ಮಧ್ಯವೆಂಬ ರಾಕ್ಷಸಿಯ ಬಾಯಿಗೆ ತುತ್ತಾಗಬೇಡಿರಿ ಅಬ್ಬಬ್ಬಾ ! ಇದೆಂತಹ ಮೋಹಿನಿ ಈಜಗತ್ತಿನಲ್ಲಿ ತನ್ನ ಮೋಹಪಾಶಕ್ಕೆ ಅನೇಕರನ್ನು ಒಳಪಡಿಸಿಕೊಂಡು ಕಡೆಗೆ ಅವರ ಸರ್ವಸ್ವವನ್ನು ನಾಶಪಡಿಸಿ ಅವರ ಇಹಪರ ಸುಖಕ್ಕೆ ತಿಲೋದಕವನ್ನು ಎರೆಯುತ್ತಿರುವ ಈ ಮೋಹಿನಿಯು ಯಾರು ? ಸಿರಿ, ಸರಸ್ವತಿ ದುರ್ಗಿಯರೇ ! ಅಲ್ಲ ಚಂಡಿ ಚಾಮುಂಡಿ ಪ್ಪಾರಿ ಮೊದಲಾದ ಶಕ್ತಿಯರೇ ? ಛೇ ! ಛೇ ! ಅಲ್ಲ ಅವರು ಯಾವಾಗಲೂ ಇಂತಹ ಕ್ರೂರ ಕೃತ್ಯಕ್ಕೆ ಕೈಹಾಕುವವರೇ ಸರಿ ಆದರೆ ಮತ್ತಾರಾಗಿರಬಹುದು, ಯೋಚಿಸೋಣ ಓ ಹೋ ! ಸರಿ, ಸರಿ ತಿಳಿದೆ ಈಗ ನಾನು ತಿಳಿದೆ ಇವಳೇ ಮಧ್ಯದಿಂದ ಉತ್ಪನ್ನವಾಗಿ ಮಧ್ಯವೆಂಬ ಹೆಸರಿನಿಂದ ಕರೆಯತಕ್ಕವಳು ಹೇ ಸುರಾದೇವಿ ! ನಿನ್ನ ಅದ್ಭುತ ಮಹಿಮೆಯನ್ನು ಯಾರುತಾನೇ ಬಣ್ಣಿಸಲಾಪರು ಒಬ್ಬನನ್ನು ಒಟ್ಟಾಬ್ಬನಿಗೆ ಪರಲೋಕಯಾತ್ರೆ ಮಾಡಿಸುವದು ನಿನ್ನಿಂದ ಅಲ್ಲವೇ ? ಯಾವ ಉತ್ತಮ ಗುಣವಂತನನ್ನು ನೀನು ಮಲಿನನನ್ನಾಗಿ ಮಾಡಲಿಲ್ಲ ! ಯಾವ ಸತಿಯ ಸತೀತ್ವವನ್ನು ಅವಮಾನಗೊಳಿಸಲಿಲ್ಲ. ಯಾವ ಯಾವ ಅನ್ಯಾಯಗಳು ನಡೆಯಗಬೇಕಾದರೂ ಎಲ್ಲವುಗಳಿಗೂ ಸಹಾಯಮಾಡಲು ... ಕಾರಣಳಾದ ನಿನ್ನ ವಿರುದ್ಧ ಮಂತ್ರಿಸ... ಲಾಗುವುದು ? ನಿನ್ನನ್ನು ... ನ ಬದ್ಧಿ, ... ಕೊಂಡು ನಿನ್ನ ... [illegible]

ತ್ತಾ, ಕಂಡ ಕಂಡವರಲ್ಲಿ ಜಗಳವಾಡುತ್ತಾ, ಸಿಕ್ಕಿಸಿಕ್ಕಿದವರ ಕೈಯಿಂದ ಪೆಟ್ಟು ತಿನ್ನುತ್ತಾ, ಕಟ್ಟ ಕಡೆಗೆ ಚರಂಡಿ ವಗೈರೆಗಳಲ್ಲಿ ಬಿದ್ದು ಕಾಲುಕೈಗಳನ್ನು ಮುರಿದುಕೊಂಡು ಬಿದ್ದಲ್ಲಿಯೇ ಕಾರಿ ನಾಯಿಗಳಿಂದ ಮುಖಮಜ್ಜನ ಮಾಡಿಕೊಳ್ಳುತ್ತಾ, ನೊಣಗಳಿಂದ ಬೀಸಿಕೊಳ್ಳುತ್ತಾ, ಕಂದಿ ಕುಂದಿ ನಿತ್ರಾಣರಾಗಿ ಬಳಲಿ ಬೇಸತ್ತು ತಮ್ಮ ಮನೆಗಳನ್ನು ಸೇರಿ ಮನೆಯಲ್ಲಿನ ಹೆಂಗಸರು ಮಕ್ಕಳ ಕೈಯಿಂದ ಬೈಗಳನ್ನು ಕೇಳುವದು, ಕೆಲವುವೇಳೆ ನಾಲ್ಕೈದು ರೂಪಾಯಿಗಳನ್ನು ಜುಲ್ಮಾನೆ ತೆರುತ್ತಾ, ಕುಡಿಯುವದಕ್ಕೆ ಸಲುವಾಗಿ ಇನ್ನೊಬ್ಬರಿಗೆ ಪ್ರೋನೋಟು ವಗೈರೆ ಮಾಡಿಕೊಟ್ಟು ಅವರಿಂದ ಹೊಂದಿದ ಹಣವನ್ನು ನಿನ್ನ ವಾದಾರವಿಂದಕ್ಕೆ ಸಮರ್ಪಿಸಿ, ಅವರ ಹಣ ಸಲ್ಲಿಸದಾಗ ಋಣಬಾಧೆಗೆ ಸಿಲುಕುತ್ತಾ ಅವರು ಅವರ ತನು ಧನ ಸರ್ವಸ್ವವನ್ನು ನಿನಗೆ ಧಾರೆಯೆರೆಯುತ್ತಾರೆ ಆದ್ದರಿಂದಲೇ ನಿನಗೆ ಸರ್ವಸ್ವಪಹಾರಿಣಿ ಎಂಬ ಬಿರುದ ಸಿಕ್ಕಿರುವದು ನೀನು ಹೀಗೆ ಮಾಡುವದು ಧರ್ಮವೇ ? ನಿನಗೆ ಯಾವಾಗಲಾದರೂ ಅಳಿವಿಲ್ಲವೇ ? ಹೀಗೆ ನೀನು ಈ ಭಾರತಕ್ಕೆ ದುಃಖಕ್ಕೆ ಗುರಿಮಾಡಬಾರದು ಒಂದಾನೊಂದು ಕಾಲದಲ್ಲಿ ಯರನ್ನು ಈ ಭಾರತಮಾತೆಯ ಪುತ್ರರು, ನೀನು ಮಾಡಿದ ಅನ್ಯಾಯವನ್ನು ತಿಳಿದು ನಿನ್ನನ್ನು ಮೆಟ್ಟಿ, ನಿನ್ನ ಮೇಲೆ ಸಲಿದಾಡುವಾಗಬಾರದರೂ ನಾನು ನೋಡಿ ಸಂತೋಷಿಸಲಾರೆನೆ! ನಿನ್ನ ಈ ಕಲುಷಿತ ವಿಷಯವನ್ನು ಪೂರಾ ತೆಗೆದು ಹಾರಕವದು ಇದಬೇಕೆಂದು ನನ್ನ ಮನಸ್ಸಿನಲ್ಲಿ ಕುತೂಹಲವಿದ್ದರೂ ಲೇಖನಿಗೆ ಏನೋ ಬಹಳ ಹೇಸಿಕೊಂಡು ನನ್ನಲ್ಲಿ ಈ ವಿಷಯವನ್ನು ಇಂದಿಗೆ ಸಾಕುಮಾಡಿರೆಂದು ಬೇಡಿಕೊಳ್ಳುತ್ತಿರುವದರಿಂದ ಇನ್ನು ಒಂದುವಾರದವರೆಗೆ ನಿನಗೆ ಅವಕಾಶಯಾ ಸಮಯಕೊಟ್ಟಿರುವೆನು ಈ ಸಮಯದಲ್ಲಾದರೂ ನಿನ್ನ ಈ ದುರ್ಗುಣವನ್ನು ಬಿಟ್ಟುಹೊಗು ಉಳಿದವಿಷಯವನ್ನು ಇನ್ನೊಂದು ವಾರದಲ್ಲಿ ತೆಗೆದಿಡುತ್ತೇನೆ

ಸ ಕೇ ಷ

ನಿಶಾನಿಷೇಧ

ಬೆಟ್ಟತ್ತು ನಾಡು—ತಾ|| 7—5—21 ರಲ್ಲಿ ಬೆಟ್ಟತ್ತು ನಾಡು ತಕ್ಕ ಮುಖ್ಯಸ್ಥರು ಕೂಡಿ ಮಾಡಿದ ತಾಹಾನಾಮೆ ಏನೆಂದರೆ —

ನಮ್ಮ ಜನಾಂಗವು ಅಮಲ್ ಪದಾರ್ಥವನ್ನು ಸೇವನೆಮಾಡುವದರಿಂದುಂಟಾಗುವ ಕೆಡಕುಗಳನ್ನು ನಿವಾರಿಸಲಿಕ್ಕಾಗಿ 17-4-21 ರಲ್ಲು ನಡದ ಓನಿನ್ ನಾರಸಂಘದ ಮಹಾಸಭೆಯ ತೀರ್ಮಾನದ ಮೇರೆ ನಾವು ಮಾಡಿಕೊಂಡ ಕಟ್ಟಳೆಗಳು —

ನಮ್ಮ ನಾಡಿನಲ್ಲಿ ಎಲ್ಲಿಯಾದರೂ ಸೇಂದಿ ಇಳಿಸಬಾರದೆಂದು ಮೊದಲೇ ನಿರ್ಬಂಧ ಮಾಡಿಕೊಂಡಿದ್ದಲ್ಲದೆ, ಶುಭ ಅಶುಭ ಕಾರ್ಯಗಳಲ್ಲಿ ನಿಷಧಪದಾರ್ಥಗಳನ್ನು ಕುಡಿಸಬಾರದೆಂತಲೂ, ಮತ್ತು ಪೇಟೆ ವಗೈರೆ ಬಯಿರಂಗಸ್ಥಳದಲ್ಲೂ ಸಂತೆ ದಿನಗಳಲ್ಲೂ ಸಹಾ ನಿಷಧಪದಾರ್ಥವನ್ನು ಕುಡಿಯಬಾರದೆಂತಲೂ ತೀರ್ಮಾನಿಸಿರುತ್ತೇವೆ ಈ ವಿಷಯವನ್ನು ನಮ್ಮ ನಾಡಿನ ಎಲ್ಲಾ ಗ್ರಾಮಸ್ಥರು ಈ ಅಲಾಗಾಯಿತು ಜಾರಿಗೆ ತರಬೇಕಾಗಿ ನಾವು ಈ ದಿನ ಸೇರಿದ ಸಭಿಕರು ಭಕ್ತಿಪೂರ್ವಕವಾಗಿ ಕೇಳಿಕೊಳ್ಳುತ್ತೇವೆ ನಂಣ ಮಕ್ಕಳು, ಯುವಕರು ಸಹಾ ತಮ್ಮ ಜ್ಞಾಪಕ ಶಕ್ತಿಯನ್ನು ನಾಶಮಾಡುವಂಥ ಸಿಗರೇಟ್ ಬೀಡಿ ವಗೈರೆಯನ್ನು ಸೇವನೆಮಾಡುವಂಥ ದುಶ್ಚ್ಯಾಸವನ್ನು ಇನ್ನು ಮುಂದೆ ಖಂಡಿತವಾಗಿ ನಿಲ್ಲಿಸಬೇಕಾಗಿ ನಾವು ಒಪ್ಪಂದ ಮಾಡಿರುತ್ತೇವೆ

ಮಗ್ಗುಲ— ಮಗ್ಗುಲ ಗ್ರಾಮಸ್ಥರೆಲ್ಲರು ಸೇರಿ ಮದ್ಯಪಾನಸೇವನೆಯು ನಾಶಕರವಾದ್ದು, ಮದ್ಯಪಾನವನ್ನು ಶುಭ ಅಶುಭ ವಗೈರೆ ಕಾಲದಲ್ಲಿಯೂ ಯಾವ ಸಂದರ್ಭದಲ್ಲಿಯೂ ಸೇವಿಸಕೂಡದಾಗಿ ಒಂದು ತೀರ್ಮಾನಮಾಡಿಕೊಂಡಿರುತ್ತಾರೆ ಈ ಸಂಗತಿಯನ್ನು ತಿಳಿದು ಈ ಗ್ರಾಮದಲ್ಲಿ ಇರತಕ್ಕ ಸೇವಕಾವೃತ್ತಿ ಜನರು ಅಂದರೆ ಹೊಲೆಯರು, ಎರವೆಯರು ಇನ್ನು ಮದ್ಯಪಾನ ಸೇವನೆಯಿಂದ ನಾವುಗಳೆಲ್ಲಾ ಕೆಟ್ಟುಹೋದೆವು ಆದುದರಿಂದ ಈ ದುಷ್ಟಸೇವನೆ ಮಾಡಬಾರದಾಗಿ ಒಂದು ಕಟ್ಟುಮಾಡಿಕೊಂಡಿರುತ್ತಾರೆ ಸೇವಕಾವೃತ್ತಿ ಜನರಿಗೆ ಇಂಥಾ ಜ್ಞಾನೋದಯವನ್ನು ಕೊಟ್ಟ ಭಗವಂತನನ್ನು ಪ್ರಾರ್ಥಿಸಿ ನಮ್ಮ ದೇಶಾಭಿಮಾನಿಗಳಾದ ಕೊಡಗುಜನರೆಲ್ಲಾ ಈ ಮದ್ಯಪಾನಸೇವನೆಯನ್ನು ತ್ಯಜಿಸುವರೆಂದು ನಂಬಿದ್ದೇವೆ ಅಲ್ಲದೆ, ಧೂಮಪಾನಸೇವನೆಯನ್ನು ಸಹ ತ್ಯಜಿಸುವ ವಿಷಯದಲ್ಲಿಯೂ ಗಮನಕೊಡುವರಾಗಿ ನಂಬಿದೇವೆ

ನಾಪೋಕ್ಲು—ಮೂರ್ನಾಡು ನಾಪೋಕ್ಲು ಪ್ರಾಂತ್ಯ ನಿಶಾಸೇವನೆಯು ಕಮ್ಮಿಯಾಗಿದೆ ಮದ್ಯಪಾನದಿಂದ ತಮ್ಮ ಏಳಿಗೆಗೆ ಹಾನಿಯಾಗುತ್ತೆಂಬದನ್ನು ಪ್ರತಿಒಬ್ಬನೂ ಚೆನ್ನಾಗಿ ಅರಿತಿರುವನು ಗ್ರಾಮಗಳಲ್ಲಿ ತಮ್ಮ ಬೈಲೆಮರಗಳನ್ನು ಕಟ್ಟಿಸುವದು ಮನ್ನಪಡಿಸಿರುತ್ತಾರೆ ಇದು ಕೊಡಗಿನ ಶುಭಚಿಹ್ನೆಯಾಗಿದೆ ಕೊಡಗಿನ ನಿವಾಸಿಗಳು ಬಲುಬೇಗನೆ ತಮ್ಮ ... ತಿಳುಕೊಳ್ಳಲು ಆತುರಸ್ಥರಾಗಿ ಮುಂದರಿಸು... ನಿಗಳು ಧರ್ಮಕ್ಕೂ ಸತ್ಯಕ್ಕೂ ತಮ್ಮ ಸನಾ... ವಲಂಬಿಸಲು ತುಂಬಾ ಆತುರಸ್ಥರಾಗಿರು... ಭಾಗದವರು ಈ ಉದಾಹರಣೆಯು... ಪ್ರಾಂತದಲ್ಲಿಯೇ ಉಚ್ಚಸ್ಥಿತಿಗೆ ಬರುವ

Printed and ... at The Sri ... Ltd., Mer...

ವರ್ತಮಾನ ಸಂಗ್ರಹ.

ಒಳದೇಶ.

ಮೆ॥ ಕೇತಿಯಂಡ್ರ ಕಾಳಪ್ಪನವರು ಒಂದು ತಿಂಗಳವರೆಗೆ, ರಜದಲ್ಲಿರುವ ಪಾಲೇಕಾಂಡ್ರ ಮೆ॥ ಚಂಗಪ್ಪನವರ ಬದಲಿಗೆ ಮಡಿಕೇರಿ ತಾಲ್ಲೋಕಿನ ಸುಬೇದಾರರಾಗಿ ನೇಮಕ ಮಾಡಲ್ಪಟ್ಟಿದ್ದಾರೆ

* * *

ಹೈದರಾಬಾದು ಮಿಲಿಟೆರಿಯಲ್ಲಿ ಸೆಕೆಂಡ್ ಲೆಫ್ಟಿನೆಂಟ್ ನಾಗಿರುವ ಮೆ॥ ಚೆಪ್ಪುಡೀರ ಯಸ್ ಸುಬ್ಬಯ್ಯನವರು ಮೂರು ತಿಂಗಳು ರಜೆಯಲ್ಲಿ ಕೊಡಗಿಗೆ ಬಂದು ತಮ್ಮ ಲಗ್ನ ಮಹೋತ್ಸವವನ್ನು ತೀರಿಸಿಕೊಂಡು 4—0—21 ರಲ್ಲಿ ತನ್ನ ಕುಟುಂಬಸಮೇತರಾಗಿ ಹೈದರಾಬಾದಿಗೆ ತೆರಳಿದರು

* * *

ಕೊಡಗು ಕಮೀಷನರಾಗಿದ್ದ ಮೆ॥ ಸೂಟರ್ ಐ ಸಿ ಯಸ್. ಇವರು ಆರುತಿಂಗಳು ರಜೆಯಲ್ಲಿ ಇಂಗ್ಲೆಂಡಿಗೆ ಕಳೆದತಿಂಗಳ 20 ರಲ್ಲಿ ಹೊರಟುಹೋದರು. ಇವರ ಬದಲಿಗೆ ಕೊಡಗಿನಲ್ಲಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಆಗಿದ್ದ ಹಿಲ್ಟನ್ ಬ್ರವುನ್ ಸಾಹೇಬರು ಆಕ್ಟಿಂಗ್ ಕೆಲಸ ನೋಡುತ್ತಾ ಇದ್ದಾರೆ

* * *

ಸೋಮವಾರಪೇಟೆಯ ಶ್ರೀಮಂತರಾದ ಡಿ. ಚನ್ನಬಸಪ್ಪನವರು ತಾ॥ 6-6 21 ರಲ್ಲಿ ಸ್ವರ್ಗಸ್ಥರಾದರು. ಇವರಿಗೆ 33 ವರುಷ ಪ್ರಾಯವಾಗಿತ್ತು ಕಳೆದ ಮೇ ತಿಂಗಳು 26 27 ರಲ್ಲಿ ತಮ್ಮ "Paradise" ಎಂಬ ನೂತನ ಗೃಹಪ್ರವೇಶವನ್ನು ಬಹಳಬ್ಬಂಡಗೆಯಿಂದ ನಡಿಸಿದರು. "ಸ್ವರ್ಗ"ವೆಂದು ನಾಮಕರಣಹೊಂದಿದ ಮನೆಯು ವ್ಯತಿರಿಕ್ತನಾಮ ಹೊಂದಿದ್ದಕ್ಕೆ ನಾವು ವ್ಯಸನಪಡುತ್ತೇವೆ

* * *

ಬ್ರಿಟಿಷ್ ಸರ್ಕಾರದ ಮಿಲಿಟೆರಿಯಲ್ಲಿ ಸೆಕೆಂಡ್ ಲೆಫ್ಟಿನೆಂಟಾಗಿ ಕಿಂಗ್ಸ್ ಕಮಿಷನ್ (Kings Commission) ಪಡೆದಿರುವ ಮೆ॥ ಚೆಪ್ಪುಡೀರ ಪಿ ಪೊನ್ನಪ್ಪನವರು ಒಂದು ವರ್ಷದಹಿಂದೆ ಬಸ್ರಾದಕಡೆ ರಣರಂಗಕ್ಕೆ ಹೋಗಿದ್ದು ಅಲ್ಲಿ ಜಯಶೀಲರಾಗಿ ಹಿಂದೂದೇಶಕ್ಕೆ ವಾಪಸು ಬಂದು 2-6-21 ರಲ್ಲು, ಕೆಲವುದಿನ ರಜೆಯಲ್ಲಿ ಸ್ವದೇಶವಾದ ಕೊಡಗಿಗೆ ಬಂದಿರುವ ವಾರ್ತೆಯನ್ನು ಕೇಳಿ ಹರ್ಷಿತರಾಗಿದ್ದೇವೆ

* * *

ತಾರೀಖು 1 6 21 ರಲ್ಲು ಕೊಡಗನ್ನು ಮದರಾಸಿಗೆ ಸೇರಿಸುವುದರ ವಿಷಯ ಮಡಿಕೇರಿಯಲ್ಲಿ ಮೀಟಿಂಗ್ ನಡೆದು ಮಡಿಕೇರಿಯ ಎಲ್ಲಾ ದೊಡ್ಡಮನುಷ್ಯರು [illegible] ಸಂಘದ ನಿರ್ಣಯಕ್ಕೆ ಅನುಗುಣವಾಗಿ ಕೊಡಗನ್ನು ನಮಗೆ ಮಾರ್ಪಾಟುಗಳು ದೊರಿಯದೆಹೋದರೆ ಖಂಡಿತವಾಗಿಯೂ ಮದರಾಸಿಗೆ ಸೇರಿಸಲೇಬೇಕೆಂತ ಓಟು ಕೊಟ್ಟರು ಮೀಟಿಂಗಿಗೆ ಕಮಿಷನರ್, ಅ॥ ಕಮಿಷನರ್ ಪೋಲೀಸು ಸೂಪರಿಂಟೆಂಡೆಂಟ್ ಮೊದಲಾದ ದೊಡ್ಡಮನುಷ್ಯರುಗಳು ದಯಮಾಡಿಸಿದ್ದರು

* * *

ನಮ್ಮ ಕಮಿಷನರ್ ಸಾಹೇಬರು ಕೊಡಗು ಮದರಾಸು ಒಂದಾಗಬೇಕಾದ ಸಭೆಗಳಲ್ಲಿ ಅಂದರೆ ವೀರಾಜಪೇಟೆ, ಮಡಿಕೇರಿಯಲ್ಲಿ ಮಾಡಿದ ಭಾಷಣಗಳನ್ನು ಚೆನ್ನಾಗಿ ಪರಿಶೀಲಿಸಿದರೆ ಅವರು ಸರಳಹೃದಯರೆಂದು ತಮ್ಮ ಮನಸ್ಸಿನಲ್ಲಿರುವುದನ್ನು ಮರೆಮಾಚದೆ ಹೇಳಿದರೆಂದು ತಿಳಿಯಬರುತ್ತದೆ ಆದರೆ ಇದನ್ನು ಇನ್ನೂ ಪರೀಕ್ಷಿಸಬೇಕಾದರೆ ಇನ್ನೊಂದು ತಿಂಗಳು ಹೋದಿ ಯಾವತರದ ನ್ಯಾಯನಿರ್ಣಾಯಕ ಸಭೆಯನ್ನು ನಮಗೆ ಕೊಡುತ್ತಾರೆಂಬುದನ್ನು ನಾವೆಲ್ಲರೂ ಕುತೂಹಲದಿಂದ ಕಾಯುತ್ತೇವೆ.

* * *

ಕೊಡಗನ್ನು ಮದರಾಸಿಗೆ ಸೇರಿಸುವದರಿಂದ ಕೊಡಗರಿಗೆ ಕೋವಿಗಳನ್ನು ಲೈಸನ್ಸು ಇಲ್ಲದೇ ಉಪಯೋಗಿಸುವ ಹಕ್ಕಿಗೆ ಲೋಪಬರಬಹುದಾಗಿ ಕಮಿಷನರ್ ಸಾಹೇಬರು ವೀರಾಜಪೇಟೆಯಲ್ಲಿ ಹೇಳಿದರಷ್ಟೆ ಇದನ್ನು ನಾವು ಒಪ್ಪುವದಿಲ್ಲ [illegible] ಆರ್ಮ್ಸ್ (ಕೋರ್ಗ್ ಆರ್ಮ್ಸ್) ಮೇಲೆ ಈ ಹಕ್ಕು ಸ್ಥಳಕ್ಕೆ ಸಂಬಂಧಪಟ್ಟದ್ದಲ್ಲ ಜನರಿಗೆ ಸಂಬಂಧಪಟ್ಟದ್ದಾಗಿರುತ್ತೆ ಈ ಪ್ರಾಂತ್ಯವನ್ನು ಯಾವ ಪ್ರಾಂತ್ಯಗಳಿಗೆ ಸೇರಿಸಿದ್ದೇ ಆದರೂ ಜನಾಂಗದವರಿಗೆ ಸಂಬಂಧಿಸಿದ ಈ ಹಕ್ಕಿಗೆ ಎಂದೂ ಲೋಪ ಬರುವ[illegible]

* * *

ರಾವ್ ಸಾಹೇಬ್ ಕೇಟೋಳಿರ ಚಂಗಪ್ಪನವರು [illegible] ಗಿನ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾಗಿ ನೇ[illegible]ರು ದೊರ[illegible] ನಾವುಗಳು ಬಹಳ ಸಂತೋಷಪಡುತ್ತೇವೆ ಈ ಪದವಿಯು ದೊರಕಿದ್ದು ಇದೇ ಮೊ[illegible] ನಮ್ಮ ಈ ಚಿಕ್ಕ ಪ್ರಾಯದಲ್ಲಿ ಇಂಥಾ [illegible] ಕೃತ್ಯ ತಕ್ಕ ಕಾರ್ಯನಿರ್ವಾಹಕ [illegible]

ರಿಂದಲೇ ಇವರಿಗೆ ದೇವರು ದೀರ್ಘಾಯುಷ್ಯವನ್ನು ಕೊಟ್ಟು ದೇಶಕ್ಕೆ ಒಳ್ಳೆಯದಾಗುವ ಕಾರ್ಯಗಳನ್ನು ಮಾಡಲಿಕ್ಕೆ ಅನುಕೂಲ ಕೊಡಲಿ, ಎಂದು ನಾವು ಹಾರೈಸುತ್ತೇವೆ

* * *

ಮೇ ತಾ॥ 30 ರಲ್ಲಿ ಸಿವಿಲ್ ಕೋರ್ಟು [illegible] ಕಕ್ಷಿಗಾರರು ವಕೀಲರ ಹಿಂಬಾಲಿಸಲು ತಂಡತಂಡವಾಗಿ ಉದ್ಯುಕ್ತರಾದರು. ವ್ಯಾಜ್ಯ [illegible] ಹೇಮಪ್ಪ [illegible] ದರು ವಕೀಲರ ಹಿಂಬಾಲಿಸದೆ ಪಂಚಾಯಿತಿಮೂಲಕ ನಿಮ್ಮ ಕಕ್ಷಿಗಳ ತೀರಿಸಿಕ್ಕೊಂಡು ಅನ್ಯಾಯವಾಗಿ ತೆರುವ ದಂಡದ್ರವ್ಯವನ್ನು ಉಳಿಸಿಕ್ಕೊಂಡು ಐಕ್ಯತೆಯಿಂದ ಇರಲು ಕುತೂಹಲಸ್ಥರಾಗಿರಿ ಪರಸ್ಪರ ಸಹಾಯಕರಾಗಿ ದೇಶದ ಏಳಿಗೆಯನ್ನು ಹಾರೈಸಿ ನಿಮ್ಮ ಉತ್ತರೋತ್ತರ ಕ್ಷೇಮಚಿಂತನೆಯನ್ನು ಕೈಕೊಳ್ಳಿ ಸದಾಚಾರ ಸಂಪನ್ನರಾಗಿ ಇರುವ ಪ್ರಯತ್ನಮಾಡಿ

* * *

ಮೆ॥ ಕೊಂಗಂಡ್ರ ಅಪ್ಪಯ್ಯನವರು (ನಂಜರಾಜಪಟ್ಣ ತಾಲ್ಲೋಕು ಸುಬೇದಾರರು) ಕುದುರೆಯಿಂದ ಬಿದ್ದು ಕೈ ಉಳುಕಿಕ್ಕೊಂಡಿರುವುದರಿಂದ ಇದನ್ನು ಪರೀಕ್ಷೆಮಾಡಿಸಲಿಕ್ಕೆ ಮೈಸೂರಿಗೆ ಹೋಗುತ್ತಾರೆಂದು ತಿಳಿಯುತ್ತೇವೆ ಶರೀರದ ಒಳಭಾಗದ ಫೋಟೋ ತೆಗೆಯುವ ಯಂತ್ರವು ಇಲ್ಲಿ ಇಲ್ಲದೆ ಇರುವುದರಿಂದ ನೋವು ಇರುವ ಭಾಗವನ್ನು ಕಂಡುಹಿಡಿಯುವುದು ಅಸಾಧ್ಯವಾಗಿದೆ ಇಂಥಾ ಯಂತ್ರವು ಮೈಸೂರು ಮತ್ತು ಬೆಂಗಳೂರು ಆಸ್ಪತ್ರೆಗಳಲ್ಲಿರುವುದರಿಂದ ಶರೀರದೊಳಗಿನ ಯಾವ ಭಾಗದ ನೋವನ್ನಾದರೂ ಪರೀಕ್ಷಿಸಿ ಕಂಡುಹಿಡಿದು ಗುಣಮಾಡುವುದು ಬಹಳ ಸುಲಭವಾಗಿದೆ

* * *

ಕೊಡಗಿನಲ್ಲಿ ಈಗ ಮದುವೆಸಮಯವಾದ್ದರಿಂದ ಎಲ್ಲಿ ಹೋದರೂ ವಾದ್ಯಗಳ ಶಬ್ದವೂ ಮದುವೆಯ [illegible] ಮಾತುಕತೆಗಳು ನಡೆಯುತ್ತೆ ಮದುವೆಯಲ್ಲಿ ಅನೇಕ ಜನರು ದೇಶದವರ ಇರಾದೆಗೆ ಅನುಸಾರವಾಗಿ ನಿಷಿದ್ಧಪದಾರ್ಥವನ್ನು ಸೇರಿಸದೆ ತಮ್ಮ ಶುಭಶೋಭನಗಳನ್ನು ನಡಿಸಿದ್ದು ಬಹಳ ಸ್ತೋತ್ರಾರ್ಹವಾಗಿದೆ ಆದರೆ ಕೆಲವು ಮುಷ್ಕರತನ ಹಿಡಿಸಿಕ್ಕೊಂಡಿರುವ ಕೊಡಗಿನ ಮನೆತನದವರು ದೇಶದ್ರೋಹ ಮಾಡತಕ್ಕವರು, ಈ ವಿಷಯವನ್ನು ಪತ್ರಿಕೆಯಲ್ಲಿ ಪಟ್ಟಿ ತಮ್ಮ ಮದುವೆಗಳಲ್ಲಿ ಕೆಟ್ಟದ್ದೆಂದು ಅವರ ಬಾಯಿಯಿಂದಲೇ ಹೇಳುವ ಮದ್ಯಪಾನವನ್ನು ಕೊಡಿಸಿ, ಕೆಟ್ಟ ಉದಾಹರಣೆಯನ್ನು ತೋರಿಸಿದುದಕ್ಕಾಗಿ ವ್ಯಸನಪಡುತ್ತೇವೆ ಇನ್ನಾದರೂ ದಯವಿಟ್ಟು ಇಂಥಾ ಸಂಗತಿಗಳನ್ನು ಎಲ್ಲಾ ವಿಧದಿಂದಲೂ ಬಾಕಿ ಮಾಡಿ, ಮದ್ಯಪಾನ ಸೇವನೆಯನ್ನು ನಿಲ್ಲಿಸುವ ಪ್ರೋತ್ಸಾಹಮಾಡಬೇಕಾಗಿ ಪ್ರಾರ್ಥಿಸುತ್ತೇವೆ

* * *

ಸರಕಾರದವರ ಉದ್ದೇಶವು ಪ್ರತಿ ಇಲಾಖೆಯ ಭಾರೀ ಸಂಬಳದ ಉದ್ಯೋಗಸ್ತರನ್ನು ಮತ್ತು ಬೇರೆ ಅನಾವಶ್ಯವೆಂದು ತೋರುವ ಸಿಬ್ಬಂದಿಗಳ ಖರ್ಚನ್ನು ಕಡಿಮೆಮಾಡಬೇಕೆಂಬುದೇ ಆಗಿರುತ್ತದೆ ಚೀಫ್ ಕಮಿಷನರ್ ಸಾಹೇಬರವರು ಈಚೆಗೆ ಹೇಳಿದಮೇರೆ, ಇಂಜಿನೀಯರಿಂಗ್ ಡಿಪಾರ್ಟಮೆಂಟಿನಲ್ಲಿ ಖರ್ಚು ಕಡಿಮೆಮಾಡಿದ್ದು ಬಹಳ ಕಮ್ಮಿಯಾಗಿದೆ ಭಾರೀಸಂಬಳದ ಇಂಜಿನೀಯರು ಈದೇಶದಲ್ಲಿ ಯಾವಕಾಮಗಾರಿಕೆಯೂ, ಮದುಗುತಕ್ಕೆ ಖರ್ಚುಮಾಡಿ ಮಾಡುವ ವಿಶೇಷ ಕೆಲಸವೂ ಇಲ್ಲದ್ದರಿಂದ ಯಾವ ಕಾಲದಲ್ಲಿಯೂ ಅವಶ್ಯಕಾಗುವುದಿಲ್ಲ ಇಲ್ಲಿ ಮಾಡಲ್ಪಡುವ ಕೆಲಸಕ್ಕೆ ಸಾಮಾನ್ಯ ಸೆಕ್ಷನ್ ಆಫೀಸರುಗಳೇ ಸಾಕಾಗಿರುತ್ತೆ ಹೀಗೆ ಇರುವಾಗ ಈಗತಾನೇ ಇನ್ನೂ ಒಬ್ಬ ಹೊಸ ಸಬ್ ಡಿವಿಜನಲ್ ಆಫೀಸರನ್ನು ಸೇತುವೆಗಳ ಕೆಲಸಗಳನ್ನು ನೋಡುವುದಕ್ಕಾಗಿ ಮಾತ್ರ 250 ರೂ. ಸಂಬಳ, ಭತ್ಯ ಬೇರೆ ಕೊಟ್ಟು ಏರ್ಪಾಡು ಮಾಡಿರುವುದಾಗಿ ತಿಳಿಯುತ್ತೇವೆ ಇಂಥಾ ಏರ್ಪಾಡುಗಳು ಜನರ ಮನಸ್ಸಿಗೆ ಯಾವ ವಿಧದಲ್ಲಿಯೂ ಸಮಾಧಾನವನ್ನುಂಟುಮಾಡಲಿಕ್ಕಿಲ್ಲ.

* * *

ಅಮ್ಮತ್ತಿ —24-5-21 ರಲ್ಲು ನ್ಯಾಷನಲ್ ಸ್ಕೂಲಿನಲ್ಲಿ ಅಮ್ಮತ್ತಿನಾಡು ಪ್ರಾಂತ್ಯದ ಸಮಸ್ತ ಜಾತಿಯ ಮಹನೀಯರ ಒಂದು ದೊಡ್ಡ ಸಭೆಸೇರಿತ್ತು. ಕೊಡಗರ ಸಮುದಾಯವೇ ಹೆಚ್ಚು ಸಂಖ್ಯೆ. ಮೆ॥ ಕುಟ್ಟಂಡ್ರ ತಮ್ಮಯ್ಯನವರು ಅಧ್ಯಕ್ಷರಾಗಿದ್ದರು ಕೊಡಗನ್ನು ಮದ್ರಾಸು ಸಂಸ್ಥಾನಕ್ಕೆ ಸೇರಿಸುವ ವಿಷಯ ಚರ್ಚೆನಡೆಯಿತು ಈ ಚರ್ಚೆಯಲ್ಲಿ ಕೊಡಗನ್ನು ಮದರಾಸಿಗೆ ಸೇರಿಸುವುದರಿಂದ ಹೆಚ್ಚಿನ ಲಾಭವುಂಟೆಂದು ಪ್ರಸಿದ್ಧ[illegible]ವುದು ಮೆ॥ ನಾಯಡಪ್ಪನವರೂ ಮತ್ತು ಮೆ॥ [illegible]

ಮೆ [illegible] ಸಾಹೇಬರು ತಮ್ಮ ತಮ್ಮ [illegible]ಧಾರವಾದ ಥಿಯನ್ನು ಪಾಶೀ [illegible] ಗಳನ್ನ [illegible] ಸ್ವಕ್ಷ [illegible] ಇದ್ದ [illegible]

market rates.

ನೋಟ್ **Prices Fixed.**

ಸಂತೋಷವಾಗಿ ಹೇಳುವುದರಲ್ಲಿ ಅನುಮಾನವಿಲ್ಲ ಸರ್ಕಾರದವರು ಇದಕ್ಕೆ ಪ್ರತಿಕಕ್ಷಿಯಾಗಲು ಕಾರಣವೇನೆಂಬುದು ತಿಳಿಯದು.

* * *

ನಾಪೋಕ್ಲು :—26-5-21 ರಲ್ಲು ಇಲ್ಲಿ ಕೊಡಗನ್ನು, ಇತರ ಪ್ರಾಂತ್ಯಗಳಿಗೆ ಕೊಟ್ಟಿರುವ ತಿದ್ದುಪಾಟುಗಳನ್ನು ನಮಗೆ ಕೊಡದೆಹೋದರೆ ಮದರಾಸು ಸಂಸ್ಥಾನಕ್ಕೆ ಸೇರಿಸುವ ವಿಷಯ ಮೆ॥ ಕುಟ್ಟೇಟಿರ ಮಾದಪ್ಪನವರ ಅಧ್ಯಕ್ಷತೆಯಲ್ಲಿ ಮೀಟಿಂಗ್ ನಡೆಯಿತು, ಮೆ॥ ಗ್ರಿನ್‌ಫ್ರಸನು, ಕೆ ಸುಬ್ರಾಯರು ಬಿ ಎ ಬಿಎಲ್, ಸಿ ಉತ್ತಯ್ಯನವರು, ಪಿ ಕುಶಾಲಪ್ಪನವರು ಮತ್ತು ಅಸಿಸ್ಟೆಂಟ್ ಕಮಿಷನರ್ ಕೆ ಚಂಗಪ್ಪನವರು ಮುನಸೀಫ್ ಸಿ ಯಸ್ ಮುತ್ತಣ್ಣನವರು ದಯಮಾಡಿಸಿದ್ದರು ಮೆ॥ ಕೆ ಸುಬ್ರಾಯರು ಕೆ ಪಿ ಚಿಣ್ಣಪ್ಪನವರು, ಚಂಗಂಡ್ರ [illegible]ಪ್ಪನವರು ಮತ್ತು ಬಿದ್ದಂಡ್ರ ಬೋಪಯ್ಯನವರು ನಮ್ಮ ದೇಶಕ್ಕೆ, ಬೇರ ದೇಶಕ್ಕೆ ಕೊಟ್ಟ ರೀತಿ ಮಾರ್ಪಾಟುಗಳನ್ನು ಕೊಡದೆಹೋದರೆ ಮದರಾಸು ಅಧಿಪತ್ಯದ ಒಂದು ಜಿಲ್ಲೆಯಾಗಿ ಕೊಡಗನ್ನು ಸೇರಿಸಬೇಕೆಂತಲೂ, ಮದರಾಸಿಗೆ ಸೇರಿಸಿದರೆ ಅಲ್ಲಿ ಸಿಕ್ಕುವ ಗುಣಾವಗುಣವನ್ನು ವರ್ಣಿಸಿದರು. ಮೆ॥ ಕೇಟೋಳಿರ ಚಂಗಪ್ಪನವರು ಮತ್ತು ಸಿ ಯಸ್. ಮುತ್ತಣ್ಣನವರು ಮದರಾಸಿಗೆ ಸೇರಿಸಿದರೆ ಅನೇಕತರದ ತೊಂದರೆಗಳುಂಟೆಂದೂ ಅದ್ದರಿಂದ ಸೇರಿಸುವುದು ಕೆಟ್ಟದ್ದೆಂದೂ ಹೇಳಿದರು ಆದರೆ ಕೂಡಿದ 97 ಜನರ ಪೈಕಿ 3 ಜನ ಮಾತ್ರ ಸೇರಿಸಬಾರದೆಂತಲೂ, ಬಾಕಿ 94 ಜನರು ಸೇರಿಸಬೇಕೆಂತಲೂ ನಿರ್ಧರಿಸಿ ಅನಂತರ ತಮ್ಮ ತಮ್ಮ ಓಟು ಪಟ್ಟಿಗೆಗೆ ಹಾಕಿದರು. ಮೆ॥ ಚಂಗಪ್ಪನವರು ಮುತ್ತಣ್ಣನವರು ನಿರುತ್ಸಾಹದಿಂದ ತೆರಳಿದರು.

ಈ ವರುಷ ಮಡಿಕೇರಿ ಹೈಸ್ಕೂಲಿನಿಂದ ಸ್ಕೂಲ್ ಪರೀಕ್ಷೆಗೆ ಹೋದ 15 ವಿದ್ಯಾರ್ಥಿಗಳ ಪೈಕಿ 15 ರ್ಥಿಗಳು ತೇರ್ಗಡೆಹೊಂದಿದ್ದಾರೆಂದು ವದಂತಿಯಿದೆ

* * *

ಈ ವರುಷ ವೀರರಾಜಪೇಟೆ ಸ್ಕೂಲ್‌ನಲ್ಲಿ Vನೇ ಫಾರಂ ತೆರೆಯದಿರುವದು ಅನೇಕ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ ಬರುವ ವರ್ಷವಾದರೂ ನಮ್ಮ ಸರಕಾರದವರು ತೆರೆಯುದಿರರೆಂದು ಭಾವಿಸುತ್ತೇವೆ.

* * *

ಈ ವರ್ಷದ ಇಂಟರ್ ಮೀಡಿಯಟ್ ಪರೀಕ್ಷೆಯಲ್ಲಿ ಮಿ॥ ಕುಟ್ಟಂಡ್ರ ಕರುಂಬಯ್ಯನವರು, ಮಿ॥ ಮುಕ್ಕಾಟಿರ ಮುತ್ತಣ್ಣನವರು ಮತ್ತು ಮಿ॥ ಮಾಚಿಮಾಡ ಮುತ್ತಣ್ಣನವರು ತೇರ್ಗಡೆಹೊಂದಿರುತ್ತಾರೆಂಬ ಸಂಗತಿ ಕೇಳಿ ಸಂತೋಷಿಸುತ್ತೇವೆ

* * *

ಮಡಿಕೇರಿಯ ಹೈಸ್ಕೂಲ್ ಮತ್ತು ಟ್ರೇಯಿನಿಂಗ್ ಸ್ಕೂಲ್ ಉಪಾಧ್ಯಾಯರು ತಮಗಳ ಸಂಬಳ ಬಡ್ತಿಗೋಸ್ಕರವಾಗಿ ಇಂಡಿಯಾ ಸರ್ಕಾರಕ್ಕೆ ತಂತಿ ಕೊಟ್ಟಿದ್ದಾರೆ. ಸಾರಾಂಶ—ಕೊಡಗು ಚೀಫ್ ಕಮಿಷನರ್ ಸಾಹೇಬರವರ ಸೆಕ್ರೆಟೆರಿಯವರಿಂದ ಕಳುಹಿಸೋಣವಾದ ಸಂಬಳ ಬಡ್ತಿಯ ವಿಷಯ ಸಂಪೂರ್ಣವಾಗಿ ಮಂಜೂರಾತಿಗೆ ಪ್ರಾರ್ಥನೆ.

* * *

ಜೂನ್ ತಿಂಗಳ ಮಧ್ಯದಲ್ಲಿ ನಮ್ಮ ಭೂಮಿಯು, ಈಗ್ಗೆ 2-3 ಸಾರಿ ಕಾಣಿಸಿಕೊಂಡಿರುವ ಒಂದು ಧೂಮಕೇತುವಿನ ದಾರಿಯಲ್ಲಿ ಅಡ್ಡಬರುವದೆಂಬುದಾಗಿ ಖಗೋಳಶಾಸ್ತ್ರಜ್ಞರು ತಿಳಿಸಿರುತ್ತಾರೆ ಇದರಿಂದ ಪ್ರಪಂಚದ ಯಾವ ಭಾಗಕ್ಕೂ ಅಪಾಯಬಾರದಿರಲೆಂದು ಹಾರೈಸುವೆವು. ಅಪಾಯಬಾರದಿದ್ದಲ್ಲಿ ಅತ್ಯಂತ ಸುಂದರವಾದ ನಕ್ಷತ್ರಗಳ ಮಳೆಯೇ ಬೀಳಬಹುದೆಂದು ಕೆಲವರ ಅಭಿಪ್ರಾಯ

ಹಿಂದೂದೇಶ.

ಮದ್ರಾಸು ಸಂಸ್ಥಾನದಲ್ಲಿ ಇನ್ನು ಮೇಲೆ ಡಿಸ್ಟ್ರಿಕ್ಟ್ ಬಡ್ತಿಗಳ ಪೈಕಿ ಇಬ್ಬರು ವಕೀಲರಿಂದ ಚುನಾಯಿಸಲ್ಪಡುವರು.

* * *

ಮಲಬಾರು ಡಿಸ್ಟ್ರಿಕ್ಟ್ ಬೋರ್ಡಿನವರು ಕೆಲವು [illegible] ಲೈಸೆನ್ಸುಗಳನ್ನು ಹಾಕಿ ಟೀ ಮತ್ತು ಕಾಫಿ ಹೋಟೆಗಳ ಏಳಿಗೆಯಾಗುವಂತೆ ಅನುಕೂಲ ಪಡಿಸಬೇಕೆಂದಿರುವರು.

* * *

ಷೌಕತ್ ಅಲಿಯವರೂ, ಹಕಿಮ್ ಅಜ್ಮಲ್ ಖಾನ್ ಎಂಬವರೂ ಮತ್ತು [illegible]ಯರ ವಿಷಯವಾಗಿ ವೈಸರಾಯರವರ ಸಂಗಡ ಸಂಭಾಷಣೆ ಮಾಡಬೇಕಾಗಿ ಮಹಾತ್ಮಾ ಗಾಂಧಿಯವರು ಸೂಚಿಸಿರುವರು

* * *

ಲಾಹೋರ್ ನಗರದಲ್ಲಿ ಏರ್ಪಾಡಾಗುತ್ತಲಿರುವ [illegible] ಕಮಿಟಿ ಎಂಬ ಸಭೆಗೆ ಶ್ರೀಮತಿ ಸರಳದೇವಿ [illegible] ಪ್ರಯುಕ್ತರಿಂದ [illegible] ಸಾವಿರ ಮಂದಿ [illegible]

ಮೇಲ್‌ಗೋನ್ ಎಂಬಲ್ಲಿ ನೂರು ಜನರಿಗಿಂತ ಹೆಚ್ಚು ಮಂದಿಯನ್ನು, ಅಸಹಕಾರ ಪ್ರಯುಕ್ತ ಸೆರೆಯಲ್ಲಿ ಹಿಡಿದಿರುತ್ತಾರೆಂದೂ, ಇವರ ಪೈಕಿ ಕೆಲವರು ಮರ್ಯಾದಸ್ಥರಾದ ಸಾಹುಕಾರರು ಆಗಿರುವರೆಂದೂ, ಇವರನ್ನು ಜಾಮೀನು ಮೇಲೆ ಬಿಡುವದಿಲ್ಲವೆಂದೂ, ಕೆಲವರನ್ನು ಒಂದುತಿಂಗಳಲ್ಲಿ ವಿಚಾರ ಮಾಡುವವರಗೆ ಸೆರೆಯಲ್ಲಿಯೇ ಇಡುತ್ತಾರೆಂದೂ ವರ್ತಮಾನವಿದೆ

* * *

ನಮ್ಮ ಹಿಂದೂಜನರು ಎಲ್ಲಿ ಹೀಯಾಳಿಸಲ್ಪಡುವರೋ ಎಲ್ಲಿ ಬಹಳವಾಗಿ ಹಿಂಸಿಸಲ್ಪಡುವರೋ, ಅಂಥಾ ದಕ್ಷಿಣ ಆಫ್ರಿಕದಿಂದ ವಜ್ರಗಳು ಹಿಂದೂದೇಶಕ್ಕೆ ವಿಶೇಷವಾಗಿ ಬರುವುದರಿಂದ ಅಂಥಾ ವಜ್ರಗಳನ್ನು ಇನ್ನುಮುಂದೆ ಕ್ರಯಕ್ಕೆ ಕೊಂಡುಕೊಳ್ಳಲೂ ಬಾರದೆಂದೂ ಧರಿಸಲೂ ಬಾರದೆಂದೂ ಬೊಂಬಾಯಿ ಸ್ತ್ರೀಯರನೇಕರು ಸಭೆಮಾಡಿ ಠರಾವುಮಾಡಿರುವರೆಂದು ತಿಳಿಯುತ್ತೇವೆ

* * *

ಮಲಬಾರಿನ ಪೊನ್ನಾನಿಪಟ್ಟದಲ್ಲಿ ಅಸಹಕಾರದ ವಿಷಯದಲ್ಲಿ ಉಪನ್ಯಾಸ ಮಾಡಿದ್ದಕ್ಕಾಗಿ ಮದರಾಸು ಮೆಡಿಕಲ್ ಕಾಲೇಜಿನ (ಎಲ್ ಎಂ ಎಸ್) ವಿದ್ಯಾರ್ಥಿಯಾದ ಮೆ|| ಬಾಲಕೃಷ್ಣ ಮೇನನ್ ಎಂಬಾತನಿಗೂ, ಬೊಂಬಾಯಿ ಲಾ ಕಾಲೇಜಿನ (ಎಲ್ ಎಲ್ ಬಿ) ವಿದ್ಯಾರ್ಥಿಯಾದ ಮೆ|| ಕೇಲಪನ್ ನಾಯರ್ ಎಂಬಾತನಿಗೂ, ಒಂದು ತಿಂಗಳು ಸಜಾ ಮಾಡಿರುವರಂತೆ

* * *

ಮುದ್ರಾಬಾದಿನಲ್ಲಿ ಒಂದು ಬೀದಿಯು ಹತ್ತಿ [illegible] ಮನೆಯ ಮಹಡಿಯ ಮರದಮೆಟ್ಟಲಿಗೆ ಕಿಡಿ [illegible] ಮಹಡಿಯ ಮೇಲಿದ್ದ ಇಬ್ಬರುಹೆಂಗಸರು ಇಬ್ಬರು ಕೆಳಕ್ಕೆ ಇಳಿಯಲಾರದೆ ಸುಟ್ಟು ಬೂದಿಯಾದರು [illegible] ಮಾಲೀಕನು ಕಿಟಕಿಯಿಂದ ಕೆಳಕ್ಕೆ ಧುಮುಕಿ ಘಾಯಪಟ್ಟಿರುವನು ಆಮನೆಯ ಹೆಚ್ಚಾದ ಭಾಗವು ಸುಟ್ಟುಹೋಗಿ 50,000 ರೂಪಾಯಿವರೆಗೆ ನಷ್ಟವಾಯಿತು

* * *

ಗಯಾಪಟ್ಟಣದಲ್ಲಿ ಮೂರುಮಂದಿ ಪರಊರಿನವರು, ಒಬ್ಬ ಗೃಹಸ್ಥನನ್ನು ಕರೆದು, ತಾವು ಒಂದು ನೋಟಿನಿಂದ ಅದೇ ಬೆಲೆಯ ಇನ್ನೊಂದು ನೋಟನ್ನು ಇಂದ್ರಜಾಲ ವಿದ್ಯೆಯಿಂದ ಮಾಡಬಲ್ಲೆವೆಂದು ಅವನಿಗೆ ಹೇಳಿ, ಅವನಿಂದ ಹತ್ತು ರೂಪಾಯಿಯ ನೋಟನ್ನು ತೆಗೆದುಕೊಂಡು ಅದನ್ನು ಒದ್ದೆಮಾಡಿ ಅದೇ ತರದ ಒಂದು ಬಿಳೀಕಾಗದವನ್ನು ಅದರ ಸಂಗಡವಿಟ್ಟು ಎರಡು ಮರದ ತಟ್ಟೆಗಳಿಂದ ಅವೆರಡನ್ನು ಬಿಗಿಯಾಗಿ ಕಟ್ಟಿ ಅವನಿಗೆ ಕೊಟ್ಟರು ಅದನ್ನು ಆದಿನ ರಾತ್ರಿ ಮೂರು ಸಲ ಅವರು ಕೊಟ್ಟ ಒಂದು ಭಸ್ಮವನ್ನು ಕೆಂಡದಮೇಲೆ ಹಾಕಿ ಆ ಹೊಗೆಯಲ್ಲಿ ಕಾಯಿಸ ಬೇಕೆಂದು ಅವನಿಗೆ ಹೇಳಿದರು ಅವನು ಹಾಗೆಯೇ ಮಾಡಿದನು ಮರುದಿನ ಬೆಳಿಗ್ಗೆ ಬಿಚ್ಚಿ ನೋಡುವಾಗ ಅದರಲ್ಲಿ ಎರಡು 10 ರೂಪಾಯಿನ ನೋಟುಗಳಿದ್ದವು ಅವರು ಒದ್ದೆಮಾಡಲಿಕ್ಕೆ ನೋಟನ್ನು ತೆಗೆದುಕೊಂಡು ಹೋದಾಗ ಇನ್ನೊಂದು ನೋಟನ್ನು ಅದಕ್ಕೆ ಜೋಡಿಸಿ ಇಟ್ಟದ್ದು ಗೃಹಸ್ಥನಿಗೆ ತಿಳಿಯಲಿಲ್ಲ ಎರಡು ನೋಟನ್ನು ನೋಡಿ ಸಂತೋಷಿತನಾಗಿ ಆ ಗೃಹಸ್ಥನು ಅವರ ಕೈಗೆ ಪುನಃ ಹದಿನೇಳು ನೂರು ರೂಪಾಯಿಗಳ ನೋಟನ್ನು ತಂದುಕೊಟ್ಟನು ಅವರು ಅವುಗಳನ್ನು ಒದ್ದೆಮಾಡಿ ಮರದ ತಟ್ಟೆಗಳಲ್ಲಿ ಕಟ್ಟಿ ಮೊದಲಿನಂತೆ ಒಂದುರಾತ್ರಿಯಲ್ಲಿ ಮೂರುರಾತ್ರಿ ಹೊಗೆಯ ಕಾವು ಕೊಡುವಂತೆ, ಅವನಿಗೆ ಹೇಳಿದರು ಅವನು ಹಾಗೆಯೇ ಮಾಡಿ, ಮರದ ತಟ್ಟೆಗಳನ್ನು ಬಿಚ್ಚಿ ನೋಡುವಾಗ್ಗ ಅವುಗಳಲ್ಲಿ ಬಿಳಿ ಕಾಗದವು ಮಾತ್ರವಿತ್ತು ಪೋಲೀಸಿಗೆ ಫಿರ್ಯಾದು ಹೇಳಿದನು ಅವರು ಮೂವರು ಊರು ಬಿಟ್ಟು ಹೋಗಿದ್ದರು ಕಡೇಗೆ ಸಿಕ್ಕಿಬಿದ್ದರು ವಿಚಾರಣಾದ ಮೇಲೆ ಇಬ್ಬರಿಗೆ ಒಂದೊಂದು ವರ್ಷ ಸಜವೂ ನೂರು ನೂರು ರೂಪಾಯಿ ಜುಲುಮಾನೆಯೂ ಮೂರನೇಯವನಿಗೆ 6 ತಿಂಗಳ ಸಜವೂ 100 ರೂಪಾಯಿ ಜುಲುಮಾನೆಯು ವಿಧಿಸಲಾಯಿತು

ವಿದೇಶ.

ಟ್ರೇನ್ಸ್ ಆಸ್ಟ್ರೇಲಿಯ ರೈಲ್ವೆ ಲೈನಿನಲ್ಲಿ ಸ್ವಲ್ಪವೂ ಡೊಂಕಿಲ್ಲದೆ ನೆಟ್ಟಗೆ ಇರುವಂತ 300 ಮೈಲು ಉದ್ದವಿರುವ ಒಂದು ರೈಲು ಮಾರ್ಗವಿದೆ.

* * *

ಕುದುರೆಗಳಿಗೆ ಒಣಗಿದ ಸಮುದ್ರದ ಜೊಂಡನ್ನು ಹಾಕಿ ಮೇಯಿಸಿದರೆ, ಅವು ಹೆಚ್ಚು ಪುಷ್ಟಿಕರವಾಗುವವೆಂದೂ, ಬಹಳ ಚಟುವಟಿಕೆಯುಳ್ಳವುಗಳಾಗುವವೆಂದೂ ತಿಳಿಯಬಂದಿದೆ.

* * *

ಇಂಗ್ಲೆಂಡ್ ದೇಶದಲ್ಲಿ ಸರ್ ಚಾರ್ಲ್ಸ್ ಜೆಡ್ ತಯ[illegible] [illegible]ಲಿಂದ ಹೆಂಡವನ್ನು

ಷಾಂಗಹಾಯಿ ಪಟ್ಟಣದಲ್ಲಿ ಏನೋ ಅಲ್ಪಕಾರಣದಿಂದ ಜಪಾನಿನ ಸಿಪಾಯಿಗಳಿಗೂ ಅಮೇರಿಕ ಸೈನಿಕರಿಗೂ ಕದನವುಂಟಾಯಿತು ಆದರೆ ಪ್ರಾಣನಷ್ಟವು ಹೆಚ್ಚಾಗುವ ಮೊದಲು ಸಮಾಧಾನವಾಯಿತು

* * *

ವಿಲ್ಲಿಸ್ಡನ್ ಎಂಬ ಪಟ್ಟಣದಲ್ಲಿ ಚಾರ್ಲ್ಸ್‌ಲೌ ಎಂಬಾತನು ತನ್ನ ಹೆಂಡತಿಯ ನಾಯಿಮರಿಯನ್ನು ಒದೆದು ಕೊಂದದ್ದಕ್ಕಾಗಿ ಅವನಿಗೆ 10 ಶಿಲ್ಲಿಂಗ್ಸು ಅಂದರೆ 20 ರೂಪಾಯಿ, ಜುಲುಮಾನೆಯೂ ಕೋರ್ಟಿನ ಖರ್ಚಿಯೂ ತೆರುವಂತೆ ತೀರ್ಮಾನವಾಗಿದೆ

* * *

ಕೆಲವುದಿವಸಗಳ ಮುಂಚೆ, ತನ್ನ 102 ನೇ ವಯಸ್ಸಿನಲ್ಲಿ ಸತ್ತಿಂದ ಮಿಸ್ಸಸ್ ರೋಸ್ ಎಂಬೊಬ್ಬ ಯೂರೋಪಿಯಳು, ಕಾಯಿಲೆ ಸಂಬಂಧವಾಗಿ ಡಾಕ್ಟರನ್ನು ಎಂದೂ ನೋಡಿದವಳಲ್ಲಂತೆ ಔಷಧಿಯ ರುಚಿಯೇ ಅವಳಿಗೆ ಗೊತ್ತಿ ಇರಲಿಲ್ಲವಂತೆ ತನ್ನ ಮರಣಕ್ಕೆ ನಾಲ್ಕು ದಿವಸಕ್ಕೆ ಮುಂಚಿನವರೆಗೆ ಅವಳಿಗೆ ಕಾಯಿಲೆ ಏನೆಂಬುದು ತಿಳಿದಿರಲಿಲ್ಲವಂತೆ

* * *

ಕಳೆದ ಯುದ್ಧದಲ್ಲಿ ಯುದ್ಧಶಾಸ್ತ್ರದ ಕಟ್ಟಳೆಗಳಿಗೆ ವಿರೋಧವಾಗಿ ನಡೆದ ಜರ್ಮನ್ ಯೋಧರ ವಿಚಾರಣೆಯು ಪ್ರಾರಂಭವಾಗಿರುವದು ಈಗಾಗಲೇ ಒಬ್ಬಸಿಪಾಯಿಗ 10 ತಿಂಗಳ ಸಜವು ವಿಧಿಸಲ್ಪಟ್ಟಿರುವದು ಯುದ್ಧದಲ್ಲಿ ಹೋರಾಡಿದ ಪ್ರತಿಯೊಂದು ಜನಾಂಗದವರೂ ತಮ್ಮಲ್ಲಿ ಯಾರಾದರೂ ಅನ್ಯಾಯ ಮಾಡಿದವರಿದ್ದರೆ ಅವರನ್ನು ಪಕ್ಷಪಾತವಿಲ್ಲದೆ, ವಿಚಾರಣೆಗೆ ಗುರಿಪಡಿಸಿ ಶಿಕ್ಷಿಸಿದರ ಮುಂದೆ ಯುದ್ಧಗಳು ನಡೆದಾಗ ಧರ್ಮಯುದ್ಧಕ್ಕೆ ಅವಕಾಶವಾದೀತು

* * *

ಮೋಡರೇಟ್ ಪಾರ್ಟಿಯ ಮುಂದಾಳಾಗಿರುವ ಮ|| ವಿ ಶ್ರೀನಿವಾಸ ಶಾಸ್ತ್ರಿಯವರು ಇಂಗ್ಲೆಂಡು ದೇಶದಲ್ಲಿರುವ ಹಿಂದು ದೇಶದ ವಿದ್ಯಾರ್ಥಿಗಳ ಭವನದಲ್ಲಿ ಒಂದು ಉಪನ್ಯಾಸ ಕೊಟ್ಟರು ಆಗ ಅವರು, ಕಟ್ಟವ್ಯಾಪಾರವೂ, ಕೆಲಸಗಾರರ ಮುಷ್ಕರದ ಗಲಾಟೆಯೂ, ತೆರಬಾರದ ಕಂದಾಯವನ್ನು ಎತ್ತುವದರಿಂದ ಉಂಟಾಗಿರುವ ಕ್ಷಾಮವೂ ಇವೇ ಹಿಂದೂ ದೇಶದಲ್ಲಿರುವ ಗಲಭೆಗೂ ಅಸಮಾಧಾನಕ್ಕೂ ಕಾರಣವೆಂದೂ ಆದರೆ ಗಾಂಧಿಯವರ ಅಸಹಕಾರವೆ ಕೇವಲದಿಂದ ಆಕ್ರಮವೇನೂ ಉಂಟಾಗದೆ ಇರುವದರಿಂದ ಗಾಂಧಿಯವರಿಗೆ ಬಹಳ ವಂದನೆ ಎಂದೂ ಮತ್ತು ವೈಸರಾಯರಿಗೂ ಗಾಂಧಿಯವರಿಗೂ ನಡೆದ ಸಂಭಾಷಣೆಯಿಂದ ಒಳ್ಳೇಫಲ ಶಾಂತವು ಉಂಟಾಗಬಹುದೆಂದೂ ಹೇಳಿರುವರು

* * *

ಮಿಸ್ ಫ್ರಾನ್ಸಿಸ್ ಪಿಟ್ಸ್ ಎಂಬವರು ಒಂದು ವಿಚಿತ್ರ ವೃತ್ತಾಂತ ಪ್ರಕಟಿಸಿರುತ್ತಾರೆ ಅವರು ಹೇಳುವದೇನಂದರೆ - ಅನೇಕ ಮರಿಗಳನ್ನಿಟ್ಟು ಹತ್ತು ದಿನಗಳಲ್ಲಿ ಒಂದು ಮರಿ ವಿನಹ ಉಳಿದವುಗಳನ್ನು ಕಳೆದುಕೊಂಡು ಶೋಕಿಸುತ್ತಿದ್ದ ಬೆಕ್ಕಿಗೆ ಆಹಾರಕ್ಕಾಗಿ ಇನ್ನೂ ಕಣ್ಣುಬಿಡದ ಬಡಕಲಾದ ಒಂದು ಇಲಿಮರಿಯನ್ನು ತಂದು ಕೊಟ್ಟೆನು ಆದರೆ ಬೆಕ್ಕು ಅದನ್ನು ನುಂಗಿಹಾಕುವುದಕ್ಕೆ ಬದಲಾಗಿ ಅದರ ಮೈಯ್ಯನ್ನೆಲ್ಲಾ ನಾಲಿಗೆಯಿಂದ ಸವರಿ ಗುಟುಕುಕೊಟ್ಟು ತನ್ನ ಸಂತೊಕ್ಕೊಂಡು ಮರಿಯ ಜೊತೆಯಲ್ಲಿಯೇ ತನ್ನ ಮರಿಯಂತೆ ಸಾಕಿತು ಆ ಬೆಕ್ಕು ಮತ್ತೊಂದಾವರ್ತಿ ಮರಿ ಹಾಕಿದಾಗ್ಯೂ ಕೂಡ ಈ ಇಲಿಯಮೇಲೆ ಪ್ರೀತಿಯನ್ನು ಬಿಡದೆ ಪದೇ ಪದೇ ಅದರ ಬಿಲದ ಬಳಿಗೆ ಬಂದು ಅದನ್ನು ನೋಡಿಕೊಂಡು ಹೋಗುತ್ತಿತ್ತು ಹಿಂದೆ ಇಲಿಗಳನ್ನು ವಿಶೇಷವಾಗಿ ಹಿಡಿಯುತ್ತಿದ್ದ ಈ ಬೆಕ್ಕು ಈ ಇಲಿಯನ್ನು ಸಾಕಿದಮೇಲೆ ಇಲಿಯ ಬೇಟೆಯನ್ನೇ ಸಂಪೂರ್ಣವಾಗಿ ಬಿಟ್ಟು ಬಿಟ್ಟಿತು

ಶ್ರೀಮತಿ ಕೋದಂಡ್ರ ಬೊಳ್ಳಮ್ಮನವರು ಬಿ. ಎ.

ಇವರು ಬಿ ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದಾಗ ಕೊಡಗಿನ ನಿವಾಸಿಗಳಾದ ನಾವು ಯಾವ ಪ್ರಸ್ತಾಪವನ್ನೂ ಮಾಡದೆಹೋದೆವು ನಮ್ಮ ಇಂಡಿಯಾ ದೇಶದಲ್ಲಿ ಪ್ರತಿ ಜಾತಿಯಲ್ಲಿಯೂ ಪ್ರಥಮ ತೇರ್ಗಡೆ ಹೊಂದಿದ ಸ್ತ್ರೀಯರಿಗೆ ಎಷ್ಟೋಮರ್ಯಾದೆ ತೋರಿಸುತ್ತಾರೆ ಸ್ವಲ್ಪ ದಿವಸಗಳಲ್ಲಿಯೇ ಆಂಧ್ರ ದೇಶದಲ್ಲಿ ಒಂದು ಸಂಘವು ನೆರೆದು ತೇರ್ಗಡೆ ಹೊಂದಿದವರಿಗೆ ಬಹಳ ಶುಭೋಕ್ತಿಯನ್ನು ತೋರಿಸಿ, ಅವರಿಗೆ ಆಶೀರ್ವಾದವನ್ನು ಕೊಟ್ಟರು ಕೊಡಗರಾದ ನಮಗೆ ಘನಹೊಂದಿದ ಸಂಗತಿಗಳೇನೂ ನಮ್ಮ ಚರಿತ್ರೆಯಲ್ಲಿಲ್ಲ ನಮ್ಮ ಜಾತಿಯವರಲ್ಲಿ ಬಿ ಎ ಯಲ್ಲಿ ಮೊದಲು ತೇರ್ಗಡೆಹೊಂದಿದ ಒಬ್ಬ ಸ್ತ್ರೀ ಇರುವುದನ್ನು ಕುರಿತು ನಾವು ತುಂಬಾ ಶೋಭಾಯಮಾನವಾಗಿರಬೇಕು [illegible] ಕಂ ಎದನ್ನು ಯಾರುತಾನೇ ಅಲ್ಲ ಅನು[illegible] ಚಿಂತೆಯಿಲ್ಲ, ಬಹುದಿನ ಹೋ[illegible] ಗಳಾದಲ[illegible] ಮಾ|| ಕೋದಂಡ್ರ ವಾ[illegible] ನವ[illegible] ಕ್ಕೆ ಹೋಗಯ [illegible] ಭಾ[illegible]

ಒಬ್ಬ ಇಂಗ್ಲಿಷ್ ಮಹಾಪುರುಷನು.

ಸೋಮವಾರ ಪೇಟೆಯಲ್ಲಿ ವೆಟರಿನರಿ ಸರ್ಜನ್‌ರಾಗಿರುವ ಮೆ|| ಸೋಮೆಯಂಡ್ರ ತಮ್ಮಯ್ಯನವರ ಪ್ರಿಯ ಪತ್ನಿಯು ಸ್ವರ್ಗಸ್ಥರಾದರೆಂಬುದನ್ನು ತಿಳಿದು ನಾವೆಲ್ಲರೂ ದುಃಖಾಕ್ರಾಂತರಾಗಿರುತ್ತೇವೆ ಅವರಿಗೆ ಸ್ವರ್ಗವು ಪ್ರಾಪ್ತಿಯಾಗಲೆಂದು ನಾವು ಪ್ರಾರ್ಥಿಸುತ್ತೇವೆ ಈ ಸಂಬಂಧದಲ್ಲಿ ಒಂದು ಅಸಾಧಾರಣವಾದ ಸಂಗತಿನಡೆಯಿತು ಅವರಿಗೆ ಜ್ವರವು ಹೆಚ್ಚಾಗಲು, ಹಾಲೇರಿ ತೋಟದಲ್ಲಿ ಮ್ಯಾನೇಜರ್ ಆದ ಮೆ|| ರೇಮೂಂಡ್ ಸಾಹೇಬರವರಿಗೆ ಅವರ ಮೋಟರ್ ಕಾರನ್ನು ದಯವಿಟ್ಟು ಕಳುಹಿಸಿಕೊಡಬೇಕೆಂದು ಹೇಳಿಕಳುಹಿಸಿದರು ಇದಕ್ಕೆ ಸ್ವಲ್ಪವೂ ಅನುಮಾನಪಡದೆ ಮೆ|| ರೇಮೂಂಡ ಸಾಹೇಬರವರು ಸಂತೋಷದಿಂದ ಮೋಟಾರ್ ಕಾರ್ ಸಮೇತ ತಾವೇ ದಯಮಾಡಿಸಿದರು, ಸಾಹೇಬರವರು ಅವರನ್ನು ಮೋಟರಿನಲ್ಲಿ ಮಡಕೇರಿಗೆ ತಂದದಲ್ಲದೆ, ಅವರನ್ನು ಆಸ್ಪತ್ರೆಯ ಕೋಣೆಗೆ ಸಾಗಿಸುವುದಕ್ಕೆ ಸಹಾಯ ಮಾಡಿದರು ಸಾಹೇಬರು ಆ ದಿನ ಪ್ರಾತಃಕಾಲದಿಂದ ಏನೂ ತಿಂಡಿ ತಿಂದಿರಲಿಲ್ಲ ಅವರ, ಪರರಿಗೆ ಕಷ್ಟಕಾಲದಲ್ಲಿ ಸಹಾಯಮಾಡಬೇಕೆಂಬ ಅಭಿಲಾಷೆಯಿಂದ, ಪರೋಪಕಾರಾರ್ಥಂ ಮಿದಂಶರೀರಂ " ಎಂಬ ಗಾದೆಗೆ ಸರಿಯಾಗಿ ವಿವರಿಸಲಶಕ್ಯವಾದ ದುಃಖಕಾಲದಲ್ಲಿ ಚಿಂತಾಕ್ರಾಂತರಾದ ಬಂಧುಗಳ ಮನಸ್ಸಂತೋಷಪಡಿಸಿ ಬಂಗ್ಲಿಗೆ ತೆರಳಿದರು ಹೀಗ ಉಪಕಾರಮಾಡುವವರಿಗೆ ಈ ಪ್ರಪಂಚವೆಲ್ಲಾ ಬಂಧುಬಳಗವಾಗುವುದು, ಸ್ವಪ್ರಜ್ಞತೆಯಿಂದಲೇ ಆಗಲಿ, ಅಸ್ವಪ್ರಜ್ಞತೆಯಿಂದಲೇ ಆಗಲಿ ಮೆ|| ರೇಮೂಂಡ್ ಸಾಹೇಬರು ಈ ಮೂಲೋಕದಲ್ಲಿ ಎಲ್ಲಾ ಬಲು ದೊಡ್ಡ ಪರೋಪಕಾರವನ್ನು ತೋರಿಸುವ ಸನ್ಮಾರ್ಗವು [illegible]ಟಿಗೊಂಡಿದೆಯೆಂದೂ ಜನರೆಲ್ಲರೂ ಒಬ್ಬರಿಗೊಬ್ಬರು ಸಹೋದರರಾಗಿದ್ದಾರೆಂದೂ, ಅವರು ಬೆಳ್ಳಗೇ ಇರಲಿ, ಕಂಪಗೇ ಇರಲಿ, ಕಂದುಬಣ್ಣದಲ್ಲಿಯೇ ಇರಲಿ, ವೈಮನಸ್ಸುವುಂಟಾಗುವುದಕ್ಕೆ ಆಸ್ಪದವಿಲ್ಲವೆಂದೂ ಭಾವಿಸಿಕೊಂಡಿರಬೇಕು ನಮ್ಮ ಇಂಡಿಯಾದೇಶದಲ್ಲಿ ಅನೇಕ ಮಂದಿ ಬ್ರಿಟಿಷರು ಇದ್ದಾರೆಯಷ್ಟೆ ಅವರೆಲ್ಲರೂ ಮೆ|| ರೇಮಂಡ್ ಸಾಹೇಬರವರ ಸ್ವಭಾವದವರಾದರೆ ಈ ದೇಶದ ಸ್ಥಿತಿಯು ಎಷ್ಟು ಚೆನ್ನಾಗಿರುತಿತ್ತು! ಗಾಂಧಿ ದಾಸ್ ಲಾಜಪತರಾಯ ಮೊದಲಾದ ಅನೇಕ ಮಂದಿ ರಾಜನೀತಿಜ್ಞರು, ಅಯ್ಯೋ ನಮಗ ಏನೂ ಮಾಡುವುದಕ್ಕೆ ಇಲ್ಲವಲ್ಲ! ಎಂದು ಕೂಗುತ್ತ ಸುಮ್ಮನಿರುತ್ತಿರಲಿಲ್ಲವೇ ?

ಮೆ|| ಕೇಟೋಳಿರ ಚಂಗಪ್ಪನವರು, ಬಿ. ಎ.

ರಾವ್‌ಸಾಹೇಬ್ ಚಂಗಪ್ಪನವರು ಈಗ ಕೊಡಗು ಸೀಮೆಯ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೆಲಸವನ್ನು ನಡಿಸುತ್ತಿದ್ದಾರೆ ಕೆಲವು ದಿವಸಗಳಲ್ಲಿಯೇ ಇವರಿಗೆ ಈ ಕೆಲಸವು ಖಾಯಮ್ ಆಗುವುದು ಇವರಿಗೆ ಈ ದೊಡ್ಡ ಉದ್ಯೋಗವು ದೊರೆತ ದಿನವು ನಮ್ಮ ಜಿಲ್ಲೆಯ ಚರಿತ್ರೆಯಲ್ಲಿ ಪ್ರಖ್ಯಾತಿಪಡುವ ಉತ್ಸವ ದಿನವಾಗಿ ನಮಗೆ ತೋರುತ್ತದೆ ಹತ್ತು ವರ್ಷಗಳ ಹಿಂದೆ ಯಾರಾದರೂ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಉದ್ಯೋಗವು ಒಬ್ಬ ಕೊಡನಿಗೆ ಕ್ರಮೇಣ ಸಿಕ್ಕುವುದೆಂದು ಆಲೋಚಿಸುತ್ತಿದ್ದರೆ ಅವನನ್ನು ಎಲ್ಲರೂ ಹುಚ್ಚನೆಂದು ಕರೆಯುತ್ತಿದ್ದರು. ಈ ಉದ್ಯೋಗವು ದೇಶಿಯರಿಗೆ ಸಿಕ್ಕುವುದಕ್ಕೆ ಕೊಡಗು ಜಮಾನ್‌ದಾರರ ಸಂಘವೇ ಮುಖ್ಯಕಾರಣವೆಂದು ನಾವು ಆನಂದದಿಂದ ಹೇಳುತ್ತೇವೆ ಈ ಮೇಲೆ ಹೇಳಿದ ಸಂಘಕ್ಕೆ ನಮ್ಮ ಕೃತಜ್ಞತೆಯನ್ನು ತೋರಿಸುವುದಕ್ಕೆ ನಾವು ಬಹಳ ಸಂತೋಷಪಡುತ್ತೇವೆ ಅಲ್ಲದೆ ಇವರ ಕಾರ್ಯನಿರ್ವಾಹಕ ಶಕ್ತಿಯು ಇದಕ್ಕೆ ಇನ್ನೊಂದು ಕಾರಣವೆಂದು ಹೇಳುವದಕ್ಕೆ ಸಂದೇಹವಿಲ್ಲ ಅಸಾಧ್ಯವೆಂದು ತೋರಿದದ್ದು ಈಗ ಸಾಧ್ಯವಾಯಿತು ಹಿಂದೂದೇಶದ ಒಂದು ಆಧಿಪತ್ಯಕ್ಕೆ ಕೀರ್ತಿಶ್ರೇಷ್ಠರಾದ ಸಿನ್ಹರಪ್ರಭುಗಳನ್ನು ಗವರ್ನರ್ ಆಗಿ ಮಾಡಿದಕ್ಕೆ ಹಿಂದುಸ್ಥಾನದಲ್ಲಿ ಹೇಗೆ ಆನಂದವೂ ಮಾನಾಭಿಲಾಷೆಯೂ ಉಂಟಾಯಿತೋ ಹಾಗೆಯೇ ನಮಗೆ ಮೆ|| ಚಂಗಪ್ಪನವರ ಈಗಿನ ಉದ್ಯೋಗವು ಆಗಿದೆ. ಈ ಸಂಗತಿಗೆ ಕೊಡಗಿನಲ್ಲಿ ಯಾವುದೂ ಸರಿ ಸಿಕ್ಕಿದುದ ಸಮಾನ ಇಲ್ಲ ಕೊಡಗರಿಗೆ ಈ ಉದ್ಯೋಗವು [illegible]ಎಂದುಇನ್ನು ರಿಂದ ನಾವು ಪ್ರಥಮ, ಕೊಡಗಿಗೆ ಶು[illegible] ಚಂಗಪ್ಪನವರಿಗೆ ನಮ್ಮ ವಪರಾಗುತ್ತೇವೆ, ತರುವಾಯ ಮೆ|| [illegible]ರಿಸಲಶಕ್ಯವಾದ ಸಂ ಶುಭೋಕ್ತಿಯನ್ನು ಹೇಳುವುದಕ್ಕೆ [illegible]ಪ್ಪನವರಿಗೆ ಶ್ರೀ ಭಗವಂ ತೋಷಪಡುತ್ತೇವೆ ಮೆ|| ಚಂ[illegible]ಶ್ವರ್ಯವನ್ನೂ ಧೀರ್ಘಾ ತನು ಆಯುರಾರೋಗ್ಯವನ್ನೂ [illegible]ವೆಂದು ನಾವು ಯಥಾರ್ಥ [illegible]ನ್ನೂ ದಯಪಾ[illegible] ಈ ವೇಳೆಯಲ್ಲಿ ಕೊಡಗುದೇಶದ [illegible]ಪ್ರಾರ್ಥಿಸುತ್ತೇ[illegible] ಮೆ|| ಚಂಗಪ್ಪನವರಿಗೆ ಒಂದು ರೂ[illegible]ದು ಅತ್ಯಾವಶ್ಯಕವಾಗಿ ತೋರುತ್ತದೆ. [illegible]ಮಣ್ಯವಾದ ಪ್ರಾಣ್ಯಂದ ಜನರ ಸ್ವಭಾವ [illegible]ಗುವುದು? ಹೇಗೂ ಇಂಥ ಸಂದರ್ಭ [illegible] ಇರುವುದು ನಮಗೆ ಯೋಗ್ಯ

Printed and [illegible]
at The Sre[illegible]
Ltd, Mer[illegible]

ಶ್ರೇಯಾನ್ ಸ್ವಧರ್ಮೋ ವಿಗುಣಃ | ಪರಧರ್ಮಾತ್ ಸ್ವನುಷ್ಠಿತಾತ್ ||
ಸ್ವಧರ್ಮೇ ನಿಧನಂ ಶ್ರೇಯಃ | ಪರಧರ್ಮೋ ಭಯಾವಹಃ ||

ಕಂದಂ.

...ವ್ಯವಹಾರ ಪತ್ರಿಕೆಯಂ | ಬಿಡದೆಲ್ಲರುಮಾಟಿಸಿರಾಸೆಪ್ಪ...ಯಂ ||
...ದಸಂಘದಬಲವಂ | ಪಡೆಯಲ್ಕುಬಹ ಸಾಮ್ರಾಜ್ಯವಬೇರಾಯುನಿಶಂ ||

ಕರ್ತವ್ಯ.

...ನುಷ್ಯಜನ್ಮವು ಸುಖ ಸಂಪತ್ತು ಕಷ್ಟ ದಾರಿದ್ರ್ಯ ಆವಾಸಸ್ಥಾನವಾಗಿದೆ. ಸುಖ ಸಂಪತ್ತು ಒದಗಿದಾಗ ...ಷ ಹೆಮ್ಮೆಯು, ಕಷ್ಟ ದಾರಿದ್ರ್ಯಗಳು ದೊರಕಿದಾಗ ... ದುಃಖವು ಸಾಧಾರಣವಾಗಿ ಬರುವದುಂಟು. ಆದರೆ ...ತ್ರವು ಇವೆರಡಕ್ಕೂ ಒಳಗಾಗಬಾರದು. ಮನುಷ್ಯ ಸಂಭವಿಸುವ ಇಹಾನುಕೂಲಗಳು ಕ್ಷಣಿಕವಾದ್ದಾಗಿವೆ. ...ಷ್ಯನು ಜನ್ಮಗಳಲ್ಲಿ ಶ್ರೇಷ್ಠನು. ತಿಳಿಯಲು ತಿಳುಕೆಕ್ಕೆ ...ಶಕ್ತನು ಪರಮಾತ್ಮನ ಸೃಷ್ಟಿಯಲ್ಲಿ ಮನುಷ್ಯನಿಗೆ ...ತ್ತರವಾದ ಶಕ್ತಿಯನ್ನು ಕೊಟ್ಟಿರುತ್ತಾನೆ ಮನುಷ್ಯ ಸರಿಸಮಾನವಾದ ಬೇರೆ ಸೃಷ್ಟಿಯೇ ಇಲ್ಲ. ಮನುಷ್ಯನ ...ಮುಕ್ತ್ಯೋದ್ಧಾರವಾಗಿ ವೇದಗಳು ಸೃಷ್ಟಿಸಲ್ಪಟ್ಟವು. ಅದ್ದ...ಲೇ "ನಾಸ್ತಿಕೋ ವೇದ ನಿಂದಕಃ" ಎಂಬ ವಚನವಿದೆ. ಮನುಷ್ಯನು ಶ್ರೇಷ್ಠತ್ವವನ್ನು ಹೊಂದಲು ಮೇಲೆ...ದ ಸುಖಸಂಪತ್ತಾದಿಗಳು ಕಾರಣವಲ್ಲ ಆತ್ಮಸಾಯ...ದಿಂದ ಮನುಷ್ಯನು ತೃಪ್ತಿಹೊಂದಬಹುದು ಹಿಂದೂ...ವೇ ಶ್ರೇಷ್ಠತರವಾದ್ದೆಂದು ಎಲ್ಲರಿಂದಲೂ ಆಸುವೋದಿ...ಟ್ಟಿದೆ ಗ್ರಾಮಾಂತರಗಳಲ್ಲಿ ವಾಸಿಸುವವನು ನಿರ್ಜನ...ಪದಸ್ಥಿತ ವನಸು, ಭಿಕ್ಷುಕನು ಆದಿಯಾಗಿ ಸರ್ವರೂ ...ವಲಂಬಿಗಳೇ. ನಮ್ಮ ಅರ್ಥೇಷ್ಟವೂ ಪ್ರಾಣವೂ ನಮ...ಸ್ಥಿಗಳೂ. ಹುಟ್ಟು ಬೆಳವಣಿಕೆ, ಮರಣ ಇತ್ಯಾದಿಗಳು ...ಸೇ ಎಂಬುದು ಸರ್ವರಿಗೂ ಗ್ರಾಹ್ಯವಿಷಯಕ್ಕದ್ದಾಗಿದೆ ...ತ್ಯಂ ವದಾ ಧರ್ಮಂ ಚರಾ ಎಂಬ ವೇದವಚನದಂತೆ ...ವೇ ನಮ್ಮನ್ನು ನಡಿಸತಕ್ಕಂಥ ಚಕ್ರವು ಧರ್ಮಸಂಸ್ಥಾ...ಯ ಮೂಲಸ್ಥಾನವೇ ಹಿಂದೂ ದರ್ಶನೀಯವು. ಭಾರತ...ತ್ರೀಯು ಧರ್ಮಿಷ್ಟಳು. ಧರ್ಮಚ್ಯುತ ಧರ್ಮದೂರನು ಭಾರತ...ನಲ್ಲ. ತನ್ನ ಸುಖಕ್ಕಾಗಿ ಮಾಡತಕ್ಕ ಯಾವ ಕಾರ್ಯ...ದ ಇನ್ನೊಬ್ಬನಿಗೆ ಹಾನಿಯಾಗುವದೋ ಅಂಥವುಗಳ ...ನಿಂದ್ಯವಾದವು. ತನ್ನ ಅನುಕೂಲಕ್ಕೆ ಪರಿಮಿತವೇ ... ಸ್ವಾರ್ಥವಾದ ನಂತರ ಪರೋಪಕಾರವೆಂಬುದು ಸ್ವ...ಕನ ಅಭಿಪ್ರಾಯವು ಶರೀರ ಸ್ಥಿರವಿಲ್ಲ. ಪ್ರಾಣಕ್ಕೆ ...ಣವಿಲ್ಲ, ಶರೀರಕ್ಕೆ ಮರಣ ಬಂದರೆ ಒಳಗಿರುವ ಚೈತನ್ಯ...ಯಾವ ಕುಂದಕವೂ ಇಲ್ಲ ಶರೀರಧಾರಣೆಯ ಉಪ...ಳು ಹಳೆದಾದಹಾಗೆ ಶರೀರಕ್ಕೆ ಯೋಗ್ಯವಾದ ಹೊಸ ...ವುಗಳು ಹ್ಯಾಗೆ ಯೋಗ್ಯವಿದ್ದಾವೋ ಹಾಗೇನೆ ಶರೀ... ಪ್ರಾಣಾದಿ ವಸ್ತುಗಳಿಗೆ ಅಯೋಗ್ಯವಾದಹಾಗೆ ಯೋ...ವನ್ನು ಹೊಂದುತ್ತವೆ, ಎಂದಮೇಲೆ ಮರಣವಿಲ್ಲವೆಂಬುದೇ ...ಂತವಾಯಿತು. ದೇಹವೆಂಬ ಗೃಹದಲ್ಲಿ ವ್ಯಾಪಕ ವಸ್ತು ಸಂಚಾರವಿಲ್ಲದಿದ್ದರೆ ತಾನು ಎಂಬ ಶಬ್ದವಿರದೆ, ಶವವೆಂದ...ಲೆ ಶರೀರಕ್ಕ ಅಹಂಕಾರವು ಆಧಾರವಿಲ್ಲದೆ ಹೋಯಿತು ...ದ ಚಂದ, ವೃಷ್ಟಿ, ಮಾಂಸದ ಕೊಬ್ಬು ಇವೇ ಮೊದ...ಲವುಗಳು ಭ್ರಾಂತಿಯೆಂಬುದರಲ್ಲಿ ಸಂದೇಹವಿಲ್ಲ. ಪರಿ...ವಾದ ಫಲವು ಹ್ಯಾಗೆ ಗಿಡದಲ್ಲಿರದೆ ಬಿಡುಗಡೆ ಹೊಂದಿ ...ಪೃಥ್ವಿಯನ್ನು ಅನುಕರಿಸುವದೋ ಹಾಗೆಯೇ ಶರೀರವ ಬಿಟ್ಟ ಪ್ರಾಣಾದಿಗಳು ಅನುಸರಿಸುತ್ತವೆ ಸ್ವಭಾವಬಿಟ್ಟು ...ಕರಿಸುವಿಕೆಯೇ (ವಿಕಾರ) ಎಲ್ಲಾ ಮನುಷ್ಯರ ಧರ್ಮ...ರವಾಗಿರಬೇಕು ಒಬ್ಬನ ಹಿತಕ್ಕಾಗಿ ಅನೇಕರ ಅಹಿತ...ದು. ಮನುಷ್ಯನು ಆತ್ಮಬಲವನ್ನು ಸರ್ವದಾ ವೃದ್ಧಿಗೊ... ನವನಶಕ್ತಿಯನ್ನು ಪಡೆಯಬೇಕು ಪಶುಬಲವನ್ನು ಅಂ...ಕರಿಸುವದು ಧರ್ಮವಲ್ಲ. ಹಾನಿವೃದ್ಧಿಗಳು ಜೀವಜಂತು...ಗೆ ಸಂದವು. ಅದರಲ್ಲಿ ಮನುಷ್ಯನು ಗಣಿಸಲ್ಪಟ್ಟ ಜ್ಞೇಯ ...ಗಿರುವವನು ಅಂದಮೇಲೆ (ವಿಕಾರವು) ನರಜನ್ಮಕ್ಕೆ ಸಂ...ಲ್ಲನೆಂದಾಯಿತು. ಭೇದದ ಶರೀರವು ಜಾತಿ ಮತವೆಂಬ ...ಸ್ವರೂಪವನ್ನು ಅನುಕರಣೆಗೆ ಸಹಾಯದಿಂದ ಉಂಟುಮಾ...ವದೇ ಸತ್ವ, ರಜ, ತಮ ವೆಂಬ ಗುಣಗಳು ಭಾರತೀಯರು ...ಗ್ನ್ಯರು, ಶೂರರು, ಸದ್ಧರ್ಮನಿಷ್ಠರು, ವಿವೇಕಿಷ್ಟರು, ಸಕಲ ...ರ್ಥವನ್ನು ಮುಕ್ತಿಗಾಗಿ ವಿನಿಯೋಗಿಸುವ ಮಹಾತ್ಮರು ...ಕ್ಕೆ ನಾಲ್ಕುನೂರು ವರುಷಗಳ ಕೆಳಗೆ ದಂಡಕಾರಣ್ಯ... ತಿಕವೂರು ಎಂಬ ಹಳ್ಳಿಯಲ್ಲಿ ಕೃಷ್ಣಶರ್ಮನೆಂಬ ಬ್ರಾಹ್ಮ...ಸುಶೀಲೆಯೆಂಬ ಪತ್ನಿಯಲ್ಲಿ ಸುಶರ್ಮ ಗೋವಿಂದಶರ್ಮ, ...ಬ್ಬರು ಪುತ್ರರನ್ನು, ಕೋಮಲೆಯೆಂಬ ಪುತ್ರಿಯನ್ನು ...ದು, ಧರ್ಮಾನುಸಾರವಾಗಿ ಸತ್ಯನಿಷ್ಠತೆಯಿಂದ ದೇವರ ...ಜೆ, ವೇದಾಧ್ಯಯನ, ಅತಿಥಿಸತ್ಕಾರ ಮಾಡಿಕೊಂಡು,

(ಮು[illegible]ದು.)

B. N. R.

ಮೈಸೂರು ...ಯವರು, ಸ...ರ್ಜನ್‌ರಾಗಿದ್ದು, ಈಗ ...ರ್ ಆಗಿರುವ ... ಕೊರವುಂಡ ಅಪ್ಪಯ್ಯ ನವರಿಂದ ... ಕೊಡಗರ ಕುಲಾಚಾ...ರ ... ಗ್ರಂಥ ಒಂದನ್ನೂ, ಮಡಿ...ಯಲ್ಲಿ ... ಕೃಷ್ಣಮೂರ್ತಿಯ ...ದ ... ಕೊಡಗು ನಾಡ ಚರಿತ್ರೆ' ...ವನ್ನು ... ದೊರ...

ಕೊಡಗಿನ ಕವಿಗಳು

"ಕೊಡಗು ಮಿತ್ರ"

"ಕೊಡಗಿನ ಕವಿಗಳು!" ಕೆಲಸಕ್ಕೆ ಬಾರದ ... ಸಲ್ಲಿ ಕವಿಗಳ್ಯಾರು? ಎಂದು ಹಲವರು ತರ್ಕಿಸಬಹುದು. ಕವಿತೆಗಳನ್ನು ಮಾಡಲು ಮೂಲಾಧಾರವಾಗಿರಿಸಿಕೊಂಡಿರುವ ನಾಗವರ್ಮ ಕೃತ ಛಂದೋಂಬುಧಿಯು ನಮ್ಮ ...ನ ಅರಸನೊಬ್ಬನ ಆಶ್ರಿತನಿಂದ ಬರೆಯಲ್ಪಟ್ಟಿತು ಎಂದರೆ ಯಾರಿಗೆ ಆಶ್ಚರ್ಯವಾಗಲಿಕ್ಕಿಲ್ಲ?

ಒಂದು ಕಾಲದಲ್ಲಿ ಕೊಡಗಿನ ದಕ್ಷಿಣಭಾಗವಾದ (ಲಕ್ಷ್ಮಣ ತೀರ್ಥದ ದಡದ) ಪ್ರದೇಶಗಳು ಕರ್ನಾಟಕದಲ್ಲಿ ಕೀರ್ತಿಶೇಷರಾದ ಗಂಗರ ರಾಜ್ಯಕ್ಕೆ ಸೇರಿತ್ತು. ಗಂಗರಶಾಸನಗಳು ಯಡವನಾಡಿನಿಂದ ಲಕ್ಷ್ಮಣತೀರ್ಥದ ವರೆಗಣಪ್ರಾಂತ್ಯಗಳಲ್ಲಿ ದೊರಕಿವೆ.

ಕ್ರಿಸ್ತಶಕ ಹತ್ತನೆಯ ಶತಮಾನ ನೊಳಂಬಕುಲಾಂತಕನೆನಿಸಿದ್ದ ಗುತ್ತಿಯಗಂಗೆ ಮಾರಸಿಂಹನು ಅನೇಕ ಅರಸರನ್ನು ಗೆದ್ದು ಅವರಿಂದ ಕಪ್ಪವನ್ನು ತೆಗೆದುಕೊಂಡು ತನ್ನ ವೃದ್ಧಾಪ್ಯದ ದಿವಸಗಳನ್ನು ಜೈನರ ಅಜಿತಸೇನ ದೇವರ ಪಾದದಡಿಯಲ್ಲಿ ಕಳೆಯಲು ಹೋಗಿ ಕ್ರಿ. ಶ 974 ರಲ್ಲಿ ಮರಣ ಹೊಂದಿದನು. ಆತನ ಮಗನಾದ ನಾಲ್ಕನೆಯ ಸತ್ಯವಾಕ್ಯ ರಾಚಮಲ್ಲನು ಒಡನೆಯೇ ಸಿಂಹಾಸನವನ್ನೇರಿದನು.

ಹತ್ತನೆಯ ಶತಮಾನಾಂತ್ಯವು ದಕ್ಷಿಣಹಿಂದುಸ್ಥಾನದ ಚರಿತ್ರೆಯಲ್ಲಿ ಬಹು ಮುಖ್ಯವಾದ ಸಮಯ. ರಾಷ್ಟ್ರಕೂಟವೆಂಬ ಸುಪ್ರಸಿದ್ಧ ಅರಸು ಮನೆತನದವರು ಮೂಲೆಪಾಲಾದರು. ಪಶ್ಚಿಮದ ಚಾಳುಕ್ಯರು, ಕಳಕೊಂಡಿದ್ದ ರಾಜ್ಯವನ್ನು ಪುನಃ ಸಂಪಾದಿಸಿಕೊಂಡರು ಚೋಳರು ಪ್ರಬಲರಾಗಿ ಪಲ್ಲವರನ್ನೂ ಗಂಗರನ್ನೂ ಒಂದೆರಡು ಕದನಗಳಲ್ಲಿ ಸೋಲಿಸಿದರು ಕರುಂಬರಂತು ಉಸಿರಾಡದೆ "ಹಾಗುಸ್ಸೆ! ಹೀಗೂಸ್ಸೆ" ಎಂದು ಕೆಲವುನಾಡಿನ ಅಧಿಪತಿಗಳಾಗಿ ಮಾಂಡಲೀಕತ್ವವನ್ನು ಒಪ್ಪಿ ನೆಲೆಗೊಂಡರು. ಇಂತಹ ಸಮಯದಲ್ಲಿ ಗಂಗರಿಗೂ ಕೊಂಚ ಕದನದ ಕಂಪನವು ಹೃದಯಕ್ಕೆ ತಟ್ಟಿದಂತಾಯಿತು. ರಾಚಮಲ್ಲನ ಒಬ್ಬನೇ ತಮ್ಮನಾದ ರಕ್ಕಸ ಗಂಗನನ್ನು ಹೇಗಾದರೂ ಮಾಡಿ ರಕ್ಷಿಸಬೇಕೆಂದು ಎಲ್ಲರೂ ಆಲೋಚಿಸಿದರು. ಅಂತಹ ಸುರಕ್ಷಿತ ಸ್ಥಳವಾದರೂ ಲಕ್ಷ್ಮಣತೀರ್ಥದ ದಡದಲ್ಲಿರುವ ಪಾಲುಪರೆ!

ಈಗ ಲಕ್ಷ್ಮಣತೀರ್ಥಕ್ಕೆ ಬೆಡ್ಡೊರೆ(ದೊಡ್ಡಹೊಳೆ)ಎಂಬದಾಗಿ ಹೆಸರಿತ್ತು. ಪಾಲುಪರೆಯು ಗಂಗರ ಕಾಲದಲ್ಲಿ ಎಲ್ಲಾ ವಿಷಯುಗಳಲ್ಲಿ ಮುಖ್ಯವಾದಸ್ಥಳವೆಂದೆನಿಸಿತ್ತು ಕೊಡಗಿನ ಪರ್ವದ ಚರಿತ್ರೆಯನ್ನು ಪರಿಶೀಲಿಸಿದರೆ ಪಾಲುಪರೆಯು ಗಂಗರ ಮೊದಲುಗೊಂಡ ಹಾಲೇರಿಯ ದೊಡ್ಡವೀರ ರಾಜೇಂದ್ರರ ಕಾಲದವರೆವಿಗೂ ವಿಪತ್ತು ಕಾಲದ ಗುಟ್ಟಿನ ಸ್ಥಳವಾಗಿತ್ತು. ಅನೇಕ ಕದನಗಳು ನಡೆದು ಪ್ರಸಿದ್ಧಿಗೊಂಡಿರುವ ಪಾಲುಪರೆಯು ಇಂದು ಕೇಳಿಕರಾದ ಕೊಂಪೆಯಾಗಿಹೋಯಿದೆ.

ರಕ್ಕಸಗಂಗನು ಇನ್ನೂ ಬಾಲಕ. ಆಗಲೇ ಇವನನ್ನು ಗಂಗರ ರಾಜಭಕ್ತನಾದ ರಕ್ಕರ ಬೈಗ ನೆಂಬರಾಷ್ಟ್ರಕೂಟದ ಅರಸು ಮನೆತನದವನೊಬ್ಬನಿಂದ ಪಾಲುಪರೆಗೆ ತಂದು ರಕ್ಷಿಸುತಿದ್ದನು. ಬಾಲರಾಜನ ಭಕ್ತರಲ್ಲಿ ನಾಗವರ್ಮನೊಬ್ಬನು.

ಗಂಗರ ರಾಜಧಾನಿಯಾದ ತಲಕಾಡಿನಲ್ಲಿ ಅನೇಕ ದಂಗೆಗಳು ನಡೆದು ಹೋದವು. ಪಾಂಚಾಲದೇವನೆಂಬೊಬ್ಬನು ತಾನೇ ಗಂಗರ ಅರಸನೆಂದು ಹೊಗಳಿಸಿಕೊಂಡುನು ಆತನನ್ನು ಕದನದಲ್ಲಿಸೋಲಿಸಿ ತಲಕಾಡಿಗೆ ಬರುವಷ್ಟರಲ್ಲಿ ಮುದ್ದುರಾಚಯ್ಯನೆಂಬ ಇನ್ನೊಬ್ಬ ರಾಜದ್ರೋಹಿಯು ಚಾಲಾದಂಕ ಗಂಗನೆಂಬ ಹೆಸರಿನಿಂದ ತಾನೇ ಗಂಗರ ರಾಜ್ಯಕ್ಕೆ ಅರಸೆಂದು ದಂಗೆ ಎದ್ದನು ಗಂಗರ ರಾಜಭಕ್ತರಲ್ಲಿ ಒಬ್ಬನಾದ ನಮ್ಮ ನಾಗವರ್ಮನು ಹೇಗೊ ಆತನ ಕೈ ಸಿಕ್ಕಿದನು ಫಲಿತಾಂಶ ಮರಣ ಪ್ರಾಪ್ತಿಯಾಯಿತು.

ನಾಗವರ್ಮನ ಮರಣವನ್ನು ಕೇಳಿದೊಡನೆಯೇ ಆತನ ಸಹೋದರನಾದ ಚಾಮುಂಡ ರಾಯನು ಮುದ್ದುರಾಚಯ್ಯನನ್ನು ಕೊಂದು ತನ್ನ ತಮ್ಮನ ಅಕಾಲಮರಣದವ... ವನ್ನು ಕೊಂಚಮಟ್ಟಿಗೆ ನಿವಾರಿಸಿಕೊಂಡನು ಈ ಚಾಮುಂಡರಾಯನೇ ಶ್ರವಣ ಬೆಳ್ಗೊಳದಲ್ಲಿರುವ ಗುಮಟೇಶ್ವರ ಸ್ಮೃತಿಮೆಯನ್ನು ಸ್ಥಾಪಿಸಿದ ಜೈನಮಹಾತ್ಮನು ಇದು ಕ್ರಿ. ಶ. 983 ರಲ್ಲಿ ನಡೆದ ವಿಷಯ. ಶ್ರವಣ ಬೆಳ್ಗೊಳದ ಶಾಸನಗಳಲ್ಲಿ ಈ ವಿಷಯಗಳು ಕಂಡು ಬಂದಿವೆ.

ನಾಗವರ್ಮನು ಜೈನಮತಸ್ಥನು. ಈತನು ಕೊಡಗಿನ ಲಕ್ಷ್ಮಣತೀರ್ಥದ ಪ್ರಾಂತ್ಯದಲ್ಲಿ ಕೆಲವು ಕಾಲಕಾಲಾಂತರಗಳಿಂದ ಯುವರಾಜನಾಗಿ ಆಳುತ್ತಿದ್ದ ರಕ್ಕಸಗಂಗನೆಂಬ ಪ್ರಸಿದ್ಧಗೊಂಡ ಅರಸರಲ್ಲಿ ಕೊನೆಯವನೊಬ್ಬನ ಆಶ್ರಿತನು. ಇದಕ್ಕೆ ಆಧಾರವು ಕರ್ನಾಟಕಕ್ಕೆ ಪರಮಾಪ್ತರಾಗಿರುವ ಶ್ರೀಮಾನ್ ಆರ್ ನರಸಿಂಹಾಚಾರ್ಯರವರು ಪ್ರಕಟಿಸಿರುವ ನಾಗವರ್ಮಕೃತ ಛಂದೋಂಬುಧಿಯ ಮಂಗಳಪದ್ಯಗಳಿಂದ ತಿಳಿಯಬರುತ್ತದೆ.

............ಅರಸಂ ರಕ್ಕಸಗಂಗಂ |
ಗುರುಗಳ ನೆಗಜ್ದಜಿತ ಸೇನದೇವರ ದೇಯೆಯಿಂ ||

ಎಂಬುದು ನಾವು ಮೇಲೆ ಬರೆದವಿಷಯವನ್ನು ಪುಷ್ಟೀಕರಿಸುವುದು.

ಮೆ...ಕಿಟ್ಟೆಲ್ ಸಾಹೇಬರು ಪ್ರಕಟಿಸಿರುವ ... ದೊಂಬುಧಿಯನ್ನು ಪಠಿಸೇ...

marker rates

ನೋಟ್ Prices Fixed.

ಎಂಬುದು ಚಾಮುಂಡರಾಯನನ್ನು ಮತ್ತು

ಅದಿನಂ ಪಾಳೆಯುಮಂ ಪೃದುಂ ಗೊಳಿಸಿಕೊಂಡೀ ಭೂಮಿಯುಂ ಭೂಮಿಪರ್ | ನೆಡಿಯೊಳ್ಗೆಂದು ವಿಶಾಳತಲಂ ಒಳವುದಕ್ಕೊ ಳ್ಗಾಲ ಮುತ್ತೀಳ್ತದಿಂ || ಬದಿನಂ ಪಿರಿಗೆ | ನಾಗವರ್ಮ ಕವಿತಾ ಮಹಾ ತ್ವಮಿಾ ಛಂದದೊಳ್ | ನಡಿಗೊಳ್ಗಾ! ಕವಿರಾಜ ಹಂಸನಮಿತಂ ಪರ್ಕ್ಕೆ ಭೂಚಕ್ರದೊಳ್ ||*

ಎಂಬ ಈ ಕೊನೆಯಪದ್ಯದಿಂದ ರಕ್ಕಸಗಂಗ ಮಹಾರಾಜನ ಸಂಬಂಧವೂ ಸ್ಪಷ್ಟವಾಗದಿರಲಾರದು

* ದಿಂಗತವ್ಯಾಪಿಯಾದೀ ಪದ್ಯಯನ್ನು ಮಹಾರಾಜರು ಸುಖದಿಂದ ಬಾಳುವಂತವರಾಗಲಿ! ನಮ್ಮ ನಾಡು ಸಸ್ಯಶ್ಯಾಮಲೆಯಾಗಲಿ! ಕಾಲಾಂತಕನ ಕಟಾಕ್ಷವು ಇತ್ತಕಡೆ ಬೀಳದಿರಲಿ! ನಾಗವರ್ಮನ ಕವಿತೆಯ ಮಹಾತ್ಮೆಯು ಈ ಛಂದಸ್ಸಿನ ಮೂಲಕ ಶಾಶ್ವತವಾಗಲಿ! ಮತ್ತೆ ಕವಿರಾಜಹಂಸನ ಅಭಿಪ್ರಾಯವು ಸರ್ವರಲ್ಲಿಯೂ ನೆಲಗೊಳ್ಳುವದಾಗಲಿ!!

ನಾಗವರ್ಮನ ಚತುರತೆಯನ್ನು ಕುರಿತು ಬರೆಯುವುದು ಈ ಲೇಖಕನಿಗೆ ಸ್ವರ್ಗಸುಖವನ್ನು ಒಡ್ಡಿಸಿ ಬರೆಯಂದಂತೆ! ಕವಿಯ ಯ ವಾಕ್ಸರಣಿಯನ್ನೇ ಅನುಸರಿಸಿದರೆ

ಅತಿಶಯ ವಾಕ್‌ಸಂಪನ್ನಂ |
ಶತಪತ್ರೋದ್ಭವ ಮಹಾಸ್ಯಲೋಕ್ಷನ್ನಂ ||
ಚತುರ ಕವಿಕುಲ ಲಲಾಮಂ ಗುಣೋದಯೋದಾತ್ತ
ಚತುರಾನನೇಂದ್ರ ಮತಿಪ್ರತಿಮಂ |
ಶ್ರೀ ನಾಗವರ್ಮನ ಪ್ರತಿಮಂ ||
ಆತನ ಅಭಿಪ್ರಾಯ ಛಂದಸ್ಸಿನ ಆವಶ್ಯಕತೆ
ಮಳೆಯಿಲ್ಲದ ಪೈರ್‌ನೀರಂ | ಬೆಳಗುವೆಂಥದೆ ?
ಮಡಿಗಿ, ಕುದಿದು ಶಾಸ್ತ್ರದಬಲದಿಂ || ದಳುಪಿ
ಪೇಳ್ದೊಡಮದುಕೋ ಮಳಮಕ್ಕುಮೆ ? ನವಬಿಲ್ಲ
ದಾತನ ಕಬ್ಬಂ ||
ಛಂದದ ನಯಾಯದೆತಪತೆಯ '
ದಂಡುಗದೊಳ್ ತೊಳಲಿ ಸುಳಿವ ಕುಪಸಿಸು ಕುರುಡಂ ||
ಭಾಷೆ ... ... ಸಂಸ್ಕೃತಂ ಪ್ರಾಕೃತ ಮಪ
ಭ್ರಂಶಂ ಪೈಶಾಚಿಕಮೆಂಬ ಮೂರುವರೆ ಭಾಷೆಗಳೊಳ್
ಪುಟ್ಟುವ ದ್ರವಿಡಾಂಧ್ರ
ಕರ್ಣಾಟಕಾದಿ ಷಟ್ಪಂಚಾಶತ್ ಸರ್ವವಿಷಯ
ಭಾಷಾ ಜಾತಿ ಗಳಕ್ಕಂ ....

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಪ್ರಕಾಶಕರು ಉತ್ತರವಾದಿಗಳಲ್ಲ [ಎಡಿಟರ್]

ಆರ್ಯ, ಸಂಪಾದಕರೆ

ವಾಡಿನಾಲ್ಕುನಾಡು ಕುಂಜಿಲಗ್ರಾಮದಲ್ಲಿ ಆಕ್ಕಬೆಸ್ಕೂಲು ಎಂಬ ಒಂದು ಸರಕಾರಿ ಪ್ರೈಮರಿ ಶಾಲೆ ಇರುತ್ತೆ. ಈ ಶಾಲೆಯು ಸ್ಕೂಲು ಫೀಜು ಮಾಫಿಯಾದ ಶಾಲೆಯಾಗಿರುತ್ತೆ. ಈ ಶಾಲೆಯ ಹುಡುಗರ ವಿದ್ಯಾಭಿವೃದ್ಧಿಗೋಸ್ಕರ ಇಲ್ಲಿಯ್ಯ ಮುಖಂಡರ ಮೂಲಕ ಒಂದು ಸಂಘವನ್ನು ಏರ್ಪಡಿಸಿ ಕಲಾ ಒಂದರ ಕೆಲವು ದ್ರವ್ಯ ಹಾಕಿ 1915 ನೇ ಸಂವತ್ಸರದಲ್ಲು ಏರ್ಪಡಿಸಿ ಹಾಗೆ ಉಳಿದಿತ್ತು ಹೀಗೆ ಹಣ ಉಳಿಸಿದ್ದರಿಂದ ದ್ರವ್ಯವು ವೃದ್ಧಿಯಾಗುವದಿಲ್ಲ ಎಂಬದರ ಮೇಲೆ ಕೆಲವು ಬುದ್ಧಿವಂತರು ಸೇರಿ ಇದನ್ನು ಬಡ್ಡಿಗೆ ಕೊಡುತ್ತಾ ವೃದ್ಧಿಮಾಡಬೇಕಾಗಿ ಏರ್ಪಡಿಸಿದರು ಮೇಲೆ ಹಾಗೆ ಮಾಡುತ್ತಾ ಇದರ ಆಡಳಿತ ನಡಿಸಲು ಪ್ರೆಸಿಡೆಂಟರು ಮೆಂಬರುಗಳು ಸಹ ಚುನಾಯಿಸಲ್ಪಟ್ಟು. ಅದರಂತೆ ನಡೆಯುತ್ತಾ ಬಂದು ಮಾಟಲಗು ವೃದ್ಧಿಯನ್ನು ಹೊಂದುತ್ತಾ ಬರಿದೆ ಈ ಸಂಗವು ಕಾರೋನೇಶನ್ ಯೂನಿಯನ್ ಸೊಸೈಟಿ (Coronation Union Society) ಎಂಬುದಾಗಿ ಕರೆಯಲ್ಪಡುತ್ತೆ. ಈ ಸಂಗಕ್ಕೆ ಕೊಡಗು ಗೆಜೆಟ್, ಸಾಕ್ಷಿ, ಸ್ವದೇಶಾಭಿಮಾನಿ ಪತ್ರಿಕೆ ಸಹ ಬರುತ್ತಾ, ಪ್ರತಿ ತಿಂಗಳ ಪುಸ್ತಕವಿದಾದ ವಿ. ಪ್ರೆಸಿಡೆಂಟರು. ಮೆಂಬರುಗಳೆಲ್ಲಾ ಸೇರುತ್ತಾ ಕೆಲಸ ಸರಿಯಾಗಿ ನಡೆಯಲ್ಪಡುತ್ತೆ. ಇವರಲ್ಲಿ ಉಪಯೋಗುತ್ತಾ ಬಂದ ಹಣದಿಂದ ಈ ಸ್ಕೂಲಿನಲ್ಲಿ ಪ್ರತಿ ವರ್ಷ ಪರೀಕ್ಷನ್ ದೊರೆನಂತರ ಸ್ಕೂಲ್ ಹೆಡ್ ಮಾಸ್ಟರ್ ಅಭಿಪ್ರಾಯದಂತೆ ಕೇವಲ ಬಡವಿದ್ಯಾರ್ಥಿಗಳಿಗೆ ಬೇಕಾದ ಪುಸ್ತಕದ ಖರ್ಚಿಗಾಗಿ ಕೆಲವು ದ್ರವ್ಯವನ್ನು ಕೊಡುತ್ತಾ ಬರುತ್ತಿದ್ದಲ್ಲದೆ ಪ್ರತಿ ವರ್ಷದಲ್ಲು ಹುಡುಗರನ್ನು ಆಟವಾಡಗಳು (Sports) ಮಾಡಿಸಿ ಪ್ರೈಜ್ ಬಹುಮಾನ ಕೊಡುವುದಲ್ಲದೆ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಯರಿಗೂ ಕೂಡಿದ ... ಲಾಭದಾಯಕವಾಗಿ ... ನಡೆಯುತ್ತೆ.

ಇದು ಮಾತ್ರ ಕಾಲದು ... ಈ ಶಾಲೆಯ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಯರಿಗೂ ಈ ... ಮತ್ತು ... ದೇವರ ಭಕ್ತಿ ಉಂಟಾಗುವಂತೆ ನಾಗರೀಕತನ ... ಈ ಸ್ಕೂಲು ಸಂಘಕ್ಕೆ ಸಮಂಧಪಟ್ಟವರು ... ಕಳೆದ ನವೆಂಬರ್ ತಾರೀಖು 28 ನೇ ಆದಿತ್ಯವಾರ ದಿವಸ ... ಘಂಟೆಯಿಂದ 11 ಘಂಟೆಯವರೆಗೆ ದಕ್ಷಿಣಕನ್ನಡ ... ಒಬ್ಬ ಬ್ರಾಹ್ಮಣ ಪಂಡಿತರಿಂದ ಹರಿಕಥೆ ... ಎಲ್ಲರೂ ಆನಂದಭರಿತರಾದರು ಈ ಕೆಲಸವನ್ನು ... ಮಾಡಲಾಯಿತು

ಇದಲ್ಲದೆ ಈ ನಾಡಿನಲ್ಲು ಜಮೀನ್‌ದಾರರ ಸಂಘ (ರಾಕ ಸಂಘ) ಕೊಡಗು ವಿದ್ಯಾಭಿವೃದ್ಧಿಸಂಘ, (ವಾಕಸಂಘ) ಸೋಮೇಶ್ವರದೇವರ ಸಂಘ, ಪರಂಗೇರಿ, ಯರಕ್‌ಪಾಡಿ, ಈ ಕೇರಿಗಳವರ ಬಂಡಾರದ ಸಂಘ ವಾಡಿ ಸುಬ್ರಾಮದೇವರ ಸಂಘ, ಬಾಲ ಸಂಘ ಸಹ ಪ್ರೆಸಿಡೆಂಟರು ಮೆಂಬರುಗಳ ಮೂಲಕ ಈಗಲೂ ಸಾಂಗವಾಗಿ ನಡೆಯುತ್ತಾ ಅಭಿವೃದ್ಧಿ ಹೊಂದುತ್ತಿವೆ.

ಈ ರೀತಿ ಕೊಡಗುದೇಶದ ಈ ಮೂಲೆ ಪ್ರದೇಶದಲ್ಲು ನಡೆಯುತ್ತಾ ... ಏರ್ಪಡಿಸಿ ಸಾಂಗವಾಗಿ ಅಭಿವೃದ್ಧಿಗೊಳಿಸುತ್ತಾ ಬರುವ ಭಾಗದಲ್ಲು ... ಸಂತೋಷಕರವಾಗಿದೆ. ಮುಂದೆಯೂ ಇವೆ ... ಭಗವಂತನ ಕಟಾಕ್ಷದಿಂದ ಸರಿಯಾಗಿ ನಡಿಸಿಕೊಂಡು ಹೋಗುವ ಭಾಗದಲ್ಲು ... ಕಟಾಕ್ಷವಿರಬೇಕಾಗಿ ಬೇಡುತ್ತೇನೆ

ಚಿತ್ರ ವಿಚಿತ್ರಾವಳಿ.

ಸತ್ತವರೊಡನೆ ಸಂಭಾಷಣೆ !

ನವನಾಗರಿಕತೆಯ ಈ ದಿನಗಳಲ್ಲಿ ಏನು ತಾನೆ ಅಸಾಧ್ಯ ? ವಿಜ್ಞಾನ ಶಾಸ್ತ್ರಿಗಳಾದ ಶ್ರೀಯುತ ಥಾಮಸ್ ಎ. ಎಡಿಸನ್‌ರವರು ಸತ್ತವರೊಡನೆ ಮಾತಾಡಲು “ ವಯರ್ ಲೆಸ್ ಟೆಲಿಗ್ರಾಫಿ ” (Wireless Telegraphe) (ತಂತಿ ಇಲ್ಲದೆ ಸಮಾಚಾರವನ್ನು ಅತ್ತಿತ್ತ) ಕಳುಹುವಂತಹ ಯಂತ್ರ ಒಂದನ್ನು ತಯಾರಿಸುತ್ತಿರುವರು. ಇದರಿಂದ ಸತ್ತವರೊಡನೆ ಸಂಭಾಷಿಸಲು ಸುಲಭಸಾಧ್ಯವೆಂದು ಇವರು ಹೇಳುವರು.

ಸತ್ತವರೊಡನೆ ಆಲೋಚಿಸುವುದು ವಿಜ್ಞಾನ ಶಾಸ್ತ್ರದ (Science) ಮೂಲಕ ವಾಗಬೇಕ ಹೊರತು ಪ್ಲಾಸ್ ಯಂತ್ರಗಳಿಂ ಯ ಮೂಲಕ ಆಗುವುದು ಅಸಾಧ್ಯವೆಂಬುದೇ ಇವರ ವಾದ ಮೊದಲನೆಯ ಸಮಾಚಾರ ಯಾರಿಂದ ಬರಬಹುದೆಂದರೆ—ಮ|| ಎಡಿಸನ್‌ರಂತಹ ವಿಜ್ಞಾನಶಾಸ್ತ್ರಿಗಳಿಂದಲೇ ಎಂದೂ ಹೇಳಿರುವರು.

ಅಂತೂ ಇಂತು ಇದೊಂದು ಎಂದರೆ ನಮ್ಮ ಹಿರಿಯವರು ಎಲ್ಲಿ ಹಣವನ್ನು ಹೂಳಿಟ್ಟಿರುವರೆಂದು ನಾವು ಕೇಳಬಹುದಲ್ಲವೆ ?

ವೃದ್ಧವಿವಾಹ !

ಬಾಲ್ಯವಿವಾಹವಂತೂ ಆಗಬಾರದಷ್ಟೆ, ವೃದ್ಧನ ವಿವಾಹವೊ ?

ಡಾಕ್ಟರ್ ಎಂಡ್ರ್ಯೂ ಮೆಕ್ಲಾರೆ ವಿಲ್ಸನ್ ಎಂಬ ಅ ರಿಕದವರೊಬ್ಬರು ತನ್ನ ನೂರನೆಯ ವರ್ಷದಲ್ಲಿ ಮಿಸ್ ಮೇರಿ ಆಗಸ್ಟಬಾರ್ಕ್ಲೆ ಎಂಬ ಎಪ್ಪತ್ತೆರಡು ವರುಷದ ಕನ್ನಿಕೆಯನ್ನು ವಿವಾಹ ಮಾಡಿಕೊಂಡರು.

ಅವ್ಯ ನವರ ಹೇಳಿಕೆ ಮೇರೆ ವಿವಾಹವೆಂಬುದು ಒಂದು ಪಾಲುದಾರಿಕೆಯ ವ್ಯಾಪಾರದಂತಿರುವುದು. ಜೀವನವೇ ವ್ಯಾಪಾರ ಜೀವನಕ್ಕೆ ಒಂದು ವ್ಯಕ್ತಿ ಇದೆಯಷ್ಟೆ ಇಂತಹ ವ್ಯಕ್ತಿಯನ್ನು ಎರಡು ಅನುಮೋದಿಸುವರು ಅವರೇ ಒಂದಾಗಿ ವ್ಯಾಪಾರ ಮಾಡುವರು. ಹೀಗೆಯೇ ಸತಿಪತಿಗಳಾಗುವುದು.

ಡಾಕ್ಟರ್ ಮಹಾಶಯರು ಪ್ರಪಂಚವನ್ನೇ ತಲೆಕೆಳಗೆ ಮಾಡುವಂತಹ ಒಂದು ವೈದ್ಯ ಪುಸ್ತಕವನ್ನು ತನ್ನ ಈ ನೂತನ ಸತಿಯ ಸಹಾಯದಿಂದ ಬರೆಯುತ್ತಿರುವರಂತೆ.

ಆ ಪುಸ್ತಕವನ್ನೇ ನಾವು ಎದುರು ನೋಡುತ್ತಾ ಇರುವೆವು.

75,000 ಡಾಲರ್ ಬೆಲೆಬಾಳುವ ಪುಸ್ತಕ !

ಅಮೆರಿಕದಲ್ಲಿ ಮ|| ಹ್ಯೂ ಇ. ಹಟ್ಟಿಂಗ್ಟನ್ ಎಂಬ ಮಹನೀಯರು ಪುಸ್ತಕವೆಂದರೆ ಪ್ರಾಣಬಿಡುವರಂತೆ. ಇವರು ಮೊನ್ನೆ “ Venus and Adonis ” ಎಂಬ ಒಂದು ಅಪೂರ್ವ ಪುಸ್ತಕಕ್ಕೆ ಎಪ್ಪತ್ತೈದು ಸಾವಿರ ಡಾಲರುಗಳನ್ನು ಕೊಟ್ಟು ಕೊಂಡುಕೊಂಡರು. ಇವರ ಪುಸ್ತಕ ಭಂಡಾಗಾರವಂತೂ ಶಾರದೆಯ ಭವನದಂತಿದೆ ಎಂದರೆ ಅತಿಶಯವಾಗಲಾರದು.

ನಮ್ಮಲ್ಲೋ —ಎರಡು ರೂಪಾಯಿ ಬೆಲೆಬಾಳುವ ಮಾಸಪತ್ರಿಕೆಗಳನ್ನೆ ಕೊಳ್ಳುವವರಿಲ್ಲ. ಧಾರವಾಡದ “ ಚಂದ್ರೋದಯ ” ವೆಂಬ ಪತ್ರಿಕೆಯಂತೂ ಕೊಳ್ಳುವವರೇ ಇಲ್ಲದಂತಾಗಿ ಲೋಕದಿಂದ ಅದೃಶ್ಯವಾಗುವಂತಿದೆ. ನಮ್ಮ ಭಾಷಾಮಮತೆಯು !

ಕುಂಬಳಕಾಯಿಯಿಂದ ಸಕ್ಕರೆ !

ಜೆ. ಎನ್. ಬಿಷಪ್ ಎಂಬ ವಿಜ್ಞಾನಶಾಸ್ತ್ರಿಗಳು ಕುಂಬಳಕಾಯಿಯಿಂದ ಸಕ್ಕರೆಯನ್ನು ಮಾಡುವ ವಿಧಾನವನ್ನು ಕಂಡುಹಿಡಿದಿರುವರು. ಕುಂಬಳಕಾಯಿಯ ಬಳ್ಳಿಯು ಬಹಳ ಸ್ಥಳವನ್ನೂ ಆಕ್ರಮಿಸುವುದಿಲ್ಲ. ಸದ್ಯದಸ್ಥಿತಿಯಲ್ಲಿ ಶೇಕಡ ಇರುವಾಲಷ್ಟು ಸಕ್ಕರೆಯೂ ಸಿಕ್ಕುತ್ತದೆಂದು ಇವರು ಕಂಡುಹಿಡಿದಿದ್ದಾರೆ. ಇದನ್ನು ಇನ್ನೂ ವೃದ್ಧಿಪಡಿಸಬಹುದೆಂದೂ ಬರೆದಿರುತ್ತಾರೆ.

ಇದರ ಬಣ್ಣವು ಕಬ್ಬಿನ ಸಕ್ಕರೆಯಂತೆ ಬೆಳ್ಳಗಾಗಿಯೂ ಅದಕ್ಕಿಂತಲೂ ರುಚಿಯಾಗಿಯೂ ಇದೆಯಂತೆ. ಕಲ್ಲಂಗಡಿ ಹಣ್ಣು (Water melon) ಗಳಿಂದ ಸಕ್ಕರೆ ಸಿಕ್ಕಬಹುದೆ ಎಂಬುದೇ ಇವರ ಈಗಿನ ಪ್ರಯತ್ನವಂತೆ.

ನಮ್ಮ ಸೀಮೆಯಲ್ಲಿ ಕುಂಬಳಕಾಯಿಗೇನಾದರೂ ದಾರಿದ್ರ್ಯವಿದೆಯೆ ? ಕುಂಬಳಕಾಯಿಗಂತೂ ‘ ಸಕ್ಕರೆಕಾಯಿ ’ ಎಂಬ ಹೆಸರನಿತ್ತು ಮಾರುವ ನಮ್ಮ ಬಂಧುಗಳು ಸಕ್ಕರೆಯನ್ನೇ ತಯಾರು ಮಾಡುವ ವಿಧಾನಕ್ಕೆ ಕೈಹಾಕಬಾರದೆ ?

“ಕೊಡಗು ಮಿತ್ರ”

TO LET

ಪ್ರಕಟಣೆ.

ಸನ್ 1920ನೆ ಇಸವಿ ಎಪ್ರಿಲ್ ಮಾಹೆಯಲ್ಲಿ ಪೊನ್ನಂಪೇಟೆಯಲ್ಲಿ ನಡೆದ ಕೊಡಗು ಜಮಿನ್‌ದಾರ ಸಂಘದ 6 ನೇ ವಾರ್ಷಿಕ ಮೀಟಿಂಗಿನ ನಡವಳಿಯಲ್ಲಿ ಬಾಣೆ ಜಾಗದಲ್ಲಿ ಕಿತ್ತಲೆ ತೋಟ ಮಾಡಿದರೆ ಗಿಡ ನೆಟ್ಟಲಾಗಾಯಿತು ಫಸಲು ಬರುವ ವರ್ಷದ ಅನಂತರ ಅಂದರೆ ಹದಿನೈದು ವರುಷದ ವರೆಗೆ ಕಂದಾಯ ಮಾಫಿ ಮಾಡಬೇಕೆಂದು ಮಾಡಿದ ತೀರ್ಮಾನದ ಮೇಲೆ—

ಹಜರತ್ ಚೀಫ್ ಕಮೀಷನರ್ ಸಾಹೇಬರವರು ಈ ಸಂಬಂಧವಾಗಿ 1921 ನೇ ಇಸವಿ ಜುಲೈ ತಾರೀಖು 1ರಿಂದ ರವಿನ್ಯೂ ರೂಲ್ಸ್ 185 ನೇ ಕಲಂನಲ್ಲಿ ಕಿತ್ತಲೆ ಕಂದಾಯವನ್ನು ಮನ್ನಾಯಿಸಲ್ಪಟ್ಟಿರುತ್ತೆಂದು ತಿದ್ದುಪಾಟು ಮಾಡುವರಾಗಿ ತಾರೀಖು 16—5—1921 ನಂ 50 ನೇ ಇಸ್ತಿಹಾರ್ ನಾಮೆ ಕಳುಹಿಸಿರುವ ಸಂಗತಿ ಕೊಡಗು ಕಮಿಷನರ್ ಸಾಹೇಬರು ನಂ 540—E ತಾ|| 20—5—1921 ರ ಇಂಡಾರ್ಸ್‌ಮೆಂಟಿನ ಬರಿಸಿರುತ್ತಾರೆ.

ಈ ಸಂಗತಿ ತಮ್ಮ ಇಲಾಖೆಯ ಎಲ್ಲ ರೈತರಿಗು ಪ್ರಕಟಪಡಿಸುವದು ತಾ|| 30—5—1921 ನೇ ಇಸವಿ.

ಸಿ. ಯನ್. ವೆಂಕಪ್ಪಯ್ಯ,

ತಾ|| 30 9-1921 ಜನರಲ್ ಸೆಕ್ರೆಟರಿ.

ಸೂಚನೆ.

ಷೇರು ತೆಗೆದುಕೊಳ್ಳುವುದಾಗಿ ವಾಗ್ದಾನ ಮಾಡಿದ ಎಲ್ಲಾ ಷೇರುದಾರರು ದಯವಿಟ್ಟು ತಮ್ಮ ತಮ್ಮ ಷೇರು ಹಣವನ್ನು ಕಂಪನಿಯ ಅಧ್ಯಕ್ಷರಾದ ಮೆ|| ಕ|| ರಾಯಬಹದ್ದೂರು ಕುಟ್ಟಯ್ಯನವರ ವಿಳಾಸಕ್ಕೆ ದಯವಿಟ್ಟು ಕಳುಹಿಸಿಕೊಡಬೇಕಾಗಿ ಕೋರುತ್ತೇವೆ ಅಲ್ಲದೆ ಚಂದಾದಾರರಾಗುವ ಮತ್ತು ಆದ ಎಲ್ಲಾ ಮೆಂಬರುಗಳು ದಯವಿಟ್ಟು ತಮ್ಮ ವಾರ್ಷಿಕ ಚಂದಾ (3-8-0) ರೂಪಾಯಿಯನ್ನು ಕೊಡಗು ಆಫೀಸು ಮ್ಯಾನೇಜರವರ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ಅಪೇಕ್ಷಿಸಲಾಗಿದೆ.

ಷೇರುದಾರರ ಮತ್ತು ಚಂದಾದಾರರ ಅನುಕೂಲತೆಗೋಸ್ಕರ ಕಂಪನಿಯ ಸೆಕ್ರೆಟರಿ ಅಥವಾ ಸಬ್ ಎಡಿಟರವರು ಈ ಕೆಳಗಿನ ತಾರೀಖುಗಳಲ್ಲಿ ಪ್ರತ್ಯೇಕ ಪ್ರತ್ಯೇಕ ಸ್ಥಳಗಳಲ್ಲಿ ಮಧ್ಯಾಹ್ನ 12 ಘಂಟೆಯ ಮೇಲೆ ಹಾಜರಿರುತ್ತಾರೆ. ಅದ್ದರಿಂದ ಎಲ್ಲಾ ಷೇರುದಾರರೂ ಮತ್ತು ಚಂದಾದಾರರೂ ದಯವಿಟ್ಟು ತಮ್ಮ ಷೇರು ಮತ್ತು ಚಂದಾಹಣವನ್ನು ಇವರಿಗೆ ತಪ್ಪದೆ ಪಾವತಿ ಮಾಡಿ ರಶೀತಿ ಪಡೆದುಕೊಳ್ಳಬೇಕಾಗಿ ಕೋರಲಾಗಿದೆ.

ಜೂನ್	15 ರಲ್ಲು	ವಿರಾಜಪೇಟೆ—ಬಿ ಅಯಪ್ಪನವರ ನಾಪಿನಲ್ಲಿ
,,	16 ,,	ಪೊಳ್ಳಿಬೆಟ್ಟ—ಸ್ಪೆನ್ಸರ್ ಕಂಪೆನಿಯಲ್ಲಿ
,,	17 ,,	ಬಿಟ್ಟಂಗಾಲ—ಅಂಗಡಿಬಳಿ
,,	18	ಪೊನ್ನಂಪೇಟೆ—ವೀಸ್ ಕ್ಲಬ್
,,	19 ,,	ಗೋಣಿಕೊಪ್ಪಲು—ಮೆಕ್‌ಡೋಲ್ ಬಳಿ
,,	20 ,,	ಹುದಿಕೇರಿ—ಕಚೇರಿಬಳಿ
,,	22 ,,	ವಿರಾಜಪೇಟೆ.

“ ಕೊಡಗು ”

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ, ವಿಜ್ಞಾನ ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ, ಕೊಡಗಿನ ವಾರಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್, “ ಕೊಡಗು ” ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು.
2. ಲೇಖನಗಳನ್ನು ಸಂಪಾದಕರು, “ ಕೊಡಗು ” ಮಡಿಕೇರಿ ಈ ವಿಳಾಸಕ್ಕೆ ಕಳುಹಿಸಬೇಕು.
3. ಬಾತ್ಮೀದಾರರ ಅಭಿಪ್ರಾಯಕ್ಕೆ ಕೊಡಗು, ಪತ್ರಿಕಾಕರ್ತರು ಜವಾಬ್ದಾರರಲ್ಲ.
4. ನಮ್ಮಲ್ಲಿಗೆ ಕಳುಹಿಸುವ ಬಾತ್ಮಿಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು.
5. ಪ್ರಕಟಿಸಲಾಗದ ಬಾತ್ಮಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮಾ|| ಕೊಡಗು ... ಆಪೇಕ್ಷಿಸುತ್ತೇವೆ ... ದಕ್ಕೆ ... ಕೇರಿ.

ಮುದ್ರಣ ಅಂದ ! ಛಾರ್ಜು ಸುಲಭ !! ಕೆಲಸ ಜಾಗ್ರ

ಶ್ರೀನಿವಾಸ ಪ್ರೆಸ್, ಮೈಸೂರು.

ನಮ್ಮಲ್ಲಿ ಎಲ್ಲಾ ವಿಧವಾದ ಪ್ರಿಂಟಿಂಗ್ ಕೆಲ, ಅಂದರೆ—ಬುಕ್‌ವರ್ಕುಗಳು, ಲೆಟರ್‌ಹೆಡ್‌ಗಳು, ಲಗ್ನ ಗಳು, ರಶೀತಿಫಾರಂಗಳು, ಬ್ಯಾಂಕಿಗೆ ಸಂಬಂಧಪಟ್ಟ ತರಹದ ಬ್ಯಾಲನ್ಸ್‌ಷೀಟುಗಳು, ಆಫೀಸುಗಳಿಗೆ ಸಂ ಪಟ್ಟ ಇಂಡಾಂಗೆ ರಿಜಿಸ್ಟರುಗಳು, ನಾಟಕದ ನೋಟಿ ಗಳು, ಕುಸ್ತಿ ನೋಟೀಸುಗಳು, ತರಹಾವರಿ ಟಿಕೀಟು ವಾಲ್‌ನೋಟೀಸುಗಳು ಮುಂತಾದ ಇನ್ನೂ ಅನೇಕ ನೆಯ ಕೆಲಸಗಳು ಗಿರಾಕಿಗಳ ಮನಪ್ರೊಪ್ಪುವಂತೆ ಕ ಸರಿಯಾಗಿ ಪ್ರಿಂಟ್ ಮಾಡಿಕೊಡುತ್ತೇವೆ. ಒಂದಾ ನಮ್ಮಲ್ಲಿ ಕೆಲಸವನ್ನು ಮಾಡಿಸಿದಲ್ಲಿ ತಮಗೇ ವೇದ್ಯ ತ್ತದೆ. ಗಿರಾಕಿಗಳ ಅನುಕೂಲತೆಗೋಸ್ಕರ ಪ್ರಿಂಟಿಂಗ ರ್ಜುಗಳು ಬಹಳ ಕಡಿಮೆಮಾಡಲ್ಪಟ್ಟಿರುತ್ತೆ. ಪರ ನರು ತಮ್ಮ ಸ್ಥಳದಲ್ಲಿದ್ದಂತೆಯೇ ಅಚ್ಚುಹಾಕಿಸಲು ಸೌಕರ್ಯಗಳು ಮಾಡಲ್ಪಟ್ಟಿರುತ್ತವೆ. ಅಪೇಕ್ಷಕರು ಗೆಯ ಸ್ಟ್ಯಾಂಪಿನೊಡನೆ ತಮ್ಮ ಅಭಿಪ್ರಾಯವನ್ನು ತಿ ಡಿಸಿದಲ್ಲಿ ಅನುಕೂಲತೆಗೆ ತಕ್ಕಂತೆ ರಿಪ್ಲೈ ದೊರೆಯು

ಮ್ಯಾನೇಜರ್.

R. FRAMJEE,

General Merchant, Commissio[n] Agent, Auctioner and Gent's Outfitter.

JUST RECEIVED.

Fresh Consignment of Piece Good[s] Various Kinds, Stationery, Hosiery, [Pa]tent Medicines etc., etc.

Goods available at the lowest market rates.

Prices Fixed.

TO LET

ಕೊಡಗು ನಾಡ ಚರಿತ್ರೆ

ಕೊಡಗಿನ ಚರಿತ್ರೆಯನ್ನು ತಿಳಿಸುವ ಪ್ರ ಯೊಬ್ಬ ಕನ್ನಡಿಗನು ಓದತಕ್ಕ ಪುಸ್ತಕ !

ಕರ್ನಾಟಕ ಇತಿಹಾಸ ಸಂಶೋಧಕರಿಗೆ ಕೃಪಿ

ಕೊಡಗಿನವರಿಗೆ ತಮ್ಮ ದೇಶದ ಚರಿತ್ರೆಯು ಪ್ರೀ

ಇಂತಹ ಪುಸ್ತಕದ ಬೆಲೆಯಾದರೂ ಮುಖೇ

ಮೂರು ಅಣೆ !

3 ಅಣೆಯ ಅಂಚೆ ಚೀಟನ್ನು ಕಳುಹಿಸಿ—

ಎಸ್. ಶಿವ ... ,

ಜನರಲ್ ಮರ್ಚೆಂಟ್ ...

... ಗುರುದೇವ ...

... ಚರಾಗಿ ...

Printed and Published by ... Sas[try] at The Sreenivasa Pr[ess] ... "Kod[agu] Ltd." ... 10-6 ... ಗೆ ಗಷಂಡ ಸಂದ ... ರದೆ ಇರುತ್ತೆ ... ತಮಗೆ ಯೂ

ವರ್ತಮಾನ ಸಂಗ್ರಹ

ಒಳದೇಶ.

ಮಳೆಗಾಲವು ಸರಿಯಾಗಿ ಪ್ರಾರಂಭಿಸಿದೆ, ರೈತರೆಲ್ಲರು ತಮ್ಮ ನೇಗಿಲು ಮತ್ತು ಬಿತ್ತನೆ ಕೆಲಸಗಳಲ್ಲಿ ಜಾಗರೂಕರಾಗಿರುತ್ತಾರೆ

* * *

ನಾಪೋಕ್ಲು ಆಸ್ಪತ್ರೆಯ ಕಂಪೌಂಡರನ್ನು, ಶ್ರೀಮಂಗಲ ಆಸ್ಪತ್ರೆಗೆ ಒಬ್ಬನು ಆಗಬೇಕಾದುದರಿಂದ ಅವನನ್ನು ತೆಗೆದು ಶ್ರೀಮಂಗಲಕ್ಕೆ ವರ್ಗಮಾಡಿದ್ದಾರೆಂದು ತಿಳಿಯುತ್ತೇವೆ.

ಕಳೆದವರ್ಷ ಹೊಸದಾಗಿ ಕೆಲಸಕ್ಕೆ ನೇಮಕವಾದ ಸಬ್ ಪೋಲೀಸ್ ಇನ್ಸ್‌ಪೆಕ್ಟರ್ ಅಟ್ರಂಗಡ ಚೆಣ್ಣಪ್ಪನವರು ತನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟಿರುತ್ತಾರಾಗಿ ತಿಳಿಯುತ್ತೇವೆ.

* * *

ಹುದಿಕೇರಿಯಲ್ಲಿ ಹಿಂದೂಮುಸಲ್ಮಾನರಿಗೆ ಆದ ಜಗಳವನ್ನು ಅಡಗಿಸುವ ಉದ್ದಿಷ್ಟ ಉದಾಸೀನವಾಡಿದರೆಂಬದಕ್ಕಾಗಿ ಅಲ್ಲಿಯ ಸಬ್‌ಇನ್ಸ್‌ಪೆಕ್ಟರ್ ಕೋದಾಂಡ್ರ ಮುದ್ದಪ್ಪನವರನ್ನು ತತ್ಕಾಲಕ್ಕೆ (ಸಸ್‌ಪೆಂಡ್) ಕೆಲಸವಿಲ್ಲದೆ ಮಾಡಿರುತ್ತಾರಾಗಿ ತಿಳಿಯುತ್ತೇವೆ

* * *

ಕುಚ್ಚಮಾಡನಾಣಯ್ಯನವರು ಯಫ್ ಎಲ್ ಪರೀಕ್ಷೆಯಲ್ಲಿ ಎರಡನೆ ತರಗತಿಯಲ್ಲಿ ತೇರ್ಗಡೆ ಹೊಂದಿರುತ್ತಾರೆ ಇವರು ಕಳೆದ ವರುಷ ಸರಕಾರಿ ನೌಕರಿಗೆ ಸೇರಬೇಕೆಂದಿದ್ದವರು ಕಾರಣಾಂತರದಿಂದ ವಿದ್ಯೆಯನ್ನು ಮುಂದರಿಸಿ ಪ್ರಥಮ ವರ್ಷದಲ್ಲೆ ತೇರ್ಗಡೆ ಹೊಂದಿದ್ದು ಶ್ಲಾಘನೀಯವಾದದ್ದು

* * *

ಕಳೆದ ತಿಂಗಳಲ್ಲಿ ಕಿಗ್ಗಟ್ಟುನಾಡು ತಾಲ್ಲೋಕಿನ ಚಿಕ್ಕಪಣ್ಣದಲ್ಲಿ ಕೊಡಗರ ಒಂದು ಲಗ್ನ ಮೆರವಣಿಗೆಯು ವಾದ್ಯದೊಡನೆ ಅಲ್ಲಿಯ ಮುಸಲ್ಮಾನರ ಮಸೀದಿಗಾಗಿ ಹೋಗುತ್ತಿದ್ದ ವೇಳೆಯಲ್ಲಿ, ಅಲ್ಲಿಯಣ ಮುಸಲ್ಮಾನರು ಅವರ ಮೇಲೆ ಬಿದ್ದು, ಉಭಯಕಡೆಯವರಿಗೂ, ಹೊಡೆದಾಟವಾಯಿತೆಂದು ತಿಳಿಯುತ್ತೇವೆ. ಇದೇ ಹಿಂದುಮುಸಲ್ಮಾನರ ಜಗ್ಗಟ್ಟು.

* * *

ಮಹಾತ್ಮ ಗಾಂಧಿಯವರ ಉಪದೇಶವೇನು—ಖಿಲಾಫತ್ತು ಎಂಬದಾಗಿಯೂ, ಹಲವು ತರದ ಮೀಟಿಂಗಿನ ಅರ್ಥವೇನು ಕೇರಿಯ ಮುಸಲ್ಮಾನರಿಗೆ ಯಾವ ವಿಚಾರಗಳು ಇನ್ನೂ ತಿಳಿದಿಲ್ಲವೆಂದು ಇದರಿಂದ ಸ್ಪಷ್ಟವಾಗುತ್ತೆ ಇದನ್ನು ನೋಡುವಾಗ್ಗೆ ಕೊಡಗು ಖಿಲಾಫತ್ತು ಕಮಿಟಿಯವರ ಶೋಚನೀಯವಾದ ಕಾರ್ಯನಿರ್ವಾಹಕತ್ವವೋ ಎಂದು ಸಂಶಯವುಂಟಾಗಿದೆ

* * *

ಈವರ್ಷ ನೇಶನಲ್ ಯೂನಿವರ್ಸಿಟಿಯಲ್ಲಿ ಬಿ ಎ ಪರೀಕ್ಷೆಯಲ್ಲಿ, ಎಲ್ಲ ಚಂದ್ರ ಬೆಳ್ಯಪ್ಪನವರು ತೇರ್ಗಡೆ ಹೊಂದಿದ್ದುಕ್ಕೆ ನಾವು ಬಹಳ ಸಂತೋಷ ಪಡುತ್ತೇವೆ, ಇವರು ದೇಶಸೇವೆಗೋಸ್ಕರವೇ, ನೇಶನಲ್ ಕಾಲೇಜಿಗೆ ಸೇರಿದ್ದೆಂದೂ ಈಗ ಪತ್ರಿಕೆಯನ್ನು ನಡಿಸುವ ಕೆಲಸವನ್ನು (Journalism) ಕಲಿಯಲಿಕ್ಕೆ, ಮದ್ರಾಸಿಗೆ ತೆರಳುತ್ತಾರೆಂದೂ ಕೇಳುವ ವರ್ತಮಾನವಿದೆ

* * *

ಕೊಡಗಿನಲ್ಲಿ–ಅನೇಕ (ಪ್ರಯಾಣಕ್ಕೆ ಅನುಕೂಲವಾದ ದೋಣಿಕಡವುಗಳನ್ನು ಮುಚ್ಚುವುದಾಗಿ ತಿಳಿಯುತ್ತೇವೆ. ಹೀಗೆ ಮುಚ್ಚಿದರೆ, ಮಳೆಗಾಲದಲ್ಲಿ ರೈತರಿಗೆ ಎಷ್ಟು ಅನಾನುಕೂಲಗಳುಂಟಾಗುತ್ತವೋ ಎಂಬದು ತಿಳಿಯದು ಇವುಗಳ ಪೈಕಿ ಪಾಡಿನಾಡು ತಾಲ್ಲೋಕಿನ ಮತ್ತು ಬೆಪ್ಪುನಾಡಿನ ಜನರಿಗೆ ಅತ್ಯಂತ ಅನುಕೂಲವಾದ ಬೆಪ್ಪುನಾಡು ದೋಣಿಕಡವನ್ನು ಮುಚ್ಚಿದುದಾಗಿ ತಿಳಿಯುತ್ತೇವೆ ಹೀಗೆ ಮಾಡಿದರೆ, ಜನರ ಕಷ್ಟವನ್ನು ವರ್ಣಿಸಲಾಗದು

* *

ಮಡಿಕೇರಿಗೆ, ಮೂರ್ನಾಡಿಯಲ್ಲಿ ಮುನಿಸಿಪಲ್ ಕರಡ ದ್ವಿನೊಳಗೆ ಮತ್ತು ಹೊರಗೆ ಇದಕ್ಕೆ ಮುಟ್ಟಿಕೊಂಡಿರುವ, ಉಳಿಸ್ಪಟ್ಟ ಕಾಡುಗಳನ್ನು ದನಗಳ ಚರಾವಿನ ಬಗ್ಗೆ ಇಡಬೇಕಾಗಿಯೂ, ಈ ಕಾಡುಗಳಿಂದ ಪ್ರತಿ ವರ್ಷವೂ ... ಸ್ಟ ಇಲಾಖೆಯವರು, ಸವುದೆ ಕಡಿದು ಹರ್ರಾಜು ... ವುದನ್ನು ಮನ್ನಮಾಡಿ, ಅಂಥಾ ಸವು ... ಲ್ಲಿ ಆವಸಾಯಿಸಿ, ಕುರುಬನರಿಗೆ ಚಿಲ್ಲರೆಗಾಗಿ ಕಮಿಷನ್ ಮಾಡಬೇಕಾಗಿಯೂ, ಮುನಿಸಿಪ ... ಸರಕಾರದವರನ್ನು ಕೇಳಿಕೊಂಡ ... ನರ್ ಸಾಹೇಬರವರ, ಕೈಕೇರಿಗಪ್ಪ ಜಿರಗೆ, ... ಗಿದೆ.

ಬೊ ಕಾಪನ, ಸೋಲಾಪುರ

ಭತ್ತ—ಕರಾರ್‌ವರೆಗೆ ಮಳೆಯಿಲ್ಲದೆ ಬಹಳ ಬೇಸರಿಕೆ ಪಡುತ್ತಿದ್ದ ನಮ್ಮಗಳಿಗೆ ಈ ಎರಡು ದಿವಸಗಳಿಂದ ಮುಂಗಾರು ಶುರು ಆಗಿರುವದು ಬಹಳದೊಡ್ಡ ಭಾಗ್ಯವಾಗಿಯತ್ತದೆ ಈವರುಷದ ಗದ್ದೆ ಸಾಗುವಳಿ ಕೆಲಸವು ಹಿಂದಾದರೂ ಸಹ ಇನ್ನು ಮೇಲೆ ಯಾವ ಅಭ್ಯಂತರವು ಇಲ್ಲದೆ ರೈತರು (ಜುರುಕು) ತ್ವರೆಮಾಡಿಯಾರಾಗಿ ನಂಬುತ್ತೇನೆ ಆಗಲೆ ಕೆಲವು ಕಡೆ ಬೀಜಗಳನ್ನು ಹಾಕಲು ಪ್ರಾರಂಭಿಸಿದೆ

ಕಾಫಿ—ಈ ವರುಷದ ಹೂವಿನಮಳೆಯೂ ಬಹಳ ಜೋರಾಗಿಯೂ, ನೆಲದಲ್ಲು ಕೃತ್ಯವು ಹೆಚ್ಚಾಗಿರುವದರಿಂದಲೂ ಮತ್ತು ಮಳೆ ಮೋಡಗಳು ಬಹಳಮಟ್ಟಿಗೆ ಕಾಣಿಸಿಕೊಂಡದ್ದರಿಂದ ಈ ಪ್ರಾಂತ್ಯದ ಕಾಫಿತೋಟಗಳಲ್ಲು ಅದಂತಾ ಫಸಲಿನ ಹೂವು ಬಹಳಮಟ್ಟಿಗೆ ಹಾಳಾದವು ಕೆಲವು ಕಡೆಗಳಲ್ಲು ಹತ್ತರಲ್ಲು ಒಂದುಪಾಲು ಫಸಲು ಸಂತಹಾಗಿ ತೋರುವುದಿಲ್ಲವು. ಇದು ಪ್ಲಾಂಟರುಗಳಿಗೆ ಮಹತ್ತಾದ ಪೆಟ್ಟಾಗಿರುತ್ತದೆ ಹೀಗೆಯೇ ಈ ಕಳೆದ ಮೂರು ವರುಷಗಳಿಂದಲೂ ಈ ಕಡೆ ನಡದಂತೆ ಇನ್ನು ಮುಂದಕ್ಕೂ ಆದದ್ದೇ ಆದರೆ ಬಹಳ ಜನರು ಅವರವರ ಕಾಫಿ ತೋಟಗಳನ್ನು ತ್ಯಜಿಸಬೇಕಾಗಬರಬಹುದೆಂಬ ಹೆದರಿಕೆ ಹುಟ್ಟಿರುತ್ತದೆ ಪೊಳೇಬೆಟ್ಟದಲ್ಲು ಕಾಫಿ ತೋಟಗಳು ದಿನೇದಿನೆ ಹೀನಸ್ಥಿತಿಗೆ ಬರುವ ಹಾಗೆ ತೋರುತ್ತದೆ

ಕಂಪನಿ ತೋಟಗಳು—ಈ ಕಡೆ ಅತಿ ಪ್ರಬಲವಾಗಿರುವ ಮೇಕ್ಸೇಶನ್ ಕಂಪನಿಯ ಕಾಫಿ ತೋಟಗಳ ಪೈಕಿ ಬಹಳಕಡೆ ಇದ್ದ ಯೂರೋಪಿಯನ್ ಮ್ಯಾನೇಜರುಗಳನ್ನು, ಸೂಪರಿಂಟೆಂಡೆಂಟರನ್ನು ವಜಾತಮಾಡಿ ಈಗ್ಯೆ ಎಲ್ಲಾ ಕಡೆಯಲ್ಲೂ ಇಂಡಿಯನ್ (ಸ್ವದೇಶದ) ಮ್ಯಾನೇಜರುಗಳನ್ನು ನೇಮಿಸಿರುತ್ತಾರೆ ಇದು ಖರ್ಚನಬಾಬು ಕಮ್ಮಿಮಾಡಿದುದಲ್ಲದೆ ತೋಟಗಳ ಮ್ಯಾನೇಜುಮೆಂಟ್ಟು ಸಹ ದ್ವಿಗುಣದವುಟ್ಟಿಗೆ ಅನುಕೂಲ ಉಂಟೆಂಬುದೇ ಈಗಿನ ಜನರಲ್ ಮ್ಯಾನೇಜರವರ ಆಲೋಚನೆಯಾಗಿರುತ್ತದೆ ಹೀಗಿರುವಾಗ್ಯೆ ಯಾಕೆ ತಾನೆ ನಮ್ಮ ಸ್ವದೇಶದ ಜನರು ಎಲ್ಲಾ ಬಾಬಿನಲ್ಲಿಯೂ ಯಾಕೆ ಇನ್ನೂ ಮುಂದಾಳಾಗಿರಬಾರದು ಈ ಕಂಪನಿ ತೋಟಗಳಲ್ಲು ಈ ವರುಷ ಒಂದು ಸಾವಿರ ಎಕರುವರೆಗೆ ತೋಟಗಳನ್ನು ಪಾಳುಬಿಟ್ಟು ಕೆಲಸ ಬಾಕಿಮಾಡಿ ಒಳ್ಳೆಯ ಸ್ಥಿತಿಯಲ್ಲಿರುವುವುಗಳನ್ನು ರೂಢಿಪಡಿಸಿಕೊಂಡು ಬರಲು ಏರ್ಪಾಡು ಆಗಿರುತ್ತದೆ. ಇದೇ ಅಗಲವಾಗಿ ಮಾಡುವದಕ್ಕಿಂತ ಆಳವಾಗಿ ಮಾಡಬೇಕೆಂಬುವದರ ಒಂದನೇ ಪಾಠ ಯಾ, ಹುಟ್ಟು. ಇದನ್ನು ಅನುಸರಿಸಿ ನಡೆಯಲು ನಮ್ಮ ದೇಶದಲ್ಲು ಬಹಳ ಜನರು ತ್ವರಿತದಲ್ಲಿದ್ದಾರೆ

ಅಮ್ಯೆಚರ ಮಯಸಂಘವು—ಇದೇ ಸ್ಥಳದಲ್ಲು ಕೆಲವು ವರುಷಗಳ ಹಿಂದೆ ಹುಟ್ಟಿ ಬೆಳೆದಂತಾ ಅಮ್ಯೆಚರಮಯಸಂಘವು ಕೊಡಗಿನಲ್ಲು ಬೇರೂರಿದ್ದು ನೋಡಿದರೆ ಬಹಳಮಟ್ಟಿಗೆ ಸಂತೋಷಪಡಬೇಕಾಗಿದೆ ಈಗ್ಯೆ ಇದರ ಮುಖ್ಯಸ್ಥಳವಾಗಿ ವೀರರಾಜಪೇಟೆಯಲ್ಲು "ಟೆಂಪರೆನ್ಸ್ ಹಾಲ್" ಎಂಬದಾಗಿ ನೆಲೆಗೊಂಡಿದೆ ಈ ಹಾಲಿನಲ್ಲು ಮುಖ್ಯತ್ವಾಗಿ ನಾನಾ ತರಹದ ಲೇಖನಗಳನ್ನು, ಪುಸ್ತಕಗಳನ್ನು ಮತ್ತು ಪರಗಳನ್ನು ಓದಲು ತಕ್ಕ ಏರ್ಪಾಡು ಮಾಡಿರುತ್ತದೆ ಈ ಸಂಘಕ್ಕೆ ಪ್ರೆಸಿಡೆಂಟರಾದ ಮೇ ಹೊರೇಸ್, ರಾಬಿನ್‌ಸನ್ ದೊರೆಗಳು ಸಾಧಾರಣ 74 ವರುಷ ಪ್ರಾಯಪ್ರಬುದ್ಧರಾಗಿಯೂ ಕೂಡ, ಅವರು ಕೆಲವು ತಿಂಗಳ ಹಿಂದೆ ಬಹಳಮಟ್ಟಿಗೆ ಅಸ್ವಸ್ಥದಲ್ಲಿದ್ದು ಈಗ ದೇವರ ಕಟಾಕ್ಷದಿಂದ ಪೂರ್ತಿ ಸೌಖ್ಯ ಹೊಂದಿರುತ್ತಾರೆ ಅವರು ನಮ್ಮ ಈ ದೇಶಕ್ಕೆ ಮಾಡಿರುವ, ಯಾ, ಏರ್ಪಾಡುಮಾಡಿದ ಈ ಅಮ್ಯೆಚರಮಯಸಂಘವನ್ನು ದೀರ್ಘಾಯುಷ್ಯ ನಿತ್ತು ಕಾಪಾಡಲೆಂದು ಬೇಡುತ್ತೇವೆ.

ಪೊಳ್ಳಿಬೆಟ್ಟ ಆಟದ ಸಂಘ-ಪೊಳ್ಳಿಬೆಟ್ಟದ "ಅತ್ಲೆಟಿಕ್ ಯೂನಿಯನ್" ಈ ಯೂನಿಯನ್ ಸಂಘದವರು ಸಂಪ್ರತಿ ನಡೆದುಬರುವ "ಹಾಕಿ" ಆಟವು ಇದೇ ತಾ|| 13ನೇ ಸೋಮವಾರದಿಂದ ಶುರು ಆಗಿರುತ್ತದೆ ಇದರ ಮೆಂಬರುಗಳು ಮತ್ತು ಹಾಕಿ ಇರುವ ಎಲ್ಲಾ ಮೆಂಬರುಗಳನ್ನು ಈ "ಹಾಕಿ" ಆಟ ಆಡಲು ಈ ಬಾಗಾಯಿತು ಪ್ರತಿ ಸೋಮವಾರವು 4 ಘಂಟೆಗೆ ಪೊಳ್ಳಿಬೆಟ್ಟದ ಮೈದಾನಕ್ಕೆ ಬರಲು ಕೋರುತ್ತೇವೆ ಈಸಂಘದ ವಾರ್ಷಿಕ ಮೀಟಿಂಗೂ ಇದೇ ಜೂನ್ ತಾ|| 26 ನೇ ಆದಿತ್ಯವಾರ ನಡೆಸಲು ನಿಶ್ಚೈಯಿಸಿರುತ್ತಾರೆ ಆ ದಿನ ಎಲ್ಲಾ ಮೆಂಬರುಗಳು ದಯವಿಟ್ಟು ಬರಬೇಕು

ಕೊ, A. ellion**ಟರ್ ಸಾಹೇಬರು**—ನಮ್ಮ ಕೊಡಗ ... ಹೇಬರು ಈಗ 9 ದಿವಸಗಳಿಂದ ... ಮಾಡಿಕೊಂಡು ಇದ್ದಾರೆ ... ಕಾರಿ" ಯಾಗಿರುವದರಿಂದ ... ಬರಲು ಆಗಾಗ್ಯೆ ಇಲ್ಲಿಂದ ... ರು ಈ ಕಮಿಷನರ್ ಪದವಿ ... ನಮ್ಮ ಕೊಡಗಿಗೆ ತೊಸ ... ಎಷ್ಟರಮಟ್ಟಿಗೆ ... ಕ್ಕಾದೊ ... ಪದ

Outfi[tters]

MERCARA

JUST RECE[IVED]

Fresh Con[sig]nment of

Various Kind[s of] ... Hos[iery] ...

tent Medicines etc etc

Goods available at the lowest

market rates

Prices Fixed.

ಕ್ರಿಡಿಟ್ಸ್ ಕೋ|ಆಪರೇಟಿವ್‌ಸಂಘ—ಪೊಳ್ಳಿಬೆಟ್ಟದ ಕೋ ಆಪರೇಟಿವ್ ಕ್ರಿಡಿಟ್ ಸಂಘವು ತಹಾಬಾ ವರೆಗೆ ನಡ-ದಂತಾ ಕ್ರಮಗಳನ್ನು ಮತ್ತು ರಿಯಾಯಿತಿಗಳನ್ನು ಇದೇ ತಾರೀಖು ಜೂನು 27 ನೇ ಸೋಮವಾರದ ದಿನ ಮಧ್ಯಾಹ್ನ 2 ಘಂಟೆಗೆ ಇಲ್ಲಿ ಜನರಲ್ ಮೀಟಿಂಗ್ ನಡಿಸಿ ಸಂಘದ ಪೂರ್ತಿಮೆಂಬರುಗಳ ಮುಂದಿಡಲು ಏರ್ಪಾಡಾಗಿರುತ್ತದೆ ಎಲ್ಲಾ ಸಂಘಗಳಂತೆ ಈ ಸಂಘವು "ಕೋ ಆಪ್‌ರೆಟಿವ್ ಸೆಂಟ್ರಲ್‌ಬ್ಯಾಂಕಿನ" ಎದುರುದಾರಿ ನೋಡಿಕ್ಕಲಿದೆಯಷ್ಟೆ ಇದುಯಾವಾಗ ನಮ್ಮ ಈ ಚಿಕ್ಕ ದೇಶಕ್ಕೆ ಒದಗುತ್ತದೊ? ಎಂಬ ಹೆಚ್ಚಿನ ಆಶೆಯಲ್ಲಿರುವ ಒಬ್ಬ "ಬಾತ್ಮಿದಾರ"

ವಿನೋದ ವೃತ್ತಾಂತಗಳು.

ಸ್ಕಾಟ್ಲೆಂಡ್ ದೇಶದ ಒಂದು ಗ್ರಾಮದಲ್ಲಿ ಇಬ್ಬರು ಅಣ್ಣತಮ್ಮಂದಿರಿರುವರು ಇವರು ಅವಳಿಜವಳಿ ಮಕ್ಕಳು, ಈಗ ಅವರಿಗೆ 95 ವರ್ಷ ಇದುವರೆಗೂ ಒಂದು ದಿನವಾದರೂ ಕಾಯಿಲೆ ಮಲಗಿದವರಲ್ಲ ಒಂದು ದಿನ ರಾತ್ರಿಯೂ ಮನೆಬಿಟ್ಟು ಕದಲಿದವರಲ್ಲ

* * *

ಜಪಾನ್ ದೇಶದಲ್ಲಿ ಜಾಕುಲ್ಲನ್ನು ಹಲವು ಕೆಲಸಗಳಿಗಾಗಿ ಉಪಯೋಗಿಸುತ್ತಾರ ಇದರಿಂದ ಗೋಣಿಯ ಚೀಲಗಳನ್ನೂ ಚಾದರಕ್ಕೆಗಳನ್ನೂ, ಮಳೆ ಅಂಗಿಗಳನ್ನೂ ಮೇಲ್ಪಾವಣೆಯನ್ನೂ ಚಾಪೆಗಳನ್ನೂ ತೆರೆಗಳನ್ನೂ ಹಾಸಿಗೆಗಳನ್ನೂ ಇನ್ನೂ ಅನೇಕ ಸಾಮಾನುಗಳನ್ನೂ ಮಾಡುತ್ತಾರೆ.

ಗರಗಸದಿಂದ ಕೊಯ್ಯುವಾಗ ಬೀಳುವ ಮರದ ಪುಡಿಯು ಬಹಳ ಪ್ರಯೋಜನಕಾರಿಯಾದದ್ದು ಒಲೆಗೆ ಹಾಕಬಹುದು. ಆಗ್ಸಾಲಿಕ್ ಆಸಿಡ್ಡೆಂಬ ದ್ರವ ಮತ್ತು ಆಲ್ಕೋಹಾಲ್ ಇವನ್ನು ತಯಾರ್ಮಾಡಬಹುದು. ಬಣ್ಣಗಳನ್ನೂ ತಯಾರ್ಮಾಡಬಹುದು

ಯಾರ್ಕ್ಷೈರಿನಲ್ಲಿರುವ ಜನರ ತಲೆಬುರುಡೆಯು ಅತ್ಯಂತ ಕಠಿಣವಾದದ್ದು

ಲಂಡನ್‌ಪಟ್ಟದಲ್ಲಿ ಕಿರೀಟಧಾರಣೆಕಾಲದಲ್ಲಿ ಸಭೆ ಸೇರಲು ಒಂದು ಮಂಟಪವಿರುವುದು ಇದರಲ್ಲಿ 20 000 ಜನರು ನೆರೆಯಬಹುದು.

ಹುಲಿಗಳ ಮತ್ತು ಸಿಂಹಗಳ ಶ್ವಾಸಗಳು ಬಹಳ ದುರ್ಬಲವಾದದ್ದರಿಂದ ಅರ್ಧ ಮೈಲಿಗೆ ಹೆಚ್ಚಾಗಿ ಓಡಲಾರವು.

ಅಮೇರಿಕಾಖಂಡದ ಸಯುಕ್ತಸಂಸ್ಥಾನದಲ್ಲಿ ಪ್ರತಿಯೊಂದು 10,000'000 ಜನರಿಗೂ 60 ನಾಟಕಶಾಲೆಗಳಂತೆ ಬೇಕಾದಂತೆ ನಾಟಕಶಾಲೆಗಳಿವೆ

ಅತ್ಯಂತ ದೊಡ್ಡದಾದ ಆಕಾಶಬುಟ್ಟಿಯು ಜರ್ಮನಿದೇಶದ ಗನ್‌ಸ್ಪೆಂಡ್ ಎಂಬಾತನಿಂದ ತಯಾರ್ಮಾಡಿಸಲ್ಪಟ್ಟಿತು ಇದರ ಪರಿಮಾಣವು 20,000 ಘನಗಜಗಳು ಇದರ ತೂಕ 21½ ಅರ್ಧ ಟನ್‌ಗಳು

ಆಡಿಸ್ಟರಿನಲ್ಲಿ ಒಬ್ಬನು ಒಬ್ಬಳನ್ನು, ಮೋಹಿಸಿದ್ದನು ಆಕೆಯು ಸತ್ತನಂತರ ಪ್ರತಿದಿನ ರಾತ್ರಿಯು ಸತ್ತ ಸ್ಥಳಕ್ಕೆ ಹೋಗಿ ಒಂದು ಘಂಟೆಕಾಲ ನಿಶ್ಶಬ್ದವಾಗಿ ನಿಂತಿರುತ್ತಿದ್ದನು ಹೀಗೆ 15 ವರ್ಷಗಳಕಾಲ ಮಾಡಿ ಆತನು ಕಾಲವಾದನು

ಜಪಾನ್‌ದೇಶದ ಕುಮಾಮೋಟೋ ಎಂಬ ಸ್ಥಳದಿಂದ 30 ಮೈಲಿಗಳ ದೂರದಲ್ಲಿ ಜ್ವಾಲಾಮುಖಿಯ ಅಡಿಯಲ್ಲಿ 20 000 ಜನಗಳು ಸುಖವಾಗಿ ಜೀವಿಸುತ್ತಿರುವರು ಇಲ್ಲಿಯ ಜನರು ಆ ಸ್ಥಳ ಬಿಟ್ಟು ಕದಲುವದಿಲ್ಲ

ಕೆಲವರು ಪಿಯಾನ ಮೊದಲಾದ ವಾದ್ಯಗಳನ್ನು ಅಲ್ಪಕಾಲ ಬಾರಿಸಿದರೆ ಬೇಸರಪಡುವರು ಆದರೆ ಮೈಲಾನ್ ಪಟ್ಟದಲ್ಲಿ ಬಾನ್‌ಕಿಯನಾಯಿಂಬಾತನು 50 ಘಂಟೆ ಕಾಲ ಎಡೆಬಿಡದೆ ಬಾರಿಸಿದನಂತೆ

ಆನೆಗೆ ... ಮಾತ್ರವೆ ಅದರ 14ನೆಯ ವರ್ಷದಲ್ಲಿ ಈ ಹಲ್ಲುಗಳದರ ಎರಡನೇಸಲ ಹುಟ್ಟುವವು

ಲಂಡನ್ ಪಟ್ಟಣದ ಅಂಚೆ ವ್ಯಾಪಾರಿಗೆ ಪ್ರತಿದಿನವೂ 1 67 000 ಕಾಗದಗಳು ಟಪಾಲಿನಲ್ಲಿ ಬರುವವು. ಪ್ರತಿನಿತ್ಯವೂ 1,32,000 ಕಾಗದಗಳನ್ನು ರವಾನೆಮಾಡುವನು

ಫ್ರಾನ್ಸ್ ದೇಶದಲ್ಲಿ 2000 ಜನರಿಗಿಂತಲೂ ಹೆಚ್ಚಾಗಿ ಜೂಜ ಏನಿಷ್ಟರನ್ನು ತಿಳಿಸಿ ಜೀವನವನ್ನು ಮಾಡುತ್ತಾರೆ. ವರ್ಷಕ್ಕೆ ಅವರಿಗೆ 8 00 000 ಪೌಂಡುಗಳು ಸಂಪಾದನೆ.

ಹಂಗೇರಿಯಲ್ಲಿ ಪ್ರತಿತಿಂಗಳಲ್ಲೂ ಒಂದು ಸಂತೆ ನಡೆಯುವುದು ಇದರಲ್ಲಿ ಮಕ್ಕಳನ್ನು ಮಾರಾಟಕ್ಕೆ ತರುವರು ಮಕ್ಕಳಿಲ್ಲದವರು ತಮಗೆ ಬೇಕಾದ ಮಕ್ಕಳನ್ನು ಸ್ವೀಕರಿಸುವರು

ಮೆಕ್ಸಿಕೋ ದೇಶದಲ್ಲಿ ಒಂದು ಜಗೆಯ ಪಕ್ಷಿ ಇರುವುದು. ಗಿಡಗಳಿಂದ ಗಲೆಯನ್ನು ಮುಚ್ಚಿಕೊಂಡು ಪುಷ್ಪದಂತೆ ಕಾಣುತ್ತಾ ಜೇನಿಗಾಗಿ ಬರುವ ಜೇನುನೊಣಗಳನ್ನು ಕೊಂದು ತಿನ್ನುವದು

ಜ್ವಾಲಾಮುಖಿ ಪ್ರದೇಶಗಳಲ್ಲಿ ಇದ್ದಕ್ಕಿದ್ದಹಾಗೆ ದ್ವೀಪಗಳು ಮಾಯವಾಗುವವು ಹಿಂದೆ ಫಾಲ್ಕನ್ ದ್ವೀಪವು 12 ವರ್ಷ ಕಾಲ ಜಲ್ಲೀ ಅಭಿವೃದ್ಧಿಸ್ಥಿತಿಯಲ್ಲಿದ್ದು ಒಂದು ... ಕಡಿದ ತಂದ ತಿಂಗಳು ... ಮಾಯವಾಯಿತು

ಪ್ರಪಂಚದಲ್ಲೆಲ್ಲಾ ಒಟ್ಟು 2754 ಭಾಷೆಗಳನ್ನು ಆಡುವರು.

* * *

ಕೊಡೆಯ ಪ್ರಯೋಜನವು ಇಂಗ್ಲಂಡ ದೇಶದಲ್ಲಿ 1708 ನೇ ಇಸವಿಯವರೆಗೆ ತಿಳಿದಿರಲಿಲ್ಲ.

* * *

ಪ್ರತಿವರ್ಷದಲ್ಲೂ ಪ್ರಪಂಚದಲ್ಲೆಲ್ಲಾ ಒಟ್ಟು 6,50 000 ಟನ್‌ಗಳಷ್ಟು ಕಾಫಿ ಖರ್ಚಾಗುತ್ತದೆ.

* * *

ಕಾವನ್ನು ಗೊತ್ತು ಮಾಡುವ ಉಷ್ಣಮಾಪಕ ಯಂತ್ರವು 1726 ನೇ ಇಸವಿಯಲ್ಲಿ ಕಂಡು ಹಿಡಿಯಲ್ಪಟ್ಟಿತು.

* * *

ಯೂರೋಪಿನ ಕುಸ್ತಿಗಾರನ (ಬಾಕ್ಸರ್) ತಯಾರಿ ವೆಚ್ಚ ಒಂದು ವಾರಕ್ಕೆ 60 ಪೌಂಡುಗಳೆಂದು (900 ರೂಪಾಯಿ) ಗೊತ್ತಾಗಿದೆ.

* * *

ಕ್ಯಾಲಿಫೋರ್ನಿಯಾ ಎಂಬ ಸ್ಥಳದಲ್ಲಿ ಅತ್ಯಂತ ಪುರಾತನವಾದ ಒಂದು ವೃಕ್ಷವಿದೆ. ಇದರ ಎತ್ತರ 375 ಅಡಿಗಳು, ಗಾತ್ರ 100 ಅಡಿಗಳು.

* * *

ಗುಂಡುಸೂಜಿಗಳು ಮೊದಲು 1543 ನೇ ವರ್ಷದಲ್ಲಿ ಫ್ರಾನ್ಸ್ ದೇಶದಲ್ಲಿ ತಯಾರು ಮಾಡಲ್ಪಟ್ಟವು. ಇವು ತಯಾರಾಗುವುದಕ್ಕೆ ಮುಂಚೆ ಮುಳ್ಳುಗಳನ್ನು ಉಪಯೋಗಿಸುತ್ತಿದ್ದರು.

* * *

ಅತ್ಯಂತ ಉತ್ಕೃಷ್ಟವಾದ ನಾಟಕಶಾಲೆಯು ಫ್ರಾನ್ಸ್ ದೇಶದಲ್ಲಿ ಕಟ್ಟಲ್ಪಟ್ಟಿದೆ. ಇದು ಬಿಳಿಯಾದ ಕಲ್ಲಿನಿಂದ ಕಟ್ಟಲ್ಪಟ್ಟಿದೆ. ಅಡಿಭಾಗವೆಲ್ಲಾ ಅಮೃತಶಿಲೆಯಿಂದ ಕಟ್ಟಲ್ಪಟ್ಟಿದೆ.

* * *

ಇಂಗ್ಲೆಂಡು ದೇಶದ ಎಲಿಸಬೆತ್ ರಾಣಿಯ ಕಾಲದಲ್ಲಿ "ಇಂಗ್ಲೀಷು ಮರ್ಕ್ಯೂರಿ" ಎಂಬ ವರ್ತಮಾನ ಪತ್ರಿಕೆಯೊಂದು ಹೊರಟಿತು. ಇದೇ ಇಂಗ್ಲಂಡು ದೇಶದ ಮೊದಲನೇ ವರ್ತಮಾನ ಪತ್ರಿಕೆ.

* * *

ಪ್ರಪಂಚದಲ್ಲಿ ಜನರು ಜ್ಞಾಪಕಾರ್ಥವಾಗಿ ಪ್ರತಿಮೆಗಳನ್ನು ನಿರ್ಮಿಸುವದುಂಟಷ್ಟೆ. ಅಮೇರಿಕಾ ಖಂಡದ ವಾಷಿಂಗ್‌ಟನ್ ಎಂಬುವನ ಜ್ಞಾಪಕಾರ್ಥವಾಗಿ ನಿರ್ಮಿಸಲ್ಪಟ್ಟ ಪ್ರತಿಮೆಯು 555 ಅಡಿಗಳ ಎತ್ತರವಿದೆ.

* * *

ಒಬ್ಬ ಮನುಷ್ಯನು ತನ್ನ ತಲೆಯನ್ನು 50 ವರ್ಷ ಕಾಲ ಕ್ಷೌರಮಾಡಿಕೊಳ್ಳುತ್ತಾ ಬಂದರೆ 2,800 ಮೈಲಿಗಳುದ್ದ ಕೂದಲಾಗುವುದು. ಪ್ರತಿಯೊಂದು ಸಲ ಕ್ಷೌರಮಾಡಿಕೊಳ್ಳುವಾಗಲು 44 000 ಕೂದಲು ಬೀಳುವವು.

* * *

ಚೈನಾ ದೇಶದಲ್ಲಿ ಒಂದು ಕೋಟೆಯ ಗೋಡೆಯಿದೆ. ಇದು ಕ್ರಿ.ಪೂ. 200 ರಲ್ಲಿ ಕಟ್ಟಲ್ಪಟ್ಟಿತು. ಇದರ ಉದ್ದ 1250 ಮೈಲಿ, ಎತ್ತರ 20 ಅಡಿಗಳು. ಉತ್ತರದ ಕಡೆಯಿಂದ ಶತ್ರುಗಳು ದೇಶದೊಳಕ್ಕೆ ಬಾರದಿರಲು ಇದು ಕಟ್ಟಲ್ಪಟ್ಟಿತು.

* * *

ಎಸ್ಕಿಮೋ ಜನರ ಪದ್ಧತಿಗಳು ಅತಿ ವಿಚಿತ್ರವಾಗಿವೆ. ಇತರದೇಶಗಳಲ್ಲಿ ಒಬ್ಬರೊಬ್ಬರಿಗೆ ಮನಸ್ತಾಪವುಂಟಾದಲ್ಲಿ ಅವರು ದ್ವಂದ್ವಯುದ್ಧವನ್ನು ಮಾಡಿ ವಿವಾದವನ್ನು ಫೈಸಲ್ ಮಾಡಿಕೊಳ್ಳುವವರು. ಎಸ್ಕಿಮೋ ಜನರು ಹಾಗಲ್ಲ. ಅವರು ಮಾಡುವುದೇನೆಂದರೆ ಯಾರಿಬ್ಬರಿಗೂ ಮನಸ್ತಾಪ ಉಂಟಾದಲ್ಲಿ ಫೈಸಲ್ ಮಾಡಲು ಒಂದು ದೊಡ್ಡ ಸಭೆಯನ್ನು ಸೇರಿಸುವರು. ಆಯುಧಗಳನ್ನು ಧರಿಸಿ ಯುದ್ಧ ಮಾಡುವುದಕ್ಕೆ ಬದಲಾಗಿ ಇವರು ತಮ್ಮ ನಾಲಿಗೆಯಿಂದ ಯುದ್ಧಮಾಡುವರು. ಈ ಯುದ್ಧವು ಉಪಕ್ರಮವಾಗುವುದಕ್ಕೆ ಪೂರ್ವ, ವಾದ್ಯ, ನರ್ತನ ಮುಂತಾದ ವಿನೋದಗಳು ನಡೆಯುತ್ತವೆ. ತರುವಾಯ ಒಬ್ಬನನ್ನು ಮತ್ತೊಬ್ಬನು ಮನಸ್ಸು ದೂಷಿಸಲು ಆರಂಭಿಸುವನು. ಪ್ರತಿಪಕ್ಷಿಯು ನಿಂದಿಸುವಾಗ ತಾನು ಬಾಯಿ ಮುಚ್ಚಿಕೊಂಡು ಸೈರಿಸಬೇಕು. ತರುವಾಯ ತಾನು ಬಯ್ಯಬಹುದು. ಪ್ರತಿ ಪಕ್ಷಿಯ ಪೂರ್ವಜರ ಪುರಾಣವನ್ನೆಲ್ಲಾ ಬಿಚ್ಚಿ ಒದರಬಹುದು. ಕೊನೆಗೆ ಯಾರು ಹೆಚ್ಚು ಕಾಲ ಬಯ್ಯಬಲ್ಲನೋ ಅವನೇ ಜಯಶೀಲನೆನಿಸುವನು.

* * *

ಇಂಗ್ಲಿಷ್ ಕಡಲ್ಗಾಲುವೆಯನ್ನು ಈಜಿ ದಾಟುವುದು ಅತಿ ಪ್ರಯಾಸವಾದ ಕೆಲಸವೆನಿಸಿರುವುದು. 45 ವರ್ಷಗಳ ಹಿಂದೆ ಕ್ಯಾಪ್ಟನ ವೆಬ್ ಎಂಬಾತನು ಡೋವರ್‌ನಿಂದ ಹೊರಟು ಎದುರು ದಡದಲ್ಲಿರುವ ಕೆಲೆ ಪಟ್ಟಣವನ್ನು ಬಹು ಕ್ರಮದಿಂದ ಸೇರಿದನು. ಅಲೆ ಉಬ್ಬರವಿಳಿತ ಮತ್ತು ಸಾಗರ ಪ್ರವಾಹ ಇವುಗಳನ್ನೆಲ್ಲಾ ಲೆಕ್ಕಿಸದೆ 21¾ ಘಂಟೆಗಳಕಾಲ ಈತನು ನೀರಿನಲ್ಲಿ ಈಜುತ್ತಾ ಕೊನೆಗೆ ಕಾಲುವೆಯನ್ನು ದಾಟಿದನು. 9 ವರ್ಷಗಳ ಹಿಂದೆ ಬರ್ಜಿಸ್ ಎಂಬಾತನು ಇದೇ ಸಾಹಸಕಾರ್ಯವನ್ನು ಮಾಡಿದನು. ಬರ್ಜೆಸ್ಸನು 13 ಸಾರಿ ಪ್ರಯತ್ನಪಟ್ಟು, ಭಗ್ನಮನೋರಥನಾಗಿ ಕಡೆಗೆ ಜಯಶೀಲನಾದನು. ಪ್ರಪಂಚದ ಪ್ರಖ್ಯಾತರಾದ ಇತರ ಈಜುಗಾರರೆಲ್ಲಾ ಹೀಗೆಯೇ ಪ್ರಯತ್ನಪಟ್ಟರು. ಆದರೆ ಈ ಮಹತ್ಕಾರ್ಯವು ಇವರ ಪೈಕಿ ಯಾರಿಗೂ ಸಾಧ್ಯವಾಗದೆ ಹೋಯಿತು. ಸ್ತ್ರೀಯರು ಈ ಕಾರ್ಯವನ್ನು ನೆಗೆದು ಜಯಶೀಲ[illegible]ರಾಗಬಲ್ಲರೆ? ಮಿಸೆಸ್ ಆರ್ಬರ್ ಹೆಮಿಲ್‌ಟನ್ ಎಂಬ ಸ್ತ್ರೀಯು ಇಂಗ್ಲೀಷ್ ಕಡಲ್ಗಾಲುವೆಯನ್ನು ದಾಟಬೇಕೆಂದು ಯೋಚಿಸಿರುತ್ತಾಳೆ. ಮಿಸೆಸ್ ಹಿಲ್ಡಾವಲಿಂಗ್ ಎಂಬ ಸ್ತ್ರೀಯೂ ಹೀಗೆಯೇ ಪ್ರಯತ್ನಪಡುವಳು.

* * *

ಲಂಡನ್ನಿನ ಕಟ್ಟಡಗಳು—ಲಂಡನ್ನಿನಲ್ಲಿ ಹಲವು ಭಾರಿ ಕಟ್ಟಡಗಳಿವೆ. ಟ್ರಾಫಾಲ್ಗರ್ ಚೌಕದಲ್ಲಿರುವ ನೌಕಾಧ್ಯಕ್ಷ ಲಾರ್ಡ್ ನೆಲ್ಸನ್ ರವರ ಹೆಸರಿನಲ್ಲಿ ಕಟ್ಟಿರುವ ಕಂಬಗಳಿಗೆ 28 000 ಪೌಂಡ್ ಮುಟ್ಟಿತು. ಅಲ್ಬರ್ಟ್ ಮಮೋರಿಯಲ್ಲಿಗೆ 1,20,000 ಪೌಂಡ್ ಮುಟ್ಟಿತು. ಬ್ರಿಟಿಷ್ ಮ್ಯೂಜಿಯಂಗೆ 10 ಲಕ್ಷ ಪೌಂಡ್ ವೆಚ್ಚವಾಯಿತು. ಇದನ್ನೂ ಇದರಲ್ಲಿರುವ ಸಾಮಾನುಗಳನ್ನು ಸರಿಯಾದ ಸ್ಥಿತಿಯಲ್ಲಿಡಲು ಸಾಲಿಯಾನಾ 1 ಲಕ್ಷ ಪೌಂಡ್ ವೆಚ್ಚವಾಗುತ್ತಲಿದೆ. ಇದರಲ್ಲಿ ವಾಚನಶಾಲೆಯೊಂದಿದೆ. ಇದರ ಎತ್ತರ 106 ಅಡಿ ಉದ್ದ 140 ಅಡಿ. ಇದನ್ನು ಕಟ್ಟಲು 1 50 000 ಪೌಂಡು ವೆಚ್ಚವಾಯಿತು. ಈ ಕೆಲಸವು 35 ವರ್ಷಕಾಲ ಹಿಡಿಯಿತು. ಟವರ್‌ಬ್ರಿಜ್ ಎಂಬ ಸೇತುವೆಯನ್ನು ಕಟ್ಟಲು 16 ಲಕ್ಷ ಪೌಂಡ್ ಮುಟ್ಟಿತು. ನಾಲ್ಕನೇ ಜಾರ್ಜರು ಕಟ್ಟಿದ ಬಕಿಂಗ್‌ಹ್ಯಾಮ್ ಅರಮನೆಗೆ 10 ಲಕ್ಷ ಪೌಂಡ್ ಮುಟ್ಟಿತು. ಮಾರ್ಬಲ್ ಆರ್ಚ್ ಎಂಬ ಕಮಾನುಬಾಗಲಿಗೆ 80,000 ಪೌಂಡ್ ಮುಟ್ಟಿತು. ಪಾರ್ಲಿಮೆಂಟ್ ಸಭೆ ಮಂದಿರವನ್ನು ಕಟ್ಟಲು 20 ಲಕ್ಷ ಪೌಂಡ್ ವೆಚ್ಚವಾಯಿತು. ಆದರೆ ಲಂಡನ್ನಿನ ಕಟ್ಟಡಗಳಲ್ಲೆಲ್ಲಾ ಅಲ್ಲಿಯ ನ್ಯಾಯಸ್ಥಾನದಲ್ಲಿ ಅತಿ ವಿಸ್ತಾರವಾದವು ಮತ್ತು ಬೆಲೆಬಾಳತಕ್ಕವು. ಕಟ್ಟಲು 25 ಲಕ್ಷ ಪೌಂಡ್ ವೆಚ್ಚವಾಯಿತು.

ಕೊಡಗು ಕನ್ನಡನಾಡೆ?

ಕನ್ನಡನಾಡೆಂದರೆ ಕೇಳುವವರು ಯಾರು ಇಲ್ಲವಲ್ಲ. ಪರಿಷತ್ತಿನವರಂತೂ ಕೊಡಗಿನ ತಂಟೆಗೆ ಬರುವ ಹಾಗಿಲ್ಲ. ಧಾರವಾಡದವರು ದೂರದವರಾದರು. ಪರಂತು ಮಂಗಳೂರವರು ಸ್ವಭಾಷೆಯನ್ನೆ ಮೂಲೆಗೊತ್ತಿ ಮರಾಟಿಯನ್ನೂ ಮತ್ತೆ ಇನ್ನಾವ ಭಾಷೆಯನ್ನೂ ಮಾತಾಡಲು ಪ್ರಯತ್ನಿಸುತ್ತಿರುವಲ್ಲಿ ಕೊಡಗಿನ 'ತಂಟೆ' ಯಾರಿಗೆ ಬೇಕು?

ನಮ್ಮ ನಾಡಸ್ಥಿತಿಯೊ—ಮನೆಯಲ್ಲಿ ಕೊಡಗು, ಕಚೇರಿಶಾಲೆಗಳಲ್ಲಿ ಕನ್ನಡ, ಕಾಗದ ಪತ್ರಗಳು ಇಂಗ್ಲಿಷಿನಲ್ಲಿ! ಕಾಫಿತೋಟಗಳಲ್ಲಿ ಮಲೆಯಾಳ ಮತ್ತು ತುಳು, ಸಂತೆಗಳಲ್ಲಿ ಹಿಂದುಸ್ಥಾನಿ!! ನಿಜಸ್ಥಿತಿಯು ಹೀಗಿರಲು ಕೊಡಗು ಕನ್ನಡನಾಡೆಂದು ಹೇಳುವುದಾದರೂ ಹೇಗೆ?

ನಮ್ಮಲ್ಲಿ ಛಪ್ಪನ್ನ ದೇಶ [ಐವತ್ತಾರು] ದೇಶಗಳೆಂಬುವಷ್ಟೆ. ಇವುಗಳ ಪಟ್ಟಿಯೊಂದನ್ನು ಪರಿಶೀಲಿಸಿದರೆ ಕೊಡಗು ಬೇರೆ ನಾಡಾಗಿ ತೋರಿಸಲ್ಪಟ್ಟಿದೆ. ಮಂಗಳೂರಿನ ಮಿಷನರಿಗಳಲ್ಲಿ ಪ್ರಖ್ಯಾತರಾಗಿ ಕನ್ನಡಿಗರ ಆದರಕ್ಕೆ ಪಾತ್ರರಾಗಿರುವ ಮೆ. ಕಿಟ್ಟೆಲ್ಲರಿಗೆ ನಮ್ಮ ನಾಡಿನಲ್ಲು ಒಂದು ಲಿಂಗಾಯತಮಠದಲ್ಲಿ ನಾಗವರ್ಮ ಕೃತ ಛಂದೋಂಬುಧಿಯೊಂದು ಪ್ರತಿ ದೊರಕಿದ ಹಾಗೂ ಅದರಲ್ಲಿ ವ್ಯಾಖ್ಯಾನಗಳಿದ್ದಂತೆಯೂ ಬರೆದಿರುತ್ತಾರೆ. ಅಂತಹ ವ್ಯಾಖ್ಯಾನಗಳಲ್ಲಿ ಈ ಐವತ್ತಾರು ದೇಶಗಳ ಪಟ್ಟಿಯೊಂದು ಇದರಲ್ಲು

"ಅಮೆರಿಕ, ಕನೋಜ, ಕರಾಳ (ಕೇರಳ?) ಕಿರಾತ, ಕುರು, ಕೊಡುಗು

ಕೋಶಲ ಹೈಹಯ" ಎಂದಿದೆ. ಇದಕ್ಕಾಧಾರವಾಗಿ ಕನ್ನಡ ಪಂಡಿತರ ಪಟ್ಟಿಯೊಂದನ್ನೂ ತೋರಿಸಿರುತ್ತಾರೆ.

"ಅಂಗ, ಅರುಣ........ಕಣಡ ಕಂನಾಡ (?) ....ಕುರುಗ ಕುಡಗ, ಕುಂತಳ........ವಿದರ್ಭ." ಇದನ್ನು ನೋಡಿದರೆ ಕರ್ನಾಟಕವೇ ಬೇರೆ, ಕೊಡಗೇ ಬೇರೆ ಎಂದು ಹೇಳಬೇಕಾಗುತ್ತದೆ. ಇದರಿಂದ ಇಷ್ಟುಮಾತ್ರ ಸ್ಪಷ್ಟ—ಕೊಡಗು "ಕುಡಗ" ಎಂಬ ಶಬ್ದದ ಅಪಭ್ರಂಶವೇ ವಿನಹ ಮತ್ತೆ ಬೇರೆ ಇಲ್ಲ.

ಕರ್ನಾಟಕದ ಎಲ್ಲೆಯನ್ನು ಗುರ್ತಿಸಿರುವುದನ್ನು ನೋಡಿದರೆ ಈ ವಿಷಯವು ಇನ್ನೂ ಅಂಧಕಾರಕ್ಕೆ ಹೋಗುತ್ತದೆ.

"ಕವಿರಾಜ ಮಾರ್ಗ" ದಲ್ಲಿ

ಕಾವೇರಿ ಯಿಂದಮಾ ಗೋ |
ದಾವರಿ ವರ ಮಿರ್ಪ ನಾಡದಾ ಕನ್ನಡದೊಳ್ ||
ಭಾವಿಸಿದ ಜನಪದಂ ವಸು |
ಧಾವಲಯ ವಿಲೀನ ವಿಶದ ವಿಷಯ ವಿಶೇಷಂ ||

(1,36)

ಎಂದು ಬರೆದಿರುತ್ತಾರೆ. [illegible]ವ ಬಾತ್ಮೆಗಳು [illegible] ಮಾತಾಯಿತು, ಸಾಧಾರಣ 1525 [illegible], ಹೆಸರು ವಿಳಾಸಗಳ[illegible] ನೆಂಬ ನಮ್ಮ ನಾಡಿನ ಕವಿಮಯ[illegible]. ಸ್ಥಳವು ದೊರೆತಂತೆಲ್ಲ[illegible]ವವು.

ಕಾವೇರಿಯಿಂದ ಗೋ[illegible] ಬಾತ್ಮಿಗಳನ್ನು ಮರಳಿ ಕಳುಹಿಸುವ
ರ್ಧಾ ವಸುಧಾತಳ [illegible] ಸಂಪಾದಕರು ವಹಿಸುವದಿಲ್ಲ.
ಭಾವಿಸೆ ಕರ್ನಾಟಕ [illegible]
ನಾವನೊ[illegible] ಪ್ರಕಟನೆಗಳು.

ಎಂದು ಬರೆದಿ[illegible]ಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗ ಸಂಪೂರ್ಣ 'ಮೇನೇಜರ್'ಗೆ ಬರೆದು ತಿಳಿದುಕೊ[illegible]. [illegible] ವಾ [illegible] ಕಾಗೆ. ಅತಿ[illegible] [illegible]ಯಮ[illegible]ದರ[illegible] ಹೀ[illegible]ಕೇರಿ.

ಎಂದು ಬರೆದಿರುವುದರಿಂದ ಕಾವೇರಿಯಿಂದ ಉತ್ತರ ಭಾಗವು ಕರ್ನಾಟಕ ಎಂದು ಸರ್ವರಿಂದಲೂ ಕರೆಯಲ್ಪಟ್ಟಿದೆ. ಪರಂತು ಕಾವೇರಿ ಲಕ್ಷ್ಮಣತೀರ್ಥದ ಪ್ರಾಂತ್ಯವೊ?

ಶಾಸನಗಳನ್ನು ಪರಿಶೀಲಿಸಿದರೆ ಅವೆಲ್ಲವೂ ಹಳೆಗನ್ನಡದಲ್ಲಿವೆ. ಕೊಡಗು ಭಾಷೆಯೂ ಹಳೆಗನ್ನಡವೂ ಕೊಂಚಮಟ್ಟಿಗೆ ಹೋಲುತ್ತವೆ. ಉದಾ :—

ಹಳೆಗನ್ನಡ,	ಕೊಡಗು,	ಹೊಸಕನ್ನಡ
ಪಾಟೊಳ್	ಪಾಲಲ್	ಹಾಲಲ್ಲಿ
ಕಣ್ಗೊಳಿಪ	ಕಣ್ಣುಕ್‌ಕಾಂಬಾ	ಕಣ್ಣಿಗೆಕಾಣುವ
ಪೋ! ಪೋ!	ಪೊ! ಪೊ!	ಹೋಗು! ಹೋಗು!
ಪೋಪುದ	ಪೋಕ.	ಹೋಗುವುದು
ನೋಳ್ಪೆ	ನೋಟುವಿ	ನೋಡುವೆ.
ಪುಟ್ಟು	ಪುಟ್ಟು	ಜನ್ಮವೆತ್ತು.
ಬಿತ್ತು	ಬಿತ್ತು	ಬೀಜ

ಚರಿತ್ರೆಯನ್ನು ನೋಡಿದರೆ ಲಕ್ಷ್ಮಣ ತೀರ್ಥದ ದಡದಲ್ಲಿ ಅನೇಕ ಕದನಗಳು ನಡೆದಿರುವಂತೆ ತೋರುತ್ತದೆ. ಕಾದಾಡಿದ ರಾಜರಾದರೊ ಜೈನರು ಮತ್ತೆ ಲಿಂಗಾಯತರು. ಲಿಂಗಾಯತರ ಅನೇಕ ಮಠಗಳು ದಕ್ಷಿಣ ಕೊಡಿಗಿನಲ್ಲಿವೆ. ಇದರಿಂದ ತಿಳಿಯಬಹುದಾದರೂ ಇಷ್ಟೆ. ಕಾವೇರಿ ಲಕ್ಷ್ಮಣತೀರ್ಥದ ಪ್ರಾಂತ್ಯ ಕರ್ನಾಟಕ ಅರಸರಿಂದ ಆಳಲ್ಪಡುತ್ತಿದ್ದಿತು—ಎಂಬುದೆ. ಈ ಪೂರ್ವ ಅರಸರ ಪ್ರಜೆಗಳು ಹಳೆಗನ್ನಡವನ್ನು ಮಾತಾಡುತ್ತಿದ್ದರು. ಆದರೆ ಬಗಾಗ್ರೆ, ಚೋಳರೂ, ಕೇರಳರೂ ದಂಡೆತ್ತಿ ಬಂದು ಈ ದೇಶದಲ್ಲಿ ನೆಲೆಯಾಗಿ ನಿತ್ತುದರಿಂದ ಈ ಹಳೆಗನ್ನಡ ಭಾಷೆಯೇ ತಮಿಳು ಮಲೆಯಾಳ ಮಿಶ್ರಿತವಾಗಿ ಕೊಡಗು ಆಯಿತೆಂಬುದೂ ಪಂಡಿತರ ಅಭಿಪ್ರಾಯ. ದೇಶಭಾಷೆಯು ಹಳೆಗನ್ನಡವಲ್ಲದಿದ್ದರೆ ಅನ್ಯಭಾಷೆಯ ಶಾಸನಗಳಿಂದ ಪ್ರಯೋಜನವಾದರೂ ಏನು?

ಸದ್ಯಸ್ಥಿತಿಯಲ್ಲಿ

ಕೊಡಗು ಕನ್ನಡನಾಡು. ಕೊಡಗಿನ ಎಲ್ಲಾ ಶಾಲೆಗಳಲ್ಲಿ ಕನ್ನಡ ಹೊರತು ಇನ್ನಾವ ದೇಶಿಯ ಭಾಷೆಯನ್ನೂ ಕಲಿಸುವುದಿಲ್ಲ. ಒಂದೆರಡು ಶಾಲೆಗಳಲ್ಲಿ ಮಾತ್ರ ಹಿಂದುಸ್ಥಾನಿ ಕಲಿಸುವರು. ಅಲ್ಲೂ ಕೂಡ ಕನ್ನಡ! ಹೀಗೆ ಕನ್ನಡ ಬಾರದವರೂ ಯಾರೂ ಇಲ್ಲ. ಕಾಫಿತೋಟಗಳಲ್ಲಿರುವ 'ಸಾಹೇಬ' ಜನರೂ ಕೂಡ ಕನ್ನಡವನ್ನು ಓದಬರೆಯದಿದ್ದರೂ ಮಾತಾಡಬಲ್ಲರು. ಪರಂತು ಕೊಡಗು ಕನ್ನಡ ನಾಡಲ್ಲವೆ?

ಬೆಂಗಳೂರಿನ ಭಕ್ತಮಂಡಲದ ಕೀರ್ತನ ವಿದ್ವಾನ್‌ರೊಬ್ಬರು ಇತ್ತೀಚೆಗೆ ದಯಮಾಡಿಸಿದ್ದರು. ಕೊಡಗು ಕನ್ನಡ ನಾಡು ಹೌದೊ ಅಲ್ಲವೊ, ಎಂಬ ಸಂಶಯದಿಂದ ಪಯಣ ಬೆಳೆಯಿಸಿದ ಮಹಾಶಯರು ಇಲ್ಲಿನ "ಹವಾ" ತಿಂದು ಕಂಠವನ್ನು ಪರಿಷ್ಕಾರಸ್ಥಿತಿಯಲ್ಲಿಡಲಾರದೆ ಹೇಗಾದರೂ ಕೀರ್ತನಗಳ ಮೇಲೆ ಕೀರ್ತನಗಳನ್ನು ಮಾಡಿ ಮಡಿಕೇರಿಯ ನಿವಾಸಿಗಳ ಪ್ರೇಮಕ್ಕೆ ಪಾತ್ರರಾಗಿ ಆ ಪ್ರೇಮವನ್ನು ಸದಾ ಇತರರಿಗೆಲ್ಲರಿಗೂ ತೋರುವಂತೆಯೆ [ಅದರಲ್ಲೂ ನಮ್ಮ ಮೈಸೂರು ಮಹಾಶಯರಿಗೆ—] ಎಂಬಂತೆ ಒಂದು ಸುವರ್ಣಪದಕವನ್ನು ತಮ್ಮ ವಿಶಾಲವಾದ ಎದೆಯ ಮೇಲೆ ಇಟ್ಟು ಕನ್ನಡ [ಅಚ್ಚು (Print) ಕನ್ನಡ!] ಜಿಲ್ಲೆಗೆ ದಯಮಾಡಿಸಿದರು. ಕೊಡಗಿನವರು ಕನ್ನಡಿಗರೆ?

ಕೊಡಗು ಕನ್ನಡನಾಲ್ಲದಿದ್ದರು ಕೊಡಗಿನವರು ಕನ್ನಡಿಗರೆ! ಮುಂದಿನ ವಿಷಯ—"ಕೊಡಗುನಾಡಿನ ಎಲ್ಲೆ"

"ಕೊಡಗು ಮಿತ್ರ"

ಕೊಡಗು ಜಮೀನ್‌ದಾರರ ಸಂಘದ ಅಧ್ಯಕ್ಷರ ಭಾಷಣ

ಕೊಡಗುದೇಶದ ಮಹಾಶಯರೇ, ಕರ್ನಾಟಕ ಬಂಧುಮಿತ್ರರೇ,

ನಿಮ್ಮ ಸೇವಕನಾದ ನಾನು ನಿಮ್ಮೆಲ್ಲರ ಮುಂದೆ ನಿಂತು ಪ್ರಥಮದಲ್ಲು ನಮ್ಮ ದೇಶಮಾತೆಯಾಗಿರುವ ಶ್ರೀ ಕಾವೇರಿಯಮ್ಮನವರಲ್ಲಿಯೂ ಮತ್ತು ನಮ್ಮ ನಮ್ಮ ಮತಕ್ಕೆ ಅನುಸಾರವಾಗಿರುವ ಇಷ್ಟದೇವತೆಗಳಲ್ಲಿಯೂ ಈ ದಿನ ನಾವು ಕೈಕೊಂಡ ಮಹಾಸಭೆಯ ಕೆಲಸವು ನಿರ್ವಿಘ್ನವಾಗಿ ನೆರವೇರುವಂತೆ ಪ್ರಾರ್ಥನೆಮಾಡುವೆನು :—

ಈ ಮಹಾಸಭೆಗೆ ಅಧ್ಯಕ್ಷನಾಗುವರೆ ದೇಶೀಯರೆಲ್ಲರು ಬಹುಮತದಿಂದ ನನ್ನನ್ನು ಕರೆದದ್ದಕ್ಕೆ ನಾನು ತಮ್ಮೆಲ್ಲರನ್ನು ಎಷ್ಟು ವಂದಿಸಿದರೂ ಋಣಮುಕ್ತನಾಗಲಾರೆನು. ಈ ಋಣವು ನಮ್ಮ ದೇಶದ ಪುರೋಭಿವೃದ್ಧಿಯನ್ನೆ ಮನದಲ್ಲು ಧ್ಯೇಯವಾಗಿಟ್ಟುಕೊಂಡು ಸ್ವಾರ್ಥಚಿಂತೆಗಳಿಲ್ಲದೆ ಹಸಿವು, ತೃಷೆ ವಿಶ್ರಾಂತಿಯನ್ನರಿಯದೆ ಅಹೋರಾತ್ರಿ ದೇಶಸೇವೆ ಮಾಡುವದರಿಂದ ತೀರಬೇಕಾಗಿದೆ. ಆದರೆ ಅದು ನನ್ನಿಂದ ಸಾಧ್ಯವಾಗುವದೊ? ಎಂಬದೊಂದು ಸಂಶಯವು ನನ್ನಲ್ಲಿ ಪದೇ ಪದೆ ಮೊಳೆಯುತ್ತದೆ. ಆದರೆ ನನ್ನಿಂದ ವಯೋವೃದ್ಧರಾಗಿಯೂ, [illegible]ನಶೀಲರಾಗಿಯೂ, ಅನುಭವವಂತರಾಗಿಯೂ ದೇಶದಲ್ಲಿ [illegible]ನ್ನು ಹೊಂದಿದ ಅನೇಕ ಶ್ರೀಮಂತ ಮಹಾಶ[illegible] [illegible]ಾ ಯಾವ ಗುಣಗಳು ಇಲ್ಲದ ಗ್ರಾ[illegible] [illegible]ಲ್ಪನಾದ ನನ್ನ ಮೇಲೆ ಈ ಮಹಾಕಾ[illegible] [illegible]ನ್ನು (ಕಂಡರೆ) ಗ್ರಹಿಸಿದರೆ ದೈವ [illegible]ಮನುಷ್ಯ ಚಿಂತನೆಯಲ್ಲಿ ಆದುದರಿಂದ [illegible]ವ ವ್ಯುಂಟಾದರೂ ಭಾರತದಲ್ಲು [illegible] [illegible] [illegible]ಸುವುದು.

Printed and Pub[illegible]
at The Sree[illegible]
Ltd.[illegible]

REGISTERED No. M

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾನೀತಿಪ್ರಯತ್ನತಃ | ಪ್ರಜಾನಾಂ ... ಸುಸ್ಥಿರಾ ... ||

ಪ್ರತಿ ಶುಕ್ರವಾರವೂ ಮಡಿಕೇರಿಯಲ್ಲಿ ಪ್ರಕಟಿಸಲ್ಪಡುವುದು

ಸಂಪುಟ ೧] ಕೊಡಗು, ಸನ್ ೧೯೨೧ ನೇ ಇಸವಿ ಜುಲೈ ತಾರೀಖು ೧ ನೇಯ ಶುಕ್ರವಾರ [ಸಂಚಿಕೆ ೫

ವೀರಶೈವರಿಗೆ ಸಂಗ್ರಾಹ್ಯವಾದ ಫೋಟೋ.

ಶ್ರೀ ಶಿವಯೋಗಿಗಳ ಸಂಘ :— ಭಾಗ್ಯಶಾಲಿ ಜನರು ಹಣವು ಖರ್ಚುಮಾಡಿ ಮಹಾ ಶಿವಯೋಗಿಗಳ ದರ್ಶನವನ್ನು ತೆಗೆದುಕೊಳ್ಳುತ್ತಾರೆ. ಆದರೆ ಶ್ರೀಮಂತರಿಗೂ ಮತ್ತು ಬಡವರಿಗೂ ನಿತ್ಯದರ್ಶನ ಆಗುವದಕ್ಕೆ ಫೋಟೋದ ಹೊರ್ತು ಅನ್ಯಮಾರ್ಗವು ಇಲ್ಲದಕಾರಣ ನಾವು ಪ್ರಸಿದ್ಧರಾದ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಗದಗ ತೋಂಟದಾರ್ಯ, ಅಥಣಿ ಶಿವಯೋಗಿ, ಬಾಲಲೀಲಾಸ್ವಾಮಿ ಬೀಳೂರ, ಹಾನಗಲ್ಲ, ಹಾವೇರಿ, ಬಿಡಿ, ಸಿದ್ದಪುರ ಮುಂತಾದ ೧೮ ಮಹಾಸ್ವಾಮಿಗಳ ಫೋಟೋ ತೆಗೆಸಿದ ಕಾರಣ ಒಂದೇ ಕಾಲದಲ್ಲಿ ಎಲ್ಲಾ ಶಿವಯೋಗಿಗಳ ದರ್ಶನ ಆಗುವುವು. ೧೮×೧೨ ಸೈಜಿನ ಚಿತ್ರದ ಕ್ರಯ ೧ ಪ್ರತಿಗೆ ೮ ಆಣೆ.

ಶ್ರೀ ಕಲ್ಯಾಣ ಬಸವೇಶ್ವರ.—ವೀರಶೈವ ಧರ್ಮೋದ್ಧಾರಕರಾದ ಶ್ರೀಬಸವಣ್ಣದೇವರ ಅತ್ಯಂತ ತೇಜಃಪುಂಜವಾದ ಖಾಸ ಫೋಟೋ ೧೮×೧೨ ಸೈಜ ಬಣ್ಣದ ಚಿತ್ರದ ಕ್ರಯ ೧ ಪ್ರತಿಗೆ ರೂ ೧ ಸಾದಾ ೮ ಆಣೆ.

೧. **ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ :—** ಇದರಲ್ಲಿ ಶ್ರೀಬಸವೇಶ್ವರರು ಶ್ರೀಚನ್ನಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಅಕ್ಕನಾಗಮ್ಮಾ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವರಾದ ಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೋ ಇರುತ್ತದೆ. ದೊಡ್ಡ ಸೈಜು ರೂ ೧|. ಸಣ್ಣ ಸೈಜು ರೂ. |||.

ಶ್ರೀರೇಣುಕಾಚಾರ್ಯರ ಲಿಂಗೋದ್ಭವವು— ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರ್ಯರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವ ಫೋಟೋ ಇರುತ್ತದೆ ದೊಡ್ಡ ಸೈಜು ರೂ. ೧|. ಸಣ್ಣ ಸೈಜು ರೂ. |||.

ಶ್ರೀರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ.—ಇದರಲ್ಲಿ ಅಗಸ್ತ್ಯ ಮುನಿಗಳು ತಮ್ಮ ಪತ್ನಿ ಲೋಪಾಮುದ್ರಾಸಹ ಉಪದೇಶ ಮಾಡಿಕೊಳ್ಳುತ್ತಾ ಇದ್ದಾರೆ ದೊಡ್ಡ ಸೈಜು ರೂ. ೧|. ಸಣ್ಣ ಸೈಜು ರೂ |||.

ಶ್ರೀವೀರಭದ್ರನಿಂದೇ ಹನುಮಂತನಿಗೆ ಲಿಂಗಧಾರಣವು—ಇದು ಹನುಮಂತನು ಮೋಕ್ಷಾರ್ಥಕ್ಕಾಗಿ ಲಿಂಗಧಾರಣ ಮಾಡಿಕೊಂಡ ಫೋಟೋ ಇರುತ್ತದೆ ದೊಡ್ಡ ಸೈಜು ರೂ ೧|. ಸಣ್ಣ ಸೈಜು ರೂ. |||.

ಶ್ರೀ ವೀರಶೈವ ರಾಜಸಮೂಹ —ಇದರಲ್ಲಿ ಕೊಡಗು ದೇಶದ ಲಿಂಗರಾಜೇಂದ್ರ, ವೀರರಾಜೇಂದ್ರ ಒಡೆಯರ, ದೇವಮ್ಮಾಜಿ ಮಹಾರಾಣಿ, ಹುತ್ತ ಸದ್ದದ ಶೃಂಗಸೂರ ಮತ್ತು ಗೋವಾಪ್ರಾಂತದ ಬಾಂದಿವಾಡಿ, ಸ್ವಾಂದಾದ ಅರಸರ ಫೋಟೋ ೯ ಇರುತ್ತವೆ. ಕ್ರಯ ಫುಲ್ಲಸೈಜು ೧| ರೂ. ಕ್ಯಾಬಿನೆಟ್ ೧೨ ಆಣೆ.

ಶ್ರೀಮುಜ್ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿಗಳು—ಅತ್ಯಂತ ಸುಂದರವಾದ ಕೈಬಣ್ಣದ ಫೋಟೋ ಕ್ರಯ ಪ್ರತಿ ಗೆ ರೂ ೧. ಸಾದಾದು |||.

ಸೂಚನೆ:—ಭಾರಿ ಖರೀದಿದಾರರಿಗೆ ಚನ್ನಾಗಿ ಕಮಿಷನ್ ದೊರೆಯುವದು.

ವಿಳಾಸ:—**ಗಂಗಪ್ಪ ಜಿರಗೆ,**

ಮಾಲಕ, ಧಿ ಶಾರದಾ ಫೋಟೋ ಕಂಪನಿ, ಸೋಲಾಪುರ

ಈ ಪತ್ರಿಕೆಯ ಎಲ್ಲಾ ಚಂದಾದಾರರಲ್ಲಿ ವಿಜ್ಞಾಪನೆಗಳು.

ತಮ್ಮಗಳಿಗೆಲ್ಲಾ ಕಳೆದ ನಾಲ್ಕು ವಾರದ ಪತ್ರಿಕೆಗಳನ್ನು ಕಳುಹಿಸಿದ್ದಾಯಿತು ದೇಶಾಭಿಮಾನಿಗಳಾದ ಕೆಲವರು ತಮ್ಮ ವಾರ್ಷಿಕ ಚಂದಾ ... ಕೊಡಲೇ ಪಾವತಿ ಮಾಡಿದರು. ಇನ್ನು ಅನೇಕರು ... ಚಂದಾಹಣವನ್ನು ಕಳುಹಿಸದೆ ಉದಾಸೀನರಾಗಿರುವುದು, ... ದಲ ಕಲಸಕ್ಕೆ ... ತೊಂದರೆ ... ಮತ್ತು ಹೀಗೆ ಇರುವುದು ತಮ್ಮ ದೇಶಾಭಿಮಾನವನ್ನು ಪ್ರೋತ್ಸಾಹವನ್ನು ತೋರಿಸಿದಂತೆ ಆಗುವುದಿಲ್ಲ ... ಪತ್ರಿಕೆಯೂ ಹಿಂದಕ್ಕೆ ಬಾರದೆ ಇದ್ದುದರಿಂದ, ಚಂದಾದಾರರುಗಳ ಮನಸಿಗೂ ನಾವು ಬರಲ ... ಅವರ ಮನಸಿಯೋ ಸಮ್ಮತಿಯಾಗಿರುತ್ತೆ.

ಕಂಪೆನಿಯ ಕೆಲಸವು ... ನಡೆಯುವ ಕಾರಣ ಹಣವೇ ಮುಖ್ಯವಾದುದು ಅಂಥಾ ಹಣವನ್ನು ಕೊಡುವುದು ದೇಶಾಭಿಮಾನಿಗಳಾದ ವಾಚಕರಲ್ಲೇ ಇರುತ್ತೆ ಎಂದೂ, ಈ ಮೊದಲೇ ತಿಳಿಸಿರುತ್ತೆ. ಹಣವು ಶೀಘ್ರದಲ್ಲಿ ನಮ್ಮ ಕೈಸೇರದ ಹೊರ್ತು ವಿಧಿ ಇಲ್ಲ ಆದ್ದರಿಂದ ಎಲ್ಲಾ ಚಂದಾದಾರರು ದಯವಿಟ್ಟು ತಮ್ಮ ಹಣವನ್ನು ಈ ಪ್ರತಿ ... ತ್ತೇವೆ ಹಣ ಕಳುಹಿಸದ ಎಲ್ಲಾ ಚಂದಾದಾರರುಗಳಿಗೆ ಬರುವ ವಾರದಿಂದಾಚೆಗೆ ಪತ್ರಿಕೆಗಳನ್ನು ವಿ ಪಿ ಮೂಲಕ ಕಳುಹಿಸುತ್ತೇವೆ. ಆದ್ದರಿಂದ ಎಲ್ಲಾ ಚಂದಾದಾರರು ಯಾವ ಕಾರಣದಲ್ಲಿಯೂ ಉದಾಸೀನರಾಗದೆ ವಿ ಪಿ. ಯನ್ನು ಸ್ವೀಕರಿಸಿ ಪತ್ರಿಕೆಯ ಕೆಲಸವನ್ನು ಚೆನ್ನಾಗಿ ನಡೆಸಲು ಅನುಕೂಲ ಕೊಟ್ಟು ದೇಶಸೇವೆಗೆ ಭಾಗಿಗಳಾಗಬೇಕಾಗಿ ಕೋರುತ್ತೇವೆ.

ಎಡಿಟರ್

ಸಾಮಾನುಗಳು ಬೇಕೇ ?

ಬೇಕಾದವರು ನಮ್ಮಲ್ಲಿ ದೊರೆಯುವ ಕೊಡೆ, ಗುದ್ದಲಿ, ಬೂಟ್ಸ್, ನಮೂನೆ ಫರ್ನಿಚರ್, ಹರಿಕೇನ್‌ಲ್ಯಾಂಪ್, ನಮೂನೆ ಚಟ್ಟಿ, ಆಫೀಸ್ ಕುರ್ಚಿ ಇತ್ಯಾದಿ ಸಾಮಾನುಗಳನ್ನು ಒಂದುಸಲ ತೆಗೆದು ನೋಡಿರಿ.

ಹೆಚ್ಚಿನ ಸಂಗತಿಗಳು ಕೆಳಗಿನ ವಿಳಾಸಕ್ಕೆ ಬರೆದು ತಿಳಿಯುವದು.

COMMERCIAL STORE,
General Merchants, Commission Agents and Furniture Suppliers,
MURNAD, COORG.

R. FRAMJEE,
General Merchant, Commission Agent, Auctioner and Gent's Outfitter.
MERCARA (Coorg)

JUST RECEIVED.

Fresh Consignment of Piece Goods of Various Kinds, Stationery, Hosery, Patent Medicines etc, etc

Goods available at the lowest market rates

Prices Fixed.

" ಕೊಡಗು "

ರಾಜಕೀಯ ವಿದ್ಯಾ, ಕೃಷಿ, ಸ್ವದೇಶಿ ವಿಜ್ಞಾನ ಮತ್ತು ನೀತಿ ಸಂಬಂಧವಾದ ವಿಷಯಗಳಿಂದೊಡಗೂಡಿದ ಕೊಡಗಿನ ವಾರಪತ್ರಿಕೆ.

1 ಪ್ರಕಟನೆಗೆ ಮ್ಯಾನೇಜರ್, "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಬರೆಯತಕ್ಕದ್ದು.

2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ ಈ ವಿಳಾಸಕ್ಕೆ ಕಳುಹಿಸತಕ್ಕದ್ದು.

3 ... ಅಭಿಪ್ರಾಯಗಳಿಗೆ ... ಪತ್ರಿಕಾಕರ್ತರು ಜವಾಬ್ದಾರರಲ್ಲ.

4 ನಮ್ಮಲ್ಲಿಗೆ ಕಳುಹಿಸುವ ವಾರ್ತೆಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ ... ವಿಳಾಸಗಳಿಂದ ಕೂಡಿಯೂ ಬರೆಯಲ್ಪಟ್ಟಿರಬೇಕು. ... ದೊರೆಯಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು.

5. ಪ್ರಕಟವಾಗದ ವಾರ್ತೆಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಯನ್ನು ಸಂಪಾದಕರು ವಹಿಸುವದಿಲ್ಲ.

ಪ್ರಕಟನೆಗಳು.

ಅತ್ಯಂತ ಸುಲಭವಾಗಿ ಹಾಗೂ ... ಹೆಚ್ಚು ಸಂಗ ...

ಮ್ಯಾನೇಜರ್,

" ಕೊಡಗು " ಲಿಮಿಟೆಡ್, ಮಡಿಕೇರಿ.

INSURE YOUR CAR
Against Accident and Fire.
Apply to—
K. R. Thirupad & Bros,
Sub Agents for
The Autocar Fire & Accident Insurance Co., Ltd.,
LONDON.

JUST ARRIVED FRESH STOCK OF
GOOD RICH TYRES
Best and Cheapest in the World.
Apply to—
K. R. Thirupad & Bros.,
Sayaji Rao Road,
MYSORE.

ಜಾಹೀರಾತಿನ ದರಗಳು

	ಒಂದು ಕಾಲಂ.	ಅರ್ಧಕಾಲಂ.	ಕಾಲುಕಾಲಂ.
	ರೂ	ರೂ.	ರೂ
1 ವರ್ಷಕ್ಕೆ	50	30	18
6 ತಿಂಗಳಿಗೆ	30	18	10
3 ತಿಂಗಳಿಗೆ	18	10	6
1 ತಿಂಗಳಿಗೆ	7	5	3

ಮೇಲೆ ತಿಳಿಸಿರುವ ದರಗಳು ಜಾಹೀರಾತುಗಳು ಬರಬೇಕಾದ ಹಣವನ್ನು ಮುಂಗಡವಾಗಿಯೇ ಪೂರ್ತಾ ಪಾವತಿ ಮಾಡಬೇಕು.

ಮ್ಯಾನೇಜರ್,

" ಕೊಡಗು " ಲಿಮಿಟೆಡ್, ಮಡಿಕೇರಿ.

ಬಾತ್ಮೀದಾರರುಗಳಿಗೆ ವಿಜ್ಞಾಪನೆ.

ಕೆಲವು ಬಾತ್ಮೀದಾರರು ತಮ್ಮ ತಮ್ಮ ಬಾತ್ಮಿಗಳನ್ನು ಬಹಳ ದೊಡ್ಡದಾಗಿಯೂ, ಒಂದರಿಂದ ಹೆಚ್ಚು ಬರೆದೂ ಕಷ್ಟತರದ ಶಬ್ದಗಳನ್ನು ಉಪಯೋಗಿಸಿಯೂ ಬಹಳ ಚಿಕ್ಕ ಅಕ್ಷರಗಳಿಂದ ಸ್ಪಷ್ಟವಾಗಿ ಬರೆಯದೆಯೂ ಬರೆದು ಕಳುಹಿಸುತ್ತಾರೆ. ನಡೆದ ಸಂಗತಿಗಳನ್ನು ಯಥಾರ್ಥವಾಗಿ ತಿಳಿಸುವುದು ಬಾತ್ಮೀದಾರರ ಕರ್ತವ್ಯವಾಗಿರುತ್ತೆ. ಅರ್ಥಪೂರ್ವಕವಾಗಿ ಸಂಕ್ಷೇಪದಿಂದ ಬರೆಯುವ ಬಾತ್ಮಿಗಳಿಗೆ ಹೆಚ್ಚು ಗಮನ ಕೊಡಲಾಗುತ್ತೆ. ಪತ್ರಿಕೆಯಲ್ಲಿ ಹೆಚ್ಚು ಸ್ಥಳವನ್ನು ಆಕ್ರಮಿಸುವ ಬಾತ್ಮಿಗಳನ್ನು ಸ್ಥಳ ದೊರೆತರೆ ಮಾತ್ರ ಪ್ರಕಟಿಸಲಾಗುವುದು. ಆದ್ದರಿಂದ ಎಲ್ಲಾ ಬಾತ್ಮೀದಾರರು ದಯವಿಟ್ಟು ಮೇಲ್ಕಂಡ ಸಂಗತಿಗಳಿಗೆ ಗಮನಕೊಟ್ಟು ತಮ್ಮ ತಮ್ಮ ಬಾತ್ಮಿಗಳನ್ನು ಕಳುಹಿಸಬೇಕಾಗಿದೆ.

ಎಲ್ಲಾ ಬಾತ್ಮೀದಾರರು ತಾವು ಕಳುಹಿಸಿದ ಬಾತ್ಮಿಗಳು ಪ್ರಕಟವಾಗಲಿಲ್ಲವೆಂದು ನಿರುತ್ಸಾಹಪಡದೆ ಪ್ರತಿವಾರವೂ ಸ್ಥಳೀಕ ಸಮಾಚಾರಗಳನ್ನು ತಪ್ಪದೆ ಕಳುಹಿಸಿಕೊಡಬೇಕಾಗಿ ಕೋರುತ್ತೇನೆ. "ಎಡಿಟರ್"

"ಕೊಡಗು"

೧೯೨೧ ನೇ ಇಸವಿ ಜುಲೈ ತಾ|| ೧ ನೇ ಶುಕ್ರವಾರ.

ಗ್ರಾಮಾಭಿವೃದ್ಧಿ.

ಕೊಡಗುದೇಶದ ಜನರಲ್ಲಿ ಯಾವ ಕೆಲಸವನ್ನೂ ಮಾಡಬೇಕಾದರೆ ಅಲಕ್ಷ್ಯವೂ, ಕಾರ್ಯನಿರ್ವಾಹಕತ್ವ ಮತ್ತೂ ಇಲ್ಲದಿರುವುದು ವಾಡಿಕೆಯಾಗಿ ಕಂಡುಬರುತ್ತೆ. ನಮ್ಮ ದೇಶದ ಜನರು ಒಳ್ಳೆ ಕಾರ್ಯಪ್ರವೃತ್ತಿಯುಳ್ಳವರೂ ಮತ್ತು ಕೆಲಸದಲ್ಲಿ ಮನಸ್ಸಿಟ್ಟರೆ ಚೆನ್ನಾಗಿ ಮಾಡತಕ್ಕವರೂ ಆಗಿರುತ್ತಾರೆ. ಆದರೆ ಯಾವ ಕೆಲಸದಲ್ಲೇ ಆಗಲಿ, ಆಗಾಗ್ಯೆ (Moral pressure) ಒತ್ತಾಯದ ಉಪದೇಶವನ್ನು ಮಾಡುವ ಒಬ್ಬ ಮಾನವನೂ ಅತ್ಯವಶ್ಯವಾಗಿ ಬೇಕಾಗಿರುತ್ತೆ. ಇಂಥಾ ಅಲಕ್ಷ್ಯ [illegible] ಭಾವನೆ ಇನ್ನು ಪರರಿಂದ ಬಂದದೆಂದು ತಿಳಿಯುವುದು?

ನಮ್ಮ ನಮ್ಮ ಗ್ರಾಮಗಳನ್ನು ಅಭಿವೃದ್ಧಿ ಮಾಡುವುದು ನಮ್ಮ ಕೈಯಲ್ಲೇ ಇದೆ. ಯಾರು ತಮಗೆ ತಾವೇ ಸಹಾಯ ಮಾಡಿಕೊಳ್ಳಲಿಕ್ಕೆ ಕಲಿತುಕೊಳ್ಳುತ್ತಾರೊ, ಅಂಥಾವರಿಗೆ ದೇವರು ಸಹಾಯ ಮಾಡುವನು. ಮೊದಲು, ನಾವು ನಮ್ಮನ್ನು ತಿದ್ದಿಕೊಂಡು, ನಮ್ಮ ನಡೆಯಂತೆ ನುಡಿಯನ್ನು, ನುಡಿಯಂತೆ ನಡೆಯನ್ನು ಆಚರಿಸುವುದು, ಗ್ರಾಮಾಭಿವೃದ್ಧಿಯಲ್ಲಿ ಮತ್ತು ಜನೋಪಕಾರದಲ್ಲಿ ಆಸಕ್ತರಾಗಿರುವವರ ಕರ್ತವ್ಯ.

ಪ್ರತಿ ಒಬ್ಬನಿಗೂ ಬುದ್ಧಿಶಕ್ತಿಯಿದ್ದರೂ ವಾಡಿಕೆಯಾಗಿ ನಮ್ಮ ಊರಿನಲ್ಲಿ ಮುಖಂಡರೆನಿಸಿಕೊಂಡವರು ಸ್ವಸ್ವಯೋಜನದಲ್ಲಿ ಮಗ್ನರಾಗಿ ಜನರಿಗೆ ಕಾಣುವಾಗ ಪ್ರತ್ಯಕ್ಷ ಉಪಕಾರಿಯಂತೆಯೂ, ಪರೋಕ್ಷ ನೆರೆಹೊರೆ ಹಾಳುಮಾಡಿ ದಸ್ತಾವೇಜುಗಳನ್ನು ಕಿತ್ತುಕೊಂಡು ಒಂದಾದು ಗ್ರಾಮಾಭಿವೃದ್ಧಿಗೆ ಅತ್ಯಂತ ಕುಂದಕವನ್ನುಂಟುಮಾಡಿ, ನಮಗೆ ನಾವೇ ಅಡ್ಡಿಯಾಗಿದ್ದೇವೆಯಲ್ಲದೆ ನಮ್ಮನ್ನು ಬೇರೆ ಯಾರೂ ಅಡ್ಡಿ ಮಾಡುವುದಿಲ್ಲ.

ನಮ್ಮ ದೇಶದಲ್ಲಿ ಈ ಮೊದಲು ಪ್ರತಿ ಒಂದು ಮನೆಯಲ್ಲಿ ಅವಿಭಕ್ತ ಕುಟುಂಬದಲ್ಲಿದ್ದ ಯಜಮಾನನ ಮಾತಿನಂತೆ ಇತರರು ಇರುವುದು ವಾಡಿಕೆಯಾಗಿ ಈಗಿನ ನವೀನನಾಗರೀಕತನದಲ್ಲಿ ನಿರೀಕ್ಷಿಸುವ ಪ್ರತ್ಯೇಕ ಸ್ವತಂತ್ರವೇ ಎಂಬಂತಿತ್ತು. ಆದರೆ ಕೆಲವು ವರುಷಗಳಿಂದೀಚೆಗೆ ನವನಾಗರೀಕತನದ ಬಿರುಗಾಳಿಯಿಂದ ಪ್ರತಿಯೊಬ್ಬನೂ ಪೂರ್ವಿಕರು ಮಾಡಿದ ಅತ್ಯುತ್ತಮವಾದ ಪ್ರಜಾಸ್ವತಂತ್ರ್ಯದವರೆಗಿನ್ನ ನೀತಿನಿಯಮವನ್ನು ಅಸೂಯೆ ಮೊದಲಾದ ಅನಾಚಾರಗಳನ್ನು ಕೈಕೊಂಡ ಸಹೋದರರು ಪರಸ್ಪರ ಜಗಳವಾಡುತ್ತ ತನ್ನ ಸ್ವಶಕ್ತಿಯನ್ನೂ, ಸ್ವಬುದ್ಧಿಯನ್ನು ಕಳೆದುಕೊಂಡು ಪರರಿಗೆ ಎಲ್ಲಾ ವಿಷಯಗಳಲ್ಲಿಯೂ, ದಾಸಾನುದಾಸನಾಗಿರುತ್ತಾನೆ. ನಮ್ಮ ಪೂರ್ವಿಕರ ಏಬ ಮಾನಸದನಿಯನ್ನು ನಿರ್ಮೂಲಮಾಡಿದ್ದೇ ಇದಕ್ಕೆ ಕಾರಣವಾಗಿದೆ.

ದೇಶದ ಅಭಿವೃದ್ಧಿಗೆ ಗ್ರಾಮಾಭಿವೃದ್ಧಿಯೇ ಮೂಲಕಾರಣವೆಂದು ಮಹಾತ್ಮ ಗಾಂಧಿ ಮೊದಲುಗೊಂಡು ಎಲ್ಲಾ ಮುಂದಕ್ಕೆ ಬಂದಿರುವ ಜನಾಂಗದವರು ಹೇಳುತ್ತಾರೆ. ನಮ್ಮಲ್ಲಿಯ ಗ್ರಾಮಗಳನ್ನು ವೃದ್ಧಿಪಡಿಸಲು ಕೆಳಗಿನ ಮುಖ್ಯಾಂಶಗಳು ಗಮನಿಸತಕ್ಕವಾಗಿವೆ.

(೧) ಭಗವದ್ಭಕ್ತಿ (೨) ಕುಟುಂಬಗಳ ಮೈತ್ರೀಭಾವನೆ (೩) ಗ್ರಾಮದ ಬಗ್ಗೆ (೪) ಪರಸ್ಪರ ಸಹಾಯ. ಈ ಮುಖ್ಯಾಂಶ ವಿಷಯಗಳಲ್ಲಿ ದೇಶೀಯರು ಮನಸ್ಸಿಟ್ಟರೆ ಎಷ್ಟೋ ಮುಖ್ಯವಾದ ಕಾರ್ಯಗಳು ಕೈಗೂಡುವುವು [illegible] ಬೇರೆ ಮೊರೆಬಾರದ ದೇಶಗಳ ಸ್ವತಂತ್ರ್ಯಕ್ಕೆ ಭಕ್ತಿಯು

ನಮ್ಮ ದೇಶದಲ್ಲಿ ಸಾವಿರಾರು ವರುಷಗಳ ಹಿಂದೆ ಇದ್ದ ವಿಚಾರವೇ ಆಗಿದೆ. ಇದಕ್ಕನುಸಾರವಾಗಿ ಪೂರ್ವದಲ್ಲಿ ಪ್ರತಿ ಊರಿನ, ನಾಡಿನ, ಮತ್ತು ದೇಶದ ತಕ್ಕತವ್ವಂದಾರರುಗಳು ಮತ್ತು ಪಂಚಾಯತದಾರರುಗಳು ಅಧಿಕಾರಿಗಳು ಇದ್ದದ್ದು ಸರ್ವರಿಗೂ ವೇದ್ಯವಾದೆಯಷ್ಟೆ. ಆದರೆ ಆ ಅಧಿಕಾರಗಳನ್ನು ಸಾರಾಂಶವ್ಯಯದಕಕ್ಕಾಗಿ ಮಾಡಿದ್ದು ಕೆಲವು ಮಟ್ಟಿಗೆ ದೇಶದ ಸ್ಥಿತಿಗತಿಗೆ ಕುಂದಕವನ್ನುಂಟುಮಾಡಿದೆ.

ಯಾವ ಜನಾಂಗಕ್ಕೆ ದೇವರಲ್ಲಿ ಭಕ್ತಿ ಇಲ್ಲವೋ ಅಂಥಾ ಜನಾಂಗವು ಕ್ಷೀಣಗತಿಗೆ ಬರುವುದರಲ್ಲಿ ಸಂದೇಹವಿಲ್ಲವೆಂಬುದನ್ನು ವಿವೇಕಾನಂದಸ್ವಾಮಿಗಳವರೇ ಹೇಳಿರುತ್ತಾರೆ. ನಮ್ಮ ಊರಿಗೆ ಇದು ಬಹಳ ದೊಡ್ಡ ಕೊರತೆಯಾಗಿದೆ. ಕ್ರಿಸ್ತರೂ, ಮತ್ತು ಮಹಮ್ಮದೀಯರೂ, ಸಹ, ತಮ್ಮ ಮಕ್ಕಳಿಗೆ ತಿಳುವಳಿಕೆ ಬಂದಾಕ್ಷಣವೇ ತಮ್ಮ ತಮ್ಮ ಮತಾಚಾರದ ವಿಷಯಗಳನ್ನು ಕಲಿಸುವುದರಲ್ಲಿ ಆಸಕ್ತಿಯುಳ್ಳವರಾಗಿರುತ್ತಾರೆ. ಆದರೆ ನಮ್ಮಲ್ಲಿ ಹೆಚ್ಚಿನ ಜನರಾದರೂ ತಮ್ಮ ಸನಾತನ ಧರ್ಮಗಳಿಗೆ ವಿರೋಧವನ್ನುಂಟುಮಾಡಿ ಹುಟ್ಟಿದವರ್ಕ್ಷವೇ. ಮಕ್ಕಳಿಗೆ ವಿದೇಶೀಯ [illegible] ಕಲಿಸಲಿಕ್ಕೆ ಪ್ರಾರಂಭಿಸಿದ್ದು ದೇಶದ ಕ್ಷೀಣಗತಿಗೆ ಕಾರಣವೆಂದು ಸಂದೇಹವಿಲ್ಲದೆ ಹೇಳಬಹುದು.

ಎಲ್ಲಾ ಗ್ರಾಮಗಳಲ್ಲಿ ಜೀರ್ಣವಾದ ದೇವಾಲಯಗಳೂ ಮತ್ತು ಕಟ್ಟಿಗಳೂ ಊರುಬಲುಗಳೂ ಕಾಣಬರುತ್ತವೆ. ಇದರಿಂದ ನಮ್ಮ ಗ್ರಾಮಸ್ಥರಲ್ಲಿ ಎಷ್ಟು ಮಟ್ಟಿಗೆ ದೇವಭಕ್ತಿ ಇದೆ ಎನ್ನುವುದು ತಿಳಿಯುತ್ತೆ. ಎಲ್ಲಿ ದೇವಸ್ಥಾನಗಳು ಒಳ್ಳೆಯ ಸ್ಥಿತಿಯಲ್ಲಿವೆಯೋ ಆ ಗ್ರಾಮಸ್ಥರು ಸುಖಿಗಳಾಗಿರುವುದು ಪ್ರತ್ಯಕ್ಷ ಕಂಡುಬರುವುದಿಲ್ಲವೆ?

ಭೂಲೋಕದಲ್ಲಿರುವ ಪ್ರತಿಜನ್ಮದ ಅಭಿವೃದ್ಧಿಯ ಮೂಲಾಧಾರವು ಪರಸ್ಪರಸಹಾಯವಾಗಿದೆ (Co-operation is the watch-word of every man's progress) ಇಂಥಾ ಪರಸ್ಪರ ಸಹಾಯ ಮತ್ತು ಒಗ್ಗಟ್ಟು ಮೊದಲಲ್ಲಿಯೂ ಇರುವ ಮೊದಲಾದ ಅಲ್ಪ ಜಂತುಗಳಲ್ಲಿಯೂ ಕಂಡುಬರುವಾಗ, ಗ್ರಾಮಸ್ಥರು ಸಂಘವನ್ನು ಮಾಡಿಕೊಂಡು ತಮ್ಮ ಮತ್ತು ತಮ್ಮ ಗ್ರಾಮಾಭಿವೃದ್ಧಿಯಲ್ಲಿ ಕಂಟಕರಾಗಿ ಎಷ್ಟು ಎಷ್ಟು [illegible] ಸ್ವಲ್ಪವೇ. ಇದೆಲ್ಲಾ ನಮಗೆ ದೇವರಲ್ಲಿ ಭಕ್ತಿ ಇಲ್ಲದಿರೋಣದಿಂದಲೇ ಆಗಿದೆ. ಆದ್ದರಿಂದ ನರರೂ ತನ್ನನ್ನು ತಾನು ತಿಳಿದು, ತನ್ನ ಆತ್ಮಬಲ ಆತ್ಮಾವಲಂಬನೆಯನ್ನು ವೃದ್ಧಿಪಡಿಸಿ, ತನ್ನ ಕುಟುಂಬ, ಊರು, ನಾಡು ಮತ್ತು ದೇಶಸೇವೆಯಲ್ಲಿ ನಿರತರಾಗಲು ಸರ್ವದಾ ಪ್ರಯತ್ನಿಸವುದಲ್ಲದೆ ಇಂಥಾ ಕೆಲಸಗಳಲ್ಲಿ ಮುಂದು ಬರುವವರಿಗೆ ಪ್ರೋತ್ಸಾಹವನ್ನು ಬೆಂಬಲವನ್ನು ಕೊಡಬೇಕಾದ್ದು ಅವಶ್ಯವೆ.

ದೇಶಸೇವೆ ಮಾಡುವವರ ವಿಷಯದಲ್ಲಿ ಪುರುಷಶ್ರೇಷ್ಠರಲ್ಲಿ ಅಗ್ರಗಣ್ಯರಾದ ಶ್ರೀಯುತ ಗೋಪಾಲಕೃಷ್ಣ ಗೋಖಲೆಯವರು ಹೇಳಿರುವ ವಾಕ್ಯಗಳೇನೆಂದರೆ:—

"ಸರ್ವಜನರ ಹಿತಕ್ಕಾಗಿ ಶ್ರಮಪಡುವುದೇ ಪುಣ್ಯಾರಾಧನೆ. ದೇಶಸೇವೆಯೆಂದರೆ—ಸ್ವಂತ ಕೆಲಸವಲ್ಲ, ವಿನೋದವಲ್ಲ, ಬೀದಿಯ ಜಗಳವಲ್ಲ, ಡಂಭಾಚಾರವಲ್ಲ. ಅದು ಪ್ರತಿಯೊಬ್ಬನೂ ಮಾಡತಕ್ಕ ಸಹಜವಾದ ಧರ್ಮ. ದೇಶಸೇವೆಯು ಸಾಕ್ಷಾತ್ ಪರಮೇಶ್ವರನ ಸೇವೆ. ಯಾರು ತನ್ನ ಜನರಲ್ಲಿ ಒಗ್ಗಟ್ಟನ್ನು ಹೆಚ್ಚಿಸುತ್ತಾನೋ, ಯಾರು ಸ್ವಾರ್ಥತ್ಯಾಗಮಾಡಿ ತನ್ನ ದೇಶದ ಪದ್ಧತಿಯನ್ನು, ರಾಜಕೀಯ, ಕೈಗಾರಿಕೆ, ವ್ಯಾಪಾರ, ನೀತಿ, ವಿದ್ಯೆ ಮೊದಲಾದುವುಗಳನ್ನು ಯಾವರೂಪದಲ್ಲೇ ಆಗಲೀ, ಯಾವ ರೀತಿಯಲ್ಲೇ ಆಗಲೀ, ಬೋಧಿಸುತ್ತಾನೋ ಆತನೇ ನಮ್ಮ ಸಹೋದರ, ಆತನೇ ನಮ್ಮ ಸಹೋದ್ಯೋಗಿ, ಆತನೇ ನಮಗೆ ಈಶ್ವರಸ್ವರೂಪನು."

ಈ ವಾಕ್ಯಗಳನ್ನು ನಮ್ಮ ದೇಶೀಯರು ಪದೇಪದೇ ಸ್ಮರಣೆಗೆ ತಂದುಕೊಂಡು ಅದಕ್ಕನುಸಾರವಾಗಿ ನಡೆದು ದೇಶದ ಸುಖವನ್ನು, ಶಾಂತಿಯನ್ನು, ಸಂಪತ್ತನ್ನು, ಕೀರ್ತಿಯನ್ನು ಮತ್ತು ಗೌರವವನ್ನು ಸಂಪಾದಿಸುವವರಾಗಲಿ.

ಮೆ|| ಗುಸ್ತಾವ್ ಹಾಲರವರು.

ಮೆ|| ಗುಸ್ತಾವ್ ಹಾಲರ್ ಎಂಬ ಹೆಸರು ನಮ್ಮ ದೇಶೀಯರೆಲ್ಲರ ಪತ್ರಿಕೆಗಳಲ್ಲಿ ಗುರುತವಾಗಿ ಇರುವ ಸಂಗತಿಯಾಗಿದೆ. ಇವರು ವಿರಾಜಪೇಟೆಯ ಹತ್ತಿರ ಇರುವ ಕುಂದಕೋಟೆಯ ರೆವರೆಂಡ್ ಹಾಲರವರ ಎರಡನೇ ಕುಮಾರರು. ಇವರು ಸ್ವಿಟ್ಜರ್ ಲೇಂಡ್ ದೇಶದ ಜ್ಯೂರಿಚ್ ಪಟ್ಟಣದಲ್ಲಿ ವಿದ್ಯಾಭ್ಯಾಸವನ್ನು ಹೊಂದಿ ಮದರಾಸು ಸರಕಾರದಲ್ಲಿ 1886 ರಿಂದ 1889ರವರೆಗೆ ನೌಕರಿಯಲ್ಲಿದ್ದು, 1890ರಲ್ಲಿ ಕೊಡಗು ದೇಶದ ಸರ್ವೆ ಸೂಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟರು. ಅಲ್ಲಿಂದೀಚೆಗೆ ಈ ದೇಶದಲ್ಲಿ 1918 ರವರೆಗೆ ನಾನಾ ಉದ್ಯೋಗಗಳನ್ನು ಅಂದರೆ ಡಿವಿಷ್ಯನಲ್ ಸಮುರೀಸೆಟ್ಲ್ ಮೆಂಟ್, ರಿಸೆಟ್ಲ್ ಮೆಂಟ್, ರಿಜಿಸ್ಟ್ರಾರ್, ಮತ್ತು ಡಿಪ್ಯುಟಿ ಡೈರೆಕ್ಟರ್ ವೊದಲಾದವುಗಳಲ್ಲಿ ಪಕ್ಷಪಾತವಿಲ್ಲದೆ ಮಾಡಿರುತ್ತಾರೆ.

1901 ರಲ್ಲಿ ಆದ ಪರಸ್ಪರ ಸಹಾಯದ ಇಂಡಿಯಾ ಸರಕಾರದ ಆಕ್ಟಿಗನುಸಾರವಾಗಿ ಪರಸ್ಪರ ಲೇವಾದೇವಿ ಸಂಘಗಳನ್ನು ಏರ್ಪಡಿಸಲಿಕ್ಕೆ ಮೂಲಪುರುಷರು ಇವರೇ. ಈ ವಿಷಯದಲ್ಲಿ ಇವರು ತೆಗೆದುಕೊಂಡ ಶ್ರಮವೂ, ಶ್ರದ್ಧೆಯೂ, ಜನರ ಮನಸ್ಸಿನಲ್ಲಿ ನಾಟಿಕೊಂಡದ್ದಲ್ಲದೆ ಚಿರಸ್ಮರಣೀಯವಾದುದು. ಪರಸ್ಪರ ಸಹಾಯದ ಸಂಘಗಳು ಇರುವತನಕ ಇವರ ಹೆಸರು ಮರೆಯತಕ್ಕದ್ದಲ್ಲ. ಪಶುವೈದ್ಯ ಇಲಾಖೆಯನ್ನು, ವ್ಯವಸಾಯ ಇಲಾಖೆಯನ್ನು ಸ್ಥಾಪಿಸಿದವರು ಈ ಪುಣ್ಯಾತ್ಮರೇ. ಇವರು ಸೆಟ್ಲ್ ಮೆಂಟ್ ಆಫೀಸರು ಆಗಿದ್ದದರಿಂದ ಕೊಡಗಿನಲ್ಲಿ ಹೆಚ್ಚಿನ ಕಂದಾಯ ಹಾಕಲ್ಪಡಲಿಲ್ಲವೆಂದು ಜನರು ನಂಬಿರುತ್ತಾರೆ.

1918 ನೇ ಇಸವಿಯಲ್ಲಿ ಇವರು ತಮ್ಮ ಕೆಲಸದಿಂದ ನಿವೃತ್ತರಾದಾಗ, ಕೊಡಗುದೇಶದ ಎಲ್ಲಾ ಪಂಗಡದ ಜನರೂ, ಪರಸ್ಪರ ಸಹಾಯದ ಸಂಘಗಳ ಮೆಂಬರುಗಳೂ ಕೂಡಿ ಇವರಿಗೆ ಕೊಟ್ಟ ಬಹುಮಾನಪತ್ರದಿಂದಲೂ, ಸನ್ಮಾನದಿಂದಲೂ ಮೆ|| ಹಾಲರ್ ಸಾಹೇಬರು ದೇಶೀಯರ ಪ್ರೀತಿಗೆ ಎಷ್ಟರಮಟ್ಟಿಗೆ ಪಾತ್ರರಾಗಿದ್ದಾರೆಂಬುದು ಚೆನ್ನಾಗಿ ಕಂಡುಬರುತ್ತೆ. ವಿದೇಶೀಯರ ಉದ್ಯೋಗಸ್ಥರ ಪೈಕಿ ಎಲ್ಲಾ ಜನರಿಂದ ಇವರಹಾಗೆ ಸನ್ಮಾನಿಸಲ್ಪಟ್ಟ ಮಹನೀಯರು ಕೇವಲ ಅಪೂರ್ವ.

ಇವರು ತಮ್ಮ ಜೀವಮಾನದ ಮುಂದಿನ ಭಾಗವನ್ನು ಸ್ವದೇಶದಲ್ಲಿ ಕಳೆಯಬೇಕೆಂಬ ಇಷ್ಟದಿಂದ ಬೇಗನೇ ಸ್ವದೇಶಕ್ಕೆ ಹೋರಡುತ್ತಾರಾಗಿ ತಿಳಿಯುತ್ತೇವೆ. ಇವರಿಗೆ ಭಗವಂತನು ಸುಪ್ರಯಾಣವನ್ನು ಬೆಳಸಿ ಆಯುರಾರೋಗ್ಯವನ್ನು ಕೊಡಲೀ ಎಂದು ಪ್ರಾರ್ಥಿಸುತ್ತೇವೆ.

ಕೊಡಗು ಕವಿಗಳ ವಿಚಾರ.

ಅನಾದಿಯಿಂದ ವಿದ್ಯಾಭಿವೃದ್ಧಿಗೂ, ಶಾಸ್ತ್ರಾಧಾರ ಧರ್ಮ ಭಕ್ತಿಮುಕ್ತಿ [illegible] ಕವಿಗಳ ಕಾವ್ಯವೇ ಮೂಲಾಧಾರವೆಂದು ವಿದ್ವಾಂಸರು ರಾಜಾಧಿರಾಜರುಗಳು ಸಹ ಪರಿಶೋಧಿಸಿ ಕವಿಗಳೇ ಮಾನವಜೀವಿಗಳಿಗೆ ಜ್ಞಾನೋದಯ ಉಂಟುಮಾಡತಕ್ಕ ಪರಮಗುರುಗಳೆಂದು ತೀರ್ಮಾನಿಸಿ ಕವಿಯು ಸ್ಥಾನಕ್ಕೆ ಗುರುಗಣನೆಂಬ ಶ್ರೇಷ್ಠಾಂಕಿತವನ್ನು ಸ್ಥಿರಪಡಿಸಿದರು. ಅದರಂತೆ ಪೂರ್ವಮಹಾತ್ಮರಾದ ಕನಕದಾಸ್, ಕಬೀರ್ [illegible] ಯರ್, ಸಗ್ಯರೆ ಮಹಾಕವಿಗಳ ಹೃದಯಕಮಲದಿಂದ ಉತ್ಪನ್ನವಾದ ಅಮೃತತುಲ್ಯವಾದ ಕಾವ್ಯವು ಈಗ ಅನೇಕ ಶತಮಾನಗಳಾದಾಗ್ಯೂ ನಮ್ಮಗಳನ್ನು ಭಕ್ತಿಯಲ್ಲಿ ಮುಳುಗಿಸುತ್ತಿರುವುದು ಸಂತೋಷವಲ್ಲವೆ? ಆ ಮಹಾತ್ಮರಿಗೆ ಮಂಗಳವಾಗಲಿ! ಇದರಂತೆ ಆಯಾಯದೇಶದಲ್ಲು ಆಯಾಯ ರಾಜರುಗಳ ಪ್ರೋತ್ಸಾಹದಿಂದ ಕವಿಗಳೆಂಬ ಸರೋವರದಲ್ಲು ಕಾವ್ಯವೆಂಬ ಕಮಲವು ಅರಳಿ ಪ್ರಕಾಶವಾಗುತ್ತಾ ಇರುವುದನ್ನು ನಾವುಗಳು ಪ್ರತ್ಯಕ್ಷ ಕಂಡಂತೆ ಇದೆ. ನೋಡಿರಿ, ನಮ್ಮ ಕೊಡಗುದೇಶದಲ್ಲಿ ಕೊಡಗುರಾಜರ ನಂತರ ಕವಿಗಳ ಹೆಸರೆ ಶೂನ್ಯವಾಯಿತು. ಸರಕಾರದವರ ಮತ್ತು ದೇಶಬಾಂಧವರ ಪ್ರೋತ್ಸಾಹವು ಕಡಿಮೆಯಾಗಿದ್ದೇ ಇದಕ್ಕೆ ಮುಖ್ಯ ಕಾರಣವಾಗಿದೆ. ಈ ನವನಾಗರೀಕಕಾಲದಲ್ಲು ಸಹ ಪರದೇಶದ ಕವಿಗಳ ಕಾವ್ಯಗ್ರಂಥಗಳೇ ನಮ್ಮ ದೇಶದ ಬಾಲಕರಿಗೆ ಕಂಠಪಾಠವಾಗುವದು ಕೇವಲ ನಾಚಿಕೆಯಲ್ಲವೇ? ಛೀ ಛೀ! ನಾಚಿಕೆ ನಮಗಿಲ್ಲದೆ ನಮ್ಮ ದೇಶಕ್ಕೇ ನಾಚಿಕೆಯಾಗಿರುತ್ತೆ. ಯೋಚಿಸಿರಿ ನಾವೇಕೆ ನಾಚಿಕೆಪಡಬೇಕು. ನಮ್ಮ ದೇಶದಲ್ಲಿ ಕವಿಗಳಿಲ್ಲವೆ? ವಾಚಕಮಹಾಶಯರೇ, ದಯವಿಟ್ಟು ಆಲಿಸಿರಿ. ಕೊಡಗುದೇಶದ ಮೂಲನಿವಾಸಿಗಳಾದ ಕೊಡಗು ಜನಾಂಗಗಳಿಗೆ ಅವರವರ ಸ್ವಭಾಷೆವೊಂದಲ್ಲದೆ ಇದಕ್ಕೆ ಪ್ರತ್ಯೇಕವಾದ ವಿದ್ಯಾಸಾಧನಗಳು ಇಲ್ಲ. ಹೀಗಿದ್ದಾಗ್ಯೂ ಪಾಶ್ಚಿಮಾತ್ಯರ ವಿದ್ಯಾಪ್ರಭಾವದಿಂದ ಮುಂದುಮುಂದಕ್ಕೆ ತಮ್ಮಗಳ ಮಾತೃಭಾಷೆಯು ನಿರ್ನಾಮವಾದೀತೆಂದು ಯೋಚಿಸಿ ಛಂದೋಲಕ್ಷಣಕ್ಕನುಸಾರವಾಗಿ ತಮ್ಮ ಭಾಷಾಶಬ್ದದಿಂದಲೇ ಗದ್ಯ, ಪದ್ಯ, ಕಾವ್ಯ, ಗ್ರಂಥ, ನಾಟಕ ಮುಂತಾದುವುಗಳನ್ನು ತಯಾರಿಸಿ ನಮ್ಮ ಮುದ್ದುಬಾಲಕರ ಹೃದಂಗಮಯವಾಗುವಂತೆ ರಚಿಸಿದ ಅಪ್ಪನೆರವಂಡ ಅಪ್ಪಚ್ಚ ಕವಿಗಳನ್ನು ಮರೆತಿರ. ಇವರು ಕವಿಗಳಲ್ಲವೆ, ವಿದ್ಯಾವಂತರಲ್ಲವೇ? ಅಲ್ಲವೆಂದು ಹೇಳುವ ಪಕ್ಷ (ವಿದ್ವಾನೇವ ವಿಜಾನಾತಿ | ವಿದ್ವಜ್ಜನಪರಿಶ್ರಮಂ ||) ಎಂಬಂತೆ ವಿದ್ವಾಂಸರು ಇವರನ್ನು ಉಪೇಕ್ಷೆಮಾಡುವರು. ಇವರ ಗ್ರಂಥವನ್ನು ಇವರು ಮಾಡಿದ ನಾಟಕೋತ್ಸಹವನ್ನು ನಮ್ಮ ಪ್ರೇಮದ ಬಾಲಕರು ಆಡಿ ಸಂತೋಷಪಡಿಸಿದ್ದನ್ನು ಮರೆತಿರಾ? ಇಂಥಾ ಕವಿಗಳಿಗೆ ಯಾವ ಪ್ರೋತ್ಸಾಹವನ್ನು ಕಲ್ಪಿಸಿದಿರಿ? ಇಲ್ಲವೆಂದರೆ ಯಾಕೆ ಮರೆತಿರಿ. ಹಾಗೆ ಮರೆತರೆ ನಮ್ಮ ದೇಶದಲ್ಲು ಕವಿವೃಂದವು ಎಂದಿಗೆ ವೃದ್ಧಿಯಾದೀತು. ಕವಿತ್ವವೆಂಬದ್ದು ಅವರವರ ಜನ್ಮಾರ್ಜಿತ ಸುಕೃತ ಶೇಷವಲ್ಲದೆ ಬಿ.ಎ. ಬಿ.ಎಲ್. ಪಾಸಾದವರಿಗೂ ದುರ್ಘಟವಾದ್ದೇ ಸರಿ. ಆದ್ದರಿಂದ ನಮ್ಮ ಈ ಕವಿಗಳಿಗೆ ದೇಶಬಾಂಧವರು ತಕ್ಕ ಪ್ರೋತ್ಸಾಹವನ್ನು ಕಲ್ಪಿಸಿದಲ್ಲು ಅನೇಕ ಪುಷ್ಪಗಳು ಅರಳಿ ನಮ್ಮ ದೇಶವು ಪ್ರಕಾಶಕ್ಕೆ ಬರುವುದರಲ್ಲಿ ಸಂದೇಹವಿಲ್ಲ.

ಚೆಂಗಳ.

ಮುಲ್ತಾನ್ ಸಂಟ್ರಲ್ ಜೈಲಿನಲ್ಲಿ ಮೂರುವರ್ಷ ಕಠಿಣ ಸಜೆಯನ್ನು ಅನುಭವಿಸುತ್ತಿರುವಂಥಾ ದೇಶಾಭಿಮಾನಿ ಪಂಡಿತ ಅಮೀರ್‌ಚಂದ್ ಭಾರದ್ವಾಜ್ ಎಂಬವರು ತನಗೂ ತನ್ನ ಸಂಗಾತಿಗಳಿಗೂ ಬೇಕಾದ ಉಪಹಾರವು ದೊರೆಯುತ್ತಿಲ್ಲವೆಂದು ಉಪವಾಸ ಮಾಡಲಿಕ್ಕೆ ತೊಡಗಿದರು. ಸರಿಯಾದ ಉಪಹಾರವನ್ನು ಕೊಡುತ್ತೇವೆಂದು ಭಾಷೆಯು ಸಿಕ್ಕಿದ ನಂತರ ಆಹಾರವನ್ನು ತೆಗೆದುಕೊಳ್ಳಲು ಆರಂಭಿಸಿರುವರು.

ಲಾಲ ಲಜಪತರಾಯರು ಜಲಂಧರ ಡಿಸ್ಟ್ರಿಕ್ಟಿನ ಕರ್ತಾರಪುರದಿಂದ ಮೋಟಾರಿನಲ್ಲಿ ಕಪುರ್ಥಲಾಸಂಸ್ಥಾನಕ್ಕೆ ಹೋಗುತ್ತಿರುವಾಗ್ಗೆ ಆ ಸಂಸ್ಥಾನದ ಮೇಜಿಸ್ಟ್ರೇಟರವರೂ ಪೋಲೀಸ್ ಸುಪರಿಂಟೆಂಡೆಂಟ್ ಮತ್ತು ಅನೇಕ ಪೋಲೀಸಿನವರ ಸಮೇತ ಆ ಸಂಸ್ಥಾನದ ಗಡಿಯಲ್ಲಿ ಅವರನ್ನು ನಿಲ್ಲಿಸಿಬಿಟ್ಟರು. ಲಾಲ ಲಜಪತರಾಯರವರನ್ನು ಆ ಸಂಸ್ಥಾನದೊಳಗೆ ಪ್ರವೇಶಿಸಕೂಡದೆಂದೂ ಹುಕುಂ ಬರದು ಕೊಡುವ ಪದ್ಧತಿಯಲ್ಲಿ [illegible] ಇಲ್ಲವೆಂದೂ ಮೇಜಿಸ್ಟ್ರೇಟರು ಹೇಳಿದ ಕಾರಣ ಲಜಪತರಾಯರು ಬಹ [illegible]ದಿಂದ ಜಲಂಧರಿಗೆ ಹಿಂತಿರುಗಿ ಹೋದರು.

ವಿದೇಶ.

ಕೆಲವು ದಿನಗಳಲ್ಲಿ 87 ನೇ [illegible] ಪ್ರೆಸಿಡೆಂಟ್ ಎಸ್. ಪಿ. ಜೆಫ್ಫ [illegible] ಮುಕ್ತಿ ತಂದೆಯಂತೆ.

ಪ್ರಿನ್ಸ್ ಆಫ್ ವೇಲ್ಸರವರು ಬರುವ ಚಳಿಗಾಲದಲ್ಲಿ ಹಿಂದೂದೇಶಕ್ಕೆ ಬರುತ್ತಾರೆಂತಲೂ ನವಂಬರ 30 ಕ್ಕೆ ಬೊಂಬಾಯಿಯಲ್ಲಿ ಇಳಿಯುತ್ತಾರೆಂತಲೂ ವದಂತಿಯಿದೆ.

ಸ್ಪೇನ್ ದೇಶದಲ್ಲಿ ಮೊನ್ನೆ ಮತ್ತು ಬೊಲಿವಿಯಾದ ಪಟ್ಟಣಗಳಿಂದ ಎರಡು ಎಕ್ಸ್‌ಪ್ರೆಸ್ ಟ್ರೈನ್‌ಗಳು ಒಂದೊಕ್ಕೊಂದು ಢಿಕ್ಕಿ ಹೊಡೆದು 20 ಜನರು ಕೊಲ್ಲಲ್ಪಟ್ಟರೆಂದೂ 40 ಜನರಿಗೆ ಗಾಯವಾಯಿತೆಂದೂ ವರ್ತಮಾನವಿದೆ.

"ಶಿಕಾಗೋ ಬ್ಯಾಂಕರ್" ಮಿ|| ಜೋಸೆಫ್ ಹಿಲ್ [illegible] ಅವರ ಪತ್ನಿಯಾದ ಉಡಾಹೀವ ಎಂಬವಳು ದಾಸಿಯಾಗಿ ಕೆಲಸಮಾಡುತ್ತಿದ್ದು ಈಗ ತಾನೇ ಸರಯಲ್ಲಿಡಲ್ಪಟ್ಟಿರುವಳು. ಇವಳು 16 ಸಾವಿರಪೌನುಗಳನ್ನು ಕದ್ದಿರುವಂತೆ ಅವಳ ಪತಿಯು ಕೊಟ್ಟಂತ ಒಂದು ಸಾವಿರಪೌನುಗಳ ಜಾಮೀನುಮೇಲೆ ಅವಳನ್ನು ಬಿಟ್ಟಿರುತ್ತಾರೆ.

ನ್ಯೂಯಾರ್ಕಿನ ಡಾಕ್ಟರ್ ಜೇಮ್ಸ್ ಥಾಮ್ಸನ್ ಎಂಬಾತನು ಮನುಷ್ಯರ ಬೋಳುತಲೆಯ ಮೇಲೆ ಕೂದಲನ್ನು ಹೊಲಿಯುವಷ್ಟು ಸೂಕ್ಷ್ಮವಾದಂಥ ಯಂತ್ರವನ್ನು ಕಂಡು ಹಿಡಿದಿದ್ದರೆಂದು ಹೇಳುತ್ತಾರೆ. ಇದನ್ನು ನ್ಯೂಯಾರ್ಕಿನ "ಬಾಲ್ಡ್‌ಹೆಡ್ ಕ್ಲಬ್" (ಬೋಳುತಲೆಕ್ಲಬ್) ನಲ್ಲಿ ನಾಪಿತ[illegible]ದ ದಿನ ಪ್ರದರ್ಶನವಾಡುವಂದೂ ಅಲ್ಲಿಯೇ 8 ಜನರ ತಲೆಗೆ ಒಂದೊಂದು ಕೂದಲನ್ನು ಹಾಕಿಯುವರೆಂದು ವರ್ತಮಾನವಿದೆ.

ಜರ್ಮನಿಯ ಒಬ್ಬ ಪ್ರೊಫೆಸರಾದ ಐನ್‌ಸ್ಟೀನ್ [illegible]ಅವರು ಲಂಡನ್ ಪಟ್ಟಣದ ಕಿಂಗ್ಸ್ ಕಾಲೇಜಿನಲ್ಲಿ ರಿಲೆಟಿವಿಟಿಥಿಯರಿ (Relativity Theory) ವಿಷಯ ಒಂದು ವ್ಯಾಖ್ಯಾನ ಕೊಟ್ಟ ಅಸಂಖ್ಯಾತರಾದ ಜನರು ಸೇರಿದ್ದರು. ಅಧ್ಯಕ್ಷರಾಗಿದ್ದ ಲಾರ್ಡ್ ಹಾಲ್ಡೇನ್‌ರವರು ಲೋಕದ ವಿಷಯ ಇಂದಿನವರೆಗೆ ತಿಳಿಯದಿದ್ದ ಹೊಸಸಂಗತಿಗಳನ್ನು ತಿಳಿಸುವಂತಾ ಶಾಸ್ತ್ರಿಗಳಾದ ಐನ್‌ಸ್ಟೀನ್ ಎಂಬವರನ್ನು ನಮಗೆ ಕೊಟ್ಟದ್ದಕ್ಕಾಗಿ ನಾವು ಜರ್ಮನಿದೇಶಕ್ಕೆ ಅಭಿನಂದನೆ ಮಾಡುತ್ತೇವೆಂದು ಹೇಳಿದರು.

ಇಂಗ್ಲೆಂಡ್ ದೇಶದ ಪಾರ್ಲಿಮೆಂಟ್ ಸಭೆಯಲ್ಲಿ (House of Commons) ತುರ್ಕಿಯ ವಿಷಯ ಕೇಳಿದಂಥ ಅನೇಕ ಪ್ರಶ್ನೆಗಳಿಗೆ ಉತ್ತರವಾಗಿ ಮಿ|| ಚೇಂಬರ್ಲಿನ್‌ರವರು ಹೇಳಿದೇನಂದರೆ — ಗವರ್ಮೆಂಟಿನವರು ಗ್ರೀಕರ ಪಂಗಡವನ್ನಾಗಲಿ, ತುರ್ಕಿಯವರ ಪಂಗಡವನ್ನಾಗಲಿ ವಹಿಸಿರುವದಿಲ್ಲ. ಮಿತ್ರಮಂಡಲಿಯವರ ಪ್ರಯತ್ನದಿಂದ ಬೇಗನೆ ತುರ್ಕಿಯವರಿಗೂ ಗ್ರೀಕರಿಗೂ ರಾಜಿಯಾಗಬಹುದೆಂದು ನಂಬುತ್ತೇನೆ. ಕೆಮಲಿಸ್ಟರಿಗೆ ವಿರೋಧವಾಗಿ ಗ್ರೀಕರಿಗೆ ಮಿಲಿಟರಿಯಲ್ಲಾಗಲಿ, ಹಣದಲ್ಲಿಯಾಗಲಿ ಸಹಾಯ ಮಾಡುವ ಭಾರವು ನಮಗಿರುವದಿಲ್ಲ"

ಮಿ|| ಶ್ರೀನಿವಾಸ ಶಾಸ್ತ್ರಿಯವರು [illegible] ಪಟ್ಟಣದಲ್ಲಿ ಅಸಹಕಾರತೆಯ ವಿಷಯ ಓದಿದ ಒಂದು ಉಪನ್ಯಾಸದಲ್ಲಿ ಹೀಗಂದು ಹೇಳುವರು. ಮಿ|| ಗಾಂಧಿಯು ಈಗಿನ ಔಷಧವು ನಿಶಾಚಿಯ ಸೃಷ್ಟಿಯೆಂತಲೂ ಗಾಡ್ಲಿಮ್ಯಾಟರ ನವನಾಗರೀಕತೆಯು ಮನುಷ್ಯಜಾತಿಯನ್ನು ಗುಲಾಮರನ್ನಾಗಿ ಮಾಡಲಿಕ್ಕೆ ಸೈತಾನನು ಕಂಡು ಹಿಡಿದಿರುವಂಥ ಒಂದು ಬಲೆಯೆಂತಲೂ, ನಂಬಿದ್ದಂಥ ಟಾಲ್‌ಸ್ಟಾಯಿ ಎಂಬಾತನ ಶಿಷ್ಯನು ಆದರೆ ಈಗಿನ ನವನಾಗರೀಕತೆಯಲ್ಲಿರುವ [illegible] ಮತ್ತು ಕೆಟ್ಟಗುಣಗಳನ್ನು ಹೋಗಲಾಡಿಸಿ ಉತ್ತಮ [illegible]ಗೆ ತರಲು ಪ್ರಯತ್ನ ಪಡುವವರಂತೆ ಮಿ|| ಗಾಂಧಿಯು [illegible]"

ವಿನೋದ ವೃತ್ತಾಂತಗಳು.

[illegible]ದೇಶದವರು ಪೂರ್ವದಲ್ಲಿ ಸತ್ತವರನ್ನು ತೊಟ್ಟಿದಲ್ಲಿ [illegible]ರು

ಫ್ರಾನ್ಸ್ ದೇಶದಲ್ಲಿ ಮದುವೆಯಾದವರಲ್ಲಿ 1 ಭಾಗ ದಂಪತಿಗಳಿಗೆ ಮಕ್ಕಳಿಲ್ಲ.

ಬೀದಿಗಳಿಂದ 25 ಅಡಿಗಳ ಮೇಲಿರುವ ಗಾಳಿಯೇ ಅತ್ಯಂತ ನಿರ್ಮಲವಾದ ಗಾಳಿ.

ಸ್ವೀಸ್‌ಲೆಂಡಿನಲ್ಲಿ ದಂಪತಿಗಳು ಇರುವರು. ಇವರು ಶತಮಾನದ ಉತ್ಸವವನ್ನು ಮಾಡಿರುವರು.

ಕ್ಯೂಬಾ ದೇಶದಲ್ಲಿ ಎಲ್ಲಾ ತರ್ಕಾರಿಗಳೂ, ಹಣ್ಣುಗಳೂ ಬೆಳೆಯುವವು ಸಮೃದ್ಧಿಯಾಗಿಯೂ ಬೆಳೆವುವು.

ಉತ್ತರಅಮೇರಿಕಾ ಖಂಡದಲ್ಲಿ ಅತಿ ಉದ್ದವಾದ ವೃಕ್ಷ [illegible] ಇದು 616 ಅಡಿಗಳುದ್ದವಿದೆ.

ಒಂದು ಉಷ್ಟ್ರಪಕ್ಷಿಯು 30 ವರ್ಷಗಳು ಬದುಕುವುದು. ಪ್ರತಿವರ್ಷವೂ 2 ಅಥವಾ 4 ಪೌಂಡುಗಳಷ್ಟು ಗರಿಗಳನ್ನು ಕೊಡುವದು.

ಜಪಾನ್ ದೇಶದ [illegible] ಒಬ್ಬರು 120 ಇದೆ ಒಂದು [illegible]ವಾಗಿ ತನ್ನ ಜೀವನವನ್ನು ನಡೆಯಿಸುವರು.

ಹೆಂಗಸರಿಗೆ 30 ನೇ ವರ್ಷದ ನಂತರ [illegible] ಅಧಿಕ ಕಡಮೆಯಾಗುವದು, ಗಂಡಸರಿಗೆ 40 ನೇ ವರ್ಷದಿಂದ ತೂಕ ಕಡಮೆಯಾಗುವದು.

ಅಮೇರಿಕಾ ಖಂಡದ [illegible] ಎಂಬ ಪಟ್ಟಣದಲ್ಲಿ ಒಂದು ಕಟ್ಟಡಕ್ಕೆ 598 ಮೆಟ್ಟಲುಗಳಿವೆ. ಇಷ್ಟು ಮೆಟ್ಟಲುಗಳಿರುವ ಕಟ್ಟಡ ಇನ್ನೆಲ್ಲೂ ಇಲ್ಲ.

ಪ್ರಪಂಚದಲ್ಲಿ ಸಿಕ್ಕುವ [illegible] 24 ಅಡಿ ಇದರ [illegible] ಕೊರಡಿಯನ್ನು ಆಕ್ರಮಿಸುವುದು.

ಜಪಾನ್ ದೇಶದ ನಾಟಕಶಾಲೆಗಳಲ್ಲಿ ನಾಟಕನೋಡುವವರು ಹೊರಕ್ಕೆ ಹೋಗಬೇಕಾದರೆ ಎಡಗಡೆಯಾದ [illegible] ರಟ್ಟನ್ನು ಹಾಕುವರು.

18 4 ನೇ ಇಸವಿ ಜೂನ್ 27 ನೇ ತಾರೀಖು ಅಂದರೆ [illegible] ಕಾಲದಲ್ಲಿ ನಮ್ಮ ವರಖಂಡದಲ್ಲಿ ಹೊಗೆಬಂಡಿಯ ಸಂಚರಿಸಲುಪಕ್ರಮವಾಯಿತು.

ಇಂಗ್ಲಂಡು ದೇಶದಲ್ಲಿ ಮದುವೆಗೆ ವರ [illegible] ದಕ್ಷಿಣ [illegible] ಕಾಸುಗಳನ್ನು ಒಂದು ಚೀಲದಲ್ಲಿ ಹಾಕಿ [illegible] ಇಲ್ಲವಾದರೆ ಕಳೆ ವಸೂಲ್ಮಾಡುವರು.

ನಮ್ಮ ವೈಸರೀತ್ಯರೋಗದ ಒಂದು ಶಾಖೆ.

ಮಹಾಶಯರೇ —

ನಮ್ಮ ನೂತನ ಆಚಾರವ್ಯವಹಾರಗಳು ಪ್ರಾಚೀನರವ್ವಗಳಿಗೆ ವಿರುದ್ಧವಾಗಿಯೂ ವೈಪರೀತ್ಯ ಕಾರ್ಯಗಳಾಗಿಯೂ ಇರುವುವು ಮತ್ತು ಈ ವಿಷಯವು ನನ್ನೊಬ್ಬರ ಹೊಸ ಸ್ವಗತವಾಗಿಯೂ ಇರುವುದು. ನಮ್ಮ ಸುಶಿಕ್ಷಿತ [illegible] ರಗಳು [illegible] ನಗೆಗೀಡಾಗಿವೆ ಎಂಬ ವಿಷಯವನ್ನು ಹೋಸದಾಗಿ ಹೇಳಿ ಎಲ್ಲರಿಗೂ ವ್ಯಕ್ತಪಡಿಸುವಳಂದನೆ ನಮ್ಮ ಕೊಡಗು [illegible] ನೋಡಿದರೆಯು ಕೇವಲ ಚಿಕ್ಕ ಜಾಲೆಯಾಗಿಯೂ, ಅತಿ ತರ ಹಿಡಿಯವರೂ ಆಗಿರುವ ನನ್ನೊಡನೆ ಪಶ್ಚಿಮ ಪಕ್ಷಿಸಿಯಂತೆ [illegible] ಸಂಗವನ್ನು ನಡಸಲೊಲ್ಲದ ಕಳೆಯಾಗಿಯೂ ಇರುವಳು. ಆದಕಾರಣ ನನ್ನ ಜೀವನಾನದ ದಶೆಯಲ್ಲಿ ಅತಿ ಸಾಮಾನ್ಯವಾಗಿಯೂ [illegible] ಕಾರಣ ಮಾದೇ [illegible] ಅತಿವೇಗದಿಂದ ಮುಂದುವರಿಯುತ್ತಿರುವ ಒಂದು ವಿಷಯವನ್ನು ಮಾತ್ರ ಇಂದು ನಿಮ್ಮ ಮುಂದಿಡುವೆನು.

ಭಾಷಾಭಿಮಾನಿಗಳೇ ನಮ್ಮ ಮಾತೃಭಾಷೆಗಳಾದ ಕನ್ನಡ [ಕೊಡಗು] ತಮಿಳು ಇತ್ಯಾದಿಭಾಷೆಗಳು ವ್ಯಾಕರಣ ಛಂದಸ್ಸುಗಳ ಅಂಕುಶವಿಲ್ಲದೆ ನಿರಂಕುಶವಾಗಿ ಬರೆಯಲ್ಪಡಲಿಲ್ಲ. ಈ ಭಾಷೆಗಳು ಪರಸ್ಪರ ಆಲೋಚನೆಗಳನ್ನು ಸುಲಭವಾಗಿ ತಿಳಿಸಲು ಸಾಕಾದಷ್ಟು ಶಬ್ದರಹಿತಳಾಗಿಯೂ ಇಲ್ಲ. ಹೀಗಿರುವಲ್ಲಿ ನಾವು ಅವುಗಳ ಮಧ್ಯ ಮಧ್ಯ ಇಂಗ್ಲಿಷ್ ಭಾಷೆಯ ತುಂಡು ತುಡುಕುಗಳನ್ನು ಸೇರಿಸಿ, ನಮ್ಮ ಮಾತೃಭಾಷೆಗಳನ್ನು ವಿಕಾರವಾಗಿ ಮಾಡುವುದು ಬಹು ಶೋಚನೀಯವಾದ ಸಂಗತಿಯೇ ಸರಿ. ಹೀಗೆಂದ ಮಾತ್ರದಲ್ಲಿ ಆಂಗ್ಲ ಭಾಷೆಯನ್ನು ಅಡಲೇಬಾರದೆಂಬ ವಿಪರೀತಾರ್ಥವಲ್ಲ. ಓದಿದರಾಯಿತು ಆಡಲೇಬೇಕು. ಆದರೆ ಒಂದೊಂದು ಭಾಷೆಯನ್ನು ಆಡುವಾಗಲೂ ಸಂಪೂರ್ಣವಾಗಿ ಆ ಭಾಷೆಯನ್ನೇ ಆಡಬೇಕು. ಕನ್ನಡ ವಾಕ್ಯದ ಮಧ್ಯದಲ್ಲಿ ಒಂದೆರಡು ಇಂಗ್ಲಿಷ್ ಶಬ್ದಗಳನ್ನು [illegible]ದರಿಂದ ನಾವೇನೂ [illegible] ಆದರೆ [illegible]ಯು ವಿಪರೀತ ಕಷ್ಟಕ್ಕೊಳಗಾಗುವುದು. ಈಚೀಚೆಗೆ ನಾವು ಈ ರೋಗಕ್ಕೆ ಬಹಳವಾಗಿ ತುತ್ತಾಗಿರುವುದರಿಂದ, ನಮಗೆ ಯಾವುದೊಂದು [illegible] ದರೂ [illegible] ಗಿಯೂ ಸರಳವಾಗಿ [illegible] ಮಾತನಾಡಲಿಕ್ಕಾಗುವುದಿಲ್ಲ.

ಸೃಷ್ಟಿಕರ್ತನು ಒಂದೊಂದು ವರ್ಗದ ಪ್ರಾಣಿಗಳನ್ನು ಬೇರೆ ಬೇರೆ ರೀತಿಯಾಗಿ ಸೃಷ್ಟಿಸಿರುವನು. ಹೀಗೆಮಾಡಿದ್ದು ಅವನಲ್ಲಿ ಸರಿಯಲ್ಲವೆಂದೂ, ನಾವೆಲ್ಲರೂ ಬಹು ಬುದ್ಧಿವಂತರಾದ ವೈದ್ಯರೆಂದೂ ತಿಳಿದುಕೊಂಡು, ಮನುಷ್ಯರಿಗೆ ಕತ್ತೆಯ ಕಿವಿಯನ್ನೂ ಬೆಕ್ಕಿನ ಬಾಯಿಯ ಹಲ್ಲನ್ನೂ, ಕಾಗೆಗೆ [illegible] ಹುಲಿಯ ಹಕ್ಕಿಯ ರಕ್ಕೆಯನ್ನೂ, ಇಟ್ಟು [illegible] ನಾವು ಎಷ್ಟು ಜಾಣರಾಗುವೆವೋ...... ನಾನು ನನ್ನ ಪ್ರದೇಶಿಗೆ ಸ್ವಲ್ಪ ಕೇವಲ ಆಗಿದ್ದರಿಂದ ಹಾಸ್ಪಿಟಲಿಗೆ ಹೋಗಿ ಮಡಿಸನ್ ತಂದೆನು. ಒರ ವಾಗ ದಾರಿಯಲ್ಲಿ ಟೋಲ್‌ಗೇಟ್ ಹತ್ತಿರ ಗಾಳಿಬಂದು ನನ್ನ ಸ್ಕಾರ್ಫು ಅಂಬ್ರೆಲ್ಲ ಮುರಿದು ಹೋಯಿತು. [illegible] ಬಹಳ ಕೋಲ್ಡಾಗಿದ್ದುದರಿಂದ ನಾನು ಫ್ಲಾನ್ನೆಲ್ ಶರ್ಟ್ ಧರಿಸಿದ್ದೆ. ನಮ್ಮ [illegible] ಕೊಡಗಿನ [illegible] ಕ್ರಯಿಸಿದ [illegible] ಮಾಡಿದುವಿಷ್ಟೆ ಎಂದು [illegible] ಎಂಬುದಾಗಿ [illegible] ವೈದ್ಯರಾದರೂ ಆಶ್ಚರ್ಯಪಡಬಾರದಾಗುವೆವು.

ಆದಕಾರಣ ಭಾಷಾಭಿಮಾನಿಗಳಿರಾ, ನಿಮ್ಮ [illegible] ಯಲ್ಲಿ ಆಡದೆಹೋದರೆ ಪರಭಾಷೆಯನ್ನಾದರೂ ಅಭಿಮಾನವಿಟ್ಟು ನಿಮ್ಮದರ ಜೊತೆಯಲ್ಲಿ ಜನಿಸುವ ಭಾಷೆಯನ್ನು ವಿಪರೀತ ಮಾಡಬಾರದಾಗಿ ಅತಿವಿನಯದಿಂದ ಬೇಡಿಕೊಳ್ಳುತ್ತೇನೆ. M. M.

ಮದ್ಯಪಾನ.

(೨ ನೇ ಸಂಚಿಕೆಯಿಂದ ಮುಂದುವರಿದುದು).

ಸಾರಕಮಹಾಶಯರೇ, ಕಳೆದವಾರದಲ್ಲಿ ಮದ್ಯವನ್ನು [illegible] ನಾವು [illegible] ಸೇವಿಸಬೇಕು? ಅದು ನಮಗೆ ಶಕ್ಯವೇ? ಅಥವಾ ಮದ್ಯಪಾನ ಮಾಡಿರಿ ಎಂದು ನಿಮ್ಮನ್ನು ನಿರ್ಬಂಧಪಡಿಸುತ್ತದೆಯೇ? [illegible] ಬುದ್ಧಿಯನ್ನು ತಮ್ಮ ಕೈಯಲ್ಲಿ [illegible] ಅಥವಾ ಊಟಮಾಡುವ ಪದಾರ್ಥದಲ್ಲಿ ಬಡಿಸುತ್ತದೆಯೇ? [illegible] ನಮ್ಮಗಳ ಮನೆಯನ್ನು ದರೋಡೆ ಮಾಡುತ್ತದೆಯೋ? ನಮ್ಮಗಳ ಹೆಂಡಿರು ಮಕ್ಕಳಿಗೆ ಉಡುವದಕ್ಕೆ [illegible] ಉಣ್ಣುವದಕ್ಕೆ ಅನ್ನವೂ ಇಲ್ಲದಾಗಬೇಕೆಂದು ಹಾರೈಸುತ್ತದೆಯೋ? ಇಲ್ಲ. ನೋಡಿರಿ. ಅದು ಅದರ ಸ್ವರೂಪವನ್ನು ತೋರುತ್ತಲೇ ಇದೆ. ಅದನ್ನು ನಾವು ಸಂಧಿಸಿದರೂ ಅದು ಅದರ ಕರ್ಮವನ್ನು ಬಿಡುವದಿಲ್ಲ. ಯಾರು ಸ್ವಕರ್ಮನಿಷ್ಠರಾಗಿರುತ್ತಾರೋ ಅವರಿಗೆ ಆ ಕರ್ಮದಿಂದ ಶ್ರೇಯಸ್ಸಾಗುವದೇ ಹೊರತು ಕೇಡು ಎಂದಿಗೂ ಉಂಟಾಗಲಾರದು. ನಾವುಗಳು ನಮ್ಮ ಸ್ವಕರ್ಮವನ್ನು ಮಾಡದೆ ಇರಬಾರದೆಂದು ಶ್ರೀಕೃಷ್ಣನು ಅರ್ಜುನನಿಗೆ ಹೇಳಿ[illegible] ಹಾಗೆಯೇ ಮದ್ಯವಾದರೋ ತನ್ನ ಸ್ವಕರ್ಮವನ್ನು ಮಾಡುತ್ತಲೇ ಇದೆ. ಆದರಿಂದ ಅದಕ್ಕೆ ದೋಷವೇನೂ ಬರುವದಿಲ್ಲ. ಅದನ್ನು ಭಗವಂತನು ಸೃಷ್ಟಿಯನ್ನು ಮಾಡಿ ಸಲೋಭನಾಗಿ ಮಥನಕಾಲದಲ್ಲಿ ಉಂಟುಮಾಡಿದನು. ಮಥನಕಾಲದಲ್ಲಿ ಉಂಟಾದುದರಿಂದಲೇ ಮದ್ಯವೆಂಬ ಹೆಸರು ಪ್ರಸಿದ್ಧವಾಯಿತು. ಮತ್ತು ಮದ್ಯದಿಂದ ಕೆಡಿಸುವದರಿಂದಲೂ ಮದ್ಯವೆಂಬ ಹೆಸರಾಗಿರಬಹುದು. ನಮ್ಮಗಳಿಗೆ ಭಗವಂತನು ವಿವೇಕ ಬುದ್ಧಿಗಳನ್ನು ಕೊಟ್ಟಿರುತ್ತಾನೆ. ಹೀಗಿರುವಲ್ಲಿ ನಮ್ಮ ಮನಸ್ಸನ್ನು ಸನ್ಮಾರ್ಗಕ್ಕೆ ತಿರುಗಿಸುವದು ಬಿಟ್ಟು ದುರ್ಮಾರ್ಗಕ್ಕೆ ಹೋಗಗೊಡಿಸಿ ಆದರಿಂದ ಅನೇಕ ಕಷ್ಟನಷ್ಟಗಳಿಗೆ ಗುರಿಯಾಗಿ ದುಃಖಿಸಿದ್ದರಿಂದೇನುಪ್ರಯೋಜನ? [illegible] ತಮ್ಮ ಸ್ವಾಧೀನಮಾಡಿಕೊಳ್ಳದೆ ಅದರ ಸ್ವಾಧೀನ ತಾನು ವರ್ತಿಸುದೇ ಅದರ ಅದು ತನ್ನನ್ನು ದಿಕ್ಕಿಲ್ಲದವನನ್ನಾಗಿ ಮಾಡುವುದರಲ್ಲಿ ಏನೂ ಸಂದೇಹವಿಲ್ಲ. ಹೀಗೆಯೇ ತನ್ನ ಮನಸ್ಸನ್ನು ಸ್ವಾಧೀನದಲ್ಲಿಟ್ಟುಕೊಳ್ಳದೆ ಇರುವದರಿಂದಲ್ಲವೇ ಅನೇಕರು ಕುಡಿಕರಾಗಿ ತಮ್ಮ ಸರ್ವಸ್ವವನ್ನು ಕಳಕೊಂಡಿರುವರು. ಹೀಗೆ ಕಳೆದುಕೊಂಡು ಋಣಬಾಧೆಗೆ ಸಿಲುಕಿ ಹೆರವರ ಸಂಗಡ ಜಗಳಗಳನ್ನಾಡಿ ಕೊನೆಗೆ ಏನಾದರೂ ಕುಡಿಕತನದಿಂದ ಎದೆಯೊಡೆದು ಪಿತ್ತೋದ್ರೇಕವಾಗಿ ಕ್ಷಯಾತಿಸಾರ ಮತ್ತು ವಿಷಮವ್ಯಾಧಿಗಳುಂಟಾಗಲು ಹೆಂಡಕುಡಿದು ದೇಹವು ಕಡಕುಕಟ್ಟಿರುವದರಿಂದ ಯಾವ ಔಷಧದಿಂದಲೂ ವ್ಯಾಧಿಯು ಗುಣವಾಗದಿರಲಾಗಿ ನನಗೆ ಶತ್ರುಗಳು ಮಾಟ ಮಾಡಿದ್ದಾರೆ, ದೈವಕ್ಕೆ ಹರಕೆ ಹೂತ್ತಿದಾರೆ. ಆದರಿಂದಲೇ ವ್ಯಾಧಿಯು ಗುಣವಾಗುವದಿಲ್ಲವೆಂದು ನಿರರ್ಥಕವಾಗಿ ಹೆರವರಮೇಲೆ ದೋಷಾರೋಪಣೆಗಳನ್ನು ಮಾಡುತ್ತಾ ಬಲಿ ಬಜನೆ ನೀತ ವಸ್ತುಗಳಿಗೆ ಮತ್ತಷ್ಟು ದುರ್ವ್ಯಯಗಳನ್ನು ಮಾಡುತ್ತಾರೆ. ನಮ್ಮಗಳಿಗೆ ಶತ್ರುಗಳ್ಯಾರು, ಮಿತ್ರರ್ಯಾರು, ಎಂಬುದನ್ನು ಸ್ವಲ್ಪ ವಿಚಾರ ಮಾಡೋಣ. ನಮಗೆ ನಾವೇ ಮಿತ್ರರು, ನಾವೇ ಶತ್ರುಗಳು. ಮನಸ್ಸನ್ನು ಸ್ವಾಧೀನದಲ್ಲಿಟ್ಟುಕೊಂಡರೆ ಕಾಮ ಕ್ರೋಧಾದಿಗಳನ್ನು ಜಯಿಸಬಹುದು. ಹಾಗಲ್ಲದೆ ಮನಸು ನಾನಾ ವಿಷಯಗಳಿಗೆಳದರೆ ಹ್ಯಾಗೆ ತಾನೇ ಸುಖಿಸಬಹುದ್ದು? ಆದ್ದರಿಂದ ಮಹನೀಯರೇ, ಎಲ್ಲರೂ ನಿಮ್ಮ ನಿಮ್ಮ ಮನಸ್ಸನ್ನು ಜಯಿಸಿ ನಿಮ್ಮ ಸ್ವಾಧೀನದಲ್ಲಿಟ್ಟುಕೊಳ್ಳಿರಿ. ಹಾಗಾದರೆ ನಿಮ್ಮಗಳಿಗೆ ಅರಿಷಡ್ವರ್ಗದ ಭಯ ಇರುವದಿಲ್ಲ. ಮತ್ತು ಆ ಮದ್ಯವು ತನ್ನ ಕರ್ಮವನ್ನು ಮಾಡದೆ ಕರ್ಮಭ್ರಷ್ಟತ್ವವನ್ನು ಹೊಂದುತ್ತದೆ. ಹಾಗೆ ಕರ್ಮನಷ್ಟವನ್ನು ಮಾಡುವದು ಧರ್ಮವೇಯೆಂದು ಶಂಕಿಸಬೇಡಿರಿ. ಲೋಕಕಂಟಕರಾದ ರಾಕ್ಷಸರ ಕರ್ಮವನ್ನು ದೇವತೆಗಳು ನಾಶಪಡಿಸಲು ಯತ್ನಿಸುತ್ತಲೇ ಇದ್ದಾರೆ. ಹಾಗೆಯೇ ನಾವುಗಳು ಲೋಕಕಂಟಕಿಯಾದ ಸುರಾದೇವಿಯ ಕರ್ಮವನ್ನು ನಿರ್ಮೂಲನಮಾಡುವದರಿಂದ ಏನೂ ದೋಷವಿರಲಾರದು. ಮೇಲೆ ಹಾಕಿದ ಕೆಲವು ಪ್ರಶ್ನೆಗಳಿಗೆ ಬರು[illegible]ವಾರದಲ್ಲಿ ಉತ್ತರ ಕೊಡುತ್ತೇನೆ. ಸ್ಥಳಸಂಕೋಚವಾದ್ದರಿಂದ ಇಷ್ಟಕ್ಕೆ ನಿಲ್ಲಿಸಿರುತ್ತೇನೆ.

ಎಸ್. ಎನ್.

= ವರ್ತಮಾನ

ಒಳದೇಶ.

ಪೊಳ್ಳಿಬೆಟ್ಟ ಕಡೆ ಕಾಫಿತೋಟಗಳಲ್ಲಿ ಹೊರಗಿಂದ ಬರುವ ಜಂಗೂಲಿ ಆಳುಗಳಿಗೆಲ್ಲಾ ಗಂಡಸರಿಗೆ ಪೂರ್ತಿದಿನಕ್ಕೆ 5 ಆಣೆ ಮೇರೆ ಸಂಬಳವನ್ನು ಮತ್ತು ಹೆಣ್ಣಾಳುಗಳಿಗೆ 3 ಆಣೆ ಮೇರೆ ಸಂಬಳವನ್ನು ಕೊಡುತ್ತಾರೆ. ಈ ವಿಷಯದಲ್ಲಿ ಈಗಿನ ಅಕ್ಕಿ ಬತ್ತದ ಧಾರಣೆಯು ಸುಲಭವಾಗಿರುವದರಿಂದ ಸದರಿ ಕಡೆಯ ಕೂಲಿ ಜನರು ಸಹ ಈ ಏರ್ಪಾಡಿಗೆ ಸರ್ವಸಮ್ಮತರಾಗಿದ್ದಾರೆ. ಇದು ಎಲ್ಲಾ ಕಡೆಗಳಲ್ಲು ಪ್ರಚಲಿಸಿ ಕೂಲಿ ಸಂಬಳವು ಕಮ್ಮಿಯಾದಾತ್ತಾಗಿ ತೋರುತ್ತದೆ.

ಕೊಡಗಿನಲ್ಲಿ ಈವರೆಗೆ ವಾಚಾಡುತ್ತಿದ್ದ ಮೇ॥ ಜೆ. ಸಿ. ಗ್ರೀನ್ ಪ್ರಯಿಸ್ ದೊರೆಗಳು ಆಗ್ನೆಸಿಯನ್ನು ಕಡೆ ಉತ್ತರ ಹಿಂದೂಸ್ಥಾನಕ್ಕೆ ನಮ್ಮ ದೇಶದ ಹೊಸ ರಿಯಾಯಿತಿಗಳ ಬಗ್ಗೆ ಚರ್ಚಿಸಲು ಹೋಗಿರುವದಾಗಿ ತಿಳಿಯುತ್ತೇವೆ.

[illegible] ಜಪೇಟೆಯಲ್ಲಿ [illegible] ವರ್ಷಗಳ [illegible] ಇದ [illegible] ಮೇ॥ ಗೋಪಾಲರಾವ್ [illegible] ಒಂದು ಮೆಮೋರಿಯಲ್ ಬಗ್ಗೆ ವಸೂಲುಮಾಡಿದ ಹಣದ [illegible] ಗತಿ ಏನಾಗಿದೆಯೆಂಬದಾಗಿ ತಿಳಿಸಲು ಬಹಳ ಜನರು ಅಪೇಕ್ಷಿಸುತ್ತಿರುವರು.

[illegible] ನಾಲ್ಕು ವರುಷಗಳ ಹಿಂದೆ ಮಡಿಕೇರಿ [illegible] ಒಳಿ ಇರುವ ಕೆರೆಯಲ್ಲಿ ಆಕಸ್ಮಿಕವಾಗಿ ಬಿದ್ದು [illegible] ಇಬ್ಬರು ಬ್ರಾಹ್ಮಣರ ಯುವಕರನ್ನು ರಾತ್ರಿ ವೇಳೆ [illegible] ಬೋಸ್ಟರ್ ಪೊನ್ನಪ್ಪನವರ ಪ್ರಾಣರಕ್ಷಣೆ ಮಾಡುದಕ್ಕಾಗಿ ಅಲ್ಲಿ [illegible] ಕೆಲವರ ಕೂಡಿ ಹಣದ ವಸೂಲ್ ಮಾಡಿ ಬಂದ ಹಣವು [illegible] ಮೇರೆ ವಸೂಲುಮಾಡಿದ ಮೊಬಲಗನ್ನು ಸಹಾಯಕ್ಕಾಗಿ ಬಚ್ಚಿಟ್ಟರ [illegible] ಪ್ರಯೋಜನವೇನಾಯ್ತು?

[illegible] ಪೇಟೆ [illegible] ಮಳೆಯ [illegible] ಮನೆಗೆ [illegible] ಮೇರೆ ಕಟ್ಟಿಸಿದ [illegible] ಸಾತ್ವಿಕ ಕೋದಂಡ ಸೋಮಯ್ಯರವರು [illegible] ನೂರು ರೂಪಾಯಿ [illegible] ಕೊಟ್ಟಿರುತ್ತಾರೆ. [illegible] ಕೆಲಸಕ್ಕೆ ಈ ತಾಲ್ಲೋಕಿನ ಸುಬೇದಾರರಾದ ಮ॥ ಎಂ. ಎನ್. ಮಂದಣ್ಣನವರ ಪ್ರೀತಿ ಸಾಹಸವು ಮತ್ತು ಸಿಫಾರಸು ಆಗಿರುತ್ತದೆ. ಇನ್ನು ಇದನ್ನು ದೀರ್ಘಕಾಲ ಬಾಳುವಂತೆ ಮಾಡುವದು ಅವರ ಮೇಲಿನತ್ತು ಇಗಿದೆ.

ಮಿ॥ ಬೊಳ್ಳೇರಿಯಂಡ್ರ ಮುತ್ತಣ್ಣನವರು ಮತ್ತು [illegible] ಮಾಡಮೋದಪ್ಪನವರ ಮಗ ಚಂಗಪ್ಪನವರೂ ಕೂಡ ಮದರಾಸು 'ಇಂಜಿನಿಯರಿಂಗ್' ಕಾಲೇಜಿನಲ್ಲಿ ಎಸ್. [illegible] ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುತ್ತಾರೆ. ಕೊಡಗರ ಸ್ವಕೀಯರಾವಳಿಗೆ ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರು ಯಾರೂ ಇಲ್ಲದೆ ಇರುವದರಿಂದ ಇವರ ವಿಷಯದಲ್ಲಿ ನಾವು ಬಹಳ ಸಂತೋಷಪಡಬೇಕು.

ಕಳೆದ ವಾರದಲ್ಲಿ ಮಳೆಯು ಚನ್ನಾಗಿ [illegible] ದುದರಿಂದ ಹೆಚ್ಚಿನ ಜನರು ಬೀಜ ಹಾಕಿರುತ್ತಾರೆ. ಆದರೆ ಈ ವಾರದಲ್ಲಿ ಮಳೆಯ ಸುಳಿವೇ ಇಲ್ಲದೆ ಆಗಿದೆ. ಬೇಸಿಗೆ ಕಾಲದಂತೆ ಬಿಸಿಲು ಕಾಯಲು ತೊಡಗಿದೆ. ಬೀಜ ಹಾಕದೆ ಇರುವವರಿಗಂತೂ ಇನ್ನೂ ಮಳೆ ಬಾರದೆ ಬೀಜ ಹಾಕಲು ಸಾಧ್ಯವಿಲ್ಲ. ಹೀಗೆಯೇ ಬಿಸಿಲು ಕಾಯುತ್ತಾ ಬಂದರೆ ಹಾಕಿದ ಬೀಜವು ಸಹ ಒಣಗಿ ಬರಗಾಲದ ಸೂಚನೆಯು ತಲೆದೋರುವದು.

ಕೆಲವು ವರ್ಷಗಳಿಂದ ಗೋಣಿಕೊಪ್ಪಲು ಎಂಬ ಸ್ಥಳವು ಸುತ್ತಮುತ್ತಲೂ ನಾಗರೀಕರಾದ ಯುವಕರಿಂದ ಕೂಡಿ ಕೊಡಗಿನಲ್ಲಿ ಒಂದು ಮುಖ್ಯವಾದ ಸ್ಥಳವೆಂದೆನಿಸಿಕೊಂಡಿದ್ದಾಗ್ಯೂ ಕೂಡ ಅನೇಕಸಲ ಪ್ರಯತ್ನಿಸಿದಾಗ್ಯೂ ಕೂಡ ಬಲಹೀನರಾಗಿದ್ದ ಅಲ್ಲಿಯ ನಿವಾಸಿಗಳು ಕಳೆದ ನಾಲ್ಕೈದು ತಿಂಗಳಿಂದ "ಗೋಣಿಕೊಪ್ಪಲು ಯೂನಿಯನ್" ಎಂಬ ಹೆಸರಿನ ಒಂದು ಕ್ಲಬ್ಬನ್ನು ಏರ್ಪಡಿಸಿರುವದಲ್ಲದೆ ಅದಕ್ಕೆ ಬೇಕಾಗಿರುವ ಪತ್ರಿಕೆಗಳನ್ನೂ, ಮೇಗಜಿನ್‌ಗಳನ್ನೂ ತರಿಸುತ್ತಾ ಇದ್ದಾರೆ. ಇದಕ್ಕೆ ಸುಮಾರು ನಲುವತ್ತು ಮೆಂಬರುಗಳು ಸೇರಿರುತ್ತಾರೆ. ಈ ಕ್ಲಬ್ಬಿನ ಉಪಯೋಗಾರ್ಥವಾಗಿ ಮೆ॥ ಆರ್. ಸುಂದರಸಿಂಗರವರು ಅವರ ಮನೆಯ ಮಹಡಿಯಲ್ಲಿ ಒಂದು ಕೊಠಡಿಯನ್ನು ಅವರ ಜೀವಮಾನ ಕಾಲದವರೆಗೂ ಉಚಿತಾರ್ಥವಾಗಿ ಬಿಟ್ಟುಕೊಟ್ಟಿರುವರಂತೆ. ಇವರ [illegible] ನೋಡಿ ಮೆ॥ ಚಾಪು ಕುಟ್ಟಿ ಮೇಸ್ತ್ರಿಯವರು ಸುಮಾರು 2500 ಖರ್ಚುಮಾಡಿ ಕ್ಲಬ್ಬು ಭೂಮಿಗೆ ಹೊರಗಿನಿಂದಲೇ ಹತ್ತುವಂತೆ ಒಂದು ಏಣಿಯನ್ನು ಮಾಡಿಸಿರುವರಂತೆ. ಇದಕ್ಕಾಗಿ ಕ್ಲಬ್ಬಿನ ಮೆಂಬರುಗಳು ಮೇಲಿನ ಇಬ್ಬರು ಮಹನೀಯರಿಗೆ ಕೃತಜ್ಞರಾಗಿರುತ್ತಾರೆಂದು ತಿಳಿಸುತ್ತಾರೆ.

ಬಿಟ್ಟಂಗಾಲಕ್ಕೆ ಸಮೀಪದಲ್ಲಿರುವ ಬುದ್ಧಗುಪ್ಪೆ ಹೊಳೆಗೆ ಕಳೆದ ವರ್ಷ ಹಾಕಿದ್ದ ಪಾಲವು ಕುಂಬಾಗಿದ್ದ ಕಾರಣ ಕಳೆದ ತಾರೀಕು 19 ನೇ ದಿನ ಒಬ್ಬ ಪ್ರಯಾಣಿಕನು ಆ ಪಾಲಕ್ಕಾಗಿ ದಾಟುವಾಗ್ಗೆ, ಪಾಲವು ಮುರಿದು ಆದಿನದ ಜೋರಾದ ಮಳೆಯ ನೀರಿನಿ[illegible]ಯಲ್ಲಿ ತುಳುಕುತ್ತಿದ್ದ ಹೊಳೆಯಲ್ಲಿ ಬಿದ್ದನು. ಭಟನು [illegible]ಲ್ಲವನಾದುದರಿಂದ 15 ಮಿನಿಟುಗಳವರೆಗೆ ಪ್ರಯತ್ನಪಟ್ಟು ಈಜಿ ಹೊಳೆಯನ್ನು ದಾಟಿ [illegible] ಕಾಪಾಡಿಕೊಂಡನು. [illegible] 3 [illegible] ಖರ್ಚಿನಿಂದ ಭದ್ರಪಡಿಸಿ ಕಟ್ಟಬಹುದಾದ [illegible] ಪಾಲಗಳನ್ನು ವರ್ಷಂಪ್ರತಿ [illegible] ಸರಕಾರದವರು ಹಿಂಜರಿಯುವ [illegible] ಒಹಳ [illegible] ದಾಗಿದೆ. ಇದರಿಂದ ಬಡಕೃಷಿಕರಿಗೆ ಅನೇಕ ಕಷ್ಟಗಳು ಅನಾನುಕೂಲಗಳು ಉಂಟಾಗುವದರಿಂದ ಇದರ ವಿಷಯ ಊರ ಪಟೇಲರು ಮೇಲಧಿಕಾರಿಗಳ ಗಮನಕ್ಕೆ ತರಬೇಕೆಂದು ಒಬ್ಬ ಬಿಟ್ಟಂಗಾಲದವರ ಕೋರಿಕೆ.

ಗೋಣಿಕೊಪ್ಪಲಿಗೆ ಸಮೀಪದಲ್ಲಿರುವ ಕೈಕೇರಿಗ್ರಾಮದಲ್ಲಿ ಅನೇಕ ವರ್ಷಗಳಿಂದಲೂ ಹಾಳುಬಿದ್ದಿದ್ದ ಭಗವತೀ ದೇವಸ್ಥಾನವನ್ನು ಈ ವರ್ಷ ಅಲ್ಲಿಯ ಜನರೆಲ್ಲರೂ ಸೇರಿ ಒಂದು ಫಂಡನ್ನು ಏರ್ಪಡಿಸಿ, ಸಾಲದುದಕ್ಕೆ ಚಂದಾ ವಸೂಲಿಮಾಡಿ, ಸುಮಾರು ಒಂದು ಸಾವಿರ ರೂಪಾಯಿಗಳವರೆಗೆ ಖರ್ಚುಮಾಡಿ ದೇವಸ್ಥಾನದ [illegible] ಕಟ್ಟಡವನ್ನು ಪೂರೈಸಿರುತ್ತಾರೆ. ಈ ದೇವತೆಯ ಕರುಣದಿಂದಲೇ [illegible] ಪದಾರ್ಥವನ್ನು ಅನ್ನ ಕಡೆಗಳಿಂದಾದಿ ಸೇವಿಸುತ್ತಿದ್ದ [illegible] ಈಗ ಆದ [illegible] ತ್ಯಜಿಸುತ್ತಿರುವರೆಂದು ಅಲ್ಲಿಯ ಒಬ್ಬ ನಿವಾಸಿಯ ಅಭಿಪ್ರಾಯ.

ಕಳೆದ ತಿಂಗಳು 21 ನೇ ತಾ॥ ದಿನ ಬಿಟ್ಟಂಗಾಲದಲ್ಲಿ ರುವ ಮಳಭದ್ರತೆಯಿಂದ ಬಹು [illegible] ಕವಾಗಿದ್ದ ಒಂದು ಪೇಕುವೆಗಾಗಿ [illegible] ಇಂಜಿನ್ (Steam Roller) ಬಾಡಿಗೆಯವಿಂದಲೂ ಯುಕ್ತಿಯಿಂದಲೂ, ಸ್ಪೆಷಲ್ ಆಫೀಸರಾದ ಮೆ॥ ಕೆ[illegible] ಮುತ್ತಣ್ಣನವರು ದಾಟಿಸಿದ್ದು ಅದರ ಸಂಕುಚಿತ ಸ್ಥಿತಿಯನ್ನು ತಿಳಿದ ನಗೆ ಬಹಳ ಆಶ್ಚರ್ಯಕರವಾದ ಸಂಗತಿಯಂತೆ.

ಈ ವರ್ಷದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಮಡಿಕೇರಿ ಹೈಸ್ಕೂಲಿನಿಂದ ಪರೀಕ್ಷೆಗೆ ಹೋದ 40 ವಿದ್ಯಾರ್ಥಿಗಳ ಪೈಕಿ ಕೆಳಗೆ ಕಾಣಿಸಿರುವ ಹದಿಮೂರು ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುತ್ತಾರೆ.

1 ಪುಲಿಯಂಡ ದೇವಯ್ಯ
2 [illegible]ಂಡ್ರ ತಿಮ್ಮಯ್ಯ
3 ಕುತ್ತಂಡ್ರ ಪೂವಯ್ಯ
4 ಚೋಕಂಡ್ರ ಕುಟ್ಟಪ್ಪ
5 ಅಪ್ಪಾರಂಡ್ರ ಕಾರಪ್ಪ
6 ಪಳೆಯಂಡ ಕುಶಾಲಪ್ಪ
7 ನಡಿಕೇರಿಯಂಡ್ರ ಪೊಣ್ಣಪ್ಪ
8 ಕೋದಂಡ್ರ ಚಿಟ್ಟಿಯಣ್ಣ
9 [illegible]ತಮನೆ ಮಾಚಯ್ಯ
10 ಭಾಗಮಂಡ್ಲ ಗಂಗಾಧರ ವೃದ್ಧ
11 ಮೂನರ್ಾಡು [illegible] ಕೃಷ್ಣಯ್ಯ
12 ಟಿ. ನಾರಾಯಣ ರಾವ್
13 ಪಿ. ಬಸಪ್ಪ, ಭಾಗಮಂಡ್ಲ.

ಮಂಗಳೂರಿನಲ್ಲಿ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ಕೊಡಗಿನ ವಿದ್ಯಾರ್ಥಿಗಳು —

1 ಬಿಟ್ಟಿಯಂಡ್ರ ತಿಮ್ಮಯ್ಯ
2 ಮಾಳೇಟಿರ ಮುತ್ತಣ್ಣ
3 ಮಚ್ಚಿಯಂಡ ಐಯ್ಯಣ್ಣ
4 ಕೂರವಂಡ್ರ ಐಯ್ಯಣ್ಣ
5 ಮನೆಯಪಂಡ್ರ ಚಿಟ್ಟಿಯಪ್ಪ

ಬೆಂಗಳೂರಿನಲ್ಲಿ ಸ್ಕೂಲ್ ಫೈನಲಿನಲ್ಲಿ ತೇರ್ಗಡೆಹೊಂದಿದ ವಿದ್ಯಾರ್ಥಿಗಳು —

1 ಕೋದಂಡ್ರ ಅಕ್ಕಮ್ಮ
2 ಕೋದಂಡ್ರ ಪೊನ್ನಮ್ಮ
3 ಕುಪ್ಪಂಡ್ರ ಎಂ. ಗಣಪತಿ
4 ಕೋದಂಡ್ರ ಮಾಚೈಯ್ಯನವರ ಮಗ ಬಪ್ಪು

ಡೆಲ್ಲಿ ಮೆಡಿಕಲ್ ಕಾಲೇಜಿನಲ್ಲಿ ಓದುವ ಕೊಂಗಂಡ್ರ ಮೆ॥ ಅಪ್ಪಯ್ಯನವರ ಪುತ್ರಿ ಅಕ್ಕಮ್ಮ, ತನ್ನ ಎರಡನೆಯ ವರ್ಷದ ಪರೀಕ್ಷೆಯಲ್ಲಿ ಒಂದನೆ ತರಗತಿಯಲ್ಲು, ಅದರಲ್ಲಿಯೂ ಒಟ್ಟು ಸಂಖೆಯಲ್ಲಿ ಎರಡನೆಯದಾಗಿ ತೇರ್ಗಡೆ ಹೊಂದಿರುವದನ್ನು ಕೇಳಲು ಸಂತೋಷಪಡುತ್ತೇವೆ.

ಜೂನ್ ತಾ॥ 26 ರಲ್ಲು ಮಡಿಕೇರಿ ಓಂಕಾರೇಶ್ವರದೇವಸ್ಥಾನದ ಮಹಡಿಯಲ್ಲು ಮ॥ ಜಿ. ಲಕ್ಷ್ಮೀನಾರಾಯಣರಾಯರ ಪತ್ನಿ ಶ್ರೀಮತಿ ಭವಾನಿಯಮ್ಮನವರ ಅಧ್ಯಕ್ಷತೆಯಲ್ಲಿ ಒಂದು ಮಹಿಳಾ ಸಮಾಜವು ಏರ್ಪಡಿಸಲಾಯಿತೆಂದೂ ಕೊಡಗುದೇಶದಲ್ಲಿ ಇಂಥಾ ಸಮಾಜವು ಅವಶ್ಯವಿಲ್ಲದೆ ಈಗ ಹೊಸದಾಗಿ ಏರ್ಪಡಿಸಲ್ಪಟ್ಟಿರುವ "ಮಹಿಳಾಸಮಾಜವು" ಉನ್ನತಸ್ಥಿತಿಗೆ ಬರುವಂತೆ ದೇಶೀಯ ಮಹಿಳೆಯರು ಪ್ರೋತ್ಸಾಹಮಾಡತಕ್ಕದ್ದು ಅವರ ಕರ್ತವ್ಯವೆಂದೂ ಒಬ್ಬ ಮಡಿಕೇರಿ ನಿವಾಸಿಯು ಬರೆದಿರುತ್ತಾನೆ.

ಜೂನ್ ತಾ॥ 26ನೇ ಭಾನುವಾರ ಮಡಿಕೇರಿ ಮಹದೇವಪೇಟೆಯ ಸಾಹುಕಾರ್ರು ಗತಿಸಿದ ಶಾಂತಮಲ್ಲಪ್ಪನವರ ಪುತ್ರಿಯನ್ನು ದೇವನಹಳ್ಳಿ ಅಮಲ್ದಾರ್ ಲಿಂಗೈಯ್ಯನವರ ಕುಮಾರ ಮಂಜುನಾಥರಿಗೆ ಕೊಟ್ಟು ಲಗ್ನವು ವಿಜೃಂಭಣೆಯಿಂದ ನಡಿಸಲ್ಪಟ್ಟಿತು.

ಶನಿವಾರಸಂತೆ — ಗೋಣಿಮರೂರು, ಕಣಗಾಲು, [illegible] ನವನಹಳ್ಳಿ ಈ ಗ್ರಾಮಗಳ ಪ್ರಾಂತ್ಯ ದೊಡ್ಡದೊಂದು ಆನೆಗಳ ಗುಂಪು ಒಂದು ಅಲ್ಲಿಂದ ಅನೇಕ ಸಣ್ಣಸಣ್ಣ ಗುಂಪುಗಳಾಗಿ ಒಡೆದು ಸುತ್ತಲೂ ಚದರಿಕೊಂಡು ಎಲ್ಲ ಗ್ರಾಮಗಳಲ್ಲಿಯೂ ತುಂಬಾ ಹರಡಿ ಪ್ರಯಾಣಸ್ಥರಿಗು ವ್ಯವಸಾಯಗಾರರಿಗೂ ಸಹ ಬಹಳ ಗಲಾಟೆಯನ್ನುಂಟುಮಾಡುತ್ತಾ [illegible] ತೊಂದರೆಮಾಡುತ್ತಿವೆ. ದಯಾಳು ಸರಕಾರದವರು ಈ ತೊಂದರೆಯನ್ನು ಪರಿಹರಿಸಿಕೊಡುವರೆಂದು ನಂಬಿದ್ದೇವೆ.

ಈಗಾಗಲೆ ಬತ್ತದ ಭತ್ತದ ಪೈರನ್ನೆಲ್ಲ ಸಾರಗಗಳು, ಮೊಲಗಳು ತಿಂದು ನಷ್ಟಪಡಿಸುತ್ತಿವೆ. ಇದರ ನಂತರ ಕಾಡುಹಂದಿಗಳು ಆದರ ನಂತರ ಕಾಡಾನೆಗಳು ಹೀಗೆ ಒಂದರಮೇಲೆ ಒಂದು ರೈತರ ಜಮೀನಿಗೆ ನಷ್ಟ ಇದ್ದೇಯಿದೆ. ರೈತರಲ್ಲಿ ಕೋವಿಗಳಿದ್ದಾಗ್ಯೂ ಇವರು ಶಿಕಾರಿ ಮಾಡದೆ ಉದಾಸೀನರಾಗಿರುವದೆ ಇದಕ್ಕೆ ಕಾರಣ.

ಈಗ ನಾಲ್ಕೈದು ದಿನಗಳಿಂದ ಮಳೆ ನಿಂತಿದೆ. ನಾಟಿ ಕೆಲಸದ ಸಂಬಂಧ ವ್ಯವಸಾಯಗಳು ಬಹಳ ಚುರುಕಾಗಿದೆ. ಕಡಿದಲವೇಟೆ ಪೋಲೀಸ್ ಸಬ್ ಇನಸ್ಪೆಕ್ಟರವರಾದ ಮುಂಡೇಪಂಡ್ರ ಗಣಪತಿಯವರಿಗೆ ವರ್ಗವಾಯಿತು. ಇವರ ಬದಲಿಗ [illegible] ಕಾರ್ಯಪ್ಪನವರು ಬಂದಿರುತ್ತಾರೆ. ಕೊಡಗು [illegible] ಸಾಹೇಬರವರು ಜೂನ್ ತಾ॥ 24 ನೇ ಶುಕ್ರವಾರ [illegible] ದಯಮಾಡಿಸಿ ರಿಕಾರ್ಡ್ ಇನಸ್ಪೆಕ್ಷನ್ ಮಾಡಿದರು. [illegible] ಮುಖ್ಯಸ್ಥರು ಅಸ್ಪತ್ರೆಯ [illegible] ಒಂದು ಅರ್ಜಿಯನ್ನು ಕೊಟ್ಟದ್ದಕ್ಕೆ ಆಲೋಚಿಸಿ ಮಾಡುವದಾಗಿ ಹುಕುಂ ಆಯಿತೆಂತ ವರ್ತಮಾನವಿದೆ.

ಕೊಡಗು ಸಂಪಾಜೆ — ಇಲ್ಲಿ ತಾ॥ 9-6-21 ರಲ್ಲು ಶ್ರೀ ಪಂಚಲಿಂಗೇಶ್ವರ ದೇಗುಲದಲ್ಲಿ ಗೌಡಜಾತಿಯವರೆಲ್ಲಾ ಒಂದು ಕೂಟ ಸೇರಿ ಈಗಿನ ಈ ನವಸುಧಾರಣೆಯಲ್ಲಿ ಹಿಂದಿನ ಸಂಪ್ರದಾಯ ಕರಾರು ಮುಂದುವರಿದು ಬಂದು ಒಳ್ಳೇ ಪದ್ಧತಿಯನ್ನು ನಡೆಯಬೇಕಂತ ಬಹುಕಾಲದಿಂದ ಕಮ್ಮಲ್ಲಿರುವ ಮಹತ್ತಾದ ದುರಭ್ಯಾಸಗಳಲ್ಲಿ ಒಂದಾದ ಮದ್ಯಪಾನವನ್ನು ವರ್ಜ್ಯಮಾಡಿರುವದರಿಂದ ನಾವು ಇನ್ನೂ ಹಿಂದು ನಿಂತುಕೊಳ್ಳುವದು ಯೋಗ್ಯವಲ್ಲವೆಂತ ನಿಶ್ಚಯಮಾಡಿ ಈ ಅಗಾಯಿತಿಂದ ಬಾಡಿಕವಾಗಿ ಹೆಂಡ (ತುಳುವಿನಲ್ಲಿ ಕಳಿ) ಕುಡಿಯುವರಲ್ಲವೆಂದ ಆಣೆ ಭಾಷೆ ಕೊಟ್ಟು ಸಭೆಯು ಅಗಲಿತು. ತಪಿಚಾನು ಇದೀನ ಗಡಿಕಾತನ

ಹಿಂದೂದೇಶ.

ದೇಶಭಕ್ತರಾದ ಮುಸಲ್ಮಾನ ಪುಢಾರಿ ಆರಸು ಕೃತರಾದ ಮೌಲಾನಾ ಅಬ್ದುಲ್ ಕಲಾಂ ಆಜಾದ್ ಎಂಬವರು ಕ್ಯಾಂಡಿಯಲ್ಲಿ ತಮ್ಮ ಸ್ವಂತಭವನಕ್ಕ ದಯಮಾಡಿಸಿರುವರ

[illegible] ದೇಶದಲ್ಲಿ ಮಹಮ್ಮದೀಯರ ಮುಖ್ಯಸ್ಥಾನದ [illegible] ದೊಡ್ಡ ಒಂದು ಮಸೀದಿಯನ್ನು ಸಂಸ್ಕಾರಗೊಳಿಸುವ ಮಾದರಿಯಲ್ಲಿ 4 ಲಕ್ಷ ರೂಪಾಯಿ ವೆಚ್ಚದಿಂದ [illegible] ಪ್ಲಾನಿನಲ್ಲಿ ಕಟ್ಟುತ್ತಲಿದ್ದಾರೆ.

ಈ [illegible] ನಡೆಯುವ ಬೊಂಬಾಯಿಯ ನ್ಯಾಯಾಧಿಕಾರಿ ಸಭೆ [illegible] ಪೈಕಿ ಕೌನ್ಸಿಲಿಗೆ ಮೆಂಬರುತನಕ್ಕೆ [illegible] ಸಲ್ಲಿಸುವೆಂಬುದೊಂದಾಗಿದೆ. ಇದನ್ನು ಮ॥ ಹಿರಾಲಾಲ್ ದೇಸಾಯಿ ಎಂಬುವರು ಸೂಚಿಸುವರು.

ಗೌಗಾದ್ ಡಿಸ್ಟ್ರಿಕ್ಟಿನ ಚಾರಲಿ ಎಂಬ ಒಂದು ಗ್ರಾಮದಲ್ಲಿ ಒಂದು ಪಾರ್ಸಿಯ ಮನೆಗೆ ಸಿಡಿಲು ಹೊಡದು ಆ ಮನೆಯವರೆಲ್ಲರೂ ಸತ್ತುಹೋದರು. ಅಲ್ಲದೆ ಹತ್ತಿರದ ಒಂದು ಮರದ ಕೆಳಗೆ ನಿಂತುಕೊಂಡಿದ್ದ ಇಬ್ಬರು ಹಿಂದೂಗಳೂ ಆ ಸಿಡಿಲಿನ ಪೆಟ್ಟಿಗೆ ಬಿದ್ದಾದರಂತೆ.

ಅಸಹಕಾರದ ಸಂಬಂಧ ಜೈಲಿಗೆ ಕಳುಹಿಸಲ್ಪಟ್ಟಂತ ಮೆ॥ ಕೇಶವನ್‌ನಾಯರ ಮತ್ತು ಬಾಲಕೃಷ್ಣಮೇನನವರ ಚರಜಿಂವಿಗಗಳನ್ನೆಲ್ಲಾ ಕೋರ್ಟಿನ ಅಂಗಳದಲ್ಲೇ ಹರಾಜು ಮಾಡಿದರಂತೆ. ಹೆಚ್ಚಾಗಿ ಸಾಮಾನುಗಳನ್ನು ಸರಕಾರಿ ಉದ್ಯೋಗಸ್ಥರೇ ಕೊಂಡುಕೊಂಡರಂತೆ. ಕೇಶವನ್‌ನಾಯರ ಕನ್ನಡಕಗಳನ್ನು ಸಹ ಬಿಡಲಿಲ್ಲವಂತೆ.

ಕಳೆದ ಜೂನ್ ತಾರೀಖು ಮೂರರಲ್ಲಿ ಮೂಟ್ಲಿ ಎಂಬ ಪಟ್ಟದ ಹತ್ತಿರವಿರುವ ಪ್ರೇಮಾಪುರ ವೆಂಬ ಗ್ರಾಮದಲ್ಲಿ ಒಂದು ಪತಿಸಹಗಮನವು ನಡೆಯಿತು. ಮೂವತ್ತೈದು ವರ್ಷ ಪ್ರಾಯದ ಒಬ್ಬ ಬಡಗಿಯು ಜ್ವರದಿಂದ ಸತ್ತನು. 25 ವರ್ಷ ಪ್ರಾಯದ ಅವನ ಪತ್ನಿಯು ಎಲ್ಲಾ ಆಭರಣಗಳನ್ನೂ, ಒಳ್ಳೇಯ ಉಡಪನ್ನೂ ಹಾಕಿದ್ದಳು. ಅವಳಿಗೆ ಮಕ್ಕಳಿರಲ್ಲಿಲ್ಲ. ಪತಿಯ ಶವವನ್ನು ಸುಡುವಾಗ ಅವಳು ಮನೆಯಲ್ಲೇ ಇದ್ದು, ಜನರೆಲ್ಲರೂ ಸ್ಮಶಾನದಿಂದ ಮನೆಗೆ ಹಿಂತಿರುಗಿದ ಮೇಲೆ, ಅವಳು ಯಾರಿಗೂ ತಿಳಿಯದಂತೆ ಸ್ಮಶಾನಕ್ಕೆ ಹೊರಟು ಹೋದಳು. ದೀರ್ಘಕಾಲ ಅವಳು ವಾಪಸು ಬಾರದ್ದರಿಂದ ಮನೆಯವರು, ಹುಡುಕಿಕೊಂಡು ಸ್ಮಶಾನಕ್ಕೆ ಹೋಗಿ ನೋಡುವಲ್ಲಿ ಅವಳ ಶರೀರವು ತನ್ನ ಗಂಡನ ಶವದೊಡನೆ ಬೇಯುತಿದ್ದುದನ್ನು ಕಂಡರು. ಪತಿಭಕ್ತಿ ಎಂಬುದು ಶ್ಲಾಘನೀಯವಲ್ಲವೇ?

ಮೈಸೂರಿನ ಶ್ರೀಮನ್ಮಹಾರಾಜರವರ ವರ್ಧಂತಿ ಉತ್ಸವ.

ಜೂನ್ ತಿಂಗಳು ತಾ|| 16 ರಲ್ಲು ಮೈಸೂರು ಮಹಾರಾಜರಾದ ಕರ್ನಲ್ ಹಿಸ್ ಹೈನೆಸ್ ಶ್ರೀಕೃಷ್ಣರಾಜೇಂದ್ರವೊಡೆಯರ ಬಹಾದೂರ್ ಜಿ ಸಿ ಎಸ್ ಐ ಜಿ ಸಿ ಐ ಇ, ಜಿ ಬಿ. ಇ. ರವರ 38 ನೇ ವರ್ಷದ ವರ್ಧಂತಿ ಉತ್ಸವವು ಪೂರ್ವದ ಮರ್ಯಾದೆಗಳಿಗನುಸಾರವಾಗಿ ರಾಜಧಾನಿಯಾದ ಮೈಸೂರಿನಲ್ಲಿ ನೆರವೇರಿಸಲ್ಪಟ್ಟಿತು.

ರಾಜಧಾನಿಯ ಬೀದಿಬೀದಿಗಳೆಲ್ಲಾ ತಳಿರು ತೋರಣಗಳಿಂದ ಅಲಂಕೃತವಾಗಿ ಶೋಭಿಸುತ್ತಿದ್ದಿತು. ಆ ದಿವಸ ಪ್ರಾತಃಕಾಲ ಗೌರವಾರ್ಥವಾದ 38 ತೋಪುಗಳು ಹಾರಿಸಲ್ಪಟ್ಟವು. ಶ್ರೀಮನ್ಮಹಾರಾಜರವರು ಪ್ರಾತಃಕಾಲ ಮಂಗಲಸ್ನಾನವನ್ನು ಮಾಡಿ ದೇವತಾಪೂಜೆಯನ್ನು ನಡೆಯಿಸಿ, ತಮ್ಮ ಮಾತುಶ್ರೀಯವರ ಆಶೀರ್ವಾದವನ್ನು ಕೈಗೊಂಡು, ಸಭಾಮಂಟಪಕ್ಕೆ ದಯಮಾಡಿಸಿ ಅಲ್ಲಿಗೆ ಆ ಕಾಲಕ್ಕೆ ದಯಮಾಡಿಸಿದ ರಾಜಗುರುಗಳಾಗ ವಾಗೀಶ ಬ್ರಹ್ಮತಂತ್ರ ಪರಕಾಲಯತಿವರ್ಯರ ಪಾದಪೂಜೆಯನ್ನು ನಡೆಯಿಸಿ ವೈದಿಕ ಮಂಡಲಿಯ ಆಶೀರ್ವಾದಗಳನ್ನೂ ಲೌಕಿಕ ಮಂಡಲಿಯ ನಮಸ್ಕಾರಗಳನ್ನೂ ಸ್ವೀಕರಿಸಿ ದರ್ಬಾರನ್ನು ನಡೆಸಿದರು.

ಮಧ್ಯಾಹ್ನದಮೇಲೆ ಸಮಸ್ತ ರಾಜಮರ್ಯಾದೆಗಳೊಡನೆಯೂ ಸೇನಾಸಮೇತರಾಗಿಯೂ ಅಧಿಕ ವೈಭವದಿಂದ ತಮ್ಮ ತಮ್ಮಂದಿರಾದ ಯುವರಾಜರಾದ ಶ್ರೀ ಕಂಠೀರವ ನರಸಿಂಹರಾಜ ವೊಡೆಯರವರೊಡನೆ ಅಶ್ವಾರೂಢರಾಗಿ ಮೆರವಣಿಗೆ ಹೊರಟರು. ಹೊರಡುವಾಗ್ಗೆ ಗೌರವಾರ್ಥವಾದ 21 ತೋಪುಗಳು ಹಾರಿಸಲ್ಪಟ್ಟವು.

ಮೆರವಣಿಗೆಯು ದೊಡ್ಡಪೇಟೆಯ ರಾಜಬೀದಿಯುದ್ದಕ್ಕೂ ಹೋಗಿ ರೆಸಿಡೆನ್ಸಿ ಬಂಗ್ಲೆಗೆ ತಲುಪಿತು. ದಾರಿಯುದ್ದಕ್ಕೂ ಅಂಗಡಿಗಳಲ್ಲಿಯೂ ಮನೆಯ ಮುಂಭಾಗಗಳಲ್ಲಿಯೂ ಜನರು ತುಂಬ ತುಂಬಿದ್ದರು. ಶ್ರೀಮನ್ಮಹಾರಾಜರವರನ್ನು ಕರತಾಳಗಳಿಂದ ವಂದಿಸಿದರು. ದಾರಿಯಲ್ಲಿ ಎರಡು ಕಡೆಗಳಲ್ಲಿ ಚಪ್ಪರಗಳು ಹಾಕಲ್ಪಟ್ಟಿದ್ದವು.

ರೆಸಿಡೆನ್ಸಿಯಲ್ಲಿ ಉಪಚಾರಗಳು ಆದನಂತರ ಅಲ್ಪಾಹಾರ ಕೊಂಡು ಶ್ರೀಮನ್ಮಹಾರಾಜರು ಮೆರವಣಿಗೆಯಿಂದ ಅರಮನೆಗೆ ದಯಮಾಡಿಸಿದರು. ಪೂರ್ವ ಗೌರವಾರ್ಥವಾದ 21 ತೋಪುಗಳು ಹಾರಿಸಲ್ಪಟ್ಟವು. ಆ ದಿವಸ ಅರಮನೆಯ ಮೇಲೆ ದೀಪೋತ್ಸವವು ಅನಾದ್ಯಂತವಾಗಿ ನಡೆಯಿತು. ಪಟ್ಟಣವೇ ಎಣ್ಣೆಯಾಗ ದೀಪಗಳ ಜ್ವಾಲೆಗಳಿಂದ ಬೆಳಗಿದಂತಾಗಿದ್ದಿತು.

ಚಿತ್ರವಿಚಿತ್ರಾವಳಿ.

ಬೆಂಕಿಯಲ್ಲಿ ತಿರುಗಾಡುವುದು!

ಬೆಂಕಿಯು ಯಾವ ವಸ್ತುವನ್ನಾದರೂ ಸ್ವೀಕರಿಸದಿರಲಿ, ಹಾಗೆ ಆಗಬಾರದೆಂದು ಅನೇಕರು ಅನೇಕ ವಿಧಗಳಲ್ಲಿ ಪ್ರಯತ್ನಿಸಿರುವರು. ಅವರಲ್ಲಿ ಮಿ|| ಟ್ರುರೊ [Mr Truro] ಎಂಬುವರು ಮೊದಲನೆಯವರು. ಸೋಡಿಯಂ ಸಿಲ್ಕೇಟ್ [Sodium silicate] ಎಂಬ ದ್ರಾವಕವನ್ನು ಯಾವ ವಸ್ತುವಿಗಾದರೂ ಬಳಿದಲ್ಲಿ ಅದು ಬೆಂಕಿಯಿಂದ ಸುಡಲ್ಪಡುವುದಿಲ್ಲ. ಈ ದ್ರಾವಕಕ್ಕೆ ಇನ್ನೂ ಇತರ ದ್ರಾವಕಗಳನ್ನು ಬೆರಸಿ ಶಾಕಿಬಟ್ಟೆಗಳಿಗೆ ಗಂಜಿಹಾಕಿದ ಹಾಗೆ ಹಾಕಿ ಉಪಯೋಗಿಸುವರಂತೆ. ನಮ್ಮ ದೇಶದಲ್ಲಿಯೂ ಕೂಡ ಫೈರ್ ಬ್ರಿಗೇಡ್ [Fire Brigade] ನವರಿಗೆ ಇಂತಹ ಉಡುಪು "[Uniform] ಕೊಟ್ಟಲ್ಲಿ ಆಗುತ್ತಿತ್ತೋ ಏನೋ!

* * *

ಡಾಕ್ಟರ್ ಜಾಗರ್ ಮಹಾಶಯರು

ಇವರು ಪ್ರಪಂಚದ ಎಲ್ಲಾ ಜನರ ಸ್ತುತಿಗೆ ಅರ್ಹರಾಗಿ ಇದ್ದಾರೆ. ಜನರ ವಸತಿಯೇ ಇಲ್ಲದಂತಹ ಶಾಂತಸಾಗರದ [Pacific Ocean] ನಡುಗಡೆಯೊಂದರಲ್ಲಿ ಜ್ವಾಲಾಮುಖಿಯನ್ನು ಪರೀಕ್ಷಿಸುತ್ತಿರುವರು. ಈ ಜ್ವಾಲಾ ಬೆಂಕಿಯ ಮಳೆ ಸುರಿಸುತ್ತಿದ್ದರೂ ಗಳಿಗೆಯಲ್ಲಿ ಶಾಂತ! ಇಂತಹ ಸ್ಥಿತಿಯಲ್ಲಿಯೂ ಕೂಡ ತಮ್ಮ ಪ್ರಾಣವನ್ನು ತೃಣಕ್ಕೆ ಸಮನಾಗಿ ಎಣಿಸಿ ಜ್ವಾಲಾಮುಖಿಯು ಶಾಂತವಾಗಿರುವ ಸಮಯಕ್ಕೆ ಅದರೊಳಗೆ ಹೋಗಿ ಒಂದು ಅನೇಕ ವಿಷಯಗಳನ್ನು ಒರೆದಿರುವರು. ಜ್ವಾಲಾಮುಖಿಯ ಗುಂಡಿಯಲ್ಲಿ ಅನೇಕ ವಿಚಿತ್ರಗಳು ನಡೆಯುವವಂತೆ. ಅವುಗಳಲ್ಲಿ ಒಂದು ಯಾವುದೆಂದರೆ ಕಾಣಬರುವ ಗಣಂತೆ ನಾನಾ ಬಣ್ಣದಿಂದೊಡಗೂಡಿದ ಕಾರಂಜಿಗಳು (Fountains)

* * *

ಬಿದಿರಿನಿಂದ ಕಾಗದ!

ಕಳೆದ ಇಪ್ಪತ್ತೈದು ವರ್ಷಗಳಿಂದ ಕಾಗದ ತಯಾರು ಮಾಡುವ ಹೊಸ ನಮೂನೆಯನ್ನು ಕಂಡುಹಿಡಿಯಬೇಕೆಂದು ಅನೇಕ ವಿಜ್ಞಾನಿಗಳು ಪ್ರಯತ್ನ ಪಡುತಲಿದ್ದು ಮೊನ್ನೆ ಸಾರ್ಥಕವಾಯಿತು. ಬಹು ಬೆಲೆಯುಳ್ಳ ಮರಗಳ ತಿರುಳು [Pulp] ನಿಂದ ವಿದೇಶೀ ಬಹು ಚಾಕರಿಯಾದುದಲ್ಲದೆ ಅತ್ಯಲ್ಪ ಶ್ರಮದಿಂದ ಕಂಡು ಹಿಡಿದಿದ್ದಾರೆ. ಬರ್ಮಾ, ಬಂಗಾಳ, ಮತ್ತು ಪಶ್ಚಿಮ ಕರಾವಳಿಯ ಸೀಮೆಗಳಿಂದ 10,000 000 ಟನ್ನು ತಿರುಳನ್ನು ಪ್ರತಿವರ್ಷವೂ ಪಡೆಯುವ ಪಂದರ್ ಅಷ್ಟಾಂ ದೇವಿಯೊಂದರಿಂದಲೇ 3 000 (0 ಟನ್ ತಿರುಳು ಪಡೆಯಬಹುದಂತೆ. ಮಿ|| ಆರ್ ಡಬ್ಲ್ಯು, ಸಿ ಪಿಟ್ ಎಂಬ ಪ್ರಸಿದ್ಧ ವಿಜ್ಞಾನ ಶಾಸ್ತ್ರಜ್ಞರು ಸೂಚಿಸಿದ್ದಾರೆ. ಪ್ರಪಂಚದ ಕಾಗದದ ಖರ್ಚು ಅಂದರೆ ಒಟ್ಟು 1,000,000 ಟನ್ನು ಕಾಗದ! ಹೀಗೆ ಇಡೀ ಪ್ರಪಂಚಕ್ಕೆ ಕಾಗದವನ್ನು ಹಿಂದೂ ದೇಶವು ಕಳುಹಿಸುವಷ್ಟು ಸಾಮರ್ಥ್ಯ ಉಳ್ಳದ್ದು.

ಬಿದಿರಿನ ತವರು ಮನೆಯಾದ ಕೊಡಗೂ!

* * *

ಮ ಹಿ ಳೆ.

ಪ್ರಪಂಚದ ಚರಿತ್ರೆಯನ್ನು ಪರಿಶೀಲಿಸಿದರೆ ಯಾವ ಅದ್ಭುತ ಕೆಲಸವೇ ಆಗಲಿ ಅದರ ಮೂಲಕಾರಣರು ಮಹಿಳೆಯರು.

ಪ್ಲೇಟೊ ಎಂಬ ಪ್ರಸಿದ್ಧ ತತ್ವಜ್ಞಾನಿಯು ಓದುಬರಹತಿಳಿಯುವ ಪತಿಯೊಬ್ಬ ಬಾಲ್ಯದಿಂದಲೇ ಗೌರವಿಸಲ್ಪಡುವನು. ಇಂತಹ ತತ್ವಜ್ಞಾನಿಯ ಶಿಷ್ಯಳೊ ಅಂದರೆ ದಾಯಟಿಸು (Diotima) ಎಂಬ ಮಹಿಳೆ!

ಗ್ರೀಕರ ಚರಿತ್ರೆಯನ್ನು ಪರಿಶೀಲಿಸಿದರೆ ಒಂಬತ್ತು ಜ್ಞಾನಗಳನ್ನು ಒಂಬತ್ತು ಸ್ತ್ರೀರೂಪದಿಂದ ಆರಾಧಿಸುವರು. ಈ ಸ್ತ್ರೀರೂಪವನ್ನು ಅವರು ದೇವತೆಯಂತೆ ಭಾವಿಸಿ (Muses) ಮ್ಯೂಸಿಸ್ ಎಂದು ಕರೆಯುತ್ತಿದ್ದರು.

ಹಿಂದೂ ಶಾಸ್ತ್ರಗಳಲ್ಲಿ ಎಲ್ಲಾ ವಿಧವಾದ ಚೈತನ್ಯಗಳಿಗೆ ಕಾರಣ ಮಾತೃ ದಿವ್ಯ ಶಕ್ತಿ ಎಂದು ಭಾವಿಸಿ ಪೂಜಿಸುವರು. ಹಿಂದುಗಳ ಐಶ್ವರ್ಯದ ದೇವತೆಯೋ ಅಂದರೆ ಲಕ್ಷ್ಮಿ; ವಿದ್ಯೆ ಇತ್ಯಾದಿ ಕಲೆಗಳ ದೇವತೆಯು ಸರಸ್ವತಿಯಷ್ಟೆ.

ಹೀಗೆ ಪ್ರಪಂಚದ ಎಲ್ಲಾ ನಾಗರೀಕರು ಸ್ತ್ರೀಯನ್ನು ಪ್ರಧಾನವಾಗಿ ಮತ್ತಾರ ಏಕೆಂದರೆ ಅನುಸರಿಸುವ ಅತ್ಯಂತ ಪ್ರೇಮದಿಂದ ಈ ಆಕೃತಿಯವಾದ ಪ್ರೇಮವು ಮಾನವರನ್ನು ಬಲ್ಲಿದರನ್ನಾಗಿಯೂ ಪರಾಕ್ರಮಶಾಲಿಗಳನ್ನಾಗಿಯೂ ಕೀರ್ತಿವಂತರನ್ನಾಗಿಯೂ ಮಾಡುವುದು.

ಯಾವ ಗಂಡಸು ನಾರಿಯಿಂದ ಪ್ರೀತಿಸಲ್ಪಟ್ಟಿಲ್ಲವೊ ಅಂತಹವನ ಜನ್ಮವು ಕೂಡ ಮಾನವನ ಇಹಪರಗಳ ಸುಖಕ್ಕೆ ಮಹಿಳೆ ಕಾರಣಳು. ಮಹಿಳೆಯು ಇಲ್ಲದಿದ್ದರೆ ಮಾನವರ ಮನಸ್ಸೇ ಸ್ಥಿರವಾಗಿರುತ್ತಿದ್ದಿಲ್ಲ. ಆದುದರಿಂದ ಪ್ರತಿಯೊಬ್ಬನೂ ಗೃಹಸ್ಥನಾಗಲೇಬೇಕು. ಎಲ್ಲಾ ಅವಸ್ಥೆಗಳಲ್ಲೂ ಗೃಹಸ್ಥಾಶ್ರಮವೇ ಶ್ರೇಷ್ಠವಾದುದು.

* * *

ಯಾರು ಬುದ್ಧಿವಂತರು? ಸ್ತ್ರೀಯರೊ? ಮಾನವರೊ?

ಯಾರಿಂದ ಹೇಳಲಾದೀತು? ಗಂಡಸರು ತಾವೇ ಎಂದೂ ಸ್ತ್ರೀಯರು ತಾವೇ ಎಂದೂ ಮುಂತಾಗಿ ತರ್ಕವಾಡುವರು. ಆದರೆ ಮನಶ್ಶಾಸ್ತ್ರ (Psychology) ಪಂಡಿತರಾದ ಅಮೇರಿಕದ ಶಾಸ್ತ್ರರ್ ಜೇಸಿಯನ್ ಸ್ಟಾರ್ಕ್ ಎಂಬುವರ ಅಭಿಪ್ರಾಯ ಏನಾದರೂ ಹಿಡಿದಿ!

ಸ್ತ್ರೀಪುರುಷರಲ್ಲಿರುವ ಬೇಧಗಳನ್ನು ಪರ್ಯಾಲೋಚಿಸಿದ ಬೇಳೆ ಆದರೆ ಇಂದ್ರಿಯ ವ್ಯವಹಾರದ (Difference in Sex) ಮಾತ್ರವಲ್ಲದೆ ಮತ್ತೆ ಬೇರೆ ಯಾವುದೂ ಇಲ್ಲ. ಹೀಗೆ ಇಂದ್ರಿಯ ವ್ಯವಹಾರವು ಒಂದೇ ಶರೀರಕನಲ್ಲಿದೆ ವಸ್ತ್ರೀಸೂಕ್ಷ್ಮ ಪುರುಷರ ಶರೀರವು ಯಾವತ್ತೂ ಒಂದು ನಮೂನೆಯ ಕೆಲಸಕ್ಕೂ ಸ್ತ್ರೀಯರ ಶರೀರವು ಮತ್ತೊಂದು ನಮೂನೆಯ ಕೆಲಸಕ್ಕೂ ಅಧೀನವಾಗಿದೆಯಾದುದರಿಂದ ಈ ಬೇಧವು ಏರ್ಪಟ್ಟಿತು. ಇವರಿಬ್ಬರಲ್ಲಿ ಇದಿಷ್ಟೇ ಬೇಧವಿನಃ ಮತ್ತೇನೂ ಇಲ್ಲ. ಅವರ ಬುದ್ಧಿಶಕ್ತಿ ಕಡಿಮೆ ಎಂಬುದು ಶೇಕಡ ಐವತ್ತು ಪಾಲಿಗೆ ಅಬದ್ಧ. ಮತ್ತೆ ಉಳಿದ ಐವತ್ತು ಪಾಲು ಸ್ತ್ರೀಸಮೂಹದಿಂದ.

ಅಂದರೆ ಪ್ರಪಂಚದ ಚರಿತ್ರೆಯ ಮೊದಲಿನಿಂದಲೂ ಸ್ತ್ರೀಯು ಮನೆಯ ಹೊರಗೆ ಬಾರದೇನೆ ಸಂಸಾರವನ್ನು ಸಾಗಿಸಿದಳು. ಗಂಡಸು ಹಾಗಲ್ಲ ಸಂಸಾರದ ವಿಷಯಗಳಲ್ಲಿ ಮನಸ್ಸನ್ನೇ ಕೊಡಲಿಲ್ಲ. ಇದರಿಂದ ಗಂಡಸು ಗಟ್ಟಿಗನೆಂದು ಹೇಳಕೂಡದು.

ಹಾಗಾದರೆ ಗಂಡಸರಿಗೂ ಹೆಂಗಸರಿಗೂ ಒಂದೇ ವಿದ್ಯೆಯನ್ನು ಕೊಡಬಹುದೆ? ಏಕಾಗಬಾರದು? ಆ ವಿದ್ಯೆಯು ಸ್ತ್ರೀಯನ್ನ ಕೇವಲ ಪತಿವ್ರತೆ ಸ್ತ್ರೀಯೆ? ಯಾವಕಾಲೇಜು ಉಪಾಧ್ಯಾಯರನ್ನು ವಿಚಾರಿಸಿದರೂ ಆವರೆ ಅವನು ಬಾಲಕಿಯರೇ ಹೆಚ್ಚು ಚಟುವಟಿಕೆಯುಳ್ಳವರು ಎಂದು ಹೇಳುವರು.

ಸಾರಾಂಶ! ಇಬ್ಬರೂ ಸಮಾನರು. ಇಬ್ಬರಿಗೂ ಒಂದೇ ವಿದ್ಯೆಯನ್ನು ಕೊಡಬಹುದು. ಮೇಲಾಗಿ ಸ್ತ್ರೀಯರಿಗೆ ಉನ್ನತಶಿಕ್ಷಣವು (High Education) ಕೊಂಚ ಒದಗಿಸಿದರೂ ಬದಲಾಯಿಸಬಹುದು.

ಇನ್ನು ನಮ್ಮ ಬಾಲಿಕೆಯರ ವಿಷಯ. ಏನೆಯಬೇಕೆ? ಕುತ್ತಿಗೆಯಮೇಲೆ ಕತ್ತಿನಿಲ್ಲುವುದೊ ಇಲ್ಲವೊ!

ಕೊಡಗು ಮಿತ್ರ.

ಪತ್ರವ್ಯವಹಾರಗಳು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಪ್ರಕಾಶಕರು ಉತ್ತರವಾದಿಗಳಲ್ಲ [ಎಡಿಟರ್]

ಮ ಧ್ಯ ಪಾ ನ.

ಮಾ. ಎಡಿಟರ್

ನಿಮ್ಮ ಪತ್ರಿಕೆಯು ಕೈಸೇರಿ ಹೊರೆಯಾಗಿದ್ದರೂ ಅನುಸಂಧಾನತೆಯಿಂದ ಮೊರೆಯಲ್ಲಿ ತಕ್ಕ ಪ್ರಸಂಗ ತಡಕುವುದಕ್ಕೆ ನೋಡಲು ಮಹಮ್ಮಕರು ದೇಹ ಬಿಡಲೋ ಪಾಪ ಅವಳ ನೋಟಕ್ಕೆ ಗುರಿಯಾದ ಬಡಬಗ್ಗರ ಗತಿಯೇನಾಗಬೇಕು. ಸಾರ್ಥಕಸಾಧನೆಯಿಂದ ಪರರ ನಾಶಮಾಡುವ ನರಪಿಶಾಚಿಗಳಾದ್ಯಾಲೋಚಿಸಿರಿ. ಆದ್ಯ ಪಾಚಕಮಹಾಶಯರ ಸ್ವಧರ್ಮ ಪಾಲನೆಗೆ ರಾಜ್ಯದಲ್ಲಿರುವ ಒಂದಾಗಲಿ ಮೇಳೆ ನರನೋ ಮಹನೀಯರೋ ತಾವೇ ಯೋಚಿಸಿ ನಮ್ಮ ಕೊಡಗಿನ ಪರಪ್ರಮುಖರ ಹಿಂಬಾಲಿಸಿದ ಎಂದಮೇಲೆ ಪ್ರಮುಖರ ನಾಶಕ್ಕೆ ವೃದ್ಧಿಗೂ ಕಾರಣರೆಂದು ಹೇಳಬೇಕಾದ ಅಗತ್ಯವಿಲ್ಲ. ಮಹೋಪಿವಿದ್ಯಾಜ್ಞಾನಾದಿವೃದ್ಧರಾಗಿ ದೇಶ, ರಾಜ ಗುರುಭಕ್ತಿಯುಕ್ತರಾಗಿ ಲೌಕಿಕ ಧರ್ಮದ ಮುಖಿರಾದ ಮ|| ರಾ|| ಶ್ರೀ|| ಪಿಟ್ಟಂಡ್ರ ಸಂಪನ್ನರವರು ತಮ್ಮ ಮಗಳ ವಿವಾಹಮಹೋತ್ಸವವನ್ನು ಮೊನ್ನೆ ತಾರೀಕು 21 5 21ನೇ ಶನಿವಾರ ವಿಜೃಂಭಣೆಯಿಂದ ಕಳೆದರು. ಎಲ್ಲರಿಗೂ ಜಾತಿ ವಿಜಾತಿಯರಿಗೂ ಪರಮಾನಂದವಾದ ಭೋಜನ ವಗೈರೆ ಸಾಂಗವಾಗಿ ನಡೆಯಿತು. ಕಲ್ಯಾಣವು ಮಂಗಳವಾಯ್ತು ಆದರೆ ಸುರಾ ರಾಕ್ಷಸಿಯನ್ನು ಕಲ್ಯಾಣಕ್ಕೆ ಪ್ರವೇಶಿಸಿದರೆಂಬುದು ಬಹಳ ಕಿರಿಕಿರಿಯಾಗಿದೆ. ಇದು ಇವರ ಮನೆ ಮ|| ರಾ|| ಶ್ರೀ ಕಳುಂಪಿಯ್ಯನವರಿಂದ ಪ್ರೇರೇಪಿಸಿ ನಡೆದ್ದಾಗಿ ವದಂತಿ, ಆದರೆ ನಮ್ಮ ಮಹಾನುಭಾವರಿಗೆ "ಆತ್ಮಬುದ್ಧಿ ಚಿತಂಜೀವಿ" ಎಂಬುದು ಮರೆತುಹೋಯಿತೋ ಏನೋ. ಅದು ಹಾಗಿರಲಿ ಹಾಗೇ ಸೇ ಬಿದ್ದಂತ್ರಿ ಕಳುಂಬೈಯ್ಯನವರ ತಮ್ಮ ಸೋಮಯ್ಯನವರ ವಿವಾಹದಲ್ಲಿ ಸುರಾರಾಕ್ಷಸಿಯನ್ನು ಆಲಿಂಗಿಸಿದ್ದರಂತೆ "ನಾಚಿಕೆ" "ನಹಸ್ರಚಿತ್ರ ಒಂದು ಮನೆ ನುಂಗಿತು" ಬಡವರಿಗೆ ಬುದ್ಧಿ ಕಲಿಸುವ ಪ್ರಖ್ಯಾತರೆನ್ನಿಸಿದ ಈ ಸುರಾರಾಕ್ಷಸಿ ಆಲಿಂಗನವೆತ್ತ ನಾವಿನ ಮಹಾಜನರು ತ್ಯಜಿಸಿರುವ ಈ ಮೋಹವಿಷಪೂರಿತವಾದ ನೀರೆಯನ್ನು ವಿದ್ಯಾಬುದ್ಧಿವಂತರಾದ ದೇಶಭಕ್ತರಾಗಿ ಸುಂದರು ತೊರೆದರೆಂಬ ಗೌರವದ ಹೋಗಲಾಡಿಸಿ ಜೇನೊನ್ನತಿಗೆ ತರಬೇಕಾದ ಈ ಮಹಾನೀಯರ ಮಹತ್ವವನ್ನು ತಾವೇ ಯೋಚಿಸಿ ಆದೆದ್ದರಿಂದ ಇನ್ನಾದರೂ ಇಂದಿನಿಂದ ಬಂದಿರುವತ್ತರಲ್ಲಿ ಮನಸ್ಸಾದ ದೇಶರಾಜ ಗುರು ಭಕ್ತಿಗಳನ್ನು ಕಾಪಾಡಲು ತುಂಬ ಅನುರಾಗವುಳ್ಳವರಾಗಿ ದೇಶಕ್ಷತಿ ಸಾಗಿಸುವಲ್ಲಿ ನಿಮ್ಮ ಮನ ಧನಗಳನ್ನ ಪೀನಿ ಕನಸಿನಲ್ಲಿಯಾದರೂ ಸುರಾರಾಕ್ಷಸಿಯನ್ನು ಹಿಡಿಯದೆ ತಾವು ದೇಶವನ್ನು ವೃದ್ಧಿಗೊಳಿಸಲು ನಮ್ರನಾಗಿ ಎಷ್ಟನ್ನು ಸಂಪಾದಿಸುವಿರಾಗಿ ನಂಬುತ್ತೇನೆ.

ದೇಶಸೇವಕ.

ಆರ್ಯಾ

ತಮ್ಮ ಅಮೂಲ್ಯವಾದ ನವೀನಪತ್ರಿಕೆಯಲ್ಲಿ ಈ ಕೆಳಗಿನ ಬಾತ್ಮಿಯನ್ನ ದಯಮಾಡಿ ಪ್ರಚುರಪಡಿಸಲಿಕ್ಕೆ ಅವಕಾಶಕೊಡಬೇಕೆಂದು ಕೇಳಿಕೊಳ್ಳುತ್ತೇನೆ

ಸ್ವಾಮಿ,

ಕೊಡಗಿನ ಎಲ್ಲಾ ಪ್ರಜೆಗಳು ಒಟ್ಟು ಸೇರಿಕೊಂಡರೆ ಕೊಡಗನ್ನೂ ಮದರಾಸನ್ನು ಒಂದುಮಾಡಬಹುದೆಂದು ಹಿಂದೆ ಕೆಲವರಿಗೆ ಉತ್ತರ ಏನೆಂದರೆ —

ಪ್ರತಿಯೊಂದು ದೇಶಸ್ಥರು ತಮ್ಮ ತಮ್ಮ ದೇಶವನ್ನು ತಾವೆ ಪ್ರತಿನಿಧಿಗಳನ್ನು ನೇಮಿಸಿಕೊಂಡು ರಾಜ್ಯವ ಆಡಳಿತವನ್ನು ದೇಶೋನ್ನತಿಗೆ ತರಬೇಕೆಂದು ಹೊಸ ಶಾಸನವಾಗಿದೆಯೇ ಹೊರ್ತು ಪ್ರಜೆಗಳ ಒಪ್ಪಿಗೆ ಇಂದಾಗಲಿ ಸರಕಾರದವರಾಗಿಯೇ ಆಗಲಿ ಒಂದು ರಾಜ್ಯವನ್ನು ಇನ್ನೊಂದು ರಾಜ್ಯಕ್ಕೆ ಸೇರಿಸಬಹುದೆಂದು ಕಾನೂನಾಗಿರುವುದಿಲ್ಲ. ಹೀಗಿರುವಾಗ್ಗೆ ಕಾನೂನಿಗೆ ವಿರೋಧವಾದ ಕೆಲಸ ನಡಿಸುವ ಸ್ವತಂತ್ರ ಉಭಯತ್ರರಿಗೂ ಇರುವುದಿಲ್ಲ. ಇದಿರಿಂದ ಮದರಾಸಿಗೆ ಕೊಡಗನ್ನು ಸೇರಿಸುವದಕ್ಕೆ ಪಿನಃ ಮಾತಬೇಕು ಶಿವಾಯಿ ಮದರಾಸಿಗೆ ಕೊಡಗನ್ನು ಒಂದಾಗಿ ಸೇರಿಸಿದರೆ ಮುಂದೆ ಕೊಡಗಿಗೆ ಬರುವ ಕಷ್ಟದ ವಿವರಾ

೧ ಕುಟುಂಬದ ಭೂಮಿ ಮನೆ ಜೀವನಾಂಶದ ಪಾಲ್ ಪಡಕೊಂಡವರೆಲ್ಲಾ ತಮ್ಮ ತಮ್ಮ ಪಾಲಿಗೆ ಬಂದ ಭೂಮಿ ಮನೆ ಪ್ರತ್ಯೇಕ ತಮ್ಮ ಹೆಸರಿಗೆ ಇನಾಮೆಂದು ಮಾಡಿಕೊಳ್ಳುವ ಸ್ವತಂತ್ರ ಹಿಂದಿನ ದೊರಕುತ್ತೆ

೨ ಕುಟುಂಬದಿಂದ ಪಾಲ್ ಪಡಕೊಂಡ ಸ್ತ್ರೀಧನವು ನಾಳೆ ಕಾಣದೆ ಹೋಗುವ ದಿಕ್ಕಿಗೆ ಆಗುವ ಕಾನೂನು ಈ ದೇಶದಲ್ಲಿದೆ ಆದರಿಂದ ಕೊಡಗರ ಸ್ವತ್ತು ಸಾಲಕ್ಕೆ ಆಗುವ ಸಂಭವ ಬಂದೇ ಬರುತ್ತೆ.

೩ ಗನ್ನ ಪಿಸ್ತೂಲಿಗೆ ಲೈಸನ್ಸ್ ಮತ್ತು ತಾನು ಸ್ವಯಂ ಸಂಪಾದನೆ ಮಾಡಿದ ೨ ರ ಮತ್ತು 10 ರ ಕಂದಾಯದ ಸ್ವಂತ ಭೂಮಿ, ಮಾರಾಟ ಮಾಡಿಕೊಳ್ಳುವ ಹಕ್ಕಿಲ್ಲ. ಮದರಾಸು ಕಾನೂನ್ ಜಾರಿಲಿದೆ. ಅದು ಇಲ್ಲಿಗೂ ಕ್ರಮೇಣ ಬಂದೇ ಬರುತ್ತೆ. ಇದಕ್ಕೆ ಅನುಮಾನವ್ಯಾಕೆ.

೪ ಮದರಾಸಿನ 22 ಡಿಸ್ಟ್ರಿಕ್ಟಿನವರಿಗೂ ಮಾಫಿಯಾಗಿ ಪ್ರಾಣರಕ್ಷಣೆ ಆಯುಧ ಹಿಡಿಯುವ ಹಕ್ಕಿಲ್ಲಾ. ಕೊಡಗಿಗೆ ಇದೆ ಹುದಿವರಿ ಜೊತೆ ವಿರಪವರ ಕ್ರಮೇಣ ಈ ದೇಶದ ಸಭಿಕರೇ ಇದನ್ನು ದಪ್ಪ ಮಾಡುತ್ತಾರೆ. ಹಿಂಸೆವಾಗಿ ನಂಬಿಕೊಳ್ಳಿ

೫. ಒಂದು ಅವಿಭಕ್ತ ಮನೆತನಕ್ಕೆ ಇನ್ನೊಂದು ಮನೆತನದವರ ದತ್ತು ಸ್ವೀಕಾರ ಕೊಡಗಿನಲ್ಲಿ ಇಲ್ಲ ಮದರಾಸಿನಲ್ಲಿ ಇದೆ. ಇದಕ್ಕೆ ಸಂಸ್ಕಾರ ನಾರಾಯಣಸ್ವಾಮಿಗಳವರು ಧನಿಕ ಅವರ ವಿಧವೆ ದತ್ತು ಸ್ವೀಕಾರಮಾಡಿದ ಮಾವಿನ ಮದರಾಸು ಹೈಕೋರ್ಟು ಸ್ಪಷ್ಟವೇ. ಅವಿನಾಶವಾಗಿದೆಯಾದ್ದರಿಂದ ನಮ್ಮಲ್ಲಿ ಅವಿಭಕ್ತ ಕುಟುಂಬದಲ್ಲಿಯು ದತ್ತು ಸ್ವೀಕಾರದ ಹಕ್ಕು ಬಂದೇ ಬರುತ್ತೆ. ಎಂದಿತೆ ನುಡಿಕೊಳ್ಳಿ

೬. ಈ ಮೇಲ್ಕಂಡ ಕಾರಣಗಳಿಂದ ಮದರಾಸಿಗೆ ಸೇರುವದಾಗಲಿ ಅಲ್ಲಿನ ಹೈಕೋರ್ಟಿನಲ್ಲಿ ನಮಗೆ ಎಂದೆಂದಿಗೂ ಅವಶ್ಯ ಇಲ್ಲಾ. ನಮ್ಮ ದೇಶದ ಪೂರ್ವಿಕರ ಪದ್ಧತಿ ಅನುಸರಿಸಿ ರಾಜ್ಯಭಾರ ಪ್ರಜೆಗಳಿಂದ ನಡಿಸಲ್ಪಡಬೇಕು. ಮುಂಬರುವ ಅವರಲ್ಲಿ ಇರಿಸುವ ಪ್ರತಿನಿಧಿಗಳ ಇನ್ನು ಕೋರ್ಟು ರಾಜ್ಯಭಾರ ಪ್ರತ್ಯೇಕ ನಡಿಸುವ ಹಕ್ಕು ಭಾರ ಸರಕಾರದವರಲ್ಲಿ ಪಡೆದುಕೊಳ್ಳುವದೇ ನಮ್ಮ ಕೆಲ್ಸವಾಗಿದೆ

ದೇಶಾಭಿಮಾನಿ

...ಸ್ವಾಮಿ

ಕೊಡಗುದೇಶವನ್ನು ಮದರಾಸು ಸಂಸ್ಥಾನಕ್ಕೆ ಸೇರಿಸಬೇಕೆಂಬ ವಾಜಿನಲ್ಲಿ ಕೊಡಗು ಮೂಲನಿವಾಸಿಗಳಾದ ಕೊಡಗರು ಬಹುಕಾಲದಿಂದ ಅಡ್ಡಿಮಾಡಿಕೊಳ್ಳುತ್ತಿರುತ್ತಾರೆ. ಎರಡು ವರ್ಷದಿಂದ ಕೊಡಗಿಗೆ ಬಂದು ನೆಲಸಿದ ವ್ಯಕ್ತಿಗಳು ಹೆಚ್ಚು ಉತ್ಸಾಹದಿಂದ ಮದರಾಸು ಸಂಸ್ಥಾನಕ್ಕೆ ಸೇರಬೇಕೆಂದು ಒಪ್ಪಿಗೆಕೊಡುವದಲ್ಲದೆ ಕೆಲವರಿಗೆ ಸಾಲದ ಬಡವ್ಯಕ್ತಿಗಳಿಗೂ ಮೂಲನಿವಾಸಿಗಳಾದ ವಿವೇಕಶೂನ್ಯರಾದ ನಮ್ಮವರಿಗೂ ಹುರಿದುಂಬಿಸುತ್ತಿರೆ. ಆದುದರಿಂದ ಅನ್ಯದೇಶದಿಂದ ಬಂದು ಇಲ್ಲಿ ನೆಲಸಿ ನಮ್ಮ ಪೂರ್ವಿಕರ ಜನ್ಮಭೂಮಿ ಸಾಗುವಳಿಗೆ ಪಡೆಕೊಂಡು ಭೂಮಿ ನಿಮ್ಮ ಧಗಂದ ಸಕಲ ರಿಯಾಯ್ತಿಯು ನಮ್ಮಂತೆ ಹೊಂದುವ ಸುಮುಚೇವಿಗಳಾಗಿರುವ ಮಹಾನುಭಾವರು ಅವಿವೇಕದಿಂದ ತನ್ನ ಶಕ್ತಿ ಇಂದಲೆ ಕೊರವುಕೊಯಿದುಕೊಳ್ಳುವಗಳಿಗೆ ಯಾಕೆಬೀಳುತ್ತಾರೆಂಬುದು ನಾನರಿಯೆ. ಅದ ಹಂದರೆ ಜನ್ಮಭೂಮಿಗ ಳೆಂದಾಯ ಕ್ಲಿಷ್ಟಪಡಿಸಿದ ಲವಾವಟ್ಟು ನಮಗೆ ಲಗಾವಾಗುವದೇ ಹೊರ್ತು ಅನ್ಯರಿಗಲ್ಲ. ಸಾಹುಕಾರ್ರು ಬೋಳು ಒಕ್ಕಿಗೆ ಸ್ಥಿರಸೊತ್ತು ಈಗಕೂಡದೆಂಬ ನಮ್ಮವರಿಗಲ್ಲದೆ ಅನ್ಯರಿಗಲ್ಲ. ಜೀವಾಧಾರವಾದ ... ಶಕ್ತಿ ನಮ್ಮವರಿಗಲ್ಲದೆ ಅನ್ಯರಿಗಲ್ಲ. ... ಗಿದಾಗ್ಯು ನಮ್ಮಂತೆ ಅನ್ಯರಿಗೂ ರಿಯಾಯ್ತಿ ಇರಕೂಡದೆಂದು ಕೊಡಗು ಮೂಲನಿವಾಸಿಗಳೂ ಎಂದೂ ಹೇಳಿದವರಲ್ಲ. ಮುಂದೂ ಹೇಳುವವರಲ್ಲ. ಆದಾಗ ಮದರಾಸಿಗೆ ಸೇರಿದರೆ ಇವರು ಮದರಾಸ್ ಸಂಸ್ಥಾನದಲ್ಲಿ ಜಾರಿಯಲ್ಲಿರುವ ಕಾಯಿದೆ ಕಾನೂನು ಇವರಿಗೂ ಲಗಾವಾಗಕೂಡದೆಂದು ಯಾವ ವಿಚಾವಟ್ಟು ಆಧಾರದಮೇಲೆ ಕಾಪಾಡಿಕೊಳ್ಳುತ್ತಾರೆ ಇದನ್ಯಾಕೆಯೋ ತಿಳಿಸುವದಿಲ್ಲ. ಇದು ಕಾಲಮಹಿಮೆಯೋ ಏನೆಂಬುದ ವಿವರಿಸಲಾರೆ. ನಾವು ಮೂಲನಿವಾಸಿಗಳು ಸಜ್ಜನಶಿವಾಗುಣಗಳಾಗಿದ್ದರಿಂದ ನಮ್ಮ ದೇಶಕ್ಕೆ ಬಂದವರೆಲ್ಲಾ ನಮ್ಮ ಸಹೋದರರೆಂಬರಾಗಿ ಗುಟ್ಟನ್ನು ಹೊರಪಡಿಸದೆ ಇರುವಲ್ಲಿ ಇವರು ಜಿಲ್ಲಾ ಪಟ್ ವಿನಾಟಿಂಗಿಗೆ ಸೇರಿ ನಮ್ಮವರ ಹೆಸರು ತಲಚೇರಿ ವೋಟಾರಿನಲ್ಲಿ ಒಯ ಜಯವೆಂಬದಾಗಿ ದಾರಿ ಉದ್ದಕ್ಕೂ ಬಾವುಟತೋರಿಕೊಂಡು ರಾಜಸ್ನೇಹಪೂರ್ಣ ವ್ಯಕ್ತಿಗಳ ಮನಸ್ಸು ವಿಕಲ್ಪಮಾಡುವುದು ನ್ಯಾಯವೋ ಇದಕ್ಕೆ ಒಪ್ಪಲಿಸೀತು? ಘನ ಸರಕಾರದವರು ನಮ್ಮ ರಾಜ್ಯದ ಆಡಳಿತಕ್ಕೆ ಬಂದ ಕಳೆದ 86 ವರುಷದಿಂದ ನಾವು ವೀರರಾಯರ ಕಾಟಬಾದೆಗೆ ಗುರಿಯಾಗದೆ ವಿದ್ಯಾಭ್ಯಾಸ ಕಾಪಿ ಎಲಕ್ಕಿ ಕಿತ್ತಲೆ ಮೆಣಸು ಮುಂತಾದ ವ್ಯವಸಾಯದಲ್ಲಿ ಉದ್ಯೋಗ ಮುಂತಾದ ಸರಕಾರಿ ಆಡಳಿತದಲ್ಲಿಯು ಹಲವುಬಾಬಿನಲ್ಲಿಯು ನಮ್ಮ ಪೂರ್ವದ ಪದ್ಧತಿ ಅನುಸರಿಸಿ ನಮ್ಮನ್ನು ಪುತ್ರವಾತ್ಸಲ್ಯದಿಂದ ನಡಿಸಿಕೊಂಡುಬರುವ ಘನ ಸರಕಾರದವರಿಗೆ ವಿರೋಧವಾದ ಕಾರ್ಯನಡಿಸುವದು ನ್ಯಾಯವೋ? ಮಿ|| ... ನ್ ಪ್ರಸ್ ರು ಗೌರ್ಮೆಂಟಿಗೆ ಎಂದು ಏನು ಪರುಷವಾಯಿತು ಮೆ|| ಪ ಕೆ. ವಾಟ್ಕಿಂಸರಿಗಿಂತ ಒಳಲರೋ ಅಥವಾ ಅವರಿಗಿಂತ ದೊಡ್ಡ ಆಸ್ತಿವಂತರೋ? ಅವರು ಈ ಊರತ್ತ ಕಾಯ್ದೆಮಾಗಿ ಇರುವವರೊ? ಮಿ|| ಕೆ. ಯಸ್ ಉತ್ತಯ್ಯ ನವರು ತಿಂಬಿದ ಕುಟುಂಬಸ್ಥರು ವಿವೇಕಿಗಳು. ಅವರಿಗೆ ದೇವರು ಈ ಜ್ಞಾನೋದಯ ಕೊಟ್ಟದೇನೋ ನಾನರಿಯೆ. ಇದೆಲ್ಲ ಕಾಲಮಹಿಮ ಹೊರ್ತು ಬೇರೊಂದಿಲ್ಲವೆಂಬದಾಗಿ ನೆನಸಬೇಕಾಗಿದೆ. ಮುಂದೆ ವಿವರಿಸುತ್ತೇನೆ.

ದೇಶಾಭಿಮಾನಿ

ರೋಲ್ಡ್ ಗೋಲ್ಡ್ ಬಂಗಾರದ ರೇಡಿಯಂ

ರಿಸ್ಟ್ ಲೆಟ್ ವಾಚ್



ಈ ಗಡಿಯಾರಗಳನ್ನು ನೀವೆ ಭಂಗಾರದಿಂದ ಅಮೇರಿಕಾ ದೇಶದಲ್ಲಿ ತಯಾರಿಸಿದ್ದು. ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಿಸಿ ಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು. ಇವು ಅಮೇರಿಕಾದೇಶದ ಗಡಿಯಾರಗಳು. ಒಮ್ಮಿನ ಕಾಲಕ್ಕೆ ಬರುವವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಇವಕ್ಕೆ ವರುಷ ಗ್ಯಾರಂಟಿ ಕೊಡುವೆವು. ಕೈಯಲ್ಲಿ ಕಟ್ಟುವ ಬೆಳ್ಳಿಯ ಸರಪಣಿ ಸಹಿತ ಗಡಿಯಾರ 1 ಕ್ಕೆ 10—8—0 ಕೈಯಲ್ಲಿ ಕಟ್ಟುವ ಸೀಮೆ ಪಟ್ಟಿ ಸಹಿತ ಗಡಿಯಾರ 1 ಕ್ಕೆ 8—3—0 ರೂ.

ವಿಳಾಸ —ಎಸ್ ಎಸ್ ರಾಮ ಅಂಡ್ ಕೊ,
ಪೋಸ್ಟ್ ಬಾಕ್ಸ್ ನಂ 214, ಮದರಾಸು.

ಮೂನ್ ಲೈಯಿಟು ಸೋಪು

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರ ಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದು ಬಿಡುವುದು.

ನಮ್ಮ ಮೂನ್ ಲೈಟ್ ಸೋಪು ಗಂಧ, ಮೊಡವೆ, ಬಚ್ಚು, ಕುರು, ನವೆ ಮುಂತಾದುವುಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳನ್ನು ಪೆಟ್ಟಿಗೆ 1ಕ್ಕೆ ರೂ 1—4—0 ಒಂದೇ ಸಲ ... ಪೆಟ್ಟಿಗೆ ತರಿಸಿಕೊಂಡರೆ ರೂ 2—4—0

ವಜ್ರದ ಉಂಗುರಗಳು

ಈ ಉಂಗುರಗಳನ್ನು ಸೀಮೆ ಭಂಗಾರದಿಂದ ಮಾಡಿದೆ. ಇದರ ಮೇಲುಗಡೆ ಕೆಂಪು ಹಸರು ಮುಂತಾದ ಇಮಿಟೇಷನ್ ವಜ್ರದ ಹರಳುಗಳನ್ನಿಟ್ಟು ಕಟ್ಟಡ ಕಟ್ಟಿರುವನು. ನೋಡಿದವರು ನಿಜವಾದ ವಜ್ರದ ಉಂಗುರವೆಂದೇ ಹೇಳುವರು. ಬಣ್ಣಕ್ಕೆ ಗ್ಯಾರಂಟಿ 2 ವರ್ಷ ಕೊಡುವೆವು.

ಉಂಗುರ 1 ಕ್ಕೆ ರೂ —12—0.

ವಿಳಾಸ —ಎಸ್ ಪಾಲ್ ಅಂಡ್ ಕೊ,
ಪೋಸ್ಟ್ ಬಾಕ್ಸ್ ನಂ 42 ಪಾರ್ಕ್‌ಟೌನ್, ಮದರಾಸು

ರೋಗಿಗಳೂ, ರೋಗವಿಲ್ಲದವರೂ

ಅಕ್ಸಿಡೇನನ್ನು

ಉಪಯೋಗಿಸಬೇಕು.

ಎಂತಹ ಕಠಿಣ ಕಾಯಿಲೆಯುಳ್ಳೀ ಅಗಲಿ ಮೊಗಲು ಇದನ್ನು ಉಪಯೋಗಿಸಿದರೆ ಶರೀರದ ಕಲ್ಮಷವನ್ನು ತೆಗೆದುಹಾಕಿ ಕಾಯಿಲೆಯನ್ನು ಕಡಿಮೆಮಾಡುವುದು. ಸುಂಭ ಕಾಯಿಲೆಗಳಲ್ಲವೂ ಒರಿ ಇದರ ಸೇವನೆಯಿಂದಲೇ ಗುಣವಾಗುವುವು. ತೆಗೆದುಕೊಂಡ ... ಘಂಟೆಯುಲ್ಲಿ ಸುಖಭೇದಿ ಮಾಡುವುದು. ಬೇರೆ ಭೇದಿ ಮಾತ್ರೆಗಳಂತೆ ಸಂಕಟ, ಹೊಟ್ಟೆನೋವು ಮುಂತಾದುವನ್ನುಂಟುಮಾಡುವುದಿಲ್ಲ. ಸಾಮಾನ್ಯಜ್ವರ, ಕೆಮ್ಮು, ಊದು, ಮೂತ್ರಬಂಧನ, ಆಲಸ್ಯ, ಉಷ್ಣ, ಪಿತ್ತ, ಶೀತಸಂಬಂಧ ಕಾಯಿಲೆಗಳು, ಜೀರ್ಣಕೋಶದ ಆಕ್ರಮತೆ, ಕರುಳುಗಳಲ್ಲಿ ಕ್ರಿಮಿಗಳಿಂದ ಹುಟ್ಟಿ ಉಬ್ಬರವಾಗುವುದು, ದುರ್ವಾಸನೆಯುಳ್ಳ ವಾಯುಗಳು ಹುಟ್ಟುವುದೇ ಮುಂತಾದ ವನ್ನೆಲ್ಲಾ ಗುಣಪಡಿಸುತ್ತದೆ.

ಚಿಕ್ಕಮಕ್ಕಳಿಂದ ಮುದುಕರವರೆಗೆ ವರ್ಷದ ಯಾವ ಕಾಲದಲ್ಲೂ ಉಪಯೋಗಿಸಬಹುದು. ಯಾವಾಗಲೂ ಒಂದು ಶೀಸೆಯನ್ನು ಹತ್ತಿರವೇ ಇಟ್ಟುಕೊಳ್ಳಿ.

೪೦ ಮಾತ್ರೆ ಶೀಸೆಗೆ ೧೦ ಆಣೆ

ಚಂದ್ರಕಲೆಯು

ಶರೀರದಲ್ಲಿನ ಪ್ರತಿಯೊಂದು ಧಾತುವನ್ನೂ ಸೇರಿಸಿ ಶರೀರದ ರೋಗಗಳನ್ನು ಪರಿಹರಿಸುವುದು. ರೋಗವಿಲ್ಲದವರಿಗೆ ಮಾಂಸ, ಮೆದುಳು, ಮೂಳೆ ನರ, ಮುಂತಾದುವುಗಳನ್ನು ಬಲಪಡಿಸಿ ಧಾತು ಗಟ್ಟಿಮಾಡಿ ದೃಢಕಾಯರನ್ನಾಗಿ ಮಾಡುತ್ತದೆ. ರೋಗವಿದ್ದವರಿಗೆ ಅಶಕ್ತಿ, ಗಂಡ, ಬಳಜ್ವರ, ವಾತ, ಪ್ಲೂರೆಸಿ ಎಂಬ ಪಕ್ಕನೋವು, ಪಿತ್ತಕೋಶದ ರೋಗಗಳು, ಮೂತ್ರಕೋಶದ ರೋಗಗಳು, ಮಲಬದ್ಧತೆ, ನರಗಳ ಕಾಯಿಲೆಗಳು, ನರಗಳ ಜಳುಕು, ಮಿದುಳಿನ ಕಾಯಿಲೆಗಳು, ಕಾಮಾಲೆ, ಕ್ಷಯ, ಶರೀರದಲ್ಲೆಲ್ಲಾ ಕುರಗಳೇ ಮುಂತಾದುವು ಏಳುವುದು, ಹೊಟ್ಟೆನೋವು ಮುಂತಾದುವನ್ನೆಲ್ಲ ಖಂಡಿತ ಗುಣಪಡಿಸುತ್ತದೆ. ಅಮೂಲ್ಯ ಔಷಧಿಗಳಿಂದ ತಯಾರಿಸಿದ್ದು. ಶೀಸೆಗೆ ಮೂರುರೂಪಾಯಿ

ಇಲೆಕ್ಟ್ರಿಕ್ ಬಾಂ.

ಕಜ್ಜಿ, ಕುರ, ತುರಿಕಜ್ಜಿ, ಗಾಯ, ಸುಟ್ಟಗಾಯ ಮುಂತಾದುವನ್ನೆಲ್ಲ ಗುಣಪಡಿಸುತ್ತದೆ.

ಪೆಟ್ಟಿಗೆಗೆ ... ಆಣೆ

ಎಕ್ಸೇ ದೊಡ್ಡ ಜ್ವರ ವಿರಲಿ.

ನಮ್ಮ ಜ್ವರಾರಿಮಾತ್ರೆಗಳು ತೆಗೆದುಕೊಂಡ ಎರಡುಗಂಟೆಗಳೊಳಗಾಗಿಯೇ ಜ್ವರವನ್ನು ಖಂಡಿತ ಇಳಿಸುತ್ತವೆ. ೧ ಪೆಟ್ಟಿ ಮಾತ್ರೆಗೆ ೧ ರೂ.

ಜ್ವರಗಳನ್ನು ಗುಣಪಡಿಸುವುದಕ್ಕೆ ನಮ್ಮ ಫೀವರೀಗ್ ಮಾತ್ರೆಗಳನ್ನು ಉಪಯೋಗಿಸಿ. ಇವು ಮಲೇರಿಯ, ಸನ್ನಿಪಾತ, ಪಿತ್ತಜ್ವರಗಳು, ಶ್ಲೇಷ್ಮಜ್ವರಗಳು, ಮುಂತಾದುವನ್ನೆಲ್ಲ ಗುಣಪಡಿಸುತ್ತದೆ. ಶೀಸೆಗೆ ೧ ರೂಪಾಯಿ

ಅನ್ನಕೋಶ, ಪಿತ್ತಕೋಶ ಮುಂತಾದುವುಗಳ ಆಕ್ರಮತೆಯಿಂದ ಹೊಟ್ಟೆನೋವು (ಪರಿಣಾಮಶೂಲೆ) ವಾಂತಿಯಾಗುವುದು, ಅಜೀರ್ಣ, ಮುಂತಾದ ಎಲ್ಲಾತರದ ಡಿಸ್ಪೆಪ್ಸಿಯಯೆಂಬ ಜೀರ್ಣಕೋಶದ ಕಾಯಿಲೆಗಳನ್ನೂ ನಮ್ಮ ಶೂಲಾರಿಯು ಖಂಡಿತ ಗುಣಮಾಡುತ್ತದೆ. ... ಔಷಧಗಳುಳ್ಳ ... ಶೀಸೆಗಳಿಗೆ ೫ ರೂಪಾಯಿ

ಎಲ್ಲತರದ ಕಾಯಿಲೆಗಳನ್ನೂ ಪತ್ರಮುಖಾಂತರವೂ, ಹತ್ತಿರವಿದ್ದೂ ಗುಣಮಾಡುತ್ತೇವೆ. ಜನರಲ್ ಪರಲಿಸಿಸ್ ಎಂಬರೆ ಪೂರ್ಣವಾಯು, ಮೂತ್ರಕೋಶದ ಕಾಯಿಲೆ ಮುಂತಾದುವನ್ನು ಗುಣಪಡಿಸಿದ್ದಕ್ಕೆ ನಮಗೆ ಚಿನ್ನದ ಮೆಡಲುಗಳು ಸಿಕ್ಕಿವೆ.

ಡಿ. ಜಿ. ಎಚ್. ಘೋಷ್,
ಸೋಮವಾರಪೇಟೆ, (ಕೊಡಗು).

ಇಂಗ್ಲೀಷು ಡಾಕ್ಟರುಗಳು ... ಯಲ್ಲಿ ತಯಾರಿಸಲ್ಪಟ್ಟ

...

ಈ ಪ್ರಪಂಚದಲ್ಲಿ ಅನೇಕರು (ಮೋಹ) ಕಾಮುಕ್ಕೆ ಸಿಲುಕಿ ... ಕೆಟ್ಟ ಹೆಂಗಸರ ಸಹವಾಸಕ್ಕೆ ಸಿಕ್ಕಿ ಟಾಕಿ ಪರ್ಮ ಮುಸುಕು, ಧಗೇಂದ್ರಿಯ ಧಾತು ಹೋಗುವದು ಮುಂತಾದ ವ್ಯಾಧಿಗಳನ್ನು ಅಂಟಿಸಿಕೊಂಡು ಮರಣಾಂತರವೂ ವ್ಯಸನಕ್ಕೆ ಗುರಿಯಾಗುವರು. ಇಂಥವರು ಎಷ್ಟು ಹಣವನ್ನು ಖರ್ಚುಮಾಡಿದಾಗ್ಯೂ ಪ್ರಯೋಜನವಿಲ್ಲದೆ ತಮ್ಮ ಸಂತಾನದಲ್ಲಿಯೂ ಕೆಟ್ಟ ವ್ಯಾಧಿಯನ್ನು ಅಂಟಿಸಿ ಪ್ರಪಂಚದ ಸುಖವನ್ನು ಮರೆತುಬಿಡುವಂತೆ ಮಾಡುವರು. ಆದ್ದರಿಂದ ಇಂಥಾ ವ್ಯಾಧಿಗಳು ಯಾವತ್ತೂ ಸೇರದಂತೆ ಇಂಗ್ಲೀಷು ಡಾಕ್ಟರುಗಳು ಈ ಚೀಲವನ್ನು ಕಂಡುಹಿಡಿದಿರುವರು. ಈ ಚೀಲವನ್ನು ಆ ಸಮಯದಲ್ಲಿ ಉಪಯೋಗಿಸುವದರಿಂದ ಮೇಲೆ ತಿಳಿಸಿರುವ ಕೆಟ್ಟ ವ್ಯಾಧಿಗಳು ಯಾವವೂ ಸೇರದಂತೆ ಶರೀರವನ್ನು ಬಹು ಜಾಗ್ರತೆಯಿಂದ ಕಾಪಾಡುವದು.

ಗಂಡಸರದು 1—4—0 ಹೆಂಗಸರದು 1—4—0

ಸ್ಪೆಂಡೋ ಆಯಿಲ್
(ನಪುಂಸಕತ್ವಹಾರಿ ತೈಲವು)

ಮನುಷ್ಯರಲ್ಲಿ ಪುರುಷಾರ್ಥವು ಕೇವಲ ದಾತುವಿನಿಂದಲೇ ಇರುವದು. ವಸುಷ ರ ದೂಷಿತ ವೀರ್ಯವು ಗರ್ಭಕಾರಕವಾಗಲಾರದು. ಅತ್ಯಂತ ವ್ಯಸನದಿಂದಲೂ ವ್ಯಾಯಾಮ (ಕಸರತು) ದಿಂದಲೂ ಯಾರಿಗಾಗ್ಯೂ ಕೂತುಕ್ಕೊಂಡೇ ಇರುವದರಿಂದಲೂ, ಹಸ್ತಪ್ರಯೋಗಾದಿಗಳಿಂದಲೂ, ಶರೀರದಎಲ್ಲಾ ನಾಡಿಗಳು ಬಲಹೀನವಾಗುವವು. ಕೆಲವರು ಬಾಲ್ಯದಲ್ಲಿಯೇ ಇಂದಾವ್ಯಾಧಿಗಳನ್ನು ಉಂಟುಮಾಡಿಕೊಂಡು ತಮಗಿರುವ ವ್ಯಾಧಿಯನ್ನು ವೈದ್ಯರಲ್ಲಿ ಹೇಳಲು ನಾಚಿಕೆಯಿಂದ ವ್ಯಾಧಿಯನ್ನು ಹೆಚ್ಚುಮಾಡಿಕೊಂಡು ವ್ಯಾಯಸಮರ್ಥರಾದಾಗ ರತಿಸುಖಕ್ಕೆ ಶಕ್ತಿಯಿಲ್ಲದೆ ಲಜ್ಜಾಸ್ಪದದಿಂದ ಅಕಾಲಜನ್ಯರಾಗ ಮನೋವ್ಯಥೆಯನ್ನುಂಟುಮಾಡಿಕೊಳ್ಳುವರು. ಇಂಥವರ ಉಪಯೋಗಕ್ಕೋಸ್ಕರವಾಗಿ ಪ್ರಪಂಚದಲ್ಲಿ ಅಪೂರ್ವವಾಗಿ ಸಿಕ್ಕುವ ಸಾಂಡಾ ಎಂಬ ವಸ್ತುವಿನಿಂದ ತಯಾರಿಸಲ್ಪಟ್ಟ ಈ ಎಣ್ಣೆಯನ್ನು ಲಿಂಗಕ್ಕೆ 7 ದಿನಗಳು ಹಚ್ಚುವದರಿಂದ ಗುಣವಾಗುವದು. ಮತ್ತು ಲಿಂಗವು ಬಲಹೀನವಾಗಿದ್ದರೂ ದೃಢವಾಗುವದು.

ಕ್ರಯ ಶೀಸೆ 1 ಕ್ಕೆ ರೂ, 1—4—0

ವಿಳಾಸ —ಎಸ್ ಆರ್. ಕೃಷ್ಣ ಅಂಡ್ ಕೋ,
89 ನಾರಾಯಣಮೊದಲಿಬೀದಿ ಮದರಾಸು.

ಮಧುರೆ, ಮತ್ತು ಕೊರ್ನಾಡು ಸೀರೆಗಳು

17 ಮೊಳ ಪೂರಾ ಇರುವದು ದೊಡ್ಡ ಪನ್ನ

ಈ ಸೀರೆಗಳನ್ನು ಹಸನಾದ ಘಟ್ಟಿ ನೂಲಿನಿಂದ ತಯಾರಿಸಿದೆ. ಸುಂದರವಾದ ರೇಷ್ಮೆಯ ಸೆರಗೂ ಅಂದವಾದ ದೊಡ್ಡ ಅಂಚೂ ಇದೆ. ಶ್ರೀಮಂತರಿಗೂ, ಗರೀಬರಿಗೂ ಅನುಕೂಲವಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಎಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವು ಸೀರೆಗಳನ್ನು ಮಾತ್ರ ತಯಾರಿಸಿರುವೆವು. ಬೇಕಾದವರು ತರಿಸಿ ಪರೀಕ್ಷಿಸಿರಿ.

ಕ್ರಯ ನಂಬರು 1 6—8—0
ನಂಬರು 2 7—8—0.

ವಿಳಾಸ —ಎಸ್ ಎಸ್ ರಾಮ ಅಂಡ್ ಕೊ,
ಪೋಸ್ಟ್ ಬಾಕ್ಸ್ ನಂ 214, ಮದರಾಸು

ಮುದ್ರಣ ಅಂದ! ಛಾರ್ಜು ಸುಲಭ!! ಕೆಲಸ ಜಾಗ್ರತೆ!

ಶ್ರೀನಿವಾಸ ಪ್ರೆಸ್, ಮೈಸೂರು.

ನಮ್ಮಲ್ಲಿ ಎಲ್ಲಾವಿಧವಾದ ಪ್ರಿಂಟಿಂಗ್ ಕೆಲಸಗಳು ಅಂದರೆ — ಬುಕ್‌ವರ್ಕುಗಳು ಲೆಟರ್‌ಹೆಡ್‌ಗಳು, ಲಗ್ನಪತ್ರಿಕೆಗಳು, ರಶೀತಿಫಾರಂಗಳು, ಬ್ಯಾಂಕಿಗೆ ಸಂಬಂಧಪಟ್ಟ ಎಲ್ಲಾ ತರಹದ ಬ್ಯಾಲನ್ಸ್‌ಷೀಟುಗಳು, ಆಫೀಸುಗಳಿಗೆ ಸಂಬಂಧಪಟ್ಟ ಇಂದಾ—ಗೆ ರಿಜಿಸ್ಟರುಗಳು, ನಾಟಕದ ನೋಟೀಸುಗಳು, ಕುಸ್ತಿ ನೋಟೀಸುಗಳು, ತರಹಾವರಿ ಟಿಕೇಟುಗಳು, ವಾಲ್‌ನೋಟೀಸುಗಳು ಮುಂತಾದ ಇನ್ನೂ ಅನೇಕ ನಮೂನೆಯ ಕೆಲಸಗಳು ಗಿರಾಕಿಗಳ ಮನಸ್ಸೊಪ್ಪುವಂತೆ ಕಾಲಕ್ಕೆ ಸರಿಯಾಗಿ ಪ್ರಿಂಟು ಮಾಡಿಕೊಡುತ್ತೇವೆ. ಒಂದಾವರ್ತಿ ನಮ್ಮಲ್ಲಿ ಕೆಲಸವನ್ನು ಮಾಡಿಸಿದಲ್ಲಿ ತಮಗೇ ವೇದ್ಯವಾಗುತ್ತದೆ. ಗಿರಾಕಿಗಳ ಅನುಕೂಲತೆಗೋಸ್ಕರ ಪ್ರಿಂಟಿಂಗ್ ಛಾರ್ಜುಗಳು ಬಹಳ ಕಡಿಮೆಮಾಡಲ್ಪಟ್ಟಿರುತ್ತೆ. ಪರಸ್ಥಳದವರು ತಮ್ಮ ಸ್ಥಳದಲ್ಲಿದ್ದಂತೆಯೇ ಅಚ್ಚುಹಾಕಿಸಲು ಅನೇಕ ಸೌಕರ್ಯಗಳು ಮಾಡಲ್ಪಟ್ಟಿರುತ್ತವೆ. ಅಪೇಕ್ಷಕರು ಅರ್ಧಾಣೆಯ ಸ್ಟ್ಯಾಂಪಿನೊಡನೆ ತಮ್ಮ ಅಭಿಪ್ರಾಯವನ್ನು ತಿಳಿಯಪಡಿಸಿದಲ್ಲಿ ಅನುಕೂಲತೆಗೆ ತಕ್ಕಂತೆ ರಿಪ್ಲೈ ದೊರೆಯುತ್ತದೆ.

ಮ್ಯಾನೇಜರ್.

Printed and Published by S. NANJUNDA SASTRI at The Sreenivasa Press, Mysore for "Kodagu Ltd., Mercara—1 7 1921.

REGISTERED No. M

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾನೀತಿಪ್ರಯತ್ನತಃ । ಐಕಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯಸಂಪದಃ ॥

ಪ್ರತಿಶುಕ್ರವಾರವೂ ಪ್ರಾತಃಕಾಲ ಪ್ರಕಟಿಸಲ್ಪಡುವುದು.

[ಸಂಪುಟ ೧] ಕೊಡಗು, ಸನ್ ೧೯೨೧ ನೇ ಇಸವಿ ಜುಲೈ ತಾರೀಖು ೮ ನೆಯ ಶುಕ್ರವಾರ [ಸಂಚಿಕೆ ೩

ವೀರಶೈವರಿಗೆ ಸಂಗ್ರಾಹ್ಯವಾದ ಫೋಟೋ.

ಶ್ರೀ ಶಿವಯೋಗಿಗಳ ಸಂಘ — ಭಾಗ್ಯಶಾಲಿ ಜನರು ಶಿವು ಬಿಚ್ಚುವಾಡಿ ಮಹಾ ಶಿವಯೋಗಿಗಳ ದರ್ಶನ ವನ್ನು ತೆಗೆದುಕೊಳ್ಳುತ್ತಾರೆ ಆದರೆ ಶ್ರೀಮಂತರಿಗು ಮತ್ತು ಕೆಲವು ನಿತ್ಯದರ್ಶನ ಆಗುವದಕ್ಕೆ ಫೋಟೋವ ಹೊರ್ತು ನ್ಯಮಾರ್ಗವು ಇಲ್ಲದಕಾರಣ ನಾವು ಪ್ರಸಿದ್ಧರಾದ ಶ್ರೀ ಗದ್ದು ಚಿತ್ರದುರ್ಗ ಮಹಾಸ್ವಾಮಿ ಗದಗ ತೋಂಟ ದಾರ್ಯ ಅಥಣಿ ಶಿವಯೋಗಿ ಬಾಲಲೀಲಾಸ್ವಾಮಿ ಮೊದ ಲಾದವರಲ್ಲ ಹಾನಗಲ್ಲ ಕುಮಾರ ಸ್ವಾಮಿ ಮುಂತಾದ ೮ ಮಹಾಸ್ವಾಮಿಗಳ ಫೋಟೋ ಕೂಡಿಸಿದ ಕಾರಣ ಒಂದೇ ಕಾಲದಲ್ಲಿ ಎಲ್ಲಾ ಶಿವಯೋಗಿಗಳ ದರ್ಶನ ಆಗು ವವು ೧೮×೧೨ ಸೈಜಿನ ಚಿತ್ರದ ಕ್ರಯ ೧ ಪ್ರತಿಗೆ ಆಣೆ

ಶ್ರೀ ಕಲ್ಯಾಣ ಬಸವೇಶ್ವರ — ವೀರಶೈವ ಧರ್ಮೋ ದ್ಧಾರಕರಾದ ಶ್ರೀಬಸವಣ್ಣದೇವರ ಅತ್ಯಂತ ಸುಂದರ ವಾದ ಖಾಸ ಫೋಟೋ ೧೮×೧೨ ಸೈಜಿನ ಚಿತ್ರದ ಕ್ರಯ ೧ ಪ್ರತಿಗೆ ರೂ ೧ ಸಾದಾ ೮ ಆಣೆ

ಶ್ರೀ ಅಲ್ಲಮಪ್ರಭುದೇವರ ಶೂನ್ಯಸಿಂಹಾಸನ ಇದರಲ್ಲಿ ಶ್ರೀಬಸವೇಶ್ವರರು ಶ್ರೀಚನ್ನಬಸವೇಶ್ವರ ಸಿದ್ಧರಾಮೇಶ್ವರ ಮಡಿವಾಳ ಮಾಚಿದೇವರು, ಅಕ್ಕನಾಗಮ್ಮಾ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವರಾದಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೋ ಇರುತ್ತದೆ ದೊಡ್ಡ ಸೈಜು ರೂ ೧| ಸಣ್ಣ ಸೈಜು ರೂ |||

ಶ್ರೀರೇಣುಕಾಚಾರ್ಯರ ಲಿಂಗೋದ್ಭವವು — ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣು ಕಾಚಾರ್ಯರು ಉದಯಿಸಿದ ಮಹತ್ವಪೂರ್ಣ ವಾದ ಅಪೂರ್ವ ಫೋಟೋ ಇರುತ್ತದೆ ದೊಡ್ಡ ಸೈಜು ರೂ ೧| ಸಣ್ಣ ಸೈಜು ರೂ |||

ಶ್ರೀರೇಣುಕಾಚಾರ್ಯರು ಅಗಸ್ತ್ಯ ಮಹಾ ಮುನಿಗಳಿಗೆ ಶಿವಸಿದ್ಧಾಂತ ಉಪದೇಶಿ ಸುವಿಕೆ — ಇದರಲ್ಲಿ ಅಗಸ್ತ್ಯ ಮುನಿಗಳು ತ ಮ್ಮ ಪತ್ನಿ ಲೋಪಾಮುದ್ರಾಸಹ ಉಪದೇಶ ಮಾಡಿಕೊಳ್ಳುತ್ತಾ ಇದ್ದಾರೆ ದೊಡ್ಡ ಸೈಜು ರೂ ೧| ಸಣ್ಣ ಸೈಜು ರೂ |||

ಶ್ರೀವೀರಭದ್ರನಿಂದೇ ದಕ್ಷಯಜ್ಞ ಭಂಗ ಸಂಹಾರಣವು — ಇದು ಪರಮೇಶ್ವರನು ಲೋ ಕ್ಷಾರ್ಥಕ್ಕಾಗಿ ಲಿಂಗಧಾರಣ ಮಾಡಿಕೊಂಡ ಫೋಟೋ ಇರುತ್ತದೆ ದೊಡ್ಡ ಸೈಜು ರೂ ೧| ಸಣ್ಣ ಸೈಜು ರೂ |||

ಶ್ರೀ ವೀರಶೈವ ಧರ್ಮಸಭೆಯು — ಇದರಲ್ಲಿ ಕೊಡಗು ದೇಶದ ಲಿಂಗರಾಜೇಂದ್ರ, ವೀರರಾಜೇಂದ್ರ ಪಡಿಯರ ದೇ ವಮ್ಮಾಜಿ ಮಹಾರಾಣಿ, ಮತ್ತು ಸಧ್ಯದ ಪುಂಗನೂರ ಮತ್ತು ಗೊವಾವಾಪ್ರಾಂತದ ಪಾಂಡವಾದಿ ಸ್ವಾಮಿಗಳ ಆರ ತರ ಫೋಟೋ ೯ ಇರುತ್ತವೆ ಕ್ರಯ ಪೂಲಸೈಜು ೧| ರೂ ಕ್ಯಾಬಿನೆಟ್ ೧೨ ಆಣೆ

ಶ್ರೀಮುಡ್ಡಗದ್ದುರು ಚಿತ್ರದುರ್ಗ ಮಹಾಸ್ವಾಮಿಗಳು — ಅತ್ಯಂತ ಸುಂದರವಾದ ಕೈಬಣ್ಣದ ಫೋಟೋ ಕ್ರಯ ಪ್ರತಿ ೧ಕ್ಕೆ ರೂ ೧ ಸಾದಾದು |||

ಸೂಚನೆ — ಭಾರಿ ಖರೀದಿದಾರರಿಗೆ ಚನ್ನಾಗಿ ಕಮಿಷನ್ ದೊರೆಯುವದು

ವಿಳಾಸ — ಗಂಗಪ್ಪ ಚಿರಗೆ,
ಮಾಲೀಕ, ಧಿ ಶಾರದಾ ಫೋಟೋ ಕಂಪನಿ, ಸೋಲಾಪುರ

ಈ ಪತ್ರಿಕೆಯ ಎಲ್ಲಾ ಚಂದಾದಾರರಲ್ಲಿ ವಿಜ್ಞಾಪನೆಗಳು.

ತಮ್ಮ ಗಳಿಗಲ್ಲಾ ಈಗಿದ ಎರಡು ವಾರದ ಪತ್ರಿಕೆಗಳನ್ನು ಕಳುಹಿಸಿದ್ದಾಯಿತು ದೇಶಾಭಿಮಾನಿಗಳಾದ ಕೆಲವರು ತಮ್ಮ ಮಾಸಿಕ ಚಂದಾ ರೂ ೩—೮—೦ ಗಳಲ್ಲಿ ಪಾವತಿ ಮಾಡಿದರು ಇನ್ನುಳಿದ ಕೆಲವು ಚಂದಾದಾರರನ್ನು ಕಳುಹಿಸದ ಉದಾಸೀನರಾಗಿರುವರು ತಂಗಿಸಿದ ಮುಂ ದಲ ಕಳಿಸಿ ಒಂದು ಹಿಂದಿನ ಸನ್ಮಾನಿತ ಮಾಡಿರುತ್ತೆ ಮತ್ತು ಹೀಗೆ ಇರುವದು ತ ದೇಶಾಭಿಮಾನವನ್ನು ಪ್ರೋತ್ಸಾಹವನ್ನು ತೋರಿಸುವಂತೆ ತ ಪಡಲ್ಲ ಯಾವ ಪತ್ರಿಕೆಯು ಹಿಂದಕ್ಕೆ ಬರದೆ ಇರುವುದರಿಂದ ಚಂದಾದಾರ ರುಗಳ ಮೌನಸಮ್ಮತಿಯೆಂದು ನಂಬಿ ಮುಂದೆ ಕಳುಹಿಸುತ್ತೇವೆ ಆದರೆ ಅವರ ಮೌನಸಮ್ಮತಿಯೇ ನಮ್ಮ ಬಲವಾಗಿರುತ್ತ

ಜಂಪಾಸಿಯ ಕೆಲವು ನಾಂಗಲ್ ಗಡಿಯುದ ಎಂದರ ಹಣವೇ ಮುಂಬ ಮೊದಲ ಅಂಥಾ ಹಣವನ್ನು ಹುದುಗಿಸು ವದು ದೇಶಾಭಿಮಾನಿಗಳ ಮಾಡಬೇಕಲ್ಲೇ ಉಳಿದಿರುತ್ತ ಎಂದೂ ಈ ವಾದಲೇ ಸೂಚಿಸಿರುತ್ತೆ ಹಣದ ಅಭ್ಯಾಸದಲ್ಲಿ ನಮ್ಮ ಕೈಸೇರದಹೊರತು ವಿಧಿ ಇಲ್ಲ ಆದ್ದರಿಂದ ಎಲ್ಲಾ ಚಂದಾದಾರರು ದಯವಿಟ್ಟು ತಮ್ಮ ಹಣವನ್ನು ಈ ಪ್ರತ ಕಳುಹಿಸಿದ ಕೂಡಲೆ ಕಳುಹಿಸ ಬೇಕಾಗಿ ಅಂತ ವರಾಡು [illegible] ಬರುವ ವಾರದಿಂದ ಪತ್ರಿಕೆಗಳನ್ನು ವಿ ಪಿ ಮೂಲಕ ಕಳುಹಿಸುತ್ತೇವೆ ಆದ್ದರಿಂದ ಎಲ್ಲಾ ಚಂದಾದಾರರು ಯಾವ ಭಾವನೆಯಲ್ಲಿಯೂ ಉದಾಸೀನರಾಗಿರದೆ ವಿ ಪಿ ಯನ್ನು ಸ್ವೀಕರಿಸಿ ಪತ್ರಿಕೆಯ ಕೆಲಸವನ್ನು ಚೆನ್ನಾಗಿ ನಡೆ ಸಲು ಅನುಕೂಲ ಮಾಡುತ್ತ ದೇಶಸೇವೆಗೆ ಭಾಗಿಗಳಾಗ ಬೇಕಾಗಿ ಕೋರುತ್ತೇವೆ

ಎಡಿಟರ್

" ಕೊಡಗು "

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ, ವಿಜ್ಞಾನ ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ, ಕೊಡಗಿನ ವಾರಪತ್ರಿಕೆ.

1 ಹಣವೇಗಳನ್ನು ಮೇನೇಜರ್ ಕೊಡಗು ಮಡಿಕೇರಿ ಈ ವಿಳಾಸಕ್ಕೆ ಕಳುಹಿಸಬೇಕು

2 ಲೇಖನಗಳನ್ನು ಸಂಪಾದಕರು " ಕೊಡಗು " ಮಡಿಕೇರಿ ಈ ವಿಳಾಸಕ್ಕೆ ಕಳುಹಿಸಬೇಕು

3 ಪತ್ರಿಕೆದಾರರ ಅಭಿಪ್ರಾಯಕ್ಕೆ "ಕೊಡಗು" ಪತ್ರಿಕಾಕರ್ತರು ಜವಾಬ್ದಾರರಲ್ಲ

4 ನಮ್ಮಲ್ಲಿಗೆ ಕಳುಹಿಸುವ ಪತ್ರಗಳು ಕಾಗದದ ಒಂದೇ ಕಡೆಯೂ ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿ ಯೂ ಬರೆಯಲ್ಪಟ್ಟಿರಬೇಕು ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು

5 ಪ್ರಕಟವಾಗದ ಪತ್ರಿಕೆಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಯನ್ನು ಸಂಪಾದಕರು ವಹಿಸುವದಿಲ್ಲ

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ ಹೆಚ್ಚು ಸಂಗ ತಿಗಳನ್ನು ಬರೆದು ತಿಳಿದುಕೊಳ್ಳಬಹುದು

ಮ್ಯಾನೇಜರ್,
" ಕೊಡಗು " ಲಿಮಿಟೆಡ್, ಮಡಿಕೇರಿ.

INSURE YOUR CAR
Against Accident and Fire.
Apply to—
K. R. Thirupad & Bros.,
Sub Agents for
The Autocar Fire & Accident Insurance Co., Ltd.,
LONDON.

JUST ARRIVED FRESH STOCK OF
GOOD RICH TYRES
Best and Cheapest in the World.
Apply to—
K. R. Thirupad & Bros.,
Sayaji Rao Road,
MYSORE.

ಸುನ್‌ಕಾರ ಬೇಕೇ ?

ಬೇಕಾದವರು ನಮ್ಮಲ್ಲಿ ದೊರೆಯುವ ಕೊಡೆ, ಗಡ್ಡಲಿ, ಬೂಟೀಸ್, ನಮೂನೆ ಫೌಂಟನ್‌ಪೆನ್, ಹಿಂಕ್ಸಲ್ಯಾಂಪ್, ನಮೂನೆ ಚುಟ್ಟ, ಆಫೀಸ್ ಕುರ್ಚಿ ಇತ್ಯಾದಿ ಸಾಮಾನುಗಳನ್ನು ಒಂದುಸಲ ತೆಗೆದು ನೋಡಿರಿ.

ಹೆಚ್ಚಿನ ಸಂಗತಿಗಳು ಕೆಳಗಿನ ವಿಳಾಸಕ್ಕೆ ಬರೆದು ತಿಳಿಯುವದು.

COMMERCIAL STORE,
General Merchants, Commission Agents and Furniture Suppliers,
MUNAD, COORG

R. FRAMJEE,
General Merchant, Commission Agent, Auctioneer and Gent's Outfitter
MERCARA (Coorg)

JUST RECEIVED.
Fresh Consignment Piece Goods of Various Kinds, Stationery, Hosiery, Patent Medicines etc., etc.
Goods available at the lowest market rates
Prices fixed.

ಪ್ರಕಟನೆಯ ದರಗಳು

	ಒಂದು ಕಾಲಂ	ಅರ್ಧಕಾಲಂ	ಕಾಲುಕಾಲಂ.
	ರೂ	ರೂ.	ರೂ
1 ವರ್ಷಕ್ಕೆ	50	30	18
6 ತಿಂಗಳಿಗೆ	30	18	10
3 ತಿಂಗಳಿಗೆ	18	10	6
1 ತಿಂಗಳಿಗೆ	7	4	3

ಮೇಲೆ ಕಾಣಿಸಿರುವ ದರಗಳು ಬೇಕಾದಾಗ ಬದಲಾ ಯಿಸಲ್ಪಡುವದು ಹಣವನ್ನು ಮುಂಗಡವಾಗಿಯೇ ಪೂರ್ತಾ ಪಾವತಿ ಮಾಡಬೇಕು

ಮ್ಯಾನೇಜರ್,
" ಕೊಡಗು " ಲಿಮಿಟೆಡ್, ಮಡಿಕೇರಿ.

ಬಾತ್ಮೀದಾರರುಗಳಿಗೊಂದು ವಿಜ್ಞಾಪನೆ.

ಕೆಲವು ಬಾತ್ಮೀದಾರರು ತಮ್ಮ ತಮ್ಮ ಬಾತ್ಮಿಗಳನ್ನು ಬಹಳ ದೊಡ್ಡದಾಗಿಯೂ, ಬರೆದುದನ್ನೇ ಪುನಃ ಬರೆದು ಕಷ್ಟತರದ ಶಬ್ದಗಳನ್ನು ಉಪಯೋಗಿಸಿಯೂ, ಬಹಳ ಚಿಕ್ಕ ಅಕ್ಷರಗಳಿಂದ ಸ್ಪಷ್ಟವಾಗಿ ಬರೆಯದೆಯೂ ಬರೆದು ಕಳುಹಿಸಿರುತ್ತಾರೆ. ನಡೆದ ಸಂಗತಿಗಳನ್ನು ಯಥಾರ್ಥವಾಗಿ ತಿಳಿಸುವುದು ಬಾತ್ಮೀದಾರರ ಕರ್ತವ್ಯವಾಗಿರುತ್ತೆ. ಅರ್ಥಪೂರ್ಣಕವಾಗಿ ಸಂಕ್ಷೇಪದಿಂದ ಬರೆಯುವ ಬಾತ್ಮಿಗಳಿಗೆ ಹೆಚ್ಚು ಗಮನ ಕೊಡಲಾಗುತ್ತೆ. ಪತ್ರಿಕೆಯಲ್ಲಿ ಹೆಚ್ಚು ಸ್ಥಳವನ್ನು ಆಕ್ರಮಿಸುವ ಬಾತ್ಮಿಗಳನ್ನು ಸ್ಥಳ ದೊರಕಿದರೆ ಮಾತ್ರ ಪ್ರಕಟಿಸಲಾಗುವುದು. ಆದ್ದರಿಂದ ಎಲ್ಲಾ ಬಾತ್ಮೀದಾರರು ದಯವಿಟ್ಟು ಮೇಲ್ಕಂಡ ಸಂಗತಿಗಳಿಗೆ ಗಮನಕೊಟ್ಟು ತಮ್ಮ ತಮ್ಮ ಬಾತ್ಮಿಗಳನ್ನು ಕಳುಹಿಸಬೇಕಾಗಿದೆ.

ಎಲ್ಲಾ ಬಾತ್ಮೀದಾರರು ತಾವು ಕಳುಹಿಸಿದ ಬಾತ್ಮಿಗಳು ಪ್ರಕಟವಾಗಲಿಲ್ಲವೆಂದು ನಿರುತ್ಸಾಹಪಡದೆ ಪ್ರತಿವಾರವೂ ಸ್ಥಳೀಕ ಸಮಾಚಾರಗಳನ್ನು ತಪ್ಪದೆ ಕಳುಹಿಸಿಕೊಡಬೇಕಾಗಿ ಕೋರುತ್ತೇನೆ. — ಎಡಿಟರ್.

"ಕೊಡಗು"

೧೯೩೧ ನೇ ಇಸವಿ ಜುಲೈ ತಾ|| ೮ ನೇ

ಶುಕ್ರವಾರ

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ಸಭೆ.

ಕೊಡಗು ದೇಶದ ಡಿಸ್ಟ್ರಿಕ್ಟ್ ಬೋರ್ಡಿನ ಆಡಳಿತದಲ್ಲಿರುವ ಪ್ರೈಮರಿ ಸ್ಕೂಲುಗಳ ಉಪಾಧ್ಯಾಯರುಗಳ ಮತ್ತು ಇತರ ಇಲಾಖೆಗಳ ನವ್ಕರರ ಸಂಬಳ ಹೆಚ್ಚು ಮಾಡಬೇಕೆಂಬ ವಿಷಯದಲ್ಲಿ ಹೆಚ್ಚಿನ ಹಣ ಬೇಕಾಗಬೇಕೆಂದೂ ಇಲ್ಲವಾದರೆ ಸ್ಕೂಲುಗಳ ಸಂಖ್ಯೆಯನ್ನು ಕಮ್ಮಿ ಮಾಡಬೇಕೆಂದೂ ಮತ್ತು ಚೀಫ್ ಕಮಿಷನರ್ ಸಾಹೇಬರು ಈ ವಿಷಯದಲ್ಲಿ ಇಂಡಿಯಾ ಸರಕಾರದಿಂದ ಗ್ರಾಂಟು ಕೊಡಿಸಲು ಶಿಫಾರಸು ಮಾಡಲಾಗುವದಿಲ್ಲವೆಂದೂ ಡಿ. ಬೋ. ಮೆಂಬರುಗಳಿಗೆ ನೋಟಿಸು ಬಂದಿತ್ತು.

ಈ ವಿಷಯ ತೀರ್ಮಾನ ಮಾಡಲಿಕ್ಕೆ ಈ ತಾರೀಕು 2 ರಲ್ಲು ಮಡಿಕೇರಿಯಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು ನಡೆಯಿತು. ಅಧ್ಯಕ್ಷರಾಗಿದ್ದ ಕಮಿಷನರ್ ಸಾಹೇಬರು ಡಿಸ್ಟ್ರಿಕ್ಟ್ ಬೋರ್ಡಿನ ಉತ್ಪತ್ತಿ ಕಡಿಮೆ ಇರುವದರಿಂದಲೂ ಇಂಡಿಯಾ ಸರಕಾರದಿಂದ ಗ್ರಾಂಟು ಸಿಕ್ಕಲಾರದೆಂದು ಚೀಫ್ ಕಮಿಷನರವರು ಬರೆದಿರುವದರಿಂದಲೂ ಬೋರ್ಡಿನ ಕೆಲಸ ತೃಪ್ತಿಕರವಾಗಿ ನಡೆಯಬೇಕಾದರೆ ದೈತರು ಹೆಚ್ಚು ನಸ್ಸು ತೆರಬೇಕೆಂದು ಹೇಳಿದರು. ಪ್ರಜಾಪಕ್ಷದವರಾದ ರಾಯಬಹದ್ದೂರ್ ಕೋದಂಡ ಅಪ್ಪಯ್ಯನವರು ಹೇಳಿದ್ದೇನೆಂದರೆ — ಕಳೆದ ಜಮಾಬಂದಿ ಸಮಯದಲ್ಲಿ ನಸ್ಸು ಹೆಚ್ಚಿಸುವ ವಿಷಯದಲ್ಲು ದೇಶದ ಎಲ್ಲಾ ಕಡೆ ಜನರು ಕೂಡದೆಂದು ಕಂಠೋಕ್ತವಾಗಿ ಕಮಿಷನರಿಗೂ ತಾಲ್ಲೋಕು ಸುಬೇದಾರರುಗಳಿಗೂ ಬರೆದು ತಿಳಿಸಿರುತ್ತಾರೆ. ಈ ಮೀಟಿಂಗಿನ ನೋಟಿಸು ಪ್ರಕಾರ ಡಿ. ಬೋ. ಮೆಂಬರುಗಳು ಯಾವಕಡೆಯ ಅಭಿಪ್ರಾಯವನ್ನು ತಿಳಿದಲ್ಲೂ ಜನರು ಇದಕ್ಕೆ ಸಮ್ಮತಿಸುವದಿಲ್ಲವೆಂದು ಸ್ಪಷ್ಟವಾಗಿ ಕಂಡು ಬಂದಿದೆ. ಜೂನ್ 30 ರಲ್ಲು ಮಡಿಕೇರಿಯಲ್ಲಿ ನಡೆದ ದೇಶಸಭೆಯಲ್ಲು ಸಹ ನಸ್ಸು ಹೆಚ್ಚಿಸಕೂಡದೆಂದು ತೀರ್ಮಾನಿಸಿರುತ್ತಾರೆ. ಜಮೀನ್ದಾರರ ಸಂಘವು ಇದೇ ಮೇರೆ ಅಭಿಪ್ರಾಯವನ್ನು ಕಮಿಷನರವರಿಗೆ ತಿಳಿಸಿರಬಹುದು. ಬೋರ್ಡಿನಲ್ಲಿ ಹಣ ಕಮ್ಮಿ ಇದೆಯೆಂದು ಎಲ್ಲರೂ ತಿಳಿದಿದ್ದರೂ ನಸ್ಸು ಉತ್ಪತ್ತಿಯನ್ನು ಹೆಚ್ಚಿಸಲಿಕ್ಕೆ ನಸ್ಸು ಹೆಚ್ಚಿಸುವದರ ಬದಲು ಇಂಡಿಯಾ ಸರಕಾರಕ್ಕೆ ನಮ್ಮ ದೇಶದಿಂದ ಹೋಗುವ ಹೆಚ್ಚಿನ ಕಳೆದವರ್ಷ ಐದು ಲಕ್ಷದಮೇಲೆ ಹೋಗಿದೆ. ಆದಾಯದಿಂದ ಅರ್ಧಲಕ್ಷ ರೂಪಾಯಿಗಳನ್ನು ಬೋರ್ಡಿಗೆ ಗ್ರಾಂಟುಮಾಡಲಿಕ್ಕೆ ಯಾವ ಅಡ್ಡಂಕರವೂ ಕಾಣುವದಿಲ್ಲ. ಈಗ ಎಷ್ಟೋ ವರ್ಷಕ್ಕೆ ಮೊದಲು ಡಿ. ಬೋರ್ಡಿನವರು ವಿದ್ಯಾ ಇಲಾಖೆಗಾಗಿ ಸುಮಾರು ಐದುಸಾವಿರ ರೂಪಾಯಿ ಖರ್ಚುಮಾಡುತ್ತಿದ್ದಾಗ ಇಂಡಿಯಾ ಸರಕಾರದ ಗ್ರಾಂಟು ಹತ್ತು ಸಾವಿರಕ್ಕೆ ಮೇಲಿತ್ತು. ಈಚೆಗೆ ಬೋರ್ಡು ಸುಮಾರು ಇಪ್ಪತ್ತೊಂದು ಸಾವಿರ ರೂಪಾಯಿ ಖರ್ಚು ಮಾಡುವಾಗ್ಗೆ ಗ್ರಾಂಟು ಒಕ್ಕೇ ಹನ್ನೆರಡು ಸಾವಿರ ರೂಪಾಯಿ. ಬೋರ್ಡಿನ ಖರ್ಚಿಗೆ ಅನುಸಾರವಾಗಿ ಗ್ರಾಂಟು ಸಿಕ್ಕಬೇಕಾದದ್ದು ನ್ಯಾಯವಲ್ಲವೇ? ಲೋಕವೆಲ್ಲೆಲ್ಲಾ ಮಾಧ್ಯ ವಿದ್ಯಾಭ್ಯಾಸವನ್ನು ಬೆಳಗಿ ತರುತ್ತಿರುವಲ್ಲು ಇಲ್ಲಿ ಹಣವಿಲ್ಲವೆಂದು ಶಾಲೆಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕೆಂಬುದು ಅಸಮಾಧಾನಕರ. ಕೊಡಗು ಸರಕಾರದ ವಾರ್ಷಿಕ ರಿಪೋರ್ಟಿನಲ್ಲು ಬೋರ್ಡಿಗೆ ಇಂಡಿಯಾ ಗ್ರಾಂಟು ಇಲ್ಲದೆ ಕಾರ್ಯ ಮುಂದರಿಸುವದು ಅಸಾಧ್ಯವೆಂದೂ, ಪಾಠಶಾಲೆಗಳು ಹೆಚ್ಚಿದಹಾಗೆಲ್ಲಾ ವಿದ್ಯಾರ್ಥಿ ವೃದ್ಧಿಗೆ ಹೆಚ್ಚಿನ

ಗ್ರಾಂಟು ಪಡಕೊಳ್ಳಬಹುದೆಂದು ಕಾಣಿಸಿರುತ್ತದೆ. ಕಳೆದ ವರ್ಷದ ಪಾರೆಸ್ಟು ಆದಾಯವು ಹಿಂದಿನ ವರ್ಷದಕ್ಕಿಂತ ಎರಡೂವರೆ ಲಕ್ಷದಷ್ಟು ಹೆಚ್ಚಿರುವಾಗ್ಗೆ ಇಂಡಿಯಾ ಸರಕಾರವು ಗ್ರಾಂಟು ಕೊಡಲು ಏತಕ್ಕೆ ಹಿಂಜರಿಯಬೇಕು? ಬಂದುಕಾಲಸ ತೆರಿಗೆಯನ್ನೂ ಕೂಡ ಹೆಚ್ಚಾಗಿ ಕೊಡುತಾರದ ಒಡಕ್ಕೈತ ಮೇಲೆ ಈಗಿರುವ ರೂಪಾಯಿಗೆ ಒಂದಾಣೆಗಿಂತ ಹೆಚ್ಚು ನಸ್ಸು ಹೊರಿಸಬೇಕೆಂದು ಆಲೋಚಿಸುತ್ತಿರುವದು ನ್ಯಾಯವಾಗಿ ತೋರುವದಿಲ್ಲ.

ಹೀಗೆ ಮೆ|| ಅಪ್ಪಯ್ಯನವರು ತೋರಿಸಿದ ನ್ಯಾಯವಾದ ಕಾರಣಗಳಿಗೆ ಸರಿಯಾದ ಪ್ರತ್ಯುತ್ತರವು ಯಾರಿಂದಲೂ ಬರಲಿಲ್ಲ.

ಇಷ್ಟರಲ್ಲಿ ಡಿ. ಮ. ಸಾಹೇಬರಾದ ರಾಯಸಾಹೇಬ ಮ|| ಕೇಟೋಳಿರ ಚಂಗಪ್ಪನವರು ಈಗಿರುವ ಒಂದಾಣೆ ನಸ್ಸನ್ನು ಒಂದೂವರೆ ಆಣೆ ಮಾಡಬೇಕೆಂದು ಠರಾವು ತಂದರು. ಸರಕಾರದ ಪಕ್ಷದ ಮೆಂಬರುಗಳು ಹೆಚ್ಚಿರುವದರಿಂದ ಈ ಠರಾವನ್ನು ಓಟಿಗೆ ಬಿಡುವದು ಪ್ರಜಾಪಕ್ಷದ ಮೆಂಬರುಗಳಿಗೆ ಸಮ್ಮತವಿಲ್ಲವೆಂದು ರಾ|| ಬಾ|| ಅಪ್ಪಯ್ಯನವರು ಹೇಳಿದ್ದಕ್ಕೆ ಅಧ್ಯಕ್ಷರು ಪ್ರಜಾಪಕ್ಷದ ಠರಾವನ್ನು ತರುವದಕ್ಕೆ ಅಡ್ಡಿ ಇಲ್ಲವೆಂದು ಹೇಳಿದರು. ಸರಕಾರಿ ಠರಾವನ್ನು ನಾಮಿನೇಟೆಡ್ ಸರಕಾರಿ ಮೆಂಬರುಗಳೂ, ಪ್ಲಾಂಟರ ಮೆಂಬರಾದ ಮೆ|| ಬಾಲ್ ಸಾಹೇಬರೂ ಸೇರಿ 9 ಜನರು ಅನುಮೋದಿಸಿದರು.

ಈ ಠರಾವಿಗೆ ಸರಕಾರಿ ಮೆಂಬರುಗಳು ಸಹ ತಮ್ಮ ಮನಸ್ಸಾಕ್ಷಿಗೆ ವಿರೋಧವಾಗಿ ಓಟುಮಾಡಬೇಕೆಂಬ ಒತ್ತಾಯವಿಲ್ಲವೆಂದು ಅಧ್ಯಕ್ಷರು ಅಭಯವನ್ನು ಕೊಟ್ಟಿದ್ದರೂ ಸಹ ಅವರೆಲ್ಲರೂ ಅನುಮೋದಿಸಿದ್ದು ತುಂಬಾ ಶೋಚನೀಯಕರ. ಇವರ ಪೈಕಿ ಬಡರೈತರ ಕಷ್ಟವನ್ನು ತಿಳಿದವರ್ಯಾರೂ ಇರಲಿಲ್ಲವೇ?

ಪ್ರಜಾ ಪ್ರತಿನಿಧಿಗಳ ಠರಾವು ಈಗಿರುವ ನಸ್ಸನ್ನು ಹೆಚ್ಚಿಸಕೂಡದೆಂದೂ, ಇಂಡಿಯಾ ಸರಕಾರದಿಂದ ವರ್ಷಂಪ್ರತಿ ಹತ್ತು ಸಾವಿರ ರೂಪಾಯಿ ಗ್ರಾಂಟು ಕೊಡಿಸಬೇಕೆಂದಾಗಿತ್ತು. ಮೆ|| ಕೋದಂಡ ಅಪ್ಪಯ್ಯನವರು ಸೂಚಿಸಿದಂತೆ ಈ ಠರಾವನ್ನು ಮೆ|| ಕೋಟೆರ ಚೆನ್ನಪ್ಪನವರು ಅನುಮೋದಿಸಿದರು. ಇದಕ್ಕೆ ಪ್ರಜಾ ಪ್ರತಿನಿಧಿಗಳಾದ ಎನ್. ಕೆ. ಇಂಡಿಯನ್ ಮೆಂಬರುಗಳಲ್ಲದೆ ಬೇರೆ ಯಾರೂ ಸಮ್ಮತಿಸಲಿಲ್ಲ. 1916 ನೇ ಇಸವಿಯ ಸ್ಥಳೀಕ ಸ್ವರಾಜ್ಯದ ಇಂಡಿಯಾ ಸರಕಾರದ ಠರಾವನ್ನು ಇತರ ಪ್ರಾಂತ್ಯಗಳಲ್ಲಿ ಜಾರಿಗೆ ತಂದಿರುವಂತೆ ಈ ದೇಶಕ್ಕೂ ಜಾರಿಗೆ ತಂದಿದ್ದ ಪಕ್ಷದಲ್ಲು ಪ್ರಜಾ ಪ್ರತಿನಿಧಿಗಳ ಸ್ಥಿತಿಯು ಹೀಗಾಗುತಿತ್ತೆ? ಎದುರಿನ ಪಕ್ಷಗಳ ಮೆಜಾರಿಟಿಯಾದುದರಿಂದ ಜನರ ಮನಸ್ಸಿನಂತೆ ನಡೆದುಕೊಳ್ಳಬೇಕಾಗಿದ್ದರೂ ಕೂಡ ಅವರು ಸಮ್ಮತಿಸಲಿಲ್ಲ.

ಸರಕಾರದ ಠರಾವು ಪ್ರಜೆಗಳಿಗೆ ಕಷ್ಟವನ್ನು ಹೆಚ್ಚಿಸುತ್ತದೆ. ಡಿ. ಬೋರ್ಡಿನ ಉತ್ಪತ್ತಿಯನ್ನು ಹೆಚ್ಚಿಸಬೇಕಾದರೆ ಈ ದಸ್ತು ಇಲಾಖೆಗೆ ಒಳಪಟ್ಟ ಏರಿಯನ್ನು ವ್ಯವಸಾಯಕ್ಕೆ ಕೊಡಬಾರದೆ? ನಮ್ಮ ದೇಶದಲ್ಲಿ ಅಬ್ಕಾರಿ ಇಲಾಖೆಯ ಆದಾಯವು ವರ್ಷ ವರ್ಷ ಹೆಚ್ಚುತ್ತಿದೆ. ದೇಶದ ಪ್ರತಿಯೊಬ್ಬನು 2 ರೂ. ಗಿಂತ ಹೆಚ್ಚಾಗಿ ಈ ಇಲಾಖೆಗೆ ತೆರುತ್ತಿರುವದು ಎಲ್ಲರಿಗೂ ತಿಳಿಯದ ಸಂಗತಿಯಲ್ಲ. ಇದರಿಂದಲಾದರೂ ಜನರ ಜ್ಞಾನಾಭಿವೃದ್ಧಿಗೆ ಸರಕಾರವು ಗ್ರಾಂಟು ಕೊಡಬಾರದೆ? ಮತ್ತು ದೇಶದ ಸುಮಾರು 12 ಲಕ್ಷ ರೂಪಾಯಿ ವರಮಾನದ ಪೈಕಿ ಸಾಧಾರಣ ಅರ್ಧದಷ್ಟು ಹಣವು ಇಂಡಿಯಾ ಸರಕಾರಕ್ಕೆ ಹೋಗುತ್ತಿದ್ದರೂ ನಮಗೆ ಗ್ರಾಂಟು ಸಿಕ್ಕಲಾರದಂತೆ! ಹೀಗೆ ಪ್ರಜೆಗಳ ಅಭಿಪ್ರಾಯಕ್ಕೆ ವಿರೋಧವಾಗಿ ಸರಕಾರವು ನಸ್ಸು ಹೆಚ್ಚಿಸಿದ ಪಕ್ಷದಲ್ಲಿ ಇಷ್ಟುವರ್ಷದಿಂದ ನೆಲೆಗೊಂಡಿರುವ ರಾಜಪ್ರಜಾ ಮೈತ್ರಿಯು ಕೆಟ್ಟುಹೋಗುವದೆಂದು ಮೆ|| ಪಾಲಂಗಡ ಕುಶಾಲಪ್ಪನವರು ಹೇಳಿದರು.

ಒಂದು ಇಲಾಖೆಯ ಉತ್ಪತ್ತಿಯನ್ನು ಇನ್ನೊಂದು ಇಲಾಖೆಯ ಖರ್ಚಿಗೆ ಕೊಡಲಾಗುವದಿಲ್ಲವೆಂದೂ ತಿಳಿಯಲಿಕ್ಕೆ ನಾವು ಆಶ್ಚರ್ಯಪಡುತ್ತೇವೆ. ಎಲ್ಲ ಇಲಾಖೆಗಳು ಒಂದೇ ಸರಕಾರಕ್ಕೆ ಒಳಪಟ್ಟವುಗಳಲ್ಲವೇ? ಆದರಿಂದಲ್ಲವೇ ಇಂಡಿಯಾ ಸರಕಾರವು ಬೇರೆಬೇರೆ ಕಡೆ ವಿದ್ಯಾ ಇಲಾಖೆಗೆ ಗ್ರಾಂಟು ಕೊಡುತ್ತಿರುವದು. ಸ್ಥಳೀಯ ಸ್ವರಾಜ್ಯಕ್ಕೆ ದೇಶೀಯರನ್ನು ತಯಾರಿಸುವ ಬಗ್ಗೆ ಇಂಥಾ ಬೋರ್ಡುಗಳನ್ನು ಸರಕಾರವು ಸ್ಥಾಪಿಸಿದಲ್ಲಿ ನಮಗೆ ಜವಾಬ್ದಾರಿಕೆಯನ್ನು ವಹಿಸಿಕೊಡುವುದೂ ಹಣವಿಲ್ಲದಾಗ್ಗೆ ಇಂಡಿಯಾ ಸರಕಾರದಿಂದ ಗ್ರಾಂಟು ಕೊಡಿಸುವುದಕ್ಕೆ ಆಗುವದಿಲ್ಲವೆಂದು ಕೊಡಗು ಸರಕಾರವು ಹೇಳುವದು ನ್ಯಾಯವಾಗಿ ಕಾಣುವದಿಲ್ಲ. ನಮ್ಮ ದೇಶದ ಹೊರಗೆ ಹೋಗತಕ್ಕ ಆದಾಯದಿಂದ ನಮ್ಮ ದೇಶಾಭಿವೃದ್ಧಿಗೆ ತಕ್ಕಷ್ಟು ವಿನಿಯೋಗಿಸಿ, ಮಿಗಿಲಾದದ್ದನ್ನು ಇಂಡಿಯಾ ಸರಕಾರಕ್ಕೆ ಕಳುಹಿಸಿಕೊಡುವದಲ್ಲವೇ ರಾಜಧರ್ಮ ಎಂದು ಮೆ|| ಪಂದ್ಯಂಡ ಬೆಳ್ಳಪ್ಪನವರು ಹೇಳಿದರು.

ಜಮೀನು ಕಂದಾಯದಮೇಲೆ ನಸ್ಸು ಹಾಕಿರುವದು ಸಾಕಾಗದೆ ಪಾರೆಸ್ಟು ಮತ್ತು ಅಬ್ಕಾರಿ ಇಲಾಖೆಗಳ ಉತ್ಪತ್ತಿಯಮೇಲೆ ನಸ್ಸು ಹಾಕಬಾರದೆ? ಈ ಇಲಾಖೆಗಳೂ ಡಿ. ಬೋರ್ಡಿನಿಂದ ಆಸ್ಪತ್ರೆಗಳ ಮತ್ತು ರಸ್ತೆ ನೀರುಗಳ ಮೂಲಕ ಸಹಾಯಗಳನ್ನು ಪಡೆಯುತ್ತಿರುವದಿಲ್ಲವೆ? ಎಂದು ಮೆ|| ಸಿದ್ದ ಸುಬ್ರಹ್ಮಣ್ಯಯ್ಯನವರು ಹೇಳಿದ್ದಕ್ಕೆ ಅಧ್ಯಕ್ಷರು ಸರಕಾರದ ಹಣವನ್ನೇ ನೀವು ನಸ್ಸುರೂಪದಲ್ಲಿ ಹಿಂದಕ್ಕೆ ಕೇಳುವದು ಸರಿಯಲ್ಲವೆಂದು ಹೇಳಿದರು.

ಪ್ರಜಾ ಪಕ್ಷದವರು ಅನೇಕಾನೇಕ ಕಾರಣಗಳನ್ನು ತೋರಿಸಿದರೂ ಸರಕಾರ ಪಕ್ಷದವರು ಮತ್ತು ಮೆ|| ಬಾಲ್ ಸಾಹೇಬರು ಯಾವದಕ್ಕೂ ಸರಿಯಾದ ಪ್ರತ್ಯುತ್ತರದಿಂದ ಸಮಾಧಾನ ಕೊಡದೆ ಸರಕಾರದ ಠರಾವನ್ನು ಹ್ಯಾಗೆ ಅಂಗೀಕರಿಸಿದರು? ಡಿ. ಬೋರ್ಡಿನ ಜವಾಬ್ದಾರಿಕೆಯನ್ನು ಮೊದಲೇ ಪ್ರಜಾ ಪಕ್ಷದವರಿಗೆ ವಹಿಸಿಕೊಟ್ಟಿದ್ದ ಪಕ್ಷದಲ್ಲಿ ಯಾವತರದ ಒದಗಾವಣೆಗೂ ಸರಕಾರವೂ ಗುರಿಯಾಗುತ್ತಿರಲಿಲ್ಲ. ಇತರ ಪ್ರಾಂತ್ಯಗಳಲ್ಲಿ ಅನೇಕವಿಧದ ತಿದ್ದುಪಾಟುಗಳಿಂದ ಜನರು ಸ್ವರಾಜ್ಯವನ್ನು ಪಡೆಯುವ ದಾರಿಯಲ್ಲಿರುವಾಗ ಈ ದೇಶೀಯರಿಗೆ ಸ್ಥಳೀಯ ಸ್ವರಾಜ್ಯದಸ್ವತಂತ್ರ್ಯ ಸಹ ಸಿಕ್ಕಲಿಲ್ಲವೆಂದು ಅತೃಪ್ತರಾಗಿರುವ ವೇಳೆಯಲ್ಲಿ ಸರಕಾರದವರು ನಸ್ಸು ಹೆಚ್ಚಿಸಲಿಕ್ಕೆ ಕೈಹಚ್ಚಿರುವದು ನಮಗೆ ತುಂಬಾ ವ್ಯಸನಕರವಾಗಿದೆ.

ಮೆ|| ಬಾಲ್ ಸಾಹೇಬರವರು ನಸ್ಸು ಹೆಚ್ಚಿಸದೆ ಇಂಡಿಯಾ ಸರಕಾರದಿಂದ ಗ್ರಾಂಟು ಪಡೆಯಬೇಕೆಂಬ ಠರಾವನ್ನು ಸೂಚಿಸಲು ಡಿ. ಕನ್ಸರ್ವೇಟರಾದ ಮೆ|| ಬೆನೆಟ್ ಸಾಹೇಬರವರು ಅನುಮೋದಿಸಿದರು. ಎಂದಿನಂತೆ ಇದು ಸರಕಾರ ಠರಾವಾಗಿಯೇ ಮಂಜೂರಾಯಿತು. ಕೋದಂಡ ಮೆ|| ಕೆ. ಅಪ್ಪಯ್ಯನವರು ನಸ್ಸು ಹೆಚ್ಚಿಸುವದಕ್ಕೆ ಮೊದಲೇ ಇಂಡಿಯಾ ಸರಕಾರದ ಗ್ರಾಂಟಿಗೆ ಸ್ಥಳೀಯ ಸರಕಾರವು ಒತ್ತಾಯಿಸಬೇಕೆಂದು ಸೂಚಿಸಿದ ಠರಾವನ್ನು ಮೆ|| ಪಿ. ಬೆಳ್ಳಪ್ಪನವರು ಅನುಮೋದಿಸಲು ಪ್ರಜಾ ಪಕ್ಷದ ಐದು ಇಂಡಿಯನ್ ಮೆಂಬರುಗಳು ಇದಕ್ಕೆ ಸಮ್ಮತಿಸಿದರು.

ಇಂಥಾ ತೀರ್ಮಾನವು ದೇಶದಲ್ಲಿ ಹೆಚ್ಚಿನ ಚಳವಳಿಗೆ ಆಸ್ಪದವನ್ನುಂಟುಮಾಡುವದರಲ್ಲಿ ಸಂದೇಹವಿಲ್ಲ. ಜನರಲ್ಲದೆ ಸಿಟ್ರಿಯಿಂದೆಷ್ಟಕ್ಕು ಪೋಲಿಸ ಏರ್ಪಾಡುಗಳನ್ನು ಗ್ರಹಿಸಿ ತಮ್ಮ ಮುಂದಿನ ಕರ್ತವ್ಯವೇನೆಂಬುದನ್ನು ತಿಳಿದುಕೊಳ್ಳಲು ತಕ್ಕ ಸಮಯವು ಒದಗಿದೆ.

ತಾರೀಕು 26-6-1931 ರಲ್ಲು ಸಿಮ್ಲಾದಲ್ಲಿ ಮುಸಲ್ಮಾನರ ಪೈಕಿ ಅಹಮದೀಯ ಪಂಗಡದವರು ವೈಸ್‌ರಾಯ್ ಪ್ರಭುಗಳಿಗೆ ಒಂದು ವಂದನಾಪತ್ರ (Address) ವನ್ನು ಒಪ್ಪಿಸಿದಾಗ ವೈಸ್‌ರಾಯ ದೊರೆಗಳು ಹೇಳಿದ ಜವಾಬಿನಲ್ಲಿ ಇಂಡಿಯಾದೇಶದ ಮುಸಲ್ಮಾನರ ಮತ ಸಂಬಂಧವಾದ ಅಭಿಪ್ರಾಯಗಳಿಗೆ ಅನುಕೂಲವಾಗುವಂತೆ ತುರ್ಕಿದೇಶದವರು ಮಾಡಿಕೊಂಡಿದ್ದ ಕರಾರುಗಳನ್ನು ಬದಲಾಯಿಸಲಿಕ್ಕೆ ಇಂಡಿಯಾ ಸರಕಾರದವರೂ ಇಂಗ್ಲೆಂಡ್ ದೇಶದ ಸರಕಾರವೂ ಬಹಳ ಪ್ರಯತ್ನಿಸಿದೆಯೆಂತಲೂ ಈ ವಿಷಯ ಇಂಡಿಯಾದೇಶದಲ್ಲಿ ಚನ್ನಾಗಿ ತಿಳಿದಿಲ್ಲವೆಂತಲೂ ಅಂದರು. ತುರ್ಕಿದೇಶದವರಿಗೂ ಗ್ರೀಕರಿಗೂ ನಡೆದ ಯುದ್ಧದಲ್ಲಿ ಅಂಗೋರಾದವರು ಗ್ರೀಕರು ಮಾಡುತ್ತಿರುವ ಯುದ್ಧದಲ್ಲಿ ಬ್ರಿಟಿಷ್ ಸರಕಾರವು ಏನೂ ಸಹಾಯ ಕೊಡುತ್ತಿರುವದಿಲ್ಲವಾಗಿಯೂ ಬ್ರಿಟಿಷ್ ಮತ್ತು ಇತರ ಮಿತ್ರಮಂಡಲಿಯವರ ಪ್ರಯತ್ನದಿಂದ ಅಂಗೋರಾದವರಿಗೂ ಗ್ರೀಕರಿಗೂ ಇಂಡಿಯಾದ ಮುಸಲ್ಮಾನರಿಗೆ ತೃಪ್ತಿಯಾಗುವಂಥ ರಾಜಿಯಾಗಬಹುದೆಂತ ಅಪೇಕ್ಷಿಸುತ್ತಿರುವದಾಗಿಯೂ ಹೇಳಿದರು.

ಸಾಮ್ರಾಜ್ಯದ ಸಭೆ (Colony) ಗಳಲ್ಲಿ ಇಂಡಿಯಾದೇಶದವರ ಸ್ಥಿತಿಯನ್ನು ಉತ್ತಮಗೊಳಿಸಲು ಇಂಡಿಯಾ ಸರಕಾರದವರು ಬಹಳ ಪ್ರಯತ್ನ ಮಾಡುತ್ತಿರುವದಾಗಿಯೂ ಸಾಮ್ರಾಜ್ಯದಲ್ಲಿ ಇಂಡಿಯಾದೇಶವು ಇರಬೇಕಾದ ಸ್ಥಾನಮಾನ ಈ ವಿಷಯದ ಸಂಗಡ ಕೂಡಿರುವದರಿಂದ ಈ ಮುಂದೆ ನಡೆಯುವ ಸಾಮ್ರಾಜ್ಯ ಪ್ರತಿನಿಧಿಗಳ ಸಭೆಯಲ್ಲಿ ಚರ್ಚಿಸಲ್ಪಡಬಹುದೆಂದು ಅಪೇಕ್ಷಿಸುತ್ತೇನೆ ಎಂತ ಹೇಳಿದರು.

ಇಂಡಿಯಾ ದೇಶದಲ್ಲಿ ಇರುವ ಜಾತಿಗಳ ವಿಷಯದಲ್ಲಿ ತಾನು ಈ ದೇಶಕ್ಕೆ ಬಂದಲಾಗಾಯ್ತು ಯೋಚಿಸುತ್ತಿರುವದಾಗಿಯೂ ತಾನೂ ಮತ್ತು ತನ್ನ ಮಂತ್ರಿಗಳೂ ಸಹ ಪ್ರಜೆಗಳೂ ಸರಕಾರವೂ ಅನ್ಯೋನ್ಯ ತಿಳುವಳಿಕೆಯಿಂದಲೂ, ಅನ್ಯೋನ್ಯ ಗೌರವದಿಂದಲೂ ಅನ್ಯೋನ್ಯ ಪ್ರೀತಿಯಿಂದಲೂ ಮತ್ತು ಬ್ರಿಟಿಷರೂ ಇಂಡಿಯಾದವರೂ ಬುದ್ಧಿವಂತಿಕೆಯಲ್ಲಿಯೂ ಎಲ್ಲಾ ಹಕ್ಕುಗಳಲ್ಲಿಯೂ ಸಮಾನರು ಎಂಬ ಭಾವನೆಯಿಂದಲೂ ಇಂಡಿಯಾದಲ್ಲಿ ಶಾಂತತೆ ಉಂಟಾಗುವಂತೆ ಪ್ರಯತ್ನಿಸುತ್ತಿರುವದಾಗಿಯೂ ಹೇಳಿದರು. ಬ್ರಿಟಿಷ್ ಅಥವಾ ಇಂಡಿಯನ್ ಎಂಬ ಭೇದವಿಲ್ಲದೆಯೂ, ಸರಕಾರ ಗೌರವವನ್ನು ಉಳಿಸಬೇಕೆಂಬ ಅಭಿಪ್ರಾಯದಿಂದ ನ್ಯಾಯವನ್ನು ಸ್ಥಾಪಿಸಿ ಮಾಡಬೇಕಾಗಿದೆಯೆಂತಲೂ ಸೂಚಿಸಿ ಶಾಂತಿಯುಕ್ತರಾದ ದೈತರನ್ನೂ ಮತ್ತು ಶಾಂತತೆಯನ್ನು ಸಿಕ್ಷಿಸುವವರನ್ನು ನಿಂದೆಯಿಂದಲೂ ಸಮಾಧಾನದಿಂದಲೂ ಕಾಪಾಡುತ್ತಾ ಸರಕಾರಕ್ಕೂ ದೈತರಿಗೂ ಸ್ನೇಹ ಬೆಳೆಯುವಂತೆ ಪ್ರಯತ್ನಿಸುತ್ತಿರುವದಾಗಿ ಹೇಳಿದರು.

ಬ್ರಿಟಿಷ್ ಉದ್ಯೋಗಸ್ತರು ಇಂಡಿಯಾದೇಶದವರನ್ನು ಕೀಳುಜನರೆಂದು ತಿಳಿಯಬಾರದೆಂದೂ, ಅವರು ಮಾಡಬಹುದಾದ ತಪ್ಪುಗಳನ್ನು ಒಪ್ಪಿಕೊಳ್ಳಬೇಕೆಂತಲೂ ವಂದನಾಪತ್ರದಲ್ಲಿ ಇದ್ದದ್ದಕ್ಕೆ ವೈಸ್‌ರಾಯರು ಹೇಳಿದ್ದೇನೆಂದರೆ ಬ್ರಿಟಿಷ್ ಉದ್ಯೋಗಸ್ತರು ಆಗಿಂದಾಗ್ಗೆ ತಪ್ಪು ಮಾಡಬಹುದಾ

ದರೂ ಬೇಗಂಟಲೇ ಮಾಡುವದಿಲ್ಲ 'ಇಂಡಿಯಾ ದೇಶದವರಿಗಿಂತ ದಿಳುವುವನರಾದ ಇಂಗ್ಲೀಷರು ಹೆಚ್ಚು ಶಕ್ತರಂತ' ರೆಂದು ಅವರು ತಿಳಿದುಕೊಂಡಿಲ್ಲ. ಬ್ರಿಟಿಷ್ ಉದ್ಯೋಗಸ್ಥರು ತಮ್ಮ ತಮ್ಮ ಜಿಲ್ಲೆಗಳಲ್ಲಿ ಬುದ್ಧಿವಂತಿಕೆಯಿಂದಲೂ ನ್ಯಾಯವಾಗಿಯೂ ಸರಕಾರದ ಕೆಲಸಗಳನ್ನು ನಡಿಸಲು ಪ್ರಯತ್ನಿಸುತ್ತಾರೆ. "ಪ್ರಜೆಗಳ ಪ್ರತಿನಿಧಿಗಳ ಮೂಲಕ ನಡೆಯುವ ಸ್ವತಂತ್ರದ ಸರಕಾರವನ್ನು, ಸಾಮ್ರಾಜ್ಯದೊಳಗೆ ಬೇರೆ ಭಾಗಗಳೊಂದಿಗೆ ಸಮಾನ ಹಕ್ಕುಗಳನ್ನು ಪಡೆಯುವ ಸ್ಥಿತಿಯನ್ನೂ ಹೊಂದಲು ಇಂಡಿಯಾದೇಶವು ಹೊರಟಿದೆ. ಅಂಥಾ ಕಾರ್ಯದಲ್ಲಿ ಸಹಾಯಕನಾಗಲು ಚಕ್ರವರ್ತಿಯವರು ನನ್ನನ್ನು ನೇಮಿಸಿದ್ದಕ್ಕೆ ನನಗೆ ಸಂತೋಷವಿದೆ. ಆದರೆ ದೇಶದಲ್ಲಿ ಇರುವ ಎಲ್ಲಾ ಜನರೂ ನನ್ನ ಈ ಕೆಲಸಕ್ಕೆ ಸಹಾಯಕರಾಗಲೇ ಬೇಕು" ಎಂತ ಹೇಳಿ ತಮ್ಮ ಉತ್ತರವನ್ನು ಪೂರೈಸಿದರು

ಮಹಾತ್ಮ ಗಾಂಧಿಯವರು ಬೊಂಬಾಯಿ ಫಾರ್ಸಿಜನರಿಗೆ ಕೊಟ್ಟ ಭಾಷಣದ ಮತ್ತು ಆಸಭೆಯಲ್ಲಿ ನಡೆದ ಪ್ರಶ್ನೋತ್ತರಗಳ ಮುಖ್ಯ ಸಾರಾಂಶ:—ಅಸಹಕಾರ ಚಳವಳಿಯು ಧರ್ಮ ಸಂಬಂಧವಾದದ್ದು ಎಲ್ಲಾ ಮತಗಳಲ್ಲೂ ಕೆಟ್ಟ ಗುಣಗಳಿಂದ ದೂರವಾಗಿರಬೇಕೆಂತ ಹೇಳಿದೆ. ಡೈಯರ್ ಎಂಬವನು ಒಬ್ಬನೇ ಇದ್ದರೆ ಬೇಸರವಿಲ್ಲ. ಡೈಯರನ ಮತವೇ ಸರಕಾರೀ ಮತವಾದರೆ ಅಂಥಾ ಸರಕಾರ ಬೇಡ. ದೇಶೀಯರು ಬ್ರಿಟಿಷ್ ಸರಕಾರದಿಂದ ಪ್ರಯೋಜನ ಹೊಂದಿದ್ದಾರೆ ಅನೇಕರು ಕೋಟ್ಯಾಧೀಶ್ವರರಾಗಿದ್ದಾರೆ. ಆದರೆ ಹೆಚ್ಚಿನ ಸಂಖ್ಯೆಯಾದ ಸಾಧಾರಣ ರೈತರಿಗೆ ಪ್ರಯೋಜನವಿಲ್ಲ. ದಾದಾಭಾಯಿ ನವರೋಜಿ ಗೋಖಲೆಯವರು ಸಹ ಈ ಸಂಗತಿಯನ್ನು ಒಪ್ಪುತ್ತಾರೆ. ಇಂಡಿಯಾದೇಶವು ಈಗಿನಂಥ ಹೀನಸ್ಥಿತಿಯಲ್ಲಿ ಎಂದೂ ಇರಲಿಲ್ಲ. ಮೊಗಲಾಯಿಯರ ಸರಕಾರದಲ್ಲಿ ದಬ್ಬಾಳಿಕೆ (Repression) ಮತ್ತು ಜುಲುಂ ಇರಲಿಲ್ಲವೆಂತಲ್ಲ. ಈಗಿನ ಸ್ಥಿತಿಯಂತೆ ಎಂದೂ ಇರಲಿಲ್ಲ ಈಗಿನ ರಾಜಕೀಯ ಮಾರ್ಪಾಟುಗಳಿಂದ ಏನೂ ಪ್ರಯೋಜನವಿಲ್ಲ ಪ್ರಯೋಜನವಿದ್ದದ್ದರೆ ಬ್ರಿಟಿಷ್ ಸರಕಾರಕ್ಕೆ ಇಂಡಿಯಾದೇಶದವರಿಗೆ ಏನೂ ಕೆಡಕುಮಾಡಲು ಸಾಧ್ಯವಿರುತ್ತಿರಲಿಲ್ಲ. ಲಾರ್ಡ್‍ಸಿಂಹರ ರಾಜ್ಯದಲ್ಲಿ ನಡೆದಷ್ಟು ದಬ್ಬಾಳಿಕೆಯು ಎಲ್ಲಿಯೂ ಇಲ್ಲ ಅವರ ತಾಬೆದಾರರಾದ ಇಂಗ್ಲೀಷ್ ಉದ್ಯೋಗಸ್ಥರನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲಿಕ್ಕೆ ಅವರಿಗೆ ಸಾಧ್ಯವಿಲ್ಲ.

ಅಸಹಕಾರಿಕೆಯಿಂದ ಉದ್ಯೋಗಸ್ಥರ ಭಯವೂ, ತಮಗೆ ಕಷ್ಟಸಂಭವಿಸಿತೆಂಬ ಭಯವೂ ಹೋಗಿದೆ ತ್ಯಾಗವೂ, ದೇಶಸೇವೆಯೂ ಜನರಲ್ಲಿ ಬೆಳೆದಿದೆ. ದೇಶಕ್ಕಾಗಿ ಏನು ಬೇಕಾದರೂ ಮೊದಲು ಜನರು ತಯಾರಾಗಿದ್ದಾರೆ.

ಚರಕಾ ನೂಲುವ ಯಂತ್ರದಿಂದ ಬಹಳ ಪ್ರಯೋಜನಗಳಿವೆ. ಆರಾಂಭಿಕ್ಕಿದನಂತರ ಜನರ ಮೈಮುಚ್ಚಿಕೊಳ್ಳುವ ಯೋಚನೆ ಎರಡನೆಯದಾಗಿದೆ. ಇಂಗ್ಲೆಂಡ್ ಜಪಾನ್ ವಗೈರೆ ದೇಶಗಳ ಸಹಾಯವಿಲ್ಲದೆ ಜನರ ಮೈಮುಚ್ಚುವದು ಸಾಧ್ಯವಿಲ್ಲ. ಇಂಡಿಯಾದೇಶದಲ್ಲಿರುವ ಬಟ್ಟೆ ಕಾರ್ಖಾನೆಗಳಲ್ಲಿ ತಯಾರಿಸುವ ಬಟ್ಟೆ, ನೂಲು, ಜನರಿಗೆ ಸಾಲದು. ಸುಮಾರು 3 ಕೋಟಿ ಜನರಿಗೆ ಹೊಟ್ಟೆತುಂಬಾ ಅನ್ನವೂ ಇಲ್ಲ. ಮೈತುಂಬಾ ಬಟ್ಟೆಯೂ ಇಲ್ಲ ಪ್ರತಿಯೊಬ್ಬನೂ ತನ್ನ ಕೆಲಸದಿಂದಲೇ ಮೈಮುಚ್ಚುವಂತೆ ಮಾಡಬೇಕು. ಇಂಡಿಯಾದೇಶದವರಲ್ಲಿ ಹಚ್ಚಡದ ಬಟ್ಟೆಯೇ ಸಾಕು ಅದನ್ನು ಎಲ್ಲರೂ ಉಪಯೋಗಿಸುವಂತೆ ಮಾಡಬೇಕು. ಚರಕಾವನ್ನು ಎಲ್ಲರೂ ಉಪಯೋಗಿಸಿದರೆ ಧೈರ್ಯವೂ, ಸ್ವತಂತ್ರತೆಯೂ, ಸ್ವಶಕ್ತಿಯಲ್ಲಿ ನಂಬಿಕೆಯೂ ಬೆಳೆಯುವವು. ಬಡತನದಿಂದ ಹೊಟ್ಟೆಪಾಡಿಗಾಗಿ ಬಹಳ ಬಡಹೆಂಗಸರು ಹೊರಗೆ ಕೆಲಸಕ್ಕೆ ಹೋಗುತ್ತಾರೆ, ಆಗ ಅವರ ನಡತೆ ಕೆಟ್ಟು ಹೋಗುತ್ತದೆ. ಚರಕವಿದ್ದರೆ ಮನೆಯಲ್ಲೇ ಕೆಲಸಮಾಡಿ ತಮ್ಮ ಬಡತನವನ್ನು ಹೋಗಲಾಡಿಸಲಿಕ್ಕೆ ಸಾಧ್ಯವಿದೆ. ಕಾರ್ಖಾನೆಗಳು ಬಹಳ ಹೆಚ್ಚಾಗಿರುವ ಇಂಗ್ಲೆಂಡ್‍ದೇಶದಲ್ಲೂ ಸಹ ಕೈಯಿಂದ ಮಾಡಿದ ಬಟ್ಟೆಗಳಿಗೆ ಮರ್ಯಾದೆ ಹೆಚ್ಚು ಇದೆ ಕ್ರಮೇಣ ಉತ್ತಮತರದ ಬಟ್ಟೆಗಳನ್ನು ತಯಾರಿಸಿಕೊಳ್ಳಬಹುದು. ಈಗ ಹಚ್ಚಡವೇ ಸಾಕು

ಸ್ವರಾಜ್ಯವೆಂದರೆ ಸೈನ್ಯ, ಪೊಲೀಸ್, ಖಾನೂನು ಮತ್ತು ಕಂದಾಯಸಹ ರೈತರ ಹಿಡುವಳಿಕೆಯಲ್ಲಿರಬೇಕು ತಮ್ಮ ಹಣವನ್ನು ತಾವೇ ಖರ್ಚುಮಾಡುವ ಸ್ವತಂತ್ರವಿರಬೇಕು. ಒಬ್ಬ ಸಿಪಾಯಿಯನ್ನಾದರೂ ಇಂಡಿಯಾದೇಶದಿಂದ ಹೊರಗೆ ಕಳುಹಿಸಕೂಡದೆಂತ ಹೇಳುವ ಸ್ವತಂತ್ರ ರೈತರು ಪ್ರತಿನಿಧಿಗಳಾಗಿರಬೇಕು

ಪೈಸ್‌ರಾಯರು ಕ್ರಮೇಣ ಅಂದರೆ ನಿಧಾನದಿಂದ ಸ್ವರಾಜ್ಯಸಿಕ್ಕಿಗರ ನಾಕೆನ್ನುತ್ತಾರೆ. ಆದರೆ ಜನರು ಕೂಡಲೇ ಬೇಕೆನ್ನುತ್ತಾರೆ. ಯಾವ ಉದ್ಯೋಗಸ್ಥನನ್ನಾದರೂ ಯೋಗ್ಯನಲ್ಲದವನಾದರೆ ಬನ್ನಾಸೋಡದೆ ಡಿಸ್‍ಮಿಸ್ ಮಾಡುವ ಹಕ್ಕು ರೈತರ ಪ್ರತಿನಿಧಿಗಳಿಗೆ ಇರಬೇಕು. ಮಂತ್ರಿಗಳಿಗೆ ಕಲೆಕ್ಟರ್ ಕಮಿಷನರ್‌ಗಳ ಮೇಲೆ ಅಧಿಕಾರವಿರಬೇಕು. ಮಿಲಿಟರಿ ಡಿಪಾರ್ಟ್‌ಮೆಂಟನ್ನು ನಡಿಸಲು ಇಂಡಿಯಾದವರಿಗೆ ಶಕ್ತಿ ಇದೆ. ಇಂಡಿಯಾದೇಶವನ್ನು ಬಿಟ್ಟುಹೋಗಲು ಇಂಗ್ಲೀಷರು ಇನ್ನೂ ತಯಾರಿಲ್ಲಿ ಅವರು ಹೋಗಬೇಕೆಂತಲೂ ಇಲ್ಲ. ಆದರೆ ನಮ್ಮ ಹೇಳಿಕೆಗೆ ಒಳಪಟ್ಟಿರಬೇಕು. ಸ್ವರಾಜ್ಯ ತಿದರ ನೀರೆ ರಾಜರು ಬಂದು ನಮ್ಮನ್ನು ನೋಡಿಲಿಯಾರೆಂತ ಕೆಲವರು ಹೇಳುತ್ತಾರೆ. ಯಾರು ಬಂದರೂ ಅವರನ್ನು ನೋಡಿಸುವ ಶಕ್ತಿ ನಮಗೆ ಇದೆ

ಚಕ್ರವರ್ತಿಯವರು ಹಿರೀಮಗ ಪ್ರಿನ್ಸ್ ಆಫ್ ವೇಲ್ಸ್, ಅಂದರೆ ಯುವರಾಜರು ಇಂಡಿಯಾದೇಶಕ್ಕೆ ಈವರ್ಷದ ನವಂಬರ್ ತಿಂಗಳಲ್ಲಿ ಬರುವರೆಂತ ನಿಶ್ಚಯವಾಗಿದೆಯಾಗಿ ಸರಕಾರದವರು ತಿಳಿಸುತ್ತಾರೆ. ಅಸಹಕಾರದವರು ತಿಳಿಸುತ್ತಾರೆ 'ಇಂಡಿಯಾದೇಶದಲ್ಲಿ ಅಸಹಕಾರದ ಚಳವಳಿಯಿರುವಾಗ ಬಂದರೆ ಅವರಿಗೆ ಜನರಿಂದ ಸ್ವಾಗತ ಸಿಕ್ಕುತ್ತೋ ಇಲ್ಲವೋ, ಈಗ ಬರಬಾರದಿತ್ತು ಎಂತ ಕೆಲವು ವರ್ತಮಾನ ಪತ್ರಗಳು ಬರೆಯುತ್ತಿವೆ ಕೂಸಟು ಪ್ರಭುಗಳವಿಷಯದಲ್ಲಿ ರೈತರ ತೋರಿಸಿದ ಸ್ವಾಗತ ಸೂಚನೆಯನ್ನು ಮಾತ್ರ ಜನರು ತೋರಿಸಿದರೆ ಯುವರಾಜರು ಬರದೆ ಇರುವದು ಉತ್ತಮ. ಆದರೆ ಬರುವದನ್ನು ಕಾರಣವನ್ನಾಡಿಕೊಂಡು ಇಂಡಿಯಾದೇಶದ ಅತೃಪ್ತಿಗಳನ್ನು ಹೋಗಲಾಡಿಸುವಂತೆ ಹೆಚ್ಚಿನ ಸ್ವರಾಜ್ಯದ ಹಕ್ಕುಗಳನ್ನು ಇಂಡಿಯಾದೇಶಕ್ಕೆ ಕೊಡಲು ನಿಶ್ಚಯಿಸಿದರೆ ಜನರು ಬಹಳ ಉತ್ಸಾಹದಿಂದ ಯುವರಾಜರನ್ನು ಬರಮಾಡಿಸಿಕೊಂಡಾರು ಎಂತ ನಂಬುತ್ತೇವೆ

ದಿ ವಂ ಗ ತ

ಶ್ರೀಮಾನ್ ಹೆಚ್. ನಾರಾಯಣರಾಯರು, ಬಿ.ಎ., ಬಿ ಯಲ್.

ಸಮಾಜಸಂಸ್ಕರಣ ವಿಷಯದಲ್ಲಿ ಮುಂದಾಳಾಗಿದ್ದ ಕರ್ನಾಟಕಕ್ಕೆ ತಿಲಕಪ್ರಾಯರಾಗಿದ್ದ ಶ್ರೀಮಾನ್ ಹೆಚ್. ನಾರಾಯಣರಾಯರು ಸ್ವರ್ಗಸ್ಥರಾದರೆಂದು ತಿಳುಹಲು ನಾವು ವಿಷಾದಿಸುತ್ತೇವೆ. ರಾಯರು ನಮ್ಮ ನೆರೆ ಊರಾದ ದಕ್ಷಿಣಕನ್ನಡಿಗರಾಗಿದ್ದು "ಸ್ಪೆಕ್ಟೇಟರ್" ಮತ್ತು "ಈಸ್ಟ್ ಎಂಡ್ ವೆಸ್ಟ್" ಎಂಬ ಇಂಗ್ಲೀಷ್ ಪತ್ರಗಳ ಸಹ ಸಂಪಾದಕರಾಗಿದ್ದು ಕನ್ನಡಭಾಷೆಯಲ್ಲಿ ಅದ್ವಿತೀಯ ಪಂಡಿತರಾಗಿದ್ದು ಗುಣವಂತರು, ಮಂತ್ರಿ ಭಾಷೆಗಳನ್ನರಿತ ಈ ಮಹಾಶಯರು ತೀರಿಹೋದುದರಿಂದ ಕರ್ನಾಟಕಮಾತೆಯ ವ್ಯಸನವು ಅಷ್ಟಿಷ್ಟೆಂದು ಹೇಳಿ ತೀರಲಾಗದು. ರಾಯರ ಸಂಸಾರಕ್ಕೆ ನಮ್ಮ ಪರಿತಾಪವನ್ನು ಈ ಮೂಲಕ ಸೂಚಿಸುವೆವು.

ಸ್ವೀಕಾರ.

"ಭಾರತ ವೈಭವ" ಒಂದಾಣೆಯ ಪುಸ್ತಕಮಾಲೆಯಲ್ಲಿ "ದುರ್ಗಸಿಂಹ" ಮತ್ತು ಅದರ ಉಪಸಂಹಾರ, ಧಾರವಾಡದ "ಶಂಕರ ಪುಸ್ತಕಾಲಯದ ಪುಸ್ತಕಗಳ ಪಟ್ಟಿ" ಇವುಗಳನ್ನು ಆದರಪೂರ್ವಕವಾಗಿ ಸ್ವೀಕರಿಸಿರುತ್ತೇವೆ. ಅಭಿಪ್ರಾಯವು ಹಿಂದಕೆಂದ. ಸಂಪಾದಕ.

ವರ್ತಮಾನ ಸಂಗ್ರಹ.

ಒಳದೇಶ.

ಮಾಮೂಲಿನಂತೆ ಈ ವರ್ಷ ಫ್ರೇಜರ್ ಪೇಟೆಯಲ್ಲಿ ಸರ್ವೆ ಸ್ಕೂಲು ಜುಲೈ 15 ರಲ್ಲಿ ತೆರೆಯಲ್ಪಡುತ್ತದೆ

* * *

ಈ ವರ್ಷ ಕೊಡಗರಲ್ಲಿ ಮದುಕರನೇಕರು ಮದುವೆ ಮಾಡಿದ್ದಾರೆಂಬುದು ಸಂತೋಷಕರವಾದ ಆಶ್ಚರ್ಯವೇ ಸರಿ.

* * *

ಆರ್ಯಸಮಾಜದ ಪರವಾಗಿ ಬೋಧಿಸಲಿಕ್ಕೆ ಮಡಿಕೇರಿಗೆ ಬಂದ ಪಿ. ಕೇದರ್‌ನಾಥ್ ಪಂಡಿತರು ಉತ್ತರ ಹಿಂದೂಸ್ಥಾನಕ್ಕೆ ಹೊರಟುಹೋಗುತ್ತಾರೆ

* * *

ಬರ್ಟನ್ ನಾಟ್ ಕಂಪೆನಿಯ ಕಡೆಯವರು ಮೆ|| ಲೋಗನ್ ಸಾಹೇಬರಮೇಲೆ ಸಬ್‌ಜಡ್ಜ್ ಕೋರ್ಟಿನಲ್ಲಿ 60 ಸಾವಿರ ರೂಪಾಯಿಗೆ ಹೂಡಿದ ದಾವೆ ಡಿಸ್‌ಮಿಸ್ ಆಗಿದೆಯಂತೆ

* * *

ಪ|| ಚೀಫ್ ಕಮಿಷನರವರು ಸ್ವರಾಜ್ಯವೆಂಬ ಪತ್ರಿಕೆಯ ಸಂಚಿಕೆಗಳೂ ಮಲೆಯಾಳದ ಹಲವು ಪುಸ್ತಕಗಳೂ ಓದಲು ಯೋಗ್ಯವಾದವುಗಳಲ್ಲವೆಂದು ಹುಕುಂ ಮಾಡಿರುತ್ತಾರಂತೆ

* * *

ತಿಲಕ ಸ್ವರಾಜ್ಯಫಂಡಿಗೆ ಮಡಿಕೇರಿಯಲ್ಲಿ 400 ರೂ. ವಸೂಲಿಯಾಗಿದೆಯಂತೆ. ಇದರಲ್ಲಿ ಶೇಕಡ 30 ರಷ್ಟು ಕರ್ನಾಟಕ ಪ್ರಾಂತ್ಯದ ಕಾಂಗ್ರೆಸ್ ಕಮಿಟಿಗೆ ಗದಗಿಗೆ ಕಳುಹಿಸಲಾಗಿದೆ ಎಂತ ತಿಳಿಯುತ್ತೇವೆ.

* * *

ಮಡಿಕೇರಿ ಯಂಗ್‌ಮೆನ್ಸ್‌ ಕ್ಲಬ್ಬಿನ ಕಟ್ಟಡಕ್ಕೆ ಕಮಿಷನರವರು 500 ರೂಪಾಯಿಗಳನ್ನು ಉಚಿತವಾಗಿ ಕೊಟ್ಟಿರುವರು. ಯುವಕರ ಕೃತಜ್ಞತೆಯನ್ನೂ, ನಮ್ಮ ಆನಂದವನ್ನೂ ಈ ಮೂಲಕ ಸೂಚಿಸುತ್ತೇವೆ.

ಕೊಡಗಿನ ಶಾಲೆಗಳ ಇನ್ಸ್‌ಪೆಕ್ಟರಾದ ಮೆ|| ಏಟ್ಸ್ ದೊರೆಗಳವರು ರಜ ತೀರಿದ್ದರಿಂದ ಸದ್ಯದಲ್ಲಿ ಚಾರ್ಜು ತೆಗೆದುಕೊಳ್ಳುವರು ಮೆ|| ಲೇನ್ಸ್‌ಫರ್ಡ್ ದೊರೆಗಳು ರಾಜಮಹೇಂದ್ರಿಯ ಸರ್ಕಲಿಗೆ ವರ್ಗವಾದರೆಂದು ವದಂತಿ.

* * *

ಈ ವರ್ಷ ಲೋವರ್ ಸೆಕೆಂಡರಿ ಬಾಲಿಕ ಪಾಠಶಾಲೆಯಲ್ಲಿ (Convent) ನಾಲ್ಕನೆ ಫಾರಂಮನ್ನು ತೆರೆಯುವದೆ ಅನಾನುಕೂಲವೆಂದು ಕೇಳುತ್ತೇವೆ. ಹಾಗಂತ ಹೈಸ್ಕೂಲಿಗೆ ಬಾಲಕಿಯರನ್ನು ಸೇರಿಸಿಕೊಳ್ಳಬಹುದಷ್ಟೆ?

* * *

ಮಡಿಕೇರಿಯ ಹೈಸ್ಕೂಲಿನಿಂದ ಈ ವರ್ಷ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದ ವಿದ್ಯಾರ್ಥಿಗಳಲ್ಲಿ ಹೆಡ್ ಮಾಸ್ತರವರು ಪಾಠ ಹೇಳುತ್ತಿದ್ದ ಇಂಗ್ಲೀಷ್‌ನಲ್ಲೇ ಸೋತವರು ಅನೇಕರು.

* * *

ಪಬ್ಲಿಕ್ ಭಾವಿಗಳಿಲ್ಲದೆ ಜನರಿಗೆ ಬೇಸಿಗೆಕಾಲದಲ್ಲಿ ಕುಡಿಯುವನೀರಿಗೆ ಬಹಳ ಅಭಾವ. ಇಲ್ಲಿನ ಹುಡುಗರ ಮತ್ತು ಹುಡಿಗಿಯರ ಎರಡು ಶಾಲೆಗಳ ಮಧ್ಯೆ ಒಂದು ಭಾವಿ ತೆಗೆಸುವ ಬಗ್ಗೆ ಸರಕಾರದವರ ವಿಚಾರಣೆಗಳು ಏನಾಯಿತೋ ತಿಳಿಯಲಿಲ್ಲ.

* * *

ಮಡಿಕೇರಿ ಆಸ್ಪತ್ರೆಯಲ್ಲಿ ಮಲೇರಿಯ ಜ್ವರದಿಂದ ಪೀಡಿತರಾದವರೇ ಅನೇಕರಾಗಿದ್ದಾರೆ. ಇಲ್ಲಿಯ ಸಿವಿಲ್ ಸರ್ಜನರಾದ ಮೇಜರ್ ಮಾನ್‌ಸೆಲ್ ದೊರೆಗಳವರು ಬಹಳ ಶ್ರಮ ತೆಗೆದುಕೊಂಡು ರೋಗಿಗಳ ರಕ್ತವನ್ನು ಪರೀಕ್ಷಿಸುತ್ತಲಿದ್ದಾರಂತೆ.

* * *

ಹೈಸ್ಕೂಲು ಉಪಾಧ್ಯಾಯರುಗಳಾದ ಮೆ|| ಗಣೇಶರಾಯರು ಮತ್ತು ಮೆ|| ಪೈಂದಪ್ಪನವರು ಎಲ್. ಟಿ. ಓದಲು ಮದ್ರಾಸಿಗೆ ಹೋಗಿರುತ್ತಾರೆ ಮೆ|| ಕೋಟೆರ ಮುತ್ತಣ್ಣನವರು ಹೈಸ್ಕೂಲಿನಲ್ಲಿ ಒಬ್ಬ ಉಪಾಧ್ಯಾಯರಾಗಿ ನೇಮಿಸಲ್ಪಟ್ಟಿರುತ್ತಾರೆ.

* * *

ಅಮೃತಿ:—ಸ್ಥಳಾಧಿಕಾರಿಗಳು ಮತ್ತು ವರ್ತಕರು ಸೇರಿ "ಅಮೃತಿ ಯೂನಿಯನ್" ಎಂಬ ಒಂದು ವಾಚಕ ಮಂದಿರವನ್ನು ಇಲ್ಲಿಯ ನೇಶನಲ್ ಸ್ಕೂಲಿನ ಒಂದು ಕೊಠಡಿಯಲ್ಲಿ ಏರ್ಪಡಿಸಿರುವರು. ದಿನ, ವಾರ, ಮತ್ತು ಮಾಸಿಕ ಪತ್ರಿಕೆಗಳನ್ನು ತರಿಸುತ್ತಿದ್ದಾರೆ.

* * *

ಈ ನಾಡು ಮಹಾದೇವರ ದೇವಸ್ಥಾನ ಜೀರ್ಣೋದ್ಧಾರದ ವಿಷಯ ಜನರಲ್ಲಿ ಬಹಳ ಚಳವಳಿ. ನಾಡಿನ ಎಲ್ಲಾ ಹಿಂದೂ ಜನರು ಬಹಳ ಶ್ರದ್ಧೆಯನ್ನು ತೆಗೆದುಕೊಂಡಿರುವರು. ಇದರ ವಿಷಯ ತಾ|| 4 ರಲ್ಲು ಆಗಳಿತ ಕಮಿಟಿಯ ದೊಡ್ಡ ಮೀಟಿಂಗು ನಡೆಯಿತೆಂದು ವದಂತಿಯಿದೆ

* * *

ವೀರರಾಜಪೇಟೆಯ ಸಬ್‌ಡಿವಿಜನಲ್ ಕೋರ್ಟಿನಲ್ಲು ಕ್ರಿಮಿನಲ್ ಗುಮಾಸ್ತರಾಗಿದ್ದ ಮೆ|| ಪುಕಿಯಂಡ ಚಿಣ್ಣಪ್ಪನವರು ತಾ|| 2 ರಲ್ಲು ಸ್ವರ್ಗಸ್ಥರಾದ ಸಂಗತಿಯಲ್ಲು ನಾವು ವ್ಯಸನಪಡುತ್ತೇವೆ. ಈ ಹುದ್ದೆಯಗೆ ಕೆಲವು ವರ್ಷಗಳಿಂದೀಚೆಗೆ ಬಂದವರ ಪೈಕಿ ಇವರಷ್ಟು ಜನರ ಪ್ರೀತಿಗೆ ಪಾತ್ರರಾದವರು ಯಾರೂ ಇಲ್ಲವೆಂದು ಜನರ ಭಾವನೆ.

* * *

ಕಳೆದ 30 ನೇ ತಾರೀಖಿನಲ್ಲಿ ಓಂಕಾರೇಶ್ವರ ದೇವಸ್ಥಾನದ ಮಹಡಿಯ ಮೇಲೆ ಹೆಚ್ಚಿನ ಸೆಸ್ಸು ಹಾಕುವ ವಿಷಯದಲ್ಲಿ ದೇಶೀಯರು ಮತ್ತು ಜಮೀನ್ದಾರರ ಸಂಘದವರೂ ಸಹ ಸಭೆ ಸೇರಿ ರಾಯಬಹದ್ದೂರ್ ಕೆ. ಕುಟ್ಟಯ್ಯನವರ ಅಧ್ಯಕ್ಷತೆಯಲ್ಲಿ ಮೀಟಿಂಗನ್ನು ನಡಿಸಿ, ಸರ್ವರೂ ಏಕಮತದಿಂದ ಹೆಚ್ಚಿನ ಸೆಸ್ಸು ಹಾಕಕೂಡದಾಗಿ ನಿರ್ಣಯಿಸಿದರು.

* * *

ಮಳೆ ಕಡಿಮೆಯಾದ್ದರಿಂದ ರೈತರ ವ್ಯವಸಾಯಕ್ಕೆ ಭಂಗವುಂಟಾಗಿರುವದು. ಕೆಲವರು ಬೀಜ ಬಿತ್ತಲೇ ಇಲ್ಲ. ಆಹಾರ ಸಾಮಗ್ರಿಗಳ ಬೆಲೆಯು ದಿನೇ ದಿನೇ ಹೆಚ್ಚುತ್ತಿರುವದು. ಭತ್ತದ ಕ್ರಯ ದಕ್ಷಿಣ ಕೊಡಗಿನಲ್ಲಿ ಗಾಡಿ ಒಂದಕ್ಕೆ ರೂ. 75 ರಿಂದ 80 ರ ವರೆಗೆ ಇದೆ. ಆದರೆ ಪ್ರಯೋಜನವೇನು? ಸೇರಿಗೆ ಒಂದಕ್ಕೆ 12 ಆಣೆಯಿಂದ ಒಂದು ರೂಪಾಯಿಯ ವರೆಗೆ ಬೆಲೆ! ಬಡವರಿಗೆ ಬಹಳ ಸಂಕಟ.

* * *

ಎಲ್ಲಿನೋಡಿದರೂ ಪೋಲೀಸ್ ಬಂದೋಬಸ್ತು! ಅಂಗಡಿಯಲ್ಲಿ ಕುಳಿತು ವ್ಯಾಪಾರ ಮಾಡುವವರು ಪೋಲೀಸ್ ಆಫೀಸರನ್ನು ಕಂಡೊಡನೆಯೆ ಎದ್ದು ನಿಲ್ಲಬೇಕಂತೆ! ಪೋಸ್ಟಿನಲ್ಲಿ ಪುಸ್ತಕದ ಪಾರ್ಸಲು ಬಂದರೆ ಪೋಲೀಸಿನವರು ಅಜಮಾಯಿಸಬೇಕಂತೆ!! ಕಮಿಷನರವರ ಅಧ್ಯಕ್ಷತೆಯಲ್ಲಿ ನಡೆದ ಡಿ ಬೋರ್ಡು ಮೀಟಿಂಗಿನಲ್ಲು ರಾಜದ್ರೋಹದ ಶಬ್ದವು ಹೊರಪಡುತ್ತದೋ ಎಂಬುದನ್ನು ಪೋಲೀಸಿನವರು ನೋಡಿಕೊಳ್ಳಬೇಕಂತೆ!!!

ಅಂಜನೇಯ ಮೋಟರ್ ಸರ್ವಿಸ್ ಮತ್ತು ಕೊಡಗು ಮೋಟರ್ ಸರ್ವಿಸ್ ಎಂಬ ಎರಡು ಕಂಪೆನಿಯವರು ಕೊಡಗಿನಲ್ಲಿ ಬಸ್‌ಗಳನ್ನು ನಡಿಸುತ್ತಿದ್ದಾಗ್ಯೂ ಒಂದೊಂದು ವೇಳೆ ಪ್ರಯಾಣಿಕರು ಸ್ಥಳ ದೊರಕದೆ ಅಥವಾ ಸರಿಯಾದ ಸಮಯಕ್ಕೆ ಬಸ್ ಬಾರದೆ ಅನಾನುಕೂಲತೆಗೆ ಒಳಪಡುತ್ತಾರೆ. ಬಸ್ ಸರ್ವಿಸ್ ಕಂಪೆನಿಯೊಂದನ್ನು ಮಡಿಕೇರಿಯಲ್ಲಿ ಏರ್ಪಡಿಸಬೇಕೆಂದಿದ್ದ ವಿಚಾರವು ಸ್ವಪ್ನಾವಸ್ಥೆಯೂ ಎಂದು ಸಂಶಯಪಡಬೇಕಾಗಿದೆ.

* * *

ಕೊಡ್ಲಿಪೇಟೆಯಲ್ಲಿ ಸಬ್ ಇನ್‌ಸ್ಪೆಕ್ಟರ್ ಆಗಿದ್ದ ಎಂ. ಎಸ್. ಗಣಪತಿಯವರು ವರ್ಗವಾಗಿ ಹೋಗುವಾಗ್ಗೆ ಉದ್ಯೋಗಸ್ಥರು ಮತ್ತು ಸ್ಥಳೀಕ ಜನರು ಸೇರಿ ಬಹಳ ಮರ್ಯಾದೆಯನ್ನು ಮಾಡಿದರು. ಆ ವೇಳೆಯಲ್ಲಿ ಜಿಲ್ಲದ ಸೋಮಪ್ಪನವರು, ಗಣಪತಿಯವರು ಚೆನ್ನಾಗಿ ತನ್ನ ಕೆಲಸವನ್ನು ನಡಿಸಿದರೆಂದೂ ಅನೇಕ ಸಂದರ್ಭಗಳಲ್ಲಿ ಸತ್ಯವನ್ನೇ ಹೇಳಿ ಜನರನ್ನು ಕಾಪಾಡಿದರೆಂದೂ ಮತ್ತು ಅವರಿಗೆ ಸತ್ಯವಾದಿ ಎಂಬ ಹೆಸರು ಸಲ್ಲತಕ್ಕದೆಂದೂ ಸೂಚಿಸಿದರು.

* * *

ಕೆಲವು ತಿಂಗಳ ಹಿಂದೆ ರಿಟೈರ್ ಆದ ಡಾಕ್ಟರ್ ಕೊಂಗೇಟರ ಮಾದಣ್ಣನವರು ತನ್ನ ಜೀವಮಾನದ ಮುಂದಿನ ಭಾಗವನ್ನು ಮಡಿಕೇರಿಯಲ್ಲಿ ಸ್ವಂತ ವೈದ್ಯಶಾಲೆಯನ್ನಿಟ್ಟು ಕಳೆಯಬೇಕೆಂದು ಏರ್ಪಾಡು ಮಾಡುತ್ತಿದ್ದಾರೆ. ಇದರ ಮಧ್ಯೆ ಸಿವಿಲ್ ಸರ್ಜನ್ ಸಾಹೇಬರು ಇವರನ್ನು ಆನರರಿ ಕನ್‌ಸಲ್ಟಿಂಗ್ ಸರ್ಜನ್ ಅಥವಾ ಫಿಜಿಸಿಯನ್ ಆಗಿ ಇರುವಂತೆ ಕೇಳಿದ್ದಕ್ಕೆ ಮೇಲೆ ಹೇಳಿರುವ ಕಾರಣಗಳಿಂದಲೂ ಮತ್ತು ಸ್ವತಂತ್ರರಾಗಿ ಇರಬೇಕೆಂಬ ಇರಾದೆಯಿಂದಲೂ ಅಂಗೀಕರಿಸಲಿಲ್ಲವಾಗಿ ತಿಳಿಯುತ್ತೇವೆ.

* * *

ಸರಕಾರಿ ಆಡಳಿತದಲ್ಲಿರುವ ಉಪಾಧ್ಯಾಯರುಗಳ ಸಂಬಳ ಬಡ್ತಿಗೋಸ್ಕರ ಹದಿನಾರು ಸಾವಿರ ರೂಪಾಯಿಗಳು ಬಜೆಟ್ಟಿನಲ್ಲಿ ಮಂಜೂರು ಮಾಡಲ್ಪಟ್ಟಿದೆ ಎಂದು ತಿಳಿಯುತ್ತೇವೆ. ಹಾಗಾದರೆ ಡಿ. ಬೋರ್ಡಿನ ಉಪಾಧ್ಯಾಯರುಗಳ ಗತಿಯೇ? ಈ ವಿಚಾರದಲ್ಲಿ ಸಂಕಟಪಡುವರ. ಹೆಚ್ಚಿನ ಸೆಸ್ಸು ಹಾಕಬೇಕೆಂತಲೂ ಡಿ ಬೋರ್ಡ್ ಮೆಂಬರುಗಳು ಸೆಸ್ಸು ಹಾಕಕೂಡದು, ಗ್ರಾಂಟು ಹೆಚ್ಚು ಕೊಡಬೇಕೆಂತಲೂ ಉಭಯತ್ರರೂ ಚರ್ಚೆಯಲ್ಲಿದ್ದಾರೆ. ಅಂತೂ ಡಿ ಬೋರ್ಡಿನ ಬಡಉಪಾಧ್ಯಾಯರುಗಳ ಗತಿ ಹ್ಯಾಗೆ ವಿಮುಕ್ತಿಯಾಗಲ್ಪಡುತ್ತಗೊ ಎಂದು ಸರ್ವರೂ ಎದುರುನೋಡುತ್ತಿದ್ದಾರೆ.

* * *

ಕಾಫಿ, ಭತ್ತ ವಗೈರೆ ವ್ಯಾಪಾರವಮಾಡುತ್ತಾ ಜನರಲ್ಲಿ ತುಂಬಾ ವಿಶ್ವಾಸವನ್ನೂ, ಪ್ರಮಾಣಿಕತ್ವವನ್ನೂ ಇಟ್ಟುಕೊಂಡು ಪಟ್ಟಸರಾಗಿದ್ದ ಸಾಹುಕಾರ ಮುಮ್ಮಾಲಿ ಕಾಕನವರು ಜೂನ್ 24 ರಲ್ಲಿ ಮೃತಪಟ್ಟ ವಿಷಯವು ವ್ಯಸನಕರವಾಗಿದೆ. ಇವರು ಕೂಡಾಳಿಯಲ್ಲಿ ಒಂದು ದೊಡ್ಡ ಮಾಪಿಳ್ಳೆ ಮನೆತನಕ್ಕೆ ಸೇರಿದವರು. ಇವರ ತಂದೆ ಮತ್ತು ಅಜ್ಜಂದಿರು ಸಹ ಕೊಡಗಿನ ವ್ಯಾಪಾರಿಗಳಾಗಿದ್ದರು. ಇವರ ಮರಣಕ್ಕೆ ಎಷ್ಟು ದಿನಗಳ ಮುಂದೆ ತಾಲೋಕು ಮ್ಯಾಜಿಸ್ಟ್ರೇಟರವರು ಕಾಫಿ ಪಾಪಿನ ವಿಷಯದಲ್ಲ ಇವರಿಗೆ ಜುಲುಮಾನೆ ಮಾಡಿದ್ದರು. ಕಳೆದ ನೂರತ್ತು ವರ್ಷಗಳಿಂದ ಜನರ ಪ್ರೀತಿಗೆ ಪಾತ್ರರಾಗಿ ಸತ್ಯವಾದಿ ಎನಿಸಿಕೊಂಡ ಮುಮ್ಮಾಲಿಯವರು ತನ್ನ ದುರ್ದೆಸೆಯಿಂದ ಒದಗ ಅವಮಾನಕ್ಕೆ ಮನನೊಂದು ಮೃತಪಟ್ಟರೆಂದು ಜನರ ಭಾವನೆ.

ಹಿಂದೂದೇಶ.

ಸಿಂಹಳ ದ್ವೀಪದಲ್ಲಿ ಎರಡು ಅಥವಾ ಮೂರು ತಿಂಗಳ ಖರ್ಚಿಗೆ ಸಾಕಾಗುವಷ್ಟು ಮಾತ್ರ ಅಕ್ಕಿ ಇದೆಯಂತೆ.

* * *

ಜಮಾಲ್ ಎಣ್ಣೆ ಕಂಪನಿಯ ಎಣ್ಣೆ ಶೋಧಿಸುವ ಇಲಾಖೆಯಲ್ಲಿ ಬೆಂಕಿಯಿಂದ ಅಲ್ಲಿಯಣ ಇಂಜಿನಿಯರ್ ಮತ್ತು 15 ಜನ ಕೆಲಸಗಾರರು ಬಹಳವಾಗಿ ಬೆಂದುಹೋಗಿ, ಅವರಲ್ಲಿ ಇಬ್ಬರು ಮೃತಪಟ್ಟಿರುವರಂತೆ.

* * *

ಮದ್ರಾಸು ಸಂಸ್ಥಾನದ ವಿದ್ಯಾ ಇಲಾಖೆಯ ಮಂತ್ರಿಯಾದ ದಿವಾನ್ ಬಹದ್ದೂರ್ ಸುಬ್ಬರಾಯುಲು ರೆಡ್ಡಿಯವರು ಬಾಯಿಲೆ ಸಬಬ್ ತನ್ನ ಉದ್ಯೋಗಕ್ಕೆ ರಾಜಿನಾಮೆ ಕೊಟ್ಟಿರುತ್ತಾರೆಂದು ವದಂತಿ ಇದೆ.

* * *

ಜುಲೈ ತಾರೀಖು ಒಂದನೆ ರಾತ್ರಿ ತನಕ ತಿಲಕ ಸ್ವರಾಜ್ಯಫಂಡಿನ ಧನವು ಒಂದು ಕೋಟಿ ಐದು ಲಕ್ಷ ರೂಪಾಯಿಗಳವರೆಗೆ ತಲಪಿದೆ ಎಂದು ಮಹಾತ್ಮ ಗಾಂಧಿಯವರಿಗೆ ಲೆಕ್ಕವು ಕೈಸೇರಿದೆಯಂತೆ. ಈ ವಿಷಯದಲ್ಲಿ "ಬೋಂಬೆ ಕ್ರೋನಿಕಲ್" ಪತ್ರಿಕೆಯು ಮಹಾತ್ಮ ಗಾಂಧಿಯವರನ್ನ "ಅದ್ಭುತ ಕರ್ತ" ಎಂದ ಮಹಾತ್ಮರು ಪ್ರಥಮ ಜಯವನ್ನು ಹೊಂದಿರುತ್ತಾರೆಂದೂ ಹೇಳಿರುತ್ತದೆ.

ಮಹಾತ್ಮಾ ಗಾಂಧಿಯವರ ಪತ್ನಿಯವರು "ಕೋರ" ಬಟ್ಟೆಯು ಕೊಂಚ ಭಾರವಧಿಕವಾಗಿರುವದರಿಂದ ಅದನ್ನು ಉಟ್ಟು ಅಡಿಗೆ ಮಾಡಲು ಅನಾನುಕೂಲವೆಂದು ಕೊಂಚ ಹಗುರವಾದ ಬಟ್ಟೆಯನ್ನು ಉಟ್ಟುಕೊಳ್ಳಲು ಪತಿಯನ್ನು ಬೇಡಿದಲ್ಲು "ಕೋರ" ಬಟ್ಟೆಯಲ್ಲದೆ ವಿದೇಶ ಬಟ್ಟೆಯನ್ನುಟ್ಟುಕೊಂಡು ತನಗೆ ಅಡಿಗೆ ಮಾಡುವದಕ್ಕಿಂತ ನೀನು ಅಡಿಗೆ ಮಾಡಗಿರೋಣವೇ ಲೇಸೆಂದು ಹೇಳಿರುತ್ತಾರೆ.

ವಿದೇಶ.

ಬೆಲ್ಜಿಯಮ್ ದೇಶದ ಜನರು ತಮ್ಮ ಅಭಿಪ್ರಾಯಗಳನ್ನು ಇಂಗ್ಲೀಷ್ ಭಾಷೆಯಲ್ಲೇ ಸೂಚಿಸುವದಕ್ಕೋಸ್ಕರ ಒಂದು ಸಂಘವನ್ನು ಏರ್ಪಡಿಸಿರುತ್ತಾರೆ.

* * *

ಒಂದು ಲಕ್ಷದ ಮೂವತ್ತು ಸಾವಿರ ಮೆಂಬರುಗಳುಳ್ಳ ಒರ್ವನ ಉಪಾಧ್ಯಾಯರ ಸಂಘದವರು ಕೂಲಿಕೆಲಸಮಾಡುವವರು ಹಿಂಬಾಲಿಸುವಂತ ತತ್ವಗಳನ್ನೇ ಕೈಕೊಳ್ಳಬೇಕೆಂದು ನಿರ್ಧರಿಸಿರುವದಲ್ಲದೆ, ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿಯುವ ರೀತಿಗೆ 50 ಮೆಂಬರುಗಳು ಮಾತ್ರ ವಿರೋಧವಾಗಿ ನಿಂತರಂತೆ.

* * *

ನ್ಯೂಯಾರ್ಕಿನ ಕೌಂಟಿ ಆಸ್ಪತ್ರೆಯಲ್ಲಿ ಮನುಷ್ಯನು ಬುಗರಿಯಂತೆ ತಿರುಗಿತಿರುಗಿ ಆಯಾಸದಿಂದ ಬೀಳತಕ್ಕಂತ ಖಾಯಿಲೆಯನ್ನು ವಾಸಿಮಾಡಲು ಪ್ರಯತ್ನಿಸುತ್ತಿದ್ದಾರೆ. ಮನುಷ್ಯನಿಗೆ ಈ ಖಾಯಿಲೆ ಒದಗುವಂಥ ವೇಳೆಯಲ್ಲಿ ತಾನೇ ಬುಗರಿಯಂತೆ ತಿರುಗುವದಾದರೂ ತಾನು ಸ್ಥಿರವಾಗಿದ್ದೇನೆಂತಲೂ ಸುತ್ತುಮುತ್ತಲಿನ ವಸ್ತುಗಳು ತಿರುಗುವಂತೆಯೂ ತನಗೆ ತೋರುತ್ತದೆಯಂತೆ.

* * *

ನ್ಯೂಯಾರ್ಕಿನ ಟ್ರಿಬ್ಯೂನ್ ಪತ್ರಿಕೆಯು ಸಿನ್‌ಫೀನರು ಸಮುದ್ರದೊಳಗೆ ತಿರುಗುವ ಎರಡು ಹಡಗುಗಳು ಐರ್ಲೆಂಡಿನ ಬಾವುಟವನ್ನು ಹಾರಿಸಿಕೊಂಡು ಅಮೇರಿಕ ಖಂಡದಿಂದ ಐರ್ಲೆಂಡಿಗೆ ತಿರುಗಾಡುತ್ತಾ ಇತ್ತೆಂದೂ, ಐರ್ಲೆಂಡ್ ದೇಶದ ಪ್ರಜಾಧಿಪತ್ಯದ (Republic) ಪ್ರೆಸಿಡೆಂಟರಾದ ಡಿ. ವೇಲರವರು ಮತ್ತು ಇನ್ನೂ ಕೆಲವು ಮುಖ್ಯಸ್ಥ ಸಿನ್‌ಫೀನರೂ ತಮ್ಮ ಪ್ರಯಾಣಕ್ಕೆ ಇವುಗಳನ್ನೆ ಉಪಯೋಗಿಸುತ್ತಿದ್ದರೆಂದೂ ಬರೆಯುತ್ತದೆ.

ಕೊಡಗು ರೈತರಿಗೆ ಒಂದು ಸಹಕಾರ.

ಕೊಡಗು ಜಮಿನ್‌ದಾರರ ಸಂಘವು ಜಮೀನ್‌ದಾರರಿಗೆ ಮುಖ್ಯ, ಹಲವು ವಿಧದ ಉಪಯೋಗಾರ್ಥವಾಗಿಯೂ ಸಹಾಯತಾರ್ಥವಾಗಿಯೂ ಇರಬೇಕಾದದ್ದು, ಯಾವವಿಧದಲ್ಲಿ ಹಾಗೆ ಇರುವದಾಗಿ ತೋರುವದಿಲ್ಲ. ಆದ್ದರಿಂದ ಈ ಸಂಘವನ್ನು ಹೆಚ್ಚು ರೈತರ ಉಪಯೋಗಾರ್ಥಕ್ಕ ತರಬೇಕಾದದ್ದು ಅತ್ಯಾವಶ್ಯವಾಗಿ ತೋರುತ್ತೆ. ಮುಖ್ಯವಾಗಿ ಈ ಸಂಘಕ್ಕೆ ಈ ದೇಶದಲ್ಲಿ ಒಂದೆರಡು ವಸ್ತುಪ್ರದರ್ಶನ ಶಾಲೆಗಳು ತೆರೆಯಬೇಕಾದದ್ದು ಅಗತ್ಯ. ಈ ಶಾಲೆಗಳಲ್ಲಿ ನಾನಾ ತರದ ನವೀನವಾದ (Improved to Up-to date) ಅತಿಹಾರಗಳನ್ನು ನೇಗಿಲು ವಗೈರೆ ರೈತರಿಗೆ ಉಪಯೋಗ ಇರುವ ಮಂದ ಮತ್ತು ಕಬ್ಬಿಣದ ಸಾಮಾನುಗಳನ್ನು ಇಟ್ಟು ಇವುಗಳ ಉಪಯೋಗಗಳನ್ನು ರೈತರಿಗೆ ವಿವರಿಸಿ ಹೇಳಬೇಕು. ಹೀಗೆ ಮಾಡಿದರೆ ರೈತರು ಈಗಿನ ಅತಿಶ್ರಮವನ್ನುಂಟುಮಾಡುವ ಆರಾಬದ ವಿಧಾನವನ್ನು ಬಿಟ್ಟು, ಹೊಸತಾಸಿಯು ಇದಕ್ಕಿಂತ ಸುಲಭವಾಗಿಯೂ, ಪ್ರಯೋಜನಕರವಾಗಿಯೂ, ಅಲ್ಪ ಖರ್ಚಿನಿಂದಲೂ ತಮ್ಮ ವ್ಯವಸಾಯವನ್ನು ತೀರಿಸುವ ವಿಧಾನವನ್ನು ತಿಳಿದುಕೊಳ್ಳುವರು.

ಈ ಶಾಲೆಯಲ್ಲಿಟ್ಟಿರುವ ನಾನಾ ವಿಧವಾದ ವಸ್ತುಗಳನ್ನು, ಅವುಗಳ ಉಪಯೋಗವನ್ನು, ಅವು ದೊರಕುವ ಸ್ಥಳಗಳನ್ನು ವಿವರಿಸಿ, ದರ್ಶನಾರ್ಥವಾಗಿ ಬಂದವರ ಮನಸ್ಸಿಗೆ ನಂದಟ್ಟಾಗುವಂತೆ ಮಾಡುವದಕ್ಕೆ ಒಂದು ಚಿಕ್ಕ ಪುಸ್ತಕ ಭಂಡಾರವನ್ನು ಸಹ ಇಡುವದು ಅವಶ್ಯ. ಇದರಲ್ಲಿ ಪುಸ್ತಕಗಳು ಪತ್ರಿಕೆಗಳು, ಮತ್ತು ಉಪನ್ಯಾಸಗಳು ಮೊದಲಾದವು ವ್ಯವಸಾಯ ಸಮ್ಮಂದವಾಗಿಯು ಇರಬೇಕು. ಇದರಿಂದ ರೈತರು ಇತರ ದೇಶಗಳಲ್ಲಿ ವ್ಯವಸಾಯ ನಡಿಸುವ ರೀತಿಯನ್ನು ತಿಳಿದುಕೊಳ್ಳುವರು.

ಇಂಥಾ ಪ್ರದರ್ಶನ ಶಾಲೆಯನ್ನು ತೆರೆಯುವದು ತತ್ಕಾಲಕ್ಕೆ ಸ್ವಲ್ಪ ಪ್ರಯಾಸವಾಗಿ ಕಾಣುವದು. ಇದಕ್ಕೆ ದ್ರವ್ಯವೇ ಕಾರಣವು. ಆದರೆ ಜಮೀನ್‌ದಾರರ ಸಂಘದಲ್ಲಿ ನಾನಾರ ಎರಡು ಸಾವಿರ ಮೆಂಬರುಗಳು ಈಗ ಇರುವರೆಂದು ನಂಬುತ್ತೇನೆ. ಈ ಮೆಂಬರುಗಳು ಒಬ್ಬೊಬ್ಬರು ಕಡಿಮೆ ಪಕ್ಷ ಐದು ರೂಪಾಯಿಗಳ ಮೇರೆ ದ್ರವ್ಯ ಸಹಾಯವನ್ನು ಮಾಡಿದರೆ ಸುಮಾರು ಹತ್ತು ಸಾವಿರ ರೂಪಾಯಿಗಳಾಗುವದು. ಇದಲ್ಲದೆ, ಮೆಂಬರುಗಳು ಅಲ್ಲದವರಿಂದ ಸಹ ಸಹಾಯವನ್ನು ಕೇಳಿದರೆ ಇನ್ನೂ ಹೆಚ್ಚು ಹಣವು ದೊರಕುವದು. ಈ ದ್ರವ್ಯವು ನಾನು ಮೇಲೆ ನಮೂದಿಸಿರುವ ಪ್ರದರ್ಶನ ಶಾಲೆಗೂ (Museum) ಇದಕ್ಕೆ ಸಮ್ಮಂಧ ಪಟ್ಟ ಒಂದು ಪುಸ್ತಕ ಭಂಡಾರವನ್ನು ತೆರೆಯುವದಕ್ಕೂ ಯಥೇಷ್ಟವಾಗುವದೆಂದು ನಂಬುತ್ತೇನೆ.

ಸಿ. ಸಿ. ಸಿ.

ಮಹನೀಯರಾದ ಉಪಾಧ್ಯಾಯರುಗಳೇ!

ಸ್ವಲ್ಪ ಸಮಾಧಾನತೆಗೆದುಕೊಳ್ಳಬೇಕಾಗಿ ಕೇಳುತ್ತೇನೆ. ನಾವು ಜಮೀನ್ದಾರರ ಸಂಘದ ಮೂಲಕ 1913 ನೇ ಇಸವಿ ಜಾನುವರಿ ಮೇರೆ ಡಿಸ್ಟ್ರಿಕ್ಟುಬೋರ್ಡನ್ನು ಜಮೀನ್ದಾರರ ಚುನಾವಣೆ ಮತ್ತು ಅಧ್ಯಕ್ಷತೆಯಲ್ಲಿ ಕೊಡಬೇಕೆಂದು ಕೇಳಿದ್ದೇವೆ. ಆದಕ್ಕೆ ಚೀಫ್ ಕಮಿಷನರ್ ಸಾಹೇಬರವರು ನಮಗೆ ಲೆಜಿಸ್ಲೇಟಿವ್ ಕೌನ್ಸಿಲ್ ಎಂಬ ಸಭೆಯು ಕೊಡಲ್ಪಡುತ್ತೆ. ಆಗ್ಗೆ ಡಿ|| ಬೋರ್ಡಿನ ಎಲ್ಲಾ ಹಕ್ಕು ನಮಗೆ ಸಿಕ್ಕುತ್ತೆಂದು ಜಮೀನ್ದಾರರ ಪ್ರತಿನಿಧಿಗಳಲ್ಲು ವಾಗ್ದಾನಮಾಡಿರುತ್ತಾರೆಂದು ಪ್ರತಿನಿಧಿಗಳು ನಮಗೆ ಹೇಳಿದರು. ಆ ಸಭೆಯು ಚೀಫ್ ಕಮಿಷನರವರು ಹೇಳಿದಪ್ರಕಾರ ಜುಲೈ ಆಖೈರು ಒಳಗೆ ಗೊತ್ತೇ ಕೊಡಬೇಕು. ಆಗ್ಗೆ ನಿಮ್ಮ ವಿಷಯವನ್ನೇ ಮುಂದೆ ಮಾತಾಡಿ ತೀರ್ಮಾನಮಾಡುವದಕ್ಕೆ ಯಾರ ಭೀತಿಯೂ ಬೇಡವಾಗಿದೆ. ಅವರಿಗೆ ನಾವು ರಾಜಭಕ್ತರಾಗಿಯೂ, ಪ್ರಜಾಭಕ್ತರಾಗಿಯೂ ಇರಬೇಕಾಗಿ ಕೇಳುತ್ತೇವೆ. ತಾಯಿ ಮೊಲೆಯು ಶಿಶುವಿಗೆ ಹ್ಯಾಗೆ ಪ್ರಧಾನವೋ ಹಾಗೆಯೇ ವಿದ್ಯೆಯು ನಮ್ಮ ದೇಶದ ಏಳಿಗೆಗ ಪ್ರಧಾನವಾಗಿದೆ. ಎಂಬುದನ್ನು ಅರಿತುಕೊಂಡು ನಮ್ಮ ಮಕ್ಕಳ ಶಿಕ್ಷಕ ರಕ್ಷಕರಾಗಿರುವದರಿಂದ ನೀವುಗಳೆಲ್ಲರೂ ಒಂದೆರಡು ತಿಂಗಳು ಶಾಂತತ್ವವನ್ನು ಹೊಂದುವಿರಾಗಿ ನಂಬಿರುತ್ತೇನೆ.

ಮಕ್ಕಳ ತಂದೆ.

"ಬ್ರಾಹ್ಮಣ ಸಹೋದರ ಸಹಾಯ"

ಎಂಬದಾಗಿ ಒಂದು ಲೇಖನವನ್ನು ಒಬ್ಬ ಜಾತ್ಯಿದಾರರು ಬರೆದಿರುತ್ತಾರೆ. ಇದರಲ್ಲಿ ಬ್ರಾಹ್ಮಣರ ಸಮಾಜಸುಧಾರಣೆಯ ಸಂಬಂಧದ ಅಪೂರ್ವ ಸಂಗತಿಯೊಂದನ್ನು ಸಂತೋಷವಾಗಿ ಪ್ರಕಟಿಸುವೆವು.

ನರಿಯಂದದಗ್ರಾಮದಲ್ಲಿ ಸುಮಾರು ಎವತ್ತು ಜನಬ್ರಾಹ್ಮಣರು ಸೇರಿ ಆಗ್ರಾಮದ ಮುಖ್ಯಸ್ಥರಾದ ಶ್ರೀಮಾನ್ ಶಂಕರನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸಭೆಯನ್ನು ಸೇರಿಸಿ ಇನ್ನುಮೇಲೆ ಬ್ರಾಹ್ಮಣರು "ನೇಗಿಲನ್ನು ಹಿಡಿಯಬಹುದು." ಎಂದು ಠರಾವನ್ನು ಮಾಡಿದುದಲ್ಲದೆ ಅಧ್ಯಕ್ಷರೆ ಮೊದಲು ನೇಗಿಲನ್ನು ಹಿಡಿದು ಹೂಡಿದರು. ಈ ರೀತಿ ಬ್ರಾಹ್ಮಣರೂ ಕೂಡ ದೇಶಸ್ಥಿತಿಗನುಸರಿಸಿ ಹಿಂದೂದೇಶದ ಬ್ರಾಹ್ಮಣರಿಗೆಲ್ಲಾ ಮೇಲ್ಪಂಕ್ತಿಯನ್ನು ಹಾಕಿದುದಕ್ಕೆ ನಾವು ಅವರನ್ನು ಕೊಂಡಾಡುವೆವು.

ಮಡಿಕೇರಿ.

ಕೊಡಗು ಡಿಸ್ಟ್ರಿಕ್ಟುಬೋರ್ಡಿನ ತಾ|| 2-7-1921 ರ ಮೀಟಿಂಗಿನಲ್ಲು ರೂಪಾಯಿಗೆ ಅರ್ಧ ಆಣೆ ದರದಲ್ಲಿ ಹೆಚ್ಚಿಗೆ ಸೆಸ್ಸು ಹಾಕಲು ದೇಶೀಯ ಪ್ರತಿನಿಧಿಗಳು ಒಗ್ಗಟ್ಟಾಗಿ ಕೂಡದೆಂದು ಹೇಳಿದರೂ ಸಭೆಯು ಬಹುಮತದಿಂದ ಮಂಜೂರಾಗಿರುವದಾಗಿ ತಿಳಿಯುತ್ತದೆ. ಈ ವಿಷಯದಲ್ಲು ಮತ್ತು ರಾಜಕೀಯ ತಿದ್ದುಪಾಟದ ವಿಷಯದಲ್ಲಿ ದೇಶದವರ ಅಭಿಪ್ರಾಯವನ್ನು ಸರಕಾರಕ್ಕೆ ತಿಳಿಸಲು ದೇಶದವರೆಲ್ಲಾ ತಾರೀಖು 13-7-1921 ರಲ್ಲಿ ವೀರರಾಜಪೇಟೆ ರೀಡಿಂಗ್‌ರೂಮ್ ಬಳಿ ಮೈದಾನದಲ್ಲೂ ತಾ|| 15-7-1921 ರಲ್ಲು ಮಡಿಕೇರಿ ದೇವಸ್ಥಾನದ ಮಹಡಿಯಲ್ಲಿಯೂ 2 ಘಂಟೆಗೆ ಸಭೆ ಸೇರಲು ನಿಶ್ಚಯಿಸಲಾಗಿದೆ. ತಾವು ತಮ್ಮ ಜತೆಯೊರುವವರು ಸಮೇತ ತಮಗೆ ಅನುಕೂಲವಾದ ಸ್ಥಳಕ್ಕೆ ಹಾಜರಾಗಿ ಅಭಿಪ್ರಾಯ ಕೊಡಬೇಕಾಗಿ ಕೋರುತ್ತೇನೆ.

ಸಿ ಯಮ್. ಪೊಣಪ್ಪಯ್ಯ,

ತಾ|| 3-7-1921. ಓ. ಐ. ಚೆಟ್ಟಪ್ಪ.

ಇಸ್ತಿಹಾರ್‌ನಾಮೆ.

ಕೊಡಗು ಮುಜರಾಯಿ ಇಲಾಖೆಯಿಂದ.

ಕೊಡಗು ದೇವಸ್ಥಾನಗಳ ಆಡಳಿತ ಬಗ್ಗೆ ಮಡಿಕೇರಿ ಮತ್ತು ನಂಜರಾಜಪಟ್ಟಣ ತಾಲ್ಲೋಕುಗಳಿಗೆ ನೇಮಕವಾಗಿದ್ದ ಮೆಂಬರು ಮೆ|| ಕೆ. ವೆಂಕಟಸುಬ್ಬಯ್ಯನವರು ತನ್ನ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟಿರುವದರಿಂದ ಬದ್ಲಿಗೆ ಬೇರೆ ಜನರನ್ನು ಸನ್ 1921 ನೇ ಇಸವಿ ಜುಲೈ ತಾರೀಖು 29 ನೇ ಶುಕ್ರವಾರದದಿನ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಹಾಲಿನಲ್ಲು ಹಗಲು 12 ಘಂಟೆಯಿಂದ ಸಾಯಂಕಾಲ 5 ಘಂಟೆವರೆಗೆ ಅರ್ಜಿದಾರರ ಪರವಾಗಿ ಓಟ್ಸು ತೆಗೆದು ಚುನಾಯಿಸಲ್ಪಡಲಾಗುವುದು.

(Sd) ಕೆ ಚಂಗಪ್ಪ, ಪ್ರೆಸಿಡೆಂಟ್

ಅದ್ಭುತವಾರ್ತೆ.

ಜಿಲ್ಲಾ ಎಜಾಪುರ ತಾ|| ಸಿಂದಗಿ ಪೈಕಿ ಬಾಗಾಪುರವೆಂಬ ಗ್ರಾಮದಲ್ಲಿ ಲಿಂಗವಂತರ ಒಬ್ಬ ಹೆಣ್ಣುಮಗಳು ಈಗ ಆರುವರ್ಷದಿಂದ ಅನ್ನ ನೀರು ಸೇರಿಸದೆ ಮಲಮೂತ್ರಾದಿಗಳನ್ನು ಮಾಡದೆ ಸದಾ ಉದ್ಯೋಗವನ್ನು ಮಾಡುತ್ತಾ ಮಂದಿಮಕ್ಕಳೊಡನೆ ಸಂತಸದಿಂದ ಕಾಲಕಳೆಯುತ್ತಿದ್ದಾಳೆ. ಸಂಸಾರ ಸುಖವನ್ನು ವರ್ಜಮಾಡಿದ್ದಾಳೆ. ಇವರನ್ನು ನೋಡುವದರ ದೆಸೆಯಿಂದ ಎಷ್ಟೋ ಜನರು ಬಂದು ದರ್ಶನ ತೆಗೆದುಕೊಂಡು ಹೋಗುತ್ತಾರೆ. ಇವರಿಗೆ ಸುಮಾರು ೩೦ ವರ್ಷವಾಗಿರಬಹುದು. ಇದು ದೇವಾಂಶವೇ ಆಗಿರಬಹುದೆಂದು ವಾಚಕರೇ ಊಹಿಸಬಹುದು. ಈಶ್ವರಲೀಲೆಯು ಅಗಾಧವಾದದ್ದು.

ಪ್ರ.ಕ.ಕ ದರ್ಶಿ.

ಕೊಡಗು ಕವಿಗಳ ವಿಚಾರ.

ಕೊಡಗು ಪತ್ರಿಕಾವಾಚಕರಲ್ಲಿ ವಿನಂತಿ.

ಕೊಡಗಿನ ಕವಿಗಳಲ್ಲಿ ಶ್ರೀಮಾನ್ ಆ. ಅಪ್ಪಚ್ಚನವರ ಜೀವಮಾನದ ಚರಿತ್ರೆಯು ತಯಾರಿಯಲ್ಲಿದೆ. ಪತ್ರಪರಿಪಾಲಕರು ಎದೆಕೊಟ್ಟಂತೆ ಜೀವನಚರಿತ್ರೆಯು ಪ್ರಕಟಿಸಲ್ಪಡುವುದು. ಅಂತು ವಾಚಕರಿಗಾಗಿ ಈ ಕೆಳಗಿನ ಕವಿಗಳ ಹೆಸರನ್ನು ಕೊಟ್ಟಿರುತ್ತೇವೆ.

1. ಗುಣಸೇನ,
2. ಮಂಗರಸ, III
3. ಮೌಕ್ತಿಕಕವಿ,
4. ನಂಜುಂಡ,
5. ಜಿ. ವೆಂಕಟರಾಯ,
6. ವೆಂಕಟಾದ್ರಿ ಶಾಮರಾಯ,
7. ಅಪ್ಪಚ್ಚಕವಿ,
7. ಮುಟ್ಟುಕವಿ,

" ಭಾಷಾಸೇವಕ '

ಮದ್ಯಪಾನ.

(೫ ನೇ ಸಂಚಿಕೆಯಿಂದ ಸಾಗಿದುದು).

ಸನ್ಮಿತ್ರರೇ ಒಂದಾವರ್ತಿ ಈ ಕಡೆಯನ್ನು ನೋಡಿರಿ. ಏನೆಯವಾರ ಪತ್ರಿಕೆಯಲ್ಲಿ ತಮ್ಮೆಲ್ಲರೆದುರಿಗೆ ತೆಗೆದಿಟ್ಟಿರುವ " ಮದ್ಯಪಾನ" ವೆಂಬ ವಿಷಯವು ಪೂರ್ಣವಾಗದ ಕಾರಣ ಆ ವಿಷಯವನ್ನೇ ಮುಂದರಿಸುತ್ತೇನೆ. ಓ ಮಹನೀಯರೇ, ಆ ಸುರಾರಾಕ್ಷಸಿಯೋನೋ ತನ್ನ ಕರ್ಮವನ್ನು ಮಾಡುತ್ತಲೇ ಇದ್ದಾಳೆ. ಅವಳು ಹಾಗೆ ಕರ್ಮಬದ್ಧಳಾಗಿರುವದರಿಂದ ಅವಳ ಕರ್ಮವನ್ನು ಜೈಸಲಿಕ್ಕೆ ನಮ್ಮಿಂದ ಸಾಧ್ಯವೇ? ಎಂದು ಶಂಕಿಸಬೇಡಿರಿ. ನಾವುಗಳೆಲ್ಲರೂ ಈಶ್ವರಾಂಶರಾದುದರಿಂದಲೂ ಸೃಷ್ಟಿಕರ್ತನು ನಿಮ್ಮಗಳಿಗೆ ಜ್ಞಾನ ಬುದ್ಧಿ ವೀರ್ಯ ಸ್ಥೈರ್ಯ ಧೈರ್ಯಾದಿಗಳನ್ನು ಕೊಟ್ಟಿರುವಾಗ ನಿಮ್ಮಗಳನ್ನು ಮದ್ಯಸೇವನೆ ಮಾಡಿರೆಂದು ನಿರ್ಬಂಧಪಡಿಸುವವರಿಲ್ಲ. ಹೀಗಿರುವಾಗ ಈ ಗರಳವನ್ನೇಕೆ ಪಾನಮಾಡುವಿರಿ ಇದರಿಂದ ನಿಮಗೆ ಐಶ್ವರ್ಯ ಪ್ರಾಪ್ತಿಯೋ? ಅಲ್ಲ ವಿದ್ಯಾಪ್ರಾಪ್ತಿಯೋ ಕೀರ್ತಿಯೋ? ಯಶಸ್ಸೋ ಇಲ್ಲವಾದರೆ ದೇಹದಾರ್ಢ್ಯವೋ ಇಲ್ಲವಾದರೆ ವಿವೇಕ ತಿಳಿವಳಿಕೆಗಳು ಹೆಚ್ಚುತ್ತದೆಯೋ? ಈ ಪೈಕಿ ಯಾವುದನ್ನು ನೋಡಿ ನೀವು ಮದ್ಯವನ್ನು ನೆಚ್ಚಿದಿರಿ. ಮದ್ಯಪಾನ ಮದಾಂಧತೆಯಿಂದಲ್ಲವೇ ಜಗದ್ವಿಖ್ಯಾತನಾದ ಕುಂಭಕರ್ಣನು ರಾಮನೈನ್ಯದೊಡನೆ ಯುದ್ಧಮಾಡಿ ಸುಗ್ರೀವನೆಂಬ ಕಪಿರಾಜನನ್ನು ಕೈಸೆರೆ ಹಿಡಿದುಕೊಂಡು ಹೋಗುವಾಗ ಅವನು ತನ್ನ ಕಿವಿ ಮೂಗುಗಳನ್ನು ಕತ್ತರಿಸಿ ತೆಗೆದುಕೊಂಡು ಹೋದರೂ ತಿಳಿಯದೆ ಹೋಗಿದ್ದು. ಪ್ರಖ್ಯಾತಿಹೊಂದಿರುವ ಯದುವಂಶವೂ ಕೂಡ ಶ್ರೀ ಕೃಷ್ಣನ ಮಾತನ್ನು ಉಲ್ಲಂಘಿಸಿ ಮದ್ಯಪಾನ ಮಾಡಿದುದರಿಂದಲೇ ಪ್ರಯಾಗದಲ್ಲಿ ಅವರ ಕುಲ ಕ್ಷಯವಾಯಿತು. ಹೀಗಿರುವಾಗ ಮನುಷ್ಯಮಾತ್ರದವರ ಪಾಡನ್ನು ಹೇಳಬೇಕೆ? ಕೌಂಡನಪುರದ ಜಮೀನುದಾರನಾದ ನಿರ್ಮಲಕುಮಾರನೂ ಕೂಡ ಕುಡಿಕನಾಗಿ ಅವನ ಆಸ್ತಿಪಾಸ್ತಿ ಪಗ್ಗರೆಗಳನ್ನು ಕಳೆದುಕೊಂಡದು ಸಾಲದುದಕ್ಕೆ ತನ್ನ ಧರ್ಮಪತ್ನಿಯಾದ ಸುಕುಮಾರಿಯನ್ನು ಕೊನೆಗಾಣಿಸಿ ತಾನು ಹುಚ್ಚನಾಗಿ ಕಟ್ಟಕಡೆಗೆ ಹುಚ್ಚರ ಆಸ್ಪತ್ರೆಯಲ್ಲಿ ಬಿದ್ದು ಸತ್ತುಹೋದನೆಂಬ ಸಂಗ್ತಿ ಒಂದು ಪುಸ್ತಕದಲ್ಲಿದೆ. ಶಂಕರನಾರಾಯಣನೆಂಬುವನು ತಾನು ಕುಡಿಯದಕಾರಣ ಈ ವಿಷವನ್ನು ಚೆನ್ನಾಗಿ ವರ್ಣಿಸಿ ದೂಷಿಸುತ್ತಾನೆಂದು ಯೋಚಿಸಬೇಡಿರಿ. ಹಾಗೆಯೇ ಜಗದೀಶ! ಪ್ರಭೋ! ದಾಮನೆ! ನಿನ್ನಿಂದ ನಿರ್ಮಿತರಾದ ಮನುಷ್ಯರು ನಿನ್ನನ್ನೇಕೆ ಅರಿಯರು? ನಿನ್ನ ವಿಷಯದಲ್ಲಿ ಅವರಿಗೆ ಇಷ್ಟು ಉಪೇಕ್ಷೆಯೇ? ನಿನ್ನನ್ನು ದೂರಮಾಡಿ ಅವರು ಈ ಗರಳವನ್ನೇಕೆ ಪಾನಮಾಡುವರು? ಪ್ರಯತ್ನಪಟ್ಟಾದರೂ ಈ ಕಾಲಕೂಟವನ್ನು ಕುಡಿದು, ತಾವು ಕಷ್ಟಪಡದಲ್ಲದೆ ಸಂಪದವನ್ನು ಕೆಡಿಸಿ ಸುಖಮಯವಾಗಬೇಕಾದ ನಿನ್ನ ರಾಜ್ಯದಲ್ಲಿ ದುಃಖವನ್ನು ಕಂಡು ಹರಡುತ್ತಿರುವರೇಕೆ? ಅಯ್ಯೋ? ಹೀಗೇಕಾಯಿತು. ಇದು ನಿನ್ನ ಕಟ್ಟಳೆಗೆ ವಿರೋಧವಲ್ಲವೇ? ದೀನಬಂಧೋ? ಈ ಪುಣ್ಯಭೂಮಿಯನ್ನು ಆವರಿಸಿರುವ ಈ ವಿಷವಲ್ಲರಿಯು ನಿರ್ಮೂಲವಾಗುವದೆಂದಿಗೆ? ಕೃಪಾಮಯ! ಇರಲಿ ದಾಹಕ ಮಹಾಶಯರೇ? ಯಾರಾದರೂ ಕುಡಿಕರಾಗಿರುವ ಪಕ್ಷದಲ್ಲಿ ಕುಡುಕತನವನ್ನು ಬಿಟ್ಟುಬಿಡಿರಿ! ಖಂಡಿತವಾಗಿಯೂ ಕುಡಿತದಿಂದ ಪ್ರಯೋಜನವಿಲ್ಲ! ತನ್ನ ಮನಸ್ಸಿನಲ್ಲೂ ಕೂಡ ಈ ಮದ್ಯಪಾನವನ್ನು ಯೋಚಿಸಬೇಡಿರಿ? ಎಷ್ಟೋ ಜನರು ತಮ್ಮ ಅಂಗಿಜೇಬುಗಳಲ್ಲಿ ರೂಪಾಯಿಯ ನೋಟುಗಳನ್ನು ಇರಿಸಿಕೊಂಡು ಕುಡಿದನಂತರ ಜ್ಞಾನಹೀನರಾಗಿ ಮಳೆ ಪಗ್ಗರೆಗಳಲ್ಲಿ ನೆನೆದು ಹಾಳಾಗಿ ಹೋಗುತ್ತದೆ. ಮತ್ತು ಅನೇಕರು ಚೈತನ್ಯಹೀನರಾಗಿ ದಾರಿಯಲ್ಲಿ ಬಿದ್ದು ಇರುವಾಗ ಸಮಯನೋಡಿ ಹೊಂಚುಹಾಕುತ್ತಿದ್ದವರು ಅವರ ಕೊಡೆ ಕೋಲು ಟೋಪಿ ರೂಪಾಯಿಗಳನ್ನು ಸಹ ಕಳವು ಮಾಡುವದುಂಟು. ಇಲ್ಲಿ "ಗೆ ಮದ್ಯ" ಎನ ಸಿನದದ ಮಧ್ಯಭಾಗವು ನಿಲ್ಲಿಸಿರುತ್ತೆ. (ಶೇಷ)

ಎಸ್. ಎಸ್.

ಕೂಪ ಕೂರ್ಮ.

ಭಾವಿಯಲ್ಲಿ ಇರತಕ್ಕ ಮತ್ಸ್ಯವೇ ನೀನು ನಿನ್ನ ಭಾವಿಯನ್ನು ಆಳಮಾಡಿದನ್ನು ತುಸೆಂದು ನೆನಸುತ್ತೀಯೆ. ಅಗಲವಿಲ್ಲದೆ ಆಳಮಾಡಿದರೆ ತುಸಿದುಬಿದ್ದೀತು. ಯೆರೆ ಮುಳುಕನಾಗಿ ಆಡಿಸಬೇಡ. ಅಗಲವಾದಷ್ಟು ಆಳವಾಗಬಹುದು. ಸಮುದ್ರವನ್ನು ನೀನು ನೋಡಿದೆಯಾ ಇಲ್ಲವೆ ಕೇಳಿದ್ದಾದರೂ ಉಂಟೋ? ಸಮುದ್ರ ಆಕಾಶದವಾಗೆ ನೋಡುವೇಯಲ್ಲ. ಹಾಗೆಯೇ ಆಳವನ್ನು ಕಂಡವನಿಲ್ಲ. ಇಂತಾದೊಡ್ಡ ಸಮುದ್ರದಲ್ಲಿ ತಿಮಿ ತಿಮಿಂಗಿಲಗಳು ಸೊರ್ಕು ಮೀನುಗಳು ಅಲ್ಲದೆ ಹೇರಳ ಮೀನುಗಳು ಹಡಗು, ದೋಣಿ, ಪತ್ತೇಮಾರಿ, ಸ್ಟೀಮರ್, ಮೊದಲಾದ ವಾಹನಗಳು ಚಲಿಸುತ್ತವೆ. ನಿನ್ನ ಭಾವಿಯಲ್ಲಿ ಕೊಡಪಾನದೊಡನೆ ಬೇರೆ ಏನೂ ಬರುವದಿಲ್ಲ. ಅದೇ ದೊಡ್ಡದೆಂದು ಭಾವಿಸುತ್ತೀಯಾ. ಇದು ನಿನಗೆ ಸ್ವರ್ಗದಂತೆ ನೆನಸುತ್ತೀಯಾ. ಇದರಲ್ಲಿ ಯಮದೂತನು ಇದ್ದಾನೆ. ಅವನ ಭೀಕರ ಘರ್ಜನೆಗೆ ಅಡಗಿರಬೇಕು. ಅವನ ಹೊರತು ನಿನ್ನ ಯಾವಕಾರ್ಯವು ನಡಿಯದು. ನಿನ್ನ ಒಲೆ ಉರಿಸಬೇಕಾದರೆ ಅವನ ಆಜ್ಞೆಬೇಕು. ನಿನ್ನ ಮನೆ ಕಟ್ಟಬೇಕಾದರೆ ಅವನ ಆಜ್ಞೆಬೇಕು. ಹೊಡಲು ನೇಗಿಲು ಕರುವೇಕಾದರೆ ಅವನ ಆಜ್ಞೆಬೇಕು. ಉಟ್ಟುಕೊಳ್ಳಲು ಅವನ ಆಜ್ಞೆಬೇಕು. ಕಡೆಗೆ ಅಡಿಗೆಮಾಡಿದ್ದನ್ನು ಉಣ್ಣಬೇಕಾದರೆ ಅವನ ಆಜ್ಞೆಬೇಕು. ಯಮದೂತನ ಆಜ್ಞೆಯಲ್ಲಿ ಇದ್ದೆಂದು ನೀನು ಬಾಳುವೆ. ಕೊಡಗು ಗಿಣಿಯಗೂಡಿನಂತೆ ಇರುವದು ನಿಜ. ಆ ಗೂಡಿನಲ್ಲಿ ಇರುವ ಗಿಣಿಯಂತೆ ನಿನ್ನ ಪಾಡು. ಮಾತಾಡೋ ರಾಮನಪ್ಪಯೆಂದು ಹೇಳಿಕೊಟ್ಟ ಮಾತಲ್ಲದೆ ಬೇರೆ ಮಾತಿಲ್ಲ. ಆದರೆ ಹಾಲು ಅನ್ನ ನನಗೆ ಎಷ್ಟು ಸಿಗಲಿ ಎಂದು ಭಾವಿಸುತ್ತೀಯೆ? ನೀನು ಒಬ್ಬನ ಅಧೀನದಲ್ಲಿ ಬಂಧನದಲ್ಲಿ ಇದ್ದಿಯೆಂದು ಭಾವಿಸುವದಿಲ್ಲವೋ? ಹೊರಗೆ ನೋಡು. ಆಕಾಶದಲ್ಲಿ ನಿನ್ನ ಗೆಳೆಯರು ಹಾರುತ್ತಾಡುವದನ್ನು ನೋಡು. ಅವರು ನಡೆವ ಸುಖವನ್ನು ನೋಡು. ಅವರು ನಿನ್ನಹಾಗೆ ಬಂಧನದಲ್ಲಿ ಇಲ್ಲ. ಇಷ್ಟರ ಮೇಲೆ ... ನಿನ್ನಹಾಗೆ ಹೊರೆ ಹೊರುವವರು ... ಬೇಡ ಅವರು ಸ್ವತಂತ್ರರಾಗಿ ... ಕ್ಕೆ ಹಸಿಯುಂಡರೋಳಿಗೆ ಅನ್ನ ಸಿಗದಿದ್ದರೆ ಒಬ್ಬನ ಸುಖಕ್ಕೆ ದುಡಿವರು ಕಷ್ಟಪಡುವದು ಬೇಡ ... ನಿನ್ನಿಂದ ತಾನು ಪರಕೀಯನಾಗಬೇಡ ಬಿಟ್ಟು ತನ್ನ ಕಿಂದ ... ಬೇಡ. ಹೊರ ಕೆಲಸ್ಕೆ ನಿನ್ನ ... ನೀನು ಸಟ್ಟಿದ್ದನ್ನು ಗಳಿಯಲು ಅವನ ಆಜ್ಞೆಬೇಕು ... ಗೂಡು ... ಇಲ್ಲಿ ಇದರ ... ಗಳು ಮಾತ್ರ ತೆರೆಗುಳು ಪ್ರಯತ್ನ ಮಾಡು. ನಿನ್ನ ಗೆಳೆಯರಂತೆ ನೀನು ಹಾರಾಡಲು ಪ್ರಯತ್ನಮಾಡು. ಹೊರ ಒಂದರೆ ಬೇಕು ಒಂದೀತು ಎಂಬ ಭಯವು ನಿನ್ನಲ್ಲಿರಬಹುದು. ನಿನಗೆ ಪಾರಾಬಹುದು. ಬೆಕ್ಕಿನ ಪಟ್ಟೆಲು ನಾಯಿಬರುವದು. ನಾಯಿಯನ್ನು ಓಡಿಸಲು ಹುಲಿ ಬರುವದು. ಹುಲಿಯನ್ನು ಹೊಡೆಯಲು ಮನುಷ್ಯನು ಇದ್ದಾನೆ. ಹೊರಗೆ ಬಿಟ್ಟರೆಬಿಟ್ಟರು ಯಿವಾದರೆ ... ನಿನ್ನ ಗೂಡಿಗೆ ಬೆಕ್ಕು ಬಂದರೆ ನಿನ್ನ ಗತಿಯೇನು ನಿನ್ನ ಕರೆಗೆ ಗೂಡಿಂದ ಹೊರಗೆ ಬೀಳುವದು ಹಾಗೆ ಆಳುವರೂ ನಿನ್ನ ಪ್ರಾಣಹೋದಮೇಲೆ ಆಳುವದು. ಸಂಚಿಗಿಂದ ... ಗಿನ ಕಥೆ ಕೇಳಿದೆಯೋ? ಅಸಂಗತಿ ಊರಿಗೆಲ್ಲಾ ಗೊತ್ತಾಗುವಾಗ ತಿಂಗಳು 6 ಕಳೆದು ಹೋಯಿತು. ನಮ್ಮ ಹಿಂದುಸ್ಥಾನದ ಮೇಲುವರೆಗೆ ಆತಗಿಯಿದೆ ಸಮುದ್ರ ಪ್ರಯಾಣ ಆಗಕೂಡದು ಅದರಂತೆ ಗೂಡಿನ ಗಿಣಿಯಪಾಡು. ಕೂಪದಲ್ಲಿರುವ ಕೂರ್ಮವೇ ನೀನು ನಿನ್ನ ಕೂಪವನ್ನು ಹೊಗಳಬೇಡ. ಅಪಾಯಗಳು ಬಂದರೆ ನಿನ್ನ ಗತಿಯೇನಾದೀತು ಕೂಪಕ್ಕೆ ಬೀಳುವ ಯಿರೆಯುಮುಳಕ್ಕೆ ಮರುಳಾಗಬೇಡ. ಆದುದ್ದರಿಂದ ಗಾಳವನ್ನು ಹಾಕಿ ನಿನ್ನ ಕೂಪ ಅಗಲವಿಲ್ಲದೆ ಆಳಕ್ಕೆ ನೋಡಬೇಡ ನೋಡಬೇಡ. ಕೊಡಗು ಮಹಾರಾಜಿಗೆ ಅಮಲ್ ಮಿಗೇಲನ್ ಆದ ಪಕ್ಷಕ್ಕೆ ಕಣ್ಣಿಗಾಕ್ಕೆ ಬರುತ್ತ ಮುಟ್ಟಿದರೆ ಚಿನ್ನವಾಗುವರೀತಿ ಉತ್ತಮಸ್ಥಿತಿಗೆ ಬರುವದು ಸರ್ವಾಧಿಕರಿಂದ ಬೇಡನು ವಾಲ್ಮೀಕಿ ಮಹರ್ಷಿಯಾದನು ಸ್ವಶಕ್ತಿಯನ್ನು ನಂಬಿ ಪಿರ್ಕ್ಯಕವಿವು ಕೇಳನು ಯಾವದೊಂದು ನದಿಯು ನದಿಯೆಂದು ಕರೆಯಲ್ಪಡಬೇಕಾದರೆ ಸಮುದ್ರವನ್ನು ಸೇರಬೇಕು ಇಲ್ಲವಾದರೆ ಸಮುದ್ರಕ್ಕೆ ಸೇರುವ ಹೊಳೆಯನ್ನಾದರೂ ಸೇರಬೇಕು. ಉಭಯ ಭ್ರಷ್ಟತ್ವಯೆಂದು ಒದಿಯುತ್ತ. ಕೊಡಗಿನಲ್ಲಿ ಅಲ್ಪವಿದ್ಯೆಯ ಗರ್ವದ ಪಾರ್ಶ್ವವಾತ್ಸಲ್ಯದಂತೆ ನಟಿಸಿ ಕಾಗೆ ನವಿಲಿನ ಗಾದೆಯಂತೆ ಯಥಾ ಸ್ವಪ್ನ ತಥಾ ಭ್ರಷ್ಟವಾಗಿ ಉಭಯ ಭ್ರಷ್ಟತ್ವಹೊಂದಿದೆ. ತಾಳಿ, ತಾಳಿ, ಯೆಂದರೆ ಇದು ತಾಳ್ಮೆಗೆ ಸಮಯವಲ್ಲ. ತೀರ್ಥಬಂದಾಗ ನಡಿ ಸವಾರಿಕೊಳ್ಳುವದು ಒಳ್ಳೇದು. ಮದರಾಸ್ ಆರ್ಮಲ್ ಮಿಗೇಲನಾ ಇದರಲ್ಲಿಯೂ ಸಹ ಇಲ್ಲಯೆಂತೆಯೋ ಸಾರ್ವಭೌಮ ಚಕ್ರವರ್ತಿಯವರ ಆಳಿಕೆ. ನಂಬಿ ಮರದಿಂದ ದೊಡ್ಡ ಮರಗಳ ನೆರಳನ್ನು ಆಶ್ರಯಿಸುವದು ಒಳ್ಳೇದು. ಎಂದು ನನ್ನ ಭಾವ.

ಕೊಡಗು ನಿವಾಸಿ

ನನ್ನ ಹಿಂದಿನ ಮಹನೀಯ ಸಮೋದರರಿಗೆ

ಶ್ರೀ ಭಗವಂತನ ಹೆಸರಿನಲ್ಲಿ.

ಕಿಲಾಫತು ಎಲ್ಲಾ ಮುಸಲ್ಮಾನರಿಗೆ ಉಬಾಬು (?) ಆಗಿದೆ. ಕಿಲಾಫತಿಗೆ ಕೊಡದವರು ಮತ್ತು ವಿರೋಧಹೇಳುವವನು ಮಹಮ್ಮದೀಯ ಮತದಲ್ಲಿ ಕೆಟ್ಟವನಲ್ಲದೆಂದೂ ಕಿಲಾಫತಿನಿಂದ ಮಹಮ್ಮದೀಯರಿಗೆ ಮತ್ತು ಹಿಂದುಗಳಿಗಾವು ಸ್ಥಿರ ಆಗುತ್ತಾರೆಂದು ಮಹಾಪ್ರಖ್ಯಾತರಾದಂಥಾ ಮಹಮ್ಮದ್ ನವಿ ಎಂಬ ಗುರು ಸಹಿವಾಬುಕಾರಿ ಎಂಬ ಪುಸ್ತಕದಲ್ಲಿ ಹೇಳಿದ್ದಾರೆ. ಕಿಲಾಫತ್ತಿಗೆ ಕೂಡಿರುವಂಥಾ ಹಿಂದೂ ಜನರಿಗೆ ನಮಾಜುಮಾಡಬೇಕೆಂದು ನಮ್ಮ ಖುರಾನಿನಲ್ಲಿ ಹೇಳಿರುತ್ತೆ. ಅದ ಕೆಲಸಗಳಿಗೆ ಜಗಳ ಮಾಡುವುದು ಬಹಳ ಪಾಪ ಆಗುತ್ತದೆಂದೂ ಖುರಾನ್ ಹೇಳಿರುತ್ತೆ. ಮಹಾತ್ಮನ ಪೈಕಿ ಒಬ್ಬರು ಕೇಡು ಮಾಡಿದ್ದಕ್ಕೆ ಎಲ್ಲಾ ಮಹಾತ್ಮನರನ್ನು ದೂಷಿಸಬಾರದು. ಹಿಂದೂ ಜನರ ಮಹಾತ್ಮಾ ಗಾಂಧಿಯವರೇ ಆಗಿರುತ್ತಾರೆ(?) ಸತ್ಯವನ್ನು ಹೇಳುವ ಮಹಾತ್ಮಾ ಗಾಂಧಿಯವರನ್ನು ದೂಷಿಸಿದರೆ ದೇವರನ್ನು ದೂಷಿಸಿದ ಹಾಗೆ ಆಗುತ್ತೆ. ಶ್ರೀ ಗಾಂಧಿಯವರು ಹೇಳುವ ಹಾಗೆ ಎಲ್ಲಾ ಹಿಂದೂ ಮಹಮ್ಮದೀಯ ಸಹೋದರರು ನಡೀಬೇಕೆಂದು ಪ್ರಾರ್ಥಿಸುತ್ತೇನೆ.

ಅಬ್ದುಲ್ ರಹಿಮಾನ್ ಮೊಕಲಿಯಾರು,

ಪತ್ರವ್ಯವಹಾರಗಳು.

ಬಾತ್ಮಿದಾರರು ಪರರ ಅಭಿಪ್ರಾಯಗಳಿಗೆ ಪತ್ರಪ್ರಕಾಶಕರು ಉತ್ತರವಾದಿಗಳಲ್ಲ. [ಎಡಿಟರ್]

ಕೊಡಗು ಬೆಳ್ಳುಮಾಡು ಹೊಳೆಗೋಳು.

ಅಯ್ಯಾ,

ಹಾಡಿನಾಲ್ಕು ನಾಡು ತಾಲ್ಲೂಕು ವಜಾ ಆದುವರಿಂದ ಎದೇನಾಲ್ಕು ನಾಡು ತಾಲ್ಲೂಕಿಗೆ ಹೋಗುವ ಅರ್ಧ್ದಕ್ಕ ಕಳೆದ ಖುಶ್ಯವಾದ ಮಳೆಯಲ್ಲು ಆತ ಪ್ರವಾಹಕ್ಕೆ ಹೊರಟುಹೋಗಿ ಹೊಳೆಗೆ ಮತ್ತು ಫರ್ಲಾಂಗ್ ನಮನವಾಗುತದೆ ಅನೇಕರು ಪಾಪರು ಬರುವದು ಕಂಡು ವಿಚಾರಿಸುವಲ್ಲು ಈ ಹೊತ್ತ ಜೋಡಿಕರವು ನಾಡು ಪಾರುಪತ್ಯಗಾರು ಪ್ರಥಮ ಹರಾಜು ಮಾಡಿದಲ್ಲಿ ಸುಂಕದ ಉತ್ಪತ್ತಿ ಕಡಿಮೆಯಾಯಿತೆಂದು ಸುಬೇದಾರರವರು ಆಗ್ರಹಪಟ್ಟು ತಾವೇ ಪುನಃ ಹರಾಜುಮಾಡಿದಲ್ಲಿ ಯಾರೂ ಖರೀದುಮಾಡದೆ ಹೋದುದರಿಂದ ದೋಣಿ ಹಾಕಲಿಲ್ಲ. ಪಂಕಲೂ ನಾಡವರು ಕೇವಲ ತೊಂದರೆ ನಮ್ಮಿಂದ ಮರದ ಪಾಲಹಾಕುವ ಏರ್ಪಾಡು ತೀವ್ರವು ಎಂಬದಾಗಿ ಹೇಳಿದರು. ಈ ಮಾತು ನಿಜವಾಗಿದ್ದಲ್ಲಿ ಸರಕಾರದವರ ಹಣ್ಣಿಂದು ಜೋಡಿಸಲಾರೆ. ಮುಖ್ಯ ಪಟ್ಟ ಅಧಿಕಾರಿಗಳು ಅಜಾಗ್ರತೆಯಿಂದ ಅಭಿವೃದ್ಧಿಯು ಸೋಲಾಗವು ಸಡಿಲವಾಡಿಕೆಂಬ ನಿರೀಕ್ಷಣೆಯ ಕಾರಣವೆಂದು ಯೋಚಿಸಬೇಕಾಗಿರುತ್ತದೆ. ಮಳೆಗೆ ಕಡದೆಯೂ, ಹೊಳೆಗೆ ಜೋಡಿಯೂ ವರ್ಷಕಾಲದಲ್ಲು ಇರುವೇ ಕಾದ್ದು ಧರ್ಮವಲ್ಲದೆ ಸುಂಕದ ಆದಾಯವು ಅಲ್ಪಸ್ವಲ್ಪ ಕಡಿಮೆಯಾದಾಗ್ಯೂ ನಮ್ಮ ಘನ ಸರಕಾರದವರು ಕ್ಷಮಿಸಬೇಕಲ್ಲದೆ ಕೆಲವು ದಿನದ ರೈತರ ಗತಿಯು ಅಧೋಗತಿಯಾಯಿತಲ್ಲ, ಅನಿವಾರ್ಯವಾದಂಥ ರೈತರು ಒಂದುವೇಳೆ ಈ ದೊಡ್ಡ ಹೊಳೆಗೆ ಪಾಲುಹಾಕಿದರೆ ಅಪಾಯದಿಂದ ಅನೇಕರು ಗಂಗಾಯಾತ್ರೆ ತೆರಳುವದು ನಿಜ. ಆದುದರಿಂದ ದಯಾಳು ಪ್ರಭುವಾದ ಹೊಸ ಕಮಿಷನರವರು ಪ್ರೀತಿಯಿಟ್ಟು ಜಾಗ್ರತೆಯಿಂದ ದೋಣಿ ಹಾಕಿಸುವಂತೆ ಮಾಡಬೇಕಾಗಿ ಪ್ರಾರ್ಥನೆ.

" ಪ್ರತ್ಯಕ್ಷ ದರ್ಶಿ."

ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು.

ದೇಶದವರಿಂದ ಚುನಾಯಿಸಲ್ಪಟ್ಟ ಈ ಬೋರ್ಡಿನ ಮೆಂಬರುಗಳು ಅವರಿಗೆ ತಮ್ಮ ಸ್ವಬುದ್ಧಿಯಿಂದ ಮೀಟಿಂಗಿನಲ್ಲಿ ಚರ್ಚಿಸುವುದು ವಾಡಿಕೆಯಾಗಿತ್ತು. ಈಗಚಾನೆ ಈ ಜುಲೈ ಮಾಹೆ 3 ನೇ ತಾರೀಖಿನಲ್ಲಿ ಬರುವ ಚರ್ಚೆಗಳ ವಿಷಯ ದೇಶದ ಪ್ರಜೆಗಳ ಆಲೋಚನೆಯನ್ನು ತೆಗೆದುಕೊಳ್ಳತಕ್ಕ ಬಗ್ಗೆ ಮೆಂಬರುಗಳು ಮಡಿಕೇರಿಯಲ್ಲು 3 ದಿನಕ್ಕೆ ಮುಂಚಿತವಾಗಿ ಒಂದು ಮೀಟಿಂಗು ಮಾಡುತ್ತಾರೆಂಬುದು ಕೇಳಿ ಬಹಳ ಸಂತೋಷಪಡುತ್ತೇನೆ.

ಮೆಂಬರುಗಳಾದರೋ ದೇಶದವರಿಂದ ಚುನಾಯಿಸಲ್ಪಟ್ಟವರು, ವಿದ್ಯಾವಂತರು, ನವನಾಗರೀಕತೆಯ ರಾಜಕೀಯ ಶಿಕ್ಷಣದವರು, ತಾವು ಚುನಾಯಿಸಲ್ಪಟ್ಟ ತಾಲ್ಲೋಕಿನ ಎಲ್ಲಾ ರೈತರ ನಂಬಿಕೆಯನ್ನು ಚೆನ್ನಾಗಿ ಕೈಕೊಂಡು ಕಾರ್ಯವ ನಡಗಿಸಬೇಕೆಂದು ಬಲ್ಲವರು. ತಾಲ್ಲೋಕಿನ ಪ್ರಜೆಗಳ ಇಷ್ಟ ಮತ್ತು ಅಭಿವೃದ್ಧಿಗನುಕೂಲವಾಗಿ ಕೆಲಸಮಾಡಿ ಅವರ ಗೌರವವನ್ನು ಸಂಪಾದಿಸುವ ಇಚ್ಛೆಯುಳ್ಳವರು ಅವರ ಕರ್ತವ್ಯವಲ್ಲದೆ ಮೊದಲಿನಂತೆ ಡಿ ಬಿ. ಮೆಂಬರುಗಳೆನಿಸಿಕೊಳ್ಳುವ ಗೌರವಕ್ಕೂ, ಬೋರ್ಡಿನಲ್ಲಿ ಕೊಡಗಿನ ನಿವಾಸಿಗಳ ಪ್ರತಿನಿಧಿಗಳಿದ್ದಾರೆಂಬ ಮಾತಿಗೂ, ಬೋರ್ಡಿನ ಪ್ರೆಸಿಡೆಂಟರೂ ಸರಕಾರಿ ನೌಕರರೂ ಸ್ವೇಚ್ಛೆಯಿಂದ ಜರಗಿಸುವ ಕಾರ್ಯಗಳಿಗನುಕೂಲಗಳಾಗಿರುವುದಕ್ಕಾಗಿಯೂ, ಚುನಾಯಿಸಲ್ಪಡಬಿಲ್ಲವೆಂದು ಇವರು ಸ್ಪಷ್ಟಮಾಗಿ ಊಹಿಸುತ್ತೇನೆ. ಆದುದರಿಂದ ಒಂದು ಮೀಟಿಂಗಿನ ವಿಷಯವಾಗಿ ನಡೆಯುವ ಸಂಭಾಷಣೆಗಳನ್ನು ಚರ್ಚಿಸುವ ಬಗ್ಗೆ ದೇಶದವರ ಆಲೋಚನೆಯನ್ನು ಕೇಳಲು ಉತ್ಸಾಹಪಟ್ಟದ್ದು ಸಂತೋಷಕರವಾದ ಸಂಗತಿಯಾದರೂ ಅವರನ್ನೆಲ್ಲಾ ಮಡಿಕೇರಿಗೆ ಬರಬೇಕೆಂದೂ, ರೈತರ ಉದಾಸೀನತೆಯಿಂದಾಗುವ ನಷ್ಟಕ್ಕೆ ಬಾಧ್ಯರಾಗುವುದಿಲ್ಲವೆಂದೂ ಬರೆದನ್ನು ನೋಡಿ ಕೊಂಚ ವ್ಯಾಕುಲಪಡುತ್ತೇನೆ.

ಎಲ್ಲಾ ಮೀಟಿಂಗಿನಲ್ಲಾಗುವ ನಿರ್ಣಯಗಳ ವಿಷಯ ಚರ್ಚೆಗಳಿಗೆ ಆಗಾಗ್ಗೆ ದೇಶದವರು ಈ ಮೆಂಬರುಗಳು ಹೇಳುವ ಸ್ಥಳಕ್ಕೆ ಸೇರಲು ಎಷ್ಟು ಅನಾನುಕೂಲವೆಂಬನು ಮೆಂಬರುಗಳ ಮನಸ್ಸಿಗೆ ತಂದುಕೊಳ್ಳಬೇಕು. ಅಲ್ಲದೆ ನ್ಯಾಯಾನುಸಾರವಾಗಿ ಅವರು ತಮ್ಮ ತಮ್ಮ ತಾಲ್ಲೋಕಿನಲ್ಲಿದ್ದುಕೊಂಡು ತಾಲ್ಲೋಕಿನ ಸಾರತಮ್ಯಗಳನ್ನು ಚೆನ್ನಾಗಿ ತಿಳಿದುಕೊಂಡು ಮೀಟಿಂಗುಗಳಿಗೆ ಹೋಗಬೇಕಾದ್ದೆಂದು ನೆನಸುತ್ತೇನೆ.

ಆದುದರಿಂದ ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳು, ದಯವಿಟ್ಟು ಇನ್ನು ಮುಂದೆಲ್ಲಾದರೂ, ತಮ್ಮ ತಾಲ್ಲೋಕಿನ ಪ್ರಜೆಗಳನ್ನೆಲ್ಲಾ ಅವರ ತಾಲ್ಲೋಕಿನ ಪ್ರಜೆಗಳನ್ನೆಲ್ಲಾ ಅವರ ತಾಲ್ಲೋಕಿನ ಮುಖ್ಯ ಸ್ಥಳದಲ್ಲಿ ಸಭೆ ಸೇರಿಸಿ ಮುಂದಿನ ಮೀಟಿಂಗಿನ ವಿಷಯಗಳನ್ನು ಚೆನ್ನಾಗಿ ಪರಿಶೋಧಿಸಿ ಅಲ್ಲಿಯಾಗುವ ನಿರ್ಣಯಗಳನ್ನು ಅದಾ ತಾಲ್ಲೋಕಿನ 2 ಜನ ಪ್ರತಿನಿಧಿಗಳೊಂದಿಗೆ ಬೋರ್ಡ್ ಮೀಟಿಂಗಿಗೆ 4—5 ದಿನ ಮುಂದಾಗಿ ಮಡಿಕೇರಿಯಲ್ಲಿ ಪುನಃ ಸಭೆ ಸೇರಿ ಆಯಾ ತಾಲ್ಲೋಕಿನ ಎಲ್ಲಾ ನಿರ್ಣಯಗಳನ್ನು ಮರಳಿ ಚರ್ಚಿಸಿ ಆ ನಿರ್ಣಯದಂತೆ ಮೆಂಬರುಗಳೆಲ್ಲರೂ ಮೀಟಿಂಗಿನಲ್ಲಿ ಚರ್ಚಿಸಿದರೆ, ದೇಶದ ಪ್ರಜೆಗಳ ಅಭಿವೃದ್ಧಿಗೂ ರೈತರ ರಾಜಕೀಯ ಸಂಬಂಧದ ಉತ್ತೇಜನಕ್ಕೂ ಮೆಂಬರುಗಳ ಗೌರವಕ್ಕೂ ಕಾರ್ಯಸಾಫಲ್ಯಕ್ಕೂ ಮತ್ತು ಬೋರ್ಡಿನ ಏಳಿಗೆಗೂ ತೊಂದರೆ ಬರುವದಿಲ್ಲವಾಗಿ ಭಾವಿಸುತ್ತೇನೆ.

ಪ್ರಜೆ.

ಸಂಪಾದಕರೆ,

ನಿಮ್ಮ ಕಳೆದ ಸಂಚಿಕೆಯಲ್ಲಿ "ಸಹೋದರಿ" ಯವರು ವಿಮರ್ಶೆ ಮಾಡುವದರಲ್ಲಿ ಕೊಡಗಿನ ಸಹೋದರರ ವಿಷಯ ನಾನು ಒಂದು ಲೇಖನ ಬರೆದಿದ್ದೇನೆಂತ ಬರೆದದೆ. ಆ ಲೇಖನವನ್ನು ನಾನು ಬರೆಯಲಿಲ್ಲ. ನಿಮ್ಮ ವಿಮರ್ಶಕರಾದವರು ದಯವಿಟ್ಟು ಸಂಗತಿ ತಿಳಿಕೊಳ್ಳದೆ ಬರೆಯುವಂತೆ ಎಲ್ಲಾ ತಮಗಾಗುವದನ್ನು ನಂಬಿದ್ದೇನೆ. ಆ ವಿಮರ್ಶೆಯಲ್ಲಿ ಬರೆದಮೇಲೆ ನಾನು ಪ್ರಶ್ನೆಯನ್ನು ಪಡೆದವನೂ ಅಲ್ಲ. ಪ್ರತಿದ್ವಂದ್ವಿ ಪಡೆದವರು ಪ್ರಕಟಿಸಿರಬಹುದು. ಈ ವಿಷಯವನ್ನು ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಕೋರುತ್ತೇನೆ

ಸಿ. ಯಸ್. ವಿ,

ಅಗಲಮಾಡುವದಕ್ಕಿಂತ ಅಗಲದಿರುವದು ಉತ್ತಮ

ಸ್ವಾಮಿ, ಎಡಿಟರೇ!

ನಾನು ಒಬ್ಬ ಬಡರೈತ, ನನಗೆ ಇಂಗ್ಲೀಷು ಬರುವದಿಲ್ಲ ಕನ್ನಡ ದೇಶದ ಅಲ್ಪ ಸ್ವಲ್ಪ ಗೊತ್ತಿದ. ಕಳೆದ ತಮ್ಮ ಜೂನ್ ತಿಂಗಳು 10 ರ ವರ್ತಮಾನಪತ್ರಿಕೆಯಲ್ಲಿ ಮೊಲೆಪೇಳದ ವಿಷಯದಲ್ಲಿ ... ಉಪನ್ಯಾಸ ಇದೆ. ಒಬ್ಬರನ್ನು ಅಳ ಎಂಬವನ್ನು ಮಾಡುವದು ಎಂದು ಅದರ ಅರ್ಥ ಕೇಳಿದೆ. ಬಾಯಿಯನ್ನು ಅಗಲವಾಗಿ ಬಾಯಿ ಬಿಡಕೊಳ್ಳುವದಕ್ಕಿಂತ ಮುಗನ್ನು ಆಗವನಾಡಿ ಮನಸ್ಸನ್ನೆ ಅಗಲಮಾಡಿಕೊಳ್ಳುವದು ಉತ್ತಮ ಅಂದರು. ಹೊಟ್ಟೆ ತುಂಬಿದ ಅಲ್ಲಿಂದ ಇನ್ನೊಬ್ಬ ಪುಣ್ಯಾತ್ಮನ ಹತ್ತಿರ ಹೊರಟೆ. ಅವರು ದಿ ಮಾಸ್ ಎಂದರೆ ಏನಾದರು ಆಗುವುದು ಅದಕ್ಕೆ ಅರ್ಥವಿಲ್ಲ. ಕೊಡಗನ್ನು ಮದರಾಸಿಗೆ ಸೇರಿಸಿ ಸ್ವರಾಜ್ಯ ವಗೈರೆ ಪಡೆದು ಅಗಲವಾಗುವದಕ್ಕಿಂತ ಕೊಡಗಿನಲ್ಲೇ ಕಷ್ಟಪಟ್ಟು ಈಗಿನ ಮಾರ್ಗಗಳನ್ನು ಹೊಂದುವದೆಂಬ ಅರ್ಥ. ಇದಕ್ಕೆ ತಮ್ಮ ಅಭಿಪ್ರಾಯವೇನೆಂದು ಕೇಳಿದೆ. ಅವರು ನನಗೆ ಅಭಿಪ್ರಾಯವಿಲ್ಲ. ಆದರೆ ಆದನ್ನು ಬರೆದ ಪುಣ್ಯಾತ್ಮನನ್ನು ಒಂದೆರಡು ಸವಾಲ್ ಕೇಳಿ ಜವಾಬ್ ಬಂದಮೇಲೆ ಹೇಳುವೆನು ಅಂದರು. ಅಗಲಮಾಡುವದಕ್ಕಿಂತ ಆಳಮಾಡುವದು ಒಳ್ಳೇದು ಸಾಹಜವೇ. ಆದರೆ ಹಲವತ್ತು ಮಣ್ಣ ಮೊಗು ಅಂಗುಲ ಇದ್ದ ವ್ಯವಸಾಯದಿಂದ ಬಡವಾಗಿ ಇರುವಾಗ ಊಳಮಾಡುವದಕ್ಕೆ ಪ್ರಯತ್ನಪಟ್ಟಲ್ಲಿ ಊರ ಬಂಡೆಗಳಲ್ಲಿ ... ಊಳಬೇಕಾದ ಬೇಕೇ? ಅಗಲಮಾಡಬೇಕೇ? ಈ ಚಿಕ್ಕ ನಮ್ಮ ಸಂಸ್ಥಾನದಲ್ಲಿ ಸ್ವರಾಜ್ಯ ಸಂಪತ್ತು ಹ್ಯಾಗೆ ದೊರೆಯುವದು. ಪವಿತ್ರನಾಗಿರುವ ನೀರು ... ವಿಕವಾಗಿ ಸಮುದ್ರದಿಂದ ಬಂದು ಸ್ವಭಾವಿಕವಾಗಿ ಸಮುದ್ರಕ್ಕೆ ಹೋಗುವದಕ್ಕೆ ಹ್ಯಾಗೆ ಯುಕ್ತಿಸುವದೋ, ಪರಮಾತ್ಮನೇ ಬಲ್ಲ. ನಮ್ಮ ಅದೃಷ್ಟ ... ಹ್ಯಾಗೆ ಆದಗಿರುವದೋ ... ಇಂಡ್ಯಾದೇಶದಲ್ಲಿ ಆದಗಿರುವ ಈ ದೇಶ ... ದಿಂದ ಬೇರೆ ಇರಬೇಕೆಂಬುದು ಯಾವ ... ವರುಷಗಳಿಂದ ಪರಿಹಾರವಿಲ್ಲದೆ ... ಸರ್ವಶಕ್ತಿಯುಳ್ಳ ಪರಮಾತ್ಮನ ... ದಿಂದ ... ಸ್ವರಾಜ ... ಗುಡುಕೊಂಡು ... ಈ ಗುಡುಕೊಂಡು ... ಪೇಳಿವು ದೊಡ್ಡದಾಗುವಾಗ ... ಒಂದು ... ಪಾದಿಯಲ್ಲಿ ಇರಬೇಕೆಂಬ ... ಜವಾಬ್ ಕೊಡತಕ್ಕೆಂದು ... ದಿ ಮಾಸ್ ಎನರನ್ನು ಕೇಳಿಕೊಳ್ಳುತ್ತೇನೆ

(ದೇಶಾಭಿಮಾನಿ)

ಸಂಪಾದಕರೆ

ತಮ್ಮ ಕೊಡಗು ಪತ್ರಿಕೆಯು ಸಕ್ಕರೆ ... ಓದಾಗು ತ್ತಿರುವದು ಸಂತೋಷಕರವಾದ ಸಂಗತಿಯು. ಪತ್ರಿಕೆಯು ಸಂಚಿಕಾ ... ನವು ಜಾನಾಗ ದೊರೆಯುತ್ತ ಎಂದು ... ತಮ್ಮ ... ಗಳಲ್ಲಿ ಅಂತಿಯವರ ದಾರಿಯನ್ನು ಕಾಯುತ್ತಿರುವರು ... ಆದೇ ಒಂದು ಮಾನವನ್ನು ಸೂಚಿಸುತ್ತ ಎಂಬದರಲ್ಲಿ ಸಂದೇಹವಿಲ್ಲ. ಆದೇ ಒಂದು ವಾರದ ಸಂಚಿಕೆಯು ಇನ್ನೊಂದು ವಾರದಲ್ಲಿ ತಲುಪುತ್ತಿರುವ ಬಹಳ ಅವಮಾನಕ್ಕೆ ಕಾರಣವಾಗಿದೆ. ಗ್ರಾಮಟಪಾಲಿನವರು ವಾರಕ್ಕೆ ಎರಡಾವರ್ತಿ ಬರತಕ್ಕ ಟಪಾಲು ರೂಪುಗಳಿಂದ ಬಂದ ಪಾಲಕ್ಕೆ ಸರಿಯಾಗಿ ಗ್ರಾಮಾಂತರಗಳಲ್ಲಿ ಹಂಚದಿರುವದು ಕೂಡಿಯದಾಗಿಲ್ಲ. ಅಲ್ಲದೆ ಬೀಟ್ ಪುಸ್ತಕ ಸೈನ್ ತೆಗೆದುಕೊಳ್ಳುತ್ತಿದ್ದ ಮಾಮೂಲ್ ಪದ್ಧತಿಯು ಸಹ ನಿಂತುಹೋಗಿದೆ. ತಮ್ಮ ಪತ್ರಿಕೆಗೆ ... ಸಂತೋಷವಲ್ಲವೆ? ಪತ್ರಿಕೆಯು ಸಮಯಕ್ಕೆ ಸರಿಯಾಗಿ ... ಕ್ಕೆ ಸೇರ ಬೇಕೊ? ಈ ವಿಷಯದಲ್ಲಿ ಪೋಸ್ಟಲ್ ಇಲಾಖೆಯವರು ಯಾವರೀತಿ ಯಿಂದ ಸಂಬಳ ಬಟ್ಟವಾಡೆ ಮಾಡಿಕೊಂಡರೋ ಅದೇ ರೀತಿಯಲ್ಲಿ ಟಪಾಲು ಸರಿಯಾಗಿ ಪ್ರತಿ ಗ್ರಾಮಸ್ಥನಿಗೂ ತಲುಪಿಸುವಂತೆ ಏರ್ಪಾಡು ಶೀಘ್ರದಲ್ಲಿ ಮಾಡುತ್ತಾರಾಗಿ ನಂಬಿದ್ದೇನೆ. ಇಲ್ಲವಾದರೆ ಬಹಳ ಅಸಮಾಧಾನಕ್ಕೆ ಕಾರಣವಾಗುತ್ತೆ.

ಕೊಡಗುಪತ್ರಿಕೆ ವಿಷಯದಲ್ಲಿ ಒಂದು ವಿಚಾರವನ್ನು ತಮ್ಮ ಅಭಿಪ್ರಾಯಕ್ಕೆ ತರಬೇಕೆಂದಿದ್ದೇನೆ. ನೀವು ದೇಶಾಭಿಮಾನಿಗಳೆಂದು ಸರ್ವರಿಗೂ ಪತ್ರಿಕಾ ಸೂಚಿಕೆಗಳನ್ನು ... ಸರಿಯೆ? ಆದರೆ ಆ ಪತ್ರಿಕೆಯ ಪುಟಗಳನ್ನು ಕಣ್ಣಿಂದ ಸಹ ನೋಡದೆ ಓದುವ ಉದ್ಯೋಗಸ್ಥರು ... ತಿಳಿದು ಬಹಳ ವ್ಯಸನಕ್ಕೆ ಆಶ್ಚರ್ಯವಾಗಿದೆ. ವಿದ್ಯಾವಂತರೆನಿಸಿಕೊಂಡು ಸರಕಾರದ ಉದ್ಯೋಗವನ್ನು ಸಂಪಾದಿಸತಕ್ಕ ಮಹಾನುಭಾವರೇ ಈರೀತಿಯಲ್ಲಿ ನಡೆದರೆ ಅವರ ಭಾಷಾಭಿಮಾನವು ಎಂಥಾದ್ದಿರುವುದು ... ಅವರ ದೇಶಾಭಿಮಾನವು ಎಷ್ಟರಮಟ್ಟಿಗೆ ಇರುವುದೆಂದು ಸಂಶಯವುಂಟಾಗಿದೆ. ಪವಿತ್ರವಾದ ಕೊಡಗುದೇಶದಲ್ಲಿ ರಾಜಾಧಿಕಾರ್ಯವನ್ನು ನಡಿಸತಕ್ಕವರು ಈ ನಡತೆಯಲ್ಲಿ ದೃತಿ "ಯಥಾರಾಜಾ ತಥಾಪ್ರಜಾ" ಎಂಬ ಗಾದೆಯಂತೆ ದೇಶೀಯರಲ್ಲಿ ರತಕ್ಕ ಅಭಿಮಾನಕ್ಕೆ ಕೊರತೆ ಬರದೆ ಇರಲಾರದು,

ದೇಶಾಭಿಮಾನಿ

SUBBANNA, SANGAPPA,

Receiving and Forwarding Agents, General Merchants and Commission Agents

Santhepet, Mysore.

Despatch and supply whatever you receive at Mysore Railway Station and whatever food stuffs and Stationaries you want to have from Mysore Prompt attention, moderate commission and quick disposal are their motto

ಮೈಸೂರು ರೈಲ್ವೆ ಸ್ಟೇಷನ್‌ನಿಂದ ನೀವು ಪೊಂದಬೇಕಾದ ಸಾಮಾನುಗಳ ರೈಲ್ವೆ ಪಾಸುಗಳನ್ನೂ, ಮೈಸೂರಿನಿಂದ ತರಿಸಿಕೊಳ್ಳಬೇಕಾದ ಸಾಮಾನುಗಳ ಪಟ್ಟಿಯನ್ನೂ ಮೈಸೂರು ಸಂತೇಪೇಟೆಯಲ್ಲಿರುವ

ಸುಬ್ಬಣ್ಣ ಸಂಗಪ್ಪನವರಿಗೆ ಕಳುಹಿಸಿ.

ಅವರು ಜಾಗ್ರತೆಯಾಗಿಯೂ ಜೋಪಾನವಾಗಿಯೂ, ಸುಲಭವಾದ ಕಮೀಷನ್ನಿನಲ್ಲಿಯೂ ನಿಮಗೆ ಸರಕು ರವಾನಿಸುತ್ತಾರೆ. ವಿಶ್ವ ವಿಚಾರ ಬರೆದು ತಿಳಿದುಕೊಳ್ಳಿ.

ರೋಗಿಗಳೂ, ರೋಗವಿಲ್ಲದವರೂ

ಕ್ರಿಸ್ಟಲೀನನ್ನು

ಉಪಯೋಗಿಸಬೇಕು.

ಎಂತಹ ಕಠಿಣ ಕಾಲದಲ್ಲೇ ಆಗಲಿ ಮಾಡಲು ಇದನ್ನು ಉಪಯೋಗಿಸಿದರೆ ಶರೀರದ ಕಲ್ಮಷವನ್ನು ತೆಗೆದುಹಾಕಿ ... ಕಡಿಮೆಮಾಡುವುದು ಸಂಬಂಧ ಕಾಯಿಲೆಗಳ ಲ್ಲವೂ ಒರಿ ಇದರ ಸೇವನೆಯಿಂದಲೇ ಗುಣವಾಗುವುವು ತೆಗೆದುಕೊಂಡ ... ಘಂಟೆಯಲ್ಲಿ ಸುಖಭೇದಿ ಮಾಡುವುದು. ಜೀವ ಭೇದಿ ಮಾತ್ರೆಗಳಂತೆ ಸಂಕಟ, ಹೊಟ್ಟೆನೋವು ಮುಂತಾದುವನ್ನುಂಟುಮಾಡುವುದಿಲ್ಲ. ನಾನಾವಿಧ್ವರ, ಕೆಮ್ಮು, ಊದು, ಮೂತ್ರಬಂಧನೆ, ಅಜೀರ್ಣ, ಉಷ್ಣ, ಪಿತ್ತ, ಶೀತಸಂಬಂಧ ಕಾಯಿಲೆಗಳು, ಜೀರ್ಣಕೋಶದ ಅಕ್ರಮತೆ, ... ಗಳಿಂದ ಹುಟ್ಟಿ ಉದ್ಭವವಾ ಗುವುವು, ದುರ್ವಾಸನೆಯುಳ್ಳ ... ಟ್ಟುವುದೇ ಮುಂತಾದುವನ್ನೆಲ್ಲಾ ... ತ್ತದೆ

... ದ ... ಯಾವ ... ದು ... ಬದಲ್ ... ಪ್ರತಿ ... ಕ್ಕೆ ರೂ ೦

ಚಂದ್ರಕಳೆಯು

ಶರೀರದಲ್ಲಿನ ಪ್ರತಿಯೊಂದು ದಾತುವಿಗೂ ಸೇರಿಸಿ ಶರೀರದ ರೋಗಗಳನ್ನು ಗುಣಪಡಿಸುವುದು ರೋಗವಿಲ್ಲದವರಿಗೆ ಮಾಂಸ, ... ಳು, ಮುಂತಾದ ... ಧಾತುಗಳನ್ನು ... ವೃದ್ಧಿಪಡಿಸಿ ... ಗಟ್ಟಿಮಾಡಿ ದೃಢಶರೀರದವನ್ನಾಗಿ ಮಾಡುತ್ತದೆ. ರೋಗವಿದ್ದವರಿಗೆ ಆಸ್ತಮಾ, ಗೊದ್ರ, ಬಳಜ್ವರ, ವಾತ, ಪ್ಲೂರಸಿ ಎಂಬ ಪಕ್ಕನೋವು ಪಿತ್ತಕೋಶದ ರೋಗಗಳು, ಮೂತ್ರಕೋಶದ ರೋಗಗಳು ಮಲಬದ್ಧತೆ, ನರಗಳ ಕಾಯಿಲೆಗಳು, ನರಗಳ ಬಳಲಿಕೆ, ಮೆದುಳಿನ ಕಾಯಿಲೆಗಳು, ಕಾಮಾಲೆ, ಕ್ಷಯ, ಶರೀರದ ಳ್ಳೆಲ್ಲಾ ಉರಿಗಳೇ ಮುಂತಾದುವು ಹೋಗುವುದು, ಹೊಟ್ಟೆನೋವು ಮುಂತಾದುವನ್ನೆಲ್ಲಾ ಖಂಡಿತ ಗುಣಪಡಿಸುತ್ತದೆ. ಅಮೂಲ್ಯ ಔಷಧಿಗಳಿಂದ ತಯಾರಿಸಿದ್ದು. ಶೀಸೆಗೆ ಮೂರುರೂಪಾಯಿ.

ಇಲೆಕ್ಟ್ರಿಕ್ ಬಾಂ.

ಕಜ್ಜಿ, ತುರಿ, ತುರಿಕಜ್ಜಿ, ಗಾಯ, ಸುಟ್ಟಗಾಯ ಮುಂತಾದುವನ್ನೆಲ್ಲಾ ಗುಣಪಡಿಸುತ್ತದೆ ಪೆಟ್ಟಿಗೆಗೆ ... ಆಣೆ

ಎಷ್ಟೇ ದೊಡ್ಡ ಜ್ವರವಿರಲಿ

ನಮ್ಮ ಜ್ವರಾರಿಮಾತ್ರೆಗಳು ತೆಗೆದುಕೊಂಡ ಎರಡುಗಂಟೆಗಳೊಳಗಾಗಿಯೇ ಜ್ವರವನ್ನು ಖಂಡಿತ ಇಳಿಸುತ್ತವೆ ೧ ಪೊಟ್ಟಣ ಮಾತ್ರೆಗೆ ೧ ರೂ ಜ್ವರಗಳನ್ನು ಗುಣಪಡಿಸುವುದಕ್ಕೆ ನಮ್ಮ ಫೀವರಿಗ್ ... ಮಾತ್ರೆಗಳನ್ನು ಉಪಯೋಗಿಸಿ ಇವು ಮಲೇರಿಯ, ಸನ್ನಿಪಾತ, ಪಿತ್ತಜ್ವರಗಳು, ಶ್ಲೇಷ್ಮಜ್ವರಗಳು, ಮುಂತಾದುವನ್ನೆಲ್ಲಾ ಗುಣಪಡಿಸುತ್ತವೆ. ಶೀಸೆಗೆ ೧ ರೂಪಾಯಿ

ಅನ್ನಕೋಶ, ಪಿತ್ತಕೋಶ ಮುಂತಾದುವುಗಳ ಅಕ್ರಮತೆಯಿಂದ ಹೊಟ್ಟೆನೋವು (ಶೂಲೆ ...) ವಾಂತಿಯಾಗುವುದು, ಅಜೀರ್ಣ, ಮುಂತಾದ ಎಲ್ಲಾತರದ ಡಿಸ್ಪೆಪ್ಸಿಯಾ ... ಜೀರ್ಣಕೋಶದ ಕಾಯಿಲೆಗಳನ್ನೂ ನಮ್ಮ ಕೊಲಾರಿಯು ಖಂಡಿತ ಗುಣಮಾಡುತ್ತದೆ ... ಔಷಧಗಳುಳ್ಳ ... ಶೀಸೆಗಳಿಗೆ ೫ ರೂಪಾಯಿ

ಎಲ್ಲಾತರದ ಕಾಯಿಲೆಗಳನ್ನು ಪತ್ರಮೂಲಕ ಚಿಕಿತ್ಸೆ ಮಾಡುವ ... ಹತ್ತಿರವಿದ್ದೂ ಗುಣಮಾಡುತ್ತೇವೆ. ಜನರಲ್ ಡಿಬಿಲಿಟಿ ಎಂದರೆ ಪೂರ್ಣವಾಯು, ಮೂತ್ರಕೋಶದ ಕಾಯಿಲೆ ಮುಂತಾದುವನ್ನು ಗುಣಪಡಿಸಿದ್ದಕ್ಕೆ ನಮಗೆ ಚಿನ್ನದ ಮೆಡಲುಗಳು ಸಿಕ್ಕಿವೆ

ದಿ ಜಿ ಎಚ್. ಹೌಸ್,

ಸೋಮವಾರಪೇಟೆ, (ಕೊಡಗು).

IF YOU WANT

The Best Typewriter Ribbons

AND

Carbon Papers

PLEASE ASK FOR

"CRUSADER BRAND"



The Sreenivasa Press, MYSORE.

ರೋಲ್ಡ್ ಗೋಲ್ಡ್ ಛಂಗಾರದ ರೇಡಿಯಂ

ರಿಸ್ಟ್ ಲೆಟ್ ವಾಚ್



ಈ ಗಡಿಯಾರಗಳನ್ನು ... ಅಮೇರಿಕಾ ದೇಶದಲ್ಲಿ ತಯಾರಿಸಿದ್ದು ... ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ದೀಪ ಬೇಕು ಆದರೆ ಈ ಗಡಿಯಾರಗಳಿಗೆ ದೀಪ ಬೇಕಾಗಿಲ್ಲ. ಎಷ್ಟು ಕತ್ತಲೆಯಿರುವುದೋ ಅಷ್ಟು ಚೆನ್ನಾಗಿ ಸೂರ್ಯನಂತೆ ... ಗಂಟೆಯನ್ನು ತೋರಿಸುತ್ತದೆ. ಇವು ಅಮೇರಿಕಾದೇಶದ ... ಗಡಿಯಾರಗಳು ... ಬಾಳಿಕೆ ಬರುವವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ... ಗಂಟೆಯನ್ನು ... ನೋಡಬಹುದು ... ಇವಕ್ಕೆ ೨ ವರುಷ ಗ್ಯಾರಂಟಿ ಕೊಡುವೆವು. ಕೈಯಲ್ಲಿ ಕಟ್ಟುವ ... ಗಡಿಯಾರ 1 ಕ್ಕೆ 10 ೩ 0 ಕೈಯಲ್ಲಿ ಕಟ್ಟುವ ... ಗಡಿಯಾರ 1 ಕ್ಕೆ ... ೬—0 ರೂ

ವಿಳಾಸ —ಎಸ್. ಎಸ್. ರಾಮು ಅಂಡ್ ಕೊ,

ಪೋಸ್ಟ್ ಬಾಕ್ಸ್ ನಂ 214 ಮದರಾಸು

... ಕ್ರೀಮ್ ಸೋಪು

ಈ ಸೋಪನ್ನು ... ಒಂದೇ ಒಂದು ಸಿಮಿಷ ಹಾಕಿದರ ... ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗದು ಬಿಡುವುದು

ನವ್ಯ ಮೂನ್ ಲೈಟ್ ಸೋಪು ಗಂಧ ಮೊದಲು ... ತುರಿ, ನವೆ ಮುಂತಾದುವುಗಳನ್ನು ... ಮಾತ್ರದಲ್ಲಿ ವಾಸಿಮಾಡುವುದು

3 ಸಾಬೂನು ಳನ್ನು ಪೆಟ್ಟಿಗೆ 1 ಕ್ಕೆ ರೂ 1 —1 —0 ಒಂದೇ ಸಲ ... ಪೆಟ್ಟಿಗೆ ತರಿಸಿಕೊಂಡರೆ ರೂ 2 ... 0

ವಜ್ರದ ಉಂಗುರಗಳು

ಈ ಉಂಗುರಗಳನ್ನು ... ಬಂಗಾರದಿಂದ ಮಾಡಿದೆ ಇದರ ಮೇಲುಗಡೆ ಕೆಂಪು ಹಸರು ಮುಂತಾದ ... ಕಲ್ಲುಗಳನ್ನಿಟ್ಟು ಕಟ್ಟಿದ ... ನೋಡಿದವರು ನಿಜವಾದ ವಜ್ರದ ಉಂಗುರವೆಂದೇ ಹೇಳುವರು ... ಗ್ಯಾರಂಟಿ ... ವರ್ಷ ಕೊಡುವೆವು

ಉಂಗುರ 1 ಕ್ಕೆ ರೂ —1—

ವಿಳಾಸ —ಎಸ್ ... ಅಂಡ್ ಕೊ

ಪೋಸ್ಟ್ ಬಾಕ್ಸ್ ನಂ 512 ಪಾರ್ಕ್‌ಟೌನ್ ಮದರಾಸು

ಮಧುರೆ, ಮುಸ್ಲಿನ್ ... ಸೀರೆಗಳು.

17 ಮೊಳ ಪೂರಾ ಇರುವವು ದೊಡ್ಡ ಪನ್ನ

ಈ ಸೀರೆಗಳನ್ನು ಹಸನಾದ ಘಟ್ಟಿ ನೂಲಿನಿಂದ ತಯಾರಿಸಿದೆ ಸುಂದರವಾದ ರೇಷ್ಮೆಯ ಸೆರಗೂ, ಅಂದವಾದ ದೊಡ್ಡ ಅಂಚೂ ಇದೆ ಶ್ರೀಮಂತರಿಗೂ, ಗಲೀಬರಿಗೂ ಅನುಕೂಲವಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಎಲ್ಲಿಯೂ ಸಿಕ್ಕಲಾರವು ಮಾದರಿಗಾಗಿ ಕೆಲವು ಸೀರೆಗಳನ್ನು ಮಾತ್ರ ತಯಾರಿಸಿರುವೆವು ಬೇಕಾದವರು ತರಿಸಿ ಪರೀಕ್ಷಿಸಿರಿ

ಕ್ರಯ ನಂಬರು 1 6—8—0

" ನಂಬರು 2 7—8—0

ವಿಳಾಸ —ಎಸ್ ಎಸ್. ರಾಮು,ಅಂಡ್ ಕೊ,

ಪೋಸ್ಟ್ ಬಾಕ್ಸ್ ನಂ 214, ಮದರಾಸು.

Printed and Published by S NANJUNDA SASTRY at The Sreenivasa Press, Mysore for "Kodagu" Ltd., Mercara –8 7 1921.

REGISTERED No. M.

ಕೊಡಗು.

ವಾರ್ಷಿಕ ಚಂದಾ ೩—೮—೦

ಬಿಡಿ ಪ್ರತಿ ೦—೧—೦

"ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ... ದೇಶಾನಾಂ ಸುಸ್ಥಿರಾ ರಾಜ್ಯಸಂಪದ್ಯ"॥

ಪ್ರತಿ ಶುಕ್ರವಾರವೂ ಪತ್ರಿಕೆಯು ಪ್ರಕಟಿಸಲ್ಪಡುವುದು.

ಸಂಪುಟ ೧] ಕೊಡಗು, ಸ್ ೧೯೩೧ ನೇ ಇಸವಿ ಜುಲೈ ತಾರೀಖು ೧೫ ನೆಯ ಶುಕ್ರವಾರ [ಸಂಚಿಕೆ ೭

ವೀರಶೈವರಿಗೆ ಸಂಗ್ರಾಹ್ಯವಾದ ಫೋಟೋ.

ಶ್ರೀ ಶಿವಯೋಗಿಗಳ ಸಂಘ — ಭಾಗ್ಯಶಾಲಿ ಜನರು ಹಾವು ಶಿಷ್ಯಪರಿವಾರ ಸಹಿತ ಶಿವಯೋಗಿಗಳ ದರ್ಶನವನ್ನು ತೆಗೆದುಕೊಳ್ಳುತ್ತಾರೆ. ಆದರೆ ಶ್ರೀಸಾಮಾನ್ಯರಿಗೂ ಮತ್ತು ಬಡವರಿಗೂ ನಿತ್ಯದರ್ಶನ ಆಗುವದಕ್ಕೆ ಫೋಟೋವ ಹೊರತ ಅನ್ಯಮಾರ್ಗವು ಇಲ್ಲದಕಾರಣ ನಾವು ಪ್ರಸಿದ್ಧರಾದ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಗದಗ ತೋಂಟದಾರ್ಯ ಆರ್ಯ ಶಿವಯೋಗಿ ಬಾಲಲೀಲಾಸ್ವಾಮಿ, ಬೀದರ, ಹಾನಗಲ್ಲು, ಹಾಳಕೇರಿ, ಬಿಜಾಪುರ ವಿಜಯಮಹಾಂತ ಮುಂತಾದ ೧೮ ಮಹಾಸ್ವಾಮಿಗಳ ಫೋಟೋ ಕೂಡಿಸಿದ ಕಾರಣ ಒಂದೇ ಕಾಲದಲ್ಲಿ ಎಲ್ಲಾ ಶಿವಯೋಗಿಗಳ ದರ್ಶನ ಆಗುವುವು. ೧೮×೧೨ ಸೈಜದ ಚಿತ್ರದ ಕ್ರಯ ೧ ಪ್ರತಿಗೆ ೮ ಆಣೆ.

ಶ್ರೀ ಕಲ್ಯಾಣ ಬಸವೇಶ್ವರ — ವೀರಶೈವ ಧರ್ಮೋದ್ಧಾರಕರಾದ ಶ್ರೀಬಸವಣ್ಣದೇವರ ಅತ್ಯಂತ ತೇಜಃಪುಂಜವಾದ ಖಾಸ ಫೋಟೊ ೧೮×೧೨ ಸೈಜ ಒಪ್ಪಾದ ಚಿತ್ರದ ಕ್ರಯ ೧ ಪ್ರತಿಗೆ ರೂ ೧ ಸಾದಾ ೮ ಆಣೆ

೧. **ಶ್ರೀ ಅಲ್ಲಮಪ್ರಭುಪಾದಪೂಜೋತ್ಸವ** — ಇದರಲ್ಲಿ ಶ್ರೀಬಸವೇಶ್ವರರು, ಶ್ರೀಚನ್ನಬಸವೇಶ್ವರ, ಸಿದ್ಧರಾಮೇಶ್ವರ ಮಡಿವಾಳ ಮಾಚಿದೇವರು, ಅಕ್ಕನಾಗಮ್ಮಾ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವರಪಾದಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೊ ಇರತ್ತದೆ ದೊಡ್ಡ ಸೈಜು ರೂ ೧। ಸಣ್ಣ ಸೈಜು ರೂ ।

೨. **ಶ್ರೀರೇಣುಕಾಚಾರ್ಯರ ಲಿಂಗೋದ್ಭವವು** — ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರ್ಯರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವ ಫೋಟೋ ಇರುತ್ತದೆ ದೊಡ್ಡ ಸೈಜು ರೂ ೧। ಸಣ್ಣ ಸೈಜು ರೂ |||

೩. **ಶ್ರೀರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ** — ಇದರಲ್ಲಿ ಅಗಸ್ತ್ಯಮುನಿಗಳು ತಮ್ಮ ಪತ್ನಿ ಲೋಪಾಮುದ್ರಾಸಹ ಉಪದೇಶ ಮಾಡಿಕೊಳ್ಳುತ್ತಾ ಇದ್ದಾರೆ ದೊಡ್ಡ ಸೈಜು ರೂ ೧। ಸಣ್ಣ ಸೈಜು ರೂ |||.

೪. **ಶ್ರೀವೀರಭದ್ರನಿಂದೇ ಹನುಮಂತನಿಗೆ ಲಿಂಗಧಾರಣವು** — ಇದು ಹನುಮಂತನು ಮೋಕ್ಷಾರ್ಥಕ್ಕಾಗಿ ಲಿಂಗಧಾರಣ ಮಾಡಿಕೊಂಡ ಫೋಟೊ ಇರುತ್ತದೆ ದೊಡ್ಡ ಸೈಜು ರೂ ೧। ಸಣ್ಣ ಸೈಜು ರೂ |||.

ಶ್ರೀ ವೀರಶೈವ ರಾಜಸಮೂಹ — ಇದರಲ್ಲಿ ಕೊಡಗು ದೇಶದ ಲಿಂಗರಾಜೇಂದ್ರ, ವೀರರಾಜೇಂದ್ರ ವಡಿಯರ ದೇವಮ್ಮಾಜಿ ಮಹಾರಾಣಿ ಮತ್ತು ಸಧ್ಯದ ಶೃಂಗಸೂರ ಮತ್ತು ಗೋವಾಪ್ರಾಂತದ ಬಾಂದೆವಾಡಿ ಸ್ವತಂತ್ರರಾದ ಅರಸರ ಫೋಟೊ ೯ ಇರುತ್ತವೆ. ಕ್ರಯ ಪೂರ್ಣಸೈಜು ೧। ರೂ. ಕ್ಯಾಬಿನೆಟ್ ೧೨ ಆಣೆ

ಶ್ರೀಮಜ್ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿಗಳ — ಅತ್ಯಂತ ಸುಂದರವಾದ ಕೈಬಣ್ಣದ ಫೋಟೋ ಕ್ರಯ ಪ್ರತಿ ೧ಕ್ಕೆ ರೂ ೧ ಸಾದಾದು |||.

ಸೂಚನೆ — ಭಾರಿ ಖರೀದಿದಾರರಿಗೆ ಚನ್ನಾಗಿ ಕಮಿಷನ್ ದೊರೆಯುವದು.

ವಿಳಾಸ:— ಗಂಗಪ್ಪ ಚಿರಗೆ.

ಗೂಳಪ್ಪ ಕ ಶಾರದಾ ಫೋಟೊ ಕಂಪನಿ ಸೋಲಾಪುರ

ಈ ಪತ್ರಿಕೆಯ ಎಲ್ಲಾ ಚಂದಾದಾರರಲ್ಲಿ ವಿಜ್ಞಾಪನೆಗಳು ೦

Cancelled

ತಮ್ಮ ಗಳಿಗೆಲ್ಲಾ ಕಳೆದ ಅನುಮಾನದ ಪತ್ರಿಕೆಗಳನ್ನು ಕಳುಹಿಸಿದ್ದಾಯಿತು ದೇಶಬಾಂಧವರಾದ ತಾವು ತಮ್ಮ ವಾರ್ಷಿಕ ಚಂದಾ ರೂ. 3—8 ... ಕೂಡಲೇ ಪಾವತಿ ಮಾಡಿದರು ಇನ್ನೂ ಅನೇಕರು ... ಚಂದಾಹಣವನ್ನು ಕಳುಹಿಸದೆ ಉದಾಸೀನರಾಗಿರುವುದು ಕಂಪನಿಯ ಮುಂದಲ ಕೆಲಸಕ್ಕೆ ಬಹಳ ತೊಂದರೆಯನ್ನುಂಟುಮಾಡಿರುತ್ತ ಮತ್ತು ಹೀಗೆ ಇರುವುದು ... ದೇಶಾಭಿಮಾನವನ್ನು ಪ್ರೋತ್ಸಾಹವನ್ನು ತೋರಿಸಿದಂತೆ ... ವುದಿಲ್ಲ ಯಾವ ಪತ್ರಿಕೆಯೂ ಹಿಂದಕ್ಕೆ ಬಾರದೆ ಇದ್ದುದಕ್ಕಾಗಿ, ಚಂದಾದಾರರುಗಳ ಮನಸಿಗೆ ನಾವು ಬಹಳ ಕೃತಜ್ಞರಾಗಿದ್ದೇವೆ. ಆದರೆ ಅವರ ಮೌನತೆಯೋ ನಮ್ಮ ಚಿಂತಾಗಿರುತ್ತ

ಕಂಪೆನಿಯ ಕೆಲಸವು ಸಾಂಗವಾಗಿ ನಡೆಯಬೇಕಾದರೆ ಹಣವೇ ಮುಖ್ಯವೆಂದೂ, ಅಂಥಾ ಹಣವನ್ನು ಒದಗಿಸುವರು ದೇಶಾಭಿಮಾನಿಗಳಾದ ವಾಚಕರಲ್ಲೇ ಇರುತ್ತಿದ್ದಾರೆ ಎಂದೂ, ಈ ಮೊದಲೇ ಸೂಚಿಸಿರುತ್ತೆ. ಹಣವು ಶೀಘ್ರದಲ್ಲಿ ನಮ್ಮ ಕೈಸೇರದಹೊರ್ತು ವಿಧಿ ಇಲ್ಲ ಆದ್ದರಿಂದ ಎಲ್ಲಾ ಚಂದಾದಾರರು ದಯವಿಟ್ಟು ತಮ್ಮ ಹಣವನ್ನು ಈ ಪ್ರತಿ ತಲುಪಿದ ಕೂಡಲೇ ಕಳುಹಿಸ ಕೊಡಬೇಕಾಗಿ ಅರಿಕೆ ಮಾಡುತ್ತೇವೆ. ಹಣ ಕಳುಹಿಸದ ಎಲ್ಲಾ ಚಂದಾದಾರರುಗಳಿಗೆ ಬರುವ ವಾರದಿಂದಾಚೆಗೆ ಪತ್ರಿಕೆಗಳನ್ನು ... ಕಳುಹಿಸುತ್ತೇವೆ. ಆದ್ದರಿಂದ ಎಲ್ಲಾ ಚಂದಾದಾರರು ಯಾವ ಬಾಕಿಯೂ ಉಳಿಯದಂತೆ ... ಯನ್ನು ಸ್ವೀಕರಿಸಿ ಪತ್ರಿಕೆಯ ಕೆಲಸವನ್ನು ಚೆನ್ನಾಗಿ ನಡೆಸಲು ಅನುಕೂಲ ಕೊಟ್ಟು ದೇಶಸೇವೆಗ ಭಾಗಿಗಳಾಗಬೇಕಾಗಿ ಕೋರುತ್ತೇವೆ

ಎಡಿಟರ್

ಸಹಕಾರ ಬೇಕೇ?

ಬೇಕಾದವರು ನಮ್ಮಲ್ಲಿ ದೊರೆಯುವ ಕೊಡೆ, ಗುಡ್ಡೆಲಿ, ಬೂಟೀಸ್, ನಮೂನೆ ಫರ್‌ಕ್ಯಾಸ್, ಹಿಂಕ್ಸ್‌ಲ್ಯಾಂಪ್, ನಮೂನೆ ಟೊಪ್ಪಿ, ಆಫೀಸ್ ಕುರ್ಚಿ ಇತ್ಯಾದಿ ಸಾಮಾನುಗಳನ್ನು ಒಂದುಸಲ ತೆಗೆದು ನೋಡಿರಿ.

ಹೆಚ್ಚಿನ ಸಂಗತಿಗಳು ಕೆಳಗಿನ ವಿಳಾಸಕ್ಕೆ ಬರೆದು ತಿಳಿಯುವದು.

COMMERCIAL STORE,

General Merchants, Commission Agents and Furniture Suppliers,

MURNAD, COORG.

R. FRAMJEE,

General Merchant, Commission Agent, Auctioner and Gent's Outfitter,

MERCARA (Coorg)

JUST RECEIVED.

Fresh Consignment of Piece Goods of Various Kinds, Stationery, Hosiery Patent Medicines etc., etc.

Goods available at the lowest market rates.

Prices Fixed.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ, ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ, ಕೊಡಗಿನ ವಾರಪತ್ರಿಕೆ.

1. ಪ್ರಕಟಣೆಗಳನ್ನು ಮೇನೇಜರ್ "ಕೊಡಗು" ಮಡಿಕೇರಿ ಈ ವಿಳಾಸಕ್ಕೆ ಕಳುಹಿಸಬೇಕು

2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಿಕೇರಿ ಈ ವಿಳಾಸಕ್ಕೆ ಕಳುಹಿಸಬೇಕು.

3. ವಾರ್ತೀದಾರರ ಅಭಿಪ್ರಾಯಕ್ಕೆ ಕೊಡಗು, ಪತ್ರಿಕಾಕರ್ತರು ಜವಾಬ್ದಾರರಲ್ಲ.

4. ನಮ್ಮಲ್ಲಿಗೆ ಕಳುಹಿಸುವ ವಾರ್ತೆಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವುವು.

5. ಪ್ರಕಟಿಸಲಾಗದ ವಾರ್ತೆಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮೇನೇಜರ್

"ಕೊಡಗು" ಲಿಮಿಟೆಡ್, ಮಡಿಕೇರಿ

INSURE YOUR CAR

Against Accident and Fire.

Apply to—

K. R. Thirupad & Bros.,

Sub Agents for

The Autocar Fire & Accident Insurance Co., Ltd.,

LONDON.

JUST ARRIVED FRESH STOCK OF

GOOD RICH TYRES

Best and Cheapest in the World.

Apply to—

K. R. Thirupad & Bros.,

Sayaji Rao Road,

MYSORE.

ಪ್ರಕಟನೆಯ ದರಗಳು

	ಒಂದು ಕಾಲಂ.	ಅರ್ಧಕಾಲಂ	ಕಾಲುಕಾಲಂ.
	ರೂ	ರೂ	ರೂ.
1 ವರ್ಷಕ್ಕೆ	50	30	15
6 ತಿಂಗಳಿಗೆ	30	18	10
3 ತಿಂಗಳಿಗೆ	15	10	6
1 ತಿಂಗಳಿಗೆ	7	4	3

ಮೇಲೆ ಕಾಣಿಸಿರುವ ದರಗಳು ಬೇಕಾದಾಗ ಬದಲಾಯಿಸಲ್ಪಡುವದು ಹಣವನ್ನು ಮುಂಗಡವಾಗಿಯೇ ಪೂರ್ತಿ ಪಾವತಿ ಮಾಡಬೇಕು.

ಮ್ಯಾನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ

ಎಲ್ಲಾ ಚಂದಾದಾರರುಗಳಿಗೆ ವಿಜ್ಞಾಪನೆ.

ಕಳೆದ ಸಂಚಿಕೆಗಳಲ್ಲಿ ಪತ್ರಿಕೆಯ ವಾರ್ಷಿಕಾ ಚಂದಾ ವನ್ನು ಪಾವತಿಮಾಡದವರಿಗೆ ಪತ್ರಿಕೆಗಳನ್ನು ವಿ.ಪಿ. ಮೂಲಕ ಕಳುಹಿಸುತ್ತೇವೆ ಎಂದು ಬರೆದಿದ್ದೆವು. ಆದರೆ ಪೋಸ್ಟಾಫೀಸಿನಿಂದ ಊರೂರಿಗೆ ವಿ. ಪಿ. ಗಳು ಸಕಾಲಕ್ಕೆ ದೊರಿಯದೆ, ಉಭಯತ್ರರಿಗೂ ನಷ್ಟಗಳು ಸಂಭವಿಸುವ ತೊಂದರೆಯನ್ನು ತಪ್ಪಿಸುವ ಬಗ್ಗೆ ವಿ. ಪಿ. ಗಳನ್ನು ಕಳುಹಿಸಲಿಲ್ಲ. ಆದ್ದರಿಂದ ಎಲ್ಲಾ ಚಂದಾದಾರರು ದಯವಿಟ್ಟು ತಮ್ಮ ಚಂದಾ ಹಣವನ್ನು ಪಾವತಿಮಾಡಿ, ಪತ್ರಿಕೆಯ ಮುಂದಿನ ಅಭಿವೃದ್ಧಿಗೆ ಸಹಾಯಮಾಡಬೇಕಾಗಿ ಕೋರುತ್ತೇವೆ. ವಿ. ಪಿ. ಬೇಕಾದವರು ಪ್ರತ್ಯೇಕ ಬರೆದುಕೊಳ್ಳಬೇಕು. ಚಂದಾದಾರರು ಯಾವ್ಯಸಂಗತಿಯನ್ನು ಬರೆಯಬೇಕಾದರೂ ತಮ್ಮ ತಮ್ಮ ವಿಳಾಸದ ನಂಬರುಗಳನ್ನು ಅಗತ್ಯವಾಗಿ ಬರೆಯಬೇಕು. ನಂಬರುಗಳನ್ನು ಬರೆಯದ ಲೇಖನಗಳಿಗೆ ನಿಗಾ ಕೊಡಲಾಗುವುದಿಲ್ಲ "ಎಡಿಟರ್"

"ಕೊಡಗು"

(೧೯೨೧ ನೇ ಇಸವಿ ಜುಲೈ ತಾ|| ೧೫ ನೇ ಶುಕ್ರವಾರ

ಕೋ ಆಪರೇಟಿವ್ (ಸಹಕಾರಿ) ಸೆಂಟ್ರಲ್ ಬ್ಯಾಂಕ್.

ಮಡಿಕೇರಿಯಲ್ಲಿ ಕೋ ಆಪರೇಟಿವ್ ಸೆಂಟ್ರಲ್ ಬ್ಯಾಂಕ್ ಒಂದು ರಿಜಿಸ್ಟರ್ ಆಗಿದೆಯಾಗಿ ತಿಳಿಯುತ್ತೇವೆ ನಮ್ಮ ದೇಶದಲ್ಲಿ ಈಗ ಇರುವ ಸಹಕಾರಿ ಸಂಘಗಳು ಚೆನ್ನಾಗಿ ನಡೆಯಲಿಕ್ಕೂ ಇನ್ನು ಮುಂದೆ ಸಹಕಾರಿ ಸಂಘಗಳು ಹೊಸದಾಗಿ ಹುಟ್ಟಲಿಕ್ಕೂ, ಸಹ ಸೆಂಟ್ರಲ್ ಬ್ಯಾಂಕ್ ಒಂದು ಅತಿ ಅವಶ್ಯವಿದೆ ಎಂತ ದೇಶದವರು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಇಂಥಾ ಒಂದು ಬ್ಯಾಂಕನ್ನು ಸ್ಥಾಪಿಸಿಕೊಡಬೇಕೆಂತ ಸರಕಾರದವರನ್ನು ಜಮೀನುದಾರರ ಸಂಘವು ಪ್ರತಿ ವರ್ಷವೂ ಕೇಳಿಕೊಳ್ಳುತ್ತಿತ್ತು ಸರಕಾರದವರು ಬ್ಯಾಂಕನ್ನು ರಿಜಿಸ್ಟರು ಮಾಡಿಕೊಟ್ಟಿರುತ್ತಾರೆ ಇನ್ನು ಅದನ್ನು ಬೆಳೆಯಿಸಿಕೊಳ್ಳುವದು ಜನರ ಕೈಯ್ಯಲ್ಲಿದೆ

... ಬ್ಯಾಂಕಿನಲ್ಲಿ ... ... ಸಹ ಮೆಂಬರುಗಳಾಗಬಹುದು. ಆದರೆ ಪ್ರತ್ಯೇಕ ಮೆಂಬರುಗಳಿಗೆ ತಾವು ಬ್ಯಾಂಕಿನಲ್ಲಿ ಡಿಪಾಜಿಟ್ ಇಟ್ಟಿದ್ದರೆ ಮಾತ್ರ ಅದರ ಶೇಕಡ 90 ರಷ್ಟು ಸಾಲ ದೊರೆಯುತ್ತದೆ ಆದುದರಿಂದ ಸೊಸೈಟಿಗಳಿಗೆ ಮಾತ್ರ ಈ ಬ್ಯಾಂಕಿನಿಂದ ಸಾಲ ಸಿಕ್ಕುತ್ತದೆಯಷ್ಟೆ ಎಂದರೂ ತಪ್ಪಾಗುವದಿಲ್ಲ ಪ್ರತ್ಯೇಕ ಮನುಷ್ಯರಿಗೆ ಸಾಲ ದೊರೆಯಬದ್ದರೆ ಈ ಬ್ಯಾಂಕ್ ಜನರಿಗೆ ಸಮ್ಮತವಾಗಲಿಕ್ಕಿಲ್ಲವೆಂತ ಕೆಲವರ ಅಭಿಪ್ರಾಯ. ಆದರೆ ಸಹಕಾರಿ ನೀತಿಗೂ ಕಾನೂನಿಗೂ ಒಳಪಡಬೇಕಾದರೆ ಸೊಸೈಟಿಗಳಿಗೆ ಮಾತ್ರ ಸಾಲಕೊಡುವ ಪದ್ಧತಿ ಇರಬೇಕಷ್ಟೆ ಪ್ರತ್ಯೇಕ ಮನುಷ್ಯರಿಗೆ ಸಾಲ ಬೇಕಾದಾಗ ಪತ್ತಿನ (ಕ್ರೆಡಿಟ್) ಸಂಘಗಳ ಮೂಲಕ ಹೊಂದಿಕೊಳ್ಳಬಹುದು. ಪ್ರತ್ಯೇಕ ಮನುಷ್ಯರನ್ನು ಮೆಂಬರುಗಳಾಗಿ ತೆಗೆದುಕೊಳ್ಳುವದು ಸಹ ಆಗಕೂಡದೆಂತ ಕೆಲವರ ಅಭಿಪ್ರಾಯವಿದೆ ನಮ್ಮ ದೇಶದಲ್ಲಿ ಸಹಕಾರಿ ಸಂಘಗಳ ಬೆಳವಳಿಕೆ ಇನ್ನೂ ಸಾಕಷ್ಟು ಆಗಿರುವದಿಲ್ಲ ಹೀಗಿರುವ ಸ್ಥಿತಿಯಲ್ಲಿ, ಬುದ್ಧಿಯೂ, ಹಣವೂ, ಅನುಭವವೂ ಮತ್ತು ಸಮಯವೂ ಇರುವ ಜನಗಳೆಲ್ಲರೂ ಬ್ಯಾಂಕಿಗೆ ಸಹಾಯಕರಾಗುವಂತೆ ಮಾಡಿಕೊಟ್ಟದ್ದರೆ ಬ್ಯಾಂಕಿಗೆ ಬೇಕಾದಷ್ಟು ಉತ್ತೇಜನ ದೊರೆಯಲಾರದು. ಈ ಅನುಕೂಲಗಳಿರುವ ಜನರು ಈವರೆಗೂ ಯಾವ ಸಂಘಗಳಿಗೂ ಮೆಂಬರುಗಳಾಗಿರದೆ ಇರಬಹುದು ಗ್ರಾಮ ಸಂಘಗಳು ಈಗ ಸಾಧಾರಣವಾಗಿ ಅಮಿತ ಜವಾಬ್ದಾರಿ ಪದ್ಧತಿ ಮೇರೆ ಏರ್ಪಡಿಸಲ್ಪಟ್ಟಿರುವದರಿಂದ ಅನುಕೂಲಸ್ಥರು ಅಂಥಾ ಸಂಘಗಳಲ್ಲಿ ಮೆಂಬರುಗಳಾಗಲಿಕ್ಕೆ ಅಂಜುತ್ತಾರೆ. ಬ್ಯಾಂಕ್ ಮಿತ ಜವಾಬ್ದಾರಿ ಪದ್ಧತಿ ಮೇರೆ ಮಂಜೂರಾಗಿದೆ. ಆದುದರಿಂದ ಪ್ರತಿಯೊಬ್ಬ ಅನುಕೂಲಸ್ಥನೂ ಮೆಂಬರಾಗಲಿಕ್ಕೆ ಯಾವ ಅಡ್ಡಿಯೂ ಇಲ್ಲ. ಸಂಘಗಳಿಗೆ ಬೇಕಾದಷ್ಟು ಹಣ ಈಗ ದೊರೆಯುತ್ತಿರುವದಿಲ್ಲ, ಕೋ ಆಪರೇಟಿವ್ ಸೊಸೈಟಿಗಳಲ್ಲಿ ಹಣ ಡಿಪಾಜಿಟ್ ಇಟ್ಟು ದೇಶಕ್ಕೆ ಸಹಾಯಮಾಡಬೇಕೆಂಬ ಅಭಿಪ್ರಾಯದವರು ಕೆಲವರಾದರೂ ಇರಬಹುದು. ಯಾವ ಸೊಸೈಟಿಗೆ ಹಾಕಿದರೆ ತಮ್ಮ ಹಣ ಭದ್ರವಾಗಿದ್ದೀತೆಂಬುದು ಹಣಗಾರರಿಗೆ ತಿಳಿಯುವದಿಲ್ಲ ರಿಜಿಸ್ಟ್ರಾರವರನ್ನು ಕೇಳಬೇಕು. ಅವರ ಅನೇಕ ಕೆಲಸಗಳ ಮಧ್ಯೆ ಅವರಿಂದ ಜವಾಬು ಸಿಕ್ಕುವದು ತಡವಾಗುತ್ತೆ ಅಲ್ಲದೆ ಅವರಿಗೂ ಸಹ ಸೊಸೈಟಿಗಳ ಒಳಗಿನ ಸ್ಥಿತಿ ತಿಳಿಯದೆ ಇರಬಹುದು. ಬ್ಯಾಂಕಿನಲ್ಲಿ ಡಿಪಾಜಿಟ್ ಇಡುವದರಿಂದ ತಮ್ಮ ಹಣಕ್ಕೆ ಏನೂ ಭಯವಿಲ್ಲವೆಂದು ಹಣಗಾರರು ನಂಬಲಿಕ್ಕೆ ಕಾರಣಗಳಿವೆ ಬ್ಯಾಂಕಿನಿಂದ ಸೊಸೈಟಿಗಳಿಗೆ ಮಾತ್ರ ಸಾಲಕೊಡುವುದರಿಂದಲೂ, ಬ್ಯಾಂಕಿನಿಂದ ಸಾಲ ಕೊಡಬೇಕಾದರೆ ಸೊಸೈಟಿಗಳ ಒಳಗಿನ ಸ್ಥಿತಿ ಸಹ ಚೆನ್ನಾಗಿ ತಿಳಿದ ಪ್ರತಿನಿಧಿಗಳಿಂದಲೂ, ಆಫೀಸರುಗಳಿಂದಲೂ ಶಿಫಾರಸ್ಸು ಆಗಬೇಕಾಗಿರುವದರಿಂದಲೂ ಬ್ಯಾಂಕಿನಲ್ಲಿ ಡಿಪಾಜಿಟ್ಟು ಇರುವ ಹಣಗಳಿಗೆ ಏನೂ ಅಪಾಯವಿಲ್ಲ.

ಅಲ್ಲದೆ ಬ್ಯಾಂಕಿನಿಂದ ಇನ್ನೊಂದು ಪ್ರಯೋಜನವೇನೆಂದರೆ:—ಕೆಲವು ಸೊಸೈಟಿಗಳಲ್ಲಿ ಹಣ ಹೆಚ್ಚಿಗೆ ಇರುತ್ತದೆ. ಅದನ್ನು ಬೇರೆ ಸೊಸೈಟಿಗಳಿಗೆ ಸಾಲಕೊಡಲು ಕಾನೂನಿಲ್ಲ. ಡಿಪಾಜಿಟ್ಟಾಗಿ ಕೊಡಬೇಕಾದರೂ ಸಹ ರಿಜಿಸ್ಟ್ರಾರವರ ಸಹಾಯ ಬೇಕಾಗುತ್ತದೆ. ಬ್ಯಾಂಕಿದ್ದರೆ ಪ್ರತಿಯೊಂದು ಸೊಸೈಟಿಯ ಹೆಚ್ಚಿನ ಹಣವೂ ಬ್ಯಾಂಕಿನಲ್ಲಿರುತ್ತದೆ. ಬ್ಯಾಂಕಿನ ಮೂಲಕ ಬೇರೆ ಸೊಸೈಟಿಗಳಿಗೆ ಪ್ರಯೋಜನವಾಗುತ್ತದೆ.

ಸೊಸೈಟಿಗಳ ಸಂಖ್ಯೆ ಹೆಚ್ಚಾಗಿರುವದರಿಂದ ರಿಜಿಸ್ಟ್ರಾರವರ ಮೇಲ್ವಿಚಾರಣೆ ಎಷ್ಟಾದರೂ ತೃಪ್ತಿಕರವಾಗಿರಲಾರದು. ಗ್ರಾಮ ಗ್ರಾಮಗಳಲ್ಲಿ ಸೊಸೈಟಿಗಳಾಗಿರುವದರಿಂದ ಸಹಕಾರಿ ತತ್ವಗಳು ತಿಳಿದ ಜನರು ಎಲ್ಲಾ ಸೊಸೈಟಿಗಳಲ್ಲೂ ಬೇಕಾದಷ್ಟು ಜನರಿದ್ದಾರೆಂತ ಹೇಳಲಿಕ್ಕಾಗುವದಿಲ್ಲ ಬ್ಯಾಂಕ್ ಇದ್ದರೆ ಬ್ಯಾಂಕಿನ ಆಫೀಸರ್‌ಗಳು ಮೇಲ್ವಿಚಾರಣೆ ಚೆನ್ನಾಗಿ ಮಾಡಿದ ವಿನಹ ಹಣ ಸಾಲಕೊಡುವದಿಲ್ಲ. ಬ್ಯಾಂಕಿನ ಸಹಾಯ ಹೊಂದಬೇಕೆಂಬ ಆಶೆಯು ಸೊಸೈಟಿಗಳಿಗಿರುವದರಿಂದ ತಮ್ಮ ಕೆಲಸಗಳನ್ನು ಚೆನ್ನಾಗಿ ಮಾಡಬೇಕೆಂತ ಸೊಸೈಟಿಗಳಿಗೂ ನಿಗಾ ಇರುತ್ತದೆ. ದೇಶದ ಕೆಲಸ ಮಾಡಬೇಕೆಂಬ ಅಭಿಲಾಷೆ ಇರುವ ಜನರು ಸೊಸೈಟಿಗಳ ಸ್ಥಿತಿಯನ್ನು ಪರೀಕ್ಷಿಸಲಿಕ್ಕೆ ಬ್ಯಾಂಕಿನ ಮೂಲಕ ಅನುಕೂಲ ಸಿಕ್ಕುತ್ತದೆ.

ಬ್ಯಾಂಕ್ ರಿಜಿಸ್ಟರ್ ಆಯಿತೆಂಬ ವರ್ತಮಾನದಿಂದ ಜನರು ತೃಪ್ತರಾಗಬಾರದು; ತಮ್ಮ ತಮ್ಮ ಸೊಸೈಟಿಗಳಲ್ಲಿ ಜನರಲ್ ಮೀಟಿಂಗ್ ಕೂಡಿ ಎಷ್ಟೆಷ್ಟು ಶೇರು ಬ್ಯಾಂಕಿನಲ್ಲಿ ತೆಗೆದುಕೊಳ್ಳಬೇಕೆಂತಲೂ, ಬ್ಯಾಂಕಿನಲ್ಲಿ ತಮ್ಮ ಪ್ರತಿನಿಧಿಗಳು ಯಾರಿರಬೇಕೆಂಬುದನ್ನೂ ಅತಿ ಶೀಘ್ರದಿಂದ ನಿರ್ಣಯಿಸಿ ಬ್ಯಾಂಕಿನ ಕೆಲಸವನ್ನು ಪ್ರಾರಂಭಿಸಲು ಅನುಕೂಲ ಮಾಡಬೇಕು.

ಓಂ

ಶ್ರೀ ಭಗವತೇ ರಾಮಕೃಷ್ಣಾಯ.

೧೯೨೧ ನೇ ಇಸವಿ ಏಪ್ರೆಲ್ ತಾರೀಖು ೨೪ ರಲ್ಲು ಕೊಡಗು ದೇಶದ ವೇದಾಂತ ಸಂಘದ ಮೆಂಬರುಗಳಾದ ಭಕ್ತಮಂಡಲಿಯರುಗಳೆಲ್ಲಾ ಸೇರಿ ಶ್ರೀ-ಶ್ರೀ ಭಗವಾನ್ ರಾಮಕೃಷ್ಣಾ ಪರಮ ಹಂಸರ ಭಾವಪಟವನ್ನು ವಾದ್ಯಘೋಷ ಮುಂತಾದ ವಿಜೃಂಭಣೆಯಿಂದ ನಗರೋತ್ಸವವನ್ನು ಮಾಡಿಸಿ ಭಕ್ತಮಂಡಲಿಯರಿಗೆಲ್ಲಾ ಪ್ರಸಾದವನ್ನು ಕೊಟ್ಟದ್ದು ಸರಿಯಷ್ಟೆ. ನಂತರ ಇದೇ ಏಪ್ರೆಲ್ ೨೭ ನೇ ತಾರೀಖಿನಲ್ಲಿ ಭಗವಾನ್ ರಾಮಕೃಷ್ಣ ಪರಮಹಂಸರ ಅನುಗ್ರಹದಿಂದ ಸಕಾಲ ಶುಭಲಗ್ನದಲ್ಲಿ ಒಂದು ಹೆಣ್ಣುಶಿಸುವು ಹುಟ್ಟಿತು ಈ ಶಿಶುವು ಮೆಲ್ಲ ಮೆಲ್ಲನೆ ಅಂಬೆಗಾಲಿಕ್ಕುತ್ತಾ ಎರಡು ತಿಂಗಳು ನಮ್ಮ ಕರ್ನಾಟಕಭಾರತಮಾತೆಯರ ಮನೆಗಳ ಒಳಹೊಕ್ಕಲು ಪ್ರಾರಂಭಮಾಡಿತು. ಶ್ರೀಯುತೆಯರಾದ ಭೂಮಾತೆಯರು ನಲಿಯುತ್ತಾ ಬಂದ ಮಗುವನ್ನು ಅತ್ಯಾದರದಿಂದ ಎತ್ತಿ ಮುದ್ದಿಸಿ ಪಣೆಗೆ ತಿಲುಕವನ್ನಿಟ್ಟು ಹಾಲನ್ನೂಡಿ ಲಾಲನಾ ನುಡಿಗಳಿಂದ ಮಗುವೇ ನೀನ್ಯಾರು ಎಂದು ಕೇಳಲು:—ಆಹಾ ಸೂಚಿಸುತ್ತೇನೆ ಕೇಳಿರಿ. ನಾನು ಬ್ರಹ್ಮನ ಸತಿಯಾದ ಶಾರದಾಂಬೆಯು ಈ ಕಲಿಯುಗಕ್ಕೆ ಮಾನುಷ ದೇಹವೆತ್ತಿ ಭೂಮಾತೆಯರಾದ ನಿಮ್ಮ ಭವನಗಳಿಗೆ ಬಂದೆನು. ನಾನು ಬಂದ ಕಾರಣವನ್ನು ಕೇಳುತ್ತೀರಲ್ಲವೇ ನನ್ನ ಉದ್ದಿಶ್ಯ ತಿಳಿಸುತ್ತೇನೆ. ನಿಮ್ಮ ಪೂರ್ವಜ ಮಾತೆಯರು ಆಚರಿಸುತ್ತಿದ್ದ ಪದ್ಧತಿಗಳನ್ನು ನೀವು ಆಚರಿಸುವುದರಲ್ಲಿ ಬಹು ಲೋಪಮಾಡಿದ್ದೀರಿ. ಮತ್ತು ಮಂಗಳದ್ರವ್ಯಗಳನ್ನು ದೂರ ಮಾಡಿ ಸನಾತನ ಧರ್ಮಗಳಿಗೆಲ್ಲಾ ತಿಲತರ್ಪಣಕೊಡುತ್ತಾ ಬಂಗಿರಿ ಪಶ್ಚಿಮಾತ್ಯರ ಆಚಾರಗಳಲ್ಲಿ ತುಂಬಾ ಮಮಕಾರವಿಟ್ಟಿರುವಿರಿ ಇದನ್ನು ನಾನು ಸಹಿಸಲಾರದೆ ನಿಮ್ಮಗಳಿಗೆಲ್ಲಾ ಅನಾದಿಯ ಆಚರಣೆಗಳ ನೆನಪುಕೊಡಲು ಈ ರೂಪಿನಲ್ಲಿ ಬಂದಿದ್ದೇನೆ ಇನ್ನಾದರೂ ಪರದೇಶಿಯರ ಆಚರಣೆಗಳನ್ನು ದೂರಮಾಡಿ ನನ್ನ ಜೊತೆಗಾತಿಯರಾದ ಲಕ್ಷ್ಮೀ, ಗಿರಿಜಾ, ಸೀತಾ, ಅನುಸೂಯಾ, ಅಹಲ್ಯಾ ಇಂಥ ಸತ್ಯಮಾತೆಯರ ಪೂಜಾದಿ ಸತ್ಕರ್ಮ ಪರಿನಾಮಸ್ಮರಣೆ ಸಹ ನೀವುಗಳು ಸಂಪೂರ್ಣವಾಗಿ ಮರೆತು ಆಂಗ್ಲೇಯರ ನಡೆನುಡಿಗಳಿಗೆ ನೀವುಗಳು ಮನಕೊಟ್ಟಿರುವ ಕಾರಣ ನಿಮಗಳನ್ನು ಸದ್ಬೋಧೆಯಿಂದ ಎಚ್ಚರಿಸಲು ಒಂದ ಮಹಿಳಾ ಪಾರ್ವತಿ ಎಂದು ನಾಮದೇಹವನ್ನು ಧರಿಸಿ ಬಂದೆನು ಎಂದು ಉತ್ತರಕೊಟ್ಟು ಕಳೆದ ಜೂನ್ ೨೬ ನೇ ಭಾನುವಾರ ಓಂಕಾರೇಶ್ವರ ದೇವಸ್ಥಾನದ ಮಹಡಿಗೆ ಬಿಜಯಂಗೈದು ಅಲ್ಲಿಗೆ ಬಂದ ಸ್ತ್ರೀ ಸಾಧ್ವೀಮಣಿಗಳನ್ನು ಆಶೀರ್ವದಿಸಿ ಮುಂದೆ ಆಲೋಚಿಸುತ್ತಾ ಇದ್ದಾಳೆ. ಈ ಬ್ರಹ್ಮಪತ್ನಿಯು ಮನೆ ಮನೆಗಳಲ್ಲಿ ಸತ್ಯನೀತಿಗಳನ್ನು ಬೋಧಿಸಿ ಇವರುಗಳನ್ನು ಪುಣ್ಯಭಾಗಿಗಳನ್ನಾಗಿ ಮಾಡಿದಳು. ಇವೆಲ್ಲಾ ನೋಡಿದರೆ ಸತ್ಯಸಂಧರಾದ ಶ್ರೀ ಭಗವಾನ್ ರಾಮಕೃಷ್ಣರ ಅನುಗ್ರಹ ಪ್ರಭಾವವೆಂದೇ ನಂಬಬೇಕಾಗಿದೆ. ದೇಶೋದ್ಧಾರಕ್ಕೆ ಈಗ ಹೊರಟಿರುವ ನಮ್ಮ ಭಾರತಮಾತೆಯ ಯಶೋನ್ನತಿಗಳಿಗೆ ಸಚ್ಚಿದಾನಂದ ಸ್ವರೂಪನಾದ ನಾರಾಯಣನು ಆಶೀರ್ವದಿಸಿ ಮತ್ತು ಕುಲಸ್ತ್ರೀಯರ ಕೀರ್ತಿ ಪತಾಕೆಯನ್ನು ನಮ್ಮ ಕೊಡಗು ದೇಶದಲ್ಲಿ ಸ್ಥಾಪಿಸಬೇಕೆಂದು ಆ ದಯಾಮಯನಾದ ಭಗವಂತನ ಪಾದಗಳಿಗೆ ಮೊರೆಯಿಡುತ್ತೇವೆ. ನೋಡಿ ವಾಚಕ ಸಭ್ಯರೇ ನಮ್ಮ ಕೊಡಗುದೇಶದಲ್ಲಿ ಪುರುಷರಿಗೆ ಮಾತ್ರ ಕ್ಲಬ್, ಯೂನಿಯನ್ ವೇದಾಂತ ಮೊದಲಾದ ಸಂಘಗಳಿರುವುವಲ್ಲದೆ ನಮ್ಮ ಭಾರತಮಾತೆಯರಾದ ಸ್ತ್ರೀಯರಿಗೆ ಆತ್ಮೋನ್ನತಿ ವಿಷಯಗಳು ಮುಂತಾದ ವಿಷಯಗಳನ್ನು ಒಬ್ಬರಿಗೊಬ್ಬರು ಕಲೆತು ಭಾಷಣಮಾಡಿಕೊಂಡು ಇವರುಗಳು ಮನಗಾಣಿಸಲು ತಕ್ಕ ಏರ್ಪಾಡುಗಳು ಇಂದಿನವರೆಗೆ ಕಂಡುಬರಲಿಲ್ಲಾ. ಹೊಸ್ತತಾಗಿ ಹುಟ್ಟಿದ ಶ್ರೀ ಮಹಿಳಾ ಪಾರ್ವತಿಯು ಇನ್ನೆಂಥಾ ದಯಾಮಯಳೋ ನೋಡಿ ಈ ಮಹಿಳೆಯು ಹುಟ್ಟಿದ ಶುಭಲಗ್ನವೂ ಇನ್ನೆಷ್ಟು ಪ್ರಶಸ್ತವಾಗಿರಬಹುದು. ಇವಳು ಜನಿಸಿದ ಮೂರುತಿಂಗಳೊಳಗಾಗಿಯೇ ತನ್ನ ತೇಜೋವಂಶರಾದ ಕೊಡಗು ನಿವಾಸಿಗಳಾದ ಪತಿವ್ರತಾ ಸ್ತ್ರೀಯರಿಗೆಲ್ಲಾ ಏಕಾಗ್ರತಾ ಮನಸ್ಸನ್ನು ಹುಟ್ಟಿಸಿ ಇವರುಗಳಿಂದಲೇ ಒಂದು ಸ್ತ್ರೀ ಸಮಾಜ ಏರ್ಪಡಿಸಿರುವಳು ಆಹಾ ವಿದ್ಯಾಸಿಧಿಯಾದ ಸರಸ್ವತಿಯ ಮನೋಗತಗಳು ನೆರವೇರಲು ಅಲ್ಪಜೀವಿಗಳ ತಡೆ ಏನಿದೆ, ಮುಖ್ಯ ಈಗತಾನೇ ಹೊಸದಾಗಿ ಏರ್ಪಡಿಸಲ್ಪಟ್ಟಿರುವ ಸಮಾಜಕ್ಕೆ ಏನೊಂದು ಕುಂದು ಕೊರತೆಗಳು ಸಂಭವಿಸದೇ ಚಂದ್ರತಾರಾದಿಗಳು ಇರುವ ಪರಿಯಂತರ ಸುರಕ್ಷಿತವಾಗಿ ನಡೆದುಕೊಂಡು ಹೋಗುವಹಾಗೆ ಶಾರದಾದೇವಿಯು ಆಶೀರ್ವದಿಸಲಿ ಈ ಭೂಮಾತೆಯರಿಗೆ ಜಯವಾಗಲಿ ಜಯವಾಗಲಿ ಎಂದು ದೇವದುಂದುಭಿಗಳು ಆರಸುವರು ಮತ್ತು ಈ ಸಮಾಜದ ಸ್ತ್ರೀಯರುಗಳು ತಮ್ಮ ತಮ್ಮ ಮಕ್ಕಳನ್ನು ಪೋಷಿಸುವ ಹಾಗೆ ಹೊಸ ಏರ್ಪಾಡಾಗಿರುವ ಸಮಾಜವನ್ನು ಎಡಬಿಡದೇ ಐಕ್ಯ ಮನಸ್ಸಿನಿಂದ ಪೋಷಿಸಿ ಪುಷ್ಕಳಗೊಳಿಸುತ್ತಾರೆಂದು ದೃಢವಾಗಿ ಹೇಳುತ್ತೇನೆ. ಮತ್ತು ಕೊಡಗು ನಿವಾಸಿಗಳಾದ ಭಾರತ ಮಾತೆಯರು ನೀಚವಾದ ಕಾಮ, ಕ್ರೋಧ ಮೋಹ, ಲೋಭ, ಮದ, ಮತ್ಸರ ಇಲ್ಲದೇ ಪಾರಮಾರ್ಥದರ್ಶಿಗಳಾಗಿದ್ದಾರೆಂದು ನಾನು ದೃಢವಾಗಿ ಹೇಳುತ್ತೇನೆ.

ಸ್ತ್ರೀ—

[ಮೇಲಿನ ವಿಚಾರವು ಮಡಿಕೇರಿಯಲ್ಲಿ ಹೊಸದಾಗಿ ಏರ್ಪಡಿಸಲ್ಪಟ್ಟಿರುವ ಸ್ತ್ರೀ ಸಮಾಜವನ್ನು ಪ್ರಥಮತ ಏರ್ಪಡಿಸಬೇಕಾಗಿ ಬರಕೊಂಡ ವಿಜ್ಞಾಪನಾ ಪತ್ರಿಕಗೆ ಸಂಬಂಧಿಸುತ್ತೆ, ಸ್ತ್ರೀಸಮಾಜ ಒಂದು ಕೊಡಗುದೇಶಕ್ಕೆ ಅತ್ಯವಶ್ಯವೇ. ಈಗತಾನ ಏರ್ಪಡಿಸಲ್ಪಟ್ಟಿರುವ ಸಮಾಜವು ದೇಶಾಭಿಮಾನ ಮತ್ತು ಭಾಷಾಭಿಮಾನಗಳನ್ನ ವಲಂಬಿಸಿ ಭಾರತಾ ಮಹಿಳೆಯರ ಧೀರತ್ವ ಮತ್ತು ಘನತೆಗಳನ್ನು ಹೊರಪಡಿಸು ... ... ಕೈಕೊಂಡು ದೇಶೋನ್ನತಿಯಲ್ಲಿ ನಮ್ಮ ಮಹಿಳೆಯರು ಆಸಕ್ತರಾಗುವಂತೆ ಮಾಡುತ್ತೆಂದು ನಂಬಿರುತ್ತೇವೆ.] ಎಡಿಟರ್.

ಒಬ್ಬ ಯಾಚಕನ ಪರಿತಾಪ.

ಯಾಚಕನಾದ ನನಗೆ ಒಳ್ಳೇದು ಕೆಟ್ಟದ್ದು ಎಂಬ ಭೇದವಿಲ್ಲ ನಾನು ಎಲ್ಲರಲ್ಲಿಯೂ ಸ್ವೇಚ್ಛೆಯಾಗಿ ಪ್ರವರ್ತಿಸುತ್ತೇನೆ, ನನಗೆ ಯಾರ ಲಕ್ಷ್ಯವೇನೋ ಎಂದು ಒಬ್ಬರಲ್ಲಿ ಮತ್ತೊಬ್ಬರು ನನ್ನ ಕಷ್ಟವನ್ನು ನೋಡಿ ಕನಿಕರಪಡುವರು ಮತ್ತು ನಾನು ಸ್ವಪ್ರಯೋಜನಾರ್ಥವಾಗಿ ಬೇಡುವುದಿಲ್ಲವಾದ್ದರಿಂದ ಎಂದಾದರೊಂದು ದಿವಸ ನನ್ನ ಯೋಚನೆಯು ಫಲಿತಾಂಶಕ್ಕೆ ಬರುವುದು. ಹೀಗಿರುವಲ್ಲಿ ಯಾಚಕನಾದ ನನಗೆ ಯಾರಿಗೆ ಭಯಪಡುವ ಸಂಭವವಿರುವುದು? ಆದುದರಿಂದಲೇ ನಾನು ಒಬ್ಬರ ಮೇಲೆ ಮತ್ತೊಬ್ಬನನ್ನು ಎತ್ತಿ ಹಾಕುವೆನು; ಕೊಬ್ಬಿದವನನ್ನು ಭೂಷಿಸುವೆನು. ಕೊಡದವನನ್ನು ದೂಷಿಸುವೆನು ಜಗವೆಲ್ಲವನ್ನು ನಿರ್ಲಕ್ಷ್ಯವಾಗಿ ಕಾಣುವೆನು.

ವಾಯುವಾದರೋ ಯಾರನ್ನೂ ಉಪೇಕ್ಷೆ ಮಾಡುವುದಿಲ್ಲ ಅದಕ್ಕೆ ಭಾಗ್ಯವಂತನೂ, ದರಿದ್ರವಂತನೂ, ಎಲ್ಲರೂ ಒಂದೇ ಯಾವ ಗೋಪ್ಯವಾದ ಸ್ಥಳಕ್ಕೆ ಹೋಗಬೇಕಾದರೂ ಹೋಗುತ್ತದೆ. ಕಿಟಕಿಗಳನ್ನು ಮುಚ್ಚುವುದು, ಮೇಜಿನಮೇಲಿನ ಸಾಮಾನುಗಳನ್ನು ಹಾರಿಸುವುದು—ಸ್ತ್ರೀಯರ ಅಂತಃಪುರಕ್ಕೆ ಪ್ರವೇಶಮಾಡುವುದು, ಸೆರಗು ಹಾರಿಸುವುದು, ಇವೇ ಮೊದಲಾದ ಅತ್ಯಾಚಾರಗಳನ್ನು ಮಾಡುವುದು. ಆದರೆ ಯಾರೂ ವಾಯುವಿನ ವಿಷಯದಲ್ಲಿ ಕೋಪಗೊಂಡವರಿಲ್ಲ ವಾಯುವು ಏನೇನು ಮಾಡಿದರೂ ಎಲ್ಲರಿಗೂ ಹಿತವಾಗಿಯೇ ಇರುವುದು ವಾಯುವಿಗೆ ಗೋಚರವಾಗದ ಸ್ಥಳವೇ ಇಲ್ಲ. ವಾಯುವೇ ಧನ್ಯನು ವಾಯುವೇ ನಿಷ್ಕಪಟ ಪರೋಪಕಾರಿ, ಮತ್ತು ಸರ್ವ ಹಿತೈಷಿ. ಆದರೂ ವಾಯುವು ಯಾಚಕನಿಗೆ ಹಲವು ಸಂದರ್ಭದಲ್ಲಿ ಹೆದರುತ್ತದೆ. ಅದು ಹೇಗೆಂದರೆ:—ಒಬ್ಬಾನೊಬ್ಬ ಶ್ರೇಷ್ಠ ಕವೀಶ್ವರನು, ಹೀಗೆಂದು ಹೇಳುತ್ತಾನೆ. "ಈ ಜಗತ್ತಿನಲ್ಲಿ ಬೇಡುವದಕ್ಕಿಂತ ಪರಮ ನೀಚವಾದ ಕೆಲಸವು ಬೇರೊಂದಿಲ್ಲವೆಂತಲೂ, ಅವನು ಹುಲ್ಲುಕಡ್ಡಿಗಿಂತಲೂ ತುಚ್ಛನೆಂತಲೂ, ಹುಲ್ಲುಕಡ್ಡಿಯನ್ನು ವಾಯುವು ಹೊತ್ತುಕೊಂಡು ಹೋಗುವುದೆಂತಲೂ, ತನ್ನನ್ನು ಎಲ್ಲಿ ಬೇಡುವನೋ ಎಂಬ ಭಯದಿಂದ ವಾಯುವು ಸಹ ಬೇಡುವವನ ಬಳಿಗೆ ಬಾರನು; ಅದ್ದರಿಂದಲೇ ಯಾಚಕನು ಗಾಳಿಗೆ ಹಾರಿಹೋಗುವುದಿಲ್ಲವೆಂದೂ ತರ್ಕಿಸಿದ್ದಾನೆ"

ಸ್ವಾರ್ಥಕ್ಕಾಗಲೀ, ಪರೋಪಕಾರಕ್ಕಾಗಲೀ, ಬೇಡುವುದು ಕಷ್ಟವೇ. ಆದರೆ ಈ ಜಗತ್ತಿನಲ್ಲಿ ಸ್ವಪ್ರಯೋಜನಕ್ಕಾಗಿ ಬೇಡುವುದು ನೀಚವೇ? ಪರೋಪಕಾರಕ್ಕಾಗಿಯೂ, ದೇಶ ಹಿತಕ್ಕಾಗಿಯೂ, ವಿದ್ಯಾಭಿವೃದ್ಧಿಯನ್ನು ಅಭಿವೃದ್ಧಿ ಮಾಡುವುದಕ್ಕಾಗಿಯೂ ಬೇಡುವವನೆ ಈಶ್ವರ ಸ್ವರೂಪನು. ಅವನಿಗೆ ಇದಕ್ಕಿಂತಲೂ ಶ್ರೇಷ್ಠವಾದ ಬೇರೆ ಕಾರ್ಯವು ಉಂಟೇ!

"ಯಾಚಕ"

ಒಳದೇಶ ವೃತ್ತಾಂತಗಳಲ್ಲಿ ಪ್ರಕಟಿಸಿರುವಂತೆ ಮಡಿಕೇರಿ ಹೆಂಗಸರ ಆಸ್ಪತ್ರೆಗೆ ಸೌಕರ್ಯಗಳನ್ನು ಒದಗಿಸಿದ ವಿಷಯವು ತುಂಬಾ ಸಂತೋಷಕರವಾದದ್ದು. ಸಿವಿಲ್ ಸರ್ಜನರವರು ಈ ವಿಷಯದಲ್ಲಿ ಶ್ರೀಮತಿ ಸೀತಮ್ಮನವರಿಗೂ ಮತ್ತು ಚಂದಾ ಕೊಟ್ಟ ಎಲ್ಲಾ ಮಹಿಳೆಯರಿಗೂ ತಮ್ಮ ವಂದನೆಗಳನ್ನು ಅರ್ಪಿಸಿರುತ್ತಾರೆ. ಈ ವಂದನೆಗಳನ್ನು ಚಂದಾ ಕೊಟ್ಟ ಎಲ್ಲಾ ಮಹಿಳೆಯರಿಗೆ ಈ ಪತ್ರಿಕೆ ಮೂಲಕ ತಿಳಿಸಲು ಶ್ರೀಮತಿ ಸೀತಮ್ಮನವರು ಆದರಪೂರ್ವಕವಾಗಿ ಕೇಳಿಕೊಂಡದ್ದಕ್ಕೆ ನಾವು ತುಂಬಾ ಸಂತೋಷಪಡುತ್ತೇವೆ. ನರಳುತ್ತಿರುವ ಜನಸಮುದಾಯದ ಸೌಕರ್ಯಕ್ಕಾಗಿ ಶ್ರೀಮತಿ ಸೀತಮ್ಮನವರು ಮಾಡಿದ ಉದಾಹರಣೆಯನ್ನು ದೇಶದ ಎಲ್ಲಾ ಮಹಿಳೆಯರು ಅನುಸರಿಸಿ ದೇಶಸೇವೆಯಲ್ಲಿ ಭಾಗಿಗಳಾಗಬೇಕಾಗಿ ಕೋರುತ್ತೇವೆ.

ವೀರಾಜಪೇಟೆ—ಅಮ್ಮತ್ತಿ ರಾಜಮಾರ್ಗದ ಮುನ್ಸಿಪಲ್ ಲಿಮಿಟ್ ಒಳಗೆ ಇರುವ ಚಡಾವಿನ ತಿರುವಿನಲ್ಲಿ ಮೋಟಾರು ಬಸ್ಸುಗಳನ್ನು ತಿರುಗಿಸಲು ಅತಿ ಪ್ರಯಾಸವೆಂಬುದು ಪ್ರಯಾಣಿಕರಿಗೆ ತಿಳಿಯದ ಸಂಗತಿಯಲ್ಲ. ತಿರುವಿನ ಎಡ ಭಾಗವು ಹಳ್ಳವಾಗಿರುವುದರಿಂದ ಮುಂದಕ್ಕೆ ಅಪಾಯವುಂಟಾಗಬಹುದೆಂಬ ಸಂಶಯವಿದೆ. ಆದುದರಿಂದ ಅಧಿಕಾರಿಗಳು ಈ ಸ್ಥಳವನ್ನು ಪರೀಕ್ಷಿಸಿ ಬಸ್ಸುಗಳಿಗೆ ಅಪಾಯವಾಗದಂತೆ ದುರುಸ್ತು ಮಾಡುವುದು ಒಳ್ಳೆಯದಾಗಿದೆ.

ವರ್ತಮಾನ ಸಂಗ್ರಹ.

ಒಳದೇಶ.

ಬೀದಿಯಲ್ಲು ಬಾಳೆ ಸಿಪ್ಪೆಗಳನ್ನು ಹಾಕಿದಕ್ಕೆ ಮಡಿಕೇರಿ ಬೆಂಚು ಕೋರ್ಟಿನಲ್ಲಿ ಒಂದು ಮೊಕದ್ದಮೆ ತೀರ್ಮಾನದಲ್ಲಿದೆ.

ಮಳೆ ಕಡಿಮೆಯಾದ ದೆಸೆಯಿಂದ ರೈತರು ಬಹಳ ಕಷ್ಟದಲ್ಲಿರುತ್ತಾರೆ. ಭತ್ತ ನಾಟಿ ಮಾಡುವ ರೈತರೆಲ್ಲರೂ ಮಳೆಯನ್ನು ಎದುರುನೋಡುತ್ತಾ ಇರುತ್ತಾರೆ.

ಸುಂಟಿಕೊಪ್ಪದ ಕೆಲವು ಭಾಗದಲ್ಲಿ ಮುನ್ಸಿಪ್ಸ್ರಲ್ಲಿಸಿ ಕೆಲವರು ಸೇಂದಿ ಒಟ್ಟುವುದನ್ನು ಇನ್ನೂ ನಿಲ್ಲಿಸಲಿಲ್ಲವಾಗಿ ತಿಳಿಯುತ್ತೇವೆ.

ಮಡಿಕೇರಿಯಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗಿ ನಾಲ್ಕು ಹೋಸ್ಟೆಲ್‌ಗಳಿದ್ದರೂ ಅನೇಕ ವಿದ್ಯಾರ್ಥಿಗಳಿಗೆ ಸ್ಥಳ ಸಿಕ್ಕದೆ ಬಿಡಾರಗಳಲ್ಲಿ ವಾಸಮಾಡುತ್ತಿರುವರು.

ಕೊಣಗೇರಿ ಗ್ರಾಮದಲ್ಲಿ ಒಬ್ಬ ಹೆಂಡಕುಡುಕ ಕೊಡಗನೊಬ್ಬನು ಬೈಸಿಕಲ್ಲಿಗೆ ಹತ್ತಿ, ಕಳಕ್ಕೆ ಬಿದ್ದು ಅಪಾಯ ಹೊಂದಿರುತ್ತಾನೆ.

ಮಡಿಕೇರಿ ಆಸ್ಪತ್ರೆಯಲ್ಲಿ ಅ|| ಸರ್ಜನರಾಗಿದ್ದ ಮಿ|| ಗಿಬ್‌ಸನ್‌ರವರು ವರ್ಗವಾಗಿ ಹೋಗಿರುತ್ತಾರೆ. ಅವರ ಬದಲು ಮಿ|| ಮೋಬೆಯವರು ಅ|| ಸರ್ಜನರಾಗಿ ನೇಮಿಸಲ್ಪಟ್ಟಿರುತ್ತಾರೆ.

ಮಡಿಕೇರಿಯಲ್ಲಿ ಮೋಟಾರು ಬರುವಾಗ್ಗೆ ರಸ್ತೆಗೆ ಅಡ್ಡಲಾಗಿ ದಾಟಿದ ಮತ್ತು ಗೋಲ್ಫ್ ಗ್ರೌಂಡಿನ ಹತ್ತಿರ ಮೇಯುತ್ತಿದ್ದಂತ ದನಕರಗಳನ್ನು ಅಧಿಕಾರಿಗಳು ದೊಡ್ಡಿಗೆ ಕೂಡಿಸಿರುತ್ತಾರೆ.

ರಿಟಯರ್ಡ್ ಎಕೌಂಟೆಂಟ್‌ರಾಗಿದ್ದ ಮೆ|| ಪಾಡಂಡ್ರ ಕಾಳಪ್ಪನವರು ಮಡಿಕೇರಿ ಆಸ್ಪತ್ರೆಯಲ್ಲಿ ಕೋಟೆಗೆ ಚಿಕಿತ್ಸೆ ಹೊಂದುತ್ತಿದ್ದು ತಾ|| 12-7-21 ರಲ್ಲು ಸ್ವರ್ಗಸ್ಥರಾದರೆಂಬದನ್ನು ಕೇಳಿ ವಿಷಾದಿಸುತ್ತೇವೆ.

ಮದ್ರಾಸು ಇಂಜಿನೀಯರಿಂಗ್ ಕಾಲೇಜಿನಲ್ಲಿ ನಾಲ್ಕು ವರ್ಷಗಳ ತರಬೇತಾಗಿರುವ ಮೆ|| ಬೊಪ್ಪೇರಿಯಂಡ್ರ ಮುತ್ತಣ್ಣನವರು ಪ್ರತ್ಯಕ್ಷ ತರಬೇತಿಗೆ (Practical training) ಮೂವು ಕೂಟಕ್ಕೆ ಕಳುಹಿಸಲ್ಪಡುತ್ತಾರಂತೆ.

ಮಡಿಕೇರಿಯಲ್ಲಿ ಈಗಲೀಗ ಸುಮಾರು ಹತ್ತು ನೂಲುವ ರಾಟೆಗಳು ಇವೆ. ಇವುಗಳನ್ನು ಗಣಪತಿಬೀದಿಯಲ್ಲಿರುವ ಇಬ್ಬರು ಹಿಂದೂ ಬಡಗಿಯರು ತಯಾರಿಸುತ್ತಿದ್ದಾರಂತೆ. ಒಂದು ರಾಟೆಯ ಬೆಲೆ 5 ರೂ. ಮರ ಕೊಟ್ಟರೆ ಎರಡೇ ರೂಪಾಯಿ.

ಮೊನ್ನೆ ತಾನೆ ವಿವಾಹವನ್ನು ಪೂರೈಸಿದ ಮೆ|| ಬಿ. ಮುಂಬುನಾತರವರು (ಶ್ರೀಮಂತ ಶಾಂತಮಲ್ಲಪ್ಪನವರ ಅಳಿಯ) ಇಂಗ್ಲಾಂಡಿಗೆ ಸದ್ಯದಲ್ಲಿ ಹೊರಡುವರು. ದಾರಿಯಲ್ಲಿ ತಮಗೆ ದೊರೆಯಬಹುದಾದ ಅನುಭವಾದಿಗಳನ್ನು ಇವರು ನಮ್ಮ ವಾಚಕರಿಗೋಸ್ಕರ ಕಳುಹಿಸುವ ಏರ್ಪಾಡು ಮಾಡಿರುತ್ತಾರೆ.

ಕೊಡಗು ದೇಶಕ್ಕೆ ಕೊಡುವದಾಗಿ ಬಹಳ ಕಾಲದಿಂದ ಹೇಳುತ್ತಿದ್ದ ನ್ಯಾಯವಿಧಾಯಕ ಸಭೆಯು ಮುಂದಿನ ಕಮಿಷನರಿಗೆ ಬಂದಿರುವದಾಗಿಯೂ ಕಮಿಷನರು ಮಡಿಕೇರಿಯಲ್ಲಿ ಇಲ್ಲದ್ದರಿಂದ ಪ್ರಕಟಿಸಲು ತಡವಾಗಿದೆಯಾಗಿ ತಿಳಿಯುತ್ತೇವೆ.

ಕಳೆದ ಜಮಾಬಂದಿ ಲೆಕ್ಕವನ್ನು ದಾಖಲು ಮಾಡುವದಕ್ಕಾಗಿ ಮಿ|| ಸಿದ್ದೀಕ್ ಮೊಹಿಯುದ್ದೀನ್ ಸಾಹುಕಾರರ ಬೇಳಯಿಕೇರಿ ತೋಟದ ರೈಟರ್ ಶೇಷ್ಟಗಾರ ಅಪ್ಪು ಎಂಬವರಿಗೆ ಸಬ್. ಜಡ್ಜಿಯವರು 7-7-21 ರಲ್ಲು ಪತ್ತು ರೂಪಾಯಿ ಜುಲ್ಮಾನೆ ಮಾಡಿರುವರು.

ಸುಮಾರು 12 ಲಕ್ಷದವರೆಗೆ ಖರ್ಚುಮಾಡಿ ತೋಟಗಳನ್ನು ಸಾಗಿಸಲಿಕ್ಕೆ ಮೂವು ಕೂಟದಲ್ಲಿ ಸ್ಥಾಪಿಸಲ್ಪಟ್ಟಿರುವ ಟ್ರಾಮ್‌ವೇ ಲೈನುಗಳನ್ನು ಅಜಮಾಯಿಸಲಿಕ್ಕೆ ರಾ|| ಬ|| ಕೆ. ಕುಟ್ಟಯ್ಯನವರು ರಾ|| ಬ|| ಕೆ. ಅಪ್ಪಯ್ಯನವರು ತಾರೀಖು 11 ರಲ್ಲು ಮಡಿಕೇರಿಯಿಂದ ಹೋಗಿರುತ್ತಾರೆ.

ತಾರೀಖು 10 ರ ಮಧ್ಯಾಹ್ನ ರಾಜಕಾರ್ಯಪ್ರಸಕ್ತ ರಾವ್ ಬಹದ್ದೂರ್ ಮನೆಯ ಪಂಡ್ರ ಮುತ್ತಣ್ಣನವರು ಕೊಡಗು ಗ್ರೇಜುವೇಟ್ಸ್ (ಬಿ ಎ., ಮತ್ತು ಆ ತೇರ್ಗಡೆ ಹೊಂದಿದವರು) ಗಳಿಗೆ ಮಡಿಕೇರಿಯಲ್ಲಿರುವ ತಮ್ಮ ಫರ್ನ್ ಬ್ಯಾಂಕ್ ಬಂಗ್ಲೆಯಲ್ಲಿ ಒಂದು ಔತಣ ಕೊಟ್ಟಿರುತ್ತಾರೆ.

ಮಡಿಕೇರಿ ಕೋಟೆಯ ಮಹಡಿಯ ಪೂರ್ವಭಾಗವು ಅಭದ್ರತೆಯಾಗಿರುವದರಿಂದ ಅಲ್ಲಿ ನೆಲೆಗೊಂಡಿದ್ದ ಕಮಿಷನರ ಇಂಗ್ಲೀಷ್ ಆಫೀಸನ್ನು ಮೊದಲಿನ ಜೈಲಿನ ಕಟ್ಟಡಕ್ಕೆ ವರ್ಗಾಯಿಸಿದ್ದಾರೆ. ಇಂದಿನವರೆಗೆ ಕಮಿಷನರವರು ವಾಸಮಾಡುತ್ತಿದ್ದ (ಫೋರ್ಟ್) ಬಂಗ್ಲೆಯು ವಾಸಕ್ಕೆ ಅಯೋಗ್ಯವಾದದ್ದೆಂದು ಕಂಡು ಬಂದಿರುವದರಿಂದ ಮುಂದಕ್ಕೆ ಈ ಬಂಗ್ಲೆಗೆ ಇಂಗ್ಲೀಷ್ ಆಫೀಸನ್ನು ವರ್ಗಾಯಿಸುತ್ತಾರೆಂದು ವದಂತಿ ಇದೆ.

ಪೋಲೀಸಿನವರ ಹಾವಳಿಯು ಬಹಳ ಜೋರಾಗಿದೆ. ಅವರ ಒಂದನೇ ಕೆಲಸ ರಸ್ತೆಯಲ್ಲಿರುವ ದನಗಳನ್ನು ದೊಡ್ಡಿಗೆ ಕೂಡಿಸುವುದು. ಎರಡನೇದು ಗಾಡಿಯವರನ್ನು ಚಾರ್ಜ್ ಮಾಡುವುದು. ಯಾವ ರಸ್ತೆಯಲ್ಲೇ ಆಗಲಿ ಅಂದರೆ—ಮೋಟಾರುಗಳು ತಿರುಗುವಾಗ ತೊಂದರೆಯಾಗದಂತೆ ಎಲ್ಲಾ ರಸ್ತೆಯಲ್ಲಿಯೂ, ದನ ಕರುಗಳು ತಿರುಗಬಾರದಾಗಿಯೂ, ಹಾಗೆ ತಿರುಗುವುದು ಕಂಡರೆ ದೊಡ್ಡಿಗೆ ಕೂಡಿಸುವದಾಗಿಯೂ ಕಂಡ ಕಂಡವರಿಗೆ ವಾಗ್ದಂಡನೆ ಮಾಡುತ್ತಾರೆ.

ಸೇಂಡ್ಹರ್ಸ್ಟ್ ಮಿಲಿಟರಿ ಕಾಲೇಜಿಗೆ ಹೋಗತಕ್ಕವರನ್ನು ಚುನಾಯಿಸಲಿಕ್ಕೆ ಸಿಮ್ಲಾದಲ್ಲಿ 20-9-21 ರಲ್ಲು ಪರೀಕ್ಷೆಯಾಗುವದಾಗಿಯೂ ಹಾಗೆ ಹೋಗುವವರ ಪ್ರಾಯ 17½ ಯಿಂದ 19 ರವರೆಗೆ ಇರಬೇಕೆಂತಲೂ, ಸೇಂಡ್ಹರ್ಸ್ಟ್ ಕಾಲೇಜಿನಲ್ಲಿ 75 ಪೌಂಡು ವರ್ಷಕ್ಕೆ ಫೀಜು ಕೊಡಬೇಕೆಂತಲೂ ಬೇರೆ ಖರ್ಚು ಅಭಾಯಿದೆ ಇದೆಯಾತಲೂ, ಇಷ್ಟವಿರುವವರು ಇದೇ 19 ನೇ ತಾರೀಖಿನೊಳಗೆ ಬರಬೇಕೆಂತಲೂ ಬನಿವಾಸ್ಟಾರ ಸಂಘಕ್ಕೆ ತಿಳಿಯ ಬಂದಿರುತ್ತದೆ.

ನಮ್ಮ ಹಿಂದಿನ ಸಂಚಿಕೆಯಲ್ಲಿ ಸೂಚಿಸಿದಂತೆ ಮಡಿಕೇರಿ ಕೂಡಗೂ ಮುಸಲ್ಮಾನರ ಪ್ರಸಿದ್ಧ ಮೊಕದ್ದಮೆಯು ತಾ|| 12- -21 ರಲ್ಲು ಸಬ್‌ಜಡ್ಜಿಯವರ ಕೋರ್ಟಿನಲ್ಲು ವಿಚಾರಣೆಯಾಗುತ್ತಿದ್ದದ್ದನ್ನು ನೋಡಲು ಅನೇಕ ಜನರು ನೆರೆದಿದ್ದರು. ಅಪರಾಧಿಗಳಾದರೊ, ಕೋರ್ಟು ಕೊಠಡಿಯ ಒಂದು ಮೂಲೆಯಿಂದ ಇನ್ನೊಂದು ಮೂಲೆಯವರೆಗೆ ನಾಲುಕಟ್ಟಿ ನಿಂತಿದ್ದರು. ಪೋಲೀಸ್ ಅ|| ಸೂಪರಿಂಟೆಂಡೆಂಟ್ ಸಾಹೇಬರು ಜಡ್ಜಿಯವರ ಸ್ಥಾನದಲ್ಲಿ ಸಮೀಪ ಕುಳಿತ್ತಿದ್ದರು. ಮೊಕದ್ದಮೆಯು 5-8-1921 ಕ್ಕೆ ಅಡ್ಜನ್ ಆಗಿದೆ.

· ಆಕಾಶದಲ್ಲಿ ಮೋಡಗಳು ತುಂಬಿ ಆಗಾಗ್ಗೆ ಮಳೆಯು ಬೀಳುವ ಸಂಭವವನ್ನು ಸೂಚಿಸಿದ್ದಾಗ್ಯೂ, ಕಲವು ಹನಿಗಳು ಮಾತ್ರ ಬಿದ್ದು ರೈತರ ಮನಸ್ಸನ್ನು ವ್ಯಥೆಗೊಳಿಸುತ್ತಾ ಇದೆ. ಈ ಸಂದರ್ಭದಲ್ಲಿ ಭತ್ತದ ಬೆಲೆಯು ದಿನೇದಿನೇ ಏರುತ್ತಾ ಇದೆ. ಕಾಲವುಹಿಮೆಯು ಅಕಾಲ ವೃಷ್ಟಿಯನ್ನು ಸೂಚಿಸುತ್ತವೆ. ಆದ ಪ್ರಯುಕ್ತ ಬರಗಾಲದ ಸೂಚನೆ ದೂರವಾಗಿಲ್ಲವೆಂದು ನಿರ್ಧರಿಸಬೇಕಾಗಿದೆ. ಈ ವಿಚಾರವನ್ನು ಜನರು ಮನಸ್ಸಿಗೆ ತಂದುಕೊಂಡು ಭತ್ತದ ಬೆಲೆ ಹೆಚ್ಚಿದಾಗ್ಯೂ ಧಾನ್ಯವೇ ಧನವೆಂದು ಭಾವಿಸಿ ತಮ್ಮಲ್ಲಿರುವ ಅಲ್ಪಸ್ವಲ್ಪ ಭತ್ತವನ್ನು ಕೈ ಬಿಡದೆ ಇರುವದು ಒಳ್ಳೇದು.

ನೆಲಜಿ ಸ್ಕೂಲ್ ಒಂದನೆ ಅಸಿಸ್ಟೆಂಟ್ ಮಾಸ್ಟರಾದ ಮ|| ರಾ|| ಕೆ ನಾಣಮ್ಮನವರು ತಮ್ಮ 55 ನೇ ವಯಸ್ಸಿನಲ್ಲಿ 35 ವರ್ಷ ಸರ್ವಿಸ್ ತುಂಬಿ ಇದೇ ತಾ|| 1 ನೇ ಶುಕ್ರವಾರದವಿನ ತಮ್ಮ ಕೆಲಸದಿಂದ ನಿವೃತ್ತರಾಗಿ (ರಿಟಾಯರಾಗಿ) ಹೋದರು. ಇವರು ಹೋಗುವ ದಿವಸ ಶಾಲೆಯ ಹುಡುಗರಿಗೂ, ಪಂಚಾಯಿತಿಗೆಯವರಿಗೂ ಮತ್ತು ನೆರೆದಿದ್ದ ಗ್ರಾಮಸ್ಥರಿಗೆಲ್ಲಾ ಊಟವನ್ನು ಕೊಟ್ಟರು. ಇವರಿಗೂ ಸಹ ಗ್ರಾಮಸ್ಥರೂ, ಪಂಚಾಯಿತಿಗೆಯವರೂ, ಇದೇ ಸ್ಕೂಲ್ ಬೇರೆ ಮಾಸ್ಟರುಗಳೂ, ಸ್ಕೂಲ್ ಹುಡುಗರೂ ಸೇರಿ ಸ್ಪೋರ್ಟ್ಸನ್ನು ಮುಗಿಸಿದನಂತರ ಎಂಟರ್‌ಟೇಯಿನ್‌ಮೆಂಟ್ ಕೊಟ್ಟು ಆದಮೇಲೆ ಅಡ್ರೆಸ್ಸನ್ನು ಕೊಟ್ಟು ಒಡ್ಡೋಲಗ ಸಮೇತ ಇವರನ್ನು ಮೇಲೆ ಹೇಳಿದ ಎಲ್ಲಾ ಜನರೂ, ಸ್ಕೂಲಿನಿಂದ ಅವರ ಮನೆಯ ಸಮೀಪದವರೆಗೆ ಕರೆದುಕೊಂಡು ಹೋಗಿ ಬಿಟ್ಟರು.

ಚೀಫ್ ಕಮಿಷನರ್ ಕರ್ನಲ್ ನೋಕ್ಸ್ ಸಾಹೇಬರ ಕುಟುಂಬ ಮಿಸ್ಸಸ್ ನೋಕ್ಸರವರು ಕಳೆದ ಮೇ 10 ರಲ್ಲು ಮಡಿಕೇರಿಯಲ್ಲಿನ ಹೆಂಗಸರ ಆಸ್ಪತ್ರೆಗೆ ದಯಮಾಡಿಸಿ ಅಲ್ಲಿನ ಕಾಯಿಲೆಸ್ಥರಾದ ಹೆಂಗಸರ ಮತ್ತು ಮಕ್ಕಳ ಕ್ಷೇಮಕ್ಕಾಗಿ ಕಂಬಳಿ, ಬಟ್ಟೆ ಮುಂತಾದವುಗಳು ಬೇಕಾಗಿರುವದನ್ನು ಕಂಡು ಕೊಡಂದೆರ ಮಿಸ್ಸಸ್ ತಿಮ್ಮಯ್ಯನವರಲ್ಲಿ ಈ ವಿಷಯ ಪ್ರಸ್ತಾಪಿಸಿ ಹೆಂಗಸರ ವಾರ್ಡುಗಳಿಗೆ ಬೇಕಾಗುವ ಸೌಕರ್ಯಗಳನ್ನು ಅನುಕೂಲಿಸಬೇಕೆಂದು ಕೇಳಿಕೊಂಡರು. ಶ್ರೀಮತಿ ಸೀತಮ್ಮನವರು ಈ ಪುಣ್ಯ ಕೆಲಸಕ್ಕೆ ಸರ್ವಪ್ರಯತ್ನಪಟ್ಟು ಮಡಿಕೇರಿಯಲ್ಲಿರುವ ಯೂರೋಪಿಯನ್ ಮತ್ತು ಇಂಡಿಯನ್ ಸ್ತ್ರೀಯರುಗಳಿಂದ ಒಟ್ಟು 315-0-0 ರೂ. ಚಂದಾ ವಸೂಲಿಮಾಡಿ ಈ ಕೆಳಗಿನ ಬಟ್ಟೆಗಳನ್ನು ಆಸ್ಪತ್ರೆಗೆ ಒಪ್ಪಿಸಿರುತ್ತಾರೆ. ಮಕ್ಕಳಿಗೆ—20 ಫ್ಲಾನೆಲ್ ಫ್ರಾಕ್. 12 ದಟ್ಟಿ, 6 ಕಂಬಳಿ, 12 ಗುದ್ದಿ, 100 ನೇಪ್‌ಕಿನ್, 20 ಟವಲುಗಳು. ಹೆಂಗಸರಿಗೆ—12 ಟವಲು, 14 ಫ್ಲಾನೆಲ್ ರವುಕೆ 14 ಫ್ಲಾನೆಲ್ ಒಳಅಂಗಿ, 36 ದಟ್ಟಿ, 60 ಡ್ರಾಪರ್ಸ್.

ಇದೇ 10 ನೆಯ ತಾರೀಖಿನ ಸಂಜೆ ಯಂಗ್‌ಮೆನ್ಸ್ ಕ್ಲಬ್ಬಿನ ಏರಿಸಾಲ್ಕಿನಂ ಮಹೋತ್ಸವವು ಸಂಘದ ಪ್ರೆಸಿಡೆಂಟ್ ರಾ|| ಸಾ|| ಕೆ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ತಿಂಡಿ ತೀರ್ಥಗಳು ತೀರಿದ ನಂತರ ಸೆಕ್ರೆಟರಿಯವರು ತಮ್ಮ ವರದಿಯನ್ನು ಓದಿ ಸಂಘಕ್ಕೆ ಧನಸಹಾಯ ಮಾಡಿದ ಮೆಹರಬಾನ್ ಕಮಿಷನರ್ ಸಾಹೇಬರನ್ನು ವಂದಿಸಿ ತನ್ನ ವಿವಾಹನಿಮಿತ್ತ ಸೀಮೆಗೆ ಹೋದ ಮೆ|| ಥಾಮ್ಸನ್ ಸಾಹೇಬರ ವಿದಾಯವನ್ನೂ ಸೂಚಿಸಿದರು. ಅಧ್ಯಕ್ಷರ ಭಾಷಣವೂ ಆಯಿತು. ಒಟ್ಟಾರೆ ಕಂಡುಬಂದುದು ಅಭಿವೃದ್ಧಿ. ಈ ಊರಿನ ಇತರ ಯಾವ ಸಂಘವು ಇನ್ನೊಂದು ಊರ್ಜಿತಾವಸ್ಥೆಯಲ್ಲಿರುವದಿಲ್ಲವೆಂದೆನ್ನಬೇಕಾಗುವದು. ಸಭೆಯ ಮುಕ್ತಾಯದ ಸಮಯದಲ್ಲಿ "ಕೊಡಗು" ಪತ್ರಿಕಾ ಸಂಪಾದಕರಾದ ಮೆ|| ಪಿ ಬೆಳ್ಯಪ್ಪನವರು ಸಂಘದ ವಿಷಯವಾಗಿ ಸದಭಿಪ್ರಾಯವನ್ನು ಇತ್ತುದಲ್ಲದೆ ಸಂಘಕ್ಕೆ ಮೆಂಬರಾಗಲು ತನಗೆ ಇಷ್ಟವಿರುವದನ್ನು ಸೂಚಿಸಿದರೆಂದು ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ಸುಂಟಿಕೊಪ್ಪ:—ಕಾಫಿ ತೋಟಗಳಲ್ಲಿ ಈ ವರ್ಷ ಫಸಲು ಬಹಳ ಕಮ್ಮಿಯಾಗಿದೆ. ಆಳುಗಳ ಸಂಬಳವು ಏರುತ್ತಲೇ ಇದೆ. ತೋಟದವರ ಸ್ಥಿತಿಯು ಹೀನವಾಗುತ್ತ ಬರುವದಾಗಿ ಕಾಣುತ್ತೆ. ಆಳುಗಳ ಸಂಬಳವನ್ನು, ಉತ್ಪತ್ತಿ ಮತ್ತು ಕಾಲಾನುಗುಣಕ್ಕನುಗುಣವಾಗಿ ಕಮ್ಮಿ ಮಾಡಬೇಕಾಗಿದೆ.

ಅಮ್ಮತ್ತಿ:—ಇಲ್ಲಿಗೆ ಈಗ ಹೊಸದಾಗಿ ಬಂದಿರುವ ಪಾರುಪತ್ಯಗಾರರು, ಮೆ|| ಕೋದಂಡ್ರ ಕಾಳಪ್ಪನವರು ಈ ಮೊದಲು ಸೋಮವಾರಪೇಟೆ, ಕುಶಾಲನಗರ ವಗೈರೆ ಸ್ಥಳಗಳಲ್ಲಿ ಇದೇ ಉದ್ಯೋಗದಲ್ಲಿದ್ದು ಅಲ್ಲಿಯ ಜನರ ಪ್ರೀತಿಗೆ ಪಾತ್ರರಾಗಿದ್ದ ಕಾರಣ ಇವರನ್ನು ಅಲ್ಲಿಂದ ಹೊರಟು ಬರುವಾಗ ಬಹಳ ಮರ್ಯಾದೆಯಿಂದ ಕಳುಹಿಸಿರುತ್ತಾರೆ. ಅಲ್ಲದೆ ಕುಶಾಲನಗರದಲ್ಲಿ ಒಂದು ದೇವಸ್ಥಾನದ ಜೀರ್ಣೋದ್ಧಾರ ಮಾಡಿ ಒಂದು ಜಾತ್ರೆ ಸಹ ಏರ್ಪಾಡು ಮಾಡಲು ಈ ಕಾಳಪ್ಪನವರು ಮುಖ್ಯ ಸಹಾಯಕರೆಂದು ತಿಳಿಯಬರುತ್ತೆ. ಅದೇ ಮೇರೆ ನಮ್ಮ ನಾಡಿನಲ್ಲು ಸಹ ರೈತರಕ್ಷೇಮಚಿಂತಕರಾಗಿ ಜನರ ಪ್ರೀತಿಗೆ ಪಾತ್ರರಾಗುವರೆಂದು ನಂಬಿದ್ದೇವೆಂದು ಒಬ್ಬ ಬಾತ್ಮಿದಾರರು ತಿಳಿಸುತ್ತಾರೆ.

ಫ್ರೇಜರ್ ಪೇಟೆ.- ಕೊಡಗು ಕಮೀಷನರ್ ಸಾಹೇಬರು ತಮ್ಮ ಕುಟುಂಬಸಮೇತ ಇಲ್ಲಿ ಇದ್ದಾರೆ. ಇವರು ನಾಳೆ ಮೂರು ದಿನದ ಮಟ್ಟಿಗೆ ನೀಲಗಿರಿಗೆ ಹವ ಬದಲಾವಣೆಗೆ ಹೊರಡುವವರಾಗಿದ್ದಾರೆ.

ಈ ತಾರೀಖು 18 ರಲ್ಲು ಇಲ್ಲಿ "ಪೇಪರ್ ಚೇಸ್" ಎಂಬ ತಮಾಷೆಯನ್ನು, ಇಲ್ಲಿಯ ಯೂರೋಪಿಯನ್ ಮೆಂಬರುಗಳು ಮಾಡುತ್ತಾರಾಗಿ ತಿಳಿಯುತ್ತೇವೆ.

ಮಳೆ ಇಲ್ಲದೆ ಈ ಕಡೆ ರಾಗಿಯ ಪೈರು ಬಹಳವಾಗಿ ಹಾಳಾಗಿ ಹೋಗಿದೆ. ರೈತರ ಗೋಳು ವರ್ಣಿಸಲಸದಳವಾಗಿದೆ. ಹಾರಂಗಿ ನದಿಗೆ ಕಟ್ಟತಕ್ಕ ಅಣೆಕಟ್ಟಿನ ವಿಷಯ ಹುಕ್ಕುಂ ನಿರೀಕ್ಷಿಸುತ್ತಾರೆ. ನಾಲೆಯು ನೀರಿನ ಸರಬರಾಯಿ ವಿನಹ ಇಲ್ಲಿಯ ರೈತರು ಬದುಕುವುದು ಬಹಳ ಕಷ್ಟವಾಗಿದೆ.

ಪ್ಲೇಗುರೋಗವು ತಲೆದೋರುವ ಸಂಭವವು ಕಾಣುತ್ತಿದೆ. ಬೆಟ್ಟಗೇರಿ ಗ್ರಾಮದಲ್ಲಿ ಇಲಿ ಸಾಯುವುದಾಗಿ ವರ್ತಮಾನವಿದೆ. ಅಧಿಕಾರಿಗಳು ಈ ವಿಷಯ ಬಹಳ ಜಾಗರೂಕರಾಗಿರುತ್ತಾರೆ.

ಇಲ್ಲಿ ಒಂದುಕಡೆ ಪೋಲೀಸಿನವರು ದನಗಳನ್ನು ದೊಡ್ಡಿಗೆ ಕೂಡಿಸುವ ಹೆದರಿಕೆ. ಇನ್ನೊಂದುಕಡೆ ಫಾರೆಸ್ಟಿನವರ ಹೆದರಿಕೆ. ಈ ಎರಡು ಅಧಿಕಾರಿಗಳ ದೆಸೆಯಿಂದ ರೈತರು ಊರು ಬಿಟ್ಟು ಹೋಗುವ ಸಂಭವವು ಬರುವ ಹಾಗೆ ತೋರುತ್ತೆ.

ಫಾರೆಸ್ಟುಗಳ ಸುತ್ತಮುತ್ತಲೂ ಇರುವ ರೈತರುಗಳ ಕಷ್ಟವನ್ನು ಹೋಗಲಾಡಿಸುವುದಕ್ಕಾಗಿ ರೈತರ ಮತ್ತು ಉದ್ಯೋಗಸ್ಥರ ಪಕ್ಷದ ಸರಿಸಮಾನವುಳ್ಳ ಒಂದು ಕಮಿಟಿ ಮಾಡಿ ಬೇಗನೆ ರೈತರಿಗೆ ಫಾರೆಸ್ಟ್ ಅಧಿಕಾರಿಗಳಿಂದ ಆಗುವ ಕಷ್ಟವನ್ನು ಪರಿಹರಿಸಬೇಕಾಗಿ ಸರಕಾರದವರನ್ನು ಪ್ರಾರ್ಥಿಸಬೇಕಾಗಿದೆ.

ಕೆಲವು ದಿವಸಗಳ ಹಿಂದೆ ಈ ದೇಶದ ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್‌ರವರ ಪ್ರೋತ್ಸಾಹದಿಂದ ಈ ಊರಿನಲ್ಲಿ ಒಂದು ಪರಸ್ಪರ ಸಹಾಯದ ಲೇವಾದೇವಿ ಸಂಘವನ್ನು ಏರ್ಪಡಿಸಬೇಕಾಗಿ ಜನರೆಲ್ಲರೂ ಸೇರಿ ತೀರ್ಮಾನಿಸಿದಂತೆ ಸಂಘವು ರಿಜಿಸ್ಟರ್ ಮಾಡಲ್ಪಟ್ಟಿದೆ. ಸದರಿ ಸಂಘದ ಕಾರ್ಯಕ್ರಮಗಳನ್ನು ಕುರಿತು ಪರ್ಯಾಲೋಚಿಸಲು ಈ ತಾರೀಖು 7 ರಲ್ಲು ರಿಜಿಸ್ಟ್ರಾರ್‌ರವರಾದ ಮೆ॥ ಕೆ. ಎಸ್. ಸುಬ್ರಾಯರವರ ಅಧ್ಯಕ್ಷತೆಯಲ್ಲಿ ಸಭೆಸೇರಿ, ಜನರಿಗೆಲ್ಲಾ ಪ್ರೋತ್ಸಾಹಿಸಿ ಎರಡುನೂರು ಷೇರುಗಳನ್ನು ತೆಗೆದುಕೊಳ್ಳುವಂತೆ ಮಾಡಿ ಅದಷ್ಟು ಜಾಗ್ರತೆ ಷೇರುಗಳ ಮೊಬಲಗನ್ನು ವಸೂಲುಮಾಡಿ ಲೇವಾದೇವಿಯನ್ನು ಪ್ರಾರಂಭ ಮಾಡಬೇಕಾಗಿ ತೀರ್ಮಾನವಾಯಿತು ಸದರಿ ಮೀಟಿಂಗಿನಲ್ಲಿ ಪ್ರೆಸಿಡೆಂಟರನ್ನು, ಸೆಕ್ರೆಟರಿಯವರನ್ನು, ಪಂಚಾಯಿತಿಯ ಮೆಂಬರುಗಳನ್ನು ಸಹಾ ಚುನಾಯಿಸಿದರು. ಕೆಲವು ಮಹನೀಯರುಗಳು ಸ್ವಲ್ಪ ಮೊಬಲಗನ್ನು ಡಿಪಾಜಿಟ್ ಇಡುವದಾಗಿಯೂ ವಾಗ್ದಾನ ಮಾಡಿದರು ಇಷ್ಟರಲ್ಲಿಯೇ ಲೇವಾದೇವಿ ಶುರುವಾಗಿ ಎಲ್ಲರಿಗೂ ಉಪಯೋಗವಾಗುವ ರೀತಿ ಪರಿಣಮಿಸುವುದಾಗಿ ನಂಬಲ್ಪಟ್ಟಿದೆ.

ಈಗ್ಗೆ ಇಪ್ಪತ್ತು ದಿವಸಗಳ ಹಿಂದೆ ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬರವರು ಇಲ್ಲಿಗೆ ದಯಮಾಡಿಸಿದ್ದಾಗ್ಗೆ ಕೆಲವರ ಮನೆಗಳ ಮುಂಭಾಗದ ಮುನಿಸಿಪಲ್ ರೋಡಿನಲ್ಲಿಯೂ, ನೀರು ಹೋಗುವ ಚರಂಡಿಗಳಲ್ಲಿಯೂ ಕಚಡ ಇತ್ತೆಂಬುದಾಗಿ ಮೂರು ಜನಗಳ ಮೇಲೆ ಚಾರ್ಜು ಮಾಡಿರುವರು. ಹೀಗಾದರೆ ಮುನಿಸಿಪಾಲಿಟಿಗಳಲ್ಲಿ ವಾಸಮಾಡುವುದು ಬಹಳ ಕಷ್ಟವಾಗಿದೆಯೆಂದು ಎಲ್ಲರಿಗೂ ಯೋಚನೆಯುಂಟಾಗಿದೆ.

ಹಿಂದೂದೇಶ.

ಮದ್ರಾಸಿನಲ್ಲಿ ವಿದ್ಯಾ ಇಲಾಖೆಯ ಮಂತ್ರಿಯಾಗಿದ್ದ ಮಿ॥ ಸುಬ್ರಾಯಲು ರೆಡ್ಡಿ ಯೆಂಬವರ ಬದಲಿಗೆ ಮಿ॥ ಎ. ಪಿ ಪೇಟ್ರೋ ಎಂಬವರನ್ನು ನೇಮಿಸಿದ್ದಾರೆ

ಬಿಜಾಪುರದ ದೇಶಭಕ್ತರಾದ ಮಿ॥ ದೇಶಪಾಂಡೆ ಮತ್ತು ಮಿ॥ ಕೌಜಲಗಿ ಎಂಬ ಲಾಯರುಗಳು ಅಸಹಕಾರ ದೀಕ್ಷೆವಹಿಸಿ ತಮ್ಮ ವಕೀಲತನವನ್ನು ಬಿಟ್ಟಿರುವರು

ಮೊನ್ನೆ ತಾನೇ ಮಡಿಕೇರಿಯಿಂದ ಹೊರಟು ಹೋದ ಆರ್ಯಸಮಾಜದ ಪಂಡಿತ ಕೇದಾರನಾಥರವರು ಮೈಸೂರು ಶಾಖೆಯ ಆರ್ಯಸಮಾಜದ ಪಂಡಿತ ಗೋಪಾಲದತ್ತ ಶಾಸ್ತ್ರಿಗಳೊಡನೆ ಮೈಸೂರಿನಲ್ಲಿ 11 ರಿಂದ 19 ನೇ ತಾರೀಖಿನವರೆಗೆ ಉಪನ್ಯಾಸ ಕೊಡಲು ಏರ್ಪಡಿಸಿರುತ್ತಾರೆ.

ಲೋಕದಲ್ಲೆಲ್ಲಾ ದೊಡ್ಡ ಭಾಷಣಕರ್ತನೆಂದು ಪ್ರಖ್ಯಾತಿಗೊಂಡಿರುವ ಪುಸ್ಸಿಫೂಟ್ ಜೋನ್ಸನ್ ಎಂಬೊಬ್ಬ ಅಮೇರಿಕದ ಮುಂದಾಳು ಆಗೊಸ್ಟು ತಿಂಗಳ ಆಖೈರು ವಾರದಲ್ಲು ಬೊಂಬಾಯಿಗೆ ಬರುವನು. ಇಡಿ ಹಿಂದೂದೇಶದಲ್ಲಿ ಒಬ್ಬನಾದರೂ ಕುಡುಕನಿಲ್ಲದೆ ಮಾಡುವೆನೆಂದು ಅವನು ಛಲವ ಹಿಡಿಕೊಂಡಿರುವನಂತೆ

ತಿಲಕ ಸ್ವರಾಜ್ಯ ಫಂಡಿಗೆ ಸೂರತ್ತಿನಲ್ಲಿ ಶ್ರೀಯುತ ದಯಾಳಜಿ ದೇಸಾಯಿ, ಕಲ್ಯಾಣಜಿ, ಮೇಥಾ ಮತ್ತು ಪಾರಿಗಡಿದೇಸಾಯಿ, ಇವರು ತಮ್ಮ ಸ್ಥಿರ ಮತ್ತು ಚರ ಆಸ್ತಿಪಾಸ್ತಿಗಳನ್ನು ಉಚಿತವಾಗಿ ಕೊಟ್ಟಿರುತ್ತಾರೆ. ಇದೀಗ ಸ್ವಾರ್ಥತ್ಯಾಗ! ಬೊಂಬಾಯಿಯ ಸ್ಟೇಟ್ ಪೋತದಾರರವರೂ ಎರಡು ಲಕ್ಷ ರೂಪಾಯಿಗಳನ್ನು ಸಮರ್ಪಿಸಿದ್ದಾರೆ.

ಕಳೆದ ತಿಂಗಳು ಅಂತ್ಯದವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 80 ಕಾಂಗ್ರೆಸು ಕಮಿಟಿಗಳೂ, 6000 ಜನ ಮೆಂಬರುಗಳೂ, 8 ರಾಷ್ಟ್ರೀಯ ಶಾಲೆಗಳೂ 620 ವಿದ್ಯಾರ್ಥಿಗಳೂ, 2325 ಚರ್ಕಗಳೂ ಇವೆ ರಾಷ್ಟ್ರೀಯ ಶಾಲೆಗಳಿಗಾಗಿ 2000 ರೂಪಾಯಿಗಳೂ ತಿಲಕಸ್ವರಾಜ್ಯ ಫಂಡಿಗಾಗಿ ಮಂಗಳೂರಲ್ಲಿ 8000 ರೂಪಾಯಿಗಳೂ ವಸೂಲಾಗಿವೆಯಂತೆ.

ಜೂನ್ ಆಖೈರಿಯೊಳಗೆ ಒಂದುಕೋಟಿ ರೂಪಾಯಿಗಿಂತ ಹೆಚ್ಚಿಗೆ ತಿಲಕಸ್ವರಾಜ್ಯ ಫಂಡಿಗೆ ಜಮೆಯಾಗಿರುವದರಿಂದ ಎರಡು ತಿಂಗಳೊಳಗಾಗಿ ಪರದೇಶದ ಬಟ್ಟೆಗೆ ಸಂಪೂರ್ಣ ಬಹಿಷ್ಕಾರ ಹಾಕಬೇಕಾದ್ದರಿಂದ ಈ ಕೆಲಸದಲ್ಲಿ ತಾವು ಸಂಪೂರ್ಣ ನಿರತರಾಗಿರುವದರಿಂದ ದಕ್ಷಿಣ ಇಂಡಿಯಾಕ್ಕೆ ತತ್ಕಾಲಕ್ಕೆ ಬರುವದಿಲ್ಲವಾಗಿ ಮಹಾತ್ಮ ಗಾಂಧಿಯವರು ತಿಳಿಸಿರುತ್ತಾರೆ.

ತಾರೀಕು 1-7-21 ರಲ್ಲಿ ಧಾರವಾಡ ಕಟರಸ್ಥಾನದ ಬೈಲಿನಲ್ಲಿ ಹಿಂದೂ ಮುಸಲ್ಮಾನರ ಪ್ರಮುಖರು ಮೀಟಿಂಗು ನಡಿಸುತ್ತಾ ಇರುವಾಗ್ಗೆ ಸಮೀಪವಿದ್ದ ಸಾರಾಯಿ ಅಂಗಡಿ ಬಳಿ ಆಯುಧ ಸಮೇತವಿದ್ದ ಪೋಲೀಸಿನವರನ್ನು ನೋಡಲಿಕ್ಕೆ ಬಂದ ಜನರಿಗೆ ಪೋಲೀಸಿನವರು ಗುಂಡುಹಾಕಿ 3 ಜನರು ಸತ್ತಿದ್ದಾರೆ, ಮತ್ತು 40 ಜನರು ಘಾಯಪಟ್ಟಿದ್ದಾರೆ ಪೋಲೀಸ್ ಜನರಿಗೆ ಕಲ್ಲು ಎಸೆದರೆಂತಲೂ ಸಾರಾಯಿ ಅಂಗಡಿಗೆ ಬೆಂಕಿ ಹಚ್ಚಲಿಕ್ಕೆ ಪ್ರಯತ್ನಿಸಿದರೆ ತಲೂ ಅದಕ್ಕಾಗಿ ಜನರ ಮೇಲೆ ಪೋಲೀಸಿನವರು ಕೋವಿಯನ್ನು ಉಪಯೋಗಿಸಿದರೆಂತಲೂ ಗವರ್ಮೆಂಟಿನವರು ಹೇಳುತ್ತಾರೆ ಕೆಲವು ಅಸಹಕಾರದ ಮುಖ್ಯಸ್ಥರನ್ನೂ, ಕರ್ಮವೀರ ಮತ್ತು ಕರ್ನಾಟಕ ವೈಭವ ಪತ್ರಿಕೆಗಳ ಸಂಪಾದಕ (ಎಡಿಟರ್) ರನ್ನೂ ದಸ್ತಗಿರಿ ಮಾಡಿದ್ದಾರೆ.

ಮೈಸೂರು ಸಂಸ್ಥಾನದಲ್ಲಿ ಧಾನ್ಯದ ಕಂಟ್ರೋಲನ್ನು ತೆಗೆದುಬಿಟ್ಟಿದರಿಂದ ಜೋಳದ ಬೆಲೆಯು (ಹಲ್ಲ ಒಂದಕ್ಕೆ) 6 ರೂ. ನಿಂದ 14 ರೂ ಗೂ, ರಾಗಿಯ ಬೆಲೆಯು 8 ರೂ. ನಿಂದ 12 ರೂ ಗೂ ಹಾಗೆಯೇ ಅಕ್ಕಿ ಮೊದಲಾದುವುಗಳ ಬೆಲೆಯು ಏರಿ ಹೋಗಿದೆ. ಪಟ್ಟಣದ ಗಿರಾಕಿಗಳು ಎಲ್ಲರೂ ಹುಂಬಿದ್ದಾರೆ. ಎಂದಿನಂತೆ ಕಂಟ್ರೋಲನ್ನು ಪುನಃ ಏರ್ಪಡಿಸದಿದ್ದರೆ ದೇಶದಲ್ಲಿ ವಿಪರೀತ ಹಾ ಹಾ ಕಾರವು ಹುಟ್ಟುತ್ತದೆಂದು ಒಂದು ಮೈಸೂರು ಪತ್ರಿಕೆಯು ಬರೆಯುತ್ತದೆ.

ರೀಡ್ ಎಂಬ ಚಾ ತೋಟದ ಸಾಹೇಬನು ಹೀರಾ ಎಂಬ ಕನ್ನಿಕೆಯನ್ನು ತನ್ನ ಮೋಹತೃಪ್ತಿಗೆ ಅಪೇಕ್ಷಿಸಿದಾಗ ಅವಳ ತಂದೆ ಬಂಧುಗಳು ಅಡ್ಡಿಮಾಡಿದ್ದರಿಂದ ಅವರನ್ನು ಗುಂಡಿಟ್ಟನೆಂದು ಅವನಮೇಲೆ ಫಿರ್ಯಾದಾಗಿತ್ತು ಅವನು ಜೊತೆ ಬೇಟೆಗೆ ಹೋಗಿ ಬರುವಾಗ್ಗೆ ದಾರಿತಪ್ಪಿ "ಹೀಯರ್ ರೋಡ್ ಹಯ್?" ಎಂದು ಕೇಳಿದಕ್ಕೆ ಅವರು ಹೀರಾಳನ್ನು ಕೊಡು ಎಂಬ ತಪ್ಪರ್ಥ ಮಾಡಿಕೊಂಡು ಅವನನ್ನು ಎದುರಿಸಲು ಬಂದದ್ದರಿಂದ ಅವನ ಸ್ವರಕ್ಷಣೆಗಾಗಿ ಗುಂಡು ಹಾರಿಸಿದನೆಂದು ಹೇಳಲು ಜ್ಯೂರಿಯರರು ಅವನನ್ನು ತಪ್ಪಿತಸ್ಥನಲ್ಲವೆಂದು ಬಿಡುಗಡೆಮಾಡಿದರು.

ವಿದೇಶ.

ನಮ್ಮ ಚಕ್ರವರ್ತಿಯವರು ಐರ್ಲೆಂಡಿಗೆ ಹೋಗಿ ಸುರಕ್ಷಿತವಾಗಿ ವಾಪಸ್ಸು ಬಂದಿರುತ್ತಾರೆ

ಬೆಲ್ಜಿಯಮ್ ದೇಶದ ರಾಜರು ಮತ್ತು ರಾಣಿಯವರು ಸಹ ಇಂಗ್ಲೆಂಡಿಗೆ ಅತಿಥಿಗಳಾಗಿ ಬಂದಿರುತ್ತಾರೆ

ಇಂಗ್ಲೆಂಡಿಗೂ ಜಪಾನಿಗೂ ಇರುವ ಕರಾರು ಇನ್ನೂ ಒಂದು ವರ್ಷಕ್ಕೆ ವ್ಯಾಪಿಸುವಂತೆ ಸೂಚಿತವಾಗಿದೆ

ಇಂಗ್ಲೆಂಡಿನಲ್ಲಿ ಕಲ್ಲಿದ್ದಲು ಗಣಿಗಳಲ್ಲಿ ಕೆಲಸಗಾರರು ಕೆಲಸ ಮಾಡದೆ ಮುಷ್ಕರಹಿಡಿದಿದ್ದು ಈಗ ಪುನಃ ಕೆಲಸಕ್ಕೆ ತೊಡಗಿದ್ದಾರೆ.

ಅಫಘಾನಿಸ್ಥಾನದ ಅಮೀರರಿಗೆ ಮುಂದೆ ಪಟ್ಟಕ್ಕೆ ಬರುವಂತ ಒಬ್ಬ ಕುಮಾರನು ಹುಟ್ಟಿದ್ದರಿಂದ ಅಲ್ಲಿನ ಜನರು ಬಹಳ ಸಂತೋಷಪಡುತ್ತಾರೆ

ತುರ್ಕಿಸ್ಥಾನದ ಮುಸ್ತಫ ಕೇಮಲ್ ಪಾಷಾನ ಸರಕಾರದವರು ಕೆಲವು ಬ್ರಿಟಿಷ್ ಆಫೀಸರುಗಳನ್ನು ಸೆರೆ ಹಿಡಿದದ್ದಾಗಿ ಇಂಗ್ಲೆಂಡಿನಿಂದ ಖಂಡಿತವಾಗದ ವರ್ತಮಾನವಿದೆ.

ಐರ್ಲೆಂಡಿನ ಸಿನ್‌ಫೀನರ ಮುಖ್ಯಸ್ಥರಾದ ಡಿ. ವೇಲರ್ ಎಂಬವರು ರಾಜೀ ಶರತ್ತುಗಳನ್ನು ಮಾತಾಡಲಿಕ್ಕಾಗಿ ಲಂಡನ್ನಿಗೆ ಬರಬೇಕೆಂದು ಇಂಗ್ಲೆಂಡಿನ ಮಂತ್ರಿಯವರು ಬರೆದದ್ದಕ್ಕೆ ಅವರು ಇನ್ಕಾರ ಮಾಡಿರುತ್ತಾರೆ.

ಸಂಜಗೋಕೆ.

ಶ್ರೀ ವ್ಯಾಸ ವಾಲ್ಮೀಕಿಯರು ಸೀತಾ ದ್ರೌಪದಿಯರ ಚರಿತ್ರೆಯನ್ನು ಮಹಾಭಾರತ ರಾಮಾಯಣಗಳಲ್ಲಿ ಚಿರಸ್ಥಾಯಿಯಾಗಿ ಮಾಡಿರುತ್ತಾರೆ ಚಾಂದಕವಿಯೂ ಕೂಡ "ಪೃಥ್ವೀರಾಜ ಸೋಹನರಸ" ವೆಂಬ ಕಾವ್ಯದಲ್ಲಿ ಸಂಜಗೋಕದೇವಿಯ ವಿಷಯ ಬರೆದಿರುತ್ತಾನೆ ಸೀತಾ ದ್ರೌಪದಿಯರೆಂತು ಧರಿತ್ರಿಯ ಮಹಿಳೆಯರಿಗೆ ಮೇಲ್ಪಂಕ್ತಿಯಂತಿರುವರೋ ಕ್ಷತ್ರೀತಿಯಲ್ಲಿ ಸಂಜಗೋಕೆಯೂ ಇರುವಳೆಂದರೆ ಅತಿಶಯೋಕ್ತಿಯಾಗಲಾರದು. ಕವೀಶ್ವರನ ಮಾತಿನಲ್ಲಿ ಹೇಳುವುದಾದರೆ ದೇಶದ ಶ್ರೀಯ ಅವತಾರವೇ ಜಯಚಂದ್ರನ ಕುಮಾರಿಯಾಗಿದ್ದಳೆನ್ನ ಬೇಕು ಅತ್ಯಂತ ರೂಪವತಿಯಾಗಿದ್ದದಲ್ಲದೆ ವಿದ್ಯಾವತಿಯೂ ಆಗಿದ್ದಳು

ಜಯಚಂದ್ರನು ರಾಟೊಡರೆಂಬ ರಾಜಪುತ್ರರಧಿಪತಿಯಾಗಿದ್ದನು. ಪೃಥ್ವಿರಾಜನು ಚೋಹಾನರೆಂಬುವರ ಅರಸನಾಗಿದ್ದನು. ಪೃಥ್ವಿರಾಜನು ಅಶ್ವಮೇಧ ಯಾಗವನ್ನು ಮಾಡಿದನು ತಾನೇ ಸರ್ವಸಮರ್ಥನೆಂದು ಹೊಗಳಿಸಿಕೊಳ್ಳುತ್ತಿದ್ದ ಜಯಚಂದ್ರನಿಗೆ ಇದು ಸಹಿಸಲಾರದಂತಾಯಿತು. ಅತನು ರಾಜಸೂಯಯಾಗವನ್ನು ಮಾಡಿದನು. ಭಾರತವರ್ಷದಲ್ಲಿ ಭಾರತದರು ಪ್ರಾಚೀನಪದ್ಧತಿಯಂತೆ ನಡೆಸಿದ ಯಾಗಗಳಲ್ಲಿ ಇದೇ ಕೊನೆಯದು. ಯಾಗಾಂತ್ಯದಲ್ಲಿ ತನ್ನ ಮಗಳಾದ ಸಂಜಗೋಕ್ರೆಯ ಸ್ವಯಂವರವು ನಡೆಯುವುದೆಂದು ಆಮಂತ್ರಣ ಪತ್ರಗಳನ್ನು ಕಳುಹಿಸಿದನು. ಸ್ವಜಾತಿಮಾತ್ಸರ್ಯದಿಂದಲೋ ಅಥವಾ ಇನ್ನಾವುದರಿಂದಲೋ ಪೃಥ್ವೀರಾಜನಿಗೂ ಮತ್ತು ಮೀವಾಡದ ಸಮರಸಿಗೂ ಆಮಂತ್ರಣವನ್ನು ಕಳುಹಲೇ ಇಲ್ಲ.

ರಾಜಸೂಯಯಾಗದ ಪದ್ಧತಿಪ್ರಕಾರ ಏಕಚ್ಛತ್ರಾಧೀಶದ ಅರಸರೆಲ್ಲರೂ ಸಭೆಯಲ್ಲಿರಬೇಕಾಗಿದ್ದಿತು. ಜಯಚಂದ್ರನು ಈ ಕಷ್ಟವನ್ನು ಹೋಗಲಾಡಿಸಲು ದ್ವಾರಪಾಲಕನಂತೆ ತೋರುತ್ತಿದ್ದ ಒಂದು ಭಂಗಾರದ ಪ್ರತಿಮೆಯನ್ನು ಪೃಥ್ವಿರಾಜನೆಂದು ಹೇಳಿ ಬಾಗಿಲಬಳಿ ನಿಲ್ಲಿಸಿದನು. ಸಮರಸಿಯ ಬದಲು ಅಂತಹದೇ ಇನ್ನೊಂದು ಪ್ರತಿಮೆಯು ಇರಿಸಲ್ಪಟ್ಟಿತು.

ಯಜ್ಞವಾಯಿತು. ಬ್ರಾಹ್ಮಣದಕ್ಷಿಣೆಗಳು ಯಥೇಷ್ಟವಾಗಿ ಹಂಚಲ್ಪಟ್ಟುವು. ರಾಜಪುತ್ರಿಯು ವರವನ್ನು ಆರಿಸಲು ಸಭಾಮಂಟಪಕ್ಕೆ ಕರತರಲ್ಪಟ್ಟಳು

ಸಂಜಗೋಕ್ರೆಯು ಅಗಣಿತ ಅರಳಿದ ಕಮಲದಂತೆ ಅತ್ಯಂತ ಸೌಂದರ್ಯವತಿಯಾಗಿದ್ದಳು.

ಮೋಹನವಾದಾಕೆಯ ಸೌಂದರ್ಯವನ್ನು ಕೇಳಿ ಅನೇಕದೇಶದ ರಾಜರು ಆಕೆಯು ತಮ್ಮನ್ನು ವರಿಸದಿದ್ದರೂ ಆ ಅಪೂರ್ವ ಶೋಭರಾಶಿಯ ಮೂರ್ತಿಯನ್ನು ನೋಡಿಕೊಂಡು ಹೋಗಬೇಕೆಂದು ಬಂದಿದ್ದರು. ಇಂತಹವರಲ್ಲಿ ವೇಷವನ್ನು ಬದಲಾಯಿಸಿ ಬಂದಿದ್ದ ಪೃಥ್ವೀರಾಜನು ಸಮರಸಿಯೂ ಮತ್ತು ಅವರ ಅಲ್ಪಜನ ಪರಿಚಾರಕರೂ ಇದ್ದರು

ಸ್ತ್ರೀಯರಲ್ಲಿ ಸಂಜಗೋಕ್ರೆಯು ಹೇಗೆ ಅತ್ಯಂತ ರೂಪವತಿ ಎಂದು ಪ್ರಸಿದ್ಧಿಗೊಂಡಿದ್ದಳೋ ಹಾಗೆಯೇ ಪುರುಷ ಪ್ರಪಂಚದಲ್ಲಿ ಪೃಥ್ವೀರಾಜನು ಪ್ರಸಿದ್ಧಿಗೊಂಡಿದ್ದನು ಅತ್ಯಂತ ಸುಂದರನೂ ಶೌರ್ಯಶಾಲಿಯೂ ಆದ ಪೃಥ್ವಿರಾಜನ ಅನೇಕ ಸದ್ಗುಣಗಳನ್ನು ಸಂಜಗೋಕ್ರೆಯು ಕೇಳಿದ್ದಳು ರಾಜಪುತ್ರರ ಯುವಕ ಮಂಡಳಿಯಲ್ಲಿ ತಿಲಕಪ್ರಾಯನಾಗಿದ್ದ ಪೃಥ್ವಿರಾಜನನ್ನೇ ವರಿಸಬೇಕೆಂದು ಆಕೆಯು ಮನಸ್ಸಿನಲ್ಲಿ ನಿಶ್ಚೈಯಿಸಿದ್ದಳು.

ಮುಹೂರ್ತಕಾಲವು ಸಮೀಪಿಸಿತು ಕೋಮಲವಾದ ಕರಗಳಲ್ಲಿ ಪುಷ್ಪದ ಸರವನ್ನು ಹಿಡಿದು ಸಭಾಮಂಟಪಕ್ಕೆ ಸಂಜಗೋಕ್ರೆಯು ಬಂದಳು ಆಕೆಯ ಬಳಿಯಲ್ಲಿದ್ದ ಸಖಿಯರು ರಾಜಪುತ್ರಿಗೆ ಅಲ್ಲಿ ನೆರದಿದ್ದ ಅರಸು ಕುಮಾರರ ಪರಿಚಯವನ್ನು ಮಾಡಿಸಿದಳು. ಆದರೆ ಅವನ್ನೊಂದನ್ನೂ ಕೇಳದೆ ಆ ಸುಕುಮಾರಿಯು ಮುಂದುವರಿಯಲಪ್ಪಣೆ ಇತ್ತಳು ಅಲ್ಲಿದ್ದ ಯಾವ ರಾಜಕುಮಾರರಿಗೂ ಹಾರವನ್ನು ಹಾಕದೆ ಹಿಂದಿರುಗಬೇಕೆನ್ನುತ್ತಿದ್ದ ಸಮಯದಲ್ಲಿ ಸಖಿಯರು ಪರಿಹಾಸ್ಯಕ್ಕೋಸುಗ "ಇದೊ! ಪೃಥ್ವೀರಾಜನೂ ಆತನ ಮಿತ್ರನಾದ ಸಮರಸಿಯೂ ದ್ವಾರಪಾಲಕರ ಕಾರ್ಯವನ್ನು ನಿರ್ವಹಿಸುತ್ತ ನಿಂತಿರುವರು!!" ಎಂದರು "ಪೃಥ್ವೀರಾಜ" ಎಂಬ ಶಬ್ದವನ್ನು ಕೇಳಿದೊಡನೆಯೇ ರಾಜಕುಮಾರಿಯು ಆ ಸುವರ್ಣ ಮೂರ್ತಿಯ ಕೊರಳಿಗೆ ಹಾರವನ್ನು ಹಾಕಿದಳು!

ಸಭಾಮಂದಿರದಲ್ಲಿ ಹಾ ಹಾಕಾರವಾಯಿತು ತಂದೆಯಾದ ಜಯಚಂದ್ರನಿಗೆ ಮಿತಿಮೀರಿದ ಕೋಪ ಬಂದಿತು ಆಶಾಭಗ್ನರಾದ ರಾಜಪುತ್ರ ಯುವಕ ಮಂಡಳಿಯವರು ಜಯಚಂದ್ರನ ಜೊತೆಗೆ ಸೇರಿದರು

ತನ್ನನ್ನೇ ನುಬಿದ್ದ ರಾಜಪುತ್ರಿಯ ಕೈಬಿಡಬಾರದೆಂದು ಭಾವಿಸಿ ಪೃಥ್ವೀರಾಜನು ರಾಜಕುಮಾರಿಯನ್ನು ಎತ್ತಿ ತನ್ನ ಕುದುರೆಯಮೇಲೆ ಕುಳ್ಳಿರಿಸಿ ತಾನೂ ಹಿಂದಳಿಂದ ಹತ್ತಿ ಐದು ದಿವಸಗಳಲ್ಲಿ ತನ್ನರಮನೆಯನ್ನು ಸೇರಿದನು 'ಕಳ್ಳ' ನನ್ನು ಹಿಡಿದು ತರಲು ಅನೇಕ ಪ್ರಯತ್ನಗಳು ನಡೆದುವು. ಆದರೆ ಅವೆಲ್ಲ ನೀರಿನಮೇಲೆ ಮಾಡಿದ ಹೋಮದಂತಾದುವು. ಭಲೆ! ಪೃಥ್ವಿರಾಜ ವೀರತ್ವಕ್ಕೆ ತಕ್ಕ ಪುರಸ್ಕಾರವನ್ನು ಹೊಂದಿದೆ!!

ಒಂದು ವರ್ಷಕಾಲ ಸುಖಸಾಮ್ರಾಜ್ಯದಲ್ಲಿ ಈ ನವೀನ ದಂಪತಿಗಳು ಚಿಂತಾ ಹೀನರಾಗಿ ವಾಸಮಾಡಿದರು ದುರುಳ ಜಯಚಂದ್ರನು ಸಹಿಸಲಾರದೆ ಮಹಮ್ಮದ ಘೋರಿಯನ್ನು ಈ ದೇಶಕ್ಕೆ ದಂಡೆತ್ತಿ ಬರುವಂತೆ ಆ ಮಂತ್ರಣವನ್ನು ಕೊಟ್ಟು ಕಳುಹಿಸಿದನು ದಾರಿಯಲ್ಲಿ ಹೋಗುತ್ತಿದ್ದ ಮಾರಿಯನ್ನು ಮನೆಗೆ ಕರದಂತಾಯಿತು. ಮಾರಿಯು ಬಂದಿತೆಂಬ ಸಮಾಚಾರವು ನಾಲ್ಕು ದಿಕ್ಕುಗಳಲ್ಲಿಯೂ ಹಬ್ಬಿತು ಸಂಜಗೋಕ್ರೆಯ ಕಿವಿಗೂ ಬಿದ್ದಿತು. ಒಡನೆಯೇ ತನ್ನ ಪತಿಯನ್ನು ಎಚ್ಚರಿಸಿದಳು ವರವೀರವಾಲೆಯ ವೀರವಾಕ್ಯನ್ನು ಕೇಳಿ ಪೃಥ್ವೀರಾಜನು ಹುರಿದುಂಬಿಸಿದಂತವನಾಗಿ ತನ್ನ ಇಷ್ಟಮಿತ್ರರನ್ನೆಲ್ಲಾ ಕರೆಸಿದನು. ಆದರೆ ಪ್ರಸಿದ್ಧ ರಣಪಂಡಿತರು ಸಂಜಗೋಕೆಯನ್ನು ದೆಹಲಿಗೆ ಕರೆತರುತಲಿದ್ದ ಸಮಯದಲ್ಲಿ ತಮ್ಮ ಪ್ರಿಯ ಅರಸಿಗಾಗಿ ಪ್ರಾಣವನ್ನು ಅರ್ಪಿಸಿದ್ದರಿಂದ ಇನ್ನಾರೂ ಅಲ್ಲಿದ್ದಿಲ್ಲ ಉಳಿದವರಲ್ಲಿ ಮಂತ್ರಾಲೋಚನೆಯನ್ನು ಮಾಡಿ ತಾನೂ ಸಮರಸಿಯೂ ಸೈನ್ಯವನ್ನು ನಡೆಸಬೇಕೆಂದು ಗೊತ್ತಾಯಿತು. ಸಂಜಗೋಕ್ರೆಯು ಮುಂಬಂದು ಹಿಂದಿರುಗಿ ಬರುವುದಕ್ಕಿಂತ ರಣಕ್ಷೇತ್ರದಲ್ಲೇ ಪ್ರಾಣವನ್ನರ್ಪಿಸುವುದುತ್ತಮವೆಂದರುಹಿ ಜಯವಾಗುವಂತೆ ಭಗವಂತನನ್ನು ಪ್ರಾರ್ಥಿಸಿದಳು ಸೈನ್ಯವು ರಣಭೇರಿಯ ನಾದದೊಡನೆ ರಣಜಿತದ್ವಾರಕ್ಕಾಗಿ ಸ್ಥಾನೇಶ್ವರಾಭಿಮುಖವಾಗಿ ಹೋಯಿತು. ಸಂಜಗೋಕ್ರೆಗೆ ಏಕೋ ಭೀತಿಯುಂಟಾಯಿತು ತನ್ನ ಪ್ರಿಯನು ಹಿಂದಿರುಗಿ ಬರುವನೇನು?--ಎಂದು ತನ್ನೊಳಗೇನೇ ಆಲೋಚಿಸ ತೊಡಗಿದಳು

ಯುದ್ಧದಲ್ಲಿ ಪರಾಕ್ರಮದಿಂದ ಕಾದಾಡಿದರೂ ಕುಯುಕ್ತಿಯಿಂದ ಮುಸಲಮಾನರೇ ಜಯಶಾಲಿಗಳಾದರು ಪೃಥ್ವೀರಾಜನು ವೀರಸ್ವರ್ಗವನ್ನು ಸೇರಿದನು ಸಮರಸಿಯೂ ದೇಶಮಾತೆಗೋಸುಗ ಕಾದಾಡಿ ಭೂಶಾಯಿಯಾದನು. ಇದನ್ನು ಕಂಡು ಜಯಚಂದ್ರನಿಗೆ ಸಂತೋಷವಾಯಿತು ಆ ಸಂತೋಷದ ಫಲವನ್ನು ಆತನು ಮಾರನೆಯ ವರ್ಷವೇ ಕೊಯಿದನು.

ಸಮಾಚಾರವು ಯೋಗಿನಿಪುರ (Delhi)ಕ್ಕೆ ತಲುಪಿತು ಬರೀ ನೀರನ್ನು ಕುಡಿದು ಜೀವಿಸುತ್ತಿದ್ದ ಸಂಜಗೋಕ್ರೆಯೂ ಕೇಳಿದಳು. ಆಶ್ಚರ್ಯಪಡಲಿಲ್ಲ ಬದಲು ದೊಡ್ಡದಾದ ಚಿತೆಯನ್ನು ಮಾಡಿಸಿ ತನ್ನ ಸಖಿಯರಾರೂ ವ್ಯಸನಪಡಬಾರದೆಂದು ಹೇಳಿ "ಹೇ ಭಗವಂತ! ನನ್ನ ಪತಿಯಲ್ಲಿರುವ ಸ್ಥಳಕ್ಕೆ ನನ್ನನ್ನ ಒಯ್ಯು!" ಎಂದು ಹೇಳಿ ಚಿತೆಯಲ್ಲಿ ಬಿದ್ದಳು!

ಇದೀಗ ನಿಜಪ್ರೇಮ! ಸಂಜಗೋಕ್ರೆಯಂತಹ ನಾರಿಮಣಿಯರು ಭರತಭೂಮಿಯಲ್ಲೆಲ್ಲಿಯೂ ಇದ್ದಾರೆ.

ಕೊಡಗು ಮಿತ್ರ.

ಬಿನ್ನಹಂ.

ಕೊಡಗನೇ ! ಕೊಡಗನೇ ! ಅನೇಕ
ನಾಡುಗಳ ನುಗ್ಗಿ ಮಂದಜನರ
ಬಡತನವನ್ನು ತೀಪ್ರದಲಿ ಹೋಗಲಾಡಿಸಲೆಂದೂ ||
ಎಡಂಬಿಪನಲ್ಲವನು ತೊರೆದು
ಮಡಿಕೇರಿಯಲಿ ನಿಜಕಾಲೂರಿ
ಪಡೆದ ಸಿರಿಯನು ನೆನೆವಂತೆ ಮಾಡಿದಕೆ ಬಿನ್ನಹವೂ ||

" ಸಿದಾರ್ಥಿ "

ಕೊಡಗಿನ ಈ ಕಾಲದ ಸನ್ನಸ್ಥಿಗೆ ಕಾರಣವು.

ನಂ 1

ಉದ್ಯೋಗಂ ಪುರುಷ ಲಕ್ಷಣಂ.

ನಮ್ಮ ದೇಶಕ್ಕೆ ಅವಶ್ಯವಾಗಿರುವಂಥಾದ್ದು ಉದ್ಯೋಗವೇ ನಿರುದ್ಯೋಗಿಗಳಾಗಿರುವವರು ಯಾರು? ಉದ್ಯೋಗವಾಡದೆ ಜೀವನವು ಹ್ಯಾಗೆ ನಡೆದೀತು? ಎಲ್ಲರೂ ಉದ್ಯೋಗಿಗಳಾಗಿರುತ್ತೇವೆಂದು ಹೇಳಬಹುದು. ಆದರೆ ಮನುಷ್ಯನ ಜೀವನಾಸಕ್ಕೆ ಜೀವಕಳೆಯನ್ನು ತುಂಬಿಸುವ ಶಾಶ್ವತಾದ್ಯರ್ಥವ್ಯ ಹಣವನ್ನು ಸಂಪಾದಿಸುವದಕ್ಕೋಸ್ಕರ ನಮ್ಮ ದೇಶೀಯರು ಅವಲಂಬಿಸುವ ಉದ್ಯೋಗ ಪದ್ಧತಿಯು ತಪ್ಪಾಗಿರುತ್ತದೆಂದು ತಿಳಿಯತಕ್ಕದ್ದು ನಮ್ಮ ದೇಶೀಯರು ಉದ್ಯೋಗಿಗಳಾಗಿರುವದು ಹಿಂದೆ

ಆದರೆ ನಾವು ಅನ್ಯದೇಶೀಯರ ಒಡನಾಟದಲ್ಲಿ ಸಿಲುಕಿದ್ದಾರೆ ಅವರ ನಡವಳಿಕೆಯಲ್ಲಿರುವ ಕೆಲವು ಕಾರ್ಯಗಳು ನಮ್ಮನ್ನು ಆಕರ್ಷಿಸುವದರಿಂದ ನಾವು ಅವರನ್ನು ಹಿಂಬಾಲಿಸಿ ನಡೆಯುವವರಾಗಿದ್ದೇವೆ ಅವರ ಆಹಾರ ವಸ್ತ್ರಾಭರಣ ಮೊದಲಾದವುಗಳು ನಮ್ಮವರನ್ನು ಹುಚ್ಚಾಗಿ ಮೋಹಿಸಿಕೊಳ್ಳತಕ್ಕ ಪದಾರ್ಥಗಳಾಗಿವೆ ವಿದೇಶೀಯರ ಸಂಪರ್ಕವು ಎಲ್ಲಾ ಭಾಗದಲ್ಲಿ ಸಾಧುವಾದವುಗಳೆಂದು ನಾವು ಭ್ರಮೆಗೊಳ್ಳಬಾರದು. ನಮ್ಮ ಮುಸಲ್ಮಾನರು ಇಂಗ್ಲೀಷರ ಮದ್ಯಪಾನವನ್ನು ಸ್ವೀಕರಿಸಿ ಮೃಗಪ್ರಾಯರಾಗುತ್ತಾರೆ. ಇಂಗ್ಲೀಷರ ಅತಿ ಸೂಕ್ಷ್ಮವಾದ ಸುಖಜೀವನವನ್ನು ಸಾಕ್ಷಾತ್ತಾಗಿ ಮಗೊಂಡು ತಮ್ಮ ದೇಶಕ್ಕನುಕೂಲವಾದ ಸಂಪತ್ತುಗಳನ್ನು ಬಿಟ್ಟುಬಿಟ್ಟು ನವನಾಗರೀಕತೆ ಎಂಬ ದೀಪಜ್ವಾಲೆಯಲ್ಲಿ ಬಿದ್ದು ಸುಟ್ಟು ಹೋಗುತ್ತಿರುವ ಹೇಡಿಗಳಾಗಿದ್ದೇವೆ

ಯಾವ ಮನುಷ್ಯನು ತಾನು ಗಳಿಸಿದ ದ್ರವ್ಯವನ್ನು ದೇಶದ ದಾರಿದ್ರ್ಯ ನಿವಾರಣೆಗಾಗಿ, ಯಾ ವ್ಯಾಪಾರಾಭಿವೃದ್ಧಿಗಾಗಿ ಮತ್ತು ಒಳ್ಳೆ ಕಾರ್ಯದಲ್ಲಿ ವಿನಿಯೋಗಿಸುತ್ತಾನೋ ಅವನೇ ನಿಜವಾದ ಐಶ್ವರ್ಯವಂತನು. ರೈತನು ಕಷ್ಟಪಟ್ಟು ಬೆಳೆದುದನ್ನು ತಿಂದು ಧ್ವಂಸವಾದ ಪದಕ್ಕಾಗಿಯೋ ಕಾದುಕೊಂಡಿರತಕ್ಕ ಉದ್ಯೋಗವು ಮತ್ತು ಹಾರಗಳಿಸಿದ ಹಣವೆಲ್ಲಾ ಮಣ್ಣಾಗಿ ಹೋಗುತ್ತದೆ ಹಣವು ಹಣವನ್ನು ನುಂಗಿ ಬಿಡಬಾರದು ಹಣದಿಂದ ನ್ಯಾಯವಾದ ಆಡಳಿತೆಯಲ್ಲಿ ಹಣ ಹುಟ್ಟಾವಳಿಯಾಗಬೇಕು ಯಾವದೇಶಕ್ಕಾದರೂ ಐಶ್ವರ್ಯವು ಅವಶ್ಯಕವಾಗಿದೆನ್ನುವದರಲ್ಲಿ ಸ್ವಲ್ಪವೂ ಸಂಶಯವಿಲ್ಲ ಇಂಥಾ ಸದುದ್ದೇಶವನ್ನು ಪೂರೈಸುವದಕ್ಕೆ ಯಾವ ಉದ್ಯೋಗವು ಯೋಗ್ಯವಾದದ್ದೋ? ಅಂಥಾ ಉದ್ಯೋಗವೇ ನಮ್ಮ ದೇಶಕ್ಕೆ ಪರಮಾವಶ್ಯಕವಾದದ್ದು. ಅಂಥಾ ಉದ್ಯೋಗಕ್ಕೆ ಅವಶ್ಯವಾದ ವಿದ್ಯೆಯಲ್ಲಿ ನಮ್ಮ ಜನರು ಶಿಕ್ಷಣವನ್ನು ಹೊಂದುವದೇ ನಮ್ಮ ದೇಶೀಯರಿಗೆ ಮುಖ್ಯವಾಗಿರುತ್ತದೆ

ಈಗ್ಗೆ ವರ್ಷ ವರ್ಷವು ನೂರಾರುಮಂದಿ ಯುವಕರು ಪರೀಕ್ಷೆಗಳನ್ನು ಕೊಟ್ಟು ಇಂಗ್ಲೀಷ್ ವಿದ್ಯೆಯಲ್ಲಿ ಪಂಡಿತರೆಂದು ಹೆಸರಾಗಿ ಬರುತ್ತಿದ್ದಾರೆ ಈ ವಿದ್ಯಾಭ್ಯಾಸದ ಪರಿಣಾಮವನ್ನು ಏನೆಂದು ಯೋಚಿಸಿ ನೋಡಿದಲ್ಲಿ ಇಂಗ್ಲೀಷ್ ವಿದ್ಯಾಭ್ಯಾಸವು ಸರ್ಕಾರಿ ವಗೈರೆ ಉದ್ಯೋಗಗಳನ್ನು ಪಡೆಯುವದಕ್ಕೆ ಯುವಕರನ್ನು ಯೋಗ್ಯರನ್ನಾಗಿ ಮಾಡತಕ್ಕ ಒಂದು ಯಂತ್ರಶಾಲೆಯಂತಿದೆ.

ಪಾಠಶಾಲೆಗೆ ಸೇರಿದ ಕಾಲದಿಂದ ವಿದ್ಯೆಯನ್ನು ಪೂರೈಸುವ ಕಾಲದವರೆಗೆ ಹಗಲೂ ರಾತ್ರೆ ನನಗೆ ಸುಬೇದಾರ್, ರೈಟರನೆಂದಿಗ ಆದೀತು, ನೂರಾರು ಬಟ್ಟಿಬೆಳೆಯುವ ಕಾಫಿತೋಟ ಎಂದಿಗೆ ಮಾಡ್ಯೇನು, ಬ್ಯಾಂಕಿಗೆ ಸಾವಿರಾರು ರೂಪಾಯಿಗಳನ್ನು ಯಾವಾಗ ಸೇರಿಸೇನು ಎಂಬ ಕ್ಷಣಿಕವಾದ ಜೀವ ಪೋಷಣೆಯ ಚಿಂತೆಯೆಂಬ ಗ್ರಹವೂ ನಮ್ಮ ಯುವಕರನ್ನು ಮತ್ತು ಅವರ ಪೋಷಕರನ್ನು ಬಿಡದೆ ಹಿಡಿದುಕೊಂಡಿರುತ್ತದೆ

"ಕೋಟಿ ವಿದ್ಯೆಯೂ ಕೂಳಿಗಾಗಿಯೇ" ಎಂಬುದಾಗಿ ಹೇಳಿಕೊಂಡು ತಮ್ಮನ್ನು ಪಶುಗಳಿಗೆ ಸಮಾನರನ್ನಾಗಿ ಮಾಡಿಕೊಳ್ಳುವದಕ್ಕೆ ಪ್ರಯತ್ನಿಸುತ್ತಾರೆ ವಿದ್ಯಾಹೀನನು ಪಶುವೆಂದು ಹೇಳುವವರಾದ ತಾನೇ ವಿದ್ಯಾರ್ಥಿಗಳನ್ನು ಕೊಟ್ಟವರಾಗಿದ್ದಾಗ್ಯೂ ಅನ್ನಪಾನವೇ ಪುರುಷಾರ್ಥ ಸಿದ್ಧಿ ಎಂಬದಾಗಿ ನಂಬಿ ನಡೆದುಕೊಂಡರೆ ಅವರು ಸ್ವಾಧೀನರಾದ ಪಶುಗಳಿಗಿಂತಲೂ ಎಷ್ಟೋ ಭಾಗ ಕಡೆಯಲ್ಲವೇ? ಈಗಲಾದರೂ ಬಿ. ಎ ಮತ್ತು ಎಫ್ ಎ. ಪರೀಕ್ಷೆಗಳಾಗಿರುವವರೂ ಕೂಡ ಅನ್ನಕ್ಕೆ ಮಾರ್ಗವಿಲ್ಲದೆ ಅಲೆಯುವಕಾಲ ಬಂದಿದೆ ಆ ವಿದ್ಯೆಯನ್ನು ಕಲಿಯುವದಕ್ಕಾಗಿ ವಯ ಮಾಡಿದ ಕಾಲವೂ ಧನವೂ ನಷ್ಟ ವ್ಯರ್ಥವಾಗುತ್ತಿಲ್ಲ? ವಿದ್ಯೆಯೂ ಕೂಳಿನ ಸ್ಥಿತಿಯಿಂದ ಬಹುದೂರ ಸರಿಗೆ ಇದು ಶಿಕ್ಷ ಶಿಕ್ಷೆಯೇ ಸರಿ ಯಾವ ವಿದ್ಯೆಯಿಂದಾದರೂ ಪಾರಮಾರ್ಥ ಫಲವು ಲಭಿಸುವಂಥಾ ಉದ್ಯೋಗಕ್ಕೆ ದಾರಿಯಾಗಬೇಕಾಗಿದೆ. ಸಕಲರೂ ಉದ್ಯೋಗಿಗಳಾಗಿರುವದು ಅವಶ್ಯವಾದರೂ ಅದರಲ್ಲಿ ವಿದ್ಯಾಸಂಪನ್ನರಾದವರು ಮತ್ತಷ್ಟು ಹೆಚ್ಚಾಗಿಯೇ "ಉದ್ಯೋಗ" ವೆಂಬ ದಾರಿಯಲ್ಲಿ ಪ್ರಾರಂಭಿಕರಾಗಬೇಕು ಯಾವ ವಿದ್ಯಾಭ್ಯಾಸವನ್ನು ಮಾಡುವರು ಪರರ ವಿಷಯಗಳಲ್ಲಿ ತಾವು ಸುಖಪಟ್ಟು ತಮಗೆ ಬೇಕಾದವರನ್ನು ಮತ್ತು ಇತರರನ್ನು ಸಹ ಸುಖಪಡಿಸುವದಕ್ಕೆ ಪ್ರಯತ್ನಿಸಿದರೆ ಪುರುಷಾರ್ಥ ಸಿದ್ಧಿಯನ್ನು ಪಡೆಯುವರೆಂಬುದೇ ನಮ್ಮ ನಿಶ್ಚಿತಾಭಿಪ್ರಾಯವು ಆದಕಾರಣ ಉದ್ಯೋಗವೇ ಪುರುಷನಿಗೆ ಲಕ್ಷಣವೆಂದು ಹೇಳಿರುವದು.

" ದೇಶಾಭಿಮಾನಿ

COORG COMMISSIONER'S OFFICE.

Mercara, 29th June 1921.

The following Communique is republished for general information.

HILTON BROWN I. C. S.
Offg. Commissioner of Coorg

GOVERNMENT OF INDIA
DEPARTMENT OF EDUCATION
(SANITARY)

Simla, the 1st June 1921

COMMUNIQUE.

From time to time pilgrims to the Hedjaz find themselves stranded at Jeddah after the performance of their pilgrimage without means of subsistence and unable to return to their homes. Their condition in these circumstances is often attended with great hardship. In the past the situation has been met by private subscription, by the generosity of Steamship Companies and by assistance from Government. Experience has shown that this haphazard method of assisting destitute and stranded pilgrims is inconvenient and unsatisfactory. The Government of India recently consulted certain representative Mussulmans on the subject and the opinion generally expressed was that assistance should be sought from the Muslim community and from Muslim Princes and other Princes and Rulers of Indian States which have an appreciable number of Muslim subjects. It is firmly trusted that an appeal for this object will find ready response in the Muslim community at large and among the Ruling Princes and Chiefs. The Government of India trust that, subject to the approval of such a vote by the Legislative Assembly, they will be able to assist by a substantial grant the contributions which may be collected. It is hoped that it will be possible to place the funds collected at the disposal of an agency largely non-official and composed in the main of Muhammadans, and that the funds will be sufficient to enable that agency to deal with cases of distressed pilgrims both in the current and in future years. The Government of India are at present in communication with the Government of Bombay on the subject. In the meantime, it is requested that any contributions made should be sent to the Imperial Bank of India Bombay, to be placed to the credit of a fund named "The Jeddah Repatriation Fund".

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಪ್ರಕಾಶಕರು ಉತ್ತರವಾದಿಗಳಲ್ಲ [ಎಡಿಟರ್]

ಅಯ್ಯಾ,

ಅಂಚಗೇರಿನಾಡು ತ್ರೈಸೋದು ಗ್ರಾಮದಲ್ಲಿರುವ ಶ್ರೀ ಮಹಾದೇವರ ದೇವಸ್ಥಾನವನ್ನು ಕಳೆದ 6 ವರ್ಷಗಳ ಹಿಂದೆ ಬಿಟ್ಟು ಧ್ವಜಸ್ತಂಭ ಜೀರ್ಣೋದ್ಧಾರವನ್ನು ಕಟ್ಟಿಸಿ ಪಂಚುಮಾಡಿಸುತ್ತೇನೆ ಎಂದವರು ಶೀಘ್ರವಾಗಿ ಕೊಡುವರಾಗಿ ಹೇಳಿಕೊಂಡಲ್ಲು ಸದರಿ ಊರವರು ಹಣ ವಿಧಿಯಿಲ್ಲವಾಗಿಯೂ ನನ್ನನ್ನು ಒಬ್ಬನನ್ನು ತಾವೇ ಕಟ್ಟಿಸಿಕೊಳ್ಳುತ್ತೇವೆ ಎಂಬ ಅಭಿಪ್ರಾಯದಿಂದ ಸದರಿ ದೇವರಿಗೆ ಪೂರ್ವದಿಂದ ಬರುವ ಬಾಪ ಬೇಡಿ ಉತ್ಸವದ ಹಣ ಉಪಯೋಗಿಸಿಕೊಂಡ ಕೆಲವು ಕುಳಗಳು ಮತ್ತು ಕೆಲವು ಕುಳಗಳು ತಮ್ಮ ತಮ್ಮ ಕೈಯಿಂದ ಸಹ ಕಟ್ಟಬಹುದು ಬಿಟ್ಟು ಅರ್ಧಕೆಲಸ ಮಾಡಿಸಿದರು ಈಚೆಗೆ ಊರವರು ಅವರವರೊಳಗೆ ಜಗಳವಾಡಿಕೊಂಡು ಸಾವಿರಾರು ರೂಪಾಯಿ ಕರ್ಚುಮಾಡಿ ಕಟ್ಟಿಸಿದ ಗುಡಿಯ ಕೆಲಸ ಪೂರೈಸದೆ ಪೂರಾ ನಿಂತು ಬಿದ್ದು ಅನೇಕ ನಷ್ಟವುಂಟಾದ ವಿಷಯದಲ್ಲು ಪೂರಾ ವ್ಯಸನ ತೋರಿದವರಿಲ್ಲ ಅಜೀರ್ಣವಾದ ದೇವಸ್ಥಾನಗಳನ್ನು ಜೀರ್ಣ ಕಟ್ಟಿಸಿ ನಿತ್ಯಪೂಜೆಗೆ ಅನುಕೂಲಮಾಡಿರುವ ಪ್ರಾಚೀನ ಪದ್ಧತಿಯ ಹೆಸರನ್ನು ಈ ಪತ್ರಿಕೆಯಲ್ಲಿ ಓದಿ ನೋಡಿಕೊಂಡು ಈ ಊರವರು ಸಹ ಅವರವರ ಮನಸ್ಸಿನ ಜಿದ್ದು ಬಿಟ್ಟು ಒಗ್ಗಟ್ಟಾಗಿ ಸದರಿ ದೇವರ ದೇವಸ್ಥಾನವನ್ನು ಪೂರೈಸಿಕೊಳ್ಳುವ ತೊಂದರೆಯನ್ನು ತಪ್ಪಿಸಿಕೊಳ್ಳಬಹುದಾಗಿ ನನ್ನ ಮನವಿ ಗ್ರಾಮದ ಒಗ್ಗಟ್ಟೇ ಗ್ರಾಮಾಭಿವೃದ್ಧಿಗೆ ಮೂಲ.

ಕೆ ಎ ಬಿ

ಪತ್ರಿಕಾಕರ್ತರೇ,

ಈ ಕಡೆ ಕೆಲವು ದಿನಗಳಲ್ಲಿ ಹೊತ್ತು ಒಂದೆರಡು ಮಳೆಯಿಂದ ಬಹು ಆತುರದಿಂದ ಮಧುಪಾನಂಥಾ ವ್ಯವಸಾಯ ಕೆಲಸವು ಈಗ ಮಳೆಯಿಲ್ಲದೆ ಆಕಾಶಕ್ಕೆ ಬಾಯಿಬಿಟ್ಟು ನೋಡುವ ಕಾಲವು ಬಂದಿದೆ ಇಂಥಾ ಕಷ್ಟದಲ್ಲಾದರೂ, ಇದರ ಜೊತೆಗೆ ಬಂದಿರುವ ಕಷ್ಟಗಳನ್ನು ವರ್ಣಿಸಲಸಾಧ್ಯ ಹೇಳದಿರೆ ಎದೆಬಾಗಿ ಬೇಸರ ಹೇಳದಿದ್ದರೆ ಕೊಡಗಿಗೆ ಕಷ್ಟ, ಒಂದುಕಡೆ ಬಿಲ್ಲವರ ಹೋರಾಟ, ಕೊಡಗಿಗೆ ಹೋರಾಟ, ಮಾಪಿಳ್ಳೆರಿಗೆ ಸಂಕಟ ಈಗ ಎಲ್ಲಿಲ್ಲಾ ಮಧುಪಾನ ವಿಸರ್ಜನ ಕೂಟಗಳು. ಹೊಲೆಯರೂ ಕೂಡ ಇದನ್ನೆ ಅನುಸರಿಸುತ್ತಾರಂತೆ. ಬಾಳಾಜಿ ಗ್ರಾಮದಲ್ಲಿ ಕೆಲವು ದಿವಸಗಳ ಮೊದಲು ಕೆಲವು ಮುಖಂಡರು ಸೇರಿ ಬ್ಯೆನೆ ಮರ ಕಟ್ಟಿಸಬಾರದೆಂತಲೂ ಬಿಲ್ಲವರಿಗೆ ಕೊಡದಂತೆಯೂ, ಕೊಟ್ಟವರಿಗೆ 10 ರೂ ಗಳ ಜುಲ್ಮಾನೆಯೂ ಗ್ರಾಮಸ್ಥರು ಮಾಡುವ ಆಕ್ಷೇಪಣೆಗೂ ಸಹ ಗುರಿಯಾಗುವಂತೆ ಒಂದು ಮಹಜರು ಮಾಡಿರುತ್ತಾರಂತೆ. ಈ ಮಹಜರಿಗೆ ವೃಷ್ಟಿಯಿಂದಲೆ ಬಿಲ್ಲವರು ಗ್ರಾಮಸ್ಥರ ಬ್ಯೆನೆ ಮರಗಳನ್ನು ಕೊಡಪಟ್ಟರಿಂದ ಪೈಸಾರಿಯಲ್ಲಿರುವ ಮರಗಳನ್ನು ಕಟ್ಟುತ್ತಿದ್ದ ಮರದ ಕೈಗಳನ್ನು ತಾವೇ ಕಡಿಯುತ್ತಾ ಗ್ರಾಮದ ಕೆಲವರಮೇಲೆ ಆಗಾಧ ವಾದಂಥಾ ಕೇಸನ್ನು ಮಾಡಿರುತ್ತಾರಂತೆ ಈ ಗ್ರಾಮಕ್ಕೆ ಸೆರೆ (ವ ತ್ತು) ಗ್ರಾಮ ಆಗಿರುವ ಮಾಯಮುಡಿ ಗ್ರಾಮದ ಕೊಡಗರಾದವರು ಇದನ್ನ ಮಹಜರು ಮಾಡದೆ ಇದ್ದುಕೊಂಡು ಬಿಲ್ಲವರಿಗೆ ತುಂಬಾ ಸಹಾಯಕರಂತೆ, ಹೀಗೆ ಎಂಬ ಹಿರೇವಿಯು ಇವರನ್ನು ಎಷ್ಟರಮಟ್ಟಿಗೆ ಓಡಿದೆಯೋ ಎಂಬುದು ಹೇಳಲಸಾಧ್ಯ ಸದರಿ ಬಿಲ್ಲವರಲ್ಲಿ ಒಬ್ಬನಾದರೂ ಸದರಿ ಮಾಯಮುಡಿ ಗ್ರಾಮದಲ್ಲಿ ಕೆಲವು ವರ್ಷಗಳ ಹಿಂದೆ ತನ್ನ ಹೊಂದದ ಬಲದಿಂದ ಇವರಿಗೆ ಮಾಡಿದ ಉಪಕಾರವು ಜ್ಞಾಪಕದಲ್ಲಿರಬಹುದು. ಇವನು ಇಳಿಸುವ ಹೆಂಡವು ಮೊದಲಿಂದಲು ಇದೇ ಗ್ರಾಮದ ಒಬ್ಬ ಹೆಂಗಸನು ಮಾರಲುವಾಡಿದ ಸಂಗತಿ ಗೊತ್ತೇಯಿದೆ ಈಗ ಗಂಡಸರನ್ನು ಮರಳುಗೊಳಿಸುವದಕ್ಕೆ ಏನು ಅಗಾಧ? ಇದಲ್ಲವೇ ಮಧುಪಾನವಿಸರ್ಜನದ ಪ್ರಯತ್ನ? ಇದಲ್ಲವೇ ದೇಶಾಭಿಮಾನ. (ಸತೀಶ)

ಪತ್ರಿಕಾಕರ್ತರೇ

ಕಳೆದವಾರದಲ್ಲು ಅನುದವಿ ಎಂಬಾತನು ಸೇಂದಿ ಸಾರಾಯಿ ಮುಂತಾದ ನಿಷಿದ್ಧಪದಾರ್ಥಗಳನ್ನು ತ್ಯಜಿಸಲು ಮಾಂಸ ವಗೈರೆಗಳನ್ನು ಬಿಟ್ಟಲ್ಲದೆ ಈ ಸಾಹಸವು ನೀರಮೇಲಣ ಗುಳ್ಳೆಯಂತದಿ ಎಂಬಂತೆ ಸೂಚಿಸಿರುತ್ತಾರೆ ಆದರೆ ಅವರು ಹೇಳುವ ಮಾತೇನು ಟೊಳ್ಳುಕ್ತಿಯಾಗಿರುತ್ತದೆ

ನಮ್ಮ ಈ ಚಿಕ್ಕ ದೇಶದಲ್ಲು ಇದೊಂದು ಸಂದರ್ಭದಲ್ಲು ಮಾತ್ರ ನಮ್ಮ ಪೂರ್ವಿಕರು ಮಾಡಿರುವ ಕಟ್ಟು ಕಟ್ಟಳೆ ಅನ್ನುತ್ತಾರೆ, ಇದು ಬಹಳ ಅಮೂಲ್ಯವಾಗಿದೆ ಇತರ ಸಮಯದಲ್ಲು ಹೇಳಲಸಾಧ್ಯವಾದ ಪೂರ್ವಿಕರ ಕಟ್ಟುಕಟ್ಟಳೆಗಳನ್ನು ಎಷ್ಟರಮಟ್ಟಿಗೆ ಎಲ್ಲರೂ ಹಿಂಬಾಲಿಸುತ್ತಿದ್ದಾರೆ ತಿಳಿಯಲಾರರಾ? ಮಾಂಸ ಭಕ್ಷಕರ ಮದುವೆ ಮುಂಜಿ ವಗೈರೆಯಲ್ಲು ಮತ್ತು ಇತರ ಕರ್ಮಾಸಂದರ್ಭಗಳಲ್ಲು ನಿಷಾಸೇವನೆ ಮಾಡಿದ್ದು ಅಲ್ಲದೆ ಹೋದರೆ ಅಪಮೃತ್ಯುಗಳಿಗೆ ಗುರಿಯಾಗಬಹುದೆಂಬ ಸಂದೇಹವನ್ನು ಸೂಚಿಸಿರುತ್ತಾರೆ. ಆದರೆ ನಿಷಾಸೇವನೆ ಮಾಡದೆ ಲಕ್ಷಾಂತರ ಜನರು ಜೀವಿಸುವದು ಎಲ್ಲಿಯೂ ನೋಡುತ್ತಿದ್ದಾರೆಯಲ್ಲಾ! ಅವರಷ್ಟೇ ಕೇವಲ ತಿಂಬುತ್ತಿರುವ ಈ ಮಹಾಮಾರಿರೋಗಕ್ಕೆ ಒಳಪಟ್ಟಿರುವ ನಿಷಾವೆಂಬ ವಿಷಪದಾರ್ಥಗಳ ಸೇವನೆಯಿಂದ ನರಳುತ್ತಿರುವ ಮತ್ತು ನಷ್ಟವಾಗುತ್ತಿರುವ ಸಜ್ಜನರನ್ನು ಪರಾಂಬರಿಸಲಾರರಾ? ನಮ್ಮ ಹಿಂದೂದೇಶದಲ್ಲು ಕಳೆದವರುಷದವರೆಗೆ ನ್ಯಾಯವಾದ ದಾಖಲೆಯೊಡನೆ ತಯಾರಿಸಿದ ಪಟ್ಟಿಯ ತಪಶೀಲ್ —

ಸನ್ 1919 ರಲ್ಲು ನಿಷಾಸೇವನೆಯಿಂದ ಮಾತ್ರ ಲಭಿಸಿದ ಘೋರ ಕೃತ್ಯಗಳು.

1.	ಕೈಲಿಗೆ ನಿಷಾಸಂಬಂಧದಿಂದ, ಯಾ ಸೇವನೆಯಿಂದ ಹೋದ ಜನರು	186377
2	ನಿಷಾಸೇವನೆಯಿಂದ ಅಪಮೃತ್ಯು ಮರಣಪಟ್ಟದ್ದು, (ಸತ್ತವರು)	21831
3	ಡಿಟೊ ಪ್ರಾಣಹತ ಮಾಡಲು ಯತ್ನಿಸಿದ್ದು ತಿಳುವಳಿಕೆಗೆ ಬಂದದ್ದು	2126
4	ಡಿಟೊ ಪತಿ ಮನೆಯ ಕೆಟ್ಟ ರೋಗ ಘಾತಿಸಿದವರು	7460
5	ಸನ್ನಿ ಬಿಡುಗಳು ಮತ್ತು ಮತ್ತಿಳು ಬರುತ್ತಿದ್ದ ಸತ್ತದ್ದು	1013
6	ನಿಷಾಸೇವನೆಯಿಂದಹುಟ್ಟಿಯಲ್ಲು Liver complaint ರೋಗಯುಕ್ತರು	3580

ಹೀಗೆ ಈ ಮಹತ್ತಾದ ರೋಗಕ್ಕೆ ನಿಶೇಧಿಸಿ ಮುತ್ತುತ್ತಾಗುವ ಘೋರ ಕಷ್ಟಗಳನ್ನು ಕೇಳುತ್ತಿರಲಾಗಿ ಕ್ಷಣಮಾತ್ರಕ್ಕೂ ನಮ್ಮ ಈ ದೇಶದ ಜನರು ತಿಳಿಯಲಿಲ್ಲವೆ ಎಲ್ಲಿ ಮಾಡಿದರೂ ಆಕಸ್ಮಾತ್ ಯಾವದಾದರೂ ಒಂದು ಮದುವೆ ನಡೆದಲ್ಲು ಮುಟ್ಟಿಸಲ್ಪಟ್ಟಿರುವ ಬಂಧನದ ಸಂದರ್ಭಗಳನ್ನು ಮನ್ನಿಸಿಕೊಂಡು ಈ ನಿಷಾಸೇವನೆಯೂ ಅವಶ್ಯಕವೆಂದು ಹೇಳುವವರಿಗೆ ನಾವು ಒಪ್ಪೇವು ಮಾಡಲಿ. ಅಲ್ಲದೆ ಮಾಂಸಭಕ್ಷಕರಾದ ಜನರು ಬಹು ಸುಲಭವಾಗಿರುತ್ತದೆ ನಮ್ಮ ಯಾವ ಸಂಗತಿಗೆ ಬೇಕಾದ ವ್ಯವಹಾರಗಳು ಇರುವುದಿಲ್ಲವೆ ಈ ವಿಷಯ ಹೇಳಲು ಕಾರಣವಲ್ಲ ಮಾಂಸವಿಲ್ಲದೆ ಮದುವೆ ನಡೆದಿಲ್ಲವೆ ಅವರ ಅಭಿಪ್ರಾಯದ ಕೊಡಗರಿನ್ನ ನಿಶೇಧಿಸಲಿಲ್ಲವೆ? ನಿಷೇಧಿಸಿ ಇದುವರೆಗೆ ಬಹಿಷ್ಕಾರವಾಗಿಯೂ ನಡೆಸುತ್ತಿರುವರೆ ಕೊಡಗಿನಲ್ಲು ನಡತೆ ಮನೆತನಕ್ಕೂ ವಂಶಕ್ಕೂ ಸೇರಿದಂಥಾವರೇ ಹೀಗೆ ನಡೆದರೆ ಅವರು ಹೇಳುವ ಇತರ ಮಾತುಗಳೆಲ್ಲಾ ಮತ್ತ ಜನರು ಯಾರು ಏನೆಂದು ಅವಲಂಬಿಸುತ್ತಾರೋ ಆಲೋಚಿಸಬೇಕಾಗಿದೆ.

ಆರ್ ಪಿ ಎ.

ಶುಭಶೋಭನಗಳಲ್ಲಿ, ಎಂತ ... ಗಳಲ್ಲಿ!
ಮದುವೆಮುಂಜಿಗಳಲ್ಲಿ, ಸಭಾಕೂಟಗಳಲ್ಲಿ!!

ಬೇಕಾಗುವ

ರೇಶ್ಮೆಯಸೀರೆ, ರೇಶ್ಮೆ ಮುಂತಾದ ರೇಶ್ಮೆಯಾದ ... ಅಂಚಿನ ... ಇತ್ಯಾದಿ ನಾನಾತರದ ಕೋಟು ... ಸಾಧಾರಣ ಬೆಲೆಗೆ ... ಬಟ್ಟೆಗಳೂ ... ತಮಗೆ ಬೇಕಾದುದನ್ನು ತಿಳಿಸಿ

ಕೆ. ನಂಜಪ್ಪಶೆಟ್ಟಿ,
ಗವರ್ನಮೆಂಟ್ ಕಂಟ್ರಾಕ್ಟರ್,
ಮತ್ತು ಜವಳಿ ವ್ಯಾಪಾರಿ,
ಸೋಮವಾರಪೇಟೆ.

"VOLTALITE"

Self Generating Electric Cycle Set.

An Inexhaustible supply of Electricity generated at no cost



Lighting — No Oil No ... No Battery ...
The first cost ... Will last ...

Apply to—K. R. THIRUPATI & Bros, ... MYSORE

ಗಮನಿಸಿ! ಗಮನಿಸಿ!! ಅಮಾ ಗಮನಿಸಿ!!
ಬಹುಬೇಗನೆ ಧನಿಕರಾಗಲಿ ಗಮನಿಸಬೇಕು!

ಮುಖ್ಯವಾದ ಪ್ರಸಿದ್ಧ ಪತ್ರಿಕೆ

ಕೋಡಿನ ಶುದ್ಧವಾದ ... ಆರೋಗ್ಯಕರವಾದ ಮತ್ತು ಸುಸಂಸ್ಕಾರವಾದ (ಪೋಣಾದ)

ಅಡಿಗೆ ಉಪ್ಪು

1 ಈ ಉಪ್ಪು ... ಅಂಗಡಿಬೀದಿಯಲ್ಲಿ ... ಈ ಉಪ್ಪು ... ವಿಮರ್ಶಿಸಬಹುದು.
2 ಈ ... ವಾಗಿರುವುದರಿಂದ ... ಮತ್ತು ... ಇರುತ್ತದೆ ... ಒಂದಕ್ಕೆ ... ಅಣೆ.

ಕೆ. ಆರ್. ತಿರುಪಾತ್ ಅಂಡ್ ಬ್ರದರ್ಸ್,
ಸಯಾಜೀರಾವ ರೋಡು ಮೈಸೂರು

SUBBANNA, SANGAPPA,

Receiving and Forwarding Agents
General Merchants and
Commission Agents
Santhepet Mysore

Despatch and ... whatever you receive at Mysore Railway Station and whatever food stuff and Stationeries you want to have from Mysore. Prompt attention moderate commission and quick disposal are their motto.

ಮೈಸೂರು ರೈಲ್ವೆ ಸ್ಟೇಷನ್‌ನಿಂದ ನೀವು ... ಸಾಮಾನುಗಳ ... ಮೈಸೂರಿನಿಂದ ... ಮೈಸೂರು ... ಮೈಸೂರ ...

ಸುಬ್ಬಣ್ಣ ಸಂಗಪ್ಪನವರಿಗೆ ತಿಳುಹಿಸಿ.

ಅವರು ... ಮಾಡುವ ... ಸರಕು ... ಮಾಡಿಸುತ್ತಾರೆ ...

ರೋಗಿಗಳೂ, ರೋಗವಿಲ್ಲದವರೂ

ಟ್ರೈಪೋಸಿನ್ನು

ಉಪಯೋಗಿಸಬೇಕು

... ಉಪಯೋಗಿಸಿದರೆ ಶರೀರದ ... ವನ್ನು ತಗೆದು ... ಕಾಯಿಲೆಯನ್ನು ಕಡಿಮೆಮಾಡುವುದು. ಸುಂಭ ಕಾಯಿಲೆಗಳಲ್ಲವೂ ಬರಿ ಇದರ ಸೇವನೆಯಿಂದಲೇ ಗುಣವಾಗುವವು ತೆಗೆದುಕೊಂಡ ... ಘಂಟೆಯಲ್ಲಿ ಸಭಭೇದಿ ಮಾಡುವುದು ಪೇರಿ ಭೇದಿ ಮಾತ್ರೆಗಳ ತೆ ಸಂಕಟ, ಹೊಟ್ಟೆನೋವು ಮುಂತಾದುವನ್ನುಂಟುಮಾಡುವುದಿಲ್ಲ ಸಾಮಾನ್ಯಜ್ವರ, ಕೆಮ್ಮು, ಊದು, ಮೂತ್ರಬಂಧನೆ, ಆಲಸ್ಯ, ಉಷ್ಣ, ಪಿತ್ತ, ಶೀತಸಂಬಂಧ ಕಾಯಿಲೆಗಳು, ಜೀರ್ಣಕೋಶದ ಅಕ್ರಮತೆ, ಕರುಳುಗಳಲ್ಲಿ ಕ್ರಿಮಿಗಳಿಂದ ಹುಟ್ಟಿ ಉಬ್ಬರವಾಗುವುದ, ದುರ್ವಾಸನೆಯುಳ್ಳ ವಾಯುಗಳು ... ಮುಂತಾದುವನ್ನೆಲ್ಲ ಗುಣಪಡಿಸುತ್ತದೆ.

... ಮಕ್ಕಳಿಂದ ... ವರೆಗೆ ... ದ ... ಉಪಯೋಗಿಸಬಹುದು ... ತುಂಬಿ ... ಇಟ್ಟುಕೊಳ್ಳಿ.

೩೦ ಮಾತ್ರೆ ಶೀಸೆಗೆ ೧೨ ಅಣೆ

ಚಂದ್ರಕಲೆಯು

ಶರೀರದಲ್ಲಿನ ಪ್ರತಿಯೊಂದು ಧಾತುವನ್ನೂ ಸೇರಿಸಿ ಶರೀರದ ರೋಗಗಳನ್ನು ಪರಿಹರಿಸುವುದು. ರೋಗವಿಲ್ಲದವರಿಗೆ ಮಾಂಸ, ಮೆದುಳು, ಮೂಳೆ ನರ, ಮುಂತಾದುವುಗಳನ್ನು ಬಲಪಡಿಸಿ ಧಾತು ಗಟ್ಟಿಮಾಡಿ ದೃಢಕಾಯರನ್ನಾಗಿ ... ರೋಗವಿದ್ದವರಿಗೆ ಅಶಕ್ತಿ, ಗೆಂಡೆ ... ವಾತ, ಪ್ಲೂರಸಿ ಎಂಬ ಪಕ್ಕ ... ಪಿತ್ತಕೋಶದ ರೋಗಗಳು, ಮೂತ್ರಕೋಶದ ರೋಗಗಳು ಮಲಬದ್ಧತೆ, ನರಗಳ ... ಗಳು, ಸಂಗಳ ... ಮಿದುಳಿನ ... ಗಳು, ಕಾಮಾಲೆ, ಕ್ಷಯ, ಶರೀರದ ... ಗಳೇ ಮುಂತಾದುವು ಏಳುವುದು, ಹೊಟ್ಟೆನೋವು ಮುಂತಾದುವನ್ನೆಲ್ಲ ಶಾಂತಿ ... ಪಡಿಸುತ್ತದೆ. ಅಮೂಲ್ಯ ಔಷಧಿಗಳಿಂದ ... ಸಿದ್ಧ ... ಶೀಸೆಗೆ ಮೂರುರೂಪಾಯಿ

ಇಲೆಕ್ಟ್ರಿಕ್ ಬಾಂ.

ಕೆಮ್ಮು, ಸ್ವರ, ತುರಿಕಜ್ಜಿ, ಗಾಯ, ಸುಟ್ಟಗಾಯ ಮುಂತಾದುವನ್ನೆಲ್ಲ ಗುಣಪಡಿಸುತ್ತದೆ
ಪೊಟ್ಟಣಕ್ಕೆ ೬ ಅಣೆ

ಎಕ್ಸ್‌ಪೋಡ್ಜ್ವರವಿರಲಿ

ನಮ್ಮ ಜ್ವರವಿಮಾತ್ರೆಗಳು ತೆಗೆದುಕೊಂಡ ... ಗಂಟೆಗಳೊಳಗಾಗಿಯೇ ಜ್ವರವನ್ನು ... ಇಳಿಸುತ್ತವೆ ... ಮಾತ್ರೆಗೆ ...
ಜ್ವರಗಳನ್ನು ಗುಣಪಡಿಸುವುದಕ್ಕೆ ನಮ್ಮ ... ಮಾತ್ರೆಗಳನ್ನು ಉಪಯೋಗಿಸಿ ಇವು ಮಲೇರಿಯಾ, ಸನ್ನಿಪಾತ, ಪಿತ್ತಜ್ವರಗಳು, ಶ್ಲೇಷ್ಮಜ್ವರಗಳು, ಮುಂತಾದುವನ್ನೆಲ್ಲ ಗುಣಪಡಿಸುತ್ತದೆ ಶೀಸೆಗೆ ೧ ರೂಪಾಯಿ

ಪಿತ್ತಕೋಶ, ಪಿತ್ತಕೋಶ ಮುಂತಾದುವುಗಳ ಅಕ್ರಮತೆಯಿಂದ ಹೊಟ್ಟೆನೋವು (... ವಾಂತಿಯಾಗುವುದು, ಅಜೀರ್ಣ, ... ಎಲ್ಲಾತರದ ಡಿಸ್ಪೆಪ್ಸಿಯಾ ಎಂಬ ... ಕಾಯಿಲೆಗಳನ್ನೂ ನಮ್ಮ ... ಶಾಂತಿತ ಗುಣಮಾಡುತ್ತದೆ ... ಬಿವಧ ಗಳುಳ್ಳ ... ಶೀಸೆಗಳಿಗೆ ... ರೂಪಾಯಿ

ಎಲ್ಲಾತರದ ಕಾಯಿಲೆಗಳನ್ನೂ ಪತ್ರಮುಖಾಂತರವೂ, ಹತ್ತಿರವಿದ್ದೂ ಗುಣಮಾಡುತ್ತೇವೆ ... ಬರೆದು ತಿಳಿಸಿದರೆ ಪೂರ್ಣವಾದ ... ಕಾಯಿಲೆ ಮುಂತಾದುವನ್ನು ಗುಣಪಡಿಸಿದ್ದಕ್ಕೆ ನಮಗೆ ಸರ್ಟಿಫಿಕೇಟುಗಳು ಸಿಕ್ಕಿವೆ

ಡಿ. ಜಿ ಎಚ್. ಹೌಸ್,
ಸೋಮವಾರಪೇಟೆ (ಕೊಡಗು).

IF YOU WANT
The Best Typewriter Ribbons
AND
Carbon Papers
PLEASE ASK FOR
"CRUSADER BRAND"



The Sreenivasa Press,
MYSORE.

... ರಿಸ್ಟ್ ವಾಚ್.



ಈ ಗಡಿಯಾರವನ್ನು ನಾವು ... ಅಮೇರಿಕಾ ದೇಶದಲ್ಲಿ ... ಗಡಿಯಾರಗಳಲ್ಲಿ ರಾತ್ರಿವೇಳೆ ... ಆದರೆ ಈ ಗಡಿಯಾರಗಳಿಗೆ ... ಗಂಟೆಯನ್ನು ... ಗಡಿಯಾರ ... ಗಡಿಯಾರಗಳಲ್ಲಿ ... ಗ್ಯಾರಂಟಿ ಕೊಡುತ್ತೇವೆ ಕೈಯಲ್ಲಿ ಕಟ್ಟುವ ... ಗಡಿಯಾರ 1 ಕ್ಕೆ 10—8—0 ... ಗಡಿಯಾರ 1 ಕ್ಕೆ ...—8—0

ವಿಳಾಸ — ಎಸ್. ಎಸ್. ರಾಮು ಅಂಡ್ ಕೊ.
ಪೋಸ್ಟ್ ಬಾಕ್ಸ್ ನಂ 214 ಮದರಾಸು

... ಸೋಪು

ಈ ಸೋಪನ್ನು ... ಚರ್ಮಕ್ಕೆ ... ತೆಗೆದು ಬಿಡುವುದು ... ನಮ್ಮ ಮೂನ್ ಲೈಟ್ ಸೋಪು ಗಂಧ, ನೇರಿಡೆ ... ಸೋಪು 1— 1—0 ... 2—1—0

... ಉಂಗುರಗಳು

ಈ ಉಂಗುರಗಳನ್ನು ... ಚಿನ್ನದಿಂದ ... ಕೆಂಪು ... ಉಂಗುರನೆಂದೇ ... ಗ್ಯಾರಂಟಿ 3 ವರ್ಷಕೊಡುತ್ತೇವೆ

ಉಂಗುರ 1 ಕ್ಕೆ ರೂ —12—0

ವಿಳಾಸ — ಎಸ್. ... ಅಂಡ್ ಕೊ
ಪೋಸ್ಟ್ ಬಾಕ್ಸ್ ನಂ 542 ... ಮದರಾಸು

... ಸೀರೆಗಳು

17 ಮೊಳ ... ದೊಡ್ಡ ವಸ್ತ್ರ

ಈ ಸೀರೆಗಳನ್ನು ಹೊಸದಾದ ಫ್ಯಾಷನ್ ನೂಲಿನಿಂದ ತಯಾರಿಸಿದೆ ಸುಂದರವಾದ ರೇಷ್ಮೆಯ ... ಅಂದವಾದ ... ಇದೆ ಶ್ರೀಮಂತರಿಗೂ ಗೃಹಬಳಕೆಗೂ ಅನುಕೂಲವಾದದ್ದು ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಎಲ್ಲಿಯೂ ಸಿಕ್ಕಲಾರವು ಮಾದರಿಗಾಗಿ ಕೆಲವು ಸೀರೆಗಳನ್ನು ಮಾತ್ರ ತಯಾರಿಸಿರುವೆವು ಬೇಕಾದವರು ಕೇಳಿ ಪರೀಕ್ಷಿಸಿರಿ

ಕ್ರಯ ನಂಬರು 1 ...—8—0
ನಂಬರು 2 7—8—0

ವಿಳಾಸ — ಎಸ್. ಎಸ್. ರಾಮು ಅಂಡ್ ಕೊ
ಪೋಸ್ಟ್ ಬಾಕ್ಸ್ ನಂ 214, ಮದರಾಸು.

Printed and Published by S. NANJUNDA SASTRY at the Sreenivasa Press, Mysore for "Kodagu" Ltd., Mercara—15 7 1921

ರಿಜಿಸ್ಟರ್ಡ್ ನಂ. ಎಂ. ೧೩೬೮

ಕೊಡಗು.

ಸಕ್ಕೋಪಸ್ಥಿತಪಾಕಲಯಾರ್ಥ ಸ್ವವಿದ್ಯಾನೀತಿಪ್ರಯತ್ನತಃ ಪ್ರಜಾಃ ಸ್ವತ್ಮೇನ ದೇಶಾನಾಂ ಸುಸ್ಥಿರಾಸ್ಸೈ ರಾಜ್ಯಸಂಪದಃ॥

ಪ್ರತಿ ಶುಕ್ರವಾರವೂ ಪತ್ರಿಕೆಯು ಪ್ರಕಟಿಸಲ್ಪಡುವುದು.

ಸಂಪುಟ ೧] ಕೊಡಗು, ಸನ್ ೧೯೨೧ ನೇ ಇಸವಿ ಜುಲೈ ತಾರೀಖು ೨೨ ನೆಯ ಶುಕ್ರವಾರ. [ಸಂಚಿಕೆ ೪

ವೀರಶೈವರಿಗೆ ಸಂಗ್ರಾಹ್ಯವಾದ ಫೋಟೋ.

ಶ್ರೀ ಶಿವಯೋಗಿಗಳ ಸಂಘ.—ಭಾಗ್ಯಶಾಲಿ ಜನರು ಹಣವು ಖರ್ಚುಮಾಡಿ ಮಹಾ ಶಿವಯೋಗಿಗಳ ದರ್ಶನವನ್ನು ತೆಗೆದುಕೊಳ್ಳುತ್ತಾರೆ. ಆದರೆ ಶ್ರೀಮಂತರಿಗೂ ಮತ್ತು ಬಡವರಿಗೂ ನಿತ್ಯದರ್ಶನ ಆಗುವದಕ್ಕೆ ಫೋಟೋವ ಹೊರ್ತು ಅನ್ಯಮಾರ್ಗವು ಇಲ್ಲದಕಾರಣ ನಾವು ಪ್ರಸಿದ್ಧರಾದ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಗದಗ ತೋಂಟದಾರ್ಯ, ಅಥಣಿ ಶಿವಯೋಗಿ, ಬಾಲಲೀಲಾಸ್ವಾಮಿ ಬಳೂರ, ಕಾಸಗಲ್ಲ, ಹಾಳಕೇರಿ, ಬಿಡರೀ ನಿಡಸೋಸಿ ಮುಂತಾದ ೧೮ ಮಹಾಸ್ವಾಮಿಗಳ ಫೋಟೋ ಕೂಡಿಸಿದ ಕಾರಣ ಒಂದೇ ಕಾಲದಲ್ಲಿ ಎಲ್ಲಾ ಶಿವಯೋಗಿಗಳ ದರ್ಶನ ಆಗುವವು. ೧೮×೧೨ ಸೈಜದ ಚಿತ್ರದ ಕ್ರಯ ೧ ಪ್ರತಿಗೆ ೮ ಅಣೆ.

ಶ್ರೀ ಕಲ್ಯಾಣ ಬಸವೇಶ್ವರ:—ವೀರಶೈವ ಧರ್ಮೋದ್ಧಾರಕರಾದ ಶ್ರೀಬಸವಣ್ಣದೇವರ ಅತ್ಯಂತ ಚಿಟವುಂಚವಾದ ಖಾಸ ಫೋಟೋ ೧೮×೧೨ ಸೈಜ ಬಣ್ಣದ ಚಿತ್ರದ ಕ್ರಯ ೧ ಪ್ರತಿಗೆ ರೂ. ೧, ಸಾದಾ ೮ ಅಣೆ.

೧. **ಶ್ರೀ ಅಲ್ಲಮಪ್ರಭುಪಾದಪೂಜೋತ್ಸವ**:—ಇದರಲ್ಲಿ ಶ್ರೀಬಸವೇಶ್ವರರು ಶ್ರೀಚನ್ನಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಅಕ್ಕನಾಗಮ್ಮ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವಪಾದಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೋ ಇರುತ್ತದೆ. ದೊಡ್ಡ ಸೈಜು ರೂ. ೧|, ಸಣ್ಣ ಸೈಜು ರೂ. |||.

೨. **ಶ್ರೀರೇಣುಕಾಚಾರ್ಯರ ಲಿಂಗೋದ್ಭವವು**—ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರ್ಯರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವ ಫೋಟೋ ಇರುತ್ತದೆ. ದೊಡ್ಡ ಸೈಜು ರೂ. ೧|, ಸಣ್ಣ ಸೈಜು ರೂ. |||.

೩. **ಶ್ರೀರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ**:—ಇದರಲ್ಲಿ ಅಗಸ್ತ್ಯ ಮುನಿಗಳು ತಮ್ಮ ಪತ್ನಿ ಲೋಪಾಮುದ್ರಾಸಹ ಉಪದೇಶ ಮಾಡಿಕೊಳ್ಳುತ್ತಾ ಇದ್ದಾರೆ. ದೊಡ್ಡ ಸೈಜು ರೂ. ೧|, ಸಣ್ಣ ಸೈಜು ರೂ. |||.

೪. **ಶ್ರೀವೀರಭದ್ರನಿಂದ ಹನುಮಂತನಿಗೆ ಲಿಂಗಧಾರಣವು**—ಇದು ಹನುಮಂತನು ಮೋಕ್ಷಾರ್ಥಕ್ಕಾಗಿ ಲಿಂಗಧಾರಣ ಮಾಡಿಕೊಂಡ ಫೋಟೋ ಇರುತ್ತದೆ. ದೊಡ್ಡ ಸೈಜು ರೂ. ೧|, ಸಣ್ಣ ಸೈಜು ರೂ. |||.

ಶ್ರೀ ವೀರಶೈವ ರಾಜಸಮೂಹ—ಇದರಲ್ಲಿ ಕೊಡಗು ದೇಶದ ಲಿಂಗರಾಜೇಂದ್ರ, ವೀರರಾಜೇಂದ್ರ ವಡಿಯರ, ದೇವಮ್ಮಾಜಿ ಮಹಾರಾಣಿ, ಮತ್ತು ಸನ್ನದ ಶೃಂಗಸೂರ ಮತ್ತು ಗೊವಾಪ್ರಾಂತದ ಪಾಂಡೆವಾಡಿ, ಸ್ವೋಂದಾದ ಅರಸರ ಫೋಟೋ ೯ ಇರುತ್ತವೆ. ಕ್ರಯ ಫುಲ್ಲಸೈಜು ೧| ರೂ. ಕ್ಯಾಬಿನೆಟ್ ೧೨ ಅಣೆ.

ಶ್ರೀಮುರುಘರಾಜೇಂದ್ರ ಚಿತ್ರದುರ್ಗ ಮಹಾಸ್ವಾಮಿಗಳು—ಅತ್ಯಂತ ಸುಂದರವಾದ ಕೈಬಣ್ಣದ ಫೋಟೋ ಕ್ರಯ ಪ್ರತಿ ೧ಕ್ಕೆ ರೂ ೧. ಸಾದಾದು |||.

ಸೂಚನೆ:—ಭಾರಿ ಖರೀದಿದಾರರಿಗೆ ಚನ್ನಾಗಿ ಕಮಿಷನ್ ದೊರೆಯುವದು.

ವಿಳಾಸ:—**ಗಂಗಪ್ಪ ಚಿರಗೆ,**

ಮಾಲಕ ಧಿ ಶಂಕರನಾ ಫೋಟೋ ಕಂಪನಿ, ಸೋಲಾಪುರ.

IF YOU WANT

The Best Typewriter Ribbons

AND

Carbon Papers

PLEASE ASK FOR

"CRUSADER BRAND"



The Sreenivasa Press,

MYSORE.

ಪ್ರಕಟಣೆ.

1922 ನೇ ಇಸವಿಯಲ್ಲಿ ಪ್ರಾರಂಭವಾಗುವ ಪರಿಯಾಯದಲ್ಲಿ ಪಲಿಮಾರು ಮಠದ ಶ್ರೀ ಪಾದಂಗಳವರು ಮಾಡುವ ಉಡುಪಿ ಶ್ರೀ ಕೃಷ್ಣ ದೇವರ ಪೂಜೆಯ ಸಹಾಯಾರ್ಥವಾಗಿ "ಶ್ರೀಕೃಷ್ಣ ಸೋಸೈಟಿ" ಎಂಬ ಹೆಸರಿನ ಒಂದು ಲೋಟರಿಯಾನೆ ಸೊಸೈಟಿಯನ್ನು ಏರ್ಪಡಿಸಿಯದೆ. ಟಿಕೇಟಿನ ದರ ಒಂದರ ಒಂದು ರೂ. ಆಗಿರುತ್ತದೆ. ಅದರಲ್ಲಿ 1 ನೇ ಇನಾಂ ರೂಪಾಯಿ 2000-0-0 ದಷ್ಟು, 2 ನೇ ಇನಾಂ ರೂ. 1000-0-0 ದಷ್ಟು, ರೂ. 100-0-0 ರ ಇನಾಂಗಳು 5 ರೂ 10-0-0 ರ ಇನಾಂಗಳು ನೂರು ರೂಪಾಯಿ 5 ರ ಇನಾಂಗಳು 200 ಎಂತ ನಿಶ್ಚಯಿಸಿಯದೆ. ಆದುದರಿಂದ ಎಲ್ಲಾ ಸಜ್ಜನರುಗಳು ತಮ್ಮ ಶಕ್ತ್ಯನುಸಾರ ಟಿಕೇಟುಗಳನ್ನು ಪಡೆದು ಶ್ರೀಹರಿ ವಾಯುಗಳ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸಲಾಗುತ್ತದೆ. ಎಲ್ಲಾ ಪತ್ರವ್ಯವಹಾರಗಳನ್ನು ಈ ಕೆಳಗಿನ ವಿಳಾಸಕ್ಕೆ ಮಾಡತಕ್ಕದ್ದು.

ವೈಸ್ ಸೆಕ್ರಿಟರಿ.

ಶ್ರೀಕೃಷ್ಣ ಸೋಸೈಟಿ,

ಕೊಡಿಯಾಲಬೈಲ್ ಪೋಸ್ಟ್, ದ. ಕ.

ನಿಮಗೆ ಏನು ಬೇಕು ?

ಬೇಕಾದವರು ನಮ್ಮಲ್ಲಿ ದೊರೆಯುವ ಕೊಡೆ, ಗುದ್ದಲಿ, ಬೂಟೀಸ್, ನಮೂನೆ ಫರ್‌ಕ್ಯಾಪ್, ಹಿಂಕ್ಸಲ್ಯಾಂಪ್, ನಮೂನೆ ಚಿಟ್ಟಿ, ಆಫೀಸ್ ಕುರ್ಚಿ ಇತ್ಯಾದಿ ಸಾಮಾನುಗಳನ್ನು ಒಂದುಸಲ ತೆಗೆದು ನೋಡಿರಿ.

ಹೆಚ್ಚಿನ ಸಂಗತಿಗಳು ಕೆಳಗಿನ ವಿಳಾಸಕ್ಕೆ ಬರೆದು ತಿಳಿಯುವದು.

COMMERCIAL STORE,

General Merchants, Commission Agents and Furniture Suppliers,

MURNAD, COORG.

R. FRAMJEE,

General Merchant, Commission Agent, Auctioner and Gent's Outfitter

MERCARA (Coorg)

JUST RECEIVED.

Fresh Consignment of Piece Goods of Various Kinds, Stationery, Hosiery, Patent Medicines etc., etc.

Goods available at the lowest market rates.

Prices Fixed.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ, ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ, ಕೊಡಗಿನ ವಾರಪತ್ರಿಕೆ.

1. ಹಣ ಕಳುಹಿಸುವದನ್ನು ಮೇನೇಜರ್, "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು.

2 ಲೇಖನಗಳನ್ನು ಸಂಪಾದಕರು, "ಕೊಡಗು" ಮಡಿಕೇರಿ ಈ ವಿಳಾಸಕ್ಕೆ ಕಳುಹಿಸಬೇಕು.

3 ವಾರ್ತೆದಾರರ ಅಭಿಪ್ರಾಯಕ್ಕೆ ಕೊಡಗು, ಪತ್ರಿಕಾಕರ್ತರು ಜವಾಬ್ದಾರರಲ್ಲ.

4 ನಮ್ಮಲ್ಲಿಗೆ ಕಳುಹಿಸುವ ವಾರ್ತೆಗಳು ಕಾಗದದ ಒಂದೇ ಕಡೆಯೂ ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಂತೆಲ್ಲಾ ಆ ಪತ್ರಗಳು ಪ್ರಕಟಿಸಲ್ಪಡುವವು.

5. ಪ್ರಕಟಿಸಲಾಗದ ವಾರ್ತೆಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ

INSURE YOUR CAR

Against Accident and Fire.

Apply to—

K. R. Thirupad & Bros.,

Sub Agents for

The Autocar Fire & Accident Insurance Co., Ltd.,

LONDON.

JUST ARRIVED FRESH STOCK OF

GOOD RICH TYRES

Best and Cheapest in the World.

Apply to—

K. R. Thirupad & Bros.,

Sayaji Rao Road,

MYSORE.

ಪ್ರಕಟನೆಯ ದರಗಳು

	ಒಂದು ಕಾಲಂ.	ಅರ್ಧ ಕಾಲಂ.	ಕಾಲು ಕಾಲಂ.
	ರೂ.	ರೂ.	ರೂ.
1 ವರ್ಷಕ್ಕೆ	50	30	18
6 ತಿಂಗಳಿಗೆ	30	18	10
3 ತಿಂಗಳಿಗೆ	18	10	6
1 ತಿಂಗಳಿಗೆ	7	4	3

ಮೇಲೆ ಕಾಣಿಸಿರುವ ದರಗಳು ಬೇಕಾದಾಗ ಬದಲಾಯಿಸಲ್ಪಡುವದು. ಹಣವನ್ನು ಮುಂಗಡವಾಗಿಯೇ ಪೂರ್ಣ ಪಾವತಿ ಮಾಡಬೇಕು.

ಮ್ಯಾನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ

ಎಲ್ಲಾ ಚಂದಾದಾರರುಗಳಿಗೆ ವಿಜ್ಞಾಪನೆ.

ಕಳೆದ ಸಂಚಿಕೆಗಳಲ್ಲಿ ಪತ್ರಿಕೆಯ ವಾರ್ಷಿಕಾ ಚಂದಾವನ್ನು ಪಾವತಿಮಾಡದವರಿಗೆ ಪತ್ರಿಕೆಗಳನ್ನು ವಿ.ಪಿ. ಮೂಲಕ ಕಳುಹಿಸುತ್ತೇವೆ ಎಂದು ಬರೆದಿದ್ದೆವು. ಆದರೆ ಪೋಸ್ಟಾಫೀಸಿನಿಂದ ಊರೂರಿಗೆ ವಿ. ಪಿ. ಗಳು ಸಕಾಲಕ್ಕೆ ದೊರೆಯದೆ, ಉಭಯತ್ರರಿಗೂ ನಷ್ಟಗಳು ಸಂಭವಿಸುವ ತೊಂದರೆಯನ್ನು ತಪ್ಪಿಸುವ ಬಗ್ಗೆ ವಿ. ಪಿ. ಗಳನ್ನು ಕಳುಹಿಸಲಿಲ್ಲ. ಆದ್ದರಿಂದ ಎಲ್ಲಾ ಚಂದಾದಾರರು ದಯವಿಟ್ಟು ತಮ್ಮ ಚಂದಾ ಹಣವನ್ನು ಪಾವತಿಮಾಡಿ, ಪತ್ರಿಕೆಯ ಮುಂದಿನ ಅಭಿವೃದ್ಧಿಗೆ ಸಹಾಯಮಾಡಬೇಕಾಗಿ ಕೋರುತ್ತೇವೆ. ವಿ. ಪಿ. ಬೇಕಾದವರು ಪ್ರತ್ಯೇಕ ಬರೆದುಕೊಳ್ಳಬೇಕು. ಚಂದಾದಾರರು ಯಾವ ಸಂಗತಿಯನ್ನು ಬರೆಯಬೇಕಾದರೂ ತಮ್ಮ ತಮ್ಮ ವಿಳಾಸದ ನಂಬರುಗಳನ್ನು ಅಗತ್ಯವಾಗಿ ಬರೆಯಬೇಕು. ನಂಬರುಗಳನ್ನು ಬರೆಯದ ಲೇಖನಗಳಿಗೆ ನಿಗಾ ಕೊಡಲಾಗುವುದಿಲ್ಲ.

"ಎಡಿಟರ್"

"ಕೊಡಗು"

೧೯೨೧ ನೇ ಇಸವಿ ಜುಲೈ ತಾ|| ೨೨ ನೇ ಶುಕ್ರವಾರ.

ಸದ್ಯದ ಶಿಕ್ಷಣಕ್ರಮವು.

ಶಿಕ್ಷಣವು ಮನುಷ್ಯನನ್ನು ಸುಖಿಯನ್ನಾಗಿ ಮಾಡುವದಕ್ಕೆ ವಿನಹ ಮತ್ತೊಂದಕ್ಕಲ್ಲ. ಮನುಷ್ಯನು ಸುಖಿಯಾಗಬೇಕಾದರೆ ಅವನ ಜೀವನು ಸರಾಗವಾಗಿ ನಡೆಯಬೇಕು. ಹೀಗಾಗದಿದ್ದರೆ ಶಿಕ್ಷಣದ ಉದ್ದಿಶ್ಯವು ನೆರವೇರಿದಂತಾಗುವದಿಲ್ಲ.

ಪ್ರಜೆಗಳು ಸುಖಿಯಾಗಬೇಕಾದರೆ ರಾಷ್ಟ್ರವು ಸಕಲ ಕಲೆ (Arts) ಗಳಲ್ಲೂ ಉನ್ನತಿಯನ್ನು ಪಡೆಯಬೇಕು. ಈ ಉನ್ನತಿಗೆ ಮೂಲಾಧಾರವೇ ಶಿಕ್ಷಣವು. ಇದಕ್ಕೆ ರಾಷ್ಟ್ರೀಯ ಶಿಕ್ಷಣವೆಂದು ಹೇಳಬಹುದು. ರಾಷ್ಟ್ರದ ಹಿತವನ್ನು ಸಾಧಿಸುವುದೇ ರಾಷ್ಟ್ರೀಯಶಿಕ್ಷಣದ ಉದ್ದಿಶ್ಯ. ಹೊರತು ಸರಕಾರದವರನ್ನು ದ್ವೇಷಿಸುವದಾಗಲಿ, ಕೊಲೆ ಸುಲಿಗೆಗಳನ್ನು ಮಾಡಿಸುವದಾಗಲಿ ಅಲ್ಲ; ಮತ್ತು "ನ್ಯಾಷನಲ್" ವಿದ್ಯಾಭ್ಯಾಸವು ರಾಜವಿದ್ರೋಹ ಎ ಮೊದಲೇ ಅಲ್ಲ.

ಈಗಿನ ಕಾಲದಲ್ಲಿ ಮನುಷ್ಯನು ಸುಖಿಯಾಗಿರಬೇಕಾದರೆ ಧನವೇ ಮುಖ್ಯವಷ್ಟೆ. ಇಂತಹ ಧನಾರ್ಜನೆಯಾದರೂ ಈಗಿನ ವಿದ್ಯಾಭ್ಯಾಸದಿಂದ ಆಗುವಂತಿಲ್ಲ. ಬಿ. ಎ. ಪ್ಯಾಸು ಮಾಡಿದವರಿಗೆ 60 ರೂಪಾಯಿ ಸಿಕ್ಕುವುದೆಂದರೆ "ಹರಿ ಹರಾ ಶ್ರೀಚೆನ್ನಸೋಮೇಶ್ವರ" ವೆನ್ನಬೇಕಾಗುತ್ತದೆ. ಸಿಕ್ಕಿದರೂ ಖರ್ಚುಮಾಡಿದ ಸಾವಿರಗಟ್ಟಲೆಯ ಹಣದ ಬಡ್ಡಿಯಾದರೂ ಅಲ್ಲವಲ್ಲ. ಮತ್ತು ರಾಷ್ಟ್ರೋನ್ನತಿಯಾದರೂ ಇದೆಯೆ? ಬದಲು ಬಡತನ. ತಿಂಗಳ ಕೊನೆಯಲ್ಲಿ ಸಿಕ್ಕಿದ ಸಂಬಳವು "ಮೆರೊಡಿಯನ್ ಅಥವಾ ಮುತ್ತೂರ್‌ನಬೇಗರ" ಪಾಲಿಗಾಯಿತು. ಉಳಿದುದು ಅಡಿಗೆಯವನಿಗೂ, ಮನೆಬಾಡಿಗೆಗೂ, ಸಾಲದೆಗೂ ಆಯಿತು. ಮತ್ತೆ ನವನಾಗರಿಕತೆಯ ಉಡಿಗೆ ತೊಡಿಗೆಗೋ? ಫ್ರಾನ್ಸಿಸ್ನೇಟರ ಬಿಲ್‌ಬುಕ್ಕಿನಲ್ಲಿ ದಾಖ್ಲೆ!

ಇದು ಈ ದೇಶದವರ ಪಾಡಾಯಿತು. ಇನ್ನು ಇಂಗ್ಲೆಂಡ್ ದೇಶದವರ ವಿದ್ಯಾಭ್ಯಾಸವನ್ನು ನೋಡುವ. ಸ್ವಲ್ಪ ಬಂಡವಾಳದಿಂದ ಹೆಚ್ಚಿನ ಸುಖವನ್ನು ಪಡೆಯುವ "ಟೆಕ್ನಿಕಲ್" ವಿದ್ಯೆಯೇ ಎಲ್ಲೆಲ್ಲಿಯೂ ಕೊಡಲ್ಪಡುತ್ತಿದೆ. ಇದರಿಂದ ಸರಕಾರದ ಚಾಕರಿಗೆ ಅಂಗಲಾಚಿಕೊಳ್ಳುವದಕ್ಕಿಂತ ಸ್ವತಂತ್ರರಾಗಿರುವದೇ ಒಳ್ಳೇಯದೆಂಬ ಅಭಿಪ್ರಾಯವು ಹುಟ್ಟುವದು. ಆದುದರಿಂದಲೇ ಸರಕಾರದ ನೌಕರಿಯಲ್ಲಿ ಇಂಗ್ಲೀಷರು ತೀರಾ ಕಡಿಮೆ. ವ್ಯಾಪಾರದಲ್ಲಿ ಅವರು ಅದ್ವಿತೀಯರು. ಅವರು ಕೈಕೊಂಡ ಯಾವ ಕೆಲಸವಾದರೂ ಸರಿಯಾಗಿ ನಡೆಯುತ್ತದೆ. ಇದನ್ನು ಸಂಪಾದಿಸಲು ಹಿಂದೆ ವಿದ್ಯೆಯೂ ಇದೆ.

ಇಂಗ್ಲೆಂಡಿನಲ್ಲು ವಿದ್ಯೆಯು ಮಕ್ಕಳ ಮನೋಗತಿಯನ್ನು ಅನುಸರಿಸಿ ಕೊಡಲ್ಪಡುವದು ರಾಷ್ಟ್ರೋನ್ನತಿಯನ್ನೇ ಮೂಲಾಧಾರವಾಗಿರಿಸಿಕೊಂಡು ಬೋಧಿಸುವ ಆ ಉಪಾಧ್ಯಾಯರು ಮಕ್ಕಳ ಮನೋಭಾವವನ್ನು ಅರಿತು ಅವರಿಗೆ ತಕ್ಕಂತ ವಿದ್ಯೆಯನ್ನು ಕೊಡಲು ಅನುಕೂಲಪಡಿಸುವರು. ನಮ್ಮಲ್ಲಿ ಅವರೇ ಕಲಿಯುವವರಿಗೂ ಕಲಿಸತಕ್ಕವರಿಗೂ ಸಂಸ್ಕಾರ ಪರಿಚಯವೇ ಇಲ್ಲ. ಉಪಾಧ್ಯಾಯರಾದರೂ ಕಡಿಮೆ ಸಂಬಳವೆಂದು ಗೊಣಗುಟ್ಟುವದರಲ್ಲೇ ಇದರು. ಕಲಿಯುವವರಾದರೋ ಮಂಗಳೂರಿಗೂ, ಮದರಾಸಿಗೂ ಹೋಗುವವರಾದರು. ಊರಿನ ಶಾಲೆಯನ್ನು ವಿಚಾರಿಸುವವರೇ ಇಲ್ಲವಾದರು. ಪರೀಕ್ಷೆಯಲ್ಲಿ ಫಲಿತಾಂಶವಾದರೋ ಹೇಳಲೇಬೇಡ!

ಹೀಗಾದಮೇಲೆ ಮುಂದಿನ ಜೀವನೋಪಾಯವನ್ನು ಕಲಿಸಿಕೊಡದಿರುವ ಈ ವಿದ್ಯೆಯಿಂದ ಪ್ರಯೋಜನವಾದರೋ ಏನು? ಪ್ರತಿನಿಂದಕನ್ನೂ ಸರಕಾರದವರನ್ನು ದೂರುವದು. ಪೇಟೆಗಳ ಕೆಲಸ ಇದರ ಬದಲು ಸರಕಾರದವರ ಆಶ್ರಯವನ್ನು (Grant) ಪಡೆದು "ಟೆಕ್ನಿಕಲ್" ಶಾಲೆಗಳನ್ನೇ ಸ್ಥಾಪಿಸಿ ರಾಷ್ಟ್ರೋನ್ನತಿಯ ಕಡೆಯ ಒಂದು ಸೋಪಾನವನ್ನಿರಿಸಿದರೆ ಆಗಬಾರದೆಂದಿದೆಯೆ?

ಕೊಡಗಿನ ಗ್ರಾಮಗಳ ಸ್ಥಿತಿ.

ಪ್ರತಿ ಒಂದು ಜನಾಂಗದ ಅಭಿವೃದ್ಧಿಯು ಗ್ರಾಮದಿಂದಲೇ ಪ್ರಾರಂಭಿಸಬೇಕೆಂದೂ, ಗ್ರಾಮಗಳ ಜನರೆಲ್ಲರೂ ಕೂಡಿ, ಜನಾಂಗವಾಗುವುದೆಂದೂ. ಆದ್ದರಿಂದಲೇ ರಾಷ್ಟ್ರೋನ್ನತಿಯ ಕೆಲಸವು ಆಗಬೇಕಾದರೆ ಅಂಥಾದ್ದು ಗ್ರಾಮಗಳಿಂದಲೇ ಶುರು ಆಗಬೇಕೆಂದೂ ಅನೇಕ ವಿದ್ವಾಂಸರು ಹೇಳಿರುತ್ತಾರೆ.

ಹಾಗಾದರೆ ಕೊಡಗು ದೇಶದಲ್ಲಿರುವ ಗ್ರಾಮಗಳ ಸ್ಥಿತಿ ಹೇಗಿದೆ ಎಂಬುದನ್ನು ವಿಚಾರಿಸೋಣ. ಕೊಡಗಿನಲ್ಲಿ ಒಟ್ಟಾರೆ ಸುಮಾರು 388 ಗ್ರಾಮಗಳಿವೆ. ಎಲ್ಲ ಗ್ರಾಮಗಳಲ್ಲಿಯೂ ಪಟೇಲರೇ ಮುಖ್ಯಸ್ಥರು. ಆದರೆ ಗ್ರಾಮಾಡಳಿತಗಳನ್ನು ನಡಿಸಲಿಕ್ಕೆ ತಕ್ಕ ಮುಖ್ಯಸ್ಥರು ಇರುವುದು ಎಲ್ಲರಿಗೂ ತಿಳಿಯದ ವಿಷಯವಲ್ಲ. ಹಿಂದೂದೇಶದಲ್ಲೇ, ಅದಯಾ? ಕೊಡಗುದೇಶದಲ್ಲಿಯೂ ಈ ಮೊದಲು ಇದ್ದ ಪಂಚಾಯಿತಿ ಪದ್ಧತಿಯು ಪ್ರಜಾಪ್ರತಿನಿಧಿತ್ವವೆಂಬ ಸ್ವರಾಜ್ಯವನ್ನು ಸೂಚಿಸುತ್ತಿತ್ತಲ್ಲದೆ ಅಂಥಾ ಪಂಚಾಯಿತಿಯ ಮೂಲಕ ನಡಿಸುತ್ತಿದ್ದ ಕೆಲಸಗಳೂ, ನಿಯಮಗಳೂ, ಈಗ ಅಮೇರಿಕ ಮತ್ತು ಫ್ರಾನ್ಸ್ ದೇಶಗಳಲ್ಲಿ ನಡಿಸುತ್ತಿರುವ ಪ್ರಜಾ ಪ್ರತಿನಿಧಿತ್ವದ ಸಭೆಗಳಿಗಾಗಲೀ, ಇಲ್ಲವೇ, ಬ್ರಿಟಿಷ್ ಪಾರ್ಲಿಮೆಂಟಿಗಾಗಲೀ ಕಡಿಮೆ ಎಂದೆನಿಸಿಕೊಳ್ಳುವುದಿಲ್ಲ.

ಇಂಥಾ ಪ್ರಜಾ ಪ್ರತಿನಿಧಿತ್ವವನ್ನು ಕಲಿಸುತ್ತಿದ್ದ ಪಂಚಾಯಿತಿ ಪದ್ಧತಿಯನ್ನು ಬಿಟ್ಟದ್ದರಿಂದ, ನಮ್ಮನ್ನು ನಾವೇ ಕೊಲೆಪಾತಕ ಮಾಡಿಕೊಂಡಹಾಗಾಗಿದ್ದೇವೆ. ಆದರೆ ನಾವು ಕಳಕೊಂಡ ಕೀರ್ತಿಯನ್ನೂ, ಸಂಪತ್ತನ್ನೂ ಪುನಃ ಸ್ಥಾಪಿಸಬೇಕಾದರೆ ಈಗ ಊರಿಂದೂರಿಗೆ ಸ್ಥಾಪಿಸಲ್ಪಟ್ಟಿರುವ ಪರಸ್ಪರ ಸಹಾಯದ ಸಂಘಗಳು ಓಂನಾಮಗಳಾಗಿವೆ.

ಗ್ರಾಮಾಭಿವೃದ್ಧಿಯ ಕೆಲಸಗಳು ಗ್ರಾಮನಿವಾಸಿಗಳಿಂದಲೇ ಮಾಡಲ್ಪಡಬೇಕಾದರೂ ನಮ್ಮ ಈ ಹೀನಸ್ಥಿತಿಗೆ ಸರಕಾರದವರು ಸಹ ಜವಾಬುದಾರರಾಗಿರುವರು. ಬಡ ಗ್ರಾಮ ನಿವಾಸಿಗಳ ಕ್ಷೇಮಲಾಭಗಳನ್ನು, ಕಷ್ಟಸುಖಗಳನ್ನು, ವಿಚಾರಿಸುವುದನ್ನು, ಜವಾಬುದಾರಿಯನ್ನು ಹೊಂದಿದ ಹುದ್ದೇದಾರರು ಸಂಪೂರ್ಣವಾಗಿ ಬಿಟ್ಟುಬಿಟ್ಟ ಹಾಗೆ ಕಾಣುತ್ತೆ. ಎಲ್ಲಿ ಪಟ್ಟಣಗಳಿವೆಯೋ, ಎಲ್ಲಿ ಸುಖಸ್ಥಳಗಳು ಇವೆಯೋ, ಎಲ್ಲ ಮೋಟಾರುಬಂಡಿ ಹೋಗುವ ರಸ್ತೆಗಳಿವೆಯೋ, ಎಲ್ಲಿ ವಿಶ್ರಾಂತಿಮನೆಯು ವನವಿಹಾರಗಳು ಇವೆಯೋ, ಅಂಥಾ ಜಾಗಗಳಿಗೆ ಮಾತ್ರ ಆಗಿಂದಾಗ್ಯೆ ಚಿತ್ತೈಸಿ ಅಂಥಾ ಸ್ಥಳಗಳನ್ನು ಅಭಿವೃದ್ಧಿ ಪಡಿಸುವುದರಲ್ಲಿ ಜಾಗರೂಕರಾಗಿರುತ್ತಾರೆ. ಸಕಲ ಜನಾಂಗಕ್ಕೆ ಆಧಾರವಾದ ಗ್ರಾಮನಿವಾಸಿಗಳ ಸುಖವನ್ನು ಲೆಕ್ಕಿಸದೆ, ಗ್ರಾಮಗಳಿಗೆ ಹೋಗುವ ದಾರಿ ಸೇತುವೆಗಳನ್ನು ದುರುಸ್ತು ಪಡಿಸದೆಯೂ, ಈ ಮೊದಲು ಜವಾಬುದಾರಿಯ ಹುದ್ದೆಯನ್ನ (Gazetted officers) ವಹಿಸಿಕೊಂಡಿದ್ದ ಉದ್ಯೋಗಸ್ಥರು ಮಾಡುತ್ತಿದ್ದ ರೀತಿ ಗ್ರಾಮಗಳನ್ನು, ಅಲ್ಲಿನ ಜನರನ್ನು ರೂಬರೂಬು ಪರಾಮರ್ಶಿಸಿ, ಅವರ ಕಷ್ಟಸುಖಗಳನ್ನು ವಿಚಾರಿಸದೆ ಸ್ವಸುಖದಲ್ಲಿ ನಿರತರಾಗಿರುವುದು ಅತ್ಯಂತ ಸಂಕಟವನ್ನುಂಟುಮಾಡಿವೆ.

ಕೆಲವು ವರ್ಷಗಳ ಹಿಂದೆ ಈ ಉದ್ಯೋಗಸ್ಥರುಗಳು ಗ್ರಾಮಕ್ಕೂ ನಾಡಿನ ಮಧ್ಯಭಾಗಕ್ಕೂ ಬಂದು ರೈತರನ್ನು ಬೇಟಿ ಮಾಡುತ್ತಿದ್ದಾಗ ರಸ್ತೆಗಳೂ, ಮತ್ತು ಬೇರೆ ಹಾದಿಗಳೂ, ಚೆನ್ನಾಗಿತ್ತು. ಈಗಲಾದರೋ ಎಲ್ಲಾ ಕಾಡುತುಂಬಿವೆ.

ಈ ಕಾರಣಗಳಿಂದ ಈ ದೇಶದ ಆಡಳಿತವು ಹೆಚ್ಚಾಗಿ ಉದ್ಯೋಗಸ್ಥರ ಕ್ಷೇಮಕ್ಕಾಗಿದೆಯಲ್ಲದೆ ಕಂದಾಯಕೊಡುವ ರೈತರ ಕ್ಷೇಮಕ್ಕೆ ಅಲ್ಲವೆಂಬುದು ಪರಿಷ್ಕಾರವಾಗಿ ಕಂಡುಬರುತ್ತೆ.

ಫಾರೆಸ್ಟು ಅಧಿಕಾರಿಗಳಿಂದ ರೈತರಿಗೆ ಆಗುವ ಕಷ್ಟಗಳನ್ನು ವರ್ಣಿಸಲಳವಲ್ಲ. ನಂಜರಾಜ ಪಟ್ಟಣ ತಾಲ್ಲೋಕಿನಲ್ಲಿರುವ ಗ್ರಾಮಸ್ಥರ ಸ್ಥಿತಿಯೂ, ಅವರು ಫಾರೆಸ್ಟು ಅಧಿಕಾರಿಗಳಿಂದ ಪಡುವ ಕಷ್ಟವನ್ನು ನೋಡಿದರೆ ಎಂಥ ಕಲ್ಲುಹೃದಯದವನಿಗಾದರೂ ಕಣ್ಣೀರು ಬಾರದೆ ಇರದು. ಕಾರಣ ಈ ತಾಲ್ಲೋಕಿನ ಊರೆಲ್ಲಾ ಕಾಡಾಗಿ, ಜನರೆಲ್ಲಾ ಲಯವಾಗಿ, ತಾಲ್ಲೋಕೇ ದೊಡ್ಡಕಾಡಾಗುವ ಸಂಭವವು ಕಾಣುತ್ತೆ. ಈ ಗತಿಯು ದ್ವೀಪದಂತಾಗಿ ಇರುವ ಪಾಡಿನಾಲ್ಕುನಾಡು ತಾಲ್ಲೋಕಿಗೂ ತಗ್ಗಿಟ್ಟು ನಾಡು ತಾಲ್ಲೋಕಿನ ಫಾರೆಸ್ಟುಗಳಿಗೆ ಹುಟ್ಟಿದ ಕೆಲವು ನಾಡುಗಳಿಗೂ ಬಂದೇ ಬರುತ್ತೆ.

ಮೇಲ್ಕಂಡ ಕಷ್ಟಗಳನ್ನು ಗಣನೆಗೆ ತಂದುಕೊಂಡು ಇನ್ನಾದರೂ ನಮ್ಮ ಸರಕಾರದವರು ಇವುಗಳನ್ನು ಹೋಗಲಾಡಿಸುವ ಬಗ್ಗೆ ಉದ್ಯೋಗಸ್ಥರಿಂದಲೂ, ಉದ್ಯೋಗಸ್ಥರಲ್ಲದವರಿಂದಲೂ ಕೂಡಿದ ಒಂದು ಕಮಿಟಿಯನ್ನು ಏರ್ಪಡಿಸಿ ತಕ್ಕ ಕಾರಣಗಳನ್ನು ಕಂಡು ಹಿಡಿದು ರೈತರಿಗೆ ಸರಕಾರದವರಿಂದುಂಟಾಗುವ ಕಷ್ಟಗಳನ್ನು ತೆಗೆದುಹಾಕಿ ಸರಕಾರದವರ ಪ್ರಜೆಯ ಹಿತವೆಂಬುದನ್ನು ಬೋಧಿಸಬೇಕೆಂದು ಕೋರುತ್ತೇವೆ.

ಕೊಡಗು ಜಮಿಾನ್ದಾರರ ಸಂಘ.

1921 ನೇ ಇಸವಿ ಜೂನ್ ತಾರೀಖು 30 ರಲ್ಲು ರಾಯಬಹದ್ದೂರ್ ಕೆ. ಕುಟ್ಟಯ್ಯನವರ ಅಧ್ಯಕ್ಷತೆಯಲ್ಲಿ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಮಹಡಿಯಲ್ಲಿ ನಡದ ಜಮಿಾನ್ದಾರ ಸಂಘದ ಮಿಾಟಿಂಗಿನ ತೀರ್ಮಾನಗಳು—

1. ಜನರಲ್ ಮಿಾಟಿಂಗಿಗೆ ನಾಡು ಮತ್ತು ತಾಲ್ಲೋಕುಗಳಿಂದ ಪ್ರತಿನಿಧಿಗಳು ಬಂದು ಚರ್ಚಿಸಲು ಆಯಾಯ ತಾಲ್ಲೋಕಿನ ಮೆಂಬರ್‌ಗಳು ಚುನಾಯಿಸುವದನ್ನು ಮುಂದಿನ ಜನರಲ್ ಮಿಾಟಿಂಗ್‌ನಲ್ಲಿ ಇತ್ಯರ್ಥಪಡಿಸಬೇಕಾಗಿ ತೀರ್ಮಾನವಾಯಿತೇ.

2. ಮುಂದಿನ ವರ್ಷದ ಜನರಲ್ ಮಿಾಟಿಂಗ್ ಯಾವ ಸ್ಥಳದಲ್ಲಿ ನಡಿಯಬೇಕೆಂಬ ಸಂಗ್ತಿ ಚರ್ಚಿಸುವಾಗ ಮ|| ಮುಕ್ಕಾಟ್ಟೈಯನವರು ನಂಜರಾಜಪಟ್ಣ ತಾಲ್ಲೋಕಿನಲ್ಲಿ ಸಾಧ್ಯವೋ ಎಂಬ ಸಂಗತಿಯನ್ನು ಅಕ್ಟೋಬರ್ ಮಾಹೆಯಲ್ಲಿ ನಿಶ್ಚಯಿಸಿ ಹೇಳುವದಾಗಿ ಕೇಳಿಕೊಂಡರು.

3. ಜಮಿಾನ್‌ದಾರ ಸಂಘದ ನಡವಳಿಕೆಗಳನ್ನು ಒಂದು ವರುಷದವರೆಗೆ ಅಂದರೆ 22 ನೇ ಇಸವಿ ಮೇ ಆಖೈರುವರಿಗೆ ಕೊಡಗು ಪತ್ರಿಕೆಯಲ್ಲಿ ಪ್ರಕಟಪಡಿಸುವ ಬಗ್ಗೆ ಒಂದುನೂರು ರೂಪಾಯಿ ಕೊಡುವುದಕ್ಕ ತೀರ್ಮಾನವಾಯಿತು.

4. ಡಿಸ್ಟ್ರಿಕ್ಟ್ ಬೋರ್ಡಿನವರು ರೂಪಾಯಿ ಒಂದರ ಅರ್ಧಆಣೆ ಹೆಚ್ಚಿಗೆ ಕರಿಗೆ ಹಾಕುವದನ್ನು ಮನ್ನ ಪಡಿಸಬೇಕಾಗಿಯೂ ಈಗ ಇರುವ ಸ್ಕೂಲ್‌ಗಳ ಸಂಖ್ಯೆಯನ್ನು ಕಮ್ಮಿಮಾಡಬಾರದಾಗಿಯೂ ಮತ್ತು ಸ್ಕೂಲ್ ಮೇಸ್ಟರುಗಳ ಸಂಬಳ ಹೆಚ್ಚಿಸಲಿಕ್ಕೆ ಗವರ್ನಮೆಂಟ್‌ನಿಂದ ಗ್ರ್ಯಾಂಟ್ ಕೊಡಬೇಕೆಂದು ಚೀಫ್ ಕಮಿಾಷನರ್ ಸಾಹೇಬರವರನ್ನು ಕೇಳಬೇಕೆಂಬದಾಗಿಯೂ ಸಹ ಕೊಡಗು ಜಮಿಾನ್ದಾರರ ಸಂಘದವರ ಅಭಿಪ್ರಾಯಪಡುತ್ತಾರೆ.

5. ವೈಸ್ ಪ್ರಸಿಡೆಂಟರಾದ ಮ|| ರಾಯಬಹದ್ದೂರ್ ಕೋದಂಡ ಅಪ್ಪಯ್ಯನವರು ಸಂಘದ ಲೆಕ್ಕಪತ್ರಗಳನ್ನು ತನಿಖೆಮಾಡಲು ಕೇಳಿಕೊಳ್ಳಬೇಕೆಂದು ತೀರ್ಮಾನವಾಯ್ತು.

6. ಸಂಘದ ಆರ್ಗನೈಜಿಂಗ್ ಕೆಲಸವನ್ನು ನಡಿಸುವ ಬಗ್ಗೆ "ಕೊಡಗು" ಲಿಮಿಟೆಡ್ ಸೆಕ್ರೆಟರಿ ಕೋಟೆರ ಚಿನ್ನಪ್ಪನವರು ಮತ್ತು ಬಿಟ್ಟಿಯಂಡ್ರ ಮುತ್ತಣ್ಣನವರನ್ನು ಸಹ ನೇಮಕ ಮಾಡಿರುತ್ತೆ. ತಾಲ್ಲೋಕು ಸೆಕ್ರೆಟರಿಯವರು ಮತ್ತು ಚಂದಾ ವಸೂಲಾತಿಗೆ ನೇಮಕರಾಗಿರುವವರು ಸಹ ಅವರಲ್ಲಿರುವ ಲೆಕ್ಕಪತ್ರಗಳು ರಿಜಸ್ಟರ್ ಪುಸ್ತಕ ಮತ್ತು ರಶೀತಿ ಬುಕ್ಕುಗಳನ್ನು ಸಹ ಮೇಲ್ಕಂಡವರು ಬಂದು ಕೇಳಿದಾಗ ಅವರಿಗೆ ಕೊಡಬೇಕೆಂದು ಬರಸಬೇಕಾಗಿ ತೀರ್ಮಾನವಾಯಿತು.

7. ಸಂಘದ ಲೆಕ್ಕವನ್ನು ತನಿಖೆಮಾಡಲು ಆಡಿಟರನ್ನು ನೇಮಕಮಾಡುವ ವಿಚಾರ ಮುಂದಿನ ಮಿಾಟಿಂಗಿಗೆ ನಿಲ್ಲಿಸಿರುತ್ತೆ.

8. ಕೊಡಗಿಗೆ ಲೆಜಸ್ಲೇಟೀವ್ ಸಭೆಯನ್ನು ಆರುತಿಂಗಳ ಅವಧಿಯಲ್ಲಿ ಕೊಡುವದಾಗಿ ಹಜರತ್ ಚೀಫ್ ಕಮಿಾಷನರ್ ಸಾಹೇಬರವರು ಹೇಳಿದ ವಾಯಿದೆಯು ಗತಿಸಿದಾಗ್ಯೂ ಯಾವ ಸಂಗತಿಯು ದೇಶೀಯರ ಚರ್ಚೆಗೆ ಪ್ರಕಟಿಸದ ಇರುವ ಸಂಗತಿ ವಿಷಾದಕರವಾಗಿರುತ್ತೆ.

ಕೆ. ಕುಟ್ಟಯ್ಯ ಆರ್. ಬಿ
ಪ್ರಸಿಡೆಂಟ್.

ಸಾಧುವಚನ ಹಿತೋಪದೇಶ.

ಪ್ರಥಮಾಂಕ ಸುಬೋಧಾಲಯದೊಳಗೆ ದುರ್ಮತಿ ಪ್ರವೇಶ.

ಸುಮತಿಯು "ಕೊಡಗು" ಪತ್ರಿಕೆಯನ್ನು ಓದುತ್ತಾ ಕುಳಿತಿರುವನು.

ದುರ್ಮತಿ ಸುಮತಿಯನ್ನು ನೋಡಿ, ಸುಮತಿ, ಏನನ್ನು ಓದುತ್ತಿರುವಿ.

ಸುಮತಿ:—ದುರ್ಮತಿ ಮಹಾಶಯ, ಅದು ನಿಮಗೆ ತಿಳಿಯದೆ. ನಮ್ಮ ದೇಶಾಭಿವೃದ್ಧಿಗೋಸ್ಕರ ಒಬ್ಬ ಜ್ಞಾನಶೀಲನಾದ ಬಾಲಕನು ಈಗತಾನೇ ಒಂದು ತಿಂಗಳ ಹಿಂದೆ ಜನಿಸಿ ನಮ್ಮೆಲ್ಲರಿಗೂ ನಮ್ಮ ದೇಶದಲ್ಲಿನ ವರ್ತಮಾನಗಳನ್ನು ಪ್ರತಿವಾರವು ತಪ್ಪದೆ ತಿಳಿಸುತ್ತಿರುವನು.

ದುರ್ಮತಿ:— ಎಲ್ಲಿ, ನೋಡೋಣ. ಏನೇನು ವಿಶೇಷಗಳುಂಟು ಎಂಬುದನ್ನು ಕೇಳುತ್ತೇನೆ. ನೀನು ಪತ್ರಿಕೆಯನ್ನು ಓದು.

ಸುಮತಿಯು:—ಪತ್ರಿಕೆಯನ್ನೋದುತ್ತೇನೆ. ಪತ್ರಿಕೆಯ ಬಹುಭಾಗವು ಓದಿ ಮುಗಿಯಿತು ಕೊನೆಗೆ ಬ್ರಾಹ್ಮಣರ ಪೈಕಿ ಕೆಲವರು ನೇಗಿಲು ಹಿಡಿದು ಗದ್ದೆ ಹೂಡುತ್ತಾರೆಂದು ಬರೆದಿದ್ದ ಸಂಗತಿಯನ್ನೋದಿದನು.

ಇದನ್ನು ಕೇಳಿ ದುರ್ಮತಿಯು ಆ. ಹಹ; ಬಹಳ ಸಂತೋಷವಾಯ್ತು ಎಂದು ಕುಣಿದಾಡ ತೊಡಗಿದನು.

ಸುಮತಿ—ದುರ್ಮತಿ ಮಹಾಶಯ ತಾವೇಕೆ ಹೀಗೆ ಕುಣಿಯುತ್ತೀರಿ?

ದುರ್ಮತಿ—ಸುಮತಿ, ನಿನಗೆ ಅದು ಗೊತ್ತಾಗಲಿಲ್ಲವೆ? ನಾನು ಯಾವಾಗ ವರ್ಣಾಶ್ರಮ ಧರ್ಮಗಳು ಲೋಪವಾಗುತ್ತದೆಯೋ ಎಂದು ಇದಿರು ನೋಡುತ್ತಿದ್ದೆನು. ಇಂದು ನನ್ನ ಮನಸ್ಸಾಭಿಷ್ಟವು ಸಿದ್ಧಿಸಿತು ನನಗೆ ಸೂರುಬಟ್ಟೆ ಭೂಮಿ ಇದೆ ಅದನ್ನು ಹೂಡಲಿಕ್ಕೆ ಜನಗಳನ್ನು ಇನ್ನು ಹುಡುಕಲೇ ಬೇಡ. ಪ್ರಪಂಚ ಈ ವರುಷ ನನಗೆ ಅಳಿಗೆಕೊಡುವ ಬಾಬ್ತು ಇಪ್ಪತ್ತು ಬಟ್ಟೆ ಭತ್ತ ಬಾಕಿಯಾಗಿಸುವುದು. ನೀನೇನನ್ನುವೆ, ಇದು ಬಹಳ ಉತ್ತಮವಲ್ಲವೋ?

ಸುಮತಿ—ಛೆ ಛೆ ಹಾಗೆ ಮಾಡಬಾರದು. ನೋಡು ಈ ಶ್ಲೋಕದಲ್ಲಿ ಏನು ಹೇಳಿದೆ.

ಶ್ಲೋ॥ ಅನುಚಿತ ಕರ್ಮಾರಂಭಃ ಸಂಘವಿರೋಧೋ ಬಲೀಯಸೀ ॥

ಸ್ಪರ್ಧಃ । ಪ್ರಮದಾಜನ ವಿಶ್ವಾಸೋನಾಶದ್ವಾರಾಣಿ ಚತ್ವಾರಿ ॥

ಹೀಗಿರುವಾಗ ನಮಗೆ ಹೂಡುವದು ಅನುಚಿತ ಕರ್ಮವಾದ್ದರಿಂದ ದುರ್ಮತಿ, ಮಹಾಶಯ ತಾವು ಆ ಕೃತ್ಯಕ್ಕೆ ಪ್ರವೇಶಮಾಡಬೇಡಿರಿ. ಇದರಿಂದ ನಿಮಗೆ ನಿಸ್ತಾರವಿಲ್ಲ. ಯಾವ ಕೆಲಸವನ್ನು ಮಾಡಬೇಕಾದರೂ ಆತುರ ಪಡಬೇಡಿರಿ ॥ ಆತುರೇವ್ಯಸನಂ ಪ್ರಾಪ್ತಿ ॥ ಎಂಬುದನ್ನು ಯೋಚಿಸಿರಿ.

ದುರ್ಮತಿ—ಹೌದಯ್ಯ, ಹೌದು, ನೀವು ಹೇಳುವದೆಲ್ಲಾ ನಿಮಗೆ ಯಥಾರ್ಥವಾದರೂ ನಮಗೆ ಹಿತವಲ್ಲ. ಆ ದೊಡ್ಡಮನುಷ್ಯರು ಏನು, ಅಷ್ಟು ಆಲೋಚಿಸದೆ ಈ ಕೆಲಸಕ್ಕೆ ಕೈ ಹಾಕಿದರೆ.

ಸುಮತಿ—ದುರ್ಮತಿ ಮಹಾಶಯ ತಾವು ಅಷ್ಟಕ್ಕೆ ಕೋಪಿಸಬೇಡಿರಿ ನೋಡಿ ಈ ಕೆಳಗಿನ ಶ್ಲೋಕದಲ್ಲಿ ಏನು ಹೇಳಿರುತ್ತೆ.

ಶ್ಲೋ॥ ಅಧಿಕಜನ ಸಂಭಾಷಣ ಶೈಲಿಸಿಕ ಜನಾನಂ ಕಲಹಂಪ್ರಯಃ ॥

॥ ಲಂಬಾಕಂಚಾವಿಂಗನತೋ ಅಕೂಟಕಂಚಾಪ್ಯಾದ ತಾಡನಂ ತ್ರಯಸಿಃ ॥

ದುರ್ಮತಿ—ಈ ಶಾಸ್ತ್ರವೆಲ್ಲಾ ಬಳಿಗೊಡಲ್ಲ ಪೈಥಿಕರಿಗಿರಲಿ. ನಾನು ಬಂದು ಬಹಳ ಹೊತ್ತಾಯ್ತು. ಹೋಗುತ್ತೇನೆ ಹೋಗುವೆನು.

ವಾಚಕ ಮಹಾಶಯರೆ! ಇಲ್ಲಿಗೆ ಪ್ರಥಮಾಂಕ ಸಂಪೂರ್ಣ. ಬರುವ ವಾರದಲ್ಲಿ ಸುಮತಿ ವಿವೇಕ ಸಂವಾದ ಎರಡನೇ ಅಂಕವು ಬರೆಯಲ್ಪಡುತ್ತೆ.

ಸ. ಕೇ. ಸ.

[ಮೇಲಿನ ಶ್ಲೋಕಗಳನ್ನು ಯಾವ ಗ್ರಂಥಗಳಿಂದ ತೆಗೆದದ್ದು ಎಂಬದು ಸೂಚಿಸಿದ್ದರೆ ಒಳ್ಳೆಯದಾಗಿತ್ತು.]

ಎಡಿಟರ್.

ತಮಿಳು ದೇಶದ ಬ್ರಾಹ್ಮಣೇತರರ ಕಾನ್‌ಫರೆನ್ಸಿನಲ್ಲಿ ಈಗ ಮದ್ರಾಸ್ ಮಂತ್ರಿಯಾಗಿ ನೇಮಿಸಲ್ಪಟ್ಟಿರುವ ಪಿ. ಪಿ. ಪೆಟ್ರೋ ಎಂಬವರ ಭಾಷಣದಿಂದ ಆರಿಸಿದ್ದು.

ಈಗಿನ ಕಾಲಸ್ಥಿತಿಯಲ್ಲಿ ಒಳ್ಳೇನಡತೆಯೂ ಶಕ್ತಿಯೂ ದೇಶಭಕ್ತಿ ಮತ್ತು ತ್ಯಾಗಬುದ್ಧಿಯೂ (Sacrifiec) ಇರುವ ಜನರು ಅಡ್ಡಿ ಬಂದರೆ ಬೆದರದೆಯೂ, ಕೆಲಸ ಕಷ್ಟವಾದರೂ ಹಿಂಜರಿಯದೆಯೂ ಇರುವ ಜನರು ಸ್ವರಾಜ್ಯದ ಬಾವುಟವನ್ನು ಮುಂದೆ ಸಾಗಿಸಲು ಹೊರಡಬೇಕು. ಇಂಡಿಯಾದೇಶಕ್ಕೆ ಸ್ವರಾಜ್ಯವು ಸ್ವಲ್ಪದರಲ್ಲಿ ಬಂದಿದೆ. ಆದ್ದರಿಂದ ತಾವು ಕೆಲಸಮಾಡಿ ಸ್ವರಾಜ್ಯಕ್ಕೆ ಅರ್ಹತೆಯನ್ನು ತೋರಿಸಬೇಕು.

ಬ್ರಾಹ್ಮಣೇತರರು ಸ್ವರಾಜ್ಯವನ್ನು ಕ್ರಮೇಣ ಪಡೆಯಬೇಕೆಂಬ ಉದ್ದೇಶದವರೇ ಆಗಿದ್ದಾರೆ. ಜನರಲ್ಲಿ ಗುಲಾಮಗಿರಿಯ ಬುದ್ಧಿಯನ್ನು ಹೋಗಲಾಡಿಸಿ ಕಣ್ಣುಮುಚ್ಚಿಕೊಂಡು ಕಾರಣವನ್ನು ಯೋಚಿಸದೆ ಉದ್ಯೋಗಸ್ಥರ (ಸರಕಾರದವರೇ ಆಗಲೀ ಮತದವರೇ ಆಗಲಿ) ಹುಕ್ಕುಂಗಳಂತೆ ನಡೆದುಕೊಳ್ಳುವ ಪದ್ಧತಿಯನ್ನು ಹೋಗಲಾಡಿಸುವ ಪ್ರಯತ್ನದಲ್ಲಿದೆ. ಜಾತಿ ಮತ್ತು ಮತದ ಹೆಸರಿನಲ್ಲಿ ನಡೆಯುವ ಜುಲುಮನ್ನು ಬಿಟ್ಟುಹಾಕಿ ಸ್ವತಂತ್ರತೆಯನ್ನು ಪ್ರತಿಯೊಬ್ಬರಿಗೂ ಕೊಡುವುದರಲ್ಲಿದೆ. ಪ್ರತಿಯೊಬ್ಬ ಹೆಂಗಸೂ, ಗಂಡಸೂ ಸಹ ತನ್ನ ಮರ್ಯಾದೆಯನ್ನು ಉಳಿಸುವ ಪಾಲನ್ನು ಕೋರಿಸಿ ಕೊಡುವದೂ ಈ ಚಳವಳಿ ಕೆಲಸವಾಗಿದೆ. ಸಾಮಾಜಿಕ ಮತ್ತು ರಾಜಕೀಯ ಸ್ಥಿತಿಯ ಡೆಮೊಕ್ರೆಟಿಕ್ ಅಂದರೆ ಪ್ರಜಾಪ್ರಭುತ್ವಕ್ಕನುಸಾರವಾಗಿ ಸುಧಾರಿಸಲ್ಪಡಬೇಕು, ಜಾತಿ ತಾರತಮ್ಯವನ್ನು ಹೋಗಲಾಡಿಸಿ ಬುದ್ಧಿ ಶಕ್ತಿ ಹೆಚ್ಚಿದೆ ಎಂದು ಗರ್ವಪಡುವ ವರ್ಗದವರನ್ನು ತಗ್ಗಿಸುವ ಕೆಲಸವು ಕ್ರಮೇಣ ನಡೆಯಬೇಕು. ಹಿಂದುಳಿದ (ಪಂಚಮರು) ವರ್ಗದವರನ್ನು ಮೇಲಕ್ಕೆತ್ತುವದು, ಸರ್ವರೂ ವಿದ್ಯೆ ಕಲಿಯುವುದು, ಕಸುಬು ಕಲಿಸುವದು ಸರಕಾರದ ಖರ್ಚು ಕಡಿಮೆ ಮಾಡುವದು ಸಹ ಈ ಚಳವಳದ ಕಾರ್ಯ ಕ್ರಮಕ್ಕೆ ಕೂಡಿದೆ. ವ್ಯಾಪಾರ ಮಾಡುವವರಿಗೇ ಆಗಲೀ, ವ್ಯವಸಾಯ ಮಾಡುವವರಿಗೇ ಆಗಲೀ ತನ್ನ ಕಸಬಿನ್ನ ಸರಕಾರದ ಉದ್ಯೋಗದಲ್ಲಿರುವಂತೆ ಇರಕೂಡದು. ಜಾತಿ ಕೆಲಸಗಳಲ್ಲಿಯೂ ಯಾವ ಕಡೆಯಲ್ಲಿಯೂ ವ್ಯತ್ಯಾಸವಿಲ್ಲದಂತೆ ಮಾಡಬೇಕು. ಅಸಹಕಾರವನ್ನು ಹೋಗಲಾಡಿಸಲಿಕ್ಕೆ ಒಳ್ಳೆ ಉಪಾಯವೆಂದರೆ ಅಸಹಕಾರದ ಕಾರಣಗಳನ್ನು ಸರಕಾರದವರು ತಿಳಿಸುವದು. ಅಸಹಕಾರವು ಉದ್ಭವಿಸಿರುವದರಿಂದ ಅದರ

ಅಸಹಕಾರಕ್ಕೆ ಕಾರಣಗಳು ಬಹಳ ಬಲವಾಗಿ ಸೇರಿಕೊಂಡವಾಗಿವೆ. ನೂಲು ಮಾಡುವ ಯಂತ್ರವಿದರ ಸ್ವದೇಶಿ ವ್ರತದ ಗುರುತು ಅಸಹಕಾರದಲ್ಲಿ ಅಸಾಧ್ಯವಾದವುಗಳನ್ನು ಬಿಡಬೇಕು ಅದು ಜನರಲ್ಲಿ ಒಂದು ದೊಡ್ಡ ಜಾಗ್ರತೆಯನ್ನುಂಟುಮಾಡಿದೆ. ಮಹಾತ್ಮ ಗಾಂಧಿಯವರು ಅಸ್ಪೃಶ್ಯತೆಯನ್ನು ಮತ್ತು ಕುಜಾತ ಜನರ, ಹೋಗಲಾಡಿಸಬೇಕೆಂಬ ಮತ್ತದ ಅಭಿಪ್ರಾಯಗಳನ್ನು ಪ್ರಕಟಿಸುವವರು ಆತ್ತ ಶುದ್ಧಿಯ ತತ್ವಗಳು ಗ್ರಾಮಗ್ರಾಮಗಳಿಗೆ ಹಬ್ಬಿಯದೆ ಶಾಂತಿಯೇ ಅಸಹಕಾರದ ಮೂಲ ಮಂತ್ರವಾಗಿದೆ ನೂಲಿನ ಯಂತ್ರವನ್ನು ಹಳ್ಳಿಯಲ್ಲಿ ಪ್ರತಿಯೊಂದು ಮನೆಗೂ ಹಂಚಿದರೆ ಬಹಳ ಕಷ್ಟನಿವಾರಣೆಯಾದೀತು. ಚರ್ಕಾದಿಂದ ರಾಜಕೀಯ ಬಳವಳಿಯನ್ನು ಪ್ರತ್ಯೇಕಿಸಿ ಚರ್ಕಾವನ್ನು ಹರಡಿಸಿದರೆ ಸ್ವದೇಶೀ ಅಭಿಮಾನವು ಜನರಲ್ಲಿ ಬೆಳೆದೀತು. ನಮ್ಮ ದೇಶದಲ್ಲಿ ಈಗ ಆಗುವ ಬಟ್ಟೆ ಒಟ್ಟೆಯನ್ನೇ ಹಾಕಬೇಕು. ಯಾರು ಅದರಿಂದ ನಾಚಿಕೆ ಪಡಕೂಡದು. ಚರ್ಕಾದಲ್ಲಿ ಕೆಲಸಮಾಡುವದು ಚನ್ನಾಗಿ ಅಭ್ಯಾಸವಾದರೆ ಸೊಗಸಾದ ಬಟ್ಟೆ ತಯಾರಾಗುತ್ತೆ. ಅಸಹಕಾರದ ರೀತಿಗಳು ಹೋಗಲೆಂಬೇಕಾದರೆ ಜನರಲ್ಲಿ ಆತ್ಮ ಗೌರವ ಮತ್ತು ಆತ್ಮ ಶುದ್ಧಿ ತತ್ವವು ರಾಷ್ಟ್ರೀಯ ಕೆಲಸದಲ್ಲಿ ಹುಟ್ಟಬೇಕು. ಅಸಹಕಾರಕ್ಕೆ ಕಾರಣ (ಆರ್ಕ್ಕೊ ಅದಾಲ) ಪ್ರಟಿಸರು. ಹಿಂದೀಯರಿಗಿಂತ ಮೇಲೆಂಬ ಅಭಿಪ್ರಾಯವನ್ನು ಬ್ರಿಟಿಷರು ಬಿಟ್ಟು ಹಿಂದೀಯರನ್ನು ಸಮಾನ ಹಕ್ಕುಗಳಿಗೆ ಸೇರಿಸಿಕೊಳ್ಳಬೇಕು.

ಇನ್ನೊಂದು ಕಡೆಯಲ್ಲಿ ಶಿವಿಶಾಸರವರ ಕಾಗದವನ್ನು ಅವರ ಕೋರಿಕೆ ಮೇರೆ ಪ್ರಕಟಿಸಿರುತ್ತೇವೆ ಕಳೆದ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗಿನಲ್ಲಿ ಮೊದಲನೇ ಸಾರಿ ಪೋಲೀಸ್ ರಿಪೋರ್ಟರು ಹಾಜರಿದ್ದದ್ದರಿಂದ ವರ್ತಮಾನ ಬರೆದದ್ದಾಗಿದೆ ಪೋಲೀಸ್ ರಿಪೋರ್ಟರು ಮೀಟಿಂಗಿನಲ್ಲಿ ಹಾಜರಿದ್ದ ಬಗ್ಗೆ ಯಾರು ಆಕ್ಷೇಪಿಸಲು ಕಾರಣವಿಲ್ಲ ಹಾಗೂ ಅವರ ಕರ್ತವ್ಯದ ಕಾಗದದಿಂದ ಅವರು ನಮ್ಮ ಪತ್ರಿಕೆಯ ಕ್ಷೇಮಚಿಂತಕರೆಂದು ತಿಳಿಯಲು ಕುಂಬಾ ಸಂತೋಷ ಪಡುತ್ತೇವೆ.

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿ—ಇಲ್ಲಿಯ ಪ್ರೊಬೆಷನರಿ ಸಬ್ ಇನ್‌ಸ್ಪೆಕ್ಟರ್ ಮೆ॥ ಕೆ. ಬಿ ಸುಬ್ಬಯ್ಯನವರನ್ನು ವೀರರಾಜಪೇಟೆಗೆ ವರ್ಗಾಯಿಸಿರುತ್ತಾರೆ.

ಇಲ್ಲಿ ಮುನಿಸಿಪಲ್ ಶಾಲೆಯನ್ನಾದರೂ ಲೋವರ್ ಸೆಕೆಂಡರಿ ಶಾಲೆಯನ್ನಾಗಿ ಮಾಡಿದರೆ ಅನೇಕರಿಗೆ ಸಹಾಯವಾದೀತು.

ಉತ್ತರ ಕೊಡಗಿನಲ್ಲಿ ಪ್ಲೇಗು ಶಮನವಾದಂತೆ ಕಾಣುವದು. ಮಡಿಕೇರಿಯ ಸುತ್ತ ಮುತ್ತಲಿನಲ್ಲಿ ಯಾವ ವಿಶೇಷ ಖಾಯಿಲೆಯು ಕಂಡುಬಂದಿಲ್ಲ.

ಆಬ್ಕಾರಿ ಇಲಾಖೆಯಲ್ಲಿ ದರೋಗರಾಗಿದ್ದ ಮಿ॥ ಅಪ್ಪಾಜಿ ದೇವಯ್ಯನವರು ಈ ತಿಂಗಳ ಒಂದರಲ್ಲು ಪೆನ್‌ಷನ್ ಪಡೆಯಲು ಆದರು.

ಟ್ರೆಶರಿಯಲ್ಲಿ ಉದ್ಯೋಗಸ್ಥರಾಗಿರುವ ಮಿ॥ ಚೇಂದ್ರಿರ ಮಾಚಯ್ಯನವರ ಪತ್ನಿಯು ಕಳೆದ ತಾ॥ 16 ನೇ ರಾತ್ರಿ ಮಡಿಕೇರಿಯಲ್ಲಿ ದೈವಾಧೀನರಾದರು.

ಸೋಮವಾರಪೇಟೆಯಲ್ಲಿರುವ ಪಿ. ಜೆ. ಹೆಚ್ ಸ್ಕೂಲ್ ಎಂಬಲ್ಲಿ ಒಳ್ಳೆಯ ಔಷಧಿಗಳು ದೊರೆಯುತ್ತವೆ ಜನರ ವಿಶೇಷ ಖಾಯಿಲೆಗಳನ್ನು ಸಹ ವಾಸಿಮಾಡುತ್ತಾರಾಗಿ ತಿಳಿಯುತ್ತೇವೆ.

ಕೊಡಗಿನ ‘ಸ್ಕೂಲ್ ಸುಪರ್‌ವೈಸರ್’ ಪರೀಕ್ಷೆಯಲ್ಲಿ ಮಿ॥ ಕೆ ಪಿ ಸುಬ್ಬಾಯ್ಯ, ಮಿ॥ ಮೂಡೆರ ಬೆಳ್ಯಪ್ಪನವರು ಮತ್ತು ಮಿ॥ ಕೇಲಪಂಡ್ರ ಕಾರ್ಯಪ್ಪನವರು ತೇರ್ಗಡೆಹೊಂದಿರುತ್ತಾರೆ.

ಮಡಿಕೇರಿಯಿಂದ ವೀರರಾಜೇಂದ್ರಪೇಟೆಗೆ ಹೋಗುವ ದಾರಿಯಲ್ಲಿರುವ ಬೇತ್ರಿ ಕಡುವಿನ ಜೋಡುದೋಣಿ ಮುರಿದು ಮಾಡಲ್ಪಟ್ಟು ಈಗ ಪ್ರಯಾಣಸ್ಥರಿಗೂ ಮತ್ತು ಗಾಡಿಗಳು ತಿರುಗಲು ಅನುಕೂಲವಾಗಿರುತ್ತದೆ.

ಕೊಡಗು ಪತ್ರಿಕಾ ಆಫೀಸ್ ಕಟ್ಟಡಕ್ಕೆ ಕೊಡಗು ಮೋಟಾರ್ ಸರ್ವೀಸ್ ಆಫೀಸೂ, ಮತ್ತು ದಿವಂಗತ ಪದದ ರಾಜ ನಾಯುಡುರವರ ಮನೆಯಿಂದ ಕೊಡಗು ಪತ್ರಿಕಾ ಆಫೀಸ್ ವರ್ಗಾಯಿಸಲ್ಪಟ್ಟಿದೆ.

ಮಡಿಕೇರಿಯ ಶಾಲೆಗಳಲ್ಲಿ ಪ್ರತಿತರಗತಿಯಲ್ಲು 40 ಕ್ಕಿಂತ ಕಡಿಮೆ ವಿದ್ಯಾರ್ಥಿಯರ ಇಲ್ಲ. ಕೆಲವು ತರಗತಿ 2 ಮತ್ತು 3 ಭಾಗಗಳಾಗಿ ವಿಭಾಗಿಸಲ್ಪಟ್ಟಿದ್ದರೂ ಇನ್ನೂ ಸ್ಥಳವಿಲ್ಲವೆಂಬ ಕೂಗು.

ವೀರರಾಜಪ್ಪೇಟೆ ಸೆಕೆಂಡರಿ ಶಾಲೆ ಹೆಡ್ಮಾಸ್ತರು ಮಿ॥ ಕೆ ಎಲ. ಭಟ್ಟಯ್ಯನವರು ಕಾಸರಗೋಡಿಗೂ ಅಲ್ಲಿನ ಅಸಿಸ್ಟೆಂಟರಾದ ಮೆ॥ ಕೊಡಿಯಾಲ ಗೋಪಾಲರಾವ ಮರುಷದಾ ಸೆಕೆಂಡರಿ ಶಾಲೆ ಹೆಡ್ಮಾಸ್ತರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಮಡಿಕೇರಿಯಲ್ಲಿ ಸೌದೆ ಬೆಲೆ ಗಾಡಿಗೆ 6 ರೂಪಾಯಿಯಿಂದ 7-8-0 ರ ವರೆಗೆ ಇದೆ. ದುರ್ಭಿಕ್ಷತೆಯು ಜಾಸ್ತಿಯು ಈ ಕಾಲದಲ್ಲಿ ನಮ್ಮ ಸರ್ಕಾರದವರು ಡಿಪೋ ಇಡಲು ಒಡನೆ ಆಲೋಚಿಸಬಹುದಿದ್ದರೆ ಜನರನ್ನು ಉದ್ಧಾರಮಾಡಿದಂತಾದೀತು.

14 ನೆ ತಾರೀಖಿನಲ್ಲಿ ಉತ್ತರ ಕೊಡಗಿನ ನಿವಾಸಿಗಳು ಮೆ॥ ಅಪ್ಪಾರಂಡ ಮಂದಣ್ಣ ರಾಯಬಹದ್ದೂರ್ ಇವರ ಅಧ್ಯಕ್ಷತೆಯಲ್ಲಿ ಸಭೆನಡಿ ಮೇಲಿನ ಠರಾವುಗಳನ್ನು ಪಾಸ್ ಮಾಡಿದರು ಉತ್ತರ ಕೊಡಗಿನ ಎಲ್ಲಾ ಭಾಗಗಳಿಂದಲೂ ಮುಖ್ಯಮುಖ್ಯಸ್ಥರು ಸೇರಿದ್ದರು.

ನೂಲುವ ರಾಟೆಗಳು ಶನಿವಾರಸಂತೆಯಲ್ಲಿ ಕೆಲವು ಕಡೆಯಲ್ಲಿಯೂ, ಸಿದ್ದಾಪುರ, ಬೆಟ್ಟಗೇರಿ, ಮತ್ತು ತೊರೆನೂರು, ಕಡೆಯಲ್ಲಿಯೂ ಕೆಲಸಮಾಡುತ್ತವೆ. ಮಹಾತ್ಮ ಗಾಂಧಿಯವರ ಚರಕಕ್ಕೆ ಇದಕ್ಕೆ ಹೆಚ್ಚಿ ಸಭೆಯಕಾಣುವುದಿಲ್ಲ. ದೇಶದ ಮನೆಗಳಲ್ಲಿಯೂ ಇಂಥ ರಾಟೆಗಳನ್ನಿಡುವುದು ಆವಶ್ಯಕ.

ಕಣಿವೆ ಪತ್ತಿರ ಇರುವ ಸೀಗೆ ಹೊಸೂರು ಗ್ರಾಮದಲ್ಲಿ ಎಲ್ ಸಿ ಸಾಹೇಬರು ಖಾತಾಳೆನಾಲದ ಕೋಟೆ ಮಾಡಿದ್ದು ಸರಿ ಮತ್ತು ಸುತ್ತುಮುತ್ತಲಿನ ಕೃಷಿಕ ದನಕರುಗಳಿಗೆ ಅವರು ಒಕ್ಕಲು ತೊಂದರೆಕೊಡುವುದಾಗಿ ತಿಳಿಯುತ್ತೇವೆ. ಸಿಹುವಾದಪಕ್ಷ ಅಧಿಕಾರಿಗಳು ವಿಚಾರಿಸಿ ಇಂಥಾ ಆಕ್ಷೇಪ ತೀರುವಂತೆ ಉತ್ತರ ತೆಗೆದುಕೊಳ್ಳಬೇಕಾಗಿ ಅಪೇಕ್ಷಿಸುತ್ತೇವೆ.

‘ಊರೆಲ್ಲಾ ಸೂರೆ ಹೋದಮೇಲೆ ಕೋಟೆಬಾಗಿಲು ಹಾಕಿದರು’ ಎಂಬಂತೆ ಪಟ್ಟಣಗಳ, ಪತ್ರಕ್ಕೂ ಈಗಲೀಗ ಕ್ರಮ ಪರಿದೆ ಕಳೆದವರ್ಷ ಕಾಫಿ ಕಟ್ಟೆ ದುಃಖವನ್ನು ಪರಿಹಾರ ಮಾಡಿಕೊಂಡ ನಮ್ಮ ಪಾಟೇಲ್ ಸಹೋದರರು ಈಗ ಪಾಹಾಕಾರವನ್ನು ಮಾಡುತ್ತಾರೆ ಅದರ ಪ್ರಯೋಜನವೇನು? ಊರಲ್ಲಿ ತಾಪಿಯು ಭತ್ತ ಸ್ವಲ್ಪ ದಾಸ್ತಾನು ಇರಬಹುದು ಆದರೆ ಮುಂದಿನ ಸುಭಿಕ್ಷವೋ ದುರ್ಭಿಕ್ಷವೋ ಆದಾರಿಗೆ ಗೊತ್ತು.

ಕಳೆದ ಮೇ ತಿಂಗಳಲ್ಲಿ ಕನ್ನಡ ಮಾಣೆಗ್ರಾಮದ ಪಟೇಲರು ಕುಡುಪಜೆ ರಾಮಪ್ಪನವರು 47 ವರ್ಷ ಪಟೇಲ ಕೆಲಸವನ್ನು ಇದುವರೆಗೂ ಯಾವ ಪ್ರಕಾರವೂ ಇಲ್ಲದೆ ಶ್ರದ್ಧೆಯಿಂದ ನಡಿಸಿ ತನ್ನ ಕೆಲಸಕ್ಕೆ ರಾಜೀನಾಮೆ ಮಾಡುವ ಕಾಲದಲ್ಲಿ ಸರಕಾರದವರು ಇವರು ಮಾಡಿದ ಚಾಕರಿಯನ್ನು ಕೊಂಡಾಡಿ ಒಳ್ಳೆಯ ಸರ್ಟಿಫಿಕೇಟುಗಳನ್ನು ಮತ್ತು ಐವತ್ತು ರೂಪಾಯಿ ಬಹುಮಾನವನ್ನು ಕೊಟ್ಟರು ಎಲ್ಲಾ ಪಟೇಲರು ಈ ಉದಾಹರಣೆಯನ್ನು ಅನುಸರಿಸಬೇಕಾಗಿದೆ

ಶನಿವಾರಸಂತೆಯಲ್ಲಿರುವ ಮಗ್ಗದಶಾಲೆಯು ಆರುಮಂದಿ ಹುಡುಗರಿಂದ ಚೆನ್ನಾಗಿ ಕೆಲಸನಡೆಯುತ್ತದೆ. ವರ್ಷಕ್ಕೆ ಆರು ಹುಡುಗರು ಮಾತ್ರ ತರಬೇತು ಮಾಡಲ್ಪಡುತ್ತಾರೆ ಹಾಗೆ ತರಬೇತಾದ ಹುಡುಗರು ತಮ್ಮ ತಮ್ಮ ಮನೆಗಳಲ್ಲಿ ನಡೆಯುವ ರಾಟೆಗಳನ್ನಿಟ್ಟುಕೊಂಡು ಬಟ್ಟೆ ನೆಯ್ದು ತಮ್ಮ ಜೀವನೋಪಾಯ ಮಗ್ಗವನ್ನು ಕಲ್ಪಿಸಿಕೊಂಡಿದ್ದಾರೆ. ಈ ಶಾಲೆಯಲ್ಲಿ ಖರ್ಚು ಕಳೆದು ವರ್ಷಕ್ಕೆ ನೂರಾರು ರೂಪಾಯಿ ಮಾತ್ರ ಬಿದ್ದದ್ದುಂಟು ದೇಶದ ಎಲ್ಲಾ ಭಾಗಗಳಲ್ಲಿಯೂ ಇಂಥಾ ಶಾಲೆಗಳಿರಬೇಕು ಅತ್ಯಾವಶ್ಯಕ.

ಕಳೆದವಾರ ಸಂಕ್ರಮಣವು ಸಮಾಪಿಸಿದಂತೆ ಮಳೆಯು ಸ್ವಲ್ಪಸ್ವಲ್ಪವಾಗಿ ಹೊಡೆಯಲಾರಂಭಿಸಿ ಶುಕ್ರವಾರದ ದಿನ ಸಂಕ್ರಮಣವಾದ್ದರಿಂದ ದೇಶದ ಎಲ್ಲಾ ಭಾಗಗಳಲ್ಲೂ ಚೆನ್ನಾಗಿ ಮಳೆ ಬಿತ್ತು ಬಿಸಿಲಿಗೆ ಬಾಡಿಹೋಗಿದ್ದ ರೈತರ ಮನಸ್ಸು ಕಮಲದಂತೆ ಅರಳಿತು. ಎಲ್ಲರೂ ಸಂತೋಷಭರಿತರಾದ ಉತ್ಸಾಹದಿಂದ ಉಳುವುದು, ಬಿತ್ತುವುದು, ಪೈರು ಕೀಳುವುದು, ನಾಟಿ ನೆಡುವುದೇ ಮೊದಲಾದ ಕೆಲಸಗಳಲ್ಲಿ ಉದ್ಯುಕ್ತರಾಗಿರಲು ಫಕ್ಕನೆ ಮಳೆಯು ನಿಂತುಹೋಗಿ ಪೊರಲಿನಂತೆ ಬಿಸಿಲು ಕಾಯಲು ರೈತರೆಲ್ಲರೂ ದುಃಖಾಕ್ರಾಂತರಾಗಿರುವರು.

ಸಭೆಯ ಮುಕ್ತಾಯದಂತೆ ಸಿಂಗರ ಮೆ॥ ಕೋದಂಡ ಅಪ್ಪಯನವರು ಸೇರಿದ ಕಾಯಿಸುವದನ್ನು ಮನ್ನಪಡಿಸಬೇಕೆಂದೂ, ತನಗೆ 300 ರೂಪಾಯಿ ಉತ್ಪತ್ತಿ ಆಗುತ್ತಿದ್ದರು ಸಹ ತಾನು ನಿಲ್ಲಿಸುವದಾಗಿ ಹೇಳಿ ಕುಡುಕತನದ ದೋಷಗಳನ್ನು ಬೋಧಿಸಿದರು. ಮೆ॥ ಕೊಡನಂಡ ಪೊನ್ನಪ್ಪನವರು ಸಹ ಕಾಡು ಅವರ ವರ್ಗಗಳಿಂದ ಸೇರಿದ ಇಳಿಸುವದನ್ನು ನಿಲ್ಲಿಸುವದಾಗಿಯೂ ಗ್ರಾಮದವರಿಗೆಲ್ಲಾ ಬೋಧಿಸಿರುವದಾಗಿಯೂ ಹೇಳಿದರು. ಸಭೆಯ ದೊಡ್ಡಮನುಷ್ಯರುಮಾತ್ರ ನಿಲ್ಲಿಸಲಿಲ್ಲ ಮತ್ತು 31 ದರ. ಮೆ॥ ಉಬ್ಬಯ್ಯನವರು ಸಹ ಇದಕ್ಕೆ ಒಪ್ಪಿಕೊಟ್ಟು ಬೇರೆ ಕಲವು ಒಪ್ಪಿದವುಗಳನ್ನು ಹೇಳಿದರು.

ಮಹಿಷ್ಮತಿಯಾಗ ದೊಡ್ಡ ಗುರುವಾದ ಮಾತಾನಾಯಕಿ ಎಂದು ಖ್ಯಾತ ಅಜೀತ ನಮಯನವರು ನನ್ನ ಕೆಲವು ... ಶ್ರೀ ಪ್ರತಿನಿಧಿಸಿ ಶ್ರೇಷ್ಠರಿಂದ ಆಶೀರ್ವಾದ ಪಡೆದು ಈಗ ಅವರ ಸ್ವಾಮಿ ಪ್ರದೇಶಗಳನ್ನು ಸಂಚರಿಸಿಕೊಂಡು ಕಳೆದ ತಾ॥ 11 ರಲ್ಲು ಕೊಡಗಿಗೆ ಎರಡನೇ ಪ್ರಮುಖ ಪಟ್ಟಣವಾದ ವೀರರಾಜೇಂದ್ರಪೇಟೆಗೆ ದಯಮಾಡಿದರು. ಅಲ್ಲಿಂದ ಇವರು ಈ ಗುಂಪಕ್ಕೆ ಬಂದು, ಒಂದುವಾರ ಇಲ್ಲಿ ಇದ್ದು ಮಡಿಕೇರಿಗೆ 19-7-21 ರಲ್ಲಿ ದಯಮಾಡಿಸಿರುತ್ತಾರೆ. ಇವರು ವಿದ್ಯಾಶಕ್ತಿಯಿಂದಲೂ ದೇವರ ಭಕ್ತಿಶಕ್ತಿಯಿಂದಲೂ ಅನೇಕ ಜನರ ಖಾಯಿಲೆಗಳಿಗೆ ಚಿಕಿತ್ಸೆಯನ್ನು ಮಾಡಿ ವಾಸಿಮಾಡಿದ್ದಾರೆಂದು ತಿಳಿಯುತ್ತೇವೆ.

ವೀರರಾಜಪೇಟೆಯಲ್ಲಿ 13 ನೆ ತಾರೀಖಿನಲ್ಲಿ ಮೆ|| ಮನೆಪಂಡ, ನಾಣಪ್ಪನವರ ಅಧ್ಯಕ್ಷತೆಯಲ್ಲಿ ದಕ್ಷಿಣ ಕೊಡಗಿನ ರೈತರ ಸಭೆಯೊಂದು ಕೂಡಿತ್ತು ಅನೇಕ ದೊಡ್ಡ ಮನುಷ್ಯರು ಸೇರಿ ಸುಮಾರು 400 ಜನರಿದ್ದರು ರೈತರ ಪ್ರತಿನಿಧಿಗಳು ಬಗ್ಗೆ ಟ್ಯಾಗಿಯೂ ಬಹಳ ಪತ್ರಿಯಿಂದಲೂ ವಿರೋಧಿಸುವರೂ ಸಹ ಸರಕಾರಿ ನವುಕರರ ಸಂಘಯ ಒಳಿಂದ ಡಿಸ್ಟ್ರಿಕ್ಟು ಬೋರ್ಡಿನವರು ಅರ್ಧಾಣೆ ಮೆಟ್ಟಗೆ ಸೆಸ್ ಹಾಕಲು ಮಾಡಿದ ನಿರ್ಣಯವೂ ರೈತರಿಗೆ ಸಮ್ಮತವಾಗಲಿಲ್ಲವೆಂತಲೂ ಅದನ್ನು ಚೀಫ್ ಕಮಿಶನರ್ ಸಾಹೇಬರು ಮಂಜೂರು ಮಾಡಬಾರದೆಂತಲೂ ಸ್ಕೂಲ್ ಮಾಸ್ಟರ್‌ಗಳ ಸಂಬಳವನ್ನು ಹೆಚ್ಚಿಸಲಿಕ್ಕೆ ಸರಕಾರದವರೇ ಗ್ರಾಂಟ್ ಕೊಡಬೇಕೆಂತ ತೀರ್ಮಾನ ಮಾಡಿ, ಇದನ್ನು ಚೀಫ್ ಕಮಿಶನರ್ ಸಾಹೇಬರಿಗೆ ತಂತಿ ಮೂಲಕ ತಿಳಿಸಲಾಯಿತು ಡಿಸ್ಟ್ರಿಕ್ಟು ಬೋರ್ಡು ಅದೇಶವನ್ನು ರೈತರಿಗೆ ಬಿಟ್ಟುಕೊಂಡಿದ್ದರಿಂದಲೂ ದೇಶದ ಆದೇಶನಡಿಸುವ ನ್ಯಾಯವಿಧಾಯಕ ಕೌನ್ಸಿಲ್ ಮಂಜೂರಾಗಿದ್ದರಿಂದಲೂ, ಜನರಿಗೆ ಬಹಳ ಅತೃಪ್ತಿಯಾಗಿದೆಯಂತ ತರ್ಕವಾಯಿತು

ಕಳೆದ ತಾ|| 14 ರಲ್ಲು ಮಡಿಕೇರಿ ಸಿದ್ದಾಪುರದಸ್ತೆಯ ಮಡಿಕೇರಿಯಿಂದ ಆರನೆ ಮೈಲಿನ ಬಳಿ ಬರೆಯಿಂದ ದೊಡ್ಡ ಕಲ್ಲುಗಳು ಬಿರಗಿಬಿದ್ದು ಸುಮಾರು ನೂರು ಅಡಿಗಳ ಉದ್ದ ರಸ್ತೆಯು ಮುಚ್ಚಿಹೋಗಿದೆ ಗಾಡಿಗಳೂ ಮೋಟಾರುಗಳೂ ಮೊದಲಾದ ವಾಹನಗಳು ಹೋಗಲಸಾಧ್ಯವಾಗಿದೆ ಮನುಷ್ಯರು ಪ್ರಯಾಸದಿಂದ ಕಲ್ಲುಗಳಮೇಲೆ ಹತ್ತಿ ಇಳಿದು ದಾಟುತ್ತಾರೆ ಡಿ ಪಿ ಡಬ್ಲ್ಯು ಇಲಾಖೆಯವರು ಈ ಕಲ್ಲುಗಳನ್ನು ತೆಗೆಯಿಸಿ ರಸ್ತೆಯನ್ನು ಕ್ರಮಪಡಿಸಲು ಸುಮಾರು ಏಳುಸಾವಿರ ರೂಪಾಯಿ ಖರ್ಚಾಗುತ್ತದೆಂತಲೂ, ಹೀಗೆ ಮಾಡಲು ಸುಮಾರು ಮೂರು ವಾರಗಳಾಗುವವೆಂತಲೂ ಅಂದಾಜುಮಾಡಿರುತ್ತಾರೆಂದು ತಿಳಿಯಬರುತ್ತದೆ ಅನೇಕ ವರ್ಷಗಳಿಂದ ಇಂಥಾ ದೊಡ್ಡ ವಿಪತ್ತು ಕೊಡಗಿನಲ್ಲಿ ಯಾವ ರಸ್ತೆಗಳಿಗೂ ಉಂಟಾಗಿದ್ದುದೇ ಇಲ್ಲ ಇದು ಕೊಡಗಿನಲ್ಲಿ ಮುಖ್ಯ ರಸ್ತೆಯಾಗಿರುವದರಿಂದಲೂ ವ್ಯಾಪಾರವು ಪೂರ್ತಿಯಾಗಿ ನಿಂತುಹೋಗಿರುವದರಿಂದಲೂ ಜನರಿಗೆ ಬಹಳ ತೊಂದರೆಯುಂಟಾಗಿರುತ್ತೆ ಆದುದರಿಂದ ಅಧಿಕಾರಿಗಳು ಇದರ ವಿಷಯ ಹೆಚ್ಚು ಗಮನ ಕೊಟ್ಟು ರಸ್ತೆಯನ್ನು ಅತಿ ಶೀಘ್ರದಲ್ಲಿ ಸರಿಪಡಿಸಿದರೆ ಜನರ ಕಷ್ಟವು ನಿವಾರಣೆಯಾಗುವದು

ಹಿಂದೂದೇಶ.

ಜುಲೈ 16 ರಲ್ಲಿ ಬೊಂಬಾಯಿಗೆ ಬಂದ ಮೇಲ್ ಸ್ಟೀಮರ್ ಮೋರ‍್ಯಾದ ಪ್ರಯಾಣಿಕರ ಪೈಕಿ ಡಾ|| ರವೀಂದ್ರನಾಥ್ ಟಾಗೋರರವರು ಒಬ್ಬರು

ಬೆಂಗಳೂರಿನಲ್ಲಿ ವಾರಕ್ಕೆ ಎರಡಾವರ್ತಿ ಹೊರಡುತ್ತಿದ್ದ "ಕರ್ನಾಟಕ" ವೆಂಬ ಆಂಗ್ಲ ಪತ್ರಿಕೆಯು ಪ್ರೋತ್ಸಾಹವಿಲ್ಲದುದರಿಂದ ನಿಂತುಹೋಗಿದೆ.

ಸೋಲಾಪುರದಲ್ಲಿ ಒಂದು ಮನೆಯಲ್ಲಿ ಮದುವೆಗಾಗಿ ಜನರು ಕೂಡಿದ್ದಾಗ ಆ ಮನೆಗೆ ಮಿಂಚು ಬಡಿದು ಅನೇಕ ಹೆಂಗಸರು ಮೂರ್ಛಿತರಾದರಂತೆ ಒಬ್ಬಳು ಸತ್ತೇಹೋದಳಂತೆ

ಬೊಂಬಾಯಿಯ ನ್ಯಾಯವಿಧಾಯಕ ಸಭೆಯ ಬರುವ ಮೀಟಿಂಗಿನಲ್ಲಿ, ಬೊಂಬಾಯಿ ಸಂಸ್ಥಾನದಲ್ಲಿ ಅಮಲು ಪದಾರ್ಥವನ್ನು ಉಂಟುಮಾಡುವದಾಗಲಿ ಹೊರಗಿನಿಂದ ಸಂಸ್ಥಾನದ ಒಳಗೆ ತರುವದಾಗಲಿ, ಮಾರಾಟ ಮಾಡುವದಾಗಲಿ ಕೂಡದೆಂಬ ಒಂದು ಠರಾವನ್ನು ಚರ್ಚಿಸುವರಂತೆ

ಬೊಂಬಾಯಿಯಲ್ಲಿ ಮಹಾತ್ಮ ಗಾಂಧಿಯವರ ಅಧ್ಯಕ್ಷತೆಯಲ್ಲಿ ನಡೆದ ಮೀಟಿಂಗಿನಲ್ಲಿ ಸುಮಾರು 200 ಸಾರಾಯಿ ಅಂಗಡಿಯ ಪಾರ್ಸಿಗಳೂ ಕೆಲವು ಹಿಂದೂಗಳೂ ಹಾಜರಿದ್ದರು ಇನ್ನು ಮುಂದಿನ ಲೈಸನ್ಸ್ ಫೀಯನ್ನು ಸರಕಾರದವರು ವಾಪಸ್ಸು ಕೊಡುವುದಾದರೆ ತಮ್ಮ ಸಾರಾಯಿ ಅಂಗಡಿಗಳನ್ನು ಮುಚ್ಚಿಬಿಡುತ್ತೇವೆಂದು ಅಲ್ಲಿ ನೆರೆದಿದ್ದ ಹೆಚ್ಚು ಸಂಖ್ಯೆ ಜನರು ಒಪ್ಪಿಕೊಂಡಿರುತ್ತಾರೆ

ದಿವಂಗತ ಮೆ|| ಹನುಮಾನ್‌ರವರು ಕರ್ನಾಟಕ ಭಾಷಾಸೇವೆಯಲ್ಲಿ ನಿರತರಾಗಿ "ಮಧುರವಾಣಿ" ಎಂಬ ಮಾಸಪತ್ರಿಕೆಯ ಮುಖಾಂತರ ಸಾಧಾರಣ ಜನತೆಗೆ ಉಪಯುಕ್ತವಾಗಿ ಗ್ರಂಥಗಳನ್ನು ಪ್ರಕಟಿಸಿ ಹೆಸರು ಹೊಂದಿದ ತಮ್ಮ ಊರಾದ ಮೈಸೂರಿನ ಹನುಮಾನ್‌ರವರು ತೀರಿಹೋದರೆಂಬ ಸಂಗತಿ ವಿಷಾದಕರವಾಗಿದೆ ಕನ್ನಡಿಗರಿಂದ ನಮ್ಮ ಪರಿತಾಪವನ್ನು ಅವರ ಸಂಸಾರಕ್ಕೆ ನಾವು ಈ ಮೂಲಕ ಸೂಚಿಸುವೆವು

ಹಿಂದುಸ್ಥಾನದಿಂದ ಫಿಜೀಟಿಗೆ ಹೋಗುವ ದಾರಿಯಲ್ಲಿ ದೇಶದ ಜನರನ್ನು ಜುಲುಂನಿಂದ ಹೊರೆ ಹೊರಲಿಕ್ಕೆ ಕರೆಯುವ ಪದ್ಧತಿಯನ್ನು ನಿಲ್ಲಿಸಬೇಕೆಂತ ಕೇಳಲು ಮದನಮೋಹನ ಮಾಳವೀಯರ ಅಧ್ಯಕ್ಷತೆಯಲ್ಲಿ ನಮ್ಮ ಕಡೆ ಜುಲೈ 11 ನೇ ತಾರೀಖಿನಲ್ಲಿ ಮೀಟಿಂಗ ನಡೆದಾಗ ಎಸ್ ಇ. ಜೋನ್ಸ್ ಎಂಬುವರು ಈ ಪದ್ಧತಿಯು ಬ್ರಿಟಿಷರ ಉದ್ಯೋಗಸ್ಥರ ಪ್ರಯೋಜನಕ್ಕಾಗಿಯೇ ಇಟ್ಟಿರುವದಾಗಿಯೂ ನ್ಯಾಯವಾಗಿ ಸಂಬಳಕೊಟ್ಟು ತಮ್ಮ ಕೂಲಿಯಿಂದ ಜನರನ್ನು ಮಾತ್ರ ಕೆಲಸಕ್ಕೆ ಕರಕೊಳ್ಳಬೇಕೆಂತ ಹೇಳಿದರು

"ಎಡೆಕ್ಸ್" ಬಂಗಾಳಿ ಪತ್ರಿಕೆಯಲ್ಲಿ ಬರೆದದ್ದೇನಂದರೆ—ಮಿ|| ಕ್ರಿಮಿನಲ್ ಶಾಸ್ತ್ರಿಯವರು ಹೊಸ ತಿದ್ದುಪಡಿನ ಕೌನ್ಸಿಲುಗಳ ವಿಷಯ ಪೂರಾ ಉತ್ಸಾಹಪೂರ್ಣರಾಗಿದ್ದಾರೆ. ಇವರು ಲಂಡನ್ನಿನಲ್ಲಿ ಡೊಮಿನಿಯನ್ಸ್ ಮತ್ತು ಪಕ್ಷಗಳ ಪ್ರತಿನಿಧಿಗಳನ್ನು ಹಿಂದೂ ದೇಶಕ್ಕೆ ಯಾತ್ರೆ ಮಾಡಿ ಇಲ್ಲಿ ಹಿಂದೂ ದೇಶದವರು ಕೌನ್ಸಿಲುಗಳಲ್ಲಿ ಚರ್ಚಿಸುವುದನ್ನು ನೋಡಬೇಕೆಂದು ಕೇಳುತ್ತಿದ್ದಾರಂತೆ ಪ್ರಜಾಪ್ರತಿನಿಧಿಗಳು ರಾಜ್ಯಗಳ ಪ್ರತಿನಿಧಿಗಳು ಕೆಲವು ನ್ಯಾಯವಿಧಾಯಕ ಸಭೆಗಳನ್ನು ನೋಡಿದನಂತರವಾದರೂ ಹುರುಳನ್ನು ತಿಳಿದು ಭ್ರಮೆಗೊಳ್ಳದಿರುವರು ಎಂಬ ಭಾವನೆ ಮಿ|| ಶಾಸ್ತ್ರಿಗಳಿಗೆ ದೃಢವಾಗಿ ಇದೆಯೋ ?

ಪಂಡಿತ ಮಾಳವೀಯರು ಹೇಳಿದ್ದೇನಂದರೆ "ಗುಲಾಮ ಚಾರಿತ್ರ್ಯವು ಇಂಗ್ಲಾಂಡಿನಲ್ಲಿ ಇಲ್ಲವೆಂತಲೂ ಇಂಗ್ಲೀಷಿನಲ್ಲಿ ಕಾಲಿಟ್ಟ ನಿಮಿಷದಲ್ಲಿ ಗುಲಾಮರ ಸರಪಣಿಗಳು ಸಡಲಿಹೋಗುತ್ತದೆಯಂತ ಹೆಮ್ಮೆಯಿಂದ ಹೇಳುವ ಇಂಗ್ಲೀಷರು ಪವಿತ್ರಭೂಮಿ ಮಾತಾದ ಹಿಮಾಲಯ ಪ್ರಾಂತ್ಯದಲ್ಲಿ ಬಹಳ ಕಾಲದಿಂದ ಸಂಬಳವಿಲ್ಲದೆ ಮಾಡಿಸುವ 'ಬೆಗಾರಿ' ಎಂಬ ಪದ್ಧತಿಯನ್ನು ಒಂದು ಶತಮಾನದಿಂದಲೂ ಜಾರಿಯಲ್ಲಿಟ್ಟಿದ್ದಾರೆಂದರೆ ನಾಚಿಕೆಯಾಗುವುದಿಲ್ಲವೇ. ಜನರ ಚಳವಳಿ ಜೋರಾದರೆ ಮಾತ್ರ ಸರಕಾರದಿಂದ ನ್ಯಾಯ ಸಿಕ್ಕುತ್ತೆ ಬಡಕೂಲಿಕಾರರು ಅನೇಕವೇಳೆ ಸಂಬಳವಿಲ್ಲದೆ ತಮ್ಮ ಕೈಯಿಂದ ಖರ್ಚು ಮಾಡಿ ಊಟಮಾಡಿಕೊಂಡು ಕೆಲಸ ಮಾಡಬೇಕಾಗುತ್ತೆ ಸರಕಾರದವರಿಗೆ ತಿಳುವಳಿಕೆ, ಸಹಾನುಭೂತಿ (ದಯೆ) ಇಲ್ಲದ್ದರಿಂದಲೂ ಜನರ ಪ್ರಯತ್ನವಿಲ್ಲದ್ದರಿಂದಲೂ ಈ ಬಿಟ್ಟಿ ಚಾಕರಿ ಪದ್ಧತಿ ನಡೆಯುತ್ತಿದೆ. ದೇಶಭಕ್ತಿ ಇರುವ ಎಲ್ಲಾ ಜನರೂ ಈ ಕಟ್ಟಪದ್ಧತಿ ಹೋಗುವವರೆಗೂ ದೇವರ ಕೆಲಸವೆಂದು ಯೋಚಿಸಿ ಈ ಪದ್ಧತಿಯನ್ನು ನಿಲ್ಲಿಸುವ ಪ್ರಯತ್ನ ಮಾಡಬೇಕು

ಧಾರವಾಡ ಡಿಸ್ಟ್ರಿಕ್ಟ್ ಬೋರ್ಡಿನವರು ಈ ಕೆಳಗಿನ ಠರಾವುಗಳನ್ನು ಮಂಜೂರ್ ಮಾಡಿಕೊಂಡಿದ್ದಾರಂತೆ ತಿಳಿಯುತ್ತದೆ

1 ಜನರ ಆರೋಗ್ಯ ಹಣ ಮತ್ತು ಧರ್ಮವು ಕಳೆದುಹೋಗುವುದಕ್ಕೆ ದಾರಿಯಾಗುವಂತೆ ಸೇಂದಿ ಸಾರಾಯಿಯ ಮಾರಾಟ ಹೆಚ್ಚಾಗಿ ಆಗುತ್ತಿರುವುದು ಬುಂಬಾ ವ್ಯಸನಕರ.

2 ಈ ಕಡಕನ್ನು ಹೋಗಲಾಡಿಸಲಿಕ್ಕೆ ದೇಶದ ಜನರು ಪ್ರಯತ್ನಮಾಡುವದು ಬಹಳ ಸ್ತೋತ್ರಾರ್ಹವಾಗಿದೆ

3 ಸೇಂದಿ ಸಾರಾಯಿಯ ಮಾರಾಟವನ್ನು ನಿಲ್ಲಿಸಲಿಕ್ಕೆ ಈ ಡಿಸ್ಟ್ರಿಕ್ಟ್ ಬೋರ್ಡಿಗೆ ಶಕ್ತಿಯಿಲ್ಲವೆಂತ ತಿಳಿಯಲು ವ್ಯಸನಪಡುತ್ತೇವೆ ಸ್ವಯಂ ಸೇವಕರನ್ನು ನಿತಾ ಅಂಗಡಿಗಳ ಹತ್ತರ ಇಳಿಸಿ ಕುಡುಕರನ್ನು ಅಂಗಡಿಗೆ ಹೋಗದಂತೆ ತಡೆಯುವದಕ್ಕೆ ಈ ಬೋರ್ಡ್ ಸಹಾಯ ಮಾಡಬೇಕು

4 ಕುಡುಕತನವನ್ನು ಪೂರ್ತಿ ನಿಲ್ಲಿಸಲಿಕ್ಕೆ ಒಂದು ಸಮಿತಿ ಏರ್ಪಾಡಾಯಿತು

5 ಕುಡುಕತನವನ್ನು ನಿಲ್ಲಿಸಲಿಕ್ಕೆ ಬೋರ್ಡಿನಿಂದ 5000 ರೂಪಾಯಿ ಖರ್ಚ ಮಂಜೂರ್ ಮಾಡಲಾಗಿದೆ.

ವಿದೇಶ.

ಚಕ್ರವರ್ತಿಯವರ ಮಗ ಯುವರಾಜರ ಆರೋಗ್ಯ ಚೆನ್ನಾಗಿಲ್ಲವೆಂತ ತಿಳಿಯುತ್ತೇವೆ

ಯುನೈಟೆಡ್ ಸ್ಟೇಟ್ಸ್—ಫ್ರಾನ್ಸ ಮತ್ತು ಇಂಗ್ಲೆಂಡಿನಲ್ಲಿ ಸಹ ಅನೇಕ ಕಡೆ ನೀರಿನ ಕ್ಷಾಮವು, ಅತ್ಯಂತ ಸೆಕೆಯು ಬೆಂಕಿಯ ಅಪಾಯವು ಇದೆಯಂತೆ, ಕೆಲಿಯ ತೋಟಕ್ಕೆ ಅನೇಕರು ಸತ್ತರು. ಅನೇಕರಿಗೆ ಹುಚ್ಚು ಹಿಡಿದಿದೆ

ಚಕ್ರವರ್ತಿಯವರ ಮಗ ಯುವರಾಜರನ್ನು ಅವರ ಹಿಂದೂದೇಶದ ಪ್ರಯಾಣ ತೀರಿದ ನಂತರ ಜಪಾನ್ ದೇಶಕ್ಕೆ ದಯಮಾಡಿಸಬೇಕೆಂದು ಜಪಾನ್ ಸರಕಾರದವರು ಕೇಳಿಕೊಂಡಿದ್ದಾರೆ

ಜುಲೈ 7 ನೆ ತಾರೀಖಿನ ದಿನ ಒಂದು ಊಟದ ನಂತರ ಆದ ಭಾಷಣದಲ್ಲಿ ದಕ್ಷಿಣ ಅಫ್ರಿಕದ ಮಂತ್ರಿಯಾದ ಜನರಲ್ ಸ್ಮಟ್ಸ್ ಹೇಳಿದ್ದೇನಂದರೆ—"ಇಂಡಿಯಾದೇಶವು ಬಹಳ ದೊಡ್ಡ ಪದವಿಯನ್ನು ಪಡೆಯುವದರಲ್ಲಿದೆ ಇಂಡಿಯಾದೇಶದಲ್ಲಿ ಸ್ವರಾಜ್ಯವು ಸಾಧ್ಯವಿಲ್ಲವೆಂದು ಕೆಲವರು ಹೇಳುತ್ತಾರೆ ಯಾವದು ಸಾಧ್ಯವಿಲ್ಲವೆಂದು ಹೇಳಲಿಕ್ಕಾಗುವದಿಲ್ಲ. 30 ಕೋಟಿ ಜನರನ್ನು ಸ್ವತಂತ್ರವಿಲ್ಲದೆ ಕೈಕೆಳಗೆ ಇಟ್ಟುಕೊಳ್ಳುವದು ಸಾಧ್ಯವಿಲ್ಲ 100 ವರುಷಗಳು ಆಳಿದರೂ ತನ್ನ ಕೈಕೆಳಗಿನವರನ್ನು ಸ್ವರಾಜ್ಯಕ್ಕೆ ತಯಾರುಮಾಡಲಿಕ್ಕೆ ಆಗದಿದ್ದ ಸಾಮ್ರಾಜ್ಯವು ಕೆಲಸಕ್ಕೆ ಬಾರದ ಸಾಮ್ರಾಜ್ಯ"

ಪಾರ್ಲಿಮೆಂಟಿನಲ್ಲಿ ಸ್ಪೆನ್ಸರ್ ಹ್ಯಾಂ ದೊರೆಗಳು ಇಂಡಿಯಾದೇಶದಲ್ಲಿ ಗಾಂಧಿ ಚಳವಳಿಯಿಂದ ಯೂರೋಪಿಯನ್‌ರ ಮತ್ತು ರಾಜಭಕ್ತ ಜನರ ಜೀವಕ್ಕೆ ಅಪಾಯ ಬಂದಿರುವುದನ್ನು ನಿಲ್ಲಿಸುವದಕ್ಕೆ ಸರಕಾರದವರು ಏರ್ಪಾಡು ಮಾಡಿದ್ದಾರೆಂದು ಕೇಳಿದ್ದಕ್ಕೆ ಇಂಡಿಯಾದೇಶದ ಉಪ ಮಂತ್ರಿಯಾದ ಅರ್ಲ್ ಲಿಟನ್ ದೊರೆಗಳು ಹೇಳಿದ್ದೇನಂದರೆ ಇಂಡಿಯಾ ದೇಶದಲ್ಲಿರುವ ಕೆಲವು ಇಂಗ್ಲೀಷ್ ಜನರು, ಇಲ್ಲದ ಸಂಗತಿಗಳನ್ನು ಹೇಳಿ ಗದರಿಕೆ ಉಂಟುಮಾಡುತ್ತಿರುವುದಾಗಿಯೂ ಅಸಹಕಾರ ಚಳವಳಿಯು ಬಲಗುಂದಿರುವದಾಗಿಯೂ ಅಯಾಯ ಸ್ಥಳೀಯ ಸರಕಾರದವರು. ತಕ್ಕ ಎಚ್ಚರದಲ್ಲಿ ಇರುವದಾಗಿಯೂ ಹೇಳಿದರು

ಕೊಡಗು ಕಮಿಶನರವರ ಆಫೀಸು,
ಮಡಿಕೇರಿ, ತಾ|| 18 ನೇ ಜುಲೈ 1921

ಕೊಡಗು ಎಡಿಟರವರಿಗೆ.

1921 ನೇ ಜುಲೈ 8 ದ ಕೊಡಗು ಪತ್ರಿಕೆಯ ಸಂಚಿಕೆಯಲ್ಲಿ "ಪೋಲೀಸ್ ಬಂದೋಬಸ್ತು" ಎಂಬ ಒಂದು ಕಲಮು ಇದೆ. ಇದರಲ್ಲಿ ಡಿ|| ಬೊ|| ಮೀಟಿಂಗ್‌ಗಳಲ್ಲಿ ಸರಕಾರಕ್ಕೆ ವಿರೋಧವಾದ ಮಾತುಗಳ ನಿಗಾವಣೆಗಾಗಿ ಪೋಲೀಸಿನವರು ಹಾಜರಿರುತ್ತಾರಾಗಿ ನಮೂದಿದೆ ಪೋಲೀಸ್ ಸಬ್|| ಇ|| ರುಗಳಿಗೆ ಶೋರ್ಟ ಹೇಂಡ ಬರೆಯಲು ಅಗತ್ಯವಿರುವದರಿಂದ ಕಳೆದ ಜುಲೈ ತಾರೀಖು 2 ರಲ್ಲಿ ನಡೆದ ಡಿ|| ಬೊ|| ಮೀಟಿಂಗ್ ಕಾಲದಲ್ಲಿ ನನ್ನ ಹುಕುಂ ಅನುಸರಿಸಿ ಒಬ್ಬ ಸಬ್|| ಇ|| ರು ಹಾಜರಿದ್ದರು. ಇಂಥಾ ಅಭ್ಯಾಸವನ್ನು ಪಡೆಯುವದಕ್ಕೆ ಡಿ|| ಬೊ|| ಮೀಟಿಂಗ್ ಕಾಲವು ಅನುಕೂಲವಾಗಿರುತ್ತೆ ಸರಕಾರಕ್ಕೆ ವಿರೋಧವಾದ ಮಾತುಗಳು ಒಂದು ಕಾಲಕ್ಕೂ ನಡೆಯಲಾರವು ಎಂಬದಾಗಿ ನಾನು ದೃಢವಾಗಿ ನಂಬುತ್ತೇನೆ ಒಂದುವೇಳೆ ನಡೆದ ಸಂದರ್ಭದಲ್ಲಿ ಪೋಲೀಸಿನವರ ಸಹಾಯ ವಿನಹ ಡಿ|| ಬೊ|| ಪ್ರೆಸಿಡೆಂಟರವರು ಕ್ರಮ ನಡೆಸಲು ಅರ್ಹರಾಗಿರುತ್ತಾರೆ ಈ ಸಂಗತಿಯನ್ನು ನಿಮ್ಮ ವಾಚಕರಿಗೆ ಈ ಮೂಲಕ ಸೂಚಿಸಲಾಗಿದೆ.

ನಾನು ನಿಮ್ಮ ಪತ್ರಿಕೆಯ ಕ್ಷೇಮ ಚಿಂತಕನಾಗಿರುವೆನು ಆದಕಾರಣ ನಿಮ್ಮ ವಾಚಕರಿಗೆ ತಪ್ಪು ಅಭಿಪ್ರಾಯವನ್ನು ಮಾಡಿಕೊಳ್ಳಲು ಆಸ್ಪದಕೊಡದೆ ನಿಜ ತಿಳುವಳಿಕೆಗೆ ಬರುವ ಸಂಗತಿಯ ಸ್ಥಿತಿಯನ್ನು ತಿಳಕೊಳ್ಳಲು ಪ್ರಯತ್ನಪಡಬೇಕಾಗಿ ಕೋರುತ್ತೇನೆ

ಹಿಲ್ಟನ್ ಬ್ರೌನ್
ಪ್ರಾ ಕಮಿಶನರ್

COORG COMMISSIONER'S OFFICE,
Mercara 18th July 1921

To

THE EDITOR, KODAGU

SIR,

In Kodagu dated the 8th July 1921, I notice a paragraph headed "Police Bundobust" in which it is alleged that the Police are present at District Board meetings to watch for expressions of disloyalty. A Sub-Inspector was present at the District Board meeting held on the 2nd July 1921 by my orders as the local Sub Inspectors require every possible chance of practice in shorthand recording and such meetings give them a good opportunity. I can assure your readers that should any "expressions of disloyalty" be entered which I do not for a moment anticipate I as President will be quite competent to deal with them without any help from the Police.

As a well wisher of your paper, I hope you will allow me to suggest that before misleading your readers with pointless sneers of this sort, you should make some attempts to acquaint yourselves with the facts.

I am
Sir,
Yours faithfully,
(Sd) HILTON BROWN,
Offg Commissioner

ನೋಟೀಸ್.

ಪೇರುದಾರರ ಮತ್ತು ಚಂದಾದಾರರುಗಳ ಅನುಕೂಲತೆಗಾಗಿ "ಕೊಡಗು" ಕಂಪೆನಿಯ ಸೆಕ್ರಟರಿ ಮೆ ಕೋಟೆರ ಚಿಣ್ಣಪ್ಪನವರು ಈ ತಾರೀಖು 24 ರಿಂದ [illegible] ರ ವರೆಗೆ ಸಂಬಂಧಪಟ್ಟ ತಾಲ್ಲೋಕಿನ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಅಂದರೆ ಸಂತೆ ದಿನಗಳಲ್ಲಿ, ಸೋಮವಾರಪೇಟೆ, ಶನಿವಾರಸಂತೆ, ಕೊಡ್ಲಿಪೇಟೆ ಮತ್ತು ಫ್ರೇಜರು[illegible]ಟೆಯಲ್ಲಿರುತ್ತಾರೆ

ಸಬ್ ಎಡಿಟರ್ ಮೆ|| ಪಟ್ಟಿಯಡ ಮುತ್ತಣ್ಣನವರು ಈ ತಾರೀಖು 24 ರಲ್ಲಿ ಗೋಣಿಕೊಪ್ಪಲು, 25 ಹುದಿಕೇರಿ 26 27 ಶ್ರೀಮಂಗಲ 28 29 ಪೊನ್ನಂಪೇಟೆ, 31 ಗೋಣಿಕೊಪ್ಪಲು 1 ನೇ ಆಗಸ್ಟು ಪೊನ್ನಪ್ಪ, 2 ಅಮ್ಮತ್ತಿ, 3 ವೀರರಾಜೇಂದ್ರಪೇಟೆಯಲ್ಲಿರುತ್ತಾರೆ ಆದ್ದರಿಂದ ಎಲ್ಲಾ ಪೇರುದಾರರು ಮತ್ತು ಚಂದಾದಾರರು ದಯವಿಟ್ಟು ತಮ್ಮ ತಮ್ಮ [illegible]ರು ಮತ್ತು ಚಂದಾ [illegible]ವನ್ನು ಪಾವತಿಮಾಡಿ ರಶೀ[illegible] ಹೊಂದಬೇಕಾಗಿ ಅಪೇಕ್ಷಿಸಲಾಗಿದೆ.

ಮ್ಯಾನೇಜರ್

ಕೊಡಗು ಜನಿವಾಸ್ ದಾರ ಸಂಘ.

1921 ನೇ ಇಸವಿ ಏಪ್ರಿಲ್ ತಾರೀಖು 16, 17 ರಲ್ಲು ನೇ ವಾರ್ಷಿಕ ಮೀಟಿಂಗ್‌ನಲ್ಲು ಸಂಘದ ಕಾರ್ಯನಿರ್ವಾಹಕ ಮಂಡಲಕ್ಕೆ 12 ಮೆಂಬರುಗಳನ್ನಾಗಿ ಈ ಕೆಳಗೆ ಕಾಣಿಸುವ ದೊಡ್ಡ ಮನುಷ್ಯರನ್ನು ಚುನಾಯಿಸಲ್ಪಟ್ಟಿರುತ್ತೆ

ಪ್ರೆಸಿಡೆಂಟರವರು.

ಮೆ|| ರಾಯಬಹದ್ದೂರ್ ಕೆ ಕುಟ್ಟಯ್ಯನವರು.
,, ಕೋದಂಡ್ರ ಅಪ್ಪಯ್ಯನವರು, ವೈಸ್ ಪ್ರಸಿಡೆಂಟ್.
,, ಪಿ ಶ್ರೀಪತಿರಾಯರು ,,
,, ಸಿ ಯಸ್. ವೆಂಕಟಪ್ಪಯ್ಯ ಬಿ.ಎ ಬಿ.ಯಲ್. ಜನರಲ್ ಸೆಕ್ರೆಟರಿ.
,, ಪಂದಿಯಂಡ್ರ ಬೆಳ್ಯಪ್ಪನವರು ಬಿ ಎ ಹೆಡ್ ಮಾಸ್ಟರ್
,, ಪಾಂಡಂಡ್ರ ಅಪ್ಪಚ್ಚನವರು ಟ್ರಷರರ್.

ತಾಲ್ಲೋಕು ಜಾಯಿಂಟ್ ಸೆಕ್ರೆಟರಿಗಳು

ನಂಜರಾಯ ಪಟ್ಣ ತಾಲ್ಲೋಕಿಗೆ ಮೆ|| ಸಿದ್ದದ ಸುಬ್ಬಣ್ಣಯ್ಯನವರು.
ಯೆಡೆನಾಲ್ಕು ನಾಡು ತಾಲ್ಲೋಕಿಗೆ ಮೆ|| ಕೋದಿಮಡಿಯಂಡ್ರ ಪೊನ್ನಪ್ಪನವರು
ಕಿಗ್ಗಟ್ಟುನಾಡು ತಾಲ್ಲೋಕಿಗೆ ಪುಚ್ಚಿಮಾಡ ಕುಟ್ಟಯ್ಯನವರು.
ಪಾಡೀನಾಲ್ಕು ನಾಡು ತಾಲ್ಲೋಕಿಗೆ ಐಚೆಟ್ಟಿ ಬಿದ್ದಯ್ಯನವರು.
ಮಡಿಕೇರಿ ತಾಲ್ಲೋಕಿಗೆ ಪಂಡಿಯಂಡ್ರ ಬೆಳ್ಯಪ್ಪನವರು ಬಿ.ಎ.

ಎಗ್ಸಿಕ್ಯೂಟಿವ್ ಮೆಂಬರುಗಳ ಹೆಸರು.

ಮಡಿಕೇರಿ ತಾಲ್ಲೋಕಿಗೆ.

1 ಮೆ|| ರಾಯಬಹದ್ದೂರ್ ಸಿ. ಮಾದಯ್ಯನವರು.
2 ,, ಕೆ ಸುಬ್ಬರಾಯರು, ಬಿ ಎ, ಲಾಯರ್
3 ,, ಗೆಜ್ಜೆ ಈರಪ್ಪಶೆಟ್ರು.
4 ,, ಟಿ. ಪಿ ನಾಗರತ್ನಂ ಪಿಳ್ಳೆಯವರು. ಲಾಯರು, ಬಿ ಎ ಬಿ ಎಲ್.
5 ,, ಗುಂಡುಕುಟ್ಟ ಮಂಜ್ಯಯ್ಯನವರು ಬುಂಟಿಕೊಪ್ಪ
6 ,, ಕೋಂಗೇಟಿ ಪೊನ್ನಪ್ಪನವರು
7 ,, ಉಸ್ಮಾನ್ ಖಾನ್ ಸಾಬರು
8 ,, ರಾವ್ ಸಾಹೇಬ್ ಕೆ ಸುಬ್ಬಯ್ಯನವರು
9 ,, ಕುಂಬುಗೌಡ್ನ ಅಪ್ಪಯ್ಯನವರು, ಮುಕ್ಕೋಡ್ಲು
10 ,, ಕೊಡಂದೇರ ಸಿ. ತಿಮ್ಮಯ್ಯನವರು.
11 ,, ಮಕೆಯುಪ್ಪಂಡ ಚಿಣ್ಣಪ್ಪನವರು.
12 ,, ಲಿಂಗರಾಜನ ರಾಮಸ್ವಾಮಯ್ಯನವರು.

ನಂಜರಾಜಪಟ್ನ ತಾಲ್ಲೋಕಿಗೆ.

1 ಮೆ|| ಹೆಮ್ಮನೆ ಮುತ್ತಣ್ಣನವರು ಶನಿವಾರಸಂತೆ
2. ,, ಬೇಲೂರು ಬಸಪ್ಪನವರು ,,
3. ,, ಚವುತ್ತು ಕಾಳಪ್ಪನವರು ಸೋಮವಾರಪೇಟೆ.
4 ,, ಗುಡಿಹಟ್ಟಿ ಮರಿಯಪ್ಪನವರು ಪ್ರೇಜರ್ ಪ್ಯಾಟೆ.
5. ,, ಹಂಡ್ಲಿ ಮಲ್ಲಣ್ಣನವರು ಶನಿವಾರಸಂತೆ
6 ,, ಬಿದರೂರು ಮಾದಯ್ಯನವರು ,,

ಯೆಡೆನಾಲ್ಕುನಾಡು ತಾಲ್ಲೋಕಿಗೆ

1. ಮೆ|| ಯಂ ಪಿ ಮಂದಣ್ಣನವರು ವೀರಾಜಪೇಟೆ.
2. ,, ಪಳಂಗಂಡ್ರ ಮುತ್ತಣ್ಣನವರು ,,
3 ,, ಪುಲಿಯಂಡ್ರ ತಿಮ್ಮಯ್ಯನವರು ,,
4. ,, ಕೇಳಪ್ಪಂಡ ಅಚ್ಚಯ್ಯನವರು ಅಮ್ಮತ್ತಿ.
5 ,, ನಾಯಡ ಬೆಳ್ಯಪ್ಪನವರು ವಿರಾಜಪೇಟೆ.
6 ,, ಕೇಂದ್ರಕ್ತಂಡ್ರ ಪೂವಯ್ಯನವರು ,,
7 ,, ಕುಟ್ಟಂಡ್ರ ತಮ್ಮಯ್ಯನವರು ಅಮ್ಮತ್ತಿ.
8 ,, ಕೊಕಂಡ್ರ ಗಣಪತಿಯವರು ವಿರಾಜಪೇಟೆ.

ನಾಡಿನಾಲ್ಕುನಾಡು ತಾಲ್ಲೋಕಿಗೆ.

1 ಮೆ|| ಎಸ್. ಎನ್ ಶಂಕರ ನಾರಾಯಣಯ್ಯನವರು.
2 ,, ಪಟ್ಟಮಾಡ ಕುಶಾಲಪ್ಪನವರು.
3 ,, ವಾದಂಡ ಮಂದಣ್ಣನವರು.
4 ,, ಕೆದಂಬಾಡಿ ಸುಬ್ರಾಯನವರು.
5 ,, ತೆಕ್ಕಡ ಸುಬ್ಬಯ್ಯನವರು
6 ,, ನೂಜೀರ ಅಣ್ಣಯ್ಯನವರು.
7 ,, ನಡಿಕೇರಿಯಂಡ ಕರುಂಬಯ್ಯನವರು.
8 ,, ಚಂಗಾಂಡ ಕುಟ್ಟಪ್ಪನವರು.

ಕಿಗ್ಗಟ್ಟುನಾಡು ತಾಲ್ಲೋಕಿಗೆ.

1 ಮೆ|| ಮನೆಪ್ಪಂಡ ನಾಚಯ್ಯನವರು
2 ,, ಪುಳ್ಳಮನೆ ಗಣಪಮ್ಮನವರು.
3 ,, ಕೊಡಂದೇರ ಸುಬ್ಬಯ್ಯನವರು.
4 ,, ಪಾರ್ವಂಗಳ ನಂಜಪ್ಪನವರು.
5 ,, ಚೆಪ್ಪುಡಿರ ಮಾದ್ಯಯ್ಯನವರು
6 ,, ಕೊಡಂದೇರ ಮಾದಪ್ಪನವರು.
7 ,, ಚೆಪ್ಪುಡಿರ ಲಿಂಗಪ್ಪನವರು
8 ಮನೆಯಪ್ಪಂಡ ಮಾದಪ್ಪನವರು.

ಕ. ಕುಟ್ಟಯ್ಯ, ಛೇರ್ಮನ್.

ಪತ್ರವ್ಯವಹಾರಗಳು.

ಬಾತ್ಮಿದಾರರು ಕಳುವ ಅಭಿಪ್ರಾಯಗಳಿಗೆ ಪತ್ರಪ್ರಕಾಶಕರು ಜವಾಬ್ದಾರರಲ್ಲ. [ಎಡಿಟರ್.]

ನನ್ನ ಕೈಸೇರಿದ "ಕೊಡಗು" ಎಂಬ ವಾರಪತ್ರಿಕೆಯನ್ನು ಮೊದಲಿನಿಂದ ಚೆನ್ನಾಗಿ ಪರಿಶೀಲಿಸಿದ್ದಾಯಿತು. ಆದರೆ ಪತ್ರಿಕೆಯು ವಿಷಯದಲ್ಲಿ ಬೇರೆ ಕನ್ನಡ ವಾರಪತ್ರಿಕೆಗಳಿಗಿಂತ ಹಿಂಗಳಿಸಿಟ್ಟು ಕುತೂಹಲ ಕಾಣಬರುವುದಿಲ್ಲ. ಬರಿ ಚರಿತ್ರೆಗಳನ್ನೇ ಬಾಯಿ ಪಾಡಿಸುವ ಯತ್ನವೇ ಕಂಡುಬರುತ್ತೆ. ಈ ಪತ್ರಿಕೆಗೆ ವಿಭಾಗಾಂತರಗಳು ಇದರ ಅಧಿಕತವನ್ನು ಚೆನ್ನಾಗಿ ಕೈಕೊಳ್ಳಬೇಕು ಈ ಅಂತಃಶಕ್ತಿ ಅಭಿಪ್ರಾಯಕ್ಕೆ ಕಂಗಾಲ ಪಡುವವರ ಬದಲು ಆದ ಕಿತ ವಿಷಯವನ್ನು ಚೆನ್ನಾಗಿ ಪರಿಶೋಧಿಸಲು ಪ್ರಯುಕ್ತ [illegible] ಪತ್ರಿಕೆಯು ಹೊಂದುಳಿಯುವಿಕೆಗೆ [illegible] ಕೆಯಾದ "ಶುಭೋದಯದಲ್ಲಿ ತಾ|| ೪ ನೇ ಜೂನ್‌ನಲ್ಲಿ ಬರೆದದ್ದು" "ಕೊಡಗಿನ ವೃತ್ತಪತ್ರಿಕೆಗಳ ಬಹಿಷ್ಕಾರದಿಂದ [illegible] ಜಾಗೃತ ಯಾಗಿಲ್ಲವೆಂದು ಆ ಪತ್ರದ ಸಂಪಾದಕರ ಸಹಕಾರದವರಿಂದ ತಪ್ಪುಗಳನ್ನು ಬೇಡಿಕೊಳ್ಳುವ ಧೈರ್ಯವಿಲ್ಲದಿರುವುದೇ ಎಂದು ಬರು [illegible] ಆ ಪತ್ರದ ಅಕ್ಷರ ಆಕಾರಗಳು ಮನೋಹರವಾಗಿವ ರಿಂದ ಸಮ್ಮ ಸಂಪಾದಕರು ಸ್ವಲ್ಪ ಮಟ್ಟಿಗೆ ಎಚ್ಚರಿಕೆಯುಳ್ಳವರಾಗಿ ಪ್ರಾರ್ಥನೆ

ಎಂ. ಕೆ. [illegible]

ಅಯ್ಯಾ,

ಈ ಕೆಳಗಿನ ಪ್ರಶ್ನೆಗಳಿಗೆ ನೀವಾಗಲಿ, ನಿಮ್ಮ ವಾಚಕರೇ ಆಗಲಿ ಉತ್ತರವನ್ನು ನಿಮ್ಮ ಪತ್ರಿಕಾಮೂಲಕ ಕೊಡುವರೆಂದು ನಂಬುತ್ತೇನೆ.

1 ಕೊಡಗನ್ನು ಮದ್ರಾಸಿಗೆ ಸೇರಿಸಬೇಕೆಂಬುದಕ್ಕಾಗಲಿ ಅಥವಾ ಸೇರಿಸಬಾರದೆಂಬುದಕ್ಕಾಗಲಿ ಓಟ್ಟು ಕೊಡಲು ಅರ್ಹರ್‍ಯಾರು?

2. ಕೊಡಗನ್ನು ಮದ್ರಾಸಿಗೆ ಒಂದುವೇಳೆ ಸೇರಿಸಲ್ಪಟ್ಟರೆ ಈ ದೇಶಕ್ಕೆ ಒಳಪಟ್ಟ ರಾಜಕೀಯ ವಿಷಯಗಳನ್ನು ಕೈಕೊಳ್ಳಲು ದೇಶೀಯರು ಸಿದ್ಧರಾಗಿದ್ದಾರೆಯೇ? ಹಾಗಿದ್ದ ಪಕ್ಷ ಯಾವಯಾವ ವಿಭಾಗಗಳಲ್ಲಿ ಚಳವಳಿಯನ್ನು ಎಬ್ಬಿಸುವರು?

3. ಮದ್ರಾಸಿಗೆ ಸೇರಿಸದೆಹೋದ ಪಕ್ಷ ಚೀಫ್ ಕಮಿಷನರವರ ದೇಶಕ್ಕೆ ನ್ಯಾಯವಿಧಾಯಕ ಸಭೆಯೊಂದನ್ನು ಕೊಡುವದಾಗಿ ವಾಗ್ದಾನ ಮಾಡಿದ್ದು ನೆರವೇರಿದಲ್ಲಿ ದೇಶೀಯರು ಅಂಥಾ ಸಭೆಯಲ್ಲಿ ಜವಾಬ್ದಾರಿ ಕಾರ್ಯನಿರ್ವಾಹಕತ್ವವನ್ನು ವಹಿಸಲು ಸಿದ್ಧರಾಗಿದ್ದಾರೆಯೇ? ಸಭೆಯು ದೊರಕಿದ ಕೂಡಲೆ ಯಾವಯಾವ ಕಾನೂನು ಕಾಯಿದೆಗಳನ್ನು ಈಗಿನ ಕಾಲಕ್ಕನುಗುಣವಾಗಿ ತಿದ್ದುಪಡಿಮಾಡಲು ಅಂಥಾ ಸಭೆಗೆ ಚುನಾಯಿಸಲ್ಪಡತಕ್ಕ ಮೆಂಬರುಗಳು ಕೈಕೊಳ್ಳುವರೋ?

ಬಿ ಎಂ.

ಅಯ್ಯಾ,

ಈ ಕೊಡಗು ಪತ್ರಿಕೆಯನ್ನು ಆತ್ಯಾದರದಿಂದ ಓದಿ ನಾಲ್ಕು ದಿವಸನ್ನು ಪಾನಮಾಡಿದೆನು. ಇದು ಪರಸ್ಪರದಲ್ಲಿ ಆನಂದವಾಯಿತು. ಈ ಸ್ವದೇಶಾಭಿಮಾನದಿಂದ ಈ ಪತ್ರಿಕೆಯನ್ನು ಕೈಕೊಂಡುದ್ದಕ್ಕಾಗಿ ನಮ್ಮ ಕರ್ನಾಟಕ ಬಾಂಧವರು ಕೊಡಗು ದೇಶೀಯರೆಲ್ಲರೂ ಕೃತಜ್ಞರಾಗಿ ಸಂತೋಷಿಸುವರೆಂಬುದರಲ್ಲಿ ಸಂಶಯವಿಲ್ಲ. ಈ ದೇಶದ ಪ್ರಜೆಗಳಲ್ಲಿ ನಾಗರೀಕತೆಯನ್ನು ವಿದ್ಯೆಯನ್ನು ಹೆಚ್ಚಿಸುವದಲ್ಲದೆ ಕೃಷಿ ಶಿಲ್ಪಾದ್ಯನೇಕ ವಿಷಯಗಳನ್ನು ಜನರಿಗೆ ಸುಲಭವಾಗಿ ತಿಳಿಸತಕ್ಕದೆಂಬುದೆ ನನ್ನ ಅಭಿಪ್ರಾಯ. ನಮ್ಮ ಕರ್ನಾಟಕ ಭಾಷಾಭಿಮಾನಿಗಳು ದೇಶಾಭಿಮಾನಿಗಳು, ಇದೇ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ಲೋಕೋಪಕಾರಾರ್ಥವಾದ ನಮ್ಮ ಪ್ರಯತ್ನಕ್ಕೆ ತಮತಮಗೆ ಸಾಧ್ಯವಾದ ರೀತಿಯಲ್ಲಿ ಸಹಾಯಮಾಡಿ ಪ್ರೋತ್ಸಾಹಿಸಬೇಕೆಂದು ಹೀಗೆ ಸರ್ವತೋಮುಖವಾಗಿ ಸಮಾಜ ಸಂಪತ್ತುಗಳ ಬಲದಿಂದ ನಮ್ಮ ಅಮೂಲ್ಯವಾದ ಈ ಕೊಡಗು ಬಾಲೆಯು ಚಿರಸ್ಥಾಯಿಯಾಗಿರಬೇಕೆಂದು ನಾನು ಭಗವಂತನನ್ನು ಪ್ರಾರ್ಥಿಸುವೆನು.

ಎಲೆ ಕೊಡಗು ಬಾಲೆ |
ಲೋಕದೊಳೊಲುಮೆಯ ನಾನುಕ್ತ ಬಾಳು ನೀಂ ಚಿರಕಾಲಂ ||
ಸಲೆ ಸುಖದುಃಖಂಗಳ ನುಡಿ |
ಯೊಳಪ್ಪುದ ನಧಿಕವಾಸ್ಯಕೆಯು ನಿನಗಸುದಾ ||

ಟಿ ಬಿ. ಸೋಮಯ್ಯ.

ಸಂಪಾದಕರೆ

ಮೂರು ನಾಲ್ಕು ವರ್ಷಗಳ ಹಿಂದೆ ನಮ್ಮ ಸ್ಕೂಲಿನಲ್ಲಿ ತೇರ್ಗಡೆ ಹೊಂದಿ ವಿದ್ಯೆ ಕಲಿಯಲು ಹೊರಗೆ ಹೋಗಿದ್ದ ಎಂ ಎಸ್ ರಾಮರಾವು ಮೃತಪಟ್ಟನೆಂದು ಮೆ|| ಎಂ. ಎಸ್. ಶಾಂತಣ್ಣನವರು ಅವನ ತಂದೆ ತಾಯಿಗಳ ವ್ಯಸನದಲ್ಲಿ ಪಾತ್ರರಾಗಿ [illegible] ಎಂದು ತೋರಿಸುವದಕ್ಕಾಗಿ ಆ ದಿನ ಶಾಲೆಯನ್ನು ಮುಚ್ಚಿದಲ್ಲದೆ ಅವನ ಜ್ಞಾಪಕಾರ್ಥವಾಗಿ ಒಂದು ಬೆಳ್ಳಿಯನ್ನು ಅವನ ತಂಗಿಗೆ ಕೊಟ್ಟಿತು. ಕರುಣಾಯು ಈ ಎರಡು ಮೂರು ವರ್ಷಗಳಲ್ಲಿ ಕೆಲವು ಉಪಾಧ್ಯಾಯರು ಮೃತಪಟ್ಟರೆಂದು ಶಾಲೆಯನ್ನು ಮುಚ್ಚಿದರು. ಹೀಗಿರುತ್ತಲು ಎಂ ಪಿ ಮುತ್ತಣ್ಣನೆಂಬ ವಿದ್ಯಾರ್ಥಿಯು ಮೃತಪಟ್ಟನು; ಕಡೆದ ಪರವಾಸ್ಯನು ವಿದ್ಯಾರ್ಥಿಯಾಗಿಯೂ, ದೇಶಸಹಾಯಕ ಯುವಕರಲ್ಲಿ ಒಬ್ಬನಾಗಿದ್ದ, ಡಿ. ಕೆ. ಬೆಳ್ಯಪ್ಪನೆಂಬ ಯುವಕನ ಪ್ರಾಣವನ್ನು ಕದ್ದೊಯ್ಯುವನು. ಇವರಿಬ್ಬರ ಮರಣವು ಅರಳುವ ಹೂವಿನ ಬಂಡವಾಳದಿಂದ ಬೇರುಕಿತ್ತು ಬಿಸಾಕಿದ ಕಮಲಕ್ಕೆ ಸಮಾನವಾಗಿರುವುದು. ಅಂಥಾ ಯುವಕರ ವಿಷಯವಾಗಿ ನಾವು ಬಹಳ ವ್ಯಸನಪಡುತ್ತೇವೆಂದೂ ಅದ್ದರಿಂದ ಇವರ ಮರಣಕ್ಕಾಗಿ ನಮ್ಮ ದುಃಖ ಸೂಚನೆಗೋಸ್ಕರ ಶಾಲೆಯನ್ನು ಮುಚ್ಚಬೇಕೆಂದು ಕೇಳಿದಲ್ಲಿ ನಮ್ಮ ಅಂಗಾಮಿ ಮುಖೋಪಾಧ್ಯಾಯರು ಒಪ್ಪಲಿಲ್ಲವೆಂದು ನಮ್ಮ (ಸ್ಕೂಲು) ಸೆಕ್ರೆಟರಿಯವರು ಹೇಳಿದನ್ನು ಕೇಳಿ ಬಹಳ ವ್ಯಸನಪಡುವುದಲ್ಲದೆ ನಾವು ಈ ಮೃತಪಟ್ಟ ಯುವಕರ ತಂದೆತಾಯಿಗಳ ವ್ಯಸನದಲ್ಲಿ ಭಾಗಿಗಳೆಂದು ತಿಳಿದುಕೊಳ್ಳಬೇಕಾಗಿ ಬೇಡುತ್ತೇವೆ.

ಸ್ಕೂಲ್ ವಿದ್ಯಾರ್ಥಿ

ಅಯ್ಯಾ,

ಇದೆ ತಾರೀಖು 5 ರಲ್ಲಿ ನಮ್ಮ ಡಿಸ್ಟ್ರಿಕ್ಟು ಮೆಜಿಸ್ಟ್ರೇಟ್ ದೊರೆಗಳಾದ ರಾವುಸಾಹೇಬ್ ಮೆ|| ಕೇಟೋಳಿರ ಚಂಗಪ್ಪನವರು ಸೋಮವಾರಪೇಟೆಗೆ ದಯಮಾಡಿಸಿದ್ದರು. ಇವರಿಗೆ ಈ ಪದವಿಯು ದೊರೆತ ಮೇಲೆ ಇಲ್ಲಿಗೆ ದಯಮಾಡಿಸಿದ್ದು ಇದೇ ಮೊದಲು. ನಮ್ಮ ದೇಶಾಜನರಿಗೆ ಇಂಥ ದೊಡ್ಡ ಪದವಿಯು ದೊರೆತ ಸಂಗತಿಯಲ್ಲಿ ಮೂರು ತಾಲ್ಲೋಕಿನ ಜನರು ಭಕ್ತಿ ವಿಶ್ವಾಸವನ್ನು ತೋರಿಸಲಿಕ್ಕೆ ಮಹಾನುಭಾವರಾದ ಶಾಪ್ ಕಾಂಟ್ರಾಕ್ಟರು ಮೆ|| ಶಿಂಗೂರು ಲಿಂಗಪ್ಪನವರು ಮತ್ತು [illegible] ಬಸಪ್ಪನವರು ಸಹ ಶಾಯಿಯಾಗಿ ಇದ್ದ ಇದೇ ತಾರೀಖು [illegible] ಅವರ ಮನೋಭಿಪ್ರಾಯವನ್ನು ನೆರವೇರಿಸಲಿಕ್ಕೆ ತಕ್ಕ ಸಮಯವೆಂದು ತಿಳಿದು ಡಿಸ್ಟ್ರಿಕ್ಟು ಮೆಜಿಸ್ಟ್ರೇಟ್ ಸಾಹೇಬರವರನ್ನು ಸ್ವಕೀಯ [illegible] ಉದ್ಯೋಗಸ್ಥರೊಡನೆ ಕರೆಯಿಸಿ ಮತ್ತು ಗ್ರಾಮದ ಮಹನೀಯರುಗಳು ಸಹ ಬಹು ಭಕ್ತಿಯಿಂದ ಔತಣವನ್ನು ಕೊಟ್ಟರು. ಅನೇಕ ಜನರು ನೆರೆದಿದ್ದರು. ಸಾಹೇಬರವರು ಬಾಗಿಲಿನಿಂದ ಮುಖ್ಯ ದ್ವಾರದವರೆಗೆ ವಾದ್ಯಗೋಷ್ಠಿಯಿಂದ ಕರೆತಂದರು. ಊಟ ಉಪಚಾರಗಳು ನಡೆಯುತ್ತಿರುವಾಗ್ಗೆ ಮೆ|| ಚಂಗಪ್ಪನವರಿಗೆ ದೊಡ್ಡ ಅವರ ದೇವರ ಸಂಗೀತ ಯಲ್ಲಿ ಪರಮ ಸಂತೋಷವನ್ನುಂಟುಮಾಡಿತು. ಸೂಚಿಸಿ ಒಂದು ಉಪನ್ಯಾಸವನ್ನು ಕೊಡಬೇಕೆಂದು ಮಾಡಿದಾಗ ಮೆ|| ಕೆ ಅಪ್ಪಯ್ಯನವರು ಕೆಲವು ಸಂಗತಿಯಲ್ಲಿ ದಯಮಾಡಿದ ಸಂಪತ್ತು ಸಾಹೇಬರವರು ಅನೇಕ ಬುದ್ಧಿವಾದಗಳ ನ್ನೊದಗಿಸುವ ಎಚ್ಚರವನ್ನು ಕೊಟ್ಟರು. ಊಟ ಉಪಚಾರವು ಮುಗಿದ ನಂತರ ಮಂಗಳಾರತಿಯಾದ ಗಾನವನ್ನು ಮಾಡಿ ಸಾಹೇಬರವರ ಕೊರಳಿಗೆ ಪುಷ್ಪಹಾರವನ್ನು ಧರಿಸಿ ವಾದ್ಯದಿಂದೊಡಗೂಡಿ ಸಾಹೇಬರವರನ್ನು ಬಂಗ್ಲೆಗೆ ಬಿಟ್ಟು ಬಂದರು. ರಾಜಭಕ್ತಿಶೀಲರಾದ ಮಹಾನುಭಾವರುಗಳು ನಮ್ಮ ದೇಶಸ್ಥರಿಗೆ ದೊಡ್ಡ ಪದವಿ ದೊರೆತ ವಿಷಯದಲ್ಲಿ ನಮ್ಮ ಉಪಕಾರಮನಸ್ಸಿನಿಂದಲೂ ತಾಲ್ಲೋಕಿನ ಗೌರವವನ್ನು ತೋರಿಸಿದ ವಿಷಯ ಬಹಳ ಸಂತೋಷಕರವಾದ ಸಂಗತಿಯಾಗಿದೆ.

ಕುಶಾಲನಗರ [illegible]

ಸಂಪಾದಕರೆ

ಮೊನ್ನೆ ತಾನೇ ಮಡಿಕೇರಿಯ ಉದ್ಯೋಗಸ್ಥರ ವ್ಯಕ್ತಿ ಒಬ್ಬರ ಪತ್ನಿಯು ಮೃತಪಟ್ಟಳೆಂಬ ದುಃಖವಾರ್ತೆಯನ್ನು ಕೇಳಿ ಆದರದಿಂದ ಅವರ ಮನೆಗೆ ಹೋದೆನು. ಅಲ್ಲಿಯ ಆಚಾರಗಳನ್ನು ನೋಡುವಾಗ್ಗೆ ನವನಾಗರೀಕತೆಯ ಉತ್ಕೃಷ್ಟತೆಯುಗಳಿಂದ ನಡೆಸಿದ ಶಾವವನ್ನು ನಾನೆಂದೂ ಇಂದಿನವರೆಗೆ ನೋಡಲಿಲ್ಲ. ಅಲ್ಲಿ ನಡೆದ ಆಚಾರಗಳು ಕೊಡಗಿನವೋ ಅಥವ ಇತರರದೋ ಎನ್ನುವಷ್ಟರಲ್ಲಿತ್ತು.

ಮನೆಗೆ ಹೋಗಿ ನೋಡಿದೊಡನೆ ಆಶ್ಚರ್ಯವು ನನ್ನನ್ನು ಮುಂದೆ ಮಾಡಿತು. [illegible] ನವಾಜಿಸದೇ ಗೋಚರಿಸಲಿಲ್ಲ. ನೆರೆದಿದ್ದ ಪುರುಷಸಮೂಹವು ಪಟ್ಟೆಯ ಪ್ರೇತದ ಶವವನ್ನು ಹಸ್ತದಿಂದ ಮುಟ್ಟಿ ಸತ್ಯವಾಗಿ ತೋರಿಸತಕ್ಕಂತ ಯಾವುದೊಂದು ಮರ್ಯಾದೆಯು ಕಾಣಬರಲಿಲ್ಲ. [illegible] ಕೆಲವರು ಬೂಟ್ಸುಗಳನ್ನು ಹಾಕಿಕೊಂಡು ಮನೆಯ ಹೊಸ್ತಿಲನ್ನು ಹತ್ತಿ ಒಳಗೆ ಹೋಗುವುದೇ ಎಂದು ಕೇಳಿ ಆಶ್ಚರ್ಯಪಡುತ್ತಿದ್ದರು. ಆ ಹಾ! [illegible] ಮನೆಯ ಒಳಗೆ ಹೋಗುವುದು ಎಂಬ ಸಂಶಯವನ್ನು ಹುಟ್ಟಿಸದು ವಂಥಾ ಬೂಟ್ಸಿಗೆ ಸೇವಕರಾಗಿರುವ ಗತಿಯೇ! ಶವವನ್ನು ಮುಟ್ಟಿ ಅದಕ್ಕೆ ಮರ್ಯಾದೆಕೊಡಬೇಕೆಂಬ ನಮ್ಮ ಅಭಿಪ್ರಾಯದಿಂದ ಹೋಗತಕ್ಕವರು ಬೂಟ್ಸನ್ನು ಹಾಕಿಕೊಂಡು ಹೋಗುತ್ತಿದ್ದರ ಅರ್ಥವೇನು? [illegible] ಶವವನ್ನು ಮಂಚದ ಕಟ್ಟಿ ಹೆಗಲುಗಳ ಮೇಲೆ ಹೊತ್ತುಕೊಂಡು ಹೋಗುವ ಪದ್ಧತಿಯನ್ನು ಮರೆತೇ ಬಿಟ್ಟರೋ. ಅಥವಾ ಹಾಗೆ ಮಾಡುವುದು ನಾಚಿಕೆಯೆಂದು ಅದನ್ನು ಬಿಟ್ಟುಬಿಟ್ಟರೆಂಬುದನ್ನು ತಿಳಿಯಲಾಗುವುದಿಲ್ಲ. ಕೆಲವರು ಶವವನ್ನು ಹೊತ್ತುಕೊಂಡುಹೋಗಬೇಕೆಂಬ ಪದ್ಧತಿ [illegible] ಕೆಲವರು ಅದನ್ನು ಬಿಸಿಲು ಕಡೆ ಬಂಡಿಯಲ್ಲಿ ಹಾಕಿ [illegible] ಒಯ್ದರು. [illegible] ಶವವನ್ನು ಹೊರಲಿಕ್ಕೆ ಶಕ್ತರಿಲ್ಲದಿದ್ದರೇ? [illegible] ವಾದ್ಯಗಳನ್ನು ಏಕೆಬಿಡದೆ ಹೊಯ್ಯುತ್ತಿದ್ದರು? ಮದುವೆಯ ಸಾಹಸವನ್ನು [illegible] ವಾದ್ಯಗಳ ಸ್ಥಾನ ಅಗ್ರಸ್ಥಾನ (ಕಹಳೆ) ಕೊಂಬುಗಳ ಧ್ವನಿಯೇ ಕೇಳುತ್ತಿಲ್ಲ. ಮಡಿಕೇರಿಯ ಕಲವರೆಯುಳ್ಳ ನವನಾರು ಕೊಡಗಿನವರೂ ಕೂಡ ಅದಿತ ವಾರ ದಿವಸ (ಕಟ್ಟೇರಿಗೆ ದಿನ) ಅಲ್ಲ ನಂದಿ ಸುಮಾರು (70) ವರ್ಷ ಬಾಳಿ ಕೊಂಡಿನ ಪತ್ನಿ ಕೇಳದೆ ಇದ್ದದ್ದು ಮತ್ತು ಬೋರು ಗುಂಡಿನ ಶಬ್ದ ಕೇಳದೆ ಇದ್ದದ್ದು ಅಥವಾ ನಂಬಿಕೆಯು [illegible] ಇದ್ದದ್ದೇ ಕಾರಣಗಳೆಂಬುದು ಗೊತ್ತಾಗುವುದಿಲ್ಲ. ಅಲ್ಲದೆ ಇವು ಕೊಡಗಿನಲ್ಲಿ ಸಾವಿನ ಸಮಯದಲ್ಲಿ ನಡೆಯಲಿಲ್ಲವೆಂದು ಆಶ್ಚರ್ಯಕರವಲ್ಲವೆ?

ಗ್ರಾಮನಿವಾಸಿ

ಅಯ್ಯಾ,

ತಿರುಪ್ಪದಿಲ್ಲೀ ಈಗ ಅನೇಕ ಚರ್ಚೆಗಳು ಬಾಧಿಸುತ್ತಿವೆ. ನಿನ್ನ ಜನರ ನಗೆಗೆಯು ಅಂಥಾದ್ದಾಗಿದೆ ನಿನ್ನ ಹೆಸರೋ, ಕೊಡಗಿನ ಸರ್ವಕಾರ್ಯ ಪ್ರಸಕ್ತನೆಂಬಂತಿದೆ ನಿನ್ನ [illegible] ಗುಣಗಳು [illegible] ನನ್ನ ಈ ಕೆಳಗಿನ ಎರಡು ಪಂಕ್ತಿಗಳಿಗೆ ಕೊಂಚ ಸ್ಥಳದೊರಕಿತೋ?

ಕೆಲವು ತಿಂಗಳುಗಳಿಂದ ಕೆಲವು ಕೊಡಗು ಮನುಷ್ಯರ ಸನ್ನಿಕಿಕೆ [illegible] ಪತ್ರಿಕೆಯಲ್ಲಿ ತಪ್ಪುಪಾಟುಮಾಡಲು ಕೊಡಗಿರು ಶಾಸ್ತ್ರ ನನಗೆ ನಗೆಯುಕ್ತ ನಿನಗೆ ಹೇಗೆ [illegible] ಕರ್ನಾಟಕ ಮಾಸಪತ್ರಿಕೆ [illegible] ತೆರೆಯಿಂದ ನೀರು ಮೊಕ್ಕಾ [illegible] ಅವರಿಗೆ ಗೋಚರವಾಗಲಿಲ್ಲವು. ಮದುವೆ ಬಿಚ್ಚಿಸಿದ ಕೊಡಗರು ಬದಲಾದರು. ಮದುವೆಗೆ [illegible] ಕಾರ್ಯ ಇಲ್ಲದಲ್ಲಿ ನಾಂದಿ ಆರಾಧೋಗ್ಯ ಅದೂಡಿನ ಮೂರು ದಿನ ಹೆಚ್ಚಾಯಿತು ಒಂದುದಿನ ಎತಲು ಸುಡಿ ಕೊಟ್ಟು ಪಾಟು [illegible]. ರಾತ್ರಿ ಬ್ರಾಹ್ಮಣನ ಮನೆಯ ಅವರಲ್ಲಿನ ಅದೆ ಮೊದಲಾದ ಬದಲಾವಣೆ ಉಡುಗೆಯಲ್ಲು ಪಾವಡೆಯು [illegible]. ಕೊಡಗಿನ ಪಾಯಸ, ಬಹಳ ಕೆಲೆ, ಅಯ್ಯೋ ಕೆಲವು ಕಡೆಗಳಲ್ಲಿ ಓಗೆಲ ನಡೆಯು [illegible] ಯಾ ಇದೆ ನು ವಿವಾಹಕಾಲದ ಬುದ್ಧಿಯೇ! ಕೊಡಗಿನಿಗೆ ಎಲ್ಲಿ! [illegible] ಅದೇ ಮದುವೆಯಲ್ಲವೆ ವಧುವಿಯರಿಗೆ ಮದುವೆ ಇಲ್ಲವೋ? ಪತ್ತಿದ ಮನೆ [illegible] ಎಂಬವರಿಗೆ ಪಟ್ಟೆ [illegible] ಕೊಡಗಿನವರು, ಮತ್ತೆ [illegible] ಪಟ್ಟೆಪಟ್ಟಿಗೆ ಇವೆಲ್ಲ ಸ್ತ್ರೀಯರಿಗೆಂದ ಜನರು [illegible]?

ಮದುವೆ ಮನೆಯಲ್ಲಿ ಸಕ್ಕರೆಯನ್ನು ಊಟವು ತೆರಳುವದಲ್ಲದೆ ಬಿಟ್ಟಿಗೆ ಕೇಳುವವರು [illegible] ಇದು ಆಗುವ [illegible] ಹೊಂದಿರುವ ಪದ್ಧತಿಗಳಿಗೆ ಸುಧಾರಣೆ (Reforms) ತಪ್ಪಿದ ಪದ್ಧತಿ [illegible] (Wrong form) ಅವರು ನಿಂತು ಅಗ್ನಿ, [illegible] ಮೊದಲಾದವರ ಮುಂದೆ ಆಚರೆ ಆದರೋ [illegible] ಯಾವ [illegible] ಪರಮೆಶ್ವರನಿಗೆ ಹಾಡೆ ಇದನ್ನು ತಿರಸ್ಕರಿಸಿ [illegible] ಇದನ್ನು ಒಡೆಯಲು ಕಾರಣವೇನೆಂದು ಕೇಳು [illegible] ಅದು ಅದನ್ನು ಇದರಿಂದ, ಒಂದೇ ದಿನ [illegible] ಕಾರ್ಯವನ್ನು [illegible] ನಡೆದರೆ ನಮ್ಮ [illegible] ಒಂದ ಹೊಟ್ಟೆ ಕಟ್ಟವಾ [illegible] ಮದುವೆ [illegible] ಬಿಡುವದು, ಮಾಡುವದು ಬಿಡುವದು, ಆದ [illegible] ಮಾಡುವದು! ಕಾಲವೇನು ಹೀಗಿದೆ, ನಮ್ಮ [illegible] ಸಂಗಡೋಣವೇ ಶಾಸ್ತ್ರಗಳಿಗೆ ಭಿನ್ನ [illegible] ಈ ಮನುಷ್ಯನು ಉಪದೇಶ ಹೊಂದಿದರೆ [illegible] ನಾನು ಹೇಳುವುದನ್ನು ಕೇಳಿ [illegible] ಮದುವೆ ಕಾರ್ಯ ನಡೆಸುತ್ತಿರುವ ಭ್ರಾಂತು [illegible] ಎರಡುವರ್ಷ ಹಿಂದೆ ಇದ್ದ ನಮ್ಮ [illegible] ಇರುವ ಕೊಡಗಿನ [illegible] ಈ ಪತ್ರಿಕೆಯಲ್ಲಿ ನೋಡುವೆನು. ಬದಲಿಕ್ಕೆ ಮುಂದೆ [illegible] ಕಾರಣವಲ್ಲವು ಬೇರೆ ಇದೆ ಎಂದು ತೋರಿಸುತ್ತೇನೆ.

ಅಚ್ಚಯ್ಯ

ಶುಭಶೋಭನಗಳಲ್ಲಿ, ಸಂತೋಷಕೂಟಗಳಲ್ಲಿ!
ಮದುವೆಸಮಂಜಗಳಲ್ಲಿ, ಸಭಾಕೂಟಗಳಲ್ಲಿ!!

ಬೇಕಾಗುವ

ರೇಶ್ಮೆ ಸೀರೆ, ರೇಶ್ಮೆ ಪಾವಸ್ತ್ರ, ರೇಶ್ಮೆ ಮದಿಸ್ತ್ರ ರೇಶ್ಮೆ ಪಾಂಚೆ, ಸಾಧಾರಣ ಪಂಚೆ, ಇತ್ಯಾದಿ ನಾನಾತರದ ಕೋಟು ಬಟ್ಟೆಗಳು ಮತ್ತು ಇತರ ಸಾಧಾರಣ ಉಡಿಗೆ ತೊಡಿಗೆಗಳು ಯಾವತ್ತೂ ನಮ್ಮಲ್ಲಿ ಸಿದ್ಧವಾಗಿವೆ. ಬಟ್ಟೆಗಳೂ ನಮ್ಮಲ್ಲಿಯೇ ಮಗ್ಗಗಳಿಂದ ತಯಾರಾಗುವುವು. ತಮಗೆ ಬೇಕಾದುದನ್ನು ತಿಳಿಸಿರಿ.

ಕೆ. ನಂಜಪ್ಪಶೆಟ್ಟಿ,
ಗವರ್ನಮೆಂಟ್ ಕಂಟ್ರಾಕ್ಟರ್,
ಮತ್ತು ಬಟ್ಟೆ ವ್ಯಾಪಾರಿ,
ಸೋಮವಾರಪೇಟೆ.

'VOLTALITE"
Self Generating Electric Cycle Set.
An Inexhaustible supply of Electricity generated at no cost



Lighting—No Oil, No Acid, No Battery No Acetylene
The first cost The only cost. Will last for ever.
Apply to—**K R THIRUPAD & Bros,**
Sayajee Rao Road, MYSORE

ಗಮನಿಸಿ! ಗಮನಿಸಿ!! ಅಯ್ಯಾ ಗಮನಿಸಿ!!!
ಬಡವರಾಗಲಿ, ಧನಿಕರಾಗಲಿ, ಗಮನಿಸಬೇಕು!
ಮುಖ್ಯವಾದ ಪ್ರಸಿದ್ಧ ಪತ್ರಿಕೆ.
ಶೋಧಿಸಿದ ಶುದ್ಧವಾದ, ಮಂಜಿನಂತೆ, ಬೆಳ್ಳಗಿರುವ, ಆರೋಗ್ಯಕರವಾದ ಮತ್ತು ಪರಿಷ್ಕಾರವಾದ (ಪೊಳವಾದ)

ಅಡಿಗೆ ಉಪ್ಪು

1. ಈ ಉಪ್ಪು ನಮ್ಮ ಸೀಮೆಯಲ್ಲಿ ಅಂಗಡಿಬೀದಿಯಲ್ಲಿ ಜನಾವಳಿಗೆ ಬರಲು ಇದೇ ಮೊದಲು. ಮತ್ತು ಈ ಉಪ್ಪು ಎಲ್ಲಾ ವಿಧವಾದ ಪೈಪೋಟಿಗಳನ್ನು ನಿವಾರಿಸಲಾಗುತ್ತೆ.
2. ಈ ಶುಭ್ರವಾದ, ಶೋಧಿಸಿದ, ಮಂಜಿನಂತೆ ಬೆಳ್ಳಗಿರುವ, ಆರೋಗ್ಯಕರವಾದ ಉಪ್ಪು ನೋಡುವುದಕ್ಕೆ ಅಂದವಾಗಿರುವುದಲ್ಲದೆ ಇದರಲ್ಲಿ ಕ್ಷಾರವು ಅತ್ಯಧಿಕವಾಗಿಯೂ ಮತ್ತು ಆಹಾರವನ್ನು ಜೀರ್ಣಿಸಿ, ರಕ್ತವನ್ನು ಶುದ್ಧಿಮಾಡತಕ್ಕದ್ದೆಂದು ಅನೇಕ ಡಾಕ್ಟರುಗಳು ಅಭಿಪ್ರಾಯಪಟ್ಟಿರುವುದಾಗಿಯೂ ಇರುತ್ತದೆ. ಕ್ರಯ ಪೌಂಡ್ ಒಂದಕ್ಕೆ ೨ ಆಣೆ

ಕೆ. ಆರ್. ತಿರುಪಾದ್ ಅಂಡ್ ಬ್ರದರ್ಸ್,
ಸಯಾಜಿರಾವ್ ರೋಡು, ಮೈಸೂರು.

SUBBANNA, SANGAPPA,
Receiving and Forwarding Agents, General Merchants and Commission Agents. [illegible]
Santhepet, Mysore.

Despatch and supply whatever you receive at Mysore Railway Station and whatever food stuffs and Stationaries you want to have from Mysore. Prompt attention, moderate commission and quick disposal are their motto.

ಮೈಸೂರು ರೈಲ್ವೆ ಸ್ಟೇಷನ್‌ನಿಂದ ನೀವು ತೊಂದರೆಯಿಲ್ಲದ ಸಾಮಾನುಗಳ ರೈಲ್ವೆ ಪಾರ್ಸಲುಗಳನ್ನೂ, ಮೈಸೂರಿನಿಂದ ತರಿಸಿಕೊಳ್ಳಬೇಕಾದ ಸಾಮಾನುಗಳ ಪಟ್ಟಿಯನ್ನು ಮೈಸೂರು ಸಂತೇಪೇಟೆಯಲ್ಲಿರುವ
ಸುಬ್ಬಣ್ಣ ಸಂಗಪ್ಪನವರಿಗೆ ತಿಳುಹಿಸಿ.
ಅವರು ಜಾಗ್ರತೆಯಾಗಿಯೂ, ಜೋಪಾನವಾಗಿಯೂ, ಸುಲಭವಾದ ಕಮಿಷನ್ನಿನಲ್ಲಿಯೂ ನಿಮಗೆ ಸರಕು ರವಾನಿಸುತ್ತಾರೆ. ಮಿಕ್ಕ ವಿಚಾರ ಬರೆದು ತಿಳಿದುಕೊಳ್ಳಿ.

ರೋಗಿಗಳೂ, ರೋಗವಿಲ್ಲದವರೂ
ಶ್ರೀಕೃಷ್ಣತೈಲವನ್ನು
ಉಪಯೋಗಿಸಬೇಕು.

ಎಂತಹ ಕಠಿಣ ಕಾಯಿಲೆಯುಳ್ಳವರೇ ಆಗಲಿ ನೆತ್ತಿಗೆ ಇದನ್ನು ಉಪಯೋಗಿಸಿದರೆ ಶರೀರದ ತಲ್ಲಣವನ್ನು ತೆಗೆದುಹಾಕಿ ಕಾಯಿಲೆಯನ್ನು ಕಡಿಮೆಮಾಡುವುದು. ಸುಲಭ ಕಾಯಿಲೆಗಳಲ್ಲವೂ ಬರಿ ಇದರ ಸೇವನೆಯಿಂದಲೇ ಗುಣವಾಗುವುವು. ತೆಗೆದುಕೊಂಡ ೨ ಘಂಟೆಯಲ್ಲಿ ಸುಖಭೇದಿ ಮಾಡುವುದು. ಬೇರೆ ಭೇದಿ ಮಾತ್ರೆಗಳಂತೆ ಸಂಕಟ, ಹೊಟ್ಟೆನೋವು ಮುಂತಾದುವನ್ನುಂಟುಮಾಡುವುದಿಲ್ಲ. ಸಾಮಾನ್ಯಜ್ವರ, ಕೆಮ್ಮು, ಊದು, ಮೂತ್ರಬಂಧನೆ, ಆಲಸ್ಯ, ಉಷ್ಣ, ಪಿತ್ತ, ಶೀತಸಂಬಂಧ ಕಾಯಿಲೆಗಳು, ಜೀರ್ಣಕೋಶದ ಅಕ್ರಮತೆ, ಕರುಳುಗಳಲ್ಲಿ ಕ್ರಿಮಿಗಳಿಂದ ಹುಟ್ಟಿ ಉಬ್ಬರವಾಗುವುದು, ದುರ್ವಾಸನೆಯುಳ್ಳ ವಾಯುಗಳು ಹುಟ್ಟುವುದೇ ಮುಂತಾದುವನ್ನೆಲ್ಲಾ ಗುಣಪಡಿಸುತ್ತದೆ.

ಚಿಕ್ಕಮಕ್ಕಳಿಂದ ಮುದುಕರವರೆಗೆ ಸರ್ವದ ಯಾವ ಕಾಲದಲ್ಲೂ ಉಪಯೋಗಿಸಬಹುದು. ಯಾವಾಗಲೂ ಒಂದು ಶೀಸೆಯನ್ನು ಹತ್ತಿರವೇ ಇಟ್ಟುಕೊಳ್ಳಿ.

೪೦ ಮಾತ್ರೆ ಶೀಸೆಗೆ ೧೨ ಆಣೆ.

ಚಂದ್ರಕಲೆಯು.
ಶರೀರದಲ್ಲಿನ ಪ್ರತಿಯೊಂದು ಧಾತುವನ್ನೂ ಸೇರಿಸಿ ಶರೀರದ ರೋಗಗಳನ್ನು ಪರಿಹರಿಸುವುದು. ರೋಗವಿಲ್ಲದವರಿಗೆ ಮಾಂಸ, ಮೆದುಳು, ಮೂಳೆ, ನರ, ಮುಂತಾದುವುಗಳನ್ನು ಬಲಪಡಿಸಿ ಧಾತು ಗಟ್ಟಿಮಾಡಿ ದೃಢಕಾಯರನ್ನಾಗಿ ಮಾಡುತ್ತದೆ. ರೋಗವಿದ್ದವರಿಗೆ ಅಶಕ್ತಿ, ಗಂಡೆ, ಒಳಜ್ವರ, ವಾತ, ಪ್ಲೂರೆಸಿ ಎಂಬ ಪಕ್ಕನೋವು, ಪಿತ್ತಕೋಶದ ರೋಗಗಳು, ಮೂತ್ರಕೋಶದ ರೋಗಗಳು, ಮಲಬದ್ಧತೆ, ನರಗಳ ಕಾಯಿಲೆಗಳು, ನರಗಳ ಚಳುಕು, ಮಿದುಳಿನ ಕಾಯಿಲೆಗಳು, ಕಾಮಾಲೆ, ಕ್ಷಯ, ಶರೀರದಲ್ಲೆಲ್ಲಾ ಶುದ್ಧಗಳೇ ಮುಂತಾದುವು ಏಳುವುದು, ಹೊಟ್ಟೆನೋವು ಮುಂತಾದುವನ್ನೆಲ್ಲ ಖಂಡಿತ ಗುಣಪಡಿಸುತ್ತದೆ. ಅಮೂಲ್ಯ ಔಷಧಿಗಳಿಂದ ತಯಾರಿಸಿದ್ದು. ಶೀಸೆಗೆ ಮೂರುರೂಪಾಯಿ.

ಇಲೆಕ್ಟ್ರಿಕ್ ಬಾಂ.
ಕಜ್ಜಿ, ಕುರ, ತುರಿಕಜ್ಜಿ, ಗಾಯ, ಸುಟ್ಟಗಾಯ ಮುಂತಾದುವನ್ನೆಲ್ಲ ಗುಣಪಡಿಸುತ್ತದೆ.
ಪೊಟ್ಟಣಕ್ಕೆ ೨ ಆಣೆ.

ಎಕ್ಸ್ಪೋರೆ ಜ್ವರವಿರೇಲಿ.
ನಮ್ಮ ಜ್ವರಾರಿಮಾತ್ರೆಗಳು ತೆಗೆದುಕೊಂಡ ಎರಡುಗಂಟೆಗಳೊಳಗಾಗಿಯೇ ಜ್ವರವನ್ನು ಖಂಡಿತ ಇಳಿಸುತ್ತವೆ. ೧ ಪೊಟ್ಟಣ ಮಾತ್ರೆಗೆ ೧ ರೂ.
ಜ್ವರಗಳನ್ನು ಗುಣಪಡಿಸುವುದಕ್ಕೆ ನಮ್ಮ ಜ್ವರಾರಿ ಮಾತ್ರೆಗಳನ್ನು ಉಪಯೋಗಿಸಿ. ಇವು ಮಲೇರಿಯ, ಸನ್ನಿಪಾತ, ಪಿತ್ತಜ್ವರಗಳು, ಶ್ಲೇಷ್ಮಜ್ವರಗಳು, ಮುಂತಾದುವನ್ನೆಲ್ಲ ಗುಣಪಡಿಸುತ್ತದೆ. ಶೀಸೆಗೆ ೧ ರೂಪಾಯಿ.

ಅನ್ನಕೋಶ, ಪಿತ್ತಕೋಶ ಮುಂತಾದುವುಗಳ ಅಕ್ರಮತೆಯಿಂದ ಹೊಟ್ಟೆನೋವು (ಶೂಲೆ ನಾಮಕಶೂಲೆ) ವಾಂತಿಯಾಗುವುದು, ಅಜೀರ್ಣ, ಮುಂತಾದ ಎಲ್ಲ ತರದ ದಿಸ್ಪೆಪ್ಸಿಯಯೆಂಬ ಜೀರ್ಣಕೋಶದ ಕಾಯಿಲೆಗಳನ್ನೂ ನಮ್ಮ ಶೂಲಾರಿಯು ಖಂಡಿತ ಗುಣಮಾಡುತ್ತದೆ. ೨ ಔಷಧಗಳುಳ್ಳ ೨ ಶೀಸೆಗಳಿಗೆ ೫ ರೂಪಾಯಿ.

ಎಲ್ಲ ತರದ ಕಾಯಿಲೆಗಳನ್ನೂ ಪಕ್ಷವು ಶಾಂತರವೂ, ಶಕ್ತಿರವಿದ್ದೂ ಗುಣಮಾಡುತ್ತೇವೆ. ಜನರಲ್ ಪೆರಲಿಸಿಸ್ ಎಂದರೆ ಪೂರ್ಣವಾಯು, ಮೂತ್ರಕೋಶದ ಕಾಯಿಲೆ ಮುಂತಾದುವನ್ನು ಗುಣಪಡಿಸಿದ್ದಕ್ಕೆ ನಮಗೆ ಚಿನ್ನದ ಮೆಡಲುಗಳು ಸಿಕ್ಕಿವೆ.

ಡಿ. ಜಿ. ಎಚ್. ಹೌಸ್,
ಸೋಮವಾರಪೇಟೆ, (ಕೊಡಗು).

ಕೈಯಲ್ಲಿ ಕಟ್ಟಲೂ, ಜೇಬಿನಲ್ಲಿಡಲೂ ಅನುಕೂಲವಾದ
ಹೊಸ ಸಮಾನೆಯ ಲೀವರ್ ವಾಚ್.



ಈ ಗಡಿಯಾರಗಳು ವಿಲಾಯತಿಯ ತಯಾರಾದದ್ದು. ಲೀವರ್ ಮೂವ್‌ಮೆಂಟ್‌ಗಳಿಂದ ಮಾಡಿದೆ. ಘಾಳಿ, ಧೂಳು ಸೇರದಂತೆ ಹಿಂಭಾಗದಲ್ಲಿ ಜರ್ಮನ್ ಬೆಳ್ಳಿಯ ಮುಚ್ಚಳವೂ ಮುಂದೆ ದಪ್ಪವಾದ ಕನ್ನಡಿಯೂ ಇವೆ. ಒಳಗಡೆ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ. ಇವು ಸರಿಯಾಗಿ ಕಾಲವನ್ನು ತೋರಿಸುವವು. ಈ ಗಡಿಯಾರಗಳಲ್ಲಿ ಒಂದು ಇದ್ದರೆ ಸಾಕು. ಜೇಬಿಗೂ ಕೈಗೂ ಕಟ್ಟಿಕೊಳ್ಳಲೂ ಸಹ ಅನುಕೂಲವಾದದ್ದು. ಕ್ರಯ ಗಡಿಯಾರ 1 ಕ್ಕೆ ರೂಪಾಯಿ ೨—೮—0

ಕಂಬಳಿ ಟೋಪಿ

ಈ ಟೋಪಿಗಳು ಸಾಚಾ ಉಲನ್ ದಾರದಿಂದ ತಯಾರಿಸಿದೆ. ಚಳಿಗಾಲದಲ್ಲಿಯೂ, ಕಾಯಿಲೆಯಿರುವವರೂ ಉಪಯೋಗಿಸಲು ಬಹು ಅನುಕೂಲವಾದದ್ದು. ಇವನ್ನು ಸಾಧಾರಣ ಟೋಪಿಗಳಂತೆಯೂ, ಕತ್ತಿನವರೆವಿಗೂ ಉಪಯೋಗಿಸಬಹುದು.
ಕ್ರಯ ಉಲನ್ ಟೋಪಿ 1 ಕ್ಕೆ 1—12—0
ವಿಳಾಸ:—ಎಸ್. ಆರ್. ಕೃಷ್ಣ ಅಂಡ್ ಕೋ., 89 ನಾರಾಯಣ ಮೊದಲಿಬೀದಿ, ಮದರಾಸು

ರೋಲ್ಡ್ ಗೋಲ್ಡ್ ಭಂಗಾರದ ರೇಡಿಯಂ ರಿಸ್ಟ್‌ಲೆಟ್ ವಾಚು



ಈ ಗಡಿಯಾರಗಳನ್ನು ಸೀಮೆ ಭಂಗಾರದಿಂದ ಅಮೇರಿಕಾ ದೇಶದಲ್ಲಿ ತಯಾರಿಸಿದ್ದು. ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು. ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುವು. ಇವು ಅಮೇರಿಕಾದೇಶದ ಗಡಿಯಾರಗಳು. ಬಹುದಿನ ಬಾಳಿಕೆ ಬರುವುವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು. ಇವಕ್ಕೆ 5 ವರುಷ ಗ್ಯಾರಂಟಿ ಕೊಡುವೆವು. ಕೈಯಲ್ಲಿ ಕಟ್ಟುವ ಬೆಳ್ಳಿಯ ಸರಪಣಿ ಸಹಿತ ಗಡಿಯಾರ 1 ಕ್ಕೆ 10—8—0 ಕೈಯಲ್ಲಿ ಕಟ್ಟುವ ಸೀಮೆ ಪಟ್ಟಿ ಸಹಿತ ಗಡಿಯಾರ 1 ಕ್ಕೆ 8—8—0 ರೂ

ವಿಳಾಸ:—ಎಸ್. ಎಸ್. ರಾಮ ಅಂಡ್ ಕೊ.,
ಪೋಸ್ಟ್ ಬಾಕ್ಸ್ ನಂ. 214, ಮದರಾಸು

ಮೂನ್ ಲೈಟ್ ಸೋಪು
ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಕತ್ತಿಯಿಂದ ಕ್ಷೌರ ಮಾಡಿಕೊಂಡದ್ದಕ್ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದು ಬಿಡುವುದು.
ನಮ್ಮ ಮೂನ್ ಲೈಟ್ ಸೋಪು ಗಂಧ, ಮೊಡವೆ, ಮಚ್ಚೆ, ಕುಂನವೆ, ಮುಂತಾದುವುಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡುವುದು
3 ಸಾಬೂನುಗಳನ್ನು ಪೆಟ್ಟಿಗೆ 1ಕ್ಕೆ ರೂ. 1—1—0. ಒಂದೇಸಲ 2 ಪೆಟ್ಟಿಗೆ ತರಿಸಿಕೊಂಡರೆ ರೂ. 2—4—0

ವಜ್ರದ ಉಂಗರಗಳು

ಈ ಉಂಗರಗಳನ್ನು ಸೀಮೆ ಭಂಗಾರದಿಂದ ಮಾಡಿದೆ. ಇದರ ಮೇಲುಗಡೆ ಕೆಂಪು, ಹಸರು, ಮುಂತಾದ ಇಮಿಟೇಷನ್ ವಜ್ರದ ಕಲ್ಲುಗಳನ್ನಿಟ್ಟು ಕಟ್ಟಿರುವದು. ನೋಡಿದವರು ನಿಜವಾದ ವಜ್ರದ ಉಂಗರವೆಂದೇ ಹೇಳುವರು. ಬಣ್ಣಕ್ಕೆ ಗ್ಯಾರಂಟಿ 3 ವರ್ಷ ಕೊಡುವೆವು
ಉಂಗರ 1 ಕ್ಕೆ ರೂ 1—12—0.
ವಿಳಾಸ:—ಎಸ್. ಪಾಲ್ ಅಂಡ್ ಕೊ.,
ಪೋಸ್ಟ್ ಬಾಕ್ಸ್ ನಂ 542 ಪಾರ್ಕ್‌ಟೌನ್, ಮದರಾಸು

ಮಧುರೆ, ಮತ್ತು ಕೊನಾಡು ಸೀರೆಗಳು.
17 ಮೊಳ ಪೂರಾ ಇರುವದು ದೊಡ್ಡ ಪಟ್ಟ

ಈ ಸೀರೆಗಳನ್ನು ಹಸನಾದ ಘಟ್ಟಿ ನೂಲಿನಿಂದ ತಯಾರಿಸಿದೆ. ಸುಂದರವಾದ ರೇಷ್ಮೆಯ ಸೆರಗೂ, ಅಂದವಾದ ದೊಡ್ಡ ಅಂಚೂ ಇದೆ. ಶ್ರೀಮಂತರಿಗೂ, ಗರೀಬರಿಗೂ ಅನುಕೂಲವಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಎಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವು ಸೀರೆಗಳನ್ನು ಮಾತ್ರ ತಯಾರಿಸಿರುವೆವು. ಬೇಕಾದವರು ತರಿಸಿ ಪರೀಕ್ಷಿಸಿರಿ.

ಕ್ರಯ ನಂ 1. 6—8—0 ರೂ ನಂ. 2. 7—8—0 ರೂ
ವಿಳಾಸ:—ಎಸ್. ಎಸ್. ರಾಮ ಅಂಡ್ ಕೊ
ಪೋಸ್ಟ್ ಬಾಕ್ಸ್ ನಂ. 214, ಮದರಾಸು

Printed and Published by S. NANJUNDA SASTR[illegible] at The Sreenivasa Press, Mysore for "Kodagu Ltd., Mercara. 22-7-1921.

REGISTERED NO. M. 1550.

ಕೊಡಗು.

ಸತ್ಯೇನ ಧೂಪದಯಯಾ ವಿದ್ಯಾನೀತಿಪ್ರಯುಕ್ತತಃ | ಐಕಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯಸಂಪದ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

[ಸಂಪುಟ ೧] ಕೊಡಗು, ಸನ ೧೯೨೧ ನೇ ಇಸವಿ ಜುಲೈ ತಾರೀಖು ೨೯ ನೇಯ ಶುಕ್ರವಾರ [ಸಂಚಿಕೆ ೯

ವೀರಶೈವರಿಗೆ ಸಂಗ್ರಾಹ್ಯವಾದ ಫೋಟೋಗಳು.

ಶ್ರೀ ಶಿವಯೋಗಿಗಳ ಸಂಘ.—ಭಾಗ್ಯಶಾಲಿ ಜನರು ಹಣವು ವಿರ್ಚುಮಾಡಿ ಅನೇಕ ಶಿವಯೋಗಿಗಳ ದರ್ಶನವನ್ನು ತೆಗದುಕೊಳ್ಳುತ್ತಾರೆ. ಆದರೆ ಶ್ರೀಮಂತರಿಗೂ ಮತ್ತು ಬಡವರಿಗೂ ನಿತ್ಯ ದರ್ಶನ ಆಗುವದಕ್ಕೆ ಫೋಟೋವ ಹೊರ್ತು ಅನ್ಯಮಾರ್ಗವು ಇಲ್ಲದರಿಂದಿರಾ ನಾವು ಪ್ರಸಿದ್ಧರಾದ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ ಗದಗ ತೋಂಟದಾರ್ಯ, ಅಥಣಿ ಶಿವಯೋಗಿ, ಬಾಲಲೀಲಾಸ್ವಾಮಿ ಹಿರೂರ, ಹಾನಗಲ್ಲ, ಹಾಳಕೇರಿ, ಪಡದೀ ನಿಡಸೂಸಿ ಮುಂತಾದ ೧೮ ಮಹಾಸ್ವಾಮಿಗಳ ಫೋಟೋ ಕೂಡಿಸಿದ ಕಾರಣ ಒಂದೇ ಕಾಲದಲ್ಲಿ ಎಲ್ಲಾ ಶಿವಯೋಗಿಗಳ ದರ್ಶನ ಆಗುವುವು. ೧೮×೧೨ ಸೈಜದ ಚಿತ್ರದ ಕ್ರಯ ೧ ಪ್ರತಿಗೆ ೮ ಆಣೆ

ಶ್ರೀ ಕಲ್ಯಾಣ ಬಸವೇಶ್ವರ.—ವೀರಶೈವ ಧರ್ಮೋದ್ಧಾರಕರಾದ ಶ್ರೀಬಸವಣ್ಣದೇವರ ಅತ್ಯಂತ ತೇಜಪುಂಜವಾದ ಖಾಸ ಫೋಟೋ ೧೮×೧೨ ಸೈಜ ಬಣ್ಣದ ಚಿತ್ರದ ಕ್ರಯ ೧ ಪ್ರತಿಗೆ ರೂ ೧. ಸಾದಾ ೮ ಆಣೆ.

೧. ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ :— ಇದರಲ್ಲಿ ಶ್ರೀಬಸವೇಶ್ವರರು ಶ್ರೀಚನ್ನಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಅಕ್ಕನಾಗಮ್ಮ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವರಾದಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೋ ಇರುತ್ತದೆ. ದೊಡ್ಡ ಸೈಜು ರೂ. ೧|. ಸಣ್ಣ ಸೈಜು ರೂ. |||.

೨. ಶ್ರೀ ರೇಣುಕಾಚಾರ್ಯರ ಲಿಂಗೋದ್ಭವವು.— ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರ್ಯರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವ ಫೋಟೋ ಇರುತ್ತದೆ. ದೊಡ್ಡ ಸೈಜು ರೂ. ೧|. ಸಣ್ಣ ಸೈಜು ರೂ. |||

೩. ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ - ಇದರಲ್ಲಿ ಅಗಸ್ತ್ಯ ಮುನಿಗಳು ತಮ್ಮ ಪತ್ನಿ ಲೋಪಾಮುದ್ರಾ ಸಹ ಉಪದೇಶಮಾಡಿಕೊಳ್ಳುತ್ತಾ ಇದ್ದಾರೆ. ದೊಡ್ಡ ಸೈಜು ರೂ. ೧|. ಸಣ್ಣ ಸೈಜು ರೂ. |||.

೪. ಶ್ರೀ ವೀರಭದ್ರ ನಿಂದೇ ಹನುಮಂತನಿಗೆ ಲಿಂಗಧಾರಣವು.—ಇದು ಹನುಮಂತನು ಮೋಕ್ಷಾರ್ಥಕ್ಕಾಗಿ ಲಿಂಗಧಾರಣಮಾಡಿಕೊಂಡ ಫೋಟೋ ಇರುತ್ತದೆ. ದೊಡ್ಡ ಸೈಜು ರೂ. ೧|. ಸಣ್ಣ ಸೈಜು ರೂ. |||.

ಶ್ರೀ ವೀರಶೈವ ರಾಜಸಿಂಹಾಸನ.—ಇದರಲ್ಲಿ ಕೊಡಗು ದೇಶದ ಲಿಂಗರಾಜೇಂದ್ರ, ವೀರರಾಜೇಂದ್ರ ಒಡೆಯರ, ದೇವಮ್ಮಾಜಿ ಮಹಾರಾಣಿ, ಮತ್ತು ಸಧ್ಯದ ಶೃಂಗನೂರ ಮತ್ತು ಗೊರಾಪ್ರಾಂತದ ಬಾಂದೆವಾಡಿ, ಸ್ವೋಂದಾದ ಅರಸರ ಫೋಟೋ ೯ ಇರುತ್ತವೆ. ಕ್ರಯ ಫುಲ್ಲಸೈಜು ೧| ರೂ. ಕ್ಯಾಬಿನೆಟ್ ೧೨ ಆಣೆ.

ಶ್ರೀಮಜ್ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿಗಳ - ಅತ್ಯಂತ ಸುಂದರವಾದ ಕೈಬಣ್ಣದ ಫೋಟೋ ಕ್ರಯ ಪ್ರತಿ ೧ ಕ್ಕೆ, ರೂ ೧. ಸಾದಾ ರೂ. |||.

ಸೂಚನೆ:—ಭಾರಿ ಖರೀದದಾರರಿಗೆ ಚನ್ನಾಗಿ ಕಮಿಷನ್ ದೊರೆಯುವದು.

ವಿಳಾಸ:—ಗಂಗಪ್ಪ ಜೀರಗೆ,

ಮಾಲಕ ಧಿ ಶಾರದಾ ಫೋಟೋ ಕಂಪನಿ, ಸೋಲಾಪುರ

ನಿಮ್ಮ ಇಂಗ್ಲೀಷ ಮತ್ತು ಕನ್ನಡಾ ಅಚ್ಚಿನಕೆಲಸಗಳು ಯಾವದೇಯಿದ್ದರೂ ನಮ್ಮಲ್ಲಿಗೆ ಕಳುಹಿಸಿಕೊಟ್ಟಲ್ಲಿ ನಾವು ಜಾಗ್ರತೆಯಾಗಿಯೂ, ಅಂದವಾಗಿಯೂ, ಸುಲಭಛಾರ್ಜಿಗೂ ಮಾಡಿಕೊಡುತ್ತೇವೆ. ಒಂದಾವರ್ತಿ ನಮ್ಮಲ್ಲಿ ಕೆಲಸವನ್ನು ಕೊಟ್ಟು ಪರೀಕ್ಷಿಸಬೇಕಾಗಿ ಕೋರಿಧೆ.

ನಮ್ಮ ವಿಳಾಸ.—

ಮ್ಯಾನೇಜರ್,

ಶ್ರೀನಿವಾಸ ಪ್ರೆಸ್, ಮೈಸೂರು.

ಪ್ರಕಟಣೆ

1921 ನೇ ಇಸವಿಯಲ್ಲಿ ಪ್ರಾರಂಭವಾಗುವ ಪರಿಯಾಯದಲ್ಲಿ ಪಲಿಮಾರು ಮಠದ ಶ್ರೀ ಪಾದಂಗಳವರು ಮಾಡುವ ಉಡುಪಿ ಶ್ರೀ ಕೃಷ್ಣ ದೇವರ ಪೂಜೆಯ ಸಹಾಯಾರ್ಥವಾಗಿ "ಶ್ರೀಕೃಷ್ಣ ಸೋಡ್ತಿ" ಎಂಬ ಹೆಸರಿನ ಒಂದು ಲೋಟರಿ ಯಾನೆ ಸೋಡ್ತಿಯನ್ನು ಏರ್ಪಡಿಸಿಯದೆ. ಟಿಕೇಟಿನ ದರ ಒಂದರ ಒಂದು ರೂ. ಆಗಿರುತ್ತದೆ. ಅದರಲ್ಲಿ 1 ನೇ ಇನಾಂ ರೂಪಾಯಿ 2000-0-0 ರದ್ದು, 2 ನೇ ಇನಾಂ ರೂ 1000-0-0 ರದ್ದು, ರೂ. 100-0-0 ರ ಇನಾಂಗಳು 5, ರೂ 10-0-0 ರ ಇನಾಂಗಳು ನೂರು, ರೂಪಾಯಿ 5 ರ ಇನಾಂಗಳು 200 ಎಂತ ನಿಶ್ಚಯಿಸಿಯದೆ. ಆದುದರಿಂದ ಎಲ್ಲ ಸುಜನರುಗಳು ತಮ್ಮ ಶಕ್ತಿಮೀರಿ ಟಿಕೇಟುಗಳನ್ನು ಪಡೆದು ಶ್ರೀಹರಿ ವಾಯುಗಳ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸೂಕಾಗುತ್ತದೆ. ಎಲ್ಲ ಪತ್ರವ್ಯವಹಾರಗಳನ್ನು ಈ ಕೆಳಗಿನ ವಿಳಾಸಕ್ಕೆ ಮಾಡತಕ್ಕದ್ದು.

ವೈಸ್ ಸೆಕ್ರೆಟರಿ.

ಶ್ರೀಕೃಷ್ಣ ಸೋಡ್ತಿ

ಕೊಡಿಯಾಲಬೈಲ್ ಪೋಸ್ಟ, ದ. ಕ.

ಸಂಸಾರದ ಬೇಕೇ ?

ಬೇಕಾದವರು ನಮ್ಮಲ್ಲಿ ದೊರೆಯುವ ಕೊಡೆ, ಗುದ್ದಲಿ, ಬೂಟೀಸ್ ಸಮೂನೆ ಛರಿಕ್ಯಾಟ್, ಹಿಂಕ್ಸ ಲ್ಯಾಂಪ್, ಸ್ಟೌ ನೆ ಚಾಯ ಬಫೀಸ್ ಕುಡ ಇತ್ಯಾದಿ ಸಾಮಾನುಗಳನ್ನು ಒಂದು ಸಲ ತೆಗೆದು ನೋಡಿರಿ.

ಜಾಸ್ತಿನ ಸಂಗತಿಗಳು ಕೆಳಗಿನ ವಿಳಾಸಕ್ಕೆ ಬರೆದು ತಿಳಿಯುವದು.

COMMERCIAL STORE,
General Merchants, Commission
Agents and Furniture Suppliers,
12-6 MURNAD, COORG.

R. FRAMJEE,

General Merchant, Commission Agent, Auctioneer and Gent's Outfitter.
MERCARA (Coorg)

JUST RECEIVED.

Fresh Consignment of Piece Good Various Kinds, Stationery, Hosiery, Patent Medicines etc., etc.

Goods available at the lowest market rates

Prices Fixed.

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ, ವಿಜ್ಞಾನ ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ, ಕೊಡಗಿನ ವಾರಪತ್ರಿಕೆ.

1 ಪ್ರಕಟಣೆಗಳನ್ನು ಮೇನೇಜರ್, "ಕೊಡಗು" ಮಡಿಕೇರಿ ಈ ವಿಳಾಸಕ್ಕೆ ಕಳುಹಿಸಬೇಕು

2. ಲೇಖನಗಳನ್ನು ಸಂಪಾದಕರು, "ಕೊಡಗು" ಮಡಿಕೇರಿ ಈ ವಿಳಾಸಕ್ಕೆ ಕಳುಹಿಸಬೇಕು.

3 ಬಾತ್ಮೀದಾರರ ಅಭಿಪ್ರಾಯಕ್ಕೆ ಕೊಡಗು, ಪತ್ರಿಕಾಕರ್ತರು ಜವಾಬ್ದಾರರಲ್ಲ.

4 ನಮ್ಮಲ್ಲಿಗೆ ಕಳುಹಿಸುವ ವಾರ್ತೆಗಳು ಕಾಗದದ ಒಂದೇ ಕಡೆಯೂ ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ ಬರೆಯಲ್ಪಟ್ಟಿರಬೇಕು. ಸ್ಥಳವು ದೊರೆತಂತೆಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು.

5. ಪ್ರಕಟಿಸಲಾಗದ ವಾರ್ತೆಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಕೆಯನ್ನು ಸಂಪಾದಕರು ವಹಿಸುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮೇನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೆಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ.

INSURE YOUR CAR

Against Accident and Fire.

Apply to—

K. R. Thirupad & Bros.,
Sub Agents for
The Autocar Fire & Accident Insurance Co., Ltd.,
LONDON.

JUST ARRIVED FRESH STOCK OF

GOOD RICH TYRES
Best and Cheapest in the World.

Apply to—

K. R. Thirupad & Bros.,
Sayaji Rao Road,
12-5 MYSORE.

ಪ್ರಕಟನೆಯ ದರಗಳು

	ಒಂದು ಕಾಲಂ.	ಅರ್ಧಕಾಲಂ.	ಕಾಲುಕಾಲಂ.
	ರೂ.	ರೂ.	ರೂ.
1 ವರ್ಷಕ್ಕೆ	50	30	18
6 ತಿಂಗಳಿಗೆ	30	18	10
3 ತಿಂಗಳಿಗೆ	18	10	6
1 ತಿಂಗಳಿಗೆ	7	4	3

ಮೇಲೆ ಕಾಣಿಸಿರುವ ದರಗಳು ಬೇಕಾದಾಗ ಬದಲಾಯಿಸಲ್ಪಡುವವು. ಹಣವನ್ನು ಮುಂಗಡವಾಗಿಯೇ ಪೂರ್ತಿ ಪಾವತಿ ಮಾಡಬೇಕು.

ಮ್ಯಾನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ.

ಎಲ್ಲಾ ಚಂದಾದಾರರುಗಳಿಗೆ ವಿಜ್ಞಾಪನೆ.

ಕಳೆದ ಸಂಚಿಕೆಗಳಲ್ಲಿ ಪತ್ರಿಕೆಯ ವಾರ್ಷಿಕಾ ಚಂದಾವನ್ನು ಪಾವತಿಮಾಡದವರಿಗೆ ಪತ್ರಿಕೆಗಳನ್ನು ವಿ.ಪಿ. ಮೂಲಕ ಕಳುಹಿಸುತ್ತೇವೆ ಎಂದು ಬರೆದಿದ್ದೆವು. ಆದರೆ ಪೋಸ್ಟಾಫೀಸಿನಿಂದ ಊರೂರಿಗೆ ವಿ. ಪಿ. ಗಳು ಸಕಾಲಕ್ಕೆ ದೊರೆಯದೆ, ಉಭಯತ್ರರಿಗೂ ನಷ್ಟಗಳು ಸಂಭವಿಸುವ ತೊಂದರೆಯನ್ನು ತಪ್ಪಿಸುವ ಬಗ್ಗೆ ವಿ. ಪಿ. ಗಳನ್ನು ಕಳುಹಿಸಲಿಲ್ಲ. ಆದ್ದರಿಂದ ಎಲ್ಲಾ ಚಂದಾದಾರರು ದಯವಿಟ್ಟು ತಮ್ಮ ಚಂದಾ ಹಣವನ್ನು ಪಾವತಿಮಾಡಿ, ಪತ್ರಿಕೆಯ ಮುಂದಿನ ಅಭಿವೃದ್ಧಿಗೆ ಸಹಾಯಮಾಡಬೇಕಾಗಿ ಕೋರುತ್ತೇವೆ. ವಿ. ಪಿ. ಬೇಕಾದವರು ಪ್ರತ್ಯೇಕ ಬರೆದುಕೊಳ್ಳಬೇಕು. ಚಂದಾದಾರರು ಯಾವ ಸಂಗತಿಯನ್ನು ಬರೆಯಬೇಕಾದರೂ ತಮ್ಮ ತಮ್ಮ ವಿಳಾಸದ ನಂಬರುಗಳನ್ನು ಅಗತ್ಯವಾಗಿ ಬರೆಯಬೇಕು. ನಂಬರುಗಳನ್ನು ಬರೆಯದ ಲೇಖನಗಳಿಗೆ ನಿಗಾ ಕೊಡಲಾಗುವುದಿಲ್ಲ. "ಎಡಿಟರ್"

"ಕೊಡಗು"

೧೯೨೧ ನೇ ಇಸವಿ ಜುಲೈ ತಾ॥ ೨೯ ನೇ ಶುಕ್ರವಾರ.

ನೂಲುವ ರಾಟೆ.

ನೂಲುವ ರಾಟೆಯ ಅಭಯ—"ಯಾರು ನನ್ನನ್ನು ತೆಗೆದುಕೊಂಡು ಲಾಲಿಸುವರೊ, ಅವರನ್ನು ನಾನು ಪಾಲಿಸುವೆನು."

ಹಾಗಾದರೆ ನೂಲುವ ರಾಟೆಗೆ ಪಾಲಿಸುವ ಶಕ್ತಿಯು ಇದೆಯೊ, ಇದು ಸಾಕ್ಷಾತ್ ಕಾಮಧೇನುವಿನ ಅವತಾರವೊ, ಎಂಬದಾಗಿ ಹಲವರು ತರ್ಕಿಸಬಹುದು. ಜ್ಞಾನಿಗಳ ಮಾತಿನಿಂದ ಹೇಳುವದಾದರೆ ಹಿಂದೂದೇಶದ ಜನರ ಸರ್ವಸ್ವವೂ ನೂಲುವರಾಟೆಯಲ್ಲಿದೆ. ನೂಲುವರಾಟೆಯನ್ನು ಕೈಕೊಂಡರೆ ಸರ್ವಸಂಪತ್ತೂ ದೊರೆಯುವದು. ಇದರ ಗೂಢಾರ್ಥವನ್ನು ವಿವರಿಸುವದೇ ಈ ಲೇಖನದ ಉದ್ದಿಷ್ಟ.

ಒಂದು ದೇಶದ ಐಶ್ವರ್ಯವು ಅಲ್ಲಿಯ ಉದ್ಯೋಗ (ಕೈಗಾರಿಕೆ), ವ್ಯಾಪಾರ, ಕೃಷಿ ಮತ್ತು ಶಾಂತಿ, ಇವುಗಳಲ್ಲಿದೆ ಎಂಬುದನ್ನು ಯಾರೂ ವಿವಾದಿಸಲಾರರು. ಇಂಗ್ಲಿಷ್ ಸರಕಾರದವರು ನಮಗೆ ಶಾಂತಿಯನ್ನು ಕೊಟ್ಟಿರುವರು. ಪರಂತು ವ್ಯಾಪಾರ ಮತ್ತು ಉದ್ಯೋಗಗಳ ವಿಷಯದಲ್ಲಿ ಮಾಡಿದ ಅಭಿವೃದ್ಧಿ ಸೂಚನೆಗಳು ತೀರಾ ಕಡಿಮೆ. ಒಂದಾನೊಂದು ಕಾಲದಲ್ಲಿ ಢಕ್ಕಾದ ಮಸ್ಲಿನ್ ಬಟ್ಟೆಗಳು ಯೂರೋಪಿನಲ್ಲೆಲ್ಲಾ ಪ್ರಸಿದ್ಧಗೊಂಡಿದ್ದವು. ಕ್ರಮೇಣ ಬಂಗಾಳವು ಇಂಗ್ಲಿಷರವರ ವಶವಾದಂತೆ ಅಲ್ಲಿಯ ವ್ಯಾಪಾರವೆಲ್ಲವೂ ಪರರಾಷ್ಟ್ರದವರ ವಶವಾಯಿತು. ಇದು ಹೇಗಾಯಿತು ಎಂಬದನ್ನು ಮೆ॥ ಹೊರೇಸ ಹೇಮನ್ ವಿಲ್ಸನ್ (The late Mr. Horace Hayman Wilson) ಎಂಬ ಸುಪ್ರಸಿದ್ಧ ಚರಿತ್ರಕರ್ತರ ವಾಕ್ಯಗಳನ್ನೆ ಬರೆಯುವುದಾದರೆ—"……… employed the arm of political injustice to keep down and ultimately strangle a competitor with whom he could not have contended on equal terms," ಕಂಪೆನಿಯವರ ವ್ಯಾಪಾರವನ್ನು ವಿಸ್ತರಿಸುತ್ತಿದ್ದವರನ್ನು ರಾಜಕೀಯ ಶಕ್ತಿಯಿಂದ ಒಂದು ಮೂಲೆಗೆ ಒತ್ತಿದರು, ಅಂದರೆ ಕಂಪೆನಿಯವರ ವ್ಯಾಪಾರಕ್ಕೆ ಸುಂಕವಿಲ್ಲ. ದೇಶೀಯರ ವ್ಯಾಪಾರಕ್ಕೆ ಮಿತಿ ಇಲ್ಲದ ಸುಂಕ. ಸುಂಕ ತೆತ್ತು ವ್ಯಾಪಾರ ಮಾಡುವದಕ್ಕಿಂತ ತಟಸ್ಥರಾಗಿರುವದು ಲೇಸೆಂದು ಅನೇಕರು ಭಾವಿಸಿ ಕುಲಕಸಬನ್ನು ಮೂಲೆಗೆ ಎಸೆದರು. ಇದು 1858 ಕ್ಕೆ ವರೆಗೆ ನಡೆಯಿತು. ಈ ದೇಶದ ಸರಕಾರವು ಮಹಾರಾಣಿಯವರ ಸರಕಾರಕ್ಕೆ ಸೇರಿಸಲ್ಪಟ್ಟಂದಿನಿಂದ ವ್ಯಾಪಾರದ ಸುಂಕವು ಎಲ್ಲರಿಗೂ ಏಕ ರೀತಿಯಾಯಿತು. ಆದರೆ ಕುಲಕಸಬನ್ನು ಮರೆತು ಕಂಪೆನಿಯ 'ಗುಮಾಸ್ತ' ರಾಗಲೆಣಿಸಿದ ದೇಶೀಯರಿಗೆ ಇದರಿಂದ ಯಾವ ಪ್ರಯೋಜನವೂ ದೊರೆಯಲಿಲ್ಲ. ಅಂದಿನಿಂದ ಸರಕಾರದ ಚಾಕರಿಯೇ ಎಲ್ಲರ ಉದ್ದಿಷ್ಟವಾಯಿತು. ಬಹು ಸ್ವಲ್ಪ ಮಂದಿ ಕೃಷಿಗೆ ಇಳಿದರು. ಕೃಷಿಗಾರರು ಮಹಾರಾಣಿಯವರ ಸರಕಾರದವರಿಂದಲು ಮತ್ತು ಇದುವರೆಗೆ ಬ್ರಿಟಿಷ್ ಸರಕಾರದವರಿಂದಲು ಅನೇಕ ಸೌಕರ್ಯಗಳನ್ನು ಪಡೆದು ಅಭಿವೃದ್ಧಿಯನ್ನು ಹೊಂದಿದ್ದಾರೆ. ಹೀಗೆ ದೇಶದ ಐಶ್ವರ್ಯದ ನಾಲ್ಕು ಅಂಗಗಳಲ್ಲಿ ಶಾಂತಿ ಮತ್ತು ಕೃಷಿಯನ್ನು ವಿನಾಯಿಸಿ ಮಿಕ್ಕುಳಿದ ಉದ್ಯೋಗ ಮತ್ತು ವ್ಯಾಪಾರವೆಂಬ ಎರಡು ಅಂಗಗಳು ಮೂಲೆಗೆ ಬಿದ್ದವು. ಈಗ 'ಇಂಗ್ಲೆಂಡ್' ದೇಶದ ಒಬ್ಬನ ಸರಾಸರಿ ಸಂಪಾದನೆಯು ವರ್ಷಕ್ಕೆ 42 ಪೌನುಗಳು. ಆದರೆ ಹಿಂದೂದೇಶದವನ ಸರಾಸರಿ ಸಂಪಾದನೆಯು ವರ್ಷಕ್ಕೆ ಎರಡು ಪೌನುಗಳು ಮಾತ್ರ ಆಗಿವೆ. ಈ ವ್ಯತ್ಯಾಸಕ್ಕೆ ಕಾರಣವೇನೆಂದು ಹೇಳಬೇಕಾದುದಿಲ್ಲ.

ನವನಾಗರೀಕತೆಯ ಸಮಯವಾದ ಈ ಇಪ್ಪತ್ತನೆಯ ಶತಮಾನದಲ್ಲಿ ದೇಶದ ಉನ್ನತಿಯು ಐಶ್ವರ್ಯದ ಮೇಲೆ ಹೊಂದಿದೆ. ಐಶ್ವರ್ಯಕ್ಕೆ ಮುಖ್ಯ ಅಂಗವಾದರೊ, ಉದ್ಯೋಗ ಮತ್ತು ವ್ಯಾಪಾರ. ಈ ಸಂಪತ್ತನ್ನು ನಮ್ಮ ದೇಶಕ್ಕೆ ಪುನಃ ಬರಮಾಡಬೇಕೆಂಬುದೇ ನಮ್ಮಲ್ಲಿಯ ಬುದ್ಧಿವಂತರ ಸಾಹಸ.

ಸದ್ಯದ ಸ್ಥಿತಿಯಲ್ಲಿ ಬರೇ ಬಟ್ಟೆಯ ನೆವದಿಂದ ಪರದೇಶಗಳಿಗೆ ಹೋಗುವ ಹಣದ ಲೆಕ್ಕವನ್ನು ನೋಡಿದರೆ ನಮ್ಮ ವಾಚಕರು ಬೆಪ್ಪಾಗದಿರರು. ಆ ಸಂಖ್ಯೆಯಾದರೊ ಅರುವತ್ತು ಕೋಟಿ ರೂಪಾಯಿಗಳನ್ನು ಮೀರುತ್ತದೆ. ಇಷ್ಟು ದೊಡ್ಡ ಸಂಖ್ಯೆಯ ಹಣವು ಪ್ರತಿ ವರ್ಷವೂ ಈ ದೇಶದಿಂದ ಹೊರಗೆ ಅಂದರೆ ಮುಖ್ಯವಾಗಿ ಜರ್ಮನಿ, ಜಪಾನ್, ಇಂಗ್ಲೆಂಡ್ ಮತ್ತು ಅಮೇರಿಕಾ ದೇಶಗಳಿಗೆ ಹೋಗುತ್ತಿರುವದು ವ್ಯಸನಕರವಾದ ಸಂಗತಿಯಾಗಿದೆ. ವಾಣಿಜ್ಯಸಂಪತ್ತೇ ಜಪಾನರ ಉನ್ನತಿಗೆ ಮೂಲಾಧಾರವಾಯಿತು. ಅದೇ ವ್ಯಾಪಾರವೇ ಜರ್ಮನಿಯವರನ್ನು ಮದಾಂಧರನ್ನಾಗಿ ಮಾಡಿತು. ಅದೇ ವ್ಯಾಪಾರವೇ ನಮ್ಮ ಪ್ರಭುಗಳ ರಾಜ್ಯವಿಸ್ತರಣೆಗೆ ಕಾರಣವಾಯಿತು. ಅದೇ ವ್ಯಾಪಾರವೇ ನಮ್ಮನ್ನು ಈ ದುರ್ದೆಶೆಗೂ ತಂದಿತು.

ಇನ್ನು ಮೂರುರೂಪಾಯಿ ಬೆಲೆಯ ನೂಲುವರಾಟೆಯಾದರೂ ಏನು ಮಾಡೀತು? ಬಡವರಿಗೆ ಹೆಂಗಸರು ಮಕ್ಕಳು ಎಂಬ ಭೇದವಿಲ್ಲದೆ ನೂಲನ್ನು ನೆಯ್ಯಲು ಕಲಿಸಿ ದಿನಕ್ಕೆ ಎಂಟಾಣೆ ಸಂಬಳವನ್ನು ತೆತ್ತು ಮನೆಯನ್ನು ಉದ್ಧಾರಮಾಡೀತು. ಕೆಲಸವಿಲ್ಲದೆ ಭೂಮಿಗೆ ಭಾರರಾಗಿರುವ ನಮ್ಮಲ್ಲಿ ಅನೇಕರಿಗೆ ಕೆಲಸವನ್ನು ಕೊಟ್ಟು ನಮ್ಮನ್ನು 60 ಕೋಟಿ ರೂಪಾಯಿಗಳಷ್ಟು ಐಶ್ವರ್ಯವಂತರನ್ನಾಗಿ ಮಾಡೀತು. ಮತ್ತು ಪರರಾಷ್ಟ್ರದವರ ವ್ಯಾಪಾರವನ್ನು ಅಡಗಿಸುವದರಿಂದ ಅವರು ಇತ್ತ ಬರಲು ಇಷ್ಟಪಡಲಾರರು. ಕಾಸು ಲಾಭವಿಲ್ಲದಮೇಲೆ ಏಕೆ ತಾನೆ ಇಲ್ಲಿಗೆ ಬರುವರು.

ಇನ್ನೊಂದು ಸಂಪತ್ತು ಬರೇ ಮೂರುರೂಪಾಯಿ ಬಂಡವಾಳದಿಂದ ಆಗುವಾಗ್ಗೆ ನಮ್ಮವರೇಕೆ ಕೈಕೊಳ್ಳಬಾರದು? ಸರಕಾರಕ್ಕೆ ವಿರುದ್ಧವೆಂದು ಕೆಲವು ಮತಿಗೇಡಿಗಳು ಕೂಗುತ್ತಿರುವರು. ಅಸಹಕಾರಿಗಳ ಕಾರ್ಯಕ್ರಮದಲ್ಲಿ ಸಿರಾ ಕುಡಿಯುವದನ್ನು ನಿಲ್ಲಿಸುವಂತೆ ನೂಲುವರಾಟೆಯು ಒಂದಾಗಿದ್ದರೂ ಸಹಕಾರಪಕ್ಷದವರು ಸಹ ದೇಶದ ಉನ್ನತಿಗೋಸ್ಕರ ಇದನ್ನು ಉಪಯೋಗಿಸಬಹುದೆಂದು ಎಲ್ಲಾ ಪಂಗಡದವರು ಅಭಿಪ್ರಾಯಪಟ್ಟಿರುತ್ತಾರೆ. ಅಲ್ಲದೆ ನೂಲುವ ರಾಟೆಯ ಉತ್ತಮ ಮಾದರಿಯನ್ನು ಕಾಶೀಪಟ್ಟಣದಲ್ಲಿ ಕಂಡುಹಿಡಿದಿರುವದಾಗಿ ಸರಕಾರದವರೇ ಪ್ರಕಟಿಸಿರುತ್ತಾರೆ. ಕೊಡಗಿನಲ್ಲೂ ಕೂಡ ಕೈ ಮಗ್ಗದ ಶಾಲೆಯು ಶನಿವಾರಸಂತೆಯಲ್ಲಿ ಸರಕಾರದವರಿಂದ ನಡಿಸಲ್ಪಡುತ್ತಿರುವದಿಲ್ಲವೆ?

ಬೇಸಾಯಗಾರರಾದ ನಮ್ಮ ಸೀಮೆಯಲ್ಲಾದರೊ—ನಾಲ್ಕು, ಹೆಚ್ಚಾದರೆ ಐದು ತಿಂಗಳುಗಳವರೆಗೆ ಮಾತ್ರ ಗದ್ದೆಗಳಲ್ಲಿ ಕೆಲಸವಿದ್ದೀತು. ಅದರಲ್ಲೂ ಹೆಚ್ಚಾಗಿ ಗಂಡಸರಿಗೆ ಕೆಲಸವಿದೆ ಹೆಂಗಸರಿಗೆ ಹೆಚ್ಚಿನ ಸಮಯ ವಿರಾಮವಿರುವುದು. ಈ ವಿರಾಮ ಕಾಲಗಳಲ್ಲಿ ಉಂಟಾಗಬಹುದಾದ ಪಾಲುಪೂರಿಕೆಯನ್ನು ಓಡಿಸಲಿಕ್ಕೆ ನೂಲುವರಾಟೆಯು ಒಂದು ಒಳ್ಳೆಯ ಮಂತ್ರವೇ ಸರಿ. ಇದನ್ನು ಎಲ್ಲೆಲ್ಲಿಯೂ ಹರಡುವುದು ದೇಶಾಭಿಮಾನಿಗಳೆಂದೆನ್ನಿಸಿದವರ ಕೈಯ್ಯೊಳಗಿದೆ ಎಂಬದಕ್ಕೆ ಸಂಶಯವಿಲ್ಲ.

ನಮ್ಮ ದೇಶದವರು ಹಿಮಾಲಯಪರ್ವತ ಮತ್ತು ಶೀತಪ್ರಾಂತ್ಯದ ನಿವಾಸಿಗಳಾದುದರಿಂದ ಅವರಿಗೆ ನೂಲುವರಾಟೆಯು ತೃಣಸಮಾನದ ಕೆಲಸವೆಂದು ತೋರಿ ಬಂದೀತು. ಅದರಿಂದ ಅವರು ತೃಪ್ತರಾಗದಿರಲೂ ಬಹುದು. ಆದರೆ ನಮ್ಮ ಮಹಿಳೆಯರಾದರೊ ಮನೆಯಿಂದ ಹೊರಗೆ ಬರತಕ್ಕವರಲ್ಲ. ಹಚ್ಚಿನ ಕಷ್ಟಕೆಲಸಮಾಡಲು ಶಕ್ತರು ಅಲ್ಲ. ಶಕ್ತರಾದರೂ ಈಗಿನವರು ಮಾಡಲೊಲ್ಲರು. ಮುಖ್ಯವಾಗಿ ಇಂಥವರಿಗೆ ನೂಲುವರಾಟೆಯು ಉತ್ತಮವಾದ ಒಂದು ಉದ್ಯೋಗವೇ ಸರಿ.

ಪುಸ್ಸಿಫೂಟ್ (ಬೆಕ್ಕಿನಪಾದದ) ಜೋನ್ಸನ್ ಎಂಬಾತನು ಅಮೇರಿಕಾ ಖಂಡವನ್ನು ಒಣಗಿಸಲಿಕ್ಕೆ (ಅಂದರೆ ಅಲ್ಲಿ ಅಮಲು ಪದಾರ್ಥದ ಸುದ್ದಿಯೇ ಇಲ್ಲದಂತೆ ಸರ್ಕಾರದವರು ಕಾನೂನು ಮಾಡಲಿಕ್ಕೆ) ಪ್ರಯತ್ನಿಸಿದಂತ ಮಹಾನೀಯರಲ್ಲಿ ಮುಖಂಡನು. ಈ ಉದ್ದೇಶದಿಂದ ಈತನು ಇಂಗ್ಲೆಂಡಿಗೆ ಬಂದು ಅಲ್ಲಿ ತಕ್ಕಮಟ್ಟಿಗೆ ಜಯಹೊಂದಿರುವನು. ಈತನೇ ಹಿಂದೂದೇಶಕ್ಕೆ ನವಂಬರ್ ತಿಂಗಳಲ್ಲಿ ಬಂದು ಇಲ್ಲಿ ಕುಡಿಕರು ಯಾರೂ ಇಲ್ಲದಂತೆ ಮಾಡುವನಂತೆ. ಮೊನ್ನೆ ತಾನೆ ಈತನಿಗೆ ಕಾಯಿಲೆಯಾದರೂ ಕೂಡ ಅಮಲುಪದಾರ್ಥವನ್ನು ರುಚಿಸುವದಿಲ್ಲವೆಂದು ಹೇಳಿದುದರಿಂದ ಡಾಕ್ಟರವರು ಸಾರಾಯಿಯನ್ನು ಔಷಧಿಯಾಗಿ ಕಿವಿಯೊಳಕ್ಕೆ ಹೊಯ್ದರಂತೆ. ಬೆಕ್ಕು ಮನೆಯೊಳಕ್ಕೆ ಹ್ಯಾಗೆ ನಿಶ್ಶಬ್ದವಾಗಿ ನುಗ್ಗುತ್ತದೆಯೋ ಹಾಗೆಯೇ ಈತನು ಕುಡಿಕರ ಮನಸ್ಸಿನೊಳಗೆ ಯಾವ ತೊಂದರೆಯನ್ನು ಉಂಟುಮಾಡದೆ ಸುಲಭವಾಗಿ ನುಗ್ಗಿ ಅವರ ತಪ್ಪನ್ನು ಅವರಿಗೆ ತೋರಿಸುವದರಿಂದಲೇ ಈತನಿಗೆ ಪುಸ್ಸಿಫೂಟ್ ಜೋನ್ಸನ್ ಎಂಬ ಹೆಸರು ಬಂದಿದೆಯೆಂದು ತೋರುತ್ತದೆ. ಆತನು ತನ್ನ ಪವಿತ್ರವಾದ ಪಾದಗಳನ್ನು ನಮ್ಮ ಮಾತೃಭೂಮಿಯಮೇಲೆ ಇಟ್ಟದ್ದೇ ಆದರೆ ನಮ್ಮ ದೇಶದ ಕುಡಿಕತನವು ಬಹಳಮಟ್ಟಿಗೆ ಕಡಿಮೆಯಾಗಬಹುದೆಂಬುದಕ್ಕೆ ಸಂಶಯವಿಲ್ಲ.

ಕೊಡಗು ಪತ್ರದ ಮೇನೇಜರವರ ಮೇಜು.

ಎಷ್ಟೊಂದು ಬಾತ್ಮಿಗಳು! ಎಷ್ಟೊಂದು ಪ್ರಕಾರದ ಪತ್ರ! "ನನ್ನ ವಿಳಾಸಕ್ಕೆ ಪತ್ರವಿಲ್ಲ"! "ನನ್ನ ಲೇಖನ ಪ್ರಕಟವಾಗಲಿಲ್ಲ." "ನನ್ನ ಹಣ ವಾಪಸುಮಾಡಿ." "ನನಗೆ ಎರಡು ಪತ್ರಗಳು ಬರುತ್ತಿವೆ." ಎಂದು ಮುಂತಾಗಿ ಹಲವರ ಕೋಪ ತಾಪ! ಪಾಪ! ಮೇನೇಜರರು ಏನು ಮಾಡಬಲ್ಲರು? ಚಂದಾದಾರರು ತಮ್ಮ ಚಂದಾನಂಬರು ಸೂಚಿಸುವುದಿಲ್ಲ. ಮತ್ತೆ ಕೆಲವರು ಸ್ಫುಟವಾದ ಅಕ್ಷರಗಳಿಂದ ಬರೆಯುವುದಿಲ್ಲ. ಇನ್ನು ಅನೇಕರು ತಮ್ಮ ಹೆಸರನ್ನು ಬರೆಯುವುದೇ ಇಲ್ಲ. ಇವಕ್ಕೆಲ್ಲಾ ಪ್ರತ್ಯುತ್ತರ ಬರೆಯುವುದು ಸಾಧ್ಯವೆ? ಯಾರು ತಮ್ಮ ನಂಬರನ್ನು ಸೂಚಿಸಿ 'ಸೈನ್' ಮಾಡುವರೊ ಆ ಪತ್ರಗಳಿಗೆ ಗಮನಿಸಲಾದೀತು. [ಸಂ.

ಸ್ವೀಕಾರ ಮತ್ತು ಅಭಿಪ್ರಾಯ.

ಮಹಿಳಾ ಸಖಿ.

ಕೈ. ವಾ. ಸಂಸ್ಥೆಯಿಂದ.

ಪ್ರಚುರವಾಗುವ ಈ ಪತ್ರಿಕೆಯು ಸ್ತ್ರೀಯರಿಗೆ ಉತ್ಸಾಹಗೊಳಿಸಲಿಕ್ಕೆ ಹೊರಟಿದೆ ಎಂದು ಸಂಪಾದಕರು ಬರೆದಿರುತ್ತಾರೆ. ಇದರಲ್ಲಿರುವ ವಿಷಯ ಪ್ರಪಂಚದ ಸ್ತ್ರೀಯರ ಚಟುವಟಿಕೆಯ ವಿಷಯ ಅಂದರೆ ನಮ್ಮ ಮಹಿಳೆಯರನ್ನು ಹೊರಕ್ಕೆಳೆದು ಇತರ ಮಹಿಳೆಯರಂತೆಯೇ ಮುಂದೆ ತರಬೇಕೆಂದು. ಚಂದಾ ಬರೇ 1-0-0 ಭಾಷೆಯು ಮಿಶನರಿ ಭಾಷೆಯಂತಿಲ್ಲದೆ ಚೊಕ್ಕಾಗಿದೆ.

* * *

ಸ್ವದೇಶಾಭಿಮಾನಿ.

"ಸತ್ಯದೀಪಿಕೆ" ಯು ಸತ್ತಮೇಲೆ ಮಂಗಳೂರಿನವರನ್ನು ಆನಂದಗೊಳಿಸುತ್ತಿದ್ದ ಪತ್ರಿಕೆಯಾದರೊ ಸ್ವದೇಶಾಭಿಮಾನಿ. ಸಂಪಾದಕೀಯ ಲೇಖನಗಳಲ್ಲಿ ಅಪೂರ್ವ ಶಬ್ದವನ್ನು ಹೇರಳವಾಗಿ ತುಂಬಿಸಿ ವಾಚಕರನ್ನು ಮಂಕುಮಾಡುತ್ತಿದ್ದ ಈ ಸುಪ್ರಸಿದ್ಧ ಪತ್ರಿಕೆಯ ಚಂದಾವಾದರೊ ಬರೇ 2-13-0. ದೊರೆಯುವ ಸ್ಥಳ ಕಾವದ ಪ್ರೆಸ್, ಮಂಗಳೂರು.

* * *

ಕಂಠೀರವ—ಮಾಧವಕಟ್ಟೆದ ಮಂಗಳೂರು.

ಕಂಠೀರವನನ್ನು ಕಾಣದಿದ್ದರೂ ಗರ್ಜನೆಯನ್ನಾದರೂ ಯಾರೂ ಕೇಳಿಲ್ಲ? ಮೈಸೂರು ಮಹಾಶಯರ ವಿಷಯ ಕಂಡದ್ದನ್ನು ಕಾಣಂತೆ ಬರೆದುದಕ್ಕೆ ಕಂಡದಂತ ಕೋಪಕ್ಕೆ ಪಾತ್ರನಾಗಿ ಮೈಸೂರು ಸ್ಟೇಟ್ ಶಾಲೆಗಳಿಂದ ಬಹಿಷ್ಕೃತನಾದ ನಮ್ಮ ಬಂಧುವಿನ ಧೈರ್ಯ ಸ್ಥೈರ್ಯಗಳಿಗೆ ಮೆಚ್ಚುವೆವು. ತಿರುಗ್ಗನ್ನಡದ ವಾರಪತ್ರಿಕೆಯಾದ ಇದರ ಚಂದಾ ಬರೇ 3-5-0.

* * *

ಸದ್ಗುರು! ಹಾವೇರಿ-ಧಾರವಾಡ.

ಇದು ಕನ್ನಡಿಗರ ಆದರಕ್ಕೆ ಪಾತ್ರರಾದ ವೆಂಕಟೇಶ ತಿಲಕ ಕುಲಕರ್ಣಿಗಳ ನಾಥರವರ ಜೀವನ ಸರ್ವಸ್ವದ ಮಾಸಪತ್ರಿಕೆ. ಅನೇಕ ಐತಿಹಾಸಿಕ ಕಾದಂಬರಿಗಳನ್ನೂ ಈಗಲೂ ಬರೆಯುತ್ತಿರುವರು. ವಾರ್ಷಿಕ ಚಂದಾ ಬರೇ 2-0-0.

ಚರಿತ್ರಕಾರರ ಸಂಶಯ.

[ಹೀಗೆಂದು ನಮ್ಮ ನಾಡಿಗೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ಬರೆಯುವೆವು. ವಾಚಕರು ತಮ್ಮ ಅನುಭವಕ್ಕೆ ಬಂದ ಅಂಥ ವಿಷಯಗಳನ್ನಿದ್ದರೆ ದಯವಿಟ್ಟು ತಿಳಿಸಬೇಕಾಗಿ ಕೋರಿಕೆ. ಸಂಪಾದಕ.]

ಮಡಿಕೇರಿ.

(1) ಇದು ಮಲೆಯಾಳ ಭಾಷೆಯಿಂದ ಹುಟ್ಟಿದುದಾಗಿದೆ. ಮಡಕಿಟ್ಟ=[ಕಾಲನ್ನು] ಬಗ್ಗಿ+ಏರ್=ಹತ್ತು ಅಂದರೆ ಎತ್ತರವಾದ ಈ ಮಡಿಕೇರಿಯ ಬೆಟ್ಟವು ಹತ್ತಲು ಅಷ್ಟೊಂದು ಕಷ್ಟವಾದುದರಿಂದಲೇ ಈ ಹೆಸರೇ ಬಂತೆಂಬುದಾಗಿಯೂ ಕೆಲವರ ಅಭಿಪ್ರಾಯ.

(2) ಮುದ್ದುರಾಜ ಒಡೆಯರು ಇದನ್ನು ಕಟ್ಟಿಸಿ ತನ್ನ ಹೆಸರನ್ನು ಕೊಟ್ಟುದರಿಂದ ಮುದ್ದುರಾಜಕೇರಿ ಎಂಬದಾಗಿಯೂ ಅದರ ಅಪಭ್ರಂಶವೇ ಮುದ್ದುಕೇರಿ ಮಧುಕೇರಿ, ಮಡಿಕೇರಿ ಎಂಬದಾಗಿ ಆಯಿತೆಂತಲೂ ಇನ್ನು ಕೆಲವರ ಅಭಿಪ್ರಾಯ.

ಮಡಿಕೇರಿ ಅರಮನೆಯಾದರೋ ಲಿಂಗರಾಜನಿಂದ ಕಟ್ಟಲ್ಪಟ್ಟಿತೆಂದು ಶಾಸನವಿದೆ. ಶಾಸನದ ಮೇರೆ ಈಗಿನ ಅರಮನೆಯು ಅಂಗೀರಸ ಸಂವತ್ಸರ ಭಾದ್ರಪದ ಮಾಸ ಶುದ್ಧ ಪಾಡ್ಯದಲ್ಲಿ [1812-13] ಪ್ರಾರಂಭಿಸಲ್ಪಟ್ಟು ಭವ ಸಂವತ್ಸರದ ಆಶ್ವೀಜ ಮಾಸದ ಕಡೆಗೆ ರವಿವಾರ ಮುಗಿಯಿತೆಂದು ಹೇಳಿದೆ. ಈ ಅರಮನೆಯು ಕಟ್ಟಿದ ಸ್ಥಳದಲ್ಲಿ ದುರ್ಘಟವಾದೊಂದು ಬೆಟ್ಟ ಇದ್ದಂತೆಯೂ ಆ ಬೆಟ್ಟವನ್ನು ನೆಲಸಮ ಮಾಡಿದುದು ಭಗವತ್ಕೃಪೆಯಿಂದಲೇ ಎಂದು ಸೂಚಿಸಿದೆ.

ಅರಮನೆಯು ಲಿಂಗರಾಜನಿಂದ ಕಟ್ಟಲ್ಪಟ್ಟಿದ್ದರೂ ಊರನ್ನು ಮುದ್ದುರಾಜನೇಕೆ ತನ್ನ ಹೆಸರಿನಿಂದ ಕಟ್ಟಿಸಿರಬಾರದು?

ಪತ್ರಿಕೆ ಚಂದಾದಾರರುಗಳಿಗೆ ವಿಜ್ಞಾಪನೆಗಳು

ಕಳೆದ ವಾರದಿಂದೀಚೆಗೆ ಕೆಲವು ಪತ್ರಿಕೆಗಳು ತಿರಸ್ಕರಿಸಲ್ಪಟ್ಟು ಆಫೀಸಿಗೆ ಹಿಂದಕ್ಕೆ ಬಂದಿರುತ್ತವೆ. ವಾಚಕರೇ ತಿರಸ್ಕರಿಸುತ್ತೀರೋ ಇಲ್ಲವೋ ಎಂಬುದು ನಮಗೆ ತಿಳಿಯುವುದಿಲ್ಲ. ಕಳೆದ ಎರಡು ತಿಂಗಳಿಂದ ಪತ್ರಿಕೆಯನ್ನು ತೆಗೆದುಕೊಂಡು ಓದುತ್ತಾ ಬಂದು, ಈಗ ಅದನ್ನು ತಿರಸ್ಕಾರ ಮಾಡುವುದು ದೇಶಾಭಿಮಾನಿಗಳಿಗೆ ತಕ್ಕುದಾಗಿ ಕಾಣುವುದಿಲ್ಲ. ಈ ಪತ್ರಿಕೆಯು ದೇಶೋದ್ಧಾರ ಹೊರಟಿದೆಯಲ್ಲದೆ, ವಿಶೇಷ ಲಾಭಕ್ಕೋಸ್ಕರವಾದದ್ದಲ್ಲವೆಂಬುದು ದೇಶೀಯರಿಗೆ ತಿಳಿಯದ ಸಂಗತಿಯಲ್ಲ. ಆದ್ದರಿಂದ ಅಭಿಮಾನವನ್ನು ತೋರಿಸಬೇಕಾದ ದೇಶಸೇವೆಯಲ್ಲಿ ಜಾಗರೂಕರಾಗಿ ದೇಶೀಯರೆಲ್ಲರೂ ಈ ಪತ್ರಿಕೆಗಳನ್ನು ತರಿಸಿ ಎಲ್ಲಾ ವಿಧದಲ್ಲಿಯೂ ಪ್ರೋತ್ಸಾಹಕರಾಗಬೇಕೆಂದಾಗಿ ವಾಚಕರಲ್ಲಿ ಅಪೀಲು ಮಾಡಿಕೊಳ್ಳುತ್ತೇವೆ. ಪತ್ರಿಕೆ ಬೇಡದವರು ತಮ್ಮ ಪತ್ರಿಕೆಯ ನಂಬರನ್ನೂ ತಮ್ಮ ಹೆಸರನ್ನೂ ಪ್ರತ್ಯೇಕ ಬರೆದು ಆಫೀಸಿಗೆ ತಿಳಿಸಬೇಕಲ್ಲದೆ ದಯವಿಟ್ಟು ತಿರಸ್ಕಾರ ಮಾಡಬಾರದಾಗಿ ಕೇಳಿಕೊಳ್ಳುತ್ತೇವೆ.

ಎಡಿಟರ್.

ಕೊಡಗಿನ ವೀರಶೈವರು.

(ಸ್ವಂತ ಬಾತ್ಮೀದಾರರಿಂದ)

ಕೊಡಗಿನಲ್ಲಿ ಅನೇಕ ಜಾತಿಯ ಜನರಿದ್ದಾರೆ. ಕೊಡಗರು, ಗೌಡುಗಳು, ಬ್ರಾಹ್ಮಣರು, ವೀರಶೈವರು ಇತ್ಯಾದಿ. ಇವರಲ್ಲಿ ವೀರಶೈವರು ಒಂದು ಕಾಲದಲ್ಲಿ ಕೊಡಗನ್ನು ಆಳಿದ ಲಿಂಗಾಯತ ಅರಸುಗಳಿಂದ ತುಂಬಿಹೋಗಿದ್ದರೆಂದು "ಕೊಡಗುನಾಡಚರಿತ್ರೆ" ಎಂದ ತಿಳಿಯಬರುತ್ತದೆ. ಆಗ ಒಂದು ವಿದ್ಯಾವಂತರಿಲ್ಲದ ಲಿಂಗಾಯತರು ಇಂದು ಕಾಣದ ಕೊರತೆಯ ಸ್ಥಿತಿಗಳಿಂದೇಸಿದ್ದಾರೆ. ವಿಧಾತ! ನಿನ್ನ ಲೀಲೆಯು ಯಾವ ನಮೂನೆಯದೆಂದು ಕಾಣುತಾನೆ ದೃಢವಾಗಿ ಹೇಳಬಲ್ಲವರು?

ವಿದ್ಯಾಭಿವೃದ್ಧಿಯ ಚಟುವಟಿಕೆಯನ್ನು ಪರಿಶೀಲಿಸಿದರೆ ಸಹೋದರರಾದ ಕೊಡಗರು ಗೌಡುಗಳು ಬ್ರಾಹ್ಮಣರು ಮಾಡಿರುವ ಸೌಕರ್ಯಗಳನ್ನು ಅಷ್ಟಿಷ್ಟೆಂದು ವರ್ಣಿಸುವುದಿಲ್ಲ. ವಾಸಮಾಡಲು "ಬೋರ್ಡಿಂಗ್" ಮನೆ, ವಿದ್ಯಾರ್ಥಿಗಳ ಖರ್ಚಿಗೆ ಸಹಾಯಿಸಿಡಿ ಪರದೇಶಕ್ಕೆ ಹೋಗುವುದಕ್ಕೆ ಧನ ಸಹಾಯ ಎಷ್ಟೊಂದು ಸೌಕರ್ಯಗಳು! ವೀರಶೈವರಿಗಾದರೂ ಮನೆ ಇರುವುದೂ ಒಂದು ಹಿಡಿ ಅನ್ನ ಹಾಕುವವರಿಲ್ಲ!

ಕೊಡಗಿನಲ್ಲಿ 5000 ಸಾವಿರಕ್ಕೆ ಮೇಲಾಗಿ (ಭಿನ್ನಾಂಶ ವಿನಾಯಿಸಿ) ವೀರಶೈವರಿದ್ದಾರೆ. ಅವರ ಜನರ ಶಾಲೆಗಳಲ್ಲಿ ಓದುವುದನ್ನು ನೋಡಿದರೆ ಇಪ್ಪತ್ತಕ್ಕೆ ಇಲ್ಲ. ಇದನ್ನೆಲ್ಲಾ ಪರ್ಯಾಲೋಚಿಸಿ ಹಿಂದಿನ ವರ್ಷ (ತಾ॥ 2-1919) ಮಹಾಶಿವರಾತ್ರಿಯ ದಿವಸ ಮ॥ ಕಿಗ್ಗಾಲು ಮಠಾಧ್ಯಕ್ಷರ ಮಹಡಿಯ ಮೇಲೆ ಮಡಿಕೇರಿಯ ಶ್ರೀಮಂತರಾದ ಶ್ರೀಮಾನ್ ಎಂ. ಚೆನ್ನಲಿಂಗಪ್ಪನವರ ಸಭಾಧ್ಯಕ್ಷತೆಯಲ್ಲಿ ಸಭೆ ನೆರೆದು ನಿಧಿಯನ್ನು ಕೂಡಿಸುವರೆ ಏರ್ಪಡಿಸಬೇಕೆಂದು ನಿರ್ಣಯಿಸಿದರು. ಅಂದು, ಆ ಶುಭರಾತ್ರಿ ಜಾಗರಣ ರಾತ್ರಿ, ಎಲ್ಲರೂ ಆನಂದಭರಿತರಾದರು. ನಾಪೋಕ್ಲು ಶಾಲೆಯ ಉಪಾಧ್ಯಾಯರಾದ ಮ॥ ಎಂ. ಚೆನ್ನವೀರಪ್ಪನವರು ಅಭಿನಂದನಪೂರ್ವಕವಾದ ಒಂದು ಭಾಷಣವನ್ನು ಮಾಡಿದರು. ಆದರೆ ಅವೆಲ್ಲವೂ ಆ ರಾತ್ರಿಯ ಕನಸಿನಂತಾಯಿತು. ಅಂದಿನಿಂದ ಇದುವರೆಗೆ ಯಾವ ಏರ್ಪಾಡೂ ಇಲ್ಲ.

ಸಭಾಧ್ಯಕ್ಷರು ವಿಷಯವನ್ನೇ ಮರೆತರೆಂದು ಎಂದು ಭಾವಿಸಬಹುದು. ಆದರೆ ಅನೇಕರಿಂದ ಕೇಳಲ್ಪಟ್ಟರೂ ಅವರಿಗೊದಗಿದ ವಿಪತ್ತುಗಳಿಂದ ಯಾವ ಕಾರ್ಯವೂ ಮುಂದರಿಸಲಾಗಲಿಲ್ಲ. ಈ ವಿಷಯವು "ಕೊಡಗು ಸ್ವಾರ್" ನಲ್ಲಿ ಪ್ರಕಟವಾಯಿತು. "ತಾನು ಕೊಡುವೆನು ತಾನು ಕೊಡುವೆನು" ಎಂದು ಹೇಳಿದರು. ಕೊಟ್ಟದ್ದು ಏನೂ ಇಲ್ಲ!

ಈಗಲಾದರೂ ಮಹನೀಯರು ಹಣವನ್ನು ಒಂದು ತಕ್ಕವನ್ನು ಒಟ್ಟುಮಾಡಿ ನಮ್ಮ ಸಂಕಟಾದಿಗಳಿಂದ, ಗ್ರಾಂಟ್ ಪಡೆದು ವಿದ್ಯಾಭಿವೃದ್ಧಿಯ ಕೆಲಸವನ್ನು ಸಾಗಿಸಲೆಂದು ಕೋರುವೆವು. ಈ ವಿಷಯವನ್ನು ಯುವಕರೂ ಶ್ರೀಮಂತರೂ ಮಡಿಕೇರಿಯ ಲಿಂಗಾಯತರು ಕೈಕೊಂಡು ಕೊಡಗಿನ ವೀರಶೈವರನ್ನು ಆಶ್ರಯಿಸಿ ಸೋಮವಾರಪೇಟೆಯವರ ಸಹಾಯದಿಂದ ಮಾಡಬೇಕಾಗಿದೆ. ಹಾಗೆ ಮಾಡುವ ಯಾವ ಕೆಲಸಕ್ಕಾದರೂ "ನಮ್ಮ ನಾಡಿನ" "ಕೊಡಗು ಪತ್ರಿಕೆ" ಎಡೆಕೊಡುವುದರಲ್ಲಿ ಸಂಶಯವಿಲ್ಲ.

ಎಂತಹ ಏರ್ಪಾಡಾಗುವುದೋ ಎಂದು ಎದುರು ನೋಡುತ್ತಿರುವೆವು.

"ಕೊಡಗು."

ದ್ವಿಪದಿ

ಕೊಡಗು ಮಿತ್ರನು ಬಂದ ಮನೆಯೊಳಗೆ ನಿಂದ |
ಬೆಡಗಿನ ಸುದಿಯ ಹೇಳ್ವೆ ಕೇಳು ನೀನೆಂದ ||೧||
ಹಸ್ತಲಾಘವ ಕೊಟ್ಟೆ ದುಮ್ಮಾನವನು ಬಿಟ್ಟೆ |
ವಿಸ್ತರದ ನುಡಿಗೇಳಿ ಸಂತಸದ ನಾಪಟ್ಟೆ ||೨||
ಏನು ಒಂದೆಯ ನೀನು? ಅರಿಯಬಾರನು ನಾನು |
ಮಾನವನೊ ದಾನವನೊ ಶಾರದಾಂಬೆಯೊ ನೀನೊ? ||೩||
ದಾನ ಮಾನವನಲ್ಲ ನಾ ಜ್ಞಾನ ಸಿದ್ಧಿ ಫಲನು |
ಹೀನ ಉದ್ಭವನಲ್ಲ ಮತ್ಸ್ಯ (?) ಭೂಮಿಯೊಳೂ ||೪||
ದೇಶ ದೊಳಗಿರುತಿರ್ಪ ದೋಷಗಳನೆಲ್ಲ |
ಲೇಸಾಗಿ ಪೋಗಿಸದೆ ಬಿಡುವವ ನಾನಲ್ಲ ||೫||
ಪರಮಾತ್ಮ ನಾಮವನು ಜೀವಾತ್ಮನೇನವನು |
ಪರಮಾತ್ಮ ಪ್ರೇಮವನು ಸಾರಿ ನಾ ಪೇಳುವೆನು (?) ||೬||
ದೇವನಿರ್ಪ ಊರ ಸ್ವಯಂ ದೇವ |
ಭಾವದೆ ಸೇವೆಯನೆ ಗೈದು ಉಳಿಸುವ ವೀರನೆ ||೭||
ಕುಡುಕ ಕೆಡುವರಿಗೆ ದ್ವೇಷ ಧರ್ಮದ ಮಾತು |
ನಡೆಗರದಿ ನೀತಿಯನು ಕಾಣಿಸಿ ಪೂಡಿಗರಿಂದೆ ||೮||
ನಾಡ ಸುದ್ದಿಯನೆಲ್ಲ ಸಾರುವುದೆ ನನ್ನಿಲ್ಲ |
ದೃಢದೆ ಪರಿಸಿರಿಯನ್ನು ಬಂಧುಗಳು ಎಲ್ಲ ||೯||
ಧಲರೆ! ನಮ್ಮಯ ಮಿತ್ರ ಸರ್ವ ಪ್ರೀತಿಗೆ ಪಾತ್ರ |
ಗೆಲುವಾಯುರಾರೋಗ್ಯ ನಿನಗಿರಲಿ ಪವಿತ್ರ ||೧೦||

ಟಿ. ಎಂ. ಎಸ್. ವಿದ್ಯಾರ್ಥಿ.

ಕಳೆದ ಸಂಚಿಕೆಯಲ್ಲಿ ತಿದ್ದುಪಡಿ

೧ ನೇ ಪುಟ 1 ನೇ ಕಾಲಂ

ಪಂಕ್ತಿ	ತಪ್ಪು	ಸರಿ
3	೬	11
4	ಮೊತ್ತ ಮಾಡುವ್ಯವನ್ನು	ಮಡಿಕೇರಿಯವರನ್ನು
7	ಲಕ್ಷ್ಮಣ ನವರು	ಅಪ್ಪಯ್ಯ ನವರು
10	ಚೆಳ್ಳಪ್ಪನವರು ಪಿ. ಎ. ಬೆನ್ ಮಾಸ್ಟರ್	ಚೆಕ್ಕಪ್ಪನವರು ಪೇಮೆಂಟ್ ಸೆಕ್ರಟರಿ
11	ಹೊಂಬಣ್ಣ ಅಪ್ಪಯ್ಯನವರು	ಶಾಂತಯ್ಯ ಅಪ್ಪಯ್ಯನವರು
11	ನಾಚಪ್ಪ ಬೊಳ್ಳು ಮುಣ್ಣಪ್ಪ	ನಾಣಯ್ಯನಾಬ್ಬು ಮೊಣ್ಣಪ್ಪ
16	ಪುಟ್ಟಮಾಡ	ಅಪ್ಪಮಾಡ
17	ಪೈಟ್ಟು	ಬೆಟ್ಟು
18	ಬೆಳ್ಳಪ್ಪನವರು ಬಿ. ಎ.	ಬೆಳ್ಳಪ್ಪನವರು
21	ಬಿ. ಎ. ಲಾಯರು	ಲಾಯರು
19	ಪೂವಯ್ಯನವರು	ಪೂವಯ್ಯನವರು
೩1	ನಾಡಿಕಟ್ಟು	ಕಡಿಗಟ್ಟು
೩೩	ಉತ್ತಪ್ಪನವರು	ಉತ್ತಪ್ಪನವರು
6೦	ಗಣಪಯ್ಯನವರು	ಗಣಪಯ್ಯನವರು
6೧	ಕಂಬಂಡದ ಪೂವಯ್ಯನವರು	[illegible] ಪೂವಯ್ಯನವರು ಮುಕ್ತೇಸರು
66	ಮಾಚಪ್ಪನವರು	ಮೊಣ್ಣಪ್ಪನವರು
67	ಚೆಪ್ಪಂಡ	ಚೆಪ್ಪುಡಿರ
69	ಮಾದಪ್ಪನವರು	ಮಾದಪ್ಪನವರು
70	ಕೆ. ಕುಟ್ಟಯ್ಯ ಚೇರ್ಮನ್	ಬಿ. ತಿಮ್ಮಯ್ಯ ಚೇರ್ಮನ್

೧ ನೇ ಪಂಕ್ತಿಯ ಪ್ರಾರಂಭದವರ ಎಂಬುದು 6 ನೇ ಪಂಕ್ತಿಯ ಕುಟ್ಟಯ್ಯನವರು ಎಂಬುದರ ನಂತರ ಬರತಕ್ಕದು. ಸ.

ವರ್ತಮಾನ ಸಂಗ್ರಹ.

ಒಳದೇಶ.

ಈ ವಾರ ಮಳೆಯು ಕ್ರಮವಾಗಿ ಸುರಿದಿದೆ. ರೈತರಿಗೆಲ್ಲಾ ಸಂತೋಷ. ಪ್ಲಾಂಟರುಗಳಿಗೆಲ್ಲಾ ಸಂತಾಪ.

"ಕೊಡಗು ಮೋಟಾರ್ ಸರ್ವಿಸ್" ನವರ ಮೋಟಾರ್ ಒಂದಿರುವ ಮಡಿಕೇರಿ ಸಿದ್ದಾಪುರದ ರಸ್ತೆಯಲ್ಲಿದೆ. ಮಳೆಯು ಬಹಳ ಜೋರಾದುದರಿಂದಲೂ ಮೋಟಾರು ಬಾರದ್ದರಿಂದಲೂ ಪ್ರಯಾಣಿಕರಿಗೆ ತುಂಬಾ ಕಷ್ಟವಾಗಿದೆ.

ಕಳೆದ ವಾರ 2, 3 ದಿವಸಗಳವರೆಗೆ ಮಡಿಕೇರಿಯಲ್ಲಿ ವಿಪರೀತ ಮಳೆ. ಕೂಡಿ ಬರುತ್ತಿರುವವರಿಗೆ ಎಲ್ಲಿಯ ಸ್ಥಳವೂ ದೊರೆಯದೆ ಬಹಳ ತೊಂದರೆಯಾಯಿತು. ಕಳೆದ ಇಪ್ಪತ್ತೈದು ವರ್ಷಗಳಿಂದ ಒಂದಿಲ್ಲ ಒಂದೇ ದಿವಸದಲ್ಲಿ (24 ಗಂಟೆಗಳು) 7.67 ಇಂಚು ಮಳೆಯಾಗಿದೆ.

ವೀರರಾಜಪೇಟೆಯಿಂದ ಗಾಡಿಗಳು ಸರಿಯಾಗಿ ಬಾರದೆ ವಿಪರೀತವಾದ್ದರಿಂದ ಪೇಟೆಯಲ್ಲಿ ಉಪ್ಪಿಗೂ ಸಿಗದಿರೂ ಬೆಲೆ ಏರಿದೆ. ಪತ್ರೆ ಮೈಸೂರು ಸರಕಾರದವರು ಗೋಣಿ ಪ್ರತಿಬಂಧವನ್ನು ವಜಾ ಮಾಡಿದ್ದರಿಂದ ನಮ್ಮ ವರ್ತಕರಿಗೆಲ್ಲಾ ಬಹಳ ಕಷ್ಟವಾದಂತೆ ಆಯಿತು.

ಮಡಿಕೇರಿ ಮೂರ್ನಾಡು ರಸ್ತೆಯಲ್ಲಿ ಒಂದು ಗುಡ್ಡವು ಜಾರಿ ಬಿದ್ದಿದೆ. ಮತ್ತೆ ಪುನಃ ಮಡಿಕೇರಿ ಹುಣಸೂರು ರಸ್ತೆಯಲ್ಲಿ ಅದೇ ಅನಾಹುತ ಸಂಭವಿಸಿ ಮಡಿಕೇರಿಯ ಮೋರಿ ರಸ್ತೆಗಳಲ್ಲಿ ದಾರಿ ಮುಚ್ಚಿಹೋಗಿದ್ದರಿಂದ ಜನ ಸಂಚಾರಕ್ಕೂ ಗಾಡಿ ಸಂಚಾರಕ್ಕೂ ತೊಂದರೆಯಾಗಿದೆ. ಪ್ರಕೃತ ಕ್ರಮದಿಂದ ರಸ್ತೆಯು ಸರಿಯಾಗಿದೆ.

ಸೋಮವಾರಪೇಟೆ ಗ್ರಾಮಸ್ಥರೆಲ್ಲರೂ ಸೇರಿ ಅಮಲು ಪದಾರ್ಥದ ದೋಷವನ್ನು ತಿಳಿದುಕೊಂಡು ಅದನ್ನು ಉಪಯೋಗಿಸುವವರನ್ನಾಗಲೀ ಬೇರೆ ಯಾವ ಜನರುಗಳನ್ನಾಗಲೀ ಸೇರಿಸಕೂಡದೆಂದೂ, ಬೈಸಿಕಲ್‌ಗಳಿಂದ ಸೇಂದಿ ಇಳಿಸಬಾರದೆಂದೂ ಕಟ್ಟು ಮಾಡಿದರು. ಆದರೆ ಅಲ್ಲಿಯ ಒಂದೆರಡು ಅವಿವೇಕಿಗಳ ಬೆಂಬಲದಿಂದ ಈ ಕಟ್ಟು ಸಡಿಲವಾಗಿ ಬಾರಿಗೆ ಬಂದಿರುವದಿಲ್ಲವೆಂದು ನಮ್ಮ ಬಾತ್ಮೀದಾರರು ತಿಳಿಸುತ್ತಾರೆ.

ಹೈಸ್ಕೂಲ್ ಹೆಡ್ ಮಾಸ್ತರಾದ ಮ॥ ಬ್ರೇಸ್ಲಿಯವರು 25 ನೇ ತಾರೀಖಿನಲ್ಲು ಇಲ್ಲಿಗೆ ಬಂದಾಗ ಸ್ಕೌಟ್ ವಿದ್ಯಾರ್ಥಿಗಳು ಮೋಟಾರ್ ಸ್ಟೇಷನಿಂದ "ಗಾರ್ಡ್ ಆಫ್ ಆನರ್" ಕೊಟ್ಟು ಅವರನ್ನು ಬಹು ಸಂಭ್ರಮದಿಂದ ಸ್ಕೂಲಿಗೆ ಕರೆತಂದರು. ಅವರು ಇಂಗ್ಲೆಂಡಿನ ಹೆಡ್ಮಾಸ್ತರಾಗಿದ್ದ ರಾಮರಾಯರಿಂದ ಚಾರ್ಜ್ ತೆಗೆದುಕೊಂಡು ಸ್ಕೂಲಿನ ಎಲ್ಲಾ ಭಾಗಗಳನ್ನು ನೋಡಿ ಬಹಳ ಸಂತೋಷಪಟ್ಟರಂತೆ.

"ಮಡಿಕೇರಿ ಸಿದ್ದಾಪುರ ರಸ್ತೆಯ 6 ನೇ ಮೈಲಿನ ಹತ್ತಿರ ಬಾವಿಗಳಲ್ಲಿ ಕಲ್ಲುಗಳನ್ನು ತೆಗೆಯುತ್ತಾ ಸುಮಾರು ಅರ್ಧ ಫರ್ಲಾಂಗು ಉದ್ದಕ್ಕೂ ರಸ್ತೆಯ ಮೇಲೆ ಕಲ್ಲುಗಳು ಬಿದ್ದಿರುವುದರಿಂದ ಜಾರಿಹೋಗುತ್ತವೆ. ಇದು ಪೂರ್ತಿಯಾಗಿ ದಾರಿಯಾಗಲಿಕ್ಕೆ ವಾರಗಳು ಸಾಕಾಗಬಹುದು. ಎಂಜಿನಿಯರರಿಗೆ ಈ ವಿಷಯ ತಿಳಿಯಲಿಲ್ಲವೆ? ಸರ್ಕಾರದ ಗತಿಯೇ! ಅದಕ್ಕಿಂತ ಅಪಾಯಕರವಾದ ಮಡಿಕೇರಿ ಪ್ರಯಾಣಿಕರ ಕಷ್ಟವೇ!

ಪೊಲೀಸ್ ಇನ್ಸ್‌ಪೆಕ್ಟರಿಗೆ ... ಮ॥ ... ಎಂಬವರು ... ಇನ್ಸ್‌ಪೆಕ್ಟರಾಗಿದ್ದರು.

... ಗ್ರಾಮಸ್ಥರಲ್ಲರೂ ಸೇರಿ ಒಂದು ... ಭಕ್ತಿ ... ದೇವರ ಹಬ್ಬವನ್ನು ... ಇದು ... ಎಂದು ತಿಳಿಸುತ್ತಾರೆ.

ಸೋಮವಾರಪೇಟೆ:— ... ವರ್ಷಗಳಿಂದ ... ಸರಕಾರದವರು ... ಇನ್ನೂ ... ತಿಳಿಯು ...

... ಇಲ್ಲಿಗೆ ಕಳೆದ ... ಒಂದು ... 10 ...

... ಪೇಟೆ:— ... ಕಮಿಷನರ್ ಸಾಹೇಬರು ... ಬಂದಾಗ್ಗೆ ... ಮಹಲ ... ಕಛೇರಿ ... ಪರೀಕ್ಷಿಸಿ ...

... ಎಂಬ ... ದೇಶದ ಎಲ್ಲಾ ... ಒಂದಿದ್ದರು. ಇವರು ... ನಡೆಯಿತು.

ಈ ಪ್ರಾಂತದಲ್ಲಿ ... ಯಿಂದ ... ಯ ಚಿಕಿತ್ಸೆಯ ... ಆದರ ಈ ಸೀರು ನಾಳೆಯ ... ನಾಗರೀಕರಿಗಾಗುವುದರಿಂದ ಸದರಿ ನಾಳೆಯನ್ನು ... ಪಟ್ಟಣದ ಸೌಕರ್ಯ ... ವೈಶ್ಯರ ...

ವೀರರಾಜೇಂದ್ರಪೇಟೆ:—ವೀರರಾಜಪೇಟೆಯಿಂದ ... ಶಾಲೆಯು ... ಒಂದು ... ಇದರ ಸಾರ್ವಜನಿಕ ಶಾಲೆಯಲ್ಲಿ ... ಕೋಟೆ ... ಸರಕಾರ ಬೇರೆ ... ಶಾಲೆಯನ್ನು ... ಇದು ... 20 ... ಅವರಿಗೆ ಹೋಲಿಗೆ ... ಆಗದ ... ಇಲ್ಲ ... ಮತ್ತೆ ಶಾಲೆಯು ... ಇನ್ನು ... ವಿದ್ಯಾ ... ಶಾಲೆ ... ಉತ್ತಮವಾದ ... ತೆಗೆದುಕೊಂಡು ... ಬಗೆಗೆ ಎದುರು ನೋಡುತ್ತಿದ್ದೇವೆ!

ಶಿವಿಣಾಪೇಸಂತೆ:— ... ದಿವಸದಿಂದ ... ಪ್ರಾಂತ್ಯಗಳಲ್ಲಿ ಹಾವಳಿಯೂ ... ಒಂದು ದೊಡ್ಡ ಆನೆಯು ... ದೊಡ್ಡಪೈಯ್ಯನ ತೋಟ ... ತಿನ್ನುತ್ತಿತ್ತು. ಇವನು ಆನೆ ಸಮೀಪ ... ನಿಂತು ... ಹೋಗುತ್ತಲು ಇವನನ್ನು ಆನೆಯು ತುಂಡಿಸಿ ಬಿಟ್ಟಿತು. ... ತಪ್ಪಿಸಿಕೊಂಡ ದೊಡ್ಡಪೈಯ್ಯನು

ಅಲ್ಲಿಯೆ ಮರೆಯಾಗಿ ನಿಂತು ಗುಂಡುಹೊಡಿಯಲು ಆನೆಯು ಒಂದೇ ಒಂದು ಗುಂಡಿಗೆ ಅಡ್ಡಾಡದೆ ಕೆಳಗೆಬಿದ್ದು ಮೃತವಾಯಿತಂತೆ. ಇದಲ್ಲವೆ ಶಿಕಾರಿಯ ಶೂರತ್ವ! ಗುಂಡುಹೊಡೆದು ಕೊಂದದಕ್ಕೆ ಇನಾಮು ಕೊಡಿಸಬೇಕಾಗಿ ಕಮಿಷನರ್ ಸಾಹೇಬರವರಿಗೆ ಅರ್ಜಿ ಬರಕೊಂಡಿದ್ದಾರೆ ಹ್ಯಾಗಾಗುವುದೊ? ಗೊತ್ತಿಲ್ಲ. ಪಾರೆಸ್ಟಿನವರು ಅದರ ಕೊಂಬು ತೆಗೆದುಕೊಂಡರು. ಒಡಪಾಯಿ ದೊಡ್ಡಪ್ಪನು, 15 ರೂಪಾಯಿ ಖರ್ಚಿನಿಂದ ಗುಂಡಿ ತೆಗೆಸಿ ಆನೆಯನ್ನು ಹೂಳಿಸಿಬಿಟ್ಟನು

ಮಳೆಯು ಹೋಯಿತೆಂದು ಕಳವಳ ಪಡುತ್ತಿದ್ದ ಸಮಯದಲ್ಲಿ ಮನದಣಿಯುವಷ್ಟು ಮಳೆ! ಆದರೂ ಹೊಲಕೆಲಸ ಕೊಂಚ ಹಿಂದಾಯಿತು. ಇದು ಸಕಾಲದಲ್ಲಿ ಮಳೆಬಾರದ್ದರಿಂದ ಆಯಿತು,

ಇದುವರೆಗೂ ಪೆನ್ಸ್ಲೀಫ್ ಕೋರ್ಟು ಸೋಮವಾರಪೇಟೆಗೆ ಬರುತ್ತಿದ್ದಿತಷ್ಟೆ ಇನ್ನು ಬರುವುದಿಲ್ಲವೆಂದು ಕೇಳುತ್ತೇವೆ. ದಕ್ಷಿಣ ಕೊಡಗಿನಲ್ಲೂ ಹೀಗೆಯೇ ವೀರರಾಜಪೇಟೆಯಿಂದ ಪೊನ್ನಂಪೇಟೆಗೆ ಹೋಗುವುದಿಲ್ಲವೆಂದು ವದಂತಿ ಎಲ್ಲೆಲ್ಲಿಯೂ ಜಾರಿಗೆ ಬರುತ್ತಿರುವ 'ರಿಟ್ರೆಂಚ್‌ಮೆಂಟ್'ನ ಫಲವೋ ಏನೊ!

ಹಿಂದೂದೇಶ.

ಸಜೆ ವಿಧಿಸಲ್ಪಟ್ಟ ಸ್ತ್ರೀಯರಿಗೆ ಮದರಾಸು ಸರಕಾರದವರು ವೇಲೂರಿನಲ್ಲಿ ಬಂದೀಖಾನೆಯೊಂದನ್ನು ಪ್ರತ್ಯೇಕವಾಗಿ ಕಟ್ಟಿಸುವವರಾಗಿದ್ದಾರೆ

ಪಂಡಿತ್ ಮೋತೀಲಾಲ್‌ನೆಹರು ಎಂಬವರಿಗೆ ಅಲಿಗಢಕ್ಕೆ ಹೋಗದಂತೆ ಸರಕಾರದವರು ಒಂದು ನೋಟಿಸು ಕೊಟ್ಟಿರುತ್ತಾರಂತೆ ಅವರು 24 ರಲ್ಲಿ ಅಲಹಾಬಾದಿಗೆ ಹಿಂತಿರುಗಿದರು

ಇಂಡಿಯನ್ ಪೀನಲ್ ಕೋಡಿನ 151 ಎ ಸೆಕ್ಷನ್ ಪ್ರಕಾರ "ಸರ್ಚ್" ಎಂಬ ಪತ್ರಿಕೆಯ ಎಡಿಟರಿಗೆ (ಸಂಪಾದಕರಿಗೆ) 250 ರೂ ಮತ್ತು ಪ್ರಿಂಟರಿಗೆ 25 ರೂ ಜುಲುಮಾನೆ ಮಾಡಿರುತ್ತಾರೆ

ಗತಿಸಿಹೋದ ಮಿ|| ರಾಹಿಮತುಲ್ಲಾ ಕರಿಮ್‌ಜೋಯ್ ಎಂಬವರ ಬದಲಿಗೆ ಸರ್ ಪಿತ್ತಲ್‌ದಾಸ್ [illegible] ಎಂಬವರನ್ನು ಲೆಜಿಸ್ಲೇಟಿವ್ ಅಸೆಂಬ್ಲಿಗೆ ಮೆಂಬರನ್ನಾಗಿ ಬೊಂಬಾಯಿಯ ಮಿಲ್ಲು ಅಧಿಕಾರಿಗಳ ಸಂಘವು ಚುನಾಯಿಸಿರುತ್ತ

ಮೇಜರ್ ಯಂಗ್ ಎಂಬವರು ಬರಹ್ ತಿರ್ಹೂತು ರೈಲ್ವೆಯಲ್ಲಿ ಪ್ರಯಾಣಮಾಡುತ್ತಿದ್ದ ಹಿಂದೂ ಪ್ರಯಾಣಿಕರನ್ನು ಬೇರೆಕಡೆಯಲ್ಲಿ ಕೂರಿಸಿದ ತಪ್ಪಿತಕ್ಕಾಗಿ ರೈಲ್ವೆ ಆಕ್ಟಿನ ಮೇರೆ ಮೂವತ್ತು ರೂಪಾಯಿ ಜುಲ್ಮಾನೆಯಾಗಿದೆ

ಇಂಡಿಯಾ ಗವರ್ನ್‌ಮೆಂಟಿನ ಸರಕಾರದ ಸಾಲಕ್ಕೆ ಒಂದಿರುವ ವಾಗ್ದಾನ 30,98,675 ರೂಪಾಯಿಗಳು. ಈ ಪೈಕಿ ಬೊಂಬಾಯಿಯವರು 1[illegible] ಕೋಟಿ 79 ಲಕ್ಷ ರೂಪಾಯಿಗಳನ್ನೂ, ಬಂಗಾಳಾದವರು 11 ಕೋಟಿ [illegible] ಲಕ್ಷವನ್ನೂ ಚಂದಾಹಾಕಿರುವರು.

ಬೊಂಬಾಯಿಯ ವಿದ್ಯಾ ಇಲಾಖೆಯ ಮಂತ್ರಿಯಾಗಿರುವ ಮಿ|| ಪರಾಂಜಪೆಯವರು ತಮ್ಮ ಸ್ಥಾನದಲ್ಲಿ ಎಲಿಮೆಂಟರಿ ಶಿಕ್ಷಣವನ್ನು ಚಾರ್ಜಿಲ್ಲದೆಯೂ ಬಲಾತ್ಕಾರವಾಗಿಯೂ ಮಕ್ಕಳಿಗೆ ಕೊಡುವದರ ವಿಷಯ ಆಲೋಚಿಸಲಿಕ್ಕೆ ಒಂದು ಕಮಿಟಿಯನ್ನು ಏರ್ಪಡಿಸಿರುವರು.

ಬೊಂಬಾಯಿಯಲ್ಲಿ ಸ್ವದೇಶಿ ಬಟ್ಟೆಯನ್ನೇ ಹಾಕಬೇಕೆಂತ ಇಷ್ಟವಿರುವದರಿಂದ ಪರದೇಶಿ ಬಟ್ಟೆಗಳನ್ನು ಶೇಖರಿಸಿಕೊಂಡು ಸ್ಮರ್ನಾದೇಶದ ಕಷ್ಟನಿವಾರಣೆಗಾಗಿ ಉಪಯೋಗಿಸುವದು, ಅಥವಾ ಆಗಸ್ಟ್ 1 ನೇ ತಾರೀಕಿನಲ್ಲಿ ದೊಡ್ಡ ಬೆಂಕಿಮಾಡಿ ಸುಟ್ಟು ಬಿಡುವದೆಂದು ನಿರ್ಣಯವಾಗಿದೆಯಂತೆ

ಸೆಂಟ್ರಲ್ ಪ್ರಾವಿನ್ಸು ಮತ್ತು ಬೀರಾರ್ ಪ್ರಾಂತ್ಯಗಳ ಈಗಿನ ಗವರ್ನರ್ ಆಗಿರುವ ಸರ್ ಫ್ರೇಂಕ್ ಸ್ಲೈ ಎಂಬವರು ಸದ್ಯದಲ್ಲೆ ರಿಟೈರ್ ಆಗುವರೆಂತಲೂ ಅವರ ಬದಲಿಗೆ ಒಬ್ಬ ಇಂಡಿಯನ್ ಗವರ್ನರ್ ಆಗುವರೆಂತೂ, ಮತ್ತು ಈ ಪದವಿಯನ್ನು ಸರ್. ಶಂಕರನ್ ಎಂಬವರು ಅಂಗೀಕರಿಸುವರೆಂತಲೂ (ಬಲವಾದ) ವದಂತಿಯಿದೆ

ಪರ್ಶಿಯಾ ದೇಶದ ಅಧಿಕಾರಿಯಾದ ಷಾಹನ ತಮ್ಮನಾದ 22 ವಯಸ್ಸಿನ ಯುವರಾಜರು ಬೊಂಬಾಯಿಗೆ ಬಂದು ಅಲ್ಲಿಯ ಪಾರ್ಸಿ ಜನರಿಂದ ಗೌರವವನ್ನು ಹೊಂದಿ ಈಗ ಉತ್ತರ ಹಿಂದುಸ್ಥಾನಕ್ಕೆ ಸಂಚಾರ ಹೋಗಿರುತ್ತಾರೆ ಇವರು ಜುಲೈ 30 ರಲ್ಲಿ ಮೋರ್ಯಾ ಎಂಬ ಹಡಗಿನಲ್ಲಿ ಯೂರೋಪಿಗೆ ಹೊರಟು ಹೋಗುವರು

ಆಗಸ್ಟು ಒಂದನೆ ದಿನ ಲೋಕಮಾನ್ಯತಿಲಕರವರ ಮರಣದ ದಿನವಾದುದರಿಂದ ಜನರು ಹರ್ತಾಲ್ (ಹರಿತಾಳ ಅಂದರೆ ತಾಳ ಹಾಕಿಕೊಂಡು ಒಳಗೆ ಕೂರುವದು) ಮುಂತಾದ ವ್ಯಸನದ ಸೂಚನೆಗಳನ್ನು ಮಾಡದೆ ಸ್ವರಾಜ್ಯವು ಹತ್ತಿರವಾಗುತ್ತಿದೆ ಎಂಬ ಧೈರ್ಯದಿಂದ ಸಂತೋಷಪಡಬೇಕೆಂದು ಮಹಾತ್ಮಾ ಗಾಂಧಿಯವರು ಸೂಚಿಸಿರುವರು

ಇಂಡಿಯಾದೇಶದಿಂದ ಸೀಮಾಂತರ ಕಳುಹಿಸುವ (ಬಂಕೋಲ್) ಸಜಾ ಅದಕ್ಕಾಗಿ ಅಂಡಮಾನ್ ದ್ವೀಪಕ್ಕೆ ಕಳುಹಿಸುವ ಪದ್ಧತಿಯನ್ನು ನಿಲ್ಲಿಸುವದಾಗಿಯೂ ಒಡನೆ ಈ ಸಜದಿಂದ ಅಂಡಮಾನ್ ದ್ವೀಪದಲ್ಲಿರುವ ಸ್ತ್ರೀಯರನ್ನು ವಾಪಾಸು ಕರೆಸುವದಾಗಿಯೂ ಸರಕಾರದ ಪ್ರತಿಜ್ಞೆಯಾಗಿದೆ ಆದುದರಿಂದ ಅಲ್ಲಿಂದ 1000 ಗಂಡಸರೂ 26 ಹೆಂಗಸರೂ ಒಡನೇ ಹಿಂತಿರುಗುವವರಾಗಿದ್ದಾರೆ.

1922 ನೇ ಇಸ್ವಿ ಜೂನ್ ತಿಂಗಳಿಯೊಳಗೆ "Place of Reason in Indian Philosophy" ಎಂಬವರ ವಿಷಯ ಸಂಸ್ಕೃತದಲ್ಲಿ ಬರೆದು ಕಳುಹಿಸುವಂತಹ ಉಪನ್ಯಾಸಗಳಲ್ಲಿ ಎಲ್ಲಾದಕ್ಕಿಂತ ಉತ್ತಮವಾದದ್ದಕ್ಕೆ ನೂರು ರೂಪಾಯಿ ಬೆಲೆಯ ಒಂದು ಮೈಸೂರು ಯೂನಿವರ್ಸಿಟಿ ಬಹುಮಾನವನ್ನು ಯೂನಿವರ್ಸಿಟಿ ಕೌನ್ಸಿಲಿನವರು ಕೊಡುವರು.

ಪಾರ್ಸಿ ಜನರಲ್ಲಿ ಕೆಲವರು ಮಹಾತ್ಮ ಗಾಂಧಿಯವರಿಗೆ ವಂದನಾ ಪತ್ರಕೊಟ್ಟದ್ದರಲ್ಲಿ ಹೇಳಿರುವದೇನಂದರೆ-"ನೀವು ಸತ್ಯವಾದಿಗಳು ಸರ್ವರ ಪೂಜ್ಯರ ಆಧಾರ. ಬಡರೈತರ ನಂಬಿದ ಕೂಲಿಗಾರರ ಪೋಷಕ ಹಿಂದುಳಿದವರ್ಗದ ಉದ್ಧಾರಕ ಬಡವರ ಸ್ನೇಹಿತ ಹೆಂಗಸರನ್ನು ಕಾಪಾಡುವವ ಹಿಂದುಗಳ ಉತ್ಸಾಹ ಮುಸಲ್ಮಾನರ ಮುಂದಾಳು ಪಾರ್ಸಿಗಳ ನಿಜವಾದ ಮಿತ್ರ ಕ್ರಿಸ್ತನ ಜೀವ ಅಹಿಂಸಾಬೋಧಕ ಶುದ್ಧತೆಯನ್ನು ಹೆಂಚುಕೊಡುವ ಸ್ವದೇಶಿಯ ಜ್ವಾಲೆ ಸ್ವರಾಜ್ಯದ ಮೂಲಾಧಾರ'

ರಾಯಚೂರು ಜಿಲ್ಲೆಯಿಂದ ಒಬ್ಬನು ಒಂದು ಪೊಟ್ಟಣ ಒಳ್ಳೇ ಚಿನ್ನದ ಪುಡಿಯನ್ನೂ ಮತ್ತೆ ನಾಲ್ಕು ಪೊಟ್ಟಣ ರಕ್ಕ ಚಿನ್ನದಪುಡಿಯನ್ನು ತಂದುಕೊಂಡು ಕಲ್ಲಿಕೋಟೆಯ ವರ್ತಕ ನೊಬ್ಬನಿಗೆ ಮಾರಿ 23,000 ರೂಪಾಯಿಗಳನ್ನು ತೆಗೆದುಕೊಂಡು ಹೋದನು ನಿಜವಾದ ಚಿನ್ನದ ಪೊಟ್ಟಣದ ನಂಬಿಗೆಯ ಮೇಲೆ ಮತ್ತೆ ನಾಲ್ಕು ಪೊಟ್ಟಣವನ್ನು ಕೊಂಡು ಮೋಸಹೋದ ವರ್ತಕನು ಸದರಿ ಪೊಟ್ಟಣಗಳನ್ನು ಕರಗಿಸುವಾಗ್ಯೆ ನಾಲ್ಕು ಸೀಸದ ಗಟ್ಟಿಗಳಾದವು, ವಿಕ್ರಯಮಾಡಿದವನು ಮಾಯ ನಾಮನಿಶಾನೆಗೆ ಸಿಕ್ಕಿಯದಾರಿ

ನಮ್ಮ ವೈಸರಾಯರವರು ಈ ದೇಶದಲ್ಲಿ ಜಾರಿಯಲ್ಲಿರುವ ಪ್ರೆಸ್ ಅಂದರೆ ಮುದ್ರಣ ಕಟ್ಟಳೆಯ ಕಾನೂನುಗಳು ಇರಬೇಕೆ ಅಥವಾ ಬೇಡವೆ ಎಂಬುದನ್ನು ಪರ್ಯಾಲೋಚಿಸಲು ಒಂದು ಸಮಿತಿಯನ್ನು ನೇಮಿಸಿರುವರು ಸಭೆಯಲ್ಲಿ ಡಾ|| ಸಪ್ರೂರವರೇ ಅಧ್ಯಕ್ಷರು ಮತ್ತು ಶ್ರೀಯುತರಾದ ಸರ್ ಶಿ. ಎಸ್. ಶಿವಸ್ವಾಮಿ ಅಯ್ಯರವರು ಸರ್ ಡಿ ಇ ವಾಚಾ ಎಸ್. ಎಂ ಸಾಮ್ರಾಟ ಮತ್ತು ಡಾ ಗೌರ್ ಮತ್ತು ಸರ್ಕಾರಿ ಅಧಿಕಾರಿ ಎಂಬರು ಇವರು ಈ ದೇಶದ ಮುಖ್ಯಸ್ಥರಾದವರನ್ನು ಕರೆಯಿಸಿ ಅದರ ಅಭಿಪ್ರಾಯಗಳನ್ನು ತೆಗೆದುಕೊಳ್ಳುತ್ತಲಿರುವರು

ಬಂಗಾಳದ ಆರೋಗ್ಯ ಇಲಾಖೆಯ ಮಂತ್ರಿಯಾದ ಸುರೇಂದ್ರನಾಥ ಬ್ಯಾನರ್ಜಿಯವರು ವರ್ತಮಾನ ಪತ್ರಿಕೆಗಳ ಸಂಪಾದಕರ ಸಭೆಯೊಂದು ಕೂಡಿಸಿ ಬಂಗಾಳದ ಆರೋಗ್ಯವನ್ನು ಯಾವ ರೀತಿ ಹೆಚ್ಚು ಅಭಿವೃದ್ಧಿಗೊಳಿಸುವದೆಂತ ಚರ್ಚೆ ಮಾಡಿದರು ಜನಸಂಖ್ಯೆಯ ಮರಣ ಜಾಸ್ತಿಯಾಗಿದೆ ಆದುದರಿಂದ ಪತ್ರಿಕಾ ಸಂಪಾದಕರು ಈ ವಿಷಯ ಪ್ರಚಾರವನ್ನು ಮಾಡಬೇಕು. ಆರೋಗ್ಯಹಾನಿಗೆ ಮುಖ್ಯ ಕಾರಣವಾದ ಮಲೇರಿಯ ಜ್ವರವನ್ನು ಹೋಗಲಾಡಿಸಲಿಕ್ಕೆ ರೈತರು ಆರೋಗ್ಯಶಾಸ್ತ್ರವನ್ನು ಚೆನ್ನಾಗಿ ತಿಳಿದುಕೊಂಡು ಜಾರಿಗೆ ತರಬೇಕು ಒಳ್ಳೇ ಕುಡಿಯುವ ನೀರು ಒದಗಿಸಿ ಕೊಡಬೇಕು ಹಳೇ ಕೆರೆಗಳನ್ನು ಶುದ್ಧಮಾಡಬೇಕು ಈ ಕೆಲಸಗಳನ್ನು ಮಾಡಲಿಕ್ಕೆ ಬೇಕಾಗುವ ದೊಡ್ಡ ಹಣವನ್ನು ಸರಕಾರದವರು ಸಾಲವಾಗಿ ಎತ್ತಬೇಕು ಪಾಠಶಾಲೆಗಳಲ್ಲಿ ಆರೋಗ್ಯಶಾಸ್ತ್ರವನ್ನು ಬಲಾತ್ಕಾರದಿಂದ ಕಲಿಸಬೇಕು ದೇಶಸೇವಕರು ಆರೋಗ್ಯ ವಿಷಯ ಬೋಧನೆ ಮಾಡಬೇಕು— ಎಂತ ಮಂತ್ರಿಯವರು ಭಾಷಣಮಾಡಿದರು.

ಸರ್. ಜಿ ಫ್ಲೀಟ್‌ವುಡ್ ವಿಲ್ಸನ್ ಎಂಬುವರು ಇಂಡಿಯಾದೇಶದ ಆದಾಯದ ಮಂತ್ರಿಗಳಾಗಿದ್ದು ಈಗ ಕೆಲಸದಿಂದ ನಿವೃತ್ತರಾಗಿರುವರು ಇವರು "Letters to Nobody" ಎಂಬಭಿಧಾನದಿಂದ ಒಂದು ಪುಸ್ತಕವನ್ನು ಬರೆದಿರುವರು ಇದರಲ್ಲಿ ಈ ದೇಶದ ಆದಾಯಸಭೆಯ ಹಲವು ಚಿತ್ರವಿಚಿತ್ರಗಳನ್ನು ಬರೆದಿರುವರು ಇದರಲ್ಲಿ ಈ ಕೆಳಗಿನದು ಒಂದು

"ಒಬ್ಬಾನೊಬ್ಬ ಸೆಟ್ಲ್‌ಮೆಂಟ್ ಆಫೀಸರನು ಯಾವ ಸಮೂನೆಯ ವಾಹನಗಳಾಗಲಿ ರಸ್ತೆಗಳಾಗಲಿ ಇಲ್ಲದಿರುವ ಪ್ರದೇಶಕ್ಕೆ ಹೋಗಬೇಕಾಗಿ ಬಂದುದರಿಂದ ರಾಮಪ್ರಸಾದ ನೆಸರಿನ ಒಂದು ಆನೆಯನ್ನು ತಿಂಗಳೊಂದರ 40 ರೂಪಾಯಿನ ಬಾಡಿಗೆಗೆ ಇಟ್ಟುಕೊಂಡರು ಆದರೆ ಇದು ರೂಲ್ಸ್‌"ಗೆ ವಿರುದ್ಧವಷ್ಟೆ ಆನೆಯ ಸಂಗತಿಯು ಸಭೆಗೆ ತಿಳಿದುದೇ ಆದರೆ ಖರ್ಚುಮಾಡಿದ ಹಣವು ಮಂಜೂರು ಆಗುತ್ತಿದ್ದಿಲ್ಲ ಇದನ್ನೆಲ್ಲಾ ಪರ್ಯಾಲೋಚಿಸಿ ನಮ್ಮ ಸೆಟ್ಲ್‌ಮೆಂಟ್ ಆಫೀಸರು ನೈಪುಣ್ಯಶಾಲಿ ಕಾಲಿ ಇದ್ದ ಒಬ್ಬ ಗುಮಾಸ್ತೆಯ ಕೆಲಸಕ್ಕೆ ರಾಮಪ್ರಸಾದನನ್ನು ನೇಮಕಮಾಡಿ ಯಾವ ಗಲಭೆಯೂ ಇಲ್ಲದೆ ಸಂಬಳವನ್ನು ಬರಮಾಡಿಕೊಳ್ಳುತ್ತಿದ್ದರು"

ಈ ವಿಷಯವು ಬರೇ ವಿಚಿತ್ರಮಾತ್ರವಲ್ಲ ಆಫೀಸರನ ಬುದ್ಧಿವಿಶೇಷವನ್ನು ಸಹ ಸೂಚಿಸುವುದಿಲ್ಲವೆ-ಎಂದು ಮದರಾಸಿನ ಹಿಂದೂ ಪತ್ರಿಕೆಯಲ್ಲಿ ಬರೆದಿದೆ

ಐದು ತಿಂಗಳ ಹಿಂದೆ ಕಲ್ಲಿಕೋಟೆಯಲ್ಲಿ ಆರು ತಿಂಗಳ ಸಜೆಗೆ ಗುರಿಮಾಡಲ್ಪಟ್ಟು, ಕೆಲವು ದಿವಸಗಳವರೆಗೆ ಕಣ್ಣಾನೂರು ಸೆಂಟ್ರಲ್ ಜೈಲಿನಲ್ಲಿಯೂ, ನಂತರ ಕೊಯಮುತ್ತೂರು ಸೆಂಟ್ರಲ್ ಜೈಲಿನಲ್ಲಿಯೂ ಸಜೆಯನ್ನು ಅನುಭವಿಸುತ್ತಿದ್ದ ಶ್ರೀ ಯಾಕೂಬ್ ಹಸನ್ ಸಾಹೇಬರನ್ನು ಸರಕಾರದವರು ಕಳೆದ ಜುಲೈ 17 ರಲ್ಲಿ ಬಿಡುಗಡೆಮಾಡಿರುತ್ತಾರೆ, ಯಾಕೂಬ ಹಸನ್ನರು ಜೈಲಿನಲ್ಲಿ ವಾಂತಿಭೇದಿ ರೋಗದಿಂದ ನರಳುತ್ತಿದ್ದುದರಿಂದಲೂ, ಯಾಕೂಬ ಹಸನ್ನರವರ ಅನಾರೋಗ್ಯದಿಂದ ಅವರಿಗೆ ಪ್ರಾಣಹಾನಿ ಸಂಭವಿಸಿ ಹಾನಿಯುಂಟಾಗಬಹುದೆಂದು ಡಾಕ್ಟರವರು ಹೇಳಿದುದರಿಂದಲೂ, ಅವರು ಈಗ ತನ್ನನ್ನು ಯಾವ ಉದ್ದೇಶಕ್ಕಾಗಿ ಶಿಕ್ಷಿಸಿದರೂ ಆ ಉದ್ದೇಶವಾಗಿ ಇನ್ನು ಮುಂದೆ ಮಲಬಾರಿಗೆ ಹೋಗುವುದಿಲ್ಲನೆಂದು ಒಂದು ಪತ್ರವನ್ನು ಬರೆದುಕೊಟ್ಟ ಮೇಲೆ ಸರಕಾರದವರು ಅವರನ್ನು ಬಿಡುಗಡೆ ಮಾಡಿರುತ್ತಾರೆಂದೂ ಅಲ್ಲದೆ ಐದುತಿಂಗಳ ಸಜವನ್ನು ಅನುಭವಿಸಿ ಇನ್ನುಳಿದ ಒಂದುತಿಂಗಳ ಸಜವನ್ನು ಅನುಭವಿಸಬಾರದೆ ಅಂತ ಪತ್ರವನ್ನು ಸರಕಾರಕ್ಕೆ ಬರೆದುಕೊಡಲಿಲ್ಲವೆಂತಲೂ ತನ್ನ ಬಿಡುಗಡೆ ವಿಷಯ ಜನರು ತಪ್ಪು ಅಭಿಪ್ರಾಯ ಮಾಡಿಕೊಳ್ಳಬಾರದೆಂದು ಅವರು ಆ ಜೈಲಿನ ಸೂಪರಿಂಟರಿಗೆ ಬರೆದಿರುತ್ತಾರೆ. ಅವರು ಜೈಲಿನಿಂದ ಹೊರಗೆ ಬಂದೊಡನೆಯೇ ಸಾವಿರಾರು ಜನರು ಗಾಂಧಿ ಜೈ ಎಂಬಲ್ಲಿ ಭೇಟಿಕೊಟ್ಟರು ಅಲ್ಲಿ ಅವರು ಕಾಂಗ್ರಸಿನ ಮೆಂಬರುಗಳ ಸಂಖ್ಯೆಯನ್ನು ಆದಷ್ಟು ಹೆಚ್ಚಿಸಬೇಕೆಂದು ನೆರೆದಿದ್ದ ಜನರನ್ನು [illegible]ಡರು ಅಲ್ಲಿಂದ ಅವರು ಮದ್ರಾಸಿಗೆ ಹೋಗಲು ಕಸ್ತೂರಿ ರಂಗ್ಯಯ್ಯಂಗಾರ್ ಮಿ|| ಸಿ [illegible] ಮೊದಲಾದ ಪ್ರಮುಖರಿಂದಲೂ [illegible] ಜನರಿಂದ ಬಹಳವಾಗಿ ಸನ್ಮಾನಿಸಲ್ಪಟ್ಟರು,

ವಿದೇಶ.

ಕೊಲಂಬಿಯಾದಲ್ಲಿ ಈ ವರ್ಷದ ಹತ್ತಿಯ ಬೆಳೆಯು ಇಷ್ಟರವರೆಗ ಎಂದಿಗೂ ಆಗಿದ್ದಿಲ್ಲವಂತೆ

ಪ್ಯಾರಿಸ್ ಪಟ್ಟಣದ ಪ್ರದರ್ಶನದಲ್ಲಿ "ತಿಎಕರ್" ಎಂಬ ಒಂದು ಆಕ್ಸ್‌ಫರ್ಡ ವರ್ತಮಾನಪತ್ರಿಕೆ ಇತ್ತು ಅದು ಉದ್ದ 1[illegible] ಅಡಿ ಮತ್ತು ಅದರ ಅಗಲ 15 ಅಡಿ

ಇಂಗ್ಲೆಂಡಿನವರಿಗೆ 92 ಸಬ್‌ಮೆರಿನ್ (ನೀರಿನ ಒಳಗೆ ಹೋಗುವ ಹಡಗು) ಇವೆ 8 ಕಟ್ಟುತ್ತಲಿದ್ದಾರೆ ಅಮೇರಿಕದವರಿಗೆ 107 ಸಬ್‌ಮೆರಿನ್‌ಗಳು ಇವೆ, 41 ಕಟ್ಟುತ್ತಲಿದ್ದಾರೆ

ಐರ್ಲೆಂಡಿನ ಪ್ರಜಾಪ್ರತಿನಿಧಿಯ ಅಧ್ಯಕ್ಷರಾಗಿರುವ ಡಿವಲೆರಾ ಎಂಬವರು ಇಂಗ್ಲೆಂಡಿನ ಮುಖ್ಯಮಂತ್ರಿಗಳ ಕೂಡೆಯೂ ಬ್ರಿಟಿಷರ ನಗರದ ರಾಜ್ಯದ ಲಂಡನಿನಲ್ಲಿ ಸಂಭಾಷಣೆ ಮಾಡುತ್ತಿರುವರು.

ಕಳೆದವರ್ಷ ದಕ್ಷಿಣ ಆಸ್ಟ್ರೇಲಿಯದೇಶದಲ್ಲಿ 50,00[illegible] ಗ್ಯಾಲನ್‌ಗಳಿಗಿಂತ ಹೆಚ್ಚಿಗೆ ವೈನೂ (ದ್ರಾಕ್ಷಾರಸ) [illegible]00 ಹಂಡ್ರೆಡ್ ವೈಟ್ (cwt) ಗಿಂತ ಹೆಚ್ಚಾಗಿ ಕರೆಂಟು 5[illegible],000 ಹಂಡ್ರೆಡ್ ವೈಟ್ (cwt) ಗಿಂತ ಹೆಚ್ಚಾಗಿ ರೈಸಿನ್ ತಯಾರಾಯಿತು

ಫ್ರಾನ್ಸಿಗೆ ಸೇರಿದ ಉತ್ತರ ಆಫ್ರಿಕದ ಮುಸಲ್ಮಾನ ಜನಗಳು ಫ್ರಾನ್ಸಿನ ಮುಖ್ಯಪಟ್ಟಣವಾದ ಪಾರಿಸ್‌ನಲ್ಲಿ ಸ್ಥಾಪಿಸಿರುವ ಮುಸಲ್ಮಾನ ವಿದ್ಯಾಶಾಲೆಗೆ ಒಂದು ಕಂತಿನ ಹಣವಾಗಿ ಹತ್ತುಲಕ್ಷ ರೂಪಾಯಿಗಳನ್ನು ಜಮಾಯಿಸಿ ಕಳುಹಿಸಿರುತ್ತಾರೆ

ಭೂಲೋಕದ ಯಾವ ರಾಜ್ಯಗಳಲ್ಲಿ ಹಡಗುಗಳನ್ನು ಸೈನ್ಯಗಳನ್ನೂ ಮತ್ತು ಯುದ್ಧಸಾಮಗ್ರಿಗಳನ್ನೂ ಕಡಿಮೆಮಾಡಬಹುದೆಂದು ಚರ್ಚಿಸಿ ತೀರ್ಮಾನಿಸಲಿಕ್ಕೆ ಇಂಗ್ಲೆಂಡು ಫ್ರಾನ್ಸು, ಜಪಾನ್ ಇಟಲಿ, ಅಮೇರಿಕ ಇತ್ಯಾದಿ ದೇಶಗಳ ಪ್ರತಿನಿಧಿಗಳು ಈ ವರ್ಷದ ಅಂತ್ಯದಲ್ಲಿ ಅಮೇರಿಕದಲ್ಲಿ ಒಂದು ಸಭೆಯನ್ನು ಸೇರಿಸುವವರಾಗಿದ್ದಾರೆ.

ನೋಟೀಸು.

ಷೇರುದಾರರ ಮತ್ತು ಚಂದದಾರರುಗಳ ಅನುಕೂಲಕ್ಕಾಗಿ "ಕೊಡಗು" ಕಂಪೆನಿಯ ಸಕ್ರೆಟರಿ ಮೆ ಕೋ[illegible] ಚಿಣ್ಣಪ್ಪನವರು ಈ ತಾರೀಖು 24 ರಿಂದ 30 ರ ವರೆಗೆ ಸಂ[illegible] ತಾಲ್ಲೋಕಿನ ಎಲ್ಲಾ ಮುಖ್ಯ ಸ್ಥಳಗಳು ಅಂದರೆ ಸಂತೆ ದಿನಗಳಲ್ಲಿ ಸೋಮವಾರಪೇಟೆ ಶನಿವಾರಸಂತೆ ಕೊಡ್ಲಿಪೇಟೆ ಮತ್ತು ಶ್ರೀಜರುಪೇಟೆಯಲ್ಲಿರುತ್ತಾರೆ

ಸಬ್ ಎಡಿಟರ್ ಮೆ|| ಬಿಟ್ಟಿಯಂಡ್ರ ಮುತ್ತಣ್ಣನವರು ಈ ತಾರೀಖು 24 ರಲ್ಲಿ ಗೋಣಿಕೊಪ್ಪಲು, 25 ಹುದಿಕೇರಿ 26, 27 ಶ್ರೀಮಂಗಲ 28 29 ನಾಲ್ಕೇರಿ ಮದಿಕೇರಿ ಪೊನ್ನಂಪೇಟೆ, 31 ಗೋಣಿಕೊಪ್ಪಲು 1 ನೇ ಆಗಸ್ಟು ಪೊ[illegible]ಬೆಪ್ಪ, 2 ಅಮ್ಮತ್ತಿ 3 ವೀರರಾಜೇಂದ್ರಪೇಟೆಯಲ್ಲಿರುತ್ತಾರೆ ಆದ್ದರಿಂದ ಎಲ್ಲಾ ಷೇರುದಾರರು ಮತ್ತು ಚಂದಾದಾರರು ದಯವಿಟ್ಟು ತಮ್ಮ ತಮ್ಮ ಷೇರು ಮತ್ತು ಚಂದಾ [illegible]ವನ್ನು ಪಾವತಿಮಾಡಿ ರಶೀತಿ ಹೊಂದಬೇಕಾಗಿ ಅಪೇಕ್ಷಿಸೋಣವಾಗಿದೆ.

ಮ್ಯಾನೇಜರ್.

ಚಿತ್ರವಿಚಿತ್ರಾವಳಿ

ತಲೆಯ ಕೂದಲು ಇಲ್ಲದವರಿಗೆ

ಯಾರಿಗೆ ತಲೆಯಲ್ಲಿ ಕೂದಲಿಲ್ಲವೊ ಅವರು ತಮ್ಮ ತಲೆಗೆ ಶೀತವನ್ನು ಬರಮಾಡಿಕೊಂಡಲ್ಲಿ ಒಡನೆಯೇ ಕೂದಲು ಬರುವುದು. ಶೀತಪ್ರದೇಶವಾದ ಅಂಟಾರ್ಕ್ಟಿಕ್ ಪ್ರದೇಶಕ್ಕೆ ಹೋದ ಸರ್ ಶ್ಯಾಕಲ್ಟನ್ (Sir Shackleton) ಎಂಬ ಮಹಾಶಯನ ಜೊತೆಗಾರರಲ್ಲಿ ಅನೇಕರಿಗೆ ತಲೆಕೂದಲೇ ಇಲ್ಲದೆ ಬೋಳು ನೆತ್ತಿಯವರಾಗಿದ್ದರು ಹಿಂತಿರುಗಿ ಬರುವಾಗ್ಯೆ ಅವರ ತಲೆಯಲ್ಲೆಲ್ಲಾ ಕೂದಲು.

ಶೀತಪ್ರದೇಶದ ಎಸ್ಕಿಮೊ ಜನರಿಗ ಉದವಾದ ಕೂದಲು, ಮೃಗಗಳಿಗೆಲ್ಲಾ ಉಣ್ಣೆ ಇಲ್ಲಿ ಹ...ಗ ಸ ಸು... ಸ್ವರೂ ಈ ಮಾರ್ಗವನ್ನು ಹೊಂದುವರು.

ನಾವೆಲ್ಲರೂ ಧ್ರುವಪ್ರದೇಶಕ್ಕೆ ಹೋಗಲು ಸಾಧ್ಯವೆ? ಸಾಧ್ಯವಲ್ಲದಿದ್ದರೂ ಒಂದುಪಾಯವನ್ನು ಮಾಡಬಹುದೆಂದು „ ಇಂಗ್ಲಿಷ್‌ಮೇನ್ " ಎಂಬ ಪತ್ರಿಕೆ ಸೂಚಿಸವುದು,

ಯಾರಿಗೆ ತಲೆಯಲ್ಲಿ ಕೂದಲಿಲ್ಲವೊ ಅವರು ಮಂಜು ಗಡ್ಡೆಯನ್ನು ಒಂದು ಪಟ್ಟಿಗೆಯಲ್ಲಿ ... ಪಟ್ಟಿಗೆಯಲ್ಲಿ ತಮ್ಮ ತಲೆಯನ್ನಿಟ್ಟು ಮಲಗಿದರೆ ಶೀತಪ್ರದೇಶಕ್ಕೆ ಹೋದಂತಾಗು ವುದು

ವಾಚಕರಲ್ಲಿ ಯಾರಾದರೂ ಈ ಉಪಾಯವನ್ನು ಪ್ರಯತ್ನಿಸಿ ತಮ್ಮ ಅನುಭವವನ್ನು ತಿಳುಹಿಸಬೇಕಾಗಿ ಕೋರಿಕೆ

* * *

ಶಾಲಾಮಕ್ಕಳಿಗೆ ನಕಲು ತೆಗೆಯಲು ಸುಲಭದ ದಾರಿ!

ಯಾರಿಂದಲೂ ಕಂಡುಹಿಡಿಯಲಿಕ್ಕಾಗುವುದಿಲ್ಲ ಅತ್ಯುತ್ತಮ ವಿಧಾನ ಖರ್ಚು ಬಹಳ ಕಡಿಮೆ

ಹರಳೆಣ್ಣೆ (Castor oil) ಮತ್ತು ಅಲ್ಕಹೋಲ್ Alchol) ಎಣ್ಣೆಯನ್ನು ಒಂದು ಸ್ಪಂಜಿನಿಂದ ಡ್ರಾಯಿಂಗ್ ಕಾಗದದಮೇಲೆ ಬೆರಸುವುದು ಅಲ್ಕಹೋಲ್ ಎಣ್ಣೆಯು ಸ್ವಲ್ಪದರಲ್ಲಿ ಆರಿಹೋಗುವುದು. ನಮಗೆ ಬೇಕಾದ ನಕಲನ್ನು ಅಗೆದೊಡನೆಯೇ ಪುನಃ ಅಲ್ಕಹೋಲ್ ಎಣ್ಣೆಯಲ್ಲಿ ಕಾಗದವನ್ನು ಅದ್ದಿ ಒಣಗಿಸಿದೊಡನೆಯೇ ಎಣ್ಣೆಯು ಮಾಯವಾಗಿ ಕಾಗದವು ಪೂರ್ವದ ಬಣ್ಣವು ಬರುವುದು

ಕಾಗದದ ದಪ್ಪಕ್ಕನುಸರಿಸಿ ಅಲ್ಕಹೋಲ್ ಎಣ್ಣೆಯು ಹರಳೆಣ್ಣೆಗಿಂತ ದುಬಾರಿಯಾಗಿರಬಹುದು ಶಾಲಾ ಡ್ರಾಯಿಂಗ್ ಮಾಸ್ತರರೇ ಇನ್ನು ಎಚ್ಚರಿಕೆಯಲ್ಲಿರಿ!

ಪತ್ರವ್ಯವಹಾರಗಳು.

ಬಾಹ್ಯದಾರರು ಕಳುವ ಅಭಿಪ್ರಾಯಗಳಿಗೆ ಪತ್ರಪ್ರಕಾಶಕರು ಉತ್ತರವಾದಿಗಳಲ್ಲ [ಎಡಿಟರ್]

ಯ್ಯಾ ಕೊಡಗಾಭಿಮಾನಿಯು —

ನಿನ್ನ ಗಾಂಭೀರ್ಯಯುಕ್ತವಾದ ಪತ್ರಿಕೆಯನ್ನು ನೋಡಿ ನಾನು ಸಂತೋಷಪಟ್ಟೆನು ಮತ್ತು ನೀನು ನಮ್ಮ ಕನ್ನಡ ಭಾಷೆಗೆ ವಾಕ್ಯ ಜ್ಞಾನವಾದ ವ್ಯಾಸರಿಲ್ಲ ಇನ್ನ ವೆಷ್ಠರುವಿ ಎಂದು ಕೊಡವ ತಿಳಿದೆನು ನನ್ನನ್ನು ನೋಡಿ ನಿನ್ನ ಕೊಡವ ಮಾತಾಡಿದ ಯಾವನೊಬ್ಬ ವ್ಯಕ್ತಿಯಾದರೂ ನಗಾಡಿದರೆನು ಮತ್ತು ನಿನ್ನಿಂದ ನಮ್ಮ ಮಾತೃನಿಗೂ ಕೊಡ ಒಂದು ತರದ ಕಳಂಕ ಉಂಟಾಯ್ತು ಎಂಬದಕ್ಕೆ ಮಾತ್ರ ನಾನು ಬೇಡುತ್ತೇನೆ ಇನ್ನಾದರು ನಿನ್ನ ಬಾಲ್ಯಾಯುಷ್ಯದಲ್ಲಿ ನಿನ್ನ ಭಾಷೆಯನ್ನು ಸರಿಪಡಿಸಿಕೊಂಡು ದೇಶಾಟನಕ್ಕೆ ಹೊರಡುವುದು ಉತ್ತಮವೆಂದು ನಾನು ಗ್ರಹಿಸುತ್ತೇನೆ ನಾನು ನಿನಗೆ ಭಾಷಾಭಿಮಾನಿಯಿಂದ ಇಷ್ಟನ್ನು ತಪಡಿಸದೆ ಹೋರ್ಸು ನಿನ್ನ ಮೇಲೆ ದೋಷಾರೋಪಣೆ ಮಾಡುವದಕ್ಕೋಸ್ಕರ ಬರೆದೆನೆಂದು ನೀನು ಮಾತ್ರ ಸ್ಪರ್ಶಪಡಬೇಡ ಶ್ರೀನಿವಾಸರಾವ್

[ಭಾಷಾಭಿಮಾನಿಗಳಾದ ಮ ಶ್ರೀನಿವಾಸರಾಯರ ಪತ್ರವನ್ನು ಪ್ರಕಟಿಸಿರುವೆವು ಮಾತ್ರವಲ್ಲ ವಿಷಯವು ನಮ್ಮ ಕೆಲಸವಲ್ಲ ಜಹುಷಃ ಆಯರ ಊರಿನ ಪತ್ರಗಳಲ್ಲಿ ಆ ವಿಷಯವಿರಬಹುದೇನೊ!

ಮತ್ತೆ ಭಾಷಾಕೈಲಿಯ ವಿಷಯ ಆಯಾ ದೇಶಕ್ಕೆ ಅನುಸರಣವಾಗಿ ಇವು ವ್ಯತ್ಯಾಸಗಳಿರಬಹುದು ಪರ ಪಂಡಿತಾಲಿಕರ ವಾಗ್ಭಾಷೆಯು ಇದಾಗಿದರೂ ಇನ್ನೊಂದು ಸೇವೆಯನ್ನು ದಯಮಾಡುತ್ತಿದ್ದಾರೆಂದರೆ ರಾಯರು ತಮ್ಮ ಆಕ್ಷೇಪವನ್ನು ಹಿಂತೆಗೆಯುವರೇನು? ಮತ್ತೆ ಪತ್ರವು ಮೈಸೂರಲ್ಲಿ ಪ್ರಕಟಿಸಲ್ಪಟ್ಟರೂ ಮೈಸೂರವರನ್ನು ಹಿಂಬಾಲಿಸಬೇಕೆಂದು ಶಬ್ದಗಳನ್ನು ಒರೆದು ಪಾಂಡಿತ್ಯ ಪ್ರದರ್ಶನಮಾಡುವುದು ನಮ್ಮ ಉದ್ದೇಶವಲ್ಲ ಅದು ರಾಯರಿಗೂ ಮತ್ತು ಅವರ ಮಿತ್ರರಿಗೂ ಯವರಿಗೂ ಇರಲಿ ಈ ಪತ್ರಿಕೆಯು ಸಾಧಾರಣ ಜನ್ಮಭಾಷೆಯ ಸೇವೆಗಿರುವ ಲಕ್ಷ್ಯವಿಟ್ಟಿಯ ಕನ್ನಡಿಗರ ಸೇವೆಗಾಗಿ ವಿಷಯಗಳನ್ನು ಒದಗಿಸುವುದು [ಸಂ

ಬಟ್ಟೆ ವೈರ್ಸ್ ದುಃಖ

ಅಯ್ಯಾ ನಾನು ಕೇವಲ ಗರೀಬನು ನನಗೆ ಆರಂಭದ ಬಗ್ಗೆ ಎಲ್ಲ ತಿಳಿದ ಧರ್ಮ ಸರಕಾರದವರು ನನಗಾಧಾವರಿಗೆ ... ಕೆಗಿಯವು ಮೈ ಸಹಾಯ ಮಾಡಬೇಕೆಂಬ ಆಕ್ಟು ಇದೆಯೆಂದು ತಿಳಿದು ನಾನು ಆರಂಭವು ಇಲ್ಲಿಗೆ 7 ತಿಂಗಳಾದವು ಆರಂಭದ ಅದೂ ಕಾಲವು ಕಳೆದು ಇದುವರೆಗೂ ಹಣ ದೊರೆಯಲಿಲ್ಲ ವಿಚಾರಿಸಿದಲ್ಲಿ ಹಣ ಮಂಜೂರಾಗಿ ಬಂದಿಲ್ಲವೆಂದು ಹೇಳುತ್ತಲೇ ಕಾಲ ಕಳೆಯುತ್ತಾರೆ ಅಗಲೇ ಇಲ್ಲದಿಂದ ಬಾಕಿ ಮಾಡಿದ್ದಾರೋ ಯಾ ಸ್ಕೂಲ್ ಮಾಸ್ತರರುಗಳಿಗೆ ಕೃಷಿಕರು ರೂಪಾಯಿ ಒಂದು ಅರುವು ಹೆಚ್ಚಿಗೆ ಸಹ ಕೊಡಬೇಕೆಂದು ಮೊನ್ನೆ ತೀರ್ಮಾನಕ್ಕೆ ಬಂತಂತಲ್ಲ, ಬರುತ್ತಿರುವ ಪತ್ರಿಕೆ ಯಿಂದ ತಿಳಿಯುತ್ತೇನೆ ಈ ಟಕ್ಕಾವಿ ಹಣಕ್ಕೂ ಇನ್ನೊಂದು ಸಹ ಬಿದಿ ನಂತರ ಕೊಡುವ ಇರಾದೆಯೆಂದು ಯೋಚಿಸಬೇಕಾಗಿದೆ ಈ ಮಧ್ಯೆ ಲಿಮಿಟೆಡ್ ಪರಸ್ಪರ ಸಂಘಗಳನ್ನು ಒಡದು 40 ಅನ್ ಲಿಮಿಟೆಡ್ ಗಳನ್ನು ಕೆರದಿದ್ದಾರಂತೆ ಸಂಬಂಧವಾದ ನನಾ ಲಿಮಿಟೆಡ್ ಸಂಘಕ್ಕೆ ಸೇರಿದವನಾಗಿದ್ದೆನು ಈಗ ನನಗೆ ಅದರ ಲಾಭವೂ ಅನ್ ಲಿಮಿಟೆಡ್ ದಿಂದ ದೊರೆಯಲಾರದಂತೆ ನಮ್ಮ ದೇಶದ ರೈತರ ಕ್ಷೇಮಕ್ಕಂತಾಗಿ ಜಮೀನ್‌ದಾರರ ಸಂಘ ಒಂದಿದೆಯಂತೆ ಹಾಗಿದ್ದಲ್ಲಿ ಇದುವರೆಗೂ, ಯಾಕೆ ನನಗೆ ಆರಂಭದ ಎತ್ತಿಗೆ ಹಣ ಕೊಡಿಸಲಿಲ್ಲ ... ದೊರೆಯಲಿಲ್ಲವೆಂದು ಇವರಿಗೆ ತಿಳಿಯದಿದ್ದಲ್ಲಿ ಇವರ ಸಂಘದಿಂದ ಏನಿದೆ? ಹೀಗಾದರೆ ಸಂಘದ ಹಣ ಹೆಚ್ಚಿನ, ಡಿ. ಸಿ. ಇದ್ದರೆ ಇದ್ದ ಕುಂದಾಯ, ನನ್ನ ಭೂಮಿ ಆರಂಭವಾದರೆ ಎಲ್ಲಿಂದ ಕೊಡಬೇಕು ಕೊಡದಿದ್ದರೆ ಭೂಮಿ ಹರಾಜಾಗುತ್ತದೆ ಹಣವಿದ್ದು ಸಡಿಯುತ್ತಾರೆ ರೈತರ ಕ್ಷೇಮಕ್ಕಂತರಾದರೆ ಈ ಜಮೀನ್‌ದಾರ ಸಂಘದವರು, ಯಾವಭೂಮಿ ಸಾಗುವಳಿ ಆಗಿಲ್ಲವೋ ಆ ಜಮೀನ್ ಕಂದಾಯ ವಸೂಲಿ ಕೇಳಕೂಡದಾಗಿ ಸರಕಾರದವರನ್ನು ಕೇಳಿಕೊಳ್ಳು

ಇಲ್ಲವೆ ಸದರಿ ಟಕ್ಕಾವಿ ಆಕ್ಟನ್ನು ಏಜಿ ಮಾಡಿಸಬೇಕು ಇದಲ್ಲವೆ ಸಂಘದ ಕರ್ತವ್ಯ? ಸಭೆ ಸೇರಿದಾಗ ಇದಿರ ಮಾತುಗಳು ಸರಿ ಬೆಟ್ಟಿನ ... ಇಲ್ಲವಾಗಿ ತಿಳಿಯುತ್ತೇನೆ ಮುಖಂಡರು ಈ ಸಂಗತಿಯನ್ನು ... ವಿಚಾರಿಸಿ ಗರೀಬನಾದ ನಾನು ಈ ಹೊಸವರ್ಷ ಕಂದಾಯ ಮತ್ತು ... ಕ್ಷದ ಹಣ ಕೊಡದೇಕೋ ಕ್ಯಾಗೆಂದು ತಿಳಿ

ತಮ್ಮ ಬಡರೈತ

ಕೊಡಗಿನ ಪಟೇಲರ ಮತ್ತು ಶ್ಯಾನುಬೋಗರ ಗತಿ

ಅಯ್ಯಾ, ಕಳೆದ ಆರಿಷ್ಟು ತಿಂಗಳಿಂದ ಕೊಡಗಿನ ಉದ್ಯೋಗಸ್ಥರಿಗೆ ಲ್ಲಾ ಸಂಬಳ ಬತ್ತಿ ಆಗಿದೆಯೆಂದು ಎಲ್ಲರಿಗೂ ಗೊತ್ತಿದೆಯಷ್ಟೆ ಶ್ಯಾನುಭೋಗರುಗಳಿಗೆ ಇತರ ಆಫೀಸುಗಳ ಗುಮಾಸ್ತರುಗಳಂತೆ ಸರಿಸಮಾನ ವಿದ್ಯೆ, ಸರ್ವಿಸು, ಯೋಗ್ಯತೆ ಇದ್ದರೂ ಅನಂತರ ಬಡ್ತಿ ಕೊಡದೆ ಅಂದರೆ ಶ್ಯಾನುಭೋಗರುಗಳಿಗೆ 25 ರೂಪಾಯಿಗಳಿಂದ ವರ್ಷ ಒಂದರ ಒಂದು ರೂಪಾಯಿ ಮೇಲೆ 40 ರೂಪಾಯಿಗಳ ವರೆಗೆ ಬಡ್ತಿಯೂ ಇತರರಿಗೆ 30 ರೂಪಾಯಿಗಳಿಂದ ವರ್ಷ ಒಂದರ ಎರಡು ರೂಪಾಯಿಗಳ ಮೇಲೆ 50 ರೂಪಾಯಿಗಳ ವರೆಗೆ ಬಡ್ತಿ ಮಾಡಿರುವರು ಪಟೇಲರಿಗೆ ಏನೊಂದು ಬಡ್ತಿ ತೋರಿಸದೆ ಇರುವದು ಸಂಪೂರ್ಣ ವ್ಯಸನ ವಿಷಾದ ಆಶ್ಚರ್ಯಕ್ಕೆ ಕಾರಣವಾಗಿದೆ ನಮ್ಮ ಇಂಡಿಯ ಸರಕಾರದವರು ಎಲ್ಲರಿಗೂ ಸಂಬಳ ಒಟ್ಟಿ ಮಾಡಿದೆಂದು ಹುಕುಂ ಮಾಡಿದ ಮೇಲೆ ಈ ವ್ಯತ್ಯಾಸದ ಭಿನ್ನಭೇದಗಳು ಹ್ಯಾಗಾಯಿತೆಂಬುದೂ ಯಾಕೆ ಎಂಬುವದನ್ನು ಕೊಡಗು ಪತ್ರಿಕೆಯ ಮೂಲಕ ಯಾರಾದರೂ ತಿಳುಸುವಿರಾ?

1 ಪಟೇಲ್ ಶ್ಯಾನುಭೋಗರು ಅವಕಬಿದ್ದಾಗ ತಮ್ಮ ತಮ್ಮ ಕೆಲಸದ ಜೊತೆಗೆ ಸರಕಾರದ ಎಲ್ಲಾ ಡಿಪಾರ್ಟ್‌ಮೆಂಟಿನ ಉದ್ಯೋಗಸ್ಥರಿಗೆ ತುಂಬಾ ಸಹಾಯವಾಗಿರುವವರೂ ಮತ್ತು ಅವರಿಗೆ ಸಹಾಯ ನೀಡುವವರೂ ಆಗಿರುತ್ತಾರೆ

2 (ಇವರು ಸರಕಾರಕ್ಕೆ ಸಲ್ಲತಕ್ಕ ನ್ಯಾಯವಾದ ಕಂದಾಯ ಹೆಚ್ಚಿಸಲಿಕ್ಕೆ) ಸಹಾಯವಾಡಿ ವರ್ಷ ವರ್ಷ ಜಾಸ್ತಿ (ಹೆಚ್ಚಾಗುತ್ತಾ ಬರುವುದಾದ) ಕಂದಾಯ ವಸೂಲ್ ಮಾಡುವುದರಲ್ಲಿಯೂ ಸಹಾಯ ಮಾಡುವವರಾಗಿರುವದರಿಂದ ಇವರ ಕೆಲಸಗಳು ಹೆಚ್ಚುತ್ತಾ ಹೋಗುತ್ತ

3 ಇವರು ಕೆಲವು ದಿನಗಳಲ್ಲಿ ಗ್ರಾಮಗಳಲ್ಲಿ ಕುದುರೆ ಸೈಕಲು ಮೋಟಾರಿನಲ್ಲಿ ತಿರುಗುವ ಅವರ ಮೇಲುದ್ಯೋಗಸ್ಥರ ಜೊತೆಯಲ್ಲಿ ಅವರವರ ಸಮಕ್ಕೆ ಸರಿಯಾಗಿ ತಿರುಗಿ ಕಾಲುಗಳಲ್ಲಿ ಕೆಲವು 12 1 ಮೈಲುಗಳು ನಡೆದು ಸರಿಯಾದ ಊಟ ಉಪಚಾರ ದೊರೆಯದೆ ಬಳಲುವರಾಗಿ ಅರೋಗ್ಯ ಕೆಟ್ಟು ಕಾಯಿಲೆ ಬಿದ್ದು ಜೀವ ಕಷ್ಟಕ್ಕೆ ಒಳಪಡುವವರಾಗಿದ್ದಾರೆ

ಇವರು ತಮ್ಮ ಮಕ್ಕಳಿಗೆ ವಿದ್ಯಾ ಕೊಡಲು ತುಂಬಾ ಅನಾನುಕೂಲವಾದ ಸ್ಥಳಗಳಲ್ಲಿ ಸಿಕ್ಕಿ ಬಿದ್ದು ಶಾಲೆಕ್ಕೆ ಅನುಕೂಲವಾದ ವಿದ್ಯಾರ್ಥಿಗಳು ದೊರಕಿಸಿಕೊಳ್ಳಲಾರದಷ್ಟು ಮತ್ತು ತಮ್ಮ ಮಕ್ಕಳನ್ನು ಬೇರೆ ಕಡೆ ವಾಸಕ್ಕೆ ಬಿಟ್ಟು ವಿದ್ಯಾಭ್ಯಾಸ ಮಾಡಿಸಬೇಕೆಂದರೆ ಈಗಿನ ವಿದ್ಯಾಭ್ಯಾಸದ ಖರ್ಚನ್ನು ತಡೆಯಲಾರದವರಷ್ಟು ಗರೀಬರಾಗಿ ಇದ್ದಾರೆ.

ಆದುದರಿಂದ ಈ ಬಡಪಟೇಲರ ಸ್ಥಿತಿಯನ್ನು ಸ್ವಲ್ಪ ಮಟ್ಟಿಗಾದರೂ ಸರಿಪಡಿಸಲಿಕ್ಕಾಗಿ ದಯಾಪರರಾದ ಕೊಡಗು ಸರಕಾರ ಮುಖ್ಯ ಉದ್ಯೋಗಸ್ಥರು ತುಂಬಾ ಉದಾರ ಮನಸ್ಸಿನಿಂದ ಈ ಪಟೇಲರ ಕಷ್ಟವನ್ನು ಮನಸ್ಸಿಗೆ ತೆಗೆದುಕೊಂಡು ಬಂದ ಆರಿಷ್ಟು ತಿಂಗಳಲ್ಲಿ ಆಗುವ ಹೊಸಸ್ಕೇಲಿನಲ್ಲಿ ಎಲ್ಲಾ ಇತರ ನಕರರಿಗೆ ಆಗುವಷ್ಟೇ ಬಡ್ತಿಯನ್ನು ಮಾಡಿಸಿಕೊಡುವರಾಗಿ ನಂಬಿದ್ದೇವೆ ಬಡ ಪಟೇಲ್

ಮಹಾಸ್ವಾಮಿ

ನಮ್ಮ ತಾರೀಖು 8 7 21 ರ ಪತ್ರಿಕೆಯನ್ನು ಓದಿ ನೋಡಿದಲ್ಲಿ ದಿ! ಗ್ರೇಟ್ ಟೋಡಿಗನ್ ಸಭೆಯ ವಿಷಯವು ಕೇವಲ ವ್ಯಸನಕರವಾದ ಸಂಗತಿಯಾಗುತ್ತ ಬಾಲ್‌ಸಾಹೇಬರು ಅಧ್ಯಕ್ಷರವರಾಗಿ ಇದ್ದದ್ದೂ ಸೋ ಆಗ್ರಹಯವಲ್ಲ ದೇಶೀಯರಿಂದ ಚುನಾಯಿಸಲ್ಪಟ್ಟ ಇವರು ಪ್ರತಿನಿಧಿಗಳೆ ನ ವೇರೆ ದೇಶಿಯರಿದ್ದರೂ ದೇಶದ ಪರಿಪಾಲನಿಗಾಯ ನಮ್ಮ ಮ್ಮಗಳ ಮನಸನ ಪರವಾಗಿಯೂ ಪಕ್ಷಪಕ್ಷರಹಿತವಾಗಿಯೂ ಚರ್ಚಿಸದ ಅಧ್ಯಕ್ಷರ ಪವಿತ್ರಾಗಿ ಚರ್ಚಿಸಿದ್ದು ಬಹಳ ಆಶ್ಚರ್ಯಕರವಾಗಿರುತ್ತ ಸರಕಾರದ ಖುತ್ತು ಅನ್ನವನ್ನು ತಿಂದು ಅವರಿಗೆ ಎರಡನ್ನು ಬಗೆಯಬಾರದೆಂಬುವದನ್ನು ಈ ನಮ್ಮ ಉನ್ನತ ಪದವಿಗೇರಿದ ಸ್ಥರಬಂದಿರುವ ಉದ್ಯೋಗಸ್ಥರು ಬಹಳ ಚೆನ್ನಾಗಿ ಮನಸ್ಸಿನಲ್ಲಿ ಮಡಗಿಕೊಂಡಿದ್ದಾರೆ ಇದು ಸುಳ್ಳು ನಮ್ಮ ಪಾಕುವುದು ಸರಕಾರದ ಮೂಲ ಅಲ್ಲವೇ ಅಲ್ಲ ನನ್ನು ಸಾಕಿಯೋ ವಿದ್ಯೆಯನ್ನು ಕಲಿಸಬೇಕೆಂದು ನಮ್ಮ ಈ ಕೊಡಗು ಸರಕಾರವು ಹೇಳುವ ಸಂಗತಿಯೋ ಹೊರತು ಬೇರೆ ಸರಕಾರದಲ್ಲಿ ಮನಸಿಯಾಗಿ ಜುಲುಮಿನಿಂದ ವಿದ್ಯೆಯನ್ನು ಕಲಿಸಲಿಕ್ಕೆ ಅತ್ಯಂತ ಪ್ರಯತ್ನದಲ್ಲಿ ಇದ್ದಾರೆಂಬ ಸಂಗತಿಯು ನಮಗಿಂತ ಚೆನ್ನಾಗಿ ನಮ್ಮ ಉದ್ಯೋಗಸ್ಥರಿಗೆ ತಿಳಿದಿರಬಹುದು ಹೀಗಿರುವಾಗ ಈ ಸಂಗತಿಯನ್ನು ಸರಕಾರಕ್ಕೆ ಸೂಚಿಸಿದ್ದರೆ ರಾಜಭಕ್ತರಲ್ಲ, ಭಕ್ತಿಗೂ ಅನುಗುಣವಾಗಿ ನಡೆದಂತಾಗಿ ಶೀಘ್ರದಿಂದ ಜಯಶೀಲವಾಗಿಯೂ ಪೂಜಿಸಲ್ಪಡುತ್ತಿದ್ದರು ಸರಕಾರವು ಕೊಡುವ ಉಪ್ಪು ಅನ್ನ ಎಲ್ಲಿಂದ, ಯಾರಿಂದ ಎಂಬುವನ್ನು ಇವರು ತಿಳಿಯದೆಯೂ ತಿಳಿದು ತಮ್ಮ ಅರ್ಥಕ್ಕೆ ವಿರೋಧವಾಗಿ ಏನಾದರೊಂದೂ ಕಾರಣವಿಲ್ಲದೆ ಈ ನಿಶ್ಚಯನ್ನು ಮಂಜೂರು ಮಾಡಲಿಕ್ಕೆ ಕಚೇರಿ ಕೊಟ್ಟಿದ್ದು ನೋಡಿದರೆ ನಮಗಳೆಲ್ಲಾ ತುಂಬ ವ್ಯಸನಕರವಾದ ಸಂಗತಿಯಾಗಿರುತ್ತೆ

ಮಾಂಸಹಾರಿಯಾಗಿರುವರೂ ತನ್ನ ನೂಂಸವನ್ನು ಕಾಸೇ ಕತ್ತಿಂದು ಅತ್ಯಹಿತ್ಯವನ್ನು ಮಾಡುವುದು ಸಹಜವೇ! ಈ ಸಿಕ್ಸನ ಶಾಕಿಯು ಜಾರಿಗೆ ಬ ನಮ್ಮ ದೇಶೀಯರು ಇದನ್ನು ತಿರಸ್ಕರಿಸ? ಆಗ ಅವರು ತಮ್ಮ ನಾಂಸವನ್ನು ತಾವೇ ಕಿತ್ತು ತಿಂದಂತಾಗುವುದಿಲ್ಲವೇ? ಚೆನ್ನಾಗಿ ಆಲೋಚಿಸಿಯನ್ನು ಮಾಡಿ ನೋಡಿದರೆ ನಮ್ಮ ಉದ್ಯೋಗಸ್ಥರು ಅವರಿಗೆ ನಾಳೆಗೆ ಎಷ್ಟುವ ಹೊರೆಯನ್ನು ಸಹ ಯೋಚಿಸದೆ ತಮ್ಮ ಆಸನಗೆಯ ಉದರ ಪೋಷಣೆಯಲ್ಲಿ ಇದ್ದಾರೆಯೇ ಹೊರತು ಬರಿತರ ಕಷ್ಟವನ್ನು ಗನ ತೆಗೆದುಕೊಳ್ಳುವರಾಗಿ ... ಇದು ಬಹಳ ನಾಚಿಕೆ ಅನೇಕ ಜನರು ಅನೇಕ ಸಭೆಗಳಲ್ಲಿಯೂ ಸಂಘಗಳ ... ಯಾ ಮನು ಲೌಕಿಕ ... ಗಳಲ್ಲಿಯೂ ಕಾರ್ಯ ಮಾಡುವ ... ದೇಶಗಳಲ್ಲಿಯೂ ನಮ್ಮ ಮನಸ್ಸಾಕ್ಷಿಗೆ ವಿರೋಧವಾಗಿ ಚರ್ಚಿಯು ಎಂದು ವೇಳೆಯಲ್ಲಿ ತಮ್ಮ ನಾಕರಿಗೆ ರಾಜಿನಾಮೆಯನ್ನು ಕೊಟ್ಟು ದೇಶಾಭಿಮಾನಿಗಳಾಗಿ ತಮ್ಮ ಸರ್ವಾಂಗವನ್ನು ದೇಶಾಭಿವೃದ್ಧಿಗೋಸ್ಕರ ಬಿಟ್ಟ ಸಂಗತಿಯು ನಮ್ಮ ... ತಿಗೆ ಹೊಸದಾಗಿ ಕೇಳುವ ಸಂಗತಿಯಲ್ಲ ಇದರಂತೆ ನಮ್ಮ ಮಹಾನುಭಾವರುಗಳು ಮಾಡಿದರೆ ಅಂದಿನಿಂದ ... ವಾಸಿಯೂ ಕೀರ್ತಿಯೂ ಸಂಬಂಧಿಸುತ್ತಿದ್ದವು ... ಆದುದು ಆ ಜಿಲ್ಲೆ ಮುಂಬರುವದರ ಅಧಿಕಾರ ಇದ್ದು ಮೇಲೆ ಒದವ ಮಾಡಿದರೂ ದೇಶಾಭಿಮಾನಿಗಳಾಗಬೇಕೆಂದೂ ... ಎಷ್ಟು ಪ್ರತಿನಿಧಿಗಳೂ ಸ್ವಲ್ಪವಾಗಿರಲಿ ...

' ಕೊಡಗು ' ಕಂಪೆನಿಯ ಲೆಕ್ಕ.

ಷೇರು		ರೂ	ಆ	ಪೈ
1075	ಷೇರುಗಳಿಂದ .	5375	0	0
663	ಷೇರುದಾರರಿಂದ ...	2268	12	0
	ಪ್ರವೇಶದ ಫೀಸಿನಿಂದ ...	49	8	0
	ಒಟ್ಟು .	7693	4	0
	ಈವರೆಗಿನ ಖರ್ಚು ..	2506	10	3
	ಮೈಸೂರು ಬ್ಯಾಂಕಿನಲ್ಲಿ ಸೇಕಡ			
	5 ರಂತೆ ಬಡ್ಡಿಯ ಫಿಕ್ಸೆಡ್ ಡಿಪಾಜಿಟ್ಟು	3000	0	0
	2½ ರಂತೆ ಬಡ್ಡಿಯ ಕರೆಂಟ್ ಡಿಪಾಜಿಟ್ಟು	2106	11	0
	ಟ್ರೆಶರರ ಕೈಯಲ್ಲಿ ಬಾಕಿ	79	14	9
	ಒಟ್ಟು	7693	4	0

22—7—21 ಕ ಕುಟ್ಟಯ್ಯ, ಆರ್ ಪಿ, ಟ್ರೆಶರರ್

ADVERTISEMENT.

Wanted two fair and accomplished Coorg brides for a couple of educated young men, who have just settled in life and who hold very decent standing also

Assuring that strict confidence will be maintained

MATRIMONIAL,
C/o "KODAGU"
MERCARA.

... ಪುಸ್ತಕ ...

ನಮ್ಮಲ್ಲಿ ಸುಮಾರು ೧೦೦೦ ತರದ ಬೇರೆಬೇರೆ ಕನ್ನಡಪುಸ್ತಕಗಳಿವೆ ಇಳಿ ಬರೆದ ಪುಸ್ತಕಗಳನ್ನು ಖರೀದಿ ಪೂರ್ಣ ಸ್ವಾತಂತ್ರ್ಯವು ನಮಗೆ ಇದೆ

೧ ಕರ್ನಾಟಕ ಕವಿ ಚರಿತೆ ...	೩—೦—೦
೨	೫—೦—೦
೩ ಒಳಕಟ್ಟ ವಾಸ್ತವ್ಯ	೦—೬—೦
೪ ಟಿ ಪ್ರಸರಣ ಸಾಹಿತ್ಯ ಚರಿತೆ	೦—೬—೦
೫ ರಾಜಕೀಯ ಚರಿತ್ರೆ	೧—೦—೦
೬ ನಿರ್ಮಲೆ	೦—೧೨—೦
೭ ಆಳ್ವರ ಚರಿತ್ರೆ (ಸಚಿತ್ರ)	೧—೦—೦
೮ ಆಯುರ್ವೇದ ರಕ್ತ ರತ್ನಮಾಲೆ	೨—೦—೦
೯ ರಾಯಚೂರು ವಿಜಯ	೨—೦—೦

ಇವಲ್ಲದೆ ನಮ್ಮಲ್ಲಿ ಶಾಲೋಪಯೋಗಿ ಮುಂತಾದ ಎಲ್ಲ ಕನ್ನಡ ಪುಸ್ತಕಗಳೂ ಬರವಣಿಗೆಯ ಎಲ್ಲ ಉಪಕರಣಗಳೂ ದೊರೆಯುತ್ತವೆ

ಕೊಡಗು ... ವ್ಯವಸಾಯ ...

ಪತ್ರ ನೋಡಿ ಕೊಡಗು ಬಾ ಧವರ್ ... ಇತ್ತ ನೋಡಿ!

ನಮ್ಮಲ್ಲಿ ಸಾಮಾನು ಪ್ರತಿಯೊಬ್ಬ ಹೋಗುವದು ತಮಗೆಗಳಿಗೆ ತಿಳಿದಿರಲಿದ್ದು

ತಾರಾಮಿಸಿಯ ತೈಲ ...ರಿಜ ಸೀಸ 1 ಕ್ಕೆ 1—0—0 3 ಸೀಸಗ 2—10—0 ... 1—12—0 ... 7—...—0 ... ಸೀಸೆ 1 ಕ್ಕೆ 1—12—0 ಕಸ್ತೂರಿಮಾತ್ರೆ ಸೀಸೆ 1 ಕ್ಕೆ 4 ಆಣೆ ... 1 ಕ್ಕ 2—10—0 ಮಲೇರಿಯಾ, ವಿಷ ... ವಿಟ್ಟು ಬರ 5 ... ಎಲ್ಲಾ ಮಾತ್ರೆ ... 1 ಕ್ಕೆ 1—0—0.

ಜೆಂತಾನ್ ಪಾಕೆಟ್ 1 ಕ್ಕ	1 ಆಣೆ	4 ಆಣೆ	1 ರೂ
ಗಂಧದ ಸಾಬೂನ್ 1 ಕ್ಕೆ	... ಆಣೆ	... ಆಣೆ	7 ಆಣೆ
ವಿಕ್ಟೋರಿಯಾ ಸಾಬೂನು 1 ಕ್ಕೆ			0 2 6
ಪ್ಲಾರೀನ್ ರಾಣಿ ಸಾಬೂನು 1 ಕ್ಕ			1-2 0
ಜಸ್ಮಿನ್ (ಮಲ್ಲಿಗೆ) ಸಾಬೂನ್ 1 ಕ್ಕೆ			8 ಆಣೆ
ಟಾಯ್ಲೆಟ್ ಸಾಬೂನ್ 1 ಕ್ಕೆ			10 ಆಣೆ.
ಚಿಕ್ಕ ಕನ್ನಡಿ 1 ಕ್ಕೆ		2 ಆಣೆ	0 2 6
ಸಾಬೂನ್ ಕರ 1 1 ಕ್ಕೆ		5 ಆಣೆ	7 ಆಣೆ
ಸಂಟ್ ... ಪೆಟ್ಟಿ 1 ಕ್ಕೆ			3 ಆಣೆ
ಬಾಚಣಿಗೆ 1 ... 1 ಕ್ಕೆ	0-14 0	1 4 0	1 8 0.
ಕತ್ತರಿ 1 ಕ್ಕೆ	1 4 0	2 12-0	3 8-0.
ಅಮೃತಾಂಜನ ... 1 ಕ್ಕೆ			9 ಆಣೆ.
... 1 ಕ್ಕೆ			10 ಆಣೆ
ಕಾರ್ಬಾಲಿಕ್ ಟೂತ್ ಪೌಡರ್ ಪಾಕೆಟ್ 1 ಕ್ಕೆ			8 ಆಣೆ.
ಪೋಮೇಡ್ ... 1 ಕ್ಕೆ		5 ಆಣೆ	8 ಆಣೆ.

ಸೂಚನೆ ಬೇರೆ ಸಾಮಾನು ಬೇಕಾದಲ್ಲಿ ನಮ್ಮಲ್ಲಿ ದೊರೆಯುತ್ತ ... ಕಾಗದ ಬರೆಯಿರಿ.

... ಮೆಡಿಕಲ್ ಮೆನೇಜರ್,
ನ ... ಮಂಗಳೂರು, ದ ಕ.

ಶುಭಶೋಭನಗಳಲ್ಲಿ, ಸಂತೋಷಕೂಟಗಳಲ್ಲಿ !
ಮದುವೆ ಮುಂಜಿಗಳಲ್ಲಿ, ಸಭಾಕೂಟಗಳಲ್ಲಿ !!

ಬೇಕಾಗುವ

ರೇಶ್ಮೆಯ ಸೀರೆ, ರೇಶ್ಮೆಯ ವಸ್ತ್ರ, ರೇಶ್ಮೆಯ ದಟ್ಟಿ, ರೇಶ್ಮೆಯ ಅಂಚಿನ ಪಂಚೆ ಸಾಧಾರಣ ಪಂಚೆ ಇತ್ಯಾದಿ ನಾನಾತರದ ಕೋಟು ಬಟ್ಟೆಗಳು ಮತ್ತು ಇತರ ಸಾಧಾರಣ ಉಡಿಗೆ ತೊಡಿಗೆಗಳು ಯಾವತ್ತೂ ನಮ್ಮಲ್ಲಿ ಸಿದ್ಧವಾಗಿವೆ. ಬಟ್ಟೆಗಳೂ ನಮ್ಮಲ್ಲಿಯೇ ಮಗ್ಗಗಳಿಂದ ತಯಾರಾಗುವುವು ತಮಗೆ ಬೇಕಾದುದನ್ನು ತಿಳುಹಿಸಿ

ಕೆ ನಂಜಪ್ಪಶೆಟ್ಟಿ,
ಗವರ್ನಮೆಂಟ್ ಕಂಟ್ರಾಕ್ಟರ್ ಮತ್ತು ಜವಳಿ ವ್ಯಾಪಾರಿ,
ಸೋಮವಾರಪೇಟೆ

'VOLTALITE"

Self Generating Electric Cycle Set.

An Inexhaustible supply of Electricity generated at no cost



Lighting—No Oil No Acid, No Battery No Acetylene

The first cost The only cost Will last for ever

Apply to—K R THIRUPAD & Bros Siyajee Rao Road MYSORE

ಗಮನಿಸಿ ! ಗಮನಿಸಿ !! ಅಯಾ ಗಮನಿಸಿ !!!
ಬಡವರಾಗಲಿ, ಧನಿಕರಾಗಲಿ, ಗಮನಿಸಬೇಕು !
ಮುಖ್ಯವಾದ ಪ್ರಸಿದ್ಧ ಪತಿ,
ಶೋಧಿಸಿದ, ಶುದ್ಧವಾದ ಮುಂಜಿನಂತೆ ಬೆಳ್ಳಗಿರುವ ಆರೋಗ್ಯಕರವಾದ ಮತ್ತು ಪರಿಷ್ಕಾರವಾದ (ಪುಡಿಯಾದ)

ಅಡಿಗೆ ಉಪ್ಪು

1 ಈ ಉಪ್ಪು ನಮ್ಮ ಸೀಮೆಯಲ್ಲಿ ಅಂಗಡಿಪೇಟೆಯಲ್ಲಿ ಚಲಾವಣೆಗೆ ತರಲು ಇದೇ ಮೊದಲು ಮತ್ತು ಈ ಉಪ್ಪು ಎಲ್ಲಾ ವಿಧವಾದ ವ್ಯಾಪಾರಿಗಳನ್ನು ಮಾರಿಸಲಾಗುತ್ತೆ

2. ಈ ಶುಭ್ರವಾದ ಶೋಧಿಸಿದ, ಮುಂಜಿನಂತೆ ಬೆಳ್ಳಗಿರುವ ಆರೋಗ್ಯಕರವಾದ ಉಪ್ಪು ನೋಡುವುದಕ್ಕೆ ಇಂಪಾಗಿರುವುದಲ್ಲದೆ ಇದರಲ್ಲಿ ಕ್ಷಾರವು ಅತ್ಯಧಿಕವಾಗಿಯೂ ಮತ್ತು ಆಹಾರವನ್ನು ಜೀರ್ಣಿಸಿ, ರಕ್ತವನ್ನು ಶುದ್ಧಿಮಾಡತಕ್ಕದ್ದೆಂದು ಅನೇಕ ಡಾಕ್ಟರುಗಳು ಅಭಿಪ್ರಾಯಪಟ್ಟಿರುವುದಾಗಿಯೂ ಇರುತ್ತದೆ ಕ್ರಯ ಪೌಂಡ ಒಂದಕ್ಕೆ ೨ ಆಣೆ

ಕೆ ಆರ್ ತಿರುಪಾಡ ಅಂಡ್ ಬ್ರದರ್ಸ್,
4—3 ಸಯಾಜಿರಾವ್ ರೋಡು ಮೈಸೂರು

SUBBANNA, SANGAPPA,

Receiving and Forwarding Agents, General Merchants and Commission Agents Santhepet, Mysore

Despatch and supply whatever you receive at Mysore Railway Station and whatever food stuffs and Stationaries you want to have from Mysore Prompt attention, moderate commission and quick disposal are their motto 21 4

ಮೈಸೂರು ರೈಲ್ವೆ ಸ್ಟೇಷನ್‌ನಿಂದ ನೀವು ಹೊಂದಬೇಕಾದ ಸಾಮಾನುಗಳ ರೈಲ್ವೆ ಪಾರುಗಳನ್ನೂ, ಮೈಸೂರಿನಿಂದ ತರಿಸಿಕೊಳ್ಳಬೇಕಾದ ಸಾಮಾನುಗಳ ಪಟ್ಟಿಯನ್ನೂ
ಮೈಸೂರು ಸಂತೇಪೇಟೆಯಲ್ಲಿರುವ
ಸುಬ್ಬಣ್ಣ ಸಂಗಪ್ಪನವರಿಗೆ ಕಳುಹಿಸಿ.
ಅವರು ಜಾಗ್ರತೆಯಾಗಿಯೂ ಜೋಪಾನವಾಗಿಯೂ, ಸುಲಭವಾದ ಕಮಿಷನ್ನಿನಲ್ಲಿಯೂ ನಿಮಗೆ ಸರಕು ರವಾನಿಸುತ್ತಾರೆ. ಮಿಕ್ಕ ವಿಚಾರ ಬರೆದು ತಿಳಿದುಕೊಳ್ಳಿ

ರೋಗಿಗಳೂ, ರೋಗವಿಲ್ಲದವರೂ

ಆಕ್ಸಿಟೀನ್‌ಸನ್ನು

ಉಪಯೋಗಿಸಬೇಕು.

ಎಂತಹ ಹಳೆಯ ಕಾಯಿಲೆಯಲ್ಲೇ ಆಗಲಿ ಮೊದಲು ಇದನ್ನು ಉಪಯೋಗಿಸಿದರೆ ಶರೀರದ ಕಲ್ಮಷವನ್ನು ತೆಗೆದುಹಾಕಿ ಕಾಯಿಲೆಯನ್ನು ಕಡಿಮೆಮಾಡುವುದು ಸುಲಭ ಕಾಯಿಲೆಗಳೆಲ್ಲವೂ ಬರಿ ಇದರ ಸೇವನೆಯಿಂದಲೇ ಗುಣವಾಗುವುವು ತೆಗೆದುಕೊಂಡ ೨ ಘಂಟೆಯಲ್ಲಿ ಸುಖಭೇದಿ ಮಾಡುವುದು ಬೇರೆ ಭೇದಿ ಮಾತ್ರೆಗಳಂತೆ ಸಂಕಟ, ಹೊಟ್ಟೆನೋವು ಮುಂತಾದುವನ್ನುಂಟುಮಾಡುವುದಿಲ್ಲ ಸಾಮಾನ್ಯಜ್ವರ, ಕೆಮ್ಮು, ಉಬ್ಬು, ಮೂತ್ರಬಂಧನೆ, ಆಲಸ್ಯ, ಉಷ್ಣ, ಪಿತ್ಥ, ಶೀತಸಂಬಂಧ ಕಾಯಿಲೆಗಳು, ಜೀರ್ಣಕೋಶದ ಅಕ್ರಮತೆ, ಕರುಳುಗಳಲ್ಲಿ ಕ್ರಿಮಿಗಳಿಂದ ಹುಟ್ಟಿ ಉಬ್ಬರವಾಗುವುದು, ದುರ್ವಾಸನೆಯುಳ್ಳ ವಾಯುಗಳು ಹುಟ್ಟುವುದೇ ಮುಂತಾದುವನ್ನೆಲ್ಲಾ ಗುಣಪಡಿಸುತ್ತದೆ

ಚಿಳ್ಳೆಮಕ್ಕಳಿಂದ ಮುದುಕರವರೆಗೆ ಪರ್ವದ ಯಾವ ಕಾಲದಲ್ಲೂ ಉಪಯೋಗಿಸಬಹುದು ಬಾಣಂತಿಗಳೂ ಒಂದು ಸೀಸೆಯನ್ನು ಹತ್ತಿರವೇ ಇಟ್ಟುಕೊಳ್ಳಿ

೦ ಮಾತ್ರೆ ಸೀಸೆಗೆ ೨ ಆಣೆ

ಚಂದ್ರಕಳೆಯು

ಶರೀರದಲ್ಲಿನ ಪ್ರತಿಯೊಂದು ಧಾತುವನ್ನೂ ಸೇರಿಸಿ ಶರೀರದ ರೋಗಗಳನ್ನು ಪರಿಹರಿಸುವುದು ರೋಗವಿಲ್ಲದವರಿಗೆ ಮಾಂಸ, ಮೂಳೆ, ಮಜ್ಜೆ, ನರ, ಮುಂತಾದುವುಗಳನ್ನು ಬಲಪಡಿಸಿ ಧಾತು ಗಟ್ಟಿಮಾಡಿ ದೃಢಕಾಯರನ್ನಾಗಿ ಮಾಡುತ್ತದೆ ರೋಗವಿದ್ದವರಿಗೆ ಅಶಕ್ತಿ, ಗಂಡ, ಬಿಳಿಜ್ವರ, ವಾತ, ಪ್ಲೂರಿಸಿ ಎಂಬ ಪಕ್ಕೆನೋವು, ಪಿತ್ಥಕೋಶದ ರೋಗಗಳು, ಮೂತ್ರಕೋಶದ ರೋಗಗಳು ಮಲಬದ್ಧತೆ, ನರಗಳ ಕಾಯಿಲೆಗಳು, ನರಗಳ ಚಳುಕು, ಮಿದುಳಿನ ಕಾಯಿಲೆಗಳು, ಕಾಮಾಲೆ, ಕ್ಷಯ, ಶರೀರದಲ್ಲೆಲ್ಲಾ ಬಾವುಗಳೇ ಮುಂತಾದುವು ಏಳುವುದು, ಹೊಟ್ಟೆನೋವು ಮುಂತಾದುವನ್ನೆಲ್ಲಾ ಖಂಡಿತ ಗುಣಪಡಿಸುತ್ತದೆ. ಅಮೂಲ್ಯ ಔಷಧಿಗಳಿಂದ ತಯಾರಿಸಿದ್ದು, ಸೀಸೆಗೆ ಮೂರು ರೂಪಾಯಿ

ಇಲೆಕ್ಟ್ರಿಕ್ ಬಾಂ.

ನೆಗ್ಗು, ಕುರು, ತುರಿಕಜ್ಜಿ, ಗಾಯ, ಸುಟ್ಟಗಾಯ ಮುಂತಾದುವನ್ನೆಲ್ಲಾ ಗುಣಪಡಿಸುತ್ತದೆ.

ಪೊಟ್ಟಣಕ್ಕೆ ೨ ಆಣೆ.

ಎಷ್ಟೇ ದೊಡ್ಡ ಜ್ವರವಿರಲಿ

ನಮ್ಮ ಜ್ವರನಿವಾರಣಮಾತ್ರೆಗಳು ತೆಗೆದುಕೊಂಡ ಎರಡು ಗಂಟೆಗಳೊಳಗಾಗಿಯೇ ಜ್ವರವನ್ನು ಖಂಡಿತ ಇಳಿಸುತ್ತವೆ ೧ ಪೊಟ್ಟಣ ಮಾತ್ರೆಗೆ ೧ ರೂ

ಜ್ವರಗಳನ್ನು ಗುಣಪಡಿಸುವುದಕ್ಕೆ

ನಮ್ಮ ಫೀವರ್ ಮಾತ್ರೆಗಳನ್ನು ಉಪಯೋಗಿಸಿ. ಇವು ಮಲೇರಿಯ, ಸನ್ನಿಪಾತ, ಪಿತ್ಥಜ್ವರಗಳು, ಶ್ಲೇಷ್ಮಜ್ವರಗಳು, ಮುಂತಾದುವನ್ನೆಲ್ಲ ಗುಣಪಡಿಸುತ್ತದೆ ಸೀಸೆಗೆ ೧ ರೂಪಾಯಿ

ಅನ್ನಕೋಶ, ಪಿತ್ಥಕೋಶ ಮುಂತಾದುವುಗಳ ಅಕ್ರಮತೆಯಿಂದ ಹೊಟ್ಟೆನೋವು (ಪರಿಣಾಮಶೂಲೆ) ಜಾಸ್ತಿಯಾಗುವುದು, ಅಜೀರ್ಣ, ಮುಂತಾದ ಎಲ್ಲತರದ ಅಸ್ವಸ್ಥತೆಯಿಂದ ಜೀರ್ಣಕೋಶದ ಕಾಯಿಲೆಗಳನ್ನು ನಮ್ಮ ಶೂಲಾರಿಯು ಖಂಡಿತ ಗುಣಮಾಡುತ್ತದೆ ೨ ಔಷಧಗಳುಳ್ಳ ೨ ಸೀಸೆಗಳಿಗೆ ೩ ರೂಪಾಯಿ.

ಎಲ್ಲತರದ ಕಾಯಿಲೆಗಳನ್ನೂ ಪತ್ರಮುಖಾಂತರವೂ, ಹತ್ತಿರವಿದ್ದೂ ಗುಣಮಾಡುತ್ತೇವೆ ಜನರಲ್ ಪಿರೆಲಿಸಿಸ್ ಎಂಬ ಪಾರ್ಶ್ವವಾಯು, ಮೂತ್ರಕೋಶದ ಕಾಯಿಲೆ ಮುಂತಾದುವನ್ನು ಗುಣಪಡಿಸಿದ್ದಕ್ಕೆ ನಮಗೆ ಚಿನ್ನದ ಮೆಡಲುಗಳು ಸಿಕ್ಕಿವೆ.

ಡಿ. ಜಿ. ಎಚ್. ಜೋಸ್,
ಸೋಮವಾರಪೇಟೆ, (ಕೊಡಗು).

ಕೈಯಲ್ಲಿ ಕಟ್ಟಲೂ ಜೇಬಿನಲ್ಲಿಡಲೂ ಅನುಕೂಲವಾದ
ಹೊಸ ಸಸ್ಪೆನ್ಷನ್ ಲೀವರ್ ವಾಚ್



ಈ ಗಡಿಯಾರಗಳು ವಿಲಾಯಿತಿಯಲ್ಲಿ ತಯಾರಾದದ್ದು ಲೀವರ್ ಮೂಮೆಂಟ್‌ಗಳಿಂದ ಮಾಡಿದೆ ಗ್ಲಾಸ್, ಧೂಳು ಸೇರದಂತೆ ಹಿಂಭಾಗದಲ್ಲಿ ಜರ್ಮನ್ ಬೆಳ್ಳಿಯ ಮುಚ್ಚಳವೂ ಮತ್ತು ಬಲ್ವಾದ ಕನ್ನಡಿಯೂ ಇವೆ ಒಳಗಡೆ ಬಲ್ಗೆಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿವೆ ಇವು ಸರಿಯಾಗಿ ಕಾಲವನ್ನು ತೋರಿಸುವುವು ಈ ಗಡಿಯಾರಗಳಲ್ಲಿ ಒಂದು ಇದ್ದರೆ ಸಾಕು ಜೇಬಿಗೂ ಕೈಗೂ ಕಟ್ಟಿಕೊಳ್ಳಲೂ ಸರ್ವ ಅನುಕೂಲವಾದದ್ದು ಕ್ರಯ ಗಡಿಯಾರ 1 ಕ್ಕೆ ರೂಪಾಯಿ ೨—೦—0

ಕಂಬಳಿ ಟೋಪಿ

ಈ ಟೋಪಿಗಳು ಗಾಟ ಉಲನ್ ದಾರದಿಂದ ತಯಾರಿಸಿದೆ ಚಳಿಗಾಲದಲ್ಲಿಯೂ, ಕಾಯಿಲೆ ಇರುವವರೂ ಉಪಯೋಗಿಸಲು ಬಹು ಅನುಕೂಲವಾದದ್ದು ಇದನ್ನು ಸಾಧಾರಣ ಟೋಪಿಗಳಂತೆಯೂ ಕತ್ತಿನವರಿಗೂ ಉಪಯೋಗಿಸಬಹುದು

ಕ್ರಯ ಉಲನ್ ಟೋಪಿ1 ಕ್ಕೆ 1—12 0

ವಿಳಾಸ —ಎಸ್ ಆರ್ ಕೃಷ್ಣ ಅಂಡ್ ಕೋ
೮೪ ನಾರಾಯಣ ಮೊದಲಿಬೀದಿ ಮದರಾಸು

ರೋಲ್ಡ್ ಗೋಲ್ಡ್ ಭಂಗಾರದ ರೇಡಿಯಂ ರಿಸ್ಟ್‌ಲೆಟ್ ವಾಚ್



ಈ ಗಡಿಯಾರಗಳನ್ನು ಸೀಮೆ ಬಂಗಾರದಿಂದ ಅಮೇರಿಕಾ ದೇಶದಲ್ಲಿ ತಯಾರಿಸಿದ್ದು ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ಬೆಳಕು ಬೇಕು ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು ಇವು ಅಮೇರಿಕಾದೇಶದ ಗಡಿಯಾರಗಳು ಬಹುದಿನ ಬಾಳಿಕೆ ಬರುವವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯಬಹುದು ಇವಕ್ಕೆ 5 ವರುಷ ಗ್ಯಾರಂಟಿ ಕೊಡುವೆವು ಕೈಯಲ್ಲಿ ಕಟ್ಟುವ ಬೆಲ್ಟಿನ ಸಹಿತ ಗಡಿಯಾರ 1 ಕ್ಕೆ 10—8—0 ಕೈಯಲ್ಲಿ ಕಟ್ಟುವ ಸೀಮೆ ಪಟ್ಟಿ ಸಹಿತ ಗಡಿಯಾರ 1 ಕ್ಕೆ ೮—8—0 ರೂ

ವಿಳಾಸ —ಎಸ್ ಎಸ್ ರಾಮು ಅಂಡ್ ಕೊ,
ಪೋಸ್ಟ್ ಬಾಕ್ಸ್ ನಂ. 214 ಮದರಾಸು

ಮೂನ್ ಲೈಟ್ ಸೋಪು

ಈ ಸೋಪನ್ನು ಕೊಡಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ಶಕ್ತಿಯಿಂದ ಕೆಂಪಾಗಿ ಮಾಡಿ ಕೊಂಡಿದ್ದರೆ ಕಲೆಯೂ ಚೆನ್ನಾಗಿ ಚರ್ಮಕ್ಕೆ ಯಾವ ಕೊಂದರೆಯೂ ಇಲ್ಲದೆ ಕೂದಲನ್ನು ತೆಗೆದು ಬಿಡುವುದು

ನಮ್ಮ ಮೂನ್ ಲೈಟ್ ಸೋಪು ಗಂಧ, ಮೊಡವೆ ಚಿಬ್ಬು ಬಾವು, ಮುಂತಾದುವುಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡುವುದು.

3 ಸಾಬೂನುಗಳನ್ನು ಪೆಟ್ಟಿಗೆ 1ಕ್ಕೆ ರೂ 1—1—0 ಒಂದು ಸಲ 2 ಪೆಟ್ಟಿಗೆ ತರಿಸಿಕೊಂಡರೆ ರೂ 2—4—0

ವಜ್ರದ ಉಂಗುರಗಳು

ಈ ಉಂಗುರಗಳನ್ನು ಸೀಮೆ ಬಂಗಾರದಿಂದ ಮಾಡಿದೆ ಇದರ ಮೇಲು ಕೆಂಪು ಹಸುರು, ಮುಂತಾದ ಇಮಿಟೇಷನ್ ವಜ್ರದ ಕಲ್ಲುಗಳನ್ನಿಟ್ಟು ಕಟ್ಟಿರುವುದು ನೋಡುವವರು ನಿಜವಾದ ವಜ್ರದ ಉಂಗುರವೆಂದೇ ಹೇಳುವರು ಬಣ್ಣಕ್ಕೆ ಗ್ಯಾರಂಟಿ ೩ ವರ್ಷ ಕೊಡುವೆವು

ಉಂಗುರ 1 ಕ್ಕೆ ರೂ ೧—12—0

ವಿಳಾಸ —ಎಸ್ ಪಾಲ್ ಅಂಡ್ ಕೊ,
ಪೋಸ್ಟ್ ಬಾಕ್ಸ್ ನಂ 542 ಪಾರ್ಕ್‌ಟೌನ್, ಮದರಾಸ

ಮಧುರೆ, ಮತ್ತು ಕೊಯಮತೂರು ಸೀರೆಗಳು
17 ಮೊಳ ಪೂರಾ ಇರುವುದು ದೊಡ್ಡ ಸೆ

ಈ ಸೀರೆಗಳನ್ನು ಹಸನಾದ ನೂಲಿನಿಂದ ತಯಾರಿಸಿದೆ ಸುಂದರವಾದ ರೇಷ್ಮೆಯ ಸೆರಗೂ, ಅಂದವಾದ ದೊಡ್ಡ ಅಂಚೂ ಇದೆ. ಶ್ರೀಮಂತರಿಗೂ, ಗರೀಬರಿಗೂ ಅನುಕೂಲವಾದದ್ದು ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಎಲ್ಲಿಯೂ ಸಿಕ್ಕಲಾರವು ಮಹನೀಯರಿಗಾಗಿ ಕಲವು ಸೀರೆಗಳನ್ನು ಮಾತ್ರ ತಯಾರಿಸಿರುವೆವು ಬೇಕಾದವರು ತರಿಸಿ ಪರೀಕ್ಷಿಸಿರಿ.

ಕ್ರಯ ನಂ 1 6—8—0 ರೂ ನಂ 2 7—8—0

ವಿಳಾಸ —ಎಸ್. ಎಸ್ ರಾಮು ಅಂಡ್ ಕೊ
ಪೋಸ್ಟ್ ಬಾಕ್ಸ್ ನಂ 214, ಮದರಾ

Printed and Published by S NANJUNDA SAST at The Sreenivasa Press, Mysore for "Kodu Ltd., Mercara—29 7 1921.

REGISTERED NO. M. 1550.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾನೀತಿಸ್ತ್ರಯುತ್ನತಃ [illegible]

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

ಸಂಪುಟ ೧] ಕೊಡಗು, ಸನ್ ೧೯೨೧ ನೇ ಇಸವಿ ಆಗಸ್ಟ್ ತಾರೀಖು ೫ ನೆಯ ಶುಕ್ರವಾರ [ಸಂಚಿಕೆ ೧೦

ವೀರಶೈವರಿಗೆ ಸಂಗ್ರಾಹ್ಯವಾದ ಫೋಟೋ

ಶ್ರೀ ಶಿವಯೋಗಿಗಳ ಸಂಘ :—ಭಾಗ್ಯಶಾಲಿ ಜನರು ಹಣವು ಖರ್ಚುಮಾಡಿ ಮಹಾ ಶಿವಯೋಗಿಗಳ ದರ್ಶನವನ್ನು ತೆಗೆದುಕೊಳ್ಳುತ್ತಾರೆ. ಆದರೆ ಶ್ರೀಮಂತರಿಗು ಮತ್ತು ಬಡವರಿಗೂ ನಿತ್ಯ ದರ್ಶನ ಆಗುವದಕ್ಕೆ ಫೋಟೋವ ಹೊರತು ಅನ್ಯಮಾರ್ಗವು ಇಲ್ಲದಕಾರಣ ಸಾವ್ಯ ಪ್ರಸಿದ್ಧರಾದ [illegible] ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಗದಗ [illegible] ದಾರ್ಯ, ಅಥಣಿ ಶಿವಯೋಗಿ, ಬಾಲಲೀಲಾಸ್ವಾಮಿ, [illegible] ರ, ಹಾನಗಲ್ಲ, ಹಾಳಕೇರಿ, ಬಿಡರೀ ನಿಡಸೂಸಿ ಮುಂತಾದ ೧೮ ಮಹಾಸ್ವಾಮಿಗಳ ಫೋಟೋ ಕೂಡಿಸಿದ [illegible] ಒಂದೇ ಕಾಲದಲ್ಲಿ ಎಲ್ಲಾ ಶಿವಯೋಗಿಗಳ ದರ್ಶನ ಆಗುವುವು. ೧೮×೧೨ ಸೈಜದ ಚಿತ್ರದ ಕ್ರಯ ೧ ಪ್ರತಿಗೆ ೮ ಆಣೆ.

ಶ್ರೀ ಕಲ್ಯಾಣ ಬಸವೇಶ್ವರ :—ವೀರಶೈವ ಧರ್ಮೋದ್ಧಾರಕರಾದ ಶ್ರೀಬಸವಣ್ಣದೇವರ ಅತ್ಯಂತ ತೇಜಪುಂಜವಾದ ಖಾಸ ಫೋಟೊ ೧೮×೧೨ ಸೈಜ ಬಣ್ಣದ ಚಿತ್ರದ ಕ್ರಯ ೧ ಪ್ರತಿಗೆ ರೂ. ೧. ಸಾದಾ ೮ ಆಣೆ.

೧. ಶ್ರೀ ಅಲ್ಲಮಪ್ರಭು ಪಾದಪೂಜೆ [illegible] :— ಇದರಲ್ಲಿ ಶ್ರೀಬಸವೇಶ್ವರರು ಶ್ರೀಚೆನ್ನಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಅಕ್ಕನಾಗಮ್ಮಾ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವಪಾದಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೊ ಇರುತ್ತದೆ. ದೊಡ್ಡ ಸೈಜು ರೂ. ೧|. ಸಣ್ಣ ಸೈಜು ರೂ. |||.

೨. ಶ್ರೀ ರೇಣುಕಾಚಾರ್ಯರ ಲಿಂಗೋದ್ಭವವು :— ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರ್ಯರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವ ಫೋಟೋ ಇರುತ್ತದೆ. ದೊಡ್ಡ ಸೈಜು ರೂ. ೧|. ಸಣ್ಣ ಸೈಜು ರೂ. |||.

೩. ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ :- ಇದರಲ್ಲಿ ಅಗಸ್ತ್ಯ ಮುನಿಗಳು ತಮ್ಮ ಪತ್ನಿ ಲೋಪಾಮುದ್ರಾ ಸಹ ಉಪದೇಶವನ್ನು ಕೊಳ್ಳುತ್ತಾ ಇದ್ದಾರೆ. ದೊಡ್ಡ ಸೈಜು ರೂ. ೧|. ಸಣ್ಣ ಸೈಜು ರೂ. |||.

೪. ಶ್ರೀ ವೀರಭದ್ರಸ್ವಾಮಿಯವರು ಹನುಮಂತನಿಗೆ ಲಿಂಗಧಾರಣವು :—ಇದು ಹನುಮಂತನು ಮೋಕ್ಷಾರ್ಥಕ್ಕಾಗಿ ಲಿಂಗಧಾರಣಮಾಡಿಕೊಂಡ ಫೋಟೊ ಇರುತ್ತದೆ. ದೊಡ್ಡ ಸೈಜು ರೂ. ೧|. ಸಣ್ಣ ಸೈಜು ರೂ. |||.

ಶ್ರೀ ವೀರಶೈವ ರಾಜಸಮೂಹ :—ಇದರಲ್ಲಿ ಕೊಡಗು ದೇಶದ ಲಿಂಗರಾಜೇಂದ್ರ, ವೀರರಾಜೇಂದ್ರ, ಪಟ್ಟಮದ ದೇವಮ್ಮಾಜಿ ಮಹಾರಾಣಿ, ಮತ್ತು ನನ್ನದ ಪುಂಗನೂರ ಮತ್ತು ಗೊವಾವ್ಯಾಂಕದ ಜಾಂದೇವಾಡಿ, ಸ್ವತಂತ್ರವಾದ ಅರಸರ ಫೋಟೊ ೯ ಇರುತ್ತವೆ. ಕ್ರಯ ಪೂರ್ತಿ ಸೈಜು ೧| ರೂ. ಕ್ಯಾಬಿನೆಟ್ ೧೨ ಆಣೆ.

ಶ್ರೀಮುಜ್ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿಗಳ— ಅತ್ಯಂತ ಸುಂದರವಾದ ಕೈಬಣ್ಣದ ಫೋಟೋ ಕ್ರಯ ಪ್ರತಿ ೧ಕ್ಕೆ ರೂ. ೧. ಸಾದಾ ರೂ. ||

ಸೂಚನೆ :—ಭಾರಿ ಖರೀದಿದಾರರಿಗೆ ಚನ್ನಾಗಿ ಕಮಿಷನ್ ದೊರೆಯುವದು.

ವಿಳಾಸ :—ಗಂಗಪ್ಪ ದೇವಿಗೆ,

ಮಾಲೀಕ ದಿ ಶಾರದಾ ಫೋಟೋ ಕಂಪನಿ. ಸೋಲಾಪುರ.

ನಿಮ್ಮ ಇಂಗ್ಲೀಷ್ ಮತ್ತು ಕನ್ನಡಾ ಅಚ್ಚಿನ ಕೆಲಸಗಳು ಯಾವದೇಯಿದ್ದರೂ ನಮ್ಮಲ್ಲಿಗೆ ಕಳುಹಿಸಿಕೊಟ್ಟಲ್ಲಿ ನಾವು ಜಾಗ್ರತೆಯಾಗಿಯೂ, ಅಂದವಾಗಿಯೂ, ಸುಲಭಧಾರಿಜೆಗೂ ಮಾಡಿಕೊಡುತ್ತೇವೆ. ಒಂದಾವರ್ತಿ ನಮ್ಮಲ್ಲಿ ಕೆಲಸವನ್ನು ಕೊಟ್ಟು ಪರೀಕ್ಷಿಸಬೇಕಾಗಿ ಕೋರಿಕೆ.

ನಮ್ಮ ವಿಳಾಸ :—

[illegible]

ಶ್ರೀ[illegible] ಪ್ರೆಸ್, [illegible]

[illegible] ಕೆ.

1922 ನೇ ಇಸವಿಯಲ್ಲಿ ಪ್ರಾರಂಭವಾಗುವ ಪರ್ಯಾಯದಲ್ಲಿ ಪಲಿಮಾರು ಮಠದ ಶ್ರೀ ಪಾದಂಗಳವರು, ಉಡುಪಿ ಶ್ರೀ ಕೃಷ್ಣ ದೇವರ ಪೂಜೆಯ ಸಹಾಯಾರ್ಥವಾಗಿ " ಶ್ರೀಕೃಷ್ಣ ಲಾಟರಿ " ಎಂಬ ಹೆಸರಿನ ಒಂದು ಲಾಟರಿಯನ್ನು ಏರ್ಪಡಿಸಿರುವೆ. ಟಿಕೀಟಿನ ದರ ಒಂದರ ಒಂದು ರೂ. ಆಗಿರುತ್ತದೆ. ಅದರಲ್ಲಿ 1 ನೇ ಇನಾಮ ರೂಪಾಯಿ 2000-0-0 ರಷ್ಟು, 2 ನೇ ಇನಾಮ ರೂ. 1000-0-0 ರಷ್ಟು ರೂ. 100-0-0 ರ ಇನಾಮ [illegible] 5 ರೂ. 10-0-0 ರ ಇನಾಮುಗಳು ಹತ್ತು, ರೂಪಾಯಿ 5 ರ ಇನಾಮುಗಳು 200 ಎಂತ ನಿಶ್ಚಯಿಸಿರುವೆ. ಆದುದರಿಂದ ಎಲ್ಲ ಸಜ್ಜನರುಗಳು ತಮ್ಮ ಶಕ್ತ್ಯಾನುಸಾರ ಟಿಕೇಟುಗಳನ್ನು ಪಡೆದು ಶ್ರೀಪಾದರವರುಗಳ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸಲಾಗುತ್ತದೆ. ಎಲ್ಲ ಪತ್ರವ್ಯವಹಾರಗಳನ್ನು ಈ ಕೆಳಗಿನ ವಿಳಾಸಕ್ಕೆ ಮಾಡತಕ್ಕದ್ದು.

ವ್ಯವಸ್ಥಾಪಕ,

ಶ್ರೀಕೃಷ್ಣ ಲಾಟರಿ

ಕೊಡಿಯಾಲಬೈಲ್ ಪೋಸ್ಟ್ ಮಂಗಳೂರ

ಸುಖರೋಗದ ಬಗ್ಗೆ ?

ಬೇಕಾದವರು ನಮ್ಮಲ್ಲಿ ದೊರೆಯುವ ಕೊಡೆ, ಸುಗ್ಗಿಲಿ, ಬೂಟೀಸು ನಮೂನೆ ಐರ ಸ್ಕಾರ್ಫ್, ಹಿಸ್ಸು ಲ್ಯಾಂಪ, ನಮೂನೆ ಚಾಕು ಆಫೀಸ ಸಾಮಾನು ಮುಂತಾದ ಸಾಮಾನುಗಳನ್ನು ಒಂದಾವರ್ತಿ ಕೊಂಡು ನೋಡಿರಿ.

ಹೆಚ್ಚಿನ ಸಂಗತಿಗಳು ಕೆಳಗಿನ ವಿಳಾಸಕ್ಕೆ ಬರೆಯ ಬೇಕಾಗುವದು.

COMMERCIAL STORE,
General Merchants, Commission Agents and Furniture Suppliers,
12—7 MURNAD, COORG.

R. FRAMJEE,
General Merchant, Commission Agent, Auctioner and Gent's Outfitter,
MERCARA (Coorg.)

JUST RECEIVED.
Fresh Consignment of Piece Goods of Various Kinds, Stationery, Hosiery, Patent Medicines etc., etc.
Goods available at the lowest market rates.
Prices Fixed.

" ಕೊಡಗು "

[illegible] ಸಾಹಿತ್ಯ, ಕೃಷಿ, ವೃತ್ತಿ, ವಿಜ್ಞಾನ, ಮತ್ತು ನೀತಿ [illegible] ವಿಷಯಗಳಿಂದೊಡಗೂಡಿದ, ಕೊಡಗಿನ [illegible] ವಾರ ಪತ್ರಿಕೆ.

[illegible] " ಕೊಡಗು " ಮಡಿಕೇರಿ. [illegible] ಲೇಖನಗಳನ್ನು ಸಂಪಾದಕರು [illegible] ಕಳುಹಿಸಬೇಕು. 3. ಚಾಕ್ಕಿ [illegible] ಮತ್ತೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ. [illegible] ಕಳುಹಿಸುವ ಬಾಕ್ಕಿಗಳು ಕಾಗದದ ಒಂದೇ ಕಡೆಯೂ, [illegible] ಹೆಸರು ವಿಳಾಸಗಳಿಂದ ಕೂಡಿಯೂ ಬರೆಯಲ್ಪಟ್ಟಿರ[illegible] ಬೇಕೆಂತಲೂ ಈ ಪತ್ರಗಳು ಪ್ರಕಟಿಸಲ್ಪಡುವವು. [illegible] ಗದ ಬಾಕ್ಕಿಗಳನ್ನು ಮರಳಿ ಕಳುಹಿಸುವ ಜವಾಬ್ದಾರಿ [illegible] ವರು ವಹಿಸುವದಿಲ್ಲ.

ಪ್ರಕಟನೆಗಳು.

ಸುಲಭವಾಗಿ ಮಾಡಲ್ಪಡುತ್ತವೆ. ಹೆಚ್ಚು ಸಂಗತಿಗೆ ಮೇ[illegible] ತಿಳಿದುಕೊಳ್ಳಬಹುದು.

ಮ್ಯಾನೇಜರ್,

" ಕೊಡಗು " ಲಿಮಿಟೆಡ್, ಮಡಿಕೇರಿ.

INSURE YOUR CAR
Against Accident and Fire.
Apply—
K. [illegible] Thirupad & Bros.,
Sub Agents for
The Autocar Fire & Accident Insurance Co., Ltd.,
LONDON.

ARRIVED FRESH STOCK OF
GOOD RICH TYRES
Best and Cheapest in the World.
Apply—
K. [illegible] Thirupad & Bros.,
Sayaji Rao Road,
MYSORE.

Messrs. P. SAM & Co.,
Receiving & Forwarding Agents, Cabinet Makers, Auctioneers & General Agents,
[illegible] Sayaji Rao Road, MYSORE.
[illegible] not only receive and forward your goods from [illegible] Mysore Railway Station to any part in Coorg but [illegible] receive goods from those parts and despatch them to any other part from the Mysore Railway Station. They undertake to sell your [illegible] articles by public auction or otherwise, and [illegible] supply you goods at the cheapest rates. Commission very moderate. A trial order will convince you of their promptness and business methods.

ADVERTISEMENT.
Wanted two fair and accomplished Coorg girls for a couple of educated Coorg young men, who have just settled in life and who hold very decent standing also.
[illegible] ring that strict confidence will be maintained.
MATRIMONIAL,
C/o "KODAGU"
MERCARA.

ಎಲ್ಲಾ ಚಂದಾದಾರರುಗಳಿಗೆ ವಿಜ್ಞಾಪನೆಗಳು.

ಕಳೆದ ವಾರದಿಂದೀಚೆಗೆ ಕೆಲವು ಪತ್ರಿಕೆಗಳು ತಿರಸ್ಕರಿಸಲ್ಪಟ್ಟು, ಆಫೀಸಿಗೆ ಹಿಂದಕ್ಕೆ ಬಂದಿರುತ್ತವೆ. ವಾಚಕರೇ ತಿರಸ್ಕರಿಸಿರುತ್ತೀರೋ, ಇಲ್ಲವೋ ಎಂಬುದು ನಮಗೆ ತಿಳಿಯುವುದಿಲ್ಲ. ಕಳೆದ ಎರಡು ತಿಂಗಳಿಂದ ಪತ್ರಿಕೆಯನ್ನು ಹೊಂದಿಕೊಂಡು ಓದುತ್ತಾ ಬಂದು, ಈಗ ಅಕಸ್ಮಾತಾಗಿ ಹೀಗೆ ವಾಪಾಸು ಮಾಡುವುದು ದೇಶಾಭಿಮಾನಿಗಳಿಗೆ ತಕ್ಕದಾಗಿ ಕಾಣುವುದಿಲ್ಲ. ಈ ಪತ್ರಿಕೆಯು ದೇಶೋದ್ಧಾರಕ್ಕಾಗಿ ಹೊರಟಿದೆಯಲ್ಲದೆ ವಿಶೇಷ ಲಾಭಸಂಪಾದನೆಗಲ್ಲವೆಂಬುದು ದೇಶೀಯರಿಗೆ ತಿಳಿಯದ ಸಂಗತಿಯಲ್ಲ. ಆದ್ದರಿಂದ ದೇಶಾಭಿಮಾನವನ್ನು ತೋರಿಸಲಿಕ್ಕೂ, ದೇಶಸೇವೆಯಲ್ಲಿ ಭಾಗಿಗಳಾಗಲಿಕ್ಕೂ ದೇಶೀಯರೆಲ್ಲರೂ ಈ ಪತ್ರಿಕೆಗಳನ್ನು ತರಿಸಿಕೊಂಡು ಸರ್ವ ವಿಧದಲ್ಲಿಯೂ ಪ್ರೋತ್ಸಾಹಕೊಡಬೇಕಾಗಿ ಎಲ್ಲಾ ವಾಚಕರಲ್ಲಿ ಅಪೀಲು ಮಾಡಿಕೊಳ್ಳುತ್ತೇವೆ. ಪತ್ರಿಕೆ ಬೇಡದವರು ತಮ್ಮ ಪತ್ರಿಕೆಯ ನಂಬರನ್ನೂ, ತಮ್ಮ ಹೆಸರನ್ನೂ ಪ್ರತ್ಯೇಕ ಬರೆದು ಆಫೀಸಿಗೆ ತಿಳಿಸಬೇಕಲ್ಲದೆ, ದಯವಿಟ್ಟು ತಿರಸ್ಕಾರ ಮಾಡಬಾರದಾಗಿ ಕೇಳಿಕೊಳ್ಳುತ್ತೇವೆ.

ಎಡಿಟರ್.

"ಕೊಡಗು"

೧೯೨೧ನೇ ಇಸವಿ ಆಗಸ್ಟ್ ತಾ|| ೨೬ನೇ

ಶುಕ್ರವಾರ

ದೇಶದ ಆಡಳಿತದಲ್ಲಿ ತಿದ್ದುಪಾಟುಗಳು.

ಕೊಡಗು ಕಮಿಷನರ್ ಸಾಹೇಬರಿಂದ ಈ ವಿಷಯವಾಗಿ ಬಂದ ಒಂದು ಪತ್ರದ ತರ್ಜುಮೆಯನ್ನು ಇನ್ನೊಂದು ಕಡೆ ಪ್ರಕಟಿಸಿದೆ. ಇದು ದೇಶಕ್ಕೆ ತೃಪ್ತಿಯಾಗಬಹುದೋ ಎಂತ ನಾವು ಯೋಚಿಸಬೇಕಾಗಿದೆ. ಕೌನ್ಸಿಲಿನ ಸಂಖ್ಯೆ ವಿಷಯ ವಿಶೇಷ ಚರ್ಚೆಮಾಡಬೇಕಾದುದಿಲ್ಲ. ಆದರೆ ಈ ಸಭೆಗೆ ಏನೇನು ಹಕ್ಕುಗಳು ಸಿಕ್ಕಿವೆ ಎಂತ ನೋಡುವದು ಅವಶ್ಯ.

ಸ್ಥಳೀಯ ಸ್ವರಾಜ್ಯ, ಆಸ್ಪತ್ರೆಗಳ ಆಡಳಿತೆ, ಜನರ ಆರೋಗ್ಯಸ್ಥಿತಿ ಮತ್ತು ಆರೋಗ್ಯಶಾಸ್ತ್ರ, ಜನನ ಮರಣ ಸಂಖ್ಯೆ, ವಿದ್ಯೆ, ಪಬ್ಲಿಕ್ (ಪಿ. ಡಬ್ಲ್ಯು.) ವರ್ಕ್ಸ್, ಸ್ಥಾವನಾಯ, ವಿಮಾನಿಗೆ ಸಂಬಂಧಪಟ್ಟ ಇಲಾಖೆ ಸಹಕಾರಸಂಘ, ಅಬ್ಕಾರಿ ಇಲಾಖೆ, ರಿಜಿಸ್ಟ್ರೇಷನ್, ಮತ ಮತ್ತು ಧರ್ಮ ಸಂಬಂಧವಾದ ತಸ್ತೀಕುಗಳು, (ಎಂಡೌಮೆಂಟ್ಸ್) ಮತ್ತು ಕೈಗಾರಿಕ ಬೆಳವಣಿಗೆ. ಈ ವಿಷಯಗಳ ಕುರಿತು ಕಾನೂನು ಮಾಡುವ ಹಕ್ಕು ಸಿಕ್ಕುತ್ತೆ ಎಂತ ಇದೆ. ಈ ಹಕ್ಕು ಸಹ ನಮಗೆ ಈಗ ತಿಳಿಸದೆ ಇರುವ ಕೆಲವು ಷರತುಗಳಿಗೆ ಒಳಪಟ್ಟಿದೆಯಂತೆ.

ಸ್ಥಳೀಯ ಸ್ವರಾಜ್ಯ, ಆರೋಗ್ಯ, ವಿದ್ಯೆಗಳ ವಿಷಯ ಕಾನೂನು ಮಾಡಲು ಹಕ್ಕು ಸಿಕ್ಕಿದ್ದು ಒಳ್ಳೇದೆ. ಈ ಮೇಲ್ಕಂಡ ಅನೇಕ ಇಲಾಖೆಗಳ ಹೆಸರು ಹೇಳಿದರೂ ಕೂಡ ಅವುಗಳ ವಿಷಯ ಕಾನೂನು ಮಾಡುವ ಅವಶ್ಯಕತೆ ಬೀಳುವದು ಅಪರೂಪ. ಈ ದೇಶವು ಬ್ರಿಟಿಷರ ಆಡಳಿತೆಗೆ ಒಂದುದಿನಿಂದ ಈ ಇಲಾಖೆಗಳ ವಿಷಯವಾಗಿ ಕಾನೂನು ಮಾಡಿದ್ದು ಬಹಳ ಕಡಿಮೆಯಾಗಿದೆ. ಪಿ. ಡಬ್ಲ್ಯು. ವಿನ ವಿಷಯ ಕಾನೂನುಮಾಡುವ ಅವಶ್ಯಕತೆಯೇ ಇಲ್ಲ. ಬೇರೆ ಕೆಲವು ಇಲಾಖೆಗಳ ವಿಷಯ ಕಾನೂನುಮಾಡಬಹುದಾದರೂ ಸರಕಾರಕ್ಕೆ ಹಣದ ಖರ್ಚು ಬೀಳುವ ಕಾನೂನು ಮಾಡಲು ಸಾಧ್ಯವಿದೆಯೋ ಎಂಬ ಸಂಶಯವಿದೆ. ಗವರ್ನ್‌ಮೆಂಟ್ ಆಫ್ ಇಂಡಿಯಾ ಆಕ್ಟಿನ 80 C 1917 ಸೆಕ್ಷನ್ ಮೇರೆ ಸರಕಾರಕ್ಕೆ ಖರ್ಚು ಹಿಡಿಯಬಹುದಾದ ಕಾನೂನು ಮಾಡಲು ಅಭಿಪ್ರಾಯ ತರಬೇಕಾದರೆ ಚೀಫ್ ಕಮಿಷನರ ಮಂಜೂರಾತಿ ಮುಂದಾಗಿಯೇ ಪಡೆಯಬೇಕು. ಆದುದರಿಂದ ಕಾನೂನು ಮಾಡುವ ಸ್ವತಂತ್ರವು ಸಹ ಚೀಫ್ ಕಮಿಷನರ ಕೈಯ್ಯಲ್ಲಿದೆ.

ದೇಶದ ಆಡಳಿತದಿಂದ ಜನರಿಗೆ ಪ್ರಯೋಜನವಾಗುವಂತೆ ಸಭೆಯು ಕೆಲಸಮಾಡಬೇಕಾದರೆ ಆದಾಯವೆಚ್ಚದ ಹಕ್ಕು ಸಭೆಗೆ ಇರಬೇಕಿತ್ತು. ಆದಾಯವೆಚ್ಚದ ಪಟ್ಟಿಯ ಮೇಲೆ ಚರ್ಚೆಮಾಡಬಹುದೆಂತ ಇದೆ. ಇಂಥಾ ಚರ್ಚೆಯಿಂದ ಬಹಳ ಅಲ್ಪಪ್ರಯೋಜನವಾದೀತಷ್ಟೆ. ಮದ್ರಾಸು ಮುಂತಾದ ಪ್ರಾಂತ್ಯಗಳಿಗೆ ಈ ಮೊದಲೆ (1919 ರಲ್ಲು) ಸಿಕ್ಕಿರುವ ಮಾರ್ಪಾಟುಗಳಲ್ಲಿ ಆದಾಯ ವೆಚ್ಚದ ಪ್ರತಿಯೊಂದು ಐಟಮನ್ನು ಸಭೆಯು ಮಂಜೂರು ಮಾಡಬೇಕಾಗಿದೆ. ಆದರೂ ಗವರ್ನರ್ ಸಾಹೇಬರು ಕೆಲವು ಡಿಪಾರ್ಟ್‌ಮೆಂಟುಗಳ ಖರ್ಚುಗಳ ವಿಷಯ ಸಭೆಯ ತೀರ್ಮಾನಗಳನ್ನು ನಿರಾಕರಿಸಬಹುದಾದದರಿಂದಲೇ ಅಲ್ಲಿನ ಜನರಿಗೆ ಬಹಳ ಅತೃಪ್ತಿ ಇದೆ. ಹೀಗಿರುವಾಗ್ಗೆ ನಮ್ಮ ಈ ಹೊಸದಾಗಿ ಬರುವ ಸಭೆಗೆ ಆದಾಯ ವೆಚ್ಚದಮೇಲೆ ಓಟುಮಾಡುವ ಹಕ್ಕಿಲ್ಲದಮೇಲೆ ಈ ಸಭೆಯಿಂದ ಪ್ರಯೋಜನ ಹೊಂದುವದು ಮಾಡಿಕೊಳ್ಳುವದು ಸಾಧ್ಯವಾಗಿ ಕಾಣುವದಿಲ್ಲ.

ಸರಕಾರದವರನ್ನು ಪ್ರಶ್ನೆ ಕೇಳಬಹುದೆಂದತಲೂ, ಠರಾವುಗಳನ್ನು ತಂದು ಚರ್ಚಿಸಬಹುದೆಂತಲೂ ಇದೆ. ಆದರೆ ಇದು ಸಹ ಬೇರೆ ಪ್ರಾಂತ್ಯಗಳಿಗೆ 1909 ನೇ ಇಸವಿಯಲ್ಲಿ ಮಂಜೂರಾದ ಸಭೆಗಳಿಗೆ ಇದ್ದ ಹಕ್ಕು ಮಾತ್ರವಾಗಿದೆ. ಇಂಥಾ ಸವಾಲುಗಳಿಂದಲೂ ಚರ್ಚೆಯಿಂದಲೂ ಪ್ರಜೆಗಳ ಅಭಿಪ್ರಾಯ ಮಂಜೂರು ಮಾಡಿಸಿಕೊಳ್ಳುವ ಶಕ್ತಿ ಸಿಕ್ಕಲಿಲ್ಲ. ರೈತರ ಅಭಿಪ್ರಾಯ ಖುದ್ದಾಗಿ ಸರಕಾರಕ್ಕೆ ತಿಳಿಸಲು ಅನುಕೂಲ ಸಿಕ್ಕಿದಂತಾಯಿತು. ಈ ಪ್ರಶ್ನೆ ಕೇಳುವ ಮತ್ತು ಠರಾವುಗಳನ್ನು ಚರ್ಚಿಸುವ ಹಕ್ಕು ದೊಡ್ಡ ಪ್ರಾಂತ್ಯಗಳಿಗೆ 1919 ನೇ ಇಸ್ವಿ ಆಕ್ಟಿನಿಂದ ಸಿಕ್ಕಿದಷ್ಟು ಆದರೂ ನಮ್ಮ ಸಭೆಗೆ ಕೊಡಬಾರದಿತ್ತೇ? ಈಗ ಕೊಡುವದಾಗಿ ಹೇಳುವ ಹಕ್ಕುಗಳು ಸಹ ಇನ್ನು ಮುಂದೆ ತಯಾರು ಮಾಡಬೇಕಾದ ನಿಯಮ (ರೂಲ್ಸು) ಗಳಿಗೆ ಒಳಪಡುತ್ತವೆ. ಅಂಥಾ ನಿಯಮಗಳೇ ಸಭೆಯ ಹಕ್ಕುಗಳನ್ನು ಖಂಡಿತ ಪಡಿಸುತ್ತವೆ ಎಂಬದು ಆಕ್ಟಿನಿಂದ ತಿಳಿಯುತ್ತದೆ. ಅಂಥಾ ನಿಯಮಗಳ ಮುಸೂದೆ (ಡ್ರಾಫ್ಟ್) ಗಳನ್ನು ಈಗಲೇ ಪ್ರಕಟಿಸಿದ್ದರೆ ಚರ್ಚೆಗೆ ಅನುಕೂಲವಾಗುತ್ತಿತು. ಈಗ ಪ್ರಕಟಿಸಿದವನ್ನು ಚರ್ಚೆ ನಡೆದು ಮಂಜೂರಾದ ನಂತರ ನಿಯಮಗಳ ಮುಸೂದೆ ಚರ್ಚೆಗೆ ಕೊಟ್ಟು ಮಂಜೂರಾಗಿ ಸಭೆಯು ಕೆಲಸವು ಶುರುವಾಗಬೇಕಾದರೆ ಕಡಿಮೆ ಪಕ್ಷ ಒಂದು ವರ್ಷವಾದರೂ ಆಗಬೇಕು. ಈ ಪ್ರಕಾರ ನಾವಕಾಶ ಮಾಡುವದರಿಂದ ಜನರಿಗೆ ಆಶಾಭಂಗವುಂಟಾಗುತ್ತಾಗೆ.

ಈ ಸಭೆಯಿಂದ ದೇಶದವರು ಮೂರುವರ್ಷಗಳಿಂದಲೂ ಕೇಳಿಕೊಳ್ಳುತ್ತಿರುವ ಪ್ರಾರ್ಥನೆ ಎಷ್ಟರಮಟ್ಟಿಗೆ ಸಫಲವಾಗಿದೆಯೆಂತ ನೋಡೋಣ! ದೊಡ್ಡ ಪ್ರಾಂತ್ಯಗಳಿಗೆ ಸಿಕ್ಕಿರುವ ತಿದ್ದುಪಾಟುಗಳು ನಮಗೆ ಸಿಕ್ಕಬೇಕು. ಇದು ಸಿಕ್ಕದಿಲ್ಲದಿದ್ದರೆ ಮದ್ರಾಸಿಗೆ ಸೇರಿಸಬೇಕು! ಎಂಬದೆ ದೇಶದ ಪ್ರಾರ್ಥನೆಯಾಗಿದೆ. ಬೇರೆ ಪ್ರಾಂತ್ಯಗಳಿಗೆ ಸಿಕ್ಕಿರುವ ತಿದ್ದುಪಾಟುಗಳಲ್ಲಿ ನಮ್ಮ ಸಭೆಗೆ ಕಾನೂನು ಮಾಡಲು ಕೊಟ್ಟಿರುವ ಇಲಾಖೆಗಳನ್ನು ನಡಿಸುವ ಹಕ್ಕನ್ನೇ ರೈತರ ಪ್ರತಿನಿಧಿಗಳಿಗೆ ಕೊಟ್ಟಿರುತ್ತಾರೆ. ಈ ಇಲಾಖೆಗಳ ಆಡಳಿತದಿಂದ ದೇಶಕ್ಕೆ ಒಳ್ಳೇದು ಮಾಡಲಿಕ್ಕೆ ಸಾಧ್ಯವಿದೆಯೇ ಹೊರತು ಕಾನೂನು ಮಾಡುವ ಹಕ್ಕು ಮಾತ್ರ ಸಿಕ್ಕಿದರೆ ಹೆಚ್ಚೇನೂ ಪ್ರಯೋಜನವಿಲ್ಲ. ಉದಾಹರಣೆಗಾಗಿ ಮೊನ್ನೆ ತಾನೆ ನಡೆದ ಒಂದು ವಿಷಯವನ್ನು ತೆಗೆದುಕೊಳ್ಳಬಹುದು. ಹಚ್ಚಿಗೆ ಸೆಸ್ಸ್ ಹಾಕಬೇಕೆಂತ ಡಿಸ್ಟ್ರಿಕ್ಟ್ ಬೋರ್ಡಿನ ಸರಕಾರಿ ಉದ್ಯೋಗಸ್ಥ ಮೆಂಬರುಗಳು ಮಾಡಿದ ನೈಸಲನ್ನು ದೇಶದವರೆಲ್ಲರೂ ವಿರೋಧಿಸಿದರೂ ಕೂಡ ಚೀಫ ಕಮಿಷನರು ಮಂಜೂರುಮಾಡಿರುವದಾಗಿ ತಿಳಿಯುತ್ತೇವೆ. ನಮ್ಮ ನ್ಯಾಯವಿಧಾಯಕಸಭೆಯು ವಿಚಾರ್ದಾಟ ನಂತರವೂ ಸಹ ಹೀಗೆಯೇ ಸರಕಾರದವರಿಂದ ಮಂಜೂರಾಗುತ್ತಿತ್ತು. ಆದರೆ ಸ್ಥಳೀಯ ಸ್ವರಾಜ್ಯದ ಆಡಳಿತವು ಜನರಿಂದ ಚುನಾಯಿಸಲ್ಪಟ್ಟ ಮಂತ್ರಿಯಲ್ಲಿದ್ದರೆ ಅವನು ಖಂಡಿತವಾಗಿಯೂ ಮಂಜೂರು ಮಾಡುತ್ತಿರಲಿಲ್ಲ. ಆದುದರಿಂದ ಸಭೆಗೆ ದೇಶದವರು ಚುನಾಯಿಸುವವರಲ್ಲೊಬ್ಬನನ್ನು ಮಂತ್ರಿಯಾಗಿ ನೇಮಿಸಿಕೊಂಡು ಅವನಿಗೆ ಈ ಇಲಾಖೆಗಳ ಆಡಳಿತವನ್ನು ಕೊಡಬೇಕು.

ಕಾನೂನು ಮಾಡುವ ಹಕ್ಕಾದರೂ ಬೇರೆ ಪ್ರಾಂತ್ಯಗಳಿಗೆ 1909 ನೇ ಇಸ್ವಿಗೆ ಮೊದಲು ಇದ್ದಷ್ಟು ನಮ್ಮ ಸಭೆಗೆ ಕೊಟ್ಟಿರುವದಿಲ್ಲ. ಈ ಹಕ್ಕನ್ನು ಕೆಲವು ಇಲಾಖೆಗಳಿಗೆ ಮಾತ್ರ ನಿರ್ಬಂಧ ಮಾಡಿದ್ದು ಜನರಿಗೆ ಅತೃಪ್ತಿಯನ್ನು ಉಂಟುಮಾಡದೆ ಇರಲಾರದು. ಈ ಸಭೆಗೆ ಅಧ್ಯಕ್ಷರಾಗಿ ಸರಕಾರಿ ಉದ್ಯೋಗಸ್ಥರಲ್ಲದವರು ಇರಬೇಕಾದದ್ದು ಅವಶ್ಯ. ಕಮಿಷನರಿಂದ ಬಂದಪ್ರಕಟಣೆಯಲ್ಲಿ ಈ ವಿಷಯ ಇದ್ದರೂ ಗವರ್ನ್‌ಮೆಂಟ್ ಆಫ್ ಇಂಡಿಯ ಆಕ್ಟಿನಿಂದ ಚೀಫ್ ಕಮಿಷನರೇ ಅಧ್ಯಕ್ಷರಾಗುತ್ತಾರೆಂತ ತಿಳಿಯಬರುತ್ತದೆ. ಹಿಂದೂದೇಶದ ಬೇರೆ ಭಾಗಗಳಲ್ಲಿ ರೈತರಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳ ಪೈಕಿಯವರಲ್ಲೆ ಮಂತ್ರಿಗಳನ್ನು ನೇಮಿಸಿಕೊಂಡಿರುವಲ್ಲಿ ಸಹ ಅಂಥಾ ತಿದ್ದುಪಾಟು ತೃಪ್ತಿ ಇಲ್ಲವೆಂದು ಹೋರಾಡುತ್ತಿರುವ ಸಮಯದಲ್ಲಿ ನಮಗೆ ಅವರು ನಿಷ್ಪ್ರಯೋಜನವೆಂದು ಮೂಲೆಗೆ ಒತ್ತಿಟ್ಟ ಸಭೆಗಿಂತಲೂ ಕಡಿಮೆಯಾಗಿರುವ ಸಭೆಯನ್ನು ಕೊಡುತ್ತೇವೆ ಎಂತ ಹೇಳುವದು ನಮಗೆ ತುಂಬಾ ವ್ಯಸನವನ್ನೂ ಅವಮಾನವನ್ನೂ ಉಂಟುಮಾಡುತ್ತದೆ.

1917 ನೇ ಇಸ್ವಿ ಆಗಸ್ಟು 20 ರಲ್ಲಿ ಇಂಡಿಯ ಚಕ್ರವರ್ತಿಯವರು ಪ್ರಕಟಿಸಿದ ಪತ್ರದಲ್ಲಿ "ದೇಶದ ಆಡಳಿತದ ಎಲ್ಲಾ ಇಲಾಖೆಗಳಲ್ಲೂ ದೇಶೀಯರನ್ನು ಸೇರಿಸಿಕೊಂಡು ಸ್ವತಂತ್ರತೆಯುಳ್ಳ ಸಭೆಗಳನ್ನು ಕ್ರಮಕ್ರಮವಾಗಿ ಬೆಳೆಸಿ ಬ್ರಿಟಿಷ್ ಸಾಮ್ರಾಜ್ಯದೊಳಗಿನ ಸ್ವರಾಜ್ಯಕ್ಕೆ ತಯಾರು ಮಾಡುವದೇ ಸರಕಾರದ ಉದ್ದೇಶ" ವೆಂತ ಹೇಳಿರುತ್ತಾರೆ. ಆ ಉದ್ದೇಶವು ನಮಗೆ ಕೊಡುವದಾಗಿ ಹೇಳುವ ಸುಧಾರಣೆಯಿಂದ ನೆರವೇರುವಂತೆ ಕಾಣುವದಿಲ್ಲ.

ಡಿಸ್ಟ್ರಿಕ್ಟ್ ಬೋರ್ಡ್ ಸೆಸ್ಸ್.

ಡಿಸ್ಟ್ರಿಕ್ಟ್ ಬೋರ್ಡಿನವರು ರೈತರ ಪ್ರತಿನಿಧಿಗಳ ಅಭಿಪ್ರಾಯಕ್ಕೆ ವಿರೋಧವಾಗಿ ರೂಪಾಯಿಗೆ ಅರ್ಧಾಣೆ ಹೆಚ್ಚಿಗೆ ಸೆಸ್ಸ್ ಹಾಕಬೇಕೆಂತ ಮಾಡಿದ ತೀರ್ಮಾನವನ್ನು ಚೀಫ್ ಕಮಿಷನರವರು ಮಂಜೂರುಮಾಡಿರುವದಾಗಿ ವರ್ತಮಾನ ಕೇಳುತ್ತೇವೆ. ಈ ತೀರ್ಮಾನಕ್ಕೆ ಆಕ್ಷೇಪಿಸಿದ ಜಮೀನ್ದಾರ ಸಂಪಕ್ಕಾಗಲಿ ದೇಶದ ವಿಶಾಟಿಂಗುಗಳ ಅಧ್ಯಕ್ಷರಿಗಾಗಲಿ ಡಿ. ಬೊ. ಮೆಂಬರುಗಳಿಗಾಗಲಿ ನಮ್ಮ ಪತ್ರಿಕೆಗಾಗಲಿ ಈ ಸಂಗತಿಯನ್ನು ತಿಳಿಸಿರುವದಿಲ್ಲ. ಜಮಾಬಂದಿ ಪುಸ್ತಕಗಳಲ್ಲಿ ಬರೆಯುತ್ತಿದ್ದಾರೆಂದು ಕೇಳುತ್ತೇವೆ. ಇದರ ವಿಷಯ ಇನ್ನೊಂದಾವರ್ತಿ ತಪಸೀಲಾಗಿ ಬರೆಯುತ್ತೇವೆ.

ಮ. ಮಹಮ್ಮದೀಯರ ಪೀರ್ ಸಾಹೇಬರು.

ಮೊನ್ನೆ ತಾನೆ ಮಡಿಕೇರಿಗೆ ಬಂದು ಇಲ್ಲಿ ಕೆಲವು ದಿವಸಗಳು ಮಾತ್ರ ಇದ್ದು ಈಗ ಮೈಸೂರಿಗೆ ಹೋಗಿರುವ ಪಂಚಾಬಿನಲ್ಲಿರುವ ಅಲಿಪುರದ ನಿವಾಸಿಯಾದ ಹಾಜಿ ಆಫೀಸ್ ಮೌಲಾನ ಸಯ್ಯದ್ ಜಮಾತ್ ಅಲೀಷಹಸಾಹೇಬ್ ಮುಹದ್ದೀಸ್ ಸೂಫಿನಕ್ಷಬಂದಿ ಎಂಬವರು ಅಪೂರ್ವವಾದ ಒಬ್ಬದೇವಭಕ್ತರೂ, ಜ್ಞಾನಿಗಳೂ ಆಗಿರುತ್ತಾರೆ. ಇವರ ಹೆಸರಿನೊಂದಿಗೆ ಇರುವ ಬಿರುದುಗಳನ್ನು ವಿಚಾರಿಸಿದರೆ ಇವರ ಜ್ಞಾನವು ಎಷ್ಟರ ಮಟ್ಟಿಗೆ ಇರುವದೆಂದು ತಿಳಿಯಬಹುದು. ಇವರು ಮಕ್ಕಾಕ್ಕೆ ಹೋದದರಿಂದ 'ಹಾಜಿ' ಎಂದೂ, ಕುರಾನ್ ಪೂರ್ತಿ ಬಾಯಿಪಾಠ ಮಾಡಿರುವದರಿಂದ 'ಆಫೀಸ್' ಎಂದೂ, ಮಹಾತ್ಮರಾದುದರಿಂದ 'ಮೌಲಾನ' ಎಂದೂ ಸಯ್ಯದ್ ಮನಸ್ಥಾನದವರಾದುದರಿಂದ 'ಸಯ್ಯದ್' ಎಂದೂ, ಹದೀಸ್ ಎಂಬ ಮಹಮದೀಯರ ಕಟ್ಟಳೆಗಳನ್ನು ಅರ್ಥಸಮೇತ ಬಾಯಿಪಾಠಮಾಡಿರುವದರಿಂದ 'ಮುಹದೀಸ್' ಎಂದೂ, ಈ ಲೋಕದ ವಿಚಾರವನ್ನು ಬಿಟ್ಟು ಪರಲೋಕದ ವಿಚಾರದಲ್ಲಿಯೇ ಮಗ್ನರಾಗಿರುವದರಿಂದ 'ಸೂಫಿ' ಎಂದೂ ನಕ್ಷಬಂದಿ ಎಂಬ ತಪಸ್ಸಿಯ ದಾರಿಯಿಂದ ಇವರು ದೇವರನ್ನು ಆರಾಧಿಸುವದರಿಂದ 'ನಕ್ಷಬಂದಿ' ಎಂದೂ ಇವರನ್ನು ಜನರು ಕರೆಯುತ್ತಿದ್ದಾರೆ.

ಇವರು ದೊಡ್ಡ ಐಶ್ವರ್ಯವಂತರೂ ಬಹಳ ಧರ್ಮಿಷ್ಠರೂ ಆಗಿರುತ್ತಾರೆ. ಮತವಿಚಾರಗಳನ್ನು ಚರ್ಚಿಸುವದಕ್ಕೂ ಮತ್ತು ಬೋಧಿಸುವದಕ್ಕೂ ಅಂಜುಮಾನ್ ಕುದ್ದಾಮುನ್ ಸೂಫಿಯ ಎಂಬ ಸಂಘವನ್ನು ಏರ್ಪಡಿಸಿದವರು ಇವರೆ. ಪ್ರತಿವರ್ಷವೂ ಸಂಘದ ವಾರ್ಷಿಕ ಸಭೆಯು ಅಲಿಪುರದಲ್ಲಿ ಕೂಡುತ್ತದೆ. ಇದಕ್ಕೆ ಹತ್ತುಸಾವಿರದಿಂದ ಹದಿನೈದು ಸಾವಿರವರೆಗೆ ಹಿಂದೂದೇಶದ ಎಲ್ಲಾ ಭಾಗಗಳಿಂದಲೂ ಜನರು ಬಂದು ಸೇರುತ್ತಾರೆ. ಇದಕ್ಕೆ ಬಂದು ಸೇರುವಂಥ ಸುಮಾರು ಮೂರು, ಯಾ ನಾಲ್ಕು ಸಾವಿರ ಜನರ ಉಪಚಾರಗಳನ್ನು ಇವರು ತನ್ನ ಸ್ವಂತ ಖರ್ಚಿನಿಂದಲೇ ನಡಿಸುತ್ತಾರೆ. ಈ ಸಂಘದ ಶಾಖೆಗಳು ಹಿಂದೂದೇಶದ ಬೇರೆ ಕಡೆಗಳಲ್ಲಿಯೂ ಹರಡಿಕೊಂಡಿವೆ. ಇವರ ಶಿಷ್ಯರು ಹಿಂದೂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಇದ್ದಾರೆ. ಇವರಿಗೆ ಕೊಡಗಿನಲ್ಲಿ ಸುಮಾರು 600 ಜನರೂ, ಮೈಸೂರಿನಲ್ಲಿ ಸುಮಾರು ಹನ್ನೆರಡುಸಾವಿರ ಜನರೂ, ಇಡೀ ಇಂಡಿಯಾದಲ್ಲಿ ಐದು ಲಕ್ಷಕ್ಕಿಂತ ಹೆಚ್ಚು ಜನರು ಶಿಷ್ಯರಿರುವರು. ಇವರು ಮಡಿಕೇರಿಯಲ್ಲಿ ಜೂನ್ 23 ರಲ್ಲಿ ಮೇಲೆ ಹೇಳಿದ ಸಂಘದ ಒಂದು ಶಾಖೆಯನ್ನು ಮಿ|| ಸಿ. ಯಸ್. ಮಹಮ್ಮದ್ ಅಲಿಯವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿರುವರು. ಇವರು ತನ್ನ ಭಕ್ತಿಯ ಶಕ್ತಿಯಿಂದ ಸುಮಾರು ಹನ್ನೆರಡು ಯೂರೋಪಿಯನರನ್ನು ಮಹಮ್ಮದೀಯ ಮತಕ್ಕೆ ಸೇರಿಸಿರುತ್ತಾರಂತೆ. ಅಲ್ಲದೆ ಇವರು ರಮಜಾನಿನ ಸಮಯದಲ್ಲಿ ಕುರಾನಿನ ಮೂರರಲ್ಲಿ ಒಂದು ಭಾಗವನ್ನು ನಿಲ್ಲಿಸದೆ ಒಂದೆ ಸಾರಿ ಓದಲಾಪರು.

ಇವರು ಬಹಳ ಉದಾರ ಮನಸ್ಸುಳ್ಳವರು. ಇವರು ಸ್ವರಾಜ್ಯ ಫಂಡಿಗೆ ಒಂದುಸಾವಿರ ರೂಪಾಯಿ ಕೊಟ್ಟಿರುವದಲ್ಲದೆ ಸುಮಾರು ಒಂದುಲಕ್ಷ ರೂಪಾಯಿಯನ್ನು ಜಮಾಯಿಸಿ ಕಳುಹಿಸುತ್ತಾರೆ. ಮಡಿಕೇರಿಯಲ್ಲಿ ಮೀಟಿಂಗು ಮಾಡಿ ಸ್ವರಾಜ್ಯಫಂಡಿಗೆ 447 ರೂ ವಾಗ್ದಾನವಾದದರಲ್ಲಿ ಕೂಡ್ಲೆ 274 ರೂ. ವಸೂಲಾಯಿತು. ಅಲ್ಲದೆ ಇವರು ಮುಸ್ಲಿಮ್ ಯುನಿವರ್ಸಿಟಿಗೆ ಒಂದುಲಕ್ಷ ಧನ ಕೂಡಿಸಿಕೊಟ್ಟಿರುವರು. ಇವರು ಅಸಹಕಾರತೆಯಲ್ಲಿ ಪೂರ್ತಿ ಸಂಬಿರುವವರು ದೇವಭಕ್ತರಾದುದರಿಂದ ಮತ ಸಂಭಂದವಾದಕೆಲಸಕ್ಕೆ ಸಹ, ವಿಷಯವೇ ಹೆಚ್ಚು ಬೋಧಿಸುವವರಾಗಿದ್ದಾರೆ. ಇವರ ದೇವಭಕ್ತಿಯಿಂದ ಇವರು ಹೋದಲ್ಲೆಲ್ಲಾ, ಹಾಳಾಗುತ್ತಿರುವ ಮಸೀದಿಗಳು ವೃದ್ಧಿಯಾಗುತ್ತಲೂ, ಈ ಲೋಕವಿಚಾರದಲ್ಲಿ ಮಗ್ನರಾಗಿ ಪರಲೋಕದ ವಿಚಾರವನ್ನು ಮರೆತಿರುವಂಥ ಅನೇಕರನ್ನು ದೇವರ ಕಡೆಗೆ ಎಳೆಯುತ್ತಲೂ ಇರುವದು ಇವರಲ್ಲಿಯ ಒಂದು ದೊಡ್ಡ ಮಹಾತ್ಮೆಯಾಗಿದೆ. ಇವರು ಮಡಿಕೇರಿಗೆ ಬರುವ ಮೊದಲು ಇಲ್ಲಿಯ ಮಸೀದಿಯಲ್ಲಿ ಮುಖ್ಯವಾಗಿ ಇಂಥಾ ಮಳೆಗಾಲದಲ್ಲಿ ಐದಾರು ಜನರು ಪ್ರಾರ್ಥನೆ ಮಾಡುವದು ದುರ್ಲಭವಾಗಿತ್ತು. ಆದರೆ ಈಗ 40-50 ಜನ ಮಸೀದಿಯಲ್ಲಿ ಪ್ರಾರ್ಥನೆ ಮಾಡುತ್ತಿರುವದೇ ಇದಕ್ಕೊಂದು ಉದಾಹರಣೆಯಾಗಿದೆ. ಇಂಥಾ ದೇವಭಕ್ತರು ನಮ್ಮ ದೇಶಕ್ಕೆ ದರ್ಶನ ಕೊಟ್ಟದ್ದಕ್ಕಾಗಿ ನಾವು ಬಹು ಸಂತೋಷಪಡುವದಲ್ಲದೆ ಅವರನ್ನು ಬಹಳವಾಗಿ ವಂದಿಸುತ್ತೇವೆ. ಅಲ್ಲದೆ ಅವರ ಮತಾವಲಂಬಿಗಳಾದ ನಮ್ಮ ದೇಶಭಾಂದವರು ಅವರು ಹೇಳಿದ ಬುದ್ಧಿವಾದಗಳಿಗನುಸಾರವಾಗಿ ನಡೆದುಕೊಂಡರೆ ಅವರಿಗೆ ಬಹಳವಾಗಿ ವಂದಿಸಿದಂತಾಗುವದೆಂದು ನೆನೆಸುತ್ತೇವೆ.

ಸಂಪಾದಕರ ಪತ್ರಸ್ವಿಕಾರಗಳು.

ಎಲ್ಲರೂ ದೂರುವವರೆ! « ಭಾಷೆ ಚೆನ್ನಾಗಿಲ್ಲ »! « ಪೇಪರ್ ಡಲ್ »! « ದೇಶಾದ ಪೊಲಿಟಿಕ್ಸ್ ಇಲ್ಲ »! « ನೋಡರೇಟ್ »! « ಹೊತ್ತು ಹೋದ ಸಂಗತಿಗಳಲ್ಲದೆ ಹೊಸದು ಏನೂ ಇಲ್ಲ »! ಎಂಬ ಹಲವು ದೋಷಾರೋಪಣೆಗಳು.

« ನನ್ನ ಲೇಖನವನ್ನು ಪ್ರಕಟಿಸಿದ್ದರೆ ಕಾಣೋಣವಿತ್ತು »! « ನಿಮಗೆ ಪಕ್ಷಪಾತ ಹೆಚ್ಚು » ಎಂಬಿತ್ಯಾದಿ ಅಸೂಯೆಯ ಪತ್ರಗಳು.

« ಅಚ್ಚುಗನ್ನಡದಲ್ಲಿ ಬರೆದ ನನ್ನ ಲೇಖನ ಪ್ರಕಟವಾಗಲಿ » « ಮುಖ್ಯವಾದ ನನ್ನ ಪತ್ರವೇ ಬರಲಿಲ್ಲ » « ನನ್ನ ಪತ್ರಿಯನ್ನು ಇಂಗ್ಲಿಷ್‌ನಿಂದ ಕನ್ನಡಕ್ಕೆ ಸರಿಯಾಗಿ ತರ್ಜುಮೆ ಮಾಡಿ ಪ್ರಕಟಿಸಿರಿ » « ನಾನು ಅಷ್ಟು ಪೇಪರು ತೆಗೆದುಕೊಂಡಿದ್ದೇನೆ, ಅಲ್ಲದೆ ಚಂದಾದಾರ, ಆದುದರಿಂದ ನನ್ನ ಪತ್ರ ಕೂಡಲೆ ಪ್ರಕಟಿಸಿರಿ » ಎಂದು ಹಲವು ಅಪ್ಪಣೆಗಳು.

ಇದನ್ನೆಲ್ಲಾ ಪರಿಶೀಲಿಸಿದರೆ ಚಾತ್ರಿದಾರರು ನಮ್ಮ ಒಡನೆ ಸಂಚಿಕೆಯಲ್ಲಿ ಪ್ರಕಟಿಸಿರುವ « ಸ್ವವಿಷಯ » ವನ್ನು ಸರಿಯಾಗಿ ಓದಲಿಲ್ಲವಾಗಿಯೂ ಪ್ರತಿ ಸಂಚಿಕೆಯಲ್ಲಿಯೂ ಮೊದಲ ಪುಟದ ಮೂರನೆ ಕಾಲಮಿನಲ್ಲಿ ಪ್ರಕಟಿಸುವ ಚಾತ್ರಿದಾರರಿಗಿರುವ ಸೂಚನೆಗಳನ್ನು ಕಣ್ಣೆತ್ತಿ ನೋಡುವುದೇ ಇಲ್ಲವಾಗಿಯೂ ತೋರಬರುವದು. ಅಲ್ಲದೆ ಎಡಿಟರವರು [illegible] ಸೂತನ ಕನ್ನಡಕ ಹಾಕಿ « ಪ್ರಕಟಿಸಿದ್ದರು » ಎಂಬುದ ದ, ಗ್ರಾಮ್ಯಭಾಷೆಯ ಹಳೆಯ ಹೆಸರು ವಿಶೇಷ ನಿದ್ದೆ ಪ್ರಕಟಿಸಿದ ನನ್ನೇ ಬರೆದ ...... ಇತ್ಯಾದಿ ಲೇಖನಗಳೆಲ್ಲ ಓದು ವ .. ಎಂದು ಪ್ರಕಟಿಸಬೇಕೆಂದು ಚಾತ್ರಿದಾರರು ಬಯಸಿದ ನಗ ?

ಮತ್ತೆ ಕೊಡಗಿನ ಸ್ಥಿತಿಗತಿಗಳನ್ನರಿತಿ ಪೊಲಿಟಿಕ್ಸ್ ಏನ ಒಮ್ಮೆಲೇ ಹಿಮಾಲಯ ಏರಿ ಸಕಲ ಹಿಂದೂಸ್ಥಾನದ ಬ್ರಹ್ಮಭಾರವನ್ನು ತಲೆ ಎಂದರೆ ರಾಜಕೀಯ ಎಂಬ ಕಾಲಿ ಲ್ಲಿ ಬಾಲಕ ತರಗತಿಯಲ್ಲಿರುವ ಕಾಸಿಗಾರರು ಗ್ರಾಮಸ್ಥರಾದ ವಾರು ಏನಾಗಬೇಕು? ರಾಜಕೀಯ ಜ್ಞಾನ ಕೆಲದರೂ ಬೇಕಾದ ಹಾಗೆ ಇಂಗ್ಲಿಷ್ ಹಿಂದಿ ಮರಾಠಿ ಮುಂತಾದ ಅನೇಕ ಭಾಷೆಗಳ ಪತ್ರಿಕೆಗಳು ಒದಗುತ್ತವೆ. ಆ ಬರೀ ಕನ್ನಡಿಗರಾಗಿದರೂ ನಮ್ಮ ದೇಶದ ಸಂಬಂಧ ಬೇರೆ ಯಾವ ಪತ್ರವೂ ಇಲ್ಲದಷ್ಟು ಅಂತ ಹುಡುಗರಿಗೆ ಶಾಲೆಯಲ್ಲಿ ಕ್ರಮಪ್ರಕಾರ ಶಿಕ್ಷಣವನ್ನು ಕೊಡುವಂತೆ ಈ ಪತ್ರಿಕೆಯು ಆಗಬೇಕೆಂದು ಕನ್ನಡಿಗರ ಸೇವಕರೆಂದ ಈ ಪತ್ರಿಕೆ ಸಂಪಾದಕರ ಉದ್ದೇಶವಾಗಿದೆ. ಸ್ಪಷ್ಟವಾಗಿ ಹೇಳುವದಾದರೆ, ಹಿಂದುಳಿದಿರುವ ಕೊಡಗಿನ ರಾಜಕೀಯ ವಿಷಯವನ್ನು ಮೊದಲು ಗಮನಕ್ಕೆ ತಂದು, ಇತರ ವಿಷಯಗಳನ್ನು ಅನುಕೂಲಕ್ಕೆ ತಕ್ಕಂತೆ ಬರೆಯಲ್ಪಡುವುದು.

ಈ ಉದ್ದೇಶವು ಸರಿಯಾಗಿ ನಡೆಯಲೆಂದು ಜಗದಂತರ್ಯಾಮಿ ಎಲ್ಲರ ಕೋರಿಕೆ ಇರಲಿ. [ಸಂಪಾದಕ.

ಮೆಮೊರಾಂಡಮ್.

ಗವರ್ನಮೆಂಟ್ ಆಫ್ ಇಂಡಿಯ ಆಕ್ಟಿನ 71 (2) ಸೆಕ್ಷನ ಮೇಲೆ ಒಂದು ನ್ಯಾಯವಿಧಾಯಕ ಸಭೆಯನ್ನು ಏರ್ಪಡಿಸುವ ಆಲೋಚನೆಗೆ ಕೆಲವು ಸಂಸ್ಥೆಗಳಿಗೆ ಒಳಪಟ್ಟ ಇಂಡಿಯ ಸ್ಟೇಟ್ ಸೆಕ್ರೆಟರಿಯವರ ಮಂಜೂರಾತಿಯು ಹೀಗಾಗಿರುವಾಗಿ ಸಿಕ್ಕಿರುತ್ತಿಯಂತ ಅಫಿಶಲ್ ವರ್ತಮಾನವಿಂದಿದೆ. ಏರ್ಪಾಡಿನ ಕೆಲವು ತಪಶೀಲ್ ಸಂಕ್ಷೇಪವಾಗಿ ಈ ಕೆಳಗೆ ಕೊಟ್ಟಿದೆ.

ಸಭೆಯ ಸಂಬಂ ಇಂಡಿಯ ಸ್ಟೇಟ್ ಸೆಕ್ರೆಟರಿಯವರಿಗೆ ಮಂಜೂರಾತಿಗೆ ಕಳುಹಿಸಲ್ಪಟ್ಟ ಏರ್ಪಾಡಿನ ವಿವರ.

ಚುನಾಯಿತರು	ಯುರೋಪಿಯನ್	3
	ಜಮ್ಮ ಹಿಡುವಳಿದಾರರು	14
	ಜಮ್ಮನಲ್ಲದ ಭೂಮಿ ಹಿಡುವಳಿದಾರರು	6—23
ನಿ.ಕರು	ಹಿಂದುಳಿದ ವರ್ಗಗಳು	1
	ಸರಕಾರಿ ಉದ್ಯೋಗಸ್ಥರು	6—7
		30

ಇನದ ಯೋಚಿಸಿದಲ್ಲಿ 1582 ಚದರಮೈಲು ವಿಸ್ತೀರ್ಣವೂ ಮತ್ತು 2 ಲಕ್ಷ ಜನಸಂಖ್ಯೆಯೂ ಮಾತ್ರ ಇರುವ ದೇಶಕ್ಕೆ ಇಷ್ಟು ಸಂಖ್ಯೆಯ ಸಭೆಯು ಬಹಳ ದೊಡ್ಡದಾಯಿತ್ತೆಂದು ಇಂಡಿಯ ಸರಕಾರದವರು ಅಭಿಪ್ರಾಯ ಪಡುತ್ತಾರೆ. ಈಗಿನ ರೀತಿ 20 ಸಂಖ್ಯೆಯುಳ್ಳ ಸಭೆಯಲ್ಲಿ ದಾಮನಾ ಮೇರೆ ಪ್ರತಿನಿಧಿತ್ವವನ್ನು ಕೊಡುವುದು ಸಾಧ್ಯವೆಂತ ಅಭಿಪ್ರಾಯ ಪಡಲಾಗಿದೆ.

ಚುನಾಯಿತರು	ಯುರೋಪಿಯನ್	2
	ಜಮ್ಮ ಹಿಡುವಳಿದಾರರು	9
	ಜಮ್ಮನಲ್ಲದ ಭೂಮಿ ಹಿಡುವಳಿದಾರರು	4—15
	ಸರಕಾರಿ ಉದ್ಯೋಗಸ್ಥರು	4
	ಹಿಂದುಳಿದ ಸಂಗಡಗಳು	1—5
		20

ಆರಿಸೂವ ದೊರೆಯುವಿಕೆ ಧರ್ಮಗಳು ಮಹತ್ವದ ಅಲ್ಪ ಕೆಲವು ಸಂಸ್ಥೆಗಳಿಗೆ ಒಳಪಟ್ಟು ಈ ಕೆಳಗಿನ ವಿಷಯಗಳಿಗೆ ಮಾತ್ರ ಅದಾಗಿರುವಂತೆ ಸ್ವಾತಂತ್ರ್ಯದಂತ ಅಭಿಪ್ರಾಯ ಪಟ್ಟಿದೆ.

ಸ್ಥಳೀಯ ಸ್ವರಾಜ್ಯ, ಆಸ್ಪತ್ರೆಗಳ ಆಡಳಿತ, ಜನರ ಆರೋಗ್ಯ, ಆರೋಗ್ಯಶಾಸ್ತ್ರ ಮತ್ತು ಜನನಮರಣ ಲೆಕ್ಕ, ಯೂರೋಪಿಯನ್ ಮತ್ತು ಆಂಗ್ಲೋ ಇಂಡಿಯನರ ವಿದ್ಯೆಯನ್ನು ಬಿಟ್ಟು ಉಳಿದ ವಿದ್ಯೆ, ಪಿ. ಡಬ್ಲ್ಯು. ಡಿ., ನೀರಾವರಿ, ಮನಾಹುಗಳ ವಿಷಯ, ಸಹಕಾರ ಸಂಘಗಳು, ಆಸ್ತಿ ರಿಜಿಸ್ಟ್ರೇಶನ್, ಮತ ಮತ್ತು ಧರ್ಮದ ತಸ್ತೀಕು (ಎಂಡೋಮೆಂಟ್) ಗಳು ಮತ್ತು ಕೈಗಾರಿಕೆಯ ಅಭಿವೃದ್ಧಿ ಸಮಾಚಾರಗಳು ಮತ್ತು ರಂಗವಗಳು ಈ ವಿಷಯಗಳಲ್ಲಿ ದೊಡ್ಡ ಪ್ರಾಂತ್ಯಗಳಿಗೆ 1919 ನೇ ಇಸ್ವಿ ಗವರ್ನಮೆಂಟ್ ಆಫ್ ಇಂಡಿಯ ಆಕ್ಟು ಜಾರಿಗೆ ಬರುವ ಮುಂಚೆ ಇದ್ದ ಸಭೆಗಳ ಹಕ್ಕು ಕೊಡಬಹುದೆಂತ ಅಭಿಪ್ರಾಯಪಟ್ಟಿದೆ.

ಪಾರ್ಲಿಮೆಂಟಿಗೆ ಆಯವ್ಯಯದ ಚರ್ಚೆ — ದೊಡ್ಡ ಪ್ರಾಂತ್ಯಗಳ ನ್ಯಾಯವಿಧಾಯಕ ಸಭೆಗಳಿಗೆ ಈ ವರೆಗೆ ಇದ್ದವಷ್ಟು ಹಕ್ಕು ಈ ಸಭೆಗೆ ಇರಬೇಕೆಂತ ಅಭಿಪ್ರಾಯವಿದೆ.

ಈ ಆಲೋಚನೆಗಳು ಎಲ್ಲರಿಂದಲೂ ಚರ್ಚಿಸಲ್ಪಟ್ಟು ಜನರ ಅಭಿಪ್ರಾಯ ತಿಳಿಯಲಿಕ್ಕೆ ಸ್ವಲ್ಪ ಸಮಯಕ್ಕೆ ಪ್ರಯುಕ್ತವಾಗ ಬೇಕಾದ ಯೋಚಿಸಿ ಮಡಿಕೇರಿಯಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಕೊಠಡಿಯಲ್ಲಿ 1921 ನೇ ಇಸ್ವಿ ಆಗಸ್ಟು ತಿಂಗಳು 17 ನೇ ಬುಧವಾರ 2 ಘಂಟೆಗೆ ಮೀಟಿಂಗು ನಡೆಯುತ್ತದೆ.

[ಈ ಮೆಮೋರಾಂಡವನ್ನು ಕೆಲವು ಮುಖ್ಯಸ್ಥರಿಗೆ ಮೀಟಿಂಗಿಗೆ ಹಾಜರಾಗಬೇಕೆಂದು ಕಳುಹಿಸಿರುತ್ತಾರಂತೆ.]

ಸ್ಥಳೀಯ ವರ್ತಮಾನಗಳು.

ಒಳದೇಶ

ಕಳ್ಳಿನ ಪೊಲೀಸ್ ಅಧಿಕಾರಿಗಳಿಗೆ ಪ್ರೈವೇಟ್ ಇನ್ನು ಡಿಸ್ಟ್ರಿಕ್ಟ್ ವಾರಂಟ್ ಜಾರಿಯು ಆಗಿಲ್ಲವಾಗಿರುವಂತ ಕಾಣುತ್ತದೆ.

ಮಹನೀಯರೆ, ನಮ್ಮ ಕೆಲಸವು ಇಲ್ಲಿಗೆ ಪೂರೈಸಿತೆಂದು ನಂಬಬೇಡಿರಿ ನಾವು ಪ್ರಾರಂಭಿಸಿದ್ದೇವೆ ಅಲ್ಲದೆ ಪೂರೈಸುವದಿಲ್ಲ ಈ ಸಂಘವು ಇನ್ನು ಎಷ್ಟೋ ಉನ್ನತಸ್ಥಿತಿಗೆ ಬರಬೇಕಾಗಿದೆ ನಮ್ಮ ಜನಾಂಗದ ಪೈಕಿ ನಾವಿಕಾರು ಮಂದಿ ಬಾಲಕ ಬಾಲಿಕೆಯರು ಈ ಸಂಘದ ಸಹಾಯ ನಿರೀಕ್ಷಣೆಯಲ್ಲಿದ್ದಾರೆ ಅವರನ್ನು ತೃಪ್ತಿಗೊಳಿಸಬೇಕಾದರೆ ನಾವುಗಳೆಲ್ಲರೂ ನಮ್ಮಗಳ ಸ್ವಪ್ರಯೋಜನವನ್ನು ಬಿಟ್ಟು ಧರ್ಮದ ಕಡೆಗೆ ಮನಸ್ಸಿಟ್ಟು ಒಗ್ಗಟ್ಟಿನಿಂದ ಕೆಲಸಮಾಡಬೇಕಾಗಿದೆ ಮನಸ್ಸಿನಲ್ಲಿ ಯೋಚಿಸಿದರೆ ಸಾಲದು ಬಾಯಿಯಲ್ಲಿ ಹೇಳಿದರೆ ಸಾಲದು. ಮನಃಪೂರ್ವಕವಾದ ಕೆಲಸ ಮಾಡಬೇಕು. ಅಲ್ಲದೆ ನಮ್ಮಗಳ ಕೈಲಾದಮಟ್ಟಿಗ ಈ ಫಂಡಿಗೆ ಚಂದಾವನ್ನು ಸಹ ಕೊಡಬೇಕು ಕಾಂಚಾಣವಿಲ್ಲದೆ ಕಾರ್ಯಸಿದ್ಧಿಯಾಗಲಾರದೆಂದು ತಮಗಳಿಗೆಲ್ಲರಿಗೂ ತಿಳಿದೇಯಿದೆ ಆದ್ದರಿಂದ ಮಹನೀಯರೆ, ಪ್ರತಿಯೊಬ್ಬ ಕೊಡಗನೂ ತಮ್ಮ ಕೈಲಾದ ಮಟ್ಟಿಗೆ ಈ ಸಂಘಕ್ಕೆ ಧನಸಹಾಯ ಮಾಡುವುದೇ ತನ್ನ ಮುಖ್ಯ ಕರ್ತವ್ಯವೆಂದು ತಿಳಿದುಕೊಂಡು ಮಾಹೆಯಾನ ಇಲ್ಲವೇ ವರ್ಷಗಟ್ಲೆ ಚಂದ ಕೊಡಬೇಕಾಗಿ ಈ ಸಂಘದ ಕಾರ್ಯನಿರ್ವಾಹಕ ಸಭೆಯವರ ಪರವಾಗಿ ನಾನು ಕೇಳಿಕೊಳ್ಳುತ್ತೇನೆ ಮಹನೀಯರೆ, ಪ್ರತಿಯೊಬ್ಬ ಪಟ್ಟೆದಾರನು ತನಗೆ ಹೆಚ್ಚಿಗೆ ಹಣ ಕೊಡಲು ಆಗದಿದ್ದರೆ ಒಂದು ವರ್ಷಕ್ಕೆ ಒಂದು ರೂಪಾಯಿ ಕೊಡಲಾರನೆ? ಮಧುಪಾನ ದುರ್ವ್ಯಾಜ್ಯ ಮೊದಲಾದವುಗಳಲ್ಲಿ ಎಷ್ಟು ಹಣ ವ್ಯಯವಾಗುತ್ತಿದೆ ಧರ್ಮ ಕಾರ್ಯಕ್ಕೆ ಒಂದು ರೂಪಾಯಿ ಕೊಡಲಾಗುವದಿಲ್ಲವೇ? ಹೀಗೆ ಕೊಡದೆ ಇರುವದು ನಾಚಿಗೆ ಕೇಡಲ್ಲವೇ?

ಈ ಸಂಘಕ್ಕೆ ಸಹಾಯಮಾಡಿದ ಎಲ್ಲರಿಗೂ ಪ್ರತ್ಯೇಕ ವಂದನೆ ಮಾಡುವದು ಅಸಾಧ್ಯವಾಗಿದೆ. ಆದ್ದರಿಂದ ಸರ್ವರಿಗೂ ಈ ಸಂಘದ ಸೆಂಟ್ರಲ್ ಕಮಿಟಿಯವರ ಪರವಾಗಿ ನಾನು ಈ ಮೂಲಕ ವಂದಿಸುತ್ತೇನೆ ಅಲ್ಲದೆ ಪೋಲೀಸ್ ಮತ್ತು ಫಾರಸ್ಟ್ ಇಲಾಖೆಯವರು ಕಳೆದ ವರ್ಷದಂತೆ ಈ ವರ್ಷವೂ ಚಂದಾ ಕೊಟ್ಟದ್ದಕ್ಕಾಗಿ ಆ ಎರಡು ಇಲಾಖೆಯವರಿಗೂ ಕುಶಾಲ್ನಗರ ಗ್ರಾಮಸ್ತರು ಜಾತ್ರೆ ಹಣದಿಂದ 10 ರೂ. ಕಳುಹಿಸಿಕೊಟ್ಟದ್ದಕ್ಕಾಗಿ ಅವರಿಗೂ, ಐಚಟ್ಟಿರ ಮನೆಯವರು ಅವರ ಕುಟುಂಬಕ್ಕಾಗಿ 12 8-0 ಪೈ ಕೊಟ್ಟದಕ್ಕೆ ಆ ಕುಟುಂಬಸ್ತರಿಗೂ, ಬ್ಯಾಗ್‌ಡಾಡಿನಿಂದ ರಾಯಸಾಹೇಬ್ ಬಿಟ್ಟಿಯಂಡ್ರ ಮುತ್ತಣ್ಣನವರು ಬಲ್ಲಚಂಡ್ರ ಮುತ್ತಣ್ಣನವರೂ, ಚಂಗಪ್ಪನವರೂ ಇನಾಂ ಪಂದರ 125 ಮತ್ತು 100 ರೂಪಾಯಿಗಳಮೇರೆ ಚಂದಾ ಹಾಕಿ ಒಟ್ಟು 325 ರೂಪಾಯಿಗಳನ್ನು ಕಳುಹಿಸಿಕೊಟ್ಟದ್ದಕ್ಕಾಗಿ ಅವರಿಗೂ, ಕ್ಯಾಪ್ಟನ್ ಕೋದಂಡ್ರ ಗಣಪತ್ತಿಯವರು ಡೊನೇಷನ್ (ಇನಾಂ) ಆಗಿ 190 ರೂ ಕಳುಹಿಸಿಕೊಟ್ಟದ್ದಕ್ಕಾಗಿ ಅವರಿಗೂ ಈ ಸಂಘದ ಹೆಚ್ಚಿನ ವಂದನೆಗಳನ್ನು ಅರ್ಪಿಸುತ್ತೇನೆ

ಈ ಸಂಘವನ್ನು ಕಣ್ಣೆತ್ತಿ ನೋಡದ ಅನೇಕ ಮಹಾನುಭಾವರು ಇದ್ದಾರೆ ಅಲ್ಲದೆ ಈ ಸಂಘದಿಂದ ಸಹಾಯ ಹೊಂದಿ ಸಂಪಾದನೆಗೆ ಪ್ರಾರಂಭಮಾಡಿರುವವರು ಸಹ ಈ ಫಂಡಿನ ಅಭಿವೃದ್ಧಿಗೋಸ್ಕರ ತಾವು ಮಾಡಬೇಕಾದ ಕೆಲಸಗಳನ್ನು ಮರೆತು ಸುಮ್ಮನೆ ಕೂತಿರುವಂತೆ ಕಾಣುತ್ತೆ ಇನ್ನಾದರೂ ಅವರೆಲ್ಲರೂ ತಮ್ಮ ಹೃದಯಗಳನ್ನು ತೆರೆದು ಈ ಸಂಘಕ್ಕೆ ಪೂರ್ಣ ಸಹಾಯ ಮಾಡುವರೆಂದು ನಾನು ನಂಬಿರುತ್ತೇನೆ

ಕೆ. ಕಾಳಪ್ಪ,
ಆನರರಿ ಸೆಕ್ರೆಟರಿ

ತಾರೀಖು 2 7-21 ರಲ್ಲು ನಡೆದ ಕೊಡಗು ವಿದ್ಯಾಭಿವೃದ್ಧಿ ಸಂಘದ ಕಮಿಟಿ ಮೀಟಿಂಗಿನಲ್ಲು ಈ ಕೆಳಗೆ ಕಂಡ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಮತ್ತು ಸಾಲ ಸಹ ಮಂಜೂರಾಯಿತು

ಸ್ಕಾಲರ್‌ಷಿಪ್

1 ಮೆ|| ಬಲ್ಲಚಂಡ್ರ ಅಪ್ಪಯ್ಯನವರಿಗೆ ಬಿ ಎ ಕ್ಲಾಸ್ 1 ವರ್ಷಕ್ಕೆ 180—0—0
2 ,, ಕೆಮ್ಮಂಡ್ರ ಪೊನ್ನಪ್ಪನವರಿಗೆ ಬಿ ಎ ಕ್ಲಾಸ್ 1 ವರ್ಷಕ್ಕೆ 180—0—0
3 ,, ನೆರವಂಡ್ರ ಕುಟ್ಟಪ್ಪನವರಿಗೆ ಬಿ ಎ ಕ್ಲಾಸ್ 1 ವರ್ಷಕ್ಕೆ 180—0—0
4 ,, ಮಾಚಿಮಾಡ ಚಂಗಪ್ಪನವರಿಗೆ ಬಿ ಎ ಕ್ಲಾಸ್ 1 ವರ್ಷಕ್ಕೆ 120—0—0
5 ,, ಮಾದಂಡ್ರ ಗಣಪತ್ತಿಯವರಿಗೆ ಇಂಟರ್‌ಮಿಡಿಯೆಟ್ 1 ವರ್ಷಕ್ಕೆ 120—0—0
6 ,, ಐಚೆಟ್ಟಿರ ಸುಬ್ಬಯ್ಯನವರಿಗೆ ಇಂಟರ್ ಮಿಡಿಯೆಟ್ 1 ವರ್ಷಕ್ಕೆ 120—0—0
7 ,, ನಡಿಕೇರಿಯಂಡ್ರ ಮೊಣ್ಣಪ್ಪನವರಿಗೆ ಇಂಟರ್ ಮಿಡಿಯೆಟ್ 1 ವರ್ಷಕ್ಕೆ 120—0—0
8 ,, ಕಳೆಯಂಡ್ರ ಕುಶಾಲಪ್ಪನವರಿಗೆ ಇಂಟರ್ ಮಿಡಿಯೆಟ್ 1 ವರ್ಷಕ್ಕೆ 120—0—0
9 ,, ಅಪ್ಪಾರಂಡ್ರ ಎ ಕಾರ್ಯಪ್ಪನವರಿಗೆ ಇಂಟರ್ ಮಿಡಿಯೆಟ್ 1 ವರ್ಷಕ್ಕೆ 120—0—0
10 ,, ಚೇಂದಿರ ಸುಬ್ಬಯ್ಯನವರಿಗೆ ಇಂಜಿನೀಯರಿಂಗ್ 1 ವರ್ಷಕ್ಕೆ 120—0—0

ಸಾಲ.

1 ಮೆ|| ಪಟ್ಟಮಾಡ ಚಂಗಪ್ಪನವರಿಗೆ ಇಂಜಿನೀಯರಿಂಗ್ ಕ್ಲಾಸ್ 1 ವರ್ಷಕ್ಕೆ 200—0—0
2 ,, ಚೆಪ್ಪುಡಿರ ಪೊನ್ನಪ್ಪನವರಿಗೆ ಇಂಜಿನೀಯರಿಂಗ್ ಕ್ಲಾಸ್ 1 ವರ್ಷಕ್ಕೆ 120—0—0

ಮತ್ತು ಈ ಸಂಘಕ್ಕೆ ಚಂದಾದಾರರಾಗದವರ ಮನೆಯ ಹುಡುಗರಿಗೆ ಸಂಘದಿಂದ ಯಾವ ಸಹಾಯವೂ ಕೊಡತಕ್ಕದ್ದಲ್ಲವೆಂಬುದಾಗಿ ಈ ಮೊದಲೆ ತೀರ್ಮಾನವಾಗಿರುವದನ್ನು ಜಾರೀಗೆ ತರಬೇಕಾಗಿ ಸಹ ನಿಶ್ಚಯವಾಯಿತು.

ಕೆ. ಕಾಳಪ್ಪ,
ಆನರರಿ ಸೆಕ್ರೆಟರಿ

ಮಾಡಿದಕ್ಕೆ ನಾವು ಬಹಳ ಸಂತೋಷಪಡುತ್ತೇವೆ. ಕಮಿಷನರರು ಇನ್ನು ಮುಂದೆಯೂ ಇದೇ ರೀತಿಯಲ್ಲಿ ಬಡರೈತರ ಕಷ್ಟಗಳನ್ನರಿತು ಆಲೋಚಿತವಾದ ಪರಿಹಾರಗಳನ್ನು ಕೊಡುವರೆಂಬದಾಗಿ ನಂಬುತ್ತೇವೆ. ಕೇವಲ ಬಡಸ್ಥಿತಿಯಲ್ಲಿರುವ ರೈತರೆಲ್ಲರೂ ಈಗ ಅನುಕೂಲವಾಗಿ ಮಾಡಿರುವ ನಿಯಮಗಳನ್ನು ಅನುಸರಿಸಿ ಟಕಾವಿಹಣದಿಂದ ಆದಷ್ಟು ಫಲವನ್ನು ಹೊಂದಿಕೊಂಡು ತಮ್ಮ ಕಷ್ಟಗಳನ್ನು ಪರಿಹರಿಸಿಕೊಳ್ಳುವದಕ್ಕೆ ಸಕಾಲವಾಗಿದೆ

ದೇಶೀಯರು ಸಂಘಗಳ ಮೂಲಕವೂ ಸಭೆಗಳ ಮೂಲಕವೂ ಎಷ್ಟು ಕೂಗಾಡಿದರೂ ಸಾಧ್ಯವಾಗದಿದ್ದಂಥ ಪರಿಹಾರಗಳು ವರ್ತಮಾನಪತ್ರಿಕೆಗಳ ಮೂಲಕ ಪಡೆಯಬಹುದು ಎಂಬದು ಇದರಿಂದ ಸ್ಪಷ್ಟವಾಗಿ ಕಂಡು ಬರುತ್ತದೆ. ಇದುದರಿಂದ ದೇಶೀಯರೆಲ್ಲರೂ ಇನ್ನೂ ಶಿಶುತ್ವದಲ್ಲೇ ಇರುವ ನಮ್ಮ ಈ ಪತ್ರಿಕೆಯನ್ನು ಪ್ರೋತ್ಸಾಹಿಸಿ ಪರಿಪಾಲನೆ ಮಾಡುವರಾಗಿ ನಂಬಿದ್ದೇವೆ.

ವರ್ತಮಾನ ಸಂಗ್ರಹ.

ಒಳದೇಶ.

ನಮ್ಮ ಚಂದಾದಾರರಾಗಿದ್ದ ಮಂಡೇಟಿರ ಮಾದಪ್ಪನವರು ಮೃತಪಟ್ಟದ್ದು ವಿಷಾದಕರವೆ.

ಫಾರೆಸ್ಟ ಗಾರ್ಡಾಗಿದ್ದ ಮುಂಗೇರಿ ಐಯ್ಯಪ್ಪನವರು ಕಳೆದ ಶುಕ್ರವಾರದದಿನ ಮಡಿಕೇರಿ ಆಸ್ಪತ್ರೆಯಲ್ಲಿ ತೀರಿ ಹೋದರು.

ಕೊಂಗೇಟಿರ ಪೊನ್ನಪ್ಪನವರ ಮಗ ಮೆ|| ಕಾಳಪ್ಪನವರು ಇಂಗ್ಲೆಂಡಿನಲ್ಲಿ ಬಿ. ಎಸ್. ಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ.

ಮಡಿಕೇರಿ ಮೋಡಲ್ ಸ್ಕೂಲ್ ಬಡಗಿ ಕೆಲಸದ ಉಪಾಧ್ಯಾಯರಾಗಿರುವ ಮೆ|| ಸಂಬಯ್ಯನವರ ಪತ್ನಿಯವರು ಮೃತಪಟ್ಟುಹೋದರು.

ಇಲ್ಲಿಯ ಶಾಲಾಮಾಸ್ಟರ್ ಮೆ. ಎನ್. ಬಿ ಚಂಗಪ್ಪನವರ ರಜೆಯಲ್ಲು ಮೆ|| ಪಟ್ಟಮಾಡ ಎ ಪೂವಯ್ಯನವರು ಕೆಲಸಮಾಡುವಂತೆ ನೇಮಿಸಲ್ಪಟ್ಟಿರುವರು

ಮಡಿಕೇರಿ ಹೈಸ್ಕೂಲಿನಲ್ಲಿ ಫಸ್ಟ ಅಸಿಸ್ಟೆಂಟ್ ಮಾಸ್ಟರಾಗಿರುವ ಮೆ|| ಸಿ. ಎಮ್. ರಾಮರಾಯರನ್ನು ವೀರಾಜಪೇಟೆ ಸ್ಕೂಲ್ ಹೆಡ್ಮಾಸ್ಟರಾಗಿ ವರ್ಗಾಯಿಸಿರುತ್ತಾರೆ

ಮಡಿಕೇರಿ ಕಾನ್ವೆಂಟು (ಹುಡಿಗಿಯರ ಶಾಲೆ) 2 ನೇ ತಾರೀಖಿನಲ್ಲಿ ತೆರೆಯಲ್ಪಟ್ಟಿದ್ದರೂ ಕೂಡ ಶಾಲೆಗೆ ಬರುವ ವಿದ್ಯಾರ್ಥಿಗಳ ಸಂಖ್ಯೆಯು ಇನ್ನೂ ಮೊದಲಿನ ಅರ್ಧದಷ್ಟು ಆಗಿರುವದಿಲ್ಲವಂತೆ

ಮಡಿಕೇರಿ ಸಿದ್ದಾಪುರ ರಸ್ತೆಯಲ್ಲಿದ್ದ ಅಡಚಣೆಯು ಹೀಗೆ ನಾಲ್ಕೈದು ದಿನಗಳೊಳಗಾಗಿ ಗಾಡಿ ಮೋಟಾರು ಮುಂತಾದ ವಾಹನಗಳು ಅತ್ತಿತ್ತ ದಾಟಲು ಅನುಕೂಲವಾಗುತ್ತದೆಂದು ತಿಳಿಯಬರುತ್ತದೆ

ಡಿಸ್ಟ್ರಿಕ್ಟ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ ಸಿರಸ್ತೇದಾರರಾಗಿರುವ ಮೆ|| ಕೆ. ನಾರಾಯಣರಾಯರು ಕಿಗ್ಗಟ್ಟುನಾಡು ತಾಲ್ಲೋಕು ಸುಬೇದಾರರಾಗಿ (ಎರಡು ತಿಂಗಳಿಗೆ ಮಾತ್ರ) ವರ್ಗಾಯಿಸಲ್ಪಟ್ಟಿರುತ್ತಾರೆ.

ಬಲಮುರಿ ಗ್ರಾಮದಲ್ಲಿ ಒಂದು ವರುಷದಿಂದೀಚೆಗೆ ತಿಥಿ ಕರ್ಮಗಳಲ್ಲಿ ಮದ್ಯ ಮಾಂಸವನ್ನು ವಿಸರ್ಜಿಸಿರುತ್ತಾರೆಂದೂ ಹಾಗೆಯೇ ಮೊನ್ನೆಯದಿನ ಒಂದು ತಿಥಿಯು ನಡೆಸಲಾಯ್ತು ಎಂದೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ಶನಿವಾರಸಂತೆ:—ಮುದ್ದಿನಕಟ್ಟೆ ಮಠದ ಮುರುಗ್ಯೆಯ್ಯನವರು ಎಲ್ಲಿಯೋ ಹೋದರೆಂದು ಪ್ರವಾದವಿದ್ದಲ್ಲಿ ಈಚಗೆ ಅವರ ಶವವು ಶಿರಹದ ಹೊಳೆಯಲ್ಲಿ ಸಿಕ್ಕಿತೆಂದೂ ಇವರ ಮರಣವು ಹ್ಯಾಗೆ ಸಂಭವಿಸಿತೆಂಬುದು ಭಗವಂತನಿಗೆ ಗೊತ್ತಿರಬಹುದೆಂದೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ಸೋಮಯಂಡ್ರ ಮೊಣ್ಣಪ್ಪನೆಂಬುವರು ಮದ್ರಾಸು ರಾಯಪುರಂ ಆಸ್ಪತ್ರೆಯಲ್ಲಿ ಕಳೆದ 1 ನೇ ತಾರೀಖಿನಲ್ಲಿ ಮೃತಪಟ್ಟರೆಂದೂ ಇವರ ದಫನ ಕ್ರೀಯೆಯನ್ನು ಸುಮಾರು 50 ಜನರು ಸೇರಿ ಇವರ ತಂದೆ ನಂಜಪ್ಪನವರು ಅಲ್ಲಿಗೆ ತಲುಪಿದ ನಂತರ ನಡೆಸಿದರೆಂದೂ ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

ಅಮ್ಮತ್ತಿ ಸೇಂದಿ ಅಂಗಡಿಯು ಮೊದಲು ಎರಡು ಸಾವಿರಕ್ಕಿಂತ ಹೆಚ್ಚು ರೂಪಾಯಿಗಳಿಗೆ ಹರಾಜಿನಲ್ಲಿ ಪಡಕೊಂಡದ್ದು ಸಾಕಷ್ಟು ಸೇಂದಿ ದೊರಕದೆ ಇದ್ದದ್ದರಿಂದ ಲೈಸನ್ಸ್ ದಾರನ ಅರ್ಜಿಮೇರೆ ಸುಮಾರು ಮುನ್ನೂರು ರೂಪಾಯಿ ದಟ ಕೊಟ್ಟು ಪುನಃ ಮೊನ್ನೆ ದಿನ ಹರಾಜುಮಾಡಿದಲ್ಲು ಆ ಲೈಸನ್ಸ್ ದಾರನೇ 800 ರೂ. ಗಳಿಗೆ ಪಡಕೊಂಡನು.

ಮಡಿಕೇರಿ ಟೌನು ಕೋರ್ಟಿನಲ್ಲಿ ಮುನ್ಸಿಪಾಲಿಟಿಯ ಬೀದಿಗಳಲ್ಲಿ ಬಾಳೆಸಿಪ್ಪೆ, ತರಗು ಮುಂತಾದ ಕಸ ಕಡ್ಡಿಗಳನ್ನು ಬಿಸಾಡಿದ್ದಕ್ಕೆ ದಾಖಲುಮಾಡಿದ್ದ "ಪಬ್ಲಿಕ್ ನ್ಯೂಸೆನ್ಸ್" ನಾಲ್ಕು ಮೊಕದ್ದಮ್ಮೆಗಳ ಪೈಕಿ ಒಂದು ಮೊಕದ್ದಮ್ಮೆಯಲ್ಲಿ ಅಪರಾಧಿಯು ಶುಲಾಮುಮಾಡಲ್ಪಟ್ಟಿರುತ್ತಾನೆ. ಬಾಕಿ ಮೂರು ಮೊಕದ್ದಮ್ಮೆಗಳನ್ನು ಪೋಲೀಸಿನವರು ಹಿಂದಕ್ಕೆ ತೆಗೆದುಕೊಳ್ಳುವ ಸಂಭವವಿದೆಯೆಂದು ತಿಳಿಯುತ್ತೇವೆ.

ವೀರಾಜೇಂದ್ರಪೇಟೆ ಹತ್ತಿರ ಇರುವ ಮಲೆತಿರಿಕೆ ದೇವಸ್ಥಾನದ ಪವುಳಿಗಳು ಜೀರ್ಣವಾದುದನ್ನು ಕಟ್ಟಿಸುತ್ತೇವೆಯಾಗಿ ವಾಗ್ದಾನಮಾಡಿದವರ ಪೈಕಿ ಮೆ|| ಕೊಳುವಂಡ್ರ ತಿಮ್ಮಯ್ಯನವರು ಒಪ್ಪಿಕೊಂಡಿದ್ದ ಭಾಗವನ್ನು ಕಟ್ಟಿಸಿ ಜೀರ್ಣೋದ್ಧರಿಸಿದ್ದಾರಾಗಿ ತಿಳಿಯುತ್ತೇವೆ ಮೆ|| ತಿಮ್ಮಯ್ಯನವರಂತೆಯೇ ಉಳಿದವರು ಅವರ ಪಾಲಿನ ಕೆಲಸಗಳನ್ನು ಪೂರ್ತಿಸಿ ದೇವಾಲಯ ಜೀರ್ಣೋದ್ಧಾರಕರೆನಿಸಿಕೊಳ್ಳುವರೆಂದು ಭಾವಿಸುತ್ತೇವೆ.

ಸಿದ್ದಾಪುರ ಪೇಟೆಯವರ ಮುಖ್ಯ ಪ್ರಯಾಣಿಕರ ಸಹ ಕ್ಷೇಮಕಕ್ಕೋಸ್ಕರ ರಾತ್ರಿ ಸಮಯದಲ್ಲಿ ಲಾಂದ್ರಕಂಭಗಳನ್ನು ಹಚ್ಚಲಿಕ್ಕೆ ಪೇಟೆ ನೆಟ್ಟಿಯವರಿಗೆ ಸರಕಾರದವರು ಒಪ್ಪಿಸಿರುವದು ಸರಿಯೇ. ದಾಗ್ಯೂ ಪೇಟೆಯಲ್ಲಿ ಕಗ್ಗತ್ತಲೆ ಕಾಲಗಳಲ್ಲಿ ಜನರು ತಿರುಗಾಡಲು ಲಾಂದ್ರಗಳನ್ನು ಉರಿಸುವದಿಲ್ಲವಾದ್ದರಿಂದ ಬಹಳ ಸಂಕಟಕರವೆಂದೂ, ಸಿದ್ದಾಪುರ ವಿಚಾರಗಳನ್ನು ಮೇಲಧಿಕಾರಿಗಳ ಅರಿಕೆಗೆ ಯಾರೂ ತಾರದೆ ಇರುವದು ಇದಕ್ಕೆ ಕಾರಣವಾಗಿರಬಹುದೆಂದೂ ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ಚೇರಳ ಶ್ರೀಮಂಗಲ ಗ್ರಾಮದ ಬಾಲಕ ಬಾಲಕಿಯರಿಗೆ ಶಾಲೆ ಇಲ್ಲದ್ದರಿಂದ ಅಲ್ಲಿನ ಗ್ರಾಮಸ್ಥರೆಲ್ಲರೂ ಸೇರಿ ಒಂದು ಕೈಸಂಬಳ ಶಾಲೆಯನ್ನು 10 ನೇ ಏಪ್ರಿಲಿನಲ್ಲು ಏರ್ಪಡಿಸಿರುತ್ತಾರೆ ಈ ಶಾಲೆಯಲ್ಲಿ ಸುಮಾರು 25 ರಿಂದ 30 ರ ವರೆಗೆ ವಿದ್ಯಾರ್ಥಿಗಳು ಶಿಕ್ಷೆ ಹೊಂದುತ್ತಾರೆ. ಈ ವಿಚಾರದಲ್ಲಿ ಗ್ರಾಮಸ್ಥರು ತುಂಬಾ ನಿಗ ತೆಗೆದುಕೊಳ್ಳುತ್ತಾರೆಂಬುದು ಶ್ಲಾಘನೀಯವೇ ಸರಕಾರದವರು ಸಹ ಈ ಶಾಲೆ ವಿಷಯದಲ್ಲಿ ನಿಗ ತೆಗೆದುಕೊಳ್ಳಬೇಕೆಂದು ಒಬ್ಬ ಗ್ರಾಮಸ್ಥರು ಬರೆಯುತ್ತಾರೆ

ವೀರರಾಜೇಂದ್ರಪೇಟೆ ಸಮೀಪದ ಬೋಯಿಕೇರಿ ಎಂಬಲ್ಲಿರುವ ಹಕೀಂ ಒಡನ್ ಸಾಬ ಎಂಬುವರು ಮೂಲವ್ಯಾಧಿಗೆ ದೊಡ್ಡ ಪಂಡಿತನೆಂದು ಹೇಳಿಕೊಂಡು ಅನೇಕ ಜನರಿಗೆ ಔಷಧಿಮಾಡಿ ಅವರಿಂದ 30-40 ರೂಪಾಯಿಗಳನ್ನು ಹೊಂದಿಕೊಳ್ಳುತ್ತಿದ್ದಾನೆಂದೂ, ಅವನ ಔಷಧಿಯು ಪ್ರಯೋಜನಕರವಾದ್ದಲ್ಲವೆಂದೂ ಒಬ್ಬ ಅನುಭವಿಯು ಬರೆಯುತ್ತಾರೆ ಅಲ್ಲದೆ ಗರೀಬ ಜನರು ಸಂಕಟವನ್ನು ಪರಿಹರಿಸಲಿಕ್ಕಾಗಿ ದನಕರುಗಳನ್ನು ಮಾರಿ ಇವರಿಗೆ ಕೊಡುತ್ತಿದ್ದರೂ ರೋಗವು ವಾಸಿಯಾಗದೆ ಇರುವದರಿಂದ ಮುಂದಕ್ಕೆ ಇವರಿಂದ 6 ತಿಂಗಳ ಆಧನ ಒಂದು ವರ ನದ ಔಷಧ ತೆಗೆದುಕೊಂಡೇ ಮಜೂರಿ ಕೊಡಬೇಕೆಂದು ಈ ಅನುಭವಿಯು ಸೂಚಿಸುತ್ತಾರೆ

ಮಡಿಕೇರಿ ಹೈಸ್ಕೂಲ್— ಮೆ ಸಿ. ಎಂ. ರಾಮರಾಯರು ವರ್ಗವಾಗಿರೋಣದ್ದರಿಂದ ಅವರಲ್ಲಿ ತಮಗೆ ಇರುವ ವಿಶ್ವಾಸವನ್ನು ತೋರ್ಪಡಿಸಲೋಸುಗ ವಿದ್ಯಾರ್ಥಿಯರೆಲ್ಲರೂ ಸಭೆ ಸೇರಿ ತಮ್ಮ ಗುರುಗಳಿಗೆ ಜ್ಞಾಪಕಾರ್ಥವಾಗಿ ಒಂದು ಚಿನ್ನದುಂಗುರವನ್ನೂ ಮತ್ತೆ ಅಭಿನಂದನಾ ಪತ್ರವನ್ನೂ ಒಪ್ಪಿಸಬೇಕೆಂದು ನಿರ್ಧರಿಸಿದರು.

ಈ ಕೆಳಗೆ ಕಾಣಿಸಿರುವ ಮಹಾಶಯರು ಈವರೆಗೆ ನಮ್ಮ ಪತ್ರಿಕೆಗಳನ್ನು ಹೊಂದಿಕೊಂಡು ಈಗ ಯಾವ ಕಾರಣದಿಂದ ವಾಪಾಸು ಮಾಡಿದರೆಂಬದು ತಿಳಿಯೆವು. ಇವರು ಒಂದನೆ ಪತ್ರಿಕೆ ಸಿಕ್ಕುವಾಗಲೇ ನಮಗೆ ತಿಳಿಸಿದ್ದರೆ ನಾವು ಅವರಿಂದುಟಾದ ನಷ್ಟಕ್ಕೆ ಗುರಿಯಾಗುತ್ತಿರಲಿಲ್ಲ.

1 ಮೆ|| ಕಂಡ್ರತಂಡ್ರ ಬಿ. ಕುಶಾಲಪ್ಪನವರು.
2 ,, ಕೇಟೋಳಿರ ಚಂಗಪ್ಪನವರು ಕೋಳಕೇರಿ
3 ,, ಬಲ್ಲಡಿಚಂಡ್ರ ಸಂಜಪ್ಪನವರು.
4 ,, ಕಿರಿಕೊಡ್ಲಿ ಪಟೇಲ ಪೊಳ್ಳೆಯ್ಯನವರು.
5 ,, ಕೊಲ್ಲಿರ ಬೋಪ್ಪೆಯ್ಯನವರು.
6 ,, ಕಂಡ್ರತಂಡ್ರ ಎ. ದೇವೈಯ್ಯನವರು
7 ,, ಕೊಡಗನ ಚಾಲುರು.
8 ,, ಕುಂಬೆಲಂಡ್ರ ಪೊನ್ನಪ್ಪನವರು.
9 ,, ಕುಮ್ಮೆಂಡ್ರ ಮೇದಪ್ಪನವರು.
10 ,, ಪಕ್ಕಲಿಗರ ಚಿಕ್ಕಣ್ಣನವರು. ನಾಲ್ಕೇರಿ.
11 ,, ಮೇಚಿಯಂಡ ಅಪ್ಪವಡೆ.
12 ,, ಪೊಳ್ಳೆರ ಮುದ್ದೈಯ್ಯನವರು.
13 ,, ಚೆಂಬೆ ಬೆಳಿಯೂರು ವ ಈರೆಗವುಡರು.
14 ,, ಚೋಕಿರ ನಾಣಯ್ಯನವರು.
15 ,, ಚೆರಿಯಪಂಡ್ರ ಎಸ್ ಚಿಣ್ಣಪ್ಪನವರು.
16 ,, ಕಚ್ಚಪ್ಪನೆರ ಪೂವೈಯ್ಯನವರು.
17 ,, ಕಿಕ್ಕೇರಿ ಬಿ ಪೀರುಸೆಟ್ರು.
18 ,, ಪಟೇಲ ಬಸ್ವೇಗವುಡರು.
19 ,, ಪಳಂಗಿಯಂಡ್ರ ಮುದ್ದಪ್ಪನವರು.
20 ,, ಪಟೇಲ ನಂಜೇಗವುಡರು.
21 ,, ಮುದ್ದಿಯಡ ಐಯ್ಯಣ್ಣನವರು.
22 ,, ಐಚೆಟ್ಟಿರ ಗಣಪತಿಯವರು.
23 ,, ಡಿ ಚಿಕ್ಕಣ್ಣನವರು.
24 ,, ಕಾಂಡ್ರತಂಡ್ರ ಬಿ ಮುದ್ದಪ್ಪನವರು.
25 ,, ಜಂಗಮ ಬಸುವೈಯ್ಯನವರು.
26 ,, ರಾಸಪ್ಪ ಪಟೇಲರು.
27 ,, ಪಟೇಲ್ ಅಬ್ದುಲ್ ರೈಮನ್ ಸಾಹೇಬರು.
28 ,, ಚೆಪ್ಪುಡಿರ ಬೆಳ್ಳಪ್ಪನವರು ರುದ್ರಪೀಡು.
29 ,, ತೀತಿರ ದೇವೈಯ್ಯನವರು.
30 ,, ಬೊಪ್ಪಂಡ್ರ ಐಯ್ಯಣ್ಣನವರು.
31 ,, ,, ಮುತ್ತಣ್ಣನವರು

ಹಿಂದೂದೇಶ.

ಮಿಸೆಸ್ ಮರೆಮ್ಮ ಎಂಬ ಸ್ತ್ರೀಯು ಸೆಲ್ಲಂ ಮುನ್ಸಿಪಾಲಿಟಿಯಲ್ಲಿ ಕೌನ್ಸಿಲರಾಗಿದ್ದಾರೆ.

ದಿಕ್ಕಬರು ವಂಗಳ ಹೊಸಯಲ್ಲಿ ಆಹನ ರಾಜಾದಿನಲ್ಲಿ ಕೂಡಲಿಕ್ಕಿರುವ ರಾಷ್ಟ್ರೀಯ ಸಭೆಯ ಅಧ್ಯಕ್ಷರವಿಗೆ ಚಿತ್ತರಂಜನ ದಾಸರವರಿಗೇ ಹೆಚ್ಚು ಓಟುಗಳು ಇದುವರೆಗೆ ಬಂದಿರುತ್ತವೆ

ಪಂಜಾಬ್ ನ್ಯಾಯವಿಧಾಯಕ ಸಭೆಯಲ್ಲಿ ತಾರೀಕು 29–7–21 ರಲ್ಲಿ ಪ್ರೈಮರಿ ವಿದ್ಯೆಗಾಗಿ 30 000,00 ರೂಪಾಯಿಗಳನ್ನು ಸ್ಪೆಷಲ್ ಗ್ರಾಂಟ್ ಕೊಡಬೇಕೆಂತ ಠರಾವು ಮಂಜೂರಾಗಿದೆ

ಹಿಂದೂದೇಶದಲ್ಲಿ ಅಮಲು ಪದಾರ್ಥವನ್ನು ಮಾರುವದರಿಂದ ಗವರ್ನಮೆಂಟಿನವರಿಗೆ ಉಂಟಾದ ಉತ್ಪತ್ತಿ 1874–75 ರಲ್ಲಿ 1,561 000 ಪೌನುಗಳು, 1919–20 ರಲ್ಲಿ 1 ಕೋಟಿ 30 ಲಕ್ಷ ಪೌನುಗಳು

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಐದು ತಾಲ್ಲೋಕುಗಳ ಪೈಕಿ ನಾಲ್ಕು ತಾಲ್ಲೋಕುಗಳ ಸೇಂದಿ ಅಂಗಡಿಗಳನ್ನು ಹರಾಜು ಮಾಡಿದಲ್ಲು ಒಂದೇ ಅಂಗಡಿಯನ್ನು ಮಾತ್ರ ಒಬ್ಬ ಕ್ರೈಸ್ತರವನು ತೆಗೆದುಕೊಂಡನಂತೆ.

ಕಳೆದವಾರ ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ವರ್ಣಾಂತರ ವಿವಾಹದ ಶಾಸನವನ್ನೇರ್ಪಡಿಸಬೇಕೆಂಬ ತೀರ್ಮಾನವು ಅನುಮೋದಿತವಾಯಿತು. ಅದನ್ನಾಗಬೇಕೆಂಬ ಪಂಗಡಕ್ಕೆ 54 ಮಂದಿಯೂ, ಕೂಡದೆಂಬುದಕ್ಕೆ 23 ಮಂದಿಗಳೂ ಅನುಮತಿ ಕೊಟ್ಟರು.

"ಡೈಲಿ ಎಕ್ಸ್‌ಪ್ರೆಸ್" ಪೇಪರಿನಲ್ಲಿ ಯುವರಾಜರು ಇಂಡಿಯಾ ದೇಶಕ್ಕೆ ನವಂಬರ್ ತಿಂಗಳಲ್ಲಿ ಬರುವಾಗ ಬ್ರಿಟಿಷ್ ಸಾಮ್ರಾಜ್ಯದ ವಸಾಹತು (Colonies) ಗಳಿಗೆ ಇರುವ ಸ್ವರಾಜ್ಯವನ್ನು ಇಂಡಿಯಾ ದೇಶಕ್ಕೆ ಕೊಡುತ್ತಾರೆಂಬ ವರ್ತಮಾನವನ್ನು ಬರೆದಿರುತ್ತಾರೆ.

ಮದ್ರಾಸು ಆಧಿಪತ್ಯದ ಮಚಲೀ ಬಂದರು, ರಾಜಮಹೇಂದ್ರಿ ಮತ್ತು ಗುಂಟೂರು ಮುನ್ಸಿಪಾಲಿಟಿಗಳಲ್ಲಿ ಎಲ್ಲಾ ಕಾಗದಪತ್ರಗಳು ಸ್ವದೇಶಭಾಷೆಯಲ್ಲೇ ಬರೆಯಲ್ಪಡಬೇಕೆಂದು ತೀರ್ಮಾನಿಸಲ್ಪಟ್ಟಿದೆ ಎಲ್ಲಾ ಮುನಿಸಿಪಾಲಿಟಿಗಳಲ್ಲಿಯೂ ಹೀಗೆ ಮಾಡುವದರಿಂದ ದೇಶಕ್ಕೆ ಹಿತಕರವಾಗುತ್ತೆ.

ಲಾಹೋರ್ ಜನರಲ್ ಪೋಸ್ಟಾಫೀಸಿನ ಪೋಸ್ಟ್ ಮೇನ್ ಒಬ್ಬನು 60 ಕಾಗದ ಮತ್ತು ಪೋಸ್ಟ ಕಾರ್ಡುಗಳನ್ನು ವಾಪತಿನಾಡದೆ ಹರಿದು ಬಿಸಾಡಿದಕ್ಕಾಗಿ ಡಿ. ಮೇಜಿಸ್ಟ್ರೇಟರವರು ಇಂಡಿಯನ್ ಪೋಸ್ಟಾಫೀಸು ಆಕ್ಟು 52 ನೇ ಪ್ರಕರಣದ ಮೇರೆ ಎರಡು ವರುಷ ಕಠಿಣ ಸಜವನ್ನು ವಿಧಿಸಿರುತ್ತಾರೆ.

ಜುಲೈ 30 ರಲ್ಲಿ ಮಂಗಳೂರ್ ಮದ್ರಾಸು ಮೇಲ್ ಟ್ರೈನ್ ಹೊರಟನಂತರ ಅದರ ಒಬ್ಬ ಗಾರ್ಡು ತನ್ನ ಭೂಮಿಗೆ ಹತ್ತುವಾಗ ಕಾಲುಜಾರಿ ಬಿದ್ದು ಚಕ್ರದ ಅಡಿಗೆ ಸಿಕ್ಕಿ ಮೃತಪಟ್ಟನು ಗಾಡಿಯ ವೇಗದ ಹಿಂದುಗಡೆ ಇಂಜನೀಯರಿನ ವೇಗ ಇದ್ದದರಿಂದ ಈವನು ಚಕ್ರದಡಿಗೆ ಸಿಕ್ಕಿ ಹೋದನೆಂದು ಜನರ ಅಭಿಪ್ರಾಯ.

ಬೆಂಕಿಪುರದಲ್ಲಿ ಅಡ್ವಕೇಟಾಗಿ ವಾದಮಾಡಲು ಬಿ. ಎ. ಬಿ. ಎಲ್. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಸುಧನ ಬಾಲಾ ಹಜ್ರಮ್ಮ ಎಂಬ ನಾರಿಮಣಿಯನ್ನು ಅಂಗೀಕರಿಸಬೇಕೆಂದು ಅಲ್ಲಿಯ ಕೆಲವು ವಕೀಲರು ಪಾಟ್ನಾ ಹೈಕೋರ್ಟ್ ಜಸ್ಟಿಸ್‌ರವರಿಗೆ ಬರೆಕೊಂಡದ್ದಕ್ಕೆ ಆ ವಿಷಯವನ್ನು ವಿಚಾರಮಾಡುವದಾಗಿ ಉತ್ತರ ಕೊಟ್ಟಿರುವರು.

ಪುದುಕೋಟೆ ಸಂಸ್ಥಾನದ ರಾಜರು ತಮ್ಮ ಪದವಿಯನ್ನು ತ್ಯಜಿಸಿದರೆಂದೂ, ಅಲ್ಲಿಯಣ ಅಧಿಕಾರವನ್ನು ಇಂಗ್ಲೀಷಿನವರು ವಶಪಡಿಸಿಕೊಳ್ಳುವರೆಂದೂ ಮತ್ತು ಮದ್ರಾಸು ಸರಕಾರದವರು ಅದರ ಆಡಳಿತ ವಿಷಯ ತಿದ್ದುಪಾಟುಗಳನ್ನು ಮಾಡುವರೆಂದೂ ಪತ್ರಿಕೆಗಳಲ್ಲಿ ಬಂದಿದ್ದಿತು. ಆದರೆ ಮದ್ರಾಸು ಸರ್ಕಾರದವರು ಈ ಸಂಸ್ಥಾನ ಪರಿಪಾಲನ ಕ್ರಮದಲ್ಲಿ ತಿದ್ದುಪಾಟು ಮಾಡುವದು ಮಾತ್ರ ನಿಜವೆಂದು ತಿಳಿಯಬರುತ್ತದೆ.

ಮೈಸೂರಿನಲ್ಲಿ ಆಚೆವಾರ ಒಂದು ಕೌತುಕವು ನಡೆಯಿತು. ಗಂಗಮ್ಮನೆಂಬ ಮದರಾಸಿನ ಬ್ರಾಂಹ್ಮಣೇತರ ಯುವತಿಯು ಪುರುಷವೇಷವನ್ನು ಧರಿಸಿಕೊಂಡು ರೈಲಿನಲ್ಲಿ ಪ್ರಯಾಣಮಾಡಿ ಮೈಸೂರಿಗೆ ಬಂದಳು. ಅಲ್ಲಿದ್ದ ಪೋಲೀಸಿನವರು ಅವಳನ್ನು ಸಂಶಯದಿಂದ ತಡೆದು ವಿಚಾರಿಸಿ ಅಳೆಯ ಸಹೋದರನನ್ನು ಕರೆಸಿ ಆತನ ವಶಕ್ಕೆ ಒಪ್ಪಿಸಿದರು. ವಿವಾಹದ ವಿಷಯದಲ್ಲಿ ಮನಸ್ತಾಪ ಬಂದದರಿಂದ ಈರೀತಿ ವೇಷ ಬದಲಾಗಲು ಕಾರಣವಾಯಿತು.

ಆಗಸ್ಟು 1 ರಲ್ಲು ಲೋಕಮಾನ್ಯ ತಿಲಕರವರ ವರ್ಷೋತ್ಸವವು ಎಲ್ಲಾ ಮುಖ್ಯ ಪಟ್ಟಣಗಳಲ್ಲಿಯೂ ವಿಶೇಷವಾದ ಸಭೆಸೇರಿ ನಡಿಸಲ್ಪಟ್ಟಿತು. ಇವುಗಳ ಪೈಕಿ ಡೆಲ್ಲಿಯಲ್ಲಿ ನಡೆದ ವರ್ಷೋತ್ಸವದ ಮೆರವಣಿಗೆಯಲ್ಲಿ ಸಾಮಾನ್ಯ ಚರಕಾದ 20 ರಷ್ಟು ದೊಡ್ಡದಾದ ಒಂದು ನೂಲುವ ರಾಟೆಯನ್ನು ಬೀದಿಯಲ್ಲೆಲ್ಲಾ ಮೆರವಣಿಗೆ ಮಾಡಿದರಂತೆ. ಆ ರಾಟೆಯ ಮೇಲೆ ಉರುದು ಮತ್ತು ಹಿಂದೀ ಭಾಷೆಗಳಲ್ಲಿ "ಸ್ವತಂತ್ರವನ್ನು ಹೊಂದಿಸುವ ಫಿರಂಗಿ" ಎಂದು ಪ್ರದರ್ಶಿಸಲ್ಪಟ್ಟಿತೆಂದು "ಹಿಂದು" ಪತ್ರಿಕೆಯು ಬರೆಯುತ್ತದೆ.

ರಾಜನ ಪೇಂಡ್ರಿ, ಮುನಿಸಿಪಾಲಿಟಿಯವರು ತಿಲಕರ ಸಕ್ಕ್ ಮುನ್ಸಿಪಾಲಿಟಿಯ ಕಟ್ಟಡದಲ್ಲಿ ಇಡಬೇಕೆಂತಲೂ, ಸೇಂದಿ, ಸಾರಾಯಿ, ಬ್ರಾಂದಿ ಮುಂತಾದ ನಿಷಪದಾರ್ಥಗಳ ಅಂಗಡಿಗಳನ್ನು ಮುನ್ಸಿಪಾಲಿಟಿಯೊಳಗೆ ಇಡಬಾರದೆಂತ ಸರಕಾರವನ್ನು ಕೇಳಬೇಕೆಂತಲೂ ಹಾಗೆ ಸರಕಾರದವರು ಮಾಡುವವರೆಗೆ ಹಸ್ತಪತ್ರಗಳಿಂದಲೂ ಬೋಧಕರಿಂದಲೂ ಕುಡುಕತನವನ್ನು ನಿಲ್ಲಿಸಲಿಕ್ಕೆ ಪ್ರಯತ್ನಿಸಬೇಕೆಂತಲೂ ಹಿಂದುಳಿದ ಪಂಗಡದವರನ್ನು ಉನ್ನತಸ್ಥಿತಿಗೆ ತರಲು ಪ್ರಯತ್ನಿಸಬೇಕೆಂತಲೂ, ಈ ಕಡೇ ಎರಡು ಉದ್ದೇಶಗಳನ್ನು ನೆರವೇರಿಸಲಿಕ್ಕೆ ತಿಲಕಸ್ವರಾಜ್ಯ ಫಂಡಿನಿಂದ ಮೂರುಸಾವಿರ ರೂಪಾಯಿ ಕೇಳಬೇಕೆಂತಲೂ ನಿಶ್ಚೈಸಲಾಗಿದೆ.

ಆಗಿಸ್ಟು 1 ರಲ್ಲು ಮಹಾತ್ಮ ಗಾಂಧಿಯವರು ಖಾದಿ ಬಟ್ಟೆಯ ಪ್ರದರ್ಶನವನ್ನು ಬೊಂಬಾಯಿಯಲ್ಲಿ ಬಹಿರಂಗಪಡಿಸಿದರು ಜನರಿಂದ ಸ್ವಂತ ಮತ್ತು ಕಾರ್ಖಾನೆಗಳಿಂದ ತಯಾರಿಸಲ್ಪಟ್ಟ ಬಟ್ಟೆಗಳ 20 ಅಂಗಡಿಗಳಿದ್ದವು. ಈ ಪ್ರದರ್ಶನವು ರಾಷ್ಟ್ರೀಯ ಸ್ತ್ರೀ ಸಭೆಯ ಆಶ್ರಯದಲ್ಲಿ ನಡೆಯಲ್ಪಟ್ಟಿತು ಕೈಯಿಂದಲೇ ತಯಾರಿಸಲ್ಪಟ್ಟ ನೂತನವಾದ ನೂಲು ಮತ್ತು ಬಟ್ಟೆಗಳು ಸಹ ಪ್ರದರ್ಶಿಸಲ್ಪಟ್ಟವು ಅಗ್ರ ದೇಶದವರಲ್ಲ ಮಹಾತ್ಮರು ವಿಜಯ ರಾಘವಾಚಾರ್ಯರು, ಪಂಡಿತರು ಮಾಳವೀಯರು ಮತ್ತು ನೇಜದರವರ ಲಾಲ ಪುತ ರಾಯರು ಮೌಲಾನಾ ಅಬ್ದುಲ್ ಕಲಾಂ ಅಜಾದರವರು ಮತ್ತು ಸರೋಜಿನಿದೇವಿಯವರು ಸಹ ಇದ್ದರು

ವಿದೇಶ.

ಮೊದಲು ಪಾದ್ರಿ, ನಂತರ ..... ದ ಮೇಲೆ ತುಪಾಕಿಯ ದೋಣಿ, ಅದರ ನಂತರ ..... ಮೇಲೆ ಓ ಪೇನರೇ! ಆಫ್ರಿಕದ ಒಬ್ಬ ಮುಖಂಡ

ಸ್ಯೂಜೇಲೇಂಡಿನ ಜನ ಸಂಖ್ಯೆ 1 200 000 ಅಂದರೆ ಕಲ್ಕತ್ತಾ ಪಟ್ಟಣದ ಅರ್ಧ ಜನಸಂಖ್ಯೆ ನ್ಯೂಜೀಲೇಂಡು ಜನಾಂಗಗಳ ಸಭೆ (League of Nations) ಯ ಒಂದು ಮೆಂಬರು ಕಲ್ಕತ್ತಾ ಪಟ್ಟಣ ಏನು ಇರುತನವಲ್ಲ!

ಕುದರೆಗಳು ಮಂಜು ಮಾವಿನಯುಲ್ಲ ..... ಪ್ರದೇಶಗಳಲ್ಲೂ ಜಾರಿ ಅಪಾಯಗೊ .....ದಂತೆ ..... ಗಳನ್ನು ಕಂಡು ಹಿಡಿದವರು ..... ಮೂಸವನ್ನು ..... ಜುತ್ತೇವೆಂದು ..... ಬಸೋಸ್ಸಿಯೇಷನ್‌ರವರು ಪ್ರಕಟಿಸಿದ್ದಾರೆ

ಬ್ರಿಟಿಷ್ ದ್ವೀಪಗಳ ..... ಪದಾರ್ಥ ..... ಡಿಯಲಿಕ್ಕ ಒಂದು ವರ್ಷಕ್ಕೆ 60 000 000 ..... ಆದನಾ ಒಂದು ವಾರಕ್ಕೆ ..... 000 ಪೌನ್ಗಳನ್ನು ಅದಾಗಿ ದಿನ ಒಂದಕ್ಕೆ 700 000 ಪೌನುಗಳಂತ .....ಗಿ (..... ಕೋಟಿ ರೂಪಾಯಿಗಳಿಗಿಂದ .....) ..... ಮಾಡುತ್ತಾರೆ

ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸರವರು ಇಂಡ್ಯಾ ಮತ್ತು ಪೂರ್ವದೇಶಗ..... ಪ್ರವಾಸ ..... ಗ 25 000 ಪೌನುಗ..... ಅಂದಾಜು ..... ಇವರು ಬರುವ ನಂಬರ ತಾ|| 17 ರಲ್ಲು ..... ಡಿಸಿ 1922 ನೇ ಇಸ್ವಿ ಮಾರ್ಚಿ ತಾ|| 17 ರಲ್ಲಿ ಇಲ್ಲಿಂದ ಸ್ವದೇಶಕ್ಕೆ ತಿರುಗುವರೆಂದು ತಿಳಿಯುತ್ತೇವೆ

ಅಮಲು ಪದಾರ್ಥ ಮಾಡುವವರಿಗೆ ಇಂಗ್ಲಾಂಡಿನ ಮಂತ್ರಿಯಾಗಿದ್ದ ಗ್ಲೇಡ್‌ಸ್ಟನ್‌ರವರು ಹೇಳಿದ್ದೇನೆಂದರೆ — "..... ಉತ್ಪತ್ತಿ ..... ನೀವು ..... ಮಾಡತಕ್ಕ ಅವಶ್ಯವಿರುವದಿ..... ಉತ್ಪತ್ತಿಯ ..... ಆಗತ್ಯವಿರುವ ತಿದ್ದುಪಾಟುಗಳಿಗೆ ..... ಅಲ್ಲಿ..... ಅಲ್ಲದೆ ತಪ್ಪು ..... ಪ್ರಯೋಜನವಾಗಿ ಪೆಚ್ಚ ಮಾಡದಂತ ..... ಎಲ್ಲಿಂದ ಉತ್ಪತ್ತಿಯನ್ನು ಪಡೆದು ಪಡೆಂದು, ... ಟ"

ಇಂಗ್ಲೆಂಡಿನ ಮಂತ್ರಿಯಾದ ಲೋಯಿಡ ..... ವರಿಗೆ ಸ್ಯೂಯಾರ್ಕ್ ಕಪ್ಪುಜನರು (ನೀಗ್ರೋಸ) ಕಳುಹಿಸಿದ ತಂತಿವರ್ತಮಾನ — ಐರ್ಲೆಂಡ ಈಜಿಪ್ಟ ಮತ್ತು ಇಂಡಿಯಾ ದೇಶಗಳಿಗೆ ಸ್ವತಂತ್ರವನ್ನು ಕೊಟ್ಟು ಜಾತಿ ಸಂಬಂಧ ಯುದ್ಧವನ್ನು ನಿಲ್ಲಿಸಲಿಕ್ಕೆ ನೀವು ಪ್ರೇರೇಪಿಸಬೇಕು' ಈ ತಂತಿವರ್ತಮಾನವನ್ನು ಕಳುಹುವದಕ್ಕೆ ಮೊದಲೇ 15 000 ನೀಗ್ರೋರವರು ಕೆಂಪು, ಹಚ್ಚೆ ಮತ್ತು ಕಪ್ಪು ಬಣ್ಣದ ಬಾವುಟಗಳನ್ನು ಹಾರಿಸುತ್ತಾ ವಾದ್ಯದ ಧ್ವನಿಗ ಸರಿಯಾಗಿ ಹಾಗುತ್ತಾ ಪಟ್ಟಣದ ಬೀದಿಗಳ ನೀಗ್ರೋ ಕೇರಿಗಳಲ್ಲೆಲ್ಲಾ ಮೆರವಣಿಗೆ ಮಾಡಿದರು

"ಪುಸ್ಸಿಫೂಟ್" ಜೋನ್‌ಸನರವರು ಇಂಡ್ಯಾ ಸಿಲೋನ್ ಮತ್ತು ಮಾಲ್ಯಾದೇಶಗಳಲ್ಲಿ ಸಂಚರಿಸಲು ತಾ|| 5-8 21 ರಲ್ಲು ಇಂಗ್ಲಾಂಡಿನಿಂದ ಹೊರಟಿರ ತ್ತಾರೆ. ರಾಯಟರವರ ಪ್ರತಿನಿಧಿಯು ಭೇಟಿ ಮಾಡಿದಲ್ಲು "ಪುಸಿಫೂಟ" ರವರು ಹಿಂದೂರಾಜಕೀಯ ಮತ್ತು ಮತವಿಚಾರಗಳ ವಿಷಯ ತಾನು ಗೋಜಿಗೆ ಹೋಗುವುದಿಲ್ಲವೆಂದೂ ಹೇಳುತ್ತಾರೆ ಹಿಂದೂಜನರ ..... ಅಮೇರಿಕವನ್ನು ಕಂಡುಹಿಡಿಯುವುದಕ್ಕೆ 2000 ವರ್ಷಗಳ ಮೊದಲೇ, ಪ್ರಾತಿ ಮದ್ಯನಿಷೇಧವನ್ನು ಬೋಧಿಸುತ್ತಿದ್ದರೆಂದೂ ಮತ್ತು ಹಿಂಸಾವಲಂಬನೆಯು ತಿದ್ದುಪಾಟುಗಳಿಗೆ ಆಧಾರವಲ್ಲವೆಂಬುದು ..... ಅಮೇರಿಕದವರ ಅನುಭವವೆಂದು ಹೇಳುತ್ತಾರೆ

ಮಾಪ್ಲಕೋಟೆ ಫಾರೆಸ್ಟ್ ಟ್ರೇಸ್ಟು

ಕಳೆದ ಜನವರಿ ತಿಂಗಳಲ್ಲಿ ರಾಜಕೀಯ ಮಾರ್ಪಾಟು ವಗೈರೆ ಸಂಗತಿಗಳನ್ನು ಸಂಭಾಷಣ ಮಾಡತಕ್ಕ ಬಗ್ಗೆ ಆಗ್ಗೆ ಚೀಫ್ ಕಮಿಷನರಾಗಿದ್ದ ಮೆ|| ಬಾರ್ಟನ್ ಸಾಹೇಬರವರ ಬಳಿಗೆ ಜಮೀನ್‌ದಾರರ ಸಂಘದ ಪ್ರತಿನಿಧಿಗಳಾಗಿ ಹೋಗಿದ್ದಾಗ್ಯ ಫಾರಸ್ಟ್ ಇಲಾಖೆಯಲ್ಲು ಹೆಚ್ಚಾಗಿ ಹಣ ವ್ಯಯ ಮಾಡುವ ಸಂಗತಿ ಅವರ ಗಮನಕ್ಕೆ ತರಲಾಯಿತು ಅಗ್ಗೆ ಈ ಸಂಗತಿಯಲ್ಲು ಹೆಚ್ಚು ಮಾತಾಡಬೇಕಾದರೆ ಮಾವು ಕೋಟೆದಲ್ಲಿ ನಡಿಯುವ ಕಾಮಗಾರಿಯನ್ನು ನಿಮ್ಮ ಪೈಕಿ ಒಬ್ಬಿಬ್ಬರು ಹೋಗಿ ನೋಡಿದರ ಎಲ್ಲಾ ಸಂಗತಿಯೂ ತಿಳಿಯಬಹುದೆಂದು ಜವಾಬು ಕೊಟ್ಟರು ಅದೇಮೇರೆ ಸಮಯ ಕಾದುಕೊಂಡಿದ್ದು, ಈ ತಾರೀಖು 12 ನೇ ದಿನ ಅಸಿಸ್ಟೆಂಟ ಕನ್‌ಸರ್ವೇಟರ್ ಮ|| ರಡೇಮಾಡ ವೆಂಕ್ಟಪ್ಪನವರ ಜೊತೆಯಲ್ಲಿ, ರಾಯಬಹದ್ದೂರ್ ಕ ಕುಟ್ಟಯ್ಯನವರು ಮತ್ತು ನಾನು ಸಹ ಆ ದಿನ ಬೆಳಿಗ್ಗೆ ಇರಟಿಗೆ ತಲಪಿದೆವು ಅಲ್ಲಿ ಫಾರೆಸ್ಟ್ ಮತ್ತು ಇಂಜನೀಯರ್ ಇಲಾಖೆಯವರು ನಡಿಸುವ ಕಾಮಗಾರಿಗಳನ್ನೆಲ್ಲ ದಯವಿಟ್ಟು ತೋರಿಸಿದರು ಉರುಟಿ ಪಲ್ಲನ್ ರಸ್ತೆಗೆ ಎಡಪಾರ್ಶ್ವದಿಂದ ಸುರುವಾಗಿರುವ ಟ್ರಾಂಲೈನಿನಲ್ಲು ಸುಮಾರು 2-3 ಮೈಲಾಗ ಹೋದೆವು ಅಲ್ಲಿ ಅನೇಕ ಮರಗಳು ಜಮಾಯಿಸಿರುವ ಡಿಪೋ ನೋಡಿದೆವು ಆ ಡಿಪೋದಿಂದ ಕೋಲೆಗಳನ್ನು ಸಮೀಪದಲ್ಲಿ ಹರಿಯುವ ಒಡಹೊಳೆಗೆ ತಳ್ಳಿ ಹಾಕಿ ಅಲ್ಲಿಂದ ಒಲಿಯುಪಟ್ಟ ಹೊಳೆಗೆ ಸಾಗಿಸಿ ಅಲ್ಲಿ ಕೊಡಗಿನಿಂದ ಹೋಗುವ ಮರಗಳನ್ನು ಪರಾಜುಮಾಡಿಸುವದಾಗಿದ ಕೋಲೆಗಳನ್ನು ಹೊಳೆಗೆ ತಳ್ಳುವ ಮತ್ತು ..... ಇಳಿಸುವ ವಿಧಾನಗಳ ನೋಡಿಕೊಂಡು ಟ್ರಾಮ ಲೈನಿನಲ್ಲು ..... ಪೆಟ್ರೋಲ ..... ಗಾಡಿ ..... ಒರ ಪ್ರಾಳ ..... ಹೋದೆವು ಹೀಗ ಹೋಗುತ್ತ ..... ಉಪ್ಪು ..... ಉಪಯೋಗಿಸುತ್ತಾ ಹೋದೆವು ತಮ್ಮ ಕಲಸಕ್ಕ ಒದಗುವಂತಾ ಜನಸ್ಸಾಗಿ ಬೇಕಾದ ..... ಇರುವ ..... ಪಗೈರೆ ಮರಗಳನ್ನು ..... ಫಾರೆಸ್ಟ ..... ಮರಗಳು ಕಡಿದ ..... ಮತ್ತು ಹಿಂಗ ದೂರದೂರ ..... ದಿಂದ ಉಳಿದಿರುವ ಮರಗಳ ..... ಬೆಳವು ಕೊಟ್ಟು ಅವುಗಳನ್ನು ವೃದ್ಧಿ ಮಾಡುವದ..... ಇಲ್ಲಿ ಎಂದು ..... ಮರಗಳ ..... ಕಲ್ಲಿಗ ..... ನೋಡ ಇನ್ನು ..... ಇದ್ದ ಈ ಉರುಟಿ ಫಾರೆಸ್ಟಿನಲ್ಲಿ ಇಸಹ ದೊಡ್ಡ ..... ಹುಟ್ಟಿತು

2 ..... ಇಲ್ಲೀಗ ..... ವೀರರಾಜ ಮತ್ತು ಸುಲ್ತಾನ ..... ಕಾಲಗಳನ್ನು ಯೋಚಿಸದು ..... ಉಪಾಯ ದಿಂದ ..... ಟ್ರಾಂ ಲೈನಿಗ ..... ಇಲ್ಲ ..... ಮರದಲು ..... ಇಲ್ಲಿ ..... ದಲ್ಲಿ ..... ಸಹ ನೋಡಿದೆವು ಈ ಕೋಲೆಗಳ ..... ಲೋಕೋಮೋಟೀವ್ ಇಂಜಿನ್ ..... ಗಂಟೆ ಸುಮಾರು 10 ಟನ್ ಭಾರವುಳ್ಳ ಕೋಲೆಗಳನ್ನು ಎಳೆಕೊಂಡು ..... ಶೀಘ್ರದಲ್ಲ ಡಿಪೋಗೆ ..... 2 ..... ಸಾರಿ ಹೋಗುತ್ತದೆ ..... ಒಂದು ..... ಕೆಲಸವು! ..... ಇನ್ನೊಂದು 3½ ಮೈಲ್ ದೂರ ..... ಎಂಬ ..... ಟ್ರಾಂ ನಡದು ಅಲ್ಲಿವರೆಗಿನ ..... ನಲ್ಲಿ ಕಡಿದಿರುವ ಕೋಲೆಗಳನ್ನೆಲ್ಲ ಡಿಪೋಕ್ಕ ಸಾಗಿಸುವದಕ್ಕ ಯಾವ ಅಭ್ಯಂತರವೂ ಕಾಣುವದಿಲ್ಲ

3 ಉರುಟಿ ಫಾರಸ್ಟ್ (60 000) ಅರವತ್ತು ಸಾವಿರ ಯೇಕರುಗ..... ಗಳಾಗಿಯೂ ಸಾಲಿಯಾನ ಸುಮಾರು 700 ಯೇಕರು ಕಲ್ಪಮಾಡುವವಾಗಿಯೂ ಹೀಗೆ 90 ವರುಷದವರೆಗ ..... ಯೂ ..... ಅಲ್ಲಿ ..... ಯುವ ಸಸಿಗಳು ಉಪಯೋಗಕ್ಕೆ ಬರುವದಾಗಿಯೂ ಹೀಗ ಉರುಟಿ ಫಾರೆಸ್ಟ್ ನಿರಂತರ ಉಪಯೋಗಕ್ಕೆ ಬರುವದಾಗಿ ಸಹ ತಿಳದೆವು

ಈ ಫಾರೆಸ್ಟಿನಲ್ಲಿಂದ ಬಟ್ಟೆ ಮರಗಳ ಕಡಿದು ..... ಟಿಮಾಡದೆ ಆದಾಯ ಬರುವ ಮರಗಳನ್ನು ಚುನಾಯಿಸಿ ಕಡಿದು ಇನ್ನು ಬಾಕಿ ಮರಗಳ ಸಸಿಗಳನ್ನು ಶಾಬೀತಿಗೆ ತರುವ ಮುಂದಾಲೋಚನೆಯಲ್ಲು ನೋಲ್ಮಿ..... ತೆಗೆದು ಕೊಳ್ಳುತ್ತಿರುವ ಫಾರೆಸ್ಟ ಲಾಖೆಗೆ ನಾವು ಈಗ ಖುದ್ದಾಗಿಯು, ಜನರ ಪರವಾಗಿಯು ವಂದನೆಮಾಡುತ್ತೇವೆ ಅಲ್ಲದೆ ಈ ಫಾರೆಸ್ಟಿನಲ್ಲಿ ನಡೆಸುವ ಎಲ್ಲ ಅಮಲುಗಳನ್ನು ನಮಗೆ ವಿಸ್ತಾರವಾಗಿ ತಿಳಿಸಿದ್ದರಿಂದ ನಾವು ಸಂತುಷ್ಟರಾದೆವು ಅಲ್ಲದೆ ನಮಗೆ ಸತ್ಕರಿಸಿದ್ದಕ್ಕೆ ಮೆ|| ವೆಂಕ್ಟಪ್ಪನವರಿಗ ಬಹಳ ವಂದನ ಮಾಡಿದರು ..... ಮತ್ತು ಹೊಸದಾಗಿ ..... ಅಸಿಸ್ಟಂಟ್ ಕನ್‌ಸರ್ವೇಟರ್ ಮೆ|| ವಾಲ್‌ಫೋಲ್ ಸಾಹೇಬರು ನಮ್ಮ ಜೊತೆಗಡ ಇದ್ದರು

ಮೆ|| ಬಾರ್ಟನ್ ಸಾಹೇಬರವರು ಹೇಳಿದ ರೀತಿ ಈ ಫಾರೆಸ್ಟಿನಲ್ಲ ನಡಿಯುವ ಅಮಲು ತಿಳಿಯಬೇಕಾದರ ಇಷ್ಟ ಇರುವವರು ಖುದ್ದಾಗಿ ನೋಡಬೇಕಾದ್ದು ಅವಶ್ಯವಾಗಿದೆ. ಆದಾಯವೆಷ್ಟು ಖರ್ಚುಗಳೇನೆಂಬುದನ್ನು ಈಗಲೆ ಹೇಳುವದು ಅಸಾಧ್ಯ ಟ್ರಾಂ ಲೈನ್ ತಯಾರಾಗತಕ್ಕ ಬಗ್ಗೆಯೂ ಕೆಲಸಗಳ ಕಟ್ಟತಕ್ಕ ಬಗ್ಗೆ ಪ್ರಥಮತಃ ..... ದು ಕೆಲವು ಸಮಯ ಕಳದ ಮೇಲೆ ಕೊಡಗಿ ..... ರೆವಿನ್ಯು ಪ್ರಧಾನ ರವಿನ್ಯು ಆಗುತ್ತೆಂದು ಸರ್ಕಾರದವರು ಹೇಳುವ ಮಾತು ಸಫಲವಾಗಲೆಂದು ಹಾರೈಸುತ್ತೇವೆ

ದೇವರ ಕೃಪೆಯಿಂದ ಈ ಇಲಾಖೆಯ ರೆವಿನ್ಯು ಹೆಚ್ಚುತ್ತಾ ಬಂದರ ಮೆ|| ಕಾಪ್‌ಸಾಹೇಬರವರು ಮತ್ತು ಬಾರ್ಟನ್ ಸಾಹೇಬರವರು ಹೇಳಿದರೀತಿ ದೇಶಾಭಿವೃದ್ಧಿಗ ಅನಕೂಲವಾಗುವ ವಿದ್ಯೆ ವಗೈರೆ ಬಾಬುಗಳಿಗೆ ತುಂಬ ಹಣ ಸಹಾಯ ಸಿಕ್ಕಬಹುದಾಗಿ ಕುತೂಹಲದಿಂದ ಎದುರುನೋಡುತ್ತಾ ಇದ್ದೇವೆ ಕೋದಂಡ ಅಪಯ್ಯ.

ಸನ್ 1921 ನೆ ಇಸವಿ ಜುಲೈ ತಾರೀಖು 2 ರಲ್ಲು ನಡದ ಕೊಡಗು ಡಿಸ್ಟ್ರಿಕ್ಟ್ ಬೋರ್ಡ ಮೀಟಿಂಗಿನ ಪ್ರೋಸಿಡಿಂಗ್ಸ್

ಹಾಜರು

ಮೆ|| ವಿಲ್ಸನ್ ಬ್ರವುನ್‌ರವರು, ... ಪ್ರೆಸಿಡೆಂಟರು

ಮೇಜರ್ ಇ ಸಿ ಸಿ ಮಾ.....ರವರು ಐ ಎಮ್ ಎಸ್

ಮೆ|| ಹೆಚ್ ಸಿ ಜನ್ನಿಂಗರವರು ಕೊಡಗು ಫಾರಸ್ಟ ಡಿ ಕನ್ಸರ್‌ವೇಟರ್‌ರವರು

ರಾವ್ ..... ಮಂಗಪ್ಪನವರು ..... ಅಸಿಸ್ಟೆಂಟ್ ..... ಕಮೀಷನರವರು ಮತ್ತು ಹಾಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ..... ಶಂಕರಮೇನನ್‌ರವರು ಇನ್‌ಸ್ಪೆಕ್ಟರರು

ರಾವುಬಹದ್ದೂರ್ ಕ ಅಪ್ಪಯ್ಯನವರು ಮ|| ಡಬ್ಲ್ಯು ..... ರಾರು

..... ಕುಶಾಲಪ್ಪನವರು

ಪಂಡ್ಯಂಡ ಬೆಳ್ಯಪ್ಪನವರು

,, ಕೋಟೇರ ಚಿಣ್ಣಪ್ಪನವರ

,, ನಿಡ್ತ ಸುಬ್ಬಣ್ಣಯ್ಯನವರು

ನಡಿಕೇರಿಯಂಡ ಕಾಳಪ್ಪನವರು ಕಿಗ್ಗಟ್‌ನಾಡು ತಾಲ್ಲೋಕು ಸುಬೇದಾರರು

ಎನ್ ಎಸ್ ಮಂದಣ್ಣನವರು ಪಾಡಿಯೆಡೆ ನಾಲ್ಕುನಾಡು ತಾಲ್ಲೋಕು ಸುಬೇದಾರರು

..... ಕಾಳಪ್ಪನವರು ಮಡಿಕೇರಿ ತಾಲ್ಲೋಕು ಆಕ್ಟಿಂಗ್ ಸುಬೇದಾರರು

ಗೈರ್ ಹಾಜರು

..... ಜೆಪ್ಲೇನ್‌ರವರು ಎಗ್ಜಿಕ್ಯೂಟಿವ ಇಂಜಿನಿಯರು

ಮ|| ..... ಜೇಕ್ಸನ್‌ರವರು

ಮೆ|| ಕೆ ಅಪ್ಪಯ್ಯನವರು ನಂಜರಾಯಪಟ್ಣ ತಾಲ್ಲೋಕು ಸುಬೇದಾರರು

ಪ್ರಸಿದ್ಧಮಾಡಿದ ಕಳದ ಮೀಟಿಂಗಿನ ಪ್ರೋಸೀಡಿಂಗ್ಸನ್ನು ಓದಿದಂತ ಮಾಡಲಾಯಿತು

ಕೊಡಗು ಡಿ ಬೋರ್ಡಿನ ನವ್ಕರರ ಸಂಬಳ ಬಡಿ ವಿಷಯದಲ್ಲು ಡಿ ಬೋರ್ಡಿನವರು ಖರ್ಚಿಗೆ ಬೇಕಾಗಿರುವ ಹಚ್ಚಿನ ಹಣಕ್ಕೋಸ್ಕರ ಹೆಚ್ಚು ಕಂದಾಯವನ್ನು ವಿಧಿಸುವುದುವರ್ಜಿಯಿಂದ ಸರಿಯಾದ ಜವಾಬ್ದಾರಿಯನ್ನು ತಿದ್ದುಕೊಳ್ಳಬೇಕಾಗಿ ಚೀಫ್ ಕಮಿಷನರ ಸಕ್ರಿಟರಿಯವರಿಂದ ಬಂದ ನಂ 1611/128-..0-1921 ನೇ ಇಸವಿ ಜೂನ್ ತಾರೀಕು 6 ರಲ್ಲು ಮೆಮೊರಾಂಡಂ ಓದಲಾಯಿತು

ರಾವುಸಾಹೇಬ ..... ಕ ಮಂಗಪ್ಪನವರು ರೂಪಾಯಿ ಆರುಕಾಸು ದರದಲ್ಲಿ ಸೆಸ್ಸು ಹೆಚ್ಚಿಸೋಣವಾಗಲೆಂದೂ ಅಥವಾ ಸೆಸ್ಸನ್ನು ಜಮ್ಮ ಮತ್ತು ಸಾಗು ಕಂದಾ ಪದಮೇಲಾಕ್ಕವೆ ವಿಚಾರಗಳನ್ನು ನ್ಯಾಯವಾದ ..... ಪರಿಶೋಧಿಸಲ್ಪಡಬೇಕೆಂತಲೂ ಅಭಿಪ್ರಾಯ ಕೊಟ್ಟರು ..... ರಾ ..... ಇನ್‌ಸ್ಪೆಕ್ಟರು ಮೆ|| ಶಂಕರಮೇನನ್‌ರವರು ಇದನ್ನು ಅನುಮೋದಿಸಿದರು ದೇಶದ ಹೆಚ್ಚಿನ ಬಡಸ್ಥಿತಿಯನ್ನು ಗಮನಕ್ಕೆ ತೆಗದುಕೊಂಡರ ಜನರು ಹೆಚ್ಚಿನ ಸೆಸ್ಸುಕೊಡಲು ..... ಮರ್ಥರೆಂದು ಕಂಡುಬರುವದರಿಂದ ಕೊಡಗು ದೇಶದಿಂದ ಇಂಡ್ಯಾ ಸರಕಾರಕ್ಕೆ ಸಿಕ್ಕುವ ಹಚ್ಚಿನ ಮಿಗಿಲಾದ ಧನದಿಂದ ಸಾಲಿಯಾನ 50 000 ರೂಪಾಯಿಗಳನ್ನು ಕೊಡಬೇಕಾಗಿ ..... ಚೀಫ್ ಕಮಿಷನರ್ ರವರನ್ನು ಕೇಳಬೇಕಾಗಿ ರಾವುಬಹದ್ದೂರ್ ಕೋದಂಡ ಅಪ್ಪಯ್ಯನವರು ಸೂಚಿಸಿದರು. ಇದನ್ನು ಪಂ.....ಗಳ ಕುಶಾಲಪ್ಪನವರು ಅನುಮೋದಿಸಿದರು ಠರಾವನ್ನು ಓಟಿಗ ಹಾಕಿದಲ್ಲು 9 ನರು ಓಟು ಕೊಟ್ಟರು 5 ಜನರು ವಿರೋಧಿಸಿದರು ಪ್ರಜಾಪಕ್ಷದವರಾದ ರಾವುಬಹದ್ದೂರ್ ಕೆ ಅಪ್ಪಯ್ಯನವರು ಮೆ|| ..... ಕುಶಾಲಪ್ಪನವರು ಪಿ ಸಿ. ಬೆಳ್ಯಪ್ಪನವರು ..... ಚಿಣ್ಣಪ್ಪನವರು ಮತ್ತು ಎನ್. ಸುಬ್ಬಣ್ಣಯ್ಯನವರ ಠರಾವು ಮಂಜೂರು ಮಾಡಲ್ಪಟ್ಟಿತು

2 ಡಿ ಬೋರ್ಡಿಗ ಹಚ್ಚಿನ ಗ್ರಾಂಟನ್ನು ಕೊಡುವಂತೆ ಚೀಫ್ ಕಮಿಷನರವರ ಮೂಲಕ ಇಂಡ್ಯಾ ಸರಕಾರಕ್ಕ ಬಿನ್ನಹಾವದ ಅರಿಕ ಮಾಡಬೇಕಂದು ಮೆ|| ಡಬ್ಲ್ಯು .... ರವರು ಅಭಿಪ್ರಾಯಪಟ್ಟರು ಡಿ ಕನ್‌ಸರ್‌ವೇಟರು ಮೆ|| ಜೆನ್ನಿಂಗರವರು ಇದನ್ನು ಅನುಮೋದಿಸಿದರು ಇದ ಎಲ್ಲರೂ ಸಮ್ಮತಿಸಿದರು

ಹೈಸ್ಕೂಲ್ ಸ್ಕೌಟ್ ಸಂಘ

ಕೊಡಗಿನಲ್ಲಿ ಸ್ಕೌಟ್ ವಿದ್ಯಾರ್ಥಿಯರ ಚಳವಳವನ್ನು ಕುರಿತು ಇಂಡಿಯಾ ಸರಕಾರದ ರಿಪೋರ್ಟಿನಲ್ಲಿ ಈ ಮೇರೆ ಉಚಿಸೋಣಾಗಿದೆ—

In Coorg the experiment is very popular and the scouts are reported to have rendered valuable assistance in extinguishing fire. PP-10

ಸ್ಕೌಟ್ ಚಳವಳವು ಕೊಡಗಿನಲ್ಲೆಲ್ಲಾ ಹಬ್ಬಿರುವುದು ... ಬೆಂಕಿಯನ್ನು ಆರಿಸುವಂತಹ ಅನೇಕ ಉಪಕಾರದ ಕೆಲಸಗಳನ್ನು ಮಾಡುವುದರಲ್ಲಿಯೂ ಹೆಸರು ಗೊಂಡಿದ್ದಾರೆ ... [ಸಂ

ಪತ್ರವ್ಯವಹಾರಗಳು.

ಬಾತ್ಮಿದಾರರು ವಡುವ ಅಭಿಪ್ರಾಯಗಳಿಗೆ ಪತ್ರ ಪ್ರಕಾಶಕರು ಉತ್ತರವಾದಿಗಳಲ್ಲ [ಎಡಿಟರ್]

ಅಯ್ಯಾ

...

ಹಾಜರು ಇದ್ದ ಒಬ್ಬ ಉದ್ಯೋಗಸ್ತ

ಸಂಪಾದಕರೇ

...

ಮದರಾಸು ಮತ್ತು ಕೂಡಗು ಒಂದುಮಾಡುವ ಠರಾವು

ಸಂಪಾದಕರೇ

...

ಮಾರ್ಪಾಡುಗಳು

...

Reformer

For Sale—ಮಾರಾಟಕ್ಕೆ !!!

The Veeraj Pet Works, Veeraj Pet

SUBBANNA, SANGAPPA,

Receiving and Forwarding Agents, General Merchants and Commission Agents

Santhepet, Mysore.

Despatch and supply whatever you receive at Mysore Railway Station and whatever food stuffs and Stationaries you want to have from Mysore. Prompt attention, moderate commission and quick disposal are their motto. 24-6

...

ಶ್ರೀ ಕಂಠದ ಕರ್ನಾಟಕ ಪುಸ್ತಕ ಭಾಂಡಾರ.

೧ ಕರ್ನಾಟಕ ಕವಿ ಚರಿತ್ರೆ	೩—೦—೦
೨	೫—೦—೦
೩	೧—೩—೦
೪	೧—೪—೦
೫	೧—೦—೦
೬	೦—೧೨—೦
೭	೧—೦—೦
೮	೨—೦—೦
೯	೨—೦—೦

ವಹಳಮುದ್ರಿ, ಧಾರವಾಡ—ವ್ಯವಸ್ಥಾಪಕ.

ಶುಭಶೋಭನಗಳಲ್ಲಿ, ಸಂತೋಷಕೂಟಗಳಲ್ಲಿ !
ಮದುವೆ ಮುಂಜಿಗಳಲ್ಲಿ, ಸಭಾಕೂಟಗಳಲ್ಲಿ !!

ಬೇಕಾಗುವ

ರೇಶ್ಮೆಯಸೀರೆ, ರೇಶ್ಮೆಯವಸ್ತ್ರ, ರೇಶ್ಮೆಯಪಟ್ಟಿ, ರೇಶ್ಮೆಯ ಅಂಚಿನಪಂಚೆ, ಸಾಧಾರಣಪಂಚೆ, ಇತ್ಯಾದಿ ನಾನಾತರದ ಕೋಟು ಬಟ್ಟೆಗಳು ಮತ್ತು ಇತರ ಸಾಧಾರಣ ಉಡಿಗೆ ತೊಡಿಗೆಗಳು ಯಾವತ್ತೂ ನಮ್ಮಲ್ಲಿ ಸಿದ್ಧವಾಗಿವೆ. - ಬಟ್ಟೆಗಳೂ ನಮ್ಮಲ್ಲಿಯೇ ಮಗ್ಗಗಳಿಂದ ತಯಾರಾಗುವುವು. ತಮಗೆ ಬೇಕಾದುದನ್ನು ತಿಳುಹಿಸಿ.

ಕೆ. ನಂಜಪ್ಪಶೆಟ್ಟಿ,
ಗವರ್ನಮೆಂಟ್ ಕಂಟ್ರಾಕ್ಟರ್, ಮತ್ತು ಜವಳಿ ವ್ಯಾಪಾರಿ,
ಸೋಮವಾರಪೇಟೆ.

Messrs. P. SAM & Co.,

Receiving & Forwarding Agents, Cabinet Makers, Auctioners & General Agents,

501/4 Sayaji Rao Road, MYSORE.

They, not only receive and forward your goods from Mysore Railway Station to any part in Coorg but also receive goods from those parts and despatch them to any other part from the Mysore Railway Station. They undertake to sell your salable articles by public auction or otherwise, and also supply you goods at the cheapest rates Commission very moderate. A trial order will convince you of their promptness and business methods.

ಒಳ್ಳೆಯ ಪುಸ್ತಕಗಳು !! ಬೆಲೆ ಸುಲಭ !!

A. N. C. & Co., Mysore.

ಮಹಾಶಯರ—ನಮ್ಮ ಕಂಪೆನಿಯಲ್ಲಿ ಸಾವಿರಾರು ಬಗೆಯ ಕನ್ನಡ ಪುಸ್ತಕಗಳೂ ಇತರ ಸಾಮಾನುಗಳೂ ಬೆಲೆಗೆ ಸಿದ್ಧವಾಗಿವೆ ಕನ್ನಡ ಗ್ರಂಥಕಾರರು ತಮ್ಮ ಪುಸ್ತಕಗಳ ಒಂದೊಂದು ಪ್ರತಿಯನ್ನು ಕಳುಹಿಸಿದರೆ ಅವುಗಳನ್ನು ಅಡ್ವರ್‌ಟೈಸು ಮಾಡುವುದಲ್ಲದೆ ಒಳ್ಳೆಯ ಪುಸ್ತಕಗಳನ್ನು ಕೊಂಡುಕೊಳ್ಳುತ್ತೇವೆ. ನಾವು ಅನುಮೋದಿಸಿದ ಪುಸ್ತಕಗಳನ್ನು ಹಿಂದಕ್ಕೆ ಕಳುಹಿಸಬೇಕಾದಲ್ಲಿ ಟಪಾಲುಖರ್ಚನ್ನು ಪುಸ್ತಕ ಕಳುಹಿಸಿದವರೇ ವಹಿಸಬೇಕು ನಾವು ಹೊಸದಾಗಿ ಪ್ರಕಟಿಸಿರುವ—

ಸ್ತೋತ್ರಮಾಲಿಕಾ ಭಾಗ ೧.

ಎಂಟು ಪುಸ್ತಕವು 1 ಮಂಗಲಾಚರಣೆ 2 ಪ್ರತಿದಿನ ನಯುಕ್ತ ಸ್ತೋತ್ರಗಳು, 3 ಪ್ರತಿ ವಾರೋ ನಯುಕ್ತ ಸ್ತೋತ್ರಗಳು, ಪ್ರತಿ ಮಾಸೋಪಯುಕ್ತ ಸ್ತೋತ್ರಗಳು, 5 ಉಪಯುಕ್ತ ಸ್ತೋತ್ರಗಳು, ಎಂಟು ಐದು ವಿಭಾಗಗಳನ್ನು ಒಳಗೊಂಡಿದೆ ಇದರ ಬೆಲೆ 4 ಆಣೆ ನಾವು ಇದನ್ನು ವಿ ಪಿ ಮೂಲಕವಾಗಿಯಾಗಲೀ 5 ಆಣೆ ಪೋಸ್ಟಲ್ ಸ್ಟ್ಯಾಂಪ್ ಕಳುಹಿಸಿ ಸಾಧಾರಣ ಬುಕ್ಕುಪೋಸ್ಟು ಮೂಲಕವಾಗಿಯಾಗಲೀ ಪಡೆಯಬಹುದು ಪಂಕ್ತಿಸಬೇಕು! ಎಸರನಾದಬೇಕು!! ಇಲ್ಲದಿದ್ದರೇನು ಪ್ರಯೋಜನ!!!

ಇತ್ತನೋಡಿರಿ! ಕೊಡಗು ಬಾಂಧವರೇ! ಇತ್ತನೋಡಿರಿ!

ನಮ್ಮಲ್ಲಿ ಸಾಮಾನು ಪ್ರತಿಯೊಬ್ಬ ಹೊಗಳುವದು ತಮ್ಮಗಳಿಗೆ ತಿಳಿದಿರುವದಷ್ಟೆ.

ಕಾಮಿಸಿಯಾತೈಲ —ಚಿಕ್ಕ ಸೀಸೆ 1 ಕ್ಕೆ 1—0—0 3 ಶೀಸೆಗೆ 2—10—0. ಒರೋದಿಲ್ಲಿಖಾಂ ಅತ್ತರ್ ಡಬ್ಬಿಮು ಶೀಸೆ 1ಕ್ಕೆ 0—12—0. ಡಜನ್ 7—8—0. ಅರ್ಧ ಔನ್ಸ್ ಬಾಟ್ಲು ಶುಧ್ದನಿಲಗಿರೀ ತೈಲ ಶೀಶೆ 1 ಕ್ಕೆ 3 ಆಣೆ ಡಜನ್ 1 ಕ್ಕೆ 1—12—0 ಕಸ್ತೂರಿಮಾತ್ರೆ ಶೀಸ 1 ಕ್ಕೆ 4 ಆಣೆ. ಡಜನ್ 1 ಕ್ಕೆ 2—10—0. ಮಲೇರಿಯಾ, ದಿನ ಬಿಟ್ಟು ಬರುವ ಜ್ವರಕ್ಕೆ ಮಾತ್ರೆಯಾದ ಬಿಳ್ಳಿ ಮುಟಾವಿನ ಮಾತ್ರೆ ಶೀಸೆ 1 ಕ್ಕೆ 1—0—0 ರೂ.

ಜಿಂತಾನ್ ಪಾಕೆಟ್ 1 ಕ್ಕೆ	1 ಆಣೆ. 4 ಆಣೆ. 1 ರೂ.
ಗಂಧದ ಸಾಬೂನ್ 1 ಕ್ಕೆ	1 ಆಣೆ 6 ಆಣೆ. 7 ಆಣೆ.
ವಿಕಟೋರಿಯಾ ಸಾಬೂನು 1 ಕ್ಕೆ	0-2-6.
ಪ್ಯಾರೀಸ್ ರಾಣಿ ಸಾಬೂನು 1 ಕ್ಕೆ	1-2 0.
ಜಸ್‌ಮಿನ್ (ಮಲ್ಲಿಗೆ) ಸಾಬೂನ್ 1 ಕ್ಕೆ	8 ಆಣೆ.
ಟುಕ್ಕೆಟ್ ಗುಡ್‌ವಿನ್ 1 ಕ್ಕೆ	10 ಆಣೆ.
ಚಿಕ್ಕ ಕನ್ನಡಿ 1 ಕ್ಕೆ	2 ಆಣೆ. 0-2-6.
ಸಾಬೂನ್ ಕರಡಿಗೆ 1 ಕ್ಕೆ	5 ಆಣೆ 7 ಆಣೆ
ಸರಟ್ ಬಟನ್ ಹರಳಿನದ್ದು ಸೆಟ್ಟು 1 ಕ್ಕೆ	3 ಆಣೆ
ಬಾಚಣಿಗೆ ಡಜನ್ 1 ಕ್ಕೆ	0-14 0 1-1 0 1-8-0.
ಕ್ಷೌರಕತ್ತಿ 1 ಕ್ಕೆ	2-4-0. 2-12-0 3-8-0.
ಅಮೃತಾಂಜನ ಡಬ್ಬಿ 1 ಕ್ಕೆ	9 ಆಣೆ
ಜರ್ಮನಿ ಕತ್ತರಿ 1 ಕ್ಕೆ	10 ಆಣೆ
ಕಾಡ್‌ಬರಿ ಚೊಕಲೇಟ್ ಪಾಕೆಟು 1 ಕ್ಕೆ	8 ಆಣೆ.
ವಾಸ್‌ಲಿನ್ ಪೆನ್ 1 ಕ್ಕೆ	15 ಆಣೆ. 8 ಆಣೆ.

ಯಾವ ತರಹ ಸಾಮಾನು ಬೇಕಾದಲ್ಲಿ ನಮ್ಮಲ್ಲಿ ದೊರೆಯುತ್ತೆ. ಟಪಾಲು ಖರ್ಚು ಅಲಾಯಿದಾ.

ವಿಳಾಸ—ದಿ ಊಲ್ ಪೊರ್ಟರ್,
ನಂ ೩, ಮಂಗಳೂರು, ದ. ಕ.

ಕೋಗಿಗಳೂ, ರೋಗವಿಲ್ಲದವರೂ

ಶ್ರೀಕೃಷ್ಣತೀರ್ಥವನ್ನು

ಉಪಯೋಗಿಸಬೇಕು.

ಎಂತಹ ಕಠಿಣ ಕಾಯಿಲೆಯಲ್ಲೇ ಆಗಲಿ ಮೊದಲು ಇದನ್ನು ಉಪಯೋಗಿಸಿದರೆ ಶರೀರದ ಕಲ್ಮಷವನ್ನು ತೆಗೆಯುವಾಕೆ ಕಾಯಿಲೆಯನ್ನು ಕಡಿಮೆಮಾಡುವುದು. ಸುಲಭ ಕಾಯಿಲೆಗಳೆಲ್ಲವೂ ಬರಿ ಇದರ ಸೇವನೆಯಿಂದಲೇ ಗುಣವಾಗುವುವು. ತೆಗೆದುಕೊಂಡ ೨॥ ಘಂಟೆಯಲ್ಲಿ ಸುಖಭೇದಿ ಮಾಡುವುದು. ಬೇರೆ ಭೇದಿ ಮಾತ್ರೆಗಳಂತೆ ಸಂಕಟ, ಹೊಟ್ಟೆನೋವು ಮುಂತಾದುವನ್ನುಂಟುಮಾಡುವುದಿಲ್ಲ. ಸಾಮಾನ್ಯಜ್ವರ, ಕೆಮ್ಮು, ಊರು, ಮೂತ್ರಬಂಧನೆ, ಅಲಸ್ಯ, ಉಷ್ಣ, ಪಿತ್ತ, ಶೀತಸಂಬಂಧ ಕಾಯಿಲೆಗಳು, ಜೀರ್ಣಕೋಶದ ಅಕ್ರಮತೆ, ಹರುಳುಗಳಲ್ಲಿ ಕ್ರಿಮಿಗಳಿಂದ ಹೊಟ್ಟೆ ಉಬ್ಬರವಾಗುವುದು, ದುರ್ವಾಸನೆಯುಳ್ಳ ವಾಯುಗಳು ಹುಟ್ಟುವುದೇ ಮುಂತಾದುವನ್ನೆಲ್ಲಾ ಗುಣಪಡಿಸುತ್ತದೆ.

ಚಿಕ್ಕಮಕ್ಕಳಿಂದ ಮುದುಕರವರೆಗೆ ವರ್ಷದ ಯಾವ ಕಾಲದಲ್ಲೂ ಉಪಯೋಗಿಸಬಹುದು. ಯಾವಾಗಲೂ ಒಂದು ಶೀಸೆಯನ್ನು ಹತ್ತಿರವೇ ಇಟ್ಟುಕೊಳ್ಳಿ.

೫೦ ಮಾತ್ರೆ ಶೀಸೆಗೆ ೧೨ ಆಣೆ

ಚಂದ್ರಕಲೆಯು.

ಶರೀರದಲ್ಲಿನ ಪ್ರತಿಯೊಂದು ಧಾತುವನ್ನೂ ಸೇರಿಸಿ ಶರೀರದ ರೋಗಗಳನ್ನು ಪರಿಹರಿಸುವುದು. ರೋಗವಿಲ್ಲದವರಿಗೆ ಮಾಂಸ, ಮೆದುಳು, ಮೂಳೆ, ನರ, ಮುಂತಾದುವುಗಳನ್ನು ಬಲಪಡಿಸಿ ಧಾತು ಗಟ್ಟಿಮಾಡಿ ದೃಢಕಾಯರನ್ನಾಗಿ ಮಾಡುತ್ತದೆ. ರೋಗವಿದ್ದವರಿಗೆ ಅಶಕ್ತಿ, ಗಂಡೆ, ಒಳಜ್ವರ, ವಾತ, ಪ್ಲೂರಸಿ ಎಂಬ ಪಕ್ಕೆನೋವು, ಪಿತ್ತಕೋಶದ ರೋಗಗಳು, ಮೂತ್ರಕೋಶದ ರೋಗಗಳು, ಮಲಬದ್ಧತೆ, ನರಗಳ ಕಾಯಿಲೆಗಳು, ನರಗಳ ಚಳುಕು, ಮಿದುಳಿನ ಕಾಯಿಲೆಗಳು, ಕಾಮಾಲೆ, ಕ್ಷಯ, ಶರೀರದಲ್ಲೆಲ್ಲಾ ಕುರಗಳೇ ಮುಂತಾದುವು ಏಳುವುದು, ಹೊಟ್ಟೆನೋವು ಮುಂತಾದುವನ್ನೆಲ್ಲ ಖಂಡಿತ ಗುಣಪಡಿಸುತ್ತದೆ. ಅಮೂಲ್ಯ ಔಷಧಿಗಳಿಂದ ತಯಾರಿಸಿದ್ದು ಶೀಸೆಗೆ ಮೂರುರೂಪಾಯಿ.

ಇಲೆಕ್ಟ್ರಿಕ್ ಬಾಂ.

ಕಜ್ಜಿ, ಕಾರ, ತುರಿಕಜ್ಜಿ, ಗಾಯ, ಸುಟ್ಟ ಗಾಯ ಮುಂತಾದುವನ್ನೆಲ್ಲ ಗುಣಪಡಿಸುತ್ತದೆ.

ಪೆಟ್ಟಿಗೆಕ್ಕೆ ೨ ಆಣೆ.

ಎಷ್ಟೇ ದೊಡ್ಡ ಜ್ವರವಿರಲಿ.

ನಮ್ಮ ಜ್ವರಾರಿಮಾತ್ರೆಗಳು ತೆಗೆದುಕೊಂಡ ಎರಡುಗಂಟೆಗಳೊಳಗಾಗಿಯೇ ಜ್ವರವನ್ನು ಖಂಡಿತ ಇಳಿಸುತ್ತವೆ. ೧ ಪೊಟ್ಟಣ ಮಾತ್ರೆಗೆ ೧ ರೂ.

ಜ್ವರಗಳನ್ನು ಗುಣಪಡಿಸುವುದಕ್ಕೆ ನಮ್ಮ ಫೀವರೀಗ್ ಮಾತ್ರೆಗಳನ್ನು ಉಪಯೋಗಿಸಿ. ಇವು ಮಲೇರಿಯ, ಸನ್ನಿಪಾತ, ಪಿತ್ತಜ್ವರಗಳು, ಶ್ಲೇಷ್ಮಜ್ವರಗಳು, ಮುಂತಾದುವನ್ನೆಲ್ಲ ಗುಣಪಡಿಸುತ್ತದೆ. ಶೀಸೆಗೆ ೧ ರೂಪಾಯಿ

ಅನ್ನಕೋಶ, ಪಿತ್ತಕೋಶ ಮುಂತಾದುವುಗಳ ಅಕ್ರಮತೆಯಿಂದ ಹೊಟ್ಟೆನೋವು (ಪರಿಣಾಮಶೂಲೆ) ವಾಂತಿಯಾಗುವುದು, ಅಜೀರ್ಣ, ಮುಂತಾದ ಎಲ್ಲಾತರದ ಡಿಸ್ಪೆಪ್ಸಿಯಯೆಂಬ ಜೀರ್ಣಕೋಶದ ಕಾಯಿಲೆಗಳನ್ನೂ ನಮ್ಮ ಶೂಲಾರಿಯು ಖಂಡಿತ ಗುಣಮಾಡುತ್ತದೆ. ೨ ಔಷಧಗಳುಳ್ಳ ೨ ಶೀಸೆಗಳಿಗೆ ೩ ರೂಪಾಯಿ.

ಎಲ್ಲಾತರದ ಕಾಯಿಲೆಗಳನ್ನೂ ಪತ್ರಮುಖಾಂತರವೂ, ಹತ್ತಿರವಿದ್ದೂ ಗುಣಮಾಡುತ್ತೇವೆ. ಜನರಲ್ ಪೆರಲಿಸಿಸ್ ಎಂದರೆ ಪೂರ್ಣವಾಯು, ಮೂತ್ರಕೋಶದ ಕಾಯಿಲೆ ಮುಂತಾದುವನ್ನು ಗುಣಪಡಿಸಿದ್ದಕ್ಕೆ ನಮಗೆ ಚಿನ್ನದ ಮೆಡಲುಗಳು ಸಿಕ್ಕಿವೆ.

ಡಿ. ಜಿ. ಎಚ್. ಹೌಸ್,
ವೀರರಾಜಪೇಟೆ, (ಕೊಡಗು)

ಕೈಯಲ್ಲಿ ಕಟ್ಟಲೂ, ಜೇಬಿನಲ್ಲಿ ಡಲೂ ಅನುಕೂಲವಾದ ಹೊಸ ಸಣ್ಣ ಮೂರನೆ ರಾಯ್ ಲೀವರ್ ವಾಚು



ಈ ಗಡಿಯಾರಗಳು ನಿಲಯು ತಯಾರಾದದ್ದು. ಲೀವರ್ ಮೂಳೆ ಗಳಿಂದ ಮಾಡಿದೆ ಘಾಳಿ, ಧೂಳು ಒಂದೇ ಹಿಂಭಾಗದಲ್ಲಿ ಜರ್ಮನ್ ಮುಚ್ಚಳವನ್ನೂ, ಮುಂದೆ ದಪ್ಪವಾದ ಗ್ಲಾಸನ್ನೂ ಒಳಗಡೆ ಚಕ್ರಗಳಾಗಳು ಕೆತ್ತಲ್ಪಟ್ಟಿವೆ. ಇವು ಸರಿಯಾಗಿ ಟೈಮನ್ನು ತೋರಿಸುವುವು. ಈ ಗಡಿಯಾರವು ಒಂದು ಇದ್ದರೆ ಸಾಕು ಜೀವಮಾನವೆಲ್ಲಾ ಕೈಗಾಗಿ ಕಟ್ಟಿಕೊಳ್ಳಲೂ ಸಹ ಅನುಕೂಲವಾದದ್ದು. ಕ್ರಯ ಗಡಿಯಾರ 1 ಕ್ಕೆ ರೂಪಾಯಿ ೨—೮—0.

ಕಂಬಳಿ ಟೋಪಿ.

ಈ ಟೋಪಿಗಳು ನಾಜೂಕು ಉಲನ್‌ದಾರದಿಂದ ತಯಾರಿಸಿದ ಚಳಿಕಾಲದಲ್ಲಿಯೂ, ಕಾಯಿಲೆ ಇರುವವರೂ ಉಪಯೋಗಿಸಲು ಬಹು ಅನುಕೂಲವಾದದ್ದು. ಇದನ್ನು ಸಾಧಾರಣ ಟೋಪಿಗಳಂತೆಯೂ, ಕತ್ತಿನವರಿವಿಗೂ ಉಪಯೋಗಿಸಬಹುದು

ಕ್ರಯ ಉಲನ್ ಟೋಪಿ 1 ಕ್ಕೆ 1—12—0.

ವಿಳಾಸ—ಎಸ್ ಆರ್ ಕೃಷ್ಣ ಅಂಡ್ ಕೋ, 89 ನಾರಾಯಣ ಮೊದಲಿಬೀದಿ, ಮದರಾಸು.

ರೋಲ್ಡ್ ಗೋಲ್ಡ್ ಭಂಗಾರದ ರೇಡಿಯಂ ರಿಸ್ಟ್ ಲೇಟ್ ವಾಚ್



ಈ ಗಡಿಯಾರಗಳನ್ನು ಸೀಮೆ ಭಂಗಾರದಿಂದ ಅಮೇರಿಕಾದಲ್ಲಿ ತಯಾರಿಸಿದ್ದು ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ನೋಡಬೇಕಾದರೆ ಬೆಳಕು ಬೇಕು ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ. ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯಬೆಳಕಿನ ಸಹಿತ ಗಂಟೆಯನ್ನು ತೋರಿಸುವುದು ಇವು ಅಮೇರಿಕಾದ ಗಡಿಯಾರಗಳು ಬಹುದಿನ ಬಾಳಿಕೆ ಬರುವವು. ಯಾರೇ ಆಗಲಿ ಗಡಿಯಾರಗಳಲ್ಲಿ ಬಹು ಬೇಗನೆ ಗಂಟೆಯನ್ನು ಗುರುತು ಹಿಡಿಯುದು ಇದಕ್ಕೆ ೨ ವರುಷ ಗ್ಯಾರಂಟಿ ಕೊಡುವುವು ಕೈಯಲ್ಲಿ ಕಟ್ಟಲು ಒಳ್ಳೆಯ ಸರಪಣಿ ಸಹಿತ ಗಡಿಯಾರ 1 ಕ್ಕೆ 10-8-0 ಕೈಯಲ್ಲಿ ಕಟ್ಟುವ ಸೀಮೆ ಪಟ್ಟಿ ಸಹಿತ ಗಡಿಯಾರ 1 ಕ್ಕೆ 8-8-0 ರೂ

ವಿಳಾಸ:—ಎಸ್ ಎಸ್ ರಾಮು ಅಂಡ್ ಕೊ, ಪೋಸ್ಟ್ ಬಾಕ್ಸ್ ನಂ. 214, ಮದರಾಸು.

ಮೂನ್ ಲೈಟ್ ಸೋಪ್ಸು.

ಈ ಸೋಪನ್ನು ಕೂದಲುಗಳಿಗೆ ಒಂದೇ ಒಂದು ನಿಮಿಷ ಹಚ್ಚಿದರೆ ಕತ್ತಿಯಿಂದ ಕ್ಷೌರ ಮಾಡಿಸಿ ಕೊಂಡಷ್ಟು ಕಿಂತಲೂ ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದು ಬಿಡುವುದು ನಮ್ಮ ಮೂನ್ ಲೈಟ್ ಸೋಪು. ಗಂಧ, ಮೊದಲು ಪೆಟ್ಟಿಗೆ ನಂತರ, ಮುಂತಾದವುಗಳನ್ನು ಕ್ಷಣ ಮಾತ್ರದಲ್ಲಿ ವಾಯುಮಾಡುತ್ತೆ 3 ಸಾಬೂನುಗಳನ್ನು ಪೆಟ್ಟಿಗೆ 1ಕ್ಕೆ ರೂ 1—4—0 ಒಟ್ಟು 2 ಪೆಟ್ಟಿಗೆ ಪಾರ್ಸಲೊಂದರಲ್ಲಿ ರೂ 2—4—0

ವಜ್ರದ ಉಂಗುರಗಳು.

ಈ ಉಂಗುರಗಳನ್ನು ಸೀಮೆ ಭಂಗಾರದಿಂದ ಮಾಡಿದೆ. ಇದರ ಮೇಲು ಕೆಂಪು, ಹಸರು, ಮುಂತಾದ ಬಣ್ಣದ ವಜ್ರದ ಕಲ್ಲುಗಳನ್ನು ಕಟ್ಟಿ ಕೆತ್ತಿರುವದು ನೋಡಿದವರು ನಿಜವಜ್ರದ ಉಂಗುರವೆಂದೇ ಹೇಳುವರು 3 ವರ್ಷಕೊಡುವ ಗ್ಯಾರಂಟಿ ಕೊಡುವ

ಉಂಗುರ 1 ಕ್ಕೆ ರೂ ೦—12—0.

ವಿಳಾಸ:—ಎಸ್. ಪಾಲ್ ಅಂಡ್ ಕೊ, ಪೋಸ್ಟ್ ಬಾಕ್ಸ್ ನಂ 542. ಪಾರ್ಕ್‌ಟೌನ್, ಮದರಾಸು.

ಮಧುರೆ, ಮತ್ತು ಕೂರ್ನಾಡು ಸೀರೆಗಳು.

17 ಮೊಳ ಪೂರಾ ಇರುವವು ದೊಡ್ಡ ಪಟ್ಟೆ



ಈ ಸೀರೆಗಳನ್ನು ಹೊಸದಾದ ಫ್ಯಾಶನಿನಿಂದ ತಯಾರಿಸಿದೆ. ಸುಂದರವಾದ ರೇಷ್ಮೆಯ ಸೆರಗೂ, ಅಂಚೂ ದೊಡ್ಡ ಅಂಚೂ ಇದೆ. ಶ್ರೀಮಂತರಿಗೂ ಗರೀಬರಿಗೂ ಅನುಕೂಲವಾದದ್ದು. ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಎಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವು ಸೀರೆಗಳನ್ನು ಮಾತ್ರ ತಯಾರಿಸಿರುವೆವು. ಬೇಕಾದವರು ತರಿಸಿ ಪರೀಕ್ಷಿಸಿರಿ.

ಕ್ರಯ ನಂ 1. 6—8—0 ರೂ. ನಂ 2 7—8—0 ರೂ.

ವಿಳಾಸ:—ಎಸ್. ಎಸ್. ರಾಮು ಅಂಡ್ ಕೊ, ಪೋಸ್ಟ್ ಬಾಕ್ಸ್ ನಂ. 214, ಮದರಾಸು.

Printed and Published by S NANJUNDA SASTRI at The Sreenivasa Press, Mysore for "Kodagu Ltd, Mercara—12 8 1921.

REGISTERED NO. M. 1550.

ಕೊಡಗು.

ಸತ್ಯೇನ ಧೂತದಯಯಾ. ವಿದ್ಯಾನೀತಿಸ್ಸಮುನ್ನತಿಃ | ಏಕಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯಸಂಪದ ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

ಕೊಡಗು, ಸನ್ ೧೯೨೧ ನೇ ಇಸವಿ ಆಗಸ್ಟ್ ತಾರೀಖು ೧೯ ನೇಯ ಶುಕ್ರವಾರ. [ಸಂಚಿಕೆ ೧೨

ಸಂಪುಟ ೧]

ವೀರಶೈವರಿಗೆ ಸಂಗ್ರಾಹ್ಯವಾದ ಫೋಟೋ

ಶ್ರೀ ಶಿವಯೋಗಿಗಳ ಸಂಘ.—ಭಾಗ್ಯಶಾಲಿ ಜನರು ಹಣವು ಖರ್ಚುಮಾಡಿ ಮಹಾ ಶಿವಯೋಗಿಗಳ ದರ್ಶನವನ್ನು ತೆಗೆದುಕೊಳ್ಳುತ್ತಾರೆ. ಆದರೆ ಶ್ರೀಮಂತರಿಗು ಮತ್ತು ಬಡವರಿಗೂ ನಿತ್ಯದರ್ಶನ ಆಗುವದಕ್ಕೆ ಫೋಟೋವ ಹೊರ್ತು ಅನ್ಯಮಾರ್ಗವು ಇಲ್ಲದಕಾರಣ ನಾವು ಪ್ರಸಿದ್ಧರಾದ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಗದಗ ತೋಂಟದಾರ್ಯ, ಅಥಣಿ ಶಿವಯೋಗಿ, ಬಾಲಲೀಲಾಸ್ವಾಮಿ ಹುಬ್ಬಳ್ಳಿ, ಹಾನಗಲ್ಲ, ಹಾಳಕೇರಿ, ... ಮುಂತಾದ ... ಮಹಾಸ್ವಾಮಿಗಳ ಫೋಟೋ ಕೂಡಿಸಿದ ಕಾರಣ ಒಂದೇ ಕಾಲದಲ್ಲಿ ಎಲ್ಲಾ ಶಿವಯೋಗಿಗಳ ದರ್ಶನ ಆಗುವವು ೧೮×೧೨ ಸೈಜು ... ೧ ಪ್ರತಿಗೆ ... ಆಣೆ

ಶ್ರೀ ಕಲ್ಯಾಣ ಬಸವೇಶ್ವರ ... ವೀರಶೈವ ಧರ್ಮೋದ್ಧಾರಕರಾದ ಶ್ರೀಬಸವಣ್ಣದೇವರ ... ಆದ ಖಾಸ ಫೋಟೊ ೧೮×೧೨ ಸೈಜು ಬಣ್ಣದ ಚಿತ್ರದ ಕ್ರಯ ೧ ಪ್ರತಿಗೆ ರೂ. ೧ ಸಾದಾ ೮ ಆಣೆ.

೧. ಶ್ರೀ ಅಲ್ಲಮಪ್ರಭು ... —ಇದರಲ್ಲಿ ಶ್ರೀಬಸವೇಶ್ವರರು, ಚೆನ್ನಬಸವೇಶ್ವರ, ಸಿದ್ಧರಾಮೇಶ್ವರ, ... ಅಕ್ಕನಾಗಮ್ಮಾ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವನಾದಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೊ ಇರುತ್ತದೆ. ದೊಡ್ಡ ಸೈಜು ರೂ. ೧| ಸಣ್ಣಸೈಜು ರೂ. |||.

ಶ್ರೀ ರೇಣುಕಾಚಾರ್ಯರ ಲಿಂಗೋದ್ಭವವು.—ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರ್ಯರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವ ಫೋಟೋ ಇರುತ್ತದೆ ದೊಡ್ಡ ಸೈಜು ರೂ. ೧|. ಸಣ್ಣ ಸೈಜು ರೂ. |||.

ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ—ಇದರಲ್ಲಿ ಅಗಸ್ತ್ಯ ಮುನಿಗಳು ತಮ್ಮ ಪತ್ನಿ ಲೋಪಾಮುದ್ರಾ ಸಹ ಉಪದೇಶಮಾಡಿಕೊಳ್ಳುತ್ತಾ ಇದ್ದಾರೆ. ದೊಡ್ಡ ಸೈಜು ರೂ. ೧|. ಸಣ್ಣ ಸೈಜು ರೂ. |||.

ಶ್ರೀ ವೀರಭದ್ರ ನಿಂದೇ ಹನುಮಂತನಿಗೆ ಲಿಂಗಧಾರಣವು:—ಇದು ಹನುಮಂತನು ಮೋಕ್ಷಾರ್ಥಕ್ಕಾಗಿ ಲಿಂಗಧಾರಣಮಾಡಿಕೊಂಡ ಫೋಟೊ ಇರುತ್ತದೆ. ದೊಡ್ಡ ಸೈಜು ರೂ. ೧|. ಸಣ್ಣ ಸೈಜು ರೂ. |||.

ಶ್ರೀ ವೀರಶೈವ ರಾಜಸಮೂಹ.—ಇದರಲ್ಲಿ ಕೊಡಗು ದೇಶದ ಲಿಂಗರಾಜೇಂದ್ರ, ವೀರರಾಜೇಂದ್ರ ಒಡೆಯರ, ... ಚೆನ್ನಮ್ಮಾಜಿ ಮಹಾರಾಣಿ, ಮತ್ತು ಸದ್ಯದ ... ಮತ್ತು ಗೂವಾಪ್ರಾಂತದ ಬಾಂದೆವಾಡಿ, ... ಅರಸರ ಫೋಟೊ ೯ ಇರುತ್ತವೆ. ಕ್ರಯ ಫುಲ್ಲಸೈಜು ೧| ರೂ. ಕ್ಯಾಬಿನೆಟ್ ೧೨ ಆಣೆ.

ಶ್ರೀಮಜ್ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿಗಳ—ಅತ್ಯಂತ ಸುಂದರವಾದ ಕೈಬಣ್ಣದ ಫೋಟೋ ಕ್ರಯ ಪ್ರತಿ ೧ ಕ್ಕೆ. ರೂ. ೧. ಸಾದಾ ರೂ. |||

ಸೂಚನೆ:—ಖಾರಿ ಖರಿದಾರರಿಗೆ ಚನ್ನಾಗಿ ಕಮಿಷನ್ ದೊರೆಯುವದು.

ವಿಳಾಸ:—ಗುರುಗಪ್ಪ ಜೀರಗೆ,

ಮಾಲಿಕ: ಧಿ ಶಾರದಾ ಫೋಟೊ ಕಂಪನಿ, ಸೊಲಾಪುರ.

ನಿಮ್ಮ ಇಂಗ್ಲೀಷ ಮತ್ತು ಕನ್ನಡಾ ಅಚ್ಚಿನಕೆಲಸಗಳು ಯಾವದೇಯಿದ್ದರೂ ನಮ್ಮಲ್ಲಿಗೆ ಕಳುಹಿಸಿಕೊಟ್ಟಲ್ಲಿ ನಾವು ಜಾಗ್ರತೆಯಾಗಿಯೂ, ಅಂದವಾಗಿಯೂ, ಸುಲಭಚಾರ್ಜಿಗೂ ಮಾಡಿಕೊಡುತ್ತೇವೆ ಒಂದಾವರ್ತಿ ನಮ್ಮಕೈ ಕೆಲಸವನ್ನು ಕೊಟ್ಟು ಪರೀಕ್ಷಿಸಬೇಕಾಗಿ ಕೋರಿಕೆ.

ನಮ್ಮ ವಿಳಾಸ:—

ಮ್ಯಾನೇಜರ್,

ಶ್ರೀನಿವಾಸ ಪ್ರೆಸ್, ಮೈಸೂರು.

ಪ್ರಕಟಣೆ.

೧೨೨ ನೇ ಇಸಿವಿನಲ್ಲಿ ನಾವು ... ನಡೆಸಲ್ಪಟ್ಟ ... ಉಡುಪಿ ಶ್ರೀ ಕೃಷ್ಣ ದೇವರ ಪೂಜೆಯ ಸಹಾಯಾರ್ಥವಾಗಿ "ಶ್ರೀಕೃಷ್ಣ ಸೋಡ್ತಿ" ಎಂಬ ಹೆಸರಿನ ಒಂದು ಲೋಟರಿಯನ್ನು ಏರ್ಪಡಿಸಿದೆ. ಟಿಕೇಟಿನ ದರ ಒಂದರ ಒಂದು ರೂ. ಆಗಿರುತ್ತದೆ. ಅದರಲ್ಲಿ 1 ನೇ ಇನಾಮು ರೂಪಾಯಿ 2000-0-0 ಎರಡು, 2 ನೇ ಇನಾಮು ರೂ 1000-0-0 ರಷ್ಟು, ರೂ. 100-0-0 ರ ಇನಾಮುಗಳು 5 ರೂ 10-0-0 ರ ಇನಾಮು ಒಂದು ನೂರು, ರೂಪಾಯಿ 5 ರ ಇನಾಮುಗಳು ... ಎತ್ತಲ್ಪಡುವುಯಿವೆ. ಆದುದರಿಂದ ಎಲ್ಲ ಸಜ್ಜನರುಗಳು ತಮ್ಮ ಶಕ್ತ್ಯನುಸಾರ ಟಿಕೇಟುಗಳನ್ನು ಪಡೆದು ಶ್ರೀಹರಿ ವಾಯುಗಳ ಅನುಗ್ರಹಕ್ಕೆ ಪಾತ್ರನಾಗಬೇಕಾಗಿ ಅಪೇಕ್ಷಿಸಲಾಗುತ್ತದೆ. ಎಲ್ಲ ಪತ್ರವ್ಯವಹಾರಗಳನ್ನು ಈ ಕೆಳಗಿನ ವಿಳಾಸಕ್ಕೆ ಮಾಡತಕ್ಕದ್ದು.

ಮೈಸ. ಸೆಕ್ರೆಟರಿ.

ಶ್ರೀಕೃಷ್ಣ ಸೋಡ್ತಿ,

ಕೊಡಿಯಾಲಬೈಲ್ ಪೋಸ್ಟ್, ದ. ಕ.

ಸಹಕಾರ ಬೇಕೇ ?

ಬೇಕಾದವರು ನಮ್ಮಲ್ಲಿ ದೊರೆಯುವ ಕೊಡೆ, ಗುದ್ದಲಿ, ಬುಟ್ಟಿಗಳು, ನಮೂನೆ ಸರಕ್ಕಾಯಿ, ಹುಲ್ಲು ಬ್ಲಾಂಕೆಟ್, ನಮೂನೆ ಚುಟ್ಟಿ, ಅಫೀಸು ಕುರ್ಚಿ ಇವಾದಿ ಸಾಮಾನುಗಳನ್ನು ಒಂದುಸಲ ತೆಗೆದು ನೋಡಿರಿ.

ಹೆಚ್ಚಿನ ಸಂಗತಿಗಳು ಕೆಳಗಿನ ವಿಳಾಸಕ್ಕೆ ಬರೆದು ತಿಳಿಯುವದು.

COMMERCIAL STORE,

General Merchants, Commission Agents and Furniture Suppliers,

12–9 MURNAD, COORG.

For Sale—ಮಾರಾಟಕ್ಕೆ !!!

ಹಣ ದಾಸ್ತಾನು ಮಡಗಿಕೊಂಡು ಏನು ಪ್ರಯೋಜನ ? ಐಶ್ವರ್ಯವಂತರಿಗೆ ಉಪಯುಕ್ತವಾದ ಸಂಪಾದನೆಯು !!

ಸಿದ್ದಾಪುರದ ಸಮೀಪದಲ್ಲಿ ಒಳ್ಳೆ ತರಹದ ಪೂರ್ತಿ ಸಾಗುವಳಿಯಾಗಿರುವ ಭತ್ತದ ಭೂಮಿಯು (500) ಐದುನೂರು ಬಟ್ಟಿಕೊಲೆ ವರಿಕೆಯುಳ್ಳದು ಒಳ್ಳೆ ಮರ ಕಾಡು 40 ಎಕರೆ ಸಹಿತ ಶುದ್ಧ ಕ್ರಯ (6000-0-0) ಆರುಸಾವಿರ ರೂಪಾಯಿಗಳಿಗೆ ಮಾರಾಟಕ್ಕೆ ಇರುವದರ ಸಂಗ್ತಿ ಈ ಕೆಳಗಿನ ಅಡ್ರಸ್ಸಿಗೆ ಬರೆದುಕೊಂಡಲ್ಲಿ ತಿಳಿಯಲಾಗುವದು.

ವೀರರಾಜಪೇಟೆ. ಪರಕ್ ವಾಹ ವೀರರಾಜಪೇಟೆ. } The Veeraj Pet, Works, Veeraj Pet.

"ಕೊಡಗು"

ರಾಜಕೀಯ, ... ಕೃಷಿ ವೃತ್ತಿ, ವಿಜ್ಞಾನ ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ, ಕೊಡಗಿನ ವಾರ ಪತ್ರಿಕೆ.

1 ವರ್ತಮಾನ ... "ಕೊಡಗು" ಮಡಿಕೇರಿ. ಈ ವಿಳಾಸಕ್ಕೆ ... 2 ... ಸಂಪಾದಕರು "ಕೊಡಗು" ಮಡಿಕೇರಿ ಈ ವಿಳಾಸಕ್ಕೆ ಕಳುಹಿಸಬೇಕು 3. ... ಜವಾಬ್ದಾರರಲ್ಲ. 4 ನಮ್ಮಲ್ಲಿಗೆ ಕಳುಹಿಸುವ ... ಒಂದೇ ಕಡೆಯೂ, ಸ್ಪಷ್ಟವಾಗಿಯೂ, ... ಬರೆಯಲ್ಪಟ್ಟಿರಬೇಕು. ... ಈ ಪತ್ರಗಳು ಪ್ರಕಟವಾಗದಿದ್ದರೆ ... ಹಿಂದಿರುಗಿಸಲ್ಪಡುವದಿಲ್ಲ ... ಜವಾಬ್ದಾರಿಕೆಯನ್ನು ಸಂಪಾದಕರು ವಹಿಸುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭದರ ... ಹಾಕಲಾಗುತ್ತವೆ. ಹೆಚ್ಚು ಸಂಗತಿಗೆ ಮ್ಯಾನೇಜರಿಗೆ ಬರೆದು ತಿಳಕೊಳ್ಳಬಹುದು.

ಮ್ಯಾನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ.

INSURE YOUR CAR

Against Accident and Fire.

Apply to—

K. R. Thirupad & Bros.,

Sub Agents for

The Autocar Fire & Accident Insurance Co., Ltd.,

LONDON.

JUST ARRIVED FRESH STOCK OF

GOOD RICH TYRES

Best and Cheapest in the World.

Apply to—

K. R. Thirupad & Bros.,

Sayaji Rao Road,

12–6 MYSORE

SUBBANNA, SANGAPPA,

Receiving and Forwarding Agents General Merchants and Commission Agents.

Santhepet, Mysore.

Despatch and supply whatever yo[u] receive at Mysore Railway Station an[d] whatever food stuffs and Stationaries yo[u] want to have from Mysore. Prompt a[t]tention, moderate commission and quic[k] disposal are their motto. 24–7

ಮೈಸೂರು ರೈಲ್ವೆ ಸ್ಟೇಷನ್ನಿಂದ ನೀವು ಹೊಂದಬೇಕಾದ ಸಾಮಾನುಗಳ ರೈಲ್ವೆ ಪಾರ್ಸಲುಗಳನ್ನೂ, ಮೈಸೂರಿನಿಂದ ತರಿಸಿಕ್ಕೊಳ್ಳಬೇಕಾದ ಸಾಮಾನುಗಳ ಸಪ್ಲೈಯನ್ನೂ ಮೈಸೂರು ಸಂತೇಪೇಟೆಯಲ್ಲಿರುವ ಸುಬ್ಬಣ್ಣ ಸಂಗಪ್ಪನವರಿಗೆ ಕಳುಹಿಸಿ.

ಅವರು ಜಾಗ್ರತೆಯಾಗಿಯೂ, ಜೋಪಾನವಾಗಿಯೂ ಸುಲಭವಾದ ಕಮಿಷನ್ನಿನಲ್ಲಿಯೂ ನಿಮಗೆ ಸರಕು ರವಾನಿಸುತ್ತಾರೆ. ಮಿಕ್ಕ ವಿಚಾರ ಬರೆದು ತಿಳಿದುಕೊಳ್ಳಿ.

ಎಲ್ಲಾ ಚಂದಾದಾರರುಗಳಿಗೆ ವಿಜ್ಞಾಪನೆಗಳು.

ಕಳೆದ ವಾರದಿಂದೀಚೆಗೆ ಕೆಲವು ಪತ್ರಿಕೆಗಳು ತಿರಸ್ಕರಿಸಲ್ಪಟ್ಟು, ಆಫೀಸಿಗೆ ಹಿಂದಕ್ಕೆ ಬಂದಿರುತ್ತವೆ. ವಾಚಕರೇ ತಿರಸ್ಕರಿಸಿರುತ್ತೀರೋ, ಇಲ್ಲವೋ ಎಂಬುದು ನಮಗೆ ತಿಳಿಯುವುದಿಲ್ಲ. ಕಳೆದ ಎರಡು ತಿಂಗಳಿಂದ ಪತ್ರಿಕೆಯನ್ನು ಹೊಂದಿಕೊಂಡು ಓದುತ್ತಾ ಬಂದು, ಈಗ ಆಕಸ್ಮಾತಾಗಿ ಹೀಗೆ ವಾಪಾಸು ಮಾಡುವುದು ದೇಶಾಭಿಮಾನಿಗಳಿಗೆ ತಕ್ಕದಾಗಿ ಕಾಣುವುದಿಲ್ಲ. ಈ ಪತ್ರಿಕೆಯು ದೇಶೋದ್ಧಾರಕ್ಕಾಗಿ ಹೊರಟಿದೆಯಲ್ಲದೆ, ವಿಶೇಷ ಲಾಭಸಂಪಾದನೆಗಲ್ಲವೆಂಬುದು ದೇಶೀಯರಿಗೆ ತಿಳಿಯದ ಸಂಗತಿಯಲ್ಲ. ಆದ್ದರಿಂದ ದೇಶಾಭಿಮಾನವನ್ನು ತೋರಿಸಲಿಕ್ಕೂ, ದೇಶಸೇವೆಯಲ್ಲಿ ಭಾಗಿಗಳಾಗಲಿಕ್ಕೂ ದೇಶೀಯರೆಲ್ಲರೂ ಈ ಪತ್ರಿಕೆಗಳನ್ನು ತರಿಸಿಕೊಂಡು ಸರ್ವ ವಿಧದಲ್ಲಿಯೂ ಪ್ರೋತ್ಸಾಹಕೊಡಬೇಕಾಗಿ ಎಲ್ಲಾ ವಾಚಕರಲ್ಲಿ ಅಪೀಲು ಮಾಡಿಕೊಳ್ಳುತ್ತೇವೆ. ಪತ್ರಿಕೆ ಬೇಡದವರು ತಮ್ಮ ಪತ್ರಿಕೆಯ ನಂಬರನ್ನೂ, ತಮ್ಮ ಹೆಸರನ್ನೂ ಪ್ರತ್ಯೇಕ ಬರೆದು ಆಫೀಸಿಗೆ ತಿಳಿಸಬೇಕಲ್ಲದೆ ದಯವಿಟ್ಟು ತಿರಸ್ಕಾರ ಮಾಡಬಾರದಾಗಿ ಕೇಳಿಕೊಳ್ಳುತ್ತೇವೆ.

ಎಡಿಟರ್.

"ಕೊಡಗು"

೧೯೨೧ ನೇ ಇಸವಿ ಆಗಸ್ಟ ತಾ|| ೧೯ ನೇ ಶುಕ್ರವಾರ.

ಕೊಡಗು ದೇಶದ ಸ್ಥಿತಿ.

ಕೊಡಗು ದೇಶದ ಜನರು ಸ್ವಾಭಾವಿಕವಾಗಿ ಅಲ್ಲಿನ ವಾಯುಗುಣ ಮತ್ತು ಮಳೆಯಿಂದ ತಮ್ಮ ಜೀವನೋಪಾಯವನ್ನು ನಡಿಸಲಿಕ್ಕೆ ವ್ಯವಸಾಯ ಮಾಡಿ ಬದುಕುತ್ತಿರುವುದು ಯಾರಿಗೂ ತಿಳಿಯದ ವಿಷಯವಲ್ಲ. ಸರಕಾರದವರು ಕೈಗಾರಿಕೆ, ವ್ಯಾಪಾರ, ಮತ್ತು ಕೃಷಿಗಳ ವಿಷಯದಲ್ಲಿ, ಬೇರೆ ದೇಶಗಳಲ್ಲಿನ ಸರಕಾರವು ಸಾಕಷ್ಟು ಇಲಾಖೆಗಳನ್ನು ಏರ್ಪಡಿಸಿ ಬಹಳ ಹಣವನ್ನು ರೈತರ ಪ್ರಯೋಜನದಲ್ಲಿ ವಿನಿಯೋಗಿಸುವಂತೆ, ನಮ್ಮ ಸರಕಾರವು ಈವರೆಗೂ ಮಾಡಿರುವುದಿಲ್ಲ. ಹುಟ್ಟಿದ ಮನುಷ್ಯನು ಯಾವಾಗಲೂ ಅಭಿವೃದ್ಧಿಯನ್ನೇ ಕೋರುವುದು ಸಹಜವಾದರೂ, ನಮ್ಮ ದೇಶದಲ್ಲಿನ ಸರಕಾರದವರು ಈ ಬಾಬಿನಲ್ಲಿ ಉದಾಸೀನರಾಗಿರುವುದರಿಂದ ರೈತರು ಮುಂದಕ್ಕೆ ಬರುವುದು ಕಷ್ಟವಾಗಿರುತ್ತೆ.

ದೇಶದ ಸ್ಥಿತಿಯು ದಿನೇದಿನೇ ಹೀನಸ್ಥಿತಿಗೆ ಬರುತ್ತಿರುವುದು ವಿಷಾದವಾಗಿದೆ. ಈ ದೇಶದ ಆಯಾಯ ತಾಲ್ಲೋಕುಗಳನ್ನು ತೆಗೆದುಕೊಂಡರೆ ನಮ್ಮ ಸರಕಾರದ ಉದ್ಯೋಗಸ್ತರು ತಾವು ತೆಗೆದುಕೊಳ್ಳಬೇಕಾಗುವಷ್ಟು ಜೊಂದರೆಯನ್ನು ಜನರ ಅಭಿವೃದ್ಧಿಯನ್ನು ಹುಟ್ಟಿಸುವಲ್ಲಿ ತೆಗೆದುಕೊಂಡಂತೆ ಕಾಣುವುದಿಲ್ಲ. ಉದ್ಯೋಗಸ್ತರೇ ರೈತರ ನ್ಯಾಯವಾದ ಪ್ರತಿನಿಧಿಗಳೆಂದೂ, ಅವರು ದೇಶದ ಸ್ಥಿತಿಗತಿಯ ವಿಷಯ ಕೊಡುವ ಇರಾದೆಯೇ ರೈತರ ಇರಾದೆಯೆಂದು ಸರಕಾರವು ನಂಬಿ ಅದರಂತೆ ರಾಜ್ಯಭಾರನಡೆಸುತ್ತಿರುವುದೂ, ಜನರ ಪ್ರತಿನಿಧಿಗಳ ಇರಾದೆಯನ್ನು ಗಣನೆಗೆ ತಾರದಿರುವುದೂ, ಪ್ರಜೆಗಳಿಗೆ ಸಂಕಟವನ್ನುಂಟುಮಾಡಿವೆ. ಪ್ರಜೆಗಳಿದ್ದರೆ ದೊರೆತನ. ರಾಜ್ಯಾಡಳಿತವು ಯಾವಾಗಲೂ ಪ್ರಜಾಪ್ರತಿನಿಧಿತ್ವದ ಗುರುವಾಗಿದ್ದು, ಅಮೇರಿಕಾದೇಶದ ಸಂಯುಕ್ತಸಂಸ್ಥಾನದ ಪ್ರೆಸಿಡೆಂಟರಾಗಿದ್ದ ಏಬ್ರಹಾಂ ಲಿಂಕನ್ ಸಾಹೇಬರವರು ಹೇಳಿದಂತೆ ಪ್ರಜೆಗಳಿಗೆ ಪ್ರಜೆಗಳಿಂದ ಪ್ರಜೆಗಳಿಗಾಗಿ ನಡಿಸಲ್ಪಡಬೇಕೆಂದು ದೊರೆತನ ಮಾಡುವವರೆಲ್ಲರಿಗೂ ತಿಳಿದೇ ಇರಬೇಕು.

ಕಳೆದ ಘೋರಯುದ್ಧವು ತೀರಿದ ಒಡನೆಯೇ ಇಂಗ್ಲೆಂಡಿನ ಎರಡು ಪಾರ್ಲಿಮೆಂಟ್ ಸಭೆಗಳ ಸಮ್ಮತಿಮೇರೆ ನಮ್ಮ ಚಕ್ರವರ್ತಿ ಸಾರ್ವಭೌಮರವರು ಮಾಡಿದ ಪ್ರಕಟಣೆಯನ್ನು ನಮ್ಮ ಸರ್ಕಾರಿ ನೌಕರರುಗಳು ಗಣನೆಗೆ ತಂದುಕೊಂಡಂತೆ ಕಾಣುವುದಿಲ್ಲ. ಅವರ ಪ್ರಕಟಣೆಯೇನಂದರೆ ದೇಶದ ಪ್ರಜೆಗಳೆಲ್ಲರೂ ತಮಗೆ ನ್ಯಾಯವಾಗಿಯೂ, ಉದಾರವಾಗಿಯೂ ಇರುವ ಆಳುವಿಕೆಯು ದೊರೆಯುವಂತೆ ಮಾಡುವುದರಲ್ಲಿ, ಸರ್ಕಾರಿ ಅಧಿಕಾರಿಗಳಿಗೆ ಸಹಾಯಮಾಡಬೇಕೆಂತಲೂ ಸರಕಾರದ ಅಧಿಕಾರಿಗಳೂ ಕೂಡ ಮುಂದೆ ಪ್ರಜೆಗಳ ಸಹಾಯಕ್ಕಾಗಿ ಬರತಕ್ಕ ಸಾಮಾಜಿಕರನ್ನು ವಿಶೇಷ ಪ್ರೀತಿ ಗೌರವಗಳಿಂದ ಕಾಣುತ್ತ ಅವರೊಡನೆ ಅನುಕೂಲಭಾವದಿಂದ ಪ್ರಜೆಗಳಿಗೆ ಕ್ಷೇಮಕರವಾದ ಮಾರ್ಗವನ್ನಾಲೋಚಿಸಿ ಅವರ ಶ್ರೇಯೋಭಿವೃದ್ಧಿಗೆ ಸಹಕಾರಿಗಳಾಗಿರುವರೆಂದೂ ನಂಬಿವೆವು.

ಮೇಲಿನ ಪ್ರಕಟಣೆಯನ್ನು ಅಧಿಕಾರಿಗಳು ತಮ್ಮ ಚಿತ್ತಕ್ಕೆ ತೆಗೆದುಕೊಂಡಿದ್ದರೆ ನಮಗೆ ಈ ಹೀನಸ್ಥಿತಿಯು ಬರುತ್ತಿರಲಿಲ್ಲ. ಕಡಿಮೆ ಸಂಬಳದ ಉದ್ಯೋಗಸ್ತರ ಸಂಬಳ ಬಡ್ತಿ ಮಾಡಿದ್ದು ನ್ಯಾಯವೇ. ಹಾಗೆಯೇ ನಮ್ಮ ಸರಕಾರವು ಸಿಕ್ಕುವ ಸಂಬಳವೇ ಹೆಚ್ಚೆಂದು ರೈತರು ಬಾಯಿಬಿಡಿಯುತ್ತಿರುವಾಗ ದೊಡ್ಡ ಉದ್ಯೋಗಸ್ತರಿಗೆ ಮತ್ತೆಮತ್ತೆ ಸಂಬಳ ಹೆಚ್ಚಿಸುತ್ತಿರುವುದು ಯಾವ ಧರ್ಮ. ಎಲ್ಲಾ ಸಾಮಗ್ರಿಗಳಿಗೆ ಹೆಚ್ಚು ಬೆಲೆಯೆಂದು ಸರಕಾರವು ನೌಕರರ ಸಂಬಳ ಹೆಚ್ಚು ಮಾಡಿದ್ದಾಯಿತು. ಆದರೆ ಒಕ್ಕಲಿಗರಿಗೂ ಅಂಥಾ ಕಷ್ಟಗಳು ಬರಲಿಲ್ಲವೋ? ಅವರೂ ಸಹ ಒಂದಕ್ಕೆ ನಾಲ್ಕರಂತೆ ಹೆಚ್ಚಿನ ಬೆಲೆ ಕೊಟ್ಟು ಸಾಮಾನುಗಳನ್ನು ಕೊಳ್ಳುವುದಿಲ್ಲವೋ! ಸರ್ಕಾರದವರು, ಅಂಥಾದ್ದರಲ್ಲಿ ರೈತರು ಈ ದೇಶದಲ್ಲಿ ಹೆಚ್ಚಾಗಿ ಬೆಳೆಯುವ ಭತ್ತದ ಪೈರುಗಳನ್ನು ಮತ್ತು ಇತರ ಆದಾಯಗಳನ್ನು ರೈತರ ಕ್ಷೇಮವನ್ನು ಬಯಸಿ ಅಭಿವೃದ್ಧಿಮಾಡುವ ಪ್ರಯತ್ನ ತೆಗೆದುಕೊಳ್ಳದೆ ಇರುವುದು ಬಹಳ ವ್ಯಸನವನ್ನುಂಟುಮಾಡುತ್ತ.

ದೇಶದ ಬಂದ ತಾಕೀದ್ದೀಕನ್ನು ಖರ್ಚು ಕಡಿಮೆಮಾಡುವ ಉದ್ದೇಶ್ಯ ತೆಗೆದದ್ದಾಯಿತು. ಆದರೆ ಅಂಥಾ ಹಣವನ್ನು ತಾಲ್ಲೋಕುಗಳ ಯಾವ ಅಭಿವೃದ್ಧಿಗೆ ಕೊಟ್ಟರು. ಇದರ ಬದಲಾಗಿ ದೋಣಿ ಹಾಕಲಿಕ್ಕೆ ಸಹ ಹಣವಿಲ್ಲವೆಂದು ಹೇಳುತ್ತಾರೆ. ದೇವರೇ ಬಡಾನದಲ್ಲಿರುವಾಗ ಆಯಾಯ ತಾಲ್ಲೋಕನ್ನು ವಿವರಿಸುವುದೇನು. ಪೂರ್ವದಿಂದಲೇ ಕ್ಷೇಶಪಡಿಸಿಕೊಂಡಿದ್ದ ಪಾಡಿನಾಲ್ಕು ನಾಡು ತಾಲ್ಲೋಕು ಒಡನೆ ಹೆಸರುಗೊಳಿಸಿ. ಅಲ್ಲಿಯ ಜನರು ಮಳೆಗಾಲದಲ್ಲಿ ನೂರು ನಾಲ್ಕು ರಾಗಳು ಪ್ರಯಾಣವಾಗುವುದು ಬಹಳ ಕಷ್ಟ. ನಡೆದು ಹೋಗ ಒಳ್ಳೆಯ ರಸ್ತೆಗಳಿಲ್ಲ. ಈ ನೋಡಲು ಮಾಡಿದ ಬಿಸ ರಸ್ತೆಗಳೂ ಊರು ದಾರಿಗಳೂ ಕಾಡುಗಳಿಂದ ತುಂಬಿರುವ ಡಿಸ್ಟ್ರಿಕ್ಟುಬೋರ್ಡಿನಿಂದ ರಿಪೇರಿಮಾಡಿಸುವುದು ಕಾಣುವುದಿಲ್ಲ. ಅಧಿಕಾರಿಗಳು ಆಗಾಗ್ಗೆ ಓಡುತ್ತಿದ್ದಾಗ ರಸ್ತೆಗಳನ್ನು ಹೊಸ ಗಾಡಿ ಕುದುರೆಗಳೂ ಸಹ ತಿರುಗಲಿಕ್ಕಾಗಿ ರಸ್ತೆಗಳ ರಿಪೇರಿ ಮಾಡಲ್ಪಡುತ್ತಿದ್ದವು. ಈಗಲಾದರೋ ಅಧಿಕಾರಿಗಳು ಬೈಸಿಕಲ್ ತಪ್ಪಿತು. ಇನ್ನು ನೋಡುವವರಾರು. ಒಕ್ಕಲಿತನ ಕಷ್ಟದ ಕಷ್ಟ.

ಬಹಳ ಕಷ್ಟ ಪಡುವ ತಾಲ್ಲೋಕಿನವರು ಬೇರೆ ತಾಲ್ಲೋಕುಗಳಿಗಿಂತ ಕಲವು ಮಟ್ಟಿಗೆ ಒಳ್ಳೆಯ ಸ್ಥಿತಿಯಲ್ಲಿರಬಹುದೆಂದ ಹೇಳಬಹುದು. ಆದರಲ್ಲಿಯೂ ಕಲವು ಜನರು ನವನಾಗರೀಕತನದ ಗಾಳಿಗೆ ಸಿಕ್ಕಿ ದೇವತಾಭಕ್ತಿಯಿಲ್ಲದೆ ವೈಷ್ಣವೀತ ಮೂಢ ರೋಗಕ್ಕೆ ಸಿಕ್ಕಿ ನರಳುತ್ತಿರುವುದು ಮಾತ್ರ ವ್ಯಸನಕರವಾಗಿದೆ.

ಕಿಗ್ಗಟ್ಟುನಾಡು ತಾಲ್ಲೋಕಿನಲ್ಲಿ ರೈತರಿಗೆ ಬೇಕಾದಷ್ಟು ಭೂಮಿ ಇದೆ. ಇವರು ಬೆಳೆಸುವ ಬತ್ತವು ಸಮೃದ್ಧಿಯಾದರೆ ಇಡೀದೇಶವನ್ನು ಸಾಕಬಹುದು. ಆದರೆ ಮಳೆ ಕಡಿಮೆಯಾದ ವರ್ಷ ಮುಕ್ಕಾಲುವಾಸಿ ಜನರು ನೀರಿಲ್ಲದೆ ತಮ್ಮ ತಮ್ಮ ಭೂಮಿಗಳನ್ನು ಉತ್ತು ನಡುವುದೇ ಕಷ್ಟವಾಗಿದೆ. ಆದ್ದರಿಂದ, ಈ ತಾಲ್ಲೋಕಿಗೆ, ಈಗ ಇರುವ ನಾಲೆಗಳ ಜೊತೆಗೆ ಇನ್ನು ಅನೇಕ ನಾಲೆಗಳನ್ನು ಏರ್ಪಡಿಸಿದರೆ ರೈತರ ಸ್ಥಿತಿಯು ಅತ್ಯುನ್ನತವಾಗುವುದರಲ್ಲಿ ಸಂದೇಹವಿಲ್ಲ. ಆದರೆ ಈಗ ಇರುವ ನಾಲೆಗಳ ರಿಪೇರಿ ಕೆಲಸವು ಚೆನ್ನಾಗಿ ಆಗುವುದಿಲ್ಲವಾಗಿ ತಿಳಿಯುತ್ತೇವೆ. ಇದನ್ನು ಯಾರು ಒಡರ್ಯರೇ ಮಾಡಬೇಕಲ್ಲೇ?

ಮಡಿಕೇರಿ ತಾಲ್ಲೋಕಿನ ರೈತರ ಸ್ಥಿತಿಯು ಬೇರೆ ಮೂರು ತಾಲ್ಲೋಕಿಗಿಂತಲೂ ಹೀನವಾಗಿದೆ. ಮಡಿಕೇರಿ ಪಟ್ಟಣವಾಸಿಗಳೂ ಮತ್ತು ಕಲವು ಕಾಫಿಪ್ಲೇಂಟರುಗಳು ವಿನಹ ಬಾಕಿ ರೈತರು ಮೌಢ್ಯವೆಂಬ ಅಂಧಕಾರದಿಂದ ಏಳುವ ಸಂದರ್ಭವೇ ಕಾಣುವುದಿಲ್ಲ. ಮಡಿಕೇರಿ ನಿವಾಸಿಗಳು ಮತ್ತು ಬೇರೆ ಪ್ಲೇಂಟರುಗಳು ಹೆಚ್ಚಾಗಿ ತಾಲ್ಲೋಕಿನ ಮುಖ್ಯ ಭಾಗವನ್ನೇ ಸ್ವಾಧೀನಮಾಡಿಕೊಂಡಿರುತ್ತಾರೆ. ಇನ್ನು ಹೆಚ್ಚಾಗಿ ಹೀಗಯೇ ಮುಖ್ಯ ಸ್ಥಳವನ್ನು ಆಕ್ರಮಿಸುವುದರಲ್ಲಿಯೇ ಆಸಕ್ತಿಯುಳ್ಳವರಾಗಿರುತ್ತಾರಲ್ಲದೆ, ಹಿಂದೆ ಬಿದ್ದಿರುವ ಬಡಜನರ ಕ್ಷೇಮದಲ್ಲಿ ಯಾವ ವಿಧದ ತೊಂದರೆಯನ್ನು ತಗದುಕೊಳ್ಳುವಹಾಗೆ ಕಾಣುವುದಿಲ್ಲ. ಇನ್ನು ನಂಜರಾಜಪಟ್ಣ ತಾಲ್ಲೋಕಿನ ಸ್ಥಿತಿಯನ್ನು ಪರಾಂಬರಿಸೋಣ.

ಈ ತಾಲ್ಲೋಕಿನ ಸ್ಥಿತಿಯು ಅತ್ಯಂತ ಶೋಚನೀಯವಾಗಿದೆ. ಜನರಿಗೆ ಕುಡಿಯುವುದಕ್ಕೆ ಒಳ್ಳೆಯ ನೀರಿಲ್ಲ. ಸಾಗುವಳಿಗೆ ಲಾಯಕ್ಕಾದಂತ ಒಳ್ಳೆಯ ಕೆರೆಕಟ್ಟೆಗಳಿಲ್ಲ. ಬಾವಿಗಳಿಲ್ಲ, ನಾಲೆಗಳಿಲ್ಲ. ಜನರು ಬಡತನದಿಂದಲೂ ಮೂಢತನದಿಂದಲೂ ನಿಸ್ಸಾರಿಗ ಹೋಗಿರುತ್ತಾರೆ. ಅವರ ಈ ಹೀನಸ್ಥಿತಿಯನ್ನು ಮಿ|| ಸಿತ್ತ ಸಬ್ಬಣ್ಣಯ್ಯನವರು ಪ್ರತಿವರ್ಷದ ಒಮಿನಾಸುದಾರರ ಸಂಘದ ವಾರ್ಷಿಕ ಮೀಟಿಂಗಿನಲ್ಲಿ ಹೇಳುತ್ತಿದ್ದಾಗ ಜನಗಳಿಗೆ ಏನೇನೋ ತೋರುತ್ತಿತ್ತು. ಜನಸಂಖ್ಯೆಯೂ ದಿನೇ ದಿನೇ ಕಡಿಮೆಯಾಗುತ್ತಾ ಬರುತ್ತದೆ. ಈಗಿನ ರೀತಿ ಕಡಿಮೆಯಾದರೆ ಇನ್ನು ಹತ್ತು ವರ್ಷದಲ್ಲಿ ಈ ತಾಲ್ಲೋಕಿನಲ್ಲಿ ಜನರೇ ಇಲ್ಲದಂತಾಗುವದು. ದೇಶಾಭಿಮಾನಿಗಳಾದವರು ಕರುಣವಿಟ್ಟು ಇದನ್ನು ಶುದ್ಧ ಪರಾಂಬರಿಸಿದರೂ ವೇದ್ಯವಾದೀತು.

ಬಂದುಕಡೆ ಪೋಲೀಸಿನವರ ಹದರಿಕೆ. ಇನ್ನೊಂದು ಕಡೆ ಬೇರೆ ಉದ್ಯೋಗಸ್ತರ ಮತ್ತು ಕಾಫಿಪ್ಲೇಂಟರುಗಳ ಹೆದರಿಕೆ ಇನ್ನೊಂದು ಕಡೆ ಮನೆಯಿಲ್ಲದೆಯೂ, ನಾಲೆಯ ನೀರಿನ ಅನುಕೂಲವಿಲ್ಲದೆಯೂ ಪಡುವ ಗೋಳೂ ಮತ್ತು ಕುಡಿಯುವ ನೀರಿಲ್ಲದೆ ಮಡಿ ಮತ್ತು ಕಾಳುಕುನೀರು ಕುಡಿದು ಜನರ ಕಾಯಿಲೆಯ ಸಂಕಟ. ಜನರೇ ಮುಂದೇ ಬಂದು ಸರಕಾರದವರಲ್ಲಿ ಕರೆಯೋಕ್ತವಾಗಿ ಹೇಳುವುದೆಂದರೆ ಅವರ ತಿಳಿಗೇಡಿತನ ಮತ್ತು ನೀತಿಗೇಡಿತನ. ಸರಕಾರದವರು ಇದನ್ನು ಕಂಡು ರೈತರ ಸಹಾಯಕ್ಕೆ ಬರುವಹಾಗೆ ಇಲ್ಲ. ರೈತರೇ ತಮ್ಮ ಕಾಲಿನಮೇಲೆ ತಾವೇ ನಿಂತುಕೊಳ್ಳಬೇಕೆಂತಲೇ ಸರಕಾರದವರ ಭಾವನೆಯಾಗಿರುತ್ತೆ.

ಅಕಸ್ಮಾತ್ತಾಗಿ ಒಬ್ಬ ಅಪರಿಚಿತನು ಇಲ್ಲಿನ ಯಾವುದಾದರೂ ಒಂದು ಊರಿಗೆ ಹೋದರೆ ಅಲ್ಲಿನ ಜನರ ಸ್ಥಿತಿಯನ್ನು ತಿಳಿಯಬಹುದು. ಕಾಯಪುಷ್ಟಿಯುಳ್ಳ, ಕಾಂತಿ ಮತ್ತು ನಗುಮೊಖವುಳ್ಳ ಮತ್ತು ಸೌಂದರ್ಯದಿಂದ ಕೂಡಿದ ಗಂಗಸನ್ನಾದರೂ, ಹೆಂಗಸನ್ನಾದರೂ, ಅಥವಾ ಮಕ್ಕಳನ್ನಾದರೂ ಕಾಣಲಿಕ್ಕೆ ಅಪರೂಪವಾಗುತ್ತೆ. ಈ ಹೀನಸ್ಥಿತಿಗೆ (1) ತಿಳಿಗೇಡಿತನ (2) ಬಡತನ, (3) ತಾಲೋಕಿನ ಮುಂದಾಳುಗಳಾಗಿದ್ದ ಮತ್ತು ಇರುವ ಮುಖಂಡರ ಮುಂಗೇಡಿತನವು ಮುಖ್ಯಕಾರಣಗಳಾಗಿ ಕಂಡು ಬರುತ್ತವೆ. ಬೇಕಾದಷ್ಟು ಆಸ್ತಿಪಾಸ್ತಿಗಳಿದ್ದರೂ ಫಲವೇನು? ಕಷ್ಟಪಟ್ಟು ದುಡಿದು ಬಂದದನ್ನು ನ್ಯಾಯವಾದ ರೀತಿಯಿಂದ ಉಪಯೋಗಿಸಿ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಮಾಡಿಸುವುದಿಲ್ಲ. ಯಾವ ಹಳ್ಳಿಗೆ ಹೋದರೂ ವಿದ್ಯೆ ತಿಳಿದವರೂ, ಓದಬರುವವರೂ ಕಮ್ಮಿ. ಶಾಲೆಗೆ ಹೋಗುವ ವಿದ್ಯಾರ್ಥಿಗಳೂ ಕಡಿಮೆ. ಹೈಸ್ಕೂಲಿಗೆ ಹೋಗುವವರು ಶೇಕಡ 1 ರಂತೆ ಸಹ ಇಲ್ಲ. ಇವರ ಬಡತನದ ಕಾರಣ ಎಲ್ಲಾ ಈ ಮೇಲೆ ಹೇಳಿದ್ದ ಇದನ್ನು ವರ್ಣಿಸಲಸದಳವಾಗಿದೆ. ಅಲ್ಲದೆ ಈ ತಾಲೋಕಿನ ಜನರು ಕೋರ್ಟು ಕಚೇರಿಗಳಲ್ಲಿ ಖಾಲಿವ್ಯಾಜ್ಯಮಾಡುವುದಕ್ಕಾಗಿ ಯಥೇಷ್ಟ ದ್ರವ್ಯವನ್ನು ವೆಚ್ಚಮಾಡಿ ತಮ್ಮ ಪ್ರಾಬಲ್ಯವನ್ನು ತೋರಿಸುವುದರಲ್ಲಿ ಮಾತ್ರ ಉಳಿದ ತಾಲ್ಲೋಕುಗಳನ್ನು ಮೀರಿರುತ್ತಾರೆ. ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯದಿಂದ ಈ ತಾಲೋಕಿನ ಮಕ್ಕಳಿಗೆ ಮಾಡಿಸಿದ ಹೊರತು ಇವರು ಅಭಿವೃದ್ಧಿಗೆ ಬರುವ ವಿಧಾನವೇ ಕಾಣುವದಿಲ್ಲ. ಬೇರೆ ತಾಲೋಕುಗಳ ರೈತ ಜನರ ಕಷ್ಟವನ್ನು ಅನುಭವಿಸುತ್ತಿರುವ ಈ ತಾಲೋಕಿನ ಜನರ ಸ್ಥಿತಿಯನ್ನು ಉನ್ನತಸ್ಥಿತಿಗೆ ತರುವುದನ್ನು ಸರಕಾರದವರು ಒಡನೇ ವಹಿಸಿಕೊಳ್ಳುವರಾಗಿ ನಂಬುತ್ತೇವೆ. ಯಾವಾಗಲೂ ಹಿಂದೆ ಬಿದ್ದಿರುವ ಜನರನ್ನು ಮುಂದಕ್ಕೆ ತರುವುದು ರಾಜಧರ್ಮವಲ್ಲವೇ! ಜನರೂ ಸಹ ತಮ್ಮ ಅಭಿವೃದ್ಧಿಯಲ್ಲಿ ಆಸಕ್ತಿಯನ್ನು ತೋರಿಸುವುದಕ್ಕೆ ಮುಂದೆ ಬರುವುದು ಅವರ ಕರ್ತವ್ಯವಾಗಿರುತ್ತೆ.

ಈ ತಾಲೋಕಿನ ಸ್ಥಿತಿಯನ್ನು ಪ್ರತ್ಯೇಕವಾಗಿ ಪರಾಂಬರಿಸುವಂತೆಯೂ, ದೇಶದ ಸ್ಥಿತಿಯನ್ನು ಪರೀಕ್ಷಿಸಿ ಅಭಿವೃದ್ಧಿಗೆ ತರುವ ಸಾಧನೋಪಾಯಗಳನ್ನು ಕಲ್ಪಿಸುವಂತೆಯೂ, ಉದ್ಯೋಗಸ್ಥರ ಮತ್ತು ರೈತ ಪ್ರತಿನಿಧಿಗಳ ಸಮ್ಮಿಶ್ರವಾದ ಒಂದು ಕಮಿಟಿಯನ್ನು ಸರಕಾರದವರು ಒಡನೇ ಏರ್ಪಡಿಸಿ ರೈತರ ಕುಂದುಕೊರತೆಗಳನ್ನು ನೀಗಿಸಾಡಿಸುವರಾಗಿ ಹಾರೈಸುತ್ತೇವೆ.

ನಮ್ಮ ದೇಶ ಮಂಜೂರಾದ ನ್ಯಾಯ ನಿರ್ಮಾಣಸಭೆಯು ಬೇರೆ ದೇಶಕ್ಕೆ ದೊರೆತ ರೀತಿ ನಮಗೆ ಸಿಕ್ಕಿದರೆ ಇಂಥಾ ಅಸಂಗತಿಗಳನ್ನು ಒಡನೇ ಬೇರುಸಹಿತ ಕಿತ್ತುಹಾಕಬಹುದಾಗಿ ನಂಬುತ್ತೇವೆ.

ಬರುವ ಸೆಪ್ಟೆಂಬರು ತಿಂಗಳು 3 ರಲ್ಲು ಆಗುವಂಥ ಕೊಡಗರ ಕೈಲ್‌ಮುಹೂರ್ತ ಹಬ್ಬವನ್ನು ನಡಿಸಲು ತಕ್ಕ ಏರ್ಪಾಡುಗಳನ್ನು ಮಾಡಲಿಕ್ಕಾಗಿ ನಡಿಸಿದ ಎರಡು ಮೀಟಿಂಗುಗಳ ತಪಸೀಲು ಇನ್ನೊಂದು ಕಡ ಪ್ರಕಟಿಸಿದೆ. ಇಷ್ಟೊಂದು ಚಿಕ್ಕ ಪಟ್ಟಣದಲ್ಲಿ ಅದರಲ್ಲೂ ಕೊಡಗರ ಸಂಖ್ಯೆಯು ಕಡಿಮೆಯಾಗಿರುವಲ್ಲೂ ಕೂಡ ಎರಡು ಮೀಟಿಂಗುಗಳು ನಡೆದದ್ದು ಕೇವಲ ಅನಾವಶ್ಯಕವಾಗಿ ಕಂಡು ಬರುತ್ತದೆ. ಕೊಡಗು ಪದ್ಧತಿ ಮೇರೆ ಒಂದು ಗ್ರಾಮದಲ್ಲಿಯೂ ಒಂದು ಪಟ್ಟಣದಲ್ಲಿ ಒಂದು ಅಂಬಲದಲ್ಲಿ ಜನರೆಲ್ಲರೂ ಕೂಡಿ ಗುರಿಗೆ ಗುಂಡು ಹೊಡೆಯುವದಲ್ಲದ ಬೇರೆ ಬೇರೆ ವರ್ಗಗಳಾಗಿ ಕೈಲ್‌ಮುಹೂರ್ತ ಹಬ್ಬವನ್ನು ಆಚರಿಸುವ ಪದ್ಧತಿ ಇಲ್ಲ. ಆದರೆ ಕೊಡಗಿನ ಮುಖ್ಯಪಟ್ಟಣವಾಗಿರುವ ಮಡಿಕೇರಿಯಲ್ಲಿಯೇ ವಿದ್ಯಾವಂತರೂ, ಬುದ್ಧಿವಂತರೂ, ಉದ್ಯೋಗಸ್ಥರೂ, ಎಂದೆನ್ನಿಸಿಕೊಂಡಿರುವ ಕೊಡಗು ಮಹನೀಯರು ಒಗ್ಗಟ್ಟಿನಲ್ಲಿ ಬಲವಿದೆ ಎಂಬ ತತ್ವವನ್ನು ಮರೆತೊ, ಅಥವಾ ಗಣನೆಗೆ ತಾರದೆಯೊ ಪಂಗಡವಾಗಿ ಎರಡು ಕಡೆಗಳಲ್ಲಿ ಹಬ್ಬವನ್ನು ಆಚರಿಸುವದು ನಾಡು ನಿವಾಸಿಗಳಿಗೆ ಒಳ್ಳೇ ಉದಾಹರಣೆಯಾಗಿ ತೋರುವದಿಲ್ಲ.

"ಕೊಡಗ."

(ಭಾಮಿನಿ ಷಟ್ಪದಿ)

ಚಲ್ಲಿ ಕನ್ನಡ ಭಾರ ದಕ್ಷಿಣ |
ದಲ್ಲಿ ಮೆರೆಯುವ ಸೀಮೆನಾಡುಗ |
ಳಲ್ಲಿ ಕೊಡಗು ನಾಡು ಎಂಬದೆ ಮಯಭಯಂಕರವು ||
ಹುಲ್ಲಿ ಹುಲಿಗಳ ಕರಡಿ ಸಂಗಳ |
ಎಲ್ಲ ಮೃಗಗಳ್ ಹಗಲು ಇರುವನ |
ಇಲ್ಲ ಮನುಜರೆ ನೋಡೆ ತರೆತರ ತಕ್ಕ ಜೀವಿಗಳಾ || ೧

ಎತ್ತನೋಡಲು ನೆರಳು ಮರಗಳ |
ಬಿತ್ತರಿಸಿ ಯಡೆನೊಲ ಪಡುಳ |
ಹುತ್ತ ಸರ್ಪನ ಮನೆಯು ಉರಗನ ಜಾತಿಯಲ್ಲಿ ಹವು ||
ಮತ್ತೆ ಗಿಡಗಳ್ ಹೂಗಳು ಮಳೆಗಳ್ |
ಸುತ್ತ ಬೆಳೆದಿಹ ಬಳ್ಳಿ ಎಲೆಗಳ್ |
ಮುತ್ತ ಕೊಡುವವು ಕರಿಯ ಕಾಂಡಗಳ ಕಂಡು ವಿಸ್ಮಯದಿ || ೨

ಬೇಸನೊಡಗಳು ಬೇಸುತಿಂಬುದೆ |
ನೀನು ತರುವುದೆ ಮತ್ತೆ ಪುಷ್ಪದಿ |
ಗಾನ ರಾಗದಿ ಕೂಡಿ ಭ್ರಮರ ಕೀಟಸ್ತ್ರೀಯುಗಳು ||
ನೀನು ವರ್ಣಿಸ ಬೇನು ಚಿತ್ರವ |
ನೀನು ಪೇಳಲಿ ಆವದು ಕೋವಿದ |
ನೀನು ವಿವರವ ಭಾರಿ ಪೇಳಲು ಯನಗೆ ಸಾಧ್ಯವಲೆ ||೧||

ಒಂದು ಕಡೆಯಲಿ ಕೆರೆ ಸರೋವರ |
ಮೊಂದು ಕಡೆಯಲಿ ಕಲ್ಲು ಗಿರಿಗಳ |
ಸಂದಿನಲಿ ಬೀಳುವಸರು ವಿಮಲದ ಜಲವ ಹರಿಯುತಿದೊ ||
ಇಂದು ನೀಳದಂತೆ ಹಂಪದು |
ಒಂದು ಅಧರೊಳ್ ಮಿಂಚು ಮುಳುಗಿದೆ |
ಕೊಂದ ಮನಸಿಗೆ ಕೊಡುವ ಆಶಯ ಶುಭ್ರ ನದಿಯುದುವೆ ||೨||

ಪರಮ ಮಂಗಳ ಭಾರಿ ಪುಷ್ಕಳ |
ಮೆರೆವ ಕೆಂಟಿಯ ಪಾಪ ಕ್ಷಮಿಸೀ |
ಪೊರೆವ ಭಕ್ತರ ಇಷ್ಟಸಿದ್ಧಿಯ ಕಾವೇರಿ ಗಂಗೆಯನೇ ||
ಮೆರೆವ ತಟದಲಿ ಭಾರಿ ಬಗೆಯಲಿ |
ತತಕಿರವ ಬೆಳಸುವರೆ ಬೆಳೆಗಳ್ |
ವರಿದ್ರ ದುಃಖಿಪೇ ತಲೆಯುದೋರ ಸುರಾಷ್ಟ್ರದಲೀ ||೩||

ಪರಿಯ ಈತರ ಇರುವ ನಾಡಲಿ |
ಹಿರಿಯ ಮೂರ್ಧರು ಹಿಂದೆ ಕೊಡಗರು |
ಅರಿಯ ಮುಖಲನಿವಾಸಿ ಗೆಲವರೆ ಕಿರಿಯುತಿರು ||
ಕರದು ಕೊಡುವರೆ ದಾನ ಧರ್ಮವ |
ಪರರಿಗುಪಕಾರವನೆ ಬಯಸೀ |
ಹರ ಶಂಕರ ಚರಣವನೆ ನಂಬಿಹರು ಅನುದಿನದಿ ||೪||

ಮುಂದೆ ಸರಿದರೆ ಕೆಲ ವಿದ್ಯೆಲಿ |
ಇಂದು ಕೊಡಗರ ನಾಗರಿಕೆಯಲಿ |
ಬಂದವರ ಬೇಶನದಿ ಮೆರದರೆ ಆಯುಧಪಾಣಿಗಳು ||
ಹಿಂದು ದೇಶದಿ ಕೊಡಗು ರಾಜ್ಯದಿ |
ಹಿಂದುಮುಖ ದಭಿಮಾನಿ ಕನ್ನಡಿಗ |
ರೆಂದು ಕಂಡರು ಮಿಗಿಲು ಮಿಗಿಲಾಗಿ ಅದ್ಭುತವಾ ||೫||

ನಾಡು ತಳ್ಳಿಯ ಯಲ್ಲ ಕಡೆಯಲಿ |
ಗಾಢವರೆ ನಾಗರಿಕೆಯ ಕೊಡಲು |
ಸ್ವಾತಂತ್ರ್ಯಪತ್ರಿಕೆಯೆಂದು ಹರಡಿಸಿದರೆ ಕೊಡಗು ಕೊಂಗನಲೀ ||
ನೀಡು ಇದರಲಿ ಸರಳ ಭಕ್ತಿಯ |
ನೋಡಿ ನುಡಿಗನ್ನಡಿಯ ಮುಕ್ತಿಯ |
ಕೂಡಿ ಚಂದಾದಾರರಾಗಿರಿ ಬಿಡದೊಡನೆ ಪತ್ರಿಕೆಯ ||೬||

ವೀರ ಕೇಸರಿ ಎಂಬ ಬಿರುದಿನ |
ಭಾರಿ ಪತ್ರಿಕೆಯ ಕೊಡಗು ಮನುಜರೆ |
ಸಾರಿ ಕೊಡಿರಿ ಜಯವ ಬಯಸಿರಿ ಗೊಂಚು ಮನದಲಿಸೀ ||
ದೂರ ಹೋಗಲಿ ಊರ ಪತ್ರಿಕೆ |
ವಾರಗಾಣಿಸಿ ಈಗದಿ ಮರೆಯಲಿ |
ಮಾರಿ ಕರುಣಿಸುದೋಃ ಪೊರೆಯೋ ಪರಶಿವ ಪರಸೀ ||೭||

ಕೆ. ಮಂಜುನಾಥ, ಶ್ಯಾನುಭೋಗ್

ವರ್ತಮಾನ ಸಂಗ್ರಹ.

ಒಳದೇಶ.

ನಿನ್ನೆಯದಿನ ತಾ|| 15 ರಲ್ಲಿ ಭಕ್ರಿತುಬ್ಬವು ಮುಸಲ್ಮಾನರಿಂದ, ಬಹು ವಿಜೃಂಭಣೆಯಿಂದ ನಡಿಸಲ್ಪಟ್ಟಿತು

* * *

ಮಳೆಯು ಕೆಲವು ಮಟ್ಟಿಗೆ ನಿಧಾನವಾಗಿದೆ ಈ ವರ್ಷ ಕೃಷಿಕರಿಗೆ ಬೇಡವಾದಷ್ಟು ಮಳೆಯು ಆಗಿದೆಯೆಂದು ಎಲ್ಲರ ಅಭಿಪ್ರಾಯ

* * *

ಗೋಣಿಕೊಪ್ಪಲು ಕಚೇರಿ ಕಟ್ಟಡವನ್ನು ಜನರ ಉಪಯೋಗಾರ್ಥಕ್ಕಾಗಿ ಛತ್ರವಾಗಿ ಮಾಡಬೇಕೆಂದು ಒಬ್ಬರು ತಿಳಿಸುತ್ತಾರೆ.

* * *

ಕೊಡಗು ಕಂಪೆನಿಯ ಡೈರೆಕ್ಟರುಗಳ ಒಂದು ಮೀಟಿಂಗ್ ಈ ತಾರೀಕು 18 ನೇ ಗುರುವಾರ ಬೆಳಗ್ಗೆ 9 ಘಂಟೆಗೆ ಕೊಡಗು ಆಫೀಸಿನಲ್ಲಿ ನಡೆಯುತ್ತೆ.

* * *

ಕೊಡಗಿನ ಶಾಲಾ ಅಸಿಸ್ಟೆಂಟ್ ಇನ್ಸ್‌ಪೆಕ್ಟರಾಗಿ ನೇಮಕಮಾಡಲ್ಪಟ್ಟಿರುವ, ಮೆ|| ಪಿ. ಮಂಗೇಶರಾಯರು ಈ ತಾ|| 14 ರಲ್ಲಿ ಮಡಿಕೇರಿಗೆ ತಲಪಿರುತ್ತಾರೆ

* * *

ಗೋಣಿಕೊಪ್ಪಲು ನಾಡು ಕಚೇರಿಯು ಪೊನ್ನಂಪೇಟೆಗೆ ವರ್ಗವಾದ್ದರಿಂದ ಸ್ಥಳೀಕ ರೈತರಿಗೆ ಬಹಳ ತೊಂದರೆಯೆಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

* * *

ಕೊಡಗು ಕಮೀಷನರವರು ಕಳೆದ ತಾ|| 7 ರಲ್ಲು ಪೊನ್ನಂಪೇಟೆಗೆ ದಯಮಾಡಿಸಿದವರು ಅಲ್ಲಿಂದ ಹುದಿಕೇರಿಗೆ ಕಾಲು ನಡಿಗೆಯಲ್ಲೇ ಹೋಗಿ ಹಿಂದಕ್ಕೆ ಬಂದರೆಂದು ತಿಳಿಯುತ್ತೇವೆ.

* * *

ಕಳೆದ ತಾರೀಕು 12 ರಲ್ಲಿ ಮಡಿಕೇರಿ ಓಂಕಾರದೇವಸ್ಥಾನದ ಮಹಡಿಯಲ್ಲಿ, ನಮಗೆ ಈಗ ಸಿಕ್ಕಬಹುದಾದ ನ್ಯಾಯನಿರ್ಮಾಣಕ ಸಭೆಯ ವಿಷಯ ಚರ್ಚಿಸಲು ಒಂದು ಮೀಟಿಂಗ್ ನಡೆಯಿತು.

ಗೋಣಿಕೊಪ್ಪಲಲ್ಲಿ ಕಳೆದವಾರದಿಂದೀಚೆಗೆ, ದನದ ಕಾಯಿಲೆಯಿಂದ ಸುಮಾರು ಇಪ್ಪತ್ತೈದು ದನಗಳು ಸತ್ತು ಹೋಯಿತೆಂದೂ, ವೆಟರನರಿ ಅಸಿಸ್ಟೆಂಟರ ಸಹಾಯವು ಅತ್ಯಾವಶ್ಯವೆಂದೂ ಒಬ್ಬರು ಬರೆಯುತ್ತಾರೆ

* * *

ಕೈಲ್‌ಮುಹೂರ್ತ ಮಾಡುವ ವಿಷಯದಲ್ಲಿ ಮಡಿಕೇರಿಯಲ್ಲಿ ಕೊಡಗರಲ್ಲಿಯೇ ತಾ|| 12 ರಲ್ಲಿ ದೇವಸ್ಥಾನದ ಮಹಡಿಯಲ್ಲಿ ಒಂದು ಮೀಟಿಂಗು. ತಾ|| 14 ರಲ್ಲಿ ಇನ್ನೊಂದು ಮೀಟಿಂಗ್ ಸ್ಕೂಲ್ ಹಾಲಿನಲ್ಲಿಯೂ ನಡೆಯಿತು.

* * *

ಭಾಗಮಂಡಲದಿಂದ ಮಡಿಕೇರಿಗೆ ಬರುವ ರಸ್ತೆಯಲ್ಲಿರುವ ಅನೇಕ ಹೊಳೆಗಳ ಸೇತುವೆಯು ಕೊಚ್ಚಿ ಹೋಗಿದೆಯೆಂದೂ, ಇದನ್ನು ಒಡನೇ ರಿಪೇರಿಮಾಡಿ ಪ್ರಯಾಣಿಕರಿಗೆ ಅನುಕೂಲಮಾಡಬೇಕೆಂದೂ ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

* * *

ವಿರಾಜಪೇಟೆಯಿಂದ ಕುರುಟಿಗೆ ಹೋಗುವ ರಸ್ತೆಯು ಬಹಳ ಹೀನ ಸ್ಥಿತಿಯಲ್ಲಿದೆಯೆಂದೂ, ಕಾಲು ನಡಿಗೆಯಲ್ಲಿ ಬಹಳ ಕಷ್ಟವೆಂದೂ ಕುರುಟಿಗಾಡಿ ಮಾರ್ಗವು ಬಹಳ ಕೆಸರು ತುಂಬಿಕೊಂಡಿರುವುದರಿಂದ ಗಾಡಿ ನಿಲ್ಲಲಿಕ್ಕೆ ಬಹಳ ಅನಾನುಕೂಲವಾದೂ ತಿಳಿಯುತ್ತೇವೆ

* * *

ಮಡಿಕೇರಿ ಸಿದ್ದಾಪುರ ರಸ್ತೆಯು ಈಗ ಪ್ರಯಾಣಕ್ಕೆ ಅನುಕೂಲವಾಗಿ, ಗಾಡಿ, ಮೋಟಾರುಗಳು ಅಡಚಣೆಯಿಲ್ಲದೆ ನಡಿಯುತ್ತಿವೆ ಕೊಡಗು ಮೋಟಾರು ಸರ್ವೀಸು ಮಹಾಲಿಸಂಕ ವಿರಾಜಪೇಟೆಯಿಂದ ಮಡಿಕೇರಿಗೆ ನಡಿಯುವುದು ಜನರಿಗೆ ಬಹಳ ಅನುಕೂಲವಾಗಿದೆ

* * *

ಕಳೆದ ತಾರೀಕು 10 ರಲ್ಲು ಮಡಿಕೇರಿ ಇಂಜಿನೀಯರಿಂಗ್ ಆಫೀಸು ಮೇನೇಜರಾದ ಮೆ|| ಪಾತಲುರವರು ಕಾಲವಾದರು. ಇವರು ಏದಾರು ದಿನದಿಂದ ಕಾಯಿಲದಲ್ಲಿ ಬಿದ್ದರು. ಇವರ ಶವವನ್ನು ದಹನಮಾಡಲಿಕ್ಕೆ ಬ್ರಾಹ್ಮಣರಲ್ಲಿ ಅನೇಕರು ಕೂಡದೆ ಇದ್ದುದು ವ್ಯಸನಕರವಾಗಿದೆ

* * *

ಸಾಡಿನಾಲ್ಕುನಾಡು ತಾಲೋಕು ಕಟ್ಟಡವನ್ನು ನಾಪೋಕ್ಲು ಹುಡುಗಿಯರ ಶಾಲೆಗೆ ಕೊಡಬೇಕಾಗಿಯೂ ಈಗ ಅಂಗಾಡಿಯಾಗಿ ಬಿಟ್ಟುಕೊಟ್ಟ ಛತ್ರವನ್ನು. ದೇಶೀಯರ ಉಪಯೋಗಕ್ಕೇನೇ ಬಿಟ್ಟುಕೊಟ್ಟಿದ್ದರೆ ಸರಕಾರವು ಬಹಳ ಉಪಕಾರ ಮಾಡುವಂತೆ ಆಗುವುದಾಗಿ ಒಬ್ಬರು ಬರೆಯುತ್ತಾರೆ.

* * *

ಪೊನ್ನಂಪೇಟೆಯಲ್ಲಿ ಮೆ|| ಸುಂದರಸಿಂಗರವರು ಒಂದು ಸಾವಿರರೂಪಾಯಿ ಖರ್ಚುಮಾಡಿ ಒಂದು ಬಾಲಿಕಾ ಪಾಠಶಾಲೆಯನ್ನು ಏರ್ಪಡಿಸಿದ್ದು ಸರಿಯಷ್ಟೆ. ಅವರ ಜ್ಞಾಪಕಾರ್ಥವಾಗಿ ಇಡಲಿಕ್ಕೆ ಬಂದ ಶಾಸನಕಲ್ಲನ್ನು, ಅವರ ಸ್ವಂತ ಖರ್ಚಿನಿಂದಲೇ, ಅವರೇ ಇಡಬೇಕೆಂದು ಶಾಲಾ ಅಧಿಕಾರಿಗಳು ಹೇಳುತ್ತಾರಂತೆ.

* * *

ಈ ತಾರೀಕು 15 ರಲ್ಲು ಮೆ|| ಪುಚ್ಚಿಮಾಡ ಮಾದಪ್ಪನವರು ತನ್ನ 67 ನೇ ವಯಸ್ಸಿನಲ್ಲಿ ಶಿವಾಧೀನರಾದರು. ಎಲ್ಲಾ ಕೆಲಸವೂ ಕೊಡಗು ಪದ್ಧತಿಮೇರೆ ನಡೆದುದು ಶ್ಲಾಘನೀಯವಾಗಿದೆ ಕೊಡಗು ಪದ್ಧತಿಮೇರೆ ಶವವನ್ನು ದಹನಮಾಡಿದ್ದು ಮಡಿಕೇರಿಯಲ್ಲಿ ಇದೇ ಮೊದಲು ಎಂದು ತಿಳಿಯುತ್ತೇವೆ. ಇನ್ನು ಮುಂದಕ್ಕಾದರೂ ಮಡಿಕೇರಿ ನಿವಾಸಿಗಳು ಐಶ್ವರ್ಯವಂತರು ಗರೀಬರು ಎಂಬ ಭೇದವಿಲ್ಲದೆ ಶುಭಶೋಭಾನದಲ್ಲಿ ಮಿಳಿತದಿಂದ ಕೂಡಿ ಸಹೋದರ ಭಾವತ್ವವನ್ನು ಸೂಚಿಸುವಂತಾಗಿ ಸಂತೋಷವಾಗಿದೆ.

ಹಿಂದೂದೇಶ.

ಬ್ರಿಟಿಷ್ ಕೊಲಂಬಿಯದಿಂದ ಹೊರಡುವ "ಒಂದೇ ಮಾತ್ರಂ" ಎಂಬ ಪತ್ರಿಕೆಯನ್ನು ಬ್ರಿಟಿಷ್ ಇಂಡಿಯಾವಿಗೆ ಬರಲು ಬಿಡಬಾರದೆಂದು ಶಾಸನವಾಗಿದೆ

* * *

ಶಾರದ ಪೀಠದ ಆಶ್ರಮದ ಸ್ವಾಮಿ ಶಂಕರಾಚಾರ್ಯರೆಂಬವರು, ಡಾಕ್ಟರ್ ಗೋರ್‌ರವರ, ಸಮ್ಮಿಶ್ರಿತ ವಿವಾಹದ ಏರ್ಪಾಡು, ಹಿಂದೂ ಶಾಸ್ತ್ರಕ್ಕೆ ವಿರೋಧವೆಂಬದಾಗಿ ಬರೆದಿರುತ್ತಾರೆ

* * *

ಬೊಂಬಾಯಿ ಮತ್ತು ಪೂನಾಪಟ್ಟಣಕ್ಕೆ ತಂತಿ ಇಲ್ಲದ ವರ್ತಮಾನವನ್ನು ಕಳುಹಿಸುವ ಯಂತ್ರವನ್ನು ಏರ್ಪಡಿಸಲು ಇಂಡಿಯಾ ಸರಕಾರದ, ಈ ಬಾಬಿನ ಶಾಸ್ತ್ರಜ್ಞರು ಪರೀಕ್ಷಿಸಿರುತ್ತಾರೆ.

* * *

ಒರಿಸ್ಸಾ, ಬೀಹಾರ್, ಪ್ರಾಂತ್ಯದ ಗವರ್ನರ್ ಆಗಿರುವ ಲಾರ್ಡ್ ಸಿಂಹರವರು ಕುಲಾ ಕ್ಷಾಮ ನಿವಾರಣ ಫಂಡಿಗೋಸ್ಕರ, ಸರ್ ಪಿ. ಸಿ. ರೇಯವರಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟಿರುತ್ತಾರೆ

ಭಾರತೋಪಕಾರದಿನ ಚಿಂತಾಮಣಿ ಛಾಪಖಾನೆಯಲ್ಲಿ ಬಾಬು ಶ್ರೀಪ್ರಸಾದ ಎಂಬವರಿಂದ ಪ್ರಕಾಶಿಸಲ್ಪಟ್ಟ "ಮಹಾತ್ಮಾಗಾಂಧಿ ಆರ್‌ಚರ್ಚ್" ಎಂಬ ಸಣ್ಣ ಪುಸ್ತಕವನ್ನು ಪ್ರಚುರಗೊಳಿಸಬಾರದೆಂದು ಸರಕಾರದ ಹುಕುಂ ಆಗಿರುತ್ತೆ.

* * *

ಗೋಸಂರಕ್ಷಣಾರ್ಥವಾಗಿ ಏರ್ಪಡಿಸಲ್ಪಟ್ಟ, ಹಿಂದೂದೇಶದ ಮಹಾಸಭೆಯಲ್ಲಿ ಶ್ರೀನಿವಾಸ ಶಾಸ್ತ್ರಿ ಮದನಮೋಹನ ಮಾಳವೀಯರು. ಅಧ್ಯಕ್ಷರಾಗಿ ನೇಮ ಮಾಡಲ್ಪಟ್ಟಿರುವರು. ಈ ಮಹಾಸಭೆಯು ಈ ತಾ|| 20 ರಲ್ಲಿ ಬೃಂದಾವನದಲ್ಲಿ ಆಗುತ್ತದೆ.

* * *

ನಮ್ಮ ಚಕ್ರವರ್ತಿಯವರ ಪ್ರಿಯ ಪುತ್ರರಾದ, ಪ್ರಿನ್ಸ್ ಆಫ್‌ವೇಲ್ಸ್‌ರವರು ಇಂಡಿಯಾಕ್ಕೆ ದಯಮಾಡಿಸುವಾಗ, ಹಿಂದುಸ್ಥಾನದ ಸ್ವಸ್ಥದ ಎಲ್ಲಾ ಜನರನ್ನು ನೋಡುವರೆಂಬುದಾಗಿ, ಲಾರ್ಡ್ ಕ್ರೂಯವರು ತಂತೀ ವರ್ತಮಾನ ಕಳುಹಿಸಿರುತ್ತಾರೆ.

* * *

ಅಲಿಘರ್ ಮುಸಲ್ಮಾನರ (ಯೂನಿವರ್ಸಿಟಿ) ಸಕಲ ಕಲಾಶಾಲೆಯು ಮೊದಲನೆ ಪರೀಕ್ಷೆಯ ಫಲಿತಾಂಶವು ಬೈರಾಗೆ ಪಡಿಸಿರುತ್ತಾರೆ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಇಪ್ಪತ್ತನಾಲ್ಕು ಹುಡುಗರ ಪೈಕಿ ಹದಿಮೂರು ವಿದ್ಯಾರ್ಥಿಯರೂ, ಇಂಟರ್ ಮಿಡಿಯೇಟಿನಲ್ಲಿ ಹನ್ನೊಂದರ ಪೈಕಿ ಐದು ಜನರು ತೇರ್ಗಡೆ ಹೊಂದಿರುತ್ತಾರೆ.

* * *

ಗೂಟಿ ಡಿವಿಜನ್‌ನಲ್ಲಿ ಮಳೆಯಿಲ್ಲದೆ ಕ್ಷಾಮಪೀಡಿತರಾಗಿದ್ದ ಕೂಲೀಜನರಿಗೆ ಮೆ|| ಶ್ರೀನಿವಾಸ ಅಯ್ಯಂಗಾರ್, ಬಿ ಎ ಬಿ ಎಲ್. ಯಂ ಎಲ್ ಸಿ ರವರು 200 ರೂಪಾಯಿಗಳನ್ನು ಹೊದ್ದುಕೊಳ್ಳುವ ಬಟ್ಟೆಗೋಸ್ಕರ ಕೊಟ್ಟಿರುತ್ತಾರೆ. ಮೆ|| ರಾಮಸ್ವಾಮಿ ಅಯ್ಯಂಗಾರರು 100 ರೂಪಾಯಿಗಳನ್ನು ಮೆ|| ಪಿ. ರಾಮಚಂದರನ್‌ಗುಡಿ ಎಂಬ ಕಲೆಕ್ಟರು 100 ರೂಪಾಯಿಗಳನ್ನೂ ಕೂಲಿ ಜನರು ಹೊದ್ದುಕೊಳ್ಳುವ ಬಟ್ಟೆಗಾಗಿಯೇ ಸಹಾಯಮಾಡಿರುತ್ತಾರೆ ಬಟ್ಟೆಗಾಗಿಯೇ ಇಷ್ಟು ಸಹಾಯ ಮಾಡಿದ್ದರೂ ಕೂಡ ಇನ್ನೂ ಅನೇಕರು ಬಟ್ಟೆಬರೆಗಳಿಲ್ಲದೆ ತಿರುಗಾಡುತ್ತಾ ಇರುವರಂತೆ.

ವಿದೇಶ.

ಮಾಂಸವನ್ನು ಕಾಣದೆ ಮಾಡುವಂತೆ, ಅಥವಾ ಕನ್ನಡಿಯಂತೆ ಮಾಡಿ ಅದರೊಳಗಿರುವ ಎಲುಬನ್ನೆ ಕಾಣುವಂತೆ ಮಾಡುವ, ಒಂದು ದ್ರವಪದಾರ್ಥವನ್ನು ಕಂಡುಹಿಡಿದಿರುತ್ತಾರೆ

* * *

ಜೆಕೋಸ್ಲಾವಕ್ಯಾದ ಅಧ್ಯಕ್ಷರಾಗಿರುವ ಮಸಾರಿಕ್ ಎಂಬುವರು ಅತ್ಯಂತ ಕಷ್ಟದಲ್ಲಿರುವ ವಿದ್ವಾಂಸರ ಉಪಯೋಗಾರ್ಥವಾಗಿ ಸುಮಾರು 3,500 ಪೌನುಗಳನ್ನು ಕೊಟ್ಟಿರುತ್ತಾರೆ.

* * *

ಡಾಕ್ಟರ್ ಸಿ. ಜಿ ಏಬಡ್ ಎಂಬಾತನು ಸೂರ್ಯಕಿರಣದಿಂದ ಉರಿಯುವ ತಿಂತಿ ಪದಾರ್ಥ ವಿಸಹ ಪಾಕ ಎಲ್ಲಾ ಅಡಿಗೆ ಕೆಲಸವನ್ನು ಮಾಡುವಂತ ಒಂದು ಯಂತ್ರವನ್ನು ಕಂಡುಹಿಡಿದಿರುತ್ತಾರೆ

* * *

ಸ್ಯಾಮುಲ್ ಓಹಾಪ್ ಮೆಗ್ ಎಂಬಾತನು ಕಿವಿಯ ಅಲೆಗಳಿಂದ ಕಂಡುಹಿಡಿಯುವಂತ ಒಂದು ಯಂತ್ರವನ್ನು ಕಂಡುಹಿಡಿದಿದ್ದಾನಂತೆ ಈ ಯಂತ್ರದ ಮೂಲಕ ಎಂಥಾ ಕಗ್ಗತ್ತಲೆಯಲ್ಲಿಯಾದರೂ ಅರುನೂರು ಅಡಿಗಳ ದೂರದಲ್ಲಿರುವ ಜನರನ್ನು ಕಂಡುಹಿಡಿಯಬಹುದಂತೆ.

* * *

ರಷ್ಯಾದ ಕ್ಷಾಮಪೀಡಾರ್ಥಿಗಳಿಗಾಗಿ ಉಪಾಯವನ್ನು ಯೋಚಿಸುತ್ತಿರುವಾಗ ಲಾರ್ಡ್ ಕರ್ಜನ್‌ರವರು ತಮಗೆ ಇಂಡಿಯಾದಲ್ಲಿ ಕ್ಷಾಮಪೀಡಿತರಾಗಿದ್ದ ಜನರ ಅನುಭೋಗವು ತಿಳಿದಿದ್ದದ್ದರಿಂದ ಹಿಂದೂದೇಶದ ಜನರ ಮತ್ತು ಕ್ಷಾಮಪೀಡಿತರಾಗಿದ್ದ ಇತರ ದೇಶಗಳ ಸಹಾಯವನ್ನೂ ಕೇಳುವುದು ಒಳ್ಳೆಯದೆಂದು ಸೂಚಿಸಿದರು.

* * *

ಒಬ್ಬ ಕೃಷಿಯು ಇಪ್ಪತ್ತೈದು ವರ್ಷಗಳ ಹಿಂದೆ ಫ್ಲೋರಿಡಾ ಅವರೆಕಾಳಿನ ತಿರುಳಿನಿಂದ ಯೇಸುಕ್ರಿಸ್ತರ ಮುಖದ ನಕ್ಷೆಯನ್ನು ಬಹಳ ವಿಶೇಷವಾಗಿಯೂ, ಸೂಕ್ಷ್ಮದಿಂದಲೂ ಈಗ ಕಂಡುಹಿಡಿಯಲ್ಪಟ್ಟಿದೆ. ಕುತ್ತಿಗೆಯಿಂದ ತಲೆಯ ಮೇಲಿನ ಮುಳ್ಳಿನವರೆಗೆ ಒಂದು ಇಂಚು ಮಾತ್ರ ಈ ನಕ್ಷೆಯು ಇದೆಯಂತೆ ! ಎಂಥಾ ಚಾತುರ್ಯ !

* * *

ಬಯೋಸ್ಕೋಪ್ ಏರ್ಪಡಿಸುವ ಅನುಕೂಲಕ್ಕಾಗಿ ಜರ್ಮನಿ ಸೈನ್ಯದ ಮುಖ್ಯಸ್ಥನು ಒಂದು ಯುದ್ಧವನ್ನು ಏರ್ಪಡಿಸಿರುವನಂತೆ. ತನ್ನ ಸೈನ್ಯವನ್ನೇ ಎರಡು ಪಂಗಡಮಾಡಿ, ತಮಾಷೆಗಾಗಿ ಯುದ್ಧಮಾಡುತ್ತಾನೆಂದೂ, ಯಾವ ಪಂಗಡವು ಗೆಲ್ಲುತ್ತದೋ, ಆ ಪಂಗಡಕ್ಕೆ ತಾನು ಮುಂದಾಳಾಗಿ ನಿಲ್ಲುತ್ತೇನೆಂತಲೂ ಸೋಲುವ ಪಂಗಡಕ್ಕೆ ಇನ್ನೊಬ್ಬ ಮುಂದಾಳು ಬೇಕೆಂತಲೂ ಬರೆದಿರುತ್ತಾರೆ.

ಪತಿಭಕ್ತಿ.

ಮದುವೆಯಾದವರಲ್ಲಿ ವಿಶ್ವಾಸಘಾತಕತನವನ್ನು ಮಾಡಿ ಪರಸ್ಪರ ಪ್ರೀತಿಯನ್ನು ಕಳೆದುಕೊಳ್ಳಬಾರದೆಂಬುದೇ ವಿವಾಹದ ಮುಖ್ಯೋದ್ದೇಶವು. ಕೋಮಲತೆ, ಸೌಂದರ್ಯ ಮಾಧುರ್ಯ ಮೊದಲಾದ ರಮಣೀಯವಾದ ಸ್ವಭಾವಗಳು ಸ್ತ್ರೀಯರಲ್ಲಿ ಸಹಜವಾಗಿರುತ್ತವೆಯೇ ಹೊರತು, ಪುರುಷರಲ್ಲಿರುವುದಿಲ್ಲ. ಇದರಂತೆಯೇ ಸಾಹಸ ಧೈರ್ಯ, ಸ್ಥೈರ್ಯ ಮೊದಲಾದ ಗುಣಗಳು ಪುರುಷರಲ್ಲಿ ಕಾಣಬರುವುದೇ ಹೊರತು, ಸ್ತ್ರೀಯರಲ್ಲಿ ಕಾಣಬರುವುದಿಲ್ಲ. ಆದಕಾರಣ ಸ್ತ್ರೀ ಪುರುಷರಿಬ್ಬರೂ ತಮ್ಮ ತಮ್ಮ ಗುಣಗಳ ಪರಸ್ಪರ ಮೇಳನವನ್ನು ಮಾಡಿದರೆ ಸಂಸಾರದಲ್ಲಿ ಸುಖಾಭಿವೃದ್ಧಿ ಉಂಟಾಗುವುದೇ ಅಲ್ಲದೆ, ಅತ್ಯಂತ ಅನುರಾಗವೂ ಉಂಟಾಗುವುದು. ಆದುದರಿಂದ ನಿರಂತರವಾದ ಸಂಸಾರಸುಖಕ್ಕೂ ಪ್ರೀತಿಗೂ ಪತ್ನಿಯೇ ಮೂಲಕಾರಣವು.

ಯಾವಾಗಲೂ ಮನೆಯಲ್ಲಿ ನಡೆಸತಕ್ಕ ಕೆಲಸಗಳನ್ನು ಪಾಲುಮಾರಿಕೆಯಿಲ್ಲದೆ ಕ್ಲಿಪ್ತಕಾಲದಲ್ಲಿ ಮಾಡುತ್ತ, ಪತಿಯ ಹೆಸರನ್ನು ಔನತ್ಯಕ್ಕೆ ತರುವ ಕೆಲಸಗಳಲ್ಲಿ ಹೆಚ್ಚು ನಿಗವಿಟ್ಟು ಅವುಗಳನ್ನು ಮಾಡುವುದೇ ಅಲ್ಲದೆ, ಪತಿಯು ಯಾವ ಕೆಲಸದಲ್ಲಿಯಾಗಲಿ ಆಶಾಭಂಗವಾಗಿ ಉತ್ಸಾಹಹೀನನಾದರೆ ಉತ್ಸಾಹವನ್ನು ಹುಟ್ಟಿಸುವ ಸವಿನುಡಿಗಳಿಂದ ಸಮಾಧಾನಪಡಿಸಿ ಧೈರ್ಯವನ್ನು ಹೇಳಬೇಕಾದುದೇ ನಿಜವಾದ ಪತ್ನಿಯ ಧರ್ಮವು.

ಹೀಗಿರದೆ ನಮ್ಮಲ್ಲಿ ಕೆಲವು ಹೆಂಗಸರು ಪತಿಯು ಗೃಹವನ್ನಾಶ್ರಯಿಸಿದಕೂಡಲೇ ಆತನಿಗೆ ಒಡವೆ ವಸ್ತ್ರ ಕಡಗ ಕಂಠಾಭರಣ ಮುಂತಾದವುಗಳಿಗಾಗಿ ಅಪರಿಮಿತವಾದ ತೊಂದರೆಯನ್ನು ಕೊಟ್ಟು, ಆತನು ಅವುಗಳನ್ನು ತಂದು ಕೊಡದೆ ಹೋದಲ್ಲಿ, ತೌರುಮನೆಯವರ ಪ್ರಶಂಸೆಯನ್ನು ಮಾಡಿ ಗಂಡನು ನಾಚಿಕೊಳ್ಳುವಂತೆಯೂ ಕೂಡ ಮಾಡುತ್ತಾರೆ. ಇಂಥಾ ಸ್ತ್ರೀಯರು ಈ ದೇಶದಲ್ಲಿ ಕಡಿಮೆಯಾಗಿಲ್ಲ! ಇಂಥಾ ಹೆಂಗಸರು ತಮ್ಮ ವಾಕ್ಚಾತುರ್ಯದಿಂದ ಪತಿಯನ್ನು ಮರುಳುಮಾಡಿ ಆತನು ತಂದುಹಾಕಿದ ಧನಧಾನ್ಯ, ವಸ್ತ್ರಾಭರಣಗಳಿಂದ ತೃಪ್ತಿಹೊಂದದೆ ಅತಿಯಾಗಿ ಹಿಂಸೆಕೊಟ್ಟು ಪತಿಗೆ ಸಂಸಾರದಲ್ಲಿ ಬೇಸರವನ್ನು ಹುಟ್ಟಿಸಿ ಕೊನೆಗೆ 'ಹೆಂಡತೀ ನೀನು ನನ್ನ ಪ್ರಾಣಹಿಂಡುತಿ' ಎಂದು ಹೇಳುವಮಟ್ಟಿಗೂ ಮಾಡುವರು.

ನಿಜವಾದ ಪತ್ನಿಯು ತನ್ನ ಪತಿಯ ಸ್ಥಿತಿಯು ಒಳ್ಳೇದಾಗಿರಲಿ, ಕೆಟ್ಟದಾಗಿರಲಿ, ಗಂಡನಿಗೆ ಐಶ್ವರ್ಯವಿರಲಿ ಇಲ್ಲದಿರಲಿ ಅದನ್ನು ಹೆಂಡತಿಯೂ ಅನುಭವಿಸಬೇಕು. ಇದಲ್ಲವೇ ಪತ್ನೀಕರ್ತವ್ಯ! ಹೀಗೆ ಪತಿಯ ಸುಖದುಃಖಗಳಲ್ಲಿ ಪತ್ನಿಯು ಸಮಭಾಗಿನಿಯಾಗಿದ್ದರಲ್ಲವೇ ದಾಂಪತ್ಯದಲ್ಲಿ ನಿಶ್ಚಲವಾದ ಪ್ರೇಮವಿರುವುದು. ತನ್ನ ಪತಿಯ ಮಾನವನ್ನು ಕಾಪಾಡಿ, ಆತನಿರುವ ಸ್ಥಿತಿಯಲ್ಲಿ ತಾನೂ ಇರಬೇಕಾದುದೇ ಸ್ತ್ರೀಧರ್ಮನೀತಿಯಲ್ಲವೇ? ಹೀಗಿರದೆ ವಿವಾಹವಾದನಂತರ ಪತಿಯ ಸ್ಥಿತಿಯನ್ನರಿತುಕೊಳ್ಳದೆ ದೇಹಕ್ಕಿಂತ ಭಾರವಾದ ಆಭರಣಗಳನ್ನು ಧರಿಸಿಕೊಂಡು, ಪಾಶ್ಚಿಮಾತ್ಯರುಟ್ಟುಕೊಳ್ಳುವ ಮತ್ತು ನವೀನ ನಾಗರಿಕತೆಯನ್ನು ಸೂಚಿಸುವ ವಿವಿಧ ಬಟ್ಟೆಗಳನ್ನುಟ್ಟು, ದೇಹವನ್ನು ಶೃಂಗರಿಸಿಕೊಂಡು, ಪಾಲುಮಾರಿಕೆಯಿಂದ ಗೃಹಕೃತ್ಯವನ್ನು ಚೆನ್ನಾಗಿ ಮಾಡದೆ ಹೊತ್ತುಗಳೆಯುವ ನಾರಿಯು ಮನೆಗೆ ಮಾರಿಯೆಂದು ಹೇಳುವುದರಲ್ಲಿ ಆಶ್ಚರ್ಯವೇನು?

ಇಂಥಾ ಸ್ತ್ರೀಯರಿಗೆ ನಮ್ಮ ಭಾರತಮಾತೆಯ ವಿಶಾಲವಾದ ಗರ್ಭದಲ್ಲಿ ಸೀತೆ, ಸಾವಿತ್ರಿ, ಲೋಪಾಮುದ್ರೆ, ದಮಯಂತಿ ಮುಂತಾದ ಕುಲಸ್ತ್ರೀಯರು ಹುಟ್ಟಿ ಬದುಕಿ ಬಾಳಿದರೆಂದೂ, ಮತ್ತು ಅವರು ಎಷ್ಟರಮಟ್ಟಿಗೆ ಪತಿಭಕ್ತಿಪರಾಯಣೆಯರಾಗಿದ್ದರೆಂದೂ, ಇಷ್ಟೇ ಅಲ್ಲದೆ ಅವರ ಜನನವು ಭಾರತಮಾತೆಯನ್ನು ಎಷ್ಟು ಪವಿತ್ರವಾಗಿ ಮಾಡಿದೆಯೆಂದೂ ತಿಳಿದಿಲ್ಲವಾಗಿ ತೋರುತ್ತೆ. ಇದು ಬಹಳ ಶೋಚನೀಯವಲ್ಲವೇ? ಈಗಿನ ನಾರೀಮಣಿಯರು ಅವರಂತೇ ಸ್ತ್ರೀಯರಲ್ಲವೇ, ಆದರೂ ಇವರಿಗೂ ಅವರಿಗೂ ಇಷ್ಟು ವ್ಯತ್ಯಾಸವೇಕೆಂದು ಹೇಳಲಾಗುವುದಿಲ್ಲವೇ. ಇದೆಲ್ಲಕ್ಕೂ ಪಾಶ್ಚಿಮಾತ್ಯರಿಂದ ಕೊಂಡುಕೊಂಡಿರುವ ಕನ್ನಡಿಯೇ ಕಾರಣ. ಇದನ್ನು ನಮ್ಮವರು ಧರಿಸಿಕೊಂಡಿರುವುದರಿಂದ ಅವರಿಗೆ ತಮ್ಮ ತಮ್ಮ ಆಚಾರಗಳೇ ಗೋಚರವಾಗುವುದಿಲ್ಲ. ಇದೆಂಥಾ ಅದ್ಭುತ ಕನ್ನಡಿ! ಇದರಿಂದ ಉಂಟಾಗುವ ನೋವನ್ನು ಆ ಕಣ್ಣು ಎಷ್ಟು ದಿವಸ ತಾನೇ ಸಹಿಸಿಕೊಂಡೀತು? ಸಹಿಸಿಕೊಂಡರೂ ಕಣ್ಣಿನ ದೃಷ್ಟಿಯು ದಿನೇದಿನೇ ಕುಂದದೇ ಹೋದೀತೇ?

ಕಾರೊನೇಶನ್ ಸಮಯದಲ್ಲಿ ಡಿಲ್ಲಿ ಪಟ್ಟಣದಲ್ಲಿ ಲಾರ್ಡ್ ಹಾರ್ಡಿಂಜ್ ಪ್ರಭುಗಳು ಪತ್ನೀ ಸಮೇತರಾಗಿ ಮೆರವಣಿಗೆಯಲ್ಲಿ ಆನೆಯ ಮೇಲೆ ಅಂಬಾರಿಯಲ್ಲಿ ಹೋಗುತ್ತಿದ್ದಾಗ ಯಾರೋ ಗೊತ್ತಿಲ್ಲದೆ ಅವರ ಮೇಲೆ ಬಾಂಬನ್ನು ಹಾರಿಸಿದರಷ್ಟೆ. ಆಸಮಯದಲ್ಲಿ ಅವರು ಗುಂಡಿನಪೆಟ್ಟಿನಿಂದ ಮೂರ್ಛಿತರಾದಾಗ ಪತಿಯ ಸ್ಥಿತಿಯನ್ನು ನೋಡಿದಂಥಾ ಲೇಡಿಹಾರ್ಡಿಂಜರು ಯಾವಭಯವೂ ಇಲ್ಲದೆ ಅಂಬಾರಿಯಿಂದಿಳಿದು ಅತ್ಯಂತ ತಾಳ್ಮೆಯಿಂದ ಪತಿಯನ್ನು ಕೆಳಗಿಳಿಸಿ ಅಲ್ಲಿ ಭೀತಿಗೊಂಡಿದ್ದ ಜನರನ್ನು ಸಮಾಧಾನಿಸಿ, ದೇವರ ದಯದಿಂದ ಏನೂ ಹಾನಿಯುಂಟಾಗಲಿಲ್ಲವೆಂದು ಅವರಿಗೆ ಅಭಯವನ್ನಿತ್ತು, ಆತನನ್ನು ಮೋಟಾರಿನಲ್ಲಿ ಕುಳ್ಳಿರಿಸಿಕೊಂಡು ಎಂದಿನಂತೆ ತಾಳ್ಮೆಯಿಂದಲೂ ಧೈರ್ಯದಿಂದಲೂ ತಮ್ಮ ಮನೆಗೆ ಹಿಂತಿರುಗಿದರು. ಇದಲ್ಲವೇ ಪತಿಯ ಮೇಲಿನ ಅತ್ಯಂತ ಪ್ರೇಮ ಮತ್ತು ಭಕ್ತಿ. ಪತಿಯ ಕಷ್ಟವು ಪತ್ನಿಯದೇ ಎಂದು ಎಣಿಸಿದುದರಿಂದಲ್ಲವೇ ಅವರಿಗೆ ಭಯವೆಂಬುದು ತೋರಲಿಲ್ಲ. ಪಾಶ್ಚಾತ್ಯರಲ್ಲಿ ಇಂಥಾ ಧೀರೆಯರು ಇನ್ನೂ ಅನೇಕರಿರುವರು.

ಆದಕಾರಣ ವಾಯುಗುಣಕ್ಕೆ ಸರಿಯಾದ ಪಾಶ್ಚಾತ್ಯರ ಉಡಿಗೆತೊಡಿಗೆಗಳನ್ನು ನಮ್ಮವರು ಅನುಸರಿಸುವದರ ಬದಲು ಅವರ ಸದ್ಗುಣಗಳನ್ನು ತಿಳಿದುಕೊಂಡು ಅದರಂತೆಯೇ ನಡೆದರೆ ನಮ್ಮ ದೇಶವು ಎಷ್ಟು ಉನ್ನತಿಸ್ಥಿತಿಗೆ ಬರುವದೆಂಬುದನ್ನು ಹೇಳಲಸಾಧ್ಯ.

ಲೋಕಮಾನ್ಯಳಾದ ಸೀತಾದೇವಿಯ ವೃತ್ತಾಂತವು ಈಗಿನವರಿಗೆ ತಿಳಿಯದೇ? ಅವಳೊಬ್ಬಳ ಜನನದಿಂದಲೇ ಭಾರತಮಾತೆಗೆ 'ರತ್ನಗರ್ಭ' ಎಂದು ಹೆಸರು ಬಂದಿದೆಯೆಂದು ತಿಳಿಯದೇ? ಇಂಥಾ ಪ್ರಖ್ಯಾತವಾದ ಹೆಸರನ್ನು ನವನಾಗರೀಕತೆಹೊಂದಿದ ಕೆಲವರು ಸ್ತ್ರೀಯರು ಹಾಳುಗೆಡಿಸಲುದ್ಯೋಗಿಸುವುದು ದೊಡ್ಡ ಪ್ರಮಾದವಲ್ಲವೇ. ಇಂಥಾ ಅವಮಾನವನ್ನು ತಾನೇ ಆ ಭಾರತಮಾತೆಯು ಹೇಗೆ ಸಹಿಸ್ಯಾಳು?

ಸೀತೆಯಂಥಾ ಉತ್ತಮಸ್ತ್ರೀಯರು ಹುಟ್ಟಿದ ದೇಶವು ಎಷ್ಟು ಚಿಕ್ಕದಾದರೂ, ಎಂಥಾ ಹೀನಸ್ಥಿತಿಯಲ್ಲಿದ್ದರೂ ಲೋಕದಲ್ಲಿ ಪೂಜ್ಯವಾದದ್ದು. ಈ ಲೋಕದಲ್ಲಿ ಹುಟ್ಟಿದ ಸೀತೆಯಂಥಾ ಉತ್ತಮಸ್ತ್ರೀಯರು ಇನ್ನಾವ ದೇಶದಲ್ಲಿಯೂ ಹುಟ್ಟಲಿಲ್ಲವೆಂದು ಹಿಂದೂದೇಶವು ಎಷ್ಟರಿಂದಲೂ ಹೊಗಳಿಕೊಳ್ಳುವುದಿಲ್ಲವೇ. ಇತರ ವಿಷಯದಲ್ಲಿ ಭರತಖಂಡವು ಉಳಿದ ದೇಶಗಳಿಗಿಂತ ಕಡಿಮೆಯಾದಾಗ್ಯೂ ಸೀತೆಯಂಥಾ ಪತಿವ್ರತೆಯರ ಸತ್ಕೀರ್ತಿಯ ವಿಷಯದಲ್ಲಿ ಇದಕ್ಕೆ ಸಮಾನವಾದದೇಶವು ಮತ್ತೊಂದಿಲ್ಲ. ದಮಯಂತಿ, ಲೋಪಾಮುದ್ರೆ, ಸಾವಿತ್ರಿ ಮುಂತಾದ ಉತ್ತಮ ಸ್ತ್ರೀಯರ ಚರಿತ್ರೆಗಳೂ ಇದರಂತೆಯೇ ಇವೆ. ಆದಕಾರಣ ಸ್ತ್ರೀಜನರಯೋಗ್ಯತೆಯನ್ನು ಅಭಿವೃದ್ಧಿಪಡಿಸುವುದಕ್ಕೆ ಅಪೇಕ್ಷೆಯುಳ್ಳ ನಮ್ಮ ದೇಶದ ಸ್ತ್ರೀಯರು ಮೇಲೆ ಹೇಳಿದಂಥಾ ಪವಿತ್ರವಾದ ನಡತೆಯು ಮರಳಿ ಉಜ್ಜೀವಿತವಾಗುವಂತೆ ನಡೆದುಕೊಂಡಲ್ಲಿ ನಮ್ಮ ಈ ದೇಶವು ಎಷ್ಟೇ ಚಿಕ್ಕದಾಗಿದ್ದರೂ ಅತುಳಕೀರ್ತಿಯನ್ನು ಹೊಂದದಿರುವುದೇ?

ಕರ್ತವ್ಯ.

(೪ ನೇ ಸಂಚಿಕೆಯಿಂದ ಸಾಗಿಬಂದದ್ದು)

ಅರಿತು ಸರ್ವಜ್ಞನಾದ ಸುಶೀಲನಾದ ತ್ರಿಕಾಲಜ್ಞಾನಿಯಾದ ತಪಸ್ವಿಯು ನಿನ್ನ ಆಸ್ಥಾನದಲ್ಲಿರುವನೋ? ಪೂರ್ವದಲ್ಲಿ ಶ್ರೀರಾಮಚಂದ್ರನಿಗೆ ವಸಿಷ್ಠಮಹರ್ಷಿಗಳು ಅಜ್ಞಾನನಿವೃತ್ತಿಮಾಡಿ ಸ್ಥೈರ್ಯವನ್ನುಂಟುಮಾಡಿದರೋ ಹಾಗೆ ನೃಪತಿಗಳಿಗೆ ಸಾಮಾನ್ಯವಾಗಿ ಶಂಕೆಗಳು ಉದ್ಭವಿಸಲು ಕಾರಣಗಳುಂಟು. ಹೊಂಗಣ ವಿಶಿಷ್ಟ ಆಡಳಿತಗಳ ವೃದ್ಧಿಪಡಿಸಲು ತಕ್ಕ ಮಂತ್ರಿವರ್ಯನು ಅಂತರಂಗದ ಆತ್ಮಬಲವೃದ್ಧಿಗೊಳಿಸಲು ತಕ್ಕ ಪ್ರಾಜ್ಞನು ಇರಬೇಕು. ಅಂಥಾ ರಾಜನಿಗೆ ಇಹದಲ್ಲಿ ಸುಖವು ಪರದಲ್ಲಿ ಸಾಯುಜ್ಯವು ದೊರಕುವುದು. ಹೀಗಿಲ್ಲದ ದೊರೆಯು ಎಂದೂ ಊರ್ಜಿತಹೊಂದಲಾರನು. ಎಂದ ಮುನಿಪುಂಗವನ ನುಡಿಯಂ ಕೇಳಿ ರಾಜನು ಹೇ ಮುನಿಶ್ರೇಷ್ಠನೆ, ತಮ್ಮ ದರ್ಶನದಿಂದ ನನ್ನ ಭವಬಂಧನವು ನುಡಿಯಿಂದ ಸಾಯುಜ್ಯವು ದೊರೆಯುವದೆಂದು ನಾನು ನಂಬಿರುತ್ತೇನೆ. ನನ್ನ ಮನಸಂಶಯವು ದೂರೀಕರಿಸುವಂತೆ ಮನುಷ್ಯಜನ್ಮದ ಸಾರಾಸಾರ ವಿವರವಂ ವಿಸ್ತಾರವಾಗಿ ಹೇಳಿ ನನ್ನ ಜನ್ಮವಂ ಪಾವನಗೈಯ್ಯಬೇಕಾಗಿ ಕೇಳಿಕೊಂಡ ನೃಪತಿಗೆ ಮುನಿಪುಂಗವನು ಹೇಳುವದೆಂತೆಂದರೆ —ರಾಜಶ್ರೇಷ್ಠನೆ ಆಲಿಸು. ಮನುಷ್ಯಜನ್ಮವು ಸೃಷ್ಟಿಯಲ್ಲಿ ಶ್ರೇಷ್ಠತರವಾದ್ದರಲ್ಲಿ ಕರ್ತವ್ಯಾಕರ್ತವ್ಯ ತಿಳಿದು ನಡೆಯತಕ್ಕದ್ದೇ ಮುಖ್ಯವಾದ ಕರ್ಮವಾಗಿದೆ. ಮನುಷ್ಯನು ಕರ್ಮದಲ್ಲಿ ನಿರತನಾಗಿರುವಷ್ಟು ಸೌಲಭ್ಯವು ಬೇರೆ ಯಾವುದರಲ್ಲಿಯೂ ಇಲ್ಲವೆಂದು ನಂಬು. ಕರ್ತವ್ಯವು ಕರ್ಮದ ಮೂಲಸ್ಥಾಯಿಯಾಗಿದೆ. ಕರ್ಮವು ಮನುಷ್ಯನಿಗೇ ಕಾಮ್ಯರಹಿತವಾಗಿ ಇಂಬೇರ್ಪಡುವುದು ಜಗತ್ತಿನಲ್ಲಿ. ಮನುಷ್ಯನಲ್ಲಿ ಇರತಕ್ಕ ವಿಧೇಯತ್ವವೆಂಬ ಸುಗುಣವನ್ನು ತೋರಿಸಿಯೇ ಪ್ರಪಂಚದ ವಿಶಿಷ್ಟ ಸೃಷ್ಟಿಗಳು ಅನುಕರಿಸಿವೆ ಎಂಬುದು ಪರಮಾತ್ಮನ ಸೃಷ್ಟಿರಚನೆಯಲ್ಲಿ ಮೇಲ್ಪಂಕ್ತಿಯಾಗಿದೆ. ಎಂಬುದು ಪ್ರತಿಯೊಬ್ಬನು ಧ್ಯೇಯದಲ್ಲಿಡತಕ್ಕ ಮುಖ್ಯ ಅಂಶವಾಗಿದೆ. ಅಂಥಾ ಮನುಷ್ಯನು ಕರ್ತವ್ಯದಿಂದ ವಿಧೇಯತ್ವವನ್ನಂಗೀಕರಿಸುವದು ಪ್ರಾಮುಖ್ಯವಾದ ಗುಣರೂಪವಾಗಿ ಪುರಾತನದಿಂದ ಸಾಂಗವಾಗಿ ನಡೆದುಬಂದ ಕರ್ಮಕರ್ತವ್ಯಕ್ಕೆ ವಿರೋಧ ನಡೆದವನು ಮನುಷ್ಯಗಣನೆಗೆ ಬಾರದೆ ಪಶುವೆಂದೆಣಿಸಬೇಕು.

ಕರ್ಮಣೈವಹಿ ಸಂಸಿದ್ಧಿ ಮಾಸ್ಥಿತಾ ಜನಕಾದಯಃ |
ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ ||

ಎಂಬ ಗೀತೆ ವಾಕ್ಯವನ್ನು ಆದರಿಸುವ ಸನಾತನಧರ್ಮಕ್ಕನುಸಾರವಾಗಿ ನಡಿಯುವ ಕರ್ಮಕರ್ತವ್ಯವೇ ಮಂಗಳಪ್ರದವಾದದ್ದು. ವಿಪರೀತಭಾವನೆಯಿಂದ ನರನು ಸ್ವಾರ್ಥಪರನಾಗಿ ಮಾಡತಕ್ಕ ಎಲ್ಲಾ ಕೆಲಸವು ದೂಷಣೀಯವಾದ್ದಾಗಿದೆ. ತ್ರಿಕರಣಶುದ್ಧಿಯು ಮನುಷ್ಯನಿಗೆ ಪ್ರಥಮಶಿಕ್ಷಣ. ಇದನ್ನು ಬಾಲ್ಯದಿಂದಲೆ ಕಲಿಯತಕ್ಕದ್ದು. ಕ್ಷಣಕ್ಷಣ ಚಿತ್ತಚಾಂಚಲ್ಯ ಸ್ವಭಾವವು ಸುಲಕ್ಷಣವಿಲ್ಲದ ಪಾಮರರೆಂದೂಹಿಸು. ನರನು ಸ್ವಾತಂತ್ರಪರನಾಗಬೇಕೆಂದರೆ ಅಭಿಪ್ರಾಯವಿರೋಧವಲ್ಲ. ನೀತಿಯಿಂದ ಸತ್ಯಪಾಲನ ನೋಡು. ಪ್ರಹ್ಲಾದ ಹರಿಶ್ಚಂದ್ರ ಶ್ರೀರಾಮ, ಧರ್ಮರಾಯ, ನಳ ಇತ್ಯಾದಿ ಮಹನೀಯರು ಭಾರತಾಗ್ರಗಣ್ಯರೆಂದು ಕೀರ್ತಿ ಪಡೆದು ಮರಣಪಟ್ಟರೂ ಅವರ ಕೀರ್ತಿಯೂ ಲೋಕಪ್ರಖ್ಯಾತವಾಗಿ ಸ್ಥಿರಚಾಯಿಯಾಗಿರುವುದು. ಮನುಷ್ಯನು ಸ್ವಧರ್ಮವನ್ನು ಕಾಪಾಡುವದೇ ಮುಖ್ಯ ಕರ್ತವ್ಯ. ಸ್ವಧರ್ಮವೆಂದರೆ ಸ್ವರಾಜ್ಯಸ್ವತಂತ್ರ ತಮ್ಮ ಜನಾಂಗದ ಐಕಮತ್ಯ ದೇಶೋನ್ನತಿಯ ಕುರುಹು ತಮ್ಮ ದೇಶದ ನಡವಳಿಕೆಯು ತಮ್ಮ ಸನಾತನಧರ್ಮವನ್ನವಲಂಬಿಸಿರಬೇಕು. ಐಶ್ವರ್ಯಮದದಿಂದಲೋ ವಿದ್ಯಾಮದದಿಂದಲೋ ವಿಕಾರತೆಯನ್ನು ಹೊಂದುವದು ಮನುಷ್ಯನಿಗೆ ಸ್ವಾತಂತ್ರ್ಯವಲ್ಲ. ಐಶ್ವರ್ಯವು ತನ್ನ ಮೇಹನತ್ತಿನಿಂದ ದೈವಾನುಕೂಲದಿಂದಲೇ ಬರತಕ್ಕದ್ದಾಗಿದೆ. ತನ್ನ ಮೇಹನತ್ತು ತನ್ನ ಸುಖವನ್ನು ದೈವಾನುಕೂಲ ಹೊಂದಿ ವಿಶಿಷ್ಟತೆಯಿಂದ ಪ್ರಾಧಾನ್ಯವನ್ನು ಹೊಂದುವದರಿಂದ ಐಶ್ವರ್ಯವು ಸಲ್ಪ ಸಂಪಾದಿಸುವದು ನರಾಧಮನ ಮತವಾಗಿದೆ. ಪೂರ್ವಜನ್ಮದ ವಾಸನಾಫಲದಿಂದಲೇ ತನಗೆ ಈ ಜನ್ಮದಲ್ಲಿ ಒದಗತಕ್ಕಂಥಾ ಐಶ್ವರ್ಯವನ್ನು ತಾನು ಅನುಭವಿಸದೆ ಪರರಿಗೂ ಕೊಡದೆ ಇದ್ದರೆ (ಧನವಪರರಿಗೆಕೊಡದೆ ತಾನನುಭವಿಸದಿರಲು | ಕನಗಂಟಿನ ತೆರದೊಳಾರಾದರೊಯ್ವರು | ಒನಗಳಿದನರಿತುತುಂಬಿದ ಒರೆಗೆ ಕಾಲ್ಪೆಗಳ ತೆಗೆದು ಸ್ವರುಗಳನು || ಯುನಿತುಬಳಸುವಂತೆ ಸಂಪಾದಿಸಿದ ಧನವ ನಸುವಾ ಪಾತ್ರವರಿತಿತ್ತು ಮೆಚ್ಚಿಸಲದುವ | ಘನಕೀರ್ತಿಗೆ ಕೀರ್ತಿಫಲವಾಗಿ ನೂಗಯುಸುವದರ್ಥವಂಶರನಿಬೆಡು ||) ಈ ರೀತಿ ಇರತಕ್ಕದ್ದಾಗಿದೆ. ಧನವು ತನ್ನಲ್ಲಿರುವದರಿಂದ ತನ್ನ ಸ್ವಾತಂತ್ರ್ಯವೂ ದುರಭಿಮಾನದಿಂದ ತಾನು ತನ್ನ ಪತ್ನೀಪುತ್ರರನ್ನು ಸ್ವಇಚ್ಛೆ ಪ್ರಕಾರ (ಮುಂದರಿಯುವದು)

ಆರ್. ಎಸ್. ಆರ್.

ವೇದಾಂತ ಸಂಘ

|| ಓಂ ನಮೋ ಭಗವತೇ ರಾಮಕೃಷ್ಣಾಯ ||

ಕೊಡಗು ವೇದಾಂತ ಸಂಘದವರು ದೇಶಾಭಿಮಾನಿಗಳ ಮತ್ತು ಧರ್ಮಾಭಿಮಾನಿಗಳ ಸಹಾಯದಿಂದ ಶ್ರೀರಾಮಕೃಷ್ಣಪರಮಹಂಸರ ಎಂಭತ್ತಾರನೇ ಜಯಂತ್ಯುತ್ಸವವನ್ನು ಎಂದಿನಂತೆ ಈ ವರ್ಷದಲ್ಲಿಯೂ ಮಡಿಕೇರಿಯಲ್ಲಿ ಆಚರಿಸುವವರಾದರು. ಇದಕ್ಕಾಗಿ ಕಳೆದ ಏಪ್ರಿಲ್ ತಾ|| 24ನೇ ದಿನ ಸೆಂಟ್ರಲ್‌ಸ್ಕೂಲ್ ಹಾಲಿನಲ್ಲಿ ಮ|| ರಾ|| ಎ. ಬಿ. ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಮಹಾಸಭೆಯು ನೆರವೇರಿತು. ಆ ದಿನದ ಪೂರ್ವಭಾಗವೆಲ್ಲಾ ಭಕ್ತಮಂಡಲಿಯ ಭಜನೆಯು ಕೂಟವೊಂದಿಗೆ ಶ್ರೀರಾಮಕೃಷ್ಣಪರಮಹಂಸರ ಭಾವಚಿತ್ರವನ್ನು ನಗರದಲ್ಲೆಲ್ಲಾ ಮೆರವಣಿಗೆ ಮಾಡುವುದರಲ್ಲೇ ಕಳೆದುಹೋದುದರಿಂದ ಈ ಮಹಾಸಭೆಯು ಸಾಯಂಕಾಲ 3 ಘಂಟೆಯಲ್ಲಿ ಪ್ರಾರಂಭಿಸಿತು. ವೇದಾಂತಸಂಘದ ಆನರರಿ ಸೆಕ್ರೆಟರಿಗಳಾದ ಮ|| ರಾ|| ಬಿ. ರಾಮಣ್ಣನವರು ವಾರ್ಷಿಕ ಚರಿತ್ರೆಯನ್ನು ಓದಿದರು. ಅದರ ಸಾರಾಂಶವೇನೆಂದರೆ—

ಈ ವೇದಾಂತ ಸಂಘವು ಮಡಿಕೇರಿಯಲ್ಲಿ ಸ್ಥಾಪಿಸಲ್ಪಟ್ಟು ಏಳು ವರುಷಗಳಾದುವು. ಒಂದೆರಡು ವರುಷಗಳಲ್ಲಿ ಇದರಲ್ಲಿ ಮೆಂಬರುಗಳ ಸಂಖ್ಯೆ ನೂರನ್ನು ಮೀರಿದರೂ ಕ್ರಮೇಣ ಅದು ಕೆಳಕ್ಕಿಳಿದು ಈಗ ನಲ್ವತ್ತುಮಂದಿ ಮೆಂಬರುಗಳುಳಿಯುವಂತಾಯಿತು.

ಸಂಘದ ಜಮಾ ಖರ್ಚಿನ ವಿವರ.

1917—18	ಜಮಾ	501—3—2	ಖರ್ಚು	467—10—2
1918—19	,,	569—12—7	,,	538—14—2
1919—20	,,	469—2—5	,,	136—5—3

ಖಾತಾ ಬಾಕಿ ರೂ. 332—13—2 ಇದರಲ್ಲಿ ಮಂದಿರಸ್ಥಾಪನಾರ್ಥವಾಗಿ ಇರಿಸಿರುವ ಬಂಡವಾಳದ ರೂ. 250—0—0; ಪೋಸ್ಟಾಫೀಸು ಸೇವಿಂಗ್ಸ್ ಬ್ಯಾಂಕಿನಲ್ಲಿ ಇರಿಸಿರುವ ರೂ. 50—0—0; ಚಲಾವಣೆಯಲ್ಲಿರುವ ರೂ 32—13—2.

ನಮ್ಮ ಸಂಘಕ್ಕೆ ಬಹಳ ಸಹಾಯವನ್ನು ಮಾಡುತ್ತಿದ್ದ ಮತ್ತು ನಮ್ಮ ಸಂಘದ ಬೆಳವಣಿಗೆಗೆ ಸ್ಥಳವನ್ನು ಕೊಟ್ಟಿರುವ ಮ|| ರಾ|| ಸಿ. ಜಿ. ಬೇನ್‌ಸಿಂಗರವರು ಕಾಲಾಧೀನರಾದರೆಂಬ ವಿಷಯದಲ್ಲಿ ತುಂಬಾ ವಿಷಾದಪಡಬೇಕಾಗಿದೆ. ಅವರಿಗೆ ಅತ್ಯುತ್ತಮ ಪದವಿಯು ಪ್ರಾಪ್ತಿಯಾಗಲಿ ಎಂದು ಶ್ರೀ ರಾಮಕೃಷ್ಣ ಪರಮಹಂಸರನ್ನು ಪ್ರಾರ್ಥಿಸುವುದಾಗಿದೆ.

ಬಿ. ರಾಮಣ್ಣ, ಸೆಕ್ರೆಟರಿ.

ಕೊಡಗು ಬ್ರಾಹ್ಮಣರು, ಧರ್ಮಪ್ರಶಂಸೆ.

ಕೆಲವು ದಿನಗಳ ಹಿಂದೆ ಕೊಡಗು ಕಡಿಯತ್ತುನಾಡಿನ ಕೆಲವು ಬ್ರಾಹ್ಮಣರು ಇದುವರೆಗೆ ಬ್ರಾಹ್ಮಣರಲ್ಲಿ ಆಚರಣೆಯಲ್ಲಿಲ್ಲದಂಥಾ ಹೂಡುವ ಕರ್ಮವನ್ನು ಮಾಡಿದರೆಂದೂ, ಹಾಗೆ ಹೂಡಿಯೂ ಸಹ ಅದು ಧರ್ಮವಿರುದ್ಧವಲ್ಲವೆಂದು ವಾದಿಸುತ್ತಿರುವರೆಂದೂ ಕೇಳಲು ತುಂಬಾ ವಿಷಾದಿಸುತ್ತೇನೆ. ಹೂಡುವುದು ಕೇವಲ ಧರ್ಮವಿರುದ್ಧವೆಂಬುದು ಸುಪ್ರಸಿದ್ಧವಾದುದರಿಂದಲೇ ಇದುವರೆಗೆ ನಮ್ಮ ಪೂರ್ವಿಕರಾದ ಮಹರ್ಷಿಯರು ಅದನ್ನು ಆಚರಣೆಗೆ ತರಲಿಲ್ಲ. ನಮ್ಮ ಪೂರ್ವಜರಿಗೆ ಆಪತ್ಕಾಲವು ಬರಲಿಲ್ಲವೆಂತಲ್ಲ. ಅವರಿಗೆ ಒಂದಂತಹ ಆಪತ್ತುಗಳು ನಮಗೆ ಇದುವರೆಗೂ ಬಂದಿಲ್ಲ. ಅಂಥ ಆಪತ್ತುಗಳು ಬಂದಿದ್ದರೆ ಧರ್ಮವಿರುದ್ಧವಾದ ಯಾವ ಕರ್ಮಗಳನ್ನು ಮಾಡುತ್ತಿದ್ದೆವೊ ಊಹಿಸಲಶಕ್ಯವು. ಅಂಥಾ ದುರವಸ್ಥೆಗಳಲ್ಲಿಯೂ ಸಹ ಭಾರತ ಧರ್ಮವನ್ನು ಕಾಪಾಡಿದ್ದರಿಂದ ಭಾರತೀಯರ ಪ್ರಾಶಸ್ತ್ಯವು ಚಿರಸ್ಥಾಯಿಯಾಗಿದೆ. ಅಂಥಾ ಧರ್ಮವೆಂಬ ರತ್ನವು ಆಧುನಿಕರಾದ ನಮ್ಮ ಕೈಗೆ ದೊರೆತದ್ದು ಮಂಗನಕೈಯಲ್ಲಿ ಮಾಣಿಕ್ಯವನ್ನು ಕೊಟ್ಟಂತಾಗಿದೆ.

ಬ್ರಾಹ್ಮಣರು ಹೂಡುವ ವಿಷಯದಲ್ಲಿ ಶಾಸ್ತ್ರಸಿದ್ಧಾಂತವೇನೆಂದು ತಿಳಿಯಬೇಕಾಗಿದೆ. ಪರಾಶರಸ್ಮೃತಿ ಎರಡನೇ ಅಧ್ಯಾಯದಲ್ಲಿ.

ಶ್ಲೋ॥ ಷಟ್ಕರ್ಮ ಸಹಿತೋವಿಪ್ರಃ । ಕೃಷಿಕರ್ಮಚ ಕಾರಯೇತ್ ॥

ಅರ್ಥ॥ ಷಟ್ಕರ್ಮವುಳ್ಳ ಬ್ರಾಹ್ಮಣನು ಕೃಷಿಕಾರ್ಯವನ್ನು ಮಾಡಿಸಬೇಕು —ಎಂದು ಹೇಳುತ್ತೆ. ಮತ್ತು ಇದೇ ಶ್ಲೋಕದ ವ್ಯಾಖ್ಯಾನದಲ್ಲಿ ವಿದ್ಯಾರಣ್ಯರು ಕೃಷಿ ಎಂದರೆ ಮುಖ್ಯವಾಗಿ ಲೋಹಮುಖವುಳ್ಳ ಕಾಷ್ಠಮಯವಾದ ವಸ್ತುವನ್ನು ಎತ್ತುಗಳ ಸಹಾಯದಿಂದ ಉಪಯೋಗಿಸಿ ವ್ಯವಸಾಯ ಮಾಡುವುದೆಂತಲೂ ಹೀಗೆ ಮಾಡುವುದರಿಂದ ಬಹಳ ಪ್ರಾಣಿಗಳಿಗೆ ಹಿಂಸೆಯುಂಟಾಗುವುದರಿಂದ ಅದು ಬಹುನಿಂದ್ಯವಾದುದೆಂತಲೂ ಅದರೆ ಅತ್ಯಂತಾಪತ್ತಿನಲ್ಲಿ ಮಾತ್ರ ಕೃತತ್ರೇತದ್ವಾಪರದಲ್ಲಿ ಕೃಷಿಮಾಡಿಸಬಹುದೆಂತಲೂ ಕಲಿಯುಗದಲ್ಲಿ ಮಾತ್ರ ಕೃಷಿ ಮಾಡಬಹುದೆಂತಲೂ, ಅನಂತರ ಪ್ರಾಯಶ್ಚಿತ್ತಾದಿಗಳನ್ನು ಮಾಡಿಕೊಳ್ಳಬೇಕೆಂತಲೂ ಶ್ಲೋಕದ ರಹಸ್ಯಾರ್ಥವನ್ನು ಗ್ರಹಿಸಿ ವ್ಯವಸ್ಥೆ ಮಾಡಿರುತ್ತಾರೆ.

ಅದೇ ಅಧ್ಯಾಯದಲ್ಲಿ ಅಂಥಾ ಆಪತ್ತಿನಲ್ಲಿ ಬ್ರಾಹ್ಮಣನು ಹೂಡಬೇಕಾದಾಗ ಅನುಸರಿಸಬೇಕಾದ ನಿಯಮಗಳನ್ನೂ ಸಹ ವಿಧಿಸಿದ್ದಾರೆ.

ರೋಗಪೀಡಿತಗಳಾದ ಎತ್ತುಗಳನ್ನು ಕಟ್ಟಬಾರದು. ಮುಳ್ಳುಗೋಲಿನಿಂದ ತಿವಿದು ಹಿಂಸಿಸಬಾರದು. ಹೂಡಿದ ನಂತರ ಎತ್ತುಗಳಿಗೆ ಸ್ನಾನಮಾಡಿಸಬೇಕು. ಎತ್ತುಗಳಿಗೆ ಶ್ರಮಪಡಿಸಿದ ದೋಷಪರಿಹಾರಕ್ಕೋಸ್ಕರ ಒಪ ದೇವತಾರ್ಚನೆ ಹೋಮ ಮುಂತಾದುದನ್ನು ತನ್ನ ಶಕ್ತ್ಯನುಸಾರ ಮಾಡಬೇಕು. ಇವೇ ಮೊದಲಾದ ಅನೇಕ ನಿಯಮಗಳನ್ನು ವಿಧಿಸಿರುತ್ತಾರೆ.

ಇತರ ಅನೇಕ ಜೀವಿಗಳಿಗೆ ಉಂಟಾಗುವ ಹಿಂಸೆಯಿಂದ ಬರುವ ದೋಷವನ್ನು ಕುರಿತು ಸ್ಮೃತಿಯು,

ಶ್ಲೋ॥ ಬ್ರಾಹ್ಮಣಶ್ಚೇತ್ ಕೃಷಿಂ ಕುರ್ಯಾತ್ ತದ್ದೋಷಮವಾಪ್ನುಯಾತ್
ಸಂವತ್ಸರೇಣ ಯತ್ಪಾಪಂ ಮತ್ಸ್ಯಘಾತೀ ಸಮಾಪ್ನುಯಾತ್ ।
ಅಯೋಮುಖೇನ ಕಾಷ್ಠೇನ ತದೇಕಾಹೇನ ಲಾಂಗಲೀ ॥

ಅ॥ ಬ್ರಾಹ್ಮಣನು ಕೃಷಿಮಾಡಿದರೆ ಮಹಾದೋಷಕ್ಕೆ ಭಾಗಿಯಾಗುತ್ತಾನೆ. ಮೀನುಗಳನ್ನು ಕೊಲ್ಲುವವನು ಒಂದು ವರ್ಷದಲ್ಲಿ ಹೊಂದುವನ್ನು ಪಾಪವನ್ನು ಉಕ್ಕಿನ ಮೂತಿಯುಳ್ಳ ಕಾಷ್ಠದಿಂದ ಕರ್ಷಣಮಾಡುವವನು ಒಂದು ದಿವಸದಲ್ಲಿಯೆ ಹೊಂದುತ್ತಾನೆ.

ಇದಕ್ಕೆ ಪ್ರಾಯಶ್ಚಿತ್ತರೂಪವಾಗಿ ಬಲಿಯಜ್ಞಾದಿಗಳನ್ನು ಹೇಳಿರುತ್ತಾನೆ.

ಪ್ರಕೃತ ಇದರಿಂದ ತಿಳಿಯಬರುವುದೇನೆಂದರೆ ಬ್ರಾಹ್ಮಣನು ಹೂಡುವುದು ದೋಷಾಸ್ಪದ. ಅತ್ಯಂತಾಪತ್ತಿನಲ್ಲಿ ಮಾತ್ರ ಹೂಡಬಹುದು. ಅನಂತರ ಪ್ರಾಯಶ್ಚಿತ್ತಮಾಡಿಕೊಳ್ಳಬೇಕು. ಇತರ ಸಂದರ್ಭಗಳಲ್ಲಿ ಹೂಡಿದ್ದೇ ಆದರೆ ಭ್ರಷ್ಟನಾಗುತ್ತಾನೆ. ಇದು ಸ್ಪಷ್ಟವು. ಸಾವಧಾನದಿಂದ ವಿಚಾರಿಸಿ ನೋಡಿದಲ್ಲಿ ಈಗ ಹೂಡಿದ ಮಹನೀಯರಲ್ಲಿ ಯಾರಿಗೂ ಅತ್ಯಂತಾಪತ್ತು ಬಂದಿಲ್ಲವೆಂಬುದು ಸ್ಪಷ್ಟವು. ಆದುದರಿಂದ ಇವರು ತಮ್ಮ ಅಧರ್ಮ ವ್ಯಾಪಾರದಿಂದ ತಾವೇ ತೇಜೋಹೀನರಾಗುವುದಲ್ಲದೆ, ಇವರ ಸಂಪರ್ಕದಿಂದ ಇತರರಿಗೆ ಉಂಟಾಗುವ ದೋಷಕ್ಕೂ, ಇನ್ನು ಮುಂದೆ ಇವರ ಉದಾಹರಣೆಯನ್ನನುಸರಿಸಿ ಹೂಡಬಹುದಾದ ಬ್ರಾಹ್ಮಣರ ಪಾಪಗಳಿಗೂ ಸಹ ಭಾಗಿಗಳಾಗುವುದರಲ್ಲಿ ಸಂದೇಹವಿಲ್ಲ.

ಆರ್. ದೇವದಾಸ.

ವೈದ್ಯಶಾಲೆ.

ಸೋಮವಾರಪೇಟೆ ಪ್ರೈಮರಿ ಸ್ಕೂಲ್ ಹೆಡ್‌ಮಾಸ್ತರಾಗಿದ್ದ ಶ್ರೀ ರಾಮಕೃಷ್ಣರಾಯರು ಈಗ ಸ್ವಲ್ಪ ದಿವಸಗಳ ಹಿಂದೆ ವೀರರಾಜೇಂದ್ರಪೇಟೆಗೆ ವರ್ಗವಾದದ್ದು ಸರಿಯಷ್ಟೆ. ಆ ಕಾರಣದಿಂದ ಸೋಮವಾರಪೇಟೆ ವಿ. ಡಿ. ಪೆಜ್ ಹಾಸಿನ ಕೆಲಸವನ್ನು ನಡೆಸುತ್ತಿದ್ದ ಅವರ ಪುತ್ರ ಶ್ರೀ ನಾರಾಯಣರಾಯರವರೂ ಸಹ ಅಲ್ಲಿನ ಸ್ಥಳೀಯರು ಎಷ್ಟು ನಿಲುವಾಗಿ ಕೇಳಿಕೊಂಡರೂ ಅಲ್ಲಿರಲು ಸಮ್ಮತಿಸದೆ ತಾ. 7-21 ರಲ್ಲಿ ವೀರರಾಜೇಂದ್ರಪೇಟೆಗೆ ಹೊರಟು ಹೋದರು. ಅಲ್ಲಿ ಒಬ್ಬ ಅನುಭವಶಾಲಿಯಾದ ವೈದ್ಯನು ಬಹಳ ಅವಶ್ಯಕತೆ ... ಮನಗಂಡು ಅವರು ಅಲ್ಲಿ ಅನೇಕ ... ಗುಣಪಡಿಸುತ್ತಿದ್ದರು. ಉದಾಹರಣೆಗೆ ಈಗ ಸ್ವಲ್ಪದಿನಗಳ ಹಿಂದೆ ಒಬ್ಬ ವ್ಯಕ್ತಿಗೆ ಮೈದುನ ಕಟ್ಟುಪೋಗಿ ಹುಚ್ಚನಾಗಿ ಅಲೆಯುತ್ತಿದ್ದ ಸಮಯದಲ್ಲಿ ನಾರಾಯಣರಾಯರವರು ಅವನ ವಾಸಿಯನ್ನು ಮೂರೇ ಮೂರು ದಿವಸಗಳಲ್ಲಿ ಗುಣಪಡಿಸಿದರು. ಅಲ್ಲದೆ ಸೋಮವಾರಪೇಟೆಯಲ್ಲಿ ಒಬ್ಬ ಯುವಕನಿಗೆ ಕುಷ್ಠರೋಗವು ಹಿಡಿದು ಅವನು ಮದ್ರಾಸು ಮೈಸೂರು ಮೊದಲಾದ ಅನೇಕ ಸ್ಥಳಗಳಲ್ಲಿ ಔಷಧಿಯನ್ನು ತೆಗೆದುಕೊಂಡು ನಿರಾಶನಾಗಿ ಹಿಂದಿರುಗಿ ಬಂದವನನ್ನು ತಮ್ಮ ಔಷಧಿಯಿಂದ ನಾರಾಯಣರಾಯರವರು ಸ್ವಲ್ಪ ದಿವಸಗಳಲ್ಲಿಯೇ ಅವನ ಕಾಯಿಲೆಯನ್ನು ಗುಣಪಡಿಸಿದರು. ಇವರು (Giles Schacht & Co., of Arister, Dr Schassler of Germany) ಮೊದಲಾದ ಸ್ಥಳಗಳಲ್ಲಿ ತಯಾರಿಸತಕ್ಕಂಥಾ ಅನೇಕ ಔಷಧಿಗಳನ್ನು ತಾವು ಇಲ್ಲಿಯೇ ಸ್ವತಃ ತಯಾರಿಸುತ್ತಿದ್ದರು. ಬಹೋಪಕಾರಿಯಾಗಿದ್ದ ಸದರಿ ನಾರಾಯಣರಾಯರವರು ಆ ಸ್ಥಳವನ್ನು ಬಿಟ್ಟು ಹೋದದ್ದು ನಮಗೆಲ್ಲಾ ಬಹಳ ವ್ಯಸನಕರವಾದ ಸಂಗತಿಯಾಗಿದೆ. ಇವರು ಹೋದ ಕಡೆಗಳಲ್ಲೆಲ್ಲಾ ದೇವರು ಇವರಿಗೆ ಸುಯಶಸ್ಸನ್ನುಂಟುಮಾಡಲೆಂದು ನಾವೆಲ್ಲರೂ ಹಾರೈಸುತ್ತೇವೆ.

N. M.

ಪದ್ಮರಾಣಿ.

ಎರಡನೆಯ ಪರಿಚ್ಛೇದ

(ಸಾಕ್ಷಾತ್ ಸಂಜೆಯಿಂದ ಮುಂದುವರಿದ ದು)

"ಪರಿಚಯ"

ಕೊಡಗಿನಲ್ಲಿ ದೊರೆಗಳು ನಡೆಯುತ್ತಿದ್ದಾಗ ಮಹಮ್ಮದ್ ಶ್ಯಾಮನೆಂಬುದು ಹೆಸರು. ಕ್ರಿಸ್ತಶಕ 1780 ರಲ್ಲಿ ಮಹಾರಾಜ ಲಿಂಗರಾಜನು ಸ್ವರ್ಗಸ್ಥನಾದನು. ಈ ಲಿಂಗರಾಜನು ಹೈದರನ ಸಹಾಯದಿಂದ ಸಿಂಹಾಸನವನ್ನೇರಿದ್ದನು. ಪರಂತು ಹೈದರನ ಸಾರ್ವಭೌಮತ್ವವನ್ನು ಸಹಿಸಬೇಕಾದುದಿಲ್ಲವಷ್ಟೆ. ಮಹಾರಾಜನ ಮರಣಾನಂತರ ಅರಸನ ಮೂರು ಜನ ಮಕ್ಕಳನ್ನು ತಾನು ರಕ್ಷಿಸುವನೆಂಬ ನೆಪದಿಂದ ಹಾಸನದಲ್ಲಿರುವ ಗೊರೂರಿಗೆ ಒಯ್ದು ಅಲ್ಲಿಂದ ಪೆರಿಯಾಪಟ್ಟಣದ ಕೋಟೆಯಲ್ಲಿ ಸೆರೆಯಾಗಿಟ್ಟನು. ಈ ಸಮಯದಲ್ಲಿ ಕೊಡಗನ್ನು ತನ್ನ ವಶಮಾಡಿಕೊಂಡು ತನ್ನ ಕಡೆಯವನೊಬ್ಬನನ್ನು ಮಡಿಕೇರಿಯಲ್ಲಿರಿಸಿದನು. ಅತನೇ ಮಹಮ್ಮದ್ ಶ್ಯಾಮ. ಈತನು ಮೊದಲು ಹಿಂದುವಾಗಿದ್ದು ಆ ತರುವಾಯ ಮುಸಲ್ಮಾನ ಧರ್ಮವನ್ನು ಸ್ವೀಕರಿಸಿದುದರಿಂದ ಹೈದರನಲ್ಲಿಯ ಕೃಪಾವಿಶೇಷಕ್ಕೆ ಪಾತ್ರನಾದ್ದನು.

ಹಿಂದುಗಳಿಗೆ ಮತಧರ್ಮಕ್ಕಿಂತ ಮಿಗಿಲಾದುದಿಲ್ಲ. ಜಾತಿಭ್ರಷ್ಟನಾಬ್ಬನಿಂದ ಅಳ್ವಿಸುವುದಕ್ಕಿಂತ ಸಾಯುವುದೇ ಲೇಸೆಂದು ಅವರು ಭಾವಿಸಿದರು. ಹೀಗೆ ಕೊಡಗಿನವರಾರೂ ಈತನನ್ನು ಒಪ್ಪಲಿಲ್ಲ. ಈತನ ಮೂರು ವರ್ಷದ ಆಳ್ವಿಕೆಯು ಮುನ್ನೂರು ನಾವಿರ ಕದನಗಳಿಂದ ತುಂಬಿರುವುದು. ಇಂತಹ ಸಂಕಷ್ಟಗಳಿಗೆ ಒಳಗಾದವರಲ್ಲಿ ನಮ್ಮ ಕಥಾನಾಯಕಿಯಾದ ಪದ್ಮೆಯು.

ಪದ್ಮೆಯ ನಿಜವಾದ ಹೆಸರು ಯಾರಿಗೂ ಗೊತ್ತಿಲ್ಲ. ಆದರೆ ಶ್ರೀರಂಗಪಟ್ಟಣ [ಪಾಲೇರಿ] ದ ಮುಸಲ್ಮಾನನೊಬ್ಬನ ಹೆಸರು ಪದ್ಮರಾಜ. ಅತನ ಹೃದಯೇಶ್ವರಿಯಾದುದರಿಂದ ಮಹಮ್ಮದ್ ಶ್ಯಾಮನು ಇವಳನ್ನು ಪದ್ಮರಾಣಿ ಎಂದು ಕರೆದಿದ್ದನು. ನಾವೂ ಈ ಕಥಾಂತ್ಯವಾದ ಸಂಗತಿಗೆ ಹಾಕಿದ ಮುಂದುವರಿಯೋಣ.

ನಾವು ಯಾವ ಕಾಲದ ಚರಿತ್ರೆಯನ್ನು ಬರೆಯುತ್ತೇವೋ ಆ ಕಾಲದಲ್ಲಿ ಶಾಂತಿ ಎಂಬುದು ಎಲ್ಲೆಲ್ಲಿಯೂ ಇತ್ತಿಲ್ಲ. ಮತ್ತೆ ನಮ್ಮ ಪುಟ್ಟನಾಡಾದ ಕೊಡಗಿನಲ್ಲಿದ್ದೀತೆ? ಒಂದು ಕಡೆ ಮಹಾರಾಜನ ಆಕಸ್ಮಿಕ ಮರಣ. ಇನ್ನೊಂದು ಕಡೆ ಮಹಮ್ಮದ್ ಶ್ಯಾಮನ ದರ್ಪ. ಇಂತಹ ಕಷ್ಟವು ಆ ಕಾಲದವರಿಗೆ ಕೊಡಗಿನವರು ಅನುಭವಿಸಿದ್ದುದೇ ಇಲ್ಲ.

ಮಹಮ್ಮದ್ ಶ್ಯಾಮನು ವೀರನು. ಧೈರ್ಯದಲ್ಲಿ ಮೃಗರಾಜನು ಕೂಡ ಅತನನ್ನು ಎದುರಿಸುವಂತಿಲ್ಲ. ಆದರೆ ವಿಷಯಲಂಪಟನು. ಅತ್ಯಂತ ವಿಲಾಸಿ. ಇಂದ್ರಿಯತೃಪ್ತಿಗೋಸ್ಕರ ಏನನ್ನು ಬೇಕಾದರೂ ಮಾಡಲು ಹೇಸನು. ಒಂದು ದಿವಸ ಹಾಲೇರಿಯ ಅರಮನೆಯನ್ನು ದಾಳಿಮಾಡಿ ಒಬ್ಬ ವಿಶಾಲ ಪೊದರಿನ ಮರೆಯಲ್ಲಿದ್ದ ಪದ್ಮೆಯನ್ನು ಕಂಡು ಮೋಹಿತನಾಗಿದ್ದನು. ಅದರೆ ಆಕೆಯನ್ನು ಜನರ ಮುಂದೆ ಆಕೆಯನ್ನು ಅಪಹರಿಸುವುದು ಒಳ್ಳೆಯದಲ್ಲವೆಂದೂ ಒಂದುವೇಳೆ ಅಪಹರಿಸಿದರೂ ಆ ಸಂಗತಿಯು ಸರ್ವಾಧಿಪನಿಗೆ ತಿಳಿದಲ್ಲಿ ತನ್ನ ಸತ್ತೆಯು ಕುತ್ತಿಗೆಯಮೇಲೆ ನಿಲ್ಲುವುದು ಸ್ವಲ್ಪ ಅಸಂಭವವೇ ಎಂದೂ ತಿಳಿದಿದ್ದನು.

ಮಡಿಕೇರಿಯ ಶಿಬಿರಕ್ಕೆ ಬಂದೊಡನೆ ಮಾಡಬೇಕಾಗಿದ್ದ ಕಾರ್ಯವನ್ನೆಲ್ಲಾ ಜಾಗ್ರತೆಯಾಗಿ ತೀರಿಸಿ ತನ್ನ ಹಾಸಿಗೆಯ ಮೇಲೆ ಒಬ್ಬನೇ ಬಿದ್ದುಕೊಂಡನು. ಏನುಮಾಡಿದರೂ ನಿದ್ರೆಯು ಬಾರದು. ಒದಲು ಆ ಅಸುಗನು ರೂಪಲಾವಣ್ಯವತಿಯಾದ ಅಪರಿಚಿತ ಯುವತಿಯ ಮನೋಹರವಾದ ಸವಿತ್ರ! ತನ್ನ ಪ್ರಾಣವನ್ನಪಹರಿಸಿದಕಾರಿಯಾದ ಸುಂದರಿಯು ದರ್ಪ!

ಸ್ವಭಾವಿಕವಾಗಿಯೇ ಪದ್ಮೆಯು ಸುಂದರಿ. ಅದರಲ್ಲಿಯೂ ನವರಂತ್ರಿಯ ಹಬ್ಬದ ಆ ಅಪರೂಪವಾದ ವೇಷವಿನ್ಯಾಸಗಳಿಂದ ಅವಳ ಸೌಂದರ್ಯರಾಶಿಯು ಇನ್ನಷ್ಟು ಹೆಚ್ಚಾಗಿಯೇ ಇತ್ತು.

ಇಂತಹ ಪದ್ಮಿನಿಯ ಮೋಹಕವಾದ ಆ ಅಪರೂಪಸೌಂದರ್ಯವೆಂಬ ಬೆಂಕಿಯಿಂದ ದಹಿಸಲ್ಪಡದಿರುವವನಾದರೂ ಅದಾರು? ದೇವ ದಾನವ ಯಕ್ಷ ಗಂಧರ್ವ ಇತ್ಯಾದಿ ಸಹ ಸ್ತ್ರೀ ಮೃಗರಾಗ ಹೋದವೆಂದ ಬಳಿಕ ಹುಲುಮನುಷ್ಯನಾದ ಮಹಮ್ಮದ್ ಶ್ಯಾಮನ ಪಾಡೇನು?

ಕೈಲ್ ಮುಹೂರ್ತ ಹಬ್ಬದ ವಿಚಾರಗಳು.

(ನಮ್ಮ ಸ್ವಂತ ವಾತ್ತಿದಾರರಿಂದ)

ಕಳೆದ ತಾ॥ 12 ರಲ್ಲಿ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಮಂಟಪದಲ್ಲಿ ರಾ॥ ಬಾ॥ ಕೊಡಂದೇರ ಕುಟ್ಟಪ್ಪಯ್ಯನವರ ಸೋಟೀಸ್ ಮೇರೆ ಅವರ ಅಧ್ಯಕ್ಷತೆಯಲ್ಲಿಯೂ ಈ ವರ್ಷದ ಕೈಲ್ ಮುಹೂರ್ತ ಹಬ್ಬವನ್ನು ಯಾವ ರೀತಿಯಿಂದ ನಡಿಸಬೇಕೆಂಬ ವಿಮರ್ಶೆಗಾಗಿ ಒಂದು ಮೀಟಿಂಗು ನಡೆಯಿತು. ಸುಮಾರು 50 ಕೊಡಗರು ಸೇರಿದ್ದರು. ನಡಿಕೆರಿ ವೈಕಿ ಕೊಡಗು ಯೌವನಸ್ಥರು ಕೇವಲ ಕಡಿಮೆಯಾಗಿದ್ದರು.

ಕಳೆದ ವರ್ಷದಲ್ಲಿ ನಡೆಸಿದಂತೆಯೇ ಈ ವರ್ಷದಲ್ಲೂ ನಮ್ಮ ಕೈಲ್ ಮುಹೂರ್ತ ಹಬ್ಬವನ್ನು ನಡಿಸುವದೋ ಎಂಬುದರಲ್ಲಿಯೇ ಬಹಳ ಹೊತ್ತಿನವರೆಗೆ ಚರ್ಚೆ ನಡೆಯಿತು. ಈ ಹಬ್ಬದಲ್ಲಿ ಕಳೆದ ವರ್ಷ ಮದ್ಯಪಾನವು ನಿಷೇಧಿಸಲ್ಪಟ್ಟಂತೆ ಈ ವರ್ಷ ನಿಷೇಧಿಸದೆ ಮದ್ಯವೆಂಬ ರಾಕ್ಷಸಿಯನ್ನು ಪೂರ್ತಿಯಾಗಿ ತ್ಯಜಿಸಬೇಕೆಂದು ಕೆಲವರು, ಮತ್ತೆ ಕೆಲವರು ಯಥೋಚಿತವಾಗಿ ಹಬ್ಬವನ್ನು ಕಳೆದವರ್ಷದಂತೆ ಮದ್ಯಪಾನವನ್ನು ಸಭೆಯಲ್ಲಿ ನಿರಬರಾಯಿ ಮಾಡಬೇಕೆಂದೂ ವಗೈರೆಯಾಗಿ ವಾದಿಸಿದರು. ನಮ್ಮ ಹಿರಿಯರು ಪೂರ್ವದಲ್ಲಿ ಕೈಲ್ ಮುಹೂರ್ತ ಹಬ್ಬವನ್ನು ಯಾವ ರೀತಿಯಲ್ಲಿ ನಡಿಸುತ್ತಿದ್ದರೋ ಹಾಗೆಯೇ ಆಯಾವರು ಅವರವರ ಮನೆಗಳಲ್ಲಿ ಆಯುಧಪೂಜೆಯನ್ನು ಮಾಡಿ ಊಟ ಉಪಚಾರಗಳನ್ನು ತೀರಿಸಿಕೊಂಡು, ನಾಡು ಕಡೆಗಳಲ್ಲಿ ಯಾವ ರೀತಿಯಿಂದ ಆಯುಧಪಾಲಿಗಳಾಗಿ "ಮಂದು" ಸೇರಿ ಗುರಿಗೆ ಗುಂಡುಹೊಡೆಯುತ್ತಾರೂ ಹಾಗೆಯೇ ಮಡಿಕೇರಿಯಲ್ಲಿಯೂ ನಡಿಸಬೇಕೆಂದು ತೀರ್ಮಾನವಾಯಿತು. ಮಂದಿನಲ್ಲು (ರಾಜ ಸೀಟಿನಲ್ಲು) ನೆರೆವ ಪ್ರತಿಯೊಬ್ಬ ಕೊಡಗನು ಸ್ವದೇಶ ಉಡುಪಾದ ಕುಪ್ಪಸ ಮತ್ತು ರುಮಾಲನ್ನು ಧರಿಸಬೇಕೆಂತಲೂ, ಸ್ವದೇಶೀಯರ ಪಾದರಕ್ಷೆಯಾದ ಬೂಟ್ಸುಗಳಿಗೆ ಬಹಿಷ್ಕಾರ ಹಾಕಬೇಕೆಂತಲೂ ತೀರ್ಮಾನವಾಯಿತು.

ನಮ್ಮ ದೇಶವಲ್ಲೆಲ್ಲಾ ಅಲ್ಲದೆ ಇಡೀ ಹಿಂದೂದೇಶದಲ್ಲಿ ಯಾಕೆ, ಭೂಲೋಕದಲ್ಲೆಲ್ಲಾ ಜನರು ಮದ್ಯಪಾನದ ಕೇಡುಗಳನ್ನು ಚೆನ್ನಾಗಿ ತಿಳಿದುಕೊಂಡು ಅದನ್ನು ಅದೆಷ್ಟು ಮಟ್ಟಿಗೆ ತ್ಯಜಿಸುವದಲ್ಲದೆ, ಅದನ್ನು ಮಾರದೆಯಿರೂ ನಿಷೇಧಿಸಲೆಂದು ಪ್ರಯತ್ನ ಪಡುತ್ತಿರುವ ಸಮಯದಲ್ಲಿ ವಿದ್ಯೆಯಲ್ಲಿಯೂ ಬುದ್ಧಿಯಲ್ಲಿಯೂ ಉದ್ಯೋಗದಲ್ಲಿಯೂ ಮುಂದಾಗಿರುವ ಮಡಿಕೇರಿಯ ಕೊಡಗರು ಸಭೆಗಳಲ್ಲಿ ಬಹಿರಂಗವಾಗಿ ಮದ್ಯಪಾನವನ್ನು ನೇರಿಸಬಹುದೆಂದು ಚರ್ಚೆಮಾಡಿದ್ದು ಹಿಂದಾಳುಗಳಾಗಿರುವ ಗ್ರಾಮ ನಿವಾಸಿಗಳಿಗೆ ಒಳ್ಳೇ ಮೇಲ್ಪಂಕ್ತಿ ಹಾಕಿದ ಹಾಗೆ ಕಾಣದ್ದರಿಂದ ಬಹಳ ವ್ಯಸನ ಪಡಬೇಕಾಗಿದೆ.

ಕಳೆದ ರವಿವಾರ (14-8-21) ಹಗಲು 10 ಗಂಟೆಯ ಸಮಯಕ್ಕೆ ಸರಿಯಾಗಿ ಹೈಸ್ಕೂಲ್ ಹಾಲ್‌ನಲ್ಲು ಕೊಡಗು ಆಬಾಲವೃದ್ಧರ ಸಭೆಯು ಕೈಲ್ ಮುಹೂರ್ತವೆಂಬ ಆಯುಧಪೂಜೆಯ ಹಬ್ಬವನ್ನು ಹೇಗೆ ಆಚರಿಸಬೇಕೆಂದು ಮುಂತಾಗಿ ಚರ್ಚಿಸುವರೆ ನೇರಿತು. ಶ್ರೀಮಾನ್ ಕೋಟೆರ ಉತ್ತಯ್ಯ ಬಿ. ಎ. ಎಲ್. ಎಲ್. ಬಿ ಯವರು ಅಗ್ರಸ್ಥಾನವನ್ನು ವಹಿಸಿ ಸಭೆಯು ನೇರಲು ಕಾರಣ ಇತ್ಯಾದಿಗಳನ್ನು ಶ್ರೀಯುತ ಪಿ. ಸಿ. ಉತ್ತಪ್ಪನವರಿಂದ ಹೇಳಿಸಿದರು. ಒಡನೆ ರಾವ್ ಸಾಹೇಬ್ ಮ॥ ಕೆ ಮುಟ್ಟಯ್ಯನವರು ಈ ಸಭೆಯು ಆಮಂತ್ರಿತವಾದುದು ಏನೂ ಇಲ್ಲವೆಂದು ಮೊನ್ನೆಯ ದಿನವೇ ಕೊಡಗರ ಸಭೆ ನೇರಿರುವಲ್ಲಿ ಮತ್ತೊಂದು ಸಭೆಯು ಏತಕ್ಕೆ ಎಂಬುದು ತಿಳಿಯಲಿಲ್ಲವೆಂದೂ ಇಷ್ಟು ಚಿಕ್ಕ ಬಚಾಬಂಗಡವಾದ ಕೊಡಗರಲ್ಲಿ ಭಿನ್ನಾಭಿಪ್ರಾಯವು ಕಲಹೋದಯವಾಗಿ ಎಲ್ಲರೂ ಪ್ರಯತ್ನಿಸಬೇಕಾದುದರಿಂದ ಈ ಸಭೆಯಲ್ಲಿರುವ ಕೊಡಗರಲ್ಲೂ ಈ ಮೊದಲೇ ಮಾಡಿದ ಸಭೆಯ ಕರಾರುಗಳು

ಒಮ್ಮನಸ್ಸಿನಿಂದ ಒಪ್ಪಿತಕೂಡಬೇಕೆಂದು ಮುಂತಾಗಿ ಕೇಳಿಕೊಂಡರು. ಅನೇಕ ತರ್ಕವಿತರ್ಕಗಳು ನಡೆದವು. ಕೊನೆಗೆ ಕಳೆದ ವರ್ಷದಂತೆಯೇ ನಡೆಯಿಸಬೇಕೆಂದು ಹಲವರು ಹಟ ಹಿಡಿದರು. ಕೆಲವು ಕಾರಣಾಂತರಗಳಿಂದ ಹೀಗೆ ಬೇರೆ ಇರಬೇಕಾಗಿಬಂದುದು ವ್ಯಸನಕರವಾದರೂ ಬೇರೆ ವಿಧಿ ಇಲ್ಲದುದರಿಂದ ಮುಂದಣ ಕಾರ್ಯವನ್ನು ನೆರವೇರಿಸುವ ಕೆಲಸ ನೋಡಬೇಕೆಂದು ಕೆಲವರು ವಾದಿಸಿದರು. ಕೊನೆಗೆ ಇನ್ನು ಕೆಲವರ ಅಭಿಲಾಷೆ ಮೇರೆ ಎಲ್ಲಾ ಕೊಡಗರ ಸಭೆಯನ್ನು ಪುನಃ ಕೂಡಿಸಿ ನಮ್ಮಲ್ಲಿರುವ ಭಿನ್ನಾಭಿಪ್ರಾಯಗಳಿಗೆ ಅಲ್ಲಿ ತಿಲಾಂಜಲಿಯನ್ನಿತ್ತು ಮುಂದುವರಿಯುವುದೊ ಅಥವ ಈ ಹೊತ್ತೇ ಮುಂದುವರಿಸಬೇಕೊ ಎಂಬ ವಿಷಯದಲ್ಲಿ ಸಭಿಕರ ಅಭಿಪ್ರಾಯ ಕೇಳಲಾಗಿ ಹೆಚ್ಚಿನ ಜನರು ಈ ಹೊತ್ತೇ ಮುಂದುವರಿಸಬೇಕೆಂದರು. ಇದೇ ನಿರ್ಧಾರವಾಯಿತು

ಒಡನೆಯೇ ಕೆಲವು ಮಹನೀಯರು ಹೊರಗೆ ಹೊರಟು ಹೋದರು. ಉಳಿದವರೆಲ್ಲರೂ ಒಂದು ಕಮಿಟಿಯನ್ನು ಏರ್ಪಡಿಸಿ ಎಲ್ಲಾ ಕೆಲಸವನ್ನು ಅವರಿಗೆ ವಹಿಸಿ ಸಭೆಯನ್ನು ಬರಕಾಸ್ತು ಮಾಡಿದರು.

ಚರಿತ್ರಕಾರರ ಸಂಶಯ

ಮಡಿಕೇರಿ

"ಮಡಿಕೇರಿ" ಯೆಂಬ ಶಬ್ದವು ಕೊಡಗು ಭಾಷೆಯಾದ "ಮೊಟ್ಟಿಕೇರಿ" ಎಂಬ ಶಬ್ದದಿಂದ ಬಂತು. ಇದರ ಸುತ್ತಲೂ ಪುಟ್ಟಿಟ್ಟಕೇರಿ ಕಾಕೇರಿ ಪೊನ್ನಾಂಗೇರಿ ಕಾಟಕೇರಿ, ಮೇಕೇರಿ ಕರ್ಣಂಗೇರಿ ಎಂಬ ಕೇರಿಗ-ಳಿಯಮಧ್ಯೆಯಲ್ಲಿರುವ ಬಾಣೆಮೊಟ್ಟೆ, ಕುಂದ್‌ಮೊಟ್ಟೆ ಸಹ ಸೇರಿದಲ್ಲಿ ಮೊಟ್ಟೆಕೇರಿ ಎಂಬುದನ್ನು ಮಾಡಿಕೊಂಡು ಇದು ಗ್ರಾಮ್ಯವಾಗಿ ಮಡಿಕೇರಿಯೆಂಬ ಶಬ್ದವು ಆಯಿತು ಎಂದು ನಡಿಕೇರಿಯಂಡ ಚಣ್ಣಪ್ಪನವರ ಅಭಿಪ್ರಾಯ

ಪತ್ರವ್ಯವಹಾರಗಳು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ [ಎಡಿಟರ್]

ಏನಾಶ್ಚರ್ಯ !

ಅಯ್ಯಾ ಕೊಡಗು,

ಶ್ರೀ ಕಾವೇರಮ್ಮನವರ ಜನ್ಮ ಭೂಮಿಯಾದ ಈ ಕೊಡಗಿನಲ್ಲಿ ನೀನು, ನಮ್ಮ ಚಕ್ರವರ್ತಿಯವರ ವರ್ಧಂತಿ ದಿವಸ ಜನ್ಮವೆತ್ತಿ, ಮಹತ್ತಾದ ಕಾರ್ಯಗಳನ್ನು ಮಾಡುತ್ತಿರುವ ನೀನೇ ಧನ್ಯನು. ನೀನು ಎಲ್ಲ ಜನರಲ್ಲಿಯೂ ಸಮಾನನಾಗಿರುತ್ತೀ ಎಲ್ಲಾ ಪತ್ರಿಕೆಗಳ ನೀತಿಯಂತೆ (Policy) to promote truth and Justice without fear or favour neither racour norhatred) ನೀನು ನಿನ್ನ ಕೆಲಸವನ್ನು ಆರಂಭಿಸುತ್ತಿ. ನೀನು ಇಲ್ಲದಮನೆಯು ಗಂಡನಿಲ್ಲದಹೆಂಗಸಿನಂತೆ, ಪ್ರಾಣ ಜೀವವಿಲ್ಲದ ದೇಹದಂತೆ ಎಂಬುದಕ್ಕೆ ಸಂಶಯವಿಲ್ಲ. ನಿನ್ನ ಸೇವೆಯನ್ನು ಮಾಡುವುದರಿಂದ ಶ್ರೀ ಕಾವೇರಮ್ಮನವರ ಸೇವೆಮಾಡಿದಂತೆ. ಕಳೆದ ತಾರೀಖು 19 ರ ಪತ್ರಿಕೆಯಲ್ಲಿ ಮ|| ಬೇಪಂಡ್ರ ವಾಚಯ್ಯನವರ ಪತ್ರವು ತೀರಿಹೋದವರ ದಿನದಲ್ಲಿ ಕೊಡಗು ಪದ್ಧತಿಯ ವಿಷಯ ಕೆಲವುಮಟ್ಟಿಗೆ ಗ್ರಾಮನಿವಾಸಿಯು ಸೂಚಿಸಿದ್ದುದನ್ನು ಕಂಡೆನು ವಿವರಂತೆ ಕೊಡಗರಾದ ನಮ್ಮವರು ಮ|| ಪುಟ್ಟಿಮಾದ ಮಾದಪ್ಪನವರು ನಿನ್ನೆ ತೀರಿಹೋದಲ್ಲಿ, ನಮ್ಮ ಆಚಾರಗಳನ್ನು ತಕ್ಕಮಟ್ಟಿಗೆ ಪದ್ಧತಿಮೇರೆ ನಡಿಸಿದರು ಆದರೆ ಕೆಲವು ಜನರು ಪದ್ಧತಿಯನ್ನು ತುಚ್ಛೀಕರಿಸಿ, ಮೃತಪಟ್ಟ ದೇಹಕ್ಕೆ ಮರ್ಯಾದೆಯಂತೆ ಕೊಡುವ ವ್ಯಸನವನ್ನು ಸೂಚಿಸುವ ಬದಲಾಗಿ ಬೂಟ್ ಮತ್ತು ಹೇಟ್‌ಗಳನ್ನು ಹಾಕಿಕೊಂಡು ತಾವು ಮಾಡಬೇಕಾದ ಕರ್ತವ್ಯಗಳನ್ನು ಮಾಡದಿರುವುದಕ್ಕಾಗಿ ವ್ಯಸನ ಪಡುತ್ತೇನೆ ಆದರೆ ಎಲ್ಲಾ ಕೆಲಸವು ಒಂದೇ ಸಲಕ್ಕೆ ಆಗುವುದಿಲ್ಲ. ಇನ್ನು ಕ್ರಮೇಣ ಮಡಿಕೇರಿಯ ಮಹಾಶಯರೆಲ್ಲರೂ ಕೊಡಗು ಪದ್ಧತಿಯನ್ನು ಖಂಡಿತವಾಗಿ ಆಚರಿಸುವುದಾಗಿ ನನ್ನ ಮನಸ್ಸಿಗೆ ಭರವಸೆಯುಂಟಾಯಿತು ಅದಂತಿರಲಿ! ನಾನು ಎಲ್ಲಿಯೂ ಈವರೆಗೂ ಕಂಡೂ ಕೇಳದ ಇನ್ನೊಂದು ಸಂಗತಿಯನ್ನು ದೇಶದವರ ಮುಂದಿಡಲು ವ್ಯಸನಪಡುತ್ತೇನೆ. ಹಿಂದೂ ಶಾಸ್ತ್ರಪ್ರಕಾರ ನಮ್ಮಲ್ಲಿ ಶುಭಶೋಭನದಲ್ಲಿ ನಮ್ಮ ಸ್ತ್ರೀಯರೇ ಎಲ್ಲಾ ಕೆಲಸ ಮಾಡಬೇಕಾಗಿದೆ. ಅವರು ಯಾವ ಶುಭಶೋಭನದಲ್ಲಿಯಾದರೂ ಎಲ್ಲಾ ಕೆಲಸಕ್ಕೂ ಮುಂದಾಳುಗಳಾಗಿ ಅವರ ಕರ್ತವ್ಯ ಪೂರೈಸಿದ ಮೇಲೆ ಗಂಡಸರು ಮಾಡಬೇಕಲ್ಲದೆ ಬೇರೊಂದಿಲ್ಲ. ಆದರೆ ಇಲ್ಲಿಯಾದರೋ ಕೆಲವು ಸಹೋದರಿಯರು, ಕಾಲಿಗೆ ಬೋಡನ್ನು ಹಾಕಿಕೊಂಡು ಹೋಗಿ, ಒಳಗೆ ಕೂತುಕೊಂಡಿರುವದನ್ನು ನೋಡಿ, ಮೃತಪಟ್ಟ ದೇಹಕ್ಕೆ ಮರ್ಯಾದೆಯ ವ್ಯಸನ ಸೂಚಕಗಳನ್ನು ಸೂಚಿಸುವ ಬದಲಾಗಿ ಅವಮಾನ ಪಡಿಸುವ ಹಾಗೆ ಕಂಡೆನು ಎಲೈ ಪ್ರಿಯಸಹೋದರಿಯರಿರಾ, ನೀವು ದಯವಿಟ್ಟು ಬರೀ ಕಾಲಿನಲ್ಲಿ ಅಲ್ಲಿ ಕೂತಿದ್ದರೆ ಏನಾಗುತ್ತಿತ್ತು ? ಒಂದುವೇಳೆ ಕಾಯಿಲೆಯಿಂದ ಕಾಲಿಗೆ ಜೋಡು ಇಲ್ಲದೆಹೋದರೆ ನೀತವಾಗಬಹುದೆಂದೂ ನೀವು ಉತ್ತರ ಹೇಳಬಹುದು. ಹಾಗೆ ಕಾಯಿಲೆಯಾದವರು ಅಲ್ಲಿಗೆ ಬರುವ ಅವಶ್ಯವಿರಲಿಲ್ಲ. ಸಹೋದರಿಯರೇ, ನಿಮ್ಮ ನೀತಿಗೇಡಿತನಕ್ಕೆ ಏನೆಂದು ಹೇಳಬೇಕು ನೀವೇ ನಮ್ಮ ಜನಾಂಗದ ಅಭಿವೃದ್ಧಿಗೆ ಮೂಲಾಧಾರರು. ನೀವೇ ಮುಂದೆಬಂದು ದೇಶಕ್ಕೆ ಅದನ್ನು ಒಳ್ಳೆಯ ಕೆಲಸಗಳನ್ನು ಮಾಡಿ ವೀರಪುತ್ರರನ್ನು ಪಡೆದು ವೀರಮಾತೆಯರೆಂಬ ಹೆಸರು ಪಡೆಯಬೇಕಲ್ಲದೆ, ಇಂಥಾ ಅಸಂಗತವಾದ, ಪದ್ಧತಿಗೆ ವಿರೋಧವಾದ, ಕಾರ್ಯಗಳನ್ನು ಇನ್ನು ಮುಂದಕ್ಕಾದರೂ ಮಾಡಬಾರದೆಂದು ನಿಮ್ಮನ್ನು ಅತಿ ದೈನ್ಯೋಕ್ತಿಯಿಂದ ಬೇಡಿಕೊಳ್ಳುತ್ತೇನೆ. ಪ್ರಿಯ ಸಹೋದರಿಯರೇ ನೀವು ಈಗ ವಿಜೃಂಭಿಸುವ ಮಡಿಕೇರಿಯ ಸಮಾಜದಲ್ಲಿ. ದಯವಿಟ್ಟು, ಈ ಸಂಗತಿ ಬರ್ತ ನಮ್ಮ ಜಾತಿ ಪದ್ಧತಿ ಮೇರೆ ಆಗುವ ಕೆಲಸವನ್ನು ಖಂಡಿತವಾಗಿ ಆಚರಿಸುವಂತೆ ಮಾಡಬೇಕಾಗಿ ಬೇಡಿಕೊಳ್ಳುವ.

ಸಹೋದರ.

ಬ್ರಾಹ್ಮಣರ ವೃತ್ತಿ.

ಮಹನೀಯರೇ,

ಈಗೀಗ ನಮ್ಮವರಲ್ಲನೇಕರು, ಬ್ರಾಹ್ಮಣನು ಕೃಷಿ ಮಾಡಬಾರದೆಂತಲೂ, ಮಾಡಬಹುದೆಂತಲೂ ಹೇಳುತ್ತಾ ಅನೇಕ ಕಡೆಗಳಲ್ಲಿ ಈ ವಿಷಯವನ್ನು ಬಹಳವಾಗಿ ಚರ್ಚಿಸುತ್ತಿರುವರು. ಕೆಲವರು ವಾಕ್ ಚಾತುರ್ಯವನ್ನು ಕೈಯಿಂದಲೇ ತೋರಿಸಿಬಿಟ್ಟರು. ಇದಕ್ಕಾಗಿ ಅನೇಕರು ಅವರನ್ನು ದ್ವೇಷಿಸುವರು. ದ್ವೇಷಿಸುವುದು ಶುದ್ಧ ತಪ್ಪು ಅಭಿಪ್ರಾಯ ಬ್ರಾಹ್ಮಣನು ಕೃಷಿಯನ್ನು ಮಾಡಬಾರದೆಂಬುದಾಗಿ ಯಾವ ಗ್ರಂಥದಲ್ಲಿಯೂ ಹೇಳಿರುವುದಿಲ್ಲ. ಆದರೆ ಕೆಲವುಗಳಲ್ಲಿ ಮಾತ್ರ ವೇದಾಧ್ಯಯಿಯಾದ ವಿಪ್ರನು ಮಾತ್ರ ತನ್ನ ಮುಖ್ಯವೃತ್ತಿಯನ್ನು ಬಿಡಬಾರದೆಂತಲೂ, ಮತ್ತು ದೇಹಕ್ಕೆ ಶ್ರಮವನ್ನುಂಟುಮಾಡುವ ಕೆಲಸಗಳನ್ನು ಮಾಡಬಾರದೆಂಬುದಾಗಿಯು ಹೇಳಿದೆ. ಈಗ ನಮ್ಮ ತಿಳುವಳಿಕೆಯಂತೆ ನಾವೇ ಆಲೋಚಿಸಿದರೂ, ಈಗಿನ ಬ್ರಾಹ್ಮಣನು ಮಾಡುತ್ತಿರುವ ಅನೇಕ ಹೀನವಾದ ವ್ಯಾಪಾರಗಳಿಗಿಂತ ಕೃಷಿಯು ಎಷ್ಟೋ ಉತ್ತಮವಾದುದೆಂಬುದಾಗಿ ಗೊತ್ತಾಗಬಹುದು. ಪ್ರತಿಯೊಬ್ಬನೂ ಅವನ ಶರೀರವನ್ನು ಅವನೇ ಕಾಪಾಡಿಕೊಳ್ಳಬೇಕೇ ಹೊರತು ಅವನ ಶರೀರವನ್ನು ಕಾಪಾಡಲು ಇನ್ನೊಬ್ಬನು ಬರಲಾರನು. ಇಷ್ಟೇ ಅಲ್ಲದೆ, ಅವನ ಶರೀರವನ್ನು ಕಾಪಾಡಲು ಬೇಕಾದ ಪದಾರ್ಥಗಳನ್ನು ಅವನೇ ಒದಗಿಸಿಕೊಳ್ಳಬೇಕು ಮನುಷ್ಯನು ಕೃಷಿಮಾಡುವುದು ಅವನ ಹೊಟ್ಟೆಗೋಸ್ಕರವೇ ಹೊರತು ತನ್ನ ಬೇಸರವನ್ನು ಹೋಗಲಾಡಿಸಿಕೊಳ್ಳಲಿಕ್ಕಲ್ಲ ಈಗ ಪುರಾಣಗಳನ್ನು ತೆಗೆದು ನೋಡಿದರೆ ಅದರಲ್ಲಿ, ಸುಮತಿ ಎಂಬ ಬ್ರಾಹ್ಮಣನು ಕೃಷಿ ಕರ್ಮವನ್ನು ಮಾಡುತ್ತಿದ್ದನೆಂತಲೂ, ಉದ್ದಾಲಕನೆಂಬ ಮುನಿಯು ಮನೆ ಕೆಲಸಗಳಿಗೋಸ್ಕರ ಗಾಡಿಯನ್ನು ಅಪೇಕ್ಷಿಸುತ್ತಿದ್ದನೆಂತಲೂ, ಮಂತಿ ಎಂಬ ಬ್ರಾಹ್ಮಣನು ಎತ್ತುಗಳಿಂದ ಗದ್ದೆಯ ಕೆಲಸಗಳನ್ನು ಮಾಡುತ್ತಿದ್ದನೆಂತಲೂ ಪ್ರತಿಪಾದಿತವಾಗಿದೆ ಕೆಲವರು ಧರ್ಮಶಾಸ್ತ್ರದ ಸ್ವರೂಪವನ್ನು ತಿಳಿಯದೆ ಪಂಡಿತಮಾನ್ಯರಾಗಿ, ಬ್ರಾಹ್ಮಣನು ಷಟ್ಕರ್ಮಗಳಿಗೆ ಮಾತ್ರ ಅರ್ಹನೇ ಹೊರತು ಬೇರೆ ಕೆಲಸಗಳಿಗೆ ಅಯೋಗ್ಯನು. ಕೃಷಿ ಮೊದಲಾದವುಗಳು ವೈಶ್ಯಕರ್ಮಗಳು, ಇವು ಪರಧರ್ಮಗಳಾದ ಕಾರಣ, ಇವುಗಳನ್ನು ಮಾಡಿದ ಪಕ್ಷದಲ್ಲಿ, ಪತಿತನಾಗುವನೆಂದು ಹೇಳುವರು. ಇದು ನಿಜವಾದರೆ ಹಿಂದೆ ಹೇಳಿದ ಸುಮತಿ, ಉದ್ದಾಲಕ, ಮಂತಿ, ಇವರುಗಳೇಕೆ ಋಷಿಗಳೆನ್ನಿಸಿಕೊಂಡರು ? ಏಕೆ ಪತಿತರಾಗಲಿಲ್ಲ. ಆದ್ದರಿಂದ ಧರ್ಮಶಾಸ್ತ್ರ ವಚನಗಳಿಗೆ ಆ ರೀತಿ ಅರ್ಥಮಾಡಕೂಡದು.

ಪರಾಶರ ಸ್ಮೃತಿಯಲ್ಲಿ—"ಸ್ವಯಂ ವಾಕೃಷ್ಟಂ ಕುರ್ಯಾತ್ ವಾಣಿಜ್ಯಂ ವಾಪ್ಯನೀದತಃ" ಕೃಷಿಯನ್ನಾಗಲಿ, ವ್ಯಾಪಾರವನ್ನಾಗಲೀ ಬುದ್ಧಿಯಿಂದ ಜೀವಿಸುವವನ್ನಾಗಲೀ ಬ್ರಾಹ್ಮಣನು ಮಾಡಬಹುದೆಂದು ಕೂರ್ಮ ಪುರಾಣದಲ್ಲಿ ಇರುವುದೆಂತಲೂ, "ಕುಸೀದಂ ಕೃಷಿವಾಣಿಜ್ಯಂ ಪ್ರಕುರ್ವೀತ ಸ್ವಯಂಕೃತಂ" ಬುದ್ಧಿಯಿಂದ ಜೀವಿಸುವುದನ್ನೂ, ಕೃಷಿಯನ್ನೂ, ವ್ಯಾಪಾರವನ್ನೂ, ಬ್ರಾಹ್ಮಣನು ಸ್ವಯಂ ಮಾಡಬಹುದೆಂತಲೂ, ಹಾಗೆ ಕೃಷಿಯನ್ನು ಮಾಡಬೇಕಾದಾಗ,

"ಕ್ಷುಧಿತಂ ತೃಷಿತಂ ಶ್ರಾಂತಂ ಬಲೀವರ್ದಂ ನಯೋಜಯೇತ್ |
ಹೀನಾಂಗಂ ವ್ಯಾಧಿತಂ ಕ್ಲೀಬಂ ವೃಷಂ ವಿಪ್ರೋ ನವಾಹಯೇತ್||"

ಹಸಿವಿನಿಂದಲೂ, ಬಾಯಾರಿಕೆಯಿಂದಲೂ, ಬಳಲಿದ ಎತ್ತನ್ನು ಬ್ರಾಹ್ಮಣನು ಕಟ್ಟಿಕೊಡಕೆಂತಲೂ, ಅಂಗಹೀನವಾಗಿಯೂ, ರೋಗವುಳ್ಳದಾಗಿಯೂ, ಷಂಡವಾಗಿಯೂ ಇರುವ ಎತ್ತಿನಮೇಲೆ ಹೊರೆಯನ್ನು ಹೊರಿಸಬಾರದೆಂತಲೂ,

"ಸ್ಥಿರಾಂಗಂ ನೀರುಜಂ ತೃಪ್ತಂ ಸುನರ್ದಂ ಷಂಢವರ್ಜಿತಂ|
ವಾಹಯೇತ್ ದಿವಸಸ್ಯಾರ್ಧಂ ಪಶ್ಚಾತ್ ಸ್ನಾನಂ ಸಮಾಚರೇತ್||"

ಸ್ಥಿರವಾದ ಶರೀರವುಳ್ಳದಾಗಿಯೂ, ರೋಗವಿಲ್ಲದೆ ತೃಪ್ತವಾಗಿ ಗಂಭೀರವಾದ ಕಂಠಧ್ವನಿಯುಳ್ಳ ಎತ್ತನ್ನು ಮಧ್ಯಾಹ್ನದವರೆಗೆ ಕೆಲಸಕ್ಕೆ ಉಪಯೋಗಿಸಿಕೊಂಡು, ಅನಂತರದಲ್ಲಿ ಸ್ನಾನ ಮಾಡಬೇಕೆಂತಲೂ ಹೇಳಿರುವುದು. ಬ್ರಾಹ್ಮಣನಿಗೆ ಕೃಷಿಕರ್ಮವು ನಿಂದ್ಯವಾಗಿದ್ದರೆ ಪರಾಶರ ಸ್ಮೃತಿಯಲ್ಲಿ ಹೀಗೆ ಹೇಳುವುದಕ್ಕೆ ಕಾರಣವಿಲ್ಲವು. ಕೃಷಿಯೊಂದೇನು? ಬ್ರಾಹ್ಮಣನು ಕ್ಷತ್ರಿಯ ವೃತ್ತಿಯನ್ನಾಗಲಿ, ವೈಶ್ಯ ವೃತ್ತಿಯನ್ನಾಗಲಿ ಶೂದ್ರ ವೃತ್ತಿಯನ್ನಾಗಲಿ ಯಾವ ವೃತ್ತಿಯನ್ನು ಅವಲಂಬಿಸುವುದಕ್ಕೂ ಅಧಿಕಾರಿಯಾಗಿರುವನು. ಇತರರು ಮಾತ್ರ ಬ್ರಾಹ್ಮಣ ವೃತ್ತಿಗೆ ಅರ್ಹರಾಗಲಾರರೆಂಬ ಭಾವದಿಂದ ಷಟ್ಕರ್ಮಗಳು ಬ್ರಾಹ್ಮಣರ ಕರ್ಮಗಳೆಂದು ಹೇಳಲ್ಪಟ್ಟಿವೆಯೇ ಹೊರತು, ಬ್ರಾಹ್ಮಣನು ಆ ಆರುಕರ್ಮಗಳಲ್ಲಿಯೇ ಇರಬೇಕೆಂದಲ್ಲವು. ಇಷ್ಟೇ ಅಲ್ಲದೆ ಬ್ರಾಹ್ಮಣನು ಯಜನ, ಯಾಜನ ಅಧ್ಯಯನ, ಅಧ್ಯಾಪನ, ದಾನ ಪ್ರತಿಗ್ರಹಗಳೆಂಬ ಷಟ್ಕರ್ಮಗಳನ್ನು ಮುಂದಾಗಿಟ್ಟುಕೊಂಡು ಉಳಿದ ವೃತ್ತಿಗಳನ್ನು ಉಪಸರ್ಜನಗಳಾಗಿ ಉಪಯೋಗಿಸಿಕೊಳ್ಳಬೇಕು. ಆ ಷಟ್ಕರ್ಮಗಳನ್ನು ಬಿಟ್ಟು ಇವುಗಳನ್ನು ಮಾತ್ರವೇ ಪರಿಗ್ರಹಿಸಿದರೆ ವೈಶ್ಯಾದಿ ವೃತ್ತಿಗಳಾಗುವುವೇ ಹೊರತು ಆ ಷಟ್ಕರ್ಮಗಳೊಂದಿಗೆ ಇವುಗಳನ್ನು ಆಚರಿಸಿದರೆ ಇವುಗಳೂ ಬ್ರಾಹ್ಮಣ ವೃತ್ತಿಗಳೇ ಆಗುವುವು

ಆದ್ದರಿಂದ ಬ್ರಾಹ್ಮಣರು ತಮ್ಮ ವೃತ್ತಿಯು ಯಾವುದು ಎಂದು ಸಂದೇಹಪಡದೆ ತಮ್ಮ ಧರ್ಮ ಕರ್ಮಗಳಿಗೆ ವಿರೋಧವಿಲ್ಲದಂತೆ ಇತರ ವೃತ್ತಿಗಳನ್ನು ಅಂದರೆ, ಕೃಷಿ, ವ್ಯಾಪಾರ, ಶಿಲ್ಪ ಮೊದಲಾದುವುಗಳನ್ನು ಮಾಡುತ್ತಾ, ಆತ್ಮಾವಲಂಬಿಗಳಾಗಿ ಎಲ್ಲರಿಗೂ ಆದರ್ಶಪ್ರಾಯರಾಗಿ ತಮ್ಮ ಅಸಾಧ್ಯವಾದ ಶಕ್ತಿಯನ್ನು ಲೋಕಕ್ಕೆ ಪ್ರಕಾಶಪಡಿಸಿ, ಸರ್ವತೋಮುಖವಾಗಿ ಅಭಿವೃದ್ಧಿಯನ್ನು ಹೊಂದುವರೆಂದು ನಂಬಿದ್ದೇನೆ.

ಇತಿ—ಬ್ರಾಹ್ಮಣ ವಿದ್ಯಾರ್ಥಿ

ಅಯ್ಯಾ,

ನಾನು ಕಳೆದ ಜುಲೈ ತಾರೀಖು 9 ನೇ ದಿನ ಮಡಿಕೇರಿ ಆಸ್ಪತ್ರೆಗೆ ಹೋದೆನು. ನಾನು ಹೋಗುವಾಗ ಒಂಭತ್ತು ಘಂಟೆಯಾಗಿತ್ತು ಒಂಭತ್ತು ಘಂಟೆಯಿಂದ ಹತ್ತು ಗಂಟೆಯವರೆಗೂ ಆಸ್ಪತ್ರೆಯಲ್ಲಿ ಸಬ್ ಅಸಿಸ್ಟೆಂಟ್ ಸರ್ಜನ್ನರುಗಳನ್ನು ಕಾದೆನು ಅಲ್ಲಿ ನನ್ನ ಹಾಗೆಯೇ ಕಾಯುತ್ತಿದ್ದ ಬಡ ಕಾಯಿಲಸ್ತರ ಮತ್ತು ಔಷಧಿಗೆ ಬಂದ ಜನರ ಸಂಖ್ಯೆಯು ಎಪ್ಪತ್ತಕ್ಕೆ ಕಡಿಮೆ ಇರಲಿಲ್ಲ. ಕಡೇಗಾಲಕ್ಕೆ 10 ಘಂಟೆಗೆ ಒಬ್ಬ ಸಬ್ ಅಸಿಸ್ಟೆಂಟ್ ಸರ್ಜನ್ನರು ಬಂದು ಔಷಧಿಗೆ ಚೀಟಿ ಕೊಡಲು ಶುರುಮಾಡಿದರು. ಆಸ್ಪತ್ರೆಗಳು ಬೆಳಗ್ಗೆ ಏಳುಘಂಟೆಗೆ ತೆರೆಯಲ್ಪಡುತ್ತವೆ ಮಡಿಕೇರಿ ಆಸ್ಪತ್ರೆಯಲ್ಲಿ, ಔಷಧಿಕೊಡಲಿಕ್ಕೆ ಎರಡು ಜನರು ಯಾವಾಗಲೂ ಇದ್ದೇ ಇರುತ್ತಾರೆ. ಇವರಲ್ಲದೆ ಬೇರೆ ಒಬ್ಬ ಅಸಿಸ್ಟೆಂಟ್ ಸರ್ಜನರೂ, ಸಬ್ ಅಸಿಸ್ಟೆಂಟ್ ಸರ್ಜನರೂ ಇರುತ್ತಾರೆ ಏಳು ಘಂಟೆಯಿಂದ ಹತ್ತು ಘಂಟೆಯವರೆಗೂ ಕಾಯುತ್ತಾ ಇರುವ ಬಡ ಕಾಯಿಲಸ್ತರ ಪಾಡೇನು ಎಂಬುದನ್ನು ಯೋಚಿಸಿದರೆ ಬಹಳ ವ್ಯಸನಕ್ಕೆ ಕಾರಣವಾಗಿದೆ 11 ಘಂಟೆಗೆ ಆಸ್ಪತ್ರೆ ಮುಚ್ಚಲಿಕ್ಕೆ ಆಯಿತು. ಈ 1 ಘಂಟೆಯಲ್ಲಿ 70 ಕ್ಕಿಂತ ಹೆಚ್ಚು ಇದ್ದ ಕಾಯಿಲಸ್ತರಿಗೆ ಒಬ್ಬ ಸಬ್ ಅಸಿಸ್ಟೆಂಟ್ ಸರ್ಜನನು ಎಷ್ಟರಮಟ್ಟಿಗೆ ಪರೀಕ್ಷಿಸಿ ಔಷಧಿ ಕೊಡುತ್ತಾನೆಂಬುದು ಆಲೋಚಿಸತಕ್ಕ ವಿಷಯವಾಗಿದೆ 11 ಘಂಟೆಯ ಮೇಲೆ ಆದರೆ ಔಷಧಿಗೆ ಕ್ರಯ ಕೊಡಬೇಕಂತೆ. ಧರ್ಮದ ಆಸ್ಪತ್ರೆಯೆಂದು ಹೆಸರಿಟ್ಟು ಬಡಜನರ ಕ್ಷೇಮಕ್ಕೋಸ್ಕರ ಇರುವ ಆಸ್ಪತ್ರೆಯಲ್ಲಿ ಇಂಥಾ ಅಕ್ರಮಗಳು ನಡೆಯುವಂತೆ ಇನ್ನು ಮುಂದಕ್ಕಾದರೂ ಅಧಿಕಾರಿಗಳು ಎಚ್ಚರ ತೆಗೆದುಕೊಳ್ಳಬೇಕಾಗಿಯೂ ಎಲ್ಲಾ ಬಾಬಿನಲ್ಲಿಯೂ ಬಡಜನರ ಕ್ಷೇಮಚಿಂತನೆಯನ್ನು ಬಯಸಿ ಕೆಲಸ ಮಾಡಬೇಕಾಗಿಯೂ ಕೋರುತ್ತೇನೆ

ಒಬ್ಬ ಕಾಯಿಲಸ್ತ.

ಕೊಡಗಿನ ಸುಧಾರಣೆ.

ಸಂಪಾದಕರೇ,

ತಮ್ಮ ಪತ್ರಿಕೆಯಲ್ಲಿ ಕೌನ್ಸಿಲಿನ ಮೆಮೊರಾಂಡಂ ನೋಡಿದವು

ತಮ್ಮ ಪತ್ರಿಕೆಯಲ್ಲಿ ಎಲ್ಲಾ ಸಂಗತಿಯಲ್ಲು ರಿಮಾರ್ಕ ಮಾಡುತ್ತೀರಿ.

ಜಮ್ಮದವರು ಮತ್ತು ಜಮ್ಮವಲ್ಲದವರ ವಿಷಯದಲ್ಲಿ ಏನೂ ಬರೆಯದೆ ಇರುವದು ನೋಡಿದರೆ ವ್ಯಸನವಾಗುತ್ತದೆ,

ಜಮ್ಮ ಇದ್ದವರ ಕಡಮೆ ಜನಸಂಖ್ಯೆಗೆ 9 ಮೆಂಬರುಗಳಾಗಿಯೂ ಜಮ್ಮ ಇಲ್ಲದ ಡಬ್ಬಲ್ ಜನಸಂಖ್ಯೆಗೆ ನಾಲ್ಕು ಮೆಂಬರುಗಳು ಮಾತ್ರ ಆರಿಸಿದೆ ಕೊಡಗಿನಲ್ಲಿರುವ ಜಮ್ಮದವರು ಮಾತ್ರ ಮನುಷ್ಯರೊ, ಬಾಕಿಯವರು ಮನುಷ್ಯರಲ್ಲವೊ ? ಅಥವ ಜಮ್ಮದವರು ಮಾತ್ರ ಸರಕಾರದ ರೈತರೊ, ಬಾಕಿಯವರು ಅಲ್ಲವೊ ? ಜಮ್ಮದವರ ಪೂರ್ತಿ ರಕ್ಷಣೆಯಾಗಿ ಜಮ್ಮವಲ್ಲದವರ ಅರ್ಧರಕ್ಷಣೆ ಆದರೆ ಸಾಕೋ ? ಎಂಬ ಸವಾಲುಗಳು ಹುಟ್ಟುತ್ತವೆ

ಕೊಡಗಿನಲ್ಲಿರುವ ಸರ್ವ ಮತಸ್ತರು ಅನಂತರ ಬಂದ ಆರ್ಯಜಾತಿಯವರೆ. ಭರತ ಖಂಡದ ಮೊದಲು ನಿವಾಸಿಗಳು ಬಿಲ್ ಮತ್ತು ಖುಂಡು ಜಾತಿಯವರೆಂತ ಇತಿಹಾಸ ಓದಿದವರಿಗೆ ಗೊತ್ತಿದೆ

ಕೊಡಗಿನಲ್ಲಿರುವ ಕೊಡಗರು, ಲಿಂಗಾಯಿತರು, ಮುಸಲ್ಮಾನರು, ಬ್ರಾಹ್ಮಣರು ಮತ್ತು ಬೇರೆ ಹಿಂದುಜನರು ಸಹ ಹಿಂದಲಿಂದಲೆ ಬಂದು ಇದ್ದವರು. ಕೊಡಗರ ವಿನಹ ಬೇರೆ ಮತಸ್ತರಿಗೆ ಅವರ ಮತದ ಪ್ರತ್ಯೇಕ ಹೆಸರು ಇದ್ದದ್ದರಿಂದ ಅವರಿಗೆ ಹೊಸ ಹೆಸರು ಇಡಬೇಕಾದ ಅವಶ್ಯ ಬೀಳಲಿಲ್ಲ

ರಾಜ್ಯಾಡಳಿತದಲ್ಲಿ ಜಮ್ಮ ಇದ್ದವರ ರಕ್ಷಣೆ ಆದರೆ ಸಾಲದು. ಪ್ರತಿ ಒಬ್ಬರ ರಕ್ಷಣೆ ಆಗಬೇಕು. ಮತ್ತು ಮೆಂಬರು ತನದಲ್ಲಿ ಜಮ್ಮದವರಿಗೂ ಜಮ್ಮವಲ್ಲದವರಿಗೂ ಹಕ್ಕು ಸಿಕ್ಕಿ ವ್ಯಾಪಾರಸ್ತರಿಗೂ, ಇತರ ಕೈಗಾರಿಕೆಯವರಿಗೂ ವಕೀಲರಿಗೂ, ಮತ್ತು ಇತರರಿಗೂ ಹಕ್ಕು ಸಿಕ್ಕದೆ ಇರುವದು ಅನ್ಯಾಯವಲ್ಲವೋ ? ಜಮ್ಮದವರು, ಜಮ್ಮವಲ್ಲದವರು ಅಂತ ಹೇಳಿದರೆ, (Divide and Rule) ಎಂಬ (Policy) ಅಲ್ಲವೋ ? ಇಂಥ ಕಾಲಸ್ಸಿಗೆ ಉತ್ತೇಜನ ಕೊಡುವದೋ ?

ನವನಾಗರೀಕತೆಯನ್ನು ಹೊಂದಿದ ಇಂಗ್ಲಾಂಡ್ ದೇಶದಲ್ಲಿ (Labour party) ಯವರಿಗೆ ಪಾರ್ಲಿಮೆಂಟಿನಲ್ಲಿ ಮೆಂಬರಿನ ಹಕ್ಕು ಸಿಕ್ಕಿ ಇದೆ ಅವರಿಗೆ ಇಲ್ಲಿ ಹಕ್ಕು ಸಿಕ್ಕಿ ಜೀವಿಸಬಾರದೋ ? ಈ ರೀತಿ ಕೌನ್ಸಿಲ್ ಸಿಕ್ಕುವದು ನೋಡಿದರೆ ಜಮ್ಮ ಇಲ್ಲದ ಡಬ್ಬಲ್ ಜನಸಂಖ್ಯೆಯವರು ಬೇರೆಯಾಗಿ ತಮ್ಮ ಹಕ್ಕಿಗೋಸ್ಕರ ಜಗಳ ಉಂಟಾಗುವ ರೀತಿ ಕಂಡು ಬರುತ್ತದೆ.

ಕೊಡಗಿನ ಹಿತಚಿಂತಕರು ಜಮ್ಮದ ಹೆಸರು ಪೂರ್ಣವಾಗಿ ಅಂದರೆ ಮೆಂಬರುತನಕ್ಕಾಗಿ ತೆಗೆದು ಬಿಡಬೇಕು.

ಬೇರೆ ಹಿಂದುಸ್ಥಾನದ ಇಲಾಖೆಗಳಲ್ಲಿ ಜಹಗೀರುದಾರರು ಇದ್ದಾಗ್ಯೂ ಕೌನ್ಸಿಲಿನಲ್ಲಿ ಪ್ರತ್ಯೇಕ ಹಕ್ಕು ಇರುವದಿಲ್ಲವಾಗಿ ಕೇಳುತ್ತೇನೆ.

ಈಗ ಸಿಕ್ಕುವ ಕೌನ್ಸಿಲಿನಲ್ಲಿ ಮಾಂಟೆಗೂ ಚೆಲ್ಮ್ಸ್‌ ಫೋರ್ಡ್ ಸಾಹೇಬರುಗಳ ಸುಧಾರಣೆ ಪ್ರಕಾರ ರೈತರಿಗೆ ಹಕ್ಕು ಇಲ್ಲವೆಂತ ಎರಡನೆಯ ವ್ಯಸನಕರವಾದ ಸಂಗತಿಯಾಗಿದೆ. ಅಂಥಾ ಹಕ್ಕು ಇರುವ ಸಭೆಯು ಸಾಲದೆಂತ ಹಿಂದುಸ್ಥಾನದ ಹೆಚ್ಚು ಜನರು ಕೂಗುತ್ತಾರೆ. ಹೀಗಿರುವಾಗ ನಮಗೆ ಸಿಕ್ಕಿರುವ ಕೌನ್ಸಿಲ್ ಅಷ್ಟು ಹಕ್ಕು ಇಲ್ಲದಿದ್ದರೆ ನಾವು ಹ್ಯಾಗೆ ಒಪ್ಪುವದು ?

M. M. Siddeck.
K. S. Santyya.

ಅಕ್ಕಯ್ಯ,

ಈಗ ಕೊಡಗು ಮುಸ್ಲಿಂ ವಿದ್ಯಾರ್ಥಿಗಳ [illegible] ಕೊಡಗರ ಗದ್ದೆಯಲ್ಲಿ ಕಪ್ಪುಪಾಟು ಮತ್ತು ಕೊಡಗಿನ ಸಂಗತಿ ಯಲ್ಲಿ, ತಾವು ಸರಿಯಾದ ಜವಾಬು ತಾ|| 22 ನೇ [illegible] ಪತ್ರಿಕೆ ಯಲ್ಲಿ ಪ್ರಕಟಿಸಿದ್ದು ನೋಡಿ, ಇದಕ್ಕೆ ನಾನು ಇನ್ನು ಒಂದನೆ ಮಾತಿದರೂ ಸ್ವಲ್ಪವೇ ಆಗಿರುತ್ತೆ. ನಿಮ್ಮ ನಾವು [illegible] ಮಾಡಿ ಬಡವರಾಗಿಲ್ಲ. ಬಡವರಾದುದಕ್ಕೆ ಅನೇಕ [illegible] ಗಳನ್ನು ಬರೆಯುವವರಿಂದ [illegible] ನಮ್ಮ ಪೂರ್ವಿಕರು ಮಾಡಿರುವ ಕಷ್ಟ ಕಾಯು ಬಹು ದೊಡ್ಡಾಗಿರುತ್ತೆ. [illegible] ಹೇಳಿದರೆ, ನಾಳೆ ನಮ್ಮ ಮಕ್ಕಳು ನಮ್ಮನ್ನು [illegible] ಕೇಳು ವಹೊಂದು ಅನುಮಾನವಿಲ್ಲ.

ಅಕ್ಕಯ್ಯ ತಮ್ಮ ಮನೆ ಮತ್ತು ಹೆಸರನ್ನು ತಿಳಿಯಬಯಸುವ

ಮುಂಡಂಡ ಬಿದ್ದಯ್ಯ ಸಿದ್ದಾಪುರ

ಕೊಡಗು ಸಂಪಾದಕರೇ,

ತಮ್ಮ ಅಗ್ರಲೇಖದಲ್ಲಿ ಕೆಲವು ವಾರಗಳ ಹಿಂದೆ ಒಂದು ಕೋಆಪರೇಟಿವ್ ಸೆಂಟ್ರಲ್ ಬ್ಯಾಂಕ್ ರಿಜಿಸ್ಟ್ರರಾಗಿದೆಯೆಂತಲೂ ಅದನ್ನು ಜನರು ಉಪಯೋಗಿಸಿಕೊಳ್ಳಬೇಕೆಂತಲೂ ಬರೆದಿತ್ತು. ಅದನ್ನು ಬರೆದು ಬಹಳ ದಿವಸಗಳಾದವು. ಬ್ಯಾಂಕ್ ಕೆಲಸ ಪ್ರಾರಂಭವಾದ ವರ್ತಮಾನವಿಲ್ಲ. ಮಡಿಕೇರಿ ಮುಂದಾಳುಗಳು ಈ ಬ್ಯಾಂಕ್ ನಮಗೇನೂ ಅವಶ್ಯವಿಲ್ಲ. [illegible] ಕೆಲಸವಾದರೆ ಸಾಕು ಎಂತ ಯೋಚಿಸಿ ಸುಮ್ಮನೇ ಕೂತಿದ್ದಾರೋ ತಿಳಿಯದು. [illegible] ಸಂಘಗಳಿಗೆ ಸಾಲ ಸಿಕ್ಕಬೇಕಾದರೆ ಅವರಿವರನ್ನು [illegible] ಹೋಗಬೇಕಾಗುತ್ತೆ. ಹೋದರೂ ಕಾಲಕ್ಕೆ ಸರಿಯಾ[illegible] ಕೃಷಿಕರಿಗೆ ಬಹಳ ಪ್ರಯೋಜನವಾಗುವ ಸಹಕಾರಿ ಸಂಘಗಳಿಗೆ ಸಹಾಯ ಮಾಡತಕ್ಕ ಬ್ಯಾಂಕನ್ನು ಜಾಗ್ರತೆ ಪ್ರಬಲಿಸಲು ಮನಸ್ಸು ಕೊಡದಿದ್ದರೆ ಮುಂದಾಳುಗಳೆಂದು ಹೆಸರು ಪಡೆಯಬೇಕೆಂತ ಇರುವವರು [illegible] ಕೃಷಿಕರು [illegible] [illegible]

[illegible]

ಅಯ್ಯಾ,

[illegible]

ದೇಶ ಭಕ್ತ.

ಕೊಡಗು ವಿದ್ಯಾಭಿವೃದ್ಧಿಯ ಸಂಘ.

ಅಯ್ಯಾ, ಈ ಹಿಂದಿನ "ಹಿತಚಿಂತಕ" [illegible]

[illegible] ಯಲ್ಲಿ ಜನರಲ್ ಮತ್ತು ಕಮಿಟಿ ಮೀಟಿಂಗುಗಳಲ್ಲಿ ನಡೆದಿರತಕ್ಕ ಎಲ್ಲಾ ಸಂಗತಿಗಳನ್ನು ಪ್ರಕಟಿಸಲ್ಪಟ್ಟಿರುತ್ತೆ. ಅವನ್ನು ನೋಡಿದರೆ ಹಿತಚಿಂತಕ ರಿಗೆ ಬೇಕಾಗುವ ಅನೇಕ ಉತ್ತರಗಳು ದೊರೆಯಬಹುದು. ಹ್ಯಾಗೂ ಅವರ ಆಕ್ಷೇಪಗಳಿಗೆ ಸಂಕ್ಷೇಪವಾಗಿ ಉತ್ತರಕೊಡುವೆನು.

(1) ಈ ಸಂಘದ ಮೀಟಿಂಗುಗಳ ಪ್ರೊಸೀಡಿಂಗ್ಸುಗಳನ್ನು ಕೊಡಗು ಪ್ರಕಟಣೆ ಮಾಡಬೇಕಾಗಿತ್ತು. ಆದರೆ ನಾನು ಇತರ ಕೆಲಸದಲ್ಲಿ ಇದ್ದುದ ರಿಂದ ಕೂಡಲೆ ಕೊಡಗು ಪತ್ರಿಕೆಗೆ ಕಳುಹಿಸಲು ಅನಾನುಕೂಲವಾಯಿತು. ಇದಕ್ಕಾಗಿ ಚಂದಾದಾರರ ಮನ್ನಣೆ ಕೇಳಿಕೊಳ್ಳುತ್ತೇನೆ.

(2) ಪ್ರಾರಂಭದಲ್ಲಿ ತಾ|| 25—6—21 ರಲ್ಲಿ ಜನರಲ್ ಮೀಟಿಂಗ್ ನಡೆಯುವದಾಗಿ ನೋಟೀಸ್ ಕೊಟ್ಟೆನು. ಆ ದಿನ ಮಳೆ [illegible] ಕಾಟೀ ಕಾರಿವಾರವಾದ್ದರಿಂದಲೂ ಎಲ್ಲಾ ಜನರಿಗೂ ಮೀಟಿಂಗಿಗೆ ಬರಲು ಅನುಕೂಲವೆಂದು ಆ ದಿನಕ್ಕೆ ಗೊತ್ತುಮಾಡಿದ್ದಾಗಿದೆ. ಆದರೆ ಆ ದಿನ ತಕ್ಕಷ್ಟು ಜನರು ನೆರೆದುಬಾರದ ಕಾರಣ ಸಭೆಯಲ್ಲಿ ನೆರೆದಿದ್ದವರ ಅಭಿಪ್ರಾಯದಂತೆ ತಾ|| 1—7—21 ರಲ್ಲಿ ಮೀಟಿಂಗ್ ನಡೆದಲಾಯಿತು. ಎಂದಿನಂತೆ ಮಡಿಕೇರಿಯಲಿರುವ ಎಲ್ಲಾ ಜನರಿಗೆ ನೋಟೀಸ್ ಕೊಟ್ಟದ್ದಲ್ಲದೆ ಸೆಂಟ್ರಲ್ ಕಮಿಟಿ ಮೆಂಬರುಗಳಾಗಿರುವ ಎಲ್ಲಾ ತಾಲ್ಲೂಕ್ ಸುಪರ್‌ದಾರರವರಿಗೂ ಪಾರುಪತ್ಯಗಾರರವರಿಗೂ ಪ್ರತ್ಯೇಕ ನೋಟೀಸ್ ಕಳುಹಿಸಲಾಯಿತು. ಎಂದಿನಂತೆ ಇವರು ಅವರವರ ತಾಲ್ಲೂಕಿನ ಜನರಿಗೆ ತಿಳಿಸಬಹುದಾಗಿ ನಂಬುತ್ತೇನೆ. ಪ್ರತಿ ಒಬ್ಬ ಚಂದಾದಾರನಿಗೆ ಆಗಾಗುವ ನೋಟೀಸ್ ಕಳುಹಿಸುವುದು ಅಸಾಧ್ಯವೆಂದು ಹಿತಚಿಂತಕರಿಗೆ ತಿಳಿದಿರಬಹುದು. ಆದ್ದರಿಂದ ಅವರ ಈ ಬಾಬಿನ ಆಕ್ಷೇಪಣೆ ನ್ಯಾಯವಾದದ್ದಲ್ಲ.

(3) "ಹಿತಚಿಂತಕ" ರು ಮೀಟಿಂಗಿನಲ್ಲಿ ಹಾಜರು ಇದ್ದರಾಗಿ [illegible] ಮೇಲೆ ಹೇಳುತ್ತೇನೆ. ಹಾಗೆ ಅವರು ಇದ್ದಪಕ್ಷಕ್ಕೆ ಬಹುಶಃ ನಾನು ಕನ್ನಡದಲ್ಲಿ ಓದಿದ ರಿಪೋರ್ಟ್ ಅವರಿಗೆ [illegible] ಇಲ್ಲ ಅವರ ಮನಸ್ಸನ್ನು ಇನ್ಯಾವುದೋ ಇಟ್ಟಿದ್ದರೋ ಹೇಳಲಾಗುವದಿಲ್ಲ. ನನ್ನ ರಿಪೋರ್ಟಿನ 2 ನೆ ಮತ್ತು 5 ಪ್ಯಾರಗಳನ್ನು ನೋಡಿದರೆ ಈ ಸಂಗತಿ ತಿಳಿಯುವುದು. ಹಿಂದಿನ ಕಮಿಟಿಯ ಸೆಕ್ರೆಟರಿಯು ರಿಪೋರ್ಟಿನಲ್ಲೂ ನಮೂದಿಸುವುದು ಅಸಾಧ್ಯವಾಗಿದೆ. ಈ [illegible]

[illegible]

(4) [illegible] "ಹಿತಚಿಂತಕ" ರು ಬರೆದಿರುವ [illegible] 1917 ನೆ ಇಸವಿಯಲ್ಲಿ [illegible] ಈ ಫಂಡು 1821 ನೆ ಇಸವಿಯ 12 [illegible] 1740 [illegible]

[illegible]

(5) ಈ ಸಂಗತಿಗೆ ನನ್ನ ರಿಪೋರ್ಟಿನ [illegible] ನೋಡಿಕೊಂಡರೆ ಸಾಕಾಗಿದೆ.

(6) ಈ ಸಮಯ ಸೆಂಟ್ರಲ್ ಕಮಿಟಿ ಮೆಂಬರುಗಳನ್ನು ಚುನಾಯಿಸುವ [illegible]

[illegible]

ಹಿತಚಿಂತಕರೇ, ದಯವಿಟ್ಟು ಈ ಫಂಡಿನಲ್ಲಿ ನಡೆಯುತ್ತಿರುವ ಕೆಲಸಗಳನ್ನು ನೋಡದೆ ಊಹೆಯ ಮೇಲೆ ಆಕ್ಷೇಪಣೆಗಳನ್ನು [illegible] ದಯವಿಟ್ಟು ಈ ಫಂಡಿನ ಏಳಿಗೆಗೋಸ್ಕರ, ಅದರ ಸ್ಥಿತಿಗತಿಗಳನ್ನು ತಿಳಿಯುವ [illegible]

ಕೆ. ಕಾಳಪ್ಪ.

ಪ್ರ ಕ ಟ ಣೆ.

ಈ ಕಳೆದ ಸನ್ 1921 ನೇ ಏಪ್ರಿಲ್ ತಾರೀಖು 25 ರಲ್ಲು ಪಿಂಚಿನಾಗಿ ಬಂದ ಕೊಂಗೇಟ್ಟ ಮಂದಣ್ಣನವರು ಕೊಡಗು ಮಡಿಕೇರಿ ಮಹಾದೇವಪೇಟೆ ಚೌಕದಲ್ಲಿ ಇಂಗ್ಲಾಂಡಿನಿಂದ ಎಲ್ಲಾ ಔಷಧ ಆಪರೇಸನಿಗೆ ಬೇಕಾಗುವ ಆಯುಧಗಳ ಮತ್ತು ಔಷಧವಾಡಲಿಕ್ಕೆ ಬೇಕಾಗುವ ಎಲ್ಲಾ ಸಾಮಾನುಗಳನ್ನು ತರಿಸಿಕೊಂಡು ತಮ್ಮ ತಂದೆ ಕೊಂಗೇಟಿರ ಅಪ್ಪಯ್ಯನವರ ಹೆಸರಿನಲ್ಲಿ ಒಂದು ಆಸ್ಪತ್ರೆಯನ್ನು ತೆರದು ಇರುತ್ತಾರೆ.

ಇ ನ ರ ಸ ರ ಕಾ ಗ ಳು.

(1) ಪ್ರತಿಯೊಬ್ಬರನ್ನು ಪರೀಕ್ಷಿಸಿ ಔಷಧ ಪಟ್ಟಿಯನ್ನು ಮಾಡಲು ಎಂಟು ಆಣೆಗಳ ಫೀಜು.

(2) ಪ್ರತಿಯೊಂದು ಔನ್ಸ್ ಕುಡಿಯಲಿಕ್ಕೆ ಕೊಡತಕ್ಕ ನೀರು ಮದ್ದಿಗೆ ಎರಡು ಆಣೆಗಳು. ಪ್ರತಿಯೊಂದು ಗುಡಿಗೆ ಒಂದು ಆಣೆ. ಹೊರಗೆ ಹಚ್ಚಲಿಕ್ಕೆ ಇರತಕ್ಕ ಮುಲಾಮ್ ಔಷಧ ಔನ್ಸಿಗೆ ಮೂರು ಆಣೆ. ಮತ್ತು ಹೊರಗೆ ಉಜ್ಜಲಿಕ್ಕೆ ಇರತಕ್ಕ ತೈಲಗಳಿಗೆ ಔನ್ಸಿಗೆ ನಾಲ್ಕು ಆಣೆಗಳ ಛಾರ್ಜು ಮಾಡುತ್ತಾರೆ. ಈ ಮೇಲಣ ಛಾರ್ಜುಗಳು ಮೊದಲಾಗಿ ಕೊಡಬೇಕಾಗಿದೆ.

(3) ಇವರನ್ನು ಪಟ್ಟಣದಲ್ಲಿ ವಾಯಿದೆ ಅಜಮಾಯಿಸಲು ಮನೆಗಳಿಗೆ ಕರದುಕೊಂಡು ಹೋದಲ್ಲಿ ಇವರ ಫೀಜು ಎರಡು ರೂಪಾಯಿಗಳು. ಪಟ್ಟಣದ ಹೊರಗೆ ಹೋದಲ್ಲಿ ಮೈಲಿಗೆ ಒಂದು ರೂಪಾಯಿಯಂತೆ ಛಾರ್ಜು ಮಾಡುತ್ತಾರೆ.

(4) ಇವರನ್ನು ಹೆಂಗಸರ ಹೆರಿಗೆ ಕಾಲದಲ್ಲಿ ಕರಸಿಕೊಂಡಲ್ಲಿ ಸುಲಭದ ಹೆರಿಗೆಗೆ ಇಪ್ಪತ್ತೈದು ರೂ. ಮತ್ತು ಕಷ್ಟದ ಹೆರಿಗೆಗೆ ಐವತ್ತು ರೂಪಾಯಿಗಳ ಛಾರ್ಜು ಮಾಡುತ್ತಾರೆ.

(5) ಚಾವು, ಕುರ, ಹಲ್ಲು ಕೀಳುವ ಸಾಧಾರಣ ಆಪರೇಷನುಗಳಿಗೆ ಐದು ರೂಪಾಯಿ ಛಾರ್ಜು ಮಾಡುತ್ತಾರೆ.

ಮಾ ರಾ ಟ ಕ್ಕೆ!

ಕೊಂಡುಕೊಳ್ಳಲು ಯೋಗ್ಯವಾದುದು!

ರೂ. 800 ಬೆಲೆಬಾಳುವ ನಾಲ್ಕು ಜನರು ಕೂರಬಹುದಾದ ದಿಂಬು, ದೀಪ ಇತ್ಯಾದಿಗಳಿಂದ ಸಂಪೂರ್ಣವಾಗಿರುವ

ಒಂದು ಟೋಂಗವು.

ರೂ. 500 ಕ್ಕೆ ಮಾರಾಟಕ್ಕಿದೆ. ಮಲಗಲಿಕ್ಕೂ, ಕೂರಲಿಕ್ಕೂ ಅನುಕೂಲಗಳಿವೆ.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ —

"ಎಕ್ಸ್"

ಸೊ/ಕೊ, ಮೇನೇಜರ್,

4—1 "ಕೊಡಗು" ಲಿಮಿಟೆಡ್, ಮಡಿಕೇರಿ.

FOR SALE.

"A WORTH BUYING BARGAIN"

A four seated "Tonga" with complete Cushions, Covers and Best Lamps worth Rs. 800 will be sold for Rs. 500. It is very convenient to travel in night time and also can sleep comfortably.

For particulars apply to—

4—1 **"X"**

C/o Manager, Kodagu Ltd.,

MERCARA.

ಶ್ರೀ ಕಂಠರ ಕರ್ನಾಟಕ ಪುಸ್ತಕ ಭಾಂಡಾರ.

ನಮ್ಮಲ್ಲಿ ಈಗ ೧೮೦೦ ಕರದ ಬೇರೆಬೇರೆ ಕನ್ನಡ ಪುಸ್ತಕಗಳಿವೆ. ಕೆಳಗೆ ಬರೆದ ಪುಸ್ತಕಗಳನ್ನು ಮಾರುವ ಪೂರ್ಣ ಸ್ವಾತಂತ್ರ್ಯವು ನಮ್ಮದೇ ಇದೆ.

೧	ಕರ್ನಾಟಕ ಕವಿ ಚರಿತ್ರೆ ಪು. ೧	ರೂ.	೪—೦—೦
೨	,, ,, ೨	,,	೫—೦—೪
೩	ಟೂಕರ ಟಿ. ವಾಶಿಂಗ್ಟನ್ನ	,,	೧—೩—೦
೪	ಚಿರಮಂಗಲದ ಗಾಳಿಯ ಚರಿತ್ರೆ	,,	೧—೨—೦
೫	ರಾಜಕೇಸರಿ ಚರಿತ್ರೆ	,,	೧—೦—೧
೬	ಕಿಮ್ಮೆರಿ		೦—೧೨—೦
೭	ಅಕ್ಬರ ಚರಿತ್ರೆ (ಸಚಿತ್ರ)	,,	೧—೧—೦
೮	ಅಬಲಾ ಸಚ್ಚರಿತ್ರ ರತ್ನಮಾಲೆ	,,	೩—೩—೦
೯	ರಾಯಚೂರ ವಿಜಯ	,,	೨—೦—೦

ಇವಲ್ಲದೆ ನಮ್ಮಲ್ಲಿ ಶಾಲೋಪಯೋಗಿ ಮುಂತಾದ ಎಲ್ಲ ಕನ್ನಡ ಪುಸ್ತಕಗಳೂ ಬರವಣಿಗೆಯ ಎಲ್ಲ ಉಪಕರಣಗಳೂ ದೊರೆಯುತ್ತವೆ.

ಮಾಳಮಡ್ಡಿ, ಧಾರವಾಡ—ಪುಸ್ತಕ ಭಂಡಾರ.

ಶುಭಶೋಭನಗಳಲ್ಲಿ, ಸಂತೋಷಕೂಟಗಳಲ್ಲಿ !
ಮದುವೆ ಮುಂಜಿಗಳಲ್ಲಿ, ಸಭಾಕೂಟಗಳಲ್ಲಿ !!

ಬೇಕಾಗುವ

ರೇಶ್ಮೆಯ ಸೀರೆ, ರೇಶ್ಮೆಯ ವಸ್ತ್ರ, ರೇಶ್ಮೆಯ ದಟ್ಟಿ, ರೇಶ್ಮೆಯ ಅಂಚಿನ ಪಂಚೆ, ಸಾಧಾರಣ ಪಂಚೆ, ಇತ್ಯಾದಿ ನಾನಾಂತರದ ಕೋಟು ಬಟ್ಟೆಗಳು ಮತ್ತು ಇತರ ಸಾಧಾರಣ ಉಡಿಗೆ ತೊಡಿಗೆಗಳು ಯಾವತ್ತೂ ನಮ್ಮಲ್ಲಿ ಸಿದ್ಧವಾಗಿವೆ. ಬಟ್ಟೆಗಳೂ ನಮ್ಮಲ್ಲಿಯೇ ಮಗ್ಗಗಳಿಂದ ತಯಾರಾಗುವುವು. ತಮಗೆ ಬೇಕಾದುದನ್ನು ತಿಳುಹಿಸಿ.

ಕೆ. ನಂಜಪ್ಪಶೆಟ್ಟಿ,
ಬನಳಿ ವ್ಯಾಪಾರಿ,
ಸೋಮವಾರಪೇಟೆ.

Messrs. P. SAM & Co.,

Receiving & Forwarding Agents, Cabinet Makers, Auctioneers & General Agents,

591/4 Aryaji Rao Road, MYSORE

They not only receive and forward your goods from Mysore Railway Station to any part in Coorg but also receive goods from those parts and despatch them to any other part from the Mysore Railway Station. They undertake to sell your saleable articles by public auction or otherwise, and also supply you goods at the cheapest rates. Commission very moderate. A trial order will convince you of their promptness and business methods.

ಒಳ್ಳೆಯ ಪುಸ್ತಕಗಳು !! ಬೆಲೆ ಸುಲಭ !

A. N. C. & Co., Mysore.

ಮಹಾಶಯರೆ—ನಮ್ಮ ಕಂಪೆನಿಯು ... ಕನ್ನಡ ಪುಸ್ತಕಗಳೂ ಇತರ ಸಾಮಾನುಗಳೂ ... ಕನ್ನಡ ಗ್ರಂಥಕಾರರು ತಮ್ಮ ಪುಸ್ತಕಗಳ ... ಪ್ರತಿಯನ್ನು ... ಅಪ್ಪುಗಳನ್ನು ... ಮಾಡುವುದಲ್ಲದೆ ಒಳ್ಳೆಯ ಪುಸ್ತಕಗಳನ್ನು ಕೊಂಡುಕೊಳ್ಳುತ್ತೇವೆ. ... ಅನುಮೋದಿಸಿದ ಪುಸ್ತಕಗಳನ್ನು ಹಿಂದಕ್ಕೆ ಕಳುಹಿಸಬೇಕಾದಲ್ಲಿ ಟಪಾಲು ಖರ್ಚನ್ನು ಪುಸ್ತಕ ಕಳುಹಿಸಿದವರೇ ಕೊಡಬೇಕು. ... ಪ್ರಕಟಿಸಿರುವ—

ಸ್ತೋತ್ರಮಾಲಿಕಾ. ಭಾಗ ೧

ಎಂಬ ಪುಸ್ತಕದಲ್ಲಿ 1 ಮಂಗಳಾಚರಣೆ 2 ಪ್ರತಿದಿನ ಪಠಿಸುವ ಸ್ತೋತ್ರಗಳು 3 ಪ್ರತಿ ವಾರದ ಪಯುಕ್ತ ಸ್ತೋತ್ರಗಳು 4 ಪ್ರತಿ ವರ್ಷ ಪಯುಕ್ತ ಸ್ತೋತ್ರಗಳು 5 ಉಪಯುಕ್ತ ಸ್ತೋತ್ರಗಳು, ಎಂಬ ಐದು ವಿಭಾಗಗಳನ್ನು ಒಳಗೊಂಡಿದೆ. ಇದರ ಬೆಲೆ 1 ಆಣೆ ಮಾತ್ರ. ಇದನ್ನು ... 5 ಆಣೆ ಪೋಸ್ಟಲ್ ಸ್ಟಾಂಪು ಕಳುಹಿಸಿ ಸಾಧಾರಣ ಬುಕ್ಕುಪೋಸ್ಟು ಮೂಲಕ ... ಪಡೆಯಬಹುದು. ಪರೀಕ್ಷಿಸಿ ನೋಡಿರಿ ! ಮಾರಾಟಗಾರರಿಗೆ ಉತ್ತಮ ... ಪ್ರಯೋಜನ !!

ಇತ್ತ ನೋಡಿ ! ಕೊಡಗು ಬಾಂಧವರೇ ! ಇತ್ತ ನೋಡಿ !

ನಮ್ಮಲ್ಲಿ ಸಾಮಾನು ಪ್ರತಿಯೊಬ್ಬ ಹೊಗಳುವದು ತಮ್ಮ ಗಳಿಗೆ ತಿಳಿದಿರುವದಷ್ಟೆ.

ಕಾಮಿನಿಯಾತೈಲ —ಎಂಟೆ ಶೀಸೆ 1 ಕ್ಕೆ 1—0—0 3 ಶೀಸೆಗೆ 2—10—0 ಓರೋದಿಲ್ಲಖಾರ ಅತ್ತರ್ ಪ್ರಾಮು ಶೀಸೆ 1ಕ್ಕ 0—12—0 ಡಜನ್ 7—8—0 ಅರ್ಧ ಔನ್ಸ್ ಬಾಟ್ಲು ಶುದ್ಧಸಿಲೋನ್ ತೈಲ ಶೀಸೆ 1 ಕ್ಕೆ 3 ಆಣೆ ಡಜನ್ 1 ಕ್ಕೆ 1—12—0 ಕಸ್ತೂರಿಮಾತ್ರೆ ಶೀಸೆ 1 ಕ್ಕೆ 4 ಆಣೆ ಡಜನ್ 1 ಕ್ಕೆ 2—10—0 ಮಲೇರಿಯಾ, ಚಳಿ ಬಿಟ್ಟು ಬರುವ ಜ್ವರಕ್ಕೆ ಚಾತ್ರಿಯಾದ ಚಕ್ಕಿ ಮುಲಾಮಿನ ಮಾತ್ರೆ ಶೀಸ 1 ಕ್ಕ 1—0—0 ರೂ

ಜಿಂತಾನ್ ಪಾಕೇಟ್ 1 ಕ್ಕೆ	1 ಆಣೆ	4 ಆಣೆ	1 ರೂ.
ಗಂಧದ ಸಾಬೂನ್ 1 ಕ್ಕ	೨ ಆಣೆ	6 ಆಣೆ	7 ಆ.
ವಿಕಟೋರಿಯಾ ಸಾಬೂನು 1 ಕ್ಕ			0 2-6
ಪ್ಯಾರೀಸ್ ರಾಣಿ ಸಾಬೂನು 1 ಕ್ಕ			1 2 0
ಜಸ್‌ಮಿನ್ (ಮಲ್ಲಿಗೆ) ಸಾಬೂನ್ 1 ಕ್ಕ			8 ಆಣೆ
ಬುಕ್ಕಟ್ ಗುಡ್‌ವಿನ್ ,, 1 ಕ್ಕ			10 ಆಣೆ
ಚಿಕ್ಕ ಕನ್ನಡಿ 1 ಕ್ಕ		2 ಆಣೆ	0 2 6
ಸಾಬೂನ್ ಕರಡಿಗೆ 1 ಕ್ಕ		5 ಆಣೆ	7 ಆಣೆ
ಶರಟ್ ಬಟನ್ ಹರಳಿನದ್ದು ಸೆಟ್ಟು 1 ಕ್ಕ			3 ಆಣೆ
ಬಾಚಣಿಗೆ ಡಜನ್ 1 ಕ್ಕ	0 14 0	1 4 0	1 8 0
ಕ್ಷೌರಕತ್ತಿ 1 ಕ್ಕೆ	2 4 0	2 12 0	೨ 8 0
ಅಮೃತಾಂಜನ ಡಬ್ಬಿ 1 ಕ್ಕೆ			9 ಆಣೆ
ಜರ್ಮನಿ ಕತ್ತರಿ 1 ಕ್ಕ			10 ಆಣೆ
ಕಾಡ್‌ಬರಿ ಚೊಕಲೇಟ್ ಪಾಕೇಟ್ 1 ಕ್ಕೆ			8 ಆಣೆ.
ಫೌಂಟನ್ ಪೆನ್ 1 ಕ್ಕೆ		15 ಆಣೆ	8 ಆಣೆ

ಯಾವ ತರದ ಸಾಮಾನು ಬೇಕಾದಲ್ಲಿ ನಮ್ಮಲ್ಲಿ ದೊರೆಯುತ್ತೆ. ಟಪಾಲು ಖರ್ಚು ಅಲಾಯಿದಾ

... ಉಲ್ ಪಾರ್ಟಿ,
ನಂ ೩, ಮಂಗಳೂರು, ದ. ಕ.

ರೋಗಿಗಳೂ, ರೋಗವಿಲ್ಲದವರೂ

ಆಕ್ಸಿಟೇನ್‌ಸ್ನ

ಉಪಯೋಗಿಸಬೇಕು.

ಎಂಥ ಹಳೇ ಕಾಯಿಲೆಯಲ್ಲೇ ಆಗಲಿ ಮೊದಲು ಇದನ್ನು ಉಪಯೋಗಿಸಿದರೆ ಶರೀರದ ಕಲ್ಮಷವನ್ನು ತೆಗೆದುಹಾಕಿ ಕಾಯಿಲೆಯನ್ನು ಕಡಿಮೆಮಾಡುವುದು. ಸುಲಭ ಕಾಯಿಲೆಗಳಲ್ಲವೂ ಬರಿ ಇದರ ಸೇವನೆಯಿಂದಲೇ ಗುಣವಾಗುವುವು. ತೆಗೆದುಕೊಂಡ ೨॥ ಘಂಟೆಯಲ್ಲಿ ಸುಖಭೇದಿ ಮಾಡುವುದು. ಬೇರೆ ಭೇದಿ ಮಾತ್ರೆಗಳಂತೆ ಸಂಕಟ, ಹೊಟ್ಟೆನೋವು ಮುಂತಾದುವನ್ನುಂಟುಮಾಡುವುದಿಲ್ಲ. ಸಂನಿಪಾತಜ್ವರ, ಕೆಮ್ಮು, ಉಬ್ಬಸ, ಮೂತ್ರಬಂಧನೆ, ತಲೆಸ್ಯ, ಉಷ್ಣ, ಪಿತ್ತ, ಶೀತಸಂಬಂಧ ಕಾಯಿಲೆಗಳು, ಜೀರ್ಣಕೋಶದ ಅಕ್ರಮತೆ, ಕರುಳುಗಳಲ್ಲಿ ಕ್ರಿಮಿಗಳಿಂದ ಹೊಟ್ಟೆ ಉಬ್ಬರವಾಗುವುದು, ದುರ್ವಾಸನೆಯುಳ್ಳ ವಾಯುಗಳು ಹುಟ್ಟುವುದೇ ಮುಂತಾದುವನ್ನೆಲ್ಲಾ ಗುಣಪಡಿಸುತ್ತದೆ.

ಚಿಕ್ಕಮಕ್ಕಳಿಂದ ಮುದುಕರವರೆಗೆ ವರ್ಷದ ಯಾವ ಕಾಲದಲ್ಲೂ ಉಪಯೋಗಿಸಬಹುದು. ಯಾವಾಗಲೂ ಒಂದು ಶೀಸೆಯನ್ನು ಹತ್ತಿರವೇ ಇಟ್ಟುಕೊಳ್ಳಿ.

೧೦ ಮಾತ್ರೆ ಶೀಸೆಗೆ ೧೨ ಆಣೆ

ಚಂದ್ರಕಳೆಯು

ಶರೀರದಲ್ಲಿನ ಪ್ರತಿಯೊಂದು ಧಾತುವನ್ನೂ ಸೇರಿಸಿ ಶರೀರದ ರೋಗಗಳನ್ನು ಪರಿಹರಿಸುವುದು. ರೋಗವಿಲ್ಲದವರಿಗೆ ಮಾಂಸ, ಮೆದುಳು, ಮೂಳೆ, ನರ, ಮುಂತಾದುವುಗಳನ್ನು ಬಲಪಡಿಸಿ ಧಾತು ಗಟ್ಟಿಮಾಡಿ ವೃದ್ಧರಾಯಿರನ್ನಾಗಿ ಮಾಡುತ್ತದೆ. ರೋಗಿಷ್ಟರಿಗೆ ಅಶಕ್ತಿ, ಗುಡ್ಡೆ, ಜಳಜ್ವರ, ವಾತ, ಪ್ಲೀಹ ಏಂಬ ಪಕ್ಕೆನೋವು, ಪಿತ್ತಕೋಶದ ರೋಗಗಳು, ಮೂತ್ರಕೋಶದ ರೋಗಗಳು, ಮುಖಬದ್ಧತೆ, ನರಗಳ ಕಾಯಿಲೆಗಳು, ಸರ್ಗಳ ಚಳುಕು, ಮಿದುಳಿನ ಕಾಯಿಲೆಗಳು, ಹುಣ್ಣು, ಕ್ಷಯ, ಶರೀರದ ... ಮುಂತಾದುವು ಹಿಡಿವುದು, ಹೊಟ್ಟೆನೋವು ಮುಂತಾದುವನ್ನೆಲ್ಲಾ ಖಂಡಿತ ಗುಣಪಡಿಸುತ್ತದೆ. ಅಮೂಲ್ಯ ಔಷಧಗಳಿಂದ ತಯಾರಿಸಿದ್ದು. ಶೀಸೆಗೆ ೫ ರೂಪಾಯಿ

ಇಲೆಕ್ಟ್ರಿಕ್ ಬಾಂ.

ತಲೆ ಶೂಲ, ತುರಿಕಜ್ಜಿ, ಗಾಯ, ಸುಟ್ಟ ಗಾಯ ಮುಂತಾದುವನ್ನೆಲ್ಲಾ ಗುಣಪಡಿಸುತ್ತದೆ

ಪೆಟ್ಟಿಗೆಗೆ ೨ ಆಣೆ

ಎಷ್ಟೇ ದೊಡ್ಡ ಜ್ವರ ವಿರಲಿ

ನಮ್ಮ ಜ್ವರಾರಿಮಾತ್ರೆಗಳು ತೆಗೆದುಕೊಂಡ ಎರಡುಗಂಟೆಗಳೊಳಗಾಗಿಯೇ ಜ್ವರವನ್ನು ಬಿಡಿಸುವುವು. ೧ ಪೆಟ್ಟಿಗೆ ಮಾತ್ರೆ ೧ ರೂ

ರೋಗಗಳನ್ನು ಗುಣಪಡಿಸುವುದಕ್ಕೆ ನಮ್ಮ ಶೀತಜ್ವರಿ ಮಾತ್ರೆಗಳನ್ನು ಉಪಯೋಗಿಸಿ. ಇವು ಮಲೇರಿಯಾ, ಸನ್ನಿವಾತ, ಪಿತ್ತಜ್ವರಗಳು, ಶ್ಲೇಷ್ಮಜ್ವರಗಳು, ಮುಂತಾದುವನ್ನೆಲ್ಲ ಗುಣಪಡಿಸುತ್ತದೆ. ಶೀಸೆಗೆ ೧ ರೂಪಾಯಿ

ಅನ್ನಕೋಶ, ಪಿತ್ತಕೋಶ ಮುಂತಾದುವುಗಳ ಅಕ್ರಮತೆಯಿಂದ ಹೊಟ್ಟೆನೋವು (ಪರಿಣಾಮಶೂಲೆ) ಶಾಂತಿಯಾಗುವುದು, ಅಜೀರ್ಣ, ಮುಂತಾದ ಎಲ್ಲಾತರದ ಡಿಸ್ಪೆಪ್ಸಿಯ ... ಜೀರ್ಣಕೋಶದ ಕಾಯಿಲೆಗಳನ್ನೂ ... ರಿಯು ಖಂಡಿತ ಗುಣಮಾಡುತ್ತದೆ. ... ವಿಧ ಗುಳಿಗಳು ... ಶೀಸೆಗಳಿಗೆ ೫ ರೂಪಾಯಿ

ಎಲ್ಲಾ ತರದ ಕಾಯಿಲೆಗಳನ್ನೂ ಪತ್ಯವಿಲ್ಲದೆ ಕಂಚಿತವಾಗಿ ಹತ್ತಿರವಿದ್ದು ಗುಣಮಾಡುತ್ತೇವೆ. ಜನರಲ್ ಬರೆಯಿರಿ ಎಂದರೆ ಪ್ರೋಗ್ರಾಮ ... ಮೂತ್ರಕೋಶದ ಕಾಯಿಲೆ ಮುಂತಾದುವನ್ನು ಗುಣಪಡಿಸಿದ್ದಕ್ಕೆ ನಮಗೆ ಚಿನ್ನದ ಮೆಡಲುಗಳು ಸಿಕ್ಕಿವೆ.

ಡಿ. ಜಿ. ಎಚ್. ಹೌಸ್,
ವೀರಾಜಪೇಟೆ, (ಕೊಡಗು).

ಕೈಯಲ್ಲಿ ಕಟ್ಟಲೂ ಜೇಬಿನಲ್ಲಿ ಡಲೂ ಅನುಕೂಲವಾದ ಹೊಸ ಸನ್ ... ಲಿ ವರ್ ವಾಚ್



ಈ ಗಡಿಯಾರಗಳು ವಿಲಾಯಿತಿಯ ... ಲಿವರ್ ಮೂವ್ಮೆಂಟ್ ... ಗುಂಡಿ ... ಕೈಯಲ್ಲಿ ಕಟ್ಟಿಕೊಳ್ಳಲೂ ... ಜೇಬಿನಲ್ಲಿ ... ಕಟ್ಟಿಕೊಳ್ಳಲೂ ಇದು ಅನುಕೂಲ.

ನಾಲ್ಕನೆಯ ... ಕ್ರಯ ಗಡಿಯಾರ 1 ಕ್ಕೆ ರೂಪಾಯಿ ೨—೦—0

ಕಂಬಳಿ ಟೋಪಿ

ಈ ಟೋಪಿಗಳು ... ಉಲ್ಲನ್ ದಾರದಿಂದ ತಯಾರಿಸಿದ ... ಇರುವವರೂ ಉಪಯೋಗಿಸಲು ... ಸಾಧಾರಣ ... ಸಿಗುವುದು

ಕ್ರಯ ಉಲ್ಲನ್ ಟೋ ೩ 1 ಕ್ಕೆ 12 0

ವಿಳಾಸ —ಎಸ್ ಆರ್ ... ಅಂಡ್ ಕೊ. ೬೩ ... ಮದರಾಸು

ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚ್ ... ರಿಸ್ಟ್ ಲೆಟ್ ವಾ.



ಈ ಗಡಿಯಾರಗಳನ್ನು ... ಭಂಗಾರದಿಂದ ಅಮೇರಿಕಾದಲ್ಲಿ ತಯಾರಿಸಿದ್ದು ... ಗಡಿಯಾರಗಳಲ್ಲಿ ರಾತ್ರಿವೇಳೆ ... ಅಮೇರಿಕಾದ ಗಡಿಯಾರಗಳು ... ಗಡಿಯಾರಕ್ಕೆ ೨ ವರುಷ ಗ್ಯಾರಂಟಿ ಕೊಡುವುದು ... ಕೈಯಲ್ಲಿ ಕಟ್ಟಿಕೊಳ್ಳುವ ... ಸಹಿತ ಗಡಿಯಾರ 1 ಕ್ಕೆ 10—8 0 ಕೈಯಲ್ಲಿ ಕಟ್ಟುವ ... ಸಹಿತ ಗಡಿಯಾರ 1 ಕ್ಕೆ ೩—8—0 ರೂ

ವಿಳಾಸ —ಎಸ್ ಎಸ್ ರಾಮ ಅಂಡ್ ಕೊ
ಪೋಸ್ಟ್ ಬಾಕ್ಸ್ ನಂ 214, ಮದರಾಸು

ಮೂನ್ ಲೈಟ್ ಸೋಪು

ಈ ಸೋಪನ್ನು ಕಾದಲುಗಳಿಗೆ ಒಂದು ... ಕೊಂಡು ... ಮಾಡಿಕೊಂಡರೆ ... ತೆಗೆದು ಬಿಡುವುದು ... ನಮ್ಮ ಮೂನ್ ಲೈಟ್ ಸೋಪು ಗಂಧ, ವಾಸನೆ ... ವಸ್ತ್ರದಲ್ಲಿ ವಾಯುಮಾಡು ...

3 ಸಾಬೂನುಗಳನ್ನು ಪೆಟ್ಟಿಗೆ 1ಕ್ಕೆ ರೂ 1—4—0 ... ಪೆಟ್ಟಿಗೆ ತರಿಸಿಕೊಂಡರೆ ರೂ 2—4—0

ವಜ್ರದ ಉಂಗುರಗಳು



ಈ ಉಂಗುರಗಳನ್ನು ... ದಿಂದ ಮಾಡಿದೆ ... ಹೆಸರು ... ವಜ್ರದ ಕಲ್ಲುಗಳನ್ನಿಟ್ಟು ... ಕಟ್ಟಿರುವದು ... ವಜ್ರದ ಉಂಗುರವೆಂದೇ ... ಬಣ್ಣಕ್ಕೆ ಗ್ಯಾರಂಟಿ ೫ ವರ್ಷ ಕೊಡು...

ಉಂಗುರ 1 ಕ್ಕೆ ರೂ ೨—12—0

ವಿಳಾಸ —ಎಸ್ ಪಾಲ್ ಅಂಡ್ ಕೊ
ಪೋಸ್ಟ್ ಬಾಕ್ಸ್ ನಂ 542 ಪಾರ್ಕ್‌ಟನ್, ಮದರಾಸು

ಮಧುರೆ ಮತ್ತು ... ಸೀರೆಗಳು

17 ಮೊಳ ಪೂರಾ ಇರುವದು ದೊಡ್ಡ

ಈ ಸೀರೆಗಳನ್ನು ಹಸನಾದ ... ನೂಲಿನಿಂದ ತಯಾರಿಸಿದೆ ... ವಾದ ರೇಷ್ಮೆಯ ಸೆರಗೂ, ಅಂದ... ದೊಡ್ಡ ಅಂಚೂ ಇದೆ. ಶ್ರೀಮ... ರಿಗೂ ಗರೀಬರಿಗೂ ಅನುಕೂಲ... ದದ್ದು. ಈಗಿನ ಕಾಲದಲ್ಲಿ ಈ ಕ್ರ... ಕ್ಕೆ ಎಲ್ಲಿಯೂ ಸಿಕ್ಕಲಾರವು. ... ರಿಗಾಗಿ ಕೆಲವು ಸೀರೆಗಳನ್ನು ... ತಯಾರಿಸಿರುವೆವು. ಬೇಕಾದ... ತರಿಸಿ ಪರೀಕ್ಷಿಸಿರಿ.

ಕ್ರಯ ನಂ 1 6—8—0 ರೂ ನಂ 2 7—8—0

ವಿಳಾಸ —ಎಸ್ ಎಸ್ ರಾಮ ಅಂಡ್ ಕೊ
ಪೋಸ್ಟ್ ಬಾಕ್ಸ್ ನಂ 214, ಮದರಾಸು

Printed and published by S. NANJUNDA SW... at The Sreenivasa Press, Mysore for 'Koda... Ltd., Mercara—19 8 1921.

REGISTERED NO. M. 1550.

ಕೊಡಗು.

ಸತ್ಯೇನ ಭಾರತದಯಾ ವಿದ್ಯಾನೀತಿಪ್ರಯುಕ್ತಾಃ । ಐಕಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯಸಂಗತಿ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

ಪುಟ ೧] ಕೊಡಗು, ಸನ್ ೧೯೨೧ ನೇ ಇಸವಿ ಆಗಸ್ಟ್ ತಾರೀಖು ೨೬ ನೆಯ ಶುಕ್ರವಾರ. [ಸಂಚಿಕೆ ೧೩

ವೀರಶೈವರಿಗೆ ಸಂಗ್ರಾಹ್ಯವಾದ ಫೋಟೋ.

ಶ್ರೀ ಶಿವಯೋಗಿಗಳ ಸಂಘ — ಭಾಗ್ಯಶಾಲಿ ಜನರು ಖರ್ಚುಮಾಡಿ ಮಹಾ ಶಿವಯೋಗಿಗಳ ದರ್ಶನ ತೆಗೆದುಕೊಳ್ಳುತ್ತಾರೆ ಆದರೆ ಶ್ರೀಮಂತರಿಗು ಮತ್ತು ಬಡವರಿಗೂ ನಿತ್ಯದರ್ಶನ ಆಗುವದಕ್ಕೆ ಫೋಟೋದ ಹೊರತು ಮಾರ್ಗವು ಇಲ್ಲದಕಾರಣ ನಾವು ಪ್ರಸಿದ್ಧರಾದ ಶ್ರೀ ...ರು ಚಿತ್ರದುರ್ಗ ಮಹಾಸ್ವಾಮಿ, ಗದಗ ತೋಂಟದಾರ್ಯ, ಅಥಣಿ ಶಿವಯೋಗಿ ಬಾಲಲೀಲಾಸ್ವಾಮಿ ...ಹಾನಗಲ್ಲ, ಹಾವೇರಿ, ಬಿದರೀ ನಿಡಸೋಸಿ ಮುಂತಾದ ಮಹಾಸ್ವಾಮಿಗಳ ಫೋಟೋ ಕೂಡಿಸಿದ ...ದೇ ಕಾಲದಲ್ಲಿ ಎಲ್ಲಾ ಶಿವಯೋಗಿಗಳ ದರ್ಶನ ಆಗು... ೧೮×೧೨ ಸೈಜದ ಚಿತ್ರದ ಕ್ರಯ ೧ ಪ್ರತಿ... ...ಣೆ.

ಶ್ರೀ ಕಲ್ಯಾಣ ಬಸವೇಶ್ವರ — ವೀರಶೈವ ದರ್ಮೋದ್ಧಾರಕರಾದ ಶ್ರೀಬಸವಣ್ಣದೇವರ ಅತ್ಯಂತ ...ದ ತಾಸ ಫೋಟೊ ೧೮×೧೨ ಸೈಜ ಬಣ್ಣದ ಚಿತ್ರದ ...ಕು ೧ ಪ್ರತಿಗೆ ರೂ ೧ ಸಾದಾ ೮ ಆಣೆ

ಶ್ರೀ ಅಲ್ಲಮಪ್ರಭು ಸಾದಪೂಜೋತ್ಸವ — ಇದರಲ್ಲಿ ಶ್ರೀಬಸವೇಶ್ವರರು ಶ್ರೀಚನ್ನಬಸವೇಶ್ವರ, ಸಿದ್ಧರಾಮೇಶ ... ಮಾಚಿದೇವರು, ಅಕ್ಕನಾಗಮ್ಮ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವಪಾದಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೋ ಇರುತ್ತದೆ ದೊಡ್ಡ ಸೈಜು ರೂ ೧| ಸಣ್ಣ ಜು ರೂ |||

ಶ್ರೀ ರೇಣುಕಾಚಾರ್ಯರ ಲಿಂಗೋದ್ಭವವು — ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರ್ಯರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವ ಫೋಟೋ ಇರುತ್ತದೆ ದೊಡ್ಡ ಸೈಜು ರೂ ೧| ಸಣ್ಣ ಸೈಜು ರೂ |||

ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ - ಇದರಲ್ಲಿ ಅಗಸ್ತ್ಯ ಮುನಿಗಳು ತಮ್ಮ ಪತ್ನಿ ಲೋಪಾಮುದ್ರಾ ಸಹ ಉಪದೇಶಮಾಡಿಕೊಳ್ಳುತ್ತಾ ಇದ್ದಾರೆ ದೊಡ್ಡ ಸೈಜು ರೂ ೧|. ಸಣ್ಣ ಸೈಜು ರೂ. |||.

ಶ್ರೀ ವೀರಭದ್ರನಿಂದ ಹನುಮಂತನಿಗೆ ಲಿಂಗಧಾರಣವು.— ಇದು ಹನುಮಂತನು ಮೋಕ್ಷಾರ್ಥಕ್ಕಾಗಿ ಲಿಂಗಧಾರಣಮಾಡಿಕೊಂಡ ಫೋಟೊ ಇರುತ್ತದೆ. ದೊಡ್ಡ ಸೈಜು ರೂ. ೧|. ಸಣ್ಣ ಸೈಜು ರೂ |||

...ಶ್ರೀ ವೀರಶೈವ ರಾಜಸಮೂಹ — ಇದರಲ್ಲಿ ಕೊಡಗು ...ಲಿಂಗರಾಜೇಂದ್ರ, ವೀರರಾಜೇಂದ್ರ ಪಡಿಯರ ದೇ... ...ಮಹಾರಾಣಿ, ಮತ್ತು ಸಧ್ಯದ ವ್ಯಾಂಗಸೂರ ...ಗೋವಾಪ್ರಾಂತದ ಬಾಂದಿವಾಡಿ ಸ್ಥಾಂಬಾದ ಅರ... ...ಫೋಟೊ ೯ ಇರುತ್ತವೆ. ಕ್ರಯ ಫುಲ್ಲಸೈಜು ೧| ರೂ ...೧೨ ಆಣೆ.

...ಗಳು ಚಿತ್ರದುರ್ಗ ಮಹಾಸ್ವಾಮಿಗಳ... ...ಸುಂದರವಾದ ಬಣ್ಣದ ಫೋಟೋ ಕ್ರಯ ಪ್ರತಿ ...ರೂ. ೧. ಸಾದಾ ರೂ |||.

...— ಖಾರಿ ಖರೀದದಾರರಿಗೆ ಚನ್ನಾಗಿ ಕಮಿಷನ್ ದೊರೆಯುವದು.

ವಿಳಾಸ — ಸಂಗಪ್ಪ ಜೇವರಗಿ,

... ಫೋಟೊ ಕಂಪನಿ, ಸೋಲಾಪುರ

ನಿಮ್ಮ ಇಂಗ್ಲೀಷ್ ಮತ್ತು ಕನ್ನಡಾ ಅಚ್ಚಿನಕೆಲಸಗಳು ಯಾವದೇಯಿದ್ದರೂ ನಮ್ಮಲ್ಲಿಗೆ ಕಳುಹಿಸಿಕೊಟ್ಟಲ್ಲಿ ನಾವು ಜಾಗ್ರತೆಯಾಗಿಯೂ, ಅಂದವಾಗಿಯೂ, ಸುಲಭಛಾರ್ಜಿಗೂ ಮಾಡಿಕೊಡುತ್ತೇವೆ. ಒಂದಾವರ್ತಿ ನಮ್ಮಲ್ಲಿ ಕೆಲಸವನ್ನು ಕೊಟ್ಟು ಪರೀಕ್ಷಿಸಬೇಕಾಗಿ ಕೋರಿಧೆ.

ನಮ್ಮ ವಿಳಾಸ —
ಮ್ಯಾನೇಜರ್,
ಶ್ರೀನಿವಾಸ ಪ್ರೆಸ್ ಮೈಸೂರು.

ಪ್ರಕಟಣೆ.

1922 ನೇ ಇಸವಿಯಲ್ಲಿ ಪ್ರಾರಂಭವಾಗುವ ಪರಿಯಾಯದಲ್ಲಿ ಪಲಿಮಾರು ಮಠದ ಶ್ರೀ ಪಾದಂಗಳವರು ಮಾಡುವ ಉಡುಪಿ ಶ್ರೀ ಕೃಷ್ಣ ದೇವರ ಪೂಜೆಯ ಸಹಾಯಾರ್ಥವಾಗಿ "ಶ್ರೀಕೃಷ್ಣ ಸೋದ್ಧಿ" ಎಂಬ ಹೆಸರಿನ ಒಂದು ಲೋಟರಿಯಾನೆ ಸೋದ್ಧಿಯನ್ನು ಏರ್ಪಡಿಸಿಯದೆ. ಟಿಕೀಟಿನ ದರ ಒಂದರ ಒಂದು ರೂ. ಆಗಿರುತ್ತದೆ. ಅದರಲ್ಲಿ 1 ನೇ ಇನಾಂ ರೂಪಾಯಿ 2000–0–0 ರದ್ದು, 2 ನೇ ಇನಾಂ ರೂ 1000–0–0 ರದ್ದು, ರೂ. 100–0–0 ರ ಇನಾಂಗಳು 5, ರೂ 10–0–0 ರ ಇನಾಂಗಳು ನೂರು ರೂಪಾಯಿ 5 ರ ಇನಾಂಗಳು 200 ... ಯಿಸಿಯದೆ. ಆದುದರಿಂದ ಎಲ್ಲ ಸುಜನರುಗಳು ತಮ್ಮ ಶಕ್ತ್ಯಾನುಸಾರ ಟಿಕೀಟುಗಳನ್ನು ಪಡೆದು ಶ್ರೀಹರಿ ವಾಯುಗಳ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸೋಣಾಗುತ್ತದೆ. ಎಲ್ಲ ಪತ್ರವ್ಯವಹಾರಗಳನ್ನು ಈ ಕೆಳಗಿನ ವಿಳಾಸಕ್ಕೆ ಮಾಡತಕ್ಕದ್ದು.

ಮೈನೇ ಸೆಕ್ರಟರಿ.
ಶ್ರೀಕೃಷ್ಣ ಸೋದ್ಧಿ,
... ಉಡುಪಿ

ಸಹಕಾರ ಬೇಕೇ ?

ಬೇಕಾದವರು ನಮ್ಮಲ್ಲಿ ದೊರೆಯುವ ಕೊಡೆ, ಗುದ್ದಲಿ, ಬೂಟೀಸ್, ನಮೂನೆ ಫರ್ನಿಚ್ಯರ್, ಹಿಂಕ್ಸ್ ಲ್ಯಾಂಪ್, ನಮೂನೆ ಚಾಕು, ಆಫೀಸ್ ಕುರ್ಚಿ ಇತ್ಯಾದಿ ಸಾಮಾನುಗಳನ್ನು ಒಂದುಸಲ ತೆಗೆದು ನೋಡಿರಿ.

ಹೆಚ್ಚಿನ ಸಂಗತಿಗಳು ಕೆಳಗಿನ ವಿಳಾಸಕ್ಕೆ ಬರೆದು ತಿಳಿಯುವದು.

COMMERCIAL STORE,
General Merchants, Commission Agents and Furniture Suppliers,
12–10 **MURNAD, COORG.**

For Sale—ಮಾರಾಟಕ್ಕೆ ! ! !

ಹಣ ದಾಸ್ತಾನು ಮಡಗಿಡೋಂತು ಏನು ಪ್ರಯೋಜನ ?

ಐಶ್ವರ್ಯವಂತರಿಗೆ ಉಪಯುಕ್ತವಾದ ಸಂಪಾದನೆಯು !

ಸಿದ್ದಾಪುರದ ಸಮೀಪದಲ್ಲು ಒಳ್ಳೆ ತರಹದ ಪೂರ್ತಿ ಸಾಗುವಳಿಯಾಗಿರುವ ಭತ್ತದ ಭೂಮಿಯು (500) ಐದು ನೂರು ಬಟ್ಟಿಹೊಲ ವಡೆಯುಳ್ಳದು ಒಳ್ಳೆ ಮರ ಕಾಡು 40 ಎಕರೆ ಸಹಿತ ಶುದ್ಧ ಕ್ರಯ (6000–0–0) ಆರುಸಾವಿರ ರೂಪಾಯಿಗಳಿಗೆ ಮಾರಾಟಕ್ಕೆ ಇರುವದರ ಸಂಗ್ತಿ ಈ ಕೆಳಗಿನ ಅಡ್ರಸ್ಸಿಗೆ ಬರೆದುಕೊಂಡಲ್ಲು ತಿಳಿಯಬಾಗುವದು

ವೀರರಾಜಪೇಟೆ
ವರ್ಕ್‌ಶಾಪ್
ವೀರರಾಜಪೇಟೆ
} The Veeraj Pet, Works, Veeraj Pet

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ ವೃತ್ತಿ ವಿಜ್ಞಾನ ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ, ಕೊಡಗಿನ ವಾರ ಪತ್ರಿಕೆ

1 ಪ್ರಕಟನೆಗಾಗಿ ಮ್ಯಾನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು. 2 ಲೇಖನಗಳನ್ನು ಸಂಪಾದಕರು "ಕೊಡಗು" ಮಡಕೇರಿ ಈ ವಿಳಾಸಕ್ಕೆ ಕಳುಹಿಸಬೇಕು 3 ಬಾಹ್ಯದಾರರ ಅಭಿಪ್ರಾಯಕ್ಕೆ ಲೇಖಕರು ಪತ್ರಿಕಾಕರ್ತರು ಜವಾಬ್ದಾರರಲ್ಲ. 4. ಪತ್ರಿಕೆಗೆ ಕಳುಹಿಸುವ ಬರಹಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ ಹೆಸರು ವಿಳಾಸಗಳಿಂದ ಕೂಡಿಯೂ ಬರೆಯಲ್ಪಟ್ಟಿರಬೇಕು ಸ್ವೀಕೃತ ದೊರೆಯಲಿಲ್ಲ ಈ ಪತ್ರಗಳು ಪ್ರಕಟಿಸಲ್ಪಡುವವು 5 ಪ್ರಕಟಿಸಲಾಗದ ಬಾಬ್ತುಗಳನ್ನು ಮರಳಿ ಕಳುಹಿಸುವ ಜವಾಬ್ದಾರಿಯನ್ನು ಸಂಪಾದಕರು ವಹಿಸುವದಿಲ್ಲ

ಪ್ರಕಟಣೆಗಳು.

ಅತ್ಯಂತ ಸವಲತ್ತಿನಿಂದ ಹಾಕಲ್ಪಡುತ್ತವೆ ಹೆಚ್ಚು ಸಂಗತಿಗೆ ಮ್ಯಾನೇಜರಿಗೆ ಬರೆದು ತಿಳಿದುಕೊಳ್ಳಬಹುದು

ಮ್ಯಾನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ

INSURE YOUR CAR
Against Accident and Fire.
Apply to—
K. R. Thirupad & Bros.,
Sub Agents for
The Autocar Fire & Accident Insurance Co., Ltd.,
LONDON.

JUST ARRIVED FRESH STOCK OF
GOOD RICH TYRES
Best and Cheapest in the World.
Apply to—
K. R. Thirupad & Bros.,
Sayaji Rao Road,
12–9 **MYSORE.**

SUBBANNA, SANGAPPA,
Receiving and Forwarding Agents, General Merchants and Commission Agents.
Santhepet, Mysore.

Despatch and supply whatever you receive at Mysore Railway Station and whatever food stuffs and Stationaries you want to have from Mysore. Prompt attention, moderate commission and quick disposal are their motto 24–8

ಮೈಸೂರು ರೈಲ್ವೆ ಸ್ಟೇಷನ್‌ನಿಂದ ನೀವು ಹೊಂದಬೇಕಾದ ಸಾಮಾನುಗಳ ರೈಲ್ವೆ ಪಾರ್ಸಲುಗಳನ್ನೂ, ಮೈಸೂರಿನಿಂದ ತರಿಸಿಕೊಳ್ಳಬೇಕಾದ ಸಾಮಾನುಗಳ ಪಟ್ಟಿಯನ್ನೂ ಮೈಸೂರು ಸಂತೇಪೇಟೆಯಲ್ಲಿರುವ ಸುಬ್ಬಣ್ಣ ಸಂಗಪ್ಪನವರಿಗೆ ಕಳುಹಿಸಿ. ಅವರು ಜಾಗ್ರತೆಯಾಗಿಯೂ, ಜೋಪಾನವಾಗಿಯೂ ಸುಲಭವಾದ ಕಮಿಷನ್ನಿನಲ್ಲಿಯೂ ನಿಮಗೆ ಸರಬರಾಜಿಸುತ್ತಾರೆ. ಹೆಚ್ಚು ವಿವರ ಬರೆದು ತಿಳಿಯುವುದು

ಎಲ್ಲಾ ಚಂದಾದಾರರುಗಳಿಗೆ ವಿಜ್ಞಾಪನೆಗಳು.

ಕಳೆದ ವಾರದಿಂದೀಚೆಗೆ ಕೆಲವು ಪತ್ರಿಕೆಗಳು ತಿರಸ್ಕರಿಸಲ್ಪಟ್ಟು, ಆಫೀಸಿಗೆ ಹಿಂದಕ್ಕೆ ಬಂದಿರುತ್ತಿವೆ. ವಾಚಕರೇ ತಿರಸ್ಕರಿಸಿರುತ್ತೀರೋ, ಇಲ್ಲವೋ ಎಂಬುದು ನಮಗೆ ತಿಳಿಯುವುದಿಲ್ಲ. ಕಳೆದ ಎರಡು ತಿಂಗಳಿಂದ ಪತ್ರಿಕೆಯನ್ನು ಹೊಂದಿಕೊಂಡು ಓದುತ್ತಾ ಬಂದು ಈಗ ಅಕಸ್ಮಾತಾಗಿ ಹೀಗೆ ವಾಪಾಸು ಮಾಡುವುದು ದೇಶಾಭಿಮಾನಿಗಳಿಗೆ ತಕ್ಕುದಾಗಿ ಕಾಣುವುದಿಲ್ಲ. ಈ ಪತ್ರಿಕೆಯು ದೇಶೋದ್ಧಾರಕ್ಕಾಗಿ ಹೊರಟಿದೆಯಲ್ಲದೆ, ವಿಶೇಷ ಲಾಭಸಂಪಾದನೆಗಲ್ಲವೆಂಬುದು ದೇಶೀಯರಿಗೆ ತಿಳಿಯದ ಸಂಗತಿಯಲ್ಲ. ಆದ್ದರಿಂದ ದೇಶಾಭಿಮಾನವನ್ನು ತೋರಿಸಲಿಕ್ಕೂ, ದೇಶಸೇವೆಯಲ್ಲಿ ಭಾಗಿಗಳಾಗಲಿಕ್ಕೂ ದೇಶೀಯರೆಲ್ಲರೂ ಈ ಪತ್ರಿಕೆಗಳನ್ನು ತರಿಸಿಕೊಂಡು ಸರ್ವ ವಿಧದಲ್ಲಿಯೂ ಪ್ರೋತ್ಸಾಹಕೊಡಬೇಕಾಗಿ ಎಲ್ಲಾ ವಾಚಕರಲ್ಲಿ ಅಪೀಲು ಮಾಡಿಕೊಳ್ಳುತ್ತೇವೆ. ಪತ್ರಿಕೆ ಬೇಡದವರು ತಮ್ಮ ಪತ್ರಿಕೆಯ ನಂಬರನ್ನೂ, ತಮ್ಮ ಹೆಸರನ್ನೂ ಪ್ರತ್ಯೇಕ ಬರೆದು ಆಫೀಸಿಗೆ ತಿಳಿಸಬೇಕಲ್ಲದೆ, ದಯವಿಟ್ಟು ತಿರಸ್ಕಾರ ಮಾಡಬಾರದಾಗಿ ಕೇಳಿಕೊಳ್ಳುತ್ತೇವೆ.

ಎಡಿಟರ್

“ಕೊಡಗು”

೧೯೨೧ ನೇ ಇಸವಿ ಆಗಸ್ಟ್ ತಾ|| ೨೬ ನೇ ಶುಕ್ರವಾರ

ಕೊಡಗಿನ ಸುಧಾರಣೆ.

ಹಿಂದೂದೇಶದ ಬೇರೆ ಅನೇಕ ಪ್ರಾಂತ್ಯಗಳಲ್ಲಿ ಮೋರ್ಲೆ ಮಿಂಟೋ ಸುಧಾರಣೆ ಜಾರಿಗೆ ತಂದು ರಾಜಕೀಯ ಆಡಳಿತೆಯಲ್ಲಿ ತರಬೇತಾಗುತ್ತಾ ಇದ್ದ ಸಮಯದಲ್ಲಿ ಕೊಡಗಿನ ನಿವಾಸಿಗಳು ತಮ್ಮ ಆಗಿನ ಸ್ಥಿತಿಯಲ್ಲಿ ಸಂತುಷ್ಟರಾಗಿ ಸರಕಾರದ ಮೇಲೆ ಅತ್ಯಂತ ವಿಶ್ವಾಸವನ್ನಿಟ್ಟು ಯಾವ ವಿಧದ ಚಳವಳಗಳನ್ನೂ ಮಾಡದೆ ಕೂಪ ಕೂರ್ಮಗಳಂತೆ ಸದಾ ಏಕ ಸ್ಥಿತಿಯಲ್ಲಿದ್ದುದೇ ಈಗಿನ ಹೀನಸ್ಥಿತಿಗೆ ಮೂಲಕಾರಣವು. ಪ್ರಜೆಗಳ ನಂಬಿಕೆಗೆ ಪಾತ್ರರಾಗಿದ್ದ ಸರಕಾರದವರು ರೈತರ ಕ್ಷೇಮ ಚಿಂತನೆಯನ್ನು ಬಯಸಿ ಮನಃಪೂರ್ವಕವಾದ ವಿಶ್ವಾಸವನ್ನು ತೋರಿಸಿದ್ದರೆ ಅವರನ್ನು ಸುತ್ತು ಮುತ್ತಲಿನ ಜಿಲ್ಲೆಗಳ ಜನರಂತೆಯೇ ದೇಶದ ಆಡಳಿತೆಯಲ್ಲಿ ತರಬೇತು ಮಾಡಲು ಅವಕಾಶವನ್ನು ಕೊಡುತ್ತಿದ್ದರು.

ಈ ರೀತಿ ಮಾಡದೆ ಒಬ್ಬರನಂತರದೊಬ್ಬರಾಗಿ ಬಂದ ನಮ್ಮ ದೇಶದ ಮೇಲಧಿಕಾರಿಗಳು, ಬಂದೊಡನೆಯೇ ದೇಶವನ್ನೂ ಜನರ ಸ್ಥಿತಿಯನ್ನೂ ಅತಿಶಯೋಕ್ತಿಗಳಿಂದ ವರ್ಣಿಸಿದ್ದರಿಂದ ಜನರು ಮರುಳಾಗಿ ತಮ್ಮ ನಿಜಸ್ಥಿತಿಯನ್ನು ತಾವೇ ಅರಿತು ಕೊಳ್ಳದಷ್ಟು ಕೂಡ ಅಶಕ್ತರಾಗಿದ್ದು ಬಿಟ್ಟರು. ಈಗೀಗ ಕೆಲವರು ತಮ್ಮ ದುರ್ದೆಸೆಯ ಪರಿಣಾಮವನ್ನು ಕಣ್ಣು ತೆರೆದು ನೋಡಿ, ಅದನ್ನು ಸರಕಾರದವರಿಗೆ ತಿಳಿಸಲು ಪ್ರಾರಂಭಿಸಿರುವರು. ಈ ಸಮಯದಲ್ಲಿ ಘನಪಟ್ಟ ಸರಕಾರವು ಮಕ್ಕಳಿಗೆ ತಂದೆಯು ಹೇಳುವ ಪ್ರಕಾರದಿಯಲ್ಲಿ ನೀವು ಇನ್ನೂ ರಾಜಕೀಯ ವಿಷಯಗಳಲ್ಲಿ ಯಾವ ತರದ ತರಬೇತು ಹೊಂದಿಲ್ಲದವರಾಗಿರುವದರಿಂದ ನೀವು ಆತುರದಿಂದ ಒಂದೇ ಸಲ ಹಾರದೆ ಸಾವಕಾಶವಾಗಿ ರಾಜಾಡಳಿತದ ಮೆಟ್ಟಲುಗಳನ್ನು ಒಂದೊಂದಾಗಿಯೇ ಹತ್ತಬೇಕೆಂದು ಹೇಳಿ ಜನರನ್ನು ಸಂತೈಸುವದಾಗಿದೆ. ಇಂಥಾ ವ್ಯವಹಾರ ಚಾತುರ್ಯದಿಂದೊಡಗೂಡಿದ ಮೃದುವಚನಗಳಿಗೆ ಮರುಳಾಗಿ, ಸರಕಾರದವರು ನಮಗೆ ಕೊಡುವ ತಿದ್ದುಪಾಟುಗಳಲ್ಲಿಯೇ ತೃಪ್ತರಾಗಿರಿ ಯೆಂದೂ, ಯಾವ ತರದ ಚಳವಳವನ್ನು ಮಾಡಬೇಡಿರಿ ಎಂದೂ ರೈತರಿಗೆ ಬೋಧಿಸುವಂತ ಮಹಾಸ್ವರು ಈ ಇಕ್ಕಟ್ಟಿನ ಸಮಯದಲ್ಲಿ ಜೀವಿತರಾಗಿರುವದು ನಮ್ಮ ದೇಶದ ಸೌಭಾಗ್ಯವೋ, ದುರ್ಭಾಗ್ಯವೋ ಎಂಬದನ್ನು ವಾಚಕರೆ ಊಹಿಸಿರಿ.

ನಮ್ಮ ನೆರೆ ಊರವರು ಮೋರ್ಲೆ ಮಿಂಟೊ ತಿದ್ದುಪಾಟುಗಳಿಂದ ತರಬೇತಾಗಿ ತಮ್ಮ ಸ್ಥಿತಿಯನ್ನು ತಿಳಿಯುತ್ತಾ ಬಂದ ಹಾಗೆ ಚಳವಳಗಳನ್ನು ನಡಿಸುತ್ತಾ ಬಂದುದರಿಂದ ಈಗಿನ ಮೋಂಟೇಗ್ ಚೆಲ್ಮ್ಸ್‌ಫರ್ಡ್ ತಿದ್ದುಪಾಟುಗಳನ್ನು ಅನುಭವಿಸಲು ಅರ್ಹರಾದರು. ಆದರೆ ಮೌನಿಗಳಾಗಿದ್ದಂತ ನಮ್ಮ ದೇಶಸ್ಥರ ಗತಿಯು ವಾಯುವ್ಯಪ್ರಾಂತ್ಯದ ಬೆಟ್ಟನಿವಾಸಿಗಳಂತೆಯೇ ಇದೆ. ಬೇರೆ ಪ್ರಾಂತ್ಯಗಳಿಗೆ ತಿದ್ದುಪಾಟು ಸಿಕ್ಕಿದ ಮೇಲೆ ಕೊಡಗಿಗೆ ಒಂದು ಪ್ರೊವಿನ್ಸಿಯಲ್ ಸಭೆಯು ಕೊಡುವದಾಗಿ, ಸರಕಾರವು ಕೆಲವು ಖಾಸಗಿ ಮಹಾಸ್ವರಿಗೆ ಹೇಳಿದನ್ನೂ, ಮದ್ರಾಸು ಗವರ್ಮೆಂಟಿಗೆ ಕೊಡಗನ್ನು ಸೇರಿಸುವದರ ಸಂಬಂಧ ಚಳವಳವೆದ್ದು ದೇಶದಲ್ಲೆಲ್ಲಾ ಮೀಟಿಂಗು ಸೇರಿದ ಸಮಯದಲ್ಲಿ ಕಮಿಷನರವರು ಕೊಡಗಿಗೆ ಒಂದು ನ್ಯಾಯವಿಧಾಯಕ ಸಭೆಯು ಬೇಗನೆ ದೊರೆಯುವದೆಂದು ಬಹಿರಂಗವಾಗಿ ಹೇಳಿದುದನ್ನೂ ಜನರು ಇಷ್ಟರವರೆಗೆ ಕುತೂಹಲದಿಂದ ಎದುರುನೋಡುತ್ತಿದ್ದರು. ಕಳೆದ ತಿಂಗಳ ಆಖೈರಿನಲ್ಲು, ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದಂತೆ ಕೊಡಗಿಗೆ ಒಂದು ನ್ಯಾಯವಿಧಾಯಕ ಸಭೆಯು ಸೆಕ್ರೆಟರಿ ಆಫ್ ಸ್ಟೇಟ್‌ವಾರ್ ಇಂಡಿಯ ರವರಿಂದ ಈಗಕ್ಕೆ ಮಂಜೂರಾಗಿದೆಯೆಂಬ ಒಂದು ಮೆಮೊರಾಂಡಮ್ ಬಂತು. ಇದನ್ನು ಕಮಿಷನರವರು ಸುಮಾರು ಇಪ್ಪತ್ತೆರಡು ಮಹಾಸಭಾವರುಗಳಿಗೆ ಮೀಟಿಂಗಿಗೆ ಬರಬೇಕೆಂದು ಕಳುಹಿಸಿದಲ್ಲದೆ ಸುಬೇದಾರರು ಮತ್ತು ಪಾರುಪತ್ಯಗಾರರು ಈ ಮೆಮೋರಾಂಡಮನ್ನು ಜನರ ತಿಳುವಳಿಕೆ ಬಗ್ಗೆ ದೇಶದಲ್ಲೆಲ್ಲಾ ಹಂಚಿಸಿರುವರು. ಇದನ್ನು ನೋಡಿದರೆ ಸರಕಾರದವರಿಗೆ ದೇಶದ ಜನರ (ಪಬ್ಲಿಕ್) ಅಭಿಪ್ರಾಯವನ್ನು ತಿಳಿದು ಕೊಳ್ಳಬೇಕೆಂಬುದೇ ಅವರ ಉದ್ದೇಶವಾದು ಸರ್ವರೂ ಅರಿತುಕೊಂಡು ಮಡಿಕೇರಿಯಲ್ಲಿ ದೇಶದವರಲ್ಲನೇಕರು ಸೇರಿ ಒಂದು ಮೀಟಿಂಗು ನಡೆಸಿದರು. ಅಲ್ಲಿ ನಮಗೆ ಈಗ ಸಿಕ್ಕಬಹುದಾದ ಸಭೆಯು ತೃಪ್ತಿಕರವಲ್ಲವೆಂದು ತೀರ್ಮಾನವಾಯಿತು. ಅದರ ತಾನ ಏನು ಪ್ರಯೋಜನ. ಎಲ್ಲವೂ ಮರುದಿನದ (17-8-21) ಮೀಟಿಂಗಿನಲ್ಲು ಸಿಹಾರ್ ಮವಾಯಿತು! ಆ ಮೀಟಿಂಗಿನಲ್ಲಿ ಕೆಲವು ಗೃಹಸ್ಥರು ದೇಶದ ಅಭಿಪ್ರಾಯವನ್ನು ತಿಳಿಸಿದಾಗ ತಾನು ದೇಶದವರ ಅಭಿಪ್ರಾಯವನ್ನು ಕೇಳಲು ಮಾಡಿದ ಮೀಟಿಂಗಲ್ಲ, ನಿಮ್ಮ ಸ್ವಂತ ಅಭಿಪ್ರಾಯವನ್ನು ಹೇಳಿರಿ ಎಂದು ಅಧ್ಯಕ್ಷರಾಗಿದ್ದ ಕಮಿಷನರವರು ಹೇಳಿದ್ದು ಇಲ್ಲಿ ಒಂದು ಕಡೆ ತಪಸೀಲಾಗಿ ಪ್ರಕಟವಾಗಿದೆ. ಆ ಮೀಟಿಂಗಿನ ಪರಿಣಾಮವಾಗಿ ಅಲ್ಲಿ ನೆರೆದಿದ್ದವರಲ್ಲಿ ಕೆಲವರು ಏನೂ ಮಾತಾಡದೆ ಹೋದರೂ ಕೂಡ ಹೆಚ್ಚಿನ ಜನರು ಸಭೆಯನ್ನು ನಡಿಸಲಿಕ್ಕೆ ಒಪ್ಪಿಕೊಂಡರೆಂದೂ ಹಾಗೆಯೇ ಮೇಲಾಧಿಕಾರಿಗಳಿಗೆ ಬರೆಯುತ್ತೇನೆಂದೂ ಕಮಿಷನರವರು ಹೇಳಿದರು. ಈ ಸಂಗತಿಯನ್ನು ಚೆನ್ನಾಗಿ ಯೋಚಿಸಿದರೆ ಸರಕಾರದವರಿಗೆ ದೇಶದ ಜನರ ಅಭಿಪ್ರಾಯವು ಅಗತ್ಯವಿರುವುದಿಲ್ಲವೆಂದೂ ಅದಕ್ಕೆ ಅವರು ಗಮನ ಕೊಡುವದಿಲ್ಲವೆಂದೂ ತೋರುತ್ತದೆ. ಹಾಗಾದರೆ ಈ ಸಭೆಯಿಂದ ದೇಶದ ಜನರಿಗೆ ಪ್ರಯೋಜನ ಉಂಟಾದೀತೋ ಎಂಬ ಸಂಶಯ ಹುಟ್ಟಿದೆ. ಅಲ್ಲದೆ ಇದು ಅತ್ಯಂತ ವಿಷಾದವಾದ ಸಂಗತಿಯಾಗಿದೆ.

ಈ ಕೌನ್ಸಿಲನ್ನು ಮಂಜೂರು ಮಾಡ ತ್ವರಿತ ವರ್ತಮಾನದಿಂದ ಜನರು ತೃಪ್ತರಾಗದೆ ಈ ಸಭೆಯಿಂದ ಪ್ರಯೋಜನವೇನಾದೀತು ಹೆಚ್ಚಿಗೆ ಯಾವ ಹಕ್ಕು ಸಿಕ್ಕಬೇಕು ಮತ್ತು ಕೌನ್ಸಿಲಿಗೆ ಮೆಂಬರುಗಳಾಗಿ ಹೋಗತಕ್ಕವರು ಇತರ ಅಭಿಪ್ರಾಯಗಳನ್ನೇ ಸರಕಾರಕ್ಕೆ ತಿಳಿಸುವಂತವರಾಗಲಿಕ್ಕೆ ಏನು ಏರ್ಪಾಡು ಮಾಡಬೇಕೆಂಬುದನ್ನೂ ಈ ಕೌನ್ಸಿಲಿಗೆ ಕೊಡುತ್ತೇವೆಂದು ಹೇಳಿದ ಹಕ್ಕುಗಳಿಗಿಂತ ಹೆಚ್ಚು ಸಿಕ್ಕದಿದ್ದರೆ ಮುಂದಿನ ಯೋಚನೆ ಏನೆಂದೂ, ನಿರ್ಧರಿಸಲಿಕ್ಕೂ ಸಹ ಪ್ರತಿಕಾಲೋಚನೆ, ನಾಡು ಮತ್ತು ಗ್ರಾಮಗಳಲ್ಲಿಯೂ ಸಹ ಮೀಟಿಂಗು ಮಾಡಿ ಚರ್ಚಿಸಿ ತಮ್ಮ ಅಭಿಪ್ರಾಯವನ್ನು ಸರಕಾರದವರಿಗೂ ಆದಷ್ಟು ಬೇಗನೆ ತಿಳಿಸುವದೇ ದೇಶೀಯರ ಕರ್ತವ್ಯವಾಗಿದೆ.

ಜಮ್ಮದಾ ಸತ್ವವೋ, ಜಮ್ಮವೋ

ಕೊಡಗು ದೇಶದಲ್ಲಿರುವ ಜಮ್ಮ ಹಿಡುವಳಿಗೂ, ಬೇರೆ ದೇಶಗಳಲ್ಲಿರುವ ಜಮೀನು ಹಿಡುವಳಿಗೂ ಬಹು ವ್ಯತ್ಯಾಸಗಳು ಕಾಣುತ್ತವೆ. ಬೇರೆ ದೇಶಗಳ ಕೆಲವು ಕಡೆಯಲ್ಲಿ ಜಮ್ಮಗಳೆಂದೆನ್ನಿಸಿಕ್ಕೊಳ್ಳುವ ಜಮೀನುದಾರರಿದ್ದಾರೆ. ಅವರಿಗೆ ತನ್ನ ಜಾಗದಲ್ಲಿರುವ ಮತ್ತು ತಾನು ಬೆಳೆಸುವ ಸರ್ವ ವಸ್ತುಗಳನ್ನು ಯಾರ ಹುಕ್ಕುಂ ಇಲ್ಲದೆ ಮಾರುವ ಸ್ವತಂತ್ರವಿದೆ. ಆದರೆ ನಮಗಾದರೋ ಇರುವ ಜಮ್ಮವು ನಮ್ಮ ದೇಶೀಯರನ್ನು ಸಾಯಲಿಕ್ಕೂ, ಬದುಕಲಿಕ್ಕೂ ಬಿಡದ ಸ್ಥಿತಿಯಲ್ಲಿದೆ. ನಮಗೆ ಸಿಕ್ಕಿದ ಜಮ್ಮ ಮತ್ತು ಇತರ ಇನಾಮತಿ ಹಿಡುವಳಿಯು ನಮ್ಮ ಪೂರ್ವಿಕರು ನಮ್ಮನ್ನಾಳುತ್ತಿದ್ದ ರಾಜರಿಗೆ ಕಷ್ಟಕಾಲದಲ್ಲಿ ಸಹಾಯಮಾಡಿದುದಕ್ಕಾಗಿ ದೊರೆತ್ತದ್ದಾಗಿರುತ್ತೆ. ಆದರೆ ನಮ್ಮ ಸರಕಾರವು ಈ ಜಮ್ಮವು ಮುಂದಕ್ಕೆ ಯಾವಾಗಲೂ ನಾವು ಹಿಟ್ಟಿಬಿಟ್ಟಿ ಚಾಕರಿಮಾಡಲಿಕ್ಕೆ ಕೊಟ್ಟಹಾಗೆ ಎಣಿಸಿರುವಂತೆ ಕಾಣುತ್ತೆ. ನಾವು ರಾಜರಿಗೆ ಸಹಾಯಮಾಡಿದುದರ ಪ್ರತಿಫಲವಾಗಿ ಕೊಡಲ್ಪಟ್ಟ ರಿಯಾಯಿತಿಯಲ್ಲದೆ, ಈ ಜಮ್ಮವು ಇನ್ನು ಮುಂದಕ್ಕೆ ಮಾಡುವ ಹಿಟ್ಟಿಬಿಟ್ಟಿ ಚಾಕರಿಗೆ ಕೊಡಲ್ಪಟ್ಟಿದೆಯೆಂದು ಹೇಳಿದರೆ ಅಂಥ ಪರಾಧೀನವಾದ ಜಮ್ಮವನ್ನಿಟ್ಟುಕ್ಕೊಳ್ಳುವುದರ ಬದಲಾಗಿ ಹೆಚ್ಚು ಕಂದಾಯ ತೆತ್ತರೂ, ಸಾಗುಭೂಮಿಯನ್ನಾಗಿ ಮಾಡಿಕ್ಕೊಂಡು ಇಷ್ಟಾನುರೀತಿ ಅದನ್ನು ಅನುಭವಿಸುತ್ತಿರುವುದು ಸಾವಿರಪಾಲು ಉತ್ತಮವಾಗಿ ಕಾಣುತ್ತೆ.

ಈಗ ನಡೆಯುತ್ತಾ ಬರುವ ಜಮ್ಮದ ಸ್ಥಿತಿಯನ್ನು ಪರಿಶೋಧಿಸಿದರೆ ಕೊಡಗಿನಲ್ಲಿರುವ ಇನಾಮತಿ ಭೂಮಿಗಳೆಲ್ಲವೂ ಸರಕಾರದೇ ಆಗಿದೆಯೆಂದೂ, ಅವರೇ ಅದರ ಮಾಲೀಕರೆಂದೂ, ಆದ್ದರಿಂದಲೇ ನಾವು ಈ ಭೂಮಿಗಳನ್ನು (Sublet) ವಾರಕ್ಕೆ, ಯಾ, ಗೇಣಿಗೆ ಕೊಡಬೇಕಾದರೆ ಮಾಲೀಕರಾದ ಸರಕಾರದಿಂದ ಮಂಜೂರಾತಿ ಪಡೆಯಬೇಕೆಂದೂ ಕಾನೂನು ಮಾಡಿರುತ್ತಾರೆ. ಈ ಕಾರಣದಿಂದಲೇ, ನಮ್ಮ ಇನಾಮತಿ ಜಾಗದಲ್ಲಿ ಯಾವದೊಂದು ಕೆಲಸಮಾಡಬೇಕಾದರೂ ಮರ ಕಲ್ಲು ಮಾರುವುದು, ಯಾ, ಸಾಗಿಸಬೇಕಾದರೂ ಸರಕಾರದಿಂದ ಹುಕ್ಕುಂ ಪಡಕ್ಕೊಂಡೇ ಮಾಡಬೇಕಾಗಿದೆ. ಇದೀಗ ನಾವು ಜಮ್ಮ ಜಮ್ಮವೆಂದು ಕೊಚ್ಚುತ್ತಿರುವ ಭೂಮಿಯ ಸ್ಥಿತಿ. ನಮ್ಮಂತ ಜಮ್ಮದವರಿಗೂ ಬೇರೆದೇಶದ ಜಮ್ಮಿಗಳಿಗೂ ಇರುವ ವ್ಯತ್ಯಾಸವನ್ನು ನೋಡಿ. ನಾವು ಈ ಜಮ್ಮವನ್ನು ಬಿಟ್ಟುಬಿಡಲು ಚೈತನ್ಯವಿಲ್ಲದೆ, ಯಾವಾಗಲೂ ಬಿಟ್ಟುಹೋಗದ ಬಗ್ಗದ ಆಳುಗಳಾಗಿದ್ದೇವೆ. ಪ್ರತಿಯೊಂದು ಅಲ್ಪಕೆಲಸಕ್ಕೂ ಸರಕಾರದ ಅಧಿಕಾರಿಗಳನ್ನು ಬೇಡಿ, ಅವರು ದಯಪಾಲಿಸಿದರೆ ಮಾತ್ರ ತೆಗೆದುಕೊಳ್ಳಬೇಕಲ್ಲದೆ, ಸ್ವತಂತ್ರವಾಗಿ ಯಾವದೂ ಮಾಡಕೂಡದು. [illegible] ಲೋಕದಲ್ಲಿ ಮನುಷ್ಯರಿಗಿರುವ ಶ್ರೇಷ್ಠವಾದ ವರಪ್ರಸಾದವು ಸ್ವತಂತ್ರವಲ್ಲವೇ. ಈ ಸ್ವತಂತ್ರಕ್ಕಲ್ಲವೇ ಬ್ರಿಟಿಷ್ ಚಕ್ರಾಧಿಪತ್ಯವು ಘೋರಯುದ್ಧವನ್ನು ಕೈಕೊಂಡದ್ದು.

ಈ ಜಮ್ಮವು ನಮ್ಮಲ್ಲಿ ಉಳಿದಿರುವುದರಿಂದಲೂ, ಸರಕಾರದವರಿಗೆ ತೋರಿದ ರೀತಿ ಕಾನೂನುಮಾಡಿಕ್ಕೊಂಡಿರುವುದರಿಂದಲೂ, ಜಮ್ಮ ರೈತರನ್ನು ಹಿಟ್ಟಿಬಿಟ್ಟಿ ಚಾಕರಿ ಮಾಡಿಸುತ್ತಾರೆ. ಇದಸಾಲ್ ವಗ್ಯರೆ ರೈತರಿಂದ ಹೂರಿಸುವುದಲ್ಲದೆ ಇನ್ನು ಅನೇಕ ಕೆಲಸಗಳನ್ನು ಸಹ ಮಾಡಿಸುತ್ತಾರೆ. [illegible] ರೈತನ ಗೋಳೇ ಗೋಳು. ಸಾವಿರ ಬಟ್ಟಿ ಭೂಮಿ ಇರುವವನಿಗೆ ಈ ಕೆಲಸವಿಲ್ಲ. ಈ ಹಿಟ್ಟಿಬಿಟ್ಟಿ ಚಾಕರಿ ಮರ್ [illegible] ರಾಯರು ಮುಖ್ಯವಾಗಿ ವಾಸಮಾಡುವ ಸಿಪಾಯಿಪ್ರದೇಶ ಬೆಟ್ಟಗುಡ್ಡದಲ್ಲಿರುವ (Beggarsystem) ಜಾಡಿಗೆ [illegible] ದುಕೊಂಡು ಸಾಯುವವರಿಗೂ, ಪೂರಲ್ಪಟ್ಟ ರ [illegible] ಇರುವ ಕೂಲೀಕಾರರ ಸ್ಥಿತಿಗೆ ಹೋಲಿಸಬಹುದು. [illegible] ಸ್ಟೋಕ್ ಸಾಹೇಬರು, ಪಂಡಿತ ಮದನಮೋಹನ [illegible] ವೀಯರು ಮಹಾತ್ಮ ಗಾಂಧಿಯವರಂತ ಲೋಕಮಾನ್ಯರು ಇಂಥಾ ಪದ್ಧತಿಗಳನ್ನು ಖಡಾಖಂಡಿತವಾಗಿ ನಿಂದಿಸಿ, ಇದನ್ನು [illegible] ಗಾಗಿಯೂ ನಿಲ್ಲಿಸಬೇಕಾಗಿ ಒದರುತ್ತಾರೆ. [illegible] ನಮ್ಮ ಜಮ್ಮದ ಸ್ಥಿತಿಯು ವಿಷಯ ವ್ಯಸನಪಡುವವರ್ಯಾರು.

ನಮ್ಮ ಮುಖ್ಯ ಅಧಿಕಾರಿಗಳು ಬಿಟ್ಟು ಪ್ರಾಂತ್ಯ [illegible] ಹೋಗಬೇಕಾಗಿ ಬಂದಾಗ ಜಮ್ಮದ ರೈತರು ಅವರ [illegible] ಸಗ್ಗೈರೆ ಸಾಮಾನುಗಳನ್ನು ತಮ್ಮ ಕೆಲಸಗಳನ್ನೆಲ್ಲಾ ಬಿಟ್ಟು ಹೊತ್ತು ಕೊಡಬೇಕಾಗುತ್ತದೆ. ಸರಕಾರದ ಹುಕುಂ [illegible] ಇಲ್ಲವನ್ನು ಪಡೆಯುತ್ತವರಿಂದ ಒರಗಿಸುತ್ತಾರೆ. ಹೀಗೆ [illegible] ಮಾಡಿದವರಿಗೆ ಸರಿಯಾದ ಸಂಬಳ ಸಿಕ್ಕಿದರೂ ಸಹ [illegible] ಸಿಂದ ಹೋಗುವದಾದ್ದರಿಂದ ಇದು ದೇಶಕ್ಕೆ ಒಂದು ಮಹಾಪಾಪ ಅಲ್ಲವೇ!

ನಮ್ಮ ದೇಶವನ್ನು ಮದ್ರಾಸು ಆಧಿಪತ್ಯದ ಒಂದು ಜಿಲ್ಲೆಯಾಗಿ ಸೇರಿಸಿದರೆ ನಮ್ಮ ಜಮ್ಮವು ಹೋಗಿಬಿಡುವದೆಂದು ಹೇಳುವ ಮಹನೀಯರೇ ಇದಕ್ಕೆ ಜವಾಬುಕೊಡಿ. ಮತ್ತು ಈಗ ನಮಗೆ ಇರುವ ಜಮ್ಮದ ಪ್ರಯೋಜನವೇನು? ಸಲಿ ನಮ್ಮ ಜಮ್ಮಭೂಮಿಗಳನ್ನು ಬೇರೆ ದೇಶದ ಜಮ್ಮಿಗಳ ಹಿಡುವಳಿಯ ರೀತಿಯಲ್ಲಿ ಜಾರಿಗೆ ತರದೆ, ಈ ಸ್ಥಿತಿಯಲ್ಲಿ ಅನುಭವಿಸಿಕ್ಕೊಂಡು ಬಂದರೆ ಈ ಜಮ್ಮದ [illegible] ದಾಸತ್ವವು ಕೊನೆಯ ದೇಶಗಳಲ್ಲಿರುವವರಿಗೂ ಸ್ವತಂತ್ರವಿಲ್ಲದ ಬಗ್ಗದ ಆಳುಗಳ ಹಾಗೆ ಇರಬೇಕಾದ್ದು. ಖಂಡಿತ. ಆದ್ದರಿಂದ ಈ ಹೀನಸ್ಥಿತಿಯನ್ನು ತಪ್ಪಿಸಲು ಅಂದರೆ [illegible] ಈಗ ಇರುವ ಜಮ್ಮ ಮತ್ತು ಇತರ ಇನಾಮತಿ ಹಿಡುವಳಿಯು ಎಲ್ಲಾ ವಿಧದಲ್ಲಿಯೂ ಇತರ ದೇಶದ ಜಮ್ಮ ಹಿಡುವಳಿಯಂತೆ ಇರಬೇಕೆಂದೂ ನಮ್ಮ ಪೂರ್ವಿಕರು ಕೊಟ್ಟ ಸಹಾಯಕ್ಕಾಗಿ ಈ ಜಮ್ಮ ಮತ್ತು ಇತರ ಇನಾಮ ಹಿಡುವಳಿಯು ಕೊಡಲ್ಪಟ್ಟಿದೆಯೆಂದೂ ಇನ್ನು ಮುಂದೆ ಮಾಡುವ ಯಾವ ಚಾಕರಿಗೂ ಅಲ್ಲವೆಂಬುದನ್ನು ಊರ್ಜಿತ ಪಡಿಸಲಿಕ್ಕೆ ಇನಾಮತಿ ಹಿಡುವಳಿದಾರರೆಲ್ಲರೂ ಮುಂದೆ ಬರುವವರಾಗಿ ನಂಬುತ್ತೇವೆ.

ಪರೋಪಕಾರವೇ ಸದ್ಗತಿಗೆ ದಾರಿ.

ಸಿರಿಯುರ್ ಕಾಮೊಕದನಗುವ |
ಪರೋಪಕಾರಕ್ಕೆ ಪಾಪರೆಂದುಂ ಮುಯ್ಯುಂ ||
ದರೆಗನುಬಮ ಸುಖಮುಂ ಬಿ |
ತ್ತರಿಸುವ ಧಾರಾಧರಕ್ಕೆ ಮುಯ್ಯಾವುದು ಪೇಳ್ |
ಪರೋಪಕಾರಮೆ ಗಯ್ಯುವುದು |
ದೊರೆಕೊಳ್ವುದೆ ಕೇಡು ದಂದುಗಂ ಬಡದಾರ್ಯರ್ ||
ಪರಿವರ್ತಿಸಿಯುಂ ಕಮ್ಮಿಯ |
ಶರೀರತುಂ ಪಡೆಯುತಕ್ಕುವಾ ಕೇಡೆಂಬರ್

ಎಂತಹ ಸಣ್ಣಹಳ್ಳಿಯಲ್ಲಿ ನೋಡಿದರೂ ಕೂಡ ಮತ ಪದ್ಧತಿಗನುಸಾರವಾಗಿ ಅನೇಕ ವಿಧವಾದ [illegible] ಮಹಣೆ ಮುಂತಾದ ದೇವತೆಗಳ ಗುಡಿಗಳನ್ನು ಕಟ್ಟಿಕೊಂಡು ಪಾಪ ವಿಮೋಚನೆಗೆಂದೂ ಪುಣ್ಯಾರ್ಜನೆಗೆಂದೂ [illegible] ಭಕ್ತಿಯಿಂದ ಆ ಮೂರ್ತಿಗಳನ್ನು ಪೂಜಿಸುತ್ತಾರೆ. “ಅಜ್ಞಾನ” ವೆಂಬ ಪಾಪವನ್ನು ಹೋಗಲಾಡಿಸಿ “ಜ್ಞಾನ” ವೆಂಬ ಪುಣ್ಯವನ್ನು ಕೊಡುವ ‘ಶಾರದಾ’ (ಸಾರಸಾಲೆ) ಗಳನ್ನು ಕಟ್ಟಿಸಿ ಪೂಜಿಸುವವರು ಬಹು ರೂಪ ಇಲ್ಲವೇ ಇಲ್ಲವೆಂದು ಹೇಳಿದರೂ ಹೇಳಬಹುದು.

ಆದ್ದರಿಂದ ಐಶ್ವರ್ಯವಂತರಾದ ಮಹನೀಯರೆಲ್ಲರೂ ಶಾಶ್ವತ ಕೀರ್ತಿಯನ್ನೀವ ಈ ಶಾರದಾಲಯಗಳನ್ನು ಕಟ್ಟಿಸಿ ಪರೋಪಕಾರಮಾಡಿ ಅವಿದ್ಯಾವಂತ ಜನಗಳನ್ನು ವಿದ್ಯಾವಂತರನ್ನಾಗಿ ಮಾಡುವುದರಿಂದಲೂ ಜೀವನಕ್ಕೆ ಅಲ್ಲಲ್ಲೆ ಏರ್ಪಡಿಸಲ್ಪಟ್ಟಿರುವ ವಿದ್ಯಾರ್ಥಿನಿಲಯಗಳಿಗೆ ಧನ, ಧಾನ್ಯ, ಸಹಾಯಮಾಡಿ ಬಡ ವಿದ್ಯಾರ್ಥಿಗಳಿಗೆ ಅನ್ನದಾನಮಾಡುವುದರಿಂದಲೂ ಇಹಲೋಕದಲ್ಲಿ ಕೀರ್ತಿಯನ್ನೂ, ಪರಲೋಕದಲ್ಲಿ ಶಾಶ್ವತವಾದ ಸದ್ಗತಿಯನ್ನೂ ಪಡೆಯಿರೆಂದು ಕೋರುವ

ಬಡ ವಿಧ್ಯಾ

ಬನ್ನಿರಿ! ಒಳ್ಳೆಯ ಸಮಯ!! ಕಳಕೊಳ್ಳಬೇಡಿರಿ!!

ಸ್ವದೇಶೀ ಉಡುಪುಗಳು ತಮಗೆ ಬೇಕೆ?

ಬೇಕಾದವರು ನಮ್ಮಲ್ಲಿ ದೊರೆಯುವ ಗಟ್ಟಿ ರಂಗಿನ, ಯಲ್ಲಿ ಯಾವಾಗಲೂ ಉಡಲಿಕ್ಕೆ ಅನುಕೂಲವಾದ ತರಾ ರಂಗಿನ, ಸೀರೆಗಳು ಕೆಂಪು ಮತ್ತು ಕಪ್ಪು ಅಂಚಿಬಟ್ಟೆ ನಾನಾ ತರದ ಕೋಟಿಗೆ ಲಾಯಕ್ಕಾದ ಚೆಕ್ಕು ಒಟ್ಟೆ ಅಲ್ಲದೆ ಟವೆಲ್ ನಾಪ್‌ಕಿನ್ ಬೆಡ್‌ಶೀಟ್ ಪಗ್ಗದ ಅನೇಕ ತರದ ಬಟ್ಟೆಗಳು ನಮ್ಮಲ್ಲಿ ಮಾರಾಟಕ್ಕೆ ತಯಾರಾಗಿವೆ ...ಟ್ಟೆಗಳು ನಮ್ಮಲ್ಲಿಯೇ ನುಗ್ಗಾಗುವದ ತಯಾರಾಗುವವು ದೇಶೀಯ ಬಟ್ಟೆ ಯಾವದಾದರೂ ...ದವರು ಸ್ಪೆಶಿಯಲ್ ಆರ್ಡರ್ ಕೊಟ್ಟಲ್ಲಿ ತಯ್ಯಾರು ಕಳುಹಿಸಲ್ಪಡುವುದು ಸುಮ್ಮನೆ ಪೇಟೆಗೆ ಹೋಗಿ ...ವುದರಿಂದ ಪ್ರಯೋಜನವಿಲ್ಲ ಬೇಕಾದವರು ಈ ಕೆಳ ...ಡ್ರೆಸ್ಸಿಗೆ ಬರೆದು ಒಂದುಸಲ ತರಿಸಿನೋಡಿರಿ

ವಿಳಾಸ — ಕೆ ನಂಜಪ್ಪಸೆಟ್ಟಿ
ಸ್ವದೇಶಿ ಬಟ್ಟೆ ವ್ಯಾಪಾರಿ
ಸೋಮವಾರಪೇಟೆ — ಕೊಡಗು

Messrs. P. SAM & Co.,

...ceiving & Forwarding Agents,
...abinet Makers, Auctioneers &
General Agents, 12–4

59 1/4 Sayaji Rao Road, MYSORE

...hey, not only receive and forward goods from Mysore Railway Station ...y part in Coorg but also receive ...s from those parts and despatch them ...ny other part from the Mysore ...way Station. They undertake to sell ...saleable articles by public auction or ...wise, and also supply you goods at cheapest rates. Commission very ...rate. A trial order will convince you ...eir promptness and business methods.

ಪುಸ್ತಕಗಳು!! ಬೆಲೆ ಸುಂಕ!!

A. N. C & Co., Mysore.

ಹಾಕಯರೆ — ನಮ್ಮ ಕಂಪೆನಿಯಲ್ಲಿ ನಾವಿರಾರು ಬಗೆಯ ಕನ್ನಡ ಪುಸ್ತಕಗಳು ಇತರ ಸಾಮಾನುಗಳೂ ಬೆಲೆಗೆ ಸಿದ್ಧವಾಗಿವೆ ... ಅದರ ಪುಸ್ತಕಗಳ ಒಂದೊಂದು ಪ್ರತಿಯನ್ನು ಕಳುಹಿ ... ಪುಗಳನ್ನು ಅಡ್ವರ್ಟೈಸು ಮಾಡುವುದಲ್ಲದೆ ಒಳ್ಳೆಯ ಪುಸ್ತಕ ... ಕೊಂಡುಕೊಳ್ಳುತ್ತೇವೆ ನಾವು ಅನುಮೋದಿಸಿದ ಪುಸ್ತಕಗಳ ... ಹಿಂದಕ್ಕೆ ಕಳುಹಿಸಬೇಕಾದಲ್ಲಿ ... ಪುಸ್ತಕ ... ವರೇ ಮುಸಲಬೇಕು ನಾವು ಹೊಸದಾಗಿ ಪ್ರಕಟಿಸಿರುವ—

ಸ್ತೋತ್ರಮಾಲಿಕಾ ಭಾಗ ೧

... ಪುಸ್ತಕವು 1 ಮಂಗಳಾಚರಣೆ 2 ಪ್ರತಿದಿನೋಪಯುಕ್ತ ... ಗಳು 3 ಪ್ರತಿ ವಾರೋಪಯುಕ್ತ ಸ್ತೋತ್ರಗಳು 4 ಪ್ರತಿ ... ಪಯುಕ್ತ ಸ್ತೋತ್ರಗಳು ... ಉಪಯುಕ್ತ ಸ್ತೋತ್ರಗಳು ... ದು ವಿಭಾಗಗಳನ್ನು ಒಳಗೊಂಡಿದೆ ಇದರ ಬೆಲೆ 4 ಆಣೆ ಮಾತ್ರ ... ವಿ ಪಿ ಮೂಲಕವಾಗಿಯಾದರೆ 5 ಆಣೆ ಪೋಸ್ಟಲ್ ಸ್ಟಾಂಪು ... ಸಾಧಾರಣ ಬುಕ್ಕು ಪೋಸ್ಟು ಮೂಲಕವಾಗಿಯಾದರೆ ... ಪರೀಕ್ಷಿಸಬೇಕು! ಮಾಡಬಾರದೇಕು!! ... ಜನ!!! 12—3

ಬನ್ನಿರಿ! ಕೊಡಗು ಬಾಂಧವರೇ! ಇತ್ತ ನೋಡಿರಿ

...ಲ್ಲಿ ಸಾಮಾನು ಪ್ರತಿಯೊಬ್ಬ ಹೊಗಳುವದು ತಮ್ಮ ... ಗಳಿಗೆ ತಿಳಿದಿರುವದಷ್ಟೆ.

...ಮಿಸಿಯಾತೈಲ —ರಿಜಿ ಶೀಸೆ 1 ಕ್ಕೆ 1—0—0 ...ಗೆ 2—10—0 ಒರೋದಿಲ್ಲಭಾರ್ ಅತ್ತರ್ ದ್ರಾ ...ಸೆ 1 ಕ್ಕೆ 0—12—0 ಡಜನ್ 7—8—0 ಅರ್ಧ ...ಬಂಟ್ಟು ಶುದ್ಧನೀಲಗಿರಿ ತೈಲ ಶೀಸೆ 1 ಕ್ಕೆ 3 ಆಣೆ ... 1 ಕ್ಕೆ 1—12—0 ಕಸ್ತೂರಿಮಾತ್ರೆ ಶೀಸೆ 1 ಕ್ಕೆ ಡಜನ್ 1 ಕ್ಕೆ 2—10—0 ಮಲೇರಿಯಾ ದಿನ ಬರುವ ಜ್ವರಕ್ಕೆ ಖಾತ್ರಿಯಾದ ಔಷಧಿ ಮುಲಾಮಿನ ಶೀಸೆ 1 ಕ್ಕೆ 1—0—0 ರೂ

...ನ್ ಪಾಕೇಟ್ 1 ಕ್ಕೆ	1 ಆಣೆ	4 ಆಣೆ	1 ರೂ
...ಸಾಬೂನ್ 1 ಕ್ಕೆ	... ಆಣೆ	6 ಆಣೆ	7 ಆಣೆ
...ರಿಯಾ ಸಾಬೂನು 1 ಕ್ಕೆ			0 2 6
...ಸ್ ರಾಣಿ ಸಾಬೂನು 1 ಕ್ಕೆ			1-2 0
...ನ್ (ಮಲ್ಲಿಗೆ) ಸಾಬೂನ್ 1 ಕ್ಕೆ			8 ಆಣೆ
... ಗುಲಾಬಿ " 1 ಕ್ಕೆ			10 ಆಣೆ
...ಡಿ 1 ಕ್ಕೆ		2 ಆಣೆ	0-2 6
...ನ್ ಕಡ್ಡಿಗೆ 1 ಕ್ಕೆ		5 ಆಣೆ	7 ಆಣೆ
...ಟನ್ ಹರಳಸಿದ್ದು ಸೆಟ್ಟು 1 ಕ್ಕೆ			... ಆಣೆ
...ಗೆ ಡಜನ್ 1 ಕ್ಕೆ	0-14 0	1 4 0	1 8 0
...ಕ್ಕೆ 1 ಕ್ಕೆ	2 4 0	2 12 0	... 8 0
...ಂಜನ ಡಬ್ಬಿ 1 ಕ್ಕೆ			9 ಆಣೆ
...ಕತ್ತರಿ 1 ಕ್ಕೆ			10 ಆಣೆ
...ಚಾಕಲೇಟ್ ಪಾಕೆಟ್ 1 ಕ್ಕೆ			8 ಆಣೆ
...ನಾಸೆನ್ 1 ಕ್ಕೆ		15 ಆಣೆ	8 ಆಣೆ

...ವ ತರದ ಸಾಮಾನು ಬೇಕಾದಲ್ಲಿ ನಮ್ಮಲ್ಲಿ ದೊರೆ... ...ಟಾಗಲು ಖರ್ಚು ಅಲ್ಪಾಯಿದಾ.

ವಿಳಾಸ—ಬಿ ಉಲ್ಲಾ ಮಾರ್ಟ್,
ನಂ. ೩, ಮಾರ್ಕೆಟ್ ..., ಬ ...

ರೋಗಿಗಳೂ, ರೋಗವಿಲ್ಲದವರೂ

ಆರ್ಸ್ಕಾಟೇನನ್ನು

ಉಪಯೋಗಿಸಬೇಕು.

ಎಂತಹ ಕಠಿಣ ಕಾಯಿಲೆಯುಳ್ಳ ರೋಗಿ ಗಳೂ ಇದನ್ನು ಉಪಯೋಗಿಸಿದರೆ ಶರೀರದ ಬಲ್ಹೀನತೆಯನ್ನು ತೆಗೆದುಹಾಕಿ ಕಾಯಿಲೆಯನ್ನು ಕಡಿಮೆ ಮಾಡುವುದು ಸುಭ ಕಾಯಿಲೆಗಳಲ್ಲವೂ ಬರಿ ಇದರ ಸೇವನೆಯಿಂದಲೇ ಗುಣವಾಗುವುವು. ತೆಗೆದುಕೊಂಡ ... ಟೀಮಲ್ಲಿ ಸ ಬಾಹ್ಯ ... ಬೇರೆ ಬೇರೆ ಮಾತ್ರೆಗಳಂತೆ ಸಂಕಟ, ಹೊಟ್ಟೆನೋವು ... ಉಂಟುಮಾಡುವುದಿಲ್ಲ ... ಕೆಮ್ಮು, ಉಬ್ಬಸ, ಮೂತ್ರಬಂಧನೆ ... ಉಷ್ಣ ಪಿತ್ತ, ... ಸಂಬಂಧ ಕಾಯಿಲೆಗಳು ... ಕರುಳುಗಳಲ್ಲಿ ಕ್ರಿಮಿಗಳಿಂದ ಹುಟ್ಟಿ ಉಬ್ಬರವಾಗುವುದು, ದುರ್ವಾಸನೆಯುಳ್ಳ ವಾಯುಗಳು ಹುಟ್ಟುವುದೇ ಮುಂತಾದ ಎಲ್ಲಾ ಗುಣಪಡಿಸುತ್ತದೆ

ಚಿಕ್ಕಮಕ್ಕಳಿಂದ ಮುದುಕರವರೆಗೆ ಎಲ್ಲ ರ ಯಾವ ಕಾಲದಲ್ಲೂ ಉಪಯೋಗಿಸಬಹುದು ಯಾವಾಗಲೂ ಒಂದು ಸೀಸೆಯನ್ನು ಹತ್ತಿರವೇ ಇಟ್ಟುಕೊಳ್ಳಿ

೪೦ ಮಾತ್ರೆ ಶೀಸೆಗೆ ೧—೦ ಆಣೆ

ಚಂದ್ರಕಳೆಯು

ಶರೀರದಲ್ಲಿನ ಪ್ರತಿಯೊಂದು ಧಾತುವನ್ನೂ ಸೇರಿಸಿ ಶರೀರದ ರೋಗಗಳನ್ನು ಪರಿಹರಿಸುವುದು ರೋಗವಿಲ್ಲದವರಿಗೆ ... ಮುಖ ... ಸಕಲ ಧಾತು ಗಟ್ಟಿಯಾಗಿ ... ರೋಗವಿದ್ದವರಿಗೆ ... ವಾತ, ಪ್ಲೀಹ, ... ಜೀರ್ಣ ರೋಗಗಳು, ಮೂತ್ರ ಕೋಶದ ರೋಗಗಳು, ಮಲಬದ್ಧತೆ, ನರಗಳ ಕಾಯಿಲೆಗಳು, ನರಗಳ ಬಲುಳಿಕೆ, ಮಿದುಳಿನ ಕಾಯಿಲೆಗಳು, ಕೆಮ್ಮು, ... ಕುಗ್ಗಿದ ... ಹೊಟ್ಟೆನೋವು ಮುಂತಾದುವನ್ನೆಲ್ಲ ... ಗುಣಪಡಿಸುತ್ತದೆ ಅಮೂಲ್ಯ ... ತಯಾರಿಸಿದ್ದು ಶೀಸೆಗೆ ... ರೂಪಾಯಿ

ಇಲೆಕ್ಟ್ರಿಕ್ ಬಾಂ.

ಚಳಿ, ಜ್ವರ, ತುರಿಕಜ್ಜಿ, ಗಾಯ ಸುಟ್ಟ ಗಾಯ ಮುಂತಾದುವನ್ನೆಲ್ಲ ಗುಣಪಡಿಸುತ್ತದೆ ಪೆಟ್ಟಿಗೆಗೆ ... ಆಣೆ

ಎಪ್ಪೇ ದೊಡ್ಡ ಜ್ವರವಿರಲಿ.

ನಮ್ಮ ಜ್ವರಾರಿಮಾತ್ರೆಗಳು ತೆಗೆದುಕೊಂಡು ... ಗಂಟೆಗಳೊಳಗಾಗಿಯೇ ಜ್ವರವನ್ನು ... ಡಿತ ಇಳಿಸುತ್ತವೆ ... ಪೊಟ್ಟಣ ಮಾತ್ರೆಗೆ ... ರೂ ಜ್ವರಗಳನ್ನು ಗುಣಪಡಿಸುವುದಕ್ಕೆ ನಮ್ಮ ಫೀವರಿಗ್ ಮಾತ್ರೆಗಳನ್ನು ಉಪಯೋಗಿಸಿ ಇವು ಮಲೇರಿಯಾ, ಸನ್ನಿಪಾತ, ಪಿತ್ತಜ್ವರಗಳು, ಶ್ಲೇಷ್ಮಜ್ವರಗಳು, ಮುಂತಾದುವನ್ನೆಲ್ಲ ಗುಣಪಡಿಸುತ್ತವೆ ಶೀಸೆಗೆ ೧ ರೂಪಾಯಿ

ಅನ್ನಕೋಶ, ಪಿತ್ತಕೋಶ ಮುಂತಾದುವುಗಳ ಅಕ್ರಮತೆಯಿಂದ ಹೊಟ್ಟೆನೋವು (ಪರಿಣಾಮಶೂಲೆ) ವಾ ತಿಪಾಗುವುದು, ಅಜೀರ್ಣ, ಮುಂತಾದ ಎಲ್ಲಾ ತರದ ... ಎಂಬ ... ರ್ಣಕೋಶದ ಕಾಯಿಲೆಗಳನ್ನೂ ನಮ್ಮ ... ರಿಯು ಬಹು ದಿನ ಗುಣಪಡಿಸುತ್ತದೆ ... ಔಷಧ ಗಳಲ್ಲ ... ಶೀಸೆಗಳಿಗೆ ... ರೂಪಾಯಿ

ಎಲ್ಲಾ ತರದ ಕಾಯಿಲೆಗಳನ್ನೂ ಪತ್ರಮು ... ಪಾರವೂ, ಹಕ್ಕಿ ... ಗುಣಪಡಿಸುತ್ತವೆ ... ಹಸುಲ್ ಬರೆದಿಸಿ ಎಂದರೆ ಪೂರ್ಣ ... ಮು ಮೂತ್ರಕೋಶದ ಕಾಯಿಲೆ ಮುಂತಾದುವನ್ನು ಗುಣಪಡಿಸಿದ್ದಕ್ಕೆ ನಮಗೆ ಚಿನ್ನದ ಮೆಡಲುಗಳು ಸಿಕ್ಕಿವೆ

ಬಿ. ಜಿ. ಎಚ್ ಹೌಸ್,
ವೀರಾಜಪೇಟೆ, (ಕೊಡಗು)

ಕೈಯಲ್ಲಿ ಕಟ್ಟಲೂ ಜೇಬಿನಲ್ಲಿ ಇಡಲು ಅನುಕೂಲವಾದ ಹೊಸ ಸನ ... ನ ಎಲೀವರ್ ವಾಚ್.

ಈ ಗಡಿಯಾರಗಳು ವಿಲಾಯತಿಯಲ್ಲಿ ತಯಾರಾದದ್ದು ಲೀವರ್ ಮೂಮೆಂಟ್ ಗಳಿಂದ ಮಾಡಿದೆ ... ಜರ್ಮನ್ ಬೆಳ್ಳಿಯ ... ಮುಂದೆ ... ವಾದ ... ಯಾ ... ಒಳಗಡೆ ... ಗಳು ... ಇವು ಸರಿಯಾಗಿ ಟವನ್ನು ತೋರಿಸುವವು ಈ ಗಡಿಯಾರ ... ಒಂದು ಇದ್ದರೆ ... ಜೇಬಿನ ... ಕೈಗೂ ಕಟ್ಟಿಕೊಳ್ಳಲೂ ಸಹ ಅನುಕೂಲ

ವಾಚನ್ನು ಕ್ರಯ ಗಡಿಯಾರ 1 ಕ್ಕೆ ರೂ ... —0

ಕಿವಿ ಟೋಪಿ

ಈ ಟೋ ... ಉಲನ್ ದಾರದಿಂದ ತಯಾರಾಗಿದೆ ... ಯೂ ... ಉಪಯೋಗಿಸಲು ಬಹು ... ಕೊಡುವದನ್ನು ... ಪಿಗಳಂತೆ ... ಹುದುದು

ಕ್ರಯ ಉಲನ್ ಟೋಪಿ 1 ಕ್ಕೆ ... 1

ವಿಳಾಸ —ಎಸ್ ಆರ್ ಕೃಷ್ಣ ಅಂಡ್ ಕೋ
89 ನಾರಾಯಣ ಮೊದಲಿ ... ಮದರಾಸು.

ರೋಲ್ಡ್ ಗೋಲ್ಡ್ ಬಂಗಾರದ ರೇಡಿಯಂ ರಿಸ್ಟ್ ಲೆಟ್ ವಾಚ್

ಈ ಗಡಿಯಾರಗಳನ್ನು ಶೀಮೆ ಬಂಗಾರದಿಂದ ಅಮೇರಿಕಾ ದೇಶದಲ್ಲಿ ತಯಾರಾದದ್ದು ಇತರ ಗಡಿಯಾರಗಳಲ್ಲಿ ರಾತ್ರಿವೇಳೆ ಗಂಟೆ ನೋಡಬೇಕಾದರೆ ದೀಪ ಬೇಕು ಆದರೆ ಈ ಗಡಿಯಾರಗಳಿಗೆ ಬೆಳಕು ಬೇಕಾಗಿಲ್ಲ ಎಷ್ಟು ಕತ್ತಲಾಗಿರುತ್ತೋ ಅಷ್ಟು ಚೆನ್ನಾಗಿ ಸೂಕ್ಷ್ಮವಾಗಿ ಬೆಳಕಿನ ಸಂಗ ಗಂಟೆಯನ್ನು ತೋರಿಸುವುದು. ಇವು ಅಮೇರಿಕಾದೇಶದ ಗಡಿಯಾರಗಳು ಬಹುದಿನ ಬಾಳಿಕೆ ಬರುವವು. ಯಾರೇ ಆಗಲಿ ಈ ಗಡಿಯಾರಗಳಲ್ಲಿ ಒಂದು ಬೆಗನೆ ಗಂಟೆಯನ್ನು ಗುರುತು ಹಿಡಿಯಬಹುದು ಇವಕ್ಕೆ 5 ವರುಷ ಗ್ಯಾರಂಟಿ ಕೊಡುವೆವು ಕೈಯಲ್ಲಿ ಕಟ್ಟುವ ಬೆಳ್ಳಿಯ ಸರಪಣಿ ಸಹಿತ ಗಡಿಯಾರ 1 ಕ್ಕೆ 10—8—0 ಕೈಯಲ್ಲಿ ಕಟ್ಟುವ ಶೀಮೆ ಸಪ್ಪೆ ಸಹಿತ ಗಡಿಯಾರ 1 ಕ್ಕೆ ... —8—0 ರೂ

ವಿಳಾಸ —ಎಸ್ ಎಸ್ ಶಾಮ ಅಂಡ್ ಕೊ,
ಪೋಸ್ಟ್ ಬಾಕ್ಸ್ ನಂ 214, ಮದರಾಸು

ಮೂನ್ ಲೈಟ್ ಸೋಪು

ಈ ಸೋಪನ್ನು ಕೊಡಲುಗಳಿಗೆ ಒಂದೇ ಒಂದು ನಿಮಿಷ ಹಾಕಿದರೆ ... ಕ್ಷೌರ ಮಾಡಿ ... ಕೆಂಕಲು ಚೆನ್ನಾಗಿ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕೂದಲನ್ನು ತೆಗೆದು ಬಿಡುವುದು

ನಮ್ಮ ಮೂನ್ ಲೈಟ್ ಸೋಪು ಗಂಧ, ಮೊಡವೆ ಬಕ್ಕ, ... ನನ ಮಂ... ಮುಂತಾದುವುಗಳನ್ನು ಕ್ಷಣ ಮಾತ್ರದಲ್ಲಿ ವಾಸಿಮಾಡುವುದು

3 ಸಾಬೂನುಗಳನ್ನು ಪೆಟ್ಟಿಗೆ 1 ಕ್ಕೆ ರೂ 1—4—0 ಒಂದೇ ಸಲ ... ಪೆಟ್ಟಿಗೆ ತರಿಸಿಕೊಂಡರೆ ರೂ 2—4—0

ವಜ್ರದ ಉಂಗುರಗಳು

ಈ ಉಂಗುರಗಳನ್ನು ಶೀಮೆ ಬಂಗಾರದಿಂದ ಮಾಡಿದೆ ಇದರ ಮೇಲುಗಡೆ ಕೆಂಪು ಹಸುರು ಮುಂತಾದ ಇಮಿಟೇಷನ್ ವಜ್ರದ ಕಲ್ಲು ಗಳನ್ನಿಟ್ಟು ಕಟ್ಟಿದ ಕಟ್ಟುವವನು ನೋಡಿದವರು ನಿಜವಾದ ವಜ್ರದ ಉಂಗುರವೆಂದೇ ಹೇಳುವರು.

ಬಣ್ಣಕ್ಕೆ ಗ್ಯಾರಂಟಿ 2 ವರ್ಷ ಕೊಡುವೆವು

ಉಂಗುರ 1 ಕ್ಕೆ ರೂ ...—12—0

ವಿಳಾಸ —ಎಸ್ ಪಾಲ್ ಅಂಡ್ ಕೊ
ಪೋಸ್ಟ್ ಬಾಕ್ಸ್ ನಂ 542 ಪಾರ್ಕ್ ಟೌನ್, ಮದರಾಸು.

ಮಧುರೆ ಮತ್ತು ಕರ್ನಾಟಕ ಸೀರೆಗಳು

17 ಮೊಳ ಪೂರಾ ಇರುವದು ದೊಡ್ಡ ಅಗಲ

ಈ ಸೀರೆಗಳನ್ನು ಹಸನಾದ ಭಟ್ಟಿ ನೂಲಿನಿಂದ ತಯಾರಿಸಿದೆ. ಸುಂದರವಾದ ರೇಷ್ಮೆಯ ಸೆರಗೂ, ಅಂದವಾದ ದೊಡ್ಡ ಅಂಚೂ ಇದೆ ಶ್ರೀಮಂತರಿಗೂ, ಗರೀಬರಿಗೂ ಅನುಕೂಲವಾದದ್ದು ಈಗಿನ ಕಾಲದಲ್ಲಿ ಈ ಕ್ರಯಕ್ಕೆ ಎಲ್ಲಿಯೂ ಸಿಕ್ಕಲಾರವು. ಮಾದರಿಗಾಗಿ ಕೆಲವು ಸೀರೆಗಳನ್ನು ಮಾತ್ರ ತಯಾರಿಸಿರುವೆವು ಬೇಕಾದವರು ತರಿಸಿ ಪರೀಕ್ಷಿಸಿರಿ.

ಕ್ರಯ ನಂ 1 6—8—0 ರೂ ನಂ 2 7—8—0 ರೂ

ವಿಳಾಸ —ಎಸ್ ಎಸ್ ಶಾಮ ಅಂಡ್ ಕೊ
ಪೋಸ್ಟ್ ಬಾಕ್ಸ್ ನಂ 214, ಮದರಾಸು.

Printed and Published by S NANJUNDA SASTRY at The Sreenivasa Electric Press Mysore for 'Kodagu Ltd, Mercara—26 8 1921

ನೋಟೀಸ್.

ಕೊಡಗು ಕಂಪೆನಿಯ ಸಕ್ರೆಟರಿ ಮೆ|| ಕೋಳೆರ ಚಿನ್ನಪ್ಪನವರು ಈ ತಾ|| 31 ನೇ ಬುಧವಾರ ವಿರಾಜಪೇಟೆಯಲ್ಲಿಯೂ, 1 ನೇ ಸಪ್ಟಂಬರಿನಲ್ಲಿ ಸೂನವಾರದಿನಲ್ಲಿಯೂ ಪೈ|| ಬೆಟ್ಟಿಯತ್ತು ಮುತ್ತಣ್ಣ ಇವರ ತಾ| 29 ರಲ್ಲಿ ಗೋಣಿಕೊಪ್ಪಲಿನಲ್ಲಿ 2 ರಲ್ಲಿ ಪೊನ್ನಂಪೇಟೆಯಲ್ಲಿ, ಸಪ್ಟಂಬರ್ 4 ನೇ ಆದಿತ್ಯವಾರ ಗೋಣಿಕೊಪ್ಪಲು 5 ನೇ ಸೋಮವಾರ ಮಡಿಕೇರಿ 7 ನೇ ಬುಧವಾರ ವಿರಾಜಪೇಟೆಯಲ್ಲಿಯೂ ಇರುವುದರಿಂದ ಕಂಪೆನಿಯ ಷೇರು ಹಣ ಮತ್ತು ಚಂದಾ ಹಣ ಪಾವತಿಮಾಡಲಿಕ್ಕೆ ಬಾಕಿ ಇರುವ ಎಲ್ಲಾ ದೇಶಾಭಿಮಾನಿಗಳು ದಯವಿಟ್ಟು ಅವರವರ ಬಾಕಿಯನ್ನು ಪಾವತಿಮಾಡಿ ರಶೀತಿ ಪಡೆಯಬೇಕಾಗಿಯೂ, ಬಾಕಿಯನ್ನು ಪಾವತಿ ಮಾಡದೆ, ಉದಾಸೀನರಾಗಿರುವುದು, ಕಂಪೆನಿಯ ಮುಂದಣ ಅಭಿವೃದ್ಧಿಗೆ ಕುಂದುಕವುಂಟುಮಾಡಿದಂತಾಗಿಯೂ ಈ ಮೂಲಕ ತಿಳಿಸಲಾಗಿದೆ

ಮ್ಯಾನೇಜರ್

ಕೊಡಗು ಲಿಮಿಟೆಡ್, ಮಡಿಕೇರಿ

ಪಾಕೆಟ್ ಲೀವರ್ ವಾಚ್

ಇದರ ಕ್ರಯ ಸಾಧ್ಯವಾದ ವಾಚ್ ಸಂಪಣಿ ಮತ್ತು ಸುಂದರವಾದ ವಾಚ್ ಪಟ್ಟಿಗೆ ಸಮೇತ

5—8—0 ರೂ ಮಾತ್ರ.

ಘನವಂತರೇ 12–1



ಈ ವಾಚ್ ಶ್ರೇಷ್ಠವಾದ ಲೀವರ್ ಕೆಲಸದಿಂದ ತಯಾರಾದದ್ದು ಸಾಣ್ಯವಾದ ಮತ್ತು ಬಲಿಷ್ಟವಾದ ಸಾಮಾನುಗಳಿಂದ ತಯಾರಾದದ್ದು ಅಲ್ಪವಾದ ಪಟ ಪಟೋಪ ಪ್ರಕಟನೆಯ ವಾಚ್ ಅಲ್ಲ ವಾಚ್ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು ಎಂದು ಪ್ರಪಂಚದಲ್ಲೆಲ್ಲಾ ತಿಳಿದ ವಿಷಯವೇ ಸರಿ ನೋಡುವದಕ್ಕೆ ಬಹು ಗಂಭೀರವಾದದ್ದು ಕೆಲವು ಮಾತ್ರವೇ ಉಳಿದಿವೆ ಬೇಕಾದವರು ಶೀಘ್ರವಾಗಿ ಬರೆದು ತರಿಸಿಕೊಳ್ಳಿ

ವಿಳಾಸ —ಆರ್ ಕೆ ವಾಚ್ ಕಂಪನಿ,

ನಂಬರು 42, ತಂದಪ್ಪ ಶೆಟ್ಟಿಬೀದಿ ಮದರಾಸು

ಎಲೆಕ್ಟ್ರಿಕ್ ಗಿಲ್ಟು ಬಂಗಾರದ ನಗಗಳು

ಗೆಜ್ಜೆ ನಾಗರು 1 ಕ್ಕೆ	2—8—0
ರೋಜಾ ಹುವ್ವು 1 ಕ್ಕೆ	0—12—0
ಶಾವಂತಿಗೆ ಹುವ್ವು 1 ಕ್ಕೆ	0—12—0
ಮಲ್ಲಿಗೆ ಮಗ್ಗು ದಾಬು 1 ಕ್ಕೆ	3—0—0
ಚಂದ್ರಹಾರ ಸಾದಾ 1 ಕ್ಕೆ	2—8—0
ಡಿಟೋ ಮೋಪು ಸಹಾ	3—0—0
ಇಮಿಟೇಷನ್ ಪಿಂಡೋಲೆ ಜೊತೆಗೆ	9—0—0
ಮೂಗಬಟ್ಟು 1 ಕ್ಕೆ	0—8—0
ಬುಲಾಕು 1 ಕ್ಕೆ	0—12—0
ಜರ್ಮನ್ ಬೆಳ್ಳಿ ತಟ್ಟೆ 1 ಕ್ಕೆ	3—0—0
ಪನ್ನೀರು ಧಾನಿ 1 ಕ್ಕೆ	3—0—0
ಡಿಟೋ ಲೋಟ 1 ಕ್ಕೆ	1—8—0

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ

12–1 ಆರ್ ಕೆ ವಾಚ್ ಕಂಪೆನಿ,

ನಂಬರು 42, ತಂದಪ್ಪ ಶೆಟ್ಟಿ ಬೀದಿ, ಮದರಾಸು

ಮಡಿಕೇರಿ ಸಿದ್ದಾಪುರ ವಿರಾಜಪೇಟೆ ನಾಡುಗಳು, ಅಮ್ಮತ್ತಿ

ಮುಂತಾದ ಸ್ಥಳಗಳಲ್ಲಿರುವವರಿಗೆ ಮೋಟಾರ್ ಬಸ್ಸು ದಾರ

ನಾಗಿಯೂ ಮತ್ತು ಟಪಾಲಿನ ಮೂಲಕವಾಗಿಯೂ

ರವಾನಿಸಿಕೊಡುತ್ತೇವೆ

ಎಸ್ ಎಸ್. ಬಾಲಚಂದ್ರ ಅಂಡ್ ಕೋ,

ನಂ 1,011, ಸಯ್ಯಾಜಿರಾವ್ ರೋಡ್,

ಮೈಸೂರು.

ನಮ್ಮಲ್ಲಿ—ರಬ್ಬರ್ ಸ್ಟಾಂಪುಗಳು ಸ್ಟೇಷನರಿ ಸಾಮಾನುಗಳು, ನಮೂನೆ ಬುಕ್ಕುಗಳು ಅಲ್ಲದೆ—ಪ್ರಿಂಟಿಂಗ್ ಆಫೀಸಿಗೆ ಹೋಗದಂತೆ ಬೇಕಾಗುವ, ಬಿಲ್ ಫಾರಂಗಳು, ಲೆಟರ್ ಫಾರಂಗಳು ರಶೀತಿ ಬುಕ್ಕುಗಳು ವಿಜಿಟಿಂಗ್ ಕಾರ್ಡುಗಳು ಲಗ್ನಪತ್ರಿಕೆಗಳು, ಕೋಆಪರೇಟಿವ್ ಸೊಸೈಟಿಗಳಿಗೆ ಬೇಕಾಗುವ ಎಲ್ಲಾ ವಿಧವಾದ ಫಾರಂಗಳು ಕ್ಯಾಷ್ ಲೆಡ್ಜರು ಬುಕ್ಕುಗಳು ಮುಂತಾದವುಗಳನ್ನು ಗ್ರಾಹಕರ ಮನಸ್ಸೊಪ್ಪುಕೆಯಂತೆ ಸಕಾಲಕ್ಕೆ ನಾಜೂಕಾಗಿ ಪ್ರಿಂಟು ಮಾಡಿಸಿ ಕಳುಹಿಸಿಕೊಡುತ್ತೇವೆ ಅಲ್ಲದೆ—ಶುಭಶೋಭನಾದಿಗಳಿಗೆ ಬೇಕಾಗುವ ಮೈಸೂರಿನ ತರಕಾರಿ, ಹೂವು ಮತ್ತು ವೀಳ್ಯದೆಲೆಗಳನ್ನು ಸಹ ರವಾನಿಸಿ ಕೊಡುತ್ತೇವೆ ಅಡ್ವಾನ್ಸಿಲ್ಲದ ಆರ್ಡರುಗಳಿಗೆ ನಿಗಾ ಕೊಡಲಾರೆವು ಹೂವು, ವೀಳ್ಯದೆಲೆ ಹಣ್ಣು ಮುಂತಾದ ಹಸಿಯ ಪದಾರ್ಥಗಳನ್ನು ಅಪೇಕ್ಷಿಸತಕ್ಕವರು ಪೂರ್ತಾ ಮೊಬಲಗನ್ನು ಅಡ್ವಾನ್ಸಾಗಿ ಕಳುಹಿಸಬೇಕು ಹೆಚ್ಚು ಸಂಗತಿಗಳನ್ನು ತಿಳಿಯಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು

ಎಸ್ ಎಸ ಬಾಲಚಂದ್ರ ಅಂಡ್ ಕೋ

ನಂ 1011, ಸಯ್ಯಾಜಿರಾವ ರೋಡ್ ಮೈಸೂರು

WANTED

1 One Compositor for the "SUNDARA VILAS Printing works.

Apply —R S SINGH,
GONIKOPAL

2 ENCOURAGE SWADESHIUM

If you are not at the point of defending yourself you will loose the opportunity of gaining freedom. So, try to encourage THE SUNDARAVILAS PRESS" Gonikopal South Coorg A Reliable and Neat Printing Office for every sort of Job Printing Neat and cheap

3 BEWARE MERCHANTS

Fixed Prices and Terms Cash are the ways of attractions and magnetic

But does a Merchant satisfy himself with what he advertises

Remember "Honesty is the best Policy" If you like to be convinced please go to—

Messrs R SUNDAR SINGH,
GONIKOPAL

A well reknown firm for all luxuries Provisions necessities, and he is at your call to do the needful in case of a small commission if it pleases the taste of the function and trouble

Besides the firm under the above-head is intending to close the business if the "PUBLIC" donot encourage him by the end of this year So in order to retain him at your service It will afford you a great boon to him and the "MOTHERLAND OF HIM" Kaveriamma for whom he has till now struggled and rooted in this "BLACKHOLL"

R. SUNDER SINGH,
GONIKOPAL, S Coorg

ಪ್ರಕಟಣೆ

ಈ ಕಳೆದ ಸನ್ 1921 ನೇ ಏಪ್ರಿಲ್ ತಾರೀಖು 2 ರಲ್ಲು ಪಿಂಚಿನಾಗಿ ಬಂದ ಕೆಂಗಟ್ಟೆ ಮಂದಣ್ಣನವರು ಕೊಡಗು ಮಡಿಕೇರಿ ಮಹಾದೇವಪೇಟೆ ಚೌಕದಲ್ಲಿ ಇಂಗ್ಲಾಂಡಿನಿಂದ ಎಲ್ಲಾ ಔಷದ ಆಪರೇಷನಿಗೆ ಬೇಕಾಗುವ ಆಯುಧಗಳು ಮತ್ತು ಔಷಧಮಾಡಲಿಕ್ಕೆ ಬೇಕಾಗುವ ಎಲ್ಲಾ ಸಾಮಾನುಗಳನ್ನು ತರಿಸಿಕೊಂಡು ತನ್ನ ತಂದೆ ಕೆಂಗೇಟ್ಟೆ ಅಪ್ಪಯ್ಯನವರ ಹೆಸರಿನಲ್ಲಿ ಒಂದು ಆಸ್ಪತ್ರೆಯನ್ನು ತೆರದು ಇರುತ್ತಾರೆ 4–2

ಖವ ತ ನ ದ ಗ ಗ ಳು

(1) ಪ್ರತಿಯೊಬ್ಬರನ್ನು ಪರೀಕ್ಷಿಸಿ ಔಷಧ ಪಟ್ಟಿಯನ್ನು ಕೊಡಲು ಎಂಟು ಆಣೆಗಳ ಫೀಜು

(2) ಪ್ರತಿಯೊಂದು ಬಿನ್ಸ್ ಕುಡಿಯುಕ್ಕೆ ಕೊಡತಕ್ಕ ನೀರು ಮದ್ದಿಗೆ ಎರಡು ಆಣೆಗಳು ಪ್ರತಿಯೊಂದು ಹಚ್ಚಿ ಒಂದು ಆಣೆ ಹೂರಗೆ ಹಚ್ಚಲಿಕ್ಕೆ ಇರತಕ್ಕ ಮುಲಾಮ ಔಷಧ ಬಿನ್ಸಿಗೆ ಎರಡು ಆಣೆ ಮತ್ತು ಹೂರಗೆ ಉಜ್ಜಲಿಕ್ಕೆ ಇರತಕ್ಕ ತೈಲಗಳಿಗೆ ಬಿನ್ಸಿಗೆ ನಾಲ್ಕು ಆಣೆಗಳ ಚಾರ್ಜು ಮಾಡುತ್ತಾರೆ ಈ ಮೇಲಿನ ಚಾರ್ಜುಗಳು ಮೊದಲಾಗಿ ಕೊಡಬೇಕಾಗಿದೆ.

(3) ಇವರನ್ನು ಪಟ್ಟಣದಲ್ಲಿ ಖಾಯಿಲೆ ಆಜಮಾಯಿಸಿ ಮನೆಗಳಿಗೆ ಕರದುಕೊಂಡು ಹೋದಲ್ಲಿ ಇವರ ಫೀಜು ಎರಡು ರೂಪಾಯಿಗಳು ಪಟ್ಟಣದ ಹೊರಗೆ ಹೋದಲ್ಲಿ ಮೈಲಿಗೆ ಒಂದು ರೂಪಾಯಿಯಂತೆ ಛಾರ್ಜು ಮಾಡುತ್ತಾರೆ

(4) ಇವರನ್ನು ಹೆಂಗಸರ ಹೆರಿಗೆ ಕಾಲದಲ್ಲಿ ಕರೆಕೊಂಡಲ್ಲಿ ಸುಲಭದ ಹೆರಿಗೆಗೆ ಇಪ್ಪತ್ತೈದು ರೂ ಮತ್ತು ಕಷ್ಟದ ಹೆರಿಗೆಗೆ ಐವತ್ತು ರೂಪಾಯಿಗಳ ಛಾರ್ಜು ಮಾಡುತ್ತಾರೆ.

(5) ಬಾವು ಕುರ, ಹಲ್ಲು ಕೀಳುವ ಸಾಧಾರಣ ಆಪರೇಷನುಗಳಿಗೆ ಐದು ರೂಪಾಯಿ ಛಾರ್ಜು ಮಾಡುತ್ತಾ[ರೆ]

ಮಹಾ ಲಾಭಕರ!

ಕೊಂಡುಕೊಳ್ಳಲು ಯೋಗ್ಯವಾದುದು!

ರೂ. 800 ಬೆಲೆಬಾಳುವ ನಾಲ್ಕು ಜನರು ಕೂರುವ ದಿಂಬು ದೀಪ ಇತ್ಯಾದಿಗಳಿಂದ ಸಂಪೂರ್ಣವಾಗಿ

ಒಂದು ಟಾಂಗಾವು.

ರೂ. 500 ಕ್ಕೆ ಮಾರಾಟಕ್ಕಿದೆ ಮಲಗಲಿಕ್ಕೂ, ... ಲಿಕ್ಕೂ ಅನುಕೂಲಗಳಿವೆ.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬ[ರೆದು] ಕೊಳ್ಳಿರಿ —

"ಎಕ್ಸ್"

ಕೊ/ಕೊ, ಮೇನೇಜರ್,

4–2 "ಕೊಡಗು" ಲಿಮಿಟೆಡ್, ಮಡಿ[ಕೇರಿ]

FOR SALE.

"A WORTH BUYING BARGAIN

A four seated "Tonga" with com[plete] Cushions, Covers and Best Lamps w[orth] Rs. 800 will be sold for Rs 500 I[t is] very convenient to travel in night time also can sleep comfortably

For particulars apply to—

4–2 **"X"**

C/o Manager, Kodagu Ltd
MERCA[RA]

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾ[ರ]

ನಮ್ಮಲ್ಲಿ ಈಗ ಹಲವು ತರದ ಬೇರೆಬೇರ ಕನ್ನಡಪುಸ್ತಕ

ಕೆಳಗೆ ಬರೆದ ಪುಸ್ತಕಗಳನ್ನು ಮಾರುವ ಪೂರ್ಣ

ಸ್ವಾತಂತ್ರ್ಯವು ನಮ್ಮದೇ ಇದೆ

೧ ಕರ್ನಾಟಕ ಕವಿ ಚರಿತ್ರೆ ಸ ೧ ರೂ		೩–
೨ ,, ,, ೨ ,		೫–
೩ ಬೂಕರ ಟಿ. ವಾಶಿಂಗ್ಟನ್ನ	,	೧–
೪ ಛತ್ರಪತಿಶಿವನ ಸಾಹಸ ಚರಿತ್ರೆ	,,	೧–
೫ ರಾಜಶೇಖರ ಚರಿತ್ರೆ	,,	೧–
೬ ಸಿಮ್ಮಲೆ		೦–
೭ ಅಕ್ಬರ ಚರಿತ್ರೆ (ಸಚಿತ್ರ)	,,	೧–
೮ ಅಬಲಾಸಚ್ಚರಿತ್ರ ರತ್ನಮಾಲೆ	,	೨–
೯ ರಾಯಚೂರ ವಿಜಯ	,	೨–

ಇವಲ್ಲದೆ ನಮ್ಮಲ್ಲಿ ಶಾಲೋಪಯೋಗಿ ಮುಂತಾದ ಕನ್ನಡ ಪುಸ್ತಕಗಳೂ ಬರವಣಿಗೆಯ ಎಲ್ಲ ಉಪಕರಣಗಳೂ ದೊರೆಯುತ್ತವೆ.

ಮಾಳಮಡ್ಡಿ, ಧಾರವಾಡ—ಮೈಸೂ[ರು]

ಅಮೃತಾಂಜನ.

ನೋವುಗಳಿಗೆ ಸಿದ್ಧೌಷಧವು

ಎಲ್ಲಾ ವಾಪ್ರುಗಳಲ್ಲಿಯೂ ಮಾರಲ್ಪಡುತ್ತೆ

12–1

ಅಮೃತಾಂಜನ ಡಿಪೋ,

ಬೊಂಬಾಯಿ ಮತ್ತು ಮದರಾಸು.

ಮೈಸೂರಿನಲ್ಲಿ ದೊರೆಯುವ ಸ್ಥಳ —ಯಸ್ ಕೃಷ್ಣಸ್ವಾಮಿಶೆಟ್ಟಿ ಅಂಡ್‌ಸನ್ಸ್.

KALAPPAN'S ADVERTISING SERVICES.

ದಿವಂಗತ ಪೇಪಂಡ ಮುಕ್ಕಾಟೀರ ಮಂದಣ್ಣನವರು

ನಮ್ಮ ಕಂಪೆನಿಯ ಒಬ್ಬ ಡೈರೆಕ್ಟರರೂ, ಪತ್ರಿಕೆಯ ಚಂದಾದಾರರೂ, ಆಪ್ತಮಿತ್ರರೂ, ರಾಷ್ಟ್ರೀಯ ವಿದ್ಯಾನಿಧಿಯ ಕೋಶಾಧ್ಯಕ್ಷರೂ ಆದ ಕೊಡಗಿನ ಯುವಕಮಂಡಲಿಯಲ್ಲಿ ನಕ್ಷತ್ರರೂಪದ ನಮ್ಮೆಲ್ಲರ ಚಿರಪರಿಚಿತರಾದ ಶ್ರೀಮಾನ್ ಮಂದಣ್ಣನವರು ಇದೇ ತಿಂಗಳ 17 ನೇ ಬುಧವಾರ ರಾತ್ರಿ ಸ್ವರ್ಗಸ್ಥರಾದರೆಂಬ ಶೋಕವಾರ್ತೆಯನ್ನು ತನ್ನ ವಾಚಕರಿಗೆ ತಿಳುಹಿಸಲು "ಕೊಡಗು" ಪತ್ರಿಕೆಯು ವಿಷಾದಿಸುತ್ತದೆ. ತನ್ನ ಪರಿತಾಪವನ್ನು ಮರಣದ ಸುದ್ದಿ ಕೇಳಿದ ಗಳಿಗೆಯಲ್ಲಿಯೇ ಡೈರೆಕ್ಟರುಗಳವರ ಮೂಲಕ ತಂತಿವಾರ್ತೆಯಲ್ಲಿ ಅವರ ವಯೋವೃದ್ಧರಾದ ತಂದೆಯವರಿಗೂ, ಅವರ ಸಂಸಾರಕ್ಕೂ ಕಳುಹಿಸಿಕೊಟ್ಟಿತು. ಕೊಡಗಿನ ಸದ್ಯದ ರಾಜಕೀಯ ವ್ಯವಸ್ಥೆಯ ಕಾಲವಾದ ಈಗಿನ ಸಮಯದಲ್ಲಿ ಪ್ರಿಯರು ತೀರಿಹೋದುದು "ಕೊಡಗು" ಪತ್ರಿಕೆಗೆ ಮಾತ್ರವಲ್ಲ, ಕೊಡವ ಜನರಿಗೆ ಅವರ ಮುಂಚೆಯೇ ಅಲ್ಲ-ಇಡೀ ಕೊಡಗು ಪ್ರಾಂತ್ಯಕ್ಕೆ ಒಬ್ಬ ನಯಸಿಯಾದ ಮುಂದಾಳು ಹೋದದು ಕೇವಲ ದುರ್ಭಾಗ್ಯವೇ ಸರಿ. ಬರೀ ಚಿಕ್ಕ ಪ್ರಾಯದಲ್ಲಿ ಇವರಿಗೆ ಒದಗಿದ ಅಕಾಲಮರಣವು ಕೇವಲ ಅನುಚಿತ.

ಶ್ರೀಯುತರಿಗೆ ಇಹಲೋಕದ ವ್ಯಾಕುಲದಿಂದ ಪರಲೋಕದಲ್ಲಾದರೂ ಚಿರಶಾಂತಿ ದೊರಕಲೆಂದೂ, ಮತ್ತು ಪುತ್ರಶೋಕದಲ್ಲಿ ಸಂತಪ್ತರಾದ ಅವರ ವೃದ್ಧರಾದ ತಂದೆಯವರಿಗೂ ಸೌಭಾಗ್ಯವನ್ನು [illegible] ದುಃಖಸಾಗರದಲ್ಲಿ ಮುಳುಗಿರುವ ಅವರ ಪತ್ನಿಯವರಿಗೂ ಇನ್ನೂ ಬಾಲ್ಯಾವಸ್ಥೆಯಲ್ಲಿರುವ ಅವರ ಮಕ್ಕಳಿಗೂ ಧೈರ್ಯ ಮತ್ತು ಶಾಂತಿಯನ್ನು ದಯಪಾಲಿಸಲೆಂದೂ ಕರುಣಾಳುವಾದ ಭಗವಂತನಲ್ಲಿ ನಮ್ಮ ಪ್ರಾರ್ಥನೆ.

ವರ್ತಮಾನ ಸಂಗ್ರಹ.

ಒಳದೇಶ.

ಮಳೆಯು ಸ್ವಲ್ಪ ಕಡಿಮೆಯಾಗಿ ದೇಶದ ರೈತರೆಲ್ಲರೂ ತಮ್ಮ ತಮ್ಮ ವ್ಯವಸಾಯ ಕೆಲಸಗಳಲ್ಲಿ ಮಗ್ನರಾಗಿದ್ದಾರೆ.

ಮುನಾರ್ಡಿನವರು, ಕೆಲವು ಜನರಿಂದ ಸ್ವರಾಜ್ಯಕ್ಕಾಗಿ ಸಂಗ್ರಹಿಸಿದ ಹಣವು ಯಾರಲ್ಲಿದೆ. ಎಷ್ಟು ಹಣ ಜಮೆಯಾದದ್ದು, ಎಷ್ಟು ಖರ್ಚು. ಹಣದ ವಿಲೇವಾರಿ ಹೇಗೆಂಬುದನ್ನು ಸಹ ದಯವಿಟ್ಟು ವಾಚಕರಾದರೂ ತಿಳಿಸಬೇಕಾಗಿ ಕೋರುತ್ತೇವೆ.

ಮಡಿಕೇರಿ ಹೈಸ್ಕೂಲಿನಲ್ಲಿ ಸಹೋಪಾಧ್ಯಾಯರಾಗಿದ್ದ ಶ್ರೀಮಾನ್. ಸಿ. ಎಂ ರಾಮರಾವ್, ಬಿ ಎ.ಎಲ್.ಟಿ. ಮತ್ತು ಶ್ರೀಯುತ ಮೂವೆರ ಬೆಳ್ಳಿಯಪ್ಪನವರಿಗೂ ಒಂದು ಅಡ್ರೆಸ್ ' ಎಂದು ಎಲ್ಲರಿಗೂ ಆ ಮಂತ್ರಣ ಕೊನೆಗೆ ಶ್ರೀಮಾನರೊಬ್ಬರೀ ' ಅಡ್ರೆಸ್ ' ಅರ್ಪಿಸಲ್ಪಟ್ಟಿತು.

ಕಿಗ್ಗಟ್ಟುನಾಡು ತಾಲೋಕಿನಲ್ಲೆಲ್ಲಾ ಜಾನುವಾರುಗಳಿಗೆ ಕಾಯಿಲೆಯು ವಿಪರೀತವಾಗಿದೆಯೆಂದೂ, ವೆಟರಿನರಿ ಇನ್ಸ್‌ಪೆಕ್ಟರವರು ಅನೇಕ ಸ್ಥಳ ಸಂಚಾರದಲ್ಲಿರುವವರಾದುದರಿಂದ ತಕ್ಕ ಸಮಯಕ್ಕೆ ಅವರ ಸಹಾಯ ದೊರಕುವದು ದುರ್ಘಟವೆಂದೂ ಒಬ್ಬ ರೈತನ ಕೋಲಾಹಲ.

ಶ್ರೀಮಂಗಲನಾಡು ನಾಲ್ಕೇರಿ ಗ್ರಾಮದ ದೇವಸ್ಥಾನಗಳಲ್ಲಿ ಈಗಿನವರೆಗೆ ನಡೆಯುತ್ತಿದ್ದ ಪೂಜೆ ಪುನಸ್ಕಾರಗಳು ಹಲವು ಹೊಸ ಮೆಂಬರುಗಳನ್ನು ಚುನಾಯಿಸಿದಂದಿನಿಂದೀಚೆಗೆ ನಿಂತು ಹೋಗಿರುವದು ಬಹಳ ವ್ಯಸನಕರವಾದ ಸಂಗತಿ ಎಂದು ಒಬ್ಬ ಬಾತ್ಮಿದಾರರು ಬರೆಯುತ್ತಾರೆ.

ಕೆಲವು ವರ್ಷಗಳ ಹಿಂದೆ ಶ್ರೀಯುತ ಗೋಪಾಲಕೃಷ್ಣ ಹೀಕಲಿಯವರ ಜ್ಞಾಪಕಕ್ಕಾಗಿ ಸ್ಕಾಲರ್‌ಶಿಪ್, ಯಾರಿಗೆ ಯಾವದಾದರೊಂದು ಕೆಲಸಮಾಡಲು ಜಮೆಯಾದ ಹಣವು ಎಲ್ಲಿದೆ. ಯಾವರೀತಿಯಲ್ಲಿ ವಿನಿಯೋಗಿಸಲ್ಪಟ್ಟಿದೆ ಎಂಬದನ್ನು ದಯವಿಟ್ಟು, ಯಾರಾದರೂ ತಿಳಿಸಬೇಕಾಗಿ ಕೋರಿಕೆ.

ಕೊಡಗು ಸ್ಕೂಲುಗಳ ಕಾಯಂ ಅ|| ಇನ್ಸ್‌ಪೆಕ್ಟರಾಗಿದ್ದ ಮ|| ಆರ್. ಎಮ್. ಸವೂರ್ ಬಿ ಎ ಯವರು ಪಾಲಘಾಟಿನ ವಿಕ್ಟೋರಿಯ ಕಾಲೇಜಿನ ಪ್ರಿನ್ಸಿಪಾಲರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ. ಈ ಮೊದಲು ಸೂಚಿಸಿದಂತೆ ಮ|| ಶಂಕರ ನಾರಾಯಣನವರನ್ನು ಪಾಲಘಾಟಿಗೆ ವರ್ಗಾಯಿಸಿದ್ದು ಬದಲಾಯಿಸಿದ್ದಾರೆ.

ಕಳೆದವಾರ ಗೋಣಿಕೊಪ್ಪಲಿನ ಹೆಡ್‌ಕಾನಿಸ್ಟೇಬಲರು ಬಸದಮೇಲೆ ತಿತಿಮತಿಗೆ ಹೋಗಿದ್ದ ವೇಳೆಯಲ್ಲಿ ಕಳ್ಳರು ಅವರ ಮನೆಗೆ ನುಗ್ಗಿ ಒಂದು ಚಿನ್ನದ ಉಂಗುರವನ್ನೂ ಮತ್ತು ಹಲವು ಆಭರಣಗಳನ್ನೂ ಕಳವು ಮಾಡಿರುತ್ತಾರಂತೆ ಬೇರೆ ಯವರನ್ನು ಕಳ್ಳರೆಂದು ಪೋಲೀಸಿನವರು ಶಂಕಿಸಿದ್ದಾರೆ. ಪೋಲೀಸಿನವರನ್ನು ಕಳ್ಳರೆ ಯಾರಿದ್ದಾರೆ?

ತಾ|| 18 ರಲ್ಲಿ ನಡೆದ "ಕೊಡಗು" ಕಂಪೆನಿ ಡೈರೆಕ್ಟರುಗಳ ಮೀಟಿಂಗಿನಲ್ಲಿ ಒಬ್ಬ ಡೈರೆಕ್ಟರಾಗಿದ್ದ ಮ|| ಮುಕ್ಕಾಟೀರ ಮಂದಣ್ಣನವರ ಮರಣವಾರ್ತೆಯನ್ನು [illegible] ನಮ್ಮ ದುಃಖವನ್ನು ತಂತೀವರ್ತಮಾನದ ಮೂಲಕ ಅವರ ತಂದೆಗೆ ಸೂಚಿಸಿದ್ದಲ್ಲದೆ ಕಂಪೆನಿಗೆ ಸಂಬಂಧಪಟ್ಟ ಬೇರೆ [illegible] ಸಂಗತಿಗಳೂ ಸಹ ತೀರ್ಮಾನಿಸಲ್ಪಟ್ಟವು.

19-8-21 ರಲ್ಲಿ ಮಡಿಕೇರಿಯಲ್ಲಿ [illegible] ದ ಕಮಿಟಿ ಮೀಟಿಂಗು ನಡೆಯಿತು. ಆ ವರ್ಷದ [illegible] ನದ ಕರ್ಚಿನ ಬಾಬ್ತು ಮ|| ಕೊರವಂಡ ನಂಜಪ್ಪನವರು ಕೊಟ್ಟ ಐದುನೂರು ರೂಪಾಯಿಗಳಮೇಲೆ ಇದ ಸುಮಾರು 150 ರೂ ಗಳನ್ನು ಮಡಿಕೇರಿ ತಾಲೋಕಿನವರೇ ಭರ್ತಿ ಮಾಡಿ ಕೊಳ್ಳಬೇಕೆಂದು ತೀರ್ಮಾನವಾಯಿತು.

ಬೆಟ್ಟತ್ತುನಾಡು ಬಾಳೆಲೆ ಗ್ರಾಮದ ಒಂದು ಕೇರಿಯ ಕೆಲವರು ಸೇರಿ ಪ್ರತಿವರ್ಷದಂತೆ ಶಿವ ಜಯಂತಿ [illegible] ವಸೂಲಾತಿಮಾಡಿ ಒಂದು ಪಂಡನ್ನು ಏರ್ಪಡಿಸಿ, ಚಂದಾದಾರರು ಯಾರಾದರೂ ಪ್ರತಿವರ್ಷವೂ ಅವರ ಕಿನ ಸಂಸ್ಥೆ [illegible] ರಾರಿಗಳಿಗೆ ದ್ರವ್ಯ ಸಹಾಯ ಮಾಡುತ್ತಾರೆಂದೂ, ವರ್ಷದ ಆದಾಯದ ಸಮಯದಲ್ಲಿ ಸದ್ಯ ಬೇಕಾದೇಬೇಕಾದ [illegible] ನುವ ಬಗ್ಗೆ ತಕ್ಕ ಏರ್ಪಾಡುಗಳನ್ನು ಮಾಡಿಕೊಂಡಿರ ಬಹುದೆಂದೂ ತಿಳಿಯಬರುತ್ತದೆ.

ಸಿದ್ದಾಪುರ ಸ್ಟೇಶನ್ನಿನಲ್ಲಿ 2? 8-21 ರಲ್ಲಿ ಒಂದು ಹಿಂಡು ದನಗಳನ್ನು [illegible] ಮೋಟಾರು ಬಸ್ಸಿನ ಪೆಟ್ಟಕ್ಕೆ ಬಿದ್ದು [illegible] ದುಡುಕಿ [illegible] [illegible] ಎತ್ತು ಕಾಲು [illegible] [illegible] [illegible] [illegible] ಉಂಟುಮಾಡುವದು ಅತ್ಯವಶ್ಯವಾಗಿದೆ.

ರಾಣಿಪೇಟೆ ಹೋಬಳಿ ಮುಕ್ಕಾರಿ [illegible] ಗ್ರಾಮದವರು ಶ್ರೀ [illegible] [illegible] [illegible] ಮತ್ತು ಗ್ರಾಮಸ್ಥರನ್ನು ಬಹಿಷ್ಕರಿಸ [illegible] ನೆಂದು ಅರಿತುಕೊಂಡು ಈಗಿನಾಗಲೇ [illegible] ಮಾಡುತ್ತಾ ಬಂದಿರುತ್ತಾರೆ [illegible] ಸ್ಥಳದಲ್ಲಿಯೇ [illegible] ಪಂ ಚಾಯತನ್ನು [illegible] ಕಂಡು ಒಬ್ಬ ಸಾಹುಕಾರನು ವರದಿ ಮಾಡುತ್ತಾನೆ.

ಕಣಿವೆ ಹೋಬಳಿ [illegible] ಶಾಲೆಗೆ ಕುಂದುಗ್ರಾಮದ [illegible] ಯಿಸಲ್ಪಟ್ಟಿರುವ ಉಪಾಧ್ಯಾಯರು [illegible] ನಾಲ್ಕು ದಿನ ರಜಹಾಕಿ ಬರೆ ಹಳ್ಳಿ ಹೋಗಿರುವರೆಂದೂ, ರಜ ತೀರಿ [illegible] ಒಂದನೆ ಅಕ್ಕ [illegible] ದುರ್ಭಾಗ್ಯವೆಂದೂ. ತಂದೆ ತಾಯಿಗಳು [illegible] ದೂ ವಿದ್ಯಾ ಇಲಾಖೆಯವರು ಉತ್ತರವಾಗಿನ ಯಾರಾದರೂ ಪಂಚರು ಬೋಧಿಸುವ [illegible] ಒಳ್ಳೆ [illegible] ದೆಂದೂ ಒಬ್ಬ ಊರವರು [illegible] ಇಂಥಾ ಪ್ರಕಾರಗಳನ್ನು ತಕ್ಕ ಅಧಿಕಾರಿಗಳಿಗೆ [illegible] ಉತ್ತಮ.)

ಪತ್ತುಗಟ್ಟುನಾಡು ಬಾಳೆಲೆಗ್ರಾಮದಲ್ಲಿ, [illegible] ಹಳ್ಳಿ ಹೋಗುವ ಅಬಿಮಾನದಂತೆ ತನ್ನ [illegible] ಯ [illegible] ಪೋಷಿಸಲು ಒಬ್ಬ [illegible] ಸಿರುತ್ತಾನೆಂದೂ ಇದನ್ನು ತಾಯಿ ಮತ್ತು ಮಗಳ ಪುರಾವೆದಮೇಲೆ ಊರವರು [illegible] ಅವನನ್ನು ಪೋಷಿಸುತ್ತಾ ಇರುವದು. ನಿಜವೆಂದು ಹೇಳಿದ್ದರಿಂದ ಅವನು (ಮಗಳು) ಇಂಥಾ [illegible] ಪ್ರಾಣತ್ಯಾಗವನ್ನು ಮಾಡುವೆನೆಂದು [illegible] ಮದ ಪಟೇಲರು ಅವನಿಗೆ ಬುದ್ಧಿಹೇಳಿ ಇನ್ನು ಮುಂದೆ [illegible] ಕಂಟಕ ಹೋಗುವದಿಲ್ಲವೆಂದು. ಅವನಿಂದ ಮುಚ್ಚಳಿಕೆಯನ್ನು ತೆಗೆದುಕೊಂಡಿದ್ದಾರೆಂದು ಒಬ್ಬ [illegible] ತಿಳಿಸುತ್ತಾರೆ.

ಅಂಚನೀಯ ಮೋಟಾರ್ ಸರ್ವಿಸ್ [illegible] ಒಬ್ಬ [illegible] ಸ್ತ್ರೀಯಾಗಿದ್ದ ಕಾರಣ ಒಂದು ತಿಂಗಳ ಮೊದಲೇ [illegible] ಹೋಗಿ ಚಿಕಿತ್ಸೆ ಹೊಂದುತಿದ್ದು ನೌಕರಿಗೆ ವಾಪಸು ಬರುವಾಗ ದಾರಿಯಲ್ಲಿ ಮಡಿಕೇರಿ ಹತ್ತಿರ [illegible] ಮೋಟಾರನ್ನು ಎದುರು [illegible] ಗಾಬರಿಯಾದುದರಿಂದ ವಿನಃ ಗಲಾಟೆಯಾಗಿ [illegible] [illegible] ಯಲು ಆಟೋ [illegible] ಮನೆಯೊಳಗೆ ಸ್ವಸ್ಥವಾಗಿದ್ದು ಪುನಃ ಚೇತರಿಸಿ ಎದ್ದು ಈಗ ತಾನೇ ಮುಂದಿನಂತೆ ಓಡಾಡಲು ಸುರುಮಾಡಿರುತ್ತದೆ. ಮುಂದಕ್ಕೆ ಅಂಚನೇಯನೆಂದು ಹೆಸರು ಗೊಂಡಿರುವ ಈ ಬಸ್ಸು [illegible] ಪರಾಕ್ರಮಗಳಿಂದ ವಿನಾ ಅಪ್ರತಿಹತವಿಲ್ಲದೆ ನಡೆಯುವದೆಂದು ನಂಬಿದ್ದೇವೆ.

ಶ್ರೀಮಾನರು ಎಲ್ಲರ ಪ್ರೀತಿಗೂ ಪಾತ್ರರಾಗಿದ್ದ [illegible] ಧ್ಯಾಯರು, ಇವರ ಭಾಷಣವು ಯುವಕರ [illegible] ಯಕ್ಕೆ ತಕ್ಕದ್ದಾಗಿದ್ದಿತು. [illegible] ತಮ್ಮ ಪೂರ್ವಚರಿತ್ರ ಮಾಡಿದುದು [illegible] ದೆಂದೂ ಮತ್ತು ಅಂಥಾ ವಿಜ್ಞಾನಶಾಸ್ತ್ರಿಯಾದ ಸರ್ ಜಗದೀಶಚಂದ್ರಬೋಸ್ ರಂತಹ ಮಹನೀಯರೇ ಹಿರಿಯರ [illegible] ಒಪ್ಪಿ [illegible] ಗಳಿರುವದು ಇದಕ್ಕೆ ಉದಾಹರಣೆ [illegible] ಹೇಳಿದವರು ಕಳೆದ ಬಾತ್ಮಿ [illegible] ಸಿದಂತೆ [illegible] ಕೊಡಲಿಲ್ಲ. [illegible] ಸನದನು 1/19-20 ನೇ ಸಾಲಿನ [illegible] 1-3-6 ರೂಪಾಯಿಯಂತೆ ಪಂಚರು [illegible] ಒಳ್ಳ [illegible] ವರು [illegible]

[illegible] 16 ರಲ್ಲಿ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ [illegible] ಒಂದು ಮೀಟಿಂಗು ನಡೆದು. ಈಗ [illegible] ಕೌನ್ಸಿಲು ದೇಶದ [illegible] ಇನ್ನೂ ಕೆಲವು ಸುಧಾರಣೆಗಳನ್ನು [illegible] ಅಂಗೀಕರಿಸುವದಿಲ್ಲವೆಂದೂ [illegible] ಮಾಡಿದರು ಆಬಳೆ ಡಿ. ಬೆಳ್ಳಿಯಪ್ಪನವರು [illegible] ಮಂಜೂರು [illegible] ಅಭಿಪ್ರಾಯಕ್ಕೆ ವಿರೋಧವಾದುದರಿಂದ [illegible] ತಕ್ಕ ಅಧಿಕಾರಿಗಳಿಗೆ ಒಂದು ಮೆಮೋರಿಯಲ್ [illegible] ಕಳುಹಿಸಲು [illegible] ಕೊಡಂದೇರ [illegible] ಕೋದಂಡ ಅಪ್ಪಯ್ಯನವರು, ಮ|| [illegible] ಮ|| ಕೇಳಪಮಣಿ ಮಂತ್ರ ಸುಬ್ಬಯ್ಯನವರು [illegible] ಬೆಳ್ಳಿಯಪ್ಪನವರು ಮೆಂಬರುಗಳಾಗಿ ಒಂದು ಕಮಿಟಿಯನ್ನು ಏರ್ಪಡಿಸಿದರು.

[illegible] ತಿಳಿಸಿದ ಪ್ರಕಾರ ಮ|| ಪ್ರೀಯರ್ಲ [illegible] ಹೆಡ್‌ಮಾಸ್ಟರಾಗಿ [illegible] ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಇವರು [illegible] ದ ಮೊದಲಿನ ಕಟ್ಟಳೆಗಳನ್ನು [illegible] ಕಟ್ಟಳೆಗಳು [illegible] ಮಾಡುತ್ತವೆ. ಆದರೆ [illegible] ಮತ್ತು ಬ್ಯಾಗಿದೆ [illegible] ವರೆಗೆ ಇಲ್ಲಿ ಕೆಲವರು [illegible] ನಿಜ್ಜನ ತಿಳುವಳಿಕೆ [illegible] ವಿದ್ಯಾರ್ಥಿಗಳಿಗೆ ಸಾಠಸೇಳಿ ಅಷ್ಟದಲ್ಲಿ [illegible] ಹೊಂದುತ್ತಿದ್ದರು. [illegible] ಅಂದರೆ ಈ ವರುಷ [illegible] ದಯಪಾಲಿಸಿದ್ದಾರೆ. [illegible] ಒಟ್ಟಿನ ಪರಿಮಾಣದಲ್ಲಿ [illegible] ನಿಯಮಗಳನ್ನು ಅನುಸರಿಸಿ ನಡೆ [illegible] ವಿದ್ಯಾಭ್ಯಾಸದ ಗತಿಯು ವಿನಾ [illegible] ವುದಿಲ್ಲ.

[illegible] — "The [illegible] of the new Headmaster"
— Written Experienced Teachers
ಎಂದು ಒಬ್ಬ ಬಡವಿದ್ಯಾರ್ಥಿಯ ಅಭಿಪ್ರಾಯ.

ಹೊರದೇಶ.

[illegible] ಸ್ಟೇಟಿನ ಅಧ್ಯಕ್ಷರಾಗಿರುವ ಮ|| [illegible] ರವರು ಸರ್ಕಲ್ [illegible] ವನ್ನು ಆಗಸ್ಟು [illegible] ಡೊಂಗಾಲ ಹಡಗಿನಲ್ಲಿ ಇಂಡಿಯಾಕ್ಕೆ [illegible] ತಿಳಿದುಬಂದಿದೆ.

[illegible] ವ್ಯಾಪಾರಿಗಳೆಲ್ಲರೂ ಸ್ವದೇಶದ ಬಟ್ಟೆ [illegible] ವಾಗಿಯೂ, ಮಗ್ಗದವರೆ [illegible] ಬಟ್ಟೆಗಳನ್ನು ತಯಾರುಮಾಡು [illegible] ಪ್ರಮಾಣ ಮಾಡಿರುತ್ತಾರೆ.

[illegible] ಕಾಲಿಮಾರವರು ಕುರಿಗಾರಿ [illegible] ಜಂತುಗಳ ಚರ್ಮದ ಕು [illegible] ಘಂಟಿಗ ಕೂಡಬೇಕೆಂದು ಮುಸ [illegible] ಸೆಂಟ್ರಲ್ [illegible] ಈ ಅರ್ಜಿಗೆ ಒಪ್ಪಿರುತ್ತಾರೆ.

ಮೈಸೂರು ವಿದ್ಯಾ ಇಲಾಖೆಯು ಪ್ರತ್ಯಕ್ಷ ಸುಗುಣವಾಗಿ [illegible] ಎರಡು ಪಂಚ [illegible] ದ್ದಾರೆ. ಅಲ್ಲಿಯ ಜನರು [illegible] ರೀತಿಯಿಂದ ಎಂಟುಸಾವಿರ [illegible] ವಸೂಲಿ ಮಾಡಿ ಒಂದು ಹೊಸ ಶಾಲೆಯನ್ನು ಸ್ಥಾಪಿಸಿರುವರು.

[illegible] ಜಿಲ್ಲೆ ಕಾನ್‌ಫರೆನ್ಸಿನ ಅಧ್ಯಕ್ಷಸ್ಥಾನವನ್ನು ವಹಿಸಿದ್ದಾಗ ಶ್ರೀಮತಿ ಸರೋಜಿನಿ ದೇವಿ [illegible] ಸ್ವದೇಶಿ ಖಾದಿ ಬಟ್ಟೆ [illegible] ದೊರೆಯದ ಹೋದರೆ, ನಮ್ಮ [illegible] ಮಾಡಿದ [illegible] ಬಟ್ಟೆಯನ್ನು ಹಾಕಿಕೊಳ್ಳುವದ [illegible] ಧರಿಸಿಕೊಳ್ಳುವದು ಒಳ್ಳೇಯದೆಂದು ಸೂಚಿಸುವೆನು.'

[illegible] ಪೂನಾ ಪಟ್ಟಣದಲ್ಲಿ ಇಟ್ಟಿರುವ ತಂತಿ ಇಲ್ಲದೆ ಮಾತಾಡುವ ಯಂತ್ರದ ಪರೀಕ್ಷೆಯ ಫಲಿತಾಂಶವು [illegible] ದರ ಮಾತಾಡುವದರಲ್ಲಿ ಗುಟ್ಟು ನಿಲ್ಲು [illegible] ಯಂತ್ರದ ಹತ್ತಿರ ಇರುವ ಪ್ರತಿಯೊಬ್ಬ [illegible] ಕೇಳುತ್ತದೆ. ಹಾಗೆಯೇ ಸಮುದ್ರದಲ್ಲಿ 141 ಮೈಲು ದೂರದಲ್ಲಿದ್ದ ಹಡಗಿನ ಒಬ್ಬನು ಯಂತ್ರದ ಮೂಲಕ [illegible] ಪೂನದವರ [illegible] ಅವರ ಯಂತ್ರದಲ್ಲಿ ಮಾತಾಡುವದನ್ನು ಕೇಳಿದನಂತೆ.

ಎಲ್ಲೂರಿನಲ್ಲಿ 13—8—21 ರಲ್ಲು ತಾಲ್ಲೋಕು ಕಚೇರಿಯಲ್ಲಿ ಸೇರಿದ ಅಂಗಡಿ ಹರಾಜು ಆದಾಗ ಪಟ್ಟದ ಜನರೆಲ್ಲಾ ಬಹಿಷ್ಕಾರವನ್ನು ಅವಲಂಬಿಸಿದ್ದರು. ಸುಮಾರು ಹದಿನೈದುಸಾವಿರ ಜನರು ಸೇರಿದ್ದರು. ಪ್ರತಿಯೊಬ್ಬ ದರಖಾಸ್ತುದಾರನಿಗೆ 20 ರಿಂದ 30 ರ ವರೆಗೆ ಅಸಹಕಾರಿಗಳು ಅವರಿಗೆ ಬೋಧನೆ ಕೊಡುತ್ತಿದ್ದರು ರಾಷ್ಟ್ರೀಯ ಸಂಘದವರು ಬಾದ ಬಟ್ಟೆಯಿಂದ ಅಲಂಕೃತರಾಗಿ ಗಲಾಟೆ ಉಂಟಾಗದ ಹಾಗೆ ಎಚ್ಚರ ತೆಗೆದುಕೊಳ್ಳುತ್ತಿದ್ದರು. ಮೇಲ್ಕಂಡ ಪ್ರಯತ್ನದಿಂದ ದರಖಾಸ್ತುದಾರರು ಯಾರೂ ಅಂಗಡಿಗಳನ್ನು ಕೂಗಿ ಪಡಕೊಳ್ಳಲಿಲ್ಲ.

ಮಹಾತ್ಮ ಗಾಂಧಿಯವರಿಗೆ ಒಬ್ಬ ಇಂಗ್ಲೀಷರವನು ಹಾಕಿದ ಕೆಲವು ಪ್ರಶ್ನೆಗಳು ಮತ್ತು ಅವರ ಉತ್ತರಗಳು

1. ಪ್ರಶ್ನೆ—ನಿಮಗೂ ಮತ್ತು ವೈಸರಾಯರಾದ ರೀಡಿಂಗ ರವರಿಗೂ ಇರುವ ಅಭಿಪ್ರಾಯದ ಭೇದಗಳು ಕ್ರಮೇಣ ಹೆಚ್ಚಾಗುವುವೊ ಕಡಿಮೆಯಾಗುವುವೊ?

ಉತ್ತರ—ಭೇದಗಳು ಕಡಿಮೆಯಾಗಲು ಇದ್ದ ಹಾಗೆ ಹೆಚ್ಚಾಗಲು ಸಂಭವವಿದೆ

2 ಪ್ರ ಸ್ವರಾಜ್ಯವನ್ನು ಸ್ಥಾಪನೆಮಾಡಲು ಯಾವ ಸಮಯವನ್ನು ಎದುರು ನೋಡುತ್ತಿದ್ದೀರಿ?

ಉ— ಅತಿ ಶೀಘ್ರವಾಗಿ ನನ್ನ ಮೇಲಿನ ಸ್ವರಾಜ್ಯವನ್ನು ಸ್ಥಾಪಿಸಲು ನಾನು ಅದಷ್ಟು ಪ್ರಯತ್ನಿಸುತ್ತಾ ಇದ್ದೇನೆ. ಹಿಂದೂಸ್ಥಾನಕ್ಕೆ ಸ್ವರಾಜ್ಯ ಸ್ಥಾಪನೆ ಮಾಡಲು ನನ್ನಿಂದ ಆಗಲಾರದು. ಆದರೆ ಈ ವರ್ಷವೇ ಭಾರತ ಮಾತೆಯು ತನ್ನ ಸ್ವರಾಜ್ಯವನ್ನು ಸ್ಥಾಪಿಸುವಳೆಂದು ನಾನು ಧೃಢವಾಗಿ ಹೇಳುತ್ತೇನೆ.

3. ಪ್ರ—ಮುಖ್ಯ ಮಂತ್ರಿಯವರು ಹೆಚ್ಚು ಸ್ನೇಹಾನಿಯಾಗುತ್ತಿದ್ದಾರೊ, ಅಥವಾ ಎಂದಿಗಿಂತಲೂ ಕೆಟ್ಟವರಾಗುತ್ತಿದ್ದಾರೊ?

ಉ—ಮುಖ್ಯಮಂತ್ರಿಯು ನನಗೆ ಒಂದು ಒಗಟಿನ ಹಾಗೆ ಕಾಣುತ್ತದೆ. ಅವರು ಇನ್ನೂ ಹಿಂದೂದೇಶದ ಮುಸಲ್ಮಾನರಿಗೆ ಕೊಡತಕ್ಕ ಋಣವನ್ನು ತೀರಿಸಿರುವುದಿಲ್ಲ.

4. ಪ್ರ—ತಿದ್ದುಪಾಟಿನ ಕೌನ್ಸಿಲುಗಳ ಮೂಲಕ ಸ್ವರಾಜ್ಯ ಪಡೆಯಲು ಪ್ರಯತ್ನಿಸುವಂಥ ನಿಮ್ಮ ದೇಶಸ್ಥರಾದ ಹೊಸ ಮಂತ್ರಿಗಳಿಗೆ ನೀವೇಕೆ ಉತ್ತೇಜನ ಕೊಡುವುದಿಲ್ಲ?

ಉ—ಹಿಂದೂದೇಶವನ್ನು ಹೀನಸ್ಥಿತಿಗೆ ತರಲು ಅವರನ್ನು ಕೊಡಲಿ ಕಾವಿನಂತೆ ಉಪಯೋಗಿಸುವ ಸರಕಾರದವರ ಮಿತ್ರತ್ವವನ್ನು ಬಿಟ್ಟಹೊರತು ಮಂತ್ರಿಗಳಿಗೆ ನಾನು ಉತ್ತೇಜನ ಕೊಡುವದಿಲ್ಲ.

5. ಪ್ರ—ಈ ಭೂಲೋಕದಲ್ಲಿ ಜೀವಿಸಲಿಕ್ಕೆ ವಿನೋದದ ಅಗತ್ಯ ಇದೆಯೆಂದು ನೀವು ಯೋಚಿಸುತ್ತೀರೋ?

ಉ—ನನ್ನಲ್ಲಿ ವಿನೋದಭಾವ ಇಲ್ಲದೆ ಹೋಗಿದ್ದರೆ ನಾನು ಮೊದಲೆ ಆತ್ಮಹತ್ಯ ಮಾಡಿಕೊಳ್ಳಬೇಕಾಗಿದ್ದಿತು

ವಿದೇಶ.

ಪ್ಯಾರಿಸ್ ಪಟ್ಟದ ಬೀದಿಗಳಲ್ಲಿ ದಿನ ಒಂದಕೆ ಸರಾಸರಿ 165 ಅಪಾಯಗಳುಂಟಾಗುತ್ತವೆ

ಜಾರ್ಜ್ ಹೆನ್ರಿಮುರ್ರೆಯವರು ಈಗ ಇಪ್ಪತ್ತೈದು ವರ್ಷಗಳಿಂದ ಎಡೆಬಿಡದೆ ನಾವಸ್ಕಾಟಿಯ ದೇಶದ ಮಂತ್ರಿಯಾಗಿರುತ್ತಾರೆ.

ಕಳೆದ ವರ್ಷ ಅಮೇರಿಕದ ಯುನೈಟೆಡ್ ಸ್ಟೇಟ್ಸಿನಿಂದ 1,711 ಹೊಗೆಬಂಡಿಗಳಿಗಿಂತ ಹೆಚ್ಚಾಗಿ ರಫ್ತು ಮಾಡಲ್ಪಟ್ಟವು. ಅವುಗಳ ಪೈಕಿ 721 ಬೆಲ್ಜಿಯಮ್, ಪೋಲೆಂಡ್, ಫ್ರಾನ್ಸ್ ಮತ್ತು ಇಟಲಿಗೆ ಮಾರಲ್ಪಟ್ಟವು.

ಪ್ಯಾರಿಸ್ ಪಟ್ಟದ ಮುನಿಸಿಪಾಲಿಟಿಗೆ ಬೇಕಾಗಿರುವ 4,000,000 ಫ್ರಾನುಗಳನ್ನು ಪಡೆಯಲು ಯಾವ ವಿಧವೂ ತೋರದ್ದರಿಂದ ಪಿಯಾನೊಗಳ ಮೇಲೆ ಸುಂಕ ಹಾಕಿ ಸುಮಾರು 90,000 ಫ್ರಾನುಗಳನ್ನು ವಸೂಲಿ ಮಾಡಬಹುದೆಂದು ನಿಶ್ಚೈಸಿರುತ್ತಾರೆ.

ನಮ್ಮ ಚಕ್ರವರ್ತಿಯವರು ಸ್ವೀಡನ್ ಎಂಬ ಪಟ್ಟಣಕ್ಕೆ ಹೋಗಿದಲ್ಲಿ ಒಂದು ವರ್ಷಕ್ಕೆ ಒಂದು ಟನ್ ಬೆಣ್ಣೆಯಾಗುವಷ್ಟು ಹಾಲುಕೊಡುವ ಅಪರೂಪವಾದ ಒಂದು ಆಕಳನ್ನು ಪರಾಮರ್ಶಿಸಿದರು. ತಿಂಗಳಿಗೆ ಎಂಟುಮಣ ಬೆಣ್ಣೆ ಆಗುವಷ್ಟು ಹಾಲುಕೊಡುವಂಥ ಆಕಳು ಬಹಳ ವಿಶೇಷವಾದದ್ದಲ್ಲವೆ.

ಅಮೇರಿಕದ ಮುಖ್ಯ ಸ್ಕೌಟ್ ಮೂಸ್ತರಾಗಿರುವ ಬೆಗ್‌ಹಾಕ್ ಎಂಬ ಕೆಂಪು ಇಂಡಿಯನರ ಸೈನಿಕ ಪಂಗಡದ ಮುಖ್ಯಸ್ತನು ಫ್ರಾನ್ಸ್ ದೇಶದ ಸ್ಕೌಟ್ ಹುಡುಗರಿಗೆ ಕಾಡಿನ ಮತ್ತು ಮೈದಾನಿನ ಜೀವನದ ತಿಳುವಳಿಕೆಯನ್ನು ಕಲಿಸಲು ಫ್ರಾನ್ಸಿಗೆ ಹೋಗಿರುವನು. ಕಾಂಪೇನ್ ಮತ್ತು ವಿಲ್ಲರ್ಸ್ ಕಾಟ್ರೆಟ್ಸ್ ಎಂಬ ಕಾಡುಗಳಲ್ಲಿ ಇವನು ಹುಡುಗರಿಗೆ ಕಲಿಸುವನು.

ನ್ಯೂಯಾರ್ಕಿನಲ್ಲಿ ಓರ್ವ ದಂಪತಿಗಳು ಒಟ್ಟಿಗೇನೇ ಜೀವಿಸುತ್ತಿದ್ದರೂ ಕೂಡ ತಮ್ಮಿಬ್ಬರ ಒಪ್ಪಂದ ಮೇರೆ ಒಂಭತ್ತು ವರ್ಷಗಳವರೆಗೆ ಒಬ್ಬರೊಂದಿಗೊಬ್ಬರು ಮಾತಾಡಲೇ ಇಲ್ಲವಂತೆ. ಪುನಹ ಅವರು ಒಂಭತ್ತು ವರ್ಷಗಳವರೆಗೆ ಮಾತಾಡದೇನೇ ಒಟ್ಟಿಗೆ ಜೀವಿಸಲು ಒಪ್ಪಂದ ಮಾಡಿಕೊಂಡಿರುತ್ತಾರೆ. ಅವರಿಬ್ಬರಿಗೆ ಯಾವ ವಿಷಯದಲ್ಲೂ ಹೊಂದಿಕೆಯಿಲ್ಲದೆ ಇರುವದೇ ಅವರ ಇಂಥಾ ಒಪ್ಪಂದಕ್ಕೆ ಕಾರಣವು.

ಕಾಸ್ಕೋ ಪ್ರಾಂತದ ಫಾರೆಸ್ಟಿನ ಇಲಾಖೆಯವರು ಫಾರೆಸ್ಟಿನಲ್ಲಿ ಇಲಿಗಳನ್ನು ನಾಶಮಾಡಲಿಕ್ಕೆ ಒಂದು ಬೆಕ್ಕನ್ನು ಸಾಕಲಿಕ್ಕೆ ತಿಂಗಳು ಒಂದರ 15,000 ರಬ್ಬಲ್ಗಳನ್ನು ಖರ್ಚಿನ ಪಟ್ಟಿಯಲ್ಲಿ ತೋರಿಸಿದ್ದಾರೆಂಬುದನ್ನು ಬೊಲ್ಷವಿಸ್ಟ್ ಸೆಂಟ್ರಲ್ ಎಕ್ಸಿಕ್ಯೂಟಿವ್ ಕಮಿಟಿಯ ಮೆಂಬರೊಬ್ಬರು ಕಂಡು ಹಿಡಿದಿರುತ್ತಾರೆಂದು ಮಾಸ್ಕೋ ಪಟ್ಟದ "ಪ್ರವಾದ" ಪತ್ರಿಕೆಯು ಹೇಳುತ್ತದೆ. ಸೆಂಟ್ರಲ್ ಕಮಿಟಿಗೆ ಈ ಸಂಗತಿಯನ್ನು ತಿಳಿಸಿದವನಿಗೆ 1,500 ರಬ್ಬಲ್ಗಳನ್ನು ಅಂದರೆ ಬೆಕ್ಕಿನ ಒಂದು ತಿಂಗಳ ಖರ್ಚಿಗಿಂತಲೂ ಕಡಿಮೆಯಾಗಿ, ಕೊಟ್ಟರು.

ಈಗ ಪ್ರಪಂಚದಮೇಲಿರುವ ದೇಶಗಳಲ್ಲೆಲ್ಲಾ ಹುಡುಗರು ಉಪಾಧ್ಯಾಯರಿರುವ ಸ್ಥಳಕ್ಕೆ ಹೋಗಿ ಪಾಠ ಹೇಳಿಸಿಕೊಳುವ ವಾಡಿಕೆಯಾಗಿದೆ ಇದು ಸರಿಯಾದ ಪದ್ಧತಿಯಲ್ಲವೆಂದೂ ಇನ್ನೊಂದು ನೂತನವಾದ ಪದ್ಧತಿಯನ್ನು ಕಂಡು ಹಿಡಿಯಬೇಕೆಂದೂ ಹಲ್ವ ದೇಶದವರು ನಿಶ್ಚೈಸಿಕೊಂಡಿರುತ್ತಾರೆ ಉಪಾಧ್ಯಾಯರೇ ಪ್ರತಿದಿನವೂ ವಿದ್ಯಾರ್ಥಿಗಳ ಮನೆಗೆ ಹೋಗಿ ಅವರಿಗೆ ಬೇಕಾದ ಪಾಠಗಳನ್ನು ಹೇಳಿಕೊಡುವರಂತೆ ಇದಕ್ಕೋಸ್ಕರವಾಗಿ ಅಲ್ಲಿಯವರು ನಿಶಾನ್ ಅಮೇರಿಕನ್ ವಿದ್ಯಾಪೀಠವೆಂಬ ಒಂದು ವಿಶ್ವ ವಿದ್ಯಾಲಯವನ್ನು ಸ್ಥಾಪಿಸಲು ನಿರ್ಣಯಿಸಿರುತ್ತಾರೆ. ಕೃಷಿ ವಿದ್ಯೆ ಕಲಿಸಲು ಕಿತ್ತಳೆ ಹಣ್ಣಿನ ಮತ್ತು ಸಕ್ಕರೆಮಾಡುವ ತೋಟಗಳನ್ನು ಉಪಯೋಗಿಸುತ್ತಿದ್ದಾರೆ

ನ್ಯಾಯ ವಿಧಾಯಕ ಸಭೆಯ ವಿಷಯ ಮೀಟಿಂಗು.

ನಾನು ಮಡಿಕೇರಿಯಲ್ಲಿ ಕಮಿಷನರ್ ಸಾಹೇಬರವರು ಕೆಲವು ಮುಖ್ಯಸ್ಥರನ್ನು ಕರೆದು ಮುಂದಕ್ಕೆ ನಮಗೆ ಕೊಡತಕ್ಕ ನ್ಯಾಯ ವಿಧಾಯಕ ಸಭೆಯ ವಿಷಯ ಚರ್ಚಿಸಿದ ಮೀಟಿಂಗಿನ ವಿಷಯ ಬರೆಯಲಪೇಕ್ಷಿಸುತ್ತೇನೆ ಇದರೆ ನಾನು ಬರೆಯುವುದು ಸದರಿ ಮೀಟಿಂಗಿಗೆ ಹೋಗಿದ್ದವರ ಅಥವಾ ಮಡಿಕೇರಿಯಲ್ಲಿರುವ ಜನಗಳ ಪ್ರಯೋಜನಕ್ಕ ಆಗಿಯುವುದಲ್ಲ. ಇದರೆ ಅನೇಕ ತಿಂಗಳುಗಳಿಂದ ಕೌನ್ಸಿಲ್ ನಮಗೆ ನಮ್ಮ ಉದಾರ ಭಾವದ ಸರಕಾರವು ಕೊಡುತ್ತಾರೆಂದು ಕಾದುಕೊಂಡಿದ್ದ ಜನರು ಈ ಮೀಟಿಂಗಿನಲ್ಲಿ ಏನು ನಡೆಯಿತು, ನಮ್ಮ ಮುಖ್ಯಸ್ಥರು ಏನೇನು ಹೇಳಿದರು ಯಾವ ಅಭಿಪ್ರಾಯಕೊಟ್ಟರು ಎಂದು ಅನೇಕ ವಿಧದಲ್ಲಿ ಕುತೂಹಲವುಳ್ಳವರಾಗಿರಬಹುದು. ಇವರ ತಿಳುವಳಿಕೆಗೆ ನಾನು ಬರೆಯೋಣವಾಗಿದೆ ನಾನೂ ಸದರಿ ಸಭೆಗೆ ಕರೆಯಕಳುಹಿಸಿದ ಜನರಲ್ಲಿ ಒಬ್ಬನಾಗಿದ್ದೆನು

ಸಾಧಾರಣ ಇಪ್ಪತ್ತೆರಡು ಜನರನ್ನು ಕರೆಯಕಳುಹಿಸಿದ್ದರು. ಅಲ್ಲದೆ ಸುಬೇದಾರರು ಮತ್ತು ಪಾರುಪತ್ಯಗಾರರು ಸಭೆಯ ವಿಷಯದ ಮೆಮೊರಾಂಡವನ್ನು ಜನರ ತಿಳುವಳಿಕೆಗೆ ಪ್ರಕಟಿಸಿದ ಮೇರೆ ಮ|| ರಾಯಬಹದ್ದೂರ್ ಅಪ್ಪಾರಂಡ ಮಂದಣ್ಣನವರು, ಕೊಡಂದೇರ ತಿಮ್ಮಯ್ಯನವರು, ಚೆಪ್ಪುಡಿರ ಸುಬ್ಬೈಯ್ಯನವರು ಮತ್ತು ಬಿದ್ದಂಡ್ರ ಸುಬ್ಬೈಯ್ಯನವರು, ಮೊದಲಾದವರು ಮೀಟಿಂಗಿಗೆ ದಯಮಾಡಿಸಿದ್ದರು ಈ ಮಹಾನುಭಾವರು ಕುತೂಹಲದಿಂದ ಒಂದಿಷ್ಟರೂ ಕಮಿಷನರವರು ಇವರು ಹಿಂದಕ್ಕೆ ಹೋಗಬಹುದೆಂದು ಮರ್ಯಾದೆಯಿಂದ ತಿಳಿಸಿದರು ಅದೇಮೇರೆ ಮಂದಣ್ಣನವರಿಲ್ಲದೆ ಇತರ ಮೂವರು ಒಂದ ಬಾಗಿಲಿನಿಂದ ಹೊರಗೆ ಹೋದರು. ಆದರೆ ಮಂದಣ್ಣನವರು ಮಾತ್ರ ಕಮಿಷನರವರ ಅನುಮತಿ ಮೇರೆ ಪೀಠವನ್ನು ಅಲಂಕರಿಸಿದ್ದರು

ಕಮಿಷನರವರು ಮೀಟಿಂಗಿನ ಉದ್ದೇಶ್ಯವನ್ನು ವಿವರಿಸಿದಾಗ ಇದು ಪ್ರೈವೇಟ್ (ಗುಪ್ತವಾದ) ಮೀಟಿಂಗಾದುದರಿಂದ ಠರಾವು ಕಟಬೇಕಾದ ಅವಶ್ಯವಿಲ್ಲವೆಂದು ಹೇಳಿದ ವೇಳೆ ಮೆ|| ಕೊಡಂದೇರ ಕುಟ್ಟಯ್ಯನವರು, ಜಮಾನ್‌ದಾರರ ಮೆಂಬರುಗಳ ಪರವಾಗಿ ಒಂದು ದಿನಕ್ಕೆ ಮುಂದೆ ನಡೆದ ಮೀಟಿಂಗಿನಲ್ಲಿ ಠರಾವು ಆದರೀತಿ ತಮಗೆ ಕೊಡಬೇಕಂದು ಇರುವ ನ್ಯಾಯವಿಧಾಯಕ ಸಭೆಯು ನಮ್ಮ ದೇಶದವರ ಯೋಗ್ಯತೆಗೆ ತಕ್ಕದ್ದಾಗಿರುವುದಿಲ್ಲ. ನಮಗೆ ಖಾನಾನು ಖಾಯಿದೆ ಮಾಡಲು ಕೆಲವು ವಿಷಯಗಳಲ್ಲಿ ಹಕ್ಕು ಇದ್ದರೂ ಈ ಖಾನೂನುಗಳು ರೂಢಿಗೆ ತರುವ ಹಕ್ಕೂ ಶಕ್ತಿಯೂ ಇಲ್ಲವೆಂದು ಹೇಳಿದರು. ಮೆ|| ಕೋದಂಡ್ರ ಅಪ್ಪೈಯ್ಯನವರು ಕುಟ್ಟಯ್ಯನವರಿಗೆ ಒತ್ತಾಸೆಕೊಟ್ಟರು ಅಲ್ಲದೆ ಕುಟ್ಟಯ್ಯನವರು ದೇಶದವರೂ, ಮತ್ತು ನಮ್ಮ ಯೌವನಸ್ಥರೂ ಯೋಚಿಸಿ ಹೇಳುವ ಮಾತನ್ನೇ ಹೇಳುತ್ತೇನೆಂದೂ ಈ ಕಾಲದಲ್ಲಿ ಯುವಕರೂ ಎಂದೂ ಸಂತುಷ್ಟರಾಗುವವರಲ್ಲ ಅವರು ಮುಂದೆ ಮುಂದಕ್ಕೆ ಹೋಗುವ ಇಷ್ಟವುಳ್ಳವರು ಅವರನ್ನು ಎಷ್ಟೇ ತಡೆದರು ಹಿಂದಕ್ಕೆ ನಿಲ್ಲುವವರಲ್ಲ ಹೀಗಿರುವುದರಿಂದ ನಾವು ಈ ಕೌನ್ಸಿಲನ್ನು ಸ್ವೀಕರಿಸಿದ ಪಕ್ಷ ನಮ್ಮನ್ನು ಹಿಂದಕ್ಕೆ ತಳ್ಳುವರು ಎಂದು ಮೊದಲಾಗಿ ಪದೇಪದೇ ಹೇಳಿದರು ಹೀಗೆ ಯೌವನಸ್ಥರಿಗೆ ದೊಡ್ಡ ಬಹುಮಾನವನ್ನು ಕೊಟ್ಟರು ಶ್ರೀಪತಿರಾಯರೂ ಸಹ ದೇಶದವರ ಠರಾವಿಗನುಸಾರವಾಗಿ ಮಾತಾಡಿದಲ್ಲದೆ ನಮಗೆ ಕೊಡತಕ್ಕ ಕೌನ್ಸಿಲ್ ಮಿಂಟೋ ಮೋರ್ಲೆ ಮತ್ತು ಮೋಂಟ್‌ಫೋರ್ಡ್ ಇವೆರಡು ಸ್ಕೀಮುಗಳ ಕೆಲವು ಏರ್ಪಾಡುಗಳನ್ನು ಅನುಸರಿಸಿರುವುದರಿಂದ ನಾವು ಕೇಳಿದ ಪಕ್ಷ ಸರಕಾರದವರು ನಮ್ಮ ಸ್ಥಳೀಕ ಅನುಕೂಲಾನುಕೂಲಗಳಿಗೆ ಸರಿಯಾಗಿ ನಮಗೆ ಬೇಕಾಗಿರುವಂತಹ ಏರ್ಪಾಡುಗಳ ಕೊಡಬಹುದು ಎಂದೂ ಹೇಳಿದರು ಇದಕ್ಕೆ ಅಪ್ಪೈಯ್ಯನವರೂ ಒಪ್ಪಿದರು.

ಹೀಗಿರುವಾಗ ಸಬ್ ಜಡ್ಜಿಯರಾದ ಮೆ|| ಎ. ಕಾರ್ಯಪ್ಪನವರು ಹೇಳಿದ್ದೇನಂದರೆ, ನಿಮಗೆ ಅನುಭವನೂ ಇಲ್ಲ ಸರಕಾರದವರು ಕೊಡುವುದಷ್ಟನ್ನು ಸ್ವೀಕರಿ[illegible] ಹೆಚ್ಚು ಕೊಡುವಂತೆ ಕೇಳಿ ನೀವು ಕೇಳಿದ್ದಷ್ಟನ್ನೂ [illegible] ಕೊಟ್ಟಿರುವದಕ್ಕೆ ಒಂದಿಷ್ಟಾದರೂ ವಿಾರಿಯೂ ಎಂ[illegible] ಕೊಡುವುದಿಲ್ಲ. ಅಲ್ಲದೆ ಈ ಕೌನ್ಸಿಲನ್ನು ಸ್ವೀಕರಿಸಿ "[illegible]ಪೀರಿಯಲ್ ಕೌನ್ಸಿಲಿಗೆ" ನಮ್ಮ ಕೌನ್ಸಿಲಿನಿಂದ ಒಬ್ಬ[illegible]ಬರನ್ನು ಚುನಾಯಿಸುವ ಹಕ್ಕನ್ನು ಕೇಳಿಕೊಳ್ಳಿ. ಹೀ[illegible]ದರೆ ನಮಗೆ ಬೇಕಾದದ್ದು ಸಿಕ್ಕಿದಂತಾಯಿತು. ಎ[illegible] ಹೇಳಿದರು.

ಇವರಿಗೆ ಉತ್ತರವಾಗಿ ಮೆ|| ಕುಟ್ಟಯ್ಯನವರು [illegible] ಏರ್ಪಾಡು ಮಾಡಿರುವ ಕೌನ್ಸಿಲ್ ನಮಗೆ ಎಂದೂ [illegible]ಯುಕ್ತವಾಗುವುದಿಲ್ಲ ನಾವು ಬೇಕಾದರೆ ಕೆಲವು [illegible] ಕಾದುಕೊಂಡು ಇರುವೆವು. ನಮ್ಮ ಯೌವನಸ್ಥರು [illegible]ನ್ನು ಹಿಂದಕ್ಕೆ ತಳ್ಳುವರು ಎಂದು ಮೊದಲಾಗಿ ಹೇಳಲು [illegible]ಷನರವರು ಮೀಟಿಂಗಿನಲ್ಲಿದ್ದ ಮೂರುಜನ ಯೌವನಸ್ಥ[illegible] ನೋಡಿ, ನೀವು ಏನುಹೇಳುತ್ತೀರಿ ಎನ್ನಲು ಮೆ|| ಪಾರು[illegible]ಗಳ ಕುಶಾಲಪ್ಪನವರು ನಮಗೆ ಕೊಡಬೇಕೆಂದು ಏರ್ಪಾ[illegible] ಮಾಡಿರುವ ಕೌನ್ಸಿಲ್ ಎಂದೂ ನಮಗೆ ತಕ್ಕದ್ದಾಗಿರ[illegible]ದಿಲ್ಲ ಅದು ನಮಗೆ ಅತೃಪ್ತಿಕರವಾದದ್ದು, ಮನಸಂ[illegible]ಉಂಟುಮಾಡತಕ್ಕದ್ದು ಮತ್ತು ನಮ್ಮ ಯೋಗ್ಯತೆಗೆ [illegible]ಯಾದದ್ದಲ್ಲ. ನಾವು ಹೇಳಿರುವ ತಿದ್ದುಪಾಟು ಮಾ[illegible] ಹೊರತು ನಮಗೆ ಎಂದೂ ಅವಶ್ಯವಿಲ್ಲ. ಎಂದು ಹೇಳಿದ[illegible] ಅಷ್ಟರಲ್ಲಿ ಮುನ್ಸೀಫರಾದ ಮೆ|| ಕೂರವಂಡ ಮುತ್ತಣ್[illegible]ನರು ಅವರು ಹೇಳಿದ್ದು ಸರಿಯಲ್ಲವೆಂದು ಹೇಳಿದರು.

ಇಷ್ಟರಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್‌ಯೂ ವಕೀಲರ[illegible] ಗಳಾಗಿಯೂ ಎಂದೆಣಿಸುವ ಮೆ|| ಕೃಷ್ಣರಾಯರು [illegible] ಕಮಿಷನರವರೂ ಮೆ|| ಕಾರ್ಯಪ್ಪನವರೂ ಹೇಳಿದ [illegible] ಕೌನ್ಸಿಲನ್ನು ತಗೆದುಕೊಳ್ಳುವುದು ಉತ್ತಮ ಇದನ್ನು ಪ[illegible]ದಿಕೊಂಡು ಪ್ರವೀಣತೆಯನ್ನು ಹೊಂದಿ ಕೊನೆಗೆ ಒಳ್ಳೆ[illegible]ದಕ್ಕೆ ಕೇಳೋಣ ಎಂದು ಹೇಳಿದರು

ಇದನ್ನು ಕೇಳಿದೊಡನೆಯೇ ಮೆ|| ಕೋಟೆರ ಚಿಣ್ಣ[illegible]ನವರು ಎದ್ದು ನಾನು ಮೆ|| ಕೃಷ್ಣರಾಯರ ಅಭಿಪ್ರಾಯ[illegible] ವಿರೋಧಮಾಡುತ್ತೇನೆಂದು ಹೇಳಿದರು. ಆಗ ಮೆ|| ಮ[illegible]ಣ್ಣನವರು "ಕೆಲವು ಮಟ್ಟಿಗೆ ಬುದ್ಧಿವಂತಿಕೆಯುಳ್ಳ[illegible] ನೀವು" ಎಂದು ಕೃಷ್ಣರಾಯರಿಗೆ ಒಂದು ಸರ್ಟಿಫಿಕೇ[illegible] ಕೊಟ್ಟು ತಮ್ಮ ಬುದ್ಧಿವಂತಿಕೆಯನ್ನು ಸೂಚಿಸಿದರು [illegible]ನ್ನು ಕೇಳಿ ಮೆ|| ಪೊನ್ನಪ್ಪನವರು ನ್ಯಾಯ ಎಂದು ಹಾ[illegible]ಡಿದರು ಹೀಗಿರುವಾಗ ಮೆ|| ಶ್ರೀಪತಿರಾಯರು, ನಾ[illegible] ಕೌನ್ಸಿಲ್ ಬೇಡವೇ ಬೇಡ ಎನ್ನುವುದಿಲ್ಲ. ಆದರೆ ನಾ[illegible] ಕೇಳುವ ಮಾರ್ಪಾಟು ಕೊಡಿಸಬೇಕಂದು ಹೇಳಿದ್ದ[illegible] ಕಮಿಷನರವರು ಕೌನ್ಸಿಲ್ ಸ್ವೀಕರಿಸುತ್ತೀರಿ ಆದರೆ ಕೆ[illegible] ತಿದ್ದುಪಾಟು ಬೇಕೆಂಬ ಅಭಿಪ್ರಾಯ ಸೂಚಿಸಿದರೆಂದು [illegible] ದುಕೊಂಡರು ಆದಕ್ಕೆ ಮೆ|| ಪಂದ್ಯಂಡ್ರ ಬೆಳ್ಯಪ್ಪನ[illegible] ಹೇಳಿದ್ದೇನಂದರೆ- ಈಗ ಯೋಚಿಸುವ ಕೌನ್ಸಿಲು ಎಲ್ಲರಿಗ[illegible] ಸಮ್ಮತವಿಲ್ಲ ಒಂದು ದಿನಕ್ಕ ಮುಂದಾಗಿ ನಡೆದ ದೇಶದವ[illegible] ಮೀಟಿಂಗಿನಲ್ಲು ಈ ಕೌನ್ಸಿಲ್ ತೃಪ್ತಿಕರವಲ್ಲವೆಂದೂ, ಅ[illegible]ತದ ಮತ್ತು ಆದಾಯವೆಚ್ಚದ ಹಕ್ಕು ನಮಗೆ ಸ್ವಲ್ಪವಾ[illegible]ರೂ ಸಿಕ್ಕದೆಹೋದರೆ ನಮಗೆ ಸಭೆಯಿಂದ ಪ್ರಯೋಜನ[illegible]ನೂ ಇಲ್ಲವೆಂದೂ ಮಂಜೂರಾದ ಠರಾವೇ ದೇಶದ ಅ[illegible]ಪ್ರಾಯ ಆದಕ್ಕೆ ನಾವು ವಿರೋಧವಾಗಿ ಹೋಗಕೂ[illegible]ದೆಂದು ಹೇಳುವಷ್ಟರಲ್ಲೆ ಮುನಸೀಫರಾದ ಕೂರವಂ[illegible] ಮುತ್ತಣ್ಣನವರು ನಿನ್ನೆ ನಡೆದದ್ದು (Mass Meeting[illegible] ಸಾಧಾರಣ ಜನ ಮೀಟಿಂಗ್ ಎಂದರು ಆದು ಇಲ್ಲಿಯ[illegible] ಸೇರಿರುವ ಮತ್ತು ದೇಶದ ಬೇರೆ ಬುದ್ಧಿವಂತರನೇಕರು ಸೇ[illegible] ಮಾಡಿದ ಮೀಟಿಂಗೆಂದ ಬೆಳ್ಯಪ್ಪನವರು ಉತ್ತರ ಕೊಟ್ಟ[illegible]

ಆಗ ಕಮಿಷನರವರು ಮೀಟಿಂಗ್ ಮಾಡಿದ ಠರಾ[illegible] ನಮಗೆ ಸಂಬಂಧವಿಲ್ಲ ನಿಮ್ಮ ಸ್ವಂತ ಅಭಿಪ್ರಾಯವೇ[illegible] ಎಂದು ಕೇಳಿದರು ಆಗ ಯಾರೂ ಏನೂಹೇಳದೆ ಗಾಂಭೀ[illegible]ವಾಗಿ ಕೂತು ನೋಡುತ್ತಿದ್ದರು. ಕಮಿಷನರವರು ಸಂತೋ[illegible]ಷದಿಂದ, ಅಂದರೆ ಕೌನ್ಸಿಲ್ ನೀವು ಸ್ವೀಕರಿಸುತ್ತೀರೆಂ[illegible] ನಾನು ಚೀಫ ಕಮಿಷನರವರಿಗೆ ತಿಳಿಸುತ್ತೇನೆ. ಅ[illegible] ನೀವು ಕೆಲವು ತಿದ್ದುಪಾಡುಗಳನ್ನೂ ಕೇಳುತ್ತೀರೆಂದು [illegible]ಸುವೆನು ಎಂದು ಹೇಳಿ ಬರೆದುಕೊಂಡು ಮೀಟಿಂಗನ್ನು [illegible] ಕಾಸ್ತು ಮಾಡಿದರು.

ನಾನು ಇಷ್ಟೆಲ್ಲಾ ಹೇಳಿದ್ದರಲ್ಲಿ ಕೆಲವು ಜನರ ಮ[illegible]ನ್ನು ಬಿಟ್ಟು ಬಿಟ್ಟಿದ್ದಕ್ಕೆ ವ್ಯಸನಪಡುತ್ತೇನೆ ಮೆ|| ಚಾ[illegible] ಸಾಹೇಬರು ಬುದ್ಧಿಶಾಲಿಗಳಂತೆಯೂ ವಿನಯದಿಂದ[illegible] ಹೇಳಿದ್ದೇನಂದರೆ—ಯೂರೋಪಿಯನ್ ಮೆಂಬರುಗಳ[illegible] ಪ್ರಜೆಗಳು ಚುನಾಯಿಸುವುದು ಬೇಡ ಸರಕಾರದವರ ನೇ[illegible]ತವು ಸಾಕು. ಆದರೆ ಅವರು ಒಂದು ಮಿಲಿಯನ್ ಪೌ[illegible] ಈ ದೇಶದ ಅಭಿವೃದ್ಧಿಗೆ ಇಟ್ಟಿರುವುದರಿಂದ ಸದ್ಯ ನಾ[illegible] ಜನರನ್ನಾದರೂ ಕೌನ್ಸಿಲಿಗೆ ಕೊಡಬೇಕು. ಜಮ್ಮದ[illegible]ತಾವು ಮೊದಲು ಸಹಾಯ ಮಾಡಿರುವುದರಿಂದ [illegible] ಜಮ್ಮದವರು ಅವರಿಗೆ ಪ್ರತಿಯಾಗಿ ಸಹಾಯ ಮಾ[illegible]ಕೆಂದೂ ಮುಖ್ಯದಲ್ಲಿ ಕೇಳಿದರು. ಚುನಾಯಿತರ ಬ[illegible]

ಸ್ಥಿತರು ಸಿಕ್ಕಿದರೆ ನಾವೆಂದೂ ಬಿಡಲಾರೆವು ಒಪ್ಪಿಕೊಂಡರು ಅಲ್ಲದೆ ಕೌನ್ಸಿಲ್ಲನ್ನು ಸ್ವೀಕರಿಸಿ ಎಂದು ಬುದ್ಧಿವಂತಿಕೆಯನ್ನೂ ಕೊಟ್ಟರು

ಮೆ|| ಕೋಡಿಮಣಿಯಂಡ್ರ ಸುಬ್ಬಯ್ಯನವರು, ಕುಟ್ಟಯ್ಯನವರೂ, ಅಪ್ಪಯ್ಯನವರೂ, ಮಾತಾಡಿದನಂತರ ಪ್ರಜೆಗಳು ಸರಕಾರದವರಲ್ಲಿ ನಂಬಿಕೆಯಿಟ್ಟು, ತಾವು ಏನೂ ಕೇಳದಿದ್ದರೂ ಸರಕಾರದವರು ನಮ್ಮನ್ನು ಮರೆಯಲಾರರು ಎಂದು ನಂಬಿ ಆಶಾಭಂಗರಾದರು. ನಾವು ಎಂದೂ ವಿದ್ಯಾಬುದ್ಧಿಯಲ್ಲಿ ಕಡಮೆಯವರಲ್ಲ ಈಗ ಸರಕಾರದವರು ಬೇರೆ ಕಡೆಗಳಿಗೆ ಹೆಚ್ಚಿನ ತಿದ್ದುಪಾಟು ಕೊಟ್ಟಿರುವಾಗ ನಮಗೆ ಸ್ವಲ್ಪವಾದರೂ ಕೊಡಬಾರದೇ ಎಂದು ಕೇಳಿದರು

ಹುರುಪಿನಲ್ಲಿ ಚೆನ್ನಾಗಿ ಹಲವರು ಮಾತಾಡಿದರೂ, ಮೆ|| ಕೃಷ್ಣರಾಯರು ಹೇಳಿದ್ದಕ್ಕೆ ವಿರೋಧ ಹೇಳದೆ ಸುಮ್ಮನಿದ್ದು ಕೌನ್ಸಿಲನ್ನು ಒಪ್ಪಿಕೊಂಡಂತೆ ಕಮಿಷನರವರಿಗೆ ತೋರ್ಪಡಿಸಿದಂಥ ನಮ್ಮ ಮುಖಸ್ತರೆನಿಸಿಕೊಂಡಿರುವ ಜನರು ಅವರಲ್ಲಿಟ್ಟಿದ್ದ ನಂಬಿಕೆಯನ್ನು ಕಾಪಾಡಿಕೊಂಡಂತಾಗಲಿಲ್ಲವೆಂಬುದು ಅತ್ಯಂತ ವ್ಯಸನಕರವಾದ ಸಂಗತಿಯಾಗಿದೆ ಮುಂದಕ್ಕಾದರೂ ಭಗವಂತನು ಇವರಿಗೆ ಬುದ್ಧಿಯನ್ನು ಧೈರ್ಯವನ್ನು ಕೊಡಲೆಂದು ಪ್ರಾರ್ಥಿಸುವ

ಮೀಟಿಂಗ್ ಅತಿಥಿ.

"ರಾಮಾಯಣದಲ್ಲಿ ವರ್ಣಿತವಾಗಿರುವ ಮಳೆಯು ಕೊಡಗಿನಲ್ಲಿ ಸುರಿಯಿತು!"

ಇಲ್ಲಿ ನಾವಿನ್ನಿಗಾ ವೇನ ತಾ
ಸಲ್ಲಲಿತ ಗುಣಸಿಧಿ ಗಳಿರಲಾ
ಗೆಲ್ಲಿ ಡೆಯ ನಾವರಿ ಕೊಂಡುದ ಕಾವ
ಚಲ್ಲಿದುದು ಒಲು ಮಳೆಯ ನದಿ ತಾ
ನಲ್ಲಿಯಂ ಪಿರುಗಾಳಿ ಎಸಿತು
ನಿಲ್ಲಲಾರದೆ ಜೀವತತಿಗಳು ತಲೆಯಮರೆಂದುವು

ಸುತ್ತಲುಂ ಕವಿದಿರ್ದ ಮಂ ಬಂ
ಕತ್ತಲೆಯು ತಾನಾಗೆ ಸೂರ್ಯನ
ಗೊತ್ತನರಿಯದೆ ನಿತ್ಯಕರ್ಮವ ಗೃಹಜನಸಿಕರ
ತತ್ತರಿಸಿ ಪಕ್ಷಿಗಳ ಗತಿಯಿಂ
ಹೊತ್ತನರಿ ಪಂತಾಯ್ತು ಬಿಸಿಲಿಂ
ಬತ್ತಿದಾ ಕೆರೆ ಕಟ್ಟೆ ಒಲವಿಂ ತುಂಬಿ ತುಳುಕಿದುವು ||೩||

ನದಿಗಳುಬ್ಬುತೆ ಪರಿದು ಜಲಧಿಯ
ನೊಡೆವೊಲೆಸೆದುವು ಮುಗಿಲ ಕೊಡದಿಂ
ತ್ರಿದಶರಪಿಷೇಕವ ಗಿರಿವರ ಬಿಂಗಗಳ ಕೈಲಿದು |
ವಿದಿತಮಪ್ಪುದಿ ದೆಂಬವೊಲುಮಳೆ
ಯಧಿಕ ಮಾಗುತೆ ಭುವನವೆಲ್ಲವ |
ಮುದಕಮಯಮಾಗಲ್ಕೆ ಘಿರಿದ ದುಃಖಗಳಿಂ ಜಡದೆ ||೪||

ಕೈಲ್‌ಮೂರ್ತ ಹಬ್ಬ.

ಮಡಿಕೇರಿಯಲ್ಲಿರುವ ಕೊಡಗು ನಿವಾಸಿಗಳೆಲ್ಲರು ಸೇರಿ ಸೆಪ್ಟಂಬರು ತಾರೀಖು ೩ರಲ್ಲು ಗದ್ದುಗೆ ಮೈದಾನದಲ್ಲಿ, ಗಂಟೆಗೆ ಸರಿಯಾಗಿ ಕೈಲ್ ಮೂರ್ತ ಹಬ್ಬವನ್ನು ನಡಿಸಲು ನಿಶ್ಚೈಸಿರುವದರಿಂದ ಮಡಿಕೇರಿ ಮತ್ತು ಇತರ ಸ್ಥಳಗಳ ಕೊಡಗು ನಿವಾಸಿಗಳೆಲ್ಲರು ಸದರಿ ದಿವಸ 2 ಗಂಟೆಗೆ ಸರಿಯಾಗಿ ಓಂಕಾರೇಶ್ವರ ದೇವಸ್ಥಾನಕ್ಕೆ ದಯಮಾಡಿಸಿ ಪ್ರೋತ್ಸಾಹಗೊಳಿಸಬೇಕಾಗಿ ವಿನಯದಿಂದ ಕೇಳಿಕೊಳ್ಳುವ,

ಮಡಿಕೇರಿ, ಮಣವಂಡ್ರ ಗಣಪತಿ,

ತಾ|| 23-8-21. ಸೆಕ್ರೆಟರಿ

ನೋಟೀಸ್.

ಕೊಡಗಿಗೆ ಕೊಡಬೇಕಾದ ಮಾರ್ಪಾಟುಗಳು ಯಾವ ವಿಧದಲ್ಲಿಯೂ ದೇಶದವರಿಗೆ ತೃಪ್ತಿಕರವಾಗಿರುವುದಿಲ್ಲವಾದುದರಿಂದಲೂ ಕೆಲವು ಜನಗಳು ಮನುಷ್ಯರು, ಈ ಮಾರ್ಪಾಟುಗಳನ್ನೇ ಅನುಸರಿಸಿ ಕೆಲಸ ಮುಂದರಿಸುವಂತೆ ಒಪ್ಪಿಕೊಂಡಿರುವುದರಿಂದಲೂ, ಈ ಸಂಗತಿ ಚರ್ಚೆ ಮತ್ತು ತೀರ್ಮಾನ ಬಗ್ಗೆ ಈ ತಾರೀಖು 31 ನೇ ಬುಧವಾರ 3 ಘಂಟೆಗೆ ವಿಕ್ಟೋರಿಯಾ ಜುಬಿಲೀ ರೀಡಿಂಗ್ ರೂಮಿನ ಒಳ ಮತ್ತು ಪೊನ್ನಂಪೇಟೆಯಲ್ಲಿ ಈ ತಾ|| 29 ನೇ ಸೋಮವಾರ 2 ಘಂಟೆಗೆ ಮೀಟಿಂಗ್‌ಗಳು ಆಗುವುದರಿಂದ, ದೇಶದ ಎಲ್ಲಾ ಜನರು, ದೇಶದ ಅಭಿವೃದ್ಧಿಯನ್ನು ಕೋರಿ, ಸದರಿ ಮೀಟಿಂಗ್‌ಗಳಿಗೆ ತಪ್ಪದೆ ಹಾಜರಾಗಬೇಕಾಗಿ ಕೇಳಿಕೊಳ್ಳಲಾಗಿದೆ.

ಕೇಳಪಂಡ್ರ ಅಪ್ಪಯ್ಯ.
ಕೋದಂಡ ಉತ್ತಯ್ಯ
ಪಾರ್ವಂಗಡ ಕುಶಾಲಪ್ಪ.
ಕೋಟೆರ ಚಿಣ್ಣಪ್ಪ.
ಪಂದಿಯಂಡ್ರ ಬೆಳ್ಳಪ್ಪ.

ಇದೇ ತಿಂಗಳ 14 ನೆಯ ದಿನ ಕೈಲ್ ಮುಹೂರ್ತ ಹಬ್ಬದ ಆಚರಣೆಯನ್ನು ಕುರಿತು ಶ್ರೀಮಾನ್ ಕ ಕೆ ಉತ್ತಯ್ಯ ಬಿ ಎ ಎಲ್ ಎಲ್ ಬಿ ಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಪರಿಣಾಮವು ಒಂದು ಕಮಿಟಿಯನ್ನು ಏರ್ಪಡಿಸಿ ಮುಕ್ತಾಯಗೊಂಡಿತಷ್ಟೆ ಈ ಕಳಗ ನಮೂದಿಸಿರುವ ಕಮಿಟಿಯವರು ಈ ಕಳಗಿನ ಠರಾವುಗಳನ್ನು ಮಂಜೂರ್ ಮಾಡಿರುವುದಲ್ಲದೆ ಹಬ್ಬದ ಕಾರ್ಯಕ್ರಮವನ್ನು ಕೂಡ ತಯಾರಿಸಿ ಎಲ್ಲಾ ಕೊಡಗು ಮಹನೀಯರ ಅವಗಾಹನೆಯ ಗೋಸ್ಕರ ಪ್ರಕಟಿಸಿರುತ್ತಾರ

ಕಮಿಟಿಯ ಸದಸ್ಯರು"

ಮ|| ರಾ|| ರಾ|| ಗಳಾದ —

1 ಕೆ ಕೆ ಉತ್ತಯ್ಯ ಬಿ ಎ ಎಲ್ ಎಲ್ ಬಿ	9 ಎಸ್ ಸಿ ಮೇದಪ್ಪ.
2 ಪಿ ಉತ್ತಯ್ಯ ಬಿ ಎ	10 ಕೆ ಎಸ್ ದೇವಯ್ಯ
3 ಎಂ ಎಂ ಗಣಪತಿ ಬಿ ಎ	1 ಪಿ ಕೆ ಗಣಪತಿ
4 ಕೆ ಪಿ ಕುಟ್ಟಪ್ಪ ಬಿ ಎ	12 ಎಂ ಎಂ ತಿಮ್ಮಯ್ಯ
5 ಬಿ ಎಂ ಕಾರ್ಯಪ್ಪ ಬಿ ಎ	13 ಕೆ ಎ ಪೊನ್ನಪ್ಪ.
6 ಕೆ ಪಿ ಮುತ್ತಣ್ಣ ಬಿ ಎ	14 ಕೆ ಡಿ ಕಾಳಪ್ಪ.
7 ಎಂ ಎ ಉತ್ತಯ್ಯ ಸಬ್ ಇನ್ಸ್‌ಪೆಕ್ಟರ್	15 ಎಸ್. ಎ ಉತ್ತಯ್ಯ
8 ಪಿ ಎಂ ಪೂವಯ್ಯ	16 ಎಸ್ ಎ ಸುಬ್ಬಯ್ಯ

ಇದೇ ತಿಂಗಳು 17 ನೆಯ ದಿನ ನಡೆದ ಸದಸ್ಯರ ಸಭೆಯಲ್ಲಿ ಮಂಜೂರಾದ ಠರಾವುಗಳು —

1 ಸರಕಾರಿ ಉದ್ಯೋಗಸ್ಥರಿಗೂ ಉದ್ಯೋಗಸ್ಥರಲ್ಲದವರಿಗೂ ಸರಾಸರಿ ಕಡಿಮೆ ಚಂದಾ ಒಂದು ರೂಪಾಯಿ ದಾರ ಮಕ್ಕಳಿಗೆ (ಅವರ ಇಷ್ಟವಿದ್ದರೆ ಮಾತ್ರ) ನಾಲ್ಕಾಣೆ.

2 ಎಲ್ಲಾ ಕೊಡಗು ಮಹನೀಯರು ತಮ್ಮ ಜನಾಂಗದ ಉಡುಪಿನಿಂದ ಕೊಡಗಿನಂದಲೇ ಬರುವುದು ಒಳ್ಳೆಯದು.

3 ಕೊಡಗು ಮಹನೀಯರು ಓಂಕಾರೇಶ್ವರ ದೇವಸ್ಥಾನದಲ್ಲಿ ಮಧ್ಯಾಹ್ನ 2 ಘಂಟೆಗೆ ಸೇರಿ ಕಾರ್ಲೇನ ಸ್ಥ ಮೈದಾನಕ್ಕಾಗಿ ಮಹದೇವಪೇಟೆಯನ್ನು ದಾಟಿ ಗದ್ದುಗೆ ಮೈದಾನಕ್ಕೆ ಸಂಗೀತ ವಾದ್ಯಗಳೊಡನೆ ಮೆರವಣಿಗೆಯಿಂದ ಹೋಗುವುದು.

4 ಮಡಿಕೇರಿಯಲ್ಲಿ ವಾಸಮಾಡುವ ಎಲ್ಲಾ ಕೊಡಗು ಮಹನೀಯರು ಮತ್ತು ಮಹಿಳೆಯರಿಗೆ ಆಮಂತ್ರಣವನ್ನು (Invitation) ಕೊಡುವುದು

5 ಬಾಲಾ ಮಕ್ಕಳಿಗೋಸ್ಕರವೆಂದೂ ಉದ್ಯೋಗಸ್ಥರಿಗೂ ಮತ್ತು ಉದ್ಯೋಗಸ್ಥರಲ್ಲದ ಇತರ ಮಹನೀಯರಿಗೆಂದು ಎರಡು ಚಂದಾಪಟ್ಟಿಯನ್ನು ಕಳುಹಿಸಿಕೊಡುವುದು.

6 ಇದಕ್ಕೋಸ್ಕರ ಶ್ರೀಯುತರಾದ ಪಿ ಕೆ ಗಣಪತಿ ಮತ್ತು ಕೆ ಎಸ್ ದೇವಯ್ಯನವರು, ಶಾಲೆಗೂ, ಕ ಡಿ ಕಾಳಪ್ಪನವರು ಉದ್ಯೋಗಸ್ಥರಿಗೂ ಕೆ ಪಿ ಮುತ್ತಣ್ಣನವರು ಇತರರಿಗೂ ಎಂದು ನೇಮಕ ಮಾಡಲ್ಪಟ್ಟಿದೆ

7. ಕೋಶಾಧ್ಯಕ್ಷರನ್ನಾಗಿ —
(1) ಶಾಲೆಯ ಪರವಾಗಿ ಮೆ|| ಎಸ್ ಎ ಉತ್ತಯ್ಯ
(2) ಉದ್ಯೋಗಸ್ಥರ ಪರವಾಗಿ ಮೆ|| ಎಂ ಎಂ ತಿಮ್ಮಯ್ಯ
(3) ಇತರರ ಪರವಾಗಿ ಮೆ|| ಎಂ ಎಂ ಗಣಪತಿ ಯವರು ನೇಮಿಸಲ್ಪಟ್ಟಿರುತ್ತಾರ

8 ಮುಂದಣ ಕಾರ್ಯವನ್ನು ಆಲೋಚಿಸಲೋಸ್ಕರ ಪುನಃ ಆಗಸ್ಟ್ 27 ನೆಯ ದಿನ ವೈ ಎಂ ಸಿ ಮಂದಿರದಲ್ಲಿ ಎಲ್ಲರ ಸಭೆಯು ಸೇರುವುದ.

9 ನಮ್ಮ ಹೈಸ್ಕೂಲಿನ ಈಗಿನ ಮತ್ತು ಹಳೆಯ ವಿದ್ಯಾರ್ಥಿಗಳಿಗೆ ಒಂದು "ಹಾಕಿ" ಪಂಧ್ಯದಾಟವನ್ನು ಆಡುವುದು

ಕಾರ್ಯಕ್ರಮ.

(ಸಾಯಂಕಾಲ 3 ರಿಂದ 6 ರ ವರೆಗೆ)

1 ತೆಂಗಿನಕಾಯಿಗೆ ಗುರಿಯಿಟ್ಟು ಗುಂಡು ಹೊಡೆಯುವುದು
2 ತೆಂಗಿನಕಾಯಿ ಕಸಿದುಕೊಳ್ಳುವುದು (ತೆಂಗಿನರಾಪ)
3 ತೆಂಗಿನಕಾಯಿಗೆ ಗುರಿಯಿಟ್ಟು ಹೊಡೆಯುವುದು
4. ಓಡುವುದು—100 ಗಜ ದೂರ
5 ,, } ಮೈಲು ದೂರ
6 ಗುರಿ ಇಡುವುದು
7 ಪಕ್ಕಿ ಓಟ
8 ಕಣ್ಣುಮುಚ್ಚಿ (Blind-fold) ಓಡುವುದು.

ಕೊಡಗು ಪ್ರೈಮರಿ ವಿದ್ಯಾಭ್ಯಾಸ

ಕೊಡಗುಭಾಷೆಯು ಲಿಖಿತಭಾಷೆಯಲ್ಲದೆ ಇರುವುದರಿಂದ ಪ್ರಥಮತ ವಿದ್ಯಾಭ್ಯಾಸಮಾಡುವ ಸಣ್ಣಮಕ್ಕಳು ಕೇವಲ ಶ್ರಮಪಡಬೇಕಾಗುತ್ತದೆ. ಇತರ ದೇಶಗಳಲ್ಲಿ ಮಕ್ಕಳು ತಮ್ಮ ತಾಯಿತಂದೆಗಳು ಮನೆಯಲ್ಲಿ ಮಾತಾಡುವ ಭಾಷೆಯನ್ನೇ ಕಲಿಯಲು ಪ್ರಾರಂಭಮಾಡುವದರಿಂದ ಅವರಿಗೆ ಓದುಬರಹ ಕಲಿಯುವದು ಕಷ್ಟವಾಗಿಯೂ ವಿಚಿತ್ರವಾಗಿಯೂ ಕಾಣುವದಿಲ್ಲ. ಈ ನ್ಯೂನತೆಯನ್ನು ಹೋಗಲಾಡಿಸಲು ಒಂದೆರಡು ಮಾರ್ಪಾಟುಗಳನ್ನು ಇಲ್ಲಿ ಸೂಚಿಸಬೇಕೆಂದಿದ್ದೇನೆ.

ಸಾಧಾರಣವಾಗಿ ಕನ್ನಡ ಶಬ್ದಗಳು ನಮ್ಮ ಭಾಷೆಯಲ್ಲಿ ವಿಶೇಷವಾಗಿ ಉಪಯೋಗಿಸಲ್ಪಡುತ್ತಿದೆ ಈ ವಿಷಯವನ್ನು ಮನಸ್ಸಿನಲ್ಲಿಟ್ಟು ಕೊಂಡು, ಆದಿಯಲ್ಲಿ ಓದ ಬರಹ ಕಲಿಸುವಾಗ ಎರಡು ಭಾಷೆಗಳಲ್ಲಿಯೂ ಒಂದೇ ಪ್ರಯೋಗವಿರುವಂಥಾ ಶಬ್ದಗಳನ್ನೇ ಆದಷ್ಟು ಮಟ್ಟಿಗೆ ಕಲಿಸಬೇಕು. ಹ್ಯಾಗೆಂದರೆ ಅಕ್ಷರಮಾಲೆಯಲ್ಲಿ ಮೊದಲಿನ ಅಕ್ಷರವು 'ಅ' ಆಗಿದೆ. ನಾವು ಕಲಿತ ಪುಸ್ತಕಗಳಲ್ಲಿ ಈ ಅಕ್ಷರಗಳನ್ನು ಸೂಚಿಸುವುದಕ್ಕೆ 'ಅಳಿಲು ಅನ' ಎಂದು ಕಲಿತೆವು ಅನ ಎಂದರೆ ಏನೋ ಮನಸ್ಸಿನಲ್ಲಿ ತಿಳಿಯಿತು. ಆದರೆ 'ಅಳಿಲು' ಎಂದರೆ ಏನೆಂದು ಪ್ರಶ್ನೆ ಮಾಡಬೇಕಾಗುತ್ತಿತ್ತು ಚಿತ್ರವನ್ನು ನೋಡಿದರೆ ನಮ್ಮ ಭಾಷೆಯಲ್ಲಿ 'ಕೊರಿಯ' ಎನ್ನುವ ಜಂತುವೆಂದು ಕಾಣುತ್ತಿತ್ತು ಇವುಗಳ ಬದಲಿಗೆ 'ಅಡಿಕೆ' 'ಆನೆ' ಇವು ಮೊದಲಾದ ನಮ್ಮ ದೇಶದಲ್ಲಿನ ಮಕ್ಕಳು ಸಾಧಾರಣವಾಗಿ ನೋಡಿರುವಂತ ವಸ್ತುಗಳ ಚಿತ್ರಗಳನ್ನು ಬರೆಸಿ ಈ ಪ್ರಕಾರವಾಗಿ ಅಕ್ಷರಮಾಲೆಯನ್ನು ಅವುಗಳನ್ನು ಜೋಡಿಸಿ ಉಚ್ಚರಿಸುವ ಕ್ರಮವನ್ನೂ ಕಲಿಸಬೇಕು ಮಕ್ಕಳು ಎರಡುವರೆ ಅಥವಾ ಮೂರು ವರ್ಷಪ್ರಾಯಗಳಲ್ಲಿ ವಿದ್ಯಾಭ್ಯಾಸಕ್ಕೆ ಸುರು ಮಾಡುತ್ತಾರೆ ಆ ವೇಳೆಯಲ್ಲಿ ಅವರಿಗೆ ಕನ್ನಡಭಾಷೆಯು ಮಾತಿಲ್ಲ ಭಾಷೆಯಷ್ಟು ಗೊತ್ತಿರುವುದಿಲ್ಲ ಆದುದರಿಂದ ಮೇಲೆ ಹೇಳಿದ ರೀತಿಯಲ್ಲಿ ಬಾಲಶಿಕ್ಷೆ ಅಥವಾ ಮೊದಲನೇ ಪುಸ್ತಕಗಳನ್ನು ಏರ್ಪಡಿಸಬೇಕು ಕ್ರಮೇಣ ಮಕ್ಕಳಿಗೆ ಭಾಷಾಭೇದಗಳು ತಿಳಿಯುತ್ತದೆ ಕೊಡಗಿನ ಭಾಷೆಯಲ್ಲಿ 'ಕೊರಿಯ' ಎಂಬ ಜಂತುವಿಗೆ ಕನ್ನಡದಲ್ಲಿ 'ಅಳಿಲು' ಎಂದೂ ಮತ್ತು ನಾವು ಕಲಿಯುವ ಭಾಷೆಯ ಪರಿಯಿಂದಲೂ ಗೊತ್ತಾಗುತ್ತದೆ ಅದರನಂತರ ಕನ್ನಡ ಭಾಷೆಯಲ್ಲಿಯೇ ಪಾಠಗಳನ್ನು ಕಲಿಯಲು ಸುಲಭವಾಗುತ್ತದೆ

ಇನ್ನೊಂದು ದೊಡ್ಡ ಕುಂದಕವೇನೆಂದರೆ ನಮ್ಮ ದೇಶದ ಎಲ್ಲಾ ಟೆಕ್ಸ್ಟು ಬುಕ್ಕುಗಳು (Text Books) ಪಾಠಕರ ಮದರೆ ದಕ್ಷಿಣ ಕನ್ನಡ ಮೈಸೂರು ಪ್ರಾಂತ್ಯಗಳ್ಳ ಆಯಾ ದೇಶಗಳ ಸ್ಥಿತಿಗಳಿಗನುಸರಿಸಿ ಬರೆದವುಗಳಾಗಿವೆ ಕೊಡಗು ದೇಶವೇನೋ ದೊಡ್ಡದೇಶವಲ್ಲದಿದ್ದರೂ ಇಲ್ಲಿನ ನಿವಾಸಿಗಳ ಆಚಾರ ನಡತೆ, ದೇಶದ ಸ್ಥಿತಿ ಇವುಗಳೆಲ್ಲಾ ದೇಶಗಳಿಂದ ಪ್ರತ್ಯೇಕವಾಗಿದೆ ಆದುದರಿಂದ ಇತರ ದೇಶಗಳಲ್ಲಿ ಬರೆದ ಪುಸ್ತಕಗಳು ನಮ್ಮ ದೇಶಕ್ಕೆ ಎಂದಿಗೂ ತಕ್ಕುದಲ್ಲ. ನಮ್ಮ ದೇಶಕ್ಕೆ ತಕ್ಕಂತ ಪುಸ್ತಕಗಳನ್ನು ಯಾಕೆ ಪ್ರತ್ಯೇಕ ಬರೆಯಬಾರದು? ನಮ್ಮ ದೇಶದ ಚಿತ್ರಗಳನ್ನೇ ಬೇಕಾದಷ್ಟು ಮಟ್ಟಿಗೆ ತೋರಿಸಬೇಕು ಸ್ವದೇಶೀಯ ಪುಸ್ತಕಗಳನ್ನು ಏರ್ಪಡಿಸಬೇಕೆಂದು ಹೇಳಿದ ಮಾತ್ರಕ್ಕೆ ಇದ ರಲ್ಲೇನೋ ಗಾಂಧಿ ಮಹಾತ್ಮರ ಸ್ವದೇಶೀ ಮೂವ್ಮೆಂಟಿನ ವಾಸನೆ ಇದೆ ಎಂದು ಬೆದರಿ ಅದರ ವಿಷಯ ಮಾತಾಡದೆ ಇರಲು ದಾರಿಯಿಲ್ಲ ಇದರ ಮುಖ್ಯ ಉದ್ದಿಶ್ಯವೇನೆಂದರೆ ವಿದ್ಯಾಭ್ಯಾಸವು ಎಂದಿಗೂ ಗಿಳಿಪಾಠದ ಹಾಗೆ ಇರಬಾರದು ಮಕ್ಕಳ ಆಲೋಚನಾಶಕ್ತಿಯನ್ನು ಆದಷ್ಟುಮಟ್ಟಿಗೆ ವೃದ್ಧಿಪಡಿಸಬೇಕು ನಮ್ಮ ದೇಶದ ಸಂಗತಿಗಳನ್ನೇ ಪುಸ್ತಕದಲ್ಲಿ ವಿವರಿಸಿ ಕಲಿಸಿದರೆ ಮಕ್ಕಳಿಗೆ ಅವುಗಳು ಅದ್ಭುತವಾಗಿ ಕಾಣುವುದಿಲ್ಲ ಯಾಕೆಂದರೆ ಆ ವಿಷಯಗಳನ್ನು ಅವರು ಕಣ್ಣಾರೆ ನೋಡಿರುತ್ತಾರೆ. ಕಥೆಗಳಲ್ಲಿ ನಮ್ಮ ದೇಶದವರ ಹೆಸರನ್ನೇ ಹಾಕಬೇಕು ಪರದೇಶಗಳ ಸಂಗತಿಗಳನ್ನು ಕಲಿಸಲೇ ಬೇಡವೆಂದು ಅಭಿಪ್ರಾಯವಲ್ಲ ಆ ಪುಸ್ತಕಗಳಿಂದ ಕೆಲವು ಪಾಠಗಳನ್ನು ತೆಗೆದು ತೋರಿಸಿದರ ಪ್ರಯೋಜನಕರವಾಗುವುದು ಆದರೆ ಮಕ್ಕಳಿಗೆ ಇದು ಸ್ವದೇಶದ ವಿಷಯವಲ್ಲವೆಂದು ಸ್ಪಷ್ಟವಾಗಿ ತಿಳಿಸಬೇಕು

ಹೀಗೆ ಪ್ರತ್ಯೇಕ ಪುಸ್ತಕಗಳನ್ನು ಏರ್ಪಡಿಸುವುದು ಬಹಳ ಪ್ರಯಾಸವಲ್ಲ ಯಾಕಂದರೆ ಎರಡು ಭಾಷೆಗಳನ್ನೂ ಈ ದೇಶದ ಸ್ಥಿತಿಯನ್ನೂ ಚೆನ್ನಾಗಿ ಗೊತ್ತಿದ್ದು, ವಿದ್ಯಾಬೋಧನೆಯ ಕೃತ್ಯದಲ್ಲೇ ನಿರತರಾಗಿದ್ದು, ಮೇಲೆ ತೋರಿಸಿದ ಕುಂದಕಗಳನ್ನು ಮನಸ್ಸಿನಲ್ಲಿ ಗ್ರಹಿಸಲು ಶಕ್ತರಾಗಿರುವವರು ಸುಲಭದಲ್ಲಿಯೇ ಬರೆಯಲಾಪರು ಪ್ರಯಾಸ ಕಡಿಮೆ, ಕೀರ್ತಿ ದೊಡ್ಡದು. ದೇಶೋಪಕಾರ ಪ್ರೇಮರಿರಾ ಅ ಉಪಾಧ್ಯಾಯರು ತಮ್ಮ ಮೀಟಿಂಗಿನಲ್ಲಿ ಈ ವಿಷಯವನ್ನು ಚರ್ಚಿಸಿ ಇನ್ಸ್‌ಪೆಕ್ಟರವರ ದರ್ಶನಕ್ಕೆ ತರಬೇಕಾಗಿ ಕೋರಿಕೆ.

ಆರ್. ಎಸ್. ಕುಶಾಲಪ್ಪ.

ಕುಮಾರ.

(ಒಬ್ಬ ವಿದ್ಯಾರ್ಥಿಯಿಂದ)

ಮೊದಲನೆ ಪರಿಚ್ಛೇದ.

ಪಶ್ಚಿಮಸಮುದ್ರಾಂಗಣದಲ್ಲಿ ನಿಶಿ ಆದಿತ್ಯರು ಘನಘೋರ ಸಂಗ್ರಾಮವನ್ನಾರಂಭಿಸಿದರು ಆದಿತ್ಯದೇವನ ಸಾಮ್ರಾಜ್ಯವು ನಶಿಸಿಹೋಗುವಕಾಲವು ಬಂದೊದಗಿತು ಕ್ರಮಶಃ ಆತನ ಶೌರ್ಯವು ಕುಂದುತ್ತ ಬಂದಿತು ಮುಖದಲ್ಲಿ ಉಜ್ವಲಕಾಂತಿಯು ಮಾಯವಾಗಿ, ರಕ್ತಿಮಕಾಂತಿಯುಕ್ತವಾದ ತೋಳ್ಪೋಜ್ವಲನವು ಮಾತ್ರ ತೋರಲು ಪ್ರಾರಂಭಿಸಿತು ಪಶ್ಚಿಮಗಗನವೆಲ್ಲವೂ ಶೋಣಿತ ಪ್ರವಾಹದಲ್ಲಿ ಮುಳುಗಿ ಹೋಯಿತು. ಏನಾದರೇನು? ಆದಿತ್ಯದೇವನು ಧೈರ್ಯಗುಂದದೆ ಚಿಂಗಾ ಡುಕ್ಕಲೇ ಇದ್ದನು. ದಿನನಾಥನೊಬ್ಬನು ಅಸಹಾಯಕನಾದ

ಶತ್ರುಸೈನ್ಯವನ್ನು ವೇಗ ತಾನೆ ಗೆಲ್ಲಲಾರನು। ಕೊನೆಗೆ ನಿರಾಗ್ರಸ್ತನಾಗಲೇ ಬೇಕಾಯಿತು.

ನಿಶಾರಾಣಿಯು ಸೂಕ್ಷ್ಮವಾದ ಪೈರಿಯನ್ನು ಮನ್ನಿಸಲಿಲ್ಲ ಪಶ್ಚಿಮಾಂಬುಧಿಗೆ ತಳ್ಳಿಸಿಯೇ ಬಿಟ್ಟಳು. ಸಾಗರನು ಸೂರ್ಯನ ಆಗಮನಕ್ಕಾಗಿ ತಡೆಯಲಾರದೆ ಅಲ್ಲೋಲಕಲ್ಲೋಲವಾಗಲು ಪ್ರಾರಂಭಿಸಿದನು. ಪತಿಯಾದ ಪ್ರಭಾಕರನ ಹೀನಸ್ಥಿತಿಯನ್ನು ಕಂಡು ಕಮಲಿನಿಯು ನಾಚಿಕೊಂಡಳು. ಅಷ್ಟರಲ್ಲಿ ಪೃಥ್ವಿಯ ಪೂರ್ವಕವಾಟವು ತೆರೆಯಲ್ಪಟ್ಟಿತು. ನಿಶಾಪತಿಯು ತಾರಾಂಗಣವನು ಪ್ರವೇಶಿಸಿಬಿಟ್ಟನು. ಸಂಗಡಲೇ ಅಸಂಖ್ಯಾತ ತಾರಾಪದಜ್ಯೋತಿ[illegible] ಚಂದ್ರಮನು ಬಂದೊಡನೆಯೇ ಅತನ ಸತಿಯಾದ [illegible]ಯು ಆಕಾಶದಲ್ಲಿಯೇ ಲೀನಳಾಗಿ ಬಿಟ್ಟಳು.

ನಿಶಿಯಿಂದ ಸರಿಸಿಹೋಗಿದ್ದ ಪೃಥ್ವಿಯ ಸೌಂದರ್ಯವು ಪುನಃ ಉಜ್ವಲಿಸಿತು. ಕಸ್ತೂರಿಯು [illegible] ಸಕಲವಸ್ತುಗಳೂ ಆದಕ್ಕನುಗುಣವಾದ [illegible]ಗಳನ್ನು ಹೊಂದಿತು.

ಸುಹಾಸಿತವಾದ ಪೃಥ್ವಿಯನ್ನೀಕ್ಷಿಸುತ್ತ ಚಂದ್ರಮನು ನೀಲ ಧವಳ ಮಿಶ್ರಿತವಾದ ಅಂತರಿಕ್ಷದಲ್ಲಿ ನಿರಾಲಂಬನಾಗಿ ಅಂದೋಲಿತನಾಗುತ್ತಿದ್ದನು. ಅಪ್ರಾಯಾಸವಾದ ಶೀತಲನಂದ ಮಾರುತನಿಂದ ಪೃಥ್ವಿಯ ಸೌಂದರ್ಯವು ಇನ್ನೂ ಅಧಿಕವಾಗುತ್ತಿತ್ತು.

ಕಾವೇರಿ ನದಿಯು ಈ ಜಾವದಲ್ಲಿ ರಮ್ಯವಾಗಿ ತೋರುತ್ತಿತ್ತು. ಮಾರುತನಿಂದ ಚಿಕ್ಕ ಅಲೆಗಳು ಆ ನದಿಯಲ್ಲಿ ಉಂಟಾದಾಗ ಚಂದ್ರಬಿಂಬವು ಅವುಗಳಲ್ಲಿ ಬೀಳದು ಅದೃಶ್ಯವಾಗುತಿದ್ದುದನ್ನು ನೋಡಿದರೆ ನಾಲ್ಕಾರು ಚಂದ್ರರು ತಮ್ಮ ಪಾಪಪರಿಹಾರಕ್ಕೋಸ್ಕರ ಆ ನದಿಯಲ್ಲಿ ಸ್ನಾನಮಾಡುತ್ತಿದ್ದಂತೆ ತೋರುತ್ತಿತ್ತು. ನದಿಯ ಎರಡು ಪಾರ್ಶ್ವಗಳಲ್ಲಿಯೂ ವನ. ಆ ವನದ ಒಂದು ವೃಕ್ಷವನ್ನವಲಂಬಿಸಿಕೊಂಡು ಒಬ್ಬ ಯುವಕನು ಆ ನದಿಯ ಸೌಂದರ್ಯ ರಾಶಿಯನ್ನು ಈಕ್ಷಿಸುತ್ತಿದ್ದನು.

ಇದ್ದಕ್ಕಿದ್ದಹಾಗೆ ಆ ವನದಿಂದ ಒಂದಾನೊಂದು ಮಧುರ ಗಾನವು ಹೊರಹೊರಟು ಮೋಘದ್ವಾರದಲ್ಲಿ ಲೀನವಾಯಿತು. ಪೃಥ್ವಿಯ ಸೌಂದರ್ಯವನ್ನು ಪಾನಮಾಡಿ ಆನಂದಗೊಳ್ಳುತ್ತಿದ್ದ ಆ ಯುವಕನ ಹೃದಯವು ಸೌಂದರ್ಯ ರಾಶಿಯನ್ನು ಮರೆತು, ಆ ಗಾನದ ಮಾಧುರ್ಯವನ್ನು ಪಾನಮಾಡುವುದಕ್ಕೆ ಆತುರಗೊಂಡಿತು. ಆ ಗಾನವು ಒಂದೊಂದು ವೇಳೆ ಸಣ್ಣಸ್ವರದಿಂದಲೂ ಒಂದೊಂದುವೇಳೆ ಉಚ್ಚಸ್ವರದಿಂದಲೂ, ಆ ವನದಿಂದ ಹೊರಕ್ಕೆ ಹೊರಡುತ್ತಿತ್ತು. ಯುವಕನು ತಲ್ಲೀನನಾದನು.

ಸುಧಾಂಶುವಿನ ಶುಭ್ರಮರೀಚಿಕಾಂಬನದಿಂದ ಭಾಸಮಾನವಾಗಿ ಕಾಣುತ್ತಿರುವ ಪೃಥ್ವಿಯ ಸೌಂದರ್ಯರಾಶಿಯ ಮಧ್ಯದಲ್ಲಿ ನಿಂತು ಹೃದಯಾಕರ್ಷಕವಾದ ಆ ಮಧುರ ಗಾನವನ್ನು ಕೇಳಿ ಆ ಯುವಕನ ಹೃದಯವು ದ್ರವಿಸಿ ಕುಮುದಬಾಂಧವನ ಕಿರಣಗಳಿಂದ ಸೆಳೆಯಲ್ಪಟ್ಟ ಸಾಗರನು ಅಲ್ಲೋಲಕಲ್ಲೋಲವಾಗುವಂತೆ ಚಂಚಲ ಭಾವವನ್ನು ಹೊಂದಿತು. ಆ ಗಾನವು ತನ್ನ ಪ್ರತಿಯೊಂದು ನಾಡಿಯಲ್ಲಿಯೂ ಪ್ರವೇಶಿಸಿ ಅಲ್ಲಿ ಪ್ರತಿಧ್ವನಿ ಕೂಡುವಂತೆ ಅವನಿಗೆ ಭಾಸವಾಯಿತು. ಕಾದಂಬಿನಿಯ ಮೇಲೆ ಸಂಚರಿಸುವ ಸೌದಾಮಿನಿಯು ಮೇಘಮಾಲೆಯನ್ನೆಲ್ಲಾ ಪ್ರಜ್ವಲಗೊಳಿಸುವಂತೆ, 'ಆ ಗಾನವು ಅವನ ಹೃದಯವನ್ನು ಪ್ರಜ್ವಲಗೊಳಿಸಿತು. ಅಷ್ಟಕ್ಕೇ ಸುಮ್ಮನಿರಲಿಲ್ಲ. ಆ ಆಕರ್ಷಣಾಶಕ್ತಿಯು ಯಾವ ಪದಾರ್ಥದ ಪ್ರಭಾವವೋ ಆ ಪದಾರ್ಥವನ್ನೀಕ್ಷಿಸಲು ಚಂಚಲಗೊಂಡಿದ್ದಾ ಹೃದಯವು ತವಕಗೊಂಡಿತು. ತವಕಗೊಂಡಿದ್ದಾ ಯುವಕನನ್ನು ಸಂಪೂರ್ಣವಾಗಿ ಆಕರ್ಷಿಸಿಯೂ ಬಿಟ್ಟಿತು.

ಯುವಕನು ಮುಂದೆ ಹೋದನು. ಸ್ವಲ್ಪದೂರ ಹೋದೊಡನೆಯೇ ತಾನು ಯಾವುದನ್ನು ನೋಡಲು ಇಚ್ಛೆಗೊಂಡನೋ, ಅದನ್ನು ಕಂಡನು. ಅದೊಂದು ಸೌಂದರ್ಯಶಾಲಿನಿಯಾದ ರಮಣೀಮೂರ್ತಿ! (ಸಶೇಷ)

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್]

ಅಯ್ಯಾ,

ನಿನ್ನೆ ಸಾಯಂಕಾಲ ಮ|| ರಾ|| ಮುಕ್ಕಾಟಿ ಮಂದಣ್ಣನವರು ಮೃತಪಟ್ಟ ಸಂಗತಿಯನ್ನು ಕೇಳಲು ತುಂಬಾ ವಿಷಾದಕರವಾಗಿದೆ. ಅವರ ಶ್ಲಾಘನೀಯವಾದ ಗುಣಗಳು [illegible] ತಿಳಿದಿರುವ ಸಂಗತಿಯಾದುದರಿಂದ ನಾನು ಅದನ್ನು ಹೆಚ್ಚು ಬಹಿರಂಗಪಡಿಸಲು ಇಚ್ಛಿಸಲ್ಲ. ಒಟ್ಟಾರೆ ನನ್ನ ಅಭಿಪ್ರಾಯದಲ್ಲಿ ಕೊಡಗುದೇಶದ ಮಹನೀಯರ ಶಿರೋಭೂಷಣವೇ ಮುರಿದುಬಿದ್ದಂತಾಯಿತು. ಅಪಾರವಾದ ದುಃಖಸಮುದ್ರದಲ್ಲಿ ಬಿದ್ದು ಕೇಳಾಡುವ ಮೃತ ಪ್ರಾಣಿಯ ಕುಟುಂಬ ವರ್ಗದವರ ಅಪಾರವಾದ ಚಿಂತೆಯಲ್ಲಿ ನಾನು ನನ್ನ ಅ|| ಮಾಸ್ತರು ಮತ್ತು ನಮ್ಮ ಶಿಷ್ಯವರ್ಗದವರು ಸಹ ಸಂಪೂರ್ಣ ಭಾಗಿಗಳಾಗಿದ್ದೇವೆ ಎಂಬುದನ್ನು ವಿಶದಪಡಿಸಲು ಈ ದಿವಸಕ್ಕೆ ಮ|| ರಾ|| ಮಂದಣ್ಣನವರ ಜ್ಞಾಪಕಾರ್ಥವಾಗಿ ಕೊಡಗು ನಾರ್ಮಲ್ ಶಾಲೆಯನ್ನು ಮುಚ್ಚಲಾಯಿತು. ಮ|| ಮಂದಣ್ಣನವರು ಈ ಶಾಲಾಕಮಿಟಿ ಕಾರ್ಯಾಧ್ಯಕ್ಷರಾಗಿದ್ದರು.

ಎಂ. ಶ್ರೀನಿವಾಸರಾವ್ ಅಮ್ಮತ್ತಿ.

ಅಯ್ಯಾ,

ಕೆಲವು ದಿವಸಗಳ ಹಿಂದೆ ಡಿಸ್ಟ್ರಿಕ್ಟ್ ಬೋರ್ಡ ಸ್ಕೂಲುಮಾಸ್ತರುಗಳಿಗೆ ಸಂಬಳ ಹೆಚ್ಚು ಕೊಡಬೇಕಾಗಿ ಚರ್ಚೆನಡೆದು ಇದಕ್ಕೆ ಸರಕಾರದಲ್ಲು ಹಣವಿಲ್ಲವೆಂದು ಸೂಚಿಸಿ ರೈತರಿಗೆ ಸೆಸ್ ಹೆಚ್ಚಿಸಬೇಕೆಂದು ತೀರ್ಮಾನಿಸಿದ್ದು ತಮಗೆ ತಿಳಿಯದ್ದಲ್ಲ.

ಡಿಸ್ಟ್ರಿಕ್ಟ್ ಬೋರ್ಡಿನ ಸ್ಕೂಲು ಮಾಸ್ತರುಗಳಲ್ಲಿ ಕೆಲವರು ಪ್ರೈಮರಿ ಮಾತ್ರ ಪಾಸಾದವರಾಗಿಯೂ ಕೆಲವರಿಗೆ ತಮ್ಮ ಸ್ವಂತ ಮನೆವಕ್ಕರ ಕೆಲಸಕೊಟ್ಟು ಸರಿಯಾಗಿ ಸ್ಕೂಲಿಗೆ ಬಾರದವರಾಗಿಯೂ ಆ ಮೇಲೆ ಸರಿಯಾದ ಹೊತ್ತಿಗೆ ಹಂಚಾಯಿತದಾರರೊಂದಿಗೆ ಮಧ್ಯಪಾನಕ್ಕೆ ಹೋಗುವವರಾಗಿಯೂ ಇದ್ದಾರೆ. ಇಂಥವರಿಗೆ ಸಂಬಳ ಹೆಚ್ಚಿಸಬೇಕೆಂದು ನಾವು ಕೊಡದಾದುತ್ತದರಿಂದ ಪ್ರಯೋಜನವೇನಾಯಿತು? ಅದ್ದರಿಂದ ಸಂಬಳ ಹೆಚ್ಚಿಸುವ ಪಕ್ಷ ತಮ್ಮ ಮನೆಯಿಂದ 10 ಮೈಲುಗಳ ಮೇಲೆ ಇರುವ ಸ್ಕೂಲಿನಲ್ಲಿ ಮಾತ್ರ ಇವರಿಗೆ ಕೆಲಸ ಕೊಡಬೇಕೆಂದು ನನ್ನ ಅಭಿಪ್ರಾಯ. ನಾಳೆಗಾದರೂ ಪ್ರತಿಯೊಬ್ಬ ಸ್ಕೂಲು ಮಾಸ್ತರು ತಮ್ಮ ಗದ್ದೆಯನ್ನು ಹೂಡಿ ಊಟಮಾಡಿ ಸ್ಕೂಲಿಗೆ ಹೋಗುತ್ತವರಾಗಿದ್ದಾರೆ. ಅವರವರಿಗೆ ದಕ್ಷಮಾನೀಟರುಗಳು ಪಾಠ ನಡಿಸುವವರಾಗಿದ್ದಾರೆ. ಇದರಿಂದೇನು ಪ್ರಯೋಜನವಾಯಿತು? ಸಂಬಳ ಹೆಚ್ಚಿಸುವ ಬಗ್ಗೆ ಚರ್ಚಿಸುವಾಗ 10 ಮೈಲುಗಳ ಮೇಲೆ ದೂರದಲ್ಲಿರುವ ಸ್ಕೂಲಿನಲ್ಲಿ ಮಾತ್ರ ಕೆಲಸ ಕೊಡಬೇಕಾಗಿ ತೀರ್ಮಾನ ಮಾಡಬೇಕಾದದ್ದು ಅತ್ಯವಶ್ಯವಾಗಿತ್ತು. ಇನ್ನು ಮುಂದಾದರೂ ಡಿ. ಬೋರ್ಡಿನ ಮೆ|| ಸ್ಕೂಲ ಅ|| ಇನ್ಸ್‌ಪೆಕ್ಟರವರು ಈ ವಿಷಯ ಗಮನಕ್ಕೆ ತರಬೇಕಾಗಿ ನನ್ನ ಪ್ರಾರ್ಥನೆ.

I. K.

(Reforms) ಮಾರ್ಪಾಡುಗಳು

ನಾನು ಕಳೆದ ತಾರೀಖು 12 ನೆ ಸಂಚಿಕೆಯಲ್ಲಿ (Reforms) ಎಂಬ ಹೆಸರಿನಿಂದ ನಮಗೆ ಈಗ ಕೊಡಬಹುದಾದ ನ್ಯಾಯ ನಿರ್ಮಾಣಕ ಸಭೆಯ ವಿಷಯ ಬರೆದಿದ್ದನ್ನು [illegible] ಓದಿದೆನು. ಅದೆ ಪ್ರಕಾರ [illegible] ಮುಖ್ಯ ಕಮೀಷನರವರ ಮೂಲಕ [illegible] ಸಂಘ ಸಭೆಯಲ್ಲಿ ವಿಶೇಷ [illegible] ತಾರೀಖು 16 ರ [illegible] ಆದ [illegible] ನಿರ್ಣಯಕ್ಕೆ ವಿರೋಧವಾಗಿ [illegible] ಈ ನ್ಯಾಯವಿಧಾಯಕ ಸಭೆಯನು ಅಂಗೀಕರಿಸಿ ಕೆಲಸ [illegible] ಬಹುದೆಂದು ಮಾತಾಡಿದವರೂ ಮತ್ತು ಮಾನನೀಯ [illegible] ದೇರ ಮತ್ತು ಸಂಘದವರುಗಳೆಂದು ಹೇಳಲು [illegible] ವಿರುದ್ಧವಿಲ್ಲ. [illegible] ತಮ್ಮ ಅಭಿಮತವನ್ನು ಸ್ಪಷ್ಟವನ್ನು ತೋರಿಸಿದ್ದಾಯಿತು. ಇನ್ನು ಸದರಿ ನ್ಯಾಯನಿರ್ಮಾಣಕ ಸಭೆಯಲ್ಲಿ ಒಬ್ಬೊಬ್ಬರಾಗಿ ಕುಳಿತು ತಮ್ಮ ಸ್ಥಾನವನ್ನು ಶೋಭಿಸಲು [illegible] ಯ ಎಲ್ಲವರಿಗೆ ದೇಶದವರು ಯಾವ ವಿಧದಲ್ಲಿ ಸತ್ಕಾರಮಾಡಬೇಕೆಂಬ ಸಂಗತಿ ಎಲ್ಲರೂ ಆಲೋಚಿಸತಕ್ಕ ವಿಷಯವಾಗಿದೆ.

ದೇಶೀಯರಿಗೆ ಯಾರನ್ನು ಸದರಿ ಸಭೆಗೆ ನಾಮಕರಣ [illegible] ಯಿಸಬೇಕೆಂಬುದು ಈಗ ತಿಳಿಯಲು ಒಳ್ಳೆ ಸಮಯ. ಅದ್ದರಿಂದ ಎಲ್ಲ ದೇಶೀಯರಿಂದ ಯಾವ ಹುದರಿಕೆಯ [illegible] ಬರುವಂಥವರಾಗಿ ಸದರಿ ಸಭೆಯಿಂದ ನಮಗೆ ಆಗಬೇಕಾದ ಅಭಿವೃದ್ಧಿಯಲ್ಲಿ ಮುಂದಕ್ಕೆ ಬರುವವರನ್ನು ದೇಶಸೇವಾ ನಿರತರನ್ನೂ ಯಾವ ನಿರೀಕ್ಷಣೆಯ ಹಸ್ತಲಾಘವಕ್ಕೆ ಪ್ರಯೋಜನ ಹೊಂದಿಕೊಳ್ಳಲು ಮುಯ್ಯಾಗದವರನ್ನೂ ಬಡಜನರ ಸ್ನೇಹಿತರನ್ನೂ ಊರೂರು ಸಂಚರಿಸಿ ದೇಶೀಯರ ಕಷ್ಟಸುಖವನ್ನು ತಿಳಿಯುವವರನ್ನು ಮಾತ್ರ ಸದರಿ ಸಭೆಗೆ ಮೆಂಬರಾಗಿ ಚುನಾಯಿಸಬೇಕಲ್ಲದೆ ಮೇಲೆ ನಮೂದ ಮಾಡಿದಂತ ಭೂಷಣ ಪುರುಷರನ್ನು ಸಭೆಗೆ ಆರಿಸಿದ್ದೇ ಆದರೆ ನಮ್ಮ ದೇಶದ ಸ್ಥಿತಿಯು [illegible] ನವಾಗುವದರಲ್ಲಿ ಸಂದೇಹವಿಲ್ಲ.

ದೇಶಸೇವಕ

ಕೊಡಗು ವಿದ್ಯಾಭಿವೃದ್ಧಿ ಸಂಘ

ಅಯ್ಯಾ,

ನಮ್ಮ ಊರಲ್ಲಿ ಒಂದು ವಿದ್ಯಾಭಿವೃದ್ಧಿ ಸಂಘವಿದೆ. ಕೊಡಗರ ಪೈಕಿ ಬಡವರಾದವರಿಗೆ ವಿದ್ಯೆಯನ್ನು ಮುಂದರಿಸಲಿಕ್ಕೆ ಸಹಾಯವಾದ ಬೇಕೆಂಬುದೇ ಈ ಸಂಘದ ಮುಖ್ಯೋದ್ದೇಶ. ಇಂಥಾ ಸಂಘವು ಸ್ಥಾಪಿಸಿ ಇರುವ ಕಾರಣ ಬಡವರಿಗೆ ಸಹಾಯ ದೊರೆಯ ಬಹುದೆಂಬ ಅಭಿಪ್ರಾಯದಿಂದ ಅನುಕೂಲ ಕಡಿಮೆಯಾದವರು ಸಂಘದವರನ್ನು ಸಹಾಯ ಕೇಳುವದು ನ್ಯಾಯ. ಇಂಥಾ ಸಂಘದ ಸ್ಥಾಪನೆ ಇಲ ವಿದ್ಯಾರ್ಥಿಯಾದ ಕೇಳರು [illegible]ಗಿರುವಾಗ ಸಹಾಯ ಕೇಳುವವರ (Applicants) ವಿಷಯಗಳನ್ನು ಯೋಚಿಸಿ ಯೋಗ್ಯರಾದ (Deserving) ವಿದ್ಯಾರ್ಥಿಗಳಿಗೆ ಸಹಾಯಕೊಡಬೇಕಾದ್ದು ನ್ಯಾಯವಲ್ಲವೇ? ಒಂದು ವೇಳೆ ಸಂಘದ ಖಾನೂನು (Rules) ಚೆನ್ನಾಗಿ ತಿಳಿಯದವರು ಸ್ವಲ್ಪ ಸಮಯ ತಪ್ಪಿ ಬರಕೊಂಡರೂ ಸಹ ಅದಷ್ಟು ಮಟ್ಟಿಗೆ ಯುಕ್ತನಿಸಿ ಬಡವರಿಗೆ ಸಹಾಯ ಮಾಡುವದಲ್ಲವೇ ಸಂಘದ ಧರ್ಮ. [illegible] ಒಬ್ಬಾತನು ಸಂಘದಿಂದ ಸ್ಕಾಲರ್‌ಶಿಪ್ ಮೂಲಕ ಸಹಾಯ ಕೊಡಬೇಕೆಂದು ಕೇಳಿಕೊಂಡಿರುವಾಗ ಅವನ ವಿಷಯವನ್ನೇ ಯೋಚಿಸದೆ ಒಂದೇ ಒಂದು ಅರ್ಜಿಯ ವಿಷಯವಾಗಿ ಯಾಕೆ ಮೀಟಿಂಗ್ ಮಾಡುವದು ಹೊತಗೊಂದು ಬರಲಿ ಎಂಬದಾಗಿ ಉದಾಸೀನ ಮಾಡಿದರೆ ಮೊದಲನೆಯವನಿಗೆ ಏನು ಸಹಾಯ ದೊರೆದಂತಾಯಿತು. ಇನ್ನೊಬ್ಬನು ಕೇಳುತ್ತಾನೆಂಬ ನಂಬಿಕೆ ಏನಿದೆ? ಹೀಗೆ ಮಾಡುವದರಿಂದ ಮೊದಲನೆಯವನಿಗೆ ಅನಾವಶ್ಯಕವಾದ ಡೀಲಿಯಲ್ಲವೇ? ಇಂಥಾ ವಿಷಯಗಳನ್ನು ನೋಡಿದರೆ ಮೆಂಬರುಗಳಿಗೆ ಬೇಕಾದವರು, ವಾರಿಸ್ದಾರರು ವಗೈರೆಯವರನ್ನು ನೋಡಿ ಸಂಘದಿಂದ ಸಹಾಯ ಮಾಡುವದಲ್ಲದೆ ಬೇರೆ ಬಡವಾಗಿ [illegible] ವಿನಹ ಯಾವ ಸಹಾಯವೂ ದೊರೆಯದಂತೆ ತೋರುತ್ತಿದೆ. ಇದು ವ್ಯಸನಕರವಾದ ಸಂಗತಿಯಲ್ಲವೇ? ಆದಕಾರಣ ಇನ್ನು ಮುಂದಕ್ಕಾದರೂ ಸಂಘದ ಮೆಂಬರುಗಳು ಅದಷ್ಟುಮಟ್ಟಿಗೆ ಬಡ ಜನರಿಗೆ ಸಂಘದಿಂದ ಸಹಾಯದೊರಕಿಸಿ ಸಂಘವನ್ನು ಸಹ ಅಭಿವೃದ್ಧಿಗೆ ತಂದು ಸಂಘವು ಬಹುಕಾಲ (Ever standing) ನಡೆಯುವಂತೆ ಮಾಡಬೇಕಾಗಿ ಕೋರುವ

ಅನುಭವದಾರ

ಕೈಗಾರಿಕೆ

ನಮ್ಮ ದೇಶದಲ್ಲಿ ಸಾಧಾರಣವಾಗಿ ಯಾವ ಕೈಗಾರಿಕೆಯೂ ಇಲ್ಲದೆ ಇರುವದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ನಮ್ಮ ಹಿತಚಿಂತಕರಾದ ಧುರೀಣರು ಸ್ಟೇಜಿನ ಮೇಲೆ ಬಂದು ಉಪನ್ಯಾಸಕೊಟ್ಟು ತಮ್ಮ ಸೊಗಸಾದ ಮಾತಿನಿಂದ ಜನರಿಗೆ ಸಂತೋಷಪಡಿಸುತ್ತಾರೆ. ಆದರೆ ನಮ್ಮ ಒಡಬನರ ಹೀಳಿಕ್ಕಾಗಿ ಕೈಗಾರಿಕೆ ವಿಷಯದಲ್ಲಿ ಏನೊಂದು ಮಾತೂ ಆಡುವುದಿಲ್ಲ.

ಈಗಿಗೆ ಚರ್ಕಗಳಿಂದ ದೇಶೋದ್ಧಾರಕೆಯ ಕಾರ್ಯ ಹೇಗೆ ಸಾಧಿಸಬಹುದೆಂಬುದನ್ನು ವಿಸ್ತಾರವಾಗಿ ಎಲ್ಲಾ ಕಡೆಗಳಲ್ಲಿಯೂ ವಿವರಿಸುತ್ತಾ ಇದ್ದಾರೆ. ಆದರೆ ಕೊಡಗಿನ ಹಿತಚಿಂತಕರ ನಾಲಿಗೆಯು ಈ ವಿಷಯದಲ್ಲಿ ತಟಸ್ಥವಾಗಿದೆ. ಅನೇಕ ಜಾಗಗಳಲ್ಲಿ ಸಭೆ ಸೇರುತ್ತ ಆದರೆ ಇದರ ವಿಷಯದಲ್ಲಿ ಯಾರೂ ಬೋಧಿಸುವದಿಲ್ಲ.

ಈ ದೇಶವು ಹೇಗೇಗೆ ತಮಗೆ ಬೇಕಾದ ವಸ್ತ್ರಕ್ಕೆ ಪರದೇಶದ ಮೇಲೆ ಅವಲಂಬಿಸಬೇಕಾಗಿ ಬಂತೋ ಹಾಗೆಯೇ ದೇಶದ ದರಿದ್ರ ಹೆಚ್ಚುತ್ತಾ ಬಂತು. ಕೊಡಗಿನ ಸಾಧಾರಣ ನಾಲ್ಕು ಸಾವಿರ ಖಂಡಿ [illegible] ಟಿಪ್ ಕಾಫಿ ಮತ್ತು ಯಾಲಕ್ಕಿ ಮಾರಿ ಬಂದ ಹಣದಲ್ಲಿ ಹೆಚ್ಚಿನ ಭಾಗ ಬಟ್ಟೆಗಳಿಗಾಗಿ ಪರದೇಶಗಳಿಗೆ ಹೋಗುತ್ತದೆ.

ಚರ್ಕಗಳ ಮೂಲಕ ನೂಲನ್ನು ತಯಾರಿಸಿ ಬಟ್ಟೆಗಳನ್ನು ಸ್ವದೇಶದ ಈ ಬಟ್ಟೆಗಳನ್ನು ಉಪಯೋಗಿಸಿದರೆ, ಮತ್ತು ನಿಪಟವಾದವನ್ನು ಸೇವಿಸುವುದು ಬಿಟ್ಟರೆ ನಮ್ಮ ದೇಶದ ದರಿದ್ರವು ಕಡಿಮೆಯಾಗುವುದಕ್ಕೆ ಸಂದೇಹವಿಲ್ಲ.

ಚರ್ಕಗಳನ್ನು ಪ್ರತಿ ಗ್ರಾಮಗಳಲ್ಲಿ ಉಪಯೋಗಿಸುವಂತೆ ಮಾಡುವದು ದೇಶಭಕ್ತರ ಕೆಲಸವಾಗಿದೆ. ಜಮಾನ್‌ದಾರರ ಸಂಘವು ಆಯಾ ತಾಲ್ಲೋಕುಗಳಲ್ಲಿ ಸ್ಥಾಪಿಸಲ್ಪಟ್ಟಿವೆ. ಈ ಸಂಘಗಳ ಮೂಲಕ ಚರ್ಕಗಳನ್ನು ಗ್ರಾಮನಿವಾಸಿಗಳಲ್ಲಿ ಹಂಚಲಿಕ್ಕೂ ಚರ್ಕಗಳಿಂದ ತಯಾರಾದ ನೂಲು ತೆಗೆದುಕೊಳ್ಳುವವರಿಗೂ ಹತ್ತಿಯನ್ನು ಒದಗಿ ಕೊಡುವುದಕ್ಕೂ ಅನುಕೂಲವಾಗಿರುವದು. ಭೂಮಿ ವ್ಯವಸಾಯ ಮಾಡುವವರು [illegible] ತಿಂಗಳು ಕೆಲಸವಿಲ್ಲದೆ ಇರುತ್ತಾರೆ. ಈ ಸಮಯದಲ್ಲಿ ಇವರೂ [illegible] ಹೆಂಗಸರೂ ಮಕ್ಕಳೂ ಸಹ ಚರ್ಕದ ಕೆಲಸವನ್ನು ಮಾಡಲಿಕ್ಕೆ ಶುರುಮಾಡಿ ನಮ್ಮ ದೇಶದಲ್ಲಿ ಕೈಗಾರಿಕೆಯು ಬಹಳ ಒಳ್ಳೆ ಸ್ಥಿತಿಯಲ್ಲಿ ಇರುವುದು.

ಜಮಾನ್‌ದಾರ ಸಂಘದ ಮೂಲಕ ಚರ್ಕಗಳನ್ನು ಗ್ರಾಮಗಳಲ್ಲಿ ಉಪಯೋಗಿಸುವಂತೆ ಪ್ರಯತ್ನ ಪಡುವದು ಬಹಳ ಅಗತ್ಯವಾಗಿದೆ.

ಈ ಸೂಚನೆಯನ್ನು ತಾಲ್ಲೋಕು ಸಂಘಗಳವರು ಅವುಗಳ ಮೇಲೆ ವಿಚಾರಮಾಡುವದೂ ಆಲೋಚಿಸಬೇಕಾಗಿ ನನ್ನ ಕೋರಿಕೆಯಾಗಿದೆ.

ಕೆಲವರು ಚರ್ಕ ಮತ್ತು ಹತ್ತಿ ಸಿಕ್ಕುವದಿಲ್ಲವಾಗಿ ಹೇಳುತ್ತಾರೆ [illegible] ತೆರಿಯುವವರು ಪತ್ರಿಕೆ ಸಹ [illegible]

ಅಯ್ಯಾ,

[illegible] 1921 ನೆ [illegible] ಸಂಚಿಕೆಯಲ್ಲಿ ಕೊಡಗು [illegible] ಸ್ಯದ ವಿದ್ಯಾರ್ಥಿಗಳ [illegible] ಕೆಲವು ಸಂಗತಿಗಳು ಕಂಡು [illegible] ನಡೆದ ವಿಷಯವಾಗಿ [illegible] ಮ|| [illegible] ನವರು [illegible] ಸಂಗತಿಗಳೆಲ್ಲಾ ಇನ್ನೂ [illegible] ಎಂಬುದೇನೊ ನಿಜ. ಅಲ್ಲದೆ ಕೆಲವು ತಿಂಗಳಿಂದ ಕಂಬಾರನ ಪತ್ರಿಕೆಯಲ್ಲಿ 'ನಮ್ಮ ಕೋರಿಕೆ' ಎಂಬ ಒಂದು ಬಾತ್ಮಿಯು ಸಹ ಇತ್ತು. ಅದರಲಿ ಕೆಲವು ವೀರಶೈವ ಮುಖ್ಯರ ಹೆಸರುಗಳೂ ಸಹ ಪ್ರಸಿದ್ಧ ಪಡಿಸಿತ್ತು. ಆದರೆ ಆ ಮಹನೀಯರು ಅದರ ವಿಷಯವಾಗಿ ಯಾವದೊಂದು ಏರ್ಪಾಡನ್ನೂ ಮಾಡಲಿಲ್ಲ. [illegible] ಸಂಗತಿಗಳನ್ನೆಲ್ಲಾ ಆಲೋಚಿಸಿದರೆ ನಮ್ಮ ಕೊಡಗಿನಲಿ ವೀರಶೈವರು ಎಷ್ಟುಮಟ್ಟಿಗೆ ಪರೋಪಕಾರ ಬುದ್ಧಿಯುಳ್ಳವರೆ ನಿರಾಯಾಸವಾಗಿ ತಿಳಿದುಕೊಳ್ಳಬಹುದು.

ವೀರಶೈವರೆ ನಿವು ಈಗಲಾದರೂ ನಿದ್ರೆಯನ್ನು ಬಿಡಿ ನ[illegible] ಕಂಡು ಕೇಳದಹಾಗೆ ವಿದ್ಯೆಯನ್ನು ಅಭಿವೃದ್ಧಿಗೊಳಿಸುವುದಕ್ಕೋಸ್ಕರ ಎಷ್ಟೋ ಮಹಾತ್ಮರು ತಮ್ಮ ಆಸ್ತಿಪಾಸ್ತಿಗಳನ್ನೆಲ್ಲಾ ವಿನಿಯೋಗಿಸ್ತಾರೆ. [illegible] ದಲ್ಲಿ ಮಾಡಿದಂಥ ಪರೋಪಕಾರವೇ ಶಾಶ್ವತವಾಗಿ ನಿಲ್ಲುವುದೇ ಹೊರತು ಅನ್ನಾಹಾರಾದಿಗಳನ್ನು ತೊರೆದು ಸಿಗೆ ಕಾಸನ್ನು ಸೇರಿಸಿ ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸಿ ನಿಮಗೇನಿದರೂ ಯಶಸ್ಸುಂಟಾಗಲಾರದು.

ಸಾಧಾರಣವಾಗಿ ನಮ್ಮ ಕೊಡಗಿನ ವೀರಶೈವ ಶ್ರೀಮಂತರ ಸ್ವಾರ್ಥತೆ ಇರುವದೆ ಹೊರತು ಪರೋಪಕಾರ ದೇಶಸೇವೆ ಮೊದಲಾದ ಸುಗುಣಗಳು ಶೂನ್ಯವಾಗಿರುತ್ತದೆ. ನಿಮ್ಮ ಮನೆಗೆ ಒಬ್ಬನು ಹೋಗಿ ಹಸಿವನ್ನು ತಾಳಲಾರದೆ ಊಟಕ್ಕೆ ನೀಡಿ ಎಂದು ಕೇಳಿದರೆ ನಿಮಗೆ ಊಟಕ್ಕೆ ನೀಡಲು ಶಕ್ತಿ ಇಲ್ಲದಿದ್ದರೆ ಊಟ ಕೊಡುವ ಧಾರ್ಮಿಕರ ಮನೆಗಾದರೂ ಕರೆದುಕೊಂಡು ಹೋಗಬೇಕು. ಹೀಗೆ ಮಾಡಿದರೆ ನೀವು ಈ ಭೂಲೋಕದಲ್ಲಿ ಜನಿಸಿದ್ದು ಸಾರ್ಥಕವಾಗುವುದು. ಆದರೆ ನಿಮಗೆ ಇಂಥಾ ಪರೋಪಕಾರ ಬುದ್ಧಿ ಇಲ್ಲದೆಹೋದರೆ ನೀವು ಈ ಲೋಕದಲ್ಲಿ ಇತರರ ಸಾಧನೆಗೆ ತೀರ[illegible] ಬಾಗುತ್ತದೆಯಲ್ಲವೆ. ಮಾಲಂಗಾರಿಗಳಲ್ಲದ ಕೊಡಗಿನ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ಮಡಿಕೇರಿ ಮುನಿಸಿಪಾಲಿಟಿಯಲ್ಲಿ ಮ|| [illegible] ಒಂದು ಹಾಸ್ಟೆಲನ್ನು ಸ್ಥಾಪಿಸಿರುತ್ತಾರೆ. ಇವರು [illegible] ಗಳು ಬಹು ಶ್ಲಾಘನೀಯವಾದವುಗಳು. ಇವರ ಸ್ವ[illegible] ನಮ್ಮ [illegible] ಧನ ಸಹಾಯವನ್ನು ಈ ಹಾಸ್ಟೆಲ [illegible] ಇದರಿಂದ ಮ[illegible]ಗಳಲ್ಲದ ವಿದ್ಯಾರ್ಥಿಗಳಿಗೆ ಎಷ್ಟೊಂದು ಅನುಕೂಲತೆಯನು [illegible] ಇಂಥಾ ಉದಾಹರಣೆಯನ್ನು ನಮ್ಮ ವೀರಶೈವರಲ್ಲಿರುವ ಮುಂದಾಳುಗಳು ಏತಕ್ಕೆ ಅನುಸರಿಸಬಾರದು?

ನಮ್ಮ ಕೊಡಗಿನ ವೀರಶೈವರು ಬೇರೆ ಹಾಸ್ಟೆಲನ್ನು ಏರ್ಪಡಿಸುವ ಕೆಲಸವನ್ನು ಪ್ರತ್ಯೇಕವಾಗಿ ಮಾಡಲಾರದೆ ಹೋದರೂ ರಾಮಾ[illegible] ಹಾಸ್ಟೆಲಿಗೆ ನಮ್ಮ ಹುಡುಗರನ್ನು ಸೇರಿಸಲು ಪ್ರಯತ್ನಪಡಬಹುದಲ್ಲ. ಈ ಹಾಸ್ಟೆಲ್ ವಿದ್ಯಾರ್ಥಿಗಳ ಸಮುದಾಯದಲ್ಲಿಯೇ ಇದ್ದುಕೊಂಡು ಭೋಜನದ ಮಟ್ಟಿಗೆ ಮಾತ್ರ ಪ್ರತ್ಯೇಕ ಇದೇ ಭವನದಲ್ಲಿ ಅನುಕೂಲಪಡಿಸಿಕೊಳ್ಳುವದು ಕಷ್ಟಸಾಧ್ಯವಲ್ಲವೇ. ಮ|| ಕಾಳಮ್ಮನ [illegible] ಅನೇಕರಲ್ಲಿ ಹೇಳುತ್ತಿದ್ದರು. ಅದರ ಸಲುವಾಗಿ ಒಂದು ಏರ್ಪಾಡು ಮಾಡಿದರೆ [illegible] ಗರಿಗೆ [illegible] ಗೊತ್ತುಮಾಡುವ [illegible] ದಲ್ಲಿ ವೀರಶೈವರಲ್ಲಿ ಇದ್ದರು ಕೊಡಗಿನ ಪ್ರಸಿದ್ಧವಾದ [illegible] ಶಾಲೆಗಳಲ್ಲಿ ಮುಖ್ಯೋಪಾಧ್ಯಾಯರಾಗಿದ್ದವರಾದ ವೀರಶೈವ [illegible] ಗಳನ್ನು ಓದಿಸಲಾರರೇ. [illegible] ಭಿಮಾನಿಗಳಾದ ನಮ್ಮ ವೀರಶೈವ ಮಹನೀಯರು ಈ ಸಂಗತಿಯನ್ನು ಮನಸ್ಸಿಗೆ ತೆಗೆದುಕೊಳ್ಳದೆ ಕಣ್ಣು ಮುಚ್ಚಿಕೊಂಡಿರುವುದನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ.

ಈಗ ಮಡಿಕೇರಿಯಲ್ಲಿ ವೀರಶೈವ ವಿದ್ಯಾರ್ಥಿಗಳು ಮೇಲೆ ಆನಾನುಕೂಲದ ದೆಸೆಯಿಂದ ಬಹಳ ಕಡಿಮೆಯಾಗಿರುತ್ತಾರೆ. ತಕ್ಕ ಅನುಕೂಲತೆಗಳನ್ನು ಒದಗಿಸಿಕೊಟ್ಟಲ್ಲಿ ದಿನೇದಿನೇ ವೀರಶೈವ ವಿದ್ಯಾರ್ಥಿ ಸಂಖ್ಯೆಯು ಹೆಚ್ಚಿ ನಮ್ಮ ಸಕಾಲದ ಶ್ರೀಮಂತರ ಪ್ರೇಮ ಪುತ್ರರು ವಿದ್ಯಾವಂತರಾದ ತರುಣರು ನಮ್ಮ ಈ ಕೊಡಗಿನಲ್ಲಿಯೇ ದೊರೆಯುವದರಿಂದ ಕೆಲಸವನ್ನೆಲ್ಲಾ ಬಿಟ್ಟು ವರರನ್ನು ಹುಡುಕಲು ದೇಶ[illegible] ಮಾಡುವ ತೊಂದರೆಯು ಕಡಿಮೆಯಾದೀತೆಂದು ಹಾರೈಸುತ್ತೇನೆ.

ಹಿತಚಿಂತಕ

REGISTERED NO. M. 1550.

ಕೊಡಗು.

ಶ್ರೀಮ ಭಗವದ್ಗೀತಾ ವಿದ್ಯಾನೀತಿರ್ಮತಿರ್ಮಮ | ... ಸುಸ್ಥಿರಾ ...

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

ಸಂಪುಟ ೧] ಕೊಡಗು, ಸ್ ೧೯೨೧ ನೇ ಇಸವಿ ಸೆಪ್ಟೆಂಬರ್ ತಾರೀಖು ೨ ನೆಯ ಶುಕ್ರವಾರ. [ಸಂಚಿಕೆ ೧೪

ವೀರಶೈವರಿಗೆ ಸಂಗ್ರಹಿಸಬೇಕಾದ ಫೋಟೊಗಳು

ಶ್ರೀ ಶಿವಯೋಗಿಗಳ ... —ಭಾಗ್ಯಶಾಲಿ ಜನರು ಹಣವು ಖರ್ಚುಮಾಡಿ ... ಶಿವಯೋಗಿಗಳ ದರ್ಶನವನ್ನು ತೆಗದುಕೊಳ್ಳುತ್ತಾರೆ ... ಶ್ರೀಮಂತರಿಗು ಮತ್ತು ಬಡವರಿಗೂ ನಿತ್ಯದರ್ಶನ ... ಫೋಟೋವ ಹೊರ್ತು ಅನ್ಯಮಾರ್ಗವು ಇಲ್ಲದ ... ಪ್ರಸಿದ್ಧರಾದ ಶ್ರೀ ಜಗದ್ಗುರು ಚಿತ್ರದುರ್ಗ ... ಗದಗ ತೋಂಟದಾರ್ಯ, ಅಥಣಿ ಶಿವಯೋಗಿ ... ಸ್ವಾಮಿ ಬಿಳೂರ, ಹಾನಗಲ್ಲ ... ಸಿದ್ದ ... ಮುಂತಾದ ೧೮ ಮಹಾಸ್ವಾಮಿಗಳ ಫೋಟೋ ಕೂಡಿಸಿದ ಕಾರಣ ಒಂದೇ ಕಾಲದಲ್ಲಿ ... ದರ್ಶನ ಆಗುವುವು ೧೮x೧೨ ... ಚಿತ್ರ ... ಯ ೧ ಪ್ರತಿಗೆ ... ಆಣೆ.

ಶ್ರೀ ಕಲ್ಯಾಣ ... ಧರ್ಮೋದ್ಧಾರಕರಾದ ಶ್ರೀ ... ಕ ಚೈತನ್ಯ ವಾದ ... ಫೋ ... ನ ಚಿತ್ರದ ಕ್ರಯ ೧ ಪ್ರತಿಗೆ ...

೧ ಶ್ರೀ ... ತ್ಸವ — ಇದರಲ್ಲಿ ಶ್ರೀ ... ಬಸವೇಶ್ವರ, ... ಅಕ್ಕನಾಗಮ್ಮ ... ಮುಂತಾದ ಪ್ರಮಥಗಣಂಗಳ ಸಹ ... ಮಾಡುತ್ತ ಇದ್ದ ... ಇರುತ್ತದೆ ದೊಡ್ಡ ಸೈಜು ರೂ ೧ ಸಣ್ಣಸೈಜು ರೂ |||

೨ ಶ್ರೀ ರೇಣುಕಾ ... ಲಿಂಗೋದ್ಭವವು — ಕೊಲ್ಲಿಪಾಕಿ ... ಲಿಂಗದಲ್ಲಿ ರೇಣುಕಾಚಾರ್ಯರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವ ಫೋಟೋ ಇರುತ್ತದೆ ದೊಡ್ಡ ಸೈಜು ರೂ ೧| ಸಣ್ಣ ಸೈಜು ರೂ |||

೩ ಶ್ರೀ ರೇಣುಕಾಚಾ... ರು ಅಗಸ್ತ್ಯ ಮಹಾಮುನಿಗಳಿಗೆ ... ಉಪದೇಶಿಸುವಿಕೆ — ಇದರಲ್ಲಿ ಅಗಸ್ತ್ಯ ... ತಮ್ಮ ಪತ್ನಿ ಲೋಪಾಮುದ್ರ ... ಉಪದೇಶಮಾಡಿಕೊಳ್ಳುತ್ತಾ ಇದ್ದಾರೆ ದೊಡ್ಡ ಸೈಜು ರೂ ೧| ಸಣ್ಣ ಸೈಜು ರೂ |||

೪ ಶ್ರೀ ವೀರಭದ್ರ ... ಹನುಮಂತನಿಗೆ ಲಿಂಗಧಾರಣವು — ... ಹನುಮಂತನು ಮೋಕ್ಷಪ್ರಾಪ್ತಿಗಾಗಿ ಲಿಂಗಧಾರಣ ಮಾಡಿಕೊಂಡ ಫೋಟೊ ಇರುತ್ತದೆ ದೊಡ್ಡ ಸೈಜು ರೂ ೧| ಸಣ್ಣ ಸೈಜು ರೂ |||

ಶ್ರೀ ವೀರಶೈವ ... —ಇದರಲ್ಲಿ ಕೊಡಗು ದೇಶದ ಲಿಂಗರಾಜೇಂದ್ರ, ವೀರರಾಜೇಂದ್ರ ಒಡೆಯರ ... ಮಹಾರಾಜ ... ಮತ್ತು ಗೊರವಾ ... ಫೋಟೋ ... ಇರುತ್ತವೆ ಕ್ರಯ ಫುಲ್ಲಸೈಜು ೧| ರೂ. ಕ್ಯಾಬಿನೆಟ್ ೧೨ ಆಣೆ

ಶ್ರೀಮುರುಘ ಗದ್ದುಗೆ ಚಿತ್ರದುರ್ಗ ಮಹಾಸ್ವಾಮಿಗಳ — ಅತ್ಯಂತ ಸುಂದರವಾದ ಕೈಬಣ್ಣದ ಫೋಟೋ ಕ್ರಯ ಪ್ರತಿ ೧ ... ರೂ. ೧ ಸಾದಾ ರೂ |||

ಸೂಚನೆ:—ಭಾರಿ ಖರೀದಿದಾರರಿಗೆ ತಕ್ಕಷ್ಟು ಕಮಿಷನ್ ದೊರೆಯುವದು

ವಿಳಾಸ ... ಗಂಗಪ್ಪ ಚೀರಗೆ,

ಮಾಲೀಕ, ... ಶಾರದಾ ಫೋಟೊ ಕಂಪನಿ, ಸೋಲಾಪುರ.

CHANGE OF NAME

Please note that our press hitherto styled as The Sreenivasa Press, will hereafter be changed to SREENIVAS ELECTRIC PRESS, MYSORE

ಪ್ರಕಟಣೆ.

1922 ನೇ ಇಸವಿಯಲ್ಲಿ ಪ್ರಾರಂಭ ... ಯದಲ್ಲಿ ಪಲಿಮಾರು ಮಠದ ಶ್ರೀ ಪಾದಂಗಳವರ ... ಉಡುಪಿ ಶ್ರೀ ಕೃಷ್ಣ ದೇವರ ಪೂಜೆಯ ಸಹಾಯಾರ್ಥ ... ' ಶ್ರೀಕೃಷ್ಣ ಸೋಡ್ತಿ ' ... ಯಾನೆ ಸೋಡ್ತಿಯನ್ನು ... ಟಿಕೇಟು ಒಂದರ ಒಂದು ರೂ ಅಗಿರು ... ಅದರಲ್ಲಿ 1 ನೇ ಇನಾ ರೂಪಾಯಿ 2000-0-0 ರ ... ನೇ ಇನಾಂ ರೂ 1000-0-0 ರದ್ದು, ರೂ ...0-0-0 ರ ಇನಾಂ ... ರೂ 10-0-0 ರ ಇನಾಂ ... ಇನಾಂಗಳು 200 ಎಂತ ನಿಶ್ಚಯಿಸುವದೆ ... ರಿಂದ ಎಲ್ಲ ಸುಜನರುಗಳು ತಮ್ಮ ... ಟಿಕೇಟುಗಳನ್ನು ಪಡೆದು ಶ್ರೀಹರಿ ವಾಯುಗಳ ... ಪಾತ್ರರಾಗಬೇಕಾಗಿ ಅಪೇಕ್ಷಿಸೋಣಾಗುತ್ತದೆ ... ಪತ್ರವ ... ಗಳನ್ನು ಈ ಕೆಳಗಿನ ವಿಳಾಸಕ್ಕೆ ಮಾಡತಕ್ಕದ್ದು

ಮ್ಯಾನೇಜಿಂಗ್ ಸೆಕ್ರೆಟರಿ

ಶ್ರೀಕೃಷ್ಣ ಸೋಡ್ತಿ

ಕೊಡಿಯಾಲಬೈಲ್ ಪೋಸ್ಟ್, ...

ಸಹಕಾರ ಬೇಕೇ ?

ಬೇಕಾದವರು ನಮ್ಮಲ್ಲಿ ... ರುವ ... ಗುದ್ದಲಿ, ಬೂಟೀಸ್, ... ಲ್ಯಾಂಪ್, ಸಮೂನೆ ಚಟ್ಟಿ ... ಸಾಮಾನುಗಳನ್ನು ಒಂದುಸಲ ಬಂದು ನೋಡಿರಿ

ಹೆಚ್ಚಿನ ಸಂಗತಿಗಳು ಕೆಳಗಿನ ವಿಳಾಸಕ್ಕೆ ಬರೆದು ತಿಳಿಯುವದು

COMMERCIAL STORE,

General Merchants, Commission **Agents and** Furniture Suppliers

12-11 MURNAD, COORG

For Sale— ಮಾರಾಟಕ್ಕೆ ! ! !

ಹಳೇ ದಾಸ್ತಾನು ಮಾರಿಕೊಂಡು ಹೋಸ ... ದ

ಐಶ್ವರ್ಯವಂತರಿಗೆ ಉಪಯುಕ್ತವಾದ ಸಂಧರ್ಭ

ಸಿದ್ದಾಪುರದ ಸಮೀಪದಲ್ಲು ಒಳ್ಳೆ ಕರಡ ... ವಾಗುವರೆಯಾಗಿರುವ ಭತ್ತದ ಭೂಮಿಯು (೫೦) ಐದು ನೂರು ಬಟ್ಟಿಹೊಲ ವರಿಕೆಯುಳ್ಳದು ಒಳ್ಳೆ ಮರ ... ೪೦ ಎಕರೆ ಸಹಿತ ಶುದ್ಧ ಕ್ರಯ (6000-0-0) ಆರು ... ರೂ ಪಾಯಿಗಳಿಗೆ ಮಾರಾಟಕ್ಕೆ ಇರುವದರ ... ಅಪ್ಲಿಸಿಗೆ ಬರೆದುಕೊಂಡಲ್ಲು ತಿಳಿಯಲಾಗುವದು

ವೀರಾಜಪೇಟೆ.	The Veeraj Pet,	
ವರ್ಕ್‌ಷಾಪ್	Work	
ವೀರಾಜಪೇಟೆ	Veeraj Pet	

“ಕೊಡಗು”

ರಾಜಕೀಯ ವಿದ್ಯಾ ... ಜ್ಞಾನ ಮತ್ತು ಸೀಡ ... ದ ವಿಷಯಗಳಿಂದೊಡಗೂಡಿದ ಕೊಡಗಿನ ... ವಾರ ಪತ್ರಿಕೆ

... “ಕೊಡಗು” ಪತ್ರಿಕೆ ... ಸಂಖ್ಯೆ ... ದ ... ಭಾಷೆ ... ಜ್ಞಾನ ... ಪ್ರಕಟಿಸಲು ...

ಪ್ರಕಟಣೆಗಳು.

... ಮುದ್ರಣಕ್ಕೆ ... ಮತ್ತು ಸಂಚಿಕೆ ... ಬರೆದು ತಿಳಿದುಕೊಳ್ಳಬಹುದು

ಮ್ಯಾನೇಜರ್,

“ಕೊಡಗು” ಲಿಮಿಟೆಡ್, ಮಡಿಕೇರಿ.

INSURE YOUR CAR

Against Accident and Fire.

Apply to—

K. R. Thirupad & Bros.,

Sub Agents for

The Autocar Fire & Accident Insurance Co., Ltd., LONDON.

JUST ARRIVED FRESH STOCK OF

GOOD RICH TYRES

Best and Cheapest in the World.

Apply to—

K. R. Thirupad & Bros.,

Sayaji Rao **Road,**

12 10 **MYSORE.**

SUBBANNA, SANGAPPA,

Receiving and Forwarding **Agents, General Merchants and Commission Agents**

Santhepet, Mysore,

Despatch and supply whatever you receive at Mysore Railway Station and whatever food stuffs and Stationaries you want to have from Mysore Prompt attention moderate commission and quick disposal are their motto

ಮೈಸೂರು ರೈಲ್ವೆ ಸ್ಟೇಷನಿನಿಂದ ನಿಮ್ಮ ಹೊಂದಬೇಕಾದ ಸಾಮಾನುಗಳ ರೈಲ್ವೆ ಪಾರ್ಸಲುಗಳನ್ನೂ, ಮೈಸೂರಿನಿಂದ ತರಿಸಿಕೊಳ್ಳಬೇಕಾದ ಸಾಮಾನುಗಳ ಪಟ್ಟಿಯನ್ನು

ಮೈಸೂರು. ಸಂತೇಪೇಟೆಯಲ್ಲಿರುವ

ಸುಬ್ಬಣ್ಣ ಸಂಗಪ್ಪನವರಿಗೆ ಕಳುಹಿಸಿ.

ಅವರು ಜಾಗ್ರತೆಯಾಗಿಯೂ, ಜೋಪಾನವಾಗಿಯೂ, ಸುಲಭವಾದ ಕಮಿಷನ್ನಿನಲ್ಲಿಯೂ ನಿಮಗೆ ಸಹಾಯ ರವಾನಿಸುತ್ತಾರೆ. ಮಿಕ್ಕ ವಿಚಾರ ಬರೆದು ತಿಳಿದುಕೊಳ್ಳಿ.

ಎಲ್ಲಾ ಚಂದಾದಾರರುಗಳಿಗೆ ವಿಜ್ಞಾಪನೆಗಳು.

ಕಳೆದ ವಾರದಿಂದೀಚೆಗೆ ಕೆಲವು ಪತ್ರಿಕೆಗಳು ತಿರಸ್ಕರಿಸಲ್ಪಟ್ಟು, ಆಫೀಸಿಗೆ ಹಿಂದಕ್ಕೆ ಬಂದಿರುತ್ತವೆ. ವಾಚಕರೇ ತಿರಸ್ಕರಿಸಿರುತ್ತೀರೋ, ಇಲ್ಲವೋ ಎಂಬುದು ನಮಗೆ ತಿಳಿಯುವುದಿಲ್ಲ. ಕಳೆದ ಎರಡು ತಿಂಗಳಿಂದ ಪತ್ರಿಕೆಯನ್ನು ಸ್ವೀಕರಿಸಿಕೊಂಡು ಓದುತ್ತಾ ಬಂದು, ಈಗ ಅಕಸ್ಮಾತಾಗಿ ಹೀಗೆ ವಾಪಾಸು ಮಾಡುವುದು ದೇಶಾಭಿಮಾನಿಗಳಿಗೆ ತಕ್ಕದಾಗಿ ಕಾಣುವುದಿಲ್ಲ. ಈ ಪತ್ರಿಕೆಯು ದೇಶೋದ್ಧಾರಕ್ಕಾಗಿ ಹೊರಟಿದೆಯಲ್ಲದೆ, ವಿಶೇಷ ಲಾಭಸಂಪಾದನೆಗಲ್ಲವೆಂಬುದು ದೇಶೀಯರಿಗೆ ತಿಳಿಯದ ಸಂಗತಿಯಲ್ಲ. ಆದ್ದರಿಂದ ದೇಶಾಭಿಮಾನವನ್ನು ತೋರಿಸಲಿಕ್ಕೂ, ದೇಶಸೇವೆಯಲ್ಲಿ ಭಾಗಿಗಳಾಗಲಿಕ್ಕೂ ದೇಶೀಯರೆಲ್ಲರೂ ಈ ಪತ್ರಿಕೆಗಳನ್ನು ತರಿಸಿಕೊಂಡು ಸರ್ವ ವಿಧದಲ್ಲಿಯೂ ಪ್ರೋತ್ಸಾಹಕೊಡಬೇಕಾಗಿ ಎಲ್ಲಾ ವಾಚಕರಲ್ಲಿ ಅಪೀಲು ಮಾಡಿಕೊಳ್ಳುತ್ತೇವೆ. ಪತ್ರಿಕೆ ಬೇಡದವರು ತಮ್ಮ ಪತ್ರಿಕೆಯ ನಂಬರನ್ನೂ, ತಮ್ಮ ಹೆಸರನ್ನೂ ಪ್ರತ್ಯೇಕ ಬರೆದು ಆಫೀಸಿಗೆ ತಿಳಿಸಬೇಕಲ್ಲದೆ ದಯವಿಟ್ಟು ತಿರಸ್ಕಾರ ಮಾಡಬಾರದಾಗಿ ಕೇಳಿಕೊಳ್ಳುತ್ತೇವೆ.

ಎಡಿಟರ್

"ಕೊಡಗು"

೧೯೨೧ನೇ ಇಸವಿ ಸೆಪ್ಟಂಬರ್ ತಾ|| ೨

ಶುಕ್ರವಾರ

ಭತ್ತದ ವ್ಯವಸಾಯ.

ಗುಡ್ಡಬೆಟ್ಟಗಳಿಂದ ಕೂಡಿ ಪೈರುಪಚ್ಚೆಗಳಿಂದ ರಮಣೀಯವಾಗಿ ಇರುವ ಚಿಕ್ಕಪ್ರಾಂತ್ಯವಾದ ನಮ್ಮ ಈ ಕೊಡಗು ದೇಶವು ಪ್ರಥಮತಃ ಬರುವ ಪ್ರತಿಯೊಬ್ಬ ವಿದೇಶಿಯನಿಗೂ ಅತ್ಯಂತ ಮನೋಲ್ಲಾಸವನ್ನುಂಟುಮಾಡುತ್ತದೆ. ಎಲ್ಲೆಲ್ಲಿಯೂ ಬೆಳೆದಿರುವ ಮರಗಿಡಗಳಿಂದಲೂ ತೋಪುಗಳಿಂದಲೂ ಸಮೃದ್ಧಿಯಾಗಿ ಬೆಳೆದಿರುವ ಭತ್ತದ ಪೈರಿನಿಂದಲೂ ಕಿಕ್ಕಿರಿದು ಹೋಗಿ ಎಲ್ಲವೂ ಹೊಸದಾಗಿ ಕಾಣುವ ಪರದೇಶಿಯನಿಗೆ ಈ ದೇಶವು ಪ್ರಕೃತಿಯ ತೋಟವೆಂದು ತೋರುವುದು. ಕೂಡಲೆ ಅವನು ದೀನನಾಗಿಯೂ ಕಷ್ಟಗಾರನಾಗಿಯೂ ಇರುವ ಕೊಡಗಿನ ಬಡರೈತನಿಗೆ ಕಠಿಣಾವಸ್ಥೆಯನ್ನು ಉಂಟುಮಾಡುವಂತ ಒಂದು ಊಹನೆಯನ್ನು ಮಾಡುವನು. ಈ ಊಹನೆಯನ್ನು ಇನ್ನೂ ಬಹಿರಂಗಪಡಿಸಬೇಕೆಂದಾದರೆ ಅನೇಕರು ಹೇಳುವಂತೆ ಈ ಪ್ರಾಂತ್ಯದ ಜನರು ಐಶ್ವರ್ಯವಂತರೂ ಮತ್ತು ಸಂತುಷ್ಟರೂ ಆಗಿದ್ದಾರೆ.

ಈಗ ಬರಯಲೆಣಿಸಿರುವ ವಿಷಯ ವಿವರಿಸುವದಾದರೆ ನಮ್ಮ ದೇಶದ ಮುಖ್ಯೋತ್ಪತ್ತಿಯಾಗಿಯೂ ಜನರ ಮುಖ್ಯಾಹಾರವಾಗಿಯೂ ಇರುವ ಭತ್ತದ ಸಾಮಾನ್ಯ ಕೃಷಿಯನ್ನು ಬರೆಯುವದು ಈ ಲೇಖನದ ಉದ್ದೇಶವಾಗಿದೆ. ನಮಗೆಲ್ಲರಿಗೂ ತಿಳಿದಿರುವ ಹಾಗೆ ಭತ್ತವು ಸರ್ವಸಾಧಾರಣವಾಗಿ ಸಾಧಾರಣ ಮಣ್ಣುಗಳಲ್ಲಿ ಕುಷ್ಕಿ ಪೈರಾಗಿ ಬೆಳೆಸುವ ಧಾನ್ಯವಾಗಿದೆ. ಉತ್ತರ ಸೀಮೆ ಮಾರನಾಡಿನಲ್ಲಲ್ಲದೆ ಇತರ ಊರುಗಳಲ್ಲೆಲ್ಲಾ ಭತ್ತದ ಬೆಳೆಯು ಮುಖ್ಯವಾಗಿ ವಾಯುವ್ಯ ವರ್ಷದ ನೀರಿನಿಂದಲೇ ಬೆಳೆಯುವುದಾಗಿದೆ.

ಬಟ್ಟಾಲೆ ಪ್ರಾರಂಭದ ಆರಂಭವೇ ತೃಪ್ತಿಕರವಾದದ್ದಲ್ಲ. ಈಗ ಕಂಡು ಬರುವ ಮಟ್ಟಿಗೆ ಕೆಲವರು ಮಾತ್ರ ಭೂಮಿಯನ್ನು ಚೆನ್ನಾಗಿ ಉತ್ತು ಹದಗೊಳಿಸಲು ಪ್ರಯತ್ನಪಡುತ್ತಾರೆ. ಧಾನ್ಯವನ್ನು ಬಿತ್ತಲಿಕ್ಕಿರುವ ಪೈರು ಗದ್ದೆಯನ್ನು (ಯಾಕಲನ್ನು) ಮಾತ್ರ ಚೆನ್ನಾಗಿ ಹದಮಾಡುವದು ಅನೇಕ ಸಂದರ್ಭಗಳಲ್ಲಿ ಉಳಲಿಕ್ಕೆ ಸರಿಯಾದ ಎತ್ತುಗಳೂ ಕೆಲಸಕ್ಕೆ ಆಳುಗಳೂ ಕೆಲವು ವೇಳೆಗಳಲ್ಲಿ ಮಾತ್ರ ಮಳೆಯು ಇಲ್ಲದೆ ಇರುವದು ಇಂಥಾ ಕಂಡಾ ಬಟ್ಟೆ ಆರಂಭಕ್ಕೆ ಕಾರಣವು. ಮುಖ್ಯ ಗೊಬ್ಬರವಾಗಿರುವ ದನಗಳ ಸಗಣಿಯನ್ನು ಎಲ್ಲಾ ಗದ್ದೆಗಳಿಗೆ ಉಪಯೋಗಿಸುವದು ಬಹಳ ಕಡಿಮೆ. ಕಾಲಮಹಿಮೆಯಿಂದಲೂ, ಕಲಿಯುಗ ದೆಸೆಯಿಂದಲೂ ಬೆಳೆ ಫಸಲು ಕಡಿಮೆಯೆಂದು ಜನರ ದೂರು. ಆದರೆ ಬೆಳೆಯು ಕಡಿಮೆಯಾಗುತ್ತಾ ಬರುವದು ಮಣ್ಣಿನ ಸಾರ ಕೆಡುತ್ತಾ ಬರುವದರಿಂದಲ್ಲದೆ ಕಾಲಮಹಿಮೆಯಿಂದಲ್ಲ. ಪೈರು ಗದ್ದೆಗಳಿಗೆ ಸಹ ಕೆಲವು ವೇಳೆಗಳಲ್ಲಿ ಯಥೇಷ್ಟವಾಗಿ ಗೊಬ್ಬರ ಹಾಕುವದಿಲ್ಲ.

ಕೊಡಗಿನಲ್ಲಿ ರೂಢಿಯಾಗಿರುವ ಆರಂಭದ ಪ್ರಕಾರ ಬೀಜ ಹಾಕಲಿಕ್ಕೆ ಬೇರೆ ಒಂದು ಗದ್ದೆಯು ತಯಾರಿಸಲ್ಪಡುತ್ತದೆ. ಎಕರೆ ಒಂದಕ್ಕೆ 40 ರಿಂದ 48 ಸೇರಿನಂತೆ ಬೀಜ ಬೇಕಾಗುತ್ತದೆ. ಪೈರು ಕೀಳಲು ತಯಾರಾಗಲಿಕ್ಕೆ ಬೀಜ ಬಿತ್ತಿ 30 ರಿಂದ 45 ದಿವಸಗಳವರೆಗೆ ಬೇಕಾಗುತ್ತದೆ. ಸಾಧಾರಣವಾಗಿ ಎಲ್ಲೆಲ್ಲಿಯೂ ಸುಲಿನಾಟಿ ಹಾಕಲ್ಪಡುತ್ತದೆ (ಒಂದೊಂದು ಸುಲಿಯಲ್ಲಿ 15 ರಿಂದ 20 ರ ವರೆಗೆ ಕಣೆಗಳಿರುತ್ತವೆ).

ನಾಟಿಹಾಕಿ ಐದಾರು ತಿಂಗಳುಗಳಲ್ಲಿ ಬೆಳೆಯು ಕುಯಿಲಿಗೆ ಬರುತ್ತದೆ. ಎಕರೆ ಒಂದಕ್ಕೆ 10 ರಿಂದ 25 ಭಟ್ಟಿಗಳವರೆಗೆ ಭತ್ತವುಂಟಾಗುತ್ತದೆ. ಕೊಡಗಿನ ಉತ್ತಮವಾದ ಬೆಳೆಯ ಫಸಲು ತಂಜಾವೂರು ಮೊದಲಾದ ಮುಖ್ಯವಾಗಿ ಭತ್ತ ಬೆಳೆಯುವ ಜಿಲ್ಲೆಗಳ ಸಾಧಾರಣ ಬೆಳೆಯ ಫಸಲಿನಷ್ಟೇ ಇರುತ್ತದೆ.

ಈ ಕೆಳಗೆ ಬರೆಯುವ ಕೆಲವು ವಿಷಯಗಳ ಗಮನವನ್ನಿತ್ತು ಅವುಗಳಿಗನುಸಾರವಾಗಿ ನಡೆದರೆ ನಮ್ಮ ಪ್ರಾಂತ್ಯದ ಭತ್ತದ ಬೆಳೆಯ ಸಾಗುವಳಿಯು ಉತ್ತಮಸ್ಥಿತಿ ಬರಬಹುದಾಗಿ ನಂಬಿದ್ದೇವೆ. ಎಲ್ಲಾ ಕಡೆಗಳಲ್ಲಿಯೂ ಇವುಗಳಂತೆಯೇ ನಡೆಯಬೇಕೆಂದಿಲ್ಲ. ಸ್ಥಳಕ್ಕನುಕೂಲವಾಗಿ ತಿದ್ದುಪಾಟು ಮಾಡಿಕೊಳ್ಳಲಿಕ್ಕಾಗಿ ಇವುಗಳು ದಾರಿಯನ್ನು ತೋರಿಸುತ್ತವೆ.

ಬೀಜವ ಹಾಕುವ ಯಾಕಲನ್ನು ತಯಾರಿಸುವದೇ ಆರಂಭದ ಮೊದಲನೆಯ ಕೆಲಸವಾಗಿದೆ. "ಆಗಲ್ ಕಂಡ ಕರಿಯು ಬೋಂಗುಣ" ಎಂಬಂತೆ ಒಳ್ಳೇಯ ಬೀಜವನ್ನು ಬಿತ್ತಿ ಪೈರು ಚೆನ್ನಾಗಿದ್ದರೆ ಬೆಳೆಯು ಪುಷ್ಟೀಕರವಾಗುವದರಿಂದ ಯಾಕಲಿನ ವಿಷಯದಲ್ಲಿ ಬಹಳ ಎಚ್ಚರಿಕೆ ತೆಗೆದುಕೊಳ್ಳಬೇಕಾಗಿದೆ. ಬೀಜದ ಗದ್ದೆಗೆ ಬೇರೆ ಗದ್ದೆಗಳಿಗೆ ಹಾಕುವ ಎರಡರಷ್ಟಾದರೂ ಗೊಬ್ಬರಹಾಕಿ ಚೆನ್ನಾಗಿ ಉತ್ತು ಸಮತಟ್ಟವಾಗಿ ಮಟ್ಟ ಹೊಡೆಯಬೇಕು. ಸಮತಟ್ಟವಾಗಿಲ್ಲದೆ ಹೋದರೆ ಪೈರಿನ ಒಳ್ಳೇ ಬೆಳವಣಿಗೆಗೆ ಕೊರತೆಯುಂಟಾಗುವದರಿಂದ ಹಾಳೆ ಮರವನ್ನು ಉಪಯೋಗಿಸುವದು ಅಗತ್ಯವಾಗಿದೆ. ಯಾಕಲು ನೀರಿನ ಸಮೀಪದಲ್ಲಿರಬೇಕಲ್ಲದೆ ಅದರಲ್ಲಿ ಚೆನ್ನಾಗಿ ಕಾಲುವೆಗಳನ್ನು ಸಹ ತೆಗೆದಿರಬೇಕು. ಮಿತಿಯಿಂದ ಮಾಡುವ ಆರಂಭಕ್ಕೆ ಪ್ರತಿ ಸುಲಿಯೊಂದರಲ್ಲಿ ಮೂರು ಯಾ ನಾಲ್ಕು ಕಣೆಗಳಿರಬೇಕು. ಆಂದರೆ ನಾವು ಈಗ ನೆಡುವದರ ಕಾಲುಭಾಗದಿಂದ ಅರ್ಧದವರೆಗೆ ಮಾತ್ರ ಇರಬೇಕು. ಬೆಳೆಯು ಬೆಳೆಯುವ ಸಮಯದಲ್ಲಿ ಪ್ರತಿಯೊಂದು ತಿಂಗಳಿಗೆ ಒಂದುವಾರದ ಪ್ರಕಾರ ಬೀಜವು ಯಾಕಲಲ್ಲಿರಬೇಕು. ಹೀಗೆ ಐದು ತಿಂಗಳಲ್ಲಿ ಫಸಲಿಗೆ ಬರುವ ಬೆಳೆಯ ಪೈರನ್ನು 35 ದಿನಗಳ ಮೇಲೆ ಯಾಕಲಿನಿಂದ ಕೀಳತಕ್ಕದ್ದು. ನಾಟಿಯನ್ನೆಲ್ಲಾ ಒಂದೇ ಸಲ ಹಾಕುವದು ಕಷ್ಟವಾಗಿರುವದರಿಂದ ಬೇರೆ ಬೇರೆ ಯಾಕಲುಗಳಿಗೆ ಬೇರೆ ಬೇರೆ ಸಮಯಗಳಲ್ಲಿಯೂ ಬೇರೆ ಬೇರೆ ದಿನಗಳಲ್ಲಿಯೂ ಬೀಜ ಬಿತ್ತಬೇಕು. ಮೊದಲು ಮತ್ತು ತೆಳುವಾಗಿ ಬಿತ್ತಿದ ಬೀಜವು ಸಡಿಲವಾಗಿ ಮತ್ತು ದಟ್ಟವಾಗಿ ಬಿತ್ತಿದ್ದಕ್ಕಿಂತ ಬೇಗನೆ ನೆಡಲಿಕ್ಕೆ ಪೈರಾಗುವದರಿಂದ ನಾಟಿ ಕೆಲಸಕ್ಕೆ ಅನುಕೂಲವಾಗುತ್ತದೆ. ನಮ್ಮ ನಾಟಿಯು ದೂರದೂರವಾಗಿರುವ ಕಾರಣ ಕಳೆಗಳು ಸುಲಭವಾಗಿಯೂ ಹೆಚ್ಚಾಗಿಯೂ ಬೆಳೆಯುವದರಿಂದ ಗದ್ದೆಗಳನ್ನು ಉತ್ತು ಚೆನ್ನಾಗಿ ಹದಮಾಡಬೇಕು. ತಂಜಾವೂರು ಮುಂತಾದ ಜಿಲ್ಲೆಗಳಲ್ಲಿ ಉಪಯೋಗಿಸಿ ಪ್ರಯೋಜನಕರವಾಗಿ ಕಂಡುಬಂದಿರುವ ಕಲ್ಟಿವೇಟರ್ ನೇಗಿಲನ್ನು ಇಲ್ಲಿ ಸೂಚಿಸಬಹುದು. ಎಲ್ಲಾ ಭೂಮಿಗಳಿಗೂ ಹೊಂದುವ ಈ ನೇಗಿಲಿಗೆ ಸುಮಾರು ಹತ್ತುರೂಪಾಯಿ ಕ್ರಯವಿದೆ. (ಹಾವೆ) ಮರ ಗೊತ್ತಿಲ್ಲದ ಸ್ಥಳವಿದ್ದರೂ ಕೂಡ ಅದನ್ನು ಯಾವಾಗಲೂ ಉಪಯೋಗಿಸಲೇಬೇಕು.

ನಾವು ಯೋಚಿಸಬೇಕಾದ ಎರಡನೆಯ ಸಂಗತಿಯು ಗೊಬ್ಬರ. ದಪ್ಪದಪ್ಪವಾಗಿ ನಾಟಿ ನೆಡದೆ ಮೇಲೆ ಹೇಳಿದಂತೆ ನಾಟಿಯಲ್ಲಿ ತಿದ್ದುಪಾಟುಗಳನ್ನು ಅನುಸರಿಸಿದರೆ ಬೆಳೆಯು ಸೊಗಸಾಗಿ ಬೆಳೆದು ಭೂಮಿಯ ಸಾರವನ್ನು ಹೆಚ್ಚಾಗಿ ಹೀರಿಬಿಡುವದರಿಂದ ಭೂಮಿಯನ್ನು ಫಲವತ್ತಾಗಿಡಲಿಕ್ಕೆ ಆಗುವಷ್ಟು ಗೊಬ್ಬರವನ್ನು ಹಾಕುತ್ತಾ ಬರಬೇಕು. ಬೇರೆ ಕಡೆಗಳಲ್ಲಿ ಭತ್ತದ ವ್ಯವಸಾಯಕ್ಕೆ ಉಪಯೋಗಿಸದೇ ಇರುವಂಥ ದನದ ಸಗಣಿಯೇ ಕೊಡಗಿನಲ್ಲಿ ಸರ್ವಸಾಧಾರಣವಾದ ಗೊಬ್ಬರವಾಗಿದೆ. ಅದು ಸಹ ಇಲ್ಲಿ ಬಹಳ ಕಡಿಮೆಯಾಗಿ ದೊರಕುವದರಿಂದ ಸರಿಯಾಗಿ ಉಪಯೋಗಿಸಿದರೆ ಕೆಲವು ಸಮಯಗಳಲ್ಲಿ ಯಾಕಲಿಗೆನೇ ಸಾಕಾಗುವದಿಲ್ಲ. ಹೀಗಿರುವಾಗ್ಗೆ ಮರ ಗಿಡಗಳು ಹೆಚ್ಚಾಗಿರುವ ನಮ್ಮ ಈ ದೇಶದಲ್ಲಿ ಹಸುರುಸೊಪ್ಪನ್ನು ಗೊಬ್ಬರಕ್ಕಾಗಿ ಉಪಯೋಗಿಸುವದು ಐಶ್ವರ್ಯವಂತರಿಗೂ ಮತ್ತು ಬಡರೈತರಿಗೂ ಸಹ ಒಳ್ಳೇಯ ದಾರಿಯೆಂದು ಕಾಣುತ್ತದೆ. ಸಾಧಾರಣವಾಗಿ ಎಕರೆ ಒಂದಕ್ಕೆ 50 ರಿಂದ 60 ತಲೆಹೊರೆಗಳ ಸೊಪ್ಪನ್ನು ಹಾಕಿದರೆ ಸರಿಯಾದ ಗೊಬ್ಬರವಾಗುವದಾದರೂ ಅದರ ದರವನ್ನು ಸೊಪ್ಪು ದೊರಕುವಂತೆ ಹೆಚ್ಚು ಕಡಿಮೆ ಮಾಡಿಕೊಳ್ಳಬಹುದು. ಅನೇಕ ವೇಳೆಗಳಲ್ಲಿ ಬೆಳೆಯು ಕಟಾವಾದನಂತರ ಗದ್ದೆಗಳಲ್ಲಿ ಗೊಬ್ಬರಕ್ಕಾಗಿ ಹಸುರು ಸಸಿಗಳನ್ನು ಬೆಳೆಸಬಹುದು. ಸ್ವಲ್ಪ ತೇವದಿಂದ ಬೆಳೆಯುವ ಕಡಲೆ, ಅವರೆ ಮೊದಲಾದ ಕಾಳುಗಳನ್ನು ಗದ್ದೆಯಲ್ಲಿ ಹಾಕುವದರಿಂದ ಭತ್ತದ ಬೆಳೆಗೆ ಒಳ್ಳೆಯ ಹಸುರುಗೊಬ್ಬರವಾಗುವದು. ಈ ಸಸಿಗಳು ಭತ್ತದ ಬೆಳೆಗೆ ಬೇಕಾಗಿರುವ ಬಹು ಸಾರವುಳ್ಳ, ನಾರಜನಕವೆಂಬ ಸಸ್ಯಾಹಾರವನ್ನು ವಾಯುವಿನಿಂದ ಹೀರಿ ಭೂಮಿಗೆ ಕೊಡುವವು.

ಭೂಮಿಯನ್ನು ಕಾಲಕ್ಕೆ ಸರಿಯಾಗಿ ಉತ್ತು ತಕ್ಕಷ್ಟು ಗೊಬ್ಬರವನ್ನು ಹಾಕಿ ಹಸನುಮಾಡಿದ ಮೇಲೆ ನಾಟಿ ನಡುವದಕ್ಕೆ ಗಮನಕೊಡಬೇಕಾಗಿದೆ. ಮೇಲೆ ಸೂಚಿಸಿದ ರೀತಿ ಬೀಜವನ್ನು ತೆಳುವಾಗಿ ಬಿತ್ತಿದ ಪಕ್ಷದಲ್ಲಿ ಪೈರು ದಪ್ಪವಾಗಿಯೂ ಪುಷ್ಟಿಯಾಗಿಯೂ ಬೆಳೆಯುವದರಿಂದ ಯಾಕಲಿನಿಂದ ಸುಲಭವಾಗಿ ಕಿತ್ತು ಹತ್ತು ಹದಿನೈದು ಕಣೆಗಳುಳ್ಳ ದಪ್ಪನಾದ ಸುಲಿಗಳಾಗಿ ನಡುವದರ ಬದಲಾಗಿ ಮೂರು ನಾಲ್ಕು ಕಣೆಗಳ ನಾಟಿ ಹಾಕಲು ಅನುಕೂಲವಾಗುತ್ತದೆ. ನಾಟಿ ಸುಲಿಯಿಂದ ಸುಲಿಗೆ ಇರುವ ದೂರವು ಮಣ್ಣಿನ ಸಾರವನ್ನನುಸರಿಸಬೇಕು. ಸಾಧಾರಣ ಭೂಮಿಯಲ್ಲಿ ಈ ದೂರವು 6 ರಿಂದ 8 ಇಂಚುಗಳವರೆಗೆ ಇರಬಹುದು. ಹೆಚ್ಚು ಫಲವತ್ತಾದ ಭೂಮಿಯಲ್ಲಿ ಇದಕ್ಕಿಂತ ದೂರವಾಗಿಯೂ ಸಾರವಿಲ್ಲದ ಮಣ್ಣಿನಲ್ಲಿ ಹತ್ತಿರವಾಗಿಯೂ ನಡತಕ್ಕದ್ದು. ಈ ತರದ ಆರಂಭದಿಂದ ಅನೇಕ ಪ್ರಯೋಜನಗಳುಂಟು. (1) ಎಕ್ರೆ ಒಂದರ ಬೀಜವು ಬಹಳ ಕಡಿಮೆಯಾಗುತ್ತದೆ. (2) ಪೈರನ್ನು ಕೀಳಲಿಕ್ಕೂ ಹೊರಲಿಕ್ಕೂ ಮತ್ತು ನೆಡಲಿಕ್ಕೂ ಕೆಲಸವು ಕಡಿಮೆಯಾಗುತ್ತದೆ. (3) ಬೆಳೆಯು ಹೆಚ್ಚು ಪುಷ್ಟೀಕರವಾಗುವದಲ್ಲದೆ ಮಳೆಯು ಕಡಿಮೆಯಾದರೆ ಗದ್ದೆಗಳಲ್ಲಿ ನೀರು ಬೇಗನೆ ಬತ್ತಿಹೋಗುವುದಿಲ್ಲ. (4) ಬೆಳೆಯು ಚೆನ್ನಾಗಿ ಹಣ್ಣಾಗುವದಲ್ಲದೆ ಉತ್ತಮತರದ ಹೆಚ್ಚು ಫಸಲನ್ನು ಕೊಡುತ್ತದೆ. ಯಾಕಂದರೆ ನಾಟಿ ಸುಳಿಗೆ ಬೇಕಾದಷ್ಟು ಸ್ಥಳವಿರುವದರಿಂದ ಚಿಕ್ಕಂದಿನಲ್ಲೇ ಅಟಂಕವಿಲ್ಲದೆ ಬೆಳೆದು ದೊಡ್ಡದಾಗುತ್ತಾ ಸಾಗಿ ಬಂದು ಒಂದೊಂದು ಸುಲಿಯಲ್ಲಿ ಸುಮಾರು 40 ರಿಂದ 60 ತೆನೆಗಳು ದಾಟುತ್ತವೆ. ಈಗ ಮಾಡುವಹಾಗೆ ಹತ್ತಿರ ನಾಟಿ ಹಾಕಿದರೆ ಸುಲಿಗೆ ಬೆಳೆಯಲು ತಕ್ಕ ಸ್ಥಳ ಸಿಕ್ಕದೆ ಮುರುವಿನಲ್ಲೇ ಬಲಹೀನವಾಗಿ ಹೋಗುತ್ತವೆ. ಇದನ್ನು ಒಬ್ಬ ಮನುಷ್ಯನಿಗೆ ಎರಡು ಯಾ ಮೂರುವ ಕ್ಕಳು ಹುಟ್ಟುವದಕ್ಕೂ ಹತ್ತು ಹತ್ತು ಯಾ ಹನ್ನೆರಡು ಮಕ್ಕಳು ಹುಟ್ಟುವದಕ್ಕೂ ಉಂಟಾಗುವ ತಾರತಮ್ಯಕ್ಕೆ ಹೋಲಿಸಬಹುದು.

ಭತ್ತದ ಬೆಳೆಯ ಬೆಳವಣಿಗೆಯ ಸಮಯದಲ್ಲಿ ನೀರಿನ ನಿಯಮವನ್ನು ಕಳೆಗಳ ನಾಶವನ್ನು ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳತಕ್ಕದ್ದು.

ಆಸ್ತಿಯಲ್ಲು ತಾನು ಎಂಥಾ ಬೀಜವನ್ನು ಹಸನಾಯಿಸಿಕೊಳ್ಳಬೇಕೆಂಬುದಕ್ಕೆ ಗಮನ ಕೊಡುವದರಿಂದ ರೈತನಿಗೆ ಬಹಳ ಲಾಭವುಂಟಾಗುತ್ತದೆ. ಅವನು ಬೀಜವನ್ನು ಬೆಳೆಗಳ ಪೈಕಿ ಉತ್ತಮವಾದದರಿಂದ ಆರಿಸಬೇಕು. ಭತ್ತದ ವ್ಯವಸಾಯದಲ್ಲಿ ಇದು ಅತ್ಯಂತ ಮುಖ್ಯವಾದ ಸಂಗತಿಯಾಗಿದೆ. ಯಜಮಾನನು ತಾನೇ ಒಬ್ಬ ಸಹಾಯಕನ ಸಮೇತನಾಗಿ ಗದ್ದೆಗಳನ್ನೆಲ್ಲಾ ಸುತ್ತಿ ನೋಡಿ ಪುಷ್ಟೀಕರವಾಗಿಯೂ ಒಳ್ಳುಗಳಿಲ್ಲದೆಯೂ ಮತ್ತು ಪೂರ್ತಿಯಾಗಿ ಹಣ್ಣಾಗಿಯೂ ಇರುವ ಬೆಳೆಯನ್ನು ಆರಿಸಿ ತೆಗೆಯಬೇಕು. ಬೀಜವನ್ನು ಸಾಕಷ್ಟು ಪುನಃ ಪುನಃ ಬಣ್ಣಿ ಮಣ್ಣಿನ ಗುಡಾಣಗಳಲ್ಲಿಯಾಗಲಿ, ಮೂಡೆ ಕಟ್ಟಿಯಾಗಲಿ ಇಡಬೇಕು. ಹೀಗೆ ಮಾಡುವದರಿಂದ ಕಳೆಗಳ ಬೀಜವು ಭತ್ತದ ಬೀಜದೊಂದಿಗೆ ಸೇರಿ ವರ್ಷ ವರ್ಷವೂ ಕಳೆಗಳು ಹೆಚ್ಚದಂತಾಗುವದು.

ಮಲಬಾರಿನ "ದಂಗೆ".

ಕಳೆದ ತಿಂಗಳ 22 ನೆಯ ದಿವಸ ಮಲಬಾರಿನ ಕಲೆಕ್ಟರರು ತಿರುರಂಗಡಿ ಎಂಬ ಸ್ಥಳಕ್ಕೆ ಹೋಗಿ ಯುದ್ಧದ ಆಯುಧಗಳು ಇರುವ ಗುಮಾನಿಯಿಂದ ಕೆಲವರನ್ನು ದಸ್ತಗಿರಿ ಮಾಡಿದ್ದಲ್ಲದೆ ಹತ್ತು ಜನರ ಮಟ್ಟಿಗೆ ಹುಡುಕಿದುದಾಯಿತು. ಈ ದಸ್ತಗಿರಿ ಇತ್ಯಾದಿ ಆಕಸ್ಮಿಕವಾಗಿ ಆದುದು ಹಳ್ಳಿಗಳಲ್ಲೆಲ್ಲಾ ಪ್ರಚುರಗೊಂಡಿತು. ಮಧ್ಯಾಹ್ನ ತಾನೂರು ಎಂಬಲ್ಲಿಂದ ಪರಪನಂಗಡಿಯ ಮೇಲ್ಭಂಡಿಯಲ್ಲಿ ಸಾಧಾರಣ 2000 ಮಂದಿ ಮಾಪಿಳ್ಳೆಯರು ಬಂದರು. ಇವರನ್ನು ಎದುರಿಸಿ ಕಳುಹಿಸಲು ಸೈನ್ಯಸಮೇತ ಕಲೆಕ್ಟರರು ಹೋಗಿ ಪ್ರಯತ್ನಿಸಿದುದು ನಿಷ್ಫಲವಾಗಲು ಗುಂಡು ಹಾರಿಸಬೇಕಾಗಿ ಬಂತು. ಅನೇಕರು ಹತರಾದರು. ಈ ವರ್ತಮಾನವು ಹಬ್ಬಿದೊಡನೆ ಮಂಜೇರಿ ಮುಂತಾದ ಸ್ಥಳಗಳಲ್ಲಿಯ ಸಹಸ್ರ ಗಟ್ಲೆಯ ಮಾಪಿಳ್ಳೆಯರು ತಂತಿಯನ್ನು ಕತ್ತರಿಸುವುದು ರೈಲ್ ಕಂಬಿಯನ್ನು ಕೀಳುವುದು ಸೇತುವೆಗಳನ್ನು ಮುರಿಯುವುದು, ಅಂಚೆಯ ಮನೆಗಳನ್ನು ಲೂಟಿ ಮಾಡುವುದು, ಪೋಲೀಸ್ ಸ್ಟೇಷನ್‌ಗಳಿಗೆ ಬೆಂಕಿ ಹಚ್ಚಿ ಯೂರೋಪಿಯನರನ್ನು ಕೊಂದು ಹಣ ಕಾಸುಗಳನ್ನು ದೋಚಿಕೊಂಡು ಹೋಗುವುದು ಇತ್ಯಾದಿ ಅನ್ಯಾಯಕತ್ವದ ಕೆಲಸಗಳನ್ನು ಮಾಡತೊಡಗಿದರು. ಮೊದಲೇ ಮಾಪಿಳ್ಳೆಯವರು ಧರ್ಮಾಭಿಮಾನಿಗಳು. ಅವರಿಗೆ ಹಿತಾಹಿತ ವಿವೇಚನೆಯೇ ಇಲ್ಲ. ಅದರಲ್ಲೂ ಈ ಖಿಲಾಫತ್ತಿನ ಆಪತ್ತು, ನಿಸ್ಸಹಕಾರದ ಬೋಧನೆಯ ಮಹತ್ತು, ಸರಕಾರದವರ ದಮ್ಮಿತ್ತು ಇವೆಲ್ಲವೂ ಕೂಡಿ ಮಹಾತ್ಮ ಗಾಂಧಿಯವರ ಅಹಿಂಸೆಯ ಘೋಷಣೆಯನ್ನು ಮೂಲೆಗೆ ತಳ್ಳಿದಂತಾಯಿತು. ದೇಶದ ಅಭ್ಯುದಯವನ್ನು ಕೋರುವುದಲ್ಲದೆ ಹೀಗೆ ಅನ್ಯಾಯಕತ್ವವನ್ನು ಹರಡಿ ಯೂರೋಪಿಯನ್‌ರನ್ನು ಕೊಲ್ಲುವುದು ಬಣ್ಣದ್ವೇಷವೆಂದಾಗಲ್ಲವೆ? ಇದು ಸ್ವರಾಜ್ಯಪ್ರಾಪ್ತಿಯ ಶುಭಸೂಚನೆಯೆ?

ಸರಕಾರದವರಾದರೂ ಅಷ್ಟೊಂದು ಕ್ಷಿಪ್ರದಲ್ಲಿ ಮಾರ್ಶ್ಯಲ್ ಲಾ (Martial Law) ನಿಬಂಧನೆಯನ್ನು ಇಟ್ಟುದೇಕೆ? ಮದರಾಸು ಮೇಲ್ ಮೇರೆ 2700, ಕಂರೀರವನ ಮೇರೆ 1500, ಇನ್ನು ಇತರರ ಮೇರೆ 200 ಹೀಗೆ ಇಷ್ಟೊಂದು ಜನರ ಪ್ರಾಣವನ್ನು ಏಕೆ ತೆಗೆಯಬೇಕಾಗಿತ್ತು? ಮನುಷ್ಯರ ಜೀವವೆಂದರೆ ಹುಲ್ಲುಗಿಂತ ಕಡೆಯ? ಎಂದೂ ಬರಲು ಮೌ|| ಯಾಕೂಬ್ ಹುಸೇನರಮೇಲೆ ಭರವಸೆಯನ್ನಿಟ್ಟು ಅವರನ್ನು ಮಲಬಾರಿಗೆ ಕಳುಹಿಸಿದರೆ ಎಷ್ಟೊಂದು ಜನರ ಪ್ರಾಣವು ಉಳಿಸಿದಂತಾಗುತ್ತಿತ್ತು?

ಎಂದು ಮುಂತಾಗಿ ಹಲವು ಪತ್ರಿಕೆಗಳು ಪ್ರಕಟಿಸಿರುವುದಲ್ಲದೆ ಐರೋಪ್ಯರೂ ಯುರೇಶಿಯನ್ ರೈಫಲ್ಸ್ ಜನ ಪೋಲೀಸ್ ಮತ್ತು ಮಿಲಿಟರಿ ಉದ್ಯೋಗಸ್ಥರೂ ಮತ್ತು ಅವರ ಸೇವಕರು ಕೊಲ್ಲಲ್ಪಟ್ಟರು. ವರ್ತಮಾನವು ಒಂದೆರಡು ರಬ್ಬರ್ ತೋಟಗಳಲ್ಲಿ ಸಹ ದೊಡನೆ ಅಲ್ಲಿದ್ದ ಹತ್ತೈವತ್ತುಮಂದಿ ಮಾಪಿಳ್ಳೆಯರು ಪ್ಲಾಂಟರನ್ನು ಕೊಂದು ಅವರ ಶವವನ್ನು ಪಕ್ಕದ ನದಿಯಲ್ಲಿ ಹಾಕಿಬಿಟ್ಟರು ಮತ್ತೆ ಬ್ಬರು ಕಾಣದಾದರು ಹಿಂದುಗಳಲ್ಲಿ ಅನೇಕರು ಪ್ರಾಣದಾಸೆಗೋಸ್ಕರ ಓಡಿಹೋಗುತ್ತಲಿದ್ದಾರೆ ಇನ್ನೊಂದು ಬಾಲಿಯನ್‌ವಾಲಾಬಾಗ್ ಆಗುವುದೋ ಎಂಬ ಹೆದರಿಕೆಯೂ ಸಹ ಇದೆ.

ಆದರೆ ಇಷ್ಟರಲ್ಲಿ ಬಂದ ವರ್ತಮಾನದಲ್ಲಿ ಮಲಬಾರು ಸರಕಾರದ ಅಧಿಕಾರಿಗಳ ವಿಚಾರವತ್ತು ಕೆಲಸಗಾರರ ಪ್ರಯತ್ನದಿಂದ ಈ ದೊಂಬಿಯು ಅಲ್ಲಿಗೆ ಬಂದಿಲ್ಲವಾಗಿ ತಿಳಿಯುತ್ತದೆ ಸ್ವರಾಜ್ಯವಾಗಲಿ ಪರರಾಜ್ಯವಾಗಲಿ ದೇಶದ ಅಭ್ಯುದಯವೇ ಸಕಲರ ಉದ್ದಿಷ್ಟದಲ್ಲಿರಬೇಕು ಹೊರತು ಅನಾಯಕತ್ವವಲ್ಲ.

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿಯಲ್ಲಿರುವ ಮಚ್ಚಿಮಾಡ ಮನೆಯಲ್ಲಿ ಮೆ॥ ಪೊನ್ನಪ್ಪನವರ ಶವಸಂಸ್ಕಾರವು ಕೊಡಗಿನ ಪದ್ಧತಿ ಪ್ರಕಾರ ನಡೆಸಲ್ಪಟ್ಟಿತ್ತು. ಅಧಿಕಮಾಸದಲ್ಲಿ ಪದ್ಧತಿಯನ್ನು ನಡೆಸಲಿಲ್ಲವಾಗಿ ವರ್ತಮಾನವಿದೆ.

ಕೈಲ ಮುಹೂರ್ತ ಮತ್ತು ಗೌರಿ ಗಣೇಶ ಹಬ್ಬಗಳಿಗಾಗಿಯೂ ಇನ್ನು ಇತರ ತಿಳಿಯದ ಕಾರಣಗಳಿಗಾಗಿಯೂ ಮಡಿಕೇರಿ ಹೈಸ್ಕೂಲಿಗೆ ಆಗೋಸ್ಟು 6 ರಿಂದ ಸಪ್ಟಂಬರ್ 12 ರ ವರೆಗೆ ರಜೆ ಬಿಟ್ಟಿರುತ್ತಾರೆ.

ಕಳೆದ ತಾ॥ 24 ರಲ್ಲು ಮಡಿಕೇರಿ ಕೊಡಗು ಮಹಮ್ಮದಿಯರ ಮಸೀದಿಯ ಹುಪ್ಪರಿಗೆಯ ಕೆಲಸವು ಪೂರ್ತಿಯಾಗಿ ವಿಚಾರವಾಗಿ ಆಗು ಕ್ಲಿಮೆಂಟು ಪೂರ್ವಸಿದ್ಧ ರೂ ಕೂಡ ಒಳ್ಳೆ ಮಂಟು ಇನ್ನೂ ತಿಳಿದು ಬಂದಿರುವದಿಲ್ಲ.

ಕಮಿಷನರವರ ಆಫೀಸಿನಲ್ಲಿ ಹೆಡ್‌ಕ್ಲಾರ್ಕರಾಗಿರುವ ಮೆ॥ ಕಾಮತರವರು ಸಪ್ಟಂಬರ್ ಒಂದರಿಂದ ಮೂರು ತಿಂಗಳು ರಜೆ ತೆಗೆದುಕೊಂಡಿರುತ್ತಾರೆ ಇವರ ಬದಲು ಮೆ॥ ರಂಗಪ್ಪಯವರು ಕೆಲಸಮಾಡುವದಾಗಿಯೂ, ಐಲೋಬ್ಯನ್ನು ಮೆ॥ ಮಾಚಿಮಾಡ ನಾಣಯ್ಯನವರಿಗೆ ಕೊಡುವದಾಗಿಯೂ ತಿಳಿಯುತ್ತೇವೆ.

ಮಲಬಾರಿನ ಟಪ್ಪಾಲುಗಳನ್ನು ಬೆಂಗಳೂರು ಮೂಲಕ ಮೋಟಾರು ಬಸ್ಸುಗಳಲ್ಲಿ ಮೈಸೂರಿಗಾಗಿ ಮದ್ರಾಸಿಗೆ ಸಾಗಿಸುತ್ತಾರೆ ಅಲ್ಲದೆ ಮಲೆಯಾಳದಿಂದ ಮದ್ರಾಸಿಗೆ ಹೋಗುವ ತಂತಿವರ್ತಮಾನಗಳೆಲ್ಲಾ ಮಡಿಕೇರಿಗಾಗಿ ದಾಟುವದರಿಂದ ಮಡಿಕೇರಿ ಪೋಸ್ಟಾಫೀಸಿನಲ್ಲು ಸಾಧಾರಣ ಟೆಲಿಗ್ರಾಮುಗಳನ್ನು ತೆಗೆದುಕೊಳ್ಳುವದಿಲ್ಲ.

ನಮ್ಮ ಸ್ಕೂಲುಗಳ ಹೊಸ ಇನ್ಸ್‌ಪೆಕ್ಟರಾದ ಮೆ॥ ಮಂಗೇಶರಾಯರು ಶನಿವಾರ ಸಂತಿಗೆ ಹೋಗಿ ಅಲ್ಲಿಯ ಸ್ಕೂಲನ್ನು ಇನ್ಸ್‌ಪೆಕ್ಷನ್ ಮಾಡಿದರು ಇವರು ವಿದ್ಯಾರ್ಥಿಗಳಿಗೆ ಮಾಡಿದ ಬೋಧನೆಗಳ ಉಪನ್ಯಾಸವು ಬಹಳ ವಿಸ್ಮಯವನ್ನುಂಟುಮಾಡುತ್ತದೆ ಇವರ ಮೇಲಾ ಪತ್ರಿಗೆ ಪಾಠಶಾಲೆಗಳ ಅಧಿಪರು ಬಹು ಸಂತೋಷವಟ್ಟರಂತೆ.

ಫಾರೆಸ್ಟು ಸಟ್ಲ್‌ಮೆಂಟ್ ಆಫೀಸರರು ಶನಿವಾರ ಸಂತೆಗೆ ಹೋಗಿರುತ್ತಾರೆ ರೈತರ ದರಖಾಸ್ತಿನ ಪೈಸಾರಿಯನ್ನು ಫಾರೆಸ್ಟಿಗೆ ಸೇರಿಸುವುದರ ವಿಷಯವಾಗಿ ಒಂದು ದೊಡ್ಡ ವಿಚಾರ ನಡೆಯುತ್ತದೆ ಇದರಲ್ಲಿ ರೈತರ ಪಕ್ಷವಾಗಿ ವಾದಿಸಲು ಲಾಯರ್ ಮೆ॥ ಕೆ. ಸುಬ್ರಾಯರು ಅಲ್ಲಿಗೆ ಹೋಗಿದ್ದಾರೆ ಇದರ ಫಲಿತಾಂಶವನ್ನು ಕಾಯುತ್ತಿದ್ದೇವೆ.

ಕಳೆದವಾರ ಸೂಚಿಸಿದಂತೆ ಆಂಜನೇಯ ಬಸ್ಸು ಓಡಾಡಲು ಶುರುಮಾಡಿರು ವಾಕ್ಯನಲ್ಲ ಆದನ್ನು ಮಲೆಯಾಳದ ಕಡೆ ಓಡಿಸಿಬಿಟ್ಟಂತೆ ಕಾಣುತ್ತದೆ ಇದು ಸಿಬಂದಿ ಪತ್ರದಲ್ಲಿ ಮೊಟ್ಟಮೊದಲು ಮೋಟಾರಿನಲ್ಲು ಜನರ ಹಿತಕ್ಕಾಗಿ ಓಡ್ಯಾಡುತ್ತಿದ್ದ ಈ ಮೋಟಾರನ್ನು ಮಾಯಗಾಣಿಸಿದ್ದು ಜನರಿಗೆ ಹೆಚ್ಚು ತೊಂದರೆಯನ್ನು ವ್ಯಸನವನ್ನೂ ಉಂಟುಮಾಡಿದಂತಾಗಿದೆ.

ಕಳೆದ ಜೂನ್ ಮಾಹೆಯಿಂದ ಈ ಜುಲೈ ಮಾಹೆ ವರೆಗೆ ಮಡಿಕೇರಿಯಲ್ಲಿ ಮಳೆಯು ಬಹಳ ಜೋರಾಗಿದ್ದು ಈಗ ಸ್ವಲ್ಪ ಬೆಳಕಾಗಿದೆ ಈ ವರುಷ ಜನವು ಪೂರ್ವದಲ್ಲಿ ಹುಟ್ಟಿ ಹರಿಯುತ್ತಿದ್ದಂತಾ ಜಾಗದಲ್ಲೆಲ್ಲಾ ಹುಟ್ಟಿ ಹರಿಯಲಿಕ್ಕೆ ಕೊಡಗಿದ್ದರೂ ಕೂಡ ಮಡಿಕೇರಿ ಪಂಪುಗಳಲ್ಲಿ ಸೀರಿಗ ದುರ್ಲಭವಾಗಿ ಕಾಣುತ್ತೆ ಆದರಲ್ಲು ಗಣಪತ್ತಿ ಬೀದಿಯಲ್ಲಿ ನೀರಿನ ಬೊಬ್ಬೆ ಕೇಳಲಾಗುವದಿಲ್ಲ.

ಕುಂದಿಕೊಪ್ಪಲಿನ ಮಸ್ತಿ ಪೇಟೆಯಲ್ಲು ಒಂದು ಅಂಗಡಿಗೆ ಕಳ್ಳರು ರಾತ್ರಿ ಹೊತ್ತು ನುಗ್ಗಿ ಅಕ್ಕಿ ರವಾಯಿ ವಗ್ಗೈರೆ ಸಾಮಾನುಗಳನ್ನು ಕದ್ದೊಯ್ದರಂತಲೂ ಇವರನ್ನು ಪೋಲೀಸಿನವರು ಪತ್ತೆಮಾಡುವದರಲ್ಲಿದ್ದಾರಂತಲೂ ವರ್ತಮಾನವಿದೆ ಪೋಲೀಸಿನವರು ರಾತ್ರಿ ಬೀಟು ಇರುವ ಇಂಥಾ ಪಟ್ಟಣಗಳಲ್ಲಿ ಹೀಗಾದರೆ ಕಾಡಿ ಲೈನ್ಸನ್ನು ಸಿಕ್ಕದೆ ಒದ್ದೊಬ್ಬರಾಗಿ ಕಾಡು ವಗ್ಗೈರೆ ಪ್ರಾಂತ್ಯಗಳಲ್ಲಿ ವಾಸಿಸುವ ಜನರ ಗತಿಹ್ಯಾಗಾದೀತು?

ಕಡಿಯತ್ನಾಡು ಪೊದವಡಗ್ರಾಮದ ನಾಯಿಂದ ಮನೆ ಪ್ಪನವರ ದನಗಳು ಸದರಿ ಮನೆ ಚೇಯಣ್ಣನವರ ಗದ್ದೆಗೆ ಇಳಿದುದರಿಂದ ಅವರಿಬ್ಬರಿಗೆ ಕಲಹವುಂಟಾಗಿ ಹೊಡೆದಾಡಿ ಬೆಳ್ಳಪ್ಪನಿಗೆ ಬಲವಾದ ಪೆಟ್ಟು ತಗಲಿ ಕೂಗಿ ಕೊಂಡು ಚೇಯಣ್ಣನ ತಲೆಗೆ ಬೆಳ್ಳಪ್ಪನ ಕೈಯಲ್ಲಿದ್ದ ಕತ್ತಿ ತಗಲಿ ಗಾಯವಾಗಿದೆ ಬೆಳ್ಳಪ್ಪನನ್ನು ಅವನ ಆಳು ಮನೆಗೆ ಕರೆದುಕೊಂಡುಹೋಗಿ ಸ್ವಲ್ಪ ಸಮಯದಲ್ಲಿಯೇ ಅವನು ಪ್ರಾಣಬಿಟ್ಟನು. ಪೋಲೀಸ್ ಸುಪರಿಂಟೆಂಡೆಂಟರವರು ಹೋಗಿ ಎಲ್ಲವನ್ನೂ ವಿಚಾರಿಸಿ ಚೇಯಣ್ಣನನ್ನು ಬಂದಿಖಾನೆಯಲ್ಲಿ ಇಟ್ಟಿರುತ್ತಾರೆಂದು ವರ್ತಮಾನವಿದೆ.

ಮಡಿಕೇರಿ ಇಲ್ಲಿ ತಾ॥ 2೧ 8-1921 ನೆ ದಿನ ಶಾಗಿನ ಬಿಜಿನ ಮನೆಯಲ್ಲು ಗೋಕುಲಾಷ್ಟಮಿ ಪೂಜೆಯು ವಿಜೃಂಭಣೆಯಿಂದ ನಡೆಯಿತು. ಪೂಜೆಗೆ ಮೊದಲು ಮೆ॥ ಪಟ್ಟಯಂತ್ರ ಮಂತ್ರಣ್ಣನವರು ಒಂದು ಹರಿಕಥೆಯನ್ನು ಮಾಡಿದರು ಇದನ್ನು ಅಲ್ಲಿ ನೆರೆದಿದ್ದ ಸಭೆಯು ಕೇಳಿ ಬಹಳ ಆನಂದಭರಿತರಾದರು ಕೊಡಗು ಜನರ ಪೈಕಿ ಇವರೇ ಮೊದಲಿಗ ಹರಿಕಥಾಸ್ತರು ಎಂದು ಅನೇಕರು ಬಹಳ ಸಂತೋಷಪಟ್ಟರು ಪೂಜೆಯು ಮುಗಿದನಂತರ ಮಂಗಳಾರತಿ ಕೈಗೊಂಡು ಸಕ್ಕರೆ ಬಾಳೆಹಣ್ಣು ಪಾಕ ವೀಳ್ಯದೆಲೆ ಮತ್ತು ಜೂಜಾ ವಗ್ಗೈರ ಒಟವಾದಯಿಂದ ನೆರೆದಿದ್ದ ಸಭೆಯು ವಿಸರ್ಜಿಸಲ್ಪಟ್ಟಿತು.

ಕೊಡಗು ಮೋಟಾರು ಸರ್ವಿಸಿನವರು ನಿಂತುಹೋಗಿದ್ದ ಒಂದು ತಿಂಗಳಲ್ಲಿ ಉಂಟಾದ ನಷ್ಟವನ್ನು ತಕ್ಕಮಟ್ಟಿಗಾದರೂ ಪರಿಹರಿಸಬೇಕೆಂದು ಮೊದಲಿಗಿಂತ ಮೈಲು ಒಂದಕ್ಕೆ ಕಾಲಾಣೆ ಚಾರ್ಜು ಹೆಚ್ಚು ಮಾಡಿದರು ಅಷ್ಟರಲ್ಲೇ ಅಂಜನೇಯ ಬಸ್ಸಿನವರ ಓಡಾಟವು ನಿಂತು ಹೋದದರಿಂದ ತಾವೊಬ್ಬರೇ ಎಂದು ಇವರು ಹೆಚ್ಚು ಚಾರ್ಜುಮಾಡಿದರೆಂದು ಒಂದು ಆಡೀಟುಳ್ಳವರನ್ನು ಕೇಳಿ ಸಪ್ಟಂಬರ್ ಒಂದರಿಂದ ಹೊಸ ಸಪ್ಟಾನೇ ದರೂ ಜಂತೆಯ ಸ್ಲಿಪಿಂದ ಮೊದಲಿಗಿಂತಲೂ ಮೈಲಿಗೆ ಒಂದುಕಾಲಾಣೆಯ ದರದ ಪ್ರಕಾರ ಮಡಿಕೇರಿಯಿಂದ ಸೀರಾಜಪೇಟೆಗೆ ಎಂಟು ಅಣೆಯಾಯಿ ಮಾತ್ರ ಚಾರ್ಜು ಮಾಡುತ್ತಾರೆ.

ವೀರಾಜಪೇಟೆ ನಾಡುಬಾಡಗಗ್ರಾಮದಲ್ಲು ಇರುವ ಬಾಲಕ ಬಾಲಿಕೆಯರಿಗೆ ವಿದ್ಯೆ ಇಲ್ಲದೆ ಇರುವ ಸ್ಥಿತಿಯನ್ನು ಮ॥ ಕೊಂಗಂಡ್ರ ಕುಟ್ಟಪ್ಪನವರು ಕಂಡು ಬಹಳ ವ್ಯಸನದಿಂದ ರಾಜಾ ಇನ್ಸ್‌ಪೆಕ್ಟರಿಂದ ಹುಕುಂ ತೆಗೆದುಕೊಂಡು ಊರಿನವರಿಂದ ಚಂದಾ ವಸೂಲುಮಾಡಿ ಬಹುಮೋಸತ್ತಿಸಿಂದ ಕಟ್ಟಿಸಿದ ಶಾಲೆಯು ಈ ವರ್ಷದ ಮಳೆಯ ದೆಸೆಯಿಂದ ಬಿದ್ದುಹೋದುದನ್ನು ನೋಡಿ ನಾವುಗಳು ಬಹಳ ವ್ಯಸನಪಡುತ್ತೇವೆ ಆದರೂ ಸದರಿ ಕುಟ್ಟಪ್ಪನವರು ಬಾಲಕ ಬಾಲಿಕೆಯರಿಗೆ ವಿದ್ಯಾದಾನಮಾಡಿಸಬೇಕೆಂಬ ಇರಾದೆಯಿಂದ ಬಿದ್ದು ಹೋದ ಶಾಲೆಯನ್ನು ಕಟ್ಟುವದಕ್ಕೆ ಪ್ರಯತ್ನಪಡುತ್ತಿರುವದಕ್ಕಾಗಿ ನಾವುಗಳು ಅವರನ್ನು ವಂದಿಸುತ್ತೇವೆಂದು ಒಬ್ಬ ರೈತನು ಬರೆಯುತ್ತಾನೆ.

ಹಿಂದೂದೇಶ.

ಮೆ॥ ಎಸ್. ಶ್ರೀನಿವಾಸಶಾಸ್ತ್ರಿಯವರನ್ನು ಇಂಗ್ಲಂಡಿನಲ್ಲಿ ಪ್ರಿವಿ ಕೌನ್ಸಿಲಿನ ಒಬ್ಬ ಮೆಂಬರಾಗಿ ಮಾಡಿರುತ್ತಾರೆ.

ಲಾಹೋರಿನಲ್ಲಿ ಯುವರಾಜರಾದ ಪ್ರಿನ್ಸ್ ಆಫ್‌ವೇಲ್ಸ್‌ರವರಿಗೆ ಸ್ವಾಗತವನ್ನು ಕೊಡಕೂಡದೆಂದು ಅಲ್ಲಿಯ ಮುನ್ಸಿಪಾಲಿಟಿಯವರು ನಿಶ್ಚೈಸಿರುವರು.

ಸರ್ ಶಂಕರನಾಯರ್ ಎಂಬವರು ಇಂಡಿಯಾ ಕೌನ್ಸಿಲಿನ ಮೆಂಬರತ್ವಕ್ಕೆ ರಾಜೀನಾಮೆ ಕೊಡುತ್ತಾರಂತೆ ಇದು ನಿಜವಾದರೆ ನಮ್ಮ ಒಳ್ಳೆ ಮುಂದಾಳೊಬ್ಬರು ಸಿಕ್ಕಿದರು.

ಒಬ್ಬ ಉಪಾಧ್ಯಾಯರು ಒಬ್ಬ ಹುಡುಗನನ್ನು ಹೊಡೆದರಂತೆ ಅವನಿಗೆ ಈ ಕಾರಣದಿಂದ ಜ್ವರವು ಬಂತಂತೆ ಆದ್ದರಿಂದ ಆ ಉಪಾಧ್ಯಾಯನು ಕಲ್ಕತ್ತೆಯ ಕೋರ್ಟಿನಲ್ಲಿ ಐದು ಕೇಸು ನಡೆಯುತ್ತಿದೆಯಂತೆ.

ಬಹಳಸಿನಿಂದ ಒಂದು ಸಂಚಾರದ ಪಂಗಡವು ಇದೇ ತಿಂಗಳ ಅಂತ್ಯಕ್ಕೆ ನಮ್ಮ ದೇಶಕ್ಕೆ ಬರಲು ಇರುವುದು ಹಿಂದುಸ್ಥಾನಕ್ಕೂ ಜಪಾನಿಗೂ ವ್ಯಾಪಾರಸಂಬಂಧವನ್ನು ಹೆಚ್ಚಿಸುವುದೇ ಇದರ ತಾತ್ಪರ್ಯ.

ಫ್ರೆಂಚರ ಸಂಸ್ಥಾನದ ಮಹಾರಾಜರು ಮೈಸೂರು ಮಹಾರಾಜರ ಅತಿಥಿಯಾಗಿ ಬಂದು ಕೋಲಾರದ ಚಿನ್ನದ ಗಣಿಗಳಿಗೆ ಹೋಗಿ ಅಲ್ಲಿ ಗಣಿಯಿಂದ ಚಿನ್ನವನ್ನು ತೆಗೆಯುವ ವಿಧಾನವನ್ನು ನೋಡಿ ಸಂತೋಷಗೊಂಡು ವಾಪಾಸು ಬಂದರು.

ಕಾಶ್ಮೀರದಲ್ಲಿ ಕ್ಷಾಮವು ತಲೆದೋರಿದೆ ಜನರ ಸಂಕಟವು ಹೆಚ್ಚುತ್ತಾ ಬರುತ್ತಿದೆ ರೂಪಾಯಿಗೆ ಎರಡು ಸೇರು ಅಕ್ಕಿ ಸಿಕ್ಕುವದೂ ಕಷ್ಟವಂತೆ ಅನೇಕರು ಅಕ್ಕಿಯನ್ನು ಕೊಂಡುಕೊಳ್ಳಲಾರದವರ ಒಡನಾಡಿಗಳಾಗಿರುವದರಿಂದ ತರಕಾರಿಗಳನ್ನೇ ತಿಂದು ಜೀವಿಸುತ್ತಿರುವರು.

ಡೆಲ್ಲಿಪಟ್ಟಣದಲ್ಲಿ ಆಹಾರಸಾಮಗ್ರಿಗಳ ಕ್ರಯವು ಹೆಚ್ಚುತ್ತಾ ಒಮ್ಮತ್ತಿದೆ ಆದಕ್ಕೆ ಸರಿಯಾದ ಪರಿಹಾರವು ಮೊದಲೇ ದೊರೆಯದೆ ಹೋದರೆ ಬೇಗನೆ ಕ್ಷಾಮವು ಪ್ರಬಲವಾಗುವದು. ಸರಕಾರದ ಕಡಿಮೆ ಸಂಬಳದ ನೌಕರನ್ನೆಲ್ಲಾ ಸಹಾಯಕ್ಕಾಗಿ ಸರಕಾರದವರಿಗೆ ಅರ್ಜಿ ಒಪ್ಪಿಸಿರುತ್ತಾರೆ.

ಕಾಂಗ್ರೆಸ್ ಕೆಲಸಗಾರರಾದ ಮೆ॥ ಸಿ. ರಾಜಗೋಪಾಲಚಾರಿಯವರೂ ಮೆ॥ ಯಾಕೂಬ್ ಹಸನ್‌ರವರು ದೊಂಬಿ ನಡೆಯುತ್ತಿರುವ ಮಲಬಾರಿಗೆ ಹೋಗಿ ಶಾಂತವಾಗಲು ತಮ್ಮನ್ನು ಬಿಡಬೇಕೆಂದು ಮದ್ರಾಸು ಗವರ್ನರನ್ನು ಕೇಳಿದ್ದಕ್ಕೆ ಹೋಗಲು ಬಿಡುವದಿಲ್ಲವೆಂದು ಗವರ್ನರು ಉತ್ತರಕೊಟ್ಟಿರುವರು.

ಇದೇ ಸೆಪ್ಟಂಬರ್ ತಿಂಗಳು 7 ರಿಂದ ಮಂಗಳೂರಿನಲ್ಲಿ "ನವಯುಗ" ವೆಂಬ ಕನ್ನಡ ವಾರಪತ್ರಿಕೆಯು ಪ್ರತಿ ಗುರುವಾರದ ದಿವಸ ಪ್ರಕಟವಾಗುವದು. ಇದಕ್ಕೆ ವಾರ್ಷಿಕ ಚಂದಾ ರೂ 3—0—0 ಮಾತ್ರ. ಆದಕಾರಣ ದೇಶಾಭಿಮಾನಿಗಳಾದ ಕನ್ನಡಿಗರೆಲ್ಲರೂ ಈ ಪತ್ರಿಕೆಗೆ ಪ್ರೋತ್ಸಾಹ ಕೊಡುವರಾಗಿ ಕೋರಿಕೆ.

ಬೀಡಿ ಸಿಗರೇಟನ್ನು ಬಾಲಕರು ಸೇದುವದು ಅವರ ಮುಂದಣ ಅಭಿವೃದ್ಧಿಗೆ ಕೊರತೆ ಎಂಬುದು ನಮಗೆಲ್ಲರಿಗೂ ಗೊತ್ತು. ಆದರೂ ನಮ್ಮ ಕಣ್ಣು ಮುಂದೆ ಸ್ಕೂಲ್ ಬಾಲಕರು ಈ ದುರಭ್ಯಾಸದಿಂದ ಕೆಡುತ್ತಿದ್ದಾರೆ ಈ ಸಂಬಂಧ ನಿರ್ಬಂಧಿಸುವ ಕಾನೂನು ಮೈಸೂರಲ್ಲಿ ಒಂದೇ ಇದೆಯುಷ್ಟೆ ಕೊಡಗಿಯಲ್ಲಿ ಇದ್ದದ್ದಲ್ಲಿ ಒಳ್ಳೆಯದಾಗಿದೆ.

ದಕ್ಷಿಣ ಮಲಬಾರಿನ ವರದಸಂಗತಿ, ಪರೋಕ್ಷ ಪ್ರಾಂತ್ಯಗಳಲ್ಲೆಲ್ಲಾ ಅಲ್ಲಿಯ ನಿವಾಸಿಗಳಾದ ಮಾಪಿಳ್ಳೆಯವರು ಸರಕಾರದ ಕಟ್ಟಡಗಳನ್ನು ಸುಡುವುದು ರೈಲು ಮತ್ತು ತಂತಿಗಳನ್ನು ಕೀಳುವುದು ಇತ್ಯಾದಿ ಕೆಲಸಗಳಲ್ಲಿ ನಿರತರಾಗಿದ್ದಾರೆ ಇವರು ಹೀಗೆ ಮಾಡುವದು ಸ್ವರಾಜ್ಯ ಸ್ಥಾಪನೆಗೆಂದು ಇವರ ಯೋಚನೆಯಂತೆ ಒಡೆಯರುಗಳ ಮೂಲಕವೇ ದರ್ಶನವು ಸ್ವರಾಜ್ಯದ ದಾರಿಗೆ ಅಡ್ಡಬರಬಹುದೆಂದು ಕೇಳುತ್ತದೆ.

ಮಲಬಾರಿನಲ್ಲಿ ನಡೆಯುವ ದಂಗೆಯ ಸಂಬಂಧ ಒಳ್ಳೆಯ ಹೆಚ್ಚಿನ ಭಾಗದಲ್ಲೆಲ್ಲಾ ಮಾರ್ಷಲ್ ಲಾ ಆದರೆ ರೈಲ್ವೆ ಲೈನುಗಳಿಗೆ ಹೋದವರಿಗೆಲ್ಲಾ ಗುಂಡು ಹಾಕುತ್ತಾರೆಂದೂ ಐದು ಜನರಿಗಿಂತ ಹೆಚ್ಚು ಒಂದು ಎಲ್ಲಿಯೂ ಜೊತೆ ಸೇರಬಾರದೆಂದೂ, ಸರಿಯಾಗಿ ಸಂದಿಸುತರ ಜಾಗದಲ್ಲಿಯೂ ತಮ್ಮ ಮನೆಗಳಿಂದ ಆಗುವಷ್ಟು ಹೊರಗೆ ಬಾರದೆಂತಲೂ ಮೋಟಾರುಕಾರು ಬಸ್ಸುಗಳಿರುವವರು ಅವುಗಳನ್ನು ಪೆಸ್ಟ್‌ಹಿಲ್ ಎಂಬ ಸ್ಥಳಕ್ಕೆ ಒಪ್ಪಿಸಬೇಕೆಂದೂ ಹೇಳುವ ಕಾನೂನನ್ನು ಆಗಸ್ಟು 22 ರಿಂದ ಜಾರಿಗೆ ತಂದಿರುತ್ತಾರೆ.

ಮೊನ್ನೆ ಕಲ್ಕತ್ತಾ ಪಟ್ಟಣದ ಪಟ್ಟಣದವರು ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಸ್ವಾಗತವನ್ನು ಕೊಡುವದರ ವಿಷಯವಾಗಿ ಚರ್ಚಿಸಲು ಆ ಪಟ್ಟಣದ ಚರ್ಚಿಲರ ಸಭೆಯು ಕೂಡ ವಂತೆ ಸೂಚಿಸಿದ್ದರು ಹಾಗೆಯೇ ಟವನ್ ಹಾಲಿನಲ್ಲಿ ಜನರು ಕಾಲಕ್ಕೆ ಸರಿಯಾಗಿ ಬಂದು ನೆರೆದಿದ್ದರು ಅಸಹಕಾರ ಸಹಕಾರಿಗಳಾದ ಜನರಿಂದ ಸರೀಫರು ... ಸಹಕಾರಿಗಳೊಡನೆ ಹೊರಗೆ ಬಿಗಳಿಯಲ್ಲಿ ಸಭೆಯ ... ದರು ಆದರೆ ಅಸಹಕಾರಿಗಳೆಲ್ಲರೂ ಒಳಗೆ ಚಿತ್ತರಂಜನದಾಸರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಸರೀಫರು ಸಭೆಯಿಂದ ಹೊರ ಕಳುಹಿಸಿ ಪಟ್ಟಣದ ಸಿವಾಸಿಗಳು ಈ ಸಭೆಯಲ್ಲಿ ಸ್ವಾಗತವನ್ನು ಮಾಡಿದೇ ನಡವೆ—ಪ್ರಿನ್ಸ್ ಆಫ್ ವೇಲ್ಸ್‌ರವರಿಗೆ ಸದ್ಯದ ಪರಿಸ್ಥಿತಿಯಲ್ಲಿ ಸ್ವಾಗತಕೊಡಲಾಗುವದಿಲ್ಲ ಇದಕ್ಕೆ ಅತಿ ರಕ್ಷವಾದ ಸಹಕಾರಿಗಳು ಕರಾರನ್ನು ಅವರ ವಿರೋಧಿಸಲ್ಲ ವ್ಯಾಸ್ ಮಾಡಿದರು.

ವಿದೇಶ.

ಅಂಗೋರದಲ್ಲಿ ಗ್ರೀಕರಿಗೂ ಟರ್ಕಿಯವರಿಗೂ ಯುದ್ಧ ನಡೆಯುತ್ತಲೇ ಇದ್ದರೂ ಗ್ರೀಕರೇ ಜಯಶಾಲಿಗಳಾಗಿರುವ ಹಾಗೆ ವರ್ತಮಾನವಿದೆ.

ಐರ್ಲಂಡಿನ ಸ್ವಾತಂತ್ರ್ಯ ಪಕ್ಷದವರು ಸ್ವಾತಂತ್ರ್ಯ ಕೊಡಬೇಕೆಂದು ಸರಕಾರವನ್ನು ಕೊಡುವಂತೆ ಐರ್ಲಂಡನ್ನು ಒತ್ತಾಯಿಸಿ ಒಂದು ಠರಾವನ್ನು ಆ ದ್ವೀಪದ ನ್ಯಾಯಸಭಾಧ್ಯಕ್ಷ ಸಭೆಗೆ ತಂದಿರುತ್ತಾರೆ.

ಅಂಕೂರ ಅಂತರ ಮೆಸಪಟೋಮಿಯಕ್ಕೆ ಒಬ್ಬ ದೊರೆ ಯಾರೆಂದು ಅಮೀರ್ ಫೈಸಲ್ ಎಂಬ ರಾಜನನ್ನು ಬ್ರಿಟಿಷ ಜನರ ಆದರಕ್ಕೆ ಪಾತ್ರನಾದವರಿಂದ ಅವನನ್ನೇ ಬ್ರಿಟನರು ಸಿಂಹಾಸನದ ಮೇಲೆ ಕೂರಿಸಿದರು.

ಪ್ರಪಂಚದಲ್ಲೆಲ್ಲಾ ಗಟ್ಟಿಯಾದ ಸ್ಪೈಯಿನ್‌ದೇಶಕ್ಕೆ ಸೇರಿದ ಮೊರಾಕೊ ಎಂಬಲ್ಲಿಯ ಒಬ್ಬ ಸೈನಿಕರ ನಾಯಕನಿಂದ ದಂಗೆ ಎದ್ದರು ಒಂದುವಾರಕ್ಕಿಂತ ದಂಗೆಯ ರಗಳೆ ಹೀಗೆ ಗಟ್ಟಿಯಲ್ಲಿ ಸ್ಪೈಯಿನ್‌ನಿಂದ ಹೊಸಸೈನ್ಯ ಒಂದ ಮೇಲೆ ಗದ್ದಲವು ಕಡಿಮೆಯಾಯಿತು. ಫಲಿತಾಂಶ ನಾವು ಅರಿತು ಜನರ ಪ್ರಾಣದ ಅಪಾಯ ತಿಳಿಗೇಡಿಗಳ ಗಡಿಪಡಿಯೇ ಇಷ್ಟು.

ಐರ್ಲಂಡಿನ ಸಿನ್‌ಫೇನರಿಗೂ ಬ್ರಿಟಿಷರಿಗೂ ನಡೆದ ಪತ್ರವ್ಯವಹಾರಗಳನ್ನು ನಮ್ಮ ವಾಚಕರು ಕೇಳಿರಬಹುದು ಬ್ರಿಟಿಷರು ಹೇಳುವದೇನೆಂದರೆ ಐರ್ಲಂಡಿಗೆ ಸಂಪೂರ್ಣವಾದ ಸ್ವರಾಜ್ಯವನ್ನು ಮಹಾ ಚಕ್ರಾಧಿಪತ್ಯದೊಳಗೆ ಆದೂ ಒಂದ ತಂಗಾಗಬಹುದು. ಆದರೆ ಈ ದ್ವೀಪಗಳ ಸಂರಕ್ಷಣೆಗೂ ಸ್ವ ಕೆಲವು ನಿರ್ಬಂಧಗಳು ಇರಬೇಕೆಂದು ಬ್ರಿಟಿಷರು ಹೇಳುತ್ತಿದ್ದರೆಂದು ಐರ್ಲಂಡಿನವರೂ ಒಪ್ಪುತ್ತಿರುವರು. ಮುಂದೆ ಏನಾಗುವುದೋ ನೋಡಬೇಕಾಗಿದೆ.

ಪ್ರಪಂಚದಲ್ಲೆಲ್ಲಾ ಬೋಲ್ಷೆವಿಕ್ ಎಂದು ಭಯಂಕರವನ್ನು ಹುಟ್ಟಿಸಿದ್ದ ರಷ್ಯಾದಲ್ಲಿ ಘೋರಕ್ಷಾಮವು ತಲೆದೋರಿದೆ. ಅಲ್ಲಿಯ ಜನರು ಹೊಟ್ಟೆಗಿಲ್ಲದೆ, ಇಲಿ ಹೆಗ್ಗಣ ಬೆಕ್ಕು, ನಾಯಿ ಇತ್ಯಾದಿಗಳನ್ನು ಕೂಡ ತಿನ್ನುವುದಲ್ಲದೆ ಹುಲ್ಲನ್ನು ಕೂಡ ಬೇಯಿಸಿ ತಿನ್ನತೊಡಗಿರುವರು. ಎಲ್ಲೆಲ್ಲಿ ಸಮಾಜ ತಲೆಕೆಳಗಾದ ಪ್ರಸಂಗಗಳಿವೆಯೋ ಅಲ್ಲಿ ಕ್ಷಾಮವು ಬರುವುದು

ಪ್ಯಾರಿಸ್ ನಗರದಲ್ಲಿ ಎಸ್ತೋರ್ ಬಾಯಿಟರ್ ಎಂಬ ಮಿಲೇನರಿ ಅಂದರೆ ಕೋಟ್ಯಾಧೀಶ್ವರನು ಒಂದು ಅಂಗಡಿಗೆ ಹೋಗಿದ್ದಾಗ್ಗೆ ಅಲ್ಲಿಯ ಕೆಲವು ಸಾಮಾನುಗಳನ್ನು ಕದ್ದು ಜೇಬಿನಲ್ಲಿಟ್ಟುಕೊಂಡು ಅಂಗಡಿಯಿಂದ ಹೊರಗೆ ಹೊರಟನು. ಪೋಲೀಸಿನವರು ಅನುಮಾನದಮೇಲೆ ಅತನ್ನು ವಿಚಾರಿಸಿದುದರಲ್ಲಿ "ತಮಾಷೆಗೋಸುಗ ಕಳುವುಮಾಡಿದ್ದೇನ' ಎಂದನಂತೆ. ಈಗ ವಾರಂಟಿನಲ್ಲಿ ಅತನನು ಹಿಡಿದಿರುತ್ತಾರೆ ದೊಡ್ಡವರು ಮಾಡುವುದೆಲ್ಲವೂ ತಮಾಷೆಗಾಗಿಯೇ ಅಲ್ಲವೆ?

ಚರಿತ್ರಕಾರರ ಸಂಶಯ.

ಮಡಿಕೇರಿ.

ಮಡಿಕೇರಿಯೆಂಬುದು ಮುದ್ದುವೀರಪ್ಪಯೆಂಬವನು ಜನ ಸಂಚಾರವಿಲ್ಲದ ಎತ್ತರ ಸ್ಥಳ ಕಂಡು ಆ ಸ್ಥಳದಲ್ಲಿ ಕೂತು ಅಲ್ಲಿ ಕೆಲವು ಮನೆಗಳನ್ನೂ, ಪೇಟೆಯನ್ನು ಸ್ಥಾಪಿಸಿದ್ದರಿಂದ ಮುದ್ದುಕೇರಿ ಎಂದೂ ಅದರಿಂದ ಮಡಿಕೇರಿಯಾಯ್ತೆಂದೂ ಸುಮಾರು ಎಪತ್ತು ವರ್ಷಗಳ ಹಿಂದೆ ಕೊಡಗು ಕಮಿಷನರಾಗಿದ್ದವರೊಬ್ಬರು ಬರೆದ ಕೊಡಗು ಚರಿತ್ರೆಯಲ್ಲಿ ಕಂಡು ಬರುತ್ತದೆಂದು ರೇವಪ್ಪಯ್ಯನವರು ಬರೆದಿದ್ದಾರೆ

ಕೊಡಗು ರಾಜರಕಾಲದಲ್ಲಿ ಓಂಕಾರೇಶ್ವರದೇವಸ್ಥಾನವನ್ನು ಕಟ್ಟಿಸಿ, ಅದರ ಎದುರಿನಲ್ಲಿ, ಜನರ ಪ್ರಯೋಜನಾರ್ಥವಾಗಿ ಒಂದು ಕೆರೆಯನ್ನು ತೋಡಿಸಿದರು ಆಕೆರೆಯ ನೀರು ಬಹಳ ನಿರ್ಮಲವಾಗಿದ್ದದ್ದರಿಂದ (ಮಡಿ ನಿರ್ಮಲವಾದ) ಅದಕ್ಕೆ ಮಡಿಕೆರೆಯೆಂಬ ಹೆಸರಾಗಿ, ಈ ಪಟ್ಟಣವು ಈ ಕೆರೆಯಿಂದಲೇ ಮಡಿಕೇರಿಯೆಂಬ ನಾಮವನ್ನು ಧರಿಸಿರಬಹುದೆಂದು ಎಂ. ಸಂಜಪ್ಪನವರ ಅಭಿಪ್ರಾಯ

ಹಿಂದೂಸ್ಥಾನದ ಜನರು ವಿಜಯದಶಮಿಯಲ್ಲಿ ಆಯುಧಪೂಜೆಯ ಸಮಾರಂಭವನ್ನು ನಡೆಯಿಸುವಾಗ್ಗೆ ಹಿಂದೂಗಳಾದ ಕೊಡಗರೇಕೆ ಬೇರೆ ಸಮಯದಲ್ಲಿ ಈ ಹಬ್ಬವನ್ನು ಆಚರಿಸುವರು. ಹಿಂದೂ ಜನರೆಲ್ಲರಿಗೂ ಒಂದೇ ತರದ ಆಚರಣೆಯೆಂಬುದು ನಮ್ಮ ಜನಾಂಗದ ಹಬ್ಬಗಳಿಂದ (National Festivals) ತಿಳಿಯ ಬಹುದು ಈ ವಿಷಯದಲ್ಲಿ ಚರಿತ್ರಾರ್ಹವಾದ ಕಾರಣಗಳೇನಾದರೂ ಇವೆಯೋ?

ಮದ್ಯಪಾನ ಪ್ರತಿಬಂಧಕ ಸರ್ವಜ್ಞ ದಶಕವು.

ಮುಖಕೆಲ್ಲ ದುರ್ಗಂಧ ಸುಖಕಿಲ್ಲ ಬಿಸಿಬೂದಿ।
ಮುಖವಾಣ್ಮ[1] ನೊದೆಯುವ ದಾರುಣ[2] ಮದ್ಯದಿಂ।
ದುಃಖವೇಯಕ್ಕು ಸರ್ವಜ್ಞ ॥೧॥

ಸದ್ದು ಕಾರ್ಯಕೆ ಹೊಲ್ಲ ಮುದ್ದು[3] ಬಾಲಗೆ ಹೊಲ್ಲ
ಕದ್ದು ಕುಡಿವವರ ನರಹೊಲ್ಲ ಮದ್ಯವದು
ಮುದ್ದೀಗೂ ಹೊಲ್ಲ ಸರ್ವಜ್ಞ ॥೨॥

ಧಾತುಗಳು ಕುಂದುವವು ಗಾತ್ರಗಳು ತಗ್ಗುವವು
ಮಾತುಗಳು ತೊದಲ್ವವು ನಾಶದ ಸೆರೆಯದು
ಯಾತಕೂ ಬೇಡ ಸರ್ವಜ್ಞ ॥೩॥

ಮತಿಯು ಕೆಡಿಸುವನೇಂದಿ ಗತಿಯುಕೆಡಿಸುವನೇಂದಿ
ಸತಿ ಲಜ್ಜೆ ಕಳೆಯುವ ನೇಂದಿಯದ ಕುಡಿವುದು
ಹಿತದಮಾತಲ್ಲ ಸರ್ವಜ್ಞ ॥೪॥

ಮಾನಹೀನತೆಯಕ್ಕು ಧನದ ಹಾನಿಯದಕ್ಕು।
ಹೀನ ಮನವದಕ್ಕು ರಾಕ್ಷಸನ ದೈತ್ಯ ತಾ।
ಮಾನವಗೆ ಬೇಡ ಸರ್ವಜ್ಞ ॥೫॥

ಹೆಂಡ ನರಕಕೆ ದಾರಿ ಹೆಂಡ ಲೋಕಕೆ ಮಾರಿ।
ಹೆಂಡಗುಡಕ ತಾನು ಭಂಡು ಹೊಲೆಯನಹನು।
ರಂಡೆಗೂ ಕೀಳು ಸರ್ವಜ್ಞ ॥೬॥

ರೂಪಗೇಡಿಯು ಮಾಡಿ ಕುಲವ ನಾಶಿಸುವಂಥ।
ಪಾಪಿನುರೆಯಗಾಳಿ ಸೋಂಕಿದ ನರಕಟ್ಟು।
ಕಪಿಯಹನು ಕೇಳು ಸರ್ವಜ್ಞ ॥೭॥

ಎಂಜಲೆಂಜಲ ವೃಗುಳ ಕಂಡಕಂಡರ ಬೊಗಳೆ।
ಸಂಜುಹೆಂಡವ[4] ಕುಡಿದು ಹೊಂಡದಿ ಬೀಳ್ವಗೆ
ಮಂಜುಗಣ್ಣಕ್ಕು ಸರ್ವಜ್ಞ ॥೮॥

ಬ್ರಾಂಡಿ ಕುಡಿವವ ದೇಶಭಕುತನಾದಪನೇನು।
ಬ್ರಾಂಡಿಯಿಂ ಶೀಲಪದವಿಗಳ್ ಬಯಲಾಗಿ।
ಮಿಂಡೆ[5] ಗೆಣೆಯಕ್ಕು ಸರ್ವಜ್ಞ ॥೯॥

ಸುರೆಯ ಸೇವಿಪ ತಾನು ಮದುಳೆ ಮಾತಸುಪೇಳ್ವ
ದುರುಳತನವ ಮಾಡಿ ಮದನೇರಿ ಕುಣಿವುತ್ತೆ।
ಹರಿಯಲ್ಲಿ[6] ಬೀಳ್ವ ಸರ್ವಜ್ಞ ॥೧೦॥

ಬಂಕಿಕೋಡ್ಲ,
ತಾ॥ 23-7-1921. ರಾ ವಾ. ಪಂಡಿತ

1 ಇಂದ್ರ. 2. ಭಯಂಕರ. 3 ಅಬ್ಬೆ. 4 ವಿಷ. 5. ಹಾದರಗಿತ್ತಿ. 6. ಕಾಲಿವೆ (ಗಟಾರ).

("ಕನ್ನಡ ಧುರೀಣ" ದಿಂದ)

ಪುಸ್ತಕ ವಿಮರ್ಶೆ.

ಕೊಡಗರ ಕುಲಾಚಾರಾದಿ ತತ್ವೋಜ್ಜೀವಿನಿ.

ಗ್ರಂಥಕರ್ತ- ಕೂರವ್ವಂಡ ಅಪ್ಪಯ್ಯ, ಮೈಸೂರು

ಪುಸ್ತಕದ ವಿಷಯವೇನೆಂದು ಹೆಸರನ್ನು ಓದುವಾಗಲೇ ವಾಚಕರಿಗೆ ತಿಳಿಯಬಹುದು. ಗ್ರಂಥಕರ್ತರು ಪಟ್ಟ ಶ್ರಮವು ಅಲ್ಪವಲ್ಲವೆಂದು ಹೇಳಬೇಕಾಗದು ಈಗ್ಗೆ ೧೯ ವರ್ಷಗಳ ಹಿಂದೆ ಈ ಪುಸ್ತಕವು ಬರೆಯಲ್ಪಟ್ಟರೂ ಕೊಡಗಿನವರಾರೂ ಪುಸ್ತಕಕ್ಕೆ ಬೆಂಬಲ ಕೊಡಬೇಕಾಗಿದ್ದು ಆದರವು ಕೊಡಲಿಲ್ಲವೆಂಬುದನ್ನು ತಿಳಿಯಲು ವಿಷಾದಿಸುತ್ತೇವೆ ಪುಸ್ತಕದ ಮುಖ್ಯಾಂಶಗಳನ್ನು ವಾಚಕರಿಗಾಗಿ ಎತ್ತಿ ಬರೆಯುತ್ತೇವೆ

1. ಕೊಡಗು ಎಂಬ ಶಬ್ದವು "ಕುಡುಮಲೆನಾಡು" ಎಂಬುದರಿಂದಲೇ ಹುಟ್ಟಿತು ಕುಡು ಎಂದರೆ ಪಶ್ಚಿಮ ಎಂದರ್ಥ.

2. ಕೊಡಗರು ಕಾವೇರಿ ಪುರಾಣದಲ್ಲಿ ಹೇಳಿರುವಂತ ಶೂದ್ರ ಸ್ತ್ರೀಯಲ್ಲಿ ಹುಟ್ಟಿದ ಕದಂಬ ವಂಶಸ್ಥರಲ್ಲ. ಅವರು ಉತ್ತರದಿಂದ ಬಂದ ಬಾಹ್ಲೀಕ್ಸರ ರಕ್ತ ಸಂಬಂಧಿಯರು.

3 ಕೊಡಗರಿಗೆ ಇತರ ವರ್ಣಾಶ್ರಮ ಧರ್ಮಸ್ಥರಿಗಿರುವಂತೆ ಆಚಾರಗಳಿವೆ ಉದಾ ಜಾತಕರ್ಮ ನಾಮಕರಣ ಇತ್ಯಾದಿ ಪ್ರಥಮ ಋತುಮತಿಯಾದಾಗ್ಗೆ ಮಾಡುವಶಾಸ್ತ್ರ ವಿವಾಹಕ್ರಮ ಇತ್ಯಾದಿ, ಇತ್ಯಾದಿ.

ಈ ಪುಸ್ತಕವನ್ನು ಪರಿಶೋಧಿಸಿದರೆ ಸದ್ಯದ ಕೊಡಗರು ಸರ್ವವನ್ನು ಬಿಟ್ಟು ಕೊಟ್ಟಂತಿದೆ ವಿವಾಹ ಕಾಲದಲ್ಲಿ ಆಗತಕ್ಕ ದೇವತಾಪೂಜೆ, (ಕಾರಣಂಗಿಡುವುದು) ನಾಂದಿ ಪೂಜೆ ಇತ್ಯಾದಿ ಕ್ರಮಗಳೆಲ್ಲಾ ನಕಲಿಯಾಗಿವೆ (Farce) ಕೊಡಗರು ಶುದ್ಧ ಹಿಂದುಗಳೆಂಬುದಕ್ಕೆ ಯಾವ ಸಂಶೋಧವು ಇಲ್ಲದಿರುವಲ್ಲಿ ಅವರಲ್ಲಿ ಏಕ ಹಿಂದುಗಳ ಆಚಾರಗಳಿರಬಾರದು?

ಈ ಆಚಾರಗಳೆಲ್ಲ ಕೊಡಗಿನಲ್ಲಿ ಉಂಟಾದ ರಾಜವಿಪ್ಲವಗಳ ಸಮಯದಲ್ಲಿ ಅಂದರೆ ಟಿಪ್ಪುಸುಲ್ತಾನನು ಕೊಡಗರನ್ನು ಬಲತ್ಕಾರದಿಂದ ಹಿಡಿದುಕೊಂಡು ಹೋದ ಸಮಯದಲ್ಲಿ ಸ್ವಲ್ಪ ಮೂಲೆಗ ಬಿದ್ದಹಾಗೂ ಮತ್ತೆ ಪರಮತಸ್ಥರಾದ ಕೊಡಗಿನ ಅರಸರು ಈ ವಿಷಯದಲ್ಲಿ ಸುಮ್ಮನಿದ್ದುದರಿಂದ ಸಂಪೂರ್ಣ ಮೂಲೆಗೆ ಬಿದ್ದಹಾಗೂ ಬರೆದಿರುತ್ತದೆ ಈ ವಿಷಯವನ್ನು ಸರಾ. ಲೋಕಿನ ಕಾವೇರಿ ಪೂರ್ವಾಚಾರವು ಕೈಗೊಂಡರು ಇವರೇ ಅಮ್ಮ ಕೊಡಗರು "ಅಮ್ಮ ಎಂಬ ಶಬ್ದವು ಅಣ್ಣು ಎಂಬ ಹಳಗನ್ನಡದ ಧಾತುವಿನಿಂದ ಹುಟ್ಟಿ ತೆಂಕಲೂ ಅಮ್ಮ ಎಂಬುದಕ್ಕ ಹೆಮ್ಮೆ ಅಥವಾ ಶ್ರೇಷ್ಠತ್ವವೆಂಬ ಅರ್ಥವೆಂಬುದಾಗಿಯೂ ಬರೆದಿರುತ್ತಾರೆ.

ಪುಸ್ತಕವು ೧೯೦೨ ನೆಯ ಇಸವಿಯಲ್ಲಿ ಬರೆದಿರೋದರಿಂದ ಚರಿತ್ರಾಂಶದ ಕೆಲವು ವಿಷಯಗಳು ಸರಿಯಿಲ್ಲ ಕಾರಣ ಚರಿತ್ರೆಗ ಸಂಬಂಧಪಟ್ಟ ಅನೇಕ ಶಾಸನಗಳು ಈಗೀಗ ಶೋಧಿಸಲ್ಪಟ್ಟಿದೆ ಆದರೆ ಮರೆತು ಹೋಗುತ್ತಿರುವ ಸಾಮಾಜಿಕ (Social) ಸಂಗತಿಗಳನ್ನು ಪುಸ್ತಕರೂಪದಲ್ಲಿ ಬರೆದಿಟ್ಟುದುದು ಕೊಡಗಿನವರಾದ ನಮ್ಮೆಲ್ಲರ ಸೌಭಾಗ್ಯವೇ ಸರಿ.

ಅಂತು ಈ ಪುಸ್ತಕವು ಪ್ರತಿ ಒಬ್ಬರಿಂದಲೂ ತರಿಸಲು ಯೋಗ್ಯವಾಗಿದೆ ಪುಸ್ತಕದಲ್ಲಿ ೧೧೧-೧೨೬ ಪುಟ ಇದ್ದು ಮೈಸೂರು ಜಿ ಟಿ ಎ ಪ್ರೆಸ್ಸಿನಲ್ಲಿ ಮುದ್ರಿತವಾಗಿದೆ

ಪ್ರೋತ್ಸಾಹಿಸಲ್ಪಟ್ಟ ಆಟದ ಸಂಘ.

ಪೊನ್ನಂಪೇಟೆಯಲ್ಲಿದ್ದ "ಅಥ್ಲೆಟಿಕ್ ಯೂನಿಯನ್" ಎಂಬ ಸಂಘದ ಒಂದು ಧಾಂಜನದ ಮೀಟಿಂಗು ಇದೇ ತಾರೀಕು 21 ರಲ್ಲು ಜರುಗಿತು ಸದರಿ ಮೀಟಿಂಗಿಗೆ ಮೆಂಬರುಗಳು ನೇಕರು ಸೇರಿ ಈ ವರ್ಷ ಕೈಲ್ ಮುಹೂರ್ತದ ಆಟಗಳನ್ನು (Sports) ಬರುವ ಸೆಪ್ಟಂಬರ್ ತಾರೀಕು 18 ನೇ ಆದಿತ್ಯವಾರ ನಡಸಲು ನಿಶ್ಚೈಸಿದರು ಸದರಿ ಆಟದ ದಿವಸ ಅಧ್ಯಕ್ಷರನ್ನಾಗಿ ಮೆ॥ ಅಪ್ಪಾರಂಡ್ರ ಕಾರ್ಯಪ್ಪನವರು ಎಂ. ಎ ಬಾರ್-ಎಟ್-ಲಾ ಸಬ್ ಜಡ್ಜಿಯವರನ್ನು ಕೇಳಿಕೊಳ್ಳುವ ಮೇರೆ ತೀರ್ಮಾನವಾಯಿತು. ಈ ವರ್ಷದ ಆಟಗಳನ್ನು ಬಹಳ ವಿಜೃಂಭಣೆಯಿಂದ ನಡಿಸಬೇಕಾಗಿಯೂ ಸಹ ವಿಚಾರವಾಗಿರುತ್ತದೆ ಅಲ್ಲದೆ ವರ್ಷಂ ಪ್ರತಿ ಇಂಥಾ ಕೂಟಗಳಲ್ಲಿ ಮದ್ಯಪಾನ ಮತ್ತು ನಿಷಿದ್ಧ ಪದಾರ್ಥಸೇವನೆಮಾಡಿಕೊಂಡು ಅನ್ಯಥಾ ವ್ಯಯಮಾಡುವ ಸಂದರ್ಭವನ್ನು ಬಿಟ್ಟುಬಿಟ್ಟು ಈ ವರ್ಷ ಯಾವತರದ ಮದ್ಯವನ್ನಾಗಲಿ ಕೂಡಿಸದೆ ಐಕ್ಯಮತ್ಯದಿಂದ ನಡಿಸಬೇಕೆಂಬದಾಗಿ ಎಲ್ಲರೂ ಏಕ ಮನಸ್ಸಿನಿಂದ ಒಪ್ಪಿರುತ್ತಾರೆ. ಈಗ್ಗೆ ಕೊಡಗಿನಲ್ಲು ಬಹಳ ಕಡೆ ನಡೆಯುವ ಕೂಟ ಮತ್ತು ಸಂತೋಷ ಸ್ಥಳಗಳಲ್ಲಿ ಈ ಪಿಶಾಚಿಯಾದ ಮದ್ಯಪಾನ ಸೇವನೆಯನ್ನು ಬಿಟ್ಟಿರುವದು ನೋಡಿದರೆ ಇನ್ನು ಮೇಲೆಯಾದರೂ ನಮ್ಮ ದೇಶವು ಅಭಿವೃದ್ಧಿ ಹೊಂದಲು ಯಾವ ಅಡ್ಡಂತರವು ಇಲ್ಲವೆಂಬುದಾಗಿ ದೃಢವಾಗಿ ಹೇಳಬಹುದಾಗಿದೆ ಆದ್ದರಿಂದ ಈ ಸಂಘಕ್ಕೆ ನಮ್ಮ ಅಮೃತಮಯ ಸಂಘದ ಶುಭಾಶನನ್ನು ಮತ್ತು ವಿನಯಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇವೆಯಲ್ಲದೆ ಆಶೀರ್ವಾದಗಳನ್ನೂ ಮಾಡುತ್ತೇವೆ.

ಪಿ ಬಿ

ಕೊಡಗು ಮಹಾಶಯರಿಗೆ ವಿನಂತಿ.

ಕೈಲು ಮುಹೂರ್ತ ಹಬ್ಬವು ಹತ್ತಿರ ಸೇರಿತು. ಈ ಹಬ್ಬದಲ್ಲು ಪ್ರತಿ ಒಬ್ಬರೂ ಅವರವರ ಕರ್ತವ್ಯವನ್ನು ಮಾಡಲೇಬೇಕಾಗಿದೆ ಸಾರಾಯವೆಂಬ ಪಿಶಾಚಿಯನ್ನು ಬಹು ಕಷ್ಟನಿಷ್ಠುರಗಳಿಂದ ಶಕ್ಯವುಟ್ಟಿಗೆ ಕೊಡಗಿನಿಂದ ಓಡಿಸಿದೆವು ಈ ಹಬ್ಬವು ನಮ್ಮ ಮನಸ್ಸಿನ ಸ್ಥಿರತ್ವವನ್ನು ತೋರ್ಪಡಿಸಬೇಕು ಉತ್ತರ ಹಿಂದುಸ್ಥಾನದಲ್ಲಿ ಮಹಮ್ಮದೀಯರು ಲಕ್ಷಗಟ್ಟಲೆಯಾಗಿ ಬಕ್ರಿದ್ ಹಬ್ಬದಲ್ಲಿ ಗೋವುಗಳನ್ನು ಕೊಲ್ಲುತ್ತಿದ್ದರು. ಅವರು ಎಷ್ಟೋ ಕಷ್ಟಗಳಿಂದ, ಸಾಹಸದಿಂದ ಸಹನೆಯಿಂದ, ಗೋವು ಹಬ್ಬವನ್ನು ಈ ವರ್ಷದ ಹಬ್ಬದಲ್ಲಿ ನಿಲ್ಲಿಸಿಬಿಟ್ಟಿರುತ್ತಾರೆ. ಸಾರಾಯಿಯದ ಪಂಚಿನ ಉತ್ತರ ಹಿಂದುಸ್ಥಾನದಲ್ಲಿಯೂ ಬೇರೆ ದೇಶಗಳಲ್ಲಿಯೂ, ನಿರ್ಮೂಲವಾಗುವ ಕಾಲವು ಬಂದು ಹೋಗಿ ಕೌನ್ಸಿಲ್ ಪ್ರತಿನಿಧಿಗಳು ಸಾರಾಯದ ಇಲಾಖೆಯನ್ನೇ ಯಾಕ ಸರ್ಕಾರದವರು ತೆಗೆದುಬಿಡಬಾರದೆಂದು ಕೇಳತೊಡಗಿದ್ದಾರೆ ಅನೇಕ ಪಟ್ಟಣಗಳಲ್ಲಿ ಸಾರಾಯದ ಪಂಚಾಚಿಗೆ ಸಹ ಬಂದವಾಗಿದೆ ವಿದ್ಯೆಯಲ್ಲಿ ಮುಂದಾಗಿರುವ ನಮ್ಮ ಕೊಡಗು ಜನಗಳು ಈ ಸಮಯದಲ್ಲು ಸುಮ್ಮನಿರಬಹುದೇ. ನವ ಸಾರಾಯಿಯ ಹೆಂಡದಲ್ಲಿ ಇಂಥ ದ್ವೇಷವನ್ನು ತೋರಿಸಲಿಕ್ಕೆ ಇದಲ್ಲವೇ ಒಳ್ಳೆ ಸಮಯ ಕೂಡ್ಲೆ ಈ ಹಬ್ಬದ ಮೊದಲೇ ಪ್ರತಿನಾಡುಗಳಲ್ಲಿಯೂ ನಗರಗಳಲ್ಲಿಯೂ, ಗ್ರಾಮಗಳಲ್ಲಿಯೂ ಗ್ರಾಮಾಂತರಗಳಲ್ಲಿಯೂ ಮೀಟಿಂಗನ್ನು ನಡೆಸಬೇಕಾಗಿದೆ ಪ್ರತಿಗ್ರಾಮಸ್ಥರೂ ಮೀಟಿಂಗ ನಡಿಸಿ ಸಾರಾಯವನ್ನು ಈ ಹಬ್ಬಕ್ಕೆ ಸೇರಿಸಲೇ ಕೂಡದೆಂಬುದನ್ನು ನಿರ್ಧರಿಸಿದರೆ ಕೊಡಗಿಗೆ ಎಷ್ಟು ಲಾಭ ಎಷ್ಟು ಕೀರ್ತಿ, ಎಂಥಾ ಒಗ್ಗಟ್ಟು ಉಂಟಾಗುವದು. ಎಂಬುದನ್ನು ತಾವೇ ಆಲೋಚಿಸಿ. ಆಗಲೇ ಅನೇಕ ಗ್ರಾಮಗಳಲ್ಲಿ ಈ ಕಟ್ಟುಕಟ್ಟಳೆಗಳನ್ನು ಮಾಡಿಕೊಂಡು ಈ ಹಬ್ಬವನ್ನು ಸಾರಾಯವಿಲ್ಲದ ನಡಿಸುವಂತೆ ತೀರ್ಮಾನಿಸಿಕೊಂಡಿದ್ದಾರೆ. ಇದರಂತೆ ಎಲ್ಲರೂ ಕೂಡಲೆ ಮೀಟಿಂಗು ನಡಿಸಿ ತೀರ್ಮಾನಿಸಬೇಕಾಗಿ ವಿಜ್ಞಾಪನೆ ಕೊಡಗು ಜನಾನ ರಾಂಕನ್ಯಾ ಸಹ ಕಳೆದ ವರ್ಷದ ಮೀಟಿಂಗಿನಲ್ಲಿ ಸಾರಾಯವನ್ನು ಹಬ್ಬ, ಮದುವೆ ಶುಭಕೋಲಗಳಲ್ಲಿ ಉಪಯೋಗಿಸಬಾರದೆಂದು ಠರಾವು ಮಾಡಿ ಪ್ರತಿನಾಡುಗಳಿಗೆ ಕಳುಹಿಸಿದೆ ಅದನ್ನು ಹಿಂಬಾಲಿಸಿ ಕೊಡಗುಮೇಲ್ ಒಂದು ವರ್ಷದಿಂದ ಸಾರಾಯದ ವಿಷಯವಾಗಿ ಮಹತ್ತಾದ ಕಾರ್ಯವನ್ನು ಮಾಡಿ ಸಾರಾಯ ಸೇಂದಿಯ ಜಪವನ್ನು ಬಗಾಗಿಸಿ ಇತರ ದೇಶದ ಜನಾಂಗದವರೂ ಕೂಡ ನಮ್ಮನ್ನು ಕೊಂಡಾಡುವಂತೆ ಮಾಡಿದೆ ಇದಲ್ಲವೇ ಕೀರ್ತಿ, ಇದಲ್ಲವೇ ಬಹುಮಾನ. ಹೀಗಿರುವಾಗ್ಗೆ ಈ ಹಬ್ಬದಲ್ಲು ಸಾರಾಯವನ್ನು ಕೂಡಿಸಿದರೆ ಬಣಗಿದ ಬೇರಿಗೆ ನೀರು ಹೊಯಿದಂತೆ ಆಗುತ್ತೆ. ಹಾಗೆ ಮಾಡಬಾರದೆಂದು ಕೊಡಗು ಮಹಾಶಯರನ್ನು ಬೇಡಿಕೊಳ್ಳುವೆನು. ಈ ಸಮಯದಲ್ಲು (Temperance Association) ಕೊಡಗು ನಿರಾಸೇವನರ್ಜನೆ ಸಂಘದವರು ಅವರು ಇಷ್ಟು ವರ್ಷಗಳಿಂದ ಮಾಡಿದ ಸಾಹಸವನ್ನೆಲ್ಲಾ ಒಟ್ಟುಗೂಡಿಸಿ ಎಲ್ಲೆಲ್ಲಿಯೂ ಈ ಹಬ್ಬವನ್ನು ನಿರುಪರ್ಬನೆಯಿಂದ ನಡಿಸುವಂತೆ ಪ್ರಯತ್ನಪಡುವಂತೆ ಸಂಘದ ಮುಖ್ಯಸ್ಥರನ್ನು ಕೇಳಿಕೊಳ್ಳುವೆನು ಅದರೆ ಈ ಹಬ್ಬದಲ್ಲಿ ಗಂಡಸರೇ ಅಲ್ಲ, ಸಹೋದರಿಯರಾದ ಕೊಡಗು ಮಹಾಸ್ತ್ರೀಯರೂ ಸಹ ಈ ಸಾರಾಯವನ್ನು ಇಲ್ಲದಂತೆ ಮಾಡುವ ಕೆಲಸವನ್ನು ಕೈಕೊಳ್ಳಬೇಕಾಗಿದೆ ಸಾರಾಯವೆಂಬ ಪಿಶಾಚಿಯು ಅವರ ಮನೆಯೊಳಕ್ಕೆ ಸೇರದಂತೆ ಮಾಡುವದು ಅವರ ಕೆಲಸವಾಗಿದೆ. ಅವರು ಮನದಲ್ಲಿ ನಿಂತರೆ ಇದು ದೊಡ್ಡ ಕೆಲಸವಲ್ಲ. ಲೋಕದ ಏಳಿಗೆಗೆ ಸ್ತ್ರೀಯೇ ಕಾರಣವಲ್ಲವೇ ಸ್ತ್ರೀಯರಿಂದ ಎಂಥಾ ಮಹತ್ಕಾರ್ಯವೂ ಲಭಿಸುವದಿಲ್ಲ? ದುಡಿದ ಆಳುಗಳಿಗೆ "ಇಷ್ಟು ಸಾರಾಯ ಕೊಡಬೇಡವೋ"? ಎಂಬ ಮಾತು ಕುತುಕ ಯಜಮಾನನ ಬಾಯಿಯಿಂದ ಬೀಳುವದೇ ಹೊರತು ಅನ್ಯಥಾ ಅಲ್ಲ. ಇದಕ್ಕೆ ಬದಲಾಗಿ ದುಡಿದ ಆಳಿಗೆ ಒಪ್ಪಿ ಕೊಡಬಹುದು. ಅನ್ನ ಕೊಡಬಹುದು ಬೇರೆ ಯಾವದನ್ನು ಕೊಟ್ಟರೂ ಅದು ಆಳಿನ ಮತ್ತು ಯಜಮಾನನ ಪ್ರಯೋಜನಕ್ಕೆ ಬರುತ್ತೆ ಹಬ್ಬ ಕಳೆದ ಕೂಡ್ಲೆ ತಮ್ಮ ಆರಂಬದ ಇತರ ಕೆಲಸವೂ ಸರಾಗವಾಗಿ ನಡೆಯುತ್ತದೆ ಆಯಾಯಾ ಗ್ರಾಮಸ್ಥರು ಈ ಸಮಯದಲ್ಲಿ ಅಲ್ಲಲ್ಲಿ ಮೀಟಿಂಗ್ ನಡಿಸಿ ಎಷ್ಟರಮಟ್ಟಿಗೆ ಸಾರಾಯವನ್ನು ಈ ಹಬ್ಬದಲ್ಲಿ ನಿಲ್ಲಿಸಿದರೆಂಬ ಸಂಗತಿಯನ್ನು ಕೊಡಗು ಪತ್ರಾ ಎಡಿಟರವರಿಗೆ ತಿಳಿಸಿದರೆ ಅವರು ಅದನ್ನು ಸಂತೋಷದಿಂದ ಪತ್ರಿಕೆಯಲ್ಲಿ ಪ್ರಕಟಿಸುವರು. ಪ್ರಿಯಸಹೋದರ ಸಹೋದರಿಯರೇ ಎದ್ದೇಳಿರಿ! ಸಾರಾಯವೆಂಬ ಪಿಶಾಚಿಯನ್ನು ಓಡಿಸಿ ಕೀರ್ತಿಯನ್ನು ಪಡೆಯಿರಿ! ನಿಮಿಷಮಾತ್ರದ ಸಂತೋಷಕ್ಕೆ ಮರುಳಾಗಬೇಡಿರಿ! ಕುಡುಕರ ಮಾತಿಗೆ ಕಿವಿಗೊಡಬೇಡಿರಿ!

ಹಬ್ಬಗಳ ಕೋಲಾಹಲ.

ಕೊಡಗರಿಗೆ ಆಯುಧಪೂಜೆಯ ಹಬ್ಬ! ಕೊಡಗರಲ್ಲದ ಹಿಂದುಗಳಿಗ ಗೌರಿ ಗಣೇಶಹಬ್ಬ! ನಮ್ಮ ಮುಸಲ್ಮಾನ ಬಾಂಧವರಿಗೆ 'ಮೊಹರಂ' ಪ್ರಾರಂಭ! ಇಂತಹ ಹಬ್ಬಗಳ ಸುಸಂತೋಷ ಸಮಯದಲ್ಲಿ "ಕೊಡಗು" ಪತ್ರಿಕೆಯೂ ಕೂಡ ತನಗಿರುವ ಸಂತೋಷವನ್ನು ಪ್ರದರ್ಶಿಸಲೋಸುಗ ಎರಡು ಹಾಳೆಯ ಒಂದು "ಸ್ಪೆಷಲ್" ನ್ನು ಹೊರಡಿಸಿದೆ.

ಸಮಸ್ತ ಜನರಿಗೆ ಸುಖಸಂತೋಷ ಉಂಟಾಗಲೆಂದು ಮತ್ತೊಮ್ಮೆ "ಪತ್ರಿಕೆ" ಯು ಕೋರುವುದಲ್ಲದೆ ವಾಚಕರೆಲ್ಲರಲ್ಲಾ ದಾರಿದ್ರ್ಯವು ಕಾಣದಾಗಿ ಸುಖ ಸಂಪತ್ತು ಬರಲೆಂದು ಜಗದೀಶನನ್ನು ಪ್ರಾರ್ಥಿಸುವುದು.

ಇತಿ "ಕೊಡಗು"

" ಕೈಲ್ ಮುಹೂರ್ತದ ಹಬ್ಬದ ನಿಮಿತ್ತ ಸ್ಪೆಷಲ್ "

ಕೈಲುಮುಹೂರ್ತಹಬ್ಬದ ಚಳವಳಿಕೆ.

ನೀನು ಬರುವದಿಲ್ಲವೇ ಬರದಿದ್ದರೆ ಬೇಡ. ನಿನ್ನ ಇಲ್ಲದಿದ್ದರೆ ನೀನು ಏನು. ನಮ್ಮನ್ನೇಕೆ ನಿರ್ಬಂಧಿಸುವೆ. ತಾನು ಕುಡಿಯುವರರ ಜತೆ ಎರಡು ನಾಣ್ಣುಡಿಯಂತೆ ನಾಕಷ್ಟು, ನಾಕು, ಈ ನಿರ್ಬಂಧ ನಾಕು ಉಂಡು ಉಟ್ಟು ಕುಡಿಯದೆ ಮಾಡಿದಂತಾ ಈ ಜಾಣ್ಯಸಂವಾದನೆ ಮಾರಿಗೆ ಈಗಿನ ಕಾಲದಲ್ಲಿ ಇಂದು ಕಂಡವರನ್ನು ನಾಳೆ ಕಾಣುವದಿಲ್ಲ. ಆದ್ದರಿಂದ ನನಗೆ ಅನುಕೂಲ ಇರುವಾಗ ಎಂಜೋಯ್ ಪಡದೆ ಇರುವದು ಸರಿಯಲ್ಲ. ಇಷ್ಟು ದಿವಸ ಛಳಿ, ಮಳೆ ಗಾಳಿ ರಾತ್ರಿ, ಹಗಲು ಎಂಬುದನ್ನು ಗಣನೆಗೆ ತಾರದೆ ಹಾಗಾದರೂ ಕೈಲ್‌ಮುಹೂರ್ತಹಬ್ಬಕ್ಕೆ ಮೊದಲೆ ಕೆಲಸ ಪೂರೈಸಬೇಕೆಂತ ನಿಶ್ಚೈಸಿ ದುಡಿದು ಬಿಟ್ಟೆನು. ಈ ಹಬ್ಬವನ್ನು ಮುಂದೆ ಮುಗಿಸಿದ ಸಂತೋಷಾರ್ಥವಾಗಿ ಈ ದಿವಸ ಒಂದೋ, ಎರಡೋ, ಶೀಶೆ ಸಾರಾಯಿಗಳನ್ನು ಕುಡಿದು ತಮಾಷೆ ಮಾಡುವದು ನನ್ನ ಇಷ್ಟವೇ ಎಂಬುದೇ ಮೊದಲಾದ ಮಾತುಗಳನ್ನು ಆಡುತ್ತಾ ಇಬ್ಬರು ಪಟ್ಟಣದಲ್ಲಿ ಹಿಂದಿರಾ ಜೇಂದ್ರಪೇಟೆಯಲ್ಲಿ ಇದ್ದರು. ಅದರಲ್ಲಿ ಒಬ್ಬನು ಮದ್ಯವನ್ನು ನಿಷೇಧಿಸುವವನೆಂದು ಮೇಲಿನ ವಾಕ್ಯಗಳಿಂದ ತಿಳಿದು ಬರುತ್ತದೆ. ಅವನು ಈ ಮಾತುಗಳನ್ನು ಕೇಳಿ ಅಗ್ಯೆಯಾ ನಾನು ನಿನ್ನನ್ನು ನಿರ್ಬಂಧಿಸುವದಿಲ್ಲ ಉಂಡು ಉಟ್ಟು ಕುಡಿಯಬೇಡವೆಂದು ಮೊದಲೇ ಹೇಳಿಲ್ಲ ಸ್ವಲ್ಪ ತಾಳ್ಮೆ ತೆಗೆದುಕೊಂಡು ನನ್ನ ಮಾತುಗಳನ್ನು ಕೇಳು. ನೀನು ಕೆಲಸ ಮುಗಿದ ಸಂತೋಷಾರ್ಥವಾಗಿ ಸಾರಾಯಿ ಕುಡಿದು ತಮಾಷೆ ಮಾಡಬೇಕೆಂದು ಹೇಳಿದೆಯಲ್ಲವೇ, ತಮಾಷೆ ಒಳ್ಳೆಯ ತಮಾಷೆ! ರೂಪಾಯಿ ಹಾಕಿ ಸಾರಾಯಿ ಕುಡಿಯುತ್ತ ತಲೆತಿರುಗಾಟ, ದೊಪ್ಪರಿ ಬಿಳಾಟ ತಳಿಯೊಡೆಯಾಟ! ಆ ತಮಾಷೆ ಬಹು ಸೊಗಸಾದ ತಮಾಷೆ. ಆ ತಮಾಷೆಯನ್ನು ನೋಡಲಿಕ್ಕೆ ನಾಯಿ ನರಿಗಳು ಸಂತೋಷದಿಂದ ಓಡಿಬರುತ್ತವೆ. ಈ ತಮಾಷೆಯ ಆಟವನ್ನಾಡಲಿಕ್ಕೆ ಮಾರ್ಗದ ಚರಂಡಿಯೇ ರಂಗಸ್ಥಳವಲ್ಲವೇ. ಈ ತಮಾಷೆಯಿಂದ ನಿನಗಾವ ಪ್ರಯೋಜನವೇನು ಇಲ್ಲ ಸುರಾಪಾನ ಅಡಿದಮಾತಿಗೆ ತಪ್ಪಬೇಡ ಕಳೆದ ಜಮಾನ್‌ದಾರ ಸಂಘದ ಜನರಲ್ ಮೀಟಿಂಗಿನಲ್ಲಿ ನಡೆದ ಮದ್ಯನಿಷೇಧ ಠರಾವಿಗೆ ಸಮ್ಮತಿಸಿ ಈಗ ತಿರಸ್ಕರಿಸುವದು ನ್ಯಾಯವೇ? ಹೀಗೆ ಮಾಡಿದರೆ ನಮ್ಮ ದೇಶೋನ್ನತ ಸ್ಥಿತಿಗೆ ಕುಂದಕವೇ ಸರಿ ಮತ್ತು ಇನ್ನು ಯಾವ ಠರಾವನ್ನು ಮೀಟಿಂಗಿನಲ್ಲಿ ಮುಂದಿರಿಸಲು ನಂಬಿಕೆಯಿಲ್ಲದಾಗುತ್ತದೆ. ಮಹಾತ್ಮ ಗಾಂಧಿಯವರು ನಮಗೆ ಹೇಳುವುದೇನೆಂದರೆ—ಮಾನಸ ನಿನ್ನ ಪ್ರಕೃತಿ? ಮೆದುಳನ್ನು ತಿಂದು ಬಿಡುವ ಮದ್ಯವನ್ನು ಸೇವಿಸಿದರೆ ಏಕ್ಯಮತ್ಯವು ಉಂಟಾಗಲಾರದೆಂದು ಅವರ ಅಭಿಪ್ರಾಯ. ಆದ ಸೇನೆ ಮನುಷ್ಯ—ನಾಕಷ್ಟ ನಿನ್ನ ಹರಟೆಗಳು ನಾನೊಬ್ಬನೇ ಠರಾವನ್ನು ತಿರಸ್ಕರಿಸುವದು ಕೊಡಗಿಗೆ ಮುಖ್ಯಪಟ್ಟಣವಾದ ಮಡಿಕೇರಿಯಲ್ಲಿಯೇ ಕೆಲವು ಮಹನೀಯರು ಕೈಲ್‌ಮುಹೂರ್ತಹಬ್ಬದ ವಿಷಯ ಕಳೆದ ಮೀಟಿಂಗಿನಲ್ಲಿ ನಿಷಪದಾರ್ಥ ಸೇವನೆ ಮಾಡಬೇಕಾಗಿ ವಾದಿಸಿದರೆಂದು ಪತ್ರಿಕೆಯಲ್ಲಿ ಕಂಡು. ಒರುತ್ತೆ ಅವರೇನು ಅಷ್ಟು ತಿಳಿಗೇಡಿಗಳೋ! ದೇಶಕ್ಕೆ ಕಂಟಕವನ್ನು ತರುವವರೋ? ಎಂಬದನ್ನು ನೀನೇ ಯೋಚಿಸಿ ನೋಡು. ಮೂದಲನೆ ಮನುಷ್ಯ—ಮಡಿಕೇರಿಯಲ್ಲಿ ನಡೆದ ಮೀಟಿಂಗಿನಲ್ಲಿ ಕೂಡ ಈಗಿನ ದೇಶಸ್ವಾಧೀನ ಸುಶಿಕ್ಷಿತ ಮೇಧಾವಿಗಳು ಯಾರು, ನಿಷಪದಾರ್ಥ ಸೇವನಮಾಡಬಹುದಾಗಿ ಸಮ್ಮತಿಸಿರುವದಿಲ್ಲ. ನಿಷಪದಾರ್ಥ ಕೆಟ್ಟದೆಂದು ಸಣ್ಣ ಮಕ್ಕಳು ಸಹ ಹೇಳಬಲ್ಲವು. ಆದರೆ ಶ್ರೇಯಾಂಸಿ ಬಹುವಿಘ್ನಾನಿ, ಎಂಬ ವಾಕ್ಯದಂತೆ ದೇಶದ ಶ್ರೇಯಸ್ಸಿಗೋಸ್ಕರ ಹೋರಾಡುವಾಗ ಅನೇಕ ವಿಘ್ನಗಳು ಸಂಭವಿಸುತ್ತವೆ ಧೀರನಾದವನು ಎಷ್ಟೇ ವಿಪತ್ತು ಬಂದರೂ ಕೂಡ ತಾನು ಹಿಡಿದ ಕೆಲಸವನ್ನು ಪೂರೈಸುವದಕ್ಕೆ ಹಿಂಜರಿಯುವದಿಲ್ಲ ಬಂದು ಮನೆ ಕಟ್ಟುವದಕ್ಕೆ ಕೂಡುವದು ಮೇಲೋ, ಅಥವಾ ಹಾಳು ಮಾಡುವದಕ್ಕೆ ಕೂಡುವದು ಮೇಲೋ? ನಮ್ಮ ದೇಶವೆಂಬ ಮನೆಯಲ್ಲಿ ಮದ್ಯವೆಂಬ ಪಿಶಾಚಿಯನ್ನು ಹೊಕ್ಕು ಯಜಮಾನೂನಿಕೆಯನ್ನು ನಡಿಸುತ್ತಿರುವಾಗ್ಯೆ ನಾವು ಈಶ್ವರಾಂಶಸಂಭೂತರಾಗಿ ಪುರುಷರೆಂದು ಹೆಸರು ಪಡೆದು ಮದ್ಯಪಿಶಾಚಿಯನ್ನು ನಮ್ಮ ಮನೆಯಿಂದ ಹೊರಡಿಸಬೇಕು ಅದರೆ ಪಿಶಾಚಿ ಗ್ರಹಸ್ಥರು ಸಭೆಗಳಲ್ಲಿ ಹಾಡು ಹಾಡೆಂದು ಒಪ್ಪಿಕೊಂಡು ಮನೆಗಳಲ್ಲಿ ಈ ರಕ್ಕಸಿಯನ್ನು ಆಲಿಂಗಿಸುವದು, ಇದು ಯಾವ ಧರ್ಮ, ನನಗೆ ತಿಳಿಯದು. ಯಾವ ದೇಶದಲ್ಲು ಸಾಧಾರಣವಾಗಿ ನಡಿಯುತ್ತಿರುವ ಅಪರಾಧಗಳಲ್ಲಿ ಅರ್ಧ ಭಾಗವೆಲ್ಲಾ ಮದ್ಯಪಾನಗಳ ಬೇರಿಯಿಂದಲೇ ಉಂಟಾದವುಗಳಾಗಿರುವವು. ಸಮಸ್ತ ದೋಷಗಳಿಗೂ ತಾಯಿ ನಿಶೆಯಾದ ಈ ಮಾದಕ ದ್ರವದ ಮಾರಾಟವು ಪ್ರಭುತ್ವದವರಿಂದ ಏನುಸ್ವತಂತ್ರವಾಗಿರುವದು ಅನ್ಯಾಯಕರವೇ ಸರಿ. ಅಪರಾಧಗಳನ್ನು ಮಾಡಿದ ಒಳಕ ದೋಷಗಳನ್ನು ಹಿಡಿದು ಶಿಕ್ಷಿಸುವದಕ್ಕಿಂತ ಅಪರಾಧಗಳ ಉತ್ಪತ್ತಿಗೆ ಕಾರಣವಾದ ಮದ್ಯಪಾನವನ್ನು ಪರಿಹರಿಸುವದಕ್ಕೆ ಪ್ರಯತ್ನಿಸುವದು ಉಚಿತವಾದುದಲ್ಲವೆ? ಈ ಮಾತುಗಳನ್ನು ಆಡುತ್ತಿರುವಾಗ ದೇಶದ ಕೆಲವು ಮುಖಂಡರೆನಿಸಿಕೊಳ್ಳುವವರು ಕೈಲ್‌ಮುಹೂರ್ತದ ಮುಂದಿನ ದಿನ ಗಾಡಿ ಮತ್ತು ಕೂಡ ಪಾನಗಳನ್ನು ಮದ್ಯವನ್ನು ಸೇರಿಕೊಂಡು ಗಡಂಗದಿಂದ ಬರುತ್ತಿದ್ದರು. ಅವರು ಈ ಮದ್ಯನಿಷೇಧಿಯನ್ನು ಕಂಡ ಕೂಡಲೆ ಸೂರ್ಯಪ್ರಕಾಶವನ್ನು ಕಂಡ ಗೂಬೆಯಂತೆ ಅವರ ಮುಖವು ಬಾಡಿಹೋಯಿತು. ಇದರಿಂದ ಅವರೊಡನೆ ಮದ್ಯನಿಷೇಧಿಯು ಮಾತಾಡಲು ಅನುಕೂಲ ಸಿಕ್ಕಲಿಲ್ಲ ಯಾಕೆಂದರೆ ಅವರು ಗುಳ್ಳೆನರಿಯನ್ನು ಕಂಡ ಕೋಳಿಯಂತೆ ಆ ಬಸಗಳ ಮಧ್ಯದಲ್ಲಿ ಪ್ರವೇಶಿಸಿಬಿಟ್ಟರು. ಇದು ದೊಡ್ಡ ಅಪಮಾನಕರವೇ? ಆದುದರಿಂದ ಸರ್ವ ವಿಧದಲ್ಲಿಯೂ ನಾವು ನಮ್ಮ ಹೃದಯದಲ್ಲಿ ಬೇರೂರಿರುವ ಮದ್ಯವೆಂಬ ವೃಕ್ಷವನ್ನು ಬೇರು ಸಹಿತ ಕಿತ್ತು ಹಾಕಲು ಪ್ರಯತ್ನಿಸಬೇಕು. ಇದು ಉತ್ತಮ.

ಚಂಗಂಡ ಕುಟ್ಟಪ್ಪ

' ಕೈಲ್ ಪೊಳ್ದು ' ಅಥವಾ " ಆಯುಧಪೂಜೆ "

(ಒಂದು ನರ್ಮಹಸ್ತ್ಯ ಚಿತ್ರ)

ಸೂರ್ಯ ಈಗತಾನೆ ಏಂತಿದೆ. ಗದ್ದೆಗಳಲ್ಲೆಲ್ಲಾ ಪೈರುಗಳು ಸುಂದರವಾಗಿ ತೋರುತ್ತಿವೆ. ಗದ್ದೆಯ ಆಚೆಯ ಮೈದಾನವೂ ಕೂಡ ಹಸುರಾಗಿದೆ. ನಮ್ಮ ಕೂಡ ಕೆಲಸ ತೀರಿತೆಂದು ಸಂತೋಷವಾಗಿದೆ. ಇದನ್ನು ಕಂಡು ದಿನಮಣಿಯು ತನ್ನ ಸಂತೋಷವನ್ನು ಪ್ರದರ್ಶಿಸಲಿಕ್ಕೋ ಎನ್ನುವಂತೆ ಪೂರ್ವಗಗನಾಂಗಣಕ್ಕೆ ಬಂದು ಬಂದನು. ಕೊಡಗಿನ ಹುಡುಗರ ಮುಖಗಳಲ್ಲೆಲ್ಲಾ ಬೆಡಗಾದ ಉಣಿಸು! ಎಂತಹ ನೋಟವು ಅದಾಗಿ ಈಗತಾನೆ ಸಂತೋಷವನ್ನುಂಟುಮಾಡುವುದಿಲ್ಲ!

ದೂರದಲ್ಲಿ ದುಂದುಭಿಯ ನಾದವು ಕೇಳಿಸುತ್ತದೆ ಇದೇನಿದು? ನಿಸ್ಸಹಕಾರದ ಚಳವಳಿಯ ಸಮಯದಲ್ಲಿ ಯುದ್ಧಪ್ರಸಂಗವೆಲ್ಲಿಂದ ಬಂತು? ಪೂರ್ವಕಾಲದಲ್ಲಿ ರಣಯಜ್ಞಕ್ಕೆ ಸ್ವಲೆನಗ ದುಂದುಭಿಯನ್ನು ಮೊಳಗಿಸುವ ಪದ್ಧತಿಯಿತ್ತು. " ಹಾಗೇನಾದರೂ ಇದೆಯೆ? ಓಹೋ! ಮರೆತೆವು ಈಗ ನಾಲ್ಕೈದು ತಿಂಗಳಿಂದ ಮೂಲೆಯಲ್ಲಿಟ್ಟ ಆಯುಧಗಳನ್ನು ಇಂದು ಹೊರತಂದು ಪೂಜಿಸಿ ದಕ್ಷಿಣ ವಾಯು ಉಪಯೋಗಿಸಬೇಕಲ್ಲವೆ? ಆಗೋ! ಮನೆಯ ಯಜಮಾನನು ಕತ್ತಿ ಕೋವಿ ಗುರಾಣಿ ಇತ್ಯಾದಿ ಆಯುಧಗಳನ್ನು ತೊಳೆದು ನಡುಮನೆಯಲ್ಲಿ ಚಾಪೆಯನ್ನು ಹಾಸಿ ಮಣೆಯ ಮೇಲೆ ಇಟ್ಟಿದ್ದಾನೆ. ಇನ್ನೇನು ನಾವು ಹೋಗೋಣ! ಆದರೆ ಸ್ನಾನಮಾಡಬೇಕಷ್ಟೆ. ಪಾಠಕರೆ! ನಡೆಯಿರಿ ಜಾಗ್ರತೆ ಸ್ನಾನಮಾಡಿಕೊಂಡು ಬರೋಣ!

ಎಂತಹ ನೋಟ! ಫಳಫಳನೆ ಹೊಳೆಯುವ ಆ ಕತ್ತಿಯು ಎಷ್ಟು ಚೆನ್ನಾಗಿದೆ! ಅದೋ ಆ ಕೋವಿಯಿಂದ ನಮ್ಮ ಹಿರೇ ಅಣ್ಣನು ಒಂದು ಹುಲಿಯನ್ನು ಕೊಂದನು. ಒಡಿಕತ್ತಿಯಿಂದ ಒಬ್ಬ ರಕ್ಕಸನ ತಲೆಯೇ ಹಾರಿಹೋಯಿತು. ಈ ಪೀಚೆಕತ್ತಿಯು ನಮ್ಮ ಮಹಾರಾಜ ಹಾಲೇರಿ ಒಡೆಯರು ದಯಪಾಲಿಸಿದ್ದು ಇನ್ನು ಮಾತು ಸಾಕು. ಒಳ್ಳೆಯ ಪಂಚೆಯನ್ನುಟ್ಟು ಬಿಳಿಪಾಗಿಲ್ಲದೆ ಇವಾವ ಪುರೋಹಿತನು ಪೂಜೆ ಮಾಡಲೆಸಿರುವನು? ತಿಳಿದಿರಲಿ—ಕೊಡಗರ ಯಾವ ಶುಭಾಶುಭ ಕಲಾಪಗಳಿದ್ದರೂ ಬ್ರಾಹ್ಮಣ ಪುರೋಹಿತನ ಅವಶ್ಯಕತೆಯೇ ಇರುವುದಿಲ್ಲ.

ಪೂಜೆ ನಡೆಯುತ್ತಿದೆ ಮನೆಯ ಹಿರಿಯಾಳು ನೋಡ ಸರ್ವಾಲಂಕಾರಗಳಿಂದ ಆ ಆಯುಧಗಳಿಗೆ ಪೂಜೆಮಾಡುತ್ತಾನೆ ಹಣ್ಣುಹಂಪಲು ಮೊದಲಾದ ತಿಂಡಿ ಪದಾರ್ಥಗಳನ್ನೆಲ್ಲಾ ನೈವೇದ್ಯವಾಯಿತು. ಮಂಗಳಾರತಿಯಾಯಿತು. ಎಲ್ಲರೂ ಮಂಗಳಾರತಿ ಪ್ರಸಾದವನ್ನು ಸ್ವೀಕರಿಸಿದರು ಗುಡಸವೆಲ್ಲರೂ ಊಟಕ್ಕೆ ಕುಳಿತಿದ್ದಾರೆ. ನಾವೂ ಹೋಗೋಣ! ಅದೇನು ಎಲ್ಲಿ? ನೆಲದಮೇಲೆ ಕೂರಬೇಕೆ? ಚೇರು ಟೇಬಲು ಪ್ಲೇಟು (Chair, Table and Plate) ಗಳಾವುವೂ ಕಾಣಬರುವುದಿಲ್ಲ ತಿಳಿದಿರಲಿ—ಪೂರ್ವಿಕರು ಹಿಂದಿನ ಪದ್ಧತಿಯಂತೆ ಮಣೆಯಲ್ಲಿ ಕುಳಿತು ಎಲೆಯಲ್ಲಿ ಬಡಿಸಿದುದನ್ನು ಊಟಮಾಡುತ್ತಿದ್ದರು. ಆ ಹಳೆಯ ಮಾತಿನಿಂದ ಈಗ ಪ್ರಯೋಜನವೇನು?

ಊಟವಾಯಿತು. ಹೆಂಗಸರು ಎಂಜಲೆಲೆಯನ್ನು ತೆಗೆದು ಗೋಮಯವನ್ನು ಹಾಕಿದರು ಮತ್ತೇನಿದು! ಇದ್ದವಾದ

*. ರಾಜಸ್ಯೋಪಚಿ ಮಂತ್ರಿಣಾಯು ರಣೇ ಸ್ಥಿತಂ ಹತೋ ಮುಂದುಭಿಃ ||

ಸಂಸ್ಕೃತವೇಣೀ ಸಂಹಾರ [೬ ಅಂಕ

ನಿಲುವಂಗಿಯನ್ನು ತೊಟ್ಟು ಸೊಂಟಕ್ಕೆ ಚೌಕ್ಕೆಯ ಚೌತ್ರವಾದಿರುವ ದಟ್ಟಿಯನ್ನು ಸೊಂಟಕ್ಕೆ ಬಿಗಿದು ಬಂದು ಎದುರುನಿಂತಿರುವ ಈ ಯುವಕರಾರು?

ಆಗೋ! ನೋಡಿರಿ! ಮನೆಯ ಹಿರಿಯಾಳು ಮತ್ತೆ ಪುನಃ ಆಯುಧಗಳ ಎದುರಿಗೆ ನಿಂತು ದೀಪದಮೇಲೂ ಆಯುಧಗಳಮೇಲೂ ಮಂತ್ರಾಕ್ಷತೆಯನ್ನು ಅರ್ಪಿಸಿ, ನಮಸ್ಕರಿಸಿ, ದೇವತಾಪ್ರಾರ್ಥನೆಯನ್ನು ಮಾಡಿ ನೆರೆದ ಯುವಕರಲ್ಲಿ ಅವರವರ ವಯಸ್ಸಿಗನುಸರಿಸಿ ಆಯುಧಗಳನ್ನು ಎತ್ತಿಕೊಡುತ್ತಾನೆ ಆಯುಧಗಳನ್ನು ಸ್ವೀಕರಿಸಿಕೊಟ್ಟವನಿಗೆ ನಮಸ್ಕಾರ ಮಾಡಲು ಆ ವೃದ್ಧವೀರನು ಕೊಡುವ ಆಶೀರ್ವಾದವನ್ನು ಕೇಳಿ —

> ನಮಗಾಗದವರ ನಡೆಬಿಡದು |
> ನಮಗಾಗುವವರ ನೆರವಾಗು ||
> ನಮ್ಮ ಗೋವುಗಳ ಸಂರಕ್ಷಿಸಿ |
> ಅವರಿಗಾಗದ ಹುಲಿಗಳ ಕೊಂದು ||
> ಮ ಏಳ್ಬ ಹೆಜ್ಜೆ ಹಿಂತೆಗೆಯದೆ
> ಮುಂದಿಟ್ಟ ಗುರಿತಪ್ಪದೆ ಬಯಸಲನಾಗಿರಾ ||

ಹೀಗೆ ವಯೋವೃದ್ಧನ ವೀರವಾಕ್ಯವನ್ನು ಕೇಳಿ ಎಲ್ಲರೂ ನಮಸ್ಕರಿಸಿ ಹೊರಟು ಸ್ವಲ್ಪ ದೂರ ಸಂಗೀತವಾದ್ಯಗಳೊಡನೆ ಹೋಗಿ ಮೈದಾನದಲ್ಲಿ ಕಟ್ಟಿಟ್ಟಿರುವ ತೆಂಗಿನಕಾಯಿಗಳಿಗೆ ಗುರಿಯಿಟ್ಟು ಹೊಡೆಯುವರು. ಗೆದ್ದವರಿಗೆ ಇನಾಮು. ನಿಶ್ಚಿತವು ಇದಾದನಂತರ ಶಕ್ತಿಪ್ರದರ್ಶಕದ ಕೆಲವು ಸಾಧನಗಳನ್ನು ಮಾಡಿ ಕಡೆಗೆ ತಮ್ಮ ಮನೆಗೆ ತೆರಳುವರು.

ಮುಹೂರ್ತದಲ್ಲಿ ಮಾರನೆಯದಿನದಿಂದ ಹದಿನೆಂಟು ದಿವಸಗಳವರೆಗೆ ಎಲ್ಲರೂ ಬೇಟೆಗೆ ಹೋಗಿದ್ದರೆಂದು ತಿಳಿಯಬಂದಿತು. ಪಾಠಕರೇ!

ಇದೀಗ ಕೈಲ್‌ಪೊಳ್ದು ಹಬ್ಬದ ಆಚರಣೆಯ ಕ್ರಮ ಇದು ಕೈಲು ಪೊಳ್ದು ಎಂಬ ಎರಡು ಶಬ್ದಗಳಿಂದ ಹುಟ್ಟಿತೆಂದು ಕೊಡಗಿನ ಚರಿತ್ರಕಾರರೊಬ್ಬರ ಅಭಿಪ್ರಾಯ. ಇವರ ಪ್ರಕಾರ ಕೈಲು ಎಂದರೆ ಆಯುಧವೆಂದೂ, ' ಪೊಳ್ದು ' ಎಂದರೆ ಹೊಳಪು ಅಥವಾ ಪ್ರಕಾಶ ಎಂದೂ ಅರ್ಥವಾಗುವುದು. ಇದು ಪ್ರತಿ ಸಂವತ್ಸರದ ಸಿಂಹಮಾಸದ ಹದಿನೆಂಟನೆಯ ದಿವಸದಲ್ಲಿ ಆಚರಿಸಲ್ಪಡುವುದು.

" ಕೊಡಗುಮಿತ್ರ

ಕೊಡಗಿನ ಕೈಲ್‌ಮುಹೂರ್ತ ಹಬ್ಬವು.

ಕೊಡಗರು ತಮ್ಮ ಭೂಮಿ ಕಸಬಿನಲ್ಲಿ ಇರುವಾಗ್ಯೆ ತಮ್ಮ ಆಯುಧಗಳು ಅಂದರೆ ಕೋವಿ ಕತ್ತಿಗಳನ್ನು ಮೂಲೆಯಲ್ಲಿ ಇಟ್ಟು ತಮ್ಮ ಸಮಯವನ್ನೆಲ್ಲಾ ಭೂಮಿ ಕಸಬಿನಲ್ಲಿ ಕಳೆಯುತ್ತಾ ತಮ್ಮ ನಾಟಿ ಕೆಲಸಗಳನ್ನೆಲ್ಲಾ ತೀರಿಸಿ ಭೂಮಿ ಕಸಬಿನ ಆಯುಧಗಳಿಗೆ ಪೂಜೆಮಾಡಿ ಅವುಗಳನ್ನು ಮುಂದಿನ ವರುಷಕ್ಕೆ ಅನುಕೂಲವಾಗುವಂತೆ ಒದ್ದೆಯಾಗಿ ಇಟ್ಟು ತಾವು ಉಪಯೋಗಮಾಡದೆ ಇಟ್ಟ ತಮ್ಮ ಕೋವಿ ಕತ್ತಿಗಳನ್ನು ಬೆಳಗ್ಗೆ ಯಾ ತೊಳೆದು ಮನೆಯ ಕನ್ನಿಮೂಲೆ ದೇವರ ಕೋಣೆಯಲ್ಲಿ ಆ ಕೋಣೆಯನ್ನು ಶುಚಿಮಾಡಿ ಇಟ್ಟು ಮನೆಯಲ್ಲಿ ಆಯುಧ ಪೂಜೆಗೆ ಯೋಗ್ಯರಾದ ನಿತ್ಯಕರ್ಮ ಒಬ್ಬ ಮನುಷ್ಯನು ಆ ಬೆಳಗ್ಗೆಯಿಂದ ಉಪವಾಸ ಇದ್ದು ಸ್ನಾನವಗೈದ ಮಡಿಯಾಗಿ ಹಬ್ಬದ ದಿನ ಮಧ್ಯಾಹ್ನದೊಳಗೆ ಒದಗಿಸಿಕೊಂಡಿದ್ದ ತಕ್ಕ ಪುಷ್ಪ ಧೂಪ ದೀಪ ಮಗ್ಯೆರೆ ಸಾಮಾನುಗಳಿಂದ ಪೂಜೆಯನ್ನು ಮಾಡಿ ಆ ಒಳಕ ಆಯುಧಗಳಿಗೆ ಒಡೆಯನ್ನು ಇಟ್ಟು ಘಂಟೆಗಳ ಶಬ್ದವನ್ನು ಮಾಡಿ ಗುರು ಹಿರಿಯರಿಗೆ ಸಾಷ್ಟಾಂಗಗಳನ್ನು ಮಾಡಿ ಹಾಗಲು ಮುಟ್ಟಿಕೊಂಡು ಹೊರಗೆ ಬರುತ್ತಾನೆ. ಅಷ್ಟರಲ್ಲಿ ಮನೆಯ ಹೆಂಗಸರು ಹಬ್ಬಕ್ಕೆ ಯೋಗ್ಯವಾದ ಪದಾರ್ಥಗಳನ್ನು ತೈಯ್ಯಾರು ಮಾಡಿ ಇರುತ್ತಾರೆ ಗಂಡಸರೆಲ್ಲಾ ತಮ್ಮ ಕೈಕಾಲುಗಳನ್ನು ತೊಳೆದುಕೊಂಡು ಮನೆಯ ಬಾಡ ಎಂಬ ಹಾಲಿನಲ್ಲಿ ಪಂಕ್ತಿಗಳಾಗಿ ಕೂತು ಭೋಜನವನ್ನು ಮಾಡುತ್ತಾರೆ ಅಗ್ಯೆ ಆಯುಧಗಳ ಮುಂದೆ ಇಟ್ಟ ಎಡೆಯನ್ನು ತಂದು ಮನೆ ಯಜಮಾನನಿಗೆ ಇಡುವರು. ಹಬ್ಬದ ತಿಯಾಗಿದೆ ಭೋಜನವಾದ ಒಳಕ ಎಲ್ಲರೂ ಕೈಯಾಕ್ತಿ ಎಂಬ ಮುಂದಿನ ಹಜಾರಕ್ಕೆ ಬಂದು ತಾಂಬೂಲವನ್ನು ಹಾಕಿಕೊಂಡು ಆಯುಧ ಪೂಜಮಾಡಿ ಇರಕಕ್ಕೆ ಕೊಂಡಿಗೆ ಹೋಗುತ್ತಾರೆ ಅಗ್ಯೆ ಪೂಜೆಮಾಡಿ ಇರಕಕ್ಕವನು ದೇವರನ್ನು ಕರೆದು ಗುರು ಹಿರಿಯರನ್ನು ನೆನಸಿ ಪ್ರತಿಯೊಬ್ಬರ ಆಯುಧವನ್ನು ಅವರವರಿಗೆ ಕೊಡುತ್ತಾನೆ. ಮತ್ತೆ ಪೂಜೆಮಾಡಿ ಇಟ್ಟಿರಕ್ಕ ತೆಂಗಿನಕಾಯಿ ನೋಳನ್ನು ತಂದು ಮನೆಗೆ ಎದುರಾಗಿ ಇರಕಕ್ಕೆ ಎತ್ತರವಾದ ಸ್ಥಳದಲ್ಲಿ ಇಟ್ಟು ಗುಂಡುಗಳನ್ನು ಹೊಡಿಯುತ್ತಾರೆ. ಆ ಬಳಿಕ ಎಲ್ಲರೂ ತಮ್ಮ ತಮ್ಮ ಒಳ್ಳೆ ಉಡುಪುಗಳನ್ನು ಧರಿಸಿ ಕೋವಿ ಕತ್ತಿಗಳೊಡನೆ ದೇವ

ಸ್ಥಾನದ ಅಂಬಲಕ್ಕೆ ಹೋಗಿ ಸೇರುತ್ತಾರೆ. ಅಲ್ಲಿಗೆ ಊರಿನವರೆಲ್ಲಾ ಸೇರಿದ ಬಳಿಕ ದೇವಸ್ಥಾನಕ್ಕೆ ಹೋಗಿ ದೇವರನ್ನು ಪ್ರಾರ್ಥನೆ ಮಾಡಿ ಪೂಜಾರಿ ಕೊಡತಕ್ಕ ತೀರ್ಥ ಮತ್ತು ಗಂಧವನ್ನು ತೆಗೆದುಕ್ಕೊಂಡು ದೇವರನ್ನು ಕರಕೊಂಡು ದೇವಸ್ಥಾನಕ್ಕೆ ಮೂರು ಸುತ್ತು ಬಂದು ಮುಂದಿಗೆ ಅಂಬು ಬಿಲ್ಲು ಕೋವಿ ಕತ್ತಿಯಾಗಿ ಹೋಗಿ ಅಂಬು ಬಿಲ್ಲು ತೆಗೆದುಕ್ಕೊಂಡವನು ಮತ್ತು ಕತ್ತಿಗಳ ಹಿಡಿದವರು ಮುಂದಾಗಿ ಓಡಿಹೋಗಿ ಹಾಲು ಬರತಕ್ಕ ಅರಳಿಮರಕ್ಕೆ ಅಂಬು ಎಸದು ಕತ್ತಿಯಿಂದ ಕಡಿಯುತ್ತಾರೆ. ಇದು ಆದ ಬಳಿಕ ಕೋವಿಯವರು ಮೂಮೂಲಿನಿಂದು ಗುಂಡು ಹೊಡಿಯುತ್ತಾ ಬಂದು ಇರತಕ್ಕ ಮರಕ್ಕೆ ಗುಂಡುಗಳು ಹೊಡಿಯುತ್ತಾರೆ. ಕೋವಿಗಳಲ್ಲಿ ತೂಟುಗಳು ತೀರಿದಬಳಿಕ ತಮ್ಮ ತಮ್ಮ ಸಾಮರ್ಥ್ಯಗಳನ್ನು ತೋರುವದಕ್ಕೆ ಕಲ್ಲುಗಳನ್ನು ಎತ್ತುವದು ಎಸೆಯುವದು ಎತ್ತರ ಹಾರುವದು ಉದ್ದಕ್ಕೆ ಹಾರುವದು ಶಕ್ತಿಗಳನ್ನು ಪರೀಕ್ಷೆ ಮಾಡುಲು ಕೋಲುಗಳ ಎಸೆಯುವದು ವಗೈರೆ ಯೌವನಸ್ಥರ ಆಟಗಳನ್ನು ಆಡುತ್ತಾ ಸಾಯಂಕಾಲದವರೆಗೆ ಇದ್ದು ತಮ್ಮ ತಮ್ಮ ಮನೆಗಳಿಗೆ ಇತರರುಗಳೊಡನೆ ವಾಪಸ್ ಹೋಗುತ್ತಾರೆ. ಹೀಗೆ ಮಂದು ಬಿಡುವದಕ್ಕೆ ಮೊದಲಾಗಿ ಮಾರನೆ ದಿನ ಎಲ್ಲರೂ ಅಂಬಲಕ್ಕೆ ತಮ್ಮ ತಮ್ಮ ಕೋವಿಗಳೂ ನಾಯಿಗಳೂ ನಾಯಿ ಕೂಡಲು ಕತ್ತಿಗಳ ಸಮೇತ ಹುಡುಗರುಗಳೂ ಸೇರಬೇಕಾಗಿ ಊರಿನ ತಕ್ಕರು ಕೇಳಿಕೊಳ್ಳುತ್ತಾರೆ. ಹಾಗೆ ಮಾರನೆ ದಿನ ಅಂಬಲದಲ್ಲಿ ಸೇರಿ ದೇವರನ್ನು ಕರದು ಬೇಟೆ ಹೋಗುತ್ತಾರೆ. ಹಾಗೆ ದೇವರ ಬೇಟೆಯಾಗಿ ಮೂರು ದಿನಗಳು ಬೇಟೆ ಆಡುತ್ತಾರೆ. ಆಗ್ಯ ಸಿಕ್ಕಿದ ಜಾತಿಗಳಲ್ಲಿ ಕೋರೆ ಹಲ್ಲುಗಳು ಇಲ್ಲದ ಎಲ್ಲಾ ಜಾತಿಗಳ ತಲೆಗಳನ್ನು ಐಯಪ್ಪ ದೇವರಿಗೆ ಅವರ ಬನದಲ್ಲಿ ಹೊಟ್ಟೆ ಉದಕ್ಕಗಳ ಮಾಡಿ ಎಡೆ ಇಟ್ಟು ಅಲ್ಲಿಗೆ ಸೇರಿ ಇರತಕ್ಕ ಜನರೆಲ್ಲಾ ಭೋಜನವನ್ನು ಮಾಡುತ್ತಾರೆ. ಇದೇ ರೀತಿಯಲ್ಲಿ ಸುಮಾರು ಮೂರು ತಿಂಗಳುಗಳ ವರೆಗೆ ತಲೆಗಳನ್ನು ದೇವರಿಗೆ ಒಪ್ಪಿಸುತ್ತಾರೆ.

ಕೊಂಗೆಟ್ಟಿ ಮಂದಣ್ಣ.

ಸ್ವರ್ಣಗೌರಿ ಮತ್ತು ಗಣೇಶ ಚತುರ್ಥಿ.

[ಕೊಡಗು ಮಿತ್ರರಿಂದ].

ಭಾದ್ರಪದಮಾಸ. ಸಸ್ಯಾದಿಗಳು ಪೂರ್ಣಾವೃದ್ಧಿಯನ್ನು ಹೊಂದಿ ಫಲೋನ್ಮುಖವಾಗತೊಡಗಿವೆ. ಫಲವು ಮನೆಗೆ ಬರುವ ಸಂತೋಷಸಮಯದಲ್ಲಿ ಮದುವೆ ಮುಂಚೆಯಾಗಬೇಕೆಂದು ಸ್ತ್ರೀಯರ ಬಯಕೆ. ಪರಂತು ಧನಧಾನ್ಯಗಳು ಮನೆಗೆ ಸರಾಗವಾಗಿ ಬರಲು ಯಾವ ವಿಘ್ನವೂ ಬಾರದಿರಲೆಂದು ಪುರುಷವರ್ಗದವರ ಕೋರಿಕೆ ಅಂತೆಯೇ ಸ್ತ್ರೀವರ್ಗದವರು.

ಪೂಜಿಸಿದಳು ಗೌರಿಯ, ವರಪಂಚಾಲೆಯು || ತನಗ ಸುರೂಪನಾದವಂ | ಸನುಕೊಡಬೇಕೆನುತ || ಪೂಜಿಸಿದಳು ಗೌರಿಯ || ಎಂದು ಮುಂತಾಗಿ ತಮ್ಮ ಮಧುರವಾದ ಕಂಠದಿಂದ ಹಾಡುವರು. ಪುರುಷವರ್ಗದವರೂ ವಕ್ರತುಂಡಮಹಾಕಾಯ ಸೂರ್ಯಕೋಟಿಸಮಪ್ರಭ | ನಿರ್ವಿಘ್ನಂಕುರು ಮೇದೇವ ಸರ್ವಕಾರ್ಯೇಷುಸರ್ವದಾ || ಎಂದೂ ಪ್ರಾರ್ಥಿಸುವರು ಆದರೆ ಸ್ವರ್ಣಗೌರಿಯ ವ್ರತವು ಸಮಗ್ರಭಾರತೀಯ ರಮಣಿಯರಿಂದ ಆಚರಿಸಲ್ಪಡುವುದಿಲ್ಲ. ಹೆಚ್ಚಾಗಿ ಶೈವರೇ ಆಚರಿಸುವವರಾದರೂ ಮಾಧ್ವರೂ ಕೊಂಚಮಟ್ಟಿಗೆ ಆಚರಿಸುವರು.

ಭಾದ್ರಪದಮಾಸದ ಮೂರನೆಯದಿನ ಸ್ತ್ರೀಯರಿಗೆ ಹೆಸರುಹೋದದಿವಸ. ಈ ದಿವಸ ಬಳಿಗ್ಗೆ ಸುಮಂಗಲೆಯರಾದ ಸ್ತ್ರೀಯರೂ ಮುಂಜಾನೆ ಎದ್ದು ಸ್ನಾನಮಾಡಿ ಕಾಗದದಲ್ಲಿ ಬರೆದ ಪ್ರತಿಮೆಯನ್ನಾಗಲಿ ಅಥವಾ ಕಲಶವನ್ನಾಗಲಿ ಇಟ್ಟು ಪ್ರಾಣಪ್ರತಿಷ್ಠೆಮಾಡಿ ಷೋಡಶೋಪಚಾರ ಪೂಜೆಯನ್ನು ಮಾಡುವರು. ಕೊಡಗಿನಲ್ಲಿ ಹೆಚ್ಚಾಗಿ ಲಿಂಗಾಯತರು, ವೈಶ್ಯರೂ ಇದನ್ನು ಮೇಲೆಹೇಳಿದ ರೀತಿ ಆಚರಿಸುವರು. ಇಲ್ಲಿ ದೇಶಗೌರಿ ಎಂಬದಾಗಿ ಎಲ್ಲರೂ ಕೂಡಿ ನಿಯಮಿತ ಕೆರೆಯಿಂದ ಕಲಶವನ್ನು ಪೂಜಿಸಿ ಮೆರವಣಿಗೆಗೆ ತರುವರು. ಮಹಿಕೇರಿಯಲ್ಲಿ ಎರಡು ಮೆರವಣಿಗೆಗಳಿವೆ ಅವುಗಳಲ್ಲಿ ಲಿಂಗಾಯತರು ಬಹು ಅಟ್ಟಹಾಸದಿಂದ ಎಂಟು ಒಂಭತ್ತು ದಿವಸಗಳವರೆಗೆ ಪೂಜಿಸುವರು.

ಇದಾದ ಮರುದಿವಸವೇ ಗಣೇಶಚತುರ್ಥಿ.

ಮಣ್ಣಿನ ವಿಗ್ರಹವನ್ನು ತಂದು ಪ್ರಾಣಪ್ರತಿಷ್ಠಾಪೂರ್ವಕ ಪೂಜಿಸುವರು. ಗಜಾನನನಿಗೆ ಮೋದಕಪ್ರಿಯವೆಂದು ಅದನ್ನು ಯಥೇಷ್ಟವಾಗಿ ಮಾಡುವರು. ಈ ವಿಗ್ರಹವನ್ನು ಒಂದುವರೆ ಅಥವಾ ಐದು, ಏಳು, ಹತ್ತುದಿವಸಗಳವರೆಗೆ ಇಟ್ಟು ಉತ್ತರಪೂಜೆಯಾದಮೇಲೆ ನೀರಿಗೆ ಬಿಡುವರು. ಹಲವರು ಬರೇ ಗಣಹೋಮವನ್ನು ಮಾತ್ರ ಆಚರಿಸುವರು.

ಚತುರ್ಥಿಯ ರಾತ್ರಿಯ ಚಂದ್ರನನ್ನು ನೋಡಿದರೆ ಅಪವಾದ ಬರುವದೆಂದು ಹಲವರ ಭಾವನೆ. ಹಾಗೆ ಯಾರಾದರೂ ನೋಡಿದರೆ ಈ ಕೆಳಗಿನ ಮಂತ್ರವನ್ನು ಜಪಿಸಿ ಆ ದೋಷವನ್ನು ಪರಿಹರಿಸಿಕೊಳ್ಳುವರು:—

" ಸಿಂಹಃ ಪ್ರಸೇನಮವಧೀಃ ಸಿಂಹೋಜಾಂಬವತಾಹತಃ |
ಸುಕುಮಾರಕ ಮಾರೋದೀಸ್ತವಹ್ಯೇಷಸ್ಯಮಂತಕಃ || "

ಇದು ಹಬ್ಬದ ಆಚರಣೆಯಾಯಿತು. ಇದರ ಜ್ಞಾನ ಭಾಗವು ನಮಗೆ ಬೋಧೆಯಾಗದಿದ್ದಲ್ಲಿ ನಾವು ಆಚರಿಸಿದ ಹಬ್ಬದ ಪ್ರಯೋಜನವಾದರೂ ಹಾಳಾಗುವುದು.

ಸಕಲ ಗಣಗಳನಾಥ ನಿಖಿಲವಿಘ್ನತ್ರಾತ,
ಅಕಲಂಕ ಪ್ರಥಮ ಪೂಜಿತ ವಿನಕನಮ್ಮಾ
ಪ್ರಕಟ ಮಮತೆಯಲಿ ಮೂಷಿಕ ವಾಹನನೆನಿಸು ||

ಇತ್ಯಾದಿ ಬಿರುದುಗಳಿಂದ ಮೆರೆಯುವ ಸರ್ವವ್ಯಾಪಕನಾದ ಭಗವಂತನ ವಿಗ್ರಹವನ್ನು ನೋಡಿದುದೇ ಆದರೆ ಹಲವರು ಆಶ್ಚರ್ಯಪಡದಿರಲಾರರು. ಆನೆಯಮುಖ, ಏಕದಂತ, ನಾಗಭೂಷಣ, ಕೆಂಬಣ್ಣದಮೈ ಇತ್ಯಾದಿಗಳೆಲ್ಲವೂ ನಮ್ಮೂಪದ ಏಡಲು ಭಯವನ್ನು ತೋರಿಸುವುದಿಲ್ಲವೆ? ಸಾಲದುದಕ್ಕೆ ಅಂತಹ ಸರ್ವವ್ಯಾಪಕನಾದ ಭಗವಂತನು ಪುಟ್ಟದಾದ ಇಲಿಯಮೇಲೆ ಕೂರುವನಂತೆ! ಇದಾದರೂ ಸಾಧ್ಯವೆ?

ನಮ್ಮ ಪೂರ್ವಜರು ಬಹು ಆಲೋಚನಾಪರರು. ಹೆಚ್ಚಾಗಿ ಆತ್ಮಜ್ಞಾನಿಗಳು. ಆದುದರಿಂದ ಪ್ರತಿವರ್ಷವೂ ಲೋಕದ ಜನರು ಹಬ್ಬಗಳಾಚರಣೆ ಮೂಲಕ ಅನೇಕ ವಿಷಯಗಳನ್ನು ತಿಳಿಯಲೆಂದು ಈ ರೀತಿಯಾದ ಹಲವು ಉಪಾಯಗಳನ್ನು ಕಲ್ಪಿಸಿರುವರು. ಭಗವಂತನು ಸರ್ವವ್ಯಾಪಕನೆಂದಲ್ಲಿ ಎಲ್ಲವೂ ಅವನೇ ಯಿತಷ್ಟೆ. ಅವನಲ್ಲದಿರುವ ವಸ್ತುವು ಯಾವುದೂ ಇಲ್ಲ ಆದರೆ ಅಸ್ಥಿರವಾದುವುಗಳಲ್ಲಿ ಅತನಿರನೆಂದು ಜ್ಞಾನಿಗಳು ಹೇಳುತ್ತಾರೆ. ಪರಂತು ನಮ್ಮ ಶರೀರವೂ ಕೂಡ ಅಸ್ಥಿರವಾದರೂ ಅದರಲ್ಲಿರುವ ಮನಸ್ಸೇ ಸ್ಥಿರವೆಂಬುದೇನೊ ಎಲ್ಲರೂ ಒಪ್ಪತಕ್ಕ ಮಾತಾಗಿದೆ ಅದು ದರಿಂದಲೇ,

ಮನಏವಮನುಷ್ಯಾಣಾಂ ಕಾರಣಂಬಂಧಮೋಕ್ಷಯೋಃ ||

ಎಂದರೆ ಮನಸ್ಸಿನಿಂದಲೇ ಮನುಷ್ಯನೆಂಬ ಹೆಸರು ಬಂದಿತೆಂದು ತಾತ್ಪರ್ಯ ವಾದ. ವಿನಾಯಕನ ಪ್ರತಿಮೆಯು ಆ ಮನಸ್ಸು ಎಂತಲೂ ಆತನ ವಾಹನವು ಚಪಲತೆಯೆಂದೂ ತಿಳಿಯಬೇಕು. ಚಪಲತೆಯು ಮನಸ್ಸಿನ ಅಧೀನವಷ್ಟ ಕವಿಯಬೇಕೆಂಬುದು ಚಪಲಬುದ್ಧಿಯ ಒಂದು ಭಾಗ ಹಾಗೆ ಮಾಡಕೂಡದೆಂಬುದೇ ಮನಸ್ಸಿನ ಸ್ಥಿರ ಹುಕುಂ! ಮತ್ತೆ ಅತಿಯಾಶೆಮಾಡಿದರೆ ಕೆಡಕು ಎಂಬುದನ್ನು ಸೂಚಿಸಲೋಸುಗವೊ ಎಂಬಂತೆ ಹೆಚ್ಚಾಗಿ ತಿಂದು ಹೊಟ್ಟೆ ಹೊಡೆದು ಹೋದುದನ್ನು ತೋರಿಸುವುದು. ಮತ್ತೊಂದು ವಿಷಯ ಕಷ್ಟವಲ್ಲಿರುವಾಗ್ಯೆ ಅಪಹಾಸ್ಯಮಾಡಿದರೆ ವಿಪರೀತದ ಕೋಪವು ಬರುವುದೆಂದೂ ಇದರಿಂದ ಹಿಂದು ಮುಂದು ಆಲೋಚಿಸದೆ ಅನೇಕ ಕೆಡಕುಗಳು ಬರಬಹುದೆಂತಲೂ ಸೂಚಿಸುವುದೇ ಚಂದ್ರನನ್ನು ನೋಡಬಾರದೆಂಬುವುದು. ಮತ್ತೆ ಕೋಪವು ಯಾವತ್ತು ಕೆಟ್ಟದೆಂಬುವುದನ್ನು ತೋರಿಸಲೋಸುಗ ಅಂಗಹೀನತ್ವವನ್ನು ತೋರಿಸುವುದೇ ಏಕದಂತತ್ವ.

ಹೀಗೆ ಅನೇಕ ವಿಷಯಗಳು ಈ ಹಬ್ಬದಾಚರಣೆಯಿಂದ ನಾವು ಕಲಿಯಬಹುದಾಗಿದೆ.

ಕಾಳತ್ತಮನೆ ಬಯನವ್ವನ ಮಾಹಾತ್ಮ್ಯೆ.

[ಎಂಬ ಈ ಹರಿಕಥೆಯ ಸಾರಾಂಶವನ್ನು ಕೊಡಗಿನ ಸುಪ್ರಸಿದ್ಧ ಜಬಳತೊಬರ ಅನುಮತಿಯಿಂದ ಪ್ರಕಟಿಸಿದೆ ಇದರ ಸರ್ವ ಹಕ್ಕೂ ಅವರದೆ
ಸಂಪಾದಕ]

ರಾಗ-ಯಾಹಿದ್ದೀ!] ತಾಳ:-ಹಾಕಿದ್ದೇ!!]

ಬಯನಯ ಬಸವು ರಸದಾಳಿ ಕಬ್ಬಿನಂತೆ |
ಆಯ್ಯೋ! ಅದರ ಸಹಸವ ನೀನು ಒಣ್ಣೆಸಲಿ ||
ಮರೆತೆ ಮರೆತೆನು ಕೋಪಿಸದಿರಿ
ಗುರು ಹಿರಿಯರ ವಂದಿಸುತೆ ಮತ್ತೆ |
ವರ ಪದದಡಿಗಳಿಗೆ ನಮಿಸಿ |
ಬರೆಯುವೆನು ಬಯನವ್ವನ ಚರಿತೆಯನೂ ||
ಗುರು ಬಿಲ್ಲವರಿಗೆ ನಂದಿಸಿ ಮೆರೆವ |
ಹಿರಿಯ ಭಕ್ತಾದಿಗಳಿಗೆ ಬಾಗಿ ||
ಸಿರಿವಂತ ಬತ್ರಂಡಿ ವಿಷ್ಕ ಕವಿಗಳ ನೆನೆದು |
ಸರಾಯಿ ಸರದಾರನನು ಪೂಜಿಸಿ ||
ಎನ್ನ ಕೃತಿಯವೇಳ್ವೆನು ಸರಾಗದಿ |
ಮುನ್ನ ಜನರಿದ ಓದಿ ಪಾಡಿರಿ |
ಎನ್ನರಾಯ ಸಕಲ ನಾಡಿಗೊಡೆಯ |
ಚೆನ್ನ ಕೇಶವನು ನಿಮಗೀಯ್ವನು ಸಂಪದವ ||

ಇಂತೆಂದು ಗುರು ಹಿರಿಯರನ್ನು ವಂದಿಸಿ ವರಕವಿಗಳನ್ನು ಮನದಲ್ಲಿ ನೆನಿಸಿ ಕಥಾ ವಿಸ್ತರಣವನ್ನು ಮಾಡುವೆನು.

ಮುನ್ನ ಈ ನಾಡಿನಲ್ಲಿ ಅನೇಕ ವೀರರಿದ್ದರು ಎಂಬುದನ್ನು ನೀವು ಕೇಳಿದ್ದಿರಷ್ಟೆ. ಅವರು ಹೆಸರು ಹೋದ ಅನೇಕ ಕೆಲಸಗಳನ್ನು ಮಾಡಿರುವರು. ಅಂತವುಗಳಲ್ಲಿ ಅನೇಕಕ್ಕೆ ಮೂಲ ಕಾರಣವನ್ನು ಹುಡುಕಿದುದೇ ಆದರೆ ಅದು ಬಯನವ್ವನ ಮಾಹಾತ್ಮ್ಯೆಯಿಂದಲೇ ಎಂದು ತಿಳಿಯಬಂದಿದೆ. ಪ್ರಸಿದ್ಧ ಇತಿಹಾಸ ಸಂಶೋಧಕನು (Research Scholars) ಈ ಬಯನವ್ವನು ಹಿಂದೆ ಆರ್ಯರ ಕಾಲದಿಂದಲೂ ಬಂದಿದೆ ಎಂತಲೂ ಇದಕ್ಕೆ ಅವರು ಸೋಮ ಎಂತಲೂ ಕರೆಯುತ್ತಿದ್ದರೆಂತಲೂ ಹೇಳುತ್ತಾರೆ ಮೂಲಸ್ಮೃತಿಗಾರನಾದ ಪೌಲಸ್ತ್ಯನು

ಪಾನಸಂ ದ್ರಾಕ್ಷಮಾಧೂಕಂ,
ಖರ್ಜೂರಂ ತಾಲಮೈಕ್ಷವಂ |
ಮಾಧ್ವೀಕಂ ಸೈರಮಾರಿಷ್ಟಂ
ಮೈರೇಯಂ ನಾರಿಕೇಲಜಂ ||

ಸಮಾನಾನಿ ವಿಜಾನೀಯಾತ್
ಮಧ್ಯಾನ್ಯೇಕಾ ದಶೈವತು |
ದ್ವಾದಶಂತು ಸುರಾಮದ್ಯಂ
ಸರ್ವೇಷಾ ಮಧಮಂ ಸ್ಮೃತಂ ||

ಪಾನಸ, ದ್ರಾಕ್ಷೆ, ಮಾಧೂಕ, ಖರ್ಜೂರ, ತಾಲ ಐಕ್ಷವ, ಮಾಧ್ವೀಕ, ಸೈರ ಅರಿಷ್ಟ ಮೈರೇಯ, ನಾರಿಕೇಲಜ ವೆಂಬ ಹನ್ನೆರಡು ಬಗೆಯ ಸಾರಾಯಿಗಳಿರುವುವು. ಇವನ್ನು ಸೌತ್ರಮಣಿ, ವಾಜಪೇಯ, ಮುಂತಾದ ಹಲವು ಯಜ್ಞಗಳಲ್ಲಿ ಉಪಯೋಗಿಸುತ್ತಿದ್ದುದನ್ನು ಆರ್ಯರ ಪವಿತ್ರ ಗ್ರಂಥವಾದ ಋಗ್ವೇದದಲ್ಲಿದೆ ಮಾತು ಅಲ್ಲ ಪರಮೇಶ್ವರನು ಕೂಡ ತನ್ನ ಪತ್ನಿಯೊಡನೆ

ಬ್ರಾಮ್ಹಣಸ್ಯ ಮಹಾಮೋಕ್ಷಂ
ಮಧ್ಯಪಾನಂ ಪ್ರಿಯಂವದೆ ||

ಅಂದರೆ ಬ್ರಾಮ್ಹಣರ ಮುಕ್ತಿಯು ಮಧ್ಯಪಾನದಮೇಲೆ ಆದರಿಸಿರುವುದು ಎಂದೂ ಹೇಳಿರುವನು. ಅಥವ ವೇದ ಪುರಾಣ ಇತಿಹಾಸ ಸುಪ್ರಸಿದ್ಧೆಯಾದ ಬಯನವ್ವನ ಈ ಗುಣ ಮಹಾತ್ಮ್ಯೆಯನ್ನು ವಿವರಿಸುವೆನು.

ಬಯನವ್ವನಿಗೆ ಸದ್ಯದಲ್ಲಿ ಸರಾಯನೆಂಬ ಅಣ್ಣನೂ ಬ್ರಾಂದಕ್ಕ, ವಿಸ್ಕಕ್ಕನೆಂಬ ಇಬ್ಬರು ಸಹೋದರಿಯರೂ ಇದ್ದಾರೆ. ಇವರಲ್ಲಿ ಬ್ರಾಂದಕ್ಕನೂ ವಿಸ್ಕಕ್ಕನೂ ಸಭ್ಯರ ಸಂಘದಲ್ಲಿ ಓಡಾಡುತ್ತಿರುವಳು. ಸರಾಯನು ಸಾಧಾರಣ ಜನರಲ್ಲಿ ಹೋಗುವನು. ಬಯನವ್ವೆಯು ಪಾಪ ಬಡವೆ! ಹಳ್ಳಿ ಕೇರಿಗಳಲ್ಲಿ ಓಡಾಡುವಳು.

ಅಂತು ಇವರು ಎಲ್ಲೆಲ್ಲಿಯೂ ಇದ್ದಾರೆ. ಸವನಾಗರಿಕರ ಊಟ, ಕೂಟ ಆಟ (Dinner Party Ball) ಗಳಲ್ಲಿ ಇವರು ಮುಖ್ಯಸ್ಥರು. ಸಂತೆಯ ಅಂತ್ಯದಲ್ಲಿ ಶ್ರಮ ಪರಿಹಾರಕರಲ್ಲಿ ಮತ್ತೆ ಪುನಃ ಇವರೇ ಕಾಯಿಲೆಯ ಸಮಯದಲ್ಲ ಇವರಿಲ್ಲದಿರುವ ಸ್ಥಳವಿಲ್ಲ. ಅಂತು, ಸದ್ಯದಲ್ಲಿ ಎಲ್ಲರಿಗಿಂತಲೂ ಕಿರಿಯವಳಾದ ಬಯನವ್ವೆಯು ಎಲ್ಲರ ಪ್ರೀತಿಗೆ ಪಾತ್ರಳಾಗಿದ್ದಾಳೆ

ಆದರೆ ಈಗೀಗ ಕೆಲವರು ಬಯನವ್ವನನ್ನು ಬಾಧಿಸಲು ಹೊರಟಿರುವರಂತೆ ಮುಖ್ಯ ಬಡವರನ್ನು ಕಂಡರೆ ಯಾರಿಗೂ ಆಗುವುದಿಲ್ಲ.

ಯಾರೇನ ಮಾಡುವರು ತಾ ಪಾಪಿಯಾದರೆ
ಊರೆಲ್ಲ ನೆಂಟರು ಉಣಬಡಿಸುವವರ ಕಾಣೆ ||

ಎಂಬಂತೆ

ಒಮ್ಮೆ ಬರೆದಿಹ ಲಿಪಿ ಇ
ನ್ನೊಮ್ಮೆ ಬರೆಯುವುದುಂಟೆ ಬೊಮ್ಮನು
ಸುಮ್ಮನೇತಕೆ ಚಿಂತಿಪುದು ಎನ್ನಮ್ಮ ಕೇಳೆ ||

ಇದು ತರವಲ್ಲ. ಸರಿಯಲ್ಲ. ನೀವು ಮಾಡುವುದಾದರೂ ಏನು?

ಕಮಾನ್ ಕಮಾನ್ ಗಾಡಿ ಕಮಾನ್!
ಜವಾನ್ ಜವಾನ್ ಬಾರೆ ಬ್ರಾಂಡಿ!!
ಪೂಜ್ಯ ಪಾಯಸ ಮೆಕಡೊಲ್ ಸ್ಪೆನ್ಸರ್!
ತಿಕ್ಯಬ್ಯ ಬಂಕು ಹೊಂಕು ಸಂಕು ಪೂಜಾರಿ!!

ಕಾಸು ಕೊಟ್ಟವರಿಗೆ ಕೈಲಾಸ ತೋರುವಳೆಂಬ ಬಿರುದಿನ ಬಯನವ್ವನು ಹಾಗಲ್ಲ.

(ರಾಗ ಬಿಲಹರಿ! ತಾಳ ಹಾಕಿದ್ದೆ!)

ನಾಮವೊಂದೇ ಸಾಲದೆ? ಬಯನಕ್ಕನ ನಾಮವೊಂದೇ ಸಾಲದೆ ||
ಮೊರೆಯ ಲಾಲಿಸಿ ಮುನ್ನ ಭಕ್ತರ ಸಲಹಿದ ನಾಮ |
ಕರುಣದಿಂ ಕೆಲಸಗಾರರ ಕಾಯ್ದ ನಾಮ |
ಮಮಗುತಿಹಯೋದ್ಧರಿಗೆ ಉನ್ನತವ ಮಾಡಿದ ನಾಮ |
ಇಹಕೆ ಪರತತ್ವವಲ್ಲವೆ ನಿಮ್ಮ ನಾಮ ||

ಮತ್ತೆಂತಹ ನಾಮ?

ಅಖಿಲ ವೇದ ಪುರಾಣ ಅರಸಿ ಕಾಣದ ನಾಮ |
ಸಕಲ ಭೋಗೀಜನಕೆ ಕಾಮಿತಾರ್ಥ ವಿತ್ತ ನಾಮ |
ಪ್ರಕಟಿಸಲು ಜಗವ ಪಾವನ ಮಾಡಿದ ನಾಮ |
ಮುಕುತಿ ದಾಯಕಿ ಬಯನವ್ವನ ನಾಮಾ ||
ಜಯ ಜಯವೆನುತ ಅರ್ಜಿಸಿದ ಧನವನೆಲ್ಲವ |
ಸುರೆಯಧಿಪ ಪೂಜಾರಿ [ಪೂಜ+ಅರಿ=ಶತ್ರು, ಭಂಡಾರಕಿತ್ತ] ||
ನೆರೆನಂಬಿದ ಮಡದಿ ಮಕ್ಕಳ ಮರೆತು ತಾ |
ಶರಣಾಗತರ ಪೊರೆವಳೆಂದು ನಂಬಿಸಿರಿಯನಪ ||
ಹರಿಸಿ ನರಕಾರಗೊಲಿದಿತ್ತಿ ವೇಷವ ಧರಿಸಿ |
ಮರೆಯದೆ ಕೃಷಿ ಭೋಜನವ ನಿಂತು ||
ಮರೆತು ಇಹ ಪರಲೋಕ ಯಾತನೆಯ |
ಇರುವರು ಸುಖದಲಿ ಮರೆತು ನಮ್ಮೆಲ್ಲರನು ||

ಆದುದರಿಂದ ಯಾವ ಯಾತನೆಯನ್ನು ಮಾಡದೆ ಆಸು ದಿನವು ಪಡುವ ಸುಖ ದುಃಖವು ನಿನ್ನದೆ ಎಂದು ಏಕಾಗ್ರ ಚಿತ್ತದಿಂದ ಬಯನವ್ವನನ್ನು ಭಜಿಸಿದವರಿಗೆ ಶ್ರೀ ಚೆನ್ನಕೇಶವನು ಮೇಲೆ ವಿವರಿಸಿದಂತೆ ಕಾಲಕ್ರಮದಲ್ಲಿ ದೊಡ್ಡಮನೆಯ ಸುಖ ಸಾಮ್ರಾಜ್ಯವನ್ನೀಯುವನು.

ಆದರಿಂದೆಲ್ಲರು ತಳತ ಮನೆಯೊಳಹ |
ವರ ಬಯನವ್ವನ ಸಿರಿ ಪದವ |
ಸದಮಲ ಮನದಿಂ ಪೂಜಿಸಿ |
ಪಡೆಯಿರಿ ಸುಖ ಸಂಪದವಾ ||

ಸಮಾಪ್ತಿ:

ಹರಿದಾಸ.

ಮಹಾರಾಜಶ್ರೀ ಮುಕ್ಕಾಟಿರ ಐಯ್ಯಣ್ಣನವರ ಸಮಕ್ಷಮಕ್ಕೆ.

ವಿಕ್ಟೋರಿಯ ಕ್ಲಬ್ ಮೆಂಬರುಗಳ ಪ್ರೀತಿಪುರಸ್ಸರವಾದ ವಿಜ್ಞಾಪನೆ

ತಮ್ಮ ಕುಮಾರರು ಮ|| ರಾ|| ಮಂದಣ್ಣನವರು ನೆನ್ನೆ ಸಾಯಂಕಾಲ ಸ್ವರ್ಗಸ್ಥರಾದ ವಿಷಾದಕರವಾದ ಸಂಗತಿಯನ್ನು ತಿಳಿದೆವು. ತಮ್ಮ ವೃದ್ಧಾಪ್ಯಕಾಲದಲ್ಲಿ ತಮಗೆ ಇಂಥ ಅಪಾರವಾದ ಗುಃಖವನ್ನು ಉಂಟುಮಾಡಿದ ವಿಧಿಯನ್ನು ಎಷ್ಟುಮಟ್ಟಿಗೆ ದೂಷಿಸಿದರೂ ಸ್ವಲ್ಪವೇ ಸರಿ. ತಮ್ಮ ಜೀವನದ ಮೂಲಾಧಾರಸ್ತಂಭವೇ ಮುರಿದುಬಿದ್ದಂತಾಯಿತು. ತಮ್ಮ ಭಾಗ್ಯೋದಯದ ತೇಜೋವೃದ್ಧಿಯು ಅಕಾಲದಲ್ಲಿ ಅವಸಾನಹೊಂದಿ ತಮ್ಮ ಉತ್ತಮೋತ್ತರದ ಆಸೆಯನ್ನು ಗಾಢಾಂಧಕಾರ ಸಮಯದಲ್ಲಿ ಅಲ್ಲೋಲ ಕಲ್ಲೋಲವಾದ ಸಮುದ್ರದಲ್ಲಿ ಮುಳುಗಿಸಿದಂತಾಯಿತು. ಈ ದುರ್ವಾರ್ತೆಯನ್ನು ಅಕಸ್ಮಾತ್ತಾಗಿ ಕೇಳಿದ ಒಡನೆ ಕೆಲವು ಕ್ಷಣದ ವರೆಗೆ ನಮಗಳಿಗೆ ಚಿತ್ತವೇ ಪಲ್ಲಟವಾಗಿ ಆಗೋದರು. ಆಪಾರದಿಂದ ಸ್ತಂಭೀಭೂತರಾದೆವು. ತಮಗಳಿಗಂತು ವೃದ್ಧಾಪ್ಯಕಾಲದಲ್ಲಿ ಉಂಟಾದ ಅಧೋಗತಿ ಅವಸ್ಥೆಯಿಂದಲೂ, ರಕ್ತಸಮ್ಮಂಧದಿಂದಲೂ ಮ|| ರಾ|| ಮಂದಣ್ಣನವರ ಮರಣದಿಂದುಂಟಾದ ಪುತ್ರಶೋಕವು ದೇಹಾಂತಪರಿಯಂತ ಸುಡುತ್ತಿರುವುದು. ನಮಗೂ ಸಹ ಮಿತ್ರಭಾವದ ಸ್ನೇಹಮೂಲಕ ತಮ್ಮ ಕುಮಾರರು ಅಕಾಲದಲ್ಲಿ ಮೃತಪಟ್ಟಿಗೆ ತುತ್ತಾದದ್ದರ ದುಃಖವು ಬಹುಕಾಲದವರೆಗೆ ಅಳಿಸಿಹೋಗುವುದು, ಅಸಾಧ್ಯ. ತಾವುಗಳು ಪ್ರಕೃತದಲ್ಲಿ ಅಹೋರಾತ್ರಿ ತೇಲುವ ದುಃಖಸಮುದ್ರದಲ್ಲಿ ನಾವುಗಳು ಸಹ ಒಂದು ಭಾಗದಲ್ಲಿ ತೇಲುತ್ತಾ ಮುಳುಗುತ್ತಾ ತಮ್ಮ ಶೋಕದಲ್ಲಿ ಭಾಗಿಗಳಾಗಿದ್ದೇವೆಂದು ತಾವು ಸಂಪೂರ್ಣವಾಗಿ ನಂಬಬೇಕು.

ಆದರೆ ಮನುಷ್ಯನು ಆಪತ್ಕಾಲದಲ್ಲಿ ಶಾಂತಿಯನ್ನೂ, ಧೈರ್ಯವನ್ನೂ ತಂದುಕೊಂಡವನೇ ಮನುಷ್ಯನೆನ್ನಿಸಿಕೊಳ್ಳುತ್ತಾನೆ. ಶ್ರೀ ಭಗವಂತನು ನಮ್ಮ ಪರೀಕ್ಷಾರ್ಥವಾಗಿ ಕಷ್ಟವನ್ನೂ, ಸುಖವನ್ನೂ ಕೊಡುತ್ತಾನೆ. ಸಂಪತ್ತಿನಲ್ಲಿ ಅಹಂಕಾರಪಡದೆ ವಿವೇಕವನ್ನು ತಂದುಕೊಂಡು ವಿಪತ್ತಿನಲ್ಲಿ ಧೈರ್ಯವನ್ನೂ, ಸಮಾಧಾನವನ್ನೂ ತಾಳಿದವನೇ ಧೀರೋದಾತ್ತನಾಯಕನು. ನಾವು ಕಷ್ಟಕ್ಕೆ ಗುರಿಯಾದಾಗ ನಮಗಿಂತಲೂ ಹೆಚ್ಚು ಕಷ್ಟಕ್ಕೆ ಗುರಿಯಾದವರ ವಿಷಯಗಳನ್ನು ಜ್ಞಾಪಕಕ್ಕೆ ತಂದುಕೊಂಡು ನಮ್ಮ ದುಃಖಗಳನ್ನು ನೀಗಿಕೊಳ್ಳಬೇಕು. ತಾವು ಹರಿಶ್ಚಂದ್ರ, ನಳ, ಪಾಂಡವರು, ದಶರಥ ಮತ್ತು ಶ್ರೀರಾಮಾದಿಗಳೇ ಮೊದಲಾದ ಪುರಾಣಪುರುಷರ ಕಥೆಗಳನ್ನು ತಿಳುಕೊಂಡಿರುವುದಲ್ಲದೆ ತಮ್ಮ ಜೀವಮಾನಕಾಲದಲ್ಲಿಯೇ ತಮಗೆ ದೇವರು ಕೊಟ್ಟ ವಿಪತ್ತಿಗಿಂತ ಹೆಚ್ಚಾದ ವಿಪತ್ತಿಗೆ ಗುರಿಯಾದ ಜನರ ಅವಸ್ಥೆಯು ತಮ್ಮ ತಿಳುವಳಿಕೆಯಲ್ಲಿರಬಹುದು. ಜನನ ಮರಣ ಪ್ರಾಣಿಗಳಿಗೆ ಸ್ವಾಭಾವಿಕವಾದ ಅವಸ್ಥೆ. ಬಟ್ಟೆಯು ಧರಿಸುವುದಕ್ಕೆ ಅಯೋಗ್ಯವಾದೊಡನೆ ಆ ವಸ್ತ್ರವನ್ನು ತ್ಯಜಿಸಿ ಬೇರೆ ಬಟ್ಟೆಯನ್ನು ನಾವು ಯಾವರೀತಿಯಲ್ಲಿ ಧರಿಸುತ್ತೇವೋ, ಹಾಗೆಯೇ ರೀತಿಯಲ್ಲಿ ಜೀವಾತ್ಮನು ತಾನು ಧರಿಸಿರುವ ದೇಹವು ತನಗೆ ಅಯುಕ್ತವಾಯಿತೋ ಆ ಕೂಡಲೆ ನೂತನ ದೇಹಧಾರಿಯಾಗುತ್ತಾನೆಂದು ಗೀತೆಯಲ್ಲಿ ಭಗವಂತನು ಅರ್ಜುನನಿಗೆ ಹೇಳಿಕೊಡಿಸಿರುತ್ತಾನೆ. ಈ ವಿಷಯ ನೂತನವಾಗಿ ನಾವು ತಮಗೆ ಅರಿಕೆ ಮಾಡಬೇಕಾಗಿಲ್ಲ. ಈ ಎಲ್ಲಾ ತತ್ವಗಳು ತಾವು ತಿಳಿದಿರುವುದೇ. ಆದರೆ ದುಃಖಸಮುದ್ರದಲ್ಲಿ ಅಪ್ಪಳಿಸಿಬಿಟ್ಟ ಮರಿಗೆ ತತ್ವಗಳು ಎಲ್ಲಾ ಮೂಳೆಗೆ ಒತ್ತರಿಸಲ್ಪಟ್ಟು ಮೋಹಪಾಶವೇ ತನ್ನ ಪ್ರಬಲವಾದ ಬಂಧನದಿಂದ ಬಹು ಘೋರವಾಗಿ ಪೀಡಿಸುವುದು. ಆದರೆ ಇಂಥಾ ನಮ್ಮ ದುರವಸ್ಥೆಯಲ್ಲಿಯೇ ಪೂರ್ವಾಪರ ಗ್ರಹಿಕೆಗಳನ್ನು ತಂದುಕೊಂಡು ಪೌರುಷಧೈರ್ಯದಿಂದ ನಮ್ಮ ಶೋಕವನ್ನೆಲ್ಲಾ ನೀಗಿ ಮನುಷ್ಯನನ್ನು ಅತಿಕ್ರಮಿಸಿದ ಸರ್ವಕಾರ್ಯವು ಭಗವತ್ಪ್ರೇರಣೆಯಿಂದಲೇ ನಡೆಯುವುದೆಂಬುದರಲ್ಲಿ ಸಂಪೂರ್ಣ ನಂಬಿಕೆಯಿಟ್ಟು ನಾವು ತೇಲಾಡುವ ದುಃಖಸಮುದ್ರದಿಂದ ನಿವೃತ್ತರಾಗಿ ಈ ದುಃಖಮಯವಾದ ಪ್ರಪಂಚದಿಂದ ಬಿಡುಗಡೆಯಾಗುವವರೆಗೆ ನಮ್ಮ ಕರ್ತವ್ಯವಾದ ಕೆಲಸವನ್ನು ಭಗವಂತನ ಮೇಲೆ ಭಾರವಿಟ್ಟು ನಡಿಸಿಕೊಂಡು ಬರುವುದೇ ನಮ್ಮ ಕರ್ತವ್ಯ. ವಯೋವೃದ್ಧ ಮತ್ತು ಜ್ಞಾನವೃದ್ಧರಾದ ತಮ್ಮಂಥಾ ಮಹಾನುಭಾವರಿಗೆ ಅಲ್ಪಮತಿಗಳಾದ ನಾವು ಹೆಚ್ಚು ಅರಿಕೆಮಾಡಲು ಶಕ್ತರಲ್ಲ.

ಮುಖ್ಯತಃ ಮೃತಪ್ರಾಣಿಗೆ ಸಾಯುಜ್ಯಪದವಿಯನ್ನು ಮತ್ತು ತಮಗೂ ತಮ್ಮ ಕುಟುಂಬ ಸರ್ವಕ್ಕೂ ತಮ್ಮಗಳಿಗೆ ಪ್ರಾಪ್ತವಾದ ಅಪಾರ ಶೋಕದಿಂದ ಮುಕ್ತರನ್ನಾಗಿಮಾಡಿ ತಮಗಳಿಗೆ ಸರ್ವಥಗೂ ಆಯುರಾರೋಗ್ಯ ಸಂಪದವನ್ನಿತ್ತು ಚಿರಕಾಲ ಕಾಪಾಡಬೇಕೆಂದು ಸರ್ವೇಶ್ವರನಾದ ಭಗವಂತನನ್ನು ಪ್ರಾರ್ಥಿಸುತ್ತೇವೆ.

ವೀರರಾಜಪೇಟೆ,	ಏಸ್. ತಮ್ಮಯ್ಯ,
ವಿಕ್ಟೋರಿಯ ಕ್ಲಬ್.	ಬಿ. ಐ. ಕುಟ್ಟಪ್ಪ,
30—8—1921.	ಜಾಯಿಂಟ್ ಸೆಕ್ರೆಟರಿಗಳು.

ಸಾಧುವಚನ ಹಿತೋಪದೇಶ.

[ಎಂಟನೆಯ ಸಂಚಿಕೆಯಿಂದ ಮುಂದುವರಿದುದು]

ಸುಮತಿ ದುರ್ಮತಿಗಳ ಸಂವಾದವನ್ನು ನಾಟಕ ಮಾದರಿಯಲ್ಲಿಯೂ ಕೇಳಿರುತ್ತದೆ. ಅನಂತರದಲ್ಲಿ ಏನಾಯ್ತೆಂಬುದನ್ನು ನೋಡೋಣ ಬನ್ನಿರಿ

ದ್ವಿತೀಯಾಂಕ—ಸುಬೋಧಾಲಯದೊಳಗೆ ಸುಮತಿಯು ಪ್ರವೇಶಿಸುವನು. ಪ್ರಥಮಾಂಕದಲ್ಲಿ ಹಾರೈಸಿದಂತೆ ಉದಿಗ ಪರಿಚಿತನಾದ ಸುಮತಿಯು ಏನನ್ನೋ ಯೋಚಿಸುತ್ತಾ ಅಲ್ಲಿ ಕುಳಿದ್ದಾನೆ. ಈ ಸಮಯದಲ್ಲಿ ಸುಮತಿಯು ಒಳಗ ಪ್ರವೇಶಿದವನೇ ಯಾವ ಸುತನನ್ನೂ ಆದರೆ ಸುಮತಿಯ ಸಮೀಪಕ್ಕೆ ಹೋಗಿ ನೀನು ಆಕಾಶವನ್ನು ನೋಡುತ್ತಾ ಏನನ್ನು ಯೋಚಿಸುತ್ತಿದ್ದೀ ಎಂದು ಕೇಳಿದನು

ಸುಮತಿ—ಆಕಾಶವನ್ನು ನೋಡು ಎಷ್ಟು ನಿರ್ಮಲವಾಗಿದೆ. ಜ್ಞಾನಿಯ ಹೃದಯದಲ್ಲಿ ಪಾಪಕೃತ್ಯಗಳು ಹೇಗೆ ನಿಲ್ಲಲಾರವೋ ಹಾಗೆಯೇ ನಿರ್ಮಲವಾದ ಆಕಾಶದಲ್ಲಿ ಮೇಘ ಸಮೂಹಗಳು ನಿಲ್ಲದೆ ಓಡುತ್ತವೆ. ವಿಶಿಷ್ಟಾರ್ಥ. ಇಂದು ಆಷಾಢ ಪೂರ್ಣಿಮೆಯೆಂದು ಗೊತ್ತಾಗುವದಿಲ್ಲ ಯಾರು ಮಸಿದರು. ಪುಸ್ತಕ ಮುಗಿಯಲಿಕ್ಕೆ ಇಲ್ಲದೆ ಮಾತು ಸುಳ್ಳಾಯ್ತು. ಒಂದಾನೊಂದು ಚಂದ್ರನು ಯಾವಾಗ ದಾಟುವನೆಂದು ಮಂಗಳಾಂಗನನ್ನು ನೋಡಲೇ ಬೇಡ. ಮರಿದಲೇ ದುರ್ಮತಿ ಮಹಾಶಯನೊಬ್ಬನು ನಾನು ಹುಡುಗಿ ಬಿಡಲಾರೆನೆಂದು ಹೇಳಿ ಹೊರಟನು. ಇವನು ಹುಡುಗಿಗೆ ಸುರುಮಾಡಿದಂದಿನಿಂದ ಮಳೆಯು ಕಡಿಮೆ. ಅವನಿಗೋಸ್ಕರ ಹೂಡುವದರಿಂದ ಇಷ್ಟರಲ್ಲಿ ಒಟ್ಟಿಲಾಭ ಉಂಟೆಂತೆ ಮಾಡಲಿ ಎಂಬ ಚೆನ್ನಾಗಿ ಮಾಡು ಆಕ್ಷೇಪದ ಗುಣವು ಕಾಣುವದಿಲ್ಲವೇ! ವರ್ಷಂ ಪ್ರತಿ ಕರ್ನಾಟಕ ದೇಶದಲ್ಲಿ ನಡೆಸಲ್ಪಡುವ ಗದ್ದೆಗಳು ಈ ಮಳೆಯ ಪ್ರಯುಕ್ತ ನಾಟಿ ಮಾಡಲಾಗದೆ ಬಿದ್ದಿರುವ ಹಾಗೆ ಸಾವಿರಾರು ಎಕರೆಯ ಗದ್ದೆಗಳು ನೀರಾರಿ ಒಣಗಿ ಹೋಯಿತು. ಕನಕದಾಸ ಅಗಲ್ ಕರ್ನಾಟಕ ದೇಶದಲ್ಲಾಗುವ ಕಲಹವು ನಿಂತು ಕನ್ಯಾಕುಮಾರಿವರೆಗೂ ಆಗಲಿ

ದುರ್ಮತಿ—ಮಹಾಶಯನೇ. ಈ ವಿಷಯವು ನಮ್ಮ ಸಮಾಜಕ್ಕೆ ಒಂದು ಅಪೂರ್ವ ಶೋಧೆಯು ಉಂಟಾಗಬಹುದೆಂದು ಯೋಚಿಸುತ್ತಾನೆ.

ಇದು ನಮ್ಮ ಸಮಾಜಕ್ಕೆ ಅಚಂದ್ರಾರ್ಕವಾಗಿರುವ ಅಖಂಡಿತವಾಗಿರುವ ಕಳಂಕ ಎಂದು ಕೆಲವರು. ಮಾಡಿದ ಅಪರಾಧಕ್ಕೆ ಸಲುವಾಗಿ ಇಷ್ಟರ ಮಟ್ಟಿಗೆ ಯಾರು ಮಾಡಬೇಕೋ ಯಾವ ಕಾಲದಲ್ಲಿ ವರ್ಣಾಶ್ರಮಧರ್ಮಗಳು ನಾಶಹೊಂದುತ್ತವೆಯೋ ಆ ಕಾಲದಲ್ಲಿ ಅತಿವೃಷ್ಟಿ ಅನಾವೃಷ್ಟಿ ಅಕಾಲವೃಷ್ಟಿಗಳು ಸಂಭವಿಸಿ ಲೋಕಕ್ಷೋಭೆಯುಂಟಾಗುವದೆಂದು ಗುರುಹಿರಿಯರು ಹೇಳುತ್ತಿದ್ದರು. ಈಗ ಅದು ನಿದರ್ಶನಕ್ಕೆ ಬಂದಿತು. ಇದನ್ನು ಕಷ್ಟವನ್ನು ನಿವಾರಿಸುವವರ ಸೃಷ್ಟಿ ಸ್ಥಿತಿ ಲಯಕಾರಣನಾದ ದೇವನು ಎಲ್ಲರಿಗೂ ಅನುಗ್ರಹ ಮಾಡಲಿ ಎಂದು ಹಾರೈಸೋಣ (ಸಶೇಷ)

ಸುಮತಿ ಒಂದೆ ಸಿಕ್ಕಿದ ತಿದ್ದುಪಡಿ.

ಇದು ಶ ಸ್ವಪ್ರತಿ

ಅನುಚಿತ ಕರ್ಮಾರಂಭ ಸ್ವಜನವಿರೋಧೋ ಬಲೀಯಸಾ ಸ್ಪರ್ಧಾ । ಪ್ರಮದಾಜನ ವಿಶ್ವಾಸೋ ಮೃತ್ಯುದ್ವಾರಾಣಿ ಚತ್ವಾರಿ ॥ ಅರಿಕೆ ಸುನಾಶವನಾತೋ ಚಿತ ಜನಾನಂದಕಾಳಿತು ಸ್ವಯಂ । ಆಯಾಸ ಕಾಲಯಾಪನಕಲುಷಿತ ದೂಷಾತ್ ಮನಸ್ಸ್ವಯ ಕಿ ,

(ನೀತಿರತ್ನಾಕರ ಎಂಬ ಗ್ರಂಥದಿಂದ).

"IF I WERE IS WOMAN"

ನಾನು ರಮಣಿಯಾಗಿದ್ದಲ್ಲಿ!

' Sigh no more, ladies, sigh no more,
Men were deceivers ever,
One foot in sea and one on shore,
To one thing constant never!"

ಅಹಾ! ನಾನು ರಮಣಿಯಾಗಿದ್ದಲ್ಲಿ! ಏನು ಅಟೋಪ ಚೆನ್ನಿಯೇ ನನ್ನನ್ನು ನಾಯಕನನ್ನಾಗಿ ಮಾಡುವುದು! ಇನ್ನು ರಮಣಿಯಾಗಿದ್ದಲ್ಲಿ!

ರಮಣಿ! ಹಾದಿಯಾಗ ಒಸರ ಮಾಡಿಯಾಗಿರುವ ಭೂದೇವಿಗೋಸ್ಕರ ನಿನ್ನ ಹೆಸರನ್ನು ಇಡುವನು. ವೃತ್ತ ಪತ್ರಿಕಾಕಾರರು ತಮ್ಮ ಪತ್ರಿಕೆಯನ್ನು ಬಾಲಿಕ ಮೊದಲು ಕರೆಯಲಿಟ್ಟಿರುವರು ಮರಂತ. ಈಗಿನ ಪ್ರಬೋಧ ಸಮಯವಲ್ಲ. ನೀನು ಕೂರಬೇಕು ನಿನ್ನ ಪತಿಯು ನಿಲ್ಲಬೇಕು ಎಷ್ಟೊಂದು ಬಹುಮಾನ!

ಯಾವ ಚರಿತ್ರೆಯನ್ನಾಗಲಿ ಕಥೆಗಳನ್ನಾಗಲಿ ತೆಗೆದು ನೋಡಿದರೆ ಅಲ್ಲಿ ರಮಣೀಮಣಿಯ ಮಹಾ ಶೌರ್ಯದ ಯಾವದೇಶದ ಚರಿತ್ರೆಯನ್ನು ಶೋಧಿಸಿದರೂ ಆಶ್ಚರ್ಯಕರವಾದ ಸಾಹಸ ಕಾರ್ಯಗಳು ನಿನ್ನ ದೆಸೆಯಿಂದಲೇ ಆಗಿರುವುವು.

ಆಃ ರಮಣಿ! ನೀನು ಅಬಲೆಯೆ? ಸಬಲೆಯೆ!

ಮೊನ್ನೆ ನಮ್ಮೂರ ಜಾತ್ರೆ ನಾವಿರುವೆಡೆಯಿಂದ ಜಾತ್ರೆಯ ಸ್ಥಳಕ್ಕೆ ಮೂರು ಮೈಲು ದೂರ ದಾರಿಯು ಪ್ರಶಸ್ತವಾಗಿದ್ದಿಲ್ಲ. ಸಾಲದುದಕ್ಕೆ 'ಸ್ಟೀಮ್‌ರೋಲರ್' ಬರುವುದೆಂದು ದಾರಿಯುದ್ದಕ್ಕೂ ರಸ್ತೆಯನ್ನು ಅಗೆದಿದ್ದರು ವಿಳಂಬ ನಡುವೆ ದೂರದನಾದ ನನ್ನಿಂದ ನಡೆಯಲು ಆದೀತೇನು? ಇದನ್ನೆಲ್ಲಾ ಆಲೋಚಿಸಿ ಅಪ್ಪಯ್ಯನಲ್ಲಿಗೆ ಹೋಗಿ ನಾನು ಬರಲಾರೆನೆಂದು ಹೇಳಿದೆ. ವಿಜ್ಞಾಪಿಸಿದೆ, ಅಂಗಲಾಚಿ ಬೇಡಿಕೊಂಡೆ, ಕಣ್ಣೀರು ಸುರಿಸಿದೆ, ವ್ಯರ್ಥವಾಗಿ ಮಾಡಬಾರದನ್ನೆಲ್ಲಾ ಮಾಡಿದೆ—ಹೊಸ ಅಂಗಿ ತೊಟ್ಟುಕೊಳ್ಳಲಿಲ್ಲ, ಅನ್ನ ಊಟಮಾಡಲಿಲ್ಲ, ಆದರೆ ಅದನ್ನೆಲ್ಲಾ ವಿಚಾರಿಸುವವನಾರು? "ಕೋಣ! ಒಂದು ಹರದಾರಿ ನಡೆಯಲಿಕ್ಕೆ ಹೆಂಗಸರಂತೆ ಅಳುತ್ತಾನೆ. ಹೆಣ್ಣಿಗ!" ಎಂದು ಮುಂತಾಗಿ ಅಪ್ಪಗಳಿದರು. ನೆರೆಮನೆಯ ಅಪ್ಪಯ್ಯನಿಗಾದರೊ—ಎಲ್ಲಿ ಬಿಸಿಲು ಹೆಚ್ಚಾಗಿ ಚಿನ್ನದಂತ ಮೈ ಒಣ್ಣವು ಕಪ್ಪಾದಿತೋ! ಮತ್ತೆಲ್ಲಿ ಮತ್ತಗಿರುವ (ಹತ್ತಿಯಹಾಗಿರೊ?) 'ಪಾದವಡಿ' ಗಳಿಗೆ ಕಲ್ಲು ತಗಲಿ ನೆತ್ತರು ಸುರಿದೀತೋ? ಎಂದು ಅವರ ಅಪ್ಪಯ್ಯನು 'ಸಾರೋಟು' ಗಾಡಿ ತಂದು ಎಲ್ಲರನ್ನು ಕುಳ್ಳಿರಿಸಿಕೊಂಡು ಹೋದನು. ಆಹಾ! ನಾರಿಯರ ಜೀವನವೇ! ಮನೆಯಲ್ಲಿ ನೀವೇ ಸರ್ವಾಧಿಕಾರಿಯರಂತೆ, ಕತ್ತಲಿಲ್ಲ ಬೇಕೆನಿಸಿರುವವರಂತೆ ಮಾನವ ಹೃದಯ ಶಾಂತ್ಯೆಯರಂತೆ. ಹೋದಲ್ಲೆಲ್ಲಾ ಸೌಂದರ್ಯ ಸುಖವನ್ನು ಬಿತ್ತಿ ಹರಡುವವರಂತೆ ಆಹಾ! ನಡೆಯಲಾರೆ ನಡೆಯಲಾರೆ! ಮಳೆ ಘೋರಗರೆಯುತ್ತಿದೆ. ಕಾಲುವೆಗಳೆಲ್ಲಾ ನೀರು ಉಕ್ಕಿ ರಸ್ತೆಯ ಮೇಲೆಲ್ಲಾ ಹರಿದು ಓಡುತ್ತಿದೆ. ಬೀದಿಬೀದಿಯಲ್ಲಿ ನಾಯಿಯು ಕೂಡ ಕಾಣುವುದಿಲ್ಲ. ಇಂತಹ ಸಮಯದಲ್ಲಿ ನಾನು ಮಾತ್ರ ಶಾಲೆಗೆ ಹೋಗಬೇಕಂತೆ. ನನ್ನ ಸಹಪಾಠಿಯಾಗಿದ್ದ ಗೌರು ಏನಾದರೂ ಬರುವಳೆ? ಕೊಂಚ ಮಳೆ ಮಿತಿ ಮೀರಿದರಾಯಿತು. ಅವರ ಅಪ್ಪನು ಮಗೂ! (ಅವಳು ಮಗು! ನಾನು ಕೋಣ!!) ಈ ಹೊತ್ತು ಶಾಲೆಗೆ ಹೋಗಬೇಡ, ಎನ್ನುವರು. ಹೇ ಭಗವಂತ ನೀನು ಪಕ್ಷಪಾತವನ್ನರಿಯದವನಂತೆ ಇದೇಕೆ ಮಾತ್ರ ನಿನ್ನ ಕಣ್ಣಿಗೆ ಗೋಚರವಾಗಿಲ್ಲವೊ ಕಾಣೆ

ಒಹು ಚಿಕ್ಕವನಾಗಿದ್ದಾಗ್ಯೆ ನನ್ನನ್ನೆಲ್ಲರೂ ಸುಂದರನೆನ್ನುತ್ತಿದ್ದರು. ಈಗ ನಮ್ಮ ನೆರೆಮನೆಯ ಅಕ್ಕಣ್ಣಿಯೇ ಹೇಳುತ್ತಾಳೆ ಮೊದಲಿನ ಆ ರೂಪು ಎಲ್ಲಿಯೋ ಮಾಯವಾಯಿತೆಂದು ಇದೇನಿದು? ಬಿಸಿಲಿನಿಂದ ನನ್ನ ಮೈ ಬಣ್ಣವು ಕಂದಿಹೋಯಿತೆ? ಅಷ್ಟಗ ಕರಿದೆವ್ವದಂತಿದ್ದ (ಇನ್ನೇನು ಮಾಡಲು ಸಹಿಸಲಾರೆ) ಅಕ್ಕಣ್ಣಿಯು ಇಂದು ನಪ್ರೋತೆ ಸುಂದರಿಯಾಗಿರುವಳು ಅಕ್ಕಣ್ಣಿ ನನ್ನನ್ನು ವರಿಸಬೇಕು. ನನ್ನನ್ನು ವರಿಸಬೇಕು ಎಂದು ಅವರ ಜಾತಿಯ ಯುವಕರ ಹೊಡೆದಾಟವಂತೆ! (ಸಶೇಷ)

ನೋಟೀಸ್.

ಕೊಡಗು ಕಂಪೆನಿಯ ಮೆ|| ಬಿಟ್ಟಿಯಂಡ ಮುತ್ತಣ್ಣನವರು ಇದೇ ಸೆಪ್ಟಂಬರ್ ತಾರೀಖು 4 ನೇ ಆದಿತ್ಯವಾರ ಗೋಣಿಕೊಪ್ಪಲು, 5 ನೇ ಸೋಮವಾರ ಮಡಿಕೇರಿ 7 ನೇ ಬುಧವಾರ ವಿರಾಜಪೇಟೆಯಲ್ಲಿಯೂ ಇರುವುದರಿಂದ ಕಂಪೆನಿಯ ಷೇರು ಹಣ ಮತ್ತು ಚಂದಾ ಹಣ ಪಾವತಿಮಾಡಲಿಕ್ಕೆ ಬಾಕಿ ಇರುವ ಎಲ್ಲಾ ಷೇರಾಧಿಪತಿಗಳು ದಯವಿಟ್ಟು ಅವರವರ ಬಾಕಿಯನ್ನು ಪಾವತಿಮಾಡಿ ರಶೀತಿ ಪಡೆಯಬೇಕಾಗಿಯೂ, ಬಾಕಿಯನ್ನು ಪಾವತಿ ಮಾಡದೆ, ಉದಾಸೀನರಾಗಿರುವುದು, ಕಂಪೆನಿಯ ಮುಂದಣ ಅಭಿವೃದ್ಧಿಗೆ ಕುಂದುಂಟುಮಾಡಿದೆಯಾಗಿಯೂ ಈ ಮೂಲಕ ತಿಳಿಸೋಣಾಗಿದೆ.

ಮ್ಯಾನೇಜರ್,

ಕೊಡಗು ಲಿಮಿಟೆಡ್, ಮಡಿಕೇರಿ.

ಪತ್ರವ್ಯವಹಾರಗಳು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್.]

ಆರ್ಯ,

ಕಳೆದ ಜೂನ್ ತಾರೀಖು 17 ರ ಪತ್ರಿಕೆಯಲ್ಲಿ ಒಬ್ಬ ಪೆನ್‌ಷನ್ ದಾರ, ಕೆಲವು ಪೆನ್‌ಷನ್‌ದಾರರಿಗೆ ಸರಕಾರದವರು ಹೆಚ್ಚಿಗೆ ಎಲೊವೆನ್ಸ್ ಕೊಡದೆ ಕೆಲವರಿಗೆ ತಾಹಲ ಕೊಡದಿರಲು ಕಾರಣ ಯಾರಾದರು ತಿಳಸಬೇಕಾಗಿ ಬರೆದ ವಿಷಯದಲ್ಲಿ ತಾಹಲ ಕಾರಣವು ತಿಳಿಸದೆ ಇರುವುದು ವ್ಯಸನಕರವಾಗಿದೆ. ಪಕ್ಷಪಾತವಿಲ್ಲದ ನಮ್ಮ ಜನ ಸರಕಾರವು ಈ ಮೇರೆ ಕೊಡುವ ಕಾರಣವಿರುವದಿಲ್ಲ. ಕೆಲವರ ಹೆಸರು ಕೈಬಿಟ್ಟಿರಬಹುದು. ಸರಕಾರದವರು ಈವರ ಪಟ್ಟಿ ತೆಗಿಸಿನೋಡಿ ಬಾಕಿ ಜನರಿಗೂ ಭೇದವಿಲ್ಲದೆ ಎಲೊವೆನ್ಸ್ ಕೊಡುವಂಬದಾಗಿಯೂ ಇಲ್ಲವೆ ಕಾರಣವನ್ನಾದರೂ ತಿಳಿಸುವರಾಗಿಯೂ ಪ್ರಾರ್ಥಿಸುವ

ಇಷ್ಟೊಬ್ಬ ಪೆನ್‌ಷನ್‌ದಾರ್.

ಅಯ್ಯಾ,

ರಾಯಬಹದ್ದೂರ್ ಮುಕ್ಕಾಟಿರ ಐಯ್ಯಪ್ಪನವರು ಈ ಶಾಲೆಯ ಪ್ರೆಸಿಡೆಂಟರಾಗಿಯೂ, ಇವರ ಜೇಷ್ಠ ಪುತ್ರ ಮಂದಣ್ಣನವರು ಟ್ರಿಜರಿಯರರಾಗಿಯೂ, ಈ ಶಾಲಾ ಕೆಲಸವು ಕ್ರಮವಾಗಿ ನೆರವೇರಿಸಿಕೊಂಡು ಬರುತ್ತಿರುವದು ನಮಗೆಲ್ಲ ತಿಳಿಯುವಂತಾದ್ದೇ. ಈ ಶಾಲೆಯನ್ನು ಊರ್ಜಿತಗೊಳಿಸುವ ಇರಾದೆಯೂ ಪೂರ್ತಿಯಾಗಿದ್ದ ಭಾಗಸ್ಥಾನ ಸಹ ಮಾಡಿದ್ದರು. ತನ್ನಪ್ಪ ಈ ತಾರೀಖು ಹದಿನೇಳರಲ್ಲಿ ಮಂದಣ್ಣನವರು ತನ್ನ ಬಾಲ್ಯಾವಸ್ಥೆಯಲ್ಲಿಯೇ ವೃದ್ಧರಾದ ತನ್ನ ತಂದೆಯನ್ನು ಕುಟುಂಬ ಸಂರಕ್ಷಣೆಗೆ ಬಿಡು ಮಾಡಿ ತಾನು ಸ್ವರ್ಗಸ್ತನಾದ ವಿಷಾದಕರ ಸೂಚನೆಗಾಗಿ ಸದರಿ ದಿನ ಶಾಲೆಯು ಮುಚ್ಚಲ್ಪಟ್ಟಿತು. ಇವರು ಇಹವನ್ನು ಬಿಟ್ಟದ್ದು ತಮ್ಮ ಕುಟುಂಬದ್ದಲ್ಲದೆ ನಮ್ಮ ದೇಶೋನ್ನತಿಯ ಒಂದು ಪಾದ ನಷ್ಟವಾಯ್ತೆಂಬುದಕ್ಕೆ ಸಂದೇಹವಿಲ್ಲ. ದೈವಾನುಗ್ರಹಕ್ಕೆ ಯಾರು ತಾನೆ ಏನು ಮಾಡಬಲ್ಲರು. ಜಗದೀಶನು ಈ ದುಃಖಾಂಬುಧಿಯಲ್ಲಿ ಮುಳುಗಿರುವ ಇವರ ವೃದ್ಧರಾದ ತಂದೆಯವರಿಗೂ ಇವರ ಕುಟುಂಬಕ್ಕೂ ಇದಕ್ಕೆ ಭಾಗಿಗಳಾಗಿರುವವರಿಗೂ ಆಯುರಾರೋಗ್ಯವನ್ನಿತ್ತು ದುಃಖ ಶಮನಿಸಿ ಕಾಪಾಡಲೆಂದು ಪ್ರಾರ್ಥಿಸುವ ಈ ಶಾಲಾ ಸಂಘದ ಪರವಾಗಿ.

ಕೊಡಗು ನ್ಯಾಶನಲ್ ಸ್ಕೂಲ್, ಅಮ್ಮತ್ತಿ. — ಚಟ್ಟಂಡ್ರ ತಮ್ಮಯ್ಯ, ಹೆ. ಪ್ರ.

ಅಯ್ಯಾ,

ಸಿದ್ದಾಪುರಪೇಟೆಯಲ್ಲಿ ಲಾಂದ್ರಗಳನ್ನು ಉರಿಸುವ ಕೆಲಸವನ್ನು ಸರಕಾರದವರು ಪೋಲೀಸಿನವರಿಗೆ ಒಪ್ಪಿಸಿದ್ದರೂ ಕತ್ತಲೆಯಲ್ಲಿ ಲಾಂದ್ರಗಳನ್ನು ಉರಿಸುವದಿಲ್ಲವಾದ್ದರಿಂದ ಜನರ ಪ್ರಯಾಣಕ್ಕೆ ಬಹಳ ಕಷ್ಟವಾಗಿದೆಯೆಂದು ಕೊಡಗು ಪತ್ರಿಕೆಯಲ್ಲಿ ತಾರೀಖು 12-8-21 ರಲ್ಲಿ ಬರೆದಿರುತ್ತಾರಷ್ಟೆ.

ರಾತ್ರಿವೇಳೆಯಲ್ಲಿ ಲಾಂದ್ರಗಳಿಲ್ಲದೆ ಸಂಚರಿಸುವ [illegible] ಗಳನ್ನು ಬಿಡದ ಪೋಲೀಸಿನವರು ಸೆಟ್ಟಿಯವರನ್ನು ಏಕೆ [illegible] ಮವರೇ?

ಅಲ್ಲದೆ ಪತ್ತೆದಾರಿ ಪೋಲೀಸ್ ಸ್ಟೇಶನ್ ಸ್ಥಳದಲ್ಲಿ ಇದ್ದು ಪಾರುಪತ್ತೆಗಾರರು ಮತ್ತು ಸುಬೇದಾರರವರು ಪದೆ ಪದೆ ಅಲ್ಲಿಗೆ ಬರುತ್ತಾರೆ. ಅವರಿಗೆ ಈ ಸಮಾಚಾರ ಯಾರೂ ತಿಳಿಸಲಿಲ್ಲವೆ? ಅಂಥಾ ಯಾವ ಪುಕಾರವೂ ಬಾರದಿರುವದು ಲಾಂದ್ರಗಳನ್ನು ಸರಿಯಾಗಿ ಹಚ್ಚುತ್ತಿದ್ದರಿಂದಲ್ಲವೆ?

ಇಂಥಾ ಸಂಗತಿಗಳಲ್ಲಿ ಬರುವ ಸುಳ್ಳು ದೂರನ್ನು ಬಾತ್ಮಿದಾರರು ಚೆನ್ನಾಗಿ ವಿಚಾರಿಸದೆ ಇನ್ನು ಮುಂದಕ್ಕಾದರೂ ಪತ್ರಿಕೆಯಲ್ಲಿ ಪ್ರಕಟಿಸಲಾರರೆಂದು ಭಾವಿಸುತ್ತೇನೆ. ಹೀಗೆ ಪ್ರಕಟಿಸಿದ ಬಾತ್ಮಿದಾರರು, ಮಳೆಗಾಲವಾಗಿ ಬಹು ವರ್ಷವಿದ್ದ ಕಾರಣ ಚಂದ್ರನ ಬೆಳಕಿರುವಾಗ ದೀಪಗಳನ್ನು ಹಚ್ಚಸದೆ ಇಟ್ಟದ್ದನ್ನು ನೋಡಿ ಕತ್ತಲೆಯಲ್ಲಿ ದೀಪಗಳನ್ನು ಹಚ್ಚಸದೆ ಇರುವದು ಸರಿಯಲ್ಲವೆಂದು ಬಾತ್ಮಿದಾರರು ಹೀಗೆ ಬರೆದಿರುತ್ತಾರೋ? ತಿಳಿಯಲಾರೆನೆಂದು ಭಾವಿಸುವ

ದೇಶಾಭಿಮಾನಿಗಳ ಹಿತಚಿಂತಕ.

ಅಯ್ಯಾ,

ನಿಮ್ಮ ಪತ್ರಿಕೆಯಲ್ಲಿ ಕೊಡಗಿನ ವೀರಕ್ಷೇತ್ರ ಎಂಬ ಹೆಸರಿನ ಬಾತ್ಮಿಗೆ ಹಿತಚಿಂತಕರು ಬರೆದ ಜವಾಬನ್ನು ನೋಡಿದೆನು. ಹಿತಚಿಂತಕರಿಗೆ ಬಹಳ ವಂದನೆ. ಇವರು ವೀರಕ್ಷೇತ್ರದವರೊ? ಅಲ್ಲದಿದ್ದರೆ ಯಾತಕ್ಕೆ ರುಜು ಹಾಕಲಿಲ್ಲ. ಇವರಿಗೆ ಇಲ್ಲಿಯ ಸ್ಥಿತಿ ಗೊತ್ತಿಲ್ಲ.

ಕೊಡಗಿನಲ್ಲಿ ವೀರಕ್ಷೇತ್ರದವರು ಕೋಟೆ ಪೇಟೆ ಹತ್ತಿರ ಹೆಚ್ಚಿಗೆ ಇದ್ದಾರೆ. ಇವರಿಗೆ ಹತ್ತಿರದಲ್ಲಿ ಇರುವ ಮೂರು ಪಾಠಶಾಲೆಗಳು ಅನುಕೂಲ ಇದೆ. ಅಲ್ಲದೆ ಪುಕ್ಕಟೆ ಅನ್ನವೂ ಸಿಕ್ಕುವದು. ಇದನ್ನು ಗಟ್ಟಿ ಮಾಡುವದು ಬಿಟ್ಟು ಯಾವುದೋ ಒಂದು ರಾಮಕೃಷ್ಣನ ಹಾಸ್ಟೆಲಿಗೆ ಹೋಗಬೇಕಂತೆ. ಇದರಿಂದ ಪ್ರಯೋಜನವೇನು.

ನಾಲ್ಕು ವೀರಕ್ಷೇತ್ರದವರಿಗೆ ಒಬ್ಬ ಅಡಿಗೆಯವ. ಇವರಿಗೆ ಸರ್ಕಾರ ಹಾಸ್ಟೆಲಿನಲ್ಲಿ ಸ್ಥಳ. ಇದಕ್ಕೆ ಎಷ್ಟು ಸಂಬಳ ಯಾರು ಕೊಡುತ್ತಾರೆ? [illegible] ಬೇಕಾಗಿತ್ತೋ? ಅಥವ ತಂದೆತಾಯಿಗಳೋ? ಎಂದು ವಿಚಾರಿಸಿದರೆ, ಒಂದು ವೆಜಿಟೇರಿಯನ್ ಹಾಸ್ಟೆಲ್ ಎಂದು ಮಾಡಿ ಮತ್ತು ಅದು ಕೊಡಗರಿಗೆ ಮಾತ್ರ ಎಂದು ಮಾಡಿ ಈಗ ಎಲ್ಲರಿಗೆ ಎಂದು ಹೇಳುವ ಹಾಗಿನ ಹಿಂದಿನವು ಯಾರಿಗೆ ಗೊತ್ತಿದೆ. ಈಗ ಮಡಿಕೇರಿಯಲ್ಲಿ ನಾಲ್ಕು ಐದು ಜನರು ಓದುತ್ತಿದ್ದಾರಲ್ಲ. ಇವರಿಗೆ ದೊಡ್ಡ ಮನುಷ್ಯರು ತಮ್ಮ ಮನೆಯಲ್ಲಿ ಅನ್ನ ಹಾಕುವುದಿಲ್ಲವೇ? ಇದಲ್ಲದೆ ಮಣಿ ಮ|| ಗುಬ್ಬಿ ಬಸಪ್ಪನವರ ಬಂಗ್ಲೆ ಮನೆ ಇಲ್ಲವೋ? ಇದೆಲ್ಲಾ ಇದ್ದು ಸಹಾಯ ಇಲ್ಲ ಎಂದು ಕೂಗುವ ಹಿತಚಿಂತಕರಿಗೆ ಏನೂ ಗೊತ್ತಿಲ್ಲ. ಆದ್ದರಿಂದ ನಮಗೆ ರಾಮಕೃಷ್ಣ ಹಾಸ್ಟೆಲ್ ಬೇಡ. ಇರುವುದೇ ಸಾಕು.

ಹಳ್ಳಿಯವ.

ಕೈಲ್ ಮುಹೂರ್ತ ಹಬ್ಬ

ಸಂಪಾದಕರೆ,

ಕೈಲ್ ಮುಹೂರ್ತದ ಹಬ್ಬವು ಹೊಸ ಏರ್ಪಾಡಿನ ಹಬ್ಬವಲ್ಲ. ಪೂರ್ವದಿಂದಲೇ ಕೊಡಗರಲ್ಲಿ ನಾಮೂಲು ಮೇರೆ ನಡೆಯುವ ಹಬ್ಬವಾಗಿದೆ. ಮಡಿಕೇರಿಯಲ್ಲಿ ತಕ್ಕಂಥ ಕೊಡಗರು ಹೊಸಕೊಡಗರಲ್ಲ. ಪೂರ್ವಿಕರ ವಂಶದವರೇ. ಆಗಿರುವಾಗ ನಾಮೂಲ್ ಪದ್ಧತಿ ಮೀರಿ ಮಾಡತಕ್ಕ ಕೈಲ್ ಮುಹೂರ್ತ ಹಬ್ಬಕ್ಕೆ ನವೀನ ಏರ್ಪಾಡಿಗೋಸ್ಕರ 2-3 ಮೀಟಿಂಗ್ ನಡಿಸಿ ಗಲಾಟೆ ಹಾಕುವದನ್ನು ಬೇರೆ ಮತಸ್ಥರು ನೋಡಿ ನಗಾಡದೆ ಇರರು. ಈ ಹಬ್ಬದಲ್ಲಿ ಮಂದಿನಲ್ಲು (ಸಭೆಯಲ್ಲಿ) ಮದ್ಯಪಾನ ಸರಬರಾಯಿ ಮಾಡುವದು ಎಲ್ಲಿಯೂ ಯಾವ ಕಾಲದಲ್ಲೂ ನಡೆದಿಲ್ಲ. ಮನೆಗಳಲ್ಲಿ ಉಪಯೋಗಿಸುತ್ತಿದ್ದರೂ ಮದ್ಯಪಾನ ಸೇವನೆಯು ಪಾಪಕರವಾದುದರಿಂದ ಕಳೆದ ಜಮಾನ್‌ಬಾತ್ರ ಸಂಘದ ಮೀಟಿಂಗಿನಲ್ಲಿ ಶುಭ ಅಶುಭ ಕಾರ್ಯದಲ್ಲಿ ಯಾವ ವಿಧದಿಂದಲೂ ಮದ್ಯಪಾನ ಸೇವಿಸಕೂಡದಾಗಿ ಕೊಡಗಿನ ಮುಖ್ಯಸ್ಥಳವಾದ ಮಡಿಕೇರಿಯಲ್ಲಿ ಮಡಿಕೇರಿ ನಿವಾಸಿಗಳು ಸಹ ಸೇರಿ ತಂದ ಠರಾವಿಗೆ ವಿರೋಧವಾಗಿಯೂ ಹಬ್ಬದಲ್ಲಿ ಮದ್ಯಪಾನ ಸರಬರಾಯಿ ಮಾಡಬೇಕಾಗಿ ಚರ್ಚಿಸಿದ್ದು ನ್ಯಾಯವಲ್ಲ. ಅಂದರೆ "ಅನ್ಯಾಯ" "ನನ್ನ ಬೆನ್ನು ನನಗೆ ಕಾಣುವದಿಲ್ಲ." ಇಂಥಾ ನಾಮೂಲು ನಡಿಯತಕ್ಕ ಮತ ಸಂಬಂಧವಾದ ಹಬ್ಬದ ವಿಷಯದಲ್ಲಿ ಅಲ್ಲಿರತಕ್ಕ ಕೆಲವು ಜನರಲ್ಲಿ ಈ ಮೇರೆ ಭಿನ್ನ ಅಭಿಪ್ರಾಯಗಳು ತಲೆದೋರುವದನ್ನು ನೋಡಿದರೆ ಇವರು ಬೇರೆ ಸಂಬಂಧವಾಗಿ ಮಾಡತಕ್ಕಂಥ ಏರ್ಪಾಡುಗಳು ಎಷ್ಟರಮಟ್ಟಿಗೆ ಐಕಮತ್ಯದಿಂದ ನಡೆದಾವು ಎಂಬ ಸಂಗತಿಯಲ್ಲಿ ನಾವು ಯೋಚಿಸಬೇಕಾದ ಸಂದರ್ಭಗಳಿಗೆ ಆಸ್ಪದ ಕೊಟ್ಟಂತಾಯ್ತು. ತಮ್ಮದು ನಡಿಯಬೇಕು ತಮ್ಮದು ಸಾಗಬೇಕು ಎಂಬ ಅಭಿಮಾನದ ಅಂಟು ನಮ್ಮವರಲ್ಲಿ ನೀಗದ ಹೊರತು ಯಾವ ಕಾರ್ಯವು ಜಾರಿಗೆ ಬರುವದು ಸಂಶಯಾಸ್ಪದವಾಗಿದೆ.

"ನಾಡಿನವ"

ಮಹಾಶಯರೇ,

ಮಡಿಕೇರಿ ಎಂಬ ಹೆಸರಿನ ಅರ್ಥವನ್ನು ಒಬ್ಬೊಬ್ಬರು ಒಂದೊಂದು ವಿಧದಲ್ಲಿ ಬರೆಯುವುದು ನೋಡಿದರೆ ಆಶ್ಚರ್ಯವಾಗುತ್ತೆ. ಕೊಡಗು ಭಾಷೆಯನ್ನು ಚೆನ್ನಾಗಿ ಆಲೋಚಿಸಿ ಬರೆಯಬೇಕಲ್ಲದೆ ಅನ್ಯರ ಕಂಠಾ ಒಟ್ಟೆ ಬರೆಯುವುದು ಸರಿಯಲ್ಲ. ಮಡಿಕೇರಿ ಎಂಬ ಅರ್ಥ ಸಿಕ್ಕಬೇಕಾದರೆ ಮೊದಲು ಕೊಡಗು ಎಂಬವರ ಅರ್ಥ ಕಂಡು ಹಿಡಿಯಬೇಕಲ್ಲವೇ? ಆದರೆ ನನ್ನ ತಿಳುವಳಿಕೆಯನ್ನು ಬರೆಯುತ್ತೇನೆ. ದಯವಿಟ್ಟು ಆಲೋಚನೆಯಿಂದ ಯಾರಾದರೂ ಸರಿಪಡಿಸಬಹುದಾಗಿ ಪ್ರಾರ್ಥಿಸುತ್ತೇನೆ.

ಕೊಡಗು ಮಲೆ–ಮಲೆ ಕೊಡಗು ಅಂದರೆ, ಡ ಕೊಡಿ (ಬೆಟ್ಟದ ಮೇಲೆ) ಕೊಡಿದೇಶ ಕೊಡಗ ದೇಶ–ಮುಟ್ಟಿದ ಕೊಡಿಲ್ ದೇಶ.

ಮಡಿಕೇರಿ–ಮಡಿ–ಶುಚಿ, ಕೇರಿ–ಊರು (ಮಡಿಯಾನ ಊರ್) ಶುಚಿಯಾದ ಸ್ಥಳ. ನಾಲ್ಕೈದು ಕೇರಿಗಳು ಸೇರಿದರೆ ಒಂದು ಊರು. ಮೊದಲು ನಮಗೆ ಕೇರಿ ಎಂಬದೇ ಮುಖ್ಯ. ಕೊಡಗು ಮಡಿಕೇರಿ ಎಂಬದೇ ಮುಖ್ಯ ಕೊಡಗು ಮಡಿಕೇರಿ ಎಂಬದರ ಅರ್ಥ. ಮಲೆಕೊಡಿ ದೇರತ್ ಮಡಿಯಾನ ಕೇರಿ (ಕೊಡಗು ದೇಶದ ಶುಚಿಯಾದ ಸ್ಥಳ) ನಿರ್ಮಲ. ಮಲೆಯಾಳ ಮಲೆ–ಬೆಟ್ಟ ಹಳ್ಳ–ಗುಂಡಿ (ಕೆಳಗೆ) ಬೆಟ್ಟದ ಅಡಿ (ಮಲೆಯ ತಳ ಮಲೆಯಾಳ)

ವಯನಾಡ್ ವಯಂದನಾಡ್, ವಯಂದ ಸ್ವಲ್ಪ ಎತ್ತರವಾದ್ದಕ್ಕೆ ವಯಂದ ಎಂಬ ಹೆಸರು. ಕಿಗ್ಗಟ್ಟು ನಾಡು ಕಿಗ್ಗಟ್ಟು ಕಿಳಕ್ಕ್ ಎಟ್ ಕೇಕ್‌ಯಿಟ್ (ಕೆಳಕ್‌ಯಿಟ್) ಕೆಳಕ್ ಅಂಥ ಪೂರ್ವಕ್ಕೆ ಹೆಸರು. ಕೆಳಕ್ ಎಟ್ ನಾಡು (ಪೂರ್ವದಲ್ಲಿ ಎಂಟು ನಾಡು) ಪಡಿ ನಾಲ್ಕುನಾಡು–ಪಡಿಂಞಾರ್ಲ್ ನಾಲ್ ನಾಡ್ (ಪಶ್ಚಿಮದಲ್ಲಿ ನಾಲ್ಕು ನಾಡು)

ಎಡೆ ನಾಲ್ಕು ನಾಡು ಎಡೆಲ್ ನಾಲ್ ನಾಡ್ ಎಡೆಲ್–ಮಧ್ಯದಲ್ಲಿ ನಾಲ್ಕು ನಾಡು.

ಪೂರ್ವಕ್ಕೂ ಪಶ್ಚಿಮಕ್ಕೂ ಮಧ್ಯದ ಊರು ಕಿಗ್ಗಟ್ಟು ನಾಡಿಗೂ ಪಡಿನಾಲ್ಕುನಾಡಿಗೂ ಮಧ್ಯದಲ್ಲಿರುವ ಸ್ಥಳ ಎಡೆನಾಲ್ಕು ನಾಡು.

ಹೀಗೆಯೇ ಕೊಡಗರ ಭಾಷೆಯು ಅರ್ಥವಾಗದೆ ಇದನ್ನು ಪಂಡಿತರು ಸರಿಪಡಿಸಿ ಎಲ್ಲಾ ಜನರಿಗೂ ತಿಳುವಳಿಕೆ ಕೊಡಬೇಕಾಗಿದೆ.

ಮೇಲೆ ಬರೆದ ನನ್ನ ತಿಳುವಳಿಕೆಯಲ್ಲಿ ತಪ್ಪು ಇದ್ದರೆ ನಮ್ಮ ಹಿರಿಯವರು ನಮ್ಮ ಭಾಷೆಯನ್ನು ಸರಿಪಡಿಸಿ ತಿಳಿಸಬೇಕಾಗಿ ಕೋರಿಕೆ.

ಚಣ್ಣುವಂಡ ಕರಿಯಪ್ಪ.

ಪತ್ರಿಕಾಕರ್ತರೇ,

17-8-21 ರಲ್ಲಿ ನಾನು ಕೊಡಗು ಆಫೀಸಿಗೆ ಬಂದಿದ್ದಾಗ ಆ ಮೊದಲು ನಾನು ಬರಕೊಂಡ ಕಾಗದವು ಪ್ರಕಟವಾಗದಿರಲಿಕ್ಕೆ ಕಾರಣ ಪೋಸ್ಟಾಫೀಸಿನಲ್ಲಿ ಗಲ್ತಿಯಾಯ್ತೆಂದೂ ಆ [illegible] ಬೇರೆ ಒಂದು ಕಾಗದ ಬರೆಯಬೇಕೆಂದೂ ಹೇಳಿದ ರೀತಿ ಈ ಪತ್ರವನ್ನು ಬರೆದಿರುತ್ತೇನೆ.

ಕಳೆದ ಮೇ ತಿಂಗಳಲ್ಲಿ ನಮ್ಮ ಮನೆಯಲ್ಲಿ ನಡೆದ ಮದುವೆ ವಿಷಯದಲ್ಲಿ ಆಕ್ಷೇಪಣೆ ಮಾಡಿ ಒಬ್ಬರು ನಿಮ್ಮ ಪತ್ರಿಕೆಯಲ್ಲಿ ಬರೆದಿದ್ದರು. ಯೂರೋಪಿಯನ್ ಜನರು ಮತ್ತು ಇತರ ಜನರು ಮುಹೂರ್ತಸ್ಥಳಕ್ಕೆ ಬೂಟ್ಸ್ ಹಾಕಿಕೊಂಡು ಬಂದು ಕೂತಿದ್ದರೆಂದು ನಿಂದಿಸಿ ಬರೆದಿದ್ದರು. ಯೂರೋಪಿಯನರು ಬೂಟ್ಸ್ ಹಾಕಿಕೊಂಡು ಮುಹೂರ್ತಸ್ಥಳಕ್ಕೆ ಬಂದು ಕೂತಿದ್ದರು. ಅವರ ಸಂಗಡ ಇತರ ಕೆಲವರು ಬೂಟ್ಸ್ ಹಾಕಿ ಕೂತಿದ್ದರೆಂಬುದು ಸುಳ್ಳು. ಹೀಗೆ ನಿಜವಲ್ಲದ ಸಂಗತಿಯನ್ನು ಪತ್ರಿಕೆಗೆ ಕಳುಹಿಸಿದ್ದರಿಂದ ನಮ್ಮ ಮನೆಯವರಿಗೂ ಮತ್ತು ಕೊಡಗರೆಲ್ಲರಿಗೂ ಯಾಕೆ ಎಂದೂ ಜನರೆಲ್ಲರಿಗೂ ಆಕ್ಷೇಪವಾಗಿರುತ್ತದೆ. ಒಂದುವೇಳೆ ಮನೆಯವರು ಕೆಲವು ಇಷ್ಟ ಜನರನ್ನು ಹೀಗೆ ಬಿಟ್ಟದ್ದರೂ ಕೂಡ ಬೇರೆ ಜನರು ಏನೂ ವಿಚಾರಿಸದೆ ಈ ಕೆಟ್ಟ ಸಂಗತಿಯನ್ನು ಹೇಳದೆಯೂ ಉಳಿದಲ್ಲಿಯೂ ಸೇರುತ್ತಿದ್ದರೋ [illegible] ವರಿಂದಲೇ ಆ ವರ್ತಮಾನವು ಎಷ್ಟರಮಟ್ಟಿಗೆ ನಿಜವೆಂದು ವಾಚಕರು ತಿಳಿದುಕೊಳ್ಳಬಹುದು. ಆ ಪತ್ರಿಕೆದಾರರಿಗೆ ಬೂಟ್ಸ್ ಹಾಕಿ ಇದ್ದ ಕೆಲವು ಜನರ ಹೆಸರುಗಳು ಮಾತ್ರ [illegible] ಕಣ್ಣಿಗಿಂದ ಕಂಡಿತೂ ಅವರ ಮುಖವು ಕಾಣಲಿಲ್ಲವೋ? ಹಾಗೆ ಕೂತ ಒಂದೆರಡು ಜನರ ಹೆಸರಾದರೂ ಅವರಿಗೆ ಗೊತ್ತಾಗಲಿಲ್ಲವೇ? ಗೊತ್ತಿದ್ದರೆ ತಿಳಿಸಬಹುದಾಗಿತ್ತು. ಒರೆ ಹಚ್ಚಿಬಿಟ್ಟ ವರ್ತಮಾನವೆಂದು ಜನರು ಭಾವಿಸಿಕೊಂಡು ಆಗಾಗನೆ ಹೊರಡುವ 'ಕೊಡಗು' ಪತ್ರಿಕೆಗೆ ಸುಳ್ಳು ಬಾತ್ಮಿಗಳನ್ನು ಕಳುಹಿಸಿ ಅದರ ಅಭಿವೃದ್ಧಿಗೆ ಕುಂದಕವನ್ನು ತರುವಂತೆ ಕಾಣುತ್ತದೆ. ಈ ನಿಜವಲ್ಲದ ವರ್ತಮಾನ ಬರೆದವನು ಅನಾವಶ್ಯಕವಾಗಿ ದೂಷಣೆ ಮಾಡಿದನ್ನು ರದ್ದುಪಡಿಸಿ ಪತ್ರಿಕೆಯವರ ಮನ್ನಣೆ ಕೇಳಿಕೊಳ್ಳುವರಾಗಿ ನಂಬುತ್ತೇನೆ. ನಮ್ಮ ಮನೆ ಪಕ್ಕದಲ್ಲಿರುವ ಬಳೆಪರೆಯಲ್ಲಿ ಬಂದವರೆಲ್ಲರೂ ಬೂಟ್ಸ್ ಬಿಚ್ಚಿ ಕೈಕಾಲು ತೊಳಕೊಂಡು ಐನ್ ಮನೆಗೆ ಹೋಗಿರುತ್ತಾರೆ. ಈ ರೀತಿ ಎಚ್ಚರ ತೆಗೆದುಕೊಂಡವರಿಗೂ ಕೂಡ ಆಕ್ಷೇಪಣೆ ಮಾಡುವದು ಮೂರಾ ದಸ್ತುರ ಭಾಗಕ್ಕೆ ಬಹಳ ಅನ್ಯಾಯವಾಗಿದೆ.

ಕೊಣವಂಡ್ರ ತಿಮ್ಮಯ್ಯ.

ಕೊಡಗಿನ ಸ್ಥಿತಿ

ಸಂಪಾದಕರೇ,

ಈಗ ಕೊಡಗು ಕಮಿಶನರ ಕೆಲಸ ವಹಿಸಿ ನೋಡುತ್ತಿರುವ ಸ್ಟಿನ್‌ಬ್ರೌನ್ ಸಾಹೇಬರವರು ಕೊಡಗು ದೇಶಕ್ಕೆ ಇಂಡ್ಯಾ ಗವರ್ನ್‌ಮೆಂಟು ಆಕ್ಟು 77(2) ಅನುಸರಿಸಿ, ಲೆಜಿಸ್ಲೇಟಿವ್ ಸಭೆಯ ಕೆಲಸ ವಿವರಗಳು ಬಂದಿವೆಯಾಗಿ ಅವುಗಳನ್ನು ಜ್ಞಾಪಕ ಪತ್ರದಲ್ಲಿ ಸೂಚಿಸಿದ ನಂತರ (ಐದ್ಮೈರು ಭಾಗದಲ್ಲಿ) ಈ ಕಾರಣಗಳಿಂದ ಮಡಿಕೇರಿ, ವಿ|| ಪೇ|| ಕೊರಡಿಯಲ್ಲಿ, ಈ ಅಭಿಪ್ರಾಯಗಳನ್ನು ನಿಶ್ಚಯಿಸುವದಕ್ಕಾಗಿ ಸರ್ವಜನರ ಇರಾದೆ ಮತ್ತು ತರ್ಕಕ್ಕಾಗಿ ಇದೇ ಆಗಸ್ಟು ತಾರೀಖು 17 ನೇ ಬುಧವಾರ ಮಧ್ಯಾಹ್ನ 2 ಘಂಟೆಗೆ ಸರಿಯಾಗಿ ಒಂದು ಮೀಟಿಂಗು ಆಗುತ್ತೆಂಬದಾಗಿಯೂ, ಎಲ್ಲರ ತಿಳುವಳಿಕೆ ಬಗ್ಗೆ ಒಂದು "ಯಾದಾಸ್ತು" ಜ್ಞಾಪಕ ಪತ್ರದ ನಕಲನ್ನು ಆಯಾ ತಾಲ್ಲೂಕಿನಲ್ಲಿ ಪ್ರಚುರಪಡಿಸಬೇಕೆಂದು ಸುಬೇದಾರರಿಗೆ ಮಾಡೋಣಾದ ಹುಕುಂ ಅನುಸರಿಸಿ ಇಲಾಖೆಯವರು ಕೊಡಗು ದೇಶದ ಎಲ್ಲಾ ಭಾಗದ ಮುಖ್ಯಸ್ಥರಿಗೆ ಹಂಚಿದ ಮೇರೆಯೂ, ಕೊಡಗು ಪತ್ರಿಕೆಯಲ್ಲು ಸೂಚಿಸಿದ ಮೇರೆ 16 ನೇ ಮಂಗಳವಾರ ದೇಶದವರ ಮೀಟಿಂಗಿಗೆ, ಮಳೆಗಾಲ ಮತ್ತು ವ್ಯವಸಾಯದ ಕಾಲವಾದ್ದರಿಂದ, ಬಹುಸ್ವಲ್ಪ ಹೊರಗಿನ ದೇಶಾಭಿಮಾನಿಗಳೂ, ಮಡಿಕೇರಿಯಲ್ಲದ ಅನೇಕ ದೇಶಾಭಿಮಾನಿಗಳೂ ಮತ್ತು ಉದ್ಯೋಗಸ್ಥರು, ಕೂಡಿಕೊಂಡು ಮೀಟಿಂಗು ನಡೆಸುವಾಗ್ಯೆ, ಹೊರಗಿನ ಅಭಿಮಾನಿಗಳು ಅತಿ ಸ್ವಲ್ಪವೇ ಇರುವದರಿಂದ ಮೀಟಿಂಗು ಮಾಡಕೂಡದೆಂದು ವಿರೋಧಿಸಿದರೂ ಕೂಡ ಮ|| ರಾ|| ಆರ್. ಬಿ. ಅಪ್ಪಾರಂಡ್ರ ಮಂದಣ್ಣನವರ ಅಧ್ಯಕ್ಷತೆಯಲ್ಲು ಈಗ ಪ್ರಕಟಿಸಿರುವ ಮಾರ್ಪಾಟುಗಳು ನಮಗೆ ತೃಪ್ತಿಕರವಲ್ಲವೆಂದೂ, ಈ ಮಾರ್ಪಾಟುಗಳಲ್ಲಿ ನ್ಯಾಯ ವಿಧಿಸಲಿಕ್ಕೆ ಕೊಟ್ಟಿರುವ ಇಲಾಖೆಗಳ ಮೇಲಾದರೂ, ಪೂರ್ತಿ ಆಡಳಿತೆ ಹಕ್ಕನ್ನೂ ಮತ್ತು ಕಂದಾಯ ವೆಚ್ಚದಮೇಲೆ ಓಟು ಮಾಡುವ ಹಕ್ಕನ್ನು ಕೊಡಬೇಕೆಂದು ಉದ್ಯೋಗಸ್ಥರು ಮತ್ತು ಅಲ್ಲಿ ಕೂಡಿದ ಜನರು ಏಕೋಭಾವದಲ್ಲು ಠರಾವು ಆಗಿದ್ದನ್ನು 17 ನೇ ದಿನದ ಸಭೆಯಲ್ಲಿ ಕೊಡಬೇಕೆಂದು ತೀರ್ಮಾನವಾಯಿತು.

17 ನೇ ದಿನ ಬುಧವಾರ 2 ಘಂಟೆಗೆ ಸರಿಯಾಗಿ ಸುಮಾರು 25 ಜನರವರೆಗೆ ಮೀಟಿಂಗಿಗಾಗಿ ಜನರು ಹಾಜರಾಗಿದ್ದಲ್ಲು, ಕ|| ರು ಕೊಠಡಿಗೆ ದಯಮಾಡಿಸಿ ಈಗ ನಡಿಯುವ ಮೀಟಿಂಗು ಬಹಿರಂಗವಾದದ್ದಲ್ಲ. ಇದು (Private) ಗುಪ್ತವಾದ ಮೀಟಿಂಗು ಆಗಿದೆಂದು ಹೇಳಿ ಒಬ್ಬೊಬ್ಬರ ಹೆಸರನ್ನೆತ್ತಿ (Roll Call) ಹಾಜರು ಕರೆದರು. ಆ ಪ್ರಕಾರ ಜನರನ್ನು ಮಾತ್ರ ಕರೆಯಲ್ಪಡಲಿಲ್ಲ. ನಂತರ ಕಮಿಷನರು ಎದ್ದು ನಿಂತು ಈಗ ಹಾಜರು ಕರೆಯಲ್ಪಟ್ಟವರು ಮಾತ್ರ ಇರಬಹುದೆಂತಲೂ, ಬಾಕಿ ಜನರು ದಯವಿಟ್ಟು ಹಿಂತಿರುಗಬೇಕೆಂತಲೂ ಸೂಚಿಸಿದರು. ಇದಕ್ಕೆ ಹಾಜರು ಕರೆಯಲ್ಪಡದವರು ಮೇಲಣ ಸಂಗತಿಕುರಿತು ಚರ್ಚೆಗಾಗಿ ಇಸ್ತಿಯಾರು ಮಾಡಿದಮೇರೆ ನಾವು ಬಂದಿರುತ್ತೇವಾಗಿಯೂ, ಸರ್ವ ಜನರ ತರ್ಕಕ್ಕಾಗಿ ಮೀಟಿಂಗು ಕರೆಯಲ್ಪಟ್ಟದ್ದಕ್ಕಾಗಿ ನಾವು ಬಂದಿರುತ್ತೇವಾಗಿ ಹೇಳುವಷ್ಟರಲ್ಲೇ ಕಮಿಷನರವರು ಆ ವಿಷಯವಾಗಿ ತರ್ಕಮಾಡಲು ನನಗೆ ಮನಸ್ಸಿಲ್ಲ. ಇದು ಬಹಿರಂಗ ಮೀಟಿಂಗು ಅಲ್ಲ. ಇದು (Private) ಗುಪ್ತವಾದ ಮೀಟಿಂಗು ಆಗಿದೆ. ಆದ್ದರಿಂದ ಬಾಕಿ ಜನರು ಹಿಂತಿರುಗಬೇಕೆಂದು ಪುನಹ ಹೇಳಿದ ಮೇರೆ, ನಾಲ್ಕು ಜನರು ಕೂಡ್ಲೆ ಹಿಂತಿರುಗಿದರು. ಬಾಕಿ ನಿಂತಿದ್ದ ಮ|| ರಾ|| ಆರ್. ಬಿ. ಅ. ಮಂದಣ್ಣನವರ ಗತಿ ಏನಾಯಿತೋ [illegible]. ಬಂಡಾಟದಲ್ಲು ಅಲ್ಲೇ ಇದ್ದದಾಗಿ ತಿಳಿಯುತ್ತೇವೆ.

ಆ ಹೊಸ ಮಾರ್ಪಾಡಿನ ವಿಷಯವೇ ಚರ್ಚೆಯಾಯಿತೆಂದೂ, ಅದಕ್ಕೆ ರು ಮೇಲ್ಕಂಡ ಸಭೆಯನ್ನೇ ಒಪ್ಪಿಕೊಳ್ಳಬೇಕೆಂದು ಹೇಳುವಷ್ಟರಲ್ಲೇ ಕೆಲವರು ಅದಕ್ಕೆ ವಿರೋಧವಾಗಿ ಒಪ್ಪಿಕೊಳ್ಳಲಾಗುವುದಿಲ್ಲ. ಈ ಮಾರ್ಪಾಡುಗಳು ದೇಶದ ಜನರಿಗೆ ತೃಪ್ತಿಕರವಲ್ಲವೆಂದೂ, ಈ ಮಾರ್ಪಾಟುಗಳಲ್ಲಿ ನ್ಯಾಯ ವಿಧಿಸಲಿಕ್ಕೆ ಕೊಟ್ಟಿರುವ ಇಲಾಖೆಗಳ ಮೇಲಾದರೂ ಪೂರ್ತಿ ಆಡಳಿತೆ ಹಕ್ಕನ್ನು ಮತ್ತು ಕಂದಾಯ ವೆಚ್ಚದಮೇಲೆ ಓಟುಮಾಡುವ ಹಕ್ಕನ್ನು ಕೊಡಬೇಕೆಂದು ಅನೇಕರವಾಗಿ ಕೇಳಿಕೊಂಡರು. ಕೆಲವು ಜನರು ಒಪ್ಪಿಕೊಳ್ಳುವೆವೆಂದೂ, ಒಪ್ಪಿಕೊಳ್ಳಲಾಗುವದಿಲ್ಲವೆಂದೂ, ಹೇಳುವಷ್ಟರಲ್ಲೇ ಅಧ್ಯಕ್ಷರು ಒಪ್ಪಿಕೊಂಡಂತೆ ಸಭೆಯನ್ನು ಬರಖಾಸ್ತು ಮಾಡಿದರಾಗಿ ತಿಳಿಯುತ್ತೆ. ಇಂಗ್ಲೀಷು ತಿಳಿಯದವರು ಯಾವ ರೀತಿ ಉಸುರಾಡುವದಕ್ಕೆ ತಿಳಿಯದೆ "ಮೌನಂ ಸಮ್ಮತಿ ಲಕ್ಷಣಂ" ಎಂಬ ಮಂತ್ರದ ಯೋಗಾಭ್ಯಾಸದಲ್ಲು ಇದ್ದ ಕಥೆ. ಈ ಸಂಗತಿ ನಿಜ. ಈ ಮಹನೀಯರಿಗೆ ಎಷ್ಟರಮಟ್ಟಿಗೆ ಉತ್ತಮವಿದೆ ಎಂದು ಸಮಾಲೋಚಿಸಬೇಕಾದ ಈ ಸಮಯವಾಗಿದೆ.

ಕ|| ನವರ ದೇಶದ ಎಲ್ಲಾ ಜನರ ತಿಳುವಳಿಕೆಗಾಗಿ ಎಲ್ಲಾ ಭಾಗಕ್ಕೂ ಇಲಾಖೆದಾರರ ಮೂಲಕ ಮಾರ್ಪಾಡಿನ ವಿಷಯ ದಿನವನ್ನೂ, ಸ್ಥಳವನ್ನೂ ಸಮಯವನ್ನೂ, ಗೊತ್ತುಮಾಡಿ, ದೇಶೀಯರಾದ ನಾವು ಈ ಸಂಗತಿಗಾಗಿ ಚರ್ಚೆಗೆ ಬಂದಲ್ಲು ಗುಪ್ತವಾದ ಸಭೆ ಒಂದು ಹೇಳಿ ಕರೆಯದ ಜನರು ಹಿಂತಿರುಗಬೇಕೆಂದು ಹೇಳುವದು ನೋಡಿದರೆ ಈಗ ನಿಶ್ಚಯ [illegible] ರಹಸ್ಯಗಳು ಯಾಕಿರುವವೆಂದು ವಾಚಕರು ಗಮನಿಸಿಕೊಳ್ಳಬೇಕಾದ ಮುಖ್ಯ ಕರ್ತವ್ಯವಾಗಿದೆ. ಹಾಲಿ ಕಮಿಷನರ [illegible] ಪತ್ರದ ಚರ್ಚೆಗಾಗಿ ತಾರೀಖು, ಸಮಯ ಸ್ಥಳವನ್ನು, ನಿಶ್ಚಯಿಸಿ ಸರ್ವ ಜನರ ಚರ್ಚೆಗಾಗಿ ಇಟ್ಟಿದೆಂದು ಇಲಾಖೆಯವರ ಮೂಲಕ ಪ್ರಕಟಿಸಿರುವಾಗಿತ್ತು? ನಾವು ಈ ಜನರಿಗೆ ಒಳಪಟ್ಟವರಲ್ಲವೇ? ನಾವು ರಾಜ ಮತ್ತು ಪ್ರಜಾ ಭಕ್ತರಲ್ಲವೇ? ನಮಗೆ ರಾಜಕೀಯ ವ್ಯವಹಾರಗಳಲ್ಲು ಮಮತೆಯಿಲ್ಲವೇ? ರಾಜ ಮತ್ತು ಪ್ರಜಾ ಹಿತಚಿಂತಕರಲ್ಲವೆಂದು ನಿರಾಕರಿಸುವಿರಾ? ರಾಜ್ಯವೆಂದರೆ ರಾಜ ಮತ್ತು ಪ್ರಜೆಗಳು ಕೂಡಿಯಲ್ಲವೇ? ಗುಪ್ತವಾದ ಮೀಟಿಂಗಿನಲು ಚರ್ಚೆ ನಡಿಯುತ್ತವೆಂದು ಪ್ರಕಟಿಸಿದ್ದರೆ ನಾವು ಹೋಗುತ್ತಿದ್ದೆವೆಯೇ? ಹಾಲಿ ಕಮಿಷನರವರು ಪ್ರತಿ ತಾಲ್ಲೋಕಿನಿಂದ ಇಂತಿಷ್ಟು ಪ್ರತಿನಿಧಿಗಳು ಬಂದರೆ ಸಾಕೆಂದು ಇಲಾಖೆಯವರ ಮೂಲಕ ಸೂಚಿಸಿದ್ದರೆ ಅಷ್ಟೇ ಜನರನ್ನು ಚುನಾಯಿಸಿ ಕಳುಹಿಸುತ್ತಿದ್ದಲ್ಲವೇ? ಬಹು ದೂರದಿಂದ ಈ ಮಳೆಗಾಲದಲ್ಲು ಕಷ್ಟಪಟ್ಟು ಬಂದ ಪ್ರಯೋಜನವೇನು? ಮಳೆಯಲ್ಲದಿದ್ದರೆ ಎಷ್ಟು ಜನ ಮಹನೀಯರು ಬಂದು ಅಪಮಾನಿತರಾಗಿ ಹೋಗುತ್ತಿದ್ದರು? ಹಾಲಿ ಕಮಿಷನರು ಒಂದಾನೊಂದು ಉಪನ್ಯಾಸದಲ್ಲು ಈ ದೇಶದವರು ಬಹಳ ಮುಂದುವರಿದರು. ನಿಮಗೆ ನ್ಯಾಯವಾದ ಸಭೆ ಸಿಕ್ಕದಹೊರತು ತೃಪ್ತಿಕರವಾಗಲಾರದು ಎಂದು ಹೇಳಿದ್ದು ಈ ಬುದ್ಧಿವಂತರೆಂದು ತಿಳಿದು ಕೂಡ ಈತರವಾಗಿ ಬಹಿರಂಗವಾಗಿ ಆಜ್ಞೆಕೊಡದೆ ಗುಪ್ತವಾದ ಸಭೆಯಲ್ಲು ಚರ್ಚೆಗೆ ತಂದಿರುವದು ಹೇಳಲಶಕ್ಯವಾದ ವಿಷಮ ಸಂಗತಿಯಲ್ಲವೇ? ವಾಚಕರೇ! ಸಹೋದರರೇ!! ದೇಶಬಾಂಧವರೇ!!! ನಿದ್ರೆಯಿಂದ ಎಚ್ಚರವಾಗಿರಿ! ಕಣ್ಣು ತೆರೆದು ಮುಂದಾಲೋಚನೆಯನ್ನು ಮಾಡಿರಿ. ಎದ್ದು ನಿಂತುನೋಡಿರಿ —

ದೇಶಬಾಂಧವರೇ! ಇಡೀ ಹಿಂದುಸ್ಥಾನದಲ್ಲೆಲ್ಲ ಸಿಕ್ಕಿದ ಮಾರ್ಪಾಟುಗಳಿಂದ ತೃಪ್ತರಲ್ಲವೆಂಬ ಚಳವಳದಲ್ಲಿರುತ್ತ. ಇಂಡಿಯಾ ಸೆಕ್ರೆಟರಿ ಮಾಂಟೇಗ್ಯೂಯವರು ಹಿಂದುಸ್ಥಾನವು (Dominion Home Rule) ಹೊರೆತನದ ಸ್ವರಾಜ್ಯಕ್ಕೆ ಸಮಾನರೆಂದೂ, ಕೊಡಬೇಕೆಂತಲೂ 17 ನೇ ಹಿಂದು ಪತ್ರಿಕೆಯಲ್ಲೂ ಮೇಲ್ ಪತ್ರಿಕೆಯಲ್ಲೂ ಸೂಚಿಸಿರುತ್ತೆ. ನಮ್ಮ ಯುವರಾಜರು ಬಂದಲ್ಲು ಪ್ರಕಟಿಸುವರೆಂದೂ (Daily Express) ಡೇಲಿ ಎಕ್ಸ್‌ಪ್ರೆಸಿನಲ್ಲು ಸೂಚಿಸಿದೆಯಾಗಿದೆ. ಆದ್ದರಿಂದ ಇಂಥ ಪೂರ್ತಿ ಆಡಳಿತದ ಮಾರ್ಪಾಟುಗಳನ್ನು ಅನುಭವಿಸಬೇಕಾದರೆ ನಾವು ಅವರೊಂದಿಗೆ ಸೇರದಹೊರತು ವಿಧಿಯಿಲ್ಲ. ನಮಗೆ ಇರುವ ಹಕ್ಕು ಬಾಧ್ಯತೆಗಳು ಹೋಗುವವೆಂದೂ, ಯಾರೂ ಗ್ರಹಿಸಬಾರದು. ಯಾಕೆಂದರೆ 1834 ನೇ ಇಸವಿಗೆ ಮುಂದೆ ಯಾ ಈಚೆಗೆ ಸಿಕ್ಕಿದ ಜಮ್ಮದ ಸನ್ನದುಮೇರೆ ಇರುವ ಹಕ್ಕನ್ನು ಉಳಿಸಿರುತ್ತಾರೊ? ಜಮ್ಮದ ಭೂಮಿಯಮೇಲೆ ಸನ್ನದಿಗೆ ವಿರೋಧವಾಗಿ ಕಂದಾಯ ಹೆಚ್ಚು ಕಮ್ಮಿ ಮಾಡಿರುತ್ತಾರೆ. ಹೆಚ್ಚು ಕಮ್ಮಿ ಮಾಡಕೂಡದೆಂದು ಎಷ್ಟು ಮೊರೆಯಿಟ್ಟರೂ ಫಲಕಾಣಲಿಲ್ಲ; ಉಬ್ಬಳಿಬಾಣೆಯನ್ನು ರೂಢಿಸಿ ಏನು ಮಾಡಿರುತ್ತಾರೆ! ಈಗಿನ ಸಭೆಯ ಸ್ಥಿತಿಗತಿ ಹ್ಯಾಗಾಯಿತೆಂಬುದನ್ನೂ, ನಾವು ಪ್ರತ್ಯಕ್ಷವಾಗಿ ನೋಡಿರುವದರ ಫಲವನ್ನು ಸ್ವಲ್ಪಮಟ್ಟಿಗೆ ವಿಜ್ಞಾಪಿಸಿಕೊಂಡಿರುತ್ತೇನೆ.

ಆದ್ದರಿಂದ ಸಮಾನಸ್ಥಿತಿಯಲ್ಲೂ ಯಾವ ಭೇದಗಳಿಲ್ಲದೆ ದೊಡ್ಡ ಪ್ರಾಂತ್ಯಗಳಿಗೆ ಸೇರುವದಕ್ಕೆ ಮೇ ಮತ್ತು ಜೂನ್ ತಿಂಗಳಲ್ಲು ಮಾಡಿದ ಠರಾವುಗೇನೆ ಸಲ್ಲಬೇಕೆಂದು ಕೇಳಿಕೊಳ್ಳುವವನಾಗಿರುತ್ತೇನೆ.

ಬಿದ್ದಂಡ್ರ ಸುಬ್ಬಯ್ಯ.

...ont loose this opportunity!

...1914 model Ford Cars

FOR SALE

...mpletely overhauled with new parts including Engine.

...oth in good running order.

Price Rs. 2500 each.

...further particulars apply to

THE MANAGER,
Victoria Motor Garage,
MERCARA.

ಪಾಕೆಟ್ ಲೀವರ್ ವಾಚ್.

...ದರ ... ಮ ಸಾಣ್ಯವಾದ ವಾಚ್ ಸರಪಣಿ ಮತ್ತು ಸುಂದರವಾದ ವಾಚ್ ಪೆಟ್ಟಿಗೆ ಸಮೇತ

5—8—0 ರೂ. ಮಾತ್ರ.

ಕವಂತರೇ 12–2



ಈ ವಾಚ್ ಶ್ರೇಷ್ಟವಾದ ಲೀವರ್ ಕೆಲಸದಿಂದ ತಯಾರಾದದ್ದು ನಾಣ್ಯವಾದ ಮತ್ತು ಒಲಿಷ್ಟವಾದ ಸಾಮಾನುಗಳಿಂದ ತಯಾರಾದದ್ದು ಅಲ್ಪವಾದ ಪಟಾಟೋಪ ಪ್ರಕಟನೆಯ ವಾಚ್ ಅಲ್ಲ. ವಾಚ್ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು ಎಂದು ಪ್ರಪಂಚದಲ್ಲೆಲ್ಲಾ ತಿಳಿದ ವಿಷಯವೇ ಸರಿ. ನೋಡುವದಕ್ಕೆ ಬಹು ಗಂಭೀರವಾದದ್ದು. ಕೆಲವು ಮಾತ್ರವೇ ಉಳಿದಿವೆ. ಬೇಕಾದವರು ಶೀಘ್ರವಾಗಿ ಬರೆದು ತರಿಸಿಕೊಳ್ಳಿ.

ವಿಳಾಸ —ಆರ್. ಕೆ. ವಾಚ್ ಕಂಪನಿ,
ನಂಬರು 42, ಕಂದಪ್ಪ ಶೆಟ್ಟಿ ಬೀದಿ. ಮದರಾಸು.

ಎಲೆಕ್ಟ್ರಿಕ್ ಗಿಲ್ಟು ಭಂಗಾರದ ನಗಗಳು

	2—8—0
ಗೆಜ್ಜೆ ನಾಗರು 1 ಕ್ಕೆ	0—12—0
ರೋಜಾ ಹುವ್ವು 1 ಕ್ಕೆ	0—12—0
ಸಾಕೆಂತಿಗೆ ಹುವ್ವು 1 ಕ್ಕೆ	3—0—0
ಮಲ್ಲಿಗೆ ಮಗ್ಗು ದಾಬು 1 ಕ್ಕೆ	3—8—0
ಚಂದ್ರಹಾರ ಸಾದಾ 1 ಕ್ಕೆ	3—0—0
...ಮೋಫ ಸಭಾ	8—0—0
...ವನ್ ಪೆಂಡೋಲಿ ಜೊತೆಗೆ	0—8—0
...ಗಬಟ್ಟು 1 ಕ್ಕೆ	0—12—0
...ರಾಕು 1 ಕ್ಕೆ	3—0—0
...ನ್ ಬೆಲ್ಟ್ ಪಟ್ಟಿ 1 ಕ್ಕೆ	3—0—0
...ರು ಧಾನಿ 1 ಕ್ಕೆ	1—8—0
...ಲೋಟ 1 ಕ್ಕೆ	

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ

ಆರ್. ಕೆ. ವಾಚ್ ಕಂಪನಿ,
12–2
ನಂಬರು 42, ಕಂದಪ್ಪ ಶೆಟ್ಟಿ ಬೀದಿ, ಮದರಾಸು

ಮಡಕೆಂ, ಸಿದ್ಧಾಪುರ ವೀರರಾಜಪೇಟೆ, ನಾಪೋಕ್ಲು, ಅಮ್ಮತ್ತಿ

ಮುಂತಾದ ಸ್ಥಳಗಳಲ್ಲಿರುವವರಿಗೆ ಮೋಟಾರ್ ಬಸ್ಸು ದ್ವಾರ

ವಾಗಿಯೂ ಮತ್ತು ಟಪಾಲಿನ ಮೂಲಕವಾಗಿಯೂ

ರವಾನಿಸಿಕೊಡುತ್ತೇವೆ.

ಎಸ್. ಎಸ್. ಬಾಲಚಂದ್ರ ಅಂಡ್ ಕೋ,
ನಂ. 1,014, ಸಯಾಜಿರಾವ್ ರೋಡ್,
ಮೈಸೂರು.

ನಮ್ಮಲ್ಲಿ—ರಬ್ಬರ್ ಸ್ಟಾಂಪುಗಳು, ಸ್ಟೇಷನರಿ ಸಾಮಾನುಗಳು, ಸಮೂನೆ ಬುಕ್ಸ್‌ಗಳು ಅಲ್ಲದೆ–ಪ್ರಿಂಟಿಂಗ್ ಆಫೀಸಿಗೆ ಹೋಗದಂತೆ ಬೇಕಾಗುವ, ಬಿಲ್ ಫಾರಂಗಳು, ಲೆಟರ್ ಫಾರಂಗಳು, ರಶೀತಿ ಬುಕ್ಕುಗಳು, ವಿಜಿಟಿಂಗ್ ಕಾರ್ಡುಗಳು, ಲಗ್ನಪತ್ರಿಕೆಗಳು, ಕೋ ಅಪರೇಟಿವ್ ಸೊಸೈಟಿಗಳಿಗೆ ಬೇಕಾಗುವ ಎಲ್ಲಾ ವಿಧವಾದ ಫಾರಂಗಳು, ಕ್ಯಾಷ್, ಲೆಡ್ಜರು ಬುಕ್ಕುಗಳು ಮುಂತಾದುವುಗಳನ್ನು ಗ್ರಾಹಕರ ಮನಮೊಪ್ಪಿಕೆಯಂತೆ ಸಕಾಲಕ್ಕೆ ನಾವೇ ಖುದ್ದಾಗಿ ನಿಂತು ಮಾಡಿಸಿ ಕಳುಹಿಸಿಕೊಡುತ್ತೇವೆ. ಅಲ್ಲದೆ—ಶುಭಶೋಭನಾದಿಗಳಿಗೆ ಬೇಕಾಗುವ ಮೈಸೂರಿನ ತರಕಾರಿ, ಹೂವು ಮತ್ತು ವೀಳದೆಲೆಗಳನ್ನು ಸಹ ರವಾನಿಸಿ ಕೊಡುತ್ತೇವೆ. ಅಡ್ವಾನ್ಸಿಲ್ಲ ಆರ್ಡರುಗಳಿಗೆ ಸಿಗಾ ಕೊಡಲಾರೆವು ಹೂವು, ವೀಳ್ಯದೆ ಹಣ್ಣು ಮುಂತಾದ ಹಸಿಯ ಪದಾರ್ಥಗಳನ್ನು ಅಪೇಕ್ಷಿಕ್ಕವರು ಪೂರ್ತಾ ಮೊಬಲಗನ್ನು ಅಡ್ವಾನ್ಸಾಗಿ ಕಳುಹಿಸಬೇಕು. ಹೆಚ್ಚು ಸಂಗತಿಗಳನ್ನು ತಿಳಿಯಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

ಎಸ್. ಎಸ್. ಬಾಲಚಂದ್ರ ಅಂಡ್ ಕೋ
ನಂ. 1,014, ಸಯಾಜಿರಾವ್ ರೋಡ್, ಮೈಸೂರು.

WANTED

1. One Compositor for the "SU?ARA VILAS" Printing works.

Apply:—R S SING,
GONIOPAL.

2 ENCOURAGE SWADESHJM

If you are not at the point of efending yourself you will loose the opportunity of gaining freedom. Sc try to encourage "THE SUNDARAVILAS PRESS" Gonikopal, South Coorg. A Reliable and Neat Printing Office for eery sort of Job Printing. Neat and che?.

3 BEWARE MERCHAN'S

Fixed Prices and Terms C?h, are the ways of attractions and magnec.

But does a Merchant sati?y himself with what he advertises.

Remember "Honesty i the best Poli?y" If you like to b convinced please go to—

Messrs R. SUNDAR ?INGH,
GONIKOPAL

Awell reknown firm fo all luxuries, Provisions necessities, and ?e is at your call to do the needful in ca?e of a small commission if it pleases th taste of the function and trouble

Besides the firm under he above-head is intending to close the ?usiness if the "PUBLIC" donot encourage him by the end of this year So ?r order to retain him at your service. It will afford you a great boon to him and the 'MOTHERLAND OF HIM" Kaseramma fo whom he has till now struggled and rooted in this "BLACKHOLE"

R SUNDER SINGH,
GONKOPAL, S Coorg.

ಪ್ರಕಟಣೆ

ಕಳೆದ ಸನ್ 1921 ನೇ ಏಪ್ರಿಲ್ ತಾರೀಖು 25 ರಲ್ಲು ...ನಾಗಿ ಬಂದ ಕೊಂಗೇಟ್ಟ ಮಂದಣ್ಣನವರು ಕೋ ಮಡಿಕೇರಿ ಮಹಾದೇವಪೇಟೆ ಚೌಕದಲ್ಲಿ ಇಂಗ್ಲಿಷ ... ನಿಂದ ಎಲ್ಲಾ ಔಷಧ ಆಪರೇಷನಿಗೆ ಬೇಕಾಗುವ ...ಗಳ ಮತ್ತು ಔಷಧಮಾಡಲಿಕ್ಕೆ ಬೇಕಾಗುವ ಎಲ್ಲಾ ಸಾಮಾನುಗಳನ್ನು ತರಿಸಿಕೊಂಡು ತಮ್ಮ ತಂದೆ ಕೊಂಗೇಟಿರ ಅಯ್ಯಪ್ಪನವರ ಹೆಸರಿನಲ್ಲಿ ಒಂದು ಆಸ್ಪತ್ರೆಯನ್ನು ತೆರೆದು ... 4–3

ಇದರ ಸರಕಾಗಳು.

(1) ಪ್ರತಿಯೊಬ್ಬರನ್ನು ಪರೀಕ್ಷಿಸಿ ಔಷಧ ಪಟ್ಟಿಯನ್ನು ... ಎಂಟು ಆಣೆಗಳ ಫೀಜು.

(2) ಪ್ರತಿಯೊಂದು ಔನ್ಸ್ ಕುಡಿಯಲಿಕ್ಕೆ ಕೊಡತಕ್ಕ ...ರು ಮದ್ದಿಗೆ ಎರಡು ಆಣೆಗಳು. ಪ್ರತಿಯೊಂದು ಹುಡಿಗೆ ...ಂದು ಆಣೆ. ಹೊರಗೆ ಹಚ್ಚಲಿಕ್ಕೆ ಇರತಕ್ಕ ಮುಲಾಮ್ ಔಷಧ ಔನ್ಸಿಗೆ ಮೂರು ಆಣೆ. ಮತ್ತು ಹೊರಗೆ ಉಜ್ಜಲಿಕ್ಕೆ ಇರತಕ್ಕ ತೈಲಗಳಿಗೆ ಔನ್ಸಿಗೆ ನಾಲ್ಕು ಆಣೆಗಳ ಛಾರ್ಜು ಮಾಡುತ್ತಾರೆ. ಈ ಮೇಲಿನ ಛಾರ್ಜುಗಳು ಮೊದಲಾಗಿ ಕೊಡಬೇಕಾಗಿದೆ.

(3) ಇವರನ್ನು ಪಟ್ಟಣದಲ್ಲಿ ಚಾಯಿಲೆ ಅಜಮಾಯಿಸಲು ಮನೆಗಳಿಗೆ ಕರೆದುಕೊಂಡು ಹೋದಲ್ಲಿ ಇವರ ಫೀಜು ಎರಡು ರೂಪಾಯಿಗಳು ಪಟ್ಟಣದ ಹೊರಗೆ ಹೋದಲ್ಲಿ ಮೈಲಿಗೆ ಒಂದು ರೂಪಾಯಿಯಂತೆ ಛಾರ್ಜು ಮಾಡುತ್ತಾರೆ.

(4) ಇವರನ್ನು ಹೆಂಗಸರ ಹೆರಿಗೆ ಕಾಲದಲ್ಲಿ ಕರೆಸಿಕೊಂಡಲ್ಲಿ ಸುಲಭದ ಹೆರಿಗೆಗೆ ಇಪ್ಪತ್ತೈದು ರೂ. ಮತ್ತು ಕಷ್ಟದ ಹೆರಿಗೆಗೆ ಐವತ್ತು ರೂಪಾಯಿಗಳ ಛಾರ್ಜು ಮಾಡುತ್ತಾರೆ.

(5) ಜಾವು, ಕುರ, ಹಲ್ಲು ತೀಳುವ ಸಾಧಾರಣ ಆಪರೇಷನುಗಳಿಗೆ ಐದು ರೂಪಾಯಿ ಛಾರ್ಜು ಮಾಡುತ್ತಾರೆ

ಮಾರಾಟಕ್ಕೆ!

ಕೊಂಡುಕೊಳ್ಳಲು ಯೋಗ್ಯವಾದುದು

ರೂ. 800 ಬೆಲೆಬಾಳುವ ನಾಲ್ಕು ಜನರು ಕೂರಬಹುದಾದ ದಿಂಬು, ದೀಪ ಇತ್ಯಾದಿಗಳಿಂದ ಸಂಪೂರ್ಣವಾಗಿರುವ

ಒಂದು ಟೋಂಗಾವು

ರೂ. 500 ಕ್ಕೆ ಮಾರಾಟಕ್ಕಿದೆ. ಮಲಗಲಿಕ್ಕೂ, ಕೂರಲಿಕ್ಕೂ ಅನುಕೂಲಗಳಿವೆ

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆದು ಕೇಳಬೇಕು:—

"ಎಕ್ಸ್"
ನೊ/ಆ, ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

4 3

FOR SALE.

"A WORTH BUYING BARGAIN"

A four seated "Tonga" with complete Cushions, Covers and Best Lamps worth Rs. 800 will be sold for Rs. 500. It is very convenient to travel in night time and also can sleep comfortably.

For particulars apply to—

"X"
4–3
C/o Manager, Kodagu Ltd.,
MERCARA.

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಂಡಾರ.

ನಮ್ಮಲ್ಲಿ ಈಗ ೧೮೦೦ ತರದ ಬೇರೆಬೇರೆ ಕನ್ನಡ ಪುಸ್ತಕಗಳಿವೆ.

ಕೆಳಗೆ ಬರೆದ ಪುಸ್ತಕಗಳನ್ನು ಮಾರುವ ಪೂರ್ಣ ಸ್ವಾತಂತ್ರ್ಯವು ನಮ್ಮದೇ ಇದೆ.

೧ ಕರ್ನಾಟಕ ಕವಿ ಚರಿತ್ರೆ ಸ. ೧	ರೂ.	೩—೦—೦
	೨ ,,	೩—೦—೦
೨ ,,		೧—೨—೦
೪ ಬಾಲರ ಟಿ. ಪಾಠಿಂಗ್ವಸ್	,,	೧—೩—೦
೫ ಹಿಂದೂಸ್ಥಾನದ ಸಾಹಸ ಚರಿತ್ರೆ	,,	೧—೦—೦
೬ ರಾಜಶೇಖರ ಚರಿತ್ರೆ	,,	೦—೧೨—೦
೭ ಸಮರ		೧—೧—೦
೮ ಅದ್ಭುತ ಚರಿತ್ರೆ (ಸಚಿತ್ರ)	,,	೨—೨—೦
೯ ಅಬಲಾಸಚ್ಚರಿತ್ರ ರತ್ನಮಾಲೆ	,,	೨—೦—೦
೧೦ ರಾಯಚೂರ ವಿಜಯ	,,	

ಇವಲ್ಲದೆ ನಮ್ಮಲ್ಲಿ ಶಾಲೆಯ ಉಪಯೋಗಿ ಮುಂತಾದ ಎಲ್ಲಾ ಕನ್ನಡ ಪುಸ್ತಕಗಳೂ ಬರವಣಿಗೆಯ ಎಲ್ಲಾ ಉಪಕರಣಗಳೂ ದೊರೆಯುತ್ತವೆ.

ಪಾಳಮರ್ತಿ, ಧಾರವಾಡ—ಮೈಸೂರು ಪಳ...

ಅಮೃತಾಂಜನ್.

ನೋವುಗಳಿಗೆ ಸಿದ್ಧೌಷಧವು.

ಎಲ್ಲಾ ಷಾಪುಗಳಲ್ಲಿಯೂ ಮಾರಲ್ಪಡುತ್ತೆ.

ಅಮೃತಾಂಜನ್ ಡಿಪೋ,

ಬೊಂಬಾಯಿ ಮತ್ತು ಮದರಾಸು.

12–2

ಮೈಸೂರಿನಲ್ಲಿ ದೊರೆಯುವ ಸ್ಥಳ:—ಯನ್. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್.

KALAPPAN'S ADVERTISING SERVICES.

ಇತ್ತ ನೋಡಿರಿ ! ಒಳ್ಳೆಯ ಸಮಯ !! ತಡಕೊಳ್ಳಬೇಡಿ !!

ಸ್ವದೇಶಿ ಜವಳಿ ತಮಗೆ ಬೇಕೆ

ಬೇಕಾದವರು ನಮ್ಮಲ್ಲಿ ದೊರೆಯುವ ಗಟ್ಟಿ ವಸ್ತ್ರ ಮನೆಯಲ್ಲಿ ಯಾವಾಗಲೂ ಉಡಲಿಕ್ಕೆ ಲಾಯಕ್ಕಾದ [illegible] ವರಿ ರಂಗಿನ, ಸೀರೆಗಳು ಬಿಳುಪು ಮತ್ತು ಕಪ್ಪು ಸಂಬೆಗಳು, ನಾನಾತರದ ಕೋಟಿಗೆ ಲಾಯಕ್ಕಾದ ಚೆಕ್ಕುಗಳು, ಅಲ್ಲದೆ ಟವೆಲ್ ನಾಪ್‌ಕಿನ್, ಬೆಡ್ಡ್‌ಶೀಟ್, ವ[illegible] ಇನ್ನು ಅನೇಕ ತರದ ಬಟ್ಟೆಗಳು ನಮ್ಮಲ್ಲಿ ಮಾರಾಟ[illegible] ತಯ್ಯಾರಾಗಿವೆ [illegible] ಟ್ಟಿಗಳು ನಮ್ಮಲ್ಲಿಯೇ ಮಗ್ಗಗಳ[illegible] ತಯ್ಯಾರಾಗುವವು ರೇಶ್ಮೆಯ ಜವುಳಿ ಯಾವದಾದರೂ ಬೇಕಾದವರು ಸ್ಪೆಶಿಯಲ್ ಆರ್ಡರ್ ಕೊಟ್ಟಲ್ಲಿ ತಯ್ಯಾರು ಮಾಡಿ ಕಳುಹಿಸಲ್ಪಡುವುದು ಸುಮ್ಮನೆ ಪಟ್ಟಿಗೆ ಹೋಗ[illegible] ಬರೆಯುವುದರಿಂದ ಪ್ರಯೋಜನವಿಲ್ಲ. ಬೇಕಾದವರು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ಬಂದುಸಲ ತರಿಸಿನೋಡಿರಿ

ವಿಳಾಸ:— ಕೆ. ಸಂಜಪ್ಪಸೆಟ್ಟಿ,
ಸ್ವದೇಶಿ ಜವುಳಿ ವ್ಯಾಪಾರಿ
ಸೋಮವಾರಪೇಟೆ, ಉ—ಕೊಡಗು

Messrs. P. SAM & Co.,

Receiving & Forwarding Agents, Cabinet Makers, Auctioners & General Agents,

12 5

591 4 Sayaji Rao Road, MYSORE

They not only receive and forward your goods from Mysore Railway Station to any part in Coorg but also receive goods from those parts and despatch them to any other part from the Mysore Railway Station They undertake to sell your saleable articles by public auction or otherwise, and also supply you goods at the cheapest rates Commission very moderate A trial order will convince you of their promptness and business methods

ಒಳ್ಳೆಯ ಪುಸ್ತಕಗಳು ! ಬೆಲೆ ಸುಲಭ !!

A. N C. & Co., Mysore.

ಮಹಾಶಯರೆ — ನಮ್ಮ ಕಂಪೆನಿಯಲ್ಲಿ ಸಾವಿರಾರು ಬಗೆಯ ಕನ್ನಡ ಪುಸ್ತಕಗಳೂ ಇತರ ಸಾಮಾನುಗಳೂ ಬೆಲೆಗೆ ಸಿದ್ಧವಾಗಿವೆ ಕನ್ನಡ ಗ್ರಂಥಕರ್ತರು ತಮ್ಮ ಪುಸ್ತಕಗಳ ಒಂದೊಂದು ಪ್ರತಿಯನ್ನು ಕಳುಹಿಸಿದರೆ ಅವುಗಳನ್ನು ಅಡ್ವರ್ಟೈಸು ಮಾಡುವುದಲ್ಲದೆ ಒಳ್ಳೆಯ ಪುಸ್ತಕಗಳನ್ನು ಕೊಂಡುಕೊಳ್ಳುತ್ತೇವೆ ನಾವು ಅನುಮೋದಿಸಿದ ಪುಸ್ತಕಗಳನ್ನು ಹಿಂದಕ್ಕೆ ಕಳುಹಿಸಬೇಕಾದಲ್ಲಿ ಟಪಾಲುಖರ್ಚನ್ನು ಪುಸ್ತಕ ಕಳುಹಿಸಿದವರೇ ವಹಿಸಬೇಕು ನಾವು ಹೊಸದಾಗಿ ಪ್ರಕಟಿಸಿರುವ—

ಸ್ತೋತ್ರಮಾಲಿಕಾ ಭಾಗ ೧.

ಎಂಬ ಪುಸ್ತಕವು 1 ಮಂಗಳಾಚರಣೆ 2 ಪ್ರತಿದಿನೋಪಯುಕ್ತ ಸ್ತೋತ್ರಗಳು, 3 ಪ್ರತಿ ವಾರೋಪಯುಕ್ತ ಸ್ತೋತ್ರಗಳು 4 ಪ್ರತಿ ಮಾಸೋಪಯುಕ್ತ ಸ್ತೋತ್ರಗಳು 5 ಉಪಯುಕ್ತ ಸ್ತೋತ್ರಗಳು ಎಂಬ ಐದು ವಿಭಾಗಗಳನ್ನು ಒಳಗೊಂಡಿದೆ ಇದರ ಬೆಲೆ 4 ಆಣೆ ಮಾತ್ರ ಇದನ್ನು ವಿ ಪಿ ಮೂಲಕವಾಗಿಯಾಗಲೀ 5 ಆಣೆ ಪೋಸ್ಟಲ್ ಸ್ಟಾಂಪು ಕಳುಹಿಸಿ ಸಾಧಾರಣ ಬುಕ್ಕುಪೋಸ್ಟು ಮೂಲಕವಾಗಿಯಾಗಲಿ ಪಡೆಯಬಹುದು ಪರೀಕ್ಷಿಸಬೇಕು ! ವಾಚಕನಾಡಬೇಕು ! ಇಲ್ಲದಿದ್ದರೇನು ಪ್ರಯೋಜನ !!!

12—4

ಇತ್ತ ನೋಡಿರಿ ! ಕೊಡಗು ಬಾಂಧವರೇ ! ಇತ್ತ ನೋಡಿರಿ !

ನಮ್ಮಲ್ಲಿ ಸಾಮಾನು ಪ್ರತಿಯೊಬ್ಬ ಹೊಗಳುವದು ತಮ್ಮಗಳಿಗೆ ತಿಳಿದಿರುವದಷ್ಟೆ.

ಕಾಮಿಸಿಯಾಕ್ಟೈಲ — ಬಿಜಿ ಶೀಸೆ 1 ಕ್ಕೆ 1—0—0 3 ಶೀಸೆಗೆ 2—10—0 ಓರಿಯೋದಿಲ್ಲಿಭಾರ್ ಅಕ್ಸರ್ ಬಾಮು ಶೀಸೆ 1ಕ್ಕೆ 0—12—0. ಡಜನ್ 7—8—0 ಆರ್ಥ ಔನ್ಸ್ ಬಾಟ್ಲು ಶುಧಸಿಲೇಶಿರಿ ತೈಲ ಶೀಸೆ 1 ಕ್ಕೆ 3 ಆಣೆ, ಡಜನ್ 1 ಕ್ಕೆ 1—12—0 ಕಸ್ತೂರಿಮಾತ್ರೆ ಶೀಸೆ 1 ಕ್ಕೆ 4 ಆಣೆ. ಡಜನ್ 1 ಕ್ಕೆ 2—10—0 ಮಲೇರಿಯಾ, ದಿನ ಬಿಟ್ಟು ಬರುವ ಜ್ವರಕ್ಕೆ ಖಾತ್ರಿಯಾದ ಟಿಕ್ಕಿ ಮುಖಾಮಿನ ಮಾತ್ರೆ ಶೀಸೆ 1 ಕ್ಕೆ 1—0—0 ರೂ.

ಜಿಂತಾನ್ ಪಾಕೇಟ್ 1 ಕ್ಕೆ	1 ಆಣೆ 4 ಆಣೆ,	1 ರೂ
ಗಂಧದ ಸಾಬೂನ್ 1 ಕ್ಕೆ	೨ ಆಣೆ 6 ಆಣೆ	7 ಆಣೆ
ವಿಕಟೋರಿಯಾ ಸಾಬೂನು 1 ಕ್ಕೆ		0-2-6.
ಪ್ಯಾರೀಸ್ ರಾಣಿ ಸಾಬೂನು 1 ಕ್ಕೆ		1-2 0
ಜಸ್‌ಮಿನ್ (ಮಲ್ಲಿಗೆ) ಸಾಬೂನ್ 1 ಕ್ಕೆ		8 ಆಣೆ
ಬುಕ್ಕೆಟ್ ಗುಡ್‌ವಿನ್ " 1 ಕ್ಕೆ		10 ಆಣೆ
ಚಿಕ್ಕ ಕನ್ನಡಿ 1 ಕ್ಕೆ	2 ಆಣೆ.	0 2-6
ಸಾಬೂನ್ ಕರಡಿಗೆ 1 ಕ್ಕೆ	5 ಆಣೆ.	7 ಆಣೆ
ಸರಟ್ ಬಟನ್ ಹರಳಿನದ್ದು ಸೆಟ್ಟು 1 ಕ್ಕೆ		3 ಆಣೆ
ಬಾಚಣಿಗೆ ಡಜನ್ 1 ಕ್ಕೆ	0-14-0 1-4-0	1-8 0
ಕ್ಷೌರಕತ್ತಿ 1 ಕ್ಕೆ	2-4-0. 2-12-0.	3-8-0
ಅಮೃತಾಂಜನ ಡಬ್ಬಿ 1 ಕ್ಕೆ		9 ಆಣೆ.
ಜರ್ಮನಿ ಕತ್ತರಿ 1 ಕ್ಕೆ		10 ಆಣೆ
ಕಾಡ್‌ಬರಿ ಚೊಕಲೇಟ್ ಪಾಕೆಟ್ 1 ಕ್ಕೆ		6 ಆಣೆ
ವಾಸ್‌ಲೈನ್‌ಪೆನ್ 1 ಕ್ಕೆ	5 ಆಣೆ.	8 ಆಣೆ.

ಯಾವ ತರದ ಸಾಮಾನು ಬೇಕಾದಲ್ಲಿ ನಮ್ಮಲ್ಲಿ ದೊರಿಯುತ್ತೆ. ಟಪಾಲು ಖರ್ಚು ಅಲಾಯಿದಾ.

ವಿಳಾಸ:—ದಿ ಉರ್ಬ ಮಾರ್ಟ್,
ನಂ. ೩, ಮಂಗಳೂರು, ದ. ಕ.

ರೋಗಿಗಳೂ, ರೋಗವಿಲ್ಲದವರೂ

ಲಿಕ್ಸಿಟೇನನ್ನು

ಉಪಯೋಗಿಸಬೇಕು.

ಎಂತಹ ಕಠಿಣ ಕಾಯಿಲೆಯುಳ್ಳವರೇ ಆಗಲಿ ಮೊದಲು ಇದನ್ನು ಉಪಯೋಗಿಸಿದರೆ ಶರೀರದ ಕಲ್ಮಷವನ್ನು ತೆಗೆದುಹಾಕಿ ಕಾಯಿಲೆಯನ್ನು ಕಡಿಮೆಮಾಡುವುದು. ಸುಲಭ ಕಾಯಿಲೆಗಳಲ್ಲಂತೂ ಬರಿ ಇದರ ಸೇವನೆಯಿಂದಲೇ ಗುಣವಾಗುವುವು ತೆಗೆದುಕೊಂಡ ೬॥ ಘಂಟೆಯಲ್ಲಿ ಸುಖಭೇದಿ ಮಾಡುವುದು. ಬೇರೆ ಭೇದಿ ಮಾತ್ರೆಗಳಂತೆ ಸಂಕಟ, ಹೊಟ್ಟೆನೋವು ಮುಂತಾದುವನ್ನುಂಟುಮಾಡುವುದಿಲ್ಲ. ಸಾಮಾನ್ಯಜ್ವರ, ಕೆಮ್ಮು, ಊದು, ಮೂತ್ರಬಂಧನೆ, ಅಲಸ್ಯ, ಉಷ್ಣ, ಪಿತ್ತ, ಶೀತಸಂಬಂಧ ಕಾಯಿಲೆಗಳು, ಜೀರ್ಣಕೋಶದ ಅಕ್ರಮತೆ, ಕರುಳುಗಳಲ್ಲಿ ಕ್ರಿಮಿಗಳಿಂದ ಹುಟ್ಟಿ ಉಬ್ಬರವಾಗುವುದು ದುರ್ವಾಸನೆಯುಳ್ಳ ವಾಯುಗಳು ಹುಟ್ಟುವುದೇ ಮುಂತಾದುವನ್ನೆಲ್ಲಾ ಗುಣಪಡಿಸುವುದು.

ಚಿಕ್ಕಮಕ್ಕಳಿಂದ ಮುದುಕರವರೆಗೆ ವರ್ಷದ ಯಾವ ಕಾಲದಲ್ಲೂ ಉಪಯೋಗಿಸಬಹುದು ಯಾವಾಗಲೂ ಒಂದು ಶೀಸೆಯನ್ನು ಹತ್ತಿರ ಇಟ್ಟುಕೊಳ್ಳಿ.

ಚಿಕ್ಕ ಮಾತ್ರೆ ಶೀಸೆಗೆ ೧೨ ಆಣೆ

ಚಂದ್ರಕಲೆಯು.

ದೇಹದಲ್ಲಿನ ಪ್ರತಿಯೊಂದು ಧಾತುವನ್ನೂ ಸರಿ ಪಡಿಸಿ ಶರೀರದ ರೋಗಗಳನ್ನು ಪರಿಹರಿಸುವುದ ರೋಗವಿಲ್ಲದವರಿಗೆ ಮಾಂಸ, ಮೂಳೆ, ನರ, ಮುಂತಾದುವುಗಳನ್ನು ಬಲಪಡಿಸುತ್ತಾ ಗಟ್ಟಿಮಾಡಿ ದೃಢಕಾಯರನ್ನಾಗಿ ಮಾಡುವುದೆ ರೋಗವಿದ್ದವರಿಗೆ ಅಶಕ್ತಿ, ಗೆಡ್ಡೆ, ಚಳಿಜ್ವರ, ವಾತ, ಪ್ಲೂರಸಿ ಎಂಬ ಪಕ್ಕೆನೋವುಪಿತ್ತಕೋಶದ ರೋಗಗಳು, ಮೂತ್ರಕೋಶ ರೋಗಗಳು, ಮಲಬದ್ಧತೆ, ನರಗಳ ಕಾಯಿಲೆಗಳು, ನರಗಳ ಚಳುಕು, ಮಿದುಳಿನ ಕಾಯಿಲೆಗಳು, ಕಾಮಾಲೆ, ಕ್ಷಯ, ಶರೀರದಲ್ಲೆಲ್ಲಾ ಗಂಟುಗಳೇ ಮುಂತಾದುವು ಏಳುವುದು ಹೊಟ್ಟೆನೋವು ಮುಂತಾದುವನ್ನೆಲ್ಲ ಖಂಡಿತ ಗುಣಪಡಿಸುತ್ತದೆ. ಅಮೂಲ್ಯ ಔಷಧಗಳಿಂದ ತಯಾರಿಸಿದ್ದು ಶೀಸೆಗೆ ಮೂರುರೂಪಾಯಿ

ಇಲೆಕ್ಟ್ರಿಕ್ ಬಾಂ.

ಕಜ್ಜಿ, ಹುರ, ತುರಿಕಜ್ಜಿ, ಗಾಯ, ಸುಟ್ಟಗಾಯ ಮುಂತಾದುವನ್ನೆಲ್ಲ ಗುಣಪಡಿಸುತ್ತದೆ ಡಬ್ಬಕ್ಕೆ ೬ ಆಣೆ.

ಎಷ್ಟೇಕೊಡ್ಡ ಜ್ವರವಿರಲಿ.

ನಮ್ಮ ಜ್ವರಹರಿಮಾತ್ರೆಗಳು ತೆಗೆದುಕೊಂಡ ಎರಡುಗಂಟೆಗಳೊಳಗಾಗಿಯೇ ಜ್ವರವನ್ನು ಖಂಡಿತ ಇಳಿಸುತ್ತವೆ ೧ ಪೊಟ್ಟಣ ಮಾತ್ರೆಗೆ ೧ ರೂ. ಜ್ವರಗಳನ್ನು ಗುಣಪಡಿಸುವುದಕ್ಕೆ ನಮ್ಮ ಫೀವರೀನ್ ಮಾತ್ರೆಗಳನ್ನು ಉಪಯೋಗಿಸಿ. ಇವು ಮಲೇರಿಯ, ಸನ್ನಿಪಾತ, ಪಿತ್ತಜ್ವರಗಳು, ಪ್ಲೀಹಜ್ವರಗಳು, ಮುಂತಾದುವನ್ನೆಲ್ಲ ಗುಣಪಡಿಸುತ್ತದೆ. ಶೀಸೆಗೆ ೧ ರೂಪಾಯಿ

ಅನ್ನಕೋಶ, ಪಿತ್ತಕೋಶ ಮುಂತಾದುವುಗಳ ಅಕ್ರಮತೆಯಿಂದ ಹೊಟ್ಟೆನೋವು (ಪರಿಣಾಮಶೂಲೆ) ವ್ಯಾಧಿಯಾಗುವುದು, ಅಜೀರ್ಣ, ಮುಂತಾದ ಎಲ್ಲಾತರದ ಡಿಸ್ಪೆಪ್ಸಿಯಯೆಂಬ ಜೀರ್ಣಕೋಶದ ಕಾಯಿಲೆಗಳನ್ನೂ ನಮ್ಮ ಶೂಲಾರಿಯು ಖಂಡಿತ ಗುಣಮಾಡುತ್ತದೆ. ೬ ಔಷಧಗಳುಳ್ಳ ೬ ಶೀಸೆಗಳಿಗೆ ೫ ರೂಪಾಯಿ.

ಎಲ್ಲಾತರದ ಕಾಯಿಲೆಗಳನ್ನೂ ಪತ್ರಮುಖಾಂತರವೂ, ಹತ್ತಿರವಿದ್ದೂ ಗುಣಮಾಡುತ್ತೇವೆ ಜನರಲ್ ಪೆರಲಿಸಿಸ್ ಎಂದರೆ ಪೂರ್ಣವಾಯು, ಮೂತ್ರಕೋಶದ ಕಾಯಿಲೆ ಮುಂತಾದುವನ್ನು ಗುಣಪಡಿಸಿದ್ದಕ್ಕೆ ನಮಗೆ ಚಿನ್ನದ ಮೆಡಲುಗಳು ಸಿಕ್ಕಿವೆ.

ದಿ. ಜಿ. ಎಚ್. ಹೌಸ್,

ವೀರರಾಜಪೇಟೆ, (ಕೊಡಗು).

ಕಟುಂಬ ಜೀವನಕ್ಕೆ ಬಲೂ ಅನುಕೂಲ

ಟೈಮ್‌ಪೀಸ್ ಮತ್ತು ಅಲಾರಂ ವಾಚು

ಈ ಗಡಿಯಾರಗಳು ವಿದೇಶೀಯರಿಂದ ಲೀವರ್ ಗಂಟೆ ನಾಡಿದೆ ಭಾಳಿ, ದಕ್ಕಿ ಹಿಂಭಾಗದಲ್ಲಿ ಒಂದು [illegible] ಮುಂದೆ ದಪ್ಪಾಯಾಗಿವೆ ಒಳಗಡೆ ಚಕ್ರಗಳು ಕೆತ್ತಲ್ಪಟ್ಟಿವೆ [illegible] ಲವನ್ನು ತೋರಿಸುವವು ಈ ವಲ್ಲಿ ಒಂದು ನಿದ್ದರೆ ಸಾಕು ಕೈಗೂ ಕಟ್ಟಿಕೊಳ್ಳಲೂ ಸ[illegible]

ಗಡಿಯಾರ 1 ಕ್ಕೆ ರೂಪಾಯಿ [illegible]

ವಿ. ಪಿ. [illegible]

[illegible] ಅಲರ್ದಾರದಿಂದ [illegible] ಶಾಖೆ [illegible] ಕಾರಿಗಳು ಬಹು [illegible] ಸಾಧಾರಣ ರೋಗಿಗೂ ಉಪಯೋಗಿ

[illegible] 1 ಕ್ಕೆ 1—12—0

ಕೃಷ್ಣ ಅಂಡ್ ಕೋ,
[illegible] ಮದರಾಸು

ಬಂಗಾರದ ರೇಡಿಯಂ ರಿಸ್ಟ್‌ಲೆಟ್‌ವಾಚು



[illegible] ಸೀಮೆ ಬಂಗಾರದಿಂದ ಅಮೇರಿಕ [illegible] ದರ ಗಡಿಯಾರಗಳಲ್ಲಿ ರಾತ್ರಿ [illegible] ಬೇಕು ಆದರೆ ಈ ಗಡಿಯಾರಗಳ [illegible] ಬಂಗಾರವುಳ್ಳ ಅಷ್ಟು ಚೆನ್ನಾಗಿ [illegible] ನ್ನು ತೋರಿಸುವುದು ಇವು ಅಮೇರಿಕ [illegible] ಬಾಳಿಕೆ ಬರುವವು. ಯಾರೇ ಆಗಲಿ ಬೇಗನೆ ಗಂಟೆಯನ್ನು ಗುರುತು ಹಿಡಿ[illegible] ಗ್ಯಾರಂಟಿ ಕೊಡುವೆವು ಕೈಯಲ್ಲಿ ಕ[illegible]

ಗಡಿಯಾರ 1 ಕ್ಕೆ 10—8—0 ಕೈಯಲ್ಲಿ [illegible]

ಗಡಿಯಾರ 1 ಕ್ಕೆ 8—8—0 ರೂ

—ಎಸ್. ಎಸ್. ರಾಮು ಅಂಡ್ ಕೋ

ಪೋಸ್ಟ್ ಬಾಕ್ಸ್ ನಂ 214, ಮದರಾಸು

[illegible] ಲೈಯಿಟ್ ಸೋಪು.

ಕೂದಲುಗಳಿಗೆ ಒಂದೇ ಒಂದು ನಿಮಿಷ[illegible] ಮಾಡಿಸಿ ಕೊಂಡದ್ದ ಹಿಂಗಲೂ ಚೆನ್ನಾ[illegible] ಯಾ ಇಲ್ಲದೆ ಕೂದಲನ್ನು ತೆಗೆದು ಬಿಡುವ[illegible] ಲೈಟ್ ಸೋಪು ಸಂಧಿ ನೋವು [illegible] ಗಳನ್ನು ಕ್ಷಣ ಮಾತ್ರದಲ್ಲಿ ಮಾಯಮಾಡು[illegible] ಒನ್ನು ಪೆಟ್ಟಿಗೆ 1ಕ್ಕೆ ರೂ 1—1—0 [illegible] ಒಂದರಕ್ಕೆ ರೂ 2—4—0

ವಜ್ರದ ಉಂಗುರಗಳು

ಈ ಉಂಗುರಗಳನ್ನು ಸೀಮೆ [illegible] ರದಿಂದ ಮಾಡಿದೆ ಇದರ ಮೇ[illegible] ಕೆಂಪು, ಹಸುರು ಮುಂತಾದ [illegible] ಪನ್ ವಜ್ರದ ಕಲ್ಲುಗಳನ್ನಿಟ್ಟು ಕ[illegible] ಕಟ್ಟಿರುವದು ನೋಡಿದವರು ನಿಜ[illegible] ವಜ್ರದ ಉಂಗುರವೆಂದೇ ಹ[illegible] ಬಣ್ಣಕ್ಕೆ ಗ್ಯಾರಂಟಿ 2 ವರ್ಷ[illegible]

ಉಂಗುರ 1 ಕ್ಕೆ ರೂ 1—12—0.

ವಿಳಾಸ—ಎಸ್. ಪಾಲ್ ಅಂಡ್ ಕೋ

ಪೋ[illegible] ನಂ 542 ಪಾರ್ಕ್‌ಟೌನ್, ಮದರಾಸು

[illegible] ಕೊರಾಹು ಸೀರೆಗಳು

17 [illegible] ಇರುವವು. ದೊಡ್ಡ [illegible]



ಈ ಸೀರೆಗಳನ್ನು ಹಸನಾದ ಫ[illegible] ನೂಲಿನಿಂದ ತಯಾರಿಸಿದೆ. ಸುಂದ[illegible] ವಾದ ರೇಷ್ಮೆಯ ಸೆರಗೂ, ಅಂಚ[illegible] ದೊಡ್ಡ ಅಂಚೂ ಇದೆ ಶ್ರೀಮ[illegible] ರಿಗೂ, ಗರೀಬರಿಗೂ ಅನುಕೂಲವಾ[illegible] ದದ್ದು ಈಗಿನ ಕಾಲದಲ್ಲಿ ಈ ಕ್ರ[illegible] ಕ್ಕ ಎಲ್ಲಿಯೂ ಸಿಕ್ಕಲಾರವು. ಮ[illegible] ರಿಗಾಗಿ ಕೆಲವು ಸೀರೆಗಳನ್ನು ಮಾ[illegible] ತಯಾರಿಸಿರುವೆವು ಬೇಕಾದವ[illegible] ತರಿಸಿ ಪರೀಕ್ಷಿಸಿರಿ.

ಕ್ರಯ ನಂ. 1 ೬—8—0 ರೂ. ನಂ 2 7—8—0 ರೂ

ವಿಳಾಸ —ಎಸ್. ಎಸ್. ರಾಮು ಅಂಡ್ ಕೋ

ಪೋಸ್ಟ್ ಬಾಕ್ಸ್ ನಂ 214, ಮದರಾಸು

Printed and Published by S. NANJUNDA SASTRI at the Sreenivas Electric Press, Mysore for "Kodagu" Ltd., Mercara—4-9 1921.

REGISTERED NO. M. 1550.

ಕೊಡಗು.

ಸತ್ಯೇನ ಧೂತದಯಾ ಏಷಾ ವಿದ್ಯಾನೀತಿಸ್ತ್ರಬುದ್ಧಿಕಾ | ಐಕಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯಸಂಪದ |

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

ಸಂಪುಟ ೧] ಕೊಡಗು, ಸಗ ೧೯೨೧ ನೇ ಇಸವಿ ಸೆಪ್ಟೆಂಬರ್ ತಾರೀಖು ೯ ನೆಯ ಶುಕ್ರವಾರ. [ಸಂಚಿಕೆ ೧೫

ವೀರಶೈವರಿಗೆ ಸಂಗ್ರಾಹ್ಯವಾದ ಫೋಟೋ.

ಶ್ರೀ ಶಿವಯೋಗಿಗಳ ಸಂಘ :—ಭಾಗ್ಯಶಾಲಿ ಜನರು ಹಣವು ಖರ್ಚುಮಾಡಿ ಮಹಾ ಶಿವಯೋಗಿಗಳ ದರ್ಶನವನ್ನು ತೆಗದುಕೊಳ್ಳುತ್ತಾರೆ. ಆದರೆ ಶ್ರೀಮಂತರಿಗು ಮತ್ತು ಬಡವರಿಗೂ ನಿತ್ಯದರ್ಶನ ಆಗುವದಕ್ಕೆ ಫೋಟೋವ ಹೊರ್ತು ಅನ್ಯಮಾರ್ಗವು ಇಲ್ಲದಕಾರಣ ನಾವು ಪ್ರಸಿದ್ಧರಾದ ಶ್ರೀ ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ, ಗದಗ ತೋಂಟದಾರ್ಯ, ಅಥಣಿ ಶಿವಯೋಗಿ, ಬಾಲಲೀಲಾಸ್ವಾಮಿ ಅಲೂರ, ಹಾನಗಲ್ಲು, ಹಾಳಕೇರಿ, ಚಿಕ್ಕೋಡಿ ಸಿದ್ದಾರೂಢ ಮುಂತಾದ ೧೮ ಮಹಾಸ್ವಾಮಿಗಳ ಫೋಟೋ ಕೂಡಿಸಿದ ಕಾರಣ ಒಂದೇ ಕಾಲದಲ್ಲಿ ಎಲ್ಲಾ ಶಿವಯೋಗಿಗಳ ದರ್ಶನ ಆಗುವುವು. ೧೮×೧೨ ಸೈಜದ ಚಿತ್ರದ ಕ್ರಯ ೧ ಪ್ರತಿಗೆ ೮ ಆಣೆ.

ಶ್ರೀ ಕಲ್ಯಾಣ ಬಸವೇಶ್ವರ :—ವೀರಶೈವ ಧರ್ಮೋದ್ಧಾರಕರಾದ ಶ್ರೀಬಸವಣ್ಣದೇವರ ಅತ್ಯಂತ ತೇಜಃಪುಂಜವಾದ ಖಾಸ ಫೋಟೊ ೧೮×೧೨ ಸೈಜ ಒಣ್ಣದ ಚಿತ್ರದ ಕ್ರಯ ೧ ಪ್ರತಿಗೆ ರೂ. ೧. ಸಾದಾ ೮ ಆಣೆ.

ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ :— ಇದರಲ್ಲಿ ಶ್ರೀಬಸವೇಶ್ವರರು ಶ್ರೀಚನ್ನಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಅಕ್ಕನಾಗಮ್ಮಾ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವಪಾದಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೊ ಇರುತ್ತದೆ. ದೊಡ್ಡ ಸೈಜು ರೂ. ೧|. ಸಣ್ಣಸೈಜು ರೂ. |||.

ಶ್ರೀ ರೇಣುಕಾಚಾರ್ಯರ ಲಿಂಗೋದ್ಭವವು:— ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರ್ಯರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವ ಫೋಟೋ ಇರುತ್ತದೆ. ದೊಡ್ಡ ಸೈಜು ರೂ. ೧|. ಸಣ್ಣ ಸೈಜು ರೂ. |||.

ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ:- ಇದರಲ್ಲಿ ಅಗಸ್ತ್ಯ ಮುನಿಗಳು ತಮ್ಮ ಪತ್ನಿ ಲೋಪಾಮುದ್ರಾ ಸಹ ಉಪದೇಶಮಾಡಿಕೊಳ್ಳುತ್ತಾ ಇದ್ದಾರೆ. ದೊಡ್ಡ ಸೈಜು ರೂ. ೧|. ಸಣ್ಣ ಸೈಜು ರೂ. |||.

ಶ್ರೀ ವೀರಭದ್ರಸಿಂದೇ ಹನುಮಂತನಿಗೆ ಲಿಂಗಧಾರಣವು :—ಇದು ಹನುಮಂತನು ಮೋಕ್ಷಾರ್ಥಕ್ಕಾಗಿ ಲಿಂಗಧಾರಣಮಾಡಿಕೊಂಡ ಫೋಟೊ ಇರುತ್ತದೆ. ದೊಡ್ಡ ಸೈಜು ರೂ. ೧|. ಸಣ್ಣ ಸೈಜು ರೂ. |||.

ಶ್ರೀ ವೀರಶೈವ ರಾಜಮಂಡಲ:— ಇದರಲ್ಲಿ ಕೊಡಗು ದೇಶದ ಲಿಂಗರಾಜೇಂದ್ರ, ವೀರರಾಜೇಂದ್ರ, ವಡಿಯರ, ದೇವಮ್ಮಾಜಿ ಮಹಾರಾಣಿ, ಮತ್ತು ಸದ್ಯದ ಶೃಂಗಸೂರ ಮತ್ತು ಗೊವಾಪ್ರಾಂತದ ಬಾಂದೆವಾಡಿ, ಸೊಂದಾದ ಅರಸರ ಫೋಟೊ ೯ ಇರುತ್ತವೆ. ಕ್ರಯ ಫುಲ್ಲ ಸೈಜು ೧| ರೂ. ಕ್ಯಾಬಿನೆಟ್ ೧೨ ಆಣೆ.

ಶ್ರೀಮಜ್ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿಗಳ ಅತ್ಯಂತ ಸುಂದರವಾದ ಕೈಬಣ್ಣದ ಫೋಟೋ ಕ್ರಯ ಪ್ರತಿ ೧ಕ್ಕೆ ರೂ. ೧. ಸಾದಾ ರೂ. |||.

ಸೂಚನೆ:—ಭಾರಿ ಖರೀದಾರರಿಗೆ ಆದ್ದಾಗಿ ಕಮಿಷನ್ ದೊರೆಯುವದು.

ವಿಳಾಸ :—ಗಂಗಪ್ಪ ಜೇರಗೆ,

ಮಾಲಕ ಧಿ ಶಾರದಾ ಫೋಟೊ ಕಂಪನಿ, ಸೋಲಾಪೂರ.

NOTICE.

If you want any kind of English or Kanarese Printing, Please write to:

SREENIVAS ELECTRIC PRESS, MYSORE.

ಪ್ರಕಟಣೆ.

1922 ನೇ ಇಸವಿಯಲ್ಲಿ ಪ್ರಾರಂಭವಾಗುವ ಪರಿಯಾಯದಲ್ಲಿ ಪಲಿಮಾರು ಮಠದ ಶ್ರೀ ಪಾದಂಗಳವರು ಮಾಡುವ ಉಡುಪಿ ಶ್ರೀ ಕೃಷ್ಣ ದೇವರ ಪೂಜೆಯ ಸಹಾಯಾರ್ಥವಾಗಿ "ಶ್ರೀಕೃಷ್ಣ ಸೋಟ್ತಿ" ಎಂಬ ಹೆಸರಿನ ಒಂದು ಲೋಟರಿಯಾನೆ ಸೋಟ್ತಿಯನ್ನು ಏರ್ಪಡಿಸಿಯದೆ. ಟಿಕೇಟಿನ ದರ ಒಂದರ ಒಂದು ರೂ. ಆಗಿರುತ್ತದೆ ಅದರಲ್ಲಿ 1 ನೇ ಇನಾಮು ರೂಪಾಯಿ 2000–0–0 ರದ್ದು, 2 ನೇ ಇನಾಂ ರೂ. 1000–0–0 ರದ್ದು ರೂ 100–0–0 ರ ಇನಾಂಗಳು 5, ರೂ 10–0–0 ರ ಇನಾಂಗಳು ನೂರು, ರೂಪಾಯಿ 5 ರ ಇನಾಂಗಳು 200 ಎಂತ ನಿಶ್ಚಯಿಸಿಯದೆ. ಆದುದರಿಂದ ಎಲ್ಲ ಸುಜನರುಗಳು ತಮ್ಮ ಶಕ್ತ್ಯಾನುಸಾರ ಟಿಕೇಟುಗಳನ್ನು ಪಡೆದು ಶ್ರೀಹರಿ ವಾಯುಗಳ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸೋಣಾಗುತ್ತದೆ. ಎಲ್ಲ ಪತ್ರವ್ಯವಹಾರಗಳನ್ನು ಈ ಕೆಳಗಿನ ವಿಳಾಸಕ್ಕೆ ಮಾಡತಕ್ಕದ್ದು.

ಮ್ಯಾನೇಜರು.

ಶ್ರೀಕೃಷ್ಣ ಸೋಟ್ತಿ,

ಕೊಡಿಯಾಲಬೈಲ್ ಪೋಸ್ಟ್, ದ. ಕ.

ಸಹಕಾರ ಬೇಕೇ ?

ಬೇಕಾದವರು ನಮ್ಮಲ್ಲಿ ದೊರೆಯುವ ಕೊಡೆ, ಸುದ್ದಲಿ, ಬೂಟೀಸ್, ನಮೂನೆ ಫರ್ನಿಚರ್, ಲಾಂಟರ್ನ್ ಲ್ಯಾಂಪ್, ನಮೂನೆ ಚುಟ್ಟ, ಅಫೀಸ್ ಕುರ್ಚಿ ಇತ್ಯಾದಿ ಸಾಮಾನುಗಳನ್ನು ಖಂಡಿತ ತೆಗೆದು ನೋಡಿರಿ.

ಹೆಚ್ಚಿನ ಸಂಗತಿಗಳು ಕೆಳಗಿನ ವಿಳಾಸಕ್ಕೆ ಬರೆದು ತಿಳಿಯುವದು.

COMMERCIAL STORE,
General Merchants, Commission Agents and Furniture Suppliers,
12–13 MURNAD, COORG.

For Sale—ಮಾರಾಟಕ್ಕೆ!!!

ಹಣ ದಾಸ್ತಾನು ಮಾಡಬೇಕೆಂದು ಏನು ಪ್ರಯೋಜನ ?

ಐಶ್ವರ್ಯವಂತರಿಗೆ ಉಪಯುಕ್ತವಾದ ಸಂಪಾದನೆಯು !

ಸಿದ್ದಾಪುರದ ಸಮೀಪದಲ್ಲು ಒಳ್ಳೆ ತರಹದ ಪೂರ್ತಿ ಸಾಗುವಳಿಯಾಗಿರುವ ಭತ್ತದ ಭೂಮಿಯು (500) ಐದು ನೂರು ಬಟ್ಟಿಕೊಲ ವರಿಕೆಯುಳ್ಳದು ಒಳ್ಳೆ ಮರ ಕಾಡು 40 ಎಕರೆ ಸಹಿತ ಶುದ್ಧ ಕ್ರಯ (6000–0–0) ಆರುಸಾವಿರ ರೂಪಾಯಿಗಳಿಗೆ ಮಾರಾಟಕ್ಕೆ ಇರುವದರ ಸಂಗ್ತಿ ಈ ಕೆಳಗಿನ ಅಡ್ರಸ್ಸಿಗೆ ಬರೆದುಕೊಂಡಲ್ಲು ತಿಳಿಯಬಾಗುವದು

ವೀರರಾಜಪೇಟೆ.
ವರ್ಕ್ ಷಾಪ್
ವೀರರಾಜಪೇಟೆ.

The Veeraj Pet,
Works,
Veeraj Pet

"ಕೊಡಗು"

ರಾಜಕೀಯ, ವಿದ್ಯಾ, ಕೃಷಿ, ವೃತ್ತಿ, ವಿಜ್ಞಾನ, ಮತ್ತು ನೀತಿ ಮುಂತಾದ ವಿಷಯಗಳಿಂದೊಡಗೂಡಿದ, ಕೊಡಗಿನ ವಾರಪತ್ರಿಕೆ.

1 ಪ್ರಕಟಣೆಗಳನ್ನು ಮ್ಯಾನೇಜರ್ "ಕೊಡಗು" ಮಡಿಕೇರಿ, ಈ ವಿಳಾಸಕ್ಕೆ ಕಳುಹಿಸಬೇಕು 2. ಲೇಖನಗಳನ್ನು ಸಂಪಾದಕರು "ಕೊಡಗು" ಮಡಕೇರಿ ಈ ವಿಳಾಸಕ್ಕೆ ಕಳುಹಿಸಬೇಕು. 3. ಬಾಹ್ಯದಾರರ ಅಭಿಪ್ರಾಯಕ್ಕೆ ಕೊಡಗು ಪತ್ರಿಕಾಕರ್ತರು ಜವಾಬ್ದಾರರಲ್ಲ. 4 ನಮ್ಮಲ್ಲಿಗೆ ಕಳುಹಿಸುವ ಪತ್ರಿಗಳು ಕಾಗದದ ಒಂದೇ ಕಡೆಯೂ, ಸ್ಪಷ್ಟವಾಗಿಯೂ, ಹೆಸರು ವಿಳಾಸಗಳಿಂದ ಕೂಡಿಯೂ ಬರೆಯಲ್ಪಡಬೇಕು ಸ್ಥಳವು ದೊರೆಕಂಕಲ್ಲಾ ಈ ಪತ್ರಗಳು ಪ್ರಕಟಿಸಲ್ಪಡುವವು 5 ಪ್ರಕಟಿಸಲಾಗದ ಪತ್ರಿಗಳನ್ನು ಮರಳ ಕಳುಹಿಸುವ ಜವಾಬ್ದಾರಿಯನ್ನು ಸಂಪಾದಕರು ವಹಿಸುವದಿಲ್ಲ.

ಪ್ರಕಟಣೆಗಳು.

ಅತ್ಯಂತ ಸುಲಭವಾಗಿ ಹಾಕಲ್ಪಡುತ್ತವೆ. ಹೆಚ್ಚು ಸಂಗತಿಗೆ ಮ್ಯಾನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ಮ್ಯಾನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ.

INSURE YOUR CAR
Against Accident and Fire.
Apply to—
K. R. Thirupad & Bros.,
Sub Agents for
The Autocar Fire & Accident Insurance Co., Ltd.,
LONDON.

JUST ARRIVED FRESH STOCK OF
GOOD RICH TYRES
Best and Cheapest in the World.
Apply to—
K. R. Thirupad & Bros.,
Sayaji Rao Road,
12–11 **MYSORE.**

SUBBANNA, SANGAPPA,
Receiving and Forwarding Agents, General Merchants and Commission Agents.
Santhepet, Mysore.

Despatch and supply whatever you receive at Mysore Railway Station and whatever food stuffs and Stationaries you want to have from Mysore. Prompt attention, moderate commission and quick disposal are their motto. 24–10

ಮೈಸೂರು ರೈಲ್ವೆ ಸ್ಟೇಷನ್‌ನಿಂದ ನೀವು ತರಿಸಬೇಕಾದ ಸಾಮಾನುಗಳ ರೈಲ್ವೆ ಪಾರ್ಸಲುಗಳನ್ನೂ, ಮೈಸೂರಿನಿಂದ ತರಿಸಿಕೊಳ್ಳಬೇಕಾದ ಸಾಮಾನುಗಳ ಪಟ್ಟಿಯನ್ನೂ ಮೈಸೂರು ಸಂತೇಪೇಟೆಯಲ್ಲಿರುವ ಸುಬ್ಬಣ್ಣ ಸಂಗಪ್ಪನವರಿಗೆ ಕಳುಹಿಸಿ.

ಅವರು ಜಾಗ್ರತೆಯಾಗಿಯೂ, ಜೋಪಾನವಾಗಿಯೂ, ಸುಲಭವಾದ ಕಮೀಷನ್ನಿನಲ್ಲಿಯೂ ನಿಮಗೆ ಸರಬರಾಜು ಮಾಡುತ್ತಾರೆ ಮಿಕ್ಕ ವಿಚಾರ ಬರೆದು ತಿಳಿಯಿರಿ.

ಎಲ್ಲಾ ಚಂದಾದಾರರುಗಳಿಗೆ ವಿಜ್ಞಾಪನೆಗಳು.

ಇದುವರೆಗೆ ಛಂದಾ ಪಾವತಿಮಾಡಲಿಕ್ಕಿರುವ ಪತ್ರಿಕೆಯ ಛಂದಾದಾರರುಗಳು ತಮ್ಮ ಬಾಕಿಯನ್ನು ಪಾವತಿಮಾಡಬೇಕೆಂದು ಸೂಚಿಸುತ್ತಾ ಬಂದಿರುವುದು ಸರಿಯಷ್ಟೆ. ಆದರೆ ಶೇಕಡ ೬೦ ರಷ್ಟು ಛಂದಾದಾರರು ಅದರಲ್ಲಿಯೂ ನಾಡಿನ ಕಡೆಯ ಜನರು ಈ ವಿಷಯ ಉದಾಸೀನರಾಗಿರುವುದು ಕಂಪೆನಿಯ ಮುಂದಾಳುಗಳಿಗೆ ವ್ಯಸನವನ್ನುಂಟುಮಾಡಿವೆ. ಈ ಪತ್ರಿಕೆಯು ನಾಡಿನ ಜನಸಮುದಾಯವನ್ನು ಮುಂದಕ್ಕೆ ತರುವುದಕ್ಕೆ ಹೊರಟಿರುವುದು ಎಲ್ಲಾ ವಾಚಕರಿಗೂ ತಿಳಿಯದ್ದಲ್ಲ. ನಾಡಿನ ಜನರಿಗೆ ಈವರೆಗೆ ನಾಟಿ ಕೆಲಸದ ಗಲಾಟೆಯಿಂದ ಹಣವನ್ನು ಒಟ್ಟುಮಾಡಿ ಕಳುಹಿಸಲಿಕ್ಕೆ ಅನಾನುಕೂಲವಾಗಿರಬಹುದು. ಆದರೆ ಇನ್ನಾದರೂ ದಯವಿಟ್ಟು ಬಾಕಿದಾರರಾದ ದೇಶಾಭಿಮಾನಿಗಳು ಉದಾಸೀನರಾಗದೆ ಬಾಕಿಯನ್ನು ಪಾವತಿಮಾಡಿ ರಶೀತಿ ಪಡೆಯಬೇಕಾಗಿ ಕೋರುತ್ತೇವೆ. ಇದುವರೆಗೂ, ಪತ್ರಿಕೆಯನ್ನು, ಹಣ ಪಾವತಿ ಮಾಡದೆ ಓದುತ್ತಾ ಒಂದು ಕೆಲವು ಜನರು ಪತ್ರಿಕೆಯನ್ನು ತಿರಸ್ಕರಿಸುತ್ತಾ ಬರುತ್ತಿರುವುದು ತುಂಬಾ ನಾಚಿಕೆಯನ್ನುಂಟುಮಾಡುವ ವಿಷಯವಾಗಿದೆ.

ಎಡಿಟರ್

" ಕೊಡಗು "

೧೯೨೧ನೇ ಇಸವಿ ಸೆಪ್ಟಂಬರ್ ತಾ|| ೯ನೇ ಶುಕ್ರವಾರ.

CO-OPERATIVE SOCIETIES IN COORG
ಕೊಡಗಿನ ಸಹಕಾರಿ ಸಂಘಗಳು.

ಯಾರು ತಮಗೆ ತಾವೇ ಸಹಾಯಮಾಡಲಿಕ್ಕೆ ಕಲಿಯುತ್ತಾರೋ ಅಂಥವರಿಗೆ ದೇವರು ಸಹಾಯಮಾಡುವನು (God helps those who help themselves) ಅನ್ನುವುದನ್ನು ತನ್ನವರಂತೆ ಸಂಬ ಪರಸ್ಪರ ಸಹಾಯಮಾಡು (All for each each, for all) ವುದೇ ಪರಸ್ಪರ ಸಂಘಗಳ ಮುಖ್ಯ ಸೂತ್ರಗ (Principles) ಳೆಂದೂ ಅನೇಕರಿಗೆ ತಿಳಿದಿವೆ. ಆದರೆ ಈ ತತ್ವಗಳನ್ನು ಈಚೆಗೆ ನಮ್ಮ ದೇಶೀಯರು ಮನಸ್ಸಿಗೆ ತೆಗೆದುಕೊಂಡು ತಮ್ಮ ತಮ್ಮ ಪ್ರಾಥಮಿಕ (Primary) ಸಂಘಗಳನ್ನು ತಕ್ಕಮಟ್ಟಿಗೆ ನಡಿಸುತ್ತಾರೆ.

ಸಂಘಗಳ ಕೆಲಸಗಳಲ್ಲಿ ಅನೇಕ ಕುಂದುಕೊರತೆಗಳಿವೆ (1) ಪರಸ್ಪರ ಸಹಾಯದ ಮೂಲತತ್ವಗಳು ಜನರಿಗೆ ಚೆನ್ನಾಗಿ ತಿಳಿಯದೆ ಇರುವದು. (2) ಸಂಘದ ಮುಖ್ಯವಾದ ನಿಬಂಧನೆಗಳೂ, ಬೈಲಾಗಳೂ, ಮತ್ತು ಇತರ ಸಹಕಾರಿ ಪುಸ್ತಕಗಳೂ ಇಂಗ್ಲೀಷಿನಲ್ಲಿರುವುದರಿಂದ, ಕನ್ನಡಿಗರಾದ ಊರು ಸಂಘದವರಿಗೆ ಅವುಗಳನ್ನೋದಿ ತಿಳಿದುಕೊಳ್ಳುವುದು ಬಹುಕಷ್ಟ. (3) ಆಗಾಗ್ಯೆ ರಿಜಿಸ್ಟ್ರಾರವರಾಗಲೀ ಅವರ ಸಿಬ್ಬಂದಿಗಳಾಗಲೀ, ಪರಸ್ಪರ ಸಹಾಯದ ವಿಷಯ ಜನರಿಗೆ ಶಿಕ್ಷಣ ಕೊಟ್ಟು ಸಂಘಗಳನ್ನು ಊರ್ಜಿತಸ್ಥಿತಿಗೆ ತರುವುದೆಂದರೆ ರಿಜಿಸ್ಟ್ರಾರವರ ಅನಾನುಕೂಲತೆಯು ಮತ್ತು, ಬೇರೆ ದೇಶಗಳಲ್ಲಿರುವಹಾಗೆ ಸಂಘಗಳ ಆಡಳಿತಕ್ಕೆ, ಇನ್ಸ್‌ಪೆಕ್ಟರವರನ್ನು, ಸುಪರ್‌ವೈಸರವರನ್ನು, ಸರಕಾರದವರು ನೇಮಕಮಾಡದೆ ಇರುವುದು (4) ಜಮ್ಮದ ಭೂಮಿಯನ್ನು (ಇನಾಮತಿ) ಸಂಘದಿಂದ, ಸಾಲ ತೀರಿಸಲಿಕ್ಕಾಗಿ ಹೊಂದಿಕೊಳ್ಳುವ ಸಾಲಕ್ಕೆ ಗಿರ್ವಿ ಕೊಡುವುದಕ್ಕೆ ಸರಕಾರದವರು ಮಂಜೂರಾತಿ ಕೊಡದೆ ಇರುವುದು ಮೊದಲಾದ ಅನೇಕ ಕಾರಣಗಳಿವೆ.

ರಿಜಿಸ್ಟ್ರಾರವರು ಸಂಘಗಳ ವಿಷಯ, ತಾವು ತೆಗೆದುಕೊಳ್ಳಬೇಕಾಗುವಷ್ಟು ತೊಂದರೆಗಳನ್ನು ತೆಗೆದುಕೊಳ್ಳುವ ಅನುಕೂಲವೂ, ಸಮಯವೂ ಅವರಿಗೆ ಕಡಿಮೆ. ಕಳೆದ ಎರಡು ಮೂರು ವರ್ಷದಿಂದೀಚೆಗೆ ಜಮಾನು ಸಂಘದಲ್ಲಿ ನಿರ್ಣಯ ಮಾಡಿ ಸರಕಾರಕ್ಕೆ ಕಡಿಮೆಪಕ್ಷ ಎರಡು ಕೋ-ಆಪರೇಟಿವ್ ಇನ್ಸ್‌ಪೆಕ್ಟರವರನ್ನು ನೇಮಕಮಾಡಬೇಕೆಂದು ಬರಕೊಂಡದ್ದಕ್ಕೆ, ಸರಕಾರವು ಗಣನೆಗೆ ತರಲಿಲ್ಲ. ಜನರ ಅಭಿವೃದ್ಧಿಯನ್ನು ಎಲ್ಲಾ ವಿಧದಲ್ಲಿಯೂ ಕಡಿಸುವ ಅಬ್‌ಕಾರಿ ಇಲಾಖೆಯವರ ಸಂಬಳಗಳನ್ನು ಜಾಸ್ತಿಮಾಡುವುದರ ಬದಲಾಗಿ, ಜನರನ್ನು ತಿಳುವಳಿಕೆಗೆ ತಂದು ಒಳ್ಳೆಯ ಪುರಸಿವಾಸಿಗಳಂತೆ (good citizens) ಮಾಡುವ ಪರಸ್ಪರ ಸಹಾಯದ ಸಂಘಗಳ ಅಭಿವೃದ್ಧಿಯಲ್ಲಿ ಉದಾಸೀನರಾಗಿರುವುದು ವ್ಯಸನಕರವಾಗಿದೆ. ಬ್ರಿಟಿಷ್ ಚಕ್ರಾಧಿಪತ್ಯದ ನೀತಿಯು ಎಲ್ಲಾ ಜನಾಂಗವನ್ನು ಮುಂದಕ್ಕೆ ತಂದು ಒಳ್ಳೆಯ ಪುರನಿವಾಸಿಗಳಾಗಿ ಮಾಡುವುದಲ್ಲವೇ.

ಇನ್ನಾದರೂ ಮೇಲಣ ವಿಷಯಕ್ಕೆ ಗಮನಕೊಡಬೇಕಾಗಿಯೂ, ಎಲ್ಲಾ ರೂಲ್ಸ್‌ಗಳನ್ನು, ಕನ್ನಡದಲ್ಲಿ ತರ್ಜುಮೆ ಮಾಡಬೇಕಾಗಿಯೂ ಪರಸ್ಪರ ಸಹಾಯದ ವಿಷಯಶಿಕ್ಷಣ ಕೊಡುವ [illegible] ನೇಮಕಮಾಡಬೇಕಾಗಿಯೂ ಆಪೇಕ್ಷಿಸುತ್ತೇವೆ. ಮದ್ರಾಸು ಆಧಿಪತ್ಯದಲ್ಲಿ, ಪ್ರತಿ ಇಪ್ಪತ್ತೈದು ಸಂಘಗಳಿಗೆ ಒಬ್ಬೊಬ್ಬ ಸರಕಾರದಿಂದ ನೇಮಿಸಲ್ಪಟ್ಟ ಇನ್ಸ್‌ಪೆಕ್ಟರೂ, ಸುಪರ್‌ವೈಸರುಗಳೂ ಇದ್ದಾರೆ. ಕಮಿಶನರವರು, ರೈತರ ಪಕ್ಷದ, ಉಚಿತಾರ್ಥವಾಗಿ ಕೆಲಸಮಾಡುವ ಮುಂದಾಳುಗಳು ಪರಸ್ಪರ ಸಂಘಗಳ ಏಳಿಗೆಗೆ ಕೆಲಸಮಾಡಲು ಮುಂದೆ ಬಂದರೆ ಅವರಿಗೆ ಪ್ರಯಾಣದ ಭತ್ಯ ಕೊಡುವ ವಿಚಾರ ಮಾಡಬಹುದೆಂದೂ ಜಮಾನುದಾರರ ಸಂಘಕ್ಕೆ ತಿಳಿಸಿರುತ್ತಾರೆ. ನಾವು ಮೊದಲು ನಮ್ಮ ಕಾಲಿನ ಮೇಲೆ ನಿಂತುಕೊಳ್ಳಲು ಪ್ರಯತ್ನಪಡುವುದು ನಮ್ಮಗಳ ಕರ್ತವ್ಯ. ನಮ್ಮ ಯೋಗ್ಯತೆಯನ್ನು ತೋರ್ಪಡಿಸಿದ್ದೇ ಆದರೆ ಸರಕಾರದವರು ನಮ್ಮ ಕೋರಿಕೆಯನ್ನು ಖಂಡಿತವಾಗಿಯೂ ನೆರವೇರಿಸುತ್ತಾರೆ.

ಜಮ್ಮದ ಭೂಮಿಯನ್ನು (ಇನಾಮತಿ) ಲ್ಯಾಂಡ್ ಇಂಪ್ರೂವ್‌ಮೆಂಟ್, ಮತ್ತು ಅಗ್ರಿಕಲ್ಚರಲ್ ಲೋನ್ಸ್ ಆಕ್ಟಿನ ಪ್ರಕಾರ ಸರಕಾರದಿಂದ ರೈತರಿಗೆ ಕೊಡಬಹುದಾದ ಸಾಲದ ಉದ್ದೇಶಕ್ಕೆ ಮಾತ್ರ ಅಂದರೆ ಭೂಮಿರೂಪಿತ, ಬೀಜ, ಎತ್ತು ಮತ್ತೆ ಜೀವನಾಂಶಕ್ಕೆ ಮಾತ್ರ ಗಿರ್ವಿಯನ್ನು ಸರಕಾರದವರು ಮಂಜೂರು ಮಾಡಬೇಕಲ್ಲದೆ ಮತ್ತು ಈ ಉದ್ದೇಶಕ್ಕೆನೇ ಸಹಕಾರಿಸಂಘಗಳು ಜಮ್ಮದ ಭೂಮಿಯನ್ನು ಗಿರ್ವಿ ತೆಗೆದುಕೊಳ್ಳಬೇಕೆಂದೂ ಸರಕಾರಿ ಹುಕುಂ ಇಂಥಾ ಕಾನೂನು ಇರುವುದರಿಂದ ರೈತರಿಗೆ ಪರಸ್ಪರ ಸಹಾಯದ ಸಂಘಗಳಿಂದ ಯಾವ ಪ್ರಯೋಜನವೂ ಕಾಣುವುದಿಲ್ಲ. ಮೇಲಣ ಉದ್ದೇಶಕ್ಕೆ ಅಲ್ಲದೆ, ಬೇರೆ ಬಾಬಿಗೆ ಅಂದರೆ-ಸಾಲ ತೀರಿಸಲಿಕ್ಕೂ, ಮನೆ ಕಟ್ಟಿಸುವುದು, ವಿದ್ಯಾಭಿವೃದ್ಧಿ ವಗೈರೆ ಕಾರಣಗಳಿಗೆ ಹಣವು ಜಮ್ಮದ ಭೂಮಿ ಗಿರ್ವಿಯಿಂದ ದೊರೆಯದೆ ಹೋದರ ಸಂಘಗಳಿಂದ ಜಮ್ಮರೈತರಿಗೆ ಯಾವ ಪ್ರಯೋಜನವೂ ಕಾಣವುದಿಲ್ಲ. ಎಲ್ಲರೂ ಟಕಾವಿ ಹಣಕ್ಕೆ ದರಕಾಸ್ತು ಮಾಡಿ ಅದನ್ನು ಹೊಂದಿಕೊಳ್ಳುವುದೇ ಲೇಸಾಗಿ ಕಾಣುತ್ತೆ.

ಗ್ರಾಮದ ಜಮ್ಮರೈತರೆಲ್ಲರೂ ಚಿಲ್ಲರೆ ಸಾಲಗಾರರೆಂದೂ, ಸಾಲದ ಬಾಬಯೇ ದೊಡ್ಡದೆಂದೂ, ಯಾವಾಗಲೂ, ಸಾಹುಕಾರರ ಕೈಯ್ಯಲ್ಲಿ ಸಿಕ್ಕಿ ನರಳುತ್ತಿರುವುದರಿಂದಲೂ, ಜಮ್ಮದ ಭೂಮಿಯನ್ನು ಸಾಲ ತೀರಿಸುವ ಉದ್ದೇಶಕ್ಕೆ ಗಿರ್ವಿ ಕೊಡುವುದನ್ನು ಮಂಜೂರ್ಮಾಡದೆ ಹೋದರೆ ಸಹಕಾರಿ ಸಂಘಗಳಿಂದ ಕೊಡಗಿನಲ್ಲಿ ಯಾವ ಪ್ರಯೋಜನವೂ ದೊರೆಯಲಿಕ್ಕಿಲ್ಲ. ಆದ್ದರಿಂದ ಈ ಬಾಬಿನ ರೂಲ್ಸ್‌ಗಳನ್ನು ಬದಲಾಯಿಸಿ ರೈತರಿಗೆ ಅನುಕೂಲಮಾಡಬೇಕಾಗಿ ಕೋರುತ್ತೇವೆ. ಮೈಸೂರಲ್ಲಿ ಇದುವರೆಗೆ ಜಮ್ಮದ ಭೂಮಿಯನ್ನು ಕೋಆಪರೇಟಿವ್ ಸಾಲಕ್ಕಾಗಿ ಹರಾಜು ಮಾಡಿಸಿದವರು ಕೇವಲ ಕಮ್ಮಿ. ಸಂಘದವರೇ ಭೂಮಿಯನ್ನು ವಹಿಸಿಕೊಂಡು, ಅದರ ಉತ್ಪನ್ನದಿಂದ, ಸಾಲವನ್ನು ತೀರಿಸಿಕೊಳ್ಳಲು ಅನುಕೂಲವಿದೆ. ಆದ್ದರಿಂದ ಯಾರೂ ಈ ವಿಷಯ ಹೆದರ ಬೇಕಾಗಿಲ್ಲ. ಒಂದುವೇಳೆ ಹರಾಜುಮಾಡಿಸುವದಾದರೆ ಭೂಮಿ ರೂಪಿತಕ್ಕೋ, ಎತ್ತು ಕೊಳ್ಳಲಿಕ್ಕೋ, ಸಾಲ ತೆಗೆದುಕೊಂಡು ಹರಾಜು ಮಾಡಿಸಬಹುದಲ್ಲವೇ? ಜಮ್ಮದ ಆಡಳಿತವು ರೈತರ ಕೈಯ್ಯಲ್ಲಿಯೇ ಇರುವುದರಿಂದ, ನಮ್ಮ ಆಜನ್ಮಟ್ಟಿಯನ್ನು ರಕ್ಷಿಸಿಕೊಳ್ಳುವುದು ನಮ್ಮಗಳ ಕರ್ತವ್ಯ.

ಈಗ ಹೊಸತಾಗಿ ರಿಜಿಸ್ಟರಾಗಿರುವ, ಕೋ ಆಪರೇಟಿವ್ ಸೆಂಟ್ರಲ್ ಬ್ಯಾಂಕು ಎಲ್ಲಾ ಸಂಘಗಳಿಗೆ ಬೇಕಾದಷ್ಟು ಸಾಲವನ್ನು ಒದಗಿಸಿಕೊಡುವುದಕ್ಕೂ, ಅದಕ್ಕೆ ಅಡಗಿರುವ ಸಂಘಗಳ ಮೇಲು ಉಸ್ತುವಾರಿ ನೋಡಲಿಕ್ಕೂ ಬಹಳ ಅನುಕೂಲಗಳನ್ನೂ ದಗಿಸಿಕೊಡುತ್ತದೆ. ಆದ್ದರಿಂದ, ಈ ಸೆಂಟ್ರಲ್ ಬ್ಯಾಂಕ್ ಬೇಗನೆ ಕೆಲಸಮಾಡಲಿಕ್ಕೆ ಪ್ರಾರಂಭವಾಗುವುದೆಂದು, ದೇಶೀಯರೆಲ್ಲರೂ, ಆತ್ಯಾತುರದಿಂದ ಕಾಯುತ್ತೇವೆ

ಮಾರ್ಪಾಡುಗಳು.

ಕೊಡಗು ಕಮಿಷನರವರು ಕಳೆದ ತಾರೀಖು 17 ರಲ್ಲಿ ಮಾಡಿದ ಮೀಟಿಂಗ ಮತ್ತು ಅಲ್ಲಿ ಆದ ಚರ್ಚೆಗಳೂ ದೇಶೀಯರಿಗೆ ಬಹಳವಾದ ಅಸಮಾಧಾನವನ್ನುಂಟುಮಾಡಿವೆ. ದೇಶದ ಎಲ್ಲಾ ಭಾಗಗಳಿಂದಲೂ, ಮೇಲಣ ಮೀಟಿಂಗ್ ಜನಸಮ್ಮತವಾದುದಲ್ಲವೆಂತಲೂ, ಕೊಡಗಿಗೆ ಬೇರೆ ದೊಡ್ಡ ಪ್ರಾಂತ್ಯಕ್ಕೆ ಕೊಟ್ಟ ರೀತಿ ಸರಿಯಾದ ಮಾರ್ಪಾಡುಗಳನ್ನು ಕೊಡಲ ಕೂಡಬೇಕಾಗಿಯೂ ಇಲ್ಲವಾದರ ಕೊಡಗನ್ನು ಮದ್ರಾಸು ಆಧಿಪತ್ಯದ ಒಂದು ಜಿಲ್ಲೆಯನ್ನಾಗಿ ಮಾಡಬೇಕೆಂತಲೂ ಠರಾವುಗಳಾಗಿವೆ. ಈಗ ಕೊಡಬಹುದಾದ ನ್ಯಾಯವಿಧಾಯಕ ಸಭೆಯು ಜನರಿಗೆ ಯಾವ ವಿಧದಲ್ಲಿಯೂ ತೃಪ್ತಿ ಇಲ್ಲದ್ದರಿಂದ, ಕೊಡಗನ್ನು ಮದ್ರಾಸಿಗೆ ಸಂಪಿತವಾಗಿ ಸೇರಿಸಿಯಾದರೂ, ಬೇರೆ ದೇಶದವರ ಹಾಗೆ ಮಾರ್ಪಾಡುಗಳ ಸಂಪೂರ್ಣ ಅನುಭವವನ್ನು ಹೊಂದಬೇಕೆಂದು ಎಲ್ಲರೂ ನಿರ್ಧರಿಸಿದ್ದಾರೆ.

ಇದರ ಮಧ್ಯ ಜಮ್ಮ ಜಮ್ಮೇತರರ ಜಗಳ ಒಂದು ಕಡೆ. ಇನ್ನೊಂದು ಕಡೆ, ಜಮ್ಮದವರ ಪೈಕಿ, ಜಾತಿ, ಯಾ, ಕೋಮು ಅಂದರೆ ಗೌಡುಗಳವರು ಮುಸಲ್ಮಾನರು, ಮಾಪಿಳ್ಳೆಯವರು ಮತ್ತು ಶಿವಾಚಾರದವರುಗಳು, ಕೌನ್ಸಿಲ್ಲಿನಲ್ಲಿ ಸ್ಥಳ ಬೇಕೆಂದು ಒದ್ದಾಡುವ ಗಲಾಟೆ. ಈ ತರದ ಜಗಳಗಳು ನಮ್ಮ ದೇಶೀಯರ ಹಿಂದುಬಿದ್ದಿರುವಿಕೆಯನ್ನು ಸೂಚಿಸುತ್ತದೆಯಲ್ಲದೆ, ನಮ್ಮ ಮುಂದಿನ ಅಭಿವೃದ್ಧಿಗೆ ಕುಂದುಕವನ್ನುಂಟುಮಾಡುತ್ತೆ.

ಆದ್ದರಿಂದ ದೇಶೀಯರೆಲ್ಲರೂ ಏಕೋಭಾವದಿಂದ, ಜಾತಿ ಮತ ಭೇದಗಳಿಲ್ಲದೆ, ಈಗ ಕೊಡಬಹುದಾದ ಸಭೆಯನ್ನು ತಿರಸ್ಕರಿಸಿ, ಪೂರ್ತಿ ಮಾರ್ಪಾಡುಗಳನ್ನು ಹೊಂದುವ ಪ್ರಯತ್ನ ಮಾಡಬೇಕಾಗಿಯೂ, ಸ್ವರಾಜ್ಯವೇ ನಾವು ಪಡೆಯಬೇಕಾದ ಮನುಷ್ಯಜನ್ಮದ ಪುರುಷಾರ್ಥವೆಂದು ನಂಬಿ ಮಿತ್ರತ್ವವನ್ನು ವಹಿಸಬೇಕಾಗಿಯೂ, ವಿಂಗಡಿಸಿ ಆಳಲಿಕ್ಕೆ ಆಸ್ಪದ ಕೊಡಬಾರದಾಗಿಯೂ ಕೋರುತ್ತೇವೆ.

ಮಲಬಾರ್ ದಂಗೆ.

ಎರ್‌ನಾಡ್, ಟಿರೂರು, ವಾಲುವನಾಡ್, ಪೊನ್ನಾನಿ ತಾಲೋಕುಗಳಲ್ಲಿ ಗಲಾಟೆಗಳು ಹೆಚ್ಚಾಗಿ ಆಗುತ್ತಾ ಇವೆ. ಈ ಸ್ಥಳಗಳಲ್ಲಿ ಮಾರ್‌ಶ್ಯಲ್ ಲಾ, ಜಾರಿ ಮಾಡಿರುತ್ತಾರೆ. ಕಲ್ಲೀಕೋಟೆಗೆ ಈ ಸ್ಥಳಗಳಿಂದ, ಯಾವ ಮಾಪಿಳ್ಳೆಯು ಬಾರದ ಹಾಗೂ, ಒಂದುವೇಳೆ ಬಂದರೆ, ಅವರಿಗೆ ಇರಲಿಕ್ಕೆ ಜಾಗ ಕೊಡಬಾರದ ಹಾಗೂ ಹುಕ್ಕುಂ ಮಾಡಿರುತ್ತಾರೆ.

ಪೋಕತ್ತೂರ್ ಎಂಬ ಸ್ಥಳದಲ್ಲಿ, ಮಿಲಿಟರಿಯವರಿಗೂ ಅಲ್ಲಿ ಅವಿತುಕೊಂಡಿದ್ದ ಮಾಪಿಳ್ಳೆಯವರಿಗೂ, ಚಕ್ಕಮಕ್ಕಿ ನಡೆದು 400 ಜನ ಮಾಪಿಳ್ಳೆಯವರು ಸತ್ತರು. ಅನೇಕರಿಗೆ ಗಾಯವಾಯಿತು. ಕೋವಿ, ಕತ್ತಿ ವಗೈರೆ ಯುದ್ಧದ ಸಾಮಾನುಗಳು ಸ್ವಾಧೀನಮಾಡಲ್ಪಟ್ಟವು. ಸರಕಾರದವರ ಕಡೆ ಮೂರು ಜನರು ಸತ್ತರು ಮತ್ತು ಏಳು ಜನರಿಗೆ ಗಾಯವಾಯಿತು.

ದಂಗೆಯು ಮುಖ್ಯ ಜಾಗವಾದ ತಿರುರಂಗಡಿಯಲ್ಲಿರುವ ಮಾಪಿಳ್ಳೆಯವರು ಸರಕಾರದವರ ಸಂಗಡ ರಾಜಿ ಒಪ್ಪಂದ ಮಾಡಲಿಕ್ಕೂ, ಸೋತೆವು ಎಂದು ಒಪ್ಪಿಕೊಳ್ಳಲಿಕ್ಕೂ, ತಿರಸ್ಕರಿಸಿದರು. ಇವರ ಮುಂದಾಳಾದ ಆಲಿ ಮೊಸಲಿಯರ್‌ರವರು ತಿರುರಂಗಡಿ ಒಳಿಯಲ್ಲಿರುವ ಮಾಮಾಪುರಂ ಎಂಬ ಸ್ಥಳದಲ್ಲಿ ಅಡಗಿಕೊಂಡಿರುತ್ತಾನೆ.

ದಂಗೆ ಕೋರರು ಕಂಡ ಕಂಡ ಜಾಗಗಳನ್ನು ಲೂಟಿ ಮಾಡುತ್ತಾ, ಜನರಿಗೆ ಬೆದರಿಕೆಯುಂಟುಮಾಡುತ್ತಾರೆ. ಅನೇಕ ಸ್ಥಳಗಳು, ಖಜಾನೆಗಳು, ಐಶ್ವರ್ಯವಂತರ ಮನೆಗಳು ಲೂಟಿ ಮಾಡಲ್ಪಟ್ಟವು. ಕಲ್ಲಿಕೋಟೆ ಪಟ್ಟಣದವರು ಬಹಳ ಹೆದರಿಕೆಯಿಂದ ನಾಲ್ಕೈದುದಿನ ನಿದ್ರೆಯಿಲ್ಲದೆ, ಅವರು, ಯಾವಾಗ ಬಂದು ಲೂಟಿ ಮಾಡಲ್ಪಡುತ್ತಾರೋ ಎಂಬ ಭಯದಿಂದಿದ್ದರು. ಆದರೆ ಈಚೆಗೆ ಮಿಲಿಟರಿಗಳು ಬಹಳವಾಗಿ ಬಂದದ್ದರಿಂದ, ಪುಂಡುಗಾರರ, ತಂಟೆಯನ್ನು ಪೂರ ಅಡಗಿಸುವುದರಲ್ಲೇ ಇರುತ್ತಾರೆ. ಈಗ ರೈಲ್‌ಗಳು ಮುಂದಿನಂತೆ ಓಡಲಿಕ್ಕೆ, ಸುರುವಾಗಿ ಜನರಿಗೆ ಅನುಕೂಲವನ್ನುಂಟುಮಾಡಿವೆ.

ತಿರುರಂಗಡಿ ಎಂಬ ಸ್ಥಳದಲ್ಲಿ ಆದ ಕದನದಲ್ಲಿ ಆಲಿಮೊಸಲಿಯಾರು ಮತ್ತು 42 ಜನ ಮಾಪಿಳ್ಳೆಯವರು ಕೈದಿಯಾಗಿ ಮಾಡಲ್ಪಟ್ಟರು, ಮತ್ತು ಅನೇಕ ಜನರು ಸತ್ತರು. ಸರಕಾರದವರ ಕಡೆ ಒಬ್ಬನು ಸತ್ತನು. ನಾಲ್ಕು ಜನರಿಗೆ ಗಾಯವಾಯಿತು. ಮಂಜೇರಿಯ ಹತ್ತಿರ ಇರುವ ಬೀದಿಯಲ್ಲಿ ದಂಗೆ ಕೋರರು ಒಬ್ಬ ರಿಟೈರ್ಡ್ ಇನ್ಸ್‌ಪೆಕ್ಟರ್ ಖಾನ್‌ಬಹದೂರು ಚೆಯಿಕುಟ್ಟಿಯವರ ಮತ್ತು ಇನ್ನೊಬ್ಬ ಮಾಪಿಳ್ಳೆ ಪೋಲೀಸಿನವನ ತಲೆ ಕಡಿದು ಮುಂಡವನ್ನು, ಈಟಿಗೆ ಸಿಕ್ಕಿಸಿಕೊಂಡು ಮೆರವಣಿಗೆ ಮಾಡಿದರೆಂದೂ, ಕಂಡ ಕಂಡ ಹಿಂದುಗಳನ್ನು, ಮಾಪಿಳ್ಳೆ ಜಾತಿಗೆ ಕೂಡದೆ ಇದ್ದರೆ, ಕೊಲ್ಲುತ್ತೇವೆ ಎಂಬದಾಗಿಯೂ ಹೆದರಿಸುತ್ತಾರೆಂದು ವರ್ತಮಾನ. ಸರಕಾರಕ್ಕೆ ಬಂದಿದೆಯಂತೆ ದಂಗೆ ಕೋರರಿಗೆ ನಿವೃತ್ತಿ ಇಲ್ಲದೆ ತಿರುರಂಗಡಿಯಲ್ಲಿ ಅವರಸ್ಥಕ್ಕೆ ಅವರೇ ಹೋಗಿ ಶರಣಾಗತರಾದರಂತೆ. ಮುನ್ನೂರು ಜನರಿಗಿಂತ ಹೆಚ್ಚಾಗಿ ಹಿಂದುಗಳು, ಒತ್ತಾಯದಿಂದ ಮಾಪಿಳ್ಳೆಯವರ ಮತಕ್ಕೆ ಸೇರಿಸಲ್ಪಟ್ಟರಂತೆ.

ಈ ದಂಗೆಗಳ ದೆಸೆಯಿಂದ, ಎರ್‌ನಾಡ್, ಮತ್ತು ವಾಲುವನಾಡು ತಾಲೋಕುಗಳಲ್ಲಿ, ಕ್ಷಾಮವು ತಲೆದೋರುವದಾಗಿ ತಿಳಿಯುತ್ತೇವೆ. ದಂಗೆ ಕೋರರು ಹೆಚ್ಚಾಗಿ ಆಳುಗಳಿದ್ದರಿಂದ ಭೂಮಾಲಿಕರಿಗೆ ಅಲ್ಲಿಯ ಬೆಳೆ ಪಸಲುಗಳನ್ನು [illegible] ತ್ತಾವಳಿ ಮಾಡುವುದು ಅತ್ಯಂತ ಕಷ್ಟವಾಗಿರುತ್ತೆ. ಅವರುಗಳಿಗೆಲ್ಲಾ ಕೊಟ್ಟಿರುವ ಸಾಲಗಳನ್ನು ಸಹ ವಸೂಲ್ಮಾಡುವುದು ಕಷ್ಟವಾಗಿರುತ್ತೆ. ಕಾಂಗ್ರೆಸ್ ಸಭೆಯ ಮೆಂಬರುಗಳಾದ ಮೆ|| ಕೇಶವ ಮೆನನ್‌ರವರು, ಪ್ರಕಾಶಂರವರು, ಮತ್ತು ವೆಂಕಟರಾಮೈಯ್ಯರವರು ದಂಗೆ ನಿಲ್ಲಿಸಲಿಕ್ಕು ಮತ್ತು ಜನರಿಗೆ ಯಾವತರದ ಗಲಭೆಗೆ ಆಸ್ಪದ ಮಾಡಬಾರದೆಂದೂ ಬೋಧಿಸುತ್ತಲೇ ಇದ್ದಾರೆ. ತಿರುರಂಗಡಿ, ಪೊನ್ನಾನಿ, ಮಣ್ಣಾರ್ ಗಾಟಿನಲ್ಲಿ ಗಲಾಟೆಗಳು ಆದಾಗ್ಯೂ, ಎಲ್ಲವೂ ಅಡಗಿಸಲ್ಪಡುತ್ತಲೇ ಇವೆ. ದಂಗೆ ಕೋರರನೇಕರು ಸೆರೆ ಹಿಡಿಯಲ್ಪಟ್ಟಿದ್ದಾರೆ. ಆಲಿಮೊಸಲಿಯಾರು ಮತ್ತು ಅವನ ಹಿಂಬಾಲಿಕರನ್ನು ಕೊಯಿಬತ್ತೂರು ಸೆಂಟ್ರಲ್ ಜೇಲಿಗೆ ಸಾಗಿಸಿರುತ್ತಾರೆ. ಈ ಗಲಾಟೆ ಸ್ಥಳಗಳಲ್ಲಿದ್ದ ಎಲ್ಲಾ ಪೋಸ್ಟ್ ಮತ್ತು ತಂತಿ ಆಫೀಸುಗಳನ್ನು ಸ್ವಲ್ಪಕಾಲ ತೆರೆಯಬೇಕಾಗಿ ಪೋಸ್ಟುಮಾಸ್ಟರವರು ಹುಕುಂ ಮಾಡಿರುತ್ತಾರೆ. ಆದ್ದರಿಂದ ದಂಗೆಯು ಒಡನೇ ನಿಂತು ಸರಕಾರಕ್ಕೂ ಪ್ರಜೆಗಳಿಗೂ ಅನುಕೂಲವಾಗುವಂತೆ ಎಲ್ಲರೂ ಪ್ರಯತ್ನಿಸಬೇಕಾಗಿದೆ.

ವರ್ತಮಾನ ಸಂಗ್ರಹ.

ಜಿಲ್ಲೆಯದು.

ಈ ತಾರೀಖು 16 ನೇ ದಿನ ಕೊಡಗು ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗ್ ಜಗುತ್ತದೆ

ಮಡಿಕೇರಿ ಪೋಸ್ಟಾಫೀಸಿನಲ್ಲಿ ಗುಮಾಸ್ತನ ಕೆಲಸ ದಿಂದ ತಂತೀಪರ್ವಮಾದ ದರ್ಜೆಗಳನ್ನು ಒರಡವನ್ನು ವಹಿಸಿರುತ್ತಾರೆ

ಕಳೆದ ವಾರದಲ್ಲಿ ದೇಶದ ಎಲ್ಲಾ ಭಾಗಗಳಲ್ಲಿಯೂ ಕೊಡಗಿಗ ಕೊಡಬಹುದಾದ ಸ್ವಾಯಮಾಡಳಿತದ ವಿಷಯ ಮೀಟಿಂಗ್‌ಗಳು ಆದವು.

ಹತ್ತುಗಟ್ಟುನಾಡು ಒಂದು ಗ್ರಾಮದಲ್ಲಿ ಕೆಲವರು ಮದ್ಯಪಾನವನ್ನು ಶುಭಾ ಶುಭಗಳಲ್ಲಿ ಕುಡಿಸುವುದನ್ನು ಬಿಟ್ಟಿದ್ದಾರೆಂದೂ ಒಬ್ಬರು ತಿಳಿಸಿರುತ್ತಾರೆ

ಕೊಡಗಿನ ಕಮಿಷನರವರು ಈ ರೀತಿ ನಡಿಯುತ್ತಿದ್ದಂತೆ ಜವಾಬಂದಿಯನ್ನು ಪ್ರತಿ ತಾಲ್ಲೋಕಿನ, ಮುಖ್ಯ ಊರುಗಳಲ್ಲಿ ಮಾಡುತ್ತಾರಾಗಿ ತಿಳಿದು ಬಂದಿದೆ

ಮಡಿಕೇರಿಯಿಂದ ಮೂರ್ನಾಡಿಗಾಗಿ ವೀರರಾಜಪೇಟೆಗೆ ಹೋಗುವ ರಸ್ತೆಯು ಹೀನಸ್ಥಿತಿಯಲ್ಲಿದ್ದ ಬದಲು ಅದನ್ನು ತೆಗೆದುಕೊಂಡು ಹೋಗಿ ಸಮಮಾಡುವರೆಂದು ನಂಬುತ್ತೇವೆ

ಹೆಗ್ಗಡೆಯವರು ಎಲ್ಲಿಂದ ಒಂದವರು ಅವರ ಸಂಬಂಧ ಪತ್ರಿಕೆಯನ್ನು ಒಬ್ಬರು ಬರೆದಿರುತ್ತಾರೆ ಸ್ಪಷ್ಟವಾಗಿ ಬರೆಯದ್ದರಿಂದ ಪ್ರಕಟಿಸಲಿಲ್ಲ ಆದ್ದರಿಂದ ಸ್ಪಷ್ಟವಾಗಿ ಬರೆದು ಕಾಗದದಲ್ಲಿ ಒಯ್ಯಬೇಕಾಗಿ ಸೂಚನೆ

ಕಿರುಂದಾಡು ದೇವಸ್ಥಾನವು ಪೂರ್ಣವಾಗಿ ಬಿದ್ದು ಹೋಗಿದೆಯೆಂದೂ, ಅಪ್ಪಾರನಂಡ್ರ ವರ ಗುಣವಂತ ನನ್ನು ಕೇಳಿ ದೂ, ಸುತ್ತಮುತ್ತಲಿನ ಗ್ರಾಮಗಳ ಜನರನ್ನು ಪ್ರಾರ್ಥಿಸುತ್ತಾರಾಗಿಯೂ, ಪಾಂಗಂಡ್ರ ಜನರು ಬರೆಯುತ್ತಾರೆ

ಕುಂಜಿಲಗೇರಿ ಗ್ರಾಮದ ಮುಖ್ಯಸ್ಥರು ಕೆಲವರು ಗ್ರಾಮಾಭಿವೃದ್ಧಿಯಲ್ಲಿ ತೊಂದರೆ ಮಾಡುತ್ತಾರೆ ಗಿಯೂ ಅದರ ದೇವಸ್ಥಾನದ ಉದ್ಧಾರದ ಮಾತ್ರ ಉದಾಸೀನರಾಗಿರುತ್ತಾರೆಂದೂ, ದೇವಸ್ಥಾನದ ಕಮಿಟಿ ಮೆಂಬರುಗಳವರೇ ಜವಾಬುದಾರರೆಂದೂ ಬರೆದಿರುತ್ತಾರೆ

ಕೂಡ್ಲಿಪೇಟೆಯಲ್ಲಿ ಫಾರೆಸ್ಟರಾಗಿದ್ದ ಮಂಜಪ್ಪನವರ ಪತ್ನಿಯು ದಿವಾಧೀನರಾದರೆಂದೂ, ಕೊಡಗಿನ ಪದ್ಧತಿಯಂತೆ ಶ್ರವವನ್ನು ದಹನಮಾಡಿದರೆಂತಲೂ ಸುತ್ತ ಮುತ್ತಲು ಇರುವ ಎಲ್ಲಾ ಕೊಡಗರು ಬಂದು ಮುಹೂರ್ತವನ್ನು ಮಾಡಬೇಕೆಂತಲೂ ತೀರ್ಮಾನಿಸಿದರೆಂದು ಒಬ್ಬರು ಬರೆಯುತ್ತಾರೆ

ಕಳೆದ ತಾ|| 17 ರ ಕಮಿಷನರವರ ಮೀಟಿಂಗಿನಿಂದ ಹೊರಗೆ ಕಳುಹಿಸಲ್ಪಟ್ಟ ಮಿ|| ಕೂಡಂಡ ಮಾದಯ್ಯನವರು ಅವರಿಗೆ ಏನೂ ಮಾಡದೂ, ಚೆಪ್ಪುಡಿರ ಸುಬ್ಬಯ್ಯನವರೂ ಅವರಿಗೆ ಏನ ಮಾಡದ ಹಾನಿಗಾಗಿ ಕಠಿಣವಾದ ಕಾಗದಗಳನ್ನು ಕಮಿಷನರಿಗೆ ಬರೆದುದಾಗಿಯೂ ಅದಕ್ಕೆ ಇವರು ತಕ್ಕ ಉತ್ತರ ಕೊಟ್ಟಿರುತ್ತಾರಾಗಿಯೂ ತಿಳಿಯುತ್ತೇವೆ

ಬೆಟ್ಟತ್ತನಾಡು ದೇವಸ್ಥಾನಕ್ಕೆ ಸಂಬಂಧಪಟ್ಟವರು ಇನ್ನು ಮುಂದೆ ಶುಭ ಕಾರ್ಯಗಳಲ್ಲಿಯೂ ಹಬ್ಬ ಗಳಲ್ಲಿಯೂ, ನಿಷಿದ್ಧ ಪದಾರ್ಥ ನೀಡುವುದಿಲ್ಲವೆಂದು ನಿರ್ಧಾರ ಮಾಡಿರುತ್ತಾರಾಗಿಯೂ ಅವರು ಇದ ನಿರ್ಧಾರ ಮಾಡಿರುವುದು ಸರಿಯಾಗಿ, ಅದನ್ನು ಮೆಚ್ಚತಕ್ಕದ್ದೆಂದೂ ಒಬ್ಬರು ಬರೆಯುತ್ತಾರೆ

ನಾಪೋಕ್ಲಿನಿಂದ ಪಾರಾಣೆ ಕುಂಜಿಲಗೇರಿ ಬೆಟ್ಟಮಾಡಿಗಾಗಿ ವೀರರಾಜಪೇಟೆಗೆ ಹೋಗುವ ರಸ್ತೆಯು ಈ ಮಳೆಗಾಲದಲ್ಲಿ ಗಾಡಿ ಹೋಗುತ್ತಿದ್ದುದು, ಜನರ ಪ್ರಯಾಣಕ್ಕೆ ಅನಾನುಕೂಲವಾಗಿದೆ ಡಿ|| ಬೋರ್ಡಿನವರು ಇದನ್ನು ತಾಲ್ಲೋಕಿನ ಎಲ್ಲಾ ಜನರಿಗೆ ಅನುಕೂಲಕ್ಕೆ ಅವಶ್ಯವಾದ ಈ ರಸ್ತೆಯನ್ನು ದುರಸ್ತು ಮಾಡಬೇಕಾಗಿದೆ

ಕುಂಜಿಟ್ಟಿರ ಪೊನ್ನಪ್ಪನವರ ಮಗ ಬಯಿಸಿ ನವರು ಈಗಿನ ಕಾಲಾವಸ್ಥೆಗೆ ಸರಿಯಾಗಿ ಒಳ್ಳೆಯ ಒಂದು ಉಪನ್ಯಾಸವನ್ನು ಕೊಟ್ಟಿರುತ್ತಾರೆ ಅದರಿಂದ ಅವರು ಈ ಪತ್ರಿಕೆಯನ್ನು, ನಾಲ್ಕು ರಾಟೆಯನ್ನು ಪ್ರೋತ್ಸಾಹಿಸಬೇಕೆಂದೂ, ದೇಶದ ಕೆಲಸದಲ್ಲಿ ಎಲ್ಲರೂ ಮುಂದಾಗಬೇಕೆಂದೂ ಬರೆದಿರುತ್ತಾರೆ ಸ್ಥಳಾಭಾವದಿಂದ ಎರಡನೇ ಕಾಗಿಯೂ ಬಾತ್ಮಿಗಳನ್ನು ಪ್ರಕಟಿಸಲಿಲ್ಲ

ಮೈತಾಡಿ ಗ್ರಾಮದ ಮತ್ತು ಅದರ ಸುತ್ತಲೂ ಇರುವ ಗ್ರಾಮಗಳಿಗೆ ಗಾಡಿ ರಸ್ತೆಗಳಿಲ್ಲದೆ, ಜನಕ್ಕೆ ತೊಂದರೆಯಿಂದ, ದೇವಣಗೇರಿಯಿಂದ ಒರುವ ದಾರಿಯನ್ನು, ಹೆಗ್ಗಳ ರಿಂದ ಪೇಟೆ ಮೂರ್ನಾಡು ರಸ್ತೆಗೆ ಸೇರಿಸಿ ಒಳ್ಳೆಯ ರಸ್ತೆ ಮಾಡಿ, ಜನರಿಗೆ ಅನುಕೂಲಮಾಡಬೇಕೆಂದೂ, ಈ ಸಂಗತಿ ಅನೇಕ ದಿನಗಳಿಂದ, ಡಿ|| ಬೋರ್ಡಿನವರಿಗೆ ತಿಳಿಸಿ ಫಲವಿಲ್ಲದೆ ವರ್ಷಗಳಿಂದ, ಹೋಯಿತೆಂದೂ, ಒಬ್ಬರು ಬರೆಯುತ್ತಾರೆ.

ಪ್ರಶ್ನೆಗಳು — ಮಿ|| ರಾಮನಾಥನ್ ಈ ಜಂಗಪ್ಪನವರಿಗೆ ಡಿಸ್ಟ್ರಿಕ್ಟ್‌ಮ್ಯಾಜಿಸ್ಟ್ರೇಟ್ ಕೆಲಸ ಸಿಕ್ಕಿದುದಕ್ಕೆ ಬಹುಮಾನಪತ್ರವನ್ನು ಕೊಡುವ ವಿಷಯ ಏನಾಯಿತು?

ಗೋಕಲೆ ಪಂಡಿತ ಎಲಿವಾಳ ನ ಏನಾಯಿತು.

ಮಡಿಕೇರಿ ನಿವಾಸಿಗಳು ಮಧ್ಯಸ್ಥನವನ್ನು ಶುಭ ಶೋಭನದಲ್ಲಿ ಉಪಯೋಗಿಸಿದ ನಿಲ್ಲಿಸುವಂತೆ ನಿರ್ಧಾರ ಮಾಡಿರುತ್ತಾರೆ ಇದ್ದನ್ನು ನಾಗಾರವಾಗಿ, ಪ್ರಜ್ಞಾವಾದ ಮನೆಯಲ್ಲಿ ಕಥೆಯೂ, ಸ್ವರ ಪ್ರಯುಕ್ತ ಮಾಡಿದ್ದು, ಒಂದು ಮನೆ ಮಧ್ಯಪಿನ್ನ, ನಡೆದಿದ್ದು, ಅದ್ದೂರಿಯಾಗಿದ್ದ ಮಡಿಕೇರಿಯವರು, ಈ ರೀತಿ ಮಾಡಿದ್ದರಿಂದ ದೇಶದವರು ಇದನ್ನು ಓದಿ ಕೊಳ್ಳಬೇಕಾಗಿ ಆತುರರಾಗುವುದಾಗಿ ನಂಬುತ್ತೇವೆ

ಭಾಗಮಂಡಲ ನಾಡಿಗೆ ಸೇರಿದ ಅಯ್ಯಂಗೇರಿ ಗ್ರಾಮದಲ್ಲಿ ಒಂದು ಶಾಲೆಯೂ ವರಿಷ್ಠ ಶಿಕ್ಷೆಯೂ ಅದಕ್ಕಾಗಿ ಈ ಶಾಲೆಯನ್ನು ನಿಲ್ಲಿಸಬೇಕೆಂದು ಕೊಂಡಿರುತ್ತಾರೆ ದುರಾಗಳು ಈ ಶಾಲೆ ನಮ್ಮ ಗ್ರಾಮದ ಮುಖ್ಯಸ್ಥರಾದ ಮಿ|| ಕ್ಯಾಂಪಿನವರು ನಡೆಸುತ್ತಿದ್ದ ಗ್ರಾಮದ ಮುಖ್ಯಸ್ತರಾದ ಮಿ|| ನ್ಯಾಯವಾದ ಮಾಡಬೇಕೆಂದೂ ಗ್ರಾಮದವರು ಪತ್ರದಿಂದ ಒಂದು ತಿಳಿಸುತ್ತಾರೆ ಮಿ|| ಮಾಡಬೇಕೆಂದು ನರ್ಮೋನರಿಯಿಂದಲೂ, ಐದಲು ಶಾಲೆ ಯಾಗಿದ್ದ ಕಾರಣ ಕೇಳಿದರೆ ತೆಗೆದುಕೊಳ್ಳಲು ಗ್ರಾಮದ ಅಭಿವೃದ್ಧಿಯಲ್ಲಿ ಇದ ಗಣನೆ ತೆಗೆದುಕೊಳ್ಳು ತ್ತಾರೆಂದಾಗಲು ಒಬ್ಬರು ಬರೆದಿರುತ್ತಾರೆ.

ಈ ತಾರೀಖು 6 ರಲ್ಲಿ ನಡೆದ ಪೇಟೆಯಲ್ಲಿ ಕೊಡಗಿನ ಎಲ್ಲಾ ಮಡಿಕೇರಿ ನಾರಿ ಶ್ರೀಮತಿ ಕೊಡಂಡ ಬೋಳಮ್ಮ ನವರು ರವರಿಗೆ ಒಂದು ಸನ್ಮಾನಪತ್ರವನ್ನು ಮಡಿಕೇರಿಯಲ್ಲಿ ನಮ್ಮ ನೆರವು ನಾವು ಎಲ್ಲವನ್ನೂ ಕೊಡಲಾದ ವರ್ತಮಾನಪತ್ರ ಒಂದು ಓದಿಸಲಾಗಿತ್ತು ಸ್ತ್ರೀಯರ ಇದ್ದ ಸಭೆಯಲ್ಲಿ ಶ್ರೀಮತಿ ರಾಮನ್ನಾಳ ಪಡೆ ದಿದ್ದು ಒಂದು ಇತರ ಸಭೆ ಬಂಗಾರದ ಅಧ್ಯಕ್ಷತೆಯಲ್ಲಿ ಇದರಿಂದ ಒಂದು ಕಾಣಿಕೆ ಚಂದ್ರದ ಪ್ರಾಯಶ್ಚಿತ್ತ ಒಪ್ಪಿಸಿದರು ಕೊಡಗು ಜಿಲ್ಲೆಯ ಸ್ತ್ರೀಯರಲ್ಲಿ ಪರೀಕ್ಷೆಯಲ್ಲಿ ದೇಶೀಯ ಸ್ತ್ರೀಯರಲ್ಲಿ ಪ್ರಥಮ ಸ್ಥಾನ ಶ್ರೀಮತಿ, ಬೋಳಮ್ಮನವರು.

ಪೊನ್ನಂಪೇಟೆಯಲ್ಲು ಕೆಲವು ದಿನಗಳ ಹಿಂದೆ ಒಬ್ಬ ಮಾಪಿಳ್ಳೆಯು ಒಬ್ಬ ತೀಯರ ಹುಡುಗನನ್ನೂ ಮತ್ತು ಒಬ್ಬ ನಾಯರ ಹುಡುಗನನ್ನು ಮಾಪಿಳ್ಳೆಯವರ ಮತಕ್ಕೆ ಸೇರಿಸುತ್ತಾನೆಂದು ಮಕ್ಕಳನ್ನು ಚಿಕ್ಕ ಪ್ರಾಯದಲ್ಲಿ ತಿಳುವಳಿಕೆಯು ಚೆನ್ನಾಗಿ ಇಲ್ಲದೆ ಇರುವಾಗ ಅವರ ಮತದಿಂದ ಇನ್ನೊಂದು ಮತಕ್ಕೆ ಸೇರಿಸುವದು ನ್ಯಾಯವಲ್ಲವೆಂದೂ ಇದರ ವಿಷಯ ತಂದೆತಾಯಿಗಳು ಎಚ್ಚರಿಕೆ ತೆಗೆದುಕೊಳ್ಳಬೇಕೆಂದೂ ಒಬ್ಬರ ಬಾತ್ಮಿ.

ಫ್ರೇಜರ್‌ಪೇಟೆ ಪೋಲೀಸ [illegible]. ಬಜ್ಪಾಲೆ, ಶ್ರೀಂಗಾಲಗಳಲ್ಲಿ ಹೆಚ್ಚಾಗಿರುವ ಪಂಚಮರೂ, ಮಡಿಕೇರಿ ಉಕ್ಕಡದ ಪಂಚಮರೂ ಸೇಂದಿ ಸಾರಾಯಿ ಮೊದಲಾದ ಪದಾರ್ಥಗಳು ತನ್ನ ಆರೋಗ್ಯವನ್ನು ಕೆಡಿಸಿ ದುಡಿಯುವ ಶಕ್ತಿಯನ್ನು ಕುಂದಿಸುತ್ತವೆಂತಲೂ ಬುದ್ಧಿಯನ್ನು ಹಾಳುಮಾಡಿ ಕಲಹಗಳನ್ನು ಹೆಚ್ಚಿಸುತ್ತವೆಂತಲೂ ತಿಳಿದುಕೊಂಡು ಅವುಗಳನ್ನು ಸೇವಿಸುವದನ್ನು ಪೂರ್ತಿಯಾಗಿ ನಿಲ್ಲಿಸಲು ಏರ್ಪಾಡುಗಳನ್ನು ಮಾಡುತ್ತಾ ಇದ್ದಾರೆ. ಇಂಥಾವುಗಳನ್ನಾದರೂ ನೋಡಿ ಬುದ್ಧಿವಂತರೆನ್ನಿಸಿಕೊಳ್ಳುವ ಉತ್ತಮರು ಕಣ್ಣು ತೆರೆಯಬಾರದೆ?

ಶ್ರೀ ಕಾವೇರಿ ತುಲಾಸಂಕ್ರಮಣದ ಮುಹೂರ್ತ ಪಟ್ಟಿ.—(1) ಸನ್ 1921 ನೇ ಇಸವಿ ಅಕ್ಟೋಬರ್ ತಾರೀಖು 14 ನೇ ಶುಕ್ರವಾರದಿನ ಮಧ್ಯಾಹ್ನ 11 ಗಂಟೆ 23 ಮಿನಿಟಿಗೆ ಸರಿಯಾಗಿ ಧನುರ್ಲಗ್ನ ಗುಡಿಕಾಲ ಹೊರೆಯಲ್ಲು ಅಕ್ಷಯಪಾತ್ರ ಇಡುವ ಶುಭಮುಹೂರ್ತ. (2) ಸದ್ರಿ ದಿನ ಸಾಯಂಕಾಲ 5 ಗಂಟೆಗೆ ಸರಿಯಾಗಿ ಮೀನಲಗ್ನ ಕನಿಕಾಲ ಹೊರೆಯಲ್ಲು ಕಾಣಿಕ್ಕೆ ಡಬ್ಬಿ ಇಡುವ ಶುಭಮುಹೂರ್ತ (3) ಇದೇ ಅಕ್ಟೋಬರ್ ತಾರೀಖು 30 ನೇ ಆದಿತ್ಯವಾರ ದಿನ ಅಂದರೆ ಕನ್ಯಾಮಾಸ ತೇದಿ 30 ನೇ ದಿನ ರಾತ್ರೆ 2 ಗಂಟೆ 21 ಮಿನಿಟಿಗೆ ಸರಿಯಾಗಿ ಶ್ರೀ ಮೂಲಕಾವೇರಿಯಮ್ಮನವರ ತೀರ್ಥೋದ್ಭವ ಪುಣ್ಯಕಾಲ

ಕುಂಟಿಕೊಪ್ಪಲುಕಡೆ ಹಳ್ಳಸ್ಥಳಗಳಲ್ಲಿ ಭತ್ತದ ಬೆಳೆಯು ಚೆನ್ನಾಗಿರುವದಿಲ್ಲ. ಆದರಲ್ಲೂ ಕೊಳವೆ ಹುಳುಗಳ ದೆಸೆಯಿಂದ ಇರುವ ಬೆಳೆಯೂ ನಾಶವಾಗುತ್ತಾ ಬರುತ್ತಿದೆ ನಾಲ್ಕುನಾಡುಕಡೆ ಭತ್ತದ ಬೆಳೆಗೆ ಕಂಬಳಿಹುಳಗಳ ಅನಾಹುತವು ಹೆಚ್ಚು ತಾಬರುತ್ತಿದೆ. ದೇಶದ ಕೆಲವು ಕಡೆಗಳಲ್ಲಿ [illegible] ಸಾಲದೆ ಇರುವದರಿಂದ ಇನ್ನೂ ನಾಟಿ ಕೆಲಸವು ಪೂರೈಸಿರುವದಿಲ್ಲ ದೇಶದ ಸಾಧಾರಣ ಎಲ್ಲಾ ಭಾಗಗಳಲ್ಲಿ ಈ ವರ್ಷ ಮಳೆಯು ಹೆಚ್ಚಾದ್ದರಿಂದ ಪೈರುಗಳ ಬೆಳವಣಿಗೆಯು ಇನ್ನೂ ಚೆನ್ನಾಗಿ ಆಗಿರುವದಿಲ್ಲ ಈಗ ಹುರುಪಾಗಿರುವಹಾಗೆ ಬಿಸಿಲು ಕಾಯುತ್ತಾ ಬಂದರೆ ಮುಂದಕ್ಕೆ ಬೆಳೆ ಒಳ್ಳೇಯದಾಗುವದು ಆದರೂ ಕಳೆದ ವರ್ಷದ ಬೆಳೆಯಷ್ಟು ಚೆನ್ನಾಗಿ ಈವರ್ಷ ಬೆಳೆಯುವ ಲಕ್ಷಣವಿಲ್ಲವಾಗಿ ರೈತರ ಅಭಿಪ್ರಾಯ.

ಕೂಡ್ಲೂರುಪೇಟೆಯಲ್ಲು ಇರುವ ಬಾಚಳ್ಳಿ ಶಿದ್ಲಿಂಗಪ್ಪನವರಿಗೆ ಕೃಷ್ಣರಾಜಪೇಟೆಯಿಂದ ತಗ್ಗಳ್ಳಿ ಶಿದ್ಲಿಂಗಶೆಟ್ಟರೆಂಬುವರು 240 ರೂ. ಯ ಬಾಬ್ತು ಇನ್‌ಷೂರ್ ರಿಜಿಸ್ಟರನ್ನು ಟಪ್ಪಾಲು ಮೂಲಕ ಕಳುಹಿಸಿದನ್ನು ಶಾವತಿ ಒಗ್ಗೆ ಪೋಸ್ಟ್ ಮಾಸ್ಟರವರು ಶಿದ್ಲಿಂಗಮ್ಮನವರ ರಿಜಿಸ್ಟರ್ ರಶೀತಿಗೆ ರುಜು ತೆಗೆದುಕೊಳ್ಳುವಾಗ ಪಂಚಾಯ್ತರ ಮುಂದೆ ಇನ್‌ಷೂರ್ ಕವರನ್ನು ಒಡೆದು ನೋಡಲು ಅದರಲ್ಲಿ ಶಿದ್ಲಿಂಗಪ್ಪಶೆಟ್ಟಿ ಬರೆದ ಕಾಗದವೂ ಕೆಲವು ಕಾಗದದ ಚೂರುಗಳು ಮಾತ್ರ ಇದ್ದದ್ದೆ ಹೊರತು ನೋಟುಗಳೇನೂ ಇರಲಿಲ್ಲವೆಂದೂ ಇದರ ಫಲಿತಾಂಶವು ಏನಾಗುವದೋ ತಿಳಿಯಬೇಕೆಂತಲೂ ಒಬ್ಬರ ಪತ್ರವು ಬಂದಿದೆ ಇನ್ನು ಮುಂದೆ ರಿಜಿಸ್ಟರ್ ಇನ್‌ಷೂರನ್ನು ತೆಗೆದುಕೊಳ್ಳತಕ್ಕವರು ಎಚ್ಚರಿಕೆಯಲ್ಲಿರಬೇಕಾದದ್ದು ಅವಶ್ಯ.

ಶನಿವಾರಸಂತೆಯಲ್ಲಿ ಕಳೆದ ತಾ|| 13 ರಲ್ಲು ವೀರಶೈವ ವಿದ್ಯಾಫಂಡಿನ ವಿಷಯವಾಗಿ ಒಂದು ಮೀಟಿಂಗು ಸೇರಿತು. ಗೋಪಾಲಪುರದ ಮೆ|| ಕಾಳೇಗೌಡರು ಸಭಾಧ್ಯಕ್ಷರಾಗಿದ್ದರು ಮೆ|| ಕಲ್ಲಳ್ಳಿ ಸಿದ್ಧಬಸಪ್ಪಶೆಟ್ಟರೂ, ಮೆ|| ಬೆಲ್ಲದ ಸೋಮಪ್ಪನವರೂ ಒಳ್ಳೇ ರಂಜಿತವಾದ ಉಪನ್ಯಾಸಗಳನ್ನು ಮಾಡಿದರು ವೀರಶೈವರ ಪ್ರಮುಖರನೇಕರು ಸೇರಿದ್ದರು ಅಲ್ಲಿ ಸುಮಾರು 750 ರೂ ಜಮೆಯಾಯಿತು ಸೇರಿದ್ದವರ ಪೈಕಿ 12 ಜನರನ್ನು ಚುನಾಯಿಸಿ ಗ್ರಾಮಗಳಲ್ಲಿ ವಸೂಲಿ ಮಾಡುವಂತೆ ಏರ್ಪಾಡು ಮಾಡಿದ್ದಾರೆ ಮಠಾಧಿಪತಿಗಳಾದ ವೀರಶೈವರೂ, ದೇಶಾಭಿಮಾನಿಗಳಾದ ದೇಶೀಯರೂ ಮೇಲುಪಂಕ್ತಿಯನ್ನು ಅನುಸರಿಸಿದರೆ ದೇಶವು ಉನ್ನತಸ್ಥಿತಿಗೆ ಬರುವ ಕಾಲವು ದೂರವಿಲ್ಲವೆಂದು ಮೆ|| ಶನಿವಾರಸಂತೆ ಶ್ಯಾಮಣ್ಣನವರು ತಿಳಿಸುತ್ತಾರೆ.

ಕಳೆದವಾರ ಮಡಿಕೇರಿ ಪೋಲೀಸು ಮೈದಾನಕ್ಕೂ, ಕಾಸ್ಮೊ ಪಾಲಿಟನ್ ಕ್ಲಬ್ಬಿಗೂ ಮಧ್ಯ ಇರುವ ಬಾವಿಯೊಂದರಲ್ಲಿ ಒಂದು [illegible]ಯು ಬಿದ್ದದನ್ನು ಮೇಲಕ್ಕೆ ಜೀವಸಹಿತ ತೆಗೆಯಲು ಎಷ್ಟು ಪ್ರಯತ್ನಿಸಿದರೂ, ಆ ಬಾವಿಯು ಹಾಳುಬಿದ್ದು ಹೀನಸ್ಥಿತಿಯಲ್ಲಿರುವದರಿಂದ, ಸಾಧ್ಯವಾಗದೆ ಹೋಯಿತೆಂದೂ, ಈ ತರದ ಹಾಳು ಬಾವಿಗಳೂ ಕೆರೆಗಳೂ ಮಡಿಕೇರಿಯಲ್ಲಿ ಕೆಲವು ಇರುವವಲ್ಲದೆ ದೇಶದ ಬೇರೆ ಭಾಗಗಳಲ್ಲಿ ಅನೇಕವಿರುವದರಿಂದ ಅದರ ವಿಷಯ ಎಚ್ಚರಿಕೆ ತೆಗೆದುಕೊಳ್ಳಬೇಕಾದ ಮುನ್ಸಿಪಾಲಿಟಿಯವರಾಗಲಿ ಡಿ. ಪಿ. ಡಬ್ಲ್ಯು ಇಲಾಖೆಯವರಾಗಲಿ ಇದಕ್ಕೆ ಗಮನಕೊಟ್ಟು ಬಾವಿಗಳನ್ನು ಸರಿಪಡಿಸಬೇಕು ಇಲ್ಲವಾದರೆ ಮುಚ್ಚಿಸಬೇಕು ಹೀಗೆ ಮಾಡದೆ ಹೋದರೆ ಇನ್ನೂ ಅನೇಕ ನಷ್ಟಗಳುಂಟಾಗುವವೆಂದು ಒಬ್ಬ ಪಟ್ಟಣವಾಸಿಯವರು ಸೂಚಿಸುವರು.

ತಾ|| 25-9-21 ರಲ್ಲು ಕಾಕೋಟು ಪರಂಬಿನಲ್ಲಿ ಸರ್ವ ಕೊಡವ ಬ್ರಾಹ್ಮಣರ ಸಭೆಯೊಂದು ನಡೆಯಿತು ಶಾಸ್ತ್ರದಲ್ಲಿ ಆಪತ್ಕಾಲ ಬಂದಾಗ ಬ್ರಾಹ್ಮಣರು ಕೃಷಿಮಾಡಬಹುದೆಂತ ಇರುವದರಿಂದ ಈಗ ಹೂಡಬಹುದೋ, ಬಾರದೋ ಎಂಬ ವಿಷಯ ಚರ್ಚೆಯಾಗಿ ಸಭಿಕರಲ್ಲಿ 35 ಜನರು ಬಾರದೆಂತಲೂ, 1[illegible] ಜನರು ಬಹುದೆಂತಲೂ ಅಭಿಪ್ರಾಯ ಕೊಟ್ಟರು. ಬಲಿಯಾಳ (ಕಣದಿಂದ ಧಾನ್ಯದಾನ) ಮಾಡುತ್ತೇವೆಂತಲೂ ಇನ್ನು ಮುಂದೆ ಹೂಡುವದು ಅವಶ್ಯ ಬಿದ್ದಾಗ ಕೊಡಗು ಸಭೆಯವರ ಅನುಮತಿ ಕೇಳುತ್ತೇವೆಂತಲೂ, ಹೂಡಿದವರು ಒಪ್ಪುವವರೆಗೆ ಅವರನ್ನು ದೇವ ನಡಿಯ ಕೂಡದೆಂತಲೂ ಹೂಡಬಾರದೆಂಬುವದು ಕಟ್ಟುಮಾಡಿಕೊಂಡರು ಹೂಡಿದವರು ಬಲಿಯಚ್ಚ ಮಾಡಿಕೊಳ್ಳುತ್ತೇವೆಂತ ಒಪ್ಪಿದರೂ ಅನುಮತಿ

ಕೇಳುವ ವಿಷಯ ಆಲೋಚಿಸಿ ಹೇಳುತ್ತೇವೆಂತ ಸಮಯ ತೆಗೆದುಕೊಂಡರು ಎಂತ ಒಬ್ಬ ಬಾತ್ಮಿದಾರರು ಬರೆಯುತ್ತಾರೆ. ಈ ರೀತಿ ಕಲಹವು ತೀರುವ ಸಂಭವವಿರುವದನ್ನು ತಿಳಿಯಲು ಸಂತೋಷಿಸುತ್ತೇವೆ

ಹಿಂದೂದೇಶ.

ವಿದೇಶ ಬಟ್ಟೆಗಳನ್ನು ಕೊಂಡುಕೊಳ್ಳಬಾರದೆಂದು ಕಲ್ಕತೆಯಲ್ಲಿ ಬೋಧಿಸಿದಂತ 46 ಮಂದಿ ಅಸಹಕಾರಿಗಳನ್ನು ಪೋಲೀಸಿನವರು ಹಿಡಿದು ವಿಚಾರಣೆ ತಂದರು. ಜಡ್ಜಿಯವರು 5–10 ರೂ ಗಳಂತೆ ಜುಲ್ಮಾನೆ ವಿಧಿಸಿ, ಕೊಡದವರಿಗೆ ಸಜ ಮಾಡಿರುವರು.

ಬೊಂಬಾಯಿ ಮದ್ರಾಸು ನ್ಯಾಯವಿಧಾಯಕ ಸಭೆಗಳಲ್ಲಿ ಸ್ತ್ರೀಯರಿಗೆ ಓಟು ಕೊಡುವ ಹಕ್ಕು ಮಂಜೂರಾದ ನಂತರ ಬಂಗಳಾದ ಮಹಿಳೆಯರು ತಮಗೂ ಓಟು ಕೊಡುವ ಹಕ್ಕಿನ ವಿಷಯ ಅಲ್ಲಿಯ ಸಭೆಯಲ್ಲಿ ಒಂದು ಠರಾವು ತಂದರು. ಅಂಥಾ ಕಾಲವು ಇನ್ನೂ ಬರಲಿಲ್ಲವೆಂದು ಆ ಸಭಿಕರು ಈ ಠರಾವನ್ನು ತಿರಸ್ಕರಿಸಿದರಂತೆ.

ವೃಂದಾವನದಲ್ಲಿ ಪಂಡಿತ ಮದನಮೋಹನ ಮಾಳವ್ಯರವರ ಅಧ್ಯಕ್ಷತೆಯಲ್ಲಿ ಆಗಸ್ಟ 27 ರಲ್ಲು ನಡೆದ ಗೋರಕ್ಷಣೆ ಮಹಾಸಭೆಯಲ್ಲು, ಮುಸಲ್ಮಾನರು ತಮ್ಮೊಳಗೆ ಗೋವಧೆಯನ್ನು ನಿವಾರಿಸಲು ಮಾಡುವ ಪ್ರಯತ್ನಕ್ಕೆ ಅವರಿಗೆ ವಂದನೆಕೊಡುವಂತೆಯೂ ಹಿಂದುಗಳು ಖಿಲಾಫತ್ತಿನ ವಿಷಯ ಆಗುವಷ್ಟು ಸಹಾಯ ಮಾಡಬೇಕೆಂತಲೂ ಠರಾವುಗಳಾದವು.

ಹೀಗೆಯೇ ... ಖಿಲಾಫತ್ ಸಂಘದ ಅಧ್ಯಕ್ಷನೂ ಜಮೀಯತುಲ್ ಉಲೇಮಾ ಸಂಘದ ಕಾರ್ಯದರ್ಶಿಯೂ ಆದ ಪೀರ್ ಗುಲಾಂ ಮುಜಾದಿದ್ ರವರನ್ನು ತಾ|| 15 ನೇ ರಾತ್ರಿ ತಾಂಡ ಒರಾಯರ್ ಸಿಲ್ದಾಣದಲ್ಲಿ ಹಿಡಿದರು. ಕರವೀರಪೀಠದ ಗುರುವಾದ ಶಂಕರಾಚಾರ್ಯರನ್ನೂ ತಾ|| 21 ರಲ್ಲು ಮೌಲಾನ ಹುಸೇನ್ ಅಹಮದ್ ಎಂಬವರನ್ನು ಡಿಯೊಬಾಂದಿನಲ್ಲಿಯೂ ಹಿಡಿದಿರುವರು. ಇವರನ್ನೆಲ್ಲಾ ಕರಾಚಿ ಜೈಲಿನಲ್ಲಿಟ್ಟಿದ್ದಾರೆ

ವೈದ್ಯರ ಸೂಚನಮೇರೆ ದೇಹದ ಆರೋಗ್ಯಕ್ಕಾಗಿ ಸಿಮ್ಲಾಪಟ್ಟದಲ್ಲಿದ್ದಾಗ ಡಾಕ್ಟರ್ ಕಿಚ್ಲೂಯವರನ್ನು ತಾ|| 15 ರಲ್ಲು ಅಧಿಕಾರಿಗಳು ಸೆರೆ ಹಿಡಿದರು. ಆ ದಿನವೇ ಅವರು ಅಲ್ಲಿ ಒಂದು ಉಪನ್ಯಾಸಮಾಡಲೆಣಿಸಿದ್ದರು. ಕಿಚ್ಲೂಯವರು ಅವರ ಪತ್ನಿ ಪುತ್ರರಿಗೆ ಒಂದು ಪತ್ರವನ್ನು ಬರೆದು ಪೋಲೀಸರ ಅಧೀನವಾದನಂತರ ಅವರನ್ನು ಸ್ಪೆಶಲ್ ಟ್ರೈನಿನಲ್ಲಿ ಕಲ್ಕತ್ತಾವಿಗೆ ಸಾಗಿಸಿಕೊಂಡುಹೋಗಿ 17 ರಲ್ಲು ಕರಾಚಿಗೆ ಮೋಟಾರಿನಲ್ಲಿ ಸಾಗಿಸಿ ಅಲ್ಲಿ ಜೈಲಿನಲ್ಲಿಟ್ಟಿರುವರು.

ಸೊಲ್ಲಾಪುರಕ್ಕೆ ಸೇರಿದ ತಕ್ಲಿ, ಬರೂರು ಎಂಬ ಗ್ರಾಮಗಳಿಗೆ 3–4 ಮಂದಿ ಜೋಗಿಗಳಾದ ಫಕೀರರ ವೇಷದವರು ಪಂಡಿತರಂತೆಯೂ ಸ್ವಾಮಿಗಳಂತೆಯೂ ಮೌಲಿಗಳಂತೆಯೂ ನಟಿಸಿ, ವೇದಾಂತ ಬೋಧನೆಗಳನ್ನು ಮಾಡುತ್ತಿದ್ದು ತಮ್ಮ ಪೂಜೆಯ ಶಕ್ತಿಯಿಂದ ದ್ರವ್ಯಗಳನ್ನು ಎರಡಷ್ಟು ಮಾಡಬಲ್ಲೆವೆಂದು ಜನರಲ್ಲಿ ನಂಬಿಗೆ ಹುಟ್ಟಿಸಿ ಸುಮಾರು 75 ಸಾವಿರ ರೂ ಬೆಲೆಯ ನಗನಾಣ್ಯಗಳನ್ನು ಅಪಹರಿಸಿಕೊಂಡು ಪಲಾಯನಮಾಡಿರುವರಂತೆ ಪೋಲೀಸಿನವರು ಇವರನ್ನು ಹುಡುಕುತ್ತಿದ್ದಾರೆ.

ಮಲಬಾರಿನ ದಂಗೆಯು ಶಾಂತವಾದ ಹಾಗೆ ಕಾಣುವದಿಲ್ಲ ಹಾಲಘಾಟದಿಂದ ಅನೇಕ ಜನರು ಪಟ್ಟಬಿಟ್ಟು ಹೊರಗೆಹೋಗುತ್ತಲಿದ್ದಾರೆ ಜನ್ಮೂರಿನ ಒಳಿಯಲ್ಲಿರುವ ಅಡವಿಯಲ್ಲಿ ಮಾಪಿಳ್ಳೆಯರು ಅವಿತುಕೊಂಡು ಸೈನಿಕರಮೇಲೆ ಗುಂಡುಹಾರಿಸಿದರು ಸೈನಿಕರು ತಿರುಗಿ ಹೊಡೆದರು. ದಂಗೆಕೋರರನ್ನು ಅಲ್ಲಲ್ಲಿ ಪೋಲೀಸಿನವರೂ ಸೈನಿಕರೂ ಹಿಡಿಯುತ್ತಲಿದ್ದಾರೆ. ಅಲಂದೂರಿನ ಸಮೀಪ ಮಾಪಿಳ್ಳೆಯವರಿಗೂ ಸೈನಿಕರಿಗೂ ಯುದ್ಧವಾಗಿ ಅನೇಕ ಮಾಪಿಳ್ಳೆಯವರು ಮೃತಪಟ್ಟರು ಎಟ್ಟಕರಾವಿನಲ್ಲಿ ಒಬ್ಬ ಪೋಲೀಸ್ ಇನ್ಸ್ಪೆಕ್ಟರವನೂ, ಇಬ್ಬರು ಪೋಲೀಸಿನವರೂ ಕೊಲ್ಲಲ್ಪಟ್ಟರು

ಮದ್ರಾಸಿನ ದೇಶಭಕ್ತನ್ ಎಂಬ ತಮಿಳು ಪತ್ರಿಕೆಯಲ್ಲಿ ರಾಜದ್ರೋಹದ ಒಂದು ಲೇಖವು ಪ್ರಕಟವಾಯಿತ್ತೆಂದು ಆ ಪತ್ರಿಕೆಗೆ ಸಮಂಧಪಟ್ಟ ನಾಲ್ವರಮೇಲೆ ಕೇಸು ಮಾಡಿದ್ದರಲ್ಲಿ ಮೂರು ಜನರು ಮಾಫಿ ಕೇಳಿಕೊಂಡದರಮೇಲೆ ಅವರಿಗೆ ಮನ್ನಣೆ ಸಿಕ್ಕಿತು. ಆದರೆ ಸಂಪಾದಕರಾದ ವಿ. ವಿ. ಸುಬ್ರಮಣ್ಯಾರು ತನ್ನ ಗೈರ್ ಹಾಜರಿನಲ್ಲಿ ಆ ಲೇಖನವ ಪ್ರಕಟಿಸಲ್ಪಟ್ಟದ್ದರಿಂದ ತಾನು ಅದಕ್ಕೆ ಜವಾಬುದಾರನಲ್ಲವೆಂತಲೂ, ಆ ರಾಜದ್ರೋಹದ ಲೇಖನವಲ್ಲವೆಂತಲೂ ವಾದಿಸಿದರು. ಅವರು ಊರಿನಲ್ಲಿಲ್ಲದಿದ್ದರೂ ಎಡಿಟರ್ ಕೆಲಸದಿಂದ ಬಿಡುಗಡೆ ಆಗದೆ ಹೋದುದರಿಂದ ಅದಕ್ಕೆ ಅವರು ಉತ್ತರವಾದಿ ಎಂದು ಹೇಳಿಕೆ ನ್ಯಾಯಾಧಿಪತಿಯು ಅವರಿಗೆ ಒಂಭತ್ತು ತಿಂಗಳ ಸಜವನ್ನು ವಿಧಿಸಿದನು

ತಾ|| 15 ರಲ್ಲು ಬೊಂಬಾಯಿಯಲ್ಲಿ ಒಂದು ಸಭೆಯಲ್ಲಿ ಮೌಲಾನ ಷೌಕತಾಲಿಯವರು ಭಾಷಣ ಮಾಡುವಾಗ ತನ್ನನ್ನು ಸರಕಾರದವರು ಸೆರೆ ಹಿಡಿಯುವದರಲ್ಲಿದ್ದಾರೆಂದು ಸೂಚಿಸಿದಂತೆಯೇ ಮರುದಿನ ಸರಕಾರದವರು ಪೋಲೀಸು ಮತ್ತು ಸೈನ್ಯದೊಂದಿಗೆ ಸೆಂಟ್ರಲ್ ಖಿಲಾಫತ್ ಆಫೀಸಿನಲ್ಲಿ ಷೌಕತಾಲಿಯವರನ್ನು ಹಿಡಿದರು ಈ ಸಂಗತಿ ಅನತಿ ತೊಡಲೇ ತಿಳಿದುದರಿಂದ ಎಲ್ಲರೂ ಶಾಂತಿಯುಂಟಾದರೇ ಕೆಂತಲೂ ಸಿಟ್ಟಿನಿಂದ ಏನೊಂದು ಗಲಾಟೆ ಮಾಡಬಾರದೆಂತಲೂ ಅವರ ಹಿಂಬಾಲಕರಿಗೆ ಬೋಧಿಸಿದ್ದುದರಿಂದ ಏನೊಂದೂ ತೊಂದರೆಯುಂಟಾಗಲಿಲ್ಲ ಷೌಕತಾಲಿಯವರು ಅವರ ಸಾಮಾನುಗಳನ್ನೆಲ್ಲಾ ತೆಗೆದುಕೊಂಡನಂತರ ಅವರನ್ನು ಅಧಿಕಾರಿಗಳು ಮೋಟಾರಿನಲ್ಲಿ ಕುಳ್ಳಿರಿಸಿಕೊಂಡು ಜೈಲಿಗೆ ಹೋದರು ಅಲ್ಲಿಂದ ಹಡಗನ್ನೇರಿಸಿ ತಾ|| 20 ರಲ್ಲು ಕರಾಚಿಗೆ ಕರೆದುಕೊಂಡು ಹೋಗಿರುವರು

ಇವರನ್ನೆಲ್ಲಾ ಹಿಡಿದಿರುವದರ ಕಾರಣ—ಮಹಮ್ಮದೀಯರು ಯಾರೂ ಈಗ ಬ್ರಿಟಿಷ್ ಸೈನ್ಯದಲ್ಲಿರಕೂಡದು; ಸೇರಕೂಡದು; ಸೇರುವಹಾಗೆ ಬೇರೆಯವರನ್ನು ಪ್ರೋತ್ಸಾಹಿಸಕೂಡದು ಸೈನ್ಯದಲ್ಲಿರುವ ಮಹಮ್ಮದೀಯರಿಗೆಲ್ಲಾ ಈ ಸಂಗತಿಯನ್ನು ತಿಳಿಸುವದು ಪ್ರತಿಯೊಬ್ಬ ಮಹಮ್ಮದೀಯನ ಕರ್ತವ್ಯವಾಗಿದೆ. ಎಂಬ ತೀರ್ಮಾನವನ್ನು ಕಳೆದ ಜುಲೈ ತಾ|| 8 ರಲ್ಲು ಕರಾಚಿಪಟ್ಟದಲ್ಲಿ ಸೇರಿದ್ದ ಖಿಲಾಫತ್ ಸಭೆಯಲ್ಲಿ ಅಲಿ ಸಹೋದರರೂ ಇನ್ನು ಕೆಲವರೂ ಬಹಿರಂಗವಾಗಿ ಮಾಡಿದ್ದರಿಂದ ಹೀಗೆ ಸೈನಿಕರಿಗೆ ದುರ್ಬೋಧನೆಮಾಡುವದು ತಪ್ಪೆಂತಲೂ ಅದಕ್ಕೆ ಸರಿಯಾದ ಶಿಕ್ಷೆಮಾಡಬೇಕೆಂತಲೂ ಇಂಡಿಯಾ ಸರಕಾರದವರ ಸಮ್ಮತಿಯಿಂದ ಬೊಂಬಾಯಿ ಗವರ್ಮೆಂಟಿನವರು ಇವರೆಲ್ಲರಮೇಲೆ ಕೇಸುಮಾಡಲಿಕ್ಕೆ ನಿಶ್ಚಯಿಸಿರುವರು. ಆದ ದರಿಂದಲೇ ಇವರೆಲ್ಲರನ್ನು ಸೆರೆ ಹಿಡಿದಿರುವರು ಇವರ ವಿಚಾರಣೆಯು ಕರಾಚಿಪಟ್ಟದಲ್ಲಿ ದಂಡಾಧಿಕಾರಿಯ ಇದುರಿಗೆ ನಡೆಯುತ್ತಿದೆ

ಮಹಾತ್ಮ ಗಾಂಧಿಯವರು ತಿರುಪತಿ ಮೊದಲಾದ ಪ್ರಾಂತ್ಯಗಳಲ್ಲಿ ಪರದೇಶಿ ಬಟ್ಟೆಗಳಿಗೆ ಬಹಿಷ್ಕಾರ ಹಾಕಬೇಕೆಂತಲೂ ಚರಕವನ್ನು ಎಲ್ಲರೂ ಉಪಯೋಗಿಸಿ ಹಿಂದೂದೇಶದಲ್ಲಿಯೇ ನಮಗಿರುವ ಬಟ್ಟೆಗಳನ್ನೆಲ್ಲಾ ತಯಾರು ಮಾಡಿಕೊಳ್ಳಬೇಕೆಂತಲೂ ಉಪನ್ಯಾಸಮಾಡುತ್ತಾ ತಿರುಗುತ್ತಿದ್ದಾರೆ ಬಡವರಿಗೆ ಖಾದಿಬಟ್ಟೆಯನ್ನು ಕೊಂಡುಕೊಳ್ಳಲು ಹಣವಿಲ್ಲದೆ ಹೋದರೆ ಸೊಂಟಕ್ಕೆ ಒಂದು ತುಂಡು ಖಾದಿ ಪಂಚೆಯನ್ನೂ ಮೈಮೇಲೆ ಒಂದು ತುಂಡು ಖಾದಿ ಬಟ್ಟೆಯನ್ನು ಮಾತ್ರ ಹಾಕಿಕೊಂಡರೆ ಸಾಕೆಂದೂ ಇದಕ್ಕೆ ಮೇಲ್ಪಂಗ್ತಿಯಾಗಿ ಮ|| ಗಾಂಧಿಯವರೆ ಈತರದ ಎರಡುತುಂಡು ಬಟ್ಟೆಗಳನ್ನು ಅಕ್ಟೋಬರ್ ಅಖ್ಯೆರುವರೆಗೆ ಅಂದರೆ ಉಷ್ಣಪ್ರದೇಶವಾದ ದಕ್ಷಿಣ ಹಿಂದೂದೇಶದಲ್ಲಿರುವವರೆಗೆ ಧರಿಸಿಕೊಂಡಿರುತ್ತೇನೆಂತಲೂ ಹೇಳಿರುವರು

ಅಲಿ ಸಹೋದರರನ್ನೂ ಇನ್ನೂ ಕೆಲವು ಖಿಲಾಫತ್ ಮುಂದಾಳುಗಳನ್ನು ಜೈಲಿನಲ್ಲಿಟ್ಟಿರುವದರಿಂದಲೂ, ಖಿಲಾಫತ್ ಎಂಬ ಸಣ್ಣ ಪುಸ್ತಕವನ್ನು ಓದಕೂಡದೆಂತ ಸರಕಾರವು ಹುಕುಂಮಾಡಿರುವದರಿಂದಲೂ ಜಮಾತ್ ಅಲ್ ಯುಲೆಮ ಎಂಬ ಸಭೆ ಡಿಲ್ಲಿಯಲ್ಲಿ ಸೇರಿ ಮಹಮ್ಮದೀಯರ ಮುಂದಾಳುಗಳನ್ನು ಯಾವ ತಪ್ಪಿಗಾಗಿ ಹಿಡಿದಿರುವರೋ ಆ ತಪ್ಪನ್ನೆ ಪ್ರತಿಯೊಬ್ಬ ಮಹಮ್ಮದೀಯನು ಮಾಡಬೇಕೆಂದು ತೀರ್ಮಾನಿಸಿದರು ಸೆಂಟ್ರಲ್ ಖಿಲಾಫತ್ ಕಮಿಟಿಯವರೂ ಇಂಥಾ ಠರಾವನ್ನೇ ಮಂಜೂರುಮಾಡಿರುವರು. ಮುಸಲ್ಮಾನರ ಮುಂದಾಳುಗಳಾಗಿರುವ ಮೌ|| ಮಹಮುದ್ ಅಲಿ ಮತ್ತು ಹಕೀಮ್ ಅಜ್ಮಲ್ ಖಾನ್ ಮುಂತಾದವರು ಶಾಂತಿಯಾಗಿರಬೇಕೆಂತಲೂ ಮುಂದಾಳುಗಳಿಗೆ ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡಬೇಕೆಂತಲೂ ತಮ್ಮ ಹಿಂಬಾಲಕರಿಗೆ ಬೋಧಿಸುತ್ತಿರುವರು

ವೈಸರಾಯರವರ ಕಾರ್ಯನಿರ್ವಾಹಕ ಸಭೆ (ಎಕ್ಸಿಕ್ಯುಟಿವ್ ಕೌನ್ಸಿಲ್) ಯ ಮೆಂಬರು ಕೆಲಸಕ್ಕೆ ರಾಜಿನಾಮೆ ಕೊಟ್ಟ ಸರ್ ಜೋಸಫ್ ಹಾಲೆಂಡ್ ರವರ ಬದಲಿಗೆ ಹಂಗಾಮಿಯಾಗಿ ಮೆ|| ಸಿ. ಎ. ಇನ್ನ್ ಐ. ಸಿ. ಎಸ್ ರವರನ್ನು ನೇಮಿಸಿರುತ್ತಾರೆ.

ಪ್ರಿನ್ಸ್ ಆಫ್ ವೇಲ್ಸ್ ರವರು ಪಾಟ್ನಾಕ್ಕೆ ಡಿಸೆಂಬರ್ 9 ಕ್ಕೆ ಹೋಗುವರು. ಎಲ್ಲಾ ತರದ ಅಭಿಪ್ರಾಯದ ಮುಖ್ಯಸ್ಥರ ಸಂಗಡ ನಿಷ್ಪಕ್ಷಪಾತದ ರೀತಿಯ ವಿಷಯ ಚರ್ಚಿಸಲು ಹಾಜರಿಬಾಗ್ ಎಂಬಲ್ಲಿ ಒಂದು ದೊಡ್ಡ ಸಭೆಯನ್ನು ಮಾಡುವರು. ಈ ಸಭೆಗೆ ಅಧ್ಯಕ್ಷರಾಗಬೇಕೆಂದು ಕೇಳಿದಕ್ಕೆ ಮೌಲಾನ ಮಹಮ್ಮದ್ ಅಲಿಯವರು ಒಪ್ಪಲಿಲ್ಲ ಪಂಡಿತ ಮದನಮೋಹನ ಮಾಳವ್ಯರವರು ಅಧ್ಯಕ್ಷ ಪದವಿಯನ್ನು ವಹಿಸಲು ಒಪ್ಪಿಕೊಂಡಿರುವರು

ವಿದೇಶ.

ಜರ್ಮನಿ ದೇಶದ ಎಕ್ಸ್ ಕೈಸರವರು ಹಾಲೆಂಡ್ ದೇಶದಲ್ಲಿ ತಮ್ಮ ತೋಟದಲ್ಲಿ ತಿರುಗಾಡುತ್ತಿರುವ ಸಮಯದಲ್ಲಿ ಮರದ ಒಂದು ದೊಡ್ಡ ಕೊಂಬೆಯು ಮುರಿದು ಅವರ ತಲೆಯಮೇಲೆ ಬೀಳಲು ಅವರು ನೆಲಕ್ಕೆ ಬಿದ್ದರು ಅವರಿಗೆ ಘಾಯಗಳೇನೂ ಆಗಲಿಲ್ಲ. ತಕ್ಷಣೆ ಮೇಲಕ್ಕೆ ಎದ್ದರಂತೆ

ಇಂಗ್ಲೆಂಡಿನಲ್ಲಿ ಇಂಡಿಯಾ ಕೌನ್ಸಿಲಿನ ಮೆಂಬರಾಗಿದ್ದ ಸರ್ ಶಂಕರನಾಯರವರು ತಮ್ಮ ಮೆಂಬರುತನಕ್ಕೆ ರಾಜಿನಾಮೆಕೊಟ್ಟರು ಇವರು ಹಿಂದೂದೇಶಕ್ಕೆ ಬಂದನಂತರ ವಿದ್ಯಾಶಾಸ್ತ್ರದಲ್ಲಿಯೇ ತನ್ನ ಕಾಲವನ್ನು ಕಳೆಯುವರೆಂದು ವರ್ತಮಾನವಿದೆ. ಇವರ ಸಂಗಡ ಮೆಂಬರಾಗಿದ್ದ ಭೂಪೇಂದ್ರನಾಥ ಭಾಸುರವರು ಇದರೊಂದಿಗೆ ನವೆಂಬರು ತಿಂಗಳಲ್ಲಿ ಇಂಡಿಯಾಕ್ಕೆ ಹಿಂತಿರುಗುವವರಾಗಿದ್ದಾರೆ ಸಾಹಿಬ್ ಜಾದಾ ಆಫ್ತಾಬ್ ಅಹಮದ್ ಖಾನ್ ರವರೂ ಕೂಡ ಬೇಗನೆ ಇಂಗ್ಲೆಂಡಿನಿಂದ ಹೊರಟುಬರುತ್ತಾರಂತೆ.

ರಷ್ಯಾದೇಶದಲ್ಲಿ ಕ್ಷಾಮದ ಬಾಧೆಯಿಂದ ಸಂಕಟಪಡುತ್ತಿರುವ ಜನರ ರಕ್ಷಣೆಗಾಗಿ ಅಮೇರಿಕದವರು 25 ಹಡಗುಗಳ ತುಂಬ ಆಹಾರ ಸಾಮಗ್ರಿಗಳನ್ನು ರಷ್ಯಾ ದೇಶಕ್ಕೆ ಕಳುಹಿಸಿರುವರು ತಮ್ಮ ಬಡತನದ ನಿಮಿತ್ತದಿಂದ ಅವರಿಗೆ ತಮ್ಮಿಂದ ಸಹಾಯಮಾಡಲಿಕ್ಕಾಗುವದಿಲ್ಲವೆಂದು ಫ್ರಾನ್ಸ್ ದೇಶದವರು ಹೇಳಿರುವರು.

ಈಗ ಚೀನಾದೇಶದ ಸರಕಾರದವರು ಪ್ರಕಟಮಾಡಿರುವ ಪ್ರಕಾರ ಕಳೆದ ಡಿಶಂಬರ್ ತಿಂಗಳಲ್ಲಿ ಕನ್ಸುಪ್ರಾಂತ್ಯದಲ್ಲಿ ಆದ ದೊಡ್ಡ ಭೂಕಂಪದಿಂದ ಸಂಭವಿಸಿರುವ ಅನರ್ಥಗಳ ಪೈಕಿ ಎರಡುಲಕ್ಷ ಜನರ ಮರಣವೇ ಮುಖ್ಯವಾದದ್ದು. ಸುತ್ತಮುತ್ತಲೂ 75 ಮೈಲಿಗಳ ದೂರದವರೆಗಿನ ಮನೆಮಠಗಳೂ ಗುಡ್ಡಬೆಟ್ಟಗಳೂ ಸಡಿಲಿ ಬಿದ್ದು ನೆಲಸಮವಾದವು.

ಜರ್ಮನಿದೇಶದ ಪ್ರಜಾಪ್ರಭುತ್ವದ ಅಧ್ಯಕ್ಷರಾಗಿದ್ದ ಹರ್ ಎಜ್ಬರ್ಗರ್ ಎಂಬವರನ್ನು ಯಾರೊ ಕೊಂದುಹಾಕಿರುವರೆಂದೂ, ಆ ದೇಶದವರು ಕೆಲವರು ಕೈಜರನನ್ನೇ ಪುನಃ ಚಕ್ರವರ್ತಿಯನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆಂದೂ, ಕೈಜರರು ಹಾಲೆಂಡಿನಿಂದ ತಪ್ಪಿಸಿಕೊಂಡು ಏರೋಪ್ಲೇನ ದಲ್ಲಿ ಕುಳಿತು ಜರ್ಮನಿಗೆ ಬಂದಿರುವರೆಂದೂ ವರ್ತಮಾನ ಹುಟ್ಟಿದೆ ಇದು ಎಷ್ಟರಮಟ್ಟಿಗೆ ನಿಜವೆಂದು ತಿಳಿಯುವದಿಲ್ಲ

ಈಗ ರಷ್ಯಾದೇಶದಲ್ಲಿ ಪ್ರಬಲವಾಗಿರುವ ಕ್ಷಾಮದ ಬಾಧೆಯನ್ನು ಹೇಳಲಸಾಧ್ಯವೆಂದೂ, ಕ್ಷಾಮಪೀಡಿತರಾದವರಿಗೆ ಪ್ರತಿಯೊಬ್ಬನಿಗೆ ಒಂದೊಂದುಪೌನು ರೊಟ್ಟಿಕೊಟ್ಟರೂ ಕೂಡ ದಿನಕ್ಕೆ 10 ಲಕ್ಷ ಡಾಲರ್ ವೆಚ್ಚವಾಗುವದೆಂದೂ ಎಷ್ಟು ಸಹಾಯಮಾಡಿದರೂ ಈ ಕ್ಷಾಮದಿಂದ ಕನಿಷ್ಠ ಪಕ್ಷ ಇಪ್ಪತ್ತು ಲಕ್ಷ ಜನರು ಹೊಟ್ಟೆಗಿಲ್ಲದೆ ಸಾಯುವದು ನಿಜವೆಂದೂ ಅಮೇರಿಕಾ ರೆಡ್ ಕ್ರಾಸ್ ಸಂಘದವರು ಪ್ರಕಟಿಸಿರುವರು

ತುರ್ಕಿಸ್ಥಾನದ ಮುಖ್ಯಪಟ್ಟಣವಾಗಿರುವ ಕಾನ್ ಸ್ಟಾಂಟಿನೋಪಲಿನಲ್ಲಿ ತುರ್ಕಿಯವರು ಮಿತ್ರಮಂಡಲಿಯವರಿಗೆ ಮೇಲೆ ಏನೋ ದ್ರೋಹಾಚರಣೆಯು ಮಾಡುತ್ತಲಿದ್ದಾರೆಂದು ಕಂಡು ಹಿಡಿದು ಮೆಡಿಟರೇನಿಯನ್ ಸಮುದ್ರದಲ್ಲಿದ್ದ ಬ್ರಿಟಿಷ್ ನೌಕಾಸೈನ್ಯವನ್ನು ಬಾಸ್ಪರಸ್ ಜಲಸಂಧಿಗೆ ಕಳುಹಿಸಿದ್ದಾರಂತೆ, ಗೂಢಪ್ರಯತ್ನ ಮಾಡುವ ಮುಖಂಡರ ಪೈಕಿ 14 ಜನರನ್ನು ಬ್ರಿಟಿಷರು ಸೆರೆ ಹಿಡಿದಿದ್ದಾರೆಂದೂ ತಿಳಿಯಬರುತ್ತದೆ.

ಐರ್ಲೆಂಡಿನವರಿಗೂ ಇಂಗ್ಲೆಂಡಿನವರಿಗೂ ಇರುವ ಕಲಹಗಳು ತೀರುವ ಸಂಭವವು ಕಾಣುವದಿಲ್ಲ. ಡಿವೇಲೆರ ಎಂಬವರು ತಾನು ಸ್ವತಂತ್ರವಾದ ಐರ್ಲೆಂಡಿನ ಪ್ರತಿನಿಧಿಯಾಗಿ ಇನ್ ವರ್ನೆಸ್ ಸಭೆಗೆ ಬರುತ್ತೇನೆಂತಲೂ ಅದಕ್ಕೆ ಬ್ರಿಟಿಷ್ ಮುಖ್ಯಮಂತ್ರಿಯಾದ ಲೋಯಿಡ್ ಜಾರ್ಜರವರು ಒಪ್ಪದೆ ಇಂಗ್ಲೆಂಡಿಗೆ ಅಧೀನವಾಗಿರುವ ಐರ್ಲೆಂಡಿನ ಪ್ರತಿನಿಧಿಯಾಗಿ ಬರಬೇಕೆಂತಲೂ ಹೇಳಿದ್ದರಿಂದ ಇವೆರಡುಪಂಗಡದವರು ಯಾವ ಒಪ್ಪಂದಕ್ಕೂ ಬಾರದೆಹೋದುದರಿಂದ ಸದ್ಯಕ್ಕೆ ಇನ್ ವರ್ನೆಸ್ ಸಭೆಯು ರದ್ದುಮಾಡಲ್ಪಟ್ಟಿದೆ.

ಗ್ರೀಕ್ ತುರ್ಕಿ ಯುದ್ಧದಲ್ಲಿ ಅಂಗೋರವನ್ನು ಗ್ರೀಕರು ವಶಪಡಿಸಿಕೊಂಡ ವರ್ತಮಾನವು ಸುಳ್ಳು. ಗ್ರೀಕರನ್ನು ತುರ್ಕಿಯವರು ಆ ಪಟ್ಟಣಕ್ಕೆ 50 ಮೈಲುಗಳ ದೂರದಲ್ಲಿಯೇ ಕಾಳಗಮಾಡಿ ಹಿಂದಕ್ಕೆ ಓಡಿಸಿರುವದರಿಂದ ಅಂಗೋರವು ಇನ್ನೂ ತುರ್ಕಿಯವರ ವಶದಲ್ಲಿಯೇ ಇದೆ ಆದರೆ ಕೆಲವು ಕಾಲದಲ್ಲಿ ಗ್ರೀಕರು ಮತ್ತೆ ಕೆಮಲ್ ಸೈನ್ಯವನ್ನು ಸೋಲಿಸಿ ಅಂಗೋರವನ್ನು ವಶಪಡಿಸಿಕೊಳ್ಳುವರೆಂದೂ, ಕಾನ್ ಸ್ಟಾಂಟಿನೋಪಲನ್ನೂ ಕೂಡ ವಶಪಡಿಸಿಕೊಳ್ಳುವರು ಅಸಾಧ್ಯವಲ್ಲವೆಂದೂ, ಅದಕ್ಕೆ ಮಿತ್ರಮಂಡಲಿಯವರು ಒಪ್ಪುವದಿಲ್ಲವೆಂತಲೂ, ತನಗೆ ಮತಸ್ವಾತಂತ್ರ್ಯಗಳನ್ನು ಹೆಚ್ಚಿಸಲು ಮನಸಿಲ್ಲವೆಂತಲೂ ಗ್ರೀಸ್ ದೇಶದ ರಾಜರಾದ ಕಾನ್ ಸ್ಟಾಂಟೈನರು ಹೇಳಿರುವರು

ವಿಮರ್ಶೆ.

ನವಯುಗ' ಹೊಸ ವಾರಪತ್ರಿಕೆ' ಕೆನರಾ ಪ್ರೆಸ್ ಮಂಗಳೂರು

ಪುಟ 8. ವಾರ್ಷಿಕಚಂದಾ ಬರೇ 3—0—0 ರೂ.

ಮಂಗಳೂರಿನಲ್ಲಿ ಆಗುವುದೆಲ್ಲವೂ ಮಂಗಳಕರವಾದುದಾಗಿಯಲ್ಲ. ಮುದ್ದುಕೂಸೆ! ಮುತ್ತಿನಂತ ಸ್ಥಿತಿಯಲ್ಲಿ ಪ್ರಕಾಶಿಸಲ್ಪಟ್ಟ ಮುದ್ದಾದ ಮುದ್ರಣದಿಂದ ಹೊರಬಿದ್ದಿರುವ ಈ ನೂತನ ಬಂಧುವು ಸಕಲ ಕನ್ನಡಿಗರಿಂದಲೂ ಆದರಣೆಯೋಗ್ಯವಾಗಿದೆ ಇದಕ್ಕಿಂತ ಮುಂದೆ ಹುಟ್ಟಿರುವ ಮೂರ್ತಿಯ ಲೇಖ ಪತ್ರಿಕೆಗಳಂತೆಯೇ ಇದಕ್ಕೂ ಬಾಳುವೆ ಲಭಿಸಲೆಂದು ನಮ್ಮ ಹಾರೈಕೆ

* * *

ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ ಬೆಂಗಳೂರು

ವಾರ್ಷಿಕಚಂದಾ 4—0—0 ರೂ ತ್ರೈಮಾಸಿಕವು

ಕನ್ನಡಭಾಷೆಯನ್ನು ಉದ್ಧಾರಮಾಡಲೋಸುಗ ಹೊರಟ ಪತ್ರಿಕೆಯೂ ಈಗಲೀಗ ನಮ್ಮ ಹಸ್ತಗತವಾಗಿ 'ಕೊಡಗು' ಪತ್ರಿಕೆಯ ಮೇಲೆ ದಯೆಯುಳ್ಳ ಪರಿವರ್ತನೆಯವರು ನಮ್ಮನ್ನು ಪರಿಚಯಕ್ಕೆ ಅನೇಕ ಪರಿವರ್ತನವಾಗಿ ಪೆರ್ಸ್ಹೆಯೊಂದಿಗೆ ಕೊಡಗು ಲಕ್ಷ್ಮಿ ಆನಂದ! ಮತ್ತಿನ ಎಷ್ಟು ಹಿಂದೆಬಿದ್ದ.

COORG ASSOCIATION BANGALORE.

ಇದೇ ತಿಂಗಳು 25 ನೇ ತಾರೀಖು ಭಾನುವಾರದದಿನ ಬೆಂಗಳೂರು ಕೊಡಗು ಅಸೋಸಿಯೇಷನಿನ 11 ನೇ ವಾರ್ಷಿಕೋತ್ಸವವು ಅತಿ ವಿಜೃಂಭಣೆಯಿಂದ ಬೆಂಗಳೂರು ಪಾಂಟ್ ಬಾಯ್ ಎಂಬ ಸ್ಥಳದಲ್ಲಿ ನಡೆಯಿತು. ಅಸೋಸಿಯೇಷನಿಗೆ ಸಂಬಂಧಪಟ್ಟವರು ಮಾತ್ರವಲ್ಲದೆ ಮೈಸೂರು ದೇಶದಲ್ಲಿರುವ ಅನೇಕ ಕೊಡಗು ಜನಾಂಗದ ದೊಡ್ಡಮನುಷ್ಯರೂ ಸದರೀ ಸಭೆಗೆ ದಯಮಾಡಿಸಿದ್ದರು. ಅನಿವಾರ್ಯ ವಶಾತ್ ಬರಲು ತಪ್ಪಿದವರು ಸಭೆಯ ಜಯವನ್ನು ಪ್ರೋತ್ಸಾಹಿಸುವ (ತಮ್ಮ ವಿಷಾದವನ್ನು ಸೂಚಿಸುತ್ತಾ) ತಂತೀವರ್ತಮಾನಗಳನ್ನು ಕಳುಹಿಸಿದರು.

ಸಭೆಯು ಯುವಕರ ಆಟಗಳ ಪಂಥದಿಂದ ಪ್ರಾರಂಭವಾಯಿತು. ಎಲ್ಲರೂ ಈ ಆಟಗಳಲ್ಲಿ ತಮ್ಮ ಚಾತಕಚಕ್ಯವನ್ನೂ ಪೈಪೋಟಿಯನ್ನೂ ತೋರಿಸಿದರು. ಗುರಿಹೊಡೆಯುವುದು ಬಹಳ ಶ್ಲಾಘ್ಯವಾಗಿ ಪ್ರದರ್ಶಿಸಲ್ಪಟ್ಟಿತು. ಪ್ರಾತಃಕಾಲ 10½ ಗಂಟೆಗೆ ಸದಸ್ಯರಿಗೆ ಫಲಾಹಾರವು ಬಹಳ ತೃಪ್ತಿಕರವಾಗಿ ನಡೆಯಿತು.

ಮಧ್ಯಾಹ್ನ 12 ಗಂಟೆಗೆ ಸರಿಯಾಗಿ ಸಭಿಕರೆಲ್ಲರಿಗೂ ದೇವಾಲಯದ ಮುಂದಿರುವ ಮೈದಾನದಲ್ಲಿ ಮೃಷ್ಟಾನ್ನ ಭೋಜನವು ನಡೆಯಿತು. ತರುವಾಯ ಸರ್ವರೂ ಮತ್ತೊಂದು ಪ್ರಸಿದ್ಧವಾದ ಸ್ಥಳವನ್ನು ಸೇರಿ ಪ್ರಾತಃಕಾಲದಲ್ಲಿ ಆಟಗಳಲ್ಲಿ ಗೆದ್ದವರಿಗೆ ಬಹುಮಾನವನ್ನು ಹಂಚಿದರು.

ತರುವಾಯ ಅಸೋಸಿಯೇಷನ್ ಸಂಬಂಧವಾದ ವಿಷಯಗಳ ಚರ್ಚೆಯು ಉಪಕ್ರಮಿಸಿತು. ಕಾರ್ಯನಿರ್ವಾಹಕರು ಜನಸಮ್ಮತವಾಗಿ ನಿಯಮಿಸಲ್ಪಟ್ಟರು. ಕೊಡಗಿಗೆ ನೂತನವಾಗಿ ಕೊಟ್ಟ ನ್ಯಾಯವಿಧಾಯಕಸಭೆಯ ವಿಚಾರವಾಗಿ ದೀರ್ಘವಾದ ಚರ್ಚೆಯು ನಡದು, ಕೊನೆಗೆ ಸರ್ವರೂ ಏಕಕಂಠ್ಯವಾಗಿ ಪ್ರಸ್ತುತದಲ್ಲಿ ಈ ಸಭೆಯನ್ನು ಅನುಮೋದಿಸಬೇಕೆಂದು ತೀರ್ಮಾನಮಾಡಿದರು. ಇಷ್ಟೇ ಅಲ್ಲದೆ ಕೊಡಗರ ಒಬ್ಬ ಪ್ರತಿನಿಧಿಯನ್ನು ಇಂಡಿಯಾ ಸ್ಟೇಟ್ ಕೌನ್ಸಿಲಿಗೆ ಸಭಿಕನಾಗಿ ಕಳುಹಿಸುವ ಹಕ್ಕನ್ನು ದಯಪಾಲಿಸಬೇಕೆಂದು ಗೌರ್ನಮೆಂಟಿನವರನ್ನು ಪ್ರಾರ್ಥಿಸಿಕೊಳ್ಳಬೇಕೆಂದು ಇಕ್ಯಮತ್ಯವಾಯಿತು. ಈ ವಿಷಯವನ್ನು ಅಸೋಸಿಯೇಷನಿನ ಸೆಕ್ರೆಟರಿಯವರು ಸರಕಾರಕ್ಕೆ ತಿಳಿಸತಕ್ಕದೆಂದು ನಿರ್ಧಾರವಾಯಿತು.

ಈ ದಿನದ ಸಂತೋಷಕಾರ್ಯಗಳು ಶ್ರೀಮದಿಂಡಿಯಾ ಸಾರ್ವಭೌಮರಾದ ಚಕ್ರವರ್ತಿಗೂ, ಮೈಸೂರು ಶ್ರೀಮನ್ಮಹಾರಾಜರವರಿಗೂ ಜಯವಾಗಲೆಂಬ ಶುಭಘೋಷಗಳಿಂದ ಕೊನೆಗಂಡಿತು. ಸೆಕ್ರೆಟರಿ.

ಡಿಸ್ಟ್ರಿಕ್ಟ್ ಬೋರ್ಡ್.

ಕಳೆದವಾರದ ಪತ್ರಿಕೆಯಲ್ಲಿ ಮೇಲಣ ಹೆಸ್ಸರಿನಿಂದ ಪ್ರಕಟಿಸಿದ ಪತ್ರ ನೋಡಿದೆನು. ಮೂವತ್ತೈದು ವರ್ಷಗಳವರೆಗೆ ಸರ್ಕಾರಿ ಉದ್ಯೋಗದಲ್ಲಿಯೂ ಮತ್ತು 12 ವರ್ಷಕ್ಕೆ ಮೇಲ್ಪಟ್ಟು ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರಾಗಿಯೂ ಇದ್ದು ತುಂಬಾ ಅನುಭವಹೊಂದಿರುವವನಾಗಿಯೂ ಸರ್ಕಾರದವರ ಮೇಲೆ ಸಿಟ್ಟುಮಾಡಿಕೊಂಡು ಬೋರ್ಡುಮೀಟಿಂಗಿಗೆ ಹೋಗದೆ ಉಪೇಕ್ಷೆಮಾಡಿ ಅಸಹಕಾರಿಯಾಗಿರುವದರ ಫಲಿತಾಂಶವೇನೆಂಬುದು ನನಗೆ ಚೆನ್ನಾಗಿ ತಿಳಿದೇ ಇರುವ ಕಾರಣದಿಂದಲೂ ಮೊನ್ನೆದಿನವೇ ಮೆಂಬರಾದ ಒಬ್ಬ ಮಹಾನುಭಾವರ ಇರೂವಿಗೆ ನಾನು ಒಪ್ಪದೆ ಮೀಟಿಂಗಿಗೆ ಎಂದಿನಂತೆ ಹೋಗಿ ದೇಶದ ಸೇವೆಮಾಡಿದ್ದಾಯಿತು. ನಾವು ಮೀಟಿಂಗಿಗೆ ಹೋಗದಿದ್ದರೆ ನನಗೇ ನಷ್ಟವಲ್ಲದೆ, ಘನವುಳ್ಳ ಸರಕಾರದವರಿಗೆ ಅದರಿಂದ ಯಾವ ತೊಡಕೂ ಉಂಟಾಗಲಾರದು. ಆದುದರಿಂದ ನಾನು ಮೀಟಿಂಗಿಗೆ ಹೋದಮಾತ್ರಕ್ಕೆ ರೈತರ ವಿಶ್ವಾಸವನ್ನು ಕಳೆದುಕೊಳ್ಳುತ್ತೇನೆಂದು ಬರೆವದ್ದು ನ್ಯಾಯವಾಗಿ ತೋರದಪ್ರಯುಕ್ತ ಅದನ್ನು ನಿರಾಕರಿಸುತ್ತೇನೆ. ಅಲ್ಲದೆ ನಾನು ದೇಶೋನ್ನತಿಯಲ್ಲಿ ನಿರತನಾಗಿದ್ದೇನೋ ಇಲ್ಲವೋ ಎಂಬುದಕ್ಕೆ ನಾನು ಈವರೆಗೂ ಮಾಡಿರುವ ದೇಶಸೇವೆಯೇ ಉದಾಹರಣೆಯಾಗಿದೆ.

ಕೋದಂಡ, ಅಪ್ಪಯ್ಯ.

[ರಾ|| ಬ|| ಅಪ್ಪಯ್ಯನವರು ದೇಶೋನ್ನತಿಗಾಗಿ ದೇಶಸೇವೆಯಲ್ಲಿ ನಿರತರಾಗಿದ್ದಾರೆಂಬುದು ಬಹಳ ಸಂತೋಷಕರವಾದ ಸಂಗತಿಯಾಗಿದೆ. ಆದರೆ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗು ಒಂದಕ್ಕೆಹೋಗದೆ ಇರುವವರು ಅಸಹಕಾರಿಗಳೆಂದು ಯೋಚಿಸಲು ಕಾರಣಗಳೇನೂ ಕಾಣುವದಿಲ್ಲ. ಏತಕೆಂದರೆ:—ಅಸಹಕಾರದ ಮಾತೇ ಇಲ್ಲದೆ ಇರುವಾಗ ಸಹ ನ್ಯಾಯವಿಧಾಯಕ ಸಭೆಯ ಸದಸ್ಯರು ಹೀಗೆ ಮೀಟಿಂಗಿಗೆ ಹೋಗದೆ ಇರುವ ಉದಾಹರಣೆಗಳು ಅನೇಕ ಇವೆ. ಈ ತಿಂಗಳಲ್ಲಿಯೋ ಮೆ|| ಎಸ್. ಶ್ರೀನಿವಾಸ ಅಯ್ಯಂಗಾರ್, ಸಿ. ಐ. ಇ. ಯವರು ಮೊದಲಾದ ಸುಮಾರು ಹತ್ತು ಜನರು ಮದ್ರಾಸು ನ್ಯಾಯವಿಧಾಯಕ ಸಭೆಯ ಸದಸ್ಯರು ತಾವು ಆ ಸಭೆಯ ಒಂದು ಮೀಟಿಂಗಿಗೆ ಹೋಗುವದಿಲ್ಲವೆಂದು ಮದ್ರಾಸು ಗವರ್ನರವರಿಗೆ ಪತ್ರಬರೆದು ಮೀಟಿಂಗಿಗೆ ಹೋಗದೆ ಇದ್ದದ್ದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಆದಾಗ್ಯೂ ಅವರು ಅಸಹಕಾರಿಗಳೆಂದು ಯಾರೂ ಊಹಿಸುವದಿಲ್ಲ.

ಎಡಿಟರ್.]

ಬಹುಮಾನಪತ್ರ.

ಕೊಡಗಿನ ರಮಣಿಯರಲ್ಲಿ ಮೊದಲನೆಯ ಬಾರಿ ಪ್ರೌಢವಿದ್ಯೆಯನ್ನು ಪಡೆದ ಶ್ರೀಮತಿ ಕೋದಂಡ್ರ ಪೂವಯ್ಯ ಬೊಳ್ಳಮ್ಮನವರ ಸನ್ನಿಧಿಯಲ್ಲಿ :—

ಕೊಡಗಿನ ನಿವಾಸಿಗಳಾದ ನಾವು ನಮ್ಮ ಸಹೋದರಿಯರಾದ ನೀವು ಮೊದಲನೆಯಬಾರಿ ಬಿ.ಎ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುವುದರಿಂದ ನಮಗುಂಟಾದ ಮನಸ್ಸಂತೋಷವನ್ನು ತೋರ್ಪಡಿಸಲು ಈ ಹೊತ್ತು ಸಭೆಯು ಸೇರಿದುದಾಗಿದೆ.

ನಿಮ್ಮ ವಿದ್ಯೆಯ ಮಹತ್ವದಿಂದ ನಮ್ಮ ಪುಟ್ಟಸೀಮೆಯ ಸ್ತ್ರೀಯರೆಲ್ಲರಲ್ಲಾ ಅತಿ ಉತ್ತಮವಾದ ಮೇಲುಪಂಕ್ತಿಯನ್ನು ಹಾಕಿರುವಿರಿ. ನೀವು ಪಟ್ಟ ಸಾಹಸವು ನಮ್ಮ ದೇಶದ ರಮಣಿಯರಿಗೆಲ್ಲಾ ಮಾದರಿಯಾಯಿತು. ನಿಮ್ಮ ಈ ವಿದ್ಯೆಯ ಮಹತ್ವದಿಂದ ಇನ್ನು ಸ್ವಲ್ಪಕಾಲದಲ್ಲಿಯೇ ನಮ್ಮ ದೇಶದಲ್ಲಿ ಮಾತ್ರವಲ್ಲ, ಇಡೀ ಹಿಂದೂದೇಶದ ರಮಣಿಯರಲ್ಲಿ ಮುಖ್ಯಸ್ಥಾನವನ್ನು ಪಡೆದು ನಮ್ಮ ದೇಶಕ್ಕೆ ಕೀರ್ತಿ ತರುವಿರೆಂದು ನಾವು ಖಂಡಿತವಾಗಿಯೂ ನಂಬಿರುವೆವು.

ನಮ್ಮ ದೇಶದ ಪೂರ್ವದ ಪತಿವ್ರತೆಯರೂ, ವೀರಪುತ್ರಿಯರೂ ಆಗಿದ್ದ ಅನೇಕ ಸ್ತ್ರೀಯರಂತೆ ನೀವೂ ಕೂಡ ನಮ್ಮ ಸೀಮೆಯ ಸ್ತ್ರೀವರ್ಗದವರ ಶ್ರೇಯೋಭಿವೃದ್ಧಿಗೆ ಕಾರಣರಾಗಬೇಕೆಂಬುದಲ್ಲದೆ, ಎಲ್ಲಾ ಜನರ ಪ್ರೀತಿಗೆ ಪಾತ್ರರಾಗಿ ದೇಶೋದ್ಧಾರಕದ ಅನೇಕ ಕೆಲಸಗಳನ್ನು ಕೈಕೊಂಡು ವೀರಪುತ್ರ ಪುತ್ರಿಯರನ್ನು ಹೆತ್ತು ಹೆಸರುವಾಸಿ ಹೊಂದಿರುವ ಕೊಡಗು ಸ್ತ್ರೀಯರಿಗೆ ಮಾದರಿಯಾಗಿ ಅನೇಕ ವರ್ಷಗಳವರೆಗೆ ಬದುಕಿ ಬಾಳಬೇಕೆಂದು ನಾವು ಕೋರಿ ದಯಾಮಯನಾದ ಭಗವಂತನು ನಿಮಗೆ ಆಯುರಾರೋಗ್ಯ ಐಶ್ವರ್ಯವನ್ನು ಕೊಡಲೆಂದು ಪ್ರಾರ್ಥಿಸುವೆವು.

ಕೊನೆಯಲ್ಲಿ—ನೀವು ಈ ದಿನದಸಭೆಗೆ ಬಂದುದಕ್ಕೆ ಸಂತೋಷಪಡುವುದಲ್ಲದೆ ನಾವು ಪ್ರೀತಿಪೂರ್ವಕವಾಗಿ ಕೊಡುವ ಈ ಸಣ್ಣ ಕೈಗಡಿಯಾರವನ್ನೂ ಸ್ವೀಕರಿಸುವಿರಾಗಿ ನಂಬಿರುವ,

ನಿಮ್ಮ ಹಿತೈಷಿಗಳಾದ—ಕೊಡಗಿನ ನಿವಾಸಿಗಳು.

ತಾರೀಖು 7–9–21 ರಲ್ಲು ಮಡಿಕೇರಿ ಹೈಸ್ಕೂಲಿನ ಹಾಲಿನಲ್ಲಿ ಶ್ರೀಮತಿ ಕೋದಂಡ್ರ ಬೊಳ್ಳಮ್ಮನವರು ಕೊಡಗುಮಹಿಳೆಯರ ಪೈಕಿ ಮೊದಲು ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದವರಾದುದರಿಂದ ಅವರಿಗೆ ಕೊಡಗಿನ ಜನರು ಸೇರಿ ಒಂದು ಬಹುಮಾನಪತ್ರವನ್ನು ಓದಿದ ನಂತರ ಅಮೂಲ್ಯವಾದ ಚಿನ್ನದ ಒಂದು ಕೈಗಡಿಯಾರವನ್ನು ಒಪ್ಪಿಸಿದರು. ಮಡಿಕೇರಿಯ ಮುಖ್ಯಪಟ್ಟ ಉದ್ಯೋಗಸ್ಥರೂ ಉದ್ಯೋಗಸ್ಥರಲ್ಲದವರನೇಕರೂ ನೆರೆದ್ದರು. ಗಡಿಯಾರವನ್ನು ಕೊಟ್ಟ ನಂತರ ಬೊಳ್ಳಮ್ಮನವರು ಮಾಡಿದ ಭಾಷಣವು ಕಳೆದ ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟಿತ್ತು.

ಅಧ್ಯಕ್ಷರಾಗಿದ್ದ ರಾ|| ಸಾ|| ಕೇಟೋಳಿರ ಚಂಗಪ್ಪನವರು ಹೇಳಿದರ ಸಾರಾಂಶವೇನೆಂದರೆ—ಈ ದಿನ ನಾವು ಬೊಳ್ಳಮ್ಮ ಪ್ರಥಮ ಬಿ. ಎ. ಯವರಿಗೆ ಮರ್ಯಾದೆ ಮಾಡಿದ್ದು ನ್ಯಾಯವಾದದ್ದೇ ಸರಿ. ವಿದ್ಯಾಭ್ಯಾಸಕ್ಕಾಗಿ ಹೊರಗೆ ಹೋದ ಕೊಡಗಿನ ಸ್ತ್ರೀಯರ ಪೈಕಿ ಬೊಳ್ಳಮ್ಮನವರು ಒಂದನೇಯವರು ನಮ್ಮ ಯುವತಿಯರೆಲ್ಲರೂ ಇವರ ಉದಾಹರಣೆಯನ್ನು ಹಿಂಬಾಲಿಸಬೇಕಾಗಿದೆ. ಭೂಲೋಕದಲ್ಲಿ ಉಪಾಧ್ಯಾಯರ (ಟೀಚಿಂಗ್) ಮತ್ತು ಡಾಕ್ಟರುಗಳ ಉದ್ಯೋಗಗಳು ಬಹಳ ಒಳ್ಳೆಯವುಗಳು. ಬೊಳ್ಳಮ್ಮನವರು ಇಂಥಾ ಉತ್ತಮವಾದ ಉಪಾಧ್ಯಾಯರ ಉದ್ಯೋಗವನ್ನು ಕೈಕೊಂಡಿರುವುದು ಬಹಳ ಸಂತೋಷಕರ. ಅವರು ಕೆಲವು ಕಾಲದ ನಂತರವಾದರೂ ನಮ್ಮ ದೇಶಕ್ಕೆ ಹಿಂತಿರುಗಿ ಬರುವದನ್ನು ಕಾಯುತ್ತಾ ಇರುತ್ತೇವೆ. ಇವರಿಗೆ ಆದ ಜಯವು ಇವರ ಮತ್ತು ಬೇರೆ ತಂದೆತಾಯಿಗಳ ಮನಸ್ಸನ್ನು ಪ್ರೋತ್ಸಾಹಗೊಳಿಸುತ್ತದೆ. ಇವರ ನಂತರ ಪೆ|| ಕೋದಂಡ ಅಪ್ಪಯ್ಯನವರ ಮತ್ತು ಕೊಂಗಂಡ್ರ ಅಪ್ಪಯ್ಯನವರ ಹೆಣ್ಣುಮಕ್ಕಳು ವಿದ್ಯಾಭ್ಯಾಸಕ್ಕೆ ಹೊರಗೆ ಹೋದರು. ಎಲ್ಲರೂ ಆಗುವಷ್ಟು ಪ್ರಯತ್ನಪಟ್ಟು ತಮ್ಮ ಹೆಣ್ಣುಮಕ್ಕಳನ್ನು ಹೊರಗೆ ವಿದ್ಯಾಭ್ಯಾಸಕ್ಕೆ ಕಳುಹಿಸಬೇಕು. ಐಶ್ವರ್ಯವಂತರು ಸ್ಕಾಲರ್‌ಷಿಪ್ ಕೊಟ್ಟು ಬಡವರ ಮಕ್ಕಳನ್ನು ಕಳುಹಿಸಬೇಕು. ಡಾಕ್ಟರ್ ಕೋದಂಡ್ರ ನಂಜಪ್ಪನವರು ಉದಾರಮನಸ್ಸಿನಿಂದ ಈ ಸ್ಕಾಲರ್‌ಷಿಪ್ಪಿಗೆ ಇಟ್ಟಿರುವ ಹಣಕ್ಕಾಗಿ ಅವರಿಗೆ ಬಹಳ ವಂದನೆಮಾಡಬೇಕು. ಹಿಂದೂದೇಶವು ಬಹುಬೇಗನೆ ಓಡುತ್ತಿದೆ. ಹೆಂಗಸರು ಸಹ ಎಲ್ಲಾ ವಿಧಗಳಲ್ಲಿ ಮುಂದಕ್ಕೆ ಬರುತ್ತಲಿದ್ದಾರೆ. ನಮ್ಮ ಸ್ತ್ರೀಯರು ಅವರನ್ನು ಹಿಂಬಾಲಿಸಬೇಕು. ನಮ್ಮ ಹೆಂಗಸರು ಈವರೆಗೆ ಮನೆ ಕೆಲಸಗಳನ್ನು ಮಾತ್ರ ಮಾಡುತ್ತಾ ಇದ್ದರು. ಇನ್ನು ಮುಂದೆ ವಿದ್ಯೆ ಕಲಿತು ಮುಂದುಬರಬೇಕಾಗಿದೆ. ತಾಯಿಗಳು ವಿದ್ಯಾವಂತರಾದರೆ ಮಕ್ಕಳು ಸುಲಭದಲ್ಲೇ ವಿದ್ಯೆ ಕಲಿಯುವರು. ಬೊಳ್ಳಮ್ಮನವರು ನಮ್ಮ ದೇಶಕ್ಕೆ ಮಾಡಬೇಕಾದ ಕರ್ತವ್ಯಗಳನ್ನು ಆನಂದದ ಈಗ ಮಾಡಿಸಲು ನನಗೆ ಶಕ್ತಿ ಇರುವದಿಲ್ಲ. ದೇವರು ಬೊಳ್ಳಮ್ಮನವರಿಗೆ ಆಯುರಾರೋಗ್ಯವನ್ನು ಕೊಟ್ಟು ಕಾಪಾಡಲಿ ಎಂಬುದೆ ನನ್ನ ಪ್ರಾರ್ಥನೆ.

ನಂತರ ಶ್ರೀಮತಿ ಕೋದಂಡ್ರ ಸೀತಮ್ಮನವರು ಮಧುರವಾದ ಸಂಗೀತವನ್ನು ಹಾಡಿದರು. ತಾಂಬೂಲಾದಿಗಳು ಹಂಚಲ್ಪಟ್ಟವು. ಇದೆಲ್ಲವನ್ನು ಅನೇಕ ತೊಂದರೆಗಳಿಂದ ನಿವಾರಿಸಿ ದೃಢಮನಸ್ಸಿನಿಂದ ಕೊರತೆಯಿಲ್ಲದೆ ನೆರವೇರಿಸಿದ ಮೆ|| ಕೋದಂಡ್ರ ಅಪ್ಪಚ್ಚನವರ ಪ್ರಯುಕ್ತವು ಸ್ತೋತ್ರಾರ್ಹವಾಗಿದೆ.

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್.]

ಕೊಡಗು ಪ್ರೈಮರಿ ವಿದ್ಯಾಭ್ಯಾಸ.

[ಮಿ|| ಆರ್. ಎಸ್. ಕುಶಾಲಪ್ಪನವರಿಗೆ ಜವಾಬು.]

ಮೆ|| ಕುಶಾಲಪ್ಪನವರೇ !

ನೀವು ಕಳೆದ 13 ನೇ ಸಂಚಿಕೆಯಲ್ಲಿ ಈಗಿನ ಬೋಧನಾಕ್ರಮವನ್ನು ಕುರಿತು ಕೊಡಗು ಬಾಲಕರ ಕಷ್ಟಗಳನ್ನು ತಿಳಿಸಿ ಪುಸ್ತಕಗಳನ್ನು ತಿದ್ದಬೇಕೆಂದು ಹೇಳಿದಿರಿ. ಆದರೆ ನೀವು ಬೇಜವಾಬಂದ ಸಂಗತಿಯಾದರೊ ಈಗಿನದರ ಬದಲು ಹತ್ತುಹನ್ನೆರಡು ವರ್ಷಗಳ ಸುದ್ದಿ. 'ಡೈರೆಕ್ಟ್ ಮೆಥಡ್' ಎಂಬ ಸುಬೋಧನಕ್ರಮ ಬಂದಮೇಲೆ ಮಕ್ಕಳಿಗೆ ಅವರು ಕಾಣದಿರುವ ಆನೆ, ಅಳಿಲು ಇತ್ಯಾದಿ ಕಲಿಸಕೂಡದೆಂಬುದು ನಿಮಗೆ ತಿಳಿದಿದೆಯೆ ? ಚಿಕ್ಕ ಕ್ಲಾಸಿನಲ್ಲಿ ಮಕ್ಕಳ ಅನುಭವಕ್ಕೆ ಬರಬಹುದಾದ ಮೇಜ, ಕುರ್ಚಿ, ಮರ ಇತ್ಯಾದಿ ಮಾತ್ರವಲ್ಲವೆ ಹೊಸಗನ್ನಡ ಮೊದಲನೆಯ ಪುಸ್ತಕದಲ್ಲಿ ಕಾಣಬಹುದಾದ ಸಂಗತಿ ? ಆ ಪುಸ್ತಕವೂ ಕೂಡ ಒಂದು ಮಾದರಿಪುಸ್ತಕ. ಅಂತಹ ಪುಸ್ತಕವನ್ನು ಉಪಾಧ್ಯಾಯನು ಈ ದೇಶದ ಸ್ಥಿತಿಗನುಸರಿಸಿ ಬರೆದು ಆಯಾ ದಿವಸದ ಪಂಕ್ತಿ ಸರಿಯಾಗಿ ಕಪ್ಪು ಹಲಗೆಯಮೇಲೆ ಬರೆಸಿ ಓದಿಸಬೇಕಷ್ಟೆ. ಇದನ್ನು ತಾವು ಕೇಳಿಲ್ಲವೊ ಏನು ? ತಾವು ಉಪಾಧ್ಯಾಯರಲ್ಲವೆಂದು ತೋರುತ್ತದೆ. ಆದುದರಿಂದ ತಿಳಿಸಿ ... ಈಗ ಬಾಲಶಿಕ್ಷೆಯನ್ನು ಯಾರೂ ಉಪಯೋಗಿಸುವದಿಲ್ಲ.

ಮತ್ತೆ ಟೆಕ್ಸ್ಟ್ ಬುಕ್ಕುಗಳು ಮೈಸೂರು ದಕ್ಷಿಣಕನ್ನಡ ಸೀಮೆಗಳಿಗನುಸರಿಸಿ ಬರೆದಿವೆ ಎಂದು ಹೇಳುವಿರಿ ? ಮೈಸೂರಿನ ಯಾವ ಪುಸ್ತಕಗಳನ್ನು ಉಪಯೋಗಿಸಬೇಕೆಂದಿರುವರೆಗಿನ ಕ್ಲಾಸುಗಳಲ್ಲಿ ಪಠ್ಯ ಪುಸ್ತಕವಾಗಿವೆ ?

ಇನ್ನು ದಕ್ಷಿಣಕನ್ನಡ ಅಲ್ಲಿಯ ಮಾತೃಭಾಷೆ ತುಳು ಕೊಂಕಣಿ ಇವು ಕೆಲವೆಡೆ ಮಲೆಯಾಳ. ಆ ಬಾಲಕರಿಗಾದರೂ ಕೊಡಗಿನವರಂತೆ ಕಷ್ಟವಿಲ್ಲವೆ ?

ಆದರೂ ನಿಮ್ಮ ಲೇಖನದಿಂದ ನಾನು ಒಂದೂ ಅಭಿಪ್ರಾಯವನ್ನು ಸೂಚಿಸುವೆನು. ಕರ್ನಾಟಕ ಪರಿಷತ್ತಿನವರು ಸಮಸ್ತ ಕರ್ನಾಟಕ ಪ್ರಾಂತ್ಯದವರನ್ನು ಕರೆಯಿಸಿ ಆಯಾ ದೇಶದ ಭಾಷೆಗಳನ್ನು ಚರ್ಚಿಸಿ ಒಂದೇ ರೂಪಕ್ಕೆ ತರುವದಾಗೂ ಮತ್ತು ಶಾಲೆಗಳಲ್ಲಿ ಓದುವ ಬಾಲಕರಿಗೆ ಒಳ್ಳೆಯ ಪಠ್ಯ ಪುಸ್ತಕಗಳನ್ನು ಬರೆಯಿಸುವಂತೆ ಆಯಾ ಸರಕಾರದವರನ್ನು ಕೇಳಿಕೊಳ್ಳುವಂತೆಯೂ ಆದ ನಿಯಮಕ್ಕೆ ಕೊಡಗಿನಿಂದ ತಾವಾದರೂ ಮನಕೊಟ್ಟಿದ್ದರೆ ಈ ಪಾಡು ಏಕೆಬೇಕಾಗಿತ್ತು ? ಸದಸ್ಯರು ಕೂಡ ನಿಮ್ಮೆಲ್ಲರ ಸಹಕಾರ ಅವರಿಗಿಲ್ಲೆಂದು ಚಟಪಟರಾಗಿರುವ ಹಾಗೆ ತೋರುತ್ತದೆ. ಇನ್ನಾದರೂ ಮೆ|| ಕುಶಾಲಪ್ಪನವರೆ ಬರುವ ವರ್ಷದ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧಿವೇಶನಕ್ಕೆ ತಾವು ದಯಮಾಡಿಸಿ ಕೊಡಗು ಕನ್ನಡನಾಡೆಂದೂ ಕೊಡಗರು ಕನ್ನಡಿಗರೆಂದೂ ಪ್ರತಿಪಾದಿಸಿ ಕೊಡಗಿನ ಕನ್ನಡ ಪುಸ್ತಕಗಳ ವಿಷಯದಲ್ಲಿ ಆಗಬೇಕಾದ ಮಾರ್ಪಾಡುಗಳನ್ನು ಸೂಚಿಸಿದಲ್ಲಿ ನಿಮ್ಮ ಚಿರಋಣಿಗಳು ನಾವಾಗುತ್ತಿದ್ದೆವು. ಮಾತ್ರವಲ್ಲ ಕೊಡಗಿನಲ್ಲಿ ಕನ್ನಡ ಭಾಷಾಸೇವನೆ ಕೈಹಾಕಿದ ಪುಣ್ಯವು ಪರಲೋಕಪ್ರಾಪ್ತರಾಗುವಿರಿ ಎಂದು ನಂಬಿರುವ.

ಒಬ '' ಉಪಾಧ್ಯಾಯ ''

ಅಯ್ಯಾ,

ಕಳೆದ ತಿಂಗಳು 16 ನೇ ತಾರೀಖಿನ ದಿನ ಜಮಿನುದಾರರ ಸಂಘದವರ ಕೋರಿಕೆಯಂತೆ ಸೇರಿ ಇದ್ದ ಈ ದೇಶದ ಮಹಾಜನರ ಸಭೆಯಲ್ಲಿ ಈ ಕೊಡಗುರಾಜ್ಯಕ್ಕೆ ಅವಶ್ಯಕವಾದ ನ್ಯಾಯವಿಮರ್ಶನೆ ಯಾ ಲೆಜಿಸ್ಲೇಟಿವ್ ಸಭಾ ಯಾಕೆ ಇರಬೇಕೆಂಬುದು ದೇಶದ ಎಲ್ಲಾ ಭಾಗಗಳ ಪ್ರತಿನಿಧಿಗಳು ರಚಿಸಿ ರೆಸೊಲ್ಯೂಷನ್ ಪಾಸುಮಾಡಿ ಅದನ್ನು ಕೊಡಗು ಕಮಿಷನರವರ ತಿಳುವಳಿಕೆ ಬಗ್ಗೆ ಕಳುಹಿಸಿದರು. 17 ನೇ ತಾರೀಖಿನ ದಿನ ಸೇರಿ ಇದ್ದ ಕೊಡಗುದೇಶದ ಕಮಿಷನರವರ ಸಭಾದಲ್ಲಿ ಮಹಾಜನರ ರೆಸೊಲ್ಯೂಷನ್-ಯಾನೆ ಅಭಿಪ್ರಾಯವನ್ನು ಅಂಗೀಕರಿಸದೆ ಕಮಿಷನರ್ ಸಾಹೇಬರವರು ನೀವು ಕೇಳುವಂಥಾ ಸಭಾ ಸಿಕ್ಕಲಾರದೆಂದು ಕಂಠೋಕ್ತವಾಗಿ ತಿಳಿಸಿ ನಿಮ್ಮ ಅಭಿಪ್ರಾಯ ಹೀಗೆ ಇದೆಯೆಂದು ಚೀಫ್ ಕಮಿಷನರವರಿಗೆ ತಿಳಿಸುತ್ತೇವೆಂದು ಹೇಳಿ ... ನಮ್ಮ ಹಿತಬೋಧನೆಯನ್ನು ಸಭಿಕರಿಗೆ ತಿಳಿಸಿದ ನಂತರ ಮೆ|| ... ರವರು ಕಮಿಷನರವರ ಹಿತಬೋಧನೆ ... ನಾವು ಆಪೇಕ್ಷಿಸತಕ್ಕ ಸಭಾ ಮಂಜೂರಾಗಿ ಸುಮಾರು ಕಾಲು ಶತಮಾನ ಹಿಡಿಯುವದಕ್ಕೂ ಸಾಕು. ಆದ್ದರಿಂದ ಈಗ ಸರಕಾರದವರು ಕೊಡುತ್ತೇವೆಂತ ಹೇಳುವ ಸಭಾಕ್ಕೆ ನಾವು ತಾತ್ಕಾಲದಲ್ಲಿ ಒಪ್ಪಿಕೊಳ್ಳುವ ಎಂದು ಸೂಚಿಸಿದ್ದರಮೇಲೆ ಸಭಿಕರಲ್ಲಿ 4-5 ಜನರು ಅದಕ್ಕೆ ಅನುಮತಿಕೊಟ್ಟರು. ಅದರನ್ನೇ ಸಭಿಕರ ತಾತ್ಪರ್ಯವೆಂತ ಕಮಿಷನರವರು ಸ್ವೀಕರಿಸಲು ಮಾಡಿಕೊಂಡರು. ಆ ದಿನದ ಸಭೆಯಲ್ಲಿ ಸೇರಿದ್ದ ಸುಮಾರು 25 ಜನಗಳಲ್ಲಿ ಈ 4-5 ಜನರ ಮಾತನ್ನೇ ಅಂಗೀಕರಿಸಿರುವದು ನ್ಯಾಯವೋ ? ಬಾಕಿ ಜನರ ತಾತ್ಪರ್ಯವನ್ನು ಕೇಳದೆ ಯಾ ಆ ಸಂಗತಿಯಲ್ಲಿ ಓಟುತೆಗೆಯದೆ ಸ್ವೀಕರಿಸಲುಮಾಡಿರುವದು ತುಂಬಾ ಅನ್ಯಾಯವಾಗಿದೆ. ಆದ್ದರಿಂದ ನೀವು ನಿಮ್ಮ ಪತ್ರದಲ್ಲಿ ಈ ವಿಷಯವನ್ನು ಚೆನ್ನಾಗಿ ಚರ್ಚಿಸುವದಲ್ಲದೆ ಪುನಃ ಜಮಿನುದಾರರ ಸಂಘವು ಮಹಾಜನ ಸಭೆಯನ್ನು ಸೇರಿಸಿ ತಮ್ಮ 16 ನೇ ತಾರೀಖಿನ ರೆಸೊಲ್ಯೂಷನ್ನನ್ನೆ ಅಂಗೀಕರಿಸಬೇಕೆಂತಲೂ, 17 ನೇ ತಾರೀಖಿನ ಕಮಿಷನರವರ ಪ್ರೊಸೀಡಿಂಗ್ಸನ್ನು ರದ್ದುಪಡಿಸಬೇಕೆಂತಲೂ ಕೇಳಿಕೊಳ್ಳತಕ್ಕದ್ದು ತುಂಬಾ ಆವಶ್ಯಕವಲ್ಲವೇ ?

ಏತಕ್ಕೆ ಈಗ ಕೊಡುತ್ತೇವೆಂತ ಹೇಳುವ ಸಭೆಯು ಮಾತ್ರ ಅಂಗೀಕರಿಸಿದರೆ ಮುಂದೆ ತುಂಬಾ ವ್ಯಸನಕ್ಕೆ ಕಾರಣವಾಗುವದು. ಇನ್ನು ಒಂದುಕಾಲು ಶತಮಾನ ನಾವು ಕಷ್ಟಪಟ್ಟಾಗ್ಯೂ ನಮಗೆ ತೃಪ್ತಿಕರವಾದ ಸಭಾ ಸಿಕ್ಕಲಾರದು. ಕಮಿಷನರ್ ಸಾಹೇಬರವರ ಸೂಚನೆಯಂತೆ ಇದು ಗೊತ್ತಾಗುತ್ತೆ. ಆದ್ದರಿಂದ ಮಹಾಜನರು ಪುನಃ ಸಭಾ ಸೇರಿ ನಮ್ಮ ನೆರೆಯವರಾದ ಮದರಾಸು ಸಂಸ್ಥಾನದವರಿಗೆ ಕೊಟ್ಟಿರುವ ರೀತಿಯಲ್ಲಿ ನಮಗೂ ಪೂರ್ಣ ಅಧಿಕಾರ ಇರುವ ಸಭೆಯನ್ನು ಕೊಡಬೇಕು. ಇಲ್ಲವಾದ ಪಕ್ಷದಲ್ಲಿ ನಮ್ಮ ರಾಜ್ಯವನ್ನು ಮದರಾಸು ಸಂಸ್ಥಾನಕ್ಕೆ ಸೇರಿಸಬೇಕೆಂತ ಕಂಠೋಕ್ತವಾಗಿ ಕೇಳತಕ್ಕದ್ದು ತುಂಬಾ ಅವಶ್ಯಕವಾಗಿದೆ. ಈಗ ಕಾಲಕಳೆಯುವದಕ್ಕೆ ಸಮಯವಲ್ಲ. ಪುನಃ ಅತಿ ಶೀಘ್ರದಲ್ಲಿಯೇ ಮಹಾಜನಸಭೆ ಸೇರಬೇಕು. ಜಮಿನುದಾರರ ಸಂಘದವರು ಇದಕ್ಕೆ ಪ್ರಯತ್ನಪಡಬೇಕೆಂತ ಸೂಚಿಸುತ್ತೇನೆ.

ಹಿತಚಿಂತಕ.

ಕವಿಜಾತಸರವರಿಗೆ ಒಂದು ಬಹಿರಂಗವಾದ ಪತ್ರ.

ಕೊಡಗುದೇಶದ ಮಾರ್ಪಾಟಿನ ವಿಷಯವಾಗಿ ಕಳೆದ ಜುಲೈ ತಿಂಗಳ ಮಧ್ಯಭಾಗದಲ್ಲಿ ಪ್ರಕಟಿಸಿದ (Memorandum) ಪತ್ರದ ಮೇರೆ, ಪ್ರಜೆಗಳಾದ ನಾವುಗಳು ಕಳೆದ ಆಗಸ್ಟ 17 ರಲ್ಲಿ ಶೈಕರಾದ ನಮ್ಮಗಳ ಚರ್ಚೆಗಳ ಅಭಿಪ್ರಾಯವನ್ನು ತಿಳಿಯಲು ಕುತೂಹಲ ಉಳ್ಳವರೆಂಬ ಸಂಶಯವಿಲ್ಲ. ಪ್ರಜೆಗಳ ನಾಡಿನ ರಾಜ್ಯಭಾರದ, ಇಷ್ಟು ಮೇರೆ, ಪ್ರಜೆಗಳ ಸಾಧ್ಯ ಯಾವದೇಶದ ಮಾರ್ಪಾಟುಗಳ ಅಭಿಪ್ರಾಯವನ್ನು ತಿಳಿಸಿ, ರಾಜ ಮತ್ತು ಪ್ರಜೆಗಳ ಪರಸ್ಪರ ಪ್ರೀತಿಗಳನ್ನು ಅಂಕುರಿಸುವ ಉದ್ದೇಶ್ಯ ಬಂದಲ್ಲಿ, ತಮ್ಮ ನಿರಂಕುಶ ಪ್ರವರ್ತನವನ್ನು ಅವಲಂಬಿಸಿ, ತಮ್ಮ ಇಚ್ಛೆಗೆ ಸರಿಯಾದ ಜನರಿಂದ, ಜ್ಞಾಪಕ ಪತ್ರದ, ನಿಮ್ಮ ಇಚ್ಛೆಗೆ ಸರಿಯಾದ ಸಭೆಯನ್ನು ಒಪ್ಪಿಕೊಂಡಂತೆ ಮಾಡಿಧರಾಗಿ ತಿಳಿಯುವಂತೆ, ಸಭೆಯನ್ನು ಒಪ್ಪಿಕೊಂಡಂತೆ ಮಾಡಿದರಾಗಿ ತಿಳಿವಳಿಕೆಯನ್ನು ಈ ಪ್ರಾಂತ್ಯದಲ್ಲೆಲ್ಲಾ ಹುಟ್ಟಿಸುವ ವಿಷಯವಾಗಿ ತಮಗೆ ಎಷ್ಟು ವಂದಿಸಿದರೂ ಸ್ವಲ್ಪವೇ.

2. ತಾವು ಕಳೆದ ಮೆ ಮತ್ತು ಜೂನ್ ತಿಂಗಳಲ್ಲಿ ನಡೆಯುತ್ತಿದ್ದ ಸಂಪ್ರದಾಯ ಗೋಷ್ಠಿಗಳಲ್ಲಿ, ತಮ್ಮ ಉಪನ್ಯಾಸದಲ್ಲಿ ನಾವು ವಿದ್ಯೆಯಲ್ಲಿ ಬುದ್ಧಿಯಲ್ಲಿ ಬಹಳ ಮುಂದುವರಿಸಿದವರೆಂದೂ, ಆದ್ದರಿಂದ ಎಲ್ಲಾ ದೇಶಗಳ ಬಹಳ ಮುಂದುವರಿಸವರೆಂದೂ, ಆದ್ದರಿಂದ ಎಲ್ಲಾ ದೇಶಗಳ ಸಾಧ್ಯವಾದ ಮಾರ್ಪಾಟುಗಳು ನಿಶ್ಚಯ ಕೊಡಲು. ಒಪ್ಪಿಕೊಳ್ಳುವ ನ್ಯಾಯವಾದ ಮಾರ್ಪಾಟುಗಳು ನಿಶ್ಚಯದ ಕೊಡಲು. ಒಪ್ಪಿಕೊಳ್ಳದಿರಲು ಪ್ರಯೋಜನವಿಲ್ಲವೆಂದು ಹೇಳಿದಿರಿ. ಅಂಥ ಇರಾದೆಯಿದ್ದಲ್ಲಿ ಪ್ರಯೋಜನವಾಗಲಾರದೆಂದು ಹೇಳಿದಿರಿ. ಅಂಥ ಇರಾದೆ ತಾವು, ಈಗ ಬಂದಿರುವ ಸಭೆಯು, ನ್ಯಾಯವಾದದ್ದಲ್ಲವೆಂದು ತಾವು, ಈಗ ಬಂದಿರುವ (Memorandum) ಮೂಲಕ ಇಷ್ಟು ಜ್ಞಾಪಕಪತ್ರದ (Memorandum) ಮೂಲಕ ಇಷ್ಟು ದಿನ, ದೇಶದ ಜನರಾದ ನಮ್ಮನ್ನು, ಬಿಟ್ಟು ಮಾಡಿ, ವಿನಟಂಗಿನ ದಿನ, ದೇಶದ ಜನರಾದ ನಮ್ಮನ್ನು, (Roll Call) ಬಿಟ್ಟು ಗುಪ್ತವಾದ (Privat) ಸಭೆ ಎಂದು ಹೇಳಿ (Roll Call) ಮಾಡದೆ ಕರೆದು, ಜಾತಿ ಜನರ ಬೊಗಳಿಸಿ, ಚಳವಳ ಹುಟ್ಟಿಸಿದಕ್ಕೆ ಎಷ್ಟು ವಂದಿಸಿದರೂ ಸ್ವಲ್ಪವೇ!

3. ಇದೀ ಹಿಂದುಸ್ಥಾನದಲ್ಲಿ, ಮೋರ್ಲಿಮಿಂಟೊ ಮಾರ್ಪಾಟಿನ ಮೇಲೆ ಬಂದ ಮಾಂಟೆಗ್ಯೂ ಚೆಮ್ಸ್‌ಫರ್ಡ್ ಎಂ. ಸಿ. ಮಾರ್ಪಾಟುಗಳ ದೆಸೆಯಿಂದ ಬಯಿದದ್ದು ಸಾಲದ್ದಕ್ಕೆ, ಎಸ್. ಸಿ. ಮಾರ್ಪಾಟುಗಳ ಜಾರಿಗೆ ಬರುವದರಿಂದ ಬಯಿದದ್ದು ಸಾಲದ್ದಕ್ಕೆ ಪ್ರತ್ಯಕ್ಷ ಕೇಶವುಗಳಲ್ಲಿ ತಿಳಿದುಕೊಂಡು, ಅನಂದಪಡದಿರುವದನ್ನು ಪ್ರತ್ಯಕ್ಷ ಕೇಶವುಗಳಲ್ಲಿ ನೋಡಿಕೊಂಡು, ಅನಂದಪಡದಿರುವದನ್ನು ಕೊಡಗು ದೇಶವು ನೋಡಿದರೂ ಕೂಡ ಮುಂದಲಾಲೋಚನೆ ಇಲ್ಲದೆ, ಕೊಡಗು ದೇಶವು ನೋಡಿದರೂ ಕೂಡ ಮುಂದಲಾಲೋಚನೆ ಇಲ್ಲದೆ, ಕೆಲವು ಮುಖಂಡರು ತಮ್ಮಲ್ಲಿಟ್ಟಿದ್ದ ವಿಶ್ವಾಸವನ್ನು ಕಳಕೊಂಡಿರುವ. ಕೆಲವು ಮುಖಂಡರು ತಮ್ಮಲ್ಲಿಟ್ಟಿದ್ದ ವಿಶ್ವಾಸವನ್ನು ಕಳಕೊಂಡಿರುವ. ಹ್ಯಾಗಂದರೆ—ಇವರೇ ತಮ್ಮ ಸಾಹಸಕ್ಕೆ ತಾವು ಬಹಿರಂಗ ಪಡಿಸಿದಿರಿ. ಹ್ಯಾಗಂದರೆ—ಇವರೇ ತಮ್ಮ ಗುಪ್ತವಾದ ಮೀಟಿಂಗಿನ ಒಂದು ದಿನದ ಮುಂದಿನ ಮೀಟಿಂಗಿನಲ್ಲೂ, ಗುಪ್ತವಾದ ಮೀಟಿಂಗಿನ ಒಂದು ದಿನದ ಮುಂದಿನ ಮೀಟಿಂಗಿನಲ್ಲೂ, ಬೇರೆ ಸಭೆ ಮೀಟಿಂಗಿನ ಉದಾರ್ಯ ಸಂಘದ ಮೀಟಿಂಗಿನಲ್ಲೂ, ಬೇರೆ ಸಭೆ ಮೀಟಿಂಗಿನ ಸುದಾರ್ಯ ಸಂಘದ ಮೀಟಿಂಗಿನಲ್ಲೂ, ಎಮ್. ಸಿ ಮಾರ್ಪಾಟುಗಳಂತೆ, ಮಾಡಿದಂತ ದರಾವಿನಂತೆ ಎಮ್. ಸಿ ಮಾರ್ಪಾಟುಗಳಂತೆ, ಮಾಡಿದಂತ ದರಾವಿನಂತೆ ಎಮ್. ಸಿ. ಮಾರ್ಪಾಟುಗಳಂತೆ, ಮಾಡಿ ಮಾರ್ಪಾಟುಗಳು ಸಿಕ್ಕದಿದ್ದರೆ, ಮೇಲ್ಕಂಡ ಸಂಘಗಳಲ್ಲೂ, ಮಾಡಿ ಮಾರ್ಪಾಟುಗಳು ಸಿಕ್ಕದಿದ್ದರೆ, ಮೇಲ್ಕಂಡ ಸಂಘಗಳಲ್ಲೂ, ಮಾಡಿದ ದರಾವಿನಂತೆ ಆಗಬೇಕೆಂದು ಪ್ರಜೆಗಳ ಮುಂದೆ ಹೇಳಿಕೊಂಡು ಕೊಡದ ದರಾವಿನಂತೆ ಆಗಬೇಕೆಂದು ಪ್ರಜೆಗಳ ಮುಂದೆ ಹೇಳಿಕೊಂಡು ತಮ್ಮ ಗುಪ್ತ ಮೀಟಿಂಗಿನಲ್ಲಿ ಈಗ ಕೊಡುವ ಸಭೆಗೆ ಒಪ್ಪಿಕೊಂಡರೆಂದು, ಇವರು ಪ್ರಜೆಗಳಿಂದ ಹಿಂಬಾಲಿಸತಕ್ಕಂಥವರುಗಳಲ್ಲವೆಂಬುದನ್ನು, ಇವರು ಪ್ರಜೆಗಳಿಂದ ಹಿಂಬಾಲಿಸತಕ್ಕಂಥವರುಗಳಲ್ಲವೆಂಬುದು, ಮತ್ತು ತಮ್ಮ ಜನಾಂಗಕ್ಕಾಗಿ ಸ್ವಾರ್ಥವನ್ನು ಬಹಿರಂಗಪಡಿಸಿದಕ್ಕು ಮತ್ತು ತಮ್ಮ ಜನಾಂಗಕ್ಕಾಗಿ ಸ್ವಾರ್ಥ ಪರರಾಗಿ ತಮ್ಮ ಏಕಚಕ್ರಾಧಿಪತ್ಯದಲ್ಲೀ ನಮ್ಮನ್ನು ಇರಿಸಿ, ನಮ್ಮನ್ನು ಸಾರರಾಗಿ ತಮ್ಮ ಏಕಚಕ್ರಾಧಿಪತ್ಯದಲ್ಲೀ ನಮ್ಮನ್ನು ಇರಿಸಿ, ನಮ್ಮನ್ನು ಮೊದಲಿದ್ದ ಕೂಲಿಗಳಂತೆ, ಇನ್ನೂ ಕೆಲವು ವರುಷದವರೆಗೆ ಇರುವದನ್ನು ಇಟ್ಟದ ಕೂಲಿಗಳಂತೆ, ಇನ್ನೂ ಕೆಲವು ವರುಷದವರೆಗೆ ಇರುವದನ್ನು, ತಮ್ಮ ಗುಪ್ತವಾದ (Private) ಸಭೆ ನಡೆಯುವದಕ್ಕೆ ಆಗಸ್ಟ 17 ನೇ ತಮ್ಮ ಗುಪ್ತವಾದ (Private) ಸಭೆಯಿಂದ ನಮ್ಮನ್ನು ಹೊರಪಡಿಸಿ, ಗಾಢಾ ನಿದ್ರೆಯಿಂದ ಎಚ್ಚರಿಸಿ, ಸಭೆಯಿಂದ ನಮ್ಮನ್ನು ಹೊರಪಡಿಸಿ, ಗಾಢಾ ನಿದ್ರೆಯಿಂದ ಎಚ್ಚರಿಸಿ. ಎಚ್ಚರಿಸಿದಕ್ಕೆ ತಮಗೆ ಇನ್ನೆಷ್ಟು ವಂದಿಸಿದರೂ ಸ್ವಲ್ಪವೇ.

4. ಮದ್ರಾಸಿನಿಂದ ಬೇಸತ್ತು ಬಂದ ತಾವು, ತಮ್ಮ ಉಪನ್ಯಾಸದಲ್ಲಿ ಸೂಚಿಸಿದಂತೆ, ವಿರಾಮವಾಗಿರುವ ಈ ಕೊಡಗಿನಲ್ಲಿ, ಯಾವ ಕೆಲಸವನ್ನು ಸೂಚಿಸಿದಂತೆ, ವಿರಾಮವಾಗಿರುವ ಈ ಕೊಡಗಿನಲ್ಲಿ, ಯಾವ ಕಾರ್ಯವನ್ನು ಕೊಡದೆಯಿಲ್ಲದೆ, ಎಲ್ಲ ಇಲಾಖೆಗಳ ಅಧಿಪತಿಯಾಗಿರುವ ತಾವು ಈ ಪ್ರಾಂತ್ಯದ ವಿಷಯ, ಶ್ರದ್ಧೆ ತೆಗೆದುಕೊಂಡು, ಕನಿಕರಿಸಿದ ತಾವು ಈ ಪ್ರಾಂತ್ಯದ ವಿಷಯ, ಶ್ರದ್ಧೆ ತೆಗೆದುಕೊಂಡು, ಕನಿಕರಿಸಿದ ತಮಗೆ ಇನ್ನೆಷ್ಟು ವಂದಿಸಿದರೂ ಸಾಲದು. ಇದಕ್ಕೆ ನಮಗೆ ಸಿಕ್ಕಿದ ಅನುಭವಕ್ಕೆ ತಮಗೆ ಇನ್ನೆಷ್ಟು ವಂದಿಸಿದರೂ ಸ್ವಲ್ಪವೇ.

ರಾಜಭಕ್ತ ನವಳ

ಬಿದ್ದಂಡ್ರ ಸುಬ್ಬಯ್ಯ

ನಮ್ಮ ಅಂತರೆ ದೇಶೀಯರ ಇಚ್ಛಾನುಸಾರ ಮಾಡಿಕೊಳ್ಳಿಲಿಕ್ಕೆ ಹಿಂದಿನ ಸರಕಾರಿ ಉದ್ಯೋಗಸ್ಥರ ಸಂಖ್ಯೆಯು ನಮ್ಮಷ್ಟು ಇರಲಾರದ ಕಾರಣದಿಂದ ಸರಕಾರಿ ಉದ್ಯೋಗಸ್ಥರ ಸಂಖ್ಯೆಯು ನಮ್ಮಷ್ಟು ಇರಲಾರದಷ್ಟೆ—ಆದರೆ ನಮ್ಮ ಪಕ್ಷದವರು ಎಲ್ಲರೂ ಮುಂಬರುಗಳಾಗದೆ ಹೋದರೆ ಅವರ ಸಂಖ್ಯೆಯು ಹೆಚ್ಚಾಗುವುದು ಪ್ರಾಸ್ತವ್ಯವೇ. ಆದುದರಿಂದ ಈಗ ನವನಾಗರಿಕತೆ ಇರುವ ದೇಶಗಳಲ್ಲೆಲ್ಲಾ ಯಾವರೀತಿ ಬಹುಮತಾನುಸಾರವಾಗಿ ಸರಕಾರವು ನಡೆಯುವದೋ ಅದೇ ರೀತಿ ನಮ್ಮ ಸಂಖ್ಯೆಯನ್ನು ಇದರಲ್ಲಿ ಹೆಚ್ಚಿಸಿ ಈ ಸಭೆಯನ್ನು ನಮ್ಮ ಮನಬಂದಂತೆ ನಡೆಸಿಕೊಳ್ಳುವದಕ್ಕೆ ಕೊರತೆ ಏನು? ಇನ್ನು ಏನೆಂದರೆ ಉದ್ಯೋಗಸ್ಥರಿಗೆ ನಿರೋಧವಾಗಿ ವರ್ತಿಸಿದರೆ ಅವರು ನಮ್ಮನ್ನು ನಿಷ್ಕಾರಣವಾಗಿ ಪೀಡಿಸುವರು ಎಂಬ ಹೆದರಿಕೆ. ಅವರು ಬಹುಶಃ ಹಾಗೆ ಮಾಡದು ಮಾಡಲು ಮನಬಂದರೆ ನಾವು ನಮ್ಮನಮ್ಮಲ್ಲಿ ಅವರಿಗೆ ವಿರೋಧವಾಗಿ ಮಾತಾಡಿದನ್ನು ಗೂಢಚಾರರಿಂದಲೂ, ಚಾಡಿಕೋರರಿಂದಲೂ ತಿಳಿದು ಬೆನ್ನಹಿಂದೆ ನಮಗೆ ತೊಂದರೆಮಾಡಿದರೆ ಏನುಮಾಡೋಣ? ಅವರು ತೊಂದರೆಮಾಡಲಿಕ್ಕಿಲ್ಲ. ಮಾಡಬೇಕೆಂದು ನಿಶ್ಚಯಿಸಿದರೆ ಅವರಿಗೆ ಪ್ರತಿಕೂಲವೂ ಉಂಟು. ಆದರೆ ಅದು ಸದ್ಯಕ್ಕೆ ಬೇಡ.

ಇನ್ನೂ 'ಕೊಡಗುಸಭೆಯು' ಸ್ಥಾಪಿಸಲ್ಪಡಲಿಲ್ಲ. ಈಗ ಇರುವುದು ಬರೇ ಕಾರ್ಯ ನಿರ್ವಾಹಕಸಭೆ. ನಾವೆಲ್ಲರೂ ದೇಶದ ಹಿತಚಿಂತಕರು ಸಾರ್ಥಕವಾಗಿ ಒಟ್ಟುಕೂಡಿಬಂದರೆ ನಮಗೆ ಒಪ್ಪುವಂಥಾ ಸಭಾಪತಿಗಳನ್ನು ಚುನಾಯಿಸಲು ಯಾರದು ತಾಸೆ ಅದೆ?

ಕೊಡಗರಿಗೆ ಗುರುಗಳು ಇಲ್ಲ, ಹಳೆಯ ತಕ್ಕ ಮುಖ್ಯಸ್ಥರೆಂತು ಈ ನವನಾಗರಿಕತೆಯ ದೆಸೆಯಿಂದ ಮೂಲೆಗೆ ಹೋದರು ಆದುದರಿಂದ ಸದ್ಯಕ್ಕೆ ಒಂದು ಸಭೆಯಾದರೂ ಆಗಬೇಕು. ಅದು 'ಕೊಡಗುಸಭಾ' ವಾಗಲಿ ಬೇರೆ ಇನ್ನಾವ ಹೆಸರಿನದೇ ಆಗಲಿ, ಆದರೆ ಬರಿ ಕೊಡಗರೇ ಒಂದು ಕೂಡಿ ಚರ್ಚಿಸುವಂಥಾ ಒಂದು ಸಭೆಯು ಅತ್ಯವಶ್ಯಕ. ಕೆಲವರ ಅಭಿಪ್ರಾಯವೇನಂದರೆ—ಈ ಸಭೆಯನ್ನು ಸ್ಥಾಪಿಸಿದರೆ ಕೊಡವ ಕವ್ವು ಕೊಡಗರಲ್ಲೇ ತಕ್ಕರಿಗೂ ಜಗಳವು ಪ್ರಾರಂಭವಾಗುವುದೆಂದು ನಮ್ಮ ಜಾತಿಯವರಲ್ಲೀ ಒಂದು ಐನ್‌ಮನೆಯು ಅನೇಕ ಕೊಪ್ಪಲುಗಳು ಇವೆ ಒಂದೇ ಮನೆಯ ಸುತ್ತಲು ವಾಸಮಾಡುವವರು ದಿನವೂ ಕಚ್ಚಾಡುತಿರುತ್ತಾರೆ ಆದರೆ ಹಬ್ಬ ಮೊದಲಾದ ಸಂದರ್ಭದಲ್ಲಿ ಐನ್‌ಮನೆಯಲ್ಲಿ ಕೊಪ್ಪಲಿಂದ ಬಂದು ಸೇರಿದರೆ ಎಷ್ಟು ಪ್ರೀತಿಯಿಂದ ಇರುವರೆಂದು ನೋಡಿದರೆ ಮೇಲಿನ ಒಗಟು ಮಾಯವಾಗುವುದು

ಕೊಡಗು ವಿದ್ಯಾಭಿವೃದ್ಧಿಗೆ ಸಂಘವನ್ನು ಸ್ಥಾಪಿಸುವಾಗಲು ಅನೇಕರು ಜಾತಿಯಲ್ಲಿ ಕೊಡಗರದು ಮಾತ್ರ ಬೇಡವೆಂದು ಹೇಳಿದರು ಆದರೆ ಅದು ತಪ್ಪೆಂದು ಈಗ ವಿಶದ ಪಡಿಸಬಹುದು ಹ್ಯಾಗೆಂದರೆ ಕೊಡಗರಿಗೂ ಕೊಡಗೇತರರಿಗೂ ಜಗಳವಾಗುವುದು. ಹೋಗಿ ಪ್ರಾಕ್ಟೀಸಿನಲ್ಲಿ ಗಾಡುಗಳವರೂ (ವರ್ತಮಾನವಿಲ್ಲ) ವಿದ್ಯಾಭಿವೃದ್ಧಿ ಸಂಘಗಳೂ ಏಕಾಂತವಾಗಿ ದೇಶದ ವಿದ್ಯಾರ್ಥಿಗಳಿಗೆ ಸಹಾಯವು ಹೆಚ್ಚಾಗಿದೆ. ಈ ಕಾರಣ ದೇಶಕ್ಕೆ ಒಳ್ಳೆಯದಲ್ಲದೆ ದೋಷವೇನು ಕಾಣುವುದಿಲ್ಲ. ಅಲ್ಲದೆ ಈ ಹೈಸ್ಕೂಲಿನಲ್ಲಿ ಒಂದೆ ಹಾಸ್ಟಲ್ ಅಲ್ಲ. ನಾಲ್ಕು ಇವೆ. ಇದು ಜಾತಿಯನುಸಾರ ವಿಭಾಗಿಸಿದೆಂದು ಹೇಳಬಹುದು, ಹಾಗೆಂದು ತೊಂದರೆ ಇದಲ್ಲ ಯಾತಕ್ಕೆಂದರೆ ಒಂದಕ್ಕಿಂತಾ ಹೆಚ್ಚುಳ್ಳ ಹಾಸ್ಟಲುಗಳಲ್ಲಿ ಕೊಡಗರಿರುವರು ನಮ್ಮ ಈ ದೇಶದಲ್ಲಿರುವ ಜನರು ಜಾತಿವಾರು ಸಭೆಗಳನ್ನು ಸ್ಥಾಪಿಸಿ ಅಗತ್ಯ ಇರುವಾಗ ಒಂದಾಗಿ ಸೇರಿದರೆ ಎಷ್ಟೋ ಒಳ್ಳೆಯದೆಂದು ನೀವೇ ನೆನಸಿ

ಆದುದರಿಂದ ವಿನುಷ್ಯಸಿರ್ವಶವಾದವರೂ ಜೈವನಿಧಾಯಿಕವೆಂದು ತಿಳಿದುಕೊಂಡು ಪ್ರತಿಯೊಬ್ಬ ಕೊಡಗನೂ ಖಂಡಿತವಾಗಿಯೂ ಈ ಸಭೆಗೆ ಸೇರಿ ತನ್ನ ಕೈಯಲ್ಲಾದಷ್ಟು ತನ್ನ ಜಾತಿಯವರ ಕುಂದುಕೊರತೆಗಳನ್ನು ಹೋಗಲಾಡಿಸಿ, ತಾನು ಅದರಿಂದ ಕಲಿತುಕೊಂಡು ದೇಶೋದ್ಧಾರಮಾಡಬೇಕೆಂದು ಬಡವನಾದ ನನ್ನ ಪ್ರಾರ್ಥನೆ

ಸುಬ್ಬಯ್ಯ

ಆಶ್ಚರ್ಯಸೋಡಿರಿ! ಒಳ್ಳೆಯ ಸಮಯ!! ಕಳಕೊಳ್ಳಬೇಡಿರಿ!!!

ಸ್ವದೇಶಿ ಜವುಳಿ ತಮಗೆ ಬೇಕೆ?

ಬೇಕಾದವರು ನಮ್ಮಲ್ಲಿ ದೊರೆಯುವ ಗಟ್ಟಿ ರಂಗಿನ ಮನೆಯಲ್ಲಿ ಯಾವಾಗಲೂ ಉಡಲಿಕ್ಕೆ ಉಪಯುಕ್ತಾಗ, ತರಾವರಿ ರಂಗಿನ, ಸೀರೆಗಳು ಕೆಂಪು ಮತ್ತು ಕಪ್ಪು ಸಿಂಬೆಬಟ್ಟೆಗಳು, ನಾನಾತರದ ಕೋಟಿಗೆ ಅನುಕೂಲವಾದ ಚೆಕ್ಸ ಬಟ್ಟೆಗಳು, ಅಲ್ಲದೆ ಜಾಲಾ ಸಾಹ್ ಕಿಸ್, ಬೆಡ್ಡುಶೀಟ್, ವಗೈರೆಗಳು, ಇನ್ನು ಅನೇಕ ತರದ ಜವುಳಿಗಳು ನಮ್ಮಲ್ಲಿ ಮಾರಾಟಕ್ಕೆ ತಯ್ಯಾರಾಗಿವೆ. ಬಟ್ಟೆಗಳು ನಮ್ಮಲ್ಲಿಯೇ ಮಗ್ಗಗಳಿಂದ ತಯ್ಯಾರಾಗುವವು. ರೇಶ್ಮೆಯ ಜವುಳಿ ಯಾವದಾದರೂ ಬೇಕಾದವರು. ಸ್ಪೆಶಿಯಲ್ ಆರ್ಡರ್ ಕೊಟ್ಟಲ್ಲಿ ತಯ್ಯಾರು ಮಾಡಿ ಕಳುಹಿಸಲ್ಪಡುವುದು ಸುಮ್ಮನೆ ಹೆಚ್ಚಿಗೆ ಹೊಗಳಿ ಬರೆಯುವುದರಿಂದ ಪ್ರಯೋಜನವಿಲ್ಲ. ಬೇಕಾದವರು ಈ ಕೆಳಗಿನ ಅಡ್ರೆಸ್ಸಿಗೆ ಬರೆದು ಒಂದುಸಲ ತರಿಸಿನೋಡಿರಿ.

ವಿಳಾಸ:—ಕೆ. ಸಂಜಪ್ಪಸೆಟ್ಟಿ.

ಸ್ವದೇಶಿ ಜವುಳಿ ವ್ಯಾಪಾರಿ.

ಸೋಮವಾರಪೇಟೆ, ಉ—ಕೊಡಗು.

Messrs. P. SAM & Co.,

Receiving & Forwarding Agents, Cabinet Makers, Auctioners & General Agents. 12—9

591 4 Sayaji Rao Road, MYSORE.

They, not only receive and forward your goods from Mysore Railway Station to any part in Coorg but also receive goods from those parts and despatch them to any other part from the Mysore Railway Station. They undertake to sell your saleable articles by public auction or otherwise, and also supply you goods at the cheapest rates Commission very moderate. A trial order will convince you of their promptness and business methods.

ಒಳ್ಳೆಯ ಪುಸ್ತಕಗಳು!! ಬೆಲೆ ಸುಲಭ!!

A. N. C. & Co., Mysore.

ಮಹಾಶಯರೆ:—ನಮ್ಮ ಕಂಪನಿಯಲ್ಲಿ ಸಾವಿರಾರು ಬಗೆಯ ಕನ್ನಡ ಪುಸ್ತಕಗಳೂ ಇತರ ಸಾಮಾನುಗಳೂ ಬೆಲೆಗೆ ಸಿದ್ಧವಾಗಿವೆ ಕನ್ನಡ ಗ್ರಂಥಕಾರರು ತಮ್ಮ ಪುಸ್ತಕಗಳ ಒಂದೊಂದು ಪ್ರತಿಯನ್ನು ಕಳುಹಿ ಸಿದರೆ ಅವುಗಳನ್ನು ಅವಲೋಕಿಸಿ ಮಾಡುವದಲ್ಲದೆ ಒಳ್ಳೆಯ ಪುಸ್ತಕಗಳನ್ನು ಕೊಂಡುಕೊಳ್ಳುತ್ತೇವೆ. ನಾವು ಅನುಮೋದಿಸುವ ಪುಸ್ತಕಗಳನ್ನು ಒಂದಕ್ಕೆ ಕಳುಹಿಸಬೇಕಾದಲ್ಲಿ ಟಪಾಲುಖರ್ಚನ್ನು ಪುಸ್ತಕ ಕಳುಹಿಸುವವರೇ ಕೊಡಬೇಕು. ನಾವು ಹೊಸದಾಗಿ ಪ್ರಕಟಿಸಿರುವ—

ಸ್ತೋತ್ರಮಾಲಿಕಾ. ಭಾಗ ೧.

ಎಂಬ ಪುಸ್ತಕವು 1. ಮಂಗಳಾಚರಣೆ, 2. ಪ್ರತಿದಿನೋಪಯುಕ್ತ ಸ್ತೋತ್ರಗಳು 3 ಪ್ರತಿ ವಾರೋಪಯುಕ್ತ ಸ್ತೋತ್ರಗಳು 4. ಪ್ರತಿ ಮಾಸೋಪಯುಕ್ತ ಸ್ತೋತ್ರಗಳು, 5 ಉಪಯುಕ್ತ ಸ್ತೋತ್ರಗಳು. ಎಂಬ ಐದು ವಿಭಾಗಗಳನ್ನು ಒಳಗೊಂಡಿದೆ. ಇದರ ಬೆಲೆ 4 ಆಣೆ ಮಾತ್ರ. ಇದನ್ನು ವಿ. ಪಿ. ಮೂಲಕವಾಗಿಯಾಗಲೀ 5 ಆಣೆ ಪೋಸ್ಟಲ್ ಸ್ಟಾಂಪು ಕಳುಹಿಸಿ ಸಾಧಾರಣ ಬುಕ್ಕ್ ಪೋಸ್ಟು ಮೂಲಕವಾಗಿಯಾಗಲೀ ಪಡೆಯಬಹುದು ಪರೀಕ್ಷಿಸಬೇಕು! ಮಾತನಾಡಬೇಕು!! ಇಲ್ಲದಿದ್ದರೇನು ಪ್ರಯೋಜನ!! 12—8

ಪತ್ರಸೋಡಿರಿ! ಕೊಡಗು ಬಾಂಧವರೇ! ಪತ್ರ ಸೋಡಿರಿ!

ನಮ್ಮಲ್ಲಿ ಸಾಮಾನು ಪ್ರತಿಯೊಬ್ಬ ಹೊಗಳುವದು ತಮ್ಮಗಳಿಗೆ ತಿಳಿದಿರುವದಷ್ಟೆ.

ಆಮಿಸಿಯಾತೈಲ.—ಬಿಡಿ ಶೀಸೆ 1 ಕ್ಕೆ 1—0—0 3 ಶೀಸೆಗೆ 2—10—0 ಒಡೋದಿಲ್ಲಫಾರ್ ಅತ್ತರ್ ದಾಸ್ತ ಮು ಶೀಸೆ 1ಕ್ಕೆ 0—12—0. ಡಜನ್ 7—8—0. ಅರ್ಧ ಡಜನ್ ಬಾಪ್ತು ಶುಧಸಲಿಕೇರಿ ತೈಲ ಶೀಸೆ 1 ಕ್ಕೆ 3 ಆಣೆ. ಡಜನ್ 1 ಕ್ಕೆ 1—12—0 ಕಸ್ತೂರಿಮಾತ್ರೆ ಶೀಸೆ 1 ಕ್ಕೆ 4 ಆಣೆ. ಡಜನ್ 1 ಕ್ಕೆ 2—10—0. ಮಲೇರಿಯಾ, ದಿನ ಬಿಟ್ಟು ಬರುವ ಜ್ವರಕ್ಕೆ ಖಾತ್ರಿಯಾದ ಬೆಳ್ಳಿ ಮುಲಾಮಿನ ಮಾತ್ರೆ ಶೀಸೆ 1 ಕ್ಕೆ 1—0—0 ರೂ.

ಜಿಂತಾಸ್ ಪಾಕೇಟ್ 1 ಕ್ಕೆ	1 ಆಣೆ. 4 ಆಣೆ. 1 ರೂ.
ಗಂಧದ ಸಾಬೂನ್ 1 ಕ್ಕೆ	5 ಆಣೆ. 6 ಆಣೆ. 7 ಆಣೆ.
ವಿಕಟೋರಿಯಾ ಸಾಬೂನು 1 ಕ್ಕೆ	0 2-6.
ಪ್ಯಾರೀಸ್ ಡಾಣೆ ಸಾಬೂನು 1 ಕ್ಕೆ	1-2-0.
ಜಸ್ಮಿನ್ (ಮಲ್ಲಿಗೆ) ಸಾಬೂನ್ 1 ಕ್ಕೆ	8 ಆಣೆ.
ಬುಕ್ಕೆಟ್ ಗುಡ್‌ವಿನ್ " 1 ಕ್ಕೆ	10 ಆಣೆ.
ಚಿಕ್ಕ ಕನ್ನಡಿ 1 ಕ್ಕೆ	2 ಆಣೆ. 0-2-6.
ಸಾಬೂನ್ ಕರಡಿಗೆ 1 ಕ್ಕೆ	5 ಆಣೆ. 7 ಆಣೆ.
ಸರಟ್ ಬಟನ್ ಹರಳಿನದ್ದು ಸೆಟ್ಟು 1 ಕ್ಕೆ	3 ಆಣೆ.
ಬಾಚಣಿಗೆ ಡಜನ್ 1 ಕ್ಕೆ	0-14-0.1-4-0. 1-8-0.
ಕ್ಷೌರಕತ್ತಿ 1 ಕ್ಕೆ	2-4-0. 2-12-0. 3-8-0.
ಅಮೃತಾಂಜನ ಡಬ್ಬಿ 1 ಕ್ಕೆ	9 ಆಣೆ.
ಜರ್ಮನಿ ಕತ್ತರಿ 1 ಕ್ಕೆ	10 ಆಣೆ.
ಕಾಡ್‌ಬರಿ ಚೊಕಲೇಟ್ ಪಾಕೆಟ್ 1 ಕ್ಕೆ	5 ಆಣೆ.
ಫೌಂಟೆನ್ ಪೆನ್ 1 ಕ್ಕೆ	15 ಆಣೆ 6 ಆಣೆ.

ಯಾವ ತರದ ಸಾಮಾನು ಬೇಕಾದಲ್ಲಿ ನಮ್ಮಲ್ಲಿ ದೊರೆಯುತ್ತೆ. ಟಪಾಲು ಖರ್ಚು ಅಲಾಯಿದಾ.

ವಿಳಾಸ—ದಿ ಉರ್ಬ ಮಾರ್ಟ್,

ನಂ. ೩, ಮಂಗಳೂರು, ದ. ಕ.

Just Arrived! Just Aarrived!!

Fresh Consignment of Barton on Humber.

CYCLES

Size Frame 22", 24", & 26.

Fitted with Dunlop tyres, tubes tool Bags with tools, three Coil Spling Saddle Complete

Price Rs. 160

Special rates for purchasers of three Cycles at a time

Apply to—

K. R. Thirupad & Bros,

Motor Mechanics & Cycle, Dealers,

Sayaji Rao Road, MYSORE.

ಕೊಡವಸಭಾ.

ಮಹನೀಯರೆ "ಕೊಡಗುಸಭಾ" ಬೇಡವೆಂದು ಏನುಕಾರಣದಿಂದ ಹೇಳುವಿರಿ? ನನ್ನ ಪ್ರಶ್ನೆಗೆ ಉತ್ತರವನ್ನು ತಾವು ಒಬ್ಬರೇ ಇರುವ ಸಮಯದಲ್ಲಿ ಪರಿಶುದ್ಧವಾದ ಮನಸಿನಲ್ಲಿ ವಿಮರ್ಶಿಸಿನೋಡಿ ಬೇರೆಯವರ ಮಾತಿಗೆ ಮರುಳಾಗಬೇಡಿ. ಕೆಲವು ಬುದ್ಧಿವಂತರು "ನಿಮಗೆ ಏನು ತಿಳಿಯದು, ಈ ಸಭೆಯಲ್ಲಿ ಅನೇಕ ಭಯಂಕರವಾದ ರಹಸ್ಯಗಳಿವೆ, ನಾವು ಹೇಳುವುದನ್ನು ಗಮನಿಸಿ" ಎಂದು ನಿಮಗೆ ಮೂಢರಂತಿರದೆ ನಾವು ಹೇಳುವುದನ್ನು ಉಪದೇಶಿಸುವರು ತಾವು ಚರ್ಚಿಸದೆ ಯಾವದಾದರೂ ಒಂದೇ ಪಕ್ಷದವರು ಹೇಳುವ ವಾಕ್ಯವನ್ನು ವೇದವಾಕ್ಯವೆಂದು ನಂಬಿ ನಡೆದರೆ ದೇವರು ನಮಗೆ ಆಲೋಚನಾ ಶಕ್ತಿಯನ್ನು ಕೊಟ್ಟದ್ದು ನಿಷ್ಪ್ರಯೋಜನವಲ್ಲವೇ?

ಈ ಸಭೆಯ ಸಂಬಂಧ ನಮಗೆಲ್ಲರಿಗೂ ಇರುವ ಪ್ರಥಮ ಆಂಜಿಕೆ ಏನೆಂದರೆ.—ಸರಕಾರದ ಉದ್ಯೋಗಸ್ಥರು ಈ ಸಭೆಯನ್ನು ಸ್ಥಾಪಿಸಿದರು. ಆದುದರಿಂದ ಸರಕಾರವೆಂಬ ಕಾರಣ ಇದಕ್ಕೆ ಮೂಲವಾಗಿರಬೇಕು ನಿಜವಾಗಿಯೂ ಹಾಗಿದ್ದರೆ ಆ ಹಾರದ ವಾಸನೆಯು ನಮಗೆ ಬೇಡ. ಆದರೆ ಈ ಉದ್ಯೋಗಸ್ಥರು ನಮ್ಮ ಜನಾಂಗದವರೇ ಅಥವ ಸರಕಾರದವರ ಜನಾಂಗದವರೇ ಎಂಬುವನ್ನು ಆಲೋಚಿಸಬೇಕು. ಸ್ವಲ್ಪ ಆಲೋಚಿಸಿ. ನಮ್ಮ ಈ ದೇಶವು ದುರಾಧೀನದಿಂದ ಬಿದ್ದಂಡ್ರ ಗಣಪತಿಯವರನ್ನು ಕಳೆದುಕೊಂಡನಂತರ ಸರಕಾರ ಉದ್ಯೋಗಗಳಾಗಲೀ, ಪೆನ್‌ಷನಾಗಲೀ ಇಲ್ಲದ, ದೇಶೀಯರೆಲ್ಲರೂ ತಿಳಿದರುವ ಜಾತಿಯಲ್ಲಿ ಕೊಡಗರಾಗಿರುವ ಪದವರ್ಗಗಳ ಅನುಭವವಿರುವ, ರಾಜಕೀಯ ಕಾರ್ಯವನ್ನು ಕೈಕೊಂಡವರು ಇರುತ್ತಾರೆಯೆ? ನನ್ನ ಪ್ರಶ್ನೆಯನ್ನು ಕ್ಷಮಿಸಿ, ನಾನು ಇಲ್ಲವೆಂದೇ ನೆನಸುತ್ತೇನೆ. ಇದ್ದರೆ ದಯವಿಟ್ಟು ತಿಳಿಸಿ.

ನಮ್ಮ ಜಾತಿ, ಮತ ಮೊದಲಾದುವುಗಳ ಘನತೆಯನ್ನು ಸ್ಥಾಪಿಸಿ ರಕ್ಷಿಸಲು ಅನುಭವಶಾಲಿಗಳು ಯಾರಾದರು ಇರುವುದನ್ನು ಉಳಿಸಲಿಕ್ಕೆ ನಮ್ಮ ಗೃಹಕಾರ್ಯಗಳನ್ನು ಬೇರೆಯವರಿಂದ ಬೇಡವೇ? ಬೇಡವಾದರೆ ನಮ್ಮ ಗೃಹಕಾರ್ಯಗಳನ್ನು ಬೇರೆಯವರಿಂದ ಮಾಡಿಸೋಣವೇ? ಕೊಡಗು ದೇಶಕ್ಕೆ ಸಂಬಂಧಪಟ್ಟ ವಿಷಯವನ್ನು ಖಂಡಿತಾ ಕೊಡಗು ನಿವಾಸಿಗಳೆಲ್ಲರೂ ಚರ್ಚಿಸಲಿ. ಆದರೆ ಕೊಡಗು ಜಾತಿಯವರಿಗೆ ಸಂಬಂಧಪಟ್ಟ ಸಂಗತಿಗಳನ್ನು ಪರರು ಚರ್ಚಿಸುವುದು ನಮ್ಮ ಜಾತಿಗೆ ಹಾಸ್ಯಾಸ್ಪದವಲ್ಲವೇ? ಆದುಕಾರಣ ಬೇರೆಯತ್ನವಿಲ್ಲದೆ ಈ ಮಹಾಕಾರ್ಯವನ್ನು ಕೈಕೊಂಡಿರುವ ಕೊಡಗು ಉದ್ಯೋಗಸ್ಥರು 'ಭಿ, ಭೂ' ಪೇಟೆಯಲ್ಲಿ ನಾಕ್ ಮೂರನೆಯವನ ಮಾತನ್ನು ಕೇಳಿ ಎಂದು ಹೇಳಿದರೆ ನಾವು ನರರೇ ಯಾ?

ಏತಕನೆಂದರೆ— ನಾವು ಆ ಸಭೆಯ ಸಭಿಕರಾಗುವಾಗ ಯಾವತರದ ಆಣೆ ಹಾಕಿಕೊಳ್ಳುವುದಾಗಲೀ ಶಕ್ಯಮಾಡುವುದಾಗಲೀ ಇಲ್ಲವಷ್ಟೇ? ಮತ್ತಿನ್ನೇನು? ಒಳಗೆ ಹೋದಮೇಲೆ ಕಾರಣವಿಟ್ಟರೆ ಬಿಟ್ಟು ಬಿಡುವ, ಹ್ಯಾಗಾದರೂ ಇದ್ದೀತು? ಅದಕ್ಕೆ ಸೇರಿ ಅಲ್ಲಿ ಚರ್ಚಿಸಿ | 24—4

ಸಂಗೀತಕ್ಕೆ ಸಂಬಂಧಪಟ್ಟ

ಸಾಮಾನುಗಳ ಮಾರಾಟ

ನಮ್ಮಲ್ಲಿ ಅನುಭವಪೂರ್ವಕ ಚೆನ್ನಾಗಿ ಅನೇಕಾನೇಕ ಸಂಗೀತ ವಿದ್ವಾಂಸರುಗಳು ಒಪ್ಪತಕ್ಕ ಹಾರ್ಮೋನಿಯಂ, ತಬಲಾ, ತಂಬೂರಿ, ಸಿತಾರ್, ತಾವೂಸ್ ದಿಲ್‌ರುಬ ನಾರಂಗಿ, ಪಿಟೀಲು, ಕೊಳಲು ಶ್ರುತಿಪೆಟ್ಟಿಗೆ ಇವೇ ಮುಂತಾದ ಪದಾರ್ಥಗಳು ಸಿಕ್ಕುತ್ತವೆ ಈ ಪದಾರ್ಥಗಳ ಎಂಥಾ ರಿಪೇರಿ ಕೆಲಸವಾದರೂ ಸಹ ಸುಲಭಕ್ರಯದಲ್ಲಿ ಮಾಡಲ್ಪಡುತ್ತವೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ನಮ್ಮ ವಿಳಾಸ:—

ಯಂ. ಪುಟ್ಟಯ್ಯ ಆಂಡ್ ಸನ್ಸ್

ಹಾರ್ಮೋನಿಯಂ ಡೀಲರ್ಸ್ ಮತ್ತು ರಿಪೇರರ್ಸ್,

ಸಯಾಜಿರಾವ್ ರೋಡ್, ಮೈಸೂರು.

ಎಲೆಕ್ಟ್ರಿಕ್ ಗಿಲ್ಟು ಭಂಗಾರದ ನಗಗಳು

ಗೆಳ ಸಾಗರು 1 ಕ್ಕೆ	2—8—0
ರೋಜಾ ಹೂವು 1 ಕ್ಕೆ	0—2—0
ಸಂಪಂಗಿ ಹೂವು 1 ಕ್ಕೆ	0—12—0
ಮಲ್ಲಿಗೆ ಮಗ್ಗು ಸರ 1 ಕ್ಕೆ	3—0—0
ಚಂದ್ರಹಾರ ಸರ 1 ಕ್ಕೆ	2 8 0
ಡಿಟೋ ಬೋಳು ಸರ	3—0 0
ಇಮಿಟೇಷನ್ ಬೆಂಡೋಲೆ ಜೋಡಿಗೆ	5—0—0
ಮೂಗಬಟ್ಟು 1 ಕ್ಕೆ	0—8—0
ಬುಲಾಕು 1 ಕ್ಕೆ	0—12—0
ಜರ್ಮನ್ ಬೆಳ್ಳಿ ಪಟ್ಟಿ 1 ಕ್ಕೆ	3—0—0
ಪಸ್ಸೀರು ಥಾಸಿ 1 ಕ್ಕೆ	3—0—0
ಡಿಟೋ ಪೀಟ 1 ಕ್ಕೆ	1—8—0

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ

12-6 ಆರ್. ಕೆ. ವಾಚ್ ಕಂಪೆನಿ,

ನಂಬರು 42, ಕಂದಪ್ಪಶೆಟ್ಟಿ ಬೀದಿ, ಮದರಾಸು

ಖ್ಯಾತಿಯಿಂದ ಗುಣಪಡಿಸುವ ಔಷಧಿಗಳು.

(1) ಮಹಾಮದನಕಾಮೇಶ್ವರಿ ಲೇಹ್ಯ—ಆಯುರ್ವೇದ ವಿಧಿಪ್ರಕಾರ ತಯಾರಿಸಲ್ಪಟ್ಟಿದ್ದು, ಇದರ ಸೇವನೆಯಿಂದ ಧಾತು ಕ್ಷೀಣತೆ ಅಜೀರ್ಣ, ಎದೇನೋವು ಶರೀರದ ಶೀತದಿಂದ ಉಂಟಾದ ಅಶಕ್ತಿಯನ್ನೂ, ದೇಹಾಲಸ್ಯವನ್ನೂ ಪರಿಹರಿಸುತ್ತದೆ. ರಕ್ತಶುದ್ಧಿ ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವದು ಸ್ತ್ರೀಯರು ಪುರುಷರು ಇದನ್ನು ಉಪಯೋಗಿಸಬಹುದು. 40 ಸಲ ಸೇವಿಸುವ ಡಬ್ಬಿ 1 ಕ್ಕೆ 1—12—0 ಟಪ್ಪಾಲು ಖರ್ಚು 6 ಆಣೆ. 3 ಡಬ್ಬಿಗಳಿಗೆ 4—12—0 ಟ. ಖ. 10 ಆಣೆ.

(2) ಚವನಪ್ರಾಶ್ಯ — ಇದರ ಸೇವನೆಯಿಂದ ಕ್ಷಯ, ರಾಜಯಕ್ಷ್ಮ, ಉರಕ್ಷತ, ಕಾಸ, ಶ್ವಾಸ, ಹೃದ್ರೋಗ ಇವೇ ಮೊದಲಾದ ರೋಗಗಳನ್ನು ನಾಶಪಡಿಸಿ ಜೀರ್ಣಶಕ್ತಿಯನ್ನು ವೃದ್ಧಿಪಡಿಸಿ ಶರೀರಕ್ಕೆ ಸೌಂದರ್ಯವನ್ನು ಯುವಕಾಲದಲ್ಲಿದ್ದ ಹಾಗೆಯೇ ಇಂದ್ರಿಯಪಟುತ್ವವನ್ನು ಕೊಡುವದು ಮತ್ತು ಶರೀರದಾರ್ಢ್ಯವನ್ನೂ, ಅವಯವಗಳ ಬಲವನ್ನೂ ವೃದ್ಧಿಮಾಡುತ್ತದೆ ಮತ್ತು ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸಿ ಬುದ್ಧಿಪಟುತ್ವವನ್ನು ಅಧಿಕಮಾಡುವುದು. ಈ ಔಷಧವು ಬಾಲಕರಿಗೂ, ವೃದ್ಧರಿಗೂ ಬಹಳ ಪ್ರಯೋಜನ. ಇದು ಬಹಳ ರುಚಿಕರವಾಗಿರುವುದು ಇದು ಚವನನೆಂಬ ವೃದ್ಧಮಹರ್ಷಿಗೆ ಅಶ್ವಿನಿದೇವತೆಗಳುಪಯೋಗಿಸಲ್ಪಟ್ಟ ರಸಾಯನವಾಗಿರುತ್ತದೆ 1 ಸೇರಿನ ಡಬ್ಬಿ 1 ಕ್ಕೆ 2—0—0, 3 ಡಬ್ಬಿಗಳಿಗೆ 5—8—0 ರೂಪಾಯಿ.

(3) ಅಶೋಕಾರಿಷ್ಟ ಮತ್ತು ಸೂತ್ರಿ —ಹೆಂಗಸರು ಕ್ರಮತಪ್ಪಿ ಮುಟ್ಟಾಗುವುದು, ರಜೋಸಮಯದಲ್ಲಿ ಅತ್ಯಲ್ಪ ಅತಿರೇಕವಾಗಲಿ, ರಕ್ತಸುರಿಯುವುದು, ಹೊಟ್ಟೆನೋವು ಸೊಂಟನೋವು, ಬಲಹೀನ, ಬಂಜೆಯಾಗಿರುವಿಕೆ ಬಿಳೀಪ್ರದರ, ಕುಸುಮರೋಗ, ಗರ್ಭಕೋಶ ಉಕ್ರಮ ತಪ್ಪುವಿಕೆ, ಮತ್ತು ಸ್ತ್ರೀಗಳಿಗೆ ಉಂಟಾಗತಕ್ಕ ಸಕಲ ರೋಗಗಳನ್ನು ಖಂಡಿತವಾಗಿ ಗುಣಪಡಿಸುತ್ತದೆ 8 ಔನ್ಸ್ ಬಾಟ್ಲಿಗೂ, 1 ಡಬ್ಬಿ ಮಾತ್ರೆಗೂ 2—0—0 3 ಬಾಟ್ಲಿಗಳಿಗೆ ಮತ್ತು ಡಬ್ಬಿಗಳಿಗೆ 5—8—0 ರೂ

(4) ಪ್ರಸೂತಾವಲೇಹ—ಹೆತ್ತ ನಂತರ ಈ ಔಷಧಿಯನ್ನು ಸೇವಿಸುವದರಿಂದ ಅರುಚಿ ಅಗ್ನಿಮಾಂದ್ಯ, ನಿದ್ರಾನಾಶ ಮತ್ತು ಗರ್ಭದಿಂದ ಸಂಭವಿಸುವ ಸಕಲ ವೇದನೆಗಳನ್ನು ಖಂಡಿತ ಗುಣಮಾಡುವದು ಮತ್ತು ಧಾತುಪುಷ್ಟಿಯನ್ನು ಉಂಟುಮಾಡುವುದು ಇದು ತಾಯಿಗೆ ಹೇಗೋ ಹಾಗೆಯೇ ಮಗುವಿಗೂ ಬಹಳ ಪ್ರಯೋಜನ, ಡಬ್ಬಿ 1 ಕ್ಕೆ 2—0—0, ಟಪ್ಪಾಲ್ ಖರ್ಚು 6 ಆಣೆ.

(5) ಪಿತ್ತಹಾರಿಚೂರ್ಣ —ಮುಖದ್ವತೆ, ಬಹುಮೂತ್ರ, ಛಳಿಜ್ವರ, ಜ್ವರಗೆಡ್ಡೆ, ತಲೆತಿರುಗುವಿಕೆ, ಆಮ್ಲಪಿತ್ತ, ಹೊಟ್ಟೆ ಹಸಿವಿಲ್ಲದೆ ಇರುವಿಕೆ, ಬಾಯಿಯಲ್ಲಿ ಅಗ್ರ, ವಾತಪಿತ್ತ, ಕಫ, ಇವುಗಳಮೇಲೆ ದಿವ್ಯ ಔಷಧಿ. 1 ಡಬ್ಬಿಗೆ 12 ಆಣೆ ಟಪ್ಪಾಲ್ ಖರ್ಚು 6 ಆಣೆ 3 ಡಬ್ಬಿಗಳಿಗೆ 2—0—0.

(6) ಮೇಹಕುಠಾರ—ಮೂತ್ರಕೃಚ್ಛ್ರ ಅಶ್ಮರಿ, ವ್ರಣ, ಮೂತ್ರ ಹೋಗುವಾಗ್ಯೆ ಉರಿಯನ್ನು ಕೀವನ್ನು ಕೂಡಲೆ ನಿಲ್ಲಿಸಿ ಖಂಡಿತ ಗುಣ ಕೊಡುವುದು, 14 ದಿವಸದ ಔಷಧಿ ಡಬ್ಬಿ 1 ಕ್ಕೆ ಕ್ರಯ 2—0—0 3 ಡಬ್ಬಿಗಳಿಗೆ 5—10—0

(7) ಬಾಲಗ್ರಹ ಗುಳಿಗೆ —ಮಕ್ಕಳಿಗೆ ಮಲಬದ್ಧತೆ ಬಾಲಗ್ರಹ ಇವೇ ಮೊದಲಾದ ಕಷ್ಟದಿಂದ ಉಂಟಾಗತಕ್ಕ ಸಕಲ ರೋಗಗಳನ್ನು ಗುಣಪಡಿಸಲಿಕ್ಕೆ ರಾಮಬಾಣದಂತಿರುವುದು ಬಾಟ್ಲಿ 1 ಕ್ಕೆ 10 ಆಣೆ 3 ಬಾಟ್ಲಿಗಳಿಗೆ 1-10-0 ಒಂದರಿಂದ 3 ಬಾಟ್ಲಿವರೆಗೆ ಟಪ್ಪಾಲು ಖರ್ಚು 6 ಆಣೆ.

(8) ಶ್ವಾಸಕುಠಾರಗುಳಿಗೆ—ನಂಬರ್ 1 ನಂ. 2 ಈ ಎರಡು ನಮೂನೆಯ ಗುಳಿಗೆಗಳ ಸೇವನೆಯಿಂದ ತ್ರಿದೋಷ (ಕಫ, ವಾತ, ಪಿತ್ತ) ದಿಂದ ಉಂಟಾಗುವ ಶ್ವಾಸಕಾಸವನ್ನು ನಿರ್ಮೂಲಗೊಳಿಸುವ ಸಿದ್ಧೌಷಧವಾಗಿರುವದು. 2 ಬಾಟ್ಲಿ ಮಾತ್ರೆಗಳಿಗೆ 1—2—0. 6 ಬಾಟ್ಲಿಗಳಿಗೆ 3 ರೂ. 2 ರಿಂದ 6 ಬಾಟ್ಲಿವರೆಗೆ ಟ. ಖ 6 ಆಣೆ

(9) ಮಹಾಜ್ವರಾಂಕುಶ—ಕಫಜ್ವರ, ಪಿತ್ತಜ್ವರ, ವಾತಜ್ವರ, ಏಕಾಹಿಕಜ್ವರ ದ್ವ್ಯಾಹಿಕ ತ್ರ್ಯಾತೀಯ, ಚಾತುರ್ಥಿಕ, ಇನ್‌ಫ್ಲುಯಂಜಾ ನಿಮೋನಿಯಾ ಮೊದಲಾದ ಭಯಂಕರ ಜ್ವರಗಳನ್ನು ಸಹ ಖಂಡಿತ ಗುಣಪಡಿಸುವುದು. 1 ಬಾಟ್ಲಿಗೆ 10 ಆಣೆ. 3 ಬಾಟ್ಲಿಗಳಿಗೆ 1—10—0 ಟ. ಖರ್ಚು 1 ರಿಂದ 3 ಬಾಟ್ಲಿವರೆಗೆ 6 ಆಣೆ

(10) ಇಚ್ಛಾಭೇದಿ.—ಭಯಾಸವಿಲ್ಲದೆ ಉಂಟುಮಾಡುವ ಸುಖವಿರೇಚಕ ಬಾಟ್ಲಿ 1 ಕ್ಕೆ 12 ಆಣೆ 3 ಬಾಟ್ಲಿಗಳಿಗೆ 2 ರೂ 1 ರಿಂದ 3 ಬಾಟ್ಲಿವರೆಗೆ ಟ ಖ 6 ಆಣೆ

(11) ರಕ್ತಶುದ್ಧಿಚೂರ್ಣ —ಮೇಹ ಉಪದಂಶ ಮುಂತಾದ ಮೈಯಲ್ಲಿ ವ್ಯಾಪಿರುವ ವ್ರಣಕಜ್ಜಿ ತುರಿಕೆ, ಮಲಬದ್ಧತೆ ಮುಂತಾದ ವ್ಯಾಧಿಗಳನ್ನು ಹೋಗಲಾಡಿಸಿ ಹಸಿವೆಯನ್ನು ತ್ರಾಣವನ್ನು ಧಾತುಪುಷ್ಟಿಯನ್ನು ಉಂಟುಮಾಡುತ್ತದೆ 1 ಡಬ್ಬಿ 1—0—0 ರೂ, ಟ ಖ 5 ಆಣೆ

ಗುಣವಿಶೇಷ. ಕ್ರಯ ಕಮ್ಮಿ ಪುಡಿ ಹೆಚ್ಚು

(12) ದಂತಕಾಂತಿಯ ಚೂರ್ಣ:—ಹಲ್ಲುನೋವಿಗೆ ಖ್ಯಾತಿಯಾದ ಔಷಧಿ ಇದರ ಉಪಯೋಗದಿಂದ ಹಲ್ಲಿನ ಕ್ರಿಮಿಗಳನ್ನು ನಾಶಪಡಿಸಿ, ಹಲ್ಲಿನ ವೇದನೆಯನ್ನು ಖಂಡಿತ ಗುಣಪಡಿಸಿ, ವಸಡುಗಳ ಬೀಗು ಹಲ್ಲಿನಿಂದ ಒರುವ ರಕ್ತವನ್ನು, ಕೀವನ್ನು, ಬಾಯಿಯ ದುರ್ವಾಸನೆಯನ್ನು, ಹಲ್ಲುಗಳ ಬುಡದಲ್ಲಿ ಸಣ್ಣ ಕಟ್ಟುವುದನ್ನು ಗುಣಪಡಿಸಿ ಅಲ್ಲಾಡುವ ಹಲ್ಲುಗಳನ್ನು ವಜ್ರದೋಪಾದಿಯಲ್ಲಿ ಗಟ್ಟಿಮಾಡಿ ನಾಲಿಗೆಗೆ ರುಚಿಯನ್ನು ಸಹ ಉಂಟುಮಾಡುತ್ತದೆ ಟಿನ್ 1 ಕ್ಕೆ 3 ಆಣೆ 6 ಟಿನ್ನಿಗೆ 1—1—0 ಟ ಖರ್ಚು 5 ಆಣೆ 12 ಡಬ್ಬಿಗಳಿಗೆ ಟಪ್ಪಾಲ್ ಖರ್ಚು 6 ಆಣೆ.

(13) ಗಜಕರ್ಣಾದ ಮುಲಾಮು.—ತುಳಿ ಮೇಯುವದು, ದದ್ದು, ಗಜಕರ್ಣ, ಕಜ್ಜಿ, ಇಸುಬು ಹುಳಕಡ್ಡಿ ಮೊದಲಾದ ಸಮಸ್ತ ಚರ್ಮರೋಗಗಳು ಮೂರೇ ದಿವಸಗಳಲ್ಲಿ ಗುಣವಾಗುವದು. ಡಬ್ಬಿ 1 ಕ್ಕೆ 5 ಆಣೆ 3 ಡಬ್ಬಿಗಳಿಗೆ 15 ಆಣೆ ಟ ಖ 5 ಆಣೆ. 6 ಡಬ್ಬಿಗಳಿಗೆ 1—12—0 12 ಡಬ್ಬಿಗಳಿಗೆ 3 ರೂ. ಟಪ್ಪಾಲ್ ಖರ್ಚು 10 ಆಣೆ

(14) ವಿಶ್ವಾಂಜನ:—ಇದರ ಉಪಯೋಗದಿಂದ ವಾತ ಸಂಧಿವಾತ, ತಲೇನೋವು, ಶಿರೋಭಾರ, ಉಳುಕು ಎದೇನೋವು, ಶೀತ ಕೆಮ್ಮು, ಅರ್ಧಾಂಗವಾಯು, ಗಾಯ, ದಂತವ್ಯಾಧಿ ಮುಂತಾದ ಅನೇಕ ತರದ ವೇದನೆಗಳನ್ನು ಖಂಡಿತವಾಗಿ ಗುಣಹೊಂದುವವು. ಬಾಟ್ಲಿ 1 ಕ್ಕೆ 8 ಆಣೆ. ಡಜನಿಗೆ 5—4—0 ಶ್ಯಾಂಪಲ್ ಡಬ್ಬಿ 1 ಕ್ಕೆ 1 ಆಣೆ. ಡಜನಿಗೆ 10 ಆಣೆ 1 ಗ್ರೋಸಿಗೆ 6 ರೂಪಾಯಿ.

(15) ಭೃಂಗರಾಜತೈಲ:—ಇದರಿಂದ ತಲೆಕೂದಲು ಉದ್ದವಾಗಿಯೂ, ಕಪ್ಪಾಗಿಯೂ, ಪುಷ್ಟಿಯಾಗಿಯೂ ಒರುತ್ತದೆ. ಮೆದುಳಿಗೆ ಅತ್ಯಂತ ಹಿತಕಾರಿಯಾಗಿರುತ್ತದೆ ಬಾಟ್ಲಿ 1 ಕ್ಕೆ 12 ಆಣೆ.

(16) ಪರಿಶುದ್ಧವಾದವಾದ ಯೂಕಲಿಪ್ಟಸ್ ಆಯಿಲ್ ಎಂಬ ನೀಲಗಿರಿ ತೈಲ—ಹೊಟ್ಟೆಗೆ ತೆಗೆದುಕೊಳ್ಳುವದೆ ಖಾತ್ರಿ ಬಾಟ್ಲಿ 1 ಕ್ಕೆ 5 ಆಣೆ. ಡಜನ್ನಿಗೆ 3 ರೂಪಾಯಿ.

ನಮ್ಮಲ್ಲಿ ಎಲ್ಲಾ ವಿಧದ ಲೇಹ, ತೈಲ, ಭಸ್ಮ ಆಸವ. ಅರಿಷ್ಟಗಳು ದೊರೆಯುತ್ತವೆ. ವ್ಯಾಪಾರಸ್ಥರಿಗೆ ಸ್ಪೆಷಲ್ ರಿಯಾತಿ ದರಗಳು. ಕ್ಯಾಟಲಾಗು ಬರೆದು ತರಿಸಿಕೊಳ್ಳಿರಿ.

ವಿಳಾಸ:—ಎಂ ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಏಜನ್ಸಿಯನ್ಸ್, ಮಂಗಳೂರು ದ ಕ.

COORG TEACHERS CO-OPERATIVE STORES

ಕೊಡಗು ಉಪಾಧ್ಯಾಯರ ಕೋ ಆಪ್ ಸ್ಟೋರ್ಸ್, ಲಿಮಿಟೆಡ್, ಮಡಿಕೇರಿ

ಈ ಸ್ಟೋರ್ಸಿನಲ್ಲಿ ಶಾಲಾ ಪಠ್ಯಪುಸ್ತಕಗಳು, ಸವಿ ಸಾಮಾನುಗಳು ಮತ್ತು ಸೊಗಸಾದ ಪುಸ್ತಕಗಳು ದೊರೆಯುತ್ತವೆ ಕ್ರಯ ಸ... ಉತ್ತಮ, ಕೊಡಗಿನಲ್ಲಿ ಈ ನರ ಸ್ಟೋರ್ಸ್ ... ಮಾಲುಗಳನ್ನು ಕೋರಿದವರಿಗೆ ವಿ ಪಿ ಮೂಲಕ ಆಗುತ್ತೆ.

ಪಾಕೆಟ ಲೀವರ್ ವಾಚ್

ಇದರ ಕ್ರಯ ಸಾಮಾನ್ಯವಾದ ವಾಚ್ ಸರಪಣಿ ಸುಂದರವಾದ ವಾಚ್ ಪಟ್ಟಿಗೆ ಸಮೇತ

5—8—0 ರೂ. ಮಾತ್ರ

ಘನವಂತರೇ !



ಈ ವಾಚ್ ... ವಾದ ಲೀವರ್ ... ದ ತಯಾರಾದದು, ... ವಾದ ಮತ್ತು ... ವಾದ ಸಾಮಾನು ... ತಯಾರಾದದ್ದು ... ವಾದ ಪರಾಟೋ ... ಕಟನೆಯ ವಾಚು ಈ ವಾಚ್ ಅನೇಕ ... ಗಳ ಪರ್ಯಂತರ ... ಬರುವಂಥಾದ್ದು ... ಡುವದಕ್ಕೆ ಬಹು ... ರವಾದದ್ದು. ಕೆಲವು ಮಾತ್ರವೇ ಉಳಿದಿವೆ. ಜೇಕಾದ ಶೀಘ್ರವಾಗಿ ಬರೆದು ತರಿಸಿಕೊಳ್ಳಿ

ವಿಳಾಸ.—ಆರ್, ಕೆ. ವಾಚ್ ಕಂಪೆನಿ

ನಂಬರು 42, ಕಂದಪ್ಪಶೆಟ್ಟಿಬೀದಿ ಮದ

WANTED

1. One Compositor for the "SUND VILAS" Printing works.

Apply:—**R. S SINGH,**

GONIKOPA

2 ENCOURAGE SWADESHIUM

If you are not at the point of defei ing yourself you will loose the opp tunity of gaining freedom So, try encourage "THE SUNDARAVILAS PRESS" Gonikopal, South Coorg A Reliab and Neat Printing Office for every sor of Job Printing. Neat and cheap.

3 BEWARE MERCHANTS

Fixed Prices and Terms Cash, are th ways of attractions and magnetic

But does a Merchant satisfy himsel with what he advertises.

Remember "Honesty is the best Policy" If you like to be convinced please go to—

Messrs R. SUNDAR SINGH,

GONIKOPAL.

A well reknown firm for all luxuries Provisions necessities, and he is at you call to do the needful in case of a smal commission if it pleases the taste of the function and trouble.

Besides the firm under the above-head is intending to close the business if the "PUBLIC" donot encourage him by the end of this year. So in order to retair him at your service. It will afford you a great boon to him and the "MOTHERLAND" OF HIM" Kaveriamma for whom he has till now struggled and rooted in this "BLACKHOLE"

R. SUNDER SINGH,

GONIKOPAL, S. Coorg



ಅಮೃತಾಂಜನ್.

ನೋವುಗಳಿಗೆ ಸಿದ್ಧೌಷಧವು

ಎಲ್ಲಾ ಷಾಪುಗಳಲ್ಲಿಯೂ ಮಾರಲ್ಪಡುತ್ತೆ

12-6 ಅಮೃತಾಂಜನ್ ಡಿಪೋ,

... ಬಜಾರು ... ಮದರಾಸು.

ಮೈಸೂರಿನಲ್ಲಿ ದೊರೆಯುವ ಸ್ಥಳ —ಯಸ್ ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್

KALAPPAN'S ADVERTISING SERVICES.

Printed and Published by S. NANJUNDA SASTRY at Sreenivas Electric Press, Mysore for "Kodagu" Ltd., Mercara—30-9-1921.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾನೀತಿಪ್ರಯತ್ನತಃ । ಐಕಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯಸಂಪದ ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

ಪುಟ ೧] ಕೊಡಗು, ಸನ್ ೧೯೨೧ ನೇ ಇಸವಿ ಅಕ್ಟೋಬರ್ ತಾರೀಖು ೭ ನೆಯ ಶುಕ್ರವಾರ. [ಸಂಚಿಕೆ ೧೯

ವೀರಶೈವರಿಗೆ ಸಂಗ್ರಾಹ್ಯವಾದ ಫೋಟೊಗಳು.

ಶ್ರೀ ಶಿವಯೋಗಿಗಳ ಸಂಘ :—ಭಾಗ್ಯಶಾಲಿ ಜನರು ಪೂರ್ವಜನ್ಮದ ಪುಣ್ಯದಿಂದ ಮಹಾ ಶಿವಯೋಗಿಗಳ ದರ್ಶನ ತೆಗೆದುಕೊಳ್ಳುತ್ತಾರೆ. ಆದರೆ ಶ್ರೀಮಂತರಿಗು ಮತ್ತು ಬಡವರಿಗೂ ನಿತ್ಯದರ್ಶನ ಆಗುವದಕ್ಕೆ ಫೋಟೋವ ಹೊರ್ತು ಮಾರ್ಗವು ಇಲ್ಲದಕಾರಣ ನಾವು ಪ್ರಸಿದ್ಧರಾದ ಶ್ರೀ ... ರು ಚಿತ್ರದುರ್ಗ ಮಹಾಸ್ವಾಮಿ, ಗದಗ ತೋಂಟದಾರ್ಯ, ಅಥಣಿ ಶಿವಯೋಗಿ, ಬಾಲಲೀಲಾಸ್ವಾಮಿ ಬಳ್ಳಾರಿ, ಕಾನಗಲ್ಲ, ಹಾಳಕೇರಿ, ಬಿಡರೀ ನಿಡಸೋಸಿ ಮುಂತಾದ ... ಮಹಾಸ್ವಾಮಿಗಳ ಫೋಟೋ ಕೂಡಿಸಿದ ಕಾರಣ ಒಂದೇ ಕಾಲದಲ್ಲಿ ಎಲ್ಲಾ ಶಿವಯೋಗಿಗಳ ದರ್ಶನ ಆಗುತ್ತದೆ. ೧೮×೧೨ ಸೈಜದ ಚಿತ್ರದ ಕ್ರಯ ೧ ಪ್ರತಿಗೆ ... ರೂ.

ಶ್ರೀ ಕಲ್ಯಾಣ ಬಸವೇಶ್ವರ :—ವೀರಶೈವ ಧರ್ಮೋದ್ಧಾರಕರಾದ ಶ್ರೀಬಸವಣ್ಣದೇವರ ಅತ್ಯಂತ ತೇಜಃಪುಂಜದ ಖಾಸ ಫೋಟೊ ೧೮×೧೨ ಸೈಜ ಬಣ್ಣದ ಚಿತ್ರದ ೧ ಪ್ರತಿಗೆ ರೂ. ೧ ಸಾದಾ ೮ ಆಣೆ.

ಶ್ರೀ ಅಲ್ಲಮಪ್ರಭು ಶೂನ್ಯಸಿಂಹಾಸನಾರೋಹಣೋತ್ಸವ —

ಇದರಲ್ಲಿ ಶ್ರೀಬಸವೇಶ್ವರರು, ಶ್ರೀಚನ್ನಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಅಕ್ಕನಾಗಮ್ಮಾ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವರು ... ಮಾಡುತ್ತ ಇದ್ದ ಸಮಾರಂಭದ ಫೋಟೊ ಇರುತ್ತದೆ. ದೊಡ್ಡ ಸೈಜು ರೂ. ೧|. ಸಣ್ಣಸೈಜು ರೂ. |||.

ಶ್ರೀ ರೇಣುಕಾಚಾರ್ಯರ ಲಿಂಗೋದ್ಭವವು :—

ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರ್ಯರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವ ಫೋಟೋ ಇರುತ್ತದೆ. ದೊಡ್ಡ ಸೈಜು ರೂ ೧|. ಸಣ್ಣ ಸೈಜು ರೂ. |||.

ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ -

ಇದರಲ್ಲಿ ಅಗಸ್ತ್ಯ ಮುನಿಗಳು ತಮ್ಮ ಪತ್ನಿ ಲೋಪಾಮುದ್ರಾ ಸಹ ಉಪದೇಶಮಾಡಿಕೊಳ್ಳುತ್ತಾ ಇದ್ದಾರೆ. ದೊಡ್ಡ ಸೈಜು ರೂ. ೧| ಸಣ್ಣ ಸೈಜು ರೂ |||

ಶ್ರೀ ವೀರಭದ್ರನಿಂದ ಹನುಮಂತನಿಗೆ ಲಿಂಗಧಾರಣವು :—ಇದು ಹನುಮಂತನು ಮೋಕ್ಷಾರ್ಥಕ್ಕಾಗಿ ಲಿಂಗಧಾರಣಮಾಡಿಕೊಂಡ ಫೋಟೊ ಇರುತ್ತದೆ. ದೊಡ್ಡ ಸೈಜು ರೂ ೧|. ಸಣ್ಣ ಸೈಜು ರೂ |||.

ಶ್ರೀ ವೀರಶೈವ ರಾಜಸಮೂಹ:—ಇದರಲ್ಲಿ ಕೊಡಗು ದೇಶದ ಲಿಂಗರಾಜೇಂದ್ರ, ವೀರರಾಜೇಂದ್ರ ವಡಿಯರ, ದೇವಮ್ಮಾಜಿ ಮಹಾರಾಣಿ, ಮತ್ತು ಸದ್ಯದ ತುಂಗನೂರ ಮತ್ತು ಗೋವಾಪ್ರಾಂತದ ಬಾಂದಿವಾಡಿ, ಸೊಂದಾದ ಅರಸರ ಫೋಟೊ ೯ ಇರುತ್ತವೆ. ಕ್ರಯ ಫುಲ್ಲಸೈಜು ೧| ರೂ. ಕ್ಯಾಬಿನೆಟ್ ೧೨ ಆಣೆ.

ಶ್ರೀಮುರುಘರಾಜೇಂದ್ರ ಚಿತ್ರದುರ್ಗ ಮಹಾಸ್ವಾಮಿಗಳ - ಅತ್ಯಂತ ಸುಂದರವಾದ ಕೈಬಣ್ಣದ ಫೋಟೋ ಕ್ರಯ ಪ್ರತಿ ೧ ಕ್ಕೆ ರೂ. ೧. ಸಾದಾ ರೂ. |||.

ಸೂಚನೆ:—ಭಾರಿ ಖರೀದಿದಾರರಿಗೆ ಜಾಸ್ತಿ ಕಮಿಷನ್ ದೊರೆಯುವದು.

ವಿಳಾಸ:- ಗ. ಪ್ರ. ಪೆರಗೆ,

ಮಾಲಕ ಧಿ ಶಾರದಾ ಫೋಟೊ ಕಂಪನಿ ಕೊಲ್ಹಾಪುರ

NOTICE.

If you want any kind of English or Kanarese Printing, Please write to SREENIVAS ELECTRIC PRESS, MYSORE.

AN APPROVED FIRM FOR THE SUPPLY OF STATIONERY ARTICLES TO THE GOVT OF

H. H. the Maharaja of Mysore.

ನಮ್ಮಲ್ಲಿ ಎಲ್ಲಾ ವಿಧವಾದ ಸ್ಟೇಷನರಿ ಸಾಮಾನುಗಳೂ ಫೌಂಟನ್ ಪೆನ್ನುಗಳೂ, ಪ್ರಿಂಟಿಂಗ ಮತ್ತು ರೈಟಿಂಗ್ ಪೇಪರುಗಳೂ, ಎಕ್ಸರ್‌ಸೈಜ್ ಬುಕ್ಕುಗಳೂ, ಸ್ಕ್ರಿಬ್ಲಿಂಗ್ ನೋಟ್ ಬುಕ್ಕುಗಳೂ, ರಫ್‌ನೋಟ್ ಬುಕ್ಕುಗಳೂ, ಡ್ರಾಯಿಂಗ್ ಮತ್ತು ಟೈಪ್‌ರೈಟಿಂಗ್ ಪೇಪರುಗಳೂ, ವರ್ತಕರಿಗೆ ಅನುಕೂಲವಾದ ಅಕೌಂಟು ಬುಕ್ಕುಗಳೂ ಸಹ ಹಸನಾದ ಕಾಗದದಿಂದ ತಯಾರಾಗಿ ಬಿಕರಿಗೆ ಸಿದ್ಧವಾಗಿವೆ. ದುಬಾರಿ ಕಾಗದದಿಂದ ತಯಾರಿಸಿರುವ ಬುಕ್ಕುಗಳನ್ನು ಕೊಂಡು ಮೋಸಹೋಗಬೇಡಿರಿ ಬೇಕಾದ ಸಾಮಾನುಗಳಿಗೆ ಕೂಡಲೆ ಆರ್ಡರ್ ಕೊಡುವಿರೆಂದು ನಂಬಿದ್ದೇವೆ. ವ್ಯಾಪಾರಸ್ಥರಿಗೆ ಸರಿಯಾದ ಡಿಸ್ಕೌಂಟು ಸಹ ದೊರೆಯುತ್ತೆ. 24–4

M. N. K & Bros.
Book Binders & Stationers, MYSORE.

SUBBANNA, SANGAPPA,

Receiving and Forwarding Agents, General Merchants and Commission Agents.
Santhepet, Mysore.

Despatch and supply whatever you receive at Mysore Railway Station and whatever food stuffs and Stationaries you want to have from Mysore. Prompt attention, moderate commission and quick disposal are their motto 24–14

ಮೈಸೂರು ರೈಲ್ವೆ ಸ್ಟೇಷನ್‌ನಿಂದ ನೀವು ಹೊಂದಬೇಕಾದ ಸಾಮಾನುಗಳ ರೈಲ್ವೆ ಪಾಸುಗಳನ್ನು, ಮೈಸೂರಿನಿಂದ ತರಿಸಿಕೊಳ್ಳಬೇಕಾದ ಸಾಮಾನುಗಳ ಪಟ್ಟಿಯನ್ನು

ಮೈಸೂರು ಸಂತೇಪೇಟೆಯಲ್ಲಿರುವ

ಸುಬ್ಬಣ್ಣ ಸಂಗಪ್ಪನವರಿಗೆ ಕಳುಹಿಸಿ.

ಇವರು ಜಾಗ್ರತೆಯಾಗಿಯೂ, ಜೋಪಾನವಾಗಿಯೂ, ಸುಲಭವಾದ ಕಮೀಷನ್ನಿನಲ್ಲಿಯೂ ನಿಮಗೆ ಸರಕು ರವಾನಿಸುತ್ತಾರೆ ಮಿಕ್ಕ ವಿಚಾರ ಬರೆದು ತಿಳಿದುಕೊಳ್ಳಿ.

ಪ್ರಕಟಣೆ.

1922 ನೇ ಇಸವಿಯಲ್ಲಿ ಪ್ರಾರಂಭವಾಗುವ ಪರ್ಯಾಯದಲ್ಲಿ ಪಲಿಮಾರು ಮಠದ ಶ್ರೀ ಪಾದಂಗಳವರು ಮಾಡುವ ಉಡುಪಿ ಶ್ರೀ ಕೃಷ್ಣ ದೇವರ ಪೂಜೆಯ ಸಹಾಯಾರ್ಥವಾಗಿ "ಶ್ರೀಕೃಷ್ಣ ಲಾಟರಿ" ಎಂಬ ಹೆಸರಿನ ಒಂದು ಲೋಟರಿಯಾನ ಲಾಟರಿಯನ್ನು ಏರ್ಪಡಿಸಿಯದೆ. ಟಿಕೇಟಿನ ದರ ಒಂದರ ಒಂದು ರೂ. ಆಗಿರುತ್ತದೆ ಅದರಲ್ಲಿ 1 ನೇ ಇನಾಂ ರೂಪಾಯಿ 2000–0–0 ರದ್ದು, 2 ನೇ ಇನಾಂ ರೂ. 1000–0–0 ರದ್ದು, ರೂ. 100 0–0 ರ ಇನಾಂಗಳು 5, ರೂ. 10–0 0 ರ ಇನಾಂಗಳು ನೂರು ರೂಪಾಯಿ 5 ರ ಇನಾಂಗಳು 200 ಎಂತ ನಿಶ್ಚಯಿಸಿಯದೆ. ಆದುದರಿಂದ ಎಲ್ಲ ಸಜ್ಜನರುಗಳು ತಮ್ಮ ಶಕ್ತಿಮೀರಿ ಟಿಕೇಟುಗಳನ್ನು ಪಡೆದು ಶ್ರೀಹರಿ ವಾಯುಗಳ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸಲಾಗುತ್ತದೆ ಎಲ್ಲ ಪತ್ರವ್ಯವಹಾರಗಳನ್ನು ಈ ಕೆಳಗಿನ ವಿಳಾಸಕ್ಕೆ ಮಾಡತಕ್ಕದ್ದು.

ಮ್ಯಾನೇಜರ್ ಸೆಕ್ರೆಟರಿ.
ಶ್ರೀಕೃಷ್ಣ ಲಾಟರಿ.
ಕೊಡಿಯಾಲಬೈಲ್ ಪೋಸ್ಟ್, ದ. ಕ

THIS SPACE IS RESERVED

FOR THE

Indian Jewellery Mart

BANGALORE CITY.

ಮಂಜೇರಿ
ಮೋಟಾರ್ ಸರ್ವಿಸ್
ಲಿಮಿಟೆಡ್, ಕಲಿಕೋಟೆ.

ಈ ಕಂಪೆನಿಯು 1913 ನೇ ಇಸವಿಯ ಕಂಪೆನಿ ಆಕ್ಟಿಗೆ ಅನುಸಾರವಾಗಿ 1921-1922 ನೇ ಇಸವಿಯ ಮೊದಲನೇ ನಂಬ್ರವಾಗಿ 1921 ನೇ ಏಪ್ರಿಲ್ 4 ನೇ ತಾರೀಖಿನಲ್ಲಿ ರಿಜಿಸ್ಟ್ರಿ ಮಾಡಲ್ಪಟ್ಟು 1921 ನೇ ಮೇ 6 ನೇ ತಾರೀಕಿನಲ್ಲಿ ತಮ್ಮ ಕೆಲಸವನ್ನು ನಡಿಸುವದಕ್ಕೆ ಸಮ್ಮತಿ ಸರ್ಟಿಫಿಕೇಟು ಪಡಕೊಂಡಿರುತ್ತದೆ ಮೇ 25 ನೇ ತಾರೀಕಿನಿಂದ ಕೆಲಸವನ್ನು ಪ್ರಾರಂಭಿಸಿರುವದು.

ಈ ಕಂಪೆನಿಯ ಮೂಲಧನವು ಮೂರು ಲಕ್ಷ ರೂಪಾಯಿ ಪಾಲುವಂತಿಗೆಯಿಂದ ಸಂಗ್ರಹಿಸಲ್ಪಡಬೇಕು ಪಾಲು 1 ಕ್ಕೆ 10 ರೂಪಾಯಿವಂತಿಗೆ. ಇದರಲ್ಲಿ ಸದ್ಯ ವಿಕ್ರಯ ಸೋರಾಗುವ 20,000 ಪಾಲುಗಳಲ್ಲಿ 1540 ಪಾಲುಗಳನ್ನು ಈ ಕಂಪೆನಿಯ ಚಾಲಕರೇ ಪಡಕೊಂಡಿರುತ್ತಾರೆ

35130 ರೂಪಾಯಿಯ ಶೇರುಗಳು 1921 ನೇ ಇಸವಿ ಆಗಸ್ಟು 25 ನೇ ತಾರೀಕಿನವರೆಗೆ ಮಾರಾಟವಾಗಿದೆ.

ಕಂಪೆನಿಯ ಉದ್ದೇಶ

ಮುಖ್ಯವಾಗಿ ತಲಚೇರಿಯಿಂದ ಕೊಡಗಿಗೂ, ವಯನಾಡಿಗೂ, ಕಲಿಕೋಟೆಯಿಂದ ವಯನಾಡಿಗೂ, ದಕ್ಷಿಣ ಮಲಬಾರಿನಲ್ಲಿರುವ ಮಂಜೇರಿ, ನಿಲಂಬೂರು ತಿರೂರು ಮೊದಲಾದ ಸ್ಥಳಗಳಿಗೂ ಮೋಟಾರ್ ಬಸ್ ಸರ್ವಿಸ್ ಸ್ಥಾಪಿಸುವದು ಮತ್ತು ಮೋಟಾರ್‌ಕಾರ್, ಲೋರಿ ಮೊದಲಾದ ವಾಹನಗಳನ್ನು ಓಡ್ಯಾಡಿಸುವದು ಮೋಟಾರ್ ಬಂಡಿಗಳನ್ನು ರಿಪೇರಿ ಮಾಡುವ ಕಾರ್ಖಾನೆಗಳನ್ನು ಸ್ಥಾಪಿಸುವದು, ಸರ್ವಿಸುಗಳನ್ನು ವಿಸ್ತಾರಮಾಡುವದು, ಇವೇ ಸಂಘದ ಉದ್ದೇಶಗಳಾಗಿವೆ

ಕಂಪೆನಿಯಲ್ಲಿ ದೊರಕುವ ಅಂದಾಜು ಆದಾಯ

ಈ ಕಂಪೆನಿಯು ಕ್ರಯಕ್ಕೆ ಪಡಕೊಂಡು ನಡಿಸುತ್ತಿರುವ ಮಂಜೇರಿ ಮೋಟಾರ್ ಸರ್ವಿಸಿನ ಗತಿಸಿದ ಲೆಕ್ಕಾಚಾರಗಳನ್ನು ಪರಿಶೋಧಿಸಿದರೆ ಕ್ಷೀಣ ನಿಧಿಗೆ ತಕ್ಕಷ್ಟು ಹಣ ಉಳಿಸಿಟ್ಟು ಸುಮಾರು ಶೇಕಡ 25 ರಂತೆ ಪಾಲುಗಾರರಿಗೆ ಆದಾಯ ಕೊಡಬಹುದಾಗಿದೆಂದು ಖಂಡಿತವಾಗಿ ಹೇಳಬಹುದು ಕಾಲಕ್ರಮೇಣ ಇನ್ನಷ್ಟು ಹೆಚ್ಚಿಗೆ ಬಸ್‌ಗಳನ್ನೂ, ಕಾರ್, ಲೋರಿಗಳನ್ನೂ ಓಡ್ಯಾಡಿಸುವದಾದರೆ ಮೋಟಾರ್ ಕಾರ್ಖಾನೆಗಳನ್ನೂ ಸ್ಥಾಪಿಸುವದಾದರೆ, 100 ಕ್ಕೆ 25 ಕ್ಕಿಂತಲೂ ಹೆಚ್ಚಿನ ಆದಾಯವನ್ನು ನಿರೀಕ್ಷಿಸಬಹುದು.

ವಿಶೇಷ ಪ್ರಯೋಜನಗಳು.

ಬಹೂ ಜಾಗ್ರತೆಯಿಂದಲೂ ಮುತುವರ್ಜಿಯಿಂದಲೂ ತನ್ನ ಕೆಲಸವನ್ನು ಮಾಡಿ ಎಲ್ಲಾ ಕಡೆಯಿಂದಲೂ ಒಳ್ಳೇ ಹೆಸರನ್ನು ಪಡಕೊಂಡ ಮಂಜೇರಿ ಮೋಟಾರ್ ಸರ್ವಿಸನ್ನು ಈ ಲಿಮಿಟೆಡ್ ಕಂಪೆನಿಯು ಪಡಕೊಂಡದಾಗಿರುತ್ತದೆ

ಈ ಕಂಪೆನಿಯ ಕೆಲಸಗಾರರೆಲ್ಲರೂ ಸಮರ್ಥರೂ ಇದರ ಆಡಳಿತದಾರರು ಒಳ್ಳೇ ಅನುಭವಶಾಲಿಗಳೂ ಆಗಿದ್ದಾರೆ.

ಈ ಕಂಪೆನಿಯ ಪ್ರವೃತ್ತಿಯಿಂದ ಬರುವ ಆದಾಯವು ಕನಸಿನ ಗಂಟಲ್ಲ. ನಿಜವಾಗಿ ಕೈಗಂಟೇ ಆಗಿದೆ ಇತರ ಕಂಪೆನಿಗಳಲ್ಲಿ ಆದಾಯ ಸಿಕ್ಕುವದಕ್ಕೆ ಮೂರು ನಾಲ್ಕು ವರ್ಷ ಕಾಯಬೇಕಾಗುತ್ತದೆ ಇದರಲ್ಲಿ ಹಾಗಲ್ಲ? ಶೇರ್ ತೆಗೆದುಕೊಂಡ ಕೂಡಲೇ ಆದಾಯ ಬರುವದು.

ಸರ್ವರಿಗೂ ಅನುಕೂಲವಾಗುವಂತೆ ಒಂದೊಂದು ಪಾಲಿಗೆ 10 ರೂಪಾಯಿ ಮಾತ್ರ ಇಡೋಣಾಗಿದೆ.

ಈ ಲಿಮಿಟೆಡ್ ಕಂಪೆನಿಯು ಕಲಿಕೋಟೆಯಲ್ಲಿ ಮಂಜೇರಿ ಮೋಟಾರ್ ಸರ್ವಿಸನ್ನು ಇದೇ 1921 ನೇ ಮೇ 25 ನೇ ತಾರೀಕಿನಲ್ಲಿ ಮತ್ತು ತಲಚೇರಿಯ ಮೋಟಾರ್ ಸರ್ವಿಸನ್ನು ಇದೇ ಜೂನ್ 1 ನೇ ತಾರೀಕಿನಲ್ಲಿಯು ಬಡಗಾರ ಮತ್ತು ನಾದಾಪುರ ಸರ್ವಿಸನ್ನು 1921 ನೇ ಆಗಸ್ಟು 8 ನೇ ತಾರೀಕಿನಲ್ಲಿ ಹೊಸದಾಗಿ ಪ್ರಾರಂಭಿಸಿರುವದು.

ಪಾಲು ಬೇಕಾದವರು ಕಂಪೆನಿಯ ಅರ್ಜಿ ಫೋರ್ಮಿನಲ್ಲಿ ಅರ್ಜಿ ಬರೆದು, ತಮಗೆ ಎಷ್ಟು ಪಾಲು ಬೇಕೋ ಅಷ್ಟು ಪಾಲಿಗೆ—ಪಾಲ 1 ಕ್ಕೆ 10 ರೂಪಾಯಿ ಪ್ರಕಾರ ಆಗುವ ಒಟ್ಟು ಹಣವನ್ನು ಅರ್ಜಿಯೊಂದಿಗೆ ಮೇನೇಜಿಂಗ್ ಡೈರೆಕ್ಟರರಿಗೆ ಕಳುಹಿಸತಕ್ಕದು.

ಕಂಪೆನಿಯ ನಿಯಮಗಳ ಪ್ರತಿಗಳೂ ಅರ್ಜಿ ಫೋರ್ಮುಗಳು ಕಂಪೆನಿಯ ಆಫೀಸಿನಲ್ಲಿ ದೊರೆಯುವವು.

ಅರ್ಜಿ ಫೋರ್ಮು ಸಿಕ್ಕದಿದ್ದರೆ ಅರ್ಜಿದಾರನು ತನ್ನ ಪೂರ್ಣ ಹೆಸರು, ತಂದೆಯ ಹೆಸರು, ಉದ್ಯೋಗ ಮತ್ತು ಖಾಯಂ ವಿಳಾಸ ಇವನ್ನು ಸ್ಪಷ್ಟವಾಗಿ ಬರೆದು, ಅರ್ಜಿಯನ್ನೂ ತಾನು ಅಪೇಕ್ಷಿಸುವ ಪಾಲುಗಳ ಹಣವನ್ನೂ ಮೇನೇಜಿಂಗ್ ಡೈರೆಕ್ಟರರಿಗೆ ಕಳುಹಿಸಿಕೊಡತಕ್ಕದ್ದು.

ಈ ಕಂಪೆನಿಯ ಸರ್ವಿಸ್ ಈಗ ಕಲಿಕೋಟೆಯಿಂದ ಪುದುಪಾಡಿಗೂ ತಲಚೇರಿಯಿಂದ ಮಾಕೂಟೆಗೂ ಬಡಗರೆಯಿಂದ ನಾದಾಪುರಕ್ಕೂ ಓಡ್ಯಾಡುತ್ತಿರುವವು.

ಒಳ್ಳೇ ಮೋಟಾರ್‌ಕಾರ್‌ಗಳು ತಲಚೇರಿಯಲ್ಲಿಯೂ ಕಲಿಕೋಟೆಯಲ್ಲಿಯೂ ಬಡಗರೆಯಲ್ಲಿಯೂ ಬಾಡಿಗೆಗೆ ದೊರೆಯುವವು.

1920 ನೇ ಇಸವಿ ಡಿಸೆಂಬರಿನಿಂದ 7 ತಿಂಗಳ ವರೆಗಿನ ಮಂಜೇರಿ ಮೋಟಾರ್ ಕಂಪೆನಿಯ ಆದಾಯವೆಚ್ಚದ ಪಟ್ಟಿ.

ಬಂಡವಾಳ	... ...	60,000—0—0
ಕಲ್ಲಿಕೋಟೆ ತಲಚೇರಿ ಸರ್ವಿಸುಗಳಿಂದ ಉತ್ಪತ್ತಿ	...	48,294—13—0
ಒಟ್ಟು ಖರ್ಚು ಪೆಟ್ರೋಲ್ ಸಾಮಾನುಗಳಲ್ಲಿ	....	31,064—7—3
ಏಳು ತಿಂಗಳ ಒಟ್ಟು ನಫೆ	... . .	17,230—5—9

ಇದರಿಂದ ತಿಂಗಳಿಗೆ 2500 ರೂಪಾಯಿವರೆಗೆ ನಫೆ ಇದೆ ಎಂದು ಪೂರ್ಣ ತಿಳಿಯಿತು.

ಒಂದು ವರ್ಷಕ್ಕೆ 30,000 ರೂ. ನಫೆ. ಇದರ ಪೈಕಿ 15,000 ರೂಪಾಯಿ ಬೇರೆ ರಿಸರ್ವ್ ಫಂಡಿನಲ್ಲಿ ಇಟ್ಟರೂ ಕೂಡಾ ಶೇಕಡಾ 25 ರಂತೆ ನಫೆ ಸಿಕ್ಕಬಹುದು.

B. T. ತಲಚೇರಿ ಸಬ್‌ಕಲೆಕ್ಟರರು ಬರೆಯುವದು ಏನಂದರೆ .—

ಆಗಸ್ಟು ತಾರೀಕು 26-27-28 ರಲ್ಲು ಕೊಯಿಲಾಂಡಿ ತಮರಚೇರಿ ಕುನ್ನಮಂಗಲ ಎಂಬಲ್ಲಿಗೆ ಸರಕಾರಕ್ಕೆ ಉಪಯೋಗವಾಗಿ ಸಿಪಾಯಿಗಳನ್ನು ಕರಕೊಂಡು ಹೋಗಲು ನಿಮ್ಮ ಮೋಟಾರುಗಳನ್ನು ಬಸ್‌ಗಳನ್ನು ಅತಿ ಜಾಗ್ರತೆಯಿಂದ ಕೊಟ್ಟದ್ದು ಸರಿಯಷ್ಟೆ ನಿಮ್ಮಲ್ಲಿ ಕೆಲಸಮಾಡುವ ಕೆಲಸದವರು ಮತ್ತು ಡ್ರೈವರುಗಳು ಅತಿ ಬುದ್ಧಿವಂತರು, ಮತ್ತು ಪೂರ್ಣ ಶ್ರದ್ಧೆಯಿಂದ ಕೆಲಸಮಾಡುವವರು ಆಗಿರುತ್ತಾರೆ ಮತ್ತು ಇವರಷ್ಟು ಮುತುವರ್ಜಿಯಿಂದ ಕೆಲಸಮಾಡುವಂಥಾ ಕೆಲಸದವರನ್ನು ಈವರೆಗೆ ಎಂದು ನಾನು ಕಂಡಿಲ್ಲ ಅಲ್ಲಿಗೆ ಇದಕ್ಕೋಸ್ಕರ ಅತಿ ಕೃತಜ್ಞತೆಯುಳ್ಳವನಾಗಿರುತ್ತೇನೆ

ಇದರಿಂದ ಜನರು ನಮ್ಮ ಕಂಪೆನಿಯನ್ನು ಎಷ್ಟು ಶ್ಲಾಘನೆಮಾಡುತ್ತಾರೆಂಬದು ಪೂರ್ಣ ವ್ಯಕ್ತವಾಗುತ್ತದೆ.

THE

MANJERI MOTOR SERVICE, Ltd.,

CALICUT.

Branches

TELLICHERRY AND BADAGARA.

Registered under the Indian Companies Act 1913 as No. 1 of 1921- 1922 on the 4th day of April 1921 and prospectus filed on the 6th day of May 1921. Business commenced on the 25th day of May 1921

AUTHORISED CAPITAL RUPEES THREE LAKHS.

Divided into 30,000 ordinary shares of Rs 10 each payable fully in cash with application of which 20,000 shares are now offered for subscription at par.

1540 shares are taken by the promoters at present

Rs 35130 worth shares are sold upto 25th August 1921.

Rs. 12780 worth shares are sold from 1st to 25th August 1921.

OBJECTS.

The Company is formed primarily to estat Motor Bus Services between Tellicherry Coorg, Wynaad in North Malabar, Calicut Wynaad, Nilambur and Tirur in South Mal. to establish motor work-shops for the repai motor vehicles and for the training up of m machanics and drivers and for the perma working up of motor bus service in the convey of passengers and goods.

ESTIMATED INCOME AND PROSPE

It is estimated from a perusal of the acc of the working of the Manjeri Motor Ser which the Company has purchased that Company would be able to declare a dividend about 25 per cent after setting aside am reserves for depreciation and reserve f d As pass on and more buses and cars nd lorries introduced and more new lines a e opened a workshops established a much higher dividend confidently expected and considered feasible.

SPECIAL ADVANTAGES.

The Company has p rchased the flourish concern the Manjeri Motor Service which been exceptionally lucky all along to earn a g name and maintain the prestige and reputa throughout for its punctuality, regularity respectability required of a motor service to the confidence of the travelling public.

The Company is singulary fortunate in secu the services of choicest workmen and efficient experienced management.

The Company s lines of business are not a speculative but are reckoned as sure concerns

The Company is in a position to pay a div from the very start.

The Company has already taken charge of Manjeri Motor Service working at Calicut on **25th day of May 1921** and that of Tellich on the **1st June 1921** and Badagara—Nadapu line is newly opened on the **8th August 1921**

Application for shares should be made in form of application to the Managing Dire together with the full cash value of each share

Copies of the Memorandum and Article Association and of the Prospectus and form application can be had at the Office of Company

In the absence of application form, the ap cation should clearly state Full name, Perman address Father name, Profession, Pre address and should be sent with the full cash va of the shares to the Managing Director

The Company's service now works betw CALICUT--PUDUPADI TELLICHERR MAKKUT, BADAGARA—NADAPURA Reliable pleasure cars **Reo, Hupmobile Overl** driven by experienced hands are always availa for hire.

SUB COLLECTOR TELLICHERRY WRITES:

"Just a line to thank you for the promptn with which you placed your two Cars and Bus at the disposal of Government on the 2 27th and 28th for moving troops to Quilan Tamarachery and Kunnamangalam etc , e and concludes "**I never saw more willi workers or more competent drivers th your men.**" This unasked for remarks from pen of an high official speaks for itself about merits of the Manjeri Motor Service Ltd , a her staff

For further particulars apply to—

J. NICHOLAS,

Managing Director

Manjeri Motor Service Ltd., Calic

ಚಂದಾದಾರರುಗಳಿಗೆ ವಿಜ್ಞಾಪನೆಗಳು.

ಇದುವರೆಗೆ ಚಂದಾ ಪಾವತಿಮಾಡಲಿಕ್ಕಿರುವ ಪತ್ರಿಕೆಯ ಚಂದಾದಾರರಿಗೆ ತಮ್ಮ ಬಾಕಿಯನ್ನು ಪಾವತಿಮಾಡಬೇಕೆಂದು ಸೂಚಿಸುತ್ತಾ ಬಂದಿರುವುದು ಸರಿಯಷ್ಟೆ. ಆದರೆ ಸುಮಾರು 60 ರಷ್ಟು ಚಂದಾದಾರರ ಆದಷ್ಟಿನ್ನೂ ಪಾವತಿ ಮಾಡಿರುವುದಿಲ್ಲ. ಜನರು ಈ ವಿಷಯ ಉದಾಸೀನರಾಗಿರುವುದು ಮುಂದಾಳುಗಳಿಗೆ ವ್ಯಸನವನ್ನುಂಟುಮಾಡುತ್ತದೆ. ಪತ್ರಿಕೆಯು ನಾಡಿನ ಜನಸಮುದಾಯವನ್ನು ಮುಂದಕ್ಕೆ ತರುವುದಕ್ಕೆ ಹೊರಟಿರುವುದು ಎಲ್ಲಾ ವಾಚಕರಿಗೂ ತಿಳಿಯದ ಸಂಗತಿಯಲ್ಲ. ನಾಡಿನ ಜನರಿಗೆ ಈವರೆಗೆ ನಾಲ್ಕು ಕೆಲಸದ ಗಲಾಟೆ ಇರುವುದರಿಂದ ಹಣವನ್ನು ಜಮೆಮಾಡಿ ಕಳುಹಿಸಲಿಕ್ಕೆ ಅನಾನುಕೂಲವಾಗಿರಬಹುದು. ಆದರೆ ಇನ್ನಾದರೂ ದಯವಿಟ್ಟು ಚಂದಾದಾರರಾದ ದೇಶಾಭಿಮಾನಿಗಳು ಉದಾಸೀನರಾಗದೆ ಬಾಕಿಯನ್ನು ಪಾವತಿಮಾಡಿ ರಶೀತಿ ಪಡೆಯಬೇಕಾಗಿ ಬೇಡುತ್ತೇವೆ. ಇದುವರೆಗೂ, ಪತ್ರಿಕೆಯನ್ನು, ಹಣ ಪಾವತಿಸದೆ ಓದುತ್ತಾ ಬಂದು ಕೆಲವು ಜನರು ಪತ್ರಿಕೆಯನ್ನು ಹಿಂತಿರುಗಿಸುತ್ತಾ ಬರುತ್ತಿರುವುದು ತುಂಬಾ ನಾಚಿಕೆಯನ್ನುಂಟುಮಾಡುವ ವಿಷಯವಾಗಿದೆ.

ಎಡಿಟರ್.

"ಕೊಡಗು"

೧೯೨೧ನೇ ಇಸವಿ ಅಕ್ಟೋಬರ್ ತಾ|| ೨೧ನೇ

ಶುಕ್ರವಾರ

ಈಗಿನ ಚಳವಳಿ.

ಸನ್ 1914 ನೇ ಇಸ್ವಿಯಲ್ಲು ಯೂರೋಪುಖಂಡದಲ್ಲಿ ಕಲಿಯುಗದ ಘೋರಯುದ್ಧವು ಕೊನೆಗೊಂಡದರಿಂದ ಭೂಲೋಕದಲ್ಲಿ ತಕ್ಕಮಟ್ಟಿಗೆ ನೆಲೆಗೊಂಡಿದ್ದ ಶಾಂತತೆಯು ಭೂಖಂಡಗಳ ನಂತರ ದೇಶಗಳನ್ನು ಖಂಡಗಳ ನಂತರ ಖಂಡಗಳನ್ನು ಕೈಬಿಡುತ್ತಾ ಬಂದಿದೆ. ಆಸ್ಟ್ರಿಯ ಮತ್ತು ಸರ್ವಿಯರನ್ನು ಕೈಬಿಡುತ್ತಾ ಒಂದಿದೆ. ಆಸ್ಟ್ರಿಯ ಮತ್ತು ಸರ್ವಿಯ ದೇಶಗಳಿಗೆ ಮಾತ್ರವಾದ ಯುದ್ಧವು ಬಲವಾಗುತ್ತಾ ಬಂದು, ಜರ್ಮನಿ, ಫ್ರಾನ್ಸ್, ಇಟಲಿ ಮುಂತಾದ ದೇಶಗಳು ಇದರೊಳಗೆ ಸೇರಿಕೊಂಡವಾದದ್ದು ಮಾತ್ರವಲ್ಲದೆ ಪರಖಂಡಗಳಾದ ಅಮೇರಿಕ ಏಷ್ಯ, ಆಫ್ರಿಕ ಮತ್ತು ಆಸ್ಟ್ರೇಲಿಯ ಮೊದಲಾದವುಗಳು ಇದರಲ್ಲಿ ಭಾಗಿಗಳಾದವು. ಭೂಲೋಕವೆಲ್ಲಾ ಭೂಕಂಪದಿಂದ ಗಡಗಡನೆ ನಡುಗಿದಂತೆ ಎಲ್ಲಿ ನೋಡಿದರೂ ಅಶಾಂತಿಯೇ ತಲೆದೋರಲಾರಂಭಿಸಿತು. ನಾಲ್ಕು ವರ್ಷಗಳ ನಂತರ ಸುಮಾರು ಏಳು ಮಿಲಿಯ ಜನ ಪ್ರಾಣನಷ್ಟವಾದಮೇಲೆ ಎರಡು ಪಂಗಡದವರೂ ಉಂಟಾದ ಕಷ್ಟನಷ್ಟಗಳನ್ನು ನೋಡಿ ಕಣ್ಣು ತೆರೆದು ಹೀಗೆಯೇ ಯುದ್ಧನಡೆದರೆ ಭೂಲೋಕವೇ ನಶಿಸಿಹೋಗುವದೆಂದು ಯೋಜಿಸಿ ಕಡೆಕಡೆಗೆ ಸೋಲುತ್ತಾ ಬಂದ ಜರ್ಮನಿಯವರು ಸಂಧಿಗೆ ಕೇಳಿಕೊಂಡ ಪ್ರಕಾರ ಅದಕ್ಕೆ ಉಭಯಪಕ್ಷದವರೂ ಒಪ್ಪಿ ಮಹಾಯುದ್ಧವನ್ನು ನಿಲ್ಲಿಸಿದರು. ಆದರೆ ಈ ಪಲವೇನಾಯಿತು? ಜನಾಂಗಗಳು ಚಿಕ್ಕದೇ ಆಗಲಿ ದೊಡ್ಡವೇ ಆಗಲಿ ಪ್ರತಿಯೊಂದು ಜನಾಂಗಕ್ಕೆ ಸ್ವಾತಂತ್ರ್ಯವಿರಬೇಕೆಂಬ ತತ್ವವನ್ನೇ ಅವಲಂಬಿಸಿ ನಮ್ಮ ಬ್ರಿಟಿಷ್ ಚಕ್ರಾಧಿಪತ್ಯವು ಬೆಲ್ಜಿಯಮ್ ದೇಶದ ಸ್ವಾತಂತ್ರ್ಯವನ್ನು ಕಾಪಾಡುವದಕ್ಕಾಗಿ ಜರ್ಮನಿಯಮೇಲೆ ಯುದ್ಧ ಮಾಡಬೇಕಾಗಿ ಬಂದದ್ದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಸ್ವಾತಂತ್ರ್ಯವನ್ನು ನೆಲೆಗೊಳಿಸಲು ಹೊರಟಂಥ ಘೋರಯುದ್ಧವು ಎಲ್ಲಿ ನೋಡಿದರೂ ಕಾಣುವಂತೆ ಸಂಧಿಪತ್ರದ ಮೂಲಕ ಅದರ ಉದ್ದೇಶವು ಪೂರ್ತಿಯಾಗಿ ಕೈಗೂಡದೆ ಹೋದುದರಿಂದ ಭೂಲೋಕದ ಯಾವ ಭಾಗವನ್ನು ನೋಡಿದರೂ ಕೂಡ ಅತ್ಯಾಯಿಂದ ದೊರಕದ ಜನಾಂಗದವರು ಯುದ್ಧಗಳು ಪರಿಣಾಮದಿಂದ ಕದನಗಳೂ ತರತರದ ರಾಜಕೀಯ ಚಳುವಳಿಗಳು ಹುಟ್ಟಿ ಪ್ರಬಲವಾಗುತ್ತಾ ಬರುತ್ತವೆ.

ಒಂದ ಕಡೆ ಯೂರೋಪುಖಂಡದಲ್ಲಿ ತುರ್ಕಿಯವರಿಗೆ ಗ್ರೀಕರಿಗೂ ಪ್ರಬಲವಾದ ಯುದ್ಧವೂ, ಐರ್ಲೆಂಡಿನವರು ತಮ್ಮ ಸ್ವತಂತ್ರ್ಯವನ್ನು ಸ್ಥಾಪಿಸಲಿಕ್ಕಾಗಿ ಇಂಗ್ಲೆಂಡಿನವರ ಸಂಗಡ ಘೋರರೀತಿಯಾಗಿ ಹೋರಾಡುವದೂ, ಇನ್ನೂ ಅನೇಕ ಅಮೇರಿಕ ಮುಂತಾದ ದೇಶಗಳಲ್ಲಿ ಐಶ್ವರ್ಯವಂತರೊಂದಿಗೆ ಬಡವರೂ, ಕೂಲಿ ಆಳುಗಳೂ, ಯಜಮಾನರೊಂದಿಗೆ ಕೂಲಿ ಆಳುಗಳೂ, ಪ್ರಜೆಗಳು ಹೋರಾಡುವುದು ಖಂಡದಲ್ಲಿ ಅನ್ಯಸರಕಾರದವರೊಂದಿಗೆ ಪ್ರಜೆಗಳು ಹೋರಾಡುತ್ತಿರುವದು ಕಾಣುತ್ತವೆ.

ಈ ರೀತಿಯಲ್ಲಿ ಹೊಸ ಚಳವಳಿಯು ಭೂಲೋಕದಲ್ಲಿ ಮನುಷ್ಯರು ವಾಸವಿರುವ ಯಾವ ಮೂಲೆಯನ್ನು ತಾನೆ ಬಿಟ್ಟಿದ್ದೀತು. ಚಾರಿತ್ರಿಕವಾಗಿ ಒಂದು ಈ ಚಳವಳಿಯ ಭಾರತೀ ಮಾತೆಯನ್ನು ಹೂಕ್ಕಿ ಸಿದ್ಧಗೊಳಿಸುತ್ತಿದ್ದಂಥಾ ನಮ್ಮ ಭಾರತೀಯ ಮಾತೆಯನ್ನು ಎಚ್ಚರಗೊಳಿಸುವ ಸೂಚನೆಗಳು ಎಲ್ಲೆಲ್ಲಿಯೂ ಕಾಣಿಸುತ್ತವೆ. ಆದುದರಿಂದ ಹಿಂದೂದೇಶವು ಸರಕಾರದಿಂದಲೂ, ಅನಹಕಾರಿಗಳಿಂದಲೂ ಮುಖ್ಯವಾಗಿ ಎರಡು ಪಂಗಡದವರಾಗಿ ಹಿಂದೂದೇಶಕ್ಕೆ ಸ್ವರಾಜ್ಯವನ್ನು ಪಡೆಯುವ ಉದ್ದೇಶಕ್ಕಾಗಿಯೇ ಬೇರೆಬೇರೆ ವಿಧಾನಗಳಲ್ಲಿ ಪ್ರಯತ್ನಿಸುತ್ತಿರುವರು. ಉದ್ದೇಶವು ಒಂದೇ ಆಗಿರುವದರಿಂದ ದಾರಿಯು ವಿಧವಿಧವಾಗಿದ್ದರೂ ಕೂಡ ಇದು ತ್ಯಾಗಿತನ ಸರಿಯೇ ಇರುವದು.

ಆದರೆ ಘೋರ ಯುದ್ಧವು ಯಾವ ಜನಾಂಗದ ಸ್ವಸ್ವಯೋಜನೆಯಲ್ಲಿದೆ ಪ್ರತಿಯೊಂದು ಜನಾಂಗದ ಸ್ವಾತಂತ್ರ್ಯವನ್ನು ಸಾಧಿಸಲು ನಡೆದದ್ದರಿಂದ ಪಾಶ್ಚಿಮಾತ್ಯ ಜಾತಿಗಳು ಹೆಚ್ಚಿನ ಕುಲೀನರೆಂದೆಗಣನೆಯನ್ನು ನೆಟ್ಟು ತಾವು ಶಕ್ತಿವಂತರಾಗಿ ತಮ್ಮ ದೇಶದಲ್ಲಿದ್ದರೂ ಸಹ ತಮ್ಮ ಕೈಯಲ್ಲಿ ಸಾಧ್ಯವಾದ ಮಟ್ಟಿಗೆ ಆ ಯುದ್ಧಕ್ಕೆ ಜನ ಸಹಾಯವನ್ನೂ ದ್ರವ್ಯ ಸಹಾಯವನ್ನೂ ಮಾಡಿದ್ದು ಯಾರಿಗೂ ತಿಳಿಯದ ಸಂಗತಿಯಲ್ಲ. ಸ್ವಾತಂತ್ರ್ಯಕ್ಕಾಗಿ ಸಾವಿರಾರು ಮೈಲು ದೂರದಲ್ಲಿದ್ದ ರಣರಂಗದಲ್ಲಿ ಧೈರ್ಯದಿಂದ ತಮ್ಮ ರಕ್ತವನ್ನು ಸುರಿಸಿರುವರು. ಭಯಕಂಪ ಕೈಗೂಡದಿರುವದೇ.

ಈ ಸಮಯದಲ್ಲಿ ಕಾರ್ಮಿಕ ಪಕ್ಷವೆಂಬ ಮ್ಯಾಗ್ನೆಟ್ಟಿಂದ ಯೋಚಿಸುವ ರಾಜಕೀಯ ಸಭೆಗಳಲ್ಲಿ ಕೊಡಗಿನ ಸಿಪಾಯಿಗಳು ತಮ್ಮ ಸರಕಾರವು ತಮ್ಮನ್ನು ಎಂದಿಗೂ ಹಿಂದಿಕ್ಕಲಾರದೆಂದು ಪೂರ್ಣಶಾಗಿ ನಂಬಿ ಗಾಢನಿದ್ರೆಯಲ್ಲಿ ಹಚ್ಚಿವಾಗಿ ನಮ್ಮ ಪೂರ್ವಜನಾಗಿ ನಂಬಿ ಗಾಢನಿದ್ರೆಯಲ್ಲಿ ದ್ದರೂ ಕೂಡ ತಮ್ಮ ಭಾರತದ ತನು, ಮನ, ಧನವನ್ನು ಇಂಥಾ ಪವಿತ್ರವಾದ ಉದ್ದೇಶಕ್ಕಾಗಿ ಅರ್ಪಿಸುವದರಲ್ಲಿ ಬೇರೆ ಯಾವ ಜನರಿಗಿಂತಲೂ ಹಿಂದುಬೀಳಲಿಲ್ಲ. ನಮ್ಮ ಜನಾಂಗವು ಭಾರತಮಾತೆಯ ಸಿಪಾಯಿಗಳಾಗಿ ಒಂದು ಮುಕ್ತಿಯೋಗವು ಭಾರತಮಾತೆಯ ಸಿಪಾಯಿಗಳಾಗಿ ಒಂದು ಸಮಯದಲ್ಲಿ ಮಿಲಿಟರಿಯ ಮಾಡುತ್ತಿದ್ದಕ್ಕೋಸ್ಕರ ಜರ್ ಸಮಯದಲ್ಲಿ ಮಿಲಿಟರಿಯ ಒಂದು ಸ್ಥಿರ ಕಂಪನಿಗೆ ನಾಶವಾದುದನ್ನು ಕೂಡಲಿಕ್ಕೆ ರಕ್ತಿ ಇಲ್ಲದಿದ್ದರೂ ಸಹ ತಮ್ಮ ರಕ್ತವನ್ನು ಸಹ ಸುರಿಸಬೇಕೆಂಬ ಕುತೂಹಲದಿಂದಬಂದು ರೆಜಿಮೆಂಟನ್ನೇ ಸರಕಾರಕ್ಕೆ ಅರ್ಪಿಸಿತು. ಈ ಸಹಾಯದಲ್ಲಿಯೂ ತನ್ನ ರಕ್ಷಿಸಿರಾರಿ ಹೋಯಿತೆನ್ನಬಹುದು.

ಸ್ವತಂತ್ರಮತ್ತರಿರುವ ಸಹೋದರರು ಅಗ್ರವಿಸುತ್ತಿರುವ ರಾಜಕೀಯ ಪಕ್ಷಗಳನ್ನು ಆದರ ಪಾಲಿದೆಂದು ಹೋಲಿಸಿ ಮತ್ತಿರುವ ಗದ್ದಲದ ಪ್ರಸಂಗವನ್ನು ನೋಡಿಯೂ ಕೇಳಿಯೂ, ಶಾಂತ ಚಿತ್ತರಾಗಿದ್ದ ನಮ್ಮ ಜನಾಂಗವು ಎಚ್ಚೆತ್ತು ಅತ್ತ ಸ್ವಾಯತ್ತ ಚಿಹ್ನೆಗಳನ್ನು ತೋರಲು ತೊಡಗಿದೆ. ಊರುಗಳಲ್ಲಿ ಸಭೆ ಸಮಾಜಗಳು ಕೂಡಿ ಪಂಚಾಯತಿಗಳಲ್ಲಿಯೂ ಮತ್ತು ಆಚಾರ ಸಂಬಂಧವಾದ ಸಭೆಗಳಲ್ಲಿ ಮತ್ತು ರಾಜಕೀಯ ಚರ್ಚೆ ನಡೆಸುತ್ತಿದ್ದಂಥಾ ರೈತರು. ಈಗ ಎಲ್ಲಿ ನೋಡಿದರೂ ಕೂಡಾ ನಡೆಯುವ ವಿವಾಹಗಳಲ್ಲಿ ನಡೆಯುವ ವಿವಾಹಗಳಲ್ಲಿ ಕೂಡ ನೋಡಿದರೂ ಪಟ್ಟ ಸಾತಗಳಲ್ಲಿ ನಡೆಯುವ ಸಭೆಗಳಲ್ಲಿ ರಾಜಕೀಯ ವಿಷಯ ಮಾತಾಡುವದೂ, ಅಂಥಾ ಸಭೆಗಳಲ್ಲಿ ರಾಜಕೀಯ ರಣಾಂಗಣಗಳನ್ನು ತಂದು ಚರ್ಚಿಸುವದೂ ನಮ್ಮ ದೇಶೋನ್ನತಿಯ ಶುಭ ಸೂಚನೆ ಎಂಬುದಕ್ಕೆ ಸಂಶಯವಿಲ್ಲ.

ಈಗ ಎರಡು ತಿಂಗಳುಗಳಿಂದ ನಮ್ಮ ದೇಶದಲ್ಲಿ ಉಂಟಾಗಿರುವ ರಾಜಕೀಯ ಚಳುವಳಿಯನ್ನು ನೋಡಿದರೆ ಆದರ ನಮ್ಮ ಜನಾಂಗವು ಯಾವ ವಿಧದಲ್ಲಿಯೂ ಹಿಂದುಳಿಯಲಾರದೆಂದು ನಂಬುತ್ತೇನೆ. ದೇಶದಲ್ಲೆಲ್ಲಾ ಹರಡುತ್ತಿರುವ ಈ ಚಳವಳಿ ಜನರನ್ನು ನಾನಾ ಮಾರ್ಗವಾದ ರಾಜಕೀಯದಲ್ಲಿ ಪ್ರವೃತ್ತಿಯ ದಿಂದ ಸ್ವಪ್ರಯೋಜನವನ್ನು ನೀಡಿದೆ. ದೇಶಾಭಿಮಾನವನ್ನೇ ಮುಂದಿಟ್ಟು ದೇಶಸೇವೆಯಲ್ಲಿ ನಿರತರಾಗಿರುವ ಮುಂದಾಳುಗಳನ್ನು ಅನುಸರಿಸುವಂತೆ ತೋರುತ್ತದೆ. ಇದು ಒದಗಿದಲ್ಲಿ ಕೊಡಗುದೇಶವು ಸ್ವರಾಜ್ಯವನ್ನು ಬಹುಬೇಗ ಪೂರ್ಣಕವಾಗಿಯೇ ನಮ್ಮ ಸ್ವಕೀಯ ಸರಕಾರವು ಮತ್ತು ಇನ್ನು ಕೆಲವುಗಳೇ ನಮ್ಮ ಸ್ವಕೀಯ ಸರಕಾರವನ್ನು ಕೊಡಗಿನ ದೇಶೀಯರು ಯೋಚಿಸಿರುವ ಮೊದಲೇ ಪರಿಪಕ್ವವಾಗಿರುವರೆಂದು ಹೊಂದುವುದಕ್ಕೆ ಸಂದೇಹವಿಲ್ಲ.

"Nation building is in our hands."

"ತಮ್ಮ ದೇಶೋನ್ನತಿ ತಮ್ಮ ಕೈಯಲ್ಲಿಯೇ ಇದೆ."

1859 ನೇ ಇಸವಿ

ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟ್.

ಈ ಹೆಸರಿನ ಶಾಸನವನ್ನು 1920 ನೇ ಇಸವಿಯಲ್ಲಿ ವಜಾಮಾಡಿದರು. ಈ ವಜಾಮಾಡುವ ಮಸೂದೆಯು ಯಾವಾಗ ಜಾರಿಗೆ ಬರುವುದೆಂದು ತಿಳಿಯದೆ ಇದ್ದುದರಿಂದ ಜನರಿಗೆ ಇದರ ವಿಷಯವಾಗಿ ತಿಳಿಸುವುದಿದೆ. ಈ ಶಾಸನವು ಯಾವ ಉದ್ದೇಶದಿಂದ ಏರ್ಪಟ್ಟಿತು ಅದರ ಪರಿಣಾಮವೇನು ಎಂಬುದನ್ನು ತಿಳಿಯಲು ಇದರ ಚರಿತ್ರೆಯನ್ನು ಸ್ವಲ್ಪ ಮಟ್ಟಿಗೆ ತಿಳಿಯಬೇಕು. ಈ ಕಾಯಿದೆಯು 1921 ನೇ ಇಸ್ವಿಯಲ್ಲಿ ರದ್ದಾಗುತ್ತದೆ.

ಈ ಕಾಯಿದೆ ಯಾವ ಮಟ್ಟಿಗೆ ಉಪಕಾರವಾದುದು ಕೂಲಿಯವರಿಗೆ ಅದು ಮಾರಕವಾದುದು. ಒಂದು ನಿರ್ದಿಷ್ಟ ಕಾಲ ಒಂದು ವರ್ಷಕ್ಕೆ ಅಥವಾ ಒಂದು ತಿಂಗಳಿಗೆ ಪಿಯಾರ್ದಿ ಕೆಲಸದವರು ತಪ್ಪಿದ ಮೂರು ತಿಂಗಳೊಳಗೆ ಪಿಯಾದಿ ಯು ಕೋರ್ಟಿಗೆ ಹೋಗಿ ಫಿರ್ಯಾದು ಮಾಡಿ ಅವನ ಮೇಲೆ ವಾರಂಟು ಮಾಡಿಸಿ ಅವನ ಅರೆಸ್ಟು ಮಾಡಿಸಬಹುದು. ಅಂದರೆ ವಾರಂಟ್ ವರ್ಕ್ ಆಗ ಕೆಲಸ ಬಿಟ್ಟು ಹೋದವನನ್ನು ಕೆಲಸಕ್ಕೆ ಹಿಂದಿರುಗಿಸಿ ಮಾಡಿದ್ದ ಮಾತ್ರ ಅಕ್ರಮವಲ್ಲ. ಅವನ ಕೆಲಸವನ್ನು ಮುಗಿಸುವ ವರೆಗೆ ಹಣವನ್ನು ವಾಪಸು ಕೊಡಲು ಸಹಾ ಮಾಜಿಸ್ಟ್ರೇಟರು ಅಪ್ಪಣೆ ಮಾಡಬಹುದು.

ಇನ್ನು ಮ್ಯಾಜಿಸ್ಟ್ರೇಟರುಗಳಿಗೆ ಸ್ವತಂತ್ರ ಕೊಟ್ಟಿರುತ್ತಾರೆ ಪಿಯಾದಿ ಹಣವನ್ನು ಕೊಡದೆಹೋದರೆ ಪಿರ್ಯಾದಿಯನ್ನು ವಿಚಾರಿಸದೆ ಮ್ಯಾಜಿಸ್ಟ್ರೇಟರ ಅಭಿಪ್ರಾಯದಲ್ಲಿ ಹೊಂದಿಕೆ ಮಾಡಿಕೊಂಡು ಮುಂದಿರಿಸಲು ಪಕ್ಷದ ಸಹ ಸಲ್ಲುವಂತೆ ತಂದರೆ ಆಗಲೇ ಆರ್ಜಿಯನ್ನು ತಳ್ಳಿಬಿಡುವರು. ಪಿರ್ಯಾದಿಯನ್ನು ಮುಂದರಿಸಿದವರಾದರೂ ಅವನಿಗೆ ಯುಕ್ತ ಕಂಡಂತೆ ಸಮನ್ಸ್ ಆಗಲೀ ವಾರಂಟಾಗಲೀ ಕಳುಹಿಸಬಹುದು. ಮ್ಯಾಜಿಸ್ಟ್ರೇಟರ ಅಭಿಪ್ರಾಯದಲ್ಲಿ ಪಿಯಾರ್ದಿಯು ಸುಳ್ಳೆಂದಾಗಲೀ, ತೊಂದರೆ ಕೊಡಲಿಕ್ಕೇ ಮಾಡಿದೆಂದಾಗಲೀ ತಂದು ಬಂದರೆ ಪಿಯಾರ್ದಿಗೆ 50 ರೂಪಾಯಿಗೆ ವಿನಾ ದಂಡ ದಂಡವಾಗಿ ಅಪರಾಧಿಗೆ ಕೊಡಿಸಬಹುದು. ಹಣ ಕೊಡುವುದಕ್ಕೆ ಒಂದುವರ್ಷ ವಿಚಾರದ ಶರತ್ತಿನ ಮೇಲೆ ಬಿಡಬೇಕು ಅಥವಾ ಸಜಾಮಾಡಿಸಬೇಕೋ ಎಂಬುದನ್ನು ಮ್ಯಾಜಿಸ್ಟ್ರೇಟರ ಇಷ್ಟದಂತೆ ಆರ್ಡರ್ ಮಾಡಬಹುದು. ಈ ಕಾನೂನು ವರೆಗ ಪಿರ್ಯಾದಿಯ ಇಷ್ಟವಾಗಿತ್ತು. ಮೊದಲಿನ ಕಾನೂನಿನಂತೆ ಸಜಾ ಸುಮಾರು ಕಠಿಣಸಜಾ ಶಿಕ್ಷೆ ಕೊಡುವಂತ ಇತ್ತು. ಸಜಾ ಕೊಡಬಹುದೆಂತ ಮಾತ್ರ ಇದೆ. ಇಂಥಾ ನೌಕರಿಗಾರನಿಗೆ ಸುಲಭವಾಗಿಪ್ಪಟ್ಟ ಶಾಸನವನ್ನು ಸಹ ತೆಗೆದುಹಾಕಿ ಬಿಡಬೇಕೆಂತ ಒಂದು ಠರಾವನ್ನು ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಈ ತಿಂಗಳಿನಲ್ಲಿ ಚರ್ಚೆಗೆ ತಂದಿದ್ದರು. ಎಲ್ಲಾ ಲೋಕಲ್ ಗವರನ್ಮೆಂಟುಗಳ ಅಭಿಪ್ರಾಯ ತೆಗೆದುಕೊಂಡು 18 ತಿಂಗಳೊಳಗೆ ಯೋಚಿಸಲಾಗುತ್ತೆಂತ ಸರಕಾರದವರು ಹೇಳಿದರು.

ವರ್ತಮಾನ ಸಂಗ್ರಹ.

ಒಳದೇಶ.

ಶ್ರೀಮಂಗಲನಾಡು ಕೂಡುಮಕೇರಿ ಗ್ರಾಮದವರಲ್ಲಿ ಕೆಲವರು ಸಿಪಾಯಿ ಸೇವೆಯನ್ನು ಬಿಟ್ಟಿದ್ದಾರಾಗಿ ತಿಳಿಯುತ್ತೇವೆ.

ಮಳೆಯು ಈ ತಿಂಗಳಿನ ವರೆಗೆ ಸಮಾಧಾನವಾಗಿ ಬಿಸಿಲು ಕಾಯಲಿಕ್ಕೆ ಮುರವಾಗಿದೆ. ಅನೇಕ ಕಡೆಗಳಲ್ಲಿ ಕೆಮ್ಮಲು ಜ್ವರವು ಹರಡಿಕೊಂಡಿದೆ.

ಭತ್ತದ ಬೆಳೆಯು ಬಹಳ ಕಮ್ಮಿಯಾಗಿದೆಯೆಂದೂ, ಬರುವ ವರ್ಷವು ರೂಪಾಯಿಗೆ ಎಂಟಾಣೆಯಂತೆ ಸಿಕ್ಕಬಹುದೆಂದೂ ಅನೇಕ ರೈತರ ಅಭಿಪ್ರಾಯ.

ವಿರಾಜಪೇಟೆ ವಿರಾಜಪೇಟೆಗೆ ಹೋಗುವ ಕಾವೇರಿ ಹೊಳೆಯ ದೋಣಿ ಕಂಟ್ರಾಕ್ಟದಾರರು ಪ್ರಯಾಣಿಕರಿಂದ ಹೆಚ್ಚಿಗೆ ದುಡ್ಡು ವಸೂಲ್ಮಾಡುತ್ತಾರೆಂದು ಸ್ಥಿರವು ಬರುತ್ತಿರುತ್ತಾರೆ.

ಗೋಣಿಕೊಪ್ಪಲು—ಈ ವರ್ಷ ದಸರಾ ಹಬ್ಬವನ್ನು ಒಂದೂವರೆ ಐಶ್ವರ್ಯಶಾಲಿ ಧನಿಕರು ನಡೆಸುವುದಾಗಿ ಇದಕ್ಕೆ ಸಿರುವುದಾಗಿಯೂ ಎಲ್ಲರೂ ಪ್ರೋತ್ಸಾಹಿಸಬೇಕಾಗಿಯೂ ಒಬ್ಬರು ತಿಳಿಸಿರುತ್ತಾರೆ.

ಮಂಜ್ರಾಬಾದು ತಾಲೂಕಿನ ವ್ಯವಸಾಯದ ವಿಷಯ, ಬೆಳೆ ಕ್ಷಾಮವಾದುದ, ಜೀವ ಪ್ರಜೆಗಳು ಬಹಳ ವಿವರವಾಗಿ ಬಂದು, ಉಪನ್ಯಾಸವನ್ನು ಒದಗಿಸಿರುತ್ತಾರೆ ಸ್ಥಳ ಪರಿತ ಸಾಗಿ ಪ್ರಕಟಿಸಲಾಗಲಿಲ್ಲ.

ಪೊನ್ನಂಪೇಟೆನಾಡು ಕುಟ್ಟಂದಿ ಗ್ರಾಮದಲ್ಲಿ ಮಕ್ಕಳಿಗೆ ವಿಮುಖದಿಂದ ಶಾಲೆಯು ಇಲ್ಲದೆ ಬಹಳ ತೊಂದರೆಯೆಂದೂ ಒಂದು ಶಾಲೆಯು ಅತ್ಯಾವಶ್ಯವೆಂದೂ, ಅಲ್ಲೀಂ ಆದಕ್ಕೆ ಒಂದು ಶಾಲೆಯು ಅತ್ಯಾವಶ್ಯವೆಂದೂ, ಅಲ್ಲೀಂ ಬ್ಬರು ಬರೆಯುತ್ತಾರೆ.

ಧಂದಾ ಹಣ ಮತ್ತು ಬೇರೆ ಹಣ ಪಾವತಿಮಾಡದ ಪಂಚಾಯಿತುಗಳಿಗೆ ಈ ವಾರದಿಂದಾಚೆಗೆ ನೋಟೀಸು ಕೊಡದೆ ಹೋಗುತ್ತೆ. ಆದ್ದರಿಂದ ನೋಟೀಸನ್ನು ಕಾಯದೆ ಒಡನೆ ಪಾವತಿ ಮಾಡುವವರಾಗಿ ಕೋರುತ್ತೇವೆ.

ಶ್ರೀಮಂಗಲನಾಡು ಕುಟ್ಟದಾರು ಗ್ರಾಮದ ಮೂರು ಪಕ್ಷಗಳಲು ಕೇರಿಯವರು ಗ್ರಾಮಾಭಿವೃದ್ಧಿಗೆ ಬೇಕಾಗುವ ಪುಸ್ತಕ ಫಂಡು, ವನದ ಫಂಡು, ಪಂಚಾಯಿತಿ ಒಗ್ಗಟ್ಟನ್ನು ಏರ್ಪಡಿಸಿಕೊಂಡು ಕೆಲಸಮಾಡುತ್ತಿರುವುದಾಗಿ ತಿಳಿಯುತ್ತೇವೆ.

ನಾಪೋಕ್ಲು ಮತ್ತು ಪೋಲೀಸು ಆಫೀಸು ತೆಗೆದು ಹಾಕಲ್ಪಟ್ಟಿದ್ದರಿಂದ ಸ್ಥಳೀಕ ಜನರಿಗೆ ಸರ್ವತ್ರದಿಂದ ತೊಂದರೆಯೆಂದೂ ಈ ಅವ್ಯಯನ್ನು ತಿ|| ಬೋ|| ಮುಂಬಯಿ ರೂಕಕಾರರು ಆಗಿರುವ ಅವರು ಪ್ರವೃತ್ತರು ವ್ಯಸನಕರವೆಂದೂ ಅಲ್ಲಿಯ ಚಿಕ್ಕದಾರರು ಬರೆಯುತ್ತಾರೆ.

ಚಿಕ್ಕಮಾಡ ಗ್ರಾಮದವರು ಅನೇಕ ಮುಂದುವರಿದ ಗ್ರಾಮಗಳನ್ನು ಅನುಸರಿಸಿ ಗ್ರಾಮಾಭಿವೃದ್ಧಿಯಲ್ಲಿಯೂ ನಿರ್ಮಾಣವಸ್ಥೆಯನ್ನು ಕೈಕೊಳ್ಳುವುದರಲ್ಲಿಯೂ ಊರಿನ ದೇವಾಲಯ ಕಟ್ಟಿಸುವ ಕೆಲಸಗಳನ್ನು ಬಹಳ ಸರಿಯಾದ ರೀತಿಯಿಂದ ನಡೆಸುತ್ತಿರುವುದಾಗಿ ತಿಳಿಯುತ್ತೇವೆ.

ಕಳೆದವಾರದ ಪತ್ರಿಕೆಯಲ್ಲಿ ನ್ಯೂಸಿಂದ ಇದೇ ಅಕ್ಟೋಬರ 30 ನೇ ತಾ|| ಶುಕ್ರವಾರ ದಿನ ಹಾಕಿದರೆ ಬಂದಿರುತ್ತದೆ. ಬಹಳ ವಾರಣ ತೀರ್ಥೋದ್ಭವ ಹುತ್ತರಿ ಹಬ್ಬವೆಂದು ಕ್ರೀ ಕಾವೇರಿಯನ್ನು ನಡಸಿ ತೀರ್ಥೋದ್ಭವ ಪೂರ್ವಕಾಲವೆಂದು ಬರೆಯುತ್ತೇವೆ. ಅದರಲ್ಲಿ ಅಕ್ಟೋಬರ 30 ನೇ ದಿನವೆಂದು ತಪ್ಪಾಗಿದೆ ಅಕ್ಟೋಬರ 14 ನೇ ಶುಕ್ರವಾರವೆಂದು ಓದಬೇಕಾಗಿತ್ತು.

ಜನರು ಈ ನವ ಎಡಿಟರ್ ಅಥವಾ ಪತ್ರಿಕೆಯ ವಿಷಯವನ್ನು ಪತ್ರಿಕೆಯ ಚಂದಾದಾರರು ಮತ್ತು ಹೆಚ್ಚಿನವರು ಸಹ ಪತ್ರಿಕೆಯನ್ನು ಕೊಂಡು ಓದುವ ಪ್ರತಿ ಒಬ್ಬರಿಗೂ ಮತ್ತು ಅವರವರ ಊರಿನ ಗೊಣಿಕೊಪ್ಪಲಿನಲ್ಲಿರುತ್ತಾರೆ ಎಲ್ಲಾ ಪೇರಿದಾರರೂ, ಚಂದಾದಾರರೂ, ತಮ್ಮ ಬಾಕಿಯನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಸೂಚಿಸುತ್ತೇವೆ.

ಕಳೆದ ಸಂಚಿಕೆಯಲ್ಲಿ ಕೊಡಗು ಅಸೋಸಿಯೇಷನ್ ಬೆಂಗಳೂರು ಎಂಬುದಾಗಿ ಒಂದು ವಾರ್ತೆಯು ಪ್ರಕಟಿಸಲ್ಪಟ್ಟಿದ್ದು ಸರಿಯಷ್ಟೆ. ಸದರಿ ವಾರ್ತೆಯು ಸೆಕ್ರೆಟರಿಯವರಿಂದ ಪ್ರಕಟಿಸಲ್ಪಟ್ಟದ್ದಕ್ಕೆ ಬದಲಾಗಿ ವಾರ್ತಿದಾರರಿಂದ ಎಂದು ಓದಿಕೊಳ್ಳತಕ್ಕದ್ದು.

ಈವರೆಗೆ ಮಾಡಿರುವ ಚಂದಾದಾರರಾಗಿರುವ ವಿಜ್ಞಾಪನೆಗಳನ್ನು ನೋಡಿ, ಚಂದಾ ಹಣವನ್ನು ಇನ್ನೂ ವಾಪಸ ಮಾಡದ ಉದಾಸೀನರಾಗಿರುವವರು, ದೇಶಾಭಿಮಾನಿಗಳಲ್ಲವೆಂತಲೂ, ಮರ್ಯಾದೆಗಳನ್ನು ಉಳಿಸಿಕೊಳ್ಳಬೇಕಾದರೆ ಒಡನೇ ವಾಪಸಿಮಾಡಿ ರಶೀತಿ ಪಡೆಯಬೇಕೆಂದೂ, ದೇಶಾಭಿಮಾನಿಗಳೊಬ್ಬರು ಕಠಿಣವಾದ ಕಾಗದ ಬರೆದಿರುತ್ತಾರೆ.

ಕೊಡವಸಭೆಯು ದೇಶದ ಜನರಿಗೆ ಶತಸ್ಸಾಲಕ್ಕೆ ಅವಶ್ಯವಿಲ್ಲವೆಂದು ವಿರಾಜಪೇಟೆಯ ಮತ್ತು ಇತರ ಮುಖ್ಯಸ್ಥಳಗಳಲ್ಲಿ ತೀರ್ಮಾನವಾದಂತೆ ಎಲ್ಲರೂ ನಡಿಯಬೇಕಾಗಿಯೂ, ಯಾರಾದರೂ ಮೊಬಲಗನ್ನು ಪಾಲು ತೆಗೆದುಕೊಳ್ಳಲಿಕ್ಕೆ ಊರಿಂದೂರಿಗೆ ತಿರುಗಿದರೆ, ಯಾರೂ ದಸ್ಕತ್ತು ಕೊಟ್ಟು ಸದರಿ ಸಭೆಗೆ ಸೇರಬಾರದಾಗಿಯೂ ಬದ್ದಂಡ್ರ ಸುಬ್ಬಯ್ಯನವರು ಬರೆಯುತ್ತಾರೆ.

ಕಳೆದ ತಾ|| 30 ರಲ್ಲಿ "ಕೊಡಗು" ಕಂಪೆನಿಯ ಷೇರುದಾರರ ಸ್ಟೇಟ್ಯೂಟರೀ ಮೀಟಿಂಗ್, ವಿರಾಜಪೇಟೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಷೇರುದಾರರು 550 ಕ್ಕಿಂತ ಹೆಚ್ಚು ಇದ್ದರು. ಡೈರೆಕ್ಟರುಗಳು ಎಂಟು ಜನರು ಹಾಜರಿದ್ದರು. ಅಧ್ಯಕ್ಷರಲ್ಲಿ ಛೇರ್ಮೇನ್‌ರವರಿಗೂ ಡೈರೆಕ್ಟರುಗಳವರಿಗೂ ಷೇರುದಾರರು ವಂದನೆಗಳನ್ನು ಕೊಟ್ಟು ಮೀಟಿಂಗ್ ಮುಕ್ತಾಯವಾಯಿತು.

ಬಾಗಮಂಡ್ಲ ತಾವೂರು ಗ್ರಾಮದಲ್ಲು ಮಾಪಿಳ್ಳೆಯವರ ಕುಂಞಕಳಂದನ ಮನೆಯಲ್ಲಿ ಕಳೆದ ಸಂಗೀವಾ ಒಕ್ಕೆ ಬೂದಿಯನ್ನು ಮನೆಹತ್ತರ ಬಿಸಾಡಿದಲ್ಲಿದ್ದ ಬೆಂಕಿಯು ಮಧ್ಯರಾತ್ರಿಯಲ್ಲಿ ಮನೆಗೆ ಹತ್ತಿಕೊಂಡು ಮನೆಯು ಉರಿದುಹೋಯಿತು. ಅಂದಾಜು ಸುಮಾರು 200 ರೂಪಾಯಿನ ಸಾಮಾನು ನಷ್ಟವಾಗಿದೆಯಂತೆ, ಇವನ ಮನೆಗೆ ಬೆಂಕಿಬಿದ್ದದ್ದು ಇವನಿಗೆ ಗೊತ್ತಿಲ್ಲದೆ ಬೇರೆ ಮನೆಯವರು ಕಂಡು ಇವನನ್ನು ಕೂಗಿ ಎಬ್ಬಿಸಿರುತ್ತಾರೆ.

ಕಣಿವೆ ಹೋಬಳಿ ಹೆಬ್ಬಾಲೆ ಗ್ರಾಮವು ಒಸಭರಿತವಾಗಿರುವುದಾಗಿಯೂ, ಹೆಬ್ಬಾಗಿ ಜನರು ಕೂಲಿಯವರೇ ಆಗಿರುತ್ತಾರಾಗಿಯೂ, ನೈರ್ಮಲ್ಯವೆಂಬುದು ಗೊತ್ತೇ ಇಲ್ಲವಾಗಿಯೂ, ತಮ್ಮ ತಮ್ಮ ಪಟ್ಟಿ, ಕೊಟ್ಟಿಗೆ, ಮನೆಗಳನ್ನು ಅಶುಚಿಯಾಗಿಟ್ಟಿರುವುದರಿಂದಲೇ ಆಗಾಗ್ಯೆ ಪ್ಲೇಗುರೋಗವು ತಲೆದೋರುವುದಕ್ಕೆ ಕಾರಣವೆಂತಲೂ, ಸರಕಾರದವರು ಮತ್ತು ದೇಶಾಭಿಮಾನಿಗಳು ಈ ಊರಿನ ಸ್ಥಿತಿಯನ್ನು ಅಭಿವೃದ್ಧಿಗೆ ತರುವಂತೆ ಮುಂದಕ್ಕೆ ಬರಬೇಕಾಗಿಯೂ ಒಬ್ಬರು ಬರೆದಿರುತ್ತಾರೆ.

ಕಿರುಂಡಾಡು ದೇವಸ್ಥಾನದ ಹೀನಸ್ಥಿತಿಗೆ ಅಪ್ಪನೆರವಂಡ್ರ ಮನೆಯವರು ಕಾರಣರಲ್ಲವೆಂದೂ, ಓದುಬರಹ ತಿಳಿಯದ ಪಳಂಗಂಡ್ರ ಅಪ್ಪಚ್ಚನವರು, ತಕ್ಕ ಕಾರಣವನ್ನು ಕೊಡಬೇಕೆಂದೂ, ಅಪ್ಪನೆರವಂಡ್ರ ಮನೆಯವರಲ್ಲದೆ ಬೇರೆ ತೊಂದರೆ ತೆಗೆದುಕೊಂಡ ಆಸಾಮಿಗಳು ಯಾರು ಎಂದು ತಿಳಿಸಬೇಕೆಂತಲೂ, ಪಳಂಗಂಡ್ರ ಅಪ್ಪಚ್ಚನವರು ಬರೆದುದು ಅಪ್ಪನೆರವಂಡ್ರ ಮನೆತನವನ್ನು ನಿಂದಿಸಲಿಕ್ಕೆ ಬರೆದುದೆಂದೂ, ಹೇಗ ನಿಂದಿಸಿದರೂ ಮನಸ್ತಾಪವು ಕಟ್ಟಿ ಹೋಗಲಾರದೆಂದೂ ಅಪ್ಪನೆರವಂಡ್ರ ಉತ್ತಯ್ಯನವರು ಬರೆದಿರುತ್ತಾರೆ.

ಕೊಡವ ಸಭೆಯ ಭಾರೀ ಮೀಟಿಂಗ್ ಕಳೆದ ತಾರೀಕು 30 ರಲ್ಲಿ ವಿರಾಜಪೇಟೆಯಲ್ಲಿ ನಡೆಯಿತು. 1000 ಕ್ಕಿಂತ ಹೆಚ್ಚು ಕೊಡಗರು ದೇಶದ ಎಲ್ಲಾ ಭಾಗಗಳಿಂದಲೂ ನೆರೆದಿದ್ದರು. ಮಧ್ಯಾಹ್ನ ಎರಡು ಘಂಟೆಯಿಂದ ನಾಯಂಕಾಲ ಏಳು ಘಂಟೆಯವರೆಗೂ ಚರ್ಚಿಸಿ, ಇಂಥಾ ಸಭೆಯು ಅವಶ್ಯವಿಲ್ಲವೆಂದೂ, ಈ ಉದ್ದಿಶ್ಯ ಮೀಟಿಂಗು ದೇಶದ ಇತರ ಭಾಗಗಳಲ್ಲಿ ಮಾಡುವುದು ಅನಾವಶ್ಯವೆಂದೂ, ಸಭೆಯು ಅವಶ್ಯವೆಂದು ತೋರಿದರೆ, ರಾಜಕೀಯ ಸಂಗತಿಗಳನ್ನು ಯಾವ ವಿಧದಲ್ಲಿಯೂ ಸೇರಿಸಬಾರದಾಗಿಯೂ ತೀರ್ಮಾನವಾಯಿತು.

ಫ್ರೇಜರ್‌ಪ್ಯಾಟೆ ಸಿದ್ದಾಪುರದ ರಸ್ತೆಯಲ್ಲಿ ಎರಡು ಮೈಲಿಗಳು ಮೆಟಲಿಂಗ್ ಹಾಕದೆ ಇರುವುದರಿಂದಲೂ ಎರಡು ಸೇತುವೆಗಳು ಬಹಳ ಅಭದ್ರವಾಗಿರುವುದರಿಂದ ಗಾಡಿಗಳ ಪ್ರಯಾಣಕ್ಕೆ ಬಹಳ ತೊಂದರೆಯಾಗಿದೆ. ಸೆಕ್ಷನ್ ಆಫೀಸರು ಬಹಳ ಮೆಹನತ್ತಿನಿಂದ ಆರೇಳು ಫರ್ಲಾಂಗ್ ಕಲ್ಲು ಹಾಕಿಸಿರುತ್ತಾರೆ. ಇಷ್ಟರಲ್ಲಿಯೇ ಈ ರಸ್ತೆಯು ವೀರರಾಜಪೇಟೆಯ ಸಬ್‌ಡಿವಿಜನ್‌ಗೆ ವರ್ಗಾಯಿಸಲ್ಪಟ್ಟಿರುವುದರಿಂದ ಇನ್ನು ಮೇಲಾದರೂ ಜಾಗತೆಯಾಗಿ ಕಲಸ ಪೂರೈಸಿ ಸೇತುವೆಗಳನ್ನು ಸಹಾ ರಿಪೇರಿಮಾಡಿಸಿ ಪ್ರಯಾಣಿಕರಿಗೆ ಸೌಲಭ್ಯವನ್ನು ಉಂಟುಮಾಡಿ ಕೊಡದೆಯಿದ್ದರೆ ತುಂಬಾ ಅನಾನುಕೂಲ.

ಕರಡಗ್ರಾಮದಲ್ಲಿ ಕಳೆದ ತಾರೀಕು 1 ರಲ್ಲಿ ಕೊಡವ ಸಭೆಯ ಮೀಟಿಂಗ್ ನಡೆಯಿತು. ವಿರಾಜಪೇಟೆಯ ಮೀಟಿಂಗಿನಲ್ಲಿ ಹಾಜರಿದ್ದ, ಮೆ|| ಕೆ. ಕುಟ್ಟಯ್ಯನವರೂ, ಅಪ್ಪಯ್ಯನವರು ಅ. ಮಂದಣ್ಣನವರೂ, ಚಂಗಪ್ಪನವರೂ, ಕ. ಚಂಗಪ್ಪನವರೂ (ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್) ಮ ಮಂದಣ್ಣನವರೂ, ಸ. ಕಾಳಪ್ಪನವರೂ (ಸುಬೇದಾರರು) ಇನ್ನು ಕೆಲವು ಕೊಡಗು ಉದ್ಯೋಗಸ್ಥರೂ ಹಾಜರಿದ್ದರು. ರೈತರು **ಸುಮಾರು ಐದುನೂರು ಜನರವರೆಗೆ ಇದ್ದರು. ಮೀಟಿಂಗಿ**ನಲ್ಲಿ ಚರ್ಚೆಯಾಗಿ ಇಂಥಾ ಸಭೆಯು ಅವಶ್ಯವಿಲ್ಲವೆಂದು ತೀರ್ಮಾನವಾಯಿತು. ಒಟ್ಟು ಜನರ ಪೈಕಿ ಸುಮಾರು 15 ಜನರು ಮಾತ್ರ ಮೆಂಬರರಾಗುತ್ತೇವೆ ಎಂದು ಹೆಸರು ಕೊಟ್ಟರು.

ನಾಪೋಕ್ಲು—ಸಪ್ಟಂಬರು ತಾ|| 8 ರಲ್ಲು ಮರಂದೋಡ ಗ್ರಾಮದವರು ಬೇಟೆಯಾಡುವಾಗ ಗೌಡುಗಳ ಮುಕ್ಕಾಟಿರ ಸೋಮಪ್ಪನು ಕಾಡುಕುರಿಗೆ ಹೊಡೆದ ಗುಂಡಿನ ರವೆಯೊಂದು ಅದೇ ಮನೆ ಕೃಷ್ಣಪ್ಪನ ಕಿಬ್ಬೊಟ್ಟೆಗೆ ಆಕಸ್ಮಿತವಾಗಿ ತಗಲಿದ್ದುದ್ದನ್ನು ಮೇಲ್ಕಂಡ ಗ್ರಾಮಕ್ಕೆ ಬೀಟಿಗೆ ಹೋಗಿದ್ದ ಪೋಲೀಸ್ ಕಾನ್ಸ್ಟೇಬಲನು ತಿಳಿದು ರಿಪೋರ್ಟು ಮಾಡಿದನು. ಸಬ್ ಇನ್ಸ್‌ಪೆಕ್ಟರಿಗೂ 3 ನೇ ಗ್ರೇಡು ಮೇಜಿಸ್ಟ್ರೇಟರಿಗೂ ವ ಹತ್ತಾದ ಗಲಾಟೆ, ಜಡ್ಯ್ಮಾಟ ಬೇಗೆ, ಬೇಟೆಗಾರರಿಗೆಲ್ಲಾ ನೂರನೆದಿನ ಏಕಾದಶಿ ಮತ್ತು ಶಿವರಾತ್ರಿ ಇದರಮೇಲೆ ಸಬ್ ಅಸಿಸ್ಟಾಂಟು ಸರ್ಜನರ ಸಾಮಾನು ತಯಾರಿಸುವ ಆತುರ ಬೇರೆ. ಈ ಮಧ್ಯೆ ಫಿರ್ಯಾಧಿ ಅಪರಾಧಿಯರ ಪುರಾರು ಇಲ್ಲದಿದ್ದರೂ ರಂಗಸ್ಥಳಕ್ಕೆ ದೂಡಿ ತಂದರು. ಆಜಮಾಯಿಸುವಾಗ ಆತನ ಪುಣ್ಯವಶಾತ್ ಕಿಬ್ಬೊಟ್ಟೆಯ ಚರ್ಮಕ್ಕೆ ಸಹ ಚೆನ್ನಾಗಿ ತಗಲದ್ದರಿಂದ ಓಡ್ಯಾಟದವರಿಗೆ ಬೆವರು ಕಿತ್ತದೊಂದೇ ಪ್ರಯೋಜನವಾಯಿತು.

ಹಿಂದೂದೇಶ.

ಅಸಹಕಾರತ್ವದ ನೀತಿಯನ್ನು ಅನುಸರಿಸಿ ಬಂಗಾಳದಲ್ಲಿ ಹದಿನಾರ ವಯಸ್ಸಿಗಿಂತ ಕಡಿಮೆ ಇರುವ 7,000 ವಿದ್ಯಾರ್ಥಿಗಳು ಶಾಲೆಯನ್ನು ಬಿಟ್ಟಿರುತ್ತಾರೆ.

ಮೆ|| ಸಿ ಆರ್ ರೆಡ್ಡಿಯವರು ಮೊನ್ನೆ ತಾನೆ ತಿರುಚಿನಾಪಳ್ಳಿಯಲ್ಲಿ ಬ್ರಾಹ್ಮಣೇತರರ ಕಾನ್‌ಫರೆನ್ಸಿನಲ್ಲಿ ಅಸಹಕಾರತ್ವವು ಒಳ್ಳೆಯದಲ್ಲವೆಂಬದಾಗಿ ಅಭಿಪ್ರಾಯ ಪಟ್ಟಿರುತ್ತಾರೆ.

ಮಲೆಯಾಳದಲ್ಲಿನ ದಂಗೆಯ ಮತ್ತು ಗಲಾಟೆಯ ವಿಷಯ ಚರ್ಚಿಸಲು ಅಲ್ಲಿನ ಸಿ. ಮೆ ಥಾಮಸ್‌ರವರು, ಮದ್ರಾಸಿಗೆಬಂದು ಗವರ್ನರ್‌ರವರ ಎಗ್ಸೆಕ್ಯೂಟಿವ್ (Executive) ಮೆಂಬರುಗಳೊಡನೆ, ಆಲೋಚನ ಮಾಡುತ್ತಿರುವರು.

ಹಿಂದೂದೇಶದಲ್ಲೆಲ್ಲಾ, ಒಂದೇತರದ ಅಳತೆಯು, ಮತ್ತು ತೂಕದ ಸಾಧನಗಳಿರುವಂತೆ ಏರ್ಪಡಿಸಬೇಕೆಂಬ ತೀರ್ಮಾನವು ಕೌನ್‌ಸಿಲ್ ಆಫ್ ಸ್ಟೇಟಿಗೆ ಬಂತು. ಆದರೆ ಈ ಏರ್ಪಾಡನ್ನು ಕ್ರಮೇಣ ಮಾಡಬಹುದೆಂದು ಮಂಜೂರಾಯಿತು.

ಮದ್ರಾಸಿನಲ್ಲಿ ಗಿರಣಿಕೂಲಿಯವರ ಗಲಾಟೆಯು ಇನ್ನೂ ನಿಂತಿರುವುದಿಲ್ಲ. ಆದಿದ್ರಾವಿಡರು (ಪಂಚಮರು) ಕೆಲವುಮಟ್ಟಿಗೆ ಕ್ರೂರಕೃತ್ಯಗಳನ್ನು ನಡಿಸಲಿಕ್ಕೆ ಶುರುಮಾಡಿರುತ್ತಾರೆ. ಕೆಲಸಗಾರರ ಗಲಾಟೆಯು ಹಿಂದೂದೇಶದಲ್ಲೆಲ್ಲಾ ಜೋರಾಗಿದೆ.

ಮೌಲಾನಾ ಮಹಮ್ಮದ್ ಆಲಿ, ಶೌಕತ್ ಆಲಿ ಮೊದಲಾದ ಏಳುಜನರನ್ನು ರಾಜದ್ರೋಹದ ಅಪ್ಪಿತಕ್ಕಾಗಿ ಸೆರೆ ಹಿಡಿದುದು ಸರಿಯಷ್ಟೆ. ಕರಾಚಿಯ ಸಿಟಿ ಮೇಜಿಸ್ಟ್ರೇಟರು ಈ ಏಳುಜನರ ಮೇಲೆ ತಪ್ಪಿತಸ್ಥರು ಎಂದು ಚಾರ್ಜುಮಾಡಿ, ಸೆಷನ್ನಿಗೆ ಗುರಿಮಾಡಿರುತ್ತಾರೆ.

ಶ್ರೀಮತಿ ಸರೋಜಿನೀದೇವೀ ನಾಯಿಡುಯವರಿಗೆ, ಪ್ರಿನ್ಸ್ ಆಫ್ ವೇಲ್ಸರವರು ಬರುವಾಗ ಕಲ್ಕತ್ತ ಯೂನಿವರ್ಸಿಟಿಯವರು (ಡಾಕ್ಟರ್) ಎಂಬ ಬಿರುದನ್ನು ದಯಪಾಲಿಸುತ್ತಾರೆ. ಡಾಕ್ಟರ್ ಅಂದರೆ, ಎಲ್ಲಾ ನೀತಿ ಕುಶಲ ವ್ಯಾಸವಿದ್ಯೆಯಲ್ಲಿ ಪಾರಂಗತರೆಂಬರ್ಥ.

ಮಹಾತ್ಮ ಗಾಂಧಿಯವರನ್ನು ಪುದುಕೋಟೆ ಸಂಸ್ಥಾನಕ್ಕೆ ಹೋಗಕೂಡದಾಗಿ ಅಲ್ಲಿಯ ರಾಜರು ಅಡ್ಡಿಮಾಡಿರುತ್ತಾರೆ. ಅವರಿಗೆ ಅಡ್ರಸ್ ಒಪ್ಪಿಸಬೇಕೆಂದು ಮುಂದಾಳುಗಳಾಗಿ ನಿಂತ ಕೆಲವರ ಮೇಲೆ, ಅಲ್ಲಿಯ ಸರಕಾರದವರು ತಕ್ಕ ಕ್ರಮ ಜರಗಿಸುವುದರಲ್ಲಿದ್ದಾರೆ. ಈ ಮುಖ್ಯಸ್ತರು, ಮುನಿಸಿಪಲ್ ಮತ್ತು ರೆಪ್ರೆಸೆಂಟೇಟಿವ್ ಸಭೆಯ ಮೆಂಬರುಗಳು.

ಕಳೆದ ತಾರೀಖು 18 ನೇ ದಿನ ಮಂಗಳೂರು ಕೋರ್ಟು ಗಿಡ್ಡಶಾಲೆಯಲ್ಲಿ ಪಂಚಮರ ಒಂದು ಮಹಾಸಭೆಯು ಡಿಸ್ಟ್ರಿಕ್ಟ್ ಬೋರ್ಡು ಮೆಂಬರಾದ, ಪಂಚಮರ ಅಂಗರ ಕೊಟ್ಟಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತೆಂದೂ ವಿದ್ಯಾಭಿವೃದ್ಧಿಯ, ಮತ್ತು ಹಿಂದುಳಿದವರನ್ನು ಎತ್ತುವುದರ ವಿಷಯ ಚರ್ಚಿಸಲ್ಪಟ್ಟಿತೆಂದೂ, ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಬರೆದಿರುತ್ತದೆ.

ವಾಯುವ್ಯ ಪ್ರಾಂತ್ಯಗಳಲ್ಲಿನ ರಾಜ್ಯಭಾರವು ಚೀಫ ಕಮೀಷನರವರ ಸ್ವಾಧೀನದಲ್ಲಿರುವುದು ಜನರಿಗೆ ತೃಪ್ತಿಯಿಲ್ಲದಕಾರಣ, ಸರ್ ಶಿವಸ್ವಾಮಿ ಐಯ್ಯರವರು, ಇಂಪೀರಿಯಲ್, ಲೆಜಿಸ್‌ಲೇಟಿವ್ ಸಭೆಯಲ್ಲಿ ಅಲ್ಲಿನ ಎಲ್ಲಾ ಅಪೀಲ್ ಮೊಕದ್ದಮೆಗಳನ್ನು ಪಂಜಾಬು ಹೈಕೋರ್ಟಿಗೆ ಕಳುಹಿಸಬೇಕೆಂದೂ, ಠರಾವು ತಂದದ್ದಕ್ಕೆ ಸರಕಾರಪಕ್ಷದವರು ವಿರೋಧಿಸಿದರು, ಬಹು ಮತದವರು ಮಂಜೂರ್ಮಾಡಿದರು.

ಪ್ರೆಸ್ ಆಕ್ಟನ್ನು ಬದಲುಮಾಡಬೇಕಾಗಿ ಇಂಡಿಯಾ ಸರಕಾರದವರ ಕಮಿಟಿಯು ರಿಪೋರ್ಟು ಮಾಡಿದ್ದನ್ನು, ವೈಸರಾಯಿಯವರು ಅಂಗೀಕರಿಸಿರುತ್ತಾರೆ. ವರ್ತಮಾನ ಪತ್ರಿಕೆಯ ಮೇಲೆಯೂ, ಪ್ರಿಂಟರ್ ಮತ್ತು ಪಬ್ಲಿಷರ್, ಎಡಿಟರವರ ಮೇಲೆ ಇದ್ದ ಕಠಿಣ ನಿಬಂಧನೆಗಳನ್ನು ರದ್ದುಮಾಡಿರುವುದರಿಂದ ಇನ್ನುಮುಂದೆ ಎಲ್ಲಾ ದೇಶಗಳಲ್ಲಿಯೂ, ಅನೇಕ ಭಾಷೆಗಳಲ್ಲಿ ಇಟ್ಟುಕೊಂಡು ದೇಶೋನ್ನತಿಗೆ ಬೇಕಾಗುವ ಪತ್ರಿಕೆ, ಪುಸ್ತಕಗಳನ್ನು ಪ್ರಕಟಿಸಲು ಅನುಕೂಲಗಳುಂಟಾಗುತ್ತವೆ.

ಮಲೆಯಾಳದಲ್ಲಿ ದಂಗೆಕೋರರ ಪುಂಡು ಇನ್ನೂ ಅಡಗಿರುವುದಿಲ್ಲ. ಪುಂಡುಗಾರರನ್ನು ಅಲ್ಲಲ್ಲಿ ಹಿಡಿದು ಕೈದಿ ಮಾಡುತ್ತಾ ಇದ್ದಾರೆ. ಜನರ ಮನಸ್ಸಿನಲ್ಲಿರುವ ಭೀತಿಯು ಇನ್ನು ಹೋಗಿರುವುದಿಲ್ಲ. ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿಯ ಮುಖ್ಯಸ್ತರು ಮದ್ರಾಸು ಗವರ್ನರವರ ಸಹಾಯವನ್ನು ಹೊಂದಿ, ದಂಗೆಗಳಾದ ಜಾಗದಲ್ಲಿ ದುರ್ಭಿಕ್ಷದಿಂದ ನರಳುತ್ತಿರುವ ಜನರಿಗೆ ಎಲ್ಲಾ ವಿಧದಲ್ಲಿ ಸಹಾಯ ಮಾಡಲು ಹೋಗಿರುವರು.

ಮೀಟಿಂಗ್ ಸಮಯದಲ್ಲಿ, ಇರಾದೆಗಳು ವ್ಯತ್ಯಾಸವಾದಲ್ಲಿ, ಮುಖ್ಯಸ್ತರು ಮಾತನ್ನಾಡುವಾಗ, ಕೋಲಾಹಲ ಮಾಡಿ ತುಚ್ಛೀಕರಿಸುವುದು ಮರ್ಯಾದೆಗೆ ತಕ್ಕದಲ್ಲವೆಂದೂ ವಿರೋಧವಾದ ಅಭಿಪ್ರಾಯವು ಒಂದರೆ ಮರ್ಯಾದೆಯಿಂದಲೂ, ಶಾಂತಗುಣದಿಂದಲೂ, ಜವಾಬುಕೊಟ್ಟು, ಗೆಲ್ಲಬೇಕೆಂದೂ, ಸರ್ ಸುರೇಂದ್ರನಾಥ ಬೇನರ್ಜೀಯವರು, ಅಸಹಕಾರಿಗಳು ಮೀಟಿಂಗಿನಲ್ಲಿ ಅವಮಾನಮಾಡಿದ್ದು ತಪ್ಪೆಂತಲೂ ಮಹಾತ್ಮ ಗಾಂಧಿಯವರು ಯಂಗ್ ಇಂಡಿಯಾದಲ್ಲಿ ಬರೆದಿರುತ್ತಾರೆ.

ವಿದೇಶ.

ತುರ್ಕಿಯವರಿಗೂ ಗ್ರೀಕರಿಗೂ ಆದ ಯುದ್ಧದಲ್ಲಿ, ಗ್ರೀಕರು ಸೋತುಹೋಗಿದ್ದಾರೆ. ಎರಡು ಪಂಗಡದವರಿಗೂ ನಷ್ಟವು ಬಹಳವಾಗಿದೆಯಂತೆ.

ಪ್ಯಾರಿಸ್ ಪಟ್ಟಣದಲ್ಲಿ ಆಕಸ್ಮಿತ ಬೆಂಕಿಯಿಂದ ಕೆಲವು ಅಂಗಡಿಗಳು ಸುಟ್ಟುಹೋಗಿ ಲಕ್ಷಾಂತರ ರೂಪಾಯಿ ಬೆಲೆಬಾಳುವ ರೇಷ್ಮೆ ಬಟ್ಟೆಗಳು ಸುಟ್ಟುಹೋದವು.

ಐರ್ಲೆಂಡ ದೇಶವು, ಸ್ವರಾಜ್ಯಕ್ಕೆ ಸ್ವತಂತ್ರಕ್ಕೆ ಹೋರಾಡುತ್ತಿರುವದು ಸರಿಯಷ್ಟೆ. ಈ ವಿಷಯ ಚರ್ಚೆಗಾಗಿ ಪುನಃ ಈ ಅಕ್ಟೋಬರ್ 11 ರಲ್ಲಿ ಲಂಡನ್ ಪಟ್ಟಣದಲ್ಲಿ ಇಟ್ಟಿದೆ.

ಕೊಪ್ಪಿಪೇಟೆ.

ಕಳೆದ ಸಪ್ಟಂಬರ್ ತಾ|| 7 ರಲ್ಲಿ ಈ ಊರಿನ ವೀರಶೈವ ಮಂಡಲಿಯ ಮಹಾಜನರು ಶ್ರೀ ಬಸವೇಶ್ವರ ದೇವಾಲಯದಲ್ಲಿ ಸಭೆ ಕೂಡಿ ಸಾಹುಕಾರ್ ಮ|| ರಾ|| ಅರೆ ದೊಡ್ಡ ಕರಿಬಸಪ್ಪ ಸೆಟ್ಟರವರ ಅಧ್ಯಕ್ಷತೆಯಲ್ಲಿ ಮತಸಂಬಂಧವಾದ ಮತ್ತು ಕೊಡಗಿನ ಜನಾಂಗಗಳಲ್ಲಿ ವಿದ್ಯೆಯಲ್ಲಿ ಬಹಳ ಹಿಂದಾಳುಗಳಾಗಿರುವ ವೀರಶೈವ ಜನಗಳ ವಿದ್ಯಾಪ್ರಸಾರದ ವಿಷಯವಾಗಿಯೂ ಮ|| ರಾ|| ಕಲ್ಲಳ್ಳಿ ಸಿದ್ದಬಸಪ್ಪಶೆಟ್ಟರು ಸೂಚಿಸಿದ್ದರಮೇರೆ ಸಭೆಯಲ್ಲಿ ಅನೇಕ ಚರ್ಚೆಗಳು ನಡದು ಈ ಕೆಳಗಿನ ತೀರ್ಮಾನಗಳು ನಡೆದವು.

1. ಮೈಸೂರು ಮತ್ತು ಧಾರವಾಡ ಪ್ರಾಂತ್ಯಗಳಲ್ಲಿ ವಿದ್ಯಾಪ್ರಸಾರಕ್ಕಾಗಿ ವೀರಶೈವ ಮಂಡಲಿಯವರು ಮಾಡಿಕೊಂಡಿರುವ ಫಂಡು ವಗೈರೆಗಳಂತೆ ನಮ್ಮ ಕೊಡಗಿನಲ್ಲಿಯೂ ಒಂದು ಫಂಡನ್ನು ಏರ್ಪಡಿಸುವುದು.

2. ಸೋಮವಾರಪೇಟೆ, ಮಡಿಕೇರಿ, ವೀರರಾಜಪೇಟೆ, ಹೆಬ್ಬಾಲೆ ಫ್ರೇಜರ್‌ಪೇಟೆ ಮೊದಲಾದ ಇತರ ಎಲ್ಲಾ ಸ್ಥಳಗಳಲ್ಲಿರುವ ವೀರಶೈವ ಜನಗಳು ಅಲ್ಲಲ್ಲಿ ಸಭೆ ಸೇರಿ ಮೇಲ್ಕಂಡ ಫಂಡಿಗೆ ಧನಸಹಾಯ ಮಾಡಿ ಫಂಡನ್ನು ವೃದ್ಧಿಗೊಳಿಸಬೇಕಾಗಿ ಈ ಪತ್ರಿಕೆಯ ಮೂಲಕ ಕೇಳಿಕೊಳ್ಳಲಾಗಿದೆ.

3. ವಿದ್ಯಾಭಿವೃದ್ಧಿಗಾಗಿ ನಾವು ಮಾಡತಕ್ಕ ಸಹಾಯಗಳು ಬಹಳ ಶ್ರೇಯಸ್ಕರವಾದವುಗಳೆಂದೂ ಮತ್ತು ತಮ್ಮ ತಮ್ಮ ಪುಣ್ಯಸಂಪಾದನೆಗೆ ಒಂದು ಸುಲಭವಾದ ದಾರಿಯೆಂದೂ ಇತರ ಅನೇಕ ವಿಷಯಗಳೊಡನೆ ಮ|| ರಾ|| ಬೆಳ್ಳದ ಸೋಮಪ್ಪನವರು ಒಂದು ಸ್ವಾರಸ್ಯವಾದ ಉಪನ್ಯಾಸ ಮಾಡಿದಲ್ಲದೆ ಈ ದಿವಸ ಶುಭದಿನವಾದುದರಿಂದ ಫಂಡಿಗೆ ಧನಸಹಾಯಮಾಡಬೇಕೆಂದು ಚಂದಾಪಟ್ಟಿಯನ್ನು ಸಭೆಯ ಮುಂದೆ ಇಟ್ಟರು. ಇದಕ್ಕೆ ಮ|| ರಾ|| ಕಲ್ಲಳ್ಳಿ ಸಿದ್ದಬಸಪ್ಪ, ಮ|| ರಾ|| ಉದ್ದೂರು ವೀರಭದ್ರಪ್ಪನವರು ಮತ್ತು ಮ|| ರಾ|| ಅರೆ ಸಣ್ಣ ಕರಿಬಸಪ್ಪನವರು ಅನುಮೋದಿಸುವಾಗ್ಯೆ ಸರ್ವರೂ ತಮ್ಮ ಒಪ್ಪಿಗೆಯನ್ನು ಕರತಾಳದ ಮೂಲಕ ಸೂಚಿಸಿದರು. ಅಧ್ಯಕ್ಷರು ಮೇಲ್ಕಂಡ ಫಂಡಿಗೆ ಒಂದುನೂರು ರೂಪಾಯಿಗಳನ್ನೂ, ಮ|| ರಾ|| ಕಲ್ಲಳ್ಳಿ ಸಿದ್ದಬಸಪ್ಪನವರು ಮ|| ರಾ|| ಅರೆ ಸಣ್ಣ ಕರಿಬಸಪ್ಪನವರು ಮ|| ರಾ|| ಉದ್ದೂರು ವೀರಭದ್ರಪ್ಪನವರು ಸಹ ನೂರುನೂರು ರೂಪಾಯಿಗಳನ್ನು ಕೊಡುವುದಾಗಿ ವಾಗ್ದಾನಮಾಡಿ, ಚಂದಾಪಟ್ಟಿಗೆ ಸೈನ್ ಮಾಡಿದರು. ಇದರಂತೆಯೇ ಅಲ್ಲಿ ನೆರೆದಿದ್ದ ಸಭಿಕರು ತಮ್ಮ ತಮ್ಮ ಶಕ್ತ್ಯಾನುಸಾರವಾದ ಚಂದಾ ಮೊಬಲಗನ್ನು ಹಾಕಿದರು. ಈಗ ಒಟ್ಟು ಚಂದಾ ಮೊಬಲಗು ಸುಮಾರು ಒಂದುಸಾವಿರ ರೂಪಾಯಿಯಾಗಿದೆ ಎಂಬುದು ಬಹಳ ಸಂತೋಷಕರವೆ.

ಫಂಡಿನ ಕಾರ್ಯಕ್ರಮಗಳು ಚೆನ್ನಾಗಿ ಏರ್ಪಟ್ಟಮೇಲೆ ತಾವು ಇನ್ನೂ ಹೆಚ್ಚಿಗೆ ಧನಸಹಾಯ ಮಾಡುವುದಾಗಿ ಮ|| ರಾ|| ಕಲ್ಲಳ್ಳಿ ಸಿದ್ದಬಸಪ್ಪನವರು ವಾಗ್ದಾನಮಾಡಿರುವರು. ಇದರಂತೆಯೇ ಕೊಡಗಿನ ವೀರಶೈವ ಜನಾಂಗದವರು ಈ ಫಂಡನ್ನು ವೃದ್ಧಿಗೊಳಿಸಿ ನಮ್ಮ ಜನಾಂಗದ ಏಳಿಗೆಯನ್ನು ಕೋರುವರಾಗಿ ನಾನು ಪೂರ್ಣವಾಗಿ ನಂಬಿದ್ದೇನೆ.

ಕೆ. ಎಸ್ ಕರಿಬಸಪ್ಪ.

ಕೊಡಗು ಉಪಾಧ್ಯಾಯರುಗಳ ಕೋ—ಆಪರೇಟಿವ್ ಸೊಸೈಟಿಯ 1920 ನೇ ಇಸ್ವಿ ಜೂನ 30 ಕ್ಕೆ ಅಂತ್ಯವಾಗತಕ್ಕ ವರದಿಯ ವಿಮರ್ಶೆ

"ಈ ಪೋಲ್ಕಂಡ ಸೊಸೈಟಿಯು ಸ್ಥಾಪಿತವಾಗಿ ವರುಷಗಳಾದುವು. ಅದರ ಇದು ರಿಜಿಸ್ಟ್ರರದ್ದು 1920 ನೇ ಇಸವಿ ಜನವರಿ ತಿಂಗಳಲ್ಲಿ ಈ ಸೊಸೈಟಿಯನ್ನು ಸ್ಥಾಪಿಸಲು ... ಸಹಾಯಕರಾದ ... ಅಭಿವಂದಿಸುತ್ತೇವೆ. ಆದರೆ ಅವರು ಬೇಗನೆ ವರ್ಗವಾಗಿ ಹೋದದ್ದು ವ್ಯಸನಕರ. ಈಗಿನ ಅಸಿಸ್ಟಂಟ್ ಇನ್ಸ್ಪೆಕ್ಟರವರು ಸೊಸೈಟಿಯ ಅಭಿವೃದ್ಧಿ ವಿಷಯದಲ್ಲಿ ಹೆಚ್ಚಿನ ಆಸಕ್ತಿ ವಹಿಸುತ್ತಾರೆಂದು ಭಾವಿಸುತ್ತೇವೆ. ಸೊಸೈಟಿಯ ಉದ್ದೇಶಗಳು ರಿಪೋರ್ಟಿನಲ್ಲಿರುವಂತೆ ಈ ಕೆಳಗಿನವುಗಳಾಗಿವೆ"

"ಮಿತವ್ಯಯ, ಪರಸ್ಪರ ಸಹಾಯ, ಕೂಟ (ಅಸೋಸಿಯೇಷನ್) ಆತ್ಮಾವಲಂಬನ (ಸೆಲ್ಫ್ ಹೆಲ್ಪ್) ಮೊದಲಾದ ... ಮುಂತಾದುವುಗಳನ್ನು ಉಪಾಧ್ಯಾಯರುಗಳಲ್ಲಿ ಹುಟ್ಟಿಸುವುದು. ಇಂಥ ಸೊಸೈಟಿಗಳಿರುವುದರಿಂದ ಮನ್ನಪುರುಷರಾದ ವ್ಯಾಪಾರಿಯು ಹೆಚ್ಚು ಲಾಭವನ್ನು ಸಂಪಾದಿಸದಂತಾಗುವುದು. ಕೊಡಗಿನ ಶಾಲೆಗಳಲ್ಲಿ ತಯಾರಾಗತಕ್ಕ ... ಸಾಮಾನುಗಳನ್ನು ಸೊಸೈಟಿ ಮಾರಬೇಕೆಂಬುದು ಇನ್ನೊಂದು ಉದ್ದೇಶ. ಆದರೆ ಈ ಉದ್ದೇಶವು ಸದ್ಯಕ್ಕೆ ಸಾಧ್ಯವಾಗುವಂತೆ ತೋರುವದಿಲ್ಲ"

ಸದ್ಯಕ್ಕೆ 128 ಮೆಂಬರುಗಳಿದ್ದಾರೆ. ಪ್ರತಿ ಒಂದು ಷೇರಿನ ಬೆಲೆ ೮ ರೂಪಾಯಿ, ಮತ್ತು ಎಡ್ಮಿಷನ್ ಫೀ ... ದಾನ ಮೆಂಬರುಗಳ ಸಂಖ್ಯೆಯು ವೃದ್ಧಿಹೊಂದಿದಂತಾಗ ಕಂಡುಬರುವದಿಲ್ಲ. ವಿದ್ಯಾ ಇಲಾಖೆಯ ... ಸಹಾಯದಿಂದ ಸೊಸೈಟಿಯು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದುತ್ತದೆಂದು ಭಾವಿಸುತ್ತೇವೆ. ಸೊಸೈಟಿಯನ್ನು ಉದ್ಧಾರಮಾಡುವದು ಉಪಾಧ್ಯಾಯರ ಮುಖ್ಯ ... ಕರ್ತವ್ಯವಾಗಿದೆ.

"ವರ್ಷದ ಆದಿಯಲ್ಲಿ ಕೈಲಿದ್ದ ... ನಂತರ ವಸೂಲಾದ್ದು 55 ರೂಪಾಯಿ ... ಒಟ್ಟು 128 ರೂಪಾಯಿ. ವ್ಯಾಪಾರಕ್ಕಾಗಿ ... ಸಾಲ ತೆಗೆದುಕೊಳ್ಳುತ್ತಿದ್ದೆವು. ವ್ಯಾಪಾರದಲ್ಲಿ ... ರೂ 14 ಆಣೆ 4 ಕಾಸು ಲಾಭಪ್ರಾಪ್ತಿಯಾಯಿತು. ಆದರೆ ಈ ಹಣವೆಲ್ಲಾ ರಿಸರ್ವ್ ಫಂಡಿಗೆ ಸೇರಿಸಲ್ಪಟ್ಟಿದ್ದರಿಂದ ಮೆಂಬರುಗಳಿಗೆ ಯಾವ ಬೋನಸ್ ಉಳಿಯಲಿಲ್ಲ. ರಿಸರ್ವ್ ಫಂಡಿನಲ್ಲಿ ಈಗ ಇರತಕ್ಕ ಹಣ 360 ರೂ 12 ಆಣೆ ... ಎಂದು ರಿಪೋರ್ಟಿನಲ್ಲಿ ವಿದಿತವಾಗಿದೆ.

ಮೆ|| ಕೆ ಎನ್ ಸುಬ್ರಾಯರವರು ... ಸೊಸೈಟಿಯನ್ನು ಸ್ಥಾಪಿಸಲು ಸಹಾಯಮಾಡಿರುವುದನ್ನು ಮತ್ತು ಲೆಕ್ಕಪತ್ರಿಕೆಗಳ ವಿಷಯದಲ್ಲಿ ಸೂಚನೆಗಳನ್ನು ಕೊಟ್ಟಿರುವುದನ್ನು ರಿಪೋರ್ಟು ಸೂಚಿಸುತ್ತದೆ. ಇವರು ಮಾಡಿರುವ ಸಹಾಯಕ್ಕೆ ಸೊಸೈಟಿಯು ಕೃತಜ್ಞತೆಯನ್ನು ವಹಿಸಿದೆ.

ಈ ಸೊಸೈಟಿಯು ಹಿಂದೂಸ್ಥಾನದಲ್ಲಿ ಒಂದನೆಯದಾಗಿದೆ. ಇಂಥಾ ಸೊಸೈಟಿಯು ಎಲ್ಲೆಲ್ಲಿಯೂ ಇಲ್ಲವಾದ ಕಾರಣ ಇದನ್ನು ಬದ್ರವಾಗಿ ಸ್ಥಾಪಿಸಲು ಉಪಾಧ್ಯಾಯರುಗಳೆಲ್ಲರೂ ಸಹಾಯಮಾಡುತ್ತಾರಾಗಿ ಕೋರುತ್ತೇವೆ.

ಕೊಡಗು ಸಭಾ.

ಅಯ್ಯಾ,

ಕೊಡಗು ಸಭಾ ಎಂಬ ಒಂದು ಕೊಡಗು ಜನರ ಸಂಘವು ಮಡಿಕೇರಿಯಲ್ಲಿ ಸ್ಥಾಪಿಸಲ್ಪಟ್ಟು ಅದನ್ನು ಅಭಿವೃದ್ಧಿಗೆ ತರುವುದಕ್ಕಾಗಿ ಕೊಡಗಿನ ಸರ್ವಭಾಗದಿಂದಲೂ ಕೊಡಗರನ್ನು ಆ ಸಂಘ ಅಥವಾ ಸಭಾಕ್ಕೆ ಸೇರಿಸಬೇಕೆಂಬ ಮಹತ್ತಾದ ಪ್ರಯತ್ನವನ್ನು ಕೊಡಗಿನ ... ಮಾಡುವುದರಲ್ಲಿ ಉದ್ಯುಕ್ತರಾಗಿರುವರು. ಪ್ರತಿಯೊಂದು ಮತಸ್ಥರಿಗೆ ಅಥವಾ ಸಮಾಜಕ್ಕೆ ಒಂದು ಸಂಘವು ಇರಬೇಕೆಂಬುದು ಸ್ವಾಭಾವಿಕವಾಗಿದೆ. ಹಾಗೆಯೇ ಕೊಡಗು ಸಭಾವನ್ನು ಏರ್ಪಡಿಸಿದ್ದು ನ್ಯಾಯವು. ಇಂಡಿಯಾದೇಶದಲ್ಲಿ ಅನೇಕ ಸಂಘಗಳಿವೆ (ನಾನ್ ಬ್ರಾಹ್ಮಿನ) ... ಸಂಘ ಎಂಬುದು ಮದ್ರಾಸಿನಲ್ಲಿದೆ ... ದು ... ಮದ್ರಾಸಿನಲ್ಲೇ ರೆಡ್ಡಿ ಎಂಬವರಿಗೆ ಅವರ ಸ್ವಂತ ಸಂಘವಿದೆ. ಈ ಸಂಘಗಳ ಮುಖ್ಯೋದ್ದೇಶವು ಧ್ಯೇಯವಾಗಿ ಸರ್ವರಿಗೂ ತಿಳಿದುವುದು. ಅದನ್ನು ಗೋಪ್ಯವಾಗಿ ಯಾರೂ ಇಟ್ಟುಕೊಳ್ಳಲಿಲ್ಲ. ಈ ಸಾವಿರಾರು ಸಂಘಗಳಲ್ಲಿ ಇನ್ನೊಂದು ವಿಷಯವೇನಂದರೆ ಸರಕಾರದ ಉದ್ಯೋಗಸ್ಥರುಗಳು ಅವುಗಳಲ್ಲಿ ಏನೂ ಕೈಹಾಕುವುದಿಲ್ಲ. ಮದ್ರಾಸಿನಲ್ಲಿ ಸೋಷಿಯಲ್ ಸರ್ವೀಸ್ ಲೀಗ್ (ಸಾಮಾಜಿಕ ಸೇವಾಸಂಘ) ಇದೆ. ಅದರಲ್ಲಿ ಸರಕಾರ ಉದ್ಯೋಗಸ್ಥರುಗಳು, ಮಿಸೆಸ ಬೆಸಂಟ್, ಶ್ರೀನಿವಾಸಯ್ಯಂಗಾರ್, ರಾಮಸ್ವಾಮಿ ಅಯ್ಯರು ಇವರೇ ಮೊದಲಾದ ಸರಕಾರ ಉದ್ಯೋಗಸ್ಥರಲ್ಲದವರು ಮುಖ್ಯ ಮೆಂಬರುಗಳಾಗಿ ದ್ವಾರ ಪಂಚಮ ಜನರನ್ನು ಅವರ ಹೀನಸ್ಥಿತಿಯಿಂದ ಒಳ್ಳೇ ಮಾರ್ಗಕ್ಕೆ ತರುವುದೇ ಅದರ ಉದ್ದೇಶ. ಈಗ ಇಂಡಿಯಾದೇಶದಲ್ಲಿನ ಸಾಮಾಜಿಕ ಸಂಘಗಳು ವರ್ಷವರ್ಷವೂ ಹೀನಸ್ಥಿತಿಯನ್ನು ಹೊಂದುತ್ತ ... ಅನುಭವಿಸುವುದರಲ್ಲಿಯೂ ... ಹೊಂದಿದ ಮಾತ್ರದಲ್ಲಿ ... ಗಳು ... ನುಂಗುತ್ತಿದ್ದಂದು ... ನಂಬಿದ್ದಾರೆ.

ಬ್ರಿಟಿಷ್ ಚಕ್ರವರ್ತಿಗಳ ... ಒಂದು ಸ್ವರಾಜ್ಯವೇ ... ಆಧಿಪತ್ಯಗಳ ... ಎಂದು ... ಸ್ವರಾಜ್ಯಕ್ಕೆ ಸಮಾಧಾನ ಚಿತ್ತದಿಂದಲೂ ... ದಿಂದಲೂ ... ಮನಸ್ಸಿನಿಂದಲೂ, ಗವರ್ನಮೆಂಟಿನೊಂದಿಗೆ ... ರಾಜದ್ರೋಹಿಗಳಂದಾಗಿ ದಂಗೆ ... 'ನಾನ್ ಕೋ ಆಪರೇಷನ್' ಎಂದರೆ ಈಗಿನ ಸರಕಾರವನ್ನು ... ಅದನ್ನು ... ಕೊಡಗಿನಲ್ಲಿ ಸದ್ಯಕ್ಕೆ ಯಾರೂ ಇಲ್ಲ ... ಯಾರೂ ತರುವುದಿಲ್ಲ.

ಆದರ ಕೊಡಗುದೇಶದ ಸ್ಥಿತಿಯೇ ಬೇರೆ. ಇಲ್ಲಿನ ಜನರ ಸ್ವಾಭಾವಿಕ ಗುಣಗಳೇ ಬೇರೆ. ... ಅಭಿಪ್ರಾಯಗಳು ... ಸತ್ಯ ... ಕಾಲಿಗೆ ... ಜೋರಾಗಿ ನಡೆಯಬಾರದು. ... ಒಂದಿಗ ತನ್ನ ಮನಸ್ಸಿಗೆ ... ಇಷ್ಟೇ ... ಕೊಡಗಿನ ಮುಖ್ಯಸ್ಥರು ... ಯಾವ ... ತಿಳಿಸಿ ... ಸರಕಾರಿ ಉದ್ಯೋಗಸ್ಥರು ... ಉದ್ಯೋಗಸ್ಥರೇ ... ಕೊಡಗು ಸಭಾ ಮಾಡಲಿಕ್ಕೆ ಸ್ಥಾಪಿತವಾಗಿ ... ಕೊಡಗು ಉದ್ಯೋಗಸ್ಥರಿಲ್ಲ ... ಉದ್ಯೋಗಸ್ಥರೇ ... ಈ ಸಮಯ ... ಕೊಡಗು ಜನರ ಅಭಿಪ್ರಾಯವನ್ನು ತಿಳಿಯಲು ಮಾಡುವ ಮೀಟಿಂಗುಗಳನ್ನು ನಡೆಸುವ ... ಸೂಚನೆಗಳನ್ನು ... ಮುಖಾಂತರದಿಂದ ಮಾಡುವವರು ಉದ್ಯೋಗಸ್ಥರೇ ... ಕಮಿಟಿ ಮೆಂಬರುಗಳಲ್ಲಿ ಉದ್ಯೋಗಸ್ಥರ ಸಂಖ್ಯೆಯೇ ಹೆಚ್ಚು ... ಗುಪ್ತ ... ರಿಗೆ ... ಸುವಸಿಗೆ ...

ಪುರಾಣಿಕ

ಕೊಡಗಿನ ಕಾಫಿತೋಟ!!

"ಕಾಫಿಯೇ! ನೀನು ... "

"... ಕಾಫಿತೋಟ ... ಇವು ... ಅದರ ಜನರಿಗೆ ದಕ್ಷಿಣಕನ್ನಡ ... ಭಾಗದ ... ದಿಂದ ... ಕೂಲಿಗಾರರು ... ತಮ್ಮ ... ಅನೇಕ ... ತಮ್ಮ ... ಸುಲಿಸುತ್ತಾರೆ ...

... ಮತ್ತು ... ದಿಂದ ... ಕೂಲಿಗಳ ... ಇಲ್ಲಿ ಒಂದು ... ದುರ್ಗಂಧವು ... ಕಾಫಿ ... ಒಂದು ಮಾಲೆಯಲ್ಲಿ ... ಇನ್ನೊಂದು ... ಮಣ್ಣಿನ ... ಇನ್ನೊಂದು ... ಬಿಂಕ, ಬೂಟುಗಳು, ... ಧೂಳು, ಧೂಮಮಯ, ದುರ್ಗಂಧಮಯ.

ಒಂದು ಮಾಲೆಯಲ್ಲಿ ಒಬ್ಬ ಕಾವಲೋಲೆ ಜ್ವರದಿಂದ ಅಥವಾ ... ಹಾಸಿಗೆಯಿಂದ ನರಳುತ್ತಾ ಒಂದು ... ಕೊಂಡು, ಒಂದು ... ಹಾಸಿಗೆಯ ... ಅವನ ಮೈಯೆಲ್ಲಾ ಬೂದಿ, ಅವನು ... ಅಥವಾ ಸಾಯುವವರೆಗೆ ... ಕೆಲಸ ... ಗಳಿಂದ ... ಒಂದು ... "ಏನಯ್ಯಾ ಅಂದು" ಎಂದು ... "... ಬೇಡ" ಎಂದು ... "ಎಲ್ಲಿ ... ಗೆ ..." ಎಂದು ... ಅವನಿಗೆ ... ಆಸ್ಪತ್ರೆಗೆ ಹೋಗಲಿಕ್ಕೆ ಹೇಳು' ... ರೋಗಿಯು ... ಕಪ್ಪಾಚ್ಚೆಯ ... ಉತ್ತರ ಸಿಕ್ಕಿ ... ರೋಗಿಯನ್ನು ... ಆಸ್ಪತ್ರೆಯಲ್ಲಿ ... ಕಟ್ಟಾಜ್ಞೆಯನ್ನಿತ್ತು ... ಹೋಗುವನು. ಅದರ ... ರಾತ್ರಿ ರೋಗಿಯು ಸತ್ತುಹೋದನು.

ನಾಥ! ... ರೋಗಿಯು ... ಜೀತಗಾರರು ... ಸಾಯಂಕಾಲ ... ಒಂದು ... ಬೆಳಗ್ಗೆ ... 7 ಘಂಟೆಗೆ ಮೊದಲೇ ... ಶಬ್ದವಾಗುತ್ತೆ. ಕೂಡಲೆ ಕೆಲಸಕ್ಕೆ ... ಮದ್ಯಾಹ್ನ ... ಸಾಯಂಕಾಲ ... ಕೆಲಸ ... ಒಂದು ... ರೂಪಾಯಿ ... ವಿಧಿಸುತ್ತಾರೆ.

ಹೀಗಾಗಿ ಗಟ್ಟ ಹತ್ತಿ ... ಗಟ್ಟ ಇಳಿಯುವಾಗ ... ಪ್ರತಿಯೊಬ್ಬನ ... ಬಜೆ ... ತಿನ್ನಲಿಕ್ಕೆ ... ಒಂದೊಂದು ಮಣ್ಣಿನ ... ಒಂದೊಂದು ಸಟ್ಟುಗವು ಮಾತ್ರ ಇರುತ್ತವೆ ಕೆಲವರ ಹತ್ತರ ಇರುವುದು.

ತುಳು ಮತ್ತು ಮಲಯಾಳ ... ನಿಮ್ಮ ದೇಶಸ್ಥರಾದ ... ಕಾಫಿತೋಟಗಳೆಂಬ ನರಕದಲ್ಲಿ ... ಪ್ಲಾಂಟರು ... ಹುಟ್ಟಿಸಿ ... ! ... ! ... ಇಲ್ಲವೇ? ಇವರ ಈ ದುರವಸ್ಥೆಯನ್ನು ನೋಡಿ ... ಮರುಗುವುದು? ... ಇವರನ್ನು ... ಬಡಕೂಲಿಗಳಿಗೆ ... ಕೊಟ್ಟು ಅವರಿಗೆ ... ಅವಸ್ಥೆಗಳನ್ನು ... ಕೊಡಬಾರದೇ?

(ಮುಂದೆ ಸಾಗುವುದು) ವೈಶ

ಕೈವರನ ದಣ್ಣಯಾತ್ರೆ.

(ಭಾಮಿನಿ ಷಟ್ಪದಿ)

ಎ ದಶ್ವೈವರ ಪೂರ್ವ ದಿನದೊಳು |
ಭಾರ ... ಸಾಹಸ |
... ಕೊಡಗರು ... ದಣ್ಣಹತ್ತಿದರೊ '
ಧೀರ ಕೊಡಗರು ದೇವ ... |
... ಬೇಳೆ ... ,
ಧೀರ ... ಧಾಳಿಗೆಂದೆಸುಕೇ ||೧||
ಅಂದು ಕೊಡಗರು ಒಂದು ಕೂಡುತೆ |
... ಸಿಲ್ಲು ... ,
... ,
... |
... ಅರಿಯೆ ... ||೨||
... ಕೊಡಗರು |
ಗಟ್ಟಿ ... |
... ಕೋವಿ ... ,
... ಅರಿಯನು |
... ಮತ್ತೆ ... |
... ಶಕ್ತಿಯ ಮಟ್ಟು ಕೊರಿದರೂ ||೩||
... ಕೊಡಗರು |
... ಅರಿಯು ಬಿಡಿದರು |
... ಗೆಲುವು ...
... ಧರೆಯ ... |
... ,
... ದೇಶವಹ್ನಿ ...

ಟಿ ಯಂ ಕಾಳಪ್ಪ

ತಾ॥ 30 ರ ವೀರರಾಜೇಂದ್ರಪೇಟೆ ಮೀಟಿಂಗ್‌ಗಳು

ಕೊಡಗು ಲಿಮಿಟೆಡ್ ಕಂಪೆನಿಯ ಸ್ಟೇಟ್ಯೂಟರೀ ಮೀಟಿಂಗ್ ರೀಡಿಂಗ ರೂಮಿನ ಹಿಂದಿನ ಜಾಗದಲ್ಲಿ ನಡಿಸಲ್ಪಟ್ಟಿತು ಷೇರುದಾರರ ಸಂಖ್ಯೆಯು 350 ಕ್ಕಿಂತ ಹೆಚ್ಚಾಗಿಯೂ, ಚಂದಾದಾರರ ಸಂಖ್ಯೆಯು 700 ಕ್ಕಿಂತ ಹೆಚ್ಚಾಗಿಯೂ ನೆರೆದಿದ್ದರು

ಕಂಪೆನಿಯ ಛೇರ್‌ಮೇನ್‌ರಾದ ರಾಯಬಹದ್ದೂರು ಕೊಡಂದೆರ ಕುಟ್ಟಯ್ಯನವರು, ಡೈರೆಕ್ಟರುಗಳ ಪೈಕಿ ಮೆ॥ ಕೋದಾಂಡ್ರ ಅಪ್ಪಯ್ಯನವರು, ಡಿ ವಿ ನಾಗರತ್ನಶೆಟ್ಟಿಯವರು, ಕೋಡಿ ಮನೆಯಂಡ್ರ ಸುಬ್ಬಯ್ಯನವರೂ ಅಪ್ಪಾರಂಡ್ರ ಚಂಗಪ್ಪನವರೂ, ಸಿ ಎನ್ ವೆಂಕಪ್ಪಯ್ಯನವರೂ ಪಾರ್‍ವಂಗಡ ಕುಶಾಲಪ್ಪನವರೂ, ನಡಿಕೇರಿಯಂಡ್ರ ಚಿಣ್ಣಪ್ಪನವರೂ ಹಾಜರಿದ್ದರು

ಅಧ್ಯಕ್ಷರು ಕಂಪೆನಿಯ ಸ್ಟೇಟ್ಯೂಟರೀ ರಿಪೋರ್ಟನ್ನು ಕಲಂವಾರು ವಿವರಿಸಿ ಹೇಳಿದ್ದಲ್ಲದೆ ಕಂಪೆನಿಯನ್ನು ಸ್ಥಾಪಿಸಲಿಕ್ಕೆ ಆದ ತೊಂದರೆಯನ್ನು, ಖರ್ಚನ್ನು ತಪಸೀಲಾಗಿ ವಿವರಿಸಿದರು. ಕಂಪೆನಿಯಲ್ಲಿ ಉಳಿಕೆ ಇರುವ ಷೇರನ್ನು ಒಡನೆ ಜನರು ತೆಗೆದುಕೊಳ್ಳಬೇಕಾಗಿಯೂ, ಪತ್ರಿಕೆಯನ್ನು ಎಲ್ಲರೂ ತರಿಸಿಕೊಳ್ಳಬೇಕಾಗಿಯೂ, ವಾರ್ಷಿಕ ಚಂದಾ ಹಣವನ್ನು ಒಡನೆ ಪಾವತಿಮಾಡಿ ಕಂಪೆನಿ ... ನಿವ್ವು ಸಾಂಗವಾಗಿ ನಡಿಯುವಂತೆ ಎಲ್ಲರೂ ... ಕೊಡಬೇಕಾಗಿಯೂ ಇದುವರೆಗೆ ... ಚಂದಾ ಹಣವು ಮಾತ್ರ ಪಾವತಿಯಾಗಿರುವುದಾಗಿಯೂ ಇನ್ನೂ 1600 ಜನರು ಬಾಕಿದಾರರಾಗಿರುವುದಾಗಿಯೂ ಹೀಗೆ ಬಾಕಿದಾರರಾಗಿರುವುದು ವ್ಯಸನಕರವಾದುದಾಗಿಯೂ, ಚಿಕ್ಕಮಗುವಿನೋಪಾದಿಯಲ್ಲಿರುವ ಪತ್ರಿಕೆಯನ್ನು ಎಲ್ಲರೂ ಪ್ರೋತ್ಸಾಹಿಸಬೇಕಾಗಿಯೂ ಕುಂದುಕೊರತೆಗಳಿದ್ದರೆ ಅಂತಃಕರಣದಿಂದ ಮನ್ನಿಸಬೇಕಾಗಿಯೂ, ವಗೈರೆಯಾಗಿ, ಅನೇಕ ಒಳ್ಳೆಯ ಬುದ್ಧಿವಂತಿಕೆಯಿಂದ ಕೂಡಿದ ಭಾಷಣವನ್ನು ಮಾಡಿದರು

ಎಲ್ಲರೂ ಸದರಿ ರಿಪೋರ್ಟನ್ನು ಮಂಜೂರ್ಮಾಡಿದರು ಡೈರೆಕ್ಟರುಗಳಿಗೂ ಷೇರುದಾರರು ತಮ್ಮ ವಂದನೆಗಳನ್ನು ಅವರು ಕಂಪೆನಿಗಾಗಿ ತೆಗೆದುಕೊಂಡ ಶ್ರಮಕ್ಕಾಗಿ ಸಮರ್ಪಿಸಿದರು ಎಲ್ಲರೂ ಅದಕ್ಕೆ ಜಯಘೋಷವನ್ನು ಮಾಡಿದರು

ಮೆ॥ ಅಪ್ಪಾರಂಡ್ರ ಚಂಗಪ್ಪನವರು, ಸಕ್ರೆಟೆರಿಯ ಕೆಲಸವನ್ನು ವಿವರಿಸಬೇಕೆಂದು ಕೇಳಿಕೊಂಡದ್ದಕ್ಕೆ ಛೇರ್‌ಮೇನರು ಕಂಪೆನಿಯ ಸಕ್ರೆಟೆರಿಯ ಕೆಲಸವು ಎಲ್ಲಾ ಷೇರುದಾರರಿಂದ ಷೇರು ಹಣವನ್ನು ವಸೂಲ್ಮಾಡುವುದು ಹೊಸ ಷೇರುದಾರರನ್ನು ಸೇರಿಸುವುದು ಚಂದಾದಾರರನ್ನು ಸೇರಿಸುವುದು ಅವರಿಂದ ಮನೆಮನೆಗೆ, ಊರೂರಿಗೆ ತಿರುಗಿ ಹಣವನ್ನು ವಸೂಲ್ಮಾಡುವುದು ವಗೈರೆಯಾಗಿ ಅನೇಕ ಕೆಲಸ ಇದೆಯೆಂದು ಹೇಳಿದರು

ಪುನಃ ಮೆ॥ ಚಂಗಪ್ಪನವರು ಪತ್ರಿಕೆಯ ಸಂಪಾದಕರ ಮೇಲೆ, ಎಡಿಟೋರಿಯಲ್ ಬೋರ್ಡು ಮಾಡಬೇಕಾಗಿಯೂ, ಎಡಿಟರ್ ಇಷ್ಟ ಬಂದ ರೀತಿ ಬರೆಯುತ್ತಾರಾಗಿಯೂ, ಮದ್ಯನಿಷೇಧದ ವಿಷಯವೇ ಹೆಚ್ಚಾಗಿ ಪತ್ರಿಕೆಯಲ್ಲಿ ಬರೆಯುವುದರಿಂದ ಕೊಡಗುದೇಶದವರೆಲ್ಲರಿಗೂ, ಕುಡುಕರೆಂಬ ಭಾವನೆಯು ಉಂಟಾಗುವುದೆಂದೂ ಹೇಳಿದರು ಅಧ್ಯಕ್ಷರು ಎಡಿಟರವರ ಕೆಲಸವು ಮೊದಲಿನ ಎಡಿಟೋರಿಯಲ್ ಮತ್ತು ಇತರ ವಿಶೇಷವಾದ ಸಂಗತಿಗಳನ್ನು ಬರಯುವುದೂ ದೇಶದ ಅಭಿವೃದ್ಧಿ ಚಳವಳಿ ಮೊದಲಾದ ಅನೇಕ ವಿಷಯಗಳಲ್ಲಿ ಅವರ ಇರಾದೆಯನ್ನು ಕೊಡುವುದಾಗಿಯೂ ಪತ್ರಿಕೆದಾರರು ಪಡುವ ಅಭಿಪ್ರಾಯಕ್ಕೆ ಅವರು ಜವಾಬುದಾರರಲ್ಲವಾಗಿಯೂ, ಅಸಂಗತವಾದ ಸಂಗತಿಯನ್ನು ಎಡಿಟರು ಎಂದೂ ಬರೆಯುವುದಿಲ್ಲವಾಗಿಯೂ ಅದಕ್ಕಲ್ಲಾ ಪತ್ರಿಕೆದಾರರೇ ಜವಾಬುದಾರರೆಂದೂ ಇಂಥಾ ಅಲ್ಪಸಂಗತಿಗಳನ್ನು ಯಾರೂ ಗಮನಕ್ಕೆ ತಾರಬಾರದಾಗಿಯೂ ಪತ್ರಿಕೆಯ ಅಭಿವೃದ್ಧಿಯಲ್ಲಿ ಎಲ್ಲರೂ ಭಾಗಿಗಳಾಗಬೇಕಾಗಿಯೂ ಹೇಳಿದರು ಮೆ॥ ಪುಲಿಯಂಡ್ರ ತಿಮ್ಮಯ್ಯನವರು, ಮೆ॥ ಅಪ್ಪಾರಂಡ್ರ ಚಂಗಪ್ಪನವರು, ಬೇರೆ ಪತ್ರಿಕೆಗಳಲ್ಲಿ ಆಗುವ ಸಂಗತಿಗಳನ್ನು ನೋಡಿಲ್ಲವಾಗಿಯೂ, ಅನೇಕ ವರ್ತಮಾನ ಕಲಂಗಳಲ್ಲಿ ಎಡಿಟರವರಲ್ಲ ಕೆಳಗೆ ಅವರ ಅಭಿಪ್ರಾಯ ಬರೆದು ಎಡಿಟರ್ ಎಂಬದಾಗಿ ನೋಟ್ ಹಾಕುತ್ತಾರೆಂಬದಾಗಿಯು ದೇಶಕ್ಕೆ ಸಂಬಂಧಪಡುವ ಎಲ್ಲಾ ಒಳ್ಳೆಯ ಕೆಲಸಗಳಲ್ಲಿ ಎಡಿಟರವರು ಖಂಡಿತವಾಗಿಯೂ ಅವರ ಅಭಿಪ್ರಾಯ ಕೊಡಬೇಕೆಂದೂ, ಎಡಿಟರ್ ಮಾಡಿದ್ದು ಯಾವ ವಿಧದಲ್ಲಿಯೂ ಆಕ್ಷೇಪಣೆಯಿಲ್ಲವೆಂದೂ ಹೇಳಿದರು ಅದನ್ನು ಅನುಮೋದಿಸಿ, ಮೆ॥ ಕೇಳಪಂಡ್ರ ಅಚ್ಚಯ್ಯನವರು, ವರ್ತಮಾನಪತ್ರಿಕೆಯಲ್ಲಿ ಎಲ್ಲಾ ವಿಧದ ಹಿತವಿಹಿತ ಸಂಗತಿಗಳು ಬರಯಲ್ಪಡುವವೆಂದೂ, ಅಂಥಾದ್ದು ಒಳ್ಳೇದು ಕೆಟ್ಟದ್ದು, ನಿಜ ಸುಳ್ಳು ಎಂಬದನ್ನು ಓದುವವರು ತಿಳಕೊಳ್ಳಬೇಕಾಗಿಯೂ ಮೈಸೂರಿನ ಶ್ರೇಷ್ಠವಾದ ಪತ್ರಿಕೆಯಾದ ಸಾಧ್ವಿಯಲ್ಲಿ ಸಹ ಬಹಿರಂಗವಾಗಿ ಶಾಲಾ ಇಲಾಖೆಯ, ಇನ್‌ಸ್ಪೆಕ್ಟರ್ ಜನರಲ್, ಮೆ॥ ಸಿ ಆರ್ ರೆಡ್ಡಿಯವರನ್ನು, ಬೇರೆ ಪತ್ರಿಕೆಗಳು ಅನೇಕ ದೊಡ್ಡ ಮನುಷ್ಯರನ್ನು ಹೀಯಾಳಿಸುವುದು ಮೆ॥ ಚಂಗಪ್ಪನವರು ನೋಡಿದ್ದರೆ ಈ ಮಾತನ್ನು ಆಡುತ್ತಿರಲಿಲ್ಲವಾಗಿಯೂ, ಎಡಿಟರವರು ನೀತಿಗೆ ವಿರೋಧವಾಗಿ ಹೋಗಲಿಲ್ಲವಾಗಿಯೂ ಹೇಳಿದರು

ಕಂಪೆನಿಯ ರೂಲ್ಸ ಪ್ರಕಾರ ಹೊಸದಾಗಿ ಡೈರೆಕ್ಟರವರುಗಳ ಚುನಾವಣೆಯನ್ನು ಒಡನೇ ಮಾಡಬೇಕೆಂತಲೂ, ಷೇರುದಾರರ ಸಂಖ್ಯೆಯು ಹೆಚ್ಚಾಗಿ ದಕ್ಷಿಣ ಕೊಡಗಿನಲ್ಲಿರುವುದರಿಂದ ಈ ವರ್ಗ ಜನರಲ್‌ಮೀಟಿಂಗ್ ವಿರಾಜಪೇಟೆಯಲ್ಲೇ ಆಗಬೇಕೆಂತಲೂ ಮೀಟಿಂಗನ್ನು ಅಲ್ಲಿ ಚರ್ಚೆಯಾಗುವ ಎಲ್ಲಾ ಉದ್ದೇಶವನ್ನು ಪತ್ರಿಕೆಯಲ್ಲಿ ಎರಡುವಾರಕ್ಕೆ ಮುಂಚೆ ಪ್ರಕಟಿಸಬೇಕಾಗಿಯೂ ಮೀಟಿಂಗಿನ ತಾರೀಕನ್ನು ಡೈರೆಕ್ಟರವರುಗಳು ನಿಶ್ಚಯಿಸಬೇಕಾಗಿಯೂ ಮೆ॥ ಕೋದಂಡ್ರ ಉತ್ತಯ್ಯನವರು ಹೇಳಿದರು ಅದಕ್ಕೆ ಎಲ್ಲರೂ ಅನುಮೋದಿಸಿದರು

ಅಧ್ಯಕ್ಷರಿಗೆ ವಂದನೆಗಳನ್ನು ಸಮರ್ಪಿಸಿದನಂತರ ಮೀಟಿಂಗ ಬರಕಾಸ್ತುಮಾಡಲ್ಪಟ್ಟಿತು

ಜಮೀನ್ದಾರರ ಸಂಘದ ಕಮಿಟಿಮೀಟಿಂಗಿನ ಪ್ರೋಸೀಡಿಂಗ್ಸ್

(1) ಈ ವರ್ಷದ ಜನರಲ್ ಮೀಟಿಂಗ್ ವಾಡಿಕೆಯಂತೆ ನಾಲ್ಕುನಾಡು ಜಾರ್ಡೀಕೆಸನದ ವಿರಾಜಪೇಟೆಯಲ್ಲಿ ನಡಿಸಬೇಕಾಗಿ ತೀರ್ಮಾನವಾಯಿತು

(2) ವೈಸ ಪ್ರಿಸಿಡೆಂಟರಾಗಿದ್ದ ಮೆ॥ ಶ್ರೀಪತಿರಾಯರು ತನ್ನ ಪದವಿಗೆ ರಾಜಿನಾಮೆಯನ್ನು ಕೊಟ್ಟ ಪತ್ರವನ್ನು ಓದಲಾಯಿತು

(3) ಎಂಟುಜನ ಎಗ್ಸಿಕ್ಯೂಟಿವ್ (Executive) ಕಮಿಟಿಮೆಂಬರುಗಳು ರುಜುಮಾಡಿ, ಒಂದು ಸ್ಪೆಶಲ್ ಕಾನ್‌ಫರನ್ಸ ಕೆಲವು ಅಂಶಗಳ ವಿಷಯ ಮಾಡಿದ ಠರಾವುಗಳ ವಿಷಯವಾಗಿ ಚರ್ಚೆಮಾಡಲು ವಿರಾಜಪೇಟೆಯಲ್ಲಿ ಒಡನೇ ಮಾಡಬೇಕಾಗಿಯೂ ಮೀಟಿಂಗಿನ ತಾರೀಕನ್ನು ಎರಡುವಾರಕ್ಕೆ ಮುಂಚಿತವಾಗಿ ಎರಡುವಾರದ ಪತ್ರಿಕೆಗಳಲ್ಲಿಯೂ, ಪ್ರಕಟಿಸ ಮಾಡುವ ಮೀಟಿಂಗನ್ನು ವಿರಾಜಪೇಟೆಯಲ್ಲಿಯೇ ಮಾಡುವಂತೆ ತೀರ್ಮಾನವಾದನಂತರ ಮೀಟಿಂಗ್ ಬರಕಾಸ್ತು ಆಯಿತು

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ [ಎಡಿಟರ್]

ಅಯ್ಯಾ

ತಮ್ಮ ವಾರಪತ್ರಿಕೆಯಲು ಸತ್ತುಹೋದ ಜೂನಿಯರ್ ಪೊನ್ನಪ್ಪನವರು ಒಬ್ಬ ಬ್ರಾಹ್ಮಣ ಹುಡುಗನ ಪ್ರಾಣರಕ್ಷಣೆ ಮಾಡಿದುದಕ್ಕಾಗಿ ಪೊನ್ನಪ್ಪನವರಿಗೆ ಒಂದು ಮೆಡಲ್ ಕೊಡಬೇಕಾಗಿ ಎರ್ಪಡಿಸಿ ವಸೂಲ್ ಮಾಡಿದ ಹಣದ ಪ್ರಯೋಜನವೇನಾಯಿತೆಂದು ಕೇಳಿದ್ದಕ್ಕೆ ಷಹಾಲ್ ವರೆಗೂ ಹಣ ಇಟ್ಟುಕೊಂಡಿದರಾಗಿ ವಸೂಲ್‌ಮಾಡಲಿಕ್ಕೆ ಏರ್ಪಡಿಸಿದವರಾಗಿ ಜವಾಬುಕೊಡದ ವಿಷಯ ನೋಡಿದರೆ ಇನ್ನು ಮುಂದಕ್ಕೆ ಹೀಗೆ ಬರುವ ಪಟ್ಟಿಗಳನ್ನೆಲ್ಲಾ ಗಮನಿಸೋಣದೆ ಹಿಂದಕ್ಕೆ ಕಳುಹಿಸುವುದೇ ಉತ್ತಮವಾಗಿ ಕಾಣುತ್ತದೆ ರಾ॥ ರಾ॥ ಕೋದಂಡ್ರ ಅಪ್ಪಯ್ಯನವರು ಮುನ್‌ಸಿಪಾಲಿಟಿ ಮತ್ತು ದೇವಸ್ಥಾನಗಳ ಪ್ರಸಿಡೆಂಟರಾಗಿರುವಾಗ ಇವರ ಅನುಮತಿ ಮೇರೆ ಮೆ॥ ಕೆ ಸುಬ್ಬಯ್ಯರು ಈ ಹಣ ವಸೂಲಿಗೆ ತೊಂದರೆ ತೆಗೆದುಕೊಂಡದ್ದಾಗಿದೆ ಸುಮಾರು 25 ರೂಪಾಯಿ ಮೇಲೆಯೇ ವಸೂಲಾದ ನೆನಪು ನನಗಿದೆ ವಸೂಲ್ಮಾಡಿ ನಾಲ್ಕೈದು ವರ್ಷಗಳೂ ಆದವು ಇನ್ನಾದರೂ ನಾಲ್ಕೈದು ವರ್ಷಗಳ ಬಡ್ಡಿ ಸಹ ಸೇರಿಸಿ ಸದರಿ ಪೊನ್ನಪ್ಪನವರಿಗೆ ಒಂದು ಮೆಡಲ್ ಕೊಟ್ಟದ್ದೇಯಾದರೆ ಬಹಳ ಉಪಕಾರವಾಗುತ್ತದೆ ಹತ್ತುಜನರಿಂದ ವಸೂಲ್ಮಾಡಿದ ಹಣವನ್ನು ಹೀಗೆ ದುರ್ ಉಪಯೋಗಪಡಿಸಿಕೊಳ್ಳುವದು ಪೂರಾ ಅನ್ಯಾಯವಾಗಿದೆ ಇನ್ನಾದರೂ ಈ ಹಣವನು ವಿನಿಮಾಡಿದರೆ ಒಂದು ದೊಡ್ಡ ಉಪಕಾರವಾಗುತ್ತಿತ್ತು

ಒಬ್ಬ ಚಂದಾದಾರ

ಅಯ್ಯಾ

ಮಡಿಕೇರಿಯೆಂಬ ಹೆಸರಿಗೆ ಅನೇಕ ಅರ್ಥವನ್ನು ಕೆಲವು ಮಹನೀಯರು ಕಲ್ಪಿಸಿ ಪತ್ರಿಕೆಯಲ್ಲು ಪ್ರಕಟಿಸಿದ್ದು ನೋಡಿ ಬಹಳ ಆಶ್ಚರ್ಯಪಡುತ್ತೇನೆ ಮಡಿಕೇರಿ ಎಂಬದಕ್ಕೆ ನ್ಯಾಯವಾದ ಅರ್ಥವನ್ನು ಕೆಲವು ವರುಷಕ್ಕೆ ತಪ್ಪೂರ್ವ 80 ವರುಷದ ಒಬ್ಬ ಮುತ್ತಯ್ಯರು ಅವರು ಹೇಳಿದ್ದನ್ನು ಕೆಳಗೆ ಬರೆಯುವದನ್ನು ವಾಚಕಮಹಾಶಯರು ನೋಡಿ ತಿರಸ್ಕರಿಸಲಾರರೆಂದು ನಂಬುತ್ತೇನೆ ಪೂರ್ವ ಲಿಂಗರಾಜೇಂದ್ರ ಒಡೆಯರವರು ಅರಮನೆ ಕಟ್ಟಿಸಲು ಈಗ ಮೈಸೂರ್ಲ್ ಇರುವ ಸ್ಥಳವೇ ಪ್ರಧಾನವಾದ್ದೆಂದು ತಿಳಿದು ಬಂದು ಅನೇಕ ಕೆಲಸಗಳನ್ನು ಮಾಡಿಸಲಿಕ್ಕೆ ಶುರು ಮಾಡಿಸಿದರು ಆಗ್ಗೆ ಒಂದು ದಿನ ಅಪ್ಪರೊಡನೆ ನೋಡುವ ಉದ್ದೇಶ ರಾಜರ ಸವಾರಿ ಚಿತ್ತೈಸಿದಲ್ಲಿ ಕಟ್ಟಡದ ಸಮೀಪ ಬರುವಾಗ್ಗೆ ಒಂದು ಮೊಲವನ್ನು ರಾಜರ ನಾಯಿಯು ಓಡ್ಯಾಡಿಸುವಲ್ಲಿ ಆ ಮೊಲವು ಈಗ ಇರುವಕ್ಕೆ ಅರಮನೆ ಮೆಟ್ಟಿಹತ್ತಿ ಅಲ್ಲಿಂದ ನಾಯಿಯನ್ನು ಘುರಾಯಿಸಿ ಅಟ್ಟಿಕೊಂಡು ಬಂತು ಮೊಲವು ನಾಯಿಯನ್ನು ಓಡಿಸುವ ಆಶ್ಚರ್ಯವೇನೆಂದು ಅಷ್ಟಮಂತ್ರಿಗಳಲ್ಲು ಜೋತಿಷ್ಯರಲ್ಲು ವಿಚಾರಿಸಿದಲ್ಲಿ ಮೊಟ್ಟಸ್ಥಳವು ಮಹಾ ದೇವತಾ ಸಾನಿಧ್ಯವಿರುವದರಿಂದ ಪ್ರಜ್ವಲಿಸುವದರಿಂದ ಮೊಲಕ್ಕೆ ಗರ್ವ ಉಂಟಾಗಲು ಕಾರಣವಾಗಿರುತ್ತೆ ಆದುದರಿಂದ ಇಂಥಾ ಉಗ್ರಸ್ಥಾನದಲ್ಲೇ ಅರಮನೆ ಏಳಬೇಕೆಂದು ಏಕೋಭಾವದಿಂದ ಸರ್ವರು ಸಮ್ಮತಿಸಿ ಅರಮನೆ ಕಟ್ಟಿಸಿ ಮೊದಕೇರಿ ಎಂಬ ಹೆಸರು ಸ್ಥಾಪಿಸಿದ್ದಾಯಿತು ಈಚಿಗೆ ಅಪಭ್ರಂಶಯಿಂದ ಮಡಿಕೇರಿ ಆಯಿತೆಂದು ಸಹ ಹೇಳಿದರು. ಅಂಥಾ ಮಹಾಕ್ಷೇತ್ರ ಮಾತು ... ಸಂಖ್ಯೆಗೆ ಆಸ್ಪದವಾಗಿದೆ ಈಗಲೂ ಮೊಕರ ಎಂಬ ಹೆಸರು ರೂಢಿಗೆ ಬರುತ್ತಿರುವದು ಸರ್ವರು ತಿಳಿದಂತೆ ಇದೆ ಇದರ ... ಮಡಿಕೇರಿಯ ... ಆಶ್ಚರ್ಯವಲ್ಲ ... ಅನೇಕ ಕೇರಿ ಗ್ರಾಮಗಳಲ್ಲು ಇದ್ದ ಕೆಲವು ಪ್ರಥಿಕವಾದ ಈ ... ಮಡಕೇರಿ ಎಂದು ... ರವರ ನಾಮಧೇಯ ಕಲ್ಪಿಸಿದ್ದು ... ನಂಬಿದ್ದೇನೆ

ದಾರಿ ಪ್ರೋತ್ಸಾಹಕ

ಭಾಗಮಂಡ್ಲನಾಡು ಬೇಂಗೂರುಗ್ರಾಮ

ತಾರೀಖು 9 ರ ಪತ್ರಿಕೆಯಲ್ಲಿ ಜಮ್ಮದ ಭೂಮಿಯನ್ನು ವಗೈರೆಗೆ ಸಾಲ ನಿವೃತ್ತಿಗಾಗಿ ಗಿರ್ವಿ ಕೊಡಲಿಕ್ಕೆ ಮುಂಜೂರಾತಿ ... ರವರು ಕೊಡದೆಹೋದರೆ ಸಂಘಗಳಿಂದ ಬಡರೈತರಿಗೆ ಏನೂ ಪ್ರಯೋಜನವಿಲ್ಲವಾಗಿ ನಮೂದಿದೆ ಅದಕ್ಕೆ ಉತ್ತರ

ಈ ದೇಶಕ್ಕೆ ಪ್ರಾಚೀನದಲ್ಲಿ ರಾಜರ ಇರಲಿಲ್ಲ ರೀಪಬ್ಲಿಕ್ಕಾ ... ಆಯಾಯ ನಾಡಿನ ತಕ್ಕ ಮುಖ್ಯಸ್ಥರಿಂದಲೇ ಆಯಾಯ ನಾಡಿನ ... ಕತ ವಗೈರೆ ನಡಿಸಿಕೊಂಡು ಬಂದದ್ದಾಗಿದೆ

ಜಮ್ಮವೆಂದು ಹೇಳುವ ನಮ್ಮ ಜಮ್ಮದ ಭೂಮಿಯು ಜನ್ಮಭೂಮಿಯಾಗಿದೆ ಈಚೆಗೆ ನಮ್ಮ ರಾಜರಿಗೆ ಕಷ್ಟಬಂದ ಕಾಲದಲ್ಲಿ ... ಸಾಬೀತು ಮನಸ್ಸಿನಿಂದ ಸಹಾಯ ಮಾಡಿದ ಯಾದಗಾರಿಗೋಸ್ಕರ ಸರಕಾರದವರು ಪಸಂದುಪಟ್ಟು ನಮ್ಮ ಜಮ್ಮದ ಭೂಮಿ ... ಉಂಬಳಿ ಜಹಗೀರ್ ವಗೈರೆ ಬಿರುದಾವಳಿಗಳನ್ನು ದಯಪಾಲಿಸಿ ... ಈ ಜಮ್ಮದ ಇನಾಮತಿ ವಗೈರೆ ಪಿತ್ರಾರ್ಜಿತ ಸಂಪಾದನೆಯಾಗಿ ... ಹಿರಿಯವನ ಹೆಸರಿನಲ್ಲಿ ಜಮಾಬಂದಿ ನಡದುಬರುವಂತದಾಗಿದೆ

ನಮ್ಮಲ್ಲಿ ಪಾಲುವಂತಿಗೆ ಇಲ್ಲ ಜೀವನಾಂಶಕ್ಕೆ ಮಾತ್ರ ... ವಿನಿಯೋಗಿಸಿಕೊಂಡದ್ದಾಗಿದೆ ಪಟ್ಟೆ ಬದಲಾವಣೆ ಆಗತಕ್ಕದ್ದಲ್ಲ

ಇಂಥಾ ಜಮೀನ್‌ಗಳನ್ನು ಈ ಮೊದಲು ಅಂದರೆ ಮೂವತ್ತು ... ಮೂವತ್ತೈದು ವರುಷಗಳ ಕೆಳಗೆ ಹ್ಯಾಗೋ ಅವರವರ ಮನಸ್ಸಿನ ... ಪ್ರಕಾರ ನಾಟಿ ಸಾಹುಕಾರರು ವಗೈರೆ ಜನರಿಗೆ ಗಿರ್ವಿ ಭೋಗ್ಯಕ್ಕೆ ... ದ್ದರಿಂದ ಜನ ಜನ್ಮಸಿಂದ ಈ ದೇಶದ ಒಂದು ... ಭೂಮಿ ಸಾಗಿಸದರಕ್ಕೆ ದಾಕಲ್ಲಿ ಅಗಿ ವರಸ್ತಾ ... ಸೇರಿಗೆಲ್ಲ ... ವೇದ್ಯವಿರುವ ಸಂಗತಿಯಾಗಿದೆ ಈ ವಿ... ಜಾರಿ ಬಂದಿದ್ದ ಪಕ್ಷದಲ್ಲಿ ಈ ದೇಶದ ... ಜಮ್ಮಭೂಮಿ ಪರರುಗಳ ... ನಕ್ಕೆ ಹೋಗಿ ... ತ್ತಿರಲಿಲ್ಲ

ಈ ಕಾರಣಗಳ ಮೇಲೆ ಸಮಗ ... ವಂತಿಗೆ ಇಲ್ಲದೆ ... ನಕ್ಕಾಗಿ ಇರುವ ಭೂಮಿಯನ್ನು ... ಸಾಲಾ ನಿವಾರಣಗಾಗಿ ... ತುಪಡಿಸಲಿಕ್ಕೆ ಯಾವ ವಿಧದಲು ಸ್ವಂತ ಪರಕೊಡದು ನಮ್ಮ ... ವಿಚಾರ ಅಲ್ಲಿ ಪುಸ್ತಕಗಳನ್ನು ನೋಡು ... ಪ್ರಪಡಿಸಬೇಕೇಹೊರ್ತು ... ಪಡಿಸುವದು ವಿಹಿತವಲ್ಲ

ಕೆ ಸುಬ್ಬಯ್ಯ

[ಮೇಲೆ ಹೇಳುವದು ನ್ಯಾಯವಾಗಿದೆ ಆದರೆ ಜಮ್ಮಭೂಮಿಯನ್ನು ಟಿಕಾವು ಹಕ್ಕಿಗೆ ಗಿರ್ವಿಕೊಡುತ್ತಾ ಬರುವಾಗ ಸಾಲತೀರಿಸಲಿಕ್ಕೆ ಪರಸ್ಪರ ಸಹಾಯದ ಸಂಘದಿಂದ ಹೊಂದಿಕೊಳ್ಳುವ ಹಣಕ್ಕೆ ಯಾಕೆ ಗಿರ್ವಿಕೊಡಲು ಮುಂಜೂರಾತಿಕೊಡದೆಂಬದೇ ಪ್ರಶ್ನೆ ಒಂದು ಉದ್ದೇಶಕ್ಕೆ ಗಿರ್ವಿ ತೆಗೆದುಕೊಳ್ಳುವಾಗ ಇನ್ನೊಂದು ಉದ್ದೇಶಕ್ಕೆ ಯಾಕೆ ತೆಗೆದುಕೊಳ್ಳ ಕಾರದು ? ಜಮ್ಮದ ಭೂಮಿಯನ್ನು ಗಿರ್ವಿತೆಗೆದುಕೊಳ್ಳುವಾಗ ಕುಟುಂಬದ ಪಟ್ಟೆದಾರ ಮತ್ತು ಮುಖ್ಯ ಮೆಂಬರುಗಳ ಒಪ್ಪಿಗೆ ಇಂದಲೇ ಗಿರ್ವಿ ತೆಗೆದುಕೊಳ್ಳುವದಾಗಿದೆ

ಎಡಿಟರ್

ಒಂದು ಬಹಿರಂಗವಾದ ಪತ್ರ

ಕೊಡಗು ದೇಶದಲ್ಲಿ ಸರಕಾರದವರಿಂದ ಗಣನೆಗೆ ತರಲ್ಪಟ್ಟ ... ಕೀಯ ವಿಚಾರಣೆಯ ಸಂಘವು ಜಮೀನುದಾರರ ಸಂಘವೆಂದೇ ಆಗಿರುತ್ತೆ ಈ ಸಂಘದ ಪ್ರೆಸಿಡೆಂಟರು ಮತ್ತು ವೈಸ್‌ಪ್ರೆಸಿಡೆಂಟ್ ಮತ್ತು ಕಮಿಟಿ ಮೆಂಬರುಗಳು ದೇಶದ ಪ್ರತಿನಿಧಿಗಳೆಂದೂ ಜನರು ಮತ್ತು ಸರಕಾರವು ನಂಬುತ್ತಿದ್ದರೋ ವಾಸ್ತವ್ಯವಾಗಿದೆ ಆದರೆ ಅಂಥಾ ಮೆಂಬರುಗಳು ತಮಗೆ ಜನರ ಪ್ರತಿನಿಧಿತ್ವ ದೊರೆಕಾಕ್ಷಣವೇ ತಮ್ಮ ಸ್ವಂತ ಬುದ್ಧಿಯಿಂದಲೋ, ಯಾ ಸರಕಾರದವರಲ್ಲಿ ತಾವು ರೈತರ ಪ್ರತಿನಿಧಿಗಳೆಂದು ಹೇಳಿ ಅವರ ಒಳನುಗ್ಗಿ ರೈತರ ಇರಾದೆಗಳಿಗೆ ವಿರೋಧವಾದಿದ್ದೇ ಆದರೆ ಅವರು ಆಚರಿಸುವ ಕರ್ಮಕ್ಕೆ ತಕ್ಕ ಪ್ರತೀಕಾರ ಕೊಡುವುದೇನೋ ಸಹಜವಾಗಿದೆ

ನಮ್ಮ ಮನಸ್ಸಿನಲ್ಲಿ ಜಮೀನುಸಂಘದ ಮುಖ್ಯಪ್ರತಿನಿಧಿಗಳೆಂದೆನ್ನಿಸಿಕೊಂಡ ಪ್ರೆಸಿಡೆಂಟರು ಮತ್ತು ವೈಸ್‌ಪ್ರೆಸಿಡೆಂಟರುಗಳಾದ ಮೆ॥ ಕೆ ಕುಟ್ಟಯ್ಯನವರು ಕೆ ಅಪ್ಪಯ್ಯನವರು, ದೇಶದವರ ಇರಾದೆಯಂತೆ ನಡಿಯದೆ ತಮ್ಮ ಇಚ್ಛಾನುಸಾರ ನಡಿಯುತ್ತಾರೆಂದೂ ಸಂಪೂರ್ಣವಾಗಿ ತೋರುತ್ತೆ ಈ ಮಹನೀಯರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಕೊಟ್ಟು ನಮ್ಮ ಮನಸ್ಸಿನ ಸಂಶಯವನ್ನು ಹೋಗಲಾಡಿಸುವರಾಗಿ ನಂಬಿದ್ದೇವೆ ಈ ಮಹನೀಯರು ಹಾಗೆಯೇ ನಮಗೂ ನಮ್ಮ ದೇಶೋಭಿವೃದ್ಧಿಯ ವಿಷಯ ಅತಂ... ಇರುವದರಿಂದ ನಮ್ಮ ಸಂಶಯವನ್ನು ಮತ್ತು ನಮ್ಮ ಹಾಗೆಯೇ ಇರುವ ಎಲ್ಲಾ ದೇಶೀಯರ ಸಂಶಯವನ್ನು ಹೋಗಲಾಡಿಸುವ ಬಗ್ಗೆ, ಬರುವ ಪತ್ರಿಕೆಯಲ್ಲಿ ಇವರುಗಳ ಜವಾಬು ನಿರೀಕ್ಷಣೆಯಲ್ಲಿರುತ್ತೇವೆ

(1) ಕಳೆದ ಆಗಸ್ಟ್ ತಿಂಗಳ 16 ರಲ್ಲಿ ದೇಶೀಯರು ಮಾಡಿದ ಠರಾವಿನಂತೆ, ತಾರೀಖು 17 ರ ಕಮಿಶನರವರ ಮೀಟಿಂಗಿನಲ್ಲಿ ಈಗ ಕೊಡಲಪಡುವ ಸಭೆಯನ್ನು ಆಕ್ಷೇಪಿಸಲ್ಲಿ ಸಭೆಯನ್ನು ಅಂಗೀಕರಿಸುತ್ತೇವೆ ಎಂಬ ಭಾವನೆಯಿಂದ ಬೇರೆ ನೂರುಜನರು ವಿರೋಧಹೇಳಿದರೂ ಮೌನವನ್ನು ತಾಳಿದಲ್ಲದೆ ಯೌವನಸ್ಥರಿಗೆ ಇದು ಸಾಲದು ಎಂಬದಾಗಿ ಹೇಳಿದ್ದು ಏಕೆ ?

(2) ಕೊಡಗು ಸಭೆ ನಾಡಬೇಕೆಂದು ನೆಪಮಾತ್ರದಿಂದ ಒಂದು ಮೀಟಿಂಗನ್ನು ನಿವು ... ಮಡಿಕೇರಿ ... ತಾ॥ 3 ರಲ್ಲಿ ... ಕಳೆದ ... ರುತ ಉದ್ಯೋಗಸ್ಥರನ್ನೇ ಸೇರಿಕೊಂಡು ದೇಶದವರು ಅಂದರೆ ಮುಖ್ಯವಾಗಿ ಎಲ್ಲಾ ಜಮೀನುದಾರರು ವಿರಾಜಪೇಟೆ ಪೊನ್ನಂಪೇಟೆ ಸೋಮವಾರಪೇಟೆ, ಕೊಡ್ಲಿಪೇಟೆ ಮತ್ತು ಶನಿವಾರಸಂತೆಯಲ್ಲಿ ಮಾಡಿದ ವಿಷಯ ಮತ್ತು ಮುಸ್ಲಿಮರಿಗೆ ಸೇರಿಸುವುದರ ವಿಷಯ ಮಾಡಿದ ಠರಾವುಗಳನ್ನು ತಿಳಿದ್ದಾಗ್ಯೂ, ಅವುಗಳಿಗೆ ವಿರೋಧವಾಗಿ, ಪ್ರೆಸಿಡೆಂಟರಾದ ಮೆ॥ ಕುಟ್ಟಯ್ಯನವರ ಹೆಸರಿನಲ್ಲಿ ಮೆ॥ ಆನರೇಬಲ್ ಕಾಪವೇರಿಯವರಿಗೆ ತಂತಿ ವರ್ತಮಾನ ಕಳುಹಿಸುವ ಅಗತ್ಯವೇನಿತ್ತು ?

(3) ನೀವು ಏರ್ಪಡಿಸಿದ ತಾ॥ 8 ರ ಮೀಟಿಂಗಿನಲ್ಲಿ, ಉದ್ಯೋಗಸ್ಥರಲ್ಲದವರು ಎಷ್ಟು ಜನವಿದ್ದರು

(4) ನೀವು ಈ ಮೀಟಿಂಗನ್ನು ಯಾವ ಕಾರಣದಿಂದ ಮತ್ತು ಯಾವ ಜವಾಬುದಾರಿಕೆಯಿಂದ ಅಂದರೆ, ತಮ್ಮ ಮನಸ್ಸಾಕ್ಷಿಗೆ ವಿರೋಧವಿಲ್ಲದೆ ಮಾಡಿರುತ್ತೀರೋ

(5) ಕೊಡಗು ಸಭೆಯು ಮಾಡಬೇಕಾದರೆ ಆ ಸಭೆಯಲ್ಲಿ ಕೊಡಗಿನ ಸಾಮಾಜಿಕ ಪದ್ಧತಿ ವಗೈರೆಗಳನ್ನು ಚರ್ಚಿಸುವುದಲ್ಲದೆ, ಆರಕ್ಕಾಗಿ ತಂತಿವರ್ತಮಾನ ಕಳುಹಿಸಲು ಠರಾವುಮಾಡಲು ಅಗತ್ಯವೇನಿತ್ತು

ಕಳೆದ ತಿಂಗಳಲ್ಲಿ ಆದ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗಿನ ಸೆಷ್ ಹಾಕಬೇಕೆಂದು ಠರಾವು ತಂದವರ್ಯಾರು? ಮೀಟಿಂಗಿನ ಒಂದು ಘಂಟೆ ಇದಕ್ಕೆ ವಿರೋಧವಾಗಿ ಮೆ॥ ಅಪ್ಪಯ್ಯನವರು ಮಾತಾಡಲಿಲ್ಲವೇ.

ಕಳೆದ ತಿಂಗಳ ತಾರೀಖು 16 ರಲ್ಲಿ ದೇಶೀಯರ ಮೀಟಿಂಗಿನಲ್ಲಿ ಕಾರ್ಯದ ವಿಷಯ ತೀರ್ಮಾನ ಆದಕೂಡಲೇ, ಡಿಸ್ಟ್ರಿಕ್ಟ್ ಕಸ್ಸಿನ ವಿಷಯ ಚರ್ಚಿಸಬೇಕೆಂದು ಹೇಳುವಾಗ ಉದ್ಯೋಗಸ್ಥರಿಗೆ ಅವಶ್ಯವಿಲ್ಲವೆಂದೂ ಅದು ಉದ್ಯೋಗಸ್ಥರಲ್ಲದವರ ಎದ್ದು ಹೋದುದು ಉಂಟೋ?

ರಾಜಕೀಯ ವಿಷಯದಲ್ಲಿ ಉದ್ಯೋಗಸ್ಥರು ಮುಂದರಿಸ ಮುಂದಂಸಬಹುದಾದರೆ, ಅವರಿಗೆ ಸಂಕಟವನ್ನುಂಟು, ಜಮ್ಮ, ಸೆಟ್ಲ್ ಮೆಂಟ್, ರೆವಿನ್ಯೂ ರೂಲ್ಸ್ ವಗೈರೆಗಳಿಗೆ ಮಾಡುವುದಕ್ಕೆ ಮುಂದಕ್ಕೆ ಬಾರದೆ, ಸರಕಾರದವರ ನೀತಿ ದಿಸು, ಕೊಡಗನ್ನು ಮದ್ರಾಸಿಗೆ ಸೇರಿಸುವುದು, ಇಲ್ಲವೇ ಮಾರ್ಚಿನ್ನು ಹೊಂದುವುದು, ಈ ಸಂಗತಿಗಳಿಗೆ ಮಾತ್ರ ಬಂದು ಪಾಲಿತನ್ನಾಡಲಿಕ್ಕೆ ಕಾರಣವೇನು?

) ನಾವು ಉದ್ಯೋಗಸ್ಥರಾಗಿ ದಕ್ಷರಾಗಿರುವುದರಿಂದಲೂ, ಉದ್ಯೋಗಸ್ಥನೇ ಆಗಲಿ ಸರಕಾರದವರ ನೀತಿಯಂತೆ ನಡೆಯುವ ಕರ್ತವ್ಯವೆಂದು, ನಿಮಗೆ ತಿಳಿಯದೋ

0) ದೈಶರ ಕ್ಷೇಮಚಿಂತಕರಲ್ಲಿ ಬ್ಯೂರೋಕ್ರಸಿಯು, ತಪ್ಪು ತಿಳಿಯುವುದು ಸಹಜವಲ್ಲವೇ ಆಗಿದ್ದರೂ ಸಹ ಎರಡು ವಂಗ ಮುಚ್ಚಿಸಲು, ಶ್ರೀಯುತ ಗೋಪಾಲಕೃಷ್ಣ ಗೋಖಲೆಯವ ಅಸಾಧ್ಯವಾಗಿರಲಿಲ್ಲವೇ?

1) 1918 ನೇ ಇಸ್ವಿಯಲ್ಲಿ ಆದ ಕಾನ್ಫರೆನ್ಸಿನಲ್ಲಿ ನೀವು ಕೊಡಗನ್ನು ಮದ್ರಾಸು ಅಧಿಪತ್ಯಕ್ಕೆ ಸೇರಿಸಬೇಕೆಂದು ಹೇಳ? ಶ್ರಾಕ್ ಸಾಹೇಬರ ಕಾಗದವನ್ನು ಓದಿದುಂಟೋ ಮೂ ದಿಂದೀಚೆಗೆ ತ್ರಿವರ್ಷದ ಜಮಾ ಸಂಘದ ಜನರಲ್ ಮೀಟಿಂ ಕೊಡಗಿಗೆ ಚೀಫ್ ಮೊದ್ದಪ್ರಾಂಕ್ಕೆ ದೊರೆತ ರೀತಿ ಪೂರ್ ದು ಕೊಡಬೇಕೆಂದು ಇಲ್ಲವಾದರೆ ಮದ್ರಾಸು ಅಧಿಪತ್ಯದ ಜಿಲ್ಲೆಯನ್ನಾಗಿ ಮಾಡಬೇಕೆಂದು ತೀರ್ಮಾನಿಸಿದುಂಟೋ? ಮೀಟಿಂಗಿನಲ್ಲಿ ಕೊಡಗನ್ನು ಗವರ್ನರ್ ಪ್ರಾವಿನ್ಸ್ ಮಾಡಿ, ಮಾರ್ಚಿನ್ನು ಹೊಂದಬೇಕೆಂದು ಠರಾವು ಮಾಡಿದ್ದುಂಟೋ? ತಾರೀಖು 8 ರ ಮೀಟಿಂಗಿನಲ್ಲಿ ಈಗ ಕೊಡಬಹುದಾದ ಮಾ ಗಳೇ ಸಾಕೆಂದು ನೀವು ಹೇಳಿದ್ದುಂಟೋ?

12) ಬ್ರಿಟಿಷ್ (I. C. S) ಸಿವಿಲಿಯನ್ ಉದ್ಯೋಗಸ್ಥರು ವಿಚಾರದಿಂದೂ, ಬ್ರಿಟಿಷ್ ಚಕ್ರಾಧಿಪತ್ಯದ ನೀತಿಯು ಎಲ್ಲ ಮುಂದಕ್ಕೆ ತಂದು ಒಳ್ಳೆಯ ಪುರವಾಸಿಗಳಾಗಿ ಮಾಡುವುದೆಂದು ತಿಳಿಯದೇ? ಅಂಥಾದ್ದರಲ್ಲಿ ಎರಡು ಸರಕಾರವನ್ನು ದೈತರನ್ನು ಲಿಕ್ಕೆ ಪ್ರಯತ್ನಪಡುತ್ತಿರುವ ನಿಮ್ಮನ್ನು ನೋಡಿ ಅವರು ನಗಾ ವುದೋ?

ಮೇಲಿನ ಪ್ರಶ್ನೆಗಳಿಗೆ ಉತ್ತರ ದೊರೆತನಂತರ ಇನ್ನು ಕೆಲವು ಪ್ರಶ್ನೆ ಹಾಕಬೇಕೆಂದಿದ್ದೇವೆ

ಮುಣಿಯಚಂದ್ರ, ತಿಮ್ಮಯ್ಯ, ಚಳಂಗಡ್ರ ಮುತ್ತಣ್ಣ,

ಮತ್ತು ಆರುಜನ ಜಮಾನುದಾರರ ಸಂಘದ

ಕಮಿಟಿ ಮೆಂಬರುಗಳು

ಪತ್ರಕರ್ತರೇ,

ನೂರಕ್ಕೆ ತೊಂಭತ್ತೊಂಭತ್ತು ಜನ ಕೊಡಗರು ಮಡಿಕೇರಿಯಲ್ಲದ ಗಿನ ಇತರ ಭಾಗಗಳಲ್ಲಿ ರೈತರಾಗಿಯೂ ಪ್ಲಾಂಟರುಗಳಾಗಿಯೂ ದು ಮಡಿಕೇರಿ ಎಂಬ ಮುಖ್ಯಪಟ್ಟಣದಲ್ಲಿ ವಾಸವಿರುವ ಅಷ್ಟು ಕೊಡಗರ ಪಂಗಡವು ಹೆಚ್ಚಾಗಿ ಉದ್ಯೋಗಸ್ಥರೇ ಆಗಿರುವರು. ಬಹಳ ವರ್ಷಗಳಿಂದಲೇ ವಾಸವಿರುವದರಿಂದ ಮಡಿಕೇರಿಯವ ಕರೆಯಲಾಯ್ತು, ಇನ್ನು ಮೊದಲೂ ಅವರು ಅಲ್ಲಿಯೇ ಕಾಯಂ ಪುವವರಾದ್ದರಿಂದ ಈಗ ಕೇಳಬರುವ ಕೊಡಗರ ಸಭೆ ಎಂಬ ವಿನೋದ ಸಭೆಯು ಏರ್ಪಾಡಾದದ್ದು ಬಹಳ ಸಂತೋಷವೇ ಕೊಡಗರ ಉದ್ಯೋಗಸ್ಥರೇ ಸೇರಿ ಮಾಡಿಕೊಂಡ ಸಭೆಗೆ ಸಂತೋಷವೇ—

ಕೊಡಗಿನ ಇತರ ಭಾಗಗಳಲ್ಲಿನ ಜನರು ನಾಡು ಊರು ಕೇರಿ ನ ಮುಂದು ಮನೆ, ದೇವಸ್ಥಾನ ಮೊದಲಾದ ಸ್ಥಳಗಳಲ್ಲಿ ಸೇರಿ, ನ್ಯಾಯ ವಿತ್ಯರ್ಥಮಾಡುವದೂ ಮತಾಚಾರಗಳನ್ನು ಮುಂ ತರುವದೂ ಪೂರ್ವದಿಂದಲೇ ನಡೆದುಬರುತ್ತಿದೆ ಅಂಥಾ ಕೂಟ ಸಭೆಯನ್ನು ಇನ್ನು ಈಗ ವೃದ್ಧಿಗೊಳಿಸುವಲ್ಲಿ ತೊಂದರೆ ತೆಗೆ ವರಾಗಿರುತ್ತೇವೆ ಆದರೆ ಮಡಿಕೇರಿ ಮತ್ತು ತಾಲ್ಲೂಕು ಉ ಗಸ್ಥರೊಳಗೆ ಈ ತರದ ಕಟ್ಟು ಇಲ್ಲದ್ದರಿಂದ ಅವರು ಈ ಆಲೋ ದಿ ಅದಕ್ಕೊಂದು ಮಾದರಿ ಹೆಸರುಕೊಟ್ಟದ್ದಕ್ಕೆ ನಾವು ಸರ್ವರೂ ಪಡುವುದಲ್ಲದೆ ಕೊಡಗರ ಮತವಿಚಾರ ಪದ್ಧತಿ ವಗೈರೆಗಳನ್ನು ನಡೆಸಿಕೊಂಡು ಬರುವರೆಂದು ನಂಬಿಕೆಯುಳ್ಳವರಾಗಿದ್ದೇವೆ

ಆದರೆ ರಾಜಕೀಯ ವಿಷಯ ಮುಂದಕ್ಕೆ ತರುವದಕ್ಕೆ ಕೊಡಗರು ಒಂದು ಪಂಗಡವಾಗಿ ನಿಂತು ಮಾತನಾಡುವದು ಕೇವಲ ವಿಶಾದ ಗಿದೆ ಜನರನ್ನು ಅದಷ್ಟುಮಟ್ಟಿಗೆ ಒಗ್ಗಟ್ಟುಕೂಡಿಸಿ ಸ್ವರಾಜ್ಯಕ್ಕೆ ತುವಮಾಡುವರೇ ಬ್ರಿಟಿಷ್ ಸರಕಾರದ ಈಗಿನ ಮುಖ್ಯ ಉದ್ದಿಶ್ಯ ವಲ್ಲು ಮಡಿಕೇರಿಯವರು ಮಾತ್ರ ಈ ಭೇದವನ್ನು ಮಾಡಿ ರಾಜ ದ ಸಂಗತಿಯಲ್ಲಿ ಮಾತನಾಡುವದು ಉಚಿತವಲ್ಲ.

ಮೇಲಿನ ವಿಷಯಗಳಲ್ಲಿ ಚರ್ಚಿಸಲಿಕ್ಕೆ ಕೊಡಗಿನಲ್ಲಿ ಜಮಾ ಸಂಘವೆಂಬುದೊಂದು ಮೊದಲಿಂದಲೇ ನಡೆಯುತ್ತಿದೆ ಆ ಸಂ ಕೊಡಗಿನ ಸರ್ವಮತದವರೂ ಮೆಂಬರುಗಳಾಗಿರುವರು ಈಗ ಸ್ಥಾನದಲ್ಲೆಲ್ಲ ನಡೆಯುತ್ತಿರುವ ಸ್ವರಾಜ್ಯ ಚಳವಳದ ತರಬೇ ಜಮಾನುದಾರರ ಸಂಘವೇ ಬಹು ಉತ್ಕೃಷ್ಟವಾದದ್ದು. ಅಂಥಾ ಉತ್ಕೃಷ್ಟವೇ ಈಗ ಹೊರಬಿದ್ದಿರುವ ಕೊಡಗು ಸಭೆಯ ಉದ್ದಿ ಗಿರುವದರಿಂದ ಜಮಾನ್ದಾರರ ಸಂಘದ ಮೆಂಬರುಗಳಲ್ಲದ ಉ ಗಸ್ಥರಿಗೆ ಮಾತ್ರ ಈ ಹೊಸ ಸಭೆಯು ಹಿತಕರವಾಗಿರಬಹುದು

ಸಂಘವು ತಿಳಿದೋಸುವಾಗಲೇ ಠರಾವುಗಳು ಹೊರಪಟ್ಟು ಮುಂ ದದ್ದು ನೋಡಿದರೆ ಈ ಸಂಘವು ಯಾವ ಮಾದರಿಯಲ್ಲಿ ನಡೆಯು ವಾಗಿ ಕಾಣುತ್ತದೆ. ಅದೂ ಅಲ್ಲದೆ ರಾಜಕೀಯ ಸಂಬಂಧ ಚರ್ಚೆ ನೋಡಿದರೆ ಹಳ್ಳಿನಿವಾಸಿಗಳ ಬುದ್ಧಿಕೌಶಲತೆಯು ಸ್ಪಷ್ಟ ಕಾಣಬರುತ್ತದೆ

ತಾ 8-9-21 ರಲ್ಲಿ ಮಡಿಕೇರಿ ಮೀಟಿಂಗಿನಲ್ಲಿ ಸೇರಿದ್ದವರು ರಿ ನೌಕರರು ಆದ ಮಾತ್ರದಿಂದ ಮಡಿಕೇರಿಯಲ್ಲಿ ಕೊಡಗರ ಸರಕಾರಿ ನೌಕರರನ್ನೂ ಇತರ ಜನರನ್ನೂ ಸೇರಿಸಿದರೆ ರಾಜಕೀ ಮಾತನಾಡಿದ್ದು ಕೊಡಗಿನ ಉನ್ನತಸ್ಥಿತಿಗೆ ಸಾಧಕವೇ

ಬಾರು ಇದರಿಂದ ಚೆನ್ನಾಗಿ ವೇದ್ಯವಾಗುವದು ಜಮಾನುದಾರರ ಸಂಘದ ಮುಖ್ಯ ಅಧಿಕಾರಿಗಳೇ ಆ ಮೀಟಿಂಗಿನಲ್ಲಿ ಹಾಜರಿದ್ದು ಉದ್ಯೋಗಸ್ಥರು ಜನತೆಯ ವಿಷಯ ಮಾತನಾಡಿ ಜಮಾನ್ದಾರ ಸಂಘದ ಠರಾವಿಗೆ ವಿರೋಧವಾದ ಠರಾವನ್ನು ಸಂದರ್ಭಕ್ಕೆ ಒತ್ತಾಸೆಕೊಟ್ಟದ್ದು ನೋಡಿದರೆ ಅವರು ಜಮಾನುದಾರರ ಸಂಘದಲ್ಲಿ ಕೆಲಸಮಾಡಿ ನೋಡಿರುವ ಬುದ್ಧಿವನ್ನು ಊಹಿಸಬೇಕಾಗಿದೆ ರಾಜಕೀಯ ವಿಷಯ ಚರ್ಚಿಸುವಾಗ ಮತ ಭೇದವಾದಿ ಆಲೋಚಿಸುವ ಸಂದರ್ಭ ನೋಡಿದರೆ ಈಗ ನಡೆವರು ವ ತ್ತು ಮಹಾರಾಜು ರಾಜ್ಯಗಳಲ್ಲಿ ಪ್ರಾಂತ್ಯದ ಮತ್ತು ಗ್ರಾಮ ನ್ಯಾಯ ಸಂಗತಿದವರು ಹಾನಿಪಡುವ ರೀತಿಯಾಗುವದೆಂದು ಕಾಣುತ್ತೆ

ಈ ಸಂಗತಿ ನಡೆಯುವದು ವಿಪ್ಲವಿಯ ಅನುಕೂಲವೋ, ನಾಶವೋ, ಹೆಸರುವಾಸಿಯೂ ಸಾಲದೆಯೋ ಯಾ ಹೆಚ್ಚಾಗಿಯೋ ಎಂಬುದನ್ನು ಹೇಳಸಾಧ್ಯ

ಈ ಮಾದರಿ ಸಂಘವು ಕೊಡಗಿನ ಬೇರೆ ಎಲ್ಲಾ ಕಡೆಗಳಲ್ಲೂ ಒಂದೊಂದು ಕಮಿಟಿ ಮತ್ತು ಸಬ್ ಕಮಿಟಿಯಾಗಿ ಏರ್ಪಡಿಸುವ ಸಂಗತಿಯೂ ಕೇಳಬರುತ್ತದೆ ಇಂಥಾ ಸಂಘವು ನಾವು 'ಬುದ್ಧಿಶೂನ್ಯರಾದ ರೈತ" ರಿಗೂ ಪ್ಲಾಂಟರುಗಳಿಗೂ ಅವಶ್ಯವಿರುವದಿಲ್ಲ—ನಾವು ಊರು, ಕೇರಿಗಳ ಸಂಗ್ರಹಗಳನ್ನೆಲ್ಲಾ ಬಿಟ್ಟು ಕೊಡ್ವ ಕೊಳವಾದು ಆಗ ನಾಶ ಮಾಡುವ ಮಡಿಕೇರಿಯವರಿಗೆ ಸಾಕಾಗದೆ

ಅದೂ ಅಲ್ಲದೆ ನಾವು ನಾಡಿನಜನರು ಐಶ್ವರ್ಯವಂತರೆಂದೂ ವಿದ್ಯಾವಂತರೆಂದೂ, ಧೈರ್ಯಶಾಲಿಗಳೆಂದೂ ನಂಬಿ ಮುಂದಾಳುಗಳಾಗಿ ನಮ್ಮನ್ನು ಒಳ್ಳೆಯ ಹಾದಿಯಲ್ಲಿ ನಡೆಯಿರಿ ಎಂದು ಬಿಟ್ಟದ್ದಕ್ಕೆ ಈ ದಿವಸಗಳೆಂದು ಯೋಚಿಸಿಕೊಳ್ಳುವ ಕೆಲವರು ಈ ತರದ ಕೆಲಸ ನಡೆಯಿಸಿದ್ದಕ್ಕೂ, ಜಮಾನುದಾರರ ಸಂಘವನ್ನು ಒಡೆದುಹಾಕುವ ಸಂದರ್ಭ ಮಾಡುವದಕ್ಕೂ ದೈತರಾದ ನಾವು ಬಹಳ ವ್ಯಸನಪಡುತ್ತೇವೆ

"ಬುದ್ಧಿಶೂನ್ಯರಾದ" ನಾವು ಹಲವುತರದ ಸಂಘಕ್ಕೆ ಕಲಿಸಿ ಹಿಡಿಸುವದು ಬಹುಕಷ್ಟ ಇಂಥಾ ಮಾದರಿಸೂಚದ ಮತ್ತು ಟ್ರಿಯಿಸು ಹೋಗುವಷ್ಟು ಬೇಗಾಗಿ ನಡೆಯುವ ಸಂಘವನ್ನು ಹಿಂಬಾಲಿಸಲು ನಾವು ಧೈರ್ಯಹೀನರಾಗಿರುತ್ತೇವೆ ಇದನ್ನು ಬುದ್ಧಿಶಾಲಿಗಳು ಸೂಚನೆಯಾಗಿ ತೆಗೆದುಕೊಳ್ಳುವದು ನಾವು ದೈತರು ನಾಡುಜನರು ಆಲೋಚನೆಗೆ ತೆಗೆದುಕೊಳ್ಳುವರು

ಈ ಮೊದಲು ಎಂಬಾಲಿಸಿದ ಸಲವು ಚೆನ್ನಾಗಿ ಕೃಷಿವರು ಇನ್ನು ಮೊದಲೂ ಹಿಂಬಾಲಿಸಿದರೆ ಪ್ರಯೋಗವಾಗುವದೆಂದು ಆಲೋಚನೆಗೆ ಬಂದಿದ

ಗ್ರಾಮನಿವಾಸಿ

OFFICE OF THE DEPUTY DIRECTOR
OF LAND RECORDS AND
AGRICULTURL, COORG

NOTICE.

Mercara, dated 27th September 1921

Is hereby given for general information that a cattle fair will be held at Irarpet for 5 days commencing from the 2nd of November 1921 in connection with the Deepavali festival. Those who possess cows, calves, bulls, bullocks buffaloes, goats or sheep may exhibit them at the fair. Prizes will be awarded for the best exhibits in each class

---

ನೋಟೀಸ್.

ಇದರಿಂದ ಸಮಸ್ತಜನರಿಗೂ ತಿಳಿಯಪಡಿಸುವುದೇನಂದರೆ—ಸನ್ 1921 ನೇ ಇಸವಿ ನವಂಬರ್ ತಾರೀಖು 2 ರ ಆರಂಭವಾಯ್ತು 5 ದಿವಸಗಳ ವರೆಗೆ ಸ್ವೇಜರ್‌ಪೇಟೆಯಲ್ಲು ದೀಪಾವಳಿ ಉತ್ಸವದ ಸಮ್ಮಂದವಾಗಿ ಜಾನುವಾರುಗಳ ಸಂತೆಯೂ ಪ್ರದರ್ಶನವು ನಡೆಯುತ್ತದೆ ಅಲ್ಲಿಗೆ ಹಸು, ಕರು, ಹೋರಿ, ಎತ್ತು, ಎಮ್ಮೆ, ಕೋಣ, ಆಡು, ಕುರಿ ಮೊದಲಾದ ದನಗಳು ಇರುವವರು ತಂದು ಪ್ರದರ್ಶನಕ್ಕ ಇಡಬಹುದು ಪ್ರದರ್ಶನದಲ್ಲಿ ಬಯಾಬಯ ತರಹದ ಜಾನುವಾರುಗಳಲ್ಲಿ ಉತ್ಕೃಷ್ಟವಾದವುಗಳಿಗೆ ಇನಾಮುಗಳು ಕೊಡಲ್ಪಡುವವು.

K. N. SUBBARAYA,

Deputy Director, Land Records and Agriculture

ಸಂಗೀತಕ್ಕೆ ಸಂಬಂಧಪಟ್ಟ



ಸಾಮಾನುಗಳ ಪೂರೈಕೆ

ನಮ್ಮಲ್ಲಿ ಅನುಭವಪೂರ್ವಕ ಚೆನ್ನಾಗಿ ಅನೇಕಾನೇಕ ಸಂಗೀತ ವಿದ್ವಾಂಸರುಗಳು ಒಪ್ಪತಕ್ಕ ಹಾರ್ಮೋನಿಯಂ, ತಬಲಾ, ತಂಬೂರಿ, ಸಿತಾರ್, ತಾವೂಸ್ ದಿಲ್‌ರುಬ ಸಾರಂಗಿ, ಪಿಟೀಲು, ಕೊಳಲು ಶ್ರುತಿಪೆಟ್ಟಿಗೆ ಇವೇ ಮುಂತಾದ ಪದಾರ್ಥಗಳು ಸಿಕ್ಕುತ್ತವೆ. ಈ ಪದಾರ್ಥಗಳ ಎಂದಾ ದರೇರಿ ಕೆಲಸವಾದರೂ ಸಹ ಸುಲಭಧಾರೆಗೆ ಮಾಡಲ್ಪಡುತ್ತದೆ ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ನಮ್ಮ ವಿಳಾಸ—

ಯಂ. ಪುಟ್ಟಯ್ಯ ಅಂಡ್ ಸನ್ಸ್,

ಹಾರ್ಮೋನಿಯಂ ಡೀಲರ್ಸ್ ಮತ್ತು ರಿಪೇರರ್ಸ್

24–5 ಸಯ್ಯಾಜಿರಾವ್ ರೋಡ್, ಮೈಸೂರು.

Just Arrived ! Just Arrived !!

Fresh Consignment of Barton on Humber.

CYCLES

Size Frame 22, 24", & 26".

Fitted with Dunlop tyres, tubes tool Bags with tools, three Coil Spring Saddle Complete

Price Rs. 160

Special rates for purchasers of three Cycles at a time

Apply to— 4–2

K R Thirupad & Bros,

Motor Mechanics & Cycle, Dealers,

Sayaji Rao Road, MYSORE.

Messrs. P. SAM & Co.,

Receiving & Forwarding Agents, Cabinet Makers, Auctioneers & General Agents, 12–10

591 4 Sayaji Rao Road, MYSORE.

They, not only receive and forward your goods from Mysore Railway Station to any part in Coorg but also receive goods from those parts and despatch them to any other part from the Mysore Railway Station. They undertake to sell your saleable articles by public auction or otherwise, and also supply you goods at the cheapest rates Commission very moderate. A trial order will convince you of their promptness and business methods.

ಒಳ್ಳೆಯ ಪುಸ್ತಕಗಳು !! ಬೆಲೆ ಸುಲಭ !!

A. N. C. & Co., Mysore.

ಮಹಾಶಯರೆ—ನಮ್ಮ ಕಂಪೆನಿಯಲ್ಲಿ ಸಾವಿರಾರು ಬಗೆಯ ಕನ್ನಡ ಪುಸ್ತಕಗಳೂ ಇತರ ಸಾಮಾನುಗಳೂ ಮಾರಿಗೆ ಸಿದ್ಧವಾಗಿವೆ ಕನ್ನಡ ಗ್ರಂಥಕಾರರು ತಮ್ಮ ಪುಸ್ತಕಗಳ ಒಂದೊಂದು ಪ್ರತಿಯನ್ನು ಕಳುಹಿಸಿದರೆ ಅವುಗಳನ್ನು ಅಪ್ರಕಟಿಸಿ ಮಾಡುವುದಲ್ಲದೆ ಒಳ್ಳೆಯ ಪುಸ್ತಕಗಳನ್ನು ಕೊಂಡುಕೊಳ್ಳುತ್ತೇವೆ ನಾವು ಅನುಮೋದಿಸುವ ಪುಸ್ತಕಗಳನ್ನು ಹಿಂದಕ್ಕೆ ಕಳುಹಿಸಬೇಕಾದಲ್ಲಿ ಟಪಾಲುಖರ್ಚನ್ನು ಪುಸ್ತಕಗಳನ್ನು ಕಳುಹಿಸುವವರೇ ವಹಿಸಬೇಕು ನಾವು ಹೊಸದಾಗಿ ಪ್ರಕಟಿಸಿರುವ—

ಸ್ತೋತ್ರಮಾಲಿಕಾ ಭಾಗ ೧.

ಎಂಬ ಪುಸ್ತಕವು 1 ಮಂಗಳಾಚರಣೆ 2 ಪ್ರತಿದಿನೋಪಯುಕ್ತ ಸ್ತೋತ್ರಗಳು 3 ಪ್ರತಿ ವಾರೋಪಯುಕ್ತ ಸ್ತೋತ್ರಗಳು 4 ಪ್ರತಿ ಮಾಸೋಪಯುಕ್ತ ಸ್ತೋತ್ರಗಳು, 5 ಇತರ ಉಪಯುಕ್ತ ಸ್ತೋತ್ರಗಳು ಎಂಬ ಐದು ವಿಭಾಗಗಳನ್ನು ಒಳಗೊಂಡಿದೆ ಇದರ ಬೆಲೆ 4 ಆಣೆ ಮಾತ್ರ ಇದನ್ನು ವಿ ಪಿ ಮೂಲಕವಾಗಿಯಾಗಲೀ 5 ಆಣೆ ಪೋಸ್ಟಲ್ ಸ್ಟಾಂಪು ಕಳುಹಿಸಿ ಸಾಧಾರಣ ಬುಕ್ಪೋಸ್ಟು ಮೂಲಕವಾಗಿಯಾಗಲೀ ತರಿಸಿ ಬಹುದು ಪರೀಕ್ಷಿಸಬೇಕು ಮಾತನಾಡಬೇಕು !! ಇಲ್ಲದಿದ್ದರೇನು ಪ್ರಯೋಜನ !!! 12–9

ಇತ್ತ ನೋಡಿರಿ ಕೊಡಗು ಬಾಂಧವರೇ ! ಇತ್ತ ನೋಡಿರಿ !

ನಮ್ಮಲ್ಲಿ ಸಾಮಾನು ಪ್ರತಿಯೊಬ್ಬ ಹೊಗಳುವದು ತಮ್ಮ ಗಳಿಗೆ ತಿಳಿದಿರುವದಷ್ಟೆ.

ಕಾಶ್ಮೀರಿಯಾ ತೈಲ—ರಿಜಿ ಶೀಸೆ 1 ಕ್ಕೆ 1—0—0
3 ಶೀಸೆಗೆ 2—10—0 ಓರೋಡಿಲ್ಲಭಾವ ಅತ್ತರ್ ದಪ್ಪ ಶೀಸೆ 1 ಕ್ಕೆ 0—12—0 ಡಜನ್ 7—8—0. ಅರ್ಧ ಔನ್ಸ್ ಬಾಟ್ಲ್ ಸುಗಂಧ ತೈಲ ಶೀಸೆ 1 ಕ್ಕೆ 3 ಆಣೆ. ಡಜನ್ 1 ಕ್ಕೆ 1—12—0 ಕಸ್ತೂರಿಮಾತ್ರೆ ಶೀಸೆ 1 ಕ್ಕೆ 4 ಆಣೆ. ಡಜನ್ 1 ಕ್ಕೆ 2—10—0 ಮಲೇರಿಯಾ, ದಿನ ಬಿಟ್ಟು ಬರುವ ಜ್ವರಕ್ಕೆ ಖಾತ್ರಿಯಾದ ಬೆಳ್ಳಿ ಮುಲಾಮಿನ ಮಾತ್ರೆ ಶೀಸೆ 1 ಕ್ಕೆ 1—0—0 ರೂ

ಜಂತಾರ್ ಪಾಕೆಟ್ 1 ಕ್ಕೆ	1 ಆಣೆ 4 ಆಣೆ. 1 ರೂ.
ಗಂಧದ ಸಾಬೂನ್ 1 ಕ್ಕೆ	ಆಣೆ 6 ಆಣೆ 7 ಆಣೆ.
ವಿಕಟೋರಿಯಾ ಸಾಬೂನು 1 ಕ್ಕೆ	0 2-6.
ಪ್ಯಾರೀಸ್ ರಾಣಿ ಸಾಬೂನು 1 ಕ್ಕೆ	1-2 0.
ಒಸ್ಮಿನ್ (ಮಲ್ಲಿಗೆ) ಸಾಬೂನ್ 1 ಕ್ಕೆ	8 ಆಣೆ.
ಬಿಕ್ಕೆಟ್ ಗುಡ್ ಎನ್ " 1 ಕ್ಕೆ	10 ಆಣೆ.
ಚಿಕ್ಕ ಕನ್ನಡಿ 1 ಕ್ಕೆ	2 ಆಣೆ 0 2-6.
ಸಾಬೂನ್ ತರಟಿಗೆ 1 ಕ್ಕೆ	5 ಆಣೆ 7 ಆಣೆ.
ಸರಬ್ ಬಟನ್ ಪರಕಸದ್ದು ಸೆಟ್ಟು 1 ಕ್ಕೆ	3 ಆಣೆ.
ಬಾಚಣಿಗೆ ಡಜನ್ 1 ಕ್ಕೆ	0 11-0.1-4 0 1-8 0.
ಕ್ಷೌರಕತ್ತಿ 1 ಕ್ಕೆ	2-4-0. 2 12 0 3-8-0.
ಅಮ್ಮ ತಾರಟಿನ ಡಬ್ಬಿ 1 ಕ್ಕೆ	9 ಆಣೆ.
ಒಮ್ಮೆ ಕತ್ತರಿ 1 ಕ್ಕೆ	10 ಆಣೆ.
ಕಾಡ್‌ಬರಿ ಚಾಕಲೇಟ್ ಪಾಕೆಟ್ 1 ಕ್ಕೆ	6 ಆಣೆ
ವ್ಯಾನಿಟಿ ಪರ್ಸ್ 1 ಕ್ಕೆ	15 ಆಣೆ 6 ಆಣೆ

ಯಾವ ತರದ ಸಾಮಾನು ಬೇಕಾದಲ್ಲಿ ನಮ್ಮಲ್ಲಿ ದೊರೆಯುತ್ತೆ ಟಪಾಲು ಖರ್ಚು ಅಧಿಕ.

ಎಸ್ಸ್.—ಡಿ ಬ್ರದರ್ಸ್ ಸ್ಟೋರ್ಸ್,

ನಂ. ೩. ಮಂಗಳೂರು, ದ. ಕ.

ಎಲೆಕ್ಟ್ರಿಕ್ ಗಿಲ್ಟು ಬಂಗಾರದ ನಗಗಳು.

ಗುಪ್ಪಿ ನಾಗರು 1 ಕ್ಕೆ	2—8—0
ಶೋಬಾ ಹುವ್ವು 1 ಕ್ಕೆ	0—12—0
ಶಾವಂತಿಗೆ ಹುವ್ವು 1 ಕ್ಕೆ	0—12—0
ಮಲ್ಲಿಗೆ ಮೊಗ್ಗು ಸಾಲು 1 ಕ್ಕೆ	3—0—0
ಚಂದ್ರಹಾರ ಸಾದಾ 1 ಕ್ಕೆ	2—8—0
ಡಿಟೋ ಮೋಘ ಸರಾ	3—0—0
ಇಮಿಟೇಷನ್ ಬೆಂಡೋಲೆ ಜೊತೆಗೆ	3—0—0
ಮುಂಗುಬಟ್ಟು 1 ಕ್ಕೆ	0—8—0
ಬುಲಾಕು 1 ಕ್ಕೆ	0—12—0
ಜರ್ಮನ್ ಬೆಳ್ಳಿ ಕಟ್ಟ 1 ಕ್ಕೆ	3—0—0
ಪನ್ನೀರು ಧಾನಿ 1 ಕ್ಕೆ	3—0—0
ಡಿಟೋ ಲೋಟ 1 ಕ್ಕೆ	1—8—0

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

12—7 ಆರ್. ಕೆ. ವಾಚ್ ಕಂಪೆನಿ,

ನಂಬರು 42, ತಂದಪ್ಪ ಶೆಟ್ಟಿ ಬೀದಿ, ಮದರಾಸು.

ಖ್ಯಾತಿಯಿಂದ ಗುಣಪಡಿಸುವ ಔಷಧಿಗಳು.

(1) ಮಹಾಮದನಕಾಮೇಶ್ವರಿ ಲೇಹವು:—ಆಯುರ್ವೇದ ವಿಧಿಪ್ರಕಾರ ತಯಾರಿಸಲ್ಪಟ್ಟಿದ್ದು, ಇದರ ಸೇವನೆಯಿಂದ ಧಾತು ಕ್ಷೀಣತೆ, ಅಜೀರ್ಣ, ಎದೇನೋವು, ಶರೀರದ ಥಳಿತದಿಂದ ಉಂಟಾದ ಅಶಕ್ತಿಯನ್ನೂ, ದೇಹಾಲಸ್ಯವನ್ನೂ ಪರಿಹರಿಸುತ್ತದೆ. ರಕ್ತಶುದ್ಧಿ ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು. ಸ್ತ್ರೀಯರು ಪುರುಷರು ಇದನ್ನು ಉಪಯೋಗಿಸಬಹುದು. 40 ಸಲ ಸೇವಿಸುವ ಡಬ್ಬಿ 1 ಕ್ಕೆ 1—12—0 ಟಪ್ಪಾಲ್ ಖರ್ಚು 6 ಆಣೆ. 3 ಡಬ್ಬಿಗಳಿಗೆ 4—12—0 ಟ. ಖ. 10 ಆಣೆ.

(2) ಚವನಪ್ರಾಶ್ಯ:—ಇದರ ಸೇವನೆಯಿಂದ ಕ್ಷಯ, ರಾಜಯಕ್ಷ್ಮ, ಉರಕ್ಷತ, ಕಾಸ, ಶ್ವಾಸ, ಹೃದ್ರೋಗ ಇವೇ ಮೊದಲಾದ ರೋಗಗಳನ್ನು ನಾಶಪಡಿಸಿ ಜೀರ್ಣಶಕ್ತಿಯನ್ನು ವೃದ್ಧಿಪಡಿಸಿ ಶರೀರಕ್ಕೆ ಸೌಂದರ್ಯವನ್ನು ಯವ್ವನಕಾಲದಲ್ಲಿದ್ದ ಹಾಗೆಯೇ ಇಂದ್ರಿಯಪಟುತ್ವವನ್ನು ಕೊಡುವದು ಮತ್ತು ಶರೀರದಾರ್ಢ್ಯವನ್ನೂ, ಅವಯವಗಳ ಬಲವನ್ನೂ ವೃದ್ಧಿಮಾಡುತ್ತದೆ. ಮತ್ತು ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸಿ ಬುದ್ಧಿಪಟುತ್ವವನ್ನು ಅಧಿಕಮಾಡುವುದು. ಈ ಔಷಧವು ಬಾಲಕರಿಗೂ, ವೃದ್ಧರಿಗೂ ಬಹಳ ಪ್ರಯೋಜನ. ಇದು ಬಹಳ ರುಚಿಕರವಾಗಿರುವುದು. ಇದು ಚವನವೆಂಬ ವೃದ್ಧಮಹರ್ಷಿಗೆ ಅಶ್ವಿನಿದೇವತೆಗಳುಪಯೋಗಿಸಲ್ಪಟ್ಟ ರಸಾಯನವಾಗಿರುತ್ತದೆ. 1 ಸೇರಿನ ಡಬ್ಬಿ 1 ಕ್ಕೆ 2—0—0. 3 ಡಬ್ಬಿಗಳಿಗೆ 5—8—0 ರೂಪಾಯಿ.

(3) ಅಶೋಕಾರಿಷ್ಟ ಮತ್ತು ಮಾತ್ರೆ:—ಹೆಂಗಸರು ಕ್ರಮತಪ್ಪಿ ಮುಟ್ಟಾಗುವುದು, ರಜೋಸಮಯದಲ್ಲಿ ಅತ್ಯಲ್ಪ ಅತಿರೇಕವಾಗಲಿ, ರಕ್ತಸುರಿಯುವುದು, ಹೊಟ್ಟೆನೋವು ಸೊಂಟನೋವು, ಬಲಹೀನ, ಬಂಜೆಯಾಗಿರುವಿಕೆ ಬಿಳೇಪ್ರದರ, ಕುಸುಮರೋಗ, ಗರ್ಭಕೋಶ ಉಕ್ಕನು ತಪ್ಪುವಿಕೆ, ಮತ್ತು ಸ್ತ್ರೀಗಳಿಗೆ ಉಂಟಾಗತಕ್ಕ ಸಕಲ ರೋಗಗಳನ್ನು ಖಂಡಿತವಾಗಿ ಗುಣಪಡಿಸುತ್ತದೆ. 8 ಔನ್ಸ್ ಬಾಟ್ಲಿಗೂ, 1 ಡಬ್ಬಿ ಮಾತ್ರೆಗೂ 2—0—0. 3 ಬಾಟ್ಲಿಗಳಿಗೆ ಮತ್ತು ಡಬ್ಬಿಗಳಿಗೆ 5—8—0 ರೂ.

(4) ಪ್ರಸುತಾವಲೇಹ:—ಹೆತ್ತ ನಂತರ ಈ ಔಷಧಿಯನ್ನು ಸೇವಿಸುವದರಿಂದ ಅರುಚಿ ಅಗ್ನಿಮಾಂದ್ಯ, ನಿದ್ರಾನಾಶ ಮತ್ತು ಗರ್ಭದಿಂದ ಸಂಭವಿಸುವ ಸಕಲ ವೇದನೆಗಳನ್ನು ಖಂಡಿತ ಗುಣಮಾಡುವದು ಮತ್ತು ಧಾತುಪುಷ್ಟಿಯನ್ನು ಉಂಟುಮಾಡುವುದು ಇದು ತಾಯಿಗೆ ಹೇಗೋ ಹಾಗೆಯೇ ಮಗುವಿಗೂ ಬಹಳ ಪ್ರಯೋಜನ, ಡಬ್ಬಿ 1 ಕ್ಕೆ 2—0—0. ಟಪ್ಪಾಲ್ ಖರ್ಚು 6 ಆಣೆ.

(5) ಪಿತ್ತಹಾರಿಚೂರ್ಣ:—ಮುಘನ್ನತೆ, ಬಹುಮೂತ್ರ, ಛಳಿಜ್ವರ, ಜ್ವರಗೆಡ್ಡೆ, ತಲೆತಿರುಗುವಿಕೆ, ಆಮ್ಲಪಿತ್ತ, ಹೊಟ್ಟೆ ಹಸಿವಿಲ್ಲದೆ ಇರುವಿಕೆ, ಬಾಯಿಯಲ್ಲಿ ಅಗ್ರ, ವಾತಪಿತ್ತ, ಕಫ, ಇವುಗಳಮೇಲೆ ದಿವ್ಯ ಔಷಧಿ, 1 ಡಬ್ಬಿಗೆ 12 ಆಣೆ. ಟಪ್ಪಾಲ್ ಖರ್ಚು 6 ಆಣೆ 3 ಡಬ್ಬಿಗಳಿಗೆ 2—0—0.

(6) ಮೇಹಕುಠಾರ:—ಮೂತ್ರಕೃಚ್ಛ್ರ, ಅಶ್ಮರಿ, ವ್ರಣ, ಮೂತ್ರ ಹೋಗುವಾಗ್ಯೆ ಉರಿಯನ್ನು ಕೀವನ್ನು ಕೂಡಲೆ ನಿಲ್ಲಿಸಿ ಖಂಡಿತ ಗುಣ ಕೊಡುವುದು, 14 ದಿವಸದ ಔಷಧ ಡಬ್ಬಿ 1 ಕ್ಕೆ ಕ್ರಯ 2—0—0. 3 ಡಬ್ಬಿಗಳಿಗೆ 5—10—0

(7) ಬಾಲಗ್ರಹ ಗುಟಿಕೆ:—ಮಕ್ಕಳಿಗೆ ಮಲಬದ್ಧತೆ ಬಾಲಗ್ರಹ ಇವೇ ಮೊದಲಾದ ಕಷ್ಟದಿಂದ ಉಂಟಾಗತಕ್ಕ ಸಕಲ ರೋಗಗಳನ್ನು ಗುಣಪಡಿಸಲಿಕ್ಕೆ ರಾಮಬಾಣದಂತಿರುವುದು. ಬಾಟ್ಲಿ 1 ಕ್ಕೆ 10 ಆಣೆ 3 ಬಾಟ್ಲಿಗಳಿಗೆ 1—10—0 ಒಂದರಿಂದ 3 ಬಾಟ್ಲಿವರೆಗೆ ಟಪ್ಪಾಲ್ ಖರ್ಚು 6 ಆಣೆ.

(8) ಕಾಸಕುಠಾರಗುಟಿಕೆ:—ನಂಬರ್ 1 ನಂ. 2. ಈ ಎರಡು ನಮೂನೆಯ ಗುಟಿಕೆಗಳ ಸೇವನೆಯಿಂದ ತ್ರಿದೋಷ (ಕಫ, ವಾತ, ಪಿತ್ತ) ದಿಂದ ಉಂಟಾಗುವ ಶ್ವಾಸಕಾಸವನ್ನು ನಿರ್ಮೂಲಗೊಳಿಸುವ ಸಿದ್ಧೌಷಧವಾಗಿರುವದು. 2 ಬಾಟ್ಲಿ ಮಾತ್ರೆಗಳಿಗೆ 1—2—0. 6 ಬಾಟ್ಲಿಗಳಿಗೆ 3 ರೂ. 2 ರಿಂದ 6 ಬಾಟ್ಲಿವರೆಗೆ ಟ. ಖ. 6 ಆಣೆ

(9) ಮಹಾಜ್ವರಾಂಕುಶ:—ಕಫಜ್ವರ, ಪಿತ್ತಜ್ವರ, ವಾತಜ್ವರ, ವಿಕಾಹಿಕಜ್ವರ ದ್ವ್ಯಾಹಿಕ, ತ್ರ್ಯಾಹಿಕ, ಚಾತುರ್ಥಿಕ, ಇನ್‌ಫ್ಲುಯೆಂಜಾ, ನಿಮೋನಿಯಾ ಮೊದಲಾದ ಭಯಂಕರ ಜ್ವರಗಳನ್ನು ಸಹ ಖಂಡಿತ ಗುಣಪಡಿಸುವುದು. 1 ಬಾಟ್ಲಿಗೆ 10 ಆಣೆ. 3 ಬಾಟ್ಲಿಗಳಿಗೆ 1—10—0 ಟ. ಖರ್ಚು 1 ರಿಂದ 3 ಬಾಟ್ಲಿವರೆಗೆ 6 ಆಣೆ

(10) ಇಚ್ಛಾಭೇದಿ:—ಆಯಾಸವನ್ನು ಉಂಟುಮಾಡದ ಸುಖವಿರೇಚಕ ಬಾಟ್ಲಿ 1 ಕ್ಕೆ 12 ಆಣೆ. 3 ಬಾಟ್ಲಿಗಳಿಗೆ 2 ರೂ. 1 ರಿಂದ 3 ಬಾಟ್ಲಿವರೆಗೆ ಟ ಖ 6 ಆಣೆ.

(11) ರಕ್ತಶುದ್ಧಿಚೂರ್ಣ:—ಮೇಹವ, ಉಪದಂಶ ಸಮ್ಮಂದ ಮೈಯಲ್ಲಿ ವ್ಯಾಪಿಸಿರುವ ವ್ರಣಕಜ್ಜಿ, ನೈತುರುಸುವಿಕೆ, ಮಲಬದ್ಧತೆ ಮುಂತಾದುವುಗಳನ್ನು ಹೋಗಲಾಡಿಸಿ ಹಸಿವೆಯನ್ನು ತ್ರಾಣವನ್ನು ಧಾತುಪುಷ್ಟಿಯನ್ನು ಉಂಟುಮಾಡುತ್ತದೆ. 1 ಡಬ್ಬಿ 1—0—0 ರೂ. ಟ ಖ 5 ಆಣೆ

ಗುಣವಿಶೇಷ. ಕ್ರಯ ಕಮ್ಮಿ ಪುಡಿ ಹೆಚ್ಚು.

(12) ದಂತಕಾಂತಿಯ ಚೂರ್ಣ:—ಹಲ್ಲುನೋವಿಗೆ ಖಾತ್ರಿಯಾದ ಔಷಧಿ ಇದರ ಉಪಯೋಗದಿಂದ ಹಲ್ಲಿನ ಕ್ರಿಮಿಗಳನ್ನು ನಾಶಪಡಿಸಿ, ಹಲ್ಲಿನ ವೇದನೆಯನ್ನು ಖಂಡಿತ ಗುಣಪಡಿಸಿ, ವಸಡುಗಳ ಬೀಗು ಹಲ್ಲಿನಿಂದ ಒಸರುವ ರಕ್ತವನ್ನು, ಕೀವನ್ನು, ಬಾಯಿಯ ದುರ್ವಾಸನೆಯನ್ನು, ಹಲ್ಲುಗಳ ಬುಡದಲ್ಲಿ ಸುಣ್ಣ ಕಟ್ಟುವುದನ್ನು ಗುಣಪಡಿಸಿ ಅಲ್ಲಾಡುವ ಹಲ್ಲುಗಳನ್ನು ವಜ್ರದೋಪಾದಿಯಲ್ಲಿ ಗಟ್ಟಿಮಾಡಿ ನಾಲಿಗೆಗೆ ರುಚಿಯನ್ನು ಸಹ ಉಂಟುಮಾಡುತ್ತದೆ. ಟಿನ್ 1 ಕ್ಕೆ 3 ಆಣೆ 6 ಟಿನ್ನಿಗೆ 1—1—0 ಟ. ಖರ್ಚು 5 ಆಣೆ. 12 ಡಬ್ಬಿಗಳಿಗೆ ಟಪ್ಪಾಲ್ ಖರ್ಚು 6 ಆಣೆ.

(13) ಗಜಕರ್ಣದ ಮುಲಾಮು:—ಹುಳ ಮೇಯುವದು, ದದ್ದು, ಗಜಕರ್ಣ, ಬಜ್ಜಿ, ಇಸುಬು ಹುಳಕಡ್ಡಿ ಮೊದಲಾದ ಸಮಸ್ತ ಚರ್ಮರೋಗಗಳು ಮೂರೇ ದಿವಸಗಳಲ್ಲಿ ಗುಣವಾಗುವದು ಡಬ್ಬಿ 1 ಕ್ಕೆ 5 ಆಣೆ. 3 ಡಬ್ಬಿಗಳಿಗೆ 15 ಆಣೆ. ಟ ಖ 5 ಆಣೆ. 6 ಡಬ್ಬಿಗಳಿಗೆ 1—12—0. 12 ಡಬ್ಬಿಗಳಿಗೆ 3 ರೂ. ಟಪ್ಪಾಲ್ ಖರ್ಚು 10 ಆಣೆ

(14) ವಿಶ್ವಾಂಜನ:—ಇದರ ಉಪಯೋಗದಿಂದ ವಾತ ಸಂಧಿವಾತ, ತಲೇನೋವು. ಶಿರೋಭಾರ, ಉಳುಕು ಎದೇನೋವು, ಶೀತ, ಕೆಮ್ಮು, ಅರ್ಧಾಂಗವಾಯು, ಗಾಯ, ದಂತವ್ಯಾಧಿ ಮುಂತಾದ ಅನೇಕ ತರದ ವೇದನೆಗಳನ್ನು ಖಂಡಿತವಾಗಿ ಗುಣಹೊಂದುವವು. ಬಾಟ್ಲಿ 1 ಕ್ಕೆ 8 ಆಣೆ. ಡಜನಿಗೆ 5—4—0 ಕ್ಯಾಂಪಲ್ ಡಬ್ಬಿ 1 ಕ್ಕೆ 1 ಆಣೆ ಡಜನಿಗೆ 10 ಆಣೆ. 1 ಗ್ರೋಸಿಗೆ 6 ರೂಪಾಯಿ.

(15) ಭೃಂಗರಾಜತೈಲ:—ಇದರಿಂದ ತಲೆಕೂದಲು ಉದ್ದವಾಗಿಯೂ, ಕಪ್ಪಾಗಿಯೂ, ಪುಷ್ಟಿಯಾಗಿಯೂ ಬರುತ್ತದೆ. ಮೆದುಳಿಗೆ ಅತ್ಯಂತ ಹಿತಕಾರಿಯಾಗಿರುತ್ತದೆ. ಬಾಟ್ಲಿ 1 ಕ್ಕೆ 12 ಆಣೆ.

(16) ಪರಿಶುದ್ಧವಾದವಾದ ಯೂಕಲಿಪ್ಟಸ್ ಆಯಿಲ್ ಎಂಬ ನೀಲಗಿರಿ ತೈಲ:—ಹೊಟ್ಟೆಗೆ ತೆಗೆದುಕೊಳ್ಳುವದೆ ಖಾತ್ರಿ ಬಾಟ್ಲಿ 1 ಕ್ಕೆ 5 ಆಣೆ ಡಜನ್ನಿಗೆ 3 ರೂಪಾಯಿ

ನಮ್ಮಲ್ಲಿ ಎಲ್ಲಾ ವಿಧದ ಲೇಹ, ತೈಲ, ಭಸ್ಮ ಅಸವ. ಅರಿಷ್ಟಗಳು ದೊರೆಯುತ್ತವೆ. ವ್ಯಾಪಾರಸ್ಥರಿಗೆ ಸ್ಪೆಷಲ್ ರಿಯಾತಿ ದರಗಳು ಕ್ಯಾಟಲಾಗು ಬರೆದು ತರಿಸಿಕೊಳ್ಳಿರಿ

ವಿಳಾಸ:—ಎಂ ಗಣಪ್ಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಏಜನ್ಸಿಯನ್ಸ್, ಮಂಗಳೂರು ದ. ಕ.

ಅಮೃತಾಂಜನ್

ನೋವುಗಳಿಗೆ ಸಿದ್ಧೌಷಧವು

ಎಲ್ಲಾ ಷಾಪುಗಳಲ್ಲಿಯೂ ಮಾರಲ್ಪಡುತ್ತೆ.

12—7 ಅಮೃತಾಂಜನ್ ಡಿಪೋ,

ಬೊಂಬಾಯಿ ಮತ್ತು ಮದರಾಸು

ಮೈಸೂರಿನಲ್ಲಿ ದೊರೆಯುವ ಸ್ಥಳ:—ಯಸ್ ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್

KALAPPAN'S ADVERTISING SERVICES.

COORG TEACHERS' CO-OPERATIVE STORES,

ಕೊಡಗು ಉಪಾಧ್ಯಾಯರ ಕೋ ಆಪರೇಟಿವ್ ಸ್ಟೋರ್ಸ್ ಲಿಮಿಟೆಡ್, ಮಡಿಕೇರಿ

ಈ ಸ್ಟೋರ್ಸಿನಲ್ಲಿ ಶಾಲಾ ಪಠ್ಯಪುಸ್ತಕಗಳು, ಸರಿ ಸಾಮಾನುಗಳು, ಮತ್ತು ಸೊಗಸಾದ ಬಹುಮಾನ ಪುಸ್ತಕಗಳು ದೊರೆಯುತ್ತವೆ. ಕ್ರಯ ಸುಲಭ, ಉತ್ತಮ, ಕೊಡಗಿನಲ್ಲಿ ಈ ತರ ಸ್ಟೋರ್ಸ್ ಇದೆ ಮಾಲುಗಳನ್ನು ಕೋರಿದವರಿಗೆ ವಿ. ಪಿ. ಮೂಲಕ ಕಳುಹಿಸಲಾಗುತ್ತೆ.

ಪಾಕೆಟ್ ಲೀವರ್ ವಾಚ್

ಇದರ ಕ್ರಯ ಸಾಮಾನ್ಯವಾದ ವಾಚ್ ಸರಪಣಿ ಸುಂದರವಾದ ವಾಚ್ ಪೆಟ್ಟಿಗೆ ಸಮೇತ

5—8—0 ರೂ. ಮಾತ್ರ.

ಘನವಂತರೇ !



ಈ ವಾಚ್ ... ವಾದ ಲೀವರ್ ... ದ ತಯಾರಾದದ್ದು, ... ಣ್ಯವಾದ ಮತ್ತು ... ವಾದ ಸಾಮಾನು ... ತಯಾರಾದದ್ದು. ... ವಾದ ಪಟಾಕೋ ... ಕಟನೆಯ ವಾಚ್ ... ಈ ವಾಚ್ ಅನೇಕ ... ಗಳ ಪರ್ಯಂತರ ... ಬರುವಂಥಾದ್ದು, ... ಡುವದಕ್ಕೆ ಬಹು ... ರವಾದದ್ದು. ಕೆಲವು ಮಾತ್ರವೇ ಉಳಿದಿವೆ. ಬೇಕಾದವರು ಶೀಘ್ರವಾಗಿ ಬರೆದು ತರಿಸಿಕೊಳ್ಳಿ.

ವಿಳಾಸ:—ಆರ್. ಕೆ. ವಾಚ್ ಕಂಪನಿ,
ನಂಬರು 44, ತಂದಪ್ಪಶೆಟ್ಟಿಬೀದಿ ಮದರಾಸು.

WANTED

1. One Compositor for the "SUNDAR VILAS" Printing works.

Apply:—R. S SINGH
GONIKOPAL

2 ENCOURAGE SWADESHIUM

If you are not at the point of deluding yourself you will loose the opportunity of gaining freedom So, try to encourage "THE SUNDARAVILAS PRESS" Gonikopal, South Coorg A Reliable and Neat Printing Office for every kind of Job Printing. Neat and cheap.

3 BEWARE MERCHANTS

Fixed Prices and Terms Cash, always of attractions and magnetic

But does a Merchant satisfy him with what he advertises

Remember "Honesty is the best Policy" If you like to be convinced please go to—

Messrs R. SUNDAR SINGH,
GONIKOPAL.

A well reknown firm for all luxuries Provisions necessities, and he is at your call to do the needful in case of a small commission if it pleases the taste of function and trouble.

Besides the firm under the above-head is intending to close the business if "PUBLIC" donot encourage him by the end of this year. So in order to retain him at your service. It will afford you great boon to him and the "MOTHERLAND" OF HIM" Kaveriamma for whom he has till now struggled and rooted in the "BLACKHOLE"

R. SUNDER SINGH,
GONIKOPAL, S. Coorg.

Printed and Published by S. NANJUNDA SASTRY at Sreenivas Electric Press, Mysore for "Kodagu" Ltd., Mercara—7-10-1921.

REGISTERED No. M. 1550.

ಕೊಡಗು.

ಸತ್ಯೇನ ಜಾತದಮುಯಾ ವಿದ್ಯಾಸೇತಿಪ್ರಯುಕ್ತಃ | ಐಕಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯಸಂಪದಃ ||

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

[ಸಂಪುಟ ೧] ಕೊಡಗು, ಸನ್ ೧೯೨೧ ನೇ ಇಸವಿ ಅಕ್ಟೋಬರ್ ತಾರೀಖು ೧೪ ನೆಯ ಶುಕ್ರವಾರ. [ಸಂಚಿಕೆ ೨೦

ವೀರಶೈವರಿಗೆ ಸಂಗ್ರಾಹ್ಯವಾದ ಫೋಟೋ

ಶ್ರೀ ಶಿವಯೋಗಿಗಳ ಸಂಘ —ಬಾಗಲಕೋಟೆ ಜನರು ಹಣವು ಖರ್ಚುಮಾಡಿ ಮಹಾ ಶಿವಯೋಗಿಗಳ ದರ್ಶನವನ್ನು ತೆಗೆದುಕೊಳ್ಳುತ್ತಾರೆ ಆದರೆ ಶ್ರೀಮಂತರಿಗು ಮತ್ತು ಬಡವರಿಗೂ ನಿತ್ಯದರ್ಶನ ಆಗುವದಕ್ಕೆ ಫೋಟೋದ ಹೊರತು ಅನ್ಯಮಾರ್ಗವು ಇಲ್ಲದಕಾರಣ ನಾವು ಪ್ರಸಿದ್ಧರಾದ ಶ್ರೀ ಜಗದ್ಗುರು ಚಿತ್ರದ ... ಮಹಾಸ್ವಾಮಿ ಗದಗ ತೋಂಟದಾರ್ಯ ಅಥಣಿ ... ಶಿವಲೀಲಾಸ್ವಾಮಿ ಬೀದರ, ಹಾನಗಲ್ಲ ... ಮುಂತಾದ ಮಹಾಸ್ವಾಮಿಗಳ ಫೋಟೋ ಕೂಡಿಸಿದ ಕಾರಣ ಒಂದೇ ಕಾಲದಲ್ಲಿ ಎಲ್ಲಾ ಶಿವಯೋಗಿಗಳ ದರ್ಶನ ಆಗುವವು. ೧೮×೧೨ ಸೈಜದ ಚಿತ್ರದ ಕ್ರಯ ೧ ಪ್ರತಿಗೆ ಆಣೆ.

ಶ್ರೀ ಕಲ್ಯಾಣ ಬಸವೇಶ್ವರ —ವೀರಶೈವ ಧರ್ಮೋದ್ಧಾರಕರಾದ ಶ್ರೀಬಸವಣ್ಣದೇವರ ಅತ್ಯಂತ ತೇಜಃಪುಂಜವಾದ ಖಾಸ ಫೋಟೊ ೧೮×೧೨ ಸೈಜ ಬಣ್ಣದ ಚಿತ್ರದ ಕ್ರಯ ೧ ಪ್ರತಿಗೆ ರೂ ೧. ಸಾದಾ ೮ ಆಣೆ

ಶ್ರೀ ಅಲ್ಲಮಪ್ರಭು ಪಾದಪೂಜೋತ್ಸವ —

ಇದರಲ್ಲಿ ಶ್ರೀಬಸವೇಶ್ವರರು ಶ್ರೀಚನ್ನಬಸವೇಶ್ವರ, ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಅಕ್ಕನಾಗಮ್ಮಾ ಮುಂತಾದ ಪ್ರಮಥಗಣಂಗಳ ಸಹ ಪ್ರಭುದೇವರ ಪಾದಪೂಜಾ ಮಾಡುತ್ತ ಇದ್ದ ಸಮಾರಂಭದ ಫೋಟೊ ಇರುತ್ತದೆ. ದೊಡ್ಡ ಸೈಜು ರೂ. ೧|. ಸಣ್ಣ ಸೈಜು ರೂ. |||.

ಶ್ರೀ ರೇಣುಕಾಚಾರ್ಯರ ಲಿಂಗೋದ್ಭವವು:—

ಕೊಲ್ಲಿಪಾಕಿ ಸೋಮೇಶ್ವರ ಲಿಂಗದಲ್ಲಿ ರೇಣುಕಾಚಾರ್ಯರು ಉದ್ಭವಿಸಿದ ಮಹತ್ವಪೂರ್ಣವಾದ ಅಪೂರ್ವ ಫೋಟೋ ಇರುತ್ತದೆ ದೊಡ್ಡ ಸೈಜು ರೂ. ೧| ಸಣ್ಣ ಸೈಜು ರೂ ||

ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಮಹಾಮುನಿಗಳಿಗೆ ಶಿವಸಿದ್ಧಾಂತ ಉಪದೇಶಿಸುವಿಕೆ -

ಇದರಲ್ಲಿ ಅಗಸ್ತ್ಯ ಮುನಿಗಳು ತಮ್ಮ ಪತ್ನಿ ಲೋಪಾಮುದ್ರಾ ಸಹ ಉಪದೇಶಮಾಡಿಕೊಳ್ಳುತ್ತಾ ಇದ್ದಾರೆ ದೊಡ್ಡ ಸೈಜು ರೂ. ೧|. ಸಣ್ಣ ಸೈಜು ರೂ. ||.

ಶ್ರೀ ವಿಭೂತಿ ... ಹನುಮಂತನಿಗೆ ಲಿಂಗಧಾರಣೆಯು:—ಇದು ಹನುಮಂತನು ಮೋಕ್ಷಾರ್ಥಕ್ಕಾಗಿ ಲಿಂಗಧಾರಣಮಾಡಿಕೊಂಡ ಫೋಟೊ ಇರುತ್ತದೆ ದೊಡ್ಡ ಸೈಜು ರೂ ೧| ಸಣ್ಣ ಸೈಜು ರೂ ..

ಶ್ರೀ ವೀರಶೈವ ರಾಜಸಮಾಜ —ಇದರಲ್ಲಿ ಕೊಡಗು ದೇಶದ ಲಿಂಗರಾಜೇಂದ್ರ, ವೀರರಾಜೇಂದ್ರ ವಡಿಯರ, ದೇವಪ್ಪಾಜಿ ಮಹಾರಾಜರು, ಮತ್ತು ಸದ್ಯದ ಶೃಂಗಪುರ ಮತ್ತು ಗೋವಾಪ್ರಾಂತದ ಚಾಂದೀವಾಡಿ ಸ್ವಾಂದಾದ ಅರಸರ ಫೋಟೊ ೯ ಇರುತ್ತವೆ. ಕ್ರಯ ಪೂಲ್ಸ್ಕೈಜು ೧| ರೂ. ಕ್ಯಾಬಿನೆಟ್ ೧೨ ಆಣೆ

ಶ್ರೀಮಜ್ಜಗದ್ಗುರು ಚಿತ್ರದುರ್ಗ ಮಹಾಸ್ವಾಮಿ ಇ-ಅತ್ಯಂತ ಸುಂದರವಾದ ಕೈಬಣ್ಣದ ಫೋಟೋ ಕ್ರಯ ಪ್ರತಿ ೧ ಕ್ಕೆ ರೂ ೧. ಸಾದಾ ರೂ. ||

ಸೂಚನೆ —ಬಹಳ ಖರೀದದಾರರಿಗೆ ಚನ್ನಾಗಿ ಕಮಿಷನ್ ದೊರೆಯುವದು

ವಿಳಾಸ ಗಂಗಪ್ಪ ... ,

ಮಾನೇಜರ್ ದಿ ಶಾರದಾ ಫೋಟೊ ಕಂಪನಿ. ಸೋಲಾಪುರ

NOTICE.

If you want any kind of English or Kanarese Printing, Please write to:

SREENIVAS ELECTRIC PRESS, MYSORE.

AN APPROVED FIRM FOR THE SUPPLY OF STATIONERY ARTICLES TO THE GOVT OF

H. H. the Maharaja of Mysore.

ನಮ್ಮಲ್ಲಿ ಎಲ್ಲಾ ವಿಧವಾದ ಸ್ಟೇಷನರಿ ಸಾಮಾನುಗಳೂ ಫೌಂಟೆನ್ ಪೆನ್ನುಗಳೂ ಪ್ರಿಂಟಿಂಗ್ ಮತ್ತು ರೈಟಿಂಗ್ ಪೇಪರುಗಳೂ, ಎಕ್ಸರ್ಸೈಜ್ ಬುಕ್ಕುಗಳೂ ಸ್ಕ್ರಿಬ್ಲಿಂಗ್ ನೋಟ್ ಬುಕ್ಕುಗಳೂ, ರಫ್ ನೋಟು ಬುಕ್ಕುಗಳೂ, ಡ್ರಾಯಿಂಗ್ ಮತ್ತು ಟೈಪ್‌ರೈಟಿಂಗ್ ಪೇಪರುಗಳೂ, ವರ್ತಕರಿಗೆ ಅನುಕೂಲವಾದ ಅಕೌಂಟು ಬುಕ್ಕುಗಳೂ ಸಹ ಹೊಸದಾದ ಕಾಗದದಿಂದ ತಯಾರಾಗಿ ವಿಕರಕ್ಕೆ ಸಿದ್ಧವಾಗಿವೆ. ದಯಮಾಡಿ ಕಾಗದದಿಂದ ತಯಾರಿಸಿರುವ ಬುಕ್ಕುಗಳನ್ನು ಕಂಡು ನೋಡಬೇಕು. ಬೇಕಾದ ಸಾಮಾನುಗಳಿಗ ಕೂಡಲೆ ಆರ್ಡರ್ ಕೊಡುವಿರಾಗಿ ನಂಬಿದ್ದೇವೆ. ವ್ಯಾಪಾರಸ್ಥರಿಗೆ ಸರಿಯಾದ ಡಿಸ್ಕೌಂಟು ಸಹ ದೊರೆಯುತ್ತೆ 24 5

M N K & Bros
Book Binders & Stationers MYSORE.

SUBBANNA, SANGAPPA,

Receiving and Forwarding Agents, General Merchants and Commission Agents.
Santhepet, Mysore.

Despatch and supply whatever you receive at Mysore Railway Station and whatever food stuffs and Stationaries you want to have from Mysore. Prompt attention, moderate commission and quick disposal are their motto 24–15

ಮೈಸೂರು ರೈಲ್ವೆ ಸ್ಟೇಷನ್‌ನಿಂದ ನೀವು ಹೊಂದಬೇಕಾದ ಸಾಮಾನುಗಳ ರೈಲ್ವೆ ಪಾರ್ಸಲುಗಳನ್ನೂ, ಮೈಸೂರಿನಿಂದ ತರಿಸಿಕೊಳ್ಳಬೇಕಾದ ಸಾಮಾನುಗಳ ಪಟ್ಟಿಯನ್ನೂ

ಮೈಸೂರು ಸಂತೇಪೇಟೆಯಲ್ಲಿರುವ

ಸುಬ್ಬಣ್ಣ ಸಂಗಪ್ಪನವರಿಗೆ ಕಳುಹಿಸಿ

ಅವರು ಜಾಗ್ರತೆಯಾಗಿಯೂ, ಜೋಪಾನವಾಗಿಯೂ, ಸುಲಭವಾದ ಕಮೀಷನ್ನಿನಲ್ಲಿಯೂ ನಿಮಗೆ ಸರಕು ರವಾನಿಸುತ್ತಾರೆ. ಮಿಕ್ಕ ವಿಚಾರ ಬರೆದು ತಿಳಿದುಕೊಳ್ಳಿ.

ಪ್ರಕಟಣೆ.

1922 ನೇ ಇಸವಿಯಲ್ಲಿ ಪ್ರಾರಂಭವಾಗುವ ಪರಿಯಾಯದಲ್ಲಿ ಪಲಿಮಾರು ಮಠದ ಶ್ರೀ ಪಾದಂಗಳವರು ಮಾಡುವ ಉಡುಪಿ ಶ್ರೀ ಕೃಷ್ಣ ದೇವರ ಪೂಜೆಯ ಸಹಾಯಾರ್ಥವಾಗಿ 'ಶ್ರೀಕೃಷ್ಣ ಸೋಸೈಟಿ' ಎಂಬ ಹೆಸರಿನ ಒಂದು ಲೋಟರಿಯಾನ ಸೊಸೈಟಿಯನ್ನು ಏರ್ಪಡಿಸಿಯದೆ. ಟಿಕೇಟಿನ ದರ ಒಂದರ ಒಂದು ರೂ ಆಗಿರುತ್ತದೆ. ಅದರಲ್ಲಿ 1 ನೇ ಇನಾಂ ರೂಪಾಯಿ 2000-0-0 ರದ್ದು, 2 ನೇ ಇನಾಂ ರೂ. 1000-0-0 ರದ್ದು, ರೂ 100 0-0 ರ ಇನಾಂಗಳು 5, ರೂ. 10-0-0 ರ ಇನಾಂಗಳು ನೂರು ರೂಪಾಯಿ 5 ರ ಇನಾಂಗಳು 200 ಎಂತ ನಿಶ್ಚಯಿಸಿಯದೆ. ಆದುದರಿಂದ ಎಲ್ಲ ಸುಜನರುಗಳು ತಮ್ಮ ಶಕ್ತಿವಿಾರಿ ಟಿಕೇಟುಗಳನ್ನು ಪಡದು ಶ್ರೀಹರಿ ವಾಯುಗಳ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸಲಾಗುತ್ತದೆ. ಎಲ್ಲ ಪತ್ರವ್ಯವಹಾರಗಳನ್ನು ಈ ಕೆಳಗಿನ ವಿಳಾಸಕ್ಕೆ ಮಾಡತಕ್ಕದ್ದು.

ಮ್ಯಾನೇಜಿಂಗ್ ಸೆಕ್ರೆಟರಿ
ಶ್ರೀಕೃಷ್ಣ ಸೋಸೈಟಿ.
ಕೊಡಿಯಾಲಬೈಲ್ ಪೋಸ್ಟ್, ದ. ಕ.

ಟಂಕವಿಲ್ಲದ ಒಡವೆಗಳು !! ಅಂದವಾದ ನಮೂನೆಗಳು!!!

ನಂ. 1



ನಂ. 2



ನಂ. 3.



ನಂ. 4



ಸ್ತ್ರೀಯರ ಕೈಗಳಿಗೆ ಅಲಂಕಾರವಾಗಿ ಅಂದವಾದ ನಮೂನೆಯಲ್ಲಿ ಘಟ್ಟಿ ಕರವಾಗಿ ಅಪ್ಪಟ ಸವರನ್ ಚಿನ್ನದಲ್ಲಿ ಯಾವ ಅಳತೆಗೆ ಬೇಕಾದರೂ ಬಳೆಗಳು ತಯಾರಾಗಿ ಸಿದ್ಧವಾಗಿವೆ ಬೇರೆ ಯಾವ ನಮೂನೆ ಬೇಕಾಗಿದ್ದಾಗ್ಯೂ ತಯಾರಿಸಿ ಕೊಡುತ್ತೇವೆ. ಒಂದು ಜತೆ ಬಳೆಗಳು 3 ರಿಂದ 6 ಸವರನ್‌ಗಳ ತೂಕದಲ್ಲಿ ತಯಾರಿಸಲ್ಪಡುತ್ತವೆ

1, 2 ಮತ್ತು 3 ನೆ ನಂಬರು ಬಳೆಗಳನ್ನು ಮಾಡಲು ಕೂಲಿ ಜತೆ 1 ಕ್ಕೆ 7—0—0 ರೂ. ಮತ್ತು 2 ಆಣೆ ತರುಗು ... ದರ. 4 ನೆ ನಂ ಬಳೆಗಳನ್ನು ಮಾಡಲು ಕೂಲಿ ಜತೆ 1 ಕ್ಕೆ 6—0—0 ರೂ. ಮತ್ತು 1 ಆಣೆ ... ದರ

ಬಳೆಗಳಿಗೆ ತಿರುಪುಗಳನ್ನಿಡಬೇಕಾದಲ್ಲಿ ಜತೆ 1 ಕ್ಕೆ 3—0—0 ರೂಪಾಯಿ ಪ್ರತ್ಯೇಕ ಛಾರ್ಜ್ ಮಾಡಲ್ಪಡುತ್ತೆ ಆರ್ಡರು ಜತೆಯಲ್ಲಿ ಸರಿಯಾದ ಅಳತೆಯೂ ಮತ್ತು ಶೇಕಡಾ 10 ರಂತೆ ಮುಂಗಡವೂ ಕಳುಹಿಸಲ್ಪಡಬೇಕು. ಪೋಸ್ಟ್ ಛಾರ್ಜ್ ಅಧಿಕವಾದುದ

52—3 ಇಂಡಿಯನ್ ಜ್ಯೂಯಲರಿ ಮಾರ್ಟ್, ಪೋಸ್ಟ್ ಬಾಕ್ಸ್ ನಂ. 40. ಬೆಂಗಳೂರು ಸಿಟಿ.

ಮಂಜೇರಿ
ಮೋಟಾರ್ ಸರ್ವಿಸ್
ಲಿ ಮಿ ಟೆ ಡ್, ಕ ಲಿ ಕೋ ಟೆ.

ಈ ಕಂಪನಿಯು 1913 ನೇ ಇಸವಿಯ ಕಂಪನಿ ಆಕ್ಟಿಗೆ ಅನುಸಾರವಾಗಿ 1921-1922 ನೇ ಇಸವಿಯ ಮೊದಲನೇ ನಂಬ್ರವಾಗಿ 1921 ನೇ ಏಪ್ರಿಲ್ 4 ನೇ ತಾರೀಖಿನಲ್ಲಿ ರಜಿಸ್ಟ್ರ ಮಾಡಲ್ಪಟ್ಟು 1921 ನೇ ಮೇ 6 ನೇ ತಾರೀಕಿನಲ್ಲಿ ತಮ್ಮ ಕೆಲಸವನ್ನು ನಡಿಸುವದಕ್ಕೆ ಸಮ್ಮತಿ ಸರ್ಟಿಫಿಕೇಟು ಪಡಕೊಂಡಿರುತ್ತದೆ. ಮೇ 25 ನೇ ತಾರೀಕಿನಿಂದ ಕೆಲಸವನ್ನು ಪ್ರಾರಂಭಿಸಿರುವದು.

ಈ ಕಂಪನಿಯ ಮೂಲಧನವು ಮೂರು ಲಕ್ಷ ರೂಪಾಯಿ ಪಾಲುವಂತಿಗೆಯಿಂದ ಸಂಗ್ರಹಿಸಲ್ಪಡಬೇಕು ಪಾಲು 1 ಕ್ಕೆ 10 ರೂಪಾಯಿಯಂತೆಗೆ. ಇದರಲ್ಲಿ ಸದ್ಯಕ್ಕೆ ವಿಕ್ರಯಿಸೋಣಾಗುವ 20,000 ಪಾಲುಗಳಲ್ಲಿ 1540 ಪಾಲುಗಳನ್ನು ಈ ಕಂಪನಿಯ ಚಾಲಕರೇ ಪಡಕೊಂಡಿರುತ್ತಾರೆ.

35130 ರೂಪಾಯಿಯ ಷೇರ್‌ಗಳನ್ನು 1921 ನೇ ಇಸವಿ ಅಗಸ್ಟ 25 ನೇ ತಾರೀಕಿನವರೆಗೆ ಮಾರಲ್ಪಡುತ್ತದೆ.

ಕಂ ಪೆ ನಿ ಯ ಉ ದ್ದೇ ಶ.

ಮುಖ್ಯವಾಗಿ ತಲಚೇರಿಯಿಂದ ಮಡಿಕೇರಿಗೂ, ವಯನಾಡಿಗೂ, ಕಲಿಕೋಟೆಯಿಂದ ವಯನಾಡಿಗೂ, ದಕ್ಷಿಣ ಮಲಬಾರಿನಲ್ಲಿರುವ ಮಂಜೇರಿ, ನಿಲಂಬೂರು ತಿರೂರು ಮೊದಲಾದ ಸ್ಥಳಗಳಿಗೂ ಮೋಟಾರ್ ಬಸ್ ಸರ್ವಿಸ್ ಸ್ಥಾಪಿಸುವದು. ಮತ್ತು ಮೋಟಾರ್‌ಕಾರ್, ಲೋರಿ ಮೊದಲಾದ ವಾಹನಗಳನ್ನು ಓಡ್ಯಾಡಿಸುವದು; ಮೋಟಾರ್ ಬಂಡಿಗಳನ್ನು ರಿಪೇರಿ ಮಾಡುವ ಕಾರ್ಖಾನೆಗಳನ್ನು ಸ್ಥಾಪಿಸುವದು; ಸರ್ವಿಸುಗಳನ್ನು ವಿಸ್ತಾರಮಾಡುವದು, ಇವೇ ಸಂಘದ ಉದ್ದೇಶಗಳಾಗಿವೆ.

ಕಂಪೆನಿಯಲ್ಲಿ ದೊರಕುವ ಅಂದಾಜು ಆದಾಯ

ಈ ಕಂಪೆನಿಯು ಕ್ರಯಕ್ಕೆ ಪಡಕೊಂಡು ನಡಿಸುತ್ತಿರುವ ಮಂಜೇರಿ ಮೋಟಾರ್ ಸರ್ವಿಸಿನ ಗತಿಸಿದ ಲೆಕ್ಕಪತ್ರಗಳನ್ನು ಪರಿಶೋಧಿಸಿದರೆ, ಕ್ಷೇಮನಿಧಿಗೆ ತಕ್ಕಷ್ಟು ಹಣ ಉಳಿಸಿಟ್ಟು ಸುಮಾರು ಶೇಕಡ 25 ರಂತೆ ಪಾಲುಗಾರರಿಗೆ ಆದಾಯ ಕೊಡಬಹುದಾಗಿದೆಂದು ಖಂಡಿತವಾಗಿ ಹೇಳಬಹುದು ಕಾಲಕ್ರಮೇಣ ಇನ್ನಷ್ಟು ಹೆಚ್ಚಿಗೆ ಬಸ್‌ಗಳನ್ನೂ, ಕಾರ್, ಲೋರಿಗಳನ್ನೂ ಓಡ್ಯಾಡಿಸುವದಾದರೆ, ಮೋಟಾರ್ ಕಾರ್ಖಾನೆಗಳನ್ನೂ ಸ್ಥಾಪಿಸುವದಾದರೆ, 100 ಕ್ಕೆ 25 ಕ್ಕಿಂತಲೂ ಹೆಚ್ಚಿನ ಆದಾಯವನ್ನು ನಿರೀಕ್ಷಿಸಬಹುದು.

ವಿ ಶೇ ಷ ಪ್ರ ಯೋ ಜ ನ ಗ ಳು

ಬಹೂ ಜಾಗ್ರತೆಯಿಂದಲೂ ಮುತುವರ್ಜಿಯಿಂದಲೂ ತನ್ನ ಕೆಲಸವನ್ನು ಮಾಡಿ ಎಲ್ಲಾ ಕಡೆಯಿಂದಲೂ ಒಳ್ಳೇ ಹೆಸರನ್ನು ಪಡಕೊಂಡ ಮಂಜೇರಿ ಮೋಟಾರ್ ಸರ್ವಿಸನ್ನು ಈ ಲಿಮಿಟೆಡ್ ಕಂಪೆನಿಯು ಪಡಕೊಂಡದಾಗಿರುತ್ತದೆ

ಈ ಕಂಪೆನಿಯ ಕೆಲಸಗಾರರೆಲ್ಲರೂ ಸಮರ್ಥರೂ ಇದರ ಆಡಳಿತದಾರರು ಒಳ್ಳೇ ಅನುಭವಶಾಲಿಗಳೂ ಆಗಿದ್ದಾರೆ.

ಈ ಕಂಪೆನಿಯ ಪ್ರವೃತ್ತಿಯಿಂದ ಬರುವ ಆದಾಯವು ಕನಸಿನ ಗಂಟಲ್ಲ. ನಿಜವಾಗಿ ಕೈಗಂಟೇ ಆಗಿದೆ ಇತರ ಕಂಪೆನಿಗಳಲ್ಲಿ ಆದಾಯ ಸಿಕ್ಕುವದಕ್ಕೆ ಮೂರು ನಾಲ್ಕು ವರ್ಷ ಕಾಯಬೇಕಾಗುತ್ತದೆ ಇದರಲ್ಲಿ ಹಾಗಲ್ಲ? ಷೇರ್ ತೆಗೆದುಕೊಂಡ ಕೂಡಲೇ ಆದಾಯ ಬರುವದು.

ಸರ್ವರಿಗೂ ಅನುಕೂಲವಾಗುವಂತೆ ಒಂದೊಂದು ಪಾಲಿಗೆ 10 ರೂಪಾಯಿ ಮಾತ್ರ ಇಡೋಣಾಗಿದೆ

ಈ ಲಿಮಿಟೆಡ್ ಕಂಪೆನಿಯು ಕಲಿಕೋಟೆಯಲ್ಲಿ ಮಂಜೇರಿ ಮೋಟಾರ್ ಸರ್ವಿಸನ್ನು ಇದೇ 1921 ನೇ ಮೇ 25 ನೇ ತಾರೀಕಿನಲ್ಲಿ ಮತ್ತು ತಲಚೇರಿಯ ಮೋಟಾರ್ ಸರ್ವಿಸನ್ನು ಇದೇ ಜೂನ್ 1 ನೇ ತಾರೀಕಿನಲ್ಲಿಯು ಬಡಗಾರ ಮತ್ತು ನಾದಾಪುರ ಸರ್ವಿಸನ್ನು 1921 ನೇ ಅಗಸ್ಟ 8 ನೇ ತಾರೀಕಿನಲ್ಲಿ ಹೊಸದಾಗಿ ಪ್ರಾರಂಭಿಸಿರುವದು.

ಪಾಲು ಬೇಕಾದವರು ಕಂಪೆನಿಯ ಅರ್ಜಿ ಫ಼ೋರ್ಮಿನಲ್ಲಿ ಅರ್ಜಿ ಬರೆದು, ತಮಗೆ ಎಷ್ಟು ಪಾಲು ಬೇಕೋ ಅಷ್ಟು ಪಾಲಿಗೆ—ಪಾಲ 1 ಕ್ಕೆ 10 ರೂಪಾಯಿ ಪ್ರಕಾರ ಆಗುವ ಒಟ್ಟು ಹಣವನ್ನು ಅರ್ಜಿಯೊಂದಿಗೆ ಮೇನೇಜಿಂಗ್ ಡೈರೆಕ್ಟರರಿಗೆ ಕಳುಹಿಸತಕ್ಕದ್ದು

ಕಂಪನಿಯ ನಿಯಮಗಳ ಪ್ರತಿಗಳೂ ಅರ್ಜಿ ಫ಼ೋರ್ಮುಗಳು ಕಂಪನಿಯ ಆಫೀಸಿನಲ್ಲಿ ದೊರೆಯುವವು.

ಅರ್ಜಿ ಫ಼ೋರ್ಮು ಸಿಕ್ಕದಿದ್ದರೆ ಅರ್ಜಿದಾರನು ತನ್ನ ಪೂರ್ಣ ಹೆಸರು, ತಂದೆಯ ಹೆಸರು, ಉದ್ಯೋಗ ಮತ್ತು ಮೇಲ್ವಿಳಾಸ ಇವನ್ನು ಸ್ಪಷ್ಟವಾಗಿ ಬರದು, ಅರ್ಜಿಯನ್ನೂ ತಾನು ಅಪೇಕ್ಷಿಸುವ ಪಾಲುಗಳ ಹಣವನ್ನೂ ಮೇನೇಜಿಂಗ್ ಡೈರೆಕ್ಟರರಿಗೆ ಕಳುಹಿಸಿಕೊಡತಕ್ಕದ್ದು.

ಈ ಕಂಪನಿಯ ಸರ್ವಿಸ್ ಈಗ ಕಲಿಕೋಟೆಯಿಂದ ಪುದುಪಾಡಿಗೂ ತಲಚೇರಿಯಿಂದ ಮಾಕೂಟಿಗೂ ಬಡಗರೆಯಿಂದ ನಾದಪುರಕ್ಕೂ ಓಡ್ಯಾಡುತ್ತಿರುವವು.

ಒಳ್ಳೇ ಮೋಟಾರ್‌ಕಾರ್‌ಗಳು ತಲಚೇರಿಯಲ್ಲಿಯೂ ಕಲಿಕೋಟೆಯಲ್ಲಿಯೂ ಬಡಗೆರೆಯಲ್ಲಿಯೂ ಬಾಡಿಗೆಗೆ ದೊರಕುವವು.

1920 ನೇ ಇಸವಿ ಡಿಸೆಂಬರಿನಿಂದ 7 ತಿಂಗಳ ಬಾಬ್ತು ಮಂಜೇರಿ ಮೋಟಾರ್ ಕಂಪನಿಯ ಆದಾಯವೆಚ್ಚದ ಪಟ್ಟಿ

ಬಂಡವಾಳ	60,000—0—0
ಕಲ್ಲಿಕೋಟೆ ತಲಚೇರಿ ಲೈನುಗಳಿಂದ ಉತ್ಪತ್ತಿ ..	48,291—1?—0
ಒಟ್ಟು ಖರ್ಚು ಪೆಟ್ರೋಲ್ ಕಚ್ಚಾ ಸಾಮಾನುಗಳ ...	31 061—?—3
7 ತಿಂಗಳ ಒಟ್ಟು ನಫೆ	17,230—?—?

ಇದರಿಂದ ತಿಂಗಳಿಗೆ 2500 ರೂಪಾಯಿವರೆಗೆ ನಫೆ ಇದೆ ಎಂದು ಪೂರ್ಣ ತಿಳಿಯಿತು.

ಒಂದು ವರ್ಷಕ್ಕೆ 30,000 ರೂ. ನಫೆ ಇದರ ಪೈಕಿ 15,000 ರೂಪಾಯಿ ಬೇರೆ ರಿಸರ್ವ್ ಫಂಡಿನಲ್ಲಿ ಇಟ್ಟರು ಕೂಡಾ ಶೇಕಡಾ 25 ರಂತೆ ನಫೆ ಸಿಕ್ಕಬಹುದು.

B. T. ತಲಚೇರಿ ಸಬ್ ಕಲೆಕ್ಟರು ಬರೆಯುವ ದೇನಂದರೆ :—

ಅಗಸ್ಟ ತಾರೀಕು 26–27–28 ರಲ್ಲಿ ಕ್ವಿಲಾಂಡಿ ತಮರಚೇರಿ ಕುನ್ನಮಂಗಳ ಎಂಬಲ್ಲಿಗೆ ಸರಕಾರಕ್ಕೆ ಉಪಯೋಗವಾಗಿ ಸಿಪಾಯಿಗಳನ್ನು ಕರಕೊಂಡು ಹೋಗಲು ನಿಮ್ಮ ಮೋಟಾರುಗಳನ್ನು ಬಸ್‌ಗಳನ್ನು ಅತಿ ಜಾಗ್ರತೆಯಿಂದ ಕೊಟ್ಟದ್ದು ಸರಿಯಷ್ಟೆ ನಿಮ್ಮಲ್ಲಿ ಕೆಲಸಮಾಡುವ ಕೆಲಸದವರು ಮತ್ತು ಡ್ರೈವರುಗಳು ಅತಿ ಬುದ್ಧಿವಂತರು, ಮತ್ತು ಪೂರ್ಣ ಶ್ರದ್ಧೆಯಿಂದ ಕೆಲಸಮಾಡುವವರು ಆಗಿರುತ್ತಾರೆ. ಮತ್ತು ಇವರಷ್ಟು ಮುತುವರ್ಜಿಯಿಂದ ಕೆಲಸಮಾಡುವಂಥಾ ಕೆಲಸದವರನ್ನು ಈವರೆಗೆ ಎಂದು ನಾನು ಕಾಣಿಲ್ಲ. ಅಲ್ಲಿಗೆ ಇದಕ್ಕೋಸ್ಕರ ಅತಿ ಕೃತಜ್ಞತೆಯುಳ್ಳವರಾಗಿರುತ್ತೇನೆ.

ಇದರಿಂದ ಜನರು ನಮ್ಮ ಕಂಪೆನಿಯನ್ನು ಎಷ್ಟು ಶ್ಲಾಘನೆಮಾಡುತ್ತಾರೆಂಬದು ಪೂರ್ಣ ವ್ಯಕ್ತವಾಗುತ್ತದೆ.

THE

MANJERI MOTOR SERVICE, Ltd.,

CALICUT.

Branches :—

TELLICHERRY AND BADAGARA.

Registered under the Indian Companies Act 1913 as No. 1 of 1921—1922 on the 4th day of April 1921 and prospectus filed on the 6th day of May 1921. Business commenced on the 25th day of May 1921.

AUTHORISED CAPITAL RUPEES THREE LAKHS.

Divided into 30,000 ordinary shares of Rs. 10 each payable fully in cash with application of which 20,000 shares are now offered for subscription at par.

1540 shares are taken by the promoters at present

Rs. 35130 worth shares are sold upto 25th August 1921.

☞ Rs. 12780 worth shares are sold from 1st to 25th August 1921.

OBJECTS.

The Company is formed primarily to establish Motor Bus Services between Tellicherry and Coorg, Wynaad in North Malabar, Calicut and Wynaad, Nilambur and Tirur in South Malabar to establish motor work-shops for the repair of motor vehicles and for the training up of motor machanics and drivers and for the permanent working up of motor bus service in the conveyance of passengers and goods.

ESTIMATED INCOME AND PROSPECT

It is estimated from a perusal of the accounts of the working of the Manjeri Motor Service which the Company has purchased that the Company would be able to declare a dividend of about 25 per cent after setting aside ample reserves for depreciation and reserve fund. As time pass on and more buses and cars and lorries introduced and more routes are opened and workshops established a much higher dividend confidently expected and considered feasible.

SPECIAL ADVANTAGES

The Company has purchased the flourishing concern the Manjeri Motor Service which has been exceptionally lucky all along to earn a good name and maintain the prestige and reputation throughout for its punctuality, regularity and respectability required of a motor service to win the confidence of the travelling public.

The Company is singulary fortunate in securing the services of choicest workmen and efficient and experienced management.

The Company's lines of business are not at all speculative but are reckoned as sure concerns

The Company is in a position to pay a dividend from the very start.

The Company has already taken charge of the Manjeri Motor Service working at Calicut on the **25th day of May 1921** and that of Tellicherry on the **1st June 1921** and Badagara Nadapuram line is newly opened on the **8th August 1921.**

Application for shares should be made in the form of application to the Managing Director together with the full cash value of each share.

Copies of the Memorandum and Articles of Association and of the Prospectus and forms of application can be had at the Office of the Company.

In the absence of application form, the application should clearly state Full, name, Permanent address, Father's name, Profession, Present address and should be sent with the full cash value of the shares to the Managing Director

The Company's service now works between CALICUT--PUDUPADI, TELLICHERRY MAKKUT, BADAGARA NADAPURAM. Reliable pleasure cars **Reo Hupmobile Overland** driven by experienced hands are always available for hire

SUB-COLLECTOR TELLICHERRY WRITES

"Just a line to thank you for the promptness with which you placed your two Cars and one Bus at the disposal of Government on the 26th 27th and 28th for moving troops to Quilandi Tamaracherry and Kunnamangalam" etc etc and concludes " **I never saw more willing workers or more competent drivers than your men.**" This unasked for remarks from the pen of an high official speaks for itself about the merits of the Manjeri Motor Service Ltd., and her staff.

For further particulars apply to:—

J NICHOLAS,

Managing Director

Manjeri Motor Service Ltd., Calicut

ಎಲ್ಲಾ ಚಂದಾದಾರರುಗಳಿಗೆ ವಿಜ್ಞಾಪನೆಗಳು.

ಇದುವರೆಗೆ ಚಂದಾ ಪಾವತಿಮಾಡಲಿಕ್ಕಿರುವ ಪತ್ರಿಕೆ ಚಂದಾದಾರರಿಗೆ ತಮ್ಮ ಬಾಕಿಯನ್ನು ಪಾವತಿಮಾಡಬೇಕೆಂದು ಸೂಚಿಸುತ್ತಾ ಬಂದಿರುವುದು ಸರಿಯಷ್ಟೆ. ಆದರೆ ಸುಮಾರು ೬೦ ರಷ್ಟು ಚಂದಾದಾರರು ಅದನ್ನಲ್ಲಿಯೂ ನಾಡಿನ ಕೆಲಸದ ಜನರು ಈ ವಿಷಯ ಉದಾಸೀನರಾಗಿರುವುದು ಪತ್ರಿಕೆಯ ಮುಂದಾಳುಗಳಿಗೆ ವ್ಯಸನವನ್ನುಂಟುಮಾಡಿವೆ. ಪತ್ರಿಕೆಯು ನಾಡಿನ, ಜನಸಮುದಾಯವನ್ನು ಮುಂದಕ್ಕೆ ತರುವುದಕ್ಕೆ ಹೊರಟಿರುವುದು ಎಲ್ಲಾ ವಾಚಕರಿಗೂ ತಿಳಿಯುದು. ನಾಡಿನ ಜನರಿಗೆ ಈವರೆಗೆ ನಾಲ್ಕು ಕೆಲಸದ ಗಲಾಟೆಯಿಂದ ಹಣವನ್ನು ಜಮೆಮಾಡಿ ಕಳುಹಿಸಲಿಕ್ಕೆ ಅನಾನುಕೂಲವಾಗಿರಬಹುದು. ಆದರೆ ಇನ್ನಾದರೂ ದಯವಿಟ್ಟು ಚಂದಾದಾರರಾದ ದೇಶಾಭಿಮಾನಿಗಳು ಉದಾಸೀನರಾಗದೆ ಬಾಕಿಯನ್ನು ಪಾವತಿಮಾಡಿ ರಶೀತಿ ಪಡೆಯಬೇಕಾಗಿ ಕೋರುತ್ತೇವೆ. ಇದುವರೆಗೂ, ಪತ್ರಿಕೆಯನ್ನು, ಹಣ ಪಾವತಿ ಮಾಡದೆ ಓದುತ್ತಾ ಬಂದು ಕೆಲವು ಜನರು ಪತ್ರಿಕೆಯನ್ನು ನಿರಾಕರಿಸುತ್ತಾ ಬರುತ್ತಿರುವುದು ಕುಂದಾ ನಾಚಿಕೆಯನ್ನುಂಟುಮಾಡುವ ವಿಷಯವಾಗಿದೆ.

ಎಡಿಟರ್

"ಕೊಡಗು"

೧೯೨೧ನೇ ಇಸವಿ ಅಕ್ಟೋಬರ್ ತಾ|| ೧೪ನೇ ಶುಕ್ರವಾರ.

ಪುಸ್ತಕ ಭಂಡಾರ.

"ವಿದ್ಯಾವಿಹೀನಃ ಪಶು" ವಿದ್ಯೆ ಇಲ್ಲದವನು ಹುಲ್ಲು ತಿನ್ನುವ ಪಶುಗಳಿಗಿಂತಲೂ ಕಡಿಮೆಯಾದವನೆಂದು ಜ್ಞಾನಿಗಳು ಹೇಳುತ್ತಾರೆ. ವಿದ್ಯೆ ಇಲ್ಲದೆ ಯಾವ ಜನಾಂಗವೂ ಮೇಲೆಗೆ ಬರಲಾರದು. ಪ್ರಜಾಸಮೂಹವನ್ನು ವಿದ್ಯೆಬುದ್ಧಿಯಲ್ಲಿಯೂ, ನಾಗರೀಕತನದಲ್ಲಿಯೂ, ಜ್ಞಾನದಲ್ಲಿಯೂ ಅಭಿವೃದ್ಧಿಗೆ ತರಬೇಕಾದರೆ ಪುಸ್ತಕಭಂಡಾರಗಳು ವಿಶೇಷ ಸಹಾಯಕಗಳಾಗಿವೆ. ನಾಗರೀಕತನವನ್ನು ಪಡೆದ ಪಶ್ಚಿಮದೇಶಗಳಾದ ಅಮೆರಿಕಾ, ಇಂಗ್ಲೆಂಡ್, ಜರ್ಮನಿ ಮೊದಲಾದ ದೇಶದವರು ಪುಸ್ತಕ ಭಂಡಾರದ ಪ್ರಯೋಜನವನ್ನರಿತು ತಮ್ಮತಮ್ಮ ಪಟ್ಟಣಗಳಲ್ಲಿಯೂ, ಊರುಕೇರಿಗಳಲ್ಲಿಯೂ ಅಸಂಖ್ಯಾತವಾದ ಪುಸ್ತಕ ಭಂಡಾರವನ್ನು ಏರ್ಪಡಿಸಿರುತ್ತಾರೆ. ಅಮೆರಿಕದೇಶದವರು ಊರೂರಿಗೆ ಸಂಚರಿಸುವ ಪುಸ್ತಕಭಂಡಾರವನ್ನು ಮಾಡಿ ಅಜ್ಞಾನವೆಂಬ ಕತ್ತಲೆಯನ್ನು ಜ್ಞಾನದ ಬೆಳಕಿನಿಂದ ಓಡಿಸುತ್ತಲಿದ್ದಾರೆ. ಎಲ್ಲಾ ದೇಶಗಳು ಈ ರೀತಿಯಲ್ಲಿ ಮುಂದುವರಿಯುತ್ತಲಿರುವಾಗ ನಾವೂ ನಮ್ಮ ಜ್ಞಾನವೃದ್ಧಿಗೆ ಮನಃಪೂರ್ವಕವಾಗಿ ಪ್ರಯತ್ನವನ್ನು ಮಾಡಬೇಕಾಗಿದೆ.

ನಮ್ಮದೇಶದಲ್ಲಿ ಅಜ್ಞಾನದಿಂದಲೂ, ದಾರಿದ್ರ್ಯದಿಂದಲೂ, ನಾನ್ನು ಜನರು ತಮ್ಮ ಮಕ್ಕಳಿಗೆ ವಿಶೇಷವಾಗಿ ವಿದ್ಯೆಯನ್ನು ಕಲಿಸುವ ಕಡದೂದು ಮಾಡುವುದಿಲ್ಲ. ಇಲ್ಲದೆ ಅವರು ಮಾದ್ದರಿಂದಲೂ ಅವರಿಗೆ ಅದರ ಯೋಚನೆಯೇ ಇಲ್ಲ. ರೋಗಿಗೆ ನಿರ್ಬಂಧದಿಂದ ಔಷಧಿ ಕುಡಿಸುವಂತೆ ನಾವು ಮೂಢಜನರಿಗೆ ವಿದ್ಯೆಯನ್ನು ಕಲಿಸಲು ಪ್ರಯತ್ನಿಸಬೇಕಾಗಿದೆ. ಇಂಥಾ ವಿದ್ಯೆಯನ್ನು ಶಾಲೆಗಳಲ್ಲಿಯೂ, ಗುರಿಯರ ಉಪದೇಶದಿಂದಲೂ, ವರ್ತಮಾನಪತ್ರಿಕೆಗಳಿಂದ ವಾಚಕಶಾಲೆಯಲ್ಲಿ ಓದುವುದರಿಂದಲೂ, ಸಹವಾಸದಿಂದಲೂ, ಮತ್ತು ಪುಸ್ತಕಭಂಡಾರಗಳ ಮೂಲಕವೂ ಆಗಿ ಗಳಿಸಬಹುದು.

ಪುಸ್ತಕಗಳನ್ನು ಪ್ರಪಂಚದಲ್ಲಿರುವ ಎಲ್ಲಾ ವಸ್ತುಗಳಿಗೆ ಹೋಲಿಸಿದರೆ ಪುಸ್ತಕಗಳೇ, ದೊಡ್ಡ ದೇವಸ್ಥಾನಗಳು, ಉಪಾಧ್ಯಾಯರುಗಳು ಯಾವಾಗಲೂ ಬೋಧಿಸಲು ಸಿದ್ಧರಾಗಿದ್ದು ಸಂಬಳವನ್ನು ಎಂದೂ ಕೇಳರು. ವಿದ್ಯಾರ್ಥಿಗಳನ್ನು ಓದದವರನ್ನು ಒಳ್ಳೆಮಾರ್ಗಕ್ಕೆ ತರುವವರು, ಜನರು ಹಿತಕರವಾದ ನಿಜವಾದ ಸ್ನೇಹಿತರು, ಪ್ರತಿಜಾಗದಲ್ಲಿಯೂ ಮರ್ಯಾದೆ ಹೊಂದುವವರು, ನಮಗೆ ಹೆದರಿಕೆಯ ಕಾಲದಲ್ಲಿಯೂ, ಕಷ್ಟ ಸಮಯದಲ್ಲಿಯೂ ಧೈರ್ಯ ಹೇಳುವವರು. ಪುಸ್ತಕಭಂಡಾರವು ತನ್ನ ಹತ್ತಿರವಿದ್ದರೆ ಮಿತ್ರ ಸಂಪಿತರನ್ನಿಟ್ಟುಕೊಂಡಂತೆ ಆಗುವುದು. ಪುಸ್ತಕಗಳಿಲ್ಲದ ಪಟ್ಟಣ, ನಾಡು, ಊರು ಕೇರಿ ಮನೆಗಳು, ವಿದ್ಯೆಯಿಲ್ಲದ ಮನುಷ್ಯನಂತೆಯೂ, ಜೀವವಿಲ್ಲದ ದೇಹದಂತೆಯೂ, ಬೆಳಕಿಲ್ಲದ ಹೊಗೆಸಿನಂತೆಯೂ, ಪುಸ್ತಕಭಂಡಾರಗಳು (University) ಒಂದು ಸಕಲಕಲಾಶಾಲೆಗೆ ಸಮಾನವೆಂದೂ ಒಬ್ಬಾನೊಬ್ಬ ಕವಿವರ್ಣನೆ ವರ್ಣಿಸಿರುತ್ತಾನೆ. ಪುಸ್ತಕಭಂಡಾರವು ಭೂಲೋಕದಲ್ಲಿರುವ ಎಲ್ಲಾ ವಸ್ತುವನ್ನು ಪ್ರತ್ಯಕ್ಷ ಕಂಡಹಾಗೆ ಮಾಡುವುದು. ಗತಿಸಿದ ಮಹನೀಯರುಗಳ ಚರಿತ್ರೆಯನ್ನು, ಮತ್ತು ಎಲ್ಲಾ ವಿಶೇಷ ಸಂಗತಿಗಳನ್ನು ಪ್ರತ್ಯಕ್ಷ ನೋಡಿದಂತೆ ಮಾಡುವುದು. ಇವರಂತ ಸ್ನೇಹಿತರು ಪ್ರಪಂಚದಲ್ಲಿಲ್ಲ. ಇದರಲ್ಲಿ ಸೌಖ್ಯವನ್ನೂ ಪರದಲ್ಲಿ ಮೋಕ್ಷವನ್ನೂ ಸಂಪಾದಿಸಲಿಕ್ಕೆ ಇದರಷ್ಟು ಒಳ್ಳೆಯ ಹಾದಿ ಬೇರೊಂದಿಲ್ಲ. ಇಂಥಾ ಪುಸ್ತಕಗಳ ಸಹಾಯದಿಂದ, ಅತಿ ಸಮರ್ಥರಾದ ಯಾತ್ರಿಕರನ್ನೂ, ಜ್ಯೋತಿಷ್ಯರನ್ನೂ, ಶಾಸ್ತ್ರಜ್ಞರನ್ನೂ, ಪಂಡಿತರನ್ನೂ, ಕವಿಗಳನ್ನೂ, ದೇಶಾಸೇವಾ ನಿರತರನ್ನೂ, ಶಾಶ್ವತವಾಗಿ ಎದುರುಗೊಳ್ಳಬಹುದು. ಪುಸ್ತಕಭಂಡಾರವನ್ನು ಕಾಮಧೇನು ಕಲ್ಪವೃಕ್ಷಕ್ಕೆ ಹೋಲಿಸಬಹುದು. ಮನುಷ್ಯನು ತಾನು ಮನುಷ್ಯನೆಂದು ಹೇಳಲಿಕ್ಕೆ ಇರುವ ಗುರುತು ಜ್ಞಾನಸಂಪಾದನೆಯಲ್ಲವೇ? ಭೂಲೋಕದಲ್ಲಿ ಅಜ್ಞಾನಿಯಾಗಿರುವವನಷ್ಟು ಪಾಪಿಷ್ಟನು ಬೇರೆ ಯಾರಾದರೂ ಉಂಟೇ? ಆದ್ದರಿಂದ ಇಂಥಾ ಪಾಪವನ್ನು ಹೋಗಲಾಡಿಸುವವರೇ ಪುಣ್ಯಾತ್ಮರು. ಪಾಠಶಾಲೆಗಳಾದರೆ ಅದಕ್ಕಾಗಿ ಏರ್ಪಟ್ಟಿರುವ ವಿದ್ಯಾರ್ಥಿಗಳಿಗೆ ಮಾತ್ರ ಪ್ರಯೋಜನವನ್ನುಂಟುಮಾಡುತ್ತವೆ. ಪುಸ್ತಕ ಭಂಡಾರವಾದರೆ, ವ್ಯವಸಾಯ, ಕೈಗಾರಿಕ ಸರಕಾರಿ ಉದ್ಯೋಗ ವಗೈರೆಗಳಲ್ಲಿ ನಿರತರಾಗಿರುವ ಜನರಿಗೂ ಎಲ್ಲಾ ಬಡಜನರಿಗೂ, ವೃದ್ಧರಿಗೂ, ಸ್ತ್ರೀಯರಿಗೂ, ಮಕ್ಕಳಿಗೂ, ವಿದ್ಯಾದಾನವನ್ನು ಮಾಡುತ್ತದೆ.

ಆಯಾಯ ಪುಸ್ತಕಭಂಡಾರಕ್ಕೆ ಸಂಬಂಧಪಟ್ಟ ಎಲ್ಲಾ ಜನರು ಗರೀಬರು, ಐಶ್ವರ್ಯವಂತರು ಎಂಬ ಭೇದವಿಲ್ಲದೆ ಸೇರಿ ಸಂಘ ಸಂಸ್ಥಾಪನಮಾಡಿಕೊಂಡು ತಮ್ಮ ತಮ್ಮ ತಿಳುವಳಿಕೆಗಳನ್ನು, ಭಾವಗಳನ್ನು ಪ್ರಕಾಶಪಡಿಸುವುದರಿಂದಲೂ ತಾವು ಓದಿದ ವಿಷಯವನ್ನು, ಉಪನ್ಯಾಸಗಳ ಮೂಲಕ ತಿಳಿಸುವುದರಿಂದಲೂ ಅನೇಕ ಪ್ರಯೋಜನಗಳುಂಟಾಗುತ್ತವೆ. ಮನುಷ್ಯನಿಗಿರುವ ಅಲ್ಪವಾದ ದುರ್ಗುಣಗಳನ್ನು ಸತ್ಸಹವಾಸದಿಂದ ದೂರ ಮಾಡಬಹುದು ಮತ್ತು ಭಾಷಾ ವಿಷಯವನ್ನಾಗಲೀ ರಾಜಕೀಯ, ನೀತಿ, ಕೈಗಾರಿಕ, ವಿದ್ಯಾಭಿವೃದ್ಧಿ, ಸಹಕಾರ ಸಮಾಜ ವಗೈರೆ ಅನೇಕ ಸಂಗತಿಗಳಲ್ಲಿ, ಬುದ್ಧಿವಂತರಾದ ಇತರರಿಗೆ ಸರಿಯಾದ ಮಾರ್ಗಗಳನ್ನು ಕಲ್ಪಿಸಬಲ್ಲರು.

ಅನೇಕರಿಗೆ ಓದಲು ಬಹಳ ಇಷ್ಟವಿದ್ದರೂ, ಬಡತನದ ದೆಸೆಯಿಂದ ಗ್ರಂಥಗಳನ್ನು ಕೊಂಡುಕೊಳ್ಳಲಾರರು. ತಮ್ಮ ತಮ್ಮ ಗ್ರಾಮಗಳಲ್ಲಿ ಇಂಥಾ ಪುಸ್ತಕಭಂಡಾರವಿದ್ದರೆ, ಇಂಥಾವರ ಅಭಿಲಾಷೆಯು ನೆರವೇರಬಹುದು. ಮಹನೀಯರ ಚರಿತ್ರೆಗಳನ್ನು ಓದುವುದರಿಂದ ಎಲ್ಲರಿಗೂ ಅವರಂತೆಯೇ, ತಾನೂ ಆಗಬೇಕೆಂಬ ಅಭಿಲಾಷೆಯುಂಟಾಗುತ್ತೆ. ಅನೇಕರು ತಾವು ಓದಿದ ರೀತಿಯೇ ಆಚರಿಸುತ್ತಾರೆ ಮತ್ತು ಶಾಶ್ವತವಾದ ಕೀರ್ತಿಯನ್ನು ಸಹ ಪಡೆಯುತ್ತಾರೆ.

ವಿದ್ಯೆಯೆಂಬ ಧನಕ್ಕಿಂತ ಶ್ರೇಷ್ಠವಾದ ಧನವಿಲ್ಲ. ವಿದ್ಯೆಯಿಂದ ವಿನಯವೂ ವಿನಯದಿಂದ ಪಾತ್ರತೆಯೂ, ಪಾತ್ರತೆಯಿಂದ, ಧನವೂ, ಧನದಿಂದ ಧರ್ಮವೂ ಧರ್ಮದಿಂದ ಸುಖವೂ ದೊರಿಯುತ್ತೆ. ಇಂಥಾ ಸುಖವನ್ನು ಸಂಪಾದಿಸಲಿಕ್ಕೆ ನಮ್ಮಲ್ಲಿ ಪುಸ್ತಕಭಂಡಾರವಿದ್ದರೆ ತೀರಲಿಲ್ಲ. ಅದರ ಸದುಪಯೋಗದ ಕೆಲಸವನ್ನು ಮಾಡುವುದು ವಿಶೇಷ ಮುಖ್ಯದ ಕೆಲಸವಾಗಿದೆ. ದೇಶದ ಕಲಾಕೌಶಲ್ಯವು ಬೆಳೆದಂತೆ ಪುಸ್ತಕಗಳು ಅಗ್ಗವಾದಂತೆ, ಧರ್ಮಾರ್ಥ ಪುಸ್ತಕ ಭಂಡಾರಗಳು ಹೆಚ್ಚಿದಂತೆ ಜನರ ಮನಸ್ಸು ಒಳ್ಳೆಮಾರ್ಗಕ್ಕೆ ಬರುವುದು. ಈ ಪ್ರಕಾರ ನಡೆಯುವ ವಿದ್ಯಾದಾನದಿಂದ ಬಡತನವೂ, ಸೋಮಾರಿತನವೂ ದುರ್ಗುಣಗಳೂ ನೀಗಿ, ದೇಶದ ಜನರು ಉನ್ನತಸ್ಥಿತಿಗೆ ಬರಲು ಸಂಶಯವಿರುವುದಿಲ್ಲ. ಹೊರಗಿನ ದೇಶದ ಯಾವ ದೊಡ್ಡ ಪಟ್ಟಣಗಳಲ್ಲಿ ನೋಡಿದರೂ ಸರಕಾರದವರ ಪ್ರೋತ್ಸಾಹದಿಂದಲೂ ಜನಸಮುದಾಯದ ಉತ್ಸಾಹದಿಂದಲೂ ಆದ ಅನೇಕ ಪುಸ್ತಕಾಲಯಗಳು ಕಾಣಬರುತ್ತವೆ. ಇಂಥಾ ಏರ್ಪಾಡುಗಳನ್ನು ಕಣ್ಣಾರೆ ಕಂಡರೂ, ಕಾಣದಂತೆ ನಟಿಸುವ ನಮ್ಮ ದೇಶದ ಐಶ್ವರ್ಯವಂತರೂ, ವಿದ್ಯಾವಂತರೂ, ಮಹನೀಯರೂ, ಮಹಿಳೆಯರೂ, ತಮ್ಮ ಸಹೋದರ ಮತ್ತು ಸಹೋದರಿ ವರ್ಗದವರ ಅಜ್ಞಾನವನ್ನು ಹೋಗಲಾಡಿಸಲಿಕ್ಕೆ ಮುಂದಕ್ಕೆ ಬಾರದಿರುವುದು ಅತ್ಯಂತ ಶೋಚನೀಯವಾಗಿದೆ.

ನಮ್ಮ ದೇಶದಲ್ಲಿ ಪ್ರತಿಯೊಂದು ಊರುಗಳಲ್ಲಿಯೂ, ದೇವಸ್ಥಾನಗಳಲ್ಲಿಯೂ, ಪುಸ್ತಕಭಂಡಾರಗಳನ್ನು ಏರ್ಪಡಿಸಲು ಬಹಳ ಅನುಕೂಲಗಳಿವೆ. ಇಂಥಾ ಒಂದು ವಾಚಕಶಾಲೆ ಮತ್ತು ಪುಸ್ತಕಭಂಡಾರವನ್ನು, ದೇಶದವರ ಸಹಾಯದಿಂದ ಸ್ಥಾಪಿಸಿರುವ ಒಬ್ಬರಿ ಗ್ರಾಮದವರು ದೇಶದ ಇತರ ಗ್ರಾಮಗಳಿಗೆ ಒಂದು ಒಳ್ಳೆಯ ಉದಾಹರಣೆಯನ್ನು ತೋರಿಸಿರುತ್ತಾರೆ. ಕೊಡಗು ದೇಶದ ಪುಣ್ಯಾತ್ಮರೂ, ಐಶ್ವರ್ಯವಂತರು, ದೇಶಾಭಿಮಾನಿಗಳೆಲ್ಲರೂ ಕೂಡಿ ಕೂಡಗಿನಲ್ಲಿ, ಮಡಿಕೇರಿ, ವಿರಾಜಪೇಟೆಯಲ್ಲಿ ತತ್ಕಾಲಕ್ಕೆ ಪರೋಪಕಾರಾರ್ಥದ ಎರಡು ಪಬ್ಲಿಕ್ ಪುಸ್ತಕಭಂಡಾರವನ್ನು ಏರ್ಪಡಿಸುವ ತೊಂದರೆ ತೆಗೆದುಕೊಂಡು, ಅನ್ಯಗಳ ಶಾಖೆಗಳನ್ನು ಪ್ರತಿ ಊರುಗಳಲ್ಲಿ ಏರ್ಪಡಿಸಲು ಮುಂದಕ್ಕೆ ಬಂದರೆ ನಮ್ಮ ದೇಶದ ಸ್ಥಿತಿಯು, ಜ್ಞಾನಾಭಿವೃದ್ಧಿಯಲ್ಲಿ ಮುಂದಕ್ಕೆ ಬರುವುದರಲ್ಲಿ ಯಾವ ಸಂದೇಹವೂ ಕಾಣುವುದಿಲ್ಲ. ಪೂರ್ವದಲ್ಲಿ ನಮ್ಮ ದೇಶದ ಪುಣ್ಯಾತ್ಮರು ಛತ್ರ, ಕೆರೆ, ಬಾವಿ ದೇವಾಲಯ ವಗೈರೆಗಳನ್ನು ಕಟ್ಟಿಸಿ ಬಹಳ ಪುಣ್ಯಾತ್ಮರೆನ್ನಿಸಿಕೊಳ್ಳುತ್ತಿದ್ದರು. ಆದರೆ ಈಗಲಾದರೋ, ಅಜ್ಞಾನವೆಂಬ ಕತ್ತಲೆಯನ್ನು, ಜನಸಮುದಾಯದಿಂದ ಓಡಿಸುವಷ್ಟು, ಪುಣ್ಯವು, ಲೋಕದಲ್ಲಿ, ಯಾವ ಕಾರ್ಯದಿಂದಲೂ, ಲಭಿಸುವುದಿಲ್ಲವೆಂದು ಶ್ರೀಯುತ ಗೋಪಾಲಕೃಷ್ಣಗೋಖಲೆಯವರಂತ ಪುರುಷ ಶ್ರೇಷ್ಠರೇ ಸಾರಿಸಾರಿ ಹೇಳಿರುತ್ತಾರೆ.

ಪಂಚಮರು.

("ಯಂಗ್ ಇಂಡಿಯಾ" ದಿಂದ—)

ಮದ್ರಾಸ್ ಪ್ರಾಂತ್ಯದ ನನ್ನ ಭಾಷಣಗಳಲ್ಲೂ ಹೆಚ್ಚಾಗಿ ಪಂಚಮರ ಅಂದರೆ ಅಸ್ಪೃಷ್ಯತೆವಿಷಯ ಹೇಳಿರುತ್ತೇನೆ. ಮದ್ರಾಸ್ ಅಧಿಪತ್ಯದಲ್ಲಿ ಅಸ್ಪೃಷ್ಯತೆಯು ಕಠಿಣವಾಗಿರುವಷ್ಟು ಇನ್ನು ಎಲ್ಲಿಯೂ ಇಲ್ಲ. ಪಂಚಮನ ನೆರಳಿನಿಂದಲೇ ಬ್ರಾಹ್ಮಣನಿಗೆ ಅಶುದ್ಧವಾಗುತ್ತೆ. ಅಸ್ಪೃಷ್ಯವರ್ಗಕ್ಕೆ ಸೇರಿದವನು ಬ್ರಾಹ್ಮಣರ ಬೀದಿಗಾಗಿ ಸಹ ಹೋಗಕೂಡದು. ಬ್ರಾಹ್ಮಣೇತರರು ಸಹ ಪಂಚಮರನ್ನು ಈ ರೀತಿಯಾಗಿಯೇ ನೋಡುತ್ತಾರೆ. ಈ ಎರಡು ಪಂಗಡಗಳ ಮಧ್ಯೆ ಇರುವ ಪಂಚಮನು ಪುಡಿಪುಡಿಯಾಗುತ್ತಾನೆ. ಆದರೂ ಮದ್ರಾಸಿನಲ್ಲಿ ಭಾರೀ ಭಾರೀ ದೇವಸ್ಥಾನಗಳಿವೆ. ಜನರು ಬಹಳ ದೇವಭಕ್ತಿಯುಳ್ಳವರಾಗಿದ್ದಾರೆ. ಜನರಾದರೋ ಹಣೆಮೇಲೆ ದೊಡ್ಡ ದೊಡ್ಡ ಬೊಟ್ಟುಗಳನ್ನು ಹಾಕಿಕೊಂಡು, ತಲೆಯಮೇಲೆ ಉದ್ದವಾದ ಕೂದಲುಗಳುಳ್ಳವರಾಗಿ ಶುಚಿಯಾದ ಬಟ್ಟೆಗಳುಳ್ಳವರಾಗಿ ಋಷಿಗಳಂತೆ ಕಾಣುತ್ತಾರೆ. ಈ ಹೊರಗಿನ ತೋರಿಕೆಗಳಲ್ಲೇ ಅವರ ಮತವೆಲ್ಲಾ ತೀರಿಹೋದ ಹಾಗೆ ಕಾಣುತ್ತದೆ. ಒಳ್ಳೇ ಕೆಲಸಗಾರರಾಗಿ ದೇಶಕ್ಕೆ ಪ್ರಯೋಜನವನ್ನುಂಟುಮಾಡುವ ಈ ಜನರ ಕಡೆಗೆ ಜನರು ಬ್ರೈಯರ್ ನೀತಿಯನ್ನು ಶಂಕರ ರಾಮಾನುಜರು ಅವತರಿಸಿದಂಥ ಈ ದಕ್ಷಿಣದೇಶದಲ್ಲಿ ತೋರಿಸುವದು ಬಹಳ ಆಶ್ಚರ್ಯವಾಗಿದೆ. ಈ ಜನರು ಪಂಚಮರ ಕಡೆಗೆ ಸ್ವಾರ್ಥನಿವರ್ತನೆಯನ್ನು ನಡಿಸಿದರೂ ಅವರಲ್ಲಿ ನನಗಿರುವ ನಂಬಿಕೆ ಕಟ್ಟಿಲ್ಲ. ಪಂಚಮರನ್ನು ನಮ್ಮ ಸಂಘದಲ್ಲಿ ಹುಟ್ಟರೋಗಿಗಳಂತೆ ನಾವು ಕಾಣುವದರಿಂದಲೇ ಪ್ರಪಂಚದಲ್ಲೆಲ್ಲಾ ನಮ್ಮನ್ನು ಹಾಗೆಯೇ ಕಾಣುತ್ತಾರೆ. ನಾವು ನಮ್ಮಲ್ಲಿರುವ ದೋಷಗಳನ್ನು ಹೋಗಲಾಡಿಸಿಕೊಂಡರೆ ಇಂಗ್ಲೀಷರು ನಮ್ಮ ಮೇಲಿನ ಅಭಿಪ್ರಾಯವನ್ನು ಖಂಡಿತ ಬದಲಾಯಿಸುತ್ತಾರೆ. ಬಹು ಕಾಲದಿಂದ ಬಂದ ಈ ಕಟ್ಟುಪದ್ಧತಿಯನ್ನು ಒಂದು ವರ್ಷದೊಳಗೆ ಹೋಗಲಾಡಿಸಿಕೊಳ್ಳಲು ಶಕ್ತಿ ಇರುವ ಜನಾಂಗವು, ನಾವು ಹಾಕಿಕೊಂಡಿರುವ ಬಟ್ಟೆಗಳನ್ನು ತೆಗೆದುಹಾಕಿ ಬಿಡುವಷ್ಟು ಸುಲಭದಲ್ಲಿ ಕುಡುಕತನವನ್ನು ಬಿಡುವ ಜನಾಂಗವು, ಬಿಟ್ಟು ಹೋಗಿದ್ದಂಥ ತನ್ನ ಪೂರ್ವದ ಕೈಗಾರಿಕೆಯನ್ನು ಪುನಃ ಸ್ಥಾಪಿಸಿ ಕೆಲಸವಿಲ್ಲದೆ ಇರುವ ಕಾಲದಲ್ಲಿ ಮಾತ್ರ ಕೆಲಸಮಾಡಿ ಒಂದು ವರ್ಷದೊಳಗೆ ಅರುವತ್ತು ಕೋಟಿ ರೂಪಾಯಿ ಕ್ರಯದ ಬಟ್ಟೆಮಾಡುವ ಜನಾಂಗವು ಬಲವಾದ ಜನಾಂಗವೋ ಅದರ ಬಲವನ್ನೆಯು ಪ್ರಪಂಚಕ್ಕೆಲ್ಲಾ ಗೋಚರವಾಗದಿರಲಾರದು. ಅದರಿಂದ ಶುಚೀಕರಿಸುತ್ತಿರುವವನಿಗೂ ಸಹ ದೇವರು ಇದ್ದಾನೆಂತಲೂ ದೇವರ ಇಚ್ಛೆಯೆಂತಲೂ ನಂಬಿಕೆಯಾಗುತ್ತದೆ. ಅದರಿಂದಲೇ ಈ ರೀತಿ ಇಂಡಿಯಾವು ತನ್ನ ಗುಣವನ್ನು ಬದಲಾಯಿಸಿಕೊಂಡರೆ ಪ್ರಪಂಚದಲ್ಲಿರುವ ಯಾವ ಶಕ್ತಿಯಿಂದಲೂ ಇಂಡಿಯಾದೇಶದ ಸ್ವರಾಜ್ಯಸ್ಥಾಪನೆಯನ್ನು ತಡೆಯಲು ಸಾಧ್ಯವಾಗದು. ಆಕಾಶದಲ್ಲಿ ಮೋಡಗಳು ಮುಚ್ಚುತ್ತಿರುವದು ತೋರಿ ಬಂದರೂ ಅಸ್ಪೃಷ್ಯವರ್ಗದವರಿಗೆ ಈ ವರೆಗ ಮಾಡಿದ ಕುಚೀಕಾರಕ್ಕೆ ಮನಸ್ಸುನೊಂದು ಪರದೇಶೀ ಬಟ್ಟೆಗೆ ಬಹಿಷ್ಕಾರ ಹಾಕಿದ ಬಳಿಕಯೇ ಮನಸ್ಸು ನಿಶ್ಚಯಮಾಡಿಕೊಂಡಿರುವ ಇಂಗ್ಲೀಷ್ ಉದ್ಯೋಗಸ್ಥರೂ ಸಹ ಇಂಡಿಯಾದೇಶದವರನ್ನು ಸ್ವತಂತ್ರವಿರುವ ಧೈರ್ಯಜನಾಂಗವೆಂತ ಒಪ್ಪಿಕೊಳ್ಳುತ್ತಾರೆ. ಹಿಂದೂಗಳು ಮನಸ್ಸುಮಾಡಿದರೆ ಪಂಚಮರನ್ನು ತಮ್ಮ ಜೊತೆಗೆ ಸೇರಿಸಿಕೊಂಡು ಅವರಿಗೆ ಬೇಕೆಂತ ಕೇಳುವ ಹಕ್ಕುಗಳನ್ನೇ ಅವರಿಗೂ ಕೊಡುವದು ಸಾಧ್ಯವಿದೆ. ಇಂಡಿಯಾದೇಶವು ಮನಸ್ಸುಮಾಡಿದರೆ ತನಗೆ ಬೇಕಾದ ಆಹಾರವನ್ನಾಗಲಿ ತಾನೇ ಅಡಿಗೆ ಮಾಡಿಕೊಳ್ಳುವಂತೆ ತನಗೆ ಬೇಕಾದ ಬಟ್ಟೆಯನ್ನಲ್ಲಾ ತಾನೇ ಮಾಡಿಕೊಳ್ಳಬಹುದು. ಆದ್ದರಿಂದ ಈ ವರ್ಷದಲ್ಲಿ ಸ್ವರಾಜ್ಯಪಡೆಯಲು ಸಾಧ್ಯವಿದೆಯೆಂತಲೂ ನಾನು ನಂಬುತ್ತೇನೆ. ಈ ಬದಲಾವಣೆ ಬಾಹ್ಯ ಏರ್ಪಾಡುಗಳಿಂದ ಆಗತಕ್ಕದ್ದಲ್ಲ. ಆದರೆ ದೇವರ ದಯವಿದ್ದರೆ ಆಗುತ್ತೆ. ನಮ್ಮೆಲ್ಲರ ಮನಸ್ಸನ್ನೂ ದೇವರು ಬದಲಾಯಿಸುತ್ತಾನೆಂಬುದನ್ನು ಯಾರು ಒಪ್ಪುವದಿಲ್ಲ. ಹ್ಯಾಗೂ ಆಗಲೀ ಪ್ರತಿಯೊಬ್ಬ ಕಾಂಗ್ರೆಸ್ ಕೆಲಸಗಾರನೂ ಸಹ ಅಸ್ಪೃಷ್ಯ ಸಹೋದರನ ಸ್ನೇಹ ಬೆಳಿಸಿ ಹಿಂದೂಗಳಲ್ಲದ ಹಿಂದುಗಳಿಗೆ ಉಪನಿಷತ್ತುಗಳ, ಭಗವದ್ಗೀತೆಯ ಶಂಕರಾಚಾರ್ಯ ರಾಮಾನುಜಾಚಾರ್ಯರ ಹಿಂದೂಮತದಲ್ಲಿ ಎಷ್ಟೇ ಕೀಳಾದರೂ ಒಬ್ಬ ಮನುಷ್ಯನನ್ನೂ ಅಸ್ಪೃಷ್ಯನೆಂದು ಭಾವಿಸಲು ಆಧಾರವಿಲ್ಲವೆಂತ ಬೋಧಿಸಬೇಕು. ಶಾಸ್ತ್ರೀಕ್ತ ಪ್ರಕಾರವೇ ನಡಿಯಬೇಕೆಂತೆನ್ನುವವರಿಗೆ ಈ ಅಸ್ಪೃಷ್ಯತೆಯೆಂಬುದು ಅಹಿಂಸಾ ತತ್ವಕ್ಕೆ ವಿರೋಧವೆಂಬುದನ್ನ ಕಾಂಗ್ರೆಸ್ ಕೆಲಸಗಾರರು ತಿಳಿಸಿಕೊಡಬೇಕು.

ದಿವಂಗತ ಶಣ್ಣೆ ಸುಬ್ರಾಯರು.

ಬಿ. ಎ., ಬಿ. ಎಲ್.,

ಅರಲಿಲ್ಲವು 'ನಮ್ಮ' ಮನದ ಪರಿತಾಪಂ |
ಅರಿದುದು 'ಕೊಡಗಿನ' ಮನೆಯ ಮಣಿದೀಪಂ ||
ಅರಲಿಲ್ಲವು 'ನಮ್ಮ' ಕಂಬನಿಯ ಕೋಪಂ |
ಅರಿದುದು ಭಾಗ್ಯಾಬ್ಧಿಃ ಅಯ್ಯಯ್ಯೋ ಪಾಪಂ ||

ನಮ್ಮ ಊರಿನಲ್ಲಿ ಸುಪ್ರಸಿದ್ಧ ವಕೀಲರಾದ ಶ್ರೀಯುತ ಶಣ್ಣೆಯ ಸುಬ್ರಾಯರನ್ನು ಅರಿಯದವರು ಬಹು ಸ್ವಲ್ಪ ಮಂದಿ. ಸಹಕಾರದ ಬೀಜವನ್ನು ಬಿತ್ತಿ ಅದು ಫಲೋನ್ಮುಖವಾಗುವಷ್ಟರಲ್ಲಿ ಮರಣ ಹೊಂದಿದ ನಮ್ಮ ರಾಯರು ಮಡಿಕೇರಿಯ ನಾಲ್ಕೈದು ಸಹಕಾರ ಸಂಘಗಳ ಅಧ್ಯಕ್ಷರಾಗಿದ್ದರು, ಸಂಘಗಳ ಪರಿಪಾಲಕರಾಗಿದ್ದರು. ಸಂಘಗಳ ಸೇವಕರಾಗಿದ್ದರು ಮಾತ್ರವಲ್ಲ. ಹಿಂದುಳಿದ 'ಬಾಡಗಲ್ಲಿ'ಯರಲ್ಲೂ ಕೂಡ ಸಹಕಾರ ಸಂಘವನ್ನು ಏರ್ಪಡಿಸಿ ಕೆಲಸಮಾಡುತ್ತಿದ್ದ ಈ ಬ್ರಾಹ್ಮಣೋತ್ತಮರು ಪಂಚಮರನ್ನು ಮುಟ್ಟಬಾರದೆನ್ನುವ ಹಲವರಿಗೆ ಆದರ್ಶಸ್ವರೂಪಿಯರಾಗಿದ್ದಾರೆ ಮತ್ತೆ ವೃದ್ಧರಾದರೂ ಬಾಲಕಸುಧಾರಕ ಸಂಘ, ಮ್ಯುನಿಸಿಪಾಲಿಟಿ ಇತ್ಯಾದಿ ಸಂಘಗಳಲ್ಲೂ ಕೂಡ ಉಪಾಧ್ಯಕ್ಷರಾಗಿ ಕೆಲಸ ನೋಡುತ್ತಿದ್ದುದು "ವೇಳೆಯಿಲ್ಲ" ಎಂದೆನ್ನುವ ನಾಗರೀಕ ತರುಣರಿಗೆ ಉದಾಹರಣೆಯಾಗಿದೆ. ಸ್ವಲ್ಪದರಲ್ಲಿ ಹೇಳುವುದಾದರೆ ರಾಯರು ತೀರಿಹೋದುದು ಕೊಡಗಿನ ರತ್ನಗಳ ಮಣಿಗಳಲ್ಲಿ ಒಂದು ಕಳಕೊಂಡಂತಾಯಿತು. ಇದನ್ನು ಪ್ರತಿ ದೊರಕಿಸುವುದು ಬಹಳ ಕಷ್ಟ.

ರಾಯರು ಸ್ವರ್ಗಸ್ಥರಾದಾಗ್ಯೆ ಐವತ್ತು ವರುಷಕ್ಕೆ ಪಾದಾರ್ಪಣೆ ಮಾಡುತ್ತಿದ್ದರಷ್ಟೆ. ರಾಯರಿಗೆ ಮೂವರು ಸಹೋದರರಿಂದೊಡಗೂಡಿದ ಸಂಸಾರವಿದೆ. ಈ ಸಂಸಾರಕ್ಕೂ ಮತ್ತು ರಾಯರ ಸಹೋದರರಿಗೂ 'ಕೊಡಗು' ಪತ್ರಿಕೆಯ ಸಂತಾಪವು ಈ ಮೂಲಕ ಸೂಚಿಸೋಣವಾಗಿದೆ.

ಮೈಸೂರಿನಲ್ಲಿ ಈ ವರುಷ ನಡೆದ ನವರಾತ್ರಿ ಮಹೋತ್ಸವ.

ಮೇಲ್ಕಂಡ ಮಹೋತ್ಸವವು ಇದೇ ತಿಂಗಳು 2 ನೇ ತಾರೀಖು ಭಾನುವಾರ ಪ್ರಾರಂಭವಾಯಿತು. ಈ ದಿನ ಪ್ರಾತಃಕಾಲ 9 ಘಂಟೆಗೆ ಸಿಂಹಾಸನಾರೋಹಣವಾಯಿತು. ದಿವಾನ್‌ರಿಂದಲೂ, ಬಾಸಾ ಅಳಿಯಂದಿರುಗಳಿಂದಲೂ ಇತರ ಸರದಾರರು, ಸಿವಿಲ್ ಮತ್ತು ಮಿಲಿಟರಿ ಆಫೀಸರುಗಳಿಂದಲೂ ಮತ್ತು ಇತರರಿಂದಲೂ ನಜರ್ ಒಪ್ಪಿಸಲ್ಪಟ್ಟಿತು.

ಪ್ರಾತಃಕಾಲ ಮತ್ತು ಸಾಯಂಕಾಲಗಳಲ್ಲಿ ಪಟ್ಟದ ಆನೆ ಕುದುರೆಗಳು ದೇವತಾಪೂಜೆಯನ್ನು ದೊಡ್ಡಕೆರೆಯ ಬಳಿಯಲ್ಲಿ ತೀರಿಸಿಕೊಂಡು ಅರಮನೆಗೆ ಬಂದನಂತರ ದರ್ಬಾರು ಮುಗಿಸಲ್ಪಡುತ್ತಿತ್ತು.

ತಾ|| 3 ನೇ ಸೋಮವಾರ ,, 4 ನೇ ಮಂಗಳವಾರ ,, 5 ನೇ ಬುಧವಾರ ,, 6 ನೇ ಗುರುವಾರ ,, 7 ನೇ ಶುಕ್ರವಾರ ,, 8 ನೇ ಶನಿವಾರ ,, 9 ನೇ ಭಾನುವಾರ	ಈ ದಿನಗಳಲ್ಲಿ ಪ್ರಾತಃಕಾಲ 8 ಘಂಟೆ ಮತ್ತು ಸಾಯಂಕಾಲ 6 ಘಂಟೆಗೆ ಪಟ್ಟದ ಆನೆ ಮತ್ತು ಪಟ್ಟದ ಕುದುರೆ ಕೆರೆಬಳಿಗೆ ಬಿಜಮಾಡುತ್ತಿದ್ದವು. ಸಾಯಂಕಾಲ 7 ಘಂಟೆಗೆ ದರ್ಬಾರು ಪ್ರಾರಂಭವಾಗುತ್ತಿತ್ತು.

ಕೆರೆಯಬಳಿಯಲ್ಲಿ ಪಟ್ಟದ ಆನೆ ಕುದುರೆಗಳು ದೇವತಾ ಪೂಜೆಯನ್ನು ತೀರಿಸಿ ವಾಪಸ್ ಅರಮನೆಗೆ ಬಂದನಂತರ ದರ್ಬಾರ್ ಮುಗಿಸಲ್ಪಡುತ್ತಿತ್ತು.

ತಾ|| 10 ನೇ ಸೋಮವಾರ ಪ್ರಾತಃಕಾಲ 8 ಘಂಟೆಗೆ ಪಟ್ಟದ ಆನೆ ಪಟ್ಟದ ಕುದುರೆ ಮತ್ತು ಆಯುಧಗಳು ಕೆರೆಯಿಂದ ಅರಮನೆಗೆ ಬಿಜಮಾಡಿದವು. ಅನಂತರ ಅರಮನೆಯ ಮುಂಭಾಗದಲ್ಲಿ ನಿರ್ಮಿತವಾಗಿದ್ದ ಕಿಸಕಾಜಿ[illegible] ಮಂಟಪದಲ್ಲಿ ಶ್ರೀಮಾನ್ ಮಹಾರಾಜರವರು ಮತ್ತು ಯುವರಾಜರವರು ಆಯುಧಗಳು ಶಸ್ತ್ರಾದಿಗಳ ಪೂಜೆಯನ್ನು ನೆರವೇರಿಸಿದರು. ಈ ದಿನ ಸಾಯಂಕಾಲ 7 ಘಂಟೆಗೆ ದರ್ಬಾರ್ ನಡೆಯಿತು. (ಯೂರೋಪಿಯನ್‌ಗೆಸ್ಟ್ ನಂತರ ನೋಟ್ಸ್‌ಗಿಸ್ಟ್)

ತಾ|| 11 ನೇ ಮಂಗಳವಾರ.—ಪ್ರಾತಃಕಾಲ 9 ಘಂಟೆಗೆ ಆಯುಧಗಳು ಶಸ್ತ್ರಗಳು ಬನ್ನಿಮಂಟಪಕ್ಕೆ ಬಿಜಮಾಡಿದವು. ಅನಂತರ ಜಟ್ಟೀಕಾಳಗಗಳು ನಡೆದವು. ಸಾಯಂಕಾಲ 4 ಘಂಟೆಗೆ ಜಂಬೂಸವಾರಿ ಅತಿ ವಿಜೃಂಭಣೆಯಿಂದ ನಡೆಯಿತು. ಬನ್ನೀಮಂಟಪದಿಂದ ಸವಾರಿಯು 10½ ಘಂಟೆಗೆ ಅರಮನೆಗೆ ಹಿಂತಿರುಗಿತು. ನಂತರ ಅಂಬಾವಿಳಾಸದಲ್ಲಿ ದರ್ಬಾರ್ ನಡೆಯಿತು.

ತಾ|| 12 ನೇ ಬುಧವಾರ:—ಸಾಯಂಕಾಲ 7 ಘಂಟೆಗೆ ದರ್ಬಾರು. ಹಿಂದೆ ದರ್ಬಾರುಗಳಲ್ಲಿ ನಜರನ್ನು ಒಪ್ಪಿಸದಿರುವ ಸಿವಿಲ್, ಮಿಲಿಟರಿ ಮತ್ತು ಪೋಲೀಸ್ ಆಫೀಸರುಗಳಿಂದಲೂ ಮತ್ತು ಕೆಲವು ಪ್ರಜಾಪ್ರತಿನಿಧಿಗಳಿಂದಲೂ ನಜರ್ ನಡೆಯಿತು.

ತಾ|| 13 ನೇ ಗುರುವಾರ ಸಾಯಂಕಾಲ 7 ಘಂಟೆಗೆ ದರ್ಬಾರ್. ಉಳಿದ ಪ್ರಜಾಪ್ರತಿನಿಧಿಗಳಿಂದ ನಜರ್ ನಡೆಯಿತು.

ಮೇಲ್ಕಂಡ ಮಹಾ ಉತ್ಸವಗಳು ಅತಿವಿಜೃಂಭಣೆಯಿಂದ ನಡೆದವು. ಇದನ್ನು ನೋಡಲು ನಮ್ಮ ದೇಶದಿಂದಲೂ ಮತ್ತು ಇತರ ದೂರದೇಶಗಳಿಂದಲೂ ಅಲ್ಲದೆ ಸುತ್ತಮುತ್ತಿನ ಹಳ್ಳಿಗಳಿಂದಲೂ ಅನೇಕಜನಗಳು ನೆರೆದಿದ್ದರು. ತಾ|| 11ನೇ ಮಂಗಳವಾರ ಜಂಬೂಸವಾರಿ ಹೊರಟನಂತರ ಸ್ವಲ್ಪ ಮಳೆಯು ಪ್ರಾರಂಭವಾಯಿತು. ಇದು ಸ್ವಲ್ಪಕಾಲದಲ್ಲಿಯೇ ನಿಂತುಹೋಯಿತು. ನಂತರ ರಾತ್ರಿಯಲ್ಲಿ ಉತ್ಸವವು ವಾಪ್ಸು ಬರುವ ದಾರಿಯುದ್ದಕ್ಕೂ ಅನೇಕಾನೇಕ ದೊಡ್ಡಮನುಷ್ಯರು ತಮ್ಮ ತಮ್ಮ ರಾಜಭಕ್ತಿ ವಿಶ್ವಾಸಗಳನ್ನು ತೋರಿಸುವ ಉದ್ದೇಶ್ಯ ಅವರವರ ಮನೆ ಅಥವಾ ಅಂಗಡಿಗಳ ಎದುರಿನಲ್ಲಿ ಶ್ರೀಮನ್ ಮಹಾರಾಜರವರ ಭಾವಚಿತ್ರಗಳನ್ನು ಬಹುಮಟ್ಟಿಗೆ ಅಲಂಕಾರಗಳನ್ನು ಮಾಡಿದ್ದರು ಮತ್ತು ಶ್ರೀಮನ್ ಮಹಾರಾಜರಿಗೆ ತಮ್ಮ ಕೃತಜ್ಞತೆಯನ್ನು ತೋರ್ಪಡಿಸುವ ಉದ್ದೇಶ್ಯ ನಜರ್ ಗಳನ್ನು ದಾರಿಯಲ್ಲಿಯೇ ಒಪ್ಪಿಸಿದರು. ಉತ್ಸವವು ತೃಪ್ತಿಕರವಾಗಿ ನೆರವೇರಿತು.

ಬಿ. ಎಸ್. ಎಲ್.

ಸೂಚನೆ.

ಶ್ರೀ ಶಾಸ್ತ್ರಿ ಸಂಕ್ರಮಣ ಹಬ್ಬದಿಂದ ಬರುವ ವಾರದ ತಾ|| 30-10-21 ರ "ಕೊಡಗು" ಪತ್ರಿಕೆಯು ಪ್ರಕಟಿಸಲ್ಪಡುವುದಿಲ್ಲವೆಂಬುದನ್ನು ವಾಚಕರು ತಿಳಿಯತಕ್ಕದ್ದು.

ಎಡಿಟರ್

ವರ್ತಮಾನ ಸಂಗ್ರಹ.

ಒಳದೇಶ.

ವೀರರಾಜೇಂದ್ರ ಪೇಟೆಯಲ್ಲಿ ಪ್ಲೇಗಿನ ಇಲಿಯು ಸತ್ತ ವರ್ತಮಾನ ಕೇಳುತ್ತೇವೆ.

ಕಳೆದವಾರದ ಒಹಿರಂಗಪತ್ರಕ್ಕೆ ರುಜುಮಾಡಿದ್ದ ಮನೆಯಪಂಡ್ರ ತಿಮ್ಮಯ್ಯ ಎಂಬುದರ ಬದಲು ಮನೆಯಪಂಡ್ರ ನಾಣೈಯ್ಯ ಎಂದಾಗಬೇಕು.

ದೇಶದಲ್ಲೆಲ್ಲಾ ಈಗ ಬಿಸಿಲು ಕಾಯುತ್ತಾ ಮಧ್ಯೆ ಒಂದೊಂದು ಅಡ್ಡಮಳೆಯು ಬೀಳುವದರಿಂದ ಭತ್ತದ ಬೆಳೆಯು ತಕ್ಕಮಟ್ಟಿಗೆ ವೃದ್ಧಿಯಾಗುತ್ತಾ ಬರುತ್ತಿದೆ.

ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದಂತೆ ಕಾವೇರಿಯಲ್ಲಿ ತೀರ್ಥ ಉದ್ಭವ ಅಕ್ಟೋಬರು ತಾ|| 14 ರಲ್ಲಿ ಅಲ್ಲ. ತಾ|| 16 ನೇ ಆದಿತ್ಯವಾರ ರಾತ್ರಿ 2 ಗಂಟೆಗೆ ಆಗುತ್ತದೆ.

ಮೂನರ್ಾಡಿನ ನೇಂದಿ ಗುತ್ತಿಗೆಯನ್ನು ಮುಂಡಂಡ್ರ ನಂಜಪ್ಪನವರು 400 ರೂ. ಗೆ ತೆಗೆದುಕೊಂಡಿದ್ದಾರಾದುದರಿಂದ ಅವರನ್ನು ಆ ನಾಡಿನ ಪ್ರಾಂತಿಕ ಸಭೆಯವರು ಬಹಿಷ್ಕಾರ ಇಟ್ಟಿರುತ್ತಾರಾಗಿ ತಿಳಿಯಬರುತ್ತದೆ.

ಕೋಡಿರ ಬೆಳ್ಯಪ್ಪನವರ ಮರಣದ ವಿಷಯ ಸೆಷನ್ಸ್ ಕೋರ್ಟಿನಲ್ಲಿ ನಡೆಯುತ್ತಿದ್ದ ಮೊಕದ್ದಮೆಯಲ್ಲಿ ಅಪರಾಧಿಯಾದ ಕೋಡಿರ ಅಪ್ಪಯ್ಯನವರಿಗೆ 150 ರೂ. ಜುಲ್ಮಾನೆ ವಿಧಿಸಲ್ಪಟ್ಟಿದೆ. ಅಪರಾಧಿಯು ಅಪ್ಪೀಲು ಮಾಡುತ್ತಾರಂತೆ.

ಕಾವೇರಿ ಜಾತ್ರೆಯ ಸಮಯದಲ್ಲಿ ಈ ಪತ್ರಿಕೆಯ ಸಂಪಾದಕರು ಯಾ ಸೆಕ್ರೆಟರಿಯವರು ಕಾವೇರಿಯಲ್ಲಿಯೂ ಬಲಮುರಿಯಲ್ಲಿಯೂ ಇರುವದರಿಂದ ಜನರು ತಮ್ಮ ತಮ್ಮ ಪತ್ರಿಕೆಯ ಚಂದಾಹಣವನ್ನು ಪಾವತಿ ಮಾಡಬೇಕಾಗಿ ಕೋರಿಕೆ.

ಸರಕಾರದವರು ಮಡಿಕೇರಿಯಲ್ಲಿರುವ ಕೊಡಗು ಡಿಸ್ಟ್ರಿಕ್ಟ್ ಪ್ರೆಸ್ಸನ್ನು (ಛಾಪಾಖಾನೆ) ತೆಗೆದುಬಿಟ್ಟು ಸರಕಾರಿ ಪ್ರಿಂಟಿಂಗ್ ಕೆಲಸಗಳನ್ನು ಬೆಂಗಳೂರು ಗವರ್ನಮೆಂಟ್ ಪ್ರೆಸ್ಸಿನಲ್ಲೇ ಮಾಡಿಸುವ ಇರಾದೆ ಪಟ್ಟಿರುತ್ತಾರೆಂದು ತಿಳಿಯುತ್ತೇವೆ.

ಸೋಮವಾರಪೇಟೆಯಲ್ಲಿ ಹೆಡ್ ಕ್ವಾರ್ಟರ್ಸ್ ಆಗಿದ್ದ ಡಿ. ಪಿ. ಡಬ್ಲ್ಯು ಇಲಾಖೆಯ 3 ನೇ ಸಬ್ ಡಿವಿಜನ್ನನ್ನು ಈ ತಿಂಗಳಲ್ಲಿ ತೆಗೆದುಹಾಕಿ ಅಲ್ಲಿ ಸಬ್ ಡಿವಿಜನಲ್ ಆಫೀಸರಾಗಿದ್ದ ಸ್ಟಾಫ್ ಸಾರ್ಜಂಟ್ ಹೇಗ್ ಎಂಬವರನ್ನು ನೀಲಗಿರಿಗೆ ವರ್ಗಾಯಿಸಿರುತ್ತಾರೆ.

ಕಿಗ್ಗಾಲು ಗ್ರಾಮದವರು ತಾವು ಪಟ್ಟಂದಮಾಡಿಕೊಂಡು ನೇಂದಿ ಇಳಿಸುವದನ್ನು ಇಷ್ಟರವರೆಗೆ ನಿಲ್ಲಿಸಿ ಈಗ ಪುನಃ ಕೆಲವರು ನೇಂದಿ ಇಳಿಸಲು ತೊಡಗಿರುವದು ಬಹಳ ವ್ಯಸನಕರವಾದ ಮತ್ತು ನಾಚಿಕೆಕರವಾದ ಸಂಗತಿ ಎಂದು ಒಬ್ಬ ಗ್ರಾಮಾಭಿಮಾನಿಯು ಬರೆದಿರುತ್ತಾರೆ.

ಪೊನ್ನಂಪೇಟೆ ಪೋಸ್ಟಾಫೀಸಿನಲ್ಲಿ ಸ್ಟಾಂಪು ಕಾರ್ಡುಗಳು, ಸ್ಟಾಂಪುಮೊದಲ ಆಫೀಸಿನಲ್ಲಿ ಸ್ಟಾಂಪು ಕವರುಗಳು ಬೇಕಾದಹಾಗೆ ತಕ್ಕ ಸಮಯದಲ್ಲಿ ಸಿಕ್ಕದೆ ಬಹಳ ತೊಂದರೆಯಿಂದಲೂ ಇದೆರಡನ್ನೂ ಪೋಸ್ಟಾಫೀಸಿನಲ್ಲಿ ಮಾರಾಟಕ್ಕೆ ಇಟ್ಟರೆ ಇದಕ್ಕಿಂತ ತೊಂದರೆಯಾಗುವದಿಲ್ಲವೆಂದೂ ಒಬ್ಬರು ಬರೆಯುತ್ತಾರೆ.

ನಾಲ್ಕೇರಿ ಗ್ರಾಮದಲ್ಲಿ ಭದ್ರಕಾಳಿ ದೇವರಿಗೆ ನಡೆಯದೆ ಸುಮಾರು ಮೂರು ತಿಂಗಳಾಯಿತೆಂದೂ ಯಂಡ್ರ ಬೆಳ್ಯಪ್ಪನವರ ಕಾಲದಲ್ಲಿ ಊರು ಉನ್ನತಸ್ಥಿತಿಯಲ್ಲೂ, ಈಗ ಹಾಳಾಗುತ್ತಾ ಬಂದಿರುವ ಈ ಏಳಿಗೆಗಾಗಿ ಬಿದ್ದಂಡ್ರ ಸುಬ್ಬಯ್ಯನವರು ಬಹಳ ಶ್ರಮಿಸುತ್ತಿದ್ದಾರೆಂದು ಒಂದು ಬಾತ್ಮಿ ಬಂದಿದೆ.

ತಾರೀಖು 10 ನೇ ದಿನ ಸಾಯಂಕಾಲ ಮ[illegible] ವೇದಾಂತ ಕ್ಲಬ್ಬಿನಲ್ಲಿ ಸರಸ್ವತಿ ಪೂಜೆಯು ನಡೆಯಿತು. ಕೃಷ್ಣಮೂರ್ತಿಯವರು ಸರಸ್ವತಿಪೂಜೆಯ ವಿಷಯ ಉಪನ್ಯಾಸವನ್ನು ಓದಿದರು. ಮೆ|| ಶ್ಯಾಮಣ್ಣನವರು ಸರಸ್ವತಿ ವಿಷಯ ಒಂದು ಕಥೆಯನ್ನು ಹೇಳಿ, ಪೂಜೆತೀರಿಸಿ, ಪ್ರಸಾದ ಪಂಚಿ ಸಭೆಯನ್ನು ಮುಕ್ತಾಯ ಮಾಡಿದರು.

ಸಪ್ಟಂಬರ್ ತಾ|| 15 ರಲ್ಲಿ ವೀರರಾಜಪೇಟೆಯಿಂದ ಬಿಟ್ಟಂಗಾಲಕ್ಕೆ ಹೋಗುವ ರಸ್ತೆಯ ಬಳಿಯಲ್ಲಿ ಬೇಟೆ[illegible] ಒಂದು ಅಪೂರ್ವವಾದ ದೊಡ್ಡ ಹುಲಿಯನ್ನು ಮ[illegible] ದಂಡ ನಂಜುಂಡನವರೂ ತಾ|| 29 ರಲ್ಲಿ ನಂಜಾ[illegible] ಉಳಿ ಕೂತು ಒಂದು ಭಾರಿ ಹೆಬ್ಬುಲಿಯನ್ನು ಪಟ್ಟೇಲ ಎನ್ ಸಣ್ಣಯ್ಯಗೌಡರೂ ಗುಂಡು ಹೊಡೆದು ಕೊಂದಿದ್ದಾರೆ.

ತಾ|| 5-10-21 ರಲ್ಲಿ ದೇವಂಗೇರಿ[illegible] ನವರ ಪತ್ನಿ ಸುಬ್ಬಮ್ಮನವರು ತ[illegible] 72 ನೇ ವಯಸ್ಸಿನಲ್ಲಿ ನಿಧನವಾದರು. ಇವರು ಐದಾರು ವರ್ಷಗಳಿಂದ [illegible] ವಿನಿಂದ ಸಂಕಟಪಡುತ್ತಿದ್ದ[illegible] ಇವರನ್ನು [illegible] ಒಂದೇ ಹಾಸಿಗೆಯಲ್ಲಿದ್ದು ಕೊ[illegible] ಆದಾರದಿಂದ ಉಪಚರಿಸಿದ್ದು ಶ್ಲಾಘನೀಯ ಸಂಗತಿಯಾಗಿದೆ.

ಕಿಗ್ಗಾಲು ಗ್ರಾಮದ ಪಡಿಕ್ಕಲ್ಲಂಡ್ರ ಸುಮಾರು ವರ್ಷ ಪ್ರಾಯದ ಕುಟ್ಟಪ್ಪನೆಂಬ ಯುವಕನು ತಾ|| [illegible] ಗದ್ದೆಯಲ್ಲಿ ನೀರು ನೋಡುತ್ತಾ ಇರುವಾಗ ಸಿಡಿಲು ಬಡಿದು ಮೃತಪಟ್ಟನು. ಅವನು ಹಾಕಿಕೊಂಡಿದ್ದ ಗೊರಗವು [illegible] ಚೂರಾಗಿ ಹೋದದಲ್ಲದೆ ಮೈಯಲ್ಲಿದ್ದ ಬಟ್ಟೆ[illegible] ಸುಟ್ಟಂತಾಗಿದ್ದು ಅವನ ತಲೆಯ ಹಿಂಭಾಗದಲ್ಲಿ ಕುತ್ತಿ[illegible] ವರೆಗೆ ಬಲವಾದ ಗಾಯವಾಗಿತ್ತಂತೆ.

ಮಡಿಕೇರಿ — ಇಲ್ಲಿ ತಾರೀಖು 9 ರಲ್ಲಿ ಶ್ರೀರ[illegible] ಭಜನ ಮನೆಯಲ್ಲಿ ದೇವರ ಪೂಜೆ ವಗೈರೆ ಬಹಳ ವಿಜೃಂಭಣೆಯಿಂದ ನಡೆಯಿತು. ಅಲ್ಲದೆ ಹರಿಕಥೆ ಸಹ ನಡೆಯಿತು. [illegible]ಕ್ಕೆ ಕೃಷ್ಣಸ್ವಾಮಿ ಪಿಳ್ಳೆಯವರು ಬಹು ತೊಂದರೆ ತೆಗೆದುಕೊಂಡಿರುತ್ತಾರೆ. ಅಲ್ಲದೆ ತಾರೀಖು 11 ರಲ್ಲಿ ನದರಿ [illegible] ಮನೆಯಿಂದ ಬಹಳ ಅಲಂಕಾರವಾಗಿ ಒಂದು ಮಂಟಪವನ್ನು ತಯಾರಿಸಿ ಮೆರವಣಿಗೆ ಮಾಡಿದರು.

ಶನಿವಾರಸಂತೆಯಲ್ಲಿ ತಾ|| [illegible] ನೇ ಪ್ರಾತಃಕಾಲ [illegible]ತ್ತದೊಂದು ಮಳೆ ಬಿತ್ತು. ಇದುವರೆಗೂ ಮಳೆ ಹಸ[illegible] ಇಲ್ಲ. ಈ ಮಳೆಯಿಂದ ಪೈರಿಗೆ ಚೆನ್ನಾಗಿ ಸಹಾಯವಾಯಿತು. ಬತ್ತದ ಪೈರೆಲ್ಲಾ ಹೊಡೆಯಾಗಿದೆ. ನಾಟಿ ಪೈರು ಕಷ್ಟ ಹತ್ತಿ ಚೆನ್ನಾಗಿದೆ. ದವಸಗಳ ಧಾರಣೆಯು ದಿನೇದಿನೇ ಏರಿಬಾಗುತ್ತಾ ಇದೆ. ಮೈಸೂರು ಪ್ರಾಂತ್ಯಕ್ಕೆ ಇಲ್ಲಿಂದ ಭತ್ತವೆಲ್ಲ ಸಾಗಿಹೋಗುತ್ತಾ ಇರುವದೇ ಇದಕ್ಕೆ ಕಾರಣ. ಇದೇ ಸೂರಿ ಇನ್ನು 3-4 ಹದ ಮಳೆಯಾದರೆ ದವಸಗಳ ಧಾರಣೆಯು ಇಳಿದು ಜನಗಳ ತಲ್ಲಣವು ಶಾಂತವಾಗಬಹುದೆಂದು ನಮ್ಮ ಸ್ವಂತ ಬಾತ್ಮಿದಾರರು ತಿಳಿಸುತ್ತಾರೆ.

ತಾ|| 5 ರಲ್ಲಿ ರಾತ್ರಿ ಸುಮಾರು 8 ಗಂಟೆ ಸಮಯದಲ್ಲಿ ಪೋಲೀಸ್ ಸಬ್ ಇನ್ಸ್‌ಪೆಕ್ಟರಾದ ಮೆ|| ಕಾಳಿಮಾದಯ್ಯನವರ ಸಂಗಡ ಮಾತಾಡುತ್ತಾ ಹೋದ ಪೋಲೀಸು ಬಾದಿ ಒಟ್ಟೆಯನ್ನು ಧರಿಸಿಕೊಂಡಿದ್ದ ಮೆ|| ಬಳಗೇರಿ ರಾಮಯ್ಯನವರು ಸ್ಟೇಷನ್ನಿನ ಪೋಲೀಸ್ ಇನ್ಸ್‌ಪೆಕ್ಟರಾದ ಮೆ|| ಕೋದಂಡ ಎಮ್ಮಣ್ಣನವರ ಸಂಗಡ ಮಾತಾಡಲು, ಅವರು ರಾಮಯ್ಯನವರ ಬಾದಿ ಟೊಪ್ಪಿಯನ್ನು ತೆಗೆದುಕೊಂಡು ಅವರ ಸ್ಟೇಟ್‌ಮೆಂಟನ್ನು ಬರೆದುಕೊಂಡು ಟೊಪ್ಪಿಯನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರಿಗೆ ಕಳುಹಿದ್ದಾರೆಂದು ತಿಳಿಯುತ್ತೇವೆ.

ಮೆ|| ಪಾಡಂಡ್ರ ಅಪ್ಪಚ್ಚನವರ ಪ್ರಯತ್ನದಿಂದ ಶ್ರೀಮತಿ ಕೋದಂಡ ಬೊಳ್ಳಮ್ಮನವರಿಗೆ ಬಹುಮಾನವಾಗಿ ಕೊಟ್ಟ ಚಿನ್ನದ ರಿಸ್ಟ್‌ವಾಚಿಗಾಗಿ ವಸೂಲುಮಾಡಿದ ಚಂದದ ವಿವರಣೆ.—

ಮಡಿಕೇರಿಯಿಂದ	ಜಮ	83—0—0
ತಾಲ್ಲೋಕುಗಳಿಂದ	ಜಮ	62—0—0
	ಜುಮ್ಲಾ	145—0—0
ಗಡಿಯಾರದ ಬಾಬ್ತು ಸ್ಪೆನ್ಸರ್ ಕಂಪನಿಗೆ ಬಾಕಿ		10—0—0
	ಜುಮ್ಲಾ	155—0—0
ಮಿರ್ಜ ಚಿನ್ನದ ರಿಸ್ಟ್‌ವಾಚ್ ಕ್ರಯ		133—0—0
ಇತರ ಬೇರೆ	ಖರ್ಚು	22—0—0
	ಜುಮ್ಲಾ	155—0—0

...ಡಿತವಾಗಿಯು ಜಮೀನ್ದಾರ ಸಂಘವನ್ನು ಒಡೆದುಹಾಕುವದು, ದೇಶಾಭಿಮಾನಿಗಳೆಂದೆನಿಸಿಕೊಳ್ಳುವವರು ಸ್ವಾತಂತ್ರ್ಯವನ್ನು ಸ್ಥಾಪಿಸಿದ ವಿನಹ ಅವರ ಕಾರ್ಯಗಳು ನೆರವೇರುವಂತಿಲ್ಲ. ಆವರು ಜನರ ಆಕ್ಷೇಪಣೆಗೆ ಕಿವಿಕೊಡಬಾರದು. ಒಕ್ಕಲು ಕೊಡಗರೆಲ್ಲರೂ ಒಗ್ಗಟ್ಟಾಗಿ ನೋಡಿದರೆ ಮಾತ್ರ ಈ ಸಭೆಯಿಂದ ಪ್ರಯೋಜನ ಉಂಟಾದೀತು ಎಂದು ಹೇಳಿದರು.

ಮೆ|| ಕೀತಿಯಂಡ್ರ ಕುಶಾಲಪ್ಪನವರು ಮೆ|| ಕೆ. ನಂಜಪ್ಪನವರ ಮಾತಿಗೆ ವಿರೋಧಿಸಿ, ಹೇಳಿದ್ದೇನೆಂದರೆ— ಜಮೀನ್ದಾರಸಂಘವು ಸ್ಥಾಪಿತವಾದನಂತರ ಗೌಡುಗಳವರೂ, ಬ್ರಾಹ್ಮಣರೂ, ಮುಸಲ್ಮಾನರೂ ಬೇರೆಬೇರೆ ಸಂಘಗಳನ್ನು ಮಾಡಿಕೊಂಡಿದ್ದಾಗ್ಯೂ ಕೂಡ ಜಮೀನ್ದಾರ ಸಂಘವು ಒಡೆದಿರುವುದಿಲ್ಲ. ನಮ್ಮ ಸಭೆಯೊಂದು ಮಾಡಲಿಕ್ಕೆ ಈಗ ತಕ್ಕ ಸಮಯ. ಇಷ್ಟರವರೆಗೆ ನಾವು ಒಗ್ಗಟ್ಟಾಗಿ... ಪಂಚಮರೂ ಕೂಡ ನ್ಯಾಯವಿಧಾಯಕಸಭೆಯ ಮೆಂಬರುಗಳಾಗಿರುತ್ತಾರೆ. ಐದಾರು ಜನರು ಸೇರಿ ಜಮೀನ್ದಾರ ಸಂಘವನ್ನು ಏರ್ಪಡಿಸಿದಾಗ ಅದು ಸರಕಾರ ಸೃಷ್ಟಿಯೆಂದು ಜನರು ಹೇಳಿದರೂ ಕೂಡ ಈಗ ದೇಶದ ಸಭೆಯಾಗಿದೆ. ಹಾಗೆಯೇ ಕೊಡಗು ಸಭೆಯೂ ಆಗಬಹುದು. ನಾವು ಮಡಿಕೇರಿಯವರ ಸೇವಕರಲ್ಲ. ನಾವು ಕೂಡುವ ಸಭೆಯನ್ನು ನಮ್ಮ ಹೇಳಿಕೆಯಂತೆ ನಡಿಸಬಹುದು. 1918 ನೇ ಇಸವಿಯ ಜಮೀನ್ದಾರಸಂಘದ ಸಭೆಯಲ್ಲಿ ಅನಿಷ್ಟಕರವಾದ ವಿಷಯ ಒಂದು ಬಂತು... ಮಾತ್ರ ಸಂಬಂಧಿಸುವದರಿಂದ ಅದನ್ನು ತಳ್ಳಿಹಾಕಿಬಿಟ್ಟರು. ...ಗೆ ಕೊಡಗರು ಮಾತ್ರ ಸೇರಿದರು. ಇಂಥಾ ಸಭೆ ಇಲ್ಲದ್ದರಿಂದ ನಮ್ಮ ಜನರನ್ನು ಒತ್ತಾಯದಿಂದ ಮಿಲಿಟರಿಗೆ ಹಿಡಿದರು. ಹಿಂದೂದೇಶದಲ್ಲೆಲ್ಲಾ ಅಸಹಕಾರ ಚಳವಳವು ಜೋರಾಗುತ್ತಾ ಬರುವದರಿಂದ ಸರಕಾರದವರು ನಮ್ಮ ಕೊಡಗರ ಶಕ್ತಿಗಳ ವಿಷಯ ಬಹಳ ಎಚ್ಚರಿಕೆಯಲ್ಲಿದ್ದಾರೆ. ಆದುದರಿಂದ ನಮ್ಮ ಹಕ್ಕನ್ನು ಕಾಪಾಡಲಿಕ್ಕೆ ಇಂಥಾ ಸಭೆ ಅವಶ್ಯ. (ಇದಕ್ಕೆಲ್ಲಾ ಜಮೀನ್ದಾರಸಂಘವೇ ಸಾಕೆಂದು ಒಬ್ಬರು ಕೂಗಿದರು) ಜಮೀನ್ದಾರಸಂಘ ಇಂಥಾದಕ್ಕೆ ಗಮನಕೊಡುವದಿಲ್ಲವೆಂದೂ, ನಮ್ಮ ಹಕ್ಕುಗಳನ್ನು ನಾವೇ ಕಾಪಾಡಬೇಕೆಂದೂ, ಇಂಡಿಯ ರಾಷ್ಟ್ರೀಯ ಸಭೆಯವರು ನಮ್ಮ ಕಲಹಗಳನ್ನು ತೀರಿಸಲು ಪಂಚಾಯ್ತುಗಳನ್ನು ಏರ್ಪಡಿಸಿ ಸರಕಾರದವರನ್ನು ದೂರಮಾಡುವದಾಗಿ ನಾವೂ ಮಾಡಿ ಸ್ವರಾಜ್ಯ ಪಡೆಯಲು ಹೋರಾಡಬೇಕೆಂದೂ ಹೇಳಿದರು.

ಈ ಸಭೆಯ ಉದ್ದಿಷ್ಟ ಮತ್ತು ಕಾರ್ಯಕ್ರಮಗಳನ್ನು ಸ್ಥಿರಗೊಳಿಸುವವರೆಗೆ ಯಾರೂ ಇದಕ್ಕೆ ರುಜು ಕೊಡಬಾರದೆಂತಲೂ, ಕೊಡಗರನ್ನು ಯೂರೋಪಿಯನರು ಹೊಗಳಿದರೂ ಕೂಡ ನಮಗೆ ರಾಜಕೀಯ ಮಾರ್ಪಾಟುಗಳೇನೂ ಸಿಕ್ಕಿರುವದಿಲ್ಲವಾಗಿಯೂ, ನಮ್ಮವು ಕೊಡಗರಲ್ಲದ ಬೇರೆಯವರಿಗೂ ಸಮ ಇದೆಯೆಂತಲೂ, ಉದ್ಯೋಗಸ್ಥರು ಈ ಸಭೆಗೆ ಸೇರದೆಹೋದರೆ ಇದು ರೈತರ ಸಭೆಯಲ್ಲದೆ ಕೊಡವಸಭೆಯಾಗುವದಿಲ್ಲವೆಂತಲೂ, ತಕ್ಕ ಮನುಷ್ಯರೇ ಇಂಥಾ ಸಭೆಯನ್ನು ಸ್ಥಾಪಿಸಲು ಹೊರಡತಕ್ಕದೆಂತಲೂ, ಮೆ|| ಒಕ್ಲಿಯಂಡ, ಬೆಳ್ಯಪ್ಪನವರು ಹೇಳಿದರು. ನಮಗೆ ರಾಜಕೀಯ ತಿದ್ದುಪಾಟು ಸಿಕ್ಕಲಿಕ್ಕೆ ಕೊಡಗು ದೇಶದವರೆಲ್ಲರೂ ಒಗ್ಗಟ್ಟಾಗಿ ಹೋರಾಡಬೇಕೆಂತಲೂ, ನಮ್ಮ ಎಲ್ಲಾ ಸಂಗತಿಗಳನ್ನು ಜಮೀನ್ದಾರಸಂಘದಲ್ಲೇ ತೀರ್ಮಾನಿಸಿಕೊಳ್ಳಬೇಕಾಗಿ ತಲೂ ಮೆ|| ಕಲಿಯಂಡ್ರ ಮುದ್ದಪ್ಪನವರು ಹೇಳಿದರು.

ಅಧ್ಯಕ್ಷರು ಕೊಡವಸಭೆಯು ರಾಜಕೀಯ ಸಭೆಯಲ್ಲವೆಂತಲೂ, ಮೆ|| ಕೆ. ಕುಶಾಲಪ್ಪನವರು ಇದು ರಾಜಕೀಯ ಸಭೆಯೆಂತಲೂ ಹೇಳುವದರ ಅರ್ಥವೇನೆಂದು ಮೆ|| ಬಿಸಂಡ್ರ ಮಾದಪ್ಪನವರು ಕೇಳಿದರು.

ಎಲ್ಲರೂ ಒಗ್ಗಟ್ಟಾಗಿ ಸೇರಿ ಸಭೆ ಸುರುಮಾಡುವದು ಅಸಾಧ್ಯವೆಂತಲೂ, ಆದುದರಿಂದ ಮಡಿಕೇರಿಯಲ್ಲಿ ಕೆಲವರು ಸೇರಿ ಕೊಡವ ಸಭೆಯನ್ನು ಸ್ಥಾಪಿಸಿ ಈಗ ಮೆಂಬರುಗಳನ್ನು ಸೇರಿಸಲಿಕ್ಕೆ ನಾಡುಗಳಿಗೆ ಬಂದಿದ್ದಾರೆಂತಲೂ, ಇಷ್ಟವಿದ್ದವರು ಸೇರಬಹುದೆಂತಲೂ ಮೆ|| ಅತ್ಯಾರಂಡ್ರ ಚಂಗಪ್ಪನವರು ಹೇಳಿದರು. ಇಷ್ಟರಲ್ಲಿ ಈ ವಿಜ್ಞಾಪನ ನೋಟೀಸಿನಲ್ಲಿ "ಕೊಡವಸಭೆ ಸ್ಥಾಪಿಸುವ ಉದ್ದಿಷ್ಟ ಅಭಿಪ್ರಾಯ ತಿಳಿಸಲು" ಎಂದು ಬರೆದಿರುವದರ ಅರ್ಥವೇನೆಂದು ಸ್ವಲ್ಪ ಚರ್ಚೆ ಹುಟ್ಟಿತು. ನಮ್ಮ ಆಚಾರಪದ್ಧತಿಗಳು ನಿಯಮದಂತೆ ನಾವು ಸರಿಯಾಗಿ ನಡೆಯುತ್ತಲೂ, ತಪ್ಪಿದರೆ ಅವನ್ನು ಪಂಚಾಯ್ತಿಯ ಮೂಲಕ ತಿದ್ದುತ್ತಲೂ ಇರುವದರಿಂದ ನಮಗೆ ಇಂಥಾ ಸಭೆಯಿಂದ ಅವಶ್ಯವಿಲ್ಲವೆಂದು ಮೆ|| ಎಲ್ಲಾಮುಕ್ಕೇ ನಂಜಪ್ಪನವರೂ, ಮೆ|| ಕೊಲ್ಲೀರ ಕಾರ್ಯಪ್ಪನವರೂ ಮೆ|| ನಲ್ಲಾ... ಅಯ್ಯಪ್ಪನವರೂ, ಮೆ|| ಬಲ್ಲಚಂಡ್ರ ಸುಬ್ಬಯ್ಯನವರೂ ಇನ್ನೂ ಕೆಲವರು ಹೀಗೆ ಹೇಳಿದನಂತರ ಅಧ್ಯಕ್ಷರಿಗೆ ವಂದಿಸುವದರಿಂದ ಸಭೆಯು ಬರಖಾಸ್ತಾಯಿತು.

ಉದ್ದಿಷ್ಟ.

ನಾವು ಯಾವುದಾದರೂ ಒಂದು ಕೆಲಸವನ್ನು ಮಾಡಲು ಉಪಕ್ರಮಿಸಿದರೆ ಮೊದಲು ಅದರ ಉದ್ದಿಷ್ಟವನ್ನು ತಿಳಿಯಬೇಕು. ಈಗಿನಕಾಲದ ಪ್ರತಿಯೊಬ್ಬನೂ ಒಳ್ಳೆಯ ಕಾರ್ಯದಲ್ಲಿ ಪ್ರವರ್ತಿಸಲು ಪ್ರಯತ್ನಿಸುತ್ತಿದ್ದಾನೆ. ಆದರೆ ಯಾವ ಕಾರ್ಯವನ್ನು ಮಾಡಿದರೆ ಇಹದಲ್ಲಿ ಕೀರ್ತಿಯೂ ಪರದಲ್ಲಿ ಸುಖವೂ ಉಂಟಾಗುವುದು ಎಂಬುದನ್ನು ತಿಳಿದು ಕಾರ್ಯವನ್ನು ಕೈಕೊಳ್ಳುವ ಮಹಾಶಯರು ಬಹಳ ವಿರಳ. ನಮ್ಮ ಈ ಜನ್ಮಕ್ಕೆ ಮೊದಲು ಎಷ್ಟು ಜನ್ಮಗಳೆತ್ತಿದ್ದೆವೋ ಇನ್ನೆಷ್ಟು ಜನ್ಮಗಳನ್ನು ಎತ್ತಲಿಕ್ಕಿದೆಯೋ, ಎಷ್ಟು ದೇಹಗಳಾಗಿದೆಯೋ ಎಷ್ಟು ಜಾತಿಕುಲದವರಾಗಿದ್ದೆವೋ ಎಂಬ ವಿಷಯವನ್ನು ಮಾತ್ರ ಸ್ವಲ್ಪ ಆಲೋಚಿಸಿದರೆ ಆಗ ತಾನೆ ಈ ನಶ್ವರವಾದಂತ ದೇಹವನ್ನು ನೋಡಿಕೊಂಡು ನನ್ನದು ತನ್ನದು ಎಂದು ಹೊಡೆದಾಡಬಾರದೆಂಬ ಜ್ಞಾನವು ಉಂಟಾಗುತ್ತದೆ. ಆಗ ತಾನೇ ನಾವು ಈ ಮನುಷ್ಯ ಜನ್ಮ ಲಭಿಸಿದುದಕ್ಕೆ ನಮ್ಮ ಜ್ಞಾನವನ್ನು ಸರಿಯಾಗಿ ಉಪಯೋಗಿಸಿ ಉದ್ದಿಷ್ಟವನ್ನು ಅರಿತು ಕೆಲಸಮಾಡುವ ನಿಜಪದವಿಗೆ ಒಳಪಟ್ಟಂತಾಗುತ್ತದೆ. ಈ ನಮ್ಮ ಸಾಧನೆಗಳಿಗೆ ಅವಶ್ಯವಾಗಿರುವ ಸತ್ಯಾಚರಣೆ ಮುಂತಾದವುಗಳನ್ನು ಯಾರು ತಿಳಿದಿರುತ್ತಾನೋ ಅವನೇ ತಾನು ಜನ್ಮವೆತ್ತಿದುದರ ಉದ್ದಿಷ್ಟವನ್ನು ತಿಳಿದವನು. ಅದೇ ಜಗನ್ನಿಯಾಮಕನಾದ ಭಗವಂತನ ಉದ್ದೇಶ. ಇದನ್ನು ವಿಚಾರಿಸದೆ ಈ ಕಲಿಯುಗದ ನಾವುಗಳು ಉದ್ದಿಷ್ಟವನ್ನೇ ಅರಿಯದೆ ಕೆಲಸಮಾಡುತ್ತಿದ್ದೇವೆ. ಹೀಗೆ ಮಾಡುವುದು ಅನರ್ಥವಾಗಿ ಪರಿಣಮಿಸಿ ನಮ್ಮ ಈ ಪವಿತ್ರಜನ್ಮವನ್ನು ನಿಷ್ಪ್ರಯೋಜನವಾಗಿ ಮಾಡುತ್ತದೆ. ಇದಕ್ಕಾಗಿ ದೇಶಾಭಿಮಾನಿಗಳೆಂದು ಕರೆಸಿಕೊಳ್ಳುವ ನಾವೆಲ್ಲರೂ ಮತಾಭಿಮಾನಿಗಳಾಗಿ ಲೌಕಿಕವ್ಯವಹಾರದಲ್ಲಿ ಪ್ರವರ್ತಿಸಿದರೆ ನಮ್ಮ ಜನ್ಮವೆತ್ತಿದುದರ ಉದ್ದಿಷ್ಟವನ್ನು ತಿಳಿದೆವು ಎಂಬುವದರಲ್ಲಿ ಸಂಶಯವಿಲ್ಲ.

ಈ ನಮ್ಮ ದೇಶಸ್ಥರಾದವರು ಕೇವಲ ಲೌಕಿಕಾಭಿಮಾನಿಗಳಾಗಿ ಲೌಕಿಕ ವ್ಯವಹಾರದಲ್ಲಿ ಪ್ರವರ್ತಿಸುವ ಪರಿಣಾಮದ ದೆಸೆಯಿಂದ ಅನೇಕ ಜನರು ಮನಸ್ಸಿನ ದುಃಖಕ್ಕೆ ಗುರಿಯಾಗುತ್ತಾರೆ. ಈಗಲಾದರೂ ಕೊಡಗು ಪತ್ರಿಕೆಯಿಂದ ಮನೆಮನೆಗೂ ಪ್ರಚಾರವಾದ ದೆಸೆಯಿಂದ ಇದರ ಮೂಲಕ ಕೆಲವರು ತಮ್ಮ ಪಾಂಡಿತ್ಯವನ್ನೂ, ಕೆಲವರು ತಮ್ಮ ಸಾಮರ್ಥ್ಯಗಳನ್ನೂ ಇನ್ನು ಕೆಲವರು ಅವರವರ ಸ್ವಾರ್ಥತೆಯನ್ನೂ ಇತರರಿಗೆ ತೋರಿಸಲು ಆರಂಭಿಸಿದ್ದಾರೆ. ನಾನೆ ಬೇರೆ ಅವನೇ ಬೇರೆ, ಇವನ್ಯಾವನೋ ಬೇರೆ ಎಂಬ ಭೇದನೆಯು ನಮ್ಮ ದೇಶಸೇವಾಸಿರಶ್ಚರಲ್ಲಿ ಕೆಲವರಲ್ಲಿ ಅಂಕುರಿಸಿದೆ. ಇದು ಎಂಥಾ ನಗೆಗೇಡು! ಭಗವಂತನು ಪ್ರತಿಯೊಬ್ಬ ಮನುಷ್ಯನಿಗೂ ಬೇರೆ ಬೇರೆ ಬುದ್ಧಿಯನ್ನಿಟ್ಟಿರುವನೋ ಹಾಗೆಯೇ ಪ್ರತಿಯೊಬ್ಬ ದೇಶಾಭಿಮಾನಿ ಎಂದೂ ದೇಶಸೇವಾಧುರೀಣನೆಂದೂ ತಮ್ಮ ತಮ್ಮ ಪ್ರತಾಪಗಳನ್ನು ತೋರಿಸಿಕೊಳ್ಳುವ ಮಹನೀಯರೂ, ತಮ್ಮ ತಮ್ಮ ಕಾರ್ಯಗಳಲ್ಲೂ ಎಲ್ಲರ ಹಿತವನ್ನು ಬಯಸಿ ಸಮದೃಷ್ಟಿಯಿಂದ ನಡೆದುಕೊಳ್ಳುವದಲ್ಲವೋ ತಾವು ಈ ಜನ್ಮವೆತ್ತಿದುದಕ್ಕೆ ಸಾರ್ಥಕ. ಎಷ್ಟು ಓದಿ ಕೇಳಿದರೂ ಯಾವ ಪ್ರಯೋಜನವು ಆಗದೆ ಒಂದೆ ಕಲ್ಲಿನಮೇಲೆ ಮಳೆಯು ಸುರಿದಂತಾಗುತ್ತದೆ. ಜಾತಿ ಜಾತಿಯವರು ಬೇರೆ ಬೇರೆ ಸಭೆಗಳನ್ನು ಏರ್ಪಡಿಸಿಕೊಂಡು 10 ಗುರುಗಳ ಶಿಷ್ಯರೆಂಬಂದ 202 ವಿಧದಲ್ಲಿ ಲೌಕಿಕ ಮಾರ್ಗದಲ್ಲಿ ನಡೆಯಲಿಚ್ಛಿಸುತ್ತಲಿದ್ದಾರೆ. ಇದರ ಪ್ರಯೋಜನವೋ ಒಬ್ಬರ ಗುಲ್ಲುಸಿದ್ದಿಗೆ ಕೇಡು ಎಂಬಂತೆ ಒಳಗೊಳಗೆ ಮನಸ್ತಾಪಗಳು ಹೆಚ್ಚುತ್ತಾ ಹೆಚ್ಚುತ್ತಾ ಕಡೆಗೆ ಅಧೋಗತಿಯೋ! ಯಾತ್ರಿಶಂಕು ಸ್ವರ್ಗವೋ !!

ಆದುದರಿಂದ ದೇಶಬಾಂಧವರೆಲ್ಲಾ ಸೇರಿ ದೇಶಸೇವೆಯನ್ನು ಜಾತಿ, ಕುಲ, ಗೋತ್ರ ಎಂಬ ಪಕ್ಷಪಾತವಿಲ್ಲದೆ ಮಾಡಲು ತಕ್ಕ ಏರ್ಪಾಡು ಮಾಡಬೇಕಾಗಿದೆ. ದೇಶಸೇವೆಯನ್ನು ನಿಷ್ಪಕ್ಷಪಾತಿಗಳಾಗಿ ನಡೆಸಬೇಕಾದರೆ ಅದಕ್ಕೆ ತಕ್ಕಂತೆ ಸಚ್ಚರಿತೆಯ ಶಿಕ್ಷಣೆಯನ್ನು ನಮ್ಮ ಕಿರಿಯಜನರಿಗೆ ಕೊಟ್ಟ ಹೊರತು ಸಾಧ್ಯವಿಲ್ಲ. ಅದಕ್ಕಾಗಿ ಉದಾರಹೃದಯರಾದ ಮಹನೀಯರೇ ನಾವುಗಳೆಲ್ಲಾ ಕೂಡಿ ಬಂದು ದೇಶಸೇವಾಸಮಾಜವನ್ನೇರ್ಪಾಡುಮಾಡಿ ಒಂದು ಗುರುಕುಲವನ್ನು ಸ್ಥಾಪಿಸಿ ಗುರುಕುಲದ ... ಬಿಟ್ಟು ಕೆಲಸಮಾಡುವ ಯುವಕರನ್ನು ತಯಾರುಮಾಡಿಸಿ ಈ ಭಾರತಮಾತೆಯ ಪವಿತ್ರಕ್ಷೇತ್ರವಾದ ನಮ್ಮ ಕಾವೇರಿ ತಾಯಿಯ ಕರುಣೆಗೆ ಪಾತ್ರರಾಗಬೇಕಾಗಿ ಕೋರುತ್ತೇನೆ. ಇದರಿಂದ ದೇಶಸೇವಾ ಕಾರ್ಯದಲ್ಲಿ ಪ್ರವರ್ತಿಸುವವರ ಮನೋಭೀಷ್ಟವು ನೆರವೇರುವುದು. ಉದ್ದಿಷ್ಟವನ್ನರಿತು ಕೆಲಸ ಮಾಡಿದಂತಾಗುವುದು. ದೇವರ ಲೋಕವು ಲಭಿಸುವುದು.

R. A. B

ಬ್ರಾಹ್ಮಣ್ಯವಿಮರ್ಶೆ.

2 ಬ್ರಾಹ್ಮಣ್ಯದ ಅಧಃಪತನ.

ಪೂರ್ವಕಾಲದಿಂದಲೂ ಆರ್ಯಾವರ್ತದ ಚರಿತ್ರೆಯಲ್ಲಿ ಬ್ರಾಹ್ಮಣರು ಪ್ರಾಮುಖ್ಯತೆಯನ್ನು ಹೊಂದಿರುವರು. ಆರ್ಯ ಧರ್ಮದ ಪ್ರಚಾರಕರಾಗಿ, ಸಾತ್ವಿಕವೃತ್ತಿಯ ತವರುಮನೆಯಾದ ನಮ್ಮ ಭರತಭೂಮಿಯ ಒಳ ಧರ್ಮ ಕರ್ಮಾದಿಗಳನ್ನು ಕಾಪಾಡಿ ಅವನ್ನು ವೃದ್ಧಿಗೊಳಿಸುತ್ತ ಜ್ಞಾನಾರ್ಜನೆಮಾಡಿ ಜ್ಞಾನಬೋಧದಲ್ಲಿರುವುದೇ ಇವರ ಮುಖ್ಯ ಕರ್ತವ್ಯವಾಗಿದ್ದಿತು. ಆದರೆ ಬರಬರುತ್ತ ಬ್ರಾಹ್ಮಣರು ಕರ್ತವ್ಯವಿಮುಖರಾಗಿ ತಾಮಸವೃತ್ತಿಯ ಕಾರಣದಿಂದಲೂ ಕಾಲಗತಿಯಿಂದಲೂ ಪಾಶ್ಚಾತ್ಯ ವಿದ್ಯೆಯನ್ನು ಕಲಿಯತೊಡಗಿದ. ಹೀಗೆ ಸಂಗತಿಯೇ ಈಗಿನ ಬ್ರಾಹ್ಮಣರು ತಮ್ಮ ಪೂರ್ವಜರ ಮಹತ್ವವನ್ನೂ, ಪ್ರಾಬಲ್ಯವನ್ನೂ ಕಳೆದುಕೊಂಡಿದ್ದರೂ, ಆ ಪಾಶ್ಚಾತ್ಯವಿದ್ಯೆಯಲ್ಲೂ ಸಹ ಎಲ್ಲರಿಗೂ ಮುಂದುವರಿದರು. ಈ ಪಾಶ್ಚಾತ್ಯ ವಿದ್ಯೆಯು ಹೇಗೂ ಇರಲಿ. ಇದರಲ್ಲಿ ನೈತಿಕ ಹಾಗು ಅಧ್ಯಾತ್ಮಿಕ ಜ್ಞಾನದ ಗಂಧವೇ ಇಲ್ಲವೆಂದು ಖಂಡಿತವಾಗಿಯೂ ಹೇಳಬಹುದು. ಇದರಿಂದ ವಿದ್ಯಾರ್ಜನೆಮಾಡಿ ದೊಡ್ಡ ದೊಡ್ಡ ವಕೀಲರೂ ಉದ್ಯೋಗಸ್ಥರೂ, ಪದವೀಧರರೂ ಆದರೂ ಸಹ, ಬ್ರಾಹ್ಮಣರ ಪೂರ್ವದ ಗೌರವವೂ ಆರ್ಯತ್ವವೂ ಎಲ್ಲೋ ಓಡಿಹೋಯ್ತು. ಅವರ ಆತ್ಮಶಕ್ತಿಯು ಕ್ಷೀಣವಾಗಿ ಹೋಯಿತು. ಆತ್ಮಶಕ್ತಿಯು ಕ್ಷೀಣವಾಗಿ ಅಧ್ಯಾತ್ಮಿಕ ಜ್ಞಾನವು ಲೋಪವಾಗಲು ಅವರು ವಿಷಯಕೂಪದಲ್ಲಿ ಬಿದ್ದುಹೋದರು. ಇದರಿಂದ ಇವರಿಗೆ ಹೊಟ್ಟೆ ಹೊರೆದುಕೊಳ್ಳುವ ವಿದ್ಯೆಯೇ ಮೇಲಾಗಿ ಹಣ ಸಂಪಾದನೆಯಲ್ಲೂ ಪಾಶ್ಚಾತ್ಯ ಆಚಾರವಿಚಾರದಲ್ಲೂ ಮಗ್ನರಾಗಿ ತಮ್ಮ ಪೂರ್ವಾಚಾರಗಳನ್ನು ತಿರಸ್ಕರಿಸುತ್ತಾ ಬರತೊಡಗಿದರು. ಹೀಗಾಗಲು ತಾವೇ ಇತರ ವರ್ಣದವರಿಂದ ತಿರಸ್ಕೃತರಾಗುತ್ತಿರುವುದರಲ್ಲಾದರೂ ಆಶ್ಚರ್ಯವೇನು? ಇದರಿಂದ ಹಿಂದೆ ತಮ್ಮನ್ನು ಗುರುಗಳಂತೆ ಕಂಡು ಮನ್ನಿಸುತ್ತಿದ್ದವರೂ ಸಹ ಗುರುತ್ವವನ್ನು ಅಲ್ಲಗಳೆದು ದ್ವೇಷಿಸ ತೊಡಗಿದರು. ಇನ್ನಾಗಲು ಬ್ರಾಹ್ಮಣರ ಪ್ರಾಬಲ್ಯವಡಗಿ ಬ್ರಾಹ್ಮಣ್ಯದ ಅಧಃಪತನ ಪ್ರಾರಂಭವಾಯ್ತೆಂದು ಹೇಳಬೇಕು.

2. ಬ್ರಾಹ್ಮಣ್ಯದ ಮೂಲೋತ್ಪಾಟನ

ಪ್ರಾಚೀನ ವೃತ್ತಿಯನ್ನವಲಂಬಿಸಿಯೂ ಬ್ರಾಹ್ಮಣರು ಹಣವಂತರಾಗಲಿಲ್ಲ. ಬ್ರಾಹ್ಮಣರಲ್ಲಿಯ ಹಣವಂತರನ್ನು ಲೆಕ್ಕಮಾಡಬಹುದು. ಬ್ರಾಹ್ಮಣರ ಪೂರ್ವಿಕರಾದ ಋಷಿಗಳು ಬಡತನವನ್ನೇ ಅವಲಂಬಿಸಿದ್ದರು. ಜ್ಞಾನೈಶ್ವರ್ಯವೇ ಅವರ ಐಶ್ವರ್ಯ. ಇತರ ಯಾವವಿಧದ ಐಶ್ವರ್ಯವೂ ಅವರಿಗೆ ಬೇಕಿದ್ದಿಲ್ಲ. ಆದರೆ ಭರತಭೂಮಿಯು ಮೊಗಲಾಯರಿಂದ ಆಂಗ್ಲೇಯರ ಕೈಗೆ ದಾಟಿದಸಮಯದಲ್ಲಿ ರಾಜ್ಯಾಡಳಿತವನ್ನು ನಡೆಸಲು ಅವರಿಗೆ ಹಿಂದೀಯರ ಸಹಾಯವು ಅವಶ್ಯಕವಾಯ್ತು. ಆದ್ದರಿಂದ ಅವರು ಇಂಗ್ಲಿಷ್ ಶಾಲೆಗಳನ್ನು ತೆರೆದು ಪಾಶ್ಚಾತ್ಯವಿದ್ಯೆಯನ್ನು ಹಿಂದೀಯರಿಗೆ ಕಲಿಸತೊಡಗಿದರು. ಆ ಸಮಯದಲ್ಲಿ ವ್ಯಾಪಾರ ಕೈಗಾರಿಕೆಗಳಲ್ಲೇ ಮುಂದುವರಿದಿದ್ದ ಬೇರೆ ವರ್ಣದವರು ಈ ಆಂಗ್ಲವಿದ್ಯೆಯನ್ನು ಹೆಚ್ಚು ಲಕ್ಷಿಸಲಿಲ್ಲ. ಆದರೆ ಬ್ರಾಹ್ಮಣರು ಇಂಗ್ಲೀಷ್ ವಿದ್ಯೆಯನ್ನು ಕಲಿತುಕೊಂಡಾಗಿ ಚಿಕ್ಕದೊಡ್ಡ ಸರ್ಕಾರಿ ನೌಕರಿಯಲ್ಲಿ ಸೇರಿಕೊಂಡರು. ಅಂದೇ ಭಾರತಮಾತೆಯ ಮಕ್ಕಳು ಬ್ರಾಹ್ಮಣರ ಕ್ಷೀಣದೆಸೆಯು ಪ್ರಾರಂಭವಾಯ್ತೆಂದು ಹೇಳಬಹುದು. ಹೀಗೆ ಧನಕ್ಕಾಗಿ ಬ್ರಾಹ್ಮಣರು ತಮ್ಮ ಉಜ್ವಲ ಕಾಂತಿಯನ್ನು ಕಳೆದುಕೊಂಡು ನಿಸ್ತೇಜಿಗಳಾಗುತ್ತಾ ಬಂದರು. ಅಂದಿನಿಂದ ಇಂದಿಗೆ ಒಂದೂವರೆ ಶತಮಾನಕ್ಕೂ ಮೀರಿದ ಕಾಲದಲ್ಲಿ ಬ್ರಾಹ್ಮಣರು ಒಂದೊಂದು ಮೆಟ್ಟಲನ್ನೇ ಇಳಿಯುತ್ತ ಪ್ರಸ್ತುತಕಾಲದಲ್ಲಿ ಬಹು ಶೋಚನೀಯಸ್ಥಿತಿಗೆ ಬಂದಿರುವರು. ವ್ಯಕ್ತಿ ಸ್ವಾತಂತ್ರ್ಯದ ಹೆಸರಿನಿಂದ ಮನಸ್ಸಿಚ್ಛೆ ನಡೆಯಲು ಪ್ರಾರಂಭಿಸಿರುವರು. ಇದರಿಂದ ಬ್ರಾಹ್ಮಣ್ಯದ ಮೂಲೋತ್ಪಾಟನವಾಗುವುದರಲ್ಲಿ ಸಂಶಯವಿಲ್ಲ. ಸುಧಾರಣೆಯ ಹೆಸರಿನಿಂದ ಆಗಬಾರದ ಕಾರ್ಯವನ್ನು ಮಾಡತೊಡಗಿರುವರು.

(ಸಶೇಷ)

ಚಿತ್ರವಿಚಿತ್ರವಾರ್ತೆ.

ಅಕೃತ್ರಿಮ ಪ್ರೇಮಕ್ಕೋಸ್ಕರ ಸಖ್ಯ !

"ಡೇಲಿ ಕ್ರಾನಿಕಲ್" ಎಂಬ ಪತ್ರಿಕೆಯ ಈ ಕೆಳಗಿನ ವರ್ತಮಾನ ಸಾರಾಂಶವು ನಮ್ಮ ವಾಚಕರನ್ನು ವಿಸ್ಮಯಗೊಳಿಸದಿರದು.

"ನಿನ್ನ ಮೇಲಣ ಪ್ರೇಮವು ನನ್ನನ್ನು ಆಗಾಗ್ಯೆ ಬಾಧಿಸಿ ಕೊನೆಗೆ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದೆ, ನನ್ನ ಇರುವಿಕೆಯು ನಿನ್ನ ಸುಮಾರ್ಗದಲ್ಲಿ ಮುಳ್ಳಿನಂತಿರಬಾರದೆಂಬುದೇ ನನ್ನ ಅಭಿಪ್ರಾಯ. ಈ ಮುಳ್ಳಿನಂತಿರುವ ಸಂಭವವು ಸ್ವಲ್ಪದಲ್ಲಿ ಹೊಂದೆಂಬ ಶಂಕೆಯೂ ಇದೆ.

ಹೀಗೆಂದು ಬರೆದು ... ಇಂಗ್ಲೆಂಡಿನ ಥೇಮ್ಸ್ ನದಿಯಲ್ಲಿ ಮುಳುಗಿ ಆತ್ಮಹತ್ಯೆಮಾಡಿಕೊಂಡ ಮಿಸ್. ಜೆ. ಪೀಯರ್ಸನ್ ಎಂಬ 36... ಪ್ರಾಯಸ್ಥಳೊಬ್ಬಳ ಕಿಸೆಯಲ್ಲಿದ್ದಿತು.

ಆಕೆಯು ತನ್ನ ...ದಿಂದಲೂ ಕೈಕಾಲುಗಳನ್ನು ಕಟ್ಟಿಕೊಂಡುದರಿಂದ ... ಸಿಕ್ಕದ್ದರಿಂದಲೂ ಸಿಕ್ಕಿದರೂ ... ಮಾಡಲು ಶಕ್ತಳಾಗದಿದ್ದುದರಿಂದಲೂ ಆಗಾಗ್ಯೆ ನಡೆದಾಡುತ್ತಿದ್ದನು ... ಒಂದು ಮುಂಗಾಪಾತ (ಅನುಂಗತ್ವ !) ದಿನ ಪ್ರೀತಿಪಾತ್ರಳಾದ ಹೆಂಡತಿಯನ್ನು ಆಲಿಂಗಿಸಿ ಮು... ಮನೆಯಿಂದ ಹೊರಹೋದವನು ಮರಳಿ ಬರಲಿಲ್ಲ, ... ಕಾಗದವು ಸಿಕ್ಕಿತು.

ಇದೇ ಸೆಪ್ಟಂಬರ್ ತಾ|| 24 ರಲ್ಲು ಗೋಣಿಕೊಪ್ಪಲು ಪ್ರಾಂತಿಕ ಸಭಾದ ಜನರಲ್ ಮೀಟಿಂಗ್ ಮುಕ್ಕಾರ್ಮಡಿಸಲ್ಲು ನಡೆಯಿತು ಪ್ರಾಂತಿಕ ಸಭಾದ ಸೆಕ್ರೆಟರಿಯವರು ಸದರಿ ಮೀಟಿಂಗ್ ತಾರೀಕಿನವರೆಗೆ ಆದ ಖರ್ಚು ವೆಚ್ಚಗಳ ರಿಪೋರ್ಟನ್ನು ಓದಿದರು ಸಭಾದಲ್ಲು ಖರ್ಚು ಬಾಕಿ ಶಿಲ್ಕು 2೫೬—1—10 ಮಾತ್ರ ಕರ್ಣಿಕರಲ್ಲು ಉಳಿದಿರುವದಾಗಿ ತಿಳಿಸಿದರು ಇದಕ್ಕೆ ಸಭೆಯವರು ಅನುಮೋದಿಸಿದರು ಸದರಿ ಮೀಟಿಂಗಿನಲ್ಲು ಈ ಕೆಳಗಿನ ಠರಾವುಗಳು ಮಂಜೂರು ಮಾಡಲಾಯಿತು

1. ಮೆ|| ಕೆ ಮೊಣ್ಣಪ್ಪನವರು ಸಭಾಕಾರ್ಯೋಸ್ಕರ ಹರಾಜಿನಲ್ಲು ತೆಗೆದ ಬಾಗವನ್ನು ಸಭಾಕ್ಕ ಅವಶ್ಯವಿಲ್ಲದ್ದರಿಂದ ಸದರಿ ಬಾಗವನ್ನು ಮೆ|| ಮೊಣ್ಣಪ್ಪನವರಿಗೇನೆ ವಹಿಸಿಕೊಟ್ಟದ್ದಾಯಿತು

2 ಇಷ್ಟರವರಿವಿಗೂ ಮಸ್ಣವಾದ ಸೇಂದಿ ಗುತ್ತಿಗೆಯನ್ನು ಕೊಡಗರೇ ಪುನಹ ಬೇರೆಯವರ ಪ್ರೇರೇಪಣೆಯಿಂದ ತೆಗೆದು ಮಾರುವದು ಕೊಡಗರಿಗೆಲ್ಲಾ ಆಕ್ಷೇಪಣೆಯಂತಲೂ, ಮೊದಲೇ ನಾಡವರೆಲ್ಲಾ ಸೇಂದಿ ಇಳಿಸುವದಿಲ್ಲವಾಗಿಯೂ ಗುತ್ತಿಗೆ ಪಡಿಯುವದಿಲ್ಲವಾಗಿಯೂ ತೀರ್ಮಾನಿಸಿದ ಮೇರೆ ಪುನಹ ಈ ನೀಚಕೆಲಸಕ್ಕೆ ಕೈಹಾಕುವದಿಲ್ಲವಾಗಿ ಒಪ್ಪಂದವಾಯಿತು

3 ನಾಡಿನ ಜನರಿಗೆ ದೇಶಾಭಿವೃದ್ಧಿಗೆ ಸಮ್ಮಂಧವಾದ ಎಲ್ಲಾ ಸೂಚನೆಗಳನ್ನು ಬೋಧಿಸಲು ಬೋಧಕರನ್ನು ಬಿಡುವದಾಗಿ ತೀರ್ಮಾನವಾಯಿತು.

ಹಿಂದೂದೇಶ.

ಪ್ರಿನ್ಸ್ ಆಫ್ ವೇಲ್ಸರವರ ಸ್ವಾಗತಕ್ಕಾಗಿ ಬೊಂಬಾಯಿ ಸರಕಾರದವರು ೩½ ಲಕ್ಷರೂಪಾಯಿಗಳನ್ನು ಮಂಜೂರು ಮಾಡಿರುತ್ತಾರೆ

ಮಲಬಾರಿನ ಕೇರಳೆ ತಿರ್ರೂರಪುರದಲ್ಲಿ ದಂಗೆಕೋರರಾದ ಸುಮಾರು 200 ಜನ ಮಾಪಿಳ್ಳೆಯರು ಡಾಲಿಯನ್ ಜನಗಳ ಮೇಲೆಬಿದ್ದು ಬಹಳ ನಷ್ಟಪಡಿಸಿರುವರು ಪೊಸ್ನಾಪಿ ತಾಲ್ಲೋಕಿನಲ್ಲಿ ಆರೇಳು ಮನೆಗಳಿಗೆ ಬೆಂಕಿಕೊಟ್ಟು 9 ಜನರನ್ನು ಕೊಂದು ಆರೇಳು ಜನರಿಗೆ ಗಾಯಮಾಡಿರುತ್ತಾರೆ

ಕಳೆದವಾರ ಹಿಂದೂದೇಶದ ಅನೇಕ ಪಟ್ಟಣಗಳಲ್ಲಿ ಮಹಾತ್ಮ ಗಾಂಧಿಯವರ ಜನ್ಮದಿನದ ವರ್ಷೋತ್ಸವವನ್ನು ಪರದೇಶಿ ಬಟ್ಟೆಗಳನ್ನು ಸುಡುವದರಲ್ಲಿಯೂ ಮಹಾತ್ಮರಿಗೆ ಅವರ ಕಾರ್ಯದಲ್ಲಿ ಜಯವಾಗಲೆಂದು ಮಸೀದಿ ಮತ್ತು ದೇವಸ್ಥಾನಗಳಲ್ಲಿ ಪ್ರಾರ್ಥನೆಮಾಡುವದರಲ್ಲಿಯೂ ಒಂದಿಸಿರುವರು

ಈ ವರ್ಷದ ಐ. ಸಿ ಯಸ್. ಪರೀಕ್ಷೆಯಲ್ಲು ತೇರುಗಡೆ ಹೊಂದಿದ 16 ಜನರ ಪೈಕಿ ಮೂರು ಜನರು ಮದ್ರಾಸಿನವರಾಗಿರುತ್ತಾರೆ ಅದರಲ್ಲೂ ತಿರುವಂಕೂರಿನ ಮೆ|| ಕೆ ಶಿವಶಂಕರ್ ಮೆನನ್‌ರವರು ಒಂದನೆಯವರಾಗಿ ಒಂದದ್ದಲ್ಲದೆ ಇಷ್ಟರವರೆಗೆ ಐ ಸಿ. ಯಸ್ ಪರೀಕ್ಷೆಗೆ ಹೋದವರೆಲ್ಲರ ದಾಖ್ಲೆಗಳನ್ನು ಮೀರಿರುತ್ತಾರಂತೆ

ರವೀಂದ್ರನಾಥ್ ಟೇಗೋರರವರು ಸ್ಥಾಪಿಸಿರುವ "ವಿಶ್ವಭಾರತಿ" ಎಂಬ ವಿಶ್ವವಿದ್ಯಾಲಯದಲ್ಲಿ ಫ್ರೆಂಚ್ ಕಲಿಸಲಿಕ್ಕಾಗಿ ಫ್ರಾನ್ಸಿನಿಂದ ಪ್ರೊಫೆಸರ್ ಸಿಲ್ವೆನ್‌ಲೆವಿ ಎಂಬವರು ಇಲ್ಲಿಯಾಕ್ಕೆ ಬರುವವರಾಗಿದ್ದಾರೆ ಅವರ ಮತ್ತು ಸಂಸಾರದ ಖರ್ಚಿಗೆ 6000 ರೂ ಕಳುಹಿಸಲ್ಪಟ್ಟಿರುತ್ತೆ ಇಲ್ಲಿಗೆ ಬಂದನಂತ್ರ ಅವರ ತಕ್ಕಂತ ಸಂಬಳವು ಕೊಡಲ್ಪಡುವದು

ಮದ್ರಾಸುಪಟ್ಟದಲ್ಲಿ ಆದಿ ದ್ರಾವಿಡರು ಮುಸಲ್ಮಾನರನ್ನೂ ಕೆಲ ಉತ್ತಮ ಹಿಂದೂಗಳನ್ನೂ ಬಹಳವಾಗಿ ಕೊಂದರೆ ಪಡುತ್ತಿದ್ದಾರೆ ಕೆಲವು ಕಡೆಗಳಲ್ಲಿ ಕಲ್ಲುಗಳು ಹೊಡೆದೂ ಕೈಜಗಳವಾಗಿಯೂ ಎರಡು ಪಂಗಡದವರಿ ಬೂ ಗಾಯಗಳುಂಟಾಗಿ ಕೆಲವರು ಮೃತಪಟ್ಟು ಹೋಗಿರುವರು ಪೋಲೀಸಿನವರು ಕೆಲವು ಸಂದರ್ಭಗಳಲ್ಲಿ ಜಗಳಗಳನ್ನು ಅಡಗಿಸಲಿಕ್ಕಾಗಿ ಜನರಮೇಲೆ ಗುಂಡು ಹಾರಿಸಿರುವರು

ಮದ್ರಾಸಿನ ವಕೀಲರೆಲ್ಲರೂ ಪರದೇಶದ ಬಟ್ಟೆಗಳನ್ನು ಬಹಿಷ್ಕಾರ ಮಾಡಿ ಸ್ವದೇಶಿ ಬಟ್ಟೆಯಾದ ಖಾದಿಯನ್ನೇ ಉಪಯೋಗಿಸಬೇಕೆಂತಲೂ ಕೋರ್ಟಿಗೆ ಹೋಗಲಿಕ್ಕೆ ಸಹ ಕಪ್ಪುಬಣ್ಣದ ಖಾದಿಯನ್ನೇ ಉಪಯೋಗಿಸಿ ನಮ್ಮ ಮರ್ಯಾದೆಯನ್ನ ಕಾಪಾಡಿಕೊಳ್ಳಬೇಕಲ್ಲದೆ ಖರ್ಚುಸಹ ಕಡಿಮೆಮಾಡಿಕೊಳ್ಳಬೇಕೆಂತಲೂ ಒಂದು ಪತ್ರವನ್ನ ಬರೆದು ಎಸ್ ಶ್ರೀನಿವಾಸ ಎಯ್ಯಂಗಾರ್ ಮೊದಲಾದ 49 ಮದ್ರಾಸಿನ ಮುಂದಾಳು ಶೈನುಹಾಕಿ ವಕೀಲರೆಲ್ಲರಿಗೂ ಅಪ್ಪೀಲು ಮಾಡುತ್ತಿದ್ದಾರೆ

ಮಲಬಾರಿನ ಮಾಪಿಳ್ಳೆಯವರು ಯುದ್ಧದ ವಿಧಾನಗಳನ್ನು ಒದಲಾಯಿಸಿರುತ್ತಾರೆ ಮೊದಲಿನಂತೆ ಅವರು ಎದುರು ನಿಂತು ಜಗಳವಾಡುವದಿಲ್ಲ ಕಾಡುಗಳಲ್ಲಿಯೂ ಪೊದರುಗಳಲ್ಲಿಯೂ ಅವಿತುಕೊಂಡಿದ್ದು ಸೈನಿಕರಿಗೆ ತೊಂದರೆಕೊಡುವದಲ್ಲದೆ, ಸಿಪಾಯಿಗಳು ಸ್ಥಳವನ್ನು ಬಿಟ್ಟನಂತರ ಅಲ್ಲಿ ಮನೆಗಳಿಗೆ ನುಗ್ಗಿ ಲೂಟಿಮಾಡಿ ಹಾಳುಮಾಡುತ್ತಿದ್ದಾರೆ ತಮಗೆ ಜಯವಾಗುವದೆಂದು ತೋರದಲ್ಲಿ ಮಾತ್ರ ಅವರು ಮಿಲಿಟರಿಯವರನ್ನು ಎದುರುಗೊಳ್ಳುತ್ತಾರೆ ಹೀಗಾಗಿ ಮಿಲಿಟರಿ ಒಬ್ಬವು ಮಲಬಾರಿನಲ್ಲಿ ಸಾಲದ್ದರಿಂದ ಉತ್ತರ ಹಿಂದುಸ್ಥಾನದಿಂದ ಗುರ್ಖಾ ಸೈನ್ಯವೂ ಬರ್ಮಾದಿಂದ ಕಾಚಿನ್‌ಚಿನ್ ಸೈನ್ಯವೂ ಮಲಬಾರಿಗೆ ಬರುತ್ತಿವೆ

ಒದಲಾಗಬೇಕು ಒಬ್ಬರು ಸರ್ಕಾರಿ ಕಾರ್ಯದರ್ಶಿಯಾಗಿ ಮಾತ್ರ, ಅದರ ನ್ಯಾಯವಿಧಾಯಕ ಸಭೆಯು ಕೇವಲ 70 ರ ಒದಲು 60 ರಷ್ಟು ಮೆಂಬರುಗಳು ಜನರಿಂದ ಚುನಾಯಿತರಾಗಬೇಕೆಂತಲೂ ಗವರ್ನರವರ ಸಂಬಳವು ವರ್ಷ ಒಂದಕ್ಕೆ ಒಂದುಲಕ್ಷ ರೂ ಗೆ ಮೀರಕೂಡದೆಂತಲೂ, ಎಗ್ಸಿಕ್ಯುಟಿವ್ ಕೌನ್ಸಿಲ್ ಮೆಂಬರುಗಳ ವರ್ಷದ ಸಂಬಳವು 60 ಸಾವಿರ ರೂ ಮೀರಕೂಡದೆಂತಲೂ ನ್ಯಾಯವಿಧಾಯಕ ಸಭೆಯಲ್ಲಿ 92ಮೆಂಬರುಗಳಿರಬೇಕೆಂತಲೂ ಗವರ್ನ್‌ಮೆಂಟ್ ಆಫ್ ಇಂಡಿಯ ಆಕ್ಟಿನ 53 ನೇ ಸೆಕ್ಷನ್ ವಿನಾಯಿಸಿ ಬಾಕಿ ಎಲ್ಲಾ ಸಂಗತಿಗಳಲ್ಲಿಯೂ ಇದು ಇಂಡಿಯಾದ ಬೇರೆ ಗವರ್ನರುಗಳ ಪ್ರಾಂತ್ಯದಂತೆಯೇ ಇರಬೇಕೆಂತಲೂ ಅಪೂರ್ವವಾದ ಗಜೆಟಿನಲ್ಲಿ ಪ್ರಕಟಿಸಲ್ಪಟ್ಟಿದೆ

ಬೊಂಬಾಯಿಯಲ್ಲಿರುವ ಕೊಡಗರ ಸಭೆಯು ಮಂಜೂರುಮಾಡಿ ಅದರ ಅಧ್ಯಕ್ಷರಾಗಿರುವ ಮೆ|| ಮುಂಡಂಡ್ರ ಮುತ್ತಣ್ಣ ಬಿ ಎ, ಎಲ್‌ಎಲ್ ಬಿ ಯವರ ಮೂಲಕ ತಿಳಿಸಿರುವ ಠರಾವುಗಳು —(1) ಈಗ ಕೊಡಗಿಗೆ ಕೊಡುತ್ತೇವೆಂದು ಹೇಳುವ ನ್ಯಾಯವಿಧಾಯಕ ಸಭೆಯು ಮಸಗುಂದಿಸುವಂಥಾದ್ದು ಮತ್ತು ಒಪ್ಪತಕ್ಕದಲ್ಲವಾದದ್ದು ಎಂಬುದೆ ಈ ಸಭೆಯ ಮೆಂಬರುಗಳ ಅಭಿಪ್ರಾಯ (2) ಮೊದಲಿನ ಠರಾವನ್ನು ವಿರೋಧಿಸದೆ ಇನ್ನು ಮುಂದೆ ಕೊಡಗಿಗ ಕೊಡಬಹುದಾದಂತ ಯಾವ ನ್ಯಾಯವಿಧಾಯಕ ಸಭೆಯಲ್ಲಿಯೇ ಆಗಲಿ ಜಮ್ಮದವರು" ಜಮ್ಮ ಇಲ್ಲದವರು ಎಂಬ ಪಂಗಡಗಳನ್ನು ಮಾಡಿ ಜಮ್ಮದವರಿಗ ಸಲ್ಲತಕ್ಕದ್ದಕ್ಕಿಂತ ಹೆಚ್ಚಾದ ಮೆಂಬರುಗಳ ಸಂಖ್ಯೆಯನ್ನು ಕೊಟ್ಟು ದ್ವೇಶ ಹುಟ್ಟಿಸುವಂಥ ಭೇದವನ್ನು ಉಂಟುಮಾಡುವದಕ್ಕೆ ಈ ಸಭೆಯವರು ಒಪ್ಪುವದಿಲ್ಲ

ವಿದೇಶ.

ಸಪ್ಟಂಬರ 23 ರಲ್ಲಿ ಯುನೈಟೆಡ ರಾಜ್ಯದಲ್ಲಿ 1,445 000 ಕೂಲಿ ಆಳುಗಳು ಕೆಲಸವಿಲ್ಲದೆ ತಿರುಗಾಡುತ್ತಿದ್ದರು.

ಜಪಾನ್ ದೇಶದ ಅರಸನು ಸಾಡಿಸತಕ್ಕದ ಖಾಯಿಲೆಯಿಂದ ಸಂಕಟ ಪಡುತ್ತಿರುವದಲ್ಲದೆ ಮಾತಾಡಲೂ ಸ್ವಲ್ಪ ಕಷ್ಟವಾಗುತ್ತಾ ಬರುತ್ತಿದೆಯಂತೆ

ಸಭೆಯಮೂಲಕವಲ್ಲದೆ ಬೇರೆ ಯಾವ ವಿಧದಲ್ಲಿಯೂ ಎರಡು ಪಂಗಡದವರು ತಮ್ಮತಮ್ಮ ಅಭಿಪ್ರಾಯಗಳನ್ನು ತಿಳಿಸುವದು ಕಷ್ಟವೆಂದು ತಿಳಿದು ಪುನಃ ಇಂಗ್ಲೆಂಡಿನವರೂ ಐರ್ಲೆಂಡಿನವರೂ ತಮ್ಮ ಜನ್ನ ವಾದಗಳನ್ನು ಚರ್ಚಿಸಿ ತೀರ್ಮಾನಿಸಲು ತಾ|| 11-10-21 ರಲ್ಲು ಒಂದು ಸಭೆಯಲ್ಲಿ ಸೇರಲು ಒಪ್ಪಿಕೊಂಡಿರುತ್ತಾರೆ

ರಷ್ಯಾ ದೇಶದಲ್ಲಿ ಕ್ಷಾಮದ ಹಾನಿಯನ್ನು ವರ್ಣಿಸಲಸಾಧ್ಯವಾಗಿದೆ ಎಲ್ಲಿ ನೋಡಿದರೂ ಸತ್ತ ಹಾಗಳೇ ಕಾಣಬರುತ್ತವೆಯಂತೆ ಮನೆಗಳಲ್ಲಿಯೂ ಬೀದಿಗಳಲ್ಲಿ ಆಹಾರವಿಲ್ಲದೆ ಜನಗಳು ಮುಕ್ಕಳೂ ಒದ್ದು ಪ್ರಾಣಬಿಡುತ್ತಿದ್ದಾರೆ ಬೇರೆ ದೇಶಗಳಿಂದ ಆಗುವಷ್ಟು ಸಹಾಯವು ಹೋಗುತ್ತಲೇ ಇದೆ ಆದರೂ ಕೂಡ ಹತ್ತು ಮಿಲಿಯ ಜನರು ಕ್ಷಾಮಪೀಡಿತರಾಗಿ ಸಂಕಟಪಡುತ್ತಿದ್ದಾರಂತೆ!

ಪ್ರಿನ್ಸ್ ಅಪ್ ವೇಲ್ಸರವರು ಇಂಡಿಯಾದೇಶಕ್ಕೆ ಬರುವಾಗ ಅವರ ಜೊತೆಯಲ್ಲು 11 ಕತ್ತೆ, ಬೆಕ್ಕುಗಳನ್ನು ತರುತ್ತಾರೆಂತಲೂ ಒಂದು ಗೇಡರ ಹಳವನ್ನು ಯಾವಾಗಲು ತಮ್ಮ ಮೋಟಾರಿನಲ್ಲಿ ಕೆಗೆದುಕೊಂಡು ತಿರುಗುತ್ತಾರೆಂತಲೂ ಅಮೃತಬಜಾರ್ ಪತ್ರಿಕೆಯು ಸೂಚಿಸುತ್ತದೆ ಕಪ್ಪು ಬೆಕ್ಕುಗಳು ಇಂಗ್ಲಾಂಡ್ ದೇಶದಲ್ಲು ಕ ಮಸೂಚನೆ ಆಗಲೂ ಹಿಂದೂದೇಶದಲ್ಲು ಅದು ಅಶುಭ ಸೂಚನೆಯೆಂದೂ ಬೆಕ್ಕ ಹುಳವು ಮೈಮೇಲೆ ಹಾರಿದರೆ ಅವನಿಗೆ ಆ ದಿನ ಹೊಸಬಟ್ಟೆಗಳು ಸಿಕ್ಕುವವೆಂಟ ಅಭಿಪ್ರಾಯವು ಇಂಗ್ಲಾಂಡಿನಲ್ಲಿ ಇದೆ ಎಂದೂ ಇವುಗಳ ವಿಷಯ ಪ್ರಿನ್ಸ್ ಆಫ್ ವೇಲ್ಸರವರ ಸಂಗಡ ಕೇಳುತ್ತೇನೆಂದೂ ಮದ್ರಾಸು ಪಬ್ಲಿಸಿಟಿ ಆಫೀಸರವರು ಬರೆದಿರುತ್ತಾರೆ

ತಾ|| 2-10-21 ರಲ್ಲು 'ಕೊಡವ ಸಭೆಯ' ವಿಷಯ ಅಮ್ಮತ್ತಿ ಸರಕಾರಿ ಸ್ಕೂಲಿನಲ್ಲಿ ಮಧ್ಯಾಹ್ನ 2 ಗಂಟೆಗೆ ಮೆ|| ಕುಟ್ಟಂಡ್ರ ತಮ್ಮಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗು ನಡೆಯಿತು ಸುಮಾರು 300 ಜನರು ನೆರೆದಿದ್ದರು ಮೀಟಿಂಗಿನ ನೋಟೀಸು ಕಳುಹಿಸಿದ ರಾ|| ಬಾ|| ಕೊಟ್ಟಂಗೇರ ಕುಟ್ಟಯ್ಯನವರು ರಾ|| ಬಾ|| ಕೋದಂಡ ಅಪ್ಪಯ್ಯನವರೂ, ಅಲ್ಲದೆ ರಾ|| ಸಾ|| ಕೇಟೋಳಿರ ಚಂಗಪ್ಪನವರೂ ಮೆ|| ಕರೋಮಾಡ ಬೆಳ್ಯಪ್ಪನವರೂ, ಮೆ|| ಕೊರವಂಡ್ರ ಮುತ್ತಣ್ಣನವರು ರಾ|| ಬಾ|| ಅಪ್ಪಾರಂಡ್ರ ಮುದ್ದಣ್ಣನವರೂ ಮೆ|| ಮಂಡೇಪಂಡ್ರ ಮಂದಣ್ಣನವರೂ ಮೆ|| ಅಪ್ಪಾರಂಡ್ರ ಚಂಗಪ್ಪನವರು ಮೆ|| ಕೋದಂಡ್ರ ಕಾಳಪ್ಪನವರು ಮೆ|| ಅಜ್ಜಮಾಡ ಬೋಪ್ಪಯ್ಯನವರೂ ಸಹ ಹಾಜರಿದ್ದರು ಅಧ್ಯಕ್ಷರು ಪೀಠವನ್ನು ಅಲಂಕರಿಸಿದೊಡನೆ ಈ ವಿಷಯ ಮೊದಲೇ ತಾನೆ ವೀರರಾಜೇಂದ್ರಪೇಟೆಯಲ್ಲಿ ನಡೆದ ಮೀಟಿಂಗಿನ ಸಂಗತಿಗಳನ್ನು ಸಂಕ್ಷೇಪವಾಗಿ ಹೇಳಿ ಕೊಡಗರ ಆಚಾರಪದ್ಧತಿಗಳನ್ನು ತಿದ್ದಿ ಕೊಡಗರನ್ನು ಒಗ್ಗಟ್ಟಿನಿಂದಿಡಲಿಕ್ಕೆ ಈ ಒಂದು ಸಭೆಯ ಅವಶ್ಯವಲ್ಲದೆ ಒಂದು ಕೊಡವಸಭೆ ಅವಶ್ಯವೆಂದು ಸೂಚಿಸಿದರು.

ರಾ|| ಬಾ|| ಕುಟ್ಟಯ್ಯನವರು ಕೊಡವ ಸಭೆಯ ವಿಷಯ ಮಾತ್ರವಲ್ಲದೆ ತನ್ನ ವಿಷಯ ಸಹ ಸ್ವಲ್ಪ ಹೇಳಿಕೊಳ್ಳಲು ಸಭೆ ಯವರ ಅನುಮತಿಯನ್ನು ಕೇಳಿಕೊಂಡು ಹೇಳಿದ್ದೇನೆಂದರೆ ಕೆಲವರು ಮಡಿಕೇರಿಯಿಂದ ಬಂದು ಈ ಸಭೆಯನ್ನು ನಿಲ್ಲಿಸ ಉದ್ದೇಶ, ಇದರ ವಿಷಯ ತಪ್ಪು ಅಭಿಪ್ರಾಯಗಳನ್ನು [illegible] ರಲ್ಲಿ ಬೋಧಿಸಿರುತ್ತಾರೆ ವೀರರಾಜಪೇಟೆಯಲ್ಲಿ ನಡೆದ [illegible] ಒಬ್ಬನಿಗಿಂತ ಕರಡದ ಜನರು ಸಮಾಧಾನ ಇದ್ದ ವರ್ಗ [illegible] ರಿಂದ ಅವರು ಸಭೆಗ ಪ್ಪಂದಕೊಟ್ಟರು ಈ ಕಾರಣವು ಅಮ್ಮತ್ತಿ ನಾಡಿನವರ ಅಭಿಪ್ರಾಯ ಕೇಳಬು ಇಲ್ಲಿಗೆ ದಿಗ್ವಿಜಯ ನಾನು ಮಡಿಕೇರಿ ಮುನ್ಸಿಪಾಲಿಟಿಯಲ್ಲಿ [illegible] ಬೇಧವಿಲ್ಲದೆ ಸುಮಾರು ಐದು ಸಾವಿರ ಜನರ ಸೇವೆ [illegible] ತ್ತಿರುವದು ಅನೇಕರಿಗೆ ತಿಳಿಯದ ಸಂಗತಿಯಲ್ಲ [illegible] ರಾದ ಕೊಡಗರಲ್ಲಿ ಕೆಲವರೇ ನನ್ನನ್ನು ಅಪ್ರಿಕದಲ್ಲಿ [illegible] ಗೊ ಜನರಹಾಗೆ ಕಪ್ಪುಬಣ್ಣದಲ್ಲಿ ವರ್ಣಿಸಿರುವದು [illegible] ವ್ಯಸನಕರವಾದ ಸಂಗತಿ ವಿದ್ಯಾವಂತರು ಒಳ್ಳೆಯ [illegible] ಕಟ್ಟಡನ್ನು ಚೆನ್ನಾಗಿ ವಿಮರ್ಶಿಸಬೇಕು ಕೆಲವು [illegible] ಸ್ವರು ಈ ಕೆಡನನ್ನು ಮಾಡಿರಬಹುದು ಇದು ಸಭೆ [illegible] ವರಿಂದ ಹುಟ್ಟಿದ ಸಭೆಯೆಂದು ಕೆಲವರು ಹೇಳುತ್ತಾರೆ ಅಸಹಕಾರಿಗಳಾಗಿದ್ದರಾದರು ಇದ್ದಾರೆ? ಸರ [illegible] ದ್ಯೋಗಸ್ಥರ ಸ್ಥಿತಿಯು ಬಹು ಕಷ್ಟವಾದದ್ದು [illegible] ಪೇಟೆಯಲ್ಲು ಮಾತಾಡಿದವರು ಜವಾಬ್ದಾರಿಕೆಯನ್ನು [illegible] ದವರಾಗಿ ಕಾಣಲಿಲ್ಲ ಮುದುಕರನ್ನು ಹಿರಿಯರೆದ [illegible] ದಲಾದರೂ ನೋಯಿಸಿಬಿಟ್ಟಿವು ಎಂದು ಅವರು ಹೇಳಿ [illegible] ತ್ತಾರೆ ಜಮಿನಾನ್ದಾರರ ಸಭಾದ ಅಧ್ಯಕ್ಷರಾಗಿ [illegible] ಯಾವಾಗಲೂ ಜನರಿಗೆ ಒಳ್ಳೇದು ಮಾಡಿರುತ್ತೇನೆ [illegible] ಜನರಿಗೆ ಕೆಡಕನ್ನು ಮಾಡುವೆಂದು ನೀವು ಯೋ [illegible] ರಾ? ಯೌವನಸ್ಥರು ಪರಾಡುವವಾಗಿ ಈಗ ನನ್ನ [illegible] ನಾನೇ ಹೇಳಬೇಕಾಗಿ ಬಂದಿದೆ ನಾನು ನಿಮ್ಮನ್ನು [illegible] ನಗೊಳಿಸಲು ಬಂದಿರುವದಿಲ್ಲ ನೀವು ಹೂಂಗಿ [illegible] ನಿಮ್ಮೊಳಗ ನುಗ್ಗಲು ಬಿಟ್ಟರೆ ಅವರು ನಿಮ್ಮನ್ನು [illegible] ನ ವರು ಕಾವೇರಮ್ಮನು ಪರೋಪಕಾರಿಯಾಗಿ [illegible] ಕೊಡಗರೂ ಅದೇ ಮಾರ್ಗವನ್ನು ಹಿಂಬಾಲಿಸುತ್ತಾ [illegible] ಡಗರು ಚಾತುರ್ಯಮಾರ್ಗ (ಪೊಟ್ಟಂಗ) ತಿಳಿದ [illegible] ರಾದರೂ ಕೂಡ ಕಡೇಗ ಸೋತುಹೋಗಲಿಕ್ಕಿಲ್ಲ [illegible] ರನ್ನು ಹೂರಿಗಿಸುವರು ಬಹ ವಾಗಿ ಹೊಗಿಸುತ್ತಾ [illegible] ಯೊಟ್ಟಿನೂ ಮುಂದಾಳಾಗಿರಬೇಕೆಂದು ಅಪೇಕ್ಷ [illegible] ಸಾಧ್ಯವಾದದ್ದಲ್ಲ ನಾನು ನಿಮ್ಮಲ್ಲಿ ಒಬ್ಬನಾಗಿದ್ದೇ [illegible] ಟ್ಟಿ ಕಾವೇರಿದೇವಿಯೇ ವೀರರಾಜಪೇಟೆ ಮೀಟಿಂಗಿನ [illegible] ಕರು ಗಲಿಭಿಲಿಮಾಡಿದ್ದು ಬಹಳ ವ್ಯಸನಕರ ಮಡಿಕೇರಿ [illegible] ನೋಗ ವಿನಾದರೂ ಗಲಭೆ ಉಂಟಾದಾಗ ಒಂದು [illegible] ಅವರನ್ನು ನಿಲ್ಲಿಸಬಲ್ಲೆನು ಹೀಗಾದರೆ ನೀವು ಹಾ [illegible] ಜವನ್ನು ಪಡೆಯುವದಕ್ಕೆ ಆಗುತ್ತದೆ ಹೀಗೆ [illegible] ನಾವೇ ಹೊಡದಾಡುವಾಗ್ಗೆ ಕೌನ್ಸಿಲಿನಲ್ಲಿ ಜನ [illegible] ಸಂಖ್ಯೆಯ ವಿಷಯ ಜಮ್ಮಗಾರರಲ್ಲದವರು ಹೋರಾ [illegible] ವಿಶಾಷವಲ್ಲ ನೀವು ನ್ಯಾಯಸ್ಥಾಪದ್ದವರನ್ನು ಹಿಂತಳ [illegible] ರಿಂದ ಕೇಡುಂಟಾಗುತ್ತದೆ ನ್ಯಾಯಸ್ಥಾಪದ್ದರು [illegible] ಪ್ರಯೋಜನವನ್ನು ನೋಡಿಕೊಂಡು ನಿದ್ದೆಮಾಡ [illegible] ರೆಂದು ಜನರು ತಿಳಿದುಕೊಂಡಿದ್ದಾರೆ ಆದರೆ ಮಡಿ [illegible] ನಡೆಯುವ ಸಂಗತಿಗಳು ಅಲ್ಲಿಯ ನಿವಾಸಿಗಳಿಗ [illegible] ಮ ಎಂದಾಗಿ ತಿಳಿಯುತ್ತದೆ ನಾಡಿನವರು ಅವರ [illegible] ಮುಗ್ಧರಾಗಿರುವದರಿಂದ ಇಂಥಾ ಸಂಗತಿಗಳು [illegible] ಯಲು ಅನುಕೂಲವಿಲ್ಲ ವೀರರಾಜಪೇಟೆ ಮೀಟಿಂ [illegible] ಕರ, ಕೇಳಿದ ಮಾತಿಗೆ ಬೆಲೆಕೊಟ್ಟು ಹೆಚ್ಚು ಕಾ [illegible] ಗಡೆ ಅದರ ಪ್ರತ್ಯಕ್ಷ ಕಂಡರು ಪರೀಕ್ಷಿಸಿನೋ [illegible] ಗಾಬಿಯಿದೆ ಕೌನ್ಸಿಲ ವಿಷಯ ವೀರರಾಜಪೇಟೆಯ [illegible] ದಾಗಿ ನಡೆದ ಮೀಟಿಂಗಿನ ನೋಟೀಸು ಮಡಿಕೇ [illegible] ಸಿಕ್ಕಲಿಲ್ಲ ವೀರರಾಜಪೇಟೆಯಲ್ಲಿ ಜನರು ಸೇರಿ [illegible] ವರಿಗೆ ತಂತಿವರ್ತಮಾನ ಕೊಟ್ಟಹಾಗೆ ಮಡಿಕೇರಿ [illegible] ನಿವಾಸಿಗಳು ಸೇರಿ ಒಂದು ಟೆಲಿಗ್ರಾಮನ್ನು ಕೊಟ್ಟ [illegible] ಇದಕ್ಕೆ 'ನಿಮ್ಮ ಟೆಲಿಗ್ರಾಮ್ ತಲಪಿದೆ' [illegible] ಜವಾಬುಬಂದಿದೆ ಕೆಲವರು ತಾವು ಕೆಲಸವಾ [illegible] ಬೇರೆಯವರ ಕೆಲಸಮಾಡಲು ಬಿಡುವದೂ ಇಲ್ಲ [illegible] ನಮಾಜಲು ಮನಸ್ಸಿಲ್ಲದಿದ್ದರೂ ಬೇರೆಯವರಿಗೆ [illegible] ಅವಶ್ಯವಿಲ್ಲ ಎಲ್ಲರಿಗೂ ದೇವರುಕೊಟ್ಟ ಬುದ್ಧಿ [illegible] ಗದೆ ಹೊಡಿದ ಬ್ರಾಹ್ಮಣರು ವಿವೇಕಶಾಲಿಗ [illegible] ಪೇಕ್ಷೀನೆ ಇದಕ್ಕೆ ವಿರೋಧಿಸುವವರು [illegible] ಅಭಿವೃದ್ಧಿಗೆ ಅಡ್ಡಿಪಡಿಸುವಂತೆ ಕಾಣುತ್ತದೆ ಸುತ್ತೇನೆ.

ಈಗ ಸಭೆಯ ವಿಷಯ ಆಲೋಚಿಸು [illegible]

ಮೆ|| ಕೇಚಂಡ್ರ ಸಂಜಪ್ಪನವರು ಹೀಗ [illegible] ಯನ್ನ ಹುಟ್ಟಿಸುವದರಿಂದ ಗಲಾಟೆಯು [illegible] ತ್ತದೆಂತಲೂ ಈಗ ಇಂಥಾಸಭೆಯು ಅಗತ್ಯ [illegible] ಈ ಸಭೆ ಕೊಡಗರೆಲ್ಲರೂ ಸೇರದೆ ಇರುವದರಿಂದ ಯಾರಿಗೆ ನಿಲ್ಲಲಿಕ್ಕಿಲ್ಲವೆಂತಲೂ ಸೂಚಿಸಿದರು [illegible] ಸಭೆಯಲ್ಲಿ ಅನೇಕ ತೀರ್ಮಾನಗಳೆಯಲ್ಲ ಮುಂದಾ [illegible] ಹಾಕಿಕೊಂಡಿದ್ದಾಗ್ಯೂ ತನ್ನಂಥ ಬಡವ್ಯಕ್ತನ [illegible] ವಿಟ್ಟು ಗಮನಿಸಬೇಕೆಂದ ಕೇಳಿಕೊಂಡ [illegible] ಮನಸ್ಸಾಕ್ಷಿಗೆ ಸರಿಯಾಗಿ ಮಾತಾಡುತ್ತೇನೆ [illegible] ದ್ಯೋಗಸ್ಥರ ಸಂಗಡ ಬೆರೆತು ನನಗೆ ಅನೇಕ [illegible] ವೆನಾಗಿ ಗೊತ್ತಿದೆ, ಇಷ್ಟರವರೆಗೆ ಇಂಥಾ [illegible] ನಮ್ಮ ದೇಶದಲ್ಲಿ ಸ್ಥಿರವಾಗಿ ಸ್ಥಾಪಿತವಾಗಿರು [illegible]

ಪತ್ರವ್ಯವಹಾರಗಳು.

[illegible]

ನೋಟೀಸ್.

[illegible]

COORG TEACHERS' CO-OPERATIVE STORES, Ltd.

[illegible]

ಒಳ್ಳೆಯ ಪುಸ್ತಕಗಳು

A. N. C. & Co., Mysore.

[illegible]

12—10

Just Arrived ! Just Arrived !!

Fresh Consignment of Barton on Humber

CYCLES

Size Frame 22 24 & 26"

Fitted with Dunlop tyres, tub's, tool Bags with tools, the Coil Spring Saddle Complete

Price Rs. 160

Special rates for purchasers of three Cycles at a time

Apply to— 4—3

K R Thirupad & Bros,

Motor Mechanics & Cycle Dealers

Sayaji Rao Road MYSORE.

Messrs. P. SAM & Co.,

Receiving & Forwarding Agents, Cabinet Makers, Auctioners & General Agents 12—11

591 4 Sayaji Rao Road MYSORE

They not only receive and forward your goods from Mysore Railway Station to any part in Coorg but also receive goods from those parts and despatch them to any other part from the Mysore Railway Station. They undertake to sell your saleable articles by public auction or otherwise and also supply you goods at the cheapest rates. Commission very moderate. A trial order will convince you of their promptness and business methods.

WANTED

1 One Compositor for the "SUNDARA VILAS" Printing works

Apply—R S SINGH,

GONIKOPAL

2 ENCOURAGE SWADESHI

If you miss this opportunity of encouraging Swadeshi at this critical juncture, you are not gain'feed [illegible] So encourage The Sundaravilas Press [illegible] [illegible] Neat and cheap [illegible]

[illegible]

Messrs R SUNDARA SINGH

GONIKOPAL

[illegible]

R SUNDER SINGH,

GONIKOPAL, S. Coorg

ಎಲೆಕ್ಟ್ರಿಕ್ ಗಿಲ್ಟು ಬಂಗಾರದ ನಗಗಳು

ಗಜ ಸರದು 1 ಕ್ಕೆ	4—0
ಬೋರಾ ಹುವು 1 ಕ್ಕೆ	0—1—0
ಜಾವಂತಿಗೆ ಹುವ್ವು 1 ಕ್ಕೆ	0—12—0
ಮು ಮುಗ್ಗು ಸಾಲು ಕ್ಕೆ	3—0—0
ಬೆಂಡ ಹಾರ ಸಾದಾ 1 ಕ್ಕೆ	3 8 0
ಡಿಟೋ ಮೋಪು ಸಹಾ	3—0 0
ಇಮಿಟೇಷನ್ ಬೆಂಡೋಲೆ ಜೊತೆಗೆ	3—0—0
ಮೂಗುಬಟ್ಟು 1 ಕ್ಕೆ	0—8—0
ಬುಲಾಕು 1 ಕ್ಕೆ	0—12—0
ಜರ್ಮನ್ ಬೆಳ್ಳಿ ಪಟ್ಟಿ 1 ಕ್ಕೆ	3—0—0
ಪಟ್ಟೀರು ಘಂಟಿ 1 ಕ್ಕೆ	3—0—0
ಡಿಟೋ ಬೋಟಿ 1 ಕ್ಕೆ	1—8—0

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ

12—8 ಆರ್. ಕೆ. ವಾಚ್ ಕಂಪೆನಿ

ನಂಬರು 42, ಕೆಂಪಚೆಟ್ಟಿ ಬೀದಿ ಮದರಾಸು

ಖ್ಯಾತಿಯಿಂದ ಗುಣಪಡಿಸುವ ಔಷಧಿಗಳು

(1) ಮಹಾಮದನಕಾಮೇಶ್ವರ ಲೇಹ್ಯ — ಆಯುರ್ವೇದ ವಿಧಿಪ್ರಕಾರ ತಯಾರಿಸಲ್ಪಟ್ಟಿದ್ದು ಇದರ ಸೇವನೆಯಿಂದ ಧಾತು ಕ್ಷೀಣತೆ, ಅಜೀರ್ಣ, ಎದೇನೋವು ಶರೀರದ ಪಳಿತದಿಂದ ಉಂಟಾದ ಅಶಕ್ತಿಯನ್ನೂ ದೇಹಾಲಸ್ಯವನ್ನೂ ಪರಿಹರಿಸುತ್ತ ರಕ್ತಶುದ್ಧಿ ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು ಸ್ತ್ರೀಯರು ಪುರುಷರು ಇದನ್ನು ಉಪಯೋಗಿಸಬಹುದು 40 ಸಲ ಸೇವಿಸುವ ಡಬ್ಬಿ 1 ಕ್ಕೆ 1—12—0 ಟಪ್ಪಾಲ್ ಖರ್ಚು 6 ಆಣೆ 3 ಡಬ್ಬಿಗಳಿಗೆ 4—12—0 ಟ ಖ 10 ಆಣೆ

(2) ಚವನಪ್ರಾಶ್ಯ — ಇದರ ಸೇವನೆಯಿಂದ ಕ್ಷಯ ರಾಜಯಕ್ಷ್ಮ, ಉರಕ್ಷತ, ಶ್ವಾಸ, ಕಾಸ, ಹೃದ್ರೋಗ ಇವೇ ಮೊದಲಾದ ರೋಗಗಳನ್ನು ನಾಶಪಡಿಸಿ ಜೀರ್ಣಶಕ್ತಿಯನ್ನು ವೃದ್ಧಿಪಡಿಸಿ ಶರೀರಕ್ಕೆ ಸೌಂದರ್ಯವನ್ನು ಯವನ ಕಾಲದಲ್ಲಿದ್ದ ಹಾಗೆಯೇ ಇಂದ್ರಿಯಪಟುತ್ವವನ್ನು ಕೊಡುವದು ಮತ್ತು ಶರೀರದಾರ್ಢ್ಯವನ್ನೂ, ಅವಯವಗಳ ಬಲವನ್ನೂ ವೃದ್ಧಿಮಾಡುತ್ತದೆ ಮತ್ತು ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸಿ ಬುದ್ಧಿಪಟುತ್ವವನ್ನು ಅಧಿಕಮಾಡುವುದು ಈ ಔಷಧವು ಬಾಲಕರಿಗೂ ವೃದ್ಧರಿಗೂ ಬಹಳ ಪ್ರಯೋಜನ ಇದು ಬಹಳ ರುಚಿಕರವಾಗಿರುವುದು ಇದು ಚವನನೆಂಬ ವೃದ್ಧಮಹರ್ಷಿಗೆ ಅಶ್ವಿನಿದೇವತೆಗಳುಪಯೋಗಿಸಲ್ಪಟ್ಟ ರಸಾಯನವಾಗಿರುತ್ತದೆ 1 ಸೇರಿನ ಡಬ್ಬಿ 1 ಕ್ಕೆ 2—0—0 3 ಡಬ್ಬಿಗಳಿಗೆ 5—8—0 ರೂಪಾಯಿ

(3) ಅಶೋಕಾರಿಷ್ಟ ಮತ್ತು ಮಾತ್ರೆ — ಹೆಂಗಸರು ಕ್ರಮತಪ್ಪಿ ಮುಟ್ಟಾಗುವುದು, ರಜೋಸಮಯದಲ್ಲಿ ಅತ್ಯಲ್ಪ ಅತಿರೇಕವಾಗಲಿ, ರಕ್ತ ಸುರಿಯುವುದು, ಹೊಟ್ಟೇನೋವು ಸೊಂಟನೋವು, ಬಲಹೀನ, ಬಂಜೆಯಾಗಿರುವಿಕೆ ಬಿಳೀಪ್ರದರ, ಕುಸುಮರೋಗ, ಗರ್ಭಕೋಶ ಉಕ್ತವ ತಪ್ಪುವಿಕೆ, ಮತ್ತು ಸ್ತ್ರೀಗಳಿಗೆ ಉಂಟಾಗತಕ್ಕ ಸಕಲ ರೋಗಗಳನ್ನು ಖಂಡಿತವಾಗಿ ಗುಣಪಡಿಸುತ್ತದೆ 8 ಔನ್ಸ್ ಬಾಟ್ಲಿಗೂ ಡಬ್ಬಿ ಮಾತ್ರೆಗೂ 2—0—0 3 ಬಾಟ್ಲಿಗಳಿಗೆ ಮತ್ತು ಡಬ್ಬಿಗಳಿಗೆ 5—8—0 ರೂ

(4) ಪ್ರಸೂತಾವಲೇಹ — ಹೆತ್ತ ನಂತರ ಈ ಔಷಧಿಯನ್ನು ಸೇವಿಸುವದರಿಂದ ಅರುಚಿ ಅಗ್ನಿಮಾಂದ್ಯ, ನಿದ್ರಾನಾಶ ಮತ್ತು ಗರ್ಭದಿಂದ ಸಂಭವಿಸುವ ಸಕಲ ವೇದನೆಗಳನ್ನು ಖಂಡಿತ ಗುಣಮಾಡುವದು ಮತ್ತು ಧಾತುಪುಷ್ಟಿಯನ್ನು ಉಂಟುಮಾಡುವುದು ಇದು ತಾಯಿಗೆ ಹೇಗೋ ಹಾಗೆಯೇ ಮಗುವಿಗೂ ಬಹಳ ಪ್ರಯೋಜನ, ಡಬ್ಬಿ 1 ಕ್ಕೆ 2—0—0, ಟಪ್ಪಾಲ್ ಖರ್ಚು 6 ಆಣೆ

(5) ಪಿತ್ತಹಾರಿಚೂರ್ಣ — ಮುಖಬದ್ಧತೆ, ಒಮುಮೂತ್ರ, ಛಳಿಜ್ವರ ಬ್ವಂಗೆಡ್ಡೆ ತಲೆತಿರುಗುವಿಕೆ ಆಮ್ಲಪಿತ್ತ ಹೊಟ್ಟೆ ಹಸಿವಿಲ್ಲದೆ ಇರುವಿಕೆ, ಬಾಯಿಯಲ್ಲಿ ಆಗ್ರ ವಾತಪಿತ್ತ ಕಫ ಇವುಗಳಿಗೆ ಲೀಲ ದಿವ್ಯ ಔಷಧಿ 1 ಡಬ್ಬಿಗೆ 12 ಆಣೆ ಟಪ್ಪಾಲ್ ಖರ್ಚು 6 ಆಣೆ 3 ಡಬ್ಬಿಗಳಿಗೆ 2—0—0

(6) ಮೇಹಕುಠಾರ — ಮೂತ್ರಕೃಚ್ಛ್ರ ಅಶ್ಮರಿ, ವ್ರಣ ಮೂತ್ರ ಹೋಗುವಾಗ್ಗೆ ಉರಿಯನ್ನು ಕೀವನ್ನು ಕೂಡಲೆ ನಿಲ್ಲಿಸಿ ಖಂಡಿತ ಗುಣ ಕೊಡುವುದು, 14 ದಿವಸದ ಔಷಧಿ ಡಬ್ಬಿ 1 ಕ್ಕೆ ಕ್ರಯ 2—0—0 3 ಡಬ್ಬಿಗಳಿಗೆ 5—10—0

(7) ಬಾಲಗ್ರಹ ಗುಟಿಕೆ — ಮಕ್ಕಳಿಗೆ ಮಲಬದ್ಧತೆ ಬಾಲಗ್ರಹ ಇವೇ ಮೊದಲಾದ ಕಷ್ಟದಿಂದ ಉಂಟಾಗತಕ್ಕ ಸಕಲ ರೋಗಗಳನ್ನು ಗುಣಪಡಿಸತಕ್ಕ ಬಹಳ ಉತ್ತಮವಾದ ಔಷಧ ಬಾಟ್ಲಿ 1 ಕ್ಕೆ 10 ಆಣೆ 3 ಬಾಟ್ಲಿಗಳಿಗೆ 1—10—0 ಒಂದರಿಂದ 3 ಬಾಟ್ಲಿವರೆಗೆ ಟಪ್ಪಾಲ್ ಖರ್ಚು 6 ಆಣೆ

(8) ಶ್ವಾಸಕುಠಾರಗುಟಿಕೆ — ನಂಬರ್ 1 ನಂ 2 ಈ ಎರಡು ನಮೂನೆಯ ಗುಟಿಕೆಗಳ ಸೇವನೆಯಿಂದ ತ್ರಿದೋಷ (ಕಫ ವಾತ, ಪಿತ್ತ) ದಿಂದ ಉಂಟಾಗುವ ಶ್ವಾಸಕಾಸವನ್ನು ನಿರ್ಮೂಲಗೊಳಿಸುವ ಸಿದ್ಧೌಷಧವಾಗಿರುವದು 2 ಬಾಟ್ಲಿ ಮಾತ್ರೆಗಳಿಗೆ 1—2—0 6 ಬಾಟ್ಲಿಗಳಿಗೆ 3 ರೂ 2 ರಿಂದ 6 ಬಾಟ್ಲಿವರೆಗೆ ಟ ಖ 6 ಆಣೆ

(9) ಮಹಾಜ್ವರಾಂಕುಶ — ಕಫಜ್ವರ ಪಿತ್ತಜ್ವರ ವಾತಜ್ವರ, ಏಕಾಹಿಕಜ್ವರ ದ್ವ್ಯಾಹಿಕ ತ್ರ್ಯಾಹಿಕ ಚಾತುರ್ಥಿಕ ಇನ್‍ಫ್ಲೂಯಂಜಾ, ನಿಮೋನಿಯಾ ಮೊದಲಾದ ಭಯಂಕರ ಜ್ವರಗಳನ್ನು ಸಹ ಖಂಡಿತ ಗುಣಪಡಿಸುವುದು 1 ಬಾಟ್ಲಿಗೆ 10 ಆಣೆ 3 ಬಾಟ್ಲಿಗಳಿಗೆ 1—10—0 ಟ ಖರ್ಚು 1 ರಿಂದ 3 ಬಾಟ್ಲಿವರೆಗೆ 6 ಆಣೆ

(10) ಇಚ್ಛಾಭೇದಿ — ಆಯಾಸವನ್ನು ಉಂಟುಮಾಡದ ಸುಖವಿರೇಚಕ ಬಾಟ್ಲಿ 1 ಕ್ಕೆ 1 ಆಣೆ ಬಾಟಿಗಳಿಗೆ 2 ರೂ 1 ರಿಂದ 3 ಬಾಟ್ಲಿವರೆಗೆ ಟ ಖ 6 ಆಣೆ

(11) ಕೆತ್ತಪುಟ್ಟ ಚೂರ್ಣ — ಮೇಹದ ಉಪದಂಶ ಸಮ್ಮಂಧ ಮೈಯಲ್ಲಿ ವ್ಯಾಪಿರುವ ವ್ರಣಕಜ್ಜಿ ಮೃತ್ತುರ ಷುಪಿಕೆ ಮಲಬದ್ಧತೆ ಮುಂತಾದುವುಗಳನ್ನು ಹೋಗಲಾಡಿಸಿ ಹಸಿವೆಯನ್ನು ತ್ರಾಣವನ್ನು ಧಾತುಪುಷ್ಟಿಯನ್ನು ಉಂಟುಮಾಡುತ್ತದೆ 1 ಡಬ್ಬಿ 1—0—0 ರೂ ಟ ಖ 5 ಆಣೆ

ಗುಣವಿಶೇಷ ಕ್ರಯ ಕಮ್ಮಿ ಖ್ಯಾತಿ ಹೆಚ್ಚು

(12) ದಂತಕಾಂತಿಯ ಚೂರ್ಣ — ಹಲ್ಲು ನೋವಿಗೆ ಖಾತ್ರಿಯಾದ ಔಷಧಿ ಇದರ ಉಪಯೋಗದಿಂದ ಹಲ್ಲಿನ ಕ್ರಿಮಿಗಳನ್ನು ನಾಶಪಡಿಸಿ, ಹಲ್ಲಿನ ವೇದನೆಯನ್ನು ಖಂಡಿತ ಗುಣಪಡಿಸಿ, ವಸಡುಗಳ ಜೀಗು ಹಲ್ಲಿನಿಂದ ಬರುವ ರಕ್ತವನ್ನು, ಕೀವನ್ನು, ಬಾಯಿಯ ದುರ್ವಾಸನೆಯನ್ನು, ಹಲ್ಲುಗಳ ಬುಡದಲ್ಲಿ ಸುಣ್ಣ ಕಟ್ಟುವುದನ್ನು ಗುಣಪಡಿಸಿ ಅಲ್ಲಾಡುವ ಹಲ್ಲುಗಳನ್ನು ವಜ್ರದೋಪಾದಿಯಲ್ಲಿ ಗಟ್ಟಿಮಾಡಿ ನಾಲಿಗೆಗೆ ರುಚಿಯನ್ನು ಸಹ ಉಂಟುಮಾಡುತ್ತದೆ ಟಿನ್ 1 ಕ್ಕೆ 3 ಆಣೆ 6 ಟಿನ್ನಿಗೆ 1—1—0 ಟ ಖರ್ಚು 5 ಆಣೆ 12 ಡಬ್ಬಿಗಳಿಗೆ ಟಪ್ಪಾಲ್ ಖರ್ಚು 6 ಆಣೆ.

(13) ಗಜಕರ್ಣದ ಮುಲಾಮು — ಹುಳಿ ಮೇಯುವದು, ದದ್ದು, ಗಜಕರ್ಣ ಬಿಜ್ಜಿ, ಇಸುಬು ಹುಳಕಡ್ಡಿ ಮೊದಲಾದ ಸಮಸ್ತ ಚರ್ಮರೋಗಗಳು ಮೂರೇ ದಿವಸಗಳಲ್ಲಿ ಗುಣವಾಗುವದು ಡಬ್ಬಿ 1 ಕ್ಕೆ 5 ಆಣೆ 3 ಡಬ್ಬಿಗಳಿಗೆ 13 ಆಣೆ ಟ ಖ 5 ಆಣೆ 6 ಡಬ್ಬಿಗಳಿಗೆ 1—12—0 12 ಡಬ್ಬಿಗಳಿಗೆ 3 ರೂ ಟಪ್ಪಾಲ್ ಖರ್ಚು 10 ಆಣೆ

(14) ವಿಶ್ವಾಂಜನ — ಇದರ ಉಪಯೋಗದಿಂದ ವಾತ ಸಂಧಿವಾತ ತಲೇನೋವು ಶಿರೋಭಾರ, ಉಳುಕು ಎದೇನೋವು, ಶೀತ ಕೆಮ್ಮು ಅರ್ಧಾಂಗವಾಯು, ಗಾಯ, ದಂತವ್ಯಾಧಿ ಮುಂತಾದ ಅನೇಕ ತರದ ವೇದನೆಗಳನ್ನು ಖಂಡಿತವಾಗಿ ಗುಣಪಡಿಸುವವು ಬಾಟ್ಲಿ 1 ಕ್ಕೆ 8 ಆಣೆ, ಡಜನಿಗೆ 5—4—0 ಸ್ಯಾಂಪಲ್ ಡಬ್ಬಿ 1 ಕ್ಕೆ 1 ಆಣೆ ಡಜನಿಗೆ 10 ಆಣೆ 1 ಗ್ರೋಸಿಗೆ 6 ರೂಪಾಯಿ.

(15) ಭೃಂಗರಾಜತೈಲ — ಇದರಿಂದ ತಲೆಕೂದಲು ಉದ್ದವಾಗಿಯೂ ಕಪ್ಪಾಗಿಯೂ, ಪುಷ್ಟಿಯಾಗಿಯೂ ಬರುತ್ತದೆ ಮೆದುಳಿಗೆ ಅತ್ಯಂತ ಹಿತಕಾರಿಯಾಗಿರುತ್ತದೆ ಬಾಟ್ಲಿ 1 ಕ್ಕೆ 12 ಆಣೆ

(16) ಪರಿಶುದ್ಧವಾದವಾದ ಯೂಕಲಿಪ್ಟಸ್ ಆಯಿಲ್ ಎಂಬ ನೀಲಗಿರಿ ತೈಲ — ಹೊಟ್ಟೆಗೆ ತೆಗೆದುಕೊಳ್ಳುವದೆ ಖಾತ್ರಿ ಬಾಟ್ಲಿ 1 ಕ್ಕೆ 5 ಆಣೆ ಡಜನಿಗೆ 3 ರೂಪಾಯಿ.

ನಮ್ಮಲ್ಲಿ ಎಲ್ಲಾ ವಿಧದ ಲೇಹ್ಯ ತೈಲ ಭಸ್ಮ ಆಸವ ಅರಿಷ್ಟಗಳು ದೊರೆಯುತ್ತವೆ ವ್ಯಾಪಾರಸ್ಥರಿಗೆ ಸ್ಪೆಷಲ್ ರಿಯಾಯಿತಿ ದರಗಳು ಕ್ಯಾಟಲಾಗು ಬರೆದು ತರಿಸಿಕೊಳ್ಳಿರಿ

ವಿಳಾಸ — ಎಂ ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಏಜನ್ಸಿಯನ್ಸ್ ಮಂಗಳೂರು ದ ಕ

ಪಾಕೆಟ್ ಲೀವರ್ ವಾಚು

ಇದರ ಕ್ರಯ ಸಾಣ್ಣವಾದ ವಾಚ್ ... ಸುಂದರವಾದ ವಾಚ್ ಪಟ್ಟಿಗೆ ...

5 8 ...



... ವಾದ ... ದ ತಯು ... ಣ್ಯವಾದ ... ವಾದ ... ತಯಾರ ... ವಾದ ... ಕ ... ಈ ವಾ... ಗಳ ಪರ ... ಒರುವ... ತುಂಬದ್ದು ... ರವಾದದ್ದು ಕೆಲವು ಮಾತ್ರವೇ ಉಳಿದಿವೆ ಶೀಘ್ರವಾಗಿ ಒಂದು ತರಿಸಿಕೊಳ್ಳಿ

ವಿಳಾಸ — ಆರ ಕ ವ ಚ ...

ನಂಬರು ... ಬೀದಿ

ಇನ್ನೊಂದು ಕೊಡಗು ... ನಮ್ಮಲ್ಲಿ ಸಾಮಾನು ... ಗಳು ... ಗೆ ತಿಳಿದಿರುವದಷ್ಟೆ

ಕಾಂತಿಸಿಯಾ ... — ರಜೆ ಶೀಸೆ 1 ಕ್ಕೆ 3 ಶೀಸೆಗೆ 2—10—0 ಹಿರಗೀದಿಲ್ಲಭಿರಾರ್ ಮು ಶೀಸೆ 1 ಕ್ಕೆ 0—12—0 ಡಜನ್ 7—... ಔನ್ಸ್ ಬಾಟ್ಲು ಕುದುರೆಶೀರ ತೈಲ ಶೀಶೆ 1 ... ಡಜನ್ 1 ಕ್ಕೆ 1—12—0 ಕಸ್ತೂರಿಮಾತ್ರೆ ... 4 ಆಣೆ ಡಜನ್ 1 ಕ್ಕೆ 2—10—0 ಮಲೇ... ಬಿಟ್ಟು ಬರುವ ... ರಕ್ತ ಖಾತ್ರಿಯಾದ ಜಿಕ್ಕಿ ಮಾತ್ರ ಶೀಸೆ 1 ಕ್ಕೆ 1—0—0 ರೂ

ಜಿಂತಾನ್ ಪಾಕೀಟ್ 1 ಕ್ಕೆ	1 ಆಣೆ 4 ಆ
ಗಂಧದ ಸಾಬೂನ್ 1 ಕ್ಕೆ	3 ಆಣೆ 6 ಆ
ವಿಕಟೋರಿಯಾ ಸಾಬೂನು 1 ಕ್ಕೆ	
ವ್ಯಾಸಲೀನ್ ರಾಣಿ ಸಾಬೂನು 1 ಕ್ಕೆ	
ಜಿಸ್ ... (ಪನ್ನಿಗ) ಸಾಬೂನ್ 1 ಕ್ಕೆ	
ಬುಕ್ಕಟ್ ಗುದ್ದ... 1 ಕ್ಕೆ	
ಚಿಕ್ಕ ಕನ್ನಡಿ 1 ಕ್ಕೆ	... ಆ
ಸಾಬೂನ್ ಕರಡಿಗೆ 1 ಕ್ಕೆ	ಆ
ಸರಟ್ ಬಟನ್ ಹರಳಿನದ್ದು ಸೆಟ್ಟು 1 ಕ್ಕೆ	
ಬಾಚಣಿಗೆ ಡಜನ್ 1 ಕ್ಕೆ	0 14 0 1 ...
ಕ್ಷೌರಕತ್ತಿ 1 ಕ್ಕೆ	2 4 0 2 12
ಅಮೃತಾಂಜನ ಡಬ್ಬಿ 1 ಕ್ಕೆ	
ಜರ್ಮನ್ ಕತ್ತರಿ 1 ಕ್ಕೆ	
ಕಾಡ್ ಬರಿ ಚೊಕಲೇಟ್ ಪಾಕಟ್ 1 ಕ್ಕೆ	
ಪೌಂಟನ್ ಪೆನ್ 1 ಕ್ಕೆ	15 ಆಣೆ

ಯಾವ ತರದ ಸಾಮಾನು ಬೇಕಾದರೂ ನಮ್ಮ ... ಯುಕ್ತ ಟಪಾಲು ಖರ್ಚು ಅಲಾಯಿದಾ

ವಿಳಾಸ — ದ ... ಮಂ...

ಸ ... ಮಂ...ರ

ಸಂಗೀತಕ್ಕೆ ಸಂಬಂಧಪಟ್ಟ



ಸಾಮಾನುಗಳ ಮಾರಾಟ

ನಮ್ಮಲ್ಲಿ ... ಪೂರ್ವಕ ಚೆನ್ನಾಗಿ ಅನೇಕ ಸಂಗೀತ ವಿದ್ವಾಂಸರು ... ಹಾರ್ಮೋನಿಯಂ ತಂಬೂರಿ ... ಪ್ರವೀಣ ದಿಲ್‍ರುಬಾ ... ರಿಗೆ ಪಿಟೀಲು ಕೊಳಲು ಶ್ರುತಿಪೆಟ್ಟಿಗೆ ಇವೇ ಮುಂತಾದ ಪದಾರ್ಥಗಳು ಸಿಕ್ಕುತ್ತವೆ ಈ ಪದಾರ್ಥಗಳ ಎಂ ರಿಪೇರಿ ಕೆಲಸವಾದರೂ ಸಹ ಸ ಲಭ್ಯಕ್ರಯಕ್ಕೆ ಮಾಡಲ್ಪಡುತ್ತದೆ ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು ನಮ್ಮ ವಿಳಾಸ —

ಯಂ. ಪುಟ್ಟಯ್ಯ ಅಂಡ್ ಸನ್ಸ್,

ಹಾರ್ಮೋನಿಯಂ ಡೀಲರ್ಸ್ ಮತ್ತು ರಿಪೇರರ್ಸ್,

24—0 ಸಯ್ಯಾಜಿರಾವ್ ರೋಡ್, ಮೈಸೂರು

ಅಮೃತಾಂಜನ್

ನೋವುಗಳಿಗೆ ಸಿದ್ಧೌಷಧವು

ಎಲ್ಲಾ ಷಾಪುಗಳಲ್ಲಿಯೂ ಮಾರಲ್ಪಡುತ್ತೆ

12—8 ಅಮೃತಾಂಜನ್ ಡಿಪೋ,

ಬೊಂಬಾಯಿ ಮತ್ತು ಮದರಾಸು.

ಮೈಸೂರಿನಲ್ಲಿ ದೊರೆಯುವ ಸ್ಥಳ — ಯಸ್. ಕೃಷ್ಣಸ್ವಾಮಿಶೆಟ್ಟಿ ಅಂಡ್ ಸನ್ಸ್

KALAPPAN'S ADVERTISING SERVICES.

Printed and Published by S NANJUNDA SASTRI at Sreenivas Electric Press, Mysore "Kodagu" Ltd, Mercara—14 10 1921

REGISTERED NO M 1560

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾನೀತಿಪ್ರಯತ್ನತಃ | ಐಕಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯಸಂಪದಃ ||

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

ಸಂಪುಟ ೧] ಕೊಡಗು, ಸ ೧೯೨೧ ನೇ ಇಸವಿ ಅಕ್ಟೋಬರ್ ತಾರೀಖು ೨೮ ನೆಯ ಶುಕ್ರವಾರ. [ಸಂಚಿಕೆ ೨೧

WANTED

1 One Compositor for the 'SUNDARA VILAS' Printing works.

Apply —R S SINGH,
GONIKOPAL

2 ENCOURAGE SWADESHI

If you miss this opportunity of encouraging Swadeshi at this critical juncture, you will not [illegible] freedom So encourage 'The Sundaravilas Press' a reliable and neat Printing office for every sort of Job Printing Neat and cheap Gonikoppal South Coorg

3 Beware Merchants Fixed Prices and Terms Cash are the means of great attractions But does a Merchant satisfy himself with what he advertises? He must remember always that honesty is the best policy So please go to—

Messrs R SUNDAR SINGH
GONIKOPAL

A wellknown firm providing all sorts of luxuries and necessities and he is always at your service

In case the customers are satisfied he will serve them for a small commission

If the firm does not receive sufficient support and sympathy from the public, it will have to be closed by the end of this year So please do not fail to encourage one who has wholly set apart his life at the alter of Coorg and KAVERAMMA

R SUNDER SINGH,
GONIKOPAL S Coorg

COORG TEACHERS' CO-OPERATIVE STORES, Ltd.,

ಕೊಡಗು ಉಪಾಧ್ಯಾಯರ ಕೋಆಪರೇಟಿವ

ಸ್ಟೋರ್ಸ್ ಲಿಮಿಟೆಡ್, ಮಡಿಕೇರಿ

ಈ ಸ್ಟೋರ್ಸಿನಲ್ಲಿ ನಾನಾ ಪಠ್ಯಪುಸ್ತಕಗಳು ಸ್ಟೇಷನರಿ ಸಾಮಾನುಗಳು ಮತ್ತು ಸೊಗಸಾದ ಎಕ್ಸರ್‌ಸೈಜು ಪುಸ್ತಕಗಳು ದೊರೆಯುತ್ತವೆ ಕ್ರಯ ಸುಲಭ ಮಾಲು ಉತ್ತಮ, ಕೊಡಗಿನಲ್ಲಿ ಈ ತರ ಸ್ಟೋರ್ಸ್ ಇದೊಂದೇ, ಮಾಲುಗಳನ್ನು ಕೋರಿದವರಿಗೆ ವಿ ಪಿ ಮೂಲಕ ಕಳುಹಿಸಲಾಗುತ್ತೆ 12–5

NOTICE.

If you want any kind of English or Kanarese Printing, Please write to:

SREENIVAS ELECTRIC PRESS, MYSORE.

ಒಳ್ಳೆಯ ಪುಸ್ತಕಗಳು [illegible]

A. N. C. & Co., Mysore.

ಮಹಾಶಯರೆ —ನಮ್ಮ ಕಂಪೆನಿಯು [illegible] ಕನ್ನಡ ಪುಸ್ತಕಗಳ [illegible] ಬೆಲೆಗೆ ಸಿದ್ಧವಾಗಿವೆ ಕನ್ನಡ ಗ್ರಂಥಕಾರರು ತಮ್ಮ ಪುಸ್ತಕಗಳ [illegible] ಪ್ರತಿಯನ್ನು ಕಳುಹಿಸಿದರೆ ಅವುಗಳನ್ನು [illegible] ಒಳ್ಳೆಯ ಪುಸ್ತಕಗಳನ್ನು [illegible]

[illegible]

12–11

ನೋಟೀಸ್.

ಸನ್ 1921 ನೇ ಇಸವಿ ನವಂಬರ್ ತಾರೀಖು 2 ರ [illegible] ಗೆ ಫ್ರೇಜರ್‌ಪೇಟೆಯಲ್ಲಿ [illegible] ಉತ್ತಮವಾದ [illegible] ಪ್ರದರ್ಶನವು ನಡೆಯುತ್ತದೆ ಅಲ್ಲಿಗೆ [illegible] ಎತ್ತು, ಎಮ್ಮೆ, ಕೋಣ [illegible] ಗಳು ಇರುವವರು ತಂದು ಪ್ರದರ್ಶನಕ್ಕೆ ಇಡಬಹುದು. ನೇ ತಾರೀಕು ಸಾಯಂಕಾಲ 2½ ಘಂಟೆಗೆ ಪ್ರದರ್ಶನವನ್ನು [illegible] ತಾರೀಕು ಸಾಯಂಕಾಲ 5 ಗಂಟೆಗೆ ಅತ್ಯುತ್ತಮವಾದ [illegible] ಬಹುಮಾನ [illegible] ದರ್ಶನಕ್ಕೆ ದಯವಿಟ್ಟು [illegible] ಪ್ರದರ್ಶನಕ್ಕೆ [illegible]

ಗಣಪತಿ ದೇವಸ್ಥಾನ ಕಮಿಟಿ, ಫ್ರೇಜರ್‌ಪೇಟೆ } ಕೂಡಂಡ [illegible] ಪ್ರೆಸಿಡೆಂಟರು

Messrs. P. SAM & Co.,

Receiving & Forwarding Agents, Cabinet Makers, Auctioners & General Agents, 17 12

591 4 Sayaji Rao Road, MYSORE

They not only receive and forward your goods from Mysore Railway Station to any part in Coorg but also receive goods from those parts and despatch them to any other part from the Mysore Railway Station They also undertake to sell your [illegible] articles by public auction or otherwise and also supply you goods at the cheapest rates Commission very moderate [illegible] will convince you of their promptness and business methods.

[illegible] THE SUPPLY OF STATIONERY ARTICLES [illegible] THE GOVT OF H H the Maharaja of Mysore

[illegible]

M N K [illegible]

Book-binders & Stationers MYSORE.

Just Arrived ! Just Arrived !!

Fresh Consignment of Barton on Humber

CYCLES

Size frame 22 24, & 26

Fitted with Dunlop tyres, tubes tool Bags with tools, three Coil Spring Saddle Complete

Price Rs. 160

Special rates for purchasers of three Cycles at a time

Apply to— 4–4

K R Thirupad & Bros,

Motor Mechanics & Cycle, Dealers, Sayaji Rao Road MYSORE

ಟೊಂಕವಿಲ್ಲದ ಒಡವೆಗಳು !!

ನಂ 1



ಅಂದವಾದ ನಮೂನೆಗಳು !!!

ನಂ 3



ಸ್ತ್ರೀಯರ ಕೈಗಳಿಗೆ ಅಲಂಕಾರವಾಗಿ ಅಂದವಾದ ನಮೂನೆಯಲ್ಲಿ ಘಟ್ಟಿ ತರವಾಗಿ ಅಪ್ಪಟ ಸವರನ್ ಚಿನ್ನದಲ್ಲಿ ಯಾವ ಅಳತೆಗೆ ಬೇಕಾದರೂ ಬಳೆಗಳು ತಯಾರಾಗಿ ಸಿದ್ಧವಾಗಿವೆ ಬೇರೆ ಯಾವ ನಮೂನೆ ಬೇಕಾಗಿದ್ದಾಗ್ಯೂ ತಯಾರಿಸಿ ಕೊಡುತ್ತೇವೆ ಒಂದು ಜತೆ ಬಳೆಗಳು ೨ ರಿಂದ 6 ಸವರನ್‌ಗಳ ತೂಕದಲ್ಲಿ ತಯಾರಿಸಲ್ಪಡುತ್ತವೆ



1, 2 ಮತ್ತು ೩ ನೆ ನಂಬರು ಬಳೆಗಳನ್ನು ಮಾಡಲು ಕೂಲಿ ಜತೆ 1 ಕ್ಕೆ 7—0—0 ರೂ ಮತ್ತು 2 ನೇ [illegible] ಬಳೆಗಳನ್ನು ಮಾಡಲು ಕೂಲಿ ಜತೆ 1 ಕ್ಕೆ 6—0—0 ರೂ ಮತ್ತು 1 [illegible]

ಬಳೆಗಳಿಗೆ ತಿರುಪುಗಳನ್ನು ಹಾಕಬೇಕಾದಲ್ಲಿ ಜತೆ 1 ಕ್ಕೆ ೨—0—0 ರೂಪಾಯಿ ಪ್ರತ್ಯೇಕ [illegible] ಆರ್ಡರು ಜತೆಯಲ್ಲಿ [illegible] ಮತ್ತು ನೂರಕ್ಕೆ 10 ರಂತೆ ಮುಂಗಡವನ್ನು ಕಳುಹಿಸಬೇಕು ಪೋಸ್ಟು [illegible]

52–4 ಇಂಡಿಯನ್ ಜ್ಯುಯಲರಿ ವರ್ಕ್ಸ್, ಪೋಸ್ಟ್ ಬಾಕ್ಸ್ ನಂ. 40. ಬೆಂಗಳೂರು ಸಿಟಿ.

ಮಂಜೇರಿ
ಮೋಟಾರ್ ಸರ್ವಿಸ್
ಲಿಮಿಟೆಡ್, ಕಲಿಕೋಟೆ.

ಈ ಕಂಪೆನಿಯು 1913 ನೇ ಇಸವಿಯ ಕಂಪೆನಿ ಆಕ್ಟಿಗೆ ಅನುಸಾರವಾಗಿ 1921-1922 ನೇ ಇಸವಿಯ ಮೊದಲನೇ ನಂಬ್ರವಾಗಿ 1921 ನೇ ಏಪ್ರಿಲ್ 4 ನೇ ತಾರೀಖಿನಲ್ಲಿ ರಜಿಸ್ಟ್ರಿ ಮಾಡಲ್ಪಟ್ಟು 1921 ನೇ ಮೇ 6 ನೇ ತಾರೀಖಿನಲ್ಲಿ ತಮ್ಮ ಕೆಲಸವನ್ನು ನಡಿಸುವದಕ್ಕೆ ಸಮ್ಮತಿ ಸರ್ಟಿಫಿಕೇಟು ಪಡಕೊಂಡಿರುತ್ತದೆ. ಮೇ 25 ನೇ ತಾರೀಖಿನಿಂದ ಕೆಲಸವನ್ನು ಪ್ರಾರಂಭಿಸಿರುವದು.

ಈ ಕಂಪೆನಿಯ ಮೂಲಧನವು ಮೂರು ಲಕ್ಷ ರೂಪಾಯಿ ಪಾಲುವಂತಿಗೆಯಿಂದ ಸಂಗ್ರಹಿಸಲ್ಪಡಬೇಕು. ಪಾಲು 1 ಕ್ಕೆ 10 ರೂಪಾಯಿಯವಂತಿಗೆ. ಇದರಲ್ಲಿ ಸದ್ಯಕ್ಕೆ ವಿಕ್ರಯಕ್ಕೋಸ್ಕರ ಇರುವ 20,000 ಪಾಲುಗಳಲ್ಲಿ 1540 ಪಾಲುಗಳನ್ನು ಈ ಕಂಪೆನಿಯ ಪ್ರಮೋಟರೇ ಪಡಕೊಂಡಿರುತ್ತಾರೆ.

25130 ರೂಪಾಯಿಯ ಷೇರುಗಳನ್ನು 1921 ನೇ ಇಸವಿ ಆಗಸ್ಟ್ 25 ನೇ ತಾರೀಖಿನವರೆಗೆ ಮಾರಲಾಗಿದೆ

ಕಂಪೆನಿಯ ಉದ್ದೇಶ.

ಮುಖ್ಯವಾಗಿ ತಲಚೇರಿಯಿಂದ ಕೊಡಗಿಗೂ, ವಯನಾಡಿಗೂ, ಕಲಿಕೋಟೆಯಿಂದ ವಯನಾಡಿಗೂ, ದಕ್ಷಿಣ ಮಲಬಾರಿನಲ್ಲಿರುವ ಮಂಜೇರಿ, ನಿಲಂಬೂರು, ತಿರೂರು ಮೊದಲಾದ ಸ್ಥಳಗಳಿಗೂ ಮೋಟಾರ್ ಬಸ್ ಸರ್ವಿಸ್ ಸ್ಥಾಪಿಸುವದು. ಮತ್ತು ಮೋಟಾರ್ ಕಾರ್, ಲೋರಿ ಮೊದಲಾದ ವಾಹನಗಳನ್ನು ಒದಗಿಸುವದು, ಮೋಟಾರ್ ಬಂಡಿಗಳನ್ನು ರಿಪೇರಿ ಮಾಡುವ ಕಾರ್ಖಾನೆಗಳನ್ನು ಸ್ಥಾಪಿಸುವದು. ಡ್ರೈವರುಗಳನ್ನು ತಯಾರುಮಾಡುವದು. ಇವೇ ಸಂಘದ ಉದ್ದೇಶಗಳಾಗಿವೆ.

ಕಂಪೆನಿಯಲ್ಲಿ ದೊರಕುವ ಅಂದಾಜು ಆದಾಯ

ಈ ಕಂಪೆನಿಯು ಕ್ರಯಕ್ಕೆ ಪಡಕೊಂಡು ನಡಿಸುತ್ತಿರುವ ಮಂಜೇರಿ ಮೋಟಾರ್ ಸರ್ವಿಸಿನ ಗತಿಸಿದ ಲೆಕ್ಕಾಚಾರಗಳನ್ನು ಪರಿಶೋಧಿಸಿದರೆ, ಸವೆತಕ್ಕೆ ತಕ್ಕಷ್ಟು ಹಣ ಉಳಿಸಿಟ್ಟು ಸುಮಾರು ಶೇಕಡ 25 ರಂತೆ ಪಾಲುಗಾರರಿಗೆ ಆದಾಯ ಕೊಡಬಹುದಾಗಿದೆಂದು ನಿಶ್ಚಯವಾಗಿ ಹೇಳಬಹುದು. ಕಾಲಕ್ರಮೇಣ ಇನ್ನಷ್ಟು ಹೆಚ್ಚಿಗೆ ಬಸ್ಸುಗಳನ್ನೂ, ಕಾರ್, ಲೋರಿಗಳನ್ನೂ ಒದಗಿಸುವದಾದರೆ, ಮೋಟಾರ್ ಕಾರ್ಖಾನೆಗಳನ್ನೂ ಸ್ಥಾಪಿಸುವದಾದರೆ, 100 ಕ್ಕೆ 25 ಕ್ಕಿಂತಲೂ ಹೆಚ್ಚಿನ ಆದಾಯವನ್ನು ನಿರೀಕ್ಷಿಸಬಹುದು.

ವಿಶೇಷ ಪ್ರಯೋಜನಗಳು.

ಬಹೂ ಜಾಗ್ರತೆಯಿಂದಲೂ ಮುತುವರ್ಜಿಯಿಂದಲೂ ತನ್ನ ಕೆಲಸವನ್ನು ಮಾಡಿ ಎಲ್ಲಾ ಕಡೆಯಿಂದಲೂ ಒಳ್ಳೇ ಹೆಸರನ್ನು ಪಡಕೊಂಡ ಮಂಜೇರಿ ಮೋಟಾರ್ ಸರ್ವಿಸನ್ನು ಈ ಲಿಮಿಟೆಡ್ ಕಂಪೆನಿಯು ಪಡಕೊಂಡದಾಗಿರುತ್ತದೆ

ಈ ಕಂಪೆನಿಯ ಕೆಲಸಗಾರರೆಲ್ಲರೂ ಸಮರ್ಥರೂ ಇದರ ಆಡಳಿತದಾರರು ಒಳ್ಳೇ ಅನುಭವಶಾಲಿಗಳೂ ಆಗಿದ್ದಾರೆ.

ಈ ಕಂಪೆನಿಯ ಪ್ರವೃತ್ತಿಯಿಂದ ಬರುವ ಆದಾಯವು ಕನಸಿನ ಗಂಟಲ್ಲ ನಿಜವಾಗಿ ಕೈಗಂಟೇ ಆಗಿದೆ ಇತರ ಕಂಪೆನಿಗಳಲ್ಲಿ ಆದಾಯ ಸಿಕ್ಕುವದಕ್ಕೆ ಮೂರು ನಾಲ್ಕು ವರ್ಷ ಕಾಯಬೇಕಾಗುತ್ತದೆ ಇದರಲ್ಲಿ ಹಾಗಲ್ಲ? ಷೇರ್ ತೆಗೆದುಕೊಂಡ ಕೂಡಲೇ ಆದಾಯ ಬರುವದು.

ಸರ್ವರಿಗೂ ಅನುಕೂಲವಾಗುವಂತೆ ಒಂದೊಂದು ಪಾಲಿಗೆ 10 ರೂಪಾಯಿ ಮಾತ್ರ ಇಡಲಾಗಿದೆ.

ಈ ಲಿಮಿಟೆಡ್ ಕಂಪೆನಿಯು ಕಲಿಕೋಟೆಯಲ್ಲಿ ಮಂಜೇರಿ ಮೋಟಾರ್ ಸರ್ವಿಸನ್ನು ಇದೇ 1921 ನೇ ಮೇ 25 ನೇ ತಾರೀಖಿನಲ್ಲಿ ಮತ್ತು ತಲಚೇರಿಯ ಮೋಟಾರ್ ಸರ್ವಿಸನ್ನು ಇದೇ ಜೂನ್ 1 ನೇ ತಾರೀಖಿನಲ್ಲಿಯ ಬಡಗಾರ ಮತ್ತು ನಾದಾಪುರ ಸರ್ವಿಸನ್ನು 1921 ನೇ ಆಗಸ್ಟ್ 8 ನೇ ತಾರೀಖಿನಲ್ಲಿ ಹೊಸದಾಗಿ ಪ್ರಾರಂಭಿಸಿರುವದು.

ಪಾಲು ಬೇಕಾದವರು ಕಂಪೆನಿಯ ಅರ್ಜಿ ಫೋರಮಿನಲ್ಲಿ ಅರ್ಜಿ ಬರೆದು, ತಮಗೆ ಎಷ್ಟು ಪಾಲು ಬೇಕೋ ಅಷ್ಟು ಪಾಲಿಗೆ—ಪಾಲ 1 ಕ್ಕೆ 10 ರೂಪಾಯಿ ಪ್ರಕಾರ ಆಗುವ ಒಟ್ಟು ಹಣವನ್ನು ಅರ್ಜಿಯೊಂದಿಗೆ ಮೇನೇಜಿಂಗ್ ಡೈರೆಕ್ಟರರಿಗೆ ಕಳುಹಿಸತಕ್ಕದ್ದು.

ಕಂಪೆನಿಯ ನಿಯಮಗಳ ಪ್ರತಿಗಳೂ ಅರ್ಜಿ ಫೋರಮುಗಳು ಕಂಪೆನಿಯ ಆಫೀಸಿನಲ್ಲಿ ದೊರೆಯುವವು.

ಅರ್ಜಿ ಫೋರಮು ಸಿಕ್ಕದಿದ್ದರೆ ಅರ್ಜಿದಾರನು ತನ್ನ ಪೂರ್ಣ ಹೆಸರು, ತಂದೆಯ ಹೆಸರು, ಉದ್ಯೋಗ ಮತ್ತು ಮೊಕ್ಕಾಂ ಇವನ್ನು ಸ್ಪಷ್ಟವಾಗಿ ಬರೆದು, ಅರ್ಜಿಯನ್ನೂ ತಾನು ಅಪೇಕ್ಷಿಸುವ ಪಾಲುಗಳ ಹಣವನ್ನೂ ಮೇನೇಜಿಂಗ್ ಡೈರೆಕ್ಟರರಿಗೆ ಕಳುಹಿಸಿಕೊಡತಕ್ಕದ್ದು.

ಈ ಕಂಪೆನಿಯ ಸರ್ವಿಸು ಈಗ ಕಲಿಕೋಟೆಯಿಂದ ಪುದುಪಾಡಿಗೂ ತಲಚೇರಿಯಿಂದ ಮಾಕೂಟಿಗೂ [illegible] ಯಿಂದ ನಾದಾಪುರಕ್ಕೂ ಒದಗುತ್ತಿರುವವು.

ಒಳ್ಳೇ ಮೋಟಾರ್ ಕಾರುಗಳು ತಲಚೇರಿಯಲ್ಲಿಯೂ ಕಲಿಕೋಟೆಯಲ್ಲಿಯೂ ಬಡಗರೆಯಲ್ಲಿಯೂ ಬಾಡಿಗೆಗೆ ದೊರೆಯುವವು.

1920 ನೇ ಇಸವಿ ಡಿಸೆಂಬರಿನಿಂದ 7 ತಿಂಗಳ ವರೆಗಿನ ಮಂಜೇರಿ ಮೋಟಾರ್ ಕಂಪೆನಿಯ ಆದಾಯವೆಚ್ಚದ ಪಟ್ಟಿ.

ಬಂಡವಾಳ	60 000—0—0
ಕಲೆಕ್ಷನ್ [illegible] ಉತ್ಪತ್ತಿ ..	48 201—13—0
ಒಟ್ಟು ಖರ್ಚು [illegible] .	31 061—7—3
ನಿವ್ವಳ ತಿಂಗಳ ಒಟ್ಟು ನಫೆ	17 230—5—9

ಇದರಿಂದ ತಿಂಗಳಿಗೆ 2500 ರೂಪಾಯಿವರೆಗೆ ನಫೆ ಇದೆ ಎಂದು ಪೂರ್ಣ ತಿಳಿಯಿತು

ಒಂದು ವರ್ಷಕ್ಕೆ 30 000 ರೂ ನಫೆ. ಇದರ ಪೈಕಿ 15 000 ರೂಪಾಯಿ ಬೇರೆ ರಿಸರ್ವ್ ಫಂಡಿನಲ್ಲಿ ಇಟ್ಟರು ಕೂಡಾ ಶೇಕಡಾ 25 ರಂತೆ ನಫೆ ಸಿಕ್ಕಬಹುದು.

B. T. ತಲಚೇರಿ ಸಬ ಕಲೆಕ್ಟರು ಬರೆಯುವದು ಏನೆಂದರೆ :—

ಆಗಸ್ಟ್ ತಾರೀಖು 26–27 28 ರಲ್ಲಿ ಕೊಯಿಲಾಂಡಿ ತಮರಚೇರಿ ಕುನ್ನಮಂಗಳ ಎಂಬಲ್ಲಿಗೆ ಸರಕಾರಕ್ಕೆ ಉಪಯೋಗವಾಗಿ ಸಿಪಾಯಿಗಳನ್ನು ಕರಕೊಂಡು ಹೋಗಲು ನಿಮ್ಮ ಮೋಟಾರುಗಳನ್ನು ಬಸ್ಸುಗಳನ್ನು ಅತಿ ಜಾಗ್ರತೆಯಿಂದ ಕೊಟ್ಟದ್ದು ಸರಿಯಷ್ಟೆ. ನಿಮ್ಮಲ್ಲಿ ಕೆಲಸಮಾಡುವ ಕೆಲಸದವರು ಮತ್ತು ಡ್ರೈವರುಗಳು ಅತಿ ಬುದ್ಧಿವಂತರು, ಮತ್ತು ಪೂರ್ಣ ಶ್ರದ್ಧೆಯಿಂದ ಕೆಲಸಮಾಡುವವರು ಆಗಿರುತ್ತಾರೆ ಮತ್ತು ಇವರಷ್ಟು ಮುತುವರ್ಜಿಯಿಂದ ಕೆಲಸಮಾಡುವಂಥಾ ಕೆಲಸದವರನ್ನು ಈವರೆಗೆ ಎಂದು ನಾನು ಕಂಡಿಲ್ಲ. ಅಲ್ಲಿಗೆ ಇದಕ್ಕೋಸ್ಕರ ಅತಿ ಕೃತಜ್ಞತೆಯುಳ್ಳವರಾಗಿರುತ್ತೇನೆ.

ಇದರಿಂದ ಜನರು ನಮ್ಮ ಕಂಪೆನಿಯನ್ನು ಎಷ್ಟು ಶ್ಲಾಘನೆಮಾಡುತ್ತಾರೆಂಬದು ಪೂರ್ಣ ಸ್ಪಷ್ಟವಾಗುತ್ತದೆ.

THE

MANJERI MOTOR SERVICE, Ltd.,

CALICUT.

Branches—

TELLICHERRY AND BADAGARA.

Registered under the Indian Companies Act 1913 as No 1 of 1921—1924 on the 4th day of April 1921 and prospectus filed on the 6th day of May 1921. Business commenced on the 25th day of May 1921.

AUTHORISED CAPITAL RUPEES THREE LAKHS.

Divided into 30,000 ordinary shares of Rs. 10 each payable fully in cash with application of which 20,000 shares are now offered for subscription at par

1540 shares are taken by the promoters at present

Rs. 25130 worth shares are sold upto 25th August 1921.

Rs. 12780 worth shares are sold from 1st to 25th August 1921.

OBJECTS.

The Company is formed primarily to establish Motor Bus Services between Tellicherry and Coorg Wynaad in North Malabar, Calicut and Wynaad, Nilambur and Tirur in South Malabar, to establish motor work shops for the repair of motor vehicles and for the training up of motor mechanics and drivers and for the permanent working up of motor bus service in the conveyance of passengers and goods

ESTIMATED INCOME AND PROSPECTS

It is estimated from a perusal of the accounts of the working of the Manjeri Motor Service which the Company has purchased that the Company would be able to declare a dividend of about 25 per cent. after setting aside ample reserves for depreciation and reserve fund. As time pass on and more buses and cars and lorries are introduced and more new lines are opened and workshops established a much higher dividend is confidently expected and considered feasible

SPECIAL ADVANTAGES.

The Company has purchased the flourishing concern the Manjeri Motor Service which has been exceptionally lucky all along to earn a good name and maintain the prestige and reputation throughout for its punctuality, regularity and respectability required of a motor service to win the confidence of the travelling public.

The Company is singulary fortunate in securing the services of choicest workmen and efficient and experienced management

The Company's lines of business are not at all speculative but are reckoned as sure concerns

The Company is in a position to pay a dividend from the very start.

The Company has already taken charge of the Manjeri Motor Service working at Calicut on the **25th day of May 1921** and that of Tellicherry on the **1st June 1921** and Badagara—Nadapuram line is newly opened on the **8th August 1921.**

Application for shares should be made in the form of application to the Managing Director together with the full cash value of each share.

Copies of the Memorandum and Articles of Association and of the Prospectus and forms of application can be had at the Office of the Company.

In the absence of application form, the application should clearly state Full name, Permanent address, Father's name, Profession, Present address and should be sent with the full cash value of the shares to the Managing Director

The Company's service now works between CALICUT—PUDUPADI; TELLICHERRY-MAKKUT; BADAGARA—NADAPURAM. Reliable pleasure cars **Reo Hupmobile Overland** driven by experienced hands are always available for hire.

SUB-COLLECTOR TELLICHERRY WRITES:—

"Just a line to thank you for the promptness with which you placed your two Cars and one Bus at the disposal of Government on the 26th, 27th and 28th for moving troops to Quilandy, Tamaracherry and Kunnamangalam" etc, etc, and concludes "**I never saw more willing workers or more competent drivers than your men.**" This unasked for remarks from the pen of an high official speaks for itself about the merits of the Manjeri Motor Service Ltd, and her staff.

For further particulars apply to —

J NICHOLAS,

Managing Director

Manjeri Motor Service Ltd., Calicut

ಎಲ್ಲಾ ಚಂದಾದಾರರುಗಳಿಗೆ ವಿಜ್ಞಾಪನೆಗಳು.

ಇದುವರೆಗೆ ಚಂದಾ ಪಾವತಿಮಾಡಲಿಕ್ಕಿರುವ ಪತ್ರಿಕೆಯ ಚಂದಾದಾರರಿಗೆ ತಮ್ಮ ಬಾಕಿಯನ್ನು ಪಾವತಿಮಾಡಬೇಕೆಂದು ಸೂಚಿಸುತ್ತಾ ಬಂದಿರುವುದು ಸರಿಯಷ್ಟೆ. ಅದರ ಪ್ರಕಾರ 60 ರಷ್ಟು ಚಂದಾದಾರರು ಆದರಲ್ಲಿಯೂ ನಾಡಿನ ಕಡೆಯ ಜನರು ಈ ವಿಷಯ ಉದಾಸೀನರಾಗಿರುವುದು ಕಂಪೆನಿಯ ಮುಖಂಡರುಗಳಿಗೆ ವ್ಯಸನವನ್ನುಂಟುಮಾಡಿದೆ. ಈ ಪತ್ರಿಕೆಯು ನಾಡಿನ ಜನಸಮುದಾಯವನ್ನು ಮುಂದಕ್ಕೆ ತರುವುದಕ್ಕೆ ಹೊರಟಿರುವುದು ಎಲ್ಲಾ ವಾಚಕರಿಗೂ ತಿಳಿಯದ್ದಲ್ಲ. ನಾಡಿನ ಜನರಿಗೆ ಈವರೆಗೆ ನಾಟಿ ಕೆಲಸದ ಗಲಾಟೆಯಿಂದ ಹಣವನ್ನು ಜಮೆಮಾಡಿ ಕಳುಹಿಸಲಿಕ್ಕೆ ಅನಾನುಕೂಲವಾಗಿರಬಹುದು ಆದರೆ ಇನ್ನಾದರೂ ದಯವಿಟ್ಟು ಬಾಕಿದಾರರಾದ ದೇಶಾಭಿಮಾನಿಗಳು ಉದಾಸೀನರಾಗದೆ ಬಾಕಿಯನ್ನು ಪಾವತಿಮಾಡಿ ರಶೀತಿ ಪಡೆಯಬೇಕಾಗಿ ಕೋರುತ್ತೇವೆ. ಇದುವರೆಗೂ, ಪತ್ರಿಕೆಯನ್ನು, ಹಣ ಪಾವತಿ ಮಾಡದೆ ಓದುತ್ತಾ ಒಂದು ಕೆಲವು ಜನರು ಪತ್ರಿಕೆಯನ್ನು ತಿರಸ್ಕರಿಸುತ್ತಾ ಬರುತ್ತಿರುವುದು ತುಂಬಾ ನಾಚಿಕೆಯನ್ನುಂಟುಮಾಡುವ ವಿಷಯವಾಗಿದೆ.

ಎಡಿಟರ್.

"ಕೊಡಗು"

೧೯೩೯ನೇ ಇಸವಿ ಅಕ್ಟೋಬರ್ ತಾ|| ೨೦ನೇ ಶುಕ್ರವಾರ.

ಆರೋಗ್ಯ.

ಮನುಷ್ಯನು ಮಾಡುವ ಪ್ರತಿಯೊಂದು ಸಾಹಸಕಾರ್ಯಕ್ಕೂ ಅವನ ಆರೋಗ್ಯವೇ ಕೇವಲ ಮುಖ್ಯವಾದದ್ದು. ಮನುಷ್ಯನಿಗೆ ಆರೋಗ್ಯ ಒಂದು ಇಲ್ಲದಿದ್ದರೆ ಅವನು ಯಾವ ಕೆಲಸಮಾಡಲೂ ಅಶಕ್ತನು. ಪೂರ್ವದಿಂದಲೂ ನಾವು ನೋಡಿದರೆ ನಮ್ಮ ಪೂರ್ವದ ಜನಾಂಗವು ನಮಗಿಂತಲೂ ಗಟ್ಟಿಮುಟ್ಟಾಗಿಯೂ ಸ್ಥೂಲಕಾಯರಾಗಿಯೂ ಆರೋಗ್ಯ ಭಾಗ್ಯದಿಂದ ಕೂಡಿ ಬಾಳುತ್ತಿದ್ದರು. ಈಚೀಚೆಗೆ ಜನರು ದೇಹಶಕ್ತಿಯಲ್ಲಿ ಕುಂದುತ್ತಾ ಒಂದು ಅಲ್ಪಕಾರ್ಯಗಳನ್ನು ಕೂಡ ಮಾಡಲು ಅಶಕ್ತರಾಗಿ ಸಾಹಸಕಾರ್ಯಗಳನ್ನು ಮಾಡಲು ಆಸಕ್ತಿಯಿಲ್ಲದೆ ನರಳಾಡುತ್ತಿರುವದನ್ನು ನೋಡಿದರೆ ಇನ್ನು ಕೆಲವು ವರ್ಷಗಳಲ್ಲಿ ನಮ್ಮ ಮುಂದಿನ ಜನಾಂಗವು ಯಾವ ಸ್ಥಿತಿಯನ್ನು ಹೊಂದುವುದೆಂದು ಹೇಳಲು ಅಸಾಧ್ಯವಲ್ಲ. ನವನಾಗರೀಕತೆಯು ದೇಶದಲ್ಲೆಲ್ಲಾ ಹರಡುತ್ತಾ ಬಂದಹಾಗೆ ಜನರು ಹೊಸಹೊಸ ಪದಾರ್ಥಗಳನ್ನೂ ಬಟ್ಟೆಗಳನ್ನೂ ಉಪಯೋಗಿಸುತ್ತಾ ಒಂದು ತಮ್ಮ [illegible]ಸುವ ಒಗೆಯನ್ನೇ ಹೊಸದಾಗಿ ಮಾಡುವಂತೆ ಕಾಣುತ್ತದೆ ನಮ್ಮ ಪೂರ್ವಜರು ದೇಶದ ಹವಾಗುಣಕ್ಕನುಗುಣವಾದ ರೀತಿಯಲ್ಲಿ ಆಹಾರ ವಸ್ತ್ರಗಳನ್ನು ಉಪಯೋಗಿಸುತ್ತಿದ್ದುದರಿಂದ ಅವರು ದೃಢಕಾಯರಾಗಿದ್ದರು. ಆದರೆ ಈಗಿನವರು ತಮ್ಮ ಹುಟ್ಟುದೇಶದ ಪದ್ಧತಿಗಳನ್ನೆಲ್ಲಾ ಬಿಟ್ಟು ಪಾಶ್ಚಾತ್ಯರ ಜೀವನದ ಬಗೆಯನ್ನೇ ಕಣ್ಣುಮುಚ್ಚಿಕೊಂಡು ಹಿಂಬಾಲಿಸುತ್ತಾ ಬರುತ್ತಿರುವದರಿಂದ ಉಂಟಾಗುವ ಕಷ್ಟನಷ್ಟಗಳನ್ನು ಪ್ರತಿದಿನವೂ ನಾವು ಕಣ್ಣಾರೆ ನೋಡುತ್ತಾ ಇದ್ದೇವಷ್ಟೆ. ಪಾಶ್ಚಾತ್ಯರ ಉಡಿಗೆತೊಡಿಗೆಗಳೂ ಅವರ ಆಹಾರವೂ ಕೆಟ್ಟವೆಂದಲ್ಲ. ಅವು ಅವರ ದೇಶಕ್ಕೆ ತಕ್ಕವಾದವು. ಆದರೆ ನಾವು ಅವರಂತೆಯೇ ಅವುಗಳನ್ನು ಉಪಯೋಗಿಸಿದಲ್ಲಿ ದೇಹಕ್ಕೆ ಹಾನಿಯುಂಟಾಗುವುದಲ್ಲದೆ ದೇಶಾಭಿಮಾನಕ್ಕೂ ಕುಂದು ಉಂಟಾಗುವದು. ಅಲ್ಲದೆ ಯೂರೋಪಿಯನರ ಜೀವನದ ಕರ್ಚು ಅವರ ದೇಶದ ಉತ್ಪತ್ತಿಗೆ ಅನುಸಾರವಾಗಿದೆ. ನಮ್ಮ ದೇಶದಲ್ಲಿ ಪ್ರತಿಯೊಬ್ಬನ ಉತ್ಪತ್ತಿಯು ಕಡಿಮೆಯಾಗಿರುವದರಿಂದ ಯೂರೋಪಿಯನರ ಉಡುಪುಗಳನ್ನು ಆಹಾರವನ್ನು ಹಿಂಬಾಲಿಸುವದರಿಂದ ದಾರಿದ್ರ್ಯವು ನಮ್ಮನ್ನು ಹಿಂಬಾಲಿಸುವದರಲ್ಲಿ ಸಂದೇಹವಿಲ್ಲ

ಈಗಿನ ವಿದ್ಯೆಯ ಕ್ರಮವು ನಮ್ಮ ಜನಾಂಗದ ನಿರೋಗ್ಯಕ್ಕೆ ಇನ್ನೊಂದು ಕಾರಣವಾಗಿದೆ. ನಮ್ಮ ದೇಶಕ್ಕೆ ತಕ್ಕವೋ ಎಂದು ಆಲೋಚಿಸದೆ ಪರದೇಶಗಳಲ್ಲಿ ಹೇರಲಾಗುತ್ತಾ ಬರುವ ವಿದ್ಯಾಕ್ರಮಗಳನ್ನು ಇಲ್ಲಿ ಜಾರಿಗೆ ತಂದು ವಿದ್ಯಾರ್ಥಿಗಳ ಮೆದುಳಿನ ಬೆಳವಣಿಗೆಗೆ ಮಾತ್ರ ಲಕ್ಷ್ಯಕೊಟ್ಟು ಅವರ ದೇಹದ ಅಭಿವೃದ್ಧಿಯನ್ನು ನೋಡದೆ ಇರುತ್ತಿರುವದು ಎಲ್ಲರಿಗೂ ತಿಳಿಯದ ಸಂಗತಿಯಲ್ಲ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವದೇ ಉಪಾಧ್ಯಾಯರ ಮತ್ತು ಮಕ್ಕಳ ತಂದೆತಾಯಿಗಳ ಮುಖ್ಯೋದ್ದೇಶವಾಗಿದೆ. ಮಕ್ಕಳ ಮೆದುಳಿಗೆ ಹೆಚ್ಚು ಕೆಲಸ ಕೊಡುತ್ತಾ ಬಂದಹಾಗೆ ಸರಿಯಾದ ಅಂಗಸಾಧನೆಯನ್ನು ಮಾಡುತ್ತಾ ಬಾರದೆಹೋದರೆ ಮೆದುಳು ಅಭಿವೃದ್ಧಿಯಾಗುತ್ತಾ ಬರುವಾಗ್ಗೆ ದೇಹವು ಕುಂದುತ್ತಾ ಬರುವದು

ವಿದ್ಯಾರ್ಥಿಯ ಮನಸ್ಸೂ, ದೇಹವೂ, ಸ್ವಭಾವವೂ ಒಂದೇಸಮನಾಗಿ ಬೆಳೆಯುತ್ತಾ ಬರಬೇಕು. ಮನಸ್ಸು ಶಕ್ತಿ ಎರಡಕ್ಕಿಂತ ಹೆಚ್ಚಾಗಿ ಬೆಳೆದರೆ ಬಲಹೀನವಾಗಿಯೂ ಕೆಲಸಕ್ಕೆ ಬಾರದವಾಗಿಯೂ ಆಗಬಹುದು. ಇದು ಯಾವ [illegible] ಕೆಲವು ಗಂಟೆಗಳವರೆಗೆ ಮಾತ್ರ ಉಪಾಧ್ಯಾಯರ ಕೈಕೆಳಗೆ ಸ್ಕೂಲಿನಲ್ಲಿರುವರು. ಸಾಧಾರಣವಾಗಿ ತಂದೆತಾಯಿಗಳು ತಮ್ಮ ಮಕ್ಕಳ ದೇಹ ಆರೋಗ್ಯಕ್ಕೆ ಗಮನಕೊಡದ ಇರುವುದೇ ಈಗಿನ ವಿದ್ಯಾರ್ಥಿಗಳ ದೇಹದ ಹೀನಸ್ಥಿತಿಗೆ ಮುಖ್ಯಕಾರಣವೆಂದೆನ್ನಬಹುದು. ಪೂರ್ವಕಾಲದಲ್ಲಿದ್ದಂಥಾ ಗುರುಮಠಗಳೂ ಇಂಗ್ಲೆಂಡಿನಲ್ಲಿರುವಂಥ ಬೋರ್ಡಿಂಗ್ ಸ್ಕೂಲುಗಳೂ ಇಲ್ಲದೆ ಇರುವಾಗ ಮನೆಗಳಲ್ಲಿಯೇ ಮಕ್ಕಳ ದೇಹ ಕ್ಷೇಮವನ್ನು ನೋಡಿಕೊಳ್ಳತಕ್ಕದ್ದು. ಆದರೆ ನಮ್ಮ ದೇಶದಲ್ಲಿ ಇಂಥ [illegible] ಬಹಳ ಅಪರೂಪವಾಗಿದೆ. [illegible] ಮತ್ತು ಆರೋಗ್ಯಸ್ಥಿತಿಯ ಕಾನೂನು ಕ್ರಮಗಳನ್ನು ತಿಳಿದುಕೊಳ್ಳದೆ ಇರುವ ಮನೆಜನರು ಮಕ್ಕಳಿಗೆ ಯಾವವಿಧದಲ್ಲಿ ತಾನೆ ಸಹಾಯಮಾಡಲಾಪರು. ಚಿಕ್ಕವರು ತಮ್ಮ ಇಷ್ಟಕ್ಕೆ ತಾನೇ ಬಿಟ್ಟಂತಾಗಿ ಸರಿಯಾದ ದಾರಿಯನ್ನು [illegible] ಆಗಾಗ್ಗೆ ಸ್ವಸ್ಥ[illegible] ಗಳಿಗೆ ತುತ್ತಾಗುತ್ತಾರೆ. ಇದರಿಂದ ತಮ್ಮ [illegible] ಸಂಗವುಂಟಾಗುತ್ತದೆ.

ಚಿಕ್ಕಂದಿನಲ್ಲೇ ಮದುವೆಯಾಗುವದು ದೇಹ ಕ್ಷೀಣತೆಗೆ ಒಂದು ಕಾರಣವೇ ಸರಿ. ಈ ಪದ್ಧತಿಯು [illegible] ಇಲ್ಲದೆ ಹೋದರೂ ಅನೇಕದಲ್ಲಿ ನೆಲೆಗೊಂಡು ಹೋಗಿದೆ. ನಮ್ಮ ಕೊಡಗುದೇಶದಲ್ಲಿ ಕೂಡ್ಯ [illegible] ಅನಾರೋಗ್ಯವಾದ ಪದ್ಧತಿಯೊಂದು ನಮ್ಮ ಅಭಿವೃದ್ಧಿಗೆ ಬಹಳ ಕುಂದಕವನ್ನುಂಟು ಮಾಡುತ್ತಿದೆ. [illegible] ತಮ್ಮ [illegible] ಒಂದುಗಳಲ್ಲಿ ಮದುವೆಯಾಗುವ [illegible] ಸಂಬಂಧವು [illegible] ಅವರಿಗೆ [illegible] ಕ್ಕಳು [illegible] ಗಿಯೂ [illegible] ಆಗುತ್ತಾರೆ

ಯೌವನಸ್ಥರು ದಿನಾ ದಿನಾ ಬೀಡಿ ಸಿಗರೇಟು ಮುಂತಾದ [illegible] ಹೋಗುವುದು [illegible] ಸಾಧಾರಣವಾಗಿ [illegible] ಸಂಗತಿಯಾಗಿದೆ

[illegible] ಉಪಾಧ್ಯಾಯರೂ ಜನರು ತಮ್ಮ [illegible] ಪರೀಕ್ಷೆಯಲ್ಲಿ [illegible] ಮಾತ್ರ [illegible] ಕ್ರಮವನ್ನು [illegible] ದೇಶದ [illegible] ಜನಾಂಗದ ಸ್ಥಿತಿಯು [illegible]

[illegible]

[illegible] ಬಾಲ್ಯದಲ್ಲಿ ಮಕ್ಕಳು ಕಲಿತುಕೊಳ್ಳದಿದ್ದರೆ [illegible] ಯೌವನಸ್ಥರು [illegible]

[illegible] ಮಕ್ಕಳಿಗೆ ಉಪದೇಶ [illegible] ಮಾಡಿಕೊಡಬೇಕು.

ಎಲ್ಲಾದಕ್ಕಿಂತಲೂ ಕೊಡಗಿನ [illegible] ವನೇ ಉತ್ತಮ. [illegible] ಯೌವನಸ್ಥರು ತಮ್ಮ ದೇಹ ಅಭಿವೃದ್ಧಿಗೆ ಯಾವ [illegible] ತಿಳಿದುಕೊಂಡು [illegible] ಅವರು [illegible] ತಮ್ಮ ದೇಹ [illegible] ವಾದ ಅಂಗ ಸಾಧನೆಗಳಲ್ಲಿಯೂ ಆಟಗಳಲ್ಲಿಯೂ ಭಾಗಿಗಳಾಗಲು ಪ್ರಯತ್ನಿಸಿ ತಮ್ಮ ದೇಹಾರೋಗ್ಯವನ್ನು ಕ್ರಮವಾಗಿ ಇಟ್ಟುಕೊಂಡರೆ ದೇಶದ ಉನ್ನತಸ್ಥಿತಿಗೆ ಒಳ್ಳೆಯ ದಾರಿಯಾಗುವದು.

ಕಾವೇರಿ ಜಾತ್ರೆ.

ಪವಣಂಪ್ರತಿ ನಡೆಯುವಂತೆ ಕಾವೇರಿಜಾತ್ರೆಯು ಈ ವರ್ಷ ತುಲಾಸಂಕ್ರಮಣದ ದಿನವಾದ ಅಕ್ಟೋಬರು ತಾ|| 17 ನೇ ಮಂಗಳವಾರ ಬೆಳಗ್ಗೆ 2 ಗಂಟೆ 21 ನಿಮಿಷಕ್ಕೆ ಸರಿಯಾಗಿ ತೀರ್ಥವು ಉದ್ಭವವಾಗಿ ಬಹು ಸಂಭ್ರಮದಿಂದ ನಡೆಯಿತು. ಈ ಜಾತ್ರೆಯು ಕಳೆದ ವರ್ಷಗಳ ಜಾತ್ರೆಗಳಿಗಿಂತ ಕೇವಲ ವಿಶೇಷವಾಗಿತ್ತೆಂದು ಹೇಳಿದರೆ ಹೇಳಬಹುದು. ಯಾಕೆಂದರೆ ಎಂದಿನಂತೆ ತೀರ್ಥವು ಉದ್ಭವಿಸುವ ಸಮಯದಲ್ಲಿ ಮಳೆಯು ಕೂಡ ಇಲ್ಲದೆ [illegible] ಆಕಾಶದಲ್ಲಿ ಪೂರ್ಣಚಂದ್ರನು [illegible] ತಂಪಾದ ಕಿರಣಗಳಿಂದ ತಲಕಾವೇರಿಯ ಉನ್ನತವಾದ ಶಿಖರಗಳನ್ನೂ ಅವುಗಳ [illegible] ಪವಿತ್ರವಾದ ಸ್ಥಳ [illegible] ನೋಡಲು [illegible] ಕೆಳಗಿನ [illegible] ನಿಂತು [illegible] ಜನರು [illegible] ತೀರ್ಥಸ್ನಾನ [illegible] ತಮ್ಮ [illegible] ಗಳೆಲ್ಲ [illegible] ಗಣಗಣನೆ [illegible] ದೇವಸ್ಥಾನದ [illegible] ಪೂಜೆಯನ್ನು [illegible] ತಂದೆ [illegible] ತೀರ್ಥ ಉದ್ಭವವಾಗಿ [illegible] ಗೃಹಕ್ಕೆ [illegible] ಸಂಗೀತಗಳಿಂದ ದೇವರ [illegible]

[illegible]

[illegible] ದೇವಸ್ಥಾನದಿಂದ [illegible] ಸತ್ಕಾರ [illegible] ಜಾತ್ರೆ [illegible] ಜನರು [illegible] ಶ್ರೀ ಕಾವೇರಿಯನ್ನು ನಮಗೆ [illegible] ಕಷ್ಟವಿದ್ದ [illegible] ಶ್ರೀ ಕಾವೇರಿಯನ್ನು ನಮಗೆ ಪ್ರತಿಫಲವನ್ನು [illegible] ನಮ್ಮ ದೇಶದ [illegible] ಮುಖ್ಯವಾದ [illegible] ಉಪಕಾರ [illegible] ಫಲವನ್ನು [illegible] ಮಾಡಿದ್ದಾರೆ.

ಕಮಿಶನರ್ ಸಾಹೇಬರವರ ತಾ|| 14-10-21 ರ ಶಾಂತಗುಂಡ ಜಮಾಬಂದಿ.

(ಸ್ವಂತ ಬಾತ್ಮೀದಾರರಿಂದ)

ಜಮಾಬಂದಿಯು ಶಾಂತಗುಂಡ ಕಚೇರಿಯ ಹತ್ತಿರ ಇರುವ ಮೈದಾನದಲ್ಲಿ 2½ ಘಂಟೆಗೆ ಶುರುವಾಯಿತು ಸುತ್ತಲೂ ಇರುವ 13 ಗ್ರಾಮದ ಪಟೇಲರೂ ಅನೇಕ ರೈತರ ಹಾಜರಿದ್ದರು. ಜಮಾಬಂದಿ ಸಮಯದಲ್ಲಿ ಮಳೆಯು ಜೋರಾಗಿ ಹೊಡೆದುದರಿಂದ ಎಲ್ಲಾ ಕೆಲಸವು ಪೂರೈಸುವ ದಕ್ಕ ಮೊದಲೇ, ಕಮಿಶನರ್ ಸಾಹೇಬರು ಪಟೇಲರನ್ನು ಬಂಗಲೆಗೆ ಬರಲಿಕ್ಕೆ ಹೇಳಿ ಹೊರಟುಬಿಟ್ಟರು.

ಕಮಿಶನರವರು ಜಮಾಬಂದಿ ಮಾಡಲಿಕ್ಕೆ ಕುಳಿತಕೂಡಲೇ ಒಬ್ಬ ಪಟೇಲರು ನಜರು ತಿಳ್ಳಿದ ಸರಾಂ ಮಾಡಿದರು. ಅಷ್ಟರಲ್ಲೇ ಸುಬೇದಾರರು ನಜರು ಇಲ್ಲ ಎಂದು ಹೇಳಿ ಅವರನ್ನು ಹೆದರಿಸಿದರು. ಆಮೇಲೆ ಅನೇಕ ಪಟೇಲರುಗಳು ಅವರ ನಜರನ್ನು ಒಪ್ಪಿಸಿದರು. ಸಳಾಬಿ ಪಡ್ಡಿ ಒಂದ ದರಖಾಸ್ತುಗಳನ್ನೆಲ್ಲಾ ಸುಬೇದಾರರೇ ಹೊಂದಿಕೊಂಡು ಸಾಹೇಬರ ಸೀಲನ್ನು ಹಾಕಿದರು. ಜೇರ ಆದಿ ... ಅ... ಅರ್ಜಿದಾರರನ್ನೆಲ್ಲಾ ಕಮಿಶನರ್ ಸಾಹೇಬರು ಶರಸ ಸಮಾಧಾನದಿಂದ ... ಪ್ರಾರಂಭಿಸಿದರು ಸುಬೇದಾರರು ... ಮಾಡ ಪರದಾದರು. ಕಮಿಶನರ್ ಸಾಹೇಬರ ... ಸರಾಂ ನವಾಗಿದ್ದಿತೋ ಅದಕ್ಕೆ ಪ್ರತಿ ... ಪಟೇಲರಿಗೆ, ರೈತರನ್ನು ... ಹುತ್ತಿದ್ದುದೂ ಅಲ್ಲದೆ ಕಮಿಶನರ್ ... ಹಲಿಕ್ಕ ಇಷ್ಟಪಡುವ ... ತಜುರ್ಮೆಯ ಸ್ಥಾನದಿಂದ ಪ್ರತಿ ... ಕೊಡಗು ಕಮಿಶನರ ಸಾಹೇಬರವರು ... ಜಮಾಬಂದಿ ಮಾಡಿ ರೈತರ ಕಷ್ಟಗಳನ್ನು ಕೇಳಲಿಕ್ಕೆ ... ಇಂಥಾ ಸಂಗತಿಗಳಿಂದ ವ್ಯರ್ಥವಾಗುತ್ತಿದೆ. ರೈತರ ... ನಿಧಿಗಳನ್ನು ಯಾರಾದರೂ ರೈತರ ... ವಾಗಿ ಮಾತಾಡಲಿಕ್ಕೆ ಮತ್ತು ಧಾರಾಳತನ ... ಬಿಟ್ಟಿದ್ದರೆ ಸಾಹೇಬರು ... ಮಾಡಿದ್ದು ಫಲಕ್ಕೆ ಬರುತ್ತಿತ್ತು.

ಕೋಗದಾಳು ಗ್ರಾಮದ ಸಂಜಪ್ಪಯ್ಯರವರು ಈ ... ಸನ್ ಹಾಕಿದ್ದು ಹಬ್ಬಂತಲೂ ರೈತರಲ್ಲಿಯೂ ... ರಿಂದ ಈ ಕಂದಾಯ ... ತಕ್ಕದಲ್ಲವೆಂತಲೂ ... ಈ ಮೊದಲು ಚೆನ್ನಾಗಿದ್ದ ರಸ್ತೆಗಳು ನಾಲ್ಕೈದು ವರ್ಷಗಳಿಂದ ರಿಪೇರಿ ಇಲ್ಲದೆ ಹಾಳಾಗಿದ್ದೇವೆಂತಲೂ ಸರಕಾರದಲ್ಲಿ ಹಣ ಉಳುವರಿಯಾಗಿರುವುದರಿಂದ ಆ ಹಣವನ್ನು ತಗದುಕೊಳ್ಳಬೇಕೆಂತಲೂ ಹೇಳಿದರು.

ಅದಕ್ಕೆ ಕಮಿಶನರ್ ಸಾಹೇಬರು ತಾನು ಬೋರ್ಡಿನ ಪ್ರೆಸಿಡೆಂಟರಾಗಿದ್ದೇನೆಂತಲೂ ಬೋರ್ಡಿನ ಮೆಂಬರುಗಳು ಬಹುಮತದವರು ಈ ಸನ್ನನ್ನು ವಿಧಿಸುತ್ತಾರೆಂತಲೂ ವಿಧಿಸಿದ ಸೆಸ್ ನ್ಯಾಯವೆಂತಲೂ ಹೇಳಿದರು.

ನೋಟೀಸ್.

ಎಲ್ಲಾ ಚಂದಾದಾರರುಗಳಿಗೆ ವಿಜ್ಞಾಪನೆ. ಕೊಡಗು ಪತ್ರಿಕೆಯ ಚಂದಾ ಹಣ ಮತ್ತು ಸೇರು ಹಣವನ್ನು ಸಲ್ಲಿಸ ಮಾಡಲಿಕ್ಕೆ ಬಾಕಿ ಇರುವುದು ದಯವಿಟ್ಟು ಎದರ ಪತ್ರಿಕೆಯ ಸೆಕ್ರೆಟರಿಯಾದ ಮೆ|| ಕೋಟೆರ ಚೆಣ್ಣಪ್ಪನವರು ಈ ಕೆಳಗೆ ನಮೂದಿರುವ ಸ್ಥಳಗಳಲ್ಲಿ ಹಾಜರಿರುತ್ತಾರೆ. ದಯವಿಟ್ಟು ಸದರಿಯವರಿಗೆ ಪಾವತಿಯಿಂದ ರಶೀತಿ ಪಡಿಯಬೇಕಾಗಿ ಕೋರಿಕೆ.

ನವಂಬರು ತಾರೀಖು	1 ರಿಂದ 5 ರ ವರೆಗೆ	ಪ್ರೇಜರ್ ಪೇಟೆ.
,,	7 ಮತ್ತು 8	ಸೋಮವಾರಪೇಟೆ
,,	10 ,, 13	ಶನಿವಾರಸಂತೆ
,,	14	ಸೋಮವಾರಪೇಟೆ
,,	15 , 16	ಮಾದಾಪುರ
,,	17	ಸುಂಟಿಕೊಪ್ಪ.

ವರ್ತಮಾನ ಸಂಗ್ರಹ

ಒಳದೇಶ.

ಕೋಟಿರ ಕೇಸ್ ಮೊಕದ್ದಮೆಯಲ್ಲಿ ಎಲ್ಲಾ ನಿಯಾದ ಅಪರಾಧಿಯು ಕೋಟಿರ ಅಪ್ಪಯ್ಯ ಎಂಬುದು ಕೋರ್ಟಿನ ತೀರ್ಮಾನ ಎಂದಾಗಬೇಕು.

ಹುದಿಕೇರಿ ಮುಸಲ್ಮಾನರ ಮೊಕದ್ದಮೆಯಲ್ಲಿ ಸಜ ವಿಧಿಸಲ್ಪಟ್ಟಿದ್ದ ಅಪರಾಧಿಗಳನ್ನು ಅಪೀಲು ಕೋರ್ಟಿನವರು ಜಾಮೀನುಮೇಲೆ ಬಿಟ್ಟಿರುತ್ತಾರಂತೆ.

ಕಮಿಶನರ್ ಸಾಹೇಬರವರು ಉತ್ತರ ಕೊಡಗಿನಲ್ಲಿ ಜಮಾಬಂದಿ ನಡಿಯುವ ಉದ್ದೇಶ ಪರಿವಾರ ಸಮೇತ ಗ್ರಾಮಾಂತರಗಳಿಗೆ ಹೋಗುತ್ತಲಿದ್ದಾರೆ.

ಮಡಿಕೇರಿಯಲ್ಲಿ ದೇವಾಲಯ ಕ್ರಮ ... ದಿಂದ ಅವರ ಸ್ಮಾರಕ ಬೀರಸಾಹೇಬರ ಹಬ್ಬದ ಮೆರವಣಿಗೆಯು ವಾದ್ಯದೊಡನೆ ಬಹಳ ಅಲಂಕಾರದಿಂದ ಪಟ್ಟಣದ ಮುಖ್ಯ ಬೀದಿಯಲ್ಲೆಲ್ಲಾ ನಡೆಯಿತು.

... ಬಾಂಧವರು ಹಸ್ತ ಜಾತ್ರ ... ಗಾರರೊಬ್ಬರು ದೇವಸ್ಥಾನದಲ್ಲಿ ಬ್ರಾಹ್ಮಣ ಸಮಾರಾಧನ ಮಾಡಿಸಿರ ತ್ತಾರೆ ... ನದಿಯ ಬಳಿ ಗದ್ದೆ ... ಸುವ ... ದಿಂದ ಕೆಲವು ಜನರು ಶಕ್ತಿಯಿಂದ ಎದ್ದು ... ಎಂದು ... ಬರೆಯುತ್ತಾರೆ.

... ಸೆಪ್ಟಂಬರ್ ತಾ|| 30 ರಲ್ಲಿ ಕೊಡಗುದೇಶದ ... ಲೇವಾದೇವಿ ಸಂಘದ ಸಭೆಯು ... ಕೂಡು ಗ್ರಾಮದ ಮೆ|| ದೇವಣಮಾರ್ಯ ಅಧ್ಯಕ್ಷತೆಯಲ್ಲಿ ನಾಪೋಕ್ಲು ... ಮೈದಾನದಲ್ಲಿ ಒದಗಿಸಿ ತನ್ನ ... ತಿ ... ಕಾಡ್ಯಾಳ್ ... ಅನುಸರಿಸ ... ಕೆಲವು ... ಗಳನ್ನು ... ಮಾಡಿದರು.

ಬಿಟ್ಟಿಯಂಗ ನಾಡು ಕುಂದಾ ... ಪೇಟೆಯ ... ರದ ... ಬಲು ... ನ ಬಾರಾದ ... 51 ಮೆಂಬರು ... ಸಾಲದ ವ್ಯವಸ್ಥೆ ಬಟ್ಟಿ ... ಸಾಗಿದಂತಲೂ ... ವಾಗಿ ದರಖಾಸ್ತುದಾರರಿಗೆ ... ಮೆ|| ಎಂ ... ವೈದ್ಯರವರು ತಿಳಿಸಿರುತ್ತಾರೆ.

ಪೋಲೀಸ್ ಇನ್ಸ್‌ಪೆಕ್ಟರವರು ... ಸಿದ್ದಂತ ... ರಾವ ... ಪರೀಕ್ಷಿಸಿ ಮಾಡಿ ... ಪೋಲೀಸರ ... ಸ ದೇವಿ ... ಶಾಯವರಿಗ ... ವಾಗಿ ತೀರ್ಮಾನವಾಗಿದೆ.

ಕಕಬ್ಬೆ ಪೊನ್ನರಾಜೆಯ ... ಬಿಟ್ಟದ ... ಗ ... ಸಂತಾಪದವರು ... 15 ... ಗ ... ವರು ಎತ್ತರಕ್ಕೆ ತೆಗೆದುಕೊಂಡು ... ಸ್ಥ ... ಜನರಿಗೆ ಬಹಳ ಕಷ್ಟ ... ಬರೆಯುತ್ತಾರೆ.

... ದಿಕೇರಿಯಲ್ಲಿ ... ಪೋಲೀಸ ... ಪೋಲೀಸ್ ... ಗಿಯೂ ಇವರು ... ಪೋಲೀಸ್ ... ಬರುತ್ತಾರೋ ಅಥವಾ ... ಬರುತ್ತಾರೋ ಎಂಬುದನ್ನು ಯಾರಾದರೂ ತಿಳಿಸಬೇಕಾಗಿ ... ಪೋಲೀಸಿನವರ ಅಗತ್ಯವಿದೆಯೋ?

... ಕೊಡಗಿನಲ್ಲಿ ಕೊಹರ ಪ್ರೈಕ ... ಸ್ಥಾನದವರಿಂದೂ ಎರಡು ವಿಧದ ಮುಸಲ್ಮಾನ ... ತ್ತಿದ್ದಾರೆಂದು ... ದವರು ... ಎಲ್ಲಿಂದ ಬಂದವರು, ಹ್ಯಾಗ ... ವರು ... ಪೂರ್ವ ... ಚರಿತ್ರೆಯನ್ನು ಕೊಡಗು ಪತ್ರಿಕೆ ... ತಿಳಿಯದು ... ಕೊಡಗು ... ತಿಳಿಸಬೇಕಾಗಿ ಕೇಳಿಕೊಳ್ಳುವ ಚೇರಮಾದ ಮುಲ್ಲಯ್ಯ.

ಬಿಟ್ಟಿಯಮ್ಮ ನಾಡು ಕುಂದ ಬಾಲಿಕಾ ಪಾಠಶಾಲೆಯ ... ಉಪಯೋಗಕ್ಕಾಗಿ ... ಗ್ರಾಮಸ್ಥರು ಮತ್ತು ... ಸುಬೇದಾರರಾಗಿದ್ದ ಮೆ|| ... ಜಂಗಪ್ಪನವರು ಸಹ (10 ರೂ) ಚಂದಾಹಾಕಿ ತೆಗದುಕೊಟ್ಟಂತ ... ಕೆಲವು ದಿವಸಗಳಿಂದ ... ಕಾಣುವುದಿಲ್ಲವಾದದರಿಂದ ... ಗೊತ್ತಿರುವವರು ತಿಳಿಸಬೇಕೆಂದು ಒಬ್ಬ ಚಂದಾದಾರರು ಕೇಳಿಕೊಳ್ಳುತ್ತಾರೆ.

ನಾಪೋಕ್ಲು ಶಾಲೆಯಲ್ಲಿ ಸ್ಥಳ ಸಂಕೋಚದಿಂದ ಒಂದು ಕೋಣೆಯಲ್ಲಿ ಎರಡು ತರಗತಿಗಳನ್ನಿಟ್ಟು ಕಲಿಸುತ್ತಿರುವುದರಿಂದ ... ಹಾಗೆ ... ಮಕ್ಕಳಿಗೆ ಪಾಠ ... ಸರಕಾರದವರು ... ತೆಗೆದುಕೊಳ್ಳದಿದ್ದರೂ ... ಸ ... ಗ್ರಾಮಸ್ಥರು ತಮ್ಮ ಮಕ್ಕಳ ಹಿತಕ್ಕಾಗಿ ಕಟ್ಟಡವನ್ನು ಹೆಚ್ಚಿಸಲಿಕ್ಕೆ ಚಂದಾ ... ಮೀಟಿಂಗ ನಡೆಸಿರುವರಾಗಿಯೂ ಇದಕ್ಕೆ ಎಲ್ಲಾ ಮಹಾ ನುಭಾವರುಗಳು ತಕ್ಕ ಸಹಾಯ ಮಾಡಬೇಕಾಗಿಯೂ ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

ಇದರ ಮಧ್ಯೆ ನಿಂತು ಹೋಗಿದ್ದ ಆಂಜನೇಯ ಮೋಟಾರು ಬಸ್ಸು ಈಗ ಪುನಃ ... ದ ಮಡಿಕೇರಿಗೆ ಓಡುತ್ತಿದ್ದು ... ಮೈಲಿಗೆ ... ದಿಂದ ಕೊಡಗು ಮೋಟಾರು ... ದಾರ ... 1½ ಆಣೆ ... 1½ ಆಣೆ ... ಒಂದು ... ಚೆಲ್ಲಿ ... ಪ್ರಯಾಣಿಕರಿಗೆ ಬಹಳ ಅನುಕೂಲವಾಯಿತೆಂಬುದನ್ನು ಹೇಳುವ ಅವಶ್ಯವಿಲ್ಲ.

ಭಾಗಮಂಡಲನಾಡು ಚೇಂಗೂರು ಗ್ರಾಮದ ಮರು ತಾ|| 21-10-21 ರಲ್ಲಿ ಒಂದು ಮೀಟಿಂಗು ಸೇರಿ 2 ... ಇದ್ದ ತಮ್ಮ ಜನಸಂಖ್ಯೆಯೂ ಈಗೀಗ ಕಡಿಮೆಯ ಗುತ್ತ ಬರುವದಕ್ಕೆ ಸಿಪಾಯಿ ದಾರ್ಥದ ಸೇವನೆಯೇ ಕಾರಣವೆಂದೂ ಆದುದರಿಂದ ಸೇಂದಿಯನ್ನು ಪೂರ್ತಿಯಾಗಿ ತ್ಯಜಿಸಬೇಕೆಂದೂ ಬರುವ ಹುತ್ರಿ ಮತ್ತು ಮದುವೆಗಳಿಗೆ ಸ್ವಲ್ಪ ಸಾರಾಯಿಮಾತ್ರ ಕೂಡಿಸುತ್ತಾ ಒಂದು ಕಾಲಕ್ರಮೇಣ ಪೂರ್ತಿಯಾಗಿ ನಿಲ್ಲಿಸಿಬಿಡಬೇಕೆಂದೂ ಕುರಿಫಂಡು ಇಡ ಕ್ಕೂ ಮತ್ತು ಒಂದು ಫಸ್ತದಫಂಡು ನಿರ್ಮಿಸಲಿಕ್ಕೂ ತಾ 1-11-21 ರಲ್ಲಿ ಒಂದು ಮೀಟಿಂಗು ಮಾಡಬೇಕೆಂದೂ ತೀರ್ಮಾನಿಸಿರುವರು.

ಎಂರಾಜನ ... ಮಲೆತಿರಿಕೆ ಬೆಟ್ಟದಲ್ಲಿ ಕೆಲವು ದಿವಸಗಳ ಹಿಂದೆ ಒಂದು ಹುಲಿಯು ಒಂದು ಹಸುವನ್ನು ಹಿಡಿದು ... ಅನುಕೂಲಿಸದೆ ಅದರ ಮುಖ, ಮೂಗುಗಳನ್ನು ಹರಿಚಿ ಬಿಟ್ಟಿತು ... ಹಸುವು ತಪ್ಪಿಸಿಕೊಂಡು ... ದಿಂದ ರಕ್ತಾ ಸುರಿಯುತ್ತಾ ಪೇಟೆಗೆ ಓಡಿಬಂದಾಗ ಪೋಲೀಸಿನವರು ದೊಡ್ಡಿಗ ಕಳುಹಿಸಿದನ್ನು ಮಾಲೀಕನು ಬಿಡಿಸಿಕೊಂಡು ಹೋದನೆಯೋ ಅದು ಮ ... ಆ ಹುಲಿಯೇ ... ಬೆಟದಲ್ಲಿ ಅನೇಕ ದಿವಸಗಳಿಂದ ... ದನಗಳನ್ನು ಹಿಡಿದು ತಿನ್ನುತಾ ಬರುತ್ತಿದೆ. ಇದನ್ನು ... ಸಮರ್ಥರು ಯಾರಾದರೂ ಇಲ್ಲವೋ ಎಂದು ಒಬ್ಬ ರೈತನ ಗೋಳಾಟ.

• ಸೋಮವಾರಪೇಟೆಯಲ್ಲಿ ಇರುವ ತ್ರಿಒಸ್ವೇಶ್ವರ ದೇವಸ್ಥಾನ ಬಹಳ ... ಸುತ್ತಲೂ ಇರುವ ... ಶಂಕರು ಕೂಡ ... ಉದ್ಧಾರ ಮಾಡ ... ಅವರಿಗೆ ಆಲೋಚನೆ ... ಕೆಲಸ ನಡಿಸಲು ಬೈತ ... ಮೆ|| ರಾ|| ರಾ|| ... ರಪ್ಪನವರು ಹೆಡ್ ... ಒಂದು ... ಬೋರ್ಡಿನಿಂದ ಒಂದು ... ಏರ್ಪಡಿಸಿಕೊಂಡು ಇದರಂತೆ ದೇವಸ್ಥಾನ ... ಯಾರಾದರು ಮಹಾತ್ಮರು ಉದ್ಧರಿಸಲೆಂದೂ ... ಬರೆದಿರುತ್ತಾರೆ.

... ಗ್ರಾಮದಲ್ಲಿ ಮೆ|| ... ಅಧ್ಯಕ್ಷತೆಯಲ್ಲಿ ಒಂದು ಮೀಟಿಂಗು ... ದಲ್ಲ ಆ ಊರಲ್ಲಿ ಬಟ್ಟೆ ... ಯಲ್ಲಿ ಒಂದು ಮಗ್ಗ ... ಆಲೋಚಿಸಿ ಅಲ್ಲಿಯೇ 31 ಸೇರು ... ದಕ್ಕೆ ... ಅದನ್ನು ನಡಿಸಲು ... ಪ್ರೆಸಿಡೆಂಟರಾಗಿ ... ಮೆ|| ... ಗಣಪತಿ ... ಅಪ್ಪಯ್ಯ ಮತ್ತು ... ಕಮಿಟಿ ಮೆಂಬರುಗಳಾಗಿಯೂ ಮೆ|| ಅಬ್ದುಲ್ ... ಸಕ್ರೆಟರಿಯಾಗಿಯೂ ... ಕಮಿಟಿಯು ಸಕ್ರೆಟರಿಯವರು ತಿಳಿಸುತ್ತಾರೆ.

ಸಿಟ್ಟ್ಯಾರು ಗ್ರಾಮದಲ್ಲಿ ಪ್ರೈಮರಿ ಶಾಲೆ ಇಲ್ಲದ್ದರಿಂದ ... ಶಾಲೆ ... ಗ್ರಾಮಕ್ಕೆ ಹೋಗುವುದು ... ಕೆಲವು ವರ್ಷಗಳ ಹಿಂದೆ ಸದರಿ ಸಿಟ್ಟ್ಯಾರು ಗ್ರಾಮದಲ್ಲಿ ಒಂದು ಪ್ರೈಮರಿಶಾಲೆ ಇಡಬೇಕೆಂದು ... ಅರ್ಜಿ ... ಅವರು ... ಮೆ|| ರಾ|| ... ಅಣ್ಣಯ್ಯನವರ ... ಬಾಕಿಯಾಗಿದೆ ... ದೇವರು ಒಳ್ಳೆ ಯೋಚನೆ ... ಗ್ರಾಮಸ್ಥರು ತಿಳಿಸಿರುತ್ತಾರೆ. [ಸರ್ಕಾರದವರು ... ಮನಸ್ಸಿದ್ದರೆ ಲ್ಯಾಂಡ್ ... ಬಾಗ ... ತೆಗೆದುಕೊಳ್ಳಲು ಆಗುವದಿಲ್ಲವೆ?]

... ಪಾಕಿ ... ಮೆಂಟು ಮಡಿಕೇರಿಯಲ್ಲಿ ನವಂಬರು ತಾ|| 1 ರಿಂದ 11 ರ ವರೆಗೆ ನಡೆಯುತ್ತದೆ. ತಾ|| 1 ರಲ್ಲಿ **ಪುಲಿಯಂಡ** ಮತ್ತು ಪೊನ್ನಂಪೇಟೆ ಟೀಮುಗಳಿಗೂ 2 ರಲ್ಲಿ ಯಂಗ್ ಮನ್ಸ್ ಕ್ಲಬ್ ಮತ್ತು ಹೈಸ್ಕೂಲು 2 ನೇ ಟೀಮುಗಳಿಗೂ, 3 ರಲ್ಲಿ ವೀರಾಜಪೇಟೆ ಮತ್ತು ಮಹದೇವಪೇಟೆ ಟೀಮುಗಳಿಗೂ 4 ರಲ್ಲಿ ... ಸ್ಕೂಲ್ ಮತ್ತು ಹೈಸ್ಕೂಲಿನ 1 ನೇ ಟೀಮುಗಳಿಗೂ, 5 ರಲ್ಲಿ ಬಾಲಸಮಾಜ ಮತ್ತು ಫಾರೆಸ್ಟ್ ಟೀಮುಗಳಿಗೂ, 6 ರಲ್ಲಿ **ಪೋಲೀಸಿಗೂ** 1 ನೇ ತಾರೀಕಿನಲ್ಲಿ ಗೆದ್ದವರಿಗೂ, 8 ರಲ್ಲಿ 2 ನೇ ಮತ್ತು 3 ನೇ ತಾರೀಕುಗಳಲ್ಲಿ ಗೆದ್ದವರಿಗೂ, 9 ರಲ್ಲಿ 4 ನೇ ಮತ್ತು 5 ನೇ ತಾರೀಕುಗಳಲ್ಲಿ ಜಯಿಸಿದವರಿಗೂ 10 ರಲ್ಲಿ 6 ನೇ ಮತ್ತು 8 ನೇ ತಾರೀಕುಗಳಲ್ಲಿ ಜಯಿಸಿದವರಿಗೂ 11 ರಲ್ಲಿ 9 ನೇ ಮತ್ತು 10 ನೇ ತಾರೀಕುಗಳಲ್ಲಿ ಗೆದ್ದವರಿಗೂ ಪಂದ್ಯಾಟಗಳು ನಡೆಯುವವು.

ತಾರೀಖು 3-10-1921 ರಲ್ಲಿ ರಾತ್ರಿ ಒಂದು ಘಂಟೆಗೆ ಶುರುವಾಗಿ ಬೆಳಗಿನವರೆಗೆ ದಕ್ಷಿಣಕನ್ನಡ ಜಿಲ್ಲೆಯ ಉಪ್ಪಿನಂಗಡಿ ತಾಲ್ಲೋಕಿನ **ಬಂಟವಾಳ** ಸಂತಪ್ಪಿನಲ್ಲಿ ಹೊಡದ ಮಳೆಯಿಂದ ಅಡಿಕೆ ಗಿಡಗಳೆಲ್ಲಾ ಬಗ್ಗಿಹೋದವೆಂತಲೂ ತೋಟದ ಸಕ್ಕಗಳು ಗದ್ದೆಮೇಲೆ ಬಿದ್ದು ಬೆಳೆಯನ್ನು ಮುಚ್ಚಿ ಮರಳು ಬೀಜ ನಿಂತಿದೆಯಾಗಿಯೂ, ಅನೇಕ ಮನೆಗಳು ಕೊಚ್ಚಿಹೋಗಿದೆಂತಲೂ ಒಂದು ಮುದುಕಿಯು ಶ್ರವಣಾಗಿ ಒಂದು ಮರದಬಳಿ ಬಿದ್ದಿತೆಂತಲೂ, ಒಬ್ಬನು ತನ್ನನ್ನು ತಾನೆ **ಒಂದು ತೆಂಗಿನಮರಕ್ಕೆ ಕಟ್ಟಿಕೊಂಡುದರಿಂದ ಅವನ**

ಬ್ರಾಹ್ಮಣ್ಯ ವಿಮರ್ಶೆ.

(೨೦ ನೆಯ ಸಂಚಿಕೆಯಿಂದ ಮುಂದುವರಿದುದು)

3. ನಮ್ಮ ಕರ್ತವ್ಯ.

ಸ್ವಚ್ಛಂದ ಪ್ರವೃತ್ತಿಯೇ ಸ್ವಾತಂತ್ರ್ಯದ ಗುರ್ತೆ? ಹಾಗೆಂದರೆ ರಾಷ್ಟ್ರದ ಪ್ರಜೆಗಳು ಇಷ್ಟಬಂದಂತೆ ವರ್ತಿಸಬಹುದಲ್ಲವೇ? ಸರ್ಕಾರದ ಅವಶ್ಯತೆಯೇ ಇರಲಾರದು. ಅದರಂತೆಯೇ ಧರ್ಮಶಾಸ್ತ್ರದ ಅಧಿಪತಿಗಳೆನಿಸುವ ಗುರುಪೀಠದ ಆಜ್ಞೆಯನ್ನು ಪ್ರಜೆಗಳಾದ ಬ್ರಾಹ್ಮಣರೆಂದವರು ಪಾಲಿಸಬೇಕೇ ಬೇಡವೇ? ಈ ಎಲ್ಲಾ ಸಹಜವಾಗಿ ಉತ್ಪನ್ನವಾಗುವ ಪ್ರಶ್ನೆಗಳನ್ನು ಪೂರ್ತಿಯಾಗಿ ಆಲೋಚಿಸಿದರೆ ಈಗ್ಗೆ ನಮ್ಮ ಕೊಡಗಿನಲ್ಲಿ ವರ್ತಿಸುತ್ತಿರುವ ಬ್ರಾಹ್ಮಣರು ಉಳಿಬಹುದೇ? ಎಂಬ ಪ್ರಶ್ನೆಯನ್ನು ತಕ್ಷಣಕ್ಕೆ ಹಾಕಿಸಿದಂತಾಗಬಹುದು ಆದರೆ ಅದನ್ನು ಈಗ ಪ್ರಯತ್ನಿಸದೆ ನಮ್ಮವರನ್ನು ಬಿಟ್ಟು ಹೇಳುವುದಾದರೆ ಇದು ಸರ್ವಥಾ ಆಗತಕ್ಕದ್ದಲ್ಲವೇ ಯಾಕೆಂದರೆ ಇದರಿಂದ ಬಹುತರ ಜ್ಯೋತಿ ಕೊಂದಿರುವ ಬ್ರಾಹ್ಮಣ್ಯವು ಆರಿ ಹೋಗುವುದಲ್ಲವೇ! ಎಲ್ಲಾ ವರ್ಣದವರೂ ಎಲ್ಲಾ ದೇಶದವರೂ ತಮ್ಮ ತಮ್ಮ ಕುಂದುಕೊರತೆಗಳನ್ನು ತಿದ್ದಿಕೊಂಡು ಸ್ವರಾಜ್ಯ ಸಂಪಾದನೆಗಾಗಿ ಶ್ರೇಷ್ಠತರವಾದ ಪ್ರಯತ್ನಗಳನ್ನು ಸತ್ಕರ್ಮಗಳನ್ನೂ ಉಪಯೋಗಿಸ ಮಾಡಲು ಪ್ರಯತ್ನಿಸುತ್ತಿರುವಲ್ಲಿ ಕೊಡಗಿನ ಬ್ರಾಹ್ಮಣರು ಮಾತ್ರ ನೂತನವಾಗಿ [illegible] ದಕ್ಕೆ ಪ್ರಾರಂಭಿಸಿ ಅದರಲ್ಲೂ ತಮ್ಮಲ್ಲಿ ಎರಡು ಪಂಗಡವಾಗಿ ಒಗ್ಗಟ್ಟನ್ನು ಕಳೆವುದು ಯೋಗ್ಯವೇ? ಈಗ ಅಂತಹ ಕೊಂದುಕೊರತೆ [illegible] ಸುಧಾರಣೆಯ ಪ್ರವೃತ್ತಿಯನ್ನು ದೂರಮಾಡಿ ಒಗ್ಗಟ್ಟಿನಿಂದ ಸನ್ಮಾರ್ಗದಲ್ಲಿ ನಡೆವುದು ಅತ್ಯಗತ್ಯ.

ಇಂತಹ ಸಮಯದಲ್ಲಿ ಬ್ರಾಹ್ಮಣರ ಕರ್ತವ್ಯವೇನೆಂದು ಯೋಚಿಸಬೇಕಾಗಿದೆ. ಕೊಡಗಿನ ಬ್ರಾಹ್ಮಣರು ಒಗ್ಗಟ್ಟಿಲ್ಲದೆ ಪೂರಾ ಹಿಂದುಳಿದಿರುವರು ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಅಷ್ಟೆ! ಹೀಗಿರುವಲ್ಲಿ ಈಗಿನ ಉಳಿಕೆಯ ಪ್ರಶ್ನೆಯು ಸಮಾಜದಲ್ಲಿ ವೈಮನಸ್ಯವನ್ನು ಹೆಚ್ಚಿಸುತ್ತದೆಂಬುದರಲ್ಲಿ ಸಂಶಯವಿಲ್ಲ ಆದರೆ ಉಳಿವ ಬಾಂಧವರೆ! ಇದನ್ನಾಗಿ ಆಲೋಚಿಸಿ ಸ್ವಜಾತಿ ದೇಶೋದ್ಧಾರಕಾರ್ಯದಲ್ಲಿ ಪ್ರವರ್ತಿಸಬೇಕಾಗಿದೆ. ಹಿಂದುಳಿದಿರುವ ನಮ್ಮ ಬ್ರಾಹ್ಮಣ ಸಮಾಜವನ್ನು ವೃದ್ಧಿಗೊಳಿಸುವ ಭಾರವು ನಿಮ್ಮದೇ ಆಗಿದೆ. ಮಹಾತ್ಮ ಗಾಂಧಿಯವರ ಚರ್ಕವನ್ನು ಪ್ರತಿ ಮನೆಯಲ್ಲೂ ಇಟ್ಟು ನೂಲು ಮಾಡತೊಡಗಿದರೆ ಈ ಉಳಿವ ಪ್ರಸಂಗವು ಮುಂದೆ ಬರಲಾರದೆಂದು ನಮಗೆ ತೋರುತ್ತೆ. ನಮ್ಮ ಕೊಡಗುದೇಶದ ಬ್ರಾಹ್ಮಣರಲ್ಲಿ ವಿದ್ಯೆಯೇ ಕಡಿಮೆ. ಅದರಲ್ಲೂ ವೈದಿಕ ವಿದ್ಯೆಯನ್ನು ಕಲಿಯಲು ಯಾವ ಅನುಕೂಲವೂ ಇಲ್ಲ. ಸದ್ಯದ ಸ್ಥಿತಿಯಲ್ಲಿ ನಿತ್ಯಕ್ಕೆ ಬೇಕಾಗುವ ವೈದಿಕರಿಲ್ಲದೇ ಇಲ್ಲದಂತಾಗಿದೆ. ಆದ್ದರಿಂದ ಒಂದು ವೈದಿಕ ಪಾಠಶಾಲೆಯು ಶೀಘ್ರ ಸ್ಥಾಪಿಸಲ್ಪಡಬೇಕು. ಇಲ್ಲವೇ ನಮ್ಮಲ್ಲಿನ ಬಡ್ಡು ಬಾಲಕರನ್ನು ಬೇರೆ ಕಡೆಗೆ ಕಳುಹಿಸಿ ವೈದಿಕ ವಿದ್ಯಾಭ್ಯಾಸ ಮಾಡಿಸಬೇಕು. ಇದಕ್ಕೆ ಬೇಕಾದ ಹಣ ಕೂಡಿಸಲೂ ಮತ್ತು ಬ್ರಾಹ್ಮಣ ಸಮಾಜದ ಹಿತವನ್ನು ಸಾಧಿಸುವುದಕ್ಕೂ ಸಂಘವೊಂದು ಕೂಡ್ಲೆ ಆಗಬೇಕೆಂದು ನನ್ನ ಪ್ರಾರ್ಥನೆ ಆದ್ದರಿಂದ ಮಹನೀಯರು ಮುಂದಾಳುಗಳಾಗಿ ಈ ಕಾರ್ಯದಲ್ಲಿ ಪ್ರವರ್ತಿಸಬೇಕಾಗಿದೆ.

ರಾಮಾನುಜ.

ಶಂ ಬೀರಂಡ ಬೆಳ್ಳಿಯಪ್ಪ ಮೆಮೊರಿಯಲ್ ಹಾಲ್.

ನೆಪ್ಟಂಬರ್ 30 ರಲ್ಲು ಈಗಣ ಮತ್ತು ಮುಂದಿನ ಹೈಸ್ಕೂಲ್ ವಿದ್ಯಾರ್ಥಿಗಳು, ಶಿವಾಧೀನರಾದ ಶಂಬೀರಂಡ ಬೆಳ್ಳಿಯಪ್ಪನವರ ಜ್ಞಾಪಕಾರ್ಥವಾಗಿ ಏನಾದರೂ ಏರ್ಪಾಡು ಮಾಡಬೇಕೆಂದು ಮ॥ ರಾ॥ ಎ. ಬಿ ಕಾರ್ಯಪ್ಪ ಎಮ್. ಎ. ಯವರ ಅಧ್ಯಕ್ಷತೆಯಲ್ಲಿ ಒಂದು ಸಭೆ ಸೇರಿದರು. ಶ್ರೀಯುತ ಬೆಳ್ಳಿಯಪ್ಪನವರನ್ನು ತಿಳಿದಿರುವ ಮ॥ ರಾ॥ ಬಿ ಯಂ ಕಾರ್ಯಪ್ಪ, ಎಮ್. ಎಮ್ ಗಣಪತಿ ಕೆ. ಕೆ. ಉತ್ತಯ್ಯ, ಕೆ. ಪಿ ಮುತ್ತಣ್ಣ, ಸಿ. ಯಂ. ಉತ್ತಪ್ಪ, ಪಿ ಯಂ. ಪೂವಯ್ಯ ಇವರು ಮತ್ತು ಅಧ್ಯಕ್ಷರು ಸಹ ಅವರ ಗುಣಗಳನ್ನು ಪ್ರಾಮಾಣಿಕತೆಯನ್ನೂ ದೇಶಾಭಿಮಾನತೆಯನ್ನೂ ವರ್ಣಿಸಿದರು. ನಂತರ ಶಿವಾಧೀನರಾದವರ ಜ್ಞಾಪಕಾರ್ಥ ಏನು ಏರ್ಪಾಡು ಮಾಡೋಣವೆಂಬ ಸಂಗತಿ ಚರ್ಚಿಸಿ, ಈ ಕಾರ್ಯಕ್ಕೋಸ್ಕರ ಮಡಿಕೇರಿ ಹೈಸ್ಕೂಲಿನ ಈಗಿನ ಮತ್ತು ಮುಂದಿನ ವಿದ್ಯಾರ್ಥಿಗಳಿಂದಲೂ ಇತರ ದೇಶಾಭಿಮಾನಿಗಳಿಂದಲೂ ಚಂದಾವಸೂಲ್ಮಾಡಿ ತಕ್ಕ ಏರ್ಪಾಡು ಮಾಡುವಂತೆ ಮ॥ ರಾ॥ ಎ. ಬಿ ಕಾರ್ಯಪ್ಪನವರನ್ನು ಪ್ರೆಸಿಡೆಂಟರಾಗಿಯೂ, ಕೆ ಕೆ. ಉತ್ತಯ್ಯ, ಎಮ್. ಎಮ್. ಗಣಪತಿ ಬಿ. ಯಂ ಕಾರ್ಯಪ್ಪ, ಸಿ ಯಂ ರಾಮರಾವ್, ಬಿ. ಯಸ್. ಕುಶಾಲಪ್ಪ ಪಿ. ಯಂ ಪೂವಯ್ಯ, ಯನ್. ಸಿ. ಸುಬ್ಬಯ್ಯ, ಪಿ. ಕೆ. ಗಣಪತಿಯವರುಗಳನ್ನು ಮೆಂಬರುಗಳಾಗಿಯೂ ಒಂದು ಕಮಿಟಿ ಏರ್ಪಾಡು ಮಾಡಿದರು.

ಅದೇ ಮೇರೆ ತಾ॥ 14 ರಲ್ಲು ಒಂದು ಕಮಿಟಿ ಮೀಟಿಂಗಾಯ್ತು. ಸದರಿ ಮೀಟಿಂಗಿನಲ್ಲು ಮಡಿಕೇರಿ ಹೈಸ್ಕೂಲ್ ಮುಂದಿನ ವಿದ್ಯಾರ್ಥಿಗಳಿಂದಲೂ ಈಗಿನ ವಿದ್ಯಾರ್ಥಿಗಳಿಂದಲೂ, ಇತರ ಮಹಾನುಭಾವರಿಂದಲೂ ಚಂದಾ ಎತ್ತುವಂತೆಯೂ ಈ ಮಹಾನುಭಾವರಿಗೆಲ್ಲಾ ಚಂದಾಪಟ್ಟಿ ಕಳುಹಿಸಿ ಅವರ ಸಹಾಯ ಕೋರುವಂತೆಯೂ, ಮೀಟಿಂಗಿನಲ್ಲಿ ನಡೆದ ವಿಷಯಗಳನ್ನು ಕೊಡಗು ಪತ್ರಿಕೆಯಲ್ಲಿ ಪ್ರಕಟಿಸುವಂತೆಯೂ ಹಣ ಬಂದದನ್ನು ಕಮಿಟಿಯವರಾಗಿ ತೆಗೆದಿಡುವಂತೆಯೂ, ಬಿ ಯಂ. ಚಂಗಪ್ಪನವರನ್ನು ಕಮಿಟಿ ಮೆಂಬರಾಗಿ ಸೇರಿಸುವಂತೆಯೂ ಠರಾವು ಆದವು.

ಯನ್. ಸಿ ಸುಬ್ಬಯ್ಯ, ಬಿ ಯಂ. ಚಂಗಪ್ಪ ಇವರು ಮಡಿಕೇರಿಯ ಪಬ್ಲಿಕ್ ಜನರಿಂದಲೂ, ಪಿ. ಯಂ. ಪೂವಯ್ಯನವರು ಉದ್ಯೋಗಸ್ಥರಿಂದಲೂ, ಪಿ. ಕೆ ಗಣಪತಿಯವರು ಸ್ಕೂಲ್ ನಿಂದಲೂ ಚಂದಾ ವಸೂಲ್ಮಾಡುವ ಹಾಗೆ ಏರ್ಪಾಡಾಯ್ತು. ಕೊಡಗಿನ ಇತರ ಸ್ಥಳಗಳಿಂದಲೂ ಇತರ ದೇಶಗಳಲ್ಲಿರುವ ಕೊಡಗು ನಿವಾಸಿಗಳಿಂದ ಬಂದಾ ವಸೂಲ್ಮಾಡುವುದಕ್ಕೆ ತಕ್ಕ ಜನರನ್ನು ಮುಂದಾಗಿ ನೇಮಿಸುವಂತೆ ಏರ್ಪಾಡಾಯ್ತು.

ಕೊಡಗು ಪತ್ರಿಕೆ ಮ್ಯಾನೇಜರವರ ಮೂಲಕ ಹಣ ಕಳುಹಿಸಿ ಕೊಟ್ಟರೂ ಸಾಕಾಗುವುದು.

ಮಹಾನುಭಾವರೆಲ್ಲರೂ ಶಿಕ್ಷಕಪ್ರಾಯನಾದ ಬೆಳ್ಳಿಯಪ್ಪನವರ ಹೆಸರನ್ನು ಯಾವಾಗಲೂ ಕೊಂಡಾಡುವಂತೆ ಇವರ ಜ್ಞಾಪಕಾರ್ಥಕ್ಕೆ ತಮ್ಮ ಕೈಯಲ್ಲಿಯಾಗುವ ಸಹಾಯ ಮಾಡಬೇಕಾಗಿ ಕೋರುತ್ತೇವೆ.

ಕೆ ಕೆ ಉತ್ತಯ್ಯ,

ಜ್ಯಾಯಿಂಟ್ ಸೆಕ್ರೆಟರಿ ಕಮಿಟಿಗಾಗಿ.

(ಒಬ್ಬ ಬಾತ್ಮೀದಾರನಿಂದ)

ತಾ॥ 15 16 21 ರಲ್ಲು ಅಮ್ಮತ್ತಿನಾಡಿನ ಪಂಚಾಯತ ಸಭೆಯ ಮೀಟಿಂಗು ಅಮ್ಮತ್ತಿ ಸ್ಕೂಲಿನಲ್ಲಿ ನಡೆಯಿತು. ಸುಮಾರು 200 ರ ಮೇಲೆ ಜನರು ನೆರೆದಿದ್ದರು. ಸಭೆಯ ಅಧ್ಯಕ್ಷರಾದ ಮೆ॥ ಕುಟ್ಟಂಡ ಚಿಣ್ಣಪ್ಪನವರು ಪೀಠವನ್ನು ಅಲಂಕರಿಸಿದರು. ಉಪಾಧ್ಯಕ್ಷರಾದ ಮೆ॥ ಕೇಚಂಡ ಅಯ್ಯಪ್ಪನವರು ಮತ್ತು ಪಂಚಾಯತ ಕಮಿಟಿ ಮೆಂಬರುಗಳೂ ಹಾಜರಿದ್ದರು. ಸೆಕ್ರೆಟರಿಯಾದ ಮೆ॥ ಮಾಚಯನಾಥರಾಯರು ಸಭೆಯ ಹೊಸ ರೂಲ್ಸುಗಳನ್ನು ಓದಿದರು. ಕೆಲವು ಬದಲಾವಣೆಗಳಿಂದ ರೂಲ್ಸುಗಳು ಮೂರನೆ ಸಾರಿ ಮಂಜೂರಾದವು. ಅವುಗಳನ್ನು ಪ್ರಿಂಟು ಮಾಡುವಂತೆಯೂ ತೀರ್ಮಾನವಾಯಿತು. ಬಳಿಕ ರಾಜ್ಯದಲ್ಲಿರುವ ಸಾಹುಕಾರರಾದ [illegible] ಬಗ್ಗೆ ಹಣವನ್ನು ಪಡಕೊಂಡಿರುವವರು ಮತ್ತು ಸನ್ 1924 ನೇ ಇಸವಿಯಲ್ಲಿ ಪಾವತಿ ಮಾಡುವಂತೆಯೂ ತೀರ್ಮಾನವಾಯಿತು. ನಂತರ ಸಾರಾ ನಿಷೇಧದ ವಿಷಯವೂ ಬೈಲಾಗಳನ್ನು ಕಟ್ಟುವುದರ ವಿಷಯವೂ ಕೆಲವು ಮಹಾಶಯರು ಸ್ವಾರಸ್ಯವಾದ ಭಾಷಣಗಳನ್ನು ಮಾಡಿದರು. ಈ ನಾಡಿನವರು ಇನ್ನು ಮುಂದೆಯಾದರೂ ಸೇಂದಿ ಇಳಿಸುವುದನ್ನು ಪೂರ್ತಿಯಾಗಿ ನಿಲ್ಲಿಸುವಂತೆಯೂ ಸಾರಾ ಪದಾರ್ಥವನ್ನು ಎಲ್ಲಿಯೂ ಸೇವಿಸದಂತೆಯೂ ತೀರ್ಮಾನಿಸಿದರು.

ಈ ಮೀಟಿಂಗು ಮುಗಿದನಂತರ ಅಮ್ಮತ್ತಿಯ ಮುಸಲ್ಮಾನ ಮೆ॥ ಅಬ್ದುಲ್ ಗಫೂರ್ ಸಾಹೇಬರವರು ಒಂದು ಭಾಷಣವನ್ನು ಮಾಡಿದರು. ಅದರ ಸಾರಾಂಶವೇನೆಂದರೆ ಭಾರತವಾಸಿಗಳು ಸ್ವರಾಜ್ಯವನ್ನು ಪಡೆಯಲು ಸುಮಾರು 50 ವರ್ಷಗಳಿಂದ ಬಹಳ ತಪ್ಪುಗಳನ್ನೂ, ನಷ್ಟಗಳನ್ನೂ, ತೊಂದರೆಗಳನ್ನೂ, ಅವಸ್ಥೆಗಳನ್ನೂ ಚಿಂತೆಗಳನ್ನೂ ಅನುಭವಿಸುತ್ತಾ ಪ್ರಯತ್ನಪಡುತ್ತಾ ಇದೆ. ಈಗಲೂ ಕೂಡ ಹಿಂದೂ ದೇಶದಲ್ಲೆಲ್ಲಾ ನಮ್ಮ ನಾಯಕರೆನಿಸಿದವರು ನಮ್ಮ ಹಕ್ಕು ಬಾಧ್ಯತೆಯನ್ನು ಪಡೆಯಲು ತಮ್ಮ ಆಸ್ತಿಪಾಸ್ತಿಗಳನ್ನೂ ನೆಂಟರಿಷ್ಟರನ್ನೂ ಹೆಂಡತಿ ಮಕ್ಕಳನ್ನೂ ಬಿಟ್ಟು ಜೈಲಿನಲ್ಲಿದ್ದಾರೆ. ಇಷ್ಟು ಕಷ್ಟಪಟ್ಟರೂ ಇನ್ನೂ ಸ್ವರಾಜ್ಯವು ಸಿಕ್ಕದೆ ಹೋದರೆ ಈ ಈ ಭೂಲೋಕವನ್ನೇ ಬಿಟ್ಟು ಹೋಗಬೇಕೆನಿಸಿತು. ಮಹಾತ್ಮ ಗಾಂಧಿಯವರು ಹೇಳುತ್ತಾರೆ ಇದೀಗ ನಮಗೆ ಕಷ್ಟ ಮಾಡುವ ಸಮಯವಾದುದರಿಂದ ನಮ್ಮ ದಾರಿದ್ರ್ಯವನ್ನೂ, ನಮ್ಮ ತ್ಯಾಗವನ್ನೂ, ಕಷ್ಟನಷ್ಟಗಳನ್ನೂ ಹೋಗಲಾಡಿಸಿಕೊಳ್ಳುವುದಕ್ಕಾಗಿ ನಾವೆಲ್ಲರೂ ಏಕ ಮನಸ್ಸಿನಿಂದ ಒಗ್ಗಟ್ಟಾಗಿ ಹೋರಾಡಿ, ಶಾಂತಿಯಿಂದ, ಸಮಾಧಾನದಿಂದ ಈ ಕೆಳಗಿನ ಒಪ್ಪಂದಗಳನ್ನು ಕೈಗೊಳ್ಳುವುದು ಅಗತ್ಯವಾಗಿದೆ (1) ಪ್ರತಿ ಗ್ರಾಮದಲ್ಲಿಯೂ ಸ್ವರಾಜ್ಯ ಕಮಿಟಿಯನ್ನು ಮಾಡಿ ಕೂಡಿ ಎಲ್ಲಾ ಮತಸ್ಥರೂ ಒಗ್ಗಟ್ಟನ್ನು ಇಡುವುದು (2) ಸ್ವದೇಶಿ ಬಟ್ಟೆಯಾದ ಖಾದಿ ಬಟ್ಟೆಯನ್ನಲ್ಲದೆ ಬೇರೆ ಯಾವ ಬಟ್ಟೆಯನ್ನೂ ಕೊಂಡುಕೊಳ್ಳಬಾರದು (3) ಪ್ರತಿ ಮನೆಯಲ್ಲಿಯೂ ಚರಕಗಳನ್ನಿಟ್ಟು ನೂಲುಮಾಡುವುದು (4) ಸೇಂದಿ, ಸಾರಾಯಿ ವಗೈರೆ ಮದ್ಯಪಾನ ಸಂಪೂರ್ಣವಾಗಿ ನಿಲ್ಲಿಸುವುದು. (5) ಪಂಚಾಯತಿ ಮೂಲಕ ನಮ್ಮ ವ್ಯಾಜ್ಯಗಳನ್ನು ತೀರಿಸಿಕೊಳ್ಳುವುದು (6) ಮತ ವಿದ್ಯೆಯನ್ನು ಕಲಿಸುವುದು (7) ಸಂಪೂರ್ಣ ಅಹಿಂಸಾ ಸಂಪತ್ತಿ ಪ್ರತಿಯೊಬ್ಬನು ಇಡುವುದು ಈ ಸಂಗತಿಗಳನ್ನು ಜನರಿಗೆ ಬೋಧಿಸಲಿಕ್ಕಾಗಿ ನಾವು 5 ಜನರು ಅಂದರೆ (1) ಅಬ್ದುಲ್ ಗಫೂರ್ ಖಾನ್, (2) ಪಟ್ಟಂಡ ಪೂವಯ್ಯನವರು, (3) ಮಲ್ಲಂಡ ಅಯ್ಯಪ್ಪನವರು, (4) ನಾಯಡ ಬೆಳ್ಳಿಯಪ್ಪನವರು, (5) ಹಾಜಿ ಅಬ್ದುಲ್ ರಹಿಮಾನ್ ಸಾಹೇಬರು, ಹೊರಟಿರುತ್ತೇವೆ.

ಮಿ॥ ಶ್ರೀನಿವಾಸಯ್ಯಂಗಾರ್ ಸಿ. ಐ. ಇ. ಯವರು ತಂಜಾವೂರು ಜಿಲ್ಲೆಯ ಒಂದು ಹಳ್ಳಿಯಲ್ಲಿ ಮಾಡಿದ ಭಾಷಣದಿಂದ.

ಸ್ವರಾಜ್ಯ ಪಡೆಯಬೇಕೆಂಬ ಎಲ್ಲಾ ಪಂಗಡದವರು ಒಪ್ಪಿರುವ ವಿಷಯವಾಗಿದೆ. ಚಕ್ರವರ್ತಿ ಸಾರ್ವಭೌಮರು ನಮಗೆ ಒಂದಿಯಮೇಲಕ್ಕೆ ಸ್ವರಾಜ್ಯ ಕೊಡುತ್ತೇವೆಂತ ಹೇಳಿರುತ್ತಾರೆ. ಚಕ್ರವರ್ತಿಯವರ ಚಿಕ್ಕತಂದೆ ಕಾನ್ನಾಟ್ ಪ್ರಭುಗಳು ಸಹ ಇದನ್ನು ಒಪ್ಪಿರುತ್ತಾರೆ. ಕೆಲವರು ಕ್ರಮೇಣ ಸ್ವರಾಜ್ಯ ಸಿಕ್ಕಿದರೆ ಸಾಕೆಂತ ಹೇಳುತ್ತಾರೆ. ಕಾಂಗ್ರೆಸ್ಸಿನವರು ಒಡನೇ ಸಿಕ್ಕಬೇಕೆಂತ ಹೇಳುತ್ತಾರೆ. ಇದಕ್ಕೆ ಸಾಧನೆಗಳು ಎರಡು ಸ್ವದೇಶಿ, ಮತ್ತು ಕುಟೀರಕಸುಬನ್ನು ಪಡುವುದು. ಈ ಸಾಧನಗಳಿಗೆ ಸರಕಾರದವರ ಅಪ್ಪಣೆಗಳಿರಲಿ ಕೈಲ್ಲ. ಸರಕಾರದವರ ಸಂಗಡ ಜಗಳವಾಡುವುದಕ್ಕಾಗಿ ಸ್ವದೇಶಿ ಬಟ್ಟೆ ಹಾಕುವುದಲ್ಲ. ತಮ್ಮ ಪ್ರಯೋಜನಕ್ಕಾಗಿಯೇ ಹಾಕುವದಾಗಿದೆ. ಬಟ್ಟೆಗಾಗಿ ವರ್ಷಕ್ಕೆ ಹೋಗುವ 60 ಕೋಟಿ ರೂಪಾಯಿ ಉಳಿಸುತ್ತೆ. ನಮ್ಮ ಊರ ಒಂದು ಹಳೇ ಕಸುಬು ಪುನಃ ಜೀವಕ್ಕೆ ಬರುತ್ತೆ. ಮಿಲ್ಲಿನ (ಮಗ್ಗದ) ಬಟ್ಟೆಯು ಒಳ್ಳೆಯದು. ಮದುವೆ ವಗೈರೆ ಕಾರ್ಯಗಳ ಬಗ್ಗೆ ಒಳ್ಳೆ ಬಟ್ಟೆ ಕಟುಮಾಯಾಗುತ್ತೆ. ರಾಷ್ಟ್ರದ ಗೌರವವನ್ನು ಹೆಚ್ಚಿಸಬೇಕಾಗಿರುವ ಕಾಲದಲ್ಲಿ ಪರಕೀಯರ ಬಟ್ಟೆಯನ್ನು ಹಾಕುವುದು ನ್ಯಾಯವಲ್ಲ. ಕೆಲವು ಮೂರ್ಖರು [illegible] ಹಾಕಿ ಅಭ್ಯಾಸವಾಗಿದ್ದರೂ ಖಾದಿ ಬಟ್ಟೆ ಹಾಕಬೇಕಾದರೆ ಬಹಳ ಅಂಜಿಕೆಯಾಗುತ್ತದೆ. ದೇಶದ ಉದ್ಧಾರಕ್ಕಾಗಿ ಅದನ್ನು ಒಪ್ಪಬೇಕು. ಆ ಬಟ್ಟೆಯನ್ನು ಹಾಕಿದ್ದೇನೆ. ಅದನ್ನು ಹಾಕಲು ಯಾರಿಗೂ ನಾಚಿಕೆ ಇರಬಾರದು. ಆಸ್ಥಾನದಲ್ಲಿ ಏನೆಂದು ಹೇಳಿ ಕೊಂಡಾರು ಎಂಬ ಭಯ ಎಲ್ಲರಿಗೂ. ಸ್ವದೇಶಿ ವ್ರತವು ಅವಮಾನವಲ್ಲ. ಇಂಡಿಯನ್ ಸಿವಿಲ್ ಸರ್ವೀಸಿನ ಅಧಿಕಾರಿಗಳು ಅಲ್ಲ. ಧೈರ್ಯದಿಂದ ಪಟ್ಟಕ್ಕಾಗಿ ಆ ಬಟ್ಟೆಯನ್ನು ಧರಿಸಿ ಹಾಕಬೇಕು. ಆಗ ಪರದೇಶದ ಜನರು ನಿಂತಿರುವ ನಮಗೆ ಹೆಚ್ಚು ಗೌರವ ಕೊಡುತ್ತಾರೆ. ಸ್ವದೇಶೀ, ಸ್ವರಾಜ್ಯಬಂದರೆ ತಮ್ಮ ಮಕ್ಕಳಿಗೆ ಅನುಕೂಲವಾಗುವುದು ಅವರಿಗೆ ಗೊತ್ತಾಗುತ್ತೆ. ಒಳ್ಳೇ ಮಾತಾಡುವವರಲ್ಲಿ ಕೆಲವರು ಇದ್ದಾರೆಂತ ಗೊತ್ತಾಗುತ್ತೆ. ಸ್ವದೇಶಿ ಬಟ್ಟೆ ಹಾಕಲು ಹೆದರಿದರೆ ಸ್ವಂತ ನೆರೆಗೆ ಹೆದರಿದಂತೆ ಬೇರೆಯವರು ಏನು ಹೇಳುತ್ತಾರೋ ಎಂತ ಯೋಚಿಸಬಾರದು. ದೇಶಿ ಬಟ್ಟೆ ಸಹ ಹಾಕಬಾರದು ಅದನ್ನು ತಯಾರಿಸಬೇಕಾದರೆ ಕೋಟಿಸಂಖ್ಯೆ ಜೀವ ಪ್ರಾಣಿಗಳನ್ನು ಕೊಲ್ಲಬೇಕು.

ಕುಡಿತವನ್ನೂ ಬಿಡಬೇಕು. ಕೆಲವು ಕಮೀಷನ್ದಾರರು ಸೇಂದಿ ಮರಗಳನ್ನು ಕಟ್ಟಲಿಕ್ಕೆ ಬಿಡಬೇಕೆಂತ ಜನರಿಗೆ ಬೋಧಿಸುತ್ತಾರಂತೆ. ಇದು ಸರಿಯಾಗಲಾರದು. ಇದು ಹೀನಾಯವಾದ ಸರಕಾರದವರು ಈ ಪದ್ಧತಿಯನ್ನು ನಿಲ್ಲಿಸಬೇಕು. 550 ಲಕ್ಷ ರೂಪಾಯಿ ಉತ್ಪತ್ತಿ ಈ ಕಟ್ಟೆ ಖಾತೆಯಿಂದ ಆಗುತ್ತೆ ಈ ಭಾರವು ಹೆಚ್ಚಾಗಿ ಬಡವರಮೇಲೆಯೇ ಬೀಳುತ್ತೆ. ಇಷ್ಟು ದೊಡ್ಡ ಹಣ ಉಳಿದರೆ ಜನರು ತಮ್ಮ ಕುಟುಂಬ ಸಂರಕ್ಷಣೆಯನ್ನು ಚೆನ್ನಾಗಿ ಮಾಡಿಕೊಳ್ಳಬಹುದು. ಸರಕಾರದವರು ತಮ್ಮ ಉತ್ಪತ್ತಿ ಕಡಿಮೆಯಾಗುತ್ತೆಂತ ನೋಡಬಾರದು. ನಮ್ಮ ಶಾಸ್ತ್ರಪ್ರಕಾರ ರಾಜರು ಇಂಥಾ ಉತ್ಪತ್ತಿಯನ್ನು ಉಪಯೋಗಿಸಬಾರದು, ಮದ್ಯ ಕಟ್ಟಲಿಕ್ಕೆ ಬಿಡದಿದ್ದರೆ ಸರಕಾರ ಉದ್ಯೋಗಸ್ಥರ ಕೃಪೆ ಕಡಿಮೆಯಾಗುತ್ತೆಂತ ನೋಡಬಾರದು. ಈ ಕಟ್ಟೆ ಪದ್ಧತಿಯನ್ನು ಬಿಟ್ಟರೆ ಸರಕಾರದವರು ಸಿಟ್ಟುಮಾಡಲು ಕಾರಣವಿಲ್ಲ.

ಇಂಡಿಯನರ ನಡತೆ.

(ಕಲ್ಕತ್ತಾ ಹೈಕೋರ್ಟಿನ ಜಡ್ಜಿಯವರಾದ ಸರ್ ಜಾನ್ ಉಡ್ರಾಫ್ ಎಂಬವರ "ಭರತಶಕ್ತಿ" ಎಂಬ ಪುಸ್ತಕದಿಂದ)

ನಾನಾಗಲೀ ಅಥವಾ ಬೇರೆಯವ ಇಂಗ್ಲೀಷ್ ಮನುಷ್ಯನು ಸಹ ಬೇರೆಯವರಂತೆ ನಟಿಸಲಿಕ್ಕೆ ಅಪೇಕ್ಷಪಡುವದಿಲ್ಲ ನಾವು ಇಂಡಿಯಾದವರ ಪದ್ಧತಿಗಳನ್ನು ನಡತೆಗಳನ್ನೂ ಅವಲಂಬಿಸುವದಿಲ್ಲ ಯಾಕೆಂದರೆ ನಮ್ಮವೇ ಒಳ್ಳೇದೆಂತಲೂ ಅವೇ ನಮಗೆ ಅನ್ವಕ್ತವೆಂತಲೂ ನಂಬುತ್ತೇವೆ. ನಮ್ಮಂತೆ ನಟಿಸುವವರನ್ನು ನಾವು ಸಾಧಾರಣವಾಗಿ ಮರ್ಯಾದಿಸುವದಿಲ್ಲ ಯಾಕೆಂದರೆ ಅವನು ಬೇರೆಯವರಂತೆ ನಟಿಸಲು ಪ್ರಯತ್ನಿಸುವದರಿಂದ ಅವನು ಆ ಗುಣದಲ್ಲಿ ಆ ಬೇರೆಯವರಿಗಿಂತ ಕೀಳಾಗಲೇ ಎನಿಸುತ್ತಾನೆ. ಇಂಡಿಯಾದೇಶದಲ್ಲಿ ಬಹು ಜನರು ನಮ್ಮಂತೆ ಆಗಲಿಕ್ಕೆ ಪ್ರಯತ್ನಿಸುತ್ತಿದ್ದಾರೆ. ಇದರಿಂದ ನಮಗೆ ಒಂದು ಹಮ್ಮು ಉಂಟಾಗಿದೆ ನಾನು ಆ ದೇಶದವನಾಗಿದ್ದರೆ ತಕ್ಕ ಕಾರಣಗಳಿಲ್ಲದೆ ಪರದೇಶದ ಪದ್ಧತಿಗಳನ್ನು ಅನುಸರಿಸುತ್ತಿರಲಿಲ್ಲ "ಶೇಕ್ ಹ್ಯಾಂಡ್" (Shake hands) ನಲ್ಲಿ ಸ್ವತಂತ್ರವನ್ನೂ ಅನನ್ಯಸ್ಯತೆಯನ್ನೂ ಸೂಚಿಸುವ ಒಳ್ಳೆ ಗುಣಗಳಿದ್ದರೂ ಮಿತವಾಗಿಯೂ ಆ ದೇಶದ ನಮಸ್ಕಾರವನ್ನು ಬಿಟ್ಟು 'ಶೇಕ್ ಹ್ಯಾಂಡ್' ನ ಪದ್ಧತಿಯನ್ನು ಅನುಸರಿಸುತ್ತಿರಲಿಲ್ಲ ಈ ಹೊಸಪದ್ಧತಿಯಿಂದ ಏನೂ ಪ್ರಯೋಜನ ತೋರುವದಿಲ್ಲ 'ಬೇರೆಯವರಂತೆ' ನಟಿಸುವದೇ ಉದ್ದೇಶವೆಂದು ಅಪೇಕ್ಷಿತವಾದ ಈ ಗುಣದಲ್ಲಾದರೂ ಯುರೋಪಿಯನರು ನಮಗಿಂತ ಮೇಲೆಂತ ನೀವು ಒಪ್ಪಿದಹಾಗಾಯಿತು.

ನೋಟೀಸ್.

ಜಮಾನುದಾರರ ಸಂಘ,
ತಾ|| 23-10-21.

ಸನ್ 1921 ನೇ ಇಸವಿ ನವಂಬರು ತಾ|| 14 ನೇ ಸೋಮವಾರ ದಿನ ಮಧ್ಯಾಹ್ನ 12 ಘಂಟೆಗೆ ವೀರರಾಜೇಂದ್ರಪೇಟೆಯಲ್ಲು ಈಗ ಕೊಡಗಿಗೆ ಕೊಡಲಿಕ್ಕಿರುವ ಸೂರು ಪಾಟುಗಳ ವಿಷಯ ಚರ್ಚಿಸತಕ್ಕ ಬಗ್ಗೆ ತಾಲ್ಲೋಕು ಕಚೇರಿ ಬಳಿ ಒಂದು ವಿಶೇಷವಾದ ಜನರಲ್ ಮೀಟಿಂಗ್ ನಡಿಯುವದರಿಂದ ಸದರಿ ದಿನ ಕಾಲಕ್ಕೆ ಸರಿಯಾಗಿ ಎಲ್ಲಾ ಮೆಂಬರುಗಳು ಬರಬೇಕಾಗಿ ಕೋರಿಕೆ.

ಮಡಿಕೇರಿ,
23-10-21.

ಸಿ ಯಸ್. ವೆಂಕಪ್ಪಯ್ಯ,
ಜನರಲ್ ಸೆಕ್ರೆಟರಿ.

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಧಿಪರು ಉತ್ತರವಾದಿಗಳಲ್ಲ. [ಎಡಿಟರ್]

ಕೊಡಗು ಸಂಪಾಜೆ.

ಅಯ್ಯಾ,

ಇಲ್ಲಿ ಅನೇಕ ವರುಷಗಳಿಂದಲೂ ಇದ್ದ ಪೋಸ್ಟಾಫೀಸನ್ನು ಈ ಊರಿನ ಎರಡು ಮೈಲು ಮುಂದಕ್ಕೆ ತೆಗೆದು ಹಾಕಿರುತ್ತಾರೆ. ಅದರ ಬದಲಿಗೆ ಸಾವಿರಾರು ... ಜನ ಸುಮಾರು 12 ಗ್ರಾಮಗಳಿಗೆ ಕೂಡ ಒಂದು ಮನೆಯೂ ... ಇಲ್ಲದ ... ಗಿದೆ ಮಾತ್ರವಲ್ಲದೆ ಇಲ್ಲಿ ಒಂದು ... ಇರುವ ... ಕಾರಣವಲ್ಲದೆ ಬೇರೆ ಯಾರಿಗೂ ಪ್ರಯೋಜನವಿಲ್ಲ. ಆದುದರಿಂದ ಈ ಆಫೀಸನ್ನು ಎಲ್ಲ ಗ್ರಾಮಗಳಿಗೂ ಮಧ್ಯನಾದ ಸಂಪಾಜೆ ... ಬಳಿ ಖಾಲಿಯಾಗಿರುವ ಹಳೆ ಸ್ಟೇಷನ್ ಕಟ್ಟಡದಲ್ಲಿ ... ಇರುವ ಪೋಲೀಸ್ ಸ್ಟೇಷನ್ ಪ್ರೋಟೆಕ್ಟ್ ಇನ್ಸ್‌ಪೆಕ್ಟರ್ ಬಂಗ್ಲೆ ಕೋರ್ಟು ಇರುವದರಿಂದ ಇಲ್ಲಿ ಆಗಾಗ್ಯೆ ಬಂದು ವಾಸಮಾಡುವ ಉದ್ಯೋಗಸ್ಥರಿಗೂ ಇತರ ಬಡವರಿಗೂ ಎಷ್ಟೋ ಉಪಕಾರವಾಗುತ್ತಿತ್ತು. ಆದುದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯದಲ್ಲಿ ಗಮನ ಕೊಡತಕ್ಕದ್ದಾಗಿ ಕೇಳುವ ... ಇಲ್ಲಿಂದ ಭಾಗಮಂಡಲಕ್ಕೆ ಹೋಗುವ "ಟ್ರೈಡ್ ರೋಡ್" ಯೆಂಬ ರಸ್ತೆಯು ಈಗೀಗ ನಾದುರುಸ್ತಿಯಾಗಿ ಜನರ ಪ್ರಯಾಣಕ್ಕೆ ಬಹಳ ಕಷ್ಟವಾಗಿದೆ. ಈ ರಸ್ತೆಯಲ್ಲಿ ಬರುವ ತುಲಾ ಸಂಕ್ರಮಣದ ಸಮಯ ತಲಕಾವೇರಿ ಜಾತ್ರೆಗೆ ಸಾವಿರಾರು ಯಾತ್ರಿಕರು ಹೋಗುವ ಈ ಹಾದಿಯು ಇಷ್ಟು ನಾದುರಸ್ತಿಯಾಗಿರುವದು ಬಡಪ್ರಯಾಣಿಕರ ದುರಾದೃಷ್ಟವೇ ಸರಿ.

ಪ್ರತ್ಯಕ್ಷದರ್ಶಿ.

ವಿದ್ಯಾರ್ಥಿಗಳಿಗೆ ವಿನಂತಿ.

ಸುರೆಯೊಡನೆ ಸೇರಿರಾಡುವ, ಈ ಮದ್ಯ ಇನ್ನೊಂದು ಕಡೆ ಹೊಟೇಲ್ ಎಂಬ ಅಳಿಯ ತಂಗಿಯು ಮುನಿದವಳಾಗಿ ನಮ್ಮ ವಿದ್ಯಾರ್ಥಿಗಳ ಕರವನ್ನು ತನ್ನ ಮೋಹಪಾಶದಲ್ಲಿ ಬಂಧಿಸಿರುವಳು. ಈ ನೊಸಲೇ ನವನಾಗರೀಕತೆಯೆಂಬ ಜಾಡ್ಯದಿಂದ ಸೀಘ್ರವಾಗಿ ಪಾಶ್ಚಾತ್ಯ ವಿದ್ಯಾಸಾಗರದಲ್ಲಿ ತೇಲಾಡುತ್ತಿರುವ ನಮ್ಮ ಬಾಲಕ ಬಾಲಕಿಯರ ಸ್ಥಿತಿಯು ಇನ್ನೂ ಹೆಚ್ಚು ಶೋಚನೀಯವಾಗಿರುವುದು. ಇದರಮೇಲೆ ಸ್ಥಳೀಕ ದ್ವಿತೀಯಸ್ಥಾಯಿ ಶಾಲಾ ಬಾಲಕರಾದರೋ ಪ್ರತಿದಿನವೂ ತಮ್ಮ ಶಾಲಾ ಮುಗಿದೊಡನೆ ಗುಂಪುಗುಂಪಾಗಿ ಹೋಗಿ ಕಾಮಿನೀದೇವಿಯ ಉಪಾಸನಾ ಮಂದಿರವನ್ನು ಹೊಕ್ಕು "ಸ್ವಾಮಿನಾ, ನಾಲ್ಕು ಪ್ಲೇಟ್, ನಾಲ್ಕು ಕಪ್ಪು ಟೀ, ಯಾ ಸ್ಪ್ರಿಂಗ್ ಕಾಫಿ" ಎಂಬ ಮಂತ್ರೋಚ್ಚಾರಣೆಯನ್ನು ಮಾಡಿ, ಇವರು ಅಗ್ನಿದೇವರ ಆರಾಧಕರಾದ್ದರಿಂದ ಹೋಮಧೂಮಗಳಿಂದ ನಿತ್ಯಕರ್ಮವನ್ನು ಮುಗಿಸಿದೊಡನೆ "ಗ್ರಾಟಿಸ್" ಎಂಬ ಕಡೇ ಮಂತ್ರವನ್ನುಚ್ಚರಿಸಿ, ಬಹು ಸಂತೋಷದಿಂದ ತಿರುಗಿ ಹಿಂತಿರುಗುವರು. ಈ ಉಪಾಸನೆಯಿಂದ ಕಾಮಿನಿಯು ಪ್ರಸನ್ನಳಾಗಿ ತನ್ನ ಶಿಷ್ಯವರ್ಗಕ್ಕೆ ರಾತ್ರಿ ಸಹ ಜಾಗರಣಾವಸ್ಥೆಯನ್ನು ಒಲಿಸಿಯುವಳು. ಸಾಲದುದಕ್ಕೆ ಆಕೆಯು ಜಾಡ್ಯಗಳ ಕಣಜದ ಅಧಿಕಾರಿಣಿಯಾದ್ದರಿಂದ "ಸಿದಾರೋಗ" ಎಂಬ ನಾಲ್ಕು ವ್ಯಂಜನಾಕ್ಷರದ ದೊಡ್ಡ ಬಿರುದನ್ನು ಸಹ ದಯಪಾಲಿಸಿ, ಶೋಭೆಯನ್ನು ಪರಿಹರಿಸಿ ಮುಂದುಗಾಣದಲ್ಲಿ ಶಿರೋಮಣಿಗಳನ್ನಾಗಿ ಯೂ, ಕುಬೇರನ ಶತ್ರುಗಳನ್ನಾಗಿಯೂ ತಯಾರುಮಾಡುವ ಈಕೆಯನ್ನು ಇವರ ಅರ್ಚಕರನ್ನು ವಿದ್ಯಾರ್ಥಿಗಳ ತಾಯಿತಂದೆಗಳು ದೂಷಿಸಬೇಕೋ ಭೂಷಿಸಬೇಕೋ ನೀವೇ ತಿಳಿದು ಆದಿವದೆಂದು ತಿಳಿದರೆ ಅವರ ಮಾಲೋಕನಕ್ಕೆ ಪ್ರಾರಂಭಿಸುವುದುತ್ತಮ.

ವಿದ್ಯಾರ್ಥಿಗಳ ಹಿತಚಿಂತಕ.

ಅಯ್ಯಾ,

ಕೊಡಗು ದೇಶದಲ್ಲು ಗ್ರಾಮನಿವಾರಣೆ ಬಗ್ಗೆ, ಧವಸದ ಬಂಡಾರದ ವಿಚಾರವನ್ನು ಕಡಿಯಬತ್ತನಾದು ಕೋಟೇರಿ ಗ್ರಾಮದ ಮ|| ಮುಕ್ಕಂಡ ನಂಜಪ್ಪನವರು ಅನೇಕ ಕಡೆಂದರ ತಗೆದುಕೊಂಡು ಊರ್ಜಿತ ಪಡಿಸಿದರು. ಅದರಂತೆಯೇ ಈಗ ಅನೇಕ ಗ್ರಾಮಗಳಲ್ಲು ಧವಸದ ಬಂಡಾರವನ್ನು ಏರ್ಪಡಿಸಿ ತಮ್ಮ ಗ್ರಾಮವಾಸಿಗಳು ಅನ್ಯ ಗ್ರಾಮಗಳಿಗೆ ಹೋಗಿ ಸಾಲ ಸೋಲ ಮಾಡದ ರೀತಿ ಧವಸದ ಬಂಡಾರವನ್ನು ಮತ್ತು ಹಣದ ಬಂಡಾರವನ್ನು ಏರ್ಪಡಿಸಿಕೊಂಡಿರುವ ಸಂಗತಿ ದೇಶಾಭಿಮಾನಿಗಳಿಗೆ ತಿಳಿಯದಲ್ಲ. ಧವಸದ ಬಂಡಾರವನ್ನು ಏರ್ಪಡಿಸಿದಂತೆಯೇ ಕೋಟೇರಿ ಗ್ರಾಮದಲ್ಲು ಸೇಂದಿ ಕಟ್ಟಿ ಇಳಿಸುವದನ್ನು ನಿಲ್ಲಿಸಲು ಮ|| ನಂಜಪ್ಪನವರ ಹಿತ್ಯರಾದ ನಾವುಗಳು ಕಳೆದ 6 ತಿಂಗಳಲ್ಲು ಒಂದು ಮೀಟಿಂಗು ಮಾಡಿ ಇನ್ನು ಮುಂದಕ್ಕೆ ತಮ್ಮ ತಮ್ಮ ಓಣಿಗಳಲ್ಲು ಸೇಂದಿ ಕಟ್ಟಿಸಬಾರದೆಂತಲೂ ಇನ್ನೂ ಗ್ರಾಮಾಭಿವೃದ್ಧಿ ಬಗ್ಗೆ ಅನೇಕ ಸಂಗತಿಗಳನ್ನು ಅನುಸರಿಸಿ ಮಾಜಬರ್ ಮಾಡಿ ಗ್ರಾಮಸ್ಥರೆಲ್ಲರು ಸೈನ್ ಹಾಕಿ ಅದರಂತೆ ಕಾರ್ಯದಲ್ಲಿ ನಡೆಯುತ್ತಿದ್ದೆವು. ಇದರ ಮೇಲೆ ನಾಲ್ಕೈದು ಕೊಡವರು ಬೆಳ್ಳಿಗಾವ (ತಾಥಿಸೆಂಟ್ರು) ಹಳಬರು ನಮ್ಮ ಗ್ರಾಮದ ಹಿಂದುಗಟ್ಟಿಗೆ ಒಪ್ಪದೆಯು ಅವರ ಒಳ್ಳ ಪ್ರಕೃತಿಯನ್ನು ಬಿಡದೆಯು, ಅವರವರ ಓಣಿಗಳಲ್ಲು ಸೇಂದಿ ಇಳಿಸುವಂತೆ ಒಪ್ಪಿಕೊಂಡಿದ್ದರು. ಹೀಗಿರುವಲ್ಲು ಈ ವರ್ಷ ನಮ್ಮ ಗ್ರಾಮಗಳಲ್ಲು ನಡೆದ 2-3 ಶುಭಕಾರ್ಯಗಳಲ್ಲು ಇವರಿಗೆ ಬೇರೆ ಒಬ್ಬ ಮದ್ಯದ ದಶೆಯಿಂದ ಇವರ ಪೂರ್ವಕೃತ್ಯವನ್ನು ಸ್ಮರಿಸಿ ಊರಿನ ಭಾಷೆಗೆ ಒಪ್ಪಿಕೊಂಡಿರುತ್ತಾರೆ. ಮೊಲ್ಲಂಡ ನಾಚಪ್ಪಯ್ಯ ಮುಂಡಂಡ ಕೈರಿ ನಮ್ಮ ಟಿಕ್ಕರಾದ ಒಬ್ಬರು ಸೇಂದಿ ಇಳಿಸುವವನನ್ನು (ಕುಟುಗುವವನ್ನು) ಕರೆದು ತನ್ನ ಓಣಿಯ ಬಾಗಿಲಿಯ ಮರಗಳನ್ನು ಕಟ್ಟಿಸಿ ಸುರಪಾನ ಮತ್ತರಾಗಿ ನಮ್ಮನ್ನು ತಾವೇಮುಂದೆ ಇರುವರು. ಊರವರ ಹಿಂದಕಟ್ಟಿಗೂ ಸೇರದೆಯು ದೇಶಗಳಲ್ಲು ನಡಿಯುವ ಸ್ಥಿತಿಗತಿಗಳನ್ನರಿಯದೆ ಈ ಮಾಯಾಪಾಶಕ್ಕೊಳಗಾಗಿ ತನ್ನ ಕುಟುಂಬದ ಮತ್ತು ತನ್ನ ಊರು ನಾಡಿನ ಹೆಸರುವಾಸಿಯನ್ನು ಹಾಳುಮಾಡುವ ಈ ದೇಶಾಭಿಮಾನಿಗಳಿಗೆ ಹಿಡಿದಿರುವ ಮದ್ಯಪಾನವೆಂಬ ಪಿಶಾಚಿಯನ್ನು ಪುಣ್ಯಾತ್ಮರಿಗೆ ಮುಂದಾದರು ದೂರೀಕರಿಸಿ ಅಜ್ಞಾನವನ್ನು ತೊಲಗಿಸಿಕೊಳ್ಳ ಬಹುದು. ನೊಬ್ಬರ ಇವರ ಕುಲಸ್ಥರೇ ಆಗಲಿ ಇವರ ಬಂಧುಗಳೇ ಆಗಲಿ ಕರೆಸಿ ಮಂತ್ರಪೂರ್ವಕಯಿಂದಾದರೂ ಜಡಿಸಿ ಗ್ರಾಮವಾಸಿಗಳಿಗೆ ಈ ಪಿಶಾಚಿಯ ಬೆಸನನ್ನು ಮರಿಯುವಂತೆ ಮಾಡುಸುವಿರಾಗಿ ಕೋರುವ,

ಗ್ರಾಮವಾಸಿ.

ಜಮ್ಮ ಮತ್ತು ಜಮ್ಮೇತರರ ಜಗಳ.

ಅಯ್ಯಾ,

ಜಲ್ಪನವನ್ನು ಎತ್ತಿರುವ, ನಮ್ಮ ಕೊಡಗುಪತ್ರಿಕೆಯು 9 ನೇ ಸಂಖ್ಯೆಯ ಸಂಚಿಕೆಯಲ್ಲಿ ಜಮ್ಮ ಜಮ್ಮೇತರರು ಮತ್ತು ಜಮ್ಮದ ಕೋಮುಗಳಾರು ಜಗಳವೆಂದು, ಎಲ್ಲರೂ ನೋಡಿದವನ್ನ. ಇದು, ಕಳೆದ ಆಗಸ್ಟು 16 ನೇ ತಾರೀಖಿನಲ್ಲು ನಡೆದ ಬಹುಮತ ಉದ್ಯೋಗಸ್ಥರ ಮತ್ತು ... ಜಮ್ಮ, ಜಮ್ಮೇತರರಿಂದ ನಡೆದ ಮೀಟಿಂಗಿನ ಪ್ರತಿಫಲವೆಂದು ಖಂಡಿತ ಹೇಳಬೇಕಾಗಿದೆ. ನಾನು ಸದ ಓದುಗರಲ್ಲಿ ಇದ್ದೆನು. ಅಲ್ಲಿ ಒಂದೆರಡು, ಉದ್ಯೋಗಸ್ಥರ ಮಾತನೀಯರು ಪೂರ್ವ ದಿನ್ನು ಆಲೋಚಿಸಿದ ಲಡಿದವನಾತಿನ ಪ್ರತಿಫಲವಾದರೂ ದಿನ 7 ರಲ್ಲು ಜಮ್ಮೇತರರು ಚರ್ಚಿಮಾಡದೇ ವಾಪಾರ್ಟನ್ನು ಒಪ್ಪಿಕೊಂಡಂತೆ ಅನುಮೋದಿಸಿದ್ದಾಗಿರುತ್ತೆ. ಶಾಂತವಾಗಿರುವ ಬೆಂಕಿಕಡ್ಡಿಯನ್ನು ಉರಿಯುವಂತೆ ಮಾಡಿದಂತೆ ಉರಿಸುವರು ನೋಡಿದರೆ ಇನ್ನು ಸಣ್ಣ ಪಾಂಡದಲ್ಲಿ ಎಲ್ಲರ ಬೇಧಭಾವಗಳನ್ನು ಇವರ ಒಗ್ಗಟ್ಟಿಗಿಂದ ಕೇಳಬಯಸುವ ಒಡು ಕೊಡಗರಾದ ನಮ್ಮ ಹೃದಯದಲ್ಲಿ ಸ್ವಲ್ಪದಲ್ಲಿ ಕರಗಿ ಇಲ್ಲವೆಂಬದು 16 ರಲ್ಲಿ ನೆರದಿದ್ದ ಕೆಲವು ಮಹನೀಯರ ಮಾತಿನ ... ಪರಿಣಾಮವಾದದ್ದು ಇವರು ಸ್ವಾರ್ಥಪರರೆಂಬುವದನ್ನು ಬಹಿರಂಗಪಡಿಸುವಂತಾಯಿತು. ಕೊಡಗರಿಗೆ ಈಗಲಾದರೂ ಮುಂದಟ್ಟಕ್ಕೆ ಬಂದರೆ ಇದು ನಮ್ಮ ದುರಾದೃಷ್ಟವೇ ಸರಿ ಹೀಗೆ ಇರುವಲ್ಲಿ, ಕೊಡವರು ತಮ್ಮ ಮನಸ್ಸೊಳ್ಳೆಯ ವಾತಾವರಣದಿಂದ ಬೇರೆ ಕಾರ್ಯವಾಗಿ ಬಳಲಬೇಕಾಯಿತು. ದೇಶದ ಏಳಿಗೆಗೆ ಇವರು ಕುಂದುವನ್ನುಂಟುಮಾಡಿದವರಾಗಿಯಿತು. ಇದರಿಂದ ದೇಶದವರು ಸ್ವರಾಜ್ಯದ ಮಾರ್ಗದಿಗೆ ಅಡ್ಡವೆಂಬರು. ಸರಕಾರದವರಿಗೆ ನಾವಾಗಿ ತಿಳಿಸಿಕೊಟ್ಟಂತಾ... ಇದಕ್ಕೆ ಕೊಡಗಿನ ಪರ ವ್ಯಸನಪಡಬೇಕಾಗಿದೆ. ಪ್ರಾಗಂದರ್ಭಕ್ಕೆ (1) ಈಗ ನಿಶ್ಚಯಿಸಿದಂತೆ ಹೇಳುವ ಸಭೆಯ ಮೇರೆ

ಜಮ್ಮದವರು	9	
ಜಮ್ಮೇತರರು	4	11
ಉದ್ಯೋಗಸ್ಥರು	4	
ಮಹಮ್ಮದೀಯರು	2	
ಡಿಪ್ರೆಸ್ ಕ್ಲಾಸು	1	
	20	

ಈಗ ಜಮ್ಮದವರು ವಾದಿಸುವಂತೆ ಜಮ್ಮದವರಿಗೆ 9 ಸ್ಥಳ ದೊರೆತರೂ ಕ್ರಮೇಣ ಎಮ್ಮದ ಸಂಗತಿ ಕುರಿತು ಭಿನ್ನಾಭಿಪ್ರಾಯಗಳ ಚರ್ಚೆ ಬಂದಲ್ಲು 11 ಮಂದಿ ಜಮ್ಮದವರನ್ನು ಹಿಂದಾಕುವ ಸಂಭವ ಇದೆ. ಇದಕ್ಕೆ ಈ ವರುಷದ ಆ|| ಬೋರ್ಡಿನಲ್ಲು ನಡೆದ ಸಣ್ಣ ಮೀಟಿಂಗಿನ ಉದಾಹರಣೆಯನ್ನು ಯೋಚಿಸಬೇಕಾಗಿದೆ. ಯಾಕೆಂದರೆ ಜಮ್ಮೇತರರಿಗೆ ನಮ್ಮ ಜಮ್ಮದ ಮುಖಂಡರುಗಳು (ಈ ರೀತಿಯಲ್ಲು) ಅವಶ್ಯವಿರುವ ಸಲ ಜಮ್ಮದವರಿಗೆ ಸಾಗು ಹಿರಿಯವರಿಂದ ಅವಶ್ಯವಿದೆ.

(2) ಜಮ್ಮ, ಜಮ್ಮೇತರರೆಂಬ ಭೇದಗಳಿಟ್ಟರೆ, ಜಮ್ಮದವರು ಜಮ್ಮೇತರರ ಸ್ಥಾನಕ್ಕೆ ಹೋಗಿಸಲ್ಲಲು ಮತ್ತು ಹಿಡುಕೊಡಲು ಕೂಡದೆಂದು ಇಟ್ಟಂದರೆ ಆಗ್ಯೆ ಸರಕಾರದವರು ಅವರ ನ್ಯಾಯಕ್ಕೆ ಕಿವಿಕೊಡದೆ ಕಳಗುವದು. ಜಮ್ಮದವನಂತೆ ಜಮ್ಮೇತರರೂ ಇರುವಾಗ್ಯೆ ಪೂರ್ವ ನಾಲ್ಕು ಸ್ಥಳಗಳೂ ಅವರಿಗೇನೇ ಹೋಗುವ ಅನುಕೂಲವನ್ನು ಸರಕಾರದವರು ಗಮನಿಸಿಕೊಟ್ಟಿರುವರು. ಜಮ್ಮದವರಿಗೆ ಎಷ್ಟು ಕಾಗಿನ ಭೂಮಿ ಯಾದರೂ ಬಂದಿತ್ತು ಜಮ್ಮವಿದ್ದ ಮಾತ್ರಕ್ಕೆ ಜಮ್ಮದವರೆನ್ನಿಸಿಕೊಳ್ಳುವರೆಂದು ಸರಕಾರದವರು ಊಹಿಸುತ್ತಿರುವರು. ಹ್ಯಾಗೆಂದರೆ ಜಮ್ಮವಂಟ ನಾವು ಆರ್ಮ್ಸ್ ಆಕ್ಟಿನಿಂದ (Arms Act) ವಿಕಾಯಿಸಲ್ಪಟ್ಟವರು.

(3) ಜಮ್ಮ ಮತ್ತು ಜಮ್ಮೇತರರೆಂಬ ಭೇದಭಾವದ ಚಳವಳವು ಮಾಡಿದ್ದು ಸರಿಯೆಂದು ನಂಬುವ ಈ ಜಮ್ಮದ ವರ್ಗದಲ್ಲು, ಎಲ್ಲ ಕೋಮುವಾರು ಇರುವಲ್ಲು, ಕೋಮುವಾರು ಒಂದರ ಎಷ್ಟೆಷ್ಟು ಸ್ಥಳವು ಸಿಕ್ಕುತ್ತೆಂಬುದನ್ನು ಯೋಚಿಸಿ ಇದು ಪಾಕ್ಷಿವಾಕ್ಯಂ ಇರಾದೆಯನ್ನು ಮಾಡಬೇಕಾದವರಾಗಿ, ಭೇದಭಾವಗಳಿಂದ ನಿಷ್ಕಾರಣವಾಗಿ ಜಗಳ, ಎಬ್ಬಿಸುವದಾಗಿದೆ. ಇದರಿಂದ ನಮಗೆ ನಾವೇ ಕೇಡುಮಾಡಿಕೊಂಡಂತೆ ಆಗುವದು. ಕಡೆಯಲ್ಲಿ ಮದ್ರಾಸು ಮತ್ತು ಮೈಸೂರಿನ ಚಳವಳದಂತೆ ನರಳಬೇಕಾಗುವದು ಮಹಮ್ಮದೀಯರು, ಈ ಮೊದಲು ಈ ರಾಜಕೀಯ ಯಾವ ಭೇದಭಾವಗಳನ್ನಿಡಬಾರದೆಂಬ ಯೋಚನೆಯಿಂದಲೇ ತಮಗೆ ಪ್ರತ್ಯೇಕ ಕೋಮುವಾರು ಸ್ಥಳಬೇಡವೆಂದು ಅವರ ಮಾಡು ಹೊರಟದಾಗಿರುತ್ತೆ. ಇಂಥ ಭೇದಗಳು (ಜಮ್ಮ ಮತ್ತು ಜಮ್ಮೇತ) ಇಲ್ಲದಿದ್ದರೆ ದೇಶದ ಏಳಿಗೆಯನ್ನು ಬಯಸುವ, ಯಾರು ಸಭೆಗೆಬಂದರೇನು! ಅರ್ಹರಲ್ಲದವರನ್ನು ಚುನಾವಣೆಗೆ ಪ್ರಜೆಗಳು ಸಮ್ಮತಿಸುವದಿಲ್ಲ ನೆಂಬದು, ಎಲ್ಲರಿಗೂ ತಿಳಿದ ಗುಟ್ಟಾಗಿರುವಲ್ಲಿ ಇಂಥ ಸಂಗತಿಯನ್ನು ವಿಪ್ರಯಿಂದ ತುಳಿದು ಎಬ್ಬಿಸುವದರಿಂದ ನಂತರ ಎಲ್ಲರೂ ವ್ಯಸನಪಡಬೇಕಾಗುವದು.

ಮಹನೀಯರೇ! ಯಾರೇ ಆಗಲಿ ನ್ಯಾಯವಾಗಿರುವದಕ್ಕೆ ವಿರೋಧವಾಗಿ ಹೋರಾಡುವರು ನ್ಯಾಯ ಮತ್ತು ಸ್ವಾತಂತ್ರವೆಂಬುವ ಎಲ್ಲರ ಹಕ್ಕಾಗಿರುತ್ತೆ. ಇಂಥ ಕಾರಣಗಳಿಂದ ಜಮ್ಮ ಮತ್ತು ಜಮ್ಮೇತರರೆಂಬ ಭೇದಭಾವಗಳನ್ನು ಇಟ್ಟರೆ, ಬರುವ ಕೇಡನ್ನು ಸೂಚಿಸುವದಕ್ಕೆ ಬದಲಾಗಿ, ಜಮ್ಮದವರು ನಾನಾಕಾರಣಗಳಿಂದ ಚಳವಳವನ್ನುಂಟುಮಾಡಿದ ಜಗಳ ಯಾರಿಗೆ ಲಾಭವೆಂಬದನ್ನು ಎಲ್ಲರ ಗಣನೆಗೆ ತಂದಿಡುವೆ. ಯಾರು ಇನ್ನೊಬ್ಬರ ನ್ಯಾಯ ಮತ್ತು ಸ್ವಾತಂತ್ರ್ಯವನ್ನು ಕಿತ್ತುಹಾಕುವರೋ ಅವರು ತಮ್ಮ ನ್ಯಾಯ ಮತ್ತು ಸ್ವಾತಂತ್ರವನ್ನು ಇಟ್ಟುಕೊಳ್ಳಲಾರರೆಂದು ಮ|| ... ಎಂಬ ವಾಕ್ಯವಿದೆ, ಇಂಥ ಸಂದರ್ಭಗಳಲ್ಲಿ, ಸರಕಾರದವರು ನ್ಯಾಯಕ್ಕೆ ನಿಲ್ಲಬೇಕಾಗುವದು. ಬೆಕ್ಕು ಬೆಣ್ಣೆ ಜಗಳದಿಂದ ಮಂಗನ ಹೊಟ್ಟೆ ತುಂಬಿಕೊಂಡ ... ಬರುತ್ತೆ. ಆದ್ದರಿಂದ ಸಹೋದರರು ನಮ್ಮ ಕ್ಷೇಮದ ಸಲುವಾಗಿ ಇಂಥ ಭೇದಭಾವಗಳನ್ನು ಬಿಟ್ಟು ಐಕ್ಯತೆಯಿಂದ ದೇಶದ ಏಳಿಗೆಯನ್ನು ಎಲ್ಲರೂ ಬಯಸುವರಾಗಲೆಂದು ದೇವರನ್ನು ಪ್ರಾರ್ಥಿಸುತ್ತೇನೆ.

ಜಿದ್ದಂಡ್ರ ಸುಬ್ಬಯ್ಯ.

ಒಂದು ಪ್ರತ್ಯುತ್ತರ

ತಾ|| 7-10-21 ರಲ್ಲು "ಕೊಡಗು" ಪತ್ರಿಕೆಯಲ್ಲಿ ಮ|| ಮನೆಯಪಂಡ್ರ ತಿಮ್ಮಯ್ಯ (ಈಚಿಗೆ ನಾಚೈಯ್ಯ) ಮತ್ತು ಪಳಂಗಂಡ ಮುತ್ತಣ್ಣ ಮತ್ತು ಆರು ಜನ ಜಮಾನ್ದಾರಸಂಘದ ಕಮಿಟಿ ಮೆಂಬರುಗಳು ರುಜುಹಾಕಿ ಈ ಕೆಳಗೆ ರುಜುಮಾಡಿದ ನಾವಿಬ್ಬರು ಸಂಘದ ಪ್ರೆಸಿಡೆಂಟರು ಮತ್ತು ವೈಸ್ ಪ್ರೆಸಿಡೆಂಟರು ಆಗಿ ಇದ್ದುಕೊಂಡು ದೇಶದವರಿಗೆ ವಿರೋಧವಾಗಿಯೂ ನಮ್ಮ ಮನಸ್ಸೊಳ್ಳೆ ಇಚ್ಛೆ ನಡೆಯುತ್ತೇವೆಯಾಗಿಯೂ ಮುಂತಾಗಿ ಬರೆದ ಬಹಿರಂಗಪತ್ರದಲ್ಲಿ 12 ಸವಾಲುಗಳನ್ನು ಹಾಕಿ ಇವುಗಳಿಗೆ ಮರುಪತ್ರಿಕೆಯಲ್ಲಿ ಜವಾಬು ಕೊಡಬೇಕಾಗಿಯೂ ಬರೆದಿರುತ್ತಾರೆ.

ಈ ಪ್ರಶ್ನೆಗಳಿಗೆ ಜವಾಬು ಬರೆಯುವ ಮುಂದಾಗಿ ಸೂರುಪಾರ್ಟುಗಳ ವಿಷಯ ಆದಿಯಿಂದ ನಡೆದ ಸಂಗತಿಗಳ ರಿಕಾರ್ಡು ದಾಖಲೆಗಳನ್ನು ಕೊಡಬೇಕಾಗಿದೆ.

1. ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾದ ಮ|| ಮಾಂಟೇಗುರವರು ಸೂರುಪಾರ್ಟು ವಿಷಯ ಮದ್ರಾಸಿಗೆ ಬಂದಿದ್ದಾಗ ನಮ್ಮ ಸಂಘದ ಪರವಾಗಿಂದ ಆಗಿನ ಪ್ರೆಸಿಡೆಂಟರು ಸೇರಿ 5 ಜನ ಪ್ರತಿನಿಧಿಗಳನ್ನು ಕಳುಹಿಸಿದಾಗ್ಗೆ ಅವರಿಗೆ ಬರಹ ಮೂಲಕವಾಗಿ ಕೊಟ್ಟಂತ ಸಿದಾಪಸ 5 ನೇ ಕಲಂನಲ್ಲಿ ಒಂದು (ಬೋರ್ಡು) ಎಗ್ಸಿಕ್ಯೂಟಿವ್ ಕೌನ್ಸಿಲ್ ಕೊಟ್ಟರೆ ಸಾಕೆಂದು ಕೇಳಿಕೊಂಡದ್ದಾಗಿದೆ.

2. ಈಚಿಗೆ 1918 ನೇ ಇಸ್ವಿಲಿನಲ್ಲಿ ಹೊರಟಂತ ಸೂರುಪಾರ್ಟುಗಳ ರಿಪೋರ್ಟು ನಮಗೆ 21-7-18 ರಲ್ಲಿ ಸಿಕ್ಕಿತು. ಈ ರಿಪೋರ್ಟಿನಲ್ಲಿ ನಮ್ಮ ಸೀಮೆಗೆ ದೊಡ್ಡ ಪ್ರಾಂತ್ಯಗಳ ಸೂರುಪಾರ್ಟುಗಳು ಯುಕ್ತವಲ್ಲ ಸಿಕ್ಕಲಾರದು ಇಂಡಿಯಾ ವೈಸರಾಯರವರ ಮುಖ್ಯವಾಗಿ ತಿಳಿಸಿರುವ ಒಂದು ಎಗ್ಸಿಕ್ಯೂಟಿವ್ ಕೌನ್ಸಿಲ್ ಕೊಡಬಹುದಾಗಿ ಹೇಳಿದೆ. ಇದು ಸಿಕ್ಕಿದ ಕೂಡಲೆ ದೇಶದವರೆಲ್ಲ ಸೇರಿ ರಾ|| ... ಕೋದಂಡ ಮಾಚೈಯ್ಯನವರ ಅಧ್ಯಕ್ಷತೆಯಲ್ಲಿ ತಾ|| 22-8-18 ರಲ್ಲಿ ಮಡಿಕೇರಿಯಲ್ಲಿ ನಡೆದ ಮೀಟಿಂಗಿನಲ್ಲಿ ಎಗ್ಸಿಕ್ಯೂಟಿವ್ (ಸೂರುಪಾರ್ಟು ರಿಪೋರ್ಟಿನಲ್ಲಿ ಕೊಟ್ಟಂತ) ಕೌನ್ಸಿಲ್ ನಮಗೆ ತೃಪ್ತಿಕರವಲ್ಲವೆಂದು ರಿಸೊಲೂಷನನ್ನು ಮದ್ರಾಸಿಗೆ ಕಳುಹಿಸಿ ತರುವಾಯ ... ದಿರು.

3. 1921 ರಲ್ಲು ಹೊರಟ "ಇಂಡಿಯಾ ಆಕ್ಟು" ಎಂಬುದು ನಮ್ಮ ಸಂಘದ ಆಫೀಸಿಗೆ ಸಲ್ಪಕಾಲ ತಿಂಗಳಲ್ಲಿ ಬಂದಿರುತ್ತದೆ. ಕಳೆದ ಏಪ್ರಿಲಿನಲ್ಲಿ ನಡೆದ ನಮ್ಮ ಸಂಘದ ವಾರ್ಷಿಕ ಸಭೆಯಲ್ಲಿ ಆಕ್ಟಿನ ಅಭಿಪ್ರಾಯವನ್ನು ತಿಳಿಸಿದ ನಂತರ ಮದ್ರಾಸು ವಗೈರೆ ದೊಡ್ಡ ಪ್ರಾಂತ್ಯಗಳಿಗೆ ಕೊಟ್ಟಿರುವಂತೆ ಸಮಗ್ರ ಸೂರುಪಾರ್ಟುಗಳನ್ನು ಕೊಡಬೇಕೆಂದು ಠರಾವಾಯಿತು. ಇದೇ ಆಕ್ಟಿನ ಠರಾವಾಗಿದೆ ಹೀಗಿರುತ್ತಾ ಈಚಿಗೆ ಮ|| ಗ್ರೀಸ್ ಪ್ರೈಸ್ ಸಾಹೇಬರವರ ಜೊತೆಯಲ್ಲಿ ನಮ್ಮ ಸಂಘದ ಎಲ್ಲರೂ ಅಲ್ಲದಿದ್ದರೂ ಅನೇಕರು ಸೇಟಾರುಗಳಲ್ಲಿ ಊರೂರು ಸುತ್ತಿ ಕೊಡಗನ್ನು ಮದ್ರಾಸಿಗೆ ಸೇರಿಸುವದಕ್ಕೆ ಸಹಿಗಳನ್ನು ತೆಗೆದುಕೊಂಡು ಮಡಿಕೇರಿಗೆ ಬಂದು ಈ ಕಾಂಗ್ರೆಸಿನ ಮೀಟಿಂಗು ಮಾಡಿದಾಗ್ಗೆ ಮದ್ರಾಸಿಗೆ ಸೇರಿಸುವ ನಿರ್ಣಯ ಅಲ್ಲಿಗೆ ನಿಂತುಹೋಯಿತು.

ವಾಚಕರು ಮೇಲಿನ ರಿಕಾರ್ಡು ದಾಖಲೆಗಳನ್ನು ಗಮನಕ್ಕೆ ತೆಗೆದುಕೊಂಡು ಹೇಳಿಕೆಮಾಡಿನ ಮೇರೆ ಸಿವೇಕಶಾಲಿಗಳಾದ ನಮ್ಮ ಎಂಟು ಜನ ಸ್ನೇಹಿತರುಗಳು ನಮ್ಮಿಬ್ಬರಮೇಲೆ ದೂರು ಬರೆದುದನ್ನು ಬಹಿರಂಗಪಡಿಸಿದ ವಿಷಯದಲ್ಲಿ ನಮ್ಮಿಬ್ಬರಿಗೆ ವ್ಯಸನವುಂಟಾಗಲು ಕಾರಣ ಇರುವದಿಲ್ಲ ಎಂಬದನ್ನು ಯೋಚಿಸಬೇಕಾಗಿದೆ.

(ಪ್ರಶ್ನೆಗಳಿಗೆ ಉತ್ತರಗಳು)

(1) ಕಮಿಷನರವರ ಮೀಟಿಂಗಿಗೆ ಕರೆಸಿಕೊಂಡಿದ್ದ ಅನೇಕ ಜನರ ಅನುಕ್ರಮ ಮೇರೆ ಕುಟ್ಟಯ್ಯನಾದ ನಾನು ಒಂದು ದಿವಸಕ್ಕೆ ಮುಂದಾಗಿ ಮಾಡಿದ ದೇಶದವರ ಠರಾವಿನ ವಿಷಯ ಮಾತಾಡಿದ್ದಾಗಿದೆ. 2 ಗಂಟೆಯಿಂದ 4 ಗಂಟೆವರೆಗೆ ಕಮಿಷನರವರು ಚರ್ಚೆಮಾಡಿದಾಗ್ಯೂ, ಠರಾವಿಗೆ ಏನನ್ನು ಮೀರಿ ಮಾತಾಡಿರುವದಿಲ್ಲ. ಕಡೆಗೆ ನೀವು ಇವರಿಗೆ ಹೇಳಿ ಸರಕಾರದವರು ಕೊಡುವ ಕೌನ್ಸಿಲನ್ನು ಒಪ್ಪುವಂತೆ ಮಾಡಲಾಗುವದಿಲ್ಲವೇ ಎಂದು ಕಮಿಷನರವರು ಕೇಳಿದಕ್ಕೆ ಈ ಕಾಲದಲ್ಲಿ ಯೌವನಸ್ಥರನ್ನು ತೃಪ್ತಿಪಡಿಸುವದು ಕಷ್ಟವೆಂದು ಹೇಳಿದೆಯು. ಸರಕಾರದವರು ಕೊಡುವ ಸಭೆಯನ್ನು ನಾವು ಒಪ್ಪಿಕೊಳ್ಳುತ್ತೇವೆಂಬುದು ದೊಡ್ಡ ಸುಳ್ಳು. ಈ ಮುಖ್ಯ ಕಮಿಷನರವರು ಮೀಟಿಂಗಿನವರ ಅಭಿಪ್ರಾಯವನ್ನೆಂದು ಕೇಳಿದಕ್ಕೆ ಸರಕಾರಿ ಉದ್ಯೋಗಸ್ಥರವರೊಬ್ಬರು ಈಗ ಕೊಡುವ ಕೌನ್ಸಿಲನ್ನು ಅಂಗೀಕರಿಸಿಕೊಳ್ಳಬಹುದೆಂದು ಸೂಚಿಸಿದಕ್ಕೆ ನಮ್ಮ ಸಂಘದ ಪ್ರಮುಖರಾದ ಮೂರು ಜನರು ಸೇರಿ ಆರು ಜನರು ಅದಕ್ಕೆ ಒಪ್ಪಿಕೊಂಡರು.

(2) ನಮ್ಮಿಬ್ಬರ ತಿಳುವಳಿಕೆ ಇಲ್ಲದೆ ವೀರರಾಜಪೇಟೆಯಲ್ಲಿ ಮಾಡಿದ ಮೀಟಿಂಗಿನಲ್ಲಿ ಸಂಘದ ಕಳೆದ ವಾರ್ಷಿಕ ಮೀಟಿಂಗಿನ ಠರಾವಿಗೆ ವಿರೋಧವಾಗಿ ಮದ್ರಾಸಿಗೆ ಸೇರಿಸಬೇಕೆಂದು ಹೇಳಿದವರು ಮತ್ತು ಸಂಘದ ಅನೇಕ ಮೆಂಬರುಗಳು ಸೇರಿ ತಂತಿವರ್ತಮಾನ ಕಳುಹಿಸಿದ್ದನ್ನು ... ದ ಸಮಾಧಿಸಿದ ಮೀಟಿಂಗಿನ ವಿಷಯ ಮಡಿಕೇರಿಯವರಿಗೆ ಯಾರಿಗೂ ತಿಳಿಯದೆ ಹೋದದ್ದರಿಂದ ಮುಖ್ಯಸ್ಥರಾದ ಕೊಡಗು ಜನರು ಮಡಿಕೇರಿಯಲ್ಲಿ ಜಮೆಯಾಗಿ ಮ|| ಆನರೇಬಲ್ ಕರಾರ್ಡರು ಮದ್ರಾಸಿಗೆ ಸೇರಿಸಬೇಕೆಂದು ಠರಾವು ತರಬೇಕೆಂಬದಕ್ಕೆ ವಿರೋಧವಾಗಿ ತಂತಿವರ್ತಮಾನ ಕಳುಹಿಸಿದುಂಟು. ಇದಕ್ಕೆ "ಕೊಡವಸಭೆ" ಯ ರಿಸಲಿಲ್ಲ. ರಾ|| ಬಾ|| ಕೊಡಂದೇರ ಕುಟ್ಟಯ್ಯ ಎಂಬದಾಗಿ ರುಜು ಹಾಕಲ್ಪಟ್ಟಿತ್ತು. ಇದಕ್ಕೆ ನಿಮ್ಮ ಟೆಲಿಗ್ರಾಮ್ ಸಿಕ್ಕಿತ್ತೆಂದು ರಾ|| ಬಾ|| ಕುಟ್ಟಯ್ಯನ ಹೆಸರಿಗೆ ಜವಾಬು ಬಂದಿದೆ.

(4) ಮುಖ್ಯವಾಗಿ "ಕೊಡವಸಭೆ" ಮಾಡುವುದಕ್ಕಾಗಿಯೇ ತಾ|| 8 ರ ಮೀಟಿಂಗು ಮಾಡಿದ್ದಾಗಿದೆ.

(5) ಕೊಡವಸಭೆ ಮಾಡಿದಾಗ್ಗೆ ಇದಲ್ಲದೆ ಕೊಡಗರಿಗೆ ಸಮ್ಮಂಧ ಪಟ್ಟ ಇನ್ನೊಂದು ಸಂಗತಿಯು ವೈಸರಾಯರು ನಿಮ್ಮ ಕೌನ್ಸಿಲ್ ಮೀಟಿಂಗು ಏನೆ ನಡೆಯುವದರಿಂದ ಅದೇ ಮೇರೆ ಮ|| ಆ|| ಕಾರ್ಯಾಗಾರಿಯವರಿಗೂ, ಗವರ್ನಮೆಂಟ್ ಮೆಂಬರಿಗೂ ತಂತಿವರ್ತಮಾನ ಕೊಡಲಾಯಿತು.

ಮೇಲೆ ಕೊಟ್ಟಿರುವ ಉತ್ತರಗಳಲ್ಲಿ ಬಾಕಿ ಇರುವ ಪ್ರಶ್ನೆಗಳಿಗೆಲ್ಲಾ ಜವಾಬುಗಳು ಅಡಗಿರುವದಾಗಿ ನಂಬುತ್ತೇವೆ.

ಇನ್ನೂ ಇದರ ಮೇಲೆ ಪ್ರಶ್ನೆಗಳು ಬರುವದಾಗಿ ನಮ್ಮ ಸ್ನೇಹಿತರು ಹೇಳುತ್ತಾರೆ. ಕುಟ್ಟಯ್ಯನಾದ ನಾನು ಆ ಸಂಘಗಳ ಪ್ರೆಸಿಡೆಂಟನಾಗಿದ್ದೇನೆ. ಅದೇ ಮೇರೆ ಅಪ್ಪಯ್ಯನಾದ ನಾನು ಈ ಸಂಘಗಳ ಎಕ್ಸಿಕ್ಯೂಟಿವ್ ಮೆಂಬರಾಗಿದ್ದೇನೆ. ಈ ಸಂಘಗಳ ಕೆಲಸವನ್ನು ಮೆಂಬರುಗಳಿಗೆಲ್ಲರಿಗೂ ತೃಪ್ತಿಯಾಗುವಂತೆ ನಡಿಸಿಕೊಂಡು ಪತ್ರಿಕೆಯಲ್ಲಿ ಬಾಕಿ ಬರೆಯಲಿಕ್ಕೆ ಸಮಯವು ಕಡಿಮೆಯಾಗಿದೆ. ಆದುದರಿಂದ ಜಮಾನ್ದಾರರ ಸಂಘದ ವಿಷಯದಲ್ಲಾಗಲೀ ದೇಶದ ಇನ್ನಾವ ಸಂಗತಿಯಲ್ಲಾಗಲಿ ನಮ್ಮ ಸ್ನೇಹಿತರು ಅಪೇಕ್ಷಿಸುವಂಥ ವಿಷಯವನ್ನು ಸಂಘದ ಆಫೀಸಿಗೆ ಬಂದರೆ ವಿವರಿಸಿಕೊಡಲು ಸಿದ್ಧವಾಗಿದ್ದೇವೆ. ಈಗ ಎರಡು ಬಸ್ಸುಗಳು ವೀರರಾಜಪೇಟೆಯಿಂದ ಮಡಿಕೇರಿಗೆ ನಡೆಯುವದರಿಂದ ಪ್ರಯಾಣಕ್ಕೆ ಬಹಳ ಅನುಕೂಲವಾಗಿದೆ.

ತಾ|| 26-10-1921.

ಕೊಡಂದೇರ ಕುಟ್ಟಯ್ಯ.
ಕೋದಂಡ ಅಪ್ಪಯ್ಯ.

[illegible]

SUBBANNA, SANGAPPA,

Receiving and Forwarding Agents,

General Merchants and

Commission Agents

Santhepet Mysore

[illegible]

ಎಲೆಕ್ಟ್ರಿಕ್ ಗಿಲ್ಟು ಛಂಗಾರದ ನಗಗಳು

ಗೆಜ್ಜೆ ನಾಗರು 1 ಕ್ಕೆ	
ಗೋಡೆ ನ ಹುವ್ವು 1 ಕ್ಕೆ	2—8—0
ರಾವಂತಿಗೆ ಹುವ್ವು 1 ಕ್ಕೆ	0—12—0
ಮಲ್ಲಿಗೆ ಮುಗ್ಗು ಡಾಬು 1 ಕ್ಕೆ	0—12—0
ಚಂದ್ರಹಾರ ಸಾದಾ 1 ಕ್ಕೆ	3—0—0
ಡಿಟೋ ನೋಪು ಸಹಾ	2—8—0
ಇಮಿಟೇಷನ್ ಪೆಂಡೋಲೆ ಜೋಡಿಗೆ	1—0—0
ಮೂಗುಬಟ್ಟು 1 ಕ್ಕೆ	3—0—0
ಬುಲಾಕು 1 ಕ್ಕೆ	0—5—0
ಜರ್ಮನ್ ಸಿಲ್ವ ಪಟ್ಟಿ 1 ಕ್ಕೆ	0—12—0
ಪನ್ನೀರು ಬುಡ್ಡಿ 1 ಕ್ಕೆ	3—0—0
ಡಿಟೋ ಲೋಟ 1 ಕ್ಕೆ	3—0—0
	1—8—0

ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ

12—9 ಆರ್. ಕೆ. ವಾಚ್ ಕಂಪೆನಿ

ನಂಬರು 42, ಕೆಂಡಪ್ಪ ಶೆಟ್ಟಿ ಬೀದಿ ಮದರಾಸು

ಖ್ಯಾತಿಯಿಂದ ಗುಣಪಡಿಸುವ ಔಷಧಿಗಳು

(1) ಮಹಾಮದನಕಾಮೇಶ್ವರಿ ಲೇಹವು — ಆಯುರ್ವೇದ ವಿಧಿಪ್ರಕಾರ ತಯಾರಿಸಲ್ಪಟ್ಟಿದ್ದು ಇದರ ಸೇವನೆಯಿಂದ ಧಾತು ಕ್ಷೀಣತೆ ಅಜೀರ್ಣ, ಎದೆಗೂಡವು ಶರೀರದ ಥಳಿತದಿಂದ ಉಂಟಾದ ಅಶಕ್ತಿಯನ್ನೂ ದೇಹಾಲಸ್ಯವನ್ನೂ ಪರಿಹರಿಸುತ್ತದೆ ರಕ್ತಶುದ್ಧಿ ಧಾತುಪುಷ್ಟಿ ... ಮುಖದಲ್ಲಿ ಕಾಂತಿಗೂಳಿಸುವುದು ಸ್ತ್ರೀಯರು ಪುರುಷರು ಇದನ್ನು ಉಪಯೋಗಿಸಬಹುದು 40 ಸಲ ... ಡಪ್ಪಿ 1 ಕ್ಕೆ 1—12—0 ಟಪ್ಪಾಲ್ ಖರ್ಚು 6 ಆಣೆ 3 ಡಪ್ಪಿಗಳಿಗೆ 4—12—0 ಟ ಖ 10 ಆಣೆ

(2) ಚವನಪ್ರಾಶ್ಯ — ಇದರ ಸೇವನೆಯಿಂದ ಕ್ಷಯ ರಾಜಯಕ್ಷ್ಮ, ಉರಕ್ಷತ ಬಾಸ ಶ್ವಾಸ, ಹೃದ್ರೋಗ ಇವೇ ಮೊದಲಾದ ರೋಗಗಳನ್ನು ನಾಶಪಡಿಸಿ ಜೀರ್ಣಶಕ್ತಿಯನ್ನು ವೃದ್ಧಿಪಡಿಸಿ ಶರೀರಕ್ಕೆ ಸೌಂದರ್ಯವನ್ನು ಯವನ ಕಾಲದಲ್ಲಿದ್ದ ಹಾಗೆಯೇ ಇಂದ್ರಿಯಪಟುತ್ವವನ್ನು ಕೊಡುವದು ಮತ್ತು ಶರೀರದಾರ್ಢ್ಯತೆಯನ್ನೂ ಅವಯವಗಳ ಬಲವನ್ನೂ ವೃದ್ಧಿಮಾಡುತ್ತದೆ ಮತ್ತು ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸಿ ಬುದ್ಧಿಪಟುತ್ವವನ್ನು ಅಧಿಕವಾಡುವುದು ಈ ಔಷಧವು ಬಾಲಕರಿಗೂ, ವೃದ್ಧರಿಗೂ ಬಹಳ ಪ್ರಯೋಜನ ಇದು ಬಹಳ ರುಚಿಕರವಾಗಿರುವುದು ಇದು ಚವನನೆಂಬ ವೃದ್ಧಮಹರ್ಷಿಗೆ ಅಶ್ವಿನಿದೇವತೆಗಳುಪಯೋಗಿಸಲ್ಪಟ್ಟ ರಸಾಯನವಾಗಿರುತ್ತದೆ 1 ಸೇರಿನ ಡಪ್ಪಿ 1 ಕ್ಕೆ 2—0—0. 3 ಡಪ್ಪಿಗಳಿಗೆ 5—8—0 ರೂಪಾಯಿ

(3) ಆರೋಗ್ಯ ... ಮತ್ತು ಮಾತ್ರೆ — ಹೆಂಗಸರು ಕ್ರಮತಪ್ಪಿ ಮುಟ್ಟಾಗುವುದು, ರಜೋಸಮಯದಲ್ಲಿ ಅತ್ಯಲ್ಪ ಅತಿರೇಕವಾಗಲಿ, ರಕ್ತಸುರಿಯುವುದು, ಹೊಟ್ಟೆನೋವು ಸೊಂಟನೋವು, ಬಲಹೀನ ಒಂಟಿಯಾಗಿರುವಿಕೆ ಬಿಳಿಪ್ರದರ, ಕುಸುಮರೋಗ, ಗರ್ಭಕೋಶ ಉತ್ಕ್ರಮ ತಪ್ಪುವಿಕೆ ಮತ್ತು ಸ್ತ್ರೀಗಳಿಗೆ ಉಂಟಾಗತಕ್ಕ ಸಕಲ ರೋಗಗಳನ್ನು ಖಂಡಿತವಾಗಿ ಗುಣಪಡಿಸುತ್ತದೆ 8 ಔನ್ಸ್ ಬಾಟ್ಲಿಗೂ, 3 ಡಪ್ಪಿ ಮಾತ್ರೆಗೂ 2—0—0. 3 ಬಾಟ್ಲಿಗಳಿಗೆ ಮತ್ತು ಡಪ್ಪಿಗಳಿಗೆ 5—8—0 ರೂ

(4) ಪ್ರಸೂತಾವಲೇಪ — ಹೆತ್ತ ನಂತರ ಈ ಔಷಧಿಯನ್ನು ಸೇವಿಸುವದರಿಂದ ಅರುಚಿ ಅಗ್ನಿಮಾಂದ್ಯ, ಸಿವಾನಾಶ ಮತ್ತು ಗರ್ಭದಿಂದ ಸಂಭವಿಸುವ ಸಕಲ ವೇದನೆಗಳನ್ನು ಖಂಡಿತ ಗುಣಮಾಡುವುದು ಮತ್ತು ಧಾತುಪುಷ್ಟಿಯನ್ನು ಉಂಟುಮಾಡುವುದು ಇದು ತಾಯಿಗೆ ಹೇಗೋ ಹಾಗೆಯೇ ಮಗುವಿಗೂ ಬಹಳ ಪ್ರಯೋಜನ, ಡಪ್ಪಿ 1 ಕ್ಕೆ 2—0—0. ಟಪ್ಪಾಲ್ ಖರ್ಚು 6 ಆಣೆ

(5) ಪಿತ್ತಹಾರಿಚೂರ್ಣ — ಮಂದಿದ್ದತೆ, ಬಯುಮೂತ್ರ, ಛಳಿಜ್ವರ, ಜ್ವರಗೆಡ್ಡೆ ತಲೆತಿರುಗುವಿಕೆ ಅಮ್ಲಪಿತ್ತ, ಹೊಟ್ಟೆ ಹಸಿವಿಲ್ಲದೆ ಇರುವಿಕೆ, ಬಾಯಿಯಲ್ಲಿ ಅಗ್ನ ವಾತಪಿತ್ತ, ಕಫ, ಇವುಗಳಮೇಲೆ ದಿವ್ಯ ಔಷಧಿ 1 ಡಪ್ಪಿಗೆ 12 ಆಣೆ ಟಪ್ಪಾಲ್ ಖರ್ಚು 6 ಆಣೆ 3 ಡಪ್ಪಿಗಳಿಗೆ 2—0—0

(6) ಮೇಹಕುಠಾರ — ಮೂತ್ರಕೃಚ್ಛ್ರ ಅಶ್ಮರಿ, ಪ್ರಣ, ಮೂತ್ರ ಹೋಗುವಾಗ್ಗೆ ಉರಿಯನ್ನು ಕೀವನ್ನು ಕೂಡಲೆ ನಿಲ್ಲಿಸಿ ಖಂಡಿತ ಗುಣ ಕೊಡುವುದು, 14 ದಿವಸದ ಔಷಧಿ ಡಪ್ಪಿ 1 ಕ್ಕೆ ಕ್ರಯ 2—0—0 3 ಡಪ್ಪಿಗಳಿಗೆ 5—10—0

(7) ಜಾಲಗ್ರಹ ಗುಟಿಕ — ಮಕ್ಕಳಿಗೆ ಮುಲುದ್ದಕ್ಕೆ ಬಾಲಗ್ರಹ ಇವೇ ಮೊದಲಾದ ಕಷ್ಟದಿಂದ ಉಂಟಾಗತಕ್ಕ ಸಕಲ ರೋಗಗಳನ್ನು ಗುಣಪಡಿಸಲಿಕ್ಕೆ ರಾಮಬಾಣದಂತಿರುವುದು ಬಾಟ್ಲಿ 1 ಕ್ಕೆ 10 ಆಣೆ 3 ಬಾಟ್ಲಿಗಳಿಗೆ 1—10—0 ಒಂದರಿಂದ 3 ಬಾಟ್ಲಿವರೆಗೆ ಟಪ್ಪಾಲ್ ಖರ್ಚು 6 ಆಣೆ

(8) ಶ್ವಾಸಕುಠಾರಗುಟಿಕೆ — ನಂಬರ್ 1 ನಂ. 2 ಈ ಎರಡು ನಮೂನೆಯ ಗುಟಿಕೆಗಳ ಸೇವನೆಯಿಂದ ತ್ರಿದೋಷ (ಕಫ ವಾತ ಪಿತ್ತ) ದಿಂದ ಉಂಟಾಗುವ ಶ್ವಾಸಬಾಸವನ್ನು ನಿರ್ಮೂಲಗೊಳಿಸುವ ಸಿದ್ಧೌಷಧವಾಗಿರುವದು 2 ಬಾಟ್ಲಿ ಮಾತ್ರೆಗಳಿಗೆ 1—2—0. 3 ಬಾಟ್ಲಿಗಳಿಗೆ 3 ರೂ 7 ರಿಂದ 6 ಬಾಟ್ಲಿವರೆಗೆ ಟ ಖ 6 ಆಣೆ

(9) ಮಹಾಜ್ವರಾಂಕುಶ — ಕಫಜ್ವರ, ಪಿತ್ತಜ್ವರ ವಾತಜ್ವರ, ಏಕಾಹಿಕಜ್ವರ ದ್ವ್ಯಾಹಿಕ, ತ್ರ್ಯಾಹಿಕ ಮತ್ತು ಥಿಕ ಇನ್‌ಫ್ಲುಯೆಂಜಾ ನ್ಯುಮೋನಿಯಾ ಮೊದಲಾದ ಭಯಂಕರ ಜ್ವರಗಳನ್ನು ಸಹ ಖಂಡಿತ ಗುಣಪಡಿಸುವುದು 1 ಬಾಟ್ಲಿಗೆ 10 ಆಣೆ 3 ಬಾಟ್ಲಿಗಳಿಗೆ 1—10—0 ಟ ಖರ್ಚು 1 ರಿಂದ 3 ಬಾಟ್ಲಿವರೆಗೆ 6 ಆಣೆ

(10) ಅಜ್ವಾಯಿದಿ — ಆಯಾಸವನ್ನು ಉಂಟುಮಾಡಿದ ಸ ಖವಿರೋಚಕ ಬಾಟ್ಲಿ 1 ಕ್ಕೆ 12 ಆಣೆ 3 ಬಾಟ್ಲಿಗಳಿಗೆ 2 ರೂ 1 ರಿಂದ 3 ಬಾಟ್ಲಿವರೆಗೆ ಟ ಖ 6 ಆಣೆ

(11) ರಕ್ತಶುದ್ಧಿಚೂರ್ಣ — ಮೇಹವು, ಉಪದಂಶ ಮುಂದ ಮೈಯಲ್ಲಿ ಸ್ವಾಪಿರುವ ವ್ರಣಕಜ್ಜಿ, ವೈಕುರುಳು ... ಮುಂತಾದುವುಗಳನ್ನು ಹೋಗಲಾಡಿಸಿ ಹಸಿವೆಯನ್ನು ತ್ರಾಣವನ್ನು ಧಾತುಪುಷ್ಟಿಯನ್ನು ಉಂಟುಮಾಡುತ್ತದೆ 1 ಡಪ್ಪಿ 1—0—0 ರೂ ಟ ಖ 5 ಆಣೆ

ಗುಣವಿಶೇಷ. ಕ್ರಯ ಕಮ್ಮಿ ಶುದ್ಧಿ ಟಿಪ್ಪು

(12) ದಂತಕಾಂತಿಯ ಚೂರ್ಣ — ಹಲ್ಲುಗಳಿಗೆ ಖ್ಯಾತಿಯಾದ ಔಷಧಿ ಇದರ ಉಪಯೋಗದಿಂದ ಹಲ್ಲಿನ ಕ್ರಿಮಿ ಗಳನ್ನು ನಾಶಪಡಿಸಿ, ಹಲ್ಲಿನ ವೇದನೆಯನ್ನು ಖಂಡಿತ ಗುಣಪಡಿಸಿ, ವಸಡುಗಳ ಬೀಗು ಹಲ್ಲಿನಿಂದ ಬರುವ ರಕ್ತವನ್ನು, ಕೀವನ್ನು, ಬಾಯಿಯ ದುರ್ವಾಸನೆಯನ್ನು, ಹಲ್ಲುಗಳ ಒಡೆದಲ್ಲ ಸಣ್ಣ ಕಪ್ಪು ವರ್ಣವನ್ನು ಗುಣಪಡಿಸಿ ಅಲ್ಲಾಡುವ ಹಲ್ಲುಗಳನ್ನು ವಜ್ರದೋಪಾದಿಯಲ್ಲಿ ಗಟ್ಟಿಮಾಡಿ ನಾಲಿಗೆಗೆ ರುಚಿಯನ್ನು ಸಹ ಉಂಟುಮಾಡುತ್ತದೆ ಟಿನ್ 1 ಕ್ಕೆ 3 ಆಣೆ 6 ಟಿನ್ನಿಗೆ 1—1—0 ಟ ಖರ್ಚು 5 ಆಣೆ 12 ಡಪ್ಪಿಗಳಿಗೆ ಟಪ್ಪಾಲ್ ಖರ್ಚು 6 ಆಣೆ

(13) ಗಜಕರ್ಣದ ಮುಲಾಮು — ಹುಳ ಮೇಯುವದು ದದ್ದು, ಗಜಕರ್ಣ, ಚಿಬಿ, ಇಸುಬು ಹುಳಕಡ್ಡಿ ಮೊದಲಾದ ಸಮಸ್ತ ಚರ್ಮರೋಗಗಳು ಮೂರೇ ದಿವಸಗಳಲ್ಲಿ ಗುಣವಾಗುವದ ಡಪ್ಪಿ 1 ಕ್ಕೆ 5 ಆಣೆ 3 ಡಪ್ಪಿಗಳಿಗೆ 15 ಆಣೆ ಟ ಖ 5 ಆಣೆ 6 ಡಪ್ಪಿಗಳಿಗೆ 1—12—0 12 ಡಪ್ಪಿಗಳಿಗೆ 3 ರೂ ಟಪ್ಪಾಲ್ ಖರ್ಚು 10 ಆಣೆ

(14) ವಿಶ್ವಾಂಜನ — ಇದರ ಉಪಯೋಗದಿಂದ ವಾತ ಸಂದಿವಾತ ತಲೆನೋವು ಶಿರೋಭಾರ ಉಳುಕು ಎದೆನೋವು, ಶೀತ ಕೆಮ್ಮು, ಅರ್ಧಾಂಗವಾಯು, ಗಾಯ, ದಂತವ್ಯಾಧಿ ಮುಂತಾದ ಅನೇಕ ತರದ ವೇದನೆಗಳನ್ನು ಖಂಡಿತವಾಗಿ ಗುಣಮಾಡುವವು ಬಾಟ್ಲಿ 1 ಕ್ಕೆ 8 ಆಣೆ. ಡಜನಿಗೆ 5—4—0 ಶ್ಯಾಂಪಲ್ ಡಪ್ಪಿ 1 ಕ್ಕೆ 1 ಆಣೆ ಡಜನಿಗೆ 10 ಆಣೆ 1 ಗ್ರೋಸಿಗೆ 6 ರೂಪಾಯಿ

(15) ಶೃಂಗರಾಜತೈಲ — ಇದರಿಂದ ತಲೆಕೂದಲು ಉದ್ದವಾಗಿಯೂ, ಕಪ್ಪಾಗಿಯೂ, ಪುಷ್ಟಿಯಾಗಿಯೂ ಬರುತ್ತದೆ ಮೆದುಳಿಗೆ ಅತ್ಯಂತ ಹಿತಕಾರಿಯಾಗಿರುತ್ತದೆ ಬಾಟ್ಲಿ 1 ಕ್ಕೆ 12 ಆಣೆ

(16) ಪರಿಶುದ್ಧ ಸಾಧನವಾದ ಯುಕಲಿಪ್ಟಸ್ ಆಯಿಲ್ ಎಂಬ ನೀಲಗಿರಿ ತೈಲ — ಬಾಟ್ಲಿಗೆ ಕೆಗೆದುಕೊಳ್ಳುವದೆ ಮಾತ್ರ, ಬಾಟ್ಲಿ 1 ಕ್ಕೆ 5 ಆಣೆ ಡಜನ್ನಿಗೆ 3 ರೂಪಾಯಿ.

ನಮ್ಮಲ್ಲಿ ಎಲ್ಲಾ ವಿಧದ ಲೇಹ ತೈಲ ಭಸ್ಮ ಆಸವ ಅರಿಷ್ಟಗಳು ದೊರೆಯುತ್ತವೆ ವ್ಯಾಪಾರಸ್ಥರಿಗೆ ಸ್ಪೆಷಲ್ ರಿಯಾಯಿತಿ ದರಗಳು ಕ್ಯಾಟಲಾಗು ಬರೆದು ತರಿಸಿಕೊಳ್ಳಿರಿ

ವಿಳಾಸ — ಎಂ ಗಣಪ್ಪಯ್ಯ ಅಂಡ್ ಸನ್ಸ್, ಆಯುರ್ವೇದಿಕ್ ಫಾರ್ಮಸಿಯನ್ಸ್, ಮಂಗಳೂರು ದ ಕ

ವೆಸ್ಟ್ ಎಂಡ್ ವಾಚ್ ...

ಇದರ ಕ್ರಯ ಸಾಮಾನ್ಯವಾದ ವಾಚ್ ಸಹ ಸುಂದರವಾದ ವಾಚ್ ಪಟ್ಟಿಗೆ ಸಹ 5—8—0 ರೂ. ಮಾತ್ರ

ಘನವಂತರೇ !



ಈ ... ವಾದ ... ದ ತಯಾರು ... ಕ್ಕ್ರವಾದ ... ವಾದ ಸಾಲ ... ತಯಾರಾದ ... ವಾದ ... ಕಟನೆಯ ... ಈ ವಾಚ್ ... ಗಳ ಪದ್ಧತಿ ... ಒಬ್ಬರಿಂದಾಗ ... ಹುಡುಗರಿಗೆ ... ದವಾದದ್ದು ಕೆಲವು ಮಾತ್ರವೇ ಉಳಿದಿವೆ ... ಶೀಘ್ರವಾಗಿ ಬರೆದು ತರಿಸಿಕೊಳ್ಳಿ

ವಿಳಾಸ — ಆರ್ ... ವಾಚ್ ...

ನಂಬರು 4 ...

ಆಶ್ಚರ್ಯ! ಕೊಡುಗೆ ವಾಣಿಜ್ಯ

ನಮ್ಮಲ್ಲಿ ಸಾಮಾನು ಪ್ರತೀಕ್ಷೆ ... ಗಳಿಗೆ ... ಇರುವದನ್ನು

ಕೆಮಿಸ್ಟ್ರಿಯಾತ್ರೆ — ರಜಿ ಶೀಸ 1 ಕ್ಕೆ	1—
3 ಶೀಸೆಗೆ 2—10—0 ಓಡೋಕೋಲೋನ್ (ಬಾರ್) ಅತ್ತರು ಶೀಸ 1 ಕ್ಕೆ 0—12—0 ಡಜನ್	7—8—
ಔನ್ಸ್ ಬಾಟ್ಲಿ ಕುಂಕುಮಲಕ್ಷ್ಮೀ ತೈಲ ಶೀಸೆ 1 ಕ್ಕೆ ಡಜನ್ 1 ಕ್ಕೆ 1—12—0 ಕಸ್ತೂರಿಮಾತ್ರೆ 4 ಆಣೆ ಡಜನ್ 1 ಕ್ಕೆ 2—10—0 ಮಲೇರಿಯಾ	
ಒಟ್ಟು ಒರುವ ಜ್ವರಕ್ಕೆ ಖ್ಯಾತಿಯಾದ ಬೆಳ್ಳಿ ಮಾತ್ರೆ ಶೀಸೆ 1 ಕ್ಕೆ 1—0—0 ರೂ	
ಜಿಂತಾನ್ ಪಾಕೆಟ್ 1 ಕ್ಕೆ	1 ಆಣೆ 4 ಆ
ಗಂಧದ ಸಾಬೂನ್ 1 ಕ್ಕೆ	ಆಣೆ 6 ಆ
ಎಕಲೋಲಿಯಾ ಸಾಬೂನು 1 ಕ್ಕೆ	
ಸ್ಟ್ಯಾಂಡರ್ಸ್ ರಾಣಿ ಸಾಬೂನು 1 ಕ್ಕೆ	
ಜಸ್‌ಮಿನ್ (ಮಲ್ಲಿಗೆ) ಸಾಬೂನ್ 1 ಕ್ಕೆ	
ಬಿಸ್ಕೆಟ್ ಗುಡ್‌ವಿನ್ 1 ಕ್ಕೆ	1
ಚಿಕ್ಕ ಕನ್ನಡಿ 1 ಕ್ಕೆ	2 ಆಣೆ
ಸಾಬೂನ್ ಕರಡಿಗೆ 1 ಕ್ಕೆ	5 ಆಣೆ
ಸರ್ಟ್ ಬಟನ್ ಹರಳಿನದ್ದು ಸೆಟ್ಟು 1 ಕ್ಕೆ	
ಬಾಚಣಿಗೆ ಡಜನ್ 1 ಕ್ಕೆ	0-14-0 1-4-0
ಕ್ಷೌರಕತ್ತಿ 1 ಕ್ಕೆ	2-4-0 2-12-0
ಅಮೃತಾಂಜನ ಡಪ್ಪಿ 1 ಕ್ಕೆ	
ಜರ್ಮನಿ ಕತ್ತರಿ 1 ಕ್ಕೆ	
ಕಾಡ್‌ಬರಿ ಚೊಕಲೇಟ್ ಪಾಕೆಟ್ 1 ಕ್ಕೆ	1
ಫೌಂಟನ್ ಪೆನ್ 1 ಕ್ಕೆ	15 ಆಣೆ

ಯಾವ ತರದ ಸಾಮಾನು ಬೇಕಾದಲ್ಲಿ ನಮ್ಮಲ್ಲಿ ... ಯುತ್ತ ಟಪಾಲು ಖರ್ಚು ಅಲಾಯಿದಾ.

ವಿಳಾಸ — ದಿ ಉಲ್ಲ ಮಾರ್ಟ್, ನಂ ... ಮಂಗಳೂರು, ದ

ಸಂಗೀತಕ್ಕೆ ಸಂಬಂಧಪಟ್ಟ



ಸಾಮಾನುಗಳ ಮಾರಾಟ

ನಮ್ಮಲ್ಲಿ ಅನುಭವಪೂರ್ವಕ ಚೆನ್ನಾಗಿ ಅನೇಕಾನೇಕ ಸಂಗೀತ ವಿದ್ವಾಂಸರುಗಳು ಒಪ್ಪತಕ್ಕ ಹಾರ್ಮೋನಿಯಮ್ ತಬಲಾ, ತಂಬೂರಿ ಸಿತಾರ್, ತಾವೂಸ್ ದಿಲ್‌ರುಬ ಸಾರಂಗಿ, ಪಿಟೀಲು ಕೊಳಲು ಶ್ರುತಿಪೆಟ್ಟಿಗೆ ಇವೇ ಮುಂತಾದ ಪದಾರ್ಥಗಳು ಸಿಕ್ಕುತ್ತವೆ ಈ ಪದಾರ್ಥಗಳ ಎಂಥಾ ರಿಪೇರಿ ಕೆಲಸವಾದರೂ ಸಹ ಸುಲಭಬೆಲೆಗೆ ಮಾಡಲ್ಪಡುತ್ತದೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ನಮ್ಮ ವಿಳಾಸ —

ಯಂ. ಪುಟ್ಟಯ್ಯ ಅಂಡ್ ಸನ್ಸ್,

ಹಾರ್ಮೋನಿಯಮ್ ಡೀಲರ್ಸ್ ಮತ್ತು ರಿಪೇರರ್ಸ್,

21—7 ಸಯಾಜಿರಾವ್ ರೋಡ್, ಮೈಸೂರು



ಅಮೃತಾಂಜನ್.

ನೋವುಗಳಿಗೆ ಸಿದ್ಧೌಷಧವು

ಎಲ್ಲಾ ಪಾಸ್ತಿಗಳಲ್ಲಿಯೂ ಮಾರಲ್ಪಡುತ್ತೆ

12—9

ಅಮೃತಾಂಜನ್ ಡಿಪೋ,

ಬೊಂಬಾಯಿ ... ಮದರಾಸು

ಮೈಸೂರಿನಲ್ಲಿ ದೊರೆಯುವ ಸ್ಥಳ — ಯೆಸ್. ಕೃಷ್ಣಸ್ವಾಮಿ ಶೆಟ್ಟಿ ಅಂಡ್ ಸನ್ಸ್.

KALAPPAN'S ADVERTISING SERVICES.

Printed and Published by S NANJUNDA SASTRY at Sreenivas Electric Press, Mysore for "Kodagu" Ltd., Mercara—28 10 1921.

REGISTERED No. M. 1550.

ಕೊಡಗು.

ಪ್ರತಿ ಶುಕ್ರವಾರದ ಪ್ರಾತಃಕಾಲ ಪ್ರಕಟಿಸಲ್ಪಡುವುದು.

ಸಂಪುಟ ೧] ಕೊಡಗು, ಸನ್ ೧೯೨೧ ನೇ ಇಸವಿ ನವಂಬರ್ ತಾರೀಖು ೧೧ ನೆಯ ಶುಕ್ರವಾರ. [ಸಂಚಿಕೆ ೨೩

NOTICE.

If you want any kind of English or Kanarese Printing, Please write to:

SREENIVAS ELECTRIC PRESS, MYSORE.

For Sale—ಮಾರಾಟಕ್ಕೆ !!!

ಸುಮಾರು 350 ಎಕರೆ ವಿಸ್ತೀರ್ಣದ ... ಕೇಂಬುಕಜ್ಜಿ ಮತ್ತು ಮರನಂದಿ ತೋಟಗಳು ಮಾರಾಟಕ್ಕೆ ಬಂದಿವೆ.

ಸುಮಾರು 60 ಎಕರೆ ... ಕಾಫಿಯೂ ಬಾಕಿ ಒಳ್ಳೇ ಮೆಣಸು, ರಬ್ಬರ್ ಮತ್ತು ... ಭೂಮಿಗಳೂ ಪ್ರಾಯಶಃ ಇವೆ.

ಈ ವರ್ಷ ಸುಮಾರು ಎರಡು ಟನ್ ಕಾಫಿಯೂ, 200 ಖಂಡಗ ಒಳ್ಳೇ ಮೆಣಸೂ ಸಿಕ್ಕುವ ಅಂದಾಜು ಇದೆ.

ಅಲ್ಲದೆ ಒಂದು ದೊಡ್ಡ ಯೂರೋಪಿಯನರ ಬಂಗ್ಲೆಯೂ ಒಂದು ಚಿಕ್ಕದಾದ ಬಂಗ್ಲೆಯೂ, 5 ಕೂಲಿ ಲೈನುಗಳೂ, ಒಂದು ಪಲ್ಪ ಮನೆಯೂ, ಮತ್ತು ಒಂದು ಸ್ಟೋರೂ ಅದಕ್ಕಿವೆ.

ಕ್ರಯಕ್ಕೆ ಪಡೆಯಲು ಇಚ್ಛಿಸುವವರು ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

ಮ್ಯಾನೇಜರ್

4-2 ಯಮ್ಮೆಗುಂಡಿ ತೋಟ, ಪೊಳ್ಳಿಬೆಟ್ಟ.

COORG TEACHERS' CO-OPERATIVE STORES, Ltd.,

ಕೊಡಗು ಉಪಾಧ್ಯಾಯರ ಕೋ ಅಪರೇಟಿವ್ ಸ್ಟೋರ್ಸ್, ಲಿಮಿಟೆಡ್, ಮಡಿಕೇರಿ.

ಈ ಸ್ಟೋರಿನಲ್ಲಿ ಶಾಲಾ ಪಠ್ಯಪುಸ್ತಕಗಳು, ಸ್ಟೇಷನರಿ ಸಾಮಾನುಗಳು, ಮತ್ತು ಸೊಗಸಾದ ಎಕ್ಸರ್ಸೈಜು ಪುಸ್ತಕಗಳು ದೊರೆಯುತ್ತವೆ. ಕ್ರಯ ಸುಲಭ, ಮಾಲು ಉತ್ತಮ, ಕೊಡಗಿನಲ್ಲಿ ಈ ತರ ಸ್ಟೋರ್ಸ್ ಇದೊಂದೇ. ಮಾಲುಗಳನ್ನು ಕೋರಿದವರಿಗೆ ವಿ. ಪಿ. ಮೂಲಕ ಕಳುಹಿಸಲಾಗುತ್ತೆ. 12-7

SUBBANNA, SANGAPPA,

Receiving and Forwarding Agents, General Merchants and Commission Agents.

Santhepet, Mysore.

Despatch and supply whatever you receive at Mysore Railway Station and whatever food stuffs and Stationaries you want to have from Mysore. Prompt attention, moderate commission and quick disposal are their motto. 24-18

ಮೈಸೂರು ರೈಲ್ವೆ ಸ್ಟೇಷನ್‌ನಿಂದ ನೀವು ಹೊಂದಬೇಕಾದ ಸಾಮಾನುಗಳ ರೈಲ್ವೆ ಪಾವತಿಗಳನ್ನೂ, ಮೈಸೂರಿನಿಂದ ತರಿಸಿಕೊಳ್ಳಬೇಕಾದ ಸಾಮಾನುಗಳ ಪಟ್ಟಿಯನ್ನೂ ಮೈಸೂರು ಸಂತೇಪೇಟೆಯಲ್ಲಿರುವ ಸುಬ್ಬಣ್ಣ ಸಂಗಪ್ಪನವರಿಗೆ ಕಳುಹಿಸಿ. ಅವರು ಜಾಗ್ರತೆಯಾಗಿಯೂ, ಜೋಪಾನವಾಗಿಯೂ, ... ಕಳುಹಿಸುತ್ತಾರೆ. ... ಒಂದು ತಿಳಿಯುತ್ತೆ.

ಓದಿರಿ ಓದಿರಿ!! ಓದಿರಿ!!!

ಮಹಾಮುಷ ಠಕ್ಕಣವರ್ ಗಡಿಯಾರವು.

... ...

ಮದನಸಿಂಹಸಿ ಪಾತ್ರಗಳು.

... ... ಕರಿಯಾಗಿ ... ಮಾಡುವವು.

10 ಪಾತ್ರಗಳುಳ್ಳ ಪಟ್ಟಿ ಕ್ರಯ ರೂ 1—0—0

ವಿ. ಪಿ. ಪ್ಯಾಕಿಂಗ್ ಛಾರ್ಜುಗಳು ಪ್ರತ್ಯೇಕ

ಬೆಟ್ಟ! ಮಗನಟ್ಟ!!

ವೈದ್ಯ ವಿದ್ಯ

ಆಯುರ್ವೇದ ರಹಸ್ಯಭರಿತವಾದ ಈ ಪುಸ್ತಕವು ಆಯುರ್ವೇದ ಗೃಹ್ಯಶಾಸ್ತ್ರವುಳ್ಳವರಿಗೆ ... ಈ ಪುಸ್ತಕವು ರೋಗಿಗಳಿಗೆ ... ಸ್ತ್ರೀಗಳಿಗೆ ಬಾಲಕರಿಗೆ ಉಪಯುಕ್ತ...

ರಾಜವೈದ್ಯ ನಾರಾಯಣಜಿ ಕೇಶವಜಿ,

12-11 27 ... ಮದ್ರಾಸು

ಒಳ್ಳೆಯ ಪುಸ್ತಕಗಳು!! ಬೆಲೆ ಸುಲಭ!!

A. N. C. & Co., Mysore.

ಮಹಾಶಯರೇ—ಪುಸ್ತಕ ... ಬಗೆ ಬಗೆಯ ಕನ್ನಡ ಪುಸ್ತಕಗಳೂ ಇತರ ಸಾಮಾನುಗಳೂ ... ಕನ್ನಡ

ಗ್ರಂಥಕಾರರು ತಮ್ಮ ಪುಸ್ತಕಗಳ ಒಂದೊಂದು ಪ್ರತಿಯನ್ನು ಕಳುಹಿಸಿದರೆ ಅವುಗಳನ್ನು ಅವಲೋಕಿಸಿ ಮಾಡುವುದಲ್ಲದೆ ಒಳ್ಳೆಯ ಪುಸ್ತಕಗಳನ್ನು ಕೊಂಡುಕೊಳ್ಳುತ್ತೇವೆ. ನಾವು ಅನುಮೋದಿಸದ ಪುಸ್ತಕಗಳನ್ನು ಒಂದಕ್ಕೆ ಕಳುಹಿಸಬೇಕಾದಲ್ಲಿ ... ಪುಸ್ತಕಗಳನ್ನು ... ನಾವು ಹೊಸದಾಗಿ ಪ್ರಕಟಿಸುವ—

ಸ್ತೋತ್ರಮಾಲಿಕಾ. ಭಾಗ ೧.

ಎಂಬ ಪುಸ್ತಕವು 1. ಮಂಗಳಾಚರಣೆ, 2. ಪ್ರತಿದಿನೋಪಯುಕ್ತ ಸ್ತೋತ್ರಗಳು, 3. ಪ್ರತಿ ವಾರೋಪಯುಕ್ತ ಸ್ತೋತ್ರಗಳು, 4. ಪ್ರತಿ ಮಾಸೋಪಯುಕ್ತ ಸ್ತೋತ್ರಗಳು, 5. ಇತರ ಉಪಯುಕ್ತ ಸ್ತೋತ್ರಗಳು, ಎಂಬ ಐದು ವಿಭಾಗಗಳನ್ನು ಒಳಗೊಂಡಿದೆ. ಇದರ ಬೆಲೆ 4 ಆಣೆ ಮಾತ್ರ. ಇದನ್ನು ವಿ. ಪಿ. ಮೂಲಕವಾಗಿಯಾಗಲೀ 5 ಆಣೆ ಪೋಸ್ಟಲ್ ಸ್ಟಾಂಪು ಕಳುಹಿಸಿ ಸಾಧಾರಣ ಬುಕ್ ಪೋಸ್ಟು ಮೂಲಕವಾಗಿಯಾಗಲೀ ಪಡೆಯಬಹುದು. ... ತಡಮಾಡಬೇಡಿ!! ... !!! 12-13

"ಮೋಟಾರ್ ಸೈಕಲ್ ಸಿದ್ಧ"

ಒಂದು "ಬಿ. ಯಸ್. ಎ." ಬೈಸಿಕಲ್ ಎರಡು ಸ್ಪೀಡಿನ ಗೇರ್, ಗಂಟೆ, ಹಿಂದಿನ ಮತ್ತು ಮುಂದಿನ ಸಾಮಾನು ಕಟ್ಟುವುದು ಮತ್ತು ನಾನಾ ಸಾಮಾನು ಸಮೇತ ಇರುವ ಬೈಸಿಕಲ್, ಕ್ರಯ ಸುಮಾರು 200—0—0 ರೂ.

ಒಂದು 12 ನೇ ನಂಬ್ರಿನ ಜೋಡಿನಳಿಗೆಯ ತೋಟದ ಕೋವಿ ಪಟ್ಟಿಗೆ, ಸಾಮಾನು ಸಮೇತ ಕ್ರಯ ಸುಮಾರು 50—0—0 ರೂ.

ಇಂಗ್ಲಿಷ್ ತಯಾರಿನ ಒಂದು ಸಣ್ಣ ಕೈ ಕುಂಬಿನಕೋವಿ ಸುಮಾರು 1 200 ಗಜ ಹಾರುವಂಥಾದ್ದು, ಗುಂಡು ಮಾಡುವ ಚಿಲ್ಲೆ ಸಮೇತ ಕ್ರಯ ಸುಮಾರು 100—0—0 ರೂ. ಹೆಚ್ಚಿನ ತನಿಖೆಗೆ ಈ ಕೆಳಗಣ ವಿಳಾಸಕ್ಕೆ ಬರೆಯಿರಿ.

ದಿ ಪ್ರಾಪ್ರೈಟರ್, ಪ್ರೊಪ್ರೈಟರ್,

4-3 ಕೊಡಗು, ಮೋಟಾರ್, ಸರ್ವಿಸ್, ಮಡಿಕೇರಿ.

ನೋಟೀಸ್.

ಜಮಾಸುದಾರರ ಸಂಘ,
ತಾ|| 23-10-21.

ಸನ್ 1921 ನೇ ಇಸವಿ ನವಂಬರು ತಾ|| 11 ನೇ ಸೋಮವಾರ ದಿನ ಮಧ್ಯಾಹ್ನ 12 ಘಂಟೆಗೆ ವೀರರಾಜೇಂದ್ರಪೇಟೆಯಲ್ಲಿ ಈಗ ಕೊಡಗಿಗೆ ಕೊಡಲಿಕ್ಕಿರುವ ಮಸೂರು ಪಾಟುಗಳ ವಿಷಯ ಚರ್ಚಿಸತಕ್ಕ ಬಗ್ಗೆ ಪಾಲಿಕ್ಯಾ ಕಚೇರಿ ಬಳಿ ಒಂದು ವಿಶೇಷವಾದ ಜನರಲ್ ಮೀಟಿಂಗ್ ನಡೆಯುವ ದರಿಂದ ಸದರಿ ದಿನ ಕಾಲಕ್ಕೆ ಸರಿಯಾಗಿ ಎಲ್ಲಾ ಮೆಂಬರು ಗಳು ಬರಬೇಕಾಗಿ ಕೋರುತೇನೆ.

ಮಡಿಕೇರಿ, ಸಿ. ಯಸ್. ವೆಂಕಪ್ಪಯ್ಯ,
23-10-21 ಜನರಲ್ ಸೆಕ್ರೆಟರಿ.

ಬೆಂಕಿಯಿಲ್ಲದ ಒಡವೆಗಳು !!

ಅಂದವಾದ ನಮೂನೆಗಳು !!!

ನಂ 1.



ನಂ 2.



ನಂ 3.



ನಂ 4



ಸ್ತ್ರೀಯರ ಕೈಗಳಿಗೆ ಅಲಂಕಾರವಾಗಿ ಅಂದವಾದ ನಮೂನೆಯಲ್ಲಿ ಘಟ್ಟಿಕರವಾಗಿ ಅಪ್ಪಟ ಚಿನ್ನದಲ್ಲಿ ಯಾವ ಅಳತೆಗೆ ಬೇಕಾದರೂ ಬಳೆಗಳು ತಯಾರಾಗಿ ಸಿದ್ಧವಾಗಿವೆ. ಬೇರೆ ಯಾವ ನಮೂನೆ ಬೇಕಾಗಿದ್ದಾಗ್ಯೂ ತಯಾರಾಗ್ಯಾತಿ ಕೊಡುತ್ತೇವೆ. ಒಂದು ಜತೆ ಬಳೆಗಳು 3 ದಿನ ೬ ಪವುನ್‌ಗಳ ತೂಕದಲ್ಲಿ ತಯಾರಾಗಿ ಮಾಡಲ್ಪಡುತ್ತವೆ.

1, 2 ಮತ್ತು 3 ನೆ ನಂಬರು ಬಳೆಗಳನ್ನು ಮಾಡಲು ಕೂಲಿ ಜತೆ 1 ಕ್ಕೆ 7—0—0 ರೂ. ಮತ್ತು 2 ಆಣೆ ತೂಕ ಬೇಕಾದ 1 ನೇ ನಂ ಬಳೆಗಳನ್ನು ಮಾಡಲು ಕೂಲಿ ಜತೆ 1 ಕ್ಕೆ 6—0—0 ರೂ. ಮತ್ತು 1 ಆಣೆ ತೂಕ ಬೇಕಾದ.

ಬಳೆಗಳಿಗೆ ತಿರುವುಗಳನ್ನು ಹಚ್ಚಬೇಕಾದಲ್ಲಿ ಜತೆ 1 ಕ್ಕೆ 3—0—0 ರೂಪಾಯಿ ಪ್ರತ್ಯೇಕ ಛಾರ್ಜು ಮಾಡಲ್ಪಡುತ್ತೆ. ಆರ್ಡರು ಜತೆಯಲ್ಲಿ ಸರಿಯಾದ ಅಳತೆಯೂ ಮತ್ತು ಕೀಳ್ಕಡಾ 10 ರಷ್ಟು ಮುಂಗಡವೂ ಕಳುಹಿಸಲ್ಪಡಬೇಕು. ಪೋಸ್ಟು ಛಾರ್ಜು ಅವರಾಯಿತು.

52-6 ಇಂಡಿಯನ್ ಜ್ಯುಯಲರಿ ವರ್ಕ್ಸ್, ಪೋಸ್ಟು ಬಾಕ್ಸು ನಂ. 40. ಬೆಂಗಳೂರು ಸಿಟಿ.

ಹೊಸ ಸಂಚಿಕೆ ೨ ಆಣೆ

ಮಂಜೇರಿ

ಮೋಟಾರ್ ಸರ್ವಿಸ್

ಲಿಮಿಟೆಡ್, ಕಲ್ಲಿಕೋಟೆ.

ಈ ಕಂಪೆನಿಯು 1913 ನೇ ಇಸವಿಯ ಕಂಪೆನಿ ಆಕ್ಟಿಗೆ ಅನುಸಾರವಾಗಿ 1921-1922 ನೇ ಇಸವಿಯ ಮೊದಲನೇ ನಂಬ್ರವಾಗಿ 1921 ನೇ ಏಪ್ರಿಲ್ 4 ನೇ ತಾರೀಖಿನಲ್ಲಿ ರಿಜಿಸ್ಟ್ರ ಮಾಡಲ್ಪಟ್ಟು 1921 ನೇ ಮೇ 6 ನೇ ತಾರೀಖಿನಲ್ಲಿ ತಮ್ಮ ಕೆಲಸವನ್ನು ನಡಿಸುವದಕ್ಕೆ ಸಮ್ಮತಿ ಸರ್ಟಿಫಿಕೇಟು ಪಡಕೊಂಡಿರುತ್ತದೆ. ಮೇ 25 ನೇ ತಾರೀಖಿನಿಂದ ಕೆಲಸವನ್ನು ಪ್ರಾರಂಭಿಸಿರುವದು.

ಈ ಕಂಪೆನಿಯ ಮೂಲಧನವು ಮೂರು ಲಕ್ಷ ರೂಪಾಯಿ ಪಾಲುವಂತಿಗೆಯಿಂದ ಸಂಗ್ರಹಿಸಲ್ಪಡಬೇಕು. ಪಾಲು 1 ಕ್ಕೆ 10 ರೂಪಾಯಿಯಂತೆ. ಇದರಲ್ಲಿ ಸದ್ಯಕ್ಕೆ ವಿಕ್ರಯಿಸೋಣಾಗುವ 20,000 ಪಾಲುಗಳಲ್ಲಿ 1540 ಪಾಲುಗಳನ್ನು ಈ ಕಂಪೆನಿಯ ಪ್ರೇರೇಪಕರೇ ಪಡಕೊಂಡಿರುತ್ತಾರೆ.

35660 ರೂಪಾಯಿಯ ಷೇರ್‌ಗಳು 1921 ನೇ ಇಸವಿ ಅಕ್ಟೋಬರ್ 4 ನೇ ತಾರೀಖಿನವರೆಗೆ ಮಾರಲ್ಪಟ್ಟಿರುತ್ತದೆ.

ಕಂಪೆನಿಯ ಉದ್ದೇಶ.

ಮುಖ್ಯವಾಗಿ ತಲಚೇರಿಯಿಂದ ಮಡಿಕೇರಿಗೂ, ವಯನಾಡಿಗೂ, ಮಡಿಕೇರಿಯಿಂದ ಸೋಮವಾರಪೇಟೆಗೂ, ಕಲ್ಲಿಕೋಟೆಯಿಂದ ವಯನಾಡಿಗೂ, ದಕ್ಷಿಣ ಮಲಬಾರಿನಲ್ಲಿರುವ ಮಂಜೇರಿ, ನಿಲಂಬೂರು, ತಿರೂರು ಮೊದಲಾದ ಸ್ಥಳಗಳಿಗೂ ಮೋಟಾರ್ ಬಸ್ ಸರ್ವಿಸ್ ಸ್ಥಾಪಿಸುವದು. ಮತ್ತು ಮೋಟಾರ್‌ಕಾರ್, ಲೋರಿ ಮೊದಲಾದ ವಾಹನಗಳನ್ನು ಓಡ್ಯಾಡಿಸುವದು; ಮೋಟಾರ್ ಬಂಡಿಗಳನ್ನು ರಿಪೇರಿ ಮಾಡುವ ಕಾರ್ಖಾನೆಗಳನ್ನು ಸ್ಥಾಪಿಸುವದು, ಸರ್ವಿಸುಗಳನ್ನು ಏರ್ಪಾಡುಮಾಡುವದು, ಇವೇ ಸಂಘದ ಉದ್ದೇಶಗಳಾಗಿವೆ.

ಕಂಪೆನಿಯಲ್ಲಿ ದೊರಕುವ ಅಂದಾಜು ಆದಾಯ

ಈ ಕಂಪೆನಿಯು ಕ್ರಯಕ್ಕೆ ಪಡಕೊಂಡು ನಡಿಸುತ್ತಿರುವ ಮಂಜೇರಿ ಮೋಟಾರ್ ಸರ್ವಿಸಿನ ಗತಿಸಿದ ಲೆಕ್ಕಾಚಾರಗಳನ್ನು ಪರಿಶೋಧಿಸಿದರೆ, ಕ್ಷೇಮನಿಧಿಗೆ ತಕ್ಕಷ್ಟು ಹಣ ಉಳಿಸಿಟ್ಟು ಸುಮಾರು ಶೇಕಡ 25 ರಂತೆ ಪಾಲುಗಾರರಿಗೆ ಆದಾಯ ಕೊಡಬಹುದಾಗಿದೆಂದು ನಿಶ್ಚಿತವಾಗಿ ಹೇಳಬಹುದು. ಕಾಲಕ್ರಮೇಣ ಇನ್ನಷ್ಟು ಹೆಚ್ಚಿಗೆ ಬಸ್‌ಗಳನ್ನೂ, ಕಾರ್, ಲೋರಿಗಳನ್ನೂ ಓಡ್ಯಾಡಿಸುವದಾದರೆ, ಮೋಟಾರ್ ಕಾರ್ಖಾನೆಗಳನ್ನೂ ಸ್ಥಾಪಿಸುವದಾದರೆ, 100 ಕ್ಕೆ 25 ಕ್ಕಿಂತಲೂ ಹೆಚ್ಚಿನ ಆದಾಯವನ್ನು ನಿರೀಕ್ಷಿಸಬಹುದು.

ವಿಶೇಷ ಪ್ರಯೋಜನಗಳು.

ಬಹಳ ಜಾಗ್ರತೆಯಿಂದಲೂ ಮುತುವರ್ಜಿಯಿಂದಲೂ ತನ್ನ ಕೆಲಸವನ್ನು ಮಾಡಿ ಎಲ್ಲಾ ಕಡೆಯಿಂದಲೂ ಒಳ್ಳೇ ಹೆಸರನ್ನು ಪಡಕೊಂಡ ಮಂಜೇರಿ ಮೋಟಾರ್ ಸರ್ವಿಸನ್ನು ಈ ಲಿಮಿಟೆಡ್ ಕಂಪೆನಿಯು ಪಡಕೊಂಡದಾಗಿರುತ್ತದೆ

ಈ ಕಂಪೆನಿಯ ಕೆಲಸಗಾರರೆಲ್ಲರೂ ಸಮರ್ಥರೂ ಇದರ ಅಧಿಕಾರದಾರರು ಒಳ್ಳೇ ಅನುಭವಶಾಲಿಗಳೂ ಆಗಿದ್ದಾರೆ.

ಈ ಕಂಪೆನಿಯ ಪ್ರವೃತ್ತಿಯಿಂದ ಬರುವ ಆದಾಯವು ಕನಸಿನ ಗಂಟಲ್ಲ ನಿಜವಾಗಿ ಕೈಗಂಟೇ ಆಗಿದೆ. ಇತರ ಕಂಪೆನಿಗಳಲ್ಲಿ ಆದಾಯ ಸಿಕ್ಕುವದಕ್ಕೆ ಮೂರು ನಾಲ್ಕು ವರ್ಷ ಕಾಯಬೇಕಾಗುತ್ತದೆ. ಇದರಲ್ಲಿ ಹಾಗಲ್ಲ. ಷೇರ್ ತೆಗೆದುಕೊಂಡ ಕೂಡಲೇ ಆದಾಯ ಬರುವದು.

ಸರ್ವರಿಗೂ ಅನುಕೂಲವಾಗುವಂತೆ ಒಂದೊಂದು ಪಾಲಿಗೆ 10 ರೂಪಾಯಿ ಮಾತ್ರ ಇಡೋಣಾಗಿದೆ

ಈ ಲಿಮಿಟೆಡ್ ಕಂಪೆನಿಯು ಕಲ್ಲಿಕೋಟೆಯಲ್ಲಿ ಮಂಜೇರಿ ಮೋಟಾರ್ ಸರ್ವಿಸನ್ನು ಇದೇ 1921 ನೇ ಮೇ 25 ನೇ ತಾರೀಖಿನಲ್ಲಿ ಮತ್ತು ತಲಚೇರಿಯ ಮೋಟಾರ್ ಸರ್ವಿಸನ್ನು ಇದೇ ಜೂನ್ 1 ನೇ ತಾರೀಖಿನಲ್ಲಿಯು ಬಡಗಾರ ಮತ್ತು ನಾದಾಪುರ ಸರ್ವಿಸನ್ನು 1921 ನೇ ಆಗಸ್ಟು 8 ನೇ ತಾರೀಖಿನಲ್ಲಿ ಹೊಸದಾಗಿ ಪ್ರಾರಂಭಿಸಿರುವದು.

ಪಾಲು ಬೇಕಾದವರು ಕಂಪೆನಿಯ ಅರ್ಜಿ ಫೋರ್ಮಿನಲ್ಲಿ ಅರ್ಜಿ ಬರೆದು, ತಮಗೆ ಎಷ್ಟು ಪಾಲು ಬೇಕೋ ಅಷ್ಟು ಪಾಲಿಗೆ—ಪಾಲ 1 ಕ್ಕೆ 10 ರೂಪಾಯಿ ಪ್ರಕಾರ ಆಗುವ ಒಟ್ಟು ಹಣವನ್ನು ಅರ್ಜಿಯೊಂದಿಗೆ ಮೇನೇಜಿಂಗ್ ಡೈರೆಕ್ಟರಿಗೆ ಕಳುಹಿಸತಕ್ಕದ್ದು

ಕಂಪೆನಿಯ ನಿಯಮಗಳ ಪ್ರತಿಗಳೂ ಅರ್ಜಿ ಫೋರ್ಮುಗಳು ಕಂಪೆನಿಯ ಆಫೀಸಿನಲ್ಲಿ ದೊರೆಯುವವು.

ಅರ್ಜಿ ಫೋರ್ಮು ಸಿಕ್ಕದಿದ್ದರೆ ಅರ್ಜಿದಾರನು ತನ್ನ ಪೂರ್ಣ ಹೆಸರು, ತಂದೆಯ ಹೆಸರು, ಉದ್ಯೋಗ ಮತ್ತು ಮೇಲ್ವಿಳಾಸ ಇವನ್ನು ಸ್ಪಷ್ಟವಾಗಿ ಬರದು, ಅರ್ಜಿಯನ್ನೂ ತಾನು ಅಪೇಕ್ಷಿಸುವ ಪಾಲುಗಳ ಹಣವನ್ನೂ ಮೇನೇಜಿಂಗ್ ಡೈರೆಕ್ಟರರಿಗೆ ಕಳುಹಿಸಿಕೊಡತಕ್ಕದ್ದು.

ಈ ಕಂಪೆನಿಯ ಸರ್ವಿಸ್ ಈಗ ಕಲಿಕೋಟೆಯಿಂದ ಪುದುಪಾಡಿಗೂ ತಲಚೇರಿಯಿಂದ ಮಾಕೂಟಗೂ ಬಡಗೆರೆಯಿಂದ ನಾದಪುರಕ್ಕೂ ಓಡ್ಯಾಡುತ್ತಿರುವವು.

ಒಳ್ಳೇ ಮೋಟಾರ್‌ಕಾರ್‌ಗಳು ತಲಚೇರಿಯಲ್ಲಿಯೂ ಕಲಿಕೋಟೆಯಲ್ಲಿಯೂ ಬಡಗೆರೆಯಲ್ಲಿಯೂ ಬಾಡಿಗೆಗೆ ದೊರಕುವವು.

1920 ನೇ ಇಸವಿ ಡಿಸೆಂಬರಿನಿಂದ 7 ತಿಂಗಳ ಬಾಬ್ತು ಮಂಜೇರಿ ಮೋಟಾರ್ ಕಂಪೆನಿಯ ಆದಾಯವೆಚ್ಚದ ಪಟ್ಟಿ

ಬಂಡವಾಳ ...	60,000—0—0
ಕಲ್ಲಿಕೋಟೆ ತಲಚೇರಿ ಕ್ರಮಗಳಿಂದ ಉತ್ಪತ್ತಿ ...	48,291—13—0
ಒಟ್ಟು ಖರ್ಚು ಪೆಟ್ರೋಲ್ ಸಾಮಾನುಗಳಲ್ಲಿ .	31,061—7—3
ಏಳು ತಿಂಗಳ ಒಟ್ಟು ನಫೆ ...	17,230—5—9

ಇದರಿಂದ ತಿಂಗಳಿಗೆ 2500 ರೂಪಾಯಿವರೆಗ ನಫೆ ಇದೆ ಎಂದು ಪೂರ್ಣ ತಿಳಿಯುತ್ತೆ.

ಒಂದು ವರ್ಷಕ್ಕೆ 30,000 ರೂ. ನಫೆ. ಇದರ ಪೈಕಿ 15,000 ರೂಪಾಯಿ ಬೇರೆ ರಿಸರ್ವ್ ಫಂಡಿನಲ್ಲಿ ಇಟ್ಟರು ಕೂಡಾ ಶೇಕಡಾ 25 ರಂತೆ ನಫೆ ಸಿಕ್ಕಬಹುದು.

ತಲಚೇರಿ ಸಬ್‌ಕಲೆಕ್ಟರರು ಬರೆಯುವದು ಏನಂದರೆ --

ಆಗಸ್ಟು ತಾರೀಕು 20–27–28 ರಲ್ಲಿ ಕ್ವಿಲಾಂಡಿ ತಮರಚೇರಿ ಕುನ್ನಿಮಂಗಳ ಎಂಬಲ್ಲಿಗೆ ಸರಕಾರಕ್ಕೆ ಉಪಯೋಗವಾಗಿ ಸಿಪಾಯಿಗಳನ್ನು ಕರಕೊಂಡು ಹೋಗಲು ನಿಮ್ಮ ಮೋಟಾರುಗಳನ್ನು ಬಸ್‌ಗಳನ್ನು ಅತಿ ಜಾಗ್ರತೆಯಿಂದ ಕೊಟ್ಟದ್ದು ಸರಿಯಷ್ಟೆ. ನಿಮ್ಮಲ್ಲಿ ಕೆಲಸಮಾಡುವ ಕೆಲಸದವರು ಮತ್ತು ಡ್ರೈವರುಗಳು ಅತಿ ಬುದ್ಧಿವಂತರು, ಮತ್ತು ಪೂರ್ಣ ಶ್ರದ್ಧೆಯಿಂದ ಕೆಲಸಮಾಡುವವರು ಆಗಿರುತ್ತಾರೆ. ಮತ್ತು ಇವರಷ್ಟು ಮುತುವರ್ಜಿಯಿಂದ ಕೆಲಸಮಾಡುವಂಥಾ ಕೆಲಸದವರನ್ನು ಈವರೆಗೆ ಎಂದು ನಾನು ಕಂಡಿಲ್ಲ. ಕಂಪೆನಿಗೆ ಇದಕ್ಕೋಸ್ಕರ ಅತಿ ಕೃತಜ್ಞತೆಯುಳ್ಳವನಾಗಿರುತ್ತೇನೆ.

ಕೊಡಗಿನಲ್ಲಿ ಈಗಲೇ ಸಾವಿರ ಷೇರುಗಳು ಮಾರಲ್ಪಟ್ಟಿರುವವು. ಇವುಗಳ ಪೈಕಿ ಮೆ|| ಕೊರವಂಡ್ರ ಎನ್ ಅಪ್ಪಚ್ಚನವರು (100 ಷೇರುಗಳನ್ನೂ) ಮೆ|| ಕೊಂಗೆಡ ತಿಮ್ಮಯ್ಯನವರು (100) ಮೆ|| ಪಾಂಡಂಡ್ರ ಅಪ್ಪಚ್ಚನವರು (50) ಡಿ. ಸಾಕಮ್ಮನವರು (200) ಮೆ|| ಎಡ್ವರ್ಡ್ ಕೃಷ್ಣರಾಯರೂ, ಮೆ|| ಮುನೆಯಂಡ್ರ ಎಮ್. ಬೆಳ್ಯಪ್ಪನವರೂ ಮೆ|| ಬಸವೈಯ್ಯನ ಸಿದ್ದಪ್ಪಶೆಟ್ಟರೂ, ಮೆ|| ದೊಡ್ಡಮನೆ ನಾರಾಯಣಶೆಟ್ಟರೂ (50) ಆಸ್ಪಿನ್ ಕಂಪೆನಿಯ ಬ್ರೋಕರಾದ ಮೆ|| ಅಬ್ದುಲ್ಲರೂ (100) ವಾಲ್ಕಟ್ ಕಂಪೆನಿಯ ಮೆ|| ಆಬುಬೆಕರೂ (100) ಮೆ|| ಕೊತಂದೇರ ಕುಟ್ಟಯ್ಯನವರೂ, ಮೆ|| ಅಪ್ಪಾರಂಡ್ರ ಅಪ್ಪಚ್ಚನವರೂ ಷೇರುಗಳನ್ನು ತೆಗೆದುಕೊಂಡಿರುತ್ತಾರೆ.

ಇದರಿಂದ ಜನರು ನಮ್ಮ ಕಂಪೆನಿಯನ್ನು ಎಷ್ಟು ಶ್ಲಾಘನೆಮಾಡುತ್ತಾರೆಂಬದು ಪೂರ್ಣ ವ್ಯಕ್ತವಾಗುತ್ತದೆ.

ಜೆ. ನಿಖೊಲಾಸ್,
ಮೇನೇಜಿಂಗ್ ಡೈರೆಕ್ಟರ್,
ಮಂಜೇರಿ ಮೋಟಾರ್ ಸರ್ವಿಸ್ ಲಿಮಿಟೆಡ್,
ಕ್ಯಾಂಪು-ಮಡಿಕೇರಿ

THE

MANJERI MOTOR SERVICE, Ltd.,

CALICUT.

Branches:—

TELLICHERRY AND BADAGARA.

Registered under the Indian Companies Act 1913 as No. 1 of 1921—1922 on the 4th day of April 1921 and prospectus filed on the 6th day of May 1921. Business commenced on the 25th day of May 1921.

AUTHORISED CAPITAL RUPEES THREE LAKHS.

Divided into 30,000 ordinary shares of Rs 10 each payable fully in cash with application of which 20,000 shares are now offered for subscription at par.

1540 shares are taken by the promoters at present.

Rs 35660 worth shares are sold upto 4th October 1921

OBJECTS.

The Company is formed primarily to establish Motor Bus Services between Tellicherry and Mercara and Somwarpet in Coorg Calicut and Coorg, Wynaad in North Malabar, Calicut and Wynaad, Nilambur and Tirur in South Malabar to establish motor work shops for the repair of motor vehicles and for the training up of motor machanics and drivers and for the permanent working up of motor bus service in the conveyance of passengers and goods

ESTIMATED INCOME AND PROSPECTS

It is estimated from a perusal of the accounts of the working of the Manjeri Motor Service which the Company has purchased that the Company would be able to declare a dividend of about 25 per cent after setting aside all reserves for depreciation and reserve fund. As time pass on and more buses and cars and lorries are introduced and more new lines are opened and workshops established a much higher dividend confidently expected and considered feasible.

SPECIAL ADVANTAGES

The Company has purchased the flourishing concern the Manjeri Motor Service which has been exceptionally lucky all along to earn a good name and maintain the prestige and reputation throughout for its punctuality, regularity and respectability required of a motor service to win the confidence of the travelling public

The Company is singulary fortunate in securing the services of choicest workmen and efficient and experienced management.

The Company's lines of business are not at all speculative but are reckoned as sure concerns

The Company is in a position to pay a dividend from the very start.

The Company has already taken charge of the Manjeri Motor Service working at Calicut on the **25th day of May 1921** and that of Tellicherry on the **1st June 1921** and Badagara—Nadapuram line is newly opened on the **8th August 1921.**

Application for shares should be made in the form of application to the Managing Director together with the full cash value of each share

Copies of the Memorandum and Articles of Association and of the Prospectus and forms of application can be had at the Office of the Company

In the absence of application form, the application should clearly state Full name, Permanent address, Father's name, Profession, Present address and should be sent with the full cash value of the shares to the Managing Director

The Company's service now works between CALICUT—PUDUPADI TELLICHERRY MAKKUT, BADAGARA—NADAPURAM Reliable pleasure cars **Reo Hupmobile Overland** driven by experienced hands are always available **for hire.**

SUB-COLLECTOR TELLICHERRY WRITES -

"Just a line to thank you for the promptness with which you placed your two Cars and one Bus at the disposal of Government on the 26th 27th and 28th for moving troops to Quilandy Tamaracherry and Kunnamangalam" etc, etc and concludes "**I never saw more willing workers or more competent drivers than your men.**" This unasked for remarks from the pen of an high official speaks for itself about the merits of the Manjeri Motor Service Ltd., and her staff.

For further particulars apply to—

J. NICHOLAS,
Managing Director
Manjeri Motor Service Ltd.,
Camp—Mercara

"ಕೊಡಗು"

೧೯೨೧ನೇ ಇಸವಿ ನವಂಬರ್ ತಾ|| ೧೧

ಶುಕ್ರವಾರ

ದನಗಳ ಪ್ರದರ್ಶನ.

ಹಿಂದುಗಳು ದನಗಳನ್ನು ಬಹಳ ಪವಿತ್ರವೆಂದು ನಂಬಿ ದೇವರಿಗೆ ಸಮಾನವಾಗಿ ಪೂಜಿಸುತ್ತಾರೆ. ಇದಕ್ಕೆ ಕಾರಣಗಳನೇಕ ಇವೆ. ಹಿಂದೂದೇಶದ ಜನರು ಮುಖ್ಯವಾಗಿ ವ್ಯವಸಾಯಗಾರರಾಗಿರುವುದರಿಂದಲೂ, ಹಾಲು ಮೊಸರು ಬೆಣ್ಣೆಯು ನಮ್ಮ ದೇಹಕ್ಕೆ ಬಹಳ ಆರೋಗ್ಯವನ್ನುಂಟುಮಾಡುವ ವಸ್ತುಗಳಾಗಿರುವುದರಿಂದಲೂ, ದನಗಳು ಸತ್ತರೂ ಅವುಗಳ ಸರ್ವಾಂಗವು ಮನುಷ್ಯನ ಉಪಯೋಗಕ್ಕೆ ಬರುವುದರಿಂದಲೂ, ಈ ದನಗಳು ಪರೋಪಕಾರಕ್ಕಾಗಿಯೇ ಹುಟ್ಟಿ ಬೆಳೆದು ಸತ್ತಲ್ಲಿಯೂ ನಮ್ಮ ಉಪಕಾರವನ್ನು ಮಾಡುವುದರಿಂದ ನಮ್ಮ ಶ್ರೇಷ್ಠದೇವತೆಯಂತೆ ಆ ಗೋವುಗಳನ್ನು ಪೂಜಿಸುವುದು ಹಿಂದುಗಳ ಕರ್ತವ್ಯ. ಪೂರ್ವದಲ್ಲಿ ಹಿಂದೂದೇಶಕ್ಕೆ ಬಂದ ವಿದೇಶೀ ಪ್ರವಾಸಿಗಳಾದ ಆರ್ಯರು ಒಂದು ಕಡೆ ಪರ್ವತ... ... ದನಗಳ ಪಂಕ್ತಿಯನ್ನು ನೋಡಿದುದಾಗಿ ... ... ಓದುವುದರಿಂದ ತಿಳಿಯುತ್ತದೆ.

ಕೊಡಗು ದೇಶವು ದಿನೇ ದಿನೇ ಕ್ಷೀಣಗತಿಯನ್ನು ಹೊಂದಿ, ಜನಸಂಖ್ಯೆಯು ಕಡಿಮೆಯಾಗುತ್ತಾ ಬರುವುದು ಎಲ್ಲರಿಗೂ ವೇದ್ಯವಿದೆಯಷ್ಟೆ. ನಾವು ನಮ್ಮ ಹಟ್ಟಿ ಕೊಟ್ಟಿಗೆಯನ್ನು ಶುಚಿಯಾಗಿಡದೆ ದನಕರುಗಳನ್ನು ಸಾಕುವುದರಲ್ಲಿ ನಾಕಾದಷ್ಟು ತೊಂದರೆ ತೆಗೆದುಕೊಳ್ಳದೆ ಇರುವುದೇ ಇದಕ್ಕೆ ಒಂದು ಮುಖ್ಯ ಕಾರಣವಾಗಿದೆ. ಪತ್ತದೇ ವ್ಯವಸಾಯವಾದುದರಿಂದಲೂ ಈ ವ್ಯವಸಾಯದಲ್ಲಿ ಹಣ ಸಂಪಾದನೆ ಮಾಡಲು ಅವಕಾಶವಿಲ್ಲದಿದ್ದುದರಿಂದಲೂ ಪತ್ತದ ವ್ಯವಸಾಯದಿಂದ ಮನುಷ್ಯನು ನಾಯಿಯಂತೆ ಅನ್ನ ಬಟ್ಟೆಗಳಿಂದ ಬದುಕಬಹುದಲ್ಲದೆ ಅದರಿಂದ ಹೊರತು ಪುಷ್ಟಿಕಾರಿಯಾದ ಸಾಮಾನುಗಳನ್ನು ತಿಂದು ಶರೀರಾರೋಗ್ಯವನ್ನು ಮಾಡಬಹುದೆಂದರೆ ಬಡತನ. ಪೂರ್ವದ ಜನರು ದನಗಳನ್ನು ಸಾಕುವುದರಲ್ಲಿ ಮುಹಸತ್ತುಗಾರರಾಗಿದ್ದುದರಿಂದಲೂ ಪ್ರತಿ ಮನೆಯಲ್ಲಿಯೂ ಅನೇಕ ಕರೆಯುವ ದನಗಳಿದ್ದು, ಹಾಲು ಮೊಸರು ಬೆಣ್ಣೆಗೆ ಯಾವ ತರದ ತೊಂದರೆಗಳೂ ಇಲ್ಲದ್ದರಿಂದ ಕಾಯಪುಷ್ಟಿಯುಳ್ಳವರಾಗಿದ್ದರು. ಎಲ್ಲಾ ಡಾಕ್ಟರುಗಳೂ ಹಾಲು ಮೊಸರು ಬೆಣ್ಣೆಯು ಶರೀರಕ್ಕೆ ಅತ್ಯಂತ ಪ್ರಯೋಜನವುಳ್ಳ ಪುಷ್ಟಿಕಾರಿಯಾದ ಪದಾರ್ಥವೆಂದು ಹೇಳಿರುತ್ತಾರೆ. ಯಾವಾಗ ನಮ್ಮ ದೇಶದಲ್ಲಿ ಈ ವಾಗ್ಯಕ್ಕೆ ಕಡಿಮೆಯಾಯಿತೋ ಅಂದಿನಿಂದ ದೇಶವು ಹೀನಸ್ಥಿತಿಗೆ ಬರುತ್ತಾ ಇದೆ. ಇಂಥಾ ಸ್ಥಿತಿಯು ಇನ್ನು ಪ್ರಬಲಿಸದ ಹಾಗೆ ಫ್ರೇಜರ್‌ಪೇಟೆಯಲ್ಲಿರುವ ಕೆಲವು ಮಹನೀಯರು ಎರಡು ವರ್ಷದಿಂದೀಚೆಗೆ ದನಗಳ ಪ್ರದರ್ಶನವನ್ನು ತೆರೆದದ್ದು ಸ್ತೋತ್ರಾರ್ಹವಾಗಿದೆ.

ಈ ಪ್ರದರ್ಶನದಿಂದ ಜನರ ಮನಸ್ಸಿನಲ್ಲಿ ಎಲ್ಲರೂ ಸಾಕಬಹುದಾದ ದನಗಳನ್ನು ಸಾಕಬೇಕೆಂಬ ಕುತೂಹಲವು ಹುಟ್ಟುತ್ತದೆಯಲ್ಲದೆ ಒಳ್ಳೆ ಜಾತಿಯ ದನಗಳಾವುವೆಂಬುದನ್ನು ನೋಡಿ ... ... ಅವುಗಳನ್ನು ಕೊಂಡುಕೊಳ್ಳಲು ಬಹಳ ಅನುಕೂಲಗಳಿವೆ. ಫ್ರೇಜರ್‌ಪೇಟೆಯು ಒಳ್ಳೆ ಜಾತಿಯ ದನಗಳಿಗೆ ... ... ಇಲ್ಲಿಯ ಜುಲ್ಲು ... ... ದನಗಳನ್ನು ಸಾಕಲು ಇಷ್ಟವುಳ್ಳವರು ಇಲ್ಲಿ ... ... ಕರೆ ಜಾಗಗಳನ್ನು ಕ್ರಯಕ್ಕೆ ಕೊಂಡುಕೊಂಡು ... ಏರ್ಪಾಡು ಮಾಡಬಹುದು.

ದನಗಳನ್ನು ಸಾಕುವುದರಿಂದುಂಟಾಗುವ ಪ್ರಯೋಜನವನ್ನು ಚೆನ್ನಾಗಿ ಅರಿತರೆ ವರ್ಷ ಒಂದಕ್ಕೆ ಲಕ್ಷಾನುಲಕ್ಷ ರೂಪಾಯಿ ದನಕರುಗಳನ್ನು ಕೊಂಡುಕೊಂಡು ... ... ಕೊಂಡರೂ ನಮ ಈ ... ... ಹಿಂದಿನ ... ... ಭಾಗದವರು ... ... ನಾಲ್ಕುನಾಡು ... ... ಬ್ರೋಕಿನವರು ಇಂಥಾ ಪ್ರದರ್ಶನಕ್ಕೆ ಬಾರದೆ ತಮ್ಮ ಅಭಿವೃದ್ಧಿಯು ದನಕರುಗಳಲ್ಲೇ ಇದೆಯೆಂದು ತಿಳಿದರೂ ಕೂಡ ಕಣ್ಣು ತೆರೆಯದೆ ಇರುವುದು ಶೋಚನೀಯವಾಗಿದೆ.

ಇನ್ನಾದರೂ ದನಗಳೇ ಹಿಂದುಗಳಾದ ನಮ್ಮ ಸರ್ವ ಅಭಿವೃದ್ಧಿಗೆ ಮೂಲಾಧಾರವೆಂದೂ ದನಗಳು ಕ್ಷೀಣಗತಿಗೊಂದಲಾಗೆಲ್ಲಾ ನಮ್ಮ ದೇಶವೇ ಹೀನಸ್ಥಿತಿಗೆ ಬರುವುದೆಂದು ತಿಳಿದು ಫ್ರೇಜರ್‌ಪೇಟೆಯಲ್ಲಿ ನಡೆಯುವ ದನಗಳ ಪ್ರದರ್ಶನವನ್ನು ಪ್ರೋತ್ಸಾಹಿಸಬೇಕಾಗಿ ... ಎಲ್ಲರೂ ತಾವು ... ... ನಾಡು ದನಗಳನ್ನು ತಂದು ಪ್ರದರ್ಶನಕ್ಕೆ ಇಡಬೇಕಾಗಿಯೂ, ಸಾಧ್ಯವಾದರೆ ವಿರಾಜಪೇಟೆಯಲ್ಲಿ ಇನ್ನೊಂದು ಪ್ರದರ್ಶನವನ್ನು ತೆರೆದು ತಮ್ಮ ಅಭಿವೃದ್ಧಿಯಲ್ಲಿ ತಾವು ... ... ತರಾಗಿರಬೇಕೆಂತಲೂ ಕೋರುತ್ತೇವೆ.

ಮಡಿಕೇರಿ ಹೈಸ್ಕೂಲು.

ನವಂಬರು ತಾರೀಖು 7 ರಿಂದ 17 ರವರೆಗೆ ಮಡಿಕೇರಿ ಹೈಸ್ಕೂಲನ್ನು ಮುಚ್ಚುತ್ತಾರೆ. ಬೋರ್ಡಿಂಗಿನ ಹುಡುಗರಲ್ಲಿ ಎರಡುವರೆ ಹುಡುಗರಿಗೆ ಅಂದರೆ ... ... ಇದಕ್ಕೆ ಕಾರಣವು ಕಾವೇರಿ ಸಂಕ್ರಮಣದ ಎರಡುವಾರದ ರಜವು ವರ್ಗಸ್ತರಾನೆ ತೀರಿತ. ಒರುವ ತಿಂಗಳಲ್ಲಿ ಪುತ್ತರಿ ಹಬ್ಬದ ರಜ ಸಾಲದುದಕ್ಕೆ ಕ್ರಿಸ್ಮಸ್ ಹಬ್ಬದ ರಜವು ಬಂದರೆ ನಂತರ ಒಂದು ಹಿಂಸೆ ... ಅಂದರೆ ಕಡಿಮೆಯು ಅಂಟುರೋಗನಾಗಿದ್ದುವೆಂದೇ ... ... ಈ ... ... ಅಷ್ಟೇನೂ ದೋಷವನ್ನುಂಟುಮಾಡುವಂಥಾದ್ದಲ್ಲ. ಹೈಸ್ಕೂಲಿನ ಮುಖ್ಯವಾಗಿ ಈ ವರ್ಷವೇ ... ... ಮೆಟ್ರಿಕ್ ಪರೀಕ್ಷೆಗೆ ಹೋಗತಕ್ಕಂಥ ಸ್ಕೂಲ್ ಫೈನಲ್ ಕ್ಲಾಸಿನ ವಿದ್ಯಾರ್ಥಿಗಳಿಗೆ ಸಮಯವು ಚಿಕ್ಕದ್ದಕ್ಕಿಂತ ಅಮೂಲ್ಯವಾಗಿರುವಂಥ ಈ ವೇಳೆಯಲ್ಲಿ ಸ್ಕೂಲಿಗೆ ರಜ ಬಿಟ್ಟುದ್ದು ನೋಡಿದರೆ ಇದು ... ... ಯುಕ್ತವಲ್ಲವೆಂದೆನಿಸದೇ ಹೋಗುತ್ತದೆ. ರಜೆಯಾದರೂ ಕೂಡ ವಿದ್ಯಾರ್ಥಿಗಳು ಮಡಿಕೇರಿಯಲ್ಲಿಯೇ ಇದ್ದುಕೊಂಡು ಓದಬಹುದೆಂದರೆ ಉಳಕೊಳ್ಳಲು ತಕ್ಕ ಸ್ಥಳವಿಲ್ಲದೆ ಅನೇಕರು ಅತ್ತಿತ್ತ ಅಲೆದಾಡಿ ನಾಡು ಮನೆಗಳಿಗೆ ಹೋದರು. ನಾಡಿಗೆ ಹೋದವೇಳೆ ಅವರು ಅಲ್ಲಿ ಓದುವದು ಅಷ್ಟರಲ್ಲೇ ಇದೆ. ... ... ಶಾಲೆ ಮುಚ್ಚಿ ಹೋಗಿದ್ದರೆ ... ... ಅನೇಕರಿಗೆ ... ... ವಿಪರೀತ ತೋರದೆಯಿರುವುದಿಲ್ಲ. ... ... ಯೋಚಿಸಿ ಅಧಿಕಾರಿಗಳು ... ... ಬೇಕೆಂದು ಬೇಡಬಹುದು. ... ... ದೂರದ ಪ್ರತ್ಯೇಕ ಸ್ಥಳದಲ್ಲಿಯಾಗಲೀ ಆಸ್ಪತ್ರೆಯಲ್ಲಿ ಒಂದೊಂದು ... ... ತಕ್ಕ ಉಪಚಾರಗಳನ್ನು ಮಾಡಿದರೆ ... ... ಕಡಿಮೆಯಾ ... ... ಹುಡುಗರಿಗೆ ... ... ರಜ ಕೊಟ್ಟಿರುತ್ತಾರೆ. ... ... ಒಂದು ... ... ಕಡಿಮೆಯು ತಲೆದೋರಿ ... ... ಸ್ಕೂಲಿನಲ್ಲಿ ಬೇರೆ ಕೆಲವು ಮಕ್ಕಳಿಗೆ ... ... ಮಕ್ಕಳಿಗೆ ರಜೆ ಕೊಟ್ಟಿರುವರು. ... ... ಸ್ಕೂಲಿಗೆ ರಜವಾಯಿತು. ಹುಡುಗರಿಗೆ ಕಲಿಯಲು ಸಮಯವಲ್ಲಿ? ಪರೀಕ್ಷೆಯ ಫಲಿತಾಂಶವು ... ... ವಿದ್ಯಾರ್ಥಿಗಳು ... ... ಹೋದದರಿಂದಲೇ ಅವರು ನೋಡುವರು ... ... ಉಪಾಧ್ಯಾಯರೂ ತಂದೆತಾಯಿಗಳೂ ... ... ವಿದ್ಯಾರ್ಥಿಗಳನ್ನು ... ... ಕೂಡ ಅಂಥ ಅಧಿಕಾರಿಗಳ ... ... ? ಮಕ್ಕಳ ... ... ನ್ನುಂಟುಮಾಡುವ ... ... ಸಂಗತಿಯು ... ... ಸಂಪಾದಿಸಿದ ಹಣವನ್ನು ... ... ಓದಿಸಲಿಕ್ಕೆ ಕಳುಹಿಸಿರುವಂಥ ತಂದೆತಾಯಿಗಳಿಗೆ ... ... ಯನ್ನೂ ಉಂಟುಮಾಡದೆ ಇರಲಾರದು.

ಪಂಚಮ ಹನುಮ.

... ... ಕಳೆದ ಪತ್ರಿಕೆಯಲ್ಲಿ ... ... ಓದಿದರೆ ಉತ್ತಮ ಮನಸ್ಸಿನ ... ... ತೆಗದುಕೊಳ್ಳದೆ ಇರಲಾರರು.

ಈ ಕಥಾ ನಾಯಕನಾದ ಹನುಮನು ... ... ಗ್ರಾಮದಲ್ಲಿ ಹುಟ್ಟಿದವನು. ... ... ಮತ್ತು ಕಾಲುಗಳಿಲ್ಲ ... ... ಇಲ್ಲದವನಿಗೆ ... ... ವಿಷಯವೇ ಈ ... ... ಅನೇಕ ಸಂಗೀತಗಾರರ ... ... ಸಂಗೀತ ಕೀರ್ತನೆ ನಾಟಕದ ಹಾಡುಗಳನ್ನು ಹಾಡುವುದರಲ್ಲಿ ಅದ್ವಿತೀಯನು. ಈ ... ... ಅಂಗಹೀನನಾದ ... ... ಕನ್ನಡ ನಾಟಕ ಸಂಗೀತ ... ... ಕೀರ್ತಿಯನ್ನು ಹೊಂದಿದ ಮೆ| ... ... ಹಾಡುವ ತರದ ಸ್ವರಗಳನ್ನು ... ... ಅದೃಷ್ಟಹೀನನಾದ ಪಂಚಮನಿಗೆ ಕಲಿಸಿಕೊಟ್ಟಿರುವರು.

ಇಂಥಾ ಪಾಂಡಿತ್ಯವನ್ನು ... ... ಸಂಪಾದನ ಮಾಡಿದ ಈ ... ... ದೇಶದವರೆಲ್ಲರೂ ಪ್ರೋತ್ಸಾಹಿಸಿ ... ...

ಕರಾಚಿ ಮೊಕದ್ದಮೆ ವಿಚಾರದಲ್ಲಿ ಜಡ್ಜಿಯವರು ಜ್ಯೂರಿಗೆ ಹೇಳಿದ ಭಾಷಣದಿಂದ.

ಖಿಲಾಫತ್ ಕಮಿಟಿಗಳಲ್ಲಿ ಕೆಲಸಮಾಡಿದ್ದಕ್ಕಾಗಿ ಮಹಮ್ಮದ್ ಅಲಿ ಷೌಕತ್ ಅಲಿ ಮೊದಲಾದವರಮೇಲೆ ಕೇಸ್ ನಡಿಸಿದ್ದೆಂತ ನೀವು ಯೋಚಿಸಕೂಡದು. ಮಲಬಾರಿನಲ್ಲಿ ನಡೆದ ವಿಷಾದಕರವಾದ ಅತ್ಯಾಚಾರಗಳಿಗೆ ಇವರು ಮೂಲಕಾರಣರೆಂಬುದಕ್ಕೆ ಒಂದು ಅಣುಮಾತ್ರವಾದರೂ ರುಜುವಾತು ನಮ್ಮ ಮುಂದೆ ಇಲ್ಲ. ಸಿಪಾಯಿಗಳನ್ನು ತಮ್ಮ ಕೆಲಸ ಬಿಡುವಂತೆ ಬೋಧಿಸಿದರೆಂಬ ಆಪಾದನೆಗಾಗಿಯೇ ಈ ಮೊಕದ್ದಮೆ ನಡೆಯುವದಾಗಿದೆ. ಅಪರಾಧಿಗಳಮೇಲೆ ಅವರ ಗುಣಾಸ್ತಿತ್ವಗಳನ್ನು ಯೋಚಿಸಿ ನೀವು ಕನಿಕರತೋರಿಸಬಾರದು. 1921ನೇ ಇಸವಿ ಡಿಸೆಂಬರ್ ಜನ್ವರಿಗೆ ತಾನು ಕೇಳುವ ಕೆಲವು ... ... ಕ್ಷೇಮಕರ ಷೌಕತ್ ಅಲಿಯವರು ಹದರಿಸಿದರು. ಅಂಥಾ ಅಪರಾಧಿಗಳು ತಪ್ಪುದಾರರೆಂತ ನಿಶ್ಚಯವಾದರೆ ಅಂಥಾ ಬೆದರಿಕೆಗಾಗಿ ಅವರನ್ನು ಬಿಡಕೂಡದು. ಯಾಕೆಂದರೆ ನಮಗೆ ಅದರಿಂದ ನಾವು ಒಂದೇ ಕೊಂಚ ಭಯವಿಲ್ಲ. ನಮ್ಮ ಆಯುಷ್ಯದ ... ... ಷೌಕತ್ ಅಲಿಯವರಿಗಾಗಲೀ ಅವರ ... ... ಕೆಲವು ಅಪರಾಧಿಯರ ಬಹು ವಿಶ್ವಾಸಪಾತ್ರರಾದ ದೇಶಭಕ್ತರಾಗಿಯೂ ಇದ್ದಾರೆ. ಅವರು ನ್ಯಾಯವಾದ ದಾರಿಯಲ್ಲಿ ನಡೆದಿದ್ದರೆ ನಾವೂ ಅವರಿಗೆ ತುಂಬಾ ಗೌರವ ಕೊಡುತ್ತಿದ್ದೆವು. ಅವರು ಸಮಶಾಂತದ ದಾರಿಯಿಂದ ನಡೆದಿದ್ದರೆ ಇಸ್ಲಾಮಿಗೂ ಈ ದೇಶಕ್ಕೂ ಬಹಳ ಪ್ರಯೋಜನವಿರುತ್ತಿತ್ತು. ಅಪರಾಧಿಗಳು ... ... ದೊಡ್ಡದೊಡ್ಡ ಉದ್ಯೋಗಗಳಲ್ಲಿಯಾಗಲೀ ... ... ಇರಲು ಯೋಗ್ಯರಾಗಿದ್ದಾರೆ. ... ... ಅವರು ದೇಶದ ... ... ಆದರೆ ಅವರನ್ನು ... ... ಸಾಧ್ಯವಿಲ್ಲ. ... ... ಅವರ ಗೌರವವನ್ನು ... ... ಕೆಲವರಿಗೆ ... ... ಆದರೆ ಮೊದಲನೆ ... ... ಕಡಿಮೆಯಾಗಿ ... ... ಈ ವಿಷಯದಲ್ಲಿ ಯಾವ ಅಭಿಪ್ರಾಯವಿದ್ದರೂ ಈ ಕೇಸಿಗೆ ಸಂಬಂಧಿಸಿಕೊಳ್ಳಬಾರದು. ವಿಕ್ಟೋರಿಯ ರಾಣಿಯವರ 1857ನೇ ಇಸವಿಯ ಪ್ರಕಟಣೆಯಮೇರೆ ಮತಸಂಬಂಧ ವಿಷಯಗಳಿಗೆ ಅವರ ಸರಕಾರವು ... ... ಕಡಿಮೆಮಾಡುವದಿಲ್ಲ. ಅಂಥಾ ಪ್ರಕಟಣೆಗಳಿಗೆ ... ... ವಿರೋಧವಾಗಿಲ್ಲವೆಂತಲೇ ... ... ಸಂಗತಿಯಾಗಿದೆ. ಇಂಡಿಯಾದೇಶದಲ್ಲಿರುವ ... ... ಕೆಲಸಗಳನ್ನೆಲ್ಲಾ ... ... ದೇಶದಲ್ಲಿ ಶಾಂತಿ ... ...

ವರ್ತಮಾನ ಸಂಗ್ರಹ.

ಒಳದೇಶ.

ತಾ|| 7 11 21 ರಲ್ಲು ಮಡಿಕೇರಿಯಲ್ಲಿ ... ... ಒಂದು ... ... ನಡೆಯಿತು.

... ... ಇಂಜಿನಿಯರಾದ ಮೆ|| ... ... ಮತ್ತು ಅವರ ... ... ಮೆ|| ನಾಲಂದಿರ ... ... ಒಂದೂವರೆ ತಿಂಗಳವರೆಗೆ ಮಡಿಕೇರಿಯಿಂದ ... ... ಹೋಗಿರುತ್ತಾರೆ.

... ... ಲೈಸನ್ಸು ಇಲ್ಲದೆ ... ... ಮಾಡಿದಕ್ಕಾಗಿ ಅವನಿಗೆ 60 ರೂ ಜುಲುಮಾನೆ ಅದನ್ನು ... ... ವಿಧಿಸಲ್ಪಟ್ಟಿದ್ದರಲ್ಲಿ ... ...

... ... ಮೆ| ... ... ಡಿ| ಮೇಜಿಸ್ಟ್ರೇಟ್ ಕೋರ್ಟಿನ ಶಿರಸ್ತೆಗಾರ ... ... ಮೆ|| ಕೋಡಿರ ... ... ತಿರುತ್ತಾರೆ.

ಮೆ|| ... ... ಡಿ|| ಮೆ| ಕೋರ್ಟಿನ ... ... ಚಾರ್ಜು ತೆಗೆದುಕೊಳ್ಳುವದಕ್ಕಿಂತ ಮುಂಚೆಯೇ ನಾಲ್ಕು ತಿಂಗಳು ಪ್ರಿವಿಲೇಜ್ ರಜ ಮತ್ತು ... ... ಪಡಕೊಂಡಿರುತ್ತಾರೆ. ಇವರಿಗೆ ಈ ... ... ಸ್ವಲ್ಪಸಮಾಧಾನಕರವೆ. ... ... ಅಧಿಕಾರಿಗಳಿಗೆ ಅರ್ಜಿ ... ... ತಿಳಿಯುವದು. ಸಂತೋಷಕರವೆ.

ಪಾಡಿ ಎಡೇನಾಲ್ಕುನಾಡ ತಾಲ್ಲೋಕು ಸಬೇ ದಾರ್ ಮೇಜಿಸ್ಟ್ರೇಟರವರ ಕಛೇರಿ ನೋಟೀಸುಗಳಿಗೆ ತಾ॥ 31-10-1921 ರಲ್ಲು ಒಂದು ದೊಡ್ಡ ಕಟ್ಟುಹಾವು (ಬಳೆ ಮುರಿ) ಇತ್ತಂತೆ. ಇದು ಏನೋ ಅಶುಭಸೂಚನೆ ಎಂದು ಎಲ್ಲರೂ ಹೇಳುತ್ತಾರೆ. ಈ ಹಾವು ಇದ್ದುದರ ಸೂಚನೆಯ ನ್ನು ಬಲ್ಲವರು ಕಪಸೀಲ್ ಬರಿಯಬೇಕಾಗಿ ಒಬ್ಬ ಪೇಶಾಧ ಮಾನಿಯು ಕೇಳಿರುತ್ತಾರೆ.

* * *

ಅಬ್ಕಾರಿ ಸಬ್ ಇನ್ಸ್‌ಪೆಕ್ಟರಾಗಿರುವ ಮೆ॥ ಒಂಬತ ಸುಬ್ಬಣ್ಣನವರು ಸರ್ಕಿಟಿನಲ್ಲಿರುವಾಗ ಶಾಂಡನಹಳ್ಳಿ ಗ್ರಾಮದ ಒಬ್ಬ ಶಿವಾಚಾರದವರ ಮನೆಯಲ್ಲು ಮನೆಯ ಯಜಮಾನನ ಇಂಬಿದೆಗೆ ವಿರೋಧವಾಗಿ ಅಡಿಗೆಮಾಡಿ ಮದ್ಯ ಮಾಂಸವನ್ನು ತಂದು ಆಚರಿಸಿರಾದುದರಿಂದಲೂ ಆ ಮನೆಯವರು ಸುಬ್ಬಣ್ಣನವರಮೇಲೆ ಕ್ರಿಮಿನಲ್ ಮೊಕದ್ದಮ್ಮೆ ಮಾಡಿ ರುವದಾಗಿ ತಿಳಿಯಬರುತ್ತದೆ.

* * *

ತಾ॥ 28-10-21 ರಲ್ಲು ಮೆ॥ ಅಬ್ದುಲ್ ಗಫೂರ್ ಖಾನ್ ರವರು ಮಡಿಕೇರಿ ಮಾರ್ಕೆಟಿನಬಳಿ ಸ್ವದೇಶಿಬಟ್ಟೆ ಸಿಪಾ ನಿಷೇಧ, ಪರಸ್ಪರ ಸಹಾಯ ಮೊದಲಾದವುಗಳ ವಿಷಯ ಒಂದು ಭಾಷಣವನ್ನು ಮಾಡಿ ಒಡೆದು ಹೋದನಂತರ ಕಸ ಗುಂಡಿಗೆ ಬಿಸಾಡುವಂತ ಗಲೀಜಿನ ಸಾಮಾನುಗಳಿಗಾಗಿ ಹಣ ವೆಚ್ಚಮಾಡುವದಕ್ಕಿಂತ ಬಿಮೂಲ್ಯವಾದ ಚಿನ್ನವನ್ನೇ ಗಳಿಸಿ ಡಿರಿ ಎಂದು ಜನರಿಗೆ ಅರಿಕೆಮಾಡಿಕೊಂಡರು.

* * *

ಕೋಟೆಕೂರು ಗ್ರಾಮದ ಅಕ್ಕಂಡ ಎಸ್ಟೇಟ್ ಪ್ಲಾಂ ಟರ್ ಮೆ॥ ಕೊಡಂದೇರ ಪೂದಪ್ಪನವರು ಜಮಾನ್ದಾರ ಸಭೆಯ ನಿರ್ಣಯವನ್ನು ಶಿರಸಾವಹಿಸಿ ದೇಶದ ಅನೇಕ ಮಹನೀಯರ ಉದಾರತ್ವವನ್ನು ತಿಳಿದ ನಿಷಧಾರಿಗಳ ಕಷ್ಟವನ್ನು ಉದ್ಧರಿಸುವ ಉದ್ದಿಶ್ಯ ಅಂದಾಜು ಏದ ನೂರು ರೂಪಾಯಿಗೆ ಮೇಲ್ಪಟ್ಟ ಉಟ್ಟ್ನಾವಳಿ ಉಳ್ಳ ತಮ್ಮ ಹಿತ್ತಲಿನ ಬೈನೆ ಮರಗಳಿಂದ ಕಳ್ಳು ಇಳಿಸದಂತೆ ಮನ್ನಿಸಿದ್ದು ಸಂತೋಷಕರವಾದ ಸಂಗತಿಯಾಗಿದೆ.

* * *

ಕೊಡಗಿನಲ್ಲಿ ಪೊಲೀಸ ಸಬ್ ಇನ್ಸ್‌ಪೆಕ್ಟರಾಗಿದ್ದು ಇದಕ್ಕೆ ರಾಜೀನಾಮೆ ಕೊಟ್ಟು ಬಡುಗರ ಹೊಂದಿ ಬೇರೆ ಕಡೆಯಿಗೆ ಹೋದಂಥ ಮೆ॥ ಅಟ್ರಂಗಳ ಚಿಣ್ಣಪ್ಪನವರು ಈಗ ತಿರುಚನಾಪಳ್ಳಿಯಲ್ಲಿ ದಿ ಎನ್ ಸೈಕ್ಲೋ ಪಿಡಿಯಾ ಷೈರೆಕ್ಟರಿ ಕಂಪೆನಿಯ ಇನ್ಸ್‌ಪೆಕ್ಟರಾಗಿ ನೇಮಿಸಲ್ಪಟ್ಟಿರುತ್ತಾರೆ. ಇವರಿಗೆ ಮಾಹೆಯಾನ ಒಕ್ಕಯವಲ್ಲದೆ 175 ರೂ. ಸಂಬಳವು ದೊರೆಯುತ್ತದೆ. ಕೂಪ ಕೂರ್ಮದಂತೆ ನಮ್ಮ ದೇಶದಲ್ಲಿಯೇ ಇರದೆ ಬೇರೆ ಪ್ರಾಂತ್ಯಗಳಿಗೆ ಹೋಗುವದರ ಫಲಿತಾಂಶವಲ್ಲವೇ ಇದು.

* * *

21 ನೇ ಸಂಚಿಕೆಯಲ್ಲು ವಿದ್ಯಾರ್ಥಿಗಳ ಹಿತಚಿಂತಕರೊಬ್ಬರು ವಿದ್ಯಾರ್ಥಿಗಳು ಹೋಟೇಲಿನ ವಿಷಯ ಬರೆದ ಬರಹ ಯನ್ನು ನೋಡಿ ಒಬ್ಬ ವಿದ್ಯಾರ್ಥಿಯು ತಿಳಿಸುವದೇನೆಂದರೆ ಬೋರ್ಡಿಂಗ್ ಮನೆಯಲ್ಲು ಇರುವ ಹುಡುಗರು ಮಧ್ಯಾಹ್ನ 12½ ಘಂಟೆಗೆ ಊಟಮಾಡಿ ಸಾಯಂಕಾಲ 8 ಘಂಟೆಯವರೆಗೆ ಹಾಗೆ ಇರುವದು. ಇದಕ್ಕೆ ತಕ್ಕ ಏರ್ಪಾಡು ಗಳು ಮಾಡದರೆ ಹೋಟೇಲುದೇವಿಯ ದರ್ಶನ ನಿಲ್ಲುವದೇ ಇಲ್ಲವೆಂ ತ್ತಾನೆ. ಬೋರ್ಡಿಂಗಿನ ಅಧಿಕಾರಿಗಳು ಇದಕ್ಕೆ ಕಿಕ್ಕ ಏರ್ಪಾಡು ಏಕೆ ಇಡಬಾರದು?

* * *

ಪಾಡಿ ಎಡೇನಾಲ್ಕುನಾಡು ಸುಬೇದಾರರಾಗಿರುವ ಮೆ॥ ಮುಂಡೇಪಂಡ ಮಂದಣ್ಣ ಅವರು ಅಲ್ಲವಾರಗಳವರೆಗೆ ಮಡಿಕೇರಿಗೆ ಬಂದಿರುತ್ತಾರೆ. ಇಲ್ಲಿ ಇವರು ಸವುಗ ಸಿಕ್ಕಬಹುದಾದ ನ್ಯಾಯವಿಧಾಯಕ ಸಭೆಯ ರೂಲ್ಸುಗಳ ಸಂಬಂಧ ಕೆಲಸಮಾಡಲು ಸೆಕ್ರೆಟರಿಯಾಗಿ ಬಂದಿರುವದಾಗಿ ತಿಳಿಯುತ್ತೇವೆ. ಇವರ ಗೈರ್ ಹಾಜರಿನಲ್ಲಿ ವೀರರಾಜಪೇಟೆ ನಾಡಿನ ಪಾರುಪತ್ಯಗಾರರಿಗೆ 3 ನೇ ಕ್ಲಾಸ ಮೇಜಿಸ್ಟ್ರೇಟ್ ಅಧಿಕಾರ ಕೊಟ್ಟಿರುವದಾಗಿಯೂ ವೀರರಾಜಪೇಟೆ ಮುನಿಸೀಫರು 2 ನೇ ಕ್ಲಾಸ್ ಮೇಜಿಸ್ಟ್ರೇಟರ ಕ್ರಿಮಿನಲ್ ಕೇಸುಗಳನ್ನು ವಿಚಾರಿಸುವದಾಗಿಯೂ ಕೇಳುತ್ತೇವೆ.

* * *

ಶ್ರೀಮಂಗಲನಾಡಿಗೆ ಸೇರಿದ ಬಿರುನಾಣಿನಲ್ಲು ಕನ್ನಡ ಲೋಕಲ್ ಫಂಡ್ ಶಾಲೆಗಳು ಮೂರುನಾಲ್ಕು ಇದ್ದರೂ ಇಂಗ್ಲೀಷು ಶಾಲೆಯಿಲ್ಲದೆ ಇದ್ದದರಿಂದ ಈ ನಾಡಿಗೆ ಸೇರಿದ ಬಿರುನಾಣಿ ಗ್ರಾಮದಲ್ಲು ಒಂದು ಬಾಷಲ್ ಮಿಷನ್ ಇಂಗ್ಲೀಷ್ ಸ್ಕೂಲ್ ಈಗ 5-6 ವರ್ಷದ ಹಿಂದೆ ಇಟ್ಟಿರುವದು ನಮ್ಮ ಗಳ ಭಾಗ್ಯವೆಂತಲೂ ಈಗ ಅಲ್ಲಿ ಹೆಡ ಮಾಸ್ಟರಾಗಿರುವವರು ಸುತ್ತಮುತ್ತಲ ಜನರಿಗೆ ಬೋಧನೆಯಿಂದ "ಬಾಲ ವಿದ್ಯಾವರ್ಧಕ ಸಂಘ" ವೆಂಬ ಒಂದು ಸಂಘವನ್ನು ಸ್ಥಾಪಿಸಿರುತ್ತಾರೆಂತಲೂ ಇದಕ್ಕೆ ಧನಸಹಾಯ ಕಡಿಮೆಯಿಂದ ಕಷ್ಟವಾಗಿರುವದರಿಂದಲೂ, ಇದನ್ನುದ್ಧರಿಸಲು ಈ ನಾಡಿನವರೆಲ್ಲರ ಸಹಾಯ ಕೋರುವೇವೆಂದೂ ಒಬ್ಬರು ತಿಳಿಸುತ್ತಾರೆ.

* * *

ಈ ತಾ॥ 6 ನೇ ರಾತ್ರಿ ಮಡಿಕೇರಿ ಹೈಸ್ಕೂಲಿನ ಹಾ ಲಿನಲ್ಲು ಯಂಗ್‌ಮೆನ್ಸ್ ಕ್ಲಬ್ಬಿನವರು ನಾಟಕ ಪ್ರದರ್ಶಿಸಿದ್ದು ಅವರಿಗೆ ಯಾವತ್ತೂ ಸಹಾಯ ಮಾಡಿದವರಿಗೆ ವಂದನೆ ಗಳನ್ನು ಅರ್ಪಿಸುತ್ತಾರೆ. ಇದರಲ್ಲಿ ಖರ್ಚಾಗಿ 59 ರೂ ಮಿಗತೆಯಾಗಿದೆಯೆಂತಲೂ ಮಾರಿದ ಟಿಕೇಟುಗಳ ಬಾಕಿ ಹಣವು ನೂರು ರೂಪಾಯಿ ಬರಲಿಕ್ಕಿದೆಯೆಂತಲೂ ನಮ್ಮ ಮುಂದಾಳುಗಳಾಗಿರುವ ವೃದ್ಧ ಶರೀಕರು ಟಿಕೇಟುಗಳನ್ನು ತೆಗೆದುಕೊಂಡಿದ್ದರೂ ಈಗ ಅವರ ಪೈಕಿ ಮೆ॥ ಕೆ ಮಂದಣ್ಣನವರಲ್ಲದೆ ಬೇರೆ ಯಾರೂ ಹಣ ಕೊಡದೆ ಯೌವನಸ್ಥ ಸಹಾಯ ಕಾರ್ಯಗಳಿಗೆ ಉತ್ತೇಜನ ಕೊಡಲು ಹಿಂಜರಿಯುವದು ಬಹಳ ವ್ಯಸನಕರವಾದ ಸಂಗತಿಯಾಗಿದೆ ಎಂತಲೂ ಒಬ್ಬ ಹಿತಚಿಂತಕರು ಬರೆಯುತ್ತಾರೆ.

* * *

ಫಾರೆಸ್ಟು ಕನ್ಸರ್ವೇಟರಾದ ಮೆ॥ ಬೆನಟರವರು ವರ್ಗವಾಗಿ ಹೋಗುವದರಿಂದ ಕೊಡಗಿನಲ್ಲಿರುವ ಯೂರೋಪಿಯನ್ ಉದ್ಯೋಗಸ್ಥರು ಒಂದು "ಬಾಲ್" ನ್ನು ತಾ॥ 7 ರಲ್ಲು ಮಡಿಕೇರಿಯಲ್ಲಿ ಮಾಡಿದರು. ಕೋಟೆಯೊಳಗೆ ಇರುವ ಪೋಲೀಸ್ ಮತ್ತು ಪ್ರಿಂಟಿಂಗ್ ಆಫೀಸಿನಲ್ಲು "ಬಾಲ್" ಅಟವು ಬಹು ಸಂಭ್ರಮದಿಂದ ನಡೆಯಿತು. ಅನೇಕ ಯೂರೋಪಿಯನ್ ಪ್ಲಾಂಟರುಗಳೂ ನೆರೆದಿದ್ದರು. ಸುಮಾರು ಮೂರುಸಾವಿರ ರೂಪಾಯಿ ಖರ್ಚಾಯಿತೆಯಂತೆ. "ಬಾಲ್" ಆಟಕ್ಕೆ ಮುಂಚೆ ಎರಡುಮೂರು ದಿವಸ ಮಡಿಕೇರಿಯ ಪೋಲಿಸ್ ಇಲಾಖೆಯವರಿಗೆ ಪುರುಸತ್ತೇ ಇರಲಿಲ್ಲ. "ಬಾಲಿ" ನ ದೆಸೆಯಿಂದ ಪ್ರಿಂಟಿಂಗ ಮತ್ತು ಪೋಲೀಸ್ ಆಫೀಸುಗಳಿಗೆ ಕಳೆದ ಸೋಮವಾರ ರಜೆ ಇತ್ತು.

* * *

ಕೊಡಗು ಹಾಕಿ ಟೂರ್ನಮೆಂಟ್—(1) ಪುಲಿಯಂಡ ಮತ್ತು ಪೊನ್ನಂಪೇಟೆ ಟೀಮುಗಳು ಆಡಿದಲ್ಲು ಪೊನ್ನಂಪೇಟೆ ಟೀಮೂ (2) ಯಂಗ್‌ಮೆನ್ಸ್ ಕ್ಲಬ್ ಮತ್ತು ಹೈಸ್ಕೂಲು 2 ನೇ ಟೀಮುಗಳ ಪೈಕಿ ಹೈಸ್ಕೂಲು 2 ನೇ ಟೀಮೂ (3) ವೀರರಾಜಪೇಟೆ ಮತ್ತು ಮಹಾದೇವಪೇಟೆ ಟೀಮುಗಳ ಪೈಕಿ ಮಹಾದೇವಪೇಟೆ ಟೀಮೂ (4) ಎಲಿಮೆಂಟರಿ ಮತ್ತು ಹೈಸ್ಕೂಲು 1 ನೇ ಟೀಮುಗಳ ಪೈಕಿ ಹೈಸ್ಕೂಲು 1 ನೇ ಟೀಮೂ (5) ಬಾಲಸಮಾಜ ಮತ್ತು ಫಾರೆಸ್ಟು ಟೀಮುಗಳ ಪೈಕಿ ಬಾಲಸಮಾಜ ಟೀಮೂ (6) ಪೊಲೀಸು ಮತ್ತು ಪೊನ್ನಂಪೇಟೆ ಟೀಮುಗಳ ಪೈಕಿ ಪೊನ್ನಂಪೇಟೆ ಟೀಮೂ ತಾ॥ 7 ರ ವರೆಗೆ ಹಾಕಿ ಪಂದ್ಯಾಟಗಳಲ್ಲಿ ಜಯವನ್ನು ಹೊಂದಿವೆ. ಬಾಕಿ ಪಂದ್ಯಾಟಗಳು ಇನ್ನು ನಡೆಯಲಿಕ್ಕಿವೆ. ಪೊಲೀಸು ಮತ್ತು ಪೊನ್ನಂಪೇಟೆ ಟೀಮುಗಳೂ ಆಡುತ್ತಿರುವಾಗ ಮೆ॥ ಕುಟ್ಟಂಡ್ರ ಸುಬ್ಬಯ್ಯನವರ (ಪೈಸಣ) ಮೂಗಿನ ಭಾಗಕ್ಕೆ ಜಾಡಿನ ಬಲವಾದ ಪೆಟ್ಟು ತಗಲಿ ಕೆಳಗೆ ಬಿದ್ದು ಸ್ವಲ್ಪ ಹೊತ್ತು ಸಂಕಟಪಟ್ಟರು. ಹಾಕಿ ಆಡುವವರೆ, ಮುನ್ನೆಚ್ಚರಿಗೆ ಮಕ್ಕಳೇ ಬಲು ಎಚ್ಚರಿಕೆಯಲ್ಲಿರಿ!

ಹಿಂದೂದೇಶ.

ಮದರಾಸ್ ಕಾರ್ಪೊರೇಶನಿನ ಅಧ್ಯಕ್ಷರಾಗಿ ಪುನಃ ಮೆ॥ ತ್ಯಾಗರಾಜಚೆಟ್ಟಿಯವರನ್ನೇ ಚುನಾಯಿಸಿರುತ್ತಾರೆ.

* * *

ಕ್ಷೇತ್ರದಲ್ಲಿ ಒಬ್ಬ ಸಂನ್ಯಾಸಿಯು ತನ್ನ ಸ್ನೇಹಿತನ ಪತ್ನಿಯನ್ನು ಯಾರಿಗೂ ತಿಳಿಯದ ಹಾಗೆ ಕರೆದುಕೊಂಡು ಹೋದದಕ್ಕಾಗಿ ಅವನಿಗೆ ಮೂರು ತಿಂಗಳು ಕಠಿಣ ಸಜಾ ಆಯಿತಂತೆ.

* * *

ಕಲ್ಕತ್ತ ಪಟ್ಟಣದಲ್ಲಿ ಟ್ರಾಮ್ ವೇ ಯಲ್ಲಿ ಕೆಲಸಮಾಡುವ ಕೂಲಿಗಾರರು ತಮ್ಮ ಕೆಲಸವನ್ನು ಬಿಟ್ಟು ಹಟಮಾಡಿದ ಪಿಕ್ಕೆಟ್ಟಿಂಗ ಕೆಲವರನ್ನು ಹಿಡಿದು ಸೆರೆಹಿಡಿಯಲ್ಪಟ್ಟಿರುವರು.

* * *

ಕಲ್ಕತ್ತಾಪಟ್ಟಣದಲ್ಲಿ ಹಾಜರಿಗೆ ಬಿದ್ದ 300 ಅರ್ಜಿಗಳು ಪಟ್ಟಿ ಮಾಡಲ್ಪಟ್ಟಿರುವವು. ಮಾತ್ರ ಪಟ್ಟಿಗೆ ಬಂದರ 4315 ರೂ ಗಳ ಸ್ವಾಧೀನ ಮಾಡಲ್ಪಟ್ಟವಂತೆ. ಬಾಕಿಯನ್ನು ಮುಂದಕ್ಕೆ ತೆಗೆಯಲಿಲ್ಲ.

* * *

ಪೂನಾ ನಗರದ ಫೆರ್ಗ್ಯುಸನ ಕಾಲೇಜಿನಲ್ಲಿ 25 ವರ್ಷಗಳಿಂತ ಹೆಚ್ಚು ಕೆಲಸ ಮಾಡುತ್ತ ಇತ್ತಲಾಗೆ ಪ್ರಿನ್ಸಿಪಲರಾಗಿದ್ದ ಮಹಾಪುರುಷರಾದ ಪಟವರ್ಧನ ರವರು ಅಕ್ಟೋಬರ ತಾ॥ 26 ರಲ್ಲಿ ಸ್ವರ್ಗಸ್ಥರಾದರು.

* * *

ಮದರಾಸು ಅಧಿಪತ್ಯದ ಜಿಲ್ಲೆಗಳಲ್ಲಿ ಬಿ. ಎ. ಪಾಸಾಗಿರುವ ಗುಮಾಸ್ತರಿಗೆ 15 ರೂಪಾಯಿಗಳನ್ನೂ ಮುನ್ಸಿಪಟ್ಟಣವಾದ ಮದ್ರಾಸಿನಲ್ಲಿ 30 ರೂಪಾಯಿಗಳನ್ನೂ ಕೊಡಬಹುದೆಂದು ಸರಕಾರದವರು ಏರ್ಪಾಟು ಮಾಡಿಯಿತ್ತಾರೆ.

* * *

ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸರವರು ಬೊಂಬಾಯಿಗೆ ಈ ತಾರೀಖು 17 ರಲ್ಲು ಬಂದು ತಲಪುವರು. ಇವರ ಸ್ವಾಗತಕ್ಕಾಗಿ ಹಿಂದೂದೇಶದಲ್ಲಿ ಸುಮಾರು 90 ಲಕ್ಷ ರೂಪಾಯಿಯು ವೆಚ್ಚವಾಗುವದೆಂದು ಅಂದಾಜಾಗಿದೆ.

* * *

ಎರಡುವರ್ಷ ಕಠಿಣಸಜ ವಿಧಿಸಲ್ಪಟ್ಟಿರುವಂಥ ಡಾಕ್ಟರ್ ಕಿಚ್ಲೂರವರು ಜೈಲಿನಲ್ಲಿ ತನ್ನನ್ನು ಇದ್ದ ಸರಾಯಿಯ ಚೆಡಾವುಗಳ ಹಾಕಲಿಕ್ಕೆ ಬರಗೆ ಹೋದರೆ ಆಹಾರಗಳನ್ನು ಬಿಟ್ಟು ಉಪವಾಸವಿರುವದಾಗಿ ತೀರ್ಮಾನಿಸಿ ಕೊಂಡಿರುತ್ತಾರೆ.

ಕರಾಚಿ ಮೊಕದ್ದಮ್ಮೆಯಲ್ಲಿ ಅಲಿ ಸಹೋದರರುಗಳು ಮತ್ತು ನಾಲ್ಕು ಜನರಿಗೆ 117 ಮತ್ತು 505 ಐ. ಪಿ. ಸಿ ಸೆಕ್ಷನ್‌ಗಳ ಪ್ರಕಾರ ಎರಡುವರ್ಷ ಕಠಿಣಸಜ ವಿಧಿಸಲ್ಪಟ್ಟಿದೆ. ಶ್ರೀ ಶಂಕರಾಚಾರ್ಯರು ತಪ್ಪೇನೂ ಇಲ್ಲವೆಂದು ಬಿಡುಗಡೆಯಾಗಿರುತ್ತಾರೆ.

* * *

ಅಹ್ಮದಾಬಾದಿನಲ್ಲಿರುವ 50 (ಮಿಲ್ಸ್) ಮಗ್ಗಗಳಲ್ಲಿ ಕೆಲಸಮಾಡುವ ಪೈಕಿ 8 ರಲ್ಲಿ ಕೆಲಸಮಾಡುವವರು ಮಾತ್ರ ಕೆಲಸವನ್ನು ನಿಲ್ಲಿಸಿರುತ್ತಾರೆ. ಮದನಮೋಹನ ಮಾಳವೀಯರವರು ಇವರನ್ನು ಸಮಾಧಾನಪಡಿಸುತ್ತ ಅವರ ತಕರಾರನ್ನು ತೀರಿಸುತ್ತಿರುವರು.

* * *

ಪ್ರಿನ್ಸ್ ಆಫ್ ವೇಲ್ಸರವರು ಹಿಂದೂದೇಶಕ್ಕೆ ದಯಮಾಡಿಸುವಾಗ ಬೇರಾರ್ ದೇಶವನ್ನು ಹೈದರಾಬಾದ್ ನೈಜಾಮರವರಿಗೆ ಮರಳಿ ಕೊಡುತ್ತಾರೆಯೆಂದು ವದಂತಿ ಇದೆ ಯಂತೆ. ಹೀಗೆ ಬೇರಾರಿನವರು ಪುನಃ ನೈಜಾಮರ ಆಳಿಕೆಗೆ ಒಳಪಟ್ಟರೆ ಅವರಿಗೆ ಕಷ್ಟ ಸಂಭವಿಸುವದೆಂದೂ ಅದ್ಭುತ ಹೇನರೆಂದೂ ಮದ್ರಾಸಿನ "ಹಿಂದೂ" ಪತ್ರಿಕೆಯು ಬರೆದಿರುವದು.

* * *

ಕರಾಚಿ ಕೇಸಿನ ವಿಚಾರ ಸಮಯದಲ್ಲು ಈ ಸರಕಾರವನ್ನು ನಾಶಪಡಿಸಿ ಸ್ವರಾಜ್ಯ ಪಡೆಯುವದೇ ನಮ್ಮ ಉದ್ದೇಶವೆಂದೂ, ಸಮಾಧಾನದಲ್ಲಿ ಪ್ರಯತ್ನಿಸಿ ನವೆಂಬರ, ಡಿಶಂಬರ, ಅವೈರೊಳಗೆ ಸ್ವರಾಜ್ಯ ಸಿಕ್ಕದೆಹೋದರೆ ನಂತರ ದಂಗೆ ಮುಂತಾದ ಅಸಮಾಧಾನದ ದಾರಿಯಿಂದಲಾದರೂ ಸ್ವರಾಜ್ಯವನ್ನು ಪಡೆಯಲು ಹಿಂಜರಿಯುವದಿಲ್ಲವೆಂತಲೂ ಮೌಲಾನ ಶೌಕತಾಲಿಯವರೂ ಮತ್ತು ಡಾ॥ ಕಿಚ್ಲೂರವರೂ ಹೇಳುವರು.

* * *

ಪ್ರತಿ ಪ್ರಾಂತ್ಯದ ಕಾಂಗ್ರೆಸ್ ಕಮಿಟಿಗೆ ಯುಕ್ತವಾಗಿ ತೋರಿದಂತೆ ಕಂದಾಯವನ್ನು ಕೊಡದೆ ಪದ್ಧತಿಯಾಗಿ ಸರಕಾರದವರಿಗೆ ಅವಿಧೇಯತ್ವವನ್ನು ತೋರಿಸಬಹುದೆಂತಲೂ ಹಾಗೆ ಮಾಡುವದಕ್ಕೆ ಮುಂಚೆ ಪ್ರತಿಯೊಬ್ಬನು ಅಸಹಕಾರದ ಪ್ರತಿಯೊಂದು ಶರತ್ತಿಗೆ ಅನುಸಾರವಾಗಿ ನಡೆದಿರುವವನಾಗಿರಬೇಕೆಂದೂ ಮಹಾತ್ಮ ಗಾಂಧಿಯವರು ತಂದ ಠರಾವು ನವಂಬರು 4 ರಲ್ಲು ಡೆಲ್ಲಿಯಲ್ಲಿ ನಡೆದ ಹಿಂದೂದೇಶದ ರಾಷ್ಟ್ರೀಯಸಭೆಯ ಕಮಿಟಿ ಮೀಟಿಂಗಿನಲ್ಲಿ ಮಂಜೂರಾಗಿದೆ.

* * *

ಚಕ್ರವರ್ತಿಯವರಿಗೆ ವಿರೋಧವಾಗಿ ಯುದ್ಧಮಾಡಿದಕ್ಕೆ ಮತ್ತು ಪ್ರೈವೇಟ ವಿಲ್ಲಿಯಮ್ಸರನ್ನು ಕೊಂದದಕ್ಕಾಗಿ 11 ಜನ ಮಾಪಿಳ್ಳೆಯವರ ಪೈಕಿ ಅಲಿ ಮುಸ್ಲಿಯಾರ್ ಮತ್ತು ಹನ್ನೆರಡು ಜನರನ್ನು ನೇಣಿಗೆ ಹಾಕುವಂತೆಯೂ ಬಾಕಿಯವರನ್ನು ಸೀರಿಸಮೇಲೆ ಕಳುಹಿಸುವಂತೆಯೂ ಅವರ ಆಸ್ತಿಯೆಲ್ಲವು ಗವರ್ನಮೆಂಟಿನ ಸ್ವಾಧೀನವಾಗುವಂತೆಯೂ ಶಿಕ್ಷೆ ವಿಧಿಸಲಾಗಿದೆ. ಮೂರು ಮೈಸರುಗಳ ವಿಷಯದಲ್ಲು ಕರುಣೆಯನ್ನು ದಯಪಾಲಿಸುವಂತೆ ಕೋರ್ಟ್ ಸರಕಾರದವರನ್ನು ಕೇಳಿರುತ್ತದಂತೆ.

* * *

ಹಿಂದೂದೇಶಕ್ಕೆ ಯುವರಾಜರ ಭೇಟಿಯು ಹಿಂದೂದೇಶದವರ ಅಭಿಲಾಷೆಗೆ ವಿರೋಧವಾಗಿರುವದರಿಂದಲೂ, ಈ ಭೇಟಿಗೆ ಮುಂಚೆ ಮುಂದಾಳುಗಳಾದ ಅನೇಕ ದೇಶೀಯರನ್ನು ಸೆರೆಯಲ್ಲಿಟ್ಟಿರುವದರಿಂದಲೂ ಹಿಂದೂದೇಶದಲ್ಲಿ ಅನೇಕ ಮಿಲಿಯ ಜನರು ಹೊಟ್ಟೆಗೆ ಅನ್ನವಿಲ್ಲದೆಯೂ ಮೈಗೆ ಬಟ್ಟೆ ಇಲ್ಲದೆಯೂ ಇರುವಾಗ ಲಕ್ಷಾಂತರ ರೂಪಾಯಿ ಭೇಟಿಗಾಗಿ ಖರ್ಚುಮಾಡುವದು ನ್ಯಾಯವಲ್ಲವಾದುದರಿಂದಲೂ ಹಿಂದೂದೇಶದಲ್ಲಿ ಯಾರೂ ಯುವರಾಜರ ದರ್ಶನದಬಗ್ಗೆ ನಡೆಯುವ ಸಂಭ್ರಮಗಳಿಗೆ ಯಾವದಕ್ಕೂ ಸೇರಬಾರದೆಂದೂ ಅವರಿಗೆ ಯಾವ ಕೆಡಕನ್ನು ಉಂಟುಮಾಡಬಾರದೆಂದೂ ಮಹಾತ್ಮ ಗಾಂಧಿಯವರು ಎಲ್ಲರಲ್ಲಿಯೂ ಅರಿಕೆ ಮಾಡಿ ಕೊಂಡಿರುತ್ತಾರೆ.

* * *

ಲಾರ್ಡ ಸಿಮ್ಹರವರು ಲಾರ್ಡ ರೊನಾಲ್ಡ್‌ಶೆಯವರ ಹೋಗ ಬಳಿಕ್ಕೆ ಬಂಗಾಳ ಪ್ರಾಂತ್ಯದ ಗವರ್ನರು ಆಗುತ್ತಾರೆಂತಲೂ ಸರ್ ಎಡ್ವಿನ್ ಮಾಂಟೆಗ್ಯುರವರು ಒರಿಸ್ಸಾ ಬೀಹಾರಿನ ಗವರ್ನರಾಗುವರೆಂತಲೂ "ಕೇಪಿಟಲ್" ಪತ್ರಿಕೆಯು ಬರೆದ ವರ್ತಮಾನವು ಸುಳ್ಳೆಂದು ಹೇಳಲಿಕ್ಕೆ ಒಳ್ಳೇ ಕಾರಣಗಳಿವೆ ಎಂದೂ ಲಾರ್ಡ ಸಿನ್ಹರವರು ವಾಕ್ಸರವರ ಹೇಳಿಕೆಯಂತೆ ಒರುವ ವರ್ಷ ಉದ್ಯೋಗದಿಂದ ನಿವೃತ್ತಿ ಹೊಂದುವ ಅವಶ್ಯ ತೋರುತ್ತದೆಂತಲೂ, ಕನಿಷ್ಠ ಮೂರು ಹಿಂದೂದೇಶೀಯರು ಲಾರ್ಡ ಸಿಮ್ಹರವರ ಪದಕ್ಕೆ ಬರುವ ಕ್ರಮವಾಗಿದ್ದಾರೆಂತಲೂ ಒಂದು ವೇಳೆ ಸರ್ ಎ॥ ಆರ್ ಮ್ಯಾಕ್ ಬೆಗೋರ್ ಎಂಬವರು ಬಂಗಾಳದ ಗವರ್ನರಾಗಲಿಕ್ಕಾಗ ಬಹುದೆಂದು "ಬಂಗಾಳಿ" ಪತ್ರಿಕೆಯು ಸೂಚಿಸುತ್ತದೆ.

ವಿದೇಶ.

ಕಬೂಲ್ ದೇಶದ ಮಹಾರಾಜರು ಹಿಂದೂಸ್ಥಾನಕ್ಕೆ ನವಂಬರ್ 18 ರಲ್ಲಿ ಬರುತ್ತಾರೆಯಂತೆ.

ಯುವರಾಜರು "ರಿನವ್ವನ್" ಎಂಬ ಹಡಗಿನಲ್ಲಿ ಮಾಲ್ಟಾ ದ್ವೀಪದಿಂದ ತಾ|| 3-11-21 ರಲ್ಲು ಇಂಡಿಯಾಕ್ಕೆ ಹೊರಟಿರುತ್ತಾರೆ

*
* *

ಜರ್ಮನಿ ದೇಶದವರು ತಾವು ಮಾಡಿದ ಹಾವಳಿಗಾಗಿ ಕಳೆದ ಸೆಪ್ಟಂಬರು ೩೦ ರ ವರೆಗೆ ಮಿತ್ರರಿಗೆ ನಾಲ್ಕು ನೂರು ಮಿಲಿಯ ಪೌನುಗಳನ್ನು ಕೊಟ್ಟಿರುತ್ತಾರೆಂದು ತಿಳಿಯ ಬರುತ್ತದೆ.

*
* *

ಅಮೇರಿಕದ ಸಂಯುಕ್ತ ಸಂಸ್ಥಾನದಲ್ಲಿ ನೀಗ್ರೋ ಜನರಿಗೆ ರಾಜಕಾರ್ಯದಲ್ಲಿ ಹೆಚ್ಚಿನ ಹಕ್ಕನ್ನು ಕೊಡಬೇಕೆಂದು ಪ್ರೆಸಿಡೆಂಟರಾದ ಹಾರ್ಡಿಂಗ ದೊರೆಗಳು ಒಂದು ಭಾಷಣದಲ್ಲಿ ಹೇಳಿರುತ್ತಾರೆ

*
* *

ಇಂಗ್ಲೆಂಡಿನ ಪಾರ್ಲಿಮೆಂಟಿನವರು, ಆ ದೇಶದ ಕೂಲಿ ಜನರಿಗೆ ತಕ್ಕ ಎಲಿಪೆನ್ಸು ಕೊಡದೆ ಹೋದದ್ದಕ್ಕಾಗಿ ಕೂಲಿಜನರಿಗೆ ಸಹಾಯಕರಾದ ಡೇ-ರ. ಮೆಂಬರುಗಳೆಲ್ಲ ಪಾರ್ಲಿಮೆಂಟು ಸಭೆಯಿಂದ ಹೊರಗೆ ಹೋಗಬಿಟ್ಟರಂತೆ

*
* *

ಕೆನಡ ದೇಶದ ಮಂತ್ರಿಯವರ ಮೆ|| ಶ್ರೀನಿವಾಸ ಶಾಸ್ತ್ರಿಯವರನ್ನು ಕೆನಡಕ್ಕೆ ಬರಬೇಕೆಂದು ಕೇಳಿರುತ್ತಾರೆ ಶಾಸ್ತ್ರಿಯವರು ಅಮೇರಿಕದಲ್ಲಿ ಕಪ್ಪ ದೇಶ ಕೆಲಸಗಳು ತೀರಿದ ನಂತರ ಕೆನಡಕ್ಕೆ ಬರುತ್ತೇನೆಂದು ಜವಾಬು ಕೊಟ್ಟಿರುವರು.

*
* *

ಮದ್ರಾಸ ಹೈಕೋರ್ಟಿನಲ್ಲಿ ಮುಖ್ಯ ನ್ಯಾಯಾಧಿಪತಿಯಾಗಿ ಮೆ|| ವಾಲ್ಟರ್ ಸಾಲ್ಟ ಸ್ಮಿತ್, ಕೆ. ಸಿ ಎಂಬವರನ್ನು ರಾಜರು ನೇಮಿಸಿರುತ್ತಾರೆ ಈಗ ಮುಖ್ಯ ನ್ಯಾಯಾಧಿಪತಿಯಾಗಿರುವ ಮೆ|| ವಲಿಂಗ ರವರನ್ನು ಮೈಸೂರು ದೇಶದ ಮುಖ್ಯ ನ್ಯಾಯಾಧಿಪತಿಯಾಗಿ ನೇಮಿಸುವ ವರ್ತಮಾನವಿದೆ.

*
* *

ಪರದೇಶದ ಬಟ್ಟೆಗಳನ್ನು ಬಹಿಷ್ಕಾರಮಾಡಬೇಕೆಂಬುವ ಗಾಂಧಿಯವರ ಬೋಧನೆಯನ್ನು ಇನ್ನೂ ಹೆಚ್ಚು ಜನರು ಕೈಕೊಂಡಿರುವದಿಲ್ಲವೆಂದೂ ಹಾಗೆ ಕೈಕೊಂಡ ಪಕ್ಷದಲ್ಲಿ ಅದರ ವಿಷಯ ತಕ್ಕ ವಿಚಾರಗಳನ್ನು ಇಂಡಿಯಾ ಸರಕಾರದವರು ಮಾಡುವರೆಂದೂ ಮೆ|| ಮಾಂಟಿಗ್ಯೂರವರು ಪಾರ್ಲಿಮೆಂಟಿನಲ್ಲಿ ಹೇಳಿರುವರು

*
* *

ಗ್ರೀಕರಿಗೂ ತುರ್ಕಿಯವರಿಗೂ ಉಂಟಾಗುವ ಸಂಧಿಯಲ್ಲು ಮಾರ್ಚಿ 16 ರಲ್ಲು ಕಾನ್‌ಸ್ಟಾಂಟಿನೋಪಲ್ ಹೇಂಬ ರಿನವರು ಕೇಳಿರುವ ಶರತ್ತುಗಳನ್ನು ಒಪ್ಪಬೇಕೆಂದು ಗ್ರೀಕರನ್ನು ಯುದ್ಧದಿಂದುಂಟಾದ ನಷ್ಟವನ್ನೆಲ್ಲಾ ಗ್ರೀಕಿನವರೆ ಕೊಡಬೇಕೆಂದೂ ಅಂಗೋರ ಸರಕಾರದವರು ತೀರ್ಮಾನಿಸಿರುವ ಶರತ್ತುಗಳನ್ನು ಮ ಸ್ಟಾಫ ಕೇಮಲವರು ಪ್ಯಾರಿಸ್ ಮತ್ತು ರೋಮಿನಲ್ಲಿರುವ ಅವರ ಪ್ರತಿನಿಧಿಗಳಿಗೆ ತಿಳಿಸಿರುತ್ತಾರೆ.

ಮಕ್ಕಳ ಉಪಾಧ್ಯಾಯ.

ಮಕ್ಕಳ ತರಗತಿಗೆ ಉಪಾಧ್ಯಾಯನಾಗಬೇಕಾದರೆ ಯಾವ ವಿದ್ಯಾ ಪರಿಪೂರ್ಣತೆ ಇರಬೇಕೆಂದರೇ—ಸುಮಾರಾದ ಮೊದಲ ಗುಣಗಳಿದ್ದರ ಸಾಕೆಂದು ಬಹಳ ಜನರು ಪ್ರತಿಪಾದಿಸುತ್ತಿರುವರು ಎಲ್ ಟಿ ಪದವಿಯವರು ಮಕ್ಕಳ ತರಗತಿಯನ್ನು ತಾಗದುಕೊಂಡರೆ ತರಗತಿಯು ಉದ್ಧಾರವಾಗಬೇಕೆಂದು. ಹೇಳುವುದು ಧಡತನವಾದ ಮಾತಲ್ಲ ಯಾರಿನಲ್ಲಿ ಮಕ್ಕಳ ಹೃದಯ, ಮಕ್ಕಳನ್ನು ಹೆತ್ತ ತಾಯಿಯ ಹೃದಯ, ಸಹಜವಾಗಿ ಕೋಮಲಸ್ವಭಾವವಾದ ಹೆಂಗಸರ ಹೃದಯ ಹೀಗೆ ಮೂರುಗುಣಗಳು ಅಡಕವಾಗಿವೆಯೋ ಅತನೇ "ಕಿಂಡರಗಾರ್ಟನ" ಉಪಾಧ್ಯಾಯ ಯಾರಿನ ಲ್ಲಿಗೆ ಮಕ್ಕಳಲ್ಲಿ ಪ್ರೇಮವಿಲ್ಲವೋ ಅತನು ಉಪಾಧ್ಯಾಯನಿಗೆ ಅರ್ಹನು ಯಾವಾತನಿಗೆ ಹುಡುಗಾಟದಿಂದ ಕೋಪವೋ ಅತನು ಉಪಾಧ್ಯಾಯನಾಗಲಾರನು ತರಗತಿಯು ಉದ್ಧಾರವಾಗಬೇಕಾದರೆ ಉಪಾಧ್ಯಾಯನಲ್ಲಿ ವಿ ಷಿ ಮಿ ವಿಶೇಷಗುಣಗಳಿರಬೇಕು (1) ಮಕ್ಕಳೊಡನೆ ಪ್ರೀತಿ (2) ಮಕ್ಕಳ ಮನಸ್ಸಿನ ತಿಳುವಳಿಕೆ (3) ಧೈರ್ಯ ಮಿಷಸ್ಟ ಉಂಟೆ ಉಪಾಧ್ಯಾಯನ ಕಲಿಪದ ಗೌರವತ್ವ.

ಕೊಡಗಿನ ಶಾಲೆಗಳಲ್ಲಿ ಕೆಳಗಿನ ತರಗತಿಯ ಅವ್ಯವಸ್ಥೆಯು ಎಲ್ಲರಿಗೂ ತಿಳಿದ ಸಂಗತಿಯಾಗಿದೆ "ಬೇಬಿ ಕ್ಲಾಸ" ಹೊರತು ಇನ್ನಾವ ಸುಧಾರಣೆಯೂ ಉಪಾಧ್ಯಾಯರಿಗೆ ತಿಳಿಯದು ಈಗಿನ ಕೆಳಗಿನ ತರಗತಿಯು ಶಾಲೆಯ ಮೆಟ್ಟಿಲೆಂದು ತಿಳಿಯ ಹತ್ತಿದ್ದಾರೆ. ಇಲ್ಲವೇ ಇಲ್ಲದೆನ್ನುವ ದಕ್ಷಿಣ ಸ್ವಲ್ಪ ಕಾಲದಿಂದ ಎನ್ನುವುದು ಒಳ್ಳೆಯದಲ್ಲ. ಹಾಗೆಯೇ ಈ ಉಪಾಧ್ಯಾಯರೂ ಹೊಸ ಅನ್ನುವುದು ? ನಾನ್ಸ್ವೆಕ್ಷದಲು ಬುಡಕೆರಿನ ಹೇಗೆ "ಡಿಪಾರ್ಟಮೆಂಟು" ಕಡೆ ಎಚ್ಚೆತ್ತಿತೊ ಹಾಗೆಯೇ ಎಚ್ಚರವಾಗಲೆಂದು ದೇವರ ಬಯಕೆ.

ಈ ಸಂದರ್ಭ ನಮ್ಮ ಒಂದೆರಡು ಮಾತು ಆಡಿಯತಗೆವು, ಹಾಲು ಉಪಾಧ್ಯಾಯರಿಗೆ 'ಕಿಂಡರ ಗಾರ್ಟನ' ಎಂಬುದು ಒಂದು ವಿಷಯ (Subject) ವೆಂದಲ್ಲದೆ ಬೋಧನೆಯ ಸೂತ್ರದ ದಾರಿ (Method) ಎಂದು ತಿಳಿದಿಲ್ಲ. ಈ ಅಜ್ಞಾನಕ್ಕೆ ಯಾರನ್ನೂ ಹೊಣೆಯಾಗಿರಿಸಲು ಪ್ರಯತ್ನಿಸುವದು ವ್ಯರ್ಥ. ಬದಲು ಡಿಪಾರ್ಟಮೆಂಟಿನವರು "ಮೊಂಟೆಸೊರಿ" (ನವ ಪದ್ಧತಿ) ಶಾಲೆಗಳಲ್ಲಿ ಸುಶಿಕ್ಷಿತರಾದ ಏರ್ಪಾಡುಮಾಡಿದರೆ ಅದೇ ಸಮಯದಲ್ಲಿ ಹಳ್ಳಿಯ ಉಪಾಧ್ಯಾಯರು ಮಾತಾಡುವುದಷ್ಟೆ. ನಮ್ಮ ಸ್ಥಿತಿಯಲ್ಲಿ 'ಮೊಂಟೆಸೊರಿ' ಶಾಲೆಗಳು ತಪ್ಪದಲ್ಲಿ 'ಮೊಡೆಲ್' ಹೊರತು ಶಿಕ್ಷಣದ ವಿಷಯದಲ್ಲಿ

ಈ ಸಂದರ್ಭದಲ್ಲಿ ಗೋಣಿಕೊಪ್ಪಲು ಶಾಲೆಯಲ್ಲಿ ನಮ್ಮ ಈಗಿನ ಅ|| ಇನ್ಸ್‌ಪೆಕ್ಟರವರು ಮಾಡಿದ ಪಾಠವು ಅನೇಕರಿಗೆ ತಿಳಿಯದು ಹಳ್ಳಿಯಾದ ಗೋಣಿಕೊಪ್ಪಲಿನ ಶಾಲೆಯ ಬಾಲಕ ತರಗತಿಯಲ್ಲಿ ("This is a Bag') ("This is a Slate") ಇತ್ಯಾದಿ ಬರೆಯಲಿಕ್ಕೂ ಓದ ಲಿಕ್ಕೂ ಕಲಿಸಿದರೆಂಬ ಸುದ್ದಿಯಿಂದ ಎಲ್ಲಾ ಜನರಿಗೂ ಕೋಪ ಸೀಯುವನ್ನುಂಟು ಮಾಡೀತು. ಈ ಸಮಯದಲ್ಲಿ ಪರೀಕ್ಷಿಸಿದ್ದರೇ ಇದರ ಕೊಡಗಿನಲ್ಲಿ ಸರ್ ರವೀಂದ್ರನಾಥರ ಕವಿಗಳೂ ಸರ ಜಗದೀಶರಂತಹ ವಿಜ್ಞಾನಶಾಸ್ತ್ರೀಯರೂ ಹುಟ್ಟುವದರಲ್ಲಿ ಸಂಶಯವಿಲ್ಲ.

ಕೊಡಗು ಮುನಿಸಿಪಾಲಿಟಿಯಲ್ಲಿ ವಿಜ್ಞಾಪನೆ.

ಮಾನ್ಯರೇ

ಮನುಷ್ಯನು ತನ್ನ ದೇಹದ ಕಾಲದಲ್ಲಿ ಪ್ರವರ್ತಿಸಬೇಕಾದರೂ ಎಷ್ಟು ದೈವಸಹಾಯವು ಅವಶ್ಯಕವಾಗಿದೆಯೋ ಅಷ್ಟೇ ಅವನ ಸ್ವಾತ್ಮವರ್ಗದ ಸಹಕಾರವನ್ನು ಸಹಾನುಭೂತಿ ಎನ್ನುವುದು ಅತನು ಸಂಪಾದಿಸುವುದು ಮುಖ್ಯವಾಗಿದೆ ಉದಾರಿಗಳಿಂದ ಬಹುತೇಕರ ಸಹಾಯ ಸಮಸ್ತ ಜನರ ಮನಃಪೂರ್ವಕವಾದ ಸಹಾಯವನ್ನು ಅತನು ಹೊಂದದೆ ಆ ಕಾರ್ಯದಲ್ಲಿ ಕಾರ್ಯ ಜಯಂಟ ಸಾಗಲಿಕ್ಕಿಲ್ಲ

ಪ್ರಕೃತ ನಮ್ಮ ಈ ಪಟ್ಟಣ ಒಳ್ಳೆಗಿನ ಕಾಲದೇಶದಿಂದ ಮೀಟಿರುವ ಅದ್ಯತನ ವಜ್ರನಗರ ಮಡಿಕೇರಿಯ ಕನಕ ಜಲ ನಿತ್ಯದ ಪ್ರದು ಪಣಿಯಾಗು ವೇದ್ಯವಾದ ವಿಷ ಮನಾಗಿದೆ. ಇದಕ್ಕೆ ಹುವ್ವ ಕೇಂದ್ರಗಳ ನಮ್ಮ ಜನ್ಮಗಳ ಪೂರ್ವಾ ಜಿ ದೆ ಎಂದು ಕೆರೆಯಿಂದ ಬರುತ್ತದೆಗೆ ಬರುವ ಪತ್ರ ಮನೆಗಳಲ್ಲಿ ಹತ್ತಿ ಇಳಿಯುವ ಪ್ರಯಾಣಿಕರಿಗೂ ಬಹು ಬಹು ಚಿಂದರಗ ಅನುಕೂಲವುಂಟಾದುದು ಅನಂತರ ನಮ್ಮ ಮುನ್ಸಿಪಾಲಿಟಿ ಅಧ್ಯಕ್ಷರವರೆಗೆ ಮಡಿಕೇರಿ ವೀರರಾಜೇಂದ್ರಪೇಟೆಗಳಲ್ಲಿ ಜನ್ಮಗಳನ್ನು ಒದಗಿಸುವ ಪದವಾಗಿ (ಲೈಸನ್ಸು) ಮು ರಸ್ತು ಮಾಡಲ್ಪಟ್ಟಿತು. ಅದರ ಕೆಲವು ದಿನಗಳ ಹಿಂದೆ ಇದಕ್ಕಿಗಿನ ಮುನಿಸಿಪಲ್ ಉತ್ತೇಜನ ಪೂರ್ವಕವಾದ ಸಹಾಯ ಇದಲೂ ಮುಖ್ಯವಾಗಿ ಈವರೆಗಿನ (ಸರಕಾರ ನಡೆಸುವರು) ದೊಡ್ಡ ಮನಸ್ಸಿನಿಂದ ಮಾಡಿದ ಅನುಗ್ರಹದಿಂದಲೂ ನಮಗೆ ಪುನಃ ಲೈಸನ್ಸು ದೊರಕಿರುವುದು. ಈ ಭಾಗದಲ್ಲಿ ಕಮಿಷನರ್ ಸಾಹೇಬರವರ ಉದಾರತ್ವವೂ ಸ್ಪಷ್ಟವಾಗಿರುವುದಲ್ಲದೆ, ಇವರಲ್ಲಿ ನಾವು ಎಷ್ಟು ಕೃತಜ್ಞರಾಗಿದ್ದರೂ ಸ್ವಲ್ಪವೇ!

ಇನ್ನು ಸದ್ಯದಲ್ಲೇ ಎಂದಿನಂತೆ ತಲಿಚೇರಿ ಮಡಿಕೇರಿ ಲೈಸನ್ಸು ಸಿಗಲಿಕ್ಕಿದೆ ಅದರೂ ಅಧಿಕಾರಿಗಳು ಮಹಾಜನರು ಈ ಹೊಸದಲೇ ನಮ್ಮಲ್ಲಿ ಸಹಾನುಭೂತಿಯನ್ನು ತೋರಿದರಂತೆಯೇ ಮುಂದಕ್ಕೂ ಅದೇ ರೀತಿಯಲ್ಲಿ ಪ್ರೋತ್ಸಾಹಿಸಿ ನಮ್ಮ ವೃತ್ತಿಯನ್ನು ನಡೆಯಬೇಕಾಗಿ ವಿನಂತಿ

ತಲಿಚೇರಿ,
1-11-'21

ಪ್ರೊಪ್ರೈಟರ್,
"ಎಲಿನಾ ಕ್ವೀನ್ ಮೋಟರ್ ಸರ್ವಿಸ್"
ತಲಿಚೇರಿ.

ಪುಸ್ತಿಫ್ರೂಫ್ ಚಾರ್ಜ ದೊರೆಗಳು ಮದ್ರಾಸಿನಲ್ಲಿ ಹೇಳಿದ್ದೇನಂದರೆ:—

ಮದ್ಯಪಾನವನ್ನು ನಿಲ್ಲಿಸುವ ಸುಧಾರಣೆಯು ಒಂದೇ ದೇಶಕ್ಕಾಗಲೀ ಒಂದೇ ಜಾತಿಗಾಗಲೀ ಒಂದೇ ರಾಜನೀತಿಗಾಗಲೀ ಸಂಬಂಧಪಡುವ ವಿಷಯವಲ್ಲ ಅದು ಪ್ರಪಂಚಕ್ಕೆಲ್ಲಾ ಸಂಬಂಧಪಡುವ ವಿಷಯವಾಗಿದೆ ಸಂಕಟಪಡುವ ಜನರೊಡನೆ ಮನಸ್ಸಾದ ಹುಟ್ಟುವ ಪ್ರತಿಯೊಬ್ಬನೂ ಈ ಸಮಾಧಾನಕ್ಕಾದ ವಿಷಯವಾಗಿದೆ ನಾಗರಿಕತೆ ಹೊಂದಿದ ಪ್ರತಿಯೊ ದು ಸರಕಾರವೂ ಅವರನ್ನು ಕಾಪಾಡುವದಕ್ಕಾಗಿ ಈ ದುಷ್ಟಗುಣವನ್ನು ಹೋಗಲಾಡಿಸುವ ಈ ಕೆಲಸ ಎಷ್ಟು ಕೈಗೊಂಡಿ ದೇ... ಗುರಾಮಗಿರಿ ಪದ್ಧತಿಯು ನಿಂತಿರದ ವರ್ಷಗಳಿಂದ ಅಧಿಕ್ಷಮಿಲ್ಲಿತ್ತು. ಗುಲಾಮರ ಪ್ರಯೋಜನಕ್ಕಾಗಿ ಗುಲಾಮಗಿರಿಯು ಇರುವದಲ್ಲ ಗುಲಾಮರನ್ನು ಇಟ್ಟುಕೊಳ್ಳುವವನಿಗೆ ಹಣಸಂಪಾದನೆಗಾಗಿಯೇ ಗುಲಾಮರು ಇರುವರು. ಈ ಗುಲಾಮಗಿರಿಯು ಪ್ರಪಂಚದಲ್ಲಿ ಇರಬಾರದೆಂಬ ಕಲ್ಪನೆ ಈ ಕಾಲದಲ್ಲಿ ಜನರಿಗೆ ತೋರಿದವನ್ನು ನಿರ್ಮೂಲಮಾಡಿದರು. ಈ ಕಾಲದಲ್ಲಿ ಮದ್ಯ ಸೇವನೆಯನ್ನು ಹೋಗಲಾಡಿಸಬೇಕೆಂಬ ವಿಚಾರವು ತೋರಿದೆ. ಪಶ್ಚಿಮ ದೇಶಗಳಲ್ಲಿ ಅಮೇರಿಕಾದೇ ಮುಂದಾಗಿ ನಿಂತು ಈ ಕೆಲಸಕ್ಕೆ ಪ್ರವರ್ತಿಸಿದರೆ ಮಾರ್ಗದರ್ಶಕವಾಗಿರುತ್ತಾರೆ ಪೂರ್ವದೇಶಗಳಲ್ಲಿ ಇಂಡಿಯಾದೇಶವೇ ಮುಂದಾಗಿ ನಿಂತು ಈ ದೋಷವನ್ನು ತೆಗೆದು ಬಿಸಾಡಬೇಕು.

ಈ ಕೆಟ್ಟ ಗುಣವನ್ನು ಹೋಗಲಾಡಿಸಲಿಕ್ಕೆ ಅಡ್ಡಿಯಾವದೆಂದರೆ—ಅದರಿಂದ ಹಣವಾಗುವ ಕೆಲವರಿಂದಲೂ ಈ ಪಾಪಯುಕ್ತವಾದ ಕೆಲಸದಿಂದ ಸರಕಾರಕ್ಕೆ ಕೆಲವು ಕರಗಿ ಸಿಕ್ಕುವದರಿಂದಲೂ ಅಡ್ಡಿಯಾಗಿದೆ. ಕೆಲವರಿಗೂ, ಹೊಗೆ ಬಿಗೂ ಕುಡುಕರಿಗೂ ಜನರು ಕನಿಕರದಿಂದ ಸಹಾಯವೂ ಮಾಡುತ್ತಾರೆ. ಈ ಹುಚ್ಚಿನ ಚಾಯಾರಿಕೆಯನ್ನು ಹೋಗಲಾಡಿಸಲಿಕ್ಕೆ ಯಾರಿಗೂ ಕನಿಕರವುಟ್ಟುವದಿಲ್ಲವೋ—ಅವನ ದುರ್ಗುಣವನ್ನು ಬಿಡಿಸುವದರ ಬದಲಾಗಿ ಅವನಿಗೆ ಅನುಕೂಲ ಕೊಟ್ಟು ಅವನ ಸ್ವಂತ ಜೀವವನ್ನು ಮಾತ್ರವಲ್ಲ ಹೆಂಡತಿ ಮಕ್ಕಳ ಜೀವವನ್ನು ಸಹ ಕೆಡಿಸಲಿಕ್ಕೆ ಸಹಾಯಕರಾಗುತ್ತಾರೆ. ಅಮೇರಿಕಾದಲ್ಲಿ ಸರಕಾರವೇ ಕುಡುಕತನವನ್ನು ಕಾನೂನಿನ ಮೂಲಕ ನಿಲ್ಲಿಸಿಬಿಟ್ಟಿದೆ. ಕುಡುಕತನವನ್ನು ನಿಲ್ಲಿಸಬೇಕೆಂತ ಹೋರಾಡುವವರಷ್ಟೇ ಪಾರ್ಲಿಮೆಂಟಿಗೆ ಹೋಗುವದರಿಂದ ಈ ಕೆಲಸವು ಸಾಧ್ಯವಾಯಿತು ದೇಶಕ್ಕೆ ಕೆಡಕಾಗುವಂಥ ಈ ದುಷ್ಟವಸ್ತುವನ್ನು ಯಾರೂ ಮಾರಕೂಡದೆಂತ ಕಾನೂನು ಮಾಡಲಾಗಿದೆ.

ಅಮೇರಿಕಾದೇಶದ ಪೂರ್ವೀಕರು ಗುಹೆಗಳಲ್ಲಿ ವಾಸಮಾಡುತ್ತಾ ಚರ್ಮಗಳನ್ನು ಧರಿಸುತ್ತಿದ್ದಾಗಲೇ ಇಂಡಿಯಾ ದೇಶವು ನಿಷ ನೇಮನಿಚಾರವೆಂತ ಬೋಧಿಸುತ್ತಿತ್ತು. ಅಮೇರಿಕಾದಲ್ಲಿ ಸ್ಥಳೀಕರ ಅಪೇಕ್ಷೆಮೇರೆ ಸಾರಾಯಿ ಸೇಂದಿ ಅಂಗಡಿಗಳನ್ನು ಇಡಬಾರದೆಂತ ಒಂದು ಕಾನೂನನ್ನು ಮೊದಲು ಮಾಡಿಕೊಂಡು ಬಹಳ ಪ್ರಾಂತ್ಯಗಳಲ್ಲಿ ಅಂಗಡಿಗಳನ್ನೇ ನಿಲ್ಲಿಸಿದರು ಅಂಗಡಿಗಳನ್ನು ಎಲ್ಲಿಯೂ ಇಡಕೂಡದೆಂತ ಕಾನೂನುಮಾಡುವ ಮೊದಲೇ ಶೇಕಡ ೧೨ ಜನರು ಸಂಪೂರ್ಣವಾಗಿ ಕುಡುಕತನವನ್ನು ಬಿಟ್ಟಿದ್ದರು. ಕುಡುಕತನವನ್ನು ನಿಲ್ಲಿಸುವ ಕಾನೂನು ಮಾಡಿದ್ದರಿಂದ ಅಮೇರಿಕಾದಲ್ಲಿ ಸಾವಿರಾರು ಜೈಲುಗಳೇ ಮುಚ್ಚಬೇಕಾಗಿ ಬಂತು. ಕ್ರಿಮಿನಲ್ ಕೇಸುಗಳು ಶೇಕಡ 80 ರಷ್ಟು ಕಡಿಮೆಯಾಗಿ ಹೋಯಿತು. ಸರಕಾರಕ್ಕೆ ಉತ್ಪತ್ತಿ ಕಡಿಮೆಯಾಗುತ್ತಿಯಾದರೆ ಕ್ರಿಮಿನಲ್ ನಂಬರಗಳುಗಳು ಜೈಲುಗಳೂ ಕಡಿಮೆಯಾಗುತ್ತಾದ್ದರಿಂದ ಖರ್ಚು ಸಹ ಕಡಿಮೆಯಾಗುತ್ತೆ. ಸಂಪೂರ್ಣವಾಗಿ ಸಿರಾ ಕುಡಿಯುವದನ್ನು ನಿಲ್ಲಿಸಲಿಕ್ಕೆ ಇಂಡಿಯಾದೇಶವು ಈಗ ತಯಾರಾಗಿದೆ.

ಕುಶಾಲನಗರದ ಗಣಪತಿಉತ್ಸವ ಮತ್ತು ದನಗಳ ಪ್ರದರ್ಶನ.

ಪ್ರೇಜರ್‌ಪೇಟೆಯಲ್ಲಿ ಗಣಪತಿದೇವರ ಮಹೋತ್ಸವದ ಕಾಲದಲ್ಲಿ ದನಗಳ ಪ್ರದರ್ಶನ ನಡಸಬೇಕೆಂಬ ಅಭಿಪ್ರಾಯ ಪಟ್ಟವರು ಎರಡು ವರ್ಷಗಳ ಹಿಂದೆ ಪಾರುಪತ್ಯಗಾರರಾಗಿದ್ದ ಮೆ|| ಕೋದಂಡ ಕಾಳಪ್ಪನವರು ಕಳೆದ ವರ್ಷ ಈ ಉತ್ಸವವನ್ನು, ಪ್ರದರ್ಶನವನ್ನು ನಡಿಸಲು ಸ್ಥಳೀಕ ಜನರು ಒಂದು ಕಮಿಟಿ ಮಾಡಿ ರಾಯಬಹದ್ದೂರು ಕೋದಂಡ ಅಪ್ಪಯ್ಯನವರನ್ನು ಪ್ರೆಸಿಡೆಂಟರಾಗಿ ಮಾಡಿದರು. ರಾಗಣಾಭವರ ಕಾಮೆಟಿ ಮತ್ತು ಪ್ರೆಸಿಡೆಂಟರ ಮುತುವರ್ಜಿಯಿಂದಲೇ ಈ ಉತ್ಸವಗಳು ನಡಿಯುತ್ತೆ.

ಸಂತೆಯಾಗುವ ಜಾಗದ ಹತ್ತಿರ ಇರುವ ಮೈದಾನದಲ್ಲಿ ಸುಮಾರು ಎರಡು ಸಾವಿರ ಎಲ್ಲಾ ತರದ ಜಾನುವಾರಗಳು ಇದ್ದವು. ಜನರು ಐದು ಸಾವಿರಕ್ಕಿಂತ ಹೆಚ್ಚಾಗಿ ದೇಶದ ಎಲ್ಲಾ ಭಾಗಗಳಿಂದ ನೆರೆದಿದ್ದರು. ರಥೋತ್ಸವ ತಾ|| ೩-೧೧-೨೧ ರಲ್ಲು ೧೧½ ಗಂಟೆಗೆ ಮಹಾಗಣಪತಿಗೆ ಪೂಜೆ ಮಾಡಿಸಿದರು ೧೧½ ಗಂಟೆಗೆ ರಥವನ್ನು ಮೆಲ್ಲಗೆ ಜನರು ಎಳೆದುಕೊಂಡು ಬೀದಿಯಲ್ಲಿ ಮೆರವಣಿಗೆಹೊರಟರು ಹಣ್ಣು ಕಾಯಿಗಳನ್ನು ಭಕ್ತಿಪೂರ್ವಕ ರಥಕ್ಕೆ ಎಸೆಯುತ್ತಿದ್ದುದು ಅಲ್ಲದೆ ಗೋವಿಂದ ನಾಮಸ್ಮರಣೆಯನ್ನು ಉಚ್ಚರಿಸುತ್ತಿದ್ದರು. ತೇರನ್ನು ಅಶ್ವತ್ಥದ ಹತ್ತಿರ ಇರುವ ಮಾರ್ಗದ ಒಂದು ಬೀದಿಯಲ್ಲಿ ನಿಲ್ಲಿಸಿ ಸಾಯಂಕಾಲ ೪| ಗಂಟೆಗೆ ಸರಿಯಾಗಿ ಎಲ್ಲರೂ ದನಗಳ ಪಂತಿಯ ಮೈದಾನದಲ್ಲಿ ಪ್ರೆಸಿಡೆಂಟರು, ಕಮಿಟಿಯವರು ಸಮೇತ ಪ್ರದರ್ಶನವನ್ನು ಕಾಯಲಿಕ್ಕೆ ಹಾಕಿರುವ ಗುಂಟಿನಲ್ಲಿ ಕಮಿಷನರ್ ಸಾಹೇಬರನ್ನು ಕಾದು ಕೊಂಡಿದ್ದರು. ಕಮಿಷನರ್ ಸಾಹೇಬರು ೪ ಗಂಟೆಗೆ ದಯಮಾಡಿಸಿದರು ಇವರು ಬರುವದಕ್ಕೆ ಮೊದಲು ಬೆಟ್ಟದಳ್ಳಿ ಗ್ರಾಮದ ೨೦ ವಯಸ್ಸಿನ ಗಂಡುಮಗನಾದ ಕಣ್ಣು, ಕಾಲು ಇಲ್ಲದ ಕರುಣನನ್ನು ಅವನ ತಂದೆಯವರು ಅಲ್ಲಿಗೆ ಹೊತ್ತುಕೊಂಡು ಬಂದರು ಅವನು ತನ್ನ ಮುದ್ದಳೆಯನ್ನು ಬಾರಿಸಿ, ಗಣಪತಿ ಸ್ತೋತ್ರವನ್ನು ಮಾಡಿದ್ದು ಜನರಲ್ಲಿ ಸಂತೋಷವನ್ನು, ಆಶ್ಚರ್ಯವನ್ನು ಉಂಟುಮಾಡಿತು. ಅವನ ವಿಷಯ ಈ ಪತ್ರಿಕೆಯ ಬೇರೆ ಕಡೆ ಬರದಿದೆ.

ಕಮಿಷನರವರು ಬಂದ ಕೂಡಲೇ ಪ್ರೆಸಿಡೆಂಟು ಮತ್ತು ಕಮಿಟಿಯವರು ಅವರನ್ನು ಆದರಾಭಿಮಾನಪೂರ್ವಕವಾಗಿ ಎದುರುಗೊಂಡು ಉಚಿತಾಸನದಲ್ಲಿ ಕೂಡಿಸಿದರು. ಪ್ರೆಸಿಡೆಂಟರಾದ ರಾ|| ಬಾ|| ಅಪ್ಪಯ್ಯನವರು ಈ ಕೆಳಗಿನ ಆಹ್ವಾನವನ್ನು ಇಂಗ್ಲೀಷಿನಲ್ಲಿ ಓದಿದನ್ನು ಮೆ|| ರಾಮತಿಮ್ಮಯ್ಯನವರು ಕನ್ನಡದಲ್ಲಿ ಓದಿದ್ದು ವಿನಂದರೆ:—

ಈ ಸಂದರ್ಭದಲ್ಲಿ ತಾವು ಸಭಾಧ್ಯಕ್ಷರಾಗಿರಲು ಒಪ್ಪಿ ನಮ್ಮ ಕೋರಿಕೆಯನ್ನು ನೆರವೇರಿಸಿದ್ದಕ್ಕಾಗಿ ನಾವುಗಳು ತುಂಬಾ ಸಂತೋಷಪಡುವರಾಗಿದ್ದೇವೆ. ಕೆಲವ ಕೆಲ್ಸಾಗಿಕುವ ಈ ಕಾಲದಲ್ಲಿ ತಾವು ಕೆಲಸದ ತೆಗೆದುಕೊಂಡು ಇಷ್ಟು

ದೂರ ಒಂದದ್ದಕ್ಕಾಗಿ ಕಮಿಟಿಯವರೂ ನಾನೂ ಸಹಾ ವಂದನೆಗಳನ್ನು ಅರ್ಪಿಸುತ್ತೇವೆ. ತಮ್ಮ ಹಿಂದಿನವರಂತೆ ತಾವೂ ಸಹಾ ನಮಗೆ ವಿಶೇಷವಾದ ಪ್ರೋತ್ಸಾಹವನ್ನು ಕೊಟ್ಟಿರುವಿರೆಂಬ ವಿಷಯದಲ್ಲಿ ಲೇಶವೂ ಸಂಶಯವಿಲ್ಲ.

ಕಳೆದ ವರ್ಷ ನವಂಬರ್ ತಿಂಗಳಿನಲ್ಲಿ ನಡೆದ ಪ್ರದರ್ಶನಕ್ಕೆ ಮಿಸ್ಟರ್ ಸೂಟರ್ ಸಾಹೇಬರವರು ಬಹುಮಾನಗಳನ್ನು ಕೊಡಲಿಕ್ಕಾಗಿ ಒಂದು ನೂರು ರೂಪಾಯಿಗಳನ್ನು ಉದಾರ ಮನಸ್ಸಿನಿಂದ ದಯಪಾಲಿಸಿದರು. ಇದರ ಜೊತೆಗೆ ಮೆ॥ ಸೂಟರ್ ಸಾಹೇಬರವರೂ, ಮೆ॥ ಎ. ಬೋಪಣ್ಣನವರೂ ಸಾಹುಕಾರ್ ಡಿ. ನಾರಾಯಣಶೆಟ್ಟರವರೂ ಮತ್ತು ಕೀರ್ತಿಶೇಷರಾದ ಸಾಹುಕಾರ್ ಡಿ ಚೆನ್ನಬಸಪ್ಪಶೆಟ್ಟರವರೂ ಕೊಟ್ಟ ಜುಮ್ಲ ಅರವತ್ತು ರೂಪಾಯಿಗಳನ್ನು ಸಹಾ ಉತ್ತಮವಾದ ದನಗಳಿಗೆ ಬಹುಮಾನಗಳನ್ನು ಕೊಡಲು ವಿನಿಯೋಗಿಸಲಾಯಿತು

ಕಳೆದವರ್ಷ ಕೊಟ್ಟಹಾಗೆ ಎರಡರಷ್ಟು ಹಣವನ್ನು ಈ ಸಾರಿ ತಾವು ದಯವಿಟ್ಟು ಸ್ಯಾಂಕ್ಷನ್ ಮಾಡಿದ್ದಕ್ಕಾಗಿ ಬಹಳ ವಂದನೆ ಮಾಡುತ್ತೇವೆ. ಬಹುಮಾನಗಳನ್ನು ಕೊಡಲು ಈ ರೀತಿ ಉತ್ತೇಜನವನ್ನು ತೋರಿಸಿದ್ದು ಸ್ತೋತ್ರಾರ್ಹವಾಗಿದೆ. ಕಳೆದಸಾರಿ ದ್ರವ್ಯರೂಪವಾಗಿ ಕೊಟ್ಟ ಬಹುಮಾನಗಳ ಪೈಕಿ ಅನೇಕವು ನರಸೂರಿನವರಾದ ನ್ಯೂಸೂರು ಸೀಮೆಯ ಹಳ್ಳಿಯವರುಗಳಿಂದ ತೆಗೆದುಕೊಳ್ಳಲ್ಪಟ್ಟವು. ಆದರೆ ಈ ವರ್ಷ ಒಳ್ಳೇ ಹೋರಿಗಳಿಗೆ ಎರಡು ಬೆಳ್ಳಿಯ ಪದಕಗಳನ್ನು ಕೊಡಬೇಕಾಗಿಯೂ ಈ ಪೈಕಿ ಒಂದನ್ನು ಈ ಸೀಮೆಯವರಿಗೂ ಇನ್ನೊಂದನ್ನು ಹೊರಗಿನವರಿಗೂ ಕೊಡುವಂತೆ ಕಮಿಟಿಯವರು ಏರ್ಪಡಿಸಿದ್ದಾರೆ. ದನಗಳನ್ನು ಸಾಕುವ ವಿಷಯದಲ್ಲಿ ನಾವುಗಳು ಬಹಳ ಹಿಂದಿರುವುದರಿಂದಲೂ, ರೈತರ ಸಂಪತ್ತೆಲ್ಲಾ ದನಕರುಗಳಿಂದಲೆ ಆಗಿರುವುದರಿಂದಲೂ ಈ ರೀತಿ ಪ್ರೋತ್ಸಾಹಪಡಿಸಿ ಅಭಿವೃದ್ಧಿಪಡಿಸಬೇಕೆಂಬುದೇ ಈ ಸಂತೆ ಏರ್ಪಾಡಿನ ಉದ್ದೇಶ್ಯವಾಗಿದೆ. ಈ ವಿಷಯದಲ್ಲಿ ರೈತರು ಏನೂ ನಿಗಾ ಮಾಡದೆ ತಮಗೆ ವ್ಯವಸಾಯಕ್ಕೆ ಬೇಕಾಗುವ ಎತ್ತುಗಳನ್ನು ಹಸುಗಳನ್ನು ಸಹ ಬೇರೆ ಸೀಮೆಯಿಂದ ಹೆಚ್ಚಿಗೆ ಕ್ರಯಕೊಟ್ಟು ತರುತ್ತಾ ಇರುವುದು ವಾಡಿಕೆಯಾಗಿದೆ. ಈ ವಿಧವಾದ ಪದ್ಧತಿಯನ್ನು ಆದಷ್ಟುಮಟ್ಟಿಗೆ ಕಮ್ಮಿ ಮಾಡಲು ಈ ಪ್ರದರ್ಶನವನ್ನು ಏರ್ಪಡಿಸಿ ಕೊಡಗಿನ ರೈತರೆಲ್ಲಾ ಎಚ್ಚತ್ತುಕೊಂಡು, ದನಗಳನ್ನು ಸಾಕುವ ವಿಧಾನವನ್ನು ಹೊರಗಿನಿಂದ ಇಲ್ಲಿಗೆ ತಂದು ಪ್ರದರ್ಶಿಸಲ್ಪಡುವ ದನಗಳನ್ನು ನೋಡಿಯಾದರೂ ಕಲಿತುಕೊಳ್ಳಬೇಕಾಗಿ ಈ ವಿಷಯವನ್ನು ಪ್ರಚುರಿಸಿದ್ದಾಗಿದೆ. ಕೊಡಗಿನ ವಾಯುಗುಣವು ಇದಕ್ಕೆ ಪ್ರತಿಕೂಲವಾಗಿದ್ದಾಗ್ಯೂ ಈ ವಿಷಯಕ್ಕೆ ವಿಶೇಷ ನಿಗಾವಣೆ ಕೊಟ್ಟಲ್ಲಿ ದನಗಳು ಅಭಿವೃದ್ಧಿಗೆ ಬಂದು ಉತ್ತಮಸ್ಥಿತಿಗೆ ಬರಲು ಏನೂ ಅಡ್ಡಿ ತೋರುವುದಿಲ್ಲ

ರೈತರ ತಿಳುವಳಿಕೆಗಾಗಿ ಪ್ರತಿ ದಿವಸ ಸಾಯಂಕಾಲ ವೆಟರ್ನರಿ ಡಾಕ್ಟರುಗಳು ಉಪನ್ಯಾಸಗಳನ್ನು ಕೊಡುವಂತೆ ಏರ್ಪಡಿಸಲು ಡೆಪ್ಯುಟಿ ಡೈರೆಕ್ಟರ್ ಸಾಹೇಬರವರನ್ನು ಕೇಳಿಕೊಂಡಿದ್ದೇವೆ. ಆದ್ದರಿಂದ ರೈತರು ತಮ್ಮ ದನಗಳನ್ನು ಯಾವ ರೀತಿ ಸಾಕಬೇಕೆಂಬ ವಿಧಾನವನ್ನು ವೆಟರ್ನರಿಗಳಿಂದ ತಿಳಿದುಕೊಳ್ಳಬಹುದು. ಸಗಣಿಯನ್ನು ಗಂಜಳವನ್ನು ಹ್ಯಾಗೆ ಉಪಯೋಗಿಸಬೇಕೆಂಬುವದನ್ನು ಅಗ್ರಿಕಲ್ಚರ್ ಅಂದರೆ ವ್ಯವಸಾಯದ ಅಸಿಸ್ಟೆಂಟರು ಕೊಡುವ ಉಪನ್ಯಾಸಗಳಿಂದ ತಿಳಿದುಕೊಳ್ಳಬಹುದು.

ಕಳೆದ ವರ್ಷ ಈ ಜಾತ್ರೆಗೆ ಸುಮಾರು ೩ ಸಾವಿರ ಜನಗಳೂ 2 ಸಾವಿರ ದನಕರುಗಳೂ ಸಹಾ ಬಂದಿದ್ದವು. ಈ ವಿಷಯಕ್ಕೆ ತಾವು ಮತ್ತು ತಮ್ಮ ಹಿಂದಿನವರೂ ಸಹಾ ಕೊಟ್ಟಿರುವ ಪ್ರೋತ್ಸಾಹದಿಂದ ಈ ಜಾತ್ರೆಯು ಕೊಡಗಿನಲ್ಲಿ ಬಹಳಮಟ್ಟಿಗೆ ಅಭಿವೃದ್ಧಿಯನ್ನು ಹೊಂದುವುದಾಗಿ ಎಣಿಸಲ್ಪಟ್ಟಿದೆ.

ಈ ಸಂದರ್ಭದಲ್ಲಿ ತಮ್ಮ ತಿಳುವಳಿಕೆಗೆ ತರಬೇಕೆಂದಿರುವ ಇನ್ನೊಂದು ವಿಷಯವೇನೆಂದರೆ—ನಮ್ಮ ಕೋರಿಕೆಯಂತೆ ಪ್ರತಿವಾರವೂ ಸಂತೆಯ ದಿವಸ ಇಲ್ಲಿ ದನಗಳು ಸೇರಿ ಮಾರಾಟವಾಗುವ ವಿಷಯದಲ್ಲಿ ಮೊದಲಿನ ಕಮಿಷನರ್ ಸಾಹೇಬರವರು ಸ್ಯಾಂಕ್ಷನ್ ಮಾಡಿದಾಗ್ಯೂ ಯಾವೂ ರೂಲುಗಳನ್ನು ಮಾರಾಟಕ್ಕೆ ತರದೆ ಇರುವುದರಿಂದ ಈ ವಿಷಯವು ಫಲಕಾರಿಯಾಗಲಿಲ್ಲ. ಈ ಸಂಗತಿಯಲ್ಲಿ ಇನ್ನು ಮೇಲೆ ಪ್ರಯತ್ನಗಳನ್ನು ಮಾಡಿ ಆಚರಣೆಗೆ ಬಂದಲ್ಲಿ ಕೊಡಗಿನ ಅನೇಕ ರೈತರುಗಳು ದೂರದಲ್ಲಿರುವ ಸಂತೆಗಳಿಗೆ ಹೋಗುವ ತೊಂದರೆಯು ಖಚಿತವಾಗಿ ತಪ್ಪುತ್ತೆ.

ತಾವು ತೊಂದರೆ ತೆಗೆದುಕೊಂಡು ಇಷ್ಟು ದೂರ ಬಂದು ಅಧ್ಯಕ್ಷತೆಯನ್ನು ವಹಿಸಿದ್ದಕ್ಕಾಗಿ ಮತ್ತೊಂದು ಸಾರಿ ತಮಗೆ ವಂದನೆಗಳನ್ನು ಅರ್ಪಿಸುತ್ತೇವೆ. ಗಣಪತಿ ರಥೋತ್ಸವವಾದ ಈ ಶುಭದಿವಸದಲ್ಲಿ ಈ ಜಾತ್ರೆಯನ್ನು ತಾವು ತೆರೆಯಬೇಕಾಗಿ ತಮ್ಮಗೆ ವಿಜ್ಞಾಪಿಸಿಕೊಳ್ಳುತ್ತೇವೆ

ಅದಕ್ಕೆ ಪ್ರತ್ಯುತ್ತರವಾಗಿ ಕಮಿಷನರ್ ಸಾಹೇಬರು ಹೇಳಿದ್ದೇನೆಂದರೆ—ರಾ॥ ಬಾ॥ ಅಪ್ಪಯ್ಯನವರು ಮತ್ತು ಎಲ್ಲಾ ಮಹಾಶಯರೇ!, ನೀವು ನಾನು ಬಹಳ ತೊಂದರೆ ತೆಗೆದುಕೊಂಡು ಈ 'ಪ್ರದರ್ಶನಕ್ಕೆ' ದಯಮಾಡಿಸಿದುದಕ್ಕೆ ನನಗೆ ಸಂದಿಸಿದ ದಯಕ್ಕಾಗಿ ನನ್ನ ವಂದನೆಯನ್ನು ನಿಮಗೆ ಅರ್ಪಿಸುತ್ತೇನೆ. ಇಂಥಾ ಪ್ರದರ್ಶನಕ್ಕೆ ನಾನು ಯಾವ ಸಮಯದಲ್ಲೇ ಆಗಲೀ ಯಾವ ತೊಂದರೆಯನ್ನು ಮನಸ್ಸಿಗೆ ತೆಗೆದುಕೊಳ್ಳದೆ ಬರಲು ಸಿದ್ಧನಾಗಿದ್ದೇನೆ. ಕಳೆದ ವರ್ಷ ನಡೆದುದಕ್ಕಿಂತಲೂ ಚೆನ್ನಾಗಿ ಈ ಪ್ರದರ್ಶನವನ್ನು ನಡಿಸುವಿರಾಗಿ ನಂಬುತ್ತೇನೆ. ಒಳ್ಳೇ ದನಗಳನ್ನು ಸಾಕಿ ಮಾರುವದನ್ನು ಎಲ್ಲರೂ ಪ್ರೋತ್ಸಾಹಿಸಬೇಕು. ಇಲ್ಲಿ ಪ್ರತಿ ಸಂತೆಯಲ್ಲಿಯೂ ದನಗಳನ್ನು ಮಾರಲು ಪ್ರಯತ್ನ ತೆಗೆದುಕೊಳ್ಳಬೇಕು. ಕಳೆದ ವರ್ಷ ಸರಕಾರದಿಂದ ೧೦೦ ರೂಪಾಯಿ ಕೊಟ್ಟಿರುತ್ತಾರೆ. ಈ ವರ್ಷ ೨೦೦ ರೂಪಾಯಿ ಕೊಟ್ಟಿರುತ್ತೇನೆ. ಅದಲ್ಲದೆ ಕಳೆದ ವರ್ಷ ರೂಪಾಯಿ ಇನಾಮು ಒಳ್ಳೆ ಜಾತಿ ದನಗಳನ್ನು ತಂದವರಿಗೆ ಕೊಟ್ಟಿರುತ್ತೀರಿ. ಈ ವರ್ಷ ಮೆಡಲನ್ನೂ, ರೂಪಾಯಿಯನ್ನು ಇನಾಮು ಕೊಡಲಿಕ್ಕೆ ಮಾಡಿದ್ದು ಬಹಳ ಸಂತೋಷವಾಗಿದೆ. ಪ್ರೆಸಿಡೆಂಟರೂ ಮತ್ತು ಕಮಿಟಿಯವರೂ ತೆಗೆದುಕೊಂಡ ಶ್ರಮಕ್ಕೆ ನಾನು ನಿಮ್ಮನ್ನು ಬಹಳವಾಗಿ ವಂದಿಸುತ್ತೇನೆ. ಇನ್ನು ಮುಂದಕ್ಕು ನೀವು ಇದೇ ರೀತಿ ನಡೆಸಬೇಕೆಂದು ಕೋರುತ್ತೇನೆ. ಈ ದನದ ಪ್ರದರ್ಶನವು ತೆರೆಯಲ್ಪಟ್ಟಿದೆಯೆಂದು ನಾನು ಹೇಳುತ್ತೇನೆಂಬುದಾಗಿ ಹೇಳಿ ತಮ್ಮ ಭಾಷಣವನ್ನು ಮುಗಿಸಿದರು

ಕೂಡಲೇ ರಾ॥ ಬಾ॥ ಅಪ್ಪಯ್ಯನವರು ಕಮಿಷನರವರ ಕಂಠಕ್ಕೆ ಪುಷ್ಪಮಾಲೆಯನ್ನು ಹಾಕಿದರು. ಎಲ್ಲ ಜನರಿಗೂ ಸೀಹಿಗಳನ್ನು ವಿತರಣೆ ಮಾಡಿದನಂತರ ಸಭೆಯು ಮುಕ್ತಾಯವಾಯಿತು. ಸೋಮವಾರಪೇಟೆಯ ಚೆನ್ನಯ್ಯಶೆಟ್ಟಿಯವರು ತಮ್ಮ ಆಹ್ವಾನಿಸಿದ ಜನರಿಗೆಲ್ಲಾ ಊಟ ಉಪಚಾರಗಳನ್ನು ತನ್ನ ಸ್ವಂತ ಖರ್ಚಿನಿಂದ ಕ್ರಮವಾಗಿ ಏರ್ಪಾಡು ಮಾಡಿದ್ದರು.

ಕೊಡಗಿನ ಬ್ರಾಹ್ಮಣರಿಗೆ

ಬ್ರಾಹ್ಮಣರು ಕೃಷಿಯಿಂದ ಜೀವಿಸಬಹುದೆ?

ಎಂಬುದಾಗಿ ನಾನು ಪತ್ರಕರ್ತರಿಗೆ ವೀರರಾಜೇಂದ್ರಪೇಟೆಯಿಂದ ಒಬ್ಬರು ಕೇಳಿದಕ್ಕೆ ಅವರು ಮೈಸೂರಿನ ಆಸ್ಥಾನವಿದ್ವಾನ್ ಗೋಪಾಲಕೃಷ್ಣಶಾಸ್ತ್ರಿಗಳವರಿಂದ ಉತ್ತರವನ್ನು ಪ್ರಕಟಿಸಿರುತ್ತಾರೆ. ಅವರ ಸಾರಾಂಶವನ್ನು 'ಸಾಧ್ವಿ' ಯ ವಾಚಕರಿಗೆ ಸದುಪಯೋಗಕ್ಕೆ ಬರಲೆಂದು ಪ್ರಕಟಿಸಿರುವೆವು

ಬ್ರಾಹ್ಮಣನಾದವನಿಗೆ ಯಜನ ಯಾಜನ ಅಧ್ಯಯನ ಅಧ್ಯಾಪನ, ದಾನ, ಪ್ರತಿಗ್ರಹ ಎಂದು ಷಟ್ಕರ್ಮಗಳು ಧರ್ಮಶಾಸ್ತ್ರದಲ್ಲಿ ವಿಹಿತವಾಗಿರುವುವು. ಇವುಗಳಲ್ಲಿ ಯಾಜನ, ಅಧ್ಯಾಪನ ಪ್ರತಿಗ್ರಹವೆಂಬ ಮೂರು ಕರ್ಮಗಳು ಜೀವನಾರ್ಥವಾಗಿ ಏರ್ಪಟ್ಟಿರುವುವು. ಇವುಗಳಲ್ಲಿ ಅಧ್ಯಾಪನವು ಅಂದರೆ ಧನಾರ್ಥಿಯಿಂದ ಬಂದವರಿಗೆ ವಿದ್ಯಾದಾನ ಮಾಡುವುದು ಶ್ರೇಷ್ಠವಾದ ವೃತ್ತಿ. ಯಾಜನ ಅಂದರೆ, ಪರರಿಗೆ ಕರ್ಮವನ್ನು ಮಾಡಿಸುವುದು ಪೌರೋಹಿತ್ಯಾದಿಗಳು ಪಾಪಸಂಘಟನೆಯಾಗುವುದರಿಂದ ಪ್ರಶಸ್ತವಾದದ್ದಲ್ಲ. ಪ್ರತಿಗ್ರಹ ಅಂದರೆ ಬ್ರಾಹ್ಮಣ ಬ್ರಾಹ್ಮಣೇತರರಿಂದ ದಾನ ತೆಗೆದುಕೊಳ್ಳುವುದು. ಕೇವಲ ಪಾಪಕರವಾದದ್ದು. ಹಾಗೆ ಒಂದು ವೇಳೆ ದಾನ ತೆಗೆದುಕೊಳ್ಳಬೇಕಾದರೆ, 'ನಿಕೃಷ್ಟಾಚ್ಚ ಪ್ರತಿಗ್ರಹಃ' ಯಾವವಸ್ತುವನ್ನು ಯಾರಿಂದ ದಾನ ತೆಗೆದುಕೊಂಡರೆ ನನ್ನ ಬ್ರಾಹ್ಮಣ್ಯಕ್ಕೆ ಬಾಧಕವಾಗುವುದಿಲ್ಲವೋ ಪಾಪವೂ ಬರಲಾರದೋ ಅಂಥಾ ವಸ್ತುವನ್ನು ಅಂಥಾವರಿಂದ ತೆಗೆದುಕೊಳ್ಳಬೇಕು. ಹೇಗಾದರೂ ಪಾಪ ಸಂಭವವಿರುವುದರಿಂದ ಆಪತ್ಕಾಲದಲ್ಲಿ ಮಾತ್ರ ತೆಗೆದುಕೊಂಡು, ಪ್ರಾಯಶ್ಚಿತ್ತವನ್ನು ಮಾಡಿಕೊಂಡು ಶುದ್ಧನಾಗಬೇಕು. ಇಲ್ಲದೆ ಇದ್ದರೆ ಪತಿತನಾಗುತ್ತಾನೆ. ಹೀಗಿರುವಲ್ಲಿ ಕಲಿಯುಗದಲ್ಲಿ ಜೀವನೋಪಯೋಗ್ಯವಾದ ಯಾಜನ ಪ್ರತಿಗ್ರಹಗಳು ಸರ್ವರಿಗೂ ಸುಲಭವಾಗಿಲ್ಲವೆಂದು ಭಾವಿಸಿ, ಪರಾಶರ ಮುಂತಾದ ಮಹರ್ಷಿಗಳು 'ಕೃಷಿಗೋರಕ್ಷವಾಣಿಜ್ಯಂ ವೈಶ್ಯಂ ಕರ್ಮಸ್ವಭಾವಜಂ' ಎಂದು ವೈಶ್ಯಾದಿಗಳನ್ನು ಉದ್ದೇಶಿಸಿ, ಪ್ರಾಧಾನ್ಯೇನ ಅವರಿಗೆ ಉಪದೇಶಿಸಿದ ಕೃಷ್ಯಾದಿ ಕರ್ಮಗಳನ್ನು ವಿಪತ್ಕಾಲದಲ್ಲಿ ಬ್ರಾಹ್ಮಣರೂ ಮಾಡಬಹುದೆಂದು—ಶ್ಲೋ॥ ಷಟ್ಕರ್ಮಸಹಿತೋವಿಪ್ರಃ ಕೃಷಿಕರ್ಮ ಚ ಕಾರಯೇತ್ (ಪರಾಶರಸ್ಮೃತಿ) ಕುಸೀದ ಕೃಷಿವಾಣಿಜ್ಯಂ ಪ್ರಕುರ್ವೀತಸ್ವಯಂ ಕೃತಂ ಆಪತ್ಕಾಲೇಸ್ವಯಂ ಕುರ್ವನ್ನೈನಸಾಯುಜ್ಯತೆ ದ್ವಿಜಃ॥ (ಬೃಹಸ್ಪತಿ) ಸ್ವಯಂವಾ ಕರ್ಷಣಂಕುರ್ಯಾತ್ ವಾಣಿಜ್ಯಂ ವಾ ಕುಸೀದಕಂ। (ಕೂರ್ಮಪುರಾಣ) ಉಭಾಭ್ಯಾಮಪ್ಯಜೀವಂಸ್ತುಕಥಂ ಸ್ಯಾದಿತಿಚೇದ್ಭವೇತ್ ॥ಕೃಷಿಗೋರಕ್ಷಮಾಸ್ಥಾಯ ಜೀವೇದ್ವೈಶ್ಯಸ್ಯ ಜೀವಿಕಾಂ॥ (ಮನುಸ್ಮೃತಿ 10 ನೇ ಅಧ್ಯಾಯ) ಇತ್ಯಾದಿ ವಚನಗಳಿಂದ ಪ್ರತ್ಯಕ್ಷವಾಗಿ ಕೃಷಿ ಮುಂತಾದವುಗಳನ್ನು ಮಾಡಬಹುದೆಂದು ಅನುಜ್ಞೆ ಕೊಟ್ಟಿದ್ದಾರೆ. ಈ ಸ್ಮೃತಿಗಳಿಗೆ ವ್ಯಾಖ್ಯಾನ ಮಾಡಿರುವ ವೈದಿಕಮಾರ್ಗ ಪ್ರವರ್ತಕ ಸರ್ವತಂತ್ರ ಸ್ವತಂತ್ರ ಸರ್ವಜ್ಞರಾದ ಮಾಧವಾಚಾರ್ಯರು ಮುಂತಾದ ಮಹನೀಯರು, ಬ್ರಾಹ್ಮಣಾದಿ ವರ್ಣಗಳು ಸ್ವವರ್ಣಕ್ಕೆ ವಿಹಿತವಾದ ಮಾರ್ಗದಲ್ಲಿ ಜೀವಿಸುವುದು ತುಂಬಾ ಶ್ರೇಯಸ್ಕರವಾದದ್ದು. ಕಾಲದೋಷದಿಂದ ಜೀವಿಸುವುದು ಅಸಾಧ್ಯವಾದಲ್ಲಿ ವೃದ್ಧರಾದ ತಂದೆ ತಾಯಿಗಳನ್ನೂ, ಪತಿವ್ರತೆಯಾದ ಪತ್ನಿಯನ್ನೂ, ಶಿಶುಗಳಾದ ಗಂಡುಹೆಣ್ಣು ಮಕ್ಕಳನ್ನು ಕಾಪಾಡುವುದಕ್ಕಾಗಿ ವೈಶ್ಯವೃತ್ತಿಯನ್ನಾದರೂ ಆಶ್ರಯಿಸಬೇಕು. ಈ ವೃತ್ತಿಗಳ ಪೈಕಿ ಕೃಷಿ, ವಾಣಿಜ್ಯಗಳು ಪ್ರಶಸ್ತವಾದದ್ದು. ಭೂಮಿಯನ್ನು ಇತರರ ಮೂಲಕ ಮಾಡಿಸುವುದು ಅಸಾಧ್ಯವಾದರೆ ತಾನೇ ನೇಗಿಲನ್ನು ತೆಗೆದುಕೊಂಡು ಉಳಬಹುದು. ಭೂಮಿಯನ್ನು ಸಜ್ಜುಪಡಿಸಿ, ಧಾನ್ಯಗಳನ್ನು ಬೆಳೆದು ಅದರಿಂದ ಬಂದ ಫಲದಿಂದ ದೇವರುಷಿ, ಮನುಷ್ಯ ಮುಂತಾದವರನ್ನು ತೃಪ್ತಿಪಡಿಸಿ, ಬ್ರಾಹ್ಮಣ್ಯವನ್ನು ಸಂರಕ್ಷಿಸಿಕೊಳ್ಳಬೇಕು. ಇದಕ್ಕೆ ದೇಹಶಕ್ತಿ ಕಡಮೆ ಆದಲ್ಲಿ, ಗೌತಮಧರ್ಮಸೂತ್ರದಲ್ಲಿ ಮಾರಬಹುದೆಂದು ವಿಧಿಸಿರುವ ಪದಾರ್ಥಗಳನ್ನು ಮಾರಾಟ ಮಾಡಿ, ಸ್ವಾತಂತ್ರ್ಯದಿಂದ ಕುಟುಂಬ ಪೋಷಣ ಮಾಡಬೇಕು. ಇದೇ ರೀತಿ ಮನುವಿನಿಂದ ಶ್ಲೋ॥ ವಿದ್ಯಾಶಿಲ್ಪಂಭೃತಿಃ ಸೇವಾ ಗೋರಕ್ಷ್ಯಂ ವಿಪಣಿಃಕೃಷಿಃ ॥ ಧೃತಿರ್ಭೈಕ್ಷ್ಯಂ ಕುಸೀದಂ ಚ ದಶಜೀವನಹೇತವಃ ॥ ಎಂದು ಹೇಳಲ್ಪಟ್ಟ ವಿದ್ಯಾ—ಪಾಠ ಹೇಳಿಕೊಡುವುದು (ಇದೇ ಅಧ್ಯಾಪನ) ಶಿಲ್ಪಂ—ಎಲೆಕಟ್ಟಿ ಮಾರುವುದು, ಕಸೂತಿ ವಸ್ತುಗಳು, ನೇಯಿಗೆ, ಬಟ್ಟೆ ಹೊಲಿಯುವುದು ಮುಂತಾದ್ದು. ಭೃತಿಃ—ಸಂಬಳದಿಂದ ಚಾಕರಿ ಮಾಡುವುದು. ಸೇವಾ—ಸಂಬಳವಿಲ್ಲದೆ ಪರರ ಆಜ್ಞೆಯನ್ನು ನಡೆಸುವುದು, ಗೋರಕ್ಷ್ಯಂ ಗೋವುಗಳನ್ನು ಸಾಕಿ ವೃದ್ಧಿಪಡಿಸುವುದು, ವಿಪಣಿಃ ಅಂಗಡಿ ಇಟ್ಟು ಪದಾರ್ಥಗಳನ್ನು ವಿಕ್ರಯಿಸುವುದು. ಕೃಷಿಃ—ಉಳುವುದು ರೈತಾಪೀ ಕೆಲಸ, ಧೃತಿಃ—ಎಷ್ಟು ಲಭ್ಯವಾಗುತ್ತೋ ಅಷ್ಟರಲ್ಲೇ ತೃಪ್ತಿಪಟ್ಟುಕೊಂಡು ಜೀವಿಸುವುದು ಭೈಕ್ಷ್ಯಂ—ಭಿಕ್ಷಾಟನೆ ಕುಸೀದಂ—ಬಡ್ಡಿಯಿಂದ ಜೀವಿಸುವುದು ಈ ರೀತಿ ಹೇಳಲ್ಪಟ್ಟ ಹತ್ತು ವಿಧವಾದ ಜೀವನ ವೃತ್ತಿಯಲ್ಲಿ ಬ್ರಾಹ್ಮಣನು ಚಾಕರಿ ಸೇವೆ, ಬಡ್ಡಿಯಿಂದ ಜೀವಿಕೆ ಈ ಮೂರನ್ನು ಬಿಟ್ಟುಬಿಡಬೇಕು. ಇದರಲ್ಲೂ ಎಂಥಾ ವಿಪತ್ತು ಪ್ರಾಪ್ತವಾದರೂ 'ಶ್ವವೃತ್ತ್ಯಾ ಕದಾಚನ' ಅಂದರೆ ಮತ್ತೊಬ್ಬರಲ್ಲಿ ಚಾಕರಿ ಸೇವಾ ಮಾಡಿಕೊಂಡು, ಬ್ರಾಹ್ಮಣರು ಎಂದಿಗೂ ಜೀವಿಸಬಾರದು. ವಿಪತ್ಕಾಲ ಕಳೆದ ಬಳಿಕ ಪುನಃ ಸ್ವವೃತ್ತಿಯಿಂದಲೇ ಜೀವಿಸಬೇಕೆಂಬ ರೀತಿ ವ್ಯಾಖ್ಯಾನ ಮಾಡಿರುತ್ತಾರೆ. ಇವುಗಳಲ್ಲಿ ಸೇವಾವೃತ್ತಿ ಬಹು ನಿಂದ್ಯವಾದದ್ದೆಂಬ ಸಂಗತಿ ಕವಿಗಳಿಂದಲೂ ವರ್ಣಿಸಲ್ಪಟ್ಟಿರುತ್ತೆ (ಶ್ಲೋ) ಧ್ಯೇಯತ್ವಂ ನೃಪತೇಃ ತತಃ ಸಚಿವತೋ ರಾಜ್ಞಃ ತತೋ ವಲ್ಲಭಾದನ್ಯೇಭ್ಯಶ್ಚ ವಸಂತಿ ಯೇಸ್ಯಭವನೇ ಲಬ್ಧಪ್ರಸಾದಾ ವಿಟಾಃ ॥ ದೈನ್ಯಾದುನ್ಮುಖದರ್ಶನಾಲಪನಕೈಃ ಪಿಂಡಾರ್ಥಮಾಯಸ್ಯತಃ ಸೇವಾಂ ಲಾಘವಕಾರಿಣೀಂ ಕೃತಧಿಯಃ ಸ್ಥಾನೇಶ್ವವೃತ್ತಿಂ ವಿದುಃ ॥ ಅಂದರೆ ಪ್ರಧಾನಾಧಿಕಾರಿಗಳ ಸಮೀಪದಲ್ಲಿ ಸೇವೆಗೋಸ್ಕರ ಇರತಕ್ಕ ಮನುಷ್ಯನು ಮೊದಲು ಮುಖ್ಯಾಧಿಕಾರಿಗೂ, ನಂತರ ಅವರ ಗುಮಾಸ್ತರಿಗೂ, ಅನಂತರ ಅವನಿಗೆ ತುಂಬಾ ಇಷ್ಟರಾದವರಿಗೂ, ಅವನ ಜೊತೆಯಲ್ಲಿ ಊಟ ಮುಂತಾದ್ದನ್ನು ಹೊಂದುವ ಇತರರಿಗೂ, ಇವರನ್ನು ಆಶ್ರಯಿಸುವ ವಿಟಪುರುಷರುಗಳಿಗೂ ಭಯಪಟ್ಟುಕೊಂಡು, ಕಂಡಾಗೆಲ್ಲಾ ಕೈಮುಗಿದು, ನಮ್ರನಾಗಿ ಸಮಯಾಸಮಯವಿಲ್ಲದೆ, ನಿದ್ರಾಹಾರಗಳನ್ನೂ ಬಿಟ್ಟು ಹೇಳಿದುದನ್ನೆಲ್ಲಾ ಮಾಡಿಕೊಂಡಿರತಕ್ಕವನ ಜೀವನವನ್ನು ಶಾಸ್ತ್ರಜ್ಞರು ಶ್ವವೃತ್ತಿ ಎಂದು ಕೂಗುವುದು ನ್ಯಾಯವಾಗಿರುತ್ತೆ. ಮುದ್ರಾರಾಕ್ಷಸನಾಟಕ (ಶ್ಲೋ) ಯದ್ವಕ್ತ್ರಂ ಮುಹುರೀಕ್ಷಸೇ ನಧನಿನಾಂ ಬ್ರೂಷೇ ನ ಚಾಟೂನ್ ಮೃಷಾ ನೈಷಾಂ ಗರ್ವವಚಃ ಶೃಣೋಷಿ ನ ಚ ತಾನ್ ಪ್ರತ್ಯಾಶಯಾ ಧಾವಸಿ ॥ ಕಾಲೇ ಬಾಲತೃಣಾನಿ ಖಾದಸಿ ಪರಂ ನಿದ್ರಾಸಿ ನಿದ್ರಾಗಮೇ ತನ್ಮೇ ಬ್ರೂಹಿ ಕುರಂಗ ಕುತ್ರ ಭವತಾ ಕಿಂನಾಮ ತಪ್ತಂ ತಪಃ ॥ ಎಲೈ ಜಿಂಕೆಯೇ, ನಮ್ಮಂತೆ ನೀನು ಧನಿಕರನ್ನು ಇಂದ್ರ, ಚಂದ್ರ ದೇವೇಂದ್ರನೆಂದು ಹೊಗಳಿ ಮುಖವನ್ನೇ ನೋಡಿಕೊಂಡು ಅನುಸರಿಸುವುದಿಲ್ಲ, ಅವರುಗಳು ಅಹಂಕಾರದಿಂದ ಹೇಳುವ ಬೈಗಳ ಈಗ ಬಾ, ಆಗ ಬಾ ಎಂಬ ಮಾತನ್ನು ಕೇಳುವುದಿಲ್ಲ, ಅವರಿಂದ ಪ್ರಯೋಜನವಾಗುತ್ತೆಂದು ಸ್ವಪ್ನದಲ್ಲೂ ಭಾವಿಸಿಲ್ಲ. ಹಸಿವು ಬಂದ ಕಾಲದಲ್ಲಿ ಸಣ್ಣಸಣ್ಣ ಗರಿಕೆ ಹುಲ್ಲುಗಳನ್ನು ತಿನ್ನುತ್ತ, ನಿದ್ರೆ ಬಂದಾಗ್ಯೆ ನಿದ್ರೆ ಮಾಡುತ್ತೀ. ನಮ್ಮಗಳಿಗೆ ಇವೆರಡೂ ಸಕಾಲಕ್ಕೆ ಒದಗದೇ ಕ್ಲೇಶಪಡುತ್ತೇವೆ, ಎಲೈ ಕುರಿಂಗವೇ, ನೀನು ತಿರ್ಯಗ್ಜಂತುವಾದರೂ ಇಂಥಾ ಸುಖವನ್ನನುಭವಿಸುವುದಕ್ಕೆ ಎಲ್ಲಿ ಎಂಥಾ ತಪಸ್ಸು ಮಾಡಿರುತ್ತೀ ನನಗೆ ಹೇಳು. (ಕುವಲಯಾನಂದ) ಈ ಎರಡು ಶ್ಲೋಕಗಳಿಂದ ಉತ್ತಮರು ಸೇವೆಯಿಂದ ಜೀವಿಸುವುದು ಕೇವಲ ಜಘನ್ಯವೆಂಬ ನೀತಿಯು ಸರ್ವರಿಗೂ ಹೃದಯಂಗಮವಾಗಿ ತೋರಬರುತ್ತೆ. ಬ್ರಾಹ್ಮಣ ಎಂದು ಹೆಸರು ಹೇಳಿದ ಕೂಡಲೇ ಅಸೂಯಾಕ್ರೋಧಗಳನ್ನು ತೋರಿಸುವ ಈ ಕಾಲದಲ್ಲಿ ಪರಸೇವೆಯನ್ನೂ, ಅಧಿಕಾರವನ್ನೂ ಬಿಟ್ಟು ಕೃಷಿವಾಣಿಜ್ಯಗಳಿಂದ ಬ್ರಾಹ್ಮಣ್ಯವನ್ನು ಕಾಪಾಡಿಕೊಳ್ಳುವುದು ಶ್ರೇಯಸ್ಕರವಾದದ್ದು. ಈ ಭಾಗದಲ್ಲಿ ಋಗ್ವೇದ ಏಳನೇ ಅಷ್ಟಕದಲ್ಲಿ 'ಅಕ್ಷೈರ್ಮಾದೀವ್ಯಃ ಕೃಷಿಮಿತ್ಕೃಷಸ್ವ ವಿತ್ತೇ ರಮಸ್ವ ಬಹುಮನ್ಯಮಾನಃ ॥' ಅಂದರೆ ಎಲೈ ಮನುಷ್ಯನೇ, ಪಗಡೆ ಮುಂತಾದ ದುರ್ವ್ಯಸನಗಳಿಂದ ಕಾಲ ಕಳೆಯಬೇಡ. ವ್ಯವಸಾಯ ಮಾಡಿ ಧಾನ್ಯಾದಿಗಳನ್ನು ಸಂಪಾದಿಸು. ಅದರಲ್ಲಿ ಬಂದ ದ್ರವ್ಯದಿಂದ ತೃಪ್ತಿಪಟ್ಟು, ಕರ್ಮಾನುಷ್ಠಾನಪರನಾಗಿ ಶ್ರೇಯಸ್ಸನ್ನು ಹೊಂದು ಎಂದು ಸ್ಮೃತಿಗಳಿಗೂ ಮೂಲಭೂತವಾದ ವೇದಗಳಲ್ಲೆಲ್ಲಾ ಶ್ರೇಷ್ಠವಾದ ಋಗ್ವೇದವು ಜಾಮೀನಿಯನ್ನು ಕೊಡುತ್ತಿರುವುದು. ಇವುಗಳನ್ನೆಲ್ಲಾ ಪರಿಶೀಲಿಸದೆ, ಸ್ವಧರ್ಮಗಳನ್ನೆಲ್ಲಾ ದುರಭಿಮಾನದಿಂದ ತ್ಯಜಿಸಿ, ಕೇವಲ ಅರ್ಥಾತುರರಾಗಿ, ಪರಧರ್ಮವನ್ನು ಅವಲಂಬಿಸಿ, ಅದರಲ್ಲಿ ಪರಸ್ಪರ ಉಪಕಾರವನ್ನು ಮಾಡದೆ, ಸ್ವಾರ್ಥಪರರಾಗಿ, ಉಭಯಭ್ರಷ್ಟತೆಯನ್ನು ಹೊಂದುವುದು ಅಯುಕ್ತವಾದದ್ದು. ನಮ್ಮ ಸಂಸ್ಥಾನದಲ್ಲೇ ಬಹುಕಾಲದಿಂದ ಆಸ್ಥಾನ ಧರ್ಮಾಧಿಕಾರಿಗಳಾಗಿದ್ದ ಕುಪ್ಪೆ ನರಸಿಂಹಶಾಸ್ತ್ರಿಗಳ ವಂಶಸ್ಥರಾದ ಒಬ್ಬ ದೊಡ್ಡ ಪಂಡಿತರು

200 ವರ್ಷದ ಹಿಂದೆ ತಂಜಾವೂರಿನಲ್ಲಿ ಧರ್ಮಾಧಿಕಾರಿಗಳಾಗಿದ್ದರು. ಅಗ್ನಿ ಅನೇಕಾರವರ್ಗದವರು ಅವರಿಗೆ ಅವಮಾನ ಮಾಡಲು, ಎರಡು ಎತ್ತುಗಳನ್ನು ತರಿಸಿ, ನೇಗಲಿಗೆ ಕಟ್ಟಿ, ಭೂಮಿಯನ್ನು ಉತ್ತು, ಕೃಷಿಮಾಡಿ ಪರಾಶ್ರಯವಿಲ್ಲದೇ ಸ್ವಾತಂತ್ರ್ಯದಿಂದ ಜೀವನಮಾಡಿ, ಸರ್ವರಿಗೂ ಆಶ್ಚರ್ಯ ಉಂಟುಮಾಡಿದರು. ಈ ಸಂಗತಿಯು ದಕ್ಷಿಣ ಇಂಡಿಯಾದಲ್ಲಿ ಪ್ರಸಿದ್ಧವಾಗಿರುವ ಮಹಿಷಶತಕವೆಂಬ ಗ್ರಂಥದಿಂದ ವ್ಯಕ್ತವಾಗುತ್ತೆ. ಈ ಗ್ರಂಥದಲ್ಲಿ ಮಹಿಷ (ಎಮ್ಮೆ) ವನ್ನ ಬಹುವಾಗಿ ಹೊಗಳಿ, ತನ್ನ ಕೃಷಿಗೆ ಸಾಧನವಾದ್ದರಿಂದ, ನೀನೇ ರಾಜ, ನೀನೇ ಬೃಹಸ್ಪತಿ, ನೀನೇ ಶಂಕರ, ರಾಮಾನುಜ ಮಧ್ವ ರೆಂದು ಶ್ಲೋಕಗಳಿಂದ ಬಹು ಚಮತ್ಕಾರವಾಗಿ ಹೇಳಿರುವರು. ಈ ಗ್ರಂಥದಲ್ಲೇ ಬ್ರಾಹ್ಮಣ ಕೃಷಿ ಮಾಡಬಹುದೇ ಎಂದು ಕೇಳಿದ್ದಕ್ಕೆ—ಶ್ಲೋ॥ ಆಕ್ಷೈರ್ಮಾ ... ಕೃಷಿಮಿತ್ ಕೃಷಸ್ವ ... ಎಂಬ ಶ್ಲೋಕದಿಂದ ಹಿಂದೆ ಹೇಳಿದ ಶ್ರುತಿವಾಕ್ಯವನ್ನು ಉದಹರಿಸಿರುವರು ಆದ್ದರಿಂದ ಇಂಥಾ ಬ್ರಹ್ಮದ್ವೇಷ ಕಾಲದಲ್ಲಿ ತ್ರಿಮಧಸ್ಥರು ಒಗ್ಗಟ್ಟಾಗಿ 'ಪರಸ್ಪರಂಭಾವಯಂತಃ ಶ್ರೇಯಃಪರಮವಾಪ್ಸ್ಯಥ' ಎಂಬ ಗೀತಾವಾಕ್ಯವನ್ನು ಪರಿಶೀಲಿಸಿ, ಪರಸ್ಪರ ಸಹಾಯಮಾಡಿಕೊಂಡು, ಕೃಷಿ, ವಾಣಿಜ್ಯ ಮುಂತಾದ ವೃತ್ತಿಗಳನ್ನವಲಂಬಿಸಿ, ಸ್ವದೇಶ ಸ್ವಜನಾಭಿಮಾನವನ್ನೂ ಕೂಡ ಹಾಳುಮಾಡುವ ವಿದ್ಯಾ ಅಧಿಕಾರಗಳನ್ನ ತ್ಯಜಿಸಿ, ತಮ್ಮಗಳಿಗೆ ಅನಾದಿಯಾಗಿ ಬಂದಿರುವ ಆರ್ಯತೆಯನ್ನು ಕಾಪಾಡಿಕೊಂಡು, ಆರ್ಯರೆಂಬ ಹೆಸರನ್ನು ಸ್ಥಿರಪಡಿಸಿಕೊಳ್ಳುವಂತೆ ಭಗವಂತನು ... ಎಂದು ಪ್ರಾರ್ಥಿಸುತ್ತೇನೆ

ಕೆ. ಗೋಪಾಲಕೃಷ್ಣಶಾಸ್ತ್ರಿ, ಆಸ್ಥಾನವಿದ್ವಾನ್.

ಪತ್ರವ್ಯವಹಾರಗಳು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ [ಎಡಿಟರ್.]

ಡಿಸ್ಟ್ರಿಕ್ಟ್‌ಬೋರ್ಡ್.

ಕೊಡಗುಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗಿನಲ್ಲು ನಾಲ್ಕು ಮಂದಿ ಉದ್ಯೋಗಸ್ಥರಲ್ಲದ ಮೆಂಬರುಗಳು ಕಳೆದ ಸಲ ಮೀಟಿಂಗಿನಲ್ಲು ... ಈ ವಿಷಯ ಅವರಿಗೆ ಅದ ಅಸಮಾಧಾನಕ್ಕಾಗಿ ಇದೆ ತಾ॥ 16-9-21 ರಲ್ಲು ನಡೆದ ಡಿ॥ ಬೋರ್ಡಿನ ಮೀಟಿಂಗಿಗೆ ಹೋಗದೆ ತಮ್ಮ ಮನಸ್ಸಿನ ವ್ಯಸನವನ್ನು ... ಪ್ರತಿನಿಧಿಗಳನ್ನು ಚುನಾಯಿಸಿದ ... ನೆಗೆ ಚಿಂತಕವಾದ ಸಂಗತಿಯಾಗಿರುತ್ತೆ.

ಪ್ರಜೆಗಳ ಪ್ರತಿನಿಧಿಗಳೆಂದು ಹೊರಗಿನ ... ಒಂದು ಪ್ರದೇಶದಲ್ಲು ... ಮೆಂಬರುಗಳು ಕೆಲವು ಅಸಮಾಧಾನಕ್ಕಾಗಿ ಮೀಟಿಂಗಿನಿಂದ ಗೈರಾಜರಾಗುವ ಮೆಂಬರುಗಳು ಕೆಲವು ಅಧಿಕಾರವನ್ನು ... ಕೆಲವು ಸರಕಾರ ... ಒಂದು. ... (Paradise) ಭಾವಿಸುವ ... ಡಿ॥ ಬೋರ್ಡು, ... ಅಫಿಷಿಯಲ್ ಮೆಂಬರುಗಳ ... 'ಕೊಡಗು ಫಾ' ... ಓದುಗರೇ ನೋಡಬೇಕು. ವಾಚಕರೇ ಆಲೋಚಿಸಿರಿ

ಮಡಿಕೇರಿ ತಾಲೋಕಿನ ರೈತ

ಯ್ಯಾ,

ಈಗ್ಗೆ ಸುಮಾರು ೩ ತಿಂಗಳ ಹಿಂದೆ, ... ಗ್ರಾಮದವರೆಲ್ಲರೂ ಸೇರಿ ಎಲ್ಲಾ ... ಗ್ರಾಮದಲ್ಲು ... ಒಂದು ಮೀಟಿಂಗ್ ... ಅದೇಮೇರೆ ಈವರೆಗೆ ನಡೆಯುತ್ತಾ ಬಂತು.

ಆದರೆ ಈಗ ಕೆಲವು ದಿನಗಳಿಂದ ಈ ಗ್ರಾಮದ ಒಂದು ... ಮೂರುನಾಲ್ಕು ... ಒಂದು ... ಇವರನ್ನು ಹಿಂಬಾಲಿಸುವ ... ಈ ಸಾಲಿನಲ್ಲಿ ೨ ಜನರು ಮಾತ್ರ ಇರುತ್ತಾರೆ. ... ಗ್ರಾಮದ ಒಗ್ಗಟ್ಟನ್ನು ... ನಕರವಾಗಿದೆ.

ಸಂಪಾದಕರಾದನಲ್ಲು ಹೊತೆಯುವ ನಿಯಮದ ಗ್ರಾಮದ ... ಮನ್ನಿಸುವ ... ಪತ್ರಿಕೆಯಲ್ಲಿ ... ಕಾಣದ ವಿಷಯ ವಿಚಾರಿಸಬೇಕಾಗಿದೆ.

ಆದರಿಂದ ಇನ್ನಾದರೂ ದಯವಿಟ್ಟು ... ಕಾಪಾಡುವರಾಗಿ ನಂಬು

ಕ್ಕೆ. ... ಕೆರೆ ... ಒಪ್ಪಿ ... ಗ್ರಾಮಸ್ಥರ ... ಕೇಳುತ್ತದೆ. ... ಬೆಳೆಯ ನಷ್ಟ ಹೋಗುತ್ತಿದೆ.

ಗ್ರಾಮಸ್ಥವರಾ.

ಮಹಾಸ್ವಾಮಿ,

ತಾ॥ 28-10-1921 ರ "ಕೊಡಗು" ಪತ್ರಿಕೆಯಲ್ಲಿ ಮ॥ ರಾ॥ ಕೊಡಂದೇರ ಕುಟ್ಟಪ್ಪಯವರು ಮತ್ತು ಕೋದಂಡ ಅಪ್ಪಯ್ಯನವರು ಸಹ ಬರೆದ ಪ್ರಸ್ತುತಕ್ಕೆ ಜವಾಬು—

ಇಂಡಿಯ ಸ್ಟೇಟ್ ಸೆಕ್ರೆಟರಿ ಮತ್ತು ವೈಸ್‌ರಾಯರಿಗೆ ಕೊಟ್ಟಿ ... "(ಪೋಲ್) ಎನ್ನುವ ಕೌನ್ಸಿಲ್ ಕೊಟ್ಟಿದೆ ... ಆ ನಿಬಂಧನೆ 9 ನೇ ಕಲಮಿನ ಪ್ರಕಾರ ... ಪ್ರಾವಿನ್ಸ್‌ಗಳಿಗೆ ಕೊಡಬಹುದಾದ ಸುಧಾರಣೆಗಳನ್ನು ನಮ್ಮ ದೇಶಕ್ಕೆ ... ಪ್ರಜಾ ಪ್ರತಿನಿಧಿಸಭೆಯೆಂದು ... ಚುನಾಯಿಸಲ್ಪಡತಕ್ಕ ... ಅಭಿಪ್ರಾಯಗಳನ್ನು ಕೊಡುವ ... ಅದರಲ್ಲಿ ಹೇಳಿರುವ ... ಸುಧಾರಣೆಗಳಲ್ಲಾ ನಮಗೆ ಸಿಕ್ಕಿದರೆ ಬಹಳಮಟ್ಟಿಗೆ ತೃಪ್ತಿಯಾಗಬಹುದು.

"ಕೌನ್ಸಿಲಿನ ಮೀಟಿಂಗಿನಲ್ಲಿ ಸರಕಾರದವರು ಕೊಡುವ ಸಲಹೆಯನ್ನು ನಾವು ಒಪ್ಪಿಕೊಂಡಿರುತ್ತೇವೆಂಬುದು ದೊಡ್ಡ ಸುಳ್ಳು" ಎಂದ ಬರೆಯುತ್ತಾರೆ. ... ಮೌನದಿಂದಲೇ ಒಪ್ಪಿದಂತಾಗಲಿಲ್ಲವೇ ?

ಗ್ರಿಗ್‌ಸ್ಸನ್ ಸಾಹೇಬರ ಜೋಯಲ್ಲಿ ... ಪ್ರಾವಿನ್ಸ್‌ಗಳಿಗೆ ಕೊಡುವ ಸುಧಾರಣೆಗಳು ಈ ದೇಶಕ್ಕೆ ... ಓಟು ಕೇಳಿಕೊಂಡಿದ್ದಾಗಿದೆ.

ಗವರ್ನ್‌ಮೆಂಟ್ ಆಫ್ ಇಂಡಿಯ ಆಕ್ಟ್ ಇದರ ಆಧೀನಕ್ಕೆ 1921 ನೇ ಇಸ್ವಿಯಲ್ಲಿ ... ಪಾರ್ಲಿಮೆಂಟಿನಲ್ಲಿ 1919 ನೇ ಇಸ್ವಿಯಲ್ಲಿ ... 1920 ನೇ ಇಸ್ವಿಯ ... ಕೌನ್ಸಿಲ್ ಮೀಟಿಂಗಿನಲ್ಲು ... ಈ ಮಹಾಶಯರ ಉದ್ದೇಶವೇನು ? ...

ಈ ವರ್ಷದ ಜನರಲ್ ಮೀಟಿಂಗಿನಲ್ಲು ... (Governor's Province) ... ಸುಧಾರಕ.

ಅಯ್ಯಾ,

ನಮ್ಮ ಪತ್ರಿಕೆಯ 14 ನೇ ಸಂಚಿಕೆಯಲ್ಲಿ (ಹಳ್ಳಿಯವನು) ... ಉತ್ತರವನ್ನು ನೋಡಿ ... ಲಿಂಗಾಯತ ... ಅನುಚಿತವು

ಲಿಂಗಾಯಿತರು ಕೊಪ್ಪಿ ಪೇಟೆ ... ಹಾಸ್ಟಲ್ ... ವರ ಲಾಯಕ್ಕಾ ...

ಹಾಸ್ಟಲಲ್ಲಿ ... ಕೊಟ್ಟು ... ಹಾಸ್ಟಲ್ ... ರಾಮಕೃಷ್ಣ ಹಾಸ್ಟಲ್ ಎಂಬ ... ಹಾಸ್ಟಲ್ಲನ್ನು ... ಅಮ್ಮಕೊಡವರಿಗೆ ... ಲಿಂಗಾಯಿತರು ...

ಬಡ ಹುಡುಗರಿಗೆ ಸಹಾಯವಿಲ್ಲ ವೆಂದು ಹಳ್ಳಿಯವನಿಗೆ ... ಮ॥ ಗುಬ್ಬಿ ಬಸಪ್ಪನವರು ... ಹಾಸ್ಟಲ್ ... ಮುಂದೆ ... ಹಳ್ಳಿಯವನು ...

ಹಿತಚಿಂತಕ.

ಅಯ್ಯಾ,

... ಡಿ. ಬೊ. ಮೆಂಬರುಗಳು ... "ಕೊಡಗು" ಪತ್ರದ ...

ಈ ಕೊಡಗು ಪತ್ರವು ...

ಡಿ. ಬೊ. ಮೆಂಬರುಗಳನ್ನು ಚುನಾಯಿಸುವ ... ಓಟು ... ಡಿ. ಬೊ. ಮೆಂಬರಾಗಿ ...

ಮುಂದೆ ...

ಧನಿಕರೊಳಗಿನವರ ... ಡಿ. ಬೊ. ... ತಾರೀಖು 23 ರ "ಕೊಡಗು" ಪತ್ರದ 4 ನೇ ಪುಟದಲ್ಲು ...

ಅದ್ದರಿಂದ ...

ಹಾಗೆ ... ಡಿ. ಬೊ. ...

ನಮ್ಮ ... ಧನ್ಯವಾದ ...

ಓದುಗ.

ಮಾರಾಟಕ್ಕೆ

ಅಸ್ತಿಪಡೆಯಿರಿ—ಭೂಮಾಲೀಕರಾಗಿ—ಐಶ್ವರ್ಯಹೊಂದಿರಿ.

ಗೋಣಿಕೊಪ್ಪಲಿನಿಂದ ತಿತಿಮತ್ತಿಗೆ ಹೋಗುವ ರಸ್ತೆ ಬಾಜು ಒಂಟಿ ಅಂಗಡಿ ಬಳಿ ಇರುವ (40) ನಲವತ್ತು ಎಕರೆ ಕಾಫಿತೋಟ ಮತ್ತು (25) ಇಪ್ಪತ್ತೈದು ಎಕರೆ ಕಾಡು ಸಹ ಒಳ್ಳೆ ಸ್ಥಿತಿಯಲ್ಲು ಇರುವದು, ಶುದ್ಧಕ್ರಯಕ್ಕೆ ಮಾರಾಟವಾಗುತ್ತೆ. ಇದರಲ್ಲಿ ಕಾಫಿ ಮೆಣಸು ವಗೈರೆ ಸಹಲಿಂದ ವರ್ಷ ಒಂದಕ್ಕೆ ಸುಮಾರು (ರೂ. 5000) ಐದು ಸಾವಿರ ರೂಪಾಯಿ ಉತ್ಪನ್ನವಾಗಿ ಬರುತ್ತದೆ. ಹೆಚ್ಚಿನ ವಿಷಯಕ್ಕೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

4-1

ಮೇನೇಜರ್, ವೀರರಾಜಪೇಟೆ ಪ್ರೆಸ್ಸ್, ವೀರರಾಜಪೇಟೆ

Manager, Virajpet Press, Virajpet.

AN APPROVED FIRM FOR THE SUPPLY OF STATIONERY ARTICLES TO THE GOVT. OF

H. H. the Maharaja of Mysore.

ನಮ್ಮಲ್ಲಿ ಎಲ್ಲಾ ವಿಧವಾದ ಸ್ಟೇಷನರಿ ಸಾಮಾನು ಗಳೂ, ಫೌಂಟೆನ್ ಪೇನಾಗಳೂ, ಪ್ರಿಂಟಿಂಗ್ ಮತ್ತು ರೈಟಿಂಗ್ ಪೇಪರುಗಳೂ, ಎಕ್ಸರ್‌ಸೈಜ್ ಬುಕ್ಕುಗಳೂ, ಸ್ಟೂಡೆಂಟ್ಸ್ ನೋಟ್ ಬುಕ್ಕುಗಳೂ, ರಫ್ ನೋಟು ಬುಕ್ಕುಗಳೂ, ಡ್ರಾಯಿಂಗ್ ಮತ್ತು ಟೈಪ್ ರೈಟಿಂಗ್ ಪೇಪರುಗಳೂ, ವರ್ತಕರಿಗೆ ಅನುಕೂಲವಾದ ಅಕೌಂಟು ಬುಕ್ಕುಗಳೂ ಸಹ ಹಸನಾದ ಕಾಗದದಿಂದ ತಯಾರಾಗಿ ಬಿಕರಿಗೆ ಸಿದ್ಧವಾಗಿವೆ. ದುಯಂ ಕಾಗದದಿಂದ ತಯಾರಿಸಿರುವ ಬುಕ್ಕುಗಳನ್ನು ಕೊಂಡು ಮೋಸಹೋಗಬೇಡಿರಿ. ಬೇಕಾದ ಸಾಮಾನುಗಳಿಗೆ ಕೂಡಲೆ ಆರ್ಡರ್ ಕೊಡುವಿರಾಗಿ ನಂಬಿದೇವೆ. ವ್ಯಾಪಾರಸ್ಥರಿಗೆ ಸರಿಯಾದ ಡಿಸ್ಕೌಂಟು ಸಹ ದೊರೆಯುತ್ತೆ. 24–8

M. N. K. & Bros.
Book-Binders & Stationers. MYSORE.

ಖ್ಯಾತಿಯಿಂದ ಗುಣಪಡಿಸುವ ಔಷಧಿಗಳು.

(1) ಮಹಾಮದನಕಾಮೇಶ್ವರಿ ಲೇಹವು:—ಆಯುರ್ವೇದ ಪದ್ಧತಿಪ್ರಕಾರ ತಯಾರಿಸಲ್ಪಟ್ಟಿದ್ದು, ಇದರ ಸೇವನೆಯಿಂದ ಧಾತು ಕ್ಷೀಣತೆ, ಅಜೀರ್ಣ, ಎದೇನೋವು, ಶರೀರದ ಶ್ರಮದಿಂದ ಉಂಟಾದ ಅಶಕ್ತಿಯನ್ನೂ, ದೇಹಾಲಸ್ಯವನ್ನೂ ಪರಿಹರಿಸುತ್ತದೆ. ವೀರ್ಯಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು ಸ್ತ್ರೀಯರು ಪುರುಷರು ಇದನ್ನು ಉಪಯೋಗಿಸಬಹುದು 40 ಸಲ ಸೇವಿಸುವ ಡಬ್ಬಿ 1 ಕ್ಕೆ 1—12—0. ಟಪ್ಪಾಲ್ ಖರ್ಚು 6 ಆಣೆ 3 ಡಬ್ಬಿಗಳಿಗೆ 4—12—0 ಟ. ಖ. 10 ಆಣೆ.

(2) ಜೀವನಪ್ರಾಶ್ಯ:—ಇದರ ಸೇವನೆಯಿಂದ ಕ್ಷಯ, ರಾಜಯಕ್ಷ್ಮ, ಉರಕ್ಷತ, ಕಾಸ, ಶ್ವಾಸ, ಹೃದ್ರೋಗ ಇವೇ ಮೊದಲಾದ ರೋಗಗಳನ್ನು ನಾಶಪಡಿಸಿ ಜೀರ್ಣಶಕ್ತಿಯನ್ನು ವೃದ್ಧಿಪಡಿಸಿ ಶರೀರಕ್ಕೆ ಸೌಂದರ್ಯವನ್ನು ಯವನಕಾಲದಲ್ಲಿದ್ದ ಹಾಗೆಯೇ ಇಂದ್ರಿಯಪಟುತ್ವವನ್ನು ಕೊಡುವದು ಮತ್ತು ಶರೀರದಾರ್ಢ್ಯವನ್ನೂ. ಅವಯವಗಳ ಬಲವನ್ನೂ ವೃದ್ಧಿಮಾಡುತ್ತದೆ. ಮತ್ತು ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸಿ ಬುದ್ಧಿಪಟುತ್ವವನ್ನು ಅಧಿಕಮಾಡುವುದು. ಈ ಔಷಧವು ಬಾಲಕರಿಗೂ, ವೃದ್ಧರಿಗೂ ಬಹಳ ಪ್ರಯೋಜನ. ಇದು ಬಹಳ ರುಚಿಕರವಾಗಿರುವುದು. ಇದು ಚ್ಯವನನೆಂಬ ವೃದ್ಧಮಹರ್ಷಿಗೆ ಅಶ್ವಿನಿದೇವತೆಗಳುಪಯೋಗಿಸಲ್ಪಟ್ಟ ರಸಾಯನವಾಗಿರುತ್ತದೆ. 1 ಸೇರಿನ ಡಬ್ಬಿ 1 ಕ್ಕೆ 2—0—0. 3 ಡಬ್ಬಿಗಳಿಗೆ 5—8—0 ರೂಪಾಯಿ.

(3) ಅಶೋಕಾರಿಷ್ಟ ಮತ್ತು ಮಾತ್ರೆ:—ಹೆಂಗಸರು ಕ್ರಮತಪ್ಪಿ ಮುಟ್ಟಾಗುವುದು, ರಜೋಸಮಯದಲ್ಲಿ ಅತ್ಯಲ್ಪ ಅತಿರೇಕವಾಗಲಿ, ರಕ್ತಸುರಿಯುವುದು, ಹೊಟ್ಟೇನೋವು ಸೊಂಟನೋವು, ಬಲಹೀನ, ಬಂಜೆಯಾಗಿರುವಿಕೆ ಬಿಳೇಪ್ರದರ, ಕುಸುಮರೋಗ, ಗರ್ಭಕೋಶ ಉತ್ಕ್ರಮ ತಪ್ಪುವಿಕೆ, ಮತ್ತು ಸ್ತ್ರೀಗಳಿಗೆ ಉಂಟಾಗತಕ್ಕ ಸಕಲ ರೋಗಗಳನ್ನು ಖಂಡಿತವಾಗಿ ಗುಣಪಡಿಸುತ್ತದೆ. 8 ಔನ್ಸ್ ಬಾಟ್ಲಿಗೂ, 3 ಡಬ್ಬಿ ಮಾತ್ರೆಗೂ 2—0—0. 3 ಬಾಟ್ಲಿಗಳಿಗೆ ಮತ್ತು ಡಬ್ಬಿಗಳಿಗೆ 5—8—0 ರೂ.

(4) ಪ್ರಸುತಾವಲೇಹ:—ಹೆತ್ತ ನಂತರ ಈ ಔಷಧಿಯನ್ನು ಸೇವಿಸುವದರಿಂದ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮತ್ತು ಗರ್ಭದಿಂದ ಸಂಭವಿಸುವ ಸಕಲ ವೇದನೆಗಳನ್ನು ಖಂಡಿತ ಗುಣಮಾಡುವದು ಮತ್ತು ಧಾತುಪುಷ್ಟಿಯನ್ನು ಉಂಟುಮಾಡುವುದು ಇದು ತಾಯಿಗೆ ಹೇಗೋ ಹಾಗೆಯೇ ಮಗುವಿಗೂ ಬಹಳ ಪ್ರಯೋಜನ, ಡಬ್ಬಿ 1 ಕ್ಕೆ 2—0—0, ಟಪ್ಪಾಲ್ ಖರ್ಚು 6 ಆಣೆ.

(5) ಪಿತ್ತಹಾರಿಚೂರ್ಣ:—ಮಲಬದ್ಧತೆ, ಬಹುಮೂತ್ರ, ಛಳಿಜ್ವರ, ಜ್ವರಗೆಟ್ಟೆ ತಲೆತಿರುಗುವಿಕೆ, ಆಮ್ಲಪಿತ್ತ, ಹೊಟ್ಟೆ ಹಸಿವಿಲ್ಲದೆ ಇರುವಿಕೆ ಬಾಯಿಯಲ್ಲಿ ಅರ್, ವಾತಪಿತ್ತ ಕಫ ಇವುಗಳಿಗೆ ದಿವ್ಯ ಔಷಧಿ 1 ಡಬ್ಬಿಗೆ 12 ಆಣೆ ಟಪ್ಪಾಲ್ ಖರ್ಚು 6 ಆಣೆ 3 ಡಬ್ಬಿಗಳಿಗೆ 2—0—0.

(6) ಮೇಹಕುಠಾರ:—ಮೂತ್ರಕೃಚ್ಛ್ರ ಅಶ್ಮರಿ, ವ್ರಣ, ಮೂತ್ರ ಹೋಗುವಾಗ್ಗೆ ಉರಿಯನ್ನು ಕೀವನ್ನು ಕೂಡಲೆ ನಿಲ್ಲಿಸಿ ಖಂಡಿತ ಗುಣ ಕೊಡುವುದು, 14 ದಿವಸದ ಔಷಧ ಡಬ್ಬಿ 1 ಕ್ಕೆ ಕ್ರಯ 2—0—0. 3 ಡಬ್ಬಿಗಳಿಗೆ 5—10—0.

(7) ಬಾಲಗ್ರಹ ಗುಟಿಕೆ:—ಮಕ್ಕಳಿಗೆ ಮಾಂದ್ಯ ಬಾಲಗ್ರಹ ಇವೇ ಮೊದಲಾದ ಕಷ್ಟದಿಂದ ಉಂಟಾಗತಕ್ಕ ಸಕಲ ರೋಗಗಳನ್ನು ಗುಣಪಡಿಸಲಿಕ್ಕೆ ರಾಮಬಾಣದಂತಿರುವುದು ಬಾಟ್ಲಿ 1 ಕ್ಕೆ 10 ಆಣೆ. 3 ಬಾಟ್ಲಿಗಳಿಗೆ 1-10-0 ಒಂದರಿಂದ 3 ಬಾಟ್ಲಿವರೆಗೆ ಟಪ್ಪಾಲ್ ಖರ್ಚು 6 ಆಣೆ.

(8) ಶ್ವಾಸಕುಠಾರಗುಟಿಕೆ:—ನಂಬರ್ 1. ನಂ. 2. ಈ ಎರಡು ನಮೂನೆಯ ಗುಟಿಕೆಗಳ ಸೇವನೆಯಿಂದ ತ್ರಿದೋಷ (ಕಫ, ವಾತ, ಪಿತ್ತ) ದಿಂದ ಉಂಟಾಗುವ ಶ್ವಾಸಕಾಸವನ್ನು ನಿರ್ಮೂಲಗೊಳಿಸುವ ಸಿದ್ಧೌಷಧವಾಗಿರುವದು. 2 ಬಾಟ್ಲಿ ಮಾತ್ರೆಗಳಿಗೆ 1—2—0. 6 ಬಾಟ್ಲಿಗಳಿಗೆ 3 ರೂ. 2 ರಿಂದ 6 ಬಾಟ್ಲಿವರೆಗೆ ಟ. ಖ. 6 ಆಣೆ

(9) ಮಹಾಜ್ವರಾಂಕುಶ:—ಕಫಜ್ವರ, ಪಿತ್ತಜ್ವರ, ವಾತಜ್ವರ, ಏಕಾಹಿಕಜ್ವರ, ದ್ವ್ಯಾಹಿಕ, ತ್ರ್ಯಾಹಿಕ, ಚಾತುರ್ಥಿಕ, ಇನ್‌ಫ್ಲೂಯಂಜಾ, ನಿಮೋನಿಯಾ ಮೊದಲಾದ ಭಯಂಕರ ಜ್ವರಗಳನ್ನು ಸಹ ಖಂಡಿತ ಗುಣಪಡಿಸುವುದು. 1 ಬಾಟ್ಲಿಗೆ 10 ಆಣೆ. 3 ಬಾಟ್ಲಿಗಳಿಗೆ 1—10—0 ಟ. ಖರ್ಚು 1 ರಿಂದ 3 ಬಾಟ್ಲಿವರೆಗೆ 6 ಆಣೆ

(10) ಇಚ್ಛಾಭೇದಿ:—ಆಯಾಸವನ್ನು ಉಂಟುಮಾಡದ ಸುಖವಿರೇಚಕ ಬಾಟ್ಲಿ 1 ಕ್ಕೆ 12 ಆಣೆ. 3 ಬಾಟ್ಲಿಗಳಿಗೆ 2 ರೂ. 1 ರಿಂದ 3 ಬಾಟ್ಲಿವರೆಗೆ ಟ. ಖ. 6 ಆಣೆ.

(11) ರಕ್ತಶುದ್ಧಿ ಚೂರ್ಣ:—ಮೇಹವ, ಉಪದಂಶ ಸಮ್ಮಂದ ಮೈಯಲ್ಲಿ ವ್ಯಾಪಿಸಿರುವ ವ್ರಣಕಜ್ಜಿ, ಮೈ ತುರಿಸುವಿಕೆ, ಮಲಬದ್ಧತೆ ಮುಂತಾದುವುಗಳನ್ನು ಹೋಗಲಾಡಿಸಿ ಹಸಿವೆಯನ್ನು ತ್ರಾಣವನ್ನು ಧಾತುಪುಷ್ಟಿಯನ್ನು ಉಂಟುಮಾಡುತ್ತದೆ. 1 ಡಬ್ಬಿ 1—0—0 ರೂ. ಟ ಖ 5 ಆಣೆ.

ಗುಣವಿಶೇಷ. ಕ್ರಯ ಕಮ್ಮಿ. ಪುರಿ ಹೆಚ್ಚು.

(12) ದಂತಶಾಂತಿಯ ಚೂರ್ಣ:—ಹಲ್ಲುನೋವಿಗೆ ಖಾತ್ರಿಯಾದ ಔಷಧಿ ಇದರ ಉಪಯೋಗದಿಂದ ಹಲ್ಲಿನ ಕ್ರಿಮಿಗಳನ್ನು ನಾಶಪಡಿಸಿ, ಹಲ್ಲಿನ ವೇದನೆಯನ್ನು ಖಂಡಿತ ಗುಣಪಡಿಸಿ, ವಸಡುಗಳ ಬೀಗು ಹಲ್ಲಿನಿಂದ ಬರುವ ರಕ್ತವನ್ನು, ಕೀವನ್ನು, ಬಾಯಿಯ ದುರ್ವಾಸನೆಯನ್ನು, ಹಲ್ಲುಗಳ ಬುಡದಲ್ಲಿ ಸುಣ್ಣ ಕಟ್ಟುವುದನ್ನು ಗುಣಪಡಿಸಿ ಅಲ್ಲಾಡುವ ಹಲ್ಲುಗಳನ್ನು ವಜ್ರದೋಪಾದಿಯಲ್ಲಿ ಗಟ್ಟಿಮಾಡಿ ನಾಲಿಗೆಗೆ ರುಚಿಯನ್ನು ಸಹ ಉಂಟುಮಾಡುತ್ತದೆ. ಟಿನ್ 1ಕ್ಕೆ 3 ಆಣೆ. 6 ಟಿನ್ನಿಗೆ 1—1—0. ಟ. ಖರ್ಚು 5 ಆಣೆ. 12 ಡಬ್ಬಿಗಳಿಗೆ ಟಪ್ಪಾಲ್ ಖರ್ಚು 6 ಆಣೆ.

(13) ಗಜಕರ್ಣದ ಮುಲಾಮು:—ಗುಳ ಮೇಯುವದು, ದದ್ದು, ಗಜಕರ್ಣ, ಕಜ್ಜಿ, ಇಸುಬು ಹುಳಕಡ್ಡಿ ಮೊದಲಾದ ಸಮಸ್ತ ಚರ್ಮರೋಗಗಳು ಮೂರೇ ದಿವಸಗಳಲ್ಲಿ ಗುಣವಾಗುವದು. ಡಬ್ಬಿ 1 ಕ್ಕೆ 5 ಆಣೆ. 3 ಡಬ್ಬಿಗಳಿಗೆ 15 ಆಣೆ. ಟ. ಖ. 5 ಆಣೆ. 6 ಡಬ್ಬಿಗಳಿಗೆ 1—12—0 12 ಡಬ್ಬಿಗಳಿಗೆ 3 ರೂ. ಟಪ್ಪಾಲ್ ಖರ್ಚು 10 ಆಣೆ

(14) ವಿಶ್ವಾಂಜನ:—ಇದರ ಉಪಯೋಗದಿಂದ ವಾತ ಸಂಧಿವಾತ, ತಲೇನೋವು, ಶಿರೋಭಾರ, ಉಳುಕು ಎದೇನೋವು, ಶೀತ, ಕೆಮ್ಮು, ಅರ್ಧಾಂಗವಾಯು, ಗಾಯ, ದಂತವ್ಯಾಧಿ ಮುಂತಾದ ಅನೇಕ ತರದ ವೇದನೆಗಳನ್ನು ಖಂಡಿತವಾಗಿ ಗುಣಹೊಂದುವವು. ಬಾಟ್ಲಿ 1 ಕ್ಕೆ 8 ಆಣೆ. ಡಜನಿಗೆ 5—4—0 ಕ್ಯಾಂಪಲ್ ಡಬ್ಬಿ 1 ಕ್ಕೆ 1 ಆಣೆ. ಡಜನಿಗೆ 10 ಆಣೆ. 1 ಗ್ರೋಸಿಗೆ 6 ರೂಪಾಯಿ.

(15) ಭೃಂಗರಾಜತೈಲ:—ಇದರಿಂದ ತಲೆಕೂದಲು ಉದ್ದವಾಗಿಯೂ, ಕಪ್ಪಾಗಿಯೂ, ನುಣ್ಣಗಾಗಿಯೂ ಬರುತ್ತದೆ. ಮೆದುಳಿಗೆ ಅತ್ಯಂತ ಹಿತಕಾರಿಯಾಗಿರುತ್ತದೆ. ಬಾಟ್ಲಿ 1 ಕ್ಕೆ 12 ಆಣೆ.

(16) ಪರಿಶುದ್ಧವಾದವಾದ ಯೂಕಲಿಪ್ಟಸ್ ಆಯಿಲ್ ಎಂಬ ನೀಲಗಿರಿ ತೈಲ:—ಹೊಟ್ಟೆಗೆ ತೆಗೆದುಕೊಳ್ಳುವದಕ್ಕೆ ಖಾತ್ರಿ ಬಾಟ್ಲಿ 1 ಕ್ಕೆ 5 ಆಣೆ ಡಜನ್ನಿಗೆ 3 ರೂಪಾಯಿ.

ನಮ್ಮಲ್ಲಿ ಎಲ್ಲಾ ವಿಧದ ಲೇಹ ತೈಲ ಭಸ್ಮ ಆಸವ, ಅರಿಷ್ಟಗಳು ದೊರೆಯುತ್ತವೆ. ವ್ಯಾಪಾರಸ್ಥರಿಗೆ ಸ್ಪೆಷಲ್ ರಿಯಾತಿ ದರಗಳು, ಕ್ಯಾಟಲಾಗು ಬರೆದು ತರಿಸಿಕೊಳ್ಳಿರಿ

ವಿಳಾಸ:—ಎಂ ಗಣಪಯ್ಯ ಅಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸ್ಸಿಯನ್ಸ್, ಮಂಗಳೂರು ದ. ಕ.

ಪಾಕೆಟ್ ಲೀವರ್ ವಾಚ್.

ಇದರ ಕ್ರಯ ಸಾಧಾರಣವಾದ ವಾಚ್ ಸರಪಣಿ ಮತ್ತು ಸುಂದರವಾದ ವಾಚ್ ಪೆಟ್ಟಿಗೆ ಸಹಿತ

5 8—0 ರೂ. ಮಾತ್ರ.

ಘನವಂತರೇ! 12–11



ಈ ವಾಚ್ ಶ್ರೇಷ್ಠವಾದ ಲೀವರ್ ಕೆಲಸದಿಂದ ತಯಾರಾದದ್ದು. ಸಾಧ್ಯವಾದ ಮತ್ತು ಬಲಿಷ್ಠವಾದ ಸಾಮಾನುಗಳಿಂದ ತಯಾರಾದದ್ದು. ಅಲ್ಪವಾದ ಹೊರಾಟೋಪ ಪ್ರಕಟನೆಯ ವಾಚ್ ಅಲ್ಲ. ಈ ವಾಚ್ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ನೋಡುವದಕ್ಕೆ ಬಹು ಗಂಭೀರವಾದದ್ದು. ಕೆಲವು ಮಾತ್ರವೇ ಉಳಿದಿವೆ. ಬೇಕಾದವರು ಶೀಘ್ರವಾಗಿ ಬರೆದು ತರಿಸಿಕೊಳ್ಳಿ.

ವಿಳಾಸ:—ಆರ್. ಕೆ. ವಾಚ್ ಕಂಪೆನಿ,
ನಂಬರು 42, ಕೆಂದಸ್ತ ಚೆಟ್ಟಿಬೀದಿ, ಮದರಾಸು.

ಇತ್ತ ನೋಡಿರಿ! ಕೊಡಗು ಬಾಂಧವರೇ! ಇತ್ತ ನೋಡಿರಿ!

ನಮ್ಮ ಈ ... ... ಪ್ರತಿಯೊಬ್ಬ ಹೊಗಳುವದು ತಮ್ಮ ಗಳಿಗೆ ತಿಳಿದಿರುವದಷ್ಟೆ.

ಅಮೃತಸಾರ ತೈಲ:—ರಿಜಿ. ಶೀಸೆ 1 ಕ್ಕೆ 1—0—0 3 ಶೀಸೆಗೆ 2—10—0. ಹಿಮೋದಿಲ್ಲಭಾರ್ ಅತ್ತರ್ ಡ್ರಾಮು ಶೀಸೆ 1ಕ್ಕೆ 0—12—0. ಡಜನ್ 7—8—0. ಅರ್ಧ ಔನ್ಸ್ ಬಾಟ್ಲು ಶುದ್ಧಸಿಲತೀರಿ ತೈಲ ಶೀಸೆ 1 ಕ್ಕೆ 3 ಆಣೆ. ಡಜನ್ 1 ಕ್ಕೆ 1—12—0. ಕಸ್ತೂರಿಮಾತ್ರೆ ಶೀಸೆ 1 ಕ್ಕೆ 4 ಆಣೆ. ಡಜನ್ 1 ಕ್ಕೆ 2—10—0. ಮಲೇರಿಯಾ, ದಿನ ಬಿಟ್ಟು ಬರುವ ಜ್ವರಕ್ಕೆ ಖಾತ್ರಿಯಾದ ಬೆಳ್ಳಿ ಮುಲಾಮಿನ ಮಾತ್ರೆ ಶೀಸೆ 1 ಕ್ಕೆ 1—0—0 ರೂ.

ಚಿಂತಾನ್ ಪಾಕೇಟ್ 1 ಕ್ಕೆ	1 ಆಣೆ. 4 ಆಣೆ. 1 ರೂ.
ಗಂಧದ ಸಾಬೂನ್ 1 ಕ್ಕೆ	3 ಆಣೆ. 6 ಆಣೆ. 7 ಆಣೆ.
ವಿಕಟೋರಿಯಾ ಸಾಬೂನು 1 ಕ್ಕೆ	1-2-6.
ಪ್ಯಾರೀಸ್ ಭಾಣಿ ಸಾಬೂನು 1 ಕ್ಕೆ	1-7-0.
ಜಸ್‌ಮಿನ್ (ಮಲ್ಲಿಗೆ) ಸಾಬೂನ್ 1 ಕ್ಕೆ	8 ಆಣೆ.
ಬುಕ್ಕೆಟ್ ಗುಡ್‌ವಿನ್ " 1 ಕ್ಕೆ	10 ಆಣೆ.
ಚಿಕ್ಕ ಕನ್ನಡಿ 1 ಕ್ಕೆ	2 ಆಣೆ. 0 2-6.
ಸಾಬೂನ್ ಕರಡಿಗ 1 ಕ್ಕೆ	5 ಆಣೆ 7 ಆಣೆ.
ಸವಟ್ ಬಟನ್ ಹರಳಿನದ್ದು ಸೆಟ್ಟು 1 ಕ್ಕೆ	3 ಆಣೆ.
ಬಾಚಣಿಗೆ ಡಜನ್ 1 ಕ್ಕೆ	0-14-0. 1-4-0. 1-8-0.
ಕ್ಷೌರಕತ್ತಿ 1 ಕ್ಕೆ	2-4-0. 2-12-0. 3-8-0.
ಅಮೃತಾಂಜನ ಡಬ್ಬಿ 1 ಕ್ಕೆ	9 ಆಣೆ.
ಜರ್ಮನಿ ಕತ್ತರಿ 1 ಕ್ಕೆ	10 ಆಣೆ.
ಕಾಡ್‌ಬರಿ ಚೊಕಲೇಟ್ ಪಾಕೆಟ್ 1 ಕ್ಕೆ	8 ಆಣೆ.
ಫೌನ್‌ಟನ್ ಪೆನ್ 1 ಕ್ಕೆ	15 ಆಣೆ. 8 ಆಣೆ.

ಯಾವ ತರದ ಸಾಮಾನು ಬೇಕಾದಲ್ಲಿ ನಮ್ಮಲ್ಲಿ ದೊರೆಯುತ್ತೆ. ಟಪಾಲು ಖರ್ಚು ಅಲಾಯಿದಾ.

ವಿಳಾಸ—ದಿ. ಉಲ್ಲ ಮಾರ್ಟ್,
ನಂ. ೩, ಮಂಗಳೂರು, ದ. ಕ.

ಸಂಗೀತಕ್ಕೆ ಸಂಬಂಧಪಟ್ಟ



ಸಾಮಾನುಗಳ ಮಾರಾಟ

ನಮ್ಮಲ್ಲಿ ಅನುಭವಪೂರ್ವಕ ಚೆನ್ನಾಗಿ ಅನೇಕಾನೇಕ ಸಂಗೀತ ವಿದ್ವಾಂಸರುಗಳು ಒಪ್ಪತಕ್ಕ ಹಾರ್ಮೋನಿಯಂ, ತಬಲಾ, ತಂಬೂರಿ, ಸಿತಾರ್, ತಾವ್ಹೂಸ್ ದಿಲ್‌ರುಬ ನಾದಂಗಿ, ಪಿಟೀಲು, ಕೊಳಲು ಶ್ರುತಿಪೆಟ್ಟಿಗೆ ಇವೇ ಮುಂತಾದ ಪದಾರ್ಥಗಳು ಸಿಕ್ಕುತ್ತವೆ. ಈ ಪದಾರ್ಥಗಳ ಎಂಥಾ ರಿಪೇರಿ ಕೆಲಸವಾದರೂ ಕಡಿ ಸುಲಭಚಾರ್ಜಿಗೆ ಮಾಡಲ್ಪಡುತ್ತದೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ನಮ್ಮ ವಿಳಾಸ:—

ಯಂ. ಪುಟ್ಟಯ್ಯ ಅಂಡ್ ಸನ್ಸ್,
ಹಾರ್ಮೋನಿಯಂ ಡೀಲರ್ಸ್ ಮತ್ತು ರಿಪೇರರ್ಸ್,
24–9 ಸಯಾಜೀರಾವ್ ರೋಡ್, ಮೈಸೂರು.

12–11

ಅಮೃತಾಂಜನ್.

ನೋವುಗಳಿಗೆ ಸಿದ್ಧೌಷಧವು.

ಎಲ್ಲಾ ಷಾಪುಗಳಲ್ಲಿಯೂ ಮಾರಲ್ಪಡುತ್ತೆ.

ಅಮೃತಾಂಜನ್ ಡಿಪೋ,

ಬೊಂಬಾಯಿ ಮತ್ತು ಮದರಾಸು.

ಮೈಸೂರಿನಲ್ಲಿ ದೊರೆಯುವ ಸ್ಥಳ:—ಯಸ್. ಕೃಷ್ಣಸಾಮಿಶೆಟ್ಟಿ ಅಂಡ್ ಸನ್.

KALAPPAN'S ADVERTISING SERVICES.

Printed and Published by S. NANJUNDA SASTRY at Sreenivas Electric Press, Mysore for "Kodagu" Ltd., Mercara—11-11-1921.

Registered No. M. 1550.

ಕೊಡಗು.

ಸತ್ಯೇನ ಧರ್ಮದಯಯಾ ವಿದ್ಯಾನೀತಿಪ್ರಯತ್ನತಃ । ಐಕಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯಸಂಪದ ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

ಸಂಪುಟ ೧] ಕೊಡಗು, ಸನ್ ೧೯೨೧ ನೇ ಇಸವಿ ನವಂಬರ್ ತಾರೀಖು ೨೫ ನೆಯ ಶುಕ್ರವಾರ. [ಸಂಚಿಕೆ ೨೫

NOTICE.

If you want any kind of English or Kanarese Printing, Please write to:

SREENIVAS ELECTRIC PRESS, MYSORE.

ಖ್ಯಾತಿಯಿಂದ ಗುಣಪಡಿಸುವ ಔಷಧಿಗಳು

(1) ಮಹಾಮದನಕಾಮೇಶ್ವರಿ ಲೇಹವು.—ಆಯುರ್ವೇದ ವಿಧಿಪ್ರಕಾರ ತಯಾರಿಸಲ್ಪಟ್ಟಿದ್ದು, ಇದರ ಸೇವನೆಯಿಂದ ಧಾತು ಕ್ಷೀಣತೆ, ಅಜೀರ್ಣ, ಎದೇನೋವು, ಶರೀರದ ಘಳಿತದಿಂದ ಉಂಟಾದ ಅಶಕ್ತಿಯನ್ನೂ, ದೇಹಾಲಸ್ಯವನ್ನೂ ಪರಿಹರಿಸುತ್ತದೆ. ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು ಸ್ತ್ರೀಯರು ಪುರುಷರು ಇದನ್ನು ಉಪಯೋಗಿಸಬಹುದು. 40 ಸಲ ಸೇವಿಸುವ ಡಬ್ಬಿ 1 ಕ್ಕೆ 1—12—0. ಟಪ್ಪಾಲ್ ಖರ್ಚು 6 ಆಣೆ. 3 ಡಬ್ಬಿಗಳಿಗೆ 4—12—0 ಟ. ಖ. 10 ಆಣೆ.

(2) ಜೀವನಪ್ರಾಶ್ಯ.—ಇದರ ಸೇವನೆಯಿಂದ ಕ್ಷಯ, ರಾಜಯಕ್ಷ್ಮ, ಉರಕ್ಷತ, ಕಾಸ, ಶ್ವಾಸ್, ಹೃದ್ರೋಗ ಇವೇ ಮೊದಲಾದ ರೋಗಗಳನ್ನು ನಾಶಪಡಿಸಿ ಜೀರ್ಣಶಕ್ತಿಯನ್ನು ವೃದ್ಧಿಪಡಿಸಿ ಶರೀರಕ್ಕೆ ಸೌಂದರ್ಯವನ್ನು ಯುವನಕಾಲದಲ್ಲಿದ್ದ ಹಾಗೆಯೇ ಇಂದ್ರಿಯಪಟುತ್ವವನ್ನು ಕೊಡುವದು ಮತ್ತು ಶರೀರದಾರ್ಢ್ಯವನ್ನೂ, ಅವಯವಗಳ ಬಲವನ್ನೂ ವೃದ್ಧಿಮಾಡುತ್ತದೆ. ಮತ್ತು ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸಿ ಬುದ್ಧಿಪಟುತ್ವವನ್ನು ಅಧಿಕಮಾಡುವುದು. ಈ ಔಷಧವು ಬಾಲಕರಿಗೂ, ವೃದ್ಧರಿಗೂ ಬಹಳ ಪ್ರಯೋಜನ. ಇದು ಬಹಳ ರುಚಿಕರವಾಗಿರುವುದು. ಇದು ಚ್ಯವನನೆಂಬ ವೃದ್ಧಮಹರ್ಷಿಗೆ ಅಶ್ವಿನಿದೇವತೆಗಳುಪಯೋಗಿಸಲ್ಪಟ್ಟ ರಸಾಯನವಾಗಿರುತ್ತದೆ. 1 ಸೇರಿನ ಡಬ್ಬಿ 1 ಕ್ಕೆ 2—0—0. 3 ಡಬ್ಬಿಗಳಿಗೆ 5—8—0 ರೂಪಾಯಿ.

(3) ಅಶೋಕಾರಿಷ್ಟ ಮತ್ತು ಮಾತ್ರೆ.—ಹೆಂಗಸರು ಕ್ರಮತಪ್ಪಿ ಮುಟ್ಟಾಗುವುದು, ರಜೋನಮಯದಲ್ಲಿ ಅತ್ಯಲ್ಪ ಅತಿರೇಕವಾಗಲಿ, ರಕ್ತ ಸುರಿಯುವುದು, ಹೊಟ್ಟೇನೋವು, ಸೊಂಟನೋವು, ಬಲಹೀನ, ಬಂಜೆಯಾಗಿರುವಿಕೆ ಬಿಳೀಪ್ರದರ, ಕುಸುಮರೋಗ, ಗರ್ಭಕೋಶ ಉತ್ಕ್ರಮ ತಪ್ಪುವಿಕೆ, ಮತ್ತು ಸ್ತ್ರೀಗಳಿಗೆ ಉಂಟಾಗತಕ್ಕ ಸಕಲ ರೋಗಗಳನ್ನು ಖಂಡಿತವಾಗಿ ಗುಣಪಡಿಸುತ್ತದೆ. 8 ಔನ್ಸ್ ಬಾಟ್ಲಿಗೂ, 3 ಡಬ್ಬಿ ಮಾತ್ರೆಗೂ 2—0—0. 3 ಬಾಟ್ಲಿಗಳಿಗೆ ಮತ್ತು ಡಬ್ಬಿಗಳಿಗೆ 5—8—0 ರೂ.

(4) ಪ್ರಸೂತಾವಲೇಹ.—ಹೆತ್ತ ನಂತರ ಈ ಔಷಧಿಯನ್ನು ಸೇವಿಸುವದರಿಂದ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮತ್ತು ಗರ್ಭದಿಂದ ಸಂಭವಿಸುವ ಸಕಲ ವೇದನೆಗಳನ್ನು ಖಂಡಿತ ಗುಣಮಾಡುವದು ಮತ್ತು ಧಾತುಪುಷ್ಟಿಯನ್ನು ಉಂಟುಮಾಡುವುದು ಇದು ತಾಯಿಗೆ ಹೇಗೋ ಹಾಗೆಯೇ ಮಗುವಿಗೂ ಬಹಳ ಪ್ರಯೋಜನ. ಡಬ್ಬಿ 1 ಕ್ಕೆ 2—0—0. ಟಪ್ಪಾಲ್ ಖರ್ಚು 6 ಆಣೆ.

(5) ಪಿತ್ತಹಾರಿಚೂರ್ಣ.—ಮಲಬದ್ಧತೆ, ಬಹುಮೂತ್ರ, ಛಳಿಜ್ವರ, ಜ್ವರಗೆಟ್ಟ ತಲೆತಿರುಗುವಿಕೆ, ಅಮ್ಲಪಿತ್ತ, ಹೊಟ್ಟೆ ಹಸಿವಿಲ್ಲದೆ ಇರುವಿಕೆ, ಬಾಯಿಯಲ್ಲಿ ಅಗ್ರು, ವಾತ ಕ್ತ, ಕಫ, ಇವುಗಳಮೇಲೆ ದಿವ್ಯ ಔಷಧಿ 1 ಡಬ್ಬಿಗೆ 12 ಆಣೆ ಟಪ್ಪಾಲ್ ಖರ್ಚು 6 ಆಣೆ 3 ಡಬ್ಬಿಗಳಿಗೆ 2—0—0.

(6) ಮೇಹಕುಠಾರ.—ಮೂತ್ರಕೃಚ್ಛ್ರ. ಅಸ್ಥಿವ್ರಣ, ಮೂತ್ರ ಹೋಗುವಾಗ್ಗೆ ಉರಿಯನ್ನು ಕೀವನ್ನು ಕೂಡಲೆ ನಿಲ್ಲಿಸಿ ಖಂಡಿತ ಗುಣ ಕೊಡುವುದು. 14 ದಿನದ ಔಷಧಿ ಡಬ್ಬಿ 1 ಕ್ಕೆ ಕ್ರಯ 2—0—0 3 ಡಬ್ಬಿಗಳಿಗೆ 5—10—0.

(7) ಬಾಲಗ್ರಹ ಗುಟಿಕೆ.—ಮಕ್ಕಳಿಗೆ ಮಲಬದ್ಧತೆ ಬಾಲಗ್ರಹ ಇವೇ ಮೊದಲಾದ ಕಷ್ಟದಿಂದ ಉಂಟಾಗತಕ್ಕ ಸಕಲ ರೋಗಗಳನ್ನು ಗುಣಪಡಿಸಲಿಕ್ಕೆ ರಾಮಬಾಣದಂತಿರುವುದು ಬಾಟ್ಲಿ 1 ಕ್ಕೆ 10 ಆಣೆ 3 ಬಾಟ್ಲಿಗಳಿಗೆ 1-10-0 ಒಂದರಿಂದ 3 ಬಾಟ್ಲಿವರೆಗೆ ಟಪ್ಪಾಲ್ ಖರ್ಚು 6 ಆಣೆ.

(8) ಶ್ವಾಸಕುಠಾರಗುಟಿಕೆ.—ನಂಬರ್ 1 ನಂ 2 ಈ ಎರಡು ನಮೂನೆಯ ಗುಟಿಕೆಗಳ ಸೇವನೆಯಿಂದ ತ್ರಿದೋಷ (ಕಫ, ವಾತ, ಪಿತ್ತ) ದಿಂದ ಉಂಟಾಗುವ ಶ್ವಾಸಕಾಸವನ್ನು ನಿರ್ಮೂಲಗೊಳಿಸುವ ಸಿದ್ಧೌಷಧವಾಗಿರುವದು. 2 ಬಾಟ್ಲಿ ಮಾತ್ರೆಗಳಿಗೆ 1—2—0. 6 ಬಾಟ್ಲಿಗಳಿಗೆ 3 ರೂ 2 ರಿಂದ 6 ಬಾಟ್ಲಿವರೆಗೆ ಟ. ಖ. 6 ಆಣೆ.

(9) ಮಹಾಜ್ವರಾಂಕುಶ:—ಕಫಜ್ವರ, ಪಿತ್ತಜ್ವರ, ವಾತಜ್ವರ, ವಿಕಾಪಿಕಜ್ವರ, ದ್ವ್ಯಾಹಿಕ, ತ್ರ್ಯಾಹಿಕ, ಚಾತುರ್ಥಿಕ, ಇನ್‌ಫ್ಲುಯಂಜಾ, ನಿಮೋನಿಯಾ ಮೊದಲಾದ ಭಯಂಕರ ಜ್ವರಗಳನ್ನು ಸಹ ಖಂಡಿತ ಗುಣಪಡಿಸುವುದು. 1 ಬಾಟ್ಲಿಗೆ 10 ಆಣೆ 3 ಬಾಟ್ಲಿಗಳಿಗೆ 1—10—0. ಟ. ಖರ್ಚು 1 ರಿಂದ 3 ಬಾಟ್ಲಿವರೆಗೆ 6 ಆಣೆ.

(10) ಇಚ್ಛಾಭೇದಿ:—ಆಯಾಸವನ್ನು ಉಂಟುಮಾಡದ ಸುಖವಿರೇಚಕ ಬಾಟ್ಲಿ 1 ಕ್ಕೆ 12 ಆಣೆ. 3 ಬಾಟ್ಲಿಗಳಿಗೆ 2 ರೂ. 1 ರಿಂದ 3 ಬಾಟ್ಲಿವರೆಗೆ ಟ ಖ. 6 ಆಣೆ.

(11) ರಕ್ತಶುದ್ಧಿಚೂರ್ಣ:—ಮೇಹವ, ಉಪದಂಶ ಸಮ್ಮಂದ ಮೈಯಲ್ಲಿ ವ್ಯಾಪಿಸುವ ವ್ರಣಕಜ್ಜಿ, ಮೈತುರಿಸುವಿಕೆ, ಮಲಬದ್ಧತೆ ಮುಂತಾದುವುಗಳನ್ನು ಹೋಗಲಾಡಿಸಿ ಹಸಿವೆಯನ್ನು ತ್ರಾಣವನ್ನು ಧಾತುಪುಷ್ಟಿಯನ್ನು ಉಂಟುಮಾಡುತ್ತದೆ. 1 ಡಬ್ಬಿ 1—0—0 ರೂ. ಟ. ಖ. 5 ಆಣೆ.

ಗುಣವಿಶೇಷ ಕ್ರಯ ಕಮ್ಮಿ. ಫಲ ಹೆಚ್ಚು.

(12) ದಂತಕಾಂತಿಯ ಚೂರ್ಣ:—ಹಲ್ಲುನೋವಿಗೆ ಖಾತ್ರಿಯಾದ ಔಷಧಿ ಇದರ ಉಪಯೋಗದಿಂದ ಹಲ್ಲಿನ ಕ್ರಿಮಿಗಳನ್ನು ನಾಶಪಡಿಸಿ, ಹಲ್ಲಿನ ವೇದನೆಯನ್ನು ಖಂಡಿತ ಗುಣಪಡಿಸಿ, ವಸಡುಗಳ ಬೀಗು ಹಲ್ಲಿನಿಂದ ಬರುವ ರಕ್ತವನ್ನು, ಕೀವನ್ನು, ಬಾಯಿಯ ದುರ್ವಾಸನೆಯನ್ನು, ಹಲ್ಲುಗಳ ಬುಡದಲ್ಲಿ ಸುಣ್ಣ ಕಟ್ಟುವುದನ್ನು ಗುಣಪಡಿಸಿ ಅಲ್ಲಾಡುವ ಹಲ್ಲುಗಳನ್ನು ಪ್ರಥಮಾವಾದಿಯಲ್ಲಿ ಗಟ್ಟಿಮಾಡಿ ನಾಲಿಗೆಗೆ ರುಚಿಯನ್ನು ಸಹ ಉಂಟುಮಾಡುತ್ತದೆ. ಟಿನ್ 1 ಕ್ಕೆ 3 ಆಣೆ. 6 ಟಿನ್ನಿಗೆ 1—1—0 ಟ. ಖರ್ಚು 5 ಆಣೆ. 12 ಡಬ್ಬಿಗಳಿಗೆ ಟಪ್ಪಾಲ್ ಖರ್ಚು 6 ಆಣೆ.

(13) ಗಜಕರ್ಣದ ಮಲಾಮು.—ಹುಳಕಡ್ಡಿಯು ಪದು, ದದ್ರು, ಗಜಕರ್ಣ ಬಿಚ್ಚಿ, ಇಸುಬು ಹುಳಕಡ್ಡಿ ಮೊದಲಾದ ಸಮಸ್ತ ಚರ್ಮರೋಗಗಳು ಮೂರೇ ದಿವಸಗಳಲ್ಲಿ ಗುಣವಾಗುವದು. ಡಬ್ಬಿ 1 ಕ್ಕೆ 5 ಆಣೆ. 3 ಡಬ್ಬಿಗಳಿಗೆ 15 ಆಣೆ. ಟ ಖ 5 ಆಣೆ 6 ಡಬ್ಬಿಗಳಿಗೆ 1—12—0. 12 ಡಬ್ಬಿಗಳಿಗೆ 3 ರೂ. ಟಪ್ಪಾಲ್ ಖರ್ಚು 10 ಆಣೆ.

(14) ವಿಶ್ವಾಂಜನ.—ಇದರ ಉಪಯೋಗದಿಂದ ವಾತ ಸಂದಿವಾತ, ತಲೇನೋವು, ಶಿರೋಭಾರ, ಉಳುಕು ಎದೇನೋವು. ಶೀತ, ಕೆಮ್ಮು, ಅರ್ಧಾಂಗವಾಯು, ಗಾಯ, ದಂತವ್ಯಾಧಿ ಮುಂತಾದ ಅನೇಕ ತರದ ವೇದನೆಗಳನ್ನು ಖಂಡಿತವಾಗಿ ಗುಣಹೊಂದುವವು. ಬಾಟ್ಲಿ 1 ಕ್ಕೆ 8 ಆಣೆ. ಡಜನಿಗೆ 5—4—0 ಶ್ಯಾಂಪಲ್ ಡಬ್ಬಿ 1 ಕ್ಕೆ 1 ಆಣೆ. ಡಜನಿಗೆ 10 ಆಣೆ. 1 ಗ್ರೋಸಿಗೆ 6 ರೂಪಾಯಿ.

(15) ಭೃಂಗರಾಜತೈಲ:—ಇದರಿಂದ ತಲೆಕೂದಲು ಉದ್ದವಾಗಿಯೂ, ಕಪ್ಪಾಗಿಯೂ, ಪುಷ್ಟಿಯಾಗಿಯೂ ಬರುತ್ತದೆ ಮೆದುಳಿಗೆ ಅತ್ಯಂತ ಹಿತಕಾರಿಯಾಗಿರುತ್ತದೆ. ಬಾಟ್ಲಿ 1 ಕ್ಕೆ 12 ಆಣೆ.

(16) ಪರಿಶುದ್ಧವಾದವಾದ ಯುಕಲಿಪ್ಟಸ್ ಆಯಿಲ್ ಎಂಬ ನೀಲಗಿರಿ ತೈಲ:—ಹೊಟ್ಟೆಗೆ ತೆಗೆದುಕೊಳ್ಳುವದಕ್ಕಾತ್ರಿ, ಬಾಟ್ಲಿ 1 ಕ್ಕೆ 5 ಆಣೆ. ಡಜನ್ನಿಗೆ 3 ರೂಪಾಯಿ.

ನಮ್ಮಲ್ಲಿ ಎಲ್ಲಾ ವಿಧದ ಲೇಹ, ತೈಲ, ಭಸ್ಮ, ಆಸವ. ಅರಿಷ್ಟಗಳು ದೊರೆಯುತ್ತವೆ. ವ್ಯಾಪಾರಸ್ಥರಿಗೆ ಸ್ಪೆಷಲ್ ರಿಯಾತಿ ದರಗಳು. ಕ್ಯಾಟಲಾಗು ಬರೆದು ತರಿಸಿಕೊಳ್ಳಿರಿ.

ವಿಳಾಸ:—

ಎಂ. ಗುರಪ್ಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಪಬ್ಲಿಸಿಯನ್ಸ್, ಮಂಗಳೂರು ದ. ಕ

ಟೊಂಕವಿಲ್ಲದ ಒಡವೆಗಳು !!

ಅಂದವಾದ ನಮೂನೆಗಳು !!!

ನಂ. 1.



ನಂ. 2.

ನಂ. 3.



ಸ್ತ್ರೀಯರ ಕೈಗಳಿಗೆ ಅಲಂಕಾರವಾಗಿ ಅಂದವಾದ ನಮೂನೆಯಲ್ಲಿ ಘಟ್ಟಿ ತರವಾಗಿ ಅಪ್ಪಟ ಸವರನ್ ಚಿನ್ನದಲ್ಲಿ ಯಾವ ಅಳತೆಗೆ ಬೇಕಾದರೂ ಬಳೆಗಳು ತಯಾರಾಗಿ ಸಿದ್ಧವಾಗಿವೆ. ಬೇರೆ ಯಾವ ನಮೂನೆ ಬೇಕಾಗಿದ್ದಾಗ್ಯೂ ತಯಾರ್‍ಮಾಡಿ ಕೊಡುತ್ತೇವೆ. ಒಂದು ಜತೆ ಬಳೆಗಳು 5 ರಿಂದ 6 ಸವರನ್‌ಗಳ ತೂಕದಲ್ಲಿ ತಯಾರ್‍ಮಾಡಲ್ಪಡುತ್ತವೆ.

1, 2 ಮತ್ತು 3 ನೆ ನಂಬರು ಬಳೆಗಳನ್ನು ಮಾಡಲು ಕೂಲಿ ಜತೆ 1 ಕ್ಕೆ 7—0—0 ರೂ. ಮತ್ತು 2 ಆಣೆ ತೂಕ ಸೇದಾರ. 4 ನೆ ನಂ. ಬಳೆಗಳನ್ನು ಮಾಡಲು ಕೂಲಿ ಜತೆ 1 ಕ್ಕೆ 6—0—0 ರೂ. ಮತ್ತು 1 ಆಣೆ ತೂಕ ಸೇದಾರ.

ಬಳೆಗಳಿಗೆ ತಿರುಪುಗಳನ್ನು ಹಾಕಬೇಕಾದಲ್ಲಿ ಜತೆ 1 ಕ್ಕೆ 3—0—0 ರೂಪಾಯಿ ಪ್ರತ್ಯೇಕ ಛಾರ್ಜು ಮಾಡಲ್ಪಡುತ್ತೆ. ಆರ್ಡರು ಜತೆಯಲ್ಲಿ ಸರಿಯಾದ ಅಳತೆಯೂ ಮತ್ತು ಶೇಕಡಾ 10 ರಂತೆ ಮುಂಗಡವೂ ಕಳುಹಿಸಲ್ಪಡಬೇಕು. ಪೋಸ್ಟು ಛಾರ್ಜು ಅಲಾಯಿದ.

52-8 ಇಂಡಿಯನ್ ಜ್ಯುಯಲರಿ ಮಾರ್ಟು, ಪೋಸ್ಟ್ ಬಾಕ್ಸ್ ನಂ. 40. ಬೆಂಗಳೂರು ಸಿಟಿ.

"ಕೊಡಗು"

೧೯೨೧ನೇ ಇಸವಿ ನವಂಬರ್ ತಾ|| ೨೫ನೇ
ಶುಕ್ರವಾರ

ಯುವರಾಜರ ಆಗಮನ.

ಕೊಡಗು ಜಮಾನ್‌ದಾರರ ಸಂಘವು ಯುವರಾಜರಿಗೆ ಸ್ವಾಗತವನ್ನು ಕೊಟ್ಟು ಇಲ್ಲಿ ರೈತರ ಅಧೀನದ ಆಡಳಿತ ಪದ್ಧತಿಯನ್ನು ಇನ್ನೂ ಕೊಡಗಿಗೆ ಕೊಡದಿರುವದರಿಂದ ರೈತರಿಗೆ ಇರುವ ವ್ಯಸನವನ್ನೂ ಸೂಚಿಸಿ ಒಂದು ತಂತಿವರ್ತಮಾನವನ್ನು ಯುವರಾಜರಿಗೆ ಕಳುಹಿಸಿತು. ಚಕ್ರವರ್ತಿಗಳ ಮಗನಾಗಿ ಮುಂದೆ ಚಕ್ರವರ್ತಿಯಾಗುವವರಿಗೆ ಸ್ವಾಗತವನ್ನು ಕೊಡುವದು ಅವರ ಪ್ರಜೆಗಳಾದ ನಮಗೆ ಅವಶ್ಯದ ಕರ್ತವ್ಯವಾಗಿದೆ. ಇಂಡಿಯಾದೇಶದ ಅನೇಕ ಭಾಗಗಳಲ್ಲಿ ಅವರ ಸ್ವಾಗತದ ಉತ್ಸವಗಳಿಗೆ ರೈತರು ಸೇರಕೂಡದೆಂತ ಬೋಧನೆಗಳು ನಡದಿವೆ. ಇದು ಯಾತಕಂದರೆ—ಈಗ ಇರುವ ರೈತರ ಅಧೀನವಿಲ್ಲದ ರಾಜ್ಯಪದ್ಧತಿಯವರು ತಮ್ಮ ಆಡಳಿತವನ್ನು ಬಲಪಡಿಸಿಕೊಳ್ಳಲು ಯುವರಾಜರನ್ನು ಕರೆಸಿಕೊಂಡದ್ದೆಂದೂ, ರೈತರ ಸಂತೋಷವನ್ನು ಸೂಚಿಸಿದರೆ ಈಗಿನ ರಾಜ್ಯಪದ್ಧತಿಯಲ್ಲಿ ರೈತರಿಗೆ ಯಾವ ತರದ ಅತೃಪ್ತಿಯೂ ಇಲ್ಲವೆಂತ ಬ್ರಿಟಿಷ ಜನರೂ ಮತ್ತು ಪ್ರಪಂಚವು ಸಹ ತಿಳಿದೀತೆಂತಲೂ, ದೇಶೀಯ ಉದ್ಧಾರಕ್ಕಾಗಿ ಕೆಲಸಮಾಡುವ ಅನೇಕ ಪ್ರಮುಖರನ್ನ ಜೈಲಿನಲ್ಲಿಟ್ಟಿರುವಾಗ ನಾವು ಸರಕಾರದ ಅಂಗವಾಗಿ ಬಂದಿರುವವರಿಗೆ ಉತ್ಸವಗಳನ್ನು ನಡಿಸುತ್ತಿರುವೆ ನಮ್ಮ ಮನಸ್ಸಾಕ್ಷಿಗೆ ವಿರೋಧವಾಗುವದಂತಾಗುತ್ತದೆಯೆ, ಅನೇಕ ಭಾಗಗಳಲ್ಲಿ ಕ್ಷಾಮವುಬಾಧೆ ಬಹಳ ಕಠಿಣವಾಗಿರುವಾಗ ಲಕ್ಷಗಟ್ಟಲೆ ರೂಪಾಯಿಗಳನ್ನು ರೈತರ ಅನುಮತಿ ಇಲ್ಲದೆ ಖರ್ಚುಮಾಡುವ ಸರಕಾರದ ಕೆಲಸಗಳಿಗೆ ಯಾವ ವಿಧದಿಂದಲೂ ರೈತರು ಭಾಗಿಗಳಾಗಿರುವಂತೆ ತೋರಕೂಡದೆಂದೂ, ವಗೈರೆ ಅನೇಕ ಕಾರಣಗಳನ್ನು ಹೇಳುತ್ತಾರೆ. ಈ ಕಾರಣಗಳು ಸರ್ವಸಮ್ಮತವೋ ಅಲ್ಲವೋ ಚರ್ಚಿಸುವದು ನಮಗೆ ಆವಶ್ಯವಿಲ್ಲ. ಯುವರಾಜರು ರಾಜಕೀಯ ಕಾರ್ಯಕ್ಕಾಗಿ ಬರುವದಿಲ್ಲವೆಂತ ಸರಕಾರದವರು ಭರವಸೆ ಕೊಟ್ಟಿರುತ್ತಾರೆ. ಅದ್ದರಿಂದ ಒಳ್ಳೇ ಗುಣಗಳಿಂದ ಕೂಡಿರುವ ನಮ್ಮ ದೇಶದಲ್ಲಿ ತುಂಬಾ ಪ್ರೀತಿ ಇದೆಯೆನ್ನುವ ಯುವರಾಜರಿಗೆ ಸ್ವಾಗತವನ್ನು ಕೊಡುವದು ನಮ್ಮ ಕೆಲಸವಾಗಿದೆ. ರಾಜಭಕ್ತಿಯಲ್ಲಿ ಯಾರಿಗೂ ಹಿಂದುಳಿಯದ ನಮ್ಮ ಕೊಡಗು ದೇಶವು ಮನಃಪೂರ್ತಿಯಾಗಿ ಸ್ವಾಗತವನ್ನು ಕೊಡುತ್ತದೆ.

ಆದರೆ ಮೇಲೆ ವಿವರಿಸಿದ ತಂತೀವರ್ತಮಾನದಲ್ಲಿ ನಮಗೆ ಸ್ವರಾಜ್ಯದ ರೀತಿಯ ಸರಕಾರವನ್ನು ಇನ್ನೂ ಕೊಡದಿರುವದಕ್ಕೆ ನಮಗಿರುವ ವ್ಯಸನವನ್ನು ಸೂಚಿಸಿದೆ. ಇದು ಮಾಡದಿದ್ದರೂ ನಮ್ಮ ಕರ್ತವ್ಯವನ್ನು ಮಾಡದಂತಾಗುವದಿಲ್ಲ. ನಾವು ರಾಜಭಕ್ತಿಯನ್ನು ವಿಶೇಷವಾಗಿ ಯಾವಾಗಲೂ ತೋರಿಸುತ್ತಿರುವವರಂತ ಸರಕಾರವು ಯಾವಾಗಲೂ ಒಪ್ಪುತ್ತದೆ. ಚಕ್ರವರ್ತಿಯವರು 1917 ನೇ ಇಸ್ವಿ ಆಗಸ್ಟ 20 ನೇ ದಿವಸ ಪ್ರಕಟಪಡಿಸಿದಂತೆ ಇಂಡಿಯಾದೇಶಕ್ಕೆ ಸ್ವರಾಜ್ಯಕೊಡುವದೆಂತ ನಿಶ್ಚೈಸಿದೆಯೆಂತಲೂ ಆ ಸ್ವರಾಜ್ಯದ ರೀತಿಯಲ್ಲಿ ಸ್ವಲ್ಪ ಬಾಗವನ್ನಾದರೂ ಒಡನೇ ಕೊಡುತ್ತೇವೆಂತಲೂ ಮಾಡಿದ ವಾಗ್ದಾನಕ್ಕನುಸಾರವಾಗಿ ಇಂಡಿಯಾದೇಶದ ಬೇರೆ ದೊಡ್ಡ ಪ್ರಾಂತ್ಯಗಳಿಗೆಲ್ಲಾ ರೈತರ ಜವಾಬ್ದಾರಿ ಸರಕಾರವನ್ನು ಸ್ವಲ್ಪಮಟ್ಟಿಗಾದರೂ ಕೊಟ್ಟಿರುತ್ತಾರೆ. ನಮಗೆ ಈವರೆಗೂ ಏನೂ ಕೊಡದೇ ಈಗ ಮಾತ್ರ ಚಕ್ರವರ್ತಿಯವರ ಪ್ರಕಟಣೆಗಿಂತ ಮೊದಲೇ ಬೇರೆ ಕಡೆಗಳಲ್ಲಿ ಜಾರಿಯಲ್ಲಿ ಇದ್ದ ನ್ಯಾಯವಿಧಾಯಕ ಸಭೆಗಳಿಗಿಂತ ಕಡಿಮೆ ಹಕ್ಕುಳ್ಳ ಸಭೆಯೊಂದು ನಮಗೆ ಕೊಡುತ್ತೇವೆಂತ ತಿಳಿಸಿರುತ್ತಾರೆ. ಇದರಿಂದ ರೈತರ ಜವಾಬ್ದಾರಿ ಸರಕಾರವು ಕೊಟ್ಟಂತಾಗುವದಿಲ್ಲ. ಆದಾಯವೆಚ್ಚದಮೇಲೆ ಹಕ್ಕೂ ರೈತರ ಪ್ರತಿನಿಧಿಗಳಿಗೆ ಕಾನೂನು ಮಾಡಲು ಮಾತ್ರ ಕೊಟ್ಟು ಇಲಾಖೆಗಳಮೇಲೆ ಮಂತ್ರಿಯೊಬ್ಬನನ್ನು ಇಟ್ಟು ಆ ಮೂಲಕ ಆಡಳಿತದ ಹಕ್ಕನ್ನೂ ಸಹ ಕೊಡಬೇಕಂತ ಕೇಳುತ್ತಾ ಇದ್ದೇವೆ. ಈ ಕೋರಿಕೆಯು ದೇಶದ ಎಲ್ಲಾ ಜನರಿಗೂ ಒಪ್ಪಿಗೆ ಇರುವ ವಿಷಯವಾಗಿದೆ. ಅದ್ದರಿಂದ ಈ ಕೋರಿಕೆಯು ಈಡೇರದೇ ಸರಿಹೋಗುವ ಸಂಭವವು ಕಾಣದಿರುವದರಿಂದ ದೇಶದ ಅತೃಪ್ತಿಯನ್ನ ತೋರಿಸಿದ್ದು ಯುಕ್ತವೇ ಸರಿ. ನಮ್ಮ ಪ್ರತಿನಿಧಿಗಳು ಯುವರಾಜರ ಭೇಟಿಗೆ ಹೋಗಲು ಅನುಕೂಲ ಕೊಟ್ಟ ವರ್ತಮಾನವೇನೂ ಇಲ್ಲ. ಅದ್ದರಿಂದ ನಮ್ಮ ವರ್ತಮಾನ ಯುವರಾಜರಿಗೆ ತಿಳಿಸಲು ಇದೇ ತಕ್ಕ ಸಮಯವಾಗಿದೆ. ಯುವರಾಜರು ಇಂಡಿಯಾದೇಶದಲ್ಲಿ ತಿರುಗುತ್ತಿರುವಷ್ಟು ಕಾಲ ಅವರು ಕ್ಷೇಮವಾಗಿ ಇದ್ದು ಯಾವ ತೊಂದರೆಗಳೂ ಬಾರದೆ ಸುರಕ್ಷಿತವಾಗಿ ಹಿಂತಿರುಗಿ ಹೋಗಿ ನಮ್ಮ ದೇಶಕ್ಕೆ ಒಟ್ಟು ಇಂಡಿಯಾದೇಶಕ್ಕೆ ಸಹ ಸ್ವರಾಜ್ಯ ಸಿಕ್ಕುವ ವೇಳೆಯ ಸಿಕ್ಕಿದ ಮೇಲೂ ಚಕ್ರವರ್ತಿಯವರಿಗೆ ಅವರಿಗೆ ದೀರ್ಘಾರೋಗ್ಯವನ್ನು ಸರ್ವಶಕ್ತನು ಕೊಡಲೆಂದು ಹಾರೈಸುತ್ತೇವೆ.

ರಿಜರ್ವ್ ಫಾರೆಸ್ಟ್.

ರಿಜರ್ವ್‌ಫಾರಸ್ಟ್‌ಗಳಿಂದ ರೈತರಿಗೆ ಬಹಳ ತೊಂದರೆಗಳಿವೆಯೆಂತಲೂ ಅವನ್ನು ಪರಿಹರಿಸಿಕೊಡಬೇಕಂತಲೂ ಸರಕಾರವನ್ನು ರೈತರು ಜಮಾನ್‌ದಾರರ ಸಂಘದ ಮೂಲಕವಾಗಿಯೂ ಖುದ್ದಾಗಿಯೂ ಬಹಳಕಾಲದಿಂದ ಕೇಳುತ್ತಾ ಬರುತ್ತಿದೆ. ಹಾಗಿದ್ದರೂ ಸಹ ನಿಡತದ ಹೋಬಳಿ ಕೆಲವು ಗ್ರಾಮಗಳಲ್ಲಿ ಇರುವ ಪೈಸಾರಿಗಳನ್ನು ರಿಜರ್ವ್ ಮಾಡುವದಾಗಿಯು ಅವುಗಳಲ್ಲಿ ರೈತರ ಹಕ್ಕುಗಳನ್ನು ಉಳಿಸಬೇಕಾದರೆ ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರಮುಂದೆ ಹೇಳಿಕೊಳ್ಳಬೇಕಾಗಿಯು 1920 ನೇ ಇಸ್ವಿ ಆಗಸ್ಟ ತಿಂಗಳಿನಲ್ಲಿ ಪ್ರಕಟಿಸಿದ ಮೇರೆ ರೈತರ ಹಕ್ಕುಗಳ ತನಿಖಿ ನಡೆಯುತ್ತಾ ಇದೆಯೆಂತ ತಿಳಿಯುತ್ತೇವೆ. ರೈತರ ಚಿಲ್ರೆ ಹಕ್ಕುಗಳನ್ನು ಉಳಿಸುವ ವಿಚಾರಮಾತ್ರ ಸೆಟಲ್‌ಮೆಂಟ್ ಆಫೀಸರು ನಡಿಸುವದಾಗಿದೆ.

ರೈತರ ವಾಸದಮನೆಗಳಿಗೂ ವ್ಯವಸಾಯದ ಭೂಮಿಗಳಿಗೂ ಸಮೀಪದಲ್ಲಿ ರಿಜರ್ವ್ ಫಾರೆಸ್ಟ್ ಮಾಡುವದು ರೈತರ ನೆಮ್ಮದಿಗೆ ಪೂರಾ ಭಂಗವಾಗಿರುವದರಿಂದ ಗ್ರಾಮಗಳಲ್ಲಿರುವ ಪೈಸಾರಿಗಳು ಪೂರ್ತಿ ರೈತರ ಹಕ್ಕಾಗಿಯೇ ಇರಬೇಕೆಂತ ರೈತರು ರಿಜರ್ವ್‌ಮಾಡುವ ವರ್ತಮಾನ ತಿಳಿದ ಕೂಡಲೇ ಅರ್ಜಿ ಬರಕೊಳ್ಳಲಿಕ್ಕೆ ಪ್ರಾರಂಭಮಾಡಿದರು. ಈ ಮೊದಲೇ ಗ್ರಾಮಗಳಿಗೆ ಸಮೀಪದಲ್ಲಿ ರಿಜರ್ವ್‌ಫಾರೆಸ್ಟ್ ಒಂದದ್ದರಿಂದ ಮಾಲಂಬಿ, ಕಣಗಾಲ್, ಗಣಗೂರು, ನಂದಿ ಕಲ್ಲುಗುಡ್ಡಗಳ ಪೂರ್ವಭಾಗದಲ್ಲಿ ಸುಮಾರು 5000 ನಿವಾಸಿಗಳಿಂದ ತುಂಬಿದ್ದ 24 ಗ್ರಾಮಗಳ ಪೈಕಿ 13 ಗ್ರಾಮಗಳು ಪಾಳುಬಿದ್ದೇ ಹೋದವೆಂತಲು ಮಿಕ್ಕವುಗಳಲ್ಲಿ ಈಗಿನ ಒಟ್ಟು ಜನಸಂಖ್ಯೆ 100 ಮಾತ್ರ ಇದೆಯಂತಲೂ ಈ ಅನರ್ಥಕ್ಕೆ ಆ ಭಾಗವೆಲ್ಲಾ ರಿಜರ್ವ್‌ಫಾರೆಸ್ಟ್ ಆದದ್ದೇ ಎಂತಲು ರೈತರು ಬರಕೊಂಡ ಅರ್ಜಿಯಲ್ಲಿ ನಮೂದಿಸಿದೆ. ಫಾರೆಸ್ಟ್‌ಗಳಲ್ಲಿ ಕಾಡುಮೃಗಗಳಿಗೆ ವಾಸಕ್ಕನುಕೂಲವಾಗಿ ಪೈರಿಗೂ ದನಕರುಗಳಿಗೂ ನಾಶವುಂಟಾದ್ದರಿಂದಲೂ, ತನ್ನ ಬೆಳೆಗಳನ್ನು ಕಾಯಲು ರೈತನು ಛಳಿ ಗಾಳಿ ಮಳೆಯಂತ ನೋಡದೆ ಗದ್ದೆ ಹೊಲಗಳಲ್ಲೇ ರಾತ್ರಿಯೆಲ್ಲಾ ನಿದ್ದೆಗೆಟ್ಟು ಕಾದಿರುವದರಿಂದ ಹೊಟ್ಟೆತುಂಬಾ ಆಹಾರವೂ ಇಲ್ಲದ ರೈತನು ಶಕ್ತಿಕಡಿಮೆಯಾಗುತ್ತಾ ಬಂದು ಅಲ್ಪವ್ರಾಯದಲ್ಲೇ ಸತ್ತುಹೋಗಿ ಪ್ರಜಾಭಿವೃದ್ಧಿ ಕಡಿಮೆಯಾಯಿತೆಂತಲೂ ಕಾಡು ಬೆಳೆಯುವದರಿಂದ ರೈತರ ಆರೋಗ್ಯಕ್ಕೆ ಹಾನಿಬಂತೆಂತಲೂ, ಹುಲ್ಲುಗಾವಲುಗಳಿಲ್ಲದೆ ರೈತರ ಸಂಪತ್ತಿನ ಸಾಯವಾದ ದನಕರುಗಳನ್ನು ಸಾಕುವದು ಅಸಾಧ್ಯವಾಯಿತೆಂತಲೂ ಬರಕೊಂಡಿದ್ದಾರೆ.

ಕ್ಷೀಣಗತಿಗೆ ಇಂಥಾ ಕಾರಣಗಳಲ್ಲದೆ ಬೇರೆಕಾರಣಗಳು ಅನೇಕ ಇವೆ. ದನಗಳು ಅಕಸ್ಮಾತ್ತಾಗಿ ರಿಜರ್ವ್‌ಜಾಗಕ್ಕೆ ಹೋದರೆ ಅವುಗಳನ್ನು ದೊಡ್ಡಿಗೆಹಾಕಿ ನಷ್ಟಕೊಡುವದಲ್ಲದೆ ಕ್ರಿಮಿನಲ್ ತಕ್ಸೀರ್ ನಡಿಸಿದರ ಬಲ್ಲಾನೆ ಕೆರುತ್ತಾನೆ. ಅಕಸ್ಮಾತ್ ಫಾರೆಸ್ಟಿಗೆ ಬೆಂಕಿಬಿದ್ದರೆ ಸಮೀಪದ ರೈತನೇ ಗುರಿಯಾಗುತ್ತಾನೆ. 1911 ನೇ ಇಸ್ವಿ ಸಮಯದಲ್ಲಿ ಹೀಗೆ ಅನ್ಯಾಯವಾಗಿ ಶಿಕ್ಷೆಗೆ ಗುರಿಪಡಿಸಲ್ಪಟ್ಟ ಒಬ್ಬ ರೈತನು ಇತ್ಯರ್ಥವೆಲ್ಲಾ ಬರೆದು ಸರಕಾರಕ್ಕೆ ತಿಳಿಸಿ ಅಪಮಾನಕ್ಕೆ ಗುರಿಯಾಗುವದಕ್ಕಿಂತ ಸಾಯುವದೇ ಲೇಸೆಂತ ಆತ್ಮಹತ್ಯವನ್ನು ಮಾಡಿಕೊಂಡನೆಂತಲೂ ಮೇಲ್ ಕಾರಿಗಳಿಗೆ ಸತ್ಯ ತಿಳಿದನಂತರ ಆ ರೈತನನ್ನು ತಪ್ಪಿತಕ್ಕೆ ಗುರಿಪಡಿಸಿದ ಕೆಳಗಿನ ಉದ್ಯೋಗಸ್ಥರಿಗೆ ಶಿಕ್ಷೆಯಾಯಿತೆಂತಲೂ ವರ್ತಮಾನವಿತ್ತು. ಇಷ್ಟರಮಟ್ಟಿಗೆ ಒಬ್ಬ ರೈತನಿಗಾದರೂ ಕಷ್ಟ ಉಂಟಾಗಬೇಕಾಗಿದ್ದರೆ ಆ ಭಾಗಗಳಲ್ಲಿ ವಾಸಮಾಡುತ್ತಿರುವ ಪ್ರತಿಯೊಬ್ಬ ರೈತನ ಮನಸ್ಸು ಎಷ್ಟರಮಟ್ಟಿಗೆ ಹೆದರಿಕೆಯಲ್ಲೇ ಇರಬೇಕಂತ ಊಹಿಸಬಹುದು. ಕಾಡುಮೃಗ ಯಾವದನ್ನಾದರೂ ಊರಿಗೆ ಹಾವಳಿಗಬಂದಾಗ ಪಾಯಪಡಿಸಿದರ ಅದು ಫಾರೆಸ್ಟ್ ಒಳಕ್ಕೆಹೋಗಿ ಪ್ರಾಣಬಿಟ್ಟದ್ದನ್ನು ಫಾರೆಸ್ಟಿನ ಕೀಳು ನೌಕರರು ತಿಳದುಬಂದರ ಆ ಫಾರೆಸ್ಟಿನ ರೈತರು ತಾವು ಫಾರೆಸ್ಟಿನ ಒಳಗೆ ಬೇಟೆಯಾಡಿಕೊಂಡದ್ದಲ್ಲವೆಂತ ರುಜುವಾತು ಮಾಡಿ ತಮ್ಮ ಮೇಲೆ ಹೊರಿಸಿದ ತಪ್ಪನ್ನು ತಪ್ಪಿಸಿಕೊಳ್ಳಬೇಕಾಗುತ್ತೆ. ಫಾರೆಸ್ಟಿನ ಒಳಗೆ ಬೇಟೆಯಾಡಲು ರೈತರುಹೋಗಲಿಕ್ಕೇ ಇಲ್ಲವೆಂತಲ್ಲ ಹೋದರೆ ಫಾರೆಸ್ಟಿಗೆ ಕೆಡಕಾಗದೆಂತಲ್ಲ ರೈತನ ಸ್ವತಂತ್ರಕ್ಕೆ ಅಡಚಣೆಯಾಗುವಂತೆ ಫಾರೆಸ್ಟ್‌ಗಳನ್ನು ಊರು ಸಮೀಪ ತರುವದರಿಂದ ಈ ರೀತಿ ಕಾನೂನಿಗೆ (ಧರ್ಮಕ್ಕಲ್ಲ) ವಿರೋಧ ನಡಿಯಬೇಕಾಗುತ್ತೆ. ಫಾರೆಸ್ಟಿನ ಸಮೀಪ ಇರುವ ರೈತನ ಸ್ಥಿತಿಯನ್ನು ಯೋಚಿಸಿದರೆ ಕಣ್ಣುನೀರು ಬರುತ್ತದೆ. ಯಾರಲ್ಲಿ ಹೇಳತಕ್ಕದ್ದು. ದೇವರಲ್ಲಿ ನಂಬಿಕೆ ಇರುವ ರೈತನು ದೇವರ ಇಚ್ಛೆಯೇ ಹೀಗಿರುವಾಗ ಮಾಡತಕ್ಕದ್ದೇನೆಂತ ಬಂದ ಕಷ್ಟಗಳನ್ನೆಲ್ಲಾ ಅನುಭವಿಸುತ್ತಾ ಕ್ಷೀಣವಾಗುತ್ತಾ ಹೋಗುತ್ತಾನೆ.

ಸರಕಾರದವರನ್ನು ಕೇಳಿದರೆ ರೈತರ ವಿದ್ಯಾಭಿವೃದ್ಧಿಗೂ, ರೈತರ ಪ್ರಯೋಜನವಾಗುವ ರಸ್ತೆಗಳ ಖರ್ಚಿಗೂ, ಆರೋಗ್ಯವನ್ನು ಕೊಡುವ ಏರ್ಪಾಡುಗಳನು ಮಾಡಲಿಕ್ಕೂ ಖರ್ಚಿಗೆ ಹಣವಿಲ್ಲದ್ದರಿಂದ ಫಾರೆಸ್ಟ್‌ಗಳನ್ನು ಹೆಚ್ಚಿಸಿ ಸರಕಾರದ ಉತ್ಪತ್ತಿ ಹೆಚ್ಚಿಸಿ ರೈತರ ಪ್ರಯೋಜನಕ್ಕಾಗಿ ಖರ್ಚುಮಾಡುವದೆಂತ ಹೇಳುತ್ತಾರೆ. ಇದು ಎಂಥಾ ನ್ಯಾಯ! ರೈತರಿಗೆ ಕಷ್ಟಕೊಡುವದರಿಂದ ಲಕ್ಷಗಟ್ಲೆ ರೂಪಾಯಿ ಸರಕಾರಕ್ಕೆ ಉತ್ಪತ್ತಿಯಾದರೂ ಸಹ ರೈತನಿಲ್ಲದಹಾಗಾಗ್ಯೆ ಉತ್ಪತ್ತಿಗೆ ಆಶೆಮಾಡಬಹುದೇ. 1880 ನೇ ಇಸ್ವಿಯಿಂದ ರಿಜರ್ವ್‌ಫಾರೆಸ್ಟ್‌ಗಳನ್ನು ಮಾಡಿದೆರಷ್ಟೆ. ಅದರ ಉತ್ಪತ್ತಿಯನ್ನು ರೈತರಿಗೆ ಯಾವ ರೀತಿಯಲ್ಲಿ ಖರ್ಚುಮಾಡಿದ್ದಾರೆ? ಫಾರೆಸ್ಟ್ ಡಿಪಾರ್ಟ್‌ಮೆಂಟಿನಿಂದ ಕಳೆದ ಎರಡುವರ್ಷಗಳಲ್ಲಿ ಪ್ರತಿವರ್ಷ 5 ಲಕ್ಷ ರೂಪಾಯಿ ಅಂದಾಜು ಉತ್ಪತ್ತಿಯಾಯಿತಷ್ಟೆ. ಅಂಥಾ ಉತ್ಪತ್ತಿಯಿಂದ ಹಳ್ಳಿಯವನಿಗೆ ಯಾವ ಉಪಕಾರಸಿಕ್ಕಿದೆ? ರೈತನ ಮಗನಿಗೆ ಪಾಠಹೇಳುವ ಉಪಾಧ್ಯಾಯನ ಸಂಬಳ ಹೆಚ್ಚಿಸಲು ಬೇಕಾಗುವ 15000 ರೂಪಾಯಿ ಸಹ ಇಲ್ಲವೆಂತಲೂ ಹೆಚ್ಚಿಗೆ ರೂಪಾಯಿಗೆ ¼ ಆಣೆ ದರದಲ್ಲಿ ಕಂದಾಯ ಹಾಕಬೇಕಂತಲೂ ಪ್ರಸಲ್ ಮಾಡಿದ್ದಾರೆ. ಹೀಗಿರುತ್ತಾ ಈಗ ಮಾಡುವ ರಿಜರ್ವ್‌ಫಾರೆಸ್ಟ್‌ಗಳಿಂದ ರೈತನಿಗೆ ಪ್ರಯೋಜನ ಸಿಕ್ಕುತ್ತೆಂತ ಭರವಸ ಕೊಡುವವರ್ಯಾರು? ರಿಜರ್ವ್‌ಮಾಡಕೂಡದೆಂತ ಬರಕೊಂಡ ಅರ್ಜಿಗೆ ಉತ್ತರವಾಗಿ ಕಮಿಶನರ್ ಮತ್ತು ಡೆಪ್ಯೂಟಿ ಕನ್ಸರ್‌ವೇಟರ್ ಸಾಹೇಬರುಗಳು ಒಂದು ಮೆಮೊರಾಂಡಮನ್ನು ಪ್ರಕಟಿಸಿದರು. ಅದರಲ್ಲಿ ಗಂದದ ತೋಟಮಾಡಿದ ಜಾಗಗಳಲ್ಲಿ ಬೀಜಬಿತ್ತಿದ ಎರಡುವರ್ಷದ ನಂತರ ದನ ಮೇಯಲು ಅಡ್ಡಿ ಮಾಡುವದಿಲ್ಲವೆಂತ ಬರೆದಿದ್ದಾರೆ. ಇದಂ ಬಡರೈತನಿಗೆ ಸಹ ಸಂಬಂಧಪಟ್ಟ ವಿಷಯವಲ್ಲವೆಂತ ತಿರಿಕೊಂಡದ್ದಕ್ಕೆ ಸರಕಾರದವರು ಕೊಟ್ಟಮಾತಿಗೆ ತಪ್ಪುವದಿಲ್ಲವೆಂತ ಬರೆದ್ದಾರೆ. ಇದು ಸಂತೋಷದ ವರ್ತಮಾನವೇ ಸರಿ. ಈ ಸೆಟಲ್‌ಮೆಂಟ್ ಆಫೀಸರು ಮತ್ತು ಫಾರೆಸ್ಟಿನವರು ಈ ಮೆಮೊರ್ಯಾಂಡಮ್ಮಿನ ವಾಗ್ದಾನವನ್ನು ಹ್ಯಾಗೆ ನಡಿಸಿಕೊಡುತ್ತಾರೆಂತ ಕುತೂಹಲದಿಂದ ಎದುರುನೋಡುತ್ತೇವೆ. ರೈತರಿಗೆ ಉಪದ್ರವಾಗಲು ಆಡಚಣೆಯಾಗುವಂಥ ಫಾರೆಸ್ಟ್‌ಗಳನ್ನು ಅವನ ಮನಬಾಗಲಿಗೆ ತಂದು ಕಷ್ಟಕೊಡುವದಿಲ್ಲವೆಂತ ವಾಗ್ದಾನಮಾಡಿದರೂ ನಡಿಸಲು ಸಾಧ್ಯವಾಗಲಾರದೆಂತ ನಮಗೆ ತೋರುತ್ತದೆ. ಅರ್ಜಿಗಳಿಗೆಲ್ಲಾ ಜವಾಬೇನೂ ಕೊಡದ ಚೀಫ್ ಕಮಿಶನರ್ ಸಾಹೇಬರು ರಿಜರ್ವ್‌ಮಾಡುವದೆಂತ ಮೊದಲೇ ಫೈಸಲ್‌ಮಾಡಿದ್ದಾರಂತ ಜವಾಬು ಕೊಟ್ಟು ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರನ್ನು ನೇಮಿಸಿದರು. ಈ ರೀತಿ ರೈತರ ಮೊರೆಯನ್ನು ಕೇಳದ ಸರಕಾರವು ರೈತರ ಸರಕಾರವೆಂತ ಹ್ಯಾಗೆ ಹೇಳಲು ಸಾಧ್ಯ—ಇದಕ್ಕಾಗಿಯೇ ರೈತರ ಅಧೀನವಾಗಿರುವ ಸರಕಾರವನ್ನು ಶೀಘ್ರದಲ್ಲೇ ಸ್ಥಾಪಿಸಲು ಸರ್ವರೂ ಪ್ರಯತ್ನಪಡುತ್ತಿರುವದಾಗಿದೆ.

ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟ್.

ನಾಮದಾರ ಜೋಶಿಯವರು ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಈ ಆಕ್ಟನ್ನು ಪೂರ್ತಿಯಾಗಿ ರದ್ದುಪಡಿಸಬೇಕೆಂತ ತಾ|| 10-9-1921 ರಲ್ಲಿ ತಂದ ಠರಾವನ್ನು ಚರ್ಚಿಸುವಾಗ ಎಲ್ಲಾ ಪ್ರಾಂತೀಕ ಸರಕಾರಗಳ ಮತ್ತು ದೇಶದ ಅಭಿಪ್ರಾಯ ತೆಗೆದುಕೊಂಡು ಸಾಧಾರಣವಾಗಿ ಎಲ್ಲರೂ ಒಪ್ಪಿದರೆ ಸರಕಾರದವರು ಈ ಆಕ್ಟನ್ನು ರದ್ದುಪಡಿಸಲು ತಕ್ಕ ಕಾನೂನು ಮಾಡಲು ಆಕ್ಷೇಪಣೆ ಇಲ್ಲವೆಂತ ಸರಕಾರದ ಮೆಂಬರು ಹೇಳಿದ್ದರಿಂದ ಜೋಶಿಯವರು ಠರಾವನ್ನು ವಾಪಸು ತಕ್ಕೊಂಡರು. ಇ. ಪಿ. ಕೋಡು 490, 492 ನೇ ಸೆಕ್ಷನ್‌ಗಳನ್ನು ಸಹ ರದ್ದುಮಾಡಬೇಕೆಂತ ಚರ್ಚೆ ಬಂತು. ಇದನ್ನು ರದ್ದುಪಡಿಸಲು ಸರಕಾರದವರು ಒಪ್ಪಿಗೆಕೊಟ್ಟಿಲ್ಲ. ಈ ವಿಷಯದಲ್ಲಿ ದೇಶದವರ ಮುಖ್ಯವಾಗಿ ಕೂಲಿಕಾರರನ್ನು ಇಟ್ಟುಕೊಳ್ಳುವವರ ಅಭಿಪ್ರಾಯ ತಿಳಿಯಲಪೇಕ್ಷಿಸಿ ಇಂಡಿಯಾ ಸರಕಾರದವರು ಚೀಫ್ ಕಮಿಶನರ್ ಸಾಹೇಬರಿಗೆ ಬರೆದ ಕಾಗದವನ್ನು ಕಮಿಶನರ್ ಸಾಹೇಬರು ಕೊಡಗು ಜಮಾನ್‌ದಾರರ ಸಂಘದ ಅಭಿಪ್ರಾಯಕ್ಕೆ ಕೊಡಲು ಕಮಿಟಿ ಮೀಟಿಂಗ ಮಾಡಿಯಾರೆಂತ ನಂಬುತ್ತೇವೆ. ದೇಶದ ಎಲ್ಲಾ ಭಾಗದಲ್ಲೂ ಜಮಾನ್‌ದಾರರು ಮೀಟಿಂಗ್‌ಮಾಡಿ ಸಂಘದ ಸಕ್ರೆಟರಿಗೂ ಸರಕಾರಕ್ಕೂ ತಿಳಿಸುವದು ಒಳ್ಳೇದು.

ಹೋದವರ್ಷನಲ್ಲೇ ಕೂಲಿಕಾರರಿಗೆ ಅನುಕೂಲವಾಗುವಂತೆ ಆಕ್ಟನ್ನು ತಿದ್ದುಪಡಿ ಮಾಡಿರುತ್ತಾರೆ. ಅದರಿಂದ ತೋಟಗಾರರಿಗೂ ಜಮಾನ್‌ದಾರರಿಗೂ ತೊಂದರೆಗಳು ಹೆಚ್ಚಾಗಿವೆ. ಆಕ್ಟನ್ನೇ ತೆಗೆದುಹಾಕಿದರೆ ಪರದೇಶದ ಕೂಲಿಕಾರರ. ಒಂದೇ ತೋಟಕಲಸವೆಲ್ಲಾ ಜಮಾನ್ ಕೆಲಸವು ಕೆಲವು ಪಟ್ಟಿಗಾದರೂ ನಡಿಯಬೇಕಾದ ನಮ್ಮ ದೇಶಕ್ಕೆ ಬಹಳ ಕಷ್ಟಸಂಭವಿಸೀತು. ಅದ್ದರಿಂದ ಆಕ್ಟನ್ನು ರದ್ದುಪಡಿಸಲು ದೇಶದ ಸಮ್ಮತಿ ಇರಲಾರದು.

ಕೊಡಗಿನ ಕಾಫಿ ವ್ಯವಸಾಯದ ಕ್ರಮ.

(1) ಕಾಫಿಪನ್ನಿನ ಬೀಜ ತಯಾರಿಸುವಿಕೆ —

ಮುಖ್ಯವಾಗಿ ನಾವು ಕಾಫಿಗಿಡ ಬೆಳಸಬೇಕಾದರೆ ಒಳ್ಳೆ ಬೀಜಗಳಿಂದ ಬೆಳಸಬೇಕು. ಒಳ್ಳೆ ಬೀಜಗಳನ್ನು ಹೆಕ್ಕುವ ವಿಧಾನ ಹ್ಯಾಗಂದರೆ—ನಾವು ನಮಗೆ ಒಳ್ಳೆಜಾತಿ ದನಗಳು ಬೇಕಾದರೆ ಹ್ಯಾಗೆ ಜಾತಿ ಹೋರಿಗಳನ್ನು ಕಂಡುಹಿಡಿದು ಅವನ್ನು ಆದರಿಸುತ್ತೇವೋ ಹಾಗೆಯೇ ಒಳ್ಳೆಜಾತಿ ಕಾಫಿಗಿಡಗಳಿಂದ ಅಂದರೆ ಪುಷ್ಟಿಯಾಗಿಯೂ, ರೋಗಗಳಿಲ್ಲದೆಯೂ, ಹೆಚ್ಚು ಫಸಲಾಗಿಯೂ ಚನ್ನಾಗಿ ಬಲಿತು ಇರುವ ಗಿಡಗಳಿಂದ ಚನ್ನಾಗಿ ಹಣ್ಣಾಗಿರುವ ಬೀಜಗಳನ್ನು ಆರಿಸಿ

ಕುಯ್ಯಬೇಕು. ಇಂಥಾ ಬೀಜಗಳನ್ನು ಅದೇ ತೋಟದಲ್ಲು ಕುಯ್ಯುವದಕ್ಕಿಂತ ದೂರವಾಗಿರುವ ಬೇರೆ ತೋಟದಲ್ಲಿ, ಇಲ್ಲವೆ ಬೇರೆ ತಾಲೋಕುಯಾ ದೇಶಗಳಿಂದ ಚುನಾಯಿಸುವದು ಬಹಳ ಒಳ್ಳೇದು. ಯಾಕಂದರೆ ಒಂದೇ ತೋಟದ ಬೀಜವನ್ನು ಒಗ್ಗಾಕಿ ಅದರಿಂದ ಬೆಳಸಿದ ಗಿಡವನ್ನು ಅದೇ ತೋಟಕ್ಕೆ ಹಾಕುವದರಿಂದ ಕ್ಷೀಣಸ್ಥಿತಿಯು ಬರುವದು. ಅಲ್ಲದೆ ಕಾಫಿ ಸಹ ಹೆಚ್ಚು ಬೆಳೆಯಲಾರದು ಹೀಗೆ ಒಳ್ಳೇದೆಂದು ಆರಿಸಿ ತೆಗೆದ ಬೀಜಗಳನ್ನು ಒಗ್ಗು ಹಾಕುವಾಗ್ಯೆ ಕೈಯಿಂದ ಹಿಕ್ಕಿ ಅದರಲ್ಲಿ ಗಾತ್ರವಾಗಿಯೂ, ಭಾರವಾಗಿಯೂ, ಒಳ್ಳೆ ನಮೂನೆಯಾಗಿಯೂ (ಡೊಂಕು ಕೊಳವು ಇಲ್ಲದೆ) ಇರುವ ಬೀಜಗಳನ್ನು (ಬೇಳೆ) ಒಗ್ಗಿನಲ್ಲಿ ಹಾಕಬೇಕು. ಇಂಥಾ ಬೀಜಗಳಿಂದ ಬೆಳೆದ ಗಿಡಗಳು 6 ಅಡಿ ಉದ್ದ 6 ಅಡಿ ಅಗಲ ದೂರದಲ್ಲಿ 1,200 ಗಿಡಗಳಿರುವಂಥಾ ಒಂದು ಎಕರೆ ಜಾಗದಲ್ಲು ಕಮ್ಮಿ ಒಂದು ಖಂಡಿ ಕಾಫಿ ಆಗುವದಕ್ಕೆ ಯಾವ ದುರ್ಲಭವೂ ಆಗಲಾರದು. ಈ ರೀತಿ ಬೀಜಗಳನ್ನು ಹೆಕ್ಕುವದಕ್ಕೆ ಹೆಚ್ಚು ಶ್ರಮವೂ, ಹೆಚ್ಚು ಸಮಯವೂ, ಹೆಚ್ಚು ಖರ್ಚು ಆಗಬಹುದು. ಆದರೆ ಕಡೆಗೆ ಹೆಚ್ಚು ಉತ್ಪತ್ತಿಯೂ ಕೊಂಡಬಹುದು. ಇಷ್ಟು ತೊಂದರೆ, ಇಷ್ಟು ವೆಚ್ಚ ಯಾಕೆ ಎಂದು “ಅಜ್ಜ ಹಾಕಿದ ಆಲದಮರ” ಎಂಬಂತೆ ಅದೇ ತೋಟದ ಬೀಜದಿಂದ ಗಿಡ ಬೆಳಸಿ ಬೆಳಸಿ ಅದೇ ತೋಟದಲ್ಲಿ ನೆಡುವದರಿಂದ ಗಿಡಗಳು ಕ್ಷೀಣಸ್ಥಿತಿಗೂ, ಹೆಚ್ಚು ಫಲಕೊಡದೆಯೂ, ಇದಕ್ಕಾಗಿ ಪಟ್ಟ ಶ್ರಮ, ಖರ್ಚಾದ ಹಣವು ನಷ್ಟವಾಗುವದಲ್ಲದೆ ಯಾವ ಗುಣವು ಕಾಣದೆ ಅನ್ಯಾಯದಲ್ಲಿ ತೋಟವನ್ನು ಬಿಡಬೇಕಾಗುತ್ತೆ. ಒಂದೇ ತೋಟದ ಬೀಜದಿಂದ ಕೇಡುಬರುವದು ಹ್ಯಾಗೆ ಎಂಬದನ್ನು ಯಾರಾದರೂ ಮಹನೀಯರು ಯೋಚಿಸಬಹುದು ಕಾಫಿ ಗಿಡಗಳನ್ನು ಉದ್ಧರಿಸುವದು ಜೀವ ಇರುವ ಜಂತುಗಳಿಗೆ ಹೋಲಿಸಬಹುದು ಹ್ಯಾಗಂದರೆ ಒಂದು ಕೊಟ್ಟಿಗೆಯಲ್ಲಿರುವ ದನಗಳು ಶುರುವಿನಲ್ಲಿ ಚನ್ನಾಗಿರುತ್ತವೆ. ಕಡೆಕಡೆಗೆ ಬಹಳ ಕ್ಷೀಣವಾಗಿ ಆ ಕೊಟ್ಟಿಗೆಯಲ್ಲಿ ಹುಟ್ಟುವ ಕೋರಿಗಳು ಯಾವ ಪ್ರಯೋಜನಕ್ಕೂ ಬಾರದಷ್ಟು ಗಿಡ್ಡವಾಗಿ ಹೋಗುತ್ತೆ. ಇದರ ಪ್ರಯೋಜನವೇನು! ಶ್ರಮಪಟ್ಟು ಸಾಕಿದ್ದೇ? ಅದರಂತೆಯೇ ಕಾಫಿ ಬೀಜಗಳು ಸಹ ಆಗಿರುತ್ತೆ. ಮಹನೀಯರೆ! ಇದಕ್ಕಿಂತ ಮೊದಲಾಗಿ ಕಾಫಿ ಗಿಡವನ್ನು ನಾನು ವರ್ಣಿಸಬೇಕಿತ್ತು ಆದರೆ ಪೇಪರಿನಲ್ಲಿ ಒಂದೇಸರ್ತಿ ಬರಿಯಲು ಸ್ಥಳ ದೊರೆಯುವದು ಕಷ್ಟವಾಗಿದೆ. ಆದದರಿಂದ ಇದನ್ನು ಮಾತ್ರ ವರ್ಣಿಸಿರುತ್ತೇನೆ. ಬರುವವಾರದ ಸಂಚಿಕೆಯಲ್ಲಿ ಮೊದಲಾಗಿ ಕಾಫಿ ಗಿಡವನ್ನು ವರ್ಣಿಸಿ ಅನಂತರ ಪ್ರತಿವಾರದಲ್ಲು ಒಗ್ಗಿನ ಪಾತಿ ಗಿಡಗಳನ್ನು ಬೆಳಸುವ ವಿಧಾನ ವ್ಯವಸಾಯದ ವಿಧಾನ ಇವುಗಳನ್ನು ಪ್ರಕಟಿಸುತ್ತಾ ಬರುತ್ತೇನೆ. ನಾನು ಬರೆಯುವದಕ್ಕಿಂತ ಹೆಚ್ಚಿನ ನಮೂನೆಗಳು ಏನಾದರು ಗೊತ್ತಿರುವ ಮಹನೀಯರು ಪೇಪರಿನಲ್ಲಿ ತಿಳಿಸಿದಲ್ಲು ಎಲ್ಲಾ ಜನರಿಗೆ ತಿಳುವಳಿಕೆ ಸಿಕ್ಕುವದರಲ್ಲಿ ಯಾವತೊಂದರೆಯೂ ಇರಲಿಕ್ಕಿಲ್ಲ. ಪಿ ಬೆರಿ ಎಂಬ ಗಂಡುಬೀಜ (ತುರುಟುಬೀಜ) ಒಗ್ಗಿಗೆ ಹಾಕಬಾರದು (ಮುಂದರಿಯುವದು)

ಕಾಫಿ.

(ಬೊಂಬಾಯಿ ಕ್ರಾನಿಕಲ್ ಪತ್ರದಿಂದ)

ಹೊಸಸುಧಾರಣೆಗಳ ವಿಕವ್ನೆಯ.

ಬೊಂಬಾಯಿ ಸರಕಾರದವರು ಖರ್ಚು ಕಡಿಮೆಮಾಡುವ ಉದ್ದಿಶ್ಯ ತಮ್ಮ ಎಲ್ಲಾ ಇಲಾಖೆಗಳಲ್ಲಿನ ಜವಾನರ ಸಂಖ್ಯೆಯನ್ನು ಶೇಕಡ ೧೦ ರಷ್ಟಾದರೂ ಕಡಿಮೆಮಾಡಬೇಕೆಂತ ಒಂದು ಹುಕ್ಕುಂ ಮಾಡಿರುತ್ತಾರೆ. ಎಂಥಾ ಒಳ್ಳೇ ಅಭಿಪ್ರಾಯ! ಅವಶ್ಯಬಿದ್ದರೆ ಜವಾನರ ಸಂಖ್ಯೆಯನ್ನು ಶೇಕಡ ೨೦, ೩೦ ರಷ್ಟಾದರೂ ಕಡಿಮೆಮಾಡಿಯಾರು. ಆದರೆ ಸುಧಾರಣೆಗಳಿಂದ ಉಂಟಾದ ಹೊಸ ದೊಡ್ಡ ಉದ್ಯೋಗಗಳ್ಯಾವವೆಂದರೆ—ವರ್ಷಕ್ಕೆ ೬೪೦೦೦ ರೂಪಾಯಿ ಸಂಬಳದ ಒಬ್ಬ ಎಗ್ಸಿಕ್ಯುಟಿವ್ ಕೌನ್ಸಿಲ್ ಮೆಂಬರು ೬೪೦೦೦ ರೂಪಾಯಿ ಸಂಬಳದ ೩ ಜನ ಮಂತ್ರಿಗಳು ೩೬೦೦೦ ರೂ ಸಂಬಳದ ಇಬ್ಬರು ಸೆಕ್ರೆಟರಿಗಳು, ೧೦೨೦೦ ರೂ ಸಂಬಳದ ಇನ್ನೊಬ್ಬ ಸೆಕ್ರೆಟರಿ, ೨೪೦೦೦ ರೂ. ಸಂಬಳದ ಸೆಕ್ರೆಟರಿಯೊಬ್ಬ ಇನ್ನೂ ಕೆಲವು ಉದ್ಯೋಗಗಳು. ಇಂಥಾ ದೊಡ್ಡ ಸಂಬಳದ ಉದ್ಯೋಗಗಳನ್ನು ಮುಟ್ಟಕೂಡದು ಯಾಕೆಂದರೆ ಖರ್ಚು ಕಡಿಮೆಮಾಡಲಿಕ್ಕೆ ಇವುಗಳ ಅವಶ್ಯವಿದೆ! ಬೊಂಬಾಯಿ ಅಧಿಪತ್ಯದಲ್ಲಿ ಶೇಕಡ ೧೦ ರಷ್ಟು ಜವಾನರನ್ನು ಡಿಸ್‌ಮಿಸ್ ಮಾಡಿದರೂ ಒಬ್ಬ ಮಂತ್ರಿಯ ಸಂಬಳ ಸಹ ಆಗುತ್ತೋ—ಇಲ್ಲವೋ?

ವಾಷಿಂಗ್ಟನ್ ಕಾನ್‌ಫರೆನ್ಸ್ ಎಂಬ ಹೆಸರಿನಿಂದ ಪ್ರಪಂಚದ ಎಲ್ಲಾ ಚಕ್ರಾಧಿಪತ್ಯಗಳ ಸೈನ್ಯ ಕಡಿಮೆಮಾಡುವ ರೀತಿಯನ್ನು ನಿರ್ಣೈಸಲು ಅಮೇರಿಕಾದಲ್ಲಿ ಒಂದು ಸಭೆಸೇರಿದೆ. ಬ್ರಿಟಿಷ ಚಕ್ರಾಧಿಪತ್ಯದೊಳಗಿನ ಸ್ವತಂತ್ರ ಸಂಸ್ಥಾನಗಳು ಸಹ ಈ ಸಭೆಗೆ ಪ್ರತಿನಿಧಿಗಳನ್ನು ಕಳುಹಿಸಲಿಲ್ಲ. ಸೈನ್ಯದ ಖರ್ಚಿನಲ್ಲಿ ಒಂದು ಕಾಸನ್ನಾದರೂ ಕಡಿಮೆಮಾಡಲು ಶಕ್ತಿಯಿಲ್ಲದ ಇಂಡಿಯಾದೇಶದ ನ್ಯಾಯವಿಧಾಯಕ ಸಭೆಗಳ ಪ್ರತಿನಿಧಿಯಾಗಿ ಶ್ರೀನಿವಾಸಶಾಸ್ತ್ರಿಗಳು ಹೋಗಿರುತ್ತಾರೆ. ಈ ಸಭೆಗೆ ಅವರಿಂದ ಏನಾದರೂ ಸಹಾಯದೊರೆಯಿತೆಂಬಲ್ಲ. ಅಮೇರಿಕಾದವರು ಇಂಡಿಯಾದೇಶದಲ್ಲಿ ಬ್ರಿಟಿಷರ ಆಳ್ವಿಕವು ಜನಾಂಗಿಲ್ಲವೆಂತ ತಿಳಿದುಕೊಂಡಿದ್ದಾರೆ ಈ ತಿಳುವಳಿಕೆಯನ್ನು ಹೋಗಲಾಡಿಸಿ ಬ್ರಿಟಿಷ ಸಾಮ್ರಾಜ್ಯಕ್ಕೆ ಸಹಾಯಹೊಂದಬೇಕೆಂದೇ ಅವರನ್ನು ಕಳುಹಿಸಿರಬೇಕೆಂತ ಬೊಂಬಾಯಿ ವರ್ತಮಾನ ಪತ್ರವೊಂದು ಬರೆಯುತ್ತದೆ.

ಕೌನ್ಸಿಲ್ ಆಫ್ ಸ್ಟೇಟ್ ಸಭೆಯ ಮೆಂಬರಾದ ನಾಮದಾರ್ ಫರ್ಗಿ ಎಂಬವರು ಬರೆದಿರುವದೇನೆಂದರೆ—

ಅಲಿಸಹೋದರರ ಮೇಲೆ ಮೊಖದ್ದಮ್ಮೆ ನಡಿಸಿದ್ದರಿಂದ ಬ್ರಿಟಿಷ ಸರಕಾರದ ಕೋರ್ಟುಗಳಲ್ಲಿ ಜನರಿಗೆ ಇದ್ದ ಗೌರವವೆಲ್ಲಾ ಹೋಗಿ ತುಚ್ಛೀಕಾರಕ್ಕೆ ಗುರಿಯಾಗಿದೆ. ದೊಡ್ಡ ಸೆಕ್ಷನ್‌ಗಳ ಮೇಲೆ ಮಾಡಿದ ಮೊಖದ್ದಮ್ಮೆಗಳೆಲ್ಲಾ ವಜವಾದ್ದರಿಂದಲೂ, ಸೈನಿಕರನ್ನು ಕೆಲಸಬಿಡಲು ಹೇಳಿದ ತಕ್ಸೀರಿಗೆ ಶಿಕ್ಷೆಯಾದರೂ ದೇಶದ ಎಲ್ಲಾ ಭಾಗಗಳಲ್ಲಿಯೂ ಅದೇ ರಠಾವನ್ನೇ ಪಾಸ್‌ಮಾಡುತ್ತಿರುವದರಿಂದಲೂ ಸರಕಾರದ ತೂಕ ಕಡಮೆಯಾಯಿತು ಅಸಹಕಾರದ ಚಳವಳಿ ಇನ್ನಷ್ಟು ಹೆಚ್ಚಾಯಿತು ಆದರೂ ಈ ಕಷ್ಟಗಳನ್ನೆಲ್ಲಾ ನಿವಾರಿಸಲಿಕ್ಕೆ ಒಂದೇದಾರಿ ಇದೆ. ಯಾವದೆಂದರೆ—ಟರ್ಕಿಯವರ ಸಂಗಡ ಇಂಗ್ಲೀಷರು ಜಾಗ್ರತೆಯಾಗಿ ರಾಜಿಮಾಡಿಕೊಳ್ಳುವದು.

ಮದ್ರಾಸ್ ಅಧಿಪತ್ಯದ ಕೆಲವು ಮುನಿಸಿಪಾಲಿಟಿಗಳಲ್ಲಿ ಹುಡುಗರಿಗೆ ಪ್ರೈಮರಿ ವಿದ್ಯಾಭ್ಯಾಸವನ್ನು ಜುಲುಂನಿಂದ ಕೊಡಲು ನಿಶ್ಚೈಸಿ ಈ ಬಗ್ಗೆ ಖರ್ಚಿಗಾಗಿ ಬಾಡಿಗೆ ಉತ್ಪತ್ತಿಯ ಶೇಕಡ ೫ ರಷ್ಟು ಮತ್ತು ಕಸಬು ಕಂದಾಯದ ಶೇಕಡ ೧೦ ರಷ್ಟು ಹೆಚ್ಚಿಗೆ ಕಂದಾಯ ಹಾಕಲು ನಿಶ್ಚೈಸಿರುತ್ತಾರೆ.

ಸಾಧುವಚನ ಹಿತೋಪದೇಶ.

ಪ್ರಿಯವಾಚಕ ಮಹಾಶಯರೇ ನೀವುಗಳೆಲ್ಲರೂ ಸುಮತಿ ಸುನೀತಿಯವರ ಸಂವಾದವನ್ನು ಕೇಳಿರಬಹುದು. ಅನಂತರದಲ್ಲಿ ಏನಾಯ್ತೆಂಬುದರ ಕಡೆಗೆ ತಿರಗೋಣ. ಸುನೀತಿಯು ಸುಮತಿಯ ಮಾತುಗಳನ್ನು ಕೇಳಿ ಮಿತ್ರವರ್ಯಾ ನೀನು ಹೇಳುವ ಮಾತುಗಳು ಯತಾರ್ಥವೇ ಸರಿ. ಆದರೆ ಕಾಲಮಹಿಮೆಯನ್ನು ಯಾರುತಾನೇ ಮೀರಬಲ್ಲರು. ನೋಡು ಈ ಕೆಳಗಿನ ಶ್ಲೋಕದಲ್ಲಿ ಏನೆಂದು ಹೇಳಿದೆ.

ಶ್ಲೋ॥ ನೀದಂತಿಸಂತಃ ವಿಲಸಂತಿಸಂತಃ
ಪುತ್ರಾಮ್ರಿಯಂತೇ ಜನಕಶ್ಚಿರಾಯುಃ ॥
ಪರೇಷುಮೈತ್ರಿ ಸ್ವಜನೇಷುವೈರಂ ।
ಪಶ್ಯಂತುಲೋಕಾಃ ಕಲಿಕೌತುಕಾನಿ ॥

ಅಂದರೆ ದುಷ್ಟರು ಶ್ರೇಷ್ಟರಾಗುವರು. ಶಿಷ್ಟರು ಕಷ್ಟಪಡುವರು. ಮಕ್ಕಳು ಸಾಯುವರು. ತಂದೆ ದೀರ್ಘಜೀವಿಯಾಗುವನು. ಅನ್ಯರಲ್ಲಿ ಪ್ರೀತಿ ತನ್ನವರಲ್ಲಿ ವೈರ, ಹೀಗೆ ಒಪ್ಪಿರುವ (ಷಾಡ್ಗುಣ) ಈ ಆರುಗುಣಗಳು ಕಲಿ ಮಹಾರಾಜನ ಕಾಲದಲ್ಲಿ ನಡೆಯಬೇಕಾಗಿರುವ ಷಡ್ಗುಣಗಳು. ಆದುದರಿಂದ ಈ ಕಲಿಕಾಲದಲ್ಲಿ ಜನರು ಹ್ಯಾಗೆತಾನೇ ಧರ್ಮಿಷ್ಟರಾದಾರು?

ಸುಮತಿ-ಸುನೀತಿ ಹಾಗೆನ್ನಬೇಡ, ಕಾಲಕ್ಕೆ ಸರಿಯಾದ ಧರ್ಮಗಳನ್ನು ಸೃಷ್ಟಿನಿಯಂತನು ಸೃಷ್ಟ್ಯಾದಿಯಲ್ಲಿಯೇ ನಿಯಮಿಸಿರುವನು. ಅದ್ದರಿಂದ ಸನಾತನ ಧರ್ಮಶಾಸ್ತ್ರವನ್ನು ಕುರಿತು ವಿಚಾರಮಾಡುವದರಿಂದ ಏನುಲಾಭವು? ಎಕೆ ಈ ವಿಷಯಕ್ಕಾಗಿ ಶ್ರಮಪಡಬೇಕೆಂದು ನೀನು ಕೇಳುವೆಯಲ್ಲವೆ? ಇದರಿಂದಾಗುವ ಲಾಭವನ್ನು ಹೇಳುವೆನು. ಅದೇ ಶಾಸ್ತ್ರಸಮ್ಮತವಾದ ಆಚಾರದಿಂದ ನಿತ್ಯಾನಂದವೂ, ಶಾಸ್ತ್ರಸಮ್ಮತವಲ್ಲದ ಆಚಾರಗಳಿಂದ ಅನರ್ಥವೂ ಪ್ರಾಪ್ತವಾಗುವದೆಂದು ಜ್ಞಾನವಾಸಿಷ್ಠದಲ್ಲಿ ಹೇಳಲ್ಪಟ್ಟಿದುವುದು. ಶ್ರೀ ಭಗದದ್ಗೀತೆಯಲ್ಲಿಯೂ ಸಹಾ ಇದೇ ರೀತಿಯಾಗಿ ಹೇಳಿರುವದು.

ಶ್ಲೋ॥ ಯಶ್ಯಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ ।
ನಸಸಿದ್ಧಿಮವಾಪ್ನೋತಿ ನಸುಖಂನಪರಾಂಗತಿಂ ॥
ತಸ್ಮಾಚ್ಛಾಸ್ತ್ರಂಪ್ರಮಾಣಂತೇ ಕಾರ್ಯಾಕಾರ್ಯವ್ಯವಸ್ಥಿತೌ ।
ಜ್ಞಾತ್ವಾಶಾಸ್ತ್ರವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ ॥

ಅಂದರೆ ಯಾರು ಶಾಸ್ತ್ರಗಳಲ್ಲಿ ವಿಧಿಸಿರುವದನ್ನು ಬಿಟ್ಟು ಇಚ್ಛಾನುಸಾರವಾಗಿ ಪ್ರವರ್ತಿಸುತ್ತಲಿದ್ದಾರೋ ಅವರು ಮುಕ್ತಿಯನ್ನಾಗಲಿ, ಈ ಲೋಕದಲ್ಲಿ ಸುಖವನ್ನಾಗಲೀ ಸ್ವರ್ಗಾದಿಭೋಗಗಳನ್ನಾಗಲೀ ಹೊಂದಲಾರರು. ಅದ್ದರಿಂದ ಇದು ಮಾಡತಕ್ಕದ್ದು, ಇದು ಮಾಡತಕ್ಕದ್ದಲ್ಲ, ಎಂಬುದನ್ನು ವ್ಯವಸ್ಥೆಮಾಡುವದರಲ್ಲಿ ಶಾಸ್ತ್ರವನ್ನೇ ಪ್ರಮಾಣವಾಗಿ ಇಟ್ಟುಕೊಂಡು, ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವ ವಿಧಾನವನ್ನು ತಿಳಿದು ಕರ್ಮವನ್ನು ಮಾಡುವದು ನಮಗೆ ಧರ್ಮವು. ನಾವು ಹಾಗೆ ಮಾಡದೆ ನಮ್ಮ ಇಚ್ಛಾನುಸಾರವಾಗಿ ವರ್ತಿಸುತ್ತಾ ಇಹದಲ್ಲಿನ ವಿಷಯೋಪಭೋಗಕ್ಕಾಗಿ ಶಾಸ್ತ್ರಸಮ್ಮತವಲ್ಲದ ಕರ್ಮಗಳನ್ನು ಆಚರಿಸಿ ಕೊನೆಗೆ ಇಹಪರ ಇವೆರಡು (ಕ್ಕೂ) ಸುಖಕ್ಕೂ ತಿಲಾಂಜಲಿಯನ್ನೆರೆಯಬೇಕಾಗುತ್ತದೆ.

(ಮುಂದರಿಯುತ್ತದೆ.)

ಕೊಡಗು ನ್ಯಾಷನಲ್ ಸ್ಕೂಲ್ ಅಮ್ಮತ್ತಿ.

ಮೇಲ್ಕಂಡ ಸ್ಕೂಲಿಗೆ ತಾರೀಖು 2-10-1921 ರವರಿಗೆ ದ್ರವ್ಯಸಹಾಯ ಮಾಡಿದ ಮಹನೀಯರು.—

ಬಿಳುಗುಂದ ಶ್ರೀಮತಿ ಮೊಯ್ದಿನ್‌ಬಿಮವರು ರೂ. 100-0-0 ಬಿಳುಗುಂದ ಮೆ॥ ಸಾಹುಕಾರ್ ಜಾಗೀರ್‌ದಾರ ಅಲೀನ್‌ಖಾನ್ ಬ್ಯಾರಿ ಸಾಹೇಬ್ ರೂ 55-0-0. ವೀರರಾಜೇಂದ್ರಪೇಟೆ ಸಾಹುಕಾರ್ ಮೆ॥ ಮೂಸೆ ಅಬ್ದುಲ್ ಖಾದರ್ ಸಾಹೇಬ್ ಮತ್ತು ಬ್ರದರ್ಸ್, ಸಾಹುಕಾರ್ ಮೆ॥ ಕೋಲಮೈದಿನ್ ಸಾಹೇಬ್, ಪೊಳ್ಳಪೇಟೆ ಕಾಫಿಪ್ಲಾಂಟರ್ ಮೆ॥ ಬಿ. ಐಯ್ಯಪ್ಪನವರು ತಲ ಒಂದರ ರೂ 50-0-0 ವೀರರಾಜೇಂದ್ರಪೇಟೆ ಸಾಹುಕಾರ ಮೆ॥ ಮನ್ನ ಅಬ್ದುಲ್‌ರೈಮಾನ್ ಸಾಹೇಬ್ ಮತ್ತು ಬ್ರದರ್ಸ್ ರೂ 40-0-0 ಸಾಹುಕಾರ್ ಮೆ॥ ಕೋಲಾಮೊಯ್ದಿನ್‌ಸಾಹೇಬ್ ಬಿನ್ ಆಫ್ ಇಸ್ಮಾಯಿಲ್ ಸಾಹೇಬ್, ಮೆ॥ ಜೌ. ಅಫೀಸ್‌ಖಾನ್ ಬ್ಯಾರಿಯವರಿಂದ, ಮೆ॥ ಬಿ. ಅಂಜುಮನ್‌ಗಾಗಿ ತಲವಂದರ ರೂ 30-0-0. ಮೆ॥ ತೋಜ್‌ಬಾವು ಮನ್ನಮೈದಿನ್ ಸಾಹೇಬರಿಂದ ಮೆ॥ ಜೌಕಾರಾಗ್ಡು ಮಹಮುದ್‌ಖಾನ್ ಸಾಹೇಬರಿಂದ, ಮೆ॥ ಬಿ. ಅಂಜುಮನ್‌ಗಾಗಿಯವರಿಂದ, ಮತ್ತು ರಾಯಬಹದ್ದೂರ್ ಮೆ॥ ಕೆ. ಕುಟ್ಟಯ್ಯನವರಿಂದ ತಲವಂದರ ರೂ 25-0-0 ವೀರರಾಜೇಂದ್ರಪೇಟೆ ಮೆ॥ಸಿಸ್ತಾರ್ ಅಬ್ದುಲ್ ರಜಾಕ್ ಮೊಮಿನ್ ಅಬ್ದುಲ್ ಖಾದರ್ ಸಾಹೇಬರಿಂದ, ಮೆ॥ ಮಹಮುದ್ ಗೌಸ ಸಾಹೇಬರಿಂದ, ಮತ್ತು ಮೆ॥ ಶ್ರೀನಿವಾಸಯ್ಯನವರಿಂದ ತಲವಂದರಿಂದ ರೂ 20-0-0 ಬಿಳುಗುಂದ ಮೆ॥ ಜೌ. ಮಹಮುದ್‌ಖಾನ್ ಸರುವಾಸಿ ಸಾಹೇಬ್ ರೂ 17-0-0 ಬಿಳುಗುಂದ ಮೆ॥ ಹಾರೋನ್‌ಖಾನ್ ಬ್ಯಾರಿ ಸಾಹೇಬ್ ಕಾವರ್ಗಾಡು ಕುಟ್ಟಂಡ್ರ ಮೆ॥ ಗಣಪತ್ತಿ ಮತ್ತು ವೀರರಾಜೇಂದ ಪೇಟೆ ಮೆ॥ ಜೌ. ಗುಲಾಂ ಮುಸ್ತಫಾ ಸಾಹೇಬ್ ತಲವಂದರ ರೂ 15-0-0 ಬಿಳುಗುಂದ ಮೆ॥ ಬಿಸಂಡ್ರ ಕಾರ್ಯಪ್ಪನವರು ರೂ 11-0-0 ಮೆ॥ ಕುಟ್ಟಂಡ್ರ ತಮ್ಮಯ್ಯ ಮೆ॥ ಅಬ್ದುಲ್ ಗಫೂರ್‌ಖಾನ್ ಸಾಹೇಬರು ಮೆ॥ ಜೌ. ಅಹಮ್ಮದ್‌ಖಾನ್ ಸಾಹೇಬ್, ಮೆ॥ ಕೇಳಪಂಡ್ರ ಅಚ್ಚಯ್ಯ, ಮೆ॥ ಎ. ಎನ್. ಹುಚ್ಚೈಯ್ಯ, ಮೆ॥ ಕುಟ್ಟಂಡ್ರ ದೇವೈಯ್ಯ, ಮೆ॥ ಕೆ. ಕೆ. ಕಾವೇರಿ ಮತ್ತು ಮೆ॥ ಮನ್ನಹಸನ್ ಅಬ್ಬುಬಕರ್ ಸಾಹೇಬ್ ಇವರುಗಳಿಂದ ತಲವಂದರ ರೂಪಾಯಿ 10-0-0.

(ಮುಂದರಿಯುವದು.)

ವರ್ತಮಾನ ಸಂಗ್ರಹ.

ಒಳದೇಶ.

ಪ್ರೇಜರ್‌ಪೇಟೆ ಜೋಲ್‌ಗೇಟಿಗಾಗಿ ಈ ವರ್ಷ ನಡೆದ ದನಗಳ ಪ್ರದರ್ಶನಕ್ಕೆ ಸುಮಾರು ಒಂದು ಸಾವಿರ ದನಗಳು ದಾಟಿರುತ್ತೆಯೆಂತಲೂ, ಬೇರೆ ರಸ್ತೆಗಳಿಂದ ಸುಮಾರು ೩, ೪ ಸಾವಿರ ದನಗಳು ಬಂದು ಸೇರಿತ್ತೆಂತಲೂ, ಇಲ್ಲಿ ನೆರೆದ ಅನೇಕ ದನಗಳಿಗೆ ಕೊಡಗು ಕಮೀಷನರ್ ಸಾಹೇಬರು ಇನಾಂ ಕೊಟ್ಟರೆಂತಲೂ ಹೀಗೆ ಇನ್ನು ಮುಂದೆ ಸಹ ಹೆಚ್ಚಿನ ದನಗಳು ನೆರೆದ ಪ್ರದರ್ಶನವು ಇನ್ನು ಅಭಿವೃದ್ಧಿಯಾಗುವದೆಂದು ಒಬ್ಬರು ಬರೆದಿರುತ್ತಾರೆ.

ಅರ್ವತೊಕ್ಲು ಗ್ರಾಮದ ಪಟೇಲರಾದ ಮೆ॥ ಮುಂಡಾದೀರ ಸಿ. ಸುಬ್ಬಯ್ಯನವರ ಗೌರವಕ್ಕೆ ಹಾನಿ ಉಂಟುಮಾಡಬೇಕೆಂಬ ಇರಾದೆಯಿಂದ ಮುಂಡಾಂದೀರ ಪಳಂಗಪ್ಪನವರು, ಮೇಲ್ಕಂಡ ಸುಬ್ಬಯ್ಯನವರು ಒಂದು ಕ್ರಿಮಿನಲ್ ಕೇಸಿನಲ್ಲಿ ಪಟೇಲರಾಗಿ ಲಂಚ ತೆಗೆದುಕೊಂಡರೆಂದು ಪೋಲೀಸ್ ಇನ್‌ಸ್ಪೆಕ್ಟರವರಿಗೆ ಬರೆದದ್ದರಮೇಲೆ ಪೋಲೀಸು ಇಲಾಖೆಯವರು ತನಿಖೆಯಿಂದ ರುಜುವಾತು ಇಲ್ಲವಾಗಿ ಮುಂದರಿಸದೆ ನಿಲ್ಲಿಸಿಬಿಟ್ಟ ಸಂಗತಿ ಮೆ॥ ಸುಬ್ಬಯ್ಯನವರು ತಿಳಿದು ತನ್ನ ಗೌರವಕ್ಕೆ ಹಾನಿ ಉಂಟುಮಾಡಿದನೆಂದು ಮೇಲ್ಕಂಡ ಮೆ॥ ಪಳಂಗಪ್ಪನವರ ಮೇಲೆ ಮಡಿಕೇರಿ ಮುನ್ಸೀಫ್ ಕೋರ್ಟಿನಲ್ಲು ಮಾನನಷ್ಟದಮೇಲೆ ಮೊಖದ್ದಮ್ಮೆ ನಡಿಸಿದಕ್ಕೆ ಮಡಿಕೇರಿ ಮುನ್ಸೀಫರು ವಾದಿ ಮೆ॥ ಸುಬ್ಬಯ್ಯನವರಿಗೆ ಪ್ರತಿವಾದಿ ಮೆ॥ ಪಳಂಗಪ್ಪನವರು ಒಂದುನೂರು ರೂಪಾಯಿ ಪಂಹಾರವೂ, ಕೋರ್ಟು ಖರ್ಚು ಸಹ ಕೊಡಬೇಕಾಗಿ ಡಿಕ್ರಿ ಕೊಟ್ಟಿರುತ್ತಾರೆಂದು ಒಬ್ಬ ಕೃಷಕರು ತಿಳಿಸುತ್ತಾರೆ.

ಮಡಿಕೇರಿ ತಾಲೋಕು ಇಬ್ನಿವಳವಾಡಿ ಗ್ರಾಮದಲ್ಲಿ ಕಳೆದ ಮೇ ತಿಂಗಳ ಆಗಾಯ್ತು ಬೈನೆಮರವನ್ನು ಕಟ್ಟಕೂಡದೆಂಬ ಕಟ್ಟಳೆಮೇರೆ ರಾವ್‌ಬಹದೂರ್ ಕೋದಂಡ ಅಪ್ಪಯ್ಯನವರು ಮತ್ತು ಅಪ್ಪಚ್ಚನವರೇ ಮುಂತಾದ ಮಹಾನೀಯರು ತಮ್ಮ ಎಷ್ಟೋ ಉತ್ಪತ್ತಿಯನ್ನು ಸಹ ಬಿಟ್ಟು ಇದಕ್ಕೆ ಗಮನಕೊಟ್ಟಿರುತ್ತಾರೆ. ಆದರೆ ಈಗಲೀಗ ಒಬ್ಬೊಬ್ಬರು ಕರಕುರಿಗಳಂತೆ ಕಟ್ಟಳೆಗೆ ವಿರೋಧವಾಗಿ ನಡೆಯುತ್ತಿರುವದು ಬಹಳ ನಾಚಿಕೆಗೇಡು ಎಂದು ಒಬ್ಬ ಮಾನ್ಯನಿವೇದಕರು ತಿಳಿಸುತ್ತಾರೆ.

ತಾ॥ 30-10-21 ರಲ್ಲು ಕುಟ್ಟೀಟೀರ ಮಾದಪ್ಪನವರ ಅಧ್ಯಕ್ಷತೆಯಲ್ಲು ಕುಯ್ಯಂಗೇರಿ ನಾಡಿನವರು ಪಾಲೂರು ಸ್ಕೂಲಿನಲ್ಲಿ ನಡಸಿದ ಮೀಟಿಂಗಿನಲ್ಲಿ ತಮ್ಮ ತಮ್ಮ ಪಿತ್ರಾರ್ಜಿತ ಜಾಗದಲ್ಲಿ ಬೈನೆಮರಗಳಿಂದ ಸೇಂದಿ ಇಳಿಸುವದನ್ನು 1922 ನೇ ಮಾರ್ಚಿ ಆಖೈರ್ ನಂತರ ನಿಲ್ಲಿಸಬೇಕಾಗಿಯೂ, ಶುಭಾಶುಭ ದಿನಗಳಲ್ಲಿ ನಿಶಾ ಪದಾರ್ಥಗಳನ್ನು ನಿಲ್ಲಿಸಬೇಕೆಂತಲೂ, ಸಂಘ, ಕೂಟ, ಮುಂದುಮಾನಿಗಳಲ್ಲಿ ಸೇರುವಾಗ್ಯೆ ಪ್ರತಿಒಬ್ಬರು ಬಿಳೀ ಬಟ್ಟೆಯನ್ನೇ ಧರಿಸಬೇಕೆಂತಲೂ ತೀರ್ಮಾನಿಸಿರುತ್ತಾರೆ.

ಕೊಡಗಿನ ಶ್ರೀ ಮೂಲಕಾವೇರಿಯಮ್ಮನವರ ಜಾತ್ರೆ ಖರ್ಚಿಗಾಗಿ ಸರ್ಕಾರದಿಂದ ಸಹಾಯವಾಗಿ ಎಷ್ಟೋ ಹಣ ಮಂಜೂರು ಮಾಡಿದರು ಕೂಡ ಸಾಲದಕ್ಕಾಗಿ ಕೊಡಗಿನಲ್ಲಿ ಎಲ್ಲಾ ಜನರಿಂದ ಭತ್ತ, ಹಣ ವಗೈರೆ ಧರ್ಮಾದಾಯವಾಗಿ ಪ್ರತಿವರ್ಷವೂ ವಸೂಲ್ಮಾಡುತ್ತಿದ್ದರೂ ಈಗ ನಾಲ್ಕೈದು ವರ್ಷಗಳಿಂದ ಒಬ್ಬ ಮನುಷ್ಯನಿಗೆ ಒಂದು ಸೇರು ಅಕ್ಕಿ ಕೊಡುತ್ತಿದ್ದದನ್ನು ಮನ್ನಮಾಡಿ ಅರ್ಧಸೇರಿಗೆ ಇಳಿಸಿದ್ದು ಯಾತ್ರೀಕರಿಗೆ ಪೂರಾ ಅನ್ಯಾಯವಾಗಿದೆ ದೇವರ ಭಕ್ತಿಗಾಗಿ ಬಂಡಾರಕ್ಕೆ ತಂದಂಥಾ ಹಣವು ಅವರ ಊಟದ ಖರ್ಚಿಗಾಗಿ ಯಾತ್ರೀಕರು ಖರ್ಚುಮಾಡಬೇಕಾದದ್ದರಿಂದ ಬಂಡಾರಕ್ಕೆ ಹಣವು ಕಮ್ಮಿಯಾಗುವಂಥಾಗಿದೆ. ಅಲ್ಲದೆ ಈಗ ಉಗ್ರಾಣದಲ್ಲು ಅನೇಕ ಜನರಿಗೆ ಅನ್ನ ಕೊಡುತ್ತಿದ್ದದ್ದು ಕಾಣುವದಿಲ್ಲ. ಆದ್ದರಿಂದ ಈ ಸಂಗತಿಗೆ ದೇವಸ್ಥಾನದ ಕಮಿಟಿ ಮೆಂಬರುಗಳು ಗಮನ ಕೊಡಬೇಕೆಂದು ಒಬ್ಬ ಭಕ್ತರು ಕೇಳಿಕೊಳ್ಳುತ್ತಾರೆ.

* * *

ಕೊಡಗಿನ ಎಲ್ಲಾ ಭಾಗಗಳಲ್ಲಿ ಊರವರು, ನಾಡವರು ಸಭೆ ಸೇರಿ ಅನೇಕ ವಿಧವಾದ ಒಳ್ಳೇ ಕೆಲಸಗಳಲ್ಲಿ ಪ್ರವರ್ತಿಸಿದ್ದರೂ ಕೂಡ ಚೆಂಬೆ ಬೆಳಿಯೂರು ಗ್ರಾಮದಲ್ಲಿರುವವರು ಎಲ್ಲಾ ಒಳ್ಳೇ ಕೆಲಸಗಳನ್ನು ಹಿಂದಾಕಿ, ಸಿಪಸೇವನೆ ದೆಸೆಯಿಂದ ಹಿಂದುಳಿದಿರುವದು ನೋಡಿದರೆ ಘೋರ ವ್ಯಸನಕರವಾಗಿದೆಯೆಂದು ಆ ಗ್ರಾಮಸ್ಥರೊಬ್ಬರು ಬರೆಯುತ್ತಾರೆ.

* * *

6-11-21 ರಲ್ಲು ಎಡೆನಾಲ್ಕುನಾಡಿನ 5 ಗ್ರಾಮಗಳ ಸಂಬ್ರಾಯಪಟ್ಟಣ ತಾಲ್ಲೋಕಿನ 8 ಗ್ರಾಮಗಳ ಮತ್ತು ಮೈಸೂರು ಸೀಮೆಯ 2 ಗ್ರಾಮಗಳ ಪಂಚಮರು ಪ್ರೇಜರ್‌ಪೇಟೆಯಲ್ಲು ಸಭೆಸೇರಿದಲ್ಲಿ ಬಿಳುಗುಂದ ಪಂಚಮರ ಶಾಲೆಯ ಹೆ|| ಮಾ|| ಮರಿಯಪ್ಪನವರು ಹಿಂದುಳಿದ ಪಂಗಡದವರಾದ ಪಂಚಮರು ವಿಶೇಷ ಸತ್ತಪ್ರಾಣಿಯ ಮಾಂಸ ತಿನ್ನುವದೂ, ಮಧ್ಯಪಾನ ಮಾಡುವದೂ ಬಹಳ ಹಾನಿಕರವೆಂದು ಅನೇಕ ದೃಷ್ಟಾಂತಗಳಿಂದ ವಿವರಿಸಿದರು. ಅಲ್ಲಿ ನೆರೆದಿದ್ದ ಸುಮಾರು 100 ಮಂದಿ ಪಂಚಮರು ಸಿಪಾ ಪಾನಮಾಡುವದನ್ನೂ ಸತ್ತಪ್ರಾಣಿ ತಿನ್ನುವದನ್ನೂ ಬಿಡುವದಾಗಿ ಒಪ್ಪಿ ಸಭೆಯು ದೇವತಾ ಪ್ರಾರ್ಥನೆಯಿಂದ ಮುಕ್ತಾಯವಾಯ್ತು.

* * *

ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದಂತೆ ಜಮಾನ್ದಾರ ಸಂಘದ ವಿಶೇಷವಾದ ಜನರಲ್ ಮೀಟಿಂಗಿನಲ್ಲು ಮೆ|| ನಾಯಡ ಬೆಳ್ಯಪ್ಪನವರು ತಂದ 4 ನೇ ಠರಾವು ಮಂಜೂರಾಗಲಿಲ್ಲವೆಂದೂ ಅದಕ್ಕೆ ಬದಲು ಮೆ|| ಕೇಟಪಂಡ್ರ ಅಚ್ಚಯ್ಯನವರು ಸೂಚಿಸಿದಾತೆ ಆ ಠರಾವನ್ನು ರಾ|| ಬಾ|| ಕೆ. ಕುಟ್ಟಯ್ಯನವರಿಗೂ ರಾ|| ಬಾ|| ಸಿ ಅಪ್ಪಯ್ಯನವರಿಗೂ ಕಳುಹಿಸಿ ಅವರ ಜವಾಬು ಬಂದಮೇಲೆ ಇನ್ನೊಂದು ಮೀಟಿಂಗಿನಲ್ಲು ಇದರ ವಿಷಯ ಯಾವಸಂಗತಿಯೂ ತೀರ್ಮಾನಿಸಬಹುದೆಂದು ಎಲ್ಲರೂ ಒಪ್ಪಿಕೊಂಡದರಿಂದೂ 4 ನೇ ಠರಾವು ಮಂಜೂರಾಯಿತೆಂದು ಬರೆದಟ್ಟು ರಿಪೋರ್ಟರವರ ತಪ್ಪೆಂದೂ ಸಂಘದ ಜನರಲ್ ಸೆಕ್ರೆಟರಿಯವರು ಬರೆಯುತ್ತಾರೆ.

* * *

ತಾ|| 19 ರಲ್ಲು ದೇಶದ ಅನೇಕ ಕಡೆಗಳಲ್ಲಿ ತಕ್ಕಮಟ್ಟಿಗೆ ಒಂದು ಮಳೆಯು ಹೊಡೆದುದರಿಂದ ರೈತರ ವ್ಯಸನವು ಕೆಲವು ಮಟ್ಟಿಗೆ ಕಡಿಮೆಯಾಗಿದೆ ಈ ಮಳೆಯಿಂದ ನೀರು ಬತ್ತುತ್ತಾ ಬಂದ ಗದ್ದೆಗಳಿಗೆ ಸ್ವಲ್ಪ ನೀರಾಗಲು ಮತ್ತು ಸಾಧಾರಣ ಎಲ್ಲಾ ಗದ್ದೆಗಳಲ್ಲಿ ಕದುರುದಾಟಲು ಅನುಕೂಲವಾಯಿತು ಆದರೆ ಈಗ ಪುನಹ ಚಳಿಯು ಮೊದಲಿಗಿಂತ ಹೆಚ್ಚುತ್ತಾ ಬರುತ್ತಿದೆ.

* * *

ಮೂರುವರ್ಷಗಳಿಂದ ಮೀಟಿಂಗುಗಳು ಮಾಡುತ್ತಾ ದೇವಸ್ಥಾನದ ಕಟ್ಟಡವನ್ನು ದುರಸ್ತು ಮಾಡಿಸುವದರಲ್ಲಿಯೂ ನಿಷಾ ಪದಾರ್ಥವನ್ನು ನಿಷೇಧಿಸುವದರಲ್ಲಿಯೂ ಪರಸ್ಪರ ಲೇವಾದೇವಿ ಸಂಘವನ್ನು ವೃದ್ಧಿಪಡಿಸುವದರಲ್ಲಿಯೂ ಒಗ್ಗಟ್ಟಾಗಿ ಸೇರಿದ್ದ ಮೊಸೂರು ಗ್ರಾಮಸ್ಥರು ಈಗ ಮೂರುನಾಲ್ಕು ತಿಂಗಳಿಂದ ತಮ್ಮ ಕೆಲಸದಲ್ಲು ಉತ್ಸಾಹ ಕಡಿಮೆಮಾಡುತ್ತಾ ಬರುತ್ತಿದ್ದದರಿಂದ ಊರ ಒಗ್ಗಟ್ಟು ಒಡೆದು ಹೋಗುವದೆಂದು ಯೋಚಿಸಿ ಕೆಲವು ಮುಖನೀಯರು ಊರವರನೇಕರನ್ನು ಸೇರಿಸಿ ತಾ|| 19 ರಲ್ಲು ಒಂದು ಮೀಟಿಂಗು ಮಾಡಿ ಸೆಂಟ್ರಲ್‌ಬ್ಯಾಂಕಿಗೆ ಮೊಸೂರು ಸಂಘವು ಮೆಂಬರಾಗಿ ಸೇರಿ ಬ್ಯಾಂಕಿನ ಕೆಲಸಕ್ಕೆ ಉತ್ತೇಜನಕೊಡಬೇಕೆಂತಲೂ, ಇಷ್ಟರವರೆಗೆ ನಡೆದಂತೆಯೇ ಇನ್ನು ಮುಂದೆಯೂ ನೇಂದಿ ಇಳಿಸಲು ಯಾರೂ ಎಡೆಕೊಡಬಾರದೆಂತಲೂ. ತಮ್ಮ ಊರಿಗಾಗಿ ದಾಟುವ ಲೋಕಲ್ ಫಂಡು ರಸ್ತೆಯನ್ನು ಡಿ. ಬೋರ್ಡ್ ಸಹಾಯಪಡಕೊಂಡು ಸಾಲುದುದಕ್ಕೆ ಊರಲ್ಲಿ ಚಂದಾ ಎತ್ತಿ ಸೇತುವೆಕಟ್ಟಿ ದುರಸ್ತುಮಾಡಬೇಕೆಂದೂ ತೀರ್ಮಾನಿಸಿರುವರೆಂದೂ ಊರವರೆಲ್ಲರೂ ಇನ್ನುಮುಂದೆಯಾದರೂ ಮುತುವರ್ಜಿಯಿಂದ ಊರ ಏಳಿಗೆಗೆ ಕೆಲಸಮಾಡುವರಾಗಿ ನಂಬುತ್ತೇನೆಂದು ಆ ಗ್ರಾಮಸ್ಥರೊಬ್ಬರು ಬರೆದಿರುತ್ತಾರೆ.

* * *

ಇದು ಕಾರ್ತಿಕಮಾಸವಾದ್ದರಿಂದ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದಲ್ಲಿ ಉತ್ಸವಗಳು ಬಲು ಸಂಭ್ರಮದಿಂದ ನಡೆಯುತ್ತಿವೆ. ಇಷ್ಟರವರೆಗೆ ಫಾರೆಸ್ಟು ಇಲಾಖೆಯಲ, ಕೊಡಂದೇರ ತಿಮ್ಮಯ್ಯ ಸೀತವ್ವನವರ, ಅಪ್ಪಾರಂಡ್ರ ಅಪ್ಪಚ್ಚ ಅಕ್ಕವ್ವನವರ ಮತ್ತು ಕೊರವಂಡ್ರ ನಂಜಪ್ಪನವರ ಮತ್ತು ಶ್ರೀರಾಮ್ ನಾಗಪ್ಪಶೆಟ್ಟಿಯರ ಉತ್ಸವಗಳು ನಡೆದಿರುವ . ಉತ್ಸವವನ್ನು ಮಾಡಿಸುವಂಥವರಲ್ಲಿ ಕೆಲವರು ಉತ್ಸವ ನಡೆಯುವ ಸಮಯದಲ್ಲಿ ದೇವಸ್ಥಾನಕ್ಕೆ ಬಾರದೆ ಇರುವದು ಉತ್ಸವ ನೋಡಲಿಕ್ಕೆ ಬರುವ ಬೇರೆ ಜನರಿಗೆ ಉಲ್ಲಾಸವನ್ನು ಕಡಿಮೆಮಾಡಿದಂತಾಗುವದು.

* * *

ಕೊಡಗು ದೇಶದಲ್ಲಿ ಕುಶಾಲನಗರದಲ್ಲಿಯೂ ಮತ್ತು ರಾಮಸ್ವಾಮಿ ಕಣ್ವೆಯಲ್ಲಿ ಪ್ರತಿವರ್ಷವೂ ಜಾತ್ರೆಯ ಸಮಯದಲ್ಲಿ ದನಗಳ ಪ್ರದರ್ಶನವು ನಡೆಯುತ್ತಿರುವ ಹಾಗೆಯೇ ಕೊಡ್ಲಿಪೇಟೆಯಲ್ಲಿಯಾ ಅಲ್ಲಿ ಪುರಾತನದಿಂದಲೇ ಇರುವ ಶ್ರೀ ಬಸವೇಶ್ವರ ದೇವಸ್ಥಾನದ ಹೆಸರಿನಲ್ಲಿ ದನಗಳ ಪ್ರದರ್ಶನವನ್ನು ನಡಿಸುವಂತೆ ಅಪ್ಪಣೆಗಾಗಿ ಕಮಿಷನರ್ ಸಾಹೇಬರವರಿಗೆ ಅಲ್ಲಿಯವರು ಅರ್ಜಿ ಬರಕೊಂಡಿರುತ್ತಾರಂತೆ.

ಹಿಂದೂದೇಶ.

ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸರವರು ಇದೇ ತಾರೀಖು 17 ರಲ್ಲು ಬೊಂಬಾಯಿಪಟ್ಟಣಕ್ಕೆ ತಲಪಿದರು. ಯುವರಾಜರನ್ನು ಎರವಮಾಡಿಕೊಳ್ಳಲು ಬಂದರಿನಲ್ಲು ಸುಮಾರು 2 ಸಾವಿರ ಜನರು ಟಿಕೇಟು ಪಡಕೊಂಡವರು ಸೇರಿದ್ದರು.

* * *

ಯುವರಾಜರು ಬೊಂಬಾಯಿಯಲ್ಲಿ ಬಂದು ಇಳಿದ ದಿನವೇ ಅಸಹಕಾರಿಗಳು ಮಹಾತ್ಮಾ ಗಾಂಧಿಯವರ ಬೋಧನೆಯಂತೆ ಹರಿತಾಳವನ್ನು ಜಾರಿಗೆ ತಂದರು. ಯುವರಾಜರನ್ನು ಒಂದು ಕಡೆ ಬರಮಾಡಿಕೊಳ್ಳುತ್ತಿರುವಾಗ ಒಂದು ಕಡೆ ಪರದೇಶಿ ಒಟ್ಟೆಗಳು ದಹನವಾಗುತ್ತಿದ್ದವು. ಹರತಾಳವನ್ನು ಕೈಕೊಂಡ ಜನರ ಗುಂಪುಗಳು ಪರದೇಶಿ ಒಟ್ಟೆಗಳನ್ನು ಧರಿಸಿ ಹೋಗುತ್ತಿದ್ದ ಅನೇಕರ ಟೋಪಿ ವಗೈರೆಗಳನ್ನು ಕಿತ್ತು ಸುಟ್ಟುಬಿಟ್ಟರು. ಈ ರೀತಿ ಹಿಂಸಿಸಲ್ಪಟ್ಟವರು ಪಾರ್ಸಿಗಳು ಮತ್ತು ಇಂಡಿಯನ್ ಕ್ರೈಸ್ತರೂ ಆಗಿರುತ್ತಾರೆ. ಇದಕ್ಕೆ ಪ್ರತಿಫಲವಾಗಿ ಇವರುಗಳು ಬಿಳಿಬಟ್ಟೆಯನ್ನು ಹಾಕಿದವರನ್ನು ಹೊಡೆದಿರುವರು. ಪೋಲೀಸಿನವರು ಮತ್ತು ಮಿಲಿಟರಿಯವರು ಈ ಗಲಾಟೆಯನ್ನು ನಿಲ್ಲಿಸಿರುವರು ಕೆಲವು ಸಾರಾಯಿ ಅಂಗಡಿಗಳು ಸುಡಲ್ಪಟ್ಟವು ಈ ದೊಂಬಿಯ ಫಲಿತಾಂಶವಾಗಿ 7 ಜನರು ಮೃತಪಟ್ಟರು. 200 ಜನರು ಘಾಯಹೊಂದಿರುವರು. ಮಹಾತ್ಮ ಗಾಂಧಿಯವರು ಈ ಗಲಾಟೆಗಳಾಗಲು ತಾನು ಕಾರಣನಾಗಿರುವೆನೆಂದೂ ದೇಶೀಯರೆಲ್ಲರೂ ‹‹ ಸರಕಾರ ಅವಿಧೇಯತ್ವ '' ವನ್ನು ಕೈಕೊಳ್ಳಲು ಇನ್ನು ತಯಾರಿಲ್ಲವೆಂದೂ ಮತ್ತು ತಾನು ಇದಕ್ಕೋಸ್ಕರ ಪ್ರತಿ ಸೋಮವಾರವು 24 ಗಂಟೆಗಳ ಉಪವಾಸವನ್ನು ಸ್ವರಾಜ್ಯ ದೊರಕುವ ತನಕ ಕೈಕೊಳ್ಳುವೆನೆಂದು ಹೇಳಿರುವರು.

* * *

ಲಾರ್ಡ್ ಸಿಂಹರವರ ದೇಹಾಲಸ್ಯವು ಅವರು ರಾಜಿನಾಮೆ ಕೊಟ್ಟಿಲ್ಲದ ಪಕ್ಷ ರಾಜಿನಾಮೆಯನ್ನು ದಾಖಲು ಮಾಡುವಷ್ಟರ ಮಟ್ಟಿಗೆ ಇದೆ ಎಂದು ‹‹ ಬಂಗಾಳ '' ಪತ್ರವು ಬರೆಯುತ್ತದೆ

* * *

ಡಾ|| ವರದರಾಜುಲು ನಾಯಡುರವರಿಗೆ ರಾಜದ್ರೋಹದ ಬಾತ್ಮಿಯೊಂದನ್ನು ‹‹ ತಮಿಳನಾಡು '' ಎಂಬ ಪತ್ರದಲ್ಲಿ ಬರೆದದ್ದಕ್ಕೆ ಒಂಭತ್ತು ತಿಂಗಳು ಕಠಿಣಸಜವು ಸೇಲಂ ಡಿ|| ಮೆ|| ರವರಿಂದ ವಿಧಿಸಲ್ಪಟ್ಟಿದೆ.

* * *

ಮಲಬಾರು ದಂಗೆಖೋರರು ನೀಲಂಬೂರಿನಲ್ಲಿ ಮರೆಹೊಕ್ಕಿರತಕ್ಕ ಮಾಪಿಳ್ಳೆಯವರಮೇಲೆ ಒರಲು ಬ್ರಿಟಿಷ್ ಮತ್ತು ಹಿಂದು ಸೈನಿಕರು ಓಡಿಸಿರುವರು. ಇದರಲ್ಲಿ ಒಬ್ಬ ಮರೆಹೊಕ್ಕವನು ಮತ್ತು 6 ದಂಗೆಖೋರರು ಮೃತಪಟ್ಟಿರುವರು. 30 ಮಾಪಿಳ್ಳೆಯವರು ಮರೆಹೊಕ್ಕಲು ಓಡಿಹೋಗುತ್ತಿದ್ದ 33 ಜನರನ್ನು (ಹೆಂಗಸರು ಮಕ್ಕಳು ಸಹ) ತಡೆದು ಹೊಡೆದರು ಒಬ್ಬನು ಮಾತ್ರ ತಪ್ಪಿಸಿಕೊಂಡನು ಮೃತಪಟ್ಟವರು ಪಕ್ಕದ ಹೊಳೆಯಲ್ಲಿ ಎಸೆಯಲ್ಪಟ್ಟರು. ಮಾಪಿಳ್ಳೆಯವರು ಓಡಿಹೋದರು.

* * *

500 ರೂ. ಮೇಲೆ ಸಂಬಳವಿರುವ ಸರಕಾರಿ ಉದ್ಯೋಗಸ್ಥರಿಗೆ (ಇನ್ನು ಮುಂದೆ ಬರುವವರಿಗೆ) ಅವರ ಸಂಬಳದ ಮೂರರಲ್ಲಿ ಎರಡು ಪಾಲು ಮಾತ್ರ ಕೊಡಬೇಕೆಂದು ತಂದ ಠರಾವು ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಮಂಜೂರಾಗಿದೆ.

* * *

ಪಂಜಾಬು ಮತ್ತು ಅಮದಾಬಾದಿನ 86 ಜನ ಮಾರ್ಶಿಯಲ್ ಲಾ ಕೈದಿಗಳ ಪೈಕಿ 20 ಜನರಿಗೆ ವೈಸ್ರಾಯರವರು ಕೃಪೆಯನ್ನು ತೋರಿಸಿ ಬಿಡಿಸಿರುತ್ತಾರೆ .

ಸರ್ ಶಂಕರನಾಯರ್‌ರವರ ರಾಜಿನಾಮೆಯಿಂದ ಉಂಟಾದ ಇಂಡ್ಯಾ ಕೌನ್ಸಿಲ್ ಮೆಂಬರುತನಕ್ಕೆ ಡಿ ಯಂ. ದಲಾಲ್‌ರವರು ನೇಮಿಸಲ್ಪಡುತ್ತಾರೆಂದು ವದಂತಿ ಇದೆ

* * *

ರಾಷ್ಟ್ರೀಯ ಸಭೆಯ ಕಮಿಟಿಯವರ ಮಸೂದೆಯ ಮೇರೆ ಯುವರಾಜರು ಇಂಡಿಯಾಕ್ಕೆ ತಲಪಿದದಿನ ಕಲ್ಕತ್ತ, ಅಮೃತಸಾರ, ಪಾಟ್ನ, ಎಡೋನಿ. ಶಿಕಾರ್‌ಪುರ, ಪೂನ ಮೊದಲಾದ ಸ್ಥಳಗಳಲ್ಲಿಯೂ ಇನ್ನು ಅನೇಕ ಸ್ಥಳಗಳಲ್ಲಿಯೂ ಹರತಾಳವು ಕೈಕೊಳ್ಳಲಾಯಿತು.

* * *

ಕಲ್ಕತ್ತ ಹೈಕೋರ್ಟಿನಲ್ಲಿ ಹರಿತಾಳದ ಫಲಿತಾಂಶವಾಗಿ ಲಾಯರುಗಳಿಗೆ ಮತ್ತು ಕಕ್ಷಿಗಾರರಿಗೆ ಗಾಡಿ ಮೊದಲಾದವುಗಳು ದೊರಕದೆ ಕೋರ್ಟಿಗೆ ಹಾಜರಾಗಲಿಲ್ಲವಾದ್ದರಿಂದ ಕೆಲವು ಮೊಕದ್ದಮೆಗಳು ಅಡ್ಜರ್ನ್ ಮಾಡಲ್ಪಟ್ಟಿರುವವು.

* * *

ಬರೋಡದಲ್ಲಿ ಚೀಫ್ ಜಡ್ಜಿಯವರಾಗಿದ್ದ ಮೆ|| ಅಬ್ಬಾಸ್‌ಟ್ಯಾಬ್ಜಿ ಮತ್ತು ಇಬ್ಬರು ಅಸಹಕಾರಿಗಳನ್ನು ಯುವರಾಜರು ಬರೋಡಕ್ಕೆ ಹೋಗುವದಕ್ಕೆ ಒಂದು ವಾರ ಮುಂಚೆಯೇ ಸಂಸ್ಥಾನವನ್ನು ಬಿಡಬೇಕಾಗಿಯೂ. ಯುವರಾಜರು ಅಲ್ಲಿ ಇರುವವರೆಗೆ ಸಂಸ್ಥಾನವನ್ನು ಸೇರಕೂಡದೆಂಬದಾಗಿಯೂ ದಿವಾನರು ಹುಕ್ಕುಂ ಮಾಡಿರುತ್ತಾರೆ.

ವಿದೇಶ.

ಇಂಡಿಯಾ ಕೌನ್ಸಿಲ್ ಮೆಂಬರಾದ ಮೆ|| ಬೂಪೇಂದ್ರನಾಥ್ ಬಾಸುರವರು ಇಂಗ್ಲಾಂಡಿನಿಂದ ಹಿಂದೂದೇಶಕ್ಕೆ ಕೂಡ್ಲೆ ಪ್ರಯಾಣಮಾಡುವರು.

* * *

ಅಮೇರಿಕದ ಸಂಯುಕ್ತಸಂಸ್ಥಾನದ ಪ್ರೆಸಿಡೆಂಟರಾದ ಹಾರ್ಡಿಂಗ್‌ರವರು ಜರ್ಮನಿ ರಾಜಿ ಕವಲಿಗೆ ದಸ್ಕತ್ತು ಮಾಡಿರುತ್ತಾರೆ

* * *

ಮಿ|| ಅನಾಟೋಲ್ ಫ್ರಾನ್ಸ್‌ರವರು 3 ಲಕ್ಷ ಫ್ರಾಂಕುಗಳ ನೋಬೆಲ್ ಇನಾಮತಿಯನ್ನು ರಷ್ಯಾ ದೇಶದ ಕ್ಷಾಮ ನಿವಾರಣಕ್ಕಾಗಿ ಉಪಯೋಗಿಸಲು ನಿರ್ಧರಿಸಿರುತ್ತಾರೆ.

* * *

ಬ್ರಿಗೇಡಿಯರ್ ಜನರಲ್ ಹಾನರೆಬಲ್ ಸಿ. ಜಿ. ಬ್ರೂಸ್‌ರವರು ಹಿಮಾಲಯ ದಂಡಯಾತ್ರೆಯನ್ನು ನಡಿಸಲು ರಾಯಲ್ ಜಾಗ್ರಫಿಕಲ್ 'ಸೊಸೈಟಿಯವರ ಇರಾದೆಮೇರೆ ಒಪ್ಪಿರುವರು ಎಂದು ಈವಿನಿಂಗ್ ಸ್ಟೇಂಡಾರ್ಡ್ ಪತ್ರಿಕೆಯು ಬರೆದಿರುತ್ತೆ.

* * *

ಕಾಶ್ಮೀರ್ ಎಂಬ ಹಡಗಿನಲ್ಲಿ ತಾ|| 11 ರಲ್ಲು ಬೊಂಬಾಯಿಗೆ ತಲಪಬೇಕಾಗಿ ಆಗಾಖಾನ್ ಸಾಹೇಬರು ಅನಾಯಸಂಭವದಿಂದ ಇನ್ನೂ ಹದಿನೈದುದಿನಗಳವರೆಗೆ ತಡೆಯಲ್ಪಟ್ಟಿದ್ದಾರೆ.

(Vaccination) ಶಿತ್ಲಾಯ ಡಾಕು.

ಕೊಡಗುದೇಶದ ಎಲ್ಲಾ ಜನರಿಗೂ ಈ ಮೂಲಕ ಕೋತವಾಗಿ ಸೂಚಿಸುವ ವಾಕ್ಸಿನೇಷನ್ ಅಂದರೆ ಡಾಕು ಯಾ ಶಿಡುಬು ಹಾಕುವುದರ ಮೂಲ ಚರಿತ್ರೆಯನ್ನೂ ಮತ್ತು ಅದರಿಂದ ಉಂಟಾಗುವ ಪ್ರಯೋಜನವನ್ನೂ ಹಲವರು ಇನ್ನೂ ತಿಳಿಯದೆ ಇರುವದರಿಂದ ಇಲ್ಲಿ ಸ್ವಲ್ಪಮಟ್ಟಿಗೆ ವಿವರಿಸಬೇಕಾಯಿತು. ಮುಖ್ಯವಾಗಿ ಬಹಳ ಜನರಿಗೆ ಇದರ ಮಹಾತ್ಮ್ಯದ ಪ್ರಯೋಜನ ಗೊತ್ತಿಲ್ಲದ್ದರಿಂದಲೇ ವ್ಯಾಕ್ಸಿನೇಷನ್ ಡಿಪಾರ್ಟ್‌ಮೆಂಟಿನವರಿಗೆ ಗ್ರಾಮಗಳಲ್ಲಿ ತೃಪ್ತಿಕರವಾದ ಕೆಲಸಮಾಡಲು ಅಡ್ಡಿಯಾಗಿದೆ. ವ್ಯಾಕ್ಸಿನೇಷನ್ ಎಂಬ ವರವನ್ನು ದೇವರು ವಿಲಾಯಿತಿಯಲ್ಲಿದ್ದ ಡಾಕ್ಟರ್ ಇ. ಜೆನ್ನರ್‌ಸಾಹೇಬರ ಮೂಲಕ 1798 ನೇ ಇಸವಿಯಲ್ಲಿ ಲೋಕಕ್ಕೆ ಪ್ರಕಟಣೆ ಮಾಡಲಾಯಿತು. ಇದಕ್ಕೆ ಮೊದಲು ವಿಲಾಯಿತಿ ಮತ್ತು ಬೇರೆ ಯೂರೋಪ್ ಖಂಡಗಳಲ್ಲಿಯೂ ನಮ್ಮ ಇಂಡಿಯಾ ದೇಶದಲ್ಲಿಯೂ ಸಹ ಶಿಡುಬುಜಾಡ್ಯದ ಅವಾಂತರದಿಂದ ಕಷ್ಟವೂ ನಷ್ಟವೂ ಪ್ರಾಣಹಾನಿಯೂ ಉಂಟಾಗುತ್ತಿದ್ದ ಸಂಗತಿಗಳು ಘೋರವಾಗಿದ್ದವು. ಆ ಕಾಲದಲ್ಲಿ ಈ ಜಾಡ್ಯದಿಂದ ಮೃತಪಡುತ್ತಿದ್ದವರ ಸಂಖ್ಯೆಯು ವಿಪರೀತವಾಗಿಯೂ ಅದಕ್ಕಿಂತ ಶಿಡುಬಿನ ಉಪದ್ರದಿಂದ ಮನುಷ್ಯರಿಗೆ ಮುಖ್ಯ ಪ್ರಯೋಜನವಾದ ಕಣ್ಣುಗಳು ಹಾನಿಯಾಗಿ ಕುರುಡರ ಸಂಖ್ಯೆಯು ಹೆಚ್ಚುತ್ತಲೂ ಕಾಲು ಕೈ ಕೀಲುಗಳಿಗೆ ಊನ ಉಂಟಾಗಿ ಪ್ರಯೋಜನಕ್ಕೆ ಬಾರದ ಮನುಷ್ಯರ ಸಂಖ್ಯೆಯು ಇನ್ನಷ್ಟು ಹೆಚ್ಚುತ್ತಲೂ ಸಹಿಸಲಾರದ ಕಷ್ಟಗಳನ್ನು ಪಡುತ್ತಿದ್ದರು. ಹೀಗಿರುವಾಗ್ಯೆ, ದೇಶದ ಎಲ್ಲಾ ಜನರು ಈ ಭಯಂಕರವಾದ ಶಿಡುಬಿನ ಉಪದ್ರವನ್ನು

...ಲಿಕ್ಕೆ ಅನೇಕತರವಾದ ಪ್ರಯತ್ನಗಳನ್ನು ಮಾಡುತ್ತಿ... ಆ ಕಾಲದಲ್ಲಿಯೇ ಇದು ಒಂದುತರದ ಅಂಟುರೋ... ...ದು ಕಂಡು ಹಿಡಿದಿದ್ದರು. ಆದದ್ದರಿಂದಲೇ ಒಂದು ...ಯಲ್ಲಿ ಸಿಡುಬು ತೋರಿದಕೂಡಲೆ ಸಿಡುಬು ಇದವರನ್ನು ...ಕ ದೂರಮಾಡಗುವದರ ಬದಲು (Segregation) ...ಯವರೇ ಈ ಅಂಟುಜಾಡ್ಯವನ್ನು ತಪ್ಪಿಸಿಕೊಳ್ಳಲಿಕ್ಕೆ ...ರೋಗಿ ವಾಸಿಸುತ್ತಿದ್ದರು ಆದರೆ ಒಬ್ಬನಿಗೆ ಸಿಡುಬು ...ದರೆ ಅರುವಾಗದವರೆಗೆ (Infection) ಬಾಧ್ಯದ ಉ...ವು ಇದೆ ಎಂಬದು ತಿಳಿಯದೆಯೂ ಆವಾಗ್ಯೆ ಅಂದಾ...ಗಳನ್ನು (Disinfection) ಶುಚಿಮಾಡದೆ ಮನೆ ಸೇರ...ದೆಂಬ ಸಂಗತಿ ಗೊತ್ತಿಲ್ಲದೆಯೂ ಪುನಃ ಅಲ್ಲಿಯಣ...ರೋಗಕ್ಕೆ ತುತ್ತಾಗುತ್ತಿದ್ದರು ಒಬ್ಬನಿಗೆ ಒಂದಾ... ಸಿಡುಬು ಆದರೆ ಪುನಃ ವ್ಯಾಪಿಸುವದಿಲ್ಲವೆಂಬ ಸಂಗತಿ ...ಕಾಲದಲ್ಲಿಯೇ ಅನುಭವಕ್ಕೆ ಒಂದು ಸಿಡುಬು ಹುಣ್ಣಿನ ...ಲನ್ನು ತೆಗೆದು ಬೇರೆ ಜನರಿಗೆ ಹಾಕಲು ಉಪಕ್ರಮಿಸಿದ ... ಪೈಕಿ ಲೋಕದಲ್ಲಿ ಟರ್ಕಿಸ್ಥಾನದವರೇ ಮೊದಲು ...ದು ಕ್ರಮೇಣ ಹಿಂದೂಸ್ಥಾನದ ಆಸ್ಸಾಂ ಬರ್ಮಾ ಒಂ...ಳ ಮತ್ತು ವಾಯವ್ಯ ಪ್ರಾಂತ್ಯಗಳಲ್ಲೆಲ್ಲಾ ಹರಡಿಕೊಂ... ಸಿಡುಬು ಹಾಕುವವರ ಯಾ ಠಾಕಿದಾರರ (Inocu...tors) ಸಂಖ್ಯೆಯು ಹೆಚ್ಚಾಗುತ್ತಾ ಬರುತ್ತಿದ್ದವು ಈ ...ದ್ಧತಿಯು ಕ್ರಮೇಣ ದಕ್ಷಿಣ ಹಿಂದೂಸ್ಥಾನದಲ್ಲೆಲ್ಲಾ ವ್ಯಾ...ಸಿಕೊಂಡವು ಇದಕ್ಕೆ ದೃಷ್ಟಾಂತರವಾಗಿ ಈ ನಮ್ಮ ...ಡಗು ದೇಶದಲ್ಲಿ ಸಹ ಸಿಡುಬು ತಗಲಿದ್ದವರಲ್ಲಿಗೆ ಜನರು ಹೋಗಿ ಸಿಡುಬಿನ ಕರಟೆಯನ್ನು ಅನ್ನದೊಳಗೆ ಮಿಶ್ರಮಾಡಿ ...ಡುಬು ರೋಗವನ್ನು ಬರಮಾಡಿಕೊಳ್ಳುತ್ತಿದ್ದಂಥ ಪದ್ಧತಿ ...ಲ್ಲರೂ ಕೇಳಬಲ್ಲರು ಈ ಪದ್ಧತಿಗಳಿಂದ ಉಂಟಾದ ಪ್ರಯೋ...ನವೇನು ? ಇದರಿಂದ ಒಂದು ಭಾಗದಲ್ಲಿ ತಗಲಿದ ಬಾ...ಧ್ಯವು ಬೇರೆ ಸ್ಥಳಕ್ಕೆ ಆದಾಗ ಹಬ್ಬುವದರ ಮುಂದಾಗಿ ...ಯೇ ಮೇಲೆ ಹೇಳಿದ ಠಾಕಿದಾರರು ಗ್ರಾಮಗ್ರಾಮಗಳ...ಗೆಲ್ಲಾ ತಿರುಗುತ್ತಿದ್ದರು ಕಡೆಗೆ ಇದರ ಫಲಿತಾಂಶವು ಸ್ವಭಾ...ವಿಕವಾಗಿ ವ್ಯಾಪಿಸುತ್ತಿದ್ದ ಸಿಡುಬುಬಾಧ್ಯಕ್ಕಿಂತ ಹೆಚ್ಚಾಗಿ ಪ್ರಬಲಿಸಿದರಲ್ಲದೆ, ಸಿಡುಬು ಬಾಧ್ಯದಿಂದ ಉಂಟಾಗುತ್ತಿದ್ದ ಮರಣಗಳು ಹೆಚ್ಚಾಗುತ್ತಾ ಬಂದವು ಈ ಹಿಂದುಸ್ಥಾನದವರೆಲ್ಲರಿಗು ಮೇಲೆಹೇಳಿದ ಕ್ರಮವು ಇನ್ನಷ್ಟು ಅಪಾಯಕರವಾದದ್ದೆಂದು ಕಂಡುಬಂದರೂ ಠಾಕಿದಾರರೆಂಬುವರು ಆ ಪದ್ಧತಿಯನ್ನು ಅವರ ಜೀವನೋಪಾಯದ ಲಾಭಕ್ಕೋಸ್ಕರ ಮಾರಮ್ಮ ಎಂಬ ದೇವತೆಯ ಭಕ್ತರೆಂದು ನಟಿಸಿ ಹೆಚ್ಚಾಗಿ ಉಮೇದುಮಾಡುತ್ತಿದ್ದರು ಇಂಥಾ ಠಾಕಿದಾರರ ತಿಂಗಳು ಒಂದರ ಆದಾಯವು ಸುಮಾರು 100 ರೂಪಾಯಿ ವರೆಗೆ ಇತ್ತಂತೆ ಇವರು ಪ್ರತೀ ಒಬ್ಬನ ಕೈರಟ್ಟೆಗೆ ಚಿಕ್ಕ ಚಾಕಿನ ಮೂಲಕ ಕೊಂಚ ರಕ್ತಬರುವಹಾಗೆ 3 4 ಗಾಯ ಮಾಡಿ ಬಿಳೀ ಬಟ್ಟೇ ತುಂಡಿನಲ್ಲಿ ಅದ್ದಿಕೊಂಡಿದ್ದ ಸಿಡುಬಿನ ಹಾಲನ್ನು ಕೊಂಚ ನೀರುಹುಯ್ದು ಹದಮಾಡಿಕೊಂಡು ಸದರಿ ಘಾಯಗಳಿಗೆ ಒಂದೆರಡು ತೊಟ್ಟುಗಳನ್ನು ಹುಯ್ಯುತ್ತಿದ್ದರಂತೆ ಇದಕ್ಕೆ ಇವರಿಗೆ ಒಂದೆರಡು ಸೇರು ಧಾನ್ಯ ತೆಂಗಿನ ಕಾಯಿ 8 ಆಣೆಯಿಂದ 10 ರೂಪಾಯಿ ವರೆಗೆ ಸುಲುಕೊಳ್ಳುತ್ತಿದ್ದರಂತೆ ಮೇಲೆ ಹೇಳಿದ ಸದರಿ ಸಿಡುಬುಹಾಕುವ (Smallpox Inoculation) ಪದ್ಧತಿಯು ಯಾವಕರದಲ್ಲಿಯೂ ಬಚಾವುಮಾಡದೆ ವಾಡಿಕೆಯಂತೆ ಲಕ್ಷಾಂತರ ಜನರು ಆ ಬಾಧ್ಯಕ್ಕೆ ತುತ್ತಾಗಿಯೂ, ಬದುಕಿದವರ ಪೈಕಿ ಅನೇಕರು ಕುರುಡರಾಗಿಯೂ ಅಂಗಹೀನರಾಗಿಯೂ ನರಳುತ್ತಿದ್ದರು. ಈ ಪ್ರಕಾರ ಇಡೀ ಭೂಲೋಕದ ಜನರೆಲ್ಲರೂ ಈ ಮಾರಿಯನ್ನು ಯಾವ ಉಪಾಯದಿಂದ ಕೆಡಗುವದೆಂದು ಅನೇಕ ಪಂಡಿತರಲ್ಲಿ ಚರ್ಚೆಮಾಡುತ್ತಾ ಇದ್ದರು ಹೀಗಿರುವಾಗ್ಯೆ ಇಂಥಾ ಪಂಡಿತರ ಪೈಕಿ ವಿಲಾಯಿತಿಯಲ್ಲಿದ್ದ ಡಾಕ್ಟರ್ ಇ. ಜೆನ್ನರ್ ಸಾಹೇಬರು ಸಿಡುಬಿನ ಉಪದ್ರವನ್ನು ನಿಲ್ಲಿಸುವ ಉದ್ದಿಶ್ಯ ಒಟುವರ್ಷದಿಂದ ಅಂದರೆ 25 ವರ್ಷಕ್ಕಿಂತ ಹೆಚ್ಚಾಗಿ ಪದೇಪದೆ ಪ್ರಯತ್ನಪಟ್ಟು ತನಗೆ 1798 ನೇ ಇಸವಿಯಲ್ಲಿ ವ್ಯಾಕ್ಸಿನೇಷನ್ (Vaccination) ಅಂದರೆ ಗೋವು ಹುಣ್ಣಿನ ಹಾಲನ್ನು ತೆಗೆದು ಡಾಕು ಹಾಕುವ ವಿಧವನ್ನು ಕಂಡು ಹಿಡಿದು ಲೋಕಕ್ಕೆಲ್ಲಾ ಪ್ರಕಟಿಸಿದರು. ಇವರಿಗೆ ಲಂಡನ್ ಪಟ್ಟಣದಲ್ಲಿ ಹಾಲುಮಾರುವ ಜನರ ಪೈಕಿ ಸಿಡುಬು ಉಪದ್ರವು ಕಮ್ಮಿಯಾಗಲಿಕ್ಕೆ ಕಾರಣವೇನೆಂಬದನ್ನು ಕಂಡು ಹಿಡಿಯಲಿಕ್ಕೆ ಮೇಲೆ ಹೇಳಿದಹಾಗೆ 25 ವರ್ಷ ಹಿಡಿಯಿತು ಕಡೆಗೆ ಹಸುಗಳ ಮೈಯಲ್ಲಿಯೂ ಮನುಷ್ಯರಾ... ಕೆಚ್ಚಲಲ್ಲಿಯೂ ಒಂದು ತರದ ಬೊಕ್ಕೆಯಂತಹ (Vesicles) ಹಾಲು ಕರೆಯುವರ ಪೈಕಿ ಕೆಲವರಿಗೆ ಎಂದಾದರು ಅವರ ಕೈಗಳಿಗೆ ಅಕಾಸ್ಮತ ಚಿಕ್ಕಗಾಯ ಉಂಟಾದದಕ್ಕೆ ಸದರಿ ಬೊಕ್ಕೆಯ ಕೀವು ತಗಲಿ ಅದರಿಂದ ಉಂಟಾದ ಗೋವು ಹುಣ್ಣಿನ (Cow pox) ಮೂಲಕ ಅಂಥಾವರಿಗೆ ಸಿಡುಬು ತಗಲುವದು ಅಪರೂಪವಾಗಲಿಕ್ಕೆ ಕಾರಣವಾಗಿರಬೇಕೆಂದು ಊಹಿಸಿದರು ಇದನ್ನು ಪರೀಕ್ಷೆಮಾಡಲಿಕ್ಕೋಸ್ಕರ ಆ ಬೊಕ್ಕೆಯ ಕೀವುವನ್ನು ಯಂತ್ರದಮೂಲಕ ತೆಗೆದು ಬೇರೆ ಜನರಿಗೆ ಹಾಕಿ ಪರೀಕ್ಷಿಸಲು ಜನರು ಸಿಕ್ಕದೆ ಕೆಲವು ವರ್ಷ ತೊಂದರ ಪಡಬೇಕಾಯಿತು ಆದರೂ ಇವರು ಮತ್ತು ಇವರ ಸ್ನೇಹಿತರಾದ ಅನೇಕ ಡಾಕ್ಟರುಗಳ ಪ್ರಯತ್ನದಿಂದಲೂ ದ್ರವ್ಯ ಖರ್ಚಿನಿಂದಲೂ 5 ವರ್ಷದ ಒಂದು ಮಗು ದೊರಕಲಾಯಿತು ಈ ಮಗುವಿಗೆ ಗೋವು ಸಿಡುಬಿನ ಹಾಲನ್ನು ತೆಗೆದು ಡಾಕು ಹಾಕಿದರಲ್ಲಿ ಚೆನ್ನಾಗಿ ಹುಣ್ಣಾಗಿ ಆರೇಳನೇ ದಿವಸದಲ್ಲಿ ಜ್ವರಬಂದು 20 ದಿವಸದೊಳಗೆ ಹುಣ್ಣಿನ ಕರಟೆ ಬಿದ್ದು ವಾಸಿಯಾದ ಮಗುವನ್ನು 3 4 ವರ್ಷದವರೆಗೆ ಸಿಡುಬುರೋಗ ತಗಲಿದ ಪ್ರಾಂತ್ಯಕ್ಕೆ ಗಡೀಗಡಿ ತೆಗೆದುಕೊಂಡು ಹೋದರೂ ಆ ಬಾಧ್ಯ ಸದರಿ ಮಗುವಿಗೆ ಅಂಟದ್ದರಿಂದ ಬೇರೆ ಹಲವು ಜನರು ತಾವಾಗಿಯೇ ಮುಂದಕ್ಕೆ ಬಂದು ಸದರಿ ಡಾಕು ಹಾಕಿಸ ತೊಡಗಿದರು ಈ ಮೇರೆ ಹೊಸದಾಗಿ ಕಂಡು ಹಿಡಿದ ಸಿಡುಬು ನಿವಾರಣೆಯ ಪಲವು ವಿಲಾಯಿತಿಯಲ್ಲಿ ಮೊದಲು ಫಲಿತಾಂಶಕ್ಕೆ ಬಂದ ಸಂಗತಿ ಲೋಕವೆಲ್ಲ ಹರಡಿಕೊಂಡಿತು.

ಎ ಜಿ ಎಮ್.

(ಮುಂದುವರೆಯುವದು.)

ಪಂಚಮರ ಮಿಟಿಂಗು.

(ಒಬ್ಬ ಬಾತ್ಮಿದಾರರಿಂದ)

ತಾ 30—10—21 ರಲ್ಲು ವೀರರಾಜೇಂದ್ರಪೇಟೆ ಪಂಚಮ ಸ್ಕೂಲಿನಲ್ಲಿ ಒಂದು ಮಿಟಿಂಗುಮಾಡಿ ಪಂಚಮರ ಸಭೆಯೊಂದನ್ನು ಏರ್ಪಾಡುಮಾಡಿದರು ಇದರಲ್ಲಿ ವೀರರಾಜೇಂದ್ರಪೇಟೆ, ಬಿಳುಗುಂದ, ಮೂರ್ನಾಡು, ಕಡಿಯತ್ತುನಾಡು, ನಾಂಗಾಲ, ಅಮ್ಮತ್ತಿ, ದೇವಣಗೇರಿ ಮತ್ತು ಉತ್ತರ ಕೊಡಗಿನ ಶಾಕೇರಿ ಗ್ರಾಮಗಳ ಪಂಚಮರೆಲ್ಲರೂ ಸೇರಿ ೫೭ ಜನರು ಹಾಜರಿದ್ದರು

ಪಂಚಮ ಸಭೆಗೆ ಬಿಳುಗುಂದ ಪಂಚಮ ಸ್ಕೂಲಿನ ಹೆ ಮಾ॥ ಮರಿಯಪ್ಪನವರನ್ನು ಅಧ್ಯಕ್ಷರನ್ನಾಗಿಯೂ, ಮೂರ್ನಾಡು ಪಂಚಮ ಸ್ಕೂಲಿನ ಹೆ ಮಾ ಗಿರಿಯಪ್ಪನವರನ್ನು ಸೆಕ್ರೆಟರಿಯಾಗಿಯೂ, ವೀರಾಜಪೇಟೆ ಪಂಚಮಸ್ಕೂಲಿನ ಹೆ, ಮಾ ಚಿಟ್ಟಯ್ಯನವರನ್ನು ಕಣ್ವೀನರಾಗಿಯೂ ಚುನಾಯಿಸಿದರು ಸಭೆಯು ಈ ಮೂರು ಉದ್ಯೋಗಸ್ಥರು ಮಿಟಿಂಗಿನಲ್ಲು ಘೋಷಿಸಿದರ ಸಾರಾಂಶ—

ಸತ್ತಪ್ರಾಣಿ ಯಾವದನ್ನೂ ಇನ್ನು ಮುಂದೆ ತಿನ್ನಬಾರದು ಹೆಂಡ ಮತ್ತು ಸಾರಾಯಿ ವಗೈರೆ ಅಮಲು ಪದಾರ್ಥ ಕುಡಿಯಬಾರದು ಇದನ್ನು ಸೇವಿಸುತ್ತಾ ಬಂದವರು ಕೆಟ್ಟು ಹೋಗಿರುತ್ತಾರೆ ಇವೆರಡು ಕೆಟ್ಟ ಚಾಳಿಯನ್ನು ಬಿಟ್ಟು ಒಳ್ಳೆ ನಡೆತೆಯಿಂದ ನಡೆಯಬೇಕು ಸರಕಾರದವರು ಹಿಂದುಳಿದವರಾದ ನಮ್ಮ ಮೇಲೆ ದಯಾನುಬಂಧವಾಗಿ ನಮಗೆ ಹೆಚ್ಚು ಸಹಾಯ ಮಾಡುತ್ತಾ ಬರುವದರಿಂದ ನಾವೆಲ್ಲರೂ ಆ ಸಹಾಯವನ್ನು ಸಂಪೂರ್ಣವಾಗಿ ಸ್ವೀಕರಿಸಿ ನಮ್ಮ ಬಡಮಕ್ಕಳಿಗೆಲ್ಲಾ ವಿದ್ಯಾಭ್ಯಾಸಮಾಡಿಸುತ್ತಾ ಮುಂದುವರಿಯಬೇಕಲ್ಲದೆ ದುರ್ನಡತೆಗಳಿಂದ ಹಿಂದುಳಿಯಬಾರದು ನಮ್ಮ ಮೈಯ್ಯು ಬಟ್ಟೆಯೂ ನಿರ್ಮಲವಾಗಿರಬೇಕು. ನಮ್ಮ ಗುಡ್ಲು ಮನೆಗಳ ಸುತ್ತು ಮುತ್ತಲು ಚೊಕ್ಕಟವಾಗಿಡಬೇಕು

ನಂತರ ಇದಕ್ಕನುಣವಾಗಿ ನಮ್ಮ ಹೊಲೆಯನ ಕುರಿತು ಹೆ ಮಾ ಚಿಟ್ಟಯ್ಯನವರು ಹೋಲಿಯ ಪೊರಿ ಪುನಂಬ ಪದ್ಯ ಬೋಧಿಸಿ ಟೀಕು ಮಾಡಿಕೊಟ್ಟರು ಸೆಕ್ರೆಟರಿ ಗಿರಿಯಪ್ಪನವರು ನಿಜಾದೇವಿ ಪದ್ಯವನ್ನು ನಟನೆ ಮಾಡಿ ಬೋಧಿಸಿದರು ಅಧ್ಯಕ್ಷ ಮರಿಯಪ್ಪನವರು ಅವರ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ರಾಮಭಜನೆ ಮಾಡಿದರು ವೀರಾಜೇಂದ್ರಪೇಟೆ ಪಂಚಮ ಸ್ಕೂಲ ಇನ್‌ಫೆಂಟ್ ಕ್ಲಾಸ್ ೪ ವರ್ಷದ ಚಿಕ್ಕ ಹೆಣ್ಣು ಮಕ್ಕಳು ರಾಜಾಂಗಮಗಳ ಪದ್ಯ, ಮತ್ತು ಬಾಲಿಕ ದರ್ಜೆ ಪದ್ಯ ಹೇಳಿ ಮಂಗಳಾರತಿ ಮಾಡಿದರು

ಇದನ್ನೆಲ್ಲಾ ನೋಡಿ ನೆರೆದಿದ್ದ ಸಭೆಯವರೆಲ್ಲರಿಗೆ ಬಹಳ ಸಂತೋಷ ಉಂಟಾದ್ದು ಅಲ್ಲದೆ ಮೇಲ್ಕಂಡ, ನೀತಿ, ನಡತೆ, ಕೈಕೊಂಡು ನಿರ್ಜೀವಿ ಎಂಬ ಸತ್ತಪ್ರಾಣಿಗಳನ್ನು ಮುಂದೆ ಭಕ್ಷಿಸುವದಿಲ್ಲವಾಗಿಯೂ ಹೆಂಡ, ಸಾರಾಯಿ ಮುಂತಾದ ನಿಷಪದಾರ್ಥವನ್ನು ಸೇವಿಸುವದಿಲ್ಲವಾಗಿಯೂ ಪಂಚಮ ಸಭೆಯು ಪ್ರತಿಯೊಬ್ಬನು ಅವರ ಮುಖ್ಯಸ್ಥರಿಗೆ ಸೈನ್ ಮಾಡಿರುತ್ತಾರೆ.

ವೀರಾಜೇಂದ್ರಪೇಟೆ ಪಂಚಮಸ್ಕೂಲ್ 1908 ರಿಂದ ಸ್ಥಾಪನೆ ಆದಾಗ್ಯೂ ಉಪಾಧ್ಯಾಯರುಗಳ ಪೈಕಿ ಇಷ್ಟರ ವರೆಗೆ ಇಂಥ ಸಭೆ ಸೇರಿಸಿ ಮಿಟಿಂಗ್‌ಮಾಡಿಸಿ ಪಂಚಮರಿಗೆಲ್ಲಾ ಇಂಥಾ ನೀತಿ, ನಡತೆ ಬೋಧಿಸಿ, ಸನ್ಮಾರ್ಗದ ನಡತೆ ತೋರಿದ್ದು ಯಾರೂ ಇಲ್ಲ. ಆದರೆ ಈಗ ಬಂದಿರುವ ವೀರಾಜಪೇಟೆ ಪಂಚಮ ಶಾಲೆ ಹೆ॥ ಮಾ॥ ಚಿಟ್ಟಯ್ಯನವರು ಈ ಸ್ಕೂಲ್ ಮುಂದೆ ಅಲಂಕಾರವಾದ ಹೂವಿನತೋಟಮಾಡಿ ಇಂಥ ಸಭೆ ಸೇರಿಸಿಕೊಂಡು ನಮ್ಮ ಪಂಚಮರನ್ನು ಸನ್ಮಾರ್ಗಕ್ಕೆ ತರುವದು ನೋಡಿ. ಶ್ರೀ ಕಾವೇರಮ್ಮನವರ ಕರುಣಿ ಕಟಾಕ್ಷದಿಂದ ಇವರ ಮೇಲೆ ದಯಪಾಲಿಸಿ ಇವರಿಗೆ ಮುಂದಕ್ಕೆ ಶುಭವಾಗಲೆಂದು ಸಭೆಯವರೆಲ್ಲರು ಎದ್ದು ನಿಂತು ಕೈಚಪ್ಪಾಳೆ ಹೊಡೆದು ೪ ಘಂಟೆಗೆ ಸಭೆಯು ಮುಕ್ತಾಯವಾಯಿತು.

ಪತ್ರವ್ಯವಹಾರಗಳು

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರರ ಉತ್ತರವಾದಿಗಳಲ್ಲ [ಎಡಿಟರ್]

ಪ್ರಪಂಚದ ಮಾತಿರಲಿ, ಇಂಡಿಯಾದ ಅನೇಕ ಬ್ರಿಟಿಸ್ ಮತ್ತು ನೇಟಿವ್ ರಾಜರುಗಳ ರಾಜ್ಯದಲ್ಲಿ ಈಚೆಗೆ ಕೆಲವು ವರ್ಷಗಳಿಂದ ಈ ತರದ ಪಲವು ವಿಧದ ಸಭೆ ಕೂಟ, ಮುಂತಾದುವುಗಳನ್ನು ಏರ್ಪಡಿಸಿಕೊಂಡು ಅನೇಕ ತಿದ್ದುಪಾಟುಗಳನ್ನು ಮಾಡುತ್ತಾ ಬಂದು, ದೇಶವೃದ್ಧಿಗೆ ಒಂದಿರುವದನ್ನು ನೋಡುತ್ತಾ ಇರುವದನ್ನೂ ಕಣ್ಣಾರೆ ಕಂಡೂ ಕೇಳಿ ಇರುವುದು ಆದ್ದರಿಂದ ಈ ನಮ್ಮ ಕೊಡಗುದೇಶವು ಸಹ ವೃದ್ಧಿಗೆ ಬರಬೇಕಾದರೆ ಇಂಥಾ ಸಭೆಗಳನ್ನು ಏರ್ಪಡಿಸಿದ ಹೊರತು ವಿಧಿ ಇಲ್ಲ. ಇಂಥಾ ಮುಖ್ಯ ಸಭೆಯು ಏರ್ಪಾಡಾಗಬೇಕಾದರೆ, ಆದಿಯಾದ ಅವರವರ ಊರು, ನಾಡುಗಳಿಂದಲೇ ಸುರುವಾಗಬೇಕು ಅಲ್ಲಿಯಣತಕ್ಕ ಮುಖ್ಯಸ್ಥರಿಂದ ಜನ ಚುನಾವಣೆಯಾಗಿ, ದೇಶದವರು ಸಬ್‌ಕಮಿಟಿ, ಸೆಕ್ರೆಟರಿ, ವೈಸ್‌ಪ್ರೆಸಿಡೆಂಟ್ ಪ್ರೆಸಿಡೆಂಟ್ ಮೊದಲಾದ ಮೆಂಬರುಗಳನ್ನು ವಯಸು, ವಿದ್ಯೆ ಬುದ್ಧಿ ಅನುಭವವುಳ್ಳ ದೇಶಸೇವೆಗೆ ಯೋಗ್ಯರಾದವರನ್ನು ಪಕ್ಷಪಾತವಿಲ್ಲದೆ ಆರಿಸಿ, ಮುಂದೆ ದೇಶೋನ್ನತಿಗ ಮೂಲವಾದ ಮತ, ಆಚಾರ, ವಿದ್ಯೆ, ಉದ್ಯೋಗ ಮುಂತಾದ ಕಾರ್ಯ ವೃದ್ಧಿಗೆ ತಕ್ಕದಾದ ಏರ್ಪಾಡುಗಳನ್ನು ಕಾಲಕ್ಕನುಗುಣವಾಗಿ ನಡೆಸಿಕೊಂಡು ಬರುವದೇ ಮೇಲು ದೇಶಾಭಿಮಾನಿಗಳಲ್ಲಿ ಅನೇಕರು ತಮಗೆ ಸಾಧ್ಯವಾದ ಮಟ್ಟಿಗೆ ತಿಳಿದಿದ್ದರೂ ಕೂಡ, ಹಟಕ್ಕಾಗಿ ನೆಂಟಸ್ಥಾನದ ಯಾ, ಸ್ನೇಹಿತರ ಯಾವದಾದರೊಂದು ಪ್ರಮೆಯಿಂದ ಪಾರ್ಟಿಗೆ ಸೇರಿಕೊಂಡು ನಿನ್ನೆ ದಿನ ಒಂದು ಸಂಗತಿ ತರ್ಕಕ್ಕೆ ಬಂದಾಗ್ಯೆ, ಅದು ಆಗಲೇ ಬೇಕೆಂದು ಪಬ್ಲಿಕಿನಲ್ಲಿ ಅಭಿನಯಮಾಡಿದ ಮಹಾತ್ಮರು, ಮಾರಣೆದಿನ ಅದೇ ಸಂಗತಿ ಪುನಃ ತರ್ಕಕ್ಕೆ ಬಂದಾಗ್ಯೆ ಅದು ಆಗಕೂಡದೆಂದು ವರ್ಣಿಸಿ ನಟಿಸುವವರನ್ನು ನಾನು ಕಣ್ಣಾರೆ ನೋಡಿ ಮತ್ತಷ್ಟು ಬೆರಗಾದೆನು ಇಂಥಾ ಪಕ್ಷಪಾತಕವಾದ ನಾಟಕವನ್ನು ಊರಲ್ಲಾಗಲಿ, ನಾಡಲ್ಲಾಗಲಿ ದೇಶದಲ್ಲಾಗಲಿ ನಟಿಸಲುಪಕ್ರಮಿಸಿದರೆ ನಮ್ಮ ಬಹಳ ಹಿಂದೆ ಬಿದ್ದಿರುವ ಈ ಚಿಕ್ಕದೇಶವು ಎಂದಿಗೂ ಏಳಿಗೆಗೆ ಬಾರದೆ ಮೂಲೆ ಪಾಲಾಗುವದು ಆದ್ದರಿಂದಿನಾ ಇನ್ನಾದರೂ ಎಲ್ಲರವಿಂದ ಪಾರ್ಟಿಗೆ ಕೈಹಾಕದೆ ಧೃಡಮನಸ್ಸಿನಿಂದ ಪಕ್ಷಪಾತವಿಲ್ಲದೆ ದೇಶಸೇವೆಯನ್ನು ಮಾಡುವ ಯೋಗ್ಯತೆ ಇರುವವರು ಮಾತ್ರ ಸ್ಟೇಜಿಗ ಬಂದು ಅಭಿನಯಮಾಡಿ ಸಭೆಯು ಹೊಂದುವಂತೆಮಾಡಿ ದೇಶವನ್ನು ಮುಂದೆ ವೃದ್ಧಿ ಸ್ಥಿತಿಗೆ ತರಲು ಪ್ರಯತ್ನಮಾಡಿದರೆ ಅಂಥವರಿಗೆ ನಾವು ಸೇವಕರಾಗಿ ಬೆಂಬಲವಾಗಿ ಇರುವದು ಸಹಜ. ದೇಶ ಹಿತೈಷಿ.

ತೇ ಕೊಡಗೆ !

"ರಾಮಾಯ ನಿತ್ಯಂ ನಮಃ" ಎಂಬ ಸ್ತೋತ್ರಕ್ಕೆ ಕೊಂಚ ಸ್ಥಾನವನ್ನಾದಗಿಸಿಕೊಂಡು ಭಕ್ತಿ ಮುಕ್ತಿಗಳಿಗೆ ಮುಖ್ಯತಮವೆನಿಸಿ "ರಾಮರಾಜ್ಯ" ಎಂಬಂತಿರುವ ಅದ್ವಯ ಸೂಚಕವಾಗಿ ಸ್ತೋತ್ರಾರ್ಥವಾದ ಅನ್ಯ ಶ್ಲೋಕಗಳಿಂದ ಅಂಕೃತನಾಗಿ ಪಾಠಕಮಹಾಶಯರಿಗೆ ಮನೋಲ್ಲಾಸನೀಯವೆ ಎಂದು ಪ್ರಾರ್ಥಿಸಿಕೊಳ್ಳುವ ಶಿಷ್ಯ ಸಂಭಾವಿಕನ ಪ್ರಥಮ ಪ್ರಯತ್ನಸ್ತೋತ್ರ.

ಶ್ಲೋ॥ ಗಾಂಡೀವ ರೂಪಗಣನಾಥ ಗಜಾನನವಕ್ತ್ರ ಕಂಡಾ । ಶುಭಃ ಸುತಾಪಸ್ಮಿ ಕಾಗ್ರಜ ಏಕದಂತಾ । ಲಂಬಾ ಮಲಂಘೋದರ ವಿಘ್ನದೂರಾ । ಕುಂಭಾ ಪುರಾಸಿಲಯಗಣಾದಿಪಪಾಹಿ ನಿತ್ಯಂ ॥

ಪಾರಾಂತರ ಶ್ಲೋಕ॥ ಶ್ರೀರಾಮಾ ಮುನಿಸಿಕರಸ್ತೋ ಮಪ್ರೇಮಾ । ಧನುಪಿನರಾಮಾ ರಘುಪತೀ ವಾಮೇಕಾ ಮಹುಕಃ । ಸುರಕುಲಾ ಶ್ಯಾಮಾಂಗ ಧೀಮಾನುತಾಂ ॥ ಭೌಮಾಕಾಯನ ನೇತ ಪ್ಯಾತಪುನಿತಾ । ಪತಿತ ಪಾವನ್ನ ಮೂರ್ತಿ ನಾ । ನಾಮಂ ರಾಘವರಾಜಿತಾ ತವಪದಾ । ರಾಮಾಯ ನಿತ್ಯಂ ನಮ ॥ ಸಿ ಯ ಕೃಷ್ಣಯ್ಯ,

ಗುಹ್ಯ.

ನವಂಬರ್ ತಾರೀಕು 4 ರ ಸಂಚಿಕೆಯಲ್ಲಿ "ಅಂಗೈಯ್ಯ" ಎಂಬ ಹೆಸರಿನಿಂದ ಪ್ರಕಟಿಸಲ್ಪಟ್ಟ ಪತ್ರಕ್ಕೆ ಮಡಿಕೇರಿ ಲೋವರ್ ಸೆಕಂಡರಿ ಗರ್ಲ್ಸ್ ಸ್ಕೂಲಿನ ಮುಖ್ಯೋಪಾಧ್ಯಾಯಿನಿಯು ಬರೆದ ಜವಾಬಿನ ತರ್ಜುಮೆಯನ್ನು ವಾಚಕರ ತಿಳುವಳಿಕೆ ಬಗ್ಗೆ ಈ ಕೆಳಗೆ ಪ್ರಕಟಿಸಿರುತ್ತೆ

ಅಯ್ಯಾ,

ನಮ್ಮ ಶಾಲೆಯ ವಿಷಯ ಕೆಲವು ವಿಚಾರಗಳಲ್ಲಿ "ಅಂಗೈಯ್ಯ" ಎಂಬವರು ನಿಮ್ಮ ತಾರೀಕು 1 ರ ಸಂಚಿಕೆಯಲ್ಲಿ ಬರೆದಿರುವರಷ್ಟೆ "ಅಂಗೈಯ್ಯ" ಎಂಬವರಿಗೆ ನ್ಯಾಯವಾದ ವರ್ತಮಾನವು ದೊರೆತಿಲ್ಲವಾದ್ದರಿಂದ ಸಿಲ ಸಂಗತಿಯನ್ನು ಅವರ ಒಳ್ಳೇರೀತಿಗೆ ತರಬೇಕಾದದ್ದು ನನ್ನ ಕರ್ತವ್ಯ

(1) ಪತ್ರಿಕೆಯಲ್ಲಿ ನಮೂದಿರುವಂತೆ ಮಡಿಕೇರಿ ಲೋವರ್ ಸೆಕಂಡರಿ ಬಾಲಿಕಪಾಠಶಾಲೆಯಲ್ಲಿ 4, 5 ಉಪಾಧ್ಯಾಯನಿಯರಲ್ಲ 9 ಉಪಾಧ್ಯಾಯಿ ನಿಯರಿದ್ದಾರೆ

(2) ವಿದ್ಯಾರ್ಥಿಗಳು ನನಗೆ ಯಾರಿಗೂ ತಿಳಿಯದಂತೆಯೂ ಸ್ವೇಛೆಯಿಂದಲೂ ಚಂದ ಎತ್ತಿರುವದಾಗಿದೆ ಕೊಡಗರ ಮಕ್ಕಳಲ್ಲಿ ಮತ್ತು ಅವರ ತಂದೆತಾಯಿಗಳಲ್ಲಿ ನಸ ಇರತಕ್ಕ ಸಹಜ ಗುಣವಾದ ಕೃತಜ್ಞತೆ ಅಥವ ಕನಿಕರದ ಪ್ರೇರೇಪಣೆಯೇ ಇದಕ್ಕೆ ಕಾರಣವೆಂದು ಹೇಳಲು ನಾನು ಸಂತೋಷಿಸುತ್ತೇನೆ ಶಿಷ್ಯರಿಂದ ಅರ್ಪಿಸಲ್ಪಟ್ಟ ಕೃತಜ್ಞತೆಯ ಚಿಕ್ಕ ಬಹುಮಾನಗಳನ್ನು ತಿರಸ್ಕರಿಸಬೇಕಾಗಿತ್ತೆಂದು ಅಂಗೈಯ್ಯನವರು ಇಚ್ಛಿಸಿರುತ್ತಾರೆಯೊ?

(3) ಇನಾಮತಿಗಳ ಸಂಖ್ಯೆ ಮತ್ತು ಪ್ರಕಾರಗಳ ವಿಷಯದಲ್ಲೂ ಕೊಟ್ಟಂತಾ ಸೂಚನೆಯು ಶುದ್ಧ ತಪ್ಪಾಗಿರುತ್ತೆ

(i) ನಾವು ಹಣ ವಸೂಲ್ ಮಾಡಿರುವದಿಲ್ಲ

(ii) ಪತ್ರಿಕೆಯಲ್ಲು ನಮೂದಿಸಿರುವದರ ಅರ್ಧದಷ್ಟು ಸಹ ಚಂದಾ ಮೊಬಲಗು ಮೀರಿರುವದಿಲ್ಲ ಹಣದ ಹೆಚ್ಚಿನ ಭಾಗವು ವಿದ್ಯಾರ್ಥಿಗಳಿಗೆ ಸಿಹಿ ಪದಾರ್ಥಗಳಿಗೋಸ್ಕರ ವ್ಯಯ ಆ ಕೂಡ್ಲೆ ಮಾಡಲ್ಪಟ್ಟಿರುತ್ತೆ

(4) ಈ ಚಿಕ್ಕ ಇನಾಮತಿಗಳು ಅಕ್ಟೋಬರ್ ತಿಂಗಳಲ್ಲಿ ಮಾತ್ರ ವಿದ್ಯಾರ್ಥಿಗಳ ಸ್ವೇಚ್ಛೆಯಿಂದ ಕೊಡಲ್ಪಟ್ಟದ್ದಾಗಿರುತ್ತೆ ಮುಖ್ಯೋಪಾಧ್ಯಾಯನಿಗೆ ಮೇ ತಿಂಗಳಲ್ಲಿ ಕೊಟ್ಟದ್ದಾಗಿದೆ "ಅಂಗೈಯ್ಯ" ಎಂಬವರು ಬರೆದಿರುವಂತೆ ತಿಂಗಳಿಗೆ ಎರಡಾವರ್ತಿ ಇಂಥಾ ಇನಾಮತಿಗಳು ಕೊಡಲ್ಪಟ್ಟಿರುವದಿಲ್ಲ

ತಂದೆ ತಾಯಿಗಳ ಮತ್ತು ಗಾರ್ಡಿಯನ್‌ಗಳ ಪುಕಾರು ಇದ್ದಲ್ಲಿ ಮುಖ್ಯೋಪಾಧ್ಯಾಯನಿಯು ರೂಬರೂಬು ಪ್ರಸ್ತಾಪಿಸಲು ತನ್ನ ಬಿಡಾರದಲ್ಲಿ ಯಾವಾಗಲೂ ಸಿದ್ಧರಾಗಿದ್ದಾರೆ

ಹಾಲಕ್ಕಿ ನರಸಣ್ಣ

ವಾಚಕ ಮಹಾಶಯರೇ

ಪಾಡಿನಾಲ್ಕುನಾಡು ಮೇಜಿಸ್ಟ್ರೇಟರವರ ಮೇಜದೊಳಗೆ ಹಾವು ಇದ್ದ ಸೂಚನೆಯೇನೆಂಬ ಒಬ್ಬ ದೇಶಾಭಿಮಾನಿಗೆ ಉತ್ತರ—

ದೇಶದಲ್ಲೆಲ್ಲಾ ಗಲಭೆಹತ್ತಿದ ಹಾಗೆ ಕಾಡುವಾಸಿಗೂ ಗಲಭೆಹತ್ತಿರುತ್ತೆ ದೇಶೀಯರ ಗಲಭೆಯಿಂದ ಮುಂದಾಳುಗಳಿಗೆ ಸರಕಾರದವರ ಕಾರಾಗೃಹವಾಸ ಇದಕ್ಕೆ ಕಚೇರಿ ಮೇಜಾಗೃಹವಾಸ ವಾಸಕ್ಕೆ ಕಡಮೆಯೆ! ಕಾಡಿನವರು ಊರು ವಾಸಿತರು ಪ್ರಭುಗಳು ಆಗುವುದಾದರೆ ಮುಂಚಿನ ಊರಿನವರು ಅವರ ವೃತ್ತಿಯನ್ನನುಸರಿಸಿ ಕಾಡುವಾಸ ಮತ್ತು ಮುಂದಿನ ಕಾಡುವಾಸಸ್ಥರ ಸ್ಥಾನಕ್ಕೂ ಸಹ ಅಯೋಗ್ಯರು ಮಹನೀಯರೆ! ಅಶುಭಸೂಚನೆಯೇ ಇನ್ನೊಂದು ಪಕ್ಷಕ್ಕೆ ಶುಭಸೂಚನೆ-ಅಶುಭಸೂಚನೆಗಾಗಿ ಪ್ರಯತ್ನಪಟ್ಟ ಆಳಿಸಹೋದರರಾದಿ ಮುಂತಾದವರ ಕಾರಾಗ್ರಹವೇ ಸ್ವರಾಜ್ಯಕ್ಕೆ ಶುಭಸೂಚನೆ ಕಾರಾಗ್ರಹವಾಸವೇ ಸ್ವರಾಜ್ಯವಾಸ ಈ ಸ್ವರಾಜ್ಯವಾಸವೇ ಪ್ರಭುಗಳಿಗೆ ಅರಿಷ್ಟ ಸೂಚನೆ ನ್ಯಾಯಶಾಲಿಗಳಾಗಿಯೂ ಜನಾನುರಕ್ತ ಅಹಿಂಸಕರಾಗಿಯೂ ಇರುವ ದೇಶಮಹಾತ್ಮರ ಹಿಂಸೆಯನ್ನು ಕಂಡು ಈ ಹಾವು ಜನಾನುರಕ್ತ ಸಿಕ್ಕಿ ಸಿಕ್ಕಿದವರಿಗೆ ಹಿಂಸನೆ ಮಾಡುತ್ತಾ ಕ್ರೂರಸ್ವಭಾವವುಳ್ಳದ್ದಾಗಿ ಹಿಂಸೆಯಲ್ಲಿ ತನಗೆ ಮಿಕ್ಕಿಲ್ಲವೆಂದು ಸರ್ವ ಹಿಂಸಿತನೆಂಬ ಬಿರುದಂಪಡದು ಕಾಡುವಾಸಿಯಾದ ಇದು ಮ ವರ್ಗಕ್ಕೆ ಸೇರಿ ಅಹಿಂಸಕರೆಂಬ ಬಿರುದಂಪಡದ ಪ್ರಭುಗಳು ತನಗಿಂತಲೂ ಮಿಕ್ಕಿದ ಹಿಂಸೆಯನ್ನು ಕಂಡು ನಾಚಿಕೆಯುಳ್ಳದ್ದಾಗಿ ತನ್ನ ಬಿರುದಂ ಬಿಟ್ಟು ಇನ್ನು ಈ ಕೆಲ್ಸ ತನಗೆ ಬೇಡವೆಂದೂ ಆ ಬಿರುದಂ ಪಡೆದ ನೀವೇ ಆ ಕೆಲ್ಸವಂ ನೆರವೇರ್ಸಿ ಮುಂದಿನ ತನ್ನ ಸ್ಥಾನಕ್ಕೆ ತೆರಳಿಯೆಂದು ಭಿನ್ನೈಸುವದೆ ಕಟ್ಟು ಹಾವು ಮೇಜಿಸ್ಟ್ರೇಟರವರ ಮೇಜದೊಳಗೆ ಪ್ರವೇಶಿಸಿತೆಂದು ಹಾಲಕ್ಕಿ ನರಸಣ್ಣನ ವಿಜ್ಞಾಪನೆ ಸಾರಾಂಶ ಇನ್ನು ಮುಂದೆ ದೇಶದ ಚಳವಳಿ ಹೆಚ್ಚಿಗೆಯುಂಟಾಗುವಕಾರಣ ಮೇಜಿಸ್ಟ್ರೇಟರೂ ಕೂಡ ಈ ಕ್ರೂರ ಹಾವಿನ ಸ್ವಭಾವ ತಾಳುವರೆಂಬಭಿಪ್ರಾಯ.

ಹಾತೂರು ಸ್ಕೂಲ್.

ಹಾತೂರಿನಲ್ಲಿ ಕೆಲವು ವರುಷಗಳ ಹಿಂದೆ ಎಂದರೆ ಇಲ್ಲಿ ನಧನವಂತರ ಮಕ್ಕಳೆಲ್ಲಾ ಚಿಕ್ಕವರಾಗಿಯೂ ಮತ್ತು ಸುತ್ತಲೂ ಎರಡು ಮೂರು ಮೈಲಿಗಳಿಗಿಂತ ಕಡಿಮೆಯಿಲ್ಲದಷ್ಟು ದೂರವಿರುವ ಸ್ಕೂಲುಗಳಿಗೆ ಹೋಗಲು ಅಶಕ್ತರಾಗಿದ್ದ ಕಾಲದಲ್ಲಿ ಒಂದು ಕನ್ನಡ (ಕೈಸಂಬಳದ) ಸ್ಕೂಲು ಜಾರಿಯಾಗಿ ಒಳ್ಳೆಯ ಅಭಿವೃದ್ಧಿಗೆ ಬಂದಿದ್ದಲ್ಲದೆ, ಇಂಗ್ಲೀಷನ್ನು ಸಹ ಕಲಿಸಲಿಕ್ಕೆ ಒಬ್ಬರಿಗಿಂತ ಗಟ್ಟಿಗರಾಗಿ ಮತ್ತೊಬ್ಬರು, ಹೀಗೆಯೇ ಅಲ್ಪಕಾಲದಲ್ಲಿ ಅನೇಕ ಇಂಗ್ಲೀಷ್ ಮಾಸ್ಟರುಗಳು ಬಂದು ಪಾಠ ಹೇಳುತ್ತಿರುವಾಗ್ಯೆ ನಮ್ಮ ಹಾತೂರು ಸ್ಕೂಲು ಸುತ್ತಮುತ್ತಲೂ ಇರುವ ಸರಕಾರಿ ಶಾಲೆಗಳಿಗೆ ಯಾವ ವಿಧದಲ್ಲಿಯೂ ಹಿಂದೆ ಬಿದ್ದಿರಲಿಲ್ಲ ಆ ಕಾಲದಲ್ಲಿ ಪೂರ್ವ ಪುಣ್ಯದಿಂದ ಜನಿಸಿದ್ದ ಬಡವರ ಮಕ್ಕಳು ಧನವಂತರ ಮಕ್ಕಳ ಆಶ್ರೇಯದಲ್ಲಿ ಅಲ್ಪಸ್ವಲ್ಪ ಕನ್ನಡ ಓದಲಿಕ್ಕೂ ಬರೆಯಲಿಕ್ಕೂ ಕಲಿತುಕೊಂಡದ್ದೆ ಅವರ ಭಾಗ್ಯ ಈಚೆಗೆ ಧನವಂತರ ಮಕ್ಕಳೆಲ್ಲಾ ಮಂಗಳೂರು ಮದ್ರಾಸಿಗೆ ವಿದ್ಯೆಯನ್ನು ಮುಂದರಿಸಲಿಕ್ಕೆ ಹೋಗುವಾಗ ಇವರ ಜೊತೆಯಲ್ಲೇ ಸ್ಕೂಲು ಸಹ ತನ್ನ ವಿದ್ಯೆಯನ್ನು ಮುಂದರಿಸಲಿಕ್ಕೆ ಎಲ್ಲಿಗೋ ಹೋದದ್ದು ಇನ್ನು ಬರಲೇ ಇಲ್ಲ ತರುವಾಯ ಬಡವರಾದ ನಾವೆಲ್ಲರೂ ಪುನಃ ಒಂದು ಶಾಲೆಯನ್ನು ಏರ್ಪಡಿಸಬೇಕಾಗಿ ಧನವಂತರ ಸನ್ನಿಧಿಯಲ್ಲಿ ಅರಿಕೆಮಾಡಿಕೊಂಡದ್ದು ನೆರವೇರದಿದ್ದ ಕಾರಣ, ಇನ್ನು ನಮಗೆ ನಾವೇ ಗತಿಯೆಂದು ಕಳೆದ ಒಂದು ತಿಂಗಳ ಲಾಗಾಯತು ನಮ್ಮೊಳಗೆ ಅಲ್ಪಸ್ವಲ್ಪ ಚಂದವನ್ನೆತ್ತಿ, ಇದೇ ಅಕ್ಟೋಬರು ಮಾಹೆ 1 ನೇ ತಾರೀಖಿನಿಂದ "ಹಾತೂರ. ನೇಶನಲ್ ಸ್ಕೂಲ್" ಯೆಂಬ ಹೆಸರಿನಿಂದ ಒಂದು ಸ್ಕೂಲನ್ನು ಜಾರಿಮಾಡಿರುತ್ತೇವೆ ಈ ಸ್ಕೂಲಿನಲ್ಲಿ ಈಗ 25 ವಿದ್ಯಾರ್ಥಿಗಳಿರುತ್ತಾರೆ ಮತ್ತು ದಿನೇ ದಿನೇ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚುತ್ತಲಿದೆ ಈಗಲೇ ಸ್ಕೂಲು ಬಿಟ್ಟ 3 ವಾರವಾಗಿದ್ದುತ್ತಿದ್ದ ನಮ್ಮ ಗ್ರಾಮಸ್ಥರೊಬ್ಬರನ್ನು ಕಮ್ಮಿ ಸಂಬಳದಲ್ಲಿ ದೇಶದ ಸೇವೆಮಾಡುವಂತೆ ನಾವೆಲ್ಲರೂ ಕೇಳಿಕೊಂಡ ಪ್ರಕಾರ ಅವರು ಒಪ್ಪಿ ನಮ್ಮ ಶಾಲೆಯ ಉಪಾಧ್ಯಾಯರಾಗಿರುತ್ತಾರೆ. ಅಲ್ಲದೆ ನಮಗೆ ತತ್ಕಾಲಶಾಲೆಗೆ ತಕ್ಕ ಕಟ್ಟಡವನ್ನು ಕಟ್ಟಿಸಲು ಅನುಕೂಲವಿಲ್ಲದ್ದರಿಂದ ಮೆ|| ಎಚ್ ಡಿ ಕಾಳಪ್ಪನವರು ತನ್ನ ಅಂಗಡಿ ಮನೆಯ ಮಹಡಿಯನ್ನು ಹೊಸಕಟ್ಟಡ ತಯಾರಾಗುವವರೆಗೆ ಶಾಲೆಗೋಸ್ಕರ ಉಚಿತವಾಗಿ ದಯಪಾಲಿಸಿದ್ದಕ್ಕೆ ನಾವು ಮೊದಲಾಗಿ ಅವರನ್ನು ವಂದಿಸಬೇಕಾಗಿದೆ ಪಾಠ ವಗೈರೆ ಸರ್ಕಾರಿ ಶಾಲೆಗಳಲ್ಲಿ ನಡೆಯುವ ರೀತಿಯಲ್ಲೇ ಇಲ್ಲಿಯೂ ನಡೆಯುತ್ತವೆಯಲ್ಲದೆ ನಮ್ಮ ಶಾಲೆಯ ಮಕ್ಕಳಿಗೆಲ್ಲಾ ಅವರವರ ತಿಳುವಳಿಕೆಗನುಸಾರವಾಗಿ ಅವರವರ ನಡೆ ನುಡಿ, ಆಚಾರ, ದೇವರ ಭಕ್ತಿ, ಗುರುಭಕ್ತಿ, ದೇಶಭಕ್ತಿ ಪ್ರಾತಃಕಾಲ ಮತ್ತು ಸಂಧ್ಯಾವಂದನೆ ಮೊದಲಾದುವುಗಳನ್ನು ಕನಿಷ್ಟ ಒಂದು ತಿಂಗಳಿಗೆರಡಾವೃತ್ತಿಯಾದರೂ ಕಲಿಸುವದು ಅತ್ಯವಶ್ಯವೆಂದು ಕಂಡು ಬಂದದ್ದರಿಂದ, ನಮ್ಮ ಗ್ರಾಮದಲ್ಲಿ ತುಂಬಾ ಅನುಭವಶಾಲಿಯಾಗಿಯೂ, ಜನರ ಪ್ರೀತಿಗೆ ಪಾತ್ರರಾಗಿಯೂ ಇರುವ ದೇವರ ಶಾಂತಿಮಾಡುವ ಬ್ರಾಹ್ಮಣರೊಬ್ಬರು ನಮ್ಮ ಕೋರಿಕೆಯನ್ನು ಅಂಗೀಕರಿಸಿ ಈ ತೊಂದರೆ ತೆಗದುಕೊಳ್ಳುವದಾಗಿ ಒಪ್ಪಿಕೊಂಡಿರುತ್ತಾರೆ ಈ ಮೇಲ್ಕಂಡ ಮಹನೀಯರುಗಳ ಸಹಾಯದಿಂದ ಭಗವಂತನು ನಮ್ಮ ಪ್ರಯತ್ನವನ್ನು ನೆರವೇರಿಸಬೇಕಾಗಿ ಪ್ರಾರ್ಥಿಸುವ,

ಒಬ್ಬ ಗ್ರಾಮಸ್ಥ.

"ಕೊಡಗು ಸಭಾ" ಮತ್ತು ಗಲಾಟೆ

ಅಯ್ಯಾ ಎಡಿಟರವರೆ!

ಮೇಲ್ಕಂಡ "ಸಭೆ" ಒಂದನ್ನು ಮಡಿಕೇರಿಯಲ್ಲು ಖಾಯಂ ವಾಸಸ್ಥರಾದ ಕೆಲವು ಪೆನಷನ್ ಉದ್ಯೋಗಸ್ಥರು ಮತ್ತು ಇವರಿಗೆ ಒತ್ತಾಸೆಯಾಗಿ ಈಗಿನ ಅಲ್ಲಿಯಣ ಮತ್ತು ಈ ಕಡೆಯ ಉದ್ಯೋಗಸ್ಥರು ಕಲವರು ಸಹ ಸೇರಿಕೊಂಡು ದೇಶದ ಬಾಕಿ ಕೊಡಗು ಜನಾಂಗದವರ ಇರಾದೆಯನ್ನು ಕೇಳದೆ ಏರ್ಪಡಿಸಿ, ಅದನ್ನು ಸ್ಥಿರಪಡಿಸಬೇಕೆಂದು ಪ್ರಯತ್ನ ಮಾಡಿದ್ದು ಸಾಗಲಿಲ್ಲವಲ್ಲಾ ಎಂಬ ದುಃಖ ಅವರಿಗೊಂದು ಕಡೆ ಅವರು ಪೂರ ದಾರಿ ತಪ್ಪಿದಕಾರಣ ನಾಡಿನಲ್ಲಿರುವ ಕೊಡಗು ಮಹಾಜನಗಳಿಗೆ ಚಳವಳಿಕ್ಕೆ ಕಾರಣವಾಗಿ ಅಂಥಾ ಸಭೆಯ ಅವಶ್ಯವಿಲ್ಲವೆಂದು ಧಿಕ್ಕಾರಮಾಡಿಬಿಟ್ಟವೆಂಬ ಗೌರವ ಇವರಿಗೊಂದು ಕಡೆ ತಮ್ಮ ತಮ್ಮದು, ನಡೆಯುಬೇಕೆಂದು ಹಟಸಾಧನೆಯಿಂದ ಹೋರಾಡುತ್ತಾ ಒಂದರೆ, ಮೂರನೆಯವನಿಗೆ ಲಾಭ ಉಂಟಾಗುವದೆಂಬದು ಎಲ್ಲರಿಗೂ ತಿಳಿದಹಾಗೆ ಇದೆ ದೇಶಾಭಿವೃದ್ಧಿಗೋಸ್ಕರ ಕೈಹಾಕುವ ಮಹಾನಿಯರುಗಳಿರಾ ಇನ್ನಾದರೂ ಕಳೆದುಹೋದ ಸಂಗತಿಯನ್ನು ಮರೆತು ಐಶ್ವರ್ಯವಂತರು, ಉದ್ಯೋಗಸ್ಥರು ವಿದ್ಯಾವಂತರು ಬಡವರು ಎಂಬ ಭಿನ್ನ ಭೇದವಿಲ್ಲದೆ ಸಹೋದರ ಭಾವದಿಂದ ಪೂರ್ವಪರ ಚನ್ನಾಗಿ ತಿಳಿದುಕೊಂಡು ಒಗ್ಗಟ್ಟಾಗಿ ಸೇರಿಕೊಂಡು ಅಂಥಾ ಸಭೆ ಒಂದನ್ನು ಏರ್ಪಡಿಸಿ ದೇಶೋನ್ನತಿಗೆ ಪ್ರಯತ್ನಪಡಬೇಕಾದ್ದು ಅವಶ್ಯ ಇಲಿಗೆ ಬೇಕಾಗಿ ಮನೆಯನ್ನು ಸುಡುವದು ಯಾವ ಧರ್ಮ ಯಾವ ಕೂಟದಲ್ಲೂ ಭಿನ್ನಾಭಿಪ್ರಾಯವು ಉಂಟಾಗದೆ ಇರಲಾರದು ವಿವೇಕಿಗಳಾದ ಮುಖಂಡರು ಸ್ಥೈರ್ಯದಿಂದ ಕಾರ್ಯವನ್ನು ಸಾಧಿಸಬೇಕಲ್ಲದೆ, ಎಂದೂ ದುಡುಕಬಾರದು ದೇಶಾಭಿಮಾನಿಗಳು ಎಂಥವರೇ ಆಗಲಿ ಪಕ್ಷಪಾತದಿಂದ ಕೆಟ್ಟದಾಗಲಿ ಒಳ್ಳೆಯದಾಗಲಿ, ಪ್ರಜಾಭಿಪ್ರಾಯಕ್ಕೆ ವಿರೋಧವಾಗಿ ಪ್ರವರ್ತಿಸಲಿಕ್ಕೆ ಉಪಕ್ರಮಿಸಿದರೆ, ತಾವು ಸಾಧಿಸಬೇಕೆಂದಿರುವ ಕಾರ್ಯವು ಎಂದೂ ನೆರವೇರಲಿಕ್ಕಿಲ್ಲಾ.

ಅಯ್ಯಾ, ಕೊಡಗು ಮಿತ್ರರವರೇ!

ನಮ್ಮ ಕೊಡಗು ದೇಶವು ಬಹಳ ಫಲವತ್ತಾದ್ದೆಂದು ಇಡೀ ಭರತಖಂಡವೇ ಊಹಿಸಿರುವದು ಸರಿ. ಆದರೆ ಈಗ ಎಲ್ಲಿ ನೋಡಿದರು ಬಂಜರ್ ಜಾಗವು ವಿಸ್ತಾರವಾಗಿ ಕಾಣುತ್ತಲಿದೆ ನಮ್ಮ ದೇಶದಲ್ಲಿ ನುಚ್ಚು ಭತ್ತ ಒಂದೇ ವ್ಯವಸಾಯ ಮಾಡಿಕೊಂಡು ಹೆಚ್ಚು [illegible] ಯವನ್ನು ಬರೀ ಕೋವಿಬೇಟೆಯಲ್ಲು ಕಳೆಯುವಂಥಾ ಹಾನೀಯರನೇಕರು ಇರುವರು ಇವರು ಇದನ್ನು [illegible] ಕೂಡ್ಲೆ ಇದನ್ನು ಬರೆದವನ್ಯಾರು ಎಂದು ಮನಸ್ಸಿನಲ್ಲಿ [illegible] ಲ್ಪಿಸಬಹುದು ಆದರೆ ಇದನ್ನು ನಮ್ಮ ಜನಾಂಗದ ಗು[illegible] ಗಿ ಬರೆಯುತ್ತೇನೆ ಬೇಟೆಯಾಡುವದನ್ನು ಖಂಡಿತವಾ[illegible] ಬಿಡಕೂಡದು ಆದರೆ ವಾರಕೊಮ್ಮೆ ಬೇಟೆಯಾಡುವದ[illegible] ಮನಸ್ಸಿಗೆ ಉಲ್ಲಾಸವೂ, ಸಂತೋಷವೂ ಉಂಟು[illegible] ವದು ಬೇರ ಸಮಯಗಳಲ್ಲಿ ನಮ್ಮ ಬಂಜರ್ ಭೂಮಿ[illegible] ಯುವದಾದರು ಬೇರೆ ವಿಧದ ವ್ಯವಸಾಯವನ್ನು ಮಾ[illegible] ಆದರೆ ನಮಗೆ ಬಹಳ ಪ್ರಯೋಜನವಾದೀತು ಅನೇ[illegible] ಬಂಜರ್ ಜಾಗದಲ್ಲು ಏನು ಬೆಳೆಯುವದಿಲ್ಲವೆಂದು [illegible] ರುವರು ಇದು ಸುಳ್ಳು ಊಹನೆ ಕಷ್ಟಪಟ್ಟರೆ ಎಂಥಾ [illegible] ಗದಲ್ಲಿಯಾದರೂ ವ್ಯವಸಾಯಮಾಡಿ ವೃದ್ಧಿಗೊಳಿಸ[illegible] ಬಂಜರ್ ಜಾಗಕ್ಕೆ ಸುತ್ತುಮುತ್ತಲಿನ ಕಾಡುಗಳನ್ನು [illegible] ಹರಡಿ ಬೆಂಕಿಯಿಂದ ಬೇಯಿಸಿ ವ್ಯವಸಾಯ ಮಾಡಬಹು[illegible] ಇಲ್ಲವೇ ಸುಣ್ಣ ತರು ಹರಡಿ ಆಗತಮಾಡಿದರೆ ನೆಲವು [illegible] ವತ್ತಾಗುವದು ಈ ಮೇಲ್ಕಂಡ ತೊಂದರೆಗಳಿಲ್ಲದೆ [illegible] ಬಾಗೆಜಾಗದಲ್ಲು ರಂಗಿನ ಗಿಡಗಳನ್ನು ಬೆಳೆಸುವದು [illegible] ದಾಗಿ ಕಾಣುತ್ತೆ. ನಮ್ಮ ಭಾರತಭೂಮಿಯಾದರೋ [illegible] ಸ್ವದೇಶ ಬಟ್ಟೆಗಾಗಿ ಹೋರಾಡುತ್ತಲಿದೆ ಇದಕ್ಕೆ ಅ[illegible] ವಿಯುವ ರಂಗನ್ನು ನಾವು ಬೆಳೆದರೆ ನಮ್ಮ ಉತ್ಪತ್ತಿ[illegible] ಬೆಲೆಯು ನೆಲೆಗೊಳ್ಳುವದು ಆದ್ದರಿಂದ ಸುಮ್ಮನಿರುವ[illegible] ಒದಲು ಇದನ್ನಾದರು ಬೆಳಸಿ ಉನ್ನತಸ್ಥಿತಿಯನ್ನು ಹೊಂ[illegible] ಬೇಕಾದಲ್ಲಿ ಇಂಗಾದೆ ಇರುವ ಮಹನೀಯರು ಪತ್ರಿಕೆ ಮ[illegible] ಲಕ ತಿಳಿಸಿದ್ದೇ ಆದರೆ ಇದನ್ನು ಬೆಳಸುವ ವಿಧಾನ ಪ[illegible] ಮೂಲಕ ಬರೆದು ಎಲ್ಲಾರಿಗೂ ತಿಳಿಸಲಾಗುವದು

ಒಬ್ಬ ದೇಶಸೇವಿ.

ಅಯ್ಯಾ,

ಮನುಷ್ಯನ ಆಚಾರವು ವರ್ಣಭೇದಗಳನ್ನು ಹೊಂದಿಕೊಂಡಿವೆ ಎಂದರೆ-ಬ್ರಹ್ಮ ಕ್ಷತ್ರಿ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣ ಭೇದಗಳಿವೆ ಈ ವರ್ಣದವರಲ್ಲಿ ಕೇವರು ತಮ್ಮ ಮತಾಚಾರವನ್ನು ಬಿಟ್ಟು ಕಂಡ ಕಂಡವರ ಆಚಾರವನ್ನು ಕೈಗೊಳ್ಳುತ್ತಾರೆ

ಅದರಲ್ಲಿ ಹೆಚ್ಚಾಗಿ ನಮ್ಮ ಕೊಡಗು ದೇಶದ ಕೊಡಗು ಯುವಕರೇ ಸಿಕ್ಕಿದಕ್ಕಲಾಲ್ಲಾ ಕೈಹಾಕಿಕೊಂಡು ಬಾವಲಿಯ ರೀತಿಯಲ್ಲಿರುವುದು ಎಂದರೆ ಕೆಲವು ಕಾಲಕ್ಕೆ ಹಿಂದೆ ನಮ್ಮ ಕೊಡಗುದೇಶದ ಮುಖ್ಯಪಟ್ಟಣವಾದ ಮಡಿಕೇರಿಯಲ್ಲಿ ವೇದಾಂತ ಸಂಘವೆಂಬ ಒಂದು ಸಂಘವು ಏರ್ಪಡಾಯಿತು ಅದಕ್ಕೇ ಈ ಕ್ರೋಡದೇಶದ ನಿವಾಸಿಗಳು ರಾತ್ರಿಯಲ್ಲಿ ದೀಪದ ಬೆಳಕಿಗೆ ನಾನಾ ಕಡೆಯಿಂದ ಹಾರಿ ಬಂದು ಬಿದ್ದು ಸಾಯುವ ನೊಣಗಳೋಪಾದಿಯಲ್ಲಿ ಬೀಳ ತೊಡಗಿದರು

ಆಮೇಲೆ ಇನ್ನು ಕೆಲವುಕಾಲ ಕಳೆಯುತ್ತಲೇ ಇದೇ ಮಡಿಕೇರಿಯಲ್ಲಿ ಆರ್ಯಸಮಾಜವು ಶುರು ಆಯಿತು ಇದನ್ನು ಕೇಳಿದವರು ವೇದಾಂತ ಸಂಘವನ್ನು ದೂಷಿಸಿ ಆರ್ಯರಾಗಬೇಕೆಂದು ಎಲ್ಲರೂ ಬೀಳತೊಡಗಿದರು ಕಡೆಗೆ ಕಚ್ಚಿದ್ದೂ ಇಲ್ಲ ಹಿಡಿದದ್ದೂ ಇಲ್ಲ ಎಂಬ ಗಾದೆಗೆ ಸರಿಯಾಗುತ್ತೆ

ಅನುಭವಿನಾದ ನಾನು ಬಹಳ ಚಿಕ್ಕ ವಯಸ್ಸಿನಲ್ಲಿ ಈ ವೇದಾಂತವನ್ನು ಕೈಗೊಂಡು ಬಹುಕಾಲ ನನ್ನ ಆಚಾರವನ್ನು ಬಿಟ್ಟು ಬಂದು ಈಗ ಅನುಭವಿಸುವ ಕಷ್ಟಸುಖವನ್ನು ಅರಿತು ವೇದಾಂತ ಮತ್ತು ಇತರ ಯಾವ ಸಮಾಜವನ್ನೇ ಆಗಲಿ ಅವಲಂಬಿಸಿದಲ್ಲಿ ವರ್ಣಾಶ್ರಮ ಧರ್ಮವನ್ನು ಕಾಪಾಡತಕ್ಕದ್ದೆ ಶ್ರೇಷ್ಟವೆಂದು ಸಂವಿಕೆಮಾಡಿ ಕಳೆದ ಅಕ್ಟೋಬರ್ 31 ರಿಂದ ತನ್ನಾ ಕುಲಾಚಾರಕ್ಕೇ ಸರಿಯಾದ ಒಬ್ಬ ಕೊಡಗನಾಗಿದ್ದೇನೆ

ಆದುದರಿಂದ ಮಹಾನುಭಾವರೇ ಕುಲಾಚಾರವನ್ನು ಬಿಟ್ಟರೆ ಇಹ, ಪರ ಸುಖವನ್ನು ಕಳಕೊಳ್ಳುತ್ತೇವೆ ಎಂದು ಧೃಢವಾಗಿ ಹೇಳುತ್ತೇನೆ

ಸಜ್ಜನ ಪ್ರಿಯ

ಪ್ರಿಯರೇ,

ಕಾಲಚಕ್ರವು ಸುತ್ತುತ್ತಿರುವಲ್ಲಿ ದಿನ ದಿನಕ್ಕೆ ಕಲಿದೋಷ ಮಹಿಮೆಯಿಂದಲೋ, ಇನ್ನಾವದರ ಮಹಿಮೆಯಿಂದಲೋ ಧರ್ಮ, ಸತ್ಯ ಕ್ಷಮೆ, ದಯೆ ಆಚಾರವಿಚಾರ ಪದ್ಧತಿಗಳು ದೂರ ತೊಲಗುತ್ತಿರುವುವು ಈ ಕಾರಣಗಳಿಂದ ಆಯುಸ್ಸು, ದೇಹಬಲ, ಸ್ಮರಣಶಕ್ತಿ ಮುಂತಾದುವು ಕ್ಷಯಿಸುತ್ತ ಬರುತ್ತಿರುವುದು ಪ್ರತಿಯೊಬ್ಬನೂ ತನ್ನ ಕುಲವನ್ನೂ, ಆಚಾರವಿಚಾರಗಳನ್ನೂ, ಸದ್ಗುಣಗಳನ್ನೂ ಉಳಿಸಿಮಾಡತಕ್ಕದ್ದು ಧ್ರವ್ಯವೆಂದು ತಿಳಿದಿರುವನು. ಆದ್ದರಿಂದ ಸಣಾವಿರುವವನಿಗೆ ಎಲ್ಲಾ ಭಾಗದಲ್ಲಿಯೂ ಸನ್ಮಾನತೆಯೇ ಹೊರತು ಆತನ ಸುಗುಣಗಳಾಗಲೀ, ದುರ್ಗುಣಗಳಾಗಲೀ ಗಣನೆಗೆ ತರತಕ್ಕ

...ಹಾಗಿಲ್ಲ. ಇಂಥಾ ಕಾಲದಲ್ಲಿ ಬ್ರಾಹ್ಮಣನ ಜನ್ಮವು ಒಂದೇ ಲಕ್ಷಣವಾಗಿರುವುದು ಆತನ ಆಚಾರ ವಿಚಾರ ತಿಳಿದೊಂದೂ ಗಣನೆಯಲ್ಲಿಲ್ಲವು. ಯುಕ್ತಾಯುಕ್ತ ವಿವೇಚನೆಯಿಲ್ಲದೆ ಮದಾಂಧನಾಗಿ ಶ್ರೀನಾರಾಯಣನು ವಿಧಿಸಿರುವ ಆಂತಸ್ತನ್ನು ಅತಿಕ್ರಮಿಸಿರುವನು. ವೇದಾಧ್ಯಯನ ಮಾಡುವುದಕ್ಕೂ, ವಿದ್ಯಾ ಗುರುವಾಗುವುದಕ್ಕೂ ಯೋಗ್ಯನಾದ ಸರ್ವರಿಗೂ ಪೂಜ್ಯನೆನಿಸಿರುವ ಬ್ರಾಹ್ಮಣನು ತನ್ನ ಬ್ರಹ್ಮತೇಜಸ್ಸನ್ನು ಪರಿಪಾಲಿಸದೆ ಗಳನ್ನು ಬಯಸುವರಾದರೆ ಕೇವಲ ಉದರ ಪೋಷಣೆಗೋಸ್ಕರ ಕುಲವಿರುದ್ಧವಾದ ಕೃಷಿ, ವ್ಯಾಪಾರ ಮುಂತಾದ ವೃತ್ತಿಗಳಲ್ಲಿ ನಿಷ್ಣಾತನಾಗಿರುವನು. ನ್ಯಾಯವಾದ ಆತ್ಮವನ್ನು ಬಿಟ್ಟು ಬೇರೆ ಆಶ್ರಯವನ್ನು ಅಥವ ಪರಮತವನ್ನು ಸ್ವೀಕಾರಮಾಡುವುದಕ್ಕೂ, ನ್ಯಾಯ ವಿಮರ್ಶೆಯನ್ನು ಬಿಟ್ಟು ಅನ್ಯಾಯಮಾರ್ಗಗಳು ಸಂಪಾದಿಸುವುದಕ್ಕೂ ಧನವೋ ಒಂದೇ ಪ್ರಧಾನ ಕಾರಣವೆನಿಸಿಕೊಂಡಿದೆ. ಎಂಥಾ ಪಂಡಿತನೆನಿಸಿಕೊಂಡಿರುವನು ಶಾಸ್ತ್ರೋಕ್ತವಾಗಿ ವಾದಮಾಡಿ ಕೊಳ್ಳುವುದಕ್ಕೆ ಒದಗಲಿ ಸೋಗಿಗಾಗಿ ಕಲಿ ಕುಡಿದದನ್ನು ಕತ್ತರಿಸುವರು. ಪ್ರತಿಯೊಬ್ಬನು ಮಾಡುವ ಸೇವೆ ಅವನ ಇಹಲೋಕ ಯಶಸ್ಸಿಗೇ ಹೊರತು ಪರಲೋಕ ಸಾಧನೆಗಲ್ಲ. ಪ್ರತಿಯೊಬ್ಬನ ನನ್ನ ಮನೆ, ನನ್ನ ಸ್ವತ್ತು, ನನ್ನ ಐಶ್ವರ್ಯ ಎಂಬೀ ಮೊದಲಾದ ಮಮಕಾರದಿಂದ ಪರರನ್ನು ತುಚ್ಛೀಕರಿಸಿ ತಾನೇ ಸರ್ವಜ್ಞನೆಂದೂ ಶ್ರೇಷ್ಠನೆಂದೂ ಬೀರುವವನು. ಇಂದಿನ ಕಾಲದಲ್ಲಿ ದಾರಿದ್ರ್ಯವನ್ನು ಕೇಳುವವರು ಯಾರು? ಐಶ್ವರ್ಯವಂತನಿಗೆ ಸಹ ಸ್ನೇಹಿತರು. ಸಹಸ್ರ ಯಾರು? ಅವನಿಗೆ ಇದ್ದರೂ ಇಲ್ಲ ಒಬ್ಬ ಐಶ್ವರ್ಯವಂತನು ಒಡನನಿಗೆ ಕ್ಷಣಮಾತ್ರವೂ ಪೂರ್ವಕವಾಗಿ ದಾನಮಾಡುವುದಕ್ಕೂ ಮನಸ್ಸಿಲ್ಲದಿದ್ದರೂ ಕಾಲ ಕೊಡುವುದಕ್ಕೂ ಬಯಸುವನು. ಈ ಅಲ್ಪದ ಪ್ರವೃತ್ತಿಯಿಂದ ತನಗೆ ಎಲ್ಲಿ ಹಿಂದಕ್ಕೆ ಸಲ್ಲಿದೆ ಹೋದೀತೋ ಎಂಬ ಭಯ. ಕಳೆದು ಹೋದ ಕ್ರಿಯುಗಗಳಲ್ಲಿಯೂ ಬ್ರಹ್ಮತೇಜಸ್ಸಿನ ಯಾವ ಕ್ಷತ್ರಿಯನ ಬಲವು ತಾನೆ ಸಾಧ್ಯವಾಯಿತು? ಧಿಕ್ ಬಲಂ ಕ್ಷತ್ರಿಯಬಲಂ ಬ್ರಹ್ಮತೇಜೋ ಬಲಂ ಬಲಂ' ಎಂಬುದಾಗಿ ಕ್ಷತ್ರಿಯ ವೀರನಾಗಿ ಅನಂತರ ಬ್ರಹ್ಮರ್ಷಿಯಾದ ವಿಶ್ವಾಮಿತ್ರನೇ ನುಡಿದಿರುವನು. ಅಂಥ ಬ್ರಹ್ಮತೇಜಸ್ಸು ಯಾವದೋ ಉಳಿಯಲ್ಲಿ ಮುಳುಗಿ ಬ್ರಾಹ್ಮಣರನ್ನು ಅಬಲರನ್ನಾಗಿ ಮಾಡಿರುವುದು.

ಮಾಯೆ, ಅಸತ್ಯ ಲೋಭಮೋಹನ ನಿದ್ರೆ ಹಿಂಸೆ, ಮನೋವ್ಯಾಧಿ ಕ್ರೋಧ, ಮೋಹ, ಭಯ ಕಾರ್ಪಣ್ಯ ಮುಂತಾದುವು ಒಗ್ಗಲ್ಲಿ ಹೆಚ್ಚಾದಾಗ ಕೇವಲ ತಮ್ಮ ಪ್ರಜಾಪ್ರತಿವಾದ ಕಲಿಯುಗ ವೆಂದು ಶ್ರೀಮದ್ಭಾಗವತ ದ್ವಾದಶಸ್ಕಂದದಲ್ಲಿ ಹೇಳಲ್ಪಟ್ಟಿದೆ. ಒಗರು ತಂದೆ ತಾಯಿ ಸಹೋದರ ಸಹೋದರಿಯೆಂಬ ಮಮತೆಯನ್ನಿಡದೆ ಕೇವಲ ಸ್ತ್ರೀವಶರಾಗಿ ಪತ್ನಿಯ ಮಾತಿನಸುಗುಣವಾಗಿ ನಡೆಯುವರು. ಪತ್ನಿಯು ಪತಿಗೆ ಅರ್ಧಾಂಗಿಯೆಂದರೆ ಸಾಲದಾಗಿದೆ ಪೂರ್ಣಾಂಗಿಯೆಂದೇ ಹೇಳಬಹುದು. ಸರ್ವಾಧಿಕಾರವೂ ಆಕೆಯ ಮಾತಿನಿಂದ ನಡಸಲ್ಪಡುತ್ತೆ. ಆಕೆಯ ಬೋಧನೆಯ ಪ್ರಕಾರ ತಂದೆ ತಾಯಿಗಳನ್ನೂ ಸಹ ಮನೆಯಿಂದ ಓಡಿಸಿ ಮಾವನ ಮೈದನರನ್ನು ಹಿತೈಷಿಗಳನ್ನಾಗಿ ತಿಳಿದು ಪ್ರೀತಿಸುವನು. ಕಿಂಚಿನ್ಮಾತ್ರವಾದ ದ್ರವ್ಯವು ಅಪಹರಿಸಲ್ಪಟ್ಟಿದ್ದನ್ನು ಕಂಡರೆ ಅದಕ್ಕೋಸ್ಕರ ಎಷ್ಟೋ ವಾಜ್ಯಗಳನ್ನು ನಡೆಸುವನು.

ಬ್ರಾಹ್ಮಣ ಕುಲಯೋಗ್ಯವಾದ ವಿದ್ಯವನ್ನು ಬಿಟ್ಟು ಕುಲವಿರುದ್ಧವಾದ್ದನ್ನು ಗ್ರಹಿಸಿ ಅಯೋಗ್ಯವಾದ ಕೆಲಸವನ್ನು ಕೈಕೊಂಡಿರುವನು. ವಿದ್ಯಾ ಗುರುವಾಗಿರುವುದು ತಪ್ಪಿಹೋಯ ಯಲ್ಲಿರುವುದು ಇದು ಬ್ರಾಹ್ಮಣನ ಸ್ವಾಭಾವಿಕ ಕಲ ಸವು. ಪತಿಭಕ್ತಿ ಪರಾಯಣೆಯಾಗಿ ಆತನ ಮತಾನುಸಾರ ಅನುವರ್ತಿಸಿ ನಡೆಯುವುದೆ ಪ್ರತಿಯೊಬ್ಬ ಸ್ತ್ರೀಯ ಕರ್ತವ್ಯವಾಗಿರುತ್ತೆ. ಎಡಗಾಲಿನಿಂದ ಮುಟ್ಟುವುದಕ್ಕೂ ಅಯೋಗ್ಯವಾದ ಚರ್ಮದ ಪಾದಾರಕ್ಷೆಗಳನ್ನು ಧರಿಸಿ ಗೃಹಸ್ಥಾಶ್ರಮ ಸೂಚಕವಾದಂಥ ವಿಭೂತಿಯನ್ನು ಕತ್ತರಿಸಿ ಎರಡನೇ ಸ್ತ್ರೀಯೋ ಪಾದಿಯಲ್ಲಿ ಬೈತಲೆಯನ್ನು ತೆಗೆದುಕೊಂಡು ಸೂಗಸಿನಿಂದ ನವೀನ ಯುವಕರು ತಮ್ಮ ಕೆಲಸವನ್ನು ತಾವು ಮಾಡಿಕೊಳ್ಳಲಾರದೆ ಪರರಿಗೆ ನೇಮಿಸುವರು. ಈ ಮುಂತಾದ ದುರಾಚಾರಗಳೇ ಅಲ್ಲದೆ ದೇಶದಲ್ಲಿ ದುರ್ಭಿಕ್ಷಗೂ ಕ್ಷಾಮಕ್ಕೂ ಕಾರಣವು! ಕಲಿಯುಗದಲ್ಲಿ ಕೇವಲ ನಾಮಸ್ಮರಣೆ ಮಾತ್ರದಿಂದಲೆ ಮನುಷ್ಯನಿಗೆ ಮುಕ್ತಿ ಫಲವನ್ನು ಕೊಡುವದಾಗಿ ಶ್ರೀಕೃಷ್ಣ ಭಗವಂತನು ಅನುಗ್ರಹಿಸಿರುವನು. ಇದಕ್ಕೆ ದೃಷ್ಟಾಂತವಾಗಿ ಅನೇಕ ಜನರು ಮುಕ್ತಿಯನ್ನು ಪಡೆದಿರುವರು. ಶ್ರೀಮಚ್ಛಂಕರಾಚಾರ್ಯರು ಶ್ರೀ ಮನ್ಮಾಧ್ವಾಚಾರ್ಯರು, ಶ್ರೀರಾಮಾನುಜಾಚಾರ್ಯರು ಶ್ರೀ ರಾಮಕೃಷ್ಣ ಪರಮಹಂಸರು ಅವತರಿಸಿ ವರ್ಣಾಶ್ರಮ ಧರ್ಮಗಳನ್ನು ತಿದ್ದುಪಾಟುಮಾಡಿ ಆಸ್ತಿಕ ಬುದ್ಧಿಯನ್ನು ಜನರಲ್ಲಿ ಉಂಟು ಮಾಡಿ ಮತೋದ್ಧಾರವನ್ನು ಮಾಡಿದರು. ಈಗ ಮಹಾತ್ಮಾ ಗಾಂಧಿಯವರು ತಮ್ಮ ಸರ್ವ ಸ್ವವನ್ನೂ ತೊರೆದು ಭಾರತ ಭೂಮಿಯ ಅನೇಕುಹಿಮಾಡಬೇಕೆಂಬ ಜನರೆಲ್ಲರೂ ತಾನೊಬ್ಬನೇ ಎಂದು ತಿಳಿದುಕೊಂಡು ಸರ್ವಜನ ಸನ್ಮತವಾದ ದೇಶಸೇವೆಯನ್ನು ಕೈಕೊಂಡಿರುವರು. ಶ್ರೀಕೃಷ್ಣ ಪರಮಾತ್ಮನು ಇವರ ಇಷ್ಟಾರ್ಥಗಳೆಲ್ಲವನ್ನೂ ಕೈಗೂಡಿಸಲಿ.

ಮೈ. ಕೇ. ಬಿ.

ಮಾರಾಟಕ್ಕಿದೆ.

ಅಸ್ವಸ್ಥತೆಯಿಂದ ಜಮೀನು ವಿಲೇವಾರಿ ಮಾಡಬೇಕಾಗಿರುವುದರಿಂದ

ಗೋಣಿಕೊಪ್ಪದಿಂದ ಪಶ್ಚಿಮಕ್ಕೆ ಒಂದು ಮೈಲು ದೂರದ ಬಾಜು ಒಂಟಿ ಅಂಗಡಿ ಒಳ ಇರುವ (೮೦) ಎಕರೆ ಜಮೀನು ಕಾಫಿತೋಟ ಮತ್ತು (25) ಇದ್ದುತ್ತೈದು ಎಕರೆ ಕಾಡು. ಸದರಿ ಜಮೀನು ಸ್ಥಿತಿಯಲ್ಲು ಇರುವದು ಶುದ್ಧಕ್ರಯಕ್ಕೆ ಮಾರಾಟವಾಗುತ್ತೆ. ಇದರಲ್ಲಿ ಕಾಫಿ ಬೆಳೆಸು ವಗೈರೆ ವಸೂಲಿಂದ ವರ್ಷ ಒಂದಕ್ಕೆ ಸುಮಾರು (ರೂ. 5000) ಐದು ಸಾವಿರ ರೂಪಾಯಿ ಉತ್ಪನ್ನವಿರಬಹುದು. ಹೆಚ್ಚಿನ ವಿಷಯಕ್ಕೆ ಕೆಳಗಿನ ವಿಳಾಸಕ್ಕೆ ಬರೆಯಿರಿ. 4—3

ಮೇನೇಜರ್,	Manager,
ವೀರರಾಜಪೇಟೆ ವರ್ಕ್ಸ್,	Virajpet Works,
ವೀರರಾಜಪೇಟೆ	Virajpet

ನೋಟೀಸ್.

ಕೊಡಗು ಉಪಾಧ್ಯಾಯರ ಸಂಘದ ವ್ಯಾಂಕಿನ ಕೆಲಸ ಪ್ರಾರಂಭಿಸಲಿಕ್ಕೆ ಅದಕ್ಕೆ ಸೇರದವರ ಮತ್ತು ಸೇರಲಿಚ್ಛೈಸುವವರು ಮೊದಲನೇ ಮೀಟಿಂಗ್ 1921 ನೇ ಇಸವಿ ಡಿಸಂಬರ್ ತಾರೀಖು 4 ನೇ ಆದಿತ್ಯವಾರದ ದಿನ 2 ಗಂಟೆಗೆ ಮುನಿಸೀಪಲ್ ಆಫೀಸಿನಲ್ಲಿ ನಡೆಯುತ್ತೆ. ಈ ಬಾಂಕನ್ನು ಅಭಿವೃದ್ಧಿಗೊಳಿಸುವ ಅಪೇಕ್ಷೆಯುಳ್ಳವರೆಲ್ಲರೂ ಹಾಜರಾಗ ಬೇಕಾಗಿ ಕೋರುತ್ತೇವೆ.

ಕಲಸಗಳು

ದ್ರವ್ಯಗಳನ್ನು ಸಂಪಾದಿಸುವದು.

ಇತರ ವಿಷಯಗಳ ಬಗ್ಗೆ ಆಲೋಚನೆ ಮಾಡುವದು.

ಮಡಿಕೇರಿ,	ಕ. ಸುಬ್ಬಯ್ಯ,
11—11—1921	ಮಹಮ್ಮದ್ ಮುಜಿಂಗರಾವ್,
	Conveners

COORG TEACHERS' CO-OPERATIVE STORES, Ltd.,

ಕೊಡಗು ಉಪಾಧ್ಯಾಯರ ಕೋಆಪರೇಟಿವ್

ಸ್ಟೋರ್ಸ್, ಲಿಮಿಟೆಡ್, ಮಡಿಕೇರಿ

ಈ ಸ್ಟೋರಿನಲ್ಲಿ ಶಾಲಾ ಪಠ್ಯ ಪುಸ್ತಕಗಳು, ಸ್ಟೇಷನರಿ ಸಾಮಾನುಗಳು, ಮತ್ತು ನೋಗಸಾದ ಚಿತ್ರ ಕಥೆ ಪುಸ್ತಕಗಳು ದೊರೆಯುತ್ತವೆ. ಕ್ರಯ ಸುಲಭ. ಮಾಲು ಉತ್ತಮ. ಕೂಡಲೇ ಈ ಕರ ಸ್ಟೋರ್ಸ್ ಇದರಿಂದ ಮಾಲುಗಳನ್ನು ಕೊಂಡು ಲಾಭ ಪಡೆಯಿರಿ. 1—9

For Sale—ಮಾರಾಟಕ್ಕೆ !!!

ಸುಮಾರು 350 ಎಕರೆ ವಿಸ್ತೀರ್ಣವುಳ್ಳ ಕೊಡಗಿನಲ್ಲಿ ಮತ್ತು ವರನಾದಿ ತೋಟಗಳು ಮಾರಾಟಕ್ಕೆ ಇದೆ.

ಸುಮಾರು 60 ಎಕರೆ ಜಾಗ ನೆಟ್ಟಿರುವ ಕಾಫಿಯು ಬಾಕಿ ಒಳ್ಳೇ ಬೆಳಸು, ರಬ್ಬರ್ ಮತ್ತು ಕುಚ್ಚಿ ಮರಗಳಿನ್ನು ದ್ದಾಗಿಯೂ ಇದೆ.

ಈ ವರ್ಷ ಸುಮಾರು ಎರಡು ಟನ್ ಕಾಫಿಯೂ 200 ಖಂಡಗ ಒಳ್ಳೇ ಬೆಳಸು ಸಿಕ್ಕುವ ಅಂದಾಜು ಇದೆ.

ಅಲ್ಲದೆ ಒಂದು ದೊಡ್ಡ ಯೂರೋಪಿಯನರ ಬಂಗ್ಲೆಯೂ, ಒಂದು ಬಿಗ್ರಲಿಯರ ಬಂಗ್ಲೆಯೂ 5 ಗಾಲಿ ಲೈನು ಗಳೂ, ಒಂದು ಪಲ್ಪು ಹೌಸೂ ಮತ್ತು ಒಂದು ಸ್ಟೋರೂ ಇರುವುದು.

ಕ್ರಯಕ್ಕೆ ಪಡೆಯಲು ಇಷ್ಟವುಳ್ಳವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು.

ಮ್ಯಾನೇಜರ್

4—4 ಯಮ್ಮೆಗುಂಡಿ ತೋಟ ಪೋಸ್ಟು.

AN APPROVED FIRM FOR THE SUPPLY OF STATIONERY ARTICLES TO THE GOVT OF

H. H. the Maharaja of Mysore.

ನಮ್ಮಲ್ಲಿ ಎಲ್ಲಾ ವಿಧವಾದ ಸ್ಟೇಷನರಿ ಸಾಮಾನು ಗಳೂ, ಫೌಂಟನ್ ಪೇನಾಗಳೂ, ಪ್ರಿಂಟಿಂಗ್ ವಸ್ತುಗಳೂ ಟೈಪು ಪೇಪರುಗಳೂ, ಎಕ್ಸರ್ಸೈಸ್ ಬುಕ್ಕುಗಳೂ ಸ್ಟುಡೆಂಟ್ಸ್ ನೋಟ್ ಬುಕ್ಕುಗಳೂ, ರಫ್ ನೋಟು ಬುಕ್ಕುಗಳು, ಡ್ರಾಯಿಂಗ್ ಮತ್ತು ಟೈಪ್‌ರೈಟಿಂಗ್ ಪೇಪರುಗಳೂ, ವರ್ತಕರಿಗೆ ಅನುಕೂಲವಾದ ಅಕೌಂಟು ಬುಕ್ಕುಗಳು ಸಹ ಸಹನಾದ ಕಾಗದದಿಂದ ತಯಾರಾಗಿ ವಿಕ್ರಯಕ್ಕೆ ಸಿದ್ಧವಾಗಿವೆ. ದುಬಾರಿ ಕಾಗದದಿಂದ ತಯಾರಿಸಿರುವ ಬುಕ್ಕುಗಳನ್ನು ಕೊಂಡು ಮೋಸಹೋಗಬೇಡಿರಿ. ಬೇಕಾದ ಸಾಮಾನುಗಳಿಗೆ ಕೂಡಲೆ ಆರ್ಡರ್ ಕೊಡುವುದಾಗಿ ಸೂಚಿಸುತ್ತೇವೆ. ಸ್ಕೂಲಿಗಳಿಗೆ ಸರಿಯಾದ ಡಿಸ್ಕೌಂಟು ಸಹ ದೊರೆಯುತ್ತೆ. 24—1

M. N. K. & Bros.

Book-Binders & Stationers. MYSORE.

೧೯೨೧ ಮುದ್ರಿತ ಕೊಡಗು ಮಾರಾಟಕ್ಕೆ ! ೫೫ ರೂ.೫೦

ನಮ್ಮಲ್ಲಿ ಸಾಮಾನುಗಳು ಪ್ರತಿಯೊಬ್ಬ ಕೊಳ್ಳುವವರು ತಪ್ಪದೆ ನೋಡತಕ್ಕದ್ದು.

ಕಲಾಸುಮಾವೈದ್ಯ ಪುಸ್ತಕ, ಸೀಸೆ 1 ಕ್ಕೆ 1—0—0. 3 ಸೀಸೆಗೆ 2—10—0. ಒರಿಜಿನಲ್ ಲಿಬ್ಬಿಜಾರ್ ಅತ್ತರ್ ಡ್ರಾ ಮ್ ಸೀಸೆ 1 ಕ್ಕೆ 0—12—0. ಡಜನ್ 7—8—0. ಅರ್ಧ ಬಾಟ್ಲು ಪರಿಮಳ ಲೇಪನ ತೈಲ ಸೀಸೆ 1 ಕ್ಕೆ 3 ಆಣೆ. ಡಜನ್ 1 ಕ್ಕೆ 1—12—0. ಕಸ್ತೂರಿಮಾತ್ರೆ ಸೀಸೆ 1 ಕ್ಕೆ 4 ಆಣೆ. ಡಜನ್ 1 ಕ್ಕೆ 2—10—0. ಮಲೇರಿಯಾ, ದಿನ ಜ್ವರ, ಚಳಿ ಜ್ವರ ಬಾತ್ರಿಯಾದ ಬೆಳ್ಳಿ ಮುಲಾಮಿನ ಮಾತ್ರೆ ಸೀಸೆ 1 ಕ್ಕೆ 1—0—0 ರೂ.

ಮಿಂಟಿಂಗ್ ಪಾಕೇಟ್ 1 ಕ್ಕೆ	1 ಆಣೆ 4 ಆಣೆ.	1 ರೂ.
ಗಂಧದ ಸಾಬೂನ್ 1 ಕ್ಕೆ	3 ಆಣೆ. 6 ಆಣೆ.	7 ಆಣೆ.
ವಿಕ್ಟೋರಿಯಾ ಸಾಬೂನು 1 ಕ್ಕೆ		0-2-6.
ಪ್ಲಾಟೀನಾ ರಾಣಿ ಸಾಬೂನು 1 ಕ್ಕೆ		1-2-0.
ಒಲೀವನ್ (ಮಲ್ಲಿಗೆ) ಸಾಬೂನ್ 1 ಕ್ಕೆ		8 ಆಣೆ.
ಬುಕ್ಕಟ್ ಗುಡ್‌ವಿನ್ ,, 1 ಕ್ಕೆ		10 ಆಣೆ.
ಜೆಕ್ಕ ಕ್ಯಾಂಡಿ 1 ಕ್ಕೆ	2 ಆಣೆ.	0-2-6.
ಸಾಬೂನ್ ಕರಡಿಗೆ 1 ಕ್ಕೆ	5 ಆಣೆ.	7 ಆಣೆ.
ಸಾಬ್ ಸನ್ ಹರಳೆಣ್ಣೆ ಪಟ್ಟು 1 ಕ್ಕೆ		3 ಆಣೆ.
ಒಂಟಿ ಚಿಗ ಡಜನ್ 1 ಕ್ಕೆ	0-14-0.1-4-0.	1-8-0.
ಕ್ಲಾಂಪ್ 1 ಕ್ಕೆ	2-4 0. 2-12-0.	3-8-0.
ಅಮ್ಮತಾಂಬ ಪಟ್ಟ 1 ಕ್ಕೆ		9 ಆಣೆ.
ಜರ್ಮನ್ ಕತ್ತರಿ 1 ಕ್ಕೆ		10 ಆಣೆ.
ಕಾಡ್‌ಬರಿ ಚಾಕಲೇಟ್ ಪಾಕೆಟ್ 1 ಕ್ಕೆ		8 ಆಣೆ.
ಪೆನ್‌ಟಿನ್‌ವನ್ 1 ಕ್ಕೆ	15 ಆಣೆ.	8 ಆಣೆ.

ಯಾವ ತರದ ಸಾಮಾನು ಬೇಕಾದಲ್ಲ ನಮ್ಮಲ್ಲಿ ದೊರೆಯುತ್ತೆ. ಟಪಾಲು ಖರ್ಚು ಅಲಾಯಿದಾ.

ವಿಳಾಸ—ದಿ ಉಲ್ಸ ವರ್ಕ್ಸ್,

ನಂ 2 ಮಂಗಳೂರು, ದ. ಕ.

ಸಂಗೀತಕ್ಕೆ ಸಂಬಂಧಪಟ್ಟ



ಸಾಮಾನುಗಳ ಮಾರಾಟ

ನಮ್ಮಲ್ಲಿ ಅನುಭವಪೂರ್ವಕ ಚನ್ನಾಗಿ ಅನೇಕಾನೇಕ ಸಂಗೀತ ವಾದ್ಯಗಳು ಅಂದರೆ ಹಾರ್ಮೋನಿಯಂ, ತಂಬೂರಿ, ಪಿಟೀಲು, ಸಿತಾರ್, ತಾವೂಸ್ ದಿಲ್‌ರುಬ ಸಾರಂಗಿ, ಸಿಟೀಲು, ಕೊಳಲು ಶ್ರುತಿಪೆಟ್ಟಿಗೆ ಇವೇ ಮುಂತಾದ ಪದಾರ್ಥಗಳು ಸಿಕ್ಕುತ್ತವೆ. ಈ ಪದಾರ್ಥಗಳ ಎಂಥಾ ರಿಪೇರಿ ಕೆಲಸವಾದರೂ ಸಹ ಸುಲಭವಾಗಿ ಮಾಡಲ್ಪಡುತ್ತದೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ನಮ್ಮ ವಿಳಾಸ:—

ಟಿ. ಪುಟ್ಟಯ್ಯ ಅಂಡ್ ಸನ್ಸ್,

ಹಾರ್ಮೋನಿಯಂ ಡೀಲರ್ಸ್ ಮತ್ತು ರಿಪೇರರ್ಸ್,

24 11 ಸಯ್ಯಾಜಿರಾವ್ ರೋಡ್, ಮೈಸೂರು.

SUBBANNA, SANGAPPA,

Receiving and Forwarding Agents, General Merchants and Commission Agents

Santhepet, Mysore.

Despatch and supply whatever you receive at Mysore Railway Station and whatever food stuffs and Stationaries you want to have from Mysore. Prompt attention, moderate commission and quick disposal are their motto. 24—2

ಮೈಸೂರು ರೈಲ್ವೆ ಸ್ಟೇಷನಿನಿಂದ ನೀವು ಹೊಂದಬೇಕಾದ ಸಾಮಾನುಗಳ ಡೆಲ್ವೆ ಪಾರುಗಳನ್ನೂ, ಮೈಸೂರಿನಿಂದ ತರಿಸಿಕೊಳ್ಳಬೇಕಾದ ಸಾಮಾನುಗಳ ಪಟ್ಟಿಯನ್ನೂ ಮೈಸೂರು ಸಂತೇಪೇಟೆಯಲ್ಲಿರುವ

ಸುಬ್ಬಣ್ಣ ಸಂಗಪ್ಪನವರಿಗೆ ಕಳುಹಿಸಿ

ಅವರು ಜಾಗ್ರತೆಯಾಗಿಯೂ, ಜೋಪಾನವಾಗಿಯೂ ಸುಲಭವಾದ ಕಮಿಷನ್ನಿನಲ್ಲಿಯೂ ನಿಮಗೆ ಸರಕು ರವಾನಿಸುತ್ತಾರೆ. ಹೆಚ್ಚು ವಿವರ ಬರೆದು ತಿಳಿದುಕೊಳ್ಳಿ.

ಮಂಜೇರಿ

ಮೋಟಾರ್ ಸರ್ವಿಸ್

ಲಿಮಿಟೆಡ್, ಕಲ್ಲಿಕೋಟೆ.

ಈ ಕಂಪೆನಿಯು 1913 ನೇ ಇಸವಿಯ ಕಂಪೆನಿ ಆಕ್ಟಿಗೆ ಅನುಸಾರವಾಗಿ 1921-1922 ನೇ ಇಸವಿಯ ಮೊದಲನೇ ನಂಬ್ರವಾಗಿ 1921 ನೇ ಏಪ್ರಿಲ್ 4 ನೇ ತಾರೀಖಿನಲ್ಲಿ ರಿಜಿಸ್ಟ್ರ ಮಾಡಲ್ಪಟ್ಟು 1921 ನೇ ಮೇ 6 ನೇ ತಾರೀಕಿನಲ್ಲಿ ತಮ್ಮ ಕೆಲಸವನ್ನು ನಡಿಸುವದಕ್ಕೆ ಸಮ್ಮತಿ ಸರ್ಟಿಫಿಕೇಟು ಪಡಕೊಂಡಿರುತ್ತದೆ ಮೇ 25 ನೇ ತಾರೀಕಿನಿಂದ ಕೆಲಸವನ್ನು ಪ್ರಾರಂಭಿಸಿರುವದು.

ಈ ಕಂಪೆನಿಯ ಮೂಲಧನವು ಮೂರು ಲಕ್ಷ ರೂಪಾಯಿ ಪಾಲುವಂತಿಗೆಯಿಂದ ಸಂಗ್ರಹಿಸಲ್ಪಡಬೇಕು. ಪಾಲು 1 ಕ್ಕೆ 10 ರೂಪಾಯಿವಂತಿಗೆ. ಇದರಲ್ಲಿ ಸದ್ಯಕ್ಕೆ ವಿಕ್ರಯಿ ಸೋಣಾಗುವ 20,000 ಪಾಲುಗಳಲ್ಲಿ 1540 ಪಾಲುಗಳನ್ನು ಈ ಕಂಪೆನಿಯ ಪ್ರೋಮೊಟರ್ ಪಡಕೊಂಡಿರುತ್ತಾರೆ

35660 ರೂಪಾಯಿಯ ಷೇರ್‌ಗಳು 1921 ನೇ ಇಸವಿ ಅಕ್ಟೋಬರ್ 4 ನೇ ತಾರೀಕಿನವರೆಗೆ ಮಾರಲ್ಪಟ್ಟಿರುತ್ತದೆ.

ಕಂಪೆನಿಯ ಉದ್ದೇಶ.

ಮುಖ್ಯವಾಗಿ ತಲಚೇರಿಯಿಂದ ಮಡಿಕೇರಿಗೂ, ವಯನಾಡಿಗೂ, ಮಡಿಕೇರಿಯಿಂದ ಸೋಮವಾರಪೇಟೆಗೂ, ಕಲ್ಲಿಕೋಟೆಯಿಂದ ವಯನಾಡಿಗೂ. ದಕ್ಷಿಣ ಮಲಬಾರಿನಲ್ಲಿರುವ ಮಂಜೇರಿ, ನಿಲಂಬೂರು, ತಿರೂರು ಮೊದಲಾದ ಸ್ಥಳಗಳಿಗೂ ಮೋಟಾರ್ ಬಸ್ ಸರ್ವಿಸ್ ಸ್ಥಾಪಿಸುವದು ಮತ್ತು ಮೋಟಾರ್‌ಕಾರ್, ಲೋರಿ ಮೊದಲಾದ ವಾಹನಗಳನ್ನು ಓಡ್ಯಾಡಿಸುವದು. ಮೋಟಾರ್ ಬಂಡಿಗಳನ್ನು ರಿಪೇರಿ ಮಾಡುವ ಕಾರ್ಖಾನೆಗಳನ್ನು ಸ್ಥಾಪಿಸುವದು; ಸರ್ವಿಸುಗಳನ್ನು ಏರ್ಪಾಡುಮಾಡುವದು, ಇವೇ ಸಂಘದ ಉದ್ದೇಶಗಳಾಗಿವೆ

ಕಂಪೆನಿಯಲ್ಲಿ ದೊರಕುವ ಅಂದಾಜು ಆದಾಯ

ಈ ಕಂಪೆನಿಯು ಕ್ರಯಕ್ಕೆ ಪಡಕೊಂಡು ನಡಿಸುತ್ತಿರುವ ಮಂಜೇರಿ ಮೋಟಾರ್ ಸರ್ವಿಸಿನ ಗತಿಸಿದ ಲೆಕ್ಕಾಚಾರಗಳನ್ನು ಪರಿಶೋಧಿಸಿದರೆ, ಕ್ಷೀಣವಿಧಿಗೆ ತಕ್ಕಷ್ಟು ಹಣ ಉಳಿಸಿಟ್ಟು ಸುಮಾರು ಶೇಕಡ 25 ರಂತೆ ಪಾಲುಗಾರರಿಗೆ ಆದಾಯ ಕೊಡಬಹುದಾಗಿದೆಂದು ಖಂಡಿತವಾಗಿ ಹೇಳಬಹುದು. ಕಾಲಕ್ರಮೇಣ ಇನ್ನಷ್ಟು ಹೆಚ್ಚಿಗೆ ಬಸ್‌ಗಳನ್ನೂ, ಕಾರ್, ಲೋರಿಗಳನ್ನೂ ಓಡ್ಯಾಡಿಸುವದಾದರೆ, ಮೋಟಾರ್ ಕಾರ್ಖಾನೆಗಳನ್ನೂ ಸ್ಥಾಪಿಸುವದಾದರೆ, 100 ಕ್ಕೆ 25 ಕ್ಕಿಂತಲೂ ಹೆಚ್ಚಿನ ಆದಾಯವನ್ನು ನಿರೀಕ್ಷಿಸಬಹುದು.

ವಿಶೇಷ ಪ್ರಯೋಜನಗಳು.

ಬಹೂ ಜಾಗ್ರತೆಯಿಂದಲೂ ಮುತುವರ್ಜಿಯಿಂದಲೂ ತನ್ನ ಕೆಲಸವನ್ನು ಮಾಡಿ ಎಲ್ಲಾ ಕಡೆಯಿಂದಲೂ ಒಳ್ಳೇ ಹೆಸರನ್ನು ಪಡಕೊಂಡ ಮಂಜೇರಿ ಮೋಟಾರ್ ಸರ್ವಿಸನ್ನು ಈ ಲಿಮಿಟೆಡ್ ಕಂಪೆನಿಯು ಪಡಕೊಂಡದಾಗಿರುತ್ತದೆ

ಈ ಕಂಪೆನಿಯ ಕೆಲಸಗಾರರೆಲ್ಲರೂ ಸಮರ್ಥರೂ ಇದರ ಆಡಳಿತದಾರರು ಒಳ್ಳೇ ಅನುಭವಶಾಲಿಗಳೂ ಆಗಿದ್ದಾರೆ.

ಈ ಕಂಪೆನಿಯ ಪ್ರವೃತ್ತಿಯಿಂದ ಬರುವ ಆದಾಯವು ಕನಸಿನ ಗಂಟಲ್ಲ ನಿಜವಾಗಿ ಕೈಗಂಟೇ ಆಗಿದೆ. ಇತರ ಕಂಪೆನಿಗಳಲ್ಲಿ ಆದಾಯ ಸಿಕ್ಕುವದಕ್ಕೆ ಮೂರು ನಾಲ್ಕು ವರ್ಷ ಕಾಯಬೇಕಾಗುತ್ತದೆ. ಇದರಲ್ಲಿ ಹಾಗಲ್ಲ. ಷೇರ್ ತೆಗೆದುಕೊಂಡ ಕೂಡಲೇ ಆದಾಯ ಬರುವದು.

ಸರ್ವರಿಗೂ ಅನುಕೂಲವಾಗುವಂತೆ ಒಂದೊಂದು ಪಾಲಿಗೆ 10 ರೂಪಾಯಿ ಮಾತ್ರ ಇಡೋಣಾಗಿದೆ.

ಈ ಲಿಮಿಟೆಡ್ ಕಂಪೆನಿಯು ಕಲ್ಲಿಕೋಟೆಯಲ್ಲ ಮಂಜೇರಿ ಮೋಟಾರ್ ಸರ್ವಿಸನ್ನು ಇದೇ 1921 ನೇ ಮೇ 25 ನೇ ತಾರೀಕಿನಲ್ಲಿ ಮತ್ತು ತಲಚೇರಿಯ ಮೋಟಾರ್ ಸರ್ವಿಸನ್ನು ಇದೇ ಜೂನ್ 1 ನೇ ತಾರೀಕಿನಲ್ಲಿಯ ಬಡಗಾರ ಮತ್ತು ನಾದಾಪುರ ಸರ್ವಿಸನ್ನು 1921 ನೇ ಆಗಷ್ಟು 8 ನೇ ತಾರೀಕಿನಲ್ಲಿ ಹೊಸದಾಗಿ ಪ್ರಾರಂಭಿಸಿರುವದು.

ಪಾಲು ಬೇಕಾದವರು ಕಂಪೆನಿಯ ಅರ್ಜಿ ಫೋರ್ಮಿನಲ್ಲಿ ಅರ್ಜಿ ಬರೆದು, ತಮಗೆ ಎಷ್ಟು ಪಾಲು ಬೇಕೋ ಅಷ್ಟು ಪಾಲಿಗೆ—ಪಾಲ 1 ಕ್ಕೆ 10 ರೂಪಾಯಿ ಪ್ರಕಾರ ಆಗುವ ಒಟ್ಟು ಐವಜನ್ನು ಅರ್ಜಿಯೊಂದಿಗೆ ಮೇನೇಜಿಂಗ್ ಡೈರೆಕ್ಟರರಿಗೆ ಕಳುಹಿಸತಕ್ಕದ್ದು.

ಕಂಪೆನಿಯ ನಿಯಮಗಳ ಪ್ರತಿಗಳೂ ಅರ್ಜಿ ಫೋರ್ಮ್‌ಗಳು ಕಂಪೆನಿಯ ಆಫೀಸಿನಲ್ಲಿ ದೊರೆಯುವವು.

ಅರ್ಜಿ ಫೋರ್ಮ್ ಸಿಕ್ಕದಿದ್ದರೆ ಅರ್ಜಿದಾರರು ತನ್ನ ಪೂರ್ಣ ಹೆಸರು, ತಂದೆಯ ಹೆಸರು, ಉದ್ಯೋಗ ಮತ್ತು ಖಾಯಂವಿಳಾಸ ಇವನ್ನು ಸ್ಪಷ್ಟವಾಗಿ ಬರದು, ಅರ್ಜಿಯನ್ನೂ ತಾನು ಅಪೇಕ್ಷಿಸುವ ಪಾಲುಗಳ ಐವಜನ್ನೂ ಮೇನೇಜಿಂಗ್ ಡೈರೆಕ್ಟರರಿಗೆ ಕಳುಹಿಸಿಕೊಡತಕ್ಕದ್ದು.

ಈ ಕಂಪೆನಿಯ ಸರ್ವಿಸ್ ಈಗ ಕಲಿಕೋಟೆಯಿಂದ ಪುದುವಾಡಿಗೂ ತಲಚೇರಿಯಿಂದ ಮಾಕೂಟಿಗೂ ಬಡಗೆರೆಯಿಂದ ನಾದಪುರಕ್ಕೂ ಓಡ್ಯಾಡುತ್ತಿರುವವು.

ಒಳ್ಳೇ ಮೋಟಾರ್‌ಕಾರ್‌ಗಳು ತಲಚೇರಿಯಲ್ಲಿಯೂ ಕಲಿಕೋಟೆಯಲ್ಲಿಯೂ ಬಡಗೆರೆಯಲ್ಲಿಯೂ ಬಾಡಿಗೆಗೆ ದೊರಕುವವು.

1920 ನೇ ಇಸವಿ ಡಿಸೆಂಬರಿನಿಂದ 7 ತಿಂಗಳ ಬಾಬ್ತು ಮಂಜೇರಿ ಮೋಟಾರ್ ಕಂಪೆನಿಯ ಆದಾಯವೆಚ್ಚದ ಪಟ್ಟಿ.

ಬಂಡವಾಳ ...	... 60,000—0—0
ಕಲ್ಲಿಕೋಟೆ ತಲಚೇರಿ ಲೈನುಗಳಿಂದ ಉತ್ಪತ್ತಿ	.... 48,294—13—0
ಒಟ್ಟು ಖರ್ಚು ಪೆಟ್ರೋಲ್ ಕ್ಷಾಮದಕಾಲದಲ್ಲಿ	... 31,064—7—3
ಏಳು ತಿಂಗಳ ಒಟ್ಟು ನಫೆ	.... 17,230—5—9

ಇದರಿಂದ ತಿಂಗಳಿಗೆ 2500 ರೂಪಾಯಿವರೆಗೆ ನಫೆ ಇದೆ ಎಂದು ಪೂರ್ಣ ತಿಳಿಯುತ್ತೆ.

ಒಂದು ವರ್ಷಕ್ಕೆ 30,000 ರೂ. ನಫೆ. ಇದರ ಪೈಕಿ 15,000 ರೂಪಾಯಿ ಬೇರೆ ರಿಸರ್ವ್ ಫಂಡಿನಲ್ಲಿ ಇಟ್ಟರು ಕೂಡಾ ಶೇಕಡಾ 25 ರಂತೆ ನಫೆ ಸಿಕ್ಕಬಹುದು.

ತಲಚೇರಿ ಸಬ್‌ಕಲ್ಟೆಕ್ಟರರು ಬರೆಯುವದು ಏನೆಂದರೆ :—

ಆಗಷ್ಟು ತಾರೀಕು 26–27–28 ರಲ್ಲು ಕ್ವೊಲಾಂಡಿ ತಮರಚೇರಿ ಕುನ್ನಿಮಾಂಗಳ ಎಂಬಲ್ಲಿಗೆ ಸರಕಾರಕ್ಕೆ ಉಪಯೋಗವಾಗಿ ಸಿಪಾಯಿಗಳನ್ನು ಕರಕ್ಕೊಂಡು ಹೋಗಲು ನಿಮ್ಮ ಮೋಟಾರುಗಳನ್ನು ಬಸ್‌ಗಳನ್ನು ಅತಿ ಜಾಗ್ರತೆಯಿಂದ ಕೂಟ್ಟದ್ದು ಸರಿಯಷ್ಟೆ ನಿಮ್ಮಲ್ಲಿ ಕೆಲಸಮಾಡುವ ಕೆಲಸದವರು ಮತ್ತು ಡ್ರೈವರುಗಳು ಅತಿ ಬುದ್ಧಿವಂತರು, ಮತ್ತು ಪೂರ್ಣ ಶ್ರದ್ಧೆಯಿಂದ ಕೆಲಸಮಾಡುವವರು ಆಗಿರುತ್ತಾರೆ ಮತ್ತು ಇವರಷ್ಟು ಮುತುವರ್ಜಿಯಿಂದ ಕೆಲಸಮಾಡುವಂಥಾ ಕೆಲಸದವರನ್ನು ಈವರೆಗೆ ಎಂದು ನಾನು ಕಂಡಿಲ್ಲ. ಕಂಪೆನಿಗೆ ಇದಕ್ಕೋಸ್ಕರ ಅತಿ ಕೃತಜ್ಞತೆಯುಳ್ಳವರಾಗಿರುತ್ತೇನೆ

ಕೊಡಗಿನಲ್ಲಿ ಈಗಲೇ ಸಾವಿರ ಷೇರುಗಳು ಮಾರಲ್ಪಟ್ಟಿರುವವು. ಇವುಗಳ ಪೈಕಿ ಮೆ|| ಕೊರವಂಡ್ರ ಎನ್. ಅಪ್ಪಚ್ಚನವರು (100 ಷೇರುಗಳನ್ನೂ) ಮೆ|| ಕೊಂಗೆರ ತಿಮ್ಮಯ್ಯನವರು (100) ಮೆ|| ಪಾಡಂಡ್ರ ಅಪ್ಪಚ್ಚನವರು (50) ಡಿ. ಸಾಕಮ್ಮನವರು (200) ಮೆ|| ಎಡ್ವಕೇಟ್ ಕೃಷ್ಣರಾಯರೂ, ಮೆ|| ಮನೆಯಪಂಡ್ರ ಎಮ್. ಬೆಳ್ಯಪ್ಪನವರೂ ಮೆ|| ಬಸವೈಯ್ಯನ ಸಿದ್ಧಪ್ಪಶೆಟ್ಟರೂ, ಮೆ|| ದೊಡ್ಡಮನೆ ನಾರಾಯಣಶೆಟ್ಟರೂ (50) ಆಸ್ಪಿನ್ ಕಂಪೆನಿಯ ಬ್ರೋಕರಾದ ಮೆ|| ಅಬ್ದುಲ್ಲರೂ (100) ವಾಲ್ಕಟ್ ಕಂಪೆನಿಯ ಮೆ|| ಅಬುಬೆಕರೂ (100) ಮೆ|| ಕೊಡಂದೇರ ಕುಟ್ಟಯ್ಯನವರೂ, ಮೆ|| ಅಪ್ಪಾರಂಡ್ರ ಅಪ್ಪಚ್ಚನವರೂ ಷೇರುಗಳನ್ನು ತೆಗೆದುಕೊಂಡಿರುತ್ತಾರೆ.

ಇದರಿಂದ ಜನರು ನಮ್ಮ ಕಂಪೆನಿಯನ್ನು ಎಷ್ಟು ಶ್ಲಾಘನೆಮಾಡುತ್ತಾರೆಂಬದು ಪೂರ್ಣ ವ್ಯಕ್ತವಾಗುತ್ತದೆ.

ಜೆ. ನಿಕೊಲಾಸ್,
ಮೇನೇಜಿಂಗ್ ಡೈರೆಕ್ಟರ್,
ಮಂಜೇರಿ ಮೋಟಾರ್ ಸರ್ವಿಸ್ ಲಿಮಿಟೆಡ್,
ಕ್ಯಾಂಪು-ಮಡಿಕೇರಿ!

THE

MANJERI MOTOR SERVICE, Ltd.,

CALICUT.

Branches:—

TELLICHERRY AND BADAGARA.

Registered under the Indian Companies Act 1913 as No. 1 of 1921—1922 on the 4th day of April 1921 and prospectus filed on the 6th day of May 1921. Business commenced on the 25th day of May 1921.

AUTHORISED CAPITAL RUPEES THREE LAKHS.

Divided into 30,000 ordinary shares of Rs 10 each payable fully in cash with application, of which 20,000 shares are now offered for subscription at par.

1540 shares are taken by the promoters at present

Rs. 35660 worth shares are sold upto 4th October 1921.

OBJECTS.

The Company is formed primarily to establish Motor Bus Services between Tellicherry and Mercara and Somwarpet in Coorg, Calicut and Coorg, Wynaad in North Malabar, Calicut and Wynaad, Nilambur and Tirur in South Malabar to establish motor work shops for the repair of motor vehicles and for the training up of motor machanics and drivers and for the permanent working up of motor bus service in the conveyance of passengers and goods.

ESTIMATED INCOME AND PROSPECTS

It is estimated from a perusal of the accounts of the working of the Manjeri Motor Service which the Company has purchased that the Company would be able to declare a dividend of about 25 per cent. after setting aside ample reserves for depreciation and reserve fund. As time pass on and more buses and cars and lorries are introduced and more new lines are opened and workshops established a much higher dividend is confidently expected and considered feasible.

SPECIAL ADVANTAGES.

The Company has purchased the flourishing concern the Manjeri Motor Service which has been exceptionally lucky all along to earn a good name and maintain the prestige and reputation throughout for its punctuality, regularity and *respectability required of a motor service to win* the confidence of the travelling public.

The Company is singulary fortunate in securing the services of choicest workmen and efficient and experienced management.

The Company's lines of business are not at all speculative but are reckoned as sure concerns.

The Company is in a position to pay a dividend from the very start.

The Company has already taken charge of the Manjeri Motor Service working at Calicut on the **25th day of May 1921** and that of Tellicherry on the **1st June 1921** and Badagara—Nadapuram line is newly opened on the **8th August 1921.**

Application for shares should be made in the form of application to the Managing Director together with the full cash value of each share.

Copies of the Memorandum and Articles of Association and of the Prospectus and forms of application can be had at the Office of the Company.

In the absence of application form, the application should clearly state Full name, Permanent address, Father's name, Profession, Present address and should be sent with the full cash value of the shares to the Managing Director

The Company's service now works between CALICUT—PUDUPADI, TELLICHERRY MAKKUT, BADAGARA—NADAPURAM Reliable pleasure cars **Reo, Hupmobile Overland** driven by experienced hands are always available for hire.

SUB COLLECTOR TELLICHERRY WRITES:—

"Just a line to thank you for the promptness with which you placed your two Cars and one Bus at the disposal of Government on the 26th 27th and 28th for moving troops to Quilandy, Tamaracherry and Kunnamangalam" etc., etc., and concludes "**I never saw more willing workers or more competent drivers than your men.**" This unasked for remarks from the pen of an high official speaks for itself about the merits of the Manjeri Motor Service Ltd., and her staff.

For further particulars apply to:—

J. NICHOLAS,
Managing Director,
Manjeri Motor Service Ltd.,
Camp—Mercara.

Printed and Published by S. NANJUNDA SASTRY at Sreenivas Electric Press, Mysore for "Kodagu" Ltd., Mercara—25-11-1921.

REGISTERED NO. M. 1550.

ಕೊಡಗು.

' ಸತ್ಯೇನ ಭೂತದಯಯಾ ವಿದ್ಯಾನೀತಿಭ್ಯ ಯತ್ನತಃ | ಏಕಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯಸಂಪದಃ ||

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

ಸಂಪುಟ ೧] ಕೊಡಗು, ಸನ್ ೧೯೩೧ ನೇ ಇಸವಿ ಡಿಸೆಂಬರ್ ತಾರೀಖು ೨ ನೆಯ ಶುಕ್ರವಾರ. [ಸಂಚಿಕೆ ೨೩.

NOTICE.

If you want any kind of English or Kanarese Printing, Please write to:

SREENIVAS ELECTRIC PRESS. MYSORE.

ಖ್ಯಾತಿಯಿಂದ ಗುಣಪಡಿಸುವ ಔಷಧಿಗಳು

(1) ಮಹಾಮದನಕಾಮೇಶ್ವರಿ ಲೇಹ್ಯ —ಆಯುರ್ವೇದ ವಿಧಿಪ್ರಕಾರ ತಯಾರಿಸಲ್ಪಟ್ಟಿದ್ದು ಇದರ ಸೇವನೆಯಿಂದ ಧಾತು ಕ್ಷೀಣತೆ, ಅಜೀರ್ಣ, ಎದೇನೋವು, ಶರೀರದ ಘಳಿತದಿಂದ ಉಂಟಾದ ಅಶಕ್ತಿಯನ್ನು ದೇಹಾಲಸ್ಯವನ್ನೂ ಪರಿಹರಿಸುತ್ತದೆ. ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿಗೊಳಿಸುವುದು ಸ್ತ್ರೀಯರು ಪುರುಷರು ಇದನ್ನು ಉಪಯೋಗಿಸಬಹುದು 40 ಸಲ ಸೇವಿಸುವ ಡಬ್ಬಿ 1 ಕ್ಕೆ 1—12—0. ಟಪ್ಪಾಲ್ ಖರ್ಚು 6 ಆಣೆ 3 ಡಬ್ಬಿಗಳಿಗೆ 4—12—0 ಟ ಖ. 10 ಆಣೆ

(2) ಚವನಪ್ರಾಶ —ಇದರ ಸೇವನೆಯಿಂದ ಕ್ಷಯ, ರಾಜಯಕ್ಷ್ಮ, ಉರಕ್ಷತ, ಕಾಸ, ಶ್ವಾಸ, ಹೃದ್ರೋಗ ಇವೇ ಮೊದಲಾದ ರೋಗಗಳನ್ನು ನಾಶಪಡಿಸಿ ಜೀರ್ಣಶಕ್ತಿಯನ್ನು ವೃದ್ಧಿಪಡಿಸಿ ಶರೀರಕ್ಕೆ ಸೌಂದರ್ಯವನ್ನು ಯವ್ವನಕಾಲದಲ್ಲಿದ್ದ ಹಾಗೆಯೇ ಇಂದ್ರಿಯಪಟುತ್ವವನ್ನು ಕೊಡುವದು ಮತ್ತು ಶರೀರದಾರ್ಢ್ಯವನ್ನೂ, ಅವಯವಗಳ ಬಲವನ್ನೂ ವೃದ್ಧಿಮಾಡುತ್ತದೆ. ಮತ್ತು ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸಿ ಬುದ್ಧಿಪಟುತ್ವವನ್ನು ಅಧಿಕಮಾಡುವುದು ಈ ಔಷಧವು ಬಾಲಕರಿಗೂ, ವೃದ್ಧರಿಗೂ ಬಹಳ ಪ್ರಯೋಜನ ಇದು ಬಹಳ ರುಚಿಕರವಾಗಿರುವುದು ಇದು ಚವನನೆಂಬ ವೃದ್ಧ ಋಷಿಗೆ ಅಶ್ವಿನಿದೇವತೆಗಳುಪಯೋಗಿಸಲ್ಪಟ್ಟ ರಸಾಯನವಾಗಿರುತ್ತದೆ. 1 ಸೇರಿನ ಡಬ್ಬಿ 1 ಕ್ಕೆ 2—0—0 3 ಡಬ್ಬಿಗಳಿಗೆ 5—8—0 ರೂಪಾಯಿ

(3) ಅರೋಕಾರಿಷ್ಟ ಮತ್ತು ಮಾತ್ರೆ —ಹೆಂಗಸರು ಕ್ರಮತಪ್ಪಿ ಮುಟ್ಟಾಗುವುದು, ರಜೋಸವಯದಲ್ಲಿ ಅತ್ಯಲ್ಪ ಅತಿರೇಕವಾಗಲಿ, ರಕ್ತಸುರಿಯುವುದು, ಹೊಟ್ಟೆನೋವು, ಸೊಂಟನೋವು, ಬಲಹೀನ, ಬಂಜೆಯಾಗಿರುವಿಕೆ ಬಿಳಿಪ್ರದರ, ಕುಸುಮರೋಗ, ಗರ್ಭಕೋಶ ಉಕ್ರಮ ತಪ್ಪುವಿಕೆ ಮತ್ತು ಸ್ತ್ರೀಗಳಿಗೆ ಉಂಟಾಗತಕ್ಕ ಸಕಲ ರೋಗಗಳನ್ನು ಖಂಡಿತವಾಗಿ ಗುಣಪಡಿಸುತ್ತದೆ 8 ಔನ್ಸ್ ಬಾಟ್ಲಿಗೂ 3 ಡಬ್ಬಿ ಮಾತ್ರೆಗೂ 2—0—0. 3 ಬಾಟ್ಲಿಗಳಿಗೆ ಮತ್ತು ಡಬ್ಬಿಗಳಿಗೆ 5—8—0 ರೂ.

(4) ಪ್ರಸೂತಾವಲೇಹ —ಹೆತ್ತ ನಂತರ ಈ ಔಷಧಿಯನ್ನು ಸೇವಿಸುವದರಿಂದ ಅರುಚಿ ಅಗ್ನಿಮಾಂದ್ಯ, ನಿದ್ರಾನಾಶ ಮತ್ತು ಗರ್ಭದಿಂದ ಸಂಭವಿಸುವ ಸಕಲ ವೇದನೆಗಳನ್ನು ಖಂಡಿತ ಗುಣಮಾಡುವದು ಮತ್ತು ಧಾತುಪುಷ್ಟಿಯನ್ನು ಉಂಟುಮಾಡುವುದು ಇದು ತಾಯಿಗೆ ಹೇಗೋ ಹಾಗೆಯೇ ಮಗುವಿಗೂ ಬಹಳ ಪ್ರಯೋಜನ, ಡಬ್ಬಿ 1 ಕ್ಕೆ 2—0—0. ಟಪ್ಪಾಲ್ ಖರ್ಚು 6 ಆಣೆ.

(5) ಪಿತ್ತಹಾರಿಚೂರ್ಣ —ಮಲಬದ್ಧತೆ, ಬಹುಮೂತ್ರ ಛಳಿಜ್ವರ, ಬ್ರಂಗಿಷ್ಟೆ ತಲೆತಿರುಗುವಿಕೆ, ಆಮ್ಲಪಿತ್ತ, ಹೊಟ್ಟೆ ಹಸಿವಿಲ್ಲದೆ ಇರುವಿಕೆ, ಬಾಯಿಯಲ್ಲಿ ಆಗ್ರ, ವಾತಪಿತ್ತ ಕಫ ಇವುಗಳಮೇಲೆ ದಿವ್ಯ ಔಷಧಿ 1 ಡಬ್ಬಿಗೆ 12 ಆಣೆ ಟಪ್ಪಾಲ್ ಖರ್ಚು 6 ಆಣೆ 3 ಡಬ್ಬಿಗಳಿಗೆ 2—0—0

(6) ಮೇಹಕುಠಾರ —ಮೂತ್ರಕೃಚ್ಛ್ರ ಉಷ್ಣರೋಗ, ಮೂತ್ರ ಹೋಗುವಾಗ್ಯೆ ಉರಿಯನ್ನು ಕೀವನ್ನು ಕೂಡಲೆ ನಿಲ್ಲಿಸಿ ಖಂಡಿತ ಗುಣ ಕೊಡುವುದು, 14 ದಿವಸದ ಔಷಧಿ ಡಬ್ಬಿ 1 ಕ್ಕೆ ಕ್ರಯ 2—0—0. 3 ಡಬ್ಬಿಗಳಿಗೆ ೨—10—0

(7) ಬಾಲಗ್ರಹ ಗುಟಿಕೆ —ಮಕ್ಕಳಿಗೆ ಮಲಬದ್ಧತೆ ಬಾಲಗ್ರಹ ಇವೇ ಮೊದಲಾದ ಕಷ್ಟದಿಂದ ಉಂಟಾಗತಕ್ಕ ಸಕಲ ರೋಗಗಳನ್ನು ಗುಣಪಡಿಸಲಿಕ್ಕೆ ರಾಮಬಾಣದಂತಿರುವುದು ಬಾಟ್ಲಿ 1 ಕ್ಕೆ 10 ಆಣೆ ೨ ಬಾಟ್ಲಿಗಳಿಗೆ 1-10-0 ಒಂದರಿಂದ 3 ಬಾಟ್ಲಿವರೆಗೆ ಟಪ್ಪಾಲ್ ಖರ್ಚು 6 ಆಣೆ

(8) ಶ್ವಾಸಕುಠಾರಗುಟಿಕೆ —ನಂಬರ್ 1 ನಂ 2. ಈ ಎರಡು ನಮೂನೆಯ ಗುಟಿಕೆಗಳ ಸೇವನೆಯಿಂದ ತ್ರಿದೋಷ (ಕಫ ವಾತ, ಪಿತ್ತ) ದಿಂದ ಉಂಟಾಗುವ ಶ್ವಾಸಕಾಸವನ್ನು ನಿವರ್ತಿಸುವ ಸಿದ್ಧೌಷಧವಾಗಿರುವದು 2 ಬಾಟ್ಲಿ ಮಾತ್ರೆಗಳಿಗೆ 1—2—0. 6 ಬಾಟ್ಲಿಗಳಿಗೆ 3 ರೂ 2 ರಿಂದ 6 ಬಾಟ್ಲಿವರೆಗೆ ಟ ಖ. 6 ಆಣೆ.

(9) ಮಹಾಜ್ವರಾಂಕುಶ —ಕಫಜ್ವರ, ಪಿತ್ತಜ್ವರ, ವಾತಜ್ವರ, ಏಕಾಹಿಕಜ್ವರ ದ್ವ್ಯಾಹಿಕ, ತ್ರ್ಯಾಹಿಕ, ಚಾತುರ್ಥಿಕ, ಇನ್‌ಫ್ಲೂಯೆಂಜಾ, ನಿಮೋನಿಯಾ ಮೊದಲಾದ ಭಯಂಕರ ಜ್ವರಗಳನ್ನು ಸಹ ಖಂಡಿತ ಗುಣಪಡಿಸುವುದು. 1 ಬಾಟ್ಲಿಗೆ 10 ಆಣೆ 3 ಬಾಟ್ಲಿಗಳಿಗೆ 1—10—0 ಟ. ಖರ್ಚು 1 ರಿಂದ 3 ಬಾಟ್ಲಿವರೆಗೆ 6 ಆಣೆ.

(10) ಇಚ್ಛಾಭೇದಿ —ಆಯಾಸವನ್ನುಂಟುಮಾಡದ ಸುಖವಿರೇಚಕ ಬಾಟ್ಲಿ 1 ಕ್ಕೆ 12 ಆಣೆ. 3 ಬಾಟ್ಲಿಗಳಿಗೆ 2 ರೂ 1 ರಿಂದ 3 ಬಾಟ್ಲಿವರೆಗೆ ಟ ಖ 6 ಆಣೆ

(11) ರಕ್ತಶುದ್ಧಿಚೂರ್ಣ —ಮೇಹವ, ಉಪದಂಶ ಸಮ್ಮಂದ ಮೈಯಲ್ಲಿ ವ್ಯಾಪಿರುವ ವ್ರಣಕಜ್ಜಿ, ಮೈತುರಿಸುವಿಕೆ, ಮಲಬದ್ಧತೆ ಮುಂತಾದುವುಗಳನ್ನು ಹೋಗಲಾಡಿಸಿ ಹಸಿವೆಯನ್ನು ತ್ರಾಣವನ್ನು ಧಾತುಪುಷ್ಟಿಯನ್ನು ಉಂಟುಮಾಡುತ್ತದೆ 1 ಡಬ್ಬಿ 1—0—0 ರೂ. ಟ. ಖ. 5 ಆಣೆ.

ಗುಣವಿಶೇಷ ಕ್ರಯ ಕಮ್ಮಿ. ಶುಚಿ ಹೆಚ್ಚು.

(12) ದಂತಕಾಂತಿಯ ಚೂರ್ಣ :—ಹಲ್ಲುನೋವಿಗೆ ಖಾತ್ರಿಯಾದ ಔಷಧಿ ಇದರ ಉಪಯೋಗದಿಂದ ಹಲ್ಲಿನ ಕ್ರಿಮಿಗಳನ್ನು ನಾಶಪಡಿಸಿ, ಹಲ್ಲಿನ ವೇದನೆಯನ್ನು ಖಂಡಿತ ಗುಣಪಡಿಸಿ, ವಸಡುಗಳ ಬೀಗು ಹಲ್ಲಿನಿಂದ ಬರುವ ರಕ್ತವನ್ನು, ಕೀವನ್ನು, ಬಾಯಿಯ ದುರ್ವಾಸನೆಯನ್ನು, ಹಲ್ಲುಗಳ ಬುಡದಲ್ಲಿ ಸುಣ್ಣ ಕಟ್ಟುವುದನ್ನು ಗುಣಪಡಿಸಿ ಅಲ್ಲಾಡುವ ಹಲ್ಲುಗಳನ್ನು ವಜ್ರದೋಪಾದಿಯಲ್ಲಿ ಗಟ್ಟಿಮಾಡಿ ನಾಲಗೆಗೆ ರುಚಿಯನ್ನು ಸಹ ಉಂಟುಮಾಡುತ್ತದೆ. ಟಿನ್ 1 ಕ್ಕೆ 3 ಆಣೆ. 6 ಟಿನ್ನಿಗೆ 1—1—0 ಟ. ಖರ್ಚು 5 ಆಣೆ. 12 ಡಬ್ಬಿಗಳಿಗೆ ಟಪ್ಪಾಲ್ ಖರ್ಚು 6 ಆಣೆ.

(13) ಗಜಕರ್ಣದ ಮುಲಾಮು :—ಹುಳ ಮೇಯುವದು, ದದ್ದು, ಗಜಕರ್ಣ ಬಿಚ್ಚಿ, ಇಸುಬು ತುರಿಕಜ್ಜಿ ಮೊದಲಾದ ಸಮಸ್ತ ಚರ್ಮರೋಗಗಳು ಮೂರೇ ದಿವಸಗಳಲ್ಲಿ ಗುಣವಾಗುವದು ಡಬ್ಬಿ 1 ಕ್ಕೆ 5 ಆಣೆ. 3 ಡಬ್ಬಿಗಳಿಗೆ 15 ಆಣೆ. ಟ. ಖ 5 ಆಣೆ 6 ಡಬ್ಬಿಗಳಿಗೆ 1—12—0. 12 ಡಬ್ಬಿಗಳಿಗೆ 3 ರೂ. ಟಪ್ಪಾಲ್ ಖರ್ಚು 10 ಆಣೆ.

(14) ವಿಶ್ವಾಂಜನ —ಇದರ ಉಪಯೋಗದಿಂದ ವಾತ ಸಂಧಿವಾತ, ತಲೆನೋವು, ಶಿರೋಭಾರ, ಉಳುಕು ಎದೇನೋವು, ಶೀತ ಕೆಮ್ಮು, ಅರ್ಧಾಂಗವಾಯು, ಗಾಯ, ದಂತವ್ಯಾಧಿ ಮುಂತಾದ ಅನೇಕ ತರದ ವೇದನೆಗಳನ್ನು ಖಂಡಿತವಾಗಿ ಗುಣಹೊಂದುವವು. ಬಾಟ್ಲಿ 1 ಕ್ಕೆ 8 ಆಣೆ. ಡಜನಿಗೆ ೨—4—0 ಶ್ಯಾಂಪಲ್ ಡಬ್ಬಿ 1 ಕ್ಕೆ 1 ಆಣೆ. ಡಜನಿಗೆ 10 ಆಣೆ. 1 ಗ್ರೋಸಿಗೆ 6 ರೂಪಾಯಿ.

(15) ಭೃಂಗರಾಜತೈಲ :—ಇದರಿಂದ ತಲೆಕೂದಲು ಉದ್ದವಾಗಿಯೂ, ಕಪ್ಪಾಗಿಯೂ, ಪುಷ್ಟಿಯಾಗಿಯೂ ಬರುತ್ತದೆ ಮಿದುಳಿಗೆ ಅತ್ಯಂತ ಹಿತಕಾರಿಯಾಗಿರುತ್ತದೆ. ಬಾಟ್ಲಿ 1 ಕ್ಕೆ 12 ಆಣೆ.

(16) ಪರಿಶುದ್ಧವಾದವಾದ ಯೂಕಲಿಪ್ಟಸ್ ಆಯಿಲ್ ಎಂಬ ನೀಲಗಿರಿ ತೈಲ —ಹೊಟ್ಟೆಗೆ ತೆಗೆದುಕೊಳ್ಳುವದೆ ಖಾತ್ರಿ ಬಾಟ್ಲಿ 1 ಕ್ಕೆ 5 ಆಣೆ. ಡಜನ್ನಿಗೆ 3 ರೂಪಾಯಿ.

ನಮ್ಮಲ್ಲಿ ಎಲ್ಲಾ ವಿಧದ ಲೇಹ, ತೈಲ, ಭಸ್ಮ, ಆಸವ, ಅರಿಷ್ಟಗಳು ದೊರೆಯುತ್ತವೆ. ವ್ಯಾಪಾರಸ್ಥರಿಗೆ ಸ್ಪೆಷಲ್ ರಿಯಾಯಿತಿ ದರಗಳು ಕ್ಯಾಟಲಾಗು ಬರೆದು ತರಿಸಿಕೊಳ್ಳಿರಿ.

ವಿಳಾಸ.—

ಎಂ. ಗಣಪಯ್ಯ ಅಂಡ್ ಸನ್ಸ್,

ಆಯುರ್ವೇದಿಕ್ ಏಜನ್ಸಿಯನ್ಸ್, ಮಂಗಳೂರು ದ. ಕ

ಟಾಕವಿಲ್ಲದ ಒಡವೆಗಳು !!

ನಂ. 1



ನಂ 2



ಅಂದವಾದ ನಮೂನೆಗಳು !!!

ನಂ 3.



ನಂ 4

ಸ್ತ್ರೀಯರ ಕೈಗಳಿಗೆ ಅಲಂಕಾರವಾಗಿ ಅಂದವಾದ ನಮೂನೆಯಲ್ಲಿ ಘಟ್ಟಿ ತರವಾಗಿ ಅಪ್ಪಟ ಸವರನ್ ಚಿನ್ನದಲ್ಲಿ ಯಾವ ಅಳತೆಗೆ ಬೇಕಾದರೂ ಬಳೆಗಳು ತಯಾರಾಗಿ ಸಿದ್ಧವಾಗಿವೆ. ಬೇರೆ ಯಾವ ನಮೂನೆ ಬೇಕಾಗಿದ್ದಾಗ್ಯೂ ತಯಾರ್ಮಾಡಿ ಕೊಡುತ್ತೇವೆ. ಒಂದು ಜತೆ ಬಳೆಗಳು 3 ರಿಂದ 6 ಸವರನ್‌ಗಳ ತೂಕದಲ್ಲಿ ತಯಾರ್ಮಾಡಲ್ಪಡುತ್ತವೆ.

1, 2 ಮತ್ತು 3 ನೆ ನಂಬರು ಬಳೆಗಳನ್ನು ಮಾಡಲು ಕೂಲಿ ಜತೆ 1 ಕ್ಕೆ 7—0—0 ರೂ. ಮತ್ತು 2 ಆಣೆ ತೂಕ ಸೇದಾರ. 4 ನೆ ನಂ. ಬಳೆಗಳನ್ನು ಮಾಡಲು ಕೂಲಿ ಜತೆ 1 ಕ್ಕೆ 6—0—0 ರೂ. ಮತ್ತು 1 ಆಣೆ ತೂಕ ಸೇದಾರ.

ಬಳೆಗಳಿಗೆ ತಿರುಪುಗಳನ್ನು ಬೇಕಾದಲ್ಲಿ ಜತೆ 1 ಕ್ಕೆ 3—0—0 ರೂಪಾಯಿ ಪ್ರತ್ಯೇಕ ಛಾರ್ಜ್ ಮಾಡಲ್ಪಡುತ್ತೆ. ಆರ್ಡರು ಜತೆಯಲ್ಲಿ ಸರಿಯಾದ ಅಳತೆಯೂ ಮತ್ತು ಕೇಳಿದಾ 10 ರಾತೆ ಮುಂಗಡವೂ ಕಳುಹಿಸಲ್ಪಡಬೇಕು. ಪೋಸ್ಟು ಛಾರ್ಜ್ ಅಲಾಯಿದ.

52—9 ಇಂಡಿಯನ್ ಜ್ಯೂಯಲರಿ ವರ್ಕ್ಸ್, ಪೋಸ್ಟ್ ಬಾಕ್ಸ್ ನಂ. 40. ಬೆಂಗಳೂರು ಸಿಟಿ.

“ಕೊಡಗು”

೧೯೨೧ ನೇ ಇಸವಿ ಡಿಸೆಂಬರ್ ತಾ|| ೨ ನೇ ಶುಕ್ರವಾರ.

ಓಂ ನಮೋ ಭಗವತೇ ರಾಮಕೃಷ್ಣಾಯ
ಓಂ ನಮೋ ಭಗವತೇ ವಿವೇಕಾನಂದಾಯ.

ವಿಗ್ರಹಾರಾಧನೆ.

I

ಈಗಿನ ಕಾಲದಲ್ಲಿ ವಿಗ್ರಹಾರಾಧನೆಯು ತಪ್ಪೆಂದು ಹೇಳುವವರ ಸಂಖ್ಯೆಯು ಹೆಚ್ಚುತ್ತಾ ಹೋಗಿರುತ್ತದೆ. ಕ್ರೈಸ್ತರಲ್ಲಿ ಕೆಲವರೂ ಮುಸಲ್ಮಾನರಲ್ಲಿ ಅನೇಕರೂ ಅದು ತಪ್ಪೆಂದು ಪೂರ್ವದಿಂದಲೇ ಸಾಧಿಸುತ್ತಿರುವರಷ್ಟೆ. ಪಾಶ್ಚಿಮಾತ್ಯರ ನವನಾಗರಿಕತೆಯೆಂಬ ಅಂಧಕಾರದಿಂದ ಕಣ್ಣು ಮಂಜಾಗಿ ಅದೇ ಸರ್ವೋತ್ಕೃಷ್ಟವೆಂದು ಭಾವಿಸುವ ಹಿಂದೂದೇಶದ ಆಧುನಿಕ ಘನಪಂಡಿತರೂ ಸಹ ವಿಗ್ರಹ ಪೂಜೆಯು ತಪ್ಪೆಂದು ಬೋಧಿಸುವರು. ಬ್ರಹ್ಮಸಮಾಜ, ಆರ್ಯಸಮಾಜ ಮೊದಲಾದ ಈಗಿನ ಧಾರ್ಮಿಕ ಸಮಾಜಗಳಿಗೆ ವಿಗ್ರಹ ಪೂಜಾನಿಷೇಧವೇ ತಳಹದಿಯೆಂದು ಕಾಣುತ್ತದೆ.

ಇವರೆಲ್ಲರೂ ಬೋಧಿಸುವಂತೆಯೇ ವಿಗ್ರಹಗಳಿಲ್ಲದೆ ದೇವರನ್ನು ಆರಾಧಿಸುವುದಕ್ಕೆ ಸಾಧ್ಯವಿರುತ್ತಿದ್ದರೆ ಬಹಳ ಚೆಲೋದಿತ್ತು. ವಿಗ್ರಹಾರಾಧನೆಯು ತಪ್ಪೆಂದು ಬೋಧಿಸುವವರು ಕೇವಲ ಧ್ಯಾನಯೋಗಾಂತರಗಳಿಂದ ದೇವರನ್ನು ಸಾಕ್ಷಾತ್ಕರಿಸಬಹುದೆಂದು ನಿದರ್ಶನಪೂರ್ವಕವಾಗಿ ತೋರಿಸುತ್ತಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಆ ತರದ ನಿದರ್ಶನವೇನೂ ಅವರಲ್ಲಿ ಕಂಡುಬರುವುದಿಲ್ಲ. ದೇವರು ಅರೂಪನು, ನಿರಾಕಾರನು, ಅಚಿಂತ್ಯನು, ಮಾಯಾತೀತನು ಎಂಬುವುದೇನೋ ನಿಜ. ಆದರೆ ಅಂತಹ ಅಚಿಂತ್ಯನಾದ ಪರಮಾತ್ಮನನ್ನು ಧ್ಯಾನಿಸುವುದು ಹೇಗೆ? ಅವಾಙ್ಮನಸಗೋಚರನಾದ ಆ ಗಿರೀಶನನ್ನು ಆರಾಧಿಸುವುದು ಸಾಧ್ಯವೇ? ಈ ನಮ್ಮ ಮನಸ್ಸಿನಿಂದ ಆ ಪರಮಾತ್ಮನನ್ನು ಚಿಂತಿಸುವುದೂ ನಮ್ಮ ವಾಕ್ಕಿನಿಂದ ಆತನ ವಿಷಯವಾಗಿ ಮಾತಾಡುವುದೂ ಅಸಂಭವವೇ ಸರಿ. ಏಕೆಂದರೆ ಮನಸ್ಸಿನಿಂದ ಗ್ರಹಿಸಲ್ಪಡುವ ಪ್ರತಿಯೊಂದು ವಸ್ತುವೂ ವಿಷಯವೂ ಕೂಡಲೇ ರೂಪಯುಕ್ತವಾಗುವುದು. ಆಕಾರವೂ ಬಣ್ಣವೂ ಗುಣವೂ ಯಾವುದಕ್ಕಿದೆಯೋ ಅದಕ್ಕೆ ಕೂಡಲೇ ರೂಪೋತ್ಪತ್ತಿಯಾಗುವುದು. ಯಾವುದಕ್ಕೆ ರೂಪವಿದೆಯೋ ಅದಕ್ಕೆ ಒಂದು ಹೆಸರೂ ಕಲ್ಪಿಸಲ್ಪಡುವುದು. ಈ ಪ್ರಪಂಚದ ಸಕಲ ವಸ್ತುಗಳಿಗೂ ನಾಮರೂಪಗಳು ಇದ್ದೇ ಇರುವುವು. ನಾಮರೂಪಕಲ್ಪಿತವಲ್ಲದ ವಸ್ತುವೇ ಈ ಜಗತ್ತಿನಲ್ಲಿಲ್ಲವಾದ ಕಾರಣ ಈ ಮನಸ್ಸಿಗೆ ಎಲ್ಲಾ ಪದಾರ್ಥಗಳನ್ನೂ ನಾಮರೂಪಗಳ ಮೂಲಕವೇ ಗ್ರಹಿಸುವ ಸ್ವಭಾವವು ಅನಾದಿಸಿದ್ಧವಾಗಿರುವುದು. ಆದದರಿಂದಲೇ ಈ ಮನಸ್ಸು ಪ್ರತಿಕ್ಷಣದಲ್ಲಿಯೂ ಯಾವುದಾದರೊಂದು ರೂಪವನ್ನು ಗ್ರಹಿಸುತ್ತಲೇ ಇರುವುದು. ಈ ಅರ್ಥವನ್ನೇ ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ಈ ಕೆಳಗಿನ ಶ್ಲೋಕದಿಂದ ಹೇಳಿರುತ್ತಾನೆ —

“ನಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್
ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ ||”

ಅಂದರೆ ಒಂದು ಕ್ಷಣವಾದರೂ ಯಾರಿಂದಲೂ ಮನಸ್ಸಿನಲ್ಲಿಯೂ ಮಾತಿನಲ್ಲಿಯೂ ಶರೀರದಲ್ಲಿಯೂ ಕೆಲಸವಿಲ್ಲದೆ ಇರಲು ಸಾಧ್ಯವಿಲ್ಲ. ಎಲ್ಲರೂ ಪ್ರಕೃತಿಗೆ ಒಳಪಟ್ಟು ಅಗತ್ಯವಾಗಿ ಕೆಲಸವನ್ನು ಮಾಡುತ್ತಲೇ ಇರಬೇಕಾಗಿದೆ' ಎಂದು ತಾತ್ಪರ್ಯವು.

ಮನಸ್ಸಿನಲ್ಲಿ ಆಲೋಚನೆಗಳು ಈ ರೀತಿ ಪರಂಪರೆಯಾಗಿ ನದೀ ಪ್ರವಾಹದಂತೆ ಉತ್ಪನ್ನವಾಗಿ ಹರಿಯುತ್ತಿರಲು, ಯಾವ ನಾಮರೂಪಗಳಿಗೂ ಒಳಪಡದ ನಿರ್ಗುಣನಾದ, ಉಪಮಾನರಹಿತನಾದ ಪರಮಾತ್ಮನನ್ನು ಧ್ಯಾನಿಸಬೇಕಾದರೆ ಮನಸ್ಸಿನ ಸಕಲ ವೃತ್ತಿಗಳನ್ನೂ ನಿರೋಧಿಸಿದಲ್ಲದೆ ಅದು ಸಾಧ್ಯವಿಲ್ಲವು. ಈ ತರದ ಚಿತ್ತವೃತ್ತಿ ನಿರೋಧವುಳ್ಳ ಮಹಾಪುರುಷರು ಕೋಟಿ ಸಂಖ್ಯೆಯಲ್ಲಿ ಒಬ್ಬಿಬ್ಬರಿರಬಹುದು. ಮಿಕ್ಕವರು ಅಂತಹ ನಿರ್ಗುಣ ಬ್ರಹ್ಮನನ್ನು ಧ್ಯಾನಿಸುವುದಕ್ಕೆ ದಾರಿ ಯಾವುದು?

ಪರಮಾತ್ಮನನ್ನು ಆತನ ಸಕಲಕಲ್ಯಾಣಗುಣಗಳಿಂದ ಸದಾ ಚಿಂತಿಸುತ್ತಿರುವುದೇ ಆತನ ಆರಾಧನೆಯಲ್ಲವೆ? ಲೋಹಗಳಿಂದಲೂ ಪಾಷಾಣಗಳಿಂದಲೂ ನಿರ್ಮಿಸಲ್ಪಟ್ಟ ವಿಗ್ರಹಗಳನ್ನು ಆರಾಧಿಸಿದರೆ ಪರಮಾತ್ಮನನ್ನು ಆರಾಧಿಸಿದ ಹಾಗಾಗಲಿಲ್ಲವೆಂದು ವಿಗ್ರಹ ನಿಷೇಧಕರು ವಾದಿಸುವರು. ಆ ವಿಗ್ರಹಗಳು ಪರಮಾತ್ಮನಲ್ಲದಿದ್ದರೂ ಆತನಿಗೆ ಅನೇಕ ಕಲ್ಯಾಣಗುಣಗಳಿವೆಯೆಂದು ಒಪ್ಪಿಕೊಂಡರೆ ದೇವರು ಸಗುಣನೆಂದು ಹೇಳಿದ ಹಾಗಾಯಿತು. ಮನಸ್ಸು ಒಂದು ಪದಾರ್ಥವನ್ನು ಅದರ ಗುಣಗಳಿಂದ ಗ್ರಹಿಸುತ್ತದೆ. ಗುಣಗಳಿಲ್ಲದೆ ಒಂದು ವಸ್ತುವನ್ನು ನಿರ್ಗುಣವಾಗಿ ಗ್ರಹಿಸುವುದಕ್ಕೆ ಮನಸ್ಸಿನಿಂದ ಆಗುವುದಿಲ್ಲ. ನಮ್ಮ ಮನಸ್ಸು ಒಂದು ವಸ್ತುವನ್ನು ಗ್ರಹಿಸುವಾಗ ಆ ವಸ್ತುವಿನ ಗುಣಗಳಿಂದಲೇ ಅದನ್ನು ಗ್ರಹಿಸಬೇಕಾಗುವುದು. ಆ ವಸ್ತುವಿನ ರೂಪ, ಆಕಾರ ಪರಿಮಾಣ, ಬಣ್ಣ, ಪ್ರಯೋಜನ ಇತ್ಯಾದಿ ಗುಣಗಳು ಮಾತ್ರ ನಮ್ಮ ಮನಸ್ಸಿನಲ್ಲಿರುತ್ತವಲ್ಲದೆ ಆ ಪ್ರಾಣಿಯು ಬೇರೆ ನಮ್ಮ ಮನಸ್ಸಿನಲ್ಲಿರುವುದಿಲ್ಲ. ಅದೇ ರೀತಿಯಲ್ಲಿ ಪದಾರ್ಥವನ್ನೂ ಅದರ ಗುಣಗಳಿಂದಲೇ ಗ್ರಹಿಸಬೇಕಲ್ಲದೆ ಬೇರೆ ಉಪಾಯವಿಲ್ಲವು. ಆದುದರಿಂದ ಮನಸ್ಸಿನಿಂದ ಗ್ರಹಿಸಲ್ಪಡುವ ಗುಣಗಳೆಲ್ಲವೂ ಆಯಾಯ ಪದಾರ್ಥಗಳ ವಿಗ್ರಹಗಳಾಗಿರುವುವು. ಹಾಗೆಯೇ ಪರಮಾತ್ಮನ ಗುಣಗಳೂ ಆತನ ವಿಗ್ರಹಗಳೇ ಆಗಿರುವುವು. ಆತನ ವಿಷಯವಾಗಿ ಮನಸ್ಸಿನಿಂದ ಗ್ರಹಿಸಲ್ಪಡುವ ಗ್ರಹಿಕೆಗಳೆಲ್ಲವೂ ಆತನ ವಿಗ್ರಹ (Images) ಗಳಲ್ಲವೇ?

ಇದೂ ಅಲ್ಲದೆ ಪರಮಾತ್ಮನ ಕಲ್ಯಾಣಗುಣಗಳಲ್ಲಿ ಸರ್ವಾಂತರ್ಯಾಮಿತ್ವವೂ ಒಂದಾಗಿದೆ. ದೇವರಿಲ್ಲದ ಸ್ಥಳವೇ ಆಗಲಿ ಪದಾರ್ಥವೇ ಆಗಲಿ ಇರಕೂಡದು. ಆತನು ಅಣುರೇಣು ತೃಣಕಾಷ್ಠ ಭರಿತನು ಎಂದು ವೇದಗಳು ಬೋಧಿಸುತ್ತಿರುವುವು. ಹೀಗಿರಲು ಪಾಷಾಣಗಳಲ್ಲಿಯೂ ಲೋಹಗಳಲ್ಲಿಯೂ ಆತನು ಇರುವದಿಲ್ಲವೇ? ಆಕರ್ಷಣಶಕ್ತಿಯು ಹೇಗೆ ಎಲ್ಲಾ ಪದಾರ್ಥಗಳಲ್ಲಿಯೂ ಅವಿಚ್ಛಿನ್ನವಾಗಿರುವದೋ, ಉಷ್ಣವು ಹೇಗೆ ಎಲ್ಲಿಂದೆಲ್ಲಿಗೂ ವ್ಯಾಪಿಸಿರುವುದೋ, ಆಕಾಶವು ಹೇಗೆ ಎಲ್ಲಾ ಪದಾರ್ಥಗಳಲ್ಲಿಯೂ ಆವರಿಸಿಕೊಂಡಿದೆಯೋ ಹಾಗೆಯೇ ಭಗವಂತನು ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವನು. ಹೀಗಿರಲು ವಿಗ್ರಹಗಳಲ್ಲಿಯೂ ದೇವಾಲಯಗಳಲ್ಲಿಯೂ ಅವನು ಇರುವುದಿಲ್ಲವೆ? ಹಾಗೆ ಅವನು ಇಲ್ಲದ ಸ್ಥಳಗಳೂ ಪದಾರ್ಥಗಳೂ ಇರುವುವೆಂದಾದರೆ ಅವನ ಸರ್ವಾಂತರ್ಯಾಮಿತ್ವವನ್ನು ಒಪ್ಪುವದಕ್ಕಾಗದು.

ಅಖಂಡವಾದ ಪರಬ್ರಹ್ಮನನ್ನು ಒಂದು ಸಣ್ಣ ಕಲ್ಲಿನ ಗೊಂಬೆಯೊಡನೆ ಹೋಲುವುದು ಅನುಚಿತವು ಎಂಬ ಆಕ್ಷೇಪಣೆಯು ಬರಬಹುದು. ಆದರೆ ಈ ಪ್ರಪಂಚದಲ್ಲಿ ಒಂದು, ಎರಡು ಎಂಬ ಸಂಖ್ಯಾವಾಚಕಕ್ಕೆ ಒಳಪಡುವ ಪದಾರ್ಥಗಳೇ ಇಲ್ಲವು. ಇಲ್ಲಿ ಕಾಣಬರುವ ಸಕಲ ಪದಾರ್ಥಗಳೂ ಪಂಚಭೂತಗಳಿಂದ ಆಗಿರುವುವು. ಪಂಚಭೂತಗಳು ಆಕಾಶ ಮತ್ತು ಪ್ರಾಣವೆಂಬ ಎರಡು ಪದಾರ್ಥಗಳಿಂದ ಆಗಿರುತ್ತವೆ. ಈ ಎರಡು ಪದಾರ್ಥಗಳು ಮಹತ್ತಿನಿಂದ ಉತ್ಪತ್ತಿಯಾಗಿವೆ. ಮಹತ್ತೇ ಮೂಲ ಪ್ರಕೃತಿಯು. ಈ ಮೂಲ ಪ್ರಕೃತಿಯೇ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವುದು. ಅದನ್ನು ಇಂಗ್ಲಿಷರು (Matter) 'ಮ್ಯಾಟರ್' ಎಂದು ಹೇಳುವರು. ಇಂಗ್ಲಿಷಿನಲ್ಲಿ ಮ್ಯಾಟರ್ ಅಂದರೆ ಎಲ್ಲಾ ಪದಾರ್ಥಗಳಿಗೂ ಕಾರಣವಾದುದೆಂದು ಅರ್ಥವು. ಈ ಮ್ಯಾಟರ್ ಅಥವಾ ಮೂಲ ಪ್ರಕೃತಿಯು ಅಖಂಡವೆಂದು ವಿಜ್ಞಾನ ಶಾಸ್ತ್ರಜ್ಞರು (Scientists) ಹೇಳುವರು. ಅಖಂಡವೆಂದರೆ ಭಾಗಮಾಡುವುದಕ್ಕೆ ಅಸಾಧ್ಯವಾದುದು. ಪದಾರ್ಥವು ಯಾವುದನ್ನು ಭಾಗಿಸುವುದಕ್ಕೆ ಆಗುವುದಿಲ್ಲವೋ ಅದು ಏಕಮಯವಾಗಿರಬೇಕು. ಭೂಮಿ, ಸೂರ್ಯ, ಚಂದ್ರ, ನಕ್ಷತ್ರಾದಿ ಗೋಳಗಳೆಲ್ಲವೂ ಆಕಾಶವೆಂಬ ಸಮುದ್ರದಲ್ಲಿ ಮುಳುಗಿ ತೇಲುತ್ತಿರುವುವು. ಅಂದರೆ ಆಕಾಶವು ಎಲ್ಲಾ ಗೋಳಗಳ ಮತ್ತು ಭೂಲೋಕದ ಎಲ್ಲಾ ಪದಾರ್ಥಗಳ ಒಳಗೂ ಹೊರಗೂ ವ್ಯಾಪಿಸಿಕೊಂಡಿರುವುದು. ಸಮುದ್ರದಲ್ಲಿ ಅನೇಕ ತೆರೆಗಳು ಒಂದಕ್ಕೊಂದು ಪ್ರತ್ಯೇಕವಾಗಿರುವಂತೆ ತೋರಿದರೂ, ಒಂದು, ಎರಡು, ಮೂರು ಎಂಬ ಸಂಖ್ಯೆಗೆ ಒಳಪಟ್ಟರೂ ಎಲ್ಲಾ ತೆರೆಗಳೂ ಹೇಗೆ ಸಮುದ್ರವೊಂದೇ ಆಗಿವೆಯೋ ಹಾಗೆಯೇ ಈ ಜಗತ್ತಿನ ಪದಾರ್ಥಗಳೆಲ್ಲವೂ ಆ 'ಮ್ಯಾಟರ್' ಎಂಬ ಮೂಲ ಪ್ರಕೃತಿಯೊಂದೇ ಆಗಿರುವುದು. ಒಂದು ತೆರೆಯ ಸ್ವರೂಪವನ್ನು ಯೋಚಿಸಿದರೆ ಇಡೀ ಸಮುದ್ರವೇ ಅದರೊಂದಿಗೆ ಗ್ರಹಿಸಲ್ಪಡುವುದು. ಸಮುದ್ರವನ್ನು ಬಿಟ್ಟು ತೆರೆಯನ್ನು ಮಾತ್ರ ಗ್ರಹಿಸುವುದಕ್ಕೆ ಆಗುವುದಿಲ್ಲ. ಆದದರಿಂದ ಈ ಪ್ರಪಂಚದ ಯಾವುದಾದರೊಂದು ವಸ್ತುವನ್ನು ಗ್ರಹಿಸಲ್ಪಡಬೇಕು. ಹೀಗಿರಲು ದೇವಾಲಯದಲ್ಲಿರುವ ಒಂದಾನೊಂದು ವಿಗ್ರಹವನ್ನು ಗ್ರಹಿಸಿದರೆ ಇಡೀ ಜಗತ್ತೇ ಗ್ರಹಿಸಲ್ಪಟ್ಟ ಹಾಗಾಗುವುದು. ಈ ಜಗತ್ತಿನಲ್ಲಿ ಪರಮಾತ್ಮನು ಅಂತರ್ಯಾಮಿಯಾಗಿ ವ್ಯಾಪಿಸಿರುವನೆಂದು ವೇದಗಳು ಹೇಳುವುವು.

“ಅಗ್ನಿರ್ಯಥೈಕೋ ಭುವನಂ ಪ್ರವಿಷ್ಟೋ ರೂಪಂ ರೂಪಂ ಪ್ರತಿರೂಪೋ ಬಭೂವ | ಏಕಸ್ತಥಾ ಸರ್ವಭೂತಾಂತರಾತ್ಮಾ ರೂಪಂ ರೂಪಂ ಪ್ರತಿರೂಪೋ ಬಹಿಶ್ಚ ||”

ಅಂದರೆ ಒಂದೇ ಅಗ್ನಿಯು ಈ ಪ್ರಪಂಚವನ್ನು ಪ್ರವೇಶಿಸಿ ಹೇಗೆ ನಾನಾರೂಪವಾಯಿತೋ ಹಾಗೆಯೇ ಒಬ್ಬನೇ ಆದ ಪರಮಾತ್ಮನು ಸಕಲ ಜೀವರಾಶಿಗಳೊಳಗೆ ಪ್ರವೇಶಿಸಿ ಆಯಾ ರೂಪದಿಂದಿರುವನು ಎಂದು ಭಾವವು.

ವಿಗ್ರಹಾರಾಧಕನು ತನ್ನ ವಿಗ್ರಹದ ಮುಂದೆ, “ಅಚಿಂತ್ಯಾಯಾವ್ಯಕ್ತರೂಪಾಯ ನಿರ್ಗುಣಾಯ ಗುಣಾತ್ಮನೇ | ಸಮಸ್ತಜಗದಾಧಾರ ಮೂರ್ತಯೇ ಬ್ರಹ್ಮಣೇ ನಮಃ ||”

ಟೀಕಾ|| ಭಗವಂತನೇ ನೀನು ಯೋಚನೆಗೆ ಸಿಕ್ಕದವನು, ಯಾವ ರೂಪಕ್ಕೂ ಒಳಗಾಗದವನು, ಯಾವ ಗುಣವೂ ಇಲ್ಲದವನು. ಆದರೂ ಸಕಲ ಗುಣಗಳಿಂದಲೂ ಕೂಡಿಕೊಂಡಿರುವವನು, ಎಲ್ಲಾ ಲೋಕಗಳಿಗೂ ಆಧಾರವಾದವನು. ಈ ತರದ ಆಕಾರದಲ್ಲಿರುವ ಪರಬ್ರಹ್ಮನಿಗೆ ನಮಸ್ಕಾರವು ಎಂದು ಹೀಗೆ ತನ್ನ ವಿಗ್ರಹದ ಅಂತರ್ಯಾಮಿಯಾದ ಪರಮಾತ್ಮನನ್ನು ಪೂಜಿಸುವನು. ಈ ತರದ ವಿಗ್ರಹಾರಾಧನೆಯು ತಪ್ಪೆಂದು ಹೇಗೆ ಹೇಳಬಹುದಾದೀತು?

ಆತ್ಮನಿಷ್ಠೆ. (Self Reliance)

ಮನುಷ್ಯದೇಹದಲ್ಲಿ ವಾಸಿಸುವ ಜೀವನು ತನ್ನ ಮೋಕ್ಷವೆಂಬ ಸ್ವತಂತ್ರವನ್ನು ಯಮ ನಿಯಮ ಮೊದಲಾದ ಸಾಧನಗಳನ್ನು ಸಾಧಿಸಿದ ಹೊರತು ಪಡೆಯಲು ಹ್ಯಾಗೆ ಅಸಾಧ್ಯವೋ ಹಾಗೆಯೇ ಯಾವದೊಂದು ದೇಶವೇ ಆಗಲಿ ಸ್ವತಂತ್ರವೆಂಬ ಸ್ವರಾಜ್ಯವನ್ನು ಪಡೆಯಬೇಕಾದರೆ ಅಲ್ಲಿನ ಜನರು ಆ ದೇಶದ ಸ್ಥಿತಿಗತಿಗಳನ್ನು ಉರ್ಜಿತಸ್ಥಿತಿಗೆ ತರಲಿಕ್ಕೆ ತಕ್ಕ ಸಾಧನಗಳನ್ನು ಸಾಧಿಸಿದಲ್ಲದೆ ಸ್ವತಂತ್ರಗಳಾಗುವದು ಅಸಾಧ್ಯವೆಂಬುದು ಯಾರಿಗೂ ತಿಳಿಯದ ಸಂಗತಿಯಲ್ಲ. ಆದುದರಿಂದ ಚಿಕ್ಕದೇಶವಾದ ಕೊಡಗನ್ನು ಉನ್ನತಸ್ಥಿತಿಗೆ ತರಬೇಕಾದರೆ ಈ ಕೆಳಗೆ ಹೇಳಿದವುಗಳನ್ನು ದೇಶಾಭಿಮಾನಿಗಳಾದ ಸರ್ವರೂ ಸಾಧಿಸುವುದು ಅತ್ಯವಶ್ಯಕವೆಂದು ನಮಗೆ ತೋರುತ್ತದೆ. ಅವು ಯಾವುವೆಂದರೆ — (1) ಈ ದೇಶದಲ್ಲಿ ಬೆಳೆಯುವಂತ ಧಾನ್ಯ, ಫಲ, ಪೈರುಗಳನ್ನು ಈಗ ಬೆಳೆಯುವದಕ್ಕಿಂತಲೂ ಹೆಚ್ಚಾಗಿ ಬೆಳೆಸಿ ನಮ್ಮ ಉಪಯೋಗಕ್ಕೆ ತಕ್ಕಷ್ಟನ್ನು ಇಟ್ಟುಕೊಂಡು ಮಿಕ್ಕಿದ್ದನ್ನು ಇತರ ದೇಶಗಳಿಗೆ ಮಾರಾಟಕ್ಕೆ ಕಳುಹಿಸುವದು. (2) ಜನರು ತಮ್ಮ ಆಲಸ್ಯವನ್ನು ಬಿಟ್ಟು ವಿಶೇಷ ಪುರುಷಾರ್ಥಿಗಳಾಗುವುದು (3) ತಮ್ಮ ತಮ್ಮ ಅಭಿಮಾನಗಳನ್ನು ಬಿಟ್ಟು ಎಲ್ಲಾ ತರದ ಕೈಗಾರಿಕೆಗಳನ್ನು ಜನರು ಕೈಕೊಳ್ಳುವುದು (4) ವ್ಯಾಪಾರದ ಮರ್ಮವನ್ನು ತಿಳಿದು ಸತ್ಯ ಪ್ರಾಮಾಣಿಕರಂತೆ ಧರ್ಮವನ್ನನುಸರಿಸಿ ವ್ಯಾಪಾರವನ್ನು ಮಾಡುವುದು (5) ಪಾರಮಾರ್ಥಿಕ ಮಾರ್ಗವನ್ನು ಅವಲಂಬಿಸುವದು.

ಈ ಮೇಲೆ ಹೇಳಿದವುಗಳ ಪೈಕಿ ಧಾನ್ಯ ಫಲ ವಗೈರೆ ಸಂಗತಿಗಳನ್ನು ಕುರಿತು ಈ ಸಂಚಿಕೆಯಲ್ಲಿ ವಿಚಾರಿಸೋಣ. ಕಾವೇರಿ ಲಕ್ಷ್ಮಣತೀರ್ಥ ಮೊದಲಾದ ನದಿಗಳಿಂದಲೂ, ಬ್ರಹ್ಮಗಿರಿ ಪುಷ್ಪಗಿರಿ ಮೊದಲಾದ ಬೆಟ್ಟಗಳಿಂದಲೂ ಮತ್ತು ಅಲ್ಲಲ್ಲಿ ವಿಶಾಲವಾದ ಗದ್ದೆ ಹೊಲಗಳಿಂದಲೂ ಕೂಡಿಕೊಂಡು ಜನರ ಮನಸಿಗೆ ಮನೋಹರವನ್ನುಂಟುಮಾಡುವ ರಮಣೀಯವಾದ ನಮ್ಮ ಈ ಕೊಡಗುದೇಶದಲ್ಲಿ ಮುಖ್ಯವಾಗಿ ಬೆಳೆಯುವ ಧಾನ್ಯವು ಭತ್ತವಾಗಿದೆ. ಇದಲ್ಲದೆ ಕಾಫಿ, ಯಾಲಕ್ಕಿ, ಮೆಣಸು, ಕಿತ್ತಳೆಹಣ್ಣು, ಬಾಳೆ ಇನ್ನೇ ಮೊದಲಾದವುಗಳು ಸಹ ಇಲ್ಲಿ ಬೆಳೆಯುತ್ತವೆ. ನಮ್ಮ ಪೂರ್ವಿಕರು ಒಂದು ವರ್ಷದಲ್ಲಿ ಬೆಳೆದ ಭತ್ತದ ಪೈಕಿ ಉಪ್ಪು ಎಣ್ಣೆಗಾಗಿ ಖರ್ಚಾಗುವ ಭತ್ತವಲ್ಲದೆ ಉಳಿಕೆ ಭತ್ತವನ್ನು ಸಮಾನಕ್ಕೆ ಇಟ್ಟು ಮಾರಣೆ ವರ್ಷದ ಖರ್ಚಿಗೆ ಸಹ ಉಪಯೋಗಿಸುತ್ತಿದ್ದರು. ಆಗ ಯಾವತರದ ದಾರಿದ್ರ್ಯವೂ ಇರಲಿಲ್ಲ. ಈಗ ಎಷ್ಟು ಸೂಕ್ಷ್ಮ ಖರ್ಚುಮಾಡಿದರೂ ಸಹ ಜೀವನವು ಕಷ್ಟವಾಗಿದೆಯೆಂದು ಸರ್ವರೂ ಹೇಳುತ್ತಿದ್ದಾರೆ. ಅದೇನು! ಪೂರ್ವದವರ ವ್ಯವಸಾಯಮಾಡುವಂತೆ ಈಗಿನವರು ಕೆಲಸಮಾಡುವುದಿಲ್ಲವೇ ಎಂದು ಕೆಲವರು ಕೇಳುವರು. ಈಗಿನ ಜನಸಂಖ್ಯೆ ಪೂರ್ವಕ್ಕಿಂತಲೂ ಹೆಚ್ಚಾಗಿರುವುದೇ ಈಗಿನ ದಾರಿದ್ರ್ಯಕ್ಕೆ ಕಾರಣವೆಂದು ಇನ್ನು ಕೆಲವರು ಹೇಳುವುದು. ಪೂರ್ವದಲ್ಲಿ ಪ್ರತಿ ಒಂದು ಮನೆಯ ಆಡಳಿತವು ಒಬ್ಬ ಯಜಮಾನನಿಂದಲೇ ನಡೆಯುತ್ತಿತ್ತು. ಈಗೇಕಾದರೋ ಪ್ರತಿ ಕುಟುಂಬದಲ್ಲಿಯೂ ಸಹ ಭೂಮಿಯನ್ನು ಪಾಲುಮಾಡಿಕೊಂಡು ಪೂರ್ವಕ್ಕಿಂತಲೂ ಚೆನ್ನಾಗಿ ವ್ಯವಸಾಯಮಾಡುವರೇನೋ ನಿಜ, ಆದರೆ ಇದರಿಂದ ಪ್ರತಿಯೊಬ್ಬನೂ ಯಜಮಾನನಾಗುದರಿಂದ ಪೂರ್ವದ ಹಲವು ಕುಟುಂಬಗಳ ಖರ್ಚು ಈಗಿನ ಒಂದು ಕುಟುಂಬದಲ್ಲಿ ಆಗುತ್ತದಲ್ಲದೆ ನಾವು ಹಲವು ವಿಧಗಳಲ್ಲಿ ಖರ್ಚನ್ನು ಹೆಚ್ಚಿಸಿಕೊಂಡಿರುವುದೇ ಈಗಿನ ದಾರಿದ್ರ್ಯಕ್ಕೆ ಕಾರಣವು.

ಪೂರ್ವದಲ್ಲಿ ದನ ಕರುಗಳು ಪುಷ್ಟಿಯಾಗಿದ್ದುದರಿಂದ ಆಗ ಉತ್ತು ಬಿತ್ತಿ ಆರಂಭಮಾಡಿ ಹೆಚ್ಚು ಬೆಳೆ ತೆಗೆಯಬಹುದಾಗಿತ್ತು. ಈಗಿನ ದನಕರುಗಳ ಬಲ ಹೀನತ್ವದ ದೆಸೆಯಿಂದ ಚೆನ್ನಾಗಿ ಉಳಲು ಮಾರ್ಗವಿಲ್ಲವಲ್ಲದೆ ಒಳ್ಳೆಯ ಗೊಬ್ಬರ ಸಹ ಸಿಕ್ಕುವುದಿಲ್ಲವಾಗಿ ಅನೇಕರು ಹೇಳುತ್ತಾರೆ. ಇದಕ್ಕೆ ಅವರೇ ಅಲ್ಲದೆ ಬೇರೆಯಾರೂ ಕಾರಣಭೂತರಾಗಿರುವದಿಲ್ಲ. ದನಗಳೇ ಅವರ ಆಯುಧಗಳಾಗಿರುವಾಗ ಅವುಗಳನ್ನು ಚೆನ್ನಾಗಿ ಪೋಷಿಸಿ ಅವುಗಳಿಂದ ಬೇಕಾದಷ್ಟು ಕೆಲಸ ಮಾಡಿಸಿಕೊಳ್ಳಬೇಕಾದದ್ದು ಅವರ ಕರ್ತವ್ಯವು. ಆದುದರಿಂದ, ಪ್ರಿಯ ವಾಚಕರೇ, ವ್ಯವಸಾಯಗಾರರ ಆಯುಧವಾದ ದನಗಳನ್ನು [illegible] ತಿಂಡಿಗಳನ್ನು ಕೊಟ್ಟು ಅವುಗಳು ವಾಸಮಾಡುವ ಕೊಟ್ಟಿಗೆಯನ್ನು ನಮ್ಮ ಮನೆಗಿಂತಲೂ ಚೊಕ್ಕಟವಾಗಿಟ್ಟು ನಮ್ಮ ಮಕ್ಕಳಂತೆ ಸಾಕಿದರೆ ಅವುಗಳು ಪುಷ್ಟಿಯಾಗಿ ಅವುಗಳಿಂದ ಹೆಚ್ಚು ಕೆಲಸವನ್ನು ಮಾಡಿಸಬಹುದು. ಇದಲ್ಲದೆ ದನಕರುಗಳು ಜನರ ಪೋಷಣೆಗೂ ಅತ್ಯಾವಶ್ಯಕವಾಗಿದೆ. ಮಕ್ಕಳ ಬೆಳವಣಿಗೆಗೆ ಹಾಲು, ತುಪ್ಪ, ಮಜ್ಜಿಗೆ ಎಷ್ಟು ಅವಶ್ಯಕರವೆಂಬುದು ಎಲ್ಲರಿಗೂ ತಿಳಿದೇ ಇದೆ. ಈಗ ನಮ್ಮ ದೇಶದಲ್ಲಿ ನೂರಕ್ಕೆ ಎಪ್ಪತ್ತೈದು ಮನೆಗಳಲ್ಲಿ ಕರೆಯಲಿಕ್ಕೆ ಹಸುಗಳಿಲ್ಲದೆ ಸಣ್ಣ ಮಕ್ಕಳಿಗೆ ಬೇರೆಯವರ ಮನೆಯಿಂದ ತಂದ ನೀರುಮಜ್ಜಿಗೆಯಲ್ಲಿ ಇಲ್ಲವೇ ಗಂಜಿಯಲ್ಲಿ ಅನ್ನವನ್ನು ಅರೆದುಕೊಡುವುದನ್ನು ನೋಡಿದರೆ ಮುಂದಿನ ನಮ್ಮ ಜನಾಂಗದವರು ಎಷ್ಟರಮಟ್ಟಿಗೆ ಬಲಾಢ್ಯರೂ ಬುದ್ಧಿಶಾಲಿಗಳೂ ಆಗುವರೆಂಬುದು ಸ್ಪಷ್ಟವಾಗುತ್ತದೆ. ಆದುದರಿಂದ ದನಗಳನ್ನು ಸಾಕಲು ಕಲಿಯುವುದು ನಮ್ಮ ಪ್ರಥಮ ಕರ್ತವ್ಯವಾಗಿದೆ. ಈ ವಿಷಯವನ್ನು [illegible]

...ಂ ದಾಕ್ತರುಗಳು ಜನರಿಗೆ ಸುಬೋಧನೆಗಳನ್ನು ಕೊಟ್ಟು ...ವರ ತಿಳುವಳಿಕೆ ಬಗ್ಗೆ ಪತ್ರಿಕೆಗಳಲ್ಲಿ ವಿಷಯಗಳನ್ನು ಪ್ರಕಟಿಸುವುದಲ್ಲದೆ ಗ್ರಾಮಾಂತರಗಳಿಗೆ ಹೋಗಿ ಅವರು ಸಾಕುವ ...ಧಾನವನ್ನು ನೋಡಿ ತಿದ್ದಿಕೊಡುವುದೇ ಅವರ ಧರ್ಮವಾಗಿ ಕಾಣಬರುತ್ತದೆ.

ನಮ್ಮ ಉಪಯೋಗಕ್ಕೆ ಭತ್ತವಲ್ಲದೆ ಬೇರೆ ವಸ್ತುಗಳು ಬೇಕಾಗಿವೆ ಅವುಗಳನ್ನು ಸಹ ಪರದೇಶದಿಂದ ತಾರದೆ ಇಲ್ಲಿಯೇ ಬೆಳೆಸುವ ಪ್ರಯತ್ನವನ್ನು ಮಾಡಬೇಕು. ಈಗ ಪರದೇಶದಿಂದ ಇಲ್ಲಿಗೆ ಬರುವ ಮೆಣಸು ನೀರುಳ್ಳಿ ಸಂಬಾರ ವಗೈರೆ ಜಿನಸುಗಳನ್ನು ಇಲ್ಲಿಯೇ ಬೆಳೆಸಬಹುದು. ಇವುಗಳನ್ನು ಬೆಳೆಸುವುದಿಲ್ಲವಲ್ಲದೆ ತರಕಾರಿಗಳನ್ನು ಸಹ ನಾವು ಪೇಟೆಯಿಂದ ಕೊಂಡುಕೊಳ್ಳುವುದು ನಾಚಿಕೆಗೇಡಲ್ಲವೇ? ನಾವು ಕಾಫಿಕುಡಿಯುವ ಅಭ್ಯಾಸವನ್ನು ಮಾಡಿಕೊಂಡಿರುವುದರಿಂದ ಭತ್ತದಂತೆ ಅದನ್ನು ಪ್ರತಿಯೊಬ್ಬನೂ ಬೆಳೆಸಿ ಉಪಯೋಗಿಸಲು ಯತ್ನಿಸಬೇಕು. ಪ್ರತಿ ಒಂದು ವಿಧದಲ್ಲಿಯೂ ಹೀಗೆ ಜೀವಿಸಲು ಯತ್ನಿಸುವುದೇ ಸ್ವತಂತ್ರ ಜೀವನವು

ಭೂವ್ಯವಸಾಯಕ್ಕೋಸ್ಕರ ಇತರ ದೇಶಗಳಲ್ಲಿ ನೂತನವಾದ ಆರಂಭದ ವಿಧಾನಗಳನ್ನೂ ನವೀನ ಯಂತ್ರಗಳನ್ನೂ ಕಂಡುಹಿಡಿದು ಜನರು ಒಳ್ಳೆಯ ಬೆಳೆಯನ್ನು ಬೆಳೆಸುತ್ತಾರೆ ಇದೇ ರೀತಿ ಇಲ್ಲಿನ ಜನರು ಸಹ ಮಾಡಬಹುದು. ಇಂಥಾ ವಿಷಯಗಳಲ್ಲಿ ಬೇರೆ ದೇಶಗಳಿಗೆ ಹೋಗಿ ತೇರ್ಗಡೆಹೊಂದಿ ಬಂದಿರುವವರು ಮೇಲೆ ವೆಟರ್‍ನರಿ ದಾಕ್ತರುಗಳ ವಿಷಯ ಹೇಳಿದಂತೆ ಜನರಿಗೆ ಸಹಾಯವಾಗ[illegible] ಆಶಿಸುತ್ತೇವೆ.

ಕೆಲವು ವರ್ಷಗಳ ಹಿಂದೆ [illegible] ಎಲ್ಲಾ ಕಡೆಗಳಲ್ಲೂ ಕಾಫಿಯು ಯಥೇಷ್ಟವಾಗಿ ಬೆಳೆಯುತ್ತಿತ್ತು ಈಗ ಕೆಲವು ಕಡೆಗಳಲ್ಲಿ ಮಾತ್ರ ಚೆನ್ನಾಗಿ ಬೆಳೆಯುತ್ತದೆ ಆದರೆ ಈಗಲೂ ಸಹ ಎಲ್ಲರೂ ತಮ್ಮ ತಮ್ಮ ಹಿತ್ತಲುಗಳಲ್ಲಿ ಗೊಬ್ಬರಹಾಕಿ ಒಂದೊಂದು ಏಕರೆ ಕಾಫಿ ಬೆಳೆಸುವುದು ಒಳ್ಳೆಯದು ಏಕೆಂದರೆ ಇದರ ಉತ್ಪತ್ತಿಯು ನೂರುಪಟ್ಟು ಭೂಮಿಯ ಉತ್ಪತ್ತಿಗಿಂತ ಹೆಚ್ಚಾಗುತ್ತದೆ ಇದೇ ರೀತಿ ಸಾಧ್ಯವಾದಮಟ್ಟಿಗೆ ಎಲ್ಲೆಲ್ಲಿಯೂ ಯಾಲಕ್ಕಿ ಒಳ್ಳೆ ಮೆಣಸನ್ನು ಬೆಳಸಲು ಯತ್ನಿಸುವುದು ಒಳ್ಳೆಯದು ಈ ಕಿತ್ತಳೆ ಮರಗಳನ್ನು ನಾಶಮಾಡುವ ಹುಳಗಳ ಬಾಧೆಯನ್ನು ತಪ್ಪಿಸಲಿಕ್ಕೆ ತಕ್ಕ ಉಪಾಯಗಳನ್ನು ಕಂಡುಹಿಡಿದು ಮೊದಲಿನಂತೆ ಕಿತ್ತಳೆ ತೋಟಗಳನ್ನು ಬೆಳೆಸಲು ಪ್ರಯತ್ನಿಸದಿರುವುದು ಪುರುಷಾರ್ಥಿಗಳ ಕೆಲಸವಲ್ಲ ಅಲ್ಲದೆ ಬಾಳೆಹಣ್ಣು ಇಲ್ಲಿ ಸಮೃದ್ಧಿಯಾಗಿ ಬೆಳೆಯುತ್ತದೆಂತಲೂ ಅದು ಬಹಳ ರುಚಿಕರವಾದದ್ದೆಂತಲೂ ಅದನ್ನು ಅನ್ನದಹಾಗೆ ತಿಂಡಿಯಾಗಿ ಉಪಯೋಗಿಸಬಹುದೆಂತಲೂ ಮಿ|| ಹಾಲರ್ ಸಾಹೇಬರು ಬರೆದಿರತ್ತಾರೆ ಇದಕ್ಕೆ ಯಾವ ತರದ ಹುಳವೂ ಬೀಳುವದಿಲ್ಲವಲ್ಲದೆ ಪ್ರತಿಯೊಬ್ಬರ ಹಿತ್ತಲಿನಲ್ಲಿ ಬೆಳೆಸಲು ಹೆಚ್ಚೇನೂ ಖರ್ಚಾಗುವದಿಲ್ಲ ಅದುದರಿಂದ ಪ್ರತಿಯೊಬ್ಬರೂ ಒಂದೆರಡು ಏಕರೆ ಬಾಳೆ ತೋಟವನ್ನು ಮಾಡಿ ಹಣ್ಣನ್ನು ಮಾರುವುದಲ್ಲದೆ ತಿಂದು ಸುಖವಾಗಿ ಬದುಕಲು ಯತ್ನಿಸಬೇಕು ಮಾವಿನ ಹಣ್ಣನ್ನು ಇದೇ ರೀತಿ ಚೆನ್ನಾಗಿ ಬೆಳೆಸಬಹುದು ತೆಂಗು ಅಡಿಕೆಮರಗಳನ್ನು ಬೆಳೆಸುವುದು ಅತಿ ಪ್ರಯೋಜನಕರವೆಂಬುದನ್ನು ಯಾರೂ ಒಪ್ಪದಿರಲಿಕ್ಕಿಲ್ಲ. ಹೀಗೆಯೇ ತಮ್ಮ ಪ್ರಯೋಜನಕ್ಕೆ ಬರುವ ಎಲ್ಲಾ ವಸ್ತುಗಳನ್ನು ಅವರೇ ಬೆಳೆಸಲು ಸಾಧಿಸುವರೆಂದು ಹಾರೈಸುತ್ತೇವೆ

(ಒಬ್ಬ ಬಾತ್ಮೀದಾರರಿಂದ)

ನವಂಬರ್ ತಾರೀಖು 10 ರಲ್ಲು ಬಿಳುಗುಂದ ಗ್ರಾಮದಲ್ಲಿ ಪಂಚಮರ ಒಂದು ಮೀಟಿಂಗ್ ನಡೆಯಿತು ಅಬ್ದುಲ್ ಗಫೂರ್ ಖಾನ್ ಅಧ್ಯಕ್ಷರಾಗಿದ್ದರು

ಅಬ್ದುಲ್ ಗಫೂರ್ ಖಾನ್ ರವರು ಅಧ್ಯಕ್ಷರಾಗಿದ್ದಕ್ಕೆ ತುಂಬ ವಂದನೆಯನ್ನು ಮಾಡಿದನಂತರ ಅವರು ಪಂಚಮರ ಅಭಿವೃದ್ಧಿ ವಿಷಯವನ್ನು ಸಂಪೂರ್ಣವಾಗಿ ವಿವರಿಸಿ ಹೇಳಿದರು. ಟಿ ಎನ್. ಮರಿಯಮೇಸ್ತ್ರಿಯು ಹೊಲೆಯರು ಮಾಡಬೇಕಾದ ಕಾರ್ಯಗಳ ವಿಷಯ ವಿವರವಾಗಿ ಎಲ್ಲಾ ಪಂಚಮರಿಗು ತಿಳಿಸಲಾಯ್ತು. ಅನೇಕ ವಿಷಯಗಳು ಪಂಚಮರಿಗೆ ತಿಳಿಯುವಂತೆ ಬೋಧನೆ ಹೇಳಿ ಪಂಚಮರ ಮನಸ್ಸನ್ನು ಸಂತೋಷಪಡಿಸಿದರು. ಸೇಂದಿ, ಸಾರಾಯಿ ಸತ್ತ ಪ್ರಾಣಿಗಳ ಮಾಂಸ ಖಂಡಿತವಾಗಿ ಮನ್ನಮಾಡುವಂತೆ ಎಲ್ಲರು ಪ್ರಮಾಣದಿಂದ ಒಪ್ಪಿದರು. ಇದಕ್ಕೆ ಮುಂದೆ ಪಂಚಮರನ್ನು ಸೇರಿಸಿಕೊಂಡು ಸದರಿ ಮರಿಯಮೇಸ್ತ್ರಿಯು 4 ಮೀಟಿಂಗುಗಳನ್ನು ನಡಿಸಿರುತ್ತಾರೆ ಇನ್ನು ಮುಂದಕ್ಕೆ ಎಲ್ಲಾ ಪಂಚಮರು ಆದಷ್ಟು ಶುಚಿಯಾಗಿ ಇರುವಂತೆಯೂ ನೀತಿ ನಡತೆಗಳಲ್ಲಿ ಸರಿಯಾಗಿ ನಡೆಯುವಂತೆಯೂ ಅನುಕೂಲದಮೇರೆ ಬಕ್ಷಿ ಸಹಾ ಮರ್ಯಾದೆಯಂತೆ ಇಡುವಂತೆಯು ನಿರ್ಣಯವಾಯ್ತು. ಬಿಳುಗುಂದ ಪಂಚಮರ ಒಂದು ಫಂಡನ್ನು ಏರ್ಪಡಿಸಿ ಈಗ ವಸೂಲಾದ ಎವತ್ತು ರೂಪಾಯಿಗಳನ್ನು ಈ ಫಂಡಿಗೆ ತೆಗೆದುಕೊಳ್ಳುವಂತೆ ಎಲ್ಲರ ರಾಜಿಯಿಂದ ಮಂಜೂರಾಯಿತು. ಭೂಮಿ ವಿಷಯದಲ್ಲು ಕೂಲಿ ವಿಷಯದಲ್ಲು ಮುಂದಿನ ಮೀಟಿಂಗಿನಲ್ಲು ತೀರ್ಮಾನಮಾಡುವಂತೆ ನಿಶ್ಚಯವಾಯ್ತು ಈ ವರುಷ ಹುತ್ರಿಯಲ್ಲು ಖಾದಿ ಬಟ್ಟೆಯೇ ಹಾಕುವಂತೆ ನಿಶ್ಚಯವಾಯ್ತು, ಎಲ್ಲರು ತಮ್ಮ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಖಂಡನೆಯಾಯ್ತು. ಆನಂತರ ಮೀಟಿಂಗ್ ಬರಖಾಸ್ತ ಆಯಿತು.

ಭರತಖಂಡದ ಆರ್ಯಮಹಿಳೆಯರ ಕ್ಷೀಣಸ್ಥಿತಿಗೆ ಕಾರಣ.

ಪ್ರಿಯ ಸಹೋದರಿಯರೇ - ತಾ|| 18-11-21 ರ ಪತ್ರಿಕೆಯಲ್ಲಿ ಶ್ರೀಮತಿ ಕೋದಂಡ ಚೋಂದಮ್ಮನವರು ಮಾಡಿದ ಭಾಷಣವನ್ನು ಓದಲಾಗಿ ನನಗೆ ಅತ್ಯಂತ ಸಂತೋಷವಾಯ್ತು. ವರ್ಣಸಂಕರವು ಬದಲಾಗುವಂಥ ಈ ಕಲಿ ಪ್ರಾಬಲ್ಯದಲ್ಲಿಯೂ ಕೂಡ ಇಂಥ ಸುಜ್ಞಾನವೆಂಬ ಪ್ರಕಾಶದಲ್ಲಿ ಮಗ್ನರಾಗಿ ಸ್ತ್ರೀರತ್ನವೆಂಬ ಅಮೂಲ್ಯವಾದ ಕೀರ್ತಿಯನ್ನು ಸ್ಥಿರವಾಗಿ ನಿಲ್ಲಿಸಲು ತೊಂದರೆ ತೆಗೆದುಕೊಂಡಿರುವ ಸದ್ರಿಯವರು ತನ್ನ ಸಹೋದರಿ ವರ್ಗವಾದ ನಾವೆಲ್ಲರೂ ಅಜ್ಞಾನವೆಂಬ ಕತ್ತಲೆಯಲ್ಲಿ ಬಿದ್ದು ದಡವನ್ನು ಕಾಣದೆ ದುಃಖಾರ್ತೆಯರಾಗಿರುವ ನಮ್ಮೆಲ್ಲರನ್ನೂ ಸಹ, ತನ್ನಂತೆಯೇ ಸನ್ಮಾರ್ಗಕ್ಕೆ ಪ್ರವರ್ತಿಸುವ ಹಾಗೆ ಅಭಿಪ್ರಾಯಪಟ್ಟು ನಿಷ್ಕಪಟವಾದ ಉದಾರಮನಸ್ಸಿನಿಂದ ಮಾಡಿದ ಮಧುರ ಭಾಷಣವನ್ನು ಪುನಃ ಪುನಃ ಪಠಿಸಬೇಕೆಂಬ ಕಾಂಕ್ಷೆಯು ಬಾಧಿಸುತ್ತಿದೆ ಸ್ತ್ರೀ ಉದ್ಧಾರದಲ್ಲಿ ನಿರತರಾಗಿರುವ ಅವರಿಗೆ ನಮ್ಮೆಲ್ಲರ ಮನಃಪೂರ್ವಕವಾದ ವಂದನೆಯನ್ನು ಸಮರ್ಪಿಸುವುದೇ ನನ್ನ ಮುಖ್ಯೋದ್ದೇಶವಾಗಿದೆ;

ನಾವು ಮುಖ್ಯವಾಗಿ ವಿದ್ಯೆಯೆಂಬ ಶ್ರೇಷ್ಠವಾದ ಧನವನ್ನು ಸಂಪಾದಿಸದೆ ಇದ್ದದ್ದರಿಂದಲೇ ನಮ್ಮ ಈಗಿನ ಹೀನಸ್ಥಿತಿಗೆ ಕಾರಣ ವಿದ್ಯೆ ಎಂದರೆ ಈಶ್ವರ ವಿಷಯಕವಾದ ಜ್ಞಾನವು ಇಂಥಾ ವಿದ್ಯೆಯನ್ನು ನಾವು ಗುರುವಿನಿಂದ ತಿಳಿಯಬೇಕಲ್ಲದೆ ಬೇರೆ ದಾರಿಯೇ ಇಲ್ಲ ಇದರಿಂದಲೇ ಗು=ಅಂಧಕಾರವನ್ನು ರು=ನಿವಾರಿಸುವವನು ಎಂಬ ಹೆಸರು ಬಂದಿದೆ ಆದರೆ ವಿದ್ಯೆ ಎಂದರೆ ಎಷ್ಟೋ ವಿದ್ಯೆಗಳಿವೆ ಅವುಗಳನ್ನೆಲ್ಲ ಕಲಿಯಲು ನಮ್ಮಿಂದ ಸಾಧ್ಯವೇ ಎಂದ ನಮ್ಮ ಸಹೋದರಿಯರು ಪ್ರಶ್ನಿಸಬಹುದು. ಆದರೆ ಹಾಗೆ ಯೋಚಿಸಬಾರದು ನಾವು ವಿದ್ಯಾಮಂಜರಿಯ ಹಾಗೆ 6 ವಿದ್ಯೆಗಳಲ್ಲಿ ಪ್ರವೀಣೆಯರಾದರೂ ಕೂಡ ಧರ್ಮಾರ್ಥ ಕಾಮ. ಮೋಕ್ಷವೆಂಬ ಪುರುಷಾರ್ಥಗಳಲ್ಲಿ ಶ್ರೇಷ್ಠವಾದ ಮೋಕ್ಷವನ್ನು ಸಂಪಾದಿಸಲಿಕ್ಕೆ ಅನುಕೂಲವಾದ ವಿದ್ಯೆ ಕಲಿಯದೆ ಇದ್ದ ಪಕ್ಷಕ್ಕೆ ಎಷ್ಟು ವಿದ್ಯಾವಂತೆಯರಾದರೂ, ನಿಷ್ಪ್ರಯೋಜನವೇ ಸರಿ ಹಾಗೆ ಜ್ಞಾನವಿಲ್ಲದೆ ಗಿಳಿಗಳೋದಾದ ಬಾಯಿಪಾಠ ಮಾಡಿದ ವಿದ್ಯೆ ಸಭೆಯಲ್ಲಿ ವಾದದಲ್ಲಿ ಗೆದ್ದು ಚತುಶ್ಶಾಸ್ತ್ರಪಂಡಿತಳೆಂಬ ಹೆಸರನ್ನು ಮಾತ್ರ ಸಂಪಾದಿಸಬಹುದಲ್ಲದೆ ಬೇರೆ ಪ್ರಯೋಜನವಿಲ್ಲ. ಆದ್ದರಿಂದ ನಾವು ವೇದ, ಶಾಸ್ತ್ರ, ಪುರಾಣ, ಇತಿಹಾಸ ನೀತಿಶಾಸ್ತ್ರ, ಧರ್ಮಶಾಸ್ತ್ರ ಮುಂತಾದ್ದನ್ನು ಓದಿ ಜ್ಞಾನ ಸಂಪಾದಿಸುವುದು, ನಮ್ಮ ವಯಸ್ಸಿಗೆ ಶ್ರೇಯಸ್ಕರವಾಗಿದೆ;

ನಾವು ಮುಖ ಎಲ್ಲಾ ಪುಸ್ತಕ ಓದಿ ಮುಗಿಸಿದರೆ ಸಾಲದು ನಾವು ತಿಳಿದ ವಿಷಯವನ್ನೆಲ್ಲಾ ಅನುಭವಕ್ಕೆ ತಾರದೆ (ಹೊರಗೊಂದು ಗೌತಮ, ಒಳಗೊಂದು ಗೌತಮ) ಎಂಬಂತೆ ಮಾತಿನಲ್ಲಿ ದಪ [illegible] ಕಾರ್ಯದಲ್ಲಿ ಕರ್ಮ ಮಾಡಿದ್ದೇ ಆದರೆ [illegible] ಇಂಥ ಭಯವಿಲ್ಲದ ವಿದ್ಯೆ ಕಲಿಯುವುದಕ್ಕಿಂದ ನಿರಕ್ಷರಕುಕ್ಷಿಯಾಗಿರುವುದೇ ಲೇಸು ಮೊದಲು ಒಂದು ಸನ್ಯಾಸಿಯವರಲ್ಲಿ ಒಬ್ಬ ಕನ್ಯಾಸ್ತ್ರೀ ವಿದ್ಯಾಭ್ಯಾಸ ಮಾಡುತ್ತಿದ್ದಳಂತೆ. ಆ ಸನ್ಯಾಸಿಗರು ಆಕೆಗೆ ನಾನಾ ತಿಳುವಳಿಕೆ ಬೋಧಿಸಿದ್ದರಿಂದ, ಪತಿವ್ರತಾಮಾಹಾತ್ಮ್ಯೆಯನ್ನು ಸಾಂಗವಾಗಿ ಅಂದರೆ ಸ್ತ್ರೀಯರು ಪತಿವ್ರತೆಯರಾಗಿರಬೇಕು. ಅಲ್ಲದೆ ಪತಿಭಕ್ತಿ ಪರಾಯಣೆಯರಾಗಿ ಪತಿಶುಶ್ರೂಷಾ ನಿರತರಾಗಿರಬೇಕು (ತರುಣಿಗೆ ಪತಿದೈವ) ಎಂಬಂತೆ, ಪತಿಯೇ ಸಾಕ್ಷಾತ್ ದೇವರೆಂದು ಮನೋವಾಕ್ಕಾಯ ಕರ್ಮಗಳಿಂದ ದೃಢವಾಗಿ ನಂಬಿ ಪರಪುರುಷರನ್ನು ಸ್ವಪ್ನದಲ್ಲಿಯೂ ನೆನೆಸಬಾರದು ಬಂಧಕ್ಕೂ, ಮೋಕ್ಷಕ್ಕೂ, ಮನಸ್ಸೇ ಕಾರಣವಾದ್ದರಿಂದ ಶರೀರ ಪಾವಿತ್ರ್ಯಕ್ಕಿಂತಲೂ, ಮನಸ್ಸು ಪಾವಿತ್ರ್ಯವು ದೋಷಾಸ್ಪದವು. ಇದಕ್ಕೆ ವ್ಯತಿರಿಕ್ತವಾಗಿ ಸ್ತ್ರೀಯರು ವ್ಯಭಿಚಾರ ಮಾಡಿದ್ದೇ ಆದರೆ ಯಮಭಟರ ಕಠಿಣ ಶಿಕ್ಷೆಗಳನ್ನೆಲ್ಲಾ ಸಹಿಸಬೇಕು ಎಂಬುವೇ ಮೊದಲಾಗಿ ಆಕೆಗೆ ಚೆನ್ನಾಗಿ ಮಂದಟ್ಟಾಗುವಂತೆ ಹಗಲೆಲ್ಲಾ ಬೋಧಿಸಿದನಂತೆ ಅದೇ ರಾತ್ರಿ ಆಕೆಯ ಕೊಠಡಿಗೆ ಹೋದನಂತೆ ಆಕೆಯು ತನ್ನ ಗುರುವಿಗೆ ಸಾಷ್ಟಾಂಗ ನಮಸ್ಕಾರಮಾಡಿ, ಸ್ವಾಮಿ ಬಂದ ಕಾರ್ಯವೇನೆಂದು ಕೇಳಿದಳಂತೆ ಆಗ ಅವನು ನಾನು ನಿನ್ನಲ್ಲಿ ವಿಷಯಾಭಿಲಾಷೆಯನ್ನು ಬಯಸಿ ಬಂದಿರುವೆನಲ್ಲದೆ ಬೇರೆ ಕಾರ್ಯವೇನಿದೆ ಎಂದು ಹೇಳಿದನಂತೆ ಆಗ ಆಕೆಯು ವಿಸ್ಮಿತಳಾಗಿ, ಸ್ವಾಮಿ ತಾವಲ್ಲವೇ ನನಗೆ ಪಾತಿವ್ರತ್ಯವನ್ನು ಬೋಧಿಸಿದವರು ಈಗ ತಮ್ಮಂಥ ತಿಳುವಳಿಕೆಯುಳ್ಳವರೇ ಈ ರೀತಿ ದುರಾಲೋಚನೆಯನ್ನು ಮಾಡಿದರೆ ಬೇರೆಯವರ ಗತಿ ಏನಾಗಬೇಕು ಎಂದು ಹೇಳಿದ್ದಕ್ಕೆ ಆ ದುಷ್ಟಗುರುವು ಅಹೋ ಹಾಗೆಯೋ ಅದೆಲ್ಲಾ ಪುಸ್ತಕದಲ್ಲಿದ್ದದ್ದು ಹೇಳಿದೆನಲ್ಲದೆ, ನನ್ನ ಮನಸ್ಸಿನಲ್ಲಿದ್ದದ್ದನ್ನು ಬೇರೆ ಹೇಳಿದ್ದಿಲ್ಲ ಎಂದನಂತೆ ಹೀಗೆ ಮಾರ್ಜಾಲವು ಕಣ್ಣುಮುಚ್ಚಿಕೊಂಡು ಹಾಲು ಕುಡಿಯುವಂತೆ, ನಾವು ಕಪಟನಾಟಕವನ್ನು ಯೋಚಿಸಬಾರದು

'ನಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಹಾಗೆ ಸ್ತ್ರೀಯರುಗಳಾದ ನಾವು ಎಂದಿಗೂ ಸ್ವತಂತ್ರರಲ್ಲ ಶಕುಂತಳೆಯು ದುಷ್ಯಂತರಾಯನಿಗೆ ಹೇಳಿದಮೇರೆ ಬಾಲ್ಯದಲ್ಲಿ ಪಿತನೂ, ಯೌವನದಲ್ಲಿ ಪತಿಯೂ, ಮುಪ್ಪಿನಲ್ಲಿ ಸುತನೂ, ರಕ್ಷಕರಾದ್ದರಿಂದ ನಾವು ನಮ್ಮ ಪೋಷಕರ ಸ್ವಾಧೀನದಲ್ಲಿರದೆ ಮನಸ್ಸೋ ಇಚ್ಛೆ ನಡೆದರೆ ಎಂದಿಗೂ ಯೋಗ್ಯರಾಗುವುದಿಲ್ಲ ಒಂದಾನೊಂದು ಕಾಲದಲ್ಲಿ ಪಾರ್ವತಿಯು ಈಶ್ವರನನ್ನು ಕುರಿತು ಸ್ತ್ರೀಯರಿಗೆ ಸ್ವಾತಂತ್ರ್ಯ ಕೊಡದೆ ಇರಲು ಕಾರಣವೇನೆಂದು ಕೇಳಲು ಸ್ತ್ರೀಯರಿಗೆ ಸ್ವಾತಂತ್ರ್ಯಕೊಟ್ಟರೆ ಪೃಥ್ವಿಯನ್ನೇ ತಲೆಕೆಳಗಾಗಿ ಮಾಡಿಬಿಟ್ಟಾರೆಂದು ಹೇಳಿದ್ದನ್ನು ನಾವು ಆಲೋಚಿಸಬೇಡವೇ?

ಕೆಲವು ಸ್ತ್ರೀಯರು ಪುರುಷರಿಗೂ, ಸ್ತ್ರೀಯರಿಗೂ, ಭೇದವೇನು? ನಾವೂ ಅವರಂತೆ ವರ್ತಿಸಿದರೆ ದೋಷವೇನು? ಎಂಬದಾಗಿ ಬಹಳ ತರ್ಕಮಾಡುತ್ತಾರೆ ಇವರಿಗೆ ಜವಾಬು ಕೊಡಲು ಅಸಾಧ್ಯವಾಗಿದೆ. ಪರ್ಯಾಲೋಚಿಸಿ ನೋಡಿದರೆ ಮೇರುಪರ್ವತಕ್ಕೂ, ಸಾಸುವೆಕಾಳಿಗೂ ಇರುವಷ್ಟು ಕಾರಣವು ಏನೆಂದು ನಮಗೆ ತಿಳಿಯದಲ್ಲ.

ಪುರುಷರು ಬಲಿಷ್ಠರು ಸ್ತ್ರೀಯರು ಅಬಲೆಯರು. ಸುವರ್ಣಕಲಶಕ್ಕೂ, ಮೃತ್ತಿಕೆಯ ಪಾತ್ರೆಗೂ, ಇರುವಷ್ಟು ವ್ಯತ್ಯಾಸವು ಸ್ತ್ರೀಪುರುಷರಿಗಿದೆ ನಮಗೆ ಆಶ್ರಯವಾಗುವುದಾದರೆ ಪುರುಷರಿಂದಲ್ಲದೆ ಬೇರೆ ವಿಧವಿಲ್ಲ. ನಮಗೆ ಭೇದವಿಲ್ಲದೆ ಇದ್ದಲ್ಲಿ ಬ್ರಹ್ಮಸೃಷ್ಟಿಯಲ್ಲಿ ಸ್ತ್ರೀಯರು ಪುರುಷರ ಆಶ್ರಯದಲ್ಲಿ ಜೀವಿಸುವಂತೆಯೂ, ಅವರ ದೆಸೆಯಿಂದಲೇ ನಮಗೆ ಮೋಕ್ಷವಾಗುವಂತೆಯೂ ಮಾಡುತ್ತಿರಲಿಲ್ಲ. ಪುರುಷರು ಸ್ವತಂತ್ರರು ಏನು ಬೇಕಾದರೂ ಮಾಡಲು ಸಮರ್ಥರು. ಒಂದುವೇಳೆ ಪತಿಯು ಅಶುದ್ಧವಾದ ಪಕ್ಷದಲ್ಲಿ ತನ್ನ ಸತಿಯು ಪತಿವ್ರತೆಯಾಗಿದ್ದರೆ, ಆಕೆಯ ದೆಸೆಯಿಂದ ಪರಿಶುದ್ಧನಾಗುವನು. ಆದರೆ ನಾವು ಅಶುದ್ಧೆಯರಾದರೋ? ನಮ್ಮ ಜೀವಸಹಿತ ಚಿತೆಯಮೇಲೆ ಮಲಗಿ ಯಜ್ಞೇಶ್ವರನಿಗೆ ದಹಿಸುವಂತೆ ಅಪ್ಪಣೆಕೊಟ್ಟರೆ, ನಮಗೆ ಇಹದಲ್ಲಿ ಪ್ರಾಯಶ್ಚಿತ್ತವಾದೀತು. ಆದರೆ ಪರದಲ್ಲಿ ದೇವರೇಬಲ್ಲ

ನಮ್ಮ ದೇಹವೆಂಬ ರಥಕ್ಕೆ ಇಂದ್ರಿಯಗಳೇ ಅಶ್ವಗಳು ಮನಸ್ಸೇ ಸಾರಥಿಯು, ದೈವಾನುಗ್ರಹದಿಂದ ಸ್ತ್ರೀಪುರುಷರಿಗೆಲ್ಲಾ ಒಂದೇ ವಿಧವಾದ ಸಾರಥಿಯಾದರೂ ಕೂಡ, ಪುರುಷಶ್ರೇಷ್ಠರು ಜ್ಞಾನವಂತರಾದ್ದರಿಂದ ಸಾರಥಿಯನ್ನು ತಮ್ಮ ಸ್ವಾಧೀನ ನಡಿಸಿಕೊಂಡು ಕಡೆಗೆ ತಾವು ಸೇರಬೇಕಾದಲ್ಲಿಗೆ ತಲ್ಪಿ ಶಾಶ್ವತ ಸುಖಾನಂದವನ್ನು ಅನುಭವಿಸುವರು. ಆದರೆ ಅಜ್ಞಾನಿಗಳಾದ ನಾವು ಸಾರಥಿಯನ್ನು ಸ್ವಾಧೀನಪಡಿಸಿಕೊಳ್ಳಲಸಮರ್ಥರಾಗಿ ಸಾರಥಿಯ ಅಧೀನರಾಗಿ ಕಡೆಗೆ ಘೋರಾಟವಿಯಲ್ಲಿ ಬಿದ್ದು ಕಷ್ಟಪಡುವುದಲ್ಲದೆ, (ಪುನರಪಿಜನನಂ ಪುನರಪಿಮರಣಂ ಪುನರಪಿಜನನೀ ಜಠರೇ ವಾಸಂ) ಎಂಬಂತೆ, ಹುಟ್ಟುವುದು ಸಾಯುವುದು ಮಾತ್ರ ನಮ್ಮ ಕರ್ತವ್ಯವಾಗಿದೆ;

ನಾವು ಮುಖ್ಯವಾಗಿ ನಮ್ಮ ಪೂರ್ವಾಚಾರವನ್ನು ಮೂಲೆಗೆ ಬಿಸಾಕಿ ನವೀನ ಆಚಾರವನ್ನು ಸ್ವೀಕರಿಸಿದ್ದೂ, ದುರಿತಭೀತಿ ಎಂಬುದನ್ನು ಕನಸಿನಲ್ಲಿಯೂ ನೆನಸದಿರುವುದೂ, ಪರನಿಂದೆ ಆತ್ಮಸ್ತುತಿ, ಎಂಬ ಮೂಲಮಂತ್ರವನ್ನು ಆಗಾಗ್ಗೆ ಬಹು ಸಂತೋಷದಿಂದ ಜಪಿಸುತ್ತಿರುವುದೂ. ಆಹಾರ ಉಡುಪುಗಳಲ್ಲಿ ನಿರ್ಬಂಧವಿಲ್ಲದಿರುವುದೂ, ನಮ್ಮ ವಿದ್ಯೆಯನ್ನು ತಿರಸ್ಕರಿಸಿ. ಬೇರೆ ವಿದ್ಯೆಯನ್ನು ಕಲಿಯಲು ಹುರುಪುಮಾಡಿದ್ದೂ, ನಾವು ಗಂಡಸರಂತೆ, ಸ್ವೇಚ್ಛೆಯಾಗಿ ವರ್ತಿಸಲಿಕ್ಕೆ ತೊಡಗಿದ್ದು ನವನಾಗರೀಕತೆಯೆಂಬ ಆಕರ್ಷಣಶಕ್ತಿಗೆ ಎಡೆಕೊಟ್ಟಿರುವುದೂ ಅಲ್ಲದೆ ಮಾತೆಯು ಆರೋಗ್ಯವಾಗಿದ್ದರೂ ಕೂಡ, ಜೀವನ್ಮೃತಿಯಾಗಿ ದೈವಸನ್ನಿಹಿತವಾದ ಸ್ತನ್ಯವನ್ನು ಕೊಡದೆ, [ಶಿವಕೊಟ್ಟರೂ ಸಿಂಗರಿಯಪ್ಪ ಉಣಕೊಡಿಸನು] ಎಂಬಂತೆ ಮಾತಾಶತ್ರುಗಳಾಗುವದಕ್ಕೆ ಪ್ರಯತ್ನಿಸಿ, ಮನುಷ್ಯನಿರ್ಮಾಣವಾದ ಸ್ತನವನ್ನು ಉಪಯೋಗಿಸಲಿಕ್ಕೆ ತೊಡಗಿದ್ದರಿಂದಲೇ ಶಿಶುಗಳು ಬಲಹೀನರಾಗಿ, ನಿತ್ರಾಣಕ್ಕೆ ಮುಖ್ಯ ಕಾರಣವಾಯ್ತು ಸ್ತ್ರೀಯರು ತಮ್ಮ ಮಕ್ಕಳಿಗೆ ಸ್ತನ್ಯವನ್ನು ಕೊಡದೆ ಬಿಟ್ಟಿದ್ದೇ ಆದರೆ, ಯಮಲೋಕದಲ್ಲಿ ತನ್ನ ಸ್ತನಗಳನ್ನು ತನ್ನಿಂದಲೇ ಬಲಾತ್ಕಾರವಾಗಿ ಯಮಭಟರು ಕುಡಿಸುತ್ತಾರಂತೆ ನಾಚಿಕೆಗೇಡು ಎಷ್ಟರಿಕೆ! ಈ ಎಲ್ಲಾ ಕಾರಣದಿಂದಲೇ ಶ್ರೀ ಮೂಕಾದೇವಮ್ಮನವರು ನಮ್ಮೆಲ್ಲರಲ್ಲಿಯೂ. ನೆಲಸಿಕೊಳ್ಳಲಿಕ್ಕಿಲ್ಲ, ಶ್ರೀ ಲಕ್ಷ್ಮೀದೇವಿಯು ನಮ್ಮ ದೇಶದಿಂದ ತೊಲಗಿಹೋಗಲಿಕ್ಕೂ, ಸ್ತ್ರೀಯರಾದ ನಮ್ಮ ವಿಪರೀತ ಬುದ್ಧಿಯೇ ನಿಮಿತ್ತವಲ್ಲದೆ ಬೇರೆಯಲ್ಲ

ನಾವು ನಮ್ಮ ಪೋಷಕರನ್ನು ಬಹಳ ಪೀಡಿಸಿ, ತನ್ನ ಶಕ್ತಿಗೆ ಮೀರಿದ ಅಲಂಕಾರಕ್ಕಾಗಿ ತೊಂದರೆಕೊಡುವುದರಿಂದ. ಪಾಡಿಕೆಯುಷ್ಟೆ? ತಮ್ಮ ಪತ್ನೀಪುತ್ರಿಯರನ್ನು ನವಿರಾಗಿಟ್ಟಿರಬೇಕೆಂಬ ಇರಾದೆ ಅವರಿಗಿಲ್ಲವೇ? ಅವರು ನಮಗಾಗಿ ಇಷ್ಟದ್ದನ್ನು ಎಲ್ಲಿಂದ ತರಬೇಕು? ದರೋಡೆಯಾಗಲಿ, ಸ್ತೇಯವಾಗಲಿ, ಮೋಸವಾಗಲಿ ಈ ರೀತಿ ಯಾವುದಾದರೂ. ನೀಚಕೃತ್ಯದಿಂದ ದ್ರವ್ಯ ಸಂಪಾದಿಸಿ, ನಮ್ಮ ಇರಾದೆಮೇರೆ ಮಾಡಿಕೊಡಬೇಕೇ? (ನಾರೀ ಪುಣ್ಯಪುರುಷನ ಭಾಗ್ಯ) ಎಂಬಂತೆ, ನಮಗೆ ಅದೃಷ್ಟವಿದ್ದರೆ, ಅವರು ಐಶ್ವರ್ಯವಂತರಾಗಲಿಕ್ಕಿಲ್ಲವೇ? "ಸ್ತ್ರೀಮೂಲ ಸಂಕಷ್ಟ ಅಧಮೂಲ ವಿಪತ್ತು" ಎಂಬ ಹಾಗೆ ಎಲ್ಲದಕ್ಕೂ ನಾವೇ ಕಾರಣರಾಗಿ ನಮ್ಮನ್ನು ಅವರು ನೋಡಿಕೊಳ್ಳಬೇಕಲ್ಲದೆ ನಾವು ಅವರನ್ನು ನಿಂದಿಸುವುದು ನ್ಯಾಯವೇ? ನಮ್ಮ ಮುಖ್ಯ ಭೂಷಣವನ್ನು ಕಳೆದುಕೊಳ್ಳುವುದರಲ್ಲಿ ಹಿಂದು ಮುಂದು ನೋಡದೆ ಇರುವ ನಮಗೆ ಈ ಗೊಡವೆಯಾತಕ್ಕೆ? 'ಹೀಗೆ ತಪ್ಪು ಪುರುಷರಿಗೆ ನಾನಾವಿಧವಾದ ತೊಂದರೆ ಕೊಡುವುದ

ರಿಂದಲೇ “ ಹೆಂಡತೀ ಪ್ರಾಣಹಿಂಡುತೀ ” ಎಂದು ಹೇಳುವುದಕ್ಕೆ ಕಾರಣ. ಆದರೆ ಕೆಲವು ಪಾತಿವ್ರತ್ಯವೆಂಬುವುದರ ಅರ್ಥವೇ ತಿಳಿಯದವರು, ಗಂಡಾ ನೀವು ಜಗಳ ಬಂದಾ, ಹಾಲಿಟ್ಟಿಲ್ಲದೆ ಹೆಂಡ ಸಾರಾಯಿ ಮುಂತಾದ, ನಿಷಾಶೇ ಪಾನ ಮಾಡಿ, ಪ್ರಜ್ಞೆಯಿಲ್ಲದೆ ಸಿಕ್ಕಿದೆಡೆಯಲ್ಲಿ ಬಿದ್ದಿರುತ್ತೀರಿ. ನಿಷಾಸೇವನೆ ಪೂಜೆಯ ನಿಮಿತ್ತ ಎಷ್ಟು ಹಣವಾದರೂ, ಸಂಪಾದಿಸುತ್ತೀರಿ. ಆದರೆ ನಾವು ಮಾತ್ರ ಏನು ಹೇಳಿದರೂ, ತರಲಿಕ್ಕೆ ? ಕಾಸೂ, ಇಲ್ಲವೆಂದೇ ಹೇಳುತ್ತೀರಿ. ದುಡ್ಡಾಗಿ ನಿಷಾಸೇವನೆಗೆ ಖರ್ಚುಮಾಡಿರೆಂದು ಯಾರಾದರೂ, ಹೇಳುತ್ತಾರೆಯೇ ? ಇದು ನೋಡುವಾಗ ಆ ನಿಷಾದೇವಿಯೇ ತನ್ನ ಸ್ವಾಧೀನಪಡಿಸಿಕೊಳ್ಳುವುದಕ್ಕೋಸ್ಕರ, ಬಹುಶಃ ಕೊಡಬಹುದಲ್ಲವೇ ? ಎಂದು ನಾನಾವಿಧವಾಗಿ ದಬಾಯಿಸುತ್ತಾರೆ. ಇದು ದೊಡ್ಡ ತಪ್ಪು. ಗಂಡಸರು ಏನು ದುಷ್ಕೃತ್ಯವನ್ನು ಮಾಡಿದರೂ ಕೂಡ ಅವರನ್ನು ಕೇಳುವ ಸ್ವಾತಂತ್ರ್ಯ ದೇವರು ನಮಗೆ ಕೊಡಮಾಡಿರುವುದಿಲ್ಲವೆಂಬುದ ಎಷ್ಟರ ಶೀಘ್ರ ಸಂಗತಿಯಾಗಿದೆ ಇದಕ್ಕೆ ದೃಷ್ಟಾಂತವಾಗಿ ದಮಯಂತಿಯರಲ್ಲಿ ಒಬ್ಬಳಾದ ಸುಮತಿದೇವಿಯನ್ನು ನೆನಸಬೇಕಾಗಿದೆ

ನಾವು ನಮ್ಮ ಸ್ತ್ರೀಜಾತಿಪದ್ಧತಿಗೆ ವ್ಯತಿರಿಕ್ತವಾಗಿ [illegible] ನಡೆದು ಮಾರಿಯೆಂಬ ಹೆಸರನ್ನು ಪಡೆಯುವುದಕ್ಕಿಂತಲೂ, “ ಕಾರ್ಯೇಷು ದಾಸೀ, ಕರಣೇಷು ಮಂತ್ರೀ, ರೂಪೇಚ ಲಕ್ಷ್ಮೀ, ಕ್ಷಮಯಾ ಧರಿತ್ರೀ, ಭೋಜ್ಯೇಷು ಮಾತಾ, ಶಯನೇಷು ವೇಶ್ಯಾ, ಷಟ್ಕರ್ಮನಾರೀ ಕುಲಧರ್ಮಪತ್ನೀ ” ಎಂಬಂತೆ ನಡೆದು ನಾರೀರತ್ನವೆಂಬ ಹೆಸರನ್ನು ಪಡೆದರೆ ನಮಗೆ ಇಹಪರಕ್ಕೆ ಸಾಧನವಾಗುವುದು.

ಮನಸೋದರಿಯರೇ:—ನಿಮ್ಮಗಳಿಗಿರುವ ತಿಳಿವಳಿಕೆ [illegible] ಲೋಟಿಸಾಲಿನಲ್ಲಿ ತಿಳಿದಿರುವ, ದರೂ, ಒದ್ದಿನ [illegible] ನನಗಿರುವುದಿಲ್ಲ ಆದರೂ ಕೂಡ, ಶ್ರೀ ಹರಿಯು ನನಗೆ ಬುದ್ಧಿಶಕ್ತಿಗೆ ತೋಚಿಸಿದ್ದನ್ನು ತಿಳಿಸಿದ್ದಾಗಿದೆ. ಇದರಲ್ಲಿ [illegible] ಗುಣದೋಷಗಳಿರುತ್ತವೆ ಆದರೂ ಹಂಸ [illegible], ಕ್ಷೀರಮಿಶ್ರವಾದ ನೀರಿನಲ್ಲಿ, ನೀರನ್ನೇ ಬೇರ್ಪಡಿಸಿ ಕ್ಷೀರವನ್ನೇ ಹೀರಿಕೊಳ್ಳುವಂತೆ, ಸದ್ಗುಣವಂತೆಯರಾದ ನೀವುಗಳೆಲ್ಲಾ ದಯವಿಟ್ಟು ನನ್ನಲ್ಲಿ ದೋಷಾರೋಪಣೆ ಮಾಡಲಿಕ್ಕಿಲ್ಲವಾಗಿ ತಪ್ಪೆಲ್ಲವನ್ನೂ ಕ್ಷಮಾಪಣೆಯ ಕೇಳಿಕೊಳ್ಳುತ್ತೇನೆ. (ನೂರ ಅಲಂಬೆಗಿ [illegible] ಆರ [illegible] ಬೀರಲ ಕಂಡು) ಎಂಬಂತೆ ಎಷ್ಟು ತಿಳಿದರೂ, ಕೂಡ ಸ್ವಲ್ಪ ತಿಳಿದವನ್ನು ಅಲಕ್ಷ್ಯ ಮಾಡಬಹುದೆ ನಮ್ಮ ? ಇದುವರೆಗೆ ಆದದ್ದೆಲ್ಲಾ ಆಯಿತು. ಇನ್ನು ಮುಂದಾದರೂ ಶ್ರೀ ಭಗವಂತನು ನಮ್ಮಗಳಿಗೆಲ್ಲಾ ಜ್ಞಾನ [illegible] ವನ್ನು ಕೊಟ್ಟು ಕೊಲಗಿ ತೋರಿ ಲಕ್ಷ್ಮೀದೇವಿಯ [illegible] ನಮ್ಮ ದೇಶಕ್ಕೆ ಹಬ್ಬಿಸುವಂತೆ ಮಾಡಬೇಕೆಂದು ಸ್ತ್ರೀಯರುಗಳಾದ ನಾವೆಲ್ಲರೂ, ಶ್ರೀ ಹರಿಯನ್ನು ಭಕ್ತಿಭಾವದಿಂದ ಧ್ಯಾನಿಸುವುದಲ್ಲದೆ, ನಮ್ಮ ಪೂರ್ವದ ಸ್ಥಿತಿಗೆ ನಡೆಯುವುದೇ ನಮ್ಮಗಳ ಮುಖ್ಯ ಕರ್ತವ್ಯವು.

ಒಬ್ಬ ಸಹೋದರಿ.

ಸ್ವೀಕಾರ.

ಬೆಂಗಳೂರು ಕೃಷ್ಣರಾಜಮೊಹಲ್ಲಾದಲ್ಲಿರುವ ಯಮ್. ಯಸ್. ಸಿದ್ದಪ್ಪ ಅಂಡ್ ಬ್ರದರ್ಸ್ ರವರು 1922ನೇ ಇಸ್ವಿಯ ಪಂಚಾಂಗಸಹಿತ ಇರುವ ಶೀಟ್ ಕ್ಯಾಲೆಂಡರನ್ನು ಮತ್ತು ನಾನಾ ರೀತಿಯ ಬಣ್ಣಗಳಿಂದ ತಯಾರಿಸಲ್ಪಟ್ಟ ಅಂದವಾದ, ಕ್ಯಾಲೆಂಡರನ್ನು ನಮ್ಮಲ್ಲಿಗೆ ಕಳುಹಿಸಿದ್ದನ್ನು ಬಂದನಾಪೂರ್ವಕದಿಂದ ಸ್ವೀಕರಿಸಿದ್ದೇವೆ ಎಲ್ಲರ ಮನೆಯಲ್ಲಿಯೂ ಇಂಥಾ ಒಂದು ಕ್ಯಾಲೆಂಡರಿಟ್ಟುಕೊಳ್ಳುವುದು ಅವಶ್ಯಕ.

ಕನ್ನಡ ನವಜೀವನ, ಹೊಸ ವಾರಪತ್ರಿಕೆ.

ಕನ್ನಡ ನವಜೀವನವೆಂಬ ಹೊಸ ವಾರಪತ್ರಿಕೆಯೊಂದು [illegible] ಹೊರಟಿದೆ, ಮಹಾತ್ಮಾ ಗಾಂಧಿಯವರೇ ಒಡೆಯರಾಗಿ ನಡೆಯುವ ಗುಜರಾಥಿ ಭಾಷೆಯ “ ನವಜೀವನ ” ವತ್ತು ಇಂಗ್ಲೀಷು ಭಾಷೆಯ “ ಯಂಗ್ ಇಂಡಿಯಾ ” ಎಂಬ ಪತ್ರಿಕೆಗಳಲ್ಲಿರುವ ಲೇಖನಗಳ ಭಾಷಾಂತರಗಳೇ ಈ ಪತ್ರಿಕೆಯಲ್ಲಿ ಪ್ರಕಟವಾಗುವವು. ಭಾಷೆಯನ್ನು ಬೇರೆ ಕಾರಣದಿಂದ [illegible] ದೂರವಿರುವ ನಮ್ಮ ದೇಶಕ್ಕೂ ತಿಳಿಯುವಂತೆ ಬರೆಯುತ್ತಾರೆ. ಒಂದೆರಡು ಮಾತುಗಳು ತಿಳಿಯದವು ಇದ್ದರೂ, ಅದರ ಕೆಲವು ಪತ್ರಿಕೆಗಳನ್ನು ಓದುವವರಲ್ಲಿ ರೂಢಿಯಾಗುತ್ತೆ. ಇಂಡಿಯಾದೇಶದ ಹೊಸ ಚಳವಳಿಯ ಮೂಲ ಕರ್ತರಾದವರ ಬಾಯಿಯಿಂದಲೇ ಅವರ ಬೋಧನೆಗಳನ್ನು ತಿಳಿದುಕೊಂಡರೆ ಜನರು ದಾರಿತಪ್ಪಿ ಹೋಗುವ ಸಂಭವವಿಲ್ಲ. [illegible] ತರಿಸಿಕೊಳ್ಳಲು ಅನುಕೂಲವಾಗುವಂತೆ ವಾರ್ಷಿಕ ಚಂದಾ 4—0—0 ರೂಪಾಯಿ ಮಾತ್ರವಿದೆ. ಇದನ್ನು ಬೇಕಾದವರು ಚಂದಾ ಹಣವನ್ನು “ ವ್ಯವಸ್ಥಾಪಕ ಕನ್ನಡ ನವಜೀವನ ” ಬೆಂಗಳೂರು ಸಿಟಿ, ಬಿಸಿನೆಸ್ ಸ್ಟ್ರೀಟ್ ಎಂಬ ವಿಳಾಸಕ್ಕೆ ಕಳುಹಿಸಬೇಕು. ವಿ. ಪಿ. ಕಳುಹಿಸುವದಿಲ್ಲವೆಂತ ಬರೆದಿದ್ದಾರೆ.

ಜೀವನದ ಹಾಡು.

(ಚೌಪದಿ).

ಹೇಳದಿರಿ ಶೋಕಿಸುತ ಅರ್ಥನುಡಿಯಿಂದ |
ಬಾಳುಕನಸಿನ ಗಂಟು ಜೀವನವಿದೆಂದು ||
ಕೇಳಿ ಮನುಜರಿರುವ್ಯ ವ್ಯರ್ಥವಿದುದೆಂದು |
ಹೇಳದಿರಿ ವಸ್ತುಗಳ ಒಳನಯರಿಂದು ||೧||

ಜೀವನವು ನಿಜವೆಂದು ನಂಬಿ ನೀವೆಲ್ಲ |
ಸಾವು ಬರುವನ್ನಗಂ ಬದುಕುವುದೆ ಅಲ್ಲ ||
ನೋವು ಬಂದವ ಕಾಗಲಿ ಎಂಬುವುಗಳೆಲ್ಲ |
ಭಾವಿಸಲು ತನುಗಲ್ಲ ದಾತ್ಮನಿಗೆ ಇಲ್ಲ ||೨||

ಸಂತಸವ ಘಳಿಸುತಲಿ ನೆಲೆಯುರಿಪುದಲ್ಲ |
ಚಿಂತೆಯಲಿ ಮುಳುಗುತಲಿ ನರಳುವುದೆ ಅಲ್ಲ ||
ಸಂತಿಪ ದ್ವಂದ್ವಗಳ ಕಳೆದು ನಾವೆಲ್ಲ |
ಸಿಂತು ಕಾರ್ಯವ ಗೈವುದಲ್ಲದೆ ಬೇರಿಲ್ಲ ||೩||

ಗೈವುದಕೆ ಎತ್ತಲುಂ ವಿಸ್ತರದಿ ಊರಿ |
ಸಮಯವದು ಸರಿಯುತಿದೆ ವೇಗದಲಿ ಓಡಿ ||
ಆನಂದದಿ ನಾವೆಂದು ಧ್ರುವೆಗೊಳ್ಳ ಬೇಡಿ |
ಎದೆಸದಲಿ ಯಮಭಟರು ನೆಳಲಿವರು ನೋಡಿ ||೪||

ಧರೆ ರಣರಂಗದಲಿ ಜೀವನದ ರಾಜ್ಯ |
ವಿಕ್ರಮದ ಕಾಳಗವ ಗೆಲಿದವನೆ ಮಾನ ||
ಬರದೆ ಪಶುವಿನ ತೆರದಿ ಬಾಳುವವ ಹೀನ |
ಪರಿಕಿಸವ ಬಯಸುವವ ಅಪರಾಜಿ ನಾಣ್ಯ ||೫||

ನೆನೆಯದಿರಿ ಮುಂದೆ ನೀ ಸುಖವಿರುವುದೆಂದು |
ಎಣಿಸಿಸಿರಿ ಹಿಂದಿನಲಿ ಕೋವಿದ್ದುದೊಂದು ||
ಆನುದಿನ ಸುಕ್ಕತದ ಮನವನ್ನು ತೊರೆದು |
ಕ್ರತುಪುರುಷ ದೇವಿಯ ಕರುಣೆ ನಿಂದುದು ||೬||

ವಿಸ್ತರದಿ ಪೇಳುವೆನು ಅದುವೆ ನಿಜವಹುದು |
ಮಹಲಂ ನೋಡಿದರೆ ಧೀರಜನ ವಿಹುದು ||
ಮತ್ತವರ ಪಥದಲ್ಲಿ ನಾವು ನಡೆಯಲಹುದು |
ಉತ್ತಮದ ಬೋಧೆಯನು ಧರೆಗೊರೆಯ ಬಹುದು ||೭||

ಅಸ್ಮಂತೆ ಸಂಸಾರ ಸಾಗರದಿ ಮುಳುಗಿ |
ನಿಸ್ಸಹಾಯ ! [illegible] ಮನದೊಳಗೆ ಮರುಗಿ ||
ದುಃಖ ಭವ [illegible] ಯಾತ್ರಿಕರು ತಿರುಗಿ |
[illegible] ಯಶವ ಪಿಡು ಬರುವರು ನಾವಿ ||೮||

ಅದರಿಂದ ನಾವೆಲ್ಲ ಒಮ್ಮನದಿ ಬೇಗ |
ಅಧಿಕವಹ ಕಾರ್ಯಗಳ ಕೈಕೊಳ್ಳುತೀಗ ||
ಎದೆಯೊಳಗೆ ಮದದಿಂದ ಮಾಡುತಿರಲಾಗ |
ಪಡೆದು ಸುಧೆಯನು ಕರ್ಮ ಪಾಲಿಸುವನಾಗ ||೯||

ಲಾಂಗ್ ಫೆಲೋನವರ ಸಾಮ್ ಆಫ್ ಲೈಫ್ (Psalm of Life) ಎಂಬ ಇಂಗ್ಲೀಷು ಪದ್ಯದ ಶೀರ್ಷಕೆ.

ಟಿ. ಯಂ. ಕಾರ್ಯಪ್ಪ.

ಶ್ರೀಮಂಗಲ ಆಸ್ಪತ್ರೆ.

(ಸ್ವಂತ ಬಾತ್ಮಿದಾರರಿಂದ)

ಈ ಆಸ್ಪತ್ರೆಯನ್ನು 1916 ರಲ್ಲಿ ಸರಕಾರದವರು ಕಟ್ಟಿಸುವಾಗ ಮೇ॥ ತಿತಿರ ಗಣಪತ್ಯಯವರು ಒಂದು ಸಾವಿರ ರೂಪಾಯಿ ಉಚಿತಾರ್ಥವಾಗಿ ಕೊಟ್ಟರು. ಮೆ ಗಣಪತ್ಯಯವರು ದೊಡ್ಡ ಧನವಂತರು ಈಗತಾನೇ ಈ ಆಸ್ಪತ್ರೆಯ ಕೊಟಡಿಗಳನ್ನು ವಿಸ್ತರಿಸುವ ಬಗ್ಗೆ, ಈ ಧರ್ಮಾತ್ಮರು ತನ್ನ ಸ್ವಂತ ಖರ್ಚಿನಿಂದ ಕದರಸ್ಸಾಗುವ ಹಣವನ್ನು ಕೊಡುವುದಾಗಿಯೂ ಕಾರ್ಯಸ್ಥರಿಗೆ ತಿರಲಿಕ್ಕೆ ಒಂದು ವಾರ್ಡ್ ಕಟ್ಟಿಸಿಕೊಡುವುದಾಗಿಯೂ ಏರ್ಪಾಡು ಮಾಡಿರುವುದು ಶ್ಲಾಘನೀಯವಾಗಿದೆ ಈ ಪ್ರಾಂತ್ಯಕ್ಕೆ ಆಸ್ಪತ್ರೆಯಿಲ್ಲದೆ, ಈಗತಾನೇ ಒಂದು ಆಸ್ಪತ್ರೆ ಸ್ಥಾಪನೆ ಆಗಿರುವುದು. ಸ್ಥಳೀಕರಿಗೆ ಅತ್ಯಂತ ಅನುಕೂಲಗಳನ್ನುಂಟುಮಾಡಿದೆ. ದಿನಕ್ಕೆ ಎರಡು ನೂರರಷ್ಟು ಜನರು ಔಷಧಿಗೆ ಬರುವುದಲ್ಲದೆ ಸ್ತ್ರೀಯರುಗಳಲ್ಲಿಯೂ, ಔಷಧಿಗೆ ಬರುವ ಕಾಯಿಲೆಯವರ ಸಂಖ್ಯೆಯು ಹೆಚ್ಚುತ್ತಾ ಬರುತ್ತದೆ ಈ ಆಸ್ಪತ್ರೆಯ ಅಭಿವೃದ್ಧಿಗೆ ಈಗಿನ ಸಬ್ ಅಸಿಸ್ಟೆಂಟ್ ಸರ್ಜನ್ ಮಿ॥ ಕೋದಂಡ [illegible] ನವರೇ ಕಾರಣವೆಂದು ಎಲ್ಲರೂ ಹೇಳುತ್ತಾರೆ ಇಷ್ಟೆಯೇ ಅಲ್ಲದೆ ಪರೋಪಕಾರದಲ್ಲಿಯೂ, ನಾಗರೀಕತೆಯಲ್ಲಿಯೂ, ಕೊಡಗಿನ ಬೇರೆ ಎಲ್ಲಾ ಭಾಗಕ್ಕಿಂತಲೂ ಹಿಂದೆ ಬಿದ್ದವರಾಗಿರುತ್ತಾರೆ. ನಾನ, ನನ್ನ ಆಸ್ತಿ, ನನ್ನ ಹೆಂಡತಿ ಮಕ್ಕಳಲ್ಲದೆ ಪ್ರಪಂಚವೇ ಇಲ್ಲವೆಂಬದಾಗಿ ತಿಳಿದಿರುತ್ತಾರೆ ದೇಶದಲ್ಲಿ ಆಗುವ, ಯಾವ ಸಾರ್ವಜನಿಕ, ಕೂಟ, ಯಾ, ಸಭೆಗಳಿಗೆ ಇವರು ಬರುವುದು ಬಹಳ ಅಪೂರ್ವ, ಮೂಢತನದ ಸ್ವಕಾರ್ಯದುರಂಧರತ್ವದಲ್ಲಿ ಮಗ್ನರಾಗಿರುವರಾಗಿ ಕಾಣುತ್ತಾರೆ. ಎಲ್ಲರೂ ಜಾರೀ ಜಮಿನುದಾರರು ಮತ್ತು ಅನುಕೂಲಸ್ಥರು. ಇದ್ದಾಗ್ಯೂ ಶ್ರೀಮಂಗಲ ನಾಡಿನ ಜನರು ದೇಶದ ಹಿತಕ್ಕಾಗಿ ಬಿಡಬೇಕಿದೆ ಬೇಕು ತಮ್ಮ ಬೌದ್ಧಿಕ ಸ್ಥಿತಿಯನ್ನು ಬಿಡುವ ಕೊಂಡರೆಯನ್ನು ಈಗ [illegible] ಮೆ॥ ಗಣಪತ್ಯಯವರ ಉದಾರ [illegible] ಅವರ ಉದಾರತೆಯನ್ನು ಅನುಸರಿಸಬೇಕಾಗಿಯೂ ಹೇಳುತ್ತೇವೆ [illegible]

ವರ್ತಮಾನ ಸಂಗ್ರಹ.

ಒಳದೇಶ.

ಕಾರ್ತಿಕಮಾಸವನ್ನು ಮಡಿಕೇರಿ ನಿವಾಸಿಗಳು ಅತ್ಯಂತ ಉತ್ಸಾಹಯುಕ್ತವಾದ ರೀತಿಯಲ್ಲಿ ಮುಗಿಸಿರುವರೆಂದು ಕೋರುತವು ವೆಂಕಟರಮಣ ದೇವಸ್ಥಾನ ಉಳಿದ ಮಿಕ್ಕ ದೇವಾಲಯಗಳಲ್ಲೆಲ್ಲಾ ಹರಿಕಥೆ, ಉತ್ಸವ, ಭಜನೆಗಳ ಕೋಲಾಹಲವೇ ಕೋಲಾಹಲ ! ಮೈಸೂರು ಕಡೆಯ ಕನಕದಾಸರೆಂಬ ಹರಿಕೀರ್ತನಕಾರರು ಸದ್ಯ ಮಡಿಕೇರಿಯಲ್ಲಿ ಕೀರ್ತನ ಮಾಡುತ್ತಿರುವರು ಹಿಂದುಗಳು ಟ್ರೈನಿಂಗ್ ಮತ್ತು ಮೋಡಲ್ ಶಾಲೆಗಳ ಉಪಾಧ್ಯಾಯರು ತಮ್ಮ ಶಾಲೆಯಲ್ಲಿ ಕನಕದಾಸರ ಚರಿತ್ರೆಯನ್ನು ಶ್ರೀ ರಾಮ ಮಂದಿರದವರು ಅಲ್ಲಿ ಪ್ರಹ್ಲಾದ ಚರಿತ್ರೆಯನ್ನು ಪುರಂದರದಾಸರ ಚರಿತ್ರೆಯನ್ನು ಮಾಡಿಸಿರುವರು ಸುಮಾರು ಮೂರುನಾಲ್ಕು ವರೆ ಕೀರ್ತನೆಗಳನ್ನು ಅತ್ಯಂತ ಸರಳಶೈಲಿಯಲ್ಲಿ ಮಾಡಿ ಭಕ್ತಿಯ ರಸದಲ್ಲಿ ಎಲ್ಲರನ್ನು ಮುಳುಗಿಸಿ ಮುಗ್ಧರನ್ನಾಗಿ ಮಾಡಿರುವುದರಿಂದ ಕೀರ್ತನಕಾರರಿಗೆ ಮಡಿಕೇರಿ ನಿವಾಸಿಗಳು ಋಣಿಗಳಾಗಿರುವರು. ಇಂಥಾ ಕೀರ್ತನೆಗಳು ಪ್ರತಿ ಹಳ್ಳಿಯಲ್ಲೂ ನಡೆಯಬೇಕಾಗಿದೆ.

ಈಗ್ಗೆ ಎರಡು ವರ್ಷಗಳಿಂದ ಮೂಲೆಗೆ ಬಿದ್ದಿದ್ದ ಮಡಿಕೇರಿಯ ಓಂಕಾರ ದೇವಾಲಯವು ಮೆ॥ ಕಾಳಮ್ಮನವರ ಅತಿ ಚಾತುರ್ಯ ಸಾಹಸದಿಂದ ಈಗಲೀಗ ನಗುಮುಖವಾಗಿದೆ. ದೇವಾಲಯದ ಛತ್ರದಲ್ಲಿ ಉಂಟಾಗಿದ್ದ ಭಿನ್ನಾಭಿಪ್ರಾಯಗಳನ್ನು ತೆಗೆದು ದೇವಾಲಯವನ್ನು ಉದ್ಧಾರಮಾಡಿದುದು ಶ್ರೇಯಸ್ಕರವಾದ ಕೆಲಸವಾಗಿದೆ.

ಮಡಿಕೇರಿಯಿಂದ ವಿರಾಜಪೇಟೆಗೆ ಓಡಾಡುತ್ತಿರುವ ಎರಡು ಮೋಟಾರು ಬಸ್ಸುಗಳನ್ನು ಗಂಟೆಗೆ ಎಂಟು ಮೈಲಿಗಳಿಗಿಂತ ಹೆಚ್ಚಾಗಿ ಓಡಿಸಕೂಡದಾಗಿ ಅಧಿಕಾರಿಗಳು ಹುಕುಂ ಮಾಡಿರುವುದರಿಂದ ಇಷ್ಟು ನಿಧಾನವಾಗಿ ಹೋಗುವ ಬಸ್ಸುಗಳಲ್ಲಿ ಹೋಗುವುದಕ್ಕಿಂತ ಎತ್ತಿನ ಗಾಡಿಗಳಲ್ಲಿ ಹೋಗುವುದು ಲೇಸೆಂದೂ, ಇದರಿಂದ ಬಸ್ಸುಗಳ ಮಾಲೀಕರಿಗೆ ಹೆಚ್ಚು ನಷ್ಟವೆಯೂ ಕರ್ಣಾಟಕದ ಬೇರೆ ಪ್ರಾಂತ ಮೋಟಾರುಗಳು ಘಂಟೆಗೆ ಸುಮಾರು 20 ಮೈಲಿಗಳ ವೇಗದಲ್ಲಿ ಹೋಗುತ್ತಿರುವಾಗ ಪ್ರಯಾಣಿಕರ ಪ್ರಯೋಜನಾರ್ಥವಾಗಿ ಓಡ್ಯಾಡುತ್ತಿರುವ ಬಸ್ಸುಗಳನ್ನು ಗಂಟೆಗೆ 8 ಮೈಲುಗಳ ವೇಗದಲ್ಲಿ ಮಾತ್ರ ನಡೆಸಬೇಕೆಂದು ಹುಕುಂ ಮಾಡಿರುವುದು ಬಹಳ ವ್ಯಸನಕರವೆಂದೂ ಬೇರೆ ಪ್ರಾಂತ್ಯಗಳಲ್ಲಿ ಇರುವಂತೆ ಗಂಟೆಗೆ ಕನಿಷ್ಠ 15 ಮೈಲು ದೂರದಲ್ಲಿ ಯಾವರೂ ನಡೆಸುವಂತೆ ಬಿಟ್ಟರೆ ಬಸಪ್ರಯಾಣಿಕರಿಗೆ ಬಹಳ ಉಪಕಾರವಾದಿದಂತಾಗುತ್ತದೆಂದು ಒಬ್ಬ ಪ್ರಯಾಣಿಕರು ಬರೆದಿರುತ್ತಾರೆ

ಕೆಲವು ವಾರಗಳವರೆಗೆ ಮಡಿಕೇರಿಯಲ್ಲಿದ್ದ ಮೆ॥ ಮಂದೇಟಿರ ಮಂದಣ್ಣನವರು ತನ್ನ ಕಾಯಂ ಉದ್ಯೋಗವಾದ ಪಾಡಿ ಎಡೆನಾಲ್ಕುನಾಡು ಸುಬೇಯಕ್ಕೆ ಹಿಂತಿರುಗಿ ಹೋಗಿರುತ್ತಾರೆ

ಮಡಿಕೇರಿ ತಾಲ್ಲೋಕು ಕಚೇರಿಯಲ್ಲಿ ಹೆಡ್ ಗುಮಾಸ್ತರಾಗಿದ್ದ ಮಿ॥ ಎ. ಜಿ ಮಸ್ಕರೇನಿಯಸ್‌ರವರು ಕೆಲವು ತಿಂಗಳುಗಳ ಹಿಂದೆ ತಾಲ್ಲೋಕು ಖಜಾನೆಯಿಂದ 310 ರೂಪಾಯಿಯನ್ನು ಗಫಲತ್ತು ಮಾಡಿದ ಕ್ಯಾಪ್ಟನ್ ಇಡ್ಲಿಯವರು ಅವರಿಗೆ ಮೂರು ತಿಂಗಳು ಕಠಿಣ ಸಜೆಯನ್ನೂ 120 ರೂ ಜುಲುಮಾನೆಯನ್ನೂ ವಿಧಿಸಿದ್ದಾರೆ.

ನವೆಂಬರು ತಾ॥ 19 ರಲ್ಲು ವಿರಾಜಪೇಟೆಯಲ್ಲಿ ಒಂದು ಕುರಿಯು ಎರಡು ತಲೆ ಇರುವ ಒಂದು ಮರಿಯನ್ನು ಹಾಕಿತ್ತೆಂತಲೂ ಜನನ ಕಾಲದಲ್ಲಿ ಅದು ಸತ್ತುಹೋದರೂ ಕೂಡ ಮಾಲೀಕರು ಅದನ್ನು ಮರುದಿನ ಗೋಣಿಕೊಪ್ಪಲು ಸಂತೆಯಲ್ಲಿ ಪ್ರದರ್ಶಮಾಡಿ ಸುಮಾರು ಹತ್ತು ರೂ ಸಂಪಾದಿಸಿದರೆಂದು ತಿಳಿಯಬರುತ್ತದೆ

ರಿಪ್ರೆಂಟ್ ಮೆಂಟಿನ (ಸ್ಥಳೀಕ ಕೋಶದ ಸಮಾಚಾರ) ಫಲಿತಾಂಶವಾಗಿ ಎರಡು ವರ್ಷದೊಳಗೆ ಸರ್ವಿಸ್ ಆಗಿರುವ ಸುಮಾರು ಎಂಟು ಸರಕಾರಿ ಕ್ಲಾರ್ಕುಗಳಿಗೆ ಡಿಸೆಂಬರ್ 1 ರಿಂದ ಖಾಯಂ ಕೆಲಸವು ವಜಾಮಾಡಲ್ಪಟ್ಟದೆಯೆಂದೂ ಅವರಲ್ಲಿ ಕೆಲವರಿಗೆ ಹಂಗಾಮಿ ಕೆಲಸವು ಕೊಡಲ್ಪಟ್ಟದೆಯೆಂದೂ ತಿಳಿಯುತ್ತೇವೆ

ಅಕ್ಟೋಬರು ತಾ॥ 28 ರ ಪತ್ರಿಕೆಯಲ್ಲಿ ಪ್ರಕಟಿಸಿದ ಹಂಡ್ಲಿ ಹಚ್. ಮರ್ಕರಗಿನವರ ಟ್ಯಾಕ್ಸಿ ಪ್ರಕಾರ ಶೀಲಪೈವರ ವಿದ್ಯಾಭಿವೃದ್ಧಿ ಫಂಡಿಗೆ ಮೆ॥ ಬೆಳಾರಳ್ಳಿ ಪಟೇಲ ಬಸವಣ್ಣಯ್ಯನವರು ಕೊಟ್ಟದ್ದು 500 ರೂ, ಅಲ್ಲವೆಂತಲೂ 5 ರೂ ಮಾತ್ರವೆಂತಲೂ ಬಸವಣ್ಣಯ್ಯನವರೇ ತಿಳಿಸುತ್ತಾರೆ

ಸ್ಕೂಲು ಇಲಾಖೆಯವರಿಗೆ ಮಂಜೂರಾಗಿ ಬಂದಿರುವ ಸಂಬಳ ಬಡ್ತಿಯ ವಿವರ—ಬಿ ಎ. ಎಲ್ ಟಿ ಪ್ಯಾಸಾದ ಉಪಾಧ್ಯಾಯರುಗಳಿಗೆ ವಾಷಿಕಯಾಗ 100.5.150, 150 10-250. (ಎಫ್ ಎ. ಪ್ಯಾಸಾಗಿ ಟ್ರೈನಿಂಗ್ ಆದವರಿಗೆ 60 ರೂ ಕೊಡುವಂತೆ ಹೈಸ್ಕೂಲು ಹೆ॥ ಮಾಸ್ಟರವರು ಶಿಫಾರಸು ಮಾಡಿರುತ್ತಾರಂತೆ) ಸ್ಕೂಲ್ ಫೈನಲ್ ಮತ್ತು ಟ್ರೈನಿಂಗ ಆದವರಿಗೆ 40 2 60.1-70, ಹಯರ್ ಎಲಿಮೆಂಟರಿಯವರಿಗೆ 30-1-35, ಲೋವರ್ ಎಲಿಮೆಂಟರಿಯವರಿಗೆ 25 1 35 , ಹೈಸ್ಕೂಲು ಜಿಮ್ನಾಸ್ಟಿಕ್ ಟೀಚರಿಗೆ 30 2-50 ಕನ್ನಡ ಪಂಡಿತರಿಗೆ 40 2-70. ಉರುದು ಉಪಾಧ್ಯಾಯರಿಗೆ (ವಿರಾಜಪೇಟೆ) 30-2-50. ಡ್ರಾಯಿಂಗ್ ಟೀಚರಿಗೆ 30-2.50 ವಿರಾಜಪೇಟೆ ಸ್ಕೂಲಿನ ಹೆ॥ ಮಾಸ್ಟರವರಿಗು ಮತ್ತು ಮಡಿಕೇರಿ ಟ್ರೈನಿಂಗ್ ಸ್ಕೂಲಿನ ಹೆ॥ ಮಾಸ್ಟರವರಿಗೂ 200.10.300. ಒಬ್ಬ ಕ್ಲಾರ್ಕಿಗೆ 30.2-40-1 50. ಅಟ್ಟೆಂಡರು ಕ್ಲಾರ್ಕುಗಳು 30 1.35. (ಇವರಲ್ಲಿ ಒಬ್ಬರು ವಿರಾಜಪೇಟೆ ಸ್ಕೂಲಿಗೆ) ಈ ಬಡ್ತಿಯು ಕಳೆದ ಏಪ್ರಿಲ್ ಒಂದರಿಂದ ಕೊಡಲ್ಪಡುವದು.

ಕೊಡಗುಡಿಪುಟಿಡ ಕಂಪೆನಿಯ ಡೈರಕ್ಟರುಗಳ ಒಂದು ಮೀಟಿಂಗು ಈ ತಾ॥ 10 ರಲ್ಲು 5 ಘಂಟೆ ಸಮಯಕ್ಕೆ ಮಡಿಕೇರಿ ಮುನ್ಸಿಪಲ್ ಆಫೀಸಿನಲ್ಲಿ ನಡೆಯುತ್ತದೆ.

ಕೆಲವುದಿನಗಳ ಹಿಂದೆ ಕೈಲಗ್ರಾಮಸ್ಥರು ಬೇಟೆಯಾಡುವಾಗ್ಗೆ ಆಕಸ್ಮಿಕವಾಗಿ ಚೆಕ್ಕೆರ ಸುಬ್ಬಯ್ಯನೆಂಬ ಯುವಕನು ಕಾಳಪ್ಪ ಮೊಣ್ಣಯ್ಯನವರಿಂದ ಗುಂಡು ತಾಗಿಯಲ್ಲಿಟ್ಟು ಮೃತಪಟ್ಟನು. ಮುದ್ದಯ್ಯನವರಮೇಲೆ ಮೊಕದ್ದಮೆಯು ನಡೆಯುತ್ತಿದೆ. ಇದೇಮೇರೆ ಬೇರಳಗ್ರಾಮದಲ್ಲಿ ಸಹ ಒಂದು ಸ್ತ್ರೀ ಹತ್ಯವಾಗಿದೆಯೆಂದೂ ತಿಳಿಯುತ್ತೇವೆ. ನಮ್ಮ ದೇಶದಲ್ಲಿ ಮುಖ್ಯವಾಗಿರುವ ಬೇಟೆಗಾರರು ಇಂಥಾ ಸಂಗತಿಗಳನ್ನು ಗಮನಕ್ಕೆ ತಂದುಕೊಂಡು ಎಚ್ಚರದಲ್ಲಿರಬೇಕೆಂದು ಎಷ್ಟು ಹೇಳಿದರೂ ಸಾಲದು

ಕಡಗದಾಳ್ ಗ್ರಾಮದ ಮುಕ್ಕಾಟಿರ ಕಾರ್ಯಪ್ಪನವರ ಪತ್ನಿಯು ರಾತ್ರಿವೇಳೆಯಲ್ಲಿ ನೀರಿಗೆಹೋದಾಗ ಅಕಸ್ಮಾತಾಗಿ ಬಾವಿಗೆ ಬಿದ್ದು ಮೃತಪಟ್ಟರು.

ಕಾರ್ತಿಕಮಾಸಾಂತ್ಯದ ಮಡಿಕೇರಿ ಓಂಕಾರೇಶ್ವರ ದೇವಸ್ಥಾನವನ್ನು ಶ್ರೀಮತಿ ಕಾಳಮ್ಮನವರು ಕಡೇ ಕಾರ್ತೀಕದಲ್ಲಿ [illegible] ವದಿಂದ ಬಹು ವಿಜೃಂಭಣೆಯಾಗಿ ಮಾಡಿಸಿದರು.

[illegible] 95 [illegible]

...ರಿ ಪೈಶಾಚಿಕ ಬೆಂಕಿ [illegible] ಅನೇಕ ಅಂಗಡಿಗಳಿಗೆ ...ರಿದೆ.

...ರು ತಾ|| 13 ರಲ್ಲು ಅರಮನೆ ಪೊಲೀಸ್ 14 ರಲ್ಲು ...ಗುವದು. ಮತ್ತು ಸುಬ್ರಮಣ್ಯ ಕೃತ್ತಿಯು ತಾ|| 5 ರಲ್ಲು

...ಕೇರಿನಾಡು ಮನ್ನೂರ ಗ್ರಾಮಸ್ಥರು ತಮ್ಮ ಗ್ರಾಮದ ...ವನ್ನು ಅಭಿವೃದ್ಧಿ ಪಡಿಸುವಬಗ್ಗೆ ಒಂದು ಸಂಘವನ್ನು ಆ ಗ್ರಾಮದ ಮುಖ್ಯ ದೇವಸ್ಥಾನವಾದ ... ದೇವರ ಶ್ರೀಗೋಲ ಮಂಟಪವನ್ನು ... ಒತ್ತಿರುವ ...ಲಯವನ್ನೂ ಅದೇ ಗ್ರಾಮದ [illegible] ...ಮಯ್ಯನವರು ಈ 2 ಕಟ್ಟಡಗಳಿಗೆ ತಗಲುವ 25೦ ರೂ. ...ರ 50 ರೂಪಾಯಿ. ಕೆಲಸಕ್ಕೆ ತಾಗುವ 2೦ ರೂಪಾಯಿ ... ರೂಪಾಯಿಗಳನ್ನು ತಾನು ಕೊಡುವದಾಗಿ ಹೇಳಲು ದೈವ ... ಸಂಘದವರು ಅವರ ಭಕ್ತಿಗೆ ಮೆಚ್ಚಿ ಶ್ರೀಗೋಲ ಮಂಟ... ...ಯಲ್ಲಿ ನವರಿ ಸೋಮಯ್ಯನವರ ವಿಲಾಸವನ್ನು [illegible] ...ದಾಗಿ ಒಪ್ಪಿ, ಸೋಮಯ್ಯನವರು ಸಲ್ಲಿ [illegible] ...ವಾ|| ಶ್ರೀ|| ಪೂಲಿಯಂಡ್ರ ಮುದ್ದಪ್ಪನವರ [illegible] ...ಟಿಯವರು ಈ ಕೆಲಸವನ್ನು ಬರುವ 1922 ನೇ ಇಸವಿಯ ...ವರಿಯೊಳಗೆ ಪೂರೈಸಿಕೊಡುವದಾಗಿ ಒಪ್ಪಿ ಸೋಮಯ್ಯನವ ...ರುನೂರು ರೂಪಾಯಿ ಅಡ್ವಾನ್ಸು ಸಹ ಹೊಂದಿಕೊಂಡು ...ಪದ್ದತಿಯಲ್ಲಿ ವಿಶಿಷ್ಟ ನಕ್ಷತ್ರ [illegible] ...ನಿಂದ ಕಂಟ್ರಾಕ್ಟು ಹೊಂದಿಕೊಂಡಿರುವರೆಂದು ತಿಳಿಯು...

...|| 13-11-18 ರಲ್ಲು ಯುದ್ಧ ನಿಲ್ಲಿಸಲ್ಪಟ್ಟ [illegible] ...ಯೋಧರು ವ್ಯಕ್ತಪಟ್ಟ ವಿಷಯ [illegible] ...ನೇ ದಿನ ಪೂರ್ವಾಹ್ನ 11 ಘಂಟೆ [illegible] ...ನ್ನಿನವರು ಭಲಮುರಿ ದೇವಸ್ಥಾನ [illegible] ಮಹಾ ಪೂ... ಈ ಯೂನಿಯನ್ನಿನ ಶ್ರೀ|| ಮೆ|| ಬಿ. [illegible] ನವರ ಯುದ್ಧ... ...ಂದ ದೇವರ ನಡೆಯಲ್ಲಿ 2 [illegible] ...ಸಾದ ಸ್ವೀಕಾರವೊಡನೆ [illegible] ...ಕ್ಕೆರು ಬಿ. ಸುಬ್ಬಣ್ಣನವರು ಮಾಡಿದ ಸುಗಾಯನದಿಂದಲೂ ...ರಿ ಪ್ರಥುಕ್ತಕ್ಕೆ ಪ್ರತಿಗೂ ಅನ್ಯೋನ್ಯ ಸ್ನೇಹ [illegible] ...ಬಾಷಣೆಯೊಡನೆ ಸಭೆಯು ಮುಕ್ತಾಯವನ್ನೈದಿತು

ಹಿಂದೂದೇಶ.

...ಪ್ರಿಕರವಾದ ಇಂಗ್ಲೀಷು ಮತ್ತು ಅಫ್ಘಾನ್ ಕರಾರು ನವಂಬರು ...ು 22 ರಲ್ಲಿ ಕಾಬೂಲಿನಲ್ಲಿ ಸೈನ್ ಮಾಡಲ್ಪಟ್ಟಿದೆ

...ವಂಬರು ತಾರೀಖು 19 ರಲ್ಲು ಮಲಬಾರಿನ ಮಾಪಿಳ್ಳೆ ದಂಗೆ... ...ವ್ಯಕ್ತಿ ಕೈದು ಹಿಡಿದಿದ್ದ 127 ಜನರನ್ನು (ಹಿಂದುಗಳು ಮತ್ತು ...ಯವರು) ತಿರೂರಿನಿಂದ ಕೊಯಮುತ್ತೂರು ಜೈಲಿಗೆ ತೆಗೆದು... ...ಹೋಗುವ ಉದ್ದಿಕ್ಕ ಸಾಮಾನುಗಳ ತೆಗೆದುಕೊಂಡು ಹೋಗ... ...ವ (ಲಗ್ಗೇಜುವ್ಯಾನ್) ರೈಲ್ ಬಂಡಿಯಲ್ಲಿ ಕೂಡಿಸಿದ್ದರು. ... ...ವಂಟ ಸ್ಥಳಕ್ಕೆ ಬರಲು ಬಂಡಿಯ ಬಾಗಿಲು ತೆಗೆದು ನೋಡು... ...6 ಜನರು ಶ್ವಾಸಬಂಧನದಿಂದ ಮೃತಪಟ್ಟಿದ್ದರು. ಮಿಕ್ಕವರು ...ಹೊರಬಿದ್ದು ಸಾಯುವ ಸಂದರ್ಭದಲ್ಲಿದ್ದರು. ಇವರಿಗೆ ... ...ಡಿಸಿದನಂತರ ಬಳ್ಳಾರಿಗೆ ಕಳುಹಿಸಲ್ಪಟ್ಟರು. ಮೃತಪಟ್ಟ ಶವ... ...ಡಿಯಲ್ ಟ್ರೈನಿನಲ್ಲಿ ತಿರೂರಿಗೆ ಕಳುಹಿಸಲ್ಪಟ್ಟವು. 58 ಮಾಪಿ... ...ರ ಶವಗಳು ಅವರ ಪಳ್ಳಿಗಳಲ್ಲಿ ಹೂಳಲ್ಪಟ್ಟವು. ಮಿಕ್ಕ 4 ಹಿಂ... ...ಶವಗಳನ್ನು ಹಿಂದುಗಳು ಯಾರೂ ವಶಪಡಿಸಿಕೊಳ್ಳದ್ದರಿಂದ ...ಸಿನವರೇ ಹೂಣಿದರು.

...ವಂಬರು ತಾರೀಖು 21 ರವರೆಗಿನ ವಾರದಲ್ಲಿ ಮಾಪಿಳ್ಳೆ ದಂಗೆ... ...ಸಂಗಡ ನಡೆದ ಜಗಳದಲ್ಲಿ ಮಾಪಿಳ್ಳೆಯವರ ಪೈಕಿ 239 ಜನರು ...ಟ್ಟರು. 54 ಜನರು ಮತ್ತು 11 ಕೋವಿಗಳು ಹಿಡಿಯಲ್ಪಟ್ಟ... ...ಕಾರ ಸೈನ್ಯದ ಪೈಕಿ ಒಬ್ಬ ಗೂರ್ಖಾ ನೌಕರನು ಮೃತಪಟ್ಟನು. ...ಬ್ರಿಟಿಷ್ ಅಧಿಕಾರರೊಬ್ಬರು ಬಹಳವಾಗಿ ಗಾಯಹೊಂದಿರು... ...ತಾರೀಖು 14 ರಲ್ಲಿ ಪಿಂಡಿಕಾಡು ಎಂಬ ಸ್ಥಳದಲ್ಲಿ ಆದ ಜಗಳ... ...234 ಮಾಪಿಳ್ಳೆಯರೂ ಒಬ್ಬ ಬ್ರಿಟಿಷ್ ಅಧಿಕಾರನು 3 ನೌಕರರು ...ಪಟ್ಟರು ಮತ್ತು 34 ಜನರು ಗಾಯಪಟ್ಟರು. ಅಂತೂ ದಂಗೆ... ...ನವು ಆಗುತ್ತಲಿದೆ ಎಂದು ಮೊದಲಾಗಿ ಸರಕಾರದವರು ...ಳುತ್ತಾರೆ.

...ಇಂಗ್ಲೀಷರಿಗೆ ಕ್ಷೇಮಭಾವವಾದ ಕಣ್ಣಾನೂರುಪಟ್ಟಣದ ಮುನಿಸಿಪಾ... ...ಗೆ ಮೆ|| ರಾಜುಪಿಳ್ಳೆ ಎಂಬವರು ಚೇರ್‌ಮೇನರಾಗಿ ಚುನಾಯಿಸಲ್ಪ... ...ಟ್ಟಿದ್ದಾರೆ. ಇವರೇ ಮೊದಲನೇ ಇಂಡಿಯನ್ ಚೇರ್‌ಮೇನರಾಗಿ ...ದ್ದಾರೆ.

...ಕಲ್ಕತ್ತೆಯ ಎಂಬಲ್ಲಿರುವ ಶ್ರೀ ಹನುಮಾನ್ ದೇವಾಲಯದ ...ರ ಎರಡು ಗೋಡೆಯ ಹುಳಗಳ ಒಳಗೆಳೆದ. ಒಂದರಲ್ಲಿ “ ಮಹಾತ್ಮ ...ಯೋಗಿ ” ಎಂಬದಾಗಿಯೂ ಇನ್ನೊಂದರಲ್ಲಿ “ ಮಹಾತ್ಮ ...ಗಾನ್ ” ಎಂಬದಾಗಿಯೂ ಇಂಗ್ಲೀಷ್ ಶಬ್ದಗಳು ಮೇಯಲ್ಪಟ್ಟಿವೆ ...ಗಳನ್ನು ನೋಡಲು ಸಾವಿರಾರು ಜನರು ಹೋಗುತ್ತಲಿದ್ದಾರೆ

ಕಂಚೀವರದ ವರದರಾಜಸ್ವಾಮಿ ದೇವಾಲಯದ ರತ್ನ ಗೋಶ್ನ... ...ಗೆ ಬೆಂಕಿ ಹಚ್ಚಲ್ಪಟ್ಟು ದಹಿಸಲ್ಪಟ್ಟಿದೆ. ಬೆಂಕಿ ಯಾವರೀತಿಯಿಂದ ...ಬಿದ್ದು ಇನ್ನೂ ತಿಳಿದಿರುವದಿಲ್ಲ. ಪೋಲೀಸಿನವರು ತನಿಖೆಮಾಡುತ್ತ... ...ದ್ದಾರೆ. ಇದರಿಂದುಂಟಾಗುವ ನಷ್ಟವು 50,000 ರೂಪಾಯಿಗಳೆಂದು ...ಅಂದಾಜು ಮಾಡಲ್ಪಟ್ಟಿದೆ

...ಜಾಸ್ಸಿ ಡಿಸ್ಟ್ರಿಕ್ಟಿನ ಒಂದು ಗ್ರಾಮದಲ್ಲಿ ದೊಡ್ಡ ಒಂದು ದರೋ... ...ಯಾಗಿದೆ. ಸುಮಾರು 40 ದರೋಡೆಕೋರರು ಒಬ್ಬ ಬೇಂಕರನ ಮನೆ... ...ಗೆ ಮನೆಯವರಿಗೆಲ್ಲಾ ಘಾಯಮಾಡಿ 56,000 ರೂಪಾಯಿಗಳ ವಸ್ತು... ...ಲೂಟಿಮಾಡಿರುತ್ತಾರೆ. ಬೇಂಕರಿನ ತಾಯಿಯು ಘಾಯದ ದೆಸೆ... ...ಯಿಂದ ಮೃತಪಟ್ಟಳು

ಧಾರವಾಡ ಕೆಸರ್ ಪತ್ರಿಕೆಯವರು ಗಂಗಾಧರರಾವ್ ದೇಶಪಾಂಡೆ ...ಯವರಿಗೆ ಇ. ಪಿ. ಕೋಡು 124 ಎ. ಪ್ರಕರಣದಮೇರೆ 6 ತಿಂಗಳ ಸುಲ... ...ವನ್ನು ವಿಧಿಸಿರುತ್ತಾರೆ

ಸಾಲ್ವೇಷನ್ ಆರ್ಮಿಯ ಪ್ರಿನ್ಸಿಪಾಲ್ ಆರ್. ಎಂ. ಸಪ್ತಾರವ ...ಲಬಾರಿನಿಂದ ಮರೆತೊಳ್ಳೆ [illegible] ...ಕೆಲಸ ಉತ್ತಮ ತೋಂದರೆ ತೆಗೆದುಕೊಂಡಿದ್ದಾರೆ. ಅವರು ಮರೆತೊಳ್ಳೆ... ...ರು ತಂತ್ರ ರಚನ್ನು ತಯಾರಿಸುತ್ತಾ ಇದ್ದಾರೆ. ಕೈಗಾರಿಕ ಒಂದು ...ಲಿನಲ್ಲಿ ಸುಮಾರು 200 ಜನರಿಗೆ ಕೆಲಸಕ್ಕೆ ಅನುಕೂಲಿಸಿರು... ...ದೆ. ಅವರ ಹತ್ತಿರುವರ ಕೋರಿಕೆಮೇರೆ ವರ್ತಕರ ಮನೆಗ... [illegible] ಈ ಬಡಕಾರ್ಮಿಕರಿಗೆ ಬೇಕಾಗಿರುವ [illegible] ...ಸಾಮಾನುಗಳನ್ನು ಕಳುಹಿಸಿರುತ್ತಾರೆ.

ಮದರಾಸು ಅಧಿಕಾರದ ವಿದ್ಯಾಇಲಾಖೆಯ ಮಂತ್ರಿಯಾಗಿದ್ದ ದಿವಾನ್ ಬಹದ್ದೂರು ಸುಬ್ಬರಾಯಲು ರೆಡ್ಡಿಯವರು ತಾ|| 24 ರಲ್ಲು ಸ್ವರ್ಗಸ್ಥರಾದರೆಂಬ ವರ್ತಮಾನವು ವ್ಯಸನಕರವಾಗಿದೆ.

ತಾ|| 4 ರಲ್ಲು ನಡೆದ ಬೆಂಗಳೂರಿನ ಹರತಾಳದಲ್ಲಿ ಒಬ್ಬರು ಮುಸಲ್ಮಾನರನ್ನು ದಸ್ತಗಿರಿ ಮಾಡಿದ್ದರಿಂದ ಅವರನ್ನು ಬಿಡಿಸಲು ಕೆಲವರು ಕೇಳಲು ಗಲಾಟೆಯಾಗಿ ಪೋಲೀಸಿನವರು ಗುಂಡು ಹೊಡೆದ್ದರಿಂದ 8 ಜನರು ಗಾಯಪಟ್ಟವರ ಪೈಕಿ 3 ಜನರು ಸತ್ತರು. ಮಿಲಿಟರಿಯವರು ಬೀದಿಗಳಲ್ಲಿ ದಸ್ತು ತಿರುಗುತ್ತಿದ್ದಾರೆ. ಅನೇಕ ಅಂಗಡಿಗಳು ತೆರೆಯಲ್ಪಟ್ಟಿವೆ. ಈಗ ಗಲಾಟೆ ಏನೂ ಇರುವದಿಲ್ಲ.

ಬೊಂಬಾಯಿಯಲ್ಲಿ ಆದ ದೊಂಬಿಯ ವಿಷಯ ಪೋಲೀಸು ಮತ್ತು ಮಿಲಿಟರಿ ಅಧಿಕಾರಿಗಳು ಒಂದು ವಂಗಡಕ್ಕೆ ಸೇರಿಕೊಂಡು ಅವರಿಗೆ ಕೋವಿ ವಗೈರೆಗಳನ್ನು ಕೊಟ್ಟಿರುತ್ತಾರೆ ಎಂಬ ವರ್ತಮಾನಗಳು ಕೇವಲ ಸುಳ್ಳೆಂದೂ ಮೇಲಿನ ಅಧಿಕಾರಿಗಳು ಮುಖ್ಯವಾಗಿ ದೊಂಬಿಯನ್ನು ನಿಲ್ಲಿಸುವದರಲ್ಲಿ ಉದ್ಯುಕ್ತರಾಗಿದ್ದರೆಂದೂ ಇದರ ಫಲಿತಾಂಶವಾಗಿಯೆ ಗಲಾಟೆಯು ಹೆಚ್ಚಿನ ಪ್ರಾಣನಾಶವಿಲ್ಲದೆ ಶೀಘ್ರದಲ್ಲಿಯೇ ಅಡಗಿತೆಂದೂ ಸರಕಾರದವರು ಬರೆದಿರುತ್ತಾರೆ.

ಬೊಂಬಾಯಿ ದೊಂಬಿಯ ಕಷ್ಟದೆಸೆಯಿಂದ ನರಳುತ್ತಿರುವವರ ಕಷ್ಟನಿವಾರಣೆಗೋಸ್ಕರ ಸುಮಾರು 50,000 ರೂಪಾಯಿ ವಸೂಲಾಗಿರುತ್ತದೆ.

ಪಂಜಾಬ್ ಸರಕಾರದವರು ಕಿಲಾಫತು ಮತ್ತು ರಾಷ್ಟ್ರೀಯ ಸಭೆಗಳ ಉಮೇದುವಾರ ಸಭೆಗಳು ದೇಶದಲ್ಲಿ ಅಸಮಾಧಾನವನ್ನುಂಟುಮಾಡುತ್ತಿರುವದರಿಂದ ಈ ಸಭೆಗಳು ನ್ಯಾಯವಿರುದ್ಧ ಸಭೆಗಳೆಂದು ಪ್ರಕಟಿಸಿರುತ್ತಾರೆ.

ದಕ್ಷಿಣಕನ್ನಡ ಜಿಲ್ಲಾ ಡೆಪ್ಯುಟಿ ಜಾಯಿಂಟ್ ಮೆಜಿಸ್ಟ್ರೇಟರಾದ ಮೆ|| ಭಾರದ್ವಜರು ಇ. ಪಿ. ಕೋಡು 124 ಎ ಮತ್ತು 153 ರ ಮತ್ತು ಕ್ರಿ. ಪ್ರೊ. ಕೋಡು 112 ರ ಪ್ರಕಾರಗಳ ಮೇರೆ ಸೆರೆ ಹಿಡಿಯಲ್ಪಟ್ಟರು ತ್ತಾರೆ. ದೇಶಸೇವೆಗಾಗಿ ಸರು ಜೆಲ್ಲಿಯಲ್ಲಿ ಸೆರೆ ಹಿಡಿಯಲ್ಪಟ್ಟವರು ಇವರೇ ಮೊದಲನೆಯವರಾಗಿರುತ್ತಾರೆ. ಅವರು ಮನೆಬಿಟ್ಟು ಹೋಗುವ ಮುಂಚೆ ತನ್ನ ಚಿಕ್ಕ ತಾಯಿಯವರಿಗೆ ಸಾಷ್ಟಾಂಗವನ್ನು ಮಾಡಲು ಸೆರೆಮನೆಗೆ ಹೋಗಿ ಜಯಶೀಲನಾಗಿ ಬಾ ಎಂದು ಆಶೀರ್ವದಿಸಲ್ಪಟ್ಟರು.

ಲಾರ್ಡ್ ಸಿಂಹರವರ ರಾಜೀನಾಮೆಯು ಸ್ವೀಕರಿಸಲ್ಪಟ್ಟಿದೆ ಎಂದು ಮಹಂತ ಇದೆ. ಸರಕಾರದವರು ಈ ವಿಷಯದಲ್ಲಿ ಮೌನರಾಗಿದ್ದಾರೆ.

ಮದರಾಸು ಕೌನ್ಸಿಲ್‌ನಲ್ಲಿ ಮಾಪಿಳ್ಳೆ ಅಸಮಾಧಾನ ವಿಷಯ ಪಾನಗಲ್ ಎಂ. ಕೃಷ್ಣನ್‌ರವರು ಕೆಲವು ಪ್ರಶ್ನೆಗಳನ್ನು ಕೇಳಲು ನೋಟೀಸು ಕೊಟ್ಟಿರುವದಲ್ಲದೆ ತಪ್ಪು ಹತ್ತಿರವನ್ನು ತಿಳಿಗೆ ಗುರಿಮಾಡಲು ಸರಕಾರ ಮತ್ತು ದೇಶಿಯ ಮಿಶ್ರವಾದ ಒಂದು ಕಮಿಟಿಯನ್ನು ಬಹಿರಂಗವಾಗಿ ಈ ಅಸಮಾಧಾನದ ಕಾರಣಗಳನ್ನು ವಿಚಾರಿಸಲಿಕ್ಕೆ ನೇಮಿಸಬೇಕೆಂದು ಬಂದ ಮಾಡಿಯ ನೋಟೀಸನ್ನು ಕೊಟ್ಟಿರುತ್ತಾರೆ.

ವಿದೇಶ.

ರಷ್ಯಾದೇಶದ ಕ್ಷಾಮನಿವಾರಣೆಗಾಗಿ ಫ್ರಾನ್ಸ್‌ದೇಶದ ಪಾರ್ಲಿಮೆಂಟಿನವರು 60,000 ದ್ರವ್ಯಗಳನ್ನು ಮಂಜೂರುಮಾಡಿರುವರಾದರೆ ಫ್ರಾನ್ಸ್ ದೇಶದ ಕಡೆಯವರೇ ಈ ಧನವನ್ನು ಉಪಯೋಗಿಸಬೇಕೆಂದು ಏರ್ಪಾಡಾಗಿದೆ.

ಜಪಾನ ರಾಜರು ಅಸ್ವಸ್ಥರಾಗಿರುವದರಿಂದ ರಾಜ್ಯಾಧಿಕಾರಕ್ಕೆ ಯುವರಾಜರನ್ನು ರೀಜೆಂಟರಾಗಿ ನೇಮಿಸುತ್ತಾರೆ. ಸದರಿ ದೇಶದ ಮುಖ್ಯ ಮಂತ್ರಿಯಾಗಿ ಮಂತ್ರಾಲೋಚನಾ ಸಭೆಯಿಂದ ಒಬ್ಬರನ್ನು ನೇಮಿಸಿರುತ್ತಾರೆ.

ಹಿಂದೂಸ್ಥಾನದ ಬಹಿಷ್ಕಾರ ಮತ್ತು ಧಿಕ್ಕಾರಾಧರವರಮಯಿತ್ರರೆ ನಿಸಿಕೊಂಡಿರು ಶ್ರೀಮಾನ್ ಸಿ. ಎಫ್. ಎಂಡ್ರೂಸರವರನ್ನು ಈಸ್ಟ್ ಆಫ್ರಿಕದ ಕೈಲಿಸ್ಟೀನನಲ್ಲಿ ಯೂರೋಪಿ ಕೆಲವು ದುಷ್ಟರು ಹೊಡೆದು ಘಾಯಪಡಿಸಿರುವರೆಂದು ತಿಳಿಯಲು ವ್ಯಸನ ಪಡುತ್ತೇವೆ.

ಐರ್ಲೆಂಡ್ ಸ್ವಾತಂತ್ರ್ಯ ವಿಷಯವು ಇನ್ನೂ ಇತ್ಯರ್ಥವಾಗಿರುವದಿಲ್ಲ. ಅಲ್‌ಸ್ಟರ್ ಪ್ರಾಂತ್ಯದ ಪ್ರೊಟೆಸ್ಟಾಂಟ್ ಮತದವರು ಮಿಕ್ಕ ದೇಶದ ಕಾಥೋಲಿಕ ಜನರೊಡನೆ ಕಲೆತು ಅಧಿಕಾರ ನಡೆಸಲು ಸಮ್ಮತಿಸುವದಿಲ್ಲ. ಸೀನ್‌ಫೀನರು ಬ್ರಿಟಿಷ ಸಾಮ್ರಾಜ್ಯದ ಸಂಬಂಧವೇ ಬೇಡವೆಂದ ಹಠವಾದಿಗಳಾಗಿದ್ದಾರೆ. ಪೂರ್ಣ ಸ್ವತಂತ್ರಕೊಡುವದಕ್ಕೆ ಬ್ರಿಟಿಷರು ಒಪ್ಪುವದಿಲ್ಲ.

ಮಿ|| ಬಾಲ್‌ಪೋರರು ಬ್ರಿಟಿಷರ ಪರವಾಗಿ ವಾಶಿಂಗ್ಟನ್ ಸಭೆಯಲ್ಲಿ ಯುದ್ಧನಾವೆಗಳನ್ನು ಕಡಿಮೆಮಾಡುವದರ ವಿಷಯ ಅಮೇರಿಕಾದವರ ಸೂಚನೆಗಳನ್ನು ಅಂಗೀಕರಿಸಿರುತ್ತಾರೆ. ಇದರ ಫಲಿತಾಂಶವಾಗಿ ನೌಕಾ ಬಲವು ಕೆಲವು ವರ್ಷಗಳವರೆಗೆ ಹೆಚ್ಚಾಗಲಿಕ್ಕಿಲ್ಲ. ಭೂ ಸೈನ್ಯವನ್ನು ಕಡಿಮೆಮಾಡುವ ವಿಷಯದಲ್ಲಿ ಫ್ರಾನ್ಸ್ ದೇಶದ ಪ್ರತಿನಿಧಿಗಳ ಸೂಚನೆಗಳು ಮುಂದಿಡಲ್ಪಡಬಹುದು.

ಪತ್ರವ್ಯವಹಾರಗಳು.

ವ್ಯಕ್ತಿಗಳು ಮತ್ತು ಅಭಿಪ್ರಾಯಗಳಿಗೆ ಪತ್ರಕರ್ತರು ಉತ್ತರವಾದಿಗಳಲ್ಲ. [ಎಡಿಟರ್]

ಸಂಪಾದಕರೇ,

ಕೊಡಗು ಜವಿಲಾನಾಡಿನ ವರದಿ ಎಲ್ಲಾ ಯುನೈಟೆಡ್ ಲೀಗ್ ಕಮಿಟಿ ಮೆಂಬರುಗಳಲ್ಲಿ ಸಂಬಂಧಪಟ್ಟ ತಾಲ್ಲೂಕು ಬಾರ್ಡ್ ಸೆಕ್ರೆಟರಿ ಯನ್ ಆರ್ ಸುಬ್ಬಣ್ಣಯ್ಯನ ಪ್ರಾರ್ಥನೆ. ನಾನು ಈ ಕೆಳಗೆ ಬರೆದಿರುವ ಸಂಗತಿಯನ್ನು ನಮ್ಮ ಜನಸಾಮಾನ್ಯದ ಸಂಘದಲ್ಲಿ ತರಬೇಕೆಂತ ಇಷ್ಟಪಡುತ್ತೇನೆ. ಈ ಸಂಘದ ಕಮಿಟಿಯ ಎಲ್ಲಾ ಮೆಂಬರುಗಳಿಗೂ ನಮಸ್ಕರಿಸುತ್ತೇನೆ ಎಂಬುತ್ತೇನೆ. ಹಾಗೆ ಒಪ್ಪುವವರು ತಮ್ಮ ಅಭಿಪ್ರಾಯವನ್ನು ಇದೇ ಕೊಡಗು ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಕೇಳಿಕೊಳ್ಳುತ್ತೇನೆ.

(A) “ ನಮ್ಮ ಜನಸಾಮಾನ್ಯ ಸಂಘಕ್ಕೆ ಬರುವಂಥ ಎಲ್ಲಾ ಕಾಗದಪತ್ರಗಳ ನಕಲನ್ನು ಪ್ರತಿಯೊಬ್ಬ ಕಮಿಟಿ ಮೆಂಬರರಿಗೂ ಕಳುಹಿಸಿಕೊಡಬೇಕು. ಮತ್ತು ಸಂಘದಿಂದ ಹೊರಗೆ ಕಳುಹಿಸುವಂಥ ವಿಶಿಷ್ಟ ಕರೆಸ್ಪಾಂಡೆನ್ಸಿನ ನಕಲೂ ಸಹ ಪ್ರತಿ ಕಮಿಟಿ ಮೆಂಬರರಿಗೂ ಕಳುಹಿಸಬೇಕು. (B) ಯಾವ ವಿಷಯದಲ್ಲಿಯಾದರೂ ಸಹ ಕಮಿಟಿ ಮೆಂಬರುಗಳ ವಿಚಾರಣೆ ಮಾಡಿ ಅದರಲ್ಲಿ ಇತ್ಯರ್ಥವಾದಂತೆ ಯಾವ ಜವಾಬಾಗಲೀ ಮೇಲಕ್ಕೆ ಕಳುಹಿಸಬೇಕು. ಮತ್ತು

ಕಮಿಟಿ ಮೆಂಬರುಗಳ ಸಮ್ಮತಿಯಿಲ್ಲದೆ ಸಂಘದ ಪ್ರೆಸಿಡೆಂಟರು ಸ್ವಂತ ಅಧಿಕಾರದಿಂದ ಯಾವ ಪತ್ರವ್ಯವಹಾರವೂ ಸಂಘದ ಪರವಾಗಿ ಯಾರ ಸಂಗಡಲೂ ಮಾಡಬಾರದು. ”

ವಾಚಕರು ಒಪ್ಪುವಂತೆ

ತಾ|| 22-11-21 ರಲ್ಲು ಕೊಡಗು ಪ|| ಅ|| ಕಮಿಟಿಯ ಸಂಪದು ಕಿಗ್ಗಟ್ಟುನಾಡು ತಾಲ್ಲೋಕು ಜಾತಿ ಜವಾ ಒಂದಿಯಲ್ಲಿ ಈಗ ಕೊಡಗಿಗೆ ಕೊಡಲಿರುವ ಕೌನ್ಸಿಲ್ ವಿಷಯಕ್ಕಾಗಿ ಜನರ ಚಳವಳಿ ಸಂಗತಿಯಾಗಿ ಮಾಡಿದ ಸಂಭಾಷಣವೇನೆಂದರೆ —

ಈಗ ಮದರಾಸಿಗೆ ಕೊಟ್ಟ ರಿಯಾಯಿತಿಯು ಯಾವ ವಿಧದಲ್ಲೂ ನಮ್ಮ ಕೊಡಗಿಗೆ ಸಿಕ್ಕಲಾರದೆಂಬುದು ಕಳೆದ ಜಮಾಬಂದಾರರಾದರ ವಿಚಾರಣೆಯಲ್ಲಿ ಮ|| ರಾ|| ಬಿದ್ದಂಡ್ರ ಕುಟ್ಟಪ್ಪನವರು ಹೇಳಿದ್ದು ನಿಮಗೆಲ್ಲ ತಿಳಿಯುವದು. ಅಬಕಾರಿ ಮತ್ತು ಫಾರೆಸ್ಟು ಇಲಾಖೆಗಳ ಉತ್ಪತ್ತಿಯು ಇನ್ನು ಬರುತ್ತ ಬರುತ್ತ ಕಮ್ಮಿಯಾಗುವದು ನಮಗೆಲ್ಲರಿಗೂ ತಿಳಿದ ಸಂಗತಿಯಾಗಿದೆ. ಆದ್ದರಿಂದ ಅಂಥಾ ಕೌನ್ಸಿಲಿಗೆ ಜ ನಾಮಿನೇಟು ಮಾಡುವ ಮಂತ್ರಿಗಳಿಗೆ ಸಂಬಳ ಕೊಡಬೇಕಾಗುವದರಿಂದ ಇಲ್ಲಿನ ಉತ್ಪತ್ತಿಯು ಆ ವಿಷಯಕ್ಕೆ ಸಾಲದೆ ತೋರುವದಲ್ಲ. ಮದರಾಸಿಗೆ ಸೇರಿಸುವದರಿಂದ ಒಳ್ಳೆಯದೂ ಆಗಬಹುದು. ಕೆಟ್ಟದೂ ಆಗಬಹುದು. ಆದರೆ ಅದರಲ್ಲಿ ಒಳ್ಳೆಯ ಹೆಚ್ಚಿನ ಅಂಶವು ಯಾವುದೆಂದು ತಿಳುಕೊಳ್ಳುವ ಸಂಗತಿ ನೀವು ಆಲೋಚಿಸಬೇಕಾಗಿದೆ. ಅದರ ನಂತರ ನಿಮ್ಮ ನಿಮ್ಮ ಸ್ವಂತ ಆಲೋಚನೆಯ ಮೇರೆ ನಮ್ಮ ಕಳಿಸಬೇಕಾಗಿದೆ.

ನಾನು ನಿಮಗೆ ಯಾವದು ಒಳ್ಳೆಯದು ಯಾವದು ಕೆಟ್ಟದ್ದು ಎಂಬ ಸಂಗತಿ ಬಿಡಿಕವಾಗಿ ಹೇಳುವದಿಲ್ಲ. ಇದೇ ಪ್ರಕಾರವಾಗಿ ನಾನು ಬೇರೆ ಕಡೆಗಳಲ್ಲಿನ (ಈ ತಾಲ್ಲೋಕಿನ) ಜಮಾಬಂದಿಯಲ್ಲಿಯೂ ಸಹ ಮಾತನಾಡಿರುತ್ತೇನೆ. ಯಾವ ಚಳವಳದಲ್ಲಿಯೂ ರಾಜಿಮೂಲ (Compromise) ಮಧ್ಯೆ ತೀರ್ಮಾನವನ್ನು ಹಿಂಬಾಲಿಸುವದೇ ದೇಶೋನ್ನತಿಗೆ ಕಾರಣವಾಗಿದೆ.

ರೈತರು ಉದ್ಯೋಗಸ್ಥರನ್ನು ಅನಾವಶ್ಯಕವಾಗಿ ದೂಷಿಸುವದು ದೊಡ್ಡ ತಪ್ಪಾಗಿದೆ. ಅನ್ಯೋನ್ಯ ತಿಳುವಳಿಕೆಯಿಂದಲೂ ಪ್ರೀತಿಯಿಂದಲೂ ಇರುವಂತೆ ಉಭಯರುಗಳದವರೂ ನಡಕೊಳ್ಳಬೇಕಾಗಿದೆ. ಬೇರೊಬ್ಬರ ಮೇಳಿಕೆಮೇರೆ ನಿಂದನೆಯ ವೃತ್ತಿಯು ಕೇಡುಂಟುಮಾಡುವ ಸಂದರ್ಭಕ್ಕೆ ಬರುವದು. ಯಾರೇ ಆಗಲಿ ಮನಸ್ಸಿನಲ್ಲಿರುವದನ್ನು ಬಚ್ಚಿಡದೆ (Frank) ಹೊರಪಡಿಸುವದು ಕಾರ್ಯೋನ್ನತಿಯ ಮೂಲವಾಗಿದೆ.

ಮ|| ರಾ|| ನಡಿಕೇರಿಯಂಡ್ರ ಚಿಣ್ಣಪ್ಪನವರು ಕೊಡಗಿನವರ ಮುಂದಿನ ಅಭಿವೃದ್ಧಿ ವಗೈರೆಗಳ ವಿಷಯವಾಗಿ ತಿಳಿಯುವದರಿಂದಲೂ ಅನುಭವಶಾಲಿಗಳಿಂದಲೂ ತಿಳಿದು ಒಂದು ಪುಸ್ತಕವನ್ನು ಬರೆದಿರುತ್ತಾರೆ. ಅದನ್ನು ಮುದ್ರಿಸಲಿಕ್ಕೆ ಕಮಿಟಿಯವರ ಸಹಾಯಬೇಕು. ಅದು ರೂಪಾಯಿ ಕೊಡುತ್ತೇನೆಂದು ವಾಗ್ದಾನಮಾಡಿದ್ದಕ್ಕೆ ಕೆಲವು ಜನರು “ ಕೊಡವಸಭೆ ” ಮಾಡಲಿಕ್ಕೆ ಸರಕಾರದಿಂದ ಅನೇಕ ರೂಪಾಯಿಯನ್ನು ಹೊಂದಿಕೊಂಡಿರುತ್ತಾರೆಂತ ಹೇಳುವದು ಬಹು ದೊಡ್ಡ ಸುಳ್ಳಾಗಿದೆ. ಅದರ ನಂತರ ತಾಲ್ಲೋಕಿನ ಈ ವರ್ಷದ ಬೆಳೆಯು ಬಹು ಕಮ್ಮಿಯಿರುವದರಿಂದ ರೈತರು ಮುಂದಿನ ಜಮಾಬಂದಿ ಮುಂಚೆ ಇನ್ನು ಬೇಗನೆ ನಡೆಯಿಸಬೇಕಾಗಿದೆಯೆಂದೂ, ಮಾತನಾಡಿದರು. ಆರ್ಥಿಕ ಕಷ್ಟಸುಖಗಳನ್ನು ಸಾಂಗವಾಗಿ ವಿಚಾರಿಸಿ ಜಮಾಬಂದಿಯನ್ನು ಜರಗಿಸಿದರು. ಅನಂತರ ಕಡೇಮಾಡ ಚೆಣ್ಣಪ್ಪನವರು ಪ|| ಅ|| ಕಮಿಟಿಸದಸ್ಯರಾದ ಮೆ|| ಕೆ. ಚಂಗಪ್ಪನವರಿಗೆ ಸಿಕ್ಕಿದ ಪಿ. ಪಿ. ಪದವಿಗಾಗಿ ಕೆಲವು ಮಾತುಗಳನ್ನಾಡಿ ಅವರ ಮುಂದಿನ ಉನ್ನತಸ್ಥಿತಿಗೆ ದೇವರು ಒಳ್ಳೆಯದು ಮಾಡಲೆಂದು ಹೇಳಿ ವಂದಿಸಿದರು.

ಎಮ್. ಪಿ.

ಅಯ್ಯಾ,

ಇದೇ ನವಂಬರ್ ತಾರೀಖು 23 ನೇ ಸಂಚಿಕೆಯ ಕೊಡಗು ಪತ್ರಿಕೆಯಲ್ಲಿ ‘ ಸ್ವಸ್ತ್ರೀಯ ’ ರ ಒಂದು ವಾರ್ತೆಯನ್ನು ಓದಿದೆನು. ಈ ವಾರ್ತೆಯು ಸ್ಪಷ್ಟವಾಗಿ ಕೆಲವು ಸಂಗತಿಗಳು ನನಗೆ ಅರ್ಥವಾಗುವ ಹಾಗಿಲ್ಲವಾದುದರಿಂದ ‘ ಸ್ವಸ್ತ್ರೀಯ ’ ರು ದಯವಿಟ್ಟು ಈ ಕೆಳಗಿನ ಪ್ರಶ್ನೆಗಳಿಗೆ ಜವಾಬು ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಸದರಿ ವಾರ್ತೆಯ ಪ್ರಥಮ ಪ್ರಕರಣದಲ್ಲಿ ನಮೂದಿಸಿದ ನಾಲ್ಕುವರ್ಣಗಳ ಪೈಕಿ ಸದ್ಗೃಹಸ್ಥರು ಯಾವ ವರ್ಣಕ್ಕೆ ಸೇರಿದವರು? ಅವರಂಥ ಕೊಡಗು ಯುವಕರು ಅವರವರ ಆಚಾರಗಳನ್ನು ಬಿಟ್ಟು ಕಾಪಾಡಬೇಕು. ಆಚಾರಗಳನ್ನು ಕೈಕೊಂಡರೆಂಬ, ಅವರು ಹೇಳುತ್ತಾರೆ. ಅವರ ಪೂರ್ವದ ಆಚಾರಗಳ್ಯಾವವು. ಮತ್ತು ವೇದಾಂತ ಸಂಘಕ್ಕೆ ಸೇರಿದಮೇಲೆ ಹೊಸದಾಗಿ ಅವಲಂಬಿಸಲು ಮಾಡಿದ ಆಚಾರಗಳ್ಯಾವವು ‘ ವೇದಾಂತ ಸಂಘಕ್ಕೆ ಸೇರಿರುವ ಯುವಕರು ನೀರಿದ್ದಂತೆ ಅವರ ವರ್ಣಭೇದಕ್ಕೂ ಶಾಸ್ತ್ರ ಆಚಾರಕ್ಕೂ ಒಂದು ಕಂದಕವಾಗಬೇಕು. ’ ವೇದಾಂತ ಸಂಘವನ್ನು ದೂಷಿಸಿ ಅಜ್ಞಾನವನ್ನು ಬೆಳೆಸುತ್ತಿರುವ ಕೊಡಗಿನ ಸಂಘವನ್ನು ಯಾವ ವಿಧದಲ್ಲಿ ಮನಸಿ...

ದರೆಂಬುದನ್ನು ಸಹ ಸ್ವಲ್ಪ ವಿವರಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಸಜ್ಜನ ಪ್ರಿಯರು ಅವರ ಎಷ್ಟನೇ ವಯಸ್ಸಿನಿಂದ ಎಷ್ಟನೇ ವಯಸ್ಸಿನವರೆಗೆ ಅವರು ಹೇಳುವ 'ವಿಶೇಷತರದ' ವೇದಾಂತವನ್ನು ಕೈಕೊಂಡು ಯಾವ ಆಚಾರವನ್ನು ಬಿಟ್ಟು ಅವರು ಅನುಭವಿಸಿದ ಕಷ್ಟಸುಖಗಳ್ಯಾವವು? ಅವರು ಅಕ್ಟೋಬರ್ 31 ನೇ ತಾರೀಕಿನಿಂದ ಪರಿಯಾಪ ಕೊಡಗರಾಗಿ ಕಾಪಾಡಿಕೊಂಡು ಬರುವ ವರ್ಣಾಶ್ರಮ ಧರ್ಮ ಮತ್ತು ಕುಲಾಚಾರಗಳ್ಯಾವವು ವೇದಾಂತವನ್ನು ಅವಲಂಬಿಸುತ್ತಿದ್ದಾಗ ಅವರು ಯಾವ ರೀತಿಯಲ್ಲಿ ಸರಿಯಾದ ಕೊಡಗನಾಗಿರಲಿಲ್ಲ?

ವೇದಾಂತವನ್ನು ಕೈಕೊಂಡು ಕುಲಾಚಾರವನ್ನು ಬಿಟ್ಟು ಇಹಪರಸುಖಗಳೆರಡನ್ನೂ ಕಳೆದುಕೊಳ್ಳಬೇಕೆಂದು ಧೃಢೀಕರಿಸಿ ಹೇಳುವ ಬುದ್ಧಿವಾದವನ್ನು ಓದಿ ತುಂಬಾ ವ್ಯಾಕುಲ ಚಿತ್ತನಾಗಿದ್ದೇನೆ. ಈ ಮೇಲಿನ ಪ್ರಶ್ನೆಗಳಿಗೆ ಉತ್ತರ ದೊರೆತ ಮೇಲೆ ಇದರ ವಿಷಯ ನನಗೆ ತಿಳಿದಷ್ಟಿಗೆ ಬರೆಯಲಪೇಕ್ಷಿಸುತ್ತೇನೆ.

ಪಿ. ಯಂ. [illegible]

ಅಯ್ಯಾ,

ನಾನು ಕೊಡಗಿಗೆ ಕಳೆದ ಅಕ್ಟೋಬರ್ 1 ನೇ ತಾರೀಖಿನಲ್ಲು ಈಸ್ಟ್ ಆಫ್ರಿಕಾದಿಂದ ಬಂದು ಸೇರಿದೆನು. ಅಂದಿನಿಂದ ಈವರೇಗೆ ನನ್ನನ್ನು ಜನರು ಆ ದೇಶದ ಗುಣ ಲಕ್ಷಣಗಳನ್ನು ಕಂಡಕಂಡಲ್ಲಿ ಕೇಳುತ್ತಾರೆ. ಆದುದರಿಂದ ನಿಮ್ಮ ಪೇಪರಿನಲ್ಲಿ ಈ ಕೆಳಗೆ ನಮೂದಿಸಿದ ಸಂಗತಿಗಳನ್ನು ನಮ್ಮ ದೇಶದವರಿಗೆ ತಿಳಿಸಲಪೇಕ್ಷಿಸುತ್ತೇನೆ.

(1) "ಆ ದೇಶದ ಹವಾ ಸಾಧಾರಣ ಮೈಸೂರು ದೇಶದ ಹವವನ್ನು ಹೋಲುತ್ತದೆ. ಅದರೆ ಇನ್ನೂ ಕೆಲವು ಒಳ್ಳೇ ಸ್ಥಳಗಳಲ್ಲಿ ವಾಯುಗುಣವು ನಮ್ಮ ಹಿಂದೂದೇಶದ ಇತರ ಒಳ್ಳೇ ಸ್ಥಳಗಳನ್ನು ಹೋಲುತ್ತದೆ. ಆ ಸ್ಥಳಗಳು ಇಂಗ್ಲೀಷ್ ಜನರಿಗೂ ಹಿಂದೂದೇಶದ ಜನರಿಗೂ ಹಿತಕರವಾಗಿರುವುದು. ಅದರೆ ಆಫ್ರಿಕದಲ್ಲಿ ಸಾಧಾರಣ ಎಲ್ಲಾ ಸ್ಥಳವು ಚಳಿಜ್ವರ ಪ್ರದೇಶವಾಗಿರುವುದು (Malaria). ಅದರೆ ನಮ್ಮ ಕೊಡಗು ದೇಶದವರಿಗೆ ಇದು ಹೆಚ್ಚು ಬಾಧೆಯನ್ನು ಕೊಡುವುದಿಲ್ಲ. ನಾನು ತಿಳಿದಷ್ಟಿಗೆ ಉಷ್ಣಮಾಪಕ ಯಂತ್ರವು 55 ಡಿಗ್ರಿಗಳಿಗಿಂತ ಹೆಚ್ಚಾಗಿ ಯಾವ ಪಟ್ಟದಲ್ಲಿಯೂ ಮೇಲಕ್ಕೆ ಹೋಗಿರುವುದಿಲ್ಲ."

(2) "ಆ ದೇಶವು ಸಾಧಾರಣ ಜನರು ಯೋಚಿಸುವಹಾಗೆ ಮರುಭೂಮಿಯಾಗಿರುವುದಿಲ್ಲ. ಅಲ್ಲಿ ಮೊದಲು ಜರ್ಮನಿಯವರ ಆಳಿಕೆಯಲ್ಲಿ ಹಿಂದೂದೇಶದಲ್ಲಿ ಬೆಳೆಯುವ ನಾನಾ ಪೈರುಗಳನ್ನು ಬೆಳೆಸುತ್ತಿದ್ದರು. ಆ ಪೈರುಗಳನ್ನು ಅಲ್ಲಿಯ ಮೂಲನಿವಾಸಿಗಳು ಈಗಲೂ ಬೆಳೆಸುತ್ತಾರೆ. ಮುಖ್ಯವಾಗಿ ಜೋಳ, ಮೆಕ್ಕೆಜೋಳ, ಕಡ್ಲೆ, ಹತ್ತಿ, [illegible] ತೆಂಗಿನಕಾಯಿ, ರಬ್ಬರ್, ನಾನಾತರದ ನಾರುಗಿಡಗಳು, ಅಂಥ ಕೆಲವು ಎತ್ತರವಾದ ಸ್ಥಳಗಳಲ್ಲಿ ಕಾಪಿ, ಕಿತ್ತಳೆಹಣ್ಣು, ಬಾಳೆಹಣ್ಣು, ಮಾವಿನಹಣ್ಣು, ಹಲಸಿನಹಣ್ಣು ನಾವಿನಲ್ಲಿ (ಗೊಬ್ಬರವಿಲ್ಲದೆ ಬೆಳೆಯುತ್ತದೆ) ಇದಲ್ಲದೆ ನಾನಾತರದ [illegible] ತರಕಾರಿಗಳು ಹೆಚ್ಚಾಗಿ ಬೆಳೆಯುತ್ತದೆ."

(3) "ಆ ದೇಶದಲ್ಲಿ ನಮ್ಮ ಹಿಂದೂ ದೇಶದ ಎಲ್ಲಾ ಭಾಗಗಳ ಜನರನ್ನು ನೋಡಬಹುದು. ಇವರ ಪೈಕಿ ಗುಜರಾತಿಗಳು ಮುಖ್ಯ ವ್ಯಾಪಾರಸ್ಥರಾಗಿರುತ್ತಾರೆ. ಯೂರೋಪ ದೇಶದ ಅನೇಕ ಜನರನ್ನು ಸಹ ನೋಡಬಹುದು. ಇವರು ಮುಖ್ಯವಾಗಿ ಸರಕಾರದ ಕೆಲಸಗಳಲ್ಲಿಯೂ, ವ್ಯಾಪಾರಮಾಡುವುದರಲ್ಲಿಯೂ ಮತ್ತು ವ್ಯವಸಾಯ ಮಾಡುವುದರಲ್ಲಿಯೂ ಅವರ ಕಾಲಗಳನ್ನು ಕಳೆಯುವವರಾಗಿರುತ್ತಾರೆ. ಅಲ್ಲಿಯ ಮೂಲನಿವಾಸಿಗಳು ಮುಖ್ಯವಾಗಿ ವ್ಯವಸಾಯಗಾರರಾಗಿರುತ್ತಾರೆ. ಇವರಲ್ಲಿ ಕೆಲವರು ವ್ಯಾಪಾರವನ್ನು ಸಹ ಮಾಡುತ್ತಾರೆ."

"ನಮ್ಮ ಇಂಗ್ಲಿಷ್ ಸರಕಾರವು ರೈಲ್ವೆಯಿಂದಲೂ ನಾನಾತರದಲ್ಲಿ ವೃದ್ಧಿಯನ್ನು ಹೊಂದಿಸುತ್ತಾರೆ. ಇಂಗ್ಲಿಷ್ ಮತ್ತು ಸ್ವೇಲಿ (Swahili) ಶಾಲೆಗಳನ್ನು ನಿರ್ಮಿಸಿರುತ್ತಾರೆ."

ಅದರ ಬಂದರು ಪಟ್ಟಣಗಳಿಗೆ ತಿಂಗಳಿಗೆ ನಾಲ್ಕೈದು ಹಡಗುಗಳು ಬರುತ್ತಾ ವ್ಯಾಪಾರ ನಡಿಯುತ್ತದೆ. ಹಿಂದೂದೇಶದ ಹಡಗುಗಳು ಸಹ ಎಡೆ ಇಲ್ಲದೆ ಬರುತ್ತಾ ಹೋಗುತ್ತಾ ಇರುತ್ತವೆ. ಈ ಕಾರಣದಿಂದ ಆ ದೇಶವು ವ್ಯಾಪಾರದಲ್ಲಿ ಉನ್ನತಸ್ಥಿತಿಯನ್ನು ಹೊಂದಿರುತ್ತದೆ.

(4) "ಅಲ್ಲಿಯ ಮೂಲನಿವಾಸಿಗಳು ಸಾಧಾರಣವಾಗಿ ಕಪ್ಪು ಜನರಾಗಿರುತ್ತಾರೆ. ಇವರ ಮತವು ಮಹಮದೀ ಮತವಾಗಿರುತ್ತದೆ. ಇನ್ನು ಕೆಲವು ಜನರು ಕ್ರಿಸ್ತಮತದವರಾಗಿರುತ್ತಾರೆ. ಅವರ ಕೋರ್ಟು ಭಾಷೆ ಈಗ ಇಂಗ್ಲಿಷ್ ಆಗಿದ್ದರೂ ಇವರು ಮೊದಲು ಸ್ವೇಲಿ (Swahili) ಎಂಬ ಭಾಷೆಯನ್ನು ಉಪಯೋಗಿಸುತ್ತಿದ್ದರು. ಅವರು ಬಿಳೇ ನಿಲುವಂಗಿಗಳನ್ನು ಧರಿಸಿಕೊಳ್ಳುತ್ತಾರೆ.

(5) "ಸರಕಾರವು ವ್ಯಾಪಾರ ನಡೆಯುವುದಕ್ಕೋಸ್ಕರ ಅನುಕೂಲವಾಗುವಂತೆ ರೈಲು ಗಾಡಿಗಳನ್ನು ಮತ್ತು ಇತರ ಪ್ರಯೋಜನಕರವಾದ ಕೆಲಸಗಳನ್ನು ಮಾಡಿರುತ್ತಾರೆ."

(6) "ಇಲ್ಲಿಯ ಕಾಡು ಗಳಲ್ಲಿ ನಾನಾತರದ ಕಾಡು ಮೃಗಗಳನ್ನು ನೋಡಬಹುದು, ಕಾಡಾನೆ ಸಿಂಹ, ಹುಲಿ ಮತ್ತು ತೋಳಗಳನ್ನು ನೋಡಬಹುದು. ದೊಡ್ಡ ದೊಡ್ಡ ನದಿಗಳಲ್ಲಿ ನೀರಾನೆ, ನೀರು ಕುದುರೆ, ಮೊಸಳೆ ಮೊದಲಾದ ನೀರಿನಲ್ಲಿ ಜೀವಿಸುವ ಪ್ರಾಣಿಗಳನ್ನು ನೋಡಬಹುದು."

"ಸಮುದ್ರ ಮತ್ತು ನದಿಗಳಲ್ಲಿ ಜನರು ಹೆಚ್ಚಾಗಿ ಮೀನುಗಳನ್ನು ಹಿಡಿದು ಜೀವಿಸುತ್ತಾರೆ."

(7) "ನನ್ನ ಈ ದೇಶದ ಕೆಲವರು ಅಲ್ಲಿಯ ಜನರು ನರಭಕ್ಷಕರೆಂದು ಯೋಚಿಸುತ್ತಾರೆ. ಇದು ಬಹು ಪೂರ್ವದಲ್ಲಿ ನಡಿಯುತ್ತಿತ್ತು. ಅದರೆ ಈಗ ಅಂಥಾದ್ದೇನೂ ಇರುವುದಿಲ್ಲ. ಈಗ ಅಂಥಾ ಜನರನ್ನು ಎಲ್ಲಿಯೂ ಕಾಣುವುದಿಲ್ಲ. ಒಳ್ಳೆ ಪಟ್ಟಣಗಳಲ್ಲಿ ಹೆಚ್ಚಾಗಿ ಹಿಂದೂದೇಶದ ಇಂಗ್ಲಾಂಡ್ ದೇಶದ ಮತ್ತು ಅರೇಬ್ಯಾ ದೇಶದ ಜನರು ಪೂರ್ವದಲ್ಲಿ ಜನರನ್ನು ಹಿಡಿದು ಮಾರಲಿಕ್ಕಾಗಿ ಆ ದೇಶಕ್ಕೆ ಬಂದರು. ಈಗ ಅಂಥದ್ದೇನೂ ಇರುವದಿಲ್ಲ. ಅವರು ವ್ಯಾಪಾರ ವ್ಯವಸಾಯ ಮೊದಲಾದವುಗಳನ್ನು ನಡಿಸಿಕೊಂಡಿರುತ್ತಾರೆ. ಆ ಜನಗಳಿಗೆ ಸಂದ ಪದ್ಧತಿಯು ಇರುವದು.

"ಸಾಧಾರಣ ಮಟ್ಟಿಗೆ ನೋಡಿದಲ್ಲು ಆ ದೇಶವು ಎಲ್ಲಾ ಬಾಬುಗಳಲ್ಲಿಯೂ ಮುಂದರಿಯುತ್ತಾ ಇರುವುದು."

"ನಮ್ಮ ಕೊಡಗು ದೇಶದ ಜನಗಳು ವರ್ಷದಲ್ಲಿ 6 ತಿಂಗಳು ಕೆಲಸವನ್ನು ಮಾಡಿ 6 ತಿಂಗಳುಗಳನ್ನು ಅನಾವಶ್ಯಕವಾಗಿ ಕಳೆದು ಬಿಡುತ್ತೇವೆ. ಇದು ದೊಡ್ಡ ಅನ್ಯಾಯವಾಗಿರುವುದು. ನಾವು ನಮ್ಮ ಸಮಯವನ್ನು ಕಳೆಯದೆ [illegible] ಪ್ರತಿಯೊಂದು ಮಾರ್ಗವನ್ನು [illegible] ಒಂದಲ್ಲಿ ನನ್ನ ಅಸ್ತೆ ಒಳ್ಳೆ ಮತ್ತು [illegible] ಕಾಲವನ್ನತ್ತಿ [illegible] ಗೋಳಾಡುವ ಅವಶ್ಯವಿಲ್ಲ. ನಮ್ಮ [illegible] ಪ್ರಯೋಜನ [illegible] ನಮ್ಮ ಕೊಡಗಿನ [illegible] ಉತ್ಪತ್ತಿಯ ಮುಖ್ಯ ಭಾಗ [illegible] ನಡಿಸಿಕೊಂಡು ಬರಬಹುದು. ಇದು [illegible] ಸಹಾಯಕರಾಗುವುದಲ್ಲದೆ ನನಗೆ [illegible] ಸಹಾಯ ಮಾಡಿದವರಾಗುವೆವು."

ಸಿ. ಯಂ. ಬಿದ್ದಯ್ಯ.

ಕೊಡಗು ವಿದ್ಯಾಭಿವೃದ್ಧಿಯ ಸಂಘದ ಫಂಡಿನ ವಿಷಯವಾಗಿ.

ಸ್ವಾಮಿ,

ಈ ಫಂಡಿನ [illegible] ನಾನು ಈ ಮೊದಲು ಒಂದು ವಿಷಯದ [illegible] ಫಂಡಿನ ಸೆಕ್ರೆಟರಿಯವರು ಈ [illegible] 19 ರ ಪತ್ರಿಕೆಯಲ್ಲಿ ಪ್ರಕಟಿಸುವ ಜವಾಬನ್ನು ಓದಿ ನನಗೆ ತುಂಬಾ ಆಶ್ಚರ್ಯವೂ ವಿಷಾದವೂ ಫಂಡಿನ [illegible] ವ್ಯಸನವೂ ಉಂಟಾಗುತ್ತೆ. ಅವರು ನಾನು ಕೇಳುವ [illegible] ಸರಿಯಾದ ಜವಾಬುಕೊಡದೆ ಅನಾವಶ್ಯಕದ ದೋಷಗಳಲ್ಲಿ ಆದರೆ ನನ್ನನ್ನು ಇವರು ರಿಪೋರ್ಟಿನಲ್ಲಿ [illegible] ಈ ಕಮಿಟಿಗೆ ನನ್ನನ್ನು ಮೆಂಬರಾಗಿ [illegible] ಯಾವ ಕೆಲಸವು ಮಾಡದೆ ಕಮಿಟಿಯ ಒಟ್ಟು [illegible] ಪಡೆಯುವ [illegible] ವಗೈರೆ [illegible] ಮಾತುಗಳು [illegible] ನೋಡಿದರೆ ಇವರು ಫಂಡಿನ ಸೆಕ್ರೆಟರಿ ಕೆಲಸವನ್ನು [illegible] ಎಂಬುದು ಪರಿಷ್ಕಾರವಾಗುತ್ತೆ. ಲೋಕೋಪಕಾರವಾದ ಫಂಡಿನ ಸೆಕ್ರೆಟರಿ ಕೆಲಸವನ್ನು ಒಪ್ಪಿಕೊಂಡು ವರ್ಷಕ್ಕೊಂದು ಮೀಟಿಂಗ್ ನಡಿಸದೆಯೂ ಫಂಡಿನ ಹಣ ವಸೂಲಿ ವಿಷಯದಲ್ಲಿ ಕಷ್ಟಪಟ್ಟು [illegible] ಕಮಿಟಿ ಮೆಂಬರುಗಳ [illegible] ತಿಂಗಳು [illegible] ತಿಂಗಳವರೆಗೆ ಮೀಟಿಂಗ್ [illegible] ಮಾಡಿದ್ದು ಸಹ [illegible]

ಮೀಟಿಂಗಿನಲ್ಲಿ [illegible] ಆಕ್ಷೇಪಿಸಲಿಲ್ಲವೆಂಬ ಪ್ರಶ್ನೆ [illegible] ಸೆಕ್ರೆಟರಿಯವರು ಇವರ ರಿಪೋರ್ಟನ್ನು ಮೀಟಿಂಗಿನ ಮುಂದೆ [illegible] ಮೆಂಬರುಗಳಿಗೆ ಪರ್ಯಾಲೋಚನ ಮಾಡಿ [illegible] ಸರಿ ಕಾಣದಿಂದ ಲೋಪ ಮತ್ತು ಆಕ್ರಮಗಳ [illegible] ಆಲೋಚಿಸಿ ಮೀಟಿಂಗಿನಲ್ಲಿ ಹೇಳಬಹುದಿತ್ತು [illegible] ಕಾಲದಲ್ಲಿ ಆಕ್ಷೇಪಿಸಲು ಅನುಕೂಲಿಸದ [illegible] ಈಗ ಪತ್ರಿಕೆಯಲ್ಲಿ ಪ್ರಕಟಿಸಲು ಯಾವ ಬಾಧಕವೂ [illegible] ಮತ್ತು ಪತ್ರಿಕೆಯಲ್ಲಿ ಇಂಥಾ ವಿಷಯಗಳು ಬರೆಯುವದರಿಂದ [illegible] ಎಲ್ಲಾ [illegible] ತಿಳಿಯಲಿಕ್ಕೆ ಮತ್ತು ಆಕ್ರಮ [illegible] ತಿದ್ದಿ ಸರಿಪಡಿಸಲಿಕ್ಕೆ ಅವಕಾಶ ಉಂಟಾಗುತ್ತೆ.

ಕಮಿಟಿ [illegible] ಸೆಕ್ರೆಟರಿಯವರು [illegible] ಹೇಳುವ ಕಾರಣ ನೆಪದಿಂದ ಸೆಕ್ರೆಟರಿಯವರು [illegible] ಕಮಿಟಿ [illegible] ಕಮಿಟಿಯಿಂದ [illegible] ತೀರ್ಮಾನಗಳ ನೆರವೇರಿಸುವುದಕ್ಕಾಗಿ [illegible] ಅದರಿಂದ [illegible] ಕಮಿಟಿಯ [illegible] ವಹಿಸಿದ್ದು [illegible] ರಿಪೋರ್ಟು [illegible]

[illegible]

ಸ್ವಂತ ರಿಪೋರ್ಟು ಅಲ್ಲ ಎಂಬುದು ಸರ್ವರು ಒಪ್ಪತಕ್ಕ ಸಂಗತಿಯಾಗಿದೆ.

ಕಾಡುಬಸವೈಯ್ಯ ಯಾನೆ ದೇವರುದ್ರೈಯ್ಯನೆಂಬನಿಗೆ ಕೊಟ್ಟ ಹಣದ ಒಡ್ಡಿಯಿಂದ ಕೊಡುವ ಸ್ಕಾಲರ್ ಶಿಪ್ಪಿಗೆ ಇವರ ಹೆಸರಿಟ್ಟು ಯಾವಾಗಲೂ ಪ್ರತ್ಯೇಕಕೊಡುತ್ತಾ ಬರಬೇಕೆಂದು ಒಂದಾನೊಂದು ಮೀಟಿಂಗಿನಲ್ಲಿ ತೀರ್ಮಾನವಾಗಿತ್ತು. ಆ ರೀತಿ ಜಾರಿ ಮಾಡಿಲ್ಲ ಎಂಬದಾಗಿ ಆಕ್ಷೇಪಿಸಿದಕ್ಕೆ ಸೆಕ್ರೆಟರಿಯವರು ತಪ್ಪನ್ನು ತಿದ್ದಿ ಸರಿಪಡಿಸುವದ ಬಿಟ್ಟು ಮೇಲೆಹೇಳಿದ ಕಮಿಟಿಯವರ ಫೈಸಲನ್ನು ನಿರಾಕರಿಸಿ ಸದರಿ ದೇವರುದ್ರೈಯ್ಯ ಯಾನೆ ಕಾಡುಬಸವೈಯ್ಯ ನವರನ್ನು ಮೀಟಿಂಗಿಗೆ ಕರಸಿ ಕುರ್ಚಿಯಲ್ಲಿ ಕೂರಿಸಿ ಮರ್ಯಾದೆ ಮಾಡುತ್ತಿ ವರ್ಷವರ್ಷವೂ ಇವರ ಹೆಸರೆತ್ತುವರು ಏಕೆ ಎಂಬ ಪ್ರಶ್ನೆಗೆ ಜವಾಬು ಕೊಟ್ಟದ್ದಕ್ಕೆ ಏನೆಂದು ಹೇಳಲಿ. ಇದು ಇವರ ಸ್ವಂತದ ತಪ್ಪು ಅಭಿಪ್ರಾಯ ವಾಚಕರೇ, ಸೆಕ್ರೆಟರಿಯವರು ಕಮಿಟಿಯ ಅಭಿಪ್ರಾಯಗಳ ನೆರವೇರಿಸಬೇಕಲ್ಲ. ಹೀಗೆ ತಮ್ಮ ಮನಸ್ಸೋಯಿಚ್ಛೆ ಅಭಿಪ್ರಾಯಪಟ್ಟರೆ ನಮ್ಮ ಫಂಡು ಮುಂದೆ ಯಾವ ಸ್ಥಿತಿಗೆ ಬರುವದು ಎಂಬ ಸಂಗತಿ ಆಲೋಚನೆ ಮಾಡಬೇಕಾಗಿದೆ. ಫಂಡಿಗೆ ದೊಡ್ಡ ಮೊಬಲಗು ದಯಪಾಲಿಸಿದವರ ಹೆಸರನ್ನೇ ಇಷ್ಟು ಶೀಘ್ರದಲ್ಲಿಯೇ ಮರೆಯಲು ಯತ್ನಿಸುವ ಈ ವಗೈರೆ ಕಾರಣಗಳಿಂದಲೇ ಈ ಫಂಡಿಗೆ ಬರಬಹುದಾಗಿದ್ದ ಭಾರಿ ಮೊಬಲಗನ್ನು ಒಬ್ಬ ದೊಡ್ಡ ಮನುಷ್ಯರು ಎಂಡೋಮೆಂಟ್ ಫಂಡಿಗೆ ಸರಕಾರದವರ ವಶಕ್ಕೆ ಒಪ್ಪಿಸಿದರೆಂದು ನಾನು ನಂಬುತ್ತೇನೆ. ಇದಲ್ಲದೆ ಇನ್ನೊಬ್ಬರು ದೊಡ್ಡ ಮನುಷ್ಯರು ಕೊಡಗಿಯ ಮಕ್ಕಳ ವಿದ್ಯಾಭ್ಯಾಸಕ್ಕೆಂದು ಬಿಟ್ಟಿರುವ ಭಾರೀ ಮೊಬಲಗು ಸಹ ಮೇಲೆ ನಮೂದಿಸಿದ ಸರಕಾರದವರ ಅಧಿಕಾರಕ್ಕೇನೆ ಹೋಗುವ ಸಂದರ್ಭ ಸಹ ಕಾಣಬರುತ್ತೆ.

ಫಂಡಿನಿಂದ ಸಹಾಯಹೊಂದಿದವರನೇಕರು ಈಗ ಒಂದೆರಡು ವರ್ಷಗಳಲ್ಲಿಯೇ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ ಸರಕಾರಿ ಉದ್ಯೋಗ ಮುಂತಾದ್ದರಲ್ಲಿ ಸೇರಿ ಸಂಪಾದನೆ ಮಾಡುವವರಾಗಿ ತಮ್ಮ ಉದ್ಯೋಗ ದರ್ಮೆಯ ಮೇಲೆ ತಾವು ಸೆಕ್ಯೂರಿಟಿ ಹಣ ಪ್ರಾವಿಡೆಂಟ್ ಫಂಡ್ ಮುಂತಾದ್ದರಲ್ಲಿ ಸೂಕ್ತ ರಿಯಾಯಿತಿಗಳು ಇಟ್ಟಿರುವಂತೆ ತಿಳಿಯಬರುತ್ತೆ. ಇವರ ಹೆಸರು ಕುಟ್ಟವೇ ವಗೈರೆ ನಮೂದಿಸಿ ವಷ್ಟ ತಯಾರಾತಿಯಿಂದ ಮೀಟಿಂಗಿನಲ್ಲಿ ಕಮಿಟಿಯವರ ಮುಂದೆ ಅರ್ಜಿ ಅವರು ತೀರ್ಮಾನಮಾಡುವಷ್ಟು ಮೊಬಲಗು ಪ್ರತಿಯೊಬ್ಬನಿಂದಲೂ ಮಾಹೆಯಾನ ಸೆಕ್ರೆಟರಿಯವರು ವಸೂಲ್ಮಾಡುವದು ಇವರ ಕೆಲಸವಾಗಿದೆ. ಹಾಗೇನೂ ಮೀಟಿಂಗಿನಲ್ಲಿ ವೈಸಲ್ಮಾಡಿಸಿ ಹಣ ವಸೂಲ್ಮಾಡಿದಂತೆ ಕಾಣಬರುವದಿಲ್ಲ. ಈ ವಿಷಯದಲ್ಲಿ ಮಾಡಿದ ಪ್ರಶ್ನೆಗೆ ಸೆಕ್ರೆಟರಿಯವರು ಯಾವ ಜವಾಬು ಕೊಟ್ಟಿರುವದಿಲ್ಲ. ತಾವು ಮಾಡಬೇಕಾದ ಕೆಲಸಗಳ ಮಾಡದೆ ಸೆಕ್ರೆಟರಿಯು ಬಹುಮಾನದ ಹೆಸರನ್ನು ಇಟ್ಟುಕೊಂಡರೆ ನಮ್ಮ ಫಂಡು ಹ್ಯಾಗತಾನೆ ಉನ್ನತಸ್ಥಿತಿಗೆ ಬರಬೇಕು. ತಿಪ್ಪೆಗೆ ತಗಲಿ ಹೋಯಿತೆಂದು ಗುಟುಕ್ಕೆ ತಗಲಹಾಕಿ ಕೊಡುಕೊಂಡರೆ ಬೋಳಿಗೆ ತಾನಾಗಿಯೇ ತುಂಬುವದುಂಟೆ? ಇವರ ಲೋಪ ಮತ್ತು ಆಕ್ರಮಗಳ ತೋರ್ಪಡಿಸುವವರೆ ಫಂಡಿಗೆ ಕೆಡಕುಮಾಡುವವರೆಂದು ಇವರ ಪ್ರಕಟಣೆಯಲ್ಲಿ ಸೂಚಿಸುತ್ತಾರೆ. ಇದು ಎಷ್ಟುಮಾತ್ರಕ್ಕು ಸರಿಯಲ್ಲ. ಆಲೋಚಿಸಿ ನೋಡಿದರೆ ಲೋಕೋಪಕಾರಕ್ಕಾಗಿ ಏರ್ಪಡಿಸಿದ ಈ ಫಂಡಿನ ಕೆಲಸಗಳ ನಡಿಸಲು ಒಪ್ಪಿಕೊಂಡು ಈ ರೀತಿ ನ್ಯಾಯವಾಗಿ ನಡಿಸದೆ ಉದಾಸೀನದಿಂದ ನಡಕೊಳ್ಳುವವರು ಖಂಡಿತವಾಗಿಯು ಫಂಡಿಗೆ ಕೆಡಕುಮಾಡುವರೆಂದೇ ಭಾವಿಸಬೇಕು.

ರೂಲ್ಸಿಗೆ ವಿರೋಧವಾಗಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದೆ ತನ್ನ ಸ್ಕಾಲರ್ ಷಿಪ್ಪನ್ನು ಕಳಕೊಂಡ ಒಬ್ಬ ಯುವಕನಿಗೆ ಮರಳಿ ಸ್ಕಾಲರ್ ಷಿಪ್ ಕೊಟ್ಟದ್ದುಂಟೊ ಎಂದು ಕೇಳಿದ ಪ್ರಶ್ನೆಗೆ ಸರಿಯಾದ ಜವಾಬುಕೊಡದೆ ಮೊದಲಾಗಿ ರೂಲ್ಸಿಗೆ ವಿರೋಧವಾಗಿ ಸ್ಕಾಲರ್ ಷಿಪ್ ಕೊಟ್ಟದ್ದಿಲ್ಲ ಎಂದು ಸೆಕ್ರೆಟರಿಯವರು ಬರೆಯುತ್ತಾರೆ. ಸೆಕ್ರೆಟರಿಯವರಿಗೆ ಸುಲಭವಾದ ಮತ್ತು ಪಾಡಿಕೆಯಲ್ಲಿರುವ ಕನ್ನಡ ಭಾಷೆಯಲ್ಲಿ ಬರೆದ ನನ್ನ ಪ್ರಶ್ನೆಯು ಅರ್ಥವಾಗಲಿಲ್ಲವೆಂದೆಣಿಸಿ ಮರಳಿ ಸದರಿ ಪ್ರಶ್ನೆಯನ್ನು ವಿವರವಾಗಿ ಬರೆಯುತ್ತೇನೆ. ಅದೇನೆಂದರೆ ಒಬ್ಬ ವಿದ್ಯಾರ್ಥಿ ಕುಟ್ಟಪ್ಪನೆಂಬವನು ಫಂಡಿನಿಂದ ಸ್ಕಾಲರ್ ಷಿಪ್ ಹೊಂದಿಕೊಂಡು ಎಫ್. ಎ. ಎಂಬ ಪರೀಕ್ಷೆಗೆ ಓದಿ ಪರೀಕ್ಷೆಯಲ್ಲಿ ಸೋತು ತನ್ನ ಸ್ಕಾಲರ್ ಷಿಪ್ಪನ್ನು ಕಳಕೊಂಡನು. ಇವನಿಗೆ ಮರಳಿ ಸಹಾಯಕೊಡಲು ರೂಲ್ಸಿನಲ್ಲಿ ಅನುಕೂಲಯಿಲ್ಲ. ಈ ಯುವಕನಿಗೆ ಸ್ಕಾಲರ್ ಷಿಪ್ ಕೊಟ್ಟಿರುವರೆಂದು ನಾನು ಕೇಳಿದ ವರ್ತಮಾನ ನಿಜವೋ ಸುಳ್ಳೋ ಎಂಬದಕ್ಕೆ ಸೆಕ್ರೆಟರಿಯವರು ದಯವಿಟ್ಟು ಜವಾಬು ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ. ಇವರು ಫಂಡಿಗೆ ಕೊಡಲು ದ್ರವ್ಯದಾನದ ರೋಗ ಇತ್ತೆಂಬೂ ಇದನ್ನು ಬೇರು ಸಮೇತ ಕಿತ್ತು ನಾಶಪಡಿಸುತ್ತೇವೆಂದು ಬರೆಯುವದು ಅತ್ಯಂತ ಸೋಜಿಗವಾದ ಹೇಳಿಕೆಯಾಗಿದೆ. ಅದರೆ ಇವರು ಹಾಗೆ ಮಾಡುವ ಸಂದರ್ಭ ಇಲ್ಲಾದು. ಈಗ ದಸ್ಸಖಾತ ಹೊಲ ರೋಗದ ಬೀಜವನ್ನು ತಾವೇ ಬಿತ್ತಿ ಪೋಷಿಸುವಂತೆ ನನಗೆ ವಿಲವಾಗಿಯೂ ತೋರುಬರುತದೆ. ಇವರು ಸ್ವಾರ್ಥದ ಬೀಜವನ್ನು ಬೆಳೆಯಲು ಬಿಟ್ಟದ್ದರಲ್ಲಿ ನಮ್ಮ ಲೋಕೋಪಕಾರ

[illegible]

...ಗೆ ಬರೆಯಲು ಕಾರಣವಿಲ್ಲದೆ ನನ್ನನ್ನು ಸಸ್ಪೆಂಡು ಮಾಡಿ ಸ್ವತಃ ಕಮಿಟಿ ಮೆಂಬರು ಇಲ್ಲದೇ ಕಾಗದ ಎಷ್ಟು ಕಾಲಕ್ಕೆ ಬರೆದದ್ದಲ್ಲ ಕಂಡಿತವಾಗಿ ಹೇಳುತ್ತೇನೆ. ಸಸ್ಪೆಂಡಿಯವರೆ ಕಂಡ ಕೊಂಡದರಿಂದ ಹೀಗೆ ಹಾನಿಯಾಗಿ ತಾವು ಕಷ್ಟ ಪಡಬೇಕಾಗಿ ಹಿತಚಿಂತಕರೇ ಹೆದರಬೇಡಿರಿ ಭಯವಡ ಎಂದೂ ಮತ್ತು ಮೇಲೆ ನವ ಜನಿಸಿದ ಅನಿವಾರ್ಯದ ಗೆ ಮಾತುಗಳಾದ್ಯಕ್ಕೆ ಭಯಯಾಗಿ ಚಿಂತಿಸಬೇಡಲು ವೇನಿದೆ. ನ್ಯಾಯವಾದ ಸಂಗತಿಗೆ ಈ ಕಾಲದಲ್ಲಿ ಯಾವ ಪಕ್ಷ ಹೆದರುವದಿಲ್ಲವೆಂಬ ಸಂಗತಿ ನಮಗೂ ತಿಳಿಲ್ಲ. ತಮ್ಮ ಜವಾಬನ್ನು ಕೆಲವು ಪಟ್ಟಿಗೆ ಕಟ್ಟಿಸಿಂದ ವಾದ ಬಾಧೆಯಲ್ಲಿ ಬಂದಂತೆ ಕಾಣುತ್ತೆ ಇದರಿಂದ ಲಾಭವೇನು. ತಮ್ಮ ಭಾಷೆಯ ಕಠಿಣತ್ವದ ಪ್ರಯೋಜನ್ನು ತಾವು ಈ ಮೊದಲೆ ಒಂದೆರಡುಸಾರಿ ತಿಳಿದರು ಇಂನಾದರು ಕಠಿಣತ್ವವನ್ನು ಬಿಟ್ಟು ಮೃದುನುಡಿಗ ಇರುವ ಸಂಗ್ತಿಗಳ ಇರುವದಾಗಿ ದಯವಿಟ್ಟು ಜವಾಬಿಡಿ. ಮತ್ತು ಕಟ್ಟಿಂಬ ಸಿಕಾಚನ್ನು ತ್ಯಜಿಸಿ ಸವಾಮೆಂಬ ದೇವತೆಯನ್ನು ಪೂಜಿಸುವವರಾಗಿ. ಹಿತಚಿಂತಕರದ ಸಂಗ್ತಿಗೆ ಮುಂದಕ್ಕೆ ಅವರು ಬಾಯಿಮುಚ್ಚಿ ಕೊನ್ನು ಕಠಿಣವಾದ ಜವಾಬು ಕೊಟ್ಟೆಯೆಂಬ ಪದ್ಧತಿ ಸ ಮುಖ್ಯವಾಗಿ ಲೋಕೋಪಕಾರಕ್ಕಾಗಿ ಜನಿಸಿರುವನು ಬಂದ ಚಾಚುಕನ್ನು ಯಾವ ಕೆಡಕು ಮತ್ತು ಮರ ಗುರಿಪಡಿಸದೆ ಕಾಪಾಡಿ ಧರ್ಮ ಮತ್ತು ಸತ್ಯ... ಬಯಸುವ

Coorg Commissioner's office,
Dated the 21st November 1921

The following appeal issued by Chief Scout for ...les on behalf of His Royal Highness the Prince ...Wales' Boy Scout Fund is published for general ...rmation. All subscriptions to this fund, how... small, will be greatefully accepted and may be ... to the Manager, Coorg Commissioner's office.

(Sd.) HILTON BROWN
Offg. Commissioner

St. Jame's Palace. S. W.

During my recent tours I had an opportunity of ...ing the strength of the Boy Scout Movement ... spread to every land and corner of the empire, ... its possibilities for the future, both at home ... overseas, are very great.

There is an erroneous impression abroad that the ...k of the Boy Scouts is carried on without ...ney; unfortunately, this is a complete miscon...ption of the position. Considerable sums are ...uired to meet his expenses of the Association ... least £200,000 is essential in order to "carry ... and to put the movement on a sound footing.

On all sides I hear of greatful admiration for the ...n who have voluntarily carried out this work for ...r younger brothers during the past 12 years. I ...t to suggest that everybody who feels with me ...uld express it by subscribing to a fund, which ... could then offer to the Scouts' Association as a ...rk of appreciation for its splendid work.

The movement, as I have seen for myself is ...lthy and growing steadily last year it increased ...numbers and efficiency beyond all expectation.

Will you help it to double its numbers this next ...r?

Sd. ......
Chief Scout for Wales

ಮುಜ್ರಾಯಿ ಇಲಾಖೆಯಿಂದ.

ಪ್ರಸಿದ್ಧಪತ್ರಿಕೆ.

...ದರಿಂದ ಸಮಸ್ತ ಜನರಿಗು ತಿಳಿಯಪಡಿಸುವದೇನಂದರೆ – ಕೊಡಗು ದೇವಸ್ಥಾನಗಳ ಆಡಳಿತ ಒಗ್ಗೆ ಚೀಫ್ ಕಮಿ...ರ್ ಸಾಹೇಬರವರ ರೆಗ್ಯುಲೇಶನ್ ಅನುಸರಿಸಿ ಮಡಿಕೇರಿ ...ತ್ತ ಪಾಡಿನಾಲ್ಕು ನಾಡುತಾಲ್ಲೋಕುಗಳಿಗೆ ನೇಮಕ ...ದ ಕಮಿಟಿ ಮೆಂಬರು ಮ|| ರಾ|| ಪಿ. ಅಪ್ಪಚ್ಚನವರ ...ತ್ತು ಮಡಿಕೇರಿ ಸಂಬರಾಜಪಟ್ಟಣ ತಾಲ್ಲೋಕುಗಳಿಗೆ ...ಮಕವಾಗಿದ್ದ ಕಮಿಟಿ ಮೆಂಬರು ಮೃತಪಟ್ಟಿರುವ ಮ|| ...|| ಕೆ. ಸುಬ್ಬರಾಯರವರ ಸಹ ಮೆಂಬರುತನದ ಅವಧಿಯು ...ಒಯವ ಸನ್ 1922 ನೇ ಇಸವಿ ಜನವರಿ ತಾ|| 15 ಕ್ಕೆ ...ರೈಸುವದರಿಂದ ಐವರು ಬೇರೆ ಮೆಂಬರುಗಳ ಚುನಾ...ವಣೆಕ್ಕ ಬಗ್ಗೆ ಸನ್ 1922 ನೇ ಇಸವಿ ಜನವರಿ ತಾರೀಖು ...ನೇ ಆದಿತ್ಯವಾರ ದಿನ ಮಡಿಕೇರಿ ಓಂಕಾರೇಶ್ವರ ದೇವ...ಸ್ಥಾನದ ಸಾರ್ವಜನಿಕ ಹಾಲಿನಲ್ಲು ಆರ್ಡಿನರಿ ಪ್ರಕಾರ ...ನ್ನು ದಾಖಲ್ ಮಾಡಲು ಟೆಲ್ಲರಾಗಿ ಟೆಂಪಲ್ ಕಮಿಟಿ ...ಬರು ಮ|| ರಾ|| ಕೆ. ಕಾಳಪ್ಪನವರನ್ನು ಟೆಂಪಲ್ ಮೇ...ಜರು ಬಿ. ಯಸ್. ಐಯ್ಯಪ್ಪನವರನ್ನು ನೇಮಿಸಿದೆ. ಎಡೆ...ಲ್ಯನಾಡು ಮತ್ತು ಕಿಗ್ಗಟ್ಟುನಾಡು ತಾಲ್ಲೋಕುಗಳಿಗೆ ...ಮಕವಾದ ಮೆಂಬರು ಸಿ. ಕೆ. ಕುಟ್ಟಪ್ಪನವರ ಅವ...ಯು ... [illegible] ...ಇವರ ಜವಾಬು ಬೇರೆ ಮೆಂಬರನ್ನು ಚುನಾಯಿಸುವದಕ್ಕೆ ಸಹ 1922 ನೇ ಇಸವಿ ಜನವರಿ ತಾರೀಖು 18 ನೇ ಬುಧವಾರದ ದಿನ ವೀರರಾಜೇಂದ್ರಪ್ಯಾಟೆ ಮ|| ರಾ|| ಅಡಿಕೆ ನಂಜಪ್ಪನವರ ಚತ್ರದಲ್ಲು ಆರ್ಡಿನರಿ ಪ್ರಕಾರ ಓಟುಗಳ ದಾಖಲ್ ಮಾಡಲು ಎಡೆನಾಲ್ಕುನಾಡು, ಬೆಪ್ಪುನಾಡು ಪಾರುಪತ್ತೆಗಾರರು ಮ|| ರಾ|| ಕೆ. ಚಂಗಪ್ಪನವರನ್ನು ಟೆಂಪಲ್ ಮೇನೇಜರು ಬಿ. ಯಸ್. ಐಯ್ಯಪ್ಪನವರನ್ನು ನೇಮಿಸಿದೆ.

ಓಟುಗಳ ದಾಖಲ್ ಮಾಡಲು ನಿಶ್ಚಯವಾದ ಆಯಾ ಸ್ಥಳಗಳಲ್ಲು ಆಯಾಯ ತಾರೀಖು ದಿನ ಹಗಲು 12 ಘಂಟೆಯಿಂದ ಸಾಯಂಕಾಲ 5 ಘಂಟೆವರೆಗೆ ಮೇಲ್ಕಂಡ ಟೆಲ್ಲರ್ರುಗಳ ಸಮಕ್ಷಮದಲ್ಲು ಓಟುಗಳು ತೆಗೆಯಲ್ಪಡುತ್ತೆ. ಕಮಿಟಿ ಮೆಂಬರಾಗಲು ಬಯಸುವವರು ಅವರುಗಳ ಅರ್ಜಿಯನ್ನು ಈ ಕೆಳಗೆ ಸ್ವನ್ ಮಾಡಿದವರ ಆಫೀಸಿಗೆ 1 ದಿನಕ್ಕೆ ಮುಂದಾಗಿ ರವಾನಿಸಬೇಕಾದ ವಿವರ ಸೂಚಿಸಿದೆ.

ಕೆ. ಚಂಗಪ್ಪ,
ಪ್ರೆಸಿಡೆಂಟ್.

ಮಾರಾಟಕ್ಕೆ

ಅಸ್ಸಿಪದೆಯಿಂ—ಭೂಮಾಲೀಕರಾಗಿ—ಚಾಪಕೊಂದಿರಿ.

ಗೋಣಿಕೊಪ್ಪಲಿಂದ ತಿತಿಮತ್ತಿಗೆ ಹೋಗುವ ರಸ್ತೆ ಬಾಜು ಒಂಟಿ ಅಂಗಡಿ ಬಳಿ ಇರುವ (40) ನಲುವತ್ತು ಎಕರೆ ಕಾಫಿತೋಟ ಮತ್ತು (25) ಇಪ್ಪತ್ತೈದು ಎಕರೆ ಕಾಡು. ಸಹ ಒಳ್ಳೆ ಸ್ಥಿತಿಯಲ್ಲು ಇರುವದು. ಹುಡುಕ್ತಯಕ್ಕೆ ಮಾರಾಟವಾಗುತ್ತೆ ಇದರಲ್ಲಿ ಕಾಫಿ ಮೆಣಸು ವಗ್ಯೆರೆ ಪಸಲಿಂದ ವರ್ಷ ಒಂದಕ್ಕೆ ಸುಮಾರು (ರೂ. 5000) ಐದು ಸಾವಿರ ರೂಪಾಯಿ ಉತ್ಪಾದನೆ ಆಗುತ್ತದೆ. ಹೆಚ್ಚಿನ ವಿಷಯಕ್ಕೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ. 4–4

ಮೇನೇಜರ್	Manager,
ವೀರರಾಜಪೇಟೆ ವರ್ಕ್ಸ್,	Virajapet Works,
ವೀರರಾಜಪೇಟೆ	Virajapet.

ನೋಟೀಸ್.

ಕೋ ಆಪರೇಟೀವ್ ಸೆಂಟ್ರಲ್ ಬ್ಯಾಂಕಿನ ಶೇರು ದಾರರಿಗೂ ಸಂಬಂಧಪಟ್ಟವರಿಗೂ ಆದಕ್ಕೆ ಸೇರಿದವರ ಮತ್ತು ಸೇರಲಿಚ್ಛಿಸು ವವರು ಜನರಲ್ ಮೀಟಿಂಗ್ 1921 ನೇ ಇಸವಿ ಡಿಸೆಂಬರ್ ತಾರೀಖು 4 ನೇ ಆದಿತ್ಯವಾರದ ದಿನ 2 ಗಂಟೆಗೆ ಮುನಿಸಿಪಲ್ ಆಫೀಸಿನಲ್ಲಿ ನಡೆಯುತ್ತೆ. ಈ ಬ್ಯಾಂಕನ್ನು ಅಭಿವೃದ್ಧಿಗೊಳಿಸುವ ಅಪೇಕ್ಷೆಯುಳ್ಳವರೆಲ್ಲರೂ ಹಾಜರಾಗ ಬೇಕಾಗಿ ಕೋರುತ್ತೇವೆ.

ವಿಷಯಗಳು.

ಡೈರೆಕ್ಟರುಗಳನ್ನು ಚುನಾಯಿಸುವವದು.
ಇತರ ಅರ್ಜೆಗೆ ಬರಬಹುದಾದ ವಿಷಯಗಳು.

ಮಡಿಕೇರಿ,	ಕೆ ಕುಟ್ಟಯ್ಯ,
11–11–1921	ಯಮ್. ಭುಜಂಗರಾವ್,
	Conreners.

COORG TEACHERS' CO-OPERATIVE STORES, Ltd.,

ಕೊಡಗು ಉಪಾಧ್ಯಾಯರ ಕೋ ಆಪರೇಟಿವ್ ಸ್ಟೋರ್ಸ್, ಲಿಮಿಟೆಡ್, ಮಡಿಕೇರಿ.

ಈ ಸ್ಟೋರ್ಸಿನಲ್ಲಿ ಶಾಲಾ ಪಠ್ಯಪುಸ್ತಕಗಳು, ಸ್ಟೇಷನರಿ ಸಾಮಾನುಗಳು ಮತ್ತು ಸೊಗಸಾದ ಎಕ್ಸರ್ಸೈಜು ಪುಸ್ತಕಗಳು ದೊರೆಯುತ್ತವೆ. ಕ್ರಯ ಸುಲಭ, ಮಾಲು ಉತ್ತಮ. ಕೊಡಗಿನಲ್ಲಿ ಈ ತರ ಸ್ಟೋರ್ಸ್ ಇದೊಂದೇ. ಮಾಲುಗಳನ್ನು ಕೋರಿದವರಿಗೆ ವಿ. ಪಿ. ಮೂಲಕ ಕಳುಹಿಸ ಲಾಗುತ್ತೆ. 12–10

AN APPROVED FIRM FOR THE SUPPLY
FOR STATIONERY ARTICLES TO THE GOVT. OF
H. H. the Maharaja of Mysore.

ನಮ್ಮಲ್ಲಿ ಎಲ್ಲಾ ವಿಧವಾದ ಸ್ಟೇಷನರಿ ಸಾಮಾನು ಗಳೂ, ಫೌಂಟೇನ್ ಪೆನ್ನುಗಳೂ, ಪ್ರಿಂಟಿಂಗ್ ಮತ್ತು ರೂಲಿಂಗ್ ಮೆಷಿನುಗಳೂ, ಎಕ್ಸರ್ಸೈಜ್ ಬುಕ್ಕುಗಳೂ, ಸ್ಟೂಡೆಂಟ್ಸ್ ನೋಟ್ ಬುಕ್ಕುಗಳೂ, ರಫ್ ನೋಟು ಬುಕ್ಕುಗಳೂ, ಡ್ರಾಯಿಂಗ್ ಮತ್ತು ಟೈಪ್‌ರೈಟಿಂಗ್ ಪೇಪರುಗಳೂ, ವರ್ತಕರಿಗೆ ಅನುಕೂಲವಾದ ಅಕೌಂಟು ಬುಕ್ಕುಗಳೂ ಸಹ ಸಸಪಾದ ಕಾಗದದಿಂದ ತಯಾರಾಗಿ ವಿಕ್ರಯಕ್ಕೆ ಸಿದ್ಧವಾಗಿವೆ. ದುಯಂ ಕಾಗದದಿಂದ ತಯಾರಿಸಿರುವ ಬುಕ್ಕುಗಳನ್ನು ಕೊಂಡ ಪ್ರೋತ್ಸಾಹಿಸಬೇಕಾಗಿ. ಬೇಕಾದ ಸಾಮಾನುಗಳಿಗೆ ಕಾಗದ ಆರ್ಡರ್ ಕೊಡುವದಾಗಿ ನಂಬಿದ್ದೇವೆ. ವ್ಯಾಪಾರಸ್ಥರಿಗೆ ಕಮಿಷನ್ ಸಹ ದೊರೆಯುತ್ತೆ. 24–10

M. N. K. & Bros.
Book Binders & Stationers, MYSORE

[illegible] ! [illegible] ! [illegible] !

ನಮ್ಮಲ್ಲಿ ಸಾಮಾನುಗಳು ಪ್ರತಿಯೊಂದು ದೊರೆಯುವದು ಕಮ್ಮಿ ಬೆಲೆಗೆ ತಿಳಿದುಕೊಳ್ಳಿ

ಕಾಮಸಿಮುತ್ತೈಲ.—ಬಿಡಿ ಸೀಸ 1 ಕ್ಕೆ 1—0—0
3 ಸೀಸೆಗೆ 2—10—0 ಏಕಸೀವಿಲ್ಲ ಘಾತ್ ಪಿಲ್ಸ್ ಡಬ್ಬ ಬಿಡಿ ಸೀಸ 1 ಕ್ಕೆ 0—12—0. ಡಜನ್ 7—8—0. ಆರ್ ... ಬಿಡಿ ಬಾಟ್ಲ ... 1 ಕ್ಕೆ 3 ಆಣೆ. ಡಜನ್ 1 ಕ್ಕೆ 1—12—0 ಸನ್ಮೋಹಿನಿ ತೈಲ, ಸೀಸೆ 1 ಕ್ಕೆ 4 ಆಣೆ. ಡಜನ್ 1 ಕ್ಕೆ 2—10—0. ಮಲೇರಿಯಾ, ದಿನ ಬಿಟ್ಟು ಬರುವ ಜ್ವರಕ್ಕೆ ಖಾತ್ರಿಯಾದ ಚಳಿ ಜ್ವರ ಮಾತ್ರೆ ಸೀಸೆ 1 ಕ್ಕೆ 1—0—0 ರೂ.

ಜೆಂತಾನ್ ಪಾಕೆಟ್ 1 ಕ್ಕೆ	1 ಆಣೆ. 4 ಆಣೆ.	1 ರೂ.
ಗಂಧದ ಸಾಬೂನ್ 1 ಕ್ಕೆ	3 ಆಣೆ. 6 ಆಣೆ.	7 ಆಣೆ.
ವಿಕ್ಟೋರಿಯಾ ಸಾಬೂನು 1 ಕ್ಕೆ		0-2-0.
ಪ್ರೇವಿನ್ ರಾಣಿ ಸಾಬೂನು 1 ಕ್ಕೆ		1-2-0.
ಜಸ್ಮಿನ್ (ಮಲ್ಲಿಗೆ) ಸಾಬೂನ್ 1 ಕ್ಕೆ		8 ಆಣೆ.
ಬುಕ್ಕೆಟ್ ಗುಡ್‌ವಿನ್ „ 1 ಕ್ಕೆ		10 ಆಣೆ.
ಚಿಕ್ಕ ಕನ್ನಡಿ 1 ಕ್ಕೆ	2 ಆಣೆ.	0-2-6.
ಸಾಬೂನ್ ಕರಡಿಗೆ 1 ಕ್ಕೆ	5 ಆಣೆ	7 ಆಣೆ.
ಸರಟ್ ಬಟನ್ ಹರಳಿನದ್ದು ಸೆಟ್ಟು 1 ಕ್ಕೆ		3 ಆಣೆ.
ಜಾಕಿಟಿಗೆ ಡಜನ್ 1 ಕ್ಕೆ	0-14-0. 1-4-0	1-8-0.
ಕ್ಲಾಕ್ ಛತ್ರಿ 1 ಕ್ಕೆ	2-4-0. 2-12-0	3-4-0.
ಅಮೃತಾಂಜನ ಡಬ್ಬಿ 1 ಕ್ಕೆ		9 ಆಣೆ.
ಜರ್ಮನಿ ಕತ್ತರಿ 1 ಕ್ಕೆ		10 ಆಣೆ.
ಕಾಡ್‌ಬರಿ ಚೊಕೊಲೇಟ್ ಪಾಕೆಟ್ 1 ಕ್ಕೆ		8 ಆಣೆ.
ಟೊನಾಟಿನ್‌ಪಿನ್ 1 ಕ್ಕೆ	15 ಆಣೆ.	8 ಆಣೆ.

ಯಾವ ತರದ ಸಾಮಾನು ಬೇಕಾದಲ್ಲಿ ನಮ್ಮಲ್ಲಿ ದೊರೆಯುತ್ತೆ. ಪೋಸ್ಟೇಜು ಖರ್ಚು ಅಧಿಕವಾದುದು.

ವಿಳಾಸ:—ವಿ. ಉಲ್ಲಾಸ ಮಾರ್ಟ್,

ಸ. ಕೃ. ಬೆಂಗಳೂರು, ದ. ಕ.

ಸಂಗೀತಕ್ಕೆ ಸಂಬಂಧಪಟ್ಟ

ಸಾಮಾನುಗಳ ಮಾರಾಟ

ನಮ್ಮಲ್ಲಿ ಅನುಭವಪೂರ್ವಕ ಚೆನ್ನಾಗಿ ಅನೇಕಾನೇಕ ಸಂಗೀತ ವಿದ್ವಾಂಸರುಗಳು ಒಪ್ಪತಕ್ಕ ಹಾರ್ಮೋನಿಯಂ, ಪಿಟೀಲು, ತಂಬೂರಿ, ಸಿತಾರ್, ಕಾರ್ನೆಟ್ ದಿಲ್‌ರುಬ ಸಾರಂಗಿ, ಪಿಟೀಲು, ಕೊಳಲು ಕ್ಲಾರಿಯೊನೆಟ್ಟಿಗೆ ಇವೇ ಮುಂತಾದ ಪದಾರ್ಥಗಳು ಸಿಕ್ಕುತ್ತವೆ. ಈ ಪದಾರ್ಥಗಳ ಎಲ್ಲಾ ರಿಪೇರಿ ಕೆಲಸವಾದರೂ ಸಹ ಸುಲಭಬೆಲೆಗೆ ಮಾಡಲ್ಪಡುತ್ತದೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ಪಡೆದುಕೊಳ್ಳಬಹುದು. ನಮ್ಮ ವಿಳಾಸ:—

ಯಂ. ಪುಟ್ಟಯ್ಯ ಅಂಡ್ ಸನ್ಸ್,
ಹಾರ್ಮೋನಿಯಂ ಡೀಲರ್ಸ್ ಮತ್ತು ರಿಪೇರರ್ಸ್,
24–12 ಸಯ್ಯಾಜಿರಾವ್ ರೋಡ್, ಮೈಸೂರು

SUBBANNA, SANGAPPA,

Receiving and Forwarding Agents, General Merchants and Commission Agents.

Santhepet, Mysore.

Despatch and supply whatever you receive at Mysore Railway Station and whatever food stuffs and Stationaries you want to have from Mysore. Prompt attention, moderate commission and quick disposal are their motto. [illegible]

ಮೈಸೂರು ರೈಲ್ವೆ ಸ್ಟೇಷನ್ನಿಂದ ನೀವು ಹೊಂದಬೇಕಾದ ಸಾಮಾನುಗಳ ರೈಲ್ವೆ ಪಾರ್ಸಲುಗಳನ್ನೂ, ಮೈಸೂರಿನಿಂದ ತರಿಸಿಕೊಳ್ಳಬೇಕಾದ ಸಾಮಾನುಗಳ ಪಟ್ಟಿಯನ್ನೂ ಮೈಸೂರು ಸಂತೇಪೇಟೆಯಲ್ಲಿರುವ

ಸುಬ್ಬಣ್ಣ, ಸಂಗಪ್ಪನವರಿಗೆ ಕಳುಹಿಸಿ.

ಅವರು ಜಾಗ್ರತೆಯಾಗಿಯೂ, ಕೋಪವಿಲ್ಲದಾಗಿಯೂ ಸುಲಭವಾದ ಕಮಿಷನ್ನಿನಲ್ಲಿಯೂ ನಿಮಗೆ ಸಂಕು ರವಾನಿಸುತ್ತಾರೆ. ಮಿಕ್ಕ ವಿಚಾರ ಬರೆದು ತಿಳಿಯುತ್ತೀರಿ.

ದಿ ಮಂಜೇರಿ

ಮೋಟಾರ್ ಸರ್ವಿಸ್

ಲಿಮಿಟೆಡ್, ಕಲ್ಲಿಕೋಟೆ.

ಈ ಕಂಪೆನಿಯು 1913 ನೇ ಇಸವಿಯ ಕಂಪೆನಿ ಆಕ್ಟಿಗೆ ಅನುಸಾರವಾಗಿ 1921-1922 ನೇ ಇಸವಿಯ ಮೊದಲನೇ ನಂಬ್ರವಾಗಿ 1921 ನೇ ಏಪ್ರಿಲ್ 4 ನೇ ತಾರೀಖಿನಲ್ಲಿ ರಜಿಸ್ಟ್ರಿ ಮಾಡಲ್ಪಟ್ಟು 1921 ನೇ ಮೇ 6 ನೇ ತಾರೀಕಿನಲ್ಲಿ ತಮ್ಮ ಕೆಲಸವನ್ನು ನಡಿಸುವದಕ್ಕೆ ಸಮ್ಮತಿ ಸರ್ಟಿಫಿಕೇಟು ಪಡಕೊಂಡಿರುತ್ತದೆ. ಮೇ 25 ನೇ ತಾರೀಕಿನಿಂದ ಕೆಲಸವನ್ನು ಪ್ರಾರಂಭಿಸಿರುವದು.

ಈ ಕಂಪೆನಿಯ ಮೂಲಧನವು ಮೂರು ಲಕ್ಷ ರೂಪಾಯಿ ಪಾಲುಪಂತಿಗೆಯಿಂದ ಸಂಗ್ರಹಿಸಲ್ಪಡಬೇಕು ಪಾಲು 1 ಕ್ಕೆ 10 ರೂಪಾಯಿಯಂತೆ. ಇದರಲ್ಲಿ ಸದ್ಯಕ್ಕೆ ವಿಕ್ರಯಿಸೋಣಾಗುವ 20,000 ಪಾಲುಗಳಲ್ಲಿ 1540 ಪಾಲುಗಳನ್ನು ಈ ಕಂಪೆನಿಯ ಪ್ರೇರೇಪರೇ ಪಡಕೊಂಡಿರುತ್ತಾರೆ.

35660 ರೂಪಾಯಿಯ ಷೇರ್‌ಗಳು 1921 ನೇ ಇಸವಿ ಅಕ್ಟೋಬರ್ 4 ನೇ ತಾರೀಕಿನವರೆಗೆ ಮಾರಲ್ಪಟ್ಟಿರುತ್ತದೆ.

ಕಂಪೆನಿಯ ಉದ್ದೇಶ.

ಮುಖ್ಯವಾಗಿ ತಲ್ಲಚೇರಿಯಿಂದ ಮಡಿಕೇರಿಗೂ, ವಯನಾಡಿಗೂ, ಮಡಿಕೇರಿಯಿಂದ ಸೋಮವಾರಪೇಟೆಗೂ, ಕಲ್ಲಿಕೋಟೆಯಿಂದ ವಯನಾಡಿಗೂ, ದಕ್ಷಿಣ ಮಲಬಾರಿನಲ್ಲಿರುವ ಮಂಜೇರಿ, ನಿಲಂಬೂರು, ತಿರೂರು ಮೊದಲಾದ ಸ್ಥಳಗಳಿಗೂ ಮೋಟಾರ್ ಬಸ್ ಸರ್ವಿಸ್ ಸ್ಥಾಪಿಸುವದು. ಮತ್ತು ಮೋಟಾರ್ ಕಾರ್, ಲೋರಿ ಮೊದಲಾದ ವಾಹನಗಳನ್ನು ಓಡ್ಯಾಡಿಸುವದು, ಮೋಟಾರ್ ಬಂಡಿಗಳನ್ನು ರಿಪೇರಿ ಮಾಡುವ ಕಾರ್ಖಾನೆಗಳನ್ನು ಸ್ಥಾಪಿಸುವದು; ಸರ್ವಿಸುಗಳನ್ನು ಏರ್ಪಾಡುಮಾಡುವದು, ಇವೇ ಸಂಘದ ಉದ್ದೇಶಗಳಾಗಿವೆ

ಕಂಪೆನಿಯಲ್ಲಿ ದೊರಕುವ ಅಂದಾಜು ಆದಾಯ.

ಈ ಕಂಪೆನಿಯು ಕ್ರಯಕ್ಕೆ ಪಡಕೊಂಡು ನಡಿಸುತ್ತಿರುವ ಮಂಜೇರಿ ಮೋಟಾರ್ ಸರ್ವಿಸಿನ ಗತಿಸಿದ ಲೆಕ್ಕಾಚಾರಗಳನ್ನು ಪರಿಶೋಧಿಸಿದರೆ, ಕ್ಷೀಣವಿಧಿಗೆ ಸಕ್ಕಷ್ಟು ಹಣ ಉಳಿಸಿಟ್ಟು ಸುಮಾರು ಶೇಕಡ 25 ರಂತೆ ಪಾಲುಗಾರರಿಗೆ ಆದಾಯ ಕೊಡಬಹುದಾಗಿದೆಂದು ನಿಂಚಿತವಾಗಿ ಹೇಳಬಹುದು. ಕಾಲಕ್ರಮೇಣ ಇನ್ನಷ್ಟು ಹೆಚ್ಚಿಗೆ ಬಸ್‌ಗಳನ್ನೂ, ಕಾರ್, ಲೋರಿಗಳನ್ನೂ ಓಡ್ಯಾಡಿಸುವದಾದರೆ, ಮೋಟಾರ್ ಕಾರ್ಖಾನೆಗಳನ್ನೂ ಸ್ಥಾಪಿಸುವದಾದರೆ, 100 ಕ್ಕೆ 25 ಕ್ಕಿಂತಲೂ ಹೆಚ್ಚಿನ ಆದಾಯವನ್ನು ನಿರೀಕ್ಷಿಸಬಹುದು.

ವಿಶೇಷ ಪ್ರಯೋಜನಗಳು.

ಬಹೂ ಜಾಗ್ರತೆಯಿಂದಲೂ ನುತುವರ್ಜಿಯಿಂದಲೂ ತನ್ನ ಕೆಲಸವನ್ನು ಮಾಡಿ ಎಲ್ಲಾ ಕಡೆಯಿಂದಲೂ ಒಳ್ಳೇ ಹೆಸರನ್ನು ಪಡಕೊಂಡ ಮಂಜೇರಿ ಮೋಟಾರ್ ಸರ್ವಿಸನ್ನು ಈ ಲಿಮಿಟೆಡ್ ಕಂಪೆನಿಯು ಪಡಕೊಂಡದಾಗಿರುತ್ತದೆ

ಈ ಕಂಪೆನಿಯ ಕೆಲಸಗಾರರೆಲ್ಲರೂ ಸಮರ್ಥರೂ ಇದರ ಏಜೆಂಟದಾರರು ಒಳ್ಳೇ ಅನುಭವಶಾಲಿಗಳೂ ಆಗಿದ್ದಾರೆ.

ಈ ಕಂಪೆನಿಯ ಪ್ರವೃತ್ತಿಯಿಂದ ಬರುವ ಆದಾಯವು ಕನಸಿನ ಗಂಟಲ್ಲ. ನಿಜವಾಗಿ ಕೈಗಂಟೇ ಆಗಿದೆ ಇತರ ಕಂಪೆನಿಗಳಲ್ಲಿ ಆದಾಯ ಸಿಕ್ಕುವದಕ್ಕೆ ಮೂರು ನಾಲ್ಕು ವರ್ಷ ಕಾಯಬೇಕಾಗುತ್ತದೆ. ಇದರಲ್ಲಿ ಹಾಗಲ್ಲ. ಷೇರ್ ತೆಗೆದುಕೊಂಡ ಕೂಡಲೇ ಆದಾಯ ಬರುವದು.

ಸರ್ವರಿಗೂ ಅನುಕೂಲವಾಗುವಂತೆ ಒಂದೊಂದು ಪಾಲಿಗೆ 10 ರೂಪಾಯಿ ಮಾತ್ರ ಇಡೋಣಾಗಿದೆ.

ಈ ಲಿಮಿಟೆಡ್ ಕಂಪೆನಿಯು ಕಲ್ಲಿಕೋಟೆಯಲ್ಲಿ ಮಂಜೇರಿ ಮೋಟಾರ್ ಸರ್ವಿಸನ್ನು ಇದೇ 1921 ನೇ ಮೇ 25 ನೇ ತಾರೀಕಿನಲ್ಲಿ ಮತ್ತು ತಲಚೇರಿಯ ಮೋಟಾರ್ ಸರ್ವಿಸನ್ನು ಇದೇ ಜೂನ್ 1 ನೇ ತಾರೀಕಿನಲ್ಲಿಯೂ ಬಡಗಾರ ಮತ್ತು ನಾದಾಪುರ ಸರ್ವಿಸನ್ನು 1921 ನೇ ಆಗಸ್ಟು 8 ನೇ ತಾರೀಕಿನಲ್ಲಿ ಹೊಸದಾಗಿ ಪ್ರಾರಂಭಿಸಿರುವದು.

ಪಾಲು ಬೇಕಾದವರು ಕಂಪೆನಿಯ ಅರ್ಜಿ ಫೋರ್ಮಿನಲ್ಲಿ ಅರ್ಜಿ ಬರೆದು, ತಮಗೆ ಎಷ್ಟು ಪಾಲು ಬೇಕೋ ಅಷ್ಟು ಪಾಲಿಗೆ—ಪಾಲು 1 ಕ್ಕೆ 10 ರೂಪಾಯಿ ಪ್ರಕಾರ ಆಗುವ ಒಟ್ಟು ಹಣವನ್ನು ಅರ್ಜಿಯೊಂದಿಗೆ ಮೇನೇಜಿಂಗ್ ಡೈರೆಕ್ಟರರಿಗೆ ಕಳುಹಿಸತಕ್ಕದ್ದು

ಕಂಪೆನಿಯ ನಿಯಮಗಳ ಪ್ರತಿಗಳೂ ಅರ್ಜಿ ಫೋರ್ಮ್‌ಗಳು ಕಂಪೆನಿಯ ಆಫೀಸಿನಲ್ಲಿ ದೊರೆಯುವವು.

ಅರ್ಜಿ ಫೋರ್ಮು ಸಿಕ್ಕದಿದ್ದರೆ ಅರ್ಜಿದಾರನು ತನ್ನ ಪೂರ್ಣ ಹೆಸರು, ತಂದೆಯ ಹೆಸರು, ಉದ್ಯೋಗ ಮತ್ತು ವಿಳಾಸ ಇವನ್ನು ಸ್ಪಷ್ಟವಾಗಿ ಬರದು, ಅರ್ಜಿಯನ್ನೂ ತಾನು ಅಪೇಕ್ಷಿಸುವ ಪಾಲುಗಳ ಹಣವನ್ನೂ ಮೇನೇಜಿಂಗ್ ಡೈರೆಕ್ಟರರಿಗೆ ಕಳುಹಿಸಿಕೊಡತಕ್ಕದ್ದು.

ಈ ಕಂಪೆನಿಯ ಸರ್ವಿಸ್ ಈಗ ಕಲಿಕೋಟೆಯಿಂದ ಪುದುಪಾಡಿಗೂ ತಲಚೇರಿಯಿಂದ ಮಾಕೂಟಿಗೂ ಬಡಗೆರೆಯಿಂದ ನಾದಪುರಕ್ಕೂ ಓಡ್ಯಾಡುತ್ತಿರುವವು.

ಒಳ್ಳೇ ಮೋಟಾರ್ ಕಾರ್‌ಗಳು ತಲಚೇರಿಯಲ್ಲಿಯೂ ಕಲಿಕೋಟೆಯಲ್ಲಿಯೂ ಬಡಗರೆಯಲ್ಲಿಯೂ ಬಾಡಿಗೆಗೆ ದೊರಕುವವು.

1920 ನೇ ಇಸವಿ ಡಿಸೆಂಬರಿನಿಂದ 7 ತಿಂಗಳ ಬಾಬ್ತು ಮಂಜೇರಿ ಮೋಟಾರ್ ಕಂಪೆನಿಯ ಆದಾಯವೆಚ್ಚದ ಪಟ್ಟಿ.

ಬಂಡವಾಳ	.... 60,000—0—0
ಕಲ್ಲಿಕೋಟೆ ತಲಚೇರಿ ಲೈನುಗಳಿಂದ ಉತ್ಪತ್ತಿ	.... 48,294—13—0
ಒಟ್ಟು ಖರ್ಚು ಪೆಟ್ರೋಲ್ ಕ್ಷಾಮದಕಾಲದಲ್ಲಿ	... 31 064—7—3
ಏಳು ತಿಂಗಳ ಒಟ್ಟು ನಫೆ	.... 17,230—5—9

ಇದರಿಂದ ತಿಂಗಳಿಗೆ 2500 ರೂಪಾಯಿವರೆಗೆ ನಫೆ ಇದೆ ಎಂದು ಪೂರ್ಣ ತಿಳಿಯುತ್ತೆ.

ಒಂದು ವರ್ಷಕ್ಕೆ 30,000 ರೂ. ನಫ ಇದರ ಪೈಕಿ 15,000 ರೂಪಾಯಿ ಬೇರೆ ರಿಸರ್ವ್ ಫಂಡಿನಲ್ಲಿ ಇಟ್ಟರು ಕೂಡಾ ಶೇಕಡಾ 25 ರಂತೆ ನಫೆ ಸಿಕ್ಕಬಹುದು.

ತಲಚೇರಿ ಸಬ್ ಕಲೆಕ್ಟರರು ಬರೆಯುವದು ಏನೆಂದರೆ —

ಆಗಸ್ಟು ತಾರೀಕು 26–27–28 ರಲ್ಲು ಕ್ವೊಲಾಂಡಿ ತಮರಚೇರಿ ಕುನ್ನಮಂಗಳ ಎಂಬಲ್ಲಿಗೆ ಸರಕಾರಕ್ಕೆ ಉಪಯೋಗವಾಗಿ ಸಿಪಾಯಿಗಳನ್ನು ಕರಕೊಂಡು ಹೋಗಲು ನಿಮ್ಮ ಮೋಟಾರುಗಳನ್ನು ಬಸ್‌ಗಳನ್ನು ಅತಿ ಜಾಗ್ರತೆಯಿಂದ ಕೊಟ್ಟದ್ದು ಸರಿಯಷ್ಟೆ. ನಿಮ್ಮಲ್ಲಿ ಕೆಲಸಮಾಡುವ ಕೆಲಸದವರು ಮತ್ತು ಡ್ರೈವರುಗಳು ಅತಿ ಬುದ್ಧಿವಂತರು, ಮತ್ತು ಪೂರ್ಣ ಶ್ರದ್ಧೆಯಿಂದ ಕೆಲಸಮಾಡುವವರು ಆಗಿರುತ್ತಾನೆ. ಮತ್ತು ಇವರಷ್ಟು ಮುತುವರ್ಜಿಯಿಂದ ಕೆಲಸಮಾಡುವಂಥಾ ಕೆಲಸದವರನ್ನು ಈವರೆಗೆ ಎಂದು ನಾನು ಕಂಡಿಲ್ಲ. ಕಂಪೆನಿಗೆ ಇದಕ್ಕೋಸ್ಕರ ಅತಿ ಕೃತಜ್ಞತೆಯುಳ್ಳವನಾಗಿರುತ್ತೇನೆ.

ಕೊಡಗಿನಲ್ಲಿ ಈಗಲೇ ಸಾವಿರ ಷೇರುಗಳು ಮಾರಲ್ಪಟ್ಟಿರುವವು. ಇವುಗಳ ಪೈಕಿ ಮೆ|| ಕೊರವಂಡ್ರ ಎನ್. ಅಪ್ಪಚ್ಚನವರು (100 ಷೇರುಗಳನ್ನೂ) ಮೆ|| ಕೊಂಗೆರ ತಿಮ್ಮಯ್ಯನವರು (100) ಮೆ|| ಪಾಡಂಡ್ರ ಅಪ್ಪಚ್ಚನವರು (50) ಡಿ. ನಾಕಪ್ಪನವರು (200) ಮೆ|| ಎಡ್ವರ್ಟ್ ಕೃಷ್ಣರಾಯರೂ, ಮೆ|| ಮನೆಯಪಂಡ್ರ ಎಮ್. ಬೆಳ್ಳಪ್ಪನವರೂ ಮೆ|| ಬಸವೈಯ್ಯನ ಸಿದ್ಧಪ್ಪಶೆಟ್ಟರೂ, ಮೆ|| ದೊಡ್ಡಮನೆ ನಾರಾಯಣಶೆಟ್ಟರೂ (50) ಆಸ್ಪಿನ್ ಕಂಪೆನಿಯ ಬ್ರೋಕರಾದ ಮೆ|| ಅಬ್ದುಲ್ಲರೂ (100) ವಾಲ್ಕಟ್ ಕಂಪೆನಿಯ ಮೆ|| ಆಟಿಡೆಕರೂ (100) ಮೆ|| ಕೊಡಂದೇರ ಕುಟ್ಟಯ್ಯನವರೂ, ಮೆ|| ಅಪ್ಪಾರಂಡ್ರ ಅಪ್ಪಚ್ಚನವರೂ ಷೇರುಗಳನ್ನು ತೆಗೆದುಕೊಂಡಿರುತ್ತಾರೆ.

ಇದರಿಂದ ಜನರು ನಮ್ಮ ಕಂಪೆನಿಯನ್ನು ಎಷ್ಟು ಶ್ಲಾಘನೆಮಾಡುತ್ತಾರೆಂಬದು ಪೂರ್ಣ ವ್ಯಕ್ತವಾಗುತ್ತದೆ.

ಜೆ. ನಿಕೊಲಾಸ್,
ಮೇನೇಜಿಂಗ್ ಡೈರೆಕ್ಟರ್,
ಮಂಜೇರಿ ಮೋಟಾರ್ ಸರ್ವಿಸ್ ಲಿಮಿಟೆಡ್,
ಕ್ಯಾಂಪು–ಮಡಿಕೇರಿ

THE

MANJERI MOTOR SERVICE, Ltd.,

CALICUT.

Branches:—

TELLICHERRY AND BADAGARA.

Registered under the Indian Companies Act 1913 as No 1 of 1921—1922 on the 4th day of April 1921 and prospectus filed on the 6th day of May 1921. Business commenced on the 25th day of May 1921"

AUTHORISED CAPITAL RUPEES THREE LAKHS.

Divided into 30,000 ordinary shares of R[s. 10] each payable fully in cash with applicat[ion] which 20,000 shares are now offered for [subs]cription at par.

1540 shares are taken by the promoters at present

Rs. 35660 worth shares are sold upto 4th October 1921

OBJECTS.

The Company is formed primarily to estab[lish] Motor Bus Services between Tellicherry, Mercara and Somwarpet in Coorg, Calicut, Coorg, Wynaad in North Malabar, Calicut, Wynaad, Nilambur and Tirur in South Mala[bar,] to establish motor work-shops for the repa[ir of] motor vehicles and for the training up of m[otor] machanics and drivers and for the perma[nent] working up of motor bus service in the conveya[nce] of passengers and goods.

ESTIMATED INCOME AND PROSPECTS

It is estimated from a perusal of the accou[nts] of the working of the Manjeri Motor Ser[vice] which the Company has purchased that [the] Company would be able to declare a dividend [of] about 25 per cent. after setting aside a[mple] reserves for depreciation and reserve fund. As t[ime] pass on and more buses and cars and lorries [are] introduced and more new lines are opened [and] workshops established a much higher dividen[d is] confidently expected and considered feasible

SPECIAL ADVANTAGES.

The Company has purchased the flourish[ing] concern the Manjeri Motor Service which [has] been exceptionally lucky all along to earn a g[ood] name and maintain the prestige and reputa[tion] throughout for its punctuality, regularity [and] respectability required of a motor service to [win] the confidence of the travelling public.

The Company is singulary fortunate in secu[ring] the services of choicest workmen and efficient [and] experienced management.

The Company's lines of business are not a[t all] speculative but are reckoned as sure concerns

The Company is in a position to pay a divid[end] from the very start.

The Company has already taken charge of Manjeri Motor Service working at Calicut on **25th day of May 1921** and that of Tellich[erry] on the **1st June 1921** and Badagara—Nadapu[ram] line is newly opened on the **8th August 1921.**

Application for shares should be made in form of application to the Managing Dire[ctor] together with the full cash value of each share

Copies of the Memorandum and Articles [of] Association and of the Prospectus and forms [of] application can be had at the Office of [the] Company.

In the absence of application form, the appli[cation] should clearly state Full name, Permanent address, Father's name, Profession, Prese[nt] address and should be sent with the full cash val[ue] of the shares to the Managing Director

The Company's service now works betwe[en] CALICUT—PUDUPADI; TELLICHERRY [—] MAKKUT; BADAGARA—NADAPURAM Reliable pleasure cars **Reo. Hupmobile Overland** driven by experienced hands are always availab[le] for hire.

SUB-COLLECTOR TELLICHERRY WRITES -

"Just a line to thank you for the promptness with which you placed your two Cars and o[ne] Bus at the disposal of Government on the 26th 27th and 28th for moving troops to Quilandi Tamaracherry and Kunnamangalam" etc., etc. and concludes "**I never saw more willing workers or more competent drivers than your men.**" This unasked for remarks from the pen of an high official speaks for itself about the merits of the Manjeri Motor Service Ltd, and her staff.

For further particulars apply to:—

J. NICHOLAS,
Managing Director
Manjeri Motor Service Ltd.
Camp—Mercara

Printed and Published by K Sundararajiengar Proprietor, at Sreenivas Electric Press, Mysore for "Kodagu" Ltd., Mercara—2-12-1921.

1550.

ಕೊಡಗು.

ಸ್ವೋಂಗ ಜಗತದಯುದಾ ವಿದ್ಯಾನೀತಿಶ್ರಯಸ್ಸ್ಯಾ । ಪರಾತ್ಮನ ದೇಶಾನಾಂ ಸುಸ್ಥಿರಾ ರಾಜ್ಯಸಂಪದ ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

ಸಂಪುಟ ೧] ಕೊಡಗು, ಸನ್ ೧೯೨೧ ನೇ ಇಸವಿ ಡಿಸೆಂಬರ್ ತಾರೀಖು ೯ ನೆಯ ಶುಕ್ರವಾರ. [ಸಂಚಿಕೆ [illegible]

NOTICE.

If you want any kind of English or Kanarese Printing, Please write to:

SREENIVAS ELECTRIC PRESS, MYSORE.

ನೋಟೀಸು.

1922 ನೆಯ ಇಸವಿಯಲ್ಲಿ ಪತ್ರಾರಂಭವಾಗುವ ವರುಷಾಯದಲ್ಲಿ ಸಲಿಸಲಾದ [illegible] ಉಡುಪಿ ಶ್ರೀ ಕೃಷ್ಣದೇವರ ಪೂಜೆಯ ಸಹಾಯಾರ್ಥವಾಗಿ "ಶ್ರೀ ಕೃಷ್ಣಸನ್ನಿಧಿ [illegible] ಲಾಟರಿಯನ್ನು ಏರ್ಪಡಿಸ[illegible] ಮೊದಲ್ನೆ 1 ನೇ ಬಹುಮಾನ ರೂಪಾಯಿ 2000—0—0 ರಲ್ಲಿ 2 ನೇ ಬಹುಮಾನ ರೂಪಾಯಿ 1000—0—0 ರಲ್ಲಿ ೩ ಬಹುಮಾನಗಳು ರೂಪಾಯಿ 100 ರಂತೆ 200 ಬಹುಮಾನಗಳು ರೂಪಾಯಿ 5 ರಂತೆ ಹೀಗೆ ಒಟ್ಟು 307 ಬಹುಮಾನಗಳ[illegible] ಈ ಲಾಟರಿಯ ಟಿಕೇಟನ್ನು ಮಾರಿದ [illegible] ಲಾಟರಿ ಕಾರ್ಯ ವನ್ನು 15 12 1921 ರಲ್ಲಿ ತೆಗೆಯುವದೆಂತ ನಿಶ್ಚಯಿಸ[illegible] ಆದರೆ ಅನೇಕ ಮೂಲಪ್ರತಿಗಳು [illegible] ನಮ್ಮ [illegible] ಇನ್ನು [illegible] ಲಾಟರಿ ತೆಗೆಯುವದನ್ನು 1922 ನೆಯ ಇಸವಿ ಫೆಬ್ರವರಿ ತಾ|| 2ಕ್ಕೆ ಮುಂದರಿಸಿ ಇಟ್ಟಿದೆ [illegible] 1922 ನೇ ಇಸವಿ ಫೆಬ್ರವರಿ ತಾರೀಖು 10 [illegible] ಮೂಲಪ್ರತಿಗಳು ಮತ್ತು ಹಣಗಳು [illegible] ಟಿಕೇಟುಗಳನ್ನಾಗಲೀ ಪುಸ್ತಕಗಳನ್ನಾಗಲೀ ಅಪೇಕ್ಷಿಸುವವರಿಗೆ ಕಳುಹಿಸಿಕೊಡಲಾಗುತ್ತದೆ [illegible] ತೆಗೆಯುವದನ್ನು ಇನ್ನು ಯಾವ ಕಾರಣದಿಂದಲಾದರೂ [illegible] ಮುಂದುವರಿಸುವದಾಗಲಿಕ್ಕಿಲ್ಲ.

ಈ ಲಾಟರಿಯ ವಿಳಾಸಕ್ಕೆ [illegible] ಮಾಡುವದಲ್ಲದೆ ಟಿಕೇಟು [illegible] ತಕ್ಕದ್ದು.

ಪಿ. ಆರ್. ರಾಮರಾವ್,
ಮ್ಯಾನೇಜರ್
ಶ್ರೀ ಕೃಷ್ಣಸನ್ನಿಧಿ, ಕೊಡಿಯಾಲ
ಬೈಲ್ ಪೋಸ್ಟು, ಮಂಗಳೂರು ದ. ಕ.

ಸಂಗೀತಕ್ಕೆ ಸಂಬಂಧಪಟ್ಟ

ಸಾಮಾನುಗಳ ಮಾರಾಟ

ನಮ್ಮಲ್ಲಿ ಅನುಭವಪೂರ್ವಕ [illegible] ಅನೇಕಾನೇಕ [illegible] ಹಾರ್ಮೋನಿಯಂ, [illegible] ಸಿತಾರ್, ತಂಬೂರಿ, ದಿಲ್‌ರುಬಾ [illegible] ಕೊಳಲು, [illegible] ಮುಂತಾದ [illegible] ಈ ಸಾಮಾನುಗಳ [illegible] ಮಾಡಲ್ಪಡುತ್ತದೆ [illegible] ಒಂದು ಸಲ [illegible] ನಮ್ಮ ವಿಳಾಸ —

[illegible] ಸನ್ಸ್,
[illegible]
24—1 [illegible] ರೋಡ್, ಮೈಸೂರು.

SUBBANNA, SANGAPPA,

Receiving and Forwarding Agents,
General Merchants and Commission Agents
Santhepet, Mysore.

Despatch and supply whatever you receive at Mysore Railway Station and whatever food stuffs and Stationaries you want to have from Mysore. Prompt attention, moderate commission and quick disposal are their motto. 2

ಮೈಸೂರು ರೈಲ್ವೆ ಸ್ಟೇಷನ್ನಿಂದ ನೀವು ಬೊಂದಬೇಕಾದ [illegible] ರೈಲ್ವೆ ಸಾಮಾನುಗಳನ್ನು ಮೈಸೂರಿನಿಂದ [illegible] ಸಾಮಾನುಗಳನ್ನು ಮೈಸೂರ [illegible]

[illegible] ಸಂಗಪ್ಪನವರಿಗೆ ಕಳುಹಿಸಿ

ಅವರು ಜಾಗ್ರತೆಯಾಗಿಯೂ ಜೋಪಾನವಾಗಿಯೂ ಸ್ವಲ್ಪವಾದ ಕಮೀಷನ್ನಿನಲ್ಲಿಯೂ ನಿಮಗೆ ಸರಕು ರವಾನಿಸುತ್ತಾರೆ. ಒಂದು ಸಲ [illegible] ಒಂದು ತಿಳಿಯಬಹುದು.

COORG TEACHERS' CO-OPERATIVE STORES, Ltd.,

ಕೊಡಗು ಉಪಾಧ್ಯಾಯರ ಕೋ ಆಪರೇಟಿವ್ ಸ್ಟೋರ್ಸ್, ಲಿಮಿಟೆಡ್, ಮಡಿಕೇರಿ.

ಈ ಸ್ಟೋರ್ಸಿನಲ್ಲಿ ಶಾಲಾ ಪಠ್ಯಪುಸ್ತಕಗಳು, [illegible] ನರಿ ಸಾಮಾನುಗಳು, ಮತ್ತು ಸೊಗಸಾದ [illegible] ಪುಸ್ತಕಗಳು ದೊರೆಯುತ್ತವೆ. ಕ್ರಯ ಸುಲಭ, [illegible] ಉತ್ತಮ. ಕೊಡಗಿನಲ್ಲಿ ಈ ತರ ಸ್ಟೋರ್ಸ್ [illegible] ಮಾಲುಗಳನ್ನು ಕೇಳಿದವರಿಗೆ ವಿ. ಪಿ. ಮೂಲಕ [illegible] ಲಾಗುತ್ತದೆ. 12—11

ಇತ್ತನೋಡಿರಿ! ಕೊಡಗು ಬಾಂಧವರೇ! ಇತ್ತ ನೋಡಿರಿ!
ನಮ್ಮಲ್ಲಿ ಸಾಮಾನು ಪ್ರತಿಯೊಟ್ಟ ಹೊಗಳುವದು [illegible]ಗಳಿಗೆ ತಿಳಿಯುವದಕ್ಕೆ.

ಕಾಮಿನಿಯಾ ತೈಲ —ರಿಜಿ, ಶೀಸೆ 1 ಕ್ಕೆ 1—[illegible]—[illegible] 3 ಶೀಸೆಗೆ 2—10—0. ಓಟೋದಿಲ್ಬಹಾರ್ ಅತ್ತರ್ [illegible] ಶೀಸೆ 1 ಕ್ಕೆ 0—12—0. ಡಜನ್ 7—8—0. [illegible] ಸನ್ಸ್ ಬಾಟ್ಲಿ ಶುದ್ಧಸಿಲೋನ್ ತೈಲ ಶೀಸೆ 1 ಕ್ಕೆ 3 [illegible] ಡಜನ್ 1 ಕ್ಕೆ 1—12—0. ಕಸ್ತೂರಿಮಾತ್ರೆ, ಶೀಸೆ 1 [illegible] 4 ಆಣೆ. ಡಜನ್ 1 ಕ್ಕೆ 2—10—0 ಮಲೇರಿಯಾ, [illegible] ಬಿಟ್ಟು ಒರುವ ಜ್ವರಕ್ಕೆ ಮಾತ್ರೆಯಾದ ಬೆಳ್ಳಿ ಮುಲಾಮು ಮಾತ್ರ ಶೀಸೆ 1 ಕ್ಕೆ 1—0—0 ರೂ.

ಚಂದನ್ ಸಾಬೂನ್ 1 ಕ್ಕೆ	1 ಆಣೆ. 4 ಆಣೆ. 1 [illegible]
ಗುಲಾಬ ಸಾಬೂನ್ 1 ಕ್ಕೆ	[illegible] ಆಣೆ. 4 ಆಣೆ. 7 [illegible]
ವಿಕ್ಟೋರಿಯಾ ಸಾಬೂನು 1 ಕ್ಕೆ	0-2-[illegible]
ಪ್ಯಾಲೇಸ್ ರಾಣಿ ಸಾಬೂನು 1 ಕ್ಕೆ	1-2-[illegible]
ಜಸ್ಮಿನ್ (ಮಲ್ಲಿಗೆ) ಸಾಬೂನ್ 1 ಕ್ಕೆ	8 [illegible]
ಬುಕ್ಕಿಟ್ ಗುಡ್‌ವಿನ್ „ 1 ಕ್ಕೆ	10 [illegible]
ಚಿಕ್ಕ ಕನ್ನಡಿ 1 ಕ್ಕೆ	2 ಆಣೆ. [illegible]-2-[illegible]
ಸಂಬೂನ್ ಜವಡಿಗೆ 1 ಕ್ಕೆ	5 ಆಣೆ. 2 [illegible]
ಸರಟ್ ಬಟನ್ ಹರಳಿನದ್ದು ಸೆಟ್ಟು 1 ಕ್ಕೆ	3 [illegible]
ಜಾಪಣಿಗೆ ಡಜನ್ 1 ಕ್ಕೆ	0-14-0. 1-4-0. 1-[illegible]
ಕ್ಲಾಕು ರಂತ್ರ 1 ಕ್ಕೆ	2 4 0. 2-12-0. 3-[illegible]
ಅಮೃತಾಂಜನ ಡಬ್ಬಿ 1 ಕ್ಕೆ	9 [illegible]
ಬರ್ಮಾಸಿ ಕತ್ತರಿ 1 ಕ್ಕೆ	10 [illegible]
ಕಾಡ್‌ಬರಿ ಚೋಕಲೇಟ್ ಪಾಕೆಟ್ 1 ಕ್ಕೆ	[illegible]
ಫೌಂಟೇನ್‌ಪೆನ್ 1 ಕ್ಕೆ	15 ಆಣೆ. [illegible]

ಯಾವ ತರದ ಸಾಮಾನು ಬೇಕಾದಲ್ಲಿ ನಮ್ಮಲ್ಲಿ [illegible]ಯುತ್ತೆ. ಟಪಾಲು ಖರ್ಚು ಅಲಾಯಿದಾ.

ವಿಳಾಸ—ಬಿ. [illegible]
ನಂ. ೩, ಮಂಗಳೂರು, ದ. ಕ.

ಸಿಗರೇಟು ಬಾಕ್ಸು, ಬೆಲೆ ರೂ. 10 ಮಾತ್ರ.



ಬೆಳ್ಳಿಯ ಬೆತ್ತದಬಡಿ,
ಬೆಲೆ ರೂ. 8, 10, 12 ಮಾತ್ರ.

ಇಪ್ಪೋ ಸುಸಮಯ.

[illegible] ಸಿಗರೇಟು [illegible] ಬೆಳ್ಳಿಯಿಂದಲೂ ಪ್ರಕಾಶಮಾನವಾದ ಲೋಹದಿಂದ [illegible] ಅಮೇರಿಕಾ ದೇಶದಲ್ಲಿ ತಯಾರಾದವುಗಳು [illegible] ಚಿನ್ನದ ಮುಲಾಮು [illegible] ಅಂದವಾಗಿರುತ್ತವೆ. ಬೆಲೆ [illegible] ದೀರ್ಘಕಾಲ ಬಾಳಿಕೆ ಬರುವದಾಗಿರುತ್ತವೆ.



ಇಂಡಿಯನ್ ಜ್ಯೂವೆಲರಿ ಮಾರ್ಟ್,
ನಗರ್ತಪೇಟೆ, ಬೆಂಗಳೂರು ಸಿಟಿ.

"ಕೊಡಗು"

೧೯೨೧ ನೇ ಇಸವಿ ಡಿಸಂಬರ್ ತಾ|| ೯ ನೇ ಶುಕ್ರವಾರ.

ವಿಗ್ರಹಾರಾಧನೆ.

II

ಭೂಗೋಳ ಶಾಸ್ತ್ರಜ್ಞರು ನಮ್ಮ ಇಡೀಭೂಮಿಯ ನಕ್ಷೆಯನ್ನು ಒಂದು ಸಣ್ಣ ಕಾಗದದಮೇಲೆ ಚಿತ್ರಿಸಿ ಹೆಸಬಿಟ್ಟು "ಇಗೋ, ಇದು ಯೂರೋಪು, ಇದು ಏಷ್ಯಾ, ಇದು ಅಮೇರಿಕಾ ಖಂಡ" ವೆಂದು ತೋರಿಕೊಡುವರು. ಇದು ವಿಗ್ರಹಾರಾಧನೆಯಲ್ಲವೇ? ಕಾಗದಗಳಿಂದ ಮಾಡಿದ ಕೃತಕಭೂಗೋಳವನ್ನು ಭೂಮಿ ಯೆಂದು ಭ್ರಾಂತಿಪಟ್ಟು ನಂಬುವುದು ಮೂರ್ತಿ ಪೂಜೆಯಲ್ಲವೇ? ರೇಖಾ ಗಣಿತದಲ್ಲಿ Point" ಅಂದರೆ ಚುಕ್ಕಿ. ಚುಕ್ಕಿಗೆ ಯಾವಭಾಗವೂ ಪರಿಮಾಣವೂ ಇಲ್ಲವಂತೆ! ಅಂತಹ ಶೂನ್ಯವಸ್ತುವನ್ನು ಒಂದರೊತ್ತಿಗೆ ಇನೊಂದನ್ನು ಜೋಡಿಸುತ್ತಾ ಹೊಂದರೆ ಅದು ಒಂದು 'Line' ರೇಖೆಯಾಗುವುದಂತೆ! ಸೊನ್ನೆಗಳನ್ನು ಕೂಟ್ಟು ಸೇರಿಸಿದರೆ ಅದೊಂದು ಸಂಖ್ಯೆಯಾಗುವುದು ಹೇಗೋ ತಿಳಿಯಲಿಲ್ಲ. ಹೋಗಲಿ. ಆದರೂ ಇಂತಹ ಚುಕ್ಕಿಗಳಿಂದಾದ ರೇಖೆಗಳನ್ನೂ ಆ ರೇಖೆಗಳಿಂದಾದ ತ್ರಿಕೋಣ, ಚತುಕೋಣಾದಿ ಚಿತ್ರಗಳನ್ನೂ ಮನಸ್ಸಿನಿಂದ ಭಾವಿಸಿ ತಿಳಿಯಬೇಕಷ್ಟೆ ಹೀಗಿದ್ದರೂ ಈಗಿನ ಗಣಿತಶಾಸ್ತ್ರಜ್ಞರು ತಮ್ಮ ಗ್ರಂಥಗಳಲ್ಲಿಯೂ, ಶಾಲಾ ಉಪಾಧ್ಯಾಯರು ಕರಿಹಲಗೆಯಮೇಲೂ, ಅಂತಹ ಚುಕ್ಕಿಗಳನ್ನೂ, ರೇಖೆಗಳನ್ನೂ, ಅವುಗಳಿಂದಾಗುವ ಎಲ್ಲಾ ಚಿತ್ರಗಳನ್ನೂ ಚಿತ್ರಿಸಿ ತೋರಿಸುವರು. ಇದು ವಿಗ್ರಹಾರಾಧನೆಯಲ್ಲವೇ? ಬಹು ದೂರದೇಶದಲ್ಲಿರುವ ನಮ್ಮ ಚಕ್ರವರ್ತಿಗಳ ಭಾವಚಿತ್ರವನ್ನು ಮೆರವಣಿಗೆಮಾಡುವುದಾಗಲೀ, ಅದನ್ನು ಪೂಜಿಸುವುದಾಗಲೀ, ವಿಗ್ರಹಾರಾಧನೆಯೇ ಸರಿ! ಆರ್ಯಸಮಾಜದವರು ತಮ್ಮ ಮಹಾಪುರುಷನಾದ ಸ್ವಾಮಿದಯಾನಂದ ಸರಸ್ವತಿಯ ಭಾವಚಿತ್ರವನ್ನು ನೋಡಿದಕೂಡಲೇ, "ಈತನೇ ಅಲ್ಲವೇ ನಮ್ಮ ಮೂರ್ತಿಪೂಜಾ ಭ್ರಾಂತಿಕಾರ್ಯಗಳಿಗೆಲ್ಲ ತಿಲಕರ್ಪಣಕೊಟ್ಟವನು!" ಎಂದು ಗೌರವಿಸಿದಾಗ ಅದೇ ಒಂದು ಮೂರ್ತಿ ಪೂಜೆಯಾಗಲಿಲ್ಲವೇ? ದಯಾನಂದ ಸರಸ್ವತಿಯು ತನ್ನ ಭಾವಚಿತ್ರವನ್ನು ತೆಗೆದಿಡಕೂಡದೆಂದು ಕಂಠೋಕ್ತವಾಗಿ ಹೇಳಿರುತ್ತಾ ಅವನ ಅನುಯಾಯಿಗಳು ಅವನ ಭಾವಚಿತ್ರವನ್ನು ತೆಗೆದಿಟ್ಟುಕೊಂಡು ಈವರೆಗೂ ಕಾಪಾಡಿಕೊಂಡು ಬಂದುದನ್ನು ನೋಡಿದರೆ ಆರ್ಯಸಮಾಜದವರೂ ಯಾವುದಾದರೂ ಒಂದು ರೂಪದಿಂದ ವಿಗ್ರಹಾರಾಧನೆಯನ್ನು ಮಾಡುವವರೇ ಆಗುವರು.

"ಸಂಸ್ಕೃತದಲ್ಲಿ "ಪ್ರತೀಕಾ" "ಪ್ರತಿಮಾ" ಎಂಬ ಎರಡು ಮಾತುಗಳಿವೆ. "ಪ್ರತೀಕಾ" ಅಂದರೆ ಹತ್ತಿರಬರುವಿಕೆಯೆಂದರ್ಥವು. ಲೋಕದಲ್ಲಿ ಕೆಲವರು ಯೋಗಿಗಳನ್ನು, ಕೆಲವರು ಮಹಾತ್ಮರನ್ನೂ, ಕೆಲವರು ಮೃತಪಟ್ಟುಹೋದ ಪಿತೃಗಳನ್ನೂ, ಕೆಲವರು ದೇವತೆಗಳನ್ನೂ, ಕೆಲವರು ದೇವದೂತರನ್ನೂ, ಪೂಜಿಸುವರು. ಇವರೆಲ್ಲ ದೇವರನ್ನು ಪೂಜಿಸದಿದ್ದರೂ ದೇವರಿಗೆ ಹತ್ತಿರವಾದ ಪ್ರತೀತವನ್ನು ಪೂಜಿಸುವರು. ಕೆಲವರು ಗ್ರಂಥಗಳನ್ನು ಪೂಜಿಸುವರು. ಆ ಗ್ರಂಥವೇ ದೇವರೆಂದು ಅವರು ತಿಳಿದಿರುವರು. ವೇದಗಳು, ಪುರಾಣಗಳು, ಬಾಯಿಬ್‌ಲ್‌ಗಳು ಅಂತಹ ಗ್ರಂಥಗಳಾಗಿವೆ. ಆ ಗ್ರಂಥಗಳಲ್ಲಿ ಇಲ್ಲದ ಸಂಗತಿಗಳನ್ನು ಒಬ್ಬನು ಹೇಳಲಿಕ್ಕೆ ಬಂದರೆ ಅದನ್ನು ಅವರು ನಂಬುವಹಾಗಿಲ್ಲ. ಗ್ರಂಥಪೂಜೆಯೂ ಕೂಡ ಪ್ರತೀತಾ ಪೂಜೆಯಾಗಿದೆ. ಪ್ರತಿಮಾ ಪೂಜೆಯು ಎರಡನೇ ವಿಧವಾದ ಪೂಜೆಯಾಗಿದೆ. ಆ ಪ್ರತಿಮೆಗಳು ಹೆಚ್ಚಾಗಿ ಮನುಷ್ಯನ ಆಕೃತಿಯಲ್ಲಿವೆ. ಕ್ರೈಸ್ತರು ತಮ್ಮ ದೇವರು ಪಾರಿವಾಳದ ರೂಪದಲ್ಲಿ ಬಂದುದು ಸರಿಯೆಂದೂ, ಆದರೆ ಹಿಂದುಗಳು ಹೇಳುವಂತೆ ದೇವರು ದನದ ರೂಪದಲ್ಲಿ ಬಂದನೆಂಬುದು ಕೇವಲ ವಿರುದ್ಧವೆಂದೂ ಹೇಳುವರು. ಮಹಮ್ಮದೀಯರು ಮಕ್ಕಾದಲ್ಲಿರುವ ಮಸೀದಿಯನ್ನೂ, ಅದರಲ್ಲಿರುವ ಕಾಬಾಯೆಂಬ ಕರೀಕಲ್ಲನ್ನೂ ತಮ್ಮ ಪ್ರಾರ್ಥನಾ ಕಾಲದಲ್ಲಿ ಧ್ಯಾನಮಾಡುವುದು ಯುಕ್ತವೆಂದು ಹೇಳುವರು. ಆದರೆ ಕಲ್ಲಿನ ಪ್ರತಿಮೆಯನ್ನಾಗಲೀ, ದೇವರ ಭಾವಚಿತ್ರವನ್ನಾಗಲೀ, ಇಟ್ಟುಕೊಂಡು ಪೂಜಿಸುವುದು ತಪ್ಪೆಂದೂ ಅದು ವಿಗ್ರಹಾರಾಧನೆಯೆಂದೂ ಹೇಳುವರು. ಆದರೂ ಇವುಗಳೆಲ್ಲಾ ನಮ್ಮ ದೇವತಾರಾಧನೆಯಲ್ಲಿ ಅತ್ಯವಶ್ಯಕವಾಗಿವೆ. ಇವುಗಳೆಲ್ಲಾ ದಾರಿತಪ್ಪಿದವನಿಗೆ ದಾರಿತೋರಿಸುವ ಕೈಕಂಬಗಳಾಗಿವೆ. ನಮ್ಮ ಮನಸ್ಸನ್ನು ನಾವು ಏಕಾಗ್ರತೆಮಾಡುವುದಕ್ಕೆ ಪ್ರಯತ್ನಿಸಿದಾಗಲೆಲ್ಲಾ ನಮ್ಮ ಮನಸ್ಸಿನಲ್ಲಿ ಒಂದಲ್ಲದೊಂದು ಚಿತ್ರವು ಬಂದೇ ಬರುವುದು. ಎರಡು ವಿಧವಾದ ಜನಗಳಿಗೆ ವಿಗ್ರಹಗಳು ಬೇಕಾಗಿಲ್ಲವು. ಯಾವ ದೇವತಾ ವಿಚಾರವೂ ಇಲ್ಲದ ಮೃಗದಂತಿರುವ ಮನುಷ್ಯನಿಗೂ ಈ ಅಂತಸ್ತುಗಳನ್ನು ದಾಟಿರುವ ಸಿದ್ಧಪುರುಷನಿಗೂ ವಿಗ್ರಹ ಪೂಜೆಯಿಂದ ಯಾವ ಪ್ರಯೋಜನವೂ ಉಂಟಾಗಲಾರದು. ಇವರಿಬ್ಬರ ಮಧ್ಯದಲ್ಲಿರುವವರಿಗಲ್ಲಾ ಏನಾದರೊಂದು ರೂಪವು ಹೊರಾಗೂ ಒಳಗೂ ಬೇಕೇ ಬೇಕಾಗುವುದು. ನಾವು ಗ್ರಹಿಸುವ ಸಕಲ ವಿಷಯಗಳೂ ರೂಪಯುಕ್ತವಾದುವುಗಳು. ಅಂತಹ ವಿಷಯಗಳಿಗೆ ನಾವು ಆಸೆಪಟ್ಟುದರಿಂದ ನಮಗೆ ಈ ರೂಪಯುಕ್ತವಾದ ದೇಹವುಂಟಾಯಿತು. ನಾಮರೂಪಗಳಿಂದ ಕೂಡಿದ ಈ ವಿಷಯಾದಿ ವಿಗ್ರಹಗಳೇ ನಮ್ಮನ್ನು ಈ ಲೋಕಕ್ಕೆ ತಂದುದಾದಪಕ್ಷಕ್ಕೆ ನಮ್ಮನ್ನು ಈ ಲೋಕದಿಂದ ಪಾರುಮಾಡುವುದಕ್ಕೂ ಈ ವಿಗ್ರಹಗಳೇ ಸಹಾಯವಾಗುವುದು. ಮನುಷ್ಯರನ್ನು ಪೂಜಿಸಬೇಡವೆಂದು ಹೇಳುವುದೇನೋ ಅತಿಸುಲಭವಾಗಿದೆ. ಆದರೆ ಪಶ್ಚಿಮದೇಶದವರು ಸ್ತ್ರೀವ್ಯಕ್ತಿಯಮುಂದೆ "ನೀನು ನನ್ನ ಪ್ರಾಣವು! ನನ್ನ ಜೀವನದ ಬೆಳಕೇನೀನು!" ಎಂದು ಮೊಣಕಾಲೂರಿ ಪ್ರಾರ್ಥಿಸುವುದಕಿಂತ ಏಸುಕ್ರಿಸ್ತನ, ಅಥವಾ ಬುದ್ಧನ, ಇಲ್ಲವೇ ಶ್ರೀಕೃಷ್ಣನ ಪ್ರತಿಮೆಯಮುಂದೆ ಮೊಣಕಾಲೂರಿ "ನನ್ನನ್ನು ಉದ್ಧಾರಮಾಡು!" ಎಂದು ಹೇಳುವುದು ಎಷ್ಟೋ ಮೇಲು

"ಪ್ರತಿಮಾಪೂಜೆಯು ಅರುಂಧತಿ ನ್ಯಾಯದಂತಿದೆ ನಾವು ಒಬ್ಬನಿಗೆ ಅರುಂಧತಿ ನಕ್ಷತ್ರವನ್ನು ತೋರಿಸಬೇಕಾದರೆ ಅದರ ಹತ್ತಿರವಿರುವ ಯಾವುದಾದರೊಂದು ದೊಡ್ಡ ನಕ್ಷತ್ರವನ್ನು ಅವನಿಗೆ ತೋರಿಸುತ್ತೇವೆ ಅದನ್ನು ಅವನು ಕಂಡಮೇಲೆ ಅದಕಿಂತ ಸ್ವಲ್ಪ ಚಿಕ್ಕದಾದ ಇನೊಂದು ಹತ್ತಿರದ ನಕ್ಷತ್ರವನ್ನು ಕಡೆಗೆ ಅದರ ಹತ್ತಿರವಿರುವ ಅರುಂಧತಿ ನಕ್ಷತ್ರವನ್ನು ಅವನಿಗೆ ತೋರಿಸಲು ಸುಲಭವಾಗುವುದು. ಹಾಗೆಯೇ ಈ ಎಲ್ಲಾ ಪ್ರತಿಮಾಗಳೂ ನಮ್ಮನ್ನು ದೇವರಲ್ಲಿಗೆ ಹತ್ತಿಸುತ್ತಾ ಹೋಗುವುವು ಬುದ್ಧನನ್ನಾಗಲಿ, ಕೃಷ್ಣನನ್ನಾಗಲಿ, ರಾಮನನ್ನಾಗಲಿ, ಪೂಜಿಸುವುದು ಪ್ರತೀತಾಪೂಜೆಯು. ದೇವರ ಪೂಜೆಗೆ ಇದು ಸಮೀಪವರ್ತಿಯಾದ ಪೂಜೆಯಾಗಿದೆ. ಆದರೆ ಬರೇ ಕ್ರೈಸ್ತ ಬುದ್ಧ, ರಾಮ, ಕೃಷ್ಣ, ಇವರ ಪೂಜೆಯು ನಮ್ಮನ್ನು ಉದ್ಧಾರಮಾಡಲಾರದು ನಾವು ಅದನ್ನು ದಾಟಿ ಮುಂದೆ ಹೋಗಬೇಕು. ಈ ರಾಮ, ಕೃಷ್ಣ, ಬುದ್ಧ, ಕ್ರೈಸ್ತರೂಪದಿಂದ ಯಾರು ಅವತರಿಸಿದನೋ ಅವನನ್ನೇ ನಾವು ಹೊಂದಬೇಕು. ಅವನೇ ನಮಗೆ ಮುಕ್ತಿಯನ್ನು ಕೊಡತಕ್ಕವನು ಒಬ್ಬನು ಈ ಪ್ರತೀಮೆಗಳನ್ನಾಗಲಿ, ಪ್ರತಿಮೆಗಳನ್ನಾಗಲಿ, ಪೂಜಿಸುವುದರಿಂದ ಅವನಿಗೆ ಮೋಕ್ಷವುಂಟಾಗುವುದೆಂದು ತಿಳಿಯುವುದು ತಪ್ಪಾಗಿದೆ ಆದರೆ ಅವುಗಳಲ್ಲಿ ಭಗವಂತನಿದ್ದಾನೆಂದು ತಿಳಿದು ಪೂಜಿಸುವುದು ಸರಿಯಾಗಿದೆ. ದೇವರು ಒಂದುರೂಪದಲ್ಲಿ ಪೂರ್ತಿಯಾಗಿದ್ದಾನೆಂದು ತಿಳಿಯಬಾರದು. ಆದರೆ ಎಲ್ಲಾ ರೂಪಗಳಲ್ಲಿಯೂ ದೇವರು ಅಂತರ್ಯಾಮಿಯಾಗಿರುತ್ತಾನೆಂದು ತಿಳಿಯುವುದು ಯೋಗ್ಯವಾಗಿದೆ ಒಂದು ಭಾವಚಿತ್ರವನ್ನು ದೇವರೆಂದು ಪೂಜಿಸುವುದು ಸರಿಯೇ ಆದರೆ ದೇವರು ಭಾವಚಿತ್ರವೆಂದು ಪೂಜಿಸುವುದು ಸರಿಯಲ್ಲ "ಭಾವಚಿತ್ರದಲ್ಲಿರುವ ದೇವರು!" ಎಂಬ ಮಾತು ವಿಹಿತವಾಗಿದೆ ಆದರೆ "ಭಾವಚಿತ್ರದಂತಿರುವ ದೇವರು!" ಎಂದು ಹೇಳುವುದು ತಪ್ಪು." ಹೀಗೆಂದು ಶ್ರೀಮದ್ವಿವೇಕಾನಂದಸ್ವಾಮಿಗಳು ಹೇಳಿರುವರು ದೇವರು ಕೃಷ್ಣನಾಗಿದ್ದಾನೆ ಆದರೆ ಕೃಷ್ಣನು ದೇವರಲ್ಲ! ದೇವರು ವಿಗ್ರಹವಾಗಿದ್ದಾನೆ, ಆದರೆ ವಿಗ್ರಹವು ದೇವರಲ್ಲ! ದೇವರು ಶಿವನಾಗಿದ್ದಾನೆ, ಆದರೆ ಶಿವನು ದೇವರಲ್ಲ! ದೇವರು ವಿಷ್ಣುವಾಗಿದ್ದಾನೆ, ಆದರೆ ವಿಷ್ಣುವು ದೇವರಲ್ಲ! ಸಮುದ್ರವು ತೆರೆಯಾಗಿದೆ; ಆದರೆ ತೆರೆಯು ಸಮುದ್ರವಲ್ಲ! ಮರವು ಕೊಂಬೆಯಾಗಿದೆ, ಆದರೆ ಕೊಂಬೆಯು ಮರವಲ್ಲ! ಏಕೆಂದರೆ ಮರವು ಕೊಂಬೆಯೂ ಆಗಿದೆ, ಎಲೆಯೂ ಆಗಿದೆ, ಹೂವೂ ಆಗಿದೆ, ಹಣ್ಣೂ ಆಗಿದೆ. ಆದರೆ ಕೊಂಬೆ ಕೊಂಬೆಯೇ, ಮರವಾಗಲಾರದು. ಹಾಗೆಯೇ ಹಣ್ಣು ಹಣ್ಣೇ ಆದೀತಲ್ಲದೆ ಕೊಂಬೆಯಾಗಲಾರದು, ಇಲ್ಲವೇ ಮರವಾಗಲಾರದು. ಅದೇ ರೀತಿಯಲ್ಲಿ ದೇವರು ವಿಗ್ರಹವಾಗಿರುತ್ತಾನೆ. ಆದರೆ ವಿಗ್ರಹವು ದೇವರಲ್ಲ, ಅಂದರೇನು? ದೇವರು ವಿಗ್ರಹಮಾತ್ರವಲ್ಲದೆ ಇನ್ನೂ ಬೇರೆ ಎಲ್ಲಾ ಪದಾರ್ಥಗಳೂ ಆಗಿದ್ದಾನೆ ದೇವರು ವಿಗ್ರಹವೂ ಅಹುದು, ದನವೂ ಅಹುದು ಕಲ್ಲು, ಮಣ್ಣು, ಮರ, ಗಿಡಗಳೂ ಅಹುದು ಆದರೆ ವಿಗ್ರಹವು ದನವಾಗಲಾರದು, ಬೇರೆ ಯಾವಪದಾರ್ಥವೂ ಆಗಲಾರದು, ವಿಗ್ರಹವು ಯಾವಾಗಲೂ ವಿಗ್ರಹವೇ ಆಗಿ ಇದ್ದೀತು.

ಹೀಗಿರಲು ವಿಗ್ರಹಾರಾಧನೆಯನ್ನು ತಪ್ಪೆಂದು ಹೇಳಲು ಕಾರಣವಿಲ್ಲ. ಅದರಿಂದ ಯಾರಿಗೂ ಯಾವ ಬಾಧೆಯೂ ಇಲ್ಲ. ಒಬ್ಬಾನೊಬ್ಬ ಭಕ್ತನಿಗೆ ಒಂದಾನೊಂದು ವಿಗ್ರಹದಿಂದ ದೇವರನ್ನು ಕಾಣಲು ಸುಲಭವಾದರೆ ಅವನೇಕೆ ಆ ವಿಗ್ರಹವನ್ನು ಪೂಜಿಸಬಾರದು? ಎಳೇ ಮಗುವಾಗಿರುವಾಗ ನಮಗೆ ಒಂದು ತೊಟ್ಟಿಲಿನ ಸಹಾಯವು ಬೇಕಾಗಿತ್ತು. ಆದರೆ ನಾವು ದೊಡ್ಡವರಾದಮೇಲೆ ಆ ತೊಟ್ಟಿಲಿನ ಅಗತ್ಯವು ಇಲ್ಲದೆ ಇರಬಹುದು. ಆದರೆ ಅದು ಬೇರೆ ಮಕ್ಕಳಿಗೆ ಬೇಡವೇ? ದೇವರನ್ನು ಪ್ರತ್ಯಕ್ಷಮಾಡಿಕೊಂಡವರಿಗೆ ಒಂದು ವೇಳೆ ವಿಗ್ರಹಾರಾಧನೆಯು ಅಗತ್ಯವಿಲ್ಲದಿರಬಹುದು. ಆದರೆ ಅದು ಇತರರಿಗೆ ಬೇಡವೆಂದು, ಹೇಳುವುದು ಅನುಚಿತವು. ಹಿಂದೂ ಮತಕ್ಕೂ ಹಿಂದೂ ದೇಶಕ್ಕೂ ಲೋಕದವರಿಂದ ಸನ್ಮಾನವನ್ನು ತಂದು ಕೊಟ್ಟಂತಹ ಶ್ರೀ ರಾಮಕೃಷ್ಣ ಪರಮಹಂಸರೇ ವಿಗ್ರಹಾರಾಧನೆಯಿಂದ ಉತ್ಪನ್ನವಾದ ಬಳಿಕ ವಿಗ್ರಹಾರಾಧನೆಯನ್ನು ತಪ್ಪೆಂದು ಹೇಳುವುದಕ್ಕಾದೀತೊ? ಆ ತರದ ರಾಮಕೃಷ್ಣ ಪರಮಹಂಸರನ್ನುಂಟುಮಾಡುವ ಪಕ್ಷಕ್ಕೆ ಒಂದಲ್ಲ, ಎರಡಲ್ಲ, ಸಾವಿರಾರು ವಿಗ್ರಹಗಳು ಈ ನಮ್ಮ ದೇಶದಲ್ಲಿ ದಿನೇದಿನೇ ತಯಾರಾಗಲಿ ಎಂಬುದೇ ನಮ್ಮ ಪ್ರಾರ್ಥನೆಯು.

ಜಮಾಸುದಾರಸಂಘದ ನಿಷಾನಿಷೇಧದ ವಿಷಯ ನಿರ್ಣಯ.

ಕಳೆದ ಜಮಾಸುದಾರ ಸಂಘದ ವಾರ್ಷಿಕ ಮೀಟಿಂಗಿನಲ್ಲಿ ಇನ್ನು ಮುಂದಕ್ಕೆ ದೇಶದ ಜನರು ತಮ್ಮ ಎಲ್ಲಾ ಶುಭಶೋಭಾನದಲ್ಲಿ ಹೆಂಡ, ಸಾರಾಯಿ ವಗೈರೆ ನಿಷಸೇವನೆಯನ್ನು ಎಲ್ಲಾ ವಿಧದಲ್ಲಿಯೂ ಬಾಕಿ ಮಾಡಬೇಕೆಂದು ತೀರ್ಮಾನವಾದರೂ ಕಳೆದ ಕೈಲ್ ಪೊಳುದು ಹಬ್ಬದಲ್ಲಿ ದೇಶೀಯರು ಮೇಲಣ ಠರಾವಿಗೆ ವಿರೋಧವಾಗಿ ಬಹಳ ಹಣ ನಿಷಸೇವನೆಗೆ ಖರ್ಚುಮಾಡಿರುತ್ತಾರೆ ಇನ್ನಾದರೂ ಹುತ್ತರಿ ಹಬ್ಬದಲ್ಲಿ ಇದನ್ನು ಖಂಡಿತವಾಗಿಯೂ ಬಾಕಿಮಾಡಿ, ಜಮಾಸುದಾರರ ಸಂಘದ ಠರಾವಿಗೆ ಬೆಲೆ ಕೊಡಬೇಕಾಗಿ ಕೇಳಿಕೊಳ್ಳುತ್ತೇವೆ

ಕೊಡಗರ ವಿದ್ಯಾಭಿವೃದ್ಧಿ ಫಂಡು.

ಈ ಫಂಡು ಕೊಡಗಿನ ಯುವಕರಿಗ ಎಷ್ಟು ಸಹಾಯ ಮಾಡಿದೆ, ಇನ್ನು ಎಷ್ಟು ಮಾಡುತ್ತಿದೆ ಎಂಬುದನ್ನು ವರ್ಣಿಸಲಾಗದು ಆದರೆ ಈ ಫಂಡಿನ ಈ ವರ್ಷದ ಜಮೆಯು ಕಮ್ಮಿಯಾಗುತ್ತಾ ಬರುತ್ತದೆ ತಿಂಗಳು ತಿಂಗಳು ಹೆಚ್ಚಿಗೆ ಹಣ ಕೊಡುತ್ತಾ ಬರುತ್ತಿದ್ದ ಮಹನೀಯರನೇಕರು ತಾವು ಕೊಡುವ ಹಣವನ್ನು ಕಮ್ಮಿಮಾಡಿಕೊಂಡು ಬರುತ್ತಿರುವುದಾಗಿ ತಿಳಿಯುತ್ತೇವೆ ಈ ಗರೀಬ ಹುಡುಗರು ಮುಂದಕ್ಕೆ ಬಂದು ತಮಗೆ ಮರ್ಯಾದೆ ಸಿಕ್ಕದಂತೆ ಮಾಡುವುದರಿಂದ, ಅನೇಕ ಮಹಾನುಭಾವರು ತಾವು ಕೊಡುವ ಹಣವನ್ನು ಕಡಿಮೆಮಾಡಿರುತ್ತಾರಾಗಿ ಅನೇಕರು ಹೇಳುತ್ತಾರೆ ಇದುವರೆಗೆ ದೇಶದ ಅನೇಕ ಮಹಾನುಭಾವರು ಈ ಫಂಡನ್ನು ವೃದ್ಧಿಪಡಿಸಲಿಕ್ಕೆ ತೊಂದರೆ ತೆಗೆದುಕೊಂಡದ್ದಕ್ಕೆ ಎಷ್ಟು ವಂದಿಸಿದರೂ ಸ್ವಲ್ಪವೇ.

ಈ ಫಂಡಿನ ಪ್ರಯೋಜನವನ್ನು ಬಡವರಾದ ನಾಡಿನ ಜನರ ಮಕ್ಕಳು ಹೆಚ್ಚಾಗಿ ಅನುಭವಿಸುತ್ತಾರೆ ಆದರೆ ನಾಡಿನಿಂದ ಹಣ ಉತ್ಪತ್ತಿಯಾಗುವುದು ಬಹಳ ಕಡಿಮೆಯಾಗಿದೆ. ಹುತ್ತರಿ ಹಬ್ಬದಲ್ಲಿ ದೇಶದಲ್ಲಿ ಎಲ್ಲಾ ಕೊಡಗರೂ ಅವರ ಊರೂರಲ್ಲಿ ಸೇರುತ್ತಾರೆ. ಅನೇಕ ಊರಿನವರು ಹೆಂಡ, ಸಾರಾಯಿಗೆ ಖರ್ಚುಮಾಡುವುದನ್ನು ಬಾಕಿ ಮಾಡಿರುತ್ತಾರೆ ಆದ್ದರಿಂದ, ದೇಶದ ಎಲ್ಲಾ ಮಹಾನುಭಾವರೂ, ತಮ್ಮ ಊರೂರಿಂದ ಕಡಿಮೆಪಕ್ಷ ಹತ್ತು ರೂಪಾಯಿಯನ್ನಾದರೂ, ತಾವು ನಿಷಪದಾರ್ಥಕ್ಕೆ ಖರ್ಚುಮಾಡುವ ಹಣವನ್ನು ಉಳಿಕೆಮಾಡಿ, ಈ ಫಂಡಿನ ಸೆಕ್ರೆಟರಿ ಮೆ|| ಕೀತಿಯಂಡ್ರ ಕಾಳಪ್ಪನವರಿಗೆ ಕಳುಹಿಸಿಕೊಟ್ಟು, ನಾಡಿನವರ ದೇಶಾಭಿಮಾನವನ್ನು ತೋರಿಸಬೇಕಾಗಿ ಈ ಮೂಲಕ ಎಲ್ಲಾ ಕೊಡಗರಿಗೂ ಅರಿಕೆಮಾಡಿಕೊಳ್ಳುತ್ತೇವೆ

ಡಿಸಂಬರು ತಾರೀಕು 1 ರಲ್ಲು ಕೊಡಗು ಕಾವೇರಿ ಸ್ತ್ರೀ ಸಮಾಜದ ಮೆಂಬರುಗಳಿಗೆ ಪಾಲಿಬೆಟ್ಟ ಸರಕಾರಿ ಬಾಲಿಕಾಪಾಠಶಾಲೆಯ ಹೆಡ್‌ಮಿಸ್ಟ್ರೆಸ್ ಕೋಟೆರ ಸಿ. ಅಕ್ಕವನವರು ಪಾಂಡಂಡ್ರ ಶ್ರೀಮತಿ ಪೊನ್ನವ್ವನವರ ಅಧ್ಯಕ್ಷತೆಯಲ್ಲಿ, ಸ್ತ್ರೀ ವಿದ್ಯಾಭ್ಯಾಸ ಮತ್ತು ಮಕ್ಕಳ ಶಿಕ್ಷಣದ ವಿಷಯಮಾಡಿದ ಭಾಷಣದ ಸಾರಾಂಶ—

ಅಧ್ಯಕ್ಷರೇ, ಪ್ರಿಯಮಾತೆಯರೇ ಮತ್ತು ಪ್ರಿಯ ಸಹೋದರಿಯರೆ!

ಲೋಕದಲ್ಲಿ ಯಾವ ಜನಾಂಗವೇ ಆಗಲಿ ಅಭಿವೃದ್ಧಿಗೆ ಬರಬೇಕಾದರೆ ಮಕ್ಕಳು ವಿದ್ಯಾ ವಿವೇಕ ಸಂಪನ್ನರಾಗಬೇಕು, ಕಷ್ಟದ ಕೆಲಸಗಳನ್ನು ಮಾಡಲಿಕ್ಕೆ ಸರಿಯಾದ ಒಳ್ಳೇಯ ಶರೀರಗಳಿರಬೇಕು ಯಾವ ದೇಶದಲ್ಲಿ ಜನಾಂಗವು ಹಿಂದೆಯಾಗಿದೆಯೋ ಆ ದೇಶವು ದಾರಿದ್ರ ದುಃಖದಿಂದ ಕೂಡಿ ಜನಾಂಗವೇ ಕ್ಷೀಣಿಸಿ ಹೋಗುವುದು, ಆದ್ದರಿಂದ ಸರ್ವಜನಾಂಗದ ಅಭಿವೃದ್ಧಿಗೆ ಮೂಲಕಾರಣವಾದ ಮಕ್ಕಳನ್ನು ಎಚ್ಚರದಿಂದ ಸಾಕುತ್ತಾ ವಿದ್ಯಾಬುದ್ಧಿಯನ್ನು ಕಲಿಸಬೇಕಾದುದು ಪ್ರತಿಯೊಬ್ಬರ ಕರ್ತವ್ಯ. ಹೀಗೆಂದ ಬಳಿಕ ತಾಯಿ ತಂದೆಗಳು ದೇಶದ ಅಭಿವೃದ್ಧಿಗೆ ಆದಿಕಾರಣರೆಂದು ಹೇಳಬೇಕು. ತಂದೆಗಿಂತ ತಾಯೇ ಮಕ್ಕಳ ಪೋಷಣೆಯಲ್ಲಿ ನಿರತಳಾಗಿರುವುದರಿಂದ ಮಕ್ಕಳು ತಾಯಿಯ ನಡವಳಿಕೆಯನ್ನೇ ಅನುಸರಿಸುತ್ತಾರೆ. ಆದ್ದರಿಂದಲೇ ತಾಯಿಯಂತೆ ಮಕ್ಕಳು ಎನ್ನುವ ಮಾತು ವಾಡಿಕೆಯಲ್ಲಿ ಬಂದಿದೆ. ಒಂಭತ್ತು ತಿಂಗಳು ಹೊತ್ತು ಹೆತ್ತು ಮಕ್ಕಳ ಪೋಷಣೆಯಲ್ಲಿಯೇ ಆಸಕ್ತಳಾಗಿರುವುದರಿಂದಲೇ ತಾಯಿಗಿಂತ ಮಕ್ಕಳಿಗೆ ಬೇರೆ ದೇವರಿಲ್ಲವೆಂದು ಎಲ್ಲಾ ಶಾಸ್ತ್ರ ಪುರಾಣಗಳು ಹೇಳುತ್ತವೆ

ವಿದ್ಯಾಭ್ಯಾಸವೆಂದರೇನು—ಈ ಶಬ್ದವನ್ನು ಅನೇಕ ವಿದ್ವಾಂಸರು ಅನೇಕ ಅರ್ಥದಲ್ಲಿ ಹೇಳುತ್ತಾರೆ. ಒಬ್ಬಪಂಡಿತನು ಮಕ್ಕಳನ್ನು ಅವರವರ ಜೀವನವನ್ನು ನಡಿಸಲು ಸಿದ್ಧಪಡಿಸಲು ಪ್ರಯತ್ನ ಪೂರ್ವಕವಾಗಿ ಮಾಡಿಸುವ ಅನುಭವಗಳೇ ವಿದ್ಯಾಭ್ಯಾಸವೆನ್ನಿಸುಕೊಳ್ಳುವುದೆಂದೂ, ಇನ್ನೊಬ್ಬ ಪಂಡಿತನು ನಮ್ಮ ಗುಣವನ್ನು ಉತ್ತಮಸ್ಥಿತಿಗೆ ತರಲು ನಾವೇ ಆಗಲಿ ನಮಗೋಸ್ಕರ ಇತರರೇ ಆಗಲಿ ಮಾಡುವುದೆಲ್ಲವೋ ವಿದ್ಯಾಭ್ಯಾಸವೆಂದೂ ಇನ್ನೊಬ್ಬ ಪಂಡಿತನು ನಿಜವಾದ ವಿದ್ಯಾವಂತನು ಯಾವಾಗಲೂ ಸತ್ಕಾರ್ಯಗಳನ್ನು ಮಾಡುವಹಾಗಿರುವಂತೆ ಅಲ್ಲದೆ ಸತ್ಯವನ್ನೇ ಮುಂದಿಟ್ಟು ಒಳ್ಳೇ ಕೆಲಸ

ಗಳನ್ನು ಮಾಡುವುದೆಂದೂ ಯಾವಾಗಲೂ ಸೋಮಾರಿಯಾಗಿ ಇರದೆ ಪರರನ್ನು ದ್ವೇಷಿಸದೆ ಎಲ್ಲರನ್ನೂ ತನ್ನವರೆಂದೆ ಭಾವಿಸಿ ನ್ಯಾಯ ಮಾರ್ಗದಲ್ಲಿರುವುದೇ ನ್ಯಾಯವಾದ ವಿದ್ಯೆಯೆಂದೂ, ಮಹೋತ್ಕೃಷ್ಟ ಪಂಡಿತನು ಮನುಷ್ಯಜಾತಿಗೆ ಸೇರಿದವರನ್ನು ಅವರವರ ಕೆಲಸಗಳನ್ನು ಸರಿಯಾಗಿ ಮಾಡಿಸಲಿಕ್ಕೂ ಮನುಷ್ಯ ಜೀವಮಾನವನ್ನು ಸಂಪೂರ್ಣವಾಗಿ ಒಳ್ಳೇರೀತಿಯಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ಸಿದ್ಧಪಡಿಸಿಕೊಳ್ಳುವುದೇ ವಿದ್ಯೆಯೆಂದೂ ಹಲವು ಬಗೆಯಾಗಿ ಅನೇಕ ವಿದ್ವಾಂಸರು ಹೇಳುತ್ತಾರೆ. ಮಕ್ಕಳು ಶಾಲೆಗೆ ಹೋಗುವುದಕ್ಕೆ ಮೊದಲು ತಾಯಿಯ ಬಳಿಯಲ್ಲಿಯೂ ನಂತರ ಪ್ರಾಯಕ್ಕೆ ಬರುವವರೆಗೂ ಉಪಾಧ್ಯಾಯ, ಉಪಾಧ್ಯಾಯಿನಿಯರಲ್ಲಿ ಇರುತ್ತಾರೆ. ಮೊದಲು ತಾಯಿಯ ಹೊಟ್ಟೆಯಿಂದ ಬಂದು ತಾಯಿಯ ಬಳಿಯಲ್ಲಿರುವುದರಿಂದ ಅಂತಾ ಎಲ್ಲಾ ತಾಯಿಯರು ವಿದ್ಯಾಬುದ್ಧಿಯಲ್ಲಿದ್ದು ತಮ್ಮ ಮಕ್ಕಳ ಸ್ಥಿತಿಯನ್ನು ಅಭಿವೃದ್ಧಿಗೆ ತರುವುದು ಎಷ್ಟು ಅವಶ್ಯವೋ ಅಷ್ಟೇ ಅವರಿಗೆ ಕಲಿಸುವ ಉಪಾಧ್ಯಾಯ ಉಪಾಧ್ಯಾಯಿನಿಯರುಗಳು ತಕ್ಕವರಾಗಿರಬೇಕು. ಯಾವಾಗಲೂ ಮೋಕ್ಷವನ್ನು ಬೇಡುವವರು ಲೋಕದಲ್ಲಿ ಸಾಮಾನ್ಯ ಕೆಲಸಗಳನ್ನೆಲ್ಲ ತಾಳ್ಮೆಯಿಂದಲೂ ಶ್ರದ್ಧೆಯಿಂದಲೂ ಪರೋಪಕಾರ ಬುದ್ಧಿಯಿಂದಲೂ ಕೆಲಸಮಾಡಲಿಕ್ಕೆ ಮಕ್ಕಳನ್ನು ತಯಾರು ಮಾಡುವುದು ಅವಶ್ಯಕ ಶ್ರೇಷ್ಠವಾದ ಕಾರ್ಯಗಳೆಲ್ಲಾ ಉಪಾಧ್ಯಾಯರ ಉಪಾಧ್ಯಾಯಿನಿಯರ ಉದ್ಯೋಗವು ಕೊಡಗಿನ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಾಗಿದ್ದ ರಾವುಸಾಹೇಬ್ ಕೇಟೋಳಿರ ಚಂಗಪ್ಪನವರು ಶ್ರೀಮತಿ ಕೋದಂಡ ಬೊಳ್ಳಮ್ಮನವರಿಗೆ ಬಿನ್ನಹಪತ್ರ ಕೊಟ್ಟ ಭಾಷಣದ ದಿವಸ ಹೇಳಿದಂತೆ ಅತಿ ಶ್ರೇಷ್ಠವಾದದ್ದು. ಉಪಾಧ್ಯಾಯ ಮತ್ತು ಉಪಾಧ್ಯಾಯಿನಿಯರಿಗೆ ಇರಬೇಕಾದ ಯೋಗ್ಯತೆಗಳೆಲ್ಲಾ ಪ್ರೀತಿ ಮತ್ತು ತಾಳ್ಮೆಯೇ ಮುಖ್ಯವಾದವುಗಳು. ಉಪಾಧ್ಯಾಯಿನಿಯರುಗಳು ಸ್ತ್ರೀಯರಾಗಿ ಮಕ್ಕಳನ್ನು ಹಡೆಯುವವರಾದುದರಿಂದಲೂ ಮಕ್ಕಳಮೇಲೆ ಯಾವಾಗಲೂ ಹೆಚ್ಚಿನ ಪ್ರೀತಿ ಇದೆಯೆಂಬುದನ್ನು ಹೇಳಲು ಅವಶ್ಯ ಕಾಣುವುದಿಲ್ಲ

ಈ ನವನಾಗರೀಕತನದ ಕಾಲದಲ್ಲಿ ಉಪಾಧ್ಯಾಯ ಉಪಾಧ್ಯಾಯಿನಿಯರ ಕೆಲಸವು ಇತರ ವಿದ್ಯಾವಂತರು ಮಾಡತಕ್ಕ ಕೆಲಸಗಳಿಗಿಂತ ತುಚ್ಛವಾಗಿ ಎಣಿಸಲ್ಪಟ್ಟಿದೆ. ಅದರಲ್ಲಿಯೂ ಬಾಲಿಕಾ ಪಾಠಶಾಲೆಯಲ್ಲಿರುವ ಉಪಾಧ್ಯಾಯಿನಿಯ ಕೆಲಸವನ್ನು ಅನೇಕರು ಹೀಯಾಳಿಸುತ್ತಾರೆ. ಯಾವಳನ್ನಾದರೂ ಸರಿಯೆ ಉಪಾಧ್ಯಾಯಿನಿಯ ಕೆಲಸಕ್ಕೆ ತಕ್ಕವಳೆಂದು ಎಣಿಸುತ್ತಾರೆ ಆದ್ದರಿಂದಲೇ ಈ ವೃತ್ತಿಗೆ ಮರ್ಯಾದೆ ಕಮ್ಮಿ ಉಪಾಧ್ಯಾಯ ಉಪಾಧ್ಯಾಯಿನಿಯರು ಲೋಕದ ಮುಂದಿನ ಪ್ರಜೆಗಳಾಗಬೇಕಾದ ಈಗಿನ ಬಾಲಕ ಮತ್ತು ಬಾಲಿಕೆಯರ ನಡತೆಯನ್ನು ತಿದ್ದಿ ಒಳ್ಳೆ ಅಭ್ಯಾಸಕ್ಕೆ ತರುವುದರಿಂದಲೇ ಪೂರ್ವಕಾಲದಲ್ಲಿ ಸಹ ಈ ಉದ್ಯೋಗವು ಮಹಾಪವಿತ್ರವಾದುದೆಂದು ಭಾವಿಸಲ್ಪಟ್ಟಿತು. ಉಪಾಧ್ಯಾಯ ಮತ್ತು ಉಪಾಧ್ಯಾಯಿನಿಯರಿಗೆ ಇರಬೇಕಾದ ಯೋಗ್ಯತೆಗಳಲ್ಲೆಲ್ಲಾ ಪ್ರೀತಿ ಮತ್ತು ತಾಳ್ಮೆಯು ಮುಖ್ಯವಾದದ್ದು ನಮ್ಮ ಭಾರತಮಾತೆಯು ಪೂರ್ವದ ಸ್ಥಿತಿಯನ್ನು ಪಡೆಯಬೇಕಾದರೆ ನಾವು ಕಲಿಯುವ ವಿದ್ಯಾಭ್ಯಾಸವೇ ಮುಖ್ಯ ಕಾರಣವಾಗಿದೆ. ಅದರಲ್ಲಿಯೂ ಗುರುಶಿಷ್ಯರಿಗಿರುವ ಸಂಬಂಧವನ್ನು ಸ್ಥಾಪಿಸದಿದ್ದರೆ ಗತಿಯೇ ಇಲ್ಲ

ಎಲ್ಲಾ ಉದ್ಯೋಗಗಳಿಗೂ ತಯಾರಾಗಲು ಶಿಕ್ಷಣದೊರಕುವುದಕ್ಕಾಗಿ ಬಾಲಕ ಬಾಲಕಿಯರು ಪಾಠಶಾಲೆಯನ್ನು ಹೊಕ್ಕುಗೂಡುವರಷ್ಟೆ. ಪಾಠಶಾಲೆಯಲ್ಲಿನ ಅವರ ಜೀವಮಾನವು ಸೌಖ್ಯವಾಗಿದ್ದಲ್ಲವೇ ಅವರು ದೊಡ್ಡವರಾದಾಗ ಜನಾಂಗಕ್ಕೆ ಹಿತವನ್ನೆಸಗಲು ಸಮರ್ಥರಾಗುವರು ಮಕ್ಕಳು ಸ್ವಾಭಾವಿಕವಾಗಿ ಸುಖಿಸ್ವರೂಪಿಗಳು ಅಂಥಾ ಸುಖವು ಪಾಠಶಾಲೆಯಲ್ಲಿಯೂ ಮನೆಯಲ್ಲಿಯೂ ಅಭಿವೃದ್ಧಿಹೊಂದುವಂತೆ ಮಾಡಿದರೆ ಅಂಥಾ ಮಕ್ಕಳು ದೊಡ್ಡವರಾದಾಗ ಎಲ್ಲರಿಗೂ ಸುಖವನ್ನುಂಟುಮಾಡುವರು. ಉಪಾಧ್ಯಾಯ ಮತ್ತು ಉಪಾಧ್ಯಾಯಿನಿಯು ಯಾವಾಗಲೂ ತನ್ನ ವೃತ್ತಿಯು ದೇಶಸೇವೆಗೋಸ್ಕರವೇ ಇರತಕ್ಕದ್ದೆಂದು ಭಾವಿಸಬೇಕು ನಮ್ಮಲ್ಲಿಯಾದರೋ ಉಪಾಧ್ಯಾಯಿನಿಯರ ಪದವಿಯನ್ನು ಅನೇಕರು ತುಚ್ಛೀಕರಿಸುವುದಲ್ಲದೆ ಅನ್ಯಕ್ಕೆ ಗತಿ ಇಲ್ಲದವರೇ ಈ ಉದ್ಯೋಗಕ್ಕೆ ಬರುತ್ತಾರೆಂದು ಎಣಿಸುತ್ತಾರೆ. ಈ ಉದ್ಯೋಗವನ್ನು ಮಾಡುವವರು ಸಹ ಇದರಿಂದ ತಮ್ಮ ಜೀವನೋಪಾಯವನ್ನು ಕಳೆಯುವುದೇ ತಮ್ಮ ಮುಖ್ಯ ಕಾರ್ಯವೆಂದು ಎಣಿಸುತ್ತಾರೆ. ಈ ವೃತ್ತಿಗೆ ಬರುವವರೆಲ್ಲರೂ ಬಡವರಾದ್ದರಿಂದಲೂ ಹಾಗೆ ಯೋಚಿಸಮಾಡದೆ ವಿಧಿಯಿಲ್ಲ ಐಶ್ವರ್ಯವಂತರು ತಮ್ಮ ಬಾಲಕ ಬಾಲಕಿಯರಿಗೆ ಹೆಚ್ಚಿನ ವಿದ್ಯಾಭ್ಯಾಸವನ್ನು ಮಾಡಿಸಿ ಉಪಾಧ್ಯಾಯ ಉಪಾಧ್ಯಾಯಿನಿಯರ ಪದವಿಗೆ ಬರುವಂತೆ ಮಾಡಿದರೆ ಅವರು ದೇಶಸೇವೆಗೂ ದೇಶೋದ್ಧಾರಕ್ಕೂ ಭಾಗಿಗಳಾಗಿ ಮಹಾಪುಣ್ಯಕ್ಕೆ ಪಾತ್ರರಾಗುತ್ತಾರೆಂಬುದಕ್ಕೆ ಸಂಶಯವಿಲ್ಲ. ಉದಾಹರಣೆಯಾಗಿ ಈಗ ಇರುವ ಉಪಾಧ್ಯಾಯಿನಿಯರ ಸಂಖ್ಯೆಯನ್ನು ತೆಗೆದುಕೊಂಡರೆ ಎಲ್ಲರೂ ಹಳ್ಳಿಗಾಡಿನ ಬಡ ಉಪಾಧ್ಯಾಯಿನಿಯರೇ. ಆದ್ದರಿಂದ ತಮ್ಮಂಥ ಮಹಿಳೆಯರು ತಮ್ಮ ಬಾಲಕಿಯರನ್ನು ಈ ವೃತ್ತಿಗೆ ಬಿಟ್ಟು ದೇಶಸೇವೆಗೆ ಭಾಗಿಗಳಾದ ವಿನಹ ನಮ್ಮ ದೇಶವು ಏಳಿಗೆಗೆ ಬರಲಾರದು. ಶ್ರೀಮತಿ ಬೊಳ್ಳಮ್ಮ ಬಿ. ಎ. ಯವರು ಇದರಲ್ಲಿ ಮಾದರಿಯಾಗಿರುತ್ತಾರೆಂಬುದಕ್ಕೆ ಸಂಶಯವಿಲ್ಲ ಅವರು ಮಾಡಿರುವ ಮೇಲ್ಪಂಕ್ತಿಯನ್ನು ನಾವು ಎಷ್ಟು ಕೊಂಡಾಡಿದರೂ ಸ್ವಲ್ಪವೇ. ನಮ್ಮವರಲ್ಲಿ ಇಪ್ಪತ್ತು ಅಥವಾ ಹೆಚ್ಚು ಮಂದಿ ಸ್ತ್ರೀಯರು ಸೇರಿದರೆ ನೆರೆಮನೆಯವರ ದೂರು ಉಡಿಗೆ ತೊಡಿಗೆ ನಗನಾಣ್ಯ ಇವುಗಳ ಮಾತೇ ಹೊರತು ಪ್ರಯೋಜನವಿರುವ ಬೇರೆ ಸಂಭಾಷಣೆ ಬರುವುದಿಲ್ಲ ಇದಕ್ಕೆ ವಿದ್ಯೆ ಇಲ್ಲದಿರುವುದೇ ಮುಖ್ಯ ಕಾರಣ ಪುರುಷರು ಮಾತ್ರ ಹೆಚ್ಚು ವಿದ್ಯೆ ಕಲಿಯುತ್ತಾ ಸ್ತ್ರೀಯರು ಪಶುಗಳಂತೆ ಮೂಢರಾದರೆ ಜೋಡಿಯು ಒಂದು ಗಾಡಿಗೆ ಒಂದು ಕುದುರೆಯನ್ನು ಕತ್ತೆಯನ್ನು ಕಟ್ಟಿದಂತಾಗುವುದಿಲ್ಲವೇನೆ. ದೇವರ ಸೃಷ್ಟಿಯಲ್ಲಿ ಸ್ತ್ರೀಪುರುಷರು ಒಂದೇಯಾಗಿರುವುದರಿಂದ ಗಂಡಸರು ಮಾತ್ರ ವಿದ್ಯೆ ಕಲಿತು ಹೆಂಗಸರು ಕಲಿಯದಿರುವುದು ಯಾವನ್ಯಾಯ. ಮನಸ್ಸು ಮಾಡಿದರೆ ಇತರ ಜಾತಿಗಳಿಗೆ ಸಹ ವಿದ್ಯೆಯನ್ನು ಕಲಿಸಲು ಪ್ರಯತ್ನಿಸುವಲ್ಲಿ ಜನಾಂಗದ ಅಭಿವೃದ್ಧಿಗೆ ಮೂಲರಾದ ಸ್ತ್ರೀಯರನ್ನು ಹಿಂದಿಳ್ಳುವುದು ಎಷ್ಟು ಅನ್ಯಾಯ ಈ ಕಾರಣದಿಂದಲೆ ಅಮೇರಿಕಾ ಯೂರೋಪ್ ಖಂಡಗಳಲ್ಲಿ ಸ್ತ್ರೀಯರು ವಿದ್ಯಾಬುದ್ಧಿಯಲ್ಲಿ ಮುಂದಕ್ಕೆ ಬಂದು ಜನಾಂಗವನ್ನು ಅತ್ಯುನ್ನತಸ್ಥಿತಿಗೆ ತಂದಿದ್ದಾರೆ ಪೂರ್ವದಲ್ಲಿ ನಮಗೆ ಸ್ತ್ರೀವಿದ್ಯಾಭ್ಯಾಸವು ಹೊಚ್ಚಹೊಸದಾಗಿಲ್ಲದಿದ್ದರೂ ಬ್ರಿಟಿಷ್ ರಾಜ್ಯಾಧಿಕಾರವು ಶುರುವಾದಂದಿನಿಂದ ಅದರಲ್ಲು ಕೊಡಗಿನಲ್ಲಿ ಸ್ತ್ರೀವಿದ್ಯಾಭ್ಯಾಸಕ್ಕೆ ನಮ್ಮ ಸರಕಾರವು ಬಹಳವಾದ ಪ್ರೋತ್ಸಾಹವನ್ನು ಕೊಟ್ಟಿದ್ದಾರೆ ಆದರೆ ಹೆಣ್ಣುಮಕ್ಕಳಿಗೆ ಕೊಡುವ ಶಿಕ್ಷಣದಲ್ಲಿ ಅನೇಕ ಕುಂದುಕೊರತೆಗಳಿವೆ.

ಕೆಲವರು ಸ್ತ್ರೀಯರಿಗೆ ವಿದ್ಯಾಭ್ಯಾಸ ಕೊಟ್ಟರೆ ದುರಹಂಕಾರ ಬಂದು ಸಂಸಾರದ ಕೆಲಸಕ್ಕೆ ತೊಂದರೆ ಬರುವುದೆ ದೂ ಪುರುಷರಿಗೆ ಮರ್ಯಾದೆಯನ್ನು ತೋರಿಸಲಿಕ್ಕಿಲ್ಲವಾಗಿಯೂ ಕೆಟ್ಟ ನಡತೆಗೆ ಎಡೆಯಾಗುತ್ತದೆಂದಾಗಿಯೂ ಅನೇಕ ಆಕ್ಷೇಪಣೆಗಳನ್ನು ತರುತ್ತಾರೆ. ತುಂಬಿದ ಕೊಡ ತುಳುಕದು ಅಲ್ಪವಿದ್ಯೆ ಮಹಾಗರ್ವಿ ಎಂಬಂತೆ ನ್ಯಾಯವಾದ ವಿದ್ಯೆಯನ್ನು ಕಲಿಯದಿದ್ದರೆ ಕೆಲವರಿಗೆ ಅಹಂಕಾರವು ಬರಬಹುದು ಆದರ ಸದ್ವಿದ್ಯೆಯ ಫಲಗಳು ಸತ್ಯ, ಗುರುಹಿರಿಯರಲ್ಲಿ ಭಕ್ತಿ ಪತಿಯಲ್ಲಿ ಪ್ರೀತಿ ಮುಂತಾದ ಸುಗುಣಗಳೇ ಹೊರತು ಪತಿಯಲ್ಲಿ ಅವಿಧೇಯತೆ, ಅಲಕ್ಷ್ಯತೆಗೆ ಕಾರಣವಿಲ್ಲ ಸ್ವಭಾವಿಕವಾಗಿ ಕೆಟ್ಟ ಗುಣವುಳ್ಳವರು ವಿದ್ಯೆ ಕಲಿಯಲಿ, ಕಲಿಯದಿರಲಿ ದುರ್ಮಾರ್ಗದಲ್ಲಿ ನಡೆಯುವರು. ನಿಜ ಇದಕ್ಕೆ ವಿದ್ಯೆಯು ಕಾರಣವೆಂದು ಹೇಳಲಾಗದು. ಒಬ್ಬರ ಕೆಟ್ಟ ಗುಣವನ್ನು ನೋಡಿ ವಿದ್ಯಾಭ್ಯಾಸವೇ ಬೇಡವೆಂದೆನ್ನಬಹುದೇ ? ಕಳ್ಳರಿಗೆ ಓಡಿಹೋಗುವುದೆ ಅನುಕೂಲವಾಗಬಹುದೆಂಬ ಮಾತ್ರಕ್ಕೆ ಹೆದ್ದಾರಿಯೇ ಅವಶ್ಯವಿಲ್ಲವೆಂಬ ಮಾತಿನ ಹಾಗಾಗುತ್ತದೆ ಅಲ್ಲವೆ ? ಸ್ತ್ರೀಯರಿಗೆ ವಿದ್ಯಾಭ್ಯಾಸವಿಂದ ಒಳ್ಳೇದಾಗಬಹುದೇ ಅಥವಾ ಕೆಡುಕಾಗುವುದೆ ? ವಿದ್ಯೆಯಿಲ್ಲದ ಸ್ತ್ರೀಯು ಮಕ್ಕಳಿಗೆ ತಾಯಿಯಾಗಲಿಕ್ಕೆ ಯೋಗ್ಯಳಾದಾಳೇ ? ಆದ್ದರಿಂದ ಸ್ತ್ರೀವಿದ್ಯಾಭ್ಯಾಸವು ವೃದ್ಧಿಯಾಗದಿದ್ದರೆ ದೇಶದ ಜನಾಂಗವೇ ಹಾಳಾಗುವುದು ಮಕ್ಕಳ ವಿಷಯದಲ್ಲಿ ನೆಪೋಲಿಯನ್ ಎಂಬ ವೀರಾಧಿವೀರನ ತಾಯಿಯು ಕೊಟ್ಟ ಶಿಕ್ಷಣವನ್ನು ಎಲ್ಲರೂ ಓದಬೇಕಾಗಿದೆ ಜೇಮ್ಸ್ ಇಬ್ರಾಮ್ ಗಾರ್ಫೀಲ್ಡ್ ಎಂಬ ಅಮೇರಿಕಾದೇಶದ ಪ್ರೆಸಿಡೆಂಟರಾಗಿದ್ದವನ ತಾಯಿಯು ಕೊಟ್ಟ ಶಿಕ್ಷಣವನ್ನು ಸಹ ಓದತಕ್ಕದ್ದಾಗಿದೆ ನೆಪೋಲಿಯನನ ತಾಯಿಯು ಕ್ಷತ್ರಿಯ ಕುಲದಲ್ಲಿ ನಿಪುಣಳು ಬಹಳ ಧೈರ್ಯಶಾಲಿ ಪೌರುಷ ಹಸ್ತೆ. ಪತಿವ್ರತಾಶಿರೋಮಣಿ. ನೆಪೋಲಿಯನ್ ಚಕ್ರವರ್ತಿಯೆಂದೆನಿಸಿಕೊಂಡು ಜಗದೇಕ ವೀರನಾಗಬೇಕಾದರೆ ಅವನ ತಾಯಿ ಕೊಟ್ಟ ಶಿಕ್ಷಣವೇ ಮುಖ್ಯ ಕಾರಣವಾಗಿದೆ ಇದೇ ಪ್ರಕಾರವೇ ಜೇಮ್ಸನ ತಾಯಿಯಾದ ಎಲಿಜಯು ಮನಸ್ಸಿಟ್ಟಿದ್ದಲ್ಲಿ ಮಾರ್ಗವಿದ್ದೇ ಇದೆ ಎಂಬ ತತ್ವವನ್ನು ಮಗನಿಗೆ ಕಲಿಸಿಕೊಟ್ಟದ್ದರಿಂದ ತಾನು ಯೋಚಿಸಿದ ಕಾರ್ಯಗಳನ್ನೆಲ್ಲಾ ಸಫಲಮಾಡಿಕೊಂಡು ಅಮೇರಿಕಾ ಸಂಯುಕ್ತ ಸಂಸ್ಥಾನದ ಪ್ರೆಸಿಡೆಂಟ್ ಪದವಿಯನ್ನು ಪಡೆದನು.

ಪ್ರಿಯ ಭಗಿನಿಯರೇ ಸ್ತ್ರೀಯರು ಮಾಡಿದ ಸಾಹಸ ಕಾರ್ಯಗಳೂ ಅಂಥಾ ಸ್ತ್ರೀಯರಿಗ ಹುಟ್ಟಿದ ಮಕ್ಕಳ ಕೀರ್ತಿಯೂ, ಅನೇಕವಾಗಿರುವುದನ್ನು ನಾವುಗಳೆಲ್ಲರೂ ಯಥವಾಗಿ ಓದುತ್ತೇವೆ. ಪ್ರೀತಿಯೆಂಬ ಪುಷ್ಪವನ್ನು ಮುಡಿದು ನಂಬಿಕೆಯೆಂಬ ಗಂಧವನ್ನು ಲೇಪಿಸಿಕೊಂಡು ಪಾತಿವ್ರತ್ಯವೆಂಬ ಸೀರೆಯನ್ನು ಉಟ್ಟುಕೊಂಡು ಗುಣವೆಂಬ ಆಭರಣವನ್ನು ಇಟ್ಟುಕೊಂಡು ಎಲ್ಲ ಗುಣದಿಂದ ಒಪ್ಪುವ ಸ್ತ್ರೀಯರಿಗ ಸಮಾನರಾದವರು ಯಾರೂ ಇಲ್ಲ ಅಲ್ಲವೇ ?

ಪ್ರಿಯಸಹೋದರಿಯರೇ, ಹಳ್ಳಿಗಾಡಿನವಳಾದ ನನ್ನಂತವಳೆಲ್ಲರು ವಿದೇಶೀಯ ವಿದ್ಯಾವಂತ ಮತಿಯರಾದ ಸ್ತ್ರೀಯರು ಮಾಡುವ ಒಳ್ಳೇ ಕಾರ್ಯಗಳನ್ನು ಯಾವಾಗಲೂ ಎದುರುನೋಡುತ್ತಿ ರುತ್ತೇವೆ. ನೀವು ಮಾಡುವುದೆಲ್ಲಾ ಒಳ್ಳೇದಿಂದು ... ನೀವು ... ಹಿಂಬಾಲಿಸುವವರಿಗಾದ್ದೇವು ನಾವೆಲ್ಲರೂ ನಮ್ಮ ಮಕ್ಕಳನ್ನು ... ವಿವಾಹ. ವಿದೇಶೀಯರಲ್ಲಿನ ಸ್ತ್ರೀಯರು ಎಲ್ಲಾ ವಿಧವಾದ ಯುದ್ಧ ಕೊಡಗು ದೇಶದ ಇತರ ಸ್ತ್ರೀಯರಿಗೆ ಮುಂದಾದ ರೂಪದಲ್ಲಿದ್ದು ಒಳ್ಳೇ ಉದಾಹರಣೆ ತೋರಿಸಿ ದೇಶದ ಸ್ತ್ರೀಯರ ಅಭಿವೃದ್ಧಿಯಲ್ಲಿ ಆಸಕ್ತರಾದರೆ ನಿಮ್ಮಿಂದ ನಮ್ಮ ದೇಶವೇ ಅಭಿವೃದ್ಧಿಗೆ ಬಂದಂತಾಗುವುದಿಲ್ಲವೇ ? ಒಂದು ವೇಳೆ ನೀವು ಇವಕ್ಕೆ ಪ್ರತಿಕೂಲೆಯರಾಗಿ ನಡೆದರೆ ನಿಮ್ಮಿಂದ ದೇಶವೇ ಹಾಳಾದಂತಾಗುವುದು ಜಗದೀಶ್ವರನು ಈ ಕಾವೇರಿ ಸ್ತ್ರೀಸಮಾಜಕ್ಕೆ ದೀರ್ಘಾಯುಷ್ಯವನ್ನಿಟ್ಟು ನಮ್ಮ ಜನಾಂಗದ ಅಭಿವೃದ್ಧಿಗೆ ಮೂಲಾಧಾರರಾದ ಈ ದೇಶದ ಸ್ತ್ರೀಯರನ್ನು ಏಳಿಗೆಗೆ ತರಲು ಅನುಕೂಲಕೊಡಲಿ ಎಂದು ಪ್ರಾರ್ಥಿಸಿ ನನ್ನ ಉಪನ್ಯಾಸವನ್ನು ಮಂಗಳಮಾಡುತ್ತೇನೆ.

ಜಲಿಯನ್ ವಾಲಾಬಾಗ್.

ಅಮೃತಸರ ನಗರದ ಮಧ್ಯದಲ್ಲಿ ಎಲ್ಲಿ ಸ್ವರಾಜ್ಯಸಂಘದ ಸಭೆಗೋಸ್ಕರ ಹೇರ ಪಗ್ಗರೆಗಳು ಹಾಕಲ್ಪಟ್ಟಿರುತ್ತವೆಯೋ ಆ ಮೈದಾನಕ್ಕೆ ಹೋಗಿ ತಲುಪಿದೆವು. ಸ್ಥಳವೇನೋ ಬಹು ವಿಸ್ತಾರವಾಗಿದೆ, ಅಲ್ಲಿ ಇಲ್ಲಿ ಹುಲ್ಲು ಬೆಳದಿದೆ; ನಾಲ್ಕು ದಿಕ್ಕುಗಳಲ್ಲಿಯೂ ಮನೆಗಳಿಂದ ಸುತ್ತುವರಿಯಲ್ಪಟ್ಟಿರುವುದರಿಂದ ಒಳಗೆ ಬರುವುದಕ್ಕೂ ಹೋಗುವುದಕ್ಕೂ ಎರಡು ಇಕ್ಕಟ್ಟಾದ ಸಣ್ಣ ದ್ವಾರಗಳು ಮಾತ್ರ ಇವೆ. ನೋಡುವುದಕ್ಕೇನೋ ವಿಚಿತ್ರವಾದ ಸ್ಥಳವಲ್ಲ. ಆದರೂ ಯಾವ ದೇಶಭಕ್ತನಾದ ಭಾರತ ನಿವಾಸಿಯ ಹೃದಯವು ಈ ಸ್ಥಳಕ್ಕೆ ಬಂದೊಡನೆ ಯಾವ ಕಾರಣಕ್ಕೋಸ್ಕರ ಶೋಕದಿಂದಲೂ ನಾಚಿಕೆಯಿಂದಲೂ ಕ್ರೋಧದಿಂದಲೂ ತುಂಬಿ ಕಲಕುತ್ತದೆ ಈಗ ಎರಡು ವರ್ಷಗಳ ಹಿಂದೆ ಒಬ್ಬ ನಿರ್ದಯಿಯಾದ ಇಂಗ್ಲಿಷ್ ಸೇನಾನಾಯಕನ ಆಜ್ಞಾನುಸಾರ ಯಾವ ಸ್ಥಳದಲ್ಲಿ ನಿರಪರಾಧಿಗಳಾದ ಸಾವಿರಾರು ನಿವಾಸಿಗಳ ಕ್ರೂರ ವಧೆಯು ನಡೆದು ಈ ಭಾರತಭೂಮಿಯ ಪ್ರತಿಯೊಬ್ಬನ ಹೃದಯದಲ್ಲಿ ನಮ್ಮ ದೇಶವನ್ನು ಆಳುವವರು ನಮ್ಮ ಪ್ರಾಣಗಳಿಗೆ ಹೆಚ್ಚು ಬೆಲೆ ಕೊಡುವದಿಲ್ಲ. ಎಂಬ ವಿಷಯವು ದೃಢ ನಂಬಿಕೆಯನ್ನುಂಟುಮಾಡಿತೊ, ಆ ಪ್ರಖ್ಯಾತಿಗೊಂಡಿರುವ ಜಲಿಯನ್ ವಾಲಾಬಾಗ್ ಎಂಬ ಸ್ಥಳವು ಇದೇಯಲ್ಲವೇ. ಯಾವ ಆ ಭಯಂಕರವಾದ ರಾತ್ರಿಯಲ್ಲಿ ಈ ಸ್ಥಳದಲ್ಲಿ ತಿರಸ್ಕರಿಸಲ್ಪಟ್ಟು ಬಿದ್ದಿರುವ ಸಾವಿರಾರು ಶವಗಳ ಮಧ್ಯೆ ಒಬ್ಬಳೇ ಒಬ್ಬ ಸ್ತ್ರೀಯು ಮಾತ್ರ ತನ್ನ ಪತಿಯ ಕಳೇಬರದ ಸಮೀಪದಲ್ಲಿ ಕುಳಿತು ಕಾಲವನ್ನು ಕಳೆದಳೋ ಯಾವ ಆ ರಾತ್ರಿಯಲ್ಲಿ ಅಮೃತಸರ ನಗರದ ಪುರುಷರೆಲ್ಲರೂ ಸರಕಾರದ ಕೋಪಶಕ್ತಿಗೆ ಹೆದರಿ ತಮ್ಮ ಪುರುಷತ್ವವನ್ನು ಮರೆತು ಈ ಸ್ಥಳಕ್ಕೆ ಬರಲು ಹೆದರಿ ಸತ್ತುಬಿದ್ದ ತಮ್ಮ ಬಂಧುಬಾಂಧವರ ಶವಗಳನ್ನು ನಾಯಿನರಿಗಳ ಪಾಲುಮಾಡಿದರೊ, ಆ ರಾತ್ರಿಯ ಜ್ಞಾಪಕಕ್ಕೆ ಬಂದು ನಮ್ಮ ಹೃದಯವು ನಾಚಿಕೆಯಿಂದಲೂ ದುಃಖದಿಂದಲೂ ತಲ್ಲಣಿಸುತ್ತದೆ. ಆದರೆ ಈ ಸ್ಥಳವನ್ನು ನೋಡಿದಲ್ಲಿ ನಮ್ಮ ಹೃದಯದಲ್ಲಿ ಒಂದು ವಿಧವಾದ ಸಂತೋಷವೂ ಉಂಟಾಗುತ್ತದೆ. ಇಲ್ಲಿ ನಡೆದ ಕಠಿಣ ನರಹತ್ಯದ ದೆಸೆಯಿಂದಲ್ಲವೇ ನಾವು ಎಷ್ಟು ಹೀನಸ್ಥಿತಿಯಲ್ಲಿರುವೆನೆಂಬ ವಿಷಯವು ನಮ್ಮ ದೇಶನಿವಾಸಿಗಳ ಹೃದಯದಲ್ಲಿ ಚೆನ್ನಾಗಿ ನಾಟಿ ನಮ್ಮ ಪ್ರಾಚೀನ ಪುಣ್ಯಭೂಮಿಯ ಮಾನವನ್ನೂ ನಮ್ಮ ಮರ್ಯಾದೆಯನ್ನೂ ಕಾಪಾಡಿಕೊಳ್ಳಬೇಕೆಂಬುವ ಉತ್ಸಾಹವು ಈಗ ಎಲ್ಲೆಲ್ಲಿಯೂ ತೋರ್ಪಡಿಸಿಕೊಂಡಿದೆ.

ವಿಸ್ತಾರವಾದ ಪೆಂಡಾಲು ಜನ ಸಮೂಹದಿಂದ ತುಂಬಿತುಳುಕುತ್ತದೆ. ಈ ನವೀನ ಆತ್ಮಶಕ್ತಿಯನ್ನು ಪ್ರಕಟಿಸುವ ಸ್ವಚ್ಛವಾದ ಸ್ವದೇಶದ ಬಿಳಿವಾದ ಶ್ವೇತ, ಖಾದಿಬಟ್ಟೆಗಳಿಂದ ಅಲಂಕೃತರಾದ ವಾಲಂಟಿಯರ್‌ಗಳು ಜನರುಗಳ ಮನೋರಥಗಳನ್ನು ಸಲ್ಲಿಸುತ್ತ ಅವರನ್ನು ತಕ್ಕತಕ್ಕ ಸ್ಥಳದಲ್ಲಿ ಕುಳ್ಳಿರಿಸುತ್ತ ಓಡ್ಯಾಡುತ್ತಿದ್ದಾರೆ. ಭಜನಗಳೂ ದೇಶಭಕ್ತಿಯ ವಿಷಯವಾಗಿ ಹಾಡುಗಳೂ ನಮ್ಮ ಮನೋಲ್ಲಾಸವನ್ನು ಹೆಚ್ಚಿಸುತ್ತಿವೆ. ಟೇಬಲ್ ಚೇರ್ ಪಗ್ಗರೆಗಳೇನೂ ಕಾಣಿಸುವುದಿಲ್ಲ. ಸರ್ವರೂ ಭಾರತ ಪದ್ಧತಿಗನುಸಾರ ಪೃಥ್ವಿಯ ಮೇಲೆ ಕುಳಿತಿರುತ್ತಾರೆ. ಎಲ್ಲೆಲ್ಲಿಯೂ ಕಾಣಿಸಲ್ಪಡುತ್ತಿರುವ ಶ್ವೇತವರ್ಣದ ಗಾಂಧಿ ಟೋಪಿಗಳು ನಮ್ಮ ಹೃದಯದಲ್ಲಿ ಸಂತೋಷವನ್ನು ಉಂಟುಮಾಡುತ್ತಿವೆ. ಒಂದು ಕಡೆಯಲ್ಲಿ ನೂರಾರುಮಂದಿ ಸ್ತ್ರೀಯರು ವ್ಯಾಖ್ಯಾನಗಳನ್ನು ಕೇಳಬೇಕೆಂದು ಪುರುಷರಿಗಿಂತಲೂ ಕುತೂಹಲವುಳ್ಳವರಾಗಿ ಕುಳಿತಿದ್ದಾರೆ. ಗಾಂಭೀರ್ಯವಾದ ದಾಡಿಯುಳ್ಳವರಾಗಿ ವಿಸ್ತಾರವಾದ ಕರೀ ರುಮಾಲುಗಳನ್ನು ಧರಿಸಿರುವ ನಮ್ಮ ಖಾಲ್ಸಾ (Khalsa) ಸಿಖ್ (Sikh) ಸಹೋದರರಾದರೋ ಬಹು ಯೋಚನೆಯುಳ್ಳಿರುವಂತೆ ಕಾಣುತ್ತಾರೆ. ಈ ವೀರಪುರುಷರು ಮಾರ್ಷಿಯಲ್ ಲಾ (Martial Law) ಸಮಯದಲ್ಲಿ ಈ ಪಂಜಾಬನಗರ ಪ್ರಾಂತ್ಯದಲ್ಲಿ ತಮಗುಂಟಾದ ಅಪಮಾನಗಳನ್ನು ಯೋಚಿಸುತ್ತಾ ಚಿಂತಿಸುವಹಾಗೆ ತೋರುತ್ತದೆ. ಆಹಾ ! ಇದೇನು ಸರ್ವರೂ ಎದ್ದು ನಿಂತು ಕೊಂಡು "ವಂದೇಮಾತರಂ" ಎಂದು ಜಯಘೋಷ ಧ್ವನಿಗಳನ್ನು ಮಾಡುತ್ತಿರುವರು. ಗಿಡ್ಡರಾಗಿಯೂ ಕೃಶರಾಗಿಯೂ ಮುದುಕರಾಗಿಯೂ ಸಾಧಾರಣವಾದ ಸ್ವದೇಶಿ ಖಾದಿ ಬಟ್ಟೆಗಳನ್ನು ಸ್ವದೇಶಿ ಕಾಲುಜೋಡುಗಳನ್ನು ಧರಿಸಿರುವವರಾಗಿಯೂ ಚಳುವಳಿಯ ನಡತೆಯಿಂದ ಎದುರಿಗೆ ಬರುತ್ತಿರುವ ಈ ಮಹಾತ್ಮರ್ಯಾರು ? ಇವರೇ ತಮ್ಮ ಸರ್ವಸ್ವವನ್ನು ದೇಶಕ್ಕೊಪ್ಪಿಸಿ ರಾತ್ರಿ ಹಗಲು ಶ್ರೀ

ಹೋದ್ದಾದಕ್ಕಾಗಿ ಸರ್ವ ಪ್ರಯತ್ನವನ್ನು ಮಾಡುತ್ತಿರುವ ಸಜ್ಜನರು ಐರ್ಲೆಂಡ್ ನಿವಾಸಿಗಳು ಶತ್ರುಗಳಿಗೆ ತಾವೆಯೋ [illegible] ಅವರು ಸಿದ್ಧರು ಅಧ್ಯಕ್ಷತೆಯನ್ನು ವಹಿಸಿ [illegible]

ರಿಸೆಪ್ಶನ್ ಕಮಿಟಿಯ [illegible] ಸತ್ಯಪಾಲರವರು ಒಂದು ಸ್ವಾರಸ್ಯವಾದ ಉಪನ್ಯಾಸ ವನ್ನು ಮಾಡಿದರು. ಇದರ ಬಳಿಕ ಸಂಘಟನೆಯ ಒಂದೂ ವರೆ ಘಂಟೆಯ [illegible] ನಮಗೆಲ್ಲರಿಗೂ [illegible] [illegible] ನಮ್ಮ [illegible] ಸಹೋದರರು [illegible] ಆರಂಭಿಸಿದರ [illegible] ಯಾವಾಗ [illegible] ಅವರು [illegible] ಮನೋಹರವಾದ [illegible] ದೇಶಭಕ್ತಿಯಿಂದ ಪೂರಿತ ಗಳಾದ ಹಾಡುಗಳನ್ನು ಹಾಡುತ್ತಾ [illegible] ಮನ ಸ್ಸನ್ನು ಆನಂದಗೊಳಿಸುತ್ತಾರೆ

[illegible] ಸರ್ವಸ್ವವನ್ನು ಒಪ್ಪಿಸಿ [illegible] ಸ್ವತಂತ್ರ [illegible] ದೇಶಸೇವೆ ಮಾ ಡುವುದು [illegible] [illegible] ("Uncrowned King [illegible]") [illegible]

[illegible]

ದೇಶೀಯನೋರ್ವ.

ವರ್ತಮಾನ ಸಂಗ್ರಹ.

ಒಳದೇಶ.

ಪೋಲೀಸ್ ಸ[illegible] ಇನ್‌ಸ್ಪೆಕ್ಟರರಾಗಿದ್ದ ಮೆ|| [illegible] [illegible] ತಮ್ಮ [illegible] [illegible] ಇನ್ನೂ ತಿಳಿಯ ಬಂದಿಲ್ಲ

[illegible] ರಾ|| [illegible] [illegible] 10 [illegible] 30 [illegible]

[illegible] ನಾಡು (ಭಾಗಮಂಡಲ) ಪೋಲೀಸ್ ಸ್ಟೇಶ ನನ್ನು [illegible] ಸ್ಟೇಶನ್ನಿಗೆ ಸೇರಿಸಿ [illegible] ಸ್ಟೇಶನ್ನಿಗೆ ಸೇರಿ ಸಿರುತ್ತಾರೆ

ಅಮ್ಮತ್ತಿಯಲ್ಲಿ ತಾ|| 27-11-21 ರಲ್ಲು [illegible] ತಾ|| 28-11-21 ರಲ್ಲು ಅಮ್ಮತ್ತಿ [illegible] ತಾ|| 3 12-21 ರಲ್ಲು [illegible]

[illegible]

ತಾ|| 21 11 21 ರ [illegible]

ದಿವಂಗ ತಾ|| 1 [illegible]

[illegible] ತಾ|| 7 [illegible]

[illegible]

ತಾ|| 2[illegible] 11 21 [illegible]

[illegible]

ಈಗ [illegible] 30 [illegible] ತಾ|| 21-11-21 [illegible]

[illegible] 30 [illegible] ತಾ|| 15-11-21 [illegible]

[illegible] ಸಾಯಂಕಾಲ 5 ಘಂಟೆಯಿಂದ 12 ಘಂಟೆಯವರೆ ಸಂಗೀತ, ಕೀರ್ತನೆ ಮೊದಲಾದವುಗಳಿಂದ ಬಹು ಸಂಭ್ರಮ ದಿಂದ ನಡಿಸಿದರೆಂದು ಬಹಳ ತಿಳಿಸುತ್ತಾರೆ

ತಾ|| 13-11-21 ರಲ್ಲು [illegible] ಸುಮಾರು [illegible] ಇನ್ನು [illegible] ಮಹಾಶಯರಿಂದ [illegible] 90 ವರುಷ [illegible] 3 ನಿಮಿ ಷದಲ್ಲಿ 70 [illegible] ಒಬ್ಬ [illegible]

ಹೊರದೇಶ.

[illegible] ತಿಲಕ ಸಂದೇಶವೆಂಬ [illegible] ಕಾಂಗ್ರೆಸ್ ಕಮಿಟಿಯ ಸಕ್ರೆಟರಿಯವರಾದ ಮೆ|| [illegible] 124 [illegible] 153 [illegible]

[illegible]

[illegible] 36 [illegible]

[illegible]

[illegible]

ವಿವೇಕ

[illegible]

" ನೀನು ಕಷ್ಟಪಡು, ನಾನು ತಿನ್ನುತ್ತೇನೆ! "

'You till I eat

ಪತ್ರಿಕೆಯಲ್ಲಿ [illegible] ಸಾವಿರ ಜನರಲ್ಲಿ ಹಲವು [illegible] ಸಾವಿರ [illegible] ಸಂಖ್ಯೆಯು

ಭರತಖಂಡದಲ್ಲಿ ಸರ್ವತ್ರ [illegible] ಮೊದಲುಗೊಂಡು [illegible] ಅಂದಮೇಲೆ ಕೊಡಗಿನಲ್ಲಿ [illegible] ದೇಕೆ? ಪರಂತು [illegible] ಶ್ರೀಯುತ [illegible] ನಾರಾಯಣ ರಾಯರು ಸುಧಾರಣೆ [illegible] ಇಲ್ಲಿಯ ಸುಧಾರಣೆಯು [illegible] ದೇಶದ ಸಮಾಜ ಸ್ಥಿತಿಯನ್ನು ಚೆನ್ನಾಗಿ ತಿಳಿದ [illegible] ಲೋಕದ ಅಭ್ಯುದಯವನ್ನೇ [illegible] ಬ್ರಾಹ್ಮಣರು [illegible] (ಅಥವಾ [illegible]) [illegible] ಬಹಿಷ್ಕಾರ (Boycott) ವನ್ನು ಹಾಕಿರುವರು! ಏಕೆ? [illegible] ಬಲ್ಲವೆಂದೋ?

ಇಂತಹ [illegible] ನಮ್ಮ [illegible]

[illegible] (Disproportion ...) [illegible]

[illegible]

* Annotations by Mr. [illegible] Society, A. H. S. P. 16

[illegible]

[illegible] ಇದೇ ವಿಷಯ [illegible]

[illegible]

[illegible] Necessity Knows no [illegible]

[illegible] Mr. [illegible] (ಲೇಖಕ) [illegible]

[illegible] Mr. X. [illegible]

[illegible]

[illegible]

([illegible])

[illegible] 4-1-1921 [illegible] 50 [illegible]

[illegible] (4) [illegible] (5) [illegible] (6) [illegible] (7) [illegible] 7 [illegible] (1) [illegible] (2) [illegible] (3) [illegible] (4) [illegible] (5) [illegible] 1922 [illegible]

ಕೊಡಗು ನ್ಯಾಶನಲ್ ಸ್ಕೂಲ್ ಅಮ್ಮತ್ತಿ

ಮೇಲ್ಕಂಡ ಸ್ಕೂಲಿಗೆ ತಾರೀಖು ೨-೧೧-೧೯೨೧ ರವರೆಗೆ ದ್ರವ್ಯಸಹಾಯ ಮಾಡಿದ ಮಹಾಪನೀಯರು:— (ನವಂಬರ್ ತಾರೀಖು ೨೪ ನೆಯ ಸಂಚಿಕೆಯಿಂದ ಮುಂದರಿಸಿದ್ದು).

ಅಮ್ಮತ್ತಿ ಮ॥ ಕೀಣಿಯವರಿಂದ ರೂ, ೩-೧೪-೦ ವೀರರಾಜೇಂದ್ರಪೇಟೆ ಮ॥ ಸಾಹೇಬ್, ಮ॥ ಉಟ್ ಉಮ್ಮರ್‌ಸಾಹೇಬ್ ಮತ್ತು ಕಂಪೆನಿ ತಲಾ೧ಂದರ ರೂ. ೩-೦-೦ ಮ॥ ಕಾಟ್ಟಂಡ್ರ ತಮ್ಮಯ್ಯ ಮ॥ ಬಿಳುಗುಂದ ಸ್ಟಯಿನ್‌ಗೌಸ್ ಸಾಹೇಬ್, ಹೊಸೂರು ಮ॥ ಪಂದಿಯಂಡ್ರ ಬೆಳ್ಳಪ್ಪ. ಬಿಟ್ಟಂಗೇರಿ ಮ॥ ಒಕ್ಕಲಿಗರ ಕಲ್ಲೆತ್ಯಯ್ಯ. ಕುಂದ ಮ॥ ಸಣ್ಣುವಂಡ್ರ ಕಾರ್ಯಪ್ಪ ಬಲಮುರಿ ಮ॥ ಕೋಟೆರ ಚೆಂಗಪ್ಪ. ವೀರರಾಜೇಂದ್ರಪೇಟೆ ಮ॥ ಉಕಾಕಾ ಅಬ್ದುಲ್‌ರಹ್ಮಾನ್‌ಸಾಹೇಬ್ ನಲ್ವತೊಕ್ಲು ಮ॥ ಮುಕ್ಕಾಟಿರ ದೇವಯ್ಯ. ವೀರರಾಜೇಂದ್ರಪೇಟೆ ಮ॥ ಪಪ್ಪಮೊಹಮ್ಮದ್‌ಹಾಜಿ ಮತ್ತು ಬ್ರದರ್. ವೀರರಾಜೇಂದ್ರಪೇಟೆ ಮ॥ ಗುಲಾಂಹುಸೇನ್‌ಸಾಹೇಬ್ ಬಿ ಮೈನರ್ ಫಂಡಿನ ಸಾಹುರವರ ಬಾಬ್ತು ಮ॥ ಕಾಟ್ಟಂಡ್ರ ತಮ್ಮಯ್ಯನವರಿಂದ, ತಲಬಂದರ ರೂ. ೫-೦-೦ ವೀರರಾಜೇಂದ್ರಪೇಟೆ ಮ॥ ಅಡ್ಕಾನ್ ಮೊಹಮದ್ ಮೀರಾ ಮತ್ತು ಉಮ್ಮರ್‌ಸಾಹೇಬ್ ನಲ್ವತೊಕ್ಲು ಮ॥ ಮಂಡೇರ ಕಾಟ್ಟಪ್ಪ. ವೀರರಾಜೇಂದ್ರಪೇಟೆ ಮ॥ ಮನ್ನಸಿದ್ದಿ ಮಹಮ್ಮದ್ ಮತ್ತು ದಾಮ್ಮ ಸಾಹೇಬ್. ಮ॥ ಕಾಟ್ಟಂಡ್ರ ತಮ್ಮಯ್ಯನವರಿಂದ ಚಿಲ್ಲರೆಯಾಗಿ, ತಲಬಂದರ ರೂ. ೪-೦-೦ ಕಾರ್‍ಮಾಡು ಮ॥ ಕೆ. ಸುಬ್ರಾಯರು. ಬಿಳುಗುಂದ ಮುಕ್ಕಾಟಿರ ಮ॥ ಮಾದಯ್ಯ ತಲಬಂದರ ರೂ. ೩-೦-೦ ನಲ್ವತೊಕ್ಲು ಮ॥ ಮಾಪಿಳ್ಳೆದು ದುಂನ್ಯಾಕುಟ್ಟ್ಯಾಪಿ ಶ್ರೀಮತಿ ಮುಕ್ಕಾಟಿರ ತಂಗವ್ವ, ಮ॥ ಮಂಡೆಡ ಮಾದೈಯ್ಯ ಮ॥ ಬಿಸ್ತರ ಪುಟ್ಟಣ್ಣ. ಮ॥ ಮುಸಲ್ಮಾನರ ಸಿಲೆಮಾನ್ ಕಾರ್‍ಮಾಡು ನೆಲ್ಲಮಕ್ಕಳ ಮ॥ ಐ. ಕಾಳಪ್ಪ. ವೀರರಾಜೇಂದ್ರಪೇಟೆ ಮ॥ ಶ್ರೀನಿವಾಸರಾವು. ಕುಂದಮನೆಯಪಂಡ್ರ ಮ॥ ಐ. ಮೇದಯ್ಯ. ಮ॥ ಮಂಡಂಡ್ರ ಮುತ್ತಣ್ಣನವರು ಬಿ. ಎ.ಎಲ್ ಎಲ್. ಬಿ. ಬಿಳುಗುಂದ ಮ॥ ಮೂಕೊಂಡ್ರ ಗಣಪತಿ. ಮ॥ ಮಂಡೇಪಂಡ್ರ ಮುತ್ತಣ್ಣ ಮ॥ ಮಾದಪಂಡ ಗಣಪತಿ ಕುಂಬೇರಿ ನೆಲ್ಲಮಕ್ಕಳ ಮ॥ ಎಂ ಕಾಟ್ಟಪ್ಪ. ತಲಬಂದರ ರೂ. ೨-೦-೦ ಮ॥ ಕಾಟ್ಟಂಡ್ರ ತಮ್ಮಯ್ಯನವರಿಂದ ಚಿಲ್ಲರೆಯಾಗಿ ರೂ. ೧-೪-೦ ಮ॥ ಚೆಪ್ಪುಡಿರ ಪೊನ್ನಪ್ಪ ಬಿಳುಗುಂದ ಮ॥ ಐನಂಡ್ರ ಸುಬ್ಬಯ್ಯ. ಮ॥ ಐನಂಡ್ರ ಬೆಳ್ಳಪ್ಪ. ಮ॥ ಮಾದಪಂಡ್ರ ಕುಟ್ಟಪ್ಪ. ಡಿಟೋ ಮ॥ ಸೋಮಯ್ಯ. ಮ॥ ಮೂಕೊಂಡ ಪೊನ್ನಪ್ಪ. ಡಿಟೊ ಮ॥ ಅಯ್ಯಯ್ಯ ಮ॥ ಮಂಡೇಪಂಡ ಸುಬ್ಬಯ್ಯ ಮ॥ ದಂಡಪಂಡ್ರ ಸುಬ್ಬಯ್ಯ. ಪಟ್ಟಗೇರಿ ಮ॥ ಕಡೇಮಾಡ ಮಾದಪ್ಪ. ಮಡಿಕೇರಿ ಮ॥ ಕಂಬಿರಂಡ್ರ ಗಣಪತಿ ಮ॥ ಎಸ್ ರಾಮರಾಯರು. ಮ॥ ಕೆ. ಎಸ್. ಕುಶಾಲಪ್ಪ ಮ॥ ಕೆ. ಅಪ್ಪಯ್ಯ. ಹೆಸರು ಸ್ಪಷ್ಟವಾಗಿಲ್ಲದವರಿಂದ ಮಗ್ಗುಲ ಮ॥ ಪುಲಿಯಂಡ್ರ ತಿಮ್ಮಯ್ಯ ಮಡಿಕೇರಿ ಮ॥ ಮುಂಡಾದಿರ ಐಯ್ಯಪ್ಪ. ವೀರರಾಜೇಂದ್ರಪೇಟೆ ಮ॥ ಡಿ. ಕೆ. ಗಣಪಯ್ಯ, ಕಾರ್‍ಮಾಡು ಕುಟ್ಟಂಡ್ರ ಮ॥ ಪಿ. ಐಯ್ಯಪ್ಪ, ಮ॥ ಮುಕ್ಕಾಟಿರ ಸೋಮಯ್ಯ, ಮ॥ ಮುಕ್ಕಾಟಿರ ಉತ್ತಯ್ಯ. ಮ॥ ಕುಟ್ಟಂಡ್ರ ಕುಶಾಲಪ್ಪ. ಮ॥ ನೆಲ್ಲಮಕ್ಕಳ ಪೂಣಚ್ಚ. ಮ॥ ನೆಲ್ಲಮಕ್ಕಳ ಮುತ್ತಣ್ಣ. ಕಾವಾಡಿ ಮ॥ ಕುಪ್ಪಂಡ್ರ ಮಂದಣ್ಣ ಮ॥ ನೆಲ್ಲಮಕ್ಕಳ ಜಿ. ಕರಿಂಬಯ್ಯ ಮಗ್ಗುಲ ಮ॥ ಚೋವಂಡ್ರ ಮುತ್ತಣ್ಣ ನಲ್ವತೊಕ್ಲು ಶ್ರೀಮತಿ ಮುಕ್ಕಾಟಿರ ಬೆಳ್ಯವ್ವ ಮ॥ ಮುಕ್ಕಾಟಿರ ಕುಶಾಲಪ್ಪ. ಮ॥ ನೆಲ್ಲಚಂಡ್ರ ಗಣಪತಿ. ಮ॥ ಮುಕ್ಕಾಟಿರ ಬಿದ್ದಪ್ಪ. ಮ॥ ಮುಕ್ಕಾಟಿರ ಟಿ. ಕುಶಾಲಪ್ಪ. ಮ॥ ಮಂಡೇರ ನಾಣಪ್ಪ. ಮ॥ ನೆಲ್ಲಚಂಡ್ರ ಬಿದ್ದಪ್ಪ. ಮ॥ ಚೆಲ್ಲಪಂಡ್ರ ಮೇದಪ್ಪ. ಮ॥ ಅಬ್ದುಲ್‌ಖಾನ್ ಬಿಳುಗುಂದ ಮ॥ ಬೇಪ್ಪುಡಿಯಂಡ ಐಯ್ಯಣ್ಣ ತಲಬಂದರ ರೂ. ೧-೦-೦ ನಲ್ವತೊಕ್ಲು ಮ॥ ಅಭೂಬಾಕ ಮಿಯ ಸಾಹೇಬ್. ಮ॥ ಮಾಪಿಳ್ಳೆ ಮುತ್ತಿಕಾಕ ಮ॥ ಚಿನ್ನಮಮ್ಮದ್‌ಕಾಕ ಮ॥ ಮಮ್ಮದ್‌ಕಾಕ ಮ॥ ನಂಜೋಟ್ ಮಹಮ್ಮದ್ ಮ॥ ಮೊಯ್ದೀನ್ ಅವ್ವಲ್ಲ. ಮ॥ ಪುಡಿಯಪ್ಪುರೆಯಿಲ್ ಮೊಯ್ದಿನ್ ಮ॥ ಅಗಸರ ಮೂಲೆಮನೆ ಸುಬ್ಬ ತಲಬಂದರ ೦-೮-೦ ಮ॥ ಮುಕ್ಕಾಟಿರ ಚೆಂಗಪ್ಪ. ಮ॥ ಮಾಪಿಳ್ಳೆ ಮಮ್ಮದ್ ಕುಟ್ಟಿ ಮ॥ ಕ್ರಿಸ್ತಾನರ ಅಂತೋಣಿ ಮ॥ ಅಗಸ ಸುಬ್ಬ ತಲಬಂದರ ೦-೪-೦ ಹೀಗೆ ಒಟ್ಟು ವಸೂಲು ಆದ ರೂ ೧೫೪-೨-೦ ಇದಲ್ಲದೆ ಕಾಲೆಗೆ ಸಮ್ಮಂದದ ಟ್ಟ ಸಹಾಯಗಳು ಬೇರೆ ವಿದದಲ್ಲಿ ಮಾಡಿದ ಅನೇಕ ಮಹಾಪನೀಯರ ಹೆಸರನ್ನು ಇನ್ನೊಮ್ಮೆ ಪ್ರಕಟಿಸುವೆವು ಚಂದಾದಾರರಿಗೆ ಸಂಘದ ಪರವಾಗಿ ಕೃತಜ್ಞತೆಯನ್ನು ಅರ್ಪಿಸುವ.

ಕಾಟ್ಟಂಡ್ರ ತಮ್ಮಯ್ಯ.
ಅಮ್ಮತ್ತಿ ಜಾಯಿಂಟ್ ವೈಸ್‌ಪ್ರೆಸಿಡೆಂಟ್.

ಶ್ರೀ ಮೂಲಕಾವೇರಿ ಭಾಗಮಂಡಲದ ದೇವಸ್ಥಾನದ ಆಡಳಿತೆ.

ಕೊಡಗು ವರ್ತಮಾನಪತ್ರದ ವಾಚಕ ಮಹಾಶಯರೇ ದಯವಿಟ್ಟು ನವಂಬರು ತಾರೀಖು ೨೪ ನೆಯ ಪತ್ರದ ೪ ನೇ ಪುಟದ ೧ ನೇ ಸಾಲಿನ ಮೊದಲಿನಲ್ಲಿರುವ ಬಾತ್ಮಿಯನ್ನು ಓದಿನೋಡಿರಿ. ಸದರಿ ಸಂಗತಿಯನ್ನು ಬರದವರು ದೇವಸ್ಥಾನದ ಆದಾಯವೆಚ್ಚದ ಸ್ಥಿತಿಯನ್ನು ಅರಿಯದೆ ಬರೆದ್ದಾಗಿದೆ—೧. ಶ್ರೀ ಮೂಲ ಕಾವೇರಿಯ ಮ್ಮನವರ ಜಾತ್ರೆ ಖರ್ಚಿಗಾಗಿ ಸರ್ಕಾರದಿಂದ ನಿರಕು ತಸ್ತೀಕು ಅಲ್ಲದೆ ಹೆಚ್ಚು ಹಣ ಮಂಜೂರು ಮಾಡಲ್ಪಡುವದಿಲ್ಲ. ರಾಜರ ಕಾಲದಿಂದಲೇ ದೇವತಾ ವಿನಿಯೋಗದ ಖರ್ಚಿಗೂ ಜಾತ್ರೆ ಧರ್ಮದ ಖರ್ಚಿಗೂ ಜುಮ್ಲ ರೂಪಾಯಿ ೬೨೭೭-೭-೦ ತಸ್ತೀಕು ಬರುತ್ತಾ ಇದೆ. ಸರ್ಕಾರದವರು ಈ ಮೊಬಲಗನ್ನು ಹೆಚ್ಚು ಯಾ ಕಮ್ಮಿ ಮಾಡುವದಿಲ್ಲ. ಈ ತಸ್ತೀಕು ಪೂರ್ವದಲ್ಲಿವರ ಹಕ್ಕು ನಾಲ್ಕು ಭಟ್ಟ, ಭತ್ತ, ಎಣ್ಣೆ, ತುಪ್ಪ, ಮೊದಲಾದ ಸಕಲ ಸಮಾನುಗಳಿಗೂ ಬಹಳ ಕಮ್ಮಿ ಕ್ರಯವಿರುವಾಗ್ಯೆ ನಿಶ್ಚಯಮಾಡಿದ್ದಾಗಿದೆ. ಆ ಕಾಲದಲ್ಲು ಧಾರಾಳವೆಂದು ಕಂಡುಬಂದರು ಈಗ್ಯೆ ನಡಿಯುವ ಕ್ಷಾಮಕಾಲ ಧಾರಣೆಗೆ ಸಾಲದೆ ಹೋಗುತ್ತದೆಂದು ನಾನು ಬರಿಯತಕ್ಕ ಅಗತ್ಯವಿಲ್ಲ ಇದು ಬೋಧೆಯಾಗಲಿಕ್ಕೆ ಇಲ್ಲಿಯ ಒಂದುವರ್ಷದ ಜುಮ್ಲ ಖರ್ಚು ಈ ಕೆಳಗೆ ಬರೆಯುತ್ತೇನೆ.

ವರುಷ ಪಂಚಕ.	ಜಮ.			ಖರ್ಚು		
ಭಾಗಮಂಡಲಕ್ಕೆ ಸರ್ಕಾರದಿಂದ ಸಿಕ್ಕುವ ತಸ್ತೀಕು ಹಣ	6277	2	0			
ಧರ್ಮಾದಾಯ ವಸೂಲಿ	1050	0	0			
ಕಾಣಿಕೆಯಿಂದ ಉತ್ಪತ್ತಿ	1000	0	0			
ಕ್ರಯಕ್ಕೆ ತಗೆಯುವ ಭತ್ತ ಭಟ್ಟ 800 ಪರ ಭಟ್ಟ 1 ಕೆ 5 ರಂತೆ				4000	0	0
ವರುಷ 1 ರ ನೌಕರರ ಸಂಬಳ				2100	0	0
ಎಣ್ಣೆ ಮಣ 87 ಕ್ಕೆ ಧರ 9 ರಂತೆ				783	0	0
ತುಪ್ಪ ಮಣ 30ಕ್ಕೆ ಧರ 25 ರಂತೆ				750	0	0
ಬಾಕಿ ಸಕಲ ಸಾಮಾನುಗಳಿಗೆ				1250	0	0
ಜುಮ್ಲ	8327	2	0	8833	0	0
ಜಮೆಗಿಂತ ಹೆಚ್ಚು ಖರ್ಚಾಗುವ ಮೊಬಲಗು				505	14	0

ಅರ್ಧಪಡಿ ಕೊಟ್ಟ ಪಕ್ಷದಲ್ಲಿಯು ಆದಾಯದಿಂದ ೫೦೦ ರೂಪಾಯಿ ಹೆಚ್ಚು ಖರ್ಚಾಗುತ್ತದೆ. ಈ ಸ್ಥಿತಿಯು ನಾಲ್ಕು ವರ್ಷದಿಂದಲೂ ನಡಿಯುತ್ತದೆ. ಉತ್ಪತ್ತಿಯಿಂದ ಖರ್ಚು ಹೆಚ್ಚಾದರೆ ದೇವರ ಭಂಡಾರದಿಂದಲೇ ಖರ್ಚಾಗಬೇಕಲ್ಲದೆ ಕೈಯಿಂದ ಹಾಕುವವರು ಯಾರು ಇಲ್ಲದಿರುವಾಗ್ಯೆ ಆಡಳಿತೆಯನ್ನು ತುಂಬಾ ಜಾಗ್ರತೆಯಿಂದ ನಡ್ಸಿ ದೇವತಾ ಕಲ್ಪವನ್ನು ಸಾಂಗವಾಗಿ ನಡಿರುವದು ದೇಶದಿಂದ ನಿಯಮಿತರಾದ ಕಮಿಟಿಯವರ ಕೆಲಸವಾಗಿದೆ. ಆ ಜವಾಬ್ದಾರಿಕೆಯನ್ನು ಮನಸ್ಸಿನಲ್ಲಿಟ್ಟುಕೊಂಡು ದೇವರಿಗೂ ಮತ್ತು ಮಹಾ ಜನಗಳಿಗು ಒಪ್ಪುವಂತೆ ಕೆಲಸ ನಡಸದಿದ್ದರೆ ಈ ಕ್ಷಾಮಕಾಲದಲ್ಲು ದೇವತಾಕಲ್ಪವು ಸಾಂಗವಾಗಿ ನಡಿಯುತ್ತಿರಲಿಲ್ಲ. ನ್ಯಾಯವಾಗಿಯು ಸಾಧ್ಯವಾಗಿರುವ ಅಭಿಪ್ರಾಯವನ್ನು ಭಕ್ತರು ಕಮಿಟಿಯವರಿಗೆ ಸೂಚಿಸಿ ಅನುಸರಿಸಲು ಅಡ್ಡಿಯಿರುವದಿಲ್ಲ. ಅಲ್ಲದೆ ಚನ್ನಾಗಿ ಪರಿಶೋಧಿಸದೆ ದೋಷಾರೋಪಣೆಗಳನ್ನು ಪ್ರಕಟಿಸಿ ಕಮಿಟಿಯವರ ಭಾಗಕ್ಕೆ ಅನ್ಯಾಯವಾಗುತ್ತದೆಂಬುದನ್ನು ವಾಚಕ ಮಹಾಶಯರಿಗೆ ಹೇಳುವ ಅಗತ್ಯವಿಲ್ಲ. ೨ ಉಗ್ರಾಣದಲ್ಲು ಪಡಿ ಕೊಡುವದಲ್ಲದೆ ವಿಧಾಯಕವಾಗಿ ಅನ್ನಹಾಕುವದಿಲ್ಲ. ೩. ಈಗ್ಯೆ ನಾಲ್ಕು ವರ್ಷದಿಂದ ದೇವರಿಗೆ ಬೀಳುವ ಕಾಣಿಕೆಯು ಅರ್ಧಪಡಿಯಿಂದ ಕಮ್ಮಿ ಆಗದೆ ಹೆಚ್ಚುತ್ತಾ ಬಂದು ಈ ವರ್ಷ ಬಂದಷ್ಟು ಕಾಣಿಕೆ ೨೦ ವರ್ಷದಿಂದ ಈವರೆಗೆ ಬರಲಿಲ್ಲ. ಈ ವಿಷಯ ಸಕಲರಿಗೂ ಸಂಬಂಧಿಸುವದರಿಂದ ಒಳ್ಳೆ ಕಾಲ ಬರುವಾಗ್ಯೆ ಬಾತ್ಮಿಯು ಹೇಳಿದಂತೆ ಮಾಡಲು ಅನುಕೂಲವಾಗುವದಲ್ಲದೆ ಈಗ್ಯೆ ಸಾಧ್ಯವಿಲ್ಲ. ವಿನೀತ,

ಬಿ ಎಸ್ ಆರ್.
ಕಮಿಟಿ ಮೆಂಬರು.

ಕೊಡಗು ಮುಜ್ರಾಯಿ ಇಲಾಖೆಯಿಂದ:—

ಕೊಡಗು ದೇಶದ ಹುತ್ತರಿ ಹಬ್ಬದ ಮುಹೂರ್ತ ಪಟ್ಟಿ.

(1) ಸನ್ 1921 ನೇ ಇಸವಿ ಡಿಸೆಂಬರು ತಾರೀಖು 13 ನೇ ಮಂಗಳವಾರ ದಿನ ಅಂದರೆ ವೃಶ್ಚಿಕಮಾಸ ತೇದಿ 28 ನೇ ದಿನ ಕೃತ್ತಿಕ ನಕ್ಷತ್ರದಲ್ಲು ಪಾಡಿ ಸುಬ್ರಾಯದೇವರ ಬಾಬ್ತು (ಇಗ್ಗುತಪ್ಪದೇವರ) ಕಲಾಡ್ಚ ಹಬ್ಬವಾಗುತ್ತೆ.

(2) ಅದೇ ದಿನ ರಾತ್ರೆ ರೋಹಿಣಿ ನಕ್ಷತ್ರದಲ್ಲು ದೇವರಪೊಳುದು. ಆ ದಿನ ರಾತ್ರೆ 9 ಘಂಟೆಗೆ ನೆರೆಕಟ್ಟುವದು 10 ಘಂಟೆಗೆ ಕದರು ಕುಯ್ಯುವದು 11 ಘಂಟೆಗೆ ಹೊಸ ಅಕ್ಕಿ ಅನ್ನ ಊಟಮಾಡುವ ಶುಭಮುಹೂರ್ತ.

(3) ಮಾರಣೆದಿನ ಅಂದರೆ ಡಿಸೆಂಬರು ತಾರೀಖು 14 ನೇ ಬುಧವಾರದ ದಿನ ಮೃಗಶಿರ ನಕ್ಷತ್ರದಲ್ಲು ನಾಡು ಪೊರುದು. ಆ ದಿನ ರಾತ್ರೆ 9 ಘಂಟೆಗೆ ನೆರೆಕಟ್ಟುವದು. 10 ಘಂಟೆಗೆ ಕದರು ಕುಯ್ಯುವದು. 11 ಘಂಟೆಗೆ ಹೊಸ ಅಕ್ಕಿ ಅನ್ನ ಊಟಮಾಡುವ ಶುಭಮುಹೂರ್ತ.

(Sd) K. Chengappa,
President.

ಪತ್ರವ್ಯವಹಾರಗಳು.

ಬಾಕ್ಕಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್.]

ಬಾಲಗ್ರಹ.

ಅಯ್ಯಾ ದೇಶಬಾಂಧವರೇ,

ನೀವು ಈ ಮೊದಲು ಪರತಿಗಳಲ್ಲಿ ಬರೆದ ವಿಷಯಗಳನ್ನು ನೋಡಿದಲ್ಲು ಕೊಡಗು ಪತ್ರಿಕೆ ಜುರುವಾದ ತಿಂಗಳು 5 ರಲ್ಲೇ ಬಾಲಗ್ರಹ ದೋಷ ತಟ್ಟುವಹಾಗೆ ಕಾಣುತ್ತೆ. ಮತ್ತು ಇದಕ್ಕೆ ಕೆಲವು ಪ್ರೇತ ಬಾಧೆಗಳು ಸಹ ತಟ್ಟುವಂತೆ ಕಾಣುತ್ತೆ. ಅದು ಹ್ಯಾಗೆಂದರೆ ಇದಕ್ಕೆ ಮೂಲಪೀಠವಾದ ವರ್ಗದಾನಸಂಘವಾದ ಹಳೇ ಪ್ರಸಿಡೆಂಟರೂ ವೈಸ್ ಪ್ರಸಿಡೆಂಟರೂ ಅಲ್ಲದೆ ಇನ್ನು ಕೆಲವರು ರಾಜಿನಾಮೆ ಕೊಡುವಂತೆ ಇದ್ದಾರೆಯಾಗಿ ತಿಳಿಯುತ್ತೇನೆ

ಇದು ಈ ನಮ್ಮ ಸಣ್ಣ ಜನಾಂಗದಲ್ಲಿ ಪ್ರಾಯಸ್ಥರಿಗೂ ಯೌವಸ್ಥರಿಗೂ ವೈಮನಸ್ಸು ಹುಟ್ಟಿದ್ದೇ ಕಾರಣ. ಹೀಗೆ ಭೇದಕಲ್ಲ ನಿಯೂದಲ್ಲಿ ಎಷ್ಟು ಬಾಧಕ ಉಂಟಾದೀತೆಂದು ಹೇಳಲಾಗುವದಿಲ್ಲ. ಅಲ್ಲದೆ ನಮ್ಮ ನವಯುವಕರು ಅನೇಕವರ್ಷಗಳಿಂದ ಸರಕಾರ ಉದ್ಯೋಗ ಪಡೆದು ಪೆನ್ಶನ್ ಹೊಂದಿರುವ ವೃದ್ಧರನ್ನು ಬಿನ್ನಟ್ಟುವದು ಕೇವಲ ನಮ್ಮ ಜನಾಂಗಕ್ಕೆ ಅವಮಾನಕ್ಕವಾಗಿ ಕಾಣುತ್ತೆ. ಹಾಗೆ ಅವರು ತಪ್ಪು ಮಾಡಿದಲ್ಲಿ ಯುವಕರೂ ಯುವಕರು ತಪ್ಪು ಮಾಡಿದಲ್ಲಿ ವೃದ್ಧರೂ ತಿದ್ದಿ ತಾಳ್ಮೆಯಿಂದ ನಡೆಯಬೇಕಾದದ್ದು ಉಭಯತ್ರರ ಕರ್ತವ್ಯವಲ್ಲವೇ. ಇದರಿಂದ ನಮ್ಮ ಸಂಘಗಳಿಗೂ ಪತ್ರಿಕೆಗಳಿಗೂ ಗುರುಶಾಪ ಉಂಟಾಗಿ ಪ್ರೇತಬಾಧೆಯಿಂದ ಬಾಲಗ್ರಹದೋಷ ತಟ್ಟಲಿಕ್ಕೆ ಸಾಕು. ಇಂಥಾ ದೋಷಗಳು ಬಾರದಂತೆ ಮಾಡಲಿಕ್ಕೆ ಒಂದು ಯಂತ್ರವನ್ನು ಕಟ್ಟಬೇಕು. 1 ನೇ ಗುರುಶಾಪವನ್ನು ನಿವೃತ್ತಿಮಾಡದಿದ್ದರೆ ಯಾವ ನಿವೃತ್ತಿಯೂ ಆಗಲಾರದು. ಅದುದರಿಂದ ನವಯುವಕರೆಲ್ಲರೂ ಕೋಪ ಗುರುಶಾಪಕ್ಕೆ ತಕ್ಕ ಪರಿಹಾರಮಾಡುವುದು ಅವರ ಕರ್ತವ್ಯ. ಹಾಗೆ ಮಾಡಿದಲ್ಲು ಸಂಘಕ್ಕೂ ಪತ್ರಿಕೆಗೂ ಶ್ರೇಯಸ್ಕರ.

ಯುವಕರೆಲ್ಲರೂ ತಮ್ಮ ರಕ್ತಬಲದಿಂದಲೂ, ವಿದ್ಯೆ, ಐಶ್ವರ್ಯಬಲದಿಂದಲೂ ಯಾವ ದೋಷಬಂದಾಗ್ಯೂ ನಾವು ಸಹಿಸಿಕೊಳ್ಳುತ್ತೇವೆ. ಎಂದು ಹೇಳಬಹುದು. ಆದರೆ ಮುದುಕರು ಊರುವದು ಸರಿ ಯುವಕರು ಹಾರುವದು ಸರಿ ಎಂಬ ಹಳೇಗಾದೆ ಇದೆ. ಹಾಗೆ ಒಬ್ಬೊಬ್ಬರ ತಪ್ಪನ್ನು ಕ್ಷಮಿಸಿಕೊಳ್ಳುವದು ಉಭಯತ್ರರಿಗೆ ಉತ್ತಮ.

ಕಂ॥ ತಪ್ಪಾದರೆ ಸೈರಿಸದ |
ಕೊಪ್ಪತ್ತಾತಿದ್ದೆ ತಿರಿಗಿತಪ್ಪಾಗದವೋಲ್ ||
ಒಪ್ಪಿ ಸುನೀತಿಗೆ ಹಿತವನು |
ತಪ್ಪದೇ ನೆನಪಿಪ್ಪದೋರದವರುಪಕಾರರಂ ||

ಹೀಗೆ ಉಭಯತ್ರರು ಸೇರಿ ತಾಳ್ಮೆಯಿಂದ ನಡೆಯುವದು ಬಿಟ್ಟು ಗಡಿಬಿಡಿಯಿಂದ ಯಾವ ಕೆಲಸವನ್ನು ಮುಂದರಿಸುವದು ಉಚಿತವಲ್ಲ.

ಷಟ್ಪದಿ॥ ಗಡಿಬಿಡಿಮಾಡಬಾರದುದು ಕೆಲಸವ | ನುಡಿಯದು ನಿಜವು ದೇಶಕರೇ || ಗಡಿಬಿಡಿಯಿಂದಂ ನಡೆಯುವ | ಮನುಜರು ಪೊಡವಿಯಲಿ ಯಶವಿ ದೇಶಕರೇ ||

ಹೀಗೆ ಗಡಿಬಿಡಿಯಿಂದ ಮುದುಕರು ಯೌವನಸ್ಥರೂ ತಮ್ಮದು ಮೇಲು ತಮ್ಮದು ಮೇಲು ಎಂದು ಹೋರಾಡುತಿರುವ ಸಮಯವು ಅಲ್ಲ. ಬಿಡಾರ ಹಚ್ಚುವಾಗ ಕಾಗೆಬಾಯಲ್ಲಿ ಹುಂಡಾಯಿತು. ಎಂಬ ಗಾದೆಯು ಈಗ ನಮ್ಮ ದೇಶಕ್ಕೆ ಆಗಿದೆ. ಇಲ್ಲದಿದ್ದರೆ ಮೂರನೆಯವನಿಗೆ ಲಾಭ. ಹೀಗಾಗಿ ನಮ್ಮ ದೇಶವು ಒಂದೆ ಅನೇಕ ನಷ್ಟಗಳನ್ನು ಹೊಂದಿದೆ. ನಾನು ದೊಡ್ಡವನು ನಾನು ದೊಡ್ಡವನು ನಾನು ಸುಂದರನು ನಾನು ಹಣವಂತನು ಎಂಬ ಅಹಂಭಾವದ ರೋಗವು ನಮ್ಮ ಈ ಚಿಕ್ಕದೇಶದಲ್ಲಿ ಹೆಚ್ಚಾಗಿ ಪ್ರಬಲಿಸಿದೆ. ಇದಕ್ಕೆ ತಕ್ಕ ಯಂತ್ರವನ್ನು ನಮ ಕೊಡಗಿನವರು ತಯಾರಿಸಿ ಕಟ್ಟಬೇಕು. ಇಲ್ಲವಾದರೆ ನಮ್ಮ ರಾಜ್ಯವು ಹಿಂದುಳಿಯುವದು ಪ್ರಮಾಣವೆಂದು ನಟಿ.

S. Roy.

ಜನವಾರಪಂತೆ ಸಬ್ ರಜಿಸ್ಟ್ರಾರವರ ಆಫೀಸು.

ಅಯ್ಯಾ,

ಏನೊಂದೂ ವರ್ತಮಾನವಿಲ್ಲದೆ, ಕೊಡಗು ಗೆಜೆಟ್ಟಿನಲ್ಲಿಯೂ ಘಾಯಷ್ ಮಾಡದೆ, ಯಾವ ಮುಖಂಡರನ್ನಾಗಲೀ, ರೈತರುಗಳನ್ನಾಗಲೀ ಕೇಳದೇ ಜನವಾರಪಂತೆಯಲ್ಲಿದ್ದ ಸಬ್ ರಿಜಿಸ್ಟ್ರಾರವರ ಆಫೀಸನ್ನು ಇದೇ ನವಂಬರು ತಾರೀಖು 22 ರಂದ ವಜಾಮಾಡಲ್ಪಟ್ಟಿರುತ್ತೆ. ನನಗೆ ಈ ವರ್ತಮಾನವೇ ತಿಳಿದಿರಲಿಲ್ಲ. ತಾ॥ 29-11-1921 ಲು ನನ್ನ ಬಾಬ್ತು ಒಂದು ಕ್ರಯಪತ್ರ ರಿಜಿಸ್ಟರು ಮಾಡಿಸಲು ನಾನು ಜನವಾರಪಂತೆಗೆ ಹೋದೆನು. ಹೋಗುವಾಗ ದಾರಿಯಲ್ಲಿಯೇ ಕೆಲವರು ನನಗೆ ಸಿಕ್ಕಿ

ಜಿಸ್ಟ್ರಾರ್ರು ಆಫೀಸು ಮತ್ತು ಆದಾಯಕಂತೆ, ಖರಾರು ರಿಜಿಸ್ಟ್ರರು ಪಡಿಲ್ಲವೆಂತ ಇನ್ನು ಮುಂದೆ ಸೋಮವಾರಪೇಟೆಗೆ ಹೋಗಬೇಕು ಸಬ್ ರಿಜಿಸ್ಟ್ರಾರ್ರು ಹೇಳಿದರು ಎಂತ ಹೇಳಿ ಕಾಪು ಕಂಡಿದ್ದ ಗಳನ್ನು ವಾಪ್ಸು ಮನೆಗೆ ತೆಗೆದುಕೊಂಡು ಹೋಗುತ್ತಿದ್ದರು. ದಸಂತೆಗೆ ಶಲ್ಕ ಸ ೮. ಆಫೀಸಿಗೆ ಹೋಗಲು ಅಲ್ಲಿ ಸಹ ಕೆಲ ವ್ವ ಹಾಗೆಯೇ ಖರಾರುಗಳನ್ನು ತೆಗೆದುಕೊಂಡು ಬಂದಿದ್ದರು ಏ ನನಗೂ ಸಹ ಮೇಲ್ಕಂಡ ಉತ್ತರವೇ ಸಿಕ್ಕಿತು ಸರ್ವೇಜ ಶ್ರಯರನ್ನು ಯಾವ ಲಾಗಾಯ್ತಿನಿಂದ ಕಸಿವಾಲಯಂತೆಯ ಆಫೀಸನ್ನು ಡಿದ್ದಾರೆಂತ ಪ್ರಶ್ನೆಮಾಡಲು ಇದೇ ಡಿಸೆಂಬರ್ ಗುರ್ರಯಿಂದ ಡಿದ್ದಾರೆ. ಆದರೆ ಪ್ರತಿ ತಿಂಗಳ ಲಿಸ್ಟಿನಲ್ಲಿ ಹದಿನೈ ಆಯಿಂದ 25 ನೇ ತಾರೀಖಿನ ವರೆಗೆ ಸೋಮವಾರಪೇಟೆಯಲ್ಲಿ ಎಂದು ಏವ (22 11-21) ಟ್ರಿಬಂಗೆ ಇರ್ಕಾಲ್ ಕಳುಹಿಸಿ ಲಿಸ್ಟು ಅಪ್ಪರು ನದಿದ್ದರಿಂದ ಇನ್ನು ಈ ಆಫೀಸಿನಲ್ಲಿ ಖರಾರು ರಿಜಿಸ್ಟ್ರಿ ಮಾಡ ಪಡಿಲ್ಲವೆಂತ ಹೇಳಿದ ಮೇರೆ ನಾನು ವಾಪ್ಸು ಬಂದೆನು.

2 ಮೊದಲು ಎಲ್ಲರ ಬದಿಂದಲೂ ತಾಲ್ಲೋಕನ್ನು ತೆಗೆದರೆ ಈ ಕಾವಾದಲಂತೆ ಸಬ್ ರಿಜಿಸ್ಟ್ರಾರ್ರು ಆಫೀಸನ್ನು ತೆಗೆದುಹಾಕ ಕ ಸರ್ಕಾರದವರು ಆಲೋಚಿಸಿದ್ದರು. ಆ ಸಮಯದಲ್ಲಿ ಈ ಸ್ತದ ರೈತರೆಲ್ಲರೂ ಬಹಳವಾಗಿ ವಿವಾದಮಾಡಿ ಈ ಆಫೀಸನ್ನು ಕೊಂಡಿದ್ದರು.

3 ಈಗ ಯಾರಿಗೂ ತಿಳಿಯದೆ ಈ ಆಫೀಸು ಬಿಜಬಾಡಿರುವದು ಗಳಿಗೆ ತುಂಬಾ ತೊಂದರೆಯೂ ನಷ್ಟವೂ ನಷ್ಟವೂ ಉಂಟಾಗು ಈ ಆಫೀಸಿನಿಂದ ಸರಕಾರಕ್ಕೆ ವರ್ಷಕ್ಕೆ ಖರ್ಚುಕಳೆದು 500 ತಾರು ರೂಪಾಯಿಗಳಿಗೆ ಕಡಿಮೆಯಿಲ್ಲದೆ ಆದಾಯವಾಗುತ್ತದೆ ತ್ತು ಕ್ಷಾಗಿ ಸರಕಾರದವರು ಈ ಆಫೀಸು ತೆಗೆದುಹಾಕುವದರ ಉದ್ದ ಅಹಿಸಲಸಾಧ್ಯವಾಗದೆ

4 ವರುಷ ಸಾಕ್ಷಿಗಳನ್ನು ಹೈದಗಿಸಿಕೊಳ್ಳುವದು ಅವಶ್ಯಕವಾದ ಲ್ಲಿ ಕಷ್ಟಸಾಧ್ಯ ವಾಪ್ಸು ತನ್ನ ಗ್ರಾಮಕ್ಕೆ ಬಂದು ತರಕೊಂಡು ಸುವದೂ ಅನೇಕ ನಷ್ಟ ಕಷ್ಟವಾಗುತ್ತದೆ. ಯಾಕೆಂದರೆ ಆ ಸಾಕ್ಷಿ ಪೂ ಮೂರುನಾಲ್ಕು ದಿನ ವ್ಯರ್ಥ ಹಾಳುಮಾಡಿಕೊಂಡು ಸೋಮ ಪೇಟೆಗೆ ಹೋಗಿ ಬರಲು (ಕಸ್ಸ ಕೆಲ್ಸಬಿಟ್ಟು) ಒಪ್ಪಲಾರರು ಂದ ಅನೇಕ ನಡೆಯಬಾರದ ಕೆಲಸಗಳೂ, ಅನಾಹುತಗಳೂ ಬಿಸಲಹುದು

ಈ ಆಫೀಸು ತೆಗೆದುಹಾಕಲ್ಪಟ್ಟದ್ದರಿಂದ ರೈತರಿಗೆ ಬಹಳವಾಗಿ ರೆ ಕೆಲವು ಗ್ರಾಮಗಳವರಿಗೆ 20-24 ಮೈಲಿಯವರೆಗೂ ದೂರವಾಗು ಬಂತು. ಒಂದು ಖರಾರು ರಿಜಿಸ್ಟರು ಮಾಡಿಸಬೇಕಾದರೆ ಸೋಮ ಪೇಟೆಗೆ ಹೋಗಲು ಒಂದುದಿನ, ಬರಲು ಒಂದುದಿನ, ಅಲ್ಲಿ ಇರಲು ಒದಿನ, ಈ ರೀತಿ 3 ದಿನ ವ್ಯರ್ಥ ಕಳೆಯಬೇಕಾಗಿ ಬಂತು. ಸಾಕ್ಷಿ ಮುಂತಾದವರುಗಳ ಖಾಲ್ಕೆ ಸರಿಯಾಗಿ ಒದಗಿದರೆ ಮಾತ್ರ ನ್ನಬೇಕು. ಹಾಗೆ ಒದಗದಿದ್ದರೆ ಪುನಃ ಎಷ್ಟುಬಂದು ಹೋಗಬೇ ಕರಕೊಂಡು ಹೋಗಬೇಕಾಗುತ್ತೆ. ಹೀಗಾದರೆ ಕೆಲವು ಸಮರ ಬೇಕಾಗುತ್ತದೆ ಅರಿಭವ ಮತ್ತು [illegible] ರೈತರಿಗೆ ಒಂದೊಂದು ಖರಾರು ರಿಜಿಸ್ಟರುಮಾಡಿಸಲು ಒಂದು [illegible] ಹಿಡಿದರೆ ಅನವಶ್ಯಕವಾಗಿ [illegible] ಯಾವಾಗಲೂ ಹಟ್ಟಾಗಿ ಆಯಾ ಸಮಯದಲ್ಲಿಯೇ ಮಳೆಗಾಲದಲ್ಲಿ ಆಫೀಸುವ್ಯಲಿ ಡಾನ ಇನಿಕೊಂಡು ಸೋ ಮುವಾರ ಗೆ ಹೋಗಿ ಬರುವ ಕಷ್ಟ ನಷ್ಟ ವೆಸಲ ರೈತರಿಗೆ ಗೊತ್ತೇ ಹೊರ್ತು ವಾರ ಳಕಲ್ ಪ್ರಯಾಣಮಾಡುವವರಿಗೆ ಗೊತ್ತಾಗದು ಆದರೂ ಮಳೆ ದಲ್ಲಿ ಗಾಡಿಯಮೇಲೆ ಸಹ ಪ್ರಯಾಣಮಾಡುವುದು ಕೇವಲ ಲಿಂ ಹೊರ್ತು ಅದುಸಹ ಸಾಧ್ಯವಲ್ಲ. ಇಮ ನನ್ನ ಅನುಭವ. ಇದೇ ಇನ್ನು ಅನೇಕ ಅಡಚಣೆಗಳೂ ತೊಂದರೆಗಳೂ ಉಂಟು ಅವುಗ ಲ್ಲಾ ಇಲ್ಲಿ ಉದಹರಿಸಿರುವದರಿಂದ ಈ ಪೇಪರಿನ ಅಮೂಲ್ಯವಾದ ವನ್ನು ಹಾಳುಮಾಡಬೇಕು.

5 ಯಾವಯಾವ ರೀತಿ ಪರ್ಯಾಲೋಚಿಸಿದಾಗ್ಗೂ ಕಸಿವಾರಸಂತೆ ಸಬ್ ರ್ರಾರ್ರವರ ಆಫೀಸನ್ನು ವರ್ಗಮಾಡಿದ್ದರಿಂದ ರೈತರಿಗೆ ಅಗಲೀ ರದವರಿಗೇ ಆಗಲೀ ಕಿಂಚಿತ್ತು ಆದಾಯವಾಗಲೀ ಸೌಕರ್ಯವಾ ಅಲ್ಲ. ಅದ್ದರಿಂದ ದಯಾಳುಗಳಾದ ಸರ್ಕಾರದವರು ಇದರಿಂದ ಕರಿಕಂತೆ ಸಬ್ ಡಿಸ್ಟ್ರಿಕ್ಟಿಗೆ ಸೇರಿದ ರೈತರಿಗೆ ಉಂಟಾಗಿರುವ ದರೆಗಳನ್ನು ಚೆನ್ನಾಗಿ ಮನಸ್ಸಿಗೆ ತಂದುಕೊಂಡು ಪುನಃ ಖಾಯಂ ಯಲ್ಲಿ ಸಬ್ ರಿಜಿಸ್ಟ್ರಾರ್ರವರ ಆಫೀಸನ್ನು ಖಾಯಂ ಆಗಿ ಇಟ್ಟು ಬೇಕೆಂತ ನಾನು ಸರ್ಕಾರದವರನ್ನು ಈ ಮೂಲಕ ಪ್ರಾರ್ಥಿಸು ಲ್ಲದೆ ಹೀಗೆ ಖಾಯಂ ಅಗಿ ಸ. ೮ ಆಫೀಸು ಕಸಿವಾರಸಂತೆಯಲ್ಲಿ ವದರಿಂದ ಸರ್ಕಾರಕ್ಕೆ ನಿಸೋಂದು ಬಿಕ್ಕಾ ನಿಲ್ಲವೆಂತ ದೃಢವಾಗಿ ತ್ತೇನೆ ಸರಕಾರದವರ ಉದ್ದೇಶವು ರೈತರಿಗೆ ಅವಶ್ಯ ಮತ್ತು ಸಹಾಯ ಸೌಕರ್ಯ ಕಲ್ಪಿಸುವದಾಗಿದ್ದಾಗಿದೆ ಎಂಬುದನ್ನು ರದವರು ಮರೆಯಲಾರರು. ಸರಕಾರದವರು, ನಮ್ಮ ಪಟ್ಟುಕೊಂಡು ಕೆಲಸವು ಮಾಡಲಾರರೆಂತ ಅಗಾಗ್ಗೆ ಹೇಳುತ್ತಾರೆ. ಈ ಸಂದ ಲ್ಲಿ ಈ ಹೇಳಿಕೆ ಇದರಲ್ಲಿ ಅವಶ್ಯಕವಿಲ್ಲ. ಶೀಘ್ರದಲ್ಲಿಯೇ ಪ್ರಾರ್ಥನೆಯನ್ನು ಸರ್ಕಾರದವರು ಮನಸ್ಸಿಗೆ ತಂದುಕೊಂಡು ಕರಕಂತೆಯಲ್ಲಿ ಖಾಯಂ ಆಗಿ ಸಬ್ ರಿಜಿಸ್ಟ್ರಾರ್ರವರ ಆಫೀಸ ಇನ್ನು ಇಟ್ಟುಕೊಡುತ್ತಾರೆಂತ ನಂಬಿರುವ,

ರೈತರ ಹಿತಾಭಿಲಾಷಿ ಮತ್ತು ಕಮ್ಮಾನುಭವಿ

ಎನ್. ಆರ್ ಸುಬ್ಬಯ್ಯ

ಕೊಡಗು ವಿದ್ಯಾಭಿವೃದ್ಧಿ ಸಂಘ.

ಕೊಡಗು ಮಹಾಜನರೇ:—

ಈ ಸಂಘವು 1917 ನೇ ಇಸವಿಯಲ್ಲಿ ಜನಿಸಿ ಇದುವರೆವಿಗೆ (6.1921) ಒಟ್ಟು ಜಮಾ ರೂಪಾಯಿ 13,22-1-6 (ಖರ್ಚು ಕಳೆದ 7,403.6.6 ಮಾ|| ರಾ|| ಶ್ರೀ ತಿಮ್ಮಯ್ಯ, ಯಾನೆ [illegible] ಇವರಿಂದ 5300-0.0 ಈ ಹಣದ ಬಡ್ಡಿ 541.11.0) ಇದುವರೆ ಖರ್ಚು 5746.1.6. (ಓದುವ ಯುವಕರಿಗೆ ಸಾಲ ರೂಪಾಯಿ ಸ್ಕಾಲರ್ ಷಿಪ್ ರೂಪಾಯಿ 3455.0.0 ಪುಸ್ತಕ ರೂಪಾಯಿಗಳು 7479.0.0 ಇತರ ಖರ್ಚು 511-1-6) ಜಾತ [illegible] ಬ್ಯಾಂಕಿನಲ್ಲು ರೂಪಾಯಿ 5,300 ಪೋಸ್ಟಾಫೀಸಿನಲ್ಲು 1.6-0 ಬಾಕಿ ಮಾತ್ರ ವಸೂಲಿ 247.12.0) ಈ ಸಾಲದಲ್ಲಿ ಯುವಕರಿಗೆ ಸಾಲ ಮಂಜೂರಾದದ್ದು 12 ಯುವಕರಿಗೆ [illegible] 390 ರೂಪಾಯಿ. ಸ್ಕಾಲರ್ ಷಿಪ್ ರೂಪಾಯಿ 9.0 ಇಂತು ಒಟ್ಟು ರೂಪಾಯಿಗಳು 1,940 0.0 ಈ ಮಾ [illegible] ಸಹ ಈ ಹಣವು ಬಾಕಿ ನಿಲ್ಲುವ ರೂಪಾಯಿ 5330-0-0 ಈ ಹಣವೆಲ್ಲಾ ಮದ್ರಾಸ್ ಬ್ಯಾಂಕಿನಲ್ಲಿರುವ [illegible] ಮೂಲ ಧನವಾಗಿ [illegible]

ಕಾದ ರೂಪಾಯಿ 239 0 0 ಈ ವರುಷ ಮಡಿಕೇರಿ ಸ್ಕೂಲ್ ೧ ನೇ ತರಗತಿಯಲ್ಲಿ ಓದುವ ಕೊಡಗು ಯುವಕರ ಸಂಖ್ಯೆ 40. ಈ ವರ್ಷ ಕೆಟ್ಟ ಯುವಕರಿಗೆ ಮುಂದಕ್ಕೂ ಕೊಡಬೇಕಾಗುವದೆಂಬ ಭಾವನೆ ಯಲ್ಲು ಬೇಕಾಗುವ ರೂಪಾಯಿ 1,940 ಮತ್ತು ಮುಂದಕ್ಕೆ ಸ್ಕಾಲರ್ ಗಿದ್ಧವರಾದವರ 1 ನೇ ಭಾಗ ತೆಗೆದುಕೊಂಡರೆ 9 ಹುಡುಗರಿಗೆ ಕೊಡ ಬೇಕಾಗಿ ಬರುವದೆಂದು ಊಹಿಸಬೇಕಾಗಿದೆ ಈ ವರ್ಷ ಮಡಿಕೇರಿ ಯಲ್ಲಿ 8 ಯುವಕರೂ, ಮಂಗಳೂರಿನಲ್ಲಿ 5 ಬೆಂಗಳೂರಲ್ಲಿ 4, ಇಂತು 17 ಯುವಕರು ಪ್ರಾರ್ಥಿಸಿರುತ್ತಾರೆ. ಹಾಗೆ ಕೊಡುವದಾದರೆ .940+1 5/ ಮತ್ತು ~3020 ರೂಪಾಯಿಗಳು ಬೇಕಾಗುವವು ಈಗ ಈ ಮುಖಾಂತರ [illegible] 1 351 ಮಾ 2,000 [illegible] ಮಾತ್ರ ವಸೂಲಾಗುವದು. ಹಾಗಾದರೆ [illegible] 1, 60 [illegible] ಮುಂದಾಲೋಚನೆ [illegible] ಕೊಡಮಾಡುವದು ಉಚಿತವಲ್ಲ [illegible] ಈ ಕೆಲಸಕ್ಕೆ ಕೈಕೊಡಬೇಕಾಗಿ [illegible] ಕೊಡುವದು ಈಗ ಕೊಡುತ್ತಿರುವ ಮಾ|| ಕೊಡಂಡ ಮುದ್ದಯ್ಯ ನವರೂ, ಮಾ|| ಮನೇಯಂಡ ಮುತ್ತಣ್ಣನವರೂ ಕೊಡುವಂತೆ ವರುಷ ಒಂದರ ಕಲಾ 100 ರೂಪಾಯಿಗಳಂತೆಯೂ, ಮಾ|| ಕೊಡಂದೇರ ಕಟ್ಟ ಯ್ಯನವರು, ಮಾ|| ಕೊಡಂದೇರ ತಿಮ್ಮಯ್ಯನವರು ವರ್ಷವೊಂದರ ಕಲಾ 60 ರೂಪಾಯಿಗಳಂತೆಯೂ, ಮಾ|| ಐಚ್ಚಾರಂಡ ಕಾರ್ಯಪ್ಪನವರು ಮಾ|| ಕೇಟೋಳಿರ ಚಂಗಪ್ಪನವರು ಪ್ರತಿ ಮಾಹೆಯಲ್ಲಿ ಕಲಾ 5 ರೂಪಾಯಿ ಗಳಂತೆ ಕೊಡಬೇಕಾಗಿ ಕೇಳುವದಲ್ಲ. ಮತ್ತು ಸಂಘಕ್ಕೆ ದೊಡ್ಡವ ರೆಂದು ಹೇಳಿಸಿಕೊಳ್ಳುವ ಸಂಘದ ಕಮಿಟಿ ಮೆಂಬರಾಗಬೇಕೆಂದು ದೊಡ್ಡ ಚಿಂತಿಸಲು ಕೊಡಿರಿ ಕೊಡುವಾಗ್ಗೆ ಸಹಾಯಕ್ಕೂ ಬಾಕಿ ಇಟ್ಟುಕೊಂಡು ಸಂಘದ ಕಾರ್ಯಕ್ಕೆ ಭಂಗವದಿಸಿ ಕೊಡಲು 10 ನೇ ಸಂಚಿಕೆಯಲ್ಲಿ ಹಾಕುವ ಮೇರೆ ಈ ಫಂಡಿಗೆ ಅಧೀನಗೊಳಿಯು ಪ್ರಾಪ್ತವಾಗುವಂತೆ ಮಾಡಲು ಕೇಳುವದು. ಇಂಥಾನು ಈಗಿನ ಸಂಘದಲ್ಲು ಇದ್ದಾರೆ ಇದನ್ನು ಬದಲಿಸಿ [illegible] ಕಾಲೇಯಾನ [illegible] ಕೊಡುವ ಜನರ ರಿಜಿಸ್ಟರನ್ನು ತರಿ ನೋಡಿದರೆ ಈ ಸಂಘದ ಎಲ್ಲ ಹಿತಚಿಂತಕರಿಗೆ ಸರಿಯಾಗಿಯೇ ಕಾಣ ಬರುವದು ಈ [illegible] ಬರಿಯಲು ಹೆಚ್ಚು ಸ್ಥಳ ಬೇಕಾ ಗುತ್ತೆ ಆದರೆ ಈ ಸಂಘದಲ್ಲಿ ಇದುವರೆಗೆ ರಿಜಿಸ್ಟರ್ ಮೇರೆ 329 ಜನ ಚಂದಾದಾರರು ಈ ಪೈಕಿ 117 ಜನರು ಈ ಸಾಲಿನಲ್ಲಿ ಏನೊಂದು ಸಹಾಯವೂ ಕೊಟ್ಟಿರುವದಿಲ್ಲ. ಈ ಕೊಟ್ಟ 212 ಜನರ ಪೈಕಿ ಕಲಾ ಮಾಹೆಯೂ 0 1.0, 0 2.0 ಕೊಡುವ ಕೊಡಗು ಫ್ರೀಲೀಸ್ ಮತ್ತು ವಾರ್ಟನ್ನು ಇರುವ ಮಹನೀಯರು 70 ಜನರಾಗಿದ್ದಾರೆ ಮೇಲೆ ಕಂಡ 117 ಜನರು ಸರಕಾರ ನೌಕರರಾಗಿರುತ್ತಾರೆ.

ಕೊಡಗು ವಾಚಕರೇ ಮತ್ತು ಸಂಪಾದಕರೇ ಈ ಕೊಡಗಿನಲ್ಲಿ (12 ವರುಷ ದ ಲೆ ವಾದೀ ವಿ ಸಂಘಗಳು (ಇದರಲ್ಲಿ 48 ಫಿಕ್ಸ್ ಡ್ 16 ಗೋಪ್ಯರ ಸಂಘ ಇರುತ್ತೆ. ಇವುಗಳು ಸರಕಾರ ಮೂಲಕ ರಿಜಿಸ್ಟರಾ ದವುಗಳು ರಿಜಿಸ್ಟರಾಗದೆ ಇರುವ ಮನೆ ಫಂಡು, ಗಾ ವ ಫಂಡು, [illegible] ಫಂಡು, [illegible] ಸಂಘ ಮಹಾಜನರ 13 ಉಳಿಯುತ್ತೆ [illegible] ಕೊಡಗಿನ ಬಿ ಒಟ್ಟು [illegible] (Night School) ರಾತ್ರಿ ಶಾಲೆಗಳು ಸಹ [illegible] ಈ [illegible] ಹುವಾಮತ್ತಿ ಸಂಬಳಗಳ ಮಕ್ಕಳ ಸಂಬ ಮೂಲ ಬರಿಸ ಶಕ್ಯಿಗೆ ಬಂದು ಈಗ ಇದೇ ಕೊಡಗಿನ 6 ಶಾಲೆಗಳು ನಾಶ್ತ ಇರುತ್ತ.

ಏನ್ ಕೊಡಗಿನಲ್ಲಿ ಸರಕಾರ ಉದ್ಯೋಗಸ್ಥರ ಬಿಟ್ಟು ನ್ಯಾಯ ವಾದ ಕೆಲಸವಾದುವ ಜಮಾ[illegible]ದಾರರು 12,313 ಜನರಿಂದ್ದೆ ಕೇಳದ ಚಾನೆಲ್ ಮಾತಾರಿಯಿಂದ ತಿಳಿಯುತ್ತೆ. ಹೀಗಿರುವಾಗ್ಗೆ ನಾವು ಈಗ ಮಾ ಡಬೇಕಾದ ಕೆಲಸ ಯಾವದು. ಯಾವ ರೀತಿಯಾಗಿ ಈ ಸಂಘದ ಕೆಲ ಸಕ್ಕೆ ಮುಂದಾಳುಗಳಾಗಬೇಕೆಂದು ಯೋಚಿಸಿದರೆ ಬಹಳ ಸುಲಭವಾದ ಕೆಲಸ ಯಾವದೆಂದು ನೋಡಿದಲ್ಲಿ ಈ ಸಂಘವನ್ನು ಈಗ ಇರುವ ಮುಂದಿರುವ ಪ್ರತಿ ಕಾಲೇಜಿನ ವರುಷ ಸಂಘ ಮತ್ತು ಶಾಲೆಗಳಿಗೆ ಹೋಗೀವನು, ಯಾ ಸದರಿ ಸಂಘಗಳ ಪ್ರಸಿಡೆಂಟು ಮೆಂಬರುಗಳಿಗೂ ಮತ್ತು ಶಾಲೆಯ ಹೆಡ್ ಮಾಸ್ಟರಿಗೂ ಬರದು ಅವರುಗಳನ್ನು ಶಾಲೋ ಕಾ, ನಾದು ಯಾ ಗ್ರಾಮ, ಮೆಂಬರುಗಳಾಗಿ ಕೂಡಿಕೊಂಡು, ಸದ ಯವರುಗಳಿಗೆಲ್ಲಾ ಈ ಸಂಘದಿಂದ ಒಂದೊಂದು ಪುಸ್ತಕಗಳಿಗೆ ಪುಸ್ತ ಕಗಳ ಸೀಲ್ ಸಂದ ರಿಜಿಸ್ಟರ್ ಮತ್ತು ರಶೀದಿಯನ್ನು ಕಳುಹಿಸಿಕೊಟ್ಟು ಕೊಟ್ಟಿಗಾಗಿ ಜನಸಿ ನಾಯಿವಾಗಿ ಪ್ರವಾಯಕ್ಕೆ ಲಾಯಕ್ಕಾದ ಪರ ನೀಯರು ಮರುಷ ಒಂದಕ್ಕೆ ಕೊಡುವದಾಗಿ ಒಪ್ಪಿದ ಪಟ್ಟಿಯೊಂದನ್ನು ಪಡೆದುಕೊಂಡು ಅವರುಗಳ ಪಸುಲ್ ವಾಕಿಯನ್ನು ಹಸ್ತಾಕ್ಷರವಾದ ಮಹಜರಯಲ್ಲಿ ಇಟ್ಟು ಕೊಂಡರೆ ಒಂದೇ ವರುಷದೊಳಗಾಗಿ ಈ ಮೂಲ ಬನಬಡದ [illegible] ವಸೂಲಿಯಾದ ವಾಯುಲಿಗಿಂತ ಹೆಚ್ಚಾಗಿ ವಸೂಲಾಗು ವದರಲ್ಲಿ ಯಾವ ಸಂದೇಹವೂ ಇಲ್ಲ. ಹಾಗೆ ಸಂಘ ಮತ್ತು ಶಾಲೆಗ ಳಿಗೆ ಹೋಗಿ ಬರಿಯುವ ಪತ್ರಿಕೆಗಳ ಜೊತೆ ಒಂದು ರಿಜಿಸ್ಟರ್ ಮತ್ತು ಆ ಒಕ್ಕೆ ಪಿಲ್ಲಿಗಳ ಕ್ಯಾಂಪ್ ಅಂದುಗಳ ಜಮಾ ಖರ್ಚು ಕಳಿಸಬೇಕು. ಈ ಪಟ್ಟಿ ಇರುವದರಿಂದ ಒಟ್ಟಲ್ಲ.

ಈ ರೀತಿ ಇದ್ದಾಗೀಸಿನವನ್ನು ಚಂದಾದಾರರ ಹೆಸರು ಇಲ್ಲದ್ದರಿಂದ ದಲೇ ಈ ಆಗಿನ ಸ್ಕಾಲರ್ ಷಿಪ್ ಮಂಜೂರಾತಿ ಹುಡುಗರಲ್ಲು ಕೇವಲ [illegible] ಅರ್ಹರಾದ [illegible] ಮಾಡಲ್ಪಟ್ಟವ [illegible] ಸಂಘ ಯುವಕ ರಿಗೆ ಜಾಣ ಮಾಡಿದವರಾದರೂ ಈ ಸಂಘದ ಎಬಂಧನೆ ಬಾಧಿಸುವಿಂದ ಸ್ಕಾಲರ್ ಷಿಪಿಕ ದೊರೆಯದೆ ಹೋಯಿತು.

ಈ ನಮ್ಮ ಸಂಘವು ಕೆಡದ ನಂತರ ಸ್ವಾತಂತ್ರ್ಯ ಸಂಘ, ಗದ್ದಗು ರಾ ಸಂಘ, ವೀರಶೈವ ಮಹಾತ್ಮರ ಸಂಘಗಳು ತೆರೆಯಲ್ಪಟ್ಟ ತೆಂಗ ಈ ಪತ್ರಿಕೆಯಿಂದರೇ ತಿಳಿದಿದ್ದೇವೆ ಸ್ವಚ್ಛ ಮುಸಲ್ಮಾನರಿಗಂತೂ ಅವರ ಜಮಾತ್ ಎಂಬ ಸಂಘ ಇದ್ದೇ ಇದೆ ಹೀಗಿರುವಾಗ್ಗೆ ನಮ್ಮ ಈ ಫಂಡಿಗೆ ಕೊಡಗರಿಗೆ ಬ್ಬು ವತ್ತಿ ದ ಯಾರೊಬ್ಬರೂ ಹಿಂಜರಿಯಲಾರರು. ಇತ ವನ್ನು ಮನ ಮಾ ಯೋಗಿ ಕೇಳುವ ಇಮಿತ ಮಾಡುವವರಿಗೆ ಬಿಡುವುದೇ ಇನ್ನು ಮುಖ್ಯಗೆ ಹಿಂಜರಿಯಲು ಕಾರಣ ಈ ಮೂಲಬ ಕೊಡುವದರ ಬಿಡುವುದರ ವರನು ಕೆಟ್ಟ ಸ್ಕೂಲ್ ತಾಲೋಕಿನನ್ನು ಮಾರಾಟಮಾಡಿ ಹಾಜ ರರೀತಿಯಲ್ಲಿ ಇರುವನಿಲ್ಲ ಆಗ ಗೆ ಕೊಡಬೇಕಾಗಿ ಕೇಳುತ್ತಾರಾಗಿ ತಿಳಿಯುತ್ತೆ ಇದನ್ನು ಸಹ ನವ್ಹ ಇ ಕೆ ಫಂಡ್ಕೆ ಸೇರಿಸಿದರೆ ಈಗ ನಾವು ಸ್ಕಾಲರುಗಳಿಗೆ ಸ್ಕಾಲರ್ ಷಿಪ್ ಕೊಡಲು ಕೆಲಸ ಓದುವುದೇ ಸಂದೆ ಕಾರಣಗಳ ಬೈಟಕ್ಕೆ ಇದ್ದಿ ತೆ ಅಂಕ ಗಳ್ಳಿಗೆ ಹುಡುಗರು ಮುಂದೆ ಬ್ರೇ ಇಲಾಖೆಗೂ ಎಚ್ಚರಿಸು ಎಷ್ಟು 5 ರೂಪಾಯಿಗಳ ಮೇರೆ ಸ್ಕಾಲರ್ ಷಿಪ್ ಕೊಡಲು ಅನುಕೂಲಿಸುತ್ತೆ ಯದ್ದರಿಂದ ಮತ ಸ್ಥಳದವರೇ ಈ ಜನರುಲ್ಲ ಯಾರುಟ್ಟವರು ಹಿಂಜರಿಯದೆ ಮುಂದೆ ನಾಗುವರಾಗಿ ಬೇಡ ವ ಇ ನಾನೀಡ ಆ[illegible]

[illegible] ಮಾಚಯ್ಯ.

ವಿ ೯ ರ ಪ ಅ ಸಿ ನಿ.

ಹಾಸ್ಯ ಪ್ರಧಾನವಾದ, ಅದ್ಭುತ ವಿಷಯ ಪ್ರಚಾರ ವಾದ ಗಂಭೀರ ಗರ್ಭಿತವಾದ, ಕನ್ನಡ ವಾರಪತ್ರಿಕೆ [illegible] ಡಿಸೆಂಬರ್ 12 ಕ್ಕೆ ಹೊರಬೀಳುವುದು. ಈ [illegible] ಗಾಗಿ ಹೆಸರುಗಳನ್ನು ಕಳಿಸುವವರಿಗೆ ಬಿಟ್ಟಿಯಾಗಿ [illegible] ವರ್ಷಕಾಲ ಪತ್ರಿಕೆಯನ್ನು ಕಳುಹಿಸುವೆವು. [illegible] ಕ್ಕಾಗಿ 12 ಪ. ಮಾತ್ರ ಮುಂಗಡ ರವಾನಿಸಬೇಕು. [illegible] ಗಡ ವಿ ಪಿ ಇಲ್ಲ. ಇದಕ್ಕೆ ಗೊತ್ತಾದ ವಾರ್ಷಿಕ [illegible] 1-12-0. ಪತ್ರಿಕೆಯು ಬಲು ಅಂದವಾಗಿ [illegible] ವುವು. ಪ್ರಸಿದ್ಧವಾದ 'ಸಕಲಿ' ಪತ್ರಿಕೆ!!

ವಿಳಾಸ ಮ್ಯಾನೇಜರ್,

ನಂ. 104, 4 ನೇ ಬೀದಿ, ಚಾಮರಾಜಪೇಟೆ,

12-1 ಬೆಂಗಳೂರು [illegible]

"ಸುಲಭಬೆಲೆ, ಲಾಭದದಾರಿ"

ದೇಶಿ ಸೀರೆಗಳಿಗೂ ವಸ್ತ್ರಗಳಿಗೂ ಬನರಾಸ್, [illegible] ಕಾಶಿಪಟ್ಟೆ, ಕರ್ಚಿಪ್ [illegible] ಸೊಂಟಕ್ಕೆ ಕಟ್ಟುವ [illegible] ದಟ್ಟಿ, ತಲೆಗೆ ಕಟ್ಟುವ ವಸ್ತ್ರ, ಕೈವಸ್ತ್ರ, ಮುಂತಾದವು [illegible] ಕೊಟ್ಟು ಕಂಬಿ ವಗ್ಯರೆಯಿಂದ ಪಳೇದನ್ನು ಹೊಸದಾಗಿ ತಯಾರಿಸುತ್ತೇನೆ.

ವಿಲೇದೇಶಿ ಬಟ್ಟೆಗೆ ಅವರವರ ಇಷ್ಟದ ರೀತಿ ಬಣ್ಣ ಕೊಡಲು ತಯಾರಿದ್ದೇವೆ.

ಸುಬಿನ ಬಿಳಿ ಬಟ್ಟೆಗಳಿಗೆ ಗುಲಾಬಿ ಮತ್ತು [illegible] ಬಣ್ಣ ಕೊಡಲ್ಪಡುವುವು.

ಮೇಲ್ಕಂಡ ಬಣ್ಣಗಳು ಚಿತ್ರಯಾದ್ದಾಗಿರುತ್ತೆ. [illegible] ಕೇರಿಯಲ್ಲಿ ಅನೇಕರಿಗೆ ಈ ಮೇರೆ ಹಳೆ ಬಟ್ಟೆಗಳಿಗೆ [illegible] ಕೊಟ್ಟು ಹೊಸದಾಗಿ ಮಾಡಿಕೊಟ್ಟಿರುತ್ತೇವೆ. [illegible] ಹೊಸ ಹೊಸ ನಮೂನೆಯ ಹೊಸ ಸೀರೆಗಳನ್ನು [illegible] ಖರೀದಿಗೆ ಮಾಡುತ್ತೇವೆ. ಮೊಕ್ಕಿನ ಸಂಗ್ರಾಗಿ [illegible] ಗಿನ ವಿಳಾಸಕ್ಕೆ ಬರೆಯಿರಿ,

ಬಿ. ಉ.ಂ. ಮುಂ.ಗೋವಿಂದರಾಜ್,

ಡೈಯಿಂಗ್ ಮತ್ತು ಡಯಿಂಗ ವ್ಯಾಪಾರಿ, ಗವುರ್ನ್ಮೆಂಟ್,

12-1 ಮಡಿಕೇರಿ ([illegible]

ಅಂದವಾದ ಮಧುರೆ ಸೀರೆಗಳು.

ಕಪ್ಪು ಬಣ್ಣದಲ್ಲಿ ಮಾತ್ರ ಸಿಗುತ್ತವೆ. ನಾನಾ [illegible] ಯ ಬುಟಾಗಳುಳ್ಳವು. ಅಂಗಿಗೆ ಬಾಡಿಸ್ ಕೊಡುತ್ತೇವೆ. 16 ಮೊಳ ಉದ್ದ, $2\frac{1}{2}$ ಮೊಳ ಅಗಲ. ಒಂದು [illegible] ಸಬೇಕೆಂದು ಪ್ರಾರ್ಥನೆ. ಕ್ರಯ ರೂ 5—0—0. [illegible] ಅನೇಕ ತರಹಾ ಉಂಟು. 8 ಗಜದ ಬಾಲಾಮಣಿ [illegible] ಕಾಯಿ ಸೀರೆ ಕ್ರಯ ರೂ. 4—8—0, [illegible] ಕೋಡಿ ರೂ. 5—0—0. ಸರವಾಪುರಂ ಸಾದಾ ರೂ. [illegible] ಸರವಾಪುರಂ ಜರಿ ರೂ 7. ಸಾವಿತ್ರೀ ಜರಿ [illegible] ಮೇಲಾದ ಗೋರಖಪುರ ಸ್ ರೂ 7—8—0. [illegible] ಒಂದೇ ಸಲ ತರಿಸಿದರೆ, ಅವರಿಗೆ ಖರ್ಚು ಮಾಫಿ.

ಲಕ್ಷ್ಮೀಪತಿ ಅಂಡ್ ಕಂಪೆನಿ,

4-1 22. ವಿನಾಯಕಪೇಟೆಬೀದಿ, ಮದರಾಸು.

AN APPROVED FIRM FOR THE SUPPLY OF STATIONERY ARTICLES TO THE GOVT. OF

H. H. the Maharaja of Mysore.

ನಮ್ಮಲ್ಲಿ ಎಲ್ಲಾ ವಿಧವಾದ ಸ್ಟೇಷನರಿ ಸಾಮಾನು ಗಳೂ, ಫೌಂಟೆನ್ ಪೇನಾಗಳೂ, ಪ್ರಿಂಟಿಂಗ್ ಮತ್ತು ರೂಲಿಂಗ್ ಪೇಪರುಗಳೂ, ಎಕ್ಸರ್ ಸೈಜ್ ಬುಕ್ಕುಗಳೂ, [illegible] ನೋಟ್ ಬುಕ್ಕುಗಳೂ, ಡಿಫ್ ನೋಟು ಬುಕ್ಕುಗಳೂ, [illegible] ಯಿಂಗ್ ಮತ್ತು ಟೈಪ್ ರೈಟಿಂಗ್ ಪೇಪರುಗಳೂ, [illegible] ಅನುಕೂಲವಾದ ಅಕೌಂಟು ಬುಕ್ಕುಗಳೂ ಸಹ [illegible] ಕಾಗದದಿಂದ ತಯಾರಾಗಿ ವಿಕ್ರಯಕ್ಕೆ ಸಿದ್ಧವಾಗಿವೆ. [illegible] ಕಾಗದದಿಂದ ತಯಾರಿಸಿದ ಬುಕ್ಕುಗಳನ್ನು [illegible] ಮೋಸಹೋಗಬೇಡಿರಿ. ಬೇಕಾದ ಸಾಮಾನುಗಳಿಗೆ [illegible] ಆರ್ಡರ್ ಕೊಡುವಿರಾಗಿ ನಂಬಿದ್ದೇವೆ. ವ್ಯಾಪಾರಸ್ಥ [illegible] ಯೋಗ್ಯ ಡಿಸ್ಕೌಂಟು ಸಹ ದೊರೆಯುತ್ತೆ. 24-11

M. N. K. & Bros.

Book Binders & Stationers. MYSORE

ಮಂಜೇರಿ

ಮೋಟಾರ್ ಸರ್ವಿಸ್

ಲಿಮಿಟೆಡ್, ಕಲ್ಲಿಕೋಟೆ.

ಈ ಕಂಪೆನಿಯು 1913 ನೇ ಇಸವಿಯ ಕಂಪೆನಿ ಆಕ್ಟಿಗೆ ಅನುಸಾರವಾಗಿ 1921-1922 ನೇ ಇಸವಿಯ ಮೊದಲನೇ ನಂಬ್ರವಾಗಿ 1921 ನೇ ಏಪ್ರಿಲ್ 4 ನೇ ತಾರೀಖಿನಲ್ಲಿ ರಿಜಿಸ್ಟ್ರಿ ಮಾಡಲ್ಪಟ್ಟು 1921 ನೇ ಮೇ 6 ನೇ ತಾರೀಕಿನಲ್ಲಿ ತಮ್ಮ ಕೆಲಸವನ್ನು ನಡಿಸುವದಕ್ಕೆ ಸಮ್ಮತಿ ಸರ್ಟಿಫಿಕೇಟು ಪಡಕೊಂಡಿರುತ್ತದೆ ಮೇ 25 ನೇ ತಾರೀಕಿನಿಂದ ಕೆಲಸವನ್ನು ಪ್ರಾರಂಭಿಸಿರುವದು

ಈ ಕಂಪೆನಿಯ ಮೂಲಧನವು ಮೂರು ಲಕ್ಷ ರೂಪಾಯಿ ಪಾಲುವಂತಿಗೆಯಿಂದ ಸಂಗ್ರಹಿಸಲ್ಪಡಬೇಕು ಪಾಲು 1 ಕ್ಕ 10 ರೂಪಾಯಿವಂತಿಗೆ ಇದರಲ್ಲಿ ಸದ್ಯಕ್ಕೆ ವಿಕ್ರಯಿಸೋಣಾಗುವ 20,000 ಪಾಲುಗಳಲ್ಲಿ 1540 ಪಾಲುಗಳನ್ನು ಈ ಕಂಪನಿಯ ಪ್ರೇರೇಪರೇ ಪಡಕೊಂಡಿರುತ್ತಾರೆ

35660 ರೂಪಾಯಿಯ ಶೇರ್‌ಗಳು 1921 ನೇ ಇಸವಿ ಅಕ್ಟೋಬರ್ 4 ನೇ ತಾರೀಕಿನವರಗೆ ಮಾರಲ್ಪಟ್ಟಿರುತ್ತದೆ

ಕಂಪೆನಿಯ ಉದ್ದೇಶ

ಮುಖ್ಯವಾಗಿ ತಲಚೇರಿಯಿಂದ ಮಡಿಕೇರಿಗೂ, ವಯನಾಡಿಗೂ, ಮಡಿಕೇರಿಯಿಂದ ಸೋಮವಾರಪೇಟೆಗೂ, ಕಲ್ಲಿಕೋಟೆಯಿಂದ ವಯನಾಡಿಗೂ ದಕ್ಷಿಣ ಮಲಬಾರಿನಲ್ಲಿರುವ ಮಂಜೇರಿ ನಿಲಂಬೂರು, ತಿರೂರು ಮೊದಲಾದ ಸ್ಥಳಗಳಿಗೂ ಮೋಟಾರ್ ಬಸ್ ಸರ್ವಿಸ್ ಸ್ಥಾಪಿಸುವದು ಮತ್ತು ಮೋಟಾರ್‌ಕಾರ್, ಲೋರಿ ಮೊದಲಾದ ವಾಹನಗಳನ್ನು ಓಡ್ಯಾಡಿಸುವದು, ಮೋಟಾರ್ ಬಂಡಿಗಳನ್ನು ರಿಪೇರಿ ಮಾಡುವ ಕಾರ್ಖಾನೆಗಳನ್ನು ಸ್ಥಾಪಿಸುವದು, ಸರ್ವಿಸುಗಳನ್ನು ವಿಸ್ತಾರಮಾಡುವದು, ಇವೇ ಸಂಘದ ಉದ್ದೇಶಗಳಾಗಿವೆ.

ಕಂಪೆನಿಯಲ್ಲಿ ದೊರೆಯುವ ಅಂದಾಜು ಆದಾಯ

ಈ ಕಂಪನಿಯು ಕ್ರಯಕ್ಕೆ ಪಡಕೊಂಡು ನಡಿಸುತ್ತಿರುವ ಮಂಜೇರಿ ಮೋಟಾರ್ ಸರ್ವಿಸಿನ ಗತಿಸಿದ ಲೆಕ್ಕಾಚಾರಗಳನ್ನು ಪರಿಶೋಧಿಸಿದರೆ ಕ್ಷೇಮನಿಧಿಗೆ ತಕ್ಕಷ್ಟು ಹಣ ಉಳಿಸಿಟ್ಟು ಸುಮಾರು ಶೇಕಡ 25 ರಂತೆ ಪಾಲುಗಾರರಿಗೆ ಆದಾಯ ಕೊಡಬಹುದಾಗಿದೆಂದು ಖಂಡಿತವಾಗಿ ಹೇಳಬಹುದು ಕಾಲಕ್ರಮೇಣ ಇನ್ನಷ್ಟು ಹೆಚ್ಚಿಗೆ ಬಸ್‌ಗಳನ್ನೂ, ಕಾರ್, ಲೋರಿಗಳನ್ನೂ ಓಡ್ಯಾಡಿಸುವದಾದರೆ, ಮೋಟಾರ್ ಕಾರ್ಖಾನೆಗಳನ್ನೂ ಸ್ಥಾಪಿಸುವದಾದರೆ, 100 ಕ್ಕೆ 25 ಕ್ಕಿಂತಲೂ ಹೆಚ್ಚಿನ ಆದಾಯವನ್ನು ನಿರೀಕ್ಷಿಸಬಹುದು.

ವಿಶೇಷ ಪ್ರಯೋಜನಗಳು.

ಬಹೂ ಜಾಗ್ರತೆಯಿಂದಲೂ ಮುತುವರ್ಜಿಯಿಂದಲೂ ತನ್ನ ಕೆಲಸವನ್ನು ಮಾಡಿ ಎಲ್ಲಾ ಕಡೆಯಿಂದಲೂ ಒಳ್ಳೇ ಹೆಸರನ್ನು ಪಡಕೊಂಡ ಮಂಜೇರಿ ಮೋಟಾರ್ ಸರ್ವಿಸನ್ನು ಈ ಲಿಮಿಟೆಡ್ ಕಂಪೆನಿಯು ಪಡಕೊಂಡದಾಗಿರುತ್ತದೆ

ಈ ಕಂಪೆನಿಯ ಕೆಲಸಗಾರರೆಲ್ಲರೂ ಸಮರ್ಥರೂ ಇದರ ಅಧಿಕಾರದಾರರು ಒಳ್ಳೇ ಅನುಭವಶಾಲಿಗಳೂ ಆಗಿದ್ದಾರೆ.

ಈ ಕಂಪೆನಿಯ ಪ್ರವೃತ್ತಿಯಿಂದ ಬರುವ ಆದಾಯವು ತನಗಿನ ಗಂಟಲ್ಲ ನಿಜವಾಗಿ ಕೈಗಂಟೇ ಆಗಿದೆ ಇತರ ಕಂಪೆನಿಗಳಲ್ಲಿ ಆದಾಯ ಸಿಕ್ಕುವದಕ್ಕೆ ಮೂರು ನಾಲ್ಕು ವರ್ಷ ಕಾಯಬೇಕಾಗುತ್ತದೆ ಇದರಲ್ಲಿ ಹಾಗಿಲ್ಲ. ಶೇರ್ ತೆಗೆದುಕೊಂಡ ಕೂಡಲೇ ಆದಾಯ ಬರುವದು

ಸರ್ವರಿಗೂ ಅನುಕೂಲವಾಗುವಂತೆ ಒಂದೊಂದು ಪಾಲಿಗೆ 10 ರೂಪಾಯಿ ಮಾತ್ರ ಇಡೋಣಾಗಿದೆ.

ಈ ಲಿಮಿಟೆಡ್ ಕಂಪೆನಿಯು ಕಲ್ಲಿಕೋಟೆಯಲ್ಲಿ ಮಂಜೇರಿ ಮೋಟಾರ್ ಸರ್ವಿಸನ್ನು ಇದೇ 1921 ನೇ ಮೇ 25 ನೇ ತಾರೀಕಿನಲ್ಲಿ ಮತ್ತು ತಲಚೇರಿಯ ಮೋಟಾರ್ ಸರ್ವಿಸನ್ನು ಇದೇ ಜೂನ್ 1 ನೇ ತಾರೀಕಿನಲ್ಲಿಯು ಬಡಗಾರ ಮತ್ತು ನಾದಾಪುರ ಸರ್ವಿಸನ್ನು 1921 ನೇ ಆಗಸ್ಟು 8 ನೇ ತಾರೀಕಿನಲ್ಲಿ ಹೊಸದಾಗಿ ಪ್ರಾರಂಭಿಸಿರುವದು.

ಪಾಲು ಬೇಕಾದವರು ಕಂಪೆನಿಯ ಅರ್ಜಿ ಫೋರ್ಮಿನಲ್ಲಿ ಅರ್ಜಿ ಬರೆದು ತಮಗೆ ಎಷ್ಟು ಪಾಲು ಬೇಕೋ ಅಷ್ಟು ಪಾಲಿಗೆ—ಪಾಲ 1 ಕ್ಕೆ 10 ರೂಪಾಯಿ ಪ್ರಕಾರ ಆಗುವ ಒಟ್ಟು ಹಣವನ್ನು ಅರ್ಜಿಯೊಂದಿಗೆ ಮೇನೇಜಿಂಗ್ ಡೈರೆಕ್ಟರಿಗೆ ಕಳುಹಿಸತಕ್ಕದ್ದು.

ಕಂಪೆನಿಯ ನಿಯಮಗಳ ಪ್ರತಿಗಳೂ ಅರ್ಜಿ ಫೋರ್ಮುಗಳು ಕಂಪೆನಿಯ ಆಫೀಸಿನಲ್ಲಿ ದೊರೆಯುವವು

ಅರ್ಜಿ ಫೋರ್ಮ್ [illegible] [illegible] ಪೂರ್ಣ ಹೆಸರು, ತಂದೆಯ [illegible] ಪೇಳ್ವೆಕಾಸ [illegible] ಒಂದು ಅರ್ಜಿಯನ್ನು ಬರೆದು ಅಪೇಕ್ಷಿಸುವ ಪಾಲುಗಳ ಹಣವನ್ನೂ ಮೇನೇಜಿಂಗ್ ಡೈರೆಕ್ಟರಿಗೆ ಕಳುಹಿಸಿಕೊಡತಕ್ಕದ್ದು

ಈ ಕಂಪೆನಿಯ ಸರ್ವಿಸ್ ಈಗ ಕಲಿಕೋಟೆಯಿಂದ ಪುದುಪಾಡಿಗೂ ತಲಚೇರಿಯಿಂದ ಮಾಕೂಟಿಗೂ ಬಡಗೆರೆಯಿಂದ ನಾದಪುರಕ್ಕೂ ಓಡ್ಯಾಡುತ್ತಿರುವವು

ಒಳ್ಳೇ ಮೋಟಾರ್ ಕಾರ್‌ಗಳು ತಲಚೇರಿಯಲ್ಲಿಯೂ ಕಲಿಕೋಟೆಯಲ್ಲಿಯೂ ಬಡಗೆರೆಯಲ್ಲಿಯೂ ಬಾಡಿಗೆಗೆ ದೊರಕುವವು

1920 ನೇ ಇಸವಿ ಡಿಸೆಂಬರಿನಿಂದ 7 ತಿಂಗಳ ಬಾಬ್ತು ಮಂಜೇರಿ ಮೋಟಾರ್ ಕಂಪೆನಿಯ ಆದಾಯವೆಚ್ಚದ ಪಟ್ಟಿ

ಬಂಡವಾಳ	60 000—0—0
ಕಲ್ಲಿಕೋಟೆ ತಲಚೇರಿ ಲೈನುಗಳಿಂದ ಉತ್ಪತ್ತಿ	48 294—13—0
ಒಟ್ಟುಖರ್ಚು ಪೆಟ್ರೋಲ್ ಕ್ಷಾಮದಕಾಲದಲ್ಲಿ	31 064—7—3
ಏಳು ತಿಂಗಳ ಒಟ್ಟು ನಫೆ	17 230—5—9

ಇದರಿಂದ ತಿಂಗಳಿಗೆ 2500 ರೂಪಾಯಿವರೆಗೆ ನಫೆ ಇದೆ ಎಂದು ಪೂರ್ಣ ತಿಳಿಯುತ್ತೆ

ಒಂದು ವರ್ಷಕ್ಕೆ 30 000 ರೂ ನಫೆ ಇದರ ಪೈಕಿ 15,000 ರೂಪಾಯಿ ಬೇರೆ ರಿಸರ್ವ್ ಫಂಡಿನಲ್ಲಿ ಇಟ್ಟರು ಕೂಡಾ ಶೇಕಡಾ 25 ರಂತೆ ನಫೆ ಸಿಕ್ಕಬಹುದು

ತಲಚೇರಿ ಸಬ ಕಲೆಕ್ಟರು ಬರೆಯುವದು ಏನೆಂದರೆ —

ಆಗಸ್ಟು ತಾರೀಕು 26–27–28 ರಲ್ಲು ಕೊಯಿಲಾಂಡಿ ತಮರಶೇರಿ ಕುನ್ನಮಂಗಲ ಎಂಬಲ್ಲಿಗೆ ಸರಕಾರಕ್ಕೆ ಉಪಯೋಗವಾಗಿ ಸಿಪಾಯಿಗಳನ್ನು ಕರಕೊಂಡು ಹೋಗಲು ನಿಮ್ಮ ಮೋಟಾರುಗಳನ್ನು ಬಸ್‌ಗಳನ್ನು ಅತಿ ಜಾಗ್ರತೆಯಿಂದ ಕೊಟ್ಟದ್ದು ಸರಿಯಷ್ಟೆ ನಿಮ್ಮಲ್ಲಿ ಕೆಲಸಮಾಡುವ ಕೆಲಸದವರು ಮತ್ತು ಡ್ರೈವರುಗಳು ಅತಿ ಬುದ್ಧಿವಂತರು, ಮತ್ತು ಪೂರ್ಣ ಶ್ರದ್ಧೆಯಿಂದ ಕೆಲಸಮಾಡುವವರು ಆಗಿರುತ್ತಾರೆ. ಮತ್ತು ಇವರನ್ನು ಮುತುವರ್ಜಿಯಿಂದ ಕೆಲಸಮಾಡುವಂಥಾ ಕೆಲಸದವರನ್ನು ಈವರೆಗೆ ಎಂದು ನಾನು ಕಂಡಿಲ್ಲ ಕಂಪೆನಿಗೆ ಇದಕ್ಕೋಸ್ಕರ ಅತಿ ಕೃತಜ್ಞತೆಯುಳ್ಳವನಾಗಿರುತ್ತೇನೆ.

ಇದರಿಂದ ಜನರು ನಮ್ಮ ಕಂಪೆನಿಯನ್ನು ಎಷ್ಟು ಶ್ಲಾಘನೆಮಾಡುತ್ತಾರೆಂಬದು ಪೂರ್ಣ ವ್ಯಕ್ತವಾಗುತ್ತದೆ

ಜೆ. ನಿಕೊಲಾಸ್,

ಮೇನೇಜಿಂಗ್ ಡೈರೆಕ್ಟರ್,

ಮಂಜೇರಿ ಮೋಟಾರ್ ಸರ್ವಿಸ್ ಲಿಮಿಟೆಡ್,

ಕ್ಯಾಂಪು-ಮಡಿಕೇರಿ

THE

MANJERI MOTOR SERVICE, Ltd.,

CALICUT

Branches —

TELLICHERRY AND BADAGARA.

Registered under the Indian Companies Act 1913 as No 1 of 1921—1922 on the 4th day of April 1921 and prospectus filed on the 6th day of May 1921 Business commenced on the 25th day of May 1921'

AUTHORISED CAPITAL RUPEES THREE LAKHS.

Divided into 30,000 ordinary shares of Rs 10 each payable fully in cash with application of which 20,000 **shares are now offered for subscription at par.**

1540 shares are taken by the promoters at present

Rs 35660 worth shares are sold upto [illegible]

[illegible]ctober 1921

O[illegible]JE[illegible]TS

The Co[illegible]p[illegible]y is formed primarily to es[illegible] Motor Bus Services between Tellicher[illegible]y Mercara and Somwarpet in Coorg, Calicut[illegible] Coorg Wynaad in North Malabar, Calicut[illegible] Wynaad Nilambur and Tirur in South Mala[illegible] to establish motor work shops for the repair[illegible] motor vehicles and for the training up of [illegible] machinics and drivers and for the perman[illegible] working up of motor bus service in the convey[illegible] of passengers and goods

ESTIMATED INCOME AND PROSPEC[illegible]

It is estimated from a perusal of the acco[illegible] of the working of the Manjeri Motor Ser[illegible] which the Company has purchased that Company would be able to declare a dividend about 25 per cent after setting aside a[illegible] reserves for depreciation and reserve fund As t[illegible] pass on and more buses and cars and lorries introduced and more new lines are opened [illegible] workshops established [illegible] much higher dividen[illegible] confidently expected and considered feasible

SPECIAL ADVANTAGES

The Company has purchased the flouris[illegible] concern the Manjeri Motor Service which been exceptionally lucky all along to earn a g[illegible] name and maintain the prestige and repu[illegible] throughout for its punctuality, regularity [illegible] respectability required of a motor service to the confidence of the travelling public

The Company is singulary fortunate in secur[illegible] the services of choicest workmen and efficient experienced management

The Company's lines of business are not [illegible] speculative but are reckoned as sure concerns

The Company is in a position to pay a divid[illegible] from the very start

The Company has already taken charge of Manjeri Motor Service working at Calicut on **25th day of May 1921** and that of Telliche[illegible] on the **1st June 1921** and Badagara—Nadapu[illegible] line is newly opened on the **8th August 1921**

Application for shares should be made in form of application to the Managing Dire[illegible] together with the full cash value of each share

Copies of the Memorandum and Articles Association and of the Prospectus and forms application can be had at the Office of Company

In the absence of application form, the ap[illegible] cation should clearly state Full name, Perman[illegible] address Father's name, Profession, Prese[illegible] address and should be sent with the full cash val[illegible] of the shares to the Managing Director

The Company's service now works betwe[illegible] CALICUT—PUDUPADI TELLICHERRY MAKKUT BADAGARA—NADAPURA[illegible] Reliable pleasure cars **Reo Hupmobile Overla[illegible]** driven by experienced hands are always availab[illegible] for hire

SUB COLLECTOR TELLICHERRY WRITES —

"Just a line to thank you for the prompti[illegible] with which you placed your two Cars and o[illegible] Bus at the disposal of Government on the 26[illegible] 27th and 28th for moving troops to Quiland[illegible] Tamaracherry and Kunnamangalam' etc, et[illegible] and concludes '**I never saw more willi[illegible] workers or more competent drivers th[illegible] your men**' This unasked for remarks from th[illegible] pen of an high official speaks for itself about th[illegible] merits of the Manjeri Motor Service Ltd, a[illegible] her staff

For further particulars apply to —

J NICHOLAS,

Managing Director

Manjeri Motor Service Ltd.,

Camp—Mercara

Printed and Published by K Sundararajienga[illegible] Proprietor, at Sreenivas Electric Press, Mysor[illegible] for "Kodagu" Ltd., Mercara—9 12 1921.

ಕೊಡಗು.

ಸತ್ಯೇನ ಭೂತದಯಯಾ ವಿದ್ಯಾನೀತಿಪ್ರಯತ್ನತಃ । ಐಕಮತ್ಯೇನ ದೇಶಾನಾಂ ಸುಸ್ಥಿರಾ ರಾಜ್ಯಸಂಪದಃ ॥

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವುದು.

ಸಂಪುಟ ೧] ಕೊಡಗು, ಸ ೧೯೨೧ ನೇ ಇಸವಿ ಡಿಸಂಬರ್ ತಾರೀಖು ೧೬ ನೆಯ ಶುಕ್ರವಾರ. [ಸಂಚಿಕೆ ೨೮

NOTICE.

If you want any kind of
English or Kanarese Printing,
please write to:

SREENIVAS ELECTRIC PRESS, MYSORE.

ನೋಟೀಸ್.

1922 ನೆಯ ಇಸವಿಯಲ್ಲಿ ಪ್ರಾರಂಭವಾಗುವ ಪರ್ಯಾಯದಲ್ಲಿ ಪಲಿಮಾರು ಮಠದ ಸ್ವಾಮಿಯವರು ಮಾಡುವ ಉಡುಪಿ ಶ್ರೀ ಕೃಷ್ಣದೇವರ ಪೂಜೆಯ ಸಹಾಯಾರ್ಥವಾಗಿ "ಶ್ರೀ ಕೃಷ್ಣಸೋಡ್ತಿ" ಎಂಬ ಒಂದು ಲೋಟರಿಯಾನೆ ಸೋಡ್ತಿಯನ್ನು ಏರ್ಪಡಿಸಿಯದೆ. ಅದರಲ್ಲಿ 1 ನೇ ಇನಾಂ ರೂಪಾಯಿ 2000—0—0 ರಮ್ದು, 2 ನೇ ಇನಾಂ ರೂಪಾಯಿ 1000—0—0 ರಮ್ದು 5 ಇನಾಂಗಳು ರೂಪಾಯಿ 100 ರಂತೆ 200 ಇನಾಂಗಳು ರೂಪಾಯಿ 5 ರಂತೆ ಹೀಗೆ ಒಟ್ಟು 307 ಇನಾಮುಗಳನ್ನು ಇಟ್ಟಿದೆ. ಈ ಲೋಟರಿಯ ಟಿಕೇಟನ್ನು ಮಾರಿದ ಯೇಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾದೀತು. ಈ ಲೋಟರಿಯನ್ನು 15-12-1921 ರಲ್ಲಿ ತೆಗೆಯುವದೆಂತ ನಿಶ್ಚಯಿಸಲಾಗಿತ್ತು. ಆದರೆ ಅನೇಕ [illegible] ಹಣಗಳು ವಾಪಾಸು ಕಳುಹಿಸುವ ಕಠಣದಮೇಲೆ ಸೋಡ್ತಿಯ ಟಿಕೇಟುಗಳನ್ನಾಗಲೀ ಪುಸ್ತಕಗಳನ್ನಾಗಲೀ ಅಪೇಕ್ಷಿಸುವವರಿಗೆ ಕಳುಹಿಸಕೊಡಲಾದೀತು. ಸೋಡ್ತಿ ತೆಗೆಯುವದನ್ನು ಇನ್ನು ಯಾವ ಕಾರಣದಿಂದಲಾದರೂ ಇನ್ನು ಮುಂದುವರಿಸುವಣಾಗಲಿಕ್ಕಿಲ್ಲ.

ಈ ಕೆಳಗಿನ ವಿಳಾಸಕ್ಕೆ ಎಲ್ಲಾ ಪತ್ರವ್ಯವಹಾರಗಳನ್ನು ಮಾಡುವದಲ್ಲದೆ ಟಿಕೇಟಿನ ಹಣಗಳನ್ನು ಸಹಾ ಕಳುಹಿಸಬಕ್ಕದ್ದು.

ಪಿ. ಆರ್. ರಾಮರಾವ್,
ವೈಸ್ ಸೆಕ್ರಟರಿ.
ಶ್ರೀ ಕೃಷ್ಣಸೋಡ್ತಿ, ಕೊಡಿಯಾಲು,
ಬೈಲುಪೇಟೆ, ಮಂಗಳೂರು. ದ. ಕ.

ಸಂಗೀತಕ್ಕೆ ಸಂಬಂಧಪಟ್ಟ

ಸಾಮಾನುಗಳ ಮಾರಾಟ

ನಮ್ಮಲ್ಲಿ ಅನುಭವಪೂರ್ವಕ ಚೆನ್ನಾಗಿ ಅನೇಕಾನೇಕ ಸಂಗೀತ ವಿದ್ವಾಂಸರುಗಳು ಒಪ್ಪತಕ್ಕ ಹಾರ್ಮೋನಿಯಂ, ತಬಲ, ತಂಬೂರಿ, ಸಿತಾರ್, ತಾವೂಸ್ ದಿಲ್‌ರುಬ ಸಾರಂಗಿ, ಪಿಟೀಲು, ಕೊಳಲು ಶ್ರುತಿಪೆಟ್ಟಿಗೆ ಇವೇ ಮುಂತಾದ ಪದಾರ್ಥಗಳು ಸಿಕ್ಕುತ್ತವೆ. ಈ ಪದಾರ್ಥಗಳ ಎಂಥಾ ರಿಪೇರಿ ಕೆಲಸವಾದರೂ ಸಹ ಸುಲಭಧಾರ್ಜಿಗೆ ಮಾಡಲ್ಪಡುತ್ತದೆ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ನಮ್ಮ ವಿಳಾಸ.—

ಯಂ. ಪುಟ್ಟಯ್ಯ ಅಂಡ್ ಸನ್ಸ್,
ಹಾರ್ಮೋನಿಯಂ ಡೀಲರ್ಸ್ ಮತ್ತು ರಿಪೇರರ್ಸ್,
24–14 ಸಯಾಜಿರಾವ್ ರೋಡ್, ಮೈಸೂರು.

SUBBANNA, SANGAPPA,

Receiving and Forwarding Agents, receive at Mysore Railway Station and whatever food stuffs and Stationaries you want to have from Mysore. Prompt attention, moderate commission and quick disposal are their motto. 24–23

ಮೈಸೂರು ರೈಲ್ವೆ ಸ್ಟೇಷನ್‌ನಿಂದ ನೀವು ಹೊಂದಬೇಕಾದ ಸಾಮಾನುಗಳ ರೈಲ್ವೆ ಪಾಸುಗಳನ್ನೂ, ಮೈಸೂರಿನಿಂದ ತರಿಸಿಕೊಳ್ಳಬೇಕಾದ ಸಾಮಾನುಗಳ ಪಟ್ಟಿಯನ್ನೂ ಮೈಸೂರು ಸಂತೇಪೇಟೆಯಲ್ಲಿರುವ

ಸುಬ್ಬಣ್ಣ ಸಂಗಪ್ಪನವರಿಗೆ ಕಳುಹಿಸಿ

ಅವರು ಜಾಗ್ರತೆಯಾಗಿಯೂ, ಜೋಪಾನವಾಗಿಯೂ ಸುಲಭವಾದ ಕಮಿಷನ್ನಿನಲ್ಲಿಯೂ ನಿಮಗೆ ಸರಕು ರವಾನಿಸುತ್ತಾರೆ. ಮಿಕ್ಕ ವಿಚಾರ ಬರೆದು ತಿಳಿದುಕೊಳ್ಳಿ.

COORG TEACHERS' CO-OPERATIVE STORES, Ltd.,

ಕೊಡಗು ಉಪಾಧ್ಯಾಯರ ಕೋ ಆಪರೇಟಿವ್ ಸ್ಟೋರ್ಸ್, ಲಿಮಿಟೆಡ್, ಮಡಿಕೇರಿ.

ಈ ಸ್ಟೋರ್ಸಿನಲ್ಲಿ ಶಾಲಾ ಪಠ್ಯಪುಸ್ತಕಗಳು, ಸ್ಟೇಷನರಿ ಸಾಮಾನುಗಳು ಮತ್ತು ಸೊಗಸಾದ ಎಕ್ಸರ್‌ಸೈಜು ಪುಸ್ತಕಗಳು ದೊರೆಯುತ್ತವೆ. ಕ್ರಯ ಸುಲಭ, ಮಾಲು ಉತ್ತಮ. ಕೊಡಗಿನಲ್ಲಿ ಈ ತರ ಸ್ಟೋರ್ಸ್ ಇದೊಂದೇ. ಮಾಲುಗಳನ್ನು ಕೋರಿದವರಿಗೆ ವಿ. ಪಿ. ಮೂಲಕ ಕಳುಹಿಸಲಾಗುತ್ತೆ. 12–12

ಇತ್ತ ನೋಡಿ! ಕೊಡಗು ಬಾಂಧವರೇ! ಇತ್ತ ನೋಡಿ!

ನಮ್ಮಲ್ಲಿ ಸಾಮಾನು ಪ್ರತಿಯೊಬ್ಬ ಕೊಳ್ಳುವದು ತಮ್ಮಗಳಿಗೆ ತಿಳಿದಿರುವದಷ್ಟೆ.

ಕಾಮಿನಿಯಾ ತೈಲ.—ಚಿಕ್ಕ ಶೀಸೆ 1 ಕ್ಕೆ 1—0—0 3 ಶೀಸೆಗೆ 2—10—0. ಓಟೋದಿಲ್ಲಭಾರ್ ಅತ್ತರ್ ದ್ರಾಮು ಶೀಸೆ 1ಕ್ಕೆ 0—12—0. ಡಜನ್ 7—8—0. ಅರ್ಧ ಬಿನ್ಸ್ ಬಾಟ್ಲು ಕುಧಸಲಿತೀರ ಸೈಜ ಶೀಶೆ 1 ಕ್ಕೆ 3 ಆಣೆ. ಡಜನ್ 1 ಕ್ಕೆ 1—12—0 ಕಸ್ತೂರಿಮಾತ್ರೆ ಶೀಸೆ 1 ಕ್ಕೆ 4 ಆಣೆ. ಡಜನ್ 1 ಕ್ಕೆ 2—10—0. ಮಲೇರಿಯಾ, ದಿನ ಬಿಟ್ಟು ಬರುವ ಜ್ವರಕ್ಕೆ ಮಾತ್ರೆಯಾದ ಬೆಳ್ಳಿ ಮುಲಾಮಿನ ಮಾತ್ರೆ ಶೀಸೆ 1 ಕ್ಕೆ 1—0—0 ರೂ.

ಮಿಠಾಸ್ ಪಾಕೇಟ್ 1 ಕ್ಕೆ	1 ಆಣೆ. 4 ಆಣೆ. 1 ರೂ.
ಗಂಧದ ಸಾಬೂನ್ 1 ಕ್ಕೆ	ಆಣೆ. 6 ಆಣೆ 7 ಆಣೆ
[illegible]	0 2-6
ಸಾಬೂನ್ ತರಡಿಗೆ 1 ಕ್ಕೆ	5 ಆಣೆ. 7 ಆಣೆ.
ಸರಟ್ ಬಟನ್ ಹರಳಿನದ್ದು ಸಟ್ಟು 1 ಕ್ಕೆ	3 ಆಣೆ.
ಬಾಚಣಿಗೆ ಡಜನ್ 1 ಕ್ಕೆ	0-14-0. 1-4-0. 1-8-0.
ಕ್ಲಾಂಕತ್ತಿ 1 ಕ್ಕೆ	2 4-0. 2-12-0. 3-8-0.
ಅಮೃತಾಂಜನ ಡಬ್ಬಿ 1 ಕ್ಕೆ	9 ಆಣೆ.
ಬಮ್ರ್ಗಾನಿ ಕತ್ತರಿ 1 ಕ್ಕೆ	10 ಆಣೆ.
ಕಾಡ್‌ಬರಿ ಚೊಕಲೇಟ್ ಪಾಕೆಟ್ 1 ಕ್ಕೆ	8 ಆಣೆ.
ವ್ಯಾಸ್‌ಲಿನ್ 1 ಕ್ಕೆ	15 ಆಣೆ. 8 ಆಣೆ.

ಯಾವ ತರದ ಸಾಮಾನು ಬೇಕಾದರೂ ನಮ್ಮಲ್ಲಿ ದೊರೆಯುತ್ತೆ. [illegible]

ವಿಳಾಸ—ಡಿ [illegible],
ನಂ. ೩, ಮಂಗಳೂರು, ದ. ಕ.

ಸಿಗರೇಟು ಬಾಕ್ಸು, ಬೆಲೆ ರೂ. 10 ಮಾತ್ರ.



ಇದೇ ಸುಸಮಯ.

ಚೊಕ್ಕಬೆಳ್ಳಿಯಿಂದ ನಮೂನೆಯಾಗಿ ನಕಾಸು ಮಾಡಿ ತಯಾರಾಗಿರುವ ಹಿಡಿಗಳು ಕೊಡೆಗಳಿಗೂ ಮತ್ತು ಬೆತ್ತಗಳಿಗೂ ಹಾಕಲು ಬಹಳ ಅನುಕೂಲವಾಗಿರುತ್ತವೆ. ಸಿಗರೇಟು ಕೇಸು ಬೆಳ್ಳಿಗಿಂತಲೂ ಪ್ರಕಾಶಮಾನವಾದ ಲೋಹದಿಂದ ಬಹುಕಾಲ ಬಾಳಿಕೆ ಬರುವಂತೆ [illegible] ತಯಾರಾಗಿದ್ದು [illegible] ಬಹಳ ಅಂದವಾಗಿರುತ್ತವೆ. ಬೆಲೆ ಸುಲಭವಾದರೂ ದೀರ್ಘಕಾಲ ಬಾಳಿಕೆ ಬರುವದಾಗಿರುತ್ತವೆ.

ಬೆಳ್ಳಿಯ ಬೆತ್ತದಹಿಡಿ,
ಬೆಲೆ ರೂ. 8, 10, 12 ಮಾತ್ರ.



ಇಂಡಿಯನ್ ಜ್ಯುವೆಲರಿ ಮಾರ್ಟ್,
ನಗರ್ತಪೇಟೆ, ಬೆಂಗಳೂರು ಸಿಟಿ.

ಸೂಚನೆ.

☞ ಹುತ್ತರಿ ಹಬ್ಬವಾದುದರಿಂದ ಬರುವ ವಾರದ ತಾ|| 23-12-1921 ರ "ಕೊಡಗು" ಪತ್ರಿಕೆಯು ಪ್ರಕಟಿಸಲ್ಪಡುವದಿಲ್ಲವೆಂಬುದನ್ನು ವಾಚಕರು ತಿಳಿಯತಕ್ಕದ್ದು.

"ಕೊಡಗು"

೧೯೨೧ ನೇ ಇಸವಿ ಡಿಸಂಬರ್ ತಾ|| ೧೬ ನೇ ಶುಕ್ರವಾರ.

ಸ್ಥಳೀಯ ರಾಜ್ಯಭಾರ ಮತ್ತು ಪರಸ್ಪರಸಹಾಯ.

ಸ್ವರಾಜ್ಯವೆಂಬುದರ ನಿಜವಾದ ಅರ್ಥವೇನು? ನಮ್ಮ ಕುಟುಂಬವು ಒಂದು ಸಣ್ಣ ರಾಜ್ಯದಂತೆ ಇದೆ. ಅದರಲ್ಲಿ ಅನೇಕ ಒಳ್ಳೆಯ ಮತ್ತು ಕೆಟ್ಟ ಜನರು ಇರುತ್ತಾರೆ. ಅಂಥಾ ಕುಟುಂಬದ ಕೆಲಸವನ್ನು ನಿರ್ವಂಚನೆಯಿಂದ ಯಾರಿಗೂ, ಯಾವ ಬಾಬಿನಲ್ಲಿಯೂ ತೊಂದರೆ ಇಲ್ಲದೆ ನಮ್ಮ ಮನೆಕೆಲಸವನ್ನು ಬೇರೆ ಯಾರ ಸಹಾಯವೂ ಇಲ್ಲದೆ, ನಡಿಸುವದೇ ಸ್ವರಾಜ್ಯ. ತನ್ನ ಸಂಸಾರವನ್ನು, ಆಸ್ತಿಪಾಸ್ತಿಗಳನ್ನು, ಆಳುಗಳನ್ನು ಮತ್ತು ವಿಶಿಷ್ಟ ಕುಟುಂಬ ಕಲಹವನ್ನು, ತೊಂದರೆ ಇಲ್ಲದೆ ನಡಿಸುವ ಯಜಮಾನನ ಪದವಿಯು ಚಕ್ರವರ್ತಿ ಪದವಿಗೆ ಏನು ಕಡಿಮೆಯಾಗಿರುವುದಿಲ್ಲ. ಇಂಥಾ ಸ್ವರಾಜ್ಯವು ಮೊದಲು ಕುಟುಂಬದಲ್ಲಿಯೇ ಪ್ರಾರಂಭಿಸಬೇಕು. ಅನೇಕ ಕುಟುಂಬಗಳು ಸೇರಿ ಗ್ರಾಮಗಳೂ ಗ್ರಾಮಗಳು ಸೇರಿ ದೇಶವಾಗುವದರಿಂದ ಗ್ರಾಮನಿವಾಸಿಗಳ ಅನುಕೂಲಗಳನ್ನು, ಸ್ಥಿತಿಗತಿಗಳನ್ನು ತಿಳಿದುಕೊಂಡರೆ ದೇಶದ ನಿಜವಾದ ಸ್ಥಿತಿಯನ್ನು ತಿಳಿದುಕೊಂಡಂತಾಗುವುದು. ಗ್ರಾಮನಿವಾಸಿಗಳ ಸ್ಥಿತಿಯೇ ಆಯಾಯ ರಾಜ್ಯದ ಸ್ಥಿತಿಯನ್ನು ಕನ್ನಡಿಯಂತೆ ತೋರಿಸುವುದು. ಮತ್ತು ಪಟ್ಟಣವಾಸಿಗಳಂತೆ ಗ್ರಾಮವಾಸಿಗಳನ್ನು ವಿದ್ಯೆ, ಐಶ್ವರ್ಯ, ನಾಗರಿಕತನದಲ್ಲಿ ಮುಂದಕ್ಕೆ ತಂದ ಹೊರತು ಸರ್ಕಾರವು ತನ್ನ ಕರ್ತವ್ಯವನ್ನು ಮಾಡಿದಂತಾಗುವುದಿಲ್ಲ. ಸರಕಾರದ ಇರವು (Existence) ರಾಜ್ಯದೊಳಗಿನ ಪ್ರತಿ ಒಬ್ಬ ಮನುಷ್ಯನನ್ನು ಬುದ್ಧಿವಂತನಾಗಿಯೂ, ವಿದ್ಯಾವಂತನಾಗಿಯೂ, ಸುಖಿಯಾಗಿಯೂ, ಧನಿಕನಾಗಿಯೂ ಅವನಿಗೆ ದೇವರು ಕೊಟ್ಟ ಪ್ರತಿ ಒಂದು ಗುಣವನ್ನು ಬೆಳೆಯಿಸುವುದಕ್ಕೋಸ್ಕರವೇ ಇರುವುದೆಂದೂ ಇನ್ನು ಗ್ರಾಮ [illegible] ಸಹಾಯ [illegible] ಕ್ಕೆ ಮೊದಲು ಕಲಿಯಬೇಕು. ಅನೇಕ ವಿದ್ವಾಂಸರು ಹೇಳಿದ ಪ್ರಕಾರ ಅದ್ದರಿಂದ ಮೊದಲು, ನಮ್ಮ ಕುಟುಂಬಗಳು ಅನಂತರ ಗ್ರಾಮಪಂಚಾಯಿತಿಯಲ್ಲಿ ನಾವು ಅನುಭವದ ಮೇಲೆ ದೇಶವು ಉನ್ನತಸ್ಥಿತಿಗೆ ಬರತಕ್ಕದೆಂಬ ಮಾತು ಸಿದ್ಧಾಂತವಾಗಿದೆ.

ನಮ್ಮ ದೇಶದ ಪೂರ್ವಪದ್ಧತಿಗಳು ಅತ್ಯಂತ ವಿಶೇಷವಾದವುಗಳಾಗಿವೆ. ಸ್ವರಾಜ್ಯವೆಂಬುದು ಪ್ರತಿ ಕುಟುಂಬದಲ್ಲಿಯೂ, ಗ್ರಾಮಗಳಲ್ಲಿಯೂ, ನಾಡುಗಳಲ್ಲಿಯೂ ಕಾಣಬರುತ್ತಿತ್ತು. ಪ್ರತಿ ಕುಟುಂಬಕ್ಕೆ ಒಬ್ಬ ಯಜಮಾನನೂ ಅವನ ಅಧೀನದಲ್ಲಿ ಆ ಕುಟುಂಬದವರೆಲ್ಲರೂ ಇರುತ್ತಿದ್ದರು. ಯಜಮಾನನು ಎಲ್ಲಾ ಜಮಾ ಖರ್ಚಿನ ಲೆಕ್ಕಗಳನ್ನು ಇಟ್ಟುಕೊಂಡು ಕುಟುಂಬವನ್ನು ಪಕ್ಷಪಾತವಿಲ್ಲದೆ ನಡಿಸುತ್ತಿದ್ದನು. ಯಜಮಾನ ಪದವಿಗೆ ಅಯೋಗ್ಯನಾಗಿದ್ದರೆ ಅವನನ್ನು ತೆಗೆದುಹಾಕಿ, ಬೇರೊಬ್ಬ ಯಜಮಾನನನ್ನು ಮಾಡುತ್ತಿದ್ದರು. ಇದೇ ರೀತಿ ಪ್ರತಿ ಗ್ರಾಮದಲ್ಲಿಯೂ ಊರಂಬಲಗಳೂ, ದೇವಸ್ಥಾನಗಳೂ ಇದ್ದುವು. (ಈಗಲೂ ಇವೆ) ಪ್ರತಿಗ್ರಾಮಕ್ಕೂ, ಒಬ್ಬ ಊರು ತಕ್ಕ (Speaker) ತಕ್ಕಮುಖ್ಯಸ್ಥರು (Panchayats) ಮುಕ್ಕಾಟಿ (Treasurer) ಚಂಗೋಳಿಸೂ (Secretary) ಇದೆ. ಗ್ರಾಮಗಳಿಗೆ ಸಂಬಂಧಪಡುವ ವಿಷಯಗಳೆಲ್ಲಾ ಮೇಲೆ ಹೇಳಿದ ಊರು ತಕ್ಕತಪ್ಪಂದಾರ, ಮುಕ್ಕಾಟಿ, ಚಂಗೋಲ, ಇವರುಗಳಿಂದಲೇ ತೀರ್ಮಾನಿಸಲ್ಪಡುತ್ತಿದ್ದವು. ಆಚಾರವ್ಯವಹಾರಗಳಲ್ಲಿ ತಕ್ಕಮಟ್ಟಿಗೆ ಗ್ರಾಮಾಂತರಗಳಲ್ಲಿ ಈ ಪದ್ಧತಿಯು ಈಗಲೂ ಇದೆ. ಅಲ್ಲದೆ ದೇಶಕ್ಕೆ ಸಂಬಂಧಿಸುವ ವಿಚಾರಗಳೆಲ್ಲಾ ದೇಶತಕ್ಕರ ಮಹಾಸಭೆಯಿಂದ ವಿಲೆವಾರಿ ಮಾಡಲ್ಪಡುತ್ತಿದ್ದವು. ಅಲ್ಲದೆ ಆಕಸ್ಮಿಕವಾಗಿ ಬರುವ ಕಷ್ಟದಲ್ಲಿ ಸಹಾಯಮಾಡಲಿಕ್ಕೆ (ಆಯಿವರು) ಅರುವವರು ಸಹ ಇದ್ದಾರೆ. ಇಂಥಾ ಪದ್ಧತಿಯ ಮುಖಾಂತರ ನಡಿಸುತ್ತಿದ್ದ ಕೆಲಸಗಳು ಈಗ ನಡೆಯುತ್ತಿರುವ ಬ್ರಿಟಿಷ್ ಪಾರ್ಲಿಮೆಂಟಿಗಾಗಲೀ, ಅಮೇರಿಕಾ ಮತ್ತು ಫ್ರಾನ್ಸ್ ದೇಶದ (Republic) ಪ್ರಜಾಪ್ರತಿನಿಧಿ ಸಭೆಗಳಿಗಾಗಲೀ ಕಡಿಮೆಯಾಗಿರಲಿಲ್ಲ. ಕೊಡಗಿನವರ ಯಾವದೊಂದೂ ಪದ್ಧತಿಯೂ ಸ್ವತಂತ್ರದಿಂದೊಡಗೂಡಿದವುಗಳಾಗಿವೆ. ಹೀಗೆಯೇ ಪ್ರತಿನಾಡಿನ ದೇಶದ ರಾಜ್ಯಭಾರವು ನಾಡುತಕ್ಕ ದೇಶತಕ್ಕರಿಂದ ನಡಿಸಲ್ಪಡುತ್ತಿದ್ದುವು. ಇದಲ್ಲವೇ ನ್ಯಾಯವಾದ ಸ್ವರಾಜ್ಯ! ಈಗಿನ ನವೀನ ನಾಗರೀಕತೆಯಲ್ಲಿ ಇಂಥಾ ಸ್ವರಾಜ್ಯದ ಮತ್ತು ಸ್ವತಂತ್ರದ ಮಹಿಮೆಯನ್ನು ಕಳಕೊಳ್ಳುತ್ತಾ ಬಂದುದಲ್ಲದೆ, ಸ್ವಶಕ್ತಿಯನ್ನು, ಸ್ವಬುದ್ಧಿಯನ್ನು ಕಳಕೊಂಡು ಯಾವಾಗಲೂ ಕೋರ್ಟು ಕಚೇರಿಗಳಲ್ಲಿ ಅಲೆದಾಡುತ್ತಾ ಪ್ರಾಮಾಣಿಕತೆ, ಸತ್ಯ, ನೀತಿ ಮೊದಲಾದ ಸದ್ಗುಣಗಳನ್ನು ಕಳಕೊಂಡವರಾಗಿದೆ.

ಈಗಲೂ ಸಹ ಯಾರಾದರೂ ಒಬ್ಬನನ್ನು ನೀನು ಮಾಡಿದ ತಪ್ಪಿಗಾಗಿ ಪ್ರಮಾಣಮಾಡಬೇಕು ಎಂಬದಾಗಿ ಹೇಳಿದರೆ, ಆ ಪ್ರಮಾಣವೆಂಬ ಹೆದರಿಕೆಯಿಂದ ಆ ದೇವಭಕ್ತಿಯಿಂದೊಡಗೂಡಿದ ಭಯದಿಂದ ತನ್ನ ತಪ್ಪಿತವನ್ನು ಬೇಗನೇ ಒಪ್ಪಿಕೊಳ್ಳುತ್ತಾನೆ. ಹೀಗೆಯೇ ಪ್ರತಿ ಒಂದು ಕೆಲಸವೂ ಪೂರ್ವದಲ್ಲಿ ಪಂಚಾಯಿತರಿಂದ ದೇವರನ್ನು ಮುಂದಿಟ್ಟುಕೊಂಡು ಊರಂಬಲದಲ್ಲಿಯೂ, ದೇವಸ್ಥಾನದಲ್ಲಿಯೂ ಮಾಡುತ್ತಿದ್ದುದರಿಂದ ಸುಳ್ಳು ಮೋಸವೆಂಬುದು ಗೊತ್ತೇ ಇರಲಿಲ್ಲ. ನಮ್ಮ ಇಷ್ಟು ಒಳ್ಳೆಯ ಪದ್ಧತಿಗಳನ್ನು ಅಮೇರಿಕಾ, ಫ್ರಾನ್ಸ್ ದೇಶದವರೇ ಅನುಸರಿಸಿರುವಲ್ಲಿ ನಾವು ಅದನ್ನು ಬಿಟ್ಟದ್ದರಿಂದ ನಮ್ಮನ್ನು ನಾವೇ ಕೊಲೆಪಾತಕಮಾಡಿಕೊಂಡಂತಾಗಿದೆ.

ಪರಸ್ಪರ ಸಹಾಯದಲ್ಲಿ, ನಮ್ಮವರಲ್ಲಿ ಈಗಲೂ ನಡೆಯುತ್ತ ಬರುವ ಪದ್ಧತಿಯನ್ನು ಎಷ್ಟು ವರ್ಣಿಸಿದರೂ ಸ್ವಲ್ಪವೇ. ಕೆಲವು ವರ್ಷಗಳು ಅಂದರೆ 60 ವರ್ಷಗಳ ಹಿಂದೆ ಕಟ್ಟಿಸಿದ ಎಲ್ಲಾ ಮನೆಗಳೂ, ಪರಸ್ಪರ ಸಹಾಯದಿಂದ ಕಟ್ಟಿಸಿದ್ದೇ ಆಗಿರುತ್ತೆ. ಮದುವೆ, ಸಾವು, ತಿಥಿ ನಾಟಿ ವಗೈರೆ ಕೆಲಸಗಳಲ್ಲಿ ಮಾಡಲ್ಪಡುವ ಸಹಾಯಗಳು ಸ್ತೋತ್ರಾರ್ಹವಾಗಿವೆ. ಯಾವಾಗಲೂ ಮೋಸವೆಂಬುದು ಗೊತ್ತೇ ಇರಲಿಲ್ಲ. ಇದಲ್ಲವೇ ನಿಜವಾದ ಪರಸ್ಪರ ಸಹಾಯದ ಸಂಘ.

ಜನರ ಗುಣ, ನಡತೆ, ಬುದ್ಧಿ ಶಕ್ತಿಯನ್ನು ಹೆಚ್ಚಿಸಿ ಜನರನ್ನು ಮೊದಲಿಗಿಂತಲೂ ಉತ್ತಮರನ್ನಾಗಿಯೂ, ಧನಿಕರನ್ನಾಗಿಯೂ ಮಾಡುವುದು. ವಿಶ್ವಾಸದಿಂದ ಪ್ರತಿಯೊಬ್ಬನ ಯೋಚನೆ ಇತರರಿಗೆ ಇರುವಂತೆ ಐಕ್ಯಮತ್ಯವನ್ನು ಹುಟ್ಟಿಸುವುದೇ ಪರಸ್ಪರ ಸಹಾಯದ ಮುಖ್ಯಸೂತ್ರಗಳು. ಈ ಸೂತ್ರಗಳನ್ನು ಒಂದೊಂದಾಗಿ ತೆಗೆದುಕೊಂಡರೆ ಇವುಗಳೆಲ್ಲವೂ ನಮ್ಮ ಪೂರ್ವೀಕರ ಆಚರಣೆಯಲ್ಲಿದ್ದುವೇ. ಆಗಿ ಅಂಥಾ ಪದ್ಧತಿಗಳನ್ನು ಬಿಟ್ಟುಬಿಡುತ್ತಾ ಬಂದು, ಮತ್ತು ನವದೇಶದಲ್ಲಿ ಸ್ಥಾಪಿತವಾಗಿರುವ ಕೋ-ಆಪರೇಟಿವ್ ಎಂಬ ಸಹಕಾರಿ ಸಂಘಗಳ ಮೂಲಕ ಪರಸ್ಪರ ಸಹಾಯವೆಂಬ ನಮ್ಮ ಪುರಾತನ ಪದ್ಧತಿಯನ್ನೇ ಕಲಿಯಲು ಪ್ರಾರಂಭಿಸಿದ್ದೇವೆ.

ಇನ್ನು ಮುಂದಕ್ಕಾದರೂ ನಾವು ನಮ್ಮ ಪೇಟೆ ನಂಬಿಗೆ [illegible] ತನ್ನ ನಡತೆ ಎಣಿಸುವ ಪವಿತ್ರ ಬುದ್ಧಿಯನ್ನು ಕಲಿತು ನಮ್ಮ ಆಯುಸ್ಸಾಲದಲ್ಲಿ ಸಿಕ್ಕುವ ವಿರಾಮವನ್ನು ನಮ್ಮ ಜನರ ಸುಧಾರಣೆಯಲ್ಲಿ ಉಪಯೋಗಿಸಿ ನಾವು ಕಲಿತುಕೊಂಡಿರುವ ಸ್ವರಾಜ್ಯ, ಸ್ವತಂತ್ರ, ಪರಸ್ಪರ ಸಹಾಯ [illegible] ಸ್ಥಿರಪಡಿಸಲು ಪ್ರಯತ್ನಿಸಬೇಕಾಗಿದೆ. ದೇವರು ಮನುಷ್ಯನಿಂದ ಪ್ರಸನ್ನನಾಗುವನು. ಯಾವ ಸೇವೆಯಿಂದಲೂ ಸಂತುಷ್ಟನಾಗುವದಿಲ್ಲವೆಂಬದನ್ನು ನಾವು ಗ್ರಹಿಸತಕ್ಕದ್ದು ಪ್ರತಿಯೊಬ್ಬ ದೇಶೀಯನ ಕರ್ತವ್ಯವೆಂದು ಕಂಠೋಕ್ತವಾಗಿ ಹೇಳಬೇಕಾಗಿದೆ.

ಆದ್ದರಿಂದ ವಾಚಕಮಹಾಶಯರೇ ಶ್ಲಾಘನೀಯವಾದ ಪುರಾತನ ನಾಗರೀಕತೆಯ ರಾಜ್ಯಭಾರದ ಮತ್ತು ಪರಸ್ಪರ ಸಹಾಯದ ಮಾರ್ಗಗಳನ್ನು ಜೀರ್ಣೋದ್ಧರಿಸುವದರಲ್ಲಿ ಆಸಕ್ತಿಯನ್ನು ತೋರಿಸಿದ್ದೇ ಆದರೆ ಸ್ವರಾಜ್ಯಪದವಿಯು ಶೀಘ್ರದಲ್ಲಿಯೇ ಕೈಸೇರುವುದು.

ಕೊಡಗಿನ ಪೋಲೀಸು ಇಲಾಖೆಯ ಅಸಿಸ್ಟೆಂಟ್ ಸುಪರಿಂಟೆಂಡೆಂಟ್.

ಈಗ ಈ ಪದವಿಯಲ್ಲಿರುವ ಪೋಲೀಸು ಸುಪರಿಂಟೆಂಡೆಂಟ್ ಮೆ|| ಮಿಲ್ಲರವರು ಆರು ತಿಂಗಳ ಕಾಯಿಲೆಯ ರಜದಲ್ಲಿ ಹೋಗುವದಾಗಿ ವರ್ತಮಾನವಿದೆ. ಬ್ರಿಟಿಷ್ ರಾಜ್ಯದ ಪದ್ಧತಿಯು ಮತ್ತು ನೀತಿಯು ದೇಶೀಯರನ್ನು ತಮ್ಮ ಕರ್ತವ್ಯವನ್ನು ತಾವೇ ಮಾಡಿಕೊಳ್ಳುವುದಕ್ಕೆ ತಯಾರುಮಾಡುವುದೇ ಆಗಿರುತ್ತೆ. ಇದಕ್ಕನುಸಾರವಾಗಿ ಡಿಸ್ಟ್ರಿಕ್ಟು ಮೆಜಿಸ್ಟ್ರೇಟ್ ಪದವಿಯನ್ನು ದೇಶೀಯರಿಗೆ ಕೊಟ್ಟದ್ದು ಜನರಿಗೆ ಬಹಳ ತೃಪ್ತಿಯನ್ನುಂಟುಮಾಡಿದೆ. ಇಷ್ಟು ಜವಾಬುದಾರಿಯುಳ್ಳ ಹುದ್ದೆಯನ್ನೇ ದೇಶೀಯರಿಗೆ ದಯಪಾಲಿಸಿರುವಾಗ ಈಗ ಖಾಲಿ ಇರುವ ಅಸಿಸ್ಟೆಂಟ್ ಸುಪರಿಂಟೆಂಡೆಂಟ್ ಆಫ್ ಪೋಲೀಸು ಪದವಿಗೆ ಲಾಯಕ್ಕಾದ ಮತ್ತು ಕಾರ್ಯನಿರ್ವಾಹಕ್ರಮದಲ್ಲಿ ತರಬೇತಾಗಿರುವ ದೇಶೀಯರೇ ಇರುವಾಗ ಈ ಪದವಿಯನ್ನು ದೇಶೀಯರಿಗೆ ಕೊಡುವಲ್ಲಿ ನಮ್ಮ ಸರಕಾರವು ಹಿಂಜರಿಯಲಿಕ್ಕಿಲ್ಲವಾಗಿ ಭಾವಿಸುತ್ತೇವೆ ಮತ್ತು ಈ ಪದವಿಯನ್ನು ದೇಶೀಯರಿಗೆ ಕೊಟ್ಟಲ್ಲಿ, ದೇಶೀಯರ ಕಾರ್ಯನಿರ್ವಾಹಕತ್ವವನ್ನು ಪರೀಕ್ಷಿಸಲು ಅನುಕೂಲವಾಗುವುದಲ್ಲದೆ ಅವರನ್ನು ಜವಾಬುದಾರಿಯುಳ್ಳ ಹುದ್ದೆಗೆ ತರಬೇತು ಮಾಡಲು ಅವಕಾಶಕೊಟ್ಟಂತಾಗುವುದಕ್ಕೆ ಸಂದೇಹವಿಲ್ಲ.

ಪಂಚಮರ ಮೀಟಿಂಗ್

(ಒಬ್ಬ ಬಾತ್ಮೀದಾರರಿಂದ)

ಪಂಚಮರ ಪ್ರಮುಖರಾದವರು ಮ|| ರಾ|| ಕೃಷ್ಣ ತಮ್ಮಯ್ಯನವರನ್ನು ತಾವು ಅಧ್ಯಕ್ಷರ ಪದವಿ ಅಂಗೀಕರಿಸಬೇಕಾಗಿ ವಿಜ್ಞಾಪನ ಪತ್ರವನ್ನು ಕೊಟ್ಟು ಒಪ್ಪಿಕೊಂಡು ಅವರ ಅಧ್ಯಕ್ಷತೆಯಲ್ಲಿ 27-11-21 ರಲ್ಲಿ ನ್ಯಾಷನಲ್ ಎ. ವಿ. ಸ್ಕೂಲಿನಲ್ಲಿ ನಡೆದ ಪಂಚಮರ ಕಾನ್ಫರೆನ್ಸ್ ಪ್ರೊಸಿಡಿಂಗ್ಸ್.

ಈ ಮೊದಲು ಬಿಳುಗುಂದ ಗ್ರಾಮದಲ್ಲಿ 4 ಮೀಟಿಂಗ್ ಮಾಡಿಕೊಂಡು 1 ನೇ ವೀರರಾಜೇಂದ್ರಪೇಟೆ 2 ನೇ [illegible] ಜರ್‌ಪೇಟೆ 3 ನೇ ಬಿಳುಗುಂದ 4 ನೇ ಮೂರ್ನಾಡು ನಡೆದ ಮೀಟಿಂಗಿನಲ್ಲಿ ಜಮೆಯಾದ ಪಂಚಮರ ಪೈಕಿ [illegible] ಗ್ರಾಮದ ಮುಖ್ಯ ಮೆಂಬರುಗಳು ಹಾಜರಾಗಿದ್ದರು. [illegible] ಸಂಖ್ಯೆ 273.

ಸಭಾ ಅಧ್ಯಕ್ಷರನ್ನು ಓಲಗ ತಾಳೆ ಮುಂತಾದ ವಾದ್ಯಗಳಿಂದ ಅತ್ಯಂತ ಘನವಾದ ಮರ್ಯಾದೆ ಪೂರ್ವಕ [illegible] ಸ್ಕೂಲಿಗೆ ಕರದುಕೊಂಡು ಬಂದು ಪೂರ್ವಾಹ್ನ 12 ಗಂಟೆಗೆ ಮೀಟಿಂಗಿಗೆ ಪ್ರಾರಂಭವಾಯ್ತು. 1 ನೆ ಬಿಳುಗುಂದ ಪಂಚಾಯಿತ್ ಸ್ಕೂಲ್ ಬಾಲಕ ಬಾಲಕಿಯರಿಂದ ಸಭಾಧ್ಯಕ್ಷರವರಿಗೆ ಮಂಗಳ ಹಾಡಿದ್ದಾಯ್ತು.

ಅಧ್ಯಕ್ಷರು ಪಂಚಮರು ಯಾರು ಎಂಬ ವಿಷಯವನ್ನು ಪುರಾಣ ಆಧಾರಗಳ ಮೂಲಕ ಬಹು ಸಾರಸ್ಯವಾದ ಭಾಷಣವನ್ನು ಮಾಡಿ ಜನರ ಮನಸ್ಸನ್ನು ಸಂತೋಷಪಡಿಸಿ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು. ತದನಂತರ ಮೇಲೆ ವಿವರಿಸಿದ ನಾಲ್ಕು ಸ್ಥಳಗಳಲ್ಲಿ ನಡೆದ ಪ್ರೊಸೀಡಿಂಗ್ಸನ್ನು ಬಿಳುಗುಂದ ಪಂಚಮ ಸ್ಕೂಲ್ ಟಿ. ಎಸ್. ಮರಿಯಮಾಸ್ಟರವರು ಓದಲಾಯ್ತು. ಮೇಲ್ಕಂಡ ನಾಲ್ಕು ಮೀಟಿಂಗಿನಲ್ಲಿ ಮುಖ್ಯವಾದ ರಾವುಗಳು ಯಾವವೆಂದರೆ 1 ನೆ ಮದ್ಯಪಾನ ಸೇವೆಯನ್ನು ನಿಷೇಧಿಸುವದು 2 ನೆ ಸತ್ತ ಪ್ರಾಣಿಗಳ ಮಾಂಸಾಹಾರವನ್ನು ತ್ಯಜಿಸುವದು 3 ನೆ ಸದ್ಯಕ್ಕೆ ವಾಗಕ್ಕೊಂಡಾವತಿ ಯಾವರು ಮೈಯನ್ನು ಬಟ್ಟೆಯನ್ನು ಶುದ್ಧಪಡಿಸಿಕೊಳ್ಳುವದು ಎಂಬುದು ಮುಖ್ಯವಾದದ್ದು. ಇದು ಸರ್ವ ಸಮ್ಮತಿಯಿಂದ ಮಂಜೂರಾತಿ ಮಾಡಿದರು.

ಬಿಳುಗುಂದ ಪಂಚಮಸ್ಕೂಲ್ ಟಿ. ಎಸ್. ಮರಿಯಮಾಸ್ಟರರು ಮೂರ್ನಾಡು ಪಂಚಮಸ್ಕೂಲ್ ವಿ ಗಿರಿಮಾಸ್ಟರವರು ವೀರರಾಜೇಂದ್ರಪೇಟೆ ಪಂಚಮಸ್ಕೂಲ್ ಬೆಟ್ಟಮಾಸ್ಟರವರು ಬಹುರಸವತ್ತರಿಂದ ಭಾಷಣಮಾಡಿದ ನಂತರ ಜನರಲ್ಲಿ ಅನೇಕರು ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದರಲ್ಲಿ ಇದ್ದ ದೋಷಗಳಿಗೂ ಚರ್ಚೆ ಬಾರದ ವಿಷಯಗಳಿಗೂ ಬಹು ವಿವರವಾಗಿ ರಸಭರಿತವಾದ ಮೃದುವಚನದಿಂದ ಸಭಾ ಅಧ್ಯಕ್ಷರು ಸಮಾಧಾನಪಡಿಸುತ್ತ ಜನರಿಗೆ ಸಂತೋಷಪಡಿಸಿ ಈ ಕೆಳಗಿನ ರಾವುಗಳು ಮಂಜೂರ್‌ಮಾಡಲಾಯ್ತು—

1 ನೆ ಎಲ್ಲರು ತಮ್ಮ ತಮ್ಮ ಬಾಲಕ ಬಾಲಕಿಯರನ್ನು ಶಾಲೆಗೆ ಕಳುಹಿಸುವಂತೆಯೂ 2 ನೆ ಪಂಚಮರ ಕುಲಾಚಾರವಾಗಿ ಆದಿಯಿಂದ ನಡೆದುಬಂದಂತೆ ಸತ್ತ ದನವನ್ನು ತಿನ್ನದಿದ್ದರು ತೆಗೆದು ದಫನ್ ಗೊಳಿಸುವದು. 1ನೆ ಸತ್ತದನವಿನ ಮಾಂಸಹಾರ ಮಾತ್ರ ಬಿಟ್ಟು ಮಾಡುವದಲ್ಲದೆ ಕೊಂದ ಮಾಂಸಹಾರ ಮಾಡಬಹುದೆಂತಲೂ 5 ನೆ ಕೊಡಗಿಗೆ ಕೊಡುವ ಕಾಣಿಕೆಯಲ್ಲಿ 2 ಮೆಂಬರಿಗೆ ಕಮ್ಮಿಯಿಲ್ಲದೆ ಪಂಚಮರಿಗೆ ಕೊಡಬೇಕೆಂತ ಘನ ಸರಕಾರದ ಅವಗಾಹನೆಗೆ ತರುವದು. 6 ನೆ ಹೆಚ್ಚಿನ ವಿಶೇಷಗಳೇನಾದರು ನಮಗೆ ಅವಶ್ಯ ಬಿದ್ದರೆ ಬಿಮಿನ್ ವಾರರ ಸಂಘದವರ ಮೂಲಕ ಅರಿಕೆಮಾಡಿಕೊಳ್ಳುವಂತೆಯು 7 ನೆ ಮಡಿಕೇರಿ ಕಿಗ್ಗಟ್ಟುನಾಡು ಶಾಂತಿನಾಲ್ಕುನಾಡು ಮುಂತಾದ ಪಂಚಮರು ಇರುವ ಸ್ಥಳಗಳಲ್ಲಿ ಒಂದೊಂದು ಮೀಟಿಂಗ್ ನಡಸಿ 1922 ನೆ ಮಾರ್ಚಿ ಆಖೈರ್‌ವೊಳಗೆ ಮಡಿಕೇರಿಯಲ್ಲಿ ದೇಶಪಂಚಮರೆಲ್ಲರೂ ಸೇರಿ ಜನರಲ್ ಮೀಟಿಂಗ್ ನಡಿಸಿ ಮೇಲ್ಕಂಡ ವಿಷಯಗಳನ್ನು ಅರಿಕೆಮಾಡಿಕೊಳ್ಳುವದು.

ಇದಕ್ಕಾಗಿ ಕಮಿಟಿ ಏರ್ಪಾಡ್ ಮಾಡಲ್ಪಟ್ಟಿತು.

ಘನಹೊಂದಿದ ನಮ್ಮನ್ನು ಆಳುವ ಜಾರ್ಜು ದೊರೆಗಳವರಿಗೆ ಮಂಗಳವನ್ನು ಹಾಡಿ. ಈ ಸಭೆಗೆ ದಯಮಾಡಿಸಿದ ಮಹಾಸುಭಗರಾದ ಉತ್ತಮರಿಗೆ ತಾಂಬೂಲಾದಿಗಳು ಹಂಚಲ್ಪಟ್ಟು ಸಭಾಅಧ್ಯಕ್ಷರಿಗೆ ಬಿಳುಗುಂದ ಪಂಚಮಬಾಯಿಸ್ ಸ್ಕೂಲ್ ಬಾಲಕ ಬಾಲಕಿಯರು ಸದ್ರಿ ಗ್ರಾಮದ ಸ್ಟೇಟ್ ಶಾಲೆ ವಿದ್ಯಾರ್ಥಿಗಳು ಮತ್ತು ಮಾಸ್ಟರ್ ಸಾಹ ಹಾರ್ಮೋನಿಯ ಮೊದಲುಗೊಂಡು ವಂದನೆಯಿಂದ ಮಂಗಳ ಸಂಗೀತ ಕೀರ್ತನೆ ರಾಮಭಜನೆಯಿಂದ ಸಾಯಂಕಾಲ 4|| ಗಂಟೆಗೆ ಸಭೆಯು ವಿಸರ್ಜನೆಲಾಯ್ತು—ಬಿಳುಗುಂದ ಪಂಚಮರ ಸಭೆಗೆ ಕಾಫಿ ಫಲಹಾರಗಳು ಕೊಡಲಾಯ್ತು. ತಾ|| 11-12-21 ರಲ್ಲಿ ವೀರರಾಜೇಂದ್ರ ಪ್ಯಾಟೆಯಲ್ಲಿ ಒಂದು ಮೀಟಿಂಗ್ ನಡಿಯುವದು ಈ ಮೀಟಿಂಗಿಗೆ ಚಲವಾದಿ ಈರನು ನಂದ ಸಭಿಕರಿಗೆ ಊಟ ಕೊಡುವದಾಗಿ ಒಪ್ಪಂದ ಕೊಟ್ಟಿದ್ದನ್ನು ಸರ್ವರು ಅನುಮೋದಿಸಿದರು.

ಕೊಡಗು ಕಮಿಷನರ್ ಸಾಹೇಬರಿಗೂ, ಮೆ|| ಪಿದ್ದಂಡ ಸುಬ್ಬಯ್ಯನವರು ಮತ್ತು ಪಿದ್ದಂಡ ಕಾರ್ಯಪ್ಪನವರಿಗೂ ಸಾಪೋಕ್ಲಿನಲ್ಲಿ ತಾರೀಖು 27-10-1921 ರಲ್ಲಿ ನಡೆದ ಸಂಭಾಷಣೆ.—

ಕಮಿಷನರ್ ಸಾಹೇಬರು—ನಾನು ಕಾಗದ ಬರೆದ ಮೇರೆ ನೀವು ಬಂದದ್ದಕ್ಕೆ ಸಂತೋಷಪಡುತ್ತೇನೆ.

ಮೆ|| ಸುಬ್ಬಯ್ಯ, ಕಾರ್ಯಪ್ಪನವರು-ನಿಮ್ಮ (ಸಹೋದರರು)

ಸಂಗಡ ಮಾತಾಡಲಿಕ್ಕೆ ನಮಗೆ ಅನುಕೂಲ ಕೊಟ್ಟದ್ದಕ್ಕೆ ನಾವು ಸಹ ಸಂತೋಷಪಡುತ್ತೇವೆ.

ಕ:—ಜಮಾಬಂದಿಗೆ ಯಾರೂ ಹೋಗಬಾರದೆಂತಲೂ, ಸರಕಾರಿ ಉದ್ಯೋಗಸ್ತರ ಸಂಗಡ ಅಸಹಕಾರಮಾಡಿ ಜಮಾಬಂದಿಗೆ ಅಡಚಣೆಮಾಡುವಂತೆಯೂ ನೀವು ಗ್ರಾಮಗಳಲ್ಲಿ ಬೋಧನೆಮಾಡುತ್ತೀರಾಗಿ ತಿಳಿಯುತ್ತೇನೆ.

ಸಹೋದರರು:—ತಮ್ಮ ಮಾತು ಕೇಳಿ ಬಹಳ ವ್ಯಸನಪಡುತ್ತೇವೆ. ನಮ್ಮ ವಿಷಯ ನಿಮಗೆ ಯಾರೋ ಸುಳ್ಳು ಹೇಳಿರಬೇಕು. ನಾವು ಅಸಹಕಾರಿಗಳಾಗಿದ್ದರೆ ಕೌನ್ಸಿಲ್ ಸಿಕ್ಕಬೇಕೆಂತ ನಾವು ಚಳವಳಿ ನಡೆಸುತ್ತಿರಲಿಲ್ಲ. ನಿಮ್ಮ ಕಾಗದದ ಮೇರೆ ನಾವು ಇಲ್ಲಿಗೆ ಬರುತ್ತಿರಲಿಲ್ಲ. ನಾವು ಬೋಧನೆಮಾಡುವದೇನೆಂದರೆ-ಜಮಾಬಂದಿಗೆ ರೈತರು ಹೋಗಲೇಬೇಕೆಂತ ಜುಲುಂ ಇಲ್ಲ. ತಮ್ಮ ಅರ್ಜಿಗಳಿದ್ದರೆ ಮಾತ್ರ ಹೋಗಿ ಕೊಟ್ಟು ಬರಬಹುದು. ಸರಕಾರದವರು ಕಲಸಕ್ಕೆ ಕರೆದಾಗ ಇಷ್ಟವಿದ್ದರೆ ತಕ್ಕ ಸಂಬಳ ತೆಗೆದುಕೊಂಡು ಕೆಲಸಮಾಡಬಹುದು. ಉದ್ಯೋಗಸ್ಥರು ಸಾಮಗ್ರಿಗಳನ್ನು ಕೇಳಿದಾಗ ಕ್ರಯ ಸಿಕ್ಕಿದರೆ ಕೂಡ ಇದ್ದರೆ ಕೊಡಬಹುದು. ಎಂಬದಾಗಿ ಸಹ ಬೋಧನೆ ಮಾಡುತ್ತೇವೆ.

ಕ:—ಜಮ್ಮದ ರೈತರು ಕೆಲಸವನ್ನು ತಕ್ಕೊಳ್ಳಲಿಕ್ಕೆ ಸರಕಾರಕ್ಕೆ ಹಕ್ಕಿದೆಯೆಂಬುದು ನಿಮಗೆ ಗೊತ್ತಿಲ್ಲವೋ?

ಸ:—ನಾವು ಅದಕ್ಕೆ ಒಪ್ಪುವದಿಲ್ಲ. ನಾವು ಸಾಧಕದ ಜಮ್ಮ ಸನ್ನದ್‌ಗಳನ್ನು ನೋಡಿದ್ದೇವೆ. ಯಾವದರಲ್ಲೂ ಇನ್ನು ಮುಂದೆ ಕಲಸಮಾಡುವದಕ್ಕಾಗಿ ... ಕೊಟ್ಟದ್ದೆಂತ ಬರೆದಿಲ್ಲ. ನೀವು ಇಂಗ್ಲಿಷ್ ಜನಾಂಗದವರಾಗಿದ್ದೀರಿ. ನಿಮ್ಮ ಸ್ವತಂತ್ರಪ್ರೀತಿಯಗುಣವನ್ನು ಕುರಿತು ಕೇಳುತ್ತೇವೆ. ಕಮಿಷನರೆಂಬುದನ್ನು ಒಂದು ನಿಮಿಷಮಾತ್ರ ಮರೆತು ಜಮ್ಮದ ರೈತನೇ ನೀವೆಂತ ಭಾವಿಸಿ, ಆ ಸ್ಥಿತಿಯನ್ನು ಒಂದು ಗಳಿಗೆಯಾದರೂ ಸಹಿಸೀರೋ?

ಕ:—ಸಂಬಳ ತೆಗೆದುಕೊಂಡು ಕಲಸಮಾಡುವದು ಅವಮರ್ಯಾದೆಯೆಂತ ನಾನು ಎಣಿಸುವದಿಲ್ಲ.

ಸ.—ಸಂಬಳಕ್ಕಾದರೂ ಮನಃಪೂರ್ತಿ ಒಪ್ಪಿಗೆಯಿಂದ ಕೆಲಸಮಾಡಿದರೆ ಆಕ್ಷೇಪವೇನೂ ಇಲ್ಲ. ಸ್ವತಂತ್ರಪ್ರಿಯ ಇಂಗ್ಲಿಷ್ ಜನರಾದ ನೀವು ಜುಲುಮಿನಿಂದ ಕೆಲಸಮಾಡಲಿಕ್ಕೆ ಒಪ್ಪಲಿಕ್ಕಿಲ್ಲ. ನಮ್ಮಿಬ್ಬರ ಸ್ವಂತ ಅಭಿಪ್ರಾಯವನ್ನು ಹೇಳುವದಾದರೆ ಇಂಥಾ ಅವಮರ್ಯಾದೆಗೆ ಒಳಪಡುವ ಜಮ್ಮ ನಮಗೆ ಬೇಡವೆಂತಲೇ ಹೇಳುತ್ತೇವೆ.

ಕ:—ಆದರೆ ನೀವು ಇಬ್ಬರು ಸಹೋದರರಿಂದ ದೇಶವನ್ನು ತಲೆಕೆಳಗೆ ಮಾಡಲಿಕ್ಕೆ ಸಾಧ್ಯವಾಗಲಿಕ್ಕಿಲ್ಲ.

ಸ:—ನಮ್ಮಿಬ್ಬರಿಂದ ದೇಶವನ್ನು ತಲೆಕೆಳಗೆ ಮಾಡಲಿಕ್ಕೆ ಸಾಧ್ಯವಾಗಲಿಕ್ಕಿಲ್ಲ. ನಮ್ಮ ಜನರಿಗೆ ನಿಮ್ಮ ಚರಿತ್ರೆಯನ್ನು ನೀವೇ ಕಲಿಸಿರುತ್ತೀರಿ. ಸ್ವತಂತ್ರಕ್ಕಾಗಿ ನೀವು ಹೇಗೆ ಹೋರಾಡಿದಿರಿ ಎಂಬುದನ್ನು ಸ್ಕೂಲ್‌ಗಳಲ್ಲಿ ಕಲಿತಿರುತ್ತಾರೆ. ನಿಮ್ಮಂತೆಯೇ ಸ್ವತಂತ್ರಪ್ರೀತಿಯು ಹುಟ್ಟಲಿಕ್ಕೆ ಬೇಕಾದಷ್ಟು ಕಾಲ ವಿದ್ಯೆ ಕೊಟ್ಟಿದ್ದೀರಿ. ಈಚೆಗೆ ನಡೆದ ಪಬ್ಲಿಕ್ ಮೀಟಿಂಗ್‌ಗಳಲ್ಲಿ ತಮ್ಮ ಆಲೋಚನೆಯ ಸ್ವತಂತ್ರಕ್ಕಾಗಿ ಎಷ್ಟರ ಮಟ್ಟಿಗೆ ಹಟಮಾಡಿದರೆಂತ ನಿಮಗೆ ತಿಳಿದಿರಬಹುದು. ಈ ಅವಮರ್ಯಾದೆಯ ಸ್ಥಿತಿಯನ್ನು ತಪ್ಪಿಸಿಕೊಂಡು ಸಮ್ಮ ಜಾಯಿಂ ಸೆಟಲ್‌ಮೆಂಟನ್ನು ಪುನಃ ಸ್ಥಾಪಿಸಿಕೊಳ್ಳುವ ಆಶೆಯಿಂದಲೇ ಮದ್ರಾಸಿಗೆ ಸೇರಿಸಿಬಿಡಲು ಜನರು ಕೇಳುವದಾಗಿದೆ.

ಕ:—ನಿಮ್ಮನ್ನು ಸುಮ್ಮನಿರಿಸಲು ನನಗೆ ಶಕ್ತಿ ಇದೆಯೆಂಬುದು ನಿಮಗೆ ತಿಳಿಯದೋ? ಇನ್ನು ಮುಂದಿನ ಜಮಾಬಂದಿಗಳಲ್ಲಿ ನಿಮ್ಮ ವಿಷಯ ಪುಕಾರೇನೂ ಕೇಳದಿದ್ದರೆ ನಿಮ್ಮ ಮಾತನ್ನು ನಂಬುತ್ತೇನೆ.

ಸ—ನಾವಿಬ್ಬರಿಂದ ದೇಶವನ್ನು ತಲೆಕೆಳಗೆ ಮಾಡಲಿಕ್ಕಾಗಲಿಕ್ಕಿಲ್ಲವೆಂತ ಹೇಳಿದ್ದೀರಿ. ನಾವು ಒಪ್ಪಿದ್ದೇವೆ. ಮನಸ್ಸಾಕ್ಷಿ ರೈತನನ್ನು ನೀವು ನೋಡಿರಬಹುದು. ಅವನಿಗಿಂತ ಈ ದೇಶದ ರೈತನು ತಿಳುವಳಿಕೆಯಲ್ಲಿ ಹಿಂದಿಲ್ಲ.

ಕ:—ನಾನು ಚಕ್ರವರ್ತಿಯವರ ಪ್ರತಿನಿಧಿಯಲ್ಲವೋ? (2) ನಾನು ಜಮಾಬಂದಿಗೆ ಬರುವಾಗ ರೈತರು ನನಗೆ ಸಹಾಯಮಾಡಬೇಡವೋ? (3) ನಿಮ್ಮ ರಾಜರ ಕಾಲದಲ್ಲಿ ನಿಮಗೆ ಬಹಳ ಹಿಂಸೆ ಇರಲಿಲ್ಲವೋ? ಸ್ವಲ್ಪ ಕಾರಣಕ್ಕಾಗಿಯೇ ಜನರನ್ನು ಕೊಂದುಬಿಡುತ್ತಿದ್ದಿಲ್ಲವೋ? ಜುಲುಮಿನಿಂದ ಕೆಲಸಮಾಡಿಸಿಕೊಳ್ಳುತ್ತಿದ್ದಿಲ್ಲವೋ?

ಸ.—(1) ಹೌದು. (2) ಮನಃಪೂರ್ತಿಯಾಗಿ ಮಾಡುವ ಸಹಾಯಕ್ಕೆ ನಮ್ಮ ಆಕ್ಷೇಪಣೆಯೇನೂ ಇಲ್ಲ. (3) ನಮ್ಮ ರಾಜರ ಕಾಲಗಳಿಂದಲೇ ನಾವು ನಿಮ್ಮನ್ನು ಕರೆದದ್ದಾಗಿದೆ. ನಮ್ಮ ರಾಜರೆಲ್ಲರೂ ಧೂರ್ತರೆಂತ ನಾವು ನಂಬತಕ್ಕದ್ದಲ್ಲ. ಆ ಕಾಲದ ಚರಿತ್ರಗಳಿಂದ ನಿಮ್ಮ ದೇಶದಲ್ಲೂ ಒಳವಪ್ಪಿಂತ ನಡೆಯುತ್ತಿತ್ತೆಂತ ತಿಳಿಯುತ್ತೆ. ನಮ್ಮ ರಾಜರು ನೀವು ಹೇಳುವಷ್ಟು ಕ್ರೂರಿಗಳಾಗಿದ್ದರೆ ನಿಮ್ಮನ್ನು ಈ ದೇಶಕ್ಕೆ ಕರೆಯಲಿಕ್ಕೆ ಜನರೇ ಇರುತ್ತಿರಲಿಲ್ಲ. ಕಳೆದ ಮಾವಿ ಪಾಕ್ಷದಿಂದ ನಮ್ಮ ದೇಶದ ಜನಸಂಖ್ಯೆ ಬಹಳ ಕಡಿಮೆಯಾಗಿದೆಯೆಂತ ತಿಳಿಯುತ್ತೆ. ನಿಮ್ಮ ಸರಕಾರದ ರೈತರಾದರೂ ಎಲ್ಲಾ ಒಳ್ಳೇದಾಗಿಲ್ಲವೆಂತ ತೋರುತ್ತೆ.

ಸ—ನಾವು ನಮ್ಮ ಶಕ್ತ್ಯಾನುಸಾರ ದೇಶಸೇವೆ ಮಾಡುವವರಲ್ಲಿದ್ದೇವೆ. ನಮ್ಮ ವಿಷಯ ಜನರು ವಿಧವಿಧ ಹೇಳಬಹುದು. ನಾವು ಈ ಕೆಳಗಿನ ಕೆಲಸಗಳನ್ನು ಮಾಡುವವರಾಗಿದ್ದೇವೆಂತ ನಿಮಗೆ ತಿಳಿಸಲು ಅಪೇಕ್ಷಿಸುತ್ತೇವೆ. ಸಿಪಾಯಿಗಳನ್ನು ಕಡಿಮೆಮಾಡಬೇಕೆಂತ ಬೋಧಿಸುತ್ತೇವೆ. ಅದು ರಾಜದ್ರೋಹವೋ?

ಕ—ಅಲ್ಲ

ಸ—ನಾವು ಸ್ವದೇಶಿಯನ್ನು ಬೋಧಿಸುತ್ತೇವೆ. ಅದು ರಾಜದ್ರೋಹವೋ?

ಕ—ಅಲ್ಲ. ಅದು ಅರ್ಥಶಾಸ್ತ್ರವಿಷಯ-ನಿಮಗೆ ಅದರಲ್ಲಿ ಜಯವಾದೀತೋ ಎಂಬ ಸಂಶಯ ನನಗಿದೆ.

ಸ—ನಾವು ಅದನ್ನು ಬೋಧಿಸುತ್ತೇವೆ. ಫಲಿತಾಂಶ ಹಿಂದಿನಿಂದ ಗೊತ್ತಾಗಬೇಕಷ್ಟೆ. ನಾವು ರೈತರು ತಮ್ಮೊಳಗೆ ಸಹಕಾರಿಗಳಾಗಬೇಕೆಂತ ಬೋಧಿಸುತ್ತೇವೆ. ಸರಕಾರದವರೇ ಸಹಕಾರಿ ಸಂಘಗಳ ಮೂಲಕ ಈ ತತ್ವವನ್ನು ಬೋಧಿಸುತ್ತಾರೆ. ಇದು ರಾಜದ್ರೋಹವೋ?

ಕ—ಅಲ್ಲ

ಸ—ನಾವು ಮದ್ಯಪಾನ ಹೋಗುತ್ತಾ ಇದ್ದೇವೆಂತ ಯಾರಾದರೂ ನಿಮಗೆ ತಿಳಿಸಿದರೆ ಆಗ ನೀವು ನಮ್ಮನ್ನು ಕೇಳಿದರೆ ತಕ್ಕ ಸಮಾಧಾನವನ್ನು ಕೊಟ್ಟೇವು.

ಈ ಸಂಭಾಷಣೆಯನ್ನು ಬರೆದು ಕಮಿಷನರವರಿಗೆ ಒಪ್ಪಿಗೆಗೆ ಕಳುಹಿಸಿದ್ದಕ್ಕೆ ಈ ಕೆಳಗಿನ ಜವಾಬು ಬಂದಿದೆ.

ಸಂಭಾಷಣೆಯನ್ನು ಬರೆದು ಕಳುಹಿಸಿದ್ದನ್ನು ಒಪ್ಪಲಿಕ್ಕಾಗಲಿ ಇನ್ಕಾರಮಾಡಲಿಕ್ಕಾಗಲೀ ನನಗೆ ಇಷ್ಟವಿಲ್ಲ. ನಿಮಗೆ ನಾನು ಹೇಳಬೇಕೆಂತ ಇದ್ದದ್ದೇನೆಂದರೆ—

(a) ಜಮಾಬಂದಿಗೆ ವಿರೋಧವಾಗಿ ನೀವು ಬೋಧಿಸುವದರಿಂದ ನಿಮ್ಮ ಉದ್ದೇಶವು ದೊಡ್ಡ ಆಕ್ಷೇಪಕ್ಕೆ ಗುರಿಯಾಗುವುದೆಂತಲೂ ನಿಮ್ಮ ಮುಂದಿನ ನಡತೆಯಿಂದ ಇದು ನಿಶ್ಚಯವಾಗಬೇಕೆಂತಲೂ

(b) ಈಗ ತಿಳಿಕೊಂಡಮೇರೆ ಜಮ್ಮ ಹಿಡುವಳಿಯಿಂದು ಸರಕಾರದ ಕೆಲಸಮಾಡುವ ಜವಾಬ್ದಾರಿ ರೈತರಮೇಲೆ ಹಾಕಿರುವ ಹಿಡುವಳಿಯೆಂತಲೇ ಅರ್ಥ. ಈ ಅರ್ಥ ತಪ್ಪೆಂತ ಡಿಸೈಡಾಗುವವರೆಗೆ ಕಲಸಮಾಡುವವರಿಗೂ ಮಾಡಿಸಿಕೊಳ್ಳುವವರಿಗೂ ಅಡ್ಡಿಮಾಡಬೇಡಿ.

ಈ ವಿಷಯದಲ್ಲಿ ನೀವು ಗಮನಕೊಡಬೇಕೆಂಬುದೇ ನನ್ನ ಉದ್ದೇಶವಾಗಿದೆ.

ಈ ಮೇಲ್ಕಂಡ ಕಾಗದಗಳನ್ನು ಪ್ರಕಟಿಸುವ ಬಗ್ಗೆ ಮೆ|| ಪಿದ್ದಂಡ ಕಾರ್ಯಪ್ಪನವರು ನಮಗೆ ಕಳುಹಿಸಿಕೊಟ್ಟಿರುತ್ತಾರೆ.

ಸಂ. "ಕೊಡಗು"

ಮಡಿಕೇರಿ ತಾರೀಖು 10-12-21.

"ಕೊಡಗು" ಲಿಮಿಟೆಡ್ ಕಂಪೆನಿಯ ಡೈರೆಕ್ಟರುಗಳ ಮೀಟಿಂಗಿನ ಪ್ರೋಸಿಡಿಂಗ್ಸ್.

(ಸ್ವಂತ ಬಾತ್ಮಿದಾರರಿಂದ)

ಡೈರೆಕ್ಟರುಗಳು, ಮೆ|| ಎಮ್. ಪಿ. ಕೃಷ್ಣರಾಯರು ಮೆ|| ಕೋದಂಡ ಅಪ್ಪಯ್ಯನವರು ಆರ್. ಬಿ ಮೆ|| ನಾಗರತ್ನಪಿಳ್ಳೆಯವರು ಬಿ ಎ, ಬಿ ಎಲ್ ಮೆ|| ಪಿದ್ದ ಸುಬ್ಬಯ್ಯನವರು ಮೆ|| ಅಪ್ಪಾರಂಡ ಪಿ ಚಂಗಪ್ಪನವರು, ಮೆ|| ನಡಿಕೇರಿಯಂಡ ಕರುಂಬಯ್ಯನವರು, ಮತ್ತು ಮೆ|| ಸಿ ಎನ್ ವೆಂಕಪ್ಪಯ್ಯನವರು (ಬಿ ಎ. ಬಿ. ಎಲ್) ಹಾಜರಿದ್ದರು. ಅಧ್ಯಕ್ಷರು ಮೆ|| ಎಮ್ ಪಿ ಕೃಷ್ಣರಾಯರಾಗಿದ್ದರು.

1 ಇದುವರೆಗೆ ಆದ ಜನರ ಖರ್ಚುಗಳ ಪಟ್ಟಿಯನ್ನು ಪರಿಶೀಲಿಸಿ ಒಪ್ಪಿ ಮತ್ತು ಈ ಕೆಳಗಿನ ತೀರ್ಮಾನಗಳು ಆದವು.

2 ಎಲ್ಲಾ ಷೇರುದಾರರೂ ತಮ್ಮ ಬಾಕಿ ಹಣವನ್ನು ಈ ಫೆಬ್ರವರಿ ಆಖೈರಿನೊಳಗೆ ತಪ್ಪದೆ ಪಾವತಿಮಾಡಬೇಕಾಗಿಯೂ, ತಪ್ಪಿದರೆ ಪತ್ರಿಕೆಯನ್ನು ನಿಲ್ಲಿಸುವುದಲ್ಲದೆ ಪತ್ರಿಕೆಯ ಬಾಕಿ ಹಣವನ್ನು ವಸೂಲಿ ಮಾಡುವ ಏರ್ಪಾಡು ಮಾಡುವದೆಂತಲೂ. ಷೇರಿಗೆ ದರಖಾಸ್ತು ಮಾಡಿದ ಷೇರ್ ಹಣ ಪಾವತಿಮಾಡಲಿಕ್ಕೆ ಬಾಕಿ ಇರುವ ಎಲ್ಲಾ ಜನರು ತಮ್ಮ ಪ್ರತಿ ಷೇರಿನ ಬಾಬ್ತು ಐದು ರೂಪಾಯಿಯನ್ನು ಈ ಫೆಬ್ರವರಿ ಆಖೈರಿನೊಳಗೆ ಪಾವತಿ ಮಾಡಬೇಕಾಗಿಯೂ, ಪಾವತಿ ಮಾಡದೆಹೋದರೆ ಅವರ ದರಖಾಸ್ತುಗಳನ್ನು ತಿರಸ್ಕರಿಸುವುದಾಗಿಯೂ, (3) ಮೆ|| ಕೆ. ವೆಂಕಟಸುಬ್ಬಯ್ಯನವರನ್ನು ಕಂಪೆನಿಯ ಡಿಸೆಂಬರ್ ಆಖೈರ್‌ವರೆಗಿರುವ ಜಮಾಖರ್ಚು ಪಟ್ಟಿಯನ್ನು ಪರಿಶೋಧಿಸಿ ನೋಡಲು ಕೇಳಿಕೊಳ್ಳುವ ಹಾಗೂ ಅವರು ನೋಡಿದ ಲೆಕ್ಕವನ್ನು 1922 ನೇ ಜನವರಿ 15 ರೊಳಗೆ ಡೈರೆಕ್ಟರುಗಳವರಿಗೆ ರಿಪೋರ್ಟ್ ಮಾಡುವಹಾಗೂ, ಅವರಿಗೆ 25-0-0 ಈ ಪ್ರತಿಫಲಕ್ಕಾಗಿ ಕೊಡುವಹಾಗೂ, (4) ಕಂಪೆನಿಯ ಜನರಲ್ ಮೀಟಿಂಗ್ 1922 ನೇ ಫೆಬ್ರವರಿ 5 ನೇ ಆದಿತ್ಯವಾರ ವಿರಾಜಪೇಟೆಯಲ್ಲಿ ಮಾಡಬೇಕೆಂದೂ ಮೀಟಿಂಗಿನಲ್ಲಿ ಡೈರೆಕ್ಟರುಗಳ ಚುನಾವಣೆಯು ಮತ್ತು ಇತರ ಸಂಗತಿಗಳು ಚರ್ಚಿಸಲ್ಪಡಬೇಕಾಗಿಯೂ, (5) ಸಬ್ ಎಡಿಟರಾದ ಮೆ|| ಬಿಟ್ಟಿಯಂಡ ಮುತ್ತಣ್ಣನವರು 1½ ತಿಂಗಳು ಜೈಲಿನಲ್ಲಿದ್ದುದರಿಂದ ಅವರಿಗೆ ಅರ್ಧಸಂಬಳಮಾತ್ರ ಸಲ್ಲತಕ್ಕದ್ದೆಂದೂ, ಖಾಲಿ ಇರುವ ಜವಾನನಿಗೆ ಎರಡು ರೂಪಾಯಿ ಬಡ್ತಿ ಕೊಡುವಹಾಗೂ, ಒಮ್ಮೆ ತಿಂಗಳಿಗೆ ಐದು ರೂಪಾಯಿ ಸಂಬಳ ಕಂಪೆನಿಯಿಂದ ಕೊಡಬೇಕೆಂತಲೂ ತೀರ್ಮಾನಗಳಾದವು.

ಕಂಪೆನಿಯ ಛೇರ್‌ಮೇನ್‌ರವರಾದ ರಾಯಬಹದ್ದೂರ್ ಕುಟ್ಟಯ್ಯನವರು ಗೈರುಹಾಜರಾದ್ದರಿಂದ ಇನ್ನು ಅನೇಕ ಸಂಗತಿಗಳ ಚರ್ಚೆಯು ಬಾಕಿಯಾಯಿತು. ಕಮಿಷನರ್ ಸಾಹೇಬರು ಛೇರ್‌ಮೆನ್‌ರವರಿಗೆ ಬರೆದ ಎರಡು ಡಿ. ಒ ಕಾಗದಗಳು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ಸಾಹೇಬರು ಬರೆದ ಒಂದು ಡಿ. ಒ. ಕಾಗದ ಸಹ ಓದಲಾಯಿತು.

ಬಾತ್ಮೀದಾರರೊಬ್ಬರು ಭಾಗಮಂಡಲ ಜಮಾಬಂದಿಯ ವಿಷಯ ಬರೆದುದು ಪೂರಸುಳ್ಳೆಂತಲೂ ತಮಗೆ ಅದರಿಂದ ಏನೂ ಬಾಧಕವಿಲ್ಲವಾದರೂ ವರ್ತಮಾನಪತ್ರಿಕೆಗಳ ರೀತಿಯನ್ನು ತಿಳಿಸುವದೆ (ಇನ್ನು ಮುಂದೆ ತಿಳಿಯಬೇಡವೆಂತ ನನ್ನ ಅಭಿಪ್ರಾಯವೆಂತ ನಮೂದಿಸಿದೆ) ಕೈತಲು ಪ್ರಿಂಟಾದ ಎಲ್ಲಾ ವಿಷಯಗಳನ್ನು ಸತ್ಯವೆಂತ ನಂಬುವುದರಿಂದ, ಇಂಥಾ ಅಸತ್ಯವಾದ ಸಂಗತಿಗಳು ಪ್ರಿಂಟಾಗದಂತೆ ನೋಡಿಕೊಳ್ಳಬೇಕಾಗಿಯೂ ಬರೆದ ಕಾಗದ ಒಂದು, ಪ್ರೆಸ್ಸಿನೊಳಗಿನ ಅಂಗರೆಕಪ್ಪ (ದಡಾರ) ಗಾಳಿ ಮುಚ್ಚಿದ ವಿಷಯದಲ್ಲಿ ಬರೆದ ಲೇಖನವು ಸುಳ್ಳೆಂತಲೂ ಅನೇಕ ನಿಜವಲ್ಲದ ಸಂಗತಿಗಳು ಸೇರಿವೆಯೆಂತಲೂ ಚೀಫ್ ಕಮಿಷನರ್ ಮತ್ತು ವಿದ್ಯಾ ಇಲಾಖೆಯ ಡೈರೆಕ್ಟರವರು ಈ ವಿಷಯದಲ್ಲಿ ಎಡಿಟರವರಿಗೆ ಬರೆಯಬೇಕೆಂದು ತನ್ನನ್ನು ಕೇಳಿದಾರೆಂತಲೂ ಆದರೆ 10 ನೇ ತಾರೀಖಿನ ಮೀಟಿಂಗಿನಲ್ಲಿ ಮೊದಲನೇ ಕಾಗದದ ಪ್ರಕಾರ ಡೈರೆಕ್ಟರುಗಳು ಯಾವ ತೀರ್ಮಾನಮಾಡುತ್ತೀರೆಂದು ತಿಳಿಸಬೇಕೆಂತಲೂ ಎಡಿಟರವರ ಬರವಣಿಗೆಯಿಂದ ತಮ್ಮೆಲ್ಲರ ಸ್ಥಿತಿಯೂ ಹಾಸ್ಯಾಸ್ಪದಕ್ಕೆ ಗುರಿಯಾಗುತ್ತದೆಂತಲೂ ಇನ್ನು ಮುಂದೆ ಹೀಗೆ ಬರೆಯದಂತೆ ಮಾಡಬೇಕೆಂತಲೂ ಬರೆದ ಕಾಗದ ಒಂದು.

ಮಡಿಕೇರಿಯಲ್ಲಿ ನಡೆದ ಬಾಲಿಗೆ ಮೂರುಸಾವಿರ ರೂಪಾಯಿ ಖರ್ಚಾಯಿತೆಂತಲೂ, ಆಬಾಲಿನಿಂದ ಪೋಲೀಸಿನವರಿಗೆ ವಿಶ್ರಾಂತಿ ಇರಲಿಲ್ಲವೆಂತಲೂ ಬರೆದ ವರ್ತಮಾನವು ಪೂರ್ತಿ ಸುಳ್ಳೆಂತಲೂ ಬರೆದ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಸಾಹೇಬರ ಕಾಗದ ಒಂದು. ಈ ಮೂರು ಕಾಗದಗಳ ವಿಷಯ ಚರ್ಚೆಗಳು ಬಹಳವಾಗಿ ನಡೆದುವು. ಚರ್ಚೆಯ ಸಾರಾಂಶವೇನೆಂದರೆ—ಜಮಾಬಂದಿಯ ವಿಷಯ ಬರೆದ ಬಾತ್ಮೀದಾರರು ತಾನು ಬರೆದವಿಷಯಗಳು ನಿಜವೆಂದು ರುಜುವಾತು ಮಾಡಲು ತಯಾರಾಗಿರುವನಾಗಿ ತಿಳಿಯಬರುವುದರಿಂದಲು ಬಾತ್ಮೀದಾರರು ತನ್ನ ಹೆಸರನ್ನು ಅಧಿಕಾರಿಗಳಿಗೆ ತಿಳಿಸಲು ತಯಾರಿಲ್ಲದಿದ್ದರೆ ಬರುವ ನಷ್ಟಗಳಿಗೆಲ್ಲಾ ತಾನೇ ಜವಾಬುದಾರನಾಗುತ್ತೇನೆಂತಲೂ ವರ್ತಮಾನಪತ್ರಿಕೆಗಳ ಧರ್ಮವನ್ನು ವಿವರಿಸಿ ಎಡಿಟರ ಸ್ವತಂತ್ರವನ್ನು ಕಡಿಮೆಮಾಡಲು ಕಾರಣಗಳಿಲ್ಲವೆಂತಲು ಒಬ್ಬ ಡೈರೆಕ್ಟರುಗಳು ಹೇಳಿದಕ್ಕೆ ಒಬ್ಬರುಹೊರತು ಬಾಕಿ ಎಲ್ಲರೂ ಸಮ್ಮತಿಸಿದರು. ಮೆ ಅಪ್ಪಾರಂಡ ಚಂಗಪ್ಪನವರು ಈ ವಿಷಯ ಬಹಳವಾಗಿ ಚರ್ಚಿಸಿದರು. ಮೀಟಿಂಗ್ ಸಾಯಂಕಾಲ ಐದುಗಂಟೆಗೆ ಸುರುವಾದದ್ದು ಏಳುಗಂಟೆಗೆ ಬರಖಾಸ್ತಾಯಿತು.

ಕೊಡಗು ಕೋ ಆಪರೇಟಿವ್ ಸೆಂಟ್ರಲ್ ಬ್ಯಾಂಕಿನ ಮೀಟಿಂಗು.

(ಸ್ವಂತ ಬಾತ್ಮಿದಾರರಿಂದ)

[ಕಳೆದ ಸಂಚಿಕೆಯಿಂದ ಮುಂದೆ ಸಾಗಿರುವುದು.]

ರಾ|| ಬಾ|| ಕ ಕುಟ್ಟಯ್ಯನವರನ್ನು ಬ್ಯಾಂಕಿನ ಪ್ರೆಸಿಡೆಂಟರಾಗಿ ಆರಿಸಬೇಕೆಂದು ಮೆ|| ಗುಡ್ಡೆಮನೆ ... ಸೂಚಿಸಿದ್ದನ್ನು ... ಮೆ|| ... ಅನುಮೋದಿಸಲು ಅದಕ್ಕೆ ಎಲ್ಲರೂ ಸಮ್ಮತಿಕೊಟ್ಟರು. ಬ್ಯಾಂಕಿನ ಸೆಕ್ರೆಟರಿಯನ್ನು ಪ್ರೈಮರಿ ಸೊಸೈಟಿ ಬೋರ್ಡ್ ಆಫ್ ಡೈರೆಕ್ಟರ್ಸ್ ಚುನಾಯಿಸಲೆಂದು ಮೆ|| ತಿರುಮಲರಾಯರು ಸೂಚಿಸಿದ್ದನ್ನು ಮೆ|| ಗುಡ್ಡಂಡ ಭೀಮಯ್ಯನವರು ಅನುಮೋದಿಸಲು ಸರ್ವಸಮ್ಮತದಿಂದ ಮಂಜೂರಾಯಿತು. 1922 ನೇ ಜೂನ್ ಆಖೈರಿನವರೆಗೆ ಬೈಲಾ 23 (4) ರ ಪ್ರಕಾರ ಬ್ಯಾಂಕಿಗೆ ಐವತ್ತು ಸಾವಿರ ರೂಪಾಯಿಗಳವರೆಗೆ ಸಾಲ ತೆಗೆಯುವ ಹಕ್ಕು ಕೊಡಬಹುದೆಂದು ಏಕೋಭಾವದಿಂದ ತೀರ್ಮಾನಮಾಡಿದರು. ಅಧ್ಯಕ್ಷರಿಗೆ ವಂದನೆಗಳೊಡನೆ ಸಭೆಯು ಮುಕ್ತಾಯವಾಯಿತು.

ವರ್ತಮಾನ ಸಂಗ್ರಹ.

ಒಳದೇಶ.

ಕಮಿಷನರವರ ಆಫೀಸಿನಲ್ಲು ಹೆಡ್ ಅಕೌಂಟೆಂಟರಾಗಿದ್ದು ಈಗ ಪೆರ್ಲೋಟಲ್ಲಿರುವ ಮೆ|| ಮಾಚಿಮಾಡ ಮಾಚೈಯ್ಯನವರಿಗೆ 2 ನೇ ಗ್ರೇಡ್ ಪ್ಲೀಡರಾಗಿ ವಾದಿಸಲು ಅವರ ಮೊದಲಿನ ಸರ್ಟಿಫಿಕೇಟು ಪ್ರಕಾರ ಚೀಫ್ ಕಮಿಷನರವರಿಂದ ಮಂಜೂರು ಮಾಡಲ್ಪಟ್ಟಿರುವದು ಬಹಳ ಸಂತೋಷಕರವೆ. ಅವರು ಜನವರಿ 1 ರಿಂದ ವಿರಾಜಪೇಟೆಯಲ್ಲಿ ವಾದಿಸಲು ಸುರುಮಾಡುವರೆಂದು ತಿಳಿಯಬರುತ್ತದೆ. ಜನರು ಅವರಿಗೆ ಉತ್ತೇಜನವನ್ನು ಕೊಡುವರಾಗಿ ನಂಬುತ್ತೇವೆ.

ಐಕೊಳಗ್ರಾಮದ ಕೊಂಬಳಿ ಬೋಗ್ಯೈಯ್ಯನೆಂಬವರು ತಾರೀಖು 7 ರಲ್ಲು ಉಳಿಕೂತು ಒಂದು ಹೆಬ್ಬುಲಿಯನ್ನು ಗುಂಡುಹಾಕಿ ಮರುದಿನ ಹುಲಿ ಮದುವೆಯನ್ನು ನೆರವೇರಿಸಿದರು.

ಮಡಿಕೇರಿ ಶಾಲೆಗಳೆಲ್ಲವೂ ಈ ತಾರೀಖು 13 ರಿಂದ ಜನವರಿ 3 ರವರೆಗೆ ಮತ್ತು ಹುಡುಗಿಯರ ಸೆಕಂಡರಿ ಶಾಲೆಯು ಈ ತಾರೀಖು 10 ರಿಂದ ಜನವರಿ 6 ರವರೆಗೆ ಹುತ್ತರಿ ಕ್ರಿಸ್‍ಮಿಸ್ ಮತ್ತು ಹೊಸ ವರ್ಷದ ಹಬ್ಬಗಳಿಗಾಗಿ ಮುಚ್ಚಿರುತ್ತಾರೆ.

ಈ ತಾರೀಖು 12 ರಲ್ಲು ಮದರಾಸಿನಲ್ಲು ನಡೆಯತಕ್ಕ ಐ. ಸಿ. ಎಸ್. ಚುನಾವಣೆಯ ಮೀಟಿಂಗಿಗೆ ರಾ|| ಬಾ|| ಕೊಡಂದೆರ ಕುಟ್ಟೈಯ್ಯನವರು ಕೊಡಗುದೇಶದ ಪ್ರತಿನಿಧಿಯಾಗಿ ದಯಮಾಡಿರು[illegible]ರೆ.

ಹುತ್ತರಿಹಬ್ಬದ ನಿ[illegible] ಬೆಲ್ಲ ಮಣ ಬೆಲೆಯು 3 ರೂಪಾಯಿಯಿಂದ 4½ ರು[illegible]ಯಿವರೆಗೆ ಮಡಿಕೇರಿಯ ಕಳೆದ ಸಂತೆಯಲ್ಲಿ ಏರಿತ್ತು.

ಕೊಡಗಿನಲ್ಲಿ ನವ[illegible]ು ಆಬ್ಕಾರಿವರೆಗೆ ಸಾರಾಯಿಯ ವ್ಯಾಪಾರವು ಕಳೆದವ[illegible]ಂತ ಸುಮಾರು 5,000 ಗೇಲನ್‍ಗಳು ಕಮ್ಮಿಯಾಗಿದೆ.

ಕಳೆದ ತಿಂಗಳ 2[illegible] ತಾರೀಖಿನಲ್ಲು ಮದ್ರಾಸು ನಗರದ ಕೊಡಗಿನವರು [illegible] ದರ್ಯ ಮಹಾಲಿನಲ್ಲಿ ಸಭೆಸೇರಿ ಮೆ|| ಪಾಲೇಕಂಡ್ರ [illegible]ಪ್ಪ, ಬಿ. ಎ., ಬಿ ಎಲ್ ರವರ ಅಧ್ಯಕ್ಷತೆಯಲ್ಲಿ ಕೆಳಗಿನ ಠರಾವುಗಳನ್ನು ಅಭಿಪ್ರಾಯ ಪಟ್ಟಿರುತ್ತಾರೆ.—

1. ಕೊಡಗು ಸಭೆಯ ಅತ್ಯಾವಶ್ಯಕತೆ.
2. ಮೆ|| ಗಳಾದ ರಾ|| ಬಾ|| ಕುಟ್ಟೆಯ್ಯ, ಮತ್ತು ಅಪ್ಪಯ್ಯನವರಿಗೆ ಇವರ ಅಭಿಮಾನವೂ ಉತ್ತೇಜನವೂ ಇದೆ.

   ಜಮ್ಮ ಸಾಗುವಳಿಯ ಮೇರೆ ಕೌನ್ಸಿಲ್ ಪ್ರತಿನಿಧಿತ್ವಕ್ಕೆ ಒಪ್ಪಿಗೆ.

ನಾಪೋಕ್ಲು ಮೋಡಲ್ ಶಾಲೆಯ ವಿಸ್ತೀರ್ಣದ ಬಗ್ಯೆ ತಾರೀಖು 3 ರಲ್ಲು ಮೆ|| ಕುಂಞಿಟ್ಟಿರ ಸುಬ್ಬೈಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಭೆನೆರೆದು ಅಲ್ಲಿ ನಡೆದ ಕಾರ್ಯಕ್ರಮಗಳನ್ನು ನಮಗೆ ಕಳುಹಿಸಿರುತ್ತಾರೆ. ಮುಖ್ಯಾಂಶ ಪ್ರತಿ ಒಬ್ಬ ಬಾಲಕ ಬಾಲಕಿ ವಿದ್ಯಾರ್ಥಿಯು 4 ಆಣೆ ಮೇರೆ ಚಂದಾಕೊಡುವಂತೆಯೂ ಮತ್ತು ಎಲ್ಲಾ ಕೋ ಆಪರೇಟಿವ್ ಸಂಘದವರು ಮುಖ್ಯವಾಗಿ ನಾಪೋಕ್ಲು ಸಂಘದವರು— ದ್ರವ್ಯವನ್ನು ಸಹಾಯಮಾಡುವಂತೆಯೂ ಮತ್ತು ಇತರ ಹಿತಚಿಂತಕರಿಂದ ಚಂದಾ ವಸೂಲ್ಮಾಡುವದೆಂತಲೂ ಅಭಿಪ್ರಾಯಪಟ್ಟು ಒಂದು ಕಮಿಟಿಯನ್ನು ಏರ್ಪಡಿಸಿರುತ್ತಾರೆ. ಕಮಿಟಿಯವರ ಕಾರ್ಯವು ನೆರವೇರಲಿ ಎಂಬುದೇ ನನ್ನ ಕೋರಿಕೆ.

ಇದೇ ತಿಂಗಳು 2 ನೇ ತಾರೀಖಿನಲ್ಲು ಬಿಳುಗುಂದ ಗ್ರಾಮದ ಯುವಕರೆಲ್ಲರೂ ಕೂಡಿ „ಬಿಳುಗುಂದ ಕ್ರೆಸೆಂಟ್ ಫುಡ್‍ಬಾಲ್‍ಟೀಮ್" ಎಂಬ ಆಟದ ಸಂಘವನ್ನು, ಮೆ|| ಸಿ. ಯಸ್. ಕಾಳಪ್ಪನವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಿದರು. ಸಂಘದ ಕೇಪ್ಟನ್‍ಗಳು ಮೆ|| ಅಬ್ದುಲ್ ಮೊಹಿತ್ಸಾ ನ್ ಸ್ಪೆಸ್ಸಿ, ಮತ್ತು ಮೆ|| ಹಜರತ್ ಸೈಯದ್ ಅಬ್ದುಲ್ಲಾ ಸಾಹೇಬ್‍ರವರು ಆಗಿರುತ್ತಾರೆ.

ಮರೇನಾಡು ಐದುಗ್ರಾಮದ ಜನರು ತಾರೀಖು 2 ರಲ್ಲು ವಿರುನಾಣಿ ಗ್ರಾಮದ ಮಿಷನ್ ಸ್ಕೂಲಿನಲ್ಲಿ ಸಭೆಸೇರಿ ಶುಭಶೋಭನ ದಿನಗಳಲ್ಲಿ ನಿಶಾ ಪದಾರ್ಥವನ್ನು ಸೇವಿಸಬಾರದೆಂತಲೂ, ಹಸುವಿನ ತುಪ್ಪದ ಕ್ರಯವು ಸೇರು ಒಂದರ 1-4-0 ಮತ್ತು 1-0-0 ಗೆ ಮಾರದಂತೆಯೂ, ವಿವಾಹದಲ್ಲಿ ವಧುವಿಗೆ ಕೊಡುವ ಬಟ್ಟೆ, ವಗೈರೆಗಳು ಮೂರು ಆಳು ಹೊರ ವಿಪಾರವಾರದೆಂತಲೂ, ಮಾಂಸದ ಕ್ರಯವನ್ನು ಕಡಿಮೆಮಾಡುವದೆಂತಲೂ ಮತ್ತು ಭತ್ತದ ಸಂಡು ಮಡಗಿ ಕಡಿಮೆಬಡ್ಡಿಗೆ ಕೊಡುವಂತೆಯೂ ತೀರ್ಮಾನಿಸಿರುತ್ತಾರೆ.— ಮೇಲಿನ ತೀರ್ಮಾನಗಳಿಗೆ ವಿರೋಧವಾಗಿ ನಡೆದವರಿಗೆ ಗ್ರಾಮದ ಮುಖ್ಯಸ್ಥರು ದಂಡಹಾಕುವಂತೆಯೂ ಅಂಥಾ ದಂಡವನ್ನು ತೆರಲು ತಪ್ಪಿದರೆ ಬಹಿಷ್ಕಾರ ಮಾಡುವಂತೆಯೂ ತೀರ್ಮಾನಿಸಿರುತ್ತಾರೆ.

ಈ ಸಂವತ್ಸರದ ದ್ವಿತೀಯ ಬ್ರಾಹ್ಮಣರ ಪರಿಷದವು (ಕಾನ್‍ಫರೆನ್ಸ್) ಇದೇ ಡಿಸಂಬರು 27 ಮತ್ತು 28 ನೇ ತಾರೀಖುಗಳಲ್ಲಿ ಮ|| ರಾ|| ಶ್ರೀ|| ಭಾಗಮಂಡ್ಲ ಶ್ರೀಪತಿ ರಾಯರ ಅಧ್ಯಕ್ಷತೆಯಲ್ಲು ದಕ್ಷಿಣಕನ್ನಡ ಜಿಲ್ಲಾ ಉಡುಪಿ ಪಟ್ಟಣದಲ್ಲು ಸೇರುತ್ತದೆಂದೂ ಇದಕ್ಕೆ ಎಲ್ಲರೂ ದಯಮಾಡಿಸಬೇಕೆಂದೂ ಸ್ವಾಗತಮಂಡಲಿಯ ಅಧ್ಯಕ್ಷರಾದ ಮ|| ರಾ|| ಶ್ರೀ|| ಕಲ್ಮಾಡಿ ರಾಘವೇಂದ್ರರಾಯರು ತಿಳಿಸುತ್ತಾರೆ.

ಭಾಗಮಂಡ್ಲದಲ್ಲಿ ಶ್ರೀ ಸುಬ್ರಮ್ಮಣ್ಯ ದೇವರ ಚಂಪಾಷಷ್ಠಿ ಉತ್ಸವವು ತಾರೀಖು ಽ ರಲ್ಲು ಅತ್ಯಂತ ವೈಭವದಿಂದ ನಡಿಯಿತು.

ಕುಯ್ಯಂಗೇರಿ ನಾಡು ಸಭೆಯು ಈಚೀಚೆಗೆ ಬಹು ಒಳ್ಳೇ ಕಾರ್ಯಗಳನ್ನು ಮಾಡುವಹಾಗೆ ತಿಳಿಯಬರುತ್ತದೆ. ಇವುಗಳಲ್ಲಿ ಕುಂಬಳದಾಳು ಗ್ರಾಮದ ತಕ್ಕಾಮೆಯ ಭಿನ್ನಾಭಿಪ್ರಾಯದಲ್ಲಿ ನೆರಪಂಡ್ರ ಮನೆಯವರು ಆ ಗ್ರಾಮದ ಊರು ತಕ್ಕರೆಂತಲೂ ಮುಕ್ಕಾಟಿರ ಮನೆಯವರು ದೇವತಕ್ಕರೆಂತಲೂ ತೀರ್ಮಾನಿಸಿರುತ್ತಾರೆ.

ಮಡಿಕೇರಿಯ ಬಟ್ಲರು ಒಬ್ಬನಿಗೆ ವಿರಾಜಪೇಟೆಯಿಂದ ಒಂದು ಹೆಣ್ಣು ತರಲು ತಾ|| 11 ರಲ್ಲು ಮದುವೆಗೆ ಏರ್ಪಡಿಸಿತ್ತು. ಸರ್ವವೂ ಸಿದ್ಧವಾಗಿ ಚಪ್ಪರದ ಕೆಲಸ ಮಾತ್ರ ಬಾಕಿಯಲ್ಲಿರುವವೇಳೆ ಹುಡುಗಿಯು ಪರಾರಿಯಾಗಿರುತ್ತಾಳೆ.

ವಿರಾಜಪೇಟೆ ಟವನ್ ಮೇಜಿಸ್ಟ್ರೇಟರು ಕೆಲವು ದಿನಗಳ ಹಿಂದೆ ಮೆ|| ಬಿದ್ದಂಡ್ರ ಬೋಪೈಯ್ಯನವರಿಗೂ, ಕೃಷ್ಣಸ್ವಾಮಿ ಪಿಳ್ಳೆಯವರಿಗೂ ಮತ್ತು ಸೈಯದ್ ಗೌಸ್‍ರವರಿಗೂ ಸೆಕ್ಷನ್ 144 ರ ಮೇರೆ 2 ತಿಂಗಳವರೆಗೆ ವಿರಾಜಪೇಟೆ ಮುನಿಸಿಪಾಲಿಟಿಯ ಒಳಗೆ ಯಾವದೊಂದು ಭಾಷಣವನ್ನು ಮಾಡಬಾರದಾಗಿ ನೋಟೀಸು ಕೊಟ್ಟಿರುತ್ತಾರೆ.

ಮದರಾಸು ಹೈಕೋರ್ಟಿನಲ್ಲಿ ಪವೃತಿ ಕೊಂಗಂಡ್ರ ನೀಲವ್ವನವರ ವಿಲ್ ಪತ್ರ ಸ್ಥಾಪನೆಗೋಸ್ಕರ ಮೆ|| ಕೊಂಗರಡ್ರ ಮುತ್ತಣ್ಣ ಗಣಪತ್ತಿಯವರಿಗೂ ಮತ್ತು ಮೆ|| ಅಪ್ಪಯ್ಯನವರಿಗೂ ನಡೆಯುತ್ತಿದ್ದ ಮೊಖದಮ್ಮೆಯಲ್ಲಿ ವಿಲ್‍ಪತ್ರವು ಹಿಂದುಮಾಡಲ್ಪಟ್ಟು ಮುತ್ತಣ್ಣ ಗಣಪತ್ತಿಯವರ ಪಕ್ಷವಾಗಿ ವಿಲೆವಡಿಸಲಾಯಿತೆಂದು ತಿಳಿಯುತ್ತೇವೆ.

ಕೊಡಗಿನ ಪೋಲೀಸ್ ಇಲಾಖೆಯ ಅಸಿಸ್ಟೆಂಟ್ ಸುಪರಿಂಟೆಂಡೆಂಟರಾದ ಮಿ|| ಮಿಲ್ಲರ್ ಸಾಹೇಬರಿಗೆ ಖಾಯಿಲೆ ಸಬಬ್ 6 ತಿಂಗಳ ರಜ ಮಂಜೂರ್ಮಾಡಲ್ಪಟ್ಟಿದೆ.

ಕೆದಮುಳ್ಳೂರು ಗ್ರಾಮದ ಪುತ್ತರಿಯಮಕ್ಕಿ ಎಂಬ ಜಾಗದಲ್ಲಿ ಈಗ ಒಂದು ವಾರದಹಿಂದೆ ಬಿಳಿಮಣ್ಣು ತೆಗಿಯಲಿಕ್ಕೆ ಹೋಗಿದ್ದ ಅಮ್ಮಣ ಕುಟ್ಟಂಡ್ರ ಒಬ್ಬ ಯುವಕನು ಮಣ್ಣು ತೆಗಿಯುವ ಸಮಯದಲ್ಲಿ ಮೇಲಿನಿಂದ ಒಂದು ದೊಡ್ಡ ಕಲ್ಲು ಜರೆದು ಅವನಮೇಲೆ ಬೀಳಲು ಅದರ ದೆಶೆಯಿಂದ ಘಾಯಪಟ್ಟವನಾಗಿ ಮರುಗಿ ಆಸ್ಪತ್ರೆಯಲ್ಲಿ ಮೃತಪಟ್ಟನೆಂದು ತಿಳಿಯುತ್ತೇವೆ. ಮಣ್ಣು ತೆಗಿಯತಕ್ಕವರು ಈ ವಿಷಯವನ್ನು ದೃಢೀಕರಿಸಿ ಎಚ್ಚರದಿಂದಿರುವರೆಂದು ನಂಬಿದ್ದೇವೆ.

ಕೊಡಗು ಸೇವಾಸಮಾಜದ ಒಂದು ಮೀಟಿಂಗು ಇದೇ ತಾರೀಖು 23 ರಲ್ಲು ಮಧ್ಯಾಹ್ನ 2 ಗಂಟೆ ಸಮಯಕ್ಕೆ ವಿರಾಜಪೇಟೆಯಲ್ಲು ನಡಿಯುತ್ತದೆ.

ಹುತ್ತರಿ ಹಬ್ಬದ ಸಬಬ್, ಡಿಶಂಬರು ತಾರೀಖು 23 ರಲ್ಲು ಹೊರಡಬೇಕಾಗುವ „ಕೊಡಗು" ಪತ್ರಿಕೆಯು ನಿಲ್ಲಿಸಲ್ಪಟ್ಟಿದೆ.

ಹಿಂದೂದೇಶ.

ಹಿಂದೂದೇಶದ ಕೌನ್ಸಿಲ್ ಆಪ್‍ಸ್ಟೇಟ್ ಸಭೆಯು ಡೆಲ್ಲಿಯಲ್ಲಿ 1922 ನೇ ಇಸವಿ ಜನವರಿ ತಾರೀಖು 17 ರಲ್ಲು ಸೇರುತ್ತದೆ.

ಕಳೆದ ತಿಂಗಳ 17 ಕ್ಕೆ ಕೈಕೊಂಡ ಕಲ್ಕತ್ತದ ಹರತಾಳವು ಸರಕಾರದವರಿಗೆ ಬಹಳ ಬೇಸರವನ್ನುಂಟುಮಾಡಿದೆ. ಇಷ್ಟರವರೆಗೆ ಇಂತಹ ಹರತಾಳವು ಕಲ್ಕತ್ತೆಯಲ್ಲಿ ನಡಿಯಲಿಲ್ಲ. ಇದು ಅಲ್ಲಿಯಣ ವಾಲಂಟೀಯರ ಸಹಾಯದಿಂದಲೆ ಆಗಿರುವದು. ಆದ್ದರಿಂದ ಬಂಗಾಳ ಸರ್ಕಾರದವರು ಈ ಮಂಡಲಿಗಳನ್ನು ನ್ಯಾಯವಾದವುಗಳಲ್ಲವೆಂದು ಖಾನೂನು ಮಾಡಿರುತ್ತಾರೆ ಆಂಗ್ಲೋ ಇಂಡಿಯನರಿಗೂ ಕ್ರೈಸ್ತರಿಗೂ ಇಂತಹ ಕಾಲಗಳಲ್ಲ ಗಲಭೆಯುಂಟಾದರೆ ಆತ್ಮರಕ್ಷಣೆ ಮಾಡುವದಕ್ಕ ಸಹಾಯಮಾಡಲು ಸಿವಿಲ್‍ಗಾರ್ಡ್ಸ್ ಎಂಬ ಸಮಿತಿಯನ್ನು ಮಾಡಿಕೊಂಡಿರುತ್ತಾರೆ. ಬಂಗಾಳ ಪ್ರಾಂತಿಕ ರಾಷ್ಟ್ರೀಯ ಕಮಿಟಿಯವರು ಈ ಅಪ್ಪಣೆಯನ್ನು ಮಾನ್ಯಮಾಡಬಾರದೆಂದೂ, ಇದಕ್ಕಾಗಿ ಈ ಸಮಿತಿಗಳಿಗೆ ಅನೇಕರು ಸೇರಿ ಹೆಚ್ಚು ಉತ್ತೇಜನ ಕೊಡಬೇಕೆಂದೂ ಜನರನ್ನು ಬೇಡಿಕೊಂಡಿರುತ್ತಾರೆ.

ಕಾಂಗ್ರೆಸ್ ಮತ್ತು ಖಿಲಾಫತ್ ಸಭೆಗಳು ನ್ಯಾಯವಾದವುಗಳಲ್ಲವೆಂಬ ಸರಕಾರ ತೀರ್ಮಾನದ ಮೇರೆ ಸದರಿ ಸಭೆ ಸೇರಿದ್ದಕ್ಕೆ ಲಾಲಾ ಲಾಜ್‍ಪತರಾಯರನ್ನು ಮತ್ತು ಇತರ ಮುಂದಾಳುಗಳನ್ನೂ ಮತ್ತು ಖಾದಿ ಬಟ್ಟೆಯನ್ನು ವಿಕ್ರಯಿಸಲು ಕೊಡಗಿದುದಕ್ಕ ವ್ಯಾಪಾರ ಅಡಚಣೆಯಾಯಿತೆಂದು ಶ್ರೀಯುತ ಸಿ ಆರ್. ದಾಸ್‍ರವರ ಪತ್ನಿ, ಕುಮಾರ ಚಿರರಂಜನದಾಸ ಮತ್ತು ಇತರ 50 ಮಂದಿಯರನ್ನು ಸಹ ಸೆರೆ ಹಿಡಿದಿರುತ್ತಾರೆ ಆದರೆ ಮರುದಿನವೇ ಮಹಿಳೆಯರನ್ನೆಲ್ಲಾ ಇಂಥಾ ಕಾರ್ಯಗಳಲ್ಲಿ ಕೈಕೊಳ್ಳಬಾರದಾಗಿ ಎಚ್ಚರಿಸಿ ಬಿಡುಗಡೆ ಮಾಡಿರುತ್ತಾರೆ. ಇವರೆಲ್ಲರೂ ಬಿಡುಗಡೆಯಾದ ಕೂಡ್ಲೆ ಖಾದಿ ಬಟ್ಟೆ ವ್ಯಾಪಾರವನ್ನು ಕೈಕೊಂಡಿದ್ದಾರೆ.

ಚಿರರಂಜನ ದಾಸ್‍ರವರಿಗೆ 6 ತಿಂಗಳ ಕಠಿಣಸಜ ಮತ್ತು 100 ರೂ. ಗಳ ಜುಲುಮಾನೆಯನ್ನು ವಿಧಿಸಿರುತ್ತಾರೆ.

ಪಂಡಿತ ಮೋತಿಲಾಲ್‍ನೆಹರು ಮತ್ತು ನೆಹರು ಕುಟುಂಬದ 3 ಜನರನ್ನು ಸಹ ಸೆರೆ ಹಿಡಿದಿರುತ್ತಾರೆ. ಮೋತಿಲಾಲ್ ನೆಹರುರವರಿಗೆ 6 ತಿಂಗಳ ಸುಲಭ ಸಜೆ ಮತ್ತು 500 ರೂ. ಜುಲುಮಾನೆಯನ್ನು ಇತರರಿಗೆ ಸಜ ಮತ್ತು ಜುಲುಮಾನೆಗಳನ್ನೂ ಸಹ ವಿಧಿಸಿರುತ್ತಾರೆ.

ಅಖಿಳ ಮಹಾರಾಷ್ಟ್ರ ಸಮ್ಮೇಳನವು ಅಹಿಂಸಾ ಅಸಹಕಾರತ್ವಕ್ಕೆ ವಿರೋಧವಾದ ಮಸೂದೆಯನ್ನು ಮಾಡಿರುವದರಿಂದ ಅಮರೊಟಿಯಲ್ಲಿ 3000 ಜನರು ಸೆಠ್ ರಾಧಕಸನ್‍ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಅಹಿಂಸಾ ಅಸಹಕಾರವೇ ಸ್ವರಾಜ್ಯಕ್ಕೆ ತಕ್ಕ ಮಾರ್ಗವೆಂದು ನಿರ್ಧರಿಸಿರುವರು.

ಯುವರಾಜರ ಆಗಮನದ ವೇಳೆ ಗಲಾಟೆಯಾದೀತೆಂದು ಲಕ್ನೋ ಡಿಪ್ಯುಟಿ ಕಮಿಷನರವರು 144 ನೇ ಸೆಕ್ಷನ್ ಮೇರೆ ಯಾವ ತರದ ಸಭೆಯೂ ಮುನಿಸಿಪಾಲಿಟಿಯೊಳಗೆ ಸೇರಕೂಡದೆಂತಲೂ. ವಿದೇಶ ಸಾಮಾನುಗಳ ಬಹಿಷ್ಕಾರದ ವಿಷಯದಲ್ಲು ಹರತಾಳ ಮತ್ತು ಖಾಯದೆ ಅವಿಧೇಯತ್ವದ ವಿಷಯದಲ್ಲು ಪ್ರಕಟಣೆಗಳನ್ನು ಪ್ರಸಿದ್ಧಮಾಡಬಾರದಾಗಿ ಹುಕ್ಕುಂ ಮಾಡಿರುತ್ತಾರೆ ಇದಕ್ಕೆ ವಿರುದ್ಧವಾಗಿ ತಾರೀಖು 9 ರಲ್ಲು ಯುವರಾಜರು ದಯಮಾಡಿಸಿದಾಗ್ಯೆ ಕೆಲವು ವ್ಯಾಪಾರಿಗಳು ಹರತಾಳವನ್ನು ಕೈಕೊಂಡಿದ್ದರು.

ಯುವರಾಜರ ಆಗಮನಕ್ಕೆ ಬರ್ಮ ಅಸಹಕಾರಿಗಳು ಇಷ್ಟಪಡುವದಿಲ್ಲವಾದ್ದರಿಂದ ಅಸಹಕಾರದ ಮುಂದಾಳುಗಳನ್ನು ಸರ್ಕಾರದವರು ಸೆರೆಹಿಡಿದಿರುವರಲ್ಲದೆ ಹರತಾಳವು ಆಗದಂತೆ ತಕ್ಕ ಬಂದೋಬಸ್ತು ಮಾಡಿರುತ್ತಾರೆ.

ಕಚ್ ಮಹಾರಾಜರವರು ಇಂಗ್ಲಾಂಡಿನಿಂದ ಹಿಂದೂದೇಶಕ್ಕೆ ಬಂದು ತಲಪಿರುತ್ತಾರೆ.

ಜಿತೇಂದ್ರಲಾಲ್ ಬೆನರ್ಜಿ ಎಂಬ ಕಲ್ಕತ್ತಾ ಪಟ್ಟಣದ ಮುಖ್ಯ ಅಸಹಕಾರಿಗೆ 2 ವರುಷಗಳ ಕಠಿಣ ಸಜವು ವಿಧಿಸಲ್ಪಟ್ಟನೆ.

ತಮಿಳುನಾಡು ಕಾಂಗ್ರೆಸ್ ಕಮಿಟಿಯವರು ಅಖಿಳ ರಾಷ್ಟ್ರೀಯ ಸಭೆಯ ಇರಾದೆಯನ್ನು ಪೂರ್ತಿಗೊಳಿಸಲು ಡ್ಯುಕ್ ಮತ್ತು ವೆಲ್ಲೂರು ಮೇಜಿಸ್ಟ್ರೇಟರವರ ಹುಕುಂ ಉಲ್ಲಂಘನೆಗೋಸ್ಕರ ರಾಷ್ಟ್ರೀಯ ಸಭೆಯ ಜನರಲ್ ಸೆಕ್ರೆಟರಿಯಾದ ಶ್ರೀಯುತ ರಾಜಗೋಪಾಲ ಚಾರ್ಯರವರೂ ಮತ್ತು ಪ್ರಾಂತಿಕ ಸೆಕ್ರೆಟರಿಯಾದ ಇ. ವಿ. ರಾಮಸ್ವಾಮಿ ನಾಯಕರವರೂ ಕೂಡ್ಲೆ ಖಾಯದೆ ಅವಿಧೇಯತ್ವವನ್ನು ಜಾರಿಗೆ ತರಬೇಕೆಂದು ನಿರ್ಧರಿಸಿರುತ್ತಾರೆ.

ಬಂಗಾಳ ಮತ್ತು ಪಂಜಾಬಿನಲ್ಲಿ ಕಳೆದವಾರ ಸುಮಾರು 400 ವಾಲಂಟೀಯರುಗಳು ಸೆರೆಹಿಡಿಯಲ್ಪಟ್ಟಿರುವದರಿಂದ 100 ಸಿಕ್ ಸ್ತ್ರೀಯರು ಅನೇಕಜನ ವೃದ್ಧರು ಮತ್ತು ಯುವಕರು ಸಹ ವಾಲಂಟಿಯರುಗಳಾಗಿ ಸೇರಿರುವರಲ್ಲದೆ ಇನ್ನೂ ಸೇರುತ್ತಿರುತ್ತಾರಂತೆ.

ಆಂಧ್ರ ಪ್ರಾಂತ್ಯದ ಮುಂದಾಳುವಾದ ಮೆ|| ಕಲ್ಲೂರು ಸುಬ್ರಾಯುಲು ರವರು ಖಾಯದೆ ಅವಿಧೇಯತ್ವದ ವಿಷಯದಲ್ಲಿ ಭಾಷಣಮಾಡಿದ್ದಕ್ಕೆ ಸೆರೆ ಹಿಡಿಯಲ್ಪಟ್ಟಿದ್ದಾರೆ.

ಸೆರೆಹಿಡಿಯಲ್ಪಟ್ಟ ವಾಲಂಟೀಯರುಗಳ ಪೈಕಿ 88 ಜನರಿಗೆ 2 ವರುಷ, 1 ವರುಷ ಮತ್ತು 6 ತಿಂಗಳ ಕಠಿಣಸಜವನ್ನು ವಿಧಿಸಿರುತ್ತಾರೆ.

ಗೂಟಿ ಡೆಪ್ಯುಟಿ ಕಲೆಕ್ಟರವರ ಆಫೀಸಿನಲ್ಲಿ ಇಬ್ಬರು ಕ್ಲಾರ್ಕರು ಬಂಗಾಳದಲ್ಲಿ ಸ್ತ್ರೀಯರನ್ನು ಸೆರೆಹಿಡಿದದ್ದಕ್ಕೋಸ್ಕರ ಅಸಹಕಾರವನ್ನು ಕೈಕೊಂಡು ತಮ್ಮ ಕೆಲಸಕ್ಕೆ ರಾಜಿನಾಮೆಯನ್ನು ಕೊಟ್ಟಿರುತ್ತಾರೆ.

ಪಂಡಿತ ಮೋತಿಲಾಲ್ ನೆಹರು ಮತ್ತು ಇತರ ಮುಂದಾಳುಗಳು ಸೆರೆಹಿಡಿಯಲ್ಪಟ್ಟದ್ದಕ್ಕೆ ಮಹಾತ್ಮಾ ಗಾಂಧಿಯವರು ತಾನು ಸಂತೋಷಪಡುತ್ತೇನೆಂದೂ ಇನ್ನು ಮುಂದೆ ಅಸಹಕಾರ ಕಾರ್ಯವು ಗಡಿಯಾರದಷ್ಟು ಕ್ರಮವಾಗಿ ನಡೆಯಬೇಕೆಂದೂ ಹೇಳಿರುತ್ತಾರೆ.

ಮಲಬಾರಿನ ಖೈದಿಗಳು ಉಸುರುಕಟ್ಟಿ ಸತ್ತ 1711 ನೇ ನಂಬರಿನ ರೈಲುಬಂಡಿಯನ್ನು ಪರೀಕ್ಷಿಸುವರೆ ಮೆ|| ಮುಂಡೇರಿ ರಾಮ ಅಯ್ಯರವರು, ರಾ|| ಬಾ|| ಕೃಷ್ಣವರ್ಮರಾಜರೂ ಮತ್ತು ಒಬ್ಬ ಇಂಜನೀಯರೂ ಸಹ ತಿರೂರಿಗೆ ಹೋಗಿ 100 ಹಿಂದುಗಳನ್ನು ಬಂಡಿಯೊಳಗೆ ಕೂರಿಸಿ ಪರೀಕ್ಷಿಸಬೇಕೆಂದೆನ್ನುವಷ್ಟರಲ್ಲಿ ರೈಲ್ವೆ ಟ್ರಾಫಿಕ್ ಇನ್ಸ್‍ಪೆಕ್ಟರ್ ರೀವ್ ಎಂಬವರು ಸಿಟ್ಟುಗೊಂಡು ಒಬ್ಬರನ್ನು ಬೈದರಂತೆ. ಪರೀಕ್ಷಿಸಲಿಕ್ಕೆ ಹೋದವರು ಬೇಸರಪಟ್ಟು ಅಧಿಕಾರಿಗಳಿಗೆ ಈ ವಿಷಯವನ್ನು ತಿಳಿಸಿ ಹಿಂತೆರಳಿದರು.

ದಂಗೆಖೋರರಾದ 50 ಮಂದಿ ಮಾಪ್ಳೈಬಂದಿವಾನರನ್ನು ಕನ್ನಾನೂರಿನ ಜೈಲಿನಲ್ಲಿಟ್ಟಿದ್ದರು. ಇವರು ಒಟ್ಟುಗೂಡಿ ಬೋರೆಂದು ಕೋಣೆಯಲ್ಲಿದ್ದ 50 ಮಂದಿ ಮಾಪ್ಳೆಯವನ್ನು ಬಂಧನದಿಂದ ಬಿಡಿಸಿ ಜೈಲ್ ಆಸ್ಪತ್ರೆಯ ಕಟ್ಟಡ ವಗೈರೆ ಅನೇಕ ಸಾಮಾನುಗಳನ್ನು ಒಡೆದುಹಾಕಿ ಹರಿತವಾದ ಸಾಮಾನುಗಳನ್ನು ತೆಗೆದುಕೊಂಡು ಜೈಲಿನ ಅಧಿಕಾರಿಗಳನ್ನು ಕೊಲ್ಲಲುದ್ಯುಕ್ತರಾಗುವಷ್ಟರಲ್ಲಿ ಅಧಿಕಾರಿಗಳು ಗುಂಡನ್ನು ಹಾರಿಸಿ ಕೆಲವರನ್ನು ಕೊಂದಮೇಲೆ ದಂಗೆಯವರು ಸಮಾಧಾನಕ್ಕೆ ಬಂದರು.

ಮೌಲ್ವಿ ಜಾಫರ್ ಹುಸೇನ್‍ರವರು ಒಂದು ವಿಶೇಷವಾದ ಕಲ್ಲಿನ ಕಾಶ್ಯವನ್ನು ದಿಲ್ಲಿಯ ವಸ್ತುಪ್ರದರ್ಶನ ಶಾಲೆಗೆ ಕೊಟ್ಟಿರುವರು. ಈ ಶಿಲಾ ಶಾಸನವು [illegible] [illegible] [illegible] ಸಂಬಂಧ [illegible] ಜೋಗಿಯುಕ್ತವಾದ್ದಂತೆ. ಇದನ್ನು ಕುಡಿಯುವ [illegible]

ಬಾಡುತ್ತಿರುವುಗಳಂತೆ ಇಟ್ಟರೆ ಇದು ತನ್ನಷ್ಟಕ್ಕೆ ತಾನೇ ಶುಚಿಯಾದ ನೀರಿನಿಂದ ತುಂಬಿಕೊಂಡು ಕಲ್ಮಷವನ್ನು ಹೊರಗೆ ಬಿಡುವದು. ನೀರು ತುಂಬಿಕೊಂಡ ಬಳಿಕ ಈ ಶಿಲಾ ಪಾತ್ರೆಯನ್ನು ಹೊರಕ್ಕೆ ತೆಗೆದು ನೋಡಿದರೆ ಜಲ ಶುದ್ಧೀಕರಣ ಪಾತ್ರೆಯೆಂದು ಅದರಮೇಲೆ ಜರ್ಮನ್ ಭಾಷೆಯಲ್ಲಿ ಬರೆದಿರುವದು.

ವಿದೇಶ.

ತಾರೀಖು 5 ರಲ್ಲು ಬ್ರಿಟಿಷ್ ಪಾರ್ಲಿಮೆಂಟಿನವರು ಐರ್‌ಲೇಂಡಿನ ಸೀನ್‌ಫೀನರ ಪ್ರತಿನಿಧಿಗಳೊಂದಿಗೆ 4½ ಗಂಟೆ ವರೆಗೆ ಚರ್ಚಿಸಿದರ ಮೇಲೆ ಮರುದಿನವೇ ಐರ್‌ಲೇಂಡಿಗೆ ಸ್ವತಂತ್ರ ದೊರೆತು "ಐರಿಷ್‌ಫ್ರೀಸ್ಟೇಟ್" ಎಂಬ ನಾಮಕರಣವನ್ನು ಹೊಂದಲಾಗಿದೆ.

ಈಜಿಪ್ಟುದೇಶದ ಜನರು ಸ್ವತಂತ್ರ ಪಡೆಯಲುದ್ಯುಕ್ತ ರಾಜ್ಯಭಾರಕ್ರಮ ವಿಲೆಗೋಸ್ಕರ ಇಂಗ್ಲಾಂಡಿಗೆ ಹೋಗಿದ್ದ ಎಡ್ಲಿ ಪಾಷಾ ಮತ್ತು ಇತರ ಪ್ರತಿನಿಧಿಗಳು ತಾರೀಖು 7 ರಲ್ಲು ಹಿಂತಿರುಗಿ ಸ್ವದೇಶಕ್ಕೆ ಬಂದು ಸೇರಿದೊಡನೆಯೇ ಅಲ್ಲಿಯಣ ಸುಲ್ತಾನರವರು ತಮ್ಮ ಪದವಿಗೆ ರಾಜೀನಾಮೆ ಕೊಟ್ಟಿರುತ್ತಾರೆ.

ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಾದ ಮೆ|| ಮಾಂಟೇಗ್ ದೊರೆಗಳು ಇನ್‌ಫ್ಲುಎಂಜಾ ಖಾಯಿಲೆಯಿಂದ ಮಲಗಿದಲ್ಲಿದ್ದಾರೆಂದು ತಿಳಿಯಬರುತ್ತದೆ

ಪೂರ್ವ ಆಫ್ರಿಕದಿಂದ ಹಿಂದಿರುಗಿ ಬಂದಿರುವ ಶ್ರೀಯುತ ಸಿ.ಯಸ್. ಆಂಡ್ರೂಸರವರು ಹೇಳಿರುವದೇನಂದ್ರೆ — ಅಲ್ಲಿಯಣ ಯುರೋಪಿಯನರು ಹಿಂದೀಯರಿಗೆ ಸಮವಾದ ಹಕ್ಕುಗಳನ್ನು ಕೊಡುವ ವಿಷಯ ಪೂರ್ತಿ ವಿರೋಧಭಾವ ಪುಳ್ಳವರಾಗಿದ್ದು, ತಮ್ಮಂತೆ ಅವರಿಗೆ ಸ್ವಾತಂತ್ರ ಕೊಟ್ಟರೆ ಆಯುಧ ಪ್ರಯೋಗವನ್ನೂ ಕೂಡ ಮಾಡುವೆವೆಂದು ಹೆದರಿಸುತ್ತಿದ್ದಾರಂತೆ.

ಫ್ರಾನ್ಸ್ ದೇಶದವರು ಅಂಗೋರಾ ಸರ್ಕಾರದೊಡನೆ ಒಡಂಬಡಿಕೆ ಮಾಡಿಕೊಂಡಿರುವದರಿಂದ ಇಂಗ್ಲಾಂಡಿನಲ್ಲಿ ಬಹಳ ಅಸಂತುಷ್ಟಿಗೆ ಕಾರಣವಾಗಿದೆ.

ಕ್ಷಾಮನಿವೃತ್ತಿಗೆ 50,000 ಸ್ಟರ್ಲಿಂಗ್ ಕ್ರಯ ಬಾಳುವಷ್ಟು ಗೋಧಿ ಮತ್ತು ಮಾಂಸವನ್ನು ಯುರೋಪದ ಮಧ್ಯ ಪ್ರಾಂತ್ಯಕ್ಕೆ ಆಸ್ಟ್ರೇಲಿಯ ಸರ್ಕಾರದವರು ಕಳುಹಿಸಿ ಸಹಾಯ ಮಾಡಿರುವರೆಂದು ತಿಳಿಯಬರುತ್ತದೆ.

ಮೆ|| ಕೊರವಂಡ್ರ ಪೊನ್ನಪ್ಪನವರು ಕಮಿಷನರ್ ಸಾಹೇಬರವರಿಗೆ ನಮ್ಮ ಯುವರಾಜರಾದ ಪ್ರಿನ್ಸ್ ಆಫ್ ವೇಲ್ಸ್‌ರವರು ಮೈಸೂರಿಗೆ ದಯಮಾಡಿಸುವದರಿಂದ ಅವರ ಸಂದರ್ಶನಾರ್ಥವಾಗಿ ಕೊಡಗಿನಿಂದ ತಾಲೋಕುವಾರ್ ಮುಖಂಡ ಜನರನ್ನು ಆಯಾಯ ತಾಲೋಕಿನ ಜನರು ಚುನಾಯಿಸಿ ಕಳುಹಿಸುವಂತೆ ತಕ್ಕ ಏರ್ಪಾಡು ಮಾಡಬೇಕಾಗಿಯೂ, ಬರೆದ ಕಾಗದಕ್ಕೆ ಬಂದ ಜವಾಬನ್ನು ವಯೋವೃದ್ಧರಿಂದ ಮತ್ತು ಅನುಭವ ಶಾಲಿಗಳಾದ ಮೆ|| ಪೊನ್ನಪ್ಪನವರ ಕೋರಿಕೆ ಮೇರೆ ಪ್ರಕಟಿಸಲಾಗಿದೆ.

ಕಾಗದದ ತರ್ಜುಮೆ.

ಕೊಡಗು ಕಮಿಷನರ್‌ರವರ ಆಫೀಸಿನಿಂದ
ಮಡಿಕೇರಿ, 3-12-21.

ಡಿ.ಓ.ನಂ. 132/6

ಪ್ರಿಯ ಮೆ|| ಪೊನ್ನಪ್ಪನವರೆ,

ನೀವು ತಾರೀಖು 7 ರಲ್ಲಿ ಬರೆದ ಕಾಗದಕ್ಕೆ ಜವಾಬು ಕೊಡಲು ತಡವಾದ್ದಕ್ಕೆ ಕ್ಷಮಿಸಿ ಚಕ್ರವರ್ತಿಯವರ ಪ್ರಿಯ ಕುಮಾರರ ಸಂದರ್ಶನಕ್ಕೆ ಇಲ್ಲಿಂದ ಪ್ರತಿನಿಧಿಗಳನ್ನು ಕಳುಹಿಸುವ ಏರ್ಪಾಡು ಚೀಫ್‌ಕಮಿಷನರ್‌ರವರಲ್ಲಿ ಉಳಿದಿದೆ. ಅವರು ಅಪ್ಪಣೆ ಪಿಸುವಂತೆ ನಾವು ನಡೆಕೊಳ್ಳತಕ್ಕದ್ದು. ನಮ್ಮ ಸರಕಾರವು ಯುವರಾಜರ ಸಂದರ್ಶನಕ್ಕೆ ತಕ್ಕ ಏರ್ಪಾಡು ಮಾಡಬೇಕು ಮತ್ತು ಯುವರಾಜರ ಪ್ರೋಗ್ರಾಮ್ ಮೊದಲೇ ನೇಮಕವಾಗಬೇಕು ಆದ್ದರಿಂದ ಈ ಕೆಲಸವನ್ನು ನಾವು ಚೀಫ್‌ಕಮಿಷನರವರ ಕೈಯಲ್ಲಿಯೇ ಬಿಡತಕ್ಕದ್ದು. ಹಾಗೆ ಹೋಗುವದಕ್ಕೆ ತೀರ್ಮಾನವಾದಲ್ಲು ಇಲ್ಲಿಂದ ಮೆಂಬರುಗಳನ್ನು ಚುನಾವಣೆಯಿಂದಾಗಲೀ, ನೇಮಕದಿಂದಾಗಲೀ ಕಳುಹಿಸಲಾಗುತ್ತೆ. ನೀವು ಸೂಚಿಸುವಂತೆ ಚುನಾವಣೆಯ ತತ್ವವು ತೃಪ್ತಿಕರವಾಗಿ ನಡೆಯುವದೆಂದು ನಾನು ಯೋಚಿಸಲಾರೆ. ಅಲ್ಲದೆ ಈಗಾಗಲೇ ಕೊಡಗಿನಲ್ಲಿ ಆಗಿರುವ ಚುನಾವಣೆಗಳ ಫಲಿತಾಂಶವು ನನ್ನ ಅಭಿಪ್ರಾಯವನ್ನು ಅನುಸರಿಸುತ್ತದೆ ಎಂಬದನ್ನು ನೀವು ಒಪ್ಪುವಿರಿ.

(I do not think that the principle of election you suggest would work satisfactorily, and the results of recent elections in Coorg must, you will admit, support the view).

[ಈಗಾಗಲೇ ಆಗಿರುವ ಚುನಾವಣೆಯಿಂದ ದೇಶಕ್ಕೆ ಅತೃಪ್ತಿಕರವಾದ ಸಂಗತಿಯು ಏನೊಂದೂ ಆಗಿರುವ ಹಾಗೆ ಕಾಣುವದಿಲ್ಲ. ಚುನಾವಣೆಯೆಂಬದರ ಅರ್ಥವೇನೆಂಬುದೇ ಪ್ರಜಾಹಿತ, ಪ್ರಜಾಪಕ್ಷದ ಜನರನ್ನು ಪ್ರಜೆಗಳು ಚುನಾಯಿಸುವದಲ್ಲವೇ? ಬ್ರಿಟಿಷ್ ಚಕ್ರಾಧಿಪತ್ಯವು ಈಗಿನ ಹೊಸ ಸುಧಾರಣೆಗಳನ್ನು ಕೊಟ್ಟದ್ದು, ಪ್ರಜೆಗಳಿಗೆ ಚುನಾವಣೆಯ ರೂಪದಿಂದ ತಮಗೆ ಇಷ್ಟವಿರುವ ಜನರನ್ನು ನೇಮಕಮಾಡಿ ರಾಜ್ಯಾಧಿಕಾರವನ್ನು ಪ್ರಜೆಗಳ ಪ್ರತಿನಿಧಿಗಳ ಮೂಲಕ ನಡೆಸಬೇಕೆಂದಲ್ಲವೇ? ಕಮಿಷನರವರು ಇದಕ್ಕೆ ಹೀಗೆ ಬರೆದದ್ದು ಬ್ರಿಟಿಷ್ ರಾಜ್ಯಭಾರದ ಪದ್ಧತಿಗೆ ವಿರೋಧವಾಗಿರುವದಾಗಿ ಕಾಣುತ್ತೆ. ಇಂಗ್ಲೀಷ್ ಜನರು ಸ್ವತಂತ್ರವಿಹಾರಿಗಳು ಮತ್ತು ಪ್ರಪಂಚಕ್ಕೆ ಮಾದರಿಯಾಗಿದ್ದು ಎಲ್ಲರಿಗೂ ಪ್ರಜಾಪ್ರತಿನಿಧಿತ್ವವನ್ನು ಕಲಿಸುವವರು ಇದಕ್ಕೆ ವಿರೋಧವಾಗಿ ಕಳೆದ ರಿಫಾರಂ ಮೀಟಿಂಗಿನಲ್ಲು ಸು|| ಬಾಲ್‌ಸಾಹೇಬರು ಅವರಕಡೆಜನರನ್ನು ಕೌನ್ಸಿಲಿಗೆ ಸರಕಾರವೇ ನೇಮಕಮಾಡಬೇಕೆಂದು ಹೇಳಿದರು. ಇದರಿಂದ ನಮ್ಮ ದೇಶದ ಅಧಿಕಾರಿಗಳು ಮತ್ತು ಯುರೋಪಿಯನ್ ಪ್ಲಾಂಟರುಗಳು ಬ್ರಿಟಿಷ್‌ರಾಜ್ಯಭಾರದ ನೀತಿಯಾದ ಪ್ರಜಾಪ್ರತಿನಿಧಿತ್ವಕ್ಕೆ (ಚುನಾವಣೆಗೆ) ಎಷ್ಟರಮಟ್ಟಿಗೆ ಉತ್ತೇಜನಕೊಡುತ್ತಾರೆಂಬುದು ವಾಚಕರೇ ಊಹಿಸಿಕೊಳ್ಳಿರಿ. ಈ ರೀತಿ ನೇಮಕಮಾಡಿ ಕಳುಹಿಸಲ್ಪಡುವ ಪ್ರತಿನಿಧಿಗಳು ಪ್ರಜಾಪಕ್ಷದವರಲ್ಲವೆಂಬುದನ್ನು ಹೇಳಬೇಕಾಗಿಲ್ಲ.

ಎಡಿಟರ್]

"ಯಂಗ್ ಇಂಡಿಯಾ" ಪತ್ರಿಕೆಯಲ್ಲಿ ಮಹಾತ್ಮಾ ಗಾಂಧಿಯವರು ಬರೆದದ್ದು.

ಒಬ್ಬ ಬ್ರಾಹ್ಮಣರು ನನಗೆ ತಂಜಾವೂರಿನಿಂದ ಬರೆದು ಕಳುಹಿಸಿರುವದೇನೆಂದರೆ—"ನಾನು ಮತ್ತು ನನ್ನ ತಮ್ಮನು ಸೋಮಾರಿಯಾಗಿರುವದಕ್ಕಿಂತ ಏನಾದರೂ ಕೆಲಸ ಮಾಡುತ್ತಿರುವದು ಲೇಸೆಂತ ಯೋಚಿಸಿ ಉಕ್ಕೆವು. ಅದಕ್ಕಾಗಿ ನಮ್ಮ ಗ್ರಾಮದವರು ಬೇಸರಪಟ್ಟು ನಮ್ಮನ್ನು ಬಹಿಷ್ಕಾರ ಮಾಡಿದ್ದಾರೆ. ಕುಂಭಕೋಣಮಿನ ಶಂಕರಾಚಾರ್ಯರು ನಮ್ಮ ಪ್ರಾಂತ್ಯ ಬಂದಿದ್ದಾಗ ನಮ್ಮ ಜೀವನಕ್ಕಾಗಿ ಕೆಲಸಮಾಡಿದ ಪಾಪಕ್ಕಾಗಿ ನಮ್ಮ ಕಾಣಿಕೆಯನ್ನು ಸ್ವೀಕರಿಸಲಿಲ್ಲ" ಅವರ ದೇಶೋಪಕಾರದ ಕೆಲಸಕ್ಕೆ ನಾನು ಅವರನ್ನು ಸ್ತೋತ್ರಮಾಡುತ್ತೇನೆ ಜುಲುಂ ನಡಿಸುವ ಸಮಾಜದವರು ಬಹಿಷ್ಕಾರ ಮಾಡಿದರೆ ನಮಗೆ ಮರ್ಯಾದೆ ಸಿಕ್ಕಿದಂತಾಯಿತು. ಇಂಥಾ ಬಹಿಷ್ಕಾರವನ್ನು ಎಲ್ಲರೂ ಹಾರೈಸಬೇಕು. ಬ್ರಾಹ್ಮಣರು ನೇಗಿಲನ್ನು ಮುಟ್ಟಬಾರದೆಂಬುದು ವರ್ಣಾಶ್ರಮಧರ್ಮದ ವಿಪರೀತಾರ್ಥವಾಗಿದೆ ಭಗವದ್ಗೀತೆಯ ಅರ್ಥವನ್ನು ದುರುಪಯೋಗಪಡಿಸಿದಂತಾಯಿತು. ಆಯಾ ಜಾತಿಗಳಿಗೆ ಹೇಳಿದ ಗುಣಗಳು ಬೇರೆ ಜಾತಿಗೆ ಇರಬಾರದೆಂತಲ್ಲ. ಧೈರ್ಯವು ಕ್ಷತ್ರಿಯರ ಸ್ವಂತ ಹಕ್ಕಲ್ಲ. ಶಮೆಯು (ಸಮಾಧಾನವು) ಬ್ರಾಹ್ಮಣರ ಸ್ವಂತ ಹಕ್ಕಲ್ಲ. ಬ್ರಾಹ್ಮಣ, ಕ್ಷತ್ರಿಯ, ಶೂದ್ರರು ಗೋರಕ್ಷಣೆ ಮಾಡಬೇಡವೇ? ಗೋವನ್ನು ಕಾಪಾಡಲಿಕ್ಕಾಗಿ ಪ್ರಾಣಬಿಡಲು ತಯಾರಿಲ್ಲದವನ ಹಿಂದೂ ಎನಿಸಿಕೊಳ್ಳಲು ಯೋಗ್ಯನೋ? ಗೋರಕ್ಷಣೆಯು ವೈಶ್ಯರ ಕೆಲಸವೇ ಹೊರತು ಬೇರೆಯವರಿಗೆ ಸಂಬಂಧವಿಲ್ಲವೆಂತ ಮದ್ರಾಸ್ ಪ್ರಾಂತ್ಯದವರೊಬ್ಬರು ಬರೆದಿದ್ದಾರೆ. ಇಷ್ಟು ಹಮ್ಮಿಯಿಂದ ಕೂಡಿದ ಮೂಢತನವಿರುವಾಗ ಬಂದ ತೊಂದರೆಗಳನ್ನೆಲ್ಲಾ ಅನುಭವಿಸಿಕೊಂಡು, ಕಾಲಕ್ರಮೇಣ ಸತ್ಯಸ್ಥಾಪನೆಯಾದೀತೆಂಬ ಧೈರ್ಯದಿಂದ ಸುಧಾರಣೆಯ ಕೆಲಸವನ್ನು ಮುಂದರಿಸುವದೇ ಉತ್ತಮಕಾರ್ಯ. ದೃಢಮನಸ್ಸಿನಿಂದ ಕೂಡಿದ ಪ್ರೀತಿಯನ್ನೇ ತೋರಿಸಿದರೆ ಅಂತ್ಯದಲ್ಲಿ ಆಕ್ಷೇಪಣೆಗಳೇ ಇಲ್ಲವೆಂತಾಗುತ್ತೆ. ಸುಧಾರಕರು ತಮ್ಮ ನಿಶ್ಚಯವನ್ನು ಬಿಡಲೂ ಬಾರದು ಸಿಟ್ಟುಗೊಳ್ಳಲೂ ಬಾರದು.

ಶ್ರೀಃ.

|| ಗಣಪತಿ ಪಂಚಕ ||.

ಪಂಚಚಾಮರ ವೃತ್ತ.

[illegible] |
[illegible] ||
[illegible] |
[illegible] ||೧||

[illegible] |
[illegible] ||
[illegible] |
[illegible] ||೨||

[illegible] |
[illegible] ||
[illegible] ನಾಮಗೀತನಾ |
[illegible] ||೩||

[illegible] |
[illegible] ||
[illegible] |
[illegible] ||೪||

[illegible] |
[illegible] ||
[illegible] |
[illegible] ||

ಎಂ. ಬಿ. [illegible]

ಡಿಸ್ಟ್ರಿಕ್ಟ್ ಬೋರ್ಡ್.

ಡಿಸ್ಟ್ರಿಕ್ಟ್ ಬೋರ್ಡಿನ ಅಧಿಕಾರವು ಪ್ರತಿಪಕ್ಷದ ಜಿಲ್ಲೆಯ [illegible] ಅಧಿಕಾರಕ್ಕೆ ಸಿಕ್ಕಿದ ಹೊರತು ರೈತರಿಗೆ ಅನುಕೂಲವಾಗುವಂತ ಯಾವ ಕಾರ್ಯಗಳನ್ನು [illegible] ಆಗುವುದಿಲ್ಲ. ಕಮೀಷನರವರೇ ಪ್ರೆಸಿಡೆಂಟರಾಗಿದ್ದುಕೊಂಡು, ಅವರು ಹೇಳಿದ್ದಕ್ಕೆಲ್ಲಾ ಪ್ರತಿ ನುಡಿಯನ್ನು ಹೇಳದೆ ಸಮ್ಮತಿಸುವ ಉದ್ಯೋಗಸ್ಥರ ಬಹುಮತದಿಂದ ಕೆಲಸ ನಡಿಸುವ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ರೈತರ ಪಕ್ಷದವರ ಅಲ್ಪಜನರಿಂದ ಏನುತಾನೇ ನಡೆದೀತು. ರೈತರು [illegible] ತರಲು ಬಾರದು. ಅದನ್ನು ಯಾವ ರೀತಿಯಲ್ಲಿ ವಿನಿಯೋಗಿಸುತ್ತೀರೆಂಬದನ್ನು ಕೇಳಲು ಅವರಿಗೆ ಹಕ್ಕಿಲ್ಲ. ರೈತರು ಕೊಡುವ ತೆರಿಗೆಯನ್ನು, ನ್ಯಾಯವಾದ ರೀತಿಯಲ್ಲಿ ಖರ್ಚು ಮಾಡುವ ಜವಾಬುದಾರಿಕೆಯು ಅವರಿಗಿಲ್ಲದೆ ಹೋದರೆ, ತೆರಿಗೆ ಕೊಡುವುದೇ ಅವಶ್ಯವಿಲ್ಲವೆಂದು ಅನೇಕ ಇತರ ಸರಕಾರಗಳು ಹೇಳುತ್ತಾರೆ.

ಉದಾಹರಣೆಯಾಗಿ ಈಗತಾನೇ ಗೋಣಿಕೊಪ್ಪಲು ಆಸ್ಪತ್ರೆಯ ಕಾಂಪೌಂಡಿನಲ್ಲಿ ಒಂದು ಹೊಸ ಬಾವಿಯನ್ನು ಡಿ. ಬೋರ್ಡಿನಿಂದ ಸುಮಾರು ೧೨೫೦ ರೂ. ಖರ್ಚು ಮಾಡಿ ತೆಗೆಸಿರುತ್ತಾರೆ. ಈ ಬಾವಿಗೆ ಈ ಹಣವನ್ನು ಖರ್ಚು ಮಾಡುವ [illegible] ಮಂಜೂರಾತಿ ಕೊಡುವದಕ್ಕೆ [illegible]. ಅದರ [illegible] ಪರೀಕ್ಷೆಯಲ್ಲಿ [illegible] ಆಗಿದೆ, ರೂಪಿ ಹೇಗಿದೆ, ಎಂಬ ಕೆಲಸವನ್ನು ನೋಡತಕ್ಕವರು [illegible] ಇಲ್ಲವಾಗಿ ಕಾಣುತ್ತೆ. ಬಾವಿಯು [illegible] ಇರಬೇಕಾದವರು [illegible] ಬಾವಿಯಿಂದ ನೀರು ತೆಗೆಯಲು ಸೂರ [illegible] ಆಗುತ್ತೆ. [illegible] ಮಳೆಗಾಲದಲ್ಲಿ, [illegible] ಮತ್ತು [illegible], ಬಾವಿಗೆ ಬೀಳುವುದರಿಂದ ಬಾವಿಯು ಕಟ್ಟಿಗೆ ಒಡೆದು ಬಂದು [illegible] ಅಪಾಯಕರವಾಗಿ [illegible]. ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳು ಈ ವಿಷಯ ತಪ್ಪಿ ಮಾಡಿದರು. [illegible] ಇಂಥಾ ಅನಾವಶ್ಯ ಖರ್ಚು ಈ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಪರಿಶೋಧಿಸಿದರೆ ಇನ್ನೆಷ್ಟು ಇರುವುದೋ ತಿಳಿಯದು. ರೈತರ ಪ್ರತಿನಿಧಿಗಳಿಗೆ ಕೇಳುವ ಅಧಿಕಾರವಿದ್ದರೂ ಸರಿಯಾಗುವುದಿಲ್ಲ. ಉದ್ಯೋಗಸ್ಥರು ತಮ್ಮ ಇಷ್ಟಾನುಸಾರ ನಡಿಸುವ ಈ ಡಿಸ್ಟ್ರಿಕ್ಟ್ ಬೋರ್ಡಿನ ಪೂರ್ಣ ಸ್ವಾತಂತ್ರ್ಯವು ರೈತರ ಪ್ರತಿನಿಧಿಗಳಿಗೆ ಸಿಕ್ಕಿದ ಹೊರತು, ಇಂಥಾ ಅಸಂಗತಿಗಳು ಸರಿಯಾಗುವುದು ಕಷ್ಟ[illegible] ಎಷ್ಟು [illegible] ತೀರದು. ಆದ್ದರಿಂದ ದೇಶದ ಎಲ್ಲಾ ಜನರೂ, ಈ ಬಾವಿನಲ್ಲಿ ತಮ್ಮ [illegible] ಬಿಟ್ಟು, ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಅಧಿಕಾರವನ್ನು ಒಡನೇ ಬಿಟ್ಟು ಕೊಡುವಂತೆ ಸರಕಾರದವರನ್ನು ಒತ್ತಾಯಮಾಡಿ, ಪೂರ್ಣ ಅಧಿಕಾರವನ್ನು ಪಡೆದ ವಿನಹ ದೇಶೀಯ ಚುನಾವಣೆಯಿಂದ ಕಳುಹಿಸುವ ಮೆಂಬರುಗಳ ಜವಾಬುದಾರಿಕೆಯು [illegible] ಬಹಳ ಕಷ್ಟವಾಗುತ್ತೆ.

ಅಶ್ವಿನಿ ಪತ್ರೆ.

[illegible]

ಈ ಸಂಚಿಕೆಯಲ್ಲು ಜನರು ತಮ್ಮ ಆಲಸ್ಯವನ್ನು ಬಿಟ್ಟು [illegible] ವಿಧಾನವನ್ನು [illegible] ವಿಚಾರಿಸೋಣ. ಈ ಪ್ರಪಂಚದಲ್ಲಿರುವ ಸಕಲ ಜೀವರಾಶಿಗಳು ಯಾವಾಗಲೂ ಸುಖದಿಂದಲೇ ಜೀವಿಸಬೇಕೆಂಬ ಇಚ್ಛೆಯಿಂದ ತಮ್ಮ ತಮ್ಮ ಕೆಲಸಗಳನ್ನು ಮಾಡುವವುಗಳಾಗಿವೆ. ಪ್ರಾಣಿಗಳು ಹುಲ್ಲು ಸೊಪ್ಪು ಗೆಡ್ಡೆ ಗೆಣಸುಗಳನ್ನೂ ಮನುಷ್ಯರು ಭತ್ತ ರಾಗಿ ಗೋಧಿ ಹಾಲು ಬೆಣ್ಣೆ ಮೊದಲಾದ ಪದಾರ್ಥಗಳನ್ನೂ ತಿಂದು ಜೀವಿಸುವದಾಗಿದೆ. ನಮ್ಮ ಶರೀರ ಸಂರಕ್ಷಣೆಗೆ ಆಹಾರವೇ ಮುಖ್ಯೋಪಾಧಿ. ಈ ಆಹಾರವನ್ನೂ ಮತ್ತು ನಾನಾ ಬಗೆಯ [illegible] ಯನ್ನು ಸಂಗ್ರಹಿಸಲಿಕ್ಕಾಗಿ ನಾವು ಅನೇಕತರದ ವೃತ್ತಿಗಳನ್ನು ಮಾಡಬೇಕಾಗಿದೆ. ಇವುಗಳ ಪೈಕಿ ಈ ದೇಶದಲ್ಲಿ ವ್ಯವಸಾಯ, ವ್ಯಾಪಾರ, ಸರಕಾರಿ ಮತ್ತು ಇತರ ನೌಕರ ಇವೇ ಮುಖ್ಯವಾಗಿವೆ.

ಈ ಮೇಲ್ಕಂಡ ವೃತ್ತಿಗಳನ್ನು ಕೈಕೊಳ್ಳುವ ಪೈಕಿ ಅನೇಕ ಜನರು ಆ ಸರ್ವ ವೃತ್ತಿ ನಿಯಮಗಳ ಧರ್ಮಕ್ಕೆ ವಿರುದ್ಧವಾಗಿ ನಡೆಯುವ [illegible] ದಷ್ಟು ಮಟ್ಟಿಗೆ ಕೆಲಸಮಾಡಿ ಅದರಲ್ಲಿ ಸುಖವನ್ನು ಪಡೆದಲ್ಲಿ ಮೋಕ್ಷವನ್ನೂ ಪಡೆಯುತ್ತಾರೆ. ಇನ್ನು ಕೆಲವರು ತಮ್ಮ ವೃತ್ತಿ ನಿಯಮಗಳನುಸಾರವಾಗಿ ನಡೆಯದೆ ಮೃಗಗಳಂತೆ ತಮಗೆ ಬೇಕಾದ ಪದಾರ್ಥಗಳನ್ನು ಸಂಗ್ರಹಿಸಿಕೊಳ್ಳದೆ ಇದರಲ್ಲಿಯೂ ಪರದಲ್ಲಿಯೂ ಸಹ ಅನೇಕ ಕಷ್ಟಗಳನ್ನು ಅನುಭವಿಸುತ್ತಾರೆ.

ಈ ದೇಶದಲ್ಲಿ ಅನೇಕರು-ದ ಭೂಮಿ ವ್ಯವಸಾಯ ಕಸಬುದಾರರಿಗೆ ಸಾಧಾರಣ ಮೇ ತಿಂಗಳು ೧೫ ರ ಮೇಲೆ ಸೆಪ್ಟೆಂಬರ್ ತಿಂಗಳು ೧೫ ರವರೆಗೆ ಉಳುವುದು ನಾಟಿ ನೆಡುವುದು ವಗೈರೆ ಕೆಲಸಗಳೂ ಮತ್ತು ಡಿಸೆಂಬರ್ ೧೫ ರ ಮೇಲೆ ಮಾರ್ಚ್ ತಿಂಗಳು ೧೫ ರ ವರೆಗೆ ಕುಯಿಲು ಮತ್ತು ಒಕ್ಕಲು ಕೆಲಸಗಳೂ ಇವೆ. ಈ ಕೆಲಸವನ್ನು ಪೂರೈಸಲಿಕ್ಕೆ ಅವರಿಗೆ ಮಲೆಯಾಳ, ದಕ್ಷಿಣಕನ್ನಡ ದೇಶಗಳಿಂದ ನೌಕರರ ಸಹಾಯವೂ ಬೇಕಾಗಿದೆ. ಪೂರ್ವದ "ಕೊರುಕಾರ" ಪದ್ಧತಿ ಈಗ ಇಲ್ಲದೆ ಒಳ್ಳೆಯ ಜನರೆಲ್ಲರೂ ಯಜಮಾನರಾಗಿರುವುದರಿಂದ ಪ್ರತಿಯೊಬ್ಬನೂ ತನ್ನನ್ನೂ ಮತ್ತು ತನ್ನನ್ನು ಹೊಂದಿಕೊಂಡಿರುವವರನ್ನೂ ಪೋಷಣೆ ಮಾಡಲಿಕ್ಕೆ ತಕ್ಕ ಆಲೋಚನಾಶಕ್ತಿಯನ್ನೂ ಶರೀರಶಕ್ತಿಯನ್ನೂ ಉಪಯೋಗಿಸಬೇಕಾಗಿದೆ. ಪೂರ್ವದಲ್ಲಿ ಮನೆಯ ಯಜಮಾನನು ಬೇರೆಯವರಿಗಾಗಿ ಆಲೋಚನೆಯ ಕೆಲಸವನ್ನೂ ಇತರರು ತಮ್ಮ ಶರೀರದಿಂದ ಕೆಲಸವನ್ನು ಮಾಡುತ್ತಿದ್ದರು. ಈಗ ಪ್ರತಿಯೊಬ್ಬನು ಜ್ಞಾನ ಮತ್ತು ಕರ್ಮೇಂದ್ರಿಯಗಳ ಕೆಲಸವನ್ನು ಆತನೇ ಮಾಡಬೇಕಾದುದರಿಂದ ಈಗ ನಾವು ಇರುವಗಳಂತೆ ಎಡೆಬಿಡದೆ ಚುರುಕುಬುದ್ಧಿಯಿಂದಲೂ ಎಚ್ಚರಿಕೆಯಿಂದಲೂ ಕೆಲಸಮಾಡಬೇಕಾಗಿದೆ. ಆದುದರಿಂದ ಪ್ರಿಯವಾಚಕರೇ, ನಮ್ಮ ನಾಟಿ ಕೊಯಿಲು ಮತ್ತು ಒಕ್ಕಲುಕೆಲಸ ಪೂರೈಸಿದ ಬಳಿಕ ನಾವು ಉದಾಸೀನರಾಗಿ ಪೇಂಟೆ ಅಂಗಡಿಗಳಲ್ಲಿ ಇರುವುದನ್ನೂ, ನೆಂಟರಿಷ್ಟರ ಮನೆಯನ್ನು ಸುತ್ತುವುದನ್ನೂ, ಉಪಯೋಗವಿಲ್ಲದ ಪಂಚಾಯಿತಿಕೆ ಮಾಡುವುದನ್ನೂ, ಬೇಟೆಮಾಡುವುದನ್ನೂ ಕೋರ್ಟು ಕಛೇರಿಗಳಿಗೆ ಹೋಗುವುದನ್ನು ನಿಲ್ಲಿಸಿ ನಮ್ಮ ದೇಶದ ಸುತ್ತುಮುತ್ತು ಇರುವ ದೇಶಗಳ ಸಹೋದರ ಸಹೋದರಿಯರಂತೆ ತುಂಬಾ ಕಷ್ಟಪಟ್ಟು ಸುಖಜೀವಿಗಳಾಗಲು ಪ್ರಯತ್ನಿಸಬೇಕು. ವ್ಯವಸಾಯದ ಕೆಲಸ ತೀರಿದ ಕೂಡಲೆ ನಾವು ನಮ್ಮ ಹಿತ್ಲುಗಳಲ್ಲಿ ಕಾಫಿ ಬೆಳೆಯುವ ಕಡೆ ಕಾಫಿಯನ್ನೂ ಬಾಳೆ ಮಾವಿನಮರ ಅಡಿಕೆ ತೆಂಗು ಮೊದಲಾದುವುಗಳು ಬೆಳೆಯುವ ಕಡೆ ಅವುಗಳನ್ನೂ ತರಕಾರಿಗಳನ್ನೂ ನೆಟ್ಟು ಬೆಳಸಬೇಕು. ನಮಗೆ ಬೇಕಾದಷ್ಟು ಗದ್ದೆಗಳಿರುವುದರಿಂದ ಬೇಸಿಗೆ ಕಾಲದಲ್ಲಿ ನೀರಿರುವ ಕಡೆ ತರಕಾರಿ ತೋಟಗಳನ್ನು ಮಾಡಿ ಬೇಕಾದರೆ ಪಕ್ಕದಲ್ಲಿ ಒಂದು ಗುಡಿಸಲು ಹಾಕಿಕೊಂಡು ಬೇಸಿಗೆಯ ಬಿಸಿಲಿನ ಕಾಲದಲ್ಲಿ ಅಲ್ಲಿದ್ದು ಸದ್ಗ್ರಂಥಗಳನ್ನು ಓದುತ್ತಾ ಬಿಸಿಲು ತಂಪಾದ ಬಳಿಕ ಬಾಣೆಜಾಗದಿಂದ ತರಗೆಲೆ ಸಗಣಿ ಮತ್ತು ಬೂದಿ ಮಣ್ಣು ಮೊದಲಾದ ಗೊಬ್ಬರಗಳನ್ನು ಕೂಡುಹಾಕುತ್ತಾ ಗೆರೆಕಾಡು ಕಡಿಯುವ ಕೋಡು ರಿಪೇರಿ ಮೊದಲಾದ ಕೆಲಸಗಳನ್ನು ಮಾಡಬೇಕು. ವ್ಯವಸಾಯಗಾರನು ತನ್ನ ಆರಂಭಕ್ಕೆ ಬೇಕಾಗುವ ಎಲ್ಲಾ ಸಾಹಿತ್ಯಗಳನ್ನು ತಾನೇ ಮಾಡಿಕೊಂಡು ಸ್ವತಂತ್ರ ಜೀವಿಯಾಗಲು ಪ್ರಯತ್ನ ಪಡಬೇಕಾಗಿದೆ.

ಯಾವದೊಂದು ಕೆಲಸವೇ ಆಗಲಿ ಪರಸ್ಪರಸಹಾಯವಿಲ್ಲದೆ ಆಗುದಿವುಲ್ಲವಾದುದರಿಂದ ನಾವು ಗ್ರಾಮಾಗ್ರ ಅಂಬಲಗಳಲ್ಲಿಯಾಗಲೀ ಯಾ ಇತರ ಕಡೆಗಳಲ್ಲಾಗಲೀ ಸಣ್ಣ ಕಟ್ಟಡಗಳನ್ನು ಕಟ್ಟಿಕೊಂಡು ಒಳ್ಳೆ ಪತ್ರಿಕೆಗಳನ್ನೂ ಪುಸ್ತಕಗಳನ್ನೂ ಓದಬೇಕಲ್ಲದೆ ವಾರಕ್ಕೊಮ್ಮೆಯಾದರೂ ಗ್ರಾಮದ ಹಳಬರೂ ಯುವಕರೂ ಜೊತೆ ಸೇರಿ ಅವರವರ ಕುಟುಂಬದ ಗ್ರಾಮದ ಮತ್ತು ದೇಶದ ಅಭಿವೃದ್ಧಿಗಾಗಿ ಮಾಡಬೇಕಾದ ಕೆಲಸಗಳ ವಿಷಯ ಮಾತಾಡುತ್ತಲೂ ದನಕರುಗಳನ್ನು ಸಾಕುವುದರ ವಿಷಯ ವ್ಯವಸಾಯ, ಭತ್ತ ಮೊದಲಾದುವುಗಳಲ್ಲಿ ವ್ಯಾಪಾರ ಮಾಡಲು ಕೊಡಬೇಕಾದ ಸಹಾಯ ವಿಷಸೇವನೆಯನ್ನು ನಿಲ್ಲಿಸುವ ವಿಷಯ ಇಟ್ಟಿಗಾಗಿ ಈಗ ಖರ್ಚುಮಾಡುವ ೧೫ ಲಕ್ಷ ರೂ. ಗಳನ್ನು ಕಡಿಮೆಮಾಡುವ ವಿಧಾನ ಸಾಲುವ ಮತ್ತು ನ್ಯಾಯ್ಯವ ಕೈಗಾರಿಕೆಗಳ ವಿಷಯ ಸಹ ಉಪನ್ಯಾಸಗಳನ್ನು ಕೊಟ್ಟು ತಿಳುವಳಿಕೆಯನ್ನು ಹೆಚ್ಚಿಸಬೇಕು. ಏನಾದರೂ ಕಲಹಗಳು ಉಂಟಾದಪಕ್ಷದಲ್ಲು ಈಗಿನಹಾಗೆ ನಡೆದ ವಿಷಯವನ್ನಾಗಲೀ ನಡೆಸಿದ ಜನರ ವಿಷಯವಾಗಲೀ ಏನೂಗೊತ್ತಿಲ್ಲದ ಲಾಯರುಗಳಿಗೂ ಸ್ಟ್ಯಾಂಪಿಗೂ ಫೀಸಿಗೂ ಅನೇಕ ರೂಪಾಯಿಗಳನ್ನು ಖರ್ಚುಮಾಡುವುದಕ್ಕಿಂತಲೂ ಪ್ರತಿ ಗ್ರಾಮದಲ್ಲಿಯೂ ಜಾತಿಭೇದಗಳನ್ನಿಡದ ಪಂಚಾಯಿತರನ್ನು ನೇಮಿಸಿಕೊಂಡು ಕಲಹಗಳನ್ನು ಸುಲಭರೀತಿಯಲ್ಲಿ ತಿಳಿಸಿಕೊಳ್ಳುತ್ತಾ ಪ್ರತಿ ಗ್ರಾಮದಲ್ಲಿಯೂ. ಕಲಹ, ಚೋರತನ, ದುರ್ಗುಣತೆಗಳನ್ನು ಬೇರುಸಹಿತ ಕಿತ್ತುಹಾಕಿ ಒಗ್ಗಟ್ಟನ್ನು ಹೆಚ್ಚಿಸುವಂತ ಪ್ರಯತ್ನವನ್ನು ಪ್ರತಿಯೊಬ್ಬನೂ ಅದಷ್ಟು ಶ್ರದ್ಧೆಯಿಂದ ಮಾಡಬೇಕಾದ ಕೆಲಸವಾಗಿದೆ. ಹೀಗೆ ನಾವು ನಮ್ಮ ಕಾಲುಗಳಮೇಲೆ ನಿಲ್ಲಲು ಪ್ರಯತ್ನಿಸಿದರೆ ಸುಮ್ಮನೆ ಮೀಟಿಂಗುಗಳನ್ನು ಮಾಡಿ ಗವರ್ನ್ಮೆಂಟನ್ನು ಅದು ಕೊಡಿ ಇದು ಕೊಡಿ ಎಂದು ಪೀಡಿಸುವುದರಲ್ಲಿ ಸಮಯ ಹಾಳುಮಾಡಲವಶ್ಯ ಕಾಣುವುದಿಲ್ಲ. ಕ್ಷೌರಕನು ತನ್ನ ಕತ್ತಿಯನ್ನು ಚೆನ್ನಾಗಿ ಮಸೆದು ಹ್ಯಾಗೆ ಕ್ಷೌರಕ್ಕೆ ಉಪಯೋಗಿಸುತ್ತಾನೋ ಹಾಗೆಯೇ ಜ್ಞಾನ ಮತ್ತು ಕರ್ಮೇಂದ್ರಿಯಗಳಿಂದ ಕೂಡಿದ ಈ ದೇಹವನ್ನು ಯಾವಾಗಲೂ ಸತ್ಕಾರ್ಯಗಳಿಗೆ ಉಪಯೋಗಿಸುತ್ತಾ ಆಲಸ್ಯವೆಂಬ ನೀಚನ ಸೇವಕನಾಗಿರಲು ಬಿಡಬಾರದು.

ವ್ಯಾಪಾರಿಯು ತಾನು ಕೈಕೊಂಡ ಕೆಲಸವನ್ನು ಬಹಳ ಜವಾಬ್ದಾರಿಯಿಂದಲೂ ಸಮಾಧಾನದಿಂದಲೂ ಮತ್ತು ಧರ್ಮವನ್ನನುಸರಿಸಿ ಜನರ ಪ್ರೀತಿಗೆ ಪಾತ್ರರಾಗಿಯೂ ನಡೆಯಬೇಕು. ಹಾಗೆ ಮಾಡದೆ ಒಂದಕ್ಕೆ ಎರಡು ಲಾಭ ಪಡೆದು ಅಂಗಡಿಗಳನ್ನು ಆಳುಗಳ ಸ್ವಾಧೀನಕ್ಕೆ ಬಿಟ್ಟು ತಾನು ಇತರರ ಜೊತೆ ಸೇರಿಕೊಂಡು ಪಗಡೆ, ಇಸ್ಪೀಟು ಮೊದಲಾದ ಆಟಗಳಲ್ಲಿ ಸಮಯವನ್ನು ಹಾಳುಮಾಡುವುದು ಪುರುಷಾರ್ಥವಲ್ಲ.

ಸೇವಕಾವೃತ್ತಿಯನ್ನು ಕೈಕೊಂಡ ಸರಕಾರಿ ಉದ್ಯೋಗಸ್ಥನು ಅಥವಾ ಇತರ ಸೇವಾವೃತ್ತಿಯಲ್ಲಿರುವನು ಸಹ ತಮ್ಮ ಯಜಮಾನರ ಕಟ್ಟಳೆಗಳನುಸಾರವಾಗಿ ನಡೆದುಕೊಳ್ಳದೆ ಜನರಿಗೆ ತೊಂದರೆ ಕೊಡುತ್ತಲೂ ಸಮಯ ಹಾಳುಮಾಡುತ್ತಲೂ ಇತರರು ಮಾಡುವ ಕೆಲಸಗಳಲ್ಲಿ ತಪ್ಪು ಕಂಡುಹಿಡಿಯುತ್ತಾ ತಮ್ಮ ತಪ್ಪುಗಳನ್ನು ಬಚ್ಚಿಟ್ಟುಕೊಂಡು ಅವುಗಳನ್ನು ತಿದ್ದಿಕೊಳ್ಳದೆ ಉದಾಸೀನರಾಗಿ ತಮ್ಮ ಹೆಂಡತಿ ಮಕ್ಕಳ ಗುಣಕರ್ಮಸ್ವಭಾವಗಳನ್ನು ಅಭಿವೃದ್ಧಿಗೆ ತಂದೆಯೂ ಇರುವುದು ಪುರುಷಾರ್ಥಿಗಳಿಗೆ ಯೋಗ್ಯವಲ್ಲ. ಆದುದರಿಂದ ಪ್ರಿಯವಾಚಕರೇ, ಸ್ವತಂತ್ರ ಜೀವನಕ್ಕೆ ಆಪೇಕ್ಷೆಯುಳ್ಳವರು ಪೂರ್ವಸುಕೃತದ ಫಲದ ದೆಸೆಯಿಂದ ದೊರೆತ ನಮ್ಮ ಮನುಷ್ಯನ ದೇಹವನ್ನು ಆದಷ್ಟು ಪುರುಷಾರ್ಥದ ಕೆಲಸಗಳಿಗೆ ಉಪಯೋಗಿಸಿ ಸುಖವನ್ನು ಅನುಭವಿಸಲು ಸರ್ವರೂ ಪ್ರಯತ್ನಪಡುವುದು ಅತ್ಯುತ್ತಮವಾಗಿದೆ.

ಪತ್ರವ್ಯವಹಾರಗಳು.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್.]

ಸ್ವಾಮಿ,

ತಮ್ಮ ತಾ|| ೨ ನೇ ಡಿಸೆಂಬರಿನ ಪತ್ರಿಕೆಯಲ್ಲಿ ಸಹಕಾರ ಸಂಘದ ಜಾಯಿಂಟ್ ಸೆಕ್ರೆಟರಿ ಸಿದ್ಧ ಸುಬ್ಬಣ್ಣಯ್ಯನವರು ಆಯಾ ಸಹಕಾರ ಸಂಘದ ಕೆಲ್ಸವನ್ನು ಇನ್ನು ಮುಂದೆ ಹ್ಯಾಗೆ ನಡೆಸಬೇಕೆಂಬುದನ್ನು ಬರೆದುದನ್ನು ನೋಡಲಾಯಿತು. ಸಂಘದ ಎಗ್ಸಿಕ್ಯುಟಿವ್ ಕಮಿಟಿ ಮೆಂಬರು ತಿಂಗಳಿಗೊಂದ್ಸಾರಿ ಕೂಡಬೇಕೆಂಬುದು ಅವರ ಅಭಿಪ್ರಾಯವೇ ಎಂದರೆ ಅವರು ಅಭಿಪ್ರಾಯ ಪಡುವ ಹಾಗೆ ನಡೆದರೇನೋ! ಬಹಳ ಒಳ್ಳೆಯದೆ! ಆದರೆ ಅದು ಅಸಾಧ್ಯ. ಯಾವ ಸಂಘಕ್ಕೇ ಆಗಲಿ ಪ್ರೆಸಿಡೆಂಟರು ಮತ್ತು ಸೆಕ್ರೆಟರಿಯನ್ನು ಮಾಡುತ್ತಾರೆ. ಅಂಥವರು ಸಂಘದ ಎಲ್ಲ ಷೇರುದಾರರ ಮತ್ತು ಕಮಿಟಿಯವರ ನಂಬಿಕೆಗೆ ಮತ್ತು ಪ್ರೀತಿಗೆ ಪಾತ್ರರಾಗುವರು. ಅಂಥವರು ಕಮಿಟಿಯ ಮಂಜೂರಾತಿಗೆ ಒಳಪಟ್ಟು ಮಾಡುವ ಎಲ್ಲಾ ಕೆಲ್ಸವು ಸರ್ವ ಸಮ್ಮತವಾಗುವದೆಂದೇ ತಿಳಿಯಬೇಕು. ಒಂದುವೇಳೆ ಅವರು ತಮ್ಮ ಇಷ್ಟದಂತೆ ನಡೆದು ಸಂಘಕ್ಕೆ ಕೇಡು ತಂದರೆ ತಮ್ಮ ಸ್ಥಳವನ್ನು ಖಾಲಿಮಾಡಿಕೊಳ್ಳುವಲ್ಲದೆ ಸಂಘದ ಮೆಂಬರುಗಳಿಂದ ತಳ್ಳಲ್ಪಡುವರು. ಎಲ್ಲಾ ಕರೆಸ್ಪಾಂಡೆನ್ಸುಗಳನ್ನು ಕಮಿಟಿಯವರಿಗೆ ಕಳುಹಿಸಿ ಮಂಜೂರಾತಿ ತೆಗೆದುಕೊಳ್ಳುವದು ಅಸಾಧ್ಯ. ಎಲ್ಲಾ ಕಮಿಟಿ ಮೆಂಬರುಗಳು ಅಷ್ಟು ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದರೆ ಈ ಸಂಘದ ಸ್ಥಿತಿಯು ಎಷ್ಟು ಅಭಿವೃದ್ಧಿಯಲ್ಲಿರುತ್ತಿತ್ತೆಂದು ವಾಚಕರೆ ಊಹಿಸಲಿ. ಮ|| ಸುಬ್ಬಣ್ಣಯ್ಯನವರು ಅಭಿಪ್ರಾಯ ಪಡುವ ರೀತಿ ತಿಂಗಳಿಗೊಂದು ಮೀಟಿಂಗು ನಡೆಸಿ ಎಲ್ಲಾ ಕೆಲಸಗಳನ್ನು ಕಮಿಟಿಯವರು ತೀರ್ಮಾನ ಮಾಡುವದು ಒಳ್ಳೆಯದೆ. ಆದ್ದರಿಂದ ತಿಂಗಳಿಗೊಂದು ಕಮಿಟಿ ಮೀಟಿಂಗು ಮಾಡಿ ಎಲ್ಲಾ ಕೆಲ್ಸವನ್ನು ಕ್ರಮವಾಗಿ ತೀರ್ಮಾನ ಮಾಡುವದು ಒಳ್ಳೆಯದೆಂಬುದೇ ನನ್ನ ಅಭಿಪ್ರಾಯ. ಪ್ರತಿ ಒಬ್ಬ ಕಮಿಟಿಯ ಅವಗಾಹನೆಗೆ ತಂದು ಪತ್ರವ್ಯವಹಾರ ನಡೆಸಿ ಕೆಲ್ಸ ಮಾಡುವುದಕ್ಕಿಂತ ಮುಂದೆ ಸೂಚಿಸಿದಂತೆ ತಿಂಗಳಿಗೊಂದು ಕಮಿಟಿ ಮೀಟಿಂಗು ಮಾಡಿದರೆ ಪ್ರತಿ ಒಬ್ಬ ಕಮಿಟಿಯವರು ಚರ್ಚಿಸಿ ಸೂಕ್ಷ್ಮತೆಯಿಂದ ಕೆಲ್ಸ ಮಾಡಲು ಬಹಳ ಅನುಕೂಲವಲ್ಲದೆ ಪ್ರತಿ ಒಬ್ಬರ ಪತ್ರವ್ಯವಹಾರದಲ್ಲು ಹೆಚ್ಚಿನ ಕಷ್ಟ ನಷ್ಟಗಳಿಗೆ ಸಂಘವು ಗುರಿಯಾಗಬೇಕಾಯಿತು.

ಅಯ್ಯಾ,

ಕಳೆದ ತಾರೀಖು 2-12-21 ರ ಸಂಚಿಕೆಯಲ್ಲು ಒಬ್ಬ ಸಹೋದರಿ ಎಂಬವರು ಬರೆದ ವಿಷಯವನ್ನು ಓದಿ ನನಗೆ ಅತ್ಯಂತ ಹರ್ಷವಾಯಿತು. ಇನ್ನು ಮುಂದಕ್ಕಾದರೂ ... ವಿದ್ಯಾವತಿಯರಾದ ... ಯರು ತಾವು ಕಲಿತ ಸುವಿದ್ಯೆಯನ್ನು ವ್ಯರ್ಥಮಾಡದೆ ಏನೂ ಅರಿಯದ ನಮ್ಮಂಥವರಿಗೆ ಅವರ ಸುಜ್ಞಾನವೆಂಬ ಬೆಳಕಿನಿಂದ ನಮ್ಮಲ್ಲಿರುವ ಅಜ್ಞಾನವೆಂಬ ಅಂಧಕಾರವನ್ನು ಹೋಗಲಾಡಿಸುವರೆಂದು ಹಾರೈಸುತ್ತೇನೆ. ನಮ್ಮ ಸಹೋದರಿಯು ಬರೆದ ರೀತಿ ಪತಿಗಳಿಗೆ ಸತಿಯರು ಏನೊಂದು ಉತ್ತರವನ್ನೂ ಕೊಡುವ ಸ್ವಾತಂತ್ರ್ಯವಿಲ್ಲವೆಂಬುದು ಸಂತೋಷಕರವೆ. ಆದರೆ ಯಾವ ದುರ್ಗುಣಕ್ಕೂ ದಾಸನಾಗಬಾರದೆಂಬುದು ಬಹಳ ವ್ಯಸನಕರವಾದ ಸಂಗತಿಯಾಗಿದೆ. ಏಕೆಂದರೆ ಎಂಥಾ ದುರ್ಗುಣಗಳಿದ್ದರೂ ಮದ್ಯಪಾನಮಾಡುವುದಿರಬಾರದೆಂದು ಮಹಾತ್ಮ ಗಾಂಧಿಯವರೂ, ಮತ್ತು ನಮ್ಮ ಕೊಡಗುಪತ್ರಿಕೆಯೂ ಬೋಧಿಸುತ್ತಿರುವಲ್ಲಿಯೂ ಕೊಡ ಬರದ ... ಪತಿಗಳಿಗೆ ಪತ್ನಿಯು ಒಂದು ಮಾತನ್ನಾದರೂ ಆಡಬಾರದೆ? ಮದ್ಯಪಾನವ್ ಎಷ್ಟು ಜನರನ್ನು ಹಾಳುಮಾಡುವುದೆಂಬುದು ಎಲ್ಲರಿಗೂ ವಿದಿತವಿದೆ. ಹಾಗೆ ತಿಳಿದೂ ಸಹ ಸುಮ್ಮನಿರುವ ಸತಿಯು ಆಕೆಯ ಪತಿಯನ್ನು ಮರಣಕ್ಕೆ ಗುರಿಮಾಡಿದಂತಾಗುವುದಿಲ್ಲವೇ? ಹೀಗಿರುವಲ್ಲಿ ಕೊಡಗಿನಲ್ಲಿರುವ "ಕರ್ಣೀಮಂತ್ರಿ" ಎಂಬ ಹೆಸರು ಆ ಸತಿಗೆ ಸಲ್ಲುವುದೇ? ಯಾವ ಪುರುಷನಾದರೂ ಅನೇಕ ಗುಣಸಂಪನ್ನನಾಗಿದ್ದು ಮದ್ಯಪಾನವೆಂಬ ಅವಗುಣ ಹೀನನಾಗಿದ್ದರೆ ಎಷ್ಟು ನಿಂದ್ಯವೆಂಬುದನ್ನು ಎಲ್ಲರೂ ಯೋಚಿಸಬಹುದು. ಈ ವಿಷಯವನ್ನು ಬರೆದ ನಮ್ಮ ಪ್ರಿಯಸಹೋದರಿಯು ಕನ್ಯೆಯಾಗಿರಬಹುದೆಂದು ನೆನಸುತ್ತೇನೆ. ಅವರು ಮದ್ಯಪಾನಮಾಡದಂಥ ಸುಶಿಕ್ಷಿತನ ಕುಮಾರಿಯಾಗಿ ಧನ್ಯೆಯಾಗಿರಬಹುದೆಂದು ನಂಬುತ್ತೇನೆ. ಅವರು ಬರೆದಂತೆ ಕ್ಷೀರಮಿಶ್ರವಾದ ನೀರಿನಲ್ಲಿ ನೀರನ್ನೇ ಹೀರಿದನೆಂಬಂತೆ ಮದ್ಯಪಾನದ ವಿಷಯ ಬರೆದೆನೆಂದು ಸಹೋದರಿಯು ವ್ಯಸನಪಡಬಾರದೆಂಬದಾಗಿ ಕೇಳಿಕೊಳ್ಳುತ್ತೇನೆ. ಸಹೋದರಿಯು ಅವರ ಈ ವಯಸ್ಸಿನಲ್ಲಿ ಇಷ್ಟು ಜ್ಞಾನವೃದ್ಧರಾದ್ದರಿಂದ ಶ್ರೀ ಭಗವಂತನು ಅವರಿಗೆ ದೀರ್ಘಾಯುಷ್ಯವನ್ನು ದಯಪಾಲಿಸಿ ಇನ್ನೂ ಹೆಚ್ಚು ವಿದ್ಯೆಯನ್ನು ದಯಪಾಲಿಸಲೆಂದು ನಾನು ಸದಾ ಆ ದಯಾಮಯನನ್ನು ಪ್ರಾರ್ಥಿಸುತ್ತೇನೆ. ಪ್ರಿಯಭಗಿನಿ.

ಸೆಂಟ್ರಲ್ ಬ್ಯಾಂಕು.

2. ಜನ್ಮದವರ ಪಂಗಡ ಪ್ರತ್ಯೇಕವಿದ್ದರೆ ಬೇರೆ ಪಂಗಡಗಳ ಕಲಹಕ್ಕೆ ಕಾರಣವಾಗುವುದೆಂದು ಮುಂದಾಳುಗಳಲ್ಲನೇಕರು ಹೇಳುತ್ತಾರೆ. ಇದು, ಎಷ್ಟರಮಟ್ಟಿಗೆ ನಿಜವಾದುದೆಂದು ನೋಡೋಣ. ಸಾಧಾರಣವಾಗಿ ದೇಶಾಭಿವೃದ್ಧಿಗೆ [illegible]ಗಳಿರುವುದು ಅಲ್ಪವಲ್ಲ. ಏಕೆಂದರೆ—ಎಲ್ಲರೂ ಕೂಡಿ ಸಂಘದಿಂದ ಮಾಡಿದರೊಬ್ಬರನ್ನು ಯಾವ ಕೌನ್ಸಿಲಿಗಾದರೂ ಕಳುಹಿಸಿದ್ದೇ ಆದರೆ ಆತನು ಕೃತಜ್ಞನಾದರೆ [illegible] ವ್ಯಾಪಾರದ [illegible] ಆವಶ್ಯಕತೆಯೂ ಜನರಿಗೆ ತಿಳಿಯುವುದಿಲ್ಲ. ಇದೇರೀತಿ ಪಟ್ಟಣಿಗರಿಗೆ ಕೃಷಿಕರ ಕಷ್ಟವೂ ಆವಶ್ಯಕತೆಯೂ ತಿಳಿಯುವುದಿಲ್ಲ. ಹಾಗೆಯೇ ಇವರಿಬ್ಬರಿಗೂ [illegible] ಆವಶ್ಯಕತೆಯೂ ತಿಳಿಯುವುದಿಲ್ಲ. [illegible] ತಮ್ಮ [illegible] ವೃದ್ಧಿಗೊಳಿಸುವುದರಲ್ಲಿ ಆಸಕ್ತರಾಗಿರುವರು. [illegible] ಇಂಗ್ಲೆಂಡ್, ಅಮೇರಿಕ ಮುಂತಾದ [illegible] ಪ್ರಸಿದ್ಧ [illegible] ಆಳ್ವಿಕೆಯ [illegible] (D[illegible] atic (ou[illegible]ns) ದ್ವೈಕರಣ [illegible] ಪ್ರತ್ಯೇಕ [illegible] ಈ ನಮ್ಮ [illegible] ಮುಂದಾಳುಗಳಿಗಿರುವ [illegible] ಆ ದೇಶಗಳ [illegible] ಬುದ್ಧಿವಂತರೋ.

ಹೀಗೆ ಎಂತಹಗಳೇ ಬೇಡವೆಂದು ಕೋರಿದ ಪಕ್ಷ ಪ್ರತಿಯೊಂದು ತಾಲ್ಲೂಕಿನಿಂದ ಯಾತಕ್ಕೆ ಒಬ್ಬೊಬ್ಬ ಪ್ರತಿನಿಧಿಗಳನ್ನು ಕಳುಹಿಸಬೇಕು? ಇದು ಒಂದು ತರದ ಪಂಗಡವಾಗಲಿಲ್ಲವೇ? ಹೀಗೆ ಬೇರೆಬೇರೆ ತಾಲ್ಲೂಕುಗಳಿಂದ ಕಳುಹಿಸಲ್ಪಟ್ಟವರು ಆ [illegible] ತಾಲೂಕುಗಳಿಗೆ ಬೇಕಾದ ಸಂಗತಿಗಳಲ್ಲಿ ಮಾತ್ರ ಲಕ್ಷ್ಯಕೊಡುವುದರಿಂದ ತಾಲ್ಲೂಕುಗಳೊಳಗೇನೇ ಮತ್ಸರ ಹುಟ್ಟುವುದಿಲ್ಲವೇ? ಇದರಿಂದ ದೇಶದ ಒಗ್ಗಟ್ಟಿಗೂ, ಅಭಿವೃದ್ಧಿಗೂ [illegible] ಬಾವಿಸಿ ಪ್ರತಿ ತಾಲ್ಲೂಕಿನಿಂದ ಪ್ರತಿನಿಧಿಗಳನ್ನು ಕಳುಹಿಸುವುದರ ಬದಲು ಇಡೀ ದೇಶಕ್ಕಾಗಿ ಒಬ್ಬನನ್ನೇ ಕಳುಹಿಸಬಹುದಲ್ಲ! ಹೆಚ್ಚು ಪಂಗಡಗಳಿರುವದರಿಂದ ಕೊಡಗಿಯುಂಟಾಗುವುದೆನ್ನುವ ಮಹನೀಯರು ಹೀಗೆ ಮಾಡಬಹುದಲ್ಲ! ಅವರು ಇದಕ್ಕೇನು ಉತ್ತರ ಕೊಡುವರೆಂದು ನಾನು ಕೇಳುವೆ.

3. ಪಂಗಡಗಳಿರುವುದರಿಂದ ಇನ್ನೂ ಅನೇಕ ಪ್ರಯೋಜನಗಳವೆ. ಇವು ಆ ಮುಂದಾಳುಗಳಿಗೆ ಲೇಶಮಾತ್ರವು ತೋರದುದರಿಂದ ಅವರು ಸುಮ್ಮನಿರುವರು. ಅವು ಯಾವವೆಂದರೆ—ಒಂದು ಸಂಘದಲ್ಲಿ ಯಾವ ಸಂಗತಿಯ ವಿಷಯ ಚರ್ಚೆ ಬಂದಾಗ್ಯೂ ಒಂದೇ ಒಂದು ಅಭಿಪ್ರಾಯವು ಮಂಜೂರಾಗುವ ಬದಲು ವಿಶೇಷ ಅಭಿಪ್ರಾಯಗಳು ಎಷ್ಟೋ ಪ್ರಯೋಜನಕರವಾದವುಗಳು [illegible] ಬೆಳಕಿಗೆ ಬರುವುದರಿಂದ ಅದಕ್ಕೆ ತಕ್ಕುದಾದವು ಹೀಗೆ ಮಂಜೂರಾದ ರಾಜ್ಯ ಅನೇಕವೇಳೆ ಒಳ್ಳೇ ಅಭಿಪ್ರಾಯವುಳ್ಳ ಕೂಡಿರುವ ಸಂದರ್ಭವಿಲ್ಲ. ಏಕೆಂದರೆ—ಕೌನ್ಸಿಲಿನಲ್ಲಿ ದೊರೆಯುವ ಹಾಗೆ ಸರಕಾರದ ಅಭಿಪ್ರಾಯಗಳು [illegible] ವರಿಗೆ ದೊರೆಯುವ ಸಾಧ್ಯವಿಲ್ಲ. ಆದುದರಿಂದ ಒಂದು [illegible] ಮಂಜೂರಾಗುವುದು. ದೇಶದ ಸ್ನೇಹ [illegible] ಹಿತಕರವೆಂದು ತಾನೇ ಯೋಚಿಸಿದ [illegible] ಗುವದು. ಬೇರೆಬೇರೆ ಪಂಗಡಗಳಿದ್ದರೇನು ಬೇರೆ ಅಭಿಪ್ರಾಯಗಳು ಸರಕಾರದ ಗಣನೆಗೆ ಬರಲು ಸಾಧ್ಯ. ಹೀಗೆ ಅನೇಕ ಅಭಿಪ್ರಾಯಗಳು ಸರಕಾರದ ಗಣನೆಗೆ ಬರುವದರಿಂದ ಸರಕಾರದವರು ಪ್ರಜೆಗಳಿಗೆ ಹಿತಕರವಾದ [illegible] ಕಟ್ಟಳೆಗಳನ್ನು ರಚಿಸಲೂ [illegible] ಸಂದರ್ಭವಾಗುವುದು. ಇದು ದೇಶದ ಏಳಿಗೆಗೆ ಕಾರಣವಾಗುವುದೋ ಇಲ್ಲವೋ ನೀವೇ ನೋಡಿ. ದೃಷ್ಟಾಂತಕ್ಕೆ [illegible] ನನ್ನೇ ತೆಗೆದುಕೊಳ್ಳೋಣ. ಅಲ್ಲಿ ದೇಶಕ್ಕೆ ಸಂಬಂಧಪಟ್ಟ ಸಂಗತಿಗಳಿಂದ ವಿಷಯ ಚರ್ಚೆ ನಡೆಯುತ್ತದೆ. [illegible] ಸರಕಾರದ ಅಭಿಪ್ರಾಯಗಳು [illegible] ಮತ್ತು ತಮ್ಮ ಮುಂದಾಳುಗಳ ಅಭಿಪ್ರಾಯಗಳು ಒಳ್ಳೇದೆಂದು. ಅವರು [illegible] ಜಾರಿ ಮಾಡುವ ಅಭಿಪ್ರಾಯವು ಅತ್ಯುತ್ತಮವೆಂದು ಹೇಳಲಿಕ್ಕಾಗುವುದಿಲ್ಲ. ಸರಕಾರದವರು ಕಷ್ಟಗಳನ್ನೂ, ಅಭಿಪ್ರಾಯಗಳನ್ನೂ ಸರಕಾರದವರು [illegible] ಸಂಘದ ಮುಂದಿಟ್ಟು ಚರ್ಚಿಸಿದ್ದರೆ [illegible] ಮಂದಕ್ಕೆ ತಳ್ಳಲ್ಪಟ್ಟ ಅನೇಕ ದೇಶಾಭಿಮಾನಿಗಳ ಅಭಿಪ್ರಾಯಗಳ (Minority view) [illegible] [illegible] ಎಂದೆ ಹೇಳಿದಂತೆ ನಡ್ಡ[illegible]

[illegible] ಜನರು ತಮ್ಮ ಪ್ರೀತಿಗೆ ಪಾತ್ರರಾದ [illegible] ಹೇಳಿದಂತೆ ಅವರ [illegible] [illegible] ಮುಂದಾಳುಗಳು, ತಮ್ಮ [illegible] ಇಲ್ಲದೆ [illegible] ಪ್ರೀತಿಪಾತ್ರರಾಗಿ [illegible] (Cheap popularity) [illegible] ಮುಂದಾಳುಗಳು [illegible] ನಲ್ಲಿ [illegible] ತಮ್ಮ ಮುಂದಾಳುಗಳೇ [illegible] ಇದೇ [illegible] ಅಭಿಪ್ರಾಯವು ಈ ಸಂಘದಿಂದ [illegible] ಮುಂದಾಳುಗಳ [illegible] ಸಂಘದಲ್ಲಿ [illegible] ಸರಕಾರದವರ [illegible]. ಹೀಗೆ ದೇಶದ [illegible] ಅಭಿಪ್ರಾಯಗಳು ಸರಕಾರದ ಗಣನೆಗೆ ಬರಲು [illegible] ಮುಂದಾಳುಗಳ [illegible] ಇಂದಿನಲ್ಲಿ [illegible] ವಾಚಕರಿಗೇ [illegible].

4. [illegible] ಸರಕಾರದವರ ಹಿಟ್ಟಿಬಿಟ್ಟ ಚಾಕರಿಮಾಡಲು ಬದ್ಧರಾಗುತ್ತಾರೆ [illegible] ಅದುದರಿಂದ ಜನ್ಮ [illegible] ಕಷ್ಟಗಳಿಗೆ ಸಂಭವವಿಲ್ಲವೆಂದು ಕೆಲವು [illegible] ಹೇಳುತ್ತಾರೆ.

ವರ್ಷಕ್ಕೊಂದುಸಲ ಪ್ರತಿಯೊಂದು ಗ್ರಾಮದಿಂದ ಒಂದೆರಡು ಜನರು ತಮ್ಮ ತಮ್ಮ ತಾಲ್ಲೂಕು [illegible]ಗಳಿಂದ ಮಡಿಕೇರಿ [illegible] ಬರಬೇಕಾಗುವದಲ್ಲದೆ ಜನ್ಮದವರು ಬೇರೆ ಯಾವ ಹಿಟ್ಟಿಬಿಟ್ಟಿ ಚಾಕರಿಯನ್ನು ಮಾಡುತ್ತಿರುವರು [illegible] ತಿಳಿಸಿ ಜನ್ಮ [illegible] ಪ್ರಯೋಜನಗಳನ್ನು, ಜನ್ಮವನ್ನು [illegible] ಸರಕಾರದವರಿಗೆ [illegible] ಸಹಾಯಮಾಡುವುದು [illegible] ನೀವೇ ಊಹಿಸಿ.

5. ಇದೇ ತಾರೀಖು 18 ರ ಪತ್ರಿಕೆಯ ಅಗ್ರಲೇಖನದಲ್ಲು ಈ ಕೆಳಗೆ ನಮೂದಿಸಿರುವ ಮೇರೆ ಬರೆದಿದ್ದುದು ವಾಚಕರ ಗಣನೆಗೆ ಯೋಗ್ಯವಾಗಿರುವುದು. "ಜನ್ಮದ ವೃತ್ತಿಯ ಭೂಮಿಯನ್ನು ನೂಸ್ಟೆಟಿಗೆ [illegible] ಸರಕಾರದವರ ಹುಕುಂ ಬೇಕು. [illegible], ಬೀಜ ಕೊಂಡುಕೊಳ್ಳಲಿಕ್ಕೆ ಮಾತ್ರ [illegible] ಪಂಜೂರಾತಿ ಸಿಕ್ಕುತ್ತೆ. [illegible] ಕಾರ್ಯಗಳಿಗೆ ಹಳೆಸಾಲ ತೀರಿಸಲು [illegible] ಸಾಧ್ಯವಿಲ್ಲ. ಈ ಉದ್ದೇಶಗಳಿಗೆ [illegible] ದೊರೆಯದಿದ್ದರೆ [illegible] ಇಂಥಾ ಉದ್ದೇಶಗಳಿಗೆ ಗಿರವಿ [illegible] ದೇಶದವರೆಲ್ಲರೂ [illegible] ಸರಕಾರದವರು [illegible]?"

ರೈತರು ಸಾಹುಕಾರರ ಹಿಡಿತದಿಂದ ಈ ರೀತಿ ತಪ್ಪಿಸಿಕೊಳ್ಳಬಹುದೆಂದು ಈ ಲೇಖನ ಬರೆದವರ ಉದ್ದೇಶವಾಗಿರಬಹುದು. ಅದಕ್ಕೆ ಅವರಿಗೆ ನಮ್ಮ [illegible] ಆದರ ಈ ಮಾರ್ಗವನ್ನು ಅವಲಂಬಿಸಿದ್ದೇ ಆದರೆ "[illegible], ಗುದ್ದಲಿ [illegible]" ("Penny wise pound foolish") [illegible] ಗಾದೆಯಂತೆ ಅಲ್ಪಲಾಭಕ್ಕಾಗಿ [illegible] ಪಡೆಯುವುದೇ ಪರಿಣಾಮ. ಹೇಗೆಂದರೆ—[illegible] ಯಾವ [illegible] ಆ [illegible] ತೀರಿಸಲು [illegible] ಭೂಮಿಯನ್ನು [illegible] ಗಿರವಿ [illegible] ಪ್ರತಿಯೊಬ್ಬನೂ [illegible] ಇದ್ದರೂ ಇಲ್ಲದಿದ್ದರೂ [illegible] ಜನ್ಮ [illegible] ಗಿರವಿ [illegible] ತೀರಿಸಲಾರದ, ಯಾರ ತೀರಿಸಲು [illegible] ತನ್ನ [illegible] ಹೀಗೆ [illegible] ಭೂಮಿ [illegible] ಸಂದರ್ಭ [illegible] ಅದುದರಿಂದ ಈ [illegible] ಮಾರ್ಗವನ್ನು ಅನ್ಯಥಾ [illegible] ವಿಷಯ [illegible] ಆಲೋಚಿಸದೆ [illegible] ಈ ರೀತಿ ಬರೆಯುವುದು ಕೇವಲ [illegible].

6. ಜನ್ಮ [illegible] [illegible] ಇದೇ ರೀತಿ ಜನ್ಮ ಬೇಡವೆಂದು [illegible] [illegible] [illegible] ಈ ರೀತಿ [illegible] ಹೇಳುತ್ತಿರಲ್ಲವೆಂದು [illegible].

ಸಾಧಾರಣವಾಗಿ ಪ್ರತಿಯೊಬ್ಬ ಕೊಡಗನಿಗೂ ಜಮ್ಮವಿರುವದರಿಂದ ಆತನು ಕೇವಲ ಗರೀಬನಾಗಲು ಮತ್ತು ಕಾರಣವಿಲ್ಲ. ಹೀಗಿರುವದರಿಂದ ದೊಡ್ಡ ಪಂಗಡ ತಲೆಬಗ್ಗಿಸದೆ ಸ್ವಾತಂತ್ರದಿಂದ ತನ್ನ ಜೀವನಮಾನವನ್ನು ಮಾಡಿಕೊಳ್ಳುವ ಸಂದರ್ಭವಿದೆ. ಇವೇ ಅಲ್ಲ ಜಮ್ಮದಿಂದ ಇನ್ನೂ ಅನೇಕ ಉಪಯೋಗಗಳಿವೆ. ಆದರೆ ದೇಶದ ಜನರಿಗೇನೇ ಇದರ ಪ್ರಯೋಜನಗಳು ವ್ಯಕ್ತವಾಗಿ ತಿಳಿಯುವುದರಿಂದ ಇದರ ವಿಷಯ ನಾನು ಹೆಚ್ಚು ಬರೆಯುವುದು ಅನಾವಶ್ಯವೆಂದು ತಿಳಿಯುತ್ತೇನೆ.

ಪ್ರಯೋಜನ ಗೊತ್ತಿದ್ದೂ ಜಮ್ಮ ಬೇಡವೆಂದು ಯಾತಕ್ಕೆ ಹೋರಾಡುತ್ತಾರೋ ನನಗೆ ತಿಳಿಯಲಶಕ್ಯ. ಹೀಗೆ ಜಮ್ಮ ಬೇಡವೆಂದು ಹೇಳುವವರು ಜಮ್ಮ ಭೂಮಿ ಇಲ್ಲದವರೋ ಅಥವಾ ಜಮ್ಮವಿದ್ದೂ ಅದರ ಪ್ರಯೋಜನಗಳನ್ನು ತಿಳಿಯಲಾರದಂಥವರೋ ಎಂಬುದನ್ನು ತಿಳಿಯಲಾರೆ. ಈ ವಿಷಯ ಹೆಚ್ಚು ಗಮನವಿಟ್ಟು ಆಗಿಂದಾಗ್ಗೆ ಬರೆಯುವ ಉತ್ಸಾಹವುಳ್ಳವರು ಜಮ್ಮವಿಲ್ಲದವರಲ್ಲಿ ಒಬ್ಬರಾಗಿರಬೇಕು. ಇಲ್ಲವೆ ಜಮ್ಮವುಳ್ಳವರಾದರೆ ಅದರ ಪ್ರಯೋಜನವನ್ನು ತಿಳಿಯದೆ ಜಮ್ಮವಿಲ್ಲದವರು ಕಲ್ಪಿಸಿದ ಬಲೆಗೆ ಸಿಕ್ಕಿದವರಾಗಿರಬೇಕು. ಇವರಿವರಲ್ಲಿ ಒಂದು ಅಥವಾ ಜಮ್ಮವಿದ್ದೂ ಹೀಗೆ ಬೇಡವೆಂದು ಬೋಧಿಸುವ ಉಪದೇಶಕರು ಕೇವಲ ಹಣದ ಆಪತ್ತಿಯಲ್ಲಿರಬೇಕು. ಈಗ ಜಮ್ಮವಿರುವುದರಿಂದ ಜಮ್ಮ ಭೂಮಿಯನ್ನು ಮಾರಲು ಸಂದರ್ಭವಿಲ್ಲ. ಜಮ್ಮದ ನಿಬಂಧನೆಗಳನ್ನು ನೋಡಿ ಸಾಹುಕಾರರು ಹಣ ಕೊಡುವುದೂ ಇಲ್ಲ. ಜಮ್ಮವೆಂಬ ಬಂಧನವನ್ನು ಹೋಗಲಾಡಿಸಿದರೆ ಹಿರಿಯರು ತಮ್ಮ ವಂಶದವರಿಗೆ ... ಹಿತಕರವಾಗಲೆಂದು ಜಾಪಿಸಿ ಮಾಡಿದ ... ಪ್ರವಾಗಿ ಮಾರಿ ತಮ್ಮ ಜೀವನೋಪಾಯಕ್ಕೆ ... ಕಾಲಕ್ಷೇಪಣ ಮಾಡಿಕೊಂಡು ... ಇವರ ಮುಖ್ಯ ಅಭಿಲಾಷೆಯೆಂದು ತೋರುತ್ತದೆ. ತಮ್ಮ ಮಕ್ಕಳು ಹೇಗಾದರೂ ತಮ್ಮ ಹೊಟ್ಟೆಪಾಡು ... ಬಿಡಲಿ ಇವರ ಅಭಿಪ್ರಾಯ. ಇವರೇ ಅಲ್ಲವೆ ಮಹನೀಯರೇ, ದೇಶವನ್ನು ಉದ್ಧರಿಸಲಿಕ್ಕೆ ಹೊರಟಿರುವ ಹಿತೈಷಿಗಳು! ನೀವೇ ಸ್ವಲ್ಪ ಯೋಚಿಸಿ ನೋಡಿ. ಜಮ್ಮ ಬೇಡವೆನ್ನುವವರು ಹೀಗೆ ಒಂದು ವೇಳೆ ತುಂಬಾ ಸಾಲಗಾರರಾಗಿರಬೇಕು. ಇಲ್ಲವೆ ತುಂಬಾ ಹಣ ... ಹೆಚ್ಚು ಆಸ್ತಿ ಮಾಡಲು ಆಶೆಯುಳ್ಳವರಾಗಿರಬೇಕು. ಇದರ ಫಲಿತಾಂಶವು ಏನಾಗಬಹುದೆಂದು ನಾನು ಹೇಳಬೇಕಾದ ಅವಶ್ಯವಿಲ್ಲವೆಂದು ನೆನಸುತ್ತೇನೆ.

"ಕೊಡಗು ಸಭಾ"

ಜಮ್ಮ ಬೇಡವೆನ್ನುವ ಮಹನೀಯರೇ ಕೊಡಗು ಸಭಾ ಸಹ ಬೇಡವೆಂದು ಹೇಳುತ್ತಾ ಬಹಳ ಬುದ್ಧಿವಂತರೆಂದು ತೋರ್ಪಡಿಸಿಕೊಳ್ಳುತ್ತಾರೆ. ಇವರ ಸ್ವಂತ ಅಭಿಪ್ರಾಯವನ್ನು ಚಿಕ್ಕ ಮಾರ್ಗದಿಂದಲೋ, ಅಲ್ಲ ಇತರ ರೀತಿಯಿಂದಲೋ, ಜನರಿಗೆ ಬೋಧಿಸಿ ಅವರನ್ನು ತಮ್ಮ ಬಲೆಗೆ ಸಿಕ್ಕಿಸಿಕೊಂಡಿರುವುದು ಈ ಮುಂದಾಳುಗಳೆನ್ನಿಸಿಕೊಳ್ಳುವವರಿಗೆ ನ್ಯಾಯವಲ್ಲ. ಇಂಥಾ ಪ್ರತ್ಯೇಕ ಸಭೆಯೊಂದರಿಂದ ಏನೇನು ಪ್ರಯೋಜನಗಳಿವೆಯೆಂದು ಜನರಿಗೆ ಸ್ಪಷ್ಟಪಡಿಸಬೇಕಾದುದು ಇವರ ಮುಖ್ಯ ಕರ್ತವ್ಯ. ಒಮ್ಮೆ ಇದರ ಪ್ರಯೋಜನವನ್ನರಿತರೆ ದೇಶಾಭಿಮಾನಿಗಳು ಇದಕ್ಕೆ ವಿರೋಧಿಸುವುದಿಲ್ಲವೆಂದು ನನಗೆ ದೃಢನಂಬಿಕೆಯಿದೆ.

ಈ ಸಭೆಯ ಉದ್ದೇಶ ಚೆನ್ನಾಗಿ ತಿಳಿಯಬೇಕಾದರೆ ಈ ಸಭೆಗೆ ವಿರೋಧವಾಗಿ ಕಲಹಮಾಡುವ ಹಿತೈಷಿಗಳು ಯಾವ ಕಾರಣಕ್ಕಾಗಿ ಇದನ್ನು ವಿರೋಧಿಸುವರೆಂದು ನೋಡುವ.

1. ಇಂಥಾ ಸಭೆಯು ಪ್ರತ್ಯೇಕ ಕೊಡಗರಿಗೆ ಮಾತ್ರ ಇದ್ದದ್ದೇ ಆದರೆ ದೇಶದ ಬೇರೆ ಪಂಗಡದವರ ಅಭಿವೃದ್ಧಿಗೆ ಕುಂದುಕವನ್ನುಂಟುಮಾಡಿದಂಥಾಗುವುದೆಂದು ಇವರು ಹೇಳುತ್ತಾರೆ. ಇದು ಹೇಗೆ ಕುಂದುಕಕ್ಕೆ ಕಾರಣವಾಗುವುದೆಂದು ನಾನು ತಿಳಿಯಲಾರೆನು. ಒಂದು ಕುಲದವರು (Family) ಕಷ್ಟಪಟ್ಟು ಮುಂದಕ್ಕೆ ಬರುವುದು ಬೇರೊಂದು ಕುಲಕ್ಕೆ ಕುಂದುಕವನ್ನುಂಟುಮಾಡೀತೇ! ಒಂದು ಕುಲದವರು ವೃದ್ಧಿಗೆ ಬಂದರೆ ಇನ್ನೊಂದು ಕುಲದವರು ಇವರನ್ನು ಅನುಸರಿಸಿ ವೃದ್ಧಿಗೆ ಬರಲು ಉತ್ತೇಜನ ಕೊಟ್ಟಂಥಾಗುವುದಿಲ್ಲವೇ! ಇದಲ್ಲದೆ, ಇನ್ನೊಂದು ಪಂಗಡದವರಿಗೆ ಇಂಥಾ ಸಭೆಯೊಂದರಿಂದ ಕೇಡುಂಟಾಗುವದೆಂಬ ಭಯವೇನು? ಪರಪಂಗಡಕ್ಕೆ ಕುಂದುಕವುಂಟಾಗುವ ಸಂದರ್ಭವಿದೆಯೆಂದು ಊಹಿಸಿ ತಮ್ಮ ತಮ್ಮ ... ಪಂಗಡವನ್ನು ಒಳ್ಳೇ ಮಾರ್ಗದಿಂದಲೂ ಕೂಡ, ಮುಂದಕ್ಕೆ ತರಲು ಪ್ರಯತ್ನಿಸಬಾರದೇನು? ಇನ್ನೊಂದು ಕುಲದವರು ಸೋಮಾರಿಗಳಾಗಿದ್ದರೆ ಅದೇ ರೀತಿ ತಾವೂ ಸೋಮಾರಿಗಳಾಗಿರಬೇಕೆಂಬುದೇ ಇವರ ಅರ್ಥವಾಗಿ ಕಾಣುತ್ತದೆ. ಇದು ಎಷ್ಟು ಅರ್ಥಹೀನವಾದ ಅಭಿಪ್ರಾಯವೆಂದು ನಾನು ಹೇಳುವ ಅವಶ್ಯವಿಲ್ಲ. ಪ್ರತಿ ಕುಲದವರೂ ತಮ್ಮ ತಮ್ಮ ಕುಲಗಳ ವೃದ್ಧಿಯಲ್ಲಿ ಆಸಕ್ತರಾದರೆ ಒಂದು ಜನಾಂಗವೇ ಮುಂದಕ್ಕೆ ಬಂದಂತಾಯಿತು. ಇದೇ ರೀತಿ ಒಂದು ಜನಾಂಗವು ಕಷ್ಟಪಟ್ಟು ಮುಂದಕ್ಕೆ ಬಂದಲ್ಲಿ ಇವರನ್ನು ಹಿಂಬಾಲಿಸಿ ಬೇರೆ ಜನಾಂಗಗಳು ಮುಂದಕ್ಕೆ ಬಂದಲ್ಲಿ ದೇಶಾಭಿವೃದ್ಧಿಗೇ ಕಾರಣವಾಗಲಿಲ್ಲವೇ?

ಇದಕ್ಕೆ ನಮ್ಮ ದೇಶದಲ್ಲೇ ಈಗ್ಗೆ ಕೆಲವು ವರ್ಷಗಳ ಹಿಂದೆ ನಡೆದ ಒಂದು ದೃಷ್ಟಾಂತವಿದೆ.

ಕೊಡಗರು ತಮ್ಮ ಮಕ್ಕಳ ವಿದ್ಯಾಭಿವೃದ್ಧಿಗೋಸ್ಕರ ಪ್ರತ್ಯೇಕ ಒಂದು ಫಂಡನ್ನು ಏರ್ಪಡಿಸಲು ಪ್ರಾರಂಭಿಸಿದಾಗ ಕೊಡಗಿನ ಬೇರೆ ಪಂಗಡಗಳು ಇದನ್ನು ಸ್ಥಾಪಿಸಲು ಬಿಡಬಾರದೆಂದು ಅನೇಕ ಆಕ್ಷೇಪಗಳನ್ನು ಇವರ ಮುಂದೆ ತಂದಿಟ್ಟರು. ಆದರೆ ಇಂಥಾ ವಿರೋಧಕ್ಕೆ ತಲೆಬಗ್ಗಿಸದೆಯೂ ಕೊಡಗರ ಹಿತೈಷಿಗಳೆಂದು ತೋರ್ಪಡಿಸಿಕೊಂಡು ಕೆಟ್ಟದ್ದನ್ನು ಬಯಸುವವರ ಪ್ರಯತ್ನಗಳಿಗೆ ಮರುಳಾಗದೆಯೂ, ನಮ್ಮ ಹಿರಿಯರು-ಮುಖ್ಯವಾಗಿ ಉದ್ಯೋಗಸ್ಥರು-ಈ ಫಂಡನ್ನು ಸ್ಥಾಪಿಸಿದರು. ಈ ಫಂಡಿನಿಂದ ಅನೇಕಸಾರಿ ಸೋತು ಹೋಗಿಯೂ ದಡ್ಡರಾಗಿಯೂ ಇದ್ದ ಅರ್ಹರಲ್ಲದ ಜನರಿಗೆ ಸಹಾಯ ಕೊಡಲ್ಪಟ್ಟರೂ ಸಹ ಇದರಿಂದ ಅರ್ಹರಾದ ಅನೇಕ ಕೊಡಗ ವಿದ್ಯಾರ್ಥಿಗಳು ಹೆಚ್ಚು ಸಹಾಯಹೊಂದಿ ಮುಂದಕ್ಕೆ ಬಂದರು. ಮತ್ತು ಇನ್ನೂ ಸಹಾಯಹೊಂದಿ ಮುಂದಕ್ಕೆ ಬರತಕ್ಕದ್ದಾಗುಬಹುದಕ್ಕೆ ಸಂಶಯವೇನೂ ಇಲ್ಲ. ಇದರ ಸ್ಥಾಪನೆಗೆ ಉದ್ಯೋಗಸ್ಥರೇ ಮುಖ್ಯ ಕಾರಣರಾದರೆಂದು ಆ ಫಂಡನ್ನು ತಿರಸ್ಕರಿಸಿದ್ದರೆ ಈಗ ನಾವು ಅನುಭವಿಸುವ ಸಹಾಯಗಳು ದೊರೆಯುತ್ತಿತ್ತೋ! ಆಗ್ಗೆ ಅದನ್ನು ತಿರಸ್ಕರಿಸದೆ, ಉದ್ಯೋಗಸ್ಥರಿಗೆ ಜನರು ಬೆಂಬಲ ಕೊಟ್ಟು ಫಂಡನ್ನು ಸ್ಥಾಪಿಸಿದುದರಿಂದ, ಆಗ್ಗೆ ವಿರೋಧಿಸಿದ ಇತರ ಪಂಗಡಗಳವರೂ ಕೂಡ ನಮ್ಮ ಪ್ರವೃತ್ತಿಯನ್ನು ಅನುಸರಿಸಿ ತಮ್ಮ ತಮ್ಮ ಫಂಡುಗಳನ್ನು ಏರ್ಪಡಿಸಿಕೊಂಡು ತಮ್ಮ ತಮ್ಮ ಏಳಿಗೆ ದಾರಿಮಾಡಿಕೊಳ್ಳಲಿಲ್ಲವೋ. ಕೊಡಗು ವಿದ್ಯಾಭಿವೃದ್ಧಿ ಸಂಘವನ್ನು ಏರ್ಪಡಿಸಿದುದರಿಂದ ಬೇರೆ ಪಂಗಡಗಳು ಯಾವ ಪದದಲ್ಲಿ ಕಷ್ಟಹೋದರು? ಹೀಗೆ ಪ್ರತಿ ಪಂಗಡವೂ ತಮ್ಮ ಜನಾಂಗದಿಂದ ದೇಶವು ಉನ್ನತಸ್ಥಿತಿಗೆ ಬರಲಿಲ್ಲವೇ? ... ಈ ಸಭೆಯನ್ನು ಸ್ಥಾಪಿಸಿದ ದೇಶದ ಏಳಿಗೆ ಅವಕಾಶ ಕಲ್ಪಿತವಾಗುವುದಿಲ್ಲವೇ.

2. ಕೊಡಗು ಜಮಾನ್‌ದಾರರ ಸಂಘವು ಇರುವಾಗ್ಯೂ ಇಂಥಾ ಒಂದು ಪ್ರತ್ಯೇಕ ಸಭೆಯು ಅನಾವಶ್ಯವೆಂದೂ, ಇದು ಪಂಗಡಗಳೊಳಗೆ ಕಲಹವುಂಟಾಗಲು ಅವಕಾಶ ಕೊಡುತ್ತದೆಂದೂ ಕೆಲವು ಮಹನೀಯರು ಹೇಳುತ್ತಾರೆ. ಈ ಅಭಿಪ್ರಾಯವು ತಪ್ಪು ಎಂಬುದನ್ನು ಜಮ್ಮದ ವಿಷಯ ಬರೆಯುವಾಗ ಸ್ಪಷ್ಟವಾಗಿ ವಿವರಿಸಿ ತಿಳಿಸಿರುತ್ತೇನೆ. ನಮಗೆ ತಿಳಿಯುವಷ್ಟರಮಟ್ಟಿಗೆ ಬೇರಾಗಿ ಪಂಗಡಗಳು ದೇಶದ ಏಳಿಗೆ ಕಾರಣಗಳಾಗಿವೆ. ಇದೇ ಅಲ್ಲ ಪಂಗಡಗಳುಂಟಾದರೆ ಬೇರೆ ಪಂಗಡದವರಿಗೆ ಕುಂದುಕ ಬರುವುದೆಂದು ಯೋಚಿಸಿ ಈಗ ಈ ಕೆಲಸವನ್ನು ಮುಂದರಿಸದೆ ಹೋದರೆ ಕಾಲಕ್ರಮೇಣ ಬೇರೆಯವರು ಪಂಗಡಗಳನ್ನು ಏರ್ಪಡಿಸಿ ನಮ್ಮನ್ನು ಹಿಂದಕ್ಕೆ ತಳ್ಳಿದರೆ ನಾವು ಆಗ ಇತರರಂತೆ ಬಾಯಿಬಿಡಬೇಕಾಗಿ ಬರುವುದಿಲ್ಲವೇ. ಮತ್ತೊಂದು, ಜಮಾನ್‌ದಾರರ ಸಂಘವು ಎಲ್ಲಾ ಮತದವರಿಂದಲೂ ಕೂಡಿರುವದರಿಂದ ನಮಗೆ ಮಾತ್ರ ಸಂಬಂಧಪಟ್ಟ ಕುಲಾಚಾರ ಇತ್ಯಾದಿ ಪ್ರತ್ಯೇಕ ಸಂಗತಿಗಳನ್ನು ಅಲ್ಲಿ ಚರ್ಚಿಸಲು ಅನಾನುಕೂಲ. ಇದೇ ಅಲ್ಲ, ಈಗ ಸಿಕ್ಕುವ ಕೌನ್ಸಿಲಿನ ಮೂಲಕ ಹೆಚ್ಚಾಗಿ ಕೊಡಗರಿಗೆ ಸಂಬಂಧಪಡುವ ಕಾನೂನು ಕಾಯಿದೆಗಳನ್ನು ತಿದ್ದುಪಡಿ ಮಾಡಿಸಿಕೊಳ್ಳಲು ಇಂಥಾ ಪ್ರತ್ಯೇಕಸಭೆಯೊಂದು ನಮಗೆ ಅತ್ಯವಶ್ಯವಲ್ಲವೇ?

3. ಸರಕಾರದ ಉದ್ಯೋಗಸ್ಥರು ಈ ಸಭೆಗೆ ಸೇರಬಹುದಾದುದರಿಂದಲೂ ಜಮಾನದಾರಸಂಘದ ಪ್ರೆಸಿಡೆಂಟರು ಮತ್ತು ವೈಸ್‌ಪ್ರೆಸಿಡೆಂಟರು ಇದನ್ನು ಸ್ಥಾಪಿಸಿದುದರಿಂದಲೂ, ಇವರ ಮೂಲಕ ಸರಕಾರದವರೂ ಜನರನ್ನು ಮೋಸಗೊಳಿಸಲು ಇಂಥಾ ಒಂದು ಸಂಘವನ್ನು ಏರ್ಪಡಿಸಲು ಯತ್ನಿಸುವರೆಂಬ ತಪ್ಪಭಿಪ್ರಾಯದಿಂದ ಅನೇಕ ಮಹನೀಯರು ಈ ಸಭೆಯನ್ನು ಸ್ಥಾಪಿಸಲು ಪ್ರೋತ್ಸಾಹ ಕೊಡುವುದಿಲ್ಲ. ಮೊದಲು ತಾವು ಏನು ಮಾಡುತ್ತೇವೆಂದು ತಿಳಿಯದೆ ಕೊಡಗನ್ನು ಮದ್ರಾಸಿಗೆ ಸೇರಿಸಬೇಕೆಂತ ಹೋರಾಡಿದರು. ಈಗ ತಪ್ಪನ್ನು ತಿದ್ದಿಕೊಂಡು, ಸರಿಯಾದ ಮಾರ್ಗಕ್ಕೆ ಬಂದದ್ದು ಅವರ ತಪ್ಪೋ? ಹಾಗಾದರೆ ಲೋಕದಲ್ಲಿ ಒಂದುಸಲ ತಪ್ಪು ಮಾಡಿದವರು ಕಾಲಕ್ರಮೇಣ, ಬುದ್ಧಿ ತಿಳುವಳಿಕೆ ಹೆಚ್ಚಾದ ಹಾಗೆ ತಮ್ಮ ತಪ್ಪನ್ನು ತಿದ್ದಿಕೊಂಡು ಒಳ್ಳೇ ಮಾರ್ಗವನ್ನು ಅವಲಂಬಿಸಬಾರದೆನ್ನುವ ಹಾಗಾಯಿತು.

ಇವರ ಮೇಲೂ, ಉದ್ಯೋಗಸ್ಥರ ಮೇಲೂ ಅನಾವಶ್ಯಕವಾಗಿ ಏತಕ್ಕೆ ತಪ್ಪನ್ನು ಹೊರಿಸಬೇಕು? ಸಾಧಾರಣವಾಗಿ ಕೊಡಗರಲ್ಲಿ ವಿದ್ಯೆಕಲಿತ ಪ್ರತಿಯೊಬ್ಬ ಕೊಡಗನೂ, ಜೀವನೋಪಾಯ ತೋರದೆಯೂ ಇಲ್ಲವೆ ಕಾರಣಾಂತರದಿಂದ ಸರಕಾರಿ ಉದ್ಯೋಗಕ್ಕೆ ಸೇರಿರುವನು. ಉದ್ಯೋಗಕ್ಕೆ ಸೇರಿ ಅವರು ಮುಂದಕ್ಕೆ ಬಂದು ನಮ್ಮ ಜನಾಂಗಕ್ಕೆ ಹೆಸರಿಲ್ಲವೋ? ಅದೇ ಅಲ್ಲ ದೇಶವು ಏಳಿಗೆಗೆ ಬಂದಂತಾಗುವುದಿಲ್ಲವೋ? ಹಾಗಲ್ಲ, ಅವರು ಉದ್ಯೋಗಕ್ಕೆ ಸೇರಿದುದೇ ತಪ್ಪು. ಉದ್ಯೋಗಕ್ಕೆ ಸೇರದೆ ಹಿರಿಯರು ಮಾಡಿರುವ ಅಲ್ಪ ಸ್ವಲ್ಪ ಆಸ್ತಿಯನ್ನು ಮಾಡಿಕೊಂಡು, ಕಲಹಪ್ರಿಯರಾಗಿಯೂ ಚಾಡಿ ಹೇಳುತ್ತ ಮನೆ ಮನೆ ತಿರುಗಿಕೊಂಡು ಕಾಲಕ್ಷೇಪ ಮಾಡದಿರುವುದೇ ಇವರ ತಪ್ಪು. ಇದೇ ಅಲ್ಲ, ಅವರು ಉದ್ಯೋಗಸ್ಥರಾದರೂ ಕೊಡಗರಲ್ಲವೋ? ಅವರು ತಿಳುವಳಿಕೆಯುಳ್ಳವರಾದುದರಿಂದ, ತಮ್ಮ ಕುತ್ತಿಗೆಯನ್ನು ತಮ್ಮ ಕೈಯಿಂದಲೇ ಕೊಯ್ದುಕೊಳ್ಳುವ ಕಾರ್ಯವನ್ನೆಲ್ಲಾದರೂ ಮಾಡುತ್ತಾರೆಯೇ! ಬೇರೆ ಜನರ ಮಾತನ್ನು ಕೇಳಿಕೊಂಡು ತಾವು ಹೇಳುವ ಮಾತಿನ ಅರ್ಥವನ್ನು ತಿಳಿಯದೆ ಅನುಭವಶಾಲಿಗಳಾದ ಹಿರಿಯರನ್ನೂ, ಉದ್ಯೋಗಸ್ಥರೂ ಹಿಂಜರಿಯುವುದರಿಂದ ಯಾವ ಯಾವ ಕೆಡುಕು ಉಂಟಾಗುತ್ತದೆಂದು ಸ್ವಲ್ಪ ಯೋಚಿಸಿ ನೋಡಿ.

ಇನ್ನೊಂದು ಸಂಗತಿ ಏನೆಂದರೆ—ಹಿಂದೂ ದೇಶದ ಏಳಿಗೆಗೆ ಮುಖ್ಯ ಕಾರಣಗಳಾದ ಸಂಘಗಳು ಏರ್ಪಡುವಾಗ್ಯೆ ಮೊದಲು ಉದ್ಯೋಗಸ್ಥರಿಂದ ಅವುಗಳಿಗೆ ಬಹಳ ಸಹಾಯ ದೊರಕಿದುವು. ಇಂಡಿಯನ್ ನೇಷನಲ್ ಕಾಂಗ್ರೆಸ್ಸನ್ನು (Indian National Congress) ... ಸುವಾಗ ಮೆ|| ರಾನಡೆ, ಟೆಲಂಗ್, ವೆಡ್ಡರ್‌ಬರ್ನ್ (Ranade, Telang, Wedderburn) ಮುಂತಾದ ಉದ್ಯೋಗಸ್ಥರು ತಮ್ಮಿಂದಾದಷ್ಟು ಸಹಾಯವನ್ನು ಕೊಡಲಿಲ್ಲವೇ! ಗವರ್ನಮೆಂಟ್ ಆಫ್ ಇಂಡಿಯ ಆಕ್ಟ್ ಜಾರಿಗೆ ಬರುವ ಸಮಯದಲ್ಲು ಸ್ಥಾಪಿಸಲ್ಪಟ್ಟ ಮೋಡರೇಟ್ ಪಾರ್ಟಿ (Moderate party) ಯವರು ಸರಕಾರಿ ಉದ್ಯೋಗಸ್ಥರಿಂದ ಉತ್ತೇಜನವನ್ನು ಹೊಂದಲಿಲ್ಲವೇ. ಹಾಗೆ ಉತ್ತೇಜನವನ್ನು ಹೊಂದಿದುದರಿಂದ ಮೆ|| ಯಸ್. ಶಾಸ್ತ್ರಿ ರವರೂ, ಸಿ. ಪಿ. ರಾಮಸ್ವಾಮಿ ಅಯ್ಯರವರೂ (... Srinivasa Sastri C. P. Rama Swami Iyer) ಮುಂತಾದವರು ದೇಶ ದ್ರೋಹಿಗಳಾದರೋ? Dr. Na... ಎಂಬುವರು "Non Brahmin movement" ಏರ್ಪಡಿಸಿದಾಗ ಸರಕಾರದವರು ತಮ್ಮ ಪರವಾಗಿ ಏರ್ಪಡಿಸಿಕೊಂಡ ಮನುಷ್ಯನೆಂದು ವಾಡಿಕೆಯಾಗಿ ಜನರು ಅವರನ್ನು ದೂಷಿಸುತ್ತಿದ್ದರು. ಅದೇ "Justice Party" ಈಗ ಪ್ರಜೆಗಳ ಹಿತಕ್ಕೋಸ್ಕರ ಸರಕಾರದವರೊಡನೆ ಹೋರಾಡುವುದಿಲ್ಲವೋ!

4 ಜನರ ಮುಂದಾಳುಗಳೆನ್ನಿಸುವ ಕೆಲವು ಮಹನೀಯರು ಈ ಸಭೆಯು ಬೇಡವೆನ್ನುವುದಕ್ಕೆ ಇನ್ನೊಂದು ಕಾರಣವನ್ನು ಕೊಡುತ್ತಾರೆ. ಅದೇನೆಂದರೆ—ಸರಕಾರದವರು ನಮ್ಮ ನಮ್ಮೊಳಗೆ ಭೇದಗಳನ್ನು ಕಲ್ಪಿಸಿ, ತನ್ನ ಮನಸ್ಸಿಗೆ ಬಂದಂತೆ ಆಳಲು ಮಾಡುವ ಉಪಾಯವೆಂದು (Divide and Rule) ತಿಳಿಯುತ್ತಾರೆ. ಹೀಗೆ ಆಲೋಚಿಸುವವರು ಸರಕಾರವು ಯಾವ ನಿಮಿತ್ತ ಸ್ಥಾಪಿತವಾಯಿತೆಂಬ ಮೂಲ ಕಾರಣವನ್ನೇ ತಿಳಿದುಕೊಳ್ಳಲು ಪ್ರಯತ್ನಿಸಿದಂತೆ ತೋರುವುದಿಲ್ಲ. ಅವರ ಮನಸ್ಸಿನಲ್ಲಿ, ಸರಕಾರವು ದೇಶದ ಏಳಿಗೆ ಕೆಲಸಮಾಡುವುದೇ ಇಲ್ಲವೆಂದೂ, ಯಾವಾಗಲೂ ಪ್ರಜೆಗಳಿಗೆ ವಿರೋಧವಾಗಿ ನಡೆಯುವ ಸಂಕಲ್ಪವುಳ್ಳವರೆಂದೂ, ತಪ್ಪುಭಾವನೆಯನ್ನು ಕಲ್ಪಿಸಿಕೊಂಡು, ಸರಕಾರವು ಮಾಡುವುದು ಜನರ ಹಿತಕ್ಕೋ ಅಲ್ಲ ಕೇಡಿಗೋ ಎಂಬುದನ್ನು ಅರಿಯಲು ಸಹ ಪ್ರಯತ್ನಿಸದೆ ಅವರು ಮಾಡುವ ಕಾರ್ಯಗಳೆಲ್ಲ ಕುಂದುಕವನ್ನು ಹೇಳುತ್ತಾ, ಸರಕಾರದ ಕಾರ್ಯಗಳು ಮುಂದರಿಸದ ಹಾಗೆ ಮಾಡಲು ಪ್ರಯತ್ನಿಸುವರು. ಈ ಮುಂದಾಳುಗಳು ರೈತರ ಹಿತವನ್ನು ನಿಜವಾಗಿ ಬಯಸುವವರಾದರೆ, ರೈತರ ಅಭಿಪ್ರಾಯವನ್ನೂ, ತಮ್ಮ ಅಭಿಪ್ರಾಯವನ್ನೂ ಚೆನ್ನಾಗಿ ಸರಕಾರದವರಲ್ಲಿ ವಿವರಿಸಿ ಸರಕಾರದವರು ಹಿತಕರವಾದ ನಿಬಂಧನೆಯನ್ನು ಕಲ್ಪಿಸಲು ಸಹಾಯ ಮಾಡಬೇಕೇ ಹೊರತು, ಕಳೆದ ಸರ್ತಿ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳ ಪೈಕಿ ನಾಲ್ವರು ಮಾಡಿದಂತೆ ಸರಕಾರದವರೊಡನೆ ಅಲ್ಪ ಕಾರ್ಯಗಳಿಗೆ ಸಿಟ್ಟುಮಾಡಿಕೊಂಡು ಹೊರಗೆ ಹೋದರೆ ಅದರಿಂದ ಏನು ಪ್ರಯೋಜನವಾಯಿತು? ಹೀಗೆ ಮಾಡಿದರೆ ಸರಕಾರದವರು ಮಾತ್ರ ಹೇಗೆ ಆಡಳಿತವನ್ನು ನಡೆಸಲು ಸಾಧ್ಯ. ಅವರು ಅಲ್ಲಿಯೇ ಇದ್ದು, ಸರಕಾರದವರ ಕಷ್ಟಗಳನ್ನು, ಅಭಿಪ್ರಾಯಗಳನ್ನು ತಿಳಿದುಕೊಂಡು ಜನರ ಕಷ್ಟವನ್ನು ಸರಕಾರದವರೊಂದಿಗೆ ಹೇಳುತ್ತ ಹೋರಾಡಿದ್ದರೆ ನಷ್ಟ ಸ್ವಲ್ಪವಾದರೂ ಕಮ್ಮಿಯಾಗುವ ಸಂಭವವಿರುತ್ತಿತ್ತು. ಇಂಥಾ ಸಂದರ್ಭದಲ್ಲಿ ಸ್ವಲ್ಪ ತಿಳುವಳಿಕೆಯುಳ್ಳವರು ಸರಕಾರವು ಪ್ರಜೆಗಳಿಗೆ ಹಿತವಾದ ಕೆಲಸಮಾಡಲು ಅವಕಾಶಕೊಟ್ಟು, ಮಂಜೂರಾದ ಗ್ರಾಂಟನ್ನು ಸ್ವೀಕರಿಸಿ ಇನ್ನೂ ಹೆಚ್ಚಿಗೆ ಬೇಕೆಂದು ನ್ಯಾಯ ಮೂಲಕ ವಾದಿಸಿದ್ದೇ ಆದರೆ ಅವರನ್ನು ನಾವು ... ದೂಷಣೆ ಮಾತುಗಳಿಂದ ಹಿಂಜರಿಯುವ ಯಾವ ಮಾರ್ಗವು ದೇಶಾಭಿವೃದ್ಧಿಗೆ ಸಾಧಕವಾಗುವುದೆಂಬುದನ್ನು ತಾವೇ ಯೋಚಿಸಿ ನೋಡಿ.

ದೇಶಭಾಂದವರೇ, ನಾನು ತಿಳಿದಷ್ಟಿಗೆ ಜಮ್ಮ ಮತ್ತು ಕೊಡಗು ಸಭೆಯ ವಿಷಯ ... ಜನಗಳನ್ನ ಕುರಿತು ವಿವರಿಸಿರುವುದನ್ನೂ ಅಲ್ಲಿ ... ಮುಂದಾಳುಗಳೆಂದು ಕರೆಯಲ್ಪಡುವವರ ಅಭಿಪ್ರಾಯಗಳ ... ಚೆನ್ನಾಗಿ ವಿವೇಚಿಸಿ ನೋಡಿ. ಇದಲ್ಲದೆ ಸ್ವಂತಲಾಭ ... ಯಾವ ರೀತಿಯಿಂದಲಾದರೂ ಜನರ ಪ್ರೀತಿ ... ಗಳಿಸಿಕೊಂಡು ... ಆಶೆಯನ್ನು (Cheap Popularity) ... ಬಯಸಿ, ದೇಶದ ಅಭಿವೃದ್ಧಿಗೆ ಏನೂ ಗಮನ ... ದೇವರ ಬಲೆಗೂ, ದೇಶಕ್ಕೆ ಸಂಬಂಧಪಟ್ಟ ಸಂಗ ... ಕಿವಿಗೆ ಬಿದ್ದೇ ಆದರೆ ಅದರ ಗುಣಾವಗುಣಗ ... ವಿಚಾರಿಸದೆ, ಸ್ವಂತ ಕಾರ್ಯಸಾಧನೆಗೋಸ್ಕರ ... ತಮ್ಮ ಅಭಿಪ್ರಾಯಗಳನ್ನು ಜನರಿಗೆ ಬೋಧಿ ... ಜನರು ತಮ್ಮನ್ನು ಹಿಂಬಾಲಿಸುವಂತೆ ... ಮಾಡಿಯೂ, ತಿಳಿಗೊಳದೆ ... ಅವುಗಳ ಗುಣಾವಗುಣಗ ... ಪರ್ಯಾಲೋಚಿಸದೆ ... ಉತ್ತರವೆಂದು ತೋರಿಬರು... ಅದನ್ನು ... ಎಂಬುದೇ ನನ್ನ ಕೋರಿಕೆ.

"Ajax"

ತಾ|| 12-12-1921 ರಲ್ಲಿ ಮಡಿಕೇರಿ ಹೈಸ್ಕೂಲ್ ಹಾಲಿನಲ್ಲಿ ಸಿದ್ಧಾಂತಿ ತವಶಂಕರ ಶಾಸ್ತ್ರಿಗಳು ಒಂದು ಉಪನ್ಯಾಸವನ್ನು ಮಾಡಿದರು. ಉಪನ್ಯಾಸಕರು ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕನ್ನಡ ಪಂಡಿತರಾಗಿದ್ದು ಪೆನ್ಶನ್ ಪಡೆದಿರುತ್ತಾರೆ. ಮೈಸೂರು ಸಂಸ್ಥಾನದಿಂದಲೂ ಶೃಂಗೇರಿ ಮಠದಿಂದಲೂ ಸಹ ಬಿರುದುಗಳನ್ನು ಪಡೆದವರಾಗಿದ್ದಾರೆ. ಸಂಸ್ಕೃತ, ತಮಿಳು ತೆಲುಗು ಮತ್ತು ಕನ್ನಡದಲ್ಲಿ ಸಹ ಗ್ರಂಥಗಳನ್ನು ಬರೆದವರಾಗಿದ್ದಾರೆ. ಜ್ಯೋತಿಷ್ಯ ಶಾಸ್ತ್ರದಲ್ಲೂ ಪಂಡಿತರು ಎಂಬುದಾಗಿ ಅವರ ಶಕ್ತಿಗಳನ್ನು ಮ|| ರಾ|| ರಾ|| ಬಾ|| ಕೋದಂಡ ಅಯ್ಯಂಗಾರ್‌ರವರು ವರ್ಣಿಸಿದನಂತರ ಶಾಸ್ತ್ರಿಗಳು ಎಲ್ಲರಿಗೂ ಸಮಾಧಾನ ಆಗುವಂತೆ ಒಂದು ಉಪನ್ಯಾಸವನ್ನು ಮಾಡಿದರು. ಅದರ ಸಾರಾಂಶವನ್ನು ಇಲ್ಲಿ ಕೊಟ್ಟಿರುತ್ತೇವೆ.

ಆರೋಗ್ಯಭಾಗ್ಯ.

ಇದು ಸಾಧಾರಣ ವಿಷಯವಾಗಿ ತೋರಬಹುದು. ಆದರೆ ನಮ್ಮ ಜೀವನಕ್ಕೆಲ್ಲಾ ಸಂಬಂಧಿಸಿದ ವಿಷಯವಾಗಿದೆ. ಎಲ್ಲರೂ ತಿಳಿದ ಸಂಗತಿಗಳೇ ಆದರೂ ಅವನ್ನು ಜ್ಞಾಪಕಕ್ಕೆ ತಂದು ಕೊಡುವ ಉದ್ದೇಶದಿಂದ ಈ ಉಪನ್ಯಾಸವನ್ನು ಕೊಡಬೇಕಾಗಿದೆ. ಅಕಾಲ ಮರಣ ಹಸಿವು ಬಾಯಾರಿಕೆ ಮತ್ತು ಶೋಕ ಮೋಹ ಎಂಬ ಷಡೂರ್ಮಿಗಳೇ ಎಲ್ಲರಿಗೂ ಇರುವ ರೋಗವಾಗಿದೆ. ಇವನ್ನು ಹೋಗಲಾಡಿಸಲು ಪ್ರಯತ್ನಿಸುತ್ತಿರುವದೇ ಲೋಕವ್ಯವಹಾರ. ಎಲ್ಲಾ ಪ್ರಾಣಿಗಳೂ ಹೊಟ್ಟೆ ಹೊರೆಯುತ್ತವೆ. ಆದರೆ ಮನುಷ್ಯರು ಮಾನವೆಂಬುದೊಂದನ್ನು ಕಲ್ಪಿಸಿಕೊಂಡು ಕಷ್ಟಪಡುತ್ತಾರೆ. ಗಾಡಿಯಲ್ಲಿ ಹೋಗುವವನಿಗೆ ನಡೆಯುವದು ಮನಸ್ಸಿಗೆ ಸರಿಬರದು. ಟಾಂಗಾದಲ್ಲಿ ಹೋಗುವವನಿಗೆ ಗಾಡಿ ಮರ್ಯಾದೆಗೆ ಸಾಲದು. ಮೋಟಾರ್ ಇರುವವನಿಗೆ ಟಾಂಗಾ ಸಾಲದು. ಅವನು ಯಾರಿ[illegible] ಮೇಲೆ ಹೇಳಿದ ಆರು ವಿಧದ ರೋಗಗಳನ್ನು ಪ್ರಯತ್ನಿಸಿ ಹೊಸ ರೋಗಗಳನ್ನು ಉಂಟುಮಾಡಿಕೊಳ್ಳುತ್ತೇವೆ. ತಿನ್ನುವ ಆಸೆಯಿಂದ ವಿಶೇಷ ಪದಾರ್ಥಗಳನ್ನು ತಿಂದು ಬಾಯಿ ಬೇನೆಯನ್ನುಂಟುಮಾಡಿಕೊಳ್ಳುವದು. ನೋಟದ ಮತ್ತು ಕೇಳುವ ಆಸೆಯಿಂದ ನಾಟಕಕ್ಕೆ ಹೋದರೂ ಬಾಯಿಲೆಯೇ. ಇದೇ ತಿಳುವಳಿಕೆಗೆ ಮಾಯೆ ಅಥವ ಭ್ರಾಂತಿಯೆನ್ನುತ್ತಾರೆ. ಈ ರೋಗಗಳನ್ನು ಹೋಗಲಾಡಿಸಲು ದೇವರಿಗೇ ಶಕ್ತಿ. ಆದ್ದರಿಂದ ಅವನಿಗೆ ಭವರೋಗವೈದ್ಯನೆನ್ನುತ್ತಾರೆ. ರೋಗ ಪ್ರಬಲವಾದನಂತರ ವಾಸಿಮಾಡಿಕೊಳ್ಳುವದು ಕಷ್ಟ, ಆದ್ದರಿಂದ ಈಗಲೇ ಆನಂದಸ್ವರೂಪವಾದ ಈಶ್ವರ ಶಕ್ತಿಯನ್ನು ಸಂಪಾದಿಸಿಕೊಂಡು ರೋಗವನ್ನು ಹೋಗಲಾಡಿಸಿಕೊಳ್ಳಬೇಕು. ಪ್ರಾಣಿಗಳಲ್ಲಿ ಧರ್ಮಕ್ಕೆ ವಿರುದ್ಧವಿಲ್ಲದ ಕಾಮವು ನಾನಾಗಿದ್ದೇನೆಂತ ಕೃಷ್ಣನು ಭಗವದ್ಗೀತೆಯಲ್ಲಿ ಹೇಳಿದ್ದಾನೆ. ತನ್ನ ಹಕ್ಕಿನ ಸಂಬಳದಿಂದ ಹೆಂಡತಿ ಮಕ್ಕಳನ್ನು ಸಾಕಿ ಮರ್ಯಾದೆಯಿಂದ ಬದುಕುವದು ಧರ್ಮಕ್ಕೆ ವಿರೋಧವಿಲ್ಲದ ಕಾಮ. ಸಿಕ್ಕಿದ ಸಂಬಳವನ್ನೆಲ್ಲಾ ಕಾಫಿ ಹೋಟಲಿಗೂ ಜೂಜಿಗೂ ಖರ್ಚುಮಾಡಿ ಹೆಂಡತಿ ಮಕ್ಕಳಿಗೆ ಅನ್ನ ಬಟ್ಟೆ ಕೊಡದಿರುವದೇ ಧರ್ಮಕ್ಕೆ ವಿರೋಧವಾದ ಕಾಮ. ಇದೇ ರೀತಿ ಎಲ್ಲಾ ವಿಷಯಗಳನ್ನೂ ಮಿತವಾಗಿ ಅನುಭವಿಸಿಕೊಂಡಿರುವದು ಧರ್ಮ. ತನಗೆ ಜೀವನಕ್ಕೆ ಬೇಕಾದಷ್ಟು ಐಶ್ವರ್ಯ, ಒಳ್ಳೇ ಗುಣವಂತೆ ಹೆಂಡತಿ, ತಕ್ಕಷ್ಟು ಒಳ್ಳೇ ಬುದ್ಧಿ, ಒಳ್ಳೇ ಮಾತು, ಆರೋಗ್ಯ, ಸತ್ಸಹವಾಸ, ಒಳ್ಳೇ ಕುಲ ಮತ್ತು ದೇವರಮೇಲೆ ಭಕ್ತಿ ಸಹ ಇರುವವನು ಸುಖಿ ಎನಿಸಿಕೊಳ್ಳಬಹುದು. ಇದು ಎಲ್ಲಾ ಇರುವವರು ಬಹಳ ಅಪರೂಪ. ಆದ್ದರಿಂದ ಜನ್ಮವನ್ನು ಕೊಟ್ಟಂಥ ತಂದೆತಾಯಿಗಳಲ್ಲಿ ಭಕ್ತಿಯನ್ನು ತೋರಿಸಿ ಕೃತಜ್ಞತೆಯುಳ್ಳವರಾಗಿ, ದೇಶದೊಳಗಿರುವವರಲ್ಲಿ ಅನ್ಯೋನ್ಯ ದ್ವೇಷವಿಡದೆ, ಇದ್ದದ್ದರಲ್ಲಿ ತೃಪ್ತರಾಗಿ, ಪರೋಪಕಾರ ಮಾಡುತ್ತಾ ದೇಶಾಭಿಮಾನ ಮತ್ತು ಭಾಷಾಭಿಮಾನವನ್ನು ಅಭಿವೃದ್ಧಿಗೊಳಿಸುತ್ತಾ ಹೋದರೆ ಮೇಲೆ ಹೇಳಿದ ರೋಗಗಳ ಬಾಧೆ ಕಡಿಮೆಯಾಗಿ ಆರೋಗ್ಯಭಾಗ್ಯ ಬೆಳೆಯುತ್ತೆ.

ಮೇಲಿನ ಉಪನ್ಯಾಸವಾದ ಬಳಿಕ ಸಭೆಯಲ್ಲಿದ್ದ [illegible] ಶಾಸ್ತ್ರಿಗಳು ಜ್ಯೋತಿಷ್ಯ ವಿಷಯದಲ್ಲಿ ಒಂದು ಉಪನ್ಯಾಸವನ್ನು ಅನುಕೂಲವಾದ ಮೇರೆ [illegible] ಬೇಡಿಕೊಂಡಾಗ್ಯೂ ಉಪನ್ಯಾಸಕರು ತನಗೆ ಸಮಯವಿಲ್ಲದ್ದರಿಂದ [illegible] ಒಪ್ಪಿದರೆ ಆಗಲೇ ಸಂಕ್ಷೇಪವಾಗಿ ವಿವರಿಸುತ್ತೇನೆಂದು ಹೇಳಿ [illegible] ಒಪ್ಪಿಗೆಮೇರೆಗೆ ವಾರ ತಿಥಿ ಗ್ರಹಣ [illegible] ವಿಷಯ ಉಪನ್ಯಾಸ ಮಾಡಿದ ನಂತರ ಸಭಿಕರು ಕರತಾಡನಗಳಿಂದ ಪ್ರಸ್ತವನ್ನು ಸ್ವೀಕರಿಸಿದರು.

Vaccination ಸಿಡುಬಿನ ಡಾಕು.

(೩೫ ನೆಯ ಸಂಚಿಕೆಯಿಂದ ಮುಂದುವರಿದುದು)

ಇದರಿಂದ ಎಲ್ಲಾ ದೇಶದ ಜನರ ಸ್ಥಿತಿ ಹಿಂದುಸ್ಥಾನ [illegible] ಮುಖ್ಯ ಜನರೂ ಮತ್ತು ನಮ್ಮ ಬ್ರಿಟಿಷ್ ಸರಕಾರದವ[illegible] ಸಹ ಮೇಲೆ ಹೇಳಿದ ಸಿಡುಬು ನಿವಾರಣೆಮಾಡುವ [illegible]ನವನ್ನು ಇಲ್ಲಿಗೂ ಬರಮಾಡಿಸಿಕೊಳ್ಳುವ [illegible] [illegible]ಯು ಎಷ್ಟು ಆತುರರಾಗಿ ಇದ್ದರೆಂಬದನ್ನು ಒದರು ಪೂರೈ[illegible]ಸೆನು. ಸದರಿಯವರ ಕೋರಿಕೆ ಪ್ರಕಾರ 1799 ನೆ [illegible]ಯ ಅಂತ್ಯದಲ್ಲಿ ಡಾಕ್ಟರು ಜೆನ್ನರು ಸಾಹೇಬರು ತಯಾರಿಸಿದ ಗೋವುಹುಣ್ಣಿನ ಸಂಬಂಧ ಪುಸ್ತಕಗಳೂ (Pamplets) ಮತ್ತು ಗೋವುಹುಣ್ಣಿನ ಹಾಲನ್ನು ಸಹ ಪ್ರಾಕಾರವಾಗಿ ಕಳುಹಿಸಿದ ವರ್ತಮಾನಕ್ಕೆ ಯಾವಾಗ ಒಂದು ಸೇರುತ್ತೋ ಎಂಬುದಾಗಿ ದಾರಿ ನೋಡುತ್ತಾ ಇದ್ದ ಈ ದೇಶದ ಜನರ ದುರದೃಷ್ಟಕ್ಕೆ ಅವುಗಳನ್ನು ಕಳುಹಿಸಿದ ಹಡಗವು ಬೇರೆ ಅನೇಕ ಸಾಮಾನುಗಳೊಡನೆ ಮುಳುಗಿ ಹೋಗಿ ಅತ್ಯಂತ ಆಶಾಭಂಗಕ್ಕೆ ಕಾರಣವಾಯಿತು. ಈಚೆಗೆ ಆ ಗೋವು ಹುಣ್ಣಿನ ಹಾಲನ್ನು ತೆಗೆದು ಆರೇಳು ದಿವಸದೊಳಗೆ ಡಾಕು ಹಾಕದೆ ಹೋದರೆ ಫಲಕಾರಿಯಿಲ್ಲವೆಂಬುದಾಗಿ ಕಂಡು ಬಂದದ್ದರಿಂದ ವಿಲಾಯಿತಿಯಿಂದ ಇಲ್ಲಿಗೆ ಸದರಿ ಹಾಲನ್ನು ಆರೇಳು ದಿವಸದೊಳಗೆ ಕಳುಹಿಸಲು ಅಸಾಧ್ಯವಾಯಿತು. ಆದ್ದರಿಂದ ಗೋವು ಹುಣ್ಣಿನ ಹಾಲು ಮೂಲಕ ಡಾಕು ಹಾಕಿದವರ ಪೈಕಿ ಕೆಲವರನ್ನು ಹಡಗಿನಲ್ಲಿ ವಿಲಾಯಿತಿಯಿಂದ ಬ್ಯಾಗ್‌ದಾದ್ (Bagdad) ವರೆಗೂ ಅಲ್ಲಿಂದ ಬೇರೆ ಜನರಿಗೆ ಅವರ ಹುಣ್ಣಿನ ಮೂಲಕ ಡಾಕು ಹಾಕಿ ಬಸ್ಸೋರದವರೆಗೂ (Bassora) ಕಡೆಗೆ ಅಲ್ಲಿಂದ ಬೊಂಬಾಯಿಗೂ ಕಳುಹಿಸಿದರು. ಹೀಗೆ ಎಷ್ಟೋ ದಿವಸ ಪ್ರಯತ್ನ ಮಾಡಿ ಕಳುಹಿಸಿದರೂ ತಕ್ಕ ಸಮಯಕ್ಕೆ ಮುಟ್ಟದೆ ಕಡೆಗೆ ಫಲಿತಾಂಶವಾಯಿತು. ಹೇಗೂ 1802 ನೇ ಇಸವಿಯಲ್ಲಿ ಹಲವು ತರದೂದುಗಳಿಂದಲೂ ದ್ರವ್ಯ ಖರ್ಚಿನಿಂದಲೂ ಬೊಂಬಾಯಿಗೆ ತರಲ್ಪಟ್ಟ ಗೋವು ಸಿಡುಬು ಹಾಲನ್ನು ಡಾಕು ಹಾಕಲು ಅನುಮಾನದಿಂದ ಯಾರೂ ಬಿಡದೆ ಅನೇಕ ಅಡ್ಡಿಗಳು ಉಂಟಾದಾಗ್ಯೂ ಕಡೆಗೆ ಅನಾದಸ್ತಾಲ್ (Anna Dasthall) ಎಂಬ ಪ್ರಸಿದ್ಧವಾದ ಮಗುವಿಗೆ ಅವರ 3 ನೇ ವರ್ಷದಲ್ಲಿ ಸದರಿ ಇಸವಿ 14 ನೇ ಜೂನ್ ತಾರೀಕಿನಲ್ಲಿ ಡಾಕು ಹಾಕಿದರು. ಇದು ಬಹು ಚೆನ್ನಾದ ಹುಣ್ಣಾಗಿ ಸದರಿ ಹುಣ್ಣಿನ ಹಾಲಿನಿಂದ ಬೊಂಬಾಯಿ ಪಟ್ಟಣದ ದೊಡ್ಡ ಮನುಷ್ಯರಿಗೂ ಅವರ ಕುಟುಂಬಕ್ಕೂ ಡಾಕು ಹಾಕಲಾಯಿತು. ಇದನ್ನು ಕಂಡ ಬೊಂಬಾಯಿ ಪಟ್ಟಣದ ನಿವಾಸಿಗಳೆಲ್ಲರೂ ಕ್ರಮಕ್ರಮೇಣವಾಗಿ ಡಾಕು ಹಾಕಿಸಿಕೊಂಡರು. ಅಲ್ಲಿಂದ ಈಚೆಗೆ ಹಿಂದುಸ್ಥಾನದ ಎಲ್ಲಾ ಭಾಗಗಳಿಗೂ ಇವರ ಮೂಲಕವೇ ಡಾಕು ಹಾಕಿ ಸಿಡುಬಿನ ಉಪದ್ರವನ್ನು ಮರಣದ ಕಡಿಮೆ ಸಂಖ್ಯೆಯನ್ನು ತೋರಿಸಿದ ಲೆಕ್ಕದ ಪಟ್ಟಿಯನ್ನು ಇಲ್ಲಿ ಬರೆಯುವುದು ಅಸಾಧ್ಯ. ಹೀಗೆ ಒಂದಾವೃತ್ತಿ ಗೋ ಸಿಡುಬು ಹಾಕಿಸಿಕೊಂಡವರಲ್ಲಿ 100 ಕ್ಕೆ 7 ರಂತೆಯೂ. ಎರಡನೇ ದಪ (Vaccination) ಹಾಕಿಸಿಕೊಂಡವರಲ್ಲಿ 100 ರ ಕ್ಕೆ 3 ರಂತೆಯೂ ಸಿಡುಬು ರೋಗದಿಂದ ಮೃತ ಪಡುವದು ಪರಿಷ್ಕಾರವಾಯಿತು. ಈ ಮರಣಗಳ ಸಂಖ್ಯೆಯು ಸಹ ಗೋ ಸಿಡುಬು ಹಾಕುವ ಬಹು ಸೂಕ್ಷ್ಮವಾದ ವಿಧಾನಗಳ ಪೈಕಿ ಏನೋ ಒಂದು ತಪ್ಪು (Faulty technique) ವ್ಯಾಕ್ಸಿನೇಟರುಗಳ ಮೂಲಕ ಆಗಿದ್ದೇ ಕಾರಣ. ಸದರಿ ಗೋ ಸಿಡುಬು ವಿಧಾನವನ್ನು ಕಂಡು ಹಿಡಿಯುವುದಕ್ಕೆ ಮೊದಲು ಸಿಡುಬಿನ ಉಪದ್ರದಿಂದ 100 ರ ಕ್ಕೆ 50 ರಿಂದ 75 ರ ವರೆಗೆ ಸಾಯುತ್ತಿದ್ದರು. ಆದ್ದರಿಂದ ನಮ್ಮ ಜನರು ಮುಖ್ಯವಾಗಿ ಅವರ ಶಿಶುಗಳಿಗೆ 6 ತಿಂಗಳು ಆದಕೂಡಲೆ ವ್ಯಾಕ್ಸಿನೇಟರುಗಳು ಬಂದು ಆ ಸಮಯಕ್ಕೆ ತಿಳಿಸಿದ್ದರೆ ಒಡನೆ ಕರಸಿಕೊಂಡು ಡಾಕು ಹಾಕಿಸಿಕೊಳ್ಳುವದು ಮುಖ್ಯ ಕರ್ತವ್ಯವಾಗಿರಬೇಕು. ಇದು ತಮ್ಮ ಮಕ್ಕಳಿಗೆ ಮೊದಲು ಉಪಕಾರವಾಗುವದೆಂದು ತಿಳಿಯಬೇಕು. (ಚಿಕ್ಕಗಿಡವನ್ನು ಬೇರುಸಮೇತ ಕಳೆಯಲು ಬಹು ಸುಲಭ, ಮರವನ್ನು ಕಿತ್ತರೆ ಬೇರುಸಮೇತ ಬರುವದೇ?) ಆದ್ದರಿಂದಲೇ ಇದರ ಪ್ರಯೋಜನವನ್ನು ತಿಳಿದ [illegible] ಜನರು ಅಕಸ್ಮಾತ್ತಾಗಿ ವ್ಯಾಕ್ಸಿನೇಟರು ತಮ್ಮ ಸಮಯಕ್ಕೆ ಸಿಕ್ಕದೆ ಹೋದರೆ ತಮ್ಮ ಎರಡು ಯಾ ಮೂರು ತಿಂಗಳ ಶಿಶುಗಳನ್ನು ಗೋ ಸಿಡುಬು ತಯಾರಿಸುವ (Vaccine Depot) ಆಸ್ಪತ್ರೆಗೆ ಹೋಗಿ ನೂರಾರು ರೂಪಾಯಿ ದಾರಿ ಖರ್ಚುಮಾಡಿಕೊಂಡು ಡಾಕು ಹಾಕಿಸಿಕೊಂಡು ತೆರಳುತ್ತಾರೆ. ಕೊಡಗಿನಲ್ಲಿ ಆ ಮಾದರಿ ಗೋ ಸಿಡುಬು ತಯಾರಿಸುವ ಆಸ್ಪತ್ರೆ 30 ವರ್ಷದಿಂದ ಈಚೆಗೆ [illegible] ಇದು ಈ [illegible] [illegible] ಇಲ್ಲಿ [illegible] [illegible] [illegible] [illegible] ಮಾಡಿದ [illegible].

ಎರಡನೇ ದಪ (Re-vaccination) [illegible] ಹಾಕಿಸಿಕೊಳ್ಳುವ ಪ್ರಯೋಜನವು [illegible] (Primary Vaccination) ಗೋ ಸಿಡುಬು ಹಾಕಿಸಿದ [illegible] 0 ವರ್ಷದವರೆಗೆ ಸಿಡುಬು ತಗಲದೆ ಇರುವದು [illegible] ಬಹು ಕಡಿಮೆಯಾಗಿ ದೂರ ದೂರ [illegible] ದೃಷ್ಟಾಂತರವಾಗಿದೆ. ಆದ್ದರಿಂದಲೇ ಚಿಕ್ಕಪ್ರಾಯದಲ್ಲಿ ಒಂದು ದಪ, 10 ನೇ ಪ್ರಾಯದಲ್ಲಿ ಮತ್ತು ಪ್ರಾಯ ಪ್ರಬುದ್ಧರಾಗುವ (Puberty) 18 20 ನೇ ವಯಸ್ಸಿನಲ್ಲಿಯೂ ಡಾಕು ಹಾಕಿಸಿಕೊಳ್ಳಲೇಬೇಕು. ಒಂದನೇ ದಪ ಡಾಕು ಹಾಕುವುದು ಮಾತ್ರ ಒಂದೆರಡು ದಿನ ಜ್ವರವು ಬಂದು ಕೊಂಚ ನೋವಿರುತ್ತದೇ ಹೊರತು ಆ ಮೇಲೆ ಹಾಕಿಸಿಕೊಂಡದ್ದರಿಂದ ಏನೂ ಬಾಧೆ ಕೊಡುವುದಿಲ್ಲ. ಇಂಥ ಸುಲಭವಾದ ಮತ್ತು ಅತೀ ಪ್ರಯೋಜನವಾದ ಎರಡನೇ ದಪ ಡಾಕು ಹಾಕುವುದರ ವಿಷಯ ವ್ಯಾಕ್ಸಿನೇಟರುಗಳು ಗ್ರಾಮಗಳಲ್ಲಿ ಹೋಗಿ ಬೋಧಿಸಿದಲ್ಲಿ ಜನರು ತಮಗೆ ಒಂದಾವೃತ್ತಿ ಹಾಕಿದೆಯೆಂತಲೂ ಕೆಲವರು ವ್ಯಾಕ್ಸಿನೇಟರುಗಳ ಕೆಲಸ ತೋರಿಸುವ ಬಗ್ಗೆ ಈ ಮೇರೆ ಪುನಃ ಪುನಃ ಉಪದೇಶಮಾಡುತ್ತಾರೆಂತಲೂ ತಪ್ಪು ಅರ್ಥ ಮಾಡಿಕೊಂಡು ಅವರಲ್ಲಿ ಕೆಲವರು ಸೌದೆಗೂ, ಕೆಲವರು ಬಾವಂದಿಯರ [illegible] ನೆಂಟರಲ್ಲಿ ಮನೆ ಒಳಗೆ ತಪಾಸೆಮಾಡುತ್ತಾ ಕೂತು ಬಿಡುತ್ತಾರೆ. ವ್ಯಾಕ್ಸಿನೇಟರುಗಳ ಗತಿಯೋ, ತಾನು 6 ತಿಂಗಳ ಹಿಂದೆ ಹೋದ ದಾರಿಗಾಗಿ ಮರಳಿ ಹೋಗಲು. ಆ ದಾರಿಗಳೆಲ್ಲಾ ಗುಲಾಬಿ ಮುಚ್ಚಿಕೊಂಡು ದಾರಿಸಿಕ್ಕದೆ ಬೇರೆ ಮನೆ ಕಂಡು ಹಿಡಿಯಲಿಕ್ಕೆ ಕಷ್ಟಪಡಬೇಕಾಗುವುದು. ಇನ್ನು ಮೇಲಾದರು ಎರಡನೇ ದಪ ಡಾಕು ಹಾಕಿಸಿಕೊಳ್ಳುವುದರ ವಿಷಯ ಮೇಲೆ ಬರೆದ ಸೂಚನೆಗಳನ್ನು ಮುಂದಿಟ್ಟುಮಾಡಿಕೊಂಡು ಬಾರಿಗೆ ತರುವದಲ್ಲದೆ 40, 50 ನೇ ವಯಸ್ಸಿನಲ್ಲಿಯೂ ಸಿಡುಬುರೋಗ ತಗಲಿದ ಸಮಯದಲ್ಲಿಯೂ ಪುನಃ ಡಾಕು ಹಾಕಿಸಿಕೊಳ್ಳುವುದು ಮರೆಯಬಾರದು.

ಐ. ಬಿ. ಎಮ್.

(ಮುಂದುವರಿಯುವದು)

ಪತ್ರವ್ಯವಹಾರಗಳು.

ಬಾತ್ಮೀದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಉತ್ತರವಾದಿಗಳಲ್ಲ. [ಎಡಿಟರ್.]

ಅಯ್ಯಾ,

"ನಮ್ಮ ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗುಗಳಲ್ಲಿ ಚರ್ಚಿಸುವ ಎಲ್ಲಾ ವಿಷಯಗಳಲ್ಲಿಯೂ (All Subjects) ಮತ ತೆಗೆಯುವ ಸಮ್ಮಂಧದಲ್ಲಿ ಉದ್ಯೋಗಸ್ಥರಲ್ಲದ ಮೆಂಬರುಗಳು ಮಾತ್ರ ಮತಕೊಡಬೇಕು. ಉದ್ಯೋಗಸ್ಥರುಗಳಿಗೆ ಯಾವ ವಿಷಯದಲ್ಲಿಯೂ ಮತಕೊಡುವ ಸ್ವತಂತ್ರವಿರಕೂಡದು. ಇವರುಗಳು ವಿಷಯಗಳ ಚರ್ಚೆಯಲ್ಲಿ ಭಾಗತೆಗೆದುಕೊಳ್ಳಲೂ ಸೂಚನೆಕೊಡಲು ಮಾತ್ರ ಹಕ್ಕುಳ್ಳವರಾಗಿರಬೇಕು" ಯೆಂತ ಒಂದು ಠರಾವು ತರಬೇಕೆಂದಿರುತ್ತೇನೆ.

ಈ ಅಭಿಪ್ರಾಯವನ್ನು ಜಿಲ್ಲೆಯವರೆಲ್ಲರೂ ಅತಿ ಮುಖ್ಯವಾಗಿ ಡಿಸ್ಟ್ರಿಕ್ಟ್ ಬೋರ್ಡ್ ಎಲ್ಲಾ ಮೆಂಬರುಗಳೂ ಆಲೋಚಿಸಿ ತಮ್ಮ ತಮ್ಮ ಅಭಿಪ್ರಾಯವನ್ನು ತಮ್ಮ ಪತ್ರಿಕೆಯಲ್ಲಿ ಈ ಬರುವ ಒಂದು ತಿಂಗಳಲ್ಲಿ ಪ್ರಕಟಿಸಬೇಕಾಗಿ ಕೇಳಿಕೊಂಡಿದ್ದೇನೆ. ಈ ಅವಧಿಯಲ್ಲಿ ನನ್ನ ಠರಾವಿಗೆ ಹೆಚ್ಚು ಆಕ್ಷೇಪಗಳು ಬಾರದೆ ಇದ್ದಲ್ಲಿ ದೇಶದವರೆಲ್ಲರೂ ಅನುಮೋದಿಸಿದ್ದಾರೆಂತ ಭಾವಿಸಿ ಮುಂದರಿಸಲು ಏನೂ ಪ್ರತ್ಯವಾಯವಿಲ್ಲವೆಂತ ಈ ಮುಖೇನ ವ್ಯಕ್ತಪಡಿಸಿದ್ದೇನೆ.

ಎನ್. ಆರ್. ಎಸ್.

ಅಯ್ಯಾ,

ಭರತಖಂಡದ ಎಲ್ಲಾ ವರ್ಗದ ಹಿಂದುಗಳೂ ಗೋವಧೆಯು ಪಾತಕವೆಂದು ಹೇಳುತ್ತಿರುವದನ್ನು ಹಿಂದೂ ಸಹೋದರರಾದ ಮುಸಲ್ಮಾನರೂ ಸಹ ಒಪ್ಪಿ ಅವರೂ ಕೂಡ ಗೋವು ವಧೆಯನ್ನು ಆದುವಷ್ಟು ಮಟ್ಟಿಗೆ ನಿಲ್ಲಿಸಲು ಪ್ರಯತ್ನಿಸಿದಲ್ಲದೆ ಸ್ವಕೀಯರ ಆಹಾರಕ್ಕಾಗಿ ಗವರ್ನಮೆಂಟಿನವರು ಗೋವುವಧೆ ಮಾಡಬಾರದಾಗಿ ಎರಡು ಮತಗಳೂ ಹೋರಾಡುತ್ತಿರುವಾಗ ಕೊಡಗಿನ [illegible] ಮೀಟಿಂಗಿನಲ್ಲಿ ಸತ್ತ ಗೋವುಗಳ ಮಾಂಸವನ್ನು ತಿನ್ನಬಾರದೆಂತಲೂ ಕೊಂದು ತಿನ್ನುವವರಲ್ಲಿ ಆಕ್ಷೇಪವಿಲ್ಲವೆಂತಲೂ ತೀರ್ಮಾನಿಸಿದ್ದು ಕೊಡಗು ಪತ್ರಿಕೆಯಲ್ಲಿ ನೋಡಿ [illegible] ಗೋವುವಧೆಯನ್ನು ಪ್ರೋತ್ಸಾಹಗೊಳಿಸುವಂತಾಯಿತು. ಹೆತ್ತ ತಾಯಿಗೆ ಸಮಾನವಾದ ಮತ್ತು ಹಿಂದುಗಳಾದ ನಮ್ಮಿಂದ ಪೂಜಿಸಲ್ಪಡುವ ಗೋವುಗಳನ್ನು ವಧೆಮಾಡುವದು ಪಾಪವಲ್ಲವೇ? ಸತ್ತ ಗೋವುಗಳ ಮಾಂಸ ಭಕ್ಷಣೆಯನ್ನು ತ್ಯಜಿಸಲು ತೀರ್ಮಾನಿಸಿದಂತೆ ಕೊಂದು ತಿನ್ನುವವರನ್ನು ತ್ಯಜಿಸುವ ಏರ್ಪಾಡು ಇನ್ನು ಮುಂದೆ ಆಗುವ [illegible] ಮೀಟಿಂಗಿನಲ್ಲಿ [illegible] ಗೋವುಗಳನ್ನು ಉದ್ಧಾರಮಾಡುವದು [illegible] ಅಗತ್ಯವಾಗಿ [illegible].

ಪಿ. ಪಿ. ಮಾದಪ್ಪ.

ಅಯ್ಯಾ,

[illegible]

ಬಿ. [illegible]

ಅಯ್ಯಾ ಎಡಿಟರವರೇ,

ಕೊಡಗುದೇಶದ ಅನೇಕ ಗ್ರಾಮಗಳಲ್ಲಿ ಸೇಂದಿ ಸಾರಾಯವೆಂಬ ಪಿಶಾಚಿಯನ್ನು ಕೂಡಾ ದೂರಮಾಡಿರುವದಿಲ್ಲವಾಗಿ ತಿಳಿದು ಅತ್ಯಂತ ವ್ಯಸನಪಡಬೇಕಾಗಿದೆ ಭೂಲೋಕದ ಜನರೇ ಆ ಮಧ್ಯಪಾನವನ್ನು ಬಿಟ್ಟುಬಿಡುವ ಕಾಲವು ಬಂದು ಒದಗಿರುವಾಗ್ಯೆ ನಮ್ಮ ಕಾಡು ಪ್ರದೇಶದ ಕಾಡುಮೂಲೆಯ ಈ ಚಿಕ್ಕ ಜನಾಂಗವು ಹಿಂದುಮುಂದು ನೋಡುತ್ತಿರುವದು ಆಶ್ಚರ್ಯ! ಆದರೆ ಈ ಚಿಕ್ಕದೇಶದ ಕೆಲವು ಕಡೆಗಳಲ್ಲಿ ಬಹು ಧೀರತನದಿಂದ ಗ್ರಾಮಸ್ಥರು ಒಗ್ಗಟ್ಟಿನ ಪ್ರಯೋಜನವನ್ನು ತಿಳಿದು ಅನೇಕ ಕಾರ್ಯಗಳನ್ನು ಮಾಡಿರುತ್ತಾರೆ ಇದಕ್ಕೆ ದುಷ್ಟಾಂತವಾಗಿ ಅಮ್ಮತ್ತಿನಾಡಿನ ಬಿಳುಗುಂದ ಗ್ರಾಮಸ್ಥರನ್ನು ತೆಗೆದುಕೊಳ್ಳುವ ಈ ಚಿಕ್ಕಗ್ರಾಮವು ಧೀರತನದಿಂದ ಈ ಮಧ್ಯಪಾನದ ಹುಟ್ಟನ್ನು ಅಡಗಿರುವದಲ್ಲದೆ ಈಗ್ಗೆ 2 ವರ್ಷದಿಂದ ಗ್ರಾಮಸಭೆಯೊಂದನ್ನು ಏರ್ಪಡಿಸಿ ಈ ಪಂಚಾಯತಿ ಕೋರ್ಟಿನ ಸಹಾಯದಿಂದ ಅನೇಕ ಚಿಕ್ಕ ಚಿಕ್ಕ ವ್ಯಾಜ್ಯಗಳನ್ನು ಸುಗುಣಿಗಳಾದ ಪಂಚಾಯತಿ ಮೆಂಬರುಗಳು ತೀರಿಸಿರುವದಾಗಿ ತಿಳಿಯುತ್ತೇನೆ ಅಲ್ಲದೆ ಈ ವರ್ಷದ ನಾಟಿ ಕೆಲಸವು ಮುಗಿದ ಕೂಡಲೆ ಗ್ರಾಮಸ್ಥರೆಲ್ಲರೂ ಸೇರಿ ತಮ್ಮಗಳ ಗೋವುಗಳಿಗೆ ದಾಕ್ಷಸಣೋವಾದಿಯಲ್ಲಿರುವ ಲಂತಾನವನ್ನು ಈ ಗ್ರಾಮದಲ್ಲಿ ನಿರ್ಮೂಲಮಾಡಬೇಕೆಂಬ ಹಟದಿಂದ ಪ್ರತಿ ಶನಿವಾರವೂ ಊರಿನ ಬಾಣೆಯುಳ್ಳ ಜಾಗ ಇರುವವರೂ ಇಲ್ಲದವರೂ ವೃದ್ಧರೂ, ಬಾಲಕರೂ, ಬಡವರೂ ಧನ್ಯವಂತರೂ ಜಾತಿಭೇದವಿಲ್ಲದೆ ಸೇರಿ ಲಂತಾನವನ್ನು ತೆಗೆಯುವ ಉತ್ಸಾಹ ಈ ವರೆಗೆ ಸಾಧಾರಣ 70 ಎಕ್ರೆವರೆಗೆ ನಿರ್ಮೂಲ ಮಾಡಿರುವದು ಈ ದೇಶಕ್ಕೆ ಒಂದು ಮಾದರಿಯಾಗಿದೆ ಇದರಿಂದ ಒಗ್ಗಟ್ಟಿನ ಪ್ರಯೋಜನವು ತಿಳಿಯುತ್ತೆ, ಅಲ್ಲವೇ ಸ್ವರಾಜ್ಯದ ಕುರುಹು ಏನೆ. ಅಲ್ಲವೇ ದೇಶಸೇವೆ ಈ ಸಂಗತಿಯಲ್ಲಿ ಆ ಗ್ರಾಮದ ಯುವಕರ ಪ್ರಯತ್ನವು ಶ್ಲಾಘನೀಯವಾಗಿದೆ. ಜಹಗೀರದಾರ್ ಶಾಲ್ ಖಾನ್ ಶೈಕಿಯವರು ಈ ಸಂಗತಿಯಲ್ಲಿ ಹೆಚ್ಚು ಪ್ರೋತ್ಸಾಹಕರೆಂದು ಈ ಗ್ರಾಮದ ಹಿಂದು ಮಹಮ್ಮದಿಯರ ಒಗ್ಗಟ್ಟಿಗೆ ದೃಷ್ಟಾಂತ. ಇನ್ನಾದರೂ ಈ ಚಿಕ್ಕಗ್ರಾಮವನ್ನಾದರೂ ನೋಡಿ ಬೇರೆ ಗ್ರಾಮಸ್ಥರು ಎಚ್ಚರಗೊಳ್ಳಬೇಕೆಂಬುದು ನನ್ನ ಕೋರಿಕೆ

ಪಿ. ಕೆ. ಬಿ.

ಅಯ್ಯಾ,

ನಾನು ಕಳೆದ ತಾರೀಖು 12 ರಲ್ಲು ನನ್ನ ಒಟ್ಟು ಆಳನ್ನು ಅವನಿಗೆ ಖಾಯಿಲೆಯಿದ್ದರಿಂದ ವಿರಾಜಪೇಟೆ ಆಸ್ಪತ್ರೆಗೆ ಕಳುಹಿಸಿದೆನು ಸಬ್ ಅಸಿಸ್ಟೆಂಟ್ ಸರ್ಜನ್ನರು ಪರೀಕ್ಷೆಮಾಡಿ, ಸಮೋಸಿಯ ಖಾಯಿಲೆಯಾಗಿದೆಯೆಂದು ಹೇಳಿ ಔಷದಿಯನ್ನು ಆಸ್ಪತ್ರೆಗೆ ಸೇರಿಸಿಕೊಂಡರು ಹಿಂದಿನ ತಾರೀಖು 14 ರಲ್ಲಿ ನಾನು ಕರಡಕ್ಕೆ ಹುತ್ತರಿಗೆ ಹೋಗುವವರೆಗೆ ಆಸ್ಪತ್ರೆಯಲ್ಲಿಯೇ ಇದ್ದನು ಹುತ್ತರಿ ಕಳೆದು ತಾ|| 20 ರಲ್ಲಿ ನಾನು ತರದಿಂದ ವಾಪಸು ಬಂದು ಆಸ್ಪತ್ರೆಯ ಸಂಜನ ವನ ಕಿಕ್ಕ ಕೊಟಿದ ಬಳಿ ಕಂಡಿದೆನು. ಸುಮಾರು ಸಾಯಂಕಾಲ 7 ಘಂಟೆಯಾಗಿತ್ತು, ಯಾರೋ ರಸ್ತೆ ಬಾಳುಬಿದ್ದಿರುವುದನ್ನು ಕಂಡು ತುಕ್ಕೋಟೆ ಪಕರೆಯವನನ್ನು ಯಾರು ಬಿದ್ದಿದ್ದಾರೆಂದು ಕೇಳಿದೆನು ಆಗ ನಮ್ಮಕೇರಿಯಿಂದ್ರ ಒಬ್ಬ ಆಳು ಖಾಯಿಲೆ ಜೋರಾಗಿ ಬೀಳ್ಗೆ ಬಂದಿದ್ದವನು, ನಿತ್ರಾಣನಾಗಿ ಅಲ್ಲಿಯೇ ಬಿದ್ದು ಸತ್ತಿದ್ದಾನೆಂದು ಹೇಳಿದನು. ಕೂಡಲೇ ನಾನು ಹೋಗಿ ನೋಡುವಾಗ ನನ್ನ ಆಳಾಗಿದ್ದನು ಮಾರನೇದಿನ ಪೋಲೀಸಿಗೆ ಹೋಗಿ ಈ ವಿಷಯ ತಿಳಿಸುವಾಗ, ಅವರು ಆಸ್ಪತ್ರೆಯ ಅಧಿಕಾರಿಗಳನ್ನು ತನಿಖೆಮಾಡಿ ಈ ಕೆಳಗಿನ ಕಾಗದವನ್ನು ಬರೆದಿರುತ್ತಾರೆ. " ಮ|| ನಡಿಕೇರಿಯಂಡ ಸೋಮಯ್ಯನವರಿಗೆ ನಿಮ್ಮ ತಾ|| 21 12.21 ರ ಕಾಗದಮೇರೆ ನಿಮ್ಮ ಆಳ ಸಂಗತಿ ಆಸ್ಪತ್ರೆಯವರನ್ನು ವಿಚಾರಿಸಿದೆನು. ಅವನು ಸಿಟೀನಿರು ಜೋರಾಗಿದ್ದುದರಿಂದ ಬಹಳ ಕೆಟ್ಟಸ್ಥಿತಿಯಲ್ಲಿದ್ದು ಆಸ್ಪತ್ರೆಯಿಂದ ಅವಾಕ್ ಕೆಯು ಇರಾದೆಗೆ ವಿರೋಧವಾಗಿ ಹೋಗುವ ತರದೂದಿನಲ್ಲಿದ್ದನು ಆಸ್ಪತ್ರೆಯಿಂದ ಹೋಗಿಬಿಟ್ಟಿದ್ದಾನೆ. ದಾರಿಯಲ್ಲಿ ಹಾರ್ಟ್ ಒಡೆದು ಸತ್ತಿರಬಹುದು. ಆದ್ದರಿಂದ ಅವನನ್ನು ದಪನ್‌ಮಾಡಿಸಿದೆ ಎಂದು ಬರೆದಿರುತ್ತಾರೆ." ಇವನ್ನೆಲ್ಲಾ ನೋಡಿ ನನಗೆ ಅತ್ಯಂತ ವ್ಯಸನವಾಯಿತು ಇಂಥಾ ಕೃತ್ಯಕ್ಕೆ ಯಾರು ಜವಾಬುದಾರರು? ಆಸ್ಪತ್ರೆ ಅಧಿಕಾರಿಗಳೋ, ಯಾ, ಪೋಲೀಸು ಅಧಿಕಾರಿಗಳೋ? ಧರ್ಮದ ಆಸ್ಪತ್ರೆ ಯಾತಕ್ಕೋಸ್ಕರ ಮಡಗಿದ್ದು? ಬಡವರ ಮತ್ತು ಕೂಲಿ ಆಳುಗಳ ಪ್ರಯೋಜನಕ್ಕೋ ಇಲ್ಲವೇ ದಿಕ್ಕಿಲ್ಲದವರ ಪ್ರಯೋಜನಕ್ಕೋ? ಬಡವರ ಜೀವವು ಕೃಷಿಕರ್ಮಕ ಕಡಿಮೆಯೇ. ಎಂಬ ಈ ಸಂಗತಿಗಳಿಗೆ ದಯವಿಟ್ಟು ಆಸ್ಪತ್ರೆ ಅಧಿಕಾರಿಗಳು ಜವಾಬುಕೊಡಬೇಕಾಗಿ ಕೇಳಿಕೊಳ್ಳುತ್ತೇನೆ ಅಲ್ಲದೆ, ಇಂಥಾ ಅಕ್ರಮಗಳು ನಡಿಯದಂತೆ ಸಿವಿಲ್ ಸರ್ಜನ್ನರು ಇನ್ನು ಮುಂದಕ್ಕಾದರೂ ಎಚ್ಚರಿಕೆಗೊಳ್ಳುವಂತೆ ಆಸ್ಪತ್ರೆಯು ಬಡವರ ಕ್ಷೇಮಕ್ಕೋಸ್ಕರವೇ ಇರುವುದೆಂಬುದನ್ನು ತನ್ನ ಕೈಕೆಳಗಿನ ಉದ್ಯೋಗಸ್ಥರಿಗೆ ತಿಳಿಸುವಂತೆ ಮಾಡಬೇಕಾಗಿ ಕೋರುವೆ.

ನಡಿಕೇರಿಯಂಡ ಸೋಮಯ್ಯ.

ಕಲ್ತೋಡು ಸ್ಕೂಲ್ ವಿದ್ಯಾಭಿವೃದ್ಧಿ ಸಂಘ.

ಸಂಪಾದಕರೇ,

ಸನ್ 1921 ನೇ ನವಂಬರ್ ತಾರೀಖು 26 ರಲ್ಲು ನೀರಾಜೇಂದ್ರಪ್ಪೇಟೆ ನಾಡು ನಾಂಗಾಲ ಗ್ರಾಮದ ಕಲ್ತೋಡು ಸ್ಕೂಲಿನಲ್ಲು ವಿದ್ಯಾಭಿವೃದ್ಧಿಯ ವಿಷಯ ಮ|| ಪಟ್ಟೇದಾರ್ ಕಂಬೆಯಂಡ್ರ ಕಾಳಪ್ಪನವರ ಅಧ್ಯಕ್ಷತೆಯಲ್ಲು ಮಿಟಿಂಗ್ ನಡೆಯಿತು. ಮೊದಲು ಎರಡು ಬಾಲಕಿಯರು ಸಭೆಯವರನ್ನು ವಂದಿಸಿದ ನಂತರ ಸ್ಕೂಲು ಶಾಲೆಯ ಹೆ|| ಮಾ|| ಮ|| ಎಮ್. ಉತ್ತಯ್ಯನವರು "ಈ ಶಾಲೆಯಲ್ಲು 65 ಬಾಲಕರೂ, 63 ಬಾಲಕಿಯರೂ ವಿದ್ಯಾಭ್ಯಾಸಮಾಡುತ್ತಾರೆ. ಇನ್ನು ಹೆಚ್ಚಿಗೆ ಬಾಲಕ ಬಾಲಕಿಯರು ಸೇರುವಂತೆ ಇರುವದರಿಂದ ಇಲ್ಲಿ ಸ್ಥಳವು ಸಾಲದೆಂತಲೂ ಇಲ್ಲಿ ಮೂರೇಜನ ಉಪಾಧ್ಯರು ಇರುತ್ತೇವೆ. ಇನ್ನೊಬ್ಬ ಬೋಧಕರನ್ನು ಕಳುಹಿಸಿಕೊಡುವಂತೆ ದುಃಖ ಕೊಟ್ಟಿರುತ್ತಾರೆಂತಲೂ ಅವರನ್ನು ಬೇಗನೆ ಕಳುಹಿಸಿಕೊಡಬಹುದೆಂತಲೂ ಶಾಲೆಯ ಅಭಿವೃದ್ಧಿಯು" ಒಂದು ರಿಪೋರ್ಟ್ ಓದಿದ ಅದಕ್ಕೆ ಇಲ್ಲಿ ಬಾಲಕಿಯರು ಹೆಚ್ಚಾಗಿರುವದರಿಂದ ಒಂದು ಬಾಲಿಕಾ ಪಾಠಶಾಲೆಯನ್ನು ಕಟ್ಟಿಸುವದೇ ಒಳ್ಳೆಯದೆಂದು ಅಧ್ಯಕ್ಷರು ಅಭಿಪ್ರಾಯಪಟ್ಟದ್ದಕ್ಕೆ ಸಭಿಕರೆಲ್ಲರೂ ಒಪ್ಪಿದರು ಸದರಿ ಬಾಲಿಕಾ ಪಾಠಶಾಲೆಯನ್ನು ಕಟ್ಟಿಸುವುದಕ್ಕೆ ಈ ಗ್ರಾಮಸ್ತರು ಸಹಾಯಬುಟ್ಟಿ ಭೂಮಿಗೆ ಎರಡು ಮಾನಾಯಿಯಂತೆ ಸದರಿ ಗ್ರಾಮಸ್ಥರಿಗೆ ಬಿಟ್ಟಂಗಾಲ, ಬಾಳುಗೋಡು. ಅಂಜಿಗೆರ್ಟ್, ಬಿನ್ನಗುಪ್ಪೆ ಗ್ರಾಮಗಳಲ್ಲಿರುವ ಭೂಮಿಗಳಿಗೆಲ್ಲಾ "ಚಂದಾ" ಹಾಕಿ ಸದರಿ "ಚಂದವನ್ನು" ವಸೂಲ್ಮಾಡಲಿಕ್ಕೆ ಮ|| ಕಂಬೆಯಂಡ್ರ ಗಣಪತಿಯವರನ್ನು ಮ|| ಚೇಂದ್ರಿಮಾಡ ಪೂವಪ್ಪನವರನ್ನು ಮ|| ಬಿಟ್ಟಿಯಂಡ ಚಿಟ್ಟಿಯಪ್ಪನವರನ್ನು ಮ|| ಕುಪ್ಪಂಡ್ರ ಮಂದಪ್ಪನವರನ್ನು ನೇಮಕಮಾಡಲ್ಪಟ್ಟಿತು. ವಸೂಲಿಯಿಂದ ಹಣವನ್ನು ಇನ್ನೊಂದು ಮಿಟಿಂಗಿನಲ್ಲಿ ತೀರ್ಮಾನವಾಗುವವರೆಗೆ ಮ|| ಕಂಬೆಯಂಡ್ರ ಗಣಪತಿಯವರಲ್ಲಿ ಇಡುವಂತೆ ಅಧ್ಯಕ್ಷರ ಮತ್ತು ಸಭಿಕರ ಇರಾದೆಯಂತೆ ತೀರ್ಮಾನವಾಯಿತು. ಈ ಮಿಟಿಂಗಿಗೆ ಹಾಜರಾಗಿದ್ದ ರೇಂಜರ್ ಮ|| ಕುಪ್ಪಂಡ್ರ ಅಪ್ಪಯ್ಯನವರು ಉದಾರಗುಣದಿಂದ ಹೆಚ್ಚಿಗೆ 2- ರೂಪಾಯಿ ಕೊಡುತ್ತೇವೆಂಬದಾಗಿಯೂ ಮ|| ಪುಚ್ಚಿಮಂಡ್ರ ಭೀಮಯ್ಯನವರು 1- ರೂಪಾಯಿ ಕೊಡುತ್ತೇನೆಂದೂ. ಮ|| ಕಂಜಿತಂಡ್ರ ಬಿದ್ದಯ್ಯನವರು 5 ರೂಪಾಯಿ ಕೊಡುತ್ತೇನೆಂದಾಗಿಯೂ ವಾಗ್ದಾನವಾದಿ ಚಂದಪಟ್ಟಿಗೆ ಸೈನುಹಾಕಿದರು ಆ ಮೇಲೆ ಬಾಲಕಿಯರು ಮಂಗಳವಾದಿದನಂತರ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ಮಿಟಿಂಗ್ ಮುಗಿಸಲಾಯಿತು.

ಇದಕ್ಕೆ ಮೊದಲು ವಿದ್ಯಾಭಿವೃದ್ಧಿ ಮಿಟಿಂಗಿನಲ್ಲು ಶಾಲೆಯ ಕಾಂಪೌಂಡಿನ ಸುತ್ತಲೂ ಬೇಲಿ ಕಟ್ಟಿದವರನ್ನು ಕಟ್ಟಿಸಿಕೊಡುತ್ತೇನೆಂದಾಗಿಯೂ ಈ ಶಾಲೆಯ ಮಕ್ಕಳಿಗೆ ಕುಡಿಯಲಿಕ್ಕೆ ಕಲ್ಲುಕಟ್ಟಿ ಒಂದು ಭಾವಿ ತೆಗಿಸಿಕೊಡುತ್ತೇನೆಂದಾಗಿಯೂ, ಮಕ್ಕಳಿಗೆ ಆಟಕ್ಕೆ ಆಟದ ಮೈದಾನವನ್ನು ಮಾಡಿಸಿಕೊಡುತ್ತೇನೆಂದಾಗಿಯೂ ಒಪ್ಪಿ ಕೊಂಡ "ಮಹಾಸಭಾ ಪಾಟೀಲು" ತಮ್ಮಗಳ ಕೆಲಸವನ್ನು ಪೂರೈಸುವಲ್ಲಿ ಅತ್ಯಂತ ಆಸಕ್ತರಲ್ಲಿರುವದಾಗಿ ತಿಳಿಯುತ್ತೇನೆ ಇಂಥ ಪರೋಪಕಾರಿಗಳಿಗೆ ಅವರ ಕೆಲಸಗಳನ್ನು ಪೂರೈಸಲು ದೇವರು ಸುಖವೀಯಲೆಂದು ಆನು ದಿನವೂ ಭಗವಂತನನ್ನು ಬೇಡಿಕೊಳ್ಳುತ್ತೇನೆ

ಎನ್ ಮುತ್ತಣ್ಣ

ವೀರರಾಜೇಂದ್ರಪೇಟೆಯಲ್ಲಿ ನಡೆದ ಉಪಾಧ್ಯಾಯರ ಸಮ್ಮೇಳನ.

ತಾರೀಖು ೯, ೧೦, ೧೧, ೧೨ ಈ ನಾಲ್ಕು ದಿನಗಳಲ್ಲಿ ಮೇಲ್ಕಂಡ ಸಮ್ಮೇಳನವು ಜರಗಿತು ಸ್ಥಳೀಯ ಮತ್ತು ಇತರ ಶಾಲೆಗಳ ಉಪಾಧ್ಯಾಯರೂ ಮತ್ತು ಉಪಾಧ್ಯಾಯರು ಸಾಧಾರಣ ೧೦೦ ರವರೆಗೆ ನೆರೆದಿದ್ದರು ಶಾಲೆಗಳ ಇನ್ಸ್‌ಪೆಕ್ಟರ್ ಇನ್ಸ್‌ಪೆಕ್ಟರಾದ ಮ|| ರಾ|| ಬಿ ಮಂಗೇಶರಾವ್, ಬಿ ಎ, ಎಲ್ ಟಿ ಯವರು ಗುರುಶಿಕ್ಷಣ ಸಂಬಂಧ ಮಕ್ಕಳಿಗೆ ಪ್ರಥಮದಲ್ಲಿ ಏನನ್ನು ಕಲಿಸಬೇಕು, ಏಕ್ಕಗೆ ಕಲಿಸಬೇಕು, ಕಲಿಸುವದರ ಉದ್ದೇಶವೇನು ಎಂಬಂಥ ವಿಷಯಗಳನ್ನು ವಿಸ್ತಾರವಾಗಿ ಉಪಾಧ್ಯಾಯರಿಗೆ ತಿಳಿಸಿದರು ಅವರು ತಿಳಿಸಿದಂಥ ವಿಷಯಗಳು ಅನೇಕವಿವೆ; ಅವುಗಳಲ್ಲಿ ಕೆಲವನ್ನು (ನನ್ನಿಂದ ಸಾಧ್ಯವಾದಮಟ್ಟಿಗೆ) ಚಿಕ್ಕಮಕ್ಕಳಿಗೆ ಕಲಿಸುವ ಭಾವವನ್ನು ವಹಿಸಿರುವ ಉಪಾಧ್ಯಾಯರ ಮತ್ತು ತಂದೆತಾಯಿಗಳ ಪ್ರಯೋಜನಾರ್ಥವಾಗಿ ಬರೆಯಬಯಸಿದ್ದೇನೆ ವಾಚಕ ಮಹಾಶಯರಿಗೆ ಇದರಲ್ಲಿ ಕೋರಿಬಂದವಾದ ಕೆಲವು ಹೊಸತಿಗಳಿಲ್ಲ ನನ್ನವು ಅಲ್ಲದೆ ಭಾಷಕ ಶಕ್ತಿಯು ಅಲ್ಲ ಎಂದು ತಿಳಿಯಬೇಕ್ಕದ್ದು. ಅವರು ಬೋಧಿಸಿರುದು ಏನೆಂದರೆ—

ನ್ಯಾಯವಾದ ಬೋಧಕನೆಂದು ಅನ್ನಿಸಿಕೊಳ್ಳಬೇಕಾದರೆ, ಅತನು ಮಕ್ಕಳ ಶಾರೀರಕ ಮತ್ತು ಮಾನಸಿಕ ಶಕ್ತಿಗಳ ವಿಷಯ ಪೂರ್ಣಜ್ಞಾನವನ್ನು ಹೊಂದಿರಬೇಕು ಈ ತಿಳುವಳಿಕೆಯನ್ನು ಪಡೆಯಬೇಕಾದರೆ ತನ್ನ ಹಿಂದಿನ ವಿಷಯ ಮಂಕು, ಮರಳಿ ನೆನೆಯುವುದು, ಚಿಕ್ಕ ಮಕ್ಕಳನ್ನು ಅವರ ಆಟ, ಪಾಠಗಳಲ್ಲಿ ನೋಡಿ ನೋಡಿ ಅವರ ಪೂರ್ಣ ಪರಿಚಯವನ್ನು ಹೊಂದಿಕೊಳ್ಳುವುದೇ ಮುಖ್ಯದಾರಿ ಈ ಲೋಕದಲ್ಲಿ ಹುಟ್ಟಿದ ಮಕ್ಕಳಲ್ಲಿ, ಗಂಡ ಹೆಂಡತಿಯಲ್ಲಿ ಗುರು ಶಿಷ್ಯರಲ್ಲಿ ರಾಜಪ್ರಜೆಯರಲ್ಲಿ ಪ್ರತಿಕೂಲ ಧರ್ಮವೇ ಪ್ರಚುರದಲ್ಲಿದೆ ಆದರಿಂದ ಅಧಿಕಾರದಲ್ಲಿರುವವರ ಮೇಲೆ ಅವನಂಬಿಕೆಯೂ ಅಧೀನತೆಯಲ್ಲಿರುವವರ ಮೇಲೆ ಅಧಿಕಾರ ಪ್ರಯೋಗವೂ ನಡೆಯುತ್ತಾ, ನಡೆಯುತ್ತಾ ಲೋಕವೇ ಅಲ್ಲೋಲಕಲ್ಲೋಲವಾಗಿದೆ ಇಂಥಾ ದುಸ್ಥಿತಿಯನ್ನು ನಿರ್ಮೂಲಮಾಡಬೇಕಾದರೆ ಗುರುಶಿಷ್ಯರ ಸಂಬಂಧವು ಮಾರ್ಪಾಡಾಗಿ ಬೋಧಕನೇ ಅಂತರ್ಯಾಮಿಯೆಂದೂ, ಶಿಷ್ಯನೇ ಅತನೆಂದೂ, ಆತನೇ ಪ್ರತ್ಯಕ್ಷವಾಗುವ ಅಧಿಕಾರವೆಂದೂ ಇರುವಂಥದ್ದು ಹೋಗಿ ಬೋಧಕನು ಶಿಷ್ಯನಿಗೆ ಜ್ಞಾನಮಾರ್ಗವನ್ನು ತೋರಿಸಲಿರುವವನೆಂದೂ, ಅದರಲ್ಲಿ ಅಧಿಕಾರ, ಅಧೀನತೆಗಳಿಗೆ ಆಸ್ಪದವಿಲ್ಲವೆಂದೂ ಜ್ಞಾನೋದಯವಾಗಬೇಕು.

ಓದಿದೊಡಲ್ಲದೆ ಆಕ್ಷರ | ಸಾಧನೆಯಿಂದಿದು ದೊರೆಯದದು || ಎಂಬ ಕವಿವಾಣಿಯ ನಿಜ ಅರ್ಥವನ್ನು ತಿಳಿಯದೆ ಜನರು ಓದುವುದು, ಬರೆಯುವುದು (ಮತ್ತು ಲೆಕ್ಕ) ಇವುಗಳ ಕುಶಲತೆಯನ್ನು ಪ್ರಾಪ್ತಿ ಸಂಪಾದಿಸಿದರೆ ಆಯಿತೆಂದು ತಿಳಿಯುತ್ತಾರೆ. ಓದುಬರಹವೇ ಮನುಷ್ಯನ ಆಪಾದದ ಬುದ್ಧಿಶಕ್ತಿಯಲ್ಲ, ಕವಿವಚನದಂತೆ ಅದು ಆಪಾದ ಸಂಪತ್ತನ್ನು ಪಡೆಯಲು ಒಂದು ಸಾಧನಮಾತ್ರವಾಗಿದೆ ಹೀಗಿರುವಾಗ ಬಾಲಕನು ಸ್ವಂತ ಜ್ಞಾನವನ್ನು ಹೊಂದದೆ ಬರೇ ಪುಸ್ತಕಗಳನ್ನು ಅಭ್ಯಾಸ ಮಾಡಿದ್ದರಿಂದ ಪ್ರಯೋಜನವೇನು?

ಪ್ರತಿಯೊಬ್ಬ ಮನುಷ್ಯನಲ್ಲಿಯೂ ಇರುವ ಶಾರೀರಕ ಶಕ್ತಿಯು ಅತನನ್ನು ಸುಮ್ಮನಿರಗೊಡಿಸುವದಿಲ್ಲ. ಮಕ್ಕಳಲ್ಲಿ ಈ ಶಕ್ತಿಯು ತುಂಬಿ ತುಳುಕುತ್ತಿರುವ ಕಾರಣ ಅವರು ಸುಮ್ಮನಿರಲಾರದೆ ಏನಾದರೂ ಕೆಲಸವನ್ನು ಮಾಡುತ್ತಲೇ ಇರುತ್ತಾರೆ ಆ ಕಾರಣ ಅವರನ್ನು ಶಾಲೆಯೊಳಗೆ ಬೆಂಚಿಗಳಲ್ಲಿ ಕೂರಿಸಲ್ಪಟ್ಟಿನ್ನರೆ ಪಾಠದಲ್ಲಿ ರುಚಿಯುಂಟಾಗುವಂತೆ ಪಾಠವನ್ನು ಆಟದರೂಪಕ್ಕೆ ತಂದು ಕಲಿಸಬೇಕು ಮನುಷ್ಯನ ಮನಸ್ಸು ನಿಮಿಷವಾದರೂ ಸುಮ್ಮನಿರುವದಿಲ್ಲ. ಇಂದ್ರಿಯಗಳ ಮೂಲಕ ಬಾಹ್ಯಪ್ರಪಂಚದ ಜ್ಞಾನವನ್ನು ಹೊಂದಿಕೊಳ್ಳಲಿಕ್ಕೆ ಯತ್ನಿಸುತ್ತದೆ ಈ ಪ್ರಯತ್ನದಲ್ಲಿ ಎಷ್ಟರಮಟ್ಟಿಗೆ ಬಾಹ್ಯಪ್ರಪಂಚದ ಭಾವವೂ ಜ್ಞಾನವೂ ಮನಸ್ಸಿನಲ್ಲಿ ಅಂಕುರಿಸುವಾಯಿತೊ ಅಷ್ಟರಮಟ್ಟಿಗೆ ಜ್ಞಾನಶಕ್ತಿಯೂ ಕಿರುವಳಿಕೆಯೂ ಹೆಚ್ಚುತ್ತದೆ ಬೀದಿಯಕಸವು ಬೆಳೆಯುತು, ಕೋಣೆಯು ಕೊಸು ಕೊಳೆಯಿತು ಎಂಬ ಮಾತು ನಿಜವಾಗಿದೆ ಅನುಕೂಲ ಧರ್ಮದ ಗುಟ್ಟನ್ನು ತಿಳಿದು ಮಕ್ಕಳು ಸ್ವಭಾವದ ಮಾತ್ರ ತಿದ್ದುಕ್ಕಾ ಅವರ ಮನಸ್ಸಿಗೆ ಇಂಪಾಗುವ ರೀತಿಯಿಂದ ಸೃಷ್ಟಿಯ ಜ್ಞಾನವನ್ನುಂಟುಮಾಡುವುದು ತಂದೆತಾಯಿಗಳ ಮತ್ತು ಉಪಾಧ್ಯಾಯರ ಕರ್ತವ್ಯ.

ಮಗುವು ಭಾಷೆಯನ್ನು ಕಲಿಯಬೇಕಾದರೆ ತನ್ನ ತಾಯಿಯ ಹೆಸರು, ತಂದೆಯ ಹೆಸರು ವಗೈರೆ ಮೊದಲು ಕಲಿಯುತ್ತದೆ ಅಂದರೆ ತನ್ನ ಸುತ್ತಲೂ ಇರುವ ವಸ್ತುಗಳನ್ನು ಅನೇಕಸಲ ನೋಡಿ, ನೋಡಿ ವರು ಅದರ ಹೆಸರನ್ನು ಹೇಳುವಾಗ ಅನೇಕಸಲ ಕೇಳಿ, ಕೇಳಿ ಅನಂತರ ಅದು ಇಂಥಾದ್ದೆಂದು ತಿಳಿದುಕೊಳ್ಳುತ್ತದೆ ಪ್ರಥಮದಲ್ಲಿ ಮಕ್ಕಳಿಗೆ ಈ ಸ್ವಾಭಾವಿಕ ಕ್ರಮವನ್ನನುಸರಿಸಿ ಕಲಿಸಬೇಕು ಮೊದಲನೆ ಪಠ್ಯಪುಸ್ತಕಗಳಲ್ಲಿ ಆಲದಮರ ಹುಲಿಯ ಉಗುರು, ಮದುವೆಯ, ಅಂಗಡಿಬೀದಿ ಎಂಬ ಮಗುವಿಗೆ ಇಂದ್ರಿಯದ್ವಾರಾ ತಿಳಿದಿರುವ ಪರಿಚಯವಿಲ್ಲದ ನಾನಾ ಮಾತುಗಳನ್ನು ಕಂಠಪಾಠ ಮಾಡಿಸುತ್ತಿದ್ದರು ಅದರಿಂದ ವಸ್ತುಜ್ಞಾನವಾಗಲೀ, ಭಾಷಾಜ್ಞಾನವಾಗಲೀ, ಆಗುತ್ತಿರಲಿಲ್ಲ ಅಲ್ಲದೆ ಜೈಮಿನಿ ಭಾರತ, ಅಮರಕೋಶ ಮೊದಲಾದ ಗ್ರಂಥಗಳನ್ನು ಅತ್ಯಂತ ಬಾಲಕರು ಪಠನಮಾಡುವ ಪದ್ಧತಿಯುಂಟು ಇವುಗಳ ಬೋಧೆಯಲ್ಲಿ ಗುರುವು ಶಿಷ್ಯನ ಸ್ವಭಾವೇಂದ್ರಿಯ ಬಂದದ್ದೇ ಉಪಯೋಗಿಸುತ್ತಿದ್ದನು ಇದರಿಂದ ಬಾಹ್ಯವಸ್ತುವಿನ ಭಾವವು ಮನಸಿನಲ್ಲಿ ಅಂಕುರವಾಗುತ್ತಿರಲಿಲ್ಲ, ಕಲಿತ ಪಾಠವು ಮನಸ್ಸಿಗೆ ಮಂದಟ್ಟಾಗದ ಬಗೆಗಿನ ಕಾರಣವಾಗುತ್ತಿತ್ತು ಈ ರೀತಿ ಶಬ್ದಗಳನ್ನು ಮನಸ್ಸಿನಲ್ಲಿ ತುಂಬುವದು ಯಾವಾಗಲೂ ಮುಂದೆ ಮನಸಿನಾಶಕ್ತಿಯ ಮಾಂದ್ಯವೇ ಆಗುತ್ತದೆ. ಮಕ್ಕಳ ಬಾಲಗಳನ್ನು ಮುಸಿಕಿಂದ ಒಟ್ಟುವುದರಿಂದಲ್ಲದೆ ಬೇರಲ್ಲ.

ಕಿಂಡರ್‌ಗಾರ್ಟನ್ ಸಿಸ್ಟಂ ಅಂದರೆ ಪಾಠವನ್ನು ಕಲಿಸದೆ ಬರೀ ಆಟಾಡುತ್ತಾ ಕಾಲಹರಣಮಾಡುವ ಉಪಾಯವೆಂದು ಇದರ ಜನರು ನೇಕರು ತಿಳಿದಿರುತ್ತಾರೆ ಇದು ನಿಜವಲ್ಲ ದಶಾವತಾರದ ಆಟಗಳು ಜನರಲ್ಲಿ ಭಕ್ತಿ ನೆಲೆಗೊಳ್ಳಲಿಕ್ಕಾಗಿ ಆಡಿಸಲ್ಪಡುತ್ತವೆ ಆದರೆ ಭಕ್ತಿ ಬೋಧೆಗೆ ಭಾಗವತನು ಕಥೆಯನ್ನು ಹೇಳುವಾಗ ಜನರು ಕೇಳುವದೇ ಸಾಕಲ್ಲವೇ? ವಾದ್ಯ, ಗಾನ, ನರ್ತನಗಳಿಂದ ಪ್ರಯೋಜನವೇನು? ಇವುಗಳಿಲ್ಲದೆ ಬರೀ ಕಥೆಯನ್ನು ಹೇಳಿದರೆ ಕೇಳುವವರ ಮನಸ್ಸು ಅದರಲ್ಲಿ ನಾಟಲಾರದು ಹೇಳುವ ಕಥೆಯಲ್ಲಿ ಮನಸ್ಸು ತಲ್ಲೀನವಾಗದಿದ್ದರೆ ಭಕ್ತಿಯ ನೆಲೆಗೊಳ್ಳುವದಿಲ್ಲ? ಆದ್ದರಿಂದ ಮನೋರಂಜಕವಾದ ವಾದ್ಯ, ಗೀತ, ನರ್ತನಗಳೊಡನೆ ಕಥೆಯನ್ನು ನಡೆಸುತ್ತಾರೆ.

ಮಕ್ಕಳಿಗೆ ಪಾಠವನ್ನು ಆಟದರೀತಿಯಲ್ಲಿ ಕಲಿಸಿದರೆ ಅವರ ಮನಸ್ಸು ಬೇಗನೆ ನಾಟುತ್ತದೆ. ಯಾವ ಪಾಠವನ್ನೇ ಆಗಲಿ ಮಕ್ಕಳಿಗೆ ರುಚಿಕರವಾದ ಕಥೆ, ಪದ್ಯ ಮತ್ತು ಪದಗಳ ಮುಖಾಂತರ ಕಲಿಸಬೇಕು ಕಲಿಸುವಾಗ ಯಾವಾತನು ಮಕ್ಕಳ ಪಂಚ ಇಂದ್ರಿಯಗಳಿಗೆ ಕೆಲಸವನ್ನು ಕೊಡುತ್ತಾನೊ ಅವನೇ ಬುದ್ಧಿವಂತ ಬೋಧಕನು, ಏಕೆಂದರೆ ಉಪಯೋಗಿಸಲ್ಪಡುವ ಇಂದ್ರಿಯಗಳ ಸಂಖ್ಯೆಯು ಕ್ರಮವಾಗಿ ಹೆಚ್ಚುತ್ತಾ ಹೋಗಬೇಕಲ್ಲದೆ ಒಂದೇಬಾರಿ ಎಲ್ಲಾ ಇಂದ್ರಿಯಗಳಿಗೆ ಕೆಲಸವನ್ನು ಕೊಡಬಾರದು ಹೀಗೆ ಇಂದ್ರಿಯಗಳ ಮೂಲಕ ನಾನಾತರದಲ್ಲಿ ಬಾಹ್ಯವಸ್ತುವಿನ ಭಾವವು ಮನಸ್ಸಿನಲ್ಲಿ ನೆಲೆಗೊಂಡರೆ ಅದು ಅಳಿಸಿಹೋಗುವದಿಲ್ಲ ಈ ರೀತಿ ಬಾಲಕನು ಬೆಳೆಯುತ್ತಾ ಹೋಗುತ್ತಾ ಸೃಷ್ಟಿಯ ಎಲ್ಲಾ ವಸ್ತುಗಳ ನಿಜ ಜ್ಞಾನವನ್ನು ಹೊಂದಿ, ಅದರ ಮಹಿಮೆಯನ್ನರಿತು ಅವನ ಮನಸ್ಸು ಅದರಲ್ಲಿ ತಲ್ಲೀನವಾಗುತ್ತದೆ ಆಗ ಅವನು ತನಗೂ ಸೃಷ್ಟಿಗೂ ಭೇದವಿಲ್ಲೆಂಬ ಜ್ಞಾನಿಯಾಗುತ್ತಾನೆ. ಜೇನು ನೊಣಗಳು ಹೂವಿನಿಂದ ಮಧುವನ್ನು ಹೊತ್ತುತಂದು ಕೂಡಿಟ್ಟುಕೊಂಡ ಹಾಗೆ ಹಿಸುವಂತೆ ಮನಸ್ಸು ಇಂದ್ರಿಯದ್ವಾರ ಸೃಷ್ಟಿಯ ಪರಿಚಯವನ್ನು ತಾನು ರಿಸಿಕೊಂಡು, ತಾನು ಸಂಗ್ರಹಿಸಿದ ಚೇತನಕ ಜ್ಞಾನವನ್ನು ಭಾಷಾ ಮುಖಾಂತರ ಪರರಿಗೆ ಬೋಧಿಸುವುದು ಈ ರೀತಿ ಓದುವುದು, ಬರೆಯುವುದು ಸಾಧನಗಳು. ಇಂದ್ರಿಯಗಳನ್ನು ಶಕ್ತಿಗೊಳಿಸಿ, ಮನಸ್ಸನ್ನು ಸದ್ವಿಷಯಗಳಲ್ಲಿ ಮುಳುಗಿಸಿ ಸೃಷ್ಟಿಯ ಪರಿಚಯವನ್ನು ಹೊಂದಿಸುವದೇ ಬೋಧನೆಯ ಉದ್ದೇಶವು

ಈ ರೀತಿ ತಿಳುವಳಿಕೆಯನ್ನು ಕೊಟ್ಟದ್ದಲ್ಲದೆ, ಬಾಲಕರಿಗೆ ಯಾವ ರೀತಿಯಲ್ಲಿ ಹೇಗೆ ಕಲಿಸಬೇಕೆಂದು ನಾನಾವಿಧದ ಪಾಠಗಳನ್ನು ಮಾಡಿ ತೋರಿಸಿದರು ಅದಲ್ಲದೆ ಅವರು ಪಟ್ಟ ಕ್ರಮವು ಅಷ್ಟೇನೆಂದು ಹೇಳಿ ತೀರದು ಅಲ್ಲಿ ನೆರೆದಿದ್ದ ಉಪಾಧ್ಯಾಯ ಮಹಾಶಯರುಗಳು ಅವರ ಬೋಧನೆಯನ್ನು ಅನುಸರಿಸಿ ತಾವೂ ಕಲಿಸಿದರೆ ಅವರ ಪ್ರಯತ್ನವು ಸಾಫಲ್ಯವಾಯಿತೆಂದೂ ಅದೇ ಅವರು ಪಟ್ಟ ಪ್ರಯತ್ನಕ್ಕೆ ಫಲಸ್ವರೂಪವೆಂದೂ ನಾನು ನಂಬುತ್ತೇನೆ

ಬಿ ಯಂ ಕಾರ್ಯಪ್ಪ

ವಾ ಕೋ ಟ್ ಲೀ ವ ರ್ ವಾ ಚ್

ಇದರ ಕ್ರಯ ನ್ಯಾಯವಾದ ವಾಚ್ ಸರಪಣಿ ಮತ್ತು ಸುಂದರವಾದ ವಾಚ್ ಪೆಟ್ಟಿಗೆ ಸಮೇತ

5—8—0 ರೂ. ಮಾತ್ರ.

ಧನವಂತರೇ!



ಈ ವಾಚ್ ಶ್ರೇಷ್ಠವಾದ ಲೀವರ್ ಕೆಲಸದಿಂದ ತಯಾರಾದದ್ದು. ನ್ಯಾಯವಾದ ಮತ್ತು ಒಲಿಷ್ಟವಾದ ಸಾಮಾನುಗಳಿಂದ ತಯಾರಾದದ್ದು. ಅಲ್ಲವಾದ ಪರಾಕ್ರಮ ಪ್ರಕಟನೆಯ ವಾಚ್ ಅಲ್ಲ ಈ ವಾಚ್ ಅನೇಕ ವರ್ಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು. ನೋಡುವದಕ್ಕೆ ಬಹು ಗಂಭೀರವಾದದ್ದು ಕೆಲವು ಮಾತ್ರವೇ ಉಳಿದಿವೆ. ಬೇಕಾದವರು ಶೀಘ್ರವಾಗಿ ಒಂದು ತರಿಸಿಕೊಳ್ಳಿ.

ವಿಳಾಸ:—ಆರ್. ಕೆ ವಾಚ್ ಕಂಪೆನಿ,

12—1 ನಂಬರು 42 ಕಂದಸ್ವಶೆಟ್ಟಿಬೀದಿ, ಮದರಾಸ್

"ಸುಲಭರೀತಿ, ಲಾಭದದಾರಿ"

ರೇಶ್ಮೆಶೀರೆಗಳಿಗೂ, ವಸ್ತ್ರಗಳಿಗೂ ಬನರಾಸ್, ಕಾಶ್ಮೀರ, ಕಾಶಿಪಟ್ಟೆ, ಧೋರನಾಟಾ, ಸೊಂಟಕ್ಕೆ ಕಟ್ಟುವ ರೇಶ್ಮೆದಟ್ಟಿ, ತಲೆಗೆ ಕಟ್ಟುವ ವಸ್ತ್ರ, ಕೈವಸ್ತ್ರ, ಮುಂತಾದವು ಒಗ್ಗಿಕೊಟ್ಟು ಕಂಬಿ ವಗೈರೆಯಿಂದ ಹಳೇದನ್ನು ಹೊಸದಾಗಿ ತಯಾರಿಸುತ್ತೇವೆ.

ಬೇಕಾದರೆ ಬಟ್ಟೆಗೆ ಅವರವರ ಇಷ್ಟದ ರೀತಿ ಬಣ್ಣ ಕೊಡಲು ತಯಾರಿದ್ದೇವೆ.

ನೂಲಿನ ಬಿಳಿ ಬಟ್ಟೆಗಳಿಗೆ ಗುಲಾಬಿ ಮತ್ತು ಕಪ್ಪು ಬಣ್ಣ ಕೊಡಲ್ಪಡಲ್ಲವು.

ಮೇಲ್ಕಂಡ ಬಣ್ಣಗಳು ಖಾತ್ರಿಯಾದ್ದಾಗಿರುತ್ತೆ. ಮಡಿಕೇರಿಯಲ್ಲಿ ಅನೇಕರಿಗೆ ಈ ಮೇರೆ ಹಳೆ ಬಟ್ಟೆಗಳಿಗೆ ಬಣ್ಣ ಕೊಟ್ಟು ಹೊಸದಾಗಿ ಮಾಡಿಕೊಟ್ಟಿರುತ್ತೇವೆ ಅಲ್ಲದೆ ಹೊಸ ಹೊಸ ನಮೂನೆಯ ಹೊಸ ಶೀರೆಗಳನ್ನು ಸಹ ಸುಲಭ ದರದಿಗೆ ವಿಕ್ರಿ ಮಾಡುತ್ತೇವೆ. ಹೆಚ್ಚಿನ ಸಂಗ್ತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಪಿ. ಯಂ. ಮುರುಗೇಶಮೊದಲಿಯಾರ್,

ಕ್ಲಾತ್ ಮತ್ತು ಡಯಿಂಗ್ ವ್ಯಾಪಾರಿ, ಗವ್ಸಲ್ಪೆನ

12—3 ಮಡಿಕೇರಿ (ಕೊಡಗು)

ನೆನಪಿನಲ್ಲಿಡಿರಿ!

ಕಾರ್ತಿಕ ಬಹುಳ ದಶಮಿ! **ಗುರುವಾರ!!** **ತಾ|| ೩೦ ಡಿಸೆಂಬರ!!!**

ಈ ದಿನವೇ

ಕನ್ನಡ ನವಜೀವನವು

ಹೊರಬೀಳುವದು!! ಮಹಾತ್ಮಾಗಾಂಧಿಯವರು ಸ್ವತಃ ತಾವೇ ಬರೆಯುತ್ತಿರುವ ಕೆಚ್ಚಿನ ಮಾರ್ಮಿಕವಾದ ಲೇಖನಗಳನ್ನು ಓದುವ ಲವಲವಿಕೆಯು ನಿಮ್ಮಲ್ಲಿದ್ದರೆ ಬೇಗನೇ ಚಂದಾದಾರರಾಗಿ. ಕನ್ನಡ ನವಜೀವನ ಎಂದರೆ ಮಹಾತ್ಮರು ಪ್ರಕಟಿಸುತ್ತಿರುವ "ಎಂಗ ಇಂಡಿಯಾ" "ನವಜೀವನ" ಗಳ ಶುದ್ಧ ಭಾಷಾಂತರವೇ. ಈ ರಾಷ್ಟ್ರೀಯ ಜಾಗ್ರತಿ ಎಂಬ ಮಹಾಪರ್ವದಲ್ಲಿ ಮಹಾತ್ಮರ ಸಂದೇಶವನ್ನರಿತುಕೊಳ್ಳುವ ಆತುರತೆಯುಳ್ಳವರು ಕೂಡಲೇ ವರ್ಗಣಿ ಹಣವನ್ನು ಸಲ್ಲಿಸಬೇಕು. ಯಾಕೆಂದರೆ ಮೊದಲಿಗೆ ನಿಯಮಿತ ಪ್ರತಿಗಳು ಹೊರಡುವವು. ನೀವು ತ್ವರೆ ಮಾಡದಿದ್ದರೆ ಹಿಂದುಗಡೆಗೆ ನಿರಾಶೆಯಾಗಬಹುದು.

ವಾರ್ಷಿಕ ವರ್ಗಣಿ ರೂ ೪—೦—೦.

ಸೂಚನೆ—ವ್ಹಿ. ಪಿ. ಯಿಂದ ಪತ್ರಿಕೆಯನ್ನು ಕಳಿಸುವ ಪದ್ಧತಿಯು ನಮಗಿಲ್ಲ. ಚಂದಾದಾರರಾಗಬಿಚ್ಛಿಸುವವರು ವರ್ಗಣಿ ಹಣವನ್ನು ಮುಂಗಡ ಸಲ್ಲಿಸತಕ್ಕದ್ದು. [illegible] ಬರೆದುಕೊಳ್ಳಬೇಕು. [illegible]

ವ್ಯವಸ್ಥಾಪಕ "ಕನ್ನಡ ಜೀವನ"

ಬಾಗಲಕೋಟೆ.

ಜಿಲ್ಲಾ ವಿಜಾಪುರ

ರಿಪೇರು! ರಿಪೇರು!! ರಿಪೇರು!!!

[illegible]

ಅಜೀರ್ಣ ಸಂಬಂಧ ಅಶಕ್ತಿ [illegible] ಕತ್ವ ಮುಂತಾದ ವ್ಯಾಧಿಗಳಿಂದ [illegible] ವೈದ್ಯರ ಲೋಕವಿಖ್ಯಾತ

[illegible]

ಉಪಯೋಗಿಸುವದರಿಂದ [illegible] ಯಾಗಿ ಕಲಸಮಾಡುವದು

4 ವಾತ್ರೆಗಳುಳ್ಳ ಡಬ್ಬಿ ಕ್ರಯ ರೂ 1 —0—[illegible]

ವಿ. ಪಿ. ಪಾಕಿಂಗ ಖರ್ಚು [illegible]

ಬಿಟ್ಟಿ! ವೈದ್ಯ [illegible] ಬಿಟ್ಟಿ!!

ಆಯುರ್ವೇದ [illegible] ದಾರೋಗ್ಯ [illegible] ರೋಗಿಗಳಿಗೆ ವೈದ್ಯನು [illegible] ಉಪಾಧ್ಯಾಯನು

ರಾಜವೈದ್ಯ ನಾರಾಯಣಜಿ ಕೇಶವಜಿ

12-1 27 [illegible], ಮದ್ರಾಸು

AN APPROVED FIRM FOR THE SUPPLY OF STATIONERY ARTICLES TO THE COURT OF

H. H. the Maharaja of Mysore

ನಮ್ಮಲ್ಲಿ ಎಲ್ಲಾ ವಿಧವಾದ ಸ್ಟೇಷನರಿ ಸಾಮಾನುಗಳೂ ಫೌಂಟೆನ್ ಪೇನಾಗಳೂ ಪ್ರಿಂಟಿಂಗ [illegible] ಪೇಪರುಗಳೂ, ಎಕ್ಸರ್‌ಸೈಜ್ ಬುಕ್ಕುಗಳೂ, [illegible] ನೋಟ್ ಬುಕ್ಕುಗಳೂ, [illegible] ಬುಕ್‌ಬೈಂಡಿಂಗ್ ಮತ್ತು ಟೈಪ್‌ರೈಟಿಂಗ್ [illegible] ಅನುಕೂಲವಾದ [illegible] ಕಾಗದದಿಂದ [illegible] ಸಿದ್ಧವಾಗಿವೆ.

1922 ನೇ ಇಸವಿ ಹೊಸ [illegible] ಡೈರಿಗಳೂ [illegible] ಕಳು, ಮಹಾತ್ಮಗಾಂಧಿಯವರು [illegible] ಇನರುಗಳ ಚಿತ್ರಪಟಗಳು [illegible] ಕಾರ್ಡುಗಳೂ [illegible] ಸಿದ್ಧವಾಗಿವೆ. 21-1

M. N. K & Bros.

Book-Binders & Stationers MYSORE

ಆನಂದವಾದ ಮಧುರ ಸೀರೆಗಳು.

[illegible] ನಾನಾ ಬಗೆ [illegible] ರೂ 5—0—0 [illegible] 8 [illegible] 4—8—0 [illegible] 5—0—0 [illegible] ರೂ 7 [illegible] 7 [illegible] 8 [illegible] ರೂ 7—8—0 [illegible]

[illegible]

[illegible]

ಕ್ರಯ ಕಮ್ಮಿ! ಗುಣ ವಿಶೇಷ!!

ದಾಕ್ಷಾಪುಷ್ಟಿ ಚೂರ್ಣ—ಆಯುರ್ವೇದ ವಿಧಿ ಪ್ರಕಾರ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ [illegible] ಅಥವಾ ಸಂಕರ ಧಾತು [illegible] ಪಿತ್ತದ ಬಾಧೆ, [illegible] ಅಜೀರ್ಣ [illegible] ಮೊದಲಾದವು [illegible] ರಕ್ತಶೋಧಕ [illegible] ಇಂದ್ರಿಯಸ್ಥಂಭನ [illegible] ಶಕ್ತಿಯೂ ಉಂಟಾಗುತ್ತದೆ. [illegible] ಡಬ್ಬಿ 1 ಕ್ಕೆ ರೂ 2 [illegible]

(2) [illegible]—ಇದರ ಸೇವನೆಯಿಂದ [illegible] ರೋಗಗಳನ್ನು ನಾಶಪಡಿಸಿ ಜೀರ್ಣಶಕ್ತಿ [illegible] ಸೌಂದರ್ಯವನ್ನು [illegible] ಇಂದ್ರಿಯಪಟುತ್ವವನ್ನು [illegible] ವದು ಮತ್ತು ಶರೀರದಾರ್ಢ್ಯವನ್ನೂ, ಅವಯವಗಳ ಬಲವನ್ನು ವೃದ್ಧಿಮಾಡುತ್ತದೆ ಮತ್ತು ಜ್ಞಾಪಕಶಕ್ತಿಯನ್ನು ವೃದ್ಧಿಪಡಿಸಿ [illegible] ಅಧಿಕಮಾಡುವುದು. ಈ ಔಷಧವು ಬಾಲಕರಿಗೆ ವೃದ್ಧರಿಗೂ [illegible] ಇದು [illegible] ಇದು ಹವಸವೆಂಬ [illegible] ಶಕ್ತಿ [illegible] ಉಪಯೋಗಿಸಲ್ಪಟ್ಟ [illegible] ಯಶವಾಗಿರುತ್ತದೆ 1 ಸೇರಿನ ಡಬ್ಬಿ 1 ಕ್ಕೆ 2—0—0

(3) ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರು [illegible] ಋತುಕಾಲದಲ್ಲಿ ಅತ್ಯಲ್ಪ [illegible] ಹೊಟ್ಟೆನೋವು, ಸೊಂಟನೋವು, [illegible] ಬಿಳಿಯಾಗಿರುವಿಕೆ, [illegible] ಗರ್ಭಕೋಶ [illegible] ಮತ್ತು ಸ್ತ್ರೀಗಳಿಗೆ ಉಂಟಾಗತಕ್ಕ ಸಕಲ ರೋಗಗಳನ್ನು [illegible] ಗುಣಪಡಿಸುತ್ತದೆ 8 ಔನ್ಸ ಬಾಟ್ಲಿಗೂ ಡಬ್ಬಿ ಮಾತ್ರೆಗೂ 2—0—0.

(4) ಪಿತ್ತಶಾಮಕ ಚೂರ್ಣ—ಮಲಬದ್ಧತೆ, ಬಹುಮೂತ್ರ, ಛಳಿಜ್ವರ [illegible] ತಲೆತಿರುಗುವಿಕೆ, ಆಮ್ಲಪಿತ್ತ, ಹೊಟ್ಟೆ ಹಸಿವಿಲ್ಲದೆ ಇರುವಿಕೆ, [illegible] ವಾತಪಿತ್ತ, ಕಫ [illegible] ಔಷಧಿ, 1 ಡಬ್ಬಿಗೆ 12 ಆಣೆ.

(5) [illegible] ಗುಟಿ—ಮಕ್ಕಳಿಗೆ ಮಲಬದ್ಧತೆ [illegible] ಉಂಟಾಗತಕ್ಕ ಸಕಲ ರೋಗಗಳನ್ನು ಗುಣಪಡಿಸಲಿಕ್ಕೆ [illegible] ವುದು ಬಾಟ್ಲಿ 1 ಕ್ಕೆ 10 ಆಣೆ 3 ಬಾಟ್ಲಿಗಳಿಗೆ 1-10-0.

(6) [illegible] ಗುಟಿಕೆ—ಈ ಎರಡು [illegible] ಗುಟಿಗಳ ಸೇವನೆಯಿಂದ ತ್ರಿದೋಷ (ಕಫ, ವಾತ, ಪಿತ್ತ) ದಿಂದ ಉಂಟಾಗುವ [illegible] ಸಿದ್ಧೌಷಧವಾಗಿರುವದು 1 ಬಾಟ್ಲಿ ಮಾತ್ರೆಗಳಿಗೆ 0—10—0

(7) [illegible] ತೈಲ—ಶೀಘ್ರ ನೋವು [illegible] ಶಿರಃಶೂಲ [illegible] ಮುಂತಾದ [illegible] ರೋಗಗಳನ್ನು ಗುಣಮಾಡುತ್ತದೆ ಬಾಟ್ಲಿ 1 ಕ್ಕೆ 12 ಆಣೆ

(8) ಪ್ರಾಣದಾಯಿ ಮೂಲವ್ಯಾಧಿಗೆ ದಿವ್ಯ ಔಷಧ—ಬಾಟ್ಲಿ 1 ರ 12 ಆಣೆ

(9) ಚಂದ್ರೋದಯಾವರ್ತಿ—ಕಣ್ಣಿನಲ್ಲಿ [illegible] ತಿಮಿರ [illegible] 3 ವರುಷದ [illegible] ಇವೇ ಮುಂತಾದವನ್ನು ಗುಣಪಡಿಸುತ್ತದೆ, ಬಾಟ್ಲಿಗೆ 1 ಆಣೆ

(10) [illegible] ಗುಟಿಕೆ—ಬಾಟ್ಲಿ 1 ರ 12 ಆಣೆ

(11) [illegible]—ಡಬ್ಬಿ 1ರ 5 ಆಣೆ. 6 ಡಬ್ಬಿಗಳಿಗೆ 1—12—0 ಡಜನ್ನಿಗೆ 3 ರೂ

(1[illegible]) [illegible] ಚೂರ್ಣ—ದೊಡ್ಡ ಡಬ್ಬಿ 1 [illegible] 0 ಆಣೆ

(1[illegible]) [illegible] ಚೂರ್ಣ—ಡಬ್ಬಿ 1 [illegible] ಆಣೆ 12 ಆಣೆ ಕ್ರಯದ ಔಷಧಿಗಳಿಗಿಂತ ಕಡಿಮೆ ಔಷಧಿಯನ್ನು ವಿ. ಪಿ. ಮಾಡಲಾರೆವು.

ಕೇಟಲಾಗು ಬರೆದು ತರಿಸಿಕೊಳ್ಳಿರಿ.

[illegible] ಗೋಪಾಲಸ್ವಾಮಿ ಎಂಡ್ ಸನ್ಸ್,

ಆಯುರ್ವೇದಿಕ ಫಿಸಿಸಿಯನ್ಸ್.

12-1 ಮಂಗಳೂರು, ದ.



ಅಮೃತಾಂಜನ.

[illegible]

[illegible]

ಅಮೃತಾಂಜನ್ ಡಿಪೋ,

[illegible] ಮದರಾಸು

12-1

[illegible] ದೊರೆಯುವ ಸ್ಥಳ—[illegible]

KALAPPAN'S ADVERTISIN SERVICES

ಮಂಜೇರಿ

ಮೋಟಾರ್ ಸರ್ವಿಸ್

ಲಿಮಿಟೆಡ್, ಕ್ಯಾಲಿಕಟ್.

ಈ ಕಂಪೆನಿಯು 1913 ನೇ ಇಸವಿಯ ಕಂಪೆನಿ ಆಕ್ಟಿಗೆ ಅನುಸಾರವಾಗಿ 1921 1922 ನೇ ಇಸವಿಯ ಮೊದಲನೇ ನಂಬ್ರವಾಗಿ 1921 ನೇ ಏಪ್ರಿಲ್ 4 ನೇ ತಾರೀಖಿನಲ್ಲಿ ರಿಜಿಸ್ತ್ರ ಮಾಡಲ್ಪಟ್ಟು, 1921 ನೇ ಮೇ 6 ನೇ ತಾರೀಖಿನಲ್ಲಿ ತಮ್ಮ ಕೆಲಸವನ್ನು ನಡಿಸುವದಕ್ಕೆ ಸಮ್ಮತಿ ಸರ್ಟಿಫಿಕೇಟು ಪಡಕೊಂಡಿರುತ್ತವೆ ಮೇ 5 ನೇ ತಾರೀಖಿನಿಂದ ಕೆಲಸವನ್ನು ಪ್ರಾರಂಭಿಸಿರುವದು.

ಈ ಕಂಪೆನಿಯ ಮೂಲಧನವು ಮೂರು ಲಕ್ಷ ರೂಪಾಯಿ ಪಾಲುಪತ್ರಿಕೆಗಳಿಂದ ಸಂಗ್ರಹಿಸಲ್ಪಡಬೇಕು ಪಾಲು 1 ಕ್ಕೆ 10 ರೂಪಾಯಿಯಂತೆಗೆ ಇದರಲ್ಲಿ ಸದ್ಯಕ್ಕೆ ವಿಕ್ರಯ ಮಾಡಲಾಗುವ 20 000 ಪಾಲುಗಳಲ್ಲಿ 1540 ಪಾಲುಗಳನ್ನು ಈ ಕಂಪೆನಿಯ ಪ್ರೇರೇಪಕರೇ ಪಡಕೊಂಡಿರುತ್ತಾರೆ

3500 ರೂಪಾಯಿಯ ಷೇರುಗಳು 1921 ನೇ ಇಸವಿ ಡಿಸೆಂಬರ್ 1 ನೇ ತಾರೀಖಿನವರಿಗೆ ಮಾರಲ್ಪಟ್ಟಿರುತ್ತವೆ

ಕಂಪೆನಿಯ ಉದ್ದೇಶ

ಮುಖ್ಯವಾಗಿ ತಲಚೇರಿಯಿಂದ ಮಡಿಕೇರಿಗೂ ಸೋಮವಾರಪೇಟೆಗೂ, ಮಡಿಕೇರಿಯಿಂದ ಸೋಮವಾರಪೇಟೆಗೂ ಕಲ್ಲಿಕೋಟೆಯಿಂದ ವಯನಾಡಿಗೂ ದಕ್ಷಿಣ ಮಲಬಾರಿನಲ್ಲಿರುವ ಮಂಜೇರಿ, ನಿಲಂಬೂರು ತಿರೂರು ಮೊದಲಾದ ಸ್ಥಳಗಳಿಗೂ ಮೋಟಾರ್ ಬಸ್ ಸರ್ವಿಸ್ ಸ್ಥಾಪಿಸುವದು ಮತ್ತು ಮೋಟಾರ್ ಕಾರ್, ಲಾರಿ ಮೊದಲಾದ ವಾಹನಗಳನ್ನು ಓಡ್ಯಾಡಿಸುವದು ಮೋಟಾರ್ ಬಂಡಿಗಳನ್ನು ರಿಪೇರಿ ಮಾಡುವ ಕಾರ್ಖಾನೆಗಳನ್ನು ಸ್ಥಾಪಿಸುವದು, ಡ್ರೈವರುಗಳನ್ನು ತಯಾರುಮಾಡುವದು, ಇವೇ ಸಂಘದ ಉದ್ದೇಶಗಳಾಗಿವೆ

ಕಂಪೆನಿಯಲ್ಲಿ ದೊರೆಯುವ ಆದಾಯದ ವಿವರ

ಈ ಕಂಪೆನಿಯು ಕ್ರಯಕ್ಕೆ ತಕ್ಕೊಂಡು ನಡಿಸುವ ಮಂಜೇರಿ ಮೋಟಾರ್ ಸರ್ವಿಸ್ ನವರ ಲೆಕ್ಕಗಳನ್ನು ಪರಿಶೋಧಿಸಿದರೆ, ಕ್ಷಯಮುಂತಾದ ಎಲ್ಲವನ್ನು ಕಳೆದು ನೂರಕ್ಕೆ 25 ರಂತೆ ಲಾಭ ಬರುವಂತೆ ಆದಾಯ ಕಾಣಬಹುದಾಗಿದೆಂದು [illegible] ಕಾಲಕ್ರಮೇಣ ಇನ್ನಷ್ಟು ಬಸ್ಸುಗಳು, ಕಾರ್, ಲಾರಿಗಳನ್ನು ಓಡ್ಯಾಡಿಸುವದಾದರೆ ಮೋಟಾರ್ ಕಾರ್ಖಾನೆಗಳನ್ನು ಸ್ಥಾಪಿಸುವದಾದರೆ 100 ಕ್ಕೆ 25 ಕ್ಕಿಂತಲೂ ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು

ವಿಶೇಷ ಪ್ರಯೋಜನಗಳು

ಬಹಳ ಜಾಗ್ರತೆಯಿಂದಲೂ ಪ್ರಾಮಾಣಿಕತೆಯಿಂದಲೂ ತನ್ನ ಕೆಲಸವನ್ನು ಮಾಡಿ ಎಲ್ಲಾ ಕಡೆಯಿಂದಲೂ ಒಳ್ಳೇ ಹೆಸರನ್ನು ಪಡಕೊಂಡ ಮಂಜೇರಿ ಮೋಟಾರ್ ಸರ್ವಿಸ್ಸನ್ನು ಈ ಲಿಮಿಟೆಡ್ ಕಂಪೆನಿಯು ಪಡಕೊಂಡದಾಗಿರುತ್ತದೆ

ಈ ಕಂಪೆನಿಯ ಕೆಲಸಗಾರರೆಲ್ಲರೂ ಸಮರ್ಥರೂ ಇದರ ವ್ಯವಸ್ಥೆಗಾರರು ಒಳ್ಳೇ ಅನುಭವಶಾಲಿಗಳೂ ಆಗಿರುತ್ತಾರೆ

ಈ ಕಂಪೆನಿಯ ಪ್ರವೃತ್ತಿಯಿಂದ ಬರುವ ಲಾಭವು ಕನಸಿನ ಗಂಟಲ್ಲ ನಿಜವಾಗಿ ಕೈಗೆಂಬೇ ಆಗುವ ಇತರ ಕಂಪೆನಿಗಳಲ್ಲಿ ಆದಾಯ ಸಿಕ್ಕುವದಕ್ಕೆ ಮೂರು ನಾಲ್ಕು ವರ್ಷ ಕಾಯಬೇಕಾಗುತ್ತದೆ ಇದರಲ್ಲಿ ಹಾಗಲ್ಲ ಷೇರ್ ತೆಗೆದುಕೊಂಡ ಕೂಡಲೇ ಆದಾಯ ಬರುವದು

ಸರ್ವರಿಗೂ ಅನುಕೂಲವಾಗುವಂತೆ ಒಂದೊಂದು ಪಾಲಿಗೆ 10 ರೂಪಾಯಿ ಮಾತ್ರ ಇಡಲಾಗಿದೆ.

ಈ ಲಿಮಿಟೆಡ್ ಕಂಪೆನಿಯು ಕಲ್ಲಿಕೋಟೆಯಲ್ಲಿ ಮಂಜೇರಿ ಮೋಟಾರ್ ಸರ್ವಿಸನ್ನು ಇದೇ 1921 ನೇ ಮೇ 25 ನೇ ತಾರೀಖಿನಲ್ಲಿ ಮತ್ತು ತಲಚೇರಿಯ ಮೋಟಾರ್ ಸರ್ವಿಸನ್ನು ಇದೇ ಜೂನ್ 1 ನೇ ತಾರೀಖಿನಲ್ಲಿಯೂ ಬಡಗರ ಮತ್ತು ನಾದಾಪುರ ಸರ್ವಿಸ್ಸು 1921 ನೇ ಆಗಸ್ಟ್ 8 ನೇ ತಾರೀಖಿನಲ್ಲಿ ಹೊಸದಾಗಿ ಪ್ರಾರಂಭಿಸಿರುವದು

ಪಾಲು ಬೇಕಾದವರು ಕಂಪೆನಿಯ ಅರ್ಜಿ ಫೋರಮ್ಮಿನಲ್ಲಿ ಅರ್ಜಿ ಬರೆದು, ತಮಗೆ ಬೇಕಾದ ಪಾಲು ಷೇರುಗಳ ಪೂರ್ಣ ಹಣ—ಪಾಲು 1 ಕ್ಕೆ 10 ರೂಪಾಯಿ ಪ್ರಕಾರ ಆಗುವ ಹಣವನ್ನು ಅರ್ಜಿಯೊಂದಿಗೆ ಮೇನೇಜಿಂಗ್ ಡೈರೆಕ್ಟರಿಗೆ ಕಳುಹಿಸತಕ್ಕದ್ದು.

ಕಂಪೆನಿಯ ನಿಯಮಗಳ ಪ್ರತಿಗಳೂ ಅರ್ಜಿ ಫೋರಮ್ಮುಗಳೂ ಕಂಪೆನಿಯ ಆಫೀಸಿನಲ್ಲಿ ದೊರೆಯುವವು

ಅರ್ಜಿ ಫೋರಮ್ಮು ಇಲ್ಲದಿದ್ದರೆ ಅರ್ಜಿದಾರರು ತಮ್ಮ ಪೂರ್ಣ ಹೆಸರು ತಂದೆಯ ಹೆಸರು ಉದ್ಯೋಗ ಮತ್ತು ವಿಳಾಸವನ್ನು ಸ್ಪಷ್ಟವಾಗಿ ಬರೆದು ಅರ್ಜಿಯನ್ನು ಪಾಲಿನ ಪೂರ್ಣ ಹಣದೊಂದಿಗೆ ಮೇನೇಜಿಂಗ್ ಡೈರೆಕ್ಟರಿಗೆ ಕಳುಹಿಸತಕ್ಕದ್ದು

ಈ ಕಂಪೆನಿಯ ಸರ್ವಿಸ್ ಈಗ ಕಲಿಕೋಟೆಯಿಂದ ಪುದುಪಾಡಿಗೂ ತಲಚೇರಿಯಿಂದ ಮಾಕೂಟಿಗೂ ಬಡಗರೆಯಿಂದ ನಾದಪುರಕ್ಕೂ ಓಡ್ಯಾಡುತ್ತಿರುವವು.

ಒಳ್ಳೇ ಮೋಟಾರ್ ಕಾರ್‌ಗಳು ತಲಚೇರಿಯಲ್ಲಿಯೂ ಕಲಿಕೋಟೆಯಲ್ಲಿಯೂ ಬಡಗರೆಯಲ್ಲಿಯೂ ಬಾಡಿಗೆಗೆ ದೊರಕುವವು.

1920 ನೇ ಇಸವಿ ಡಿಸೆಂಬರಿನಿಂದ 7 ತಿಂಗಳ ಬಾಬ್ತು ಮಂಜೇರಿ ಮೋಟಾರ್ ಕಂಪೆನಿಯ ಆದಾಯವೆಚ್ಚದ ಪಟ್ಟಿ

ಬಂಡವಾಳ	60,000—0—0
ಟಿಕೇಟು ವಗೈರೆ ಬಾಬ್ತುಗಳಿಂದ ಉತ್ಪತ್ತಿ	48,794—13—0
ಖರ್ಚು ಪೆಟ್ರೋಲ್ ಸಾಮಾನುಗಳಲ್ಲಿ	31 064—7—3
7 ತಿಂಗಳ ಒಟ್ಟು ನಫೆ	17,230—5—9

ತಿಂಗಳೊಂದಕ್ಕೆ 2500 ರೂಪಾಯಿವರೆಗೆ ನಫೆ ಇದೆ ಎಂದು ಸ್ಪಷ್ಟ ವಾಗುತ್ತೆ

ಒಂದು ವರ್ಷಕ್ಕೆ 30000 ರೂ ನಫೆ ಇದರ ಪೈಕಿ 15 000 ರೂಪಾಯಿ ರಿಸರ್ವ್ ಫಂಡಿನಲ್ಲಿ ಇಟ್ಟರು ಕೂಡಾ ಶೇಕಡ 25 ರಂತೆ ನಫೆ ಸಿಕ್ಕಬಹುದು

ಸಬ್ ಕಲೆಕ್ಟರರು ಬರೆಯುವದು ಏನೆಂದರೆ —

ಆಗಸ್ಟ್ ತಾರೀಖು 26—27—28 ರಲ್ಲು ಕೊಯಿಲಾಂಡಿ ತಾಮರಶೇರಿ ಕುನ್ನಮಂಗಲಂ ಎಂಬಲ್ಲಿಗೆ ಸರಕಾರಕ್ಕೆ ಉಪಯೋಗವಾಗಿ ಸಿಪಾಯಿಗಳನ್ನು ಕರಕೊಂಡು ಹೋಗಲು ನಿಮ್ಮ ಮೋಟಾರುಗಳನ್ನು ಬಸ್‌ಗಳನ್ನು ಅತಿ ಜಾಗ್ರತೆಯಿಂದ ಒದಗಿಸಿಕೊಟ್ಟಿದ್ದಕ್ಕಾಗಿ ನಿಮ್ಮಲ್ಲಿ ಕೆಲಸಮಾಡುವ ಕೆಲಸದವರು ಮತ್ತು ಡ್ರೈವರುಗಳು ಅತಿ ಬುದ್ಧಿವಂತರು, ಪೂರ್ಣ ಶ್ರದ್ಧೆಯಿಂದ ಕೆಲಸಮಾಡುವವರು ಆಗಿರುತ್ತಾರೆ ಮತ್ತು ಇವರಷ್ಟು ಮುತುವರ್ಜಿಯಿಂದ ಕೆಲಸಮಾಡುವಂಥಾ ಕೆಲಸದವರನ್ನು ನಾನು ಎಲ್ಲಿಯೂ ಕಂಡಿರುವದಿಲ್ಲ ನಿಮಗೆ ನನ್ನ ಅತಿ ಕೃತಜ್ಞತೆಯುಳ್ಳವನಾಗಿರುತ್ತೇನೆ

ಇದರಿಂದ ಕೊಡಗು ನಮ್ಮ ಕಂಪೆನಿಯನ್ನು ಎಷ್ಟು ಶ್ಲಾಘನೆ ಮಾಡುತ್ತಾರೆಂಬುದು ಪೂರ್ಣ ವ್ಯಕ್ತವಾಗುತ್ತದೆ

ಜೆ. ನಿಕೊಲಾಸ್,

ಮೇನೇಜಿಂಗ್ ಡೈರೆಕ್ಟರ್,

ಮಂಜೇರಿ ಮೋಟಾರ್ ಸರ್ವಿಸ್ ಲಿಮಿಟೆಡ್,

ಕ್ಯಾಂಪು-ಮಡಿಕೇರಿ

THE

MANJERI MOTOR SERVICE, Ltd.,

CALICUT

Branche

TELLICHERRY AND BADAGARA.

Registered under the Indian Companies Act 1913 as No 1 of 1921—1922 on the 4th day of April 1921 the prospectus filed on the 6th day of May 1921 Business commenced on the 25th day of May 1921

AUTHORISED CAPITAL RUPEES THREE LAKHS

Divided into 30,000 ordinary shares of Rs 10 each payable fully in cash with application of which 20 000 shares are now offered for subscription at par

1540 shares are taken by the promoters at present

Rs 35000 worth shares are ...

The Company is formed primarily to establish Motor Bus Services between Tellicherry and Mercara and Somwarpet in Coorg, Calicut and Coorg, Wynaad in North Malabar, Calicut and Wynaad, Nilambur and Tirur in South Malabar, to establish motor work shops for the repair of motor vehicles and for the training up of motor machanics and drivers and for the permanent working up of motor bus service in the conveyance of passengers and goods

ESTIMATED INCOME AND PROSPECTS

It is estimated from a perusal of the accounts of the working of the Manjeri Motor Service which the Company has purchased that the Company would be able to declare a dividend of about 25 per cent after setting aside ampl reserves for depreciation and reserve fund As time pass on and more buses and cars and lorries are introduced and more new lines are opened and workshops established a much higher dividend is confidently expected and considered feasible

SPECIAL ADVANTAGES

The Company has purchased the flourishing concern the Manjeri Motor Service which has been exceptionally lucky all along to earn a good name and maintain the prestige and reputation throughout for its punctuality, regularity and respectability required of a motor service to win the confidence of the travelling public

The Company is singulary fortunate in securing the services of choicest workmen and efficient and experienced management

The Company's lines of business are not at al speculative but are reckoned as sure concerns

The Company is in a position to pay a dividend from the very start.

The Company has already taken charge of the Manjeri Motor Service working at Calicut on the **25th day of May 1921** and that of Tellicherry on the **1st June 1921** and Badagara—Nadapuram line is newly opened on the **8th August 1921.**

Application for shares should be made in the form of application to the Managing Director together with the full cash value of each share

Copies of the Memorandum and Articles of Association and of the Prospectus and forms of application can be had at the Office of the Company

In the absence of application form, the application should clearly state Full name, Permanent address, Father's name, Profession, Present address and should be sent with the full cash value of the shares to the Managing Director

The Company's service now works between CALICUT—PUDUPADI, TELLICHERRY—MAKKUT, BADAGARA—NADAPURAM. Reliable pleasure cars **Neo Hupmobile Overland** driven by experienced hands are always available for hire.

SUB COLLECTOR TELLICHERRY WRITES —

"Just a line to thank you for the promptness with which you placed your two Cars and one Bus at the disposal of Government on the 26th 27th and 28th for moving troops to Quilandy, Tamaracherry and Kunnamangalam" etc, etc, and concludes "**I never saw more willing workers or more competent drivers than your men**" This unasked for remarks from the pen of a high official speaks for itself about the merits of the Manjeri Motor Service Ltd, and her staff

For further particulars apply to—

J NICHOLAS,

Managing Director

Manjeri Motor Service Ltd.,

Camp—Mercara.

Printed and Published by K. Sundaraiengar, Proprietor, at Sumaveera Electric Press, Mysore for "Kodagu" Ltd., Mercara—20-12-1921.